Regd No M 3618 | LICENC No. 31 Licensed to Post without Prepayment

1-1-1953

Estd 1921 ಸ್ಥಾಪನೆ
32ನೆಯ ವರ್ಷ

Founder Sri A B Shetty, Minister for Medical & Public Health

ನವಯುಗ
ಆರೋಗ್ಯ ಮಂತ್ರಿ
ಎ ಬಿ ಶೆಟ್ಟರಿಂದ
ಸ್ಥಾಪಿತವಾದ ವಾರಪತ್ರಿಕೆ,
ಉಡುಪಿ, ದ ಕನ್ನಡ

ಚಂದಾ 5 12 0
ತಿಂಗಳಿಗೆ 3-0-0
ಪ್ರತಿಗೆ 0 2 0

ನವಯುಗ

ಅಂತರಂಗ
ಪುಸ್ತಕ ಪತ್ರಿಕೆಯ
ಉದಯೋತ್ಸವದ
86 ಪುಟಗಳು
ರೂ 24ಕ್ಕೆ ಸಿಗುತ್ತವೆ
ವಿವರಕ್ಕೆ ಬರೆಯಿರಿ
ಮ್ಯಾನೇಜರ್,
ಅಂತರಂಗ ಉಡುಪಿ

Vol 32 No 18

NAVAYUGA WEEKLY POST BOX NO 22 UDIPI

ವರ್ಷ ೩೨
ವಾರ ೧೮

ನೂತನ ವರ್ಷಾರಂಭಿಸುವ ದಿನ ಇದು—ಒಬ್ಬರು ಹೇಳಿದಂತೆ ಕಳೆದು ಹೋದ ಐಶ್ವರ್ಯವನ್ನು ಮಗುಳಿ ಗಳಿಸಬಹುದು, ಕುಂದಿದ ಆರೋಗ್ಯವನ್ನು ತಿರುಗಿ ಸಂಪಾದಿಸಬಹುದು ಆದರೆ ಆ ... ದ ಅಮೂಲ್ಯ ಗಳಿಗೆಗಳು ತಿರುಗಿ ಬರಲಾರವು ನಾವು ಮುನ್ನಡಿ ಇಟ್ಟ ಪ್ರತಿಕ್ಷಣವೆಂಬಂತೆ ಸಾಗುತ್ತೇವೆ ಒಳಿತು ಕಡುಕುಗಳನ್ನು ಸಿದ್ಧಾಂತವಾಗಿ ... ನಡೆಯುವಷ್ಟರ ವಷ್ಟಿನ ... ವಾತಾವರಣ ಇಂದು ಇರುವುದಿಲ್ಲವಾಗಿ ನಾವು ಹೆಜ್ಜೆ ಇಡುವಾಗ ತಪ್ಪಿ ಬೀಳುವುದೇ ಹೆಚ್ಚು ಆದರೂ ಸತರ್ಕರಿದ್ದುಕೊಂಡು, ಮುಂಜಾಗರೂಕತೆಯನ್ನು ವಹಿಸಿ ಪ್ರತಿಯೊಂದೂ ಗಳಿಗೆಯನ್ನು ನಮ್ಮ ಅಭ್ಯುದಯಕ್ಕೆ ಹಿತವನಿಸುವ ರೀತಿಯಲ್ಲಿ ಉಪಯೋಗಿಸುತ್ತಿದ್ದರೆ ಬಹಳ ಒಳ್ಳೆಯದು ಹೊಸ ವರ್ಷದ ಈ ಶುಭದಿನದಲ್ಲಿ ನಾವೆಲ್ಲರೂ ಇಂಥ ಸೌಭಾಗ್ಯಕ್ಕಾಗಿ ಪ್ರಾರ್ಥಿಸೋಣ

ನಮ್ಮ ಅಭ್ಯುದಯವೆನ್ನುವಾಗ ಸ್ವಂತ ದುಡಿಮೆಗ ತುಂಬ ಪ್ರಾಶಸ್ತ್ಯ ಬರತ್ತಿದೆ ನಾವು ಸ್ವತಃ ದುಡಿಯದೆ ನಮ್ಮ ಕಲ್ಯಾಣ ಸಂದಿಸಲ್ಪಡ ... ಎಂಬುದು ಗೊತ್ತು ತತ್ವವಲ್ಲ—ಅನ ... ಗೀತೆಯಲ್ಲಿ ಉದ್ಧರೇದಾತ್ಮನಾತ್ಮಾನಂ ಎಂದು ಭಗವಾನ ಶ್ರೀಕೃಷ್ಣ ಹೇಳುವಾಗ ಕಣ್ಣಮುಂದೆ ನಿಲ್ಲಿಸಿದ ಆದರ್ಶ ಇದು ನಮ್ಮ ಪರಿಸ್ಥಿತಿ ಇಂದು ಇರುವಷ್ಟು ಯೋಚನೀಯವಾಗಲು ... ನಮ್ಮ ಆಲಸ್ಯ ಜಾಡ್ಯಗಳೇ ಮೂಲಕಾರಣ ... ದುಡಿಮೆ ... ಬೇಕು ... ಬೇಕು ನಮ್ಮ ಆರ್ಥಿಕ ... ಮೂಲವಾಗಬೇಕು

ಭೂಸತ್ವವನ್ನು ಹೆಚ್ಚಿಸುವುದಕ್ಕೆ ನಾವು ಪ್ರಯತ್ನಿಸುವುದಿಲ್ಲ ... ದೇವಿಯು ಪ್ರಸನ್ನಳಾಗುವುದಕ್ಕೆ ... ಬರುವ ... ಹೊಸದಾಗಿ ಕೃಷಿ ಕ್ಷೇತ್ರಗಳನ್ನು ನಾವು ನಿರ್ಮಿಸಿಲ್ಲ ... ಕಾಲದಲ್ಲಿದ್ದ ಹೊಲ ... ನಾವೇನು ಬೆಳೆಸಿ ... ಗದ್ದೆ ಕಡಿದ ಬೈಲು ಮಾಡಿದ್ದ ಕಾಣುವುದಿಲ್ಲ ಜನಸಂಖ್ಯೆ ಹೆಚ್ಚಿದಂತೆ ಹೆಚ್ಚು ಹೆಚ್ಚು ಕೃಷಿ ನಡೆಯಬೇಕಾದ ಪು ಅಗತ್ಯವೆಂದು ...

ಮಧುಪರ್ಕ

... ಅವರು ... ಕೆಲವು ... ಮಾತ್ರ ... [illegible]

... [illegible]

ನಿರ್ಮಲ ನಿರ್ಣಯ

... ನಮ್ಮ ಆಲಸ್ಯವನ್ನು ಒದಿಗ ... ಉತ್ಸಾಹವನ್ನು ... ನಾವಿದ್ದೇವೆ ... ಪಲವೃಕ್ಷಗಳ ಗೊಂಚಲು ಗೊಂಚಲಾಗಿ ... ದಿನ ಸಮೃದ್ಧಿ ... ಕಣ್ಣಿಗೆ ... [illegible]

ಯನ್ನು ... ಇಲ್ಲದಿರುವುದು ... ಗೋಚರವಾದೀತ ... ಸಮೃದ್ಧಿ ... [illegible]

ಯಿಂದ ... ಫಲಿಸ್ಸಲ್ಲ ನಮ್ಮ ... [illegible]

ಇದನ್ನು ... ಎಂದರೆ ... ಕಣ್ಣಿಗೆ ... ನಮ್ಮ ಅಜ್ಞಾನವನ್ನು ... ಕಳೆದುಕೊಂಡು ... ದಾರಿದ್ರ್ಯ ... ಎಂತೆ ... ವಾರಿ ... ಇಂಥ ... ನಾವಿದ ... [illegible]

... ಪ್ರಸಾದ ... ನಮ್ಮ ವೈಜ್ಞಾನಿಕ ಬುದ್ಧಿ ... ಹೃದಯ ... ಕಳೆದು ... ನಾವು ... ಹೊರಡಿಸಿದ ... ನಿವಾರಣ ... ನಮ್ಮನ್ನು ... ಪರಿ ... [illegible]

... [illegible]

ತಂಬಾಕು ಸೇವನೆಯ ಚಟ

ಆಸ್ಪತ್ರೆಗಳಿಗೆ ವ್ಯಯಿಸುವ ಎಂಟು ಪಾಲಷ್ಟು ನಮ್ಮ ಹೊಗೆಸೊಪ್ಪಿನ ವೆಚ್ಚ!

ಕನ್ನಡದ ಉದೀಯ ಮಾನಕವಿ ಶ್ರೀ ಗೋಪಾಲಕೃಷ್ಣ ಅಡಿಗರು "ಸಿಗರೇಟಿನ ಹೊಗೆ ವರ್ತುಳ ವರ್ತುಳ.." ಎಂದು ಮನಂತಾಗಿ ಧೂಮಲೀಲೆಯನ್ನು ವರ್ಣಿಸಿರುವರು. ಧೂಮ್ರಪಾನವು ನಮ್ಮಲ್ಲಿ ಅತ್ಯಂತ ಜನಪ್ರಿಯವಾದೊಂದು ಚಟ. ಅದರಿಂದ ಆರೋಗ್ಯ ಕೆಡುವುದೆಂದು ಹೇಳುವ ಡಾಕ್ಟರ ಜನರೇ ಸಿಗರೇಟಿನ ನಿಸ್ಸೀಮ ಭಕ್ತರು! ಎಂದ ಮೇಲೆ ಬಡಜನರು ಬೀಡಿಯ ತುಣುಕೊಂದನ್ನು ತುಟಿಗಳ ನಡು ವಿಟ್ಟರೆ, ಅಥವಾ ನಸ್ಯವನ್ನು ಬ್ರಹ್ಮರಂಧ್ರಕ್ಕೇರಿಸಿ, ಆನಂದ ಪರವಶರಾಗುವುದಾದರೆ-ಅದು ತಪ್ಪೆನ್ನುವ ನೈತಿಕ ಬಲ ನಮ್ಮಲ್ಲಿ ಯಾರಿಗೂ ಇಲ್ಲ. ತಂಬಾಕು ಸೇವನೆಯ ಚಟ ನಮಗೆ ಪಾಶ್ಚಾತ್ಯರಿಂದ ಬಂದದ್ದು. ಈಗ ಕೂಡ ಅಮೇರಿಕದ ವರ್ಜೀನಿಯಾ ತಂಬಾಕು ಜಗತ್ಪ್ರಸಿದ್ಧ ನಮೂನೆಯಾಗಿದೆ 'ರೀಡರ್ಸ್ ಡೈಜೆಸ್ಟ್' ಪತ್ರಿಕೆಯ ಹೇಳಿಕೆಗನುಸಾರ ಅಮೇರಿಕದ ಆರುಕೋಟಿ ಜನರಲ್ಲಿ ಪ್ರತಿಯೊಬ್ಬರೂ ದಿನಕ್ಕೆ ೧೯ ಸಿಗರೇಟು ಸೇದಿ ಬೂದಿಮಾಡುವರು! ಮಾತ್ರವಲ್ಲ ವರ್ಷ ವರ್ಷವೂ ಸಿಗರೇಟು ಭಕ್ತರ ಸಂಖ್ಯೆ ಎಂಟು ಲಕ್ಷದಷ್ಟು ಹೆಚ್ಚುತ್ತಲೇ ಹೋಗುತ್ತದೆ! ಮೂವರು ಗಂಡಸರಲ್ಲಿ ಇಬ್ಬರು, ಐವರು ಹೆಂಗಸರಲ್ಲಿ ಇಬ್ಬರು, ಮತ್ತು ಹದಿನಾಲ್ಕು ವರ್ಷ ವಯಸ್ಸಿನ ಪ್ರತಿ ಏಳು ಹುಡುಗರಲ್ಲಿ ಒಬ್ಬ ಸಿಗರೇಟು ಸೇದುವರು. ಅಮೇರಿಕನ್ನರು ಸಿಗರೇಟಿಗಾಗಿ ವರ್ಷಕ್ಕೆ ನಾಲ್ಕು ಲಕ್ಷ ಕೋಟಿ ಡಾಲರು ವೆಚ್ಚ ಮಾಡುವರು ನಮ್ಮಲ್ಲಿ ಕೂಡ ಈ ಪ್ರಮಾಣ ಕಡಿಮೆಯೇನಿಲ್ಲ. ಪೇಟೆ ಪಟ್ಟಣಗಳಲ್ಲಿರುವ ಪ್ರತಿ ಹತ್ತು ಗಂಡಸರಲ್ಲಿ ಆರುಮಂದಿ ಒಂದಿಲ್ಲೊಂದು ರೀತಿಯಿಂದ ಹೊಗೆಸೊಪ್ಪನ್ನು ಸೇವಿಸುತ್ತಾರೆ ಆ ಆರುಮಂದಿಯಲ್ಲೂ ನಾಲ್ಕು ಮಂದಿ ಸಿಗರೇಟಿನ ಆರಾಧಕರು ಕಳೆದ ವರ್ಷ ೫೧ ಲಕ್ಷ ಭಾರತೀಯರು ಒಂದೂವರೆ ಕೋಟಿ ಸಿಗರೇಟನ್ನು ಭಸ್ಮ ಮಾಡಿದರು ಎಂದರೆ ಪ್ರತಿ ದಿನಕ್ಕೆ ಎಂಟು ಸಿಗರೇಟು ಸೇದಿದಂತಾಯಿತು. ಮಹಾ ಯುದ್ಧಕ್ಕೆ ಮುಂಚೆ ಕೇವಲ ಅರುವತ್ತು ಲಕ್ಷ ಸಿಗರೇಟು ಸೇದುತಿದ್ದರು, ಎಂದರೆ ದಿನಕ್ಕೆ ನೂರರಷ್ಟಾಯಿತು.

ನಮ್ಮ ಹೊಗೆಸೊಪ್ಪಿನ ವೆಚ್ಚ

ನಮಗೆ ಸಿಗರೇಟು ಇತ್ಯಾದಿಯಾಗಿ ಹೊಗೆಸೊಪ್ಪು ಸೇವನೆಯ ಚಟ ಪ್ರಬಲ ಅಂಟಿಕೊಂಡದ್ದು ಮಹಾ ಯುದ್ಧದ ಪರಿಣಾಮವಾಗಿಯೇ ಎಂದೆನ್ನಬಹುದು. ಪೇಟೆ ಪಟ್ಟಣಗಳಲ್ಲಿಯೇ ವರ್ಷಂಪ್ರತಿ ೧೬೦೦೦೦ ತರುಣರು ಸಿಗರೇಟಿನ ವ್ಯಸನಕ್ಕೆ ಬಲಿಬೀಳುವರು. ಇನ್ನು ಹಳ್ಳಿಯ ಮಟ್ಟಿಗೆ ಮೂಲೆ ಮೂಲೆಗೂ ತಂಬಾಕು ಸೇವನೆಯ ಚಟ ವ್ಯಾಪಕವಾಗಿ ಹಬ್ಬುತ್ತಾ ಬರುತ್ತಿದೆ ಎಂಬ ಸಂಗತಿ ಸ್ಪಷ್ಟವಿದೆ. ಮಹಾಯುದ್ಧದಿಂದ ಮನೆಗೆ ಮರಳಿದ ಸೈನಿಕನೇ ಮುಂತಾದವರಿಂದ ಹಳ್ಳಿಹಳ್ಳಿಗಳಲ್ಲಿ ಸಿಗರೇಟಿನ ಪ್ರಚಾರ ನಿರಾಯಾಸವಾಗಿ ಕೈಗೂಡಿತು. ಈಗ ಹಳ್ಳಿಯವರಿಗೆ ಅತ್ಯಾಧುನಿಕವಾದ ಯಾವ ವಸ್ತುವೂ ಅಪರಿಚಿತವೆಂಬಂತಿಲ್ಲ--ತಮ್ಮೊಟ್ಟ ಸುಧಾರಿಸಿದ ವಾತಾವರಣ ಉಂಟಾಗಿದೆ. ಹಾಗೆಂದು ಭಾರತೀಯ ಮಹಿಳೆಯರು ಹೊಗೆ ಸೇವನೆಯ ಚಟಕ್ಕೆ ಇನ್ನೂ ಬಲಿಬೀಳದಿರುವುದು ಗಮನೀಯ ಸಂಗತಿ. ಆದರೂ ಉಚ್ಚ ವಿದ್ಯಾಭ್ಯಾಸದ ಪ್ರಭಾವವೋ ಎಂಬಂತೆ—ಅವರಲ್ಲೂ ಕೆಲವರು ಸಿಗರೇಟನ್ನು ತುಟಿಗೇರಿಸಲು ಕಲಿತಿರುವರು. ಹಾಗೆಂದು ತುಂಬಿದ ರಸ್ತೆಯಲ್ಲಿ ಸಿಗರೇಟಿಗೆ ಬೆಂಕಿ ಹಚ್ಚಿ ಹೊಗೆ ಬಿಡುತ್ತಾ ಹೋಗುವುದು ಮಹಿಳೆಯರ ಮಟ್ಟಿಗೆ ಇನ್ನೂ ಎಡೆಗಾಣಿಕೆಯ ವಿಷಯವಾಗಿ ಉಳಿದಿದೆ.

ನಮ್ಮ ಹೊಗೆಸೊಪ್ಪು ಸೇವಕರು ವರ್ಷಂಪ್ರತಿ ೪೦ರಿಂದ ೪೫ಕೋಟಿ ರುಪಾಯಿ ಅದಕ್ಕಾಗಿ ವ್ಯಯಿಸುವರು. ಇಷ್ಟು ಹಣವನ್ನು ನಾವು ಶಿಕ್ಷಣ ಪ್ರಚಾರಕ್ಕೂ ವ್ಯಯಿಸುವುದಿಲ್ಲ ನಮ್ಮಲ್ಲಿರುವ ಎಲ್ಲ ಆಸ್ಪತ್ರೆಗಳನ್ನು ನಡೆಸುವ ಬಗ್ಗೆ ವೆಚ್ಚ ಮಾಡುವ ಹಣದ ಎಂಟು ಪಾಲಷ್ಟು ಕೇವಲ ಮೂಗು ಬಾಯಿಗಳಿಂದ ಹೊಗೆ ಬಿಡುವ ಆನಂದದ ಲೀಲೆಗಾಗಿ ವ್ಯಯವಾಗುತ್ತಿದೆ! ಸರಕಾರಕ್ಕೆ ಆಯಾತ, ಅಬಕಾರಿ ಮತ್ತಿತರ ಸುಂಕ ತೆರಿಗೆಗಳಿಂದ ೧೦ ಕೋಟಿ ರುಪಾಯಿ ವರಮಾನವಿದೆ. ಸಿಗರೇಟು ವಿಲಾಸ ವಸ್ತುವೆಂದು ಗ್ರಹಿಸಲ್ಪಟ್ಟಿರುವುದರಿಂದ, ಅದರ ಮೇಲೆ ಭಾರವಾದ ಕರವನ್ನು ಹೇರಿರುವರು.

ರಾಷ್ಟ್ರೀಯ ವೈಶಿಷ್ಟ್ಯ

ಪೋರ್ಚುಗೀಜರು ನಮಗೆ ೧೫೦೮ರಲ್ಲಿ ಹೊಗೆಸೊಪ್ಪನ್ನು ಕಾಣಿಕೆಯಾಗಿ ಕೊಟ್ಟರು. ಅಂದಿನಿಂದ ಹೊಗೆಸೊಪ್ಪನ್ನು ಚೆನ್ನಾಗಿ ಬೆಳೆಯುವ ಕೆಲಸವು ನಡೆದಿದೆ ಮುಖ್ಯವಾಗಿ ಎರಡು ನಮೂನೆಯ ಹೊಗೆಸೊಪ್ಪಿನ ಜಾತಿಯನ್ನು ಬೆಳೆಯುತ್ತಾರೆ. ಈಚಿನ ವರೆಗೆ ಜಗತ್ತಿನ ಹೊಗೆಸೊಪ್ಪಿನ ಉತ್ಪಾದನೆಯಲ್ಲಿ ಕಾಲಂಶ ಭಾರತದ ಪಾಲಾಗಿತ್ತು. ಆದರೆ ದೇಶ ವಿಭಜನೆಯ ಬಳಿಕ ಅರ್ಧದಷ್ಟು ಉತ್ಪಾದನೆ ಕಡಿಮೆಯಾಯಿತು. ಆದರೂ ೧೯೫೧ರಲ್ಲಿ ನಾವು ೫೬ ಕೋಟಿ ರಾತಲು ಹೊಗೆಸೊಪ್ಪನ್ನು ಬೆಳೆದೆವೆಂಬುದು ಹೆಮ್ಮೆ. ಹೊಗೆಸೊಪ್ಪನ್ನು ಉತ್ಪಾದಿಸುವ ಜಗತ್ತಿನ ರಾಷ್ಟ್ರಗಳಲ್ಲಿ ಭಾರತಕ್ಕೆ ಈಗ ಮೂರನೆಯ ಸ್ಥಾನವಿದೆ. ನಮ್ಮ ಹೊಗೆಸೊಪ್ಪಿನ ಉತ್ಪಾದನೆಯಲ್ಲಿ ನೂರಕ್ಕೆ ಎಂಭತ್ತರಷ್ಟನ್ನು ನಾವೇ ಉಪಯೋಗಿಸಿಕೊಳ್ಳುತ್ತೇವೆ. ಸಾಮಾನ್ಯವಾಗಿ ಬೆಲೆಗಳ ಮಟ್ಟ ಇನ್ನೂ ಏರಿದ್ದರೂ ಹೊಗೆಸೊಪ್ಪಿನ ಬಳಕೆಯೇನೂ ಕಡಿಮೆಯಾಗಿಲ್ಲ. ಎಲ್ಲವರೊಡನೆ ಅದು ಇನ್ನೂ ಹೆಚ್ಚುತ್ತಿದೆ.

ನಮ್ಮ ಇನ್ನೊಂದು ವೈಶಿಷ್ಟ್ಯವೆಂದರೆ, ಬೇರಾವ ರಾಷ್ಟ್ರದಲ್ಲಿಯೂ ಇರದಷ್ಟು ವೈವಿಧ್ಯ ನಮ್ಮ ಹೊಗೆಸೊಪ್ಪಿನ ಬಳಕೆಯಲ್ಲಿದೆ! ಸಿಗರೇಟು ಸೇವನೆ ಏನೆಂದರೂ ವಿದೇಶೀ ವಿಲಾಸವೆಂದು ಹಳ್ಳಿಗರ ಅವಹೇಳನೆಗೆ ಗುರಿಯಾಗಿದೆ. ನಮ್ಮ ಹಳ್ಳಿಗರಿಗೆ ಹುಕ್ಕ ಅಥವಾ ಗುಡುಗುಡಿ ತುಂಬ ಮೆಚ್ಚುಗೆಯಾಗಿದೆ. ಹಳೆಯ ದಿನಗಳಲ್ಲಿ ಹುಕ್ಕದಂಥ ಧೂಮ್ರಪಾನದ ಸಲಕರಣೆ ಶ್ರೀಮಂತಿಕೆಯ ದ್ಯೋತಕವೆಂದು ಮನ್ನಿಸಲ್ಪಡುತಿತ್ತು. ಆ ಹುಕ್ಕದ ಅಂ... ಚಂದ ಹೆಚ್ಚಿದಂತೆ ಶ್ರೀಮಂತಿಕೆಯ ಗಾಂಭೀರ್ಯಕ್ಕೂ ಕಳೆ ಬರುತ್ತಿತ್ತು. ಈ... ಕೂಡ ಹುಕ್ಕಾ ಅಥವಾ ಗುಡುಗುಡಿ ಹಳ್ಳಿಯ ಜನರಲ್ಲಿ ಸಾಮಾಜಿಕ ವೈಶಿಷ್ಟ್ಯದಿಂದ ಕೂಡಿದೆ. ಹಳ್ಳಿಯ ಹತ್ತು ಸಮಸ್ಯರು ಒಟ್ಟಿಗೆ ಕಲೆತು, ಒಂದೇ ಹುಕ್ಕ... ಸುತ್ತ ಕುಳಿತು, ಅದನ್ನು ಒಬ್ಬೊಬ್ಬ... ಸೇವಿಸುವುದೊಂದು ಮರ್ಯಾದೆ. ಸಾಮಾಜಿಕ ಕಟ್ಟುಪಾಡುಗಳನ್ನು ಪ್ರತಿ... ಟಿಸಿ ಮುರಿದ ಪ್ರತಿಗಾಮಿಗೆ ಹಳ್ಳಿಯ ಪಂಚರು ವಿಧಿಸುವ ಶಿಕ್ಷೆಯೆಂದರೆ—... ಸಾಮಾನ್ಯ ಹುಕ್ಕದಲ್ಲಿ ಪಾಲು ಇಲ್ಲವೆಂದು ಹೇಳುವುದು. ಅರ್ಥಾತ್, ಯಾ... ಸಭೆ ಸಮಾರಂಭಗಳಲ್ಲಿಯೂ ಈ ಅಪರಾಧಿಗೆ ಸ್ಥಾನ ಮಾನಗಳು ಸಿಗುವಂತಿಲ್ಲ!

ಬಡವನ ಬಂಧು - ಬೀಡಿ

ಬೀಡಿ, ಸಿಗಾರು, ಚಿರೂಟುಗಳೂ ನಮ್ಮಲ್ಲಿ ಬಳಕೆಯಲ್ಲಿವೆ. ಬೀಡಿ ಸಾಮಾನ್ಯ ಜನರ ಸ್ನೇಹಿತ. ಮಧ್ಯ ಭಾರತದ ಕಾಡುಗಳಲ್ಲಿ ಧಾರಾಳವಾಗಿ ಬೆಳೆಯುವ ಒಂದು ಜಾತಿಯ ಮರದ ಎಲೆಯಿಂದ ಬೀಡಿ ಕಟ್ಟುತ್ತಾರೆ. ಕುಶಲರಾದ ಕೆಲಸಗಾರರು ಲಕ್ಷಗಟ್ಟಲೆ ಬೀಡಿಯನ್ನು ಪ್ರತಿನಿತ್ಯ ಕಟ್ಟುವರು. ಸಾಮಾನ್ಯವಾಗಿ ಬೀಡಿ ಕಟ್ಟುವುದು ಮನೆ ಕೈಗಾರಿಕೆಯಾಗಿ ಪರಿಣಮಿಸಿದೆ.

ಭಾರತದ ಕಾರ್ಖಾನೆಗಳು ೨೨ ಲ... ಕೋಟಿ ಸಿಗರೇಟು ತಯಾರಿಸುತ್ತ... ಮುಂಬಯಿ ಕಲ್ಕತ್ತ ದಂ... ನಗರಗಳಲ್ಲಿ ನೆಲಸಿದ ಘಟ... ಒಡೆತನ ಬ್ರಿಟಿಷ ಕಂಪೆನಿಗಳಿಗೆ ಸೇರಿದೆ ನಮ್ಮ ವ್ಯಾಪಾರದಲ್ಲಿ ಮುಕ್ಕಾಲಂಶದಷ್ಟನ್ನು ಈ ವಿದೇಶೀ ಕಂಪೆನಿಗಳೇ ನಡೆಸುತ್ತವೆ. ಈಚೆಗೆ ಕಾಣಿಸಿಕೊಂಡಿರುವ ಭಾರತೀಯ ಕಂಪೆನಿಗಳ ತಯಾರಿಕೆ ವಿದೇಶೀ ವಸ್ತುಗಳಷ್ಟು ಜನಪ್ರಿಯತೆಯನ್ನು ಪ... ದಿಲ್ಲವಾಗಿ ಅವುಗಳೊಡನೆ ಸ್ಪರ್ಧಿಸುವುದು ಕಷ್ಟಸಾಧ್ಯವೆನಿಸಿದೆ.

ನಮ್ಮ ಹೊಗೆಸೊಪ್ಪು ಉತ್ಕೃಷ್ಟತ... ದ್ದಾಗಿಲ್ಲದಿರುವುದರಿಂದ, ಸಿಗರೇಟು ತಯಾರಕರು ವರ್ಜಿನೀಯಾದ ಸುಪ್ರಸಿದ್ಧ ತಂಬಾಕನ್ನು ಆಯಾತ ಮಾಡುತ್ತ... ಈ ಪ್ರಮಾಣ ೭೫ಲಕ್ಷ ರಾತಲಿನಷ್ಟಿದೆ ಈಗಾಗ ನಮ್ಮ ಸಿಗರೇಟು ಮುಂತಾದವುಗಳು ವಿದೇಶಗಳಿಗೆ ನಿರ್ಯಾತವಾಗುವುದೂ ಉಂಟು. ಭಾರತದ ಸಿಗಾರುಗಳಿಗೆ ಬೇಡಿಕೆ ತುಂಬಾ ಹೆಚ್ಚುತ್ತಿದೆಯಂತೆ.

ಎಲ್ಲರಿಗೂ ಗೊತ್ತಿರುವಂತೆ, ನಮ್ಮ ಐವತ್ತರ ಡಬ್ಬಿಯಲ್ಲೊ ಹತ್ತರ ಪಾಕೆಟುಗಳಲ್ಲೊ ಸಿಗರೇಟು ತುಂಬುತ್ತಾರೆ ಉತ್ತಮ ಮಧ್ಯಮ ಹಾಗೂ ಸಾಮಾನ್ಯ ತರಗತಿಯ ಸಿಗರೇಟುಗಳಿವೆ. ಸಾಮಾನ್ಯ ಸರಕಾರಿ ಅಧಿಕಾರಿಯೊಬ್ಬನು ತಿಂಗಳಿಗೆ ೫೦ರೂಪಾಯಿ ಸಿಗರೇಟಿಗಾಗಿ ವ್ಯಯಿಸಿಯಾನು! ಶ್ರೀಮಂತರು ೧೫೦ರೂಪಾಯಿಯಷ್ಟು ಸಿಗರೇಟು ಕೊಂಡು ಸೇದಿಯಾರು! ಆದರೆ ಶೇಕಡಾ ೭೦ ಸಿಗರೇಟುಗಳು ಸಾಮಾನ್ಯ ತರಗತಿಗೆ ಸೇರಿದ್ದು — ನಮ್ಮ ಜನರ ಮನೋಭಿಲಾಷೆಯೊಂದನ್ನು ಪೂರೈಸುವಷ್ಟೇ ಅದರ ಕಾರ್ಯಭಾರ

The Canara Mutual Assurance Co. Ltd.
Head Office: **UDIPI**, S. INDIA. ESTD: 1935.

ಶುಭಾಶಯಗಳು!

ನಾವು ನಮ್ಮೆಲ್ಲ ವಿಮಾದಾರರನ್ನೂ ಪ್ರೋತ್ಸಾಹಕರನ್ನೂ ಅವರ ನಿರಂತರವಾದ ಬೆಂಬಲಕ್ಕಾಗಿ ಅಭಿನಂದಿಸುತ್ತೇವೆ. ಅಲ್ಲದೆ ಅವರ ಪ್ರೋತ್ಸಾಹಕ್ಕೆ ಪ್ರತಿಯೊಂದೂ ರೀತಿಯಲ್ಲಿ ಅರ್ಹರಿರುವಂತೆ ಮುಂದಕ್ಕೂ ಪ್ರಯತ್ನಿಸುವೆವೆಂದು ಭರವಸೆಯನ್ನು ನೀಡುತ್ತೇವೆ. ನೂತನ ವರ್ಷವು ಸಕಲರಿಗೂ ಸುಖ ಸಂತೋಷ ಹಾಗೂ ಸಮೃದ್ಧಿಯನ್ನು ತರಲೆಂಬುದೇ ನಮ್ಮ ಹಾರ್ದಿಕೆ!

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ. ಸ್ಥಾಪನೆ: ೧೯೩೫

ರಾಮತೀರ್ಥ ಬ್ರಾಹ್ಮಿ ತೈಲ

ರಿಜಿಸ್ಟರ್ಡ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತಿದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ. ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ನಮ್ಮ ಸಾಮರ್ಥ್ಯ—ಕೌಶಲ್ಯಗಳ ದ್ಯೋತಕ

ಕನ್ನಡಿಗರ ಬಳ್ಳಾರಿ ಜಿಲ್ಲೆ ಕಳೆದ ಐವತ್ತು ವರ್ಷಗಳಿಂದ ಕ್ಷಾಮ ಡಾಮರೆಗಳಿಂದ ಬೆಂಗಾಡಾಗಿದೆ. ಮಳೆಯಿಲ್ಲದೆ ಬೆಳೆಯಾಗದೆ ಜನ ಹಾಗೂ ಜಾನುವಾರುಗಳ ಜೀವನ ದುರ್ಧರವಾಗಿದೆ. ಬರಗಾಲ ಪರಿಹಾರ ಕಾರ್ಯಕ್ಕೋಸ್ಕರ ಸರಕಾರ ಮಿತಿಮೀರಿ ವೆಚ್ಚವನ್ನು ಮಾಡುವುದು ಅಗತ್ಯವಾಗಿ ಪರಿಣಮಿತು. ಕಳೆದ ಐವತ್ತು ವರ್ಷಗಳಲ್ಲಿ ಪ್ರತಿಯೊಂದು ವರ್ಷಕ್ಕೊಮ್ಮೆ ಬರಗಾಲ ತಾಂಡವವಾಡಿಯೇ ತೀರಿತೆಂದರೆ, ಕಷ್ಟ ನಿಷ್ಟುರಗಳ, ನಾವು ನೋವುಗಳ ಕಲ್ಪನೆ ನಮಗಾದೀತು! ರಾಯಲ ಸೀಮೆಯ ಇತರ ಜಿಲ್ಲೆಗಳಂತೆ ಬಳ್ಳಾರಿಯಲ್ಲೂ ಮಳೆ ಬಹಳ ಕಡಿಮೆ: ಎಂದರೆ ೨೨ ಇಂಚು. ಅದೂ ನಿರಾವಲಂಬಿಯಾಗಿದೆ. ಆದುದರಿಂದ ಅದನ್ನು ನಂಬಿದರೆ ರೈತರ ಭಾಗ್ಯೋದಯವಾಗುವಂತಿರಲಿಲ್ಲ. ಕಾರಣ ಸರಕಾರದವರು ಕೃಷಿ ಕ್ಷೇತ್ರಗಳಿಗೆ ನಿರಂತರವಾಗಿ ನೀರನ್ನೊದಗಿಸುವ ಬಗೆ ಹೇಗೆಂಬುದನ್ನು ತಜ್ಞರ ನೆರವು ಪಡೆದು ವಿಚಾರಿಸಿದರು. ಪರಿಣಾಮವಾಗಿ ಈ ಪ್ರದೇಶದಲ್ಲಿ ಹರಿಯುವ ತುಂಗಭದ್ರೆಗೆ ಮಹಾ ಅಣೆಕಟ್ಟನ್ನು ಹಾಕಿ, ಅದರ ನಿರ್ಮಲ ಜಲ ಸೇಚನದಿಂದ ಭೂಮಿಯನ್ನು ತಣಿಸಿ, ಧನಧಾನ್ಯ ಸಮೃದ್ಧಿಯನ್ನೂ ಜನತಾ ಕಲ್ಯಾಣವನ್ನೂ ರಾಷ್ಟ್ರೀಯ ಪುನರುತ್ಥಾನವನ್ನೂ ಸಾಧಿಸಬಹುದೆಂದು ಕಂಡುಕೊಂಡರು. ೧೯೪೫ರ ಫೆಬ್ರುವರಿ ೫ನೇ ದಿನಾಂಕ ಈ ಬೃಹತ್ ಯೋಜನೆಯ ಅಡಿಗಲ್ಲನ್ನು ಹಾಕಿದರು.

ಹೊಸ ಹಂಪೆಯನ್ನು ಕಟ್ಟುವ ತುಂಗಭದ್ರೆಯ ಯೋಜನೆ

ಚಿಲುವಾದ ಯೋಜನೆ

ಯೋಜನೆಯನ್ನು ಮದ್ರಾಸು ಹಾಗೂ ಹೈದರಾಬಾದು ರಾಜ್ಯಗಳು ಸಂಯುಕ್ತ ರೂಪದಿಂದ ಕೈಗೊಂಡಿವೆ. ಪಂಚವಾರ್ಷಿಕ ಯೋಜನೆಯಲ್ಲಿ ಇದು ಸ್ಥಾನವನ್ನು ಪಡೆದದೆ ಮಾತ್ರವಲ್ಲ ೧೯೫೩ರಲ್ಲಿ ಈ ಯೋಜನೆಯು ಉಪಯೋಗಕ್ಕೆ ಸಿದ್ಧವಾಗುವುದೆಂಬ ನಿರೀಕ್ಷೆ ಇದೆ. ತುಂಗಭದ್ರೆಯು ಕನ್ನಡಿಗರಿಗೆ ಸ್ಫೂರ್ತಿಯನ್ನೂ ನವ ಚೈತನ್ಯವನ್ನೂ ಕೊಡಬಲ್ಲ ನದಿ: ಹಾಡಿನ ಕೊಂಪೆಯಾಗಿದ್ದ ಹಂಪೆ ವಿಜಯ ನಗರದಂಥ ಮಹಾ ಸಾಮ್ರಾಜ್ಯದ ರಾಜಧಾನಿಯಾಗಿ ಮೆರೆದದ್ದು ತುಂಗಭದ್ರೆಯ ಪುಣ್ಯ ಪ್ರಭಾವದಿಂದಲೇ. ಕರ್ನಾಟಕದ ೨೭೦೦೦ ಚದರ ಮೈಲು ವಿಸ್ತೀರ್ಣವನ್ನು ಬಳಸಿ ಬರುವ ಈ ನದಿ ಮಳೆಗಾಲದಲ್ಲಿ ನೆರೆ ತುಂಬಿ ಹರಿದರೂ ಬೇಸಿಗೆಯಲ್ಲಿ ನೀರಿಲ್ಲದೆ ಬತ್ತುತ್ತದೆ. ಈ ನದಿಯ ನೀರನ್ನು ಸಂಚಯಿಸಿ, ಕೃಷಿಗೆ ಉಪಯೋಗಿಸುವುದರಿಂದ ಜನತೆಗೆ ತುಂಬ ಲಾಭವಿದೆಯೆಂದು ತೋರಿದುದು ಸ್ವಾಭಾವಿಕ. ಬರಗಾಲ ನಿವಾರಣೆಗೆಂದು ಕೈಕೊಳ್ಳುವ ಕಾರ್ಯಗಳಿಗೆ ವರ್ಷ ವರ್ಷವೂ ಮಾಡುವ ವೆಚ್ಚನ್ನೆಲ್ಲ ಒಟ್ಟಿಗೆ ಅಣೆಕಟ್ಟಿನ ನಿರ್ಮಾಣಕ್ಕೆ ವಿನಿಯೋಗಿಸಿದರಾಗದೆ ಎಂಬ ಪ್ರಶ್ನೆ ತಜ್ಞರ ಮುಂದೆ ಬಂತು. ೧೮೬೦ನೆ ಇಸವಿಯಷ್ಟು ಹಿಂದಿನಿಂದಲೇ ನಡೆಸಿದ ಪರಿಶೀಲನೆಗಳು ಕೊನೆಗೊಮ್ಮೆ ಮೂರ್ತಿ ಸ್ವರೂಪವನ್ನು ತಳೆದುವು. ನೀರಿನ ಹಂಚಿಕೆಯ ಕುರಿತು ಮದ್ರಾಸು–ಹೈದರಾಬಾದು ರಾಜ್ಯಗಳೊಳಗಿದ್ದ ಭಿನ್ನಾಭಿಪ್ರಾಯವು ೧೯೩೩ರಲ್ಲಿ ರಾಜಾಜಿಯವರ ಮುತ್ಸದ್ದಿತನದಿಂದ ಬಿಡಿಸಲ್ಪಟ್ಟ ಮೇಲೆ ಕೆಲಸ ತುಂಬ ಸುಗಮವಾಯಿತು. ೧೯೪೦ರಲ್ಲಿ ಇಂಜಿನಿಯರ ಶ್ರೀ ಎಂ. ಎಸ್. ತಿರುಮಲೆ ಅಯ್ಯಂಗಾರರು ನಿರ್ಮಿಸಿದ ಯೋಜನೆಯಂತೆ, ೧೯೪೫ರಲ್ಲಿ ಕಾರ್ಯಾರಂಭಿಸಲ್ಪಟ್ಟಿತು. ನಿರ್ದೇಶಿಸಲ್ಪಟ್ಟ ಸಮಯದಲ್ಲಿ ಮತ್ತು ನಿಯೋಜಿಸಲ್ಪಟ್ಟ ರೀತಿಯಲ್ಲಿ ನಡೆಯುತ್ತಿರುವ ಯೋಜನೆ ಇದೊಂದೇ ಎಂದರೂ ಸಲ್ಲುವುದು.

ರೂಪರೇಖೆ

ಮಲ್ಲಾಪುರವೆಂಬಲ್ಲಿ ಈಗ ಅಣೆಕಟ್ಟನ್ನು ಹಾಕಿರುವರು. ಇಲ್ಲಿ ತುಂಗಭದ್ರೆಯು ವರ್ಷಕ್ಕೆ ಸುಮಾರು ನಲವತ್ತು ಸಾವಿರ ಕೋಟಿ ಘನಅಡಿಯಷ್ಟು ನೀರನ್ನು ಹರಿಯಗೊಡುತ್ತಾಳೆಂದು ಅಂದಾಜು. ನೀರಾವರಿ ಉಪಯೋಗವನ್ನಷ್ಟೆ ಅಲ್ಲ, ವಿದ್ಯುದುತ್ಪಾದನೆಯ ಗುರಿಯನ್ನೂ ಯೋಜನೆಯು ಇಟ್ಟುಗೊಂಡಿದೆ. ಮುಖ್ಯವಾಗಿ ಮಲ್ಲಾಪುರದಲ್ಲಿ ನದಿಯ ಎರಡೂ ಗುಡ್ಡಗಳನ್ನು ದಾಟುವಲ್ಲಿ ಅಣೆಕಟ್ಟನ್ನು ನಿರ್ಮಿಸುವುದೂ ನದಿಯ ಇಕ್ಕೆಲಗಳಲ್ಲಿ ನೀರಾವರಿ ಕಾಲುವೆಗಳನ್ನು ತೋಡುವುದೂ ಅಣೆಕಟ್ಟು ಹಾಗೂ ಕಾಲುವೆ ಪ್ರಪಾತಗಳಲ್ಲಿ ವಿದ್ಯುದುತ್ಪಾದಿಸುವುದೂ ಯೋಜನೆಯ ಅಂಗ. ಮಲ್ಲಾಪುರದಲ್ಲಿ ತುಂಗಭದ್ರೆಯು ೧೦೮೦೦ ಚದರ ಮೈಲು ಪ್ರದೇಶವನ್ನು ಹಾದು ಬರುತ್ತದೆ. ಇಲ್ಲಿ ಹರಿಯುವ ನೀರಿನಲ್ಲಿ ಸುಮಾರು ಹನ್ನೊಂದು ಸಾವಿರ ಕೋಟಿ ಘನಅಡಿಯಷ್ಟನ್ನು ಮಾತ್ರ ಶೇಖರಿಸಿಡಬಲ್ಲ ಅಣೆಕಟ್ಟು ಪ್ರಸ್ತುತ ನಿರ್ಮಿಸಲ್ಪಡುತ್ತಿದೆ. ಮಧ್ಯಮ ತರಗತಿಯ ಗ್ರಾನಿಟ ಮಾದರಿಯಲ್ಲಿ ಹೆಚ್ಚಿನ ನೀರನ್ನು ನದಿಗೆ ಹರಿಯಗೊಡುವಂತೆ ನಡುವೆ ಕೋಡಿಗಳನ್ನಿಟ್ಟು ಆಚೆ ಈಚೆ ತುಂಬುಗಳಲ್ಲಿನ ಭಾಗಗಳನ್ನು ಕೂಡಿಸಿಟ್ಟು ಅಣೆಕಟ್ಟು ನಿರ್ಮಾಣಗೊಂಡಿದೆ. ಬೆಣಚುಗಲ್ಲುಗಳಿಂದಲೇ ಸಂಪೂರ್ಣವಾಗಿ ಈ ಅಣೆಕಟ್ಟು ನಿರ್ಮಾಣಗೊಂಡಿರುವುದೊಂದು ಕೌತುಕ. ಇದರ ಉದ್ದ ೭೫೯೨ ಅಡಿ. ಎತ್ತರ ತಳಪಾಯದಿಂದ ೧೬೦ ಅಡಿ. ಅಗಲ ಅಡಿಭಾಗದಲ್ಲಿ ೧೩೩ ಅಡಿಯಷ್ಟಿದ್ದು, ಮೇಲೆ ೨೨ ಅಡಿ. ಈ ಅಣೆಕಟ್ಟಿನಿಂದ ನಿರ್ಮಾಣಗೊಂಡ ವಿಶಾಲವಾದ ಜಲಾಶ್ರಯವು ೧೩೩ ಚದರ ಮೈಲು ಪ್ರದೇಶವನ್ನು ಮುಳುಗಿಸ್ತುದೆ. ೭೫ ಗ್ರಾಮಗಳೂ ನಾರಾಯಣ ದೇವರ ಕೆರೆಯಂಥ ಪೇಟೆಗಳೂ ಜಲಸಮಾಧಿಯನ್ನು ಹೊಂದುತ್ತವೆ. ಮದ್ರಾಸು ರಾಜ್ಯದ ಕೆಳಮಟ್ಟದ ಕಾಲುವೆಗಳ ನಿರ್ಮಾಣ ಕಾ

(೧೦ನೇ ಪುಟ ನೋಡಿರಿ)

ನೀವು ಒಂದು ಸೇವಿಂಗ್ಸ್ ಬೇಂಕ್ ಖಾತೆಯನ್ನೇಕೆ ತೆರೆಯಬೇಕು?

ನೀವು ಒಂದು ಸೇವಿಂಗ್ಸ್ ಬೇಂಕ್ ಖಾತೆಯನ್ನು ತೆರೆಯುವಾಗ ನೀವು ಒಂದು ಪ್ರಾಮುಖ್ಯ ಹೆಜ್ಜೆಯನ್ನೂ ಮುಂದಿಡುತ್ತೀರಿ. ಈ ಹೆಜ್ಜೆಯು ನಿಮ್ಮ ಹಣದ ಭದ್ರತೆ, ಜಯ ಹಾಗೂ ಭಾವೀ ಸುಖಕ್ಕೆ ನೆರವಾಗುವುದು. ಜೀವಮಾನ ಕಾಲದಲ್ಲಿ ಅನೇಕ ಸಂದರ್ಭಗಳು ಇವೆಯಾದರೂ, ನಿಮ್ಮದೇ ಆದ ಕಿಂಚಿತ್ ಹಣವಿಲ್ಲವಾದರೆ ಅವುಗಳು ಸಾರ್ಥಕವಾಗಲಾರವು. ಆದುದರಿಂದ ಒಂದು ಸೇವಿಂಗ್ಸ್ ಬೇಂಕ್ ಖಾತೆಯಲ್ಲಿಡುವ ಅಲ್ಪ ಸ್ವಲ್ಪ ಹಣವಾದರೂ ಬೇಗನೇ ಅದು ದೊಡ್ಡ ಪ್ರಮಾಣದಲ್ಲಿ ಶೇಖರಿಸಲ್ಪಟ್ಟು ನಿಮ್ಮ ಜೀವನದ ನಿಧಿಯಾಗಿ ಪರಿಣಮಿಸುವುದು.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್

ಸ್ಥಾಪನೆ: 1925 ಹೆಡ್ ಆಫೀಸು: ಉಡುಪಿ

The Canara Industrial & Banking Syndicate Limited.

ESTD: 1925 H. O: UDIPI

ಮಿತ ದರದಲ್ಲಿ ಚಲೋ ಗಡಿಯಾರಗಳೂ ಟೈಮ್‌ಪೀಸುಗಳೂ ದೊರೆಯುತ್ತವೆ.

ವಿವರಗಳಿಗೆ ಬರೆಯಿರಿ:

MUBARAK & CO
Watch & Clock Specialists,
MADRAS 3.

ಮುಬಾರಕ್ & ಕೊ
ವಾಚ್ ಎಂಡ್ ಕ್ಲಾಕ್ ಸ್ಪೆಶಲಿಸ್ಟ್ಸ್
ಮದ್ರಾಸು 3.

ದ. ಕ. ಜಿಲ್ಲಾ ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

ಒ. ಸ. 193/1952

ಶೇಷಮ್ಮ ಶೆಡ್ತಿ—ವಾದಿ

ಮತ್ತು

ನಂದ್ಯಪ್ಪ ಶೆಟ್ಟಿ ಕೂಡಾ—ಪ್ರತಿವಾದಿರು.

ಪ್ರತಿವಾದಿರು 1, 7, 9, 11ರಿಂದ 13 ಮತ್ತು 17ನೇಯವರಾದ ಈ ಕೆಳಗಿನವರಿಗೆ—

ಉಡುಪಿ ತಾಲೂಕು ಮಂದಾರ್ತಿಗ್ರಾಮದಲ್ಲಿರುವ ರುಕ್ಮಿಣಿ ಶೆಡ್ತಿ ಮಗ ನಂದಪ್ಪ ಶೆಟ್ಟಿ ಮುತ್ತಕ್ಕ ಶೆಡ್ತಿ ಮಕ್ಕಳು ಮುಂಜಂಬಿಕ ಶೆಡ್ತಿ, ರುಕ್ಮಿಣಿ ಶೆಡ್ತಿ, ದುರ್ಗಿ ಶೆಡ್ತಿ ಮಕ್ಕಳು ನಾಗಮ್ಮ ಶೆಡ್ತಿ, ಸೂರಪ್ಪ ಸೆಟ್ಟಿ, ನಾಗಮ್ಮ ಶೆಡ್ತಿ ಮಗಳು ಕೊರಗಮ್ಮ ಶೆಡ್ತಿ ಮತ್ತು ಕೊರಗಮ್ಮ ಶೆಡ್ತಿ ಮಗಳು ಶೇಷಮ್ಮ ಶೆಡ್ತಿ ಕೂಡಾ 7 ಜನರಿಗೆ—

ಮೇಲ್ಕಾಣಿಸಿದ ವಾದಿಳಿಗೆ ತಾ7-2-1949 ರಲ್ಲು ದಾರಮ್ಮ ಶೆಡ್ತಿ (ಈಗ ಮೃತ ಪಟ್ಟ) ಮತ್ತು ಪ್ರತಿವಾದಿರು ಕೂಡಿ ರೂ5500/ಕ್ಕೆ ಬರೆಕೊಟ್ಟ ರಜಿಸ್ಟ್ರ ಡಿಮಾಂಡ್ ನೋಟಿನ ಅಸ್ಲು ಬಡ್ಡಿ ಖರ್ಚನ್ನು ಪಡೆಯುವರೆ ದಾಖಲ್ಮಾಡಿದ ಮೇಲಿನ ವ್ಯಾಜ್ಯವನ್ನು ತಾ. 29-1-1953ಕ್ಕೆ ತನಿಖೆ ಬಗ್ಗೆ ಇಟ್ಟಿದೆ. ಆ ಕುರಿತು ಏನಾದರೂ ನಿಮ್ಮ ಆಕ್ಷೇಪಗಳಿದ್ದರೆ ಸದ್ರಿ ದಿವಸ ಮೇಲಿನ ಕೋರ್ಟ್ ಮುಂದೆ ಹಗಲು 11ಘಂಟೆಗೆ ನೀವು ಖುದ್ದಾಗಲೀ ಯಾ ವಕೀಲರ ಮುಖಾಂತರವಾಗಲೀ ಹಾಜರಾಗಿ ಜ್ಯಾಹೀರು ಮಾಡಿ ಕೊಳ್ಳತಕ್ಕದು.

[ಕೋರ್ಟ್ ಹುಕುಂ ಪ್ರಕಾರ]

(Sd) B. Manjayya Hegde
Advocate for Plaintiff

ಮಂಗಳೂರು, ತಾ. 24-12-1952

NOTICE

In the Court of the Subordinate Judge of South Kanara.

R.I.A. 2353/1952 in O.P. 30/1944

Between

Thimmappa Shetty — Petitioner.

and

Kuppa Shetty & others — Respondents.

To The Respondents—

1. [illegible] of Korapalu Shedthi, resid[illegible] in Annajigoli of Inna Village of Mangalore Taluq. 2 A. Baba Shetty son of Bola Chandu Shetty C/o Madana Shetty, Mangalpadi village of Kasaragod Taluq. 3. Rukka Shetty son of Bola Chandu Shetty, residing in Palmar village of Udipi Taluk. 4. Jarappa Shetty son of Seethu Shedthi, residing in Ulepady village of Mangalore Taluq.

Please take notice that the petitioner has filed the above petition under Section 19 A (5) of the Madras Agriculturists Relief Act praying that a decree may be granted to the petitioner for the balance amount and costs etc. as stated in the petition and that the same stands posted to 6—1—1953 and that if you have any objection you may appear before the above Court at 11 A. M. on the said date and state your objections, failing which the said application will be heard and deter[illegible] in [illegible] absence

B. Padmanabha Holla,
Advocate for Petitioner.

Mangalore, Dated 24-12-52.

ಬಿರುಗಾಳಿ ಪೀಡಿತರಿಗೆ

ಆಂಧ್ರ ರಾಜ್ಯದ ಸಂಬಂಧದಲ್ಲಿ ವಿವಿಧ ಪ್ರತಿಕ್ರಿಯೆ

ತೆಲುಗ-ತಮಿಳರ ಸಂಘರ್ಷ

ನ್ಯಾಯ ಮೂರ್ತಿ ವಾಂಛೂ ಆಂಧ್ರ ಪ್ರಾಂತ ನಿರ್ಮಾಣಕೆ ಸಂಬಂಧಿಸಿದ ಆರ್ಥಿಕ ಮತ್ತಿತರ ಸಂಗತಿಗಳ ಬಗ್ಗೆ ವರದಿ ಮಾಡಲು ಮದ್ರಾಸಿಗೆ ಇಷ್ಟರಲ್ಲಿಯೇ ಆಗಮಿಸುವರು. ಆಗ ಅವರೆದುರು ತಂತಮ್ಮ ನಿಲುವೆಯನ್ನು ವಿವರಿಸುವ ಜ್ಞಾಪಕ ಪತ್ರಗಳನ್ನು ತಯಾರಿಸುವದರಲ್ಲಿ ಸಾಮಾನ್ಯತಃ ಎಲ್ಲ ಪಕ್ಷ ಪಂಗಡಗಳೂ ಈಗ ತೊಡಗಿವೆ. ಈ ಮೊದಲೇ ಊಹಿಸಿದಂತೆ ಆಂಧ್ರಪ್ರಾಂತ ನಿರ್ಮಾಣ ಮಾಡುವ ಕೇಂದ್ರಸರಕಾರದ ನಿರ್ಣಯದಿಂದ ಮೇಲಿಂದ ಮೇಲೆ ಸಂಕೋಚ ಉಂಟಾದರೂ-ಅದನ್ನು ಬಿಚ್ಚುಮನಸ್ಸಿನಿಂದ ಸ್ವಾಗತಿಸುವ ಪರಿಸ್ಥಿತಿ ಆಂಧ್ರ ಧುರೀಣರಲ್ಲಿ ಇರುವುದಿಲ್ಲ. ಮದ್ರಾಸು ನಗರವನ್ನು ಚೀಫ ಕಮಿಶನರ ರಾಜ್ಯವಾಗಿ ಮಾಡಬೇಕೆಂದು ಆಂಧ್ರ ಧುರೀಣರೆಲ್ಲರೂ ಈಗ ಒತ್ತಿಯೊತ್ತಿ ಹೇಳತೊಡಗಿರುವರು. ಆಂಧ್ರದ ಬೆನ್ನಿಗೇ ಕರ್ನಾಟಕ, ಕೇರಳ ಮುಂತಾದ ಯಾವುದೇ ಭಾಷಾನುಗುಣ ಪ್ರಾಂತ ರಚನೆಯಾಗುವುದಕ್ಕೆ ಮುಂಚಿತವಾಗಿ ಮದ್ರಾಸು ನಗರದ ಭವಿಷ್ಯ ನಿರ್ಧಾರವಾಗಬೇಕೆಂದು ಆಂಧ್ರರು ಬಯಸುತ್ತಾರೆ. ಮೊನ್ನೆತಾನೆ ಅವರೆಲ್ಲ ಸಭೆಸೇರಿ ಒಂದು ಗೊತ್ತುವಳಿಯನ್ನು ಸ್ವೀಕರಿಸಿದ್ದು—ಆಂಧ್ರಪ್ರಾಂತದ ರಾಜಧಾನಿಯು ಪ್ರಕೃತ ಮದ್ರಾಸು ನಗರದಲ್ಲಿಯೇ ಇರಬೇಕೆಂದೂ ಮದ್ರಾಸು ರಾಜ್ಯದ ಆಸ್ಪತ್ರೆ, ಶಿಕ್ಷಣ ಸಂಸ್ಥೆಗಳು ಮುಂತಾದುವಲ್ಲಿ ಆಂಧ್ರಕ್ಕೆ ಜನಸಂಖ್ಯಾ ಪ್ರಮಾಣದ ಮೇಲೆ ಮುಂದಕ್ಕೂ ಹಕ್ಕು ಉಳಿಯಬೇಕೆಂದೂ ಹೇಳಿರುವರು. ಇದೆಲ್ಲ ತೊಡಕಿನ ಪ್ರಶ್ನೆಯೆಂಬುದು ನೋಡಿದಷ್ಟಕ್ಕೆ ತಿಳಿಯುವಂತಿದೆ. ಆಂಧ್ರರು ಈ ಅಸಾಮಾನ್ಯ ಬೇಡಿಕೆಯನ್ನು ಒಪ್ಪಲಿಕ್ಕೆ ತಮಿಳರು ಸಿದ್ಧರಿಲ್ಲ—ತಮಿಳು ನಾಡಿನ ಧುರೀಣರು ಆಂಧ್ರ ಪ್ರಾಂತವು ನಿರ್ಮಾಣಗೊಂಡ ಮೇಲೆ ಒಂದೇ ಒಂದು ದಿನದ ಮಟ್ಟಿಗಾದರೂ ಅದರ ರಾಜಧಾನಿ ಮದ್ರಾಸಿನಲ್ಲಿರಲಾಗದು ಎಂದು ಸ್ಪಷ್ಟಾಭಿಪ್ರಾಯದಿಂದ ಕೂಡಿರುವರು. ಪ್ರತ್ಯೇಕವಾದ ಆಂಧ್ರವು ತನ್ನ ಸೀಮೆಯೊಳಗೆನೇ ಎಲ್ಲಿಯಾದರೂ ಹೊಸ ರಾಜಧಾನಿಯನ್ನು ಕಟ್ಟಿಕೊಳ್ಳಲಿ ಎಂದು ತಮಿಳರ ಅಪೇಕ್ಷೆ.

ಕನ್ನಡಿಗರ ಜಾಗೃತಿ

ತೆಲುಗು-ತಮಿಳರ ಸಂಘರ್ಷದೊಂದಿಗೆ ಕನ್ನಡಿಗರ ಕೂಗೂ ಕೇಳಬರುತ್ತಿದೆ: ಬಳ್ಳಾರಿ ಮತ್ತು ಅನಂತಪುರದಲ್ಲಿ ಕನ್ನಡಿಗರು ತಮ್ಮ ಧ್ವನಿಯನ್ನು ಎತ್ತಿರುವರು. ಬಳ್ಳಾರಿಯ ಆದವಾನಿ, ರಾಯದುರ್ಗ ಮತ್ತು ಆಲೂರು ತಾಲೂಕುಗಳು ಆಂಧ್ರಕ್ಕೆ ಸೇರಬೇಕೆಂದು ತೆಲುಗು ಧುರೀಣರ ಅಭಿಮತವಿದೆ. ಸಂಪೂರ್ಣ ಬಳ್ಳಾರಿ ಜಿಲ್ಲೆಯ ಮೇಲೆ ಕರ್ನಾಟಕದ ಅಧಿಕಾರ ಉಳಿಯಬೇಕು ಎಂಬುದಾಗಿ ಕನ್ನಡಿಗರ ಬೇಡಿಕೆ ಇದೆ. ಹಾಗೆಯೇ ಅನಂತಪುರ ಜಿಲ್ಲೆಯ ಮಡಕಶಿರ ಮತ್ತು ಕಲ್ಯಾಣ ದುರ್ಗ ತಾಲೂಕುಗಳೂ ಕನ್ನಡಕ್ಕೆ ಸೇರತಕ್ಕುವೆಂದು ಬೇಡಿಕೆ ಮುಂದೆ ಬಂದಿದೆ. ಬಳ್ಳಾರಿಯ ಕುರಿತು ಆಂಧ್ರರು ಬಹಳ ಹಿಂದಿನಿಂದ ತಮ್ಮ ಹಕ್ಕನ್ನೂ ವರ್ಚಸ್ಸನ್ನೂ ಪ್ರಸ್ಥಾಪಿಸುತ್ತಾ ಬಂದಿರುವರು. ಈ ವಿಷಯದಲ್ಲಿ ಕನ್ನಡಿಗ ಹಾಗೂ ತೆಲುಗರೊಳಗೆ ಯಾವಾಗಲೂ ಘರ್ಷಣೆ ನಡೆಯುತಿದ್ದಿತು. ಆದರಲ್ಲೂ ಆಂಧ್ರ ಪ್ರದೇಶ ಕಾಂಗ್ರೆಸ ಸಮಿತಿಯ ಅಧಿಕಾರಕ್ಕೆ ಬಳ್ಳಾರಿ ಜಿಲ್ಲೆಯ ಮೂರು ತಾಲೂಕುಗಳನ್ನು ಸೇರಿಸಿದಂದಿನಿಂದ ಕನ್ನಡಿಗರ ಅಸಂತೃಪ್ತಿ ಜನ್ಯವಾದ ಪ್ರತಿಭಟನೆ ಹೆಚ್ಚಿತು. ಮದ್ರಾಸು ಸರಕಾರ, ಕೇಂದ್ರ ಸರಕಾರ, ಕಾಂಗ್ರೆಸು ಮುಂತಾದುವೆಲ್ಲಕಡೆಗೂ ಒಂದರಹಿಂದೊಂದೆಂಬಂತೆ ಮನವಿಗಳನ್ನು ಕಳುಹಿಸಿದ ಬಳಿಕ ಪ್ರಧಾನಿ ನೆಹರೂ ಹೀಗೆ ಬರೆದು ತಿಳಿಸಿದರು—"ಆಂಧ್ರಪ್ರಾಂತವೇರ್ಪಡುವ ಮೊದಲು ಬಳ್ಳಾರಿ ಜಿಲ್ಲೆಯ ಮೂರು ತಾಲೂಕುಗಳ ಬಗ್ಗೆ ಅಲ್ಲದೆ ಅನಂತಪುರ ಮತ್ತು ಚಿತ್ತೂರಿನ ಕನ್ನಡ ಭಾಗಗಳ ವಿಷಯವಾಗಿ ಕನ್ನಡಿಗರು ಮಾಡಿದ ತಕರಾರುಗಳು ಬಗೆಹರಿಯಬೇಕು." ಹೀಗಿರುವುದರಿಂದ ಕನ್ನಡಿಗರಲ್ಲಿ ನವ್ಯ ಜಾಗೃತಿ ಉಂಟಾಗಿದ್ದು ಆಂಧ್ರಪ್ರಾಂತದ ಪ್ರಗತಿಯನ್ನು ಎಣ್ಣೆಗಣ್ಣಿನಿಂದ ಅಲ್ಲಿಯ ಕನ್ನಡಾಭಿಮಾನಿಗಳು ನಿರೀಕ್ಷಿಸುತ್ತಿರುವರು.

ರಾಯಲಸೀಮೆ

ಬಳ್ಳಾರಿಯ ಮೂರು ತಾಲೂಕುಗಳನ್ನು ಆಂಧ್ರದೊಡನೆ ಸೇರಿಸಬಾರದೆನ್ನುವ ಬೇಡಿಕೆ ತುಂಬ ಬಲವತ್ತರವಾಗಿರುವುದು ಗೊತ್ತಾಗುತ್ತದೆ. ಆ ಪ್ರದೇಶದ ತೆಲುಗು ನಿವಾಸಿಗಳು ಕೂಡ ಪ್ರಕೃತಮದ್ರಾಸು ರಾಜ್ಯದಲ್ಲಿಯೇ ಇರಿ ಬಳ್ಳಾರಿ ಜಿಲ್ಲೆ ಸೇರಿರಬೇಕೆಂದು ಹೇಳುತ್ತಾರೆ. ನೂರಾರು ತಂತಿಗಳೂ ಮನವಿಗಳೂ ಪ್ರಧಾನಿ ನೆಹರೂ ಮುಂತಾದವರಿಗೆ ಕಳುಹಿಸಲ್ಪಡುತಿದ್ದು, ನ್ಯಾಯಮೂರ್ತಿ ವಾಂಛೂರವರು ನಿಷ್ಪಕ್ಷಪಾತ ದೃಷ್ಟಿಯಿಂದ ಈ ಬೇಡಿಕೆಯನ್ನು ಪರಿಶೀಲಿಸುವ ಅಗತ್ಯವಿದೆ. ನಿರ್ವಿವಾದ ತೆಲುಗು ಪ್ರದೇಶಗಳಿಂದ ಮಾತ್ರ ಆಂಧ್ರ ರಾಜ್ಯವನ್ನೀಗ ನಿರ್ಮಿಸುವುದು ಕೇಂದ್ರ ಸರಕಾರದ ಬಯಕೆ ಎಂಬುದು ಪ್ರಧಾನ ಮಂತ್ರಿಗಳ ವ್ಯಕ್ತವ್ಯದಿಂದ ಸ್ಪಷ್ಟವಾಗುತ್ತಿದ್ದರೂ—ಮುಂದೆ ಗಡಿನಿರ್ಣಯದ ಪ್ರಶ್ನೆ ಬಂದಾಗ ಮತ್ತು ಉಳಿದ ಭಾಷಾನುಗುಣ ಪ್ರಾಂತರಚನೆಗೆ ಸರಕಾರ ಕೈಯಿಕ್ಕಿದಾಗ ಈ ವಿವಾದಗ್ರಸ್ತ ಪ್ರದೇಶಗಳ ಹಕ್ಕಿನ ಸಂಬಂಧದಲ್ಲಿ ತಿಕ್ಕಾಟವೆದ್ದು ಗೊಂದಲವೇರ್ಪಡುವುದು. ಇದನ್ನು ಒಮ್ಮೆಲೇ ಪರಿಹರಿಸುವುದು ಇಷ್ಟವೆಂಬುದರಿಂದ—ಆಂಧ್ರದ ಜೊತೆಗೆ ಇತರ ಭಾಷಾನುಗುಣ ಪ್ರಾಂತಗಳ ರಚನೆಯೂ ಆಗಬೇಕೆನ್ನುವ ಜನರಿರುವರು. ಹೇಗೇ ಇರಲಿ-ಆಂಧ್ರರಿಗೆ ಕನ್ನಡಿಗರ ಸತ್ವಶಾಲಿ ವಿರೋಧವೊಂದೆಡೆ ಇದ್ದರೆ—ಇನ್ನೊಂದೆಡೆಯಲ್ಲಿ ರಾಯಲಸೀಮೆಯ ಜನರಿಂದಲೂ ವಿರೋಧ ವ್ಯಕ್ತಗೊಳಿಸಲ್ಪಟ್ಟಿದೆ. ಆಂಧ್ರಪ್ರಾಂತ ನಿರ್ಮಾಣದ ಹೆಜ್ಜೆ ಅಪ್ರಸ್ತುತವೆಂದು ರಾಯಲ ಸೀಮೆಯ ಧುರೀಣರ ಅಭಿಪ್ರಾಯವಿರುವುದಲ್ಲದೆ—ಆರ್ಥಿಕ ದೃಷ್ಟಿಯಿಂದ ಅದೊಂದು ಹೊರೆಯಾಗಿ ಪರಿಣಮಿಸುವುದೆಂದು ಇವರು ಅಂಜಿಸುತ್ತಾರೆ. ಮದ್ರಾಸು ರಾಜ್ಯದಲ್ಲಿಯೆ? ರಾಯಲ ಸೀಮೆಯು ಸೇರಿರಬೇಕೆಂದು ಇವರ ಇಚ್ಛೆ ಇದೆ. ಹಾಗೆಂದು ಆಂಧ್ರ ಧುರೀಣರು ಸ್ವೀಕರಿಸಿದ ಗೊತ್ತುವಳಿಯಲ್ಲಿ ರಾಯಲ ಸೀಮೆಯ ಜನರಿಗೆ ಶ್ರೀ ಭಾಗದ ಒಪ್ಪಂದದನ್ವಯ ಭರವಸೆ ಕೊಟ್ಟಿರುವರು. ಆಂಧ್ರದ ರಾಜಧಾನಿ ಅಥವಾ ಹೈಕೋರ್ಟುಗಳಲ್ಲಿ ಒಂದನ್ನು ರಾಯಲಸೀಮೆಯಲ್ಲಿ ಸ್ಥಾಪಿಸುವ ಅಭಿಮತ ಇತ್ತಿದೆ.

ಮದ್ರಾಸಿನ ಮಂತ್ರಾಲೋಚನೆ

ಇವೆಲ್ಲವುಗಳ ಜೊತೆಗೆ ಆಂಧ್ರಪ್ರಾಂತದ ನೂತನ ಶಾಸನಸಭೆಗೆ ಹೊಸತಾಗಿ ಚುನಾವಣೆಗಳು ನಡೆಯಬೇಕೆ ಬೇಡವೆ ಎಂಬ ಸಮಸ್ಯೆ ಎದ್ದಿದೆ. ಈ ಪ್ರದೇಶದಿಂದ ಮದ್ರಾಸು ಶಾಸನಸಭೆಗೆ ಆರಿಸಿಹೋದ ೧೪೦ ಸದಸ್ಯರಿಂದಲೇ ಹೊಸ ಆಂಧ್ರ ಪ್ರಾಂತದ ಶಾಸನಸಭೆಯಾಗುವುದು ಸಾಧ್ಯವಿದೆಯೋ ಎಂಬುದು ಇನ್ನೂ ನಿರ್ಣಯಿಸಲ್ಪಟ್ಟಿಲ್ಲ—ಇದು ಸಾಧ್ಯವಾದ ಪಕ್ಷದಲ್ಲಿ ಸರಕಾರವನ್ನು ನಡೆಸಿಕೊಂಡು ಹೋಗಬಲ್ಲ ನಿಚ್ಚಳ ಬಹುಮತ ಕಾಂಗ್ರೆಸಾದಿಯಾಗಿ ಯಾವ ಪಕ್ಷಕ್ಕೂ ಇರುವುದಿಲ್ಲ. ಆದರೂ ಕೆಲವು ಸಣ್ಣ ಪಕ್ಷಗಳ ಸಹಕಾರದಿಂದ ಕಾಂಗ್ರೆಸು ಮಂತ್ರಿಮಂಡಳ ರಚಿಸಿದರೂ ಆಶ್ಚರ್ಯಪಡಬೇಕಿಲ್ಲವೆಂದು ಹೇಳುತ್ತಿರುವರು ಹೊಸತಾಗಿ ಆಂಧ್ರ ಪ್ರಾಂತ ನಿರ್ಮಾಣವಾದರೆ—ಮದ್ರಾಸ ಶಾಸನಸಭೆಯ ಸದಸ್ಯರ ಬಲವು ಬಹ ತಗ್ಗುವುದರಿಂದ ಮೇಲ್ಮನೆಯು ಇರುವುದ ಅಗತ್ಯವೇ ಎಂಬ ಇನ್ನೊಂದು ಸಂಗ ತಲೆದೋರುತ್ತದೆ. ಶಾಸನ ಸಭೆಯ ಮೇಲ್ಮನೆಯನ್ನು ಬರಖಾಸ್ತು ಗೊಳಿಸ ಹುದೆಂದು ನಿರ್ಣಯಸ್ವೀಕರಿಸದಲ್ಲಿ ಮದ್ರಾಸು ಮುಖ್ಯ ಮಂತ್ರಿ ರಾಜಗೋಪಾಲಾಚಾರಿಯರು ಚುನಾವಣೆಯ ಕಣ ಇಳಿದು, ಗೆದ್ದು ಬರುವ ಅಗತ್ಯವುಂಟಾಗುವುದು. ಅಲ್ಲದೆ, ಇತರ ಸಮಸ್ಯೆಗಳೂ ತಲೆದೋರುವುವು. ಈ ಎಲ್ಲ ಸಂಭಾವ್ಯ ಬಿಕ್ಕಟ್ಟುಗಳ ಕುರಿತಾಗಿ ಈಚೆ ಮದ್ರಾಸಿಗೆ ಆಗಮಿಸಿದ ಕೇಂದ್ರದ ಗೃಹ ಸಚಿವ ಡಾ. ಕಟಜೂ ಹಾಗೂ ಪ್ರಧಾನಿ ನೆಹರೂ ಮುಖ್ಯ ಮಂತ್ರಿ ರಾಜಗೋಪಾಲಾಚಾರಿಯವರೊಡನೆಯೂ ಬೇರೆ ಬೇರೆ ಧುರೀಣರೊಡನೆಯೂ ವಿಚಾರ ವಿನಿಮಯ ನಡೆಸಿದರು. ಡಾ. ಕಟಜೂ ಮದ್ರಾಸಿಗೆ ಆಗಮಿಸುವುದಕ್ಕೆ ಮುನ್ನ ಈ ಮಧ್ಯ ಪ್ರದೇಶದ ರಾಜ್ಯಪಾಲರಾಗಿರುವ ಮತ್ತು ತ್ರಿಮೂರ್ತಿಗಳ ವರದಿಗೆ ಸಹಿ ಹಾಕಿದವರಲ್ಲಿ ಒಬ್ಬರಾದ, ಆಂಧ್ರ ಧುರೀಣ ಡಾ. ಪಟ್ಟಾಭಿ ಸೀತಾರಾಮಯ್ಯನವರನ್ನೂ ಕಂಡರು.

ಪರಿಹಾರ ಕಾರ್ಯ

ಮದ್ರಾಸು ಸರಕಾರದ ಮಟ್ಟಿಗೆ ಹೇಳುವದಾದರೆ ಇದರಲ್ಲಿ ಉದ್ವೇಗಕ್ಕೆ ಆಸ್ಪದವಿರುವುದಿಲ್ಲ—ಅದು ಎಂದಿನಂತೆ ಕರ್ತವ್ಯ ತತ್ಪರತೆಯಿಂದ ಕಾರ್ಯನಿರ್ವಹಿಸುತ್ತಿದೆ. ನೆಹರೂರ ಹೇಳಿಕೆಯನ್ನು ಕಾರ್ಯಾನ್ವಿತಗೊಳಿಸಲು ಬೇಕಾದ್ದೆಲ್ಲವನ್ನೂ ಸರಕಾರ ಮಾಡುವುದೆಂದು ರಾಜಾಜಿ ಹಿಂದೆ ಹೇಳಿದ್ದೇ ಬಂತು—ಆ ಬಳಿಕ ಈ ಕುರಿತು ಅವರೇನೂ ಹೇಳಿದಂತಿಲ್ಲ. ಮದ್ರಾಸು ಮಂತ್ರಿ ಮಂಡಳದ ಸಭೆಯು ಮುಂಗಳವಾರದಿನ ಸೇರಿ ಆಂಧ್ರಪ್ರಾಂತ ರಚನಾ ಪ್ರಶ್ನೆಯನ್ನು ಚರ್ಚಿಸುವುದೆಂದು ತಿಳಿದಿದೆ. ಸೋಮವಾರ ದಿನ ನೆಹರೂ ರಾಜಾಜಿ ಭೇಟಿಯಾಗಿರುವುದರಿಂದ, ಮತ್ತು ಗೃಹ ಸಚಿವ ಕಟಜೂ ಕೂಡ ಮದ್ರಾಸಿನಲ್ಲಿರುವುದರಿಂದ, ಮಂತ್ರಿ ಮಂಡಳದ ಸಭೆ ಮಹತ್ವ ಪಡೆಯುತ್ತದೆ. ರಾಜಗೋಪಾಲಾಚಾರಿಯವರು ಮಾತ್ರ ಏನೇನೂ ಆತುರ ತೋರಗೊಡುವುದಿಲ್ಲ. ಈಚೆಗೆ ತಂಜಾವೂರು ತಿರುಚಿನಾಪಳ್ಳಿ ಜಿಲ್ಲೆಗಳನ್ನು ಸಂಚರಿಸಿ, ಬಿರುಗಾಳಿಯ ಅನಾಹುತವನ್ನು ಕಣ್ಣಾರೆ ಕಂಡು ಬಂದ ಇವರು—ಸಂಕಟಕ್ಕೀಡಾದ ಜನರಿಗೆ ಪರಿಹಾರವನ್ನೊದಗಿಸುವುದರಲ್ಲಿ ಆಸ್ಥೆ ವಹಿಸಿರುವರು. ಬಿರುಗಾಳಿಯ ಪ್ರಕೋಪಕ್ಕೆ ಬಲಿಯಾದ ಪ್ರತಿಯೊಂದು ಕುಟುಂಬಕ್ಕೆ ತತ್ಕಾಲದ ಪರಿಹಾರ ರೂಪದಲ್ಲಿ ಕೊಡುತಿದ್ದ ೨೦ ರೂಪಾಯಿಯನ್ನು ೩೦ ರೂಪಾಯಿಗೆ ಏರಿಸಬೇಕೆಂದು ಸರಕಾರ ಆಜ್ಞಾಪಿಸಿದೆ. ಹಾಗೆಯೇ ಕುಟುಂಬದ ಯಜಮಾನನು ಮಡಿದು, ಸದಸ್ಯರು ನಿರ್ಗತಿಕರಾದ ಸಂಗತಿಯಲ್ಲಿ ೫೦ ರೂಪಾಯಿ ಪರಿಹಾರ ಧನವ

ZANDU KESARI JIVAN

ಝಾಂಡೂ ಕೇಸರಿ ಜೀವನ

ಕೆಮ್ಮು, ನೆಗಡಿ, ರಾಜಯಕ್ಷ್ಮ, ಮಿದುಳು ನಿತ್ರಾಣ, ಅಕಾಲಿಕ ವೃದ್ಧಾಪ್ಯ, ಸರ್ವಸಾಮಾನ್ಯ ಬಲಹೀನತೆಗಳಿಗೆಲ್ಲಾ ಕೇಸರಿ ಜೀವನವು ಹೆಸರುವಾಸಿಯಾದದ್ದು ಅಲ್ಲದೆ ದೇಹಾರೋಗ್ಯವನ್ನು ಸಮತೂಕದಲ್ಲಿರಿಸಲು ಆದರ್ಶ ಟೋನಿಕ್ ಆಹಾರವಾಗಿದೆ 1 ರಾತ್ತಲು: ರೂ 6-8-0 ½ ರಾತ್ತಲು: ರೂ 1-14-0

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್, ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್, ಉಡುಪಿ

2 ಶ್ರೀ ವಿ ವಿ ಶೆಣೈ, ಕೆಮಿಸ್ಟ್, ಕಾರ್ಕಳ

3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು

4 ಎಲ್ ಎಸ್ ಶರ್ಮ, ಹಜೂರು ರಸ್ತೆ ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ.

ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಸ್ವಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರಿ ಶರತ್ತು ವಗೈರೆಗೆ ಬರೆಯಿರಿ

DAMODAR & CO.,

Nainappa Naicken Street, Park Town-MADRAS 3.

...ತೀರ್ವೆ ರಿಯಾಯಿತಿ

...ಮಾನವ ಕಲ್ಯಾಣಕ್ಕಾಗಿ ಅಣುಶಕ್ತಿಯ ಉಪಯೋಗ

...ನೀಡಬೇಕೆಂದು ಸರಕಾರ ಸಂಕಲ್ಪಿ... ಬೆಸ್ತರಿಗೆ ಬಲೆಯನ್ನು ದುರಸ್ತಿ...ಸಿ, ಮರಳಿ ಮತ್ಸ್ಯ ವ್ಯವಸಾಯ... ಕೈಗೊಳ್ಳಲನುಕೂಲಿಸುವಂತೆ ಪರಿ... ದ್ರವ್ಯವನ್ನೂ ಸರಕಾರ ನೀಡಿದೆ. ...ತರ ಹತ್ತು ಹಲವು ಬಗೆಗಳಲ್ಲಿ ನಿಸ... ಕೋಪದಿಂದ ಕಂಗೆಟ್ಟ ಜನತೆಗೆ ...ವು ನೀಡಲು ಸರಕಾರ ಪ್ರಯತ್ನಿಸಿದೆ: ...ಗಿ ಬಂದ ಅಪಾರ ಹಾನಿಯನ್ನು ಸುಲ...ದರೆ–ಸರಕಾರ ನೀಡುವ ಪರಿಹಾರ ... ಮಾತ್ರಕ್ಕೂ ಸಾಲದೆಂದು ತೋರ...ದು. ಆದರೆ ಹಿತಮಿತವಾದ ಆಬಾ...ವಲ್ಲಿ ಇಂಥ ಅನಪೇಕ್ಷಿತ ವಿಪತ್ಪ್ರಸಂಗ...ದ ಚೇತರಿಸಿಕೊಳ್ಳುವುದಕ್ಕೆ ನೀಡಿ... ಅಲ್ಪ ಸಹಾಯಲ್ಲಿ ಸಂತುಷ್ಟಿಪಟ್ಟು...ಳ್ಳುವುದು ಕರ್ತವ್ಯ. ಸಮಯಕ್ಕೆ ಒ...ದ ತೃಣವೇ ಪರ್ವತಪ್ರಾಯವೆಂಬ ...ಭಾಷಿತವನ್ನಿಲ್ಲಿ ನೆನೆಯುವುದೊಳಿತು.

ತೀರ್ವೆ ರಿಯಾಯತಿ

...ಸರಕಾರದವರು ಸಂಕಟಗ್ರಸ್ತ ಜನ... ಪರಿಹಾರ ನೀಡುವಲ್ಲಿ ಶಕ್ತಿ ಮೀರಿ...ಗುತ್ತಿದ್ದಾರೆಂಬುದು ಇನ್ನೊಂದು ...ಗತಿಯಿಂದಲೂ ವೇದ್ಯವಾಗುತ್ತಿದೆ- ...ದಲೇ ಊಹಿಸಿದಂತೆ—ಸರಕಾರದವರು ತೀರ್ವೆಯಲ್ಲಿ ಮಾಫಿಯನ್ನೂ ಮಾಡಿರುವರು. ರುಪಾಯಿಗೆ ನಾಲ್ಕಾಣೆಯಷ್ಟು ಭತ್ತದ ಬೆಳೆ ಕೈಗೆ ಬಂದಿರುವಲ್ಲಿ ಸಂಪೂರ್ಣ ತೀರ್ವೆಯನ್ನೂ, ನಾಲ್ಕಾಣೆಯಿಂದ ಎಂಟಾಣೆಯವರೆಗಷ್ಟೆ ಫಸಲು ಆದಲ್ಲಿ ಅರ್ಧದಷ್ಟನ್ನೂ ರಿಯಾಯತಿ ಮಾಡಿರುವರು. ಉಳಿದ ಬೆಳೆಗಳನ್ನೂ ಹೀಗೆ ಸಹಾನುಭೂತಿಯ ದೃಷ್ಟಿಯಿಂದ ನೋಡಿರುವರು. ಈ ಎಲ್ಲ ಕಾರಣಗಳಿಂದ ರಾಜ್ಯದ ಹಣಕಾಸಿನ ಪರಿಸ್ಥಿತಿಯು ತುಂಬ ಸೂಕ್ಷ್ಮ ಮಟ್ಟವನ್ನು ಮುಟ್ಟುವುದರಿಂದ-ರಾಜ್ಯ ಸರಕಾರ ತನ್ನ ಕೈಯಿಂದಾಗುವ ವೆಚ್ಚದಲ್ಲಿ ತುಂಬ ಬಿಗಿದೋರುವುದು ಅಗತ್ಯವೆಂದು ಕಂಡುಕೊಂಡಿದೆ. ಇಷ್ಟರವರೆಗೆ ಹೆಚ್ಚು ಬೆಲೆ ಕೊಟ್ಟು ಉಳಿದ ರಾಜ್ಯಗಳಿಂದ ಪಡೆದ ಅಕ್ಕಿಯನು ಈ ರಾಜ್ಯದ ಜನರಿಗೆ ಕಡಿಮೆ ಕ್ರಯಕ್ಕೆ ಒದಗಿಸಿಕೊಡಲಾಗುವಂತೆ ಕೈಯಿಂದ ರುಪಾಯಿಯನ್ನು ತುಂಬಿಸುತ್ತಿದ್ದ ಪರಿಪಾಟವನ್ನು ಕಳೆದ ವಾರದಿಂದ ನಿಲ್ಲಿಸಿರುವರು. ಲಾಭವೂ ಬೇಡ ನಷ್ಟವೂ ಬೇಡ ಎಂಬ ತಳಹದಿಯ ಮೇಲೆ, ಆಯಾತ ಮಾಡಿದ ಅಕ್ಕಿಯನ್ನು ಕೈಯಿಂದ ಬಿದ್ದ ಬೆಲೆಗೆ ಮಾರಲು ಸರಕಾರ ನಿರ್ಧರಿಸಿದೆ. ಪರಿಣಾಮವಾಗಿ–ಸರಕಾರ ಅಕ್ಕಿಯ ಬೆಲೆ ತುಸು ಹೆಚ್ಚಿದೆ. ಜನರಿಗೆ ಇದರಿಂದ ಹೆಚ್ಚು ತೊಂದರೆಯಾಗಬಾರದೆಂದು ಎಣಿಸಿ, ಸರಕಾರವು ಗೋಧಿಯ ಬೆಲೆಯನ್ನು ಸ್ವಲ್ಪ ತಗ್ಗಿಸಿದೆ. ನಮ್ಮ ನಿತ್ಯದ ಆಹಾರದಲ್ಲಿ ಗೋಧಿಯಂಥ ಪೌಷ್ಟಿಕ ಧಾನ್ಯವನ್ನು ಹೆಚ್ಚು ಹೆಚ್ಚು ಉಪಯೋಗಿಸುವುದು ಒಳಿತೆಂಬುದನ್ನು ಕಡೆಗಣಿಸಿ ಮದ್ರಾಸಿನವರು ಅಕ್ಕಿಯನ್ನು ತಿನ್ನುವುದರಿಂದ, ಕೇಂದ್ರ ಸರಕಾರಕ್ಕೆ ಅಕ್ಕಿಯ ಪೂರೈಕೆ ಒಂದು ಸಮಸ್ಯೆಯಾಗಿದೆ. ಮುಂದಿನ ವರ್ಷ ಕೇವಲ ೩೦ ಲಕ್ಷ ಟನ್ನು ಆಹಾರ ಧಾನ್ಯವನ್ನು ಆಯಾತ ಮಾಡಿದರೆ ಸಾಕಾದೀತೆಂದೂ ಅದರಲ್ಲಿ ೭ ಲಕ್ಷ ಟನ್ನು ಅಕ್ಕಿಯೆಂದೂ ಕಿಡ್ವಾಯಿ ಹೇಳಿರುವರು.

ಕಡಿಮೆ ವೇತನದ ಆದರ್ಶ

ವೆಚ್ಚವನ್ನು ಕಡಿಮೆ ಮಾಡುವ ಮದ್ರಾಸು ಸರಕಾರದ ಇಚ್ಛೆಯು ಉಳಿದ ರಾಜ್ಯಗಳಿಗೂ ಅನುಕರಣೀಯವೆಂದು ತೋರಿದೆ. ತನ್ನ ರಾಜ್ಯದ ಹೆಚ್ಚು ವೇತನದ ನೌಕರರ ಸಂಬಳದಲ್ಲಿ ನೂರಕ್ಕೆ ಹತ್ತರಷ್ಟು ಕಡಿತ ಹಾಕಿದ ಮದ್ರಾಸು ಸರಕಾರ, ಕೇಂದ್ರ ಸರಕಾರದ ಐ. ಸಿ. ಎಸ್ ಮತ್ತು ಐ. ಎ. ಎಸ್. ನೌಕರ ವರ್ಗಕ್ಕೂ ಈ ಕಡಿತವನ್ನು ಅನ್ವಯಿಸುವುದಕ್ಕೆ ಪರವಾನಿಗೆ ಕೇಳಿದೆ. ಈ ಸಂಬಂಧದಲ್ಲಿ ಇನ್ನೂ ನಿರ್ಣಯವನ್ನು ಕೇಂದ್ರ ಸರಕಾರ ಕೈಗೊಂಡಿಲ್ಲವಾದರೂ ರಾಜಸ್ಥಾನ, ಪಶ್ಚಿಮ ಬಂಗಾಳದಂಥ ರಾಜ್ಯಗಳೂ ಈ ಕುರಿತು ಒತ್ತಾಯವನ್ನು ಕೋರಿಸುವ ಲಕ್ಷಣವಿದೆ. ತಮ್ಮ ಸಂಬಳದಲ್ಲಿ ದೊಡ್ಡ ತೂತು ಬೀಳುವುದನ್ನು ನೌಕರರು ಸಹಿಸದಿರುವುದು ತೀರ ಸ್ವಾಭಾವಿಕ ಎಂತಲೇ––ಅವರು ಈ ಕುರಿತು ತಮ್ಮ ಆಕ್ಷೇಪಣೆಯನ್ನು ತಕ್ಷಣ ಸರಕಾರಕ್ಕೆ ತಿಳಿಸಿರುವರು. ಆದರೆ ಭಾರತದಂಥ ಬಡ ದೇಶದಲ್ಲಿ ಉನ್ನತಾಧಿಕಾರಿಗಳು ಸಂಬಳ ಮುಂತಾದ ಅನೇಕ ವಿಷಯಗಳಲ್ಲಿ ಜನತೆಗೊಂದು ಮಾದರಿಯನ್ನು ಹಾಕಿಕೊಡದಿದ್ದರೆ, ಕೆಳ ನೌಕರರ ವರ್ಗದಲ್ಲಿ ಅಸಂತುಷ್ಟಿಯೂ, ದ್ವೇಷವೂ ಹೆಚ್ಚುವುದಲ್ಲದೆ–ವಾಮಾಚಾರಕ್ಕೂ ಅವಕಾಶವೊದಗುವುದು. ನಮ್ಮ ಸರಕಾರೀ ಆಡಳಿತ ಯಂತ್ರವು ಇಷ್ಟೊಂದು ಕುಸಿದು ಬೀಳಲಿಕ್ಕೆ ಹೊಣೆಗಾರಿಕೆಯನ್ನು ಜಾರಿಸಿ ಬಿಡುವ ಸ್ವಭಾವವೊಂದು ಕಾರಣವಾದರೆ—ಕೆಳ ನೌಕರರ ಅಸಂತೃಪ್ತಿ ಇನ್ನೊಂದು ಬಲವಾದ ಕಾರಣ. ವಿದ್ಯಾಬುದ್ಧಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ವೇತನದಲ್ಲಿ ವ್ಯತ್ಯಾಸವಿರುವುದು ಅಪೇಕ್ಷಣೀಯವಾದರೂ-ಕನಿಷ್ಠ ಮತ್ತು ಗರಿಷ್ಠ ಮಿತಿಯಲ್ಲಿರುವ ಅಂತರ ಅಗಾಧವಾಗಿರುವುದು ಸಮಂಜಸವಲ್ಲ. ನಮ್ಮ ಜನರ ಸರ್ಕಾರಿಯ ಮೋಹವೊಂದಲ್ಲದಿರುತಿದ್ದರೆ—ಇಷ್ಟರ ಮಟ್ಟಿಗೆ ಸಮಾಜದ ಕೇಡು ಸಂಭವಿಸುತ್ತಿರಲಿಲ್ಲ. ದೈಹಿಕ ಶ್ರಮವನ್ನು ದುರ್ಲಕ್ಷಿಸಿ ಲಘು ಬರಹದ ಕೆಲಸಗಳಿಗೆ, ಮತ್ತು ಆ ಸಂಬಳಕ್ಕೆ ಮಾರುಹೋಗುವ ಪ್ರವೃತ್ತಿ ರಾಷ್ಟ್ರದ ಕಲ್ಯಾಣದ ದೃಷ್ಟಿಯಿಂದ ಘಾತುಕವಾಗಿದೆ. ಎಲ್ಲರೂ ಕೈ ತುಂಬ ಸಂಬಳ ಮತ್ತು ಧಾರಾಳವಾದ ಅನುಕೂಲತೆ ಇರುವ ಸರಕಾರೀ ನೌಕರಿಯನ್ನು ಪಡೆಯಲಾರರೆಂಬುದರಿಂದ ಈ ಮಾತು ಇನ್ನಷ್ಟು ಮಹತ್ವ ಪಡೆಯುತ್ತದೆ.

ನೈಸರ್ಗಿಕ ಸಂಪತ್ತು

ನಮ್ಮಲ್ಲಿರುವ ನೈಸರ್ಗಿಕ ಸಂಪತ್ತುಗಳನ್ನು ಬೌದ್ಧಿಕ ಹಾಗೂ ದೈಹಿಕ ಸಾಮರ್ಥ್ಯಗಳಿಂದ ಚೆಲುವಾಗಿ ಉಪಯೋಗಿಸಿಕೊಳ್ಳ[illegible] ಪ್ರಧಾನಿ ನೆಹರೂ ತಿರುಕೊಚ್ಚಿಯ ಕ್ವಿಲೋನು ಮತ್ತು ಎರ್ನಾಕುಳಂ ನಗರಗಳನ್ನು ಜೋಡಿಸುವ ಹೊಸ ರೈಲು ಮಾರ್ಗದ ರಚನೆಯ ಪ್ರಾರಂಭೋತ್ಸವವನ್ನು ನೆರವೇರಿಸಿದಾಗ, ಇಂಥ ಉದ್ಯಮಗಳು ಜನರ ಉತ್ಕರ್ಷಕ್ಕೆ ಅಗತ್ಯವೆಂಬುದನ್ನಂತೂ ಹೇಳಿದರು. ಆದರೆ ಅದಕ್ಕೂ ಹೆಚ್ಚು ಒತ್ತಾಯವನ್ನವರು ಪರಿಶ್ರಮಪೂರ್ವಕವಾದ ದುಡಿಮೆಗೆ ಶಾರೀರಿಕ ಶ್ರಮಕ್ಕೆ ಕೊಟ್ಟರು. ರೈಲು ಮಾರ್ಗವಾಗಲೀ, ಇನ್ನಿತರ ಯಾವುದೇ ಸಮಾಜಹಿತ ಕಾರ್ಯವಾಗಲೀ–ಜನರ ಸಾಮೂಹಿಕ ಪರಿಶ್ರಮದ ಫಲವಾಗಿ ನಿರ್ಮಾಣಗೊಂಡರೇನೆ ಶ್ರೇಯಸ್ಕರವೆಂಬ ಅವರ ಮಾತು ಇಂದಿನ ದಿನಮಾನದಲ್ಲಿ ಅಕ್ಷರಶಃ ಸತ್ಯ. ಹಣರೂಪದ ಬಂಡವಳವಿಲ್ಲದ ನಮ್ಮಂಥ ಬಡವರು [illegible] ಕೊಳ್ಳುವ ಶ್ರಮವನ್ನು ಸ್ವಂತ ದುಡಿಮೆ[illegible]ದಲ್ಲಿ ದಾನ ಮಾಡಿದರೆ–ಅದೇ ಮಹಾಮಹ ಕಾರ್ಯವೆಂದು ತಿಳಿಯಬೇಕು. ನಮ್ಮ ವಿಶ್ವವಿದ್ಯಾಲಯಗಳೂ ಶಾಲಾ ಕಾಲೇಜುಗಳೂ ಈ ಕುರಿತು ಹೆಚ್ಚಿನ ಆಸ್ಥೆಯನ್ನು

(ಆಚೇ ಪುಟ ನೋಡಿರಿ)

ಕ್ಷಯರೋಗ ನಿರೋಧ ಸಮರಕ್ಕೆ ಸಹಾಯ ನೀಡಿರಿ!

ಕ್ಷಯರೋಗ ನಿರೋಧ ಚಳವಳದ ವಿಜಯವು ಈ ಕೆಳಗಿನವುಗಳನ್ನು ಅವಲಂಬಿಸಿದೆ—

1. ತಕ್ಕಷ್ಟು ನಿಧಿ,
2. ತಿಳುವಳಿಕೆಯುಳ್ಳ ಮತ್ತು ಪರಸ್ಪರ ಸಹಾಯಕ ಮನೋವೃತ್ತಿಯ ಸಾರ್ವಜನಿಕರು,
3. ಸಾಮಾಜಿಕ ಕಾರ್ಯಕರ್ತರ ಕಾರ್ಯಸಾಧನೆ ಮತ್ತು
4. ಆರೋಗ್ಯ ವೃತ್ತಿಯ ಮುಂದಾಳುಗಳ ಉತ್ಸಾಹ.

ಕ್ಷಯರೋಗ ಮುದ್ರೆ ಮಾರಾಟ ಚಳವಳವು ಈ ಉದ್ದೇಶ ಸಾಧನೆಗೆ ಸಹಾಯ ನೀಡುತ್ತದೆ.

ದಯಮಾಡಿ ಒಂದಾಣೆಯ ಕ್ಷಯರೋಗ ಮುದ್ರೆಗಳನ್ನು ಕೊಂಡು ಉಪಯೋಗಿಸಿರಿ!

ಮುದ್ರೆಗಳು ಇವರಲ್ಲಿ ದೊರೆಯುವುವು: ಶ್ರೀ. ಡಿ ಮೋಹನರಾವ್ ಬಿ. ಎ., ಬಿ. ಎಲ್. ಕಾರ್ಯದರ್ಶಿ, ದ. ಕ. ಜಿಲ್ಲಾ ಕ್ಷಯರೋಗ ಮುದ್ರೆ ಮಾರಾಟದ ಸಮಿತಿ ಜಿ. ಕೆ. ದೇವಸ್ಥಾನದ ರಸ್ತೆ, ಮಂಗಳೂರು-1. ಗೌ। ಕಾರ್ಯದರ್ಶಿ, ಮದ್ರಾಸು ಸಂಸ್ಥಾನದ ಕ್ಷಯನಿರೋಧ ಸಂಘ ರಿಪನ್ ಬಿಲ್ಡಿಂಗ, ಮದ್ರಾಸು-೩. ಮತ್ತು ಸಂಸ್ಥಾನದ ಇತರ ವಿಭಾಗಗಳಲ್ಲಿ.

ಕ್ಷಯರೋಗ ನಿರೋಧ ಮುದ್ರೆ ಮಾರಾಟದ ಮೂರನೆಯ ಆಂದೋಲನ

(ಭಾರತದ ಕ್ಷಯರೋಗ ನಿರೋಧ ಸಂಸ್ಥೆಯಿಂದ ಪ್ರಚುರಿಸಲ್ಪಟ್ಟಿದು)

ಈ ಸ್ಥಳವನ್ನು ದಾನ ಮಾಡಿದವರು:

ಮೆಸರ್ಸ್ ರಾಣೆ (ಮದರಾಸು) ಲಿಮಿಟೆಡ್, ಮದರಾಸು.

The Canara Banking Corporation Limited.

ನವ ವರ್ಷದ ಶುಭಾಶಯಗಳು.

ನಮ್ಮ ಹಿತೈಷಿಗಳಿಗೂ, ಭಾಗೀದಾರ (Shareholders)ರಿಗೂ,
ಗ್ರಾಹಕರಿಗೂ,
—ಸರ್ವರಿಗೂ—

ನವ ವರ್ಷವು
ಹುರುಪು ಉತ್ಸಾಹಗಳೊಂದಿಗೆ
ಸುಖ, ಶಾಂತಿ, ಸಮೃದ್ಧಿಗಳನ್ನು ತರಲೆಂದು ಹಾರೈಸುತ್ತೇವೆ.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿ.,

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ನವಯುಗ

ಉಡುಪಿ, ಗುರುವಾರ ೧-೧-'೫೩

ಹಿತ ನುಡಿ

ಮುಂದಿನ ಆದಿತ್ಯವಾರದಿಂದ ಮೂರು ದಿನಗಳವರೆಗೆ ಉಡುಪಿಯಲ್ಲಿ ಅಖಿಲ ಭಾರತ ಮಾಧ್ವತತ್ವಜ್ಞಾನ ಸಮ್ಮೇಳನ ಜರಗಲಿರುವ ಸಂಗತಿ ಸರ್ವ ವಿದಿತವಿದೆ ಇಂಥ ಸಮ್ಮೇಳನದ ಅಗತ್ಯವನ್ನು ಸಂಪೂರ್ಣವಾಗಿ ಹೃದಯಂಗಮ ಮಾಡಿಕೊಳ್ಳುವುದರಲ್ಲಿ ಯೋಜಕರು ಹಿಂದುಳಿದಿಲ್ಲವೆಂದು ನಂಬಬಹುದು. ಹಿಂದೊಮ್ಮೆ ನಿಂತುಹೋಗುವುದೆಂದಿದ್ದ ಸಮ್ಮೇಳನದ ವಿಚಾರವು ಮರಳಿ ಕಾರ್ಯರೂಪಕ್ಕೆ ಇಳಿದುದು ಸಂಬಂಧಿಸಿದ ಎಲ್ಲರಿಗೂ ಆಶೆಯನ್ನುಂಟುಮಾಡಿತು. ಈ ಸಮಯದಲ್ಲಿ ಅಪಾರ ಹಣದ ವಿನಿಯೋಗವಾಗಲಿದೆ, ಸಹಸ್ರರುವಂದಿ ಪ್ರತಿನಿಧಿಗಳು ಸಭೆ ಸೇರಲಿರುವರು. ಅವರಿಗೆಲ್ಲ ಊತಣವುಣಿಸಿ, ಕೆಲವು ಗೊತ್ತುವಳಿಗಳನ್ನಷ್ಟೆ ಸ್ವೀಕರಿಸಿ ನಿಷ್ಕ್ರಿಯರಾಗಿ ಉಳಿಯುವುದಕ್ಕಿಂತಲೂ- ಉತ್ತಮವಾದ ಸಮಾಜೋದ್ಧಾರದ ವ್ಯವಹಾರ್ಯ ಮಾರ್ಗ ತೆರೆದಿಲ್ಲವೆ ಎಂಬ ಪ್ರಶ್ನೆ ಬೇರೆ. ಇಂದಿನ ದಿನಮಾನದಲ್ಲಿ ಖಿಲವಾಗುತ್ತಿರುವ ಧರ್ಮವನ್ನು ಪುನಃ ಸಂಘಟನೆಗೊಳಿಸುವ ಕಾರ್ಯವನ್ನು ಸಾಮಾಜಿಕ ಹಿತದೃಷ್ಟಿಯಿಂದ ನೋಡುವುದಕ್ಕೆ ಪ್ರಾಶಸ್ತ್ಯ ದೊರೆತಿದೆಯಲ್ಲದೆ ಜಾತಿ—ಮತಗಳ ಸಂಕುಚಿತ ಸೀಮೆಯೊಳಗೆನೇ ನಡೆಯುವ ಚಟುವಟಿಕೆಗಳಲ್ಲಿ ಆಸ್ಥೆ ಜನಕ್ಕೆ ಉಳಿಯುವುದಿಲ್ಲ—ಮತ್ತು ಉಳಿದಿಲ್ಲ ಕೂಡ. ಆದುದರಿಂದ ಇಂಥ ಸಮ್ಮೇಳನವು ಯಾವುದೊಂದು ವಿಶಿಷ್ಟ ಮತ ಸಂಪ್ರದಾಯದ ಅಥವಾ ಪಂಗಡದ ಕಾರ್ಯಕಲಾಪಗಳ ರಂಗಭೂಮಿಯಾಗುವುದಕ್ಕಿಂತ, ಸಮಷ್ಟಿಯ ಹಿತವನ್ನು ಲಕ್ಷ್ಯದಲ್ಲಿಟ್ಟುಕೊಂಡು ಮುನ್ನಡೆಯಿಡುವುದೊಳಿತು. ಹಾಗೆ ಹೇಳುವುದಾದಲ್ಲಿ ಹಿಂದೂ ಧರ್ಮವು ಅತ್ಯಂತ ಚೈತನ್ಯಪೂರ್ಣವಾದುದು: ಅದು ತೋರುವ ಔದಾರ್ಯ ಮತ್ತದರ ವ್ಯಾಪ್ತಿಯನ್ನು ಎಲ್ಲರೂ ಕೊಂಡಾಡತಕ್ಕದ್ದು. ಪ್ರಾಮಾಣಿಕ ಮತಭೇದಗಳಿದ್ದರೂ ಕೂಡ ಹಿಂದೂ ಧರ್ಮವು ಅವೆಲ್ಲವನ್ನೂ ತನ್ನ ಗರ್ಭದಲ್ಲಿಟ್ಟುಕೊಂಡು ಏಕರೂಪತೆಯನ್ನು ಸಾಂಸ್ಕೃತಿಕ ಸಾಮ್ಯವನ್ನೂ ಪ್ರಕಟಿಸಬಲ್ಲುದು. ತತ್ವಜ್ಞಾನ ಸಮ್ಮೇಳನಗಳು ವಿವಿಧ ಮತಗಳಲ್ಲಿ ಸಂಘರ್ಷವನ್ನುಂಟುಮಾಡಲು ಹವಣಿಸದೆ. ಸಮನ್ವಯ ದೃಷ್ಟಿಯನ್ನು ಸಾಧಿಸಲು ಶ್ರಮಿಸುವುದು ಕರ್ತವ್ಯ. ಇದನ್ನು ಸಾಮಾನ್ಯ ಜನಕ್ಕೆ ಮನಗಾಣಿಸುವಲ್ಲಿ ವ್ಯರ್ಥವಾದ ಭೇದಭಾವನೆಗೆ ಎಡೆಯಿಲ್ಲ. ನಮ್ಮ ಧರ್ಮದ ಜಾಯಮಾನವನ್ನರಿತು ನಡೆಯುವುದು ವಿವೇಕಿಗಳಾದವರ ಹೊಣೆಗಾರಿಕೆ. ತತ್ವಜ್ಞಾನದ ಸಾರವನ್ನು ಲೌಕಿಕರಿಗೆ ತಿಳಿಸಿ ಹೇಳಿ, ಅವರಲ್ಲಿ ಆಧ್ಯಾತ್ಮಿಕ ಜಾಗ್ರತಿಯನ್ನು ಉಂಟುಮಾಡುವುದಕ್ಕೆ ಪ್ರಸ್ತುತದ ಸಮ್ಮೇಳನ ಎಷ್ಟರ ಮಟ್ಟಿಗೆ ಯಶಸ್ಸು ಹೊಂದೀತೆಂದು ನೋಡಬೇಕಷ್ಟೆ. ನಮ್ಮ ಧರ್ಮಗುರುಗಳು–ದಕ್ಷಿಣದ ಆಚಾರ್ಯತ್ರಯರು– ಹಿಂದೂ ಧರ್ಮವನ್ನುದ್ಧರಿಸುವುದಕ್ಕೆ ಮಾಡಿದ ಕೆಲಸಗಳು ಘನವಾಗಿವೆ ಅವರ ಪಂಥಗಳು ಭಿನ್ನ ಭಿನ್ನ ಮಾರ್ಗನಿರ್ದೇಶ ಮಾಡಿದರೂ ಆತ್ಮಿಕ ಶ್ರೇಯಸ್ಸೆಂಬ ಏಕೋದ್ದೇಶವನ್ನು ಅವು ಇಟ್ಟುಕೊಂಡಿವೆ ಅಂಥದರಲ್ಲಿ ಧರ್ಮದ ಕವಲುಗಳೊಳಗೆ ಸಂಘರ್ಷ ನಡೆಯಕೂಡದು ಧರ್ಮಪೀಠಗಳು ಇಂಥದಕ್ಕೆಲ್ಲ ಆದರ್ಶ ಹಾಕಿಕೊಡಬೇಕು. ಒಂದು ವೇಳೆ ಅನ್ಯಪಂಥಗಳೊಡನೆ ಸಾಮರಸ್ಯ ಕೂಡಿ ಬರದಿದ್ದರೂ ಅಡ್ಡಿಯಿಲ್ಲ– ಸ್ವಮತೀಯರಲ್ಲಿ ಒಮ್ಮನಸ್ಸು ಇರಬೇಕಾದುದು ಅಗತ್ಯ ಗುರುಪೀಠಗಳು ಭೇದಭಾವವನ್ನೂ ವೈಮನಸ್ಸು ಮಾತ್ಸರ್ಯವನ್ನೂ ಬದಿಗೊತ್ತಿ ಸಮಾಜ ಪುರುಷನ, ಜನತಾ ಜನಾರ್ದನನ ಸೇವೆಗೆ ಕಂಕಣಬದ್ಧರಾಗುವುದನ್ನು ಈ ಶತಮಾನ ಅಪೇಕ್ಷಿಸುತ್ತದೆ. ವಿಶಾಲವಾದ ದೃಷ್ಟಿಯನ್ನೂ ಉದಾರವಾದ ಅಂತಃಕರಣವನ್ನೂ, ಅಪಾರ ಜ್ಞಾನ ವೈರಾಗ್ಯವನ್ನೂ, ವಿಶಾಲ ಅನುಭವವನ್ನೂ ಸಾಧಿಸಿದ ಯತಿವರ್ಯರು ಸಮಾಜಕ್ಕೆ ಮೇಲ್ಪಂಕ್ತಿಯನ್ನು ಹಾಕಿಕೊಡಬಲ್ಲರು. ಅನ್ಯಥಾ ಸಭೆಸಮ್ಮೇಳನಗಳು ಉದ್ದೇಶಹೀನವಾಗಿ ತಿರಸ್ಕಾರಕ್ಕೆ ಪಾತ್ರವಾಗುತ್ತವೆ. ಜನಮರುಳೋ ಜಾತ್ರೆಮರುಳೋ ಎಂಬ ಗಾದೆಯನ್ನು ನೆನಪಿಗೆ ತಂದುಕೊಡುತ್ತವೆ. ಈ ಎಲ್ಲ ಸಂಭಾವ್ಯ ಟೀಕೆಯನ್ನು ದೃಷ್ಟಿಪಥದಲ್ಲಿಟ್ಟುಕೊಂಡು ಚೊಕ್ಕಟವಾಗಿ ಮಾಧ್ವತತ್ವಜ್ಞಾನ ಸಮ್ಮೇಳನ ನಡೆಯುವುದು ಅಪೇಕ್ಷಣೀಯ. ಮಠಗಳೂ ಮಂದಿರಗಳೂ ನಮ್ಮ ಸಾಂಸ್ಕೃತಿಕ ಕೇಂದ್ರವಾಗಿ ಪರಿವರ್ತನೆಗೊಂಡು ಜನರಿಗೆ ಮಾರ್ಗದರ್ಶನ ಮಾಡಬೇಕು ಹೊರತು ಸ್ವಾರ್ಥ ಹಾಗೂ ಕೌಟಿಲ್ಯದ ದ್ಯೋತಕವಾಗಿ ಉಳಿಯಲಾಗದು. ಇಂದು ಧರ್ಮವು ಖಿಲವಾಗುತ್ತಾ ನಡೆದಿದ್ದರೆ, ಅದು ಧರ್ಮ ಗುರುಗಳೆನಿಸಿದವರ ಕರ್ತವ್ಯಚ್ಯುತಿಯ ಪರಿಣಾಮವೆಂದರೂ ಕೆಲವು ಟೀಕೆಗೆ ಸಲ್ಲುವುದು. ಜನರ ಉಪಕಾರಕ್ಕೆ ಒದಗಬಲ್ಲ ಕಾರ್ಯಕಲಾಪಗಳನ್ನು ತೊಡಗದೆ ಸಮಾಜವು ಹೊಂದುತ್ತಿರುವ ನಿಧಾನವಾದ ಬದಲಾವಣೆಯನ್ನು ಅನುಲಕ್ಷಿಸದೆ, ಸುಮ್ಮನುಳಿದುದರಿಂದ ಸಾಮಾನ್ಯ ಜನರು ಧರ್ಮವನ್ನೂ, ಗುರುಪೀಠಗಳನ್ನೂ ಉಪೇಕ್ಷೆಯಿಂದ ನೋಡುವಂತಾಯಿತೆಂದು ದೂರು ಕೇಳುತ್ತೇವೆ. ಇದನ್ನೆಲ್ಲ ನಿವಾರಿಸುವಂಥ ಪರಿಣಾಮಕಾರೀ ಯೋಜನೆಗಳನ್ನು ಕೈಗೊಳ್ಳದ ವಿನಹ ಜನರಲ್ಲಿ ಆಸ್ಥೆ ಮೂಡುವುದು ದುಸ್ಸಾಧ್ಯ. ಮಾಧ್ವ ತತ್ವಜ್ಞಾನ ಸಮ್ಮೇಳನ ಧರ್ಮರಕ್ಷಣೆಯ ಹಾಗೂ ಸಂಘಟನೆಯ ಮತ್ತು ಸಾಂಸ್ಕೃತಿಕ ವೈಶಿಷ್ಟ್ಯವನ್ನು ಕಾಯ್ದುಕೊಳ್ಳುವ ಉಪಾಯಗಳನ್ನು ಯೋಜಿಸುವುದರ ಜೊತೆಗೆ ಸಮಾಜಸೇವೆಯ ಕಾರ್ಯಕಲಾಪಗಳನ್ನೂ ಇಟ್ಟುಕೊಳ್ಳಲೆಂದು ಹಾರೈಸುತ್ತೇವೆ.

ಸ್ಟಾಲಿನ್ನರಿಗೆ ಶಾಂತಿಯಲ್ಲಿ ಆಸ್ಥೆ

ಐಸನ ಹಾವರರೊಡನೆ ಚರ್ಚಿಲರ ಭೇಟಿ

ಕ್ರಿಸ್ ಮಸ್ ಹಬ್ಬದ ಶುಭದಿನದಂದು ರೋಮಿನ ವೆಟಿಕನ' ಅರಮನೆಯಿಂದ ಪೋಪರು ಪ್ರಸಾರಮಾಡಿದ ಭಾಷಣದಲ್ಲಿ ಜನರ ಜೀವನ ಮಟ್ಟದಲ್ಲಿರುವ ವೈಷಮ್ಯ ಅಳಿದು ಉನ್ನತ ಸ್ಥಿತಿಯನ್ನು ಎಲ್ಲರೂ ಹೊಂದುವಂತಾಗಬೇಕೆಂದು ಅಪೇಕ್ಷಿಸಿದರು. ಸಮಸ್ತ ಕ್ರಿಶ್ಚಿಯನ್ ಕುಟುಂಬವು ಲೋಕಶಾಂತಿ ಮತ್ತು ತಿಳಿವಳಿಕೆಗಾಗಿ ಶ್ರಮಿಸಬೇಕೆಂದು ಕರೆಯನ್ನಿತ್ತರು. ಅಧ್ಯಕ್ಷ ಟ್ರೂಮನ್ನರು ತಮ್ಮ ಸಂದೇಶದಲ್ಲಿ ನಮ್ಮ ಕುಟುಂಬಿಕರನ್ನೂ ಇಷ್ಟರನ್ನೂ ಸ್ನೇಹದಿಂದ ಕಾಣುವುದಲ್ಲದೆ ವೈರಿಗಳಿಗೆ ಕೂಡಾ ಸದ್ಬುದ್ಧಿಯುಂಟಾಗುವಂತೆ ಹಾರೈಸಬೇಕಾಗಿ ಕೇಳಿಕೊಂಡರು. ರಾಣಿ ಎಲಿಜಾಬೆಥಳು ರಾಷ್ಟ್ರಕೂಟದ ಜನರ ಯೋಗಕ್ಷೇಮವನ್ನಷ್ಟೇ ಚಿಂತಿಸಿದರೂ "ಭೂಮಿಯ ಮೇಲೆ ಸುಖ-ಶಾಂತಿ" ಎಂಬ ಉಕ್ತಿಯನ್ನು ಎಲ್ಲರೂ ಒಪ್ಪುವಂತೆ ಕಂಡುಬಂತು. ಆದರೆ ಕ್ರಿಸ್‌ಮಸಿಗೆ ಮುಂಚೆ ಮುಗಿದ ಸಂಯುಕ್ತ ರಾಷ್ಟ್ರಸಂಘದ ಸಾಮಾನ್ಯ ಅಧಿವೇಶನವನ್ನು ಸಮೀಪದಿಂದ ವೀಕ್ಷಿಸಿದವರಿಗೆ– ಕ್ರಿಸ್‌ಮಸ್ ಸಂದೇಶ ತನ್ನೆಲ್ಲ ಪೆಂಪು ಮತ್ತು ಸೌರಭದೊಡನೆ ಬರಲಿಲ್ಲವೆಂದೇ ತೋರುವುದು. ಎಂಟುವಾರಗಳ ವರೆಗೆ ಜರುಗಿದ ಈ ಅಧಿವೇಶನದಲ್ಲಿ ಪೂರ್ವ ಪಶ್ಚಿಮಗಳ ನಡುವಿದ್ದ ಅಂತರ ಇನ್ನಷ್ಟು ಹೆಚ್ಚಿಕೊಂಡಿತು. ಬಂಡವಳದಾರ ಹಾಗೂ ಹಿಂದುಳಿದ ರಾಷ್ಟ್ರಗಳೊಳಗೆ ದ್ವೇಷವೂ ಸಾಮ್ರಾಜ್ಯಶಾಹಿ ಹಾಗೂ ರಾಷ್ಟ್ರೀಯ ಜಾಗೃತ ಹಿತಸಂಬಂಧಗಳ ನಡುವೆ ಮನಸ್ತಾಪವೂ ಬಲಿಯಿತು. ಇಷ್ಟರವರೆಗೆ ಭಾರತದ ನಿಲುವು ಹೇಗೋ ಎಂದು ಶಂಕಿಸುತಿದ್ದ ಮತ್ತು ಭಾರತದ ಸ್ನೇಹ ಬೇಕೇ ಬೇಡವೇ ಎಂದು ಚಿಂತಿಸುತಿದ್ದ ರಶಿಯಾ-ಅಮೇರಿಕನ್ ಗುಂಪಿಗೆನೇ ಭಾರತ ಸೇರಿದೆ ಎಂಬುದನ್ನು ಕಂಡುಕೊಂಡಿತು! ಕೊರಿಯಾದ ಯುದ್ಧವನ್ನು ನಿಲ್ಲಿಸುವುದರಲಿ—ಸಮಾಧಾನಕರವಾದ ಸಂಧಾನವನ್ನು ಗೌರವಯುತವಾಗಿ ಸಾಧಿಸುವುದಕ್ಕೂ ಸಂಯುಕ್ತರಾಷ್ಟ್ರ ಸಂಘಕ್ಕೆ ಸಾಧ್ಯವಾಗದೆ ಹೋಯಿತು.

ರಶಿಯಾ ಶಾಂತಿ ಪಾಠ

ಇಂಥ ವಿಷಮ ಪರಿಸ್ಥಿತಿಯಲ್ಲೂ ಕೆಲವೊಂದು ವೈಶಿಷ್ಟ್ಯಪೂರ್ಣ ಘಟನೆಗಳು ಜರಗುವುವೆಂಬುದು ಚೋದ್ಯವೇ ಸೈ: ಉದಾಹರಣೆಗೆ ಇಡೀ ಜಗತ್ತಿನ ದೃಷ್ಟಿಯು ಕ್ರಿಸ್‌ಮಸ್ ಅವಸರದಲ್ಲಿ ರಶಿಯಾದ ಸ್ಟಾಲಿನ್ನರು ವ್ಯಕ್ತಪಡಿಸಿದ ಕೆಲವು ಅಭಿಪ್ರಾಯಗಳ ಕಡೆಗೆ ಆಕರ್ಷಿಸಲ್ಪಟ್ಟಿದೆ. ಅಮೇರಿಕದ "ನ್ಯೂಯಾರ್ಕ್ ಟೈಮ್ಸ್" ಪತ್ರಿಕೆಯ ಸುದ್ದಿಗಾರರೊಬ್ಬರು ಸ್ಟಾಲಿನ್ನರಿಗೆ ಪತ್ರ ಮುಖೇನ ಕೇಳಿದ ನಾಲ್ಕು ಪ್ರಶ್ನೆಗಳಿಗೆ ಅವರಿತ್ತ ಉತ್ತರವೇ ಈ ಕೋಲಾಹಲವೇರ್ಪಡಲು ಕಾರಣ. ಅಮೇರಿಕ ಮತ್ತು ರಶಿಯಾಗಳು ಪರಸ್ಪರ ಶಾಂತಿ ಸೌಹಾರ್ದಯುತವಾದ ಭಾವನೆಯನ್ನು ತಳೆಯುವುದು ಸಾಧ್ಯವಿದೆಯೆಂದು ಸ್ಟಾಲಿನ್ನರು ಹೇಳಿರುವರು ಜೊತೆಗೆ ಅಮೇರಿಕದ ನೂತನಾಧ್ಯಕ್ಷ ಐಸೆನ ಹೋವರರೊಡನೆ ಅಂತಾರಾಷ್ಟ್ರೀಯ ದ್ವೇಷವನ್ನು ಕಡಿಮೆ ಮಾಡುವುದಕ್ಕೋಸ್ಕರ ಮಾತುಕತೆಯಾಗಬೇಕೆಂದು ರಾಜಕೀಯ ಮಟ್ಟದಲ್ಲಿ ಪ್ರಯತ್ನ ನಡೆಸಿದರೆ, ಅದನ್ನು ಸ್ವಾಗತಿಸುವೆನೆಂದೂ ಅವರು ನುಡಿದಿರುವರು. ಕೊರಿಯಾ ಯುದ್ಧವನ್ನು ನಿಲ್ಲಿಸುವುದಕ್ಕೆ ರಶಿಯಾ ತವಕಪಡುತ್ತಿದೆ ಎಂಬುದಾಗಿಯೂ ಸ್ಟಾಲಿನ್ನರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು ಶಾಂತಿಗಾಗಿ ರಶಿಯಾವು ತೋರಿಸಿದ ಈ ಕಳವಳದಿಂದ ಪಾಶ್ಚಾತ್ಯರಲ್ಲಿ ಒಂದು ಹೊಸ ಹುಚ್ಚು ಮೈದೋರಿದೆ. ರಾಜಕೀಯ ವರ್ಗಗಳಲ್ಲಿ-ಅದೂ ಅಮೇರಿಕೆಯಲ್ಲಿ- ಈ ಬಗ್ಗೆ ಆಶಾಜನಕವಾದ ಪ್ರತಿಕ್ರಿಯೆ ಕಂಡುಬರುವುದಿಲ್ಲವಾದರೂ ಜನಸಾಮಾನ್ಯರಲ್ಲಿ ಪತ್ರಿಕೆಯಲ್ಲಿ ಪ್ರಕಟವಾದ ಮತ್ತು ಮಾಸ್ಕೋ ರೇಡಿಯೊ ಪ್ರಸಾರ ಮಾಡಿದ ಈ ಹೇಳಿಕೆ ಇನ್ನಿಲ್ಲದ ಆಶೆಯನ್ನು ತುಂಬುವುದು ಸ್ವಾಭಾವಿಕ. ರ



ಶ್ರೀ ಗುರುಮಧ್ವಾಚಾರ್ಯರಿಂದ ಉಡುಪಿಯಲ್ಲಿ ಸ್ಥಾಪಿಸಲ್ಪಟ್ಟ ಪ್ರೇಮ ಸೇವಾಮೂರ್ತಿ ಶ್ರೀಕೃಷ್ಣ ವಿಗ್ರಹ.

ತಿಯಾದ ಈ ಸೂಚನೆಗಳ ಕುರಿತು–ಅದೂ ಪ್ರತ್ಯಕ್ಷ ಭೇಟಿ ಮತ್ತು ಮಾತುಕತೆಯ ಕುರಿತು ಐಸೆನ್ ಹಾವರರು ಅಷ್ಟೇನು ಹುರುಪಿನಲ್ಲಿಲ್ಲ. ರಶಿಯಾ ಎಂದಿನಿಂದಲೂ ಒಪ್ಪಿಸುತ್ತ ಬಂದ ಶಾಂತಿ ಪಾಠವನ್ನು ಈ ಸಲವೂ ಪುನರುಚ್ಚರಿಸಿದೆಯೆಂದೂ– ಅದೊಂದು ರಶಿಯಾದ ಸದಿಚ್ಛೆಯ ಬಗ್ಗೆ ಪ್ರಚಾರ ಮಾತ್ರವಾಗಿದೆಯಲ್ಲದೆ– ತಿರುಳೇನಿಲ್ಲವೆಂದೂ ರಾಜಕೀಯ ವೃತ್ತಗಳ ಅಭಿಪ್ರಾಯವಿದೆ. ರಶಿಯಾವು ಬಾಯಿ ಮಾತಿನಲ್ಲಿ ವ್ಯಕ್ತಗೊಳಿಸಿದ ಸದಿಚ್ಛೆಯನ್ನು ಕಾರ್ಯರೂಪಕ್ಕೆ ಇಳಿಸುವ ಪ್ರಸಂಗ ಬಂದಾಗ ಖಂಡಿತವಾಗಿಯೂ ಸಹಕರಿಸುವುದಿಲ್ಲ ಎಂದಿವರ ಅಂಬೋಣ.

ಕಮ್ಯೂನಿಸ್ಟರ ದುರುದ್ದೇಶ

ಇದಕ್ಕೆ ಕಾರಣವಿಲ್ಲದೆ ಇಲ್ಲ. ಕೊರಿಯಾ ಸಂಧಾನವನ್ನು ಸಾಧಿಸುವ ಬಗ್ಗೆ ಭಾರತ ಮಾಡಿದ ಸೂಚನೆಯ ಭವಿತ್ಯವನ್ನೆ ನೋಡಿದರೆ, ರಶಿಯಾದ ಮಾತೊಂದು ಕೃತಿಯೊಂದು ಎಂಬುದು ಸ್ಪಷ್ಟವಾಗುವುದು. ಕೃಷ್ಣ ಮೆನನ್ನರನ್ನು ಪ್ರಾಮಾಣಿಕ ಮನುಷ್ಯನೆಂದು ಹೊಗಳಿದ ಬಾಯಿಯಿಂದಲೇ ಕೊನೆಕೊನೆಗೆ ಅವಾಚ್ಯ ಶಬ್ದಗಳು ಹೊರ ಬಂದುವೆಂದರೆ ಯಾರಿಗೆ ಆಶ್ಚರ್ಯವಾಗಲಿಕ್ಕಿಲ್ಲ! ರಶಿಯಾದ ಉಪ ವಿದೇಶ ಸಚಿವ ಗ್ರೊಮಿಕೊ ಹೀಗೆ ನಿಂದಿಸಿದರೆಂದರೆ, ತಾಳ್ಮೆಗೆಡುವುದೇ ಸಹಜ. ಚಿನ್ನದಂಥ ಮಾತನ್ನಾಡಿ ಭೋಳೇ ಶಂಕರರಿಗೆ ರಶಿಯಾ ಶಾಂತಿಗಾಗಿ ಕಳವಳಿಸುತ್ತಿದೆ ಎಂದು ತೋರಿಸಿ ಕೊಡುವುದೇ ಸ್ಟಾಲಿನ್ನರ ನಿಜೋದ್ದೇಶ. ಪ್ರವದಾ ಪತ್ರಿಕೆ, ಚೀನಾದ ಸುದ್ದಿ ಸಂಸ್ಥೆ, ಮತ್ತಿತರ ಪೂರ್ವ ಯುರೋಪಿನ ಕಮ್ಯೂನಿಸ್ಟ ರಾಷ್ಟ್ರಗಳಿಗೆ ಸ್ಟಾಲಿನ್ನರ ಸಂದೇಶ ಅಮೃತತುಲ್ಯವೆನಿಸಿದ್ದರೆ, ಅದು ತೀರ ಸಹಜ. ಕೇವಲ ಡಾಂಭಿಕತನದಿಂದ ಕೂಡಿದ ಈ ಮರುಳು ಮಾತುಗಳಿಂದ ಶಾಂತಿ-ಸಂಧಾನಗಳು ಕೈಗೂಡಬಹುದು ಹೊಸತೊಂದು ಮಾರ್ಗವೇರ್ಪಟ್ಟಿತೆನ್ನುವವರು, ತಮ್ಮ ಅಭಿಪ್ರಾಯವನ್ನು ಬದಲಿಸಿದರೊಳ್ಳಿತು. ಇಷ್ಟರವರೆಗೆ ರಶಿಯಾ ನಡೆದುಕೊಂಡ ರೀತಿನೀತಿಗಳ ಹೊಲಬು ಅಂತವರು ಮೂರ್ಖರಂತೆ ಸ್ಟಾಲಿನ್ನರ ಈ ಸಂದೇಶದಲ್ಲಿ ದೇವವಾಣಿಯನ್ನು ಆಲಿಸಲಾರರು. ರಶಿಯಾ ಈ ಹಿಂದೆ ಹತ್ತು ಹಲವು ಸಲ ಶಾಂತಿಯ ಬಗ್ಗೆ ತನ್ನ ಕಳವಳವನ್ನೂ ಆಸ್ಥೆಯನ್ನೂ ವ್ಯಕ್ತಪಡಿಸಿದೆ. ಕಮ್ಯೂನಿಸ್ಟ ರಾಷ್ಟ್ರಗಳು ನಡೆಸುವ ಅನೇಕ ಶಾಂತಿ ಸಮ್ಮೇಳನಗಳು ಕೇವಲ ರಾಜಕೀಯ ಪ್ರಚಾರದ ದುರುದ್ದೇಶದಿಂದ ಕೂಡಿವೆ. ಕಮ್ಯೂನಿಸ್ಟರ ಪತ್ರಿಕೆಗಳಿಗಂತೂ ರಶಿಯಾ ಶಾಂತಿಗಾಗಿ ಹೆಣಗುತ್ತಿದೆ– ಆದರೆ ವಿದೇಶೀಯರು ಸದಾ ಯುದ್ಧಕಾಂಕ್ಷಿಗಳಾಗಿದ್ದಾರೆ ಎಂಬ ಎರಡೇ ಅಂಶ ಕಾಣುತ್ತಿವೆ. ತಮ್ಮಲ್ಲಿರುವ ದೋಷ ಮತ್ತು ವಿದೇಶೀಯರಲ್ಲಿರುವ ಗುಣಗಳನ್ನು ಅಂಚುಕೊಂಡು, ಪರಸ್ಪರ ಹೊಂದಿಕೊಳ್ಳುವ ಮನೋವೈಶಾಲ್ಯ ಕಮ್ಯೂನಿಸ್ಟರಿಗೆ ಇಲ್ಲವೇ ಇಲ್ಲ. ಎಂತಲೇ– ಅವರದೆಲ್ಲ ಕಾರ್ಯಗಳು ಸತ್ಯವನ್ನು ಮುಚ್ಚಿಡುವ ದುರುದ್ದೇಶದಿಂದ ಕೂಡಿವೆ. ಕಬ್ಬಿಣದ ಪರದೆಯೊಳಗೆ ಬಂಧನದಲ್ಲಿರುವ ರಶಿಯಾದ ಪ್ರಜೆ ಮೊಸ್ಕೊ ರೇಡಿಯೋ ಹಾಗೂ ಪ್ರವದಾ ಪತ್ರಿಕೆಯ ಭಾಷ್ಯಗಳಿಂದಷ್ಟೆ ತೃಪ್ತಿಪಟ್ಟುಕೊಳ್ಳಬೇಕಲ್ಲದೆ ಬಾಹ್ಯ ಪ್ರಪಂಚದ ಪ್ರಗತಿ, ವಿಗತಿಗಳ ಬಗ್ಗೆ ಅವನಿಗೇನು ಜ್ಞಾನವಿರುವುದೂ ಶಕ್ಯವಿಲ್ಲ.

ಒಳಗುಟ್ಟು

ಆದರೆ ಒಂದು ಮಾತು ನಿಜ–ರಶಿಯಾ ಪಾಶ್ಚಾತ್ಯರ ಶಾಂತ ಕೆರೆಯಲ್ಲಿ ತನ್ನದೊಂದು ಕಲ್ಲನ್ನು ಚೆಲ್ಲಿಕೊಡುತ್ತದೆ. ಆ ಗುಂಡಾದ ಅಲ್ಲೋಲ ಕಲ್ಲೋಲ ಅಡಗುವ ವರೆಗೆ, ರಶಿಯಾ ಸುಮ್ಮನುಳಿಯುತ್ತದೆ. ಅದು ಮುಗಿದು ಕೆರೆಯ ನೀರು ಶಾಂತವಾಗುವ ಕಾಲ ಸನ್ನಿಹಿತವಾಯಿತೋ, ಇನ್ನೊಂದು ಕಲ್ಲು ಚೆಲ್ಲುತ್ತದೆ; ಮರಳಿ ನೀರಿನಲ್ಲಿ ತರಂಗವೇಳುತ್ತದೆ. ಅಂತೂ ಪಾಶ್ಚಾತ್ಯ ರಾಷ್ಟ್ರಗಳು ತಮ್ಮದೊಂದು ನಿರ್ದಿಷ್ಟ ನಿಲುವೆಯನ್ನು ರೂಪಿಸಿಕೊಂಡು, ದೃಢ ನಿರ್ಧಾರದಿಂದ ನಡೆದುಕೊಳ್ಳುವುದಕ್ಕೆ ರಶಿಯಾ ಬಿಡುವುದಿಲ್ಲ. ಐಸೆನ್ ಹಾವರರು ಕೊರಿಯಾವನ್ನು ಸಂದರ್ಶಿಸಿ ಬಂದವರೇ, ಮೇಕಾರ್ಥರರನ್ನು ಕಂಡರು. ಈಗ ತಾನೆ ವರದಿ ಬಂದಿರುವಂತೆ ಐಸೆನರು ಹೊಸತೊಂದು ಯೋಜನೆಯನ್ನು ತಯಾರಿಸಿದ್ದು,ಅದರನ್ವಯ ಶತ್ರುಗಳನ್ನು ಪ್ರಬಲ ಪ್ರತಿಭಟನೆ ಕೊಟ್ಟು ಮಣಿಸಲಾಗುವುದೆಂದು ತಿಳಿದಿದೆ. ಯುದ್ಧಕ್ಷೇತ್ರವನ್ನು ವಿಸ್ತಾರಗೊಳಿಸುವುದು ಮೇಕಾರ್ಥರರಿಗೆ ಇಷ್ಟವಿಲ್ಲವೆಂದೂ ವರದಿ ಸ್ಪಷ್ಟಗೊಳಿಸುತ್ತದೆ. ದಕ್ಷಿಣ ಕೊರಿಯಾದ ಸೈನ್ಯಪಡೆಗಳನ್ನು ತೀರಾ ಬಲಗೊಳಿಸಿ ಅಂತಿಮ ಘಟ್ಟದಲ್ಲಿ ಸಾಧ್ಯವಿದ್ದಷ್ಟು ಅಮೇರಿಕನ್ ಸೇನೆಯನ್ನು ಕಡಿಮೆ ಮಾಡುವುದುದ್ದೇಶ ಐಸೆನರದೆಂದು ಹೇಳುವರು. ಹೀಗೆ ಕೊರಿಯಾ ಕದನದಲ್ಲಿ ಅಮೇರಿಕನರು ಕೊಡುವುದನ್ನು ರಶಿಯಾ ಸಹಿಸಲಾರದು. ಐಸೆನ ಹಾವರರೊಡನೆ ಮಾತುಕತೆಯಾಡುವ ವ್ಯಗಜಲವನ್ನು ಸೃಷ್ಟಿಸಿದರೆ– ರಾಜಕಾರಣಿಗಳಲ್ಲದಿದ್ದರೂ–ಪ್ರಜಾಪ್ರಭುತ್ವ ರಾಷ್ಟ್ರದ ಜನಸಾಮಾನ್ಯರ ಚಿತ್ತ ಇತ್ತಡೆಗೆ ಹರಿಯಬಹುದಲ್ಲವೆ? ಅಮೇರಿಕ ಯುದ್ಧಸಿದ್ಧತೆಗಳನ್ನು ಬಿರದಿಂದ ನಡೆಸಿ, ಸಜ್ಜುಗೊಂಡಿರುವುದು ರಶಿಯಾಕ್ಕೆ ಇಷ್ಟವಿಲ್ಲ. ಪಶ್ಚಿಮ ಯುರೋಪಿನ ರಾಷ್ಟ್ರಗಳಲ್ಲಿ ಯುದ್ಧಸಿದ್ಧತೆಗಳನ್ನು ಢಿಮೆ ಮಾಡುವ ಮನೋವೃತ್ತಿ ಹುಟ್ಟಿಸಿದರೆ–ನೆಲೆಯ ರಶಿಯಾಕ್ಕೆ ಅನೇಕ ಲಾಭವಿದೆ. ಏನಿಲ್ಲದಿದ್ದರೂ ಕಳೆದ ಯುದ್ಧದ ಹಾವಳಿಯಿಂದ ಇನ್ನೂ ಪೂರ್ಣ ಚೇತರಿಸಿಕ್ಕದ ರಶಿಯಾ, ಇನ್ನು ಕೆಲವು ಕಾಲ ತನ್ನ ಪುನರ್ನಿರ್ಮಾಣ ಯೋಜನೆಯನ್ನು ನಿಶ್ಚಿಂತೆಯಿಂದ ಕಾರ್ಯಗತ ಮಾಡಬಹುದು.

ತೀವ್ರ ಪ್ರತಿಕ್ರಿಯೆ

ಹೇಗಿದ್ದರೂ–ಅಮೇರಿಕನ್ನರು ಸ್ಟಾಲಿನ್ನರ ಸಂದೇಶಕ್ಕೆ ತೋರಿಸಿದ ತೀವ್ರ ಪ್ರತಿಕ್ರಿಯೆ ಗಮನಾರ್ಹವಾಗಿದೆ. ಐಸೆನ ಹಾವರರ ಪರವಾಗಿ ಅವರ ನೂತನ ವಿದೇಶಾಂಗ ಸಚಿವ ಡಲ್ಲೆಸರು ರಶಿಯಾ ಏನಾದರೂ ಪರಿಣಾಮಕಾರಿ ಯೋಜನೆಯನ್ನು ಈ ಸಂಬಂಧದಲ್ಲಿ ಮುಂದಿಟ್ಟರೆ, ಅದನ್ನು ಸಹಾನುಭೂತಿಯಿಂದ ವಿಚಾರಿಸಲಾಗುವುದು ಎಂದಿರುವುದು ಅರ್ಥಪೂರ್ಣವಾಗಿದೆ. ಅದರಂತೆಯೇ ಸ್ಟಾಲಿನ್ನರ ಸಂದೇಶ ಪ್ರಕಟಗೊಂಡ ದಿನವೇ ಬ್ರಿಟನ್ ಪ್ರಧಾನಿ ಚರ್ಚಿಲರ ಸದ್ಯದಲ್ಲಿಯೇ ಐಸೆನ ಹಾವರರನ್ನು ಕಾಣಲು ಅಮೇರಿಕೆಗೆ ತೆರಳುವರೆಂಬ ಸಂಗತಿಯೂ ಕುತೂಹಲಕಾರಿಯಾಗಿದೆ. ರಾಜಕೀಯ ವೃತ್ತಗಳನ್ವಯ ಐಸೆನ್ ಹಾವರ—ಚರ್ಚಿಲರ ಭೇಟಿಯು ಪೂರ್ವನಿಯೋಜಿತವಿದ್ದರೂ, ನಿಶ್ಚಯವಾಗಿಯೂ ಸ್ಟಾಲಿನ್ನರ ಶಾಂತಿ ಸಂದೇಶದ ಕುರಿತು ಅವರಲ್ಲಿ ಮಾತುಕತೆ ನಡೆಯುವುದೆಂದು ಹೇಳಬಹುದು. ಐಸೆನ ಹಾವರರು ಚರ್ಚಿಲರು ತಮ್ಮನ್ನು ಕಾಣಲಿರುವ ಸಂಗತಿಯಿಂದ ಹರ್ಷವಾಯಿತೆಂದು ನುಡಿದಿರುವರು. ಪ್ರಾಯಶಃ ಅಮೇರಿಕದ ನೂತನಾಧ್ಯಕ್ಷರು ಜನವರಿ 20ರಂದು ಅಧಿಕಾರ ಸ್ವೀಕರಿಸಿ, ಹೊಸ ಸರಕಾರದ ಧ್ಯೇಯ–ಧೋರಣೆಗಳನ್ನು ನಿರೂಪಿಸುವುದಕ್ಕೆ ಮುಂಚೆ ಬ್ರಿಟನು ಈ ಕುರಿತು ಏನು ಯೋಚಿಸುತ್ತಿದೆ ಎಂಬುದನ್ನು ಐಸನರಿಗೆ ಮನವರಿಕೆ ಮಾಡಿಕೊಡುವುದೇ ಚರ್ಚಿಲರ ಭೇಟಿಯ ಉದ್ದೇಶ. ಟ್ರೂಮನ್ನರ ಆಡಳಿತ ಕಾಲದಲ್ಲಿ ಅತ್ಯಂತ ನಿಕಟ ರೂಪದಲ್ಲಿ ಬೆಳೆದು ಬಂದ ಬ್ರಿಟನ್ ಅಮೇರಿಕನ್ ಸಂಬಂಧವನ್ನು ಇನ್ನೂ ಸುಸ್ಥಿರಗೊಳಿಸುವುದು ಚರ್ಚಿಲರ ಬಯಕೆ ಆಗಿರುವುದರಿಂದ ಸಂಬಂಧಿಸಿದೆಲ್ಲ ವಿಷಯಗಳ ಕುರಿತು ಅನೌಪಚಾರಿಕ ಸ್ವರೂಪದ ಮಾತುಕತೆ ನಡೆಸಿ, ಅನಂತರ ಅಧಿಕೃತವಾಗಿ ಸ್ಟಾಲಿನ್ನರ ಶಾಂತಿ ಸಂದೇಶದ ಕಡೆಗೂ ಹೊರಳುವುದು ಚರ್ಚಿಲರ ಕಾರ್ಯಕ್ರಮವೆಂದೆನಿಸಲಾಗಿದೆಯಲ್ಲ. ಕೊರಿಯಾದ ಕುರಿತು ಐಸೆನ ಹಾವರು ಈಚೆಗೆ ಸಿದ್ಧಪಡಿಸಿದ ಯೋಜನೆಯ ರೂಪ ಸ್ವರೂಪವನ್ನು ತಿಳಿದುಕೊಳ್ಳಲು ಚರ್ಚಿಲರು ಪ್ರಯತ್ನಿಸಿಯಾರು. ಮಾತ್ರವಲ್ಲ, ಅಮೇರಿಕ ಏನಾದರೂ ಸಾಹಸದ ಹೆಜ್ಜೆಯನ್ನು ಮುಂದಿಡುವುದಕ್ಕೆ ಮುಂಚೆ ಬ್ರಿಟನಿನ ಅಭಿಪ್ರಾಯವೇನೆಂದು ನೋಡುವುದೆಂಬ ಆಶ್ವಾಸನೆಯನ್ನು ಪಡೆಯುವುದಕ್ಕೂ ಚರ್ಚಿಲರು ಹವಣಿಸಬಹುದು.

ಉಡುಪಿ

24 ಗಂಟೆಯೂ ವಿದ್ಯುಚ್ಛಕ್ತಿ— ಇದೇ ಜನವರಿ ತಾ. 1ರಿಂದ ಗವರ್ನಮೆಂಟ್ ಇಲೆಕ್ಟ್ರಿಸಿಟಿ ಶಾಖೆಯವರು 24 ಗಂಟೆಯೂ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುವ ವ್ಯವಸ್ಥೆ ಮಾಡಿರುತ್ತಾರೆ. ಸಾರ್ವಜನಿಕರು ಇದರ ಸದುಪಯೋಗವನ್ನು ಪಡೆಕೊಳ್ಳಬೇಕಾಗಿ ಇಲೆಕ್ಟ್ರಿಕಲ್ ಇಂಜಿನಿಯರ್ ಶ್ರೀ. ಎಸ್. ಜಿ. ಕೆ. ಶೆಟ್ಟಿಯವರು ತಿಳಿಸುತ್ತಾರೆ. ಈ ವರೆಗೆ ಬೆಳಿಗ್ಗೆ 7½ ಯಿಂದ 8½ ವರೆಗೂ ಮಧ್ಯಾಹ್ನ 12 ವರೆಯಿಂದ 2 ಗಂಟೆಯ ವರೆಗೂ ವಿದ್ಯುಚ್ಛಕ್ತಿ ಸರಬರಾಯಿ ಇದ್ದಿಲ್ಲ.

ಸ್ವಚ್ಛ ಭಾರತ ಆಂದೋಲನ ಆಯಿತು— ಉಡುಪಿಯಲ್ಲಿ ಇದೇ ತಾ. 27ರಲ್ಲು ಪ್ರಾಥಮಿಕ ಶಾಲಾ ನಗರಸ್ವಚ್ಛತೆಯಿಂದ ಪ್ರಾರಂಭಿಸಲ್ಪಟ್ಟಿತು. ಮನೆ ಪಟ್ಟಣಗಳನ್ನು ಸಂದರ್ಶಿಸಿ ನಿರ್ಮಲೀಕರಣ ಮಾಡುವುದರೊಂದಿಗೆ ಶುಚಿಮಾಡುವುದರ ಕುರಿತೂ ಹೇಳಲಾಯಿತು. ಮುನಿಸಿಪಾಲಿಟಿಯ ಆರೋಗ್ಯ ಖಾತೆಯವರೂ ಸಹಕರಿಸಿದ್ದರು.

ಮಾಧ್ವ ತತ್ವಜ್ಞಾನ ಸಮ್ಮೇಳನವು— ಉಡುಪಿ ಶ್ರೀ ಕೃಷ್ಣ ಪರದ [illegible] ಜಯಂತಿ ಮಂಟಪದಲ್ಲಿ ಇದೇ ತಾ. 4 ರಿಂದ 6ರ ವರೆಗೆ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸಾಯನ್ಸ್ ಇದರ ಮಾಜಿ ಡೈರೆಕ್ಟರ್ ಡಾ। ಬಿ। ಟಿ। ವೆಂಕಟೇಶಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಮೈಸೂರಿನ ರಾಜಪ್ರಮುಖರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದೂರ್, ಅವರು ಸಮ್ಮೇಳನವನ್ನು ಉದ್ಘಾಟಿಸುವರು.

ಈ ಸಮ್ಮೇಳನಕ್ಕೆ ಯಾವ ರಾಜಕೀಯ ಸ್ವರೂಪವೂ ಇರುವುದಿಲ್ಲ. ಮಾಧ್ವರ ಸಂಘಟನೆಯೇ ಇದರ ಉದ್ದೇಶ. ತಾನು ಮಾಧ್ವನೆಂಬ ಬಗ್ಗೆ ಒಂದು ದೃಢಪತ್ರಿಕೆಯನ್ನು ಕೊಟ್ಟು ರೂ 2-8-0 ತೆರುವವರು ಪ್ರತಿನಿಧಿಗಳಾಗಲು ಅರ್ಹತೆ ಪಡೆಯುವರು. ಮಾಧ್ವ ತತ್ವದಲ್ಲಿ ಅಥವಾ ಈ ಸಮ್ಮೇಳನದಲ್ಲಿ ಆಸಕ್ತಿಯಿದ್ದು ಪ್ರೇಕ್ಷಕರಾಗಿ ಬರುವವರು ಒಂದು ರೂಪಾಯಿ ಪ್ರವೇಶ ಧನವನ್ನು ತೆರಬೇಕು. ಎಲ್ಲಾ ಮಾಧ್ವಪೀಠಾಧಿಪತಿಗಳು ಈ ಸಮ್ಮೇಳನಕ್ಕೆ ಬರಬಹುದು, ಸಭಾ ಮಂಟಪಕ್ಕೆ ಪ್ರೇಕ್ಷಕರ ಪ್ರವೇಶವು ಕಾರ್ಯಕಾರಿ ಸಮಿತಿಯ ಅಧಿಕಾರಕ್ಕೆ ಒಳಪಟ್ಟ ವಿಷಯವಾಗಿರುವುದಾಗಿ ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ವಿಶ್ವೇಶ ತೀರ್ಥ ಶ್ರೀ ಪಾದಂಗಳವರ ಪ್ರಕಟಣೆಯಲ್ಲಿ ಸೂಚಿಸಲಾಗಿದೆ.

ಜಸ್ಟಿಸ್ ಎ. ಎಸ್. ಪಿ. ಅಯ್ಯರರ ಭಾಷಣ— ಮದ್ರಾಸ್ ಹೈಕೋರ್ಟಿನ ಜಸ್ಟಿಸ್ ಶ್ರೀ ಎ. ಎಸ್. ಪಿ. ಅಯ್ಯರರು ತಾ. 28ರಂದು ಅಪರಾಹ್ನ ಉಡುಪಿ ಬಾರ್ ಎಸೋಸಿಯೇಶನನ್ನು ಸಂದರ್ಶಿಸಿ ಚಹಾ ಸತ್ಕಾರದಲ್ಲಿ ಭಾಗವಹಿಸಿದರು. ಡಿ। ಮುನ್ಸಿಫ್ ಜನಾಬ್ ಅಬ್ದುಲ್ ರಹೀಂ ಅಹಮ್ಮದ್, ಶ್ರೀ ಕೆ. ಜಿ. ಬಲ್ಲಾಳ್ ಮೊದಲಾದವರು ಸ್ವಾಗತವಿತ್ತರು. ಆನಂದ ಸಂಸ್ಕೃತ ಮಹಾ ಪಾಠಶಾಲೆಗೆ ಬಂದು ಸಂಸ್ಕೃತ ವಿದ್ಯೆಯ ಮಹತ್ವವನ್ನು ವಿವರಿಸಿ ಭಾಷಣವಿತ್ತರು. ಬಳಿಕ ಮುಕುಂದ ನಿವಾಸಕ್ಕೆ ಆಗಮಿಸಿದರು. ಡಾ। ಟಿ. ಎಮ್. ಎ. ಪೈಗಳು ಮಾನ್ಯ ಅತಿಥಿಯ ಪರಿಚಯವನ್ನು ಮಾಡಿದಲ್ಲದೆ ಅವರು ಸುಪ್ರೀಂ ಕೋರ್ಟಿನ ನ್ಯಾಯಮೂರ್ತಿ ಪದವಿಯನ್ನು ಅಲಂಕರಿಸುವಂತಾಗಲೆಂದು ಅಪೇಕ್ಷಿಸಿದರು. ಜಸ್ಟಿಸ್ ಶ್ರೀ ಅಯ್ಯರರು ಗೀತಾ ಮಹಾತ್ಮೆಯನ್ನು ಪುರಸ್ಕರಿಸಿ ಪ್ರಧಾನವಾಗಿ ವಿವರಿಸಿ ಲೋಕ ಕಲ್ಯಾಣಕ್ಕಾಗಿ ಜನಾನವನು ನಿಸ್ವಾರ್ಥ ಸೇವೆಯನ್ನು ಸಲ್ಲಿಸಬೇಕೆಂದರು.

ಆಹಾರ ಸಮಿತಿ ಸಭೆಯು— ಸಬ್ ಕಲೆಕ್ಟರ್ ಶ್ರೀ ಡಿ. ಕೃಷ್ಣನವರ ಅಧ್ಯಕ್ಷತೆಯಲ್ಲಿ ದಿನಾಂಕ 29ರಂದು ತಾಲೂಕು ಕಚೇರಿಯಲ್ಲಿ ಜರಗಿತು. ಶ್ರೀ ಮೊಳಹಳ್ಳಿ ಶಿವರಾಯರು ಸಹಕಾರಿ [illegible] ದಂಗ ಪೇಟೆ ಮತ್ತು ಅಕ್ಕಿ ಭತ್ತ [illegible] ನ್ಯಾಯವಾದ ಬೆಲೆಗೆ ಸಾರ್ವಜನಿಕರಿಗೆ ವಿತರಣೆ ಮಾಡುವ ಯೋಜನೆಯನ್ನು ವಿಮರ್ಶಿಸಿ ಅದನ್ನು ಪ್ರೋತ್ಸಾಹಿಸುವಂತೆ ವರ್ಗದಾರರನ್ನು ವಿನಂತಿಸಲಾಯಿತು.

ಉಪಾಧ್ಯಾಯರ ಸಭೆ— ಉಡುಪಿ ತಾಲೂಕಿನ ಬೋರ್ಡ್ ಎಲಿಮೆಂಟರಿ ಶಾಲೆಗಳ ಉಪಾಧ್ಯಾಯರ ಮಹಾಸಭೆಯು ತಾ. 28ರಲ್ಲು ಬೋರ್ಡ್ ಹೈಸ್ಕೂಲಿನಲ್ಲಿ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಟೀಚರ್ಸ್ ಗಿಲ್ಡಿನ ಕಡೆಯಿಂದ ಶ್ರೀ [illegible] ಉಪಾಧ್ಯಾಯರ [illegible] ಅನಂತರ [illegible] ಭಾಷಣ ಮಾಡಿದರು.

ಪ್ರೊ॥ [illegible] ಜನರಲ್— [illegible] ದಿನಾಂಕ [illegible]ರಂದು ಬೆಳಿಗ್ಗೆ [illegible] ಗುವುದೆಂದರು.

ಬಿರುಗಾಳಿ ಪೀಡಿತರಿಗೆ ತೀರ್ವೆ ರಿಯಾಯಿತಿ.

(೧ನೇ ಪುಟದಿಂದ)

ವಹಿಸಿದಂತಾಗಬಹುದು. ಕನ್ನೈಯ್ಯಾಲಾಲ ಮುನ್ಷೀ ಹೇಳಿದಂತೆ-ಶಾಲಾಕಾಲೇಜುಗಳ ವರಾಂಡವನ್ನು ಗುಡಿಸಿ ಸ್ವಚ್ಛವಾಗಿಡುವುದರಿಂದ ತೊಡಗಿ, ಗೋಡೆ ಕಟ್ಟುವುದು. ದುರಸ್ತಿ ಮಾಡುವುದು ಮುಂತಾದೆಲ್ಲ ಕೆಲಸವನ್ನೂ ವಿದ್ಯಾರ್ಥಿ ಹಾಗೂ ಅಧ್ಯಾಪಕರು ಕೂಡಿ ನಡೆಸಿದರೆ-ಉಜ್ವಲ ಭವಿಷ್ಯಕ್ಕೆ ಅಸ್ತಿವಾರವನ್ನು ಹಾಕಿದಂತಾಗುವುದು. ಪಂಚವಾರ್ಷಿಕ ಯೋಜನೆಯು ಕಾರ್ಯರೂಪಕ್ಕೆ ಬರುವುದಕ್ಕಿದೆ. ಆದುದರಿಂದ ಒತ್ತಾಯದ ಶ್ರಮವನ್ನು ಹೇರುವ ಪ್ರಸಂಗ ಬಂದರೂ ಆಶ್ಚರ್ಯವಿಲ್ಲೆಂದು ಯೋಜನಾ ಮಂತ್ರಿ ನಂದಾ ಹೇಳಿರುವುದು ಗಮನೀಯವಾಗಿದೆ. ಹೈದರಾಬಾದಿನಲ್ಲಿ ಜನವರಿಯ ಮಧ್ಯದಲ್ಲಿ ಸೇರಲಿರುವ ಕಾಂಗ್ರೆಸು ಪಂಚವಾರ್ಷಿಕ ಯೋಜನೆಗೆ ಜನಬಲವನ್ನೊದಗಿಸುವ ಸಂಗತಿಗೆ ಪ್ರಾಶಸ್ತ್ಯ ಕೊಡುವ ನಿರೀಕ್ಷೆ ಇದೆ. ಸ್ವಯಂಪ್ರೇರಣೆಯಿಂದ ಜನರು ಸ್ವಂತ ಹಿತಸಾಧನೆಯ ಕಾರ್ಯಗಳಲ್ಲಿ ನಿರತರಾಗುವಂತೆ ತರಬೇತಿ, ಮಾಹಿತಿ ಮತ್ತು ಪ್ರಚಾರವನ್ನು ಮಾಡುವ ಗುರುತರವಾದ ಹೊಣೆ ಕಾಂಗ್ರೆಸಿಗರ ಮೇಲಿದೆ. ಜನಹಿತ ಅಭಿವೃದ್ಧಿ ಯೋಜನೆಗಳು ಈಗಾಗಲೇ ಜ್ಯಾರಿಗೆ ಬಂದಿರುವ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ಜಾಗೃತಿವುಂಟಾಗುವುದು ಇಷ್ಟವಾಗಿದೆ. ಕಾಂಗ್ರೆಸಿಗರು ತಮ್ಮೊಳಗಿನ ಮತಭೇದವನ್ನು ಮರೆತು, ಐಕ್ಯ ಮನಸ್ಸನ್ನು ತೋರ್ಪಡಿಸಿದರೆ ಅವರಿಂದ ಎಲ್ಲರಿಗೂ ಹಿತವಿದೆ. ಅಂಥ ಕಾಲದಲ್ಲಿ ಕೇವಲ ಮಾನವೋಪಯೋಗಿ ಕಾರ್ಯಗಳಿಗಾಗಿ ಅಣುಶಕ್ತಿಯನ್ನು ಬಳಸಬೇಕೆಂಬ ನಮ್ಮ ನಿರ್ಮಲೇಚ್ಛೆಯೂ ಕಳಂಕಿತವಾಗದೆ ಉಳಿಯಬಲ್ಲುದು. ಇಲ್ಲದಿದ್ದರೆ- ತಿರುಕೊಚ್ಚಿಯಲ್ಲಿ ತೆರೆದ ಅಮೂಲ್ಯ ಮೃತ್ತಿಕೆಯ ಕಾರಖಾನೆ ದುರಂತವನ್ನೆ ತಂದೀತು. ಭಾರತವು ಶಾಂತಿಪ್ರಿಯವಾಗಿರುವುದರಿಂದ ಅಣುಬಾಂಬಿನಂಥ ವಿಘಾತಕ ಅಸ್ತ್ರಗಳನ್ನು ತಯಾರಿಸುವುದಕ್ಕಾಗಿ ಅಣುಶಕ್ತಿಯನ್ನು ಪಯೋಗಿಸುವುದಿಲ್ಲೆಂಬ ನೆಹರೂರ ಮಾತಿಗೆ ದೇಶದೆಲ್ಲ ಜನರಲ್ಲಿ ಏಕಾಭಿಪ್ರಾಯ ಮೂಡಿದಾಗ ಮಾತ್ರ ಬೆಲೆ ಬರುತ್ತದೆ.

ಪ್ರಜಾ ಸೋಶಿಯಲಿಸ್ಟ್ ಪಕ್ಷ ಪ್ರಚಾರ ಸಭೆಗಳು—ಕುಂದಾಪುರ ತಾಲೂಕಿನ ಕೆರ್ಗಾಲು ಗ್ರಾಮ ಶಾಲಾ ಬಳಿಯಲ್ಲಿ ತಾ. 25ರಲ್ಲು ಶ್ರೀ ವಿ. ರಾಮಣ್ಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಪಿ. ಶ್ರೀನಿವಾಸ ಸೆಟ್ಟರು ಭಾಷಣಮಾಡಿದರು. ಉಡುಪಿ ತಾಲೂಕಿನಲ್ಲಿ ತಾ 24ರಲ್ಲು ಹೇರೂರು ಗ್ರಾಮದಲ್ಲಿ ಶ್ರೀ ಪಾವುಲ್ ಡಿ'ಸೋಜರ ಅಧ್ಯಕ್ಷತೆಯಲ್ಲೂ, ತಾ 26ರಲ್ಲು ಪೆರ್ಣಂಕಿಲ ಕೇಂದ್ರದಲ್ಲಿ ಶ್ರೀ ಎಚ್ ಸಂಜೀವ ಸೆಟ್ಟರ ಅಧ್ಯಕ್ಷತೆಯಲ್ಲಿ ತಾ. 28ರಲ್ಲು ಬೆಳ್ಳೆ ಕೇಂದ್ರದಲ್ಲಿ ಶ್ರೀ ಮಥಾಯಿ ಫೆರ್ನಾಂಡೀಸರ ಅಧ್ಯಕ್ಷತೆಯಲ್ಲೂ ಪ್ರಜಾ ಸೋಶಲಿಸ್ಟ್ ಪಾರ್ಟಿ ಪ್ರಚಾರ ಸಭೆಗಳು ಜರಗಿ ಡಾ| ಸಂಜೀವನಾಥ ಮೊದಲಾದವರ ಭಾಷಣಗಳಾದುವು.

ಮಲ್ಲಾರು— ಇಲ್ಲಿಯ ಪಂಚಾಯು ಬೋರ್ಡಿನ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಶ್ರೀ. ಮಲ್ಲಾರು ಗುತ್ತು ರಾಘವ ಸೆಟ್ಟರು ಬಹುಮತದಿಂದ ಆರಿಸಲ್ಪಟ್ಟರು.

ಆಂಧ್ರ ಪ್ರಾಂತ ನಿರ್ಮಾಣ—
ಕರ್ಣಾಟಕದ ಪೂರ್ವ ಗಡಿ ಪ್ರಶ್ನೆ

(ಕೆ ಆರ್ ಆಚಾರ್, ಎಂ. ಎ., ಎಲ್.ಎಲ್. ಬಿ.)

ಭಾಷಾವಾರು ಪ್ರಾಂತ ರಚನೆ ಆಗಬೇಕೆಂದು ಹೇಳುವ ಪ್ರತಿಯೊಬ್ಬ ಕನ್ನಡಿಗನಿಗೂ ಆಂಧ್ರ ಪ್ರಾಂತ ನಿರ್ಮಾಣದ ನಿರ್ಣಯವು ಹರ್ಷದಾಯಕವಾಗಿದೆ. ಆದರೆ ಆಂಧ್ರರಿಗಿಂತಲೂ ಹೆಚ್ಚಾಗಿ ಹರಿದು ಹಂಚಿ ಹೋಗಿರುವ ಕನ್ನಡಿಗರಿಗೆ ಕರ್ಣಾಟಕ ಪ್ರಾಂತ್ಯದ ಆವಶ್ಯಕತೆ ಇನ್ನಷ್ಟು ಜಾಸ್ತಿ ಇದ್ದರೂ ಆಂಧ್ರ ಸಹೋದರರಿಗಾದರೂ ಅವರ ಕನಸು ನನಸಾದುದಕ್ಕೆ ನಾವು ಆನಂದಪಡಬೇಕಾಗಿದೆ. ಕರ್ನಾಟಕದಲ್ಲಿಯೂ ಆಂಧ್ರದಲ್ಲಿ ನಡೆದಂತೆ ಉಪವಾಸ ಬಲಿದಾನಗಳು ಆಗಬೇಕೆ? ಆಸ್ತಿ ಪಾಸ್ತಿಗಳ - ರೈಲ್ವೆ ಲೈನುಗಳ ನಾಶವಾಗಬೇಕೆ? ಅವಕ್ಕೆ ಕನ್ನಡಿಗರು ಸಿದ್ಧರೆ? ಇದು ಹೇಗೂ ಇರಲಿ ಈಗಿನ ಪರಿಸ್ಥಿತಿಯಲ್ಲಿ, ಅದರಲ್ಲಿಯೂ ಮೈಸೂರು ಇತರ ಕರ್ಣಾಟಕದೊಡನೆ ಸೇರಲು ಸಿದ್ಧವಿಲ್ಲದ ಈ ಪರಿಸ್ಥಿತಿಯಲ್ಲಿ ಸದ್ಯಕ್ಕೆ ಕರ್ಣಾಟಕ ಪ್ರಾಂತ್ಯ ನಿರ್ಮಾಣದ ಸಂಭವ ಕಾಣುವುದಿಲ್ಲ. ಆಂಧ್ರ ಪ್ರಾಂತ್ಯ ನಿರ್ಮಾಣವಾಗಿ ಕರ್ನಾಟಕ ಪ್ರಾಂತ್ಯ ಸ್ಥಾಪನೆ ಆಗದಿದ್ದರೆ ಕರ್ಣಾಟಕಕ್ಕೆ ಉಂಟಾಗಬಹುದಾದ ಅಪಾಯದ ಕಡೆಗೆ ನಮ್ಮ ಮುಖಂಡರ ಗಮನವನ್ನು ಸೆಳೆಯುವುದೇ ಈ ಲೇಖನದ ಉದ್ದೇಶ.

ಮೈಸೂರು ಸಂಸ್ಥಾನದ ಸುತ್ತಲೂ ಈಗಿನ ಮದ್ರಾಸಿನಲ್ಲಿ ಕನ್ನಡ ಪ್ರದೇಶಗಳಿವೆ ಎಂಬುದು ಎಲ್ಲರೂ ತಿಳಿದ ವಿಚಾರ. ಮೈಸೂರಿನ ದಕ್ಷಿಣದಲ್ಲಿ ನೀಲಗಿರಿ ಜಿಲ್ಲೆ ಸೇಲಂ ಮತ್ತು ಕೊಯಂಬತ್ತೂರು ಜಿಲ್ಲೆಗಳಲ್ಲಿ ಕನ್ನಡ ಭಾಷೆಯನ್ನಾಡುವ ತಾಲೂಕುಗಳು ಮತ್ತು ಗ್ರಾಮಗಳಿರುವಂತೆಯೇ ಮೈಸೂರಿನ ಪೂರ್ವ ಗಡಿಯಲ್ಲಿ ಈಗಿನ ಮದ್ರಾಸು ಪ್ರಾಂತ್ಯದ ಅನಂತಪುರ, ಕರ್ನೂಲ್ ಇತ್ಯಾದಿ ಜಿಲ್ಲೆಗಳಲ್ಲಿ ಕನ್ನಡ ಪ್ರಾಂತ್ಯಕ್ಕೆ ಸೇರಬೇಕಾದ ಅಂಶಗಳಿವೆ ಮುಖ್ಯ. ಆಂಧ್ರ ಪ್ರಾಂತ್ಯ ನಿರ್ಮಾಣದಲ್ಲಿ ಈ ಪ್ರದೇಶಗಳ ಗತಿ ಏನು? ಆಂಧ್ರರು ಮೊದಲಿನಿಂದಲೂ ಇವುಗಳನ್ನು ನುಂಗಲು ಪ್ರಯತ್ನಿಸುತ್ತಿದ್ದಾರೆ. ಬಳ್ಳಾರಿಯ ವಿಚಾರದಲ್ಲಿ ನಡೆದಿರುವ ಈ ವರೆಗಿನ ಚಳವಳಿಯಿಂದ ಇದು ಸ್ಪಷ್ಟವಾಗುತ್ತದೆ. ಈ ಗಡಿನಾಡಿನ ಪ್ರದೇಶಗಳನ್ನು ಆಂಧ್ರದಲ್ಲಿ ಈಗ ಸೇರಿಸಿದರೆ ಅವು ಮುಂದಕ್ಕೆ ಸಿಗುವುದು ಬಹಳ ದುರ್ಲಭ. ಅವುಗಳ ಸ್ಥಿತಿಗತಿಗಳು ಸಂಪೂರ್ಣ ವ್ಯತ್ಯಾಸ ಹೊಂದುವುದು ಖಂಡಿತ. ಎಲ್ಲಾ ಭಾಷೆಗಳಿರುವ ಎಲ್ಲಾ ಪ್ರಾತಿನಿಧ್ಯವಿರುವ ಮದ್ರಾಸಿನಲ್ಲಿಯೇ ಕನ್ನಡ ಮಾತನಾಡುವ ಗಡಿನಾಡುಗಳಲ್ಲಿ ಕನ್ನಡ ಶಾಲೆಗಳಿಲ್ಲ. ಮನೆಯಲ್ಲಿ ಮಾತನಾಡುವುದು ಕನ್ನಡ, ಶಾಲೆಯಲ್ಲಿ ಕಲಿಯುವುದು ತಮಿಳು, ತೆಲುಗು. ಇನ್ನು ಇವುಗಳನ್ನು ಕೇವಲ ತೆಲುಗರೇ ಆಳುವ ಪ್ರಾಂತ್ಯಕ್ಕೆ ಸೇರಿಸಿದರೆ ಇವುಗಳು ಸಂಪೂರ್ಣವಾಗಿ ಕನ್ನಡವನ್ನು ಕಳೆದುಕೊಳ್ಳುವುದು ಖಂಡಿತ.

ನಾನು ನೀಲಗಿರಿಯನ್ನು ೧೯೧೭ರಿಂದಲೂ ನೋಡಿದ್ದೇನೆ. ಆ ಕಾಲದಲ್ಲಿ ಉದಕ ಮಂಡಲ (ನೀಲಗಿರಿಯ ಮುಖ್ಯ ಪಟ್ಟಣ) ಕನ್ನಡ ಊರೆಂದು ಹೇಳಬಹುದಿತ್ತು. ಈಗ ಅದರ ಗುರುತೇ ಸಿಗುವುದಿಲ್ಲ. ಅದು ಮಲೆಯಾಳವೋ? ತಮಿಳು ನಾಡೊ? ಎಂಬ ಶಂಕೆ ಉಂಟಾಗುತ್ತದೆ. ಅದು ಕನ್ನಡ ನಾಡೆಂದು ತಿಳಿಯಬೇಕಾದರೆ ಹಳ್ಳಿಯ ಬಡವರನ್ನೂ ಗೌಡರನ್ನೂ ಕಾಣಬೇಕು. ಅವರು ಸಹ ಶಾಲೆಯಲ್ಲಿ ಕಲಿಯುವುದು ಕನ್ನಡವಲ್ಲ ಬೇರೆ ಭಾಷೆ. ಈ ಪರಿಸ್ಥಿತಿ ಕನ್ನಡ ನಾಡಿನ ಪ್ರತಿನಿಧಿಗಳು ಮದ್ರಾಸ್ ಸರಕಾರದಲ್ಲಿರುವಾಗಲೇ ನಡೆಯುತ್ತದೆ. ಇನ್ನು ಆಂಧ್ರಪ್ರಾಂತವಾದರೆ ಕನ್ನಡನಾಡಿನ ಪೂರ್ವಗಡಿಯಲ್ಲಿರುವ ಪ್ರದೇಶಗಳ ಗತಿ ಏನು? ಇವುಗಳನ್ನು ಖಂಡಿತವಾಗಿಯೂ ಆಂಧ್ರದಲ್ಲಿ ಸೇರಿಸದಂತೆ ಕರ್ಣಾಟಕದ ಮುಖಂಡರು ಕೂಡಲೇ ಪ್ರಯತ್ನಿಸಿ ಸಾಧಿಸಬೇಕು.

ಈ ಅಪಾಯವನ್ನು ಹೋಗಲಾಡಿಸಲು ಒಂದೇ ದಾರಿ. ಈ ಪ್ರದೇಶಗಳನ್ನು ಅವುಗಳ ಸಮೀಪವಿರುವ ಮೈಸೂರು ಪ್ರಾಂತ್ಯದ ಜಿಲ್ಲೆಗಳಿಗೆ ಸೇರಿಸುವಂತೆ ಕೂಡಲೇ ಪ್ರಯತ್ನಿಸಬೇಕು—ಸಾಧಿಸಬೇಕು. ಕನ್ನಡ ಜಿಲ್ಲೆಯಲ್ಲಿಯೂ ಕೂಡ ಅನೇಕರ ಅಭಿಪ್ರಾಯ ಈ ಜಿಲ್ಲೆಯನ್ನೂ ಕೊಡಗನ್ನೂ ಮೈಸೂರಿಗೆ ಸೇರಿಸಬಹುದೆಂದು ಇದೆ. ಆದರೆ ಶ್ರೀ| ಕೇಳಪ್ಪನವರಂಥವರು ಗೋಕರ್ಣದ ವರೆಗೂ, ಮಹಾರಾಷ್ಟ್ರದಲ್ಲಿ ಕೆಲವರು ಕಾರವಾರದ ವರೆಗೂ, ಕರ್ಣಾಟಕವನ್ನು ತಮ್ಮ ತಮ್ಮ ಪ್ರಾಂತ್ಯಕ್ಕೆ ಸೇರಿಸುವ ಪ್ರಯತ್ನದಲ್ಲಿದ್ದರೂ ಈಗಿನ ಪರಿಸ್ಥಿತಿಯಲ್ಲಿ ಅವರಿಂದ ಅಪಾಯ ಉಂಟಾಗಲಿಕ್ಕಿಲ್ಲ. ಆದರೆ ನಮ್ಮ ಮೂರು ಗಡಿಯಲ್ಲಿರುವ ಮದರಾಸಿನ ತಾಲೂಕೇ ಮೊದಲಾದ ಪ್ರದೇಶಗಳನ್ನು ಹೊಸ ಆಂಧ್ರ ಪ್ರಾಂತ್ಯದಲ್ಲಿ ಸೇರಿಸಿಬಿಟ್ಟರೆ ಅನಂತರ ಅವುಗಳು ಕನ್ನಡ ನಾಡಿಗೆ ಹಿಂತಿರುಗಿ ಸಿಗುವುದು ಕಷ್ಟಸಾಧ್ಯ, ಅಸಂಭವವೇ ಎಂದರೂ ತಪ್ಪಲ್ಲ. ಅಲ್ಲಿ ಸ್ವಲ್ಪ ಸಮಯದಲ್ಲಿಯೇ ಕನ್ನಡ ಅಳಿಯುವುದು ಖಂಡಿತ. ಆಂಧ್ರರ ಆಕ್ರಮಣದ ಫಲವಾಗಿ ಅಲ್ಲಿಯ ನಿವಾಸಿಗಳೂ ಕೂಡ ಕೆಲವು ವರ್ಷಗಳ ಅನಂತರ ಕರ್ಣಾಟಕಕ್ಕೆ ತಿರುಗಿ ಬರಲು ಒಪ್ಪದಿರಲೂ ಬಹುದು. ಈ ಗಂಡಾಂತರವನ್ನು ನಿವಾರಿಸಲು ಒಂದೇ ಉಪಾಯವೆಂದರೆ ಈ ಪ್ರದೇಶಗಳನ್ನು ಆಂಧ್ರ ಪ್ರಾಂತ ನಿರ್ಮಾಣ ಕಾಲದಲ್ಲಿಯೇ ಮೈಸೂರು ಪ್ರಾಂತ್ಯಕ್ಕೆ ಸೇರಿಸಿಕೊಳ್ಳುವುದು.

ಆದ್ದರಿಂದ ನಮ್ಮ ಕರ್ಣಾಟಕದ ಮುಖಂಡರು ಕೂಡಲೇ ಈ ಕಡೆ ಗಮನಕೊಟ್ಟು ಆ ಪ್ರಾಂತ್ಯಗಳಲ್ಲಿ ಸಂಚರಿಸಿ ಜನಮತವನ್ನು ಬಲಪಡಿಸಿ ಈ ಗಡಿನಾಡನ್ನು ಮೈಸೂರಿಗೆ ಸೇರಿಸುವಂತೆ ಮಾಡಬೇಕು. ಮೈಸೂರು ಮಂತ್ರಿಮಂಡಲವೂ ಈ ವಿಷಯ ಪರಿಸ್ಥಿತಿಯಲ್ಲಿ ಅಸಡ್ಡೆಯಿಂದ ವರ್ತಿಸಕೂಡದು.

ಕರ್ಣಾಟಕ ಏಕೀಕರಣ ಸಂಘ ಮತ್ತು ಕರ್ಣಾಟಕದ ಎಲ್ಲಾ ರಾಜಕೀಯ ಪಕ್ಷಗಳು ಈ ಮುಖ್ಯ ಪ್ರಶ್ನೆಯನ್ನು ಅಲಕ್ಷಿಸದೆ, ಗಡಿನಾಡನ್ನು ಉಳಿಸಿಕೊಳ್ಳಲೇ ಬೇಕು. ಅವಶ್ಯವಿದ್ದರೆ ಎಲ್ಲಾ ರಾಜಕೀಯ ಪಕ್ಷದವರೂ ಒಟ್ಟುಗೂಡಿ ಈ ಪ್ರಶ್ನೆಯನ್ನು ಬಗೆಹರಿಸಲು ಒಂದು ಪರಿಷತ್ತನ್ನು ಕೂಡಲೇ ಕರೆದು ಕರ್ತವ್ಯನಿಷ್ಠರಾಗಬೇಕೆಂದು ನನ್ನ ನಮ್ರ ಸೂಚನೆಯಾಗಿರುತ್ತದೆ.

ಒಂದು ಕಾಲದಲ್ಲಿ ಅಖಿಲ ಹಿಂದುಸ್ಥಾನದ ಸಕಲ ತತ್ವಗಳ ಸಂರಕ್ಷಣೆಮಾಡಿ
ಭಾರತದ ಭವಿಷ್ಯ ಕಾಯ್ದ ಕ್ಷಾತ್ರವೀರರ ಕೀರ್ತಿಯ ಕಥೆ
ರಜಪೂತ್
ಜಯರಾಜ್, ಸೂರ್ಯಯ್ಯಾ, ಸಪ್ರು, ಶಕುಂತಲಾ, ಕುಲದೀಪ್
ತಾ. 30—12—52ರಿಂದ
ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.
ಬರುವಚಿತ್ರ: "ಭೋಲಾನಾಥ್"

ಪೋಸ್ಟು ಮತ್ತು ಟೆಲಿಗ್ರಾಫ್ ಕೆಲಸಗಾರರ ಪ್ರಾಂತೀಯ ಪರಿಷತ್ತು.

ಕಳೆದ ತಾ 28ರಂದು ಮಂಗಳೂರಲ್ಲಿ ಶ್ರೀ ಎ ಬಿ ತುಳಸೀ ರಾಮರ ಅಧ್ಯಕ್ಷತೆಯಲ್ಲಿ ಜರಗಿತು, ಅಖಿಲ ಭಾರತ ಅಂಚೆ ಮತ್ತು ತಂತಿ ಇಲಾಖಾ ಕೆಲಸಗಾರರ ಸಂಘದ ಕಾರ್ಯದರ್ಶಿಗಳಾದ ಶ್ರೀ ಕೆ ರಾಮಮೂರ್ತಿಯವರು ಸಮ್ಮೇಳನವನ್ನು ಉದ್ಘಾಟಿಸಿದರು. ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ಬಿ. ಗಂಗಾಧರ ದಾಸರು ಸ್ವಾಗತ ಭಾಷಣ ಮಾಡಿದರು. ಆಧುನಿಕ ಜೀವನದಲ್ಲಿ ಪೋಸ್ಟ್ ಮತ್ತು ಟೆಲಿಗ್ರಾಫ್ ಬಹಳ ಮುಖ್ಯವಾದುದು. ಅಂತರ್ರಾಷ್ಟ್ರೀಯ ಸಂಬಂಧ, ಸಾಮಾಜಿಕ ಸಂಪರ್ಕ, ವಿಜ್ಞಾನದ ಬೆಳವಣಿಗೆ, ಧರ್ಮದ ಪ್ರಚಾರ—ಇವುಗಳಲ್ಲಿ ಪೋಸ್ಟು ಮತ್ತು ಟೆಲಿಗ್ರಾಫ್‌ಗಳು ಬಹಳ ಸಹಾಯವನ್ನು ಈ ಮೊದಲೂ ನೀಡಿವೆ ಈಗಲೂ ಮಾಡುತ್ತಿವೆ ಎಂದು ಮುಂತಾಗಿ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೇಳಿದರಲ್ಲದೆ ಕೆಲಸಗಾರರು ತಮ್ಮ ಜೀವನವನ್ನು ಉತ್ತಮಗೊಳಿಸಲು ಪ್ರಯತ್ನಿಸಬೇಕೆಂದೂ ಹೇಳಿ ಯೂನಿಯನನ್ನು ಬಲಗೊಳಿಸಲು ಪ್ರಾರ್ಥಿಸಿದರು.

ಪೋಸ್ಟು ಮಾಸ್ಟರ್ ಜನರಲ್ ಮೇಜರ್ ಸಿ. ವಿ ರಾಘವನ್ ಅಂಚೆಕೆಲಸಗಾರರು ತಮ್ಮ ಕರ್ತವ್ಯವನ್ನು ದಕ್ಷತೆಯಿಂದ ಸಲ್ಲಿಸಬೇಕು ಮತ್ತು ಸಾರ್ವಜನಿಕರು ಇವರೊಡನೆ ಸಹಕರಿಸ ಬೇಕೆಂದರು. ಇಲಾಖಾ ನೌಕರರ ವಿಷಯ ಪ್ರಸ್ತಾಪಿಸುತ್ತಾ ತನ್ನ ಪ್ರಾಮುಖ್ಯತೆಯು ಅಂಚೆ ಇಲಾಖೆಯ ನೌಕರರ ಕರ್ತವ್ಯದ ಮೇಲೆ ಹೊಂದಿ ಎವುದೆಂದರು. ಪಂಚವಾರ್ಷಿಕ ಯೋಜನೆಯ ಕುರಿತು ಮಾತನಾಡುತ್ತಾ ಇದಕ್ಕೆ ಅಂಚೆ ಇಲಾಖೆಯವರು ಸಹಾಯ ಮಾಡಬೇಕು. ಇಲಾಖೆಯ ನೌಕರರು ಒಳ್ಳೆಯದಕ್ಕೆ ತನ್ನಿಂದ ಆದಷ್ಟು ಸಹಾಯ ಮಾಡುವೆನೆಂದರು.

ಅಂಚೆ ಮತ್ತು ತಂತಿ ಇಲಾಖೆ ಸರಕಾರ ವಿಶೇಷ ಪ್ರಾಂತೀಯ— ಸಮ್ಮೇಳನವು ತಾ. 29ರಂದು ಶ್ರೀ. ಕೆ. ಎಮ್. ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿತು ಪ್ರಾರ್ಥನೆಯಾದ ಬಳಿಕ ಶ್ರೀ. ಬಿ. ಗಂಗಾಧರ ದಾಸರು ಸ್ವಾಗತ ಭಾಷಣಮಾಡಿದರು. ಪಾರ್ಲಿಮೆಂಟಿನ ಸದಸ್ಯರಾದ ಶ್ರೀ. ಕೆ. ಎ. ದಾಮೋದರ ಮೆನೆನ್, ಅವರು ಸಮ್ಮೇಳನವನ್ನು ಉದ್ಘಾಟಿಸುತ್ತಾ ತಮಗೆ ಆರ್ಥಿಕ ಪ್ರಜಾಪ್ರಭುತ್ವ ಬೇಕು ಮತ್ತು ಇಗರಿಂದ ರಾಜಕೀಯ ಪ್ರಜಾಪ್ರಭುತ್ವವನ್ನು ದೊರಕಿಸ ಬಹುದೆಂದರು ಇಲಾಖೆಯ ಸಮಸ್ಯೆಗಳು ಬಗೆಹರಿಯದೆ ಹಲವು ವರುಷಗಳಿಂದ ಹಾಗೆಯೇ ಇರುವವು. ಸರಕಾರವು ಈಗ ಹಳ್ಳಿಗಳಲ್ಲೆಲ್ಲಾ ಬ್ರಾಂಚು ಪೋಸ್ಟಾಫೀಸುಗಳನ್ನು ತೆರೆಯುವ ಹೊಸ ಯೋಜನೆಯನ್ನು ಆರಂಭಿಸಿಯದೆ. ಇಲಾಖೆಯ ನೌಕರರ ಬೇಡಿಕೆಗಳು ನ್ಯಾಯವಾಗಿರುವುದರಿಂದ ಅವುಗಳನ್ನು ಪರಿಶೀಲಿಸಬೇಕು ಸರಕಾರವು ಮುಷ್ಕರವನ್ನು ಮಾತ್ರ ಮಾಡದೆ ತಮ್ಮ ಸಂಸ್ಥೆಗಳ ಮೂಲಕ ಬೇಡಿಕೆಗಳನ್ನು ಮುಂದಿಡಬೇಕು ಎಂದರು.

ಅಧ್ಯಕ್ಷರು ಭಾರತದ ಮತ್ತು ಮದ್ರಾಸು ಅಧಿಪತ್ಯದ ಪೇಟೆ ಪಟ್ಟಣಗಳನ್ನೂ ಲೆಕ್ಕಹಾಕಿ ಈ ಅಧಿಪತ್ಯದ 35,932 ಹಳ್ಳಿಗಳಿವೆ ಎಂದು, ಇಲ್ಲಿ ವಿದ್ಯಾವಂತರ ಸಂಖ್ಯೆ ಬಹಳ ಕಡಿಮೆಯಿದೆ. ಎಂದೂ ಜಾಗಿದ್ದರೂ ಮತದಾನದ ಹಕ್ಕನ್ನು ಕೊಟ್ಟಿದ್ದಾರೆಂದು ಇವರು ಆ ಹಕ್ಕನ್ನು ಉಪಯೋಗಿಸುವಷ್ಟು ಸ್ಥಿತಿಯಲ್ಲಿಲ್ಲವೆಂದೂ ಹೇಳಿದರು. ಇಲಾಖಾ ನೌಕರರಿಗೆ ತಕ್ಕ ವೇತನವನ್ನು ಕೊಡಬೇಕೆಂದು ಹೇಳಿದರು. ಬಳಿಕ ಕೆಲವರ ಭಾಷಣಗಳಾಗಿ ಶ್ರೀ ಬಿ, ಎನ್, ರಾಯರು ಧನ್ಯವಾದಗಳನ್ನರ್ಪಿಸಿದರು.

ಮಂಗಳೂರು

ದಕ್ಷಿಣಾಫ್ರಿಕ ದಿನಾಚರಣೆ—ದಕ್ಷಿಣಾಫ್ರಿಕದ ಮಲಾನ್ ಸರಕಾರದ ವರ್ಣದ್ವೇಷ ಶಾಸನಗಳ ವಿರೋಧವಾಗಿ ಸತ್ಯಾಗ್ರಹವಾರಂಭಿಸುವ ದಕ್ಷಿಣಾಫ್ರಿಕದ ಭಾರತೀಯರಿಗೂ ಅಲ್ಲಿನ ಆಫ್ರಿಕನರಿಗೂ ತಮಗಿರುವ ಸಹಾನುಭೂತಿಯನ್ನು ವ್ಯಕ್ತಪಡಿಸುವುದಕ್ಕೂ ಅವರಿಗೆ ತಕ್ಕ ಬೆಂಬಲ ನೀಡುವುದಕ್ಕೂ ಮಂಗಳೂರು ನಾಗರೀಕರ ಸಭೆಯು ಇಲ್ಲಿನ ಎಲ್ಲ ಪಕ್ಷಗಳ ಸಂಯುಕ್ತ ನೇತೃತ್ವದಲ್ಲಿ ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ವೆಂಕಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎ. ಶಾಂತಾರಾಂ ಪೈ, ಬಿ ಎಮ್. ಇದಿನಬ್ಬ, ಎಫ್. ಎಕ್ಸ್. ಡಿ' ಪಿಂಟೋ, ಎಸ್. ಗೋಪಾಲ ನಾಲೆನ್ನ, ಎಸ್. ನರಸಿಂಹ ಶಾಸ್ತ್ರಿ, ಎಸ್. ಎನ್. ಹೊಳ್ಳ ಮೊದಲಾದವರು ಮಾತನಾಡಿದರು. ಅಧ್ಯಕ್ಷರ ಭಾಷಣ, ಶ್ರೀ ಬಿ. ಆರ್. ಕರ್ಕೇರರ ಧನ್ಯವಾದಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಮೈಸೂರು ರಾಜಪ್ರಮುಖರು:—ದಿನಾಂಕ 3ರಂದು ಮಂಗಳೂರಿಗೆ ಬಂದು ನಗರ ಸಭೆಯ ಮಾನಪತ್ರ ಸ್ವೀಕರಿಸಿ, ಕದ್ರಿ ದೇವಸ್ಥಾನಕ್ಕೆ ಹೋಗಿ ಅಲ್ಲಿಯ ಗಂಧಪ್ರಸಾದ ಸ್ವೀಕರಿಸುವರು.

ಕೆನರಾ ಹೈಸ್ಕೂಲ್ ದಿನಾಚರಣೆ-ಸ್ಥಳೀಯ ಕೆನರಾ ಹ್ಯಾಸ್ಕೂಲಿನ ಶಾಲಾ ದಿನಾಚರಣೆಯು ಕಳೆದ ತಾ 25ರಲ್ಲಿ ಸಂಜೆ ಜಿಲ್ಲಾ ಎಡ್ಯುಕೇಶನಲ್ ಆಫೀಸರ್ ಶ್ರೀ ಟಿ. ರಾಘವನ್ ನಾಯರರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎ. ನಾರಾಯಣ ಪೈಗಳವರು ಶಾಲೆಯ ಶುಭವನ್ನು ಬಯಸಿದರು. ಶ್ರೀಮತಿ ಎಸ್. ರಾಘವನ್, ಅವರು ಪಾರಿತೋಷಕ ವಿತರಣೆ ಮಾಡಿದರು. ಅಧ್ಯಕ್ಷ ಭಾಷಣವಾದ ಬಳಿಕ ಶಾಲಾ ಮೆನೇಜರ್ ಶ್ರೀ ಎಮ್. ಮಾಧವರಾಯರು ಧನ್ಯವಾದಗಳನ್ನರ್ಪಿಸಿದರು. ವಿವಿಧ ವಿನೋದಾವಳಿಗಳೊಡನೆ ಸಮಾರಂಭ ಮುಕ್ತಾಯವಾಯಿತು.

ಕೈಗಾರಿಕೆಗಳೂ-ಖಾಸಗಿ ಸಂಸ್ಥೆಗಳೂ—ಮಂಗಳೂರಿನ ಲಿಯೈಸಾನ್ ಕಮಿಟಿಯ ಆಶ್ರಯದಲ್ಲಿ ತಾ. 26ರಂದು ಪೂನೆಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಒಫ್ ಸೋಶಿಯಲ್ ಆರ್ಡರಿನ ಡೈರೆಕ್ಟರಾದ ರೆ| ಫಾ| ಜೆರೋಮ್ ಡಿ' ಸೋಜರು, ಲಿಯೈಸಾನ್ ಸಮಿತಿಯು ಕೆಲಸಗಾರರ ಹಾಗೂ ಮಾಲಕರ ಪ್ರತಿನಿಧಿಗಳಿಂದ ಕೂಡಿದು ಮಾಡಬೇಕಾದ ಕರ್ತವ್ಯಗಳನ್ನು ವಿವರಿಸಿದರು. ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ. ಅವರು ಸಭಾಧ್ಯಕ್ಷತೆ ವಹಿಸಿದ್ದರು.

ಭಾರತದಲ್ಲಿರುವ ಸಮಸ್ಯೆಗಳ ಪೈಕಿ ಗ್ರಾಮಗಳ ಸಮಸ್ಯೆ ಪ್ರಾಮುಖ್ಯವಾದುದು. ಆದಕ್ಕಾಗಿ ನಮ್ಮ ದೇಶದಲ್ಲಿ ಕಮ್ಯೂನಿಟಿ ಪ್ರೊಜೆಕ್ಟ್ ಏರ್ಪಡಿಸಲ್ಪಟ್ಟಿದೆ. ಇದರಲ್ಲಿ ದ. ಕ. ಜಿಲ್ಲೆಯು ಮುಖ್ಯ ಕೇಂದ್ರವಾಗಿದೆ. ಈ ಯೋಜನೆಯಿಂದ ಗ್ರಾಮ ಸಮಸ್ಯೆಗಳನ್ನು ಬಗೆಹರಿಸಬಹುದು.

ನಮ್ಮ ದೇಶದಲ್ಲಿರುವ ಮುಖ್ಯ ಕೈಗಾರಿಕೆಗಳು ಸರಕಾರದ ಕೈಯಲ್ಲಿರುವುದರಿಂದ ಪೋಸ್ಟಲ್ ಸರ್ವಿಸ್ ಭಾರತ ಸರಕಾರವು ತನ್ನ ಕೈಯಲ್ಲಿಟ್ಟುಕೊಂಡಿದೆ. ಅಮೇರಿಕಾದಲ್ಲಿ ಈ ಖಾತೆಯು ಖಾಸಗಿ ಸಂಸ್ಥೆಗಳ ವಶವಿದೆ. ಇದರಿಂದ ಜನರಿಗೆ ಏನೊಂದೂ ತೊಂದರೆಯಿಲ್ಲದೆ ಬೇಕಾದ ಸೌಕರ್ಯಗಳು ಒದಗುತ್ತವೆ. ಹಾಗೆಯೇ ಸಾರಿಗೆಯು ಕೂಡಾ ಖಾಸಗಿ ಕಂಪೆನಿಗಳ ಕೈಯಲ್ಲಿದೆ. ಭಾರತದಲ್ಲಿ ಕೂಡಾ ಅದೇ ರೀತಿಯಲ್ಲಿ ಕೈಗಾರಿಕೆಗಳನ್ನು ಖಾಸಗಿಯಾಗಿ ನಡೆಸಲು ಪ್ರಯತ್ನಿಸಬೇಕು. ಟ್ರೇಡ್ ಯೂನಿಯನ್ನುಗಳು ಕೆಲಸಗಾರರಿಗೆ ಬೇಕಾದ ಸಹಾಯನೀಡಬೇಕು. ಅವರಿಗೆ ಯೋಗ್ಯ ಶರಬೇತಿ ಕೊಡಬೇಕು ಎಂದು ಎಂಬತಾಗಿ ರೆ| ಫಾ| ಡಿ'ಸೋಜರು ಹೇಳಿದರು. ಸಭಿಕರು ಕೇಳಿದ ಪ್ರಶ್ನೆಗಳಿಗೆ ಉತ್ತರಕೊಟ್ಟರು. ಶ್ರೀ ಬಿ ವೈಕುಂಠ ಬಾಳಿಗರ ಧನ್ಯವಾದಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಎಸ್. ಆರ್. ಎಸ್. ಹೋಮ್ ಹಳೆ ವಿದ್ಯಾರ್ಥಿಗಳ ವಾರ್ಷಿಕ ಸಭೆಯು—ತಾ. 24ರಲ್ಲಿ ಜರಗಿತು. ಜತೆ ಕಾರ್ಯದರ್ಶಿಗಳಾದ ಡಾ| ಕೆ. ಬಿ. ಸೆಟ್ಟಿ ಮತ್ತು ಶ್ರೀ ಬಿ. ಬಿ. ಸೆಟ್ಟರು ಸಂಘದ ವರದಿಯನ್ನು ಒಪ್ಪಿಸಿದರು. ಶ್ರೀ ಕೆ. ಕೆ. ಹೆಗ್ಡೆಯವರು ಆಡಿಟ್ ಆದ ಲೆಖ್ಖ ಪತ್ರಗಳನ್ನು ಸಭೆಯ ಮುಂದಿಟ್ಟರು. ರಾತ್ರಿ ಭೋಜನ ಸತ್ಕಾರ ನಡೆಯಿತು. ಈ ಸಮಾರಂಭಕ್ಕೆ ಜಸ್ಟಿಸ್ ಶ್ರೀ ಎ. ಎಸ್. ಪಿ ಅಯ್ಯರ್, ಜಿಲ್ಲಾ ಜಡ್ಜ್ ಶ್ರೀ ಪಿ. ಟಿ. ರಾಮನ್ ನಾಯರ್, ಜಿಲ್ಲಾ ಕಲೆಕ್ಟರ್, ಶ್ರೀ ಸಿ. ಎ ರಾಮಕೃಷ್ಣನ್, ಜಿಲ್ಲಾ ಸೂಪರಿಂಟೆಂಡೆಂಟ್ ಶ್ರೀ ರಾಮಯ್ಯ ಪಿಳ್ಳೆ ಮೊದಲಾದ ಪ್ರತಿಷ್ಠಿತರು ಬಂದಿದ್ದರು. ರಾಷ್ಟ್ರದ ಸ್ವಸ್ತಿ ವಾಚನವನ್ನು ಜಸ್ಟಿಸ್ ಅಯ್ಯರರೂ, ಸಂಘದ ಸ್ವಸ್ತಿಯನ್ನು ಶ್ರೀ ಕೆ. ಎಸ್. ಹೆಗ್ಡೆ, ಪಾರ್ಲಿಮೆಂಟ್ ಮೆಂಬರ್ ಅವರೂ, ಅತಿಥಿಗಳ ಸ್ವಸ್ತಿವಾಚನವನ್ನು ಶ್ರೀ ಸಿ. ಆರ್. ಪೂಂಜರೂ ಮಾಡಿದರು. ಇವುಗಳಿಗೆ ಅನುಕ್ರಮವಾಗಿ ಶ್ರೀಗಳಾದ ಬಿ. ಬಿ. ಸೆಟ್ಟಿ ಮತ್ತು ಪಿ. ಟಿ. ರಾಮನ್ ನಾಯರರು ಉತ್ತರವಿತ್ತರು. ಜತೆ ಕಾರ್ಯದರ್ಶಿ ಶ್ರೀ ಬಿ. ಬಿ. ಸೆಟ್ಟರ ಧನ್ಯವಾದಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಜಸ್ಟಿಸ್ ಶ್ರೀ ಪಂಚಾಪಕೇಶ ಅಯ್ಯರರು—ಕಳೆದ ತಾ. 24ರಲ್ಲಿ ರಾತ್ರಿ ಮಂಗಳೂರಿನ ಸರಕಾರಿ ಕಾಲೇಜಿನಲ್ಲಿ ಮೊಹೆಂಜೋದಾರೋವಿನ ಮನುಷ್ಯ ಎಂಬ ವಿಷಯದಲ್ಲಿ ಭಾಷಣವಿತ್ತರು. ಅವರು ತಮ್ಮ ಭಾಷಣದಲ್ಲಿ ಮೊಹೆಂಜೋದಾರೋ ಮತ್ತು ಹರಪ್ಪನಗರಗಳ ಅವಶೇಷಗಳಿಂದ ವಾನವ ಸಂಸ್ಕೃತಿಯ ಪ್ರಾಚೀನತೆಯಲ್ಲಿ ಕಂಡು ಬಂದ ಬೆಳಕನ್ನೂ ಅಂದಿನ ಸಂಸ್ಕೃತಿಯ ಕುರುಹು ಇಂದಿನವರ ಉಡಿಗೆತೊಡಿಗೆ, ವಿಚಾರ ಲಹರಿ-ಇತ್ಯಾದಿಗಳನ್ನು ಚಿತ್ರವಾಗಿಯೂ ಸರಸವಾಗಿಯೂ ವಿವರಿಸಿದರು. ಸಭಾರಂಭದಲ್ಲಿ ಪ್ರಾರ್ಥನಾ ನಂತರ ಕಾಲೇಜಿನ ಪ್ರಿನ್ಸಿಪಾಲರು ಮಾನ್ಯ ಅತಿಥಿಯನ್ನು ಸ್ವಾಗತಿಸಿದರು.

ಮಂಗಳೂರು ವಿಮಾನ ಸರ್ವಿಸ್—ತಾ. 31ರಲ್ಲಿ ಮಂಗಳೂರಿನ ಬಜ್ಪೆ ವಿಮಾನ ನಿಲ್ದಾಣದಲ್ಲಿ ಪ್ರಥಮ ಸರ್ವಿಸ್ ವಿಮಾನವು ಇಳಿಯುವುದು. ಅನಂತರ ವಾರಕ್ಕೆ ನಾಲ್ಕು ದಿನಗಳಲ್ಲಿ (ಆದಿತ್ಯವಾರ, ಮಂಗಳವಾರ, ಬುಧವಾರ ಮತ್ತು ಶುಕ್ರವಾರ) ಬೊಂಬಾಯಿ-ಕೊಚ್ಚಿಗಳ ಮಧ್ಯೆ ಹಾರುವ ವಿಮಾನಗಳು ಇಲ್ಲಿ ಇಳಿಯುವುವು.

ಸಂಬಾರ ಜೀನಸು ಚೌಕಶಿ ಕಮಿಟಿಯು—ದ. ಕ. ಜಿಲ್ಲೆಗೆ ಜನವರಿ ತಿಂಗಳಲ್ಲಿ ಆಗಮಿಸಿ ತಾ. 23-1-53ರಲ್ಲಿ ಕಾಸರಗೋಡಿನ ತೆಂಗು ಪರಿಶೋಧನಾ ಕ್ಷೇತ್ರದಲ್ಲೂ ಮರುದಿನ ತಾ. 24ರಲ್ಲಿ ಪೂರ್ವಾಹ್ನ ಜಿಲ್ಲಾ ಕಲೆಕ್ಟರರ ಆಥವಾ ಕದ್ರಿಬಂಗ್ಲೆಯಲ್ಲೂ ಸಂಬಂಧ ಪಟ್ಟ ಎಲ್ಲಾ ಸಂಘಸಂಸ್ಥೆಗಳವರಿಗೆ ಭೇಟಿಕೊಡಲಿರುವರು

ಉಚ್ಚ ಶಿಕ್ಷಣಕ್ಕಾಗಿ ಪ್ರಯಾಣ—ಸ್ಥಳೀಯ ಸಿ. ಪಿ. ಸಿ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರೂ 'ನವಭಾರತ' ದೈನಿಕ ಪತ್ರಿಕೆಯ ಸಂಪಾದಕರೂ ಆಗಿರುವ ಶ್ರೀ ವಿ ಎಸ್. ಕುಡ್ವರ ಸಂಪುತ್ರ ಶ್ರೀ ಶ್ರೀನಿವಾಸ ಕುಡ್ವರು ತಾ 19ರಂದು ಮೊಬಿಲಾಯಿಲ್ಲಿ ಹೆಚ್ಚಿನ ಶಿಕ್ಷಣ ಪಡೆಯಲು ಅಮೇರಿಕಕ್ಕೆ ಹೊರಟುಹೋದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮಂಗಳೂರು, 3.—ಇದೇ ಜನವರಿ 12 ಮತ್ತು 22ರಂದು ಅನುಕ್ರಮವಾಗಿ, ಸ್ಕೌಟ್ ಮಾಸ್ತರರಿಗೂ, ಕಬ್ ಮಾಸ್ತರರಿಗೂ ಹೀಗೆ ಎರಡು ಶಿಕ್ಷಣ ಶಿಬಿರಗಳು ಕನಡದ ಮಾಧ್ಯಮವಾಗಿಟ್ಟುಕೊಂಡು ನಡೆಯಲಿವೆ. ಸ್ಕೌಟ್ ಮಾಸ್ತರರಿಗೆ ಬರುವ ಹಾಗೂ ಹೋಗುವ ದಿನಗಳು ಸಮೇತ ಈ ಶಿಬಿರದ ಅವಧಿಯು 10ದಿನಗಳ ವರೆಗೂ, ಕಬ್ ಮಾಸ್ತರರಿಗೆ ಅದೇ ಪ್ರಕಾರ 8ದಿನಗಳ ವರೆಗೂ ಇವೆ. ಈ ತರಬೇತಿ ಅವಧಿಯಲ್ಲಿ ಊಟ ಮತ್ತು ಇತರ ಖರ್ಚಿನ ಬಗ್ಗೆ ಸ್ಕೌಟು ಮಾಸ್ತರರು ರೂ 30ರಷ್ಟು ಕಾಣಿಕೆಯೂ, ಕಬ್ ಮಾಸ್ತರರು ರೂ 25 ರಷ್ಟು ಕಾಣಿಕೆಯೂ ಮುಂಗಡವಾಗಿ ಪ್ರಾರಂಭದ ದಿನದಲ್ಲೇ ತೆರತಕ್ಕದ್ದು. ಹಾಗೆಯೇ ಈ ಶಿಕ್ಷಣಕ್ಕೆ ಬೇಕಾದ ಅರ್ಜಿಗಳನ್ನು ಸಾಕಷ್ಟು ಮುಂಗಡವಾಗಿಯೇ ಕಳುಹಿಸತಕ್ಕದ್ದು. ಶಿಬಿರದ ಸ್ಥಳ ಹಾಗೂ ಅದಕ್ಕೆ ಸಂಬಂಧಪಟ್ಟ ಇತರ ಸಲಹೆಗಳನ್ನು ಹಿಂದನಿಂದ ತಿಳಿಸಲಾಗುವುದು.

ಬೊಂಬಾಯಿ—ಶ್ರೀ ಲಲಿತ ಕಲಾ ಕರ್ನಾಟಕ ನಾಟಕ ಸಭೆಯವ ರಿಂದ 'ಜನ ಭೂತ'ವೆಂಬ ಸಾಮಾಜಿಕ ಕನ್ನಡ ನಾಟಕವನ್ನು ಕಳೆದ ತಾ. 21ರಲ್ಲಿ ಉಡಪಿಯ ಶ್ರೀ ಗುರುರಾಮ ಮಂದಿರ ಬೈಕಾಲಿ, ಬಾಲಕಿಯರು ಕಾಲೇಜು, ಇದರ ಕಟ್ಟೋಣ ನಿಧಿಯ ಸಹಾಯಾರ್ಥವಾಗಿ ದಾಮೋದರ ಹಾಲ್ ಸಿನೇ ಹೋಲಿನಲ್ಲಿ ಅಭಿನಯಿಸಿದರು. ಶ್ರೀ ಎಮ್ ಪಿ. ಕಾಮತರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಬಂಟರ ಯಾನೆ ನಾಡವರ ಸಂಘ ಬೊಂಬಾಯಿ—ಈ ಸಂಘದ ವಿಶೇಷ ಮಹಾ ಸಭೆಯು ತಾ. 14-12 52ರಲ್ಲಿ ಬಬಾರ್ ಗೇಟ್ ಹೈಸ್ಕೂಲಿನ ಹಾಲಿನಲ್ಲಿ ಡಾಕ್ಟರ್ ಪಿ ಜಗನ್ನಾಥ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿ, ಸಂಘದ ಕಟ್ಟಡಕ್ಕೊಂದು ಸ್ವಂತ ಸ್ಥಳ ತೆಗೆದು ಕೊಳ್ಳಬೇಕೆಂದೂ, ಬರುವ ಜೂನ್ ತಿಂಗಳಲ್ಲಿ ಈ ವರ್ಷ ಆರಂಭವಾದ ಸಂಘದ ರಜತ ಮಹೋತ್ಸವದ ಕಾರ್ಯಕ್ರಮಗಳನ್ನು ನಡೆಸುವರೇ ಉಪಸಮಿತಿಯನ್ನು ಆರಿಸಿ ಸಭೆಯು ನಿಶ್ಚಯ ಗೊಂಡಿತು.

ಸುರತ್ಕಲ್—ಸ್ಥಳೀಯ ವಿದ್ಯಾದಾಯಿನಿ ಹೈಸ್ಕೂಲಿನ ಸರ್ಧಂತಿ ಸಮಾರಂಭವು ನೂತನ ಮಂದಿರ ಪ್ರವೇಶೋತ್ಸವವೂ ತಾ. 21 ರಂದು ಜಿಲ್ಲಾ ಕಲೆಕ್ಟರ್ ಶ್ರೀ ಸಿ. ಎ. ರಾಮಕೃಷ್ಣನ್, ಅವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಕೆ ಸದಾನಂದ ರಾಯರು ಶಾಲಾ ಸ್ವಸ್ತಿವಾಚನವನ್ನು ಮಾಡಿದರು. ಹೆಡ್ಮಾಸ್ತರರು ವರದಿಯನ್ನೊಪ್ಪಿಸಿದರು. ಅಧ್ಯಕ್ಷರು ಪಾರಿತೋಷಕಗಳನ್ನು ವಿತರಣೆ ಮಾಡಿದರು. ಬಳಿಕ ಜನಮನ ರಂಜನ ಕಾರ್ಯಕ್ರಮಗಳಾದುವು

ಹಿರಿಯಡ್ಕ ಸ್ಥಳೀಯ ಆರ್ಯ ಸಮಾಜದ ವತಿಯಿಂದ ಧಾರ್ಮಿಕ ಪ್ರಚಾರ ಸಭೆಯು ತಾ 27ರಂದು ಸಂಜೆ ಆದಿಯಾಡಿಲ್ಲಿ ಶ್ರೀ ಗೋಪಾಲ ರಾವ್ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಆರ್ಯ ಸಮಾಜ ಸ್ಥಾಪನೆಯ ಉದ್ದೇಶ ಮತ್ತು ಅದು ಈ ತನಕ ಸಾಧಿಸಿದ ವಿಧಾಯಕ ಕಾರ್ಯಗಳ ಕುರಿತು ಹಲವರ ಭಾಷಣಗಳಾದುವು.

ವಿವಿಧ ಪಾತ್ರೆಗಳು



ಯೋಗ್ಯವನ್ನು ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಮಯಾನುಕೂಲ ಧರದಲ್ಲಿ ಯಾವಾಗಲೂ ದೊರೆಯುತ್ತವೆ

ಕಲ್ಕೂರ ಪ್ರಭು ಸನ್ಸ್ ಬಾಯರ್,
ರಥಬೀದಿ, ಉಡುಪಿ.

ಶ್ರೀ ಯಜ್ಞೇಶ್ವರಿ ಪ್ರಸನ್ನ

ಜನ್ನನಕಟ್ಟೆ, ಕುಂದಾಪುರ ತಾಲ್ಲೂಕು
ಮಹಾಶಯರೆ,

ಇದೇ ಬರುವ ಜನವರಿ ತಾ 21-1-1953ನೇ ಬುಧವಾರ ಶ್ರೀ ಯಜ್ಞೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ವರ್ಷಂಪ್ರತಿ ನಡೆಯುವ ಮಂಡಲ ಸೇವೆ ಮತ್ತು ಗೆಂಡ ಸೇವೆಗೆ ತಾವು ತಮ್ಮ ಇಷ್ಟಮಿತ್ರರೊಡನೆ ಬಂದು ಸದ್ರಿ ಸೇವೆಗಳನ್ನು ನೋಡಿ ಶ್ರೀ ದೇವಿ ಗಂಧಪ್ರಸಾದ ಸ್ವೀಕರಿಸಿ ಶ್ರೀ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಸನ್ನಿಧಿ ಕಡೆಯಿಂದ ಅಪೇಕ್ಷಿಸುವ,

ಆಡಳ್ತೆದಾರರು— ಕೃಷ್ಣ ಅವಭೃತ
ಪಾತ್ರಿಗಳು— ವಿ ಎನ್. ಹೆಬ್ಬಾರ್
ಅರ್ಚಕರು ಎಮ್. ಆರ್. ಅವಭೃತ
ಮಂಜಂತ್ಯ, 19-12-52

ಗೀತೆಯ ಕೈಗನ್ನಡಿ

ಭಗವದ್ಗೀತೆಯ ಸಮೂಲ ಭಾಷಾಂತರ

(ಪಿ. ಹೊಸಬೆ
ಟ ದಂಬಯ್ಯ

ಬೆ 3 0-12-0

ನವಯುಗ ಪ್ರೆಸ್, ಉಡುಪಿ

ನವಭಾರತ ಪುಸ್ತಕ ಭಾಂಡಾರ ಉಡುಪಿ



ನಮ್ಮ ಸಾಮರ್ಥ್ಯ—ಕೌಶಲ್ಯಗಳ ದ್ಯೋತಕ

(೨ನೇ ಪುಟದಿಂದ)

ರ್ಯ ಈಗ ನಡೆಯುತಿದ್ದು ಈ ಕಾಲುವೆ ಕರ್ನೂಲು ಜಿಲ್ಲೆಯವರೆಗೆ ೨೨೫ ಮೈಲು ದೂರ ಹರಿಯುತ್ತದೆ. ಕಾಲುವೆಯ ಅಗಲ ೨೨೫ ಅಡಿ ಹೈದರಾಬಾದು ಪ್ರದೇಶದಲ್ಲಿ ಕಾಲುವೆಯ ಅಗಲ ೮೪ ಅಡಿಯಷ್ಟಿದ್ದು ೧೨೭ ಮೈಲು ದೂರವನ್ನು ಕ್ರಮಿಸುವುದು. ಮೊದಲ ೨೦ ಮೈಲನ್ನು ಎರಡೂ ಪ್ರದೇಶದ ಕಾಲುವೆಗಳು ಗುಡ್ಡಗಾಡುಗಳ ದುರ್ಗಮಪ್ರದೇಶವನ್ನು ದಾಟಿ ಹೋಗಬೇಕಾಗುವುದು.

ಭವ್ಯಭವಿಷ್ಯ

ಈ ಕಾಲುವೆಗಳಿಂದಾಗಿ ಮದ್ರಾಸು ರಾಜ್ಯದಲ್ಲಿ ೮೬೦೦೦೧ ಎಕ್ರೆಯಷ್ಟೂ ಹೈದರಾಬಾದಿನಲ್ಲಿ ೧೦೮೨೦೦೦ ಎಕ್ರೆಯಷ್ಟೂ ಭೂಮಿಯು ಕೃಷಿಯಿಂದ ಸಂಪನ್ನವಾಗುವುದು ಒಂದೂವರೆ ಲಕ್ಷಟನ್ ಅಧಿಕ ಆಹಾರೋತ್ಪಾದನೆಯಾಗುವುದಲ್ಲದೆ ೮೦ ಸಾವಿರಟನ್ನು ವ್ಯಾಪಾರ ವಸ್ತುಗಳ ಬೆಳೆಯೂ ಬರುವುದು ೩೫ಕೋಟಿ ರೂಪಾಯಿಯಷ್ಟು ವಾರ್ಷಿಕ ಆದಾಯವು ದೊರೆಯುವುದು ಯೋಜನೆಗೆ ಹಿಡಿಯುವ ವೆಚ್ಚ ೪೦ ಕೋಟಿ ರುಪಾಯಿಯೆಂದರೆ, ದೊರೆಯುವ ಅಮಿತ ಲಾಭದ ಕಲ್ಪನೆ ನಮಗಾದೀತು. ಇದೆಲ್ಲದರ ಜೊತೆಗೆ ಮೊದಲಿನ ೫ ವರ್ಷಗಳಲ್ಲಿ ಮದ್ರಾಸು ಪಾರ್ಶ್ವದಲ್ಲಿ ೨೫೫೦೦ ಕಿಲೋವಾಟು ನಂತರದ ೫ ವರ್ಷಗಳಲ್ಲಿ ೩೦೦೦೦ ಕಿಲೋವಾಟು ಮತ್ತು ಆ ಬಳಿಕ ೪೫೦೦೦ ಕಿಲೋವಾಟು ವಿದ್ಯುತ್ತು ಉತ್ಪನ್ನವಾಗುವುದು ಹೈದರಾಬಾದು ಪ್ರದೇಶದಲ್ಲಿ ೧೧೦೦೦೧ ಕಿಲೋವಾಟು ವಿದ್ಯುಚ್ಛಕ್ತಿ ಉತ್ಪಾದಿತವಾಗುವುದು ಈ ಅಪರಿಮಿತ ಶಕ್ತಿಯನ್ನು ನೀರಾವರಿ ಪಂಪುಗಳನ್ನು ನಡೆಸಲಿಕ್ಕೆ, ಮತ್ತು ಕಬ್ಬಿಣ ಸಿಮೆಂಟು ಮತ್ತಿತರ ಕೈಗಾರಿಕೋದ್ಯಮಗಳಿಗೆ ಧಾರಾಳವಾಗಿ ಬಳಸಬಹುದು. ಸೊಂಡೂರಿನ ಗುಡ್ಡೆಗಳಲ್ಲಿ ಉತ್ತಮವಾದ ಕಬ್ಬಿಣದ ಅದುರು ಲಭ್ಯವಿದೆ ಉಕ್ಕು ಮತ್ತು ಕಬ್ಬಿಣದ ಕಾರ್ಖಾನೆಗೆ ಇದು ತುಂಬ ಅನುಕೂಲ ಹಾಗೆಯೇ ಅಭ್ರಕ, ಹಂಚು, ಗಾಜು, ರೇಶ್ಮೆ, ಮುಂತಾದ ಕೈಗಾರಿಕೆಗಳನ್ನೂ ಇಲ್ಲಿ ಸ್ಥಾಪಿಸಲು ಅನುಕೂಲವಿದೆ ಈಗಿರುವ ಎರಡು ಸಕ್ಕರೆ ಕಾರ್ಖಾನೆಗಳನ್ನು ಇನ್ನೂ ಅಭಿವೃದ್ಧಿಗೊಳಿಸಬಹುದು. ಹೊಸತಾಗಿ ಸಂಶೋಧನಾಲಯ ಹಾಗೂ ಇಂಜಿನೀಯರಿಂಗ್ ಕಾಲೇಜು ಮುಂತಾದುವನ್ನು ತೊಡಗಬಹುದು ಮಾದರಿ ಕೃಷಿ ಕ್ಷೇತ್ರವಾಗಿ ಇದನ್ನು ಪರಿವರ್ತಿಸಿ ಸುಯೋಗ್ಯ ಆದರ್ಶವನ್ನು ಹಾಕಿಕೊಡಬಹುದು.

ನಮ್ಮ ಸಾಮರ್ಥ್ಯ

ನಮ್ಮ ಮನುಷ್ಯ ಬಲದಿಂದ ಮತ್ತು ಅಗ್ಗದ ಬೆಣಚುಗಲ್ಲಿನಿಂದ ನಿರ್ಮಿತವಾದ ಈ ಅದ್ಭುತ ಅಣೆಕಟ್ಟು ಪಾಶ್ಚಾತ್ಯರ ತಲೆಯನ್ನೂ ತಗ್ಗಿಸಿದೆ. ಕಳೆದ ವರ್ಷ ಭಾರತದ ಹಲವು ನೀರಾವರಿ ಯೋಜನೆಗಳನ್ನು ನಿರೀಕ್ಷಿಸಿದ ಪ್ರಪಂಚದ ಇಂಜಿನಿಯರರು ತುಂಗಭದ್ರೆಯ ಯೋಜನೆಯ ಕಾರ್ಯನೈಪುಣ್ಯತೆಯನ್ನು ಮುಕ್ತ ಕಂಠದಿಂದ ಪ್ರಶಂಸಿಸಿರುವರು, ಭಾರತವು ಭವ್ಯ ಭವಿಷ್ಯವನ್ನು ಸ್ವಂತ ಸಾಮರ್ಥ್ಯದಿಂದ ಕಟ್ಟಿಕೊಳ್ಳಬಲ್ಲುದೆಂಬುದಕ್ಕೆ ಈ ಯೋಜನೆ ನಿದರ್ಶನವೆಂದರೆ ಅತಿಶಯೋಕ್ತಿಯೆನಿಸದು. ಆದರೆ ಇಷ್ಟು ಚೆಲೋದಾಗಿ ಕಾರ್ಯ ನಿರ್ವಹಿಸಬೇಕಾದರೆ, ಅನೇಕ ರೀತಿಯ ಮುಂಜಾಗರೂಕತೆಯನ್ನೂ ಸಿದ್ಧತೆಯನ್ನೂ ದಕ್ಷತೆಯನ್ನೂ ಕಾರ್ಯಕ್ಷಮತೆಯನ್ನೂ ಕೈಗೊಳ್ಳುವುದವಶ್ಯಬಿತ್ತೆಂಬುದನ್ನು ಲಕ್ಷಿಸಬೇಕು. ಹೊಸಪೇಟೆಯಿಂದ ಮೂರು ಮೈಲು ಅಂತರದಲ್ಲಿರುವ ಹಗ್ರಾಮ ಮಲ್ಲಾಪುರವನ್ನು ಒಂದು ಪಸಾಹತು ಪ್ರದೇಶವಾಗಿ ಪರಿವರ್ತಿಸುವ ಕೆಲಸ ಸುಲಭ ಸಾಧ್ಯವಿರಲಿಲ್ಲ ಹೊಸ ಮಾರ್ಗಗಳನ್ನೂ ರೈಲು ದಾರಿಯನ್ನೂ ಕೂಡಿಸಿದರು. ನವನಾಗರಿಕತೆಯ ಎಲ್ಲ ಅನುಕೂಲತೆಯಿಂದೊಪ್ಪುವ ಸುಮಾರು ೮೦ ಸಾವಿರ ಜನರ ನಿವೇಶನ ನಗರವಾಗಿ ತುಂಗಭದ್ರಾ ಅಣೆಕಟ್ಟಿನ ಪ್ರದೇಶ ಮೆರೆಯಿತು. ನೀರಿನ ಸರಬರಾಯಿಗಾಗಿ ಸುರಕ್ಷಿತ ಜಲವಿತರಣಾಲಯ ತಾಲೂಕು ಕಚೇರಿ, ಖಜಾನೆ ಪೋಲೀಸು ಠಾಣೆ, ಅಂಚೆಕಟ್ಟೆ, ಟೆಲಿಫೋನು, ಆಸ್ಪತ್ರೆ, ಸಹಕಾರೀ ಸಂಘ, ಶಿಕ್ಷಣ ಸಂಸ್ಥೆಗಳು, ಉಪಹಾರ ಗೃಹ, ಉದ್ಯಾನವನ, ಆರೋಗ್ಯಗಳು ಎಲ್ಲ ಇಲ್ಲದೆ. ಈ ಅಣೆಕಟ್ಟಿನ ರಚನಾ ಕಾರ್ಯದಲ್ಲಿ ನೆರವಾಗಲು ಜೋಗಿನ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿದರು ಮನುಷ್ಯಬಲದ ಜೊತೆಗೆ ಯಂತ್ರಶಕ್ತಿಯನ್ನು ಬಳಸುತ್ತಿರುವರು. ಅತ್ಯಾಧುನಿಕ ಮಾದರಿಯ ಗೇಟುಗಳನ್ನು ನಿರ್ಮಿಸುವ ವರ್ಕ್‌ಶಾಪೊಂದನ್ನು ತೆರೆದಿದ್ದು, ಏಶಿಯಾದಲ್ಲೇ ಭಾರೀ ಕೇಂದ್ರವನ್ನಾಗಿ ಇದನ್ನು ಪರಿವರ್ತಿಸುವ ಹವಣಿಕೆ ಇದೆ. ಅಣೆಕಟ್ಟನ್ನು ಸಂದರ್ಶಿಸಲು ಬರುವ ಪ್ರವಾಸಿಕರಿಗಾಗಿ ಅದರ ಉಭಯ ಪಾರ್ಶ್ವಗಳಲ್ಲಿರುವ ಗುಡ್ಡದ ಮೇಲೆ ಎರಡು ಭವ್ಯ ಮಂದಿರಗಳಿವೆ. ಒಂದು ಭೂಕೈಲಾಸ, ಇನ್ನೊಂದು ಭೂವೈಕುಂಠ. ಮದ್ರಾಸು ಪಾರ್ಶ್ವದಲ್ಲಿರುವ ಬಂಗಲೆಯಿಂದ ನೋಡಿದರೆ ಜಲಾಶಯ, ನಿವೇಶನ, ಅಣೆಕಟ್ಟು, ಹೊಸಪೇಟೆ, ಮರಿಯಮ್ಮನಹಳ್ಳಿ, ಸಿಂದಾಬಾದು ಮುಂತಾದುವೆಲ್ಲ ರಮ್ಯವಾಗಿ ಕಂಗೊಳಿಸುತ್ತವೆ ಈ ಯೋಜನೆಯ ವಿವಿಧ ಮುಖಗಳ ತನಿಖೆಗಾಗಿ ಮದ್ರಾಸು ಸರಕಾರ ವಿಶೇಷ ನಿಬಂಧಿಯನ್ನೆ ನೇಮಿಸಿದೆ. ಒಟ್ಟಿನಲ್ಲಿ ಹೊಸ ಹಂಪೆಯೊಂದ ಜೀವಕಳೆ ತುಂಬಿ ಮೈದೋರುತ್ತಿದೆ.

ಉಡುಪಿ ಪರ್ಯಾಯಕ್ರಮವನ್ನು ಸ್ಥಾಪಿಸಿದ ಶ್ರೀ ಸೋದೆಮಠದ ವಾದಿರಾಜ ಸ್ವಾಮಿಗಳು ಇವರು ಪೂಜೆಮಾಡಿ ಕಡಲೆ ಮಡ್ಡಿಯನ್ನು ತಲೆಯಮೇಲೆ ಹೊತ್ತಾಗ ಇವರ ಆರಾಧ್ಯ ದೇವತೆ ಹಯಗ್ರೀವ ದೇವರು ಕುದುರೆ ರೂಪದಲ್ಲಿ ಬಂದು ಅದನ್ನು ತಿಂದು ಹೋಗುತ್ತಿದ್ದರೆಂದು ಪ್ರತೀತಿ ಇದೆ.

ಉಡುಪಿ ಡಿ ಮು, ಕೋರ್ಟಿನಲ್ಲಿ

ಕ್ರಮ ನಂಬ್ರ 59/1952 R I. A 1157/1952

ಮುಹಮ್ಮದ ಸಾಹೇಬ್— ವಾದಿ ಅರ್ಜಿದಾರ

ಮತ್ತು

ಅಬ್ದುಬಕರ್‌ಸಾಹೇಬ ಯಿಬ್ರಾಹಿಮ್ ಯಾನೆ ಬಾಪು ಸಾಹೇಬರ ಮಗ ಉಡ್ಪಿ ತಾಲ್ಕು ಮಲ್ಪೆ ಗ್ರಾಮದಲ್ಲಿರುವವ

-ಯೆದ್ರಿ 1 ನೇ ಪ್ರತಿವಾದಿ ಯವರೊಳಗೆ

ಸದರಿ ನ್ಯಾಜ್ಯದಲ್ಲಿ ಯೆದ್ರಿಯ ಮೇಲೆ ಕೊಡುವದಾದ ಪ್ರಿಲಿಮಿನರಿ ಡಿಕ್ರಿಯನ್ನು ಫೈನಲ್ ಮಾಡಬೇಕಂತ ಅರ್ಜಿದಾರನ ಕಡೆಯಿಂದ ದಾಖಲಾದ ಮೇಲ್ಕಂಡ ಅರ್ಜಿಯು ಯೆದ್ರಿಯ ಆಕ್ಷೇಪಣೆಯ ಬಗ್ಗೆ ತಾರೀಖು 19-1-1953ಕ್ಕೆ ಯಿಟ್ಟದೆ ಯೆದ್ರಿಗೆ ಆಕ್ಷೇಪಯಿರುವ ಪಕ್ಷದಲ್ಲಿ ಸದರಿ ತಾರೀಕಿನ ಬೆಳಿಗ್ಗೆ 10 ಘಂಟೆಗೆ ಸದ್ರಿ ಕೋರ್ಟ್ ಮುಂದೆ ಹಾಜರಾಗಿ ಬ್ಯಾಹೀರು ಮಾಡಿಕೊಳ್ಳತಕ್ಕದ್ದುಯೆಂಬ ಸಂಗ್ತಿ ಯೀ ಮೂಲಕ ತಿಳಿಸಿಯದೆ.

K Laxminarayana Aithal
Vakil for Petitioner

ಉಡಿಪಿ ತಾರೀಖು 20-12-1952

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

S. C. No 271/1952

ಭಾಮು ಪೆಂಗ್ಸ ಕೂಡಾ —ವಾದಿರು.

ಗುರುವ ಪೂಜಾರಿ ಕೂಡಾ— ಪ್ರತಿವಾದಿರು

1 ಗುರುವ ಪೂಜಾರಿ, ತಂದೆ ಪೂಜಾರಿ ಹು. 2 ಮಾಂಞಯಾನೆ ಪುಟ್ಟು 1ನೇ ಪ್ರತಿವಾದಿ ಹೆಂಡ್ತಿ ಕಾರ್ಕಳ ತಾಲೂಕು ಕೊಲ್ಲೂರು ಗ್ರಾಮದ ಪೋಂಗನ ಮನೆ ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಸುವುದೇನೆಂದರೆ ವಾದಿರ ವಳಗೆ ನೀವು ಚಾಲಗೇಣಿಗೆ ಅನುಭವಿಸಿ ಬರುತ್ತಿದ್ದ ಆಸ್ತಿಯ ಬಾಬ್ತು ನಿಮ್ಮಿಂದ ವಾದಿರಿಗೆ ತಾ 31-3 1952ಕ್ಕೆ ಬರತಕ್ಕ ಬಾಕಿ ಗೇಣಿ ವಸೂಲು ಬಗ್ಗೆ ವಾದಿರು ಹೂಡಿದ ಮೇಲಿನ ದಾವೆಯು ಆಖೈರಿ ತನ್ಖಿ ಬಗ್ಗೆ ತಾ 7-1-1953ಕ್ಕೆ ಯಿಟ್ಟದೆ. ಆ ತಾರೀಕು ನಿಮಗೆ ಆಕ್ಷೇಪವಿದ್ದರೆ ಸದ್ರಿ ತಾ 7-1-1953ಕ್ಕೆ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಉತ್ತರ ಕೊಡತಕ್ಕದ್ದು ಎಂತ ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ನಿಮಗೆ ತಿಳಿಸಲಾಗಿಯದೆ.

ಕಾರ್ಕಳ ತಾ 27—12—1952

I. S. Rao

Advocate for plaintiff

THE VIJAYA BANK LTD.

Head Office - - - MANGALORE.

1953

ನವವರ್ಷದ ಶುಭಾಶಯ!

ಕಳೆದ 22 ವರ್ಷಗಳ ನಮ್ಮ ಗಿರಾಕಿಗಳ ಯಥಾರ್ಥ ಸೇವೆ, ಪರಿಪಕ್ವ ಅನುಭವ, ಪ್ರಾಮಾಣಿಕತೆ, ಮತ್ತು ಉತ್ಸಾಹದಿಂದಾಗಿ ಮುಂದೆಯೂ ಯಥಾಪ್ರಕಾರ ನಿಮ್ಮ ಪ್ರೋತ್ಸಾಹ ಕೋರುವ,

ದಿ ವಿಜಯಾ ಬೇಂಕ್ ಲಿಮಿಟೆಡ್.

ಹೆಡ್ ಆಫೀಸು - - - ಮಂಗಳೂರು.

ಗಮನಿಸಿರಿ! ಪರೀಕ್ಷಿಸಿ ನೋಡಿರಿ!! ಸುಖಪಡೆಯಿರಿ!!!

ನಿಮ್ಮ ಮೇಲ್ಮೆಗಾಗಿ ಲಕ್ಷಿಸಿರಿ-

ಹೆಚ್ಚು ಹೇಳುವುದರಿಂದೇನು? ಹಸಿವೇ ಇಲ್ಲದಿದ್ದರೂ, ಜೀರ್ಣಶಕ್ತಿ ಸಂಪೂರ್ಣವಾಗಿ ಹೋಗಿದ್ದರೂ, ದೇಹವು ಬಹಳವಾಗಿ ಕ್ಷೀಣಿಸಿ ಮೂಳೆ (ಎಲುಬು) ಚರ್ಮಗಳು ಕಾಣುವ ಹಾಗಿದ್ದರೂ, ಕಣ್ಣುಗುಳಿಗಳು ಬಿದ್ದಿದ್ದು ಹಿಂದಲೆಯನ್ನು ಹೋಗಿ ಸೇರಿದ್ದರೂ, ಬಲ, ಚಟುವಟಿಕೆ, ಧೈರ್ಯ ಇವುಗಳು ಇಲ್ಲದೆ ಹೋದರೂ, ಶುಕ್ಲವೂ, ಇಂದ್ರಿಯವೂ, ಪೂರ್ತಿಯಾಗಿ ನಿಂತು ಹೋಗಿದ್ದರೂ, ಮೇಹವ್ಯಾಧಿಗಳೇ ಮೊದಲಾದ ವ್ಯಾಧಿಗಳಿಂದ ನರಳುತ್ತಿದ್ದರೂ ನಮ್ಮ "ಮನ್ಮಥ ಚಿಂತಾಮಣಿ ಲೇಹ್ಯ" ಸೇವನೆಯಿಂದ ಸಂಪೂರ್ಣ ಸುಖ ದೊರೆಯುವದು ಅಲ್ಲದೆ ಆರೋಗ್ಯಭಾಗ್ಯವನ್ನೂ ಪಡೆಯಬಹುದು. ಇಂತಹ ಜೀವದಾಯಕವಾದ ಅಮೃತ ಸಮಾನವಾದ ರಸಾಯನವು

ಬೆಲೆ ೨೦ತೊಲಾ ಡಬ್ಬಿ ಒಂದಕ್ಕೆ ರೂ. 2-8-0

ಮುತ್ತೆಯಾಳ ಮೆಡಿಕಲ್ ಹಾಲ್ ತಿರುವನಂತಪುರಂ- (TRIVANDRUM)

ತೃಪ್ತಿಕರವಾದ ವಸತಿ— ಹಿತಕರವಾದ ಊಟ— ರುಚಿಕರವಾದ ಉಪಾಹಾರ ಇವುಗಳಿಗೆ

ಆದರ್ಶ ನಿಲಯವೆಂದರೆ

ವುಡ್ ಲೇಂಡ್ಸ್

ಉಡುಪಿ-

ಯಾತ್ರಿಕರಿಗೂ ಪ್ರಯಾಣಿಕರಿಗೂ ಸರ್ವ ಅನುಕೂಲವಾಗುವಂತೆ ನಗರದ ಕೇಂದ್ರಭಾಗದಲ್ಲಿದೆ

ದುಡಿಮೆಯಿಂದಲೇ ದೇಶಾಭಿವೃದ್ಧಿ

ಲೇಖಕ:— ಕೆ. ರಾಧಾಕೃಷ್ಣ, ಕಳಂಜ.

ನಮ್ಮ ಭಾರತವು ಕೃಷಿಪ್ರಧಾನವಾದ ದೇಶ. ದೇಶದ ಮುಕ್ಕಾಲು ಪಾಲಿಗೂ ಮಿಕ್ಕಿ ಜನರು ಹಳ್ಳಿಗಳಲ್ಲಿ ವಾಸಿಸುತ್ತಾರೆ. ಕಾಲಕ್ಕೆ ಸರಿಯಾದ ಮಳೆಯನ್ನು, ಸಮಶೀತೋಷ್ಣ ಹವೆಯನ್ನು ಅರಣ್ಯ ಸಂಪತ್ತನ್ನೂ ಮತ್ತು ಅಲ್ಲಲ್ಲಿ ಹರಿಯುತ್ತಿರುವ ನದಿಗಳನ್ನೂ ಪ್ರಕೃತಿಯಿಂದ ಪಡೆದಿರುತ್ತೇವೆ. ನಿಸರ್ಗ ನಿಯಮದಿಂದಲೇ ಕೃಷಿಗೆ ವ್ಯವಸಾಯಕ್ಕೆ ನಮ್ಮ ದೇಶದ ಮಣ್ಣು ಬಹು ಫಲವತ್ತಾಗಿರುತ್ತದೆ. ಹೀಗಿದ್ದೂ ನಮಗೇ ಬೇಕಾಗುವಷ್ಟು ಆಹಾರಧಾನ್ಯಗಳನ್ನು ನಮ್ಮಲ್ಲಿ ನಾವು ತಯಾರಿಸದೆ ಪರರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುತ್ತೇವೆಂದರೆ ನಾವೆಷ್ಟು ಪ್ರಗತಿಗೆ [illegible] ನೆನಪಿಗೆ ತರಬೇಕಾಗಿದೆ.

ಅಮೇರಿಕಾ, ಇಂಗ್ಲೆಂಡ್, ರಷ್ಯಾ, ಆಸ್ಟ್ರೇಲಿಯಾ ಮೊದಲಾದ ರಾಷ್ಟ್ರಗಳು ಸಂಪತ್ಸಮೃದ್ಧಿಯಿಂದಿರಲು ಅಲ್ಲಿಯ ಜನರು ಶ್ರಮಜೀವಿಗಳು. ಇಂಗ್ಲೆಂಡಿಗರ ಪ್ರಧಾನ ಜೀವನ ವ್ಯಕ್ತಿ ಕೈಗಾರಿಕೆ. ಅಲ್ಲಿನ ಪ್ರತಿಯೊಬ್ಬನೂ ಗಿರಣಿಗಳಲ್ಲಿಯೂ ಕಾರ್ಖಾನೆಗಳಲ್ಲಿ ದುಡಿಯುತ್ತಾನೆ. ಎಷ್ಟು ದೊಡ್ಡ ಧನವಂತನಾದರೂ ನಿರುದ್ಯೋಗಿಯಾಗಿ ಅಲೆಯುವುದಿಲ್ಲ. ದೇಶರಕ್ಷಣೆಗಾಗಿ ಸೈನಿಕ ಜೀವನಕ್ಕೆ ಮಹತ್ವ ಸ್ಥಾನಕೊಡುತ್ತಾರೆ. ನಾವಾದರೋ ಆದರ್ಶ ಧ್ಯೇಯಗಳನ್ನೇ ಸಾರುತ್ತ— ಸ್ವರ್ಗವನ್ನೇ ಬಣ್ಣಿಸುತ್ತಾ ನರಕದ ತೆರಳುತ್ತಿರುವೆವು. ಪರರಾಷ್ಟ್ರಗಳು ದೇಶ ಕ್ಷೇಮಕ್ಕಾಗಿ ಒಗ್ಗಟ್ಟಿನ ಭಾಳ್ವೆಗೆ ಮಹತ್ವ ಸ್ಥಾನ ಕೊಡುವುದಿದ್ದರೆ ಆ ಘನವಾದ ಸ್ಥಾನವನ್ನು ನಾವು ದ್ವೇಷ ಸಂಪಾದನೆಗೆ ಮೀಸಲಾಗಿಟ್ಟಿರುವೆವೆಂದರೆ ಹೃದಯವಿದ್ರಾವಕವಾಗುತ್ತದೆ. ಕಾರಣ, ನಾವು ಶ್ರಮ ಪಡಲು ಸಿದ್ಧರಿಲ್ಲ. ಶ್ರಮಿಸದೆ ಫಲವನ್ನೀಯಲು ಮಾತ್ರ ಮುಂದಡಿಯಿಡುತ್ತೇವೆ. ನಮ್ಮ ಮದ್ರಾಸ್ ಪ್ರಾಂತ್ಯಕ್ಕೆ 5 ಲಕ್ಷ ಟನ್ ಆಹಾರ ಧಾನ್ಯ ಆಮದು ಮಾಡಿ ಕೊಳ್ಳಬೇಕಾಗುವುದಂತೆ.

ಆಹಾರ ಅಭಾವಕ್ಕೆ ಮುಖ್ಯವಾಗಿ ಎರಡು ಕಾರಣಗಳಿವೆ. 1) ವರ್ಷದಿಂದ ವರ್ಷಕ್ಕೆ ದೇಶದಲ್ಲಿ ಜನಸಂಖ್ಯೆ ಹೆಚ್ಚುತ್ತಿರುವುದು 2) ಈಗಿನ ಆಧುನಿಕ-ಹಳ್ಳಿಯ ವಿದ್ಯಾರ್ಥಿಗಳಿಗೇ ಹಳ್ಳಿಯಲ್ಲಿ ವಾಸಿಸಲು ಮನಸ್ಸಿಲ್ಲದೆ ನಗರ ವಾಸಕ್ಕೆ ಮರುಳಾಗುವುದು. ನಮ್ಮ ದೇಶದ ಜನಗಣನೆಯು ಪ್ರಕಾರ ಸಾವಿರಕ್ಕೆ 825 ಜನ ಕೃಷಿಕರಾಗಿಯೂ, ಉಳಿದ 175 ಜನರು ಕೈಗಾರಿಕೆ, ವ್ಯಾಪಾರ ವೃತ್ತಿಗಳಿಂದ ಜೀವಿಸಬಹುದಾಗಿ ಬಲ್ಲವರ ಅಭಿಪ್ರಾಯ. ದೇಶದ ಜೀವಾಳವಾದ ಕೃಷಿ-ಹೊಲ ಗದ್ದೆಯನ್ನು ತ್ಯಜಿಸಿ ಎಲ್ಲರೂ ನಗರ ವಾಸಕ್ಕೆ ಮರುಳಾಗಿ ಹೆಚ್ಚಿನವರು ನಿರುದ್ಯೋಗಿಗಳಾದರೆ ಆಹಾರ ಸ್ವಾವಲಂಬನೆಯಾಗುವುದಾದರೂ ಸಾಧ್ಯವೇ?

ಆಧುನಿಕ ವಿದ್ಯಾರ್ಥಿಗಳಿಗೆ ಹಳ್ಳಿಯ ವಾಸವೆಂದರೆ ಅದೊಂದು "ಕಷ್ಟಕೊಂಪೆ" ಎಂದು ವೈರಾಗ್ಯ ಮನಸ್ಸನ್ನಾಕ್ರಮಿಸುತ್ತದೆ. ಹಳ್ಳಿಯಲ್ಲಿ ನಗರದಂತೆ ಸಿನೆಮಾ, ನಾಟಕ, ಸಿಗರೇಟು, ಸೇವನೆ ಮುಂತಾದ ಮನರಂಜನೆಯ ನಿರುದ್ಯೋಗಕ್ಕೆ ಆಸ್ಪದವಿಲ್ಲ ಮನೆಯವರಂತೆ ತಾನೂ ದುಡಿಯ ಬೇಕಾಗಿದೆ. ದುಡಿಯುವವನ್ನು ನೋಡಿದೊಡನೆ "ಜೀವನ ನಿರ್ವಹಣಕ್ಕಾಗಿ ದುಡಿಯುತ್ತಾನೆ. ಇದೇ ಯು ವೃತ್ತಿಯವನನ್ನೆಂಥಾ ಸುಧಾರಿತ ನಾಗರಿಕ ವಿದ್ಯಾರ್ಥಿಗೆ ಹ ವು ಅಗೌರವ ವೃತ್ತಿ" ಯೆಂದು ತಿಳಿದು ನಿರುದ್ಯೋಗಿಯಾಗಿರುವುದೇ ಇಂದಿನ ಭೀಕರ ಆಹಾರ ಸಮಸ್ಯೆಯ ಪ್ರಧಾನ ಮೂಲಕಾರಣ.

ಭಾರತದಲ್ಲಿ ವಿದ್ಯಾವಂತರು ಬಹುಕಮ್ಮಿ. ಶೇಕಡಾ 90 ಮಂದಿಯೂ ಅವಿದ್ಯಾವಂತರು. ಪ್ರತಿಯೊಬ್ಬನೂ ವಿದ್ಯಾವಂತರಾಗಬೇಕು. ಆದರೆ ಹೈಸ್ಕೂಲು ವಿದ್ಯೆಯು ನಿತ್ಯವಹಾರದ ಮಟ್ಟಿಗೆ ಸಾಮಾನ್ಯ ಇಂದಿನ ಪರಿಸ್ಥಿತಿಯಲ್ಲಿ ಸಾಕು. ಇದಕ್ಕಿಂತ ಉಚ್ಚಶಿಕ್ಷಣಕ್ಕಾಗಿ ಸಾವಿರಾರು ರೂಪಾಯಿ ವೆಚ್ಚಮಾಡುವುದು ಕೃಷಿಕರಿಗೆ ಅನಗತ್ಯ. ವಿದ್ಯಾವಂತರು ಅವಿದ್ಯಾವಂತರಿಗೆ ವಿದ್ಯೆಯ ಆವಶ್ಯಕತೆ ಕುರಿತು ಹೇಳಬೇಕು.

ನಮ್ಮ ಪ್ರಧಾನ ವೃತ್ತಿಯಾದ ಕೃಷಿಯು ಅಭಿವೃದ್ಧಿಗಾಗಿ ಸರಕಾರದವರು ಕೋಟಿಗಟ್ಟಲೆ ರೂಪಾಯಿ ವೆಚ್ಚಮಾಡಿ ನೀರಾವರಿ ಯೋಜನೆಗಳನ್ನು ಕೈಗೊಂಡಿದ್ದಾರೆ. (ಅಣೆಕಟ್ಟು, ಕಾಲುವೆ ಇತ್ಯಾದಿ.) ಸರಕಾರದವರು ಸಾಗುತ್ತಿರುವ ನವೀನ ಶಾಸ್ತ್ರೀಯ ಬೀಜ, ಗೊಬ್ಬರಗಳನ್ನು ಉಪಯೋಗಿಸಬೇಕು. ಅಂಥಾ ರಾಸಾಯನಿಕ ಗೊಬ್ಬರದ ಉಪಯೋಗದಿಂದ ಬೆಳೆಯೇ ಸಂಪೂರ್ಣ ನಾಶವಾಗಬಹುದೆಂದು ರೈತರ ನಂಬಿಕೆ. ಈ ಮೂಢನಂಬಿಕೆಯನ್ನು ಹೋಗಲಾಡಿಸಲು ವಿದ್ಯಾವಂತರು ಮುಂದಾಗಬೇಕು. ಇತರ ರಾಷ್ಟ್ರಗಳಿಗೂ ನಮ್ಮ ದೇಶವು ಮಾದರಿ (ಮಾರ್ಗದರ್ಶನ) ಯಾಗಬೇಕೆಂದು ಸರಕಾರವು ಬಹಳ ಶ್ರಮಿಸುತ್ತದೆ. ಇದಕ್ಕಾಗಿ ಕೃಷಿಯ ಅಭಿವೃದ್ಧಿಯನ್ನೂ ಕೈಗಾರಿಕೆಯ ಸ್ಥಾಪನೆಯನ್ನೂ, ಗುಡಿಕೈಗಾರಿಕೆಯ ಪ್ರೋತ್ಸಾಹವನ್ನೂ, ವಿದ್ಯಾಭ್ಯಾಸದ ಪ್ರಗತಿಯನ್ನೂ, ಅಂಚೆ, ರೈಲ್ವೆ ಇತ್ಯಾದಿ ತೆರೆಯುವ ವಿಕೆಯನ್ನೂ ಸ್ವಾತಂತ್ರ್ಯ ದೊರೆತ ಅಲ್ಪಾವಧಿಯಲ್ಲೇ ಕೈಗೊಂಡಿದೆ. ಅಹಿಂದಾನ್ಯದ ನೋಲಿದ್ದ ನಿಯಂತ್ರಣವನ್ನು ನಮ್ಮ ಮದ್ರಾಸ್ ಪ್ರಾಂತ್ಯದ ಮಂತ್ರಿಗಳು ತೆಗೆದುಹಾಕಿದ್ದರಿಂದ ಆದರನ್ನು 'ಬಡವರ ಬಂಧು' ಎಂದರೆ ಅನ್ವರ್ಥವಾಗುವುದು. ಇಂದು ಕಾಂಗ್ರೆಸ್ ಸರಕಾರವು ಯೋಗ್ಯ ಪಥದರ್ಶನವೀಯುವಾಗ ಬೇಲಿಯೇ ಹೊಲ ಮೇಯದೆ ಸರಕಾರದೊಡನೆ ಸಹಕರಿಸಬೇಕಾದ್ದು ನಮ್ಮೆಲ್ಲ ಆದ್ಯಕರ್ತವ್ಯವಾಗಿದೆ. ಜನತಾ ಸರಕಾರಕ್ಕೆ ಜನತೆಯ ಬೆಂಬಲವಿಲ್ಲದಿದ್ದರೆ ಮಹಾತ್ಮರೂ ಮಹಾತ್ಮರೂ ಗಳಿಸಿಕೊಟ್ಟ ಸ್ವಾತಂತ್ರ್ಯವನ್ನು ನಾವು ಶಾಶ್ವತವಾಗಿ ಉಳಿಸಿಕೊಳ್ಳುವುದಾದರೂ ಸಾಧ್ಯವಿಲ್ಲ. ನಮ್ಮ [illegible]ಕ್ಕಾಗಿ ಸರಕಾರವನ್ನು ಟೀಕಿಸಿ ಪ್ರಯೋಜನವಿಲ್ಲ.

ವಿದ್ಯಾವಂತ ಹಳ್ಳಿಗರು ಅವರವರ ಗ್ರಾಮದ ಸಂಘಟಿತರಾಗಿ ಗ್ರಾಮಾಭಿವೃದ್ಧಿಯ ಕಾರ್ಯದಲ್ಲಿ ಪಥದರ್ಶಕರಾಗಬೇಕು. ಗ್ರಾಮೋದ್ಧಾರವೇ ದೇಶೋದ್ಧಾರ ವೆಂಬ ಉಕ್ತಿಯನ್ನು ಪಾಲಿಸಲು ಮುಂದಾಗಬೇಕು. ದೇಶದ ಅಂಗಗಳಾದ ಹಳ್ಳಿಗಳು ಉದ್ಧಾರವಾದರೆ ದೇಶದ ಕಲ್ಯಾಣವಾಗಬಹುದು. ಗ್ರಾಮದ ಕಾರ್ಯಕ್ಷೇತ್ರದಲ್ಲಿ ಸಾಮೂಹಿಕವಾಗಿ ಯಾವುದಾದರೂ ಚಟುವಟಿಕೆಗಳಲ್ಲಿ ದುಡಿಯುವುದು ಅಗೌರವವಲ್ಲೆಂದು ಸಾಂಘಿಕವಾದ ಕಾರ್ಯಕ್ಷೇತ್ರದಲ್ಲಿ ದುಡಿದು ತೋರಿಸಬೇಕು.

ಪ್ರಕೃತ ಸಂದರ್ಭದಲ್ಲಿ ಬಡವರೂ ಧನಿಕರ ಮಾರ್ಗವನ್ನನುಸರಿಸುತ್ತಾರೆ. ದುಡಿಯುವುದೆಂದರೆ ತಾತ್ಸಾರ ಭಾವವೇ ದೂ, ಜೀವನನಿರ್ವಹಣಕ್ಕಾಗಿಯೆಂದೂ ಪರಿಗಣಿಸಿಕೊಂಡಿರುವುದು ಕಂಡುಬರುತ್ತಿದೆ, ಮಧ್ಯಮ ವರ್ಗದವರೂ ಚಿಕ್ಕ ಪುಟ್ಟ ಕೆಲಸಗಳನ್ನೂ ಕೂಡಾ ಮಾಡದೆ, ದುಡಿಸಿಕೊಳ್ಳುತ್ತಾರೆ. ಧನಿಕರು ಹಾಗೂ ವಿದ್ಯಾವಂತರು ದುಡಿಯುವ ಪಥದರ್ಶನವಿತ್ತಾಗ ಸ್ವಾರ್ಥಲಾಭವನ್ನು ಬಡವರ ಹಿತವನ್ನು ಬಯಸಿದಂತಾಗುವುದು.

ಇದಕ್ಕಾಗಿ ಅಳಿಗಿ ದುಡಿದು ಆದರ್ಶವಾಗಿ ಉತ್ಸಾಹ ನಾಣ್ನುಡಿಯನ್ನು ಮುಂದಿಟ್ಟು ಕಾರ್ಯಶೀಲರಾಗಬೇಕು. ನಾವೀಗ ಶ್ರಮಪಟ್ಟು ದುಡಿದು ಕೊನೆಗೆ ಮೊಸರನ್ನವುಣ್ಣಲು ಸಿದ್ಧರಾಗೋಣ. ದುಡಿಮೆಯೇ ದೇವರು ಎಂಬೀ ದಿವ್ಯ ಶಬ್ದಗಳು ಬಲ್ಲವರ ವಿಚಾರಪೂರ್ಣ ಹಾಗೂ ಅರ್ಥಗರ್ಭಿತವಾದ ನುಡಿಗಳು. ದುಡಿಮೆಗೆ ಪೂಜನೀಯವಾದ ಸ್ಥಾನವನ್ನು ಬಲ್ಲವರು ಸಾರಿದ್ದಾರೆ, ನಾವೂ ದುಡಿಮೆಯ ಫಲದ ಅಲಕ್ಷ್ಯ ಅಗೌರವಗಳನ್ನು ಕಳೆದ ಗ್ರಾಮಾಭಿವೃದ್ಧಿಗಾಗಿ ಪ್ರೇಮ ಸಹಕಾರಗಳಿಂದ ಒಂದುಗೂಡಬೇಕಾದ್ದು ನಮ್ಮೆಲ್ಲರ ಪ್ರಧಾನ ಕರ್ತವ್ಯವಾಗಿರುತ್ತದೆ.

ಮೂಲ್ಕಿ ಬೇಂಕ್
ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S K

ಋತುಸ್ರಾವ ನಿಂತಿತೆ

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದಿನೈದು ಋತುಸ್ರಾವವಾಗದ್ದು, ಸರಿಯಾಗಿ ಬರುವುದು. ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದುವುದು. ಯಾವ ಬಾಧಕವೂ ಇಲ್ಲ. ಸಾಧಾರಣ ಬೀಮಾರಿಗೆ ಖಾತ್ರಿ ಗುಣವಾಗದಿದ್ದರೆ; ರೂ. 3-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ. ೧-[illegible] [ಅಂಚೆ ವೆಚ್ಚ ಪ್ರತ್ಯೇಕ]

Mrs. D. DEVEE, F. DS. (N. J.)
Tollygunge CALCUTTA
ಸ್ಟಾಕಿಸ್ಟರು: ಕಹಾಕಂಪನಿ, ಮಂಗಳೂರು

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ,
ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು
ಯಾವಾಗಲೂ ಸಿದ್ಧವಿವೆ
ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.
ಫೋನು ನಂಬ್ರ 66

ವೆಲ್ಕಿನ್ಸ್ ಟೂತ್ ಪೇಸ್ಟ್
ಮಿಂಚುವ ನಗುವಿಗೆ, ಮತ್ತು
ಒಸಡಿನ ಆರೋಗ್ಯಕ್ಕೆ!
ಯು. ಎಸ್. ಎ. ರಿಜಿಸ್ಟರ್ಡ್
ಪ್ರಸಿದ್ಧ ಡಾಕ್ಟರರೊಬ್ಬರ ತಯಾರಿಕೆ.
Welkin Laboratory (N)
Calcutta 3.
ಉದಾರ ಶರ್ತಗಳ ಮೇಲೆ ಏಜೆಂಟರು ಬೇಕಾಗಿದ್ದಾರೆ

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:- ಆಯುರ್ವೇದ ಭೂಷಣ ಯಂ. ಕೆ. ಶಾಸ್ತ್ರೀ.

ಬಾಣಂತಿಯರ ಸಲುವಾಗಿಯೇ ನೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರವಾದ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ ಭಾಗ್ಯಶಾಲಿಗಳಿಗೂ ಲಭವಾಗಿರುವುದು.

ಇದರ
ನವಜೀವಾಕರು
ಎಂಬ
ಸೂ. [illegible] ರಸಾಯನ

ಹೆಚ್ಚಿನ ಮಾಹಿತಿಗೆ— ಡಾ। ಯಂ. ಕೆ. ಶಾಸ್ತ್ರೀ, ಯುಸ್. ಐ. ಎ.
ಕೊಡಿಯಾಲಬೈಲ ಪೋಸ್ಟ್, (ಮಂಗಳೂರು)
ಸ್ಟಾಕಿಸ್ಟರು:— ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ
S. C. 482/1952

ವಾದಿ— ಪೀರ್ಣ ಸೆಟ್ಟಿ
ಪ್ರತಿವಾದಿ — ನಾಡ್ಯಪ್ಪ ಸೆಟ್ಟಿ ಮಟಿನ ಬೀಡು ನಾಗಯ್ಯ ಸೆಟ್ಟಿ ಆಳಿಯ ಕುಂದಾಪುರ ತಾಲ್ಲೂಕು ಗೋಳಿ ಹೊಳೆ ಗ್ರಾಮದಲ್ಲಿರುವ
ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಸುವದೇನಂದರೆ —

ವಾದಿಗೆ ಪ್ರತಿವಾದಿಯು ಬರೆಕೊಟ್ಟ ಡಿಮಾಂಡು ನೋಟಿನ ಬಾಬ್ತು ಬ ತಕ್ಕ ಅಸಲು ಬಡ್ಡಿ ಖರ್ಚು ಕೂಡಾ ರೂಪಾಯಿ 104ನ್ನು ವಸೂಲು ಮಾಡಿಕೊಳ್ಳುವರೆ ವಾದಿ ದಾವೆ ಮಾಡಿದ ನೋಟಿನ ಪಾಪೆ ತಾರೀಕು 3-1-1953ಕ್ಕೆ ಇಟ್ಟದೆ ಆ ಕರಿತು ನಿಮ್ಮ ಉಜ್ಞಾಪನೆ ಯಿದ್ದರೇ ಸದ್ರಿ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ತಿಳಿಸತಕ್ಕದ್ದು.

ಮೊಕ್ಕಾಂ: ಕುಂದಾಪುರ ತಾ. 25-12-52

Y. Manjaya Shetty.
Advocate for Pltf.

ವಾರದ ಒಳಿತು ಕೆಡುಕುಗಳು

: ತಾ. 1-1-53ರಿಂದ ತಾ 7-1-53ರ ವರೆಗೆ

ಮೇಷ—ಹೊಸ ವರ್ಷವಿಂದು ಆರಂಭವಾಯ್ತು. ನಿಮ್ಮ ಜೀವನದಲ್ಲೂ ಹೊಸ ಬದಲಾವಣೆಯು ಕಾಣಿಸುವದು. ವಾಕ್ಕಲಹ ನಿಮಿತ್ತ ಯಾರಿಂದ ನೀವು ತಿರಸ್ಕೃತರಾಗಿರುವಿರೋ ಅವರೇ ಇಂದು ನಿಮ್ಮನ್ನು ಪುರಸ್ಕರಿಸುವರು. ನಿಮ್ಮ ಆಯವು ಬಹುತೇಕ ಖರ್ಚನ್ನು ಮೀರಲಿದೆ. ವ್ಯಾಪಾರ ವ್ಯವಹಾರಗಳಲ್ಲಿ ನಿಮ್ಮ ಬಯಕೆಯು ಈಡೇರುವದು. ವಿಶೇಷತಃ ದೇಹಾರೋಗ್ಯದ ಕಡೆಗೆ ದೃಷ್ಟಿಯನ್ನಿಡಿರಿ. ಸ್ಥಾನ ಚಲನೆಯ ಯೋಗವೂ ಇದೆ. ವಾರಾಂತ್ಯದ 2 ದಿನಗಳು ಆರೋಗ್ಯ ಸುಖ ಲಾಭದಾಯಕಗಳಾಗಿವೆ.

ವೃಷಭ—ಕಷ್ಟದಿಂದ ನೀವಿನ್ನೂ ಪಾರಾದಂತಿಲ್ಲ. ಪ್ರವಾಸ ಮಾಡುವವರಿಗೆ ದಿನಯಾಪನೆಯು ದುಸ್ತರವಾಗದು. ಎಷ್ಟೇ ಮೌನಿಗಳಾಗಿರಲಿ ವಾಕ್ಕಲಹವು ಬೇರೆ ತಪ್ಪುವಂತಿಲ್ಲ. ಮಾರ್ಗಾತಿಕ್ರಮಣದಲ್ಲಿ ನಾನಾ ತರದ ಕಷ್ಟನಷ್ಟಗಳೊದಗುವವು. ತನುಮನಗಳಿಗೆ ಸ್ವಲ್ಪವೂ ಸುಖ ನೆಮ್ಮದಿಗಳಿರಲಾರವು. ಸಾಂಸಾರಿಕ ತಾಪತ್ರಯಗಳು ದಿನದಿಂದ ದಿನಕ್ಕೆ ಹೆಚ್ಚಲಿವೆ. ಆದರೂ ಶತ್ರುವರ್ಗದವರು ಸದ್ಯ ನಿಮ್ಮ ಹತ್ತಿರ ಬರಲೊಲ್ಲರು. ದ್ಯೂತಕ್ರೀಡೆಯವರಿಗೀ ಕಾಲವು ಅನುಕೂಲವಾಗಿದೆ. ವಾರಾದಿಯ 3 ದಿನಗಳಲ್ಲಿ ಧನಲಾಭ ಕಾರ್ಯ ಜಯ ಗೃಹ ಸುಖಗಳು ಲಭಿಸುವವು.

ಮಿಥುನ—ನಿಮ್ಮ ಉದ್ಯೋಗದಲ್ಲಿ ಕೊಂಚ ವಿಘ್ನ ವಿಪತ್ತುಗಳು ಅಧಿಕವಾಗಿ ತೊಂದರೆಯೆನಿಸುವವು. ಖರ್ಚಿಗೆ ಸಾಲುವಷ್ಟು ಫಲಪ್ರಾಪ್ತಿಯಾಗದ ಕಾರಣ ಹಣದ ಅಡಚಣೆಗೆ ಸಿಲುಕುವಿರಿ. ಆಪ್ತ ಮಿತ್ರರ ವಿರಹದ ದುಃಖಕ್ಕೀಡಾದ ನಿಮಗೆ ಶತ್ರು ಜನರ ಉಪಟಳವೂ ಹೆಚ್ಚಲಿದೆ. ಗೃಹಕೃತ್ಯದಲ್ಲಿ ಹಲವಾರು ತಾಪತ್ರಯಗಳುದ್ಭವಿಸುವವು. ಆದರೂ ಶುಭಗ್ರಹಗಳೊಬ್ಬರು ನಿಮಗೆ ಬಲವಾದ ಬೆಂಗಾವಲಿಗಿರುವುದರಿಂದ ತಾ. 4, 5ರಲ್ಲಿ ನಿಮ್ಮ ಕಾರ್ಯಗಳಲ್ಲಿ ವಿಜಯವೂ ಸಮಾಜದಲ್ಲಿ ಸ್ಥಾನಮಾನಗಳೂ ಲಭಿಸುವವು.

ಕರ್ಕಟ—ಒಂದೊಮ್ಮೆಗೆ ಕಷ್ಟದ ಬಲೆಯಿಂದ ಪಾರಾದಿರೆನ್ನಬಹುದು. ಇಂದಿನ ನಿಮ್ಮ ವ್ಯವಹಾರಗಳು ಸಫಲವಾಗಲಿವೆ. ಶತ್ರುಗಳ ಪೀಡೆಯು ವಿಶೇಷವಾಗಿದ್ದರೂ ಅದನ್ನು ಪ್ರತಿಭಟಿಸಿ ಕಾರ್ಯವನ್ನು ಸಾಧಿಸುವ ಧೈರ್ಯ ಸಾಹಸಗಳು ನಿಮ್ಮಲ್ಲಿರಬೇಕಾಗುವವು. ಚಂಚಲವಾದ ಮನಸ್ಸನ್ನು ಬಿಗಿಹಿಡಿಯಿರಿ. ಆರೋಗ್ಯದ ಕಡೆಗೂ ಸ್ವಲ್ಪ ಲಕ್ಷ್ಯವಿಡಿರಿ. ವಿದ್ಯೋಪಜೀವಿಗಳಿಗೂ ವಣಿಕ್ ವೃಂದಕ್ಕೂ ಈ ಕಾಲ ಉತ್ತಮ ಫಲವನ್ನೀಯಲಿದೆ. ತಾ 1, 2, 3, 6, 7 ಈ ದಿನಗಳು ನಿಮ್ಮ ಭಾಗಕ್ಕೆ ಉತ್ತಮವಿರುವವು.

ಸಿಂಹ—ಬಲೀಯರಾದ ಗುರು ಶನಿಗಳು ನಿಮ್ಮ ಬೆಂಬಲಕ್ಕಿದ್ದರೂ ಇತರ ಗ್ರಹರೆಲ್ಲರೂ ವಿಮುಖರಾಗಿರುವುದರಿಂದ ಸದ್ಯ ನಿಮಗೆ ಅನಿಷ್ಟಗಳಧಿಕವಾಗಲಿವೆ. ಕ್ಷುಲ್ಲಕ ವಿಷಯಗಳ ಸಲುವಾಗಿ ಮನೆಯವರೊಳು ಪರಸ್ಪರ ಕಲಹ ಕಚ್ಚಾಟವಾದೀತು. ವಿಶೇಷತಃ ಅರ್ಧಾಂಗಿಯು ಚಂಡಿಯಂತೆ ನಿಮ್ಮನ್ನು ಪೀಡಿಸಿಯಾಳು. ಸ್ತ್ರೀ ವರ್ಗದಿಂದಲೇ ಅನಿಷ್ಟ ಅಪಮಾನಗಳು ಪ್ರಾಪ್ತವಾಗುವ ಸಂಭವವಿದೆ. ಬಂದದ್ದೆಲ್ಲಾ ಬರಲಿ ಗೋವಿಂದನ ದಯೆ ಒಂದಿರಲೆಂದು ನಿಮ್ಮ ಮಾರ್ಗದಲ್ಲಿ ನೀವು ಸಾಗಿರಿ. ತಾ. 4, 5, ಸುಖ ಲಾಭಕಾರಿಗಳಾಗಿ ಪರಿಣಮಿಸುವವು.

ಕನ್ಯಾ—ದೈವವು ವಿಮುಖವಾಗಿದ್ದರೂ ಕೇವಲ ಪೌರುಷದಿಂದಲೇ ಸಕಲವನ್ನೂ ಸಾಧಿಸಬೇಕೆಂಬ ಹುಮ್ಮಸ್ಸು ನಿಮ್ಮಲ್ಲಿರುವದು. ಸಹಜ ಆದರೆ ನಿಮ್ಮ ಪೌರುಷವು ಸಫಲವಾಗುವದಾದರೂ ನಿರೀಕ್ಷಿಸಿದ ಫಲವು ಮಾತ್ರ ಕಾಣದು. ಸಾಹಸಿಗಳು ಮಾತ್ರ ಈ ವಾರದಲ್ಲಿ ಹೆಚ್ಚಿನ ದುಃಖಕ್ಕೊಳಗಾಗಲಾರರು. ದುಡಿಮೆಗಿಂತ ಅಧಿಕ ಖರ್ಚು ಆಕಸ್ಮಿಕ ಪರ್ಯಟನ ಗುರುಹಿರಿಯರ ಕೂಡ ವಿರೋಧ ಇವುಗಳಿಂದ ಸಂತಪ್ತರಾದ ನಿಮಗೆ ತಾ 1, 2, 3, 6, 7 ಈ ದಿನ ಅಲ್ಪ ಕೊಂಚ ಸುಖ ನೆಮ್ಮದಿ ದೊರಕೀತು.

ತುಲಾ—ಕಳೆದ ವಾರದಂತಲ್ಲವಾದರೂ ಈ ಕಾಲವು ನಿಮ್ಮ ಭಾಗಕ್ಕೆ ಸಾಕಷ್ಟು ತೃಪ್ತಿಕರವಿರುವುದು. ಬಂಧುಗಳ ನೆರವು ಜನತೆಯ ಬೆಂಬಲ ಮಿತ್ರಜನರ ಸಹಾಯಗಳಿಂದ ನಿಮ್ಮ ಮನೋರಥಗಳು ಪೂರ್ಣವಾಗಲಿವೆ. ನೌಕರಿ ಜನರಿಗೆ ಮೇಲಧಿಕಾರಿಗಳಿಂದ ತಂಟೆ ತಕರಾರುಗಳು ಬಂದಾವು. ಸಂಸಾರದಲ್ಲಿ ಕಾಹಿಲೆ ಕಸಾಲೆಗಳು ತಲೆದೋರುವ ಸಂಭವವಿದೆ. ವಾರಾದಿಯ 5 ದಿನಗಳಲ್ಲಿ ವಿತ್ತಸಮಾಗಮ ಜನಮನ್ನಣೆ ಕಾರ್ಯಲಾಭ ವಿಜಯಗಳೂ ಪ್ರಾಪ್ತವಾದಾವು.

ವೃಶ್ಚಿಕ—ಕಾಲವನ್ನು ಕಷ್ಟದಿಂದ ಕಳೆಯಬೇಕಾಗುವದು. ಕಫ ಪ್ರಕೋಪದಿಂದ ದೇಹಾಲಸ್ಯವುಂಟಾದೀತು. ಕಾಲದಲ್ಲಿ ಶತ್ರುಜನರ ಉಪದ್ರವ ಹೆಚ್ಚಲಿದೆ. ಅನಿರೀಕ್ಷಿತ ದುಃಖವಾರ್ತೆಗಳು ನಿಮ್ಮನ್ನು ತಲೆಯೆತ್ತದಂತೆ ಮಾಡುವವು, ಶತ್ರುಜನರು ಮಿತ್ರರ ಸೋಗುಹಾಕಿಕೊಂಡು ನಿಮ್ಮನ್ನು ವಂಚಿಸಲಿರುವರು. ಭೃತ್ಯವರ್ಗದವರಿಗೆ ಅಧಿಕಾರಿಗಳ ಕೂಡ ಕಲಹವುಂಟಾದೀತು. ಹಣದ ಬಿಕ್ಕಟ್ಟಿನಿಂದಾಗಿ ಮರ್ಯಾದೆ ಉಳಿಸಿಕೊಳ್ಳಲು ಕಷ್ಟವೆನಿಸೀತು. ವಾರಾಂತ್ಯದ 4 ದಿನಗಳೂ ಹೆಚ್ಚಿನ ಕಷ್ಟದಾಯಕಗಳಾಗಲಾರವು.

ಧನು—ಬರೇ ಬಯಕೆಯೊಂದಿದ್ದರೆ ಸಾಲದು. ಅದಕ್ಕನುಗುಣವಾದ ಕೃತಿಯೂ ಬೇಕು ಆಗತಾನೇ ಫಲಪ್ರಾಪ್ತಿಯು. ಈ ವಾರವು ನಿಮ್ಮ ಭಾಗಕ್ಕೆ ಅತೀವ ಪ್ರಶಸ್ತವಿರುವದು. ಇಂತಹ ಸುಸಂಧಿಯನ್ನು ವ್ಯರ್ಥವಾಗಿ ಹಾಳುಮಾಡದಿರಿ. ನೀವಾವ ಕಾರ್ಯವನ್ನು ಕೈಗೊಂಡರೂ ಅದು ಏನೊಂದೂ ವಿಘ್ನಗಳಿಗೆ ಸಿಲುಕದೆ ಕಡೆಗಾಣಲಿದೆ. ನಿಮ್ಮ ಆರ್ಥಿಕ ಭಾಗವಾದರೋ ಎಂದಿಗಿಂತಲೂ ಉತ್ತಮವೆನಿಸುವದು. ಯಾವೊಂದು ಭಾಗದಲ್ಲೂ ನ್ಯೂನತೆಗಳು ಕಾಣಿಸವು. ವಾರಾಂತ್ಯದ 2 ದಿನಗಳು ಅತೀವ ಪ್ರಶಸ್ತವಿವೆ.

ಮಕರ—ನಿಮ್ಮ ಅದೃಷ್ಟವಿಂದು ತೀರ ದುರ್ಬಲವಾಗಿರುವದು. [illegible] ನಿಮ್ಮ ಪರಿಸ್ಥಿತಿಯು ಈ ವಾರದಲ್ಲಿ ಅತೀವ ಕಷ್ಟಕರವಾಗಲಿದೆ. ಸಂದಿಗ್ಧ [illegible] ನಿಮ್ಮ ಮೇಲೆ [illegible] ಬರುವರು. ಮಧುವಿಲ್ಲದ [illegible] ಸುವಾಸನೆಯನ್ನು [illegible] ದೂರೀಕರಿಸುವಂತೆ ನಿಮ್ಮ ಬಂಧುವರ್ಗದವರು ನಿಮ್ಮನ್ನು ಕಣ್ಣೆತ್ತಿಯೂ ನೋಡಲಾರರು. ಸಾಲಮಾಡಿ ಏನಾದರೂ ಅನಿಷ್ಟಗಳನ್ನೇ ತಂದೊಡ್ಡಲು ಹಿಂಜರಿಯರು. ವಾರಾದಿಯ 3 ದಿನಗಳಲ್ಲಿ ನೀವು ಹೆಚ್ಚಿನ ಕಷ್ಟಕ್ಕೊಳಗಾಗಲಾರಿರಿ.

ಕುಂಭ—ಈ ವಾರದಲ್ಲಿ ನಿಮ್ಮ ಕರ್ಮಕ್ಕಿಂತ ಅಧಿಕವಾದ ಫಲ ಲಭಿಸಲಿದೆ. ವಿಶೇಷತಃ ನೀಚವರ್ಗದವರ ಬೆಂಬಲದಿಂದಾಗಿ ಹಲವು ಕಾರ್ಯಗಳನ್ನು ಸಾಧಿಸುವಿರಿ. ಆರ್ಥಿಕ ಬಿಕ್ಕಟ್ಟು ದೂರವಾಗುವದು. ವ್ಯಾಪಾರ ವ್ಯವಸಾಯ ನೌಕರಿ ಮುಂತಾದ ಉದ್ಯಮಗಳಲ್ಲಿ ಉತ್ತಮವಾದ ಫಲಯಶಸ್ಸುಗಳು ಲಭಿಸುವವು. ಆರೋಗ್ಯವು ಮಾತ್ರ ಸರಿಯಿರದು. ಪಿತ್ತದೋಷದಿಂದಾಗಿ ನಿದ್ರಾಭಂಗ ದುಃಸ್ವಪ್ನ ಮೊದಲಾದವುಗಳುಂಟಾಗಲಿವೆ. ವಾರಾದಿಯ 5 ದಿನಗಳು ನಿಮ್ಮ ಬಯಕೆಯನ್ನು ಈಡೇರಿಸಲು ಶಕ್ತಗಳಾಗಿವೆ.

ಮೀನ—ಅದೃಷ್ಟವಿಂದು ಉತ್ತಮಸ್ಥಿತಿಗೆ ಬಂದಿದೆ. ಯಾವ ಕಾರ್ಯಕ್ಕೆ ಕೈಹಚ್ಚಿದರೂ ಇಷ್ಟದಂತೆ ಕೆಲಸವಾಗುವುದರಲ್ಲಿ ಸಂದೇಹವಿಲ್ಲವು. ಸಾಮಾಜಿಕ ರಾಜಕೀಯ ರಂಗಗಳಲ್ಲಿ ಒಳ್ಳೇ ಯಶಸ್ಸನ್ನು ಸಂಪಾದಿಸುವಿರಿ. ಮಾತ್ರವಲ್ಲ ಜನತೆಯ ಗೌರವಾದರಗಳನ್ನು ಪಡೆವಿರಿ. ಆದರೆ ಸೇವಕ ವರ್ಗದವರಿಗೂ ಶ್ರಮಜೀವಿಗಳಿಗೂ ಈ ಕಾಲವು ಅಷ್ಟೊಂದು ಹಿತಕರವೆನಿಸದು. ವಾರಾಂತ್ಯದ 4 ದಿನಗಳು ನಿಮ್ಮ ಬಯಕೆಗಳನ್ನು ಈಡೇರಿಸಲು ಸಮರ್ಥಗಳಾಗಿವೆ.

ನಿರ್ಮಲ ನಿರ್ಣಯ

(೧ನೇ ಪುಟದಿಂದ)

ನಮ್ಮನ್ನಿನ್ನೇಗ ಕೇಳುವವರು, ನಮಗೆ ಹೇಳುವವರು ಯಾರೂ ಇಲ್ಲ. ಇದ್ದರೂ ಅವರೆಂದುವಕ್ಕೆ ಕಿವಿಗೊಟ್ಟು ನಡೆಯುವ ಇಚ್ಛೆ ನಮಗಿಲ್ಲ. ನಮ್ಮ ಅನರ್ಥಗಳಿಗೆ ಮೂಲವಾಗಿ ಇಂಥ ಉಪೇಕ್ಷೆ, ಅಶ್ರದ್ಧೆ ಮತ್ತು ಆಲಸ್ಯವಿದೆ.

ಇದನ್ನು ಇನ್ನಾದರೂ ಹೊಡೆದೋಡಿಸಬೇಡವೆ? ಬೇಕು ಎಂದು ನಾವೆಲ್ಲರೂ ಮುಕ್ತಕಂಠದಿಂದ ಘೋಷಿಸುವುದರಲ್ಲಿ ನಿಶ್ಚಯಕ್ಕೂ ಹಿಂದುಳಿಯುವುದಿಲ್ಲ. ನಾವು ಮಾತಿನ ಮಲ್ಲರು; ಕಾರ್ಯದಲ್ಲಿ ಮಾತ್ರ ಹಿಂದೆ. ಒಂದು ಕೆಲಸವನ್ನು ಮನಸ್ಸುಗೊಟ್ಟು ಕೈಗೊಳ್ಳುವುದಕ್ಕಿಂತ, ನಾವಿರ ಅಡ್ಡಿಗಳನ್ನು ಸೃಷ್ಟಿಸಿ, ಅದನ್ನು ಹೇಗೆ ಜಾರಿಸಿಬಿಡಬಹುದೆಂದು ನೋಡುವವರು. ಮಾಡಿ ಮುಗಿಸಿದರೆ ಒಂದು ತಾಸು ತಗಲುವ ಕೆಲಸವನ್ನು ಮುಂದಕ್ಕೆ ಹಾಕಲಿಕ್ಕೆ, ಅಥವಾ ಅದರಿಂದ ಪಾರಾಗಲಿಕ್ಕೆ ಏನು ಮಾಡಲಿ ಎಂದು ದಿನವಿಡೀ ಯೋಚಿಸುವವರು. ಈ ಮನೋವೃತ್ತಿ ನಮ್ಮ ನಾಶವನ್ನು ಗೈಯುತ್ತದೆ. ಕಲ್ಯಾಣಕಾಂಕ್ಷಿಗಳಾದ ನಾವು- ವಿಘ್ನವಿಡಂಬರಗಳಿಗೆ ಅಂಜುವ ಮಾತಿರಲಿ ಅವುಗಳ ಕಲ್ಪನೆಯನ್ನೂ ಮಾಡುವಂತಿಲ್ಲ. ಹೊಸ ವರ್ಷ ಇಂಥ ಚೆಲುವಾತಾವರಣವನ್ನು ನಿರ್ಮಿಸಲಿ! ಓಂ ತತ್ಸತ್ ||

ರಕ್ಷಣೆಗೂ ಉಳಿತಾಯ ವ್ಯವಸ್ಥೆಗೂ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್.

ಸ್ಥಾಪನೆ: 1934. ಪ್ರಧಾನ ಕಚೇರಿ: ಮದ್ರಾಸು.

66½ ಲಕ್ಷಕ್ಕೂ ಮಿಕ್ಕಿದ ಹೊಸ ವ್ಯವಹಾರ, 15 ಲಕ್ಷಕ್ಕೂ ಮಿಕ್ಕಿದ ಪ್ರೀಮಿಯಮ್ ಉತ್ಪತ್ತಿ, 45½ ಲಕ್ಷಕ್ಕೂ ಮಿಕ್ಕಿದ ಜೀವನಿಮಾ ನಿಧಿ. 60½ ಲಕ್ಷಕ್ಕೂ ಮಿಕ್ಕಿದ ಮೂಲಧನಗಳು, ಸಾಧಾರಣ 3 ಕೋಟಿಯಷ್ಟು ಊರ್ಜಿತದಲ್ಲಿರುವ ವಹಿವಾಟು.

ಪ್ರಗತಿಪರವಾದ ಈ ಕಂಪೆನಿಯಲ್ಲಿ ಒಂದು ಪೋಲಿಸಿ ಇರುವುದು ಉತ್ತಮ ಜೀವ ಖಾತ್ರಿ. ಅಂತೆಯೇ ಇದರ ಏಜನ್ಸಿ ಇರುವುದು ಒಳ್ಳೇ ವ್ಯವಹಾರ ಸಾಧನ.

ಉತ್ಸಾಹಿ, ಜನಾದರಣೀಯ, ಸಮರ್ಥ ಸ್ತ್ರೀ ಪುರುಷರಿಂದ ಕಂಪೆನಿ ಪ್ರಾತಿನಿಧ್ಯದ ಬಗ್ಗೆ ಅರ್ಜಿಗಳು ಸ್ವಾಗತಾರ್ಹವು. ದಯಮಾಡಿ ಬರೆಯಿರಿ:-

ಜಿ. ಆರ್ ನಾಯ್ಕ, ಬ್ರಾಂಚ್ ಮೆನೇಜರ್,
ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು [ದ. ಕ]

ಉಡುಪಿಗೆ ಹೋಗಬೇಕೆ! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರ ವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವೆಲ್ಲಕ್ಕೂ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿ ತಿನಿಸು, ಇವುಗಳ [illegible]

ಪ್ರೊಪ್ರೈಟರ್:- ಕೆ. ವೆಂಕಟ್ರಮಣಭಟ್ಟ

ಲಕ್ಷಾಂತರ ಜನರು ಗುಣಹೊಂದಿದ್ದಾರೆ!

ಸರ್ ಜೀವನ್ ಶಿಲಾಜಿತ್ ಲೇಹ

ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರು ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ. ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.
[illegible] ದಿನದ ಲೇಹ್ಯ ರೂ [illegible], [illegible] ದಿನದ ಲೇಹ್ಯ ರೂ [illegible]
(ಪೋಸ್ಟೇಜು ಮಾಫಿ)

ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳುವಿಷ ಮುಂತಾದವು, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ದಿವ್ಯೌಷಧ

ಅಮೃತಾಂಜನ ಲಿಮಿಟೆಡ್,
ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ

Edited, Printed & Published by K. H. Shetty at the Navayuga Press, Udipi, S. India.

ನವಯುಗ

NAVAYUGA WEEKLY POST BOX NO. 22 UDIPI

Vol 32 No. 18

ಮಧ್ವಾಚಾರ್ಯ ಪ್ರಸನ್ನ, ರಜತ ಪೀಠಾಸೀನ, ಚಂದ್ರಮೌಳೀಶದರ್ಶನ, ಕನಕ ಸುದರ್ಶನ ಶ್ರೀ ಕೃಷ್ಣ.

ಮಧುಪರ್ಕ

ಪಂಚತಂತ್ರ ಬರೆಯಲ್ಪಟ್ಟ ಆ ಹಿಂದಿನ ಕಾಲದಲ್ಲಿ ಆಮೆಯೊಂದನ್ನು ಸೋತ ಮೊಲವೆಂದು ತನ್ನ ಜಾತಿಗೆ ಬಂದಿದ್ದ ಕಳಂಕವನ್ನು ತೊಡೆದು ಹಾಕಲು ಈ ಶತಮಾನದ ಮೊಲವೊಂದು ನಿರ್ಧರಿಸಿತು. ಆಮೆಯ ಬಳಿ ಬಂದು "ಈಗ ಓಟದ ಪಂಥಕ್ಕೆ ಬರುವಿಯಾ?' ಎಂದು ಆಹ್ವಾನ ಕೊಟ್ಟಿತು.

ಈ ಆಮೆಗೆ ತನ್ನ ಪೂರ್ವಜ ಸಂಪಾದಿಸಿ ಗಳಿಸಿದ ಖ್ಯಾತಿಯ ಮೇಲೆ ವಿಶ್ವಾಸ ಬಹಳ. ಈ ಮೊಲವೆಂದರೆ ಏನು ಲೆಕ್ಕ ಎಂಬ ಹಾವಭಾವ ವಿಚಾರ ಮಾಡದೆ ತನ್ನಲ್ಲಿ ತನ್ನ ಪೂರ್ವಿಕನ ಬುದ್ಧಿ ಕೌಶಲ್ಯವಾಗಲೀ ಶಕ್ತಿ ಸಾಮರ್ಥ್ಯವಾಗಲೀ ಇದೆಯೋ ಎಂಬುದನ್ನು ಯೋಚಿಸದೆ 'ಬೇಡ ಮೊಲರಾಯ, ಇಷ್ಟು ದಿನಗಳು ಕಳೆದ ಮೇಲೆ ನನಗೇರೀತಿ ಪಂಥಕ್ಕೆ ಕರೆಯುವ ಛಲಬೇಡ' ಎಂದು ಬುದ್ಧಿ ಹೇಳಿತು.

ಆದರೆ ಮೊಲ ಕೇಳಬೇಕಲ್ಲ—"ಜಾತಕ್ಕ, ಈ ಗೋಂಟುಕ್ಕೆ ನೋಡಿಯೇ ಬಿಡೋಣ" ಎಂದು ಒತ್ತಾಯಿಸಿತು. ಆಮೆ ಒಣ ಜಂಭದಿಂದ ಈ ಸಲವೂ ನೀನು ಸೋತು ಹೋಗುವಿ—ನಿಶ್ಚಯ ವೆಂದಿತು.

ಸರಿ ಓಟ ತೊಡಗಿತು. ಮೊಲ ಜಿಗಿದು ನೆಗೆತದಿಂದ ಅಗಸದಲ್ಲಿ ಹಾರಿದ್ದಿತು. ಆಮೆ ನುಸಿ ನುಸಿ ನಕ್ಕು "ಇಷ್ಟು ಅಲ್ಪಕಾರ್ಯಕ್ಕೆ ಇಷ್ಟು ಸಂಭ್ರಮವೇ" ಎಂದು ನಗೆಯಾಡಿತು.

"ಓ ಮರದ ಬುಡದಲ್ಲಿ ಇಷ್ಟು ಹೊತ್ತಿಗೆ ಮೊಲ ತೆಪ್ಪಗೆ ನಿದ್ದೆ ಮಾಡುತ್ತಿರಬಹುದು' ಎಂದು ಆಮೆ ಮೆಲ್ಲನೆ ಮುನ್ನಡಿ ಇಟ್ಟಿತು. ಆದರೆ ಆ ಮರ ಬರಲು ಅಲ್ಲಿ ಮೊಲ ಇರಲಿಲ್ಲ. ಆಮೆಗೆ ನಿರಾಶೆ. ಇನ್ನೊಂದು ಮರದಡಿ ಮೊಲ ನಿದ್ರಿಸುತ್ತಿದ್ದೀತು ಎಂದು ಆಶೆಯಿಂದ ಇನ್ನೂ ಮುಂದರಿಯಿತು. ಅಲ್ಲೂ ಇಲ್ಲ-ಹೀಗೆ ದಾರಿಯಾಗಿ ಕೊನೆಗೆ ನೋಡುವುದೇನು? ಮೊಲ ಮೊದಲೇ ಪಂಥವನ್ನು ಗೆದ್ದಿದೆ!

"ತ್ರಾಸಿಗೆ ಏಳುನೂರು ಮೈಲು ಹಾರಿಸುವ ಜೆಟ್ ವಿಮಾನದ ಈ ದಿನಗಳಲ್ಲೂ ನಿನ್ನ ಪೂರ್ವಿಕರ ದಾಖಲೆ ಉಳಿಯುವುದೆಂದು ತಿಳಿದೆಯಲ್ಲಾ" ಎಂದು ಮೊಲ ಆಮೆಯನ್ನು ಕಂಡು ನುಡಿಯಿತು.

ಒಣ ಜಂಭ ಸಾಲದು!

ಕನ್ನಡಕ್ಕೊಬ್ಬನೇ ಎನ್ನಬಹುದಾದ ಶ್ರೀ ಶಿವರಾಮ ಕಾರಂತರು ನಮ್ಮ ಸಂಸ್ಕೃತಿಯ ಹೆಮ್ಮೆ ಸಾಲದು ಎಂದೆನ್ನುವುದುಂಟು. ಸಂಸ್ಕೃತಿ ಚೈತನ್ಯಮಯವಾಗಿದೆ. ಗತಿಶೀಲವಾಗಿದೆ ಎಂಬಲ್ಲಿ ಪ್ರತಿವಾದವಿಲ್ಲ. ಹಿಂದಿನದೆಲ್ಲವನ್ನೂ ಬಿಟ್ಟುಗೊಟ್ಟು, ಹೊಸತಾಗಿ ಭವ್ಯಭವಿಷ್ಯವನ್ನು ನಿರ್ಮಿಸುವೆವೆಂದು ಯಾರೊಬ್ಬರೂ ಧೈರ್ಯದಿಂದ ಹೇಳುವಂತಿಲ್ಲ. ನಮಗೆ ಭವಿಷ್ಯದ ಚಿಂತೆಯೇ ಮುಖ್ಯವಾದರೂ ಭೂತಕಾಲದ ಘಟನೆಗಳು ನಮಗ ಯೋಗ್ಯ ಮಾರ್ಗದರ್ಶನ ಮಾಡುತ್ತವೆಂಬಲ್ಲಿ ಸಂದೇಹವಿಲ್ಲ. ಹಾಗೆಯೇ ಭೂತಕಾಲದ ಘಟನೆಗಳಿಗೇ ಪ್ರಾಶಸ್ತ್ಯವನ್ನೂ ಮಹತ್ವವನ್ನೂ ಕೊಟ್ಟು, ವರ್ತಮಾನವನ್ನೂ ವರ್ತಮಾನದ ಮೇಲೆ ಕಟ್ಟುವ ಭವಿಷ್ಯವನ್ನೂ ಹಾಳುಗೆಡುವುದು ಚಪಲಮಾತ್ರ ನಮ್ಮ ಜಾಣ್ಮೆಗೆ ಸ್ವಾಭಿಮಾನಕ್ಕೆ ಒಪ್ಪುವಂತಿಲ್ಲ.

ಭಾರತೀಯರು ಸರ್ವೋತ್ತಮವಾದ ಸಂಸ್ಕೃತಿ ಎನ್ನು ಹೊಂದಿದ್ದರು. ನಮ್ಮ ಬುದ್ಧಿ ಕೌಶಲ್ಯಕ್ಕಾಗಲೀ ಕೈಚಳಕಕ್ಕಾಗಲೀ ಎಲ್ಲರೂ ತಲೆದೂಗುವ ದಿನವೂ ಇತ್ತು. ನಮ್ಮ ಪೂರ್ವಜರು ಸಂಪಾದಿಸಿದ ಅಪಾರ ಕೀರ್ತಿಯ ಬಂಡವಾಳದ ಮೇಲೆ ನಾವಿಂದು ಬದುಕು ನಡೆಸುತ್ತಿದ್ದೇವೆ ಎಂದರೆ ಅತಿಶಯೋಕ್ತಿ ಎನಿಸಲಾರದು. ಆದರೆ ಹೀಗೆ ನಾವು ಎಷ್ಟು ಸಮಯ ದೂಡಬಹುದು? "ಕೂತುಂಡರೆ ಕುಡಿಕೆ ಹಣವೂ ಸಾಲದು" ಎಂಬ ಗಾದೆಯು ನೆನಪಿಗೆ ಒಂದೊಡನೆಯೇ ನಮ್ಮ ಗತವೈಭವದ ಭವ್ಯಸ್ಮರಣೆಯಲ್ಲಿ ಲೋಲಾಯಿತರಾಗಿ ಕಳೆಯುವ ದಿನಗಳು ಎಂದೋ ಸರಿದುವು ಎಂಬ ಸಂಗತಿ ವ್ಯಕ್ತವಾಗುತ್ತದೆ.

ನಮ್ಮದು ಕರ್ಮಭೂಮಿ ಎಂದು ಹೆಸರುವಾಸಿಯಾದ ದೇಶ. ಅಂಥದರಲ್ಲಿ ನಾವಿಂದು ಪರಾವಲಂಬಿಗಳಂತೆ ಬಾಳ್ವೆ ನಡೆಸುತ್ತೇವೆ. ಹಿಂದೆ ನಮ್ಮಲ್ಲಿ ಢಾಕಾ ಮಸ್ಲಿನ್ ಬಟ್ಟೆ ಇತ್ತು ಎಂದು ತೃಪ್ತಿ ಪಟ್ಟುಕೊಳ್ಳುತ್ತೇವೆಯೇ ಹೊರತು, ಇಂದಿನ ಬಟ್ಟೆಯ ಪೂರೈಕೆ ಅವ್ಯಾಹತವಾಗಿ ನಡೆಯುವಂತೆ ನೋಡುವುದಿಲ್ಲ. ಸುಭಿಕ್ಷವು ಜೀವಿಗಳಿಗೆ ಆಕರವಾಗಿದ್ದ ರಾಮರಾಜ್ಯದ ಕನಸು ಕಾಣುತ್ತೇವೆಯೇ ಹೊರತು—ನಮ್ಮ ಸ್ವಂತ ಶಕ್ತಿಸಾಮರ್ಥ್ಯಗಳಿಂದ ಹೊಸತಾಗಿ ರಾಮರಾಜ್ಯವನ್ನು ಸೃಷ್ಟಿಸುವ ಸಾಹಸಕ್ಕೆ ಕೈಹಚ್ಚುವುದಿಲ್ಲ. ನಮಗೆಲ್ಲ ಹಿಡಿದ ನಿದ್ದೆ ಅಥವಾ ಆಲಸ್ಯ ಇನ್ನೂ ಹಿಂದಿನದ್ದೇಕೋ ಎಂದು ವ್ಯಸನವಾಗುತ್ತದೆ.

ಯಾವ ಕ್ಷೇತ್ರದಲ್ಲಿಯೇ ಆಗಲಿ—ಜನರು ಒಕ್ಕಟ್ಟು, ಒಮ್ಮನಸ್ಸು ಮತ್ತು ದೃಢ ಸಂಕಲ್ಪ ಒಡಗೂಡಿ ಕಾರ್ಯರಂಗಕ್ಕೆ ಧುಮುಕಿದರೆ ವಾಂಛಿತ ಫಲವು ಅತ್ಯಲ್ಪ ಕಾಲದಲ್ಲಿಯೇ ಕೈಗೂಡಿ ಬರಬಲ್ಲುದು. ನಮ್ಮ ಕರ್ತವ್ಯ ಬುದ್ಧಿಯನ್ನು ಜಾಗೃತಗೊಳಿಸಿ, ಜಡ ಜೀವನದಲ್ಲಿ ಲವಲವಿಕೆ ಮೂಡಿಸಿ ನವಭಾರತದ ನಿರ್ಮಾಣ ಮಾಡುವಂತೆ ರಾಷ್ಟ್ರ ಧುರೀಣರು ಕರೆಯುತ್ತಿರುವರು ಮಾತ್ರವಲ್ಲ ಸುಸಂಬದ್ಧವಾದ ಯೋಜನೆಯನ್ನೂ ನಮ್ಮ ಮುಂದಿಟ್ಟಿರುವರು. ಈ ಮಹಾ ಕಾರ್ಯಕ್ರಮವನ್ನು ನಿಶ್ಚಿತವಾದಂತೆ ಪೂರ್ಣಗೊಳಿಸುತ್ತಾ ಹೋಗುವುದಕ್ಕೆ ಪ್ರತಿಯೊಬ್ಬನೂ ತನ್ನ ಶಕ್ತ್ಯಾನುಸಾರ ದುಡಿಯಬೇಕು.

ಸಮೃದ್ಧವಾದ ಕೃಷಿ, ಕೈಗಾರಿಕೆ ಮುಂತಾದವುಗಳಿಂದ ಜೀವನ ಮಟ್ಟ, ಮನೋರಂಜಕವಾದ ಆಟ-ವಿನೋದಗಳು, ಸಾಂಸ್ಕೃತಿಕ ತೃಷೆಯನ್ನು ತಣಿಸುವ ರಾಷ್ಟ್ರೀಯ ಉತ್ಸವಗಳು. ಈ ಹಿಂದೆ ನಮ್ಮ ದೇಶವನ್ನು ಜೇನುತುಪ್ಪ ಹಾಲು ಹರಿವ ಭೂಸ್ವರ್ಗವಾಗಿ ಮಾಡಿದುವು. ಇನ್ನೊಮ್ಮೆ ಅಂಥ ದರ್ಶನ ನಮಗಾಗಬೇಕೆಂದು ಹಂಬಲಿಸುವುದು ನ್ಯಾಯವೇ ಆಗಿದೆ.

ಬತ್ತಿಹೋದ ನದಿ ಮರಳಿ ತುಂಬಿ ಹರಿಯಬೇಕು, ಬರಡಾಗಿ ಕರಡಿದ ಗದ್ದೆಗಳು ತಿರುಗಿ ಹಸುರಾಗಿ ಕಂಗೊಳಿಸಬೇಕು, ನೆಲ ಸಮವಾದ ಕೆರೆ ಬಾವಿಗಳು ಇನ್ನೊಮ್ಮೆ ಜಲಭರಿತವಾಗಬೇಕು, ನಮ್ಮ ಜಡ ಪ್ರವೃತ್ತಿ ದೂರಾಗಿ ಜಾಗೃತಿಯ ಜೊತೆಗೆ ಕಾರ್ಯಶೀಲತೆಯೂ ಬರಬೇಕು.

ವಿಜ್ಞಾನವೆಂಬ ಪಕ್ಷಿ ಇಂದು ತನ್ನ ಪಕ್ಕಗಳನ್ನು ದಶದಿಕ್ಕುಗಳಿಗೂ ಪಸರಿಸಿ ಎತ್ತರದಲ್ಲಿ ವಿಹರಿಸುತ್ತಿದೆ. ಕಣ್ಣಿಗೂ ತೋರದದನ್ನು ಅದು ತೋರುವುದು. ಅಂಥದರಲ್ಲಿ ನಮಗೆ ದೂರದರ್ಶಕ ಬೇಕು. ಅರ್ಥಾತ್ ಚಟುವಟಿಕೆಗಳು ಹಿಂದುಳಿಯದಂತೆ ಹೊಸ ಹೊಸ ಸಾಧನ ಮಾರ್ಗವೂ ತಿಳಿಯಬೇಕು.



ಉಡುಪಿಯ ಅತಿ ಪ್ರಾಚೀನ ಚಂದ್ರಮೌಳೀಶ್ವರ ದೇವಸ್ಥಾನದ ಮುಂಭಾಗ ಸ್ವಾತಂತ್ರ್ಯ ರಂಗವಾಯಿತು. ಸುಮಾರು 50 ಅಡಿ ಎತ್ತರದ ಒಪ್ಪ ಬಾಕ್ಕತಿಯ ಶಿಲಾಸ್ತಂಭ

ನಮ್ಮ ಭವ್ಯ ಭವಿಷ್ಯವನ್ನು ಕಟ್ಟುವಲ್ಲಿ ನಾವು ಹಿಂದುಳಿದರೆ ನಮ್ಮನ್ನಾರೂ ಮುಂದಕ್ಕೆ ಎತ್ತಿ ತರುವಂತಿಲ್ಲವೆಂಬುದು ನೆನಪಿರಲಿ!

—ಓಂತತ್ಸತ್॥

ಶೈಕ್ಷಣಿಕ ಕ್ಷೇತ್ರದಲ್ಲಿ ಎತ್ತಿದ ಕೈ

ಭಾರತೀಯರ ವಿದ್ಯಾ ಬುದ್ಧಿಗೆ ಸಂಸ್ಕಾರಕೊಟ್ಟ ಪ್ರಾಚೀನ ಮಾದರಿ

ಶೈಕ್ಷಣಿಕ ಕ್ಷೇತ್ರದಲ್ಲಿ ಇಂದು ಕ್ರಾಂತಿಯ ಕಹಳೆ ಮೊಳಗುತ್ತಿದೆ. ಹಳೆಯ ರೀತಿಯ ನಿಯಮಗಳು ನೂತನ ವಿಚಾರಧಾರೆಯಿಂದ ಪ್ರತಿಕ್ಷೇಪಿಸಲ್ಪಟ್ಟಿವೆ. ಹಿಂದಿನ ಬಿಗು ಮಾನ ಮತ್ತು ಕಟ್ಟು ಪಾಡುಗಳು ತೀರ ಸಡಿಲುಗೊಂಡಂತೆ ಕಂಡರೂ-ಮನುಷ್ಯನ ವ್ಯಕ್ತಿತ್ವ ಸರ್ವತೋಮುಖವಾದ ಪ್ರಗತಿಯನ್ನು ಹೊಂದಿ ವಿಕಸಿತವಾಗಬೇಕೆಂಬ ನಿರ್ಧಾರವನ್ನೂ ನಾವು ಕಾಣುತ್ತೇವೆ. ಅಂಥದರಲ್ಲಿ ಹಳೆಯದೆಲ್ಲವೂ ಹೊಲಸು ಎಂಬ ಭಾವನೆ ಕೆಲವರ ಮನಸ್ಸಿನಲ್ಲಿ ಮೂಡಿದರೂ ನಾವು ಆಶ್ಚರ್ಯಪಡಬೇಕಿಲ್ಲ. ಆದರೆ ಇಂಥ ವಿಚಾರವು ನಮ್ಮ ಮೌಢ್ಯದ ದ್ಯೋತಕವೆಂದು ಮಾತ್ರ ಹೇಳಬೇಕಾಗವುದು. ಇಂಗ್ಲಿಷನ್ನು ಬಿಟ್ಟರೆ, ಪ್ರಾದೇಶಿಕ ಭಾಷೆಗಳಲ್ಲಿ, ಉದಾಹರಣೆಗೆ ಕನ್ನಡದಲ್ಲಿ, ಜ್ಞಾನ ಪ್ರಸಾರವನ್ನು ಮಾಡುವುದೂ ಶಿಕ್ಷಣದ ಕಾರ್ಯವನ್ನು ನೆರವೇರಿಸುವುದೂ ಶಕ್ಯವಿಲ್ಲ ಎಂಬ "ಆಧುನಿಕ ಮೂಢ ನಂಬಿಕೆ"ಯಂತೆ ಹಳೆಯ ಶಿಕ್ಷಣ ಪದ್ಧತಿ ಇಂದಿಗೆ ಹೇಳಿಸಿದ್ದಲ್ಲವೆಂಬ ವಿಚಾರವೂ ಕ್ಷುಲ್ಲಕವಾದುದು. ನಮ್ಮ ವೈಜ್ಞಾನಿಕ ದೃಷ್ಟಿಯು ಪರಿಪಕ್ವವಾಗಿರುವ ಈ ದಿನಗಳಲ್ಲಿ ಒಂದೆರಡು ಸಾವಿರ ವರ್ಷಗಳ ಹಿಂದೆಯೇ ನಾವು ಕಂಡುಕೊಂಡುದು ಬಹಳ ಅಲ್ಪವೆಂದು ಬೋಧವಾದೀತಾದರೂ—ಅಷ್ಟಕ್ಕೇನೇ ಹಿಂದಿನದನ್ನು ಹಳಿಯಲು ನೋಡಿದರೆ ಅದು ಧಾರ್ಷ್ಟ್ಯವೇ ಸೈ. ನಮ್ಮ ಪೂರ್ವಜರು ವೈದ್ಯಕೀಯ ಕ್ಷೇತ್ರದಲ್ಲಿ, ಜ್ಯೋತಿಷ ಶಾಸ್ತ್ರದಲ್ಲಿ, ಗಣಿತದಲ್ಲಿ, ಶಿಲ್ಪ ಹಾಗೂ ಯಂತ್ರ ಕೌಶಲ್ಯದಲ್ಲಿ, ಧಾತು ಶೋಧನ ವಿದ್ಯೆಯಲ್ಲಿ ಎಷ್ಟರಮಟ್ಟಿಗೆ ಮುಂದುವರಿದಿದ್ದರೆಂದರೆ—ಆಧುನಿಕ ಸಂಶೋಧಕರಿಗೂ ಇವು ಕುತೂಹಲದಾಯಕವಾದ ಸಂಗತಿಗಳಾಗಿ ಪರಿಣಮಿಸಿವೆ. ಇಂಥ ಸಾಮರ್ಥ್ಯವು ಅತ್ಯಂತ ವಿಚಕ್ಷಣವಾದ ಶಿಕ್ಷಣ ಪದ್ಧತಿ, ಸುಯೋಗ್ಯ ಮಾದರಿಯ ತರಬೇತಿ ಮತ್ತು ಗಹನವಾದ ಸಂಶೋಧನೆಗಳ ನೆರವಿಲ್ಲದಿರುತ್ತಿದ್ದರೆ ಸಾಧ್ಯವೂ ಆಗುತ್ತಿರಲಿಲ್ಲ. ಈ ದೃಷ್ಟಿಯಿಂದ ನಮ್ಮ ಪೂರ್ವೇತಿಹಾಸದ ಅಲ್ಪ ಪರಿಚಯವನ್ನು ಮಾಡಿಕೊಳ್ಳುವುದು ಶ್ರೇಯಸ್ಕರವೆನ್ನಬಹುದು.

ಸಾಮಾನ್ಯ ಶಿಕ್ಷಣ ಪದ್ಧತಿ

ಸಾಮಾನ್ಯ ಶಿಕ್ಷಣವನ್ನು ವಿಸ್ತಾರವಾಗಿ ಎಲ್ಲೆಡೆಯಲ್ಲೂ ಹಬ್ಬಿದ್ದ ಪ್ರಾಥಮಿಕ ಶಾಲೆಗಳ ಮುಖಾಂತರ ನೀಡುತ್ತಿದ್ದರು. ಹೀಗಿದ್ದರೂ ಅಕ್ಷರ ಜ್ಞಾನವು ಯಾವ ಕಾಲಕ್ಕೂ ನಮ್ಮ ದೇಶದಲ್ಲಿ ವ್ಯಾಪಕವಾಗಿರಲಿಲ್ಲ; ಬಹುಶಃ ಅಶೋಕನ ಕಾಲದಲ್ಲಿ ಹೆಚ್ಚಿನವರಿಗೆ ಓದು ಬರಹ ಗೊತ್ತಿದ್ದಿತು. ಅವನ ಜನಪ್ರಿಯವಾದ ಶಿಲಾಲೇಖ ಮತ್ತು ಶಾಸನಗಳನ್ನು ನೋಡಿ ಹೀಗೆ ಊಹಿಸಬೇಕಾಗಿದೆ. ಹಾಗೆಂದು ಅಕ್ಷರಾಭ್ಯಾಸ ಎಷ್ಟೆಂದರೂ ದುರ್ಲಕ್ಷಿಸಲ್ಪಟ್ಟ ವಿಷಯವಾಗಿಯೇ ಇತ್ತೆನ್ನುವಲ್ಲಿ ಸಂದೇಹವಿಲ್ಲ. ಐದನೇ ವರ್ಷದಲ್ಲಿ ಮಗುವಿಗ ಶಿಕ್ಷಣವನ್ನು ಕೊಡಲು ಆರಂಭಿಸುತ್ತಿದ್ದರು. ಇದಕ್ಕಿಂತಲೂ ಮೊದಲು ಕ್ರಮವಾದ ಶಿಕ್ಷಣವನ್ನು ನೀಡತಕ್ಕದ್ದಲ್ಲವೆಂದು ಚರಕನ ಅಭಿಮತವಿದೆ ಏಳನೇ ಶತಮಾನದಲ್ಲಿ ಭಾರತದಲ್ಲಿ ಇದೊಂದು ಕಟ್ಟುಕಟ್ಟಳೆಯಾಗಿತ್ತಾಗಿ ಚೀನೀ ಯಾತ್ರಿಕ ಹ್ಯುಯೆನ್‌ತ್ಸಾಂಗನು ಹೇಳುತ್ತಾನೆ. ಇಂಥ ಪ್ರಾಥಮಿಕ ಶಾಲಾ ವಿದ್ಯಾಭ್ಯಾಸದ ಕ್ರಮವು ಇತ್ತೀಚಿನವರೆಗೂ ಭಾರತದ ಹಳ್ಳಿ ಹಳ್ಳಿಯಲ್ಲಿ ಸುವ್ಯವಸ್ಥಿತವಾಗಿ ನಡೆದು ಬಂದಿತ್ತು. ಈಸ್ಟ್ ಇಂಡಿಯಾ ಕಂಪೆನಿಯ ಆಳಿಕೆಯಿಂದೀಚೆಗೆ ಮಾತ್ರ ನಮ್ಮ ಪದ್ಧತಿ ಮೃತಪ್ರಾಯವಾಯಿತು. ಆದಾಗ್ಯೂ, ನಮ್ಮ ಶೈಕ್ಷಣಿಕ ಪದ್ಧತಿ ಪಾಶ್ಚಾತ್ಯರ ಮೆಚ್ಚುಗೆಗೆ ಪಾತ್ರವಾಗಿತ್ತೆಂಬುದನ್ನು ಈಸ್ಟ ಇಂಡಿಯಾ ಕಂಪೆನಿ ಲಂಡನ್ನಿನಲ್ಲಿರುವ ತನ್ನ ನಾಯಕ ಮಂಡಳಕ್ಕೆ ಬರೆದ ಈ ಕೆಳಗಿನ ಹೇಳಿಕೆಯಿಂದ ಮನವರಿಕೆಯಾಗುತ್ತದೆ-"ಹಿಂದೀಯರ ಸರಕಾರದ ಕೈಕೆಳಗೆ ಪ್ರತಿಯೊಂದೂ ಹಳ್ಳಿಯಲ್ಲಿ ವ್ಯವಸ್ಥೆಯಿಂದ ನಡೆಯುವ ಒಂದು ಪ್ರಾಥಮಿಕ ಶಾಲೆಯೂ ಒಬ್ಬ ಹಳ್ಳಿಯ ಅಧ್ಯಾಪಕರೂ ಇರುವರು. ಇಲ್ಲಿ ನೀಡಲಾಗುತ್ತಿರುವ ವಿಚಕ್ಷಣವಾದ ವಿದ್ಯಾಭ್ಯಾಸ ಮತ್ತದರ ಸರಳತೆ ಹಾಗೂ ಕಡಿಮೆ ವೆಚ್ಚದಿಂದ ಮೋಹಿತರಾಗಿ-ಕೆಲವೇ ವರ್ಷಗಳ ಹಿಂದೆ ಇಂಗ್ಲೆಂಡಿನಲ್ಲೂ ಈ ಪದ್ಧತಿಯ ಅನುಕರಣ ಮಾಡಿದರು. ಅಲ್ಲಿಂದ ಅದು ಯುರೋಪಿನ ಮೂಲೆ ಮೂಲೆಗೂ ವ್ಯಾಪಕಗೊಂಡಿತು."

ವಯಸ್ಕರ ಶಿಕ್ಷಣ

ವಯಸ್ಕರ ವಿದ್ಯಾಭ್ಯಾಸದ ಮಹತ್ವವನ್ನೂ ಹಿಂದಿನವರು ತಿಳಿದಿದ್ದರು. ಬಯಲಾಟಗಳು, ರಾಮಾಯಣ-ಮಹಾಭಾರತಗಳಂಥ ಪವಿತ್ರ ಗ್ರಂಥಗಳ ಪಠಣ, ಜನಪದ ಕತೆಗಳು, ರಾಷ್ಟ್ರೀಯ ಉತ್ಸವಗಳು, ತೀರ್ಥಾಟನೆ, ಸಂಗೀತದಿಂದ ಕೂಡಿದ ಹರಿಕಥಾ ಕಾಲಕ್ಷೇಪ, ಪಂಡಿತರೊಡನೆ ಚರ್ಚೆ ಮುಂತಾದುವುಗಳು ವಯಸ್ಕರಿಗೆ ನೀತಿಯನ್ನೂ ಧರ್ಮವನ್ನೂ ಬೋಧಿಸಿ, ಸಾಮಾಜಿಕ ಸುವ್ಯವಸ್ಥೆಯ ಅಡಿಗಲ್ಲನ್ನು ಹಾಕುತಿದ್ದುವು. ಅನಕ್ಷರಸ್ಥರ ಪ್ರಮಾಣ ತುಂಬ ಹೆಚ್ಚಿದ್ದರೂ ಕೂಡ – ಮೇಲೆ ಹೇಳಿದ ಬಗೆಬಗೆಯ ಬೋಧಪ್ರದ ಕಾರ್ಯಕ್ರಮಗಳ ಪರಿಣಾಮವಾಗಿ, ಜನರ ನೈತಿಕ ಸಾಮರ್ಥ್ಯ ಹೆಚ್ಚುತಿತ್ತು; ಮತ್ತು ಸಾಂಸ್ಕೃತಿಕ ದೃಷ್ಟಿ ಪರಿಮಾರ್ಜನಹೊಂದುತಿತ್ತು. ಇಂದು ಇಂಥ ಕಾರ್ಯಕ್ರಮಗಳು ತಮ್ಮ ಮಹತ್ವವನು ಕಳೆದುಕೊಳ್ಳುತ್ತಿವೆ. ಸಿನೆಮಾ, ರೇಡಿಯೋ, ವರ್ತಮಾನಪತ್ರಿಕೆಯು ಮುಂತಾದವುಗಳ ಮೇಲೆ ಈ ಹೊಣೆಗಾರಿಕೆ ಏರಿ ಕುಳಿತಿದೆ. ಅನಕ್ಷರಸ್ಥರನ್ನು ಜ್ಞಾನವಂತರನ್ನಾಗಿ ವಿದ್ಯಾ ಬುದ್ಧಿವಂತನ್ನರಾಗಿ ಮಾಡುವಲ್ಲಿ ಈ ಆಧುನಿಕ ಸಂಪ್ರದಾಯಗಳು ಏನೇನೂ ಯಶಸ್ವಿಯಾಗಿಲ್ಲ ವೆಂಬುದು ಸ್ಪಷ್ಟವಿದೆ.

ವೃತ್ತಿ ಶಿಕ್ಷಣ

ಹಿಂದಿನ ವಯಸ್ಕರ ಶಿಕ್ಷಣ ಪದ್ಧತಿಯು ಎಷ್ಟರ ಮಟ್ಟಿಗೆ ಪ್ರಭಾವಿಯಾಗಿತ್ತೆಂದರೆ— ಓದು ಬರೆಹದ ತಿಲಾಂಶ ಜ್ಞಾನವಿಲ್ಲದಿದ್ದರೂ ನಮ್ಮ ರೈತಾಪಿ ಜನರು ಸಂಸ್ಕೃತಿ ಹಾಗೂ ಬುದ್ಧಿವಂತಿಕೆಯಲ್ಲಿ ಯಾರಿಂದಲೂ ಹಿಂದೆ ಇರಲಿಲ್ಲ. ಅವರ ಕೈಚಳಕವೂ ಹಾಗೇನೆ. ಕರ್ಮಶಾಲೆಗಳಲ್ಲಿ ಬಗೆ ಬಗೆಯ ವೃತ್ತಿಗಳ ಶಿಕ್ಷಣವನ್ನು ನೀಡುವ ಏರ್ಪಾಡುಗಳಿದ್ದುವು. ಒಬ್ಬ ಶ್ರೇಷ್ಠಿಯು ಈ ಕರ್ಮಶಾಲೆಯ ಮುಖ್ಯಸ್ಥನಾಗಿರುತಿದ್ದನು. ಬೇರೆ ಬೇರೆ ಬಗೆಯ ಇಪ್ಪತ್ತು ಸಂಸ್ಥೆಗಳು ಎಲ್ಲ ಬಗೆಯ ವೃತ್ತಿ ಶಿಕ್ಷಣವನ್ನೂ ನೀಡುವ ಏರ್ಪಾಡು ನಡೆಸಿದ್ದುವು. ೧೨ನೇ ಶತಮಾನದಲ್ಲಿದ್ದ ಕಾಶ್ಮೀರದ ಕಲ್ಹಣನೆಂಬ ಕವಿಯು ಈ ವೃತ್ತಿಪರ ಶಿಕ್ಷಣ ನೀಡುವ ಸಂಸ್ಥೆಗಳ ಕುರಿತು ಹೇಳುತ್ತಾನೆ.

ಶಿಕ್ಷಾರ್ಥಿಗಳಿಗೆ ಬೇಕೆನಿಸಿದ ವೃತ್ತಿಯನ್ನು ಕಲಿಯುವದಕ್ಕೆ ಆಸ್ಪದವಿತ್ತು. ಮಜೂರಿಗೆ ಕೆಲಸಮಾಡುವ ಕೂಲಿಯಂತೆ ಈ ಶಿಕ್ಷಾರ್ಥಿಯನ್ನು ನೋಡದೆ, ಗುರುವು ತನ್ನ ಸ್ವಂತ ಮಗನಂತೆ ವಾತ್ಸಲ್ಯದಿಂದ ಶಿಷ್ಯನನ್ನು ನೋಡಿಕೊಳ್ಳುವ ಪರಿಪಾಠವಿತ್ತು. ಆದಕಾರಣ ದಕ್ಷಿಣೆಗೆ ತಕ್ಕ ಪ್ರದಕ್ಷಿಣೆ ಎಂಬ ಈಗಿನ ಕ್ರಮದ ಬದಲು, ಆದರ್ಶವಾದ ಮನಸೋಕ್ತವಾದ, ವಿಶಾಲ ಅಂತಃಕರಣದ ವಿದ್ಯಾಭ್ಯಾಸ ಆಗ ಕೊಡಲ್ಪಡುತಿತ್ತು. ಗುರುವಿನ ಬಳಿ ನಿರ್ದಿಷ್ಟ ಅವಧಿಯವರೆಗೆ ಇರಬೇಕೆಂಬ ನಿಯಮವೇನೋ ಇತ್ತು. ಆದರೆ ತೃಪ್ತಿಕರವಾದ ಇತರ ಮುಖ್ಯ ಕಾರಣಗಳಿದ್ದರೆ, ಈ ನಿಯಮ ಸಡಲಿಸಲ್ಪಡುತಿತ್ತು. ಈ ಶಾಲೆಗಳು ಸಂಕುಚಿತವಾಗಿದ್ದಿರಬಹುದು; ಮತ್ತವುಗಳ ಶಿಕ್ಷಣ ಪದ್ಧತಿಯಲ್ಲಿ ತುಂಬ ಬಿಗುಮಾನವೂ ಇದ್ದಿರಬಹುದು. ಹಾಗೆಂದು ನಿಜವಾದ ಅಭ್ಯರ್ಥಿಗೆ ಈ ಪದ್ಧತಿಗಳಿಂದ ಏನೂ ಅಡಚಣೆಯುಂಟಾಗುತ್ತಿರಲಿಲ್ಲ.

ವೃತ್ತಿಯನ್ನು ಕೈಗೊಳ್ಳುವಲ್ಲಿ ಸ್ವಾತಂತ್ರ್ಯ ಕೊಡಲ್ಪಟ್ಟಂತೆ ವ್ಯಕ್ತವಾಗುತ್ತದೆ ೫ನೇ ಶತಮಾನದ ಗುಪ್ತಕಾಲೀನ ಶಿಲಾಲೇಖವೊಂದರನ್ವಯ, ರೇಷ್ಮೆ ವ್ಯವಸಾಯದ ಸಂಸ್ಥೆಯೊಂದು ಒಡೆದು, ಅವರಲ್ಲಿ ಕೆಲವರು ಸಾಹಿತ್ಯಕ್ಕೆ, ಕೆಲವರು ಬಿಲ್ಲು ವಿದ್ಯೆಗೆ, ಕೆಲವರು ಜ್ಯೋತಿಷಕ್ಕೆ, ಇನ್ನು ಕೆಲವರು ಸನ್ಯಾಸೀ ಪಂಥಕ್ಕೆ ಸೇರಿದರು. ವಕೀಲರು, ವೈದ್ಯರು, ವ್ಯಾಪಾರಿಗಳು, ಸೈನಿಕರು ಆಗುವುದಕ್ಕೆ ಯಾರಿಗೂ ನಿರ್ಬಂಧವಿರಲಿಲ್ಲ.

(ಮುಂದುವರಿಯುವುದು)

The Canara Mutual Assurance Co. Ltd.
Head Office: UDIPI, S. INDIA. Estd: 1935.

ಶುಭಾಶಯಗಳು!

ನಾವು ನಮ್ಮೆಲ್ಲ ವಿಮಾದಾರರನ್ನೂ ಪ್ರೋತ್ಸಾಹಕರನ್ನೂ ಅವರ ನಿರಂತರವಾದ ಬೆಂಬಲಕ್ಕಾಗಿ ಅಭಿನಂದಿಸುತ್ತೇವೆ. ಅಲ್ಲದೆ ಅವರ ಪ್ರೋತ್ಸಾಹಕ್ಕೆ ಪ್ರತಿಯೊಂದೂ ರೀತಿಯಲ್ಲಿ ಅರ್ಹರಿರುವಂತೆ ಮುಂದಕ್ಕೂ ಪ್ರಯತ್ನಿಸುವೆವೆಂದು ಭರವಸೆಯನ್ನು ನೀಡುತ್ತೇವೆ. ನೂತನ ವರ್ಷವು ಸಕಲರಿಗೂ ಸುಖ ಸಂತೋಷ ಹಾಗೂ ಸಮೃದ್ಧಿಯನ್ನು ತರಲೆಂಬುವೇ ನಮ್ಮ ಹಾರೈಕೆ!

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ. ಸ್ಥಾಪನೆ: ೧೯೩೫

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ಮಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

More & More
PEOPLE BUY
PLATO
REGD.
PLATO FOUNTAIN PEN No. 66
The pen of the day
M. P. P. I LTD. BOMBAY 4

ನಿತ್ಯ ಜೀವನದಲ್ಲಿ ತತ್ವಜ್ಞಾನದ ಸ್ಥಾನ

ಉಡುಪಿಯಲ್ಲಿ ಮಾಧ್ವ ತತ್ವಜ್ಞಾನ ಸಮ್ಮೇಳನ

ಉಡುಪಿಯಲ್ಲಿ ದಿನಾಂಕ ೪ರಿಂದ ೬ರ ವರೆಗೆ ಅಖಿಲ ಭಾರತ ಮಾಧ್ವತತ್ವಜ್ಞಾನ ಸಮ್ಮೇಳನವು ಶ್ರೀಕೃಷ್ಣ ದೇವರ ಸನ್ನಿಧಿಯಲ್ಲಿ ರಾಜಾಂಗಣದಲ್ಲಿ ಸುಸಜ್ಜಿತವಾದ ವೈಜಯಂತಿ ಮಂಟಪದಲ್ಲಿ ಸಾಂಗವಾಗಿ ಜರಗಿತು. ಪರ್ಯಾಯ ಪೇಜಾವರ ಮಠಾಧೀಶರು ಸಮ್ಮೇಳನದ ಅಧ್ಯಕ್ಷರಾಗಿಯೂ ಮೈಸೂರಿನ ರಾಜ ಪ್ರಮುಖರು ಉದ್ಘಾಟಕರಾಗಿಯೂ ಶ್ರೀ, ಬಿ. ವೆಂಕಟೇಶಾಚಾರ್ಯರು ಅಧ್ಯಕ್ಷರಾಗಿಯೂ ಅನುಕೂಲ್ಯ ಹಿತ ನುಡಿಗಳನ್ನು ಆಡಿದರು. ನಾಡಿನ ಬೇರೆ ಬೇರೆ ಭಾಗಗಳಿಂದ ನೂರಾರು ಪ್ರತಿನಿಧಿಗಳು ಬಂದಿದ್ದರು.

ಮೈಸೂರು ರಾಜಪ್ರಮುಖರು.

ತತ್ವಜ್ಞಾನದ ಹುಟ್ಟು

ಅಖಿಲ ಭಾರತ ಮಾಧ್ವ ತತ್ವಜ್ಞಾನ ಸಮ್ಮೇಳನವನ್ನು ಉಡುಪಿಯಲ್ಲಿ ಕರೆದ ಸ್ವಾಗತ ಸಮಿತಿಯ ಅಧ್ಯಕ್ಷರಾದ ಪರ್ಯಾಯ ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀ ಪಾದಂಗಳವರು ವೈಜಯಂತಿ ಮಂಟಪದಲ್ಲಿ ನೆರೆದ ನೂರಾರು ಪ್ರತಿನಿಧಿಗಳನ್ನೂ ಪ್ರೇಕ್ಷಕರನ್ನೂ ಸ್ವಾಗತಿಸಿ ಮಾತನಾಡಿದರು. ಅವಿಶ್ರಾಂತವಾದ ಆದಿಭೌತಿಕ ಹೋರಾಟದ ಒಳಲಿಕೆಯಿಂದ ಹೊಯ್ದಾಡುತ್ತಿರುವ ಆತ್ಮನಿಗೆ ಶ್ರೀ ಮಧ್ವಾಚಾರ್ಯರ ಸತ್ ಸಿದ್ಧಾಂತ ಮಹಾ ವೃಕ್ಷದ ಪ್ರಶಾಂತವಾದ ನೆರಳಿನಲ್ಲಿ ಒಂದು ತರದ ಸಾತ್ವಿಕ ಸುಖವನ್ನು ನೀಡಲು ಸಹೃದಯತೆಯಿಂದ ನಾವಿಲ್ಲಿ ನೆರೆದಿದ್ದೇವೆ ಎಂದವರು ನುಡಿದರು. ಮಾಧ್ವ ತತ್ವಜ್ಞಾನದ ಇತಿಹಾಸದ ಅನಂತ ಆಕಾಶದಲ್ಲಿ ಈ ಮಹಾ ಸಮ್ಮೇಳನವು ಧ್ರುವ ತಾರೆಯಾಗಿ ಚಿರಕಾಲ ಶುಭ್ರವಾದ ಪ್ರಕಾಶವನ್ನು ವಿಶ್ವಕ್ಕೆ ನೀಡುವುದೆಂದು ಶ್ರೀಗಳವರು ಆಶಿಸಿದರು. ಹಿಂದೆ ಶ್ರೀ ವೇದವ್ಯಾಸರು ಅಪಾರ ವೇದ ರಾಶಿಯನ್ನು ಕಡೆದು ಒಂದು ಅಪೂರ್ವವಾದ ನವನೀತವನ್ನು ಸಿದ್ಧಗೊಳಿಸಿದರು: ಅದೇ ವೇದಾಂತ ಸಾರ ಸರ್ವಸ್ವವಾದ ಬ್ರಹ್ಮಸೂತ್ರ ಗ್ರಂಥ. ಶ್ರೀ ಮಧ್ವಾಚಾರ್ಯರು ಈ ಶುಭ್ರ ನವನೀತವನ್ನು ತನ್ನ ಆತ್ಮಜ್ಞಾನದ ಕಾವೇರಿದ ಹೃದಯದ ಕಾವಲಿಯಲ್ಲಿ ಕರಗಿಸಿ ಆತ್ಮ ಬಲಪೋಷಿತವಾದ ತತ್ವಜ್ಞಾನದ ತುಪ್ಪವನ್ನು ಸಮಾಜಕ್ಕೆ ಉಣಬಡಿಸಿದರು. ಈ ತತ್ವಜ್ಞಾನವೇ ನಮ್ಮೆಲ್ಲರ ಆಧ್ಯಾತ್ಮಿಕ ಜೀವನದ ಸಂಜೀವಿನಿಯಾಗಿದೆ. ಈ ತತ್ವಜ್ಞಾನವೇ ಮಾನವ ವರ್ಗಕ್ಕೆ ನಿಜವಾದ ಅಪೇಕ್ಷಿತವಾದ ಆನಂದವನ್ನಿತ್ತು ಆತ್ಮಶಾಂತಿಯನ್ನು ನೀಡಬಲ್ಲುದೆಂದೂ ಇದರ ನೆರವಿಲ್ಲದೆಯೇ ಮಾನವರು ವೈಷಯಿಕ ಸುಖವನ್ನು ಪಡೆಯಬಲ್ಲರಾದರೂ ಅದರ ನೆಲೆಯು ನಶ್ವರವಾದ ಆದಿಭೌತಿಕ ವಸ್ತುವಾಗಿರುವುದರಿಂದ ಈ ಸುಖವು ಶಾಶ್ವತವಾಗಲಾರದೆಂದೂ ಆತ್ಮನ ನಿಜರೂಪದ ಆನಂದವೇ ಶಾಶ್ವತವಾಗಿ ಜೀವನದ ನಿತ್ಯ ಸಂತುಷ್ಟಿಗೆ ಕಾರಣವಾದೀತೆಂದೂ ಶ್ರೀಗಳವರು ಅಭಿಪ್ರಾಯಪಟ್ಟರು. ವೈಷಯಿಕ ಸುಖಗಳೆಲ್ಲ ಎಣ್ಣೆಯ ದೀಪಗಳಂತಿದ್ದರೆ, ಆತ್ಮನ ನಿಜವಾದ ಆನಂದವೇ ಅಮೂಲ್ಯವಾದ ದೇದೀಪ್ಯಮಾನವಾದ ರತ್ನದೀಪವೆಂದೂ ಈ ದಿವ್ಯದೀಪದ ಸಾಕ್ಷಾತ್ಕಾರವನ್ನು ನೀಡುವುದಕ್ಕಾಗಿಯೇ ಶ್ರೀ ಮಧ್ವಾಚಾರ್ಯರ ತತ್ವಜ್ಞಾನದ ಉದಯವಾಗಿದೆ ಎಂದೂ ಶ್ರೀಗಳು ನುಡಿದರು.

ಪೂರಕ ವಿಚಾರಗಳು

ಶ್ರೀ ಮಧ್ವಾಚಾರ್ಯರು ತಮ್ಮ ತತ್ವಜ್ಞಾನದಲ್ಲಿ ಜಗತ್ತು ಆತ್ಮಗಳೆರಡೂ ಸತ್ಯವೆಂದು ಪ್ರತಿಪಾದಿಸಿರುವರು. ಆಧ್ಯಾತ್ಮಿಕ ಮತ್ತು ಆದಿ ಭೌತಿಕ ವಿಚಾರಗಳು ಪರಸ್ಪರ ಪೋಷಕಗಳಾಗಿ ಆತ್ಮವಿಕಾಸಕ್ಕೆ ಸಹಾಯಕಗಳಾಗಿವೆ ಎಂದು ತೋರಿಸಿರುವರು. ಜೀವವರ್ಗದ ಆಧ್ಯಾತ್ಮಿಕ ಸಿದ್ಧಿಗೆ ಪ್ರಪಂಚ ಸಾಧನ ಕ್ಷೇತ್ರ. ಅಲ್ಲಿ ನೆಟ್ಟ ಬೀಜವೇ ಬೆಳೆದು ಆಧ್ಯಾತ್ಮದ ಅಮೃತಫಲವನ್ನೀಯುವುದು ಸಾಧನವು ಅಶುದ್ಧ ಅಥವಾ ಮಾಯಿಕವಾದಲ್ಲಿ ಆತ್ಮಾನಂದ ರೂಪವಾದ ಸಾಧ್ಯದ ಬಗ್ಗೆ ಯಾವ ಪ್ರತ್ಯಾಶೆಯನ್ನೂ ಇಟ್ಟುಕೊಳ್ಳಲು ಸಾಧ್ಯವಾಗದು. ಆದುದರಿಂದ ಆಧ್ಯಾತ್ಮ ಸಿದ್ಧಿಗಾಗಿ ಹಾತೊರೆಯುವಾಗ–ಸಾಧನ ಭೂಮಿಯಾದ ಪ್ರಪಂಚದ ಅಸ್ತಿತ್ವವನ್ನು ಕಡೆಗಣಿಸಲಾಗದು. ಹೀಗೆ ಆಧ್ಯಾತ್ಮಿಕ ಬೆಳವಣಿಗೆಗೆ ಆದಿಭೌತಿಕ ವಿಚಾರವು ಪೋಷಕವಾಗಿದೆ. ಅದರಂತೆ ಲೌಕಿಕ ಜೀವನದ ಸುವ್ಯವಸ್ಥೆಯು ಆಧ್ಯಾತ್ಮ ವೃತ್ತಿಯ ಸಂಪರ್ಕದಿಂದಲೇ ನೆರವೇರಬೇಕಾಗಿದೆ ಪ್ರಪಂಚದಲ್ಲಿ ನೈತಿಕವಾಗಿ ಬಾಳುವೆಯನ್ನು ಸಾಗಿಸುವ ಹಂಬಲವೂ ಕಾರ್ಯಕ್ಷೇತ್ರದಲ್ಲಿ ಅವಿರತವಾಗಿ ದುಡಿಯುವ ಉತ್ಸಾಹವೂ ಆಧ್ಯಾತ್ಮದ ಭೂಮಿಯಲ್ಲೇ ನಿರ್ಮಾಣವಾಗಬಹುದು. ಆಧ್ಯಾತ್ಮದೃಷ್ಟಿಯೇ ಮಾನವನ ಸದ್ ವಿಚಾರ ಮತ್ತು ಸತ್ ಪ್ರವೃತ್ತಿಗಳ ಉಗಮ ಭೂಮಿ. ಜಗತ್ತು ಮತ್ತು ಆತ್ಮ ಇವೆರಡನ್ನಾಗಲೀ ಒಂದನ್ನಾಗಲೀ ಅಸ್ಥಿತ್ಯವೆಂದು ಭಾವಿಸುವುದು, ಸಮಾಜದ ವಿಕಾಸಕ್ಕೆ ಪ್ರತಿಕೂಲವಾಗಿರುವುದರಿಂದ ಅಂಥ ವಿಚಾರಗಳು ಅಪರಿಪೂರ್ಣವೆಂದೂ ಶ್ರೀ ಮಧ್ವಾಚಾರ್ಯರ ತತ್ವಜ್ಞಾನವು ಕಾರ್ಯಕ್ಷೇತ್ರವಾದ ಪ್ರಪಂಚ ಮತ್ತು ಆತ್ಮನ ವಿಶ್ರಾಂತ ಭೂಮಿಯಾದ ಬ್ರಹ್ಮ ಇವೆರಡೂ ತತ್ವಗಳು ಸತ್ಯವೆಂದು ಸಾರಿ ಪ್ರಪಂಚದ ಜೀವನ ದೃಷ್ಟಿ ಮತ್ತು ಪದ್ಧತಿಗಳನ್ನು ಉದಾತ್ತಗೊಳಿಸಿದೆಯೆಂದೂ ಶ್ರೀಗಳು ವಿವರಿಸಿದರು.

ಸಿದ್ಧಾಂತದ ಮಾರ್ಗ

ಈ ದಿಸೆಯಲ್ಲಿ ಜನರ ಕರ್ತವ್ಯವೇನೆಂಬುದನ್ನು ವಿವರಿಸುತ್ತಾ ಶ್ರೀಗಳು ತಾನು ಪರಾತ್ಪರಶಕ್ತಿಯ ಆಡಿಯಾಳು ಎಂಬ ಭಾವನೆಯನ್ನು ಸಂತತವಾಗಿ ಬೆಸಿಸಿಕೊಂಡು ಇಮ್ಮಡಿ ಉತ್ಸಾಹದಿಂದ ಕರ್ತವ್ಯನಿಷ್ಠೆಯಿಂದ ಕಾರ್ಯಕ್ಷೇತ್ರದಲ್ಲಿ ದುಮುಕ ಪುದು ಪುರೋಗಾಮಿಗಳಿಗೆ ಹಿರಿದೆ ಎಂದರು. ಇಂಥ ಅಮೃತಮಯ ಸಂದೇಶದ ಅಧ್ಯಯನದಿಂದಲೇ ಇಂದು ಜನಾಂಗವು ಚೇತರಿಸಿಕೊಳ್ಳಬೇಕಾಗಿದೆ. ಈ ತತ್ವಜ್ಞಾನದ ವಿಸ್ತರಣದಿಂದಲೇ ಇಡೀ ವಿಶ್ವದಲ್ಲಿ ಶುಭ ಪ್ರೇರಣೆ ಮತ್ತು ಕ್ರಿಯಾವೃತ್ತಿಗಳ ನಿರ್ಮಾಣವಾಗಲಿವೆ. ಸಮಗ್ರ ಭಾರತದಲ್ಲಿ ವಿಶೇಷವಾಗಿ ಈ ತತ್ವಜ್ಞಾನವು ತೆರೆದು ಕೊಡುವಂತೆ ವಿಧಾಯಕವಾದ ಮಾರ್ಗವನ್ನು ನಾವು ಅನುಸರಿಸಬೇಕಾಗಿದೆ. ಮಾಧ್ವತತ್ವಜ್ಞಾನವು ಕೇವಲ ಬ್ರಾಹ್ಮಣ ಜನಾಂಗಕ್ಕೆ ಸೀಮಿತವಾಗಿದೆಯೆಂದು ಕೆಲವರು ಭಾವಿಸಿರಬಹುದು. ಮಧ್ವ ಜನಾಂಗವು ಬ್ರಾಹ್ಮಣವರ್ಗದ ಒಂದು ಒಳಪಂಗಡವೆಂದು ತಿಳಿದವರೂ ಇದ್ದಾರೆ. ಮಾಧ್ವ ಜನಾಂಗದಲ್ಲಿ ಅನೇಕ ಪಂಗಡಗಳಿರಬಹುದಾದರೂ ಮಾಧ್ವಜನಾಂಗವೆಂಬ ಬೇರೊಂದು ಪಂಗಡವಿಲ್ಲ. ಭಗವದ್ಭಕ್ತಿಸ ದೀಕ್ಷೆ ಮತ್ತು ಸಿದ್ಧಾಂತ ತತ್ವಗಳ ಜ್ಞಾನ ಎಲ್ಲ ವರ್ಣದವರಿಗೂ ಅಧಿಕಾರಪ್ರಾಪ್ತವಾಗಿದೆಯೆಂದೇ ಶ್ರೀಮಧ್ವಾಚಾರ್ಯರ ಅಭಿಪ್ರಾಯ. ಇಂದಿನ ಆಧುನಿಕ ಯುಗದಲ್ಲಿ ಬೇರೆ ವರ್ಣದವರೂ ಇಂಥ ತತ್ವಜ್ಞಾನದಿಂದ ಮತ್ತು ಆಚಾರವಿಚಾರಗಳಿಂದ ವಿಶೇಷವಾಗಿ ವಂಚಿತರು. ಶಾಸ್ತ್ರ ಸಮ್ಮತವಾದ ಅಧಿಕಾರದ ಸದುಪಯೋಗವನ್ನು ಪಡೆದು ಎಲ್ಲವರ್ಣದವರೂ ಆಧ್ಯಾತ್ಮಿಕ ಪ್ರಗತಿಯನ್ನು ಪಡೆಯಲು ಈ ಸಮ್ಮೇಳನವು ಮಾರ್ಗದರ್ಶಕವಾಗುವುದೆಂದು ಶ್ರೀಗಳು ಭಾವಿಸಿದರು.

ವಿದ್ಯಾ ದೃಷ್ಟಿಯೇ ಮುಖ್ಯ

ಸಮ್ಮೇಳನವನ್ನು ಉದ್ಘಾಟಿಸಿದ ಮೈಸೂರಿನ ರಾಜ ಪ್ರಮುಖರಾದ ಶ್ರೀ ಜಯ ಚಾಮರಾಜೇಂದ್ರ ಒಡೆಯರ್ ಬಹದೂರ್, ಮಹಾ ಸ್ವಾಮಿಯವರು ವಿಭಿನ್ನ ವೇದಾಶ್ರಿತ ಸಂಪ್ರದಾಯಗಳೇ ಈ ಹೊತ್ತು ನಮ್ಮ ಸಾಂಸ್ಕೃತಿಕ ಜೀವನಕ್ಕೆ ಮೂಲಭೂತವಾಗಿರುವುವೆಂದೂ ಸಂಪ್ರದಾಯ ಕ್ರಮದಲ್ಲಿ ವಿವಿಧ ಅಧಿಕಾರಿಗಳು ಸಂಪ್ರದಾಯವನ್ನು ಉಪಯೋಗಿಸುವ ರೀತಿಯಲ್ಲಿ ಏನೇ ಭೇದವಿರಲಿ– ನಮಗೆ ವಿದ್ಯಾ ದೃಷ್ಟಿಯೇ ಮುಖ್ಯವೆಂದೂ ಅಭಿಪ್ರಾಯ ಪ್ರಕಟಗೊಳಿಸಿದರು. "ಆಯಾ ವೇದಾಂತಕ್ಕೆ ಪ್ರವರ್ತಕರಾದ ಆಚಾರ್ಯರು ವಿದ್ಯಾದೃಷ್ಟಿಯುಳ್ಳವರು. ಈ ದೃಷ್ಟಿಯೊಂದೇ ಅವರ ಉಪದೇಶವನ್ನು ಅಧ್ಯಯನ ಮಾಡಬೇಕಾದ ಆವಶ್ಯಕತೆಯನ್ನುಂಟುಮಾಡಿರುವುದು" ಎಂದರು.

ಶಾಸ್ತ್ರ ವಿಚಾರದಲ್ಲಿ ದೃಷ್ಟಿ ಮುಖ್ಯ; ಮಾತಲ್ಲ. ಮಾತೂ ಬೇಕು; ಮಾತಿನಲ್ಲಿ

(೧೬ನೇ, ಪುಟ ನೋಡಿರಿ)

PLACE YOUR LIFE ASSURANCE WITH A COMPANY OF YOUR OWN - - - -

Established in 1929, the POPULAR is progressing on sound lines It has built up for itself a record of efficient service, sound investment and a personal touch with its Policyholders and Representatives At whatever stage we welcome your association with the POPULAR.

The Popular Insurance Co. Ltd.
"Popular Buildings", MANGALORE—1.

ZANDU KESARI JIVAN

ಝಂಡೂ ಕೇಸರಿ ಜೀವನ

ಕೆಮ್ಮು, ನೆಗಡಿ ರಾಜಯಕ್ಷ್ಮ, ಮಿದುಳು ನಿತ್ರಾಣ, ಅಕಾಲಿಕ ವೃದ್ಧಾಪ್ಯ, ಸರ್ವಸಾಮಾನ್ಯ ಬಲಹೀನತೆಗಳಿಗೆಲ್ಲಾ **ಕೇಸರಿ ಜೀವನವು** ಗುಣದಾಯಿಯಾದದ್ದು ಅಲ್ಲದೆ ದೇಹಾರೋಗ್ಯವನ್ನು ಸಮತೂಕದಲ್ಲಿರಿಸಲು ಆದರ್ಶ ಟಾನಿಕ್ ಆಹಾರವಾಗಿದೆ 1 ರಾತ್ಲ: ರೂ. 6-8-0 ¼ ರಾತ್ಲ: ರೂ 1-14-0

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್, ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್, ಉಡುಪಿ

2 ಶ್ರೀ ವಿ ವಿ ಶೆಣೈ, ಕೆಮಿಸ್ಟ್ ಕಾರ್ಕಳ

3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು

4 ಎಲ್ ಎನ್ ಶರ್ಮ, ಹಜೂರು ರಸ್ತೆ ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ.

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರ ಷರತ್ತುಗಳಿಗಾಗಿ ಬರೆಯಿರಿ.

DAMODAR & CO.,
Nainiappa Naicken Street, Park Town-MADRAS 3.

ರಜತಪೀಠದ ಗತ ಪುರಾಣ

ವಾದಿರಾಜ ಯತಿಗಳ ಆದರ್ಶ ಇಂದು ಉಳಿದಿದೆಯೆ?



ಪಶ್ಚಿಮ ಘಟ್ಟದ ತಪ್ಪಲಲ್ಲಿರುವ ನಮ್ಮ ಜಿಲ್ಲೆಯ ಭಾಗ ಪರಶುರಾಮ ಕ್ಷೇತ್ರಕ್ಕೆ ಸೇರಿದ ಪುಣ್ಯಭೂಮಿಯೆಂದು ಸುಪ್ರಸಿದ್ಧಗೊಂಡಿದೆ. ಇದು ಅನೇಕ ಪುಣ್ಯಕ್ಷೇತ್ರಗಳಿಗೂ ನೆಲೆಯಾಗಿದೆ. "ರಜತ ಪೀಠ: ಕುಮಾರಾದ್ರಿ: ಕುಂಭಕಾಶೀ: ಧ್ವಜೇಶ್ವರ:|| ಕ್ರೋಡ ಗೋಕರ್ಣ ಮೂಕಾಂಬಾ: ಸಪ್ತೈತೇ ಮೋಕ್ಷದಾಯಕಾ:||" ಎಂಬ ಪುರಾಣ ಶ್ಲೋಕದ ಆಧಾರದ ಮೇಲಿಂದ ಉಡುಪಿಯೆಂದು ನಾವೀಗ ಕರೆಯುವ ರಜತ ಪೀಠವು ಪ್ರಾಚೀನ ಕಾಲದಿಂದಲೂ ಕ್ಷೇತ್ರರಾಜವಾಗಿ ಮೆರೆಯುತಿತ್ತೆಂದು ವ್ಯಕ್ತವಾಗುತ್ತದೆ. ಶ್ರೀ ಮನ್ಮಧ್ವಾಚಾರ್ಯರು ಉಡುಪಿಯಲ್ಲಿ ಶ್ರೀ ಕೃಷ್ಣನ ದಿವ್ಯ ಪ್ರತಿಮೆಯನ್ನು ಪ್ರತಿಷ್ಠಾಪಿಸಿದ ನಂತರ ಉಡುಪಿಯ ಕೀರ್ತಿ ದಿಗಂತ ವ್ಯಾಪಿಯಾಗಿ ವಿಸ್ತರಿಸಿದರೂ ಅದಕ್ಕೂ ಮೊದಲೇ ಶ್ರೀ ಮದನಂತೇಶ್ವರ ದೇವಾಲಯದ ಮಹಿಮೆ ಜನಾದರಣೀಯವಾಗಿ

ಅನಂತೇಶ್ವರ ದೇವಾಲಯ

ತ್ತೆಂದು ತಿಳಿಯುತ್ತದೆ. ದ್ವಾಪರ ಯುಗಾಂತ್ಯದಲ್ಲಿಯೇ ಈ ದೇವಾಲಯ ನಿರ್ಮಾಣಗೊಂಡಿರಬೇಕೆಂದು ಪೌರಾಣಿಕ ಆಧಾರಗಳಿವೆ. ಸ್ಕಾಂದ ಪುರಾಣದಲ್ಲಿ ಉಲ್ಲೇಖಿಸಿದಂತೆ ಅನಂತೇಶ್ವರ ದೇವಾಲಯಕ್ಕೆ ಇನ್ನೂ ಪುರಾತನತ್ವವು ಪ್ರಾಪ್ತವಾಗುತ್ತದೆ. ಒಂದು ರೀತಿಯಲ್ಲಿ ಹೇಳುವುದಾದರೆ ಅನಂತೇಶ್ವರ ದೇವಾಲಯದಿಂದಲೇ ಉಡುಪಿಗೊಂದು ಕೀರ್ತಿ. ಅದಕ್ಕೇನೇ ಮೊದಲ ಮನ್ನಣೆ. ಬಾರಕೂರಿನ ರಾಜಮನೆತನದವರ ಮುಖ್ಯ ದೇವಸ್ಥಾನವಾಗಿ ಮೆರೆದ ಈ ದೇವಾಲಯದಿಂದಲೇ ಉಡುಪಿಗೆ ಗೌರವ.

ಶ್ರೀ ಮಧ್ವಾಚಾರ್ಯರು

ಆದರೆ ಹದಿಮೂರನೆಯ ಶತಮಾನದಲ್ಲಿ ಉಡುಪಿಗೆ ಸಮೀಪದ ಪಾಜಕಕ್ಷೇತ್ರದಲ್ಲಿ ಹುಟ್ಟಿ ಸನ್ಯಾಸಾಶ್ರಮವನ್ನು ಸ್ವೀಕರಿಸಿದ ಪ್ರಾಜ್ಞರಾದ ಶ್ರೀ ಮನ್ಮಧ್ವಾಚಾರ್ಯರ ದೆಸೆಯಿಂದ ಈ ಕ್ಷೇತ್ರದ ಇತಿಹಾಸವೇ ಬದಲಾಯಿತು. ಆಚಾರ್ಯರು ದ್ವೈತ ಮತವನ್ನು ಪ್ರತಿಪಾದಿಸಿ-ಅನೇಕ ಬಾರಿ ಆಸೇತು ಹಿಮಾಚಲದಪರ್ಯಂತರ ಸಂಚರಿಸಿದರು. ಇವರು ಸರ್ವಪ್ರಥಮವಾಗಿ ಅನಂತೇಶ್ವರ ದೇವಾಲಯದಲ್ಲಿ ಆವಾಸಮಾಡಿಕೊಂಡಿದ್ದ ಅಚ್ಯುತ ಪ್ರೇಕ್ಷಾಚಾರ್ಯರೆಂಬ ಭಾಗವತ ಸಂಪ್ರದಾಯೀ ಸಾಧುಗಳ ಶಿಷ್ಯತ್ವವನ್ನು ವಹಿಸಿದರು. ಆದರೆ ಅದ್ವೈತಪರವಾಗಿ ಅರ್ಥಹೇಳುತಿದ್ದ ತಮ್ಮ ಗುರುವಿನ ಮಾತಿನಲ್ಲಿ ಮಧ್ವಾಚಾರ್ಯರಿಗೆ ತೃಪ್ತಿಯುಂಟಾಗದೆ, ತಾವೇ ವಿಚಾರಿಸಿ ತಿಳಿದು, ದ್ವೈತವಾದವನ್ನು ಮುಂದಕ್ಕೆ ತಂದರು. ಉಡುಪಿಯೆನ್ನುವ ರಜತಪೀಠವೇ ಶ್ರೀ ಮಧ್ವಾಚಾರ್ಯರ ದ್ವೈತ ತತ್ವಜ್ಞಾನದ ಮೂಲ ಪೀಠವಾಗಿದೆ. ಉಡುಪಿಯಲ್ಲಿಯೇ ಶ್ರೀ ಮಧ್ವಾಚಾರ್ಯರು ದೇವಸ್ಥಾನ ಸ್ಥಾಪನೆಮಾಡಿದರು; ಮತ್ತು ಶಿಷ್ಯ ಪರಂಪರೆಯನ್ನು ತೊಡಗಿದರಲ್ಲದೆ ಬೇರೆಲ್ಲಿಯೂ ಅಂಥ ಕೆಲಸ ಮಾಡಿದದುಕ್ಕೆ ದಾಖಲೆ ತೋರುವುದಿಲ್ಲ. ಅವರು ಸ್ಥಾಪಿಸಿದ ಶ್ರೀ ಕೃಷ್ಣ ದೇವಸ್ಥಾನಕ್ಕೆ ಕೂಡ ಅನಂತೇಶ್ವರ ದೇವಾಲಯದ ಪಾಳಿಯೇ ಆಶ್ರಯ ಸ್ಥಾನವಾಗಿದೆ. ಶ್ರೀ ಕೃಷ್ಣ ದೇವಸ್ಥಾನ ಈಗ ನಿಂತಿರುವ ಜಾಗವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಈ ಸಂಗತಿ ಸ್ಪಷ್ಟವಾಗುವುದು. ಅನಂತೇಶ್ವರ ದೇವಾಲಯವೇ ಈಗಲೂ ಮುಖ್ಯ ದೇವಾಲಯವಾಗಿ ಉಳಿದಿದೆ. ಶ್ರೀ ಕೃಷ್ಣ ದೇವಸ್ಥಾನವು ಇಕ್ಕಟ್ಟಾದ ಜಾಗದಲ್ಲಿ ರಸ್ತೆಯಿಂದ ಸರಿದು ಒಂದು ಮೂಲೆಯಲ್ಲಿದೆ. ಈ ಸನ್ನಿವೇಶದ ಮೇಲಿಂದಲೇ ಶ್ರೀ ಕೃಷ್ಣ ದೇವಸ್ಥಾನದ ಉತ್ಪತ್ತಿಯು ಬಹಳ ಚಿಕ್ಕ ರೂಪದಲ್ಲಿತ್ತೆಂದೂ ವಿಶೇಷ ವೈಭವದಿಂದೇನೂ ಕೂಡಿದ್ದಿಲ್ಲವೆಂದೂ ಹೇಳಬಹುದು. ಕಾಲಾನುಕಾಲದಲ್ಲಿ ಮಾಧ್ವರ ಪ್ರಾಬಲ್ಯ ಹೆಚ್ಚಿದಂತೆ ಶ್ರೀ ಕೃಷ್ಣ ದೇವಸ್ಥಾನದ ಮಹತ್ವ ಕೂಡ ಹೆಚ್ಚಿತು.

ಶ್ರೀ ಕೃಷ್ಣ ದೇವಸ್ಥಾನ

ಶ್ರೀ ಕೃಷ್ಣ ದೇವಸ್ಥಾನವನ್ನು ಸ್ಥಾಪಿಸಿದ ಬಳಿಕ ಎಂಟು ಜನ ಶಿಷ್ಯರಿಗೆ ಶ್ರೀ ಮಧ್ವಾಚಾರ್ಯರು ಬಾಲ ಸನ್ಯಾಸ ದೀಕ್ಷೆಯನ್ನು ಕೊಟ್ಟು ಶ್ರೀ ಕೃಷ್ಣನ ಪೂಜೆಯನ್ನು ನೆರವೇರಿಸುವ ಅರ್ಚಕರನ್ನಾಗಿ ಮಾಡಿದ್ದರು. ಜೊತೆಗೆ ಮತ ಪ್ರಚಾರದ ಹೊಣೆಯನ್ನೂ ಹೇರಿದರು. ಶಿಷ್ಯರು ಈ ದೇವಸ್ಥಾನದಲ್ಲಿಯೇ ನೆಲೆಸಿ, ಒಬ್ಬೊಬ್ಬರು ಒಂದೊಂದು ಪೂಜೆಯನ್ನು ಮಾಡುತ್ತಿದ್ದರು. ದೇವಸ್ಥಾನದ ಪೂಜೆಯು ಸಾಂಗವಾಗಿ ನಡೆಯುವಂತೆ ಮತ್ತು ಸಮಗ್ರ ಭಾರತದಲ್ಲಿ ದ್ವೈತ ಮತದ ಪ್ರಚಾರವಾಗುವಂತೆ ನೋಡಿಕೊಳ್ಳಲು ಒಬ್ಬ ಶಿಷ್ಯನನ್ನು ಮಧ್ವಾಚಾರ್ಯರು ನೇಮಿಸಿ, ಅವನು ದೇಶ ಸಂಚಾರ ಮಾಡಿ, ಧನ ಸಂಚಯಿಸಬೇಕೆಂದು ವಿಧಿಸಿದರು. ಆದರೆ ಕಾಲಕ್ರಮಿಸಿದಂತೆ ಈ ಸಂಚಾರೀ ಶಿಷ್ಯಂದಿರಲ್ಲಿ ಸ್ವಾರ್ಥ ಮತ್ತು ಕೌಟಿಲ್ಯಗಳು ಹೆಚ್ಚಿಕೊಂಡು, ದೇವಸ್ಥಾನದ ಪೂಜಾವಿನಿಯೋಗಕ್ಕೆ ನೀಡುವ ನೆರವು ದುರ್ಬಲ ಹೊಂದಿತು. ಎಂಟು ಜನ ಶಿಷ್ಯಂದಿರು ಕೂಡ ತಮಗೆ ವಹಿಸಿಕೊಟ್ಟ ಕಾರ್ಯವನ್ನು ಮರೆತು ಒಬ್ಬಿಬ್ಬರು ಮಾತ್ರ ಪೂಜಾಕಾರ್ಯವನ್ನು ಮಾಡಿಕೊಂಡು ಉಳಿದವರು ಹಳ್ಳಿಪಳ್ಳಿಗಳಲ್ಲಿ ತಿರುಗುತ್ತಾ ಮಠಗಳನ್ನು ತೆರೆಯುವ ಹವ್ಯಾಸಕ್ಕೆ ಇಳಿದರು. ಸರ್ವಪ್ರಥಮವಾಗಿ ಮಠವನ್ನು ಸ್ಥಾಪಿಸಿದ ಹಳ್ಳಿಯ ಹೆಸರೇ ಆಯಾ ಮಠಕ್ಕೂ ಬಂತು. ಇವುಗಳಲ್ಲಿ ಶ್ರೀ ವಾದಿರಾಜರು ಸ್ಥಾಪಿಸಿದ ಸೋದೆ ಮಠವು ತುಂಬ ಹೆಸರಾಗಿದೆ. ಶ್ರೀ ವಾದಿರಾಜರು ವಿದ್ವನ್ಮಣಿಗಳಾಗಿದ್ದರೂ ಪ್ರಚಂಡ ಮೇಧಾವಿಗಳೂ, ವಾದಕುಶಲರೂ, ಉದಾರ ಹೃದಯರೂ, ತೇಜಸ್ವಿಗಳೂ, ತಪಸ್ವಿಗಳೂ ಆಗಿದ್ದುದರಿಂದ ಇವರು ಆಗಿನ ಕಾಲದ ರಾಜಕೀಯ ಧುರಂಧರರಿಂದಲೂ ಮನ್ನಣೆಯನ್ನು ಪಡೆದರು.

ವಾದಿರಾಜರ ಸಾಹಸ

ಶ್ರೀ ವಾದಿರಾಜ ಯತಿಗಳ ಬುದ್ಧಿವಂತಿಕೆಯಿಂದಲೇ ಇಂದು ನಾವು ಕಾಣುವ ಎಂಟು ಮಠಗಳು ಉಚ್ಛ್ರಾಯ ಸ್ಥಿತಿಯನ್ನು ಹೊಂದುವಂತಾಯಿತು: ಅಲ್ಲದೆ ಶ್ರೀ ಕೃಷ್ಣ ದೇವಸ್ಥಾನದ ಮಹಿಮೆಯು ಹೆಚ್ಚಿಕೊಂಡಿತು. ಪರ್ಯಾಯವೆಂಬ ವಿಖ್ಯಾತ ಉತ್ಸವಕ್ಕೂ ವಾದಿರಾಜರು ಮಾಡಿದ ಏರ್ಪಾಡೇ ಮೂಲ. ಸ. ನಾರು ಶತಮಾನಗಳಿಗೆ ಹಿಂದೆ ಉಡುಪಿಯಲ್ಲಿ ಶಿವ ಬ್ರಾಹ್ಮಣರ ಪ್ರಾಬಲ್ಯವೇ ಕಂಡುಬರುತಿತ್ತು. ಹೊಸತಾಗಿ ತಲೆ ಎತ್ತಿದ ಮಾಧ್ವರನ್ನು ಬಗ್ಗುಬಡೆಯುವುದಕ್ಕೆ ಈ ಶಿವ ಬ್ರಾಹ್ಮಣರು ನೋಡುತಿದ್ದರು. ಪರಸ್ಪರ ವೈಮನಸ್ಸು ಮತ್ತು ಮನಸ್ತಾಪಗಳು ಬೆಳೆದುವು. ಇದು ಎಷ್ಟರ ಮಟ್ಟಿಗೆ ಹೆಚ್ಚಿತೆಂದರೆ, ಮಾಧ್ವ ಮತಾನುಯಾಯಿಗಳಿಗೆ ಉಡುಪಿಯಲ್ಲಿ ಉಳಿಗಾಲವಿಲ್ಲವೆಂಬಂತೆ ತೋರಿತು. ಶ್ರೀ ಕೃಷ್ಣ ಪೂಜೆಯ ಹೊಣೆಯನ್ನು ಹೊತ್ತಿದ್ದ ಸ್ವಾಮಿಗಳಿಗೆ ತಮ್ಮ ಕರ್ತವ್ಯ ನಿರ್ವಹಿಸುವುದು ಕಷ್ಟಸಾಧ್ಯವೆಂದೇ ತೋರಿದ ಸಂಕಟದ ಸಮಯ ಅದು: ಶ್ರೀ ವಾದಿರಾಜರು ಇದನ್ನೆಲ್ಲ ಸರಿಪಡಿಸಿ ಒಂದು ವ್ಯವಸ್ಥೆಗೆ ತಂದರು. ರಾಜಕೀಯಾಧಿಕಾರಿಗಳನ್ನು ಒಲಿಸಿ, ವಾದಿರಾಜರು, ಶಿವ ಬ್ರಾಹ್ಮಣರ ದರ್ಪ ದಮನ ಮಾಡಿದರು. ಅವರ ಅಧಿಕಾರದಲ್ಲಿದ್ದ ಶ್ರೀ ಮದನಂತೇಶ್ವರ ದೇವಾಲಯವನ್ನು ತಮ್ಮ ವಶಕ್ಕೆ ತಂದುಕೊಂಡರು. ದೇವಾಲಯದ ಕೋಟೆಯನ್ನು ಒಡೆದು, ಅದರಲ್ಲಿ ಎಂಟು ಮಠಗಳನ್ನು ಪ್ರಸ್ಥಾಪಿಸಿದರು. ಹೀಗೆ ಅನಂತೇಶ್ವರ ದೇವಾಲಯಕ್ಕೆ ದಿಗ್ಬಂಧನವನ್ನು ಹೇರಿದರು.

ಸಂಸ್ಕೃತದಲ್ಲಿ ಶ್ರೀ ವಾದಿರಾಜರು ಮಹಾ ಪಂಡಿತರು. ಅನೇಕ ಗ್ರಂಥಗಳನ್ನವರು ರಚಿಸಿ ಕೀರ್ತಿ ಸಂಪಾದಿಸಿದರು. ಕನ್ನಡದಲ್ಲಿಯೂ ಇವರ ಅನೇಕ ಕೃತಿಗಳಿವೆ. ವಾದಿರಾಜರು ಕುಸುಮ ಕೋಮಲವಾದ ಅಂತಃಕರಣದಿಂದ ಕೂಡಿದ್ದರು. ರಾಜಕೀಯ ಹಾಗೂ ಆರ್ಥಿಕ ಕಾರಣಗಳಿಂದ ಹೀನ ವೃತ್ತಿಯನ್ನು ಕೈಗೊಂಡಿದ್ದ ಸಮಾಜವೊಂದನ್ನು ಉದ್ಧರಿಸಿದ ಕೀರ್ತಿಯು ವಾದಿರಾಜರಿಗೆ ಸಲ್ಲುತ್ತದೆ. ವಾದಿರಾಜರ ಇಂಥ ಉದಾರ ಕಾರ್ಯಗಳನ್ನು ಸಹಾನುಭೂತಿಯಿಂದ ನೋಡುವ ಮನಸ್ಸು ಮಾತ್ರ ಸನಾತನಿಗಳಿಗೆ ಇದ್ದಂ

(೧೦ನೇ ಪುಟ ನೋಡಿರಿ)

ನೀವು ಒಂದು ಸೇವಿಂಗ್ಸ್ ಬೇಂಕ್ ಖಾತೆಯನ್ನೇಕೆ ತೆರೆಯಬೇಕು?

ನೀವು ಒಂದು ಸೇವಿಂಗ್ಸ್ ಬೇಂಕ್ ಖಾತೆಯನ್ನು ತೆರೆಯುವಾಗ ನೀವು ಒಂದು ಪ್ರಾಮುಖ್ಯ ಹೆಜ್ಜೆಯನ್ನೂ ಮುಂದಿಡುತ್ತೀರಿ. ಈ ಹೆಜ್ಜೆಯು ನಿಮ್ಮ ಹಣದ ಭದ್ರತೆ, ಜಯ ಹಾಗೂ ಭಾವೀ ಸುಖಕ್ಕೆ ನೆರವಾಗುವುದು. ಜೀವಮಾನ ಕಾಲದಲ್ಲಿ ಅನೇಕ ಸಂದರ್ಭಗಳು ಇವೆಯಾದರೂ, ನಿಮ್ಮದೇ ಅದ ಕಿಂಚಿತ್ ಹಣವಿಲ್ಲವಾದರೆ ಅವುಗಳು ಸಾರ್ಥಕವಾಗಲಾರವು. ಆದುದರಿಂದ ಒಂದು ಸೇವಿಂಗ್ಸ್ ಬೇಂಕ್ ಖಾತೆಯಲ್ಲಿಡುವ ಅಲ್ಪಸ್ವಲ್ಪ ಹಣವಾದರೂ ಬೇಗನೇ ಅದು ದೊಡ್ಡ ಪ್ರಮಾಣದಲ್ಲಿ ಶೇಖರಿಸಲ್ಪಟ್ಟು ನಿಮ್ಮ ಜೀವನದ ನಿಧಿಯಾಗಿ ಪರಿಣಮಿಸುವುದು.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925 ಹೆಡ್ ಆಫೀಸು: ಉಡುಪಿ

The Canara Industrial &
Banking Syndicate Limited.

Estd: 1925 H. O: UDIPI

ಕರ್ನಾಟಕ ಏಕೀಕರಣದ ಹಂಬಲ

ಆಂಧ್ರ ರಾಜ್ಯದ ಯಶಾಪಯಶವನ್ನು ಹೊಂದಿಕೊಂಡಿದೆ.

ಆಂಧ್ರಪ್ರಾಂತ ನಿರ್ಮಾಣದ ಕಾರ್ಯಕ್ಕಾಗಿ ತೆಗೆದುಕೊಳ್ಳತಕ್ಕ ಆವಶ್ಯಕ ಹೆಜ್ಜೆಗಳನ್ನು ಪರಿಶೀಲಿಸಿ ವರದಿ ಮಾಡಲು ನೇಮಕ ಹೊಂದಿದ ನ್ಯಾಯಮೂರ್ತಿ ವಾಂಛೂ ಈಗಾಗಲೇ ಮದ್ರಾಸಿಗೆ ಆಗಮಿಸಿರುವರು. ಅವರಿಗೆ ಆಡಳಿತ ವಿಭಜನೆಯ ಸಂಬಂಧದಲ್ಲಿ ನೆರವಾಗಲು ಸರಕಾರವು ಒಬ್ಬ ವಿಶೇಷಾಧಿಕಾರಿಯನ್ನೂ ನೇಮಿಸಿರುವುದು. ನ್ಯಾಯಮೂರ್ತಿಯವರು ಸಂಬಂಧಿಸಿದ ಎಲ್ಲ ಅಂಶವನ್ನೂ ಚೆನ್ನಾಗಿ ಪರಿಶೀಲಿಸುವರು. ಆನುಷಂಗಿಕವಾಗಿ ಅವರು ವಿವಿಧ ಧುರೀಣರನ್ನು ಬರಮಾಡಿಕೊಂಡು ಅವರೊಡನೆ ವಿಚಾರ ವಿನಿಮಯಗಳನ್ನು ಮಾಡುವರು. ತಮ್ಮ ಕೆಲಸದಲ್ಲಿ ಸಹಾಯ ನೀಡಬಲ್ಲುದೆಂದಿದ್ದರೆ ಅವರು ವಿವಿಧ ಪಕ್ಷಗಳು ಸಾದರಪಡಿಸುವ ಮನವಿಗಳನ್ನೂ ನೋಡುವರು. ಅಗತ್ಯಬಿದ್ದರೆ ಕೆಲವು ಪ್ರದೇಶಗಳಲ್ಲಿ ಸಂಚಾರವನ್ನು ಕೈಕೊಳ್ಳಲೂ ಬಹುದು. ಹೀಗೆ ಆದಷ್ಟು ತ್ವರ್ಯದಿಂದ ತಮ್ಮ ಕೆಲಸವನ್ನವರು ನೆರವೇರಿಸುವರು ಮತ್ತು ಇದೇ ಜನವರಿ ತಿಂಗಳಾಂತ್ಯದೊಳಗಾಗಿ ಕೇಂದ್ರ ಸರಕಾರಕ್ಕೆ ತಮ್ಮ ವರದಿಯನ್ನು ಒಪ್ಪಿಸುವರು. ನ್ಯಾಯಮೂರ್ತಿಯವರು ಭಾಷಾವಾರು ಪ್ರಾಂತರಚನೆಯ ತಾತ್ವಿಕ ಚರ್ಚೆಯನ್ನೇನೂ ಮಾಡುವಂತಿಲ್ಲ. ಆಂಧ್ರ ಪ್ರಾಂತ ನಿರ್ಮಾಣವಾಗಬೇಕೆಂಬ ನಿಶ್ಚಿತ ಉದ್ದೇಶವನ್ನು ಇಟ್ಟುಕೊಂಡೇ ಅವರು ಮುನ್ನಡೆಯಬೇಕಾಗಿದೆ. ಅವರ ವರದಿಯನ್ನು ಪರಿಶೀಲಿಸಿ, ಕೊನೆಯ ನಿರ್ಧಾರಕ್ಕೆ ಬರುವುದು ಕೇಂದ್ರ ಸರಕಾರದ ಕೈಯಲ್ಲೇ ಇದೆ ಎಂಬುದಾಗಿ ಈ ಮೊದಲೇ ಡಾ। ಕೈಲಾಸನಾಥ ಕಟಜೂ ಸ್ಪಷ್ಟೀಕರಿಸಿರುವರು.

ಆಂಧ್ರರ ದುರಾಗ್ರಹ

ಹೀಗೆ ಆಂಧ್ರಪ್ರಾಂತ ನಿರ್ಮಾಣ ಕಾರ್ಯ ಪ್ರಗತಿಯನ್ನು ಹೊಂದುತ್ತಿರುವಾಗಲೂ ಆಂಧ್ರರಲ್ಲಿ ಭೇದಭಾವವು ಕಡಿಮೆಯಾದಂತೆ ಕಾಣುವುದಿಲ್ಲ. ಅಲ್ಲದೆ ನಿರ್ವಿವಾದ ಪ್ರದೇಶಗಳಿಂದಲೇ ಆಂಧ್ರ ಪ್ರಾಂತ ರಚನೆಯನ್ನು ಪ್ರಕೃತ ಮಾಡಬೇಕೆಂಬುದು ಸರಕಾರದ ಬಯಕೆ ಎಂಬುದಾಗಿ ನೆಹರೂ ಪಾರ್ಲಿಮೆಂಟಿನಲ್ಲಿ ಸ್ಪಷ್ಟೀಕರಿಸಿದ್ದರೂ-ಆಂಧ್ರರು ತಮ್ಮ ನಿಲುವಿನಲ್ಲಿ ಬದಲಾವಣೆಯನ್ನು ಮಾಡಿರುವಂತೆ ತೋರುವುದಿಲ್ಲ. ವಿವಾದಾಸ್ಪದವಾದ ಪ್ರದೇಶಗಳ ಸುದ್ದಿಯನ್ನೇ ಬಿಟ್ಟುಗೊಟ್ಟು ಕೇಂದ್ರ ಸರಕಾರದ ತಲೆಬಿಸಿತನವನ್ನು ಕಡಿಮೆ ಮಾಡೋಣವೆಂದು ಆಂಧ್ರರು ಭಾವಿಸುವುದಿಲ್ಲ. ಬದಲು ಅವರು ಇನ್ನೂ ಮದ್ರಾಸು ನಗರದ ಮೇಲೆ ತಮ್ಮ ಸರ್ವಸ್ವ ಉಳಿಯಬೇಕು ಎಂದೇ ವಾದಿಸುತ್ತಿರುವರು. ತಮಿಳರು ಮದ್ರಾಸು ನಗರದ ಮೇಲೆ ತಮ್ಮ ಸಂಪೂರ್ಣ ಒಡೆತನವಿದೆ ಎಂಬುದನ್ನು ಅನೇಕಬಾರಿ ಸ್ಪಷ್ಟಗೊಳಿಸುವರು. ಇತ್ತೀಚೆಗೆ ಮದ್ರಾಸು ಕಾರ್ಪೋರೇಶನು ಮೇಯರರ ಅಧ್ಯಕ್ಷತೆಯಲ್ಲಿ ಸಭೆ ಸೇರಿದಾಗ—ಮದ್ರಾಸಿನ ಸಂಬಂಧದಲ್ಲಿ ಆಂಧ್ರರು ಚಕಾರವನ್ನೂ ಎತ್ತಕೂಡದೆಂಬ ಆಶಯದ ಗೊತ್ತುವಳಿಯನ್ನು ಸ್ವೀಕರಿಸಿದೆ. ಆಂಧ್ರಪ್ರಾಂತ ರಚನೆಯು ಮುಗಿದು ಆಂಧ್ರ ರಾಜ್ಯವು ಅಸ್ತಿತ್ವಕ್ಕೆ ಬಂದ ಬೆನ್ನಿಗೇ ಮದ್ರಾಸಿನ ಸಂಪರ್ಕವನ್ನವರು ಸಂಪೂರ್ಣ ಕಡಿದುಕೊಳ್ಳಬೇಕೆಂದು ಗೊತ್ತುವಳಿ ಹೇಳುತ್ತದೆ. ಸರಕಾರಿ ಕಛೇರಿಗಳು ಗವರ್ನರರ ವಾಸಸ್ಥಾನ, ಹೈಕೋರ್ಟಿನ ಕ್ಷೇತ್ರ ಮುಂತಾದುವೆಲ್ಲವೂ ಆಂಧ್ರರಿಗೆ ಪ್ರತ್ಯೇಕವಾಗಿಯೇ ನಿರ್ಮಾಣಹೊಂದಬೇಕು ಹೊರತು ಮದ್ರಾಸಿನಲ್ಲಿ ಈಗಿರುವುದರ ಮೇಲೆ ತೆಲುಗರು ಕೈ ಹಚ್ಚಕೂಡದೆಂಬುದೇ ತಮಿಳರ ನಿಜವಾದ ಅಭಿಪ್ರಾಯ.

ಹೊಣೆಗೇಡಿ ಸೂಚನೆ

ಇನ್ನೊಂದು ಕಡೆ ಕನ್ನಡಿಗರು ಬಳ್ಳಾರಿ ಮತ್ತಿತರ ಗಡಿಪ್ರದೇಶದ ಜಿಲ್ಲೆಗಳಲ್ಲಿ ತಮ್ಮ ಹಕ್ಕು ಇರುವುದು ಎಂದೂ ಕೇಳಿಕೆಯನ್ನು ಮನ್ನಿಟ್ಟಿರುವರು. ಕರ್ನಾಟಕ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರಾದ ಮೈಸೂರಿನ ನಿಜಲಿಂಗಪ್ಪನವರು ಹುಬ್ಬಳ್ಳಿಯಲ್ಲಿ ಪ್ರದೇಶ ಕಾಂಗ್ರೆಸು ಸಮಿತಿಯು ಸಭೆ ಸೇರುವುದಕ್ಕೆ ಸ್ವಲ್ಪ ಮುಂಚೆ ಪತ್ರಿಕಾ ಪ್ರತಿನಿಧಿಗಳೆದುರು ಒಂದು ಹೇಳಿಕೆಯನ್ನು ವೈಯಕ್ತಿಕವಾಗಿ ಕೊಟ್ಟರು. ಇವರು ಈ ರೀತಿ ಹೇಳಿಕೆಯನ್ನು ಕೊಡುವುದರ ಔಚಿತ್ಯವೇನೇ ಇರಲಿ—ಅದಕ್ಕೆ ಸಂಬಂಧಿಸಿದವರಿಂದ ಬಂದ ಪ್ರತಿಕ್ರಿಯೆಗಳೇ ಈ ಸೂಚನೆಗಳು ತಿಳಿಗೇಡಿತನದ್ದಾಗಿವೆ ಎಂಬುದನ್ನು ಎತ್ತಿ ಹೇಳುತ್ತವೆ. ಆಂಧ್ರ ಪ್ರಾಂತ ನಿರ್ಮಾಣದಲ್ಲಿ ಮುಖ್ಯವಾಗಿ ಬಳ್ಳಾರಿ ಜಿಲ್ಲೆ ಮತ್ತು ದಕ್ಷಿಣ ಕನ್ನಡಗಳು ಅನಾಥವಾಗುವುವು. ಅವುಗಳಿಗೆ ಮದ್ರಾಸಿನ ಸರಕಾರದೊಡನೆ ನೇರವಾದ ಸಂಪರ್ಕ ತಪ್ಪುವುದು. ಕಾರಣ-ನೆರೆಯ ಮೈಸೂರು ರಾಜ್ಯದಲ್ಲಿ ಇವೆರಡೂ ಜಿಲ್ಲೆಗಳನ್ನು ಸಮಾವೇಶಗೊಳಿಸುವುದೇ ಯೋಗ್ಯವೆಂದು ನಿಜಲಿಂಗಪ್ಪನವರ ಅಂಬೋಣ. ಬಳ್ಳಾರಿಯ ಕನ್ನಡ ಧುರೀಣರಾದ ಶ್ರೀ ಸುಬ್ರಹ್ಮಣ್ಯರು ಒಡನೆಯೇ ಈ ಸೂಚನೆಯನ್ನು ಪ್ರತಿಭಟಿಸಿ ಹೊಣೆಗಾರ ಸ್ಥಾನದಲ್ಲಿರುವ ನಿಜಲಿಂಗಪ್ಪನವರು ಈ ರೀತಿ ವ್ಯಕ್ತವ್ಯವನ್ನು ಕೊಡುವುದಕ್ಕೆ ಮುಂಚೆ ಸಂಬಂಧಿಸಿದ ಜನರ ಮನದೊಲವನ್ನು ಅರಿಯಲು ಪ್ರಯತ್ನಿಸಬೇಕಿತ್ತೆಂದರು. ಬಳ್ಳಾರಿ ಜಿಲ್ಲೆಯು ಈಗಿದ್ದಂತೆ ಇಡೀಯಾಗಿ ಮದ್ರಾಸು ರಾಜ್ಯದಲ್ಲಿಯೇ ಉಳಿಯಬೇಕೆಂದವರು ವಾದಿಸಿದರು.

ಕನ್ನಡಿಗರ ಒತ್ತಾಯ

ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ – ಆಂಧ್ರ ಪ್ರಾಂತ ನಿರ್ಮಾಣದ ಪರಿಣಾಮವಾಗಿ ನಮ್ಮ ಭವಿಷ್ಯ ಅನಿಶ್ಚಿತವಾಗುವುದಲ್ಲ ಎಂದು ಕಳವಳಪಡುವಂಥ ಕಾರಣವೇನೂ ತೋರುವುದಿಲ್ಲ. ನಮ್ಮ ಪರಿಸ್ಥಿತಿ ಈಗಿದ್ದಂತೆ ಮುಂದಕ್ಕೂ-ಕರ್ನಾಟಕ ಏಕೀಕರಣವಾಗುವವರೆಗೆ—ಉಳಿಯುವುದು. ಅರ್ಥಾತ್ ಮದ್ರಾಸಿನೊಡನೆ ಈಗ ಇರುವ ನಮ್ಮ ಸಂಬಂಧದಲ್ಲಿ ವ್ಯತ್ಯಯವುಂಟಾಗಲಾರದು. ಏನಿದ್ದರೂ ಬಳ್ಳಾರಿ ಮತ್ತು ದಕ್ಷಿಣಕನ್ನಡ ಜಿಲ್ಲೆ ಇವೆರಡನ್ನಷ್ಟೇ ಮೈಸೂರಿನಲ್ಲಿ ಲೀನಗೊಳಿಸುವ ನಿಜಲಿಂಗಪ್ಪನವರ ಸೂಚನೆಯು ಸರ್ವಥಾ ಅಗ್ರಾಹ್ಯವಾದುದು. ಮೈಸೂರಿನೊಡನೆ ಲೀನಹೊಂದುವ ಪ್ರಶ್ನೆಯೇ ಅವಲ್ಲಿ ಕರ್ನಾಟಕದ ಉಳಿದ ಪ್ರದೇಶಗಳಿಗೂ ಈ ಸೂತ್ರ ಅನ್ವಯಿಸಬೇಕಾದುದು ನ್ಯಾಯ-ಹೊರತು ಹೀಗೆ ಮಾಡುವುದು ತರವಲ್ಲ.

ಬಹುಶಃ ನಿಜಲಿಂಗಪ್ಪನವರಿಗೆ ತಮ್ಮ ಸೂಚನೆ ಸಂಪಾದಿಸಿದ ಟೀಕಾ ಟೂಕೆಯಿಂದ ಸಮಾಧಾನವಾಗಿರಬೇಕು: ಆದಕ್ಕೇ ಅವರು ಈ ಕುರಿತು ಕಾಂಗ್ರೆಸ ಸಮಿತಿ ಸಭೆಯಲ್ಲಿ ಜೋರುಕೊಡದೆ, ಕೇವಲ ಕರ್ನಾಟಕ ಪ್ರಾಂತ ನಿರ್ಮಾಣ ಕಾರ್ಯವಾಗಬೇಕೆಂದಷ್ಟೇ ಒತ್ತಾಯದಿಂದ ನುಡಿದರು. ಇದಕ್ಕೆ ಎಲ್ಲ ಸದಸ್ಯರ ಹೃತ್ಪೂರ್ವಕ ಬೆಂಬಲ ದೊರೆತದ್ದು ಆಶ್ಚರ್ಯವಲ್ಲ. ಮಾತ್ರವಲ್ಲ ಬಳ್ಳಾರಿ ಮತ್ತಿತರ ಪೂರ್ವದ ಗಡಿಪ್ರದೇಶಗಳ ಸಂಬಂಧದಲ್ಲಿ ಕನ್ನಡಿಗರ ಬೇಡಿಕೆಯನ್ನು ಮುಂದಿಡುವ ಬಗ್ಗೆ ಒಂದು ಸಮಿತಿಯು ನೇಮಕವಾದುದು ಸಂತೋಷ. ಪ್ರದೇಶ ಕಾಂಗ್ರೆಸು ಸಮಿತಿಯು ಸ್ವೀಕರಿಸಿದ ಇನ್ನೊಂದು ಗೊತ್ತುವಳಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಕ್ಕಲುಗಳಿಗೆ ನ್ಯಾಯವಾದ ಗೇಣಿ ನಿಗದಿಯಾಗುವಂತೆಯೂ ಭೂಮಿಯ ಮೇಲಿನ ಹಕ್ಕು ಶಾಶ್ವತವಾಗುವಂತೆಯೂ ಮದ್ರಾಸು ಸರಕಾರ ಕೂಡಲೇ ಕಾಯಿದೆ ಮಾಡಬೇಕೆಂದು ಬಿನ್ನವಿಸುತ್ತಿದೆ.

ಟಂಡನ್ನರ ರಾಜೀನಾಮೆ

ದಕ್ಷಿಣದ ತಿರುಕೊಚ್ಚಿ ಮತ್ತು ಮದ್ರಾಸುಗಳ ತಮ್ಮ ಸಂಚಾರ ಕಾರ್ಯಕ್ರಮವನ್ನು ಮುಗಿಸಿ ರಾಜಧಾನಿಯಾದ ದಿಲ್ಲಿಗೆ ಮರಳಿ ಪಂಡಿತ ನೆಹರೂ ಒಡನೆಯೇ ಅಖಿಲ ಭಾರತ ಕಾಂಗ್ರೆಸಿನ ಕಾರ್ಯಕಾರಿ ಸಮಿತಿಯಲ್ಲಿ ಭಾಗವಹಿಸಿದರು. ಈ ಜನವರಿ ತಿಂಗಳಲ್ಲಿ ಹೈದರಾಬಾದಿನ ಮಾನಲ ನಗರದಲ್ಲಿ ಸೇರಲಿರುವ ಅಧಿವೇಶನದ ಪೂರ್ವಸಿದ್ಧತೆಗಳನ್ನು ಯೋಜಿಸುವುದು ಇವರ ಉದ್ದೇಶವಾಗಿತ್ತು. ಈ ಸಂದರ್ಭದಲ್ಲಿ ಆಂಧ್ರಪ್ರಾಂತ ರಚನೆಯ ಮೂಲಭೂತ ತತ್ವವನ್ನು ನೆಹರೂ ಸದಸ್ಯರಿಗೆ ಮನವರಿಕೆ ಮಾಡಿಸಿಕೊಟ್ಟರೆಂದೂ ಆಂಧ್ರ ಪ್ರಾಂತರಚನೆಯ ಜಯಾಪಜಯಗಳ ಮೇಲೆಯೇ ಉಳಿದ ಭಾಷಾನುಗುಣ ಪ್ರಾಂತರಚನೆಯ ಕಾರ್ಯ ನಿಂತಿದೆಯಾಗಿಯೂ ಗೊತ್ತಾಗಿದೆ. ಕರ್ನಾಟಕ ಏಕೀಕರಣ [illegible]ವನ್ನು [illegible] ಕೈಗೊಳ್ಳಬೇಕೆಂದು ಕೇಳಿಕೊಂಡದ್ದಕ್ಕೆ ಈ ರೀತಿ ಸಮಾಧಾನ ಪ್ರತಿಕ್ರಿಯೆಯಾಗಿದೆ. ಆದರೆ ಇದಕ್ಕೂ ಮಹತ್ವದ ಸಂಗತಿ ಕಾರ್ಯಕಾರಿ ಸಮಿತಿಯು ಎದುರಿಗಿಟ್ಟಂಥ ನಿರ್ಣಯವು. ಕಾಂಗ್ರೆಸ ಘಟನೆ ಎಲ್ಲಿಯೇ ಅನೇಕ ತಿದ್ದುಪಡಿಗಳ ಯೋಗ್ಯತೆಯನ್ನು ನಿರ್ಣಯಿಸುವುದೊಂದು ಮಹಾ ಕಾರ್ಯ. ಇವೆಲ್ಲದಕ್ಕಿಂತಲೂ ಹೆಚ್ಚು ಆಸ್ಥೆಗೆ ಆಸ್ಪದಕೊಟ್ಟ ಮೂರನೆಯ ಸಂಗತಿ--ಕಾರ್ಯಕಾರಿ ಸಮಿತಿಗೆ ಟಂಡನ್ನರ ರಾಜೀನಾಮೆ. ಟಂಡನ್ನರು ಕಾಂಗ್ರೆಸಿನಲ್ಲಿ ಈಗ ತಲೆದೋರಿರುವ ಅಧಿಕಾರ ಲಾಲಸೆ ಮತ್ತು ವಂಚನೆ, ಲಂಚಗುಳಿತನ ಇತ್ಯಾದಿ ದುಷ್ಟಪ್ರವೃತ್ತಿಗಳ ಪ್ರತಿಭಟನಾರ್ಥವಾಗಿ ತಮ್ಮ ರಾಜೀನಾಮೆಯನ್ನು ಕೊಟ್ಟರೆಂದು ತಿಳಿಯುತ್ತೇವೆ. ಹೀಗಿರುವಲ್ಲಿ—ಹೈದರಾಬಾದು ಅಧಿವೇಶನದಲ್ಲಿ ಕಾಂಗ್ರೆಸಿನ ಪ್ರಭಾವಿ ಧುರೀಣ ಟಂಡನ್ನರು ಕಾಂಗ್ರೆಸಿಗರ ನಡವಳಿಕೆಯ ಸಂಬಂಧದಲ್ಲಿ ಪರಿಣಾಮಕಾರೀ ಟೀಕೆ ಮಾಡುವುದು ನಿಶ್ಚಯ.

ಕನ್ನಡ ನಾಡಿನ ತೆಂಗು ಕೃಷಿಕರಿಗೆ
ಅತ್ಯಮೂಲ್ಯವಾದ ಯೋಗ

ಕನ್ನಡ ನಾಡಿನ ತೆಂಗು ಕೃಷಿಕರು ನಿರೀಕ್ಷಿಸುತ್ತಿದ್ದ ಪ್ರಕಟನೆಯು ಇದೋ ಬರಲಿದೆ. ಭಾರತದ ಕೇಂದ್ರ ತೆಂಗಿನ ಕಮಿಟಿಯು, ತೆಂಗು ಕೃಷಿಕರಿಗೆ ಅನುಭವಿಕ ಸುದ್ದಿಗಳನ್ನೊಳಗೊಂಡ ತಮ್ಮ ಮಾಸಪತ್ರಿಕೆಯಾದ ಬುಲ್ಲೆಟಿನಿನ ಕನ್ನಡ ಮುದ್ರಣವನ್ನು 1953ನೇ ಜನವರಿಯಿಂದ ಪ್ರಕಟಿಸುವುದನ್ನು ತಿಳಿಸಲು ಸಂತೋಷಪಡುತ್ತಾರೆ. ಅದರಲ್ಲಿ ತೆಂಗು ಕೃಷಿ ಮಾಡುವಿಕೆ, ಗೊಬ್ಬರ ಹಾಕುವಿಕೆ ಕುರಿತಾದ ಲೇಖನಗಳು ಮಾತ್ರವಲ್ಲದೆ, ತೆಂಗಿನ ಕಾಯಿ ಮತ್ತು ಇತರ ತೆಂಗಿನ ಉತ್ಪನ್ನಗಳ ಭಾರತದೊಳಗಿನ ಮತ್ತು ವಿದೇಶೀಯ ಮಾರ್ಕೆಟ್ ದರಗಳನ್ನೂ ಒಳಗೊಂಡಿದೆ.

ವಾರ್ಷಿಕ ಚಂದಾ (ಅಂಚೆ ವೆಚ್ಚ ಸಹಿತ) ರೂ. 0–12–0 ಮಾತ್ರ. ಚಂದಾದರವನ್ನು ಈ ಕೆಳಗಿನ ವಿಳಾಸಕ್ಕೆ M. O. ಮೂಲಕ ಕಳುಹಿಸಿರಿ. ನಿಮ್ಮ ಪೂರ್ಣ ವಿಳಾಸವನ್ನು M. O. ಕೂಪನಿನಲ್ಲಿ ಕೊಡಬೇಕಾಗಿ ವಿನಂತಿ.

ಸೆಕ್ರೆಟರಿ,
ಇಂಡಿಯನ್ ಸೆಂಟ್ರಲ್ ಕೋಕನಟ್ ಕಮಿಟಿ,
ಎರ್ಣಾಕುಳಂ.

The Canara Banking Corporation Limited.

ಸುಲಭ ಶರ್ತಗಳಿದ್ದು, ಸಾಲಿಯಾನ್ ಸೇಕಡಾ 4ರಂತೆ ಬಡ್ಡಿ ಗಳಿಸುವ ನಮ್ಮ

ಪಂಚವಾರ್ಷಿಕ ಯೋಜನೆಯ ಠೇವಣಾತಿಗಳು.

ಈಗಾಗಲೇ ಎಲ್ಲಾ ಕಡೆಗಳಲ್ಲಿಯೂ ಜನಾದರಣೀಯವಾಗಿವೆ ನೀವೂ ಕೂಡಾ ನಿಮ್ಮ ಹಣವನ್ನು ಈ ಠೇವಣಾತಿಗಳಲ್ಲಿ ಏಕೆ ವಿನಿಯೋಗಿಸಬಾರದು?

ವಿಶೇಷ ಮಾಹಿತಿಗೆ,

ನಿಮಗೆ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ, ಉಡುಪಿ. (ದ ಭಾರತ)

ನವಯುಗ

ಉಡುಪಿ, ಗುರುವಾರ ೮-೧-೫೩

ನವಭಾರತದ ನಿರ್ಮಾಣ

ನವವರ್ಷದ ಶುಭ ಸಂದೇಶವನ್ನು ಭಾರತೀಯರಿಗೆ ನೀಡುತ್ತಾ, ಪ್ರಧಾನಿ ಜವಾಹರಲಾಲ ನೆಹರೂ ಮಾಡಿದ ಆಕಾಶವಾಣಿ ಭಾಷಣವು ಪಂಚವಾರ್ಷಿಕ ಯೋಜನೆಯನ್ನು ಜನಸಾಮಾನ್ಯರು ಯಾವ ದೃಷ್ಟಿಯಿಂದ ನೋಡುವುದಗತ್ಯವೆಂಬುದನ್ನು ನಿರ್ದೇಶಿಸುವಂತಿತ್ತು. ಸ್ವಾವಲಂಬಿಯಾಗುವ ಪ್ರಯತ್ನ ನಡೆಸಬೇಕೆಂದು ದೃಢ ಸಂಕಲ್ಪವನ್ನು ನಾವು ಮಾಡಿರುವೆವು. ಸಾಮಾಜಿಕ ವಿಷಮತೆ ಅಳಿಯಬೇಕು, ಜನರಿಗೆ ನಿರುದ್ಯೋಗಗಳು ದೂರಾಗಬೇಕು ಎಂಬುದಾಗಿ ನಾವು ಅಪೇಕ್ಷಿಸುವೆವು. ಇಂಥ ನಿರ್ಧಾರವನ್ನು ಮಾಡಿದ ಚೈತನ್ಯಯುತವಾದ ರಾಷ್ಟ್ರಕ್ಕೆ ಪಂಚವಾರ್ಷಿಕ ಯೋಜನೆಯು ಚೈತನ್ಯವನ್ನುಂಟು ಮಾಡುವಂಥದಿದೆ ಎಂದು ನೆಹರೂ ಉದ್ಗರಿಸಿದುದು ಯೋಗ್ಯವಾಗಿದೆ. ನಮ್ಮ ರಾಷ್ಟ್ರದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಭದ್ರತೆಯ ಆಶ್ವಾಸನೆ ಇದೆ. ನಮ್ಮ ಮುಂದಿರುವ ಯೋಜನೆಯನ್ನು ಕಾರ್ಯಕಾರಿ ಮಾಡಿದರೆ ನಿರುದ್ಯೋಗದ ಬಾಧೆಯು ಹಲವಂಶ ಕಡಿಮೆಯಾಗುವ ಸಂಭವ ಇದೆ. ಮೇಲಾಗಿ ಉತ್ಪಾದಕ ಚಟುವಟಿಕೆ ಇದಾಗಿರುವುದರಿಂದ ನಮ್ಮ ದಾರಿದ್ರ್ಯವು ಕೆಲವಂಶವಾದರೂ ತಗ್ಗುವುದು ನಿಶ್ಚಯ. ಆದುದರಿಂದ ಇಂಥ ಯೋಜನೆಯ ಕುಂದುಕೊರತೆಗಳನ್ನು ಎತ್ತಿತೋರಿಸುವುದನ್ನು ಬಿಟ್ಟುಕೊಟ್ಟು ನೂತನ ಭಾರತವನ್ನು ಕಟ್ಟುವ ದೀಕ್ಷೆಯನ್ನು ಪ್ರತಿಯೊಬ್ಬ ನಾಗರಿಕನೂ ಕೈಗೊಳ್ಳಬೇಕೆಂದು ನೆಹರೂ ಉಪದೇಶಿಸಿದುದು ಸಕಾಲಿಕವಾಗಿದೆ. ಹೊಸ ವರ್ಷವು ನಮಗೆಲ್ಲರಿಗೂ ಸಂತೋಷವನ್ನು ತರಲೆಂದು ಹಾರೈಸುವುದು ಸಾಮಾನ್ಯ ಪದ್ಧತಿಯಾಗಿರುವುದಾದರೂ ದೇಶದ ಮುಂದೆ ಪಂಚವಾರ್ಷಿಕ ಯೋಜನೆಯನ್ನು ನಾವಿಂದು ಇಟ್ಟುಕೊಂಡಿರುವಾಗ — ಹೀಗೆ ಹಾರೈಸುವುದಕ್ಕೆ ಹೆಚ್ಚಿನ ಮಹತ್ವವಿದೆ. ಸಂತೋಷವು ಆಕಸ್ಮಿಕದಿಂದ ಒದಗುವುದಿಲ್ಲ- ಅದು ದುಡಿಮೆಯಿಂದ ಒದಗುತ್ತದೆ ಎಂಬುದನ್ನಿಲ್ಲಿ ಉಲ್ಲೇಖಿಸದಿರಲಾರೆವು. ನೆಹರೂ ಹೇಳಿದಂತೆ ನಾವಿಂದು ಮಹಾ ಕಾರ್ಯವನ್ನು, ಸಾಹಸವನ್ನು ಮಾಡುತ್ತಿರುವೆವೆಂಬ ಭಾವನೆಯೇ ನಮ್ಮ ಸಂತೋಷವನ್ನು ಇಮ್ಮಡಿ ಮಾಡದಿರದು. ಹಿಂದೆ ಸಂಪತ್ಸಮೃದ್ಧವಾಗಿದ್ದ ಭಾರತವನ್ನು ಮರಳಿ ನಿರ್ಮಾಣ ಮಾಡುವೆವೆಂಬ ಪವಿತ್ರವಾದ ಭಾವನೆಗಿಂತಲೂ ಮಿಗಿಲು ಸ್ಫೂರ್ತಿಪ್ರದವೂ ಸಂತೋಷದಾಯಕವೂ ಆದ ನಿರ್ಧಾರ ಬೇರೇನೂ ಇರಲಾರದು. ಇಂಥ ಸಂತೋಷದಲ್ಲಿ ನಾವು ಪೂರ್ಣ ಭಾಗಿಗಳಾಗಬೇಕಿದ್ದರೆ — ನಾವು ರಟ್ಟೆ ಮುರಿದು ರಚನಾತ್ಮಕ ಕೆಲಸದಲ್ಲಿ ಪ್ರವೃತ್ತರಾಗಬೇಕಾದುದು ಅವಶ್ಯ. ದಿಲ್ಲಿಯಲ್ಲಿ ಅರ್ಥಶಾಸ್ತ್ರ ವಿದ್ಯಾ ಸಂಸ್ಥೆಯ ನಿರ್ದೇಶಕರಾದ ಕನ್ನಡದ ಡಾ. ವಿಜಯೇಂದ್ರ ರಾಯರು ಮೈಮುರಿದು ದುಡಿಯುವುದರ ಜೊತೆಗೆ ಕಣ್ಣೀರನ್ನು ಸುರಿಸಬೇಕು. ಕೆಲವು ಕಾಲವಾದರೂ ವ್ರತನಿಷ್ಠವಾದ ಜೀವನವನ್ನು ನಡೆಸಬೇಕು. ಎಂದರೇನೆ ಆರ್ಥಿಕ ಪುನರ್ನಿರ್ಮಾಣ ಮತ್ತು ಅಭಿವೃದ್ಧಿಗಳು ಕೈಗೂಡಬಲ್ಲವುವೆಂದು ನಮ್ಮೆಲ್ಲರನ್ನು ಎಚ್ಚರಿಸಿರುವರು. ನಮ್ಮ ಪಂಚವಾರ್ಷಿಕ ಯೋಜನೆಯಲ್ಲಿ ತೋರಿಸಿದ ಉಳಿತಾಯವನ್ನು ರಶಿಯಾದ ಹೊರತು ಬೇರಾವುದೇ ಪ್ರಜಾಪ್ರಭುತ್ವ ರಾಷ್ಟ್ರವು ಇಂದಿನವರೆಗೆ ತೋರಿಸಿರುವುದಿಲ್ಲ. ಇದರ ಮೇಲೆ ನಮ್ಮದು ಬಡದೇಶವೆಂಬ ಪ್ರತೀತಿಯೂ ಇದೆ. ಆದುದರಿಂದ ಸರಕಾರವು ಮಿತವ್ಯಯ ಧೋರಣವನ್ನು ಇನ್ನಷ್ಟು ಬಿಗಿಗೊಳಿಸುವುದು ಅಗತ್ಯವಿದ್ದಂತೆ ಜನರಾದರೂ ಹಣದ ಬಳಕೆಯನ್ನು ತಗ್ಗಿಸುವುದು ಅಗತ್ಯವಿದೆ. ಡಾ|| ವಿಜಯೇಂದ್ರ ರಾಯರ ಅಭಿಪ್ರಾಯದಂತೆ, ನಮ್ಮ ಮುಂದಿರುವ ಈ ಪ್ರಥಮ ಪಂಚವಾರ್ಷಿಕ ಯೋಜನೆಯ ಕಾರ್ಯಾವಧಿಯಲ್ಲಿ ಉತ್ಪಾದನೆಯೊಂದೇ ಧ್ಯೇಯವಲ್ಲದೆ, ನಾವೇನನ್ನೂ ಬಳಸಲು ಬರುವಂತಿಲ್ಲ. ಅನಂತರ ಕಾಲದವರೆಗೆ ಅಧಿಕ ಉತ್ಪಾದನೆಯಲ್ಲಿ ನೂರಕ್ಕೆ ಐವತ್ತನ್ನು ಮಾತ್ರ ಬಳಸಬಹುದು. ಉಳಿದುದನ್ನು ಪುನಃ ಬಂಡವಾಳದಲ್ಲಿ ತೊಡಗಿಸಬೇಕಾದುದು ಅಗತ್ಯ. ಆ ಬಳಿಕ ಕಾಲದ ವರೆಗೆ ಐದರಲ್ಲಿ ಒಂದಂಶದಷ್ಟು ಬಳಸಬಹುದು. ಸ್ವಲ್ಪದರಲ್ಲಿ ಹೇಳುವುದಾದರೆ ಮೊದಲಿನ ಇಪ್ಪತ್ತು ವರ್ಷಗಳಲ್ಲಿ ದೇಶದ ನಾಗರಿಕರು ಭಾವೀ ಹಿತದೃಷ್ಟಿಯಿಂದ ಬಹಳ ಸರಳ ಸುಲಭದ ಜೀವನಮಾರ್ಗವನ್ನು ಅನುಸರಿಸಬೇಕಾಗುವುದು. ತುಂಬ ತ್ರಾಸವೆನಿಸಿದರೂ, ಕಷ್ಟದ ಬಾಳ್ವೆಯನ್ನೆ ನಡೆಸಬೇಕಾಗುವುದು ಎಂದರೆ ಮಾತ್ರ, ಇಪ್ಪತ್ತು ವರ್ಷಗಳ ಬಳಿಕವಾದರೂ ನಾವು ಜೀವನ ಮಟ್ಟವನ್ನು ಎತ್ತರಿಸುವ ಧ್ಯೇಯವನ್ನು ಕೈಗೂಡಿಸಬಲ್ಲೆವು. ಅದರ ಬದಲು ಈಗ ಹೆಚ್ಚು ಉತ್ಪಾದಿಸಿದ್ದನ್ನು ಈಗಲೇ ಬಳಸಿಕೊಂಡಲ್ಲಿ ನಮ್ಮ ಧ್ಯೇಯ ಮಣ್ಣುಗೂಡುವುದು. ನಮ್ಮ ಯೋಜನೆಯು ಉತ್ಪಾದನೆಯನ್ನೂ ಉತ್ಪಾದನಾಶಕ್ತಿಯನ್ನೂ ಹೆಚ್ಚಿಸುವಂತಿದೆ ಎಂಬುದಕ್ಕೆ ಪ್ರಥಮ ಪ್ರಾಶಸ್ತ್ಯ ಕೊಟ್ಟು ಬಳಕೆಯನ್ನು ಗೌಣ ಸ್ಥಾನದಲ್ಲಿಡಬೇಕೆಂದು ಅರ್ಥಶಾಸ್ತ್ರಿಗಳ ಅಭಿಮತವಿದೆ.

ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಮನುಷ್ಯಬಲ ಹಾಗೂ ದುಡ್ಡಿನ ಬಲ ಎರಡೂ ನಮಗೆ ಬೇಕಾಗಿವೆ. ಮನುಷ್ಯ ಬಲವನ್ನು ನಾಡಿನ ನಾಗರಿಕರು ಉತ್ಸಾಹದಿಂದ ಪೂರೈಸಿಕೊಡಬೇಕು. ಈಗಾಗಲೇ ಅಲ್ಲಲ್ಲಿ ಸಂಘಟಿಸಲ್ಪಡುವ ಭಾರತ ಸೇವಕ ಸಮಾಜ ಇದಕ್ಕೊಂದು ರೂಪವನ್ನು ಕೊಡುತ್ತಿದೆ. ಆರ್ಥಿಕ ನೆರವಿಗಾಗಿ ಮಿತವ್ಯಯ ಧೋರಣೆಯನ್ನು ಅನುಸರಿಸುವುದರ ಜೊತೆಗೆ ನಮ್ಮೆಲ್ಲ ಧನಸಂಚಯವೂ ಉತ್ಪಾದಕ ಚಟುವಟಿಕೆಗಳ ಕಾರ್ಯಕ್ಷೇತ್ರಕ್ಕೆ ಬರುವಂತೆ ನೋಡಿಕೊಳ್ಳಬೇಕು. ಈ ಮಾತನ್ನು ಬ್ರಿಟಿಷರ ಕಾಲದಲ್ಲಿ ಭಾರತ ಅರ್ಥಸಚಿವರಾಗಿದ್ದ ಸರ್. ಶುಸ್ಟರು ಚೆನ್ನಾಗಿ ವಿವರಿಸಿದರು. ತನ್ನ ದೇಶದ ನಿಜವಾದ ಸಂಪತ್ತು ಹಾಗೂ ಸಾಧನಗಳ ಕಲ್ಪನೆಯನ್ನು ಇಟ್ಟುಕೊಂಡು ಅದನ್ನು ಜನಹಿತಕ್ಕಾಗಿ ಬಳಸಲು ಏನು ಮಾಡಬೇಕೆಂಬುದನ್ನು ಸ್ಪಷ್ಟವಾಗಿ ನಿರ್ದೇಶಿಸುವ ಪ್ರಾಮಾಣಿಕ ಪ್ರಯತ್ನವನ್ನು ಪಂಚವಾರ್ಷಿಕ ಯೋಜನೆ ಒಳಗೊಂಡಿದೆ ಎಂಬುದಾಗಿ ಸರ್. ಶುಸ್ಟರು ಅಭಿಪ್ರಾಯ ವ್ಯಕ್ತ ಮಾಡಿದರು. ಭಾರತೀಯರ ಪಾಲಿಗೆ ಪಂಚವಾರ್ಷಿಕ ಯೋಜನೆಯು ಒಂದು ವರದಾನದಂತೆ ಆಶಾದಾಯಕವಿದೆ ಎಂಬಲ್ಲಿ ಸಂದೇಹವಿಲ್ಲ. ನಮ್ಮಷ್ಟೇ ಆಸ್ಥೆಯನ್ನು ಈ ವಿಷಯದಲ್ಲಿ ವಿದೇಶೀಯರೂ ತೋರಿಸುತ್ತಿರುವರೆಂದು ಇವರು ಹೇಳಿದ ಸಂಗತಿ ನಮ್ಮ ಕರ್ತವ್ಯಜಾಗೃತಿಯನ್ನು ಇನ್ನಷ್ಟು ಪ್ರಬಲಗೊಳಿಸದಿರದು. ನಮ್ಮ ಯೋಜನೆಯು ಕೃಷಿಯ ಉತ್ಪಾದನೆಗೆ ಪ್ರಾಶಸ್ತ್ಯವನ್ನೂ ಪ್ರಾಧಾನ್ಯವನ್ನೂ ಕೊಟ್ಟುದು ಸರಿಯೆಂದೇ ಶುಸ್ಟರ ಅಭಿಪ್ರಾಯವಿದೆ.

ಆದರೆ ಸರಕಾರದ ಪ್ರಯತ್ನಗಳಲ್ಲಿ ಜನಸಾಮಾನ್ಯರು ಏನೇನೂ ಸಹಕರಿಸದಿದ್ದರೆ — ಅದು ತಮಗೆ ಸಂಬಂಧಿಸಿದುದು, ತಮ್ಮದು ಎಂಬ ಅಭಿಮಾನವನ್ನು ತೋರಿಸಿ ದುಡಿಯದಿದ್ದರೆ, ಅದು ಚೆನ್ನಾಗಲಾರದೆಂದೂ, ಈ ತಜ್ಞರು ನಮಗೆ ಬೋಧಿಸಿರುವರು. ಮೇಲಿನ ಎಲ್ಲ ಮಾತುಗಳನ್ನು ನಾವು ಹೃದಯಂಗಮ ಮಾಡಿಕೊಂಡು ವ್ಯವಹಾರಿಕ ಬುದ್ಧಿಗೆ ಸ್ವಾಭಾವಿಕವೆನಿಸಿದ ಆಸ್ಥೆಯಿಂದ ನವಭಾರತವನ್ನು ನಿರ್ಮಾಣ ಮಾಡುವುದಕ್ಕೆ ದುಡಿಯುವ ಸಂಕಲ್ಪ ಬದ್ಧರಾಗುವುದೊಳ್ಳೆಯದು. ನಮಗೆ ಹಣದ ಕೊರತೆಯಿದೆಯಾದರೂ — ಸರಕಾರದ ಕಾರ್ಯವು ಫಲಪ್ರದವಾಗುವುದೆಂಬ ನಿಶ್ಚಿತ ಭರವಸೆಯ ಚಿತ್ರ ನಮ್ಮ ಕಣ್ಣ ಮುಂದಿದ್ದರೆ, ಕೊಂಚೆ ಧನವಿನಿಯೋಗ ಪದ್ಧತಿಯಿಂದ ಹಾನಿಯೇನೂ ಉಂಟಾಗದೆಂದು ತಿಳಿಯುತ್ತದೆ. ಈ ವರ್ಷದ ಮಟ್ಟಿಗೆ ನಮ್ಮ ಸ್ಟರ್ಲಿಂಗ ಶಿಲ್ಕಿನಿಂದ ಎಪ್ಪತ್ತೈದು ಕೋಟಿ ರುಪಾಯಿ ಎಷ್ಟು ಮೊತ್ತವನ್ನು ಕೊಡಲು ಬ್ರಿಟನು ಒಪ್ಪಿದೆಎಂದು ಈಗತಾನೆ ಬಂದಿರುವ ವರ್ತಮಾನದಿಂದಾಗಿ, ಯೋಜನೆಯ ಪ್ರಗತಿಗೆ ಪ್ರಕೃತ ಏನೊಂದೂ ಅಡ್ಡಿ ಉಪಸ್ಥಿತವಾಗಿಲ್ಲವೆಂಬುದು ತಿಳಿಯುತ್ತದೆ. ಇನ್ನು ಮುಂದಕ್ಕೆ ಕೂಡ ಯುದ್ಧ ಕಾಲದಲ್ಲಿ ಸ್ವಂತ ರಕ್ಷಣೆಗೋಸ್ಕರ ನಾವೆಷ್ಟು ಧಾವಿತಪಟ್ಟುಕೊಂಡು ಚಟುವಟಿಕೆಯನ್ನು ತೋರುತ್ತೇವೋ- ಕಡಿಮೆ ಎಂದರೆ ಅಷ್ಟು ಉತ್ಸಾಹವನ್ನಾದರೂ ರಚನಾತ್ಮಕವಾದ ಕಾರ್ಯಕ್ಕೂ ತೋರಿಸುವುದು ಶ್ರೇಯಸ್ಕರವೆಂದು ಒತ್ತಿಯೊತ್ತಿ ಹೇಳುತ್ತೇವೆ.

ಅಖಿಲಭಾರತ ರೇಡಿಯೊಲೊಜಿ ಪರಿಷತ್ತು.

ಇದೇ ತಾ. ೩ರಲ್ಲು ದಿಲ್ಲಿಯಲ್ಲಿ ಜರಗಿದ ಅಖಿಲಭಾರತ ಐಳನೆ ರೇಡಿಯೋಲೋಜಿ ಸಮ್ಮೇಳನದ ಅಧ್ಯಕ್ಷಸ್ಥಾನದಿಂದ ಮುದ್ರಾಸಿನ ಬರ್ನಾರ್ಡ್ ಇನ್ಸ್ಟಿಟ್ಯೂಟಿನ ಡೈರೆಕ್ಟರರಾದ ಡಾ. ಕೆ ಯಂ ರೈಯವರು ಕೊಟ್ಟ ಭಾಷಣದ ಸಾರಾಂಶವು ಹೀಗಿದೆ

ಎಕ್ಸ್‌ರೇಯ ಸಂಬಂಧ ಜನತೆ ಮತ್ತು ಸರಕಾರವು ತಕ್ಕುದಾದ ಮುಂಜಾಗರೂಕತೆಯನ್ನು ವಹಿಸಿಕೊಳ್ಳುವುದು ದೇಶದ ಮತ್ತು ಜನತೆಯ ಆರೋಗ್ಯದ ಹಿತದೃಷ್ಟಿಯಿಂದ ಒಳ್ಳೆತು. ಎಕ್ಸ್‌ರೆ ಯಂತ್ರ ಮತ್ತು ಅದಕ್ಕೆ ಸಂಬಂಧಿಸಿದ ಇತರ ಪದಾರ್ಥಗಳನ್ನು ಕೊಂಡುಕೊಳ್ಳುವುದರಲ್ಲಿಯೂ ರೇಡಿಯೋಲೋಜಿಯನ್ನು ಉಪಯೋಗಿಸುವ ವಿಧಾನದಲ್ಲಿಯೂ ತಕ್ಕುದಾದ ಕಾನೂನುಗಳನ್ನು ಕೈಕೊಂಡು ಹತೋಟಿಯಲ್ಲಿಟ್ಟುಕೊಳ್ಳುವುದು ಸಾರ್ವಜನಿಕ ಹಿತದೃಷ್ಟಿಯಿಂದ ಸಮಂಜಸ. ರೇಡಿಯಮನ್ನು ಉಪಯೋಗಿಸುವ ವಿಧಾನವು ಬಹಳ ಹೀನಸ್ಥಿತಿಗೆ ಇಳಿದಿರುವುದು. ಅದು ಹೆಚ್ಚು ಕಡಿಮೆ 'ಫೋಟೊಗ್ರಫಿಯ' ಮಟ್ಟಕ್ಕೆ ಇಳಿದಿರುವುದು. ಅದನ್ನು ಹಾಗೆಯೆ ಬೆಳೆಯಬಿಟ್ಟರೆ ಅದು ಇನ್ನಷ್ಟು ವ್ಯಾಪಿಸಿ ಸಮಾಜದ ಮೇಲ್ಮೆಗೆ ಕಂಟಕಪ್ರಾಯವಾಗಬಹುದು.

ರೇಡಿಯಮಿನ ವಿಷಯ ಅಲ್ಪಸ್ವಲ್ಪ ಜ್ಞಾನ ಇರುವಂಥವರು ಅದನ್ನು ಉಪಯೋಗಿಸಲುಪಕ್ರಮಿಸುವುದರಿಂದ ವೈದ್ಯಕೀಯ ಕ್ಷೇತ್ರಕ್ಕೆನೇ ಮಾತ್ರವಲ್ಲ ಜನತೆಗೆಯೆ ಅಪಾಯ ಹಾನಿಯನ್ನುಂಟು ಮಾಡಬಹುದು. ಆದುದರಿಂದ ಇದನ್ನು ಆದಷ್ಟು ಬೇಗನೆ ತಡೆಗಟ್ಟುವುದು ವಿಹಿತ. ರೇಡಿಯಮಿನ ಸಲಕರಣೆಗಳ ತಯಾರಿಕೆಯು ನಮ್ಮ ದೇಶದಲ್ಲಿ ಅತಿ ಅವಶ್ಯವಿರುತ್ತದೆ. ರೇಡಿಯಮನ್ನು ಉಪಯೋಗಿಸುವ ಆಸ್ಪತ್ರೆಗಳಿಗೆ ತಗಲಬಹುದಾದ ಅಪಾಯದ ವೆಚ್ಚಕ್ಕೆ ಹೆದರಿದ ಆ ವಿಷಯದತ್ತ ನಮ್ಮ ಸರಕಾರವು ಹೆಚ್ಚಿನ ಗಮನವಿತ್ತಿರುವುದಿಲ್ಲ. ಇದರಿಂದಾಗಿ ರೇಡಿಯಮ್ ವಿಜ್ಞಾನದ ಬೆಳವಣಿಗೆಯ ವಿಚಾರದಲ್ಲಿ ನಮ್ಮ ಸರಕಾರವು ತಪ್ಪಿದ ಧೋರಣೆಗೆ ಧಕ್ಕೆ ತಗಲಿದೆಯೆಂಬುದಾಗಿ ಡಾ| ರೈಯವರು ಸಕಾಲದಲ್ಲಿ ಎಚ್ಚರಿಕೆ ಕೊಟ್ಟಿರುವರು

ವೈಜಯಂತ ಮಂಟಪದಲ್ಲಿ

ಮಾಧ್ವ ತತ್ವಜ್ಞಾನ ಸಮ್ಮೇಳನವು ಉಡುಪಿಯಲ್ಲಿ ಶ್ರೀ ಕೃಷ್ಣ ಮಠದ ವೈಜಯಂತ ಮಂಟಪದಲ್ಲಿ ದಿನಾಂಕ ೪ರಿಂದ ಮೂರುದಿನಗಳವರೆಗೆ ಜರಗಿತು. ದೇವತಾ ಪ್ರಾರ್ಥನೆ ಹಾಗೂ ಪ್ರಿನ್ಸಿಪಾಲ್ ಕೌಲಗಿ ಶೇಷಾಚಾರ್ಯರಿಂದ ಸಂದೇಶ ವಾಚನಗಳಾದ ತರುವಾಯ ಸಮ್ಮೇಳನದ ಕಾರ್ಯ ತೊಡಗಿತು. ಪರ್ಯಾಯ ಶ್ರೀ ಪೇಜಾವರ, ಹಿರಿಯ ಪುತ್ತಿಗೆ, ಹಿರಿಯ ಮತ್ತು ಕಿರಿಯ ಕಾಣಿಯೂರು, ಸೋದೆ, ಅದಮಾರು, ಫಲಿಮಾರು, ಭಂಡಾರಕೇರಿ, ಭೀಮನಕಟ್ಟೆ, ಸುಬ್ರಹ್ಮಣ್ಯ ಮತ್ತು ಗೋಕರ್ಣ ಮಠಾಧೀಶರು ಸಮ್ಮೇಲನಕ್ಕಾಗಿ ಚಿತ್ತೈಸಿದ್ದರು. ಅಖಿಲಭಾರತದಷ್ಟು ವಿಸ್ತೃತ ಸ್ವರೂಪದಲ್ಲಿ ನಡೆಯುವ ಈ ಸಮ್ಮೇಳನಕ್ಕೆ ಮಾಧ್ವಪೀಠಾಧಿಪತಿಗಳೆಲ್ಲರೂ ಬರುವರೆಂದು ಸಾಮಾನ್ಯವಾದ ತಿಳುವಳಿಕೆ ಇತ್ತು. ಆದರೆ ಬೇರೆಡೆಯ ಮಠಾಧಿಪತಿಗಳಿರಲಿ, ಸ್ವತಃ ಉಡುಪಿಯ ಅಷ್ಟಮಠಗಳ ಯತಿಗಳಲ್ಲಿಯೂ ಕೆಲವರು ಉಪಸ್ಥಿತರಿರಲಿಲ್ಲವೆಂಬುದು ಶೋಚನೀಯ. ಇದು ಜನಸಾಮಾನ್ಯಕ್ಕೆ ಖೇದವುಂಟುಮಾಡಿರುವುದು ಸಹಜ. ಶ್ರೀ ಗೋಕರ್ಣ ಮಠಾಧೀಶರು ತಮ್ಮ ಆಶೀರ್ವಚನರೂಪದ ಚಿಕ್ಕ ಭಾಷಣದಲ್ಲಿ ಮಾಧ್ವ ಪೀಠಾಧೀಶರೆಲ್ಲರೂ ಸಮ್ಮೇಲನದಲ್ಲಿ ಉಪಸ್ಥಿತರಾದದ್ದು ಕಂಡುಬರುವುದಿಲ್ಲ ಎಂದು ಬಾಯಿಬಿಟ್ಟು ಹೇಳಿದರು. ಸ್ವಾಗತ ಸಮಿತಿಯ ಅಧ್ಯಕ್ಷಸ್ಥಾನದಿಂದ ಶ್ರೀ ಪೇಜಾವರ ಶ್ರೀಗಳು ಮಾಧ್ವಜನಾಂಗದಲ್ಲಿ ಒಳಭೇದವಿರಬಹುದಾದರೂ ಮಾಧ್ವಜನಾಂಗದ ಐಕ್ಯಕ್ಕೇನೂ ಕುಂದಿಲ್ಲವೆಂದು ನುಡಿದರು. ಹಾಗೆಂದು ಈ ಒಳಭೇದಗಳು ಆದಕ್ಕೂ ಹೆಚ್ಚಾಗಿ ಪೀಠಾಧಿಪತಿಗಳೊಳಗೆನೇ ಪರಸ್ಪರ ವೈಮನಸ್ಸು ಇದ್ದುದು ಸಮ್ಮೇಳನದಲ್ಲಿ ಕೂಡ ಸ್ಪಷ್ಟವಾಗಿ ವ್ಯಕ್ತಗೊಂಡುದು ಖೇದದಾಯಕವಾಗಿದೆ. ಕಾಣಿಯೂರು ಮಠದ ಕಿರಿಯಶ್ರೀಗಳು ತಮ್ಮ ಆಶೀರ್ವಚನರೂಪದ ಭಾಷಣವನ್ನು "ಉಡುಪಿಯಲ್ಲಿ ಮಾಧ್ವತತ್ವಜ್ಞಾನಸಮ್ಮೇಳನವನ್ನು ಶ್ರೀ ಪೇಜಾವರಸ್ವಾಮಿಗಳು ಕರೆಯುವರೆಂಬ ಸಂಗತಿ ನಮಗೆ ಪತ್ರಿಕೆಗಳಿಂದ ತಿಳಿಯಿತು" ಎಂಬುದಾಗಿಯೇ ಪ್ರಾರಂಭಿಸಿ, ಈ ಸಮ್ಮೇಳನದ ವಿಷಯದ ಪೂರ್ಣ ಹೊಣೆಗಾರಿಕೆಯು ಪರ್ಯಾಯ ಶ್ರೀಗಳ ತಲೆಯ ಮೇಲಿದೆ ಎಂದು ಸೂಚಿಸಿದ್ದಲ್ಲದೆ —ಇತರ ಪೀಠಾಧಿಪತಿಗಳೊಡನೆ ಪೂರ್ವ ಸಮಾಲೋಚನೆಯನ್ನೇನೂ ನಡೆಸಿಲ್ಲವೆಂದೂ ಧ್ವನಿಸಿದರು. ಇದು ಸಮ್ಮೇಲನದ ಯೋಜಕರಿಗೆ ತೀವ್ರ ಆಘಾತವನ್ನುಂಟು ಮಾಡಿತು. ಮತ್ತು ಸ್ಥಳೀಯ ಪೀಠಾಧಿಪತಿಗಳೊಬ್ಬರು ಮೈಸೂರು ರಾಜಪ್ರಮುಖರೂ, ಅಸಂಖ್ಯ ಪ್ರತಿನಿಧಿಗಳೂ ಸಹಸ್ರಾರು ಪ್ರೇಕ್ಷಕರೂ ಇರುವಾಗ ಈ ರೀತಿ ಉದ್ಗರಿಸಿದುದು ಸಮ್ಮೇಳನಕ್ಕೆ ಶೋಭೆಯುಂಟುಮಾಡಲಿಲ್ಲ. ತಮ್ಮೊಳಗಿನ ಒಡಕು ಬುದ್ಧಿಯನ್ನು ತೋರಿಸುವುದಕ್ಕೆ ಸಮ್ಮೇಳನ ರಂಗಭೂಮಿಯಾಗಿರಲಿಲ್ಲ. ಅಥಮಾರು ಶ್ರೀಗಳು ಕಾಣಿಯೂರು ಮಠದ ಶ್ರೀಗಳ ತಪ್ಪನ್ನು ಕೆಲಮಟ್ಟಿಗೆ ತಿದ್ದಿ—ಮಾಧ್ವ ತತ್ವಜ್ಞಾನ ಸಮ್ಮೇಳನದ ಯಶಾಪಯಶಗಳು ಸಮ್ಮೇಳನದಲ್ಲಿ ಭಾಗವಹಿಸಿದವರ ನಡವಳಿಕೆಯ ಮೇಲೆಯೇ ಇದೆ ಎಂಬುದಾಗಿ ಬೋಧಿಸಿದರು. ಪರ್ಯಾಯ ಶ್ರೀಗಳ ಮೇಲಿನ ದೊಡ್ಡ ಭಾರವೊಂದು ಈ ರೀತಿಯ ಉಪದೇಶದಿಂದ ಇಳಿದಂತಾಯಿತು. ಆದರೂ ಅವರ ಮನಸ್ಸಿನ ಉದ್ವೇಗವು ಇಳಿಯದೆ ತತ್ವಜ್ಞಾನ ಸಮ್ಮೇಳನವನ್ನು ಜರುಗಿಸಿ, ನಿಮ್ಮೆಲ್ಲರ ಕೈಯಿಂದ ಅಪಾರ ಹಣವನ್ನು ದುರ್ವಿನಿಯೋಗಿಸಿದೆನೆಂಬ ಅಪವಾದಕ್ಕೆ—ಮಹಾಪಾಪಕ್ಕೆ ನನ್ನನ್ನು ಗುರಿಯಾಗಿಸಬೇಡಿರಿ ಎಂದವರು ಕಳಕಳಿಯಿಂದ ಪ್ರಾರ್ಥಿಸುವಂತಾಯಿತು. ತತ್ವಜ್ಞಾನವು ಪುಣ್ಯಕಾರ್ಯವೆಂದು ಎಲ್ಲರೂ ಹೇಳುವಾಗ ಪಾಪದ ಭಯವು ಶ್ರೀಗಳಿಗೆ ತಟ್ಟಿದ್ದರೆ ಅದಕ್ಕೆ ಹಿನ್ನೆಲೆಯ ಅನೇಕ ಸಂಗತಿಗಳು ಕಾರಣವಾಗಿವೆ ಎಂದೂಹಿಸಬಹುದು. ರಾಜಪ್ರಮುಖರು ಮೊದಲನೆ ದಿನ ಆಗಮಿಸಿದ್ದುದರಿಂದ ಅಂದು ಪ್ರೇಕ್ಷಕ ಜನಸಂದಣಿ ವಿಶೇಷವಾಗಿತ್ತು. ವಿಷಯ ನಿಯಾಮಕ ಸಮಿತಿ ಹಾಗೂ ಬಹಿರಂಗ ಅಧಿವೇಶನ ಕಾಲದಲ್ಲಿಯೂ ಚರ್ಚೆಗಳು ಕಾವೇರಿದ ವಾತಾವರಣದಲ್ಲಿ ನಡೆದುವು. ಸ್ವಾಭಾವಿಕವಾಗಿ ಸಾತ್ವಿಕ ಬುದ್ಧಿಯಿಂದ ಕೂಡಿರಬೇಕಿದ್ದ ವಿದ್ವಾಂಸ ಬ್ರಾಹ್ಮಣರು ಕೆಲವರು ಅಧ್ಯಕ್ಷರ ಮೇಲೆ ಪಕ್ಷಪಾತತನದ ಆರೋಪ ಹೊರಿಸಿ ಸಭಾತ್ಯಾಗ ಮಾಡುವ ನಾಟಕ ನಡೆಸಿದರೆಂದರೆ ಯಾರಿಗೂ ಆಶ್ಚರ್ಯವಾದೀತು. ಇದರಿಂದುಂಟಾದ ಗೊಂದಲವನ್ನು ಶಾಂತ ಮಾಡಲು ಅಧ್ಯಕ್ಷರಿಗೆ ಸಾಕುಸಾಕಾಯಿತು. ಮಾಧ್ವಮಹಾಮಂಡಳದ ಘಟನೆಯ ನಿರ್ಮಾಣ ಕಾರ್ಯ ನಡೆಯುವಾಗ ಈ ರೀತಿ ಉದ್ರೇಕ ಬುದ್ಧಿಯನ್ನು ತೋರಿಸುವುದು ಚೆನ್ನಾಗಿರಲಿಲ್ಲ. ಅಥಮಾರು ಹಾಗೂ ಪೇಜಾವರ ಶ್ರೀಗಳು ಈ ಸಂದರ್ಭದಲ್ಲಿ ಮಾತನಾಡಿ ಇಷ್ಟು ಕಷ್ಟದಿಂದ ನಾವೆಲ್ಲಿ ನೆರೆದವರು ಘಟನೆಯನ್ನು ಪಾಸು ಮಾಡಿಸಿಕೊಳ್ಳಲೂ ಸಾಧ್ಯವಾಗದಿದ್ದರೆ— ನಾವೇನೂ ಮಾಡಿದಂತಾಗಲಿಲ್ಲವೆಂದು ಹೇಳಿದರು. ಸಮ್ಮೇಳನವು ಮಾಧ್ವ ಮಹಾಮಂಡಳವೆಂಬ ಒಂದು ಸಂಘದ ಸ್ಥಾಪನೆಯಾಗಬೇಕೆಂದು ನಿರ್ಧರಿಸಿ, ಅದಕ್ಕೆ ಅಧ್ಯಕ್ಷರಾಗಿ ಶ್ರೀ ಪೇಜಾವರ ಶ್ರೀಗಳನ್ನು ನೇಮಿಸಿತು. ಔದಾರ್ಯ ಬುದ್ಧಿಯಿಂದ ಶ್ರೀಗಳು ಈ ಪದವನ್ನು ಭಂಡಾರಕೇರಿ ಮತ್ತು ಅಥಮಾರು ಮಠಾಧೀಶರಿಗೆ ತಾವಾಗಿ ಕೊಡ ಮಾಡಿದರೂ ಅವರದನ್ನು ಸ್ವೀಕರಿಸಲಿಲ್ಲ. ಮಾಧ್ವ ಪೀಠಾಧಿಪತಿಗಳೆಲ್ಲರಿಗೂ ಒಬ್ಬೊಬ್ಬ ಪ್ರತಿನಿಧಿಯನ್ನು ನೇಮಿಸುವ ಅಧಿಕಾರವಿರುವ ಮತ್ತು ಪ್ರತ್ಯೇಕವಾಗಿ ಲೋಕ ನಿಯುಕ್ತ ಸದಸ್ಯರಿರುವ ೪೫ ಮಂದಿಯ ಕೇಂದ್ರ ಸಭೆಯೊಂದಿರಬೇಕೆಂದೂ ಅದರಲ್ಲಿಯೇ ಒಂಭತ್ತು ಜನರ ಕಾರ್ಯಕಾರಿ ಸಮಿತಿ ಇರಬೇಕೆಂದೂ ನಿರ್ಣಯವಾಯಿತು. ಗೋವಧೆ ನಿರೋಧಿಸಬೇಕೆನ್ನುವ ವರದಕ್ಷಿಣೆಯ ಪದ್ಧತಿಯನ್ನು ಕೊನೆಗಾಣಿಸಲು ಹವಣಿಸಬೇಕೆನ್ನುವ, ಅನಾಥ ಸ್ತ್ರೀಯರಿಗಾಗಿ ಅಬಲಾಶ್ರಮ ತೆರೆಯಬೇಕೆನ್ನುವ, ಬದರಿಯಲ್ಲಿ ಮಾಧ್ವ ಯಾತ್ರಿಕರಿಗಾಗಿ ಒಂದು ವಸತಿಗೃಹ ತೆರೆಯಬೇಕೆನ್ನುವ ನಿರ್ಣಯಗಳು ಸ್ವೀಕರಿಸಲ್ಪಟ್ಟವು. ಒಂದು ರುಪಾಯಿ ಸದಸ್ಯ ಹಾಸಲನ್ನಾಗಿ ಗೊತ್ತುಮಾಡಿದರು. ಸಮಾರೋಪ ಭಾಷಣ ಕಾಲದಲ್ಲಿ ಭಂಡಾರಕೇರೆ ಮಠದ ಶ್ರೀಗಳೂ ಪರ್ಯಾಯ ಪೀಠಾಧಿಪತಿಗಳೂ ತಮಗೆ ಎಲ್ಲ ಮಾಧ್ವ ಪೀಠಾಧಿಪತಿಗಳ ಬೆಂಬಲವೂ ದೊರೆತಿದೆಯೆಂದೂ ಎಲ್ಲರೂ ಈ ಸಮ್ಮೇಳನದಲ್ಲಿ ಸಹಕರಿಸಿರುವುದೇ ನಿಜವೆಂದೂ ಬಲವಾಗಿ ಪ್ರತಿಪಾದಿಸಿದರು. ಆದರೆ ಅದು ತಪ್ಪನ್ನು ಮುಚ್ಚಿಕೊಳ್ಳಲು ಮಾಡುವ ಪ್ರಯತ್ನದಂತಿತ್ತೆಂದರೇನೆ ಚೆಂದ. ಒಟ್ಟಾರೆ ಹೇಳುವುದಾದಲ್ಲಿ— ಸಮ್ಮೇಳನವು ಪರ್ಯಾಯ ಶ್ರೀಗಳವರ ಮನಸ್ಸಿನ ಬಾಲಿಶವಾದ ಆಶೆಯೊಂದರ ದ್ಯೋತಕವಾಗಿತ್ತು ಮಾತ್ರ ಹೊರತ ಅದರಲ್ಲಿ ಆಸ್ಥೆ ಇದ್ದ ಜನರು ಬಹಳ ಕಡಿಮೆ. ಮೂರು ದಿನಗಳೂ ಸಂಭ್ರಮದ ಔತಣವನ್ನು ಅನಂತೇಶ್ವರ ಹಾಗೂ ವೆಂಕಟ್ರಮಣ ದೇವಾಲಯದಲ್ಲಿ ಏರ್ಪಡಿಸಿದ್ದರು. ನೂರಾರು ಸ್ವಯಂಸೇವಕರು ಸಮ್ಮೇಳನ ಸ್ಥಳದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಯ್ದುಕೊಳ್ಳಲು ಸಿದ್ಧರಾಗಿದ್ದರು. ಸಮ್ಮೇಳನದ ಎರಡನೆಯ ದಿನ ಬಿಂದೂ ಮಾಧವ ರಾಯರ ಭಾರತ ಪ್ರವಚನ, ಇನ್ನು ಕೆಲವು ಮಹನೀಯರ ಭಾಷಣಗಳು ನಡೆದುವು. ಪ್ರತಿದಿನವೂ ರಾತ್ರಿ ಕಲಾಗೋಷ್ಠಿಯ ಅಭಿದಾನದಲ್ಲಿ ಧರ್ಮಸ್ಥಳ ಮೇಳದ ಆಟ, ಕೊಳಲುವಾದನ ಹಾಗೂ ನಾಟಕಾಭಿನಯಗಳು ಜರಗಿದುವು. ನಮ್ಮ ತಿಳುವಳಿಕೆಗೆ ಬಂದಂತೆ— ಸ್ಥಳೀಯ ಧುರೀಣರು ಕೆಲವರು ಸಮ್ಮೇಳನದ ಕಾರ್ಯದಲ್ಲಿ ಕೈ ಹಾಕಿ, ಅದನ್ನೊಂದು ಚೆಲುವಾದ ರೀತಿಯಲ್ಲಿ ಸಾಗಿಸಬೇಕೆಂದು ಸಂಕಲ್ಪಿಸಿ ದುಡಿದುದರಿಂದ ಇಷ್ಟರಮಟ್ಟಿಗಾದರೂ ಸಮ್ಮೇಳನ ಯಶಸ್ಸು ಹೊಂದಿತು ಹೊರತು—ಸ್ವತಃ ಮಾಧ್ವ ಪೀಠಾಧಿಪತಿಗಳ ಕಾರುಭಾರೇ ಆಗಿದ್ದರೆ, ಹಿಂದೊಮ್ಮೆ ಸಮ್ಮೇಳನ ನಿಂತುಹೋಗುವುದೆಂದಿದ್ದ ಭವಿಷ್ಯವೇ ನಿಜವಾಗುತಿತ್ತು. ಸ್ಪಷ್ಟವಾದ ಪೂರ್ವ ಕಲ್ಪನೆ ಮತ್ತು ವಿಶಾಲಾನುಭವದ ಅಭಾವದಲ್ಲಿ ಸಮ್ಮೇಳನ ನಡೆಯಿತು: ಅದರ ಯಶಾಪಯಶಗಳು ಇನ್ನು ಮುಂದೆ ಮಾಧ್ವ ಮಹಾಮಂಡಳದ ಕಾರ್ಯಕಲಾಪವನ್ನು ಹೊಂದಿಕೊಂಡಿದೆ.

—ಪ್ರೇಕ್ಷಕ

ಉಡುಪಿ

ಗೌರವಾರ್ಥ ಸಭೆ— ಸ್ಥಳೀಯ ಜನರಲ್ ಇನ್ವೆಸ್ಟ್‌ಮೆಂಟ್ ಎಂಡ್ ಕಮರ್ಶಿಯಲ್ ಕೋಓಪರೇಟಿವ್‌ನ ನೇತೃತ್ವದಲ್ಲಿ ದಿನಾಂಕ ೧ರಂದು ಸಂಜೆ ಸಿಂಡಿಕೇಟ್ ಬ್ಯಾಂಕಿನ ಮಾಳಿಗೆಯಲ್ಲಿ ನೂತನ ವರ್ಷಾರಂಭ ಗೌರವ ಸಭೆಯು ಮಿಶನ್ ಹೊಸ್ಪಿಟಲ್ ಡಾ| ಇ. ಲೊಂಬಾರ್ಡ್ ಅವರನ್ನು ಗೌರವಿಸುವಿಕೆಯಿಂದ ಜರಗಿತು. ಎಮ್. ಜಿ. ಎಮ್. ಕಾಲೇಜು ಪ್ರಿನ್ಸಿಪಾಲ್ ಎಚ್. ಸುಂದರರಾಯರು ಅಧ್ಯಕ್ಷತೆ ವಹಿಸಿದ್ದರು. ಮಿಶನರಿ ಸಂಸ್ಥೆಗಳು ವಿದ್ಯಾ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ಜನತೆಗೆ ಮಾಡುತ್ತಿರುವ ಸೇವೆಯನ್ನು ಉಡುಪಿಯಲ್ಲಿ ಡಾ. ಲೊಂಬಾರ್ಡರು ಮಾಡುತ್ತಿರುವ ನಿಸ್ವಾರ್ಥ ಸೇವೆಯನ್ನು ಪ್ರಶಂಸಿಸಿ ಡಾ| ಟಿ. ಎಮ್. ಎ. ಪೈ, ಟಿ. ಎ. ಪೈ. ಎಮ್. ಎಲ್. ಎ., ಟಿ. ಆರ್. ಎ. ಪೈ, ಕೊಚ್ಚಿಕಾರ್ ಮೆಡಿಷನ್, ಡಾ| ಪೈ, ಎ. ಲಕ್ಷ್ಮಿನಾರಾಯಣ ರಾವ್, ಡಾ. ಕೆ. ಎಲ್. [illegible], ಎಮ್. ಡಿ. ಉಸ್ಮಾನ್ ಸಾಹೇಬ್, ಎಮ್. ಡಿ. ಕಾಮತ್, ಆರ್. ಆರ್. [illegible] ಎಸ್. ಎನ್. [illegible] ಭಾಷಣಗಳಾದ ಮೇಲೆ ಡಾ. ಲೊಂಬಾರ್ಡ್ [illegible] ಅಧ್ಯಕ್ಷ ಶ್ರೀ ಟಿ. [illegible] ಸಭೆಯಲ್ಲಿ ಸ್ವಾಗತ [illegible] ಧನ್ಯವಾದಗಳನ್ನರ್ಪಿಸಿದರು.

ಮುನಿಸಿಪಲ್ ಸಭೆಯು— ದಿನಾಂಕ ೩ರಂದು ಸಂಜೆ ಚೆರ್ಮನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿ ಕಂಟ್ರಾಕ್ಟ್ ಕಮಿಟಿಗೆ ಶ್ರೀ ಎಮ್. ವಿಠಲ ಕಾಮತರೂ ನೇಮಕ ಸಮಿತಿಗೆ ಶ್ರೀ ಎ. ಮಂಜುನಾಥರಾಯರು ಬಹುಮತದಿಂದ ಆರಿಸಲ್ಪಟ್ಟರು.

ಡಾ| ಶೀನಪ್ಪ ಭಂಡಾರಿಗಳ ನಿಧನ— ಪುತ್ತೂರಿನ ಪ್ರಸಿದ್ಧ ಡಾಕ್ಟರರಾದ ಡಾ| ಕೆ. ಶೀನಪ್ಪ ಭಂಡಾರಿಗಳು ಇದೇ ತಾ. 1ರಲ್ಲು ಹೃದಯ ಸ್ತಂಭನದಿಂದ ಅಕಸ್ಮಾತ್ತಾಗಿ ನಿಧನ ಹೊಂದಿದರೆಂದು ತಿಳಿಸಲು ಅತ್ಯಂತ ವಿಷಾದಪಡುತ್ತೇವೆ. ಮೃತರು ಸರ್ವಜನಪ್ರಿಯರೂ, [illegible] ಕಾರ್ಯಕರ್ತರೂ, ಕಾಂಗ್ರೆಸ್ ಭಕ್ತರೂ ಆಗಿದ್ದರು. ಕಳೆದ ಮಹಾ ಚುನಾವಣೆಯಲ್ಲಿ ಕಾಂಗ್ರೆಸಿನ ಜಯಕ್ಕೆ ವಿಶೇಷ ಕಾರಣರಾದವರು ನಿಗರ್ವಿ ಹಾಗೂ ಸರಳ ಸ್ವಭಾವದವರಾಗಿದ್ದರು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 531/1952

ವಾದಿ—1 ಸುಬ್ಬಣ್ಣಯ್ಯ [illegible], 2 [illegible], 3 [illegible], 4 [illegible].

ಪ್ರತಿವಾದಿ ೧—1 ಕೃಷ್ಣ ಹೆಬ್ಬ, 2 ಗೋಪಾಲ ಹೆಬ್ಬಾ, 3 ಸದಾಶಿವ, 4 [illegible] 5 [illegible].

[illegible]

ಪ್ರತಿವಾದಿಯಿಂದ ವಾದಿಗೆ ಬರತಕ್ಕ [illegible] ಸಂವತ್ಸರಗಳ ಮೂಲಗೇಣಿ ಗೇಣಿಬಾಕಿ ಬಗ್ಗೆ [illegible] ವಾದಿಯು ದಾಖಲು ಮಾಡಿದ ಮೇಲಿನ ದಾವೆಯು ತಾ 12-1 53 ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಮೇಲಿನ ಕೋರ್ಟಿನ ಮುಂದೆ ಹಗಲು 11ಗಂಟೆಗೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು, ಎಂಬ ಸಂಗತಿ ಈ ಮೂಲಕ ತಿಳಿಯಪಡಿಸುತ್ತದೆ.

N. S Parameshwariah,
Advocate for Plff.

Goondapoor Date 5—1—53.

ನಡಿಯುವ ಚಿತ್ರ:—

❖ ಅಲಕ್ ನಿರಂಜನ್ ❖

ಭೂಮಿಕೆಯಲ್ಲಿ — ನಿರುಪರೊಯ್, ದುರ್ಗಾ ಖೋಟೆ, ತ್ರಿಲೋಕ್ ಕಪೂರ್, [illegible]

ಬರುವಚಿತ್ರಗಳು ನೌಬಹಾರ್, ಲಕ್ಷ್ಮಿನಾರಾಯಣ, ಆನ್

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಮಂಗಳೂರಿಗೆ ಮೈಸೂರು ರಾಜ ಪ್ರಮುಖರ ಆಗಮನ

ಸಂಘ ಸಂಸ್ಥೆಗಳಿಂದ ಮಾನ ಪತ್ರ ಸಮರ್ಪಣೆ.

ಮೈಸೂರು ರಾಜ ಪ್ರಮುಖ ಶ್ರೀ ಜಯಚಾಮ ರಾಜೇಂದ್ರ ಒಡೆಯರ್ ಬಹದೂರ್ ಅವರು ತಾ. ೩ರಂದು ಮೈಸೂರಿನಿಂದ ಮಂಗಳೂರಿಗೆ ಆಗಮಿಸಿದರು. ನಗರ ಸಭಾ ಭವನದಲ್ಲಿ ಸಂಜೆ ರಾಜ ಪ್ರಮುಖರಿಗೆ ನಗರ ಸಭಾಧ್ಯಕ್ಷ ಶ್ರೀ ಕೆ. ಎಸ್. ಎನ್. ಅಡಿಗರವರು ಸ್ವಾಗತವಿತ್ತರು. ಬೆಳ್ಳಿ ರೇಶ್ಮೆ ಬಟ್ಟೆಯ ಮೇಲೆ ಮುದ್ರಿಸಿದ ಬಿನ್ನವತ್ತಳೆಯನ್ನು ಅರ್ಪಿಸಲಾಯಿತು. ಬಿನ್ನವತ್ತಳೆಯಲ್ಲಿ ರಾಜ ಪ್ರಮುಖರು ತಮ್ಮ ಸಂಸ್ಥಾನವನ್ನು ಭಾರತ ಸರಕಾರಕ್ಕೆ ಸೇರಿಸಲು ನಿಸ್ಸಂಕೋಚವಾಗಿ ಒಪ್ಪಿದ್ದಕ್ಕಾಗಿ ಕೃತಜ್ಞತೆ ಪ್ರದರ್ಶನ, ಮೈಸೂರು ಕನ್ನಡ ಜಿಲ್ಲೆಗಳು ಒಟ್ಟಾಗಿ ಸೇರುವ ಕರ್ನಾಟಕ ಪ್ರಾಂತ ರಚನೆಯು ಬೇಗನೇ ಆಗಿ ರಾಜ ಪ್ರಮುಖರ ಮುಂದಾಳುತನವನ್ನು ವಹಿಸಬೇಕನ್ನುವ ಪ್ರಾರ್ಥನೆ, ಜೋಗಿನಿಂದ ದ. ಕ. ಜಿಲ್ಲೆಗೆ ವಿದ್ಯುತ್ ಸರಬರಾಯಿ ಬೇಗನೆ ಆಗಬೇಕೆಂಬ ಕೇಳಿಕೆ ಹಾಸನ ಮಂಗಳೂರು ರೈಲ್ವೆ ಲೈನ್ ಅಗತ್ಯ ಆಗಬೇಕು. ದ. ಕ. ಜಿಲ್ಲೆಯ ವಿದ್ಯಾರ್ಥಿಗಳಿಗೆ ಮೈಸೂರು ವಿದ್ಯಾ ಕ್ಷೇತ್ರದಲ್ಲಿ ಪ್ರವೇಶ ಸಿಕ್ಕ ಸೌಕರ್ಯಗಳು ಸಿಗಬೇಕು ಇತ್ಯಾದಿ ಸೂಚಿಸಲಾಗಿತ್ತು.

ರಾಜಪ್ರಮುಖರ ಉತ್ತರ — ಈ ಜಿಲ್ಲೆಯ ಮತ್ತು ನಗರದ ನೈಸರ್ಗಿಕ ಸೌಂದರ್ಯವನ್ನು ಪ್ರಶಂಸಿಸುತ್ತ ರಾಜ ಪ್ರಮುಖರು ಮಂಗಳೂರು ದಿನೇ ದಿನೇ ಪ್ರಾಮುಖ್ಯತೆಗೆ ಬರುವುದೆಂದೂ ನ್ಯಾಶನಲ್ ಹಾರ್ಬರ್ ಬೋರ್ಡಿನವರು ಮಂಗಳೂರಿನ ಪ್ರಾಮುಖ್ಯತೆಯನ್ನು ಖಂಡಿತವಾಗಿಯೂ ಗಣಿಸುವರೆಂದೂ ಹೇಳಿದರು. ಜೋಗಿನ ವಿದ್ಯುತ್ತಿನ ಉರಿತು ತಮ್ಮ ಸರಕಾರವು ಸಹಾನುಭೂತಿಯಿಂದ ವರ್ತಿಸುತ್ತಿದೆಯೆಂದೂ, ಹಾಗೆಯೇ ಮೈಸೂರು-ಮಂಗಳೂರಿಗೆ ರೈಲು ಹಾಕಿಸುವರೆಂದು ದೇಶಗಳಿಗೂ ಪ್ರಯೋಜನವಿದೆಯೆಂದೂ, ಕೇಂದ್ರ ಸರಕಾರದವರು ಈ ರೈಲು ಮಾರ್ಗದ ಪ್ರಾಮುಖ್ಯತೆ ಮತ್ತು ಕೂಡಲೇ ಆಗ ಬೇಕಾದ ಆವಶ್ಯಕತೆಯನ್ನು ಮನಗಂಡು ಆ ವಿಷಯದಲ್ಲಿ ಶೀಘ್ರ ಆಲೋಚನೆ ಮಾಡಿಯೇ ಯೋಗ್ಯ ನಿರ್ಧಾರಕ್ಕೆ ಬರುವುದಾಗಿ ನಂಬಿಗೆ ಭರವಸೆ ಇದೆಯೆಂದೂ ಹೇಳಿ ಮಂಗಳೂರು ನಗರ ಸಭೆಯ ಇಲ್ಲಿಯ ಜನತೆಗೂ ವಂದನೆಗಳ ನಿತ್ತರು. ನಗರ ಸಭಾಧ್ಯಕ್ಷರು ರಾಜಪ್ರಮುಖರಿಗೆ ಹಾರ ಕಾಣಿಕೆಗಳನ್ನರ್ಪಿಸಿದರು. ಲಘು ಉಪಹಾರವಿತ್ತು.

ವಣಿಕ ಸಂಘದ ಮಾನ ಪತ್ರ ಮತ್ತು ಉತ್ತರ — ಕೆನರಾ ವಣಿಕ ಸಂಘವು ರಾಜಪ್ರಮುಖರಿಗಿತ್ತ ಮಾನ ಪತ್ರದಲ್ಲಿ ಜಿಲ್ಲೆಯ ವಿಷಯಗಳ ನಗರ ಸಭೆಯ ಭಿನ್ನವತ್ತಳೆಯಲ್ಲಿ ಸೂಚಿಸಲಾದುವುಗಳೇ. ರಾಜಪ್ರಮುಖರು ವರ್ತಕ ಸಂಘದವರು ಭೇಟಿಯಾಗಲು ತಮಗೊದಗಿದ ಸಂದರ್ಭಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿ ಭಾರತದ ಭವಿಷ್ಯ ಆರ್ಥಿಕ ಅಭಿವೃದ್ಧಿ ಕಾರ್ಯದಲ್ಲಿ ವರ್ತಕ ಸಂಘಗಳು ಪ್ರಮುಖ ಪಾತ್ರ ವಹಿಸಬೇಕಾಗಿದೆಯೆಂದರು.

ಮಂಗಳೂರಿಗೂ ತನ್ನ ಸಂಸ್ಥಾನಕ್ಕೂ ರೈಲು ಮಾರ್ಗದಿಂದಾಗುವ ಪರಿಚಯ ಕೇಂದ್ರಸರಕಾರದವರು ಇದರ ಪ್ರಯೋಜನ ಅವಶ್ಯಕತೆಗಳನ್ನು ಗಮನಿಸಬೇಕೆಂದು ವ್ಯವಸ್ಥೆ ಮಾಡುವರೆಂದು ನನಗೆ ಭರವಸೆಯಿದೆ ಎಂದರು. ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ. ಅವರು ಧನ್ಯವಾದಗಳನ್ನರ್ಪಿಸಿದರು. ರಾಜಪ್ರಮುಖರ ಗೌರವಾರ್ಥವಾಗಿ ಮಿಲಿಟರಿ ಕಾರರ ಬಂಗ್ಲೆಯಲ್ಲಿ ರಾತ್ರಿ ಸ್ಥಳೀಯ ಅಧ್ಯಕ್ಷರ ಸಮಿತಿಕಡೆಯಿಂದ ಔತಣ ಸಮಾರಂಭ ನಡೆಯಿತು ದಿನಾಂಕ ೫ರಂದು ಪೂರ್ವಾಹ್ನ ರಾಜ ಪ್ರಮುಖರು ಜಪ್ಪಿನಮೊಗರಿನಲ್ಲಿ ಕಮ್ಯೂನಿಟಿ ಪ್ರೊಜೆಕ್ಟಿನ ಆಸ್ಪತ್ರೆಯದಲ್ಲಿ ಸ್ಥಾಪಿಸಲಿರುವ ಆಸ್ಪತ್ರೆ ಕಟ್ಟಡದ ಶಂಕು ಸ್ಥಾಪನೆಯನ್ನು ನೆರವೇರಿಸಿದರು. ಶ್ರೀ ಬಿ. ಎಸ್. ಬಾಸ್ಕರ ಶೆಟ್ಟಿಗಳು ಸ್ವಾಗತ ನೀಡಿದರು. ಆಸ್ಪತ್ರೆಯ ಕಟ್ಟಡಕ್ಕಾಗಿ ೧೦ ಎಕ್ರೆ ಇಪ್ಪತ್ತು ಸೆಂಟ್ಸ್ ಸ್ಥಳವನ್ನು ಶ್ರೀ ಸೀನು ಶೇಕ್ ಸೆಟ್ಟಿಯವರು ದಾನವಾಗಿತ್ತರು. ರಾಜಪ್ರಮುಖರಿಗೆ ಕಾರ್ಕಳದಲ್ಲಿ ಸಮುಚಿತ ಸ್ವಾಗತನೀಡಲಾಗಿತ್ತು.

ಭಾರತದ ಸರ್ವಸೇನಾ ನಾಯಕ ಶ್ರೀ ಕೆ ಎಮ್. ಕಾರ್ಯಪ್ಪನವರು ತಾ. ೪ರಂದು ಮಂಗಳೂರಿಗೆ ಆಗಮಿಸಿದರು. ಸಂಜೆ ಸೆಂಟ್ರಲ್ ಮೈದಾನಿನಲ್ಲಿ ಸೇನಾನಿ ಕಾರ್ಯಪ್ಪನವರು ಮಾಜಿ ಸೈನಿಕರಿಗೆ ಭೇಟಿಯನ್ನಿತ್ತರು.

ಶ್ರೀ ಬಿ ವೈಕುಂಠ ಬಾಳಿಗರು ಸೇನಾನಿ ಕಾರ್ಯಪ್ಪನವರನ್ನೂ ಮಾಜಿ ಸೈನಿಕರನ್ನೂ ಹಾಗೂ ಎಲ್ಲರನ್ನೂ ಸ್ವಾಗತಿಸಿ ಭಾಷಣ ಮಾಡಿದರು. ಜಿಲ್ಲಾ ನ್ಯಾಯಾಧಿಕಾರಿ ಶ್ರೀ ಪಿ. ಟಿ. ರಾಮನ್ ನಾಯರ್‌ರು ಮಾಜಿ ಸೈನಿಕರನ್ನೂ ಸೇನಾನಿ ಕಾರ್ಯಪ್ಪನವರನ್ನೂ ಸ್ವಾಗತಿಸಿದರು. ಕಾರ್ಯಪ್ಪನವರು ಯುದ್ಧದಲ್ಲಿ ಮಡಿದ ಸೈನಿಕರ ಕುಟುಂಬದವರಿಗೆ ಹಣವನ್ನೂ ಸಂಗ್ರಾಮದಲ್ಲಿ ವಿಜಯ ಹೊಂದಿದವರಿಗೆ ಬಹುಮಾನವನ್ನೂ ಹಂಚಿದರು. ತಾ ೫ರಂದು ಮಂಗಳೂರಿನ ನಿವಾಸಿಗಳನ್ನೂ ಮಾಜಿ ಸೈನಿಕರನ್ನೂ ನೋಡಲು ಅವಕಾಶ ದೊರೆತುದಕ್ಕೆ ತುಂಬಾ ಸಂತೋಷ ಪಟ್ಟರು. ಮಾಜಿ ಸೈನಿಕ ಸೈನ್ಯದಲ್ಲಿದ್ದಾಗ ತೋರಿಸಿದ ದೇಶಭಕ್ತಿ ಶಿಸ್ತುಗಳನ್ನು ಶ್ಲಾಘಿಸಿದರು. ಶ್ರೀ. ಎ. ಸುಂದರಣ್ಣನವರು ಧನ್ಯವಾದಗಳನ್ನರ್ಪಿಸಿದ ಬಳಿಕ ಸಭಾಂತ್ಯವಾಯಿತು.

ಮಾನಪತ್ರಗಳ ಅರ್ಪಣೆ — ಜಿಲ್ಲಾ ಬೋರ್ಡ್ ಆಫೀಸಿನಲ್ಲಿ ಮುನಿಸಿಪಲ್ ಕೌನ್ಸಿಲಿನ ಮತ್ತು ಜಿಲ್ಲಾ ಬೋರ್ಡಿನ ಪರವಾಗಿ ಸೇನಾನಿ ಕಾರ್ಯಪ್ಪನವರಿಗೆ ಮಾನವಿಯನ್ನರ್ಪಿಸಲಾಯಿತು. ಮುನಿಸಿಪಾಲಿಟಿ ಮತ್ತು ಜಿಲ್ಲಾ ಬೋರ್ಡುಗಳ ಪರವಾಗಿ ಶ್ರೀಗಳಾದ ಕೆ. ಸೂರ್ಯನಾರಾಯಣ ಅಡಿಗ ಮತ್ತು ಬಿ. ಮಂಜಯ್ಯ ಹೆಗ್ಗಡೆ. ಮಾನವಿಗಳನ್ನರ್ಪಿಸಿದರು. ಮಾನವಿಗೆ ಉತ್ತರವೀಯುತ್ತಾ ಸ್ವಾತಂತ್ರ್ಯ ದೊರಕಿದ ನಂತರ ಈ ಐದು ವರ್ಷಗಳಲ್ಲಿ ಸೈನಿಕರು ಸ್ಫೂರ್ತಿಯಿಂದ ಕೆಲಸ ಮಾಡಿದ್ದಾರೆಂದೂ ಮುಂದ ಮಾಡುವರೆಂಬ ಭರವಸೆ ತಮಗಿರುವುದೆಂದೂ ಹೇಳಿದರು ಅವಕಾಶ ಎಲ್ಲರೂ ಮಕ್ಕಳಿಗೆ ಯೋಗ್ಯ ಶಿಕ್ಷಣ ಕೊಡಿಸಿ ದೇಶದ ಭದ್ರತೆಯನ್ನು ಕಾಪಾಡ ಬೇಕೆಂದರು ತಾವು ಅಧಿಕಾರದಿಂದ ನಿವೃತ್ತಿ ಹೊಂದಿದರೂ ದೇಶದ ಸೇವೆ ಮಾಡಲು ಸಿದ್ಧನಾಗಿರುವೆನೆಂದರು.

ಮಲ್ಪೆ — ಜಿಲ್ಲಾ ಫಿಶರೀಸ್ ಟೀಚರ್ಸ್ ಯೂನಿಯನಿನ ವಾರ್ಷಿಕ ಅಧಿವೇಶನವು ತಾ 27-12-52ರಲ್ಲಿ ಫಿಶರೀಸ್ ಹೈಸ್ಕೂಲಿನಲ್ಲಿ ಜರಗಿ ಹಲವು ಠರಾವು, ಅಧ್ಯಕ್ಷರ ಬೋಧಪ್ರದ ಭಾಷಣಗಳಾಗಿ ಶ್ರೀಮತಿ ಸಾರಾ ಅವರನ್ನು ಅಧ್ಯಕ್ಷರಾಗಿರುವ ಕಾರ್ಯ ಸಮಿತಿ ರಚಿಸಲ್ಪಟ್ಟಿತು.

ಚೆರ್ಕಾಡಿ — ಇಲ್ಲಿಯ ಬೇಸಿಕ್ ಟ್ರೈನಿಂಗ್ ಹಾ॥ ಪ್ರಾ॥ ಶಾಲೆಯ ರಜತ ಜಯಂತಿಯ ಉತ್ಸವದ ಅಂಗವಾಗಿ ಕೃಷಿ ಕೈಗಾರಿಕಾ ಪ್ರದರ್ಶನ ಉದ್ಘಾಟನೆಯನ್ನು ಜಿಲ್ಲಾ ಕಲೆಕ್ಟರು ಕಳೆದ ತಾ 20ರಲ್ಲಿ ಉದ್ಘಾಟಿಸಿದರು. ತಾ 21, 22ರಲ್ಲು ಶ್ರೀಗಳಾದ ಎಚ್. ಶಂಕರರಾವ್ ಮತ್ತು ಎಲ್. ಎಸ್. ನಾಗರಾಜ್ ಮತ್ತು ಎಸ್. ಆರ್. ಪಾಟ್ಕರ್, ಬಿ ಪಿ ಅವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳು ಜರಗಿದವು. ನಾಟಕ, ವಿವಿಧ ವಿನೋದಾವಳಿಗಳ ಜೋಡಣೆಯೂ ಇತ್ತು.

ಕುಂದಿ ಗ್ರಾಮ — ಹಿರಿಯಡ್ಕದ ಸಮೀಪವಿರುವ ಕುಂದಿಗ್ರಾಮ ವಯಸ್ಕರ ಶಾಲೆಯ ವಾರ್ಷಿಕ ಪರೀಕ್ಷೆಯು ಕಳೆದ ತಾ. 26ರಲ್ಲು ಕಾರ್ಕಳ ಡೆಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಶ್ರೀನಿವಾಸ್ ಕಾಮತರಿಂದ ನೆರವೇರಿಸಲ್ಪಟ್ಟಿತು. ಅದೇ ದಿನ ಜರುಗಿದ ಸಭೆಯಲ್ಲಿ ಸಂಸ್ಕೃತ ವಿನೋದಾವಳಿ, ಭಜನೆ, ಯಕ್ಷಗಾನ ಕಾರ್ಯಕ್ರಮಗಳಾದುವು.

ಅಜ್ಜಾವರ ಗ್ರಾಮ ಕೇಂದ್ರಕ್ಕೊಂದು ಹಾ॥ ಪ್ರಾ॥ ಶಾಲಾವಶ್ಯಕತೆ — ಪುತ್ತೂರು ತಾಲೂಕಿಗೆ ಸೇರಿದ ಅಜ್ಜಾವರ ಮತ್ತು ಆಸುಪಾಸಿನಲ್ಲಿ ಎರಡು ಮೂರು ಎಲಿಮೆಂಟರಿ ಶಾಲೆಗಳು ಮಾತ್ರವಿದ್ದು ಆ ಶಾಲೆಯ ಮಕ್ಕಳು ಹಾ॥ ಪ್ರಾ॥ ಶಿಕ್ಷಣಕ್ಕಾಗಿ ನಾಲ್ಕೈದು ಮೈಲು ದೂರದ ಸುಳ್ಯ ಹಾ॥ ಪ್ರಾ॥ ಶಾಲೆಗೆ ಹೋಗ ಬೇಕಾಗುತ್ತದೆ ಈಗಿನ ಆರ್ಥಿಕ ಮುಗ್ಗಟ್ಟಿನ ಸಮಯದಲ್ಲಿ ಆರೆಹೊಟ್ಟೆಯ ಬಾಲಕ ಬಾಲಕೀಯರಿಗೆ ಹಾ॥ ಪ್ರಾ॥ ಶಿಕ್ಷಣ ದೊರೆಯುವಂತೆ ಈ ಕೇಂದ್ರ ಜಲಿಲ್ಲೊಂದು ಹಾ ಪ್ರಾ. ಶಾಲೆಯನ್ನು ವಿದ್ಯಾ ಇಲಾಖೆಯು ತೆರೆಯ ಬೇಕಾಗಿ ಗ್ರಾಮಸ್ಥರ ವಿನಂತಿಯಿದೆ.

ಅರ್ಡಿ — ಕಳೆದ ತಾ. ೧ರಂದು ಆಲ್ಬಾಡಿ, ಶೇಡಿಮನೆ, ಮಡಾಮಕ್ಕಿ ಗ್ರಾಮಗಳಿಗಾಗಿ ಇಲ್ಲೊಂದು ಅಂಚೆ ಕಚೇರಿ ತೆರೆಯಲ್ಪಟ್ಟಿದೆ.

ಬೊಂಬಾಯಿ

ದೇವಾಡಿಗ ಸುಧಾರಕ ಸಂಘದ — ವಾರ್ಷಿಕೋತ್ಸವವು ಕಳೆದ ತಾ. 21ರಲ್ಲು ಶ್ರೀ ಶೇಟ್ ಪ್ರತಾಪ ಸಿಂಹ ಸೂರ್ಜಿಭಾಯಿ ವಲ್ಲಭ ದಾಸರ ಅಧ್ಯಕ್ಷತೆಯಲ್ಲಿ ಸರ್ ಕೈವಾಸ್ಜಿ ಜಹಾಂಗೀರ್ ಸಭಾ ಸದನದಲ್ಲಿ ಜರಗಿತು. ವರದಿ ವಾಚನ ಪಾರಿತೋಷಕ ವಿತರಣೆ, ಸಭಿಕರ ಭಾಷಣ ಗಳಾದುವು. ವಿವಿಧ ವಿನೋದಾವಳಿಗಳಾಗಿ ಸಭಾಂತ್ಯ ವಾಯಿತು.

THE VIJAYA BANK LTD.

Head Office - - - MANGALORE.

1953

ನವವರ್ಷದ ಶುಭಾಶಯ!

ಕಳೆದ 22 ವರ್ಷಗಳ ನಮ್ಮ ಗಿರಾಕಿಗಳ ಯಥಾರ್ಥ ಸೇವೆ, ಪರಿಪಕ್ವ ಅನುಭವ, ಪ್ರಾಮಾಣಿಕತೆ, ಮತ್ತು ಉತ್ಸಾಹದಿಂದಾಗಿ ಮುಂದೆಯೂ ಯಥಾಪ್ರಕಾರ ನಿಮ್ಮ ಪ್ರೋತ್ಸಾಹ ಕೋರುವ,

ದಿ ವಿಜಯಾ ಬೇಂಕ್ ಲಿಮಿಟೆಡ್.

ಹೆಡ್ ಆಫೀಸು - - - ಮಂಗಳೂರು.



ಗೀತೆಯ ಕೈಗನ್ನಡಿ

ಭಗವದ್ಗೀತೆಯ ಸಮೂಲ ಭಾಷಾಂತರ

(ದಿ। ಹೊಸಕೆರೆ ಚಿದಂಬರಯ್ಯ)

ಬೆಲೆ 6-12-0

ನವಯುಗ ಪ್ರೆಸ್, ಉಡುಪಿ.

ನವಭಾರತ ಪುಸ್ತಕ ಭಂಡಾರ ಉಡುಪಿ.

ಎಮ್. ಜಿ. ಎಮ್. ಕಾಲೇಜಿಗೆ ಮೈಸೂರು ರಾಜಪ್ರಮುಖರ ಸಂದರ್ಶನ.

ಶ್ರೀ ಮಧ್ವಾಚಾರ್ಯರ ಮತ್ತು ಶ್ರೀ ವಾದಿರಾಜ ಸ್ವಾಮಿಗಳ ತೈಲಚಿತ್ರ ಅನಾವರಣ.

ಶ್ರೀ ರಾಮಕೃಷ್ಣ ಸದನದ ಉದ್ಘಾಟನೆ-ಆತ್ಮಪೂರ್ವ ಸಮಾರಂಭ

ಕರೆಸ್ಪೋಂಡೆಂಟ್ ಡಾ॥ ಟಿ. ಎಂ. ಎ. ಪೈ.

ಮೈಸೂರು ರಾಜಪ್ರಮುಖರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದೂರ್, ಅವರು ತಾ. ೪ರಂದು ಮಧ್ಯಾಹ್ನ ಉಡುಪಿಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿಗೆ ಸಂದರ್ಶನವಿತ್ತರು. ಕಾಲೇಜು ಟ್ರಸ್ಟಿನ ಸದಸ್ಯರೂ, ಕಾಲೇಜು ಪ್ರೊಫೆಸರ್ ಹಾಗೂ ವಿದ್ಯಾರ್ಥಿಗಳೂ ಅವರಿಗೆ ಸಂಭ್ರಮದ ಸ್ವಾಗತವಿತ್ತರು. ಡಾ॥ ಟಿ. ಮಾಧವ ಪೈ. ಡಾ॥ ಎಸ್. ಆರ್. ಪೈ, ಕೊಟ್ಟಿಕಾರ್ ಪದ್ಮನಾಭ ಪೈ, ಶ್ರೀ ಟಿ. ಎ. ಪೈ, ಎಮ್. ಎಲ್. ಎ; ಪ್ರಿನ್ಸಿಪಾಲ ಎಚ್. ಸುಂದರರಾವ್ ಮೊದಲಾದವರೊಡನೆ ರಾಜಪ್ರಮುಖರು ಕಾಲೇಜು ಚಟುವಟಿಕೆಗಳನ್ನು ಪರಿಶೀಲಿಸಿದರು. ಬಳಿಕ ಕಿಕ್ಕಿರಿದು ನೆರೆದಿದ್ದ ಸುಸಜ್ಜಿತ ಸಭಾಂಗಣಕ್ಕೆ ಆಗಮಿಸಿದರು. ಕರತಾಡನವಾಗಲು ಆಸನವನ್ನು ಸ್ವೀಕರಿಸಿದರು. ಹಲವಾರುಮಂದಿ ಪುಷ್ಪಮಾಲಿಕೆಗಳನ್ನು ಅರ್ಪಿಸಿದರು. ಪ್ರಾರ್ಥನೆಯಾದೊಡನೆ ಕುಮಾರಿಯರಾದ ಟಿ. ತಾರಾ ಪೈ, ಕೆ. ವನಜ ಮತ್ತು ಬಿ. ಜನ್ನಿಬಾಯಿಯವರು ಸ್ವಾಗತ ಗೀತೆಯನ್ನು ಹಾಡಿದರು. ಕಾಲೇಜು ಕರೆಸ್ಪೋಂಡೆಂಟ್ ಡಾ॥ ಟಿ. ಎಮ್. ಎ. ಪೈಗಳು ಸ್ವಾಗತ ಭಾಷಣವನ್ನೋದಿದರು. ರಾಜಪ್ರಮುಖರು ವಿದ್ಯಾಕ್ಷೇತ್ರದಲ್ಲಿ ಎಸಗುತ್ತಿರುವ ಕಾರ್ಯಕಲಾಪಗಳು, ಅಖಂಡ ಕರ್ನಾಟಕದ ಸುದಿನವು ಬೇಗನೇ ಬಂದು ರಾಜ ಪ್ರಮುಖರ ಮುಂದಾಳುತ್ವದಲ್ಲಿ ಕರ್ನಾಟಕದ ಶ್ರೇಯಸ್ಸು ಅಭಿವೃದ್ಧಿಗಳಾಗುವ ಬಯಕೆ ಇತ್ಯಾದಿ ವಿಷಯಗಳು ಸ್ವಾಗತ ಭಾಷಣದಲ್ಲಿ ಉಲ್ಲೇಖಿಸಲ್ಪಟ್ಟಿದ್ದವು. ನಂತರ ಶ್ರೀ ಕುತ್ಪಾಡಿ ಸೀತಾರಾಮರಾಯರು ಭಾಷಣ ಮಾಡುತ್ತಾ, ತಾನೂ ತನ್ನ ಸಹೋದರರೂ ಏಕಸ್ತರಾಗಿ ತಮ್ಮ ದಿವಂಗತ ಸಹೋದರ ಶ್ರೀ ರಾಮಕೃಷ್ಣನ ನೆನಪಿಗಾಗಿ ಶ್ರೀ ರಾಮಕೃಷ್ಣ ಭವನವನ್ನು ಈ ಕಾಲೇಜಿಗೆ ದಾನ ಮಾಡುವುದಾಗಿ ಅದನ್ನು ಉದ್ಘಾಟಿಸುವ ಕಾರ್ಯವನ್ನು ರಾಜಪ್ರಮುಖರು ನೆರವೇರಿಸಬೇಕಾಗಿಯೂ ಪ್ರಾರ್ಥಿಸಿದರು. ಶ್ರೀ ಸೋದೆಮಠದ ಶ್ರೀ ವಿಶ್ವೋತ್ತಮ ತೀರ್ಥ ಪಾದಂಗಳವರು ಚಿಕ್ಕ ಭಾಷಣವಮಾಡುತ್ತಾ ಈ ನೂತನ ಭವನದಲ್ಲಿ ಇಡುವುದಕ್ಕಾಗಿ ಶ್ರೀ ಮಧ್ವಾಚಾರ್ಯರ ಮತ್ತು ಶ್ರೀ ವಾದಿರಾಜ ಸ್ವಾಮಿಗಳವರ ತೈಲ ಚಿತ್ರಗಳನ್ನು ಕಾಲೇಜಿಗೆ ಕೊಡುತ್ತದಾಗಿಯೂ ಅವುಗಳ ಅನಾವರಣವನ್ನು ರಾಜ ಪ್ರಮುಖರು ನೆರವೇರಿಸಬೇಕಾಗಿಯೂ ಕೇಳಿಕೊಂಡರು.

ಟ್ರಸ್ಟಿನ ಸದಸ್ಯರಲ್ಲೊಬ್ಬರಾದ ಡಾ॥ ಎಸ್. ಆರ್. ಪೈ.

ಕಾಲೇಜು ಟ್ರಸ್ಟಿನ ಸದಸ್ಯ ಡಾ॥ ಎಸ್. ಆರ್. ಪೈಗಳು ಮಧ್ವಾಚಾರ್ಯರ ಕಾಲದಿಂದಲೂ ಮಲ್ಪೆಯು ಪ್ರಾಕೃತಿಕ ಯೋಗ್ಯತೆಯುಳ್ಳ ಬಂದರಾಗಿತ್ತೆಂಬುದನ್ನೂ ಅದೀಗ ಪ್ರಬದ್ಧ ಬಂದರಾಗುವಂತೆ ಪ್ರಯತ್ನಿಸುವ ಆವಶ್ಯಕತೆಯನ್ನೂ ವಿವರಿಸಿ ತೈಲಚಿತ್ರ ಅನಾವರಣ ಮತ್ತು ರಾಮಕೃಷ್ಣ ಭವನದ ಉದ್ಘಾಟನೆಯನ್ನು ಯಶಸ್ವಿಗೊಳಿಸಬೇಕಾಗಿ ರಾಜಪ್ರಮುಖರನ್ನು ಪ್ರಾರ್ಥಿಸಿದರು.

ರಾಜಪ್ರಮುಖರು ತೈಲಚಿತ್ರಗಳ ಅನಾವರಣ ಮಾಡಿ ತಮಗಿತ್ತ ಸಂಭ್ರಮದ ಸ್ವಾಗತಕ್ಕಾಗಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ವಿದ್ಯಾಕ್ಷೇತ್ರದಲ್ಲಿ ನಿಜವಾದ ವಿದ್ಯಾಸೇವೆ ಮಾಡುವುದು ಶ್ರೀ ಕೆ. ಸೀತಾರಾಮರಾಯರ ಮತ್ತು ಅವರ ಸಹೋದರರ ಕಾರ್ಯದಿಂದ ತಿಳಿಯಬಹುದು. ಈ ಕಾಲೇಜು ನಾಲ್ಕುವರುಷ

ಪ್ರಿನ್ಸಿಪಾಲ್ ಶ್ರೀ. ಎಚ್. ಸುಂದರರಾವ್.

ಗಳೊಳಗಾಗಿ ಸಾರ್ವಜನಿಕರ ಮತ್ತು ಮದ್ರಾಸು ಸರಕಾರದ ಸಹಕಾರದಿಂದ ಉನ್ನತಿಯನ್ನು ಪಡೆದುದು ಅಭಿನಂದನೀಯವೆಂದೂ ಇತರ ಇಂತಹ ಖಾಸಗಿ ಸಂಸ್ಥೆಗಳಿಗೂ ಮೇಲ್ಪಂಕ್ತಿಯಾಗಿರುವುದೆಂದೂ ಈ ಕಾಲೇಜು ಪ್ರಗತಿ ಪಥದಲ್ಲಿ ಮುನ್ನಡಿಯಿಟ್ಟು ಬೇಗನೆ ಫಸ್ಟ್ ಗ್ರೇಡ್ ಕಾಲೇಜಾಗಲೆಂದೂ ಹರಸಿ, ರಾಮಕೃಷ್ಣ ಸದನವನ್ನು ಉದ್ಘಾಟಿಸಿದರು. ತೈಲಚಿತ್ರ ತಯಾರಕರಾದ ಶ್ರೀ ಎಂ. ಎಸ್. ಶಿರಾಲಿಯವರಿಗೆ ಸುವರ್ಣ ಪದಕವನ್ನು ಪಾರಿತೋಷ ಕೊಟ್ಟಮೇಲೆ ಪ್ರಿನ್ಸಿಪಾಲ್ ಎಚ್. ಸುಂದರರಾಯರು ಧನ್ಯವಾದಗಳನ್ನರ್ಪಿಸಿದರು.

ಸಂಸ್ಕೃತ ಕಾಲೇಜಿಗೆ ಸಂದರ್ಶನ

ಸಂಜೆ ರಾಜಪ್ರಮುಖರು ಸಂಸ್ಕೃತ ಕಾಲೇಜಿಗೂ ಸಂದರ್ಶನವಿತ್ತರು. ಪ್ರಿನ್ಸಿಪಾಲ್ ಕೌಲಗಿ ಶೇಷಾಚಾರ್ಯರು ಅಷ್ಟಮಠಾಧಿಪತಿಗಳ ಪರವಾಗಿ ಮಾನಪತ್ರವನ್ನು ಅರ್ಪಿಸಿದರು. ಶ್ರೀ ಅಥಮಾರು ಸ್ವಾಮಿಗಳವರು ಸಂದರ್ಭೋಚಿತ ಮಾತುಗಳನ್ನಾಡಿದರು.

ಮುನಿಸಿಪಾಲಿಟಿಯ ಮಾನಪತ್ರ

ಉಡುಪಿ ಮುನಿಸಿಪಲ ಮೈನ್ ಶಾಲೆಗೆ ರಾಜಪ್ರಮುಖರು ಸಂಜೆ ಆಗಮಿಸಿದಾಗ ಕೌನ್ಸಿಲು ಸದಸ್ಯರು ಸ್ವಾಗತ ನೀಡಿದರು. ಚೇರ್‌ಮೆನ್ ಶ್ರೀ ಯು. ಎಸ್. ನಾ



ಎಂ. ಜಿ. ಎಂ. ಕಾಲೇಜ್, ಟ್ರಸ್ಟಿನ ಸದಸ್ಯರಲ್ಲೊಬ್ಬರೂ, ನಗರಸಭಾಧ್ಯಕ್ಷರೂ ಆದ ಶ್ರೀ. ಯು. ಎಸ್. ನಾಯ್ಡು ರು.

ಯ್ಡುರು ನಗರಸಭೆಯ ಮಾನಪತ್ರವನ್ನೊಪ್ಪಿಸಿದರು. ರಾಜಪ್ರಮುಖರು ಉತ್ತರವೀಯುತ್ತಾ ಯಾತ್ರಾ ಸ್ಥಳಗಳ ನಗರ ಸಭೆಗಳು ನಗರ ಸ್ವಚ್ಛತೆ, ಯಾತ್ರಿಕರ ಸೌಕರ್ಯ ಮೊದಲಾದುವುಗಳ ಕಡೆಗೆ ಲಕ್ಷ್ಯವೀಯಬೇಕಾದುದು ಆದ್ಯಕರ್ತವ್ಯವೆಂದು ಮೊದಲಾಗಿ ಹೇಳಿದರು. ಮುನಿಸಿಪಲ್ ವೈಸ್‌ಛೇರ್‌ಮೆನ್ ಡಾ॥ ಪಿ. ವಿ. ನ್ಯಾಸಂಯವರು ಧನ್ಯವಾದಗಳನ್ನರ್ಪಿಸಿದರು.

ತಾ. 5ರಲ್ಲಿ ಸಮುದ್ರ ಸ್ನಾನ ಮುಗಿಸಿಕೊಂಡು ರಾಜಪ್ರಮುಖರು ಮಂಗಳೂರು ಕಡೆ ಪ್ರಯಾಣ ಬೆಳೆಸಿದರು.



ಎಮ್. ಜಿ. ಎಮ್. ಕಾಲೇಜಿನ ನವೀನ ಸುಂದರವಾದ ಕಟ್ಟಡ.

ನಿತ್ಯ ಜೀವನದಲ್ಲಿ ತತ್ವಜ್ಞಾನದ ಸ್ಥಾನ

(೩ನೇ ಪುಟದಿಂದ)

ನಿಯಾಮಕವಾಗಿ ಸಚ್ಚಿದಾನಂದಾತ್ಮ ಸ್ವರೂಪವಾದ ಪರಮಾತ್ಮ ದರ್ಶನವೇ ಶಾಶ್ವತ ಸುಖ ರೂಪವಾದ ಮೋಕ್ಷಕ್ಕೆ ಸಾಧನವೆಂದು ಸಾರುವುವು. ಈ ತತ್ವವನ್ನ ವಲಂಬಿಸಿ, ವಾದವಿವಾದ ಪರಿಹಾರ ಮೂಲಕ ಉಪನಿಷತ್ತತ್ವ ಸ್ಥಾಪನೆಗಾಗಿಯೇ ವೇದಾಂತ ಶಾಸ್ತ್ರದ ಪ್ರವೃತ್ತಿಯಾಯಿತೆಂದು ರಾಜಪ್ರಮುಖರು ವಿವರಿಸಿದರು.

ವೇದಾಂತ ಸಮಾಜ

"ಸ್ವಧರ್ಮ ಕರ್ಮವಿಮುಖಾಃ ಕೃಷ್ಣ ಕೃಷ್ಣೇತಿ ವಾದಿನಃ। ತೇಹರೇ ದ್ವೇಷಿಣೋ ಮೂಢಾಃ ಧರ್ಮಾರ್ಥಂ ಜನ್ಮಯದ್ಧರೇಃ॥ ಎಂದರೆ, ನ್ಯಾಯವಾಗಿ ತಾವು ಯಾವ ಧರ್ಮ, ಯಾವ ಕರ್ಮವನ್ನು ಮಾಡಬೇಕೋ ಅದನ್ನು ತ್ಯಜಿಸಿ, ಕೃಷ್ಣ! ಕೃಷ್ಣ! ಎಂಬ ಶಬ್ದ ಮಾತ್ರ ಉಚ್ಚಾರ ಮಾಡುವವರು ವಾಸ್ತವವಾಗಿ ಹರಿದ್ವೇಷಿಗಳು. ಕೃಷ್ಣನ ಜನ್ಮ ಧರ್ಮ ಸಂಸ್ಥಾಪನೆಗಾಗಿ ಜ್ಞಾನ, ಜ್ಞಾನಪೂರ್ವಕ ಮಾಡುವ ಕರ್ಮವೇ ಈ ಧರ್ಮ. ಇದನ್ನು ತಿಳಿಯಲು ವೇದಾಂತವೊಂದೇ ದಾರಿ ಎಂದು ಮಹಾ ಸ್ವಾಮಿಯವರು ಉದ್ಗರಿಸಿದರು.

ವೇದಾಂತ ಸಮಾಜ ಕೇವಲ ತಾರ್ಕಿಕ ರಲ್ಲ, ಅದು ಅಜ್ಞರಲ್ಲ. ಅದು, ಜ್ಞಾನಿಗಳ ಸಮಾಜ. ನಮಗೆ ಸಂಬಂಧಪಟ್ಟ ಪ್ರಪಂಚದಲ್ಲಿ ಈ ಸಮಾಜರಚನೆಯ ಕೀರ್ತಿ ಶಂಕರ ರಾಮಾನುಜ ಮಧ್ವರೆಂಬ ಆಚಾರ್ಯ ತ್ರಯರಿಗೆ ಸೇರಿದೆ. ಇವರ ದೃಷ್ಟಿಯು ವಿಚಾರಶುದ್ಧಿ ವಿದ್ಯಾಶುದ್ಧಿ, ಮತ್ತು ಬ್ರಹ್ಮಭಾವ ಶುದ್ಧಿಯನ್ನು ಕೇಂದ್ರೀಕರಿಸಿಕೊಂಡಿರುವುದು. ಇದನ್ನು ಸಹೃದಯ ಭಾವದಿಂದ ತಿಳಿದು ಗುರುಮುಖೇನ ಅರಿತು ವಿದ್ಯಾ ಸಾಮರ್ಥ್ಯವನ್ನು ಪಡೆಯುವುದೇ ವೇದಾಂತಾಧ್ಯಯನದ ಫಲ. ಶ್ರೀ ಮನ್ಮಧ್ವಾಚಾರ್ಯರು ವೈರಾಗ್ಯ, ನಿಪುಣ ಭಕ್ತಿಯೇ ಬ್ರಹ್ಮಜಿಜ್ಞಾಸೆಯಲ್ಲಿ ಅಧಿಕಾರವೆಂದು ತೋರಿಸಿರುವರು. ವಿಷ್ಣು ಭಕ್ತಿಯೆಂಬುದು ವಿಷ್ಣುವಿನ ಸರ್ವೋತ್ತಮತ್ವಜ್ಞಾನವೆಂದು ಆಚಾರ್ಯರ ಮತ. ಇವರ ವ್ಯಾಖ್ಯಾನದಂತೆ ಸರ್ವೋತ್ತಮನು ತ್ರಿಮೂರ್ತಿಗಳಿಗೂ ವ್ಯಾಪ್ತನೂ ಅವ್ಯಕ್ತವಾದ ಆನಂದ. ಸರ್ವೋತ್ತಮನು ಬ್ರಹ್ಮ ಪ್ರಾಪ್ತಿಯೇ ಮೋಕ್ಷ. ಜಿಜ್ಞಾಸೆಯಿಂದ ಹುಟ್ಟಿದ ಅವನ ಜ್ಞಾನ ಮತ್ತು ಅದರಿಂದ ಹುಟ್ಟಿದ ಪ್ರಸಾದದಿಂದಲೇ ಅಧಿಕಾರಿಯು ಮುಕ್ತನಾಗುತ್ತಾನೆ ಎಂದು ಆಚಾರ್ಯರು ಮೋಕ್ಷ ಸಾಧನವನ್ನು ನಿರೂಪಿಸಿದ ಕ್ರಮ.

ಸಮ್ಮೇಳನದ ಔಚಿತ್ಯ

ಮಧ್ವಾಚಾರ್ಯರ ಈ ಅಭಿಪ್ರಾಯದ ದೃಷ್ಟಿ, ಪ್ರತಿಭೆ ಸಂಸ್ಕಾರ ಮೂರೂ ಇರಬೇಕು. ನ್ಯಾಯಾದಿ ದರ್ಶನಗಳಲ್ಲಿ ಏನೇ ಮಹತ್ವವಿರಲಿ, ಅವುಗಳಲ್ಲಿ ಶುಷ್ಕ ವಿಚಾರಕ್ಕೆ ತಾರ್ಕಿಕರೀತಿಗೆ ಪ್ರಾಶಸ್ತ್ಯ ತರುವ ದೃಷ್ಟಿಯಲ್ಲಿ ಈ ನಿಮಿತ್ತದಿಂದ ಅವು ಜ್ಞಾನಿ ಸಮ್ಮತವಾಗಲಿಲ್ಲ. ವೇದಾಂತ ಶಾಸ್ತ್ರ ಹುಟ್ಟಲು ಇದೇ ಕಾರಣ. "ತಮಾತ್ಮಸ್ಥಂ ಯೇಽನುಪಶ್ಯಂತಿ ಧೀರಾಃ ತೇಷಾಂ ಸುಖಂ ಶಾಶ್ವತಂ ನೇತರೇಷಾಂ" "ಐಕಾತ್ಮ್ಯ ಪ್ರತ್ಯಯಸಾರಂ" ಎಂದು ಮುಂತಾಗಿ ಉಪನಿಷತ್ತುಗಳು ಸರ್ವಸತ್ತ ವೇದಾಂತವು ತತ್ವಾನುಸಂಧಾನದಲ್ಲಿ ಅವರಿಗಿದ್ದ ಆತಾಕಿತಾನಂದವನ್ನು ಸೂಚಿಸುತ್ತದೆ. ಪಾಮರರ ದೈವ ಭಕ್ತಿಯು ತನ್ನ ಸ್ವಾರ್ಥ ಸಾಧನೆಗೆ ತಾರ್ಕಿಕರನ್ನು ಒಳಮಾಡಿಕೊಳ್ಳುವಂತೆ ದೈವವನ್ನೂ ಒಳಮಾಡಿಕೊಂಡ ರೀತಿ. ಜ್ಞಾನಿಯ ದೈವಭಕ್ತಿ ಉದಾತ್ತ ತತ್ವಾನುಸಂಧಾನ ರೂಪ. ಇಂಥ ಅನುಸಂಧಾನದ ಆಶ್ರಯದಲ್ಲಿ ರೂಪುಗೊಂಡ ಲೌಕಿಕ ಜೀವನವು ಶಾಂತಿ ಸುಖಗಳಿಗಾಶ್ರಮ. ಈ ತತ್ವಜ್ಞಾನ ಶುದ್ಧಿಗಾಗಿ ರೂಪಿತವಾದ ಲೋಕ ಜೀವನವು ಧ್ಯೇಯದಿಂದ ಪೂರ್ಣವಾಗಿ ಧ್ಯೇಯಕ್ಕೆ ಸಾಧನವಾಗಿ ಪವಿತ್ರವಾದುದು. ಇಂಥ ಸಂಸ್ಕೃತಿಯನ್ನು ಲೋಕಕ್ಕೆ ಅನುಗ್ರಹಿಸಿದವರು ಶ್ರೀ ಮಧ್ವಾಚಾರ್ಯರು.

ತತ್ವಜ್ಞಾನದಿಂದ ತತ್ವಜ್ಞಾನಕ್ಕೋಸ್ಕರವೇ ರಚಿತವಾಗಿರುವ ಸಮಾಜವೇ ವಿಶ್ವ ಸಮಾಜ: ಇದನ್ನು ಸಾಧಿಸುವ ದೃಷ್ಟಿಯೇ ಇಂಥ ಸಮ್ಮೇಳನದ ಒಂದೇ ಔಚಿತ್ಯವೆಂದು ರಾಜಪ್ರಮುಖರು ಸಾರಿದರು. ಅಲ್ಲದೆ, ಶ್ರೀ ಕೃಷ್ಣ ಪರಮಾತ್ಮನೇ ಮೂರ್ತಿ ಮತ್ತಾಗಿ ನಿಂತು ಅವನ ಅನುಗ್ರಹದಿಂದ ಈ ತತ್ವಜ್ಞಾನ ಪ್ರತಿಷ್ಠಾಪನೆಯ ಪವಿತ್ರ ಕಾರ್ಯ ಪೂರ್ಣವಾಗಿ ನಡೆದು ಸುಖ ಶಾಂತಿಗಳು ಶಿಷ್ಯ ವೃಂದಕ್ಕೆ, ಭಕ್ತ ವೃಂದಕ್ಕೆ, ಇಡೀ ಪ್ರಪಂಚಕ್ಕೆ ಸಂಭವಿಸಿ ಪವಿತ್ರ ವೇದಾಂತ ಮರ್ಯಾದೆಯೂ ಉಚ್ಚ ಸ್ಥಾನದಭಾವ ವಿಶೇಷಗಳೂ ತಮ್ಮ ಮಟ್ಟದಿಂದ ಕೆಳಕ್ಕಿಳಿಯದೆ ಜನರ ಪರಿಚಯಕ್ಕೆ ಬಂದು, ಭಾವೀ ಸಮಾಜಕ್ಕೆ ಪ್ರತಿಷ್ಠಾಪಕವಾಗುವಂತೆ ಶ್ರೀ ಕೃಷ್ಣ ಪರಮಾತ್ಮನನುಗ್ರಹಿಸಲೆಂದು ಅನನ್ಯ ಭಕ್ತಿಯಿಂದ ರಾಜಪ್ರಮುಖರು ಪ್ರಾರ್ಥಿಸಿದರು.

ತತ್ವಸಾಕ್ಷಾತ್ಕಾರದ ಆಗತ್ಯ

ಅಧ್ಯಕ್ಷಸ್ಥಾನದಿಂದ ಶ್ರೀ. ಬಿ. ವೆಂಕಟೇಶಾಚಾರ್ ಅವರು ಮಾಡಿದ ಭಾಷಣದಲ್ಲಿ ವೇದಾಂತ ಶಾಸ್ತ್ರ ಮತ್ತು ತತ್ಸಂಬಂಧಿ ತತ್ವ ಜ್ಞಾನಗಳು ಜನಪ್ರಿಯವಾಗುವಂತೆ ಏನು ಮಾಡಬೇಕೆಂಬುದನ್ನು ಕೆಲವು ಸೂಚನೆಗಳ ಮೂಲಕ ವಿವರಿಸಿದರು. ಈಗ ಸುಮಾರು ಐವತ್ತು ವರ್ಷಗಳಿಂದೀಚೆಗೆ ನಮ್ಮ ದೇಶದ ಜನಗಳ ಮನೋಭಾವವು ವಿಜ್ಞಾನ ಶಾಸ್ತ್ರದ ಬಹು ಆಶ್ಚರ್ಯಕರವಾದ ವೃದ್ಧಿಯಿಂದಲೂ ತನ್ಮೂಲಕವಾದ ಪರದೇಶ ಸಂಚಾರದ ಸೌಲಭ್ಯದಿಂದಲೂ ಬಹುವೇಗದಿಂದ ಬದಲಾವಣೆಯನ್ನು ಹೊಂದಿದೆ. ಇದರ ಪರಿಣಾಮವಾಗಿ ಈಗಿನ ಯುವಕರಿಗೆ ಅನೂಚಾನವಾಗಿ ಬಂದಿರುವ ವೈದಿಕ ಪದ್ಧತಿಯಲ್ಲಿ ನಂಬಿಕೆಯು ಕಡಿಮೆಯಾಗಿದೆ. ಆರ್ಯ ಸಂಸ್ಕೃತಿಯು ಮತ್ತು ಭಾರತೀಯ ತತ್ವ ಶಾಸ್ತ್ರಗಳ ಔನ್ನತ್ಯವನ್ನು ಚೆನ್ನಾಗಿಬಲ್ಲ ಹಿರಿಯರು ಈಗಿನ ಯುವಕರಿಗೂ ಯುವತಿಯರಿಗೂ ನಮ್ಮ ಸಂಸ್ಕೃತಿಯಲ್ಲಿಯೂ ತತ್ವಜ್ಞಾನದಲ್ಲಿಯೂ ಮತದಲ್ಲಿಯೂ ಪೂಜ್ಯ ಭಾವವು ಬಂದು, ಅದರಂತೆ ಅವರು ತಮ್ಮ ದೈನಂದಿನ ನಡೆ ನುಡಿಗಳನ್ನು ತಿದ್ದಿ ಕೊಳ್ಳುವದಕ್ಕೆ ಏನು ಮಾಡಬೇಕೆಂಬುದನ್ನು ಪರ್ಯಾಲೋಚಿಸಬೇಕು; ಮತ್ತು ಯೋಗ್ಯವಾದ ಮಾರ್ಗವನ್ನು ಕಲ್ಪಿಸತಕ್ಕದು. ಈ ಕಾರ್ಯವನ್ನು ನಾವು ಕ್ಷಿಪ್ರದಲ್ಲಿಯೇ ಕೈಗೊಳ್ಳದೆ ಹೋದಲ್ಲಿ ಬಹುಬೇಗನೆ ಜನಗಳಿಗೆ ನಮ್ಮ ಮತದ ಸಂಪರ್ಕವೇ ಇಲ್ಲದ ಹಾಗಾಗಿ ನಾಸ್ತಿಕ್ಯವು ಹರಡುವುದು. ನಾಸ್ತಿಕ್ಯವು ಹರಡಿದಲ್ಲಿ ಪರಸ್ಪರ ದ್ವೇಷಾಸೂಯೆಗಳಿಂದ ಜನಾಂಗವು ದುಃಖಕ್ಕೆ ಈಡಾಗುವುದು. ಈಗ ಜನಾಂಗಗಳಲ್ಲಿ ಬೇರೂರಿರುವ ಪರಸ್ಪರ ದ್ರೋಹಚಿಂತನೆಯೆಂಬ ರೋಗಕ್ಕೆ ಆಸ್ತಿಕ್ಯ ಬುದ್ಧಿಯುಕ್ತವಾದ ತತ್ವ ಸಾಕ್ಷಾತ್ಕಾರವಲ್ಲದೆ ಬೇರೊಂದು ಔಷಧವಿಲ್ಲೆಂದು ತಮ್ಮ ದೃಢಾಭಿಪ್ರಾಯವನ್ನು ಅಧ್ಯಕ್ಷರು ಪ್ರಕಟಿಸಿದರು.

ಸ್ವಾನುಷ್ಠಾನದ ಮಹತ್ವ

ಈಗಿನ ನಮ್ಮ ಸರಕಾರ ಮತಗಳ ವಿಷಯದಲ್ಲಿ ಸಮಾನಭಾವ ವರ್ತನವುಳ್ಳದ್ದು. ಮಾಧ್ವ ಮತಾನುಯಾಯಿಗಳಾದ ನಾವು ಇತರ ಪಂಗಡದವರಿಗೆ ವ್ಯಕ್ತಿದ್ವೇಷ ಮೂಲಕ ಉದ್ವೇಗವಾಗದಂತೆ ನಮ್ಮ ಮತಾನುಷ್ಠಾನವನ್ನೂ ಅದರ ಪ್ರಚಾರವನ್ನೂ ಮಾಡುವುದರಲ್ಲಿ ಉದ್ಯುಕ್ತವಾಗಬೇಕೆಂದು ಅಧ್ಯಕ್ಷರು ಬೋಧಿಸಿದರು. ಲೌಕಿಕ ನಡವಳಿಕೆಯಲ್ಲಿ ಎಲ್ಲ ಮತಸ್ಥರಲ್ಲಿಯೂ ಅತ್ಯಾವಶ್ಯಕವಾಗಿ ಇರಬೇಕಾದ ಸೌಹಾರ್ದಕ್ಕೆ ಕುಂದಕ ಬರದಂತೆ ನಮ್ಮ ಮತಾನುಷ್ಠಾನದಲ್ಲಿಯೂ ಪ್ರಚಾರದಲ್ಲಿಯೂ ಪ್ರವರ್ತಿಸಬೇಕೆಂಬ ತಮ್ಮ ಅಭಿಪ್ರಾಯವನ್ನವರು ವ್ಯಕ್ತಗೊಳಿಸಿದರು. ಬಾಲಕರಿಗೆ ವಿಧ್ಯುಕ್ತ ಕಾಲದಲ್ಲಿ ಉಪನಯನ ಮಾಡಿ ಅವರು ಸ್ವಶಾಖಾಧ್ಯಯನವನ್ನು ಮಾಡುವುದಕ್ಕೆ ಅನುಕೂಲತೆಯನ್ನು ಪ್ರತಿಯೊಂದು ಊರಿನಲ್ಲಿಯೂ ಅಲ್ಲಿನ ಬ್ರಾಹ್ಮಣ ಮಂಡಲಿ ಕಲ್ಪಿಸಬೇಕಾದ್ದು ಅತ್ಯಾವಶ್ಯಕ. ಲೌಕಿಕ ವಿದ್ಯಾಭ್ಯಾಸಕ್ಕೆ ಅಡಚಣೆಯಾಗದಂತೆ ಈ ವ್ಯವಸ್ಥೆಯಾಗಲಿ! ವೈದಿಕ ಕರ್ಮಾನುಷ್ಠಾನದಲ್ಲಿ ಶ್ರದ್ಧೆ ಇಲ್ಲದಿರುವುದಕ್ಕೆ ಕಾರಣ ಅಂಥ ಅನುಷ್ಠಾನದಿಂದ ಯಾವ ಪ್ರಯೋಜನವೂ ಇಲ್ಲವೆಂಬ ತಪ್ಪು ನಂಬಿಕೆ. ಅಶ್ರದ್ಧೆಯು ಹೋಗಿ ಅದರಲ್ಲಿ ಶ್ರದ್ಧೆ ಉಂಟಾಗಲು ವೇದದ ಮಹತ್ವವನ್ನೂ ವೇದೋಕ್ತ ಕರ್ಮಾನುಷ್ಠಾನದ ಪ್ರಯೋಜನವನ್ನೂ ವೇದದಲ್ಲಿ ಉಕ್ತವಾಗಿರುವ ಅತೀಂದ್ರಿಯ ತತ್ವಗಳ ಮಹತ್ವವನ್ನೂ ಬಾಲಕರಿಗೆ ಅವರವರ ವಯಸ್ಸಿಗನುಗುಣವಾಗಿ ಬೋಧಿಸುವ ಸಾಮರ್ಥ್ಯವುಳ್ಳ ಪಂಡಿತರನ್ನು ಏರ್ಪಡಿಸಬೇಕು. ಮನೆಯಲ್ಲಿನ ಹಿರಿಯರು ಬಾಲಕರಿಗೆ ಈ ಮೇಲ್ಪಂಕ್ತಿಯನ್ನು ಹಾಕಿಕೊಡಬೇಕೆಂದು ಭಿನ್ನವಿಸಿದರು.

ಈ ಸಮ್ಮೇಳನವು ಪಂಡಿತರ ಉಪಸಮಿತಿಯೊಂದನ್ನು ನೇಮಿಸಿ ಬಾಲಕರಿಗೆ ಸಂಸ್ಕೃತದ ಸಾಮಾನ್ಯ ಜ್ಞಾನವಾಗಬೇಕಾದರೆ ಬೋಧನಾ ಪ್ರಕಾರ ಹೇಗಿರಬೇಕೆಂಬುದನ್ನು ಚರ್ಚಿಸಿ ನಿರ್ಣಯಿಸುವದರ ಕಡೆಗೆ ಅಧ್ಯಕ್ಷರು ಗಮನ ಸೆಳೆದರು. ಹಾಗೆಯೇ ಸಾಮಾನ್ಯ ಜನರಿಗೆ ವೇದಾಂತ ಶಾಸ್ತ್ರಗಳಲ್ಲಿ ಅಭಿರುಚಿ ಹುಟ್ಟುವಂತೆ ಪ್ರಚಾರವನ್ನು ಕೈಗೊಳ್ಳಲು ಉತ್ತಮ ಪಂಡಿತರನ್ನು ಸಿದ್ಧಪಡಿಸಬೇಕೆಂದೂ ಈ ಭಾರವನ್ನು ಮಠಾಧಿಪತಿಗಳು ವಹಿಸಬೇಕೆಂದೂ ಕೇಳಿಕೊಂಡರು. ಇಂಥ ಪಂಡಿತರು ವೇದಾಂತ ಶಾಸ್ತ್ರವನ್ನೂ ಆದಕ್ಕೆ ಉಪಯುಕ್ತವಾದ ಇತರ ಗ್ರಂಥ ಪ್ರಕರಗಳನ್ನೂ ಆಸ್ತಿಕ ಮಹಾಜನರಿಗೆ ಅನುಕೂಲವೆನಿಸಿದ ಕಾಲದಲ್ಲಿ ಹೃದಯಂಗಮವಾದ ರೀತಿಯಲ್ಲಿ ಉತ್ಸಾಹದಿಂದ ಬೋಧಿಸತಕ್ಕದ್ದೆಂದು ವಿಧಿಸಿದರು. ಸಾಮಾನ್ಯಜನರ ದೈನಂದಿನ ವರ್ತನದಲ್ಲಿ ಪ್ರತಿಬಿಂಬಿಸದ ಮತವು ಯಾವ ಪ್ರಯೋಜನಕಾರಿಯೂ ಆಗಲಾರದೆಂದು ಅಧ್ಯಕ್ಷರು ಸಾರಿದರು.

(೪ನೇ ಪುಟದಿಂದ)

ತೆ ಕಾಣುವುದಿಲ್ಲ; ಸ್ವತಃ ವಾದಿರಾಜರನ್ನೇ ಬಹಿಷ್ಕರಿಸಬೇಕೆಂಬವರಿಗೆ ಈ ಕುಹಕಗಳು ಗುಲ್ಲೆಬ್ಬಿಸಿದರು. ಎಂತಲೇ ಅಂತಿಮ ಕಾಲದಲ್ಲಿ ವಾದಿರಾಜರು ತಮ್ಮ ಸೋದೆ ಮಠದಲ್ಲಿಯೇ ಇರುತಿದ್ದರು.

ಪತಿತ ಪಾವನ

"ಕನಕನ ಕಿಂಡಿ" ಎಂದು ನಾವಿಂದು ಶ್ರೀ ಕೃಷ್ಣ ದೇವಸ್ಥಾನದ ಪಶ್ಚಿಮ ದ್ವಾರದಲ್ಲಿ ಕಾಣುವ ಕಿಡಿಕಿ ಶ್ರೀ ಕನಕದಾಸರಿಗೆ ಸಂಬಂಧಿಸಿದಂತಿದೆಯಷ್ಟೆ! ಕನಕ ದಾಸರು ಕುರುಬ ಜಾತಿಗೆ ಸೇರಿದ್ದರೂ ಅವರಲ್ಲಿ ಆಧ್ಯಾತ್ಮಿಕ ತೇಜಸ್ಸು ಮಿಂಚುತಿತ್ತು. ಇದನ್ನು ಹೃದಯಂಗಮವಾಡಿಕೊಳ್ಳುವಷ್ಟರ ಮಟ್ಟಿನ ಮನೋವೈಶಾಲ್ಯವಿದ್ದುದು ಶ್ರೀ ವಾದಿರಾಜರಿಗೆ ಮಾತ್ರ. ಅವರು ಕನಕ ದಾಸರನ್ನು ಪ್ರೀತಿಸಿ ನೆರವು ನೀಡುತಿದ್ದರು. ಸಂಧಾನೆಯನ್ನು ಒಪ್ಪದ ಕ್ಷುದ್ರಮನಸ್ಸಿನ ಸನಾತನಿಗಳ ಅಜ್ಞಾನಕ್ಕೆ ವಾದಿರಾಜರು ಬೇಸರ ತೋರುತಿದ್ದರು. ಕನಕದಾಸರು ದೇವಸ್ಥಾನವನ್ನು ಪ್ರವೇಶಿಸುವಂತಿರಲಿಲ್ಲವಾದುದರಿಂದ ಶ್ರೀ ಕೃಷ್ಣ ವಿಗ್ರಹವನ್ನೇ ಅವರು ಪಡುದಿಕ್ಕಿಗೆ ತಿರುಗಿಸಿದರು. ದೇವರ ಮುಂದೆ ಎಲ್ಲರೂ ಒಂದೆಂಬ ಭಾವವನ್ನು ಹೀಗೆ ವ್ಯಕ್ತಗೊಳಿಸಿದರು.

ವಾದಿರಾಜರ ಕೃಪೆಯಿಂದ ಇಂದಿನ ಅಷ್ಟಮಠಗಳು ಧನಕನಕದಿಂದ ಕೂಡಿ ಅತುಲೈಶ್ವರ್ಯ ಸಂಪನ್ನವಾದುವು, ಮತ ಪ್ರಚಾರದ ಜೊತೆಗೆ ವಿದ್ಯಾಪ್ರಚಾರವೂ ಭರದಿಂದ ನಡೆಯಹತ್ತಿತು ಅದರ ಈಗ?

THE BOMBAY LIFE ASSURANCE COMPANY, LTD.
ದಿ ಬೋಂಬೆ ಲ್ಯಾಫ್ ಎಶ್ಯೂರೆನ್ಸ್ ಕೋ. ಲಿಮಿಟೆಡ್.
(ಸ್ಥಾಪನೆ: 1908)
ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು
ಪ್ರಧಾನ ಏಜಂಟರು:
ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ
ಇವರ ಶಾಖಾ ಕಚೇರಿಗಳು:-
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.
ಕಳೆದ ಮೂವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುವೇ ನಮ್ಮ ಹೆಗ್ಗಳಿಕೆಯ ಮಾತು.
ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಧರ್ಮ ಸಾಮ್ರಾಜ್ಯ

ವಿಶ್ವವಿಧಾನದಲ್ಲಿ ಸುತ್ತಿ ಸುಳಿಯುತ್ತಿರುವ ಮಾನವ ಜೀವನವನ್ನು ಧರ್ಮವೆಂಬ ಧ್ರುವತಾರೆಯು ತಾರುಗಾಣಿಸುತ್ತದಂತೆ. ಅತಿವ ಮಾನವ ಪ್ರಾಣಿಯು ಲೋಕಯಾತ್ರೆಯಲ್ಲಿ ಗತಿಗೆಡದಂತೆ ಧರ್ಮದ ಮಾರ್ಗವನ್ನು ಬಿಗಿಸಿಕೊಂಡು ಕರ್ಮ ಮಾರ್ಗದಲ್ಲಿ ಮುಂಬರಿಯುತ್ತಿರುವುದು. ಅರ್ಥಾತ್— ಮನುಷ್ಯನ ಸ್ವೈರ ವೃತ್ತಿಯನ್ನು ತಡೆಗಟ್ಟುವುದಕ್ಕಾಗಿ ಧರ್ಮದ ಉತ್ಪತ್ತಿ.

ಇತರ ಜೀವಿಗಳಿಗಿಂತ ಮನುಷ್ಯನ ಹೆಚ್ಚುಗಾರಿಕೆಯೇನು? ಎಂಬ ಪ್ರಶ್ನೆಯು ಏಳುವಾಗ ಮನುಷ್ಯನು ಅವನ ಉತ್ತಮವನ್ನು ಸಮರ್ಪಕವಾಗಿ ಸಾಧಿಸಲಿ, ಅದೇ ಉತ್ಕೃಷ್ಟತವಾದ ಅಭಿಮಾನವು ಅದರ ಸಿದ್ಧಿಗಾಗಿ ಹೊಸದೊಂದು ಸಾಧನೆಯನ್ನು ಕೈಕೊಳ್ಳಲೇ ಬೇಕಾಯಿತು. ಅದೇ ಧರ್ಮ!

ಜೀವ ನಿರ್ಮಾಣಕಾಲದಲ್ಲಿ ವಿಶ್ವಶಕ್ತಿಯು ಎಸಗಿದ ಮಹದಪರಾಧವೇನೆಂದರೆ— ಮನುಷ್ಯನ ಎದೆಯಲ್ಲಿ ಬಿತ್ತಿದ ಕುತೂಹಲ. ಅದರ ಸೌಕರ್ಯಕ್ಕಾಗಿ ಮಾನವನು ಹೊಸಹೊಸತು ವಿಷಯಗಳನ್ನೆಲ್ಲಾ ಆವಿಷ್ಕರಿಸಿ ತನ್ನ ಜೀವನದೊಂದಿಗೆ ಕೂಡಿಸಲು ತೊಡಗಿದಾಗ ಅದಕ್ಕೊಂದು ಗಡಿಕಲ್ಲನ್ನು ನಿರ್ಣಯಿಸಿಡುವುದು ಹಿತಕರವೆಂಬ ಭಾವನೆಯು ವಿಚಾರಿಗಳ ತಲೆಯಲ್ಲಿ ಮೊಳೆಯತೊಡಗಿತು. ಆದಕ್ಕಾಗಿ ದೇವನೆಂಬ ಮೂಲ ಬ್ರಹ್ಮನನ್ನು ಸಾಕ್ಷೀಕರಿಸಿ, ಪಾಪಪುಣ್ಯವೆಂಬ ಮೋಸದ ಬೆದರಿಕೆಯನ್ನು ಸ್ವೀಕರಿಸಿ, ಹೊಸಹೊಸ ನಿಯಮಗಳನ್ನೆಲ್ಲಾ ಸುತ್ತಸುತ್ತಲಾಗಿ ಕಟ್ಟಿಕಡೆಗೆ ಸಿದ್ಧವಾಯಿತು ನಮ್ಮ ಇಂದಿನ ಧರ್ಮವೆಂಬ ದೊಡ್ಡ ಮುಂಡಾಸು!

ಧರ್ಮವನ್ನು ಒಪ್ಪಿಕೊಂಡ ಮೇಲೆ ಅದರ ಗೌರವ ರಕ್ಷಣೆಯ ಭಾರವೂ ಮನುಷ್ಯನನ್ನು ಹೊಂದಿಕೊಂಡಿತು. ತಾನೆ ನೆಟ್ಟ ಮರವನ್ನು ತಾನೇ ಕಿತ್ತು ಬಿಸುಡಲು ಸಾಧ್ಯವಿದೆಯೇ? ಅಂದಮೇಲೆ ಅದರ ಗೌರವ ರಕ್ಷಣೆಗಾಗಿ ಎಷ್ಟೋ ಇಚ್ಛೆಗಳನ್ನು ಮನುಷ್ಯನು ತ್ಯಾಗಮಾಡಿ, ಧರ್ಮದ ಇಚ್ಛೆಯೇ ತನ್ನದೆಂದು ಕಣ್ಮುಗಿದು ತಲೆತುಕಿಕೊಳ್ಳಲೇ ಬೇಕಾಯಿತು. ಕೊನೆಗೆ ಅದರ ಗುಲಾಮತ್ವವೇ ಹೆಚ್ಚು ಮನುಷ್ಯತ್ವದ ಹೆಗಲು ತಗ್ಗಿ ಹೋಯಿತಾದರೂ ಅದನ್ನು ಕಿರಿದಾಗಲು ಸಾಧ್ಯವೆ?

ಸಾಧ್ಯ! ಅದು ಹೇಗೆ? ಶಾಂತಂ ಪಾಪಂ! ಹಾಗೆನ್ನುವ ಸಾಹಸವಾರಿಗಿದೆ? ಅಂತಹ ಒಂದೇ ಒಂದು ಯೋಚನೆಯಾದರೂ ತಲೆದೋರಿತೆಂದರೆ, ಇಂದಿನ ಸಮಾಜವು ಕಣ್ಣು ಕೆಂಪಗಿಸಿ ಹುಂಕರಿಸುತ್ತಿರುವುದು! ಧರ್ಮವೆಂಬ ಶಕ್ತಿಯು ತುಕ್ಕು ಹಿಡಿದಿರುವುದಾದರೂ ಅದನ್ನೇ ಮೇಲೆತ್ತಿ ಜಗತ್ತನ್ನೇ ರಕ್ಷಿಸುವೆನೆಂದು ಹೇಳುತ್ತಿರುವುದು!

ಆದರೆ ಮನೋಭಾವದ ಮಹೋರ್ಮಿಯನ್ನು ಹುಂಬಾದ ಬೆದರಿಕೆಯು ತಡೆಯಬಲ್ಲುದೆ? ಧರ್ಮದ ವೇದಿಕೆಯಲ್ಲಿ ಮನುಷ್ಯ ಜೀವನವು ಹೊಡೆದಾಡುತ್ತಿರುವಾಗ, ಧರ್ಮದ ಹೇರಿಸಿದ ರಕ್ತದ ಕೋಡಿ ಹರಿದು ಎತ್ತೆತ್ತಲೂ ದ್ವೇಷದ ಬೆಂಕಿಯೇ ಧಗಧಗಿಸುತ್ತಿರುವಾಗ ಹೊರ ಹೊಮ್ಮುವ ವಿಚಾರ ಕ್ರಾಂತಿಯನ್ನು ಧರ್ಮಾಧಿಕಾರದ ಕಂಬದ ಒಗೆಯು ತಡೆಗಟ್ಟಬಲ್ಲುದೆ? ಅಥವಾ ಅಂತಹ ಪ್ರತಿಕೃತಿಯನ್ನು ಮನುಷ್ಯನು ಕಿತ್ತು ಬಿಸುಟು ತನ್ನ ಮುನ್ನಿನ ಸ್ವಾತಂತ್ರ್ಯದ ಧ್ವಜವನ್ನು ಪುನಃ ಮೇಲೆತ್ತಿದರೆ, ಅದರ ಸ್ಥಿತಿ ತಪ್ಪೇನು?

ಹೊಸತನ್ನು ಹಳತೆಂಬ ಬಾಲಾರಿಷ್ಟವು ಆಕ್ರಮಿಸುವುದು ಪ್ರಕೃತಿಸಿದ್ಧ. ಹೊಸತು ಮೂಡುವಾಗ ಹಳತೇ ಹೊಸತು; ಎಂದ ಮೇಲೆ ತನ್ನ ಆ ಹಿರಿದನ್ನು ಇನ್ನೊಂದರ ಪಾಲಿಗೆ ಸಮರ್ಪಿಸಿ ತಾನು ನಿವೃತ್ತಿಗೊಳ್ಳಲು ಅದು ಹೇಗೆ ತಾನೆ ಒಪ್ಪಿತು? ಆದರೆ— ಹೊಸತಿನ ಜಗ್ಗಾಟವು ಮಿತಿಮೀರಿದಾಗ ಆಹಳತು ಏನು ತಾನೆ ಮಾಡ ಬಲ್ಲುದು?

ಕಗ್ಗತ್ತಲೆಯು ಕವಿದಾಗ ಬೆಳಕು ಆತಗತ್ಯ. ಆದರೆ ಆ ಬೆಳಕೂ ವಿರುದ್ಧವಾಗಿ ಕಣ್ಣು ಮುಚ್ಚಿಸುವಾಗ ಅದರಿಂದೇನು ಸಿದ್ಧಿಸಿದಂತಾಯಿತು? ಅದಕ್ಕಾಗಿ ಸ್ವಧರ್ಮವನ್ನು ಒರೆಹಚ್ಚಿ ಪೌರುಷದ ಸಂಗನ್ನು ಆವಲಂಬಿಸಿದಾಗ ಪ್ರಪಂಚವೇ "ಧರ್ಮದ್ರೋಹ"ವೆಂದು ಬೊಟ್ಟಿಟ್ಟು ಬೊಬ್ಬಿಡ ತೊಡಗಿತು. ಒಂದೆಡೆ ಜಗತ್ತಿನ ಪ್ರಸಿದ್ಧ ವ್ಯಕ್ತಿಗಳು ಕೆಲವರು. ಆದರ ತತ್ವವನ್ನು ಮುಕ್ತ ಕಂಠರಾಗಿ ಹೊಗಳುತ್ತಿರುವಾಗ ಇನ್ನೊಂದೆಡೆ 'Helen At water' ಅವರಂತಹ ತತ್ವ ಪ್ರೇರಕರು ಅದನ್ನು ಸರ್ವಾತ್ಮನಾ ದಂಡಿಸುತ್ತಿರುವರು. ಆದರೆ ಮಿಸ್ ಮೇಯೋ ಅವರಂತಹ ಅಮೇರಿಕದ ಸಭ್ಯ ಮಹಿಳೆಯರಸ್ವರೂಪವನ್ನರಿತವರಿಗೆ ಇವರ ನಿಜಾಂಶವನ್ನು ತೂಗಿ ತಿಳಿಯಲು ತಾನೆ ಎಷ್ಟು ಹೊತ್ತು?

ಆಧುನಿಕ ಪ್ರಪಂಚವು ಧನಿಕರ ಕೈಯೊಳಗಡ ಗೊಂಬೆಯಾಗಿದೆ. ಧನಿಕರ ಇಚ್ಛೆಯು ಬಡವರ ಹೆಗಲನ್ನೇರಿ ಪ್ರಾಣದ ಕಡಿವಾಣವನ್ನು ಬಿಗಿದು ಸವಾರಿ ಮಾಡುತ್ತಿದೆ! ಆದರೆ— ಈ ಸವಾರಿಯು ಚಿರಂತನವಾಗಿ ನಡೆಯ ಬಲ್ಲುದೆ?

ವಿಚಾರ ಕ್ರಾಂತಿಯು ಧರ್ಮ ದ್ರೋಹವಂತೆ! ಧರ್ಮವೆಂದರೇನು? ನಿಯಮಗಳ ರಾಶಿಯನ್ನು ಮೊಳಗಿಸಿ ಜನತೆಯನ್ನು ಶಿಥಿಲಗೊಳಿಸುವುದೊಂದೆ ಮಾತ್ರ ಧರ್ಮವೇ! ವಿಚಾರ ಕ್ರಾಂತಿಯು ಅಂತಹ ಬೇಲಿಯನ್ನು ಹರಿದು ಮಾನವನಾಗಿಯೇ ನೂತನ ಮಾರ್ಗವೊಂದನ್ನು ಸಾಧಿಸತೊಡಗಿದರೆ ಅದು ಧರ್ಮ ದ್ರೋಹವೇ?

ಇದೀಗ ಕೊನೆಯ ಮಾತು. ನಿಯಮವು ರಾಷ್ಟ್ರವನ್ನು ಬಿಗಿದಪ್ಪಿ ದ್ರೋಹಬಗೆಯಲು ಎಳಸುತ್ತಿರುವುದು ಎಂದ ಮೇಲೆ ಅಂತಹ ನಿಯಮಗಳನ್ನು ಬಿಕ್ಕಟ್ಟುಗಿರಿಸಿ ಪ್ರೇಮಮಯ ವಾತಾವರಣದಲ್ಲಿ ಸಕಲರೂ ಒಂದಾಗಿ ಕಲೆತು ಬಾಳಬಾರದೇಕೆ? ಧರ್ಮದ ಸೆರೆಯಿಂದ ಜನತೆಯನ್ನು ಬಿಡಿಸಿ, ಜನತೆಯ ಹೃದಯದಲ್ಲಿ ಧರ್ಮವನ್ನು ನೆಲೆಮಾಗಿರಿಸಲಾಗದೇಕೆ?

ಕ್ರಾಂತಿಯ ಪರಿಣಾಮವಾಗಿ ವಿಶ್ವವು ಸಮಾನ ಸೌಖ್ಯವನ್ನನುಭವಿಸಲಿ! ಧರ್ಮ ಸಾಮ್ರಾಜ್ಯವು ಶ್ರೀಕಾಲ ಚಿರಾತನವಾಗಿ ಮಾನವ ಮರೆಯಲ್ಲಿ ಮುನ್ನಡೆಯಲಿ!

—ಪರಿಧಾವಿ.

ಉಡುಪಿಗೆ ಹೋಗಬೇಕು!   ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಯ ಹೇಳಬೇಕೆ

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

ಪಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು

ಯಾವಾಗಲೂ ಸಿದ್ಧವಿವೆ

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್ಟರ್

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:- ಆಯುರ್ವೇದ ಭೂಷಣ ಯಂ ವಿ. ಶಾಸ್ತ್ರೀ,

ಇವರ

ನವಜೀವಾತು

ಎಂಬ.

ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ ಭಾಗ್ಯಶಾಲಿಗಳಿಗೂ ಲಭ್ಯವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ। ಯಂ ಸಿ. ಶಾಸ್ತ್ರೀ, ಯಲ್. ಐ ಎ.

ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ಥಾನಿಕರು:— ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು

ಜೀವ ಪಾತ್ರೆಗಳು

ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ಕಡಿಮೆ ಕ್ರಯಕ್ಕೆ ದೊರಕುತ್ತವೆ.

ಕಲ್ಯಾಂಜೆ ವ್ಯಾಸರಾಯ,

ರಥಬೀದಿ, ಉಡುಪಿ.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಪೆಟ್ಟಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಚೇಳುಕೊಳ್ಳುವುದು ವಿಷ ಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಎಲ್ಲಾ ಅಂಗಡಿ, ಪೇಟೆ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ

ಶ್ರೀ ಉಚ್ಚಿಲೇಶ್ವರಿ ಪ್ರಸನ್ನ

ಜನ್ನಸಕಟ್ಟೆ ಕುಂದಾಪುರ ತಾಲ್ಲೂಕ

ಮಹಾಶಯರೆ,

ಇದೇ ಬರುವ ಜನವರಿ ತಾ 21-1-1953ನೇ ಬುಧವಾರ ಶ್ರೀ ಯಕ್ಷೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ವರ್ಷಂಪ್ರತಿ ನಡೆಯುವ ಮಂಡಲ ಸೇವೆ ಮತ್ತು ಗೆಂಡ ಸೇವೆಗೆ ತಾವು ತಮ್ಮ ಇಷ್ಟಮಿತ್ರರೊಡನೆ ಬಂದು ಸದ್ರಿ ಸೇವೆಗಳನ್ನು ಪೂರೈಸಿ ಶ್ರೀ ಮುಡಿಗಂಧ ಪ್ರಸಾದ ಪಡೆದು ಶ್ರೀ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಸನ್ನಿಧಿ ಕಡೆಯಿಂದ ಅಪೇಕ್ಷಿಸುತ್ತೇ,

ಆಡಳ್ತೆದಾರರು— ಕೃಷ್ಣ ಅವಧಾನಿ,

ಪಾತ್ರಿಗಳು— ವಿ ಎಸ್. ಹೆಬ್ಬಾರ್.

ಅರ್ಚಕರು ಎಮ್. ಆರ್ ಅವಧಾನಿ

ಮುಕ್ಕಾಂ, 19-12 52

ಮೂಲ್ಕಿ ಬೆಂಕ್;

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.

Moolky, S K

ಆಸ್ತಿಯ ಸಂತಾನ ಕಾನೂನು

ಇದರ ಪ್ರತಿಗಳು ದೊರೆ ಯುತ್ತವೆ

ಕನ್ನಡ ಪ್ರತಿಗೆ 0-8-0

ಇಂಗ್ಲಿಷ್ ಪ್ರತಿಗೆ 0-8-0

ನವಯುಗ ಪ್ರೆಸ್ ಉಡುಪಿ

ವಾರದ ಒಳಿತು ಕೆಡುಕುಗಳು

ತಾ. 8—1—53ರಿಂದ ತಾ. 14—1—53ರ ವರೆಗೆ.

ಮೇಷ— ದಿನ ಹೋದಂತೆ ನಿಮ್ಮ ಅದೃಷ್ಟವು ಉತ್ತಮವಾಗುತ್ತಿದೆ. ವ್ಯಾಪಾರ ವ್ಯವಹಾರಗಳಲ್ಲೂ ರಾಜಕೀಯ ಕ್ಷೇತ್ರದಲ್ಲೂ ನಿರೀಕ್ಷಿಸಿದುದಕ್ಕಿಂತ ಅಧಿಕ ಫಲ ಲಾಭವಾಗುವದು. ಆಪ್ತೇಷ್ಟರ ನೆರವೂ ಬಂಧುಮಿತ್ರರ ಸಹಕಾರವೂ ಚೆನ್ನಾಗಿರುತ್ತದರಿಂದ ದಿನಯಾಪನೆಯು ಸುಗಮವಾಗುವದು. ದೇಹಾರೋಗ್ಯದ ಮಟ್ಟಿಗೆ ಈ ಕಾಲವು ಅಷ್ಟೊಂದು ಶುಭಕರವಾಗಿಲ್ಲವು. ವಿದ್ಯೋಪಜೀವಿಗಳಿಗೆ ತೊಂದರೆಗಳಧಿಕವಾಗುವವು. ವಾರಾದಿಯ 3 ದಿನಗಳಲ್ಲಿ ಶುಭವಾಸ ಲಾಭದಗಳಿವೆ.

ವೃಷಭ— ಸಾಧಿಸಿದರೆ ಸಬಳ ನುಂಗಬಹುದೆಂಬ ಹಿರಿಯರ ನಾಣ್ಣುಡಿಯು ಸದ್ಯ ನಿಮಗೆ ಸಹಜವಾಗಿ ಕಾಣಬಹುದು, ಪ್ರಯತ್ನಸಾಧ್ಯವಾದ ಕಾರ್ಯಗಳಲ್ಲಿ ನೀವು ನಿಜಯಿಗಳಾಗುವಿರಿ ಆಕಸ್ಮಿಕ ಧನಪ್ರಾಪ್ತಿಯು ಯೋಗವಿದೆ. ನಿಷ್ಕಾರಣವಾಗಿ ವಾಕ್ಕಲಹವಾಗುವುದರಿಂದ ಬಹಳ ಜಾಗರೂಕತೆಯಲ್ಲಿರಬೇಕಾಗುವುದು ವಾತಕಫ ಪ್ರಕೋಪದಿಂತ ಆರೋಗ್ಯಕ್ಕೆ ಹಾನಿ ಬಟ್ಟೀತು. ತಾ 9ರಿಂದ 12ರ ವರೆಗಿನ ದಿನಗಳು ಶ್ರೇಯಸ್ಕರವಾಗಿಯಾಗಲಿವೆ,

ಮಿಥುನ— ಭಾಗ್ಯಲಾಭಗಳಲ್ಲಿನ ಶುಕ್ರನುದಯಗಳು ನಿಮಗಿಂದು ಅನುಕೂಲರಾಗಿರುವುದರಿಂದ ನಿಮ್ಮ ಸಂಪತ್ತಾಗವು ಉತ್ತಮ ಸ್ಥಿತಿಗೆ ಬರಲಿರುವುದು ದೇಹಾಲಸ್ಯವು ಕೂಡ ದೂರವಾಗಲಿದೆ ಮಹಾಜನರ ಸ್ನೇಹ ಸಹಕಾರಗಳು ಲಭಿಸುವವು. ಶ್ರಮ ಜೀವಿಗಳಿಗೆ ಮಾತ್ರ ನಿರೀಕ್ಷಿಸಿದ ಫಲ ಲಭಿಸಲಾರದು, ಗೃಹ ಕಾರ್ಯ್ಯಗಳು ಕೊಂಚ ಅಧಿಕವಾಗುವವು. ವಾರಾಂತ್ಯದ 4 ದಿನಗಳು ಉಳಿದ ದಿನಗಳಿಗಿಂತ ಉತ್ತಮವಾಗಿವೆ.

ಕರ್ಕಟ— ಒಂದೊಮ್ಮೆಗೆ ನಿಮ್ಮ ಕಷ್ಟಗಳನ್ನು ಮರೆಯುವ ಸಮಯವು ಸನ್ನಿಹಿತವಾಗಿರುವುದು ಉದ್ಯೋಗದಲ್ಲಿ ದಿನೇ ದಿನೇ, ಪ್ರಗತಿಯನ್ನೈದುವಿರಿ ಪ್ರಬಲರಾದ ಶತ್ರುಗಳ ಪೀಡೆಯು ಪ್ರಾಪ್ತವಾಗುವದಾದರೂ ಕೈಗೊಂಡ ಕಾರ್ಯವನ್ನು ಕೊನೆಗಾಣಿಸುವಿರಿ ಆಪ್ತಜನರ ಮತ್ತು ಸ್ತ್ರೀಪುತ್ರರ ವಿರಹ ದುಃಖವು ನಿಮ್ಮನ್ನು ಸದಾ ಚಿಂತೆಗೀಡು ಮಾಡುವದಾದರೂ ತಾ. 8, 13, 14 ಈ ದಿನಗಳನ್ನು ಸುಖದಿಂದ ಕಳೆವಿರಿ.

ಸಿಂಹ— ದಿನದಿಂದ ದಿನಕ್ಕೆ ಕೃಷ್ಣಪಕ್ಷದ ಚಂದ್ರನಂತೆ ನಿಮ್ಮ ಅದೃಷ್ಟವು ಕ್ಷೀಣಿಸುತ್ತಿರುವುದು. ಏತನ್ಮಧ್ಯೆ ಗೃಹದಲ್ಲಿ ಅನಾವಶ್ಯಕ ಕ್ಷೋಭೆಯುಂಟಾಗಿ ತಂದೆಮಕ್ಕಳೊಳಗೂ ಗಂಡಹೆಂಡಿರೊಳಗೂ ನಿತ್ಯ ಜಗಳ ತಪ್ಪಲಾರದು. ನೌಕರಿ ವ್ಯಾಪಾರ ವ್ಯವಹಾರಗಳಲ್ಲಿ ಅನಿರೀಕ್ಷಿತವಾಗಿ ಬಿಕ್ಕಟ್ಟುಂಟಾಗಲಿದೆ.. ಮಾನ ರಕ್ಷಣೆಗಾಗಿ ಬಹಳ ಹೋರಾಡುವ ಪ್ರಸಂಗ ಬಂದೀತು. ತಾ. 9, 10 ಮಾತ್ರ ಇದ್ದುದರಲ್ಲಿ ಉತ್ತಮ ದಿನಗಳೆನಿಸುವವು.

ಕನ್ಯಾ— ದೈವವು ತೀರಾ ಪ್ರತಿಕೂಲವಿದೆ ಆದರೂ ಉದ್ಯೋಗಕ್ಕೆ ಬಂದಾದ ನಿಮಗೆ ನಿರೀಕ್ಷಿಸಿದಷ್ಟಲ್ಲವಾದರೂ ಯೋಗ್ಯವಾದ ಫಲವು ಲಭಿಸುವದು. ಉತ್ಪತ್ತಿಯ ದ್ವಿಗುಣ ಖರ್ಚುಗಳಿರುವುದರಿಂದ ನೀವು ಹಣದ ಅಡಚಣೆಗೆ ಸಿಲುಕಲಿರುವಿರಿ ಗುರುಹಿರಿಯರ ತೀವ್ರ ವಿರೋಧಕ್ಕೊಳಗಾದ ನಿಮಗೆ ವ್ಯಾಪಾರ ಉದ್ಯೋಗಗಳಲ್ಲಿ ಕೊಂಚ ಹಿನ್ನಡೆ ಅಡ್ಡಿಗಳುದಯಿಸಲಿವೆ, ತಾ. 8, 11, 12 ಈ ದಿನಗಳಲ್ಲಿ ನೆನೆದಂತೆ ಕಾರ್ಯವು ಫಲಿಸಲಿದೆ.

ತುಲಾ— ಸುಖದುಃಖ ಲಾಭ ನಷ್ಟಗಳ ನಿಮಗಿಂದು ಸಮತೂಕದಲ್ಲಿ ನಿಲ್ಲಲಿವೆ. ನಿಮ್ಮ ವಾಕ್ಚಾತುರ್ಯಕ್ಕೆ ಮೆಚ್ಚಿದಹಲವರು ನಿಮಗೆ ಬೆಂಬಲಿಗರಾಗಿ ನಿಲ್ಲುವುದರಿಂದ ಹೆಚ್ಚಿನ ನಿಮ್ಮ ಬಯಕೆಯು ಸಫಲವಾಗಿರುವುದರಲ್ಲಿ ಸಂದೇಹ ವಿಲ್ಲವು ಆರೋಗ್ಯದ ವಿಚಾರದಲ್ಲಿ ಕೊಂಚ ಜಾಗರೂಕರಾಗಿ ಬೇಕಾದೀತು, ವಿಷಾಗ್ನಿಗಳ ಬಾಧೆಗೆ ಸಿಲುಕಲಿರುವಿರಿ ಸಂತಾನದ ನ ಆಸ ರೋಗ್ಯದಿಂದಾಗಿ ದುಗುಡವೂ ಬಹ್ವಾಲಂಕ ಡಾಕ್ಟರರ ಕೈಸೇರುವದು. ತಾ. 9, 10, 13, 14. ಈ ದಿನಗಳಲ್ಲಿ ಸ ಸುಭೋಗ ಲಾಭಗಳನ್ನು ಪಡೆವಿರಿ.

ವೃಶ್ಚಿಕ— ಈಗಲೀಗಬಂದಿರ ತಕ್ಕ ನಿಳುವರಿ ಶನಿಯು ನಿಮ್ಮನ್ನು ನೆಮ್ಮದಿಯಿಂದಿರಲು ಬಿಡಲಾರನು ಆಕಸ್ಮಿಕ ತೀಕ್ಷ್ಣ ಘಟಗಳು ಸದಾ ನಿಮಗೆ ತಪ್ಪಿದ್ದಲ್ಲವು. ಮಾತ್ರವಲ್ಲ ದುರ್ಜನರ ಸಂಸರ್ಗಕ್ಕೆ ಸಲುಕಿ ಕಷ್ಟ ನಷ್ಟಾಪವಾದಗಳನ್ನೂ ಕೂಡ ಹೊಂದಲಿರುವಿರಿ. ಕಫ ಪ್ರಕೋಪದಿಂದ ದೇಹಾರೋಗ್ಯವೂ ಕೆಟ್ಟೀತು. ನೌಕರಿ ಜನರಿಗೂ ವ್ಯಾಪಾರಿಗಳಿಗೂ ಕೂಡ ಕ್ರಮಶಃ ಉಚಿತವಾದ ಫಲ ಲಭಿಸಲಿವೆ. ತಾ 8, 11 12 ಉತ್ತಮವಿವೆ.

ಧನು— ನಿಮ್ಮ ಅದೃಷ್ಟವಿಂದು ಉತ್ತಮ ಸ್ಥಿತಿಗೆ ಬಂದಿದೆ. ಧನಪತಿಯಾದ ಶನೈಶ್ಚರನು ಉಚ್ಚನಾಗಿ ಲಾಭದಲ್ಲಿ ನಿಂತಿರುವನ. ತನುಸುಖದಾಯಕನಾದ ಬೃಹಸ್ಪತಿಯೂ ಕೂಡ ಅನುಕೂಲನಾಗಿ ರುವ ಕಾರಣ ನಿಮ್ಮ ಕಾರ್ಯಗಳೂ ತತ್ಫಲಗಳೂ ಉತ್ತಮವಾಗಿ ಫಲಿಸಲಿವೆ. ಧೈರ್ಯ ಸಾಹಸ ಯುಕ್ತಿ ಪ್ರಯುಕ್ತಿಗಳಿಂದ ಎಂತಹ ಮಹತ್ಕಾರ್ಯಗಳನ್ನೂ ಕೂಡ ಸಾಧಿಸಲು ಶಕ್ತರಾಗುವಿರಿ. ಶತ್ರುಜನ ಸದ್ಯ ನಿಮ್ಮನ್ನು ಕಣ್ಣೆತ್ತಿ ನೋಡಲಾರರು. ತಾ. 11, 12 ಹೊರತಾಗಿ ಮಿಕ್ಕ ದಿನಗಳು ನಿಮ್ಮ ಶ್ರೇಯಸ್ಸಾಧಕಗಳಾಗಿವೆ.

ಮಕರ— ತ ನೊಂದಬಗೆದರೆ ದೈವ ಪ್ರೊಂದ ಬಗೆತೆಂಬಂತೆ ಈವಾರದಲ್ಲಿ ನಿಮ್ಮ ಪರಿಸ್ಥಿತಿಯು ಎಲ್ಲಾ ವಿಪರೀತವಾಗಲಿದೆ. ಆದಾಯದ ಮಾರ್ಗಗಳೆಲ್ಲವು ಬಂದಾಗಿ ಖರ್ಚಿನ ಮಾರ್ಗಗಳು ದಿನೇ ದಿನೇ ಹೆಚ್ಚುವುದು. ಮರ್ಯಾದೆಯಿಂದ ದಿನಗಳೆವುದು ಸಾಧ್ಯವೆನಿಸದು. ಇಂತಹ ದುಷ್ಕಾಲದಲ್ಲಿ ನಿಮಗಾರೂ ಸಹಾಯಕ್ಕೊದಗಲಾರರು. ದೈತ್ಯಾಚಾರ್ಯರ ಅನುಗ್ರಹದಿಂದಾಗಿ ತಾ. 9ರಿಂದ 13ರ ವರೆಗಿನ ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳುದಯಿಸಲಾರವು.

ಕುಂಭ— ವ್ಯವಹಾರ ಕುಶಲರಾದ ನಿಮಗೀಕಾಲವು ಇಷ್ಟಾನಿಷ್ಟಗಳಿಂದ ಮಿಶ್ರವಾಗಿ ಫಲಿಸಲಿದೆ, ಹಿಂದಿನಂತೆ ಇಂದು ಹಣದ ಅಡಚಣೆಕಾಣದು ವೈದ್ಯಕೀಯ,ವ್ಯಾಪಾರ ನೌಕರಿಗಳಲ್ಲಿ ಪ್ರಗತಿಯಿದೆ, ಆದರೆ ಸದಾ ಪರ್ಯಟನವು ಪ್ರಾಪ್ತವಾದೀತು ಧರ್ಮಕರ್ಮಗಳಲ್ಲಾ ಗುರು ಹಿರಿಯರಲ್ಲೂ ಪೂಜ್ಯಭಾವನೆ ತೊಲಗಿ ತಿರಸ್ಕಾರ ಬುದ್ಧಿಯುಂಟಾಗಲಿದೆ, ಶತ್ರುಜನರೂ ಕೂಡ ಪ್ರತೀಕಾರಾಸಕ್ತರಾಗುವರು. ವಾರಾಂತ್ಯದ 4 ದಿನಗಳಲ್ಲಿ ನಿಮ್ಮ ಬಯಕೆಯು ಸಿದ್ಧಿಸಲಿದೆ.

ಮೀನ— ಕಷ್ಟದ ದಿನಗಳು ದೂರವಾದವು. ನಿಮ್ಮ ಮನಸಂಕಲ್ಪಗಳಿಂದು ಕಾರ್ಯರೂಪಕ್ಕೆ ಬರಲಿವೆ ಸಜ್ಜನರ ಮೈತ್ರಿ ಬಂಧುಜನರ ಸಹಕಾರ ಹಿತವರ್ಗದವರ ಪ್ರೋತ್ಸಾಹ ಬೆಂಬಲವು ನಿಮಗಿರುವುದರಿಂದ ನಿಮ್ಮ ಮಹತ್ಕಾರ್ಯಗಳು ನಿರ್ವಿಘ್ನದಿಂದ ನೆರವೇರಲಿವೆ. ಕೆಲವೊಮ್ಮೆ ಸಂಸಾರಿಕ ತಾಪತ್ರಯಗಳು ನಿಮ್ಮ ಮನಸ್ಸಿಗೆ ಅಶಾಂತಿಯನ್ನು ತಂದೊಡ್ಡುವು. ತಾ. 8, 13, 14 ಈ ದಿನಗಳಲ್ಲಿ ಸುಖ ಲಾಭ ಇಷ್ಟ ಪ್ರಾಪ್ತಿಯನ್ನು ಹೊಂದುವಿರಿ

ತೃಪ್ತಿಕರವಾದ ವಸತಿ— ಹಿತಕರವಾದ ಊಟ— ರುಚಿಕರವಾದ ಉಪಾಹಾರ ಇವುಗಳಿಗೆ

ಆದರ್ಶ ನಿಲಯವೆಂದರೆ

ಪ್ರೆಡ್ ಲೇಂಡ್ಸ್

ಉಡುಪಿ.

ಯಾತ್ರಿಕರಿಗೂ ಪ್ರವಾಸಿಕರಿಗೂ ಸರ್ವ ಅನುಕೂಲವಾಗುವಂತೆ

ನಗರದ ಕೇಂದ್ರಭಾಗದಲ್ಲಿದೆ

ಮುತ್ರಸ್ರಾವ ನಿಂತಿತು

'ಕುಮಾರಿ' ಪಿಲ್ಲೆಗಳನ್ನು ಉಪಯೋಗಿಸಿದರೆ ಪದೇಪದೇ ಮೂತ್ರವಿಸರ್ಜನೆಗಾಗಿ ಮೂಡು ಹಕೋಟೆಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾಕ್ಷಿ ರಾದರು ಮುಂದಿಗೆ ಹುತ್ತಿ ಗುಣವಾಗಿದೆ. ಬೆಲೆ; ರೂ. 3-; ಸ್ಪೆಷಲ್ ರೂ. 5- ಅಧಿಕಾಧಿಕ ಸ್ಪೆಷಲ್ ರೂ. 8- [ಪಿ. ಪಿ. ಹಸ್ತಿರಜಾದ ಪ್ರತ್ಯೇಕ]

MIS P. DEVEE, F. DS. (N. J.)
Tollygunge CALCUTTA
ಪ್ರಾತಿನಿಧ್ಯರು: ಶಹಾಕಂಪೆನಿ, ಮಂಗಳೂರು

For Protection and Provision Consult

The New Guardian of India Life Insurance Co., Ltd.

Estd] Head office: MADRAS [1934

NEW BUSINESS Exceeds	...	66½	Lakhs.
PREMIUM INCOME	,,	... 12	,,
LIFE FUND	,,	... 54½	,,
ASSETS	,,	.. 60¼	,,
BUSINESS IN FORCE	Nearly	3	Crores.

A Policy in this Progressive Life Office is good investment: its Agency is valuable business connection.

Applications for Representation are invited from energetic influential persons, with good connection. *Please apply to:*

G. Wallia, *Branch Manager,*
Diamond Building, Hampankatta, MANGALORE, S. K.

ಗಮನಿಸಿರಿ ! ಪರೀಕ್ಷಿಸಿ ನೋಡಿರಿ !! ಸುಖಪಡೆಯಿರಿ !!!

ನಿಮ್ಮ ಮೇಲ್ಮೆಗಾಗಿ ಲಕ್ಷಿಸಿರಿ.

ಹೆಚ್ಚು ಹೇಳುವುದರಿಂದೇನು? ಹಸಿವೇ ಇಲ್ಲದಿದ್ದರೂ, ಜೀರ್ಣಶಕ್ತಿ ಸಂಪೂರ್ಣವಾಗಿ ಹೋಗಿದ್ದರೂ, ದೇಹವು ಬಹಳವಾಗಿ ಕ್ಷೀಣಿಸಿ ಮೂಳೆ (ಎಲುಬು) ಚರ್ಮಗಳು ಕಾಣುವದಾಗಿದ್ದರೂ, ಕಣ್ಣುಗುಳಿಗಳು ಬಿದ್ದಿದ್ದು ಹಿಂದಲೆಯನ್ನು ಹೋಗಿ ಸೇರಿದ್ದರೂ, ಬಲ, ಚಟುವಟಿಕೆ, ಧೈರ್ಯ ಇವುಗಳು ಇಲ್ಲದೆ ಹೋದರೂ, ಶುಕ್ಲವೂ ಇಂದ್ರಿಯವೂ, ಪೂರ್ತಿಯಾಗಿ ನಿಂತು ಹೋಗಿದ್ದರೂ, ಮೇಹವ್ಯಾಧಿಗಳೇ ಮೊದಲಾದ ವ್ಯಾಧಿಗಳಿಂದ ನರಳುತ್ತಿದ್ದರೂ ನಮ್ಮ "ಮನ್ಮಥ ಚಿಂತಾಮಣಿ ಲೇಹ್ಯ" ಸೇವನೆಯಿಂದ ಸಂಪೂರ್ಣ ಸುಖ ದೊರೆಯುವದು ಅಲ್ಲದೆ ಆರೋಗ್ಯಭಾಗ್ಯವನ್ನೂ ಪಡೆಯಬಹುದು ಇಂತಹ ಜೀವದಾಯಕವಾದ ಅಮೃತ ಸಮಾನವಾದ ರಸಾಯನವು

ಬೆಲೆ ಒಂದು ಪೌಂಡ್ ಡಬ್ಬಿ ಒಂದಕ್ಕೆ ರೂ **2-8-0**

ಮಲೆಯಾಳ ಮೆಡಿಕಲ್ ಹಾಲ್ ತಿರುವನಂತಪುರಂ- (TRIVANDRUM)

ಲಕ್ಷಾಂತರ ಜನರು ಗುಣಹೊಂದಿದ್ದಾರೆ!

ಸರ್ ಜೀವನ್ ಶಿಲಾಜಿತ್ ಲೇಹ

ಶಿಲಾಜಿತ್ ಹಿಮಾಲಯದಲ್ಲಿ ಔಷಧಿಗಳ ರಾಜ, ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗ ನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸು ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೮೪ ದಿನದ ಲೇಹ್ಯ ರೂ ೫/೪, ೨೧ ದಿನದ ಲೇಹ್ಯ ರೂ ೩೪ (ಪೋಸ್ಟೇಜು ಪ್ರತ್ಯೇಕ)

ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿ.

ದಿ

ನ್ಯೂ ಕರ್ನಾಟಕ

ಪ್ರೊವಿಡೆಂಟ್ ಇನ್ಶೂರೆನ್ಸ್

ಕಂಪೆನಿ, ಲಿಮಿಟೆಡ್

ಉಡುಪಿ, ದ. ಕನ್ನಡ.

ಒಂದು ಸಾವಿರ ರೂಪಾಯಿ ವರೆಗೆ ವಿಮೆ ಮಾಡಲಿಕ್ಕೂ, ಏಜನ್ಸಿ ಯಾ ಸ್ಪೆಶಲ್ ಏಜನ್ಸಿ ಪಡೆದು ದುಡಿತಕ್ಕೆ ತಕ್ಕ ಪ್ರತಿಫಲ ಪಡೆಯಲಿಕ್ಕೂ ಯೋಗ್ಯವಾದ ಪ್ರೊವಿಡೆಂಟ್‌ವಿಮಾ ಕಂಪೆನಿ.

ನಿಯಮಗಳಿಗೆ ಬರೆಯಿರಿ

THE NEW KARNATAKA PROVIDENT INSURANCE CO LTD, UDIPI

ಬಾಲಚಂದ್ರ

ಶಿಕ್ಷಣ ಸಂಬಂಧವಾದ ಮಾಸಪತ್ರಿಕೆ

ಸ್ಥಾಪಕರು:
ಶ್ರೀ ಉಳ್ಳಾಲ ಮಂಗೇಶರಾವ್,
ಬಿ. ಎ ಎಲ್. ಟಿ

ಸಂಪಾದಕರು:
ಕೆ. ಆರ್. ಶೆಟ್ಟಿ ಮತ್ತು ಕೆ ಎಚ್. ಶೆಟ್ಟಿ

ಉಪಾಧ್ಯಾಯರಿಗೂ ಉಪಾಧ್ಯಾಯಿನಿಯರಿಗೂ ಅತ್ಯಾವಶ್ಯಕವಾದ ಪತ್ರಿಕೆ

ವಾರ್ಷಿಕ ಚಂದಾ ರೂ 3-0-0

ಮೆನೇಜರ್,
ಬಾಲಚಂದ್ರ, ಉಡುಪಿ

ದಯಮಾಡಿ ನಿಮ್ಮ ಚಂದಾ ಹಣ ಕಳಿಸಿರಿ.

Edited, Printed & Published By K. H. Shetty at the Navayuga Press, Udipi, S. India.

Regd No. 31
to Post without Prepaymen

Estd 1921 ಸ್ಥಾಪನೆ.
32ನೆಯ ವರ್ಷ

Founder: Sri A B. Shetty,
Minister for Medical & Public Health

ಚಂದಾ 5-12-0
ಆರು ತಿಂಗಳಿಗೆ 3-0-0
ಪ್ರತಿಗೆ 0-2-0

ನವಯುಗ

ಅಂತರಂಗ
ಪ್ರತ್ಯೇಕ ಪತ್ರಿಕೆಯಾಗಿ
ಹೊರಡುವ
86 ಪುಟಗಳ
2ನೇ ಸಂಚಿಕೆ.
ವಿವರಕ್ಕೆ ಬರೆಯಿರಿ:
ಮ್ಯಾನೇಜರ್,
ಅಂತರಂಗ, ಉಡುಪಿ.

Vol 32
No. 29

NAVAYUGA WEEKLY POST BOX NO 22 UDIPI

ವರ್ಷ ೩೨
ವಾರ ೨೦

ಮಧುಪರ್ಕ

ಪ್ರತ್ಯೇಕೋದ್ಯಮವೆಂದು ಹೇಳುವ ಪತ್ರಿಕೋದ್ಯಮದಲ್ಲಿ ಸುಪ್ರಸಿದ್ಧರಾದವರೊಬ್ಬರು ಮರಣಗೊಂಡ ಮೇಲೆ ಸ್ವರ್ಗದ ಮಹಾದ್ವಾರಕ್ಕೆ ಬಂದರು. ಆದರೆ ಅವರಿಗೆ ಸ್ವರ್ಗವನ್ನು ಪ್ರವೇಶಿಸಲು ಅಪ್ಪಣೆ ಸಿಗಲಿಲ್ಲ. ನರಕದಿಂದಲೂ ಅವರಿಗೆ ನಿರಾಶಿತರಾಗಿ ಮರಳಿ ಬರಬೇಕಾಯಿತು. ನರಕದ ಸ್ಥಾನಿಕರೂ ಇವರು ಪತ್ರಿಕೋದ್ಯಮಿ ಎಂಬುದನ್ನು ತಿಳಿದುಕೊಂಡು ತನ್ನಲ್ಲಿ ಸೇರಿಕೊಳಲು ನಿರಾಕರಿಸಿದ.

ಪ್ರಸಿದ್ಧ ಪತ್ರಿಕೋದ್ಯಮಿಯ ತೀಕ್ಷ್ಣ ಬುದ್ಧಿಗೆ ಈಗೊಂದು ಉಪಾಯ ಹೊಳೆಯಿತು— ಭಗ್ನ ನಕ್ಷತ್ರವೊಂದನ್ನು ಹೊಕ್ಕು ಈ ಪತ್ರಿಕೋದ್ಯಮಿ ಒಂದೇ ವಾರದೊಳಗೆ ಸಾಪ್ತಾಹಿಕ ಪತ್ರಿಕೆಯ ಪ್ರಥಮ ಸಂಚಿಕೆಯನ್ನು ಹೊರಡಿಸಿದರು. ಈ ಸಾಪ್ತಾಹಿಕ ಪ್ರಕಟವಾದ ಮರುದಿನವೇ ಅವರಿಗೆ ಸ್ವರ್ಗ ಹಾಗೂ ನರಕ ಎರಡೂ ಸ್ಥಾನಗಳಿಂದ 'ಪ್ರೆಸ್ ಪಾಸ್' ದೊರೆತೇ ದೊರೆಯಿತು!

ಸಾರ್ವಜನಿಕ ಮತ

ಸಾರ್ವಜನಿಕ ಮತವೆನ್ನುವಾಗ ಮೊಟ್ಟಮೊದಲಿಗೆ ನಾವು ಬಾಲಕರಿದ್ದಾಗ ಶಾಲೆಯಲ್ಲಿ ಕಲಿತ ಕತೆಯೊಂದು ನೆನಪಿಗೆ ಬರುತ್ತದೆ. ಒಂದು ಕತ್ತೆಯನ್ನು ಸಂತೆಗೆ ಹೊಡೆದುಕೊಂಡು ಹೋಗುತ್ತಿದ್ದ ಮುದುಕ ಅಗಸ ಮತ್ತು ಅವನ ಹುಡುಗ ಪ್ರಯಾಣದ ವೇಗ ದಾರಿಯಲ್ಲಿ ಎದುರಾದವರಲ್ಲಿ ಪ್ರತಿಯೊಬ್ಬರೂ ಹೇಳಿದಂತೆ ವರ್ತಿಸಲು ನೋಡಿ— ಕೊನೆಗೆ ಯಾವ ಪರಿಣಾಮವನ್ನು ತಂದುಕೊಂಡರು ಎಂಬುದನ್ನು ಈ ಕತೆ ನಿರ್ದೇಶಿಸುತ್ತದೆ. ಇಲ್ಲಿ ಪರಂಪರೆಯಿಂದ ನಡೆದುಬಂದ ರೂಢಿಯ ವಿರುದ್ಧ ಹುಚ್ಚರಂತೆ ನಡೆದುದರಿಂದ ಹಾಗೂ ಜನರ ಅಭಿಮತದ ಸಾರವನ್ನು ವಿವೇಚಿಸದೆ ದುಡುಕಿದುದರಿಂದ ಅಗಸರವನ ಸೌಭಾಗ್ಯ ನಶಿಸಿತು. ಇದರಂತೆ ಸಾರ್ವಜನಿಕಾಭಿಪ್ರಾಯಕ್ಕೆ ವಿರುದ್ಧವಾದ ವ್ಯಕ್ತಿಗತ ಅಭಿಪ್ರಾಯಕ್ಕೆ ಮಹತ್ವವನ್ನು ಕೊಟ್ಟರೂ ದುರಂತ ಸಂಭವಿಸಬಹುದು. ಉತ್ತರ ರಾಮಾಯಣದಲ್ಲಿ ಬರುವ ಅಗಸರವನ ಹೇಳಿಕೆಯೇ ಸೀತಾವನವಾಸಕ್ಕೆ ಹೇತುವಾಯಿತು. ಒಬ್ಬ ಕ್ಷುಲ್ಲಕ ಅಗಸರವನು ನುಡಿದ ಮಾತನ್ನು ಶ್ರೀ ರಾಮಚಂದ್ರನು ಮನಸ್ಸಿಗೆ ತುಂಬ ತಂದುಕೊಂಡನು. ಆದರೆ ಈ ಪ್ರಸಂಗದಲ್ಲಿ ರಾಮನು ಉದಾತ್ತವಾದ ಆದರ್ಶವೊಂದನ್ನು ಜನಸಾಮಾನ್ಯದ ಮುಂದಿಡುವುದಕ್ಕಾಗಿ ಈ ರೀತಿ ಆಗ್ರಹಪಟ್ಟನು. ಗೀತೆಯಲ್ಲಿ ಹೇಳಿದ "ಯದ್ಯದಾಚರತಿ ಶ್ರೇಷ್ಠ ತತ್ತ ದೇವೇತರೋ ಜನಃ" ಎಂಬ ಉಕ್ತಿಯಂತೆ, ನಾರಿಯ ಶೀಲವನ್ನೇ ಪ್ರಶ್ನಿಸುವ ಮಹತ್ವದ ಸಾಮಾಜಿಕ ಪ್ರಸಂಗವಿದಾದುದರಿಂದ ರಾಮನು ಈ ಉಗ್ರ ನಿರ್ಣಯಕ್ಕೆ ಬಂದನು. ಹೀಗೆ ನಾವು ಮತಭೇದಗಳ ಸಾರಾಸಾರವನ್ನು ವಿವೇಕದಿಂದ ವಿಚಾರಿಸಿ ಅವುಗಳ ತೂಕವನ್ನು ಗೊತ್ತುಹಚ್ಚುವುದರಲ್ಲಿ ನಿಷ್ಣಾತರಿರದಿದ್ದರೆ— ಜನರ ಮಾತಿಗೆನೇ ಸಲ್ಲದ ಮಹತ್ವಕೊಟ್ಟು ವ್ಯಕ್ತಿತ್ವದ ನಿಶ್ಚಲ ಭೂಮಿಕೆಯನ್ನು ಗಾಳಿಬಂದಂತೆ ಹರಿಯಗೊಟ್ಟೇವೆ. ಆದುದರಿಂದ ಶ್ರೇಯಸ್ಸು ಲಭಿಸುವುದು ಕಷ್ಟ.

ಸಾರ್ವಜನಿಕಾಭಿಪ್ರಾಯವೆಂದರೇನು? ಒಂದು ನಿರ್ದಿಷ್ಟ ಗುಂಪಿನ ಜನರಲ್ಲಿ ಪ್ರತಿಯೊಬ್ಬನೂ ಪರಸ್ಪರ ವಿಚಾರ ವಿನಿಮಯ ಮಾಡಿಕೊಂಡು ಕೊನೆಯದಾಗಿ ಮಾಡುವ ನಿರ್ಣಯ ಆ ಜನರ ಸಾಮಾನ್ಯ ಮತವಾಗುತ್ತದೆ. ಇದು ತಾತ್ಕಾಲಿಕ ಸ್ವರೂಪದ್ದಿರಬಹುದು, ಅಥವಾ ಸ್ಥಿರವಾಗಲೂ ಸಾಕು. ವಿವಾದಾಸ್ಪದವಾದ ಪ್ರಾಮುಖ್ಯ ಸಂಗತಿಗಳಲ್ಲಿ ಈ ಗುಂಪಿನಲ್ಲಿಯೂ ವಾದಗಳು ತಲೆದೋರಬಹುದು ಮತ್ತು ಅಂಥ ಸಂಗತಿಯಲ್ಲಿ ಬಹುಮತದ ತಿಳುವಳಿಕೆ ಹೇಗಿದೆಯೋ ಅದೇ ಸಿಂಧುವಾಗುವುದು. ಈ ರೀತಿ ಸಾರ್ವಜನಿಕ ಮತವು ರೂಪುಗೊಂಡರೂ ಕೂಡ-ಪ್ರತಿಯೊಬ್ಬನ ಅಭಿಪ್ರಾಯವೂ ಮೂಲಸ್ವರೂಪದಲ್ಲಿ ಬೇರೆ ಬೇರೆ ಯಾಗಿರುವುದು ಸಾಧ್ಯವೆಂಬುದನ್ನು ನಾವು ಅವಶ್ಯವಾಗಿ ಗಮನಿಸಬೇಕು. ಒಂದು ಸಂಗತಿಯ ಕುರಿತು ನಮ್ಮ ನಿಲುವೆಯನ್ನು ನಿರ್ಧರಿಸುವುದಕ್ಕೆ ಮುಂಚೆ ನಮ್ಮಲ್ಲಿ ಪ್ರತಿಯೊಬ್ಬರೂ ಆ ಕುರಿತು ಸುದೀರ್ಘ ಆಲೋಚನೆಯನ್ನೂ ಸ್ವತಂತ್ರವಾಗಿ ವಿಚಾರವನ್ನೂ ಮಾಡುತ್ತೇವೆ. ಬಿಕ್ಕಟ್ಟಿನ ಪ್ರಶ್ನೆಗಳಲ್ಲಿ ಉಳಿದವರ ವಿಚಾರ ಸರಣಿಯ ಯೋಗ್ಯಾಯೋಗ್ಯತೆಗಳನ್ನು ಹೋಲಿಸಿ ತೂಕ ಮಾಡಿ, ನೋಡುತ್ತೇವೆ. ಇಡೀ ಸಮಾಜದ ಮೇಲೆ ನಮ್ಮ ಅಭಿಪ್ರಾಯದ ಪರಿಣಾಮವೇನಾದೀತೆಂದೂ ಊಹಿಸುತ್ತೇವೆ. ನಮ್ಮ ಮಾತಿಗೆ ಬೆಲೆ ಬರುವುದೋ ಹೇಗೆಂದೂ ಕಲ್ಪಿಸಿಕೊಳ್ಳುತ್ತೇವೆ. ಇಷ್ಟೆಲ್ಲ ಸಂಗತಿಗಳ ಪರಿಣಾಮವಾಗಿ ಕೊನೆಯ ನಿರ್ಣಯವನ್ನು ನಮ್ಮಲ್ಲಿ ಪ್ರತಿಯೊಬ್ಬರೂ ಸ್ವೀಕರಿಸುತ್ತೇವೆ.

ಸಾರ್ವಜನಿಕ ಮತವೆಂದರೆ ಕೂಡ ರೂಪಿತವಾಗುವುದು ಇದೇ ರೀತಿಯಲ್ಲಿ. ಅಲ್ಲಿ ಎದ್ದು ತೋರುವ ಲಕ್ಷಣ ಸಾರ್ವತ್ರಿಕ ಸಂಪ್ರದಾಯ ಸಮುದಾಯದ ಭಾವನೆಗೇ ಇಲ್ಲಿ ಮಹತ್ವ. ಇಂಥದರಲ್ಲಿ ವ್ಯಕ್ತಿಗತ ವೈಶಿಷ್ಟ್ಯವನ್ನು ಪಯೋಗಿಸಿ ಸಾರ್ವಜನಿಕ ಮತವನ್ನು ತಿರುಗಿಸಲಿಕ್ಕೂ ಸಾಧ್ಯವುಂಟು. ಸತ್ಯವನ್ನು ವಿರೂಪಗೊಳಿಸಿ, ಸಮುದಾಯದ ಭಾವನೆಯ ಮೇಲೆ ವೈಯಕ್ತಿಕ ಪ್ರಭಾವವನ್ನೂ ಪರಿಣಾಮವನ್ನೂ ಮಾಡಿ-ಸಾರ್ವಜನಿಕ ಮತವನ್ನು ತಪ್ಪುಮಾರ್ಗಕ್ಕೆ ಎಳೆಯಲಿಕ್ಕೆ ಆಸ್ಪದವಿದೆ. ಪ್ರಾಚೀನ ಕಾಲದಲ್ಲಿ ಸಾರ್ವಜನಿಕರ ಅಭಿಪ್ರಾಯ ಹೇಗಿದೆ ಎಂಬುದನ್ನು ತಿಳಿದುಕೊಳ್ಳಲಿಕ್ಕೆ- ಹಳ್ಳಿಯ ಸಂತೆ, ನೀರಿನ ಬಾವಿ, ಊರದೇವಸ್ಥಾನ ಮುಂತಾದವುಗಳು ಪ್ರಾಮುಖ್ಯ ಕೇಂದ್ರಗಳಾಗಿದ್ದುವು. ಇಲ್ಲಿಯೇ ಎಲ್ಲ ಸಂಗತಿಗಳ ಚರ್ಚೆಯು ನಡೆದು ಸಾಮಾನ್ಯ ನಿರ್ಣಯವು ರೂಪುಗೊಳ್ಳುತ್ತಿತ್ತು. ನೀರಿನ ಬಾವಿಗೆ ಬಂದ ಹೆಂಗುಸರು ತಮ್ಮಲ್ಲೇ ಆಡಿಕೊಳ್ಳುವ ಮಾತುಕತೆಗೂ ದೇವಾಲಯದ ಅಂಗಳದಲ್ಲಿ ನೆರೆದು ಗಂಡಸರು ನಡೆಸುತ್ತಿದ್ದ ಚರ್ಚೆಗೂ ಸಾರ್ವಜನಿಕ ಮತವನ್ನು ಸೃಷ್ಟಿಸುವ ಸಾಮರ್ಥ್ಯವಿತ್ತು. ಆದರೆ ಇಂದಿನ ಕಾಲದಲ್ಲಿ ಸಿನಿಮಾ, ರೇಡಿಯೋ, ವರ್ತಮಾನ ಪತ್ರಿಕೆಗಳು ಸಾರ್ವಜನಿಕರ ಮತವನ್ನು ಸೃಷ್ಟಿಸುವುದರಲ್ಲಿ ಮುಂದಾಗಿವೆ. ಅವುಗಳ ಹೊಣೆಗಾರಿಕೆ ಹೆಚ್ಚಿಕೊಂಡಿವೆ.

ಸಾಮಾನ್ಯವಾಗಿ ಹೇಳುವುದೆಂದರೆ ಸಾರ್ವಜನಿಕ ಮತವೆಂದರೆ ವ್ಯಕ್ತಿಯ ಅಭಿಪ್ರಾಯದ ಅತ್ಯುನ್ನತ ಸ್ವರೂಪ. ಅದರಾಚೆ ಉತ್ಕೃಷ್ಟವಾದ ವಿಚಾರವಿನಿಮಯವನ್ನು ಮಾಡಿದ ಬಳಿಕ ವ್ಯಕ್ತಿಯ ನಿರ್ಣಯವೇ ಸಾಮಾನ್ಯವಾಗಿ ಸಾರ್ವಜನಿಕರ ಅಭಿಪ್ರಾಯವೆನಿಸುತ್ತದೆ. ಒಬ್ಬ ವರ್ತಮಾನ ಪತ್ರಿಕೆಯ ಸುದ್ದಿಗಾರನು 'ಇಲ್ಲಿ ಹೆಚ್ಚಿನ ಜನರ ನಂಬಿಕೆ ಹೀಗೆ—", "ಎಲ್ಲರೂ ಹೀಗೆ ಆಡಿಕೊಳ್ಳುತ್ತಾರೆ —", 'ಎಲ್ಲರ ಅಭಿಪ್ರಾಯದಿಂದ ಧ್ವನಿಸುವ ನಿರ್ಣಯವೆಂದರೆ —" ಎಂದೆಲ್ಲ ಬರೆಯುವಾಗ ನಿಜ

ಮುಂದೆ ೫ ಟ ನೋಡಿ

ನವಯುಗ
ಪ್ರಜಾಪ್ರಭುತ್ವ ದಿನೋತ್ಸವ ಸಂಚಿಕೆಯು

ಸುಪ್ರಸಿದ್ಧರನೇಕರ ಲೇಖನಗಳಿಂದ
ಹಲವಾರು ಚಿತ್ರಗಳಿಂದ ನೂರಾರು
ಪುಟಗಳಿಂದ ಕೂಡಿ ಅಚ್ಚುಕಟ್ಟಾಗಿ
ಹೊರಡಲಿವೆ

ವಿಶಾಲವಾಗಿ ಪ್ರಚಾರವಾಗಲಿರುವ
ಈ ಸಂಚಿಕೆಯು ಜಾಹೀರಾತಿಗೆ
ಉತ್ತಮ ಸಾಧನವಾಗಿದೆ

Advertise in
Navayuga Republic Day Special

ಶೈಕ್ಷಣಿಕ ಕ್ಷೇತ್ರದಲ್ಲಿ ಎತ್ತಿದ ಕೈ

ಭಾರತೀಯರ ವಿದ್ಯಾಬುದ್ಧಿಗೆ ಸಂಸ್ಕಾರವಿತ್ತ ಪ್ರಾಚೀನ ಮಾದರಿ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ವಿಶ್ವವಿದ್ಯಾಲಯಗಳು

ವಿಶ್ವವಿದ್ಯಾಲಯಗಳು ಸುವ್ಯವಸ್ಥಿತ ರೀತಿಯಲ್ಲಿ ನಡೆಯುತ್ತಿದ್ದುವು. ಹದಿನೆಂಟು ವಿವಿಧ ವಿಷಯಗಳಲ್ಲಿ ಚೊಕ್ಕಟವಾದ ವಿದ್ಯಾಭ್ಯಾಸವನ್ನು ನೀಡುವ ಏರ್ಪಾಡು ಈ ವಿಶ್ವವಿದ್ಯಾಲಯಗಳಲ್ಲಿ ಇತ್ತು. ವಿಜ್ಞಾನ ಸಾಹಿತ್ಯ, ತತ್ವಜ್ಞಾನ ಅಧ್ಯಾತ್ಮ ಜ್ಞಾನ, ವೈದ್ಯಕೀಯ, ಕಾನೂನು ಕಾಯಿದೆ, ಕೃಷಿ, ಲೆಕ್ಕಪತ್ರ ಪಶು ವಿಜ್ಞಾನ ವೃಕ್ಷ ವಿಜ್ಞಾನ ಮುಂತಾದುವೆಲ್ಲ ವಿಷಯಗಳನ್ನು ಕಲಿಸುತ್ತಿದ್ದವು. ಲಲಿತ ಕಲೆಗಳ ಶಿಕ್ಷಣವನ್ನೂ ಕೊಡುತಿದ್ದರು. ಕಾಶಿಯ ವಿಶ್ವವಿದ್ಯಾಲಯವು ಸಂಗೀತ ಹಾಗೂ ಜ್ಯೋತಿಷ ಶಾಸ್ತ್ರದ ವಿಶೇಷ ನೀಡುವುದಕ್ಕೆ ಖ್ಯಾತನಾಮನಾಗಿತ್ತು. ರಾವಲಪಿಂಡಿಯ ಬಳಿ ಇರುವ ತಕ್ಷಶಿಲೆಯ ವಿಶ್ವವಿದ್ಯಾಲಯದಲ್ಲಿ ವೈದ್ಯಕೀಯ ಹಾಗೂ ಶಸ್ತ್ರಚಿಕಿತ್ಸೆಯ ಕುರಿತಾದ ವಿಶು ವರ್ಗಗಳ ಶಿಕ್ಷಣ ಕ್ರಮ ತುಂಬ ಪ್ರಸಿದ್ಧವಾಗಿತ್ತು. ಕ್ರಿ. ಪೂ. ಏಳನೇ ಶತಮಾನದಿಂದ ಕ್ರಿ. ಶ. ಐದನೇ ಶತಮಾನದ ವರೆಗೆ ಈ ವಿಶ್ವವಿದ್ಯಾಲಯ ತುಂಬ ಹೆಸರು ಹೋಗಿತ್ತು. ಬುದ್ಧನ ವೈದ್ಯನಾಗಿ ಕೆಲಸ ಮಾಡಿದ—ಮತ್ತು ಮಗಧದ ಆಸ್ಥಾನದಲ್ಲಿದ್ದ ಜೀವಕನೆಂಬ ವೈದ್ಯನು ಈ ವಿಶ್ವ ವಿದ್ಯಾಲಯದಲ್ಲಿ ಶಿಕ್ಷಣ ಪಡೆದಿದ್ದನು

ಆಧುನಿಕ ವಿಶ್ವವಿದ್ಯಾಲಯಗಳಂತೆಯೇ ಹಳೆಯ ಕಾಲದ ಈ ವಿಶ್ವವಿದ್ಯಾಲಯಗಳೂ ಚಲೋದಾಗಿ ನಡೆಯುತಿದ್ದುವು. ಪ್ರಾಜ್ಞರಾದ ಕುಲಪತಿಗಳ ನೇತೃತ್ವದಲ್ಲಿ ಈ ವಿಶ್ವ ವಿದ್ಯಾಲಯಗಳು ಬೆಳಗುತಿದ್ದುವು. ಉಪಕುಲಪತಿಗಳು ವಿಶ್ವ ವಿದ್ಯಾಲಯದ ಕಾರ್ಯಕಲಾಪಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತಿದ್ದರು. ಪ್ರಾಧ್ಯಾಪಕ ವೃಂದವು ಕಲಾಶಾಲಿಗಳನ್ನು ವಿವಿಧ ಶಿಕ್ಷಣ ಪದ್ಧತಿಯನ್ನು ಸಾಂಗವಾಗಿ ನೆರವೇರಿಸುತಿದ್ದವು. ವಿದ್ಯಾರ್ಥಿಗಳನ್ನು ಬಾಯ್ದೆರೆಯಾಗಿ ಪರೀಕ್ಷಿಸುವುದು ಪರಿಪಾಠವಾಗಿತ್ತು ಆವಶ್ಯವೆನಿಸಿದರೆ ಲೇಖಿಪರೀಕ್ಷೆಯೂ ನಡೆಯುತಿತ್ತು. ನಲಂದದ ವಿಶ್ವ ವಿದ್ಯಾಲಯದಲ್ಲಿ ಹತ್ತು ಸಾವಿರ ಮಂದಿ ವಿದ್ಯಾರ್ಥಿಗಳಿದ್ದು ಶಿಕ್ಷಕರ ಸಂಖ್ಯೆಯೇ ಒಂದೂವರೆ ಸಾವಿರದಷ್ಟಿತ್ತು.

ಪದವಿಗಳನ್ನು ನೀಡುವ ಪರಿಪಾಠವೂ ಇತ್ತು. ಪಂಡಿತ ಅಥವಾ ಆಚಾರ್ಯ ಎಂಬ ಪದವಿಯನ್ನು ವಿಶ್ವ ವಿದ್ಯಾಲಯಗಳು ಕೊಡುತಿದ್ದುವು. ಶುಲ್ಕವನ್ನು ಕೊಡುವ ಸಾಮರ್ಥ್ಯಗಳಿಲ್ಲದ ವಿದ್ಯಾರ್ಥಿಗಳಿಂದ ಶುಲ್ಕವನ್ನು ವಸೂಲು ಮಾಡುತಿದ್ದರೂ ಧರ್ಮಾರ್ಥ ಶಿಕ್ಷಣವನ್ನೂ, ವಿದ್ಯಾವೃತ್ತಿಗಳನ್ನೂ ಕೊಡುವ ಪದ್ಧತಿ ಇತ್ತು.

ಹ್ಯೂಯೆನ್‌ತ್ಸಾಂಗ ಹೇಳುವಂತೆ ನಲಂದದ ವಿದ್ಯಾರ್ಥಿಗಳು ಬಟ್ಟೆಬರೆ, ಆಹಾರ, ಮನೆ ಮತ್ತು ಚಿಕಿತ್ಸೆಯ ಮಟ್ಟಿಗೆ ನಿಶ್ಚಿಂತೆಯಿಂದಿದ್ದರು.

ವಿಚಾರ ವಿನಿಮಯ

ಭಾಷಣ ಮತ್ತು ಬೋಧನೆಗಳು ಮಾತ್ರವಲ್ಲದೆ ಶಿಕ್ಷಣ ಪದ್ಧತಿಯಲ್ಲಿ ಪರಸ್ಪರ ವಿಚಾರ ವಿನಿಮಯ ಮತ್ತು ಚರ್ಚೆಗೆ ತುಂಬ ಪ್ರಾಧಾನ್ಯವಿದ್ದಂತೆ ಕಾಣುತ್ತದೆ. ನಲಂದದಲ್ಲಿ ದಿನ ನಿತ್ಯವೂ ಒಂದು ನೂರು ಭಾಷಣಗಳು ವಿದ್ಯಾರ್ಥಿಗಳಿಗಾಗಿ ವಿಧಿಸಲಿದ್ದುವು. ಅವುಗಳ ಮೇಲಿನ ಚರ್ಚೆಯ ಕುರಿತು ಹೇಳುತ್ತ ಹ್ಯೂಯೆನ್ಸ್‌ಸಂಗನು "ಪ್ರಶ್ನೆಗಳನ್ನು ಕೇಳಲೂ ಅವನ್ನು ಉತ್ತರಿಸಲೂ ಹಗಲು ಸಾಕಾಗುವುದಿಲ್ಲ. ಮುಂಜಾವಿನಿಂದ ಹಿಡಿದು ರಾತ್ರಿಯವರೆಗೂ ಯುವಕರೂ ಮುದುಕರೂ ಪರಸ್ಪರ ನೆರವಾಗುತ್ತಾ ಚರ್ಚೆಯಲ್ಲಿ ತೊಡಗುವರು" ಎಂದಿರುವನು. ಹಿಂದುಳಿದ ವಿದ್ಯಾರ್ಥಿಗಳಿಗೆ ವಿಶೇಷ ರೂಪದ ವ್ಯಾಸಂಗ ಪದ್ಧತಿ ಇತ್ತು. ಕಾಶಿಯಲ್ಲಿದ್ದ ಪ್ರಾಧ್ಯಾಪಕನ ಬಳಿ ಒಬ್ಬ ದಡ್ಡ ವಿದ್ಯಾರ್ಥಿ ಇದ್ದನು. ಅವನಿಗೆ ಯೋಗ್ಯ ಶಿಕ್ಷಣ ಸಿಗುವಂತೆ ಮಾಡಬೇಕಾದರೆ ಮೊದಲಿಗೆ ಬಹಳ ಸುಲಭ—ಸರಳದ ಪದ್ಧತಿಯನ್ನು ಅನುಸರಿಸುವುದು ಅಗತ್ಯವಾಯಿತು. ಶೈಕ್ಷಣಿಕ ಕ್ಷೇತ್ರದಲ್ಲಿ ಸಂಶೋಧನೆಯು ಎಷ್ಟರ ಮಟ್ಟಿಗೆ ನಡೆಯುತ್ತಿತ್ತೋ—ಹೇಳಲು ಬರುವುದಿಲ್ಲ. ಹಾಗೆಂದು ಆಗಿಂದಾಗ್ಗೆ ಮೂಲಭೂತವಾದ ಶೈಕ್ಷಣಿಕ ಪದ್ಧತಿ ಹಾಗೂ ವಿದ್ಯಾರ್ಥಿಗಳ ಮನೋವೈಜ್ಞಾನಿಕ ವರ್ಗೀಕರಣ ನಡೆಯುತಿತ್ತೆಂಬುದು ನಿರ್ವಿವಾದ ಸಂಗತಿ.

ಮನೋರಂಜನೆಯ ದೃಷ್ಟಿಯಿಂದಲೂ ಹಳೆಯ ವಿಶ್ವವಿದ್ಯಾಲಯಗಳು ಖ್ಯಾತ ನಾಮವಾಗಿದ್ದುವು. ನಲಂದ ವಿಶ್ವ ವಿದ್ಯಾಲಯದಲ್ಲಿ ಸುಂದರವಾದ ಉದ್ಯಾನವನಗಳೂ ಈಜುವ ಕೊಳಗಳೂ ಮನೋಹರವಾದ ಶಿಲ್ಪ ಪ್ರತಿಮೆಗಳೂ ನಾಟಕ ಶಾಲೆಯೂ ಇದ್ದುವು. ಜೊತೆಗೆ ರಥಗಳನ್ನು ಓಡಿಸುವ ಸ್ಪರ್ಧೆ, ಬಿಲ್ಲುವಿದ್ಯೆ, ಕುದುರೆ ಸವಾರಿ, ಮಲ್ಲಯುದ್ಧ, ಜಟ್ಟಿ ಕಾಳಗ, ಕತ್ತಿವರಸೆ ಮುಂತಾದ ಆಟಗಳೂ ಅಲ್ಲಿ ನಡೆಯುತಿದ್ದುವು. ಕೆಲವು ವಿದ್ಯಾರ್ಥಿಗಳು ಪಗಡೆಯಾಡುತಿದ್ದರೆಂದೂ ಮಹಿಳೆಯರೊಂದಿಗೆ ನರ್ತಿಸುತಿದ್ದರೆಂದೂ ಉಲ್ಲೇಖವಿದೆ.

ಪೂರ್ವಕಾಲದಲ್ಲಿ ಸುಪ್ರಸಿದ್ಧವಾದ ವಿಶ್ವ ವಿದ್ಯಾಲಯಗಳೆಂದರೆ ತಕ್ಷಶಿಲಾ, ಕಾಶಿ, ನಲಂದ, ವಿಕ್ರಮಶಿಲಾ, ವಲ್ಲಭಿ, ಉಜ್ಜೈನ್, ಅಮರಾವತಿ, ಕಾಂಚಿ, ಮಥುರಾ, ಶ್ರೀ ಮಾಂಚಿಕುಲಂ, ಕಲ್ಯಾಣ, ನವದ್ವೀಪ ಇತ್ಯಾದಿ. ಇವುಗಳಲ್ಲಿ ಕೆಲವು ಮುಂದೆ ಕಾಲಾನುಕಾಲದಲ್ಲಿ ಅವನತಿಯನ್ನು ಹೊಂದಿದವು. ಇನ್ನು ಕೆಲವು ವಿದೇಶೀಯರ ಧಾಳಿಗೆ ಗುರಿಯಾಗಿ ಕೀರ್ತಿಯನ್ನು ಕಳೆದುಕೊಂಡುವು. ಇಂದಿನ ವಿಜ್ಞಾನದ ಪ್ರಗತಿಯ ನೆರಗನ್ನು ಹಿಡಿದು ಬದುಕುವಷ್ಟರ ಮಟ್ಟಿನ ಸಾಮರ್ಥ್ಯ ಅವುಗಳಲ್ಲಿ ಯಾವುದಕ್ಕೂ ಉಳಿಯಲಿಲ್ಲ. ಹಾಗಿದ್ದರೂ ಪೂರ್ವದ ಚೈತನ್ಯಪೂರ್ಣವಾದ ದಿನಮಾನಗಳಲ್ಲಿ ಈ ಮಹಾ ವಿದ್ಯಾಸಂಸ್ಥೆಗಳು ಉಚ್ಚ ಶಿಕ್ಷಣವನ್ನು ನೀಡುವ ಶ್ರೇಷ್ಠ ಪರಂಪರೆಯನ್ನು ಹಾಕಿಕೊಟ್ಟುವಲ್ಲದ ಸರಳ ಆಚಾರ ಹಾಗೂ ಗಂಭೀರ ವಿಚಾರವೆಂಬ ನಾಣ್ನುಡಿಗೂ ಕಾರಣವಾದುವು.

ಮೂಲ್ಕಿ ಬೆಂಕ್;

ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K.

ಆಗ--?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿಯುವುದು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ, ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ ಜೀವನದ ಬೆಂಗೋಲಿನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿ ಇರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕಂಡೊಡನೆ ನಿಮ್ಮದೇ ಆಗುವ, ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ ಬೋನಸು ಹಂಚಿದ, ನಿಮ್ಮ ನಾಡಿನ

ಈ ಕಂಪೆನಿಯಲ್ಲಿಯೇ ವಿಮೆ ಇಳಿಸಿರಿ

ದಿ ಕೆನರಾ ಮ್ಯೂಚುವಲ್ ಎಶ್ಶೂರೆನ್ಸ್ ಕಂಪೆನಿ ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ. ಸ್ಥಾಪನೆ: ೧೯೩೫

The Canara Mutual Assurance Co. Ltd.
Head Office: **UDIPI**, S. INDIA ESTD: 1935.



ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ ಬಕ್ಕೆ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ. ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಪೆಶಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಉದ್ಯೋಗದಿಂದ ಲಕ್ಷ್ಮಿ

ನಮ್ಮ ದೇಶ ಮಹಾನ್ ದೇಶವಾಗಬೇಕು. ಯಾವ ಆಧಾರದ ಮೇಲೆ ಆಗಬೇಕು? ಹೊಲದ ಆಧಾರದಿಂದಲ್ಲ, ಉದ್ಯೋಗದ ಆಧಾರದಿಂದ. ಹಣವಂತರಾಗಲು ಕೈಗಾರಿಕೆಯೇ ಆಧಾರ. ಬದುಕಿರಲು ಭೂಮಿ ಆಧಾರ. ಭೂಮಿಯ ಆಧಾರದಿಂದ ನಾವೆಲ್ಲರು ಬದುಕಿರಬಹುದು. ಏಳಿಗೆಯಾಗಲು ಕೈಗಾರಿಕೆಯೇ ಆಧಾರ. ಹಿಂದೂಸ್ಥಾನದಲ್ಲಿ ಎಲ್ಲರಿಗೂ ಹೊಲ ಸಿಕ್ಕರೆ ಸಮಸ್ಯೆ ಹರಿಯಿತು, ಎಲ್ಲರೂ ಸುಖಿಯಾಗಿರಬಹುದು ಎಂದು ಜನ ತಿಳಿದಿದ್ದಾರೆ. ಇದು ತಪ್ಪು ಹೊಲದ ಹಂಚಿಕೆಯೇನೋ ಅಗತ್ಯವಾಗಿ ಆಗಬೇಕು, ಆದರೆ ಅಷ್ಟರಿಂದಲೇ ದೇಶ ಸುಖವಾಗದು. ಯಾವ ದೇಶದಲ್ಲಿ ಕೈಗಾರಿಕೆ ಇಲ್ಲವೋ ಅಲ್ಲಿ ಲಕ್ಷ್ಮಿ ಇಲ್ಲ. ನೀವು ಹತ್ತಿ ಬೆಳೆಯುತ್ತೀರಿ. ಬಟ್ಟೆ ಮಾಡುವುದಿಲ್ಲ. ಬಟ್ಟೆ ಹೊರಗಿನಿಂದ ಕೊಂಡುತರುತ್ತೀರಿ. ಕಡಲೆ ಕಾಯಿ ಬೆಳೆಯುತ್ತೀರಿ. ಎಣ್ಣೆ ಮಾಡುವುದಿಲ್ಲ. ಎಣ್ಣೆ ಕೊಳ್ಳುತ್ತೀರಿ. ಹೀಗೆ ಕಚ್ಚಾಮಾಲು ಎಲ್ಲವನ್ನೂ ಮಾರಿ ಪಕ್ಕಾಮಾಲನ್ನು ಕೊಂಡರೆ ನೀವು ಎಂದಿಗೂ ಹಣವಂತರಾಗುವುದಿಲ್ಲ. ಇಷ್ಟು ಜನ ಕೂತಿದ್ದೀರಿ. ಎಲ್ಲರಿಗೂ ಬಟ್ಟೆ ಬೇಕು. ಎಲ್ಲರ ಮೈಮೇಲೂ ಬಟ್ಟೆ ಇದೆ. ಹೊರಗಿನಿಂದ ಎಲ್ಲರೂ ಕೊಂಡು ತಂದಿದ್ದೀರಿ. ಬಟ್ಟೆಯನ್ನು ಕಳ್ಳಸಂತೆಯಲ್ಲಿ ಮಾರುತ್ತಾರೆ ಎಂದು ದೂರುತ್ತೀರಿ. ನಿಮ್ಮನೇಕಾರರು ಹೊರಗಿನಿಂದ ನೂಲು ತರುತ್ತಾರೆ. ಬಟ್ಟೆ ನೇದು ಹೊರಗೆ ಕಳಿಸುತ್ತಾರೆ. ತಮಗೆ ನೂಲು ಸಾಲದು ಎನ್ನುತ್ತಾರೆ. ಬಟ್ಟೆ ನೈದು ಹೊರಗೆ ಕಳಿಸುತ್ತಾರೆ. ತಮಗೆ ನೂಲು ಸಾಲದು ಎನ್ನುತ್ತಾರೆ. ನಿಮ್ಮ ಹಳ್ಳಿಯಲ್ಲಿ ನೂಲಿನ ಹೊಳೆ ಹರಿಯುತ್ತಿತ್ತು. ಈಗ ಅದು ಬರುತ್ತಿದೆ. ಆದ್ದರಿಂದ ನೇಕಾರರು ಹೊರಗಿನಿಂದ ನೂಲು ತರುತ್ತಾರೆ. ನೀವು ಇಲ್ಲೇ ನೂತು ನೇಯ್ದರೆ, ಇತರ ಕೈಗಾರಿಕೆ ಮಾಡಿದರೆ ಸುಖಿಗಳಾದೀರಿ. ಹೊಲವನ್ನು ಹಂಚಿದ ಮಾತ್ರಕ್ಕೇ ಸುಖಿ ಬಾರದು.

ನಿಜವಾಗಿ ನಾವು ಬಡವರ ಏಳಿಗೆಯನ್ನು ಬಯಸಿದರೆ ಅವರಿಗೆ ಕೈಗಾರಿಕೆ ಕಲಿಸುವುದು ನಮ್ಮ ಕೆಲಸ. ಇದನ್ನು ಕಮ್ಯೂನಿಸ್ಟರೂ ಮಾಡುತ್ತಿಲ್ಲ. ಆದರೆ ಬಡವರ ಹಿತವನ್ನು ಬಯಸುತ್ತೇವೆ ಎನ್ನುತ್ತಾರೆ. ಅದನ್ನು ಕೇಳಿ ನನಗೆ ಆಶ್ಚರ್ಯವಾಗುತ್ತದೆ. ಬಡವರ ಚಿಂತೆ ಮಾಡಿದವರು ಗಾಂಧೀಜೀ. ಬಡವರಿಗಾಗಿ ಚರಕಾ ಸಂಘ, ಗೋಸೇವಾ ಸಂಘ, ಗ್ರಾಮೋದ್ಯೋಗ ಸಂಘಗಳನ್ನು ಅವರು ನಿರ್ಮಿಸಿದರು. ಆದರೆ ಜನ ಪಾಲಿಸರು. ನೂಲು ತೆಗೆಯರು, ಕೈಗಾರಿಕೆ ನಡಸರು. ಕೂತುಕೊಳ್ಳೇ ಸುಖಬೇಕು ಎಂಬ ಆಸೆ ಬಿಡರು.

—ಆಚಾರ್ಯ ಶ್ರೀ ವಿನೋಬಾಜೀ

ಶಾಂತಿ ಸಾಧನೆಗಾಗಿ ಗಾಂಧೀ ನೀತಿ

ರಾಷ್ಟ್ರೀಯ ಕಾಂಗ್ರೆಸಿನ ಹೈದರಾಬಾದು ಅಧಿವೇಶನ

ಕಾಂಗ್ರೆಸು ಅಧಿವೇಶನ

ಹೈದರಾಬಾದಿನಲ್ಲಿ ನೂತನವಾಗಿ ನಿರ್ಮಿಸಿದ ನಾನಲ ನಗರದಲ್ಲಿ ಈಗಾಗಲೇ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸಿನ ಅಧಿವೇಶನ ಕೂಡಿದೆ. ದಿನಾಂಕ ೧೮ರಂದು ಕಾರ್ಯಕಾರಿ ಸಮಿತಿಯು ಸೇರಿದರೆ ದಿನಾಂಕ ೧೯ರಂದು ಬಹಿರಂಗ ಅಧಿವೇಶನವು ಸೇರುವುದು. ಕಾರ್ಯಕಾರೀ ಸಮಿತಿಯಲ್ಲಿ ಉಪಸ್ಥಿತರಿರಲು ಶ್ರೀ. ಸಿ. ರಾಜಗೋಪಾಲಾಚಾರಿ, ಶ್ರೀ ಗುಲ್ಜಾರಿಲಾಲ್ ನಂದಾ, ಶ್ರೀ ಜಗಜ್ಜೀವನ ರಾಮ್, ಡಾ। ಬಿ. ಸಿ. ರಾಯ್, ಡಾ। ಶ್ರೀ ಕೃಷ್ಣ ಸಿಂಹರಿಗೆ ವಿಶೇಷ ಆಮಂತ್ರಣವು ಕೊಡಲ್ಪಟ್ಟಿದೆ. ಮಾತ್ರವಲ್ಲ ಈಗಾಗಲೇ ಕಾರ್ಯಕಾರಿ ಸಮಿತಿಗೆ ರಾಜೀನಾಮೆ ಇತ್ತು ಕೈತೊಳೆದುಕೊಂಡಿರುವ ಟಂಡನ್ನರಿಗೂ ವಿಶೇಷ ರೂಪದ ಕರೆಯೋಲೆ ಹೋಗಿರುವುದಾಗಿ ತಿಳಿದಿದೆ. ಈ ಬಾರಿಯ ಅಧಿವೇಶನದಲ್ಲಿ ಭಾಷಾನುಗುಣ ಪ್ರಾಂತರಚನೆಗಿಂತಲೂ ರಾಷ್ಟ್ರೀಯ ಅಭಿವೃದ್ಧಿಯನ್ನು ಧ್ಯೇಯವಾಗುಳ್ಳ ಪಂಚವಾರ್ಷಿಕ ಯೋಜನೆಯನ್ನು ಯಶಸ್ಸು ಮಾಡುವುದಕ್ಕೆ ಜನರು ಸಹಕರಿಸಬೇಕೆಂದು ಒತ್ತಾಸೆ ಮಾಡುವ ನಿರೀಕ್ಷೆಯೋ ಹೆಚ್ಚಿದೆ. ಕಾಂಗ್ರೆಸು ಘಟನೆ ಸೂಚಿಸಿರುವ ತಿದ್ದುಪಡಿಗಳನ್ನು ಸ್ವೀಕರಿಸುವುದಲ್ಲದೆ– ಕಾಂಗ್ರೆಸಿನ ಮೂರು ವರ್ಗಗಳಲ್ಲೂ ಪರಸ್ಪರ ನಿಕಟ ಸಂಬಂಧ ಬೆಳೆದು ಬರುವಂತೆ ಪರಿಣಾಮಕಾರೀ ಉಪಾಯಗಳನ್ನು ಕೈಕೊಳ್ಳಬಹುದು. ಪಂಚವಾರ್ಷಿಕ ಯೋಜನೆಯ ಬಗ್ಗೆ ಉಳಿದ ರಾಷ್ಟ್ರೀಯ ಪಕ್ಷಗಳ ಅಭಿಮತ ಸಾಮಾನ್ಯವಾಗಿ ಅನುಕೂಲವೇ ಆಗಿದ್ದರೂ– ಯೋಜನೆಯ ಯಶಸ್ಸು ಕಾಂಗ್ರೆಸಿನ ಕರ್ತವ್ಯ ದಕ್ಷತೆಯನ್ನೆ ಬಹಳ ಮಟ್ಟಿಗೆ ಹೊಂದಿಕೊಂಡಿದೆ. ಕಾರಣ ಕಾಂಗ್ರೆಸಿನ ಕಾರ್ಯಕಾರೀ ವರ್ಗ, ಶಾಸನಾಧಿಕಾರೀ ವರ್ಗ ಹಾಗೂ ವಿಧಾಯಕ ಕಾರ್ಯದ ವರ್ಗ ಈ ಮೂರೂ ಪರಸ್ಪರ ಸಂಪರ್ಕವನ್ನು ವರ್ಧಿಸಿಕೊಂಡ ಕೆಲಸಮಾಡುವುದು ಅಗತ್ಯವೆನಿಸಿದೆ.

ರಾಜಾಜಿಯ ವಿನಂತಿ.

ಮೊನ್ನೆ ಹೊಸವರ್ಷದ ಶುಭಸಂದೇಶವನ್ನು ಜನತೆಕೆ ನೀಡುತ್ತಾ ಪ್ರಧಾನಿ ನೆಹರೂ ಕೊಟ್ಟ ಕರೆಯನ್ನು ಮದ್ರಾಸು ಮುಖ್ಯಮಂತ್ರಿ ರಾಜಗೋಪಾಲಾಚಾರಿಯವರೂ ಇತ್ತೀಚೆಗೆ ತಮ್ಮ ಆಕಾಶವಾಣಿ ಭಾಷಣವೊಂದರಲ್ಲಿ ನೀಡಿದರು. ಹೆಚ್ಚಿನ ಸೌಕರ್ಯ ಮತ್ತು ಹೆಚ್ಚು ಸಂಬಳ ಮುಂತಾದ ಬೇಡಿಕೆಗಳನ್ನು ಸರಕಾರದ ಮುಂದಿಡುವ ಪ್ರವೃತ್ತಿಗೆ ಈಗ ಪ್ರಾಶಸ್ತ್ಯ ಬಂದಿದೆ: ಆದರೆ ಇಂಥ ರಾಷ್ಟ್ರೀಯ ಆಗತ್ಯಗಳನ್ನು ಪೂರೈಸುವುದಕ್ಕೆ ಪೂರ್ವಭಾವಿಯಾಗಿ ರಾಷ್ಟ್ರೀಯ ಉತ್ಪಾದನೆಯನ್ನು ವರ್ಧಿಸಿಕೊಳ್ಳುವುದು ಅತ್ಯಾವಶ್ಯಕವೆಂಬ ಮಾತನ್ನು, ನಾವು ಸಾಮಾನ್ಯವಾಗಿ ಮರೆತೇ ಬಿಡುತ್ತೇವೆ. ಆದುದರಿಂದ ಪಂಚವಾರ್ಷಿಕ ಯೋಜನೆಯ ಬಗ್ಗೆ ಸಾಮಾನ್ಯರು ಕೆಲಸ, ಹೆಚ್ಚು ಕೆಲಸ ಎಂಬ ದೃಷ್ಟಿಯಿಂದ ನೋಡುವುದೇ ಚೆನ್ನಾಗಿದೆಯಲ್ಲದೆ ಸುಖ— ಸೌಕರ್ಯಗಳೆಂಬ ಹಗಲುಗನಸಿನಲ್ಲಿ ತೇಲುವುದರಿಂದಲ್ಲ. ರಾಜಗೋಪಾಲಾಚಾರಿಯವರು ಇದೇ ಮಾತನ್ನು ಎತ್ತಿ ಹಿಡಿದರು. ಪಂಚವಾರ್ಷಿಕ ಯೋಜನೆಯ ಅಂತಿಮ ಗುರಿಯನ್ನು ಮುಟ್ಟುವುದು ಸಾಧ್ಯವಾಗಬೇಕಿದ್ದರೆ - ಅದರಲ್ಲಿ ಅಪೇಕ್ಷೆ ಪಟ್ಟಂತೆ ಧಂಡವಾಳದ ಪೂರೈಕೆಯೂ ಕೆಲಸವೂ ನಡೆಯಬೇಕು: ಜೊತೆಗೆ ಜನರಿಂದ ಏನೇನು ಸಹಕಾರವನ್ನು ನಿರೀಕ್ಷಿಸಿರುವರೋ ಅದೂ ಪೂರ್ಣ ರೂಪದಲ್ಲಿ ದೊರೆಯಬೇಕು ಕೆಲಸದಲ್ಲಿ ವೈಗಳ್ಳರಂತೆ ವರ್ತಿಸುವುದು ವ್ಯಕ್ತಿತ್ವಕ್ಕೆ ಕುಂದೆಂದೂ ಅದು ಅಗೌರವವೆಂದೂ ನಮ್ಮ ಮನಸ್ಸಿನಲ್ಲಿ ಉಚ್ಚಭಾವನೆಯು ಮೂಡುವಂತಾಗಬೇಕು. ನಮ್ಮ ಪರಂಪರೆಯೂ ಶೀಲ ಸಂಪ್ರದಾಯವೂ ಹೊಸ ಸ್ವರೂಪವನ್ನು ಧಾರಣಮಾಡಬೇಕು. ನಾವು ಹಿಂದೆ ಹಾಳುಗೆಡವಿದವುಗಳನ್ನು ಪುನಃ ನಿರ್ಮಾಣ ಮಾಡುವ ಹಂಬಲ ಮೂಡಿಬರಲಿ: ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಾದರಿಯಲ್ಲೇ ಒಮ್ಮನಸ್ಸಿನಿಂದ ರಾಷ್ಟ್ರೀಯ ಪುನಾರಚನೆಯ ಕಾರ್ಯದಲ್ಲೂ ದುಡಿದು ಶ್ರೇಯೋಭಾಗಿಗಳಾಗುವುದು ನಮ್ಮ ಕರ್ತವ್ಯ ಎಂಬುದಾಗಿ ರಾಜಾಜಿ ಎಚ್ಚರಿಸಿರುವರು. ಸರಕಾರವು ಸಹಾಯನೀಡಬಹುದು. ಆದರೆ ಅದನ್ನು ಸ್ವೀಕರಿಸಿ ಕಾರ್ಯಪ್ರವೃತ್ತರಾಗುವುದು ಜನರ ಕೆಲಸ. ಜನರನ್ನು ಶಾಸನಾನು ಕಾಯಿದೆಗಳ ಬಲದಿಂದ ಆಳುವುದಕ್ಕೂ ಒಂದು ಮಿತಿಯಿದೆ. ಅದೂ ಪ್ರಜಾಪ್ರಭುತ್ವ ಪದ್ಧತಿಯೂ ರಾಜ್ಯದಲ್ಲಿ– ಜನರ ಇಚ್ಛೆ ಅನಿಚ್ಛೆಗಳಿಗೇನೆ ಹೆಚ್ಚು ಪ್ರಾಧಾನ್ಯವಿರುವಾಗ ಒತ್ತಾಯ ಮತ್ತು ಬಲಾತ್ಕಾರಗಳನ್ನು ಜನತೆಯ ಮೇಲೆ ಸರಕಾರ ಹೇರುವಂತಿಲ್ಲ. ಆದುದರಿಂದ ಜನರ ಸಹಕಾರ ಯೋಜನೆಯನ್ನು ಸರಕಾರ ಮಾಡುತ್ತಿರಬೇಕಾದ ಪ್ರಸಂಗವಿದೆ ಕಾರಣ ಜನತೆ ಕಷ್ಟಸುಖದ ನಿಜವಾದ ಸ್ಪಷ್ಟವಾದ ಕಲ್ಪನೆ ಕಟ್ಟಿಕೊಳ್ಳುವುದು ವಿಹಿತ.

ವಿಶ್ವವಿಚಾರ ಗೋಷ್ಠಿ

ವಿಶ್ವದಲ್ಲಿ ಯುದ್ಧದ ಕಾರ್ಮೋಡಗಳು ಕವಿದಿರುವುವೋ ಇಲ್ಲವೋ— ಈಗಲೇ ಹೇಳಲು ಬರುವಂತಿಲ್ಲ. ಆದರೂ ಜನಸಾಮಾನ್ಯ ಶಾಂತಿಗಾಗಿ ಪರಿತಪಿಸುತ್ತಿದ್ದರೂ ರಾಜಕಾರಣಿಗಳು ಮಾತ್ರ ಯುದ್ಧೋತ್ಸಾಹದಿಂದ ತುಂಬಿ ಜಗತ್ತನ್ನು ವಿನಾಶದ ನರಕದೆಡೆಗೆ ನೂಕುತ್ತಿರುವರು ಎಂದು ಸರ್ವಸಾಧಾರಣವಾಗಿ ಹೇಳುವುದುಂಟು. ಅಣು ಬಾಂಬು, ಜಲಜನಕ ಬಾಂಬು ಮುಂತಾದ ಭೀಷಣ ವಿಧ್ವಂಸಕ ಅಸ್ತ್ರಶಸ್ತ್ರಗಳ ಉತ್ಪಾದನೆಯು ಹೆಚ್ಚಿಕೊಂಡಿರುವಾಗ, ಕೊರಿಯಾದಲ್ಲಿ ಮಹಾಶಕ್ತಿಗಳೆರಡು ಎರಡೂವರೆ ವರ್ಷದಿಂದಲೂ ಪರಸ್ಪರ ಹೆಣಗಾಡುತ್ತಿರುವಾಗ– ಯುದ್ಧದ ವಿಭೀಷಿಕೆಯು ಜಗತ್ತನ್ನು ತಲ್ಲಣಗೊಳಿಸಿರುವುದೇ ನಿಜವೆಂದು ಯಾರೂ ಊಹಿಸಲಡ್ಡಿಯಿಲ್ಲ. ಅಂಥದರಲ್ಲಿ ಯುದ್ಧದ ಮಾರ್ಗವನ್ನೇ ಬಿಟ್ಟುಗೊಟ್ಟು ಶಾಂತಿಯ ದಾರಿಯನ್ನು ಅವಲಂಬಿಸುವುದರ ಮೂಲಕ ರಾಷ್ಟ್ರರಾಷ್ಟ್ರಗಳೊಳಗಿನ ಮತ್ತು ರಾಷ್ಟ್ರದ ಆಂತರಿಕ ಸ್ವರೂಪದ ಭಿನ್ನ ಭಿನ್ನ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯವೇ ಎಂಬ ಪ್ರಯತ್ನ ನಡೆದರೆ ಅದನ್ನು ಸ್ವಾಗತಾರ್ಹವೆನ್ನಬೇಕು. ಸಮಾಜದ ನೇತೃತ್ವವನ್ನು ವಹಿಸಿ ಅದರ ಗತಿಯನ್ನು ರೂಪಿಸುವ ಮತ್ತು ಒಳಿತು ಕೆಡುಕುಗಳಿಗೆ ಹೇತುವಾಗಿರುವ ಧುರೀಣರ ಮನೋ ಭೂಮಿಕೆ ಪಲ್ಲಟ ಹೊಂದುವುದರಿಂದ, ಅರ್ಥಾತ್ ಶಾಂತಿ ಮಾರ್ಗವನ್ನು ಅನುಸರಿಸುವುದರಿಂದಲೇ ಹಿತವಿದೆ ಎಂದು ವಿಚಾರಿಸಿ ತಿಳಿಯುವುದರಿಂದ- ಸಮಾಜವೂ ಅದರ ಉಚ್ಚ ಆದರ್ಶಗಳನ್ನು ಅನುಸರಿಸಿ ನಡೆಯಲು ಸಾಧ್ಯವಾಗುವುದು. ಈ ದೃಷ್ಟಿಯಿಂದಲೂ ಸಂಯುಕ್ತ ರಾಷ್ಟ್ರ ಸಂಘದ ಶೈಕ್ಷಣಿಕ ಸಾಮಾಜಿಕ ಹಾಗೂ ಸಾಂಸ್ಕೃತಿಗ ಸಂಸ್ಥೆಯ ಆಶ್ರಯದಲ್ಲಿ ಹೊಸ ದಿಲ್ಲಿಯಲ್ಲಿ ನಡೆಯುತ್ತಿರುವ ವಿಶ್ವ ವಿಚಾರ ಗೋಷ್ಠಿಯು ಸಕಾಲಿಕವೆನ್ನಬಹುದು. ಶಾಂತಿ ಸಾಧನೆಗೆ ಗಾಂಧೀಜಿಯ ನೀತಿ ಹಾಗೂ ತಂತ್ರಗಳು ಸೂಚಿಸುವ ದಾರಿಯನ್ನು ವಿಮರ್ಶಾತ್ಮಕ ಹಾಗೂ ತುಲನಾತ್ಮಕ ದೃಷ್ಟಿಯಿಂದ ವಿವೇಚಿಸುವುದಕ್ಕಾಗಿ ಲೋಕದ ಅನೇಕ ರಾಷ್ಟ್ರಗಳ ಪ್ರತಿಭಾನ್ವಿತ ಪ್ರತಿನಿಧಿಗಳು ಒಂದೆಡೆ ಸೇರಿರುವುದು ಸ್ತುತ್ಯ.

ಯುದ್ಧದಿಂದ ಸತ್ಫಲವಿಲ್ಲ

ಈ ವಿಚಾರ ಗೋಷ್ಠಿಯ ಉದ್ಘಾಟನೆಯನ್ನು ಭಾರತದ ಪ್ರಧಾನಿ ನೆಹರೂ (ಅರ್ಥಾತ್ ಗಾಂಧೀಜಿಯ ಮಾನಸಪುತ್ರರು) ಮಾಡಿದರು. ವಿರೋಧಿಯ ಕಡೆಗೆ ವೈಮನಸ್ಸು ಅಥವಾ ಮಾತ್ಸರ್ಯ ಭಾವವಿಲ್ಲದೆ ಸತ್ಯಕ್ಕಾಗಿ ಆಗ್ರಹಪಟ್ಟುಕೊಳ್ಳುವುದು- ಗಾಂಧೀನೀತಿಯ ವೈಶಿಷ್ಟ್ಯವೆಂದ ನೆಹರೂ ಈ ಸಂದರ್ಭದಲ್ಲಿ ಉದ್ಗರಿಸಿದರು. ಇಂಥ ವಿಚಾರಗೋಷ್ಠಿಯಿಂದ ಕೂಡಲೇ ಏನಾದರೂ ಪರಿಣಾಮವಾದೀತೆಂದು ಹೇಳುವುದು ಕಷ್ಟಸಾಧ್ಯವಾದರೂ— ಯುದ್ಧದ ಹೊರತು ಸಮಸ್ಯೆಗಳ ಪರಿಹಾರಕ್ಕೆ ಬೇರೆ ಮಾರ್ಗವೇ ತೆರೆದಿಲ್ಲೆಂಬ ಅಂಧ ವಿಶ್ವಾಸವುಳ್ಳವರ ಕಣ್ಣಿಗಿದು ಅಂಜನಪ್ರಾಯವಾಗುವುದು ನಿಶ್ಚಯವೆಂದು ನೆಹರೂ ಹೇಳಿದರು. ಯುದ್ಧಗಳು ಯಾವುದೇ ಸಮಸ್ಯೆಯ ನಿರ್ಮೂಲ ಮಾಡುವುದಕ್ಕೆ ಸಮರ್ಥವಾಗದೆ ಹೊಸ ಹೊಸ ಸಮಸ್ಯೆಗಳುದ್ಭವಿಸುವುದಕ್ಕೇ ಹೇತುವಾಗಿರುವುವು ಎಂದು ನೆಹರೂ ಸೂಚಿಸಿದರು. ರಾಜಕೀಯದಲ್ಲಿ ಸತ್ಯಪ್ರಿಯತೆಗೆ ಸ್ಥಾನ ಕೊಡುವುದಕ್ಕೊಂದು ಮಿತಿಯುಂಟೆಂದ ತಿಳಿದು ಕೊಂಡರೂ ಸಾಮಾನ್ಯ ಹಿತ-ಹಿತಗಳ ಕಲ್ಪನೆಯನ್ನು ಮಾಡಿಕೊಂಡು ಸಾಧ್ಯವಿದ್ದಷ್ಟೂ ಹೆಚ್ಚು ಶಾಂತಿಯ ಮಾರ್ಗಾನುಸರಣವನ್ನು ಕೈಗೊಳ್ಳಲು ನೋಡಬೇಕೆಂಬುದು ಸತ್ಯ. ಗಾಂಧೀ ನೀತಿಯ ಬಗ್ಗೆ ಲೋಕದ ವಿಮರ್ಶಕರಿಗೆ ಕುತೂಹಲವನ್ನು ತೋರಿಸುತ್ತಿರುವರೆಂಬ, ಸಂಗತಿಯೊಂದರಿಂದಲೇ— ಗಾಂಧೀ ನೀತಿಯ ಹಿರಿಮೆಯು ದೃಗ್ಗೋಚರವಾಗಬಲ್ಲುದು. ಹೇಗಿದ್ದರೂ ಚೀನಾ ಹಾಗೂ ರಶಿಯಾಗಳು ಈ ವಿಚಾರಗೋಷ್ಠಿಯಲ್ಲಿ ಭಾಗವಹಿಸಲು ನಿರಾಕರಿಸಿದುದೆಂದು ಕೇಳಿಬಂದ [illegible] ನ್ನು ಕೇಳಿದರೆ- ಕಮ್ಯೂನಿಸ್ಟರ ಹೃದಯ ಕಲ್ಲಿನಿಂದ ಕಟ್ಟಲ್ಪಟ್ಟದ್ದೇ ಎಂಬ ಸಂಶಯವೇಳುತ್ತದೆ. ಕಮ್ಯೂನಿಸ್ಟ ರಾಷ್ಟ್ರಗಳು ತಂತಮ್ಮ ದೇಶದಲ್ಲಿ ಶಾಂತಿ ಯೋಜನೆಗಳನ್ನೂ ಶಾಂತಿ ಪರಿಷತನ್ನೂ ಕರೆಯುತ್ತಿರುವ ರೀತಿಯನ್ನು ನೋಡಿದರೆ- ಶಾಂತಿಸಾಧನೆಗಾಗಿ ಗಾಂಧೀ ನೀತಿಯ ಕಾಣಿಕೆ ಏನೆಂಬುದರ ಬಗ್ಗೆ ಚರ್ಚಿಸುವ ಉದ್ದೇಶದಿಂದ ಕೂಡಿದ ಈ ವಿವಿಧ ಗೋಷ್ಠಿಗೇಕೆ ಬರಲಿಲ್ಲವೋ ಎನಿಸುತ್ತದೆ. ಪ್ರಾಯಶಃ ಹಿಂಸೆಯೇ ಪ್ರಬಲಾಯುಧವಾಗಿರುವ ಕಮ್ಯೂನಿಸ್ಟರಿಗೆ ಗಾಂಧೀಯ 'ಕರುಣಾತ್ಮಕ ಸತ್ಯಾಗ್ರಹ' ರುಚಿಸಲಿಕ್ಕಿಲ್ಲ.

ZANDU KESARI JIVAN

ಝಾಂಡೂ ಕೇಸರಿ ಜೀವನ

ಕೆಮ್ಮು, ನೆಗಡಿ, ರಾಜಯಕ್ಷ್ಮ, ಮಿದುಳು ನಿತ್ರಾಣ, ಅಕಾಲಿಕ ವೃದ್ಧಾಪ್ಯ, ಸರ್ವಸಾಮಾನ್ಯ ಬಲಹೀನತೆಗಳಿಗೆಲ್ಲಾ **ಕೇಸರಿ ಜೀವನವು** ಹೆಸರುವಾಸಿಯಾದದ್ದು ಅಲ್ಲದೆ ದೇಹಾರೋಗ್ಯವನ್ನು ಸಮತೂಕವಲ್ಲಿಸಲು ಆದರ್ಶ ಟಾನಿಕ್ ಆಹಾರವಾಗಿದೆ 1 ರಾತ್ಲು: ರೂ. 6-8-0 ¼ ರಾತ್ಲು: ರೂ 1-14-0

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್, ಕೆಮಿಸ್ಟ್ಸ ಎಂಡ್ ಡ್ರಗ್ಗಿಸ್ಟ್ಸ, ಉಡುಪಿ.

2 ಶ್ರೀ ವಿ ವಿ ಶೆಣೈ, ಕೆಮಿಸ್ಟ್, ಕಾರ್ಕಳ

3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು

4 ಎಲ್ ಎಸ್ ಶರ್ಮ, ಹಜೂರು ಪೇಟೆ ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರಿ ಶರತ್ತುಗಳಿಗೆ ಈಗ ಬರೆಯಿರಿ.

DAMODAR & CO.,

Namappa Naickeu Street, Park Town–MADRAS 3.



ವ್ಯವಸಾಯ ಯೋಧರಿಗೆ ಪ್ರಶಸ್ತಿ ಪತ್ರ

ಆಹಾರದ ಆಯಾತ ಪ್ರಮಾಣದಲ್ಲಿ ಕಡಿತ

ವಾಂಛೂರಿಗೆ ಮನವಿ

ಆಂಧ್ರಪ್ರಾಂತ ರಚನೆಯ ಸಂಬಂಧದಲ್ಲಿ ಈಗಾಗಲೇ ಮದ್ರಾಸಿಗೆ ಆಗಮಿಸಿರುವ ರಾಜಸ್ಥಾನ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾದ ಶ್ರೀ ವಾಂಛೂರವರಿಗೆ ಈಗಾಗಲೇ ಹಲವು ಜನರು ಭೇಟಿಯಾಗಲು ಹೋಗಿರುವರು. ನ್ಯಾಯಮೂರ್ತಿ ವಾಂಛೂ ಮದ್ರಾಸಿಗೆ ರೈಲಿನಲ್ಲಿ ಆಗಮಿಸುತ್ತಿದ್ದಂತೆಯೇ ಅಲ್ಲಲ್ಲಿ ರೇಲ್ವೆ ನಿಲ್ದಾಣದಲ್ಲಿ ಆಂಧ್ರಪ್ರಾಂತದ ಸಂಬಂಧವಲ್ಲಿ ಜನರೊಡನೆ ಮಾತನಾಡಿದರು. ಮದ್ರಾಸಿಗೆ ಬಂದವರೇ ಮುಖ್ಯ ಮಂತ್ರಿ ರಾಜಗೋಪಾಲಾಚಾರಿಯವರನ್ನೂ ಇತರ ಮಂತ್ರಿಗಳನ್ನೂ ಕಂಡು ಪ್ರತ್ಯಪ್ರತ್ಯೇಕವಾಗಿ ಅವರೆಲ್ಲರ ಹೇಳಿಕೆಯನ್ನು ತಿಳಿದುಕೊಂಡರು ಮಂತ್ರಿಗಳಲ್ಲಿ ಬಳ್ಳಾರಿಯ ಕನ್ನಡಿಗರಾದ ಡಾ. ನಾಗನಗೌಡರು ವಾಂಛೂರವರೊಡನೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಬಳ್ಳಾರಿಯ ಪೂರ್ವಭಾಗದ ಮೂರು ತಾಲೂಕುಗಳು ಆಂಧ್ರಕ್ಕೆ ಸೇರತಕ್ಕವೆಂದು ಈಗ ಚಳುವಳಿ ನಡೆದಿದ್ದರೂ—ಆ ಕಾರಣಕ್ಕಾಗಿ ಬಳ್ಳಾರಿ ಜಿಲ್ಲೆಯನ್ನು ವಿಭಜಿಸ ಕೂಡದೆಂದೂ ಮದ್ರಾಸು ರಾಜ್ಯದಲ್ಲಿಯೇ ಅದನ್ನೀಗ ಉಳಿಯಗೊಡಬೇಕೆಂದೂ ವಿನಂತಿಸಿರುವರು. ಈ ಮೂರು ತಾಲೂಕುಗಳ ಮೇಲೆ ಕನ್ನಡಿಗರ ಹಕ್ಕು ಇರುವುದು. ಈ ಸಂದರ್ಭದಲ್ಲಿ ತಮ್ಮನ್ನು ಒಡನೆಯೇ ಬಂದು ಕಾಣಬೇಕೆಂದು ಕರ್ನಾಟಕ ಪ್ರದೇಶ ಕಾಂಗ್ರೆಸ ಸಮಿತಿಯ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರಿಗೆ ಅಗತ್ಯದ ಕರೆಯು ನ್ಯಾಯಮೂರ್ತಿ ವಾಂಛೂರಿಂದ ಬಂದಿದ್ದು- ನಿಜಲಿಂಗಪ್ಪನವರ ಅಸ್ವಸ್ಥತೆಯಲ್ಲಿ ಉಳಿದ ಸದಸ್ಯರು ಮದ್ರಾಸಿಗೆ ಆಗಮಿಸಿರುವರು. ಆಂಧ್ರಕೇಸರಿ ಎನಿಸಿದ ಶ್ರೀ ಟಿ. ಪ್ರಕಾಶಮರೂ ವಾಂಛೂರನ್ನು ಕಂಡು ಒಂದು ನೂರು ಪುಟಗಳ ಮನವಿಯನ್ನು ಅರ್ಪಿಸಿರುವರು. ಆ ಮನವಿಯಲ್ಲಿ ಏನಿದೆ ಮತ್ತು ಯಾವ ವಿಶಿಷ್ಟ ಸಂಗತಿಯ ಕುರಿತು ಮಾತುಕತೆ ನಡೆಯಿತು ಎಂಬ ಸಂಗತಿ ಗೋಪ್ಯವಾಗಿದೆ. ಆಂಧ್ರದ ಧುರೀಣರನ್ನೂ ವಾಂಛೂ ಕಂಡಿರುವರು. ಕಮ್ಯೂನಿಸ್ಟರ ನಿಯೋಗವೊಂದೂ ವಾಂಛೂರನ್ನು ಭೇಟಿಯಾಗಿ ಪ್ರತ್ಯೇಕವಾದ ರಾಜಧಾನಿ, ಪ್ರತ್ಯೇಕವಾದ ಹೈಕೋರ್ಟು, ಪ್ರತ್ಯೇಕವಾದ ಪಬ್ಲಿಕ್ ಸರ್ವಿಸ್ ಕಮಿಶನ್ ಇರುವ ಹೊಸಆಂಧ್ರ ಪ್ರಾಂತವನ್ನು ತೆಲುಗು ಹೊಸವರ್ಷದಂದು (ಮಾರ್ಚಿ ೧೬) ರಚಿಸಬೇಕೆಂದಿರುವರು.

ಘಟನೆಗೆ ಗೌರವ

ನ್ಯಾಯಮೂರ್ತಿ ವಾಂಛೂರವರು ಇನ್ನೂ ಅನೇಕರನ್ನು ಭೆಟ್ಟಿಯಾಗಲಿರುವರು. ಆಂಧ್ರದ ಕೆಲವೆಡೆ ಸಂಚಾರಮಾಡಿ, ರಾಜಧಾನಿಗೆ ಯಾವ ನಗರವು ಪ್ರಶಸ್ತವೆಂಬುದನ್ನವರು ಗೊತ್ತುಮಾಡುವರು. ಪ್ರತ್ಯೇಕ ಹೈಕೋರ್ಟು ಮುಂತಾದ ಬೇಡಿಕೆಗಳ ಸಂಬಂಧದಲ್ಲಿ ವಿಚಾರ ವಿನಿಮಯ ನಡೆಸುವ ಉದ್ದೇಶದಿಂದಲೇ ಇರಬೇಕು-ನ್ಯಾಯಮೂರ್ತಿ ವಾಂಛೂರವರು ಮದ್ರಾಸು ಹೈಕೋರ್ಟಿನ ಮುಖ್ಯ ನ್ಯಾಯಾಧೀಶ ಶ್ರೀ ಪಿ. ವಿ. ರಾಜಮನ್ನಾರರೊಡನೆಯೂ ಮಾತುಕತೆ ನಡೆಸಿರುವರು. ಹೀಗೆ ಘಟನಾತ್ಮಕವಾಗಿ ಹೊಸ ಪ್ರಾಂತ ರಚನಾ ಕಾರ್ಯವು ಪ್ರಗತಿಯನ್ನು ಹೊಂದುತ್ತ ನಡೆದಿರುವಾಗ ಕೆಲವು ಕಡೆಗಳಲ್ಲಿ ಘಟನೆಯ ವಿರುದ್ಧ ನಡೆಯುವ ಅಕ್ರಮ ಕೃತ್ಯಗಳು ತುಂಬ ಶೋಚನೀಯ ಕೆಲವು ಸಮಯದ ಹಿಂದೆ ಮುಂಬಯಿಯ ಗೂಂಡಾಟಕರದ ವಿರುದ್ಧ ಚಳುವಳಿ ನಡೆದರೆ ಈಗ ತಾನೆ ಸೌರಾಷ್ಟ್ರದಲ್ಲಿ ಅಂಥ ಚಳುವಳಿ ನಡೆದು, ಪರಿಸ್ಥಿತಿ ಪ್ರಕೋಪಕ್ಕೆ ಮುಟ್ಟಿದ ವರದಿ ಬಂದಿದೆ. ಲಾಠೀಛಾರ್ಜು, ಗೋಳೀಬಾರು ನಡೆಸುವವರೆಗೂ ವಿಷಮ ಪರಿಸ್ಥಿತಿಯು ಸೌರಾಷ್ಟ್ರದ ಮೂರಾಟಕರ ವಿರೋಧ ಚಳುವಳಿಯಿಂದುಂಟಾಯಿತು. ಸರಕಾರವು ಕೆಲಮಟ್ಟಿಗೆ ಬಿಗುಮಾನದಿಂದ ವರ್ತಿಸಿದುದರಿಂದ ಹೀಗಾಯಿತೆಂದು ಹೇಳುವವರಿದ್ದರೂ—ಈಗ ಸರಕಾರವು ಕೆಲವೊಂದು ಪರಿಹಾರ ಕ್ರಮವನ್ನು ಮೂರಾಟಕರದಲ್ಲಿ ಕೈಕೊಂಡಿರುವುದರಿಂದ, ಇನ್ನಾದರೂ ಗಲಭೆಗಳು ಶಾಂತಗೊಳ್ಳಬೇಕಾದುದು ನ್ಯಾಯ. ಈ ಸಂದರ್ಭದಲ್ಲಿ ಅಹಮ್ಮದಾಬಾದಿನಲ್ಲಿ ಭಾರತದ ಹಿಂದಿನ ಅರ್ಥ ಸಚಿವರಾದ ಡಾ. ಜಾನ್ ಮತಾಯರು ಹೇಳಿದ ಮಾತುಗಳು ಗಮನಾರ್ಹವಿವೆ. ನಾವಾಗಿ ಒಪ್ಪಿ ಸ್ವೀಕರಿಸಿದ ಘಟನೆಯ ವಿರುದ್ಧ ಚಳುವಳಿಯನ್ನೂ ಆಂದೋಲನವನ್ನೂ ನಡೆಸುವ ಪ್ರವೃತ್ತಿ ವಿಘಾತಕವೆಂದು ಮಥಾಯರ ಅಭಿಪ್ರಾಯವಿವೆ. ನಮ್ಮದು ಉತ್ಕೃಷ್ಟ ರೀತಿಯಲ್ಲಿ ಸಿದ್ಧಗೊಳಿಸಿದ ರಾಜ್ಯಾಂಗ ಘಟನೆಯಾಗಿದೆ. ಒಂದುವೇಳೆ ಕೆಲ ಸಂದರ್ಭದಲ್ಲಿ ಜನಕ್ಕೆ ಸರಕಾರದಿಂದ ಪೀಡನೆಯುಂಟಾಗುವವಿದ್ದರೂ ಅವರ ನಿವಾರಣೆಗಾಗಿ ವಿಧ್ಯುಕ್ತ ಮಾರ್ಗಗಳನ್ನು ಅನುಸರಿಸಬೇಕಲ್ಲದೆ ವಿಧ್ವಂಸಕ ಚಟುವಟಿಕೆಗಳು ಪರಿಹಾರವನ್ನು ತರಲಾರವು. ಘಟನೆಯನ್ನು ನಾವು ಆದರಿಸಿ ಗೌರವಿಸಬೇಕು.

ಪೋಲೀಸರ ಆಂದೋಲನ

ಆದರೆ ಇಂಥ ಸದುಪದೇಶವನ್ನು ಕಿವಿಗೊಟ್ಟು ಆಲಿಸುವುದಕ್ಕೆ ಕೆಲವು ಹಿತಸಂಬಂಧದ ಪಕ್ಷಗಳು ಬಿಡುತ್ತಿಲ್ಲವೇನೋ ಎಂದೆನ್ನಿಸುತ್ತದೆ. ಸರಕಾರದ ವಿರುದ್ಧ ಹೂಲಿಯನ್ನೆಬ್ಬಿಸುವುದು ಬಡಜನರ ದಾರಿದ್ರ್ಯ ಹಾಗೂ ಸಂಕಷ್ಟಗಳ ಕೂಟದ ಮೇಲೆಯೇ ತಮ್ಮ ಭವನ ನಿರ್ಮಾಣ ಮಾಡುವುದೂ ಕೆಲವು ಜನರ ಹವ್ಯಾಸವಾಗಿದೆ. ಇಂಥ ಜನವಿರೋಧೀ ಚಟುವಟಿಕೆಗಳನ್ನು ದಮನಿಸಲು ಜನಹಿತ ಸರಕಾರವು ಪ್ರಯತ್ನಿಸಬೇಕಾದುದು ನ್ಯಾಯ ಸಮ್ಮತ. ಆದರೆ ಈಚೆಗೆ ಮದ್ರಾಸಿನಲ್ಲಿ ಪೋಲೀಸುಪಡೆಗಳೇ ಸರಕಾರದೊಡನೆ ಸೆಣಸಿದ ಗಂಭೀರ ವಾರ್ತೆಯೊಂದು ಬಂದಿದೆ. ಸರಕಾರವು ಕೂಡಲೇ ತಕ್ಕ ಕ್ರಮವನ್ನು ಕೈಗೊಂಡುದರಿಂದ ಎಲ್ಲವೂ ಅಲ್ಪಾವಧಿಯಲ್ಲಿ ಶಾಂತವಾಯಿತು. ಅಲ್ಲಿಯ ಪೋಲೀಸರು ರಚಿಸಿಕೊಂಡಿದ್ದ ಸಂಘದ ಕಾರ್ಯದರ್ಶಿಯನ್ನು ಸರಕಾರವು ಬಂಧಿಸಿದುದರಿಂದ ಪೋಲೀಸರು ಸಿಟ್ಟುಗೊಂಡರು. ಸಂಬಳ ಏರಿಸಬೇಕು ಸೌಕರ್ಯ ಹೆಚ್ಚಿಸಬೇಕು ಎಂಬುದೇ ಮುಂತಾದ ಬೇಡಿಕೆಗಳನ್ನು ಸರಕಾರದ ಮುಂದಿಟ್ಟರು. ದಶಂಬರ ತಿಂಗಳ ಸಂಬಳವನ್ನು ಸ್ವೀಕರಿಸಲೂ ಒಪ್ಪಲಿಲ್ಲ. ಆಂಥದರಲ್ಲಿ ಸರಕಾರವು ಜಾಗರೂಕತೆ ವಹಿಸಿ, ಎಲ್ಲ ಪೋಲೀಸರನ್ನೂ ನಿಃಶಸ್ತ್ರರನ್ನಾಗಿ ಮಾಡಿದರಲ್ಲದೆ, ಬಿಗಿಯಾದ ಕಾವಲನ್ನೂ ಇಡಿಸಿದರು. ಸ್ವಂತಃ ರಾಜಗೋಪಾಲಾಚಾರಿಯವರೇ ಪೋಲೀಸು ಪಡೆಯ ಸಂಘದ ಕಾರ್ಯದರ್ಶಿಯ ಪ್ರಕರಣದ ವಿಚಾರಣೆಯನ್ನು ತಮ್ಮ ಕೈಯಲ್ಲಿ ತೆಗೆದುಕೊಂಡರು. ಹಲವು ಜನ ಪೋಲೀಸರನ್ನು ಬಂಧಿಸಿದರು. ಈಗತಾನೆ ಬಂದ ವರದಿಗಳಂತೆ ಪೋಲೀಸರು ಮರಳಿ ತಮ್ಮ ಕೆಲಸಕ್ಕೆ ಹೋಗಿರುವರೆಂದೂ ಸಂಬಳ ತೆಗೆದುಕೊಳ್ಳಲೊಪ್ಪಿರುವರೆಂದೂ ತಿಳಿದಿದೆ. ಸರಕಾರದವರು ಒಂದು ಪ್ರಕಟಣೆ ಹೊರಡಿಸಿ ಪೋಲೀಸರ ಸಂಬಳ ಏರಿಸುವುದಕ್ಕೆ ಸರಕಾರವದ ವಿಷಮ ಆರ್ಥಿಕ ಪರಿಸ್ಥಿತಿಯಿಂದಾಗಿ ಸಾಧ್ಯವಿಲ್ಲೆಂದೂ ಆದರೆ ಕೆಲವು ನಮೂನೆಯಲ್ಲಿ ಸೌಕರ್ಯ ಹೆಚ್ಚಿಸುವುದಕ್ಕೆ ನೋಡಲಾಗುವುದೆಂದೂ ಹೇಳಿರುವರು. ಈಗಾಗಲೇ ಬಂಧಿಸಿದ್ದ ಪೋಲೀಸರನ್ನು ಪರಿಸ್ಥಿತಿ ಸಂಪೂರ್ಣ ಶಾಂತವಾಗುವ ವರೆಗೆ ಹಾಗೆಯೇ ಇಡಲಾಗುವುದು.

ನಮ್ಮ ಕೃಷಿ ಪಂಡಿತರು

ಕಳೆದ ವಾರದ ಮಹತ್ವದ ಸುದ್ದಿಯಲ್ಲದಿದ್ದರೂ ಆಕರ್ಷಕ ವಾರ್ತೆಗಳಲ್ಲಿ ವ್ಯವಸಾಯ ಸಂಶೋಧನ ಸಂಸ್ಥೆಯವರು ಅಖಿಲ ಭಾರತದ ರೂಪದಲ್ಲಿ ಏರ್ಪಡಿಸಿದ ಬೆಳೆಸ್ಪರ್ಧೆಯಲ್ಲಿ ಆರುಜನ ರೈತರಿಗೆ ಕೃಷಿಪಂಡಿತ ಎಂಬ ಪ್ರಶಸ್ತಿಯನ್ನು ಕೊಟ್ಟುದು ಮುಖ್ಯವಾಗಿದೆ. ಪ್ರಧಾನ ಮಂತ್ರಿ ನೆಹರೂರವರ ದಿವ್ಯ ಹಸ್ತಗಳಿಂದ ಈ ಪ್ರಶಸ್ತಿ ಪತ್ರಗಳು ವಿತರಿಸಲ್ಪಟ್ಟವು. ಇದರ ಜೊತೆಗೆ ಸುಮಾರು ಏಳುಸಾವಿರ ರೂಪಾಯಿ ಬೆಲೆಯ ಒಂದೊಂದು ಟ್ರಾಕ್ಟರನ್ನೂ ಸರಕಾರವು ಬಹುಮಾನವಾಗಿ ಕೊಟ್ಟಿರುವುದು. ಎಲ್ಲ ಕೃಷಿ ಪಂಡಿತರೂ ಐದು ಸಾವಿರ ರೂಪಾಯಿ ನಗದು ಹಣದ ಬದಲು ಈ ಟ್ರಾಕ್ಟರನ್ನೇ ಇಚ್ಛಿಸಿದರು. ಅಖಿಲ ಭಾರತದಲ್ಲಿಯೇ ಅಲ್ಲ-ಜಗತ್ತಿನ ಭತ್ತದ ಬೆಳೆಯಲ್ಲೇ ವಿಕ್ರಮವನ್ನು ಸ್ಥಾಪಿಸಿದ ಕೀರ್ತಿಯು ಕೊಡಗಿನ ಆಬೂರ ಎಂಬ ಗ್ರಾಮದ ಶ್ರೀ ಜಂಗಮ ಸಂಗಯ್ಯರೆಂಬ ಕನ್ನಡಿಗರಿಗೆ ದೊರೆತಿದೆ. ಇವರು ಒಂದು ಎಕ್ರೆ ಭೂಮಿಯಲ್ಲಿ ೧೩೩ ಮಣ ಭತ್ತವನ್ನು ಬೆಳೆದಿರುವರು. ಶ್ರೀ ಸಂಗಯ್ಯನವರಿಗೆ ಟ್ರಾಕ್ಟರು ಬಹುಮಾನದ ಜೊತೆಗೆ ೩೧೦೦ ರೂಪಾಯಿ ಬೆಲೆಬಾಳುವ ಡೀಜೆಲ್ ಎಂಜಿನೊಂದೂ ಪಾರಿತೋಷಕವಾಗಿ ದೊರೆತಿದೆ. ಭಾರತದಲ್ಲಿ ಭತ್ತದ ಸರಾಸರಿ ಉತ್ಪಾದನೆಯು ಎಕ್ರೆಗೆ ಏಳೂವರೆ ಮಣವಿದೆ. ಒಂದು ಎಕರೆಯಲ್ಲಿ ೭೧| ಮಣ ಗೋಧಿ ಬೆಳೆದದ್ದಕ್ಕೆ ಪೂರ್ವಪಂಜಾಬದ ಸರದಾರ ಗುರುದೇವ ಸಿಂಗರಿಗೂ ೪೬ ಮಣ ಕಡ್ಲೆ ಬೆಳೆದದ್ದಕ್ಕೆ ಲುಧಿಯಾನಾ ಜಿಲ್ಲೆಯ ವಾಲಿಯತ ರಾಮರಿಗೂ ೬೪|| ಮಣ ಜೋಳ ಬೆಳೆದದ್ದಕ್ಕೆ ಕೊಲ್ಹಾಪುರ ಜಿಲ್ಲೆಯ ಶ್ರೀ ಭೀಮಗೌಡದಾದಾ ಪಾಟೀಲರಿಗೂ ೨೫೧ ಸಜ್ಜೆ ಬೆಳೆದದ್ದಕ್ಕೆ ಮುಂಬಯಿ ರಾಜ್ಯದ ವಾಮನ ರಾಮಚಂದ್ರ ಮಂತಾತೆಯವರಿಗೂ ೭೩||| ಮಣ ಬಟಾಟೆ ಬೆಳೆದದ್ದಕ್ಕೆ ಉತ್ತರ ಪ್ರದೇಶದ ಜಯಪಾಲ ಚಂದ್ರರಿಗೂ ಕೃಷಿಪಂಡಿತ ಪ್ರಶಸ್ತಿಯು ದೊರೆಯಿತು. ನಮ್ಮ ದೇಶದ ಸರಾಸರಿ ಉತ್ಪಾದನೆಯ ಹಲವುಪಟ್ಟು ಬೆಳೆಯನ್ನು ಬೆಳೆಯಲು ಈ ಎಲ್ಲ ಕೃಷಿ ಪಂಡಿತರು ಸಮರ್ಥರಾದರು. ಅವರಷ್ಟೆ ಉತ್ಸಾಹ ಮತ್ತು ಸ್ಫೂರ್ತಿಯಿಂದ ನಮ್ಮ ಉಳಿದ ರೈತರೂ ದುಡಿದರೆ, ಅನ್ನಸ್ವಾವಲಂಬನದ ನಮ್ಮ ಧ್ಯೇಯ ಕೈಗೂಡುವುದು ಮಹತ್ವದ ಸಂಗತಿಯಲ್ಲ.

ಆಹಾರ ಮಂತ್ರಿಗಳ ಪರಿಷತ್ತು

ಈ ಮಾತನ್ನು ಪ್ರಧಾನಿ ನೆಹರೂ ಸ್ಪಷ್ಟವಾಗಿ ವರ್ಣಿಸಿದರು. ಈಗ ಭಾರತದಲ್ಲಿಯೇ ಉತ್ತಮವಾದ ಶಾಸ್ತ್ರೀಯ ರಸಾಯನ ಗೊಬ್ಬರವನ್ನು ಸಿಂಧ್ರಿಯ ಕಾರ್ಖಾನೆಯಲ್ಲಿ ಉತ್ಪಾದಿಸಲಾಗುತ್ತಿದೆ. ಅದನ್ನು ಚೆನ್ನಾಗಿ ಬಳಸಿಕೊಳ್ಳಲಿಕ್ಕೆ ರೈತರು ಮುಂದಾಗಬೇಕು. ರೊಕ್ಕಕೊಟ್ಟು ಅದನ್ನು ಕೊಂಡುಕೊಳ್ಳುವಷ್ಟು ಸಾಮರ್ಥ್ಯವಿಲ್ಲದ ರೈತರು ಮೊದಲಾಗಿ ಗೊಬ್ಬರ ಪಡೆದು ಹಿಂದಿನಿಂದ ಒಂ

(೭ನೇ ಪುಟ ನೋಡಿರಿ)

ವಿವೇಕವುಳ್ಳ ದೂರದರ್ಶಿ ಸಂಪನ್ನ ಪಿಗ್ಮಿ ಠೇವಣಾತಿದಾರ

ಅವನಿಗೆ ಯಾವ ಚಿಂತೆಯೂ ಇಲ್ಲ. ನಮ್ಮ ಜನವೇ ಆತನಿದ್ದಲ್ಲಿಗೆ ದಿನಾಲು ಹೋಗಿ ಆತನು ಕೊಡುವ ಉಳಿತಾಯದ ಹಣವನ್ನು ಒಟ್ಟು ಮಾಡುವರು. ಏಳು ವರುಷಗಳ ಅವಧಿಯಲ್ಲಿ ಆ ಠೇವಣಾತಿದಾರರ ಲೆಖ್ಖದಲ್ಲಿ ದೊಡ್ಡ ಮೊತ್ತವು ಜಮೆಯಾಗುವುದು. ನೀವು ಕೂಡಾ ಆತನಂತೆ ಪಿಗ್ಮಿ ಡಿಪೋಜಿಟ್ ಯೋಜನೆಗೆ ಇಂದೇ ಸೇರಿ ಆತನಂತೆ ಏಳುವರುಷಗಳಲ್ಲಿ ಸಿರಿವಂತರಾಗಿರಿ.

ಆಧಾರ ವಹಿವಾಟಿನ ನಿಧಿಯು ರೂ 5,00,00 000ಕ್ಕೂ ಜಾಸ್ತಿ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925 ಹೆಡ್ ಆಫೀಸು: ಉಡುಪಿ

THE CANARA INDUSTRIAL & BANKING SYNDICATE LIMITED

Estd: 1925 H. O: UDIPI

The Canara Banking Corporation Limited.

ಸುಲಭ ಶರ್ತಗಳಿದ್ದು, ಸಾಲಿಯಾನ್ ಸೇಕಡಾ 4ರಂತೆ ಬಡ್ಡಿಗಳಿಸುವ ನಮ್ಮ

ಪಂಚವಾರ್ಷಿಕ ಯೋಜನೆಯ ಠೇವಣಾತಿಗಳು.

ಈಗಾಗಲೇ ಎಲ್ಲಾ ಕಡೆಗಳಲ್ಲಿಯೂ ಜನಾದರಣೀಯವಾಗಿವೆ ನೀವೂ ಕೂಡಾ ನಿಮ್ಮ ಹಣವನ್ನು ಈ ಠೇವಣಾತಿಗಳಲ್ಲಿ ಏಕೆ ವಿನಿಯೋಗಿಸಬಾರದು?

ವಿಶೇಷ ಮಾಹಿತಿಗೆ,

ನಿಮಗೆ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ, ಉಡುಪಿ. (ದ ಭಾರತ)

ನವಯುಗ

ಉಡುಪಿ, ಗುರುವಾರ ೧೫-೧-೫೩

ಆಹಾರಾಭಾವದ ವಿಮರ್ಶೆ

ವ್ಯವಸಾಯ ಕ್ಷೇತ್ರದಲ್ಲಿ ವಿಕ್ರಮವನ್ನು ಸ್ಥಾಪಿಸಿದ ರೈತರಿಗೆ ಕೃಷಿ ಪಂಡಿತ ಪ್ರಶಸ್ತಿಯನ್ನು ನೀಡುವಾಗ ಮತ್ತು ಆಹಾರ ಮಂತ್ರಿಗಳ ಪರಿಷತ್ತು ಸೇರಿದಾಗ ಸರಕಾರದ ಕಡೆಯಿಂದ ವ್ಯಕ್ತಗೊಂಡ ಅಭಿಪ್ರಾಯಗಳನ್ನು ವಿಮರ್ಶಿಸುವುದು ಯೋಗ್ಯ. ಕೃಷಿ ಪಂಡಿತರನ್ನು ಗೌರವಿಸುವಾಗ ನೆಹರೂ ಹೇಳಿದ ಸಂಗತಿಗಳಲ್ಲಿ ವ್ಯವಸಾಯ ಸಂಶೋಧನೆಯ ಫಲವು ಹಳ್ಳಿಯ ರೈತನಿಗೆ ಮುಟ್ಟದಿದ್ದಲ್ಲಿ ಅದು ವ್ಯರ್ಥವೆಂದಿರುವುದು ಪ್ರಾಮುಖ್ಯವಾಗಿದೆ. ನಮ್ಮ ಉತ್ಪಾದನೆಯನ್ನು ಶಕ್ಯವಿದ್ದ ಎಲ್ಲ ಬಗೆಯಿಂದಲೂ ಹೆಚ್ಚಿಸಿಕೊಂಡು ಸಂಪತ್ತನ್ನು ಬೆಳೆಸುವುದೇ ಈಗಿನ ಮಹತ್ವದ ಪ್ರಶ್ನೆಯಾಗಿರುವುದರಿಂದ—ಉತ್ತಮವಾದ ಸಂಶೋಧನೆಗಳ ಪರಿಜ್ಞಾನವನ್ನು ಜನಸಾಮಾನ್ಯಕ್ಕೆ ಮಾಡಿಸುವುದಕ್ಕೆ ಯೋಗ್ಯ ಮಾರ್ಗಗಳನ್ನು ಕಲ್ಪಿಸಿ ಕೊಡಬೇಕಾದ್ದು ನ್ಯಾಯ ಮತ್ತು ಅಗತ್ಯ. ಪಂಚವಾರ್ಷಿಕ ಯೋಜನೆಯಲ್ಲಿ ಕೃಷಿಗೆ ಪ್ರಾಧಾನ್ಯವನ್ನು ಕೊಟ್ಟಿರುವುದರಿಂದ ಮುಂದಿನ ಮೂರು ವರ್ಷಗಳ ಅವಧಿಯಲ್ಲಿ ನಾವು ಬಹಳ ಮಟ್ಟಿಗೆ ಆಹಾರ ಸ್ವಾವಲಂಬನವನ್ನು ಹೊಂದಬಹುದೆಂದೂ ಆಯಾತವನ್ನು ನಿಲ್ಲಿಸಿಬಿಡುವುದೂ ಸಾಧ್ಯವಾದೀತೆಂದೂ ನೆಹರೂ ನುಡಿದರು. ಆದರೆ ಈ ವಿಷಯದಲ್ಲಿ ತಾನು ಆಶ್ವಾಸನೆಯನ್ನೇನೂ ಕೊಡುವ ಪರಿಸ್ಥಿತಿ ಇಲ್ಲವೆಂದವರು ದುಃಖದಿಂದ ಹೇಳಿದರು. ಈ ಹಿಂದೆ ಅನ್ನಕ್ಷಾಮದ ಪ್ರಶ್ನೆಯನ್ನು ಬಗೆಹರಿಸುವಲ್ಲಿ ಯುದ್ಧ ಪರಿಸ್ಥಿತಿ ಇದೆಯೆಂದೇ ಭಾವಿಸಿ ದೃಢವಾದ ಹಜ್ಜೆಯನ್ನು ಮುಂದಿಟ್ಟು ಉತ್ಪಾದನೆಯನ್ನು ಹೆಚ್ಚಿಸಬೇಕೆಂದೂ ೧೯೫೧ನೇ ವರ್ಷದ ನಂತರ ಆಹಾರದ ಆಯಾತವನ್ನೇ ನಿಲ್ಲಿಸಿಬಿಡುವಂತಾಗಬೇಕೆಂದೂ ನೆಹರೂ ಕೂಟ್ಟ ಕರೆಗೆ ನಮ್ಮ ರೈತರಿಂದ ಉತ್ತರ ದೊರೆಯದಿದ್ದುದರಿಂದ ಪ್ರಧಾನಿಗಳಿಗೆ ಈ ರೀತಿ ನಿರಾಶೆಯಾಗಿದೆ. ಬದಲೂ ಪ್ರಶಸ್ತಿ ಪತ್ರಗಳನ್ನು ಪಡೆದ ಕೃಷಿ ಪಂಡಿತರು ಅಕ್ಕಿ, ಗೋಧಿ, ಜೋಳ, ಕಡ್ಲೆ, ಸಜ್ಜೆ, ಮತ್ತು ಬಟಾಟೆ ಎಂಬ ಆರು ಬಗೆಯ ಆಹಾರ ವಸ್ತುಗಳನ್ನೂ ಸಾಮಾನ್ಯ ಉತ್ಪಾದನೆಯ ಎಂಟು-ಹತ್ತು ಪಾಲಷ್ಟು ಬೆಳೆದದ್ದು ನೋಡುವಾಗ—ನಮ್ಮ ಆಹಾರ ಸಮಸ್ಯೆಯನ್ನು ಪರಿಹರಿಸುವಲ್ಲಿ ರೈತರ ಉತ್ಸಾಹವೇ ಕಡಿಮೆಯಾಗಿದೆ ಎಂಬ ಸಂಗತಿ ವ್ಯಕ್ತವಾಗುತ್ತದೆ. ಎಲ್ಲ ಕಡೆ ಮಣ್ಣಿನ ಗುಣ ಒಂದೇಯಾಗಿರದು; ಮತ್ತು ಒಂದೆರಡು ಎಕ್ರೆಗೆ ಮಾಡಿದಷ್ಟು ಹೆಚ್ಚಿನ ಪರಿಶ್ರಮವನ್ನು ಎಲ್ಲ ಸಂದರ್ಭದಲ್ಲಿಯೂ ಮಾಡುವುದು ಕಷ್ಟಸಾಧ್ಯವಾದೀತು. ಆದರೂ ಸ್ವಲ್ಪ ಹೆಚ್ಚು ಪ್ರಯತ್ನಪಟ್ಟರೆ ನೂರಕ್ಕೆ ಹತ್ತು ಹದಿನೈದಂಶದಷ್ಟಾದರೂ ಹೆಚ್ಚು ಆಹಾರವನ್ನು ಬೆಳೆಯುವುದು ಬಹಳ ಸುಲಭವೆಂಬ ಸಂಗತಿಯನ್ನು ನಾವು ದುರ್ಲಕ್ಷಿಸುವಂತಿಲ್ಲ. ನಮ್ಮ ರೈತರು ಸುಧಾರಿತ ಕ್ರಮವನ್ನು ಕೃಷಿಪದ್ಧತಿಯಲ್ಲಿ ಅನುಸರಿಸಲು ಉತ್ಸಾಹದಿಂದ ಮುಂದೆ ಬರಬೇಕೆಂದು ಈ ಮೂಲಕ ಕರೆಕೊಡುವುದಕ್ಕೆ ಹರ್ಷವೆನಿಸುತ್ತದೆ. ಸರಕಾರ ನೀಡುವ ಪಂಪುಸೆಟ್ಟುಗಳು, ಉತ್ತಮ ಬೀಜ, ರಸಾಯನಿಕ ಗೊಬ್ಬರ ಮುಂತಾದುವುಗಳಿಂದ ಉತ್ಪಾದನೆಯನ್ನು ತ್ವರಿತಗತಿಯಲ್ಲಿಯೇ ಹೆಚ್ಚಿಸಬಹುದೆಂಬ ಸಂಪೂರ್ಣ ವಿಶ್ವಾಸವನ್ನು ತಳೆಯಬಹುದು. ಈ ವಿಶ್ವಾಸವು ಸರಕಾರಕ್ಕೂ ಇದೆ ಎಂಬುದು ಆಹಾರ ಮಂತ್ರಿಗಳ ಪರಿಷತ್ತಿನಲ್ಲಿ ಚೆನ್ನಾಗಿ ವ್ಯಕ್ತಗೊಂಡಿದೆ: ಕೇಂದ್ರ ಆಹಾರಮಂತ್ರಿ ಕಿದ್ವಾಯಿಯವರು ಆಹಾರ ಆಯಾತ ಪ್ರಮಾಣವನ್ನು ೩೦ ಲಕ್ಷ ಟನ್ನಿಗೆ ಇಳಿಸುವವರಿದ್ದು, ರಾಜ್ಯ ಸರಕಾರಗಳಿಗೆ ಸಹಾಯವೆಂದು ೨೦ ಲಕ್ಷ ಟನ್ನು ಮಾತ್ರ ಪೂರೈಸುವರು. ರಾಜ್ಯಸರಕಾರಗಳ ಬೇಡಿಕೆ ೩೫ ಲಕ್ಷ ಟನ್ನುಗಳಷ್ಟಿದ್ದರೂ ಕಿದ್ವಾಯಿಯರು ಅದನ್ನು ಅರವಾಸಿಗೂ ಕಡಿಮೆಗೆ ತಗ್ಗಿಸಿರುವುದು ಗಮನಾರ್ಹವಾಗಿದೆ. ಈ ಕಡಿತಕ್ಕೆ ವಿವರಣೆಯನ್ನು ಕೊಡುವಾಗ ಮಂತ್ರಿಗಳು—ರಾಜ್ಯ ಸರಕಾರಗಳು ತಮ್ಮ ಕೊರತೆಯನ್ನು ಹೆಚ್ಚಾಗಿಯೂ ಉಳಿಕೆಯನ್ನು ಕಡಿಮೆಯಾಗಿಯೂ ತೋರಿಸುವ ಚಪಲವನ್ನೇ ಪ್ರದರ್ಶಿಸಿವೆ ಎಂದುದು ಬಹಳ ಮಟ್ಟಿಗೆ ನಿಜವಿದೆ. ಹಿಂದಿನ ವರ್ಷಗಳ ಪಾಠದಿಂದ ಇದನ್ನು ಸಿದ್ಧಗೊಳಿಸಬಹುದು. ನಿಯಂತ್ರಣ-ವಿನಿಯಂತ್ರಣಗಳ ಸಂಗತಿಯಲ್ಲಿ ಆಹಾರ ಮಂತ್ರಿಗಳು ವಿನಿಯಂತ್ರಣ ಧೋರಣವನ್ನು ಪುರಸ್ಕರಿಸಿರುವರು. ತಿರುಕೊಚ್ಚಿ ಮತ್ತು ಮುಂಬಯಿ ಕಲ್ಕತ್ತದಂಥ ಕೆಲವೇ ನಗರಗಳನ್ನು ಬಿಟ್ಟರೆ—ಉಳಿದಲ್ಲಿ ಕಡೆ ನಿಯಂತ್ರಣವನ್ನು ಇನ್ನಷ್ಟು ಸಡಲಿಸಿದರೂ ತೊಂದರೆಯಿಲ್ಲವೆಂದೂ ಈಗಾಗಲೆ ವಿನಿಯಂತ್ರಣವನ್ನು ಜಾರಿಗೆ ತಂದಿರುವಲ್ಲಿ ಪರಿಸ್ಥಿತಿ ಚೆನ್ನಾಗಿದೆಯೆಂದೂ ಆಹಾರ ಮಂತ್ರಿಗಳೆಲ್ಲ ಅಭಿಪ್ರಾಯಪಟ್ಟದ್ದು ಸ್ತುತ್ಯ. ಕೆಲವೆಡೆ ಅನಾವೃಷ್ಟಿ ಅತಿವೃಷ್ಟಿಗಳಿಂದ ಆಹಾರಾಭಾವವಿರುವ ಬಡ ಜನರಿಗೆ ಸರಕಾರ ಅಗ್ಗದರದಲ್ಲಿ ಆಹಾರವನ್ನು ಪೂರೈಸುವುದು ಕರ್ತವ್ಯ. ಇದರಿಂದ ಉಂಟಾಗುವ ಹಾನಿಯನ್ನು ತುಂಬಿಕೊಳ್ಳಲು ಮಂತ್ರಿಗಳು ಹೊಸತೊಂದು ಉಪಾಯವನ್ನು ಯೋಚಿಸಿರುವರು—ರೇಶನು ಕಾರ್ಡಿನ ತಗ್ಗಿದ ದರದ ಅಕ್ಕಿಯಿಲ್ಲದೆ, ಬಹಿರಂಗ ಪೇಟೆಯಲ್ಲಿ ಸ್ವಲ್ಪ ಮುನಾಫೆಯಿಂದ ಸರಕಾರವು ನಾಗರಿಕರಿಗೆ ಅಕ್ಕಿಯನ್ನೊದಗಿಸಲು ಹವಣಿಸಿದೆ. ಈ ಮುನಾಫೆಯ ಹಣವು ಕ್ಷಾಮ ಗ್ರಸ್ತ ಪ್ರದೇಶಗಳ ಜನರಿಗೆ ಅಕ್ಕಿಯನ್ನು ಪೂರೈಸುವಲ್ಲಿ ಉಂಟಾಗುವ ಹಣದ ನಷ್ಟವನ್ನು ಭರ್ತಿ ಮಾಡುವುದು. ಈ ವಿಚಾರ ತುಂಬ ಚೆಲೋದಿದೆ ಎಂದು ನಮ್ಮ ಅಭಿಪ್ರಾಯ

ನವಯುಗದ ಚಂದಾಹಣ ಬಾಕಿ ಇರುವವರು ಇನ್ನಾದರೂ ಆದಷ್ಟು ತ್ವರ್ಯ ಕಳುಹಿಸಿಕೊಡುವಂತೆ ಪುನಃ ಗೊಮ್ಮೆ ವಿನಂತಿಸಲಾಗುತ್ತದೆ.

ಚರ್ಚಿಲ್-ಐಸೆನ್ ಹೋವರ್ ಭೇಟಿ

ಪಾಕಿಸ್ತಾನ ವಿದೇಶಧೋರಣೆಯಲ್ಲಿ ಬಾಹ್ಯಶಕ್ತಿಗಳ ವರ್ಚಸ್ಸು

ಎಲ್ಲರಿಗೂ ತಿಳಿದಿರುವಂತೆ ಭಾರತವು ಇಷ್ಟರ ವರೆಗೆ ಅಂತರಾಷ್ಟ್ರೀಯ ಕ್ಷೇತ್ರದಲ್ಲಿ ತಟಸ್ಥ ಧೋರಣವನ್ನು ವಹಿಸಿಕೊಂಡು ಬಂದಿದೆ. ಪೌರ್ವಾತ್ಯ ಮತ್ತು ಪಾಶ್ಚಾತ್ಯ ರಾಷ್ಟ್ರಗಳ ನಡುವಿನ ಘರ್ಷಣೆಯನ್ನು ಕಡಿಮೆ ಮಾಡುವ್ವದಕ್ಕೆ ಅದು ಶಕ್ಯವಿದ್ದಷ್ಟು ಹೆಚ್ಚು ಪ್ರಮಾಣದಲ್ಲಿ ತನ್ನ ವರ್ಚಸ್ಸನ್ನು ಉಪಯೋಗಿಸಿದೆ. ಮೂರನೆಯ ಮಹಾಯುದ್ಧವಾಗಬಾರದೆಂದು ಭಾರತವು ಕಳಕಳಿಯಿಂದ ಪ್ರಯತ್ನಿಸುತ್ತಿದೆ. ಇಷ್ಟರ ವರೆಗೆ ಭಾರತದ ವಿದೇಶ ನೀತಿಗೆ ಪೂರ್ವದ ಕೆಲವು ರಾಷ್ಟ್ರಗಳ ಧೋರಣೆಯೂ ಹೊಂದಿಕೊಂಡಿತ್ತು. ಮುಖ್ಯವಾಗಿ ಪಾಕಿಸ್ತಾನದ ವಿದೇಶ ನೀತಿಗೂ ಭಾರತದ ವಿದೇಶ ನೀತಿಗೂ ಮಹತ್ವದ ವ್ಯತ್ಯಾಸವಿದ್ದುದು ಕಂಡು ಬಂದಿಲ್ಲ. ಭಾರತ-ಪಾಕಿಸ್ತಾನಗಳೊಳಗಿನ ವಿವಾದಗಳು ಏನೇ ಇದ್ದರೂ ವಿಶಾಲವಾದ ಅಂತರಾಷ್ಟ್ರೀಯ ಕ್ಷೇತ್ರದಲ್ಲಿ ಇವೆರಡೂ ಪೌರ್ವಾತ್ಯ ರಾಷ್ಟ್ರಗಳು ಒಟ್ಟುಕೂಡಿ ಕೆಲಸ ಮಾಡಿದ್ದಕ್ಕೆ ಅನೇಕ ಉದಾಹರಣೆಗಳಿವೆ. ಭಾರತಕ್ಕೆ ಇತರ ಯಾವುದೇ ರಾಷ್ಟ್ರಕ್ಕಿಂತಲೂ ಪಾಕಿಸ್ತಾನದ ಮೈತ್ರಿ ಮತ್ತು ಅದರೊಡನೆ ಹೊಂದಿಕೊಂಡು ಹೋಗುವುದು ಹೆಚ್ಚು ಇಷ್ಟವಾಗಿದೆ: ಅಂಥದರಲ್ಲಿ ಈಗ ತಾನೆ ಪತ್ರಿಕೆಗಳು ವರದಿ ಮಾಡುತ್ತಿರುವ ಒಂದು ಮಹತ್ವದ ಸುದ್ದಿಯನ್ನು ವಿಮರ್ಶಿಸಿದರೆ ಭಾರತಕ್ಕೆ ಸನಿಹದಲ್ಲಿಯೇ ಗಂಡಾಂತರ ನಿರ್ಮಾಣಗೊಳ್ಳುತ್ತಿದೆಯೆಂಬ ಸಂದೇಹ ಮೂಡುತ್ತದೆ.

ಆಂಗ್ಲೋ ಅಮೇರಿಕನ್ನರ ಪ್ರಯತ್ನ

ಈ ವರದಿಯಂತೆ, ಮಧ್ಯಪೂರ್ವ ಸಂರಕ್ಷಣಾ ಯೋಜನೆಗೆ ಪಾಕಿಸ್ತಾನವನ್ನೂ ಸೇರಿಸಿಕೊಳ್ಳುವ ಪ್ರಯತ್ನ ಮತ್ತು ಸಿದ್ಧತೆಗಳು ಆಂಗ್ಲೋ-ಅಮೇರಿಕನ ಮಿತ್ರರಿಂದ ನಡೆಸಲಾಗುತ್ತಿವೆ. ಮಧ್ಯಪೂರ್ವ ಸಂರಕ್ಷಣಾ ಯೋಜನೆಯ ಕಲ್ಪನೆ ತೀರ ಹೊಸತಲ್ಲವಾದರೂ ಪಾಕಿಸ್ತಾನಕ್ಕೆ ಅದರಲ್ಲಿ ಸ್ಥಾನಕೊಡುವ ಸಂಗತಿ ಮಾತ್ರ ಈಚಿನದು. ಈ ಸಂದರ್ಭದಲ್ಲಿ ಏನೆಲ್ಲ ನಡೆಯುತ್ತಿದೆ ಎಂಬುದರ ಬಗ್ಗೆ ಅಧಿಕೃತವಾದ ಯಾವ ವೃತ್ತಾಂತವನ್ನೂ ತಿಳಿದುಕೊಳ್ಳುವುದು ಸಾಧ್ಯವಾಗಿಲ್ಲ. ಕೇವಲ ಊಹೆ ಹಾಗೂ ಸಂದೇಹಗಳ ಮೇಲಿಂದಲೇ ಪಾಕಿಸ್ತಾನ ತನ್ನ ಧೋರಣೆಯಲ್ಲಿ ಹೀಗೆ ಬದಲುಮಾಡುತ್ತಿದೆ ಎಂದು ಹೇಳಬೇಕಷ್ಟೆ. ಹೀಗಿದ್ದರೂ ಪತ್ರಿಕೆಗಳ ವರದಿಯನ್ನು ಬ್ರಿಟನಾಗಲೀ ಅಮೇರಿಕವಾಗಲೀ ಪಾಕಿಸ್ಥಾನವಾಗಲೀ ನಿರಾಕರಿಸಿಲ್ಲವಾದುದರಿಂದ ಇವುಗಳ ಸತ್ಯಾಂಶದ ಬಗ್ಗೆ ಪ್ರಶ್ನಿಸುವುದಕ್ಕೆ ಆಸ್ಪದವುಳಿದಿಲ್ಲ. ಮಧ್ಯಪೂರ್ವದ ಇರಾಣ, ಈಜಿಪ್ತ ಮುಂತಾದ ರಾಷ್ಟ್ರಗಳಲ್ಲಿ ತೇಜೋವಧೆಯನ್ನು ಹೊಂದುತ್ತಿರುವ ಬ್ರಿಟನ್ನೂ ಅದರ ಆಪ್ತಸ್ನೇಹಿತ ಅಮೇರಿಕಾವೂ ಮರಳಿ ತಮ್ಮ ವರ್ಚಸ್ಸನ್ನು ಬೆಳಸಿಕೊಳ್ಳುವ ಹೊಂಚಿನಿಂದ ಪಾಕಿಸ್ತಾನದ ಮನವೊಲಿಸುತ್ತಿರುವರೆಂಬುದು ಸ್ಪಷ್ಟವಿದೆ. ಪಾಕಿಸ್ತಾನದಲ್ಲಿ ವೈಮಾನಿಕ ಠಾಣ್ಯವನ್ನು ಅಮೇರಿಕ ನಿರ್ಮಿಸಲಿದೆ. ಸುಸಜ್ಜಿತ ಪಡೆಗಳೂ ಪಾಕಿಸ್ತಾನದಲ್ಲಿ ನೆಲಸುವುವು. ಸಂರಕ್ಷಣೆಯ ನೆಪದಲ್ಲಿ ಸುವ್ಯವಸ್ಥಿತವಾದ ಯುದ್ಧ ಸಿದ್ಧತೆಗಳು ನೆರೆನಾಡಿನಲ್ಲಾಗುವಾಗ ಭಾರತ ಸುಮ್ಮನುಳಿಯುವುದು ಶಕ್ಯವಿಲ್ಲ. ಈ ಚಿಂತೆ ನಮ್ಮ ಧುರೀಣರನ್ನು ಇದೀಗ ಒಳಹೊಕ್ಕು ಕಾಡುತ್ತಿದೆಯಂತೆ.

ಆಮಿಷದ ಜಾಲ

ಆಂಗ್ಲೋ ಅಮೇರಿಕನ ಮಿತ್ರರು ಕಾಶ್ಮೀರ ವಿಷಯದಲ್ಲಿ ಪಾಕಿಸ್ತಾನದ ಪಕ್ಷವನ್ನೇ ವಹಿಸಿ, ಭಾರತಕ್ಕೆ ಅನ್ಯಾಯ ಮಾಡುತ್ತಾ ಬಂದದ್ದರ ಮೇಲಿಂದಲೇ—ಭಾರತ ಸತ್ಯ ಮತ್ತು ನ್ಯಾಯದ ಧ್ಯೇಯವನ್ನಿಟ್ಟುಕೊಂಡು ಸಾಗಿದರೆ ಈ ಕಲಿಯುಗದಲ್ಲಿ ವಂಚನೆಗೊಳಗಾಗುವುದೇ ಹೆಚ್ಚು ಎಂದು ಸಾರಿ ಹೇಳುವಂತಿತ್ತು. ಮುಳ್ಳನ್ನು ಮುಳ್ಳಿಂದಲೇ ತೆಗೆಯಬೇಕೆಂಬ ಸುಭಾಷಿತವನ್ನು ನೆಹರೂ ಇನ್ನೂ ಮನವರಿಕೆ ಮಾಡಿಕೊಂಡಿಲ್ಲವೇನೋ ಎಂಬಂತಿದೆ. ಹೀಗಿದ್ದರೂ ನೆಹರೂ ವ್ಯಕ್ತಿತ್ವದ ಪ್ರಭಾವದಿಂದಾಗಿ ಭಾರತದಂಥ ವಿಶಾಲ ರಾಷ್ಟ್ರವನ್ನು ಬಗೆ ಬಗೆಯ ಆಮಿಷಗಳನ್ನು ತೋರಿ ತೋಳ ಸೆರೆಗೆ ಸಿಲುಕುವಂತೆ ಮಾ[illegible] ಆಂಗ್ಲೋ ಅಮೇರಿಕನರಿಗೆ ಈಗಾಗಲೇ ಚೆನ್ನಾಗಿ ತಿಳಿದಿದೆ. ಜೊತೆಯಲ್ಲೇ ಪಾಕಿಸ್ತಾನ ತನ್ನ ನಿಲುವಿಯಲ್ಲಿ ಸತ್ಯನ್ಯಾಯಗಳ ಧ್ಯೇಯವನ್ನು ಮಹತ್ವದಿಂದ ನೋಡದೆ-ತಮ್ಮ ಕಡೆಗೆ ಅಶಾದೃಷ್ಟಿಯಿಂದ ನೋಡುತ್ತಿರುವುದನ್ನು ಇವರು ಗಮನಿಸಿರುವರು ಕಾರಣ—ವಿವಿಧ ಲೋಭ ಮೋಹಗಳನ್ನು ಪಾಕಿಸ್ತಾನಕ್ಕೆ ತೋರಿಸಿಕೊಟ್ಟು, ತಮ್ಮ ಜಾಲದಲ್ಲಿ ಕೆಡವಿಕೊಳ್ಳಲು ಈ ರೀತಿ ಹೊಂಚುಹಾಕುತ್ತಿರುವರೆಂಬುದು ನಿಃಸಂದಿಗ್ಧವಾಗಿದೆ. ಇರಾಣದ ಎಣ್ಣೆ ಪ್ರಸಂಗದಲ್ಲಿ ಅಮೇರಿಕ ತಾನು ಈ ಹಿಂದೆ ಕೊಡುವೆನೆಂದಿದ್ದ ಧನ ಸಹಾಯದ ಮೊತ್ತವನ್ನೇರಿಸಲು ಒಡಂಬಟ್ಟಿದೆ ಎಂಬ ವಾರ್ತೆಯಿದೆ: ಹಾಗೆಯೇ ಈಜಿಪ್ತದ ನಗೀಬರ ಸರಕಾರವು ಸೈನದಿಯ ನೀರಿನ ಉಪಯೋಗದ ಬಗ್ಗೆ ಬ್ರಿಟನಿನೊಡನೊಂದು ಒಪ್ಪಂದ ಮಾಡಿಕೊಂಡಿದ್ದು, ಇದು ಸುಡಾನಿನ ವಿಷಯದಲ್ಲಿದ್ದ ಮಹತ್ವದ ಮತಭೇದವನ್ನು ಕೆಲಮಟ್ಟಿಗೆ ನಿವಾರಿಸಲು ಕಾರಣವಾಗಿದೆ ಎಂದೂ ಸುದ್ದಿ ಬಂದಿದೆ.

ಈಜಿಪ್ತದಲ್ಲಿ ಹೊಸಪಕ್ಷ

ಹೀಗೆಂದು ಇಷ್ಟರ ಮೇಲಿಂದ ಬ್ರಿಟನು ತನ್ನ ಗೌರವವನ್ನು ಮರಳಿ ಸಂಪಾದಿ

ಸಿದೆಯೆಂದೇನೂ ತಿಳಿಯುವಂತಿಲ್ಲ. ಈಜಿಪ್ತದಲ್ಲಿ ಬ್ರಿಟನಿನ ಬಗ್ಗೆ ಮೊದಲಿದ್ದ ತಿರಸ್ಕಾರ ಈಗ ಇನ್ನೂ ಹೆಚ್ಚಿದೆಯೇ ಹೊರತು ಆದರಭಾವನೆ ಮೂಡಿಲ್ಲ. ಸುಯೇಜ ಕಾಲುವೆಯಿಂದ ಬ್ರಿಟಿಷರನ್ನು ಓಡಿಸುವುದೇ ಈಜಿಪ್ಟದ ಈಗಿನ ಮುಖ್ಯಧ್ಯೇಯವೆಂದು ಹೊಣೆಗಾರ ವ್ಯಕ್ತಿಗಳು ಹೇಳುತ್ತಿರುವರು. ಮತ್ತು ಈ ಘನೋದ್ದೇಶವು ಪೂರೈಸುವ ಹೊರತು ಚುನಾವಣೆಗಳು ನಡೆಯುವುದಿಲ್ಲೆಂದೂ ಗೊತ್ತಾಗಿದೆ. ನಗೀಬರು ರಾಜ್ಯಾಂಗ ಘಟನೆಯನ್ನು ಹೊಸತಾಗಿ ಇಷ್ಟರಲ್ಲಿಯೇ ನಿರ್ಮಾಣ ಮಾಡಲಿರುವರು. ಈಜಿಪ್ಟದ ರಾಜಕೀಯ ಪಕ್ಷಗಳಿಗೆ ಪ್ರಬಲ ಪ್ರತಿಸ್ಪರ್ಧಿಯಾಗಿ ಸೇನೆಯೇ ಒಂದು ಪಕ್ಷವನ್ನು ಕಟ್ಟಿಕೊಂಡಿರುವುದು. ಈಜಿಪ್ಟಿನ ಜನತೆಯಲ್ಲಿ ಇನ್ನೂ ಆದರಪಾತ್ರವಾಗಿರುವ ವಫ್ದ ಪಕ್ಷವನ್ನೆ ಈ ಹೊಸ ಪಕ್ಷ ಆಹ್ವಾನಿಸುವಂತಿದೆ.

ಬ್ರಿಟನು-ಅಮೇರಿಕಾ ಸಂಬಂಧ

ಕಳೆದ ವಾರ ಚರ್ಚಿಲರೂ - ಐಸೆನ ಹೋವರರೂ ಭೆಟ್ಟಿಯಾದರು. ಅವರೊಳಗೆ ನಡೆದ ಮಾತುಕತೆಗಳ ವಿವರ ತಿಳಿದಿಲ್ಲವಾದರೂ ಬ್ರಿಟನು-ಅಮೇರಿಕಗಳ ಭಾವೀ ಸಂಬಂಧ ಹೊಸತಾಗಿ ರೂಪುಗೊಳ್ಳಬೇಕಿರುವ ಈ ನಾಜೂಕು ಸಂದರ್ಭದಲ್ಲಿ ಚರ್ಚಿಲರು ಸ್ವಾಭಾವಿಕವಾಗಿ ಐಸೆನ ಹೋವರರ ಮೇಲೆ ತಮ್ಮ ವರ್ಚಸ್ಸನ್ನು ಬೀರಿರಬಹುದು. ನೋಡಲಿಕ್ಕೆ ಆಂಗ್ಲೋ ಅಮೇರಿಕನರು ಒಂದೇ ಬಣದಂತೆ ಕಂಡರೂ, ನಿಜವಾಗಿ ಅವರೊಳಗೆ ತುಂಬ ತಾರತಮ್ಯವಿದೆ. ಮಹತ್ವದ ವಿಷಯಗಳಲ್ಲಿಯೇ ಈ ವ್ಯತ್ಯಾಸ ಎದ್ದು ತೋರುತ್ತಿದೆ. ಬ್ರಿಟನು ಕಮ್ಯೂನಿಸ್ಟ ರಾಷ್ಟ್ರ ಚೀನಾವನ್ನು ಮನ್ನಿಸಿದೆ. ಅಮೇರಿಕ ಚ್ಯಾಂಗ ಕೈಶೇಕರನ್ನು ಬೆಂಬಲಿಸುತ್ತಿದೆ. ಭಾರತದ ಕೊರಿಯಾ ಗೊತ್ತುವಳಿಗೆ ಬ್ರಿಟನಿನ ಬೆಂಬಲ ದೊರೆತಷ್ಟು ಅಮೇರಿಕದ ಸಹಾನುಭೂತಿ ದೊರೆತಿಲ್ಲ. ಯುರೋಪು ಸಂರಕ್ಷಣೆಯ ಯೋಜನೆಯಲ್ಲೂ ಬ್ರಿಟನು ಅಮೇರಿಕಗಳ ಸಂಬಂಧ ಸಮನಾಗಿಲ್ಲ. ಇದಕ್ಕೆಲ್ಲ ಕಳಶವಿಡುವಂತೆ ಆರ್ಥಿಕ ಕ್ಷೇತ್ರದಲ್ಲೂ ಬ್ರಿಟನು ಅಮೇರಿಕೆಗಳೊಳಗೆ ಸೌಹಾರ್ದವಿಲ್ಲ. ಚಿನ್ನದ ಬೆಲೆ, ಡಾಲರು ವಿನಿಮಯ ಮುಂತಾದ ಸಂಗತಿಗಳಲ್ಲಿ ಅಮೇರಿಕದ ಧೋರಣೆ ಬ್ರಿಟನದ ಹಿತಕ್ಕೆ ಪ್ರತಿಕೂಲವಿದೆ. ಚರ್ಚಿಲರು ಅನೌಪಚಾರಿಕವಾಗಿ ನಡೆಸಿದ ಚರ್ಚೆಯಲ್ಲಿ ಈ ಎಲ್ಲ ಸೂಕ್ಷ್ಮ ಸಂಗತಿಗಳ ಬಗ್ಗೆ ವಿಚಾರ ವಿನಿಮಯವನ್ನು ನಡೆಸಿರಬೇಕೆಂಬುದೇ ಸತ್ಯ.

ಕಮ್ಯೂನಿಸ್ಟರ ಬದ್ಧ ವೈರಿ

ಅಮೇರಿಕಾಧ್ಯಕ್ಷ ಟ್ರೂಮನರು ಕಾಂಗ್ರೆಸಿಗೆ ತನ್ನ ಕೊನೆಯ ಸಂದೇಶವನ್ನು ನೀಡುತ್ತಾ ಹಿಂದುಳಿದ ರಾಷ್ಟ್ರಗಳಿಗೆ ಪ್ರತಿಯೊಂದೂ ರೀತಿಯಿಂದ ನೆರವಾಗುವುದರಲ್ಲಿಯೇ ಅಮೇರಿಕದ ಹಿತವಿದೆಯೆಂದು ಒತ್ತಾಸೆಯಿಂದ ನುಡಿದಿರುವರು. ಕಮ್ಯೂನಿಸಂ ವಿರುದ್ಧ ನಾಗರಿಕ ಹಾಗೂ ಮಿಲಿಟರಿ ಎರಡೂ ಕ್ಷೇತ್ರಗಳಲ್ಲಿ ಸೆಣಸಬೇಕೆಂದು ಟ್ರೂಮನ್ನರ ಅಭಿಪ್ರಾಯ. ಅವರು ಈಗ ತಾನೆ ಸಿದ್ಧಪಡಿಸಿದ ಬಜೆಟಿನಲ್ಲಿ ಯುದ್ಧ ಸಿದ್ಧತೆ ಮತ್ತು ಆರ್ಥಿಕ ಸಹಾಯಗಳಿಗಾಗಿ ವಿನಿಯೋಗವಾಗಬೇಕೆಂದಿರುವ ಮೊತ್ತದ ಪ್ರಮಾಣ ೭೭%. ಇದರ ಮೇಲೆ ರಶಿಯಾದ ಸ್ಟಾಲಿನ್ನರಿಗ ಕೂಡ ಟ್ರೂಮನ್ನರು ಎಚ್ಚರಿಕೆಯನ್ನು ಕೊಟ್ಟು, ತಮ್ಮ ಜಲ ಜನಕ ಬಾಂಬಿನಿಂದ ರಶಿಯಾವನ್ನು ಹಾಳುಗೆಡವಿ ಬೀಳಿಸಬಲ್ಲೆವೆಂದು ಜಂಭವನ್ನು ಕೊಚ್ಚಿರುವರು. ರಿಪಬ್ಲಿಕನ ಪಕ್ಷವು ಕಮ್ಯೂನಿಸ್ಟರ ಬದ್ಧ ವೈರಿಯಾಗಿರುವುದರಿಂದ—ಟ್ರೂಮನ್ನರು ರೂಪಿಸಿರುವ ಬಜೆಟ ಆಯವ್ಯಯ ಹೆಚ್ಚು ಬದಲಾವಣೆಯನ್ನು ಹೊಂದಲಾರದು.

ಸಿಂಹಳದ ವಾಮ ಮಾರ್ಗ

ಭಾರತದ ದಕ್ಷಿಣ ತುದಿಯ ದ್ವೀಪ ಸಿಂಹಳವು. ಅಲ್ಲಿ ಬಂದು ನೆಲಸಿರುವ ಭಾರತೀಯರೇ ಮುಂತಾದವರ ಬಗ್ಗೆ ಅನುಸರಿಸುತ್ತಿರುವ ಧೋರಣೆ ತುಂಬ ವಿವಂಚನೆಗೆ ಗುರಿಮಾಡಿದೆ. ನಾಗರಿಕರ ಮೂಲಭೂತ ಹಕ್ಕಾಗಿರುವ ಮತಾಧಿಕಾರದ ವ್ಯಕ್ತಿಯಲ್ಲಿ ಅದು ಸಾಕಷ್ಟು ಕಣ್ಣುಮುಚ್ಚಾಲೆ ಮಾಡಿದೆ. ಈಗ ಸಿಂಹಳಕ್ಕೆ ವಲಸೆ ಹೋಗಿರುವ ಭಾರತೀಯರೇ ಮುಂತಾದವರಿಗೆ ನಾಗರಿಕ ಹಕ್ಕನ್ನು ಕೊಡುವ ಬದಲು, ಅವರನ್ನು ಹೇಗಾದರೂ ಹೊರದೂಡಲು ವಾಮಮಾರ್ಗವನ್ನು ಕೈಗೊಂಡಿರುವುದು. ೧೯೪೯ನೇ ನವಂಬರ ೧ನೇ ತಾರೀಕಿಗೆ ಹಿಂದೆ ಸಿಂಹಳದ ನಾಗರಿಕರಾಗಿದ್ದವರಿಗಷ್ಟೆ ರೇಶನು ಕಾರ್ಡನ್ನು ಕೊಡಲಾಗುವುದೆಂದು ಮುಂತಾಗಿ ಅದು ಹೊಸ ನಿರ್ಣಯ ಮಾಡಿದೆ. ರೇಶನು ಕಾರ್ಡನ್ನು ನೀಡುವುದರಲ್ಲಿ ಈ ರೀತಿ ಪ್ರಭೇದ ಮಾಡಿರುವುದರಿಂದ ಸಹಸ್ರಾರು ಭಾರತೀಯರಿಗೆ ಹೊಟ್ಟೆ ಹೊರೆಯಲು ಬಹಳ ಕಷ್ಟವಾಗುತ್ತದೆ. ಪರಿಣಾಮವಾಗಿ ಅವರು ಸಿಂಹಳವನ್ನು ಬಿಟ್ಟು ಭಾರತಕ್ಕೆ ಅಸಹಾಯರಾಗಿ ಮರಳಬೇಕಾಗುತ್ತದೆ. ಈ ರೀತಿ ಬಡಜನರ ಹೊಟ್ಟೆಗೆ ಪೆಟ್ಟುಕೊಟ್ಟು, ಅವರನ್ನು ಹೊಡೆದೋಡಿಸುವ ಬುದ್ಧಿಯನ್ನು ಸಿಂಹಳ ತೋರಿಸಿದೆ. ಈ ನಿಲುವೆಯು ತುಂಬ ಗಂಭೀರವಾದದ್ದಿರುವುದಲ್ಲದೆ-ಸಿಂಹಳ ಭಾರತ ಸಂಬಂಧದಲ್ಲಿಯೂ ಅದರಿಂದ ಹಾನಿಯಾಗುವುದು ನಿಶ್ಚಯ.

58ನೆ ಕಾಂಗ್ರೆಸ್ ಅಧಿವೇಶನ

ಕಾಂಗ್ರೆಸಿನ 58ನೆಯ ಅಧಿವೇಶನವು ಜರಗಲಿರುವ ಹೈದರಾಬಾದ್ ನಾನಲ ನಗರದ ಸರ್ವಸಿದ್ಧತೆಗಳೂ ಮುಗಿದಿವೆ. ಈಗಾಗಲೇ ಸಹಸ್ರಾರು ಪ್ರತಿನಿಧಿಗಳೂ ಪ್ರೇಕ್ಷಕರೂ ಬಂದಿದ್ದಾರೆ. ಕಾಂಗ್ರೆಸ್ ಅಧ್ಯಕ್ಷ ಪಂಡಿತ ನೆಹರೂರವರೂ ತಾ. 14ನೇ ಬೆಳಿಗ್ಗೆ ಆಗಮಿಸಿದ್ದಾರೆ.

ಉಡುಪಿಗೆ ಮಾನ್ಯ ದಾತಾರರ ಆಗಮನ

ಭಾರತ ಸರಕಾರದ ಗೃಹ ಖಾತೆಯ ಉಪಸಚಿವರಾದ ಮಾನ್ಯ ಬಳವಂತ ರಾವ್ ದಾತಾರರು ತಾ 7ರಂದು ಮಧ್ಯಾಹ್ನ ೧ಗಂಟೆಗೆ ಬಜ್ಪೆ ವಿಮಾನ ನಿಲ್ದಾಣದಿಂದ ಸೀದಾ ಇಲ್ಲಿಗೆ ಆಗಮಿಸಿದರು. ಶ್ರೀ ಟಿ. ಎ. ಪೈ. ಎಂ. ಎಲ್. ಎ. ಮತ್ತು ಸರ್ಕಲ್ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿ ಶ್ರೀ ಕೆ ನರಹರಿ ಕಾಮತರು ಶ್ರೀ ದಾತಾರರನ್ನು ಇಲ್ಲಿಯ ಪೆಂಟ್ಲೇಂಡ್ ಪೇಟೆಯ ಪ್ರಯಾಣಿಕರ ಬಂಗ್ಲೆಯಲ್ಲಿ ಸ್ವಾಗತಿಸಿದರು. ಸಂಜೆ 3 ಗಂಟೆಗೆ ಸ್ಥಳೀಯ ಬಾರ್ ಎಸೋಸಿಯೇಶನವರು ಏರ್ಪಡಿಸಿದ ಚಹಾ ಸತ್ಕಾರದಲ್ಲಿ ಭಾಗವಹಿಸಿದರು. ಸಾಯಂಕಾಲ ೪ಕ್ಕೆ ಸ್ಥಳೀಯ ಮಹಾತ್ಮಾ ಗಾಂಧೀ ಸ್ಮಾರಕ ಕಾಲೇಜಿಗೆ ಭೆಟ್ಟಿಕೊಟ್ಟು, ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಸಂಸ್ಥೆಯವರು ತಮ್ಮ ರಜತೋತ್ಸವದ ಸ್ಮಾರಕವಾಗಿ ರೂ. ೩೨,೦೦೦ ವೆಚ್ಚದಿಂದ ಕಟ್ಟಿಸಿ ಕಾಲೇಜಿಗೆ ದಾನವಾಗಿ ಅರ್ಪಿಸಿದ ಭವನವನ್ನು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಗೋಕರ್ಣ ಪರ್ತಗಾಳಿ ಶ್ರೀ ಜೀವೋತ್ತಮ ಮಠದ ಶ್ರೀ ದ್ವಾರಕಾನಾಥ ಶ್ರೀಗಳು ವಹಿಸಿದ್ದರು. ಪ್ರಾರಂಭದಲ್ಲಿ ಕಾಲೇಜು ಹುಡುಗಿಯರ ಪ್ರಾರ್ಥನಾಗೀತೆಯ ಬಳಿಕ, ಕಾಲೇಜು ಟ್ರಸ್ಟಿನರ ಪರವಾಗಿ ಡಾ ಸುಂದರರಾಯ ಪೈಗಳು ಶ್ರೀ ದಾತಾರರಿಗೆ ಮಾನಪತ್ರವನ್ನು ಅರ್ಪಿಸಿದರು ವ್ಯಾಪಾರ ವ್ಯವಹಾರ ಸಂಸ್ಥೆಗಳೂ ಶೈಕ್ಷಣಿಕ ಸಂಸ್ಥೆಗಳೂ ಹೇಗೆ ಸಹಕರಿಸಬಹುದು ಎಂಬುದಕ್ಕೆ ಸಧ್ಯದ ಉದಾರ ದಾನವೇ ದ್ಯೋತಕವಾಗಿದೆ ಎಂದವರಲ್ಲಿ ಪ್ರಸ್ತಾಪಿಸಿದ್ದರು. ಮಾನ್ಯ ಮಂತ್ರಿಗಳು ಮಾನಪತ್ರದಲ್ಲಿನ ಸಂಗತಿಗಳನ್ನು ಉತ್ತರಿಸುತ್ತಾ ಕರ್ನಾಟಕ ಏಕೀಕರಣವಾಗಿ ಹೊಸ ಪ್ರಾಂತ್ಯವು ಸಧ್ಯದಲ್ಲಿಯೇ ಆಗಲಿರುವುದು ನಿಶ್ಚಯವೆಂಬ ತಮ್ಮ ಪೂರ್ಣ ವಿಶ್ವಾಸವನ್ನು ವ್ಯಕ್ತಗೊಳಿಸಿದರು. ವಿದ್ಯಾರ್ಥಿಗಳಿಗೆ ಹಿತೋಪದೇಶಗಳನ್ನು ನೀಡುತ್ತಾ ಪಂಚವಾರ್ಷಿಕ ಯೋಜನೆಯನ್ನು ಜನಸಾಮಾನ್ಯಕ್ಕೆ ತಿಳಿಸಿ, ಅದನ್ನು ಪ್ರಚುರಗೊಳಿಸಲು ವಿದ್ಯಾರ್ಥಿಗಳು ಸರ್ವ ಶಕ್ತಿಯನ್ನುಪಯೋಗಿಸಿ ಶ್ರಮಿಸಬೇಕೆಂದರು. ಶ್ರೀ ಗೋಕರ್ಣ ಪೀಠಾಧಿಪತಿಗಳು ಆಧ್ಯಕ್ಷೀಯ ಭಾಷಣದಲ್ಲಿ ಇಂಥ ಕಾಲೇಜುಗಳಿಂದ ಹೊರಬೀಳುವ ವಿದ್ಯಾರ್ಥಿಗಳು ಸಚ್ಚಾರಿತ್ರ್ಯವಂತರೂ ಸುಶೀಲರೂ ಸದ್ವರ್ತನಿಗಳೂ ಆಗಿ ಶ್ರೀ ದಾತಾರರಂತೆ ರಾಷ್ಟ್ರದ ಮಹೋನ್ನತ ವ್ಯಕ್ತಿಗಳಾಗಿ ಮೆರೆಯುವ ಯೋಗ್ಯತೆಯಿಂದ ಕೂಡಲಿ ಎಂದು ಆಶೀರ್ವದಿಸಿದರು. ಬೇಂಕಿನ ಪರವಾಗಿ ಶ್ರೀ ಟಿ. ಎ ಪೈಗಳೂ ಕಾಲೇಜಿನ ಪರವಾಗಿ ಪ್ರಿನ್ಸಿಪಾಲ್ ಸುಂದರರಾಯರೂ ಧನ್ಯವಾದವನ್ನರ್ಪಿಸಿದರು.

ಸಾರ್ವಜನಿಕ ಸಭೆ

ಸಂಜೆ ರಥಬೀದಿಯಲ್ಲಿ ಸ್ಥಳೀಯ ಕಾಂಗ್ರೆಸು ಸಮಿತಿಯ ಆಶ್ರಯದಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲೂ ದಾತಾರರು ಭಾಗವಹಿಸಿದರು. ಸಭಾಧ್ಯಕ್ಷತೆಯನ್ನು ಶ್ರೀ ಟಿ. ಎ. ಪೈ, ಎಂ. ಎಲ್. ಎ. ವಹಿಸಿದ್ದರು. ಸರ್ಕಲ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷರು ಶ್ರೀ ಜಿ. ಕೃಷ್ಣಯ್ಯ ಹೆಗ್ಡೇರು ಮಂತ್ರಿಗಳಿಗೊಂದು ಮನವಿಯನ್ನೊಪ್ಪಿಸಿದರು ಅದರಲ್ಲಿ ಮಲ್ಪೆ ಪ್ರಬುದ್ಧ ಬಂದರಾಗುವಿಕೆಯ ಅವಶ್ಯಕತೆ ರೈಲ್ವೆ ಮಾರ್ಗದ ಜರೂರಾತಿ ಮೊದಲಾದುವು ಸೂಚಿಸಲ್ಪಟ್ಟಿದ್ದುವು ದಾತಾರರು ಉತ್ತರಿಸುತ್ತಾ ಸರಕಾರದ ಕಷ್ಟಗಳನ್ನು ಮನವರಿಕೆ ಮಾಡಿಕೊಂಡಿರುವುದಕ್ಕೆ ಕೃತಜ್ಞತೆಯನ್ನು ಸೂಚಿಸಿದರು, ಜನರ ನಮ್ರ ಸೇವಕನಾಗಿ ತಾನು ಅಧಿಕಾರ ಸ್ಥಾನದಲ್ಲಿರುವೆನೆಂದರು. ಕರ್ನಾಟಕ ಏಕೀಕರಣದ ಸಂಗತಿಯಲ್ಲಿ ತನ್ನ ಅಧಿಕಾರ ಗೌರವಕ್ಕೆ ಕುಂದು ಬರದ ರೀತಿಯಲ್ಲಿ ಹೃತ್ಪೂರ್ವಕ ದುಡಿಯುವೆನೆಂದು ಆಶ್ವಾಸನೆ ಇತ್ತದ್ದಲ್ಲದೆ ನಮ್ಮ ಕನಸು ನನಸಾಗುವ ದಿನ ಬಹಳ ದೂರವಿಲ್ಲೆಂದೂ ಭರವಸೆ ಕೊಟ್ಟರು ಪ್ರಬುದ್ಧ ಬಂದರದ ಪ್ರಶ್ನೆಯನ್ನುಲ್ಲೇಖಿಸುತ್ತಾ ಬಾವರು ಸಮಿತಿಯು ಮಲ್ಪೆಯನ್ನೇ ಶಿಫಾರಸು ಮಾಡಿದ್ದರೂ ಒಮ್ಮತದ ಕೊರತೆ ಮತ್ತಿತರ ಅಡಚಣೆಗಳಿಂದ ವಿಷಯ ಹಿಂದೆ ಬಿದ್ದಿದೆ ಎಂದರು. ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕೆ ಎಲ್ಲರೂ ಸಹಕರಿಸಬೇಕೆಂದೂ ಕಾಂಗ್ರೆಸಿನಲ್ಲಿ ತರುಣರು ಬಂದು ಸೇರಿ ಅದನ್ನು ಬಲಗೊಳಿಸಬೇಕೆಂದೂ ವಿನಂತಿಸಿದರು. ಅಧ್ಯಕ್ಷ ಪೈಗಳು ಜನಸಾಮಾನ್ಯರು ದೈಹಿಕ ಪರಿಶ್ರಮವನ್ನು ಮಾಡುವುದರ ಮೂಲಕ ಯೋಜನೆ ಯಶಸ್ವಿಯಾಗುವಂತೆ ಮಾಡಬಹುದೆಂದರು. ಮೈಸೂರಿನೊಡನೆ ದಕ್ಷಿಣ ಕನ್ನಡ ಕೊಡಗು ಮತ್ತು ಬಳ್ಳಾರಿಗಳು ಸೇರುವುದೊಳ್ಳೆಯದೆಂದು ವೈಯಕ್ತಿಕಾಭಿಪ್ರಾಯವನ್ನು ಸೂಚಿಸಿದರು. ಶ್ರೀ ಆರ್. ಆರ್. ಕುಂಜೂರರು ಧನ್ಯವಾದಗಳನ್ನಿತ್ತರು.

ಅದೇ ದಿನ ರಾತ್ರಿ ಶ್ರೀ ಟಿ. ಎ. ಪೈ, ಎಂ. ಎಲ್. ಎ. ಗಳು ಶ್ರೀ ದಾತಾರ್ ಮಂತ್ರಿವರ ಸ್ಥಳೀಯ ಆಪ್ತ ಮಹನೀಯರಿಗೆ, 'ಡಿನ್ನರ್ ಪಾರ್ಟಿ'ಯನ್ನಿತ್ತು ಸತ್ಕರಿಸಿದರು

ಶ್ರೀ ವೆಂಕಟ್ರಮಣ ಸ್ವಾಮಿ ದೇವಸ್ಥಾನದಲ್ಲಿ— ಮೊಕ್ಕಾಂ ಮಾಡಿದ್ದ ಶ್ರೀ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶರಾದ ಶ್ರೀ ದ್ವಾರಕಾನಾಥ ಶ್ರೀಪಾದಂಗಳವರ, ಮಾಧ್ವಪೀಠಾಧಿಪತಿಗಳನ್ನು ಆಮಂತ್ರಿಸಿದಂತೆ ಪರ್ಯಾಯ ಪೇಜಾವರ ಕಿರಿಯ ಕಾಣಿಯೂರು ಮತ್ತು ಸೋದೆ ಸ್ವಾಮಿಗಳವರು ಇದೇ ತಾ 12ರಲ್ಲು ಸಂಜೆ ಶ್ರೀ ದೇವಸ್ಥಾನಕ್ಕೆ ಮೆರವಣಿಗೆಯಿಂದ ಬರಲಾಗಿ ಪಾದಪೂಜೆ ಸತ್ಕಾರಗಳಾದೊಡನೆ ಪಾ. ಎಸ್. ಆರ್. ಪೈಗಳು ಸ್ವಾಗತ ಮಾತುಗಳನ್ನಾಡಿದರು ಮಾಧ್ವಪೀಠದ ಎಲ್ಲಾ ಶ್ರೀಪಾದಂಗಳವರು ಈ ರೀತಿಯಲ್ಲಿ ಒಟ್ಟುಗೂಡುವ ಆವಶ್ಯಕತೆಯನ್ನೆತ್ತಿ ಪರ್ಯಾಯ ಪೇಜಾವರ ಮತ್ತು ಗೋಕರ್ಣ ಮಠಾಧೀಶರು ಮಾತನಾಡಿದರು. ಕಿರಿಯ ಕಾಣಿಯೂರು ಮತ್ತು ಸೋದೆ ಸ್ವಾಮಿಗಳವರೂ ತಮ್ಮ ಆನಂದವನ್ನು ವ್ಯಕ್ತಗೊಳಿಸಿದರು. ಪಂಡಿತರ ಭಾಷಣ, ಧನ್ಯವಾದಾರ್ಪಣೆ ಕಾರ್ಯಕ್ರಮಗಳಿಂದ ಸಮಾರಂಭ ಕೊನೆಗೊಂಡಿತು.

ಮಂಗಳೂರು

ರೂಪವಾಣಿ ಮತ್ತು ನ್ಯೂ ಚಿತ್ರಾ ಟಾಕೀಸ್‌ಗಳ ಮಾಲಿಕ ದಕ್ಷಿಣ ಹಿಂದೂಸ್ಥಾನದ ಹಿರಿಯ ಚಲಚಿತ್ರ ಪ್ರದರ್ಶಕರಲ್ಲೊಬ್ಬರು ಇಲ್ಲಿಯ ಪ್ರಥಮ ಚಲಚಿತ್ರ ಪ್ರದರ್ಶಕರ ಆದ ಕೊಟ್ಟಾರ ವಿಠಲದಾಸ್ ಪೈಗಳು ತಾ, 5 ಲ್ಲು ಆಕಸ್ಮಿಕವಾಗಿ ನಿಧನ ಗೊಂಡರೆನ್ನಲು ವಿಷಾದವಾಗುತ್ತದೆ ಕೆಲವು ದಿನಗಳ ಹಿಂದೆ ಶ್ರೀ ಪೈಗಳಿಗೆ ಹೃದ್ರೋಗ ತಲೆದೋರಿತ್ತೆಂದು ತಿಳಿದು ಬರುತ್ತದೆ,

ವಿಚಾರ ಪ್ರಚೋದಕವಾದ ಪ್ರತಿಯೊಬ್ಬರೂ ಓದಲೇಬೇಕಾದ ನವನವೀನ ಪುಸ್ತಕಗಳು!

ಗೀತಾ ರಹಸ್ಯವನ್ನು ತಿಳಿಯ ಬಯಸದವರಾರು?

ದಿ। ಹೊಸಕೆರೆ ಚಿದಂಬರಯ್ಯ ಕೃತ **ಗೀತೆಯ ಕೈಗನ್ನಡಿ** ಭಗವದ್ಗೀತೆಯ ಸಮೂಲ ಭಾಷಾಂತರ

ಪುಟಗಳು 428 ಬೆಲೆ 0-12-0 ಅಂಚೆವೆಚ್ಚ 0-4 0

100 ಪ್ರತಿಗಳಿಗೆ ರೂ. 60; 250ಕ್ಕೆ ರೂ. 140; 500ಕ್ಕೆ ರೂ. 250.

ಕತೆ, ಕಾದಂಬರಿ, ನಾಟಕ, ಚಿತ್ರ, ಪ್ರಬಂಧ, ಹರಟೆ ಮೊದಲಾದ, ನೋಡಿದರೆ ಬಿಡದಿರುವ ಅಂತರಂಗ ಪ್ರಕಟನಾಲಯದ ರೂ. 30 ಕ್ರಯದ 86 ಪ್ರಕಟಣೆಗಳನ್ನು ಒಮ್ಮೆಯೇ ತರಿಸಿಕೊಳ್ಳುವವರಿಗೆ ರೂ. 24ಕ್ಕೆ ಕೊಡಲಾಗುವುದು.

ನಾರೀಹೃದಯ ರೂ.	1	8	ಪ್ರಕಾಶ ರೂ.	2	8	ನೆನಪಿಗಾಗಿ ರೂ.	2	0
ಭಂಡಶೀಲ ಕತೆಗಳು	1	12	ಮಧುವನ	3	0	ಕಾವ್ಯಸಾಮ್ರಾಜ್ಯ	1	8
ಸನ್ಯಾಸಿಯ ಸೋಗಿನಲ್ಲಿ	1	12	ಘಂಟೆನಾದ	2	0	ಪ್ರೇಮ ವಿಜಯ	1	4
ಕವಿತಾ ಕಾಮಿನಿ	2	0	ನಂದಾದೀಪ	1	0	ರಂಗಭೂಮಿ	0	10
ಕುಲವಿಲ್ಲದ ಹೆಣ್ಣು	2	0	ಜಮೀನ್ದಾರ	1	8	ಭಾರತದಲ್ಲಿ ಜಾತಿಭೇದ	1	0
ವ್ಯಭಿಚಾರಿಣಿ ಯಾರು	1	4	ದೇಶಭಕ್ತ	1	4	ವೀರ ಸಾವರ್ಕರ	1	4
ಸುಲಭದಲ್ಲಿ ಇಂಗ್ಲಿಷ್	2	0	ಮನೆ ಮದ್ದು	2	8	ಕದಂಬ	1	4
ನೀತಿವಿನೋದ ಕತೆಗಳು	0	12	ಸರಸ್ವತಿ	0	12	ಭಾಗ್ಯಲಕ್ಷ್ಮಿ	1	4
ಜೀವನ ಸಂಗ್ರಾಮ	1	8	ಸೇವಾಪಥ	0	8	ಲೋಪಾಮುದ್ರೆ	0	8

ಇವೇ ಮೊದಲಾದ ನೂರಾರು ಬಗೆಯ ಉಪಯುಕ್ತ ಪುಸ್ತಕಗಳ ಕೆಟಲಾಗಿಗೆ ಬರೆಯಿರಿ. ವ್ಯಾಪಾರಿಗಳಿಗೂ ಪುಸ್ತಕಭಂಡಾರಗಳಿಗೂ ವಿಶೇಷ ಸವಲತ್ತುಗಳಿವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ ಕ.

ಉಡುಪಿ.

ಕನಿಷ್ಠ ಮಜೂರಿ ಕಾನೂನು—ಕೃಷಿ ಕ್ಷೇತ್ರದಲ್ಲಿ ದುಡಿಯುವವರಿಗೆ ಕೊಡಬೇಕಾದ ಕನಿಷ್ಠ ಮಜೂರಿಯ ಮಿತಿಯನ್ನು ಮದ್ರಾಸು ಸರಕಾರವು ಬೇಗನೆ ನಿರ್ಣಯಿಸಲಿದೆ. ಕೆಳಗೆ ಸೂಚಿಸಿದ ಕನಿಷ್ಠ ಕೂಲಿಯು ಅನುಕೂಲಕರವೆಂದು ಕಂಡಲ್ಲಿ ಸಂಬಂಧಪಟ್ಟವರು ಸಕಾಲದಲ್ಲಿ ಸರಕಾರಕ್ಕೆ ಮನವಿಯೊಪ್ಪಿಸಿಕೊಳ್ಳಬೇಕು, ಮನವಿಯ ಪ್ರತಿಯನ್ನು ತಮಗೂ ಕಳಿಸಿದರೆ ಈ ಸಂಬಂಧ ಸರಕಾರದೊಡನೆ ಕಾರ್ಯವೆಸಗಲು ಅನುಕೂಲವಾಗುವುದು ಎಂದು ಶ್ರೀ ಟಿ. ಎ. ಪೈ, ಎಂ. ಎಲ್. ಎ. ಯವರು ತಿಳಿಸುತ್ತಾರೆ.

1. ಗದ್ದೆ ಹೂಡುವುದಕ್ಕೆ ದಿನ ಒಂದಕ್ಕೆ ಎತ್ತು ನೇಗಿಲು ಸಹಿತ 1-8-0
2. ಬೀಜ ಬಿತ್ತುವುದಕ್ಕೆ 0-12-0
3. ನೇಜಿ ನೆಡುವುದಕ್ಕೆ 0-12-0
4. ಕಳೆ ತೆಗೆಯುವುದಕ್ಕೆ 0-12-0

(ಮೇಲೆ ಸೂಚಿಸಿದ ವೇತನದಲ್ಲಿ ಎಲ್ಲಾ ವಿಧ ಕೂಲಿ ಕೂಡಿರುತ್ತದೆ)

ಮುನಿಸಿಪಲ್ ಕೌನ್ಸಿಲು ಸಭೆಯು:— 10ರಲ್ಲು ಸಂಜೆ ಚೇರ್ಮನ್ ಶ್ರೀ ಯು. ಶ್ರೀ. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಕ್ಷೇತ್ರಗಳಾದ ಬಳಿಕ ಸರಕಾರಿ ಆರ್ಡರುಗಳು ರಿಕಾರ್ಡು ಮಾಡಲಾದುವು ಇಲೆಕ್ಟ್ರಿಕ್ ಸಪ್ಲೈ ಲೈಸನ್ಸನ್ನು ತೆಗೆದು ಕೊಳ್ಳುವಂತೆ ಮದ್ರಾಸು ಸರಕಾರವನ್ನು ವಿನಂತಿಸಿಕೊಳ್ಳಬೇಕೆನ್ನುವ ಶ್ರೀ ಎ. ಮಂಜುನಾಥ ರಾಯರ ಠರಾವು ಒಮ್ಮತದಿಂದ ಸ್ವೀಕೃತವಾಯಿತು. ಗುಂಡಿಬೈಲು ಬನ್ನಂಜೆ ವಾರ್ಡುಗಳಲ್ಲಿಯ ಮಾಟದ ಚಟ್ಟನಲ್ಲಿ ಕೋಡಿಯಿಂದು ಸಂಕ ಹಾಕಬೇಕೆನ್ನುವ ಶ್ರೀಮತಿ ಸರೋಜಿನೀ ದೇವಿಯವರ ನಿರ್ಣಯಕ್ಕೆ ಕಾಂಗ್ರೆಸ್ ಪಾರ್ಟಿಯ ಸಂಪೂರ್ಣ ಬೆಂಬಲ ದೊರೆತು ಸ್ವತಂತ್ರರೊಳಗೆನೇ ಭಿನ್ನಾಭಿಪ್ರಾಯ...

ವ್ಯವಸಾಯ ಯೋಧರಿಗೆ ಪ್ರಶಸ್ತಿ ಪತ್ರ.

(೧ನೇ ಪುಟದಿಂದ)

...ಮಣ ಗೊಬ್ಬರಕ್ಕೆ ಒಂದು ಮಣ ಧಾನ್ಯ ಹೆಚ್ಚಿನ ಬೆಲೆ ತೆರಲೂ ಬಹುದೆಂದು ವ್ಯವಸಾಯ ಮಂತ್ರಿ ಡಾ ಪಂಜಾಬರಾವ್ ದೇಶಮುಖರು ತಿಳಿಸಿರುವರು. ಆಹಾರ ಮಂತ್ರಿಗಳ ಪರಿಷತ್ತು ಡಿಲ್ಲಿಯಲ್ಲಿ ಸೇರಿ ಈ ಅವಲೋಕನಗತಿಯನ್ನು ಪ್ರಸ್ತಾಪಿಸಿ ...ಜಪಾನಿನ ಮಾದರಿಯಲ್ಲಿ ಸುಧಾರಿತ ಕೃಷಿ ಪದ್ಧತಿಯನ್ನು ಪ್ರಯೋಗಿಸುವುದರಿಂದ ಈಗಿನ ಹತ್ತು ಪಾಲಷ್ಟು ಉತ್ಪಾದನೆಯನ್ನು ಹೆಚ್ಚಿಸಲು ಸಾಧ್ಯವಿದೆ. ...ಬಯಿಯಲ್ಲಿ ಸರಕಾರೀ ಮಟ್ಟದಲ್ಲಿ ...ಗಲೇ ನಡೆದ, ನಡೆಯುತ್ತಿರುವ ...ಯೋಗಗಳಿಂದ ಇದು ಸಿದ್ಧಿಗೊಂಡಿದೆ. ಉತ್ಪಾದನೆಯನ್ನು ಹೆಚ್ಚಿಸಿದರೆ ...ವಾನಿಕವಾಗಿ ನಮ್ಮ ಆಯಾತದ ಪ್ರಮಾಣದಲ್ಲಿ ಕಡಿತವುಂಟುಮಾಡುವುದು. ಆಹಾರ ಮಂತ್ರಿಗಳ ಪರಿಷತ್ತಿನ ...ನಿಯಂತ್ರಣದ ಯಶಸ್ಸನ್ನು ಹೊಗಳಿ ...ನಿತೆಂದೂ ಮುಂದಿನ ವರ್ಷ ಕೇವಲ ...0ಲಕ್ಷ ಟನ್ನು ಆಹಾರಧಾನ್ಯಗಳ ...ಯಾತವನ್ನಷ್ಟೇ ಮಾಡಿದರೆ ಸಾಕೆಂದು ...ಮಂತ್ರಿಗಳು ನಿರ್ಧರಿಸಿರುವರೆಂದು ಇದಿದೆ. ವಿವಿಧ ರಾಜ್ಯಗಳ ಬೇಡಿಕೆ ...ಟನ್ನಿನಷ್ಟಿದ್ದರೂ ೫ಲಕ್ಷ ಟನ್ನು ...ಕೇಂದ್ರ ಪೂರೈಸುವುದಂತೆ. ತ...ಂದಾಜು ಬೇಡಿಕೆಯನ್ನು ಪ್ರಾಂತೀಯ ...ಸರಕಾರಗಳು ಹೆಚ್ಚಾಗಿ ತೋರಿಸಿವೆಯೆಂದು ಕಿದ್ವಾಯರ ಅಭಿಪ್ರಾ...

...ಕಲೆಸೋರಿ ಕೊನೆಗೆ ಆ ವಿಷಯವನ್ನು ಮುಂದೂಡಲಾಯಿತು.

ಗೌರವ ಸಮಾರಂಭ—ಸ್ಥಳೀಯ ಕೆನರಾ ಮ್ಯೂಚುವಲ್ ಎಷ್ಯೂರೆನ್ಸ್ ಕಂಪೆನಿಯ ಆಶ್ರಯದಲ್ಲಿ ಅರ್ಥಶಾಸ್ತ್ರಜ್ಞರ ಸಮ್ಮೇಳನದ ಪ್ರಯುಕ್ತ ಇಲ್ಲಿಗೆ ಬಂದ ಕೆಲವು ಪ್ರಮುಖರನ್ನು ಗೌರವಿಸುವುದಕ್ಕಾಗಿ ಕಳೆದ ವಾರ ಏರ್ಪಡಿಸಿದ ಒಂದು ಭೋಜನ ಸಮಾರಂಭದಲ್ಲಿ ಮುಂಬಯಿಯ ಸ್ಟಾಕ್ ಎಕ್ಸ್ ಚೇಂಜಿನ ಪ್ರಮುಖ ಸದಸ್ಯರಾದ ಶ್ರೀ. ಪಿ. ಆರ್. ಸುಬ್ರಹ್ಮಣ್ಯಂ ಎಂ. ಎ ಯಸ್ ರೂ ಕಾಮರ್ಸ್ ಪತ್ರಿಕೆಯ ಸಂಪಾದಕರಾಗಿದ್ದ ಮತ್ತು ಪ್ರಕೃತ ಹಿಂದುಸ್ಥಾನ್ ಟೈಮ್ಸ್ ಹಾಗೂ ಈಸ್ಟರ್ನ್ ಇಕಾನ ಮಿಸ್ಟ್ ಪತ್ರಿಕೆಗಳೊಡನೆ ಸಂಬಂಧವಿರುವ ಹಾಗೂ ಬಿರ್ಲಾ ಬ್ರದರ್ಸ್ ಲಿಮಿಟೆಡ್ ಸಂಸ್ಥೆಯ ಸಾರ್ವಜನಿಕ ಹಿತ ಸಂಬಂಧಾಧಿಕಾರಿಯಾದ ಶ್ರೀ. ಪಿ. ವಿ. ಮೂರ್ತಿ, ಎಂ. ಎ. ಯವರೂ ಭಾರತದಲ್ಲಿ ಸದ್ಯ ವಿದ್ಯಮಾನವಿರುವ ಆರ್ಥಿಕ ಪರಿಸ್ಥಿತಿಯನ್ನೂ ಅದರ ಮೇಲೆ ಪಂಚವಾರ್ಷಿಕ ಯೋಜನೆ ಮಾಡುವ ಪರಿಣಾಮವನ್ನೂ ಚರ್ಚಿಸಿ ಮಾತನಾಡಿದರು. ಡಾ| ಎಸ್. ಆರ್. ಪೈ, ಶ್ರೀ ಟಿ. ಆರ್. ಎ. ಪೈ, ಶ್ರೀ. ಪಿ. ಪದ್ಮನಾಭ ರಾವ್, ಡಾ॥ ಕೆ ಎಲ್. ಐತಾಳ, ಶ್ರೀ ಕೊಟ್ಟಿಕಾರ್ ಪಾಂಡುರಂಗ ಪೈ,ಡಾ ಬಿ ಎಂ. ಪೈ (ಕುಂದಾಪುರ ನಗರ ಸಭೆಯ ಅಧ್ಯಕ್ಷರು) ಶ್ರೀ ಟಿ.ಎ. ಪೈ ಎಂ ಎಲ್. ಎ, ಶ್ರೀ ಎಚ್ ಲಕ್ಷ್ಮೀನಾರಾಯಣ ಕಾಮತ್,ಮೊದಲಾದ ಆಢ್ಯ ಮಹನೀಯರಲ್ಲದೆ, ನಗರದ ಆರ್ಥಿಕ ಸಂಘಸಂಸ್ಥೆಗಳ ಅಧಿಕಾರೀ ವರ್ಗದವರೂ ಈ ಸಮಾರಂಭದಲ್ಲಿ ಉಪಸ್ಥಿತರಿದ್ದರು ಡಾ. ಟಿ. ಮಾಧವಪೈಗಳು ಧನ್ಯವಾದವನ್ನರ್ಪಿಸಿದರು.

ಶ್ರೀ ರ ಮೋತ್ಸವ ಸವಿ ತಿ ಸ್ಥಾಪನೆ—ಯೊಂದನ್ನು ಕಾರ್ಯಗತ ಮಾಡುವರೆ ಇದೇ ತಾ 18ನೇ ಆದಿತ್ಯವಾರ ಸಂಜೆ 4ಗಂಟೆಗೆ ಶ್ರೀ ಮದನಂತೇಶ್ವರ ಸ್ವಾಮಿ ಸನ್ನಿಧಿಯಲ್ಲಿ ಭಕ್ತ ವೃಂದದ ಸಭೆಯು ಜರಗಲಿರುವುದೆಂದೂ ಆಸ್ತಿಕ ಮಹಾಶಯರೆಲ್ಲರು ಬರಬೇಕಾಗಿಯೂ ಬಾಧ್ಯ ಸಹೋದರರು ವಿನಂತಿಸುತ್ತಾರೆ.

ಪುತ್ತೂರು—ಡಾ| ಕೆ. ಶಿವಪ್ಪ ಭಂಡಾರಿಯವರ ನಿಧನದ ಕುರಿತು ಸಂತಾಪ ಸೂಚಕ ಠರಾವುಗಳು ಪುತ್ತೂರಿನ ಎಸ್ ಆರ್. ಎಸ್. ಹೋಮಿಯೋಪತಿ ಕ್ಲಿನಿಕ್ ಬಾಸುನಾರು ಕ್ಷೇತ್ರದ ಕೆಲಸಗಾರರ ಸಭೆಯಲ್ಲಿಯೂ ಇದೇ ತಾ 3ರಲ್ಲು ಆದವು.

ಕುಂದಾಪುರ—ಸ್ಥಳೀಯ ಬೋರ್ಡ್ ಹೈಸ್ಕೂಲ್ ಪಠಾರದಲ್ಲಿ ಇದೇ ತಾ. 31ರಲ್ಲು ಒಂದುದಿನ ಜಾನುವಾರು ಪ್ರದರ್ಶನ ನಡೆಯಲಿರುವುದೆಂದು ಜಾನುವಾರು ಪ್ರದರ್ಶನ ಕಮಿಟಿಯವರು ತಿಳಿಸುತ್ತಾರೆ.

ಬೈಂದೂರು—ತಾ. 7ರಲ್ಲಿ ನಡೆದ ಪಂಚಾಯತ ಬೋರ್ಡು ಅಧ್ಯಕ್ಷ ಚುನಾವಣೆಯಲ್ಲಿ ಶ್ರೀ ಡಿ. ಆರ್. ಕುಂಬಳೆಯವರು ಪ್ರಬಲ ಬಹುಮತದಿಂದ ಆರಿಸಲ್ಪಟ್ಟಿರುವರು.

ಹಾಡೂರ—ಇಲ್ಲಿಯ ಪಂಚಾಯತ ಬೋರ್ಡು ಚುನಾವಣೆಯು ಇದೇ ತಾ.7ರಲ್ಲು ಜರಗಿ ಶ್ರೀ. ಕೆ. ರಘುರಾಮ ಹೆಗ್ಡೆಯವರು ಅವಿರೋಧವಾಗಿ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ಸಾಂತೂರು—ಸಾಂತೂರು ಗ್ರಾಮ ಪಂಚಾಯತ ಬೋರ್ಡ್ ಚುನಾವಣೆಯು ಇದೇ ತಾ 10ರಂದು ಜರಗಿತು ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸಲಾಗಿತ್ತು. ಶ್ರೀ ಸಂಜೀವ ಶೆಟ್ಟರು ಬಹುಮತದಿಂದ ಚುನಾಯಿಸಲ್ಪಟ್ಟರು.

ಕೊಡವೂರು—ಶ್ರೀ ಶಂಕರ ನಾರಾಯಣದೇವಸ್ಥಾನದ ವಾರ್ಷಿಕ ರಥೋತ್ಸವವು ತಾ. 31-1-1953ರಲ್ಲಿ ನಡೆಯಲಿರುವುದು. ಭಕ್ತಾದಿಗಳು ಬಂದು ಸಹಕರಿಸಿ ಶ್ರೀ ಮುಖ ಗಂಧ ಪ್ರಸಾದಗಳನ್ನು ಸ್ವೀಕರಿಸಿ ಕೃತಾರ್ಥರಾಗ ಬೇಕಾಗಿ ಟ್ರಸ್ಟಿಗಳಾದ ಡಾ| ಕೆ. ಎಲ್. ಐತಾಳರು ವಿನಂತಿಸುತ್ತಾರೆ.

ಬೆಳ್ತಂಗಡಿಗೊಂದು ಸೆಕೆಂಡರಿ ಶಾಲೆಯ ಆವಶ್ಯಕತೆ—ಬೆಳ್ತಂಗಡಿ ಬೋರ್ಡು ಹೈ. ಎ. ಶಾಲೆಯನ್ನು 'ಸೆಕೆಂಡರಿ' ಶಾಲೆಯಾಗಿ ಮಾರ್ಪಡಿಸಬೇಕಾಗಿ ಇಲ್ಲಿಯ ಬಡಜನತೆಯು ಹಾರೈಸುತ್ತಿದೆ. ಸಾಧಾರಣ ಐದು ನೂರು ಮಕ್ಕಳು ಶಿಕ್ಷಣ ಹೊಂದುವ ಈ ಕೇಂದ್ರಕ್ಕೆ ಸೆಕೆಂಡರಿ ಶಾಲೆಯ ಅಗತ್ಯವ...ಸ್ಥಾಪಿಸುವಂತಾಗಬೇಕೆಂದು ವಿದ್ಯಾಪಕ್ಷಪಾತಿಯೊಬ್ಬರು ಬರೆಯುತ್ತಾರೆ. ಜಿಲ್ಲಾ ಬೋರ್ಡಿನವರು ಈಕಡೆ ನಿಗಾಕೊಡ ಬೇಕಾದುದು ಅತ್ಯಾವಶ್ಯಕವೆನಿಸುತ್ತದೆ. ಸ್ಥಳೀಯ ಬೋರ್ಡು ಹಾ. ಎ. ಶಾಲೆಯ ಹೊಸಕಟ್ಟಡ ಪೂರ್ಣತೆಗಾಗಿ ಊರವರು ತಮ್ಮ ವೈಯಕ್ತಿಕ ಶ್ರಮವನ್ನು ವಹಿಸುತ್ತಿರುವುದು ಅಭಿನಂದನೀಯವು.

ಮೂಲ್ಕಿ—ಸ್ಥಳೀಯ ಬಿಲ್ಲವ ಸಮಾಜ ಸೇವಾ ಸಂಘದಲ್ಲಿ ಬ್ರಹ್ಮಶ್ರೀನಾರಾಯಣ ಗುರುಸ್ವಾಮಿಯವರ ಪ್ರತಿಮಾ ಪ್ರತಿಷ್ಠಾ ದಿನಾಚರಣೆಯೂ, ದಿವಂಗತ ಎಚ್. ಕೊರಗಪ್ಪನವರ ಭಾವಚಿತ್ರ ಅನಾವರಣವೂ ಶ್ರೀ ಎಸ್. ಎಸ್. ಸುವರ್ಣ ಎಮ್. ಎಲ್ ಎ. ಅವರ ಅಧ್ಯಕ್ಷತೆಯಲ್ಲಿ ತಾ 4ರಲ್ಲು ವಿಜೃಂಭಣೆಯಿಂದ ಜರಗಿತು. ದೇವತಾ ಪ್ರಾರ್ಥನೆ, ವಂದಿಮಾಗಧಗಳಾದ ಬಳಿಕ ಶ್ರೀಗಳಾದ ಎಮ್. ಕೃಷ್ಣಪ್ಪ, ಕೆ. ಉಗ್ಗಪ್ಪ, ಎಮ್. ರಂಗ, ಎಸ್. ಟಿ. ಸುವರ್ಣ ಮೊದಲಾದವರು ಶಾಲೋಚಿತ ಮಾತುಗಳನ್ನಾಡಿದರು. ಅಧ್ಯಕ್ಷ ಭಾಷಣ, ಗುರುಪೂಜೆ, ಸಮಾರಾಧನೆ ಮೊದಲಾದ ಕಾರ್ಯಕ್ರಮಗಳಿಂದ ಸಮಾರಂಭ ಮುಕ್ತಾಯವಾಯಿತು.

ಇಲ್ಲಿಯ ಪುತ್ತೂರು ಬಾದದ ಕಂಬಳವು ತಾ 21 1-53ಕ್ಕೆ ಜರಗಲಿದೆ.

ಕುಂದಾಪುರ— 9-1 53ರಲ್ಲಿ ನಿಷ್ಠಾವಂತ ಕಾಂಗ್ರೆಸ್ ಕೆಲಸಗಾರರಾದ ಮತ್ತಾಡಿ ಶೀನಪ್ಪ ಹೆಗ್ಡೆಯವರು ತನ್ನ 60ನೇ ವರ್ಷದಲ್ಲಿ ದೈವಾಧೀನರಾದ ರೆಂದು ವಿಷಾದವಾಗುತ್ತದೆ

ನವಯುಗ

ನವಯುಗ ಪ್ರೆಸ್, ಉಡುಪಿ.

ಅಸಾಧಾರಣ ವಾಗ್ಮಿಗಳೂ ಗ್ರಂಥಕರ್ತರೂ ಆದ ಶ್ರೀ. ಎಸ್. ಪಂಚಪಕೇಶ ಐಯ್ಯರ್, ಎಂ. ಎ., ಐ. ಸಿ. ಎಸ್., ಬಾರ್.ಎಟ್ ಲಾ, ಎಫ್. ಎಸ್. ಎಲ್. ಅವರು ಬರೆದ Tales of Ind ಎಂಬ ಕಥಾವಳಿಯ ಅನುವಾದ

ಭಾರತೀಯ ಕತೆಗಳು

ಅನುವಾದಕರು—ಶ್ರೀ. ಕೊರಡ್ಕಲ್ ಶ್ರೀನಿವಾಸ ರಾವ್.

ಪ್ರತಿಯೊಬ್ಬನಿಗೂ ತನ್ನ ಸಾಮಾಜಿಕ ಹಾಗೂ ವ್ಯಾವಹಾರಿಕವಾದ ಮಾತುಗಾರಿಕೆಯು ಸ್ವಾರಸ್ಯವಾಗಿ, ಪರಿಣಾಮಕಾರಿಯಾಗಬೇಕೆಂಬ ಹಿರಿಯಾಶೆ ಇದ್ದೇ ಇದೆ. ಇದು ಸಿದ್ಧಿಸಬೇಕಾದರೆ ಮಾತಿನ ನಡುನಡುವೆ ಸಂದರ್ಭೋಚಿತವಾದ ಉಪಮೆ, ಗಾದೆ, ಕಥೆ ದೃಷ್ಟಾಂತ ಇತ್ಯಾದಿಗಳು ಬರಬೇಕು. ಅಂತಹ ಅಮೂಲ್ಯ ಭಂಡಾರವೇ ಈ ಭಾರತೀಯ ಕತೆಗಳು.

ಎಲ್ಲರೂ ಅವಶ್ಯವಾಗಿ ಓದತಕ್ಕ ಅಪೂರ್ವ ಗ್ರಂಥ

101 ಕತೆಗಳು | ಬೆಲೆ ರೂ. 1-12-0

ನವಭಾರತ ಪುಸ್ತಕ ಭಂಡಾರ, ಉಡುಪಿ

ರಂಗಭೂಮಿಯ ರಂಗಿನ ತರಂಗ

ಅನ್ನದಾನ

ಎಸ್. ವೆಂಕಟರಾಜರು ಬರೆದ ವಿನೋದ ಪ್ರದ ನಾಟಕ

- ನಡೆದ-ನಡೆಯುವ ವಿದ್ಯಮಾನದ ಒಂದು ಪಡಿಯಚ್ಚು
- ಒಂದು ನಾಟಕವಾಡಲು ಸುಲಭದಲ್ಲಿ ಸಿಕ್ಕಿದ ಸಾಮಾನ್ಯ ಘಟನೆಯೊಂದರ ಸ್ವಚ್ಛ ಚಿತ್ರ
- ಆಕರ್ಷಕ ಪುಸ್ತಕ, ಬೆಲೆ 0 10 0

● ಜಗತ್ತಿನ ಆದಿಯಾರು? ● ಜಗತ್ತಿನಲ್ಲಿ ಸತ್ಯಯಾವುದು?

● ಜಗತ್ತಿನ ರಕ್ಷಕನಾರು?

ಎಂಬೀ ವಿಚಾರಗಳ ವಿಮರ್ಶಾತ್ಮಕ ಚಿತ್ರ

ಪುರಾಣದ ಕಥಾಭಾಗ "ಶ್ರೀಮನ್ನಾರಾಯಣನ" ಪುಣ್ಯಕಥೆ

ಲಕ್ಷ್ಮೀನಾರಾಯಣ

ತ್ರಿವೇಣಿ, ಮಹಿಪಾಲ್, ಮೀನಾಕುಮಾರಿ

ತಾ. 15—1—1953ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ



ಸಾರ್ವಜನಿಕ ಮತ

(೧ನೇ ಪುಟದಿಂದ)

ವಾಗಿ ಅದು ಸುದ್ದಿಗಾರನ ಕೊನೆಯ ನಿರ್ಣಯವೇ ಆಗಿದೆಯಲ್ಲದೆ, ಸಾರ್ವಜನಿಕರ ಮತವೆಂದದನ್ನು ಸತ್ಯವಾಗಿ ಹೇಳಲು ಬಾರದು. ಆದರೂ ಆ ಸುದ್ದಿಗಾರನ ಬುದ್ಧಿ ವೈಶಾಲ್ಯ ಹಾಗೂ ಸೂಕ್ಷ್ಮತ್ವವನ್ನು ಎಲ್ಲರ ಅಭಿಪ್ರಾಯವನ್ನೂ ಮನವರಿಕೆ ಮಾಡಿಕೊಂಡು, ಅದರ ಆಧಾರದಿಂದ ಮತ್ತು ವಿಶಾಲಾನುಭವದಿಂದ ಹೀಗೆ ಅಂತಿಮ ನಿರ್ಣಯಕ್ಕೆ ಬಂದಪ್ಪಾಗಿದೆ: ಎಂತಲೇ ಆ ವರದಿಗೆ ಬೆಲೆಬರುತ್ತದೆ. ಸಾರ್ವಜನಿಕರ ಅಭಿಪ್ರಾಯ ಹೀಗಿದೆ ಎಂಬ ಶಬ್ದಸಮುದಾಯವನ್ನು ಸುದ್ದಿಗಾರನು ತನ್ನೊಬ್ಬನ ವೈಯಕ್ತಿಕ ಅಭಿಪ್ರಾಯಕ್ಕೆ ಪುಷ್ಟಿಕೊಡಲಿಕ್ಕೆ ತಂದಿರುವನೆಂದುಕೊಂಡರೂ ಕೂಡ—ಅವನ ಮತವನ್ನೇ ಪುರಸ್ಕರಿಸುವ ಜನ ಬೇರೆ ಹಲವರು ಇರಬಹುದು.

ಆದುದರಿಂದ ಒಂದು ಅಭಿಪ್ರಾಯವನ್ನು ಕೇವಲ ಒಬ್ಬ ಮನುಷ್ಯನು ಮಾತ್ರ ಪುರಸ್ಕರಿಸಿದನೆಂದು ಅಥವಾ ಸಮಾಜದಲ್ಲಿ ಒಂದು ಸಣ್ಣ ಗುಂಪು ಮಾತ್ರ ಅದನ್ನು ಮನ್ನಿಸಿತೆಂದು ಹೇಳಿದಷ್ಟಕ್ಕೆ—ಅದನ್ನು ಸ್ವೀಕರಿಸುವುದು ಮೂರ್ಖತೆಯೆಂದು ಯಾರೂ ತಿಳಿದುಕೊಳ್ಳಲಾಗದು. ಅಹಿಂಸಾತ್ಮಕ ಸತ್ಯಾಗ್ರಹದಿಂದಲೇ ಭಾರತಕ್ಕೆ ಸ್ವರಾಜ್ಯ ಸಿದ್ಧಿಸುವುದೆಂದು ಮೊಟ್ಟ ಮೊದಲು ನುಡಿದ ಗಾಂಧೀಜಿಯ ಮಾತನ್ನು ಉಪೇಕ್ಷೆಯಿಂದ ನೋಡಿದ್ದರೆ ಅದು ಚೆನ್ನಾಗುತಿತ್ತೆ? ಗಾಂಧೀಜಿಯ ವ್ಯಕ್ತಿಗತ ಅಭಿಪ್ರಾಯದ ಫಲ ನಿರ್ಣಯವು ೧೯೪೭ನೇ ಆಗೋಸ್ತು ೧೫ರಂದು ಆಯಿತು. ಮೊದಲಿಗೆ ಅವರ ಅಭಿಪ್ರಾಯವನ್ನು ಸಾರ್ವಜನಿಕರಲ್ಲಿ ಎಷ್ಟು ಜನ ಒಪ್ಪಿದ್ದಾರು? ಕೆಲವೇ ಮಂದಿ ಎಂಬುದು ಸ್ಪಷ್ಟವಿದೆ. ಜನರ ಅಭಿಪ್ರಾಯವನ್ನು ನಿಧಾನವಾಗಿ ತನ್ನೆಡೆಗೆ ಒಲಿಸಿಕೊಂಡರು. ಪರಿಣಾಮವಾಗಿಯೇ ಸ್ವಾತಂತ್ರ್ಯದ ಹೋರಾಟಕ್ಕೆ ಅಭೂತಪೂರ್ವವಾದ ಸ್ವರೂಪವೂ ಚೈತನ್ಯವೂ ಬಂತು. ಸಾರ್ವಜನಿಕರ ಮತವನ್ನು ಸೃಷ್ಟಿಸುವುದು ಒಂದು ಘನವಾದ ಅಗತ್ಯವಾದ ಕಾರ್ಯವೆಂಬುದ ಜಪ್ಪಲ್ಲಿ. ಒಂದು ರಚನಾತ್ಮಕವಾದ ಹೊಸ ವಿಚಾರವು ಸಮಾಜದ ಎಲ್ಲ ಜನರ ತಲೆಗೂ ಹೊಳೆಯದೆ, ಕೆಲವೇ ಬುದ್ಧಿವಂತರ ಮಿದುಳಿನಲ್ಲಿ ಅಂಕುರಿಸುತ್ತದೆ; ಆ ಉತ್ತಮ ವಿಚಾರವನ್ನು ಅಂಥ ಬುದ್ಧಿವಂತರು ಉಪೇಕ್ಷೆಯಿಂದ ನೋಡದೆ, ಜನರಲ್ಲಿ ಪ್ರಚುರಗೊಳಿಸಿ, ಜಾಗೃತಿಯನ್ನುಂಟು ಮಾಡಬೇಕು. ಎಂತಲೇ ಹೊಸ ವಿಚಾರಗಳಿಗೆ ಸ್ಥಾನ ಕೊಡಲೆತ್ನಿಸುವುದ. ಅಗತ್ಯವೆಂದು ಹೇಳಿದೆ. ಸಾಮಾಜಿಕರ ಹಿತದ ದೃಷ್ಟಿಯಿಂದಲೇ ಇಂಥ ಪ್ರಯತ್ನ ಅಪೇಕ್ಷಣೀಯವೂ ಅಗತ್ಯವೂ ಆಗಿದೆ. ಪ್ರತಿಯೊಬ್ಬ ವ್ಯಕ್ತಿ ತನ್ನ ಸ್ವಂತದ ಸಮಸ್ಯೆಗಳೇ ಎಡೆಬಿಡದೆ ಬಾಧಿಸುತ್ತಿರುವಾಗ ಸಾರ್ವಜನಿಕ ಮಟ್ಟದಲ್ಲಿ ಕಂಡುಬರುವ ತೊಡಕುಗಳ ನಿವಾರಣೋಪಾಯಗಳ ಕುರಿತು ಚಿಂತಿಸುವಷ್ಟು ವ್ಯವಧಾನವಾಗಲೀ ಚಾತುರ್ಯವಾಗಲೀ ಮನಸ್ಸಾಗಲೀ ಎಲ್ಲರಿಗೂ ಇರಲಾರದು. ಆದುದರಿಂದ ಯೋಗ್ಯತೆಯುಳ್ಳ ಕೆಲವೇ ಜನರ ಪಾಲಿಗೆ ಈ ಮಹತ್ವದ ಕಾರ್ಯಭಾರಬಂದು ಬೀಳುತ್ತದೆ. ಆಗ ಈ ಕೆಲವೇ ಜನರ ವ್ಯಕ್ತಿಗತಾಭಿಪ್ರಾಯವೇ ಸಾರ್ವತ್ರಿಕಾಭಿಪ್ರಾಯವೆಂದು ನಿಶ್ಚಿತಗೊಂಡರೆ, ಅದು ಸ್ವಾಭಾವಿಕವೇ ಹೊರತು, ತಪ್ಪೆಂದು ಹೇಳುವಂತಿಲ್ಲ.

ಹೀಗಿದ್ದರೂ ಕೂಡ-ಒಬ್ಬ ಧುರೀಣನಾಗಲೀ ಒಂದು ವಾಂಛಿತ ಆದರ್ಶವನ್ನಿಟ್ಟುಕೊಂಡಿರುವ ಗುಂಪಾಗಲೀ ಸಾರ್ವಜನಿಕ ಮತವನ್ನು ತಿರುಗಿಸುವುದಕ್ಕೂ ಮಿತಿಯಿಲ್ಲದಿಲ್ಲ. ಎಷ್ಟೇ ಪ್ರಭಾವಿ ಹಾಗೂ ಬಲಯುತವಾದ ಪ್ರಚಾರ ಸಾಧನಗಳನ್ನು ಉಪಯೋಗಿಸಿಕೊಂಡರೂ ಜನರ ಮನಸ್ಸನ್ನು ಸಂಪೂರ್ಣವಾಗಿ ತಿರುಗಿಸಿಕೊಳ್ಳಲು ಸಾಧ್ಯವೆಂದು ಹೇಳಲಾರೆವು. ಪ್ರತಿಯೊಂದು ಸಮಾಜದಲ್ಲಿ ಹಾಗೂ ರಾಷ್ಟ್ರದಲ್ಲಿ ಬಾಳ್ವೆಯ ಮಹತ್ವದ ಸಮಸ್ಯೆಗಳ ಬಗ್ಗೆ ಪರಂಪರಾಗತವಾಗಿ ಬಂದ ನಡವಳಿಕೆ ಹಾಗೂ ಸಂಪ್ರದಾಯಗಳೂ ರೂಢಿಯಮಗಳೂ ಆಚಾರ ವಿಚಾರಗಳೂ ಇಂದಿನ ಸಾರ್ವಜನಿಕ ಅಭಿಪ್ರಾಯದ ತಳಹದಿಯಾಗಿ ನಿಲ್ಲುತ್ತವೆ ಎಂಬ ಸತ್ಯವನ್ನು ನಾವು ಉಪೇಕ್ಷಿಸತಕ್ಕದ್ದಲ್ಲ. ಧುರೀಣನು ಎಷ್ಟು ಸಾಮರ್ಥ್ಯಶಾಲಿಯಾಗಿದ್ದರೂ ನಮ್ಮ ತಿಳುವಳಿಕೆಗೆ ಬಾರದಂತೆಯೇ ನಮ್ಮಲ್ಲಿ ವಿದ್ಯಮಾನವಿರುವ ಈ ಸಂಸ್ಕಾರ ಅಥವಾ ಸಂಸ್ಕೃತಿಯನ್ನು ದುರ್ಲಕ್ಷಿಸಿ ನಡೆಯಲು ಬಯಸಿದರೆ, ಅವನಿಗೆ ಯಶಸ್ಸು ದೊರೆಯುವುದು ದುರ್ಲಭ. ಸಾಮಾಜಿಕ ವಾತಾವರಣ ಹಾಗೂ ರಾಷ್ಟ್ರೀಯ ಸಂಸ್ಕೃತಿಯ ಗುರುತ್ವ ಕೇದ್ರವನ್ನು ಆಧರಿಸಿಕೊಂಡೇ ಸಾರ್ವಜನಿಕ ಮತಕ್ಕೆ ಹೊಸ ರೂಪವನ್ನು ಕೊಡಬಹುದೇ ಹೊರತು— ಈ ಮಿತಿಯನ್ನು ಮೀರಿ ನಾವು ನಡೆಯಲು ಬಾರದು.

— ಓಂ ತತ್ಸತ್॥

ಮಂಗಳೂರು

ಕೇಂದ್ರದ ಮುಖ್ಯಮಂತ್ರಿ ಬಲವಂತರಾವ್ ದಾತಾರರು–ಇದೇ ತಾ. 8ರಂದು ಸಂಜೆ ಮಂಗಳೂರಿನ ಕೇಂದ್ರ ಮೈದಾನಿನಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡುತ್ತಾ 'ಸರಕಾರದ ಪಂಚವಾರ್ಷಿಕ ಯೋಜನೆಯನ್ನು ಜನರು ಸರಿಯಾಗಿ ಅಭ್ಯಾಸಮಾಡಿ ಅದರ ಸಫಲತೆಗಾಗಿ ಸರಕಾರಕ್ಕೆ ಸಲಹೆ ಹಾಗೂ ಸಹಕಾರ ನೀಡಬೇಕು ಎಂದರು. ಕರ್ನಾಟಕ ಪ್ರಾಂತರಚನೆಯ ವಿಚಾರದಲ್ಲಿ ಮಾತನಾಡುತ್ತಾ 'ಇಂದಲ್ಲವಾದರೆ ನಾಳೆಯಾದರೂ ಕರ್ನಾಟಕ ಪ್ರಾಂತವಾಗಿಯೇ ತೀರುವುದು. ಈಗ ಮಾತ್ರ ಕೆಲವು ಅಡಚಣೆಗಳಿವೆ. ಮೊದಲು ನಮ್ಮೊಳಗೆ ಐಕ್ಯ ಮತ್ಯ ಸ್ಥಾಪಿಸಿಕೊಳ್ಳೋಣ, ವ್ಯಸನದ ವನ್ನು ಒಲಿಸಿಕೊಳ್ಳೋಣ ಪ್ರಬುದ್ಧ ಬಂದರ ಹಾಗೂ ಹಾಸನ ರೈಲ್ವೆಗಳ ಪ್ರಶ್ನೆಯು ಹೀಗೆಯೇ' ಎಂದು ಹೇಳಿದರು. ಯಾವದೃಷ್ಟಿಯಿಂದಲೂ ಹಿಂದೂಸ್ಥಾನ ಸರಕಾರವು ದಕ್ಷಿಣ ಹಿಂದೂಸ್ಥಾನದವರನ್ನು ಕಡೆಗಾಣಿಸುತ್ತಿಲ್ಲವೆಂದೂ ಹಿಂದೂಸ್ಥಾನ ಸರಕಾರಕ್ಕೆ ನಿರಾಶ್ರಿತರ ಪುನರ್ನಿವೇಶವೆಂಬುದು ಅತಿಕಠಿನವಾಗಿದೆ ಎಂಬುದನ್ನೂ ತಿಳಿಸಿದರು. ಸರಕಾರವು ಅಖಿಲಭಾರತ ದೃಷ್ಟಿಯಿಂದ ತನ್ನ ಕಾರ್ಯ ಮಾಡುತ್ತಿದೆಯಾಗಿ ಸೂಚಿಸಿದರು. ಅಧ್ಯಕ್ಷತೆ ವಹಿಸಿದ ಶ್ರೀ ಕೆ. ಆರ್. ಆಚಾರ್ಯರು ಸರಕಾರಗಳ ವಿಚಾರದಲ್ಲಿ ಜನಾಭಿಪ್ರಾಯವೇನಿದೆ ಎಂಬುದನ್ನು ಸ್ಪಷ್ಟವಾಗಿ ಮಂತ್ರಿಗಳ ಮುಂದಿಟ್ಟು ಕನ್ನಡಿಗರ ಕೋರಿಕೆಗಳು ಮಾನ್ಯವಾಗುವಂತೆ ಮಂತ್ರಿಗಳು ಸರಕಾರಕ್ಕೆ ತಿಳಿಸಬೇಕೆಂದು ಕೇಳಿಕೊಂಡರು. ಶ್ರೀ ಎನ್. ಎಸ್. ಕಿಲ್ಲೆಯವರು ಧನ್ಯವಾದಗಳನ್ನರ್ಪಿಸಿದರು. ಮಂಗಳೂರಿಗೆ ಬಂದ ಮಾನ್ಯ ಮಂತ್ರಿಗಳು ಸೂಟರಪೇಟೆಯ ಮತ್ತು ಭಟ ಗುಡ್ಡೆಯ ಹರಿಜನ ನಿವಾಸಗಳನ್ನು ನೋಡಿಕೊಂಡು ಕಲೆಕ್ಟರರ ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ವಿಚಾರ ವಿನಿಮಯ ಮಾಡಿದರು.

ಮಾನ್ಯದಾತಾರರು ಮಂಗಳೂರ ವಕೀಲ ಸಂಘಕ್ಕೂ ಭೆಟ್ಟಿಯಿತ್ತರು. ಸೈಂಟ್ ಎಲೋಸಿಯಸ್ ಕಾಲೇಜನ್ನು ಸಂದರ್ಶಿಸಿ ಅಲ್ಲಿಯ ವಿದ್ಯಾರ್ಥಿಗಳ ಸಭೆಯಲ್ಲಿ ಮಾತನಾಡುತ್ತಾ ಭಾರತಕ್ಕೆ ಕ್ರೈಸ್ತ ಪಾದ್ರಿಗಳು ಸಲ್ಲಿಸಿದ ಸೇವೆಯೇ ಮೊದಲಾದುವನ್ನು ಶ್ಲಾಘಿಸಿ, ಭಾರತದ ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗಿದೆಯೆಂದರು. ಸರಕಾರಿ ಕಾಲೇಜಿನಲ್ಲೂ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಾ ವಿದ್ಯಾರ್ಥಿಗಳು ಅಭ್ಯಾಸಿಗಳಾಗಿ ಸಮಾಜಸೇವಕರಾಗಬೇಕೆಂದರು. ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಹೋಗಿ ಕಾಂಗ್ರೆಸ್ ಕಾರ್ಯಕರ್ತರು ಜನತಾ ಸಂಪರ್ಕವಿಟ್ಟುಕೊಂಡು ಸೇವಾ ತತ್ಪರರಾಗಬೇಕೆಂದು ಉಪದೇಶ ವಾಕ್ಯಗಳನ್ನಾಡಿದರು.

ಮಂಗಳೂರು ಲಿಯೊನಾನ್ ಸಮಿತಿಯ ವಿಶೇಷ ಸಭೆಯು ತಾ. 7ರಲ್ಲು ಸಮಿತಿ ಅಧ್ಯಕ್ಷ ಶ್ರೀ ಬಿ ವೈಕುಂಠ ಬಾಳಿಗ, ಎಮ್. ಎಲ್. ಎ ಅವರ ಗೃಹದಲ್ಲಿ ಜರಗಿದಾಗ ಶ್ರೀ ವಿ. ಎಸ್. ಕುಡ್ವರಿಂದ ದೊರೆತ ಮೆಡಿಕಲ್ ಮೋಟಾರ್ ವಾಹನವನ್ನು ಸ್ವೀಕರಿಸಲಾಯಿತು. ಜಪ್ಪು ಸೆಮಿನರಿ ಕಾರ್ಖಾನೆಯಲ್ಲಿ ಈ ವಾಹನವನ್ನು ಮೆಡಿಕಲ್ ವಾಹನವಾಗಿ ಪುನರ್ರಚಿಸಲಾಗಿತ್ತು. ಕಾರ್ಖಾನೆಯಲ್ಲಿ ದುಡಿಯುವ ಮಜೂರರಿಗೆ ಈ ವಾಹನದ ಸಹಾಯದಿಂದ ಹೇಗೆ ಸಹಾಯ ನೀಡಬಹುದೆಂಬುದನ್ನು ಚರ್ಚಿಸಲಾಯಿತು. ಕೆಲವು ಅಂಕೆ ಸಂಖ್ಯೆಗಳನ್ನು ಸಂಗ್ರಹಿಸಲು ಸಬ್ ಕಮಿಟಿ ನೇಮಕವಾಯಿತು. ಡಾ॥ ಗಿರಿಧರ ರಾವ್ ಮತ್ತು ಡಾ. ಯು. ಪಿ. ಮಲ್ಯರು ಪ್ರತಿದಿನ ಕೆಲವು ಗಂಟೆಗಳ ಕಾಲ ಮೆಡಿಕಲ್ ವೇನಿನಲ್ಲಿ ದುಡಿಯುವ ತಮ್ಮ ಸಂಕಲ್ಪವನ್ನು ಪ್ರಕಟಿಸಿದರು.

ದ. ಕ. ಜಿಲ್ಲಾ ಬೋರ್ಡಿನ ಬಜೆಟ್:–ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯು ಇದೇ ತಾ. 3ರಲ್ಲು ಪೂರ್ವಾಹ್ನ ಪ್ರೆಸಿಡೆಂಟರಿಂದ ಪ್ರಾರಂಭವಾಯಿತು. 1953-54ನೆ ವರ್ಷದ ಆಯವ್ಯಯದ ಬಜೆಟ್ ಯಾವ ಚರ್ಚೆಗೂ ಒಳಗಾಗದೆ ಪಾಸಾಯಿತು. ಮುಂಗಡ ಪತ್ರದಲ್ಲಿ ರೂ. 6,42,980 ಕೊರತೆ ತೋರಿಸಲಾಗಿದೆ. 1953-54ನೆ ವರ್ಷದ ಅಂದಾಜು ಲೆಖ್ಖಪತ್ರವು ರೂ. 3,72,250ರಷ್ಟು ಕೊರತೆಯಿರುವ ಆರಂಭ ಶಿಲ್ಕಿನಿಂದ ಪ್ರಾರಂಭವಾಗುತ್ತದೆ. ಆ ವರ್ಷದ ಅಂದಾಜು ಆದಾಯವು ರೂಪಾಯಿ 9,18,7000 ಎಂದೂ ವೆಚ್ಚವು ರೂಪಾಯಿ 11,89,430 ಎಂದೂ ಸೂಚಿಸಲಾಗಿದೆ. ಹಾಗಾಗಿ ಆರುಲಕ್ಷದ ಕೊರತೆಯುಂಟಾಗಿದೆ. ಮುಂದಿನ ವರ್ಷದ ಅಂದಾಜು ಪತ್ರದಲ್ಲಿ ಆಡಳಿತ ಸಿಬಂದಿಗೆ ರೂ. 1,22,170; ಸಾರಿಗೆ ಸಂಪರ್ಕಕ್ಕೆ ರೂ. 3,99,770 ವಿದ್ಯಾಭ್ಯಾಸಕ್ಕೆ ರೂ 3,50,500; ವೈದ್ಯಕೀಯ ಖಾತೆಗೆ ರೂ. 1,98,170 ಮತ್ತು ರೂ. 1,43,350 ಇತರ ಸಹಾಯಾರ್ಥಗಳಿಗಾಗಿ ರೂ. 5,470ನ್ನು ವಿಂಗಡಿಸಲಾಗಿದೆ.

ಕುಂದಾಪುರ ತಾಲೂಕಿನ ಸರ್ವೆನಂಬ್ರ 122/1 (ಭಾಗ) ರ ಬೆಳ್ವೆಗ್ರಾಮದಲ್ಲಿ ಸರಕಾರದ ಸಾಧಾರಣ ಆರುನೂರು ಎಕ್ರೆ ಪಾಳುಬಿದ್ದ ಭೂಮಿಯಿದೆಯೆಂದೂ ಅದನ್ನು ದೀರ್ಘಾವಧಿಯ ಗೇಣಿಗೆ ಕೊಡಲಾಗುವುದೆಂದೂ ಕೈಗಾರಿಕೆ ಯಾ ಆಹಾರ ಹೆಚ್ಚು ಬೆಳೆಸುವ ಉಮೇದ್ವಾರರು ಆ ಬಗ್ಗೆ ಅರ್ಜಿಮಾಡಿಕೊಳ್ಳಬಹುದೆಂದೂ ಜಿಲ್ಲಾ ಕಲೆಕ್ಟರರು ತಿಳಿಸುತ್ತಾರೆ.

ಅಳಿಯ ಸಂತಾನ ಕಾನೂನು

ಇದರ ಪ್ರತಿಗಳು ದೊರೆಯುತ್ತವೆ
ಕನ್ನಡ ಪ್ರತಿ ೧ಕ್ಕೆ 0-8-0
ಇಂಗ್ಲಿಷ್ ಪ್ರತಿ ೧ಕ್ಕೆ 0-8-0
ನವಯುಗ ಪ್ರೆಸ್, ಉಡುಪಿ

THE VIJAYA BANK LTD.

Head Office - - - MANGALORE.

1953

ನವವರ್ಷದ ಶುಭಾಶಯ!

ಕಳೆದ 22 ವರ್ಷಗಳ ನಮ್ಮ ಗಿರಾಕಿಗಳ ಯಥಾರ್ಥ ಸೇವೆ,
ಪರಿಪಕ್ವ ಅನುಭವ, ಪ್ರಾಮಾಣಿಕತೆ, ಮತ್ತು ಉತ್ಸಾಹದಿಂದಾಗಿ
ಮುಂದೆಯೂ ಯಥಾಪ್ರಕಾರ ನಿಮ್ಮ ಪ್ರೋತ್ಸಾಹ ಕೋರುವ,

ದಿ ವಿಜಯಾ ಬೇಂಕ್ ಲಿಮಿಟೆಡ್

ಹೆಡ್ ಆಫೀಸು - - - ಮಂಗಳೂರು.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ,
ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು
ಯಾವಾಗಲೂ ಸಿದ್ಧವಿವೆ.
ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್ಟರ್

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.
ಫೋನು ನಂಬ್ರ ೮೦

ಸಮಾಜ ಧರ್ಮ

ವ್ಯಕ್ತಿಗೆ ಧರ್ಮವನ್ನು ನಿಯಮಿಸುವಂತೆ ಭಾರತದ ಋಷಿ ಸಮಾಜಕ್ಕೂ ಧರ್ಮಗಳನ್ನು ನಿಯಮಿಸಿದ್ದಾನೆ. ನಿಜದಲ್ಲಿ ವ್ಯಕ್ತಿಗೆ ಒಂದು ವರ್ತನವನ್ನು ನಿಯಮಿಸುವುದರಲ್ಲಿ ಉಪದೇಶಕನು ಇದು ವ್ಯಕ್ತಿಗೆ ಮಾತ್ರ ಕ್ಷೇಮಕರ ಎಂದಲ್ಲದೆ ಸಮಾಜಕ್ಕೂ ಹಿತವೆಂದೂ ನಿಶ್ಚಯಿಸಿದ್ದಾನೆ. ವ್ಯಕ್ತಿ ಆಶೆ ಅತಿಯಾಶೆಯಾಗದಂತೆ ನೋಡಿಕೊಂಡರೆ ಸಮಾಜದಲ್ಲಿ ಆಸ್ತಿಗಾಗಿ ಹೊಡೆದಾಟವಿಲ್ಲ: ಅರ್ಧ ರಾಜ್ಯ ನ್ಯಾಯವಾಗಿ ತನಗೆ ಬರಬೇಕಾಗಿದ್ದರೂ, ನಮ್ಮ ಜ್ಞಾತಿಗಳು ಒಪ್ಪಿ ಐದೇ ಗ್ರಾಮಗಳನ್ನು ಕೊಟ್ಟರೆ ಸಾಕು, ಎಂದ ಯುಧಿಷ್ಠಿರನು ಸಮಾಜದ ವ್ಯಕ್ತಿಗಳಿಗೆ ಒಂದು ಆದರ್ಶ. ಈ ಮನೋನಿಗ್ರಹ ಇಲ್ಲದ ಮನುಷ್ಯರು ಸಮಾಜದ ಜೀವನವನ್ನು ಮಾನವ ಜೀವನದ ಮಟ್ಟದಿಂದ ಶ್ವಾನ ಜೀವನದ ಮಟ್ಟಕ್ಕೆ ಇಳಿಸುತ್ತಾರೆ. ಯುಧಿಷ್ಠಿರನು ಹೇಳುವಂತೆ ಎರಡು ನಾಯಿ ಒಂದನ್ನೊಂದು ಕಂಡಾಗ ಗೋರ್ ಎನ್ನುವುದು, ಹಿಲ್ ಎನ್ನುವುದು, ಹಲ್ಲು ತೋರಿಸುವುದು, ಮೇಲೆ ಬೀಳುವುದು ಸಹಜವಾದ ವರ್ತನೆಯಾಗಬಹುದು. ಇದಕ್ಕಿಂತ ಒಳ್ಳೆಯ ರೀತಿಯಲ್ಲಿ ನಡೆಯದೆ ಇದ್ದರೆ ಮನುಷ್ಯರು ತಮ್ಮ ಮನುಷ್ಯತ್ವವನ್ನು ಉಳಿಸಿಕೊಳ್ಳುವುದಿಲ್ಲ.

ಜೊತೆಗೆ ಸಮಾಜದ ವ್ಯಕ್ತಿಗಳು ಮಾನವಾಡುವುದನ್ನು ಒಂದು ಧರ್ಮವಾಗಿ ಆಚರಿಸಬೇಕು. ಸಮಾಜ ಜೀವನದಲ್ಲಿ ಸತ್ಯ, ಹಲವು ರೂಪಗಳನ್ನು ತಾಳುತ್ತದೆ. ತನ್ನ ಸ್ಥಳದಿಂದ ಅದನ್ನು ಸಾಧಿಸಬೇಕು. ನ್ಯಾಯಸ್ಥಾನದಲ್ಲಿ ಸತ್ಯವಾಡುವುದು ಸಮಾಜ ಜೀವನದಲ್ಲಿ ಬಹು ಮುಖ್ಯ ಕರ್ತವ್ಯವಾಗುತ್ತದೆ. ರಾಜಪುರುಷನು ದಂಡ್ಯನಾದವನ್ನು ತನ್ನ ಮಗನಾದರೂ ದಂಡಿಸದೆ ಬಿಡಬಾರದು. ಹಾಗೆಯೇ ಸಾಕ್ಷಿ ಹೇಳುವವನು ತನ್ನ ಮಗನ ಸಲುವಾಗಿಯಾದರೂ ಇಲ್ಲದ್ದನ್ನ ಉಂಟು ಎಂದು ಸಾಕ್ಷಿ ನುಡಿಯಬಾರದು. ತನಗೆ ಬೇಕಾದರಿಗೆ ನಷ್ಟವಾಗುವುದಾದರೂ ಸತ್ಯವಾದುದನ್ನು ಹೇಳಬೇಕು. ಸಾಕ್ಷಿ ಹೇಳಬೇಕಾಗಿ ಬಂದ ಸಂದರ್ಭದಲ್ಲಿ ಬೇಕಾದವರಿಗೆ ವಿರೋಧವಾಗಿ ನುಡಿಯುವುದಕ್ಕೆ ಇಷ್ಟವಿಲ್ಲದೆ ಮೌನವನ್ನೂ ಅನುಸರಿಸಬಾರದು.

ಸಮಾಜದಲ್ಲಿ ಅಹಿಂಸೆ ಜನರಲ್ಲಿ ಪರಸ್ಪರ ದಾಕ್ಷಿಣ್ಯವಾಗಿ ಪ್ರಕಟವಾಗುತ್ತದೆ. ಯಾವನೂ ತನ್ನ ಕೆಲಸವನ್ನು ಮಾಡುವುದರಲ್ಲಿ, ತನ್ನ ಇಷ್ಟವನ್ನು ಸಾಧಿಸುವುದರಲ್ಲಿ, ಇತರರಿಗೆ ತೊಂದರೆ ಆಗುವಂತೆ ನಡೆಯಬಾರದು.

ದಾಕ್ಷಿಣ್ಯ ಸಮಾಜ ಜೀವನದಲ್ಲಿ ನಯವನ್ನು ಬೆಳಸುತ್ತದೆ. ಪರಸ್ಪರ ಆದರ, ಸಂಬೋಧನೆಯಲ್ಲಿ ಗೌರವ, ಬಾಳ್ವೆಯಲ್ಲಿ ಭೂಷಣಗಳಾಗುತ್ತದೆ.

ಸಮಾಜ ಜೀವನದಲ್ಲಿ ಕ್ಷಮಾಗುಣ ಇದೇ ರೀತಿಯ ಉದಾತ್ತ ವರ್ತನದಲ್ಲಿ ಪ್ರಕಟವಾಗುತ್ತದೆ. ಅಕ್ರೋಧೇನ ಜಯೇತ್ ಕ್ರೋಧಂ ಅಸಾಧುಂ ಸಾಧುನಾ ಜಯೇತ . ಕೆಟ್ಟದನ್ನು ಮಾಡಿದವರಿಗೆ ಪ್ರತಿಯಾಗಿ ಕೆಟ್ಟದನ್ನು ಮಾಡಬಾರದು. ಹೀಗೆ ಮಾಡುತ್ತ ಹೋದರೆ ಕೆಟ್ಟದಕ್ಕೆ ಕೊನೆಯಿಲ್ಲದೆ ಹೋಗುತ್ತದೆ. ಕೆಟ್ಟದನ್ನು ಒಳ್ಳೆಯತನದಿಂದ ಜಯಿಸಬೇಕು.

ಸಮಾಜದಲ್ಲಿ ಹಿರಿಯರು ಕಿರಿಯರು, ಪುಣ್ಯವಂತರು ಬಡವರು, ದಣಿಗಳು ಭೃತ್ಯರು, ಹೀಗೆ ಪರಸ್ಪರ ಸಂಬಂಧ ಅನಿವಾರ್ಯವಾಗಿ ಏರ್ಪಡುತ್ತದೆ. ಇಂಥ ಎಲ್ಲ ಸಂದರ್ಭದಲ್ಲಿಯೂ ಮೇಲ್ಪಟ್ಟ ಮನುಷ್ಯನು ಕೀಳ್ಪಟ್ಟವನ ವಿಷಯದಲ್ಲಿ ದಾಕ್ಷಿಣ್ಯದಿಂದ ನಡೆದುಕೊಳ್ಳಬೇಕು.

(ಶ್ರೀ ಮಾಸ್ತಿಯವರ 'ಭಾರತ ತೀರ್ಥ'ದಿಂದ)

ಸ್ವೀಕಾರ—ವಿಮರ್ಶೆ.

ಗಂಡ್ಸಲ್ವೇ ಗಂಡ್ಸು

(ಏಕಾಂಕ ನಾಟಕ)—

ಬರೆದವರು: ಕೆ. ಗುಂಡಣ್ಣ. ಪ್ರಕಾಶಕರು: ಪೂರ್ಣಿಮಾ ಪ್ರಕಾಶನ, ವಿದ್ಯಾರ್ಥಿ ಕಾರ್ಯಾಲಯ, ಬಳೇಪೇಟೆ, ಬೆಂಗಳೂರು ೨. ಬೆಲೆ. ಹತ್ತಾಣೆ.

ಇದು ಸ್ವಾರಸ್ಯ ಪೂರ್ಣವಾದ ಏಕಾಂಕ ನಾಟಕ. ಕಥಾವಸ್ತು ಹೊಸತೇನಲ್ಲವಾದರೂ ಲೇಖಕರ ಕೌಶಲ್ಯದಿಂದ ಓದುವಾಗ ತುಂಬ ಕುತೂಹಲಕಾರಿಯಾಗುತ್ತದೆ. ಅಭಿನಯಕ್ಕೂ ಈ ನಾಟಕ ಚೆಲುವಾಗಿ ಒಪ್ಪುತ್ತದೆ. ಸುಶಿಕ್ಷಿತ ಮಹಿಳೆ ಮನೆಯಲ್ಲಿ ತನ್ನ ಸ್ಥಾನ ಯಾವುದೆಂಬುದನ್ನು ಮರೆತು, ಮೆರೆದು, ಸೋತ ಕಥೆ. ಇಲ್ಲದೆ ಗಂಡ್ಸುತನವನ್ನು ಕಳೆದುಕೊಂಡ ಅಸಿಸ್ಟಂಟ್ ಕಮಿಷನರ್ ಸುಂದರರಾಯ ತನ್ನ ಗೆಳೆಯ ಗೆಳತಿಯರ ಕಪಟ ನಾಟಕದಿಂದ ಹೆಂಡತಿ ಮಿಸೆಸ್‌ಳನ್ನು ತಹಬಂದಿಗೆ ತಂದು, ನಿಜವಾದ "ಗಂಡ್ಸು" ಆಗುತ್ತಾನೆ. ನಾಟಕ ನಗೆ ಮಿಂಚುಗಳಿಂದ ತುಂಬಿದೆ. ನಾಟಕದ ಸಾಗಿಸುವ ಮಾತುಗಳು ನಮ್ಮನ್ನು ನಗೆಗಡಲಿನಲ್ಲಿ ತೇಲಿಸುತ್ತವೆ

ಕಾವ್ಯದ ಕಾರಖಾನೆ

(ಏಕಾಂಕ ನಾಟಕಗಳು)

ಬರೆದವರು: ಎನ್. ಕೆ. ಕುಲಕರ್ಣಿ, ಎಂ. ಎ. ಪ್ರಕಾಶಕರು: ಸರ್ವೋದಯ ಸಾಹಿತ್ಯ ಮಾಲೆ, ಹುಬ್ಬಳ್ಳಿ. ರೂ ೧ ೪-೦

ಸುಪ್ರಸಿದ್ಧ ನಾಟಕಕಾರರೆನ್ನಿಸಿರುವ ಏಳು ಏಕಾಂಕ ನಾಟಕಗಳ ಕೂಡು ಇದು. ಈ ನಾಟಕಗಳು ವ್ಯಂಗ ಪ್ರಧಾನವಾಗಿವೆ ಸಮಾಜದ ಹುಳುಕನ್ನು ಮಾರ್ಮಿಕವಾಗಿ ಎತ್ತಿ ತೋರಿಸುವ ಕೌಶಲವನ್ನು ಲೇಖಕರು ತೋರಿಸುತ್ತಾರೆ. "ಕವಿತಾ ಕಾರ್ಖಾನೆ" ಯುಕ್ತಿ ಗಿರಾಕಿಗಳಿಗೆ ಬೇಕು ಬೇಕೆನಿಸಿದಂತೆ ಕಾವ್ಯಗಳನ್ನು ಎರಕ ಹೊಯ್ಯುವರು. ಜಂಗೀ ಸಂಗೀತ ಕುಸ್ತಿ, ಆರ್ಥಿಕ ಅನರ್ಥ ಯೋಜನೆ, ಸ್ವಯಂವರ, ಕುರುಕ್ಷೇತ್ರ, ಸೀತಾ-ರಾಮರಾಜ್ಯ, ಕಪ್ಪು ವ್ಯಾಪಾರ ವೆಂಬ ಉಳಿದ ನಾಟಕಗಳೂ ಸ್ವಾರಸ್ಯವಾಗಿವೆ. ಓದುಗರನ್ನು ಬಡಿದೆಬ್ಬಿಸುವ ಸಾಮರ್ಥ್ಯ ಎಷ್ಟೆಯವರ ಲೇಖನಿಗಿದೆ. ವಿನೋದಪೂರ್ಣ ವಿಡಂಬನೆಯೂ ಮಾತುಮಾತಿನಲ್ಲಿ ತುಳುಕುತ್ತಿದೆ. ಸ್ವಲ್ಪಮಟ್ಟಿಗೆ ಈ ನಾಟಕಗಳಲ್ಲಿ ಕುಂದು ಕಂಡುಬರುವುದಾದರೆ ಅಭಿನಯಕ್ಕೆ ಜನಪ್ರಿಯತೆಯನ್ನು ಗಳಿಸುವುದಕ್ಕೆ ಇವು ಅಷ್ಟು ಒಪ್ಪಲಾರವು ಎಂಬ ಸಂಗತಿ ಮಾತ್ರ. ಪುಸ್ತಕವನ್ನು ಓದಿದಾಗ ಬರುವ ಆನಂದ ಬಹುಶಃ ನಾಟಕ ಆಡಿ ತೋರಿಸಿದಾಗ ಲಭ್ಯವಾಗದೆಂದು ನಮಗನಿಸುತ್ತದೆ

ರಸಾಯನ

(ಕಥಾ ಸಂಗ್ರಹ)

ಬರೆದವರು: ಪುರಂದರ ರೈ. ಪ್ರಕಾಶಕರು: ನೂತನ ಪ್ರಕಾಶನ ಸಮಿತಿ, ಧಾರವಾಡ.

ಬರೆಯುವ ಚಪಲದಿಂದ ಲೇಖನಿ ಹಿಡಿದವ ಕತೆಗಳ ಸಂಗ್ರಹವಿದು. "ಮುಂದೇನು ದಾರಿ?" ಎಂಬ ಪ್ರಥಮ ಕಥೆಯೇ ಲೇಖಕರಿಗೆ ಪರಿಗಿಲ್ಲ ಮತ್ತು ಸ್ವಾಭಾವಿಕವಾಗಿ ಒಂದು ಘಟನೆಯನ್ನು ಚಿತ್ರಿಸುವಷ್ಟು ಶಕ್ತಿ ವಾಗಿಲ್ಲವೆಂಬುದನ್ನು ನಿರ್ದೇಶಿಸುತ್ತದೆ ಉಳಿದವುಗಳನ್ನಾದರೂ ಕತೆ ಎಂದು ಪರಿಗಣಿಸಲು ಸಾಧ್ಯವಿಲ್ಲ. ಎಲ್ಲವೂ ಅಪ್ರಬುದ್ಧ ಲೇಖನಿಯಿಂದ ಬಂದ ಬಾಲಿಶ ಬರಹ. ಹಾಗೆಂದು, ಲೇಖಕರು ಇನ್ನೂ ಚೆನ್ನಾಗಿ ಅಭ್ಯಾಸ ಮಾಡಿದಲ್ಲಿ, ಚೆಲುವಾದ ಕತೆಗಳನ್ನು ಬರೆಯಲಾರರೆಂದು ನಾವು ಆಶೆ ಇಟ್ಟುಕೊಳ್ಳಲು ಅಡ್ಡಿಯಿಲ್ಲ.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನು ಕೂಡಾ ಅಗ್ಗ ಯಾವಾಗಲೂ ಸಿದ್ಧವಾಗಿ ದೊರೆಯುತ್ತವೆ.

ಕಲ್ಯಾಣಜೆ ವ್ಯಾಸಾಚಾರ್ಯ, ರಥಬೀದಿ, ಉಡುಪಿ.

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು ಕೀಲು ನೋವು, ಪಕ್ಷವಾತ, ನೊಣದ ಕಡಿತ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಔಷಧದಂಗಡಿ, ಮುಂತಾದ ಎಲ್ಲ ಕಡೆ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್.

ಮದ್ರಾಸ್, ಬೊಂಬಾಯಿ ಮತ್ತು ಕಲ್ಕತ್ತ

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ವಿಪುಲ ಸ್ನಾನ, ಊಟ, ಉಪಹಾರ, ಟೈಲೆಟ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿ ತಿನಸು, ಇವುಗಳು ಬೇಕಾದ ವೇಳೆ

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ ವಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ಶರೀರ ಮತ್ತು ಪ್ರಕೃತಿಯ ಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಸುಧಾರಿತ ರಸಾಯನ ಅದರಿಂದ ಬಡವರ ಭಾಗ್ಯಶಾಲಿಗಳಿಗೂ ಲಭ್ಯವಾಗಿರುವುದು

ಇವರ ನವಜೀವಾಮೃತ ಎಂಬ ಸ್ಪೆಷಲ್ ರಸಾಯನ

ಹೆಚ್ಚಿನ ಮಾಹಿತಿಗೆ—ಡಾ। ಯಂ ಸಿ. ಶಾಸ್ತ್ರೀ, ಯಲ್. ಐ ಎಂ

ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಶಾಖೆ:—ಡಾ। ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

ಕ್ರಮ ಸಂಖ್ಯೆ 494/1952

ಶ್ರೀ ಸುಧೀಂದ್ರ ತೀರ್ಥ ಸ್ವಾಮಿಯವರ ಜನರಲ್ ಏಜಂಟರು ಶ್ರೀ ಸುಜ್ಞಾನೇಂದ್ರ ತೀರ್ಥ ಸ್ವಾಮಿಯವರು —ವಾದಿಯು

ಮತ್ತು

ಶೀನ ಪೂಜಾರಿ ವಗೈರೆ —ಪ್ರತಿವಾದಿಗಳು

ಇವರೊಳಗೆ

ಸದ್ರಿ ದಾವೆಯ 2ನೇ ಪ್ರತಿವಾದಿ. ಚೊಗ್ರು ಪೂಜಾರಿ. ಸೇಸಿ ಪೂಜಾರ್ತಿ ಮಗ.

5ನೇ ಪ್ರತಿವಾದಿಳು ವೆಂಕಮ್ಮ ಪೂಜಾರ್ತಿ. ಮಂಜು ಪೂಜಾರಿ ಮಗಳು.

ಕಾರ್ಕಳ ತಾಲ್ಲೂಕು ಮುಡಾರು ಮರ್ನಾಡು ಗ್ರಾಮದ ಹಿತ್ಲು ಎಂಬಲ್ಲಿರುವವರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ

ವಾದಿಯ ಮರದ ದೇವಂ ಭಂಡಾರಕ್ಕೆ ನಿಮ್ಮಿಂದ ಕೂಡಾ ಬರತಕ್ಕ ಮೂಲಗೇಣಿ ಬಾಕಿ ಬಗ್ಗೆ ಹಾಕಿದ ಮೇಲ್ಕಂಡ ದಾವೆಯು ತಾ 2-2-1953ನೇ ನೆಯ ತಾರೀಕಿನ ಬಗ್ಗೆ ಮುಂದೂಡಲಾಗಿರುತ್ತದೆ ಆ ದಿವಸ ನೀವು ಸ್ವತಹಾ ಯಾ ವಕೀಲರ ಮುಖಾಂತ್ರ ಸದ್ರಿ ಕೋರ್ಟಿಗೆ ಹಾಜರಾಗದೆ ಇದ್ದರೆ ನಿಮ್ಮ ಗೈರ ಹಾಜರಿಯಲ್ಲಿ ಸದ್ರಿ ದಾವೆಯು ತೀರ್ಮಾನಿಸಲ್ಪಡುವುದು ಎಂಬ ಸಂಗತಿ ಈ ಮೂಲಕ ತಿಳಿಯಪಡಿಸಲಾಗಿದೆ

ಕೋರ್ಟಿನ ಹುಕುಂ ಪ್ರಕಾರ

ಯಂ. ಎಸ್, ಅಧಿಕಾರಿ.

ವಾದಿಯ ಕಡೆ ವಕೀಲ್.

ಮೊಕ್ಕಾಂ ಕಾರ್ಕಳ, 8 1-1953.

All Secondary schools may Subscribe to "Navayuga" weekly Since it has been approved by the Director of Public Instruction, Madras.

ವಾರದ ಒಳಿತು ಕೆಡುಕುಗಳು

ತಾ. 15—1—53ರಿಂದ ತಾ. 21—1—53ರ ವರೆಗೆ.

ಮೇಷ—ನಿಮ್ಮ ದುರ್ದೈವವೀಗ ದೂರ ತೊಲಗಿತು. ಅದಕಾರಣದಿಂದಲೇ ನಿಮ್ಮ ಪ್ರಯತ್ನಕ್ಕಿಂತ ಅಧಿಕವಾದ ಫಲವನ್ನು ನೀವೀವಾರದಲ್ಲಿ ಪಡೆವಿರಿ ಮಿತ್ರ ವರ್ಗದವರ ಸಹಕಾರದಿಂದಾಗಿ ನಿಮ್ಮ ಅನೇಕ ಸಂಕಲ್ಪಗಳು ಕಾರ್ಯರೂಪಕ್ಕೆ ಬರಲಿವೆ. ಮಾತ್ರವಲ್ಲ ಸಮಾಜದಲ್ಲಿ ಒಳ್ಳೆ ಸ್ಥಾನಮಾನವನ್ನು ಪಡೆವಿರಿ. ಹೆಚ್ಚಿನ ಕಾಲವನ್ನು ಪ್ರಯಾಣದಲ್ಲಿ ಕಳೆವ ಪ್ರಸಂಗ ಬರಲಿದೆ. ಗೃಹ ತಾಪತ್ರಯಗಳು ಬಹುಮಟ್ಟಿಗೆ ದೂರವಾಗುವವು. ತಾ. 16ರಿಂದ 19ರ ವರೆಗಿನ ದಿನಗಳು ಸುಖಲಾಭಕಾರಿಗಳಾಗಿವೆ.

ವೃಷಭ— ಶ್ರಮಸಹಿಷ್ಣುಗಳಗೀವಾರವು ಸಾಕಷ್ಟು ಫಲದಾಯಿಯಾಗಿರುವುದು ಪ್ರಬಲರಾದ ಶತ್ರುಗಳೂ ಸಹ ಗೋಚರಕ್ಕೆ ಬರಲಾರರು ಆದಾಯಕ್ಕಿಂತ ದ್ವಿಗುಣ ಖರ್ಚುಗಳಾಗುವುದರಿಂದ ಆರ್ಥಿಕ ಸಮಸ್ಯೆಯಿಂದ ಮುಕ್ತರಾಗಲಾರಿರಿ. ವ್ಯಾಪಾರ ವ್ಯವಹಾರಗಳಲ್ಲಿ ಕೊಂಚ ಬಿಕ್ಕಟ್ಟು ತೋರೀತು ವಿನಾಕಾರಣ ಕಲಹವಾಗಲಿದೆ, ವಾರಾಂತ್ಯದ 4 ದಿನಗಳಲ್ಲಿ ಮಿತ್ರ ಸಮಾಗಮ ಸುಖನಿಜಯಗಳವೆ.

ಮಿಥುನ— ಭಾಗ್ಯಭಾಗ್ಯಗಳಲ್ಲಿರತಕ್ಕ ಸಂದಾಸುರಂಗಗಳು ನಿಮ್ಮ ಹಣದ ಚಿಂತೆಯನ್ನು ಪೂರೈಕರಿಸಲಿರುವರು, ಆದರೆ ಸಾಂಸಾರಿಕ ತಾಪತ್ರಯಗಳು ನಿಮ್ಮನ್ನು ಬಹುವಾಗಿ ಪೀಡಿಸಲಿವೆ. ಭೃತ್ಯವರ್ಗದವರು ಅವಿಧೇಯತೆಯನ್ನು ತೋರ್ಪಡಿಸುವರು. ಪರಸ್ಪರ ಕಲಹ ಕಚ್ಚಾಟಗಳು ಹೆಚ್ಚುವವು ದೇಹಾಲಸ್ಯ ದೌರ್ಬಲ್ಯಗಳು ಕಾಣಿಸುವವು ವಿದ್ಯಾರ್ಥಿಗಳಿಗೆ ಅಧ್ಯಯನ ಭಾಗಕ್ಕೆ ವಿಘ್ನ ವಿದ್ರೋಹಗಳು ಬರಲಿವೆ ತಾ. 15, 20, 21 ಈ ದಿನಗಳಲ್ಲಿ ಕೊಂಚ ನಿಮ್ಮದಿ ಸುಖಲಾಭಗಳು ಲಭಿಸುವವು.

ಕರ್ಕಟ—ವಿಪಕ್ಷಿಯರ ಉಪಟಳಗಳು ದಿನದಿಂದ ದಿನಕ್ಕೆ ಹೆಚ್ಚಲಿದೆ. ಆಕಾರಣ ನಿಮ್ಮ ಧೈರ್ಯ ಸಾಹಸಗಳು ಉಡುಗಿ ಮನಸ್ಸು ಬೆದರಿದ ಹುಲ್ಲೆಯಂತೆ ಅತೀವ ಚಂಚಲ ವಾಗುವದು. ಶ್ರಮಜೀವಿಗಳಿಗಂತೂ ದಿನಬಾಳುವೆಯು ಅತೀವ ದುಸ್ತರವೆನಿಸುವದು. ದೇಹದಲ್ಲೂ ಕಜ್ಜಿ ಹುಣ್ಣು ಗಾಯಾದಿಗಳು ಕಾಣಿಸಲಿವೆ. ಆದರೂ ವಾರಾದಿಯ 3 ದಿನಗಳಲ್ಲಿ ಬಂಧುಜನರಮತ್ತು ಮಿತ್ರ ವರ್ಗದವರ ಆಶ್ರಯದಿಂದಾಗಿ ಕೊಂಚ ಮನಶ್ಶಾಂತಿ ಧನಲಾಭ ಆರೋಗ್ಯಗಳು ಲಭಿಸುವವು.

ಸಿಂಹ— ಇತ್ತೀಚೆಗೆ ನಿಮ್ಮ ಅದೃಷ್ಟವು ಕೊಂಚ ಹ್ರಾಸವಾಗುತ್ತ ಬರುತ್ತಿದೆ. ಆದರೂ ಲಾಭನಷ್ಟ ಸುಖದುಃಖಗಳು ಸಮತೂಕದಲ್ಲಿ ಫಲಿಸುವವು. ಶ್ರಮಕ್ಕೆ ಸರಿಯಾದ ಫಲಾಪ್ತಿಯಾಗಲಿದೆ. ಪ್ರಬಲರಾದ ವಿರೋಧಿಗಳನ್ನು ಕೂಡಾ ನೀವಿಂದು ಜಯಿಸಲಿರುವಿರಿ ಆರೋಗ್ಯವು ತೃಪ್ತಿಕರವಿರುವುದು ಆದರೆ ಮನೆಯಲ್ಲಿ ಪರಸ್ಪರ ಬಿಕ್ಕಟ್ಟು ಕಾಣಿಸುವದು, ತಂದೆ ಮಕ್ಕಳೊಳು ಗಂಡ ಹೆಂಡಿರೊಳೂ ಭಿನ್ನಾಭಿಪ್ರಾಯಗಳಿಂದಾಗಿ ಕಲಹಕ್ಕವಕಾಶವುಂಟಾಗಲಿದೆ ತಾ. 16ರಿಂದ 19ರ ವರೆಗಿನ ದಿನಗಳು ಉತ್ತಮವಿವೆ.

ಕನ್ಯಾ—ಆದಾಯವೊಂದು ವೆಚ್ಚವೆರಡು ಎಂಬಂತಹ ಪರಿಸ್ಥಿತಿಯನ್ನು ನೀವೀವಾರದಲ್ಲಿ ಅನುಭವಿಸಬೇಕಾಗುವದು. ನೀವೆಷ್ಟೇ ದುಡಿದರೂ ದಿನಾಂತ್ಯದಲ್ಲಿ ರಿಕ್ತಹಸ್ತರಾಗುವಿರಿ, ದೇಹಾಲಸ್ಯ ಅನಿರೀಕ್ಷಿತ ಪ್ರವಾಸಗಳಿಂದ ನಿಮ್ಮ ದುಡಿಮೆಯ ಧನವು ವ್ಯರ್ಥ ವ್ಯಯವಾಗುವದು ವ್ಯಾಪಾರದಲ್ಲಿ ನಷ್ಟವಾದೀತು. ಆದರೂ ಉದ್ಯಮಶೀಲರಿಗೆ ವಾರಾಂತ್ಯದ 4 ದಿನಗಳಲ್ಲಿ ಮನದಿಚ್ಛೆಯು ಸಫಲವಾದೀತು.

ತುಲಾ— ಪರಿಸ್ಥಿತಿಯು ಹಿಂದಿನಂತಿರಲಾರದು ಕೈಗೊಂಡ ಕಾರ್ಯಗಳಿಗೆ ಹಲವಾರು ಎಡರು ತೊಡರುಗಳೂ ಬರಲಿವೆ, ಮಾತ್ರವಲ್ಲ ಹೆಚ್ಚಿನವು ವಿಫಲಗಳಾಗುವವು. ರಾಜಕೀಯರಂಗದಲ್ಲಿ ಫಲವು ವಿಪರೀತವಾದೀತು. ವಿಪಕ್ಷಿಗಳ ಭಯಕ್ಕವಕಾಶವಿದೆ. ಆದರೂ ಗುರುವೊಬ್ಬನ ಪೂರ್ಣದೃಷ್ಟಿಯು ನಿಮಗಿರುವುದರಿಂದ ಹೆಚ್ಚಿನ ಅನಿಷ್ಟಗಳೂ ದೂರವಾಗುವವು. ತಾ. 15, 20, 21 ಈ ದಿನಗಳು ಸ್ವಲ್ಪ ಅನುಕೂಲಗಳಾಗಿವೆ.

ವೃಶ್ಚಿಕ—ಇಂದೀಗ ಏಳೂವರೆ ಶನಿಯ ಕಾಟವು ಪ್ರಾರಂಭವಾದರೂ ಕೆಲದಿನಗಳ ಹಿಂದಿಗಿಂತ ಇಂದಿನ ಪರಿಸ್ಥಿತಿಯೇ ಉತ್ತಮವಾಗಿ ಕಾಣಿಸೀತು. ಕಷ್ಟಕ್ಕೆ ತಕ್ಕ ಫಲವು ಬಂಧುಮಿತ್ರರ ಸಹಕಾರಗಳೂ ಗೃಹಸುಖವೂ ಉತ್ತಮವಾಗಿರುವದು ಆದರೂ ಅನಿರೀಕ್ಷಿತವಾಗಿ ಪ್ರಾಪ್ತವಾಗತಕ್ಕ ಶೋಕ ಪರಂಪರೆಗಳಿಂದಾಗಿ ತಮ್ಮ ಮನಗಳಿಗೆ ಸುಖಶಾಂತಿಯಿರದು. ತಾ. 16, 17 ಈ ದಿನಗಳು ಸ್ವಲ್ಪ ಉತ್ತಮವಾಗುವವು.

ಧನು—ಸದ್ಯ ನಿಮಗಾವ ತೆರನಾದ ತಂಟೆತಕರಾರುಗಳಿಲ್ಲವೆಂದರೂ ತಪ್ಪಾಗದು. ನಿಮ್ಮ ಪ್ರತಿಯೊಂದು ಸಂಕಲ್ಪವೂ ನಿರ್ವಿಘ್ನದಿಂದ ನೆರವೇರಲಿದೆ. ಉದ್ಯೋಗದಲ್ಲಿ ದಿನೇ ದಿನೇ ಪ್ರಗತಿ ಆರ್ಥಿಕ ಸುಧಾರಣೆ ಜನತೆಯ ಬೆಂಬಲ ಇವುಗಳಿಂದ ಕೂಡಿದ ನಿಮಗೀ ದಿನಗಳೆದುದೇ ತಿಳಿಯಲೊಲ್ಲದು ಹಿಂದಿನ ಸಾಲವಗೈರೆಗಳಿಂದ ಮುಕ್ತರಾಗಿ ನೀವಿಂದು ನಿಶ್ಚಿಂತೆಯಿಂದಿರುವಿರಿ. ತಾ. 15, 20, 21 ಈ ದಿನಗಳು ಅತ್ಯುತ್ತಮವಿವೆ.

ಮಕರ—ಶಂಕರಾಚಾರ್ಯರನ್ನು ಹೊರತಾಗಿ ಮಿಕ್ಕೆಲ್ಲಾ ಗ್ರಹರೂ ನಿಮಗಿಂದು ಪ್ರತಿಕೂಲರಿರುವರು ಆ ಕಾರಣ ಇಂದಿನ ನಿಮ್ಮ ಬಯಕೆಗಳು ಗಗನಕುಸುಮದಂತೆ ವ್ಯರ್ಥವಾಗಲಿವೆ ಅಪ್ತೇಷ್ಟರ ವಿರಹವುಂಟಾಗುವದು, ಶ್ರಮಕ್ಕೆ ತಕ್ಕ ಫಲ ಲಭಿಸದು. ಹಣದ ಅಭಾವದಿಂದಾಗಿ ದಿನಯಾಪನೆಯು ದುಸ್ತರವಾಗುವದು. ಜನತೆಯಿಂದ ಸರ್ವತ್ರ ತಿರಸ್ಕಾರ ಕಲಹಗಳುಂಟಾಗುವವು. ಪಿತ್ತೋದ್ರೇಕ ದೋಷದಿಂದ ಆರೋಗ್ಯವು ಕೆಡಲಿದೆ. ತಾ. 16, 17, 20, 21 ಈ ದಿನಗಳು ಹೆಚ್ಚಿನ ಅನಿಷ್ಟಕಾರಿಗಳಾಗಲಾರವು.

ಕುಂಭ – ನೆನೆದ ಕಾರ್ಯಗಳು ಸಿದ್ಧಿಸಲಾರವು ಶತ್ರುಗಳ ಪೀಡೆಯು ದಿನೇ ದಿನೇ ಹೆಚ್ಚಲಿದೆ. ಸ್ಥಾನಚಲನೆಯು ಸಂಭವವಿದೆ. ವಾತದೋಷದಿಂದ ಅವಯವಗಳಲ್ಲಿ ನೋವು ಕಾಣಿಸುವದು ನೌಕರಿ ವರ್ಗದವರಿಗೂ ಶ್ರಮಜೀವಿಗಳಿಗೂ ಖರ್ಚಿಗೆ ತಕ್ಕಷ್ಟು ಧನ ಲಭಿಸಲಿದೆ. ಸ್ವಂತ ಉಪಭೋಗಕ್ಕೆ ಬೇಕಾದ ವಸ್ತು ಒಡವೆಗಳು ಅನಾಯಾಸದಿಂದ ಲಭಿಸುವವು. ತಾ 15, 18, 19 ಈ ದಿನಗಳು ಅನುಕೂಲವಿವೆ.

ಮೀನ – ಇಂದಿನ ಗ್ರಹಮಾನವು ನಿಮಗನುಕೂಲವಾಗಿರುವದು. ಹಿಂದಿನ ದುಃಖನಷ್ಟಗಳನ್ನು ನೀವಿಂದು ಮರೆಯಲಿರುವಿರಿ ಇಚ್ಛೆಯಂತೆ ಪ್ರತಿಯೊಂದು ಕಾರ್ಯವೂ ಜರಗಲಿದೆ. ಶ್ರಮಕ್ಕಿಂತಲೂ ಅಧಿಕವಾದ ಫಲವು ನಿಮಗಿಂದು ಲಭಿಸುವದು, ಜನತೆಯ ಬೆಂಬಲ ಬಂಧುಗಳ ಸಹಕಾರಗಳು ಉತ್ತಮವಿರುವುದರಿಂದ ಸರ್ವತ್ರ ವಿಜಯಿಗಳಾಗುವಿರಿ. ತಾ. 18, 19, ಬಿಟ್ಟು ಉಳಿದ ದಿನಗಳು ಇಷ್ಟದಾಯಿಗಳಾಗಿವೆ.

ತೃಪ್ತಿಕರವಾದ ವಸತಿ— ಹಿತಕರವಾದ ಊಟ— ರುಚಿಕರವಾದ ಉಪಾಹಾರ ಇವುಗಳಿಗೆ

ಆದರ್ಶ ನಿಲಯವೆಂದರೆ

ಫ್ರೆಡ್ ಲೇಂಡ್ಸ್

ಉಡುಪಿ.

ಯಾತ್ರಿಕರಿಗೂ ಪ್ರವಾಸಿಕರಿಗೂ ಸರ್ವ ಅನುಕೂಲವಾಗುವಂತೆ

ನಗರದ ಕೇಂದ್ರಭಾಗದಲ್ಲಿದೆ

ಮೂತುಸ್ರಾವ ನಿಂತಿತು

'ಕುವಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದಕಟ್ಟಿ ಮೂತ್ರಸ್ರಾವವಾಗುವುದು, ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದುವುದು. ಯಾವ ಬಾಧಕವೂಯಿಲ್ಲ. ಸಾಧಾರಣ ತುಂಬಿಗೆ ಮಾತ್ರ ಗುಣವಾಗಿದೆ- ಬೆಲೆ; ರೂ. 3-] ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8-] ವಿವರ ಪತ್ರಿಕೆಗಾಗಿ ಬರೆಯಿರಿ]

Mrs D. DEVEE, F. DS (N. J.)
Tollygunge CALCUTTA
ಪ್ರತಿನಿಧಿಗಳು; ಶಹಾಕಂಪೆನಿ, ಮಂಗಳೂರು

ರಕ್ಷಣೆಗೂ ಉಳಿತಾಯ ವ್ಯವಸ್ಥೆಗೂ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್.

ಸ್ಥಾಪನೆ: 1934. ಪ್ರಧಾನ ಕಚೇರಿ: ಮದ್ರಾಸು.

66¼ ಲಕ್ಷಕ್ಕೂ ಮಿಕ್ಕಿದ ಹೊಸ ವ್ಯವಹಾರ, **15** ಲಕ್ಷಕ್ಕೂ ಮಿಕ್ಕಿದ ಪ್ರೀಮಿಯಮ್ ಉತ್ಪತ್ತಿ, **45¾** ಲಕ್ಷಕ್ಕೂ ಮಿಕ್ಕಿದ ಜೀವವಿಮಾ ನಿಧಿ. **10¾** ಲಕ್ಷಕ್ಕೂ ಮಿಕ್ಕಿದ ಮೂಲಗಳು, ಸಾಧಾರಣ **3** ಕೋಟಿಯಷ್ಟು ಊರ್ಜಿತದಲ್ಲಿರುವ ವಹಿವಾಟು.

ಪ್ರಗತಿಪರವಾದ ಈ ಕಂಪೆನಿಯಲ್ಲಿ ಒಂದು ಪೊಲಿಸಿ ಇರುವುದು ಉತ್ತಮ ಜೀವನಾತಿ. ಅಂತೆಯೇ ಇದರ ಏಜನ್ಸಿ ಇರುವುದು ಚಲೋ ವ್ಯವಹಾರ ಸಾಧನ.

ಉತ್ಸಾಹಿ, ಜನಾನುರಣನೀಯ, ಸಮರ್ಥ ಸ್ತ್ರೀ ಪುರುಷರಿಂದ ಕಂಪೆನಿ ಪ್ರಾತಿನಿಧ್ಯದ ಬಗ್ಗೆ ಅರ್ಜಿಗಳು ಸ್ವಾಗತಾರ್ಹವು. ದಯಮಾಡಿ ಬರೆಯಿರಿ.—

ಜಿ. ಆರ್ ನಾಲ್ಕ, ಬ್ರಾಂಚ್ ಮೆನೇಜರ್,
ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು [ದ ಕ]

ಗಮನಿಸಿರಿ ! ಪರೀಕ್ಷಿಸಿ ನೋಡಿರಿ !! ಸುಖಪಡೆಯಿರಿ !!!

ನಿಮ್ಮ ಮೇಲ್ಮೆಗಾಗಿ ಲಕ್ಷಿಸಿರಿ-

ಹೆಚ್ಚು ಹೇಳುವುದರಿಂದೇನು? ಹಸಿವೇ ಇಲ್ಲದಿದ್ದರೂ, ಜೀರ್ಣಶಕ್ತಿ ಸಂಪೂರ್ಣವಾಗಿ ಹೋಗಿದ್ದರೂ, ದೇಹವು ಬಹಳವಾಗಿ ಕ್ಷೀಣಿಸಿ ಮೂಳೆ (ಎಲುಬು) ಚರ್ಮಗಳು ಕಾಣುವಹಾಗಿದ್ದರೂ, ಕಣ್ಣುಗುಳಿಗಳು ಬಿದ್ದಿದ್ದು ಹಿಂದಲೆಯನ್ನು ಹೋಗಿ ಸೇರಿದ್ದರೂ, ಬಲ, ಚಟುವಟಿಕೆ, ಧೈರ್ಯ ಇವುಗಳು ಇಲ್ಲದೆ ಹೋದರೂ, ಪುಕ್ಲವೂ, ಇಂದ್ರಿಯವೂ, ಪೂರ್ತಿಯಾಗಿ ನಿಂತು ಹೋಗಿದ್ದರೂ, ಮೇಹವ್ಯಾಧಿಗಳೇ ಮೊದಲಾದ ವ್ಯಾಧಿಗಳಿಂದ ನರಳುತ್ತಿದ್ದರೂ ನಮ್ಮ "ಮನ್ಮಥ ಚಿಂತಾಮಣಿ ಲೇಹ್ಯ" ಸೇವನೆಯಿಂದ ಸಂಪೂರ್ಣ ಸುಖ ದೊರೆಯುವದು ಅಲ್ಲದೆ ಆರೋಗ್ಯಭಾಗ್ಯವನ್ನೂ ಪಡೆಯಬಹುದು. ಇಂತಹ ಜೀವದಾಯಕವಾದ ಅಮೃತ ಸಮಾನವಾದ ರಸಾಯನವು

ಬೆಲೆ 20 ತೊಲಾ ಡಬ್ಬಿ ಒಂದಕ್ಕೆ ರೂ. **2-8-0**

ಪುಲಿಯೂರ್ ಮೆಡಿಕಲ್ ಹಾಲ್ ತಿರುವನಂತಪುರಂ— (TRIVANDRUM)

ಲಕ್ಷಾಂತರ ಜನರು ಗುಣಹೊಂದಿದ್ದಾರೆ!

ಸರ್ ಜೀವನ್ ಶಿಲಾಜಿತ್ ಲೇಹ

ಶಿಲಾಜಿತ್ ಹಿಮಾಲಯದಲ್ಲಿ ಔಷಧಿಗಳ ರಾಜ, ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅಗ್ನಿ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರಿ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯಂತ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೪ ದಿನದ ಲೇಹ್ಯ ರೂ ೫/೪, ೨೨ ದಿನದ ಲೇಹ್ಯ ರೂ ೩॥
(ಪೋಸ್ಟೇಜು ಮಾಫ)

ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿ.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. No. 543/1952.

ಪದ್ದು ಶೆಡ್ತಿ ಸಹಾ —ವಾದಿರು

ಮತ್ತು

ಕಿಟ್ಟ ಶೆಟ್ಟಿ ಕೂಡಾ —ಪ್ರತಿವಾದಿರು

ಇವರೊಳಗೆ

ಈ ಮೊಕದ್ದಮೆಯ ಪ್ರತಿವಾದಿರು 6 ಅಣ್ಣ ಶೆಟ್ಟಿ, 8 ನಾಕುಯಾನೆ ರಗುನಾಥ ಶೆಟ್ಟಿ ಬಾಕುಯಾನೆ ನರ್ಸ ಶೆಡ್ತಿಯ ಮಕ್ಕಳು, ಉಪ್ಪಿತಾಲ್ಲು ನಂದಿಕೂರು ಗ್ರಾಮದಲ್ಲಿರುವವರಿಗೆ ಈ ಮೂಲಕ ತಿಳಿಸುವದೇನಂದ್ರೆ

ವಾದಿರು ಹಿಸೆ ಬಗ್ಗೆ ಮಾಡಿದ ಮೇಲ್ಕಂಡ ದಾವಾ ನಿಮ್ಮ ಹಾಜರಿ ಬಗ್ಗೆ ತಾರೀಕು 5-2-1953ಕ್ಕೆ ಇಟ್ಟಿದೆ. ನೀವು ಸದ್ರಿ ದಿನ ಬೆಳಗ್ಗೆ ಮೇಲ್ಕಂಡ ಕೋರ್ಟಿನ ಮುಂದೆ 11 ಗಂಟೆಗೆ ಸ್ವತಹಾ ಯಾ ವಕೀಲು ದ್ವಾರಾ ಹಾಜರಾಗಿ ಉದಾಹರಿಸತಕ್ಕದ್ದು ತಪ್ಪಿದ್ದಲ್ಲಿ ನಿಮ್ಮನ್ನು ಏಕಪಕ್ಷೀಯವಾಗಿ ಸದ್ರಿ ದಾವಾ ತೀರ್ಮಾನಿಸಲಾದೀತು.

By order of the Court

N. M. Adyanthaya
Advocate for Pltffs.

Camp:- KARKALA
Dated 10—1—1953

ದಯಮಾಡಿ ನಿಮ್ಮ ಚಂದಾ ಹಣ ಕಳಿಸಿರಿ.

Edited, Printed & Published By K. H. Shetty at the Navayuga Press, Udipi, S. India.

Regd. No. 3618 | LICENC No. 31 Licensed to Post without Prepayment

22-1-1953

Estd. 1921 ಸ್ಥಾಪನೆ.
32ನೆಯ ವರ್ಷ

Founder: Sri A. B. Shetty,
Minister for Medical & Public Health

ನವಯುಗ
ಆರೋಗ್ಯ ಮಂತ್ರಿ
ಶ್ರೀ. ಎ. ಬಿ. ಶೆಟ್ಟರಿಂದ
ಸ್ಥಾಪಿತವಾದ ವಾರಪತ್ರಿಕೆ,
ಉಡುಪಿ, ದ. ಕನ್ನಡ.

ವಾ| ಚಂದಾ	5-12-0
ತಿಂಗಳಿಗೆ	3-0-0
ಬಿಡಿ ಪ್ರತಿಗೆ	0-2-0

ನವಯುಗ

ಅಂತರಂಗ
ಪುಸ್ತಕ ಪತ್ರಿಕೆಯು
ಉಪಯುಕ್ತವಾದ
86 ಪುಸ್ತಕಗಳು
ರೂ 20ಕ್ಕೆ ಸಿಗುತ್ತವೆ.
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ.

Vol 32
No 21

NAVAYUGA WEEKLY POST BOX NO. 22 UDIPI

ವರ್ಷ ೩೨
ವಾರ ೨೧

ಮಧುಪರ್ಕ

ಗೌತಮ ಬುದ್ಧ ರಾಜಗೃಹದ ಸಮೀಪ ನೆಲಸಿದ್ದ ಸಮಯ ಒಬ್ಬ ಬ್ರಾಹ್ಮಣನು ಅಲ್ಲಿಗೆ ಬಂದು ಭಗವಾನ್ ಬುದ್ಧನನ್ನು ಬಾಯಿಗೆ ಬಂದಂತೆ, ಬೈದು ನಿಂದಿಸಿದನು. ಬ್ರಾಹ್ಮಣನ ಸಂಬಂಧಿಕನೊಬ್ಬನು ಭಿಕ್ಷು ಸಂಘವನ್ನು ಸೇರಿದ್ದಕ್ಕೆ ಈ ರೀತಿಯ ಉಡುಗೊರೆ ಇತ್ತನು.

ಈ ಎಲ್ಲ ಬೈಗಳನ್ನು ಶಾಂತಭಾವದಿಂದ ಕೇಳಿಯಾದ ಮೇಲೆ ಬುದ್ಧದೇವರು "ಏನಪ್ಪಾ ನಿನ್ನಲ್ಲಿಗೆಂದಾದರೂ, ಅತಿಥಿಗಳು ಬರುವುದುಂಟೇ?" ಎಂದು ಪ್ರಶ್ನಿಸಿದರು,

"ಓಹೋ— ಬಹಳ ಜನ ಬರುವರು."

"ನೀನು ಅವರಿಗಾಗಿ ಸ್ವಾದಿಷ್ಟವಾದ ಭೋಜನವನ್ನು ಸಿದ್ಧಗೊಳಿಸುತ್ತಿಯಲ್ಲವೆ.?"

"ನಿಜ - ರುಚಿಯಾದ ಪಕ್ವಾನ್ನಗಳನ್ನು ಬಡಿಸುತ್ತೇನೆ."

"ಆದರೆ ಅತಿಥಿಗಳು ಅವನ್ನು ಕೈಯಿಂದ ಮುಟ್ಟಿ ಕೂಡಾ ನೋಡದಿದ್ದರೆ ಆ ಪಕ್ವಾನ್ನಗಳು ಯಾರಿಗೆ ಸೇರುವುವು?'

"ಅವು ನನ್ನದಾಗಿ. ನನಗೇ ಸೇರುವುವು'

"ಹಾಗಾದರೆ ತಮ್ಮಾ 'ನಿನ್ನ ಬೈಗಳನ್ನು ನಾನು ಉಪಯೋಗಿಸಲಾರೆ. ಏಕೆಂದರೆ ನಾನು ಯಾರಿಗೂ ಬೈಗಳಾಡಲಿಲ್ಲ-ಎಂದಮೇಲೆ ನಿನ್ನ ಬೈಗುಳ ಮಾಲೆ ನಿನ್ನ ಕೊರಳನ್ನೇ ಅಲಂಕರಿಸುವುದು. ಇದು ಸ್ವಾಭಾವಿಕ" ಎಂದು ಬುದ್ಧದೇವರು ನುಡಿದರು,

ಪರದೂಷಣೆ

ರಶಿಯನ್ ಗಾದೆಯೊಂದು "ಬಾವಿಯಲ್ಲಿ ಉಗುಳಬೇಡ ಏಕೆಂದರೆ, ನಾಳೆ ನಿನಗೆ ಅದೇ ಬಾವಿಯ ನೀರನ್ನು ಕುಡಿಯಬೇಕಾಗಿ ಬಂದೀತು" ಎಂದು ಹೇಳುತ್ತದೆ. ಇದು ಅಮೂಲ್ಯವಾದ ಹಿತನುಡಿ ಎಂಬುದನ್ನು ಒಪ್ಪಬೇಕು. ನಾವು ಈ ಬಾವಿ ನಮ್ಮದಲ್ಲವಲ್ಲವೆಂಬುದಾಗಿ, ಅಥವಾ ನಮಗೆ ಆಗದವರ ಮನೆಯ ಬಾವಿ ಇದೆಂದು ಬಗೆದು ಸೇಡು ತೀರಿಸಿಕೊಳ್ಳುವುದಕ್ಕಾಗಿ ಅಥವಾ ಇನ್ನಾವುದೇ ಕಾರಣದಿಂದ ಬಾವಿಯೊಳಗೆ ಉಗುಳಲಿಕ್ಕೇನೋ ಉಗುಳಿ ಬಿಡಬಹುದು; ಆದರೆ ಭವಿಷ್ಯದಲ್ಲಿ ಪ್ರಸಂಗಗಳು ವಿಪರ್ಯಾಸ ಹೊಂದಿ ನಾವು ಮಾಡಿದ್ದನ್ನು ನಾವೇ ಉಣುವ ಯೋಗ ಹೇಗೆ ಬರುವುದೆಂದು ಈಗಲೇ ಕಲ್ಪಿಸಿಕೊಳ್ಳಲಾರೆವು. ಆಗ ಹಿಂದಿನ ಘಟನೆಯನ್ನು ಸ್ಮರಿಸಿದರೆ ಅದೃಷ್ಟ ನಮ್ಮ ಸೇಡು ತೀರಿಸಿ ಕೊಂಡುದಕ್ಕೆ ನಾವೇ ವಿಸ್ಮಯಪಟ್ಟುಕೊಳ್ಳಬೇಕು.

ಜ್ಯೋತಿಷಶಾಸ್ತ್ರದ ತರ್ಕವು ಇದಕ್ಕೆ ಆಧಾರವಿರದೆ-ಅನುದಿನ ನಮ್ಮ ಅನುಭವಕ್ಕೆ ಬರುವ ವಿದ್ಯಮಾನಗಳೇ ಈ ಗಾದೆ ಮಾತಿಗೆ ಶಿಲಹದಿ. ಎಂಥ ಉತ್ತಮ ವಸ್ತುವನ್ನಾದರೂ ಅತಿಯಾಗಿ ಪ್ರೀತಿಸಿದರೆ ಅದಕ್ಕಾಗಿ ಕೊನೆಗೊಮ್ಮೆ ಪಶ್ಚಾತ್ತಾಪಪಡಲೇ ಬೇಕಾಗಿ ಬರುವುದು ಪ್ರಕೃತಿನಿಯಮ. ಉಚ್ಚಧ್ಯೇಯವನ್ನು ಕಣ್ಣು ಮುಂದಿಟ್ಟು ಕೊಂಡು ನಾವು ಇಂದು ಒಂದು ಮಾತನ್ನು ಸತ್ಯವೆಂದು ಅಗತ್ಯವೆಂದು ಕಲ್ಲಿನಲ್ಲಿ ಕೊರೆದು ಇಡಬಹುದು, ಆದರೆ ನಾಳೆ ನಮಗೇನೆ ಅವಮಾತು ತಿರುಗಿ ಬೀಳುವುದು ಅಪರೂಪವಲ್ಲ. ಉದಾಹರಣೆಗೆ ವಿದೇಶೀಯರ ಸರಕಾರ ನಮ್ಮ ಮೇಲೆ ಅಧಿಕಾರ ನಡೆಸುತ್ತಿದ್ದಾಗ ಗಾಂಧೀಜಿ ಅಸಹಕಾರ ಆಂದೋಲನವನ್ನೂ, ಸತ್ಯಾಗ್ರಹವನ್ನೂ ಕೈಗೊಂಡರು. ಆದರೆ ಇಂದಿಗೂ ನಮ್ಮ ಮನಃ ಪ್ರವೃತ್ತಿ ರಾಜಕೀಯ ಬದಲಾವಣೆಯೊಂದಿಗೆ ಹೊಂದಿ ಹೋಗುವಷ್ಟು ಪಕ್ವವಾಗಿಲ್ಲವೆಂದೆನ್ನಿಸುತ್ತದೆ. ಹಿಂದೆ ನಾವು ವಿದೇಶೀಯರನ್ನು ಓಡಿಸಲು ಬಳಸಿದ ಉಪಾಯಗಳನ್ನೇ ಇಂದು ಸ್ವಾರ್ಥ ಹಾಗೂ ಸಂಕುಚಿತ ಉದ್ದೇಶಗಳಿಗೆ ಉಪಯೋಗಿಸುತ್ತೇವೆ. ಇದಕ್ಕೆ ಹೇಳಿದೆ ನಾಳೆ ಏನಾಗುವುದೋ ಅದನ್ನು ನಾವು ಇಂದು ಹೇಗೆ ಬಣ್ಣಿಸಬಲ್ಲೆವು?

ಮೊನ್ನೆ ಮೊನ್ನೆಯ ವರೆಗೆ ಕಾಂಗ್ರೆಸಿಗರು; ಈಗ ಪ್ರಜಾ ಪಾರ್ಟಿಯವರು; ಅಥವಾ ಇನ್ನೇ ಯಾವರೋ ಆಗಿ, ತಮಗೆ ಖ್ಯಾತಿ ತಂದ, ಕಾಂಗ್ರೆಸನ್ನೇ ದೂಷಿಸುವುದು ತಾವು ಅತ್ಯಂತ ಪ್ರಿಯವೆಂದು ಅಪ್ಪಿಕೊಂಡ ತತ್ವಗಳನ್ನು ತಿರಸ್ಕರಿಸದೆ ಜರೆಯುವರು ಇದು ರಾಜಕೀಯದ ಮಾತಾಯಿತು ಸಾಮಾಜಿಕ ಜೀವನದಲ್ಲಿಯೂ ಇಂಥ ಒಂದು ನಡೆಯಿನ್ನೊಂದು ನುಡಿಗೂ ನಡೆಗೂ ತಾಳಮೇಳವಿಲ್ಲ. ಹಿಂದಾ ಸರು ಹೇಳಿದರೆನ್ನುವ ಗಾದೆಯಂತೆ, ಹೇಳುವುದು ಕೇಳುವವರಿಗೆ ಹೊರತು ತಾನೂ ಅದರಂತೆ ನಡೆಯಬೇಕು, ನಡೆದರೇನೆ ತನ್ನ ಮಾತಿಗೆ ಬೆಲೆ ಎಂಬ ಅರಿವಿಲ್ಲ.

ಇಂಥ ಪರಿಸ್ಥಿತಿಯಲ್ಲಿ-ನಿತ್ಯವೂ ಕ್ಷಣ ಕ್ಷಣವೂ ಹೊಸ ರೂಪವನ್ನು ಧರಿಸಿ ಬದಲಾಗುವ ಗಳಿಗೆಯಲ್ಲಿ-ನಮ್ಮ ನಿಲುವು ಯೆಂತಿರಬೇಕು? ನಮ್ಮಿಂದ ಇತರರಿಗೆ ಕೇಡುಂಟಾಗಬಾರದು ಎಂದರೇನೆ, ಇತರರು ನಮಗೆ ಕೆಡುಕೆಣಿಸಲಾಗದೆಂದು ಹೇಳುವ ನೈತಿಕ ಧೈರ್ಯ ಹಾಗೂ ಅಧಿಕಾರ ದೊರೆಯುತ್ತದೆ. ನಾವು ಇತರರ ತೇಜೋವಧೆ ಮಾಡಿದಲ್ಲಿ— ನಮ್ಮಿಂದ ಅಭಿಮಾನಕ್ಕೆ ದಕ್ಕೆ ಹೊಂದಿದವರು ಮಾತ್ರ ಸುಮ್ಮನಿರಬೇಕೆಂದು ನಾವು ಹೇಳುವಂತಿಲ್ಲ. ಯೇಸು ಹೇಳಿದಂತೆ- "ನಿನ್ನನ್ನು ಇತರರು ಹೇಗೆ ಕಾಣಬೇಕೆಂದು ಬಯಸುತ್ತೀಯೋ, ನೀನು ಇತರರನ್ನು ಹಾಗೆಯೇ ನೋಡುವುದು ಶ್ರೇಯಸ್ಕರ."

ಹೀಗಿದ್ದರೂ ಮಹಾಪುರುಷರು ಇತರರ ನಿಂದೆ ದೂಷಣೆಗಳನ್ನು ಮನಸ್ಸಿಗೆ ತೆಗೆದುಕೊಳ್ಳುವುದಿಲ್ಲ. ಅವರವನ್ನು ಸ್ವೀಕರಿಸದೆ ಬಿಟ್ಟುಬಿಡುವರು. ಕಾಂಗ್ರೆಸಿನ ತತ್ವಗಳು ಚೈತನ್ಯವನ್ನು ಕಳೆದುಕೊಂಡಿವೆಯೆಂದೂ, ಕಾಂಗ್ರೆಸು ಸತ್ವಹೀನವಾಗಿದೆಯೆಂದೂ ದೂರುವವರು ನೂರಾರು ಜನ ಇರಬಹುದು: ಆದರೆ ಕಾಂಗ್ರೆಸಿನ ಘನತೆ-ಗೌರವಕ್ಕೆ ಇದರಿಂದ ವಿಶೇಷ ಹಾನಿಯಿಲ್ಲ. ಒಳಿತು-ಕೆಡುಕುಗಳೆರಡರ ಪೂರ್ಣ ಕಲ್ಪನೆಯ ಕೂಡಿ ಶ್ರೇಯೋಮಾರ್ಗವನ್ನು ಕಾಂಗ್ರೆಸು ಅರಿಸಿ ಮುನ್ನಡೆ ಇಟ್ಟಿದೆ. ಈಗಾಗಲೇ ಹಲವು ಮೈಲು ನಡೆದೂ ಆಗಿದೆ. ಈ ಮಹಾಸಂಸ್ಥೆ ತನ್ನ ಉದಾತ್ತ ಪರಂಪರೆಯನ್ನು ಕಾಯ್ದುಕೊಂಡು ಬಾಳುವುದೇ ನಿಶ್ಚಯ. ಆದರೆ ಇಂದು ಕಾಂಗ್ರೆಸನ್ನು ದೂರುವ ಪಕ್ಷಗಳು ತಾವು ಅಧಿಕಾರ ಸ್ಥಾನದಲ್ಲಿ ಬಂದರೆ ಆಗ ತಮ್ಮನ್ನು ತೆಗಳಲು ಹುಟ್ಟುವ ಪಕ್ಷಗಳ ಸಂಖ್ಯೆಯನ್ನು ಎಣಿಸಿದರೆ ಒಳಿತಲ್ಲವೇ?

ಓಂ ತತ್ಸತ್.

ನವಯುಗ
ಪ್ರಜಾಪ್ರಭುತ್ವ ದಿನೋತ್ಸವ ಸಂಚಿಕೆಯು

ಸುಪ್ರಸಿದ್ಧ ಲೇಖಕರ ಲೇಖನಗಳಿಂದ
ಹಲವಾರು ಚಿತ್ರಗಳಿಂದ ನೂರಾರು
ಪುಟಗಳಿಂದ ಕೂಡಿ ಅಚ್ಚುಕಟ್ಟಾಗಿ
ಹೊರಡಲಿದೆ.

ವಿಶಾಲವಾಗಿ ಪ್ರಚಾರವಾಗಲಿರುವ
ಈ ಸಂಚಿಕೆಯು ಜಾಹೀರಾತಿಗೆ
ಉತ್ತಮ ಸಾಧನವಾಗಿದೆ.

Advertise in
Navayuga Republic Day Special

ಗೀತೆಂಪು ಕೈಗನ್ನಡಿ
ನವಯುಗ ಪ್ರೆಸ್, ಉಡುಪಿ.

All Secondary Schools may subscribe to "Navayuga" weekly Since it has been approved by the Director of Public Instruction, Madras.

ಮಹಾಪುರುಷರ ವಿಫಲ ಮನೋರಥಗಳು

ಕರ್ಮಠ ಬಾಳ್ವೆಗೆ ಮಧುರಸ್ವಪ್ನದ ಅಮೃತ ಸೇಚನ

ಸರ್ವಾನಂದಭರಿತವಾದ ಸ್ವರ್ಗದಲ್ಲೂ ನಾನು ಖಿನ್ನನಿರುವುದನ್ನು ಭಗವಂತನು ನೋಡಿ ತುಂಬ ಸ್ನೇಹಾರ್ದ್ರ ಭಾವದಿಂದ ನನ್ನನ್ನು ಕೇಳಿದ–"ನೀನಿಷ್ಟು ಉದಾಸೀನನೇಕಿದ್ದೀಯಾ? ಸ್ವರ್ಗದಲ್ಲಿ ನಿನಗೇನು ಕಡಿಮೆ. ಎನಿಸಿತು?"

'ನಿಜ ಪ್ರಭೂ. ನಾನೊಂದು ಅಮೂಲ್ಯ ನಿಧಿಯನ್ನು ಭೂಮಿಯಲ್ಲಿಯೇ ಬಿಟ್ಟು ಬಂದಿರುವೆ ಅದರ ಮುಂದೆ ಸ್ವರ್ಗದ ಅನಂತ ಸುಖವೂ ಸ್ವಾದಿಷ್ಟವಾಗಲೊಲ್ಲದು'

'ಏನದು ಆ ನಿನ್ನ ನಿಧಿ?" ಎಂದು ವಿಧಾತ ಬಹಳ ಆತುರದಿಂದ ಕೇಳಿದ.

"ಏಕಾಂತದಲ್ಲಿ ಕಂಡ ಕೆಲವು ವಿಫಲ ಸ್ವಪ್ನಗಳು" ಎಂದು ನಾನುತ್ತರಿಸಿದೆ.

ನಾಗೋಚೀ.

— ೧ —

"– ದೇವರೇ ನಾನೊಬ್ಬ ವೈಮಾನಿಕನಿರುತಿದ್ದರೆ! ನಿರ್ಮಾಣದಿಂದ ತೊಡಗಿ ಇಂದಿನವರೆಗೆ ಆದರಲ್ಲಾದ ಎಲ್ಲ ಸಂಶೋಧನೆಗಳಲ್ಲೂ ನನ್ನ ಅಭಿರುಚಿ ಇದ್ದೇ ಇತ್ತು. ನಾನಿನ್ನೂ ವಿದ್ಯಾರ್ಥಿಯಾಗಿದ್ದಾಗ, ೧೯೦೭ರಷ್ಟು ಪೂರ್ವದಲ್ಲಿಯೇ ವಾಯು ಸಂಚಾರದ ಕುರಿತೊಂದು ಪ್ರಬಂಧ ಬರೆದಿದ್ದೆ. ಈ ಕಾಲದಲ್ಲಿಯೇ ರಾಯಟ್ ಸಹೋದರರು ಇಂಗ್ಲಿಷ್ ಕಡಲ್ಗಾಲುವೆಯನ್ನು ವಿಮಾನದಲ್ಲಿ ಪಾರಾಗ ಲೆತ್ನಿಸಿದ್ದರು. ಅವರ ಸಾಹಸದಿಂದ ನಾನು ತುಂಬ ಪ್ರಭಾವಿತನಾಗಿದ್ದೆ.

"ನಾನಾಗ ನನ್ನ ತಂದೆಯವರಿಗೊಂದು ಪತ್ರ ಬರೆದಿದ್ದುದು ನನಗೆ ಇನ್ನೂ ನೆನಪಿದೆ. ನಾನಾಗ ಇಂಗ್ಲೆಂಡಿನಲ್ಲಿ ಮತ್ತು ತಂದೆಯವರು ಭಾರತದಲ್ಲಿ ಇದ್ದರು. ಆ ಪತ್ರದಲ್ಲಿ ನಾನು ಆದಷ್ಟು ಬೇಗನೇ ಭಾರತಕ್ಕೆ ವಿಮಾನ ಮೂಲಕ ಬರುವೆನೆಂದಿದೆ.

"ಸರ್ವ ಪ್ರಥಮವಾಗಿ ಜೆಪ್ಲಿನ್ ಬರ್ಲಿನ್ ನಗರದ ಮೇಲೆ ಸುತ್ತಾಡಿದಾಗ ನಾನೂ ಅಗ ಅಲ್ಲಿದ್ದೆ. ಆಗಿನ ಎಲ್ಲ ಘಟನೆಯೂ ನನ್ನ ಸ್ಮರಣೆಯಲ್ಲಿದೆ ಮತ್ತು ನನ್ನ ನೆನೆವಾಗಲೆಲ್ಲ ಅಯ್ಯೋ, ನಾನು ವೈಮಾನಿಕನಿರುತಿದ್ದರೆ – ಎಂದೆನಿಸುತ್ತದೆ.... ಜೀವನದ ಮುಂದಗತಿ ಮತ್ತವರ ಉಪಕ್ರೇಷೆಯಲ್ಲಿ ನನ್ನ ಮನಸ್ಸು ಮುದುಡಿದಾಗಲೆಲ್ಲ ನಾನು ಒಡನೆಯೇ ಮೇಘಮಾಲೆಯ ಮೇಲೆ ಸಂಚರಿಸಲು ಹವಣಿಸಿ ಹಾರುತ್ತೇನೆ.... ಜೀವನ ಮರಣದ ಸೀಮಾರೇಖೆಯಾದ ನಭೋಮಂಡಲದಲ್ಲಿ ನಾನು ಒಬ್ಬೊ ಬಿದ್ದೇಳುವಾಗ, ಓರ್ವ ಕವಿಯು ಹಾಡಿದ ಆ ಗೀತವನ್ನು ಗುಣ್ಗುಣಿಸುತ್ತಾ ಮೌನವನ್ನು ಮುರಿಯುತ್ತೇನೆ.

"ಕಾಶ್ಮೀರದ ಹಿಮಾಚ್ಛಾದಿತ ಶೃಂಗಗಳ ಕಡೆಗೂ ನನ್ನ ಒಲವು ಬಹಳ. ಆ ಶಿಖರಗಳನ್ನು ಆರೋಹಿಸುವ ವಿಚಾರ ನಾನೆಷ್ಟು ಸಲ ಮಾಡಿರುವೆನೋ ತಿಳಿಯದು! ಎಲ್ಲ ಕೆಲಸವನ್ನೂ ಬಿಟ್ಟು ಪ್ರಕೃತಿಯ ಆ ಉದಾತ್ತ ನರ್ತನದೆಡೆಗೆ ಓಡಿಹೋಗಲು ನನ್ನ ಮನಸ್ಸು ಹೇಳುತ್ತದೆ ಎಂಬುದರಿಂದಲೇ ಆನಂದ ಕಾಂಡಿಲಿನಾಗುತ್ತೇನೆ' ಆದರೆ ನನ್ನ ಆನಂದಮಯ ಸುಖಸ್ವಪ್ನವು ಎಂದಿಗೂ ಪೂರ್ಣವಾಗಲೊಲ್ಲದು!

"ರಾಜಕೀಯ ಮತ್ತು ದೇಶದ ಶಾಸನ ಕಾರ್ಯ ನಿರ್ವಹಿಸುವಲ್ಲಿ ನನ್ನ ಕೈಕಾಲುಗಳು ದೃಢತರವಾಗುತ್ತಾ ಬರುತ್ತಿವೆ. ನನಗೆ ನೂರಾರು ಕೆಲಸಗಳನ್ನು ಮಾಡಬೇಕಾಗುತ್ತದೆ. ಅನೇಕ ಕಡೆ ಓಡಾಡಬೇಕಾಗುತ್ತದೆ. ಆದರೆ ನನಗೀಪ್ರದು ಇಷ್ಟವೋ ಅದಕ್ಕೆ ತೀರ ಭಿನ್ನವಾಗಿ ಇವೆಲ್ಲ ಇವೆ.

"......ಈಗ ನಾನು ನೋಡುತ್ತಿರುವುದೇನನ್ನು? ಒಂದೆಡೆ ನನ್ನ ಸುಖ ಸ್ವಪ್ನವಿದೆ. ಇನ್ನೊಂದೆಡೆ ಗಡಿಯಾರದ ಮುಳ್ಳುಗಳು ನಿಲ್ಲದೆ ಚಲಿಸುತ್ತಿವೆ. ಯೌವನವು ಸಂದುಹೋಗಿದೆ. ವೃದ್ಧಾಪ್ಯದಲ್ಲಿ ಹೆಜ್ಜೆ ಇಡುತಿದ್ದೇನೆ. ಎಂತಲೇ, ನನ್ನ ಕೈಲಾಸ ಹಾಗೂ ಮಾನಸ ಸರೋವರಗಳ ದರ್ಶನದ ಮಧುರ ಕಲ್ಪನೆಗೊಂದು ಮೂರ್ತಸ್ವರೂಪವನ್ನು ಕೊಡಲಾಗದಂತೆ ವೃದ್ಧಾಪ್ಯವು ನನ್ನ ರಕ್ತವನ್ನು ತಣಿಸಿ, ಹೆಪ್ಪುಗಟ್ಟಿಸುವುದೇ ಎಂದು ಭಯಪಡುತ್ತೇನೆ...."

— ೨ —

ಅತೃಪ್ತ ಆಕಾಂಕ್ಷೆ ಮತ್ತು ಪಶ್ಚಾತ್ತಾಪದಿಂದ ಉತ್ಪನ್ನವಾದ ದುಃಖದಿಂದ ಕೂಡಿದ ಮೇಲಿನ ಸಾಲುಗಳು ಯಾರವೆಂದು ನೀವು ಊಹಿಸಿದಿರಾ? ಭಾರತದ ಪ್ರಧಾನಿ ಜನನಾಯಕ ನೆಹರೂರದು! ಈ ವಾಕ್ಯಗಳನ್ನು ಓದಿದಂತೆಲ್ಲ ಕರ್ಮಕ್ಷೇತ್ರದಲ್ಲಿ ನಿರಂತರ ಪ್ರವಿಸುವ ರಾಜನೀತಿಜ್ಞ ನೆಹರೂಗಿಂತ ತೀರ ಭಿನ್ನವಾದ ವ್ಯಕ್ತಿತ್ವವನ್ನು ಬಾಲ್ಯದಿಂದಲೂ ಪೋಷಿಸಿಕೊಂಡು ನೆಹರೂ ಬಂದಿರುವರಲ್ಲಾ ಎಂದೆನಿಸುತ್ತದೆ. ನಿಜ ಹೇಳಬೇಕೆಂದರೆ ನೆಹರೂಜೀಯ ಈಗಿನ ಶುಷ್ಕ ಹಾಗೂ ಕರ್ಮಠ ವ್ಯಕ್ತಿತ್ವದ ಸುಂದರಪೂರ್ತಿಯಾಗಿ ಈ ಭಾವ ಮಾಧುರ್ಯದಿಂದ ಓತಪ್ರೋತವಾದ ಕವಿತೆಯ ರೂಪದಲ್ಲಿ ಈ ಸಾಲುಗಳು ಇವೆ. ನೆಹರೂಗೆ ಇವು ಅದಮ್ಯ ಉತ್ಸಾಹವನ್ನೂ ಅಗಾಧ ಶಕ್ತಿಯನ್ನೂ ನೀಡುತ್ತವೆ. ನೆಹರೂರ ಈ ಭಾವನಾ ಕವಿತೆಯು ಬಾಹ್ಯ ಆವಶ್ಯಕತೆಗಳ ಒತ್ತಾಟದಿಂದ ನುಗ್ಗುನುರಿಯಾಗಿದೆಯಲ್ಲ ಎಂದೆಣಿಸುತ್ತದೆ. ನಮಗೆ ಅದೃಷ್ಟವಾದದಲ್ಲಿ ನಂಬಿಗೆ ಇರಲಿ ಬಿಡಲಿ ನೆಹರೂರ ಜೀವನದ ಈ ಪ್ರಸಂಗಗಳು ಕಣ್ಣಮುಂದೆ ಕುಣಿದಾಗಲೆಲ್ಲ ನಾವು ಏನಿದ್ದುದು ಏನಾಯಿತಲ್ಲ ಎಂದು ವಿಸ್ಮಯ ವಿಮೂಢರಾಗುವುದೇನು ತಪ್ಪುವುದಿಲ್ಲ, ಅಲ್ಲವೆ?

ಶೇಕ್ಸ್‌ಪಿಯರ್ ಕವಿಯು "ಹನ್ನೆರಡನೇ ರಾತ್ರಿ" ಎಂಬ ನಾಟಕದ ನಾಯಕನ ನೆನಪು ಇಲ್ಲಿ ಸ್ವಾಭಾವಿಕವಾಗಿ ಬರುತ್ತದೆ. ಜೀವನದ ಈ ಬಗೆಯ ಪ್ರವಂಚನೆಯ ಕೊಳ್ಳೆಯಾಗುವ ದುರಾದೃಷ್ಟ ಅವರ ನಾಯಕನಿಗೂ ಬಂದಿತ್ತು. ಅ ಸಮಯ ಅವನು 'ನಾನೇನಿರುವೆನೋ ಅದು ಮಾತ್ರ ಅಲ್ಲ" ಎಂದಿದ್ದ!

ಮನುಷ್ಯನ ಅಂತರ್ಯದಲ್ಲಿ ಹತ್ತಿಕ್ಕಲ್ಪಟ್ಟ ಅವಿಕಸಿತ ವ್ಯಕ್ತಿತ್ವವು ನಿಜವಾ[ಗಿ] ಜೀವನದಲ್ಲಿನ ಕೊರತೆಗಳ ನಿವಾರಣೆಗಾ[ಗಿ] ಪ್ರಕೃತಿದತ್ತವಾದ ಸಂಜೀವಿನಿಯಾಗಿದೆ ಜೀವನದ ಪ್ರಾಣ ಸ್ರೋತವು ತನ್ನೀ ಶಕ್ತಿಸಾಮರ್ಥ್ಯಗಳಿಂದ ಗತಿಶೀಲ ಗೊ[ಂ]ಡಾಗ ತನ್ನ ಪ್ರವಾಹದಿಂದ ಅನೇಕ ಮಾ[]ರ್ಗಗಳನ್ನದು ಸೃಷ್ಟಿಸುತ್ತದೆ. ಯಾ[] ಮಾರ್ಗವು ಸುಲಭ ಹಾಗೂ ಅನಾಯಾ[]ಸದಲ್ಲಿ ರೂಪುಗೊಳ್ಳುತ್ತದೋ ಅದರಲ್ಲಿ[] ಯೇ ಪೂರ್ಣಾಕಾರದಲ್ಲಿ ತುಂಬಿ ತುಳ[ುಕಿ] ಹರಿಯುತ್ತದೆ. ಅಪರಿಮಿತ ಶಕ್ತಿಕ್ಷಮ[ತೆ]ಗಳಿಂದ ತುಂಬಿಕೊಂಡು ಜನ್ಮವೆತ್ತಿ[ದ] ಎಲ್ಲ ಮಹಾ ಪುರುಷರ ಜೀವನವೂ ಇ[ದ]ಕ್ಕೆ ಸಾಕ್ಷಿಯಾಗಿದೆ. ಮಹಾಮೇಧಾ[ವಿ]ಗಳ ಮೇಲೆ ವಿಧಾತನು ಮಾಡುವ ಈ ತೆರನಾದ ಅನ್ಯಾಯದಿಂದ ರೂಪಿತಗೊಂ[]ಡೇ ಇರಬೇಕು ಕಾರ್ಲಾಯಿ[ಲ]ನು ಅತ್ಯಂತ ನೋವಿನಿಂ[ದ] ಹೀಗೆಂದನು– "ಭಗವಂತನು ಶಾ[]ರೂಪದಲ್ಲಿ ಕೊಟ್ಟಿರುವ ಈ ವರದಾನವ[] ಕ್ರೂರತ್ವದಲ್ಲಿ ಫಲೀಭೂತ ಹೊಂದಿರು[ವುದ]ನ್ನು ಕಂಡಾಗ ಯಾರಿಗೂ ಮನಸ್ಸಿ[ಗೆ] ನೋವಾಗದಿರದು —ಭಾಗ್ಯವಂತನಿಗೆ []ನ್ನ ಸುಖಸ್ವಪ್ನಗಳನ್ನು ಎಡಗಾಲಿನಿಂ[ದ] ಒದ್ದು, ನುಚ್ಚುನುರಿಯಾಗಿ ಮಾಡಿಯೇ[] ಉತ್ಕರ್ಷದ ಮೆಟ್ಟಿಲನ್ನೇರಬೇಕಾಗುತ್ತ[ದೆ]"

— ೩ —

ವಿಶ್ವಕವಿ ರವೀಂದ್ರನಾಥ ಠಾಕೂರ[ರು] ಒಂದು ಮಧುರ ಸ್ವಪ್ನವನ್ನು ನೋಡಿ[ದ್ದರು]. ಹದು ತಮ್ಮ ವಿದ್ಯಾಭ್ಯಾಸವನ್ನು ಮ[ು]ಗಿಸಿದ ಬಳಿಕ ವಿರಾಮವನ್ನು ಕಳೆಯಲೆಂದು ಅವರು ಉತ್ತರ ಪ್ರದೇಶಕ್ಕೆ ಬಂದರ[ು]. ಅವರು ಉಳಕೊಂಡಲ್ಲಿಗೆ ಕಲ್ಕತ್ತೆಯಿಂ[ದ] ಪೇಶಾವರದ ವರೆಗೆ ಸಾಗುವ 'ಗ್ರೇಟ್ ಟ್ರಂಕ್ ರೋಡ್' ಬಹ[ಳ] ಸಮೀಪವಿತ್ತು. ಅದರಲ್ಲಿ ಎತ್ತ[ು], ಒಂಟೆ, ಆನೆ, ಕುದುರೆ ಇನ್ನೂ ಅನೇ[ಕ] ವಾಹನಗಳು ಓಡಾಡುತಿದ್ದುವು. [] ಮಾರ್ಗವು ಇತಿಹಾಸದ ಎಷ್ಟು ಏರುತಗ[್ಗು]ಗಳನ್ನು ನೋಡಿದೆಯೋ! ರವೀಂದ್ರರ ಬಾ[]ಲ್ಯದ ನಿಸ್ಸಂಕೋಚ ಮನಸ್ಸಿನಲ್ಲಿ ಅನೇ[ಕ] ಸ್ವಪ್ನಗಳು ಇದನ್ನು ಕಂಡು ಉದ್ಭವಿಸಿದವು. ಎತ್ತಿನ ಗಾಡಿಯಲ್ಲಿ ಕುಳಿತು ಗಾಜಿಪುರದಿಂದ ಪೇಶಾವರಕ್ಕೆ ಪ್ರಯಾಣಿ[ಸ]ಬೇಕೆಂದವರ ಹಗಲು ಗನಸು ಕಟ್ಟಿದರು. ಆದರೇನು? ಈ ಸಂಗತಿ ಅವರ ತಂದೆ[ಗೆ] ತಿಳಿದುದೇ ತಡ– ಒಡನೆಯೇ ಮನೆ[ಗೆ] ರವೀಂದ್ರರನ್ನು ಬರಮಾಡಿ ಕೊಂಡರು. ಹೊರತು ಆಸೆಯೇನು ಪೂರ್ಣವಾಗಲಿ[ಲ್ಲ]. ಮುಂದೆ ವಿಶ್ವಕವಿಯಾಗಿ ಖ್ಯಾತಿವೆತ್ತ [] ಮಹಾ ಮೇಧಾವಿ ಭಾರತ[] ಜನಗಣ ಮನದ ಗಾಯಕನಾಗಿ ಹಾ[]

ಎನೇ ಪುಟ ನೋಡಿರಿ.

ಆಗ--?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿಯುವುದು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ, ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ ಜೀವನದ ಬೆಂಗೋಲಿನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿ ಇರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ–ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕಂಡೊಡನೆ ನಿಮ್ಮದೇ ಆಗುವ, ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ ಬೋನಸು ಹಂಚಿದ, ನಿಮ್ಮ ನಾಡಿನ

ಈ ಕಂಪೆನಿಯಲ್ಲಿಯೇ ವಿಮೆ ಇಳಿಸಿರಿ

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ. ಸ್ಥಾಪನೆ: ೧೯೩೫

The Canara Mutual Assurance Co. Ltd.

Head Office: UDIPI, S. NDIA. Estd: 1935

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ. ಬಕ್ಕೆ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ. ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಪೆಶಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಮೇಧಾವಿಯಾದ ಮಹಾ ದಂಡನಾಯಕ

ಕನ್ನಡಿಗ ಸೈನ್ಯ ವರಿಷ್ಠ ಕಾರ್ಯಪ್ಪನವರ ನಿವೃತ್ತಿ

ಸೈನ್ಯ ವರಿಷ್ಠರ ನಿವೃತ್ತಿ

ಕಳೆದ ವಾರದ ವಿಶೇಷಗಳಲ್ಲಿ ಉಲ್ಲೇಖನೀಯವೆನಿಸಿದ ಮಹತ್ವದ ಸಂಗತಿ ಭಾರತದ ಮಹಾ ದಂಡನಾಯಕ ಸ್ಥಾನದಲ್ಲಿದ್ದ ಜನರಲ್ ಕಾರ್ಯಪ್ಪನವರ ನಿವೃತ್ತಿಯಾಗಿದೆ. ಜನರಲ್ ಕಾರ್ಯಪ್ಪನವರು ಕನ್ನಡಿಗರು: ಕೊಡಗಿನವರು ಎಂಬುದನ್ನು ಇಲ್ಲಿ ಅವಶ್ಯ ಸ್ಮರಿಸಿಕೊಳ್ಳಬೇಕು. ಈ ಧೀರ ಯೋಧರು ಕಳೆದೆರಡು ಮಹಾ ಯುದ್ಧಗಳಲ್ಲಿ ತಮ್ಮ ಶೌರ್ಯವನ್ನು ತೋರಿಸಿ, ಖ್ಯಾತಿಯನ್ನು ಹೊಂದಿದವರು. ಅಂತಲೇ ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕ ಬ್ರಿಟಿಷ್ ಸೈನ್ಯಾಧಿಪತಿಯ ಸ್ಥಾನದಲ್ಲಿ ಅಧಿಕಾರವನ್ನು ವಹಿಸುವಷ್ಟು ಸಾಮರ್ಥ್ಯವನ್ನೂ ಯೋಗ್ಯತೆಯನ್ನೂ ಪಡೆದರು. ತಮ್ಮ ಅಧಿಕಾರಾವಧಿಯಲ್ಲಿ ಜನರಲ್ ಕಾರ್ಯಪ್ಪನವರು ಭಾರತೀಯ ಸೈನ್ಯವನ್ನು ಸುಸಂಘಟಿತಗೊಳಿಸಲಿಕ್ಕೂ ಅದರ ವಿಚಕ್ಷಣತೆಯನ್ನು ಹೆಚ್ಚಿಸಿ ಸುದೃಢಗೊಳಿಸಲಿಕ್ಕೂ ತುಂಬ ಪ್ರಯತ್ನಿಸಿದರು. ಸೈನಿಕರಲ್ಲಿ ರಾಷ್ಟ್ರೀಯ ಚೈತನ್ಯವನ್ನು ತುಂಬುವುದಕ್ಕೂ ಅಧಿಕಾರಾರೂಢವಾಗಿರುವ ಸರಕಾರಕ್ಕೆ ನಿಷ್ಠೆಯನ್ನು ತೋರಿ ಕೆಲಸ ಮಾಡುವುದಕ್ಕೂ ಬೇಕಾಗಿರುವ ತರಬೇತಿಯನ್ನು ಜನರಲ್ ಕಾರ್ಯಪ್ಪನವರು ಕೊಡಮಾಡಿರುವರು. ಜನವರಿ ದಿನಾಂಕ ೧೫ರಂದು ನಿವೃತ್ತಿಯನ್ನು ಹೊಂದಿದಾಗ, ಇವರನ್ನು ಸಂಭ್ರಮದಿಂದ ಸೈನ್ಯವು ಬೀಳ್ಕೊಟ್ಟಿತ್ತು. ದಿಲ್ಲಿಯಲ್ಲಿ ಹಿಂದೆಂದೂ ನಡೆಯದಷ್ಟು ವಿಜೃಂಭಣೆಯು ಕೂಡ ನಡೆಯಿತು. ದಿಲ್ಲಿ ಪ್ರದೇಶದ ಸೈನ್ಯಪಡೆಯ ವರಿಷ್ಠರಾದ ಹೆಂಡರ್ಸನ್ ಬ್ರೂಕ್ಸರ ಜೊತೆಗೆ ಜನರಲ್ ಕಾರ್ಯಪ್ಪನವರು ಈ ಕೂಟವನ್ನು ವೀಕ್ಷಿಸಿದರು. ತಮ್ಮ ಕೊನೆಯ ಸಂದೇಶದಲ್ಲಿ ಕಾರ್ಯಪ್ಪನವರು ಸೈನಿಕರಲ್ಲಿ ಶಿಸ್ತು, ಸಂಯಮಗಳು ಬೆಳೆಯಬೇಕೆಂದೂ ರಾಷ್ಟ್ರೀಯ ಸರಕಾರಕ್ಕೆ ನಿಷ್ಠೆಯನ್ನು ತೋರುವ ಬುದ್ಧಿ ಬಲವಾಗಬೇಕೆಂದೂ ಹೇಳಿರುವರು. ಇದೀಗ ಪಡೆದಿರುವ ಸ್ವಾತಂತ್ರ್ಯವನ್ನು ಸಂರಕ್ಷಿಸಿಕೊಳ್ಳುವ ಮಹತ್ವದ ಹೊಣೆಗಾರಿಕೆಯನ್ನು ಸೈನಿಕರು ಸ್ವೀಕರಿಸಿ, ಶ್ರದ್ಧೆಯಿಂದ ದುಡಿಯಬೇಕೆಂದು ಕೇಳಿಕೊಂಡಿರುವರು.

ಸೈನಿಕ ಶಿಕ್ಷಣದ ಆಗತ್ಯ

ಜನರಲ್ ಕಾರ್ಯಪ್ಪನವರ ಸ್ಥಾನದಲ್ಲಿ ಮೊದಲು ಪಶ್ಚಿಮ ವಿಭಾಗದ ದಂಡನಾಯಕರಾಗಿದ್ದ ಲೆ. ಜ. ರಾಜೇಂದ್ರ ಸಿಂಹಜೀ ಅಧಿಕಾರವನ್ನು ಸ್ವೀಕರಿಸಿರುವರು. ಜನರಲ್ ಕಾರ್ಯಪ್ಪನವರೇ ವರ್ಣಿಸಿದಂತೆ ಲೆ. ಜ. ಸಿಂಹಜೀಯವರು ಚರಿತ ಅಧಿಕಾರಿಗಳೂ ವಿಶಾಲಾನುಭವವುಳ್ಳವರೂ ಆಗಿದ್ದು, ಸೈನ್ಯಪಡೆಯ ಸಾಮರ್ಥ್ಯವನ್ನು ವೃದ್ಧಿಗೊಳಿಸುವರೆಂಬುದು ಸಂಶಯಕ್ಕೆಡೆಯಿಲ್ಲ. ಭಾರತವು ವಿಶಾಲವಾದ ದೇಶ. ಪಾಶ್ಚಾತ್ಯ ದೇಶಗಳು ನಡೆಸುವ ಯುದ್ಧ ಸನ್ನಾಹದೊಂದಿಗೆ ತೂಗಿ ನೋಡಿದರೆ, ನಮ್ಮ ಸೈನ್ಯವು ತೀರಾ ಕಡಿಮೆ ಎಂದೇ ತೋರುವುದು. ಇಷ್ಟು ಸ್ವಲ್ಪ ಸೈನ್ಯವನ್ನಿಟ್ಟುಕೊಂಡೇ ನಾವು ದೇಶದ ಗಡಿರಕ್ಷಣೆಯನ್ನೂ ಮಾಡಬೇಕು: ಮತ್ತು ಕಾಶ್ಮೀರದಲ್ಲಿ ಆಗಿರುವಂಥ ಅನಧಿಕೃತ ಆಕ್ರಮಣಗಳನ್ನು ಯಶಸ್ವಿಯಾಗಿ ಇದಿರಿಸಬೇಕು. ಸ್ವಾತಂತ್ರ್ಯ ರಕ್ಷಣೆಯಂಥ ಗುರುತರವಾದ ಭಾರವನ್ನು ಅಲ್ಪಸಂಖ್ಯೆಯ ಸೈನಿಕರ ಮೇಲೆ ಬಿಡುವುದು ಶ್ರೇಯಸ್ಕರವೆಂದು ಹೇಳುವಂತಿಲ್ಲ. ಈ ಕಾರಣದಿಂದ ನಮ್ಮಲ್ಲಿ ಪ್ರತಿಯೊಬ್ಬ ತರುಣ ತರುಣಿಯೂ ಪ್ರಸಂಗ ಬಿದ್ದಲ್ಲಿ ಸುಶಿಕ್ಷಿತ ಸೈನಿಕನಂತೆ ಕೆಲಸ ನಿರ್ವಹಿಸಲು ತಕ್ಕ ತರಬೇತಿಯನ್ನು ಹೊಂದಿರುವುದು ಅಪೇಕ್ಷಣೀಯವಿದೆ. ಈ ದೃಷ್ಟಿಯಿಂದಲೇ ಜನರಲ್ ಕಾರ್ಯಪ್ಪನವರು ನಾಗರಿಕರಿಗೆ ಸೈನಿಕ ಶಿಕ್ಷಣವನ್ನು ಕೊಡುವುದವಶ್ಯವೆಂದು ನುಡಿದಿರುವರು. ಸೈನಿಕ ಶಿಕ್ಷಣದಿಂದ ಧೈರ್ಯ ಸ್ಥೈರ್ಯಾದಿ ಧೀರೋದಾತ್ತಗುಣಗಳು ಪೋಷಣೆಗೊಳ್ಳುವುವಲ್ಲದೆ ಸಂಯಮ, ಶಿಸ್ತು, ಕಾರ್ಯದಕ್ಷತೆ, ಸೌಹಾರ್ದಭಾವ ಮುಂತಾದ ಚರಿತ್ರ ನಡತೆಗಳೂ ಉಂಟಾಗುವುವು. ಭಾರತವು ಯುದ್ಧಪ್ರಿಯ ರಾಷ್ಟ್ರವಲ್ಲವಾದುದರಿಂದ ಸೈನ್ಯವನ್ನು ನಾಗರಿಕ ಹಿತದ ಯೋಜನೆಗಳಲ್ಲಿ ತೊಡಗಿಸುವ ಪರಿಪಾಠವನ್ನು ಹಾಕಿ ಕೊಡಲಾಗಿದೆ. ರಾಯಲಸೀಮೆಯಲ್ಲಿ ಸೈನ್ಯಪಡೆಯು ಕುಡಿಯುವ ನೀರಿಗಿಂದ ಕೂಡಿದ ಬಾವಿಯ ನಿರ್ಮಾಣ ಮಾಡಿರುವುದು ಎಲ್ಲರಿಗೂ ವೇದ್ಯವಿದೆ.

ವಿರೋಧಾಭಾಸವೇ ನಿಜ

ಹೀಗೆ ಯುದ್ಧದಂಥ ಅನಿಷ್ಟವಿದೆಯೆಂದೇ ಭಾವಿಸಿ ಸೈನ್ಯವನ್ನು ಇಟ್ಟುಕೊಳ್ಳಲೇಬೇಕೆನಿಸಿದೆ. ಇದೇ ಮಾತನ್ನು ಗಾಂಧೀ ತತ್ವಜ್ಞಾನ ಸಮ್ಮೇಳನವನ್ನು ಮುಕ್ತಾಯಗೊಳಿಸುತ್ತಾ ಮಾಡಿದ ಭಾಷಣದಲ್ಲಿ ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ಹೇಳಿದರು. ಭಾರತವು ಗಾಂಧೀಜಿಯ ಸತ್ಯ ಹಾಗೂ ಅಹಿಂಸೆಗಳೆಂಬ ತತ್ವಗಳನ್ನು ಪುರಸ್ಕರಿಸುವುದು ನಿಜವಾದರೂ ಈ ತತ್ವಗಳನ್ನು ಕಾರ್ಯಾಚರಣೆಗಿಳಿಸುವಲ್ಲಿ ರಾಜಕೀಯವಾಗಿ ಕಂಡು ಬರುವ ತೊಡಕುಗಳನ್ನು ಇದಿರಿಸುವುದು ಅದಕ್ಕೆ ಸಾಧ್ಯವಾಗಿಲ್ಲ. ಅಹಿಂಸೆಯನ್ನು ಪುರಸ್ಕರಿಸುತಿದ್ದಂತೆಯೇ ಸೈನ್ಯವನ್ನು ಅದು ಇಟ್ಟುಕೊಂಡಿರುವುದು ವಿರೋಧಾಭಾಸವೆನಿಸುತ್ತದೆ. ಹಾಗೆಂದು ಇದನ್ನು ಬಿಟ್ಟರೆ ಬೇರೆ ಸುರಕ್ಷಿತವಾದ ಮಾರ್ಗ ತೋರುವುದಿಲ್ಲ. ಜಗತ್ತಿನ ಯಾವುದಾದರೊಂದು ರಾಷ್ಟ್ರವು ಸತ್ಯ ನ್ಯಾಯ ಮತ್ತು ಅಹಿಂಸೆಗಳಲ್ಲಿ ಪೂರ್ಣ ವಿಶ್ವಾಸವನ್ನೂ ಶ್ರದ್ಧೆಯನ್ನೂ ಇಟ್ಟು ಸೈನ್ಯವನ್ನು ತ್ಯಜಿಸಿದ್ದೇ ಆದರೆ ಅದು ಮಹಾ ಆದರ್ಶವೊಂದನ್ನು ಹಾಕಿಕೊಟ್ಟಂತಾಗುವುದರಲ್ಲಿ ಸಂದೇಹವಿಲ್ಲ. ದಿಲ್ಲಿಯಲ್ಲಿ ನೆರೆದ ಎಲ್ಲ ವಿಚಾರಶೀಲ ತತ್ವಜ್ಞಾನಿಗಳು ಈ ದಿಸೆಯಲ್ಲಿ ನಾಕಷ್ಟು ಪ್ರಚಾರವನ್ನು ಮಾಡಬೇಕು. ಗಾಂಧೀಜಿಯ ತತ್ವಜ್ಞಾನವು ಅವರ ವ್ಯಕ್ತಿತ್ವಪ್ರಧಾನವಾಗಿತ್ತು: ಅಂಥ ಚೈತನ್ಯಪೂರ್ಣವಾದ ವ್ಯಕ್ತಿತ್ವವನ್ನು ಸ್ವತಂತ್ರ ಭಾರತದಲ್ಲಿ ಇನ್ನೊಬ್ಬರು ಪಡೆಯಲಿಲ್ಲ. ಶ್ರೀ ನೆಹರೂರಲ್ಲಿ ಕೂಡ ಗಾಂಧೀಯ ವ್ಯಕ್ತಿತ್ವ ಪೋಷಿಸ ಕಲೆಯೊಂದಿಗೆ ಮೈಗೂಡಿಲ್ಲ. ಗಾಂಧೀಜಿಯು ತಮ್ಮ ಒಂದೊಂದು ಕೆಲಸಕ್ಕೆ ಯಾರು ಯೋಗ್ಯರೆಂದು ಕಂಡುಕೊಂಡು ಅವರಿಗೆ ಆ ಕೆಲಸವನ್ನು ಒಪ್ಪಿಸಿಕೊಡುತಿದ್ದರು, ಮತ್ತು ಆ ಕಾರ್ಯದಲ್ಲಿ ತರಬೇತಿಯನ್ನೂ ನೀಡುತಿದ್ದರು. ಈ ಕಾರಣದಿಂದಲೇ ಗಾಂಧೀಜಿಯ ಪೂರ್ಣ ವ್ಯಕ್ತಿತ್ವವನ್ನು ಕಾಣುವುದಕ್ಕೆ ನಮ್ಮಲ್ಲಿ ಯಾರೂ ಸಮರ್ಥರಿಲ್ಲ.

ಸ್ವಾವಲಂಬನಕ್ಕೆ ಪ್ರೋತ್ಸಾಹ

ಗಾಂಧೀಜಿಯ ವಿಚಾರಕ್ಕೂ ನಮ್ಮ ಇಂದಿನ ಆಚಾರಕ್ಕೂ ಇರುವ ಅಂತರ ವಿಶೇಷವಾಗಿರುವುದನ್ನು ಪ್ರತಿಯೊಂದೂ ಕ್ಷೇತ್ರದಲ್ಲಿ ಗಮನಿಸಬಹುದಾಗಿದೆ. ಗುಡಿ ಕೈಗಾರಿಕೆಗಳೇ ನಿರುದ್ಯೋಗ ನಿವಾರಣೆಯ ಸಾಧನಗಳೆಂದು ಗಾಂಧೀಜಿ ಹೇಳುತಿದ್ದರೆ ನಾವಿಂದು ಯಾಂತ್ರಿಕ ವ್ಯವಸಾಯವನ್ನು ಔದ್ಯೋಗೀಕರಣವನ್ನೂ ಪುರಸ್ಕರಿಸುವ ಹವ್ಯಾಸದಲ್ಲಿದ್ದೇವೆ. ಮೂಲ ಶಿಕ್ಷಣವನ್ನು ಗಾಂಧೀಜಿ ಎತ್ತಿ ಹಿಡಿದಿದ್ದರೆ ಶಿಕ್ಷಣ ಕ್ರಮದಲ್ಲಿ ಮೂಲಭೂತ ಬದಲಾವಣೆಯನ್ನು ಮಾಡಬೇಕೆಂಬ ಹಂಬಲವೇ ನಮ್ಮಲ್ಲೀಗ ಇರುವುದಿಲ್ಲ. ಹಂಬಲ ಇದ್ದರೂ ಕಾರ್ಯರೂಪಕ್ಕೆ ಬಂದ ಈ ಸದಿಚ್ಛೆ ಹಾಗೂ ಅಭಿಪ್ರಾಯಗಳಿಂದ ವಿಶೇಷ ಉಪಯೋಗವಿದೆ ಎಂದೆನಿಸುವುದಿಲ್ಲ. ಆದರೆ ರಾಷ್ಟ್ರೀಯ ಪುನರುತ್ಥಾನದ ಈ ದಿನಗಳಲ್ಲಿ ನಾವು ಹೊಸತಾಗಿ ಸಮೃದ್ಧಿಸಂಪನ್ನವಾದ ರಾಷ್ಟ್ರವನ್ನು ಮರಳಿ ಕಟ್ಟಿಕೊಳ್ಳಬೇಕಾಗಿದೆಯಾದುದರಿಂದ — ಸಾಧ್ಯವಿದ್ದಷ್ಟು ಅಧಿಕ ಕ್ಷೇತ್ರಗಳಲ್ಲಿ ಸ್ವಾವಲಂಬನವನ್ನು ಸಾಧಿಸಿದರೆ ಒಳ್ಳೇದೆಂಬ ಮನಃಪ್ರವೃತ್ತಿ ಮಾತ್ರ ನಮ್ಮ ಧುರೀಣರಲ್ಲಿರುವುದು ಕಂಡು ಬರುತ್ತದೆ. ಇಷ್ಟರ ಮಟ್ಟಿಗೆ ಗಾಂಧೀರೀತಿ ಪುರಸ್ಕೃತವಾಗಿದೆ ಎಂಬಲ್ಲಿ ಸಂಶಯಕ್ಕೆಡೆಯಿಲ್ಲ. ಸ್ವಾವಲಂಬನವು ಧ್ಯೇಯೋದ್ದೇಶವೆಂಬುದರಿಂದ ಅದಕ್ಕೆ ಪೋಷಕವಾಗುವ ಪ್ರತಿಯೊಂದೂ ಉದ್ಯಮಕ್ಕೆ ಪ್ರೋತ್ಸಾಹ ಅಗತ್ಯ. ಕಳೆದವಾರ ಮುಂಬಯಿಗೆ ಸಮೀಪದ ಅಂಬರನಾಥದಲ್ಲಿ ಪ್ರಧಾನಿ ನೆಹರೂ ಉದ್ಘಾಟಿಸಿದ ಯುದ್ಧೋಪಕರಣಗಳ ಕಾರ್ಖಾನೆಯು ಅಂಥದೊಂದು ಸ್ತುತ್ಯ [illegible] ರತದ ಸಂರಕ್ಷಣಾ ಶಾಖೆಗೆ ಬೇಕಾದ ಉಪಕರಣಗಳ ಮಾದರಿಯನ್ನು ಇಲ್ಲಿ ಸಿದ್ಧಗೊಳಿಸುವರಲ್ಲದೆ ಯುದ್ಧೋಪಕರಣಗಳನ್ನು ಜೋಡಿಸಿ ತಯಾರಿಸುವ ಒಂದು ಪ್ರತ್ಯೇಕ ವಿಭಾಗವನ್ನು ಇದರೊಂದಿಗೆ ಸಂಯೋಜಿಸಲ್ಪಟ್ಟಿದೆ. ಈಗ ಇರುವ ಮದ್ದು ಗುಂಡಿನ ಕಾರ್ಖಾನೆಯ ಪಕ್ಕದಲ್ಲಿಯೇ ಈ ಹೊಸ ಕಾರ್ಖಾನೆ ಇದ್ದು—ಏಶಿಯದಲ್ಲಿಯೇ ಇದು ದೊಡ್ಡದು. ಪ್ರಾಯಶಃ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಕೂಡ ಈ ಮಾದರಿಯ ಅತ್ಯಾಧುನಿಕ ಸಲಕರಣೆಗಳಿಂದ ಸುಸಜ್ಜಿತವಾದ ಕಾರ್ಖಾನೆ ಇರಲಾರದು. ಇಂಜ್ಞೋ ಸ್ವಿಡಿಶ್ ಸಹಕಾರದ ಫಲ ಈ ಉದ್ಯಮ.

ನಮ್ಮ ವೈಜ್ಞಾನಿಕ ದೃಷ್ಟಿ

ವಿದೇಶೀ ನಾಣ್ಯ ಸಂಪಾದನೆಗೆ ಸಾಧನವಾಗುವಂತೆ [illegible] ನಿರ್ಯಾತವನ್ನು ಹೆಚ್ಚಿಸಿಕೊಳ್ಳುವುದು ಇಷ್ಟವಾಗಿರುವುದರಿಂದ — ಮದ್ರಾಸಿನಲ್ಲಿ ತೆರೆಯಲಾಗಿರುವ ಚರ್ಮ ಹದ ಮಾಡುವ ಕೈಗಾರಿಕೆಯ ಸಂಶೋಧನ ಸಂಸ್ಥೆಯೂ ಸರಿಯಾದ ಮಾರ್ಗದಲ್ಲಿಟ್ಟ ಹೆಜ್ಜೆಯಾಗಿರುತ್ತದೆ. ಭಾರ

(೭ನೇ ಪುಟ ನೋಡಿರಿ)

ವಿವೇಕವುಳ್ಳ ದೂರದರ್ಶಿ ಸಂಪನ್ನ ಠಿಗ್ರಿ ಠೇವಣಾತಿದಾರ

ಅವನಿಗೆ ಯಾವ ಚಿಂತೆಯೂ ಇಲ್ಲ. ನಮ್ಮ ಜನವೇ ಆತನಿದ್ದಲ್ಲಿಗೆ ಬಂದು ಹೋಗಿ ಆತನು ಕೊಡುವ ಉಳಿತಾಯದ ಹಣವನ್ನು ಒಟ್ಟು ಮಾಡುವನು. ಏಳು ವರುಷಗಳ ಅವಧಿಯಲ್ಲಿ ಆ ಠೇವಣಾತಿದಾರರ ಲೆಕ್ಕದಲ್ಲಿ ದೊಡ್ಡ ಮೊತ್ತವು ಜಮೆಯಾಗುವುದು. ನೀವು ಕೂಡಾ ಆತನಂತೆ ಪಿಗ್ಮಿ ಡಿಪೋಜಿಟ್ ಯೋಜನೆಗೆ ಇಂದೇ ಸೇರಿ ಆತನಂತೆ ಏಳುವರುಷಗಳಲ್ಲಿ ಸಿರಿವಂತರಾಗಿರಿ.

ಆಧಾರ ವಹಿವಾಟಿನ ನಿಧಿಯು ರೂ 5,00,00,000 ಕ್ಕೂ ಜಾಸ್ತಿ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925 ಹೆಡ್ ಆಫೀಸು: ಉಡುಪಿ.

THE CANARA INDUSTRIAL & BANKING SYNDICATE LIMITED

Estd: 1925 H. O: UDIPI



ಮಿತ ದರದಲ್ಲಿ

ಅಲಾರ್ಮ್ ಗಡಿಯಾರಗಳೂ ಟೈಮ್‌ಪೀಸುಗಳೂ ದೊರೆಯುತ್ತವೆ.

ವಿವರಗಳಿಗೆ ಬರೆಯಿರಿ:

MUBARAK & CO Watch & Clock Specialists, MADRAS 3

ಮುಬಾರಕ್ ಎಂಡ್ ಕೋ ವಾಚ್ ಎಂಡ್ ಕ್ಲಾಕ್ ಸ್ಪೆಶಲಿಸ್ಟ್ಸ್, ಮದ್ರಾಸು 3

ಕರ್ನಾಟಕ ಏಕೀಕರಣ ಹಿಂದುಳಿಯಿತು

ಭಾಷೆಯೊಂದೇ ತಳಹದಿಯಾಗಲಾರದೆಂದು ನೆಹರೂ

ಬಳ್ಳಾರಿಯ ಭವಿಷ್ಯ

ಆಂಧ್ರಪ್ರಾಂತ ರಚನೆಯ ಸಂಬಂಧದಲ್ಲಿ ನ್ಯಾಯಮೂರ್ತಿ ವಾಂಛೂರವರಿಗೆ ಪ್ರತಿದಿನವೂ ಹಲವಾರು ಮನವಿಗಳು ಬರುತ್ತಿವೆ. ಅನೇಕ ಜನರು ಬಂದು ವಾಂಛೂರನ್ನು ಕಂಡು ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸುವುದೂ ನಡೆದಿದೆ. ನ್ಯಾಯಮೂರ್ತಿಗಳು ಸ್ವೇಚ್ಛೆಯಿಂದಲೇ ಹಲವರನ್ನು ಆಮಂತ್ರಿಸಿ ಅಭಿಪ್ರಾಯವನ್ನು ತಿಳಿದುಕೊಳ್ಳಲು ಯತ್ನಿಸಿದವರು. ಕಳೆದವಾರ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ವತಿಯಿಂದಲೂ ಆಂಧ್ರ ಪ್ರದೇಶ ಕಾಂಗ್ರೆಸ್ ಸಮಿತಿಯ ಪರವಾಗಿಯೂ ಪರಸ್ಪರ ವಿರುದ್ಧವಾದ ಅಭಿಪ್ರಾಯಗಳು ನ್ಯಾಯಮೂರ್ತಿ ವಾಂಛೂರ ಎದುರಿಗೆ ಪ್ರಕಟಿಸಲ್ಪಟ್ಟವು. ಕನ್ನಡಿಗರ ಅಧಿಕಾರವು ಬಳ್ಳಾರಿ ಜಿಲ್ಲೆಯ ಮೇಲಿದೆಯಾದುದರಿಂದ ಆಂಧ್ರದಲ್ಲಿ ಅದನ್ನು ಸೇರಿಸಲೇ ಕೂಡದೆಂದು ನಿಜಲಿಂಗಪ್ಪನವರ ಧುರೀಣತ್ವದಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ ಸಮಿತಿ ತಿಳಿಸಿದರೆ- ಸಂಜೀವ ರೆಡ್ಡಿಯವರ ನೇತೃತ್ವದಲ್ಲಿ ಆಂಧ್ರರು ಹೊಸ ರಾಜ್ಯದಲ್ಲಿ ಬಳ್ಳಾರಿ ಜಿಲ್ಲೆಯನ್ನು ಸೇರಿಸಬೇಕೆಂದೂ ಕರ್ನಾಟಕ ಪ್ರಾಂತ ನಿರ್ಮಾಣವಾಗುವಾಗ ಬೇಕಾದರೆ ಬಳ್ಳಾರಿಯ ಕನ್ನಡ ಪ್ರದೇಶಗಳನ್ನು ಆಂಧ್ರದಿಂದ ಬೇರ್ಪಡಿಸಬಹುದೆಂದೂ ಹೇಳಿರುವರು. ಬಳ್ಳಾರಿ ಜಿಲ್ಲೆಯ ಭವಿತವ್ಯದ ಬಗ್ಗೆ ಈ ರೀತಿ ಭಿನ್ನ ಭಿನ್ನ ಅಭಿಪ್ರಾಯಗಳು ವ್ಯಕ್ತಗೊಂಡುದರಿಂದ ಸಮಸ್ಯೆಯು ಇನ್ನಷ್ಟು ಜಟಿಲವಾಗಿದೆ. ಬಳ್ಳಾರಿಯ ಕನ್ನಡಿಗರು ಪ್ರತಿದಿನವೆಂಬಂತೆ ಆಂಧ್ರ ರಾಜ್ಯದೊಡನೆ ತಮ್ಮ ಜಿಲ್ಲೆಯನ್ನು ಸೇರಿಸುವ ವಿಚಾರಕ್ಕೆ ಪ್ರತಿಭಟನೆ ವ್ಯಕ್ತಪಡಿಸಿ ಗೊತ್ತುವಳಿಯನ್ನು ಮಾಡುತ್ತಿದ್ದಾರೆ. ನಮ್ಮ ಜಿಲ್ಲೆಯ ಶ್ರೀ ಕೆ. ಸದಾನಂದ ಹೆಗ್ಗಡೆಯವರೂ ವಾಂಛೂರ ಕೇಳಿಕೆಯಂತೆ ತಮ್ಮ ಅಭಿಪ್ರಾಯವನ್ನು ತಂತೀ ಮೂಲಕ ಕಳಿಸಿದ್ದು-ಬಳ್ಳಾರಿ ಮುಂತಾದ ಕನ್ನಡ ಪ್ರದೇಶಗಳನ್ನು ಆಂಧ್ರ ರಾಜ್ಯದಲ್ಲಿ ಸೇರಿಸಕೂಡದೆಂದು ಬಿನ್ನವಿಸಿರುವರು.

ರಾಯಲಸೀಮೆಯ ವಿರೋಧ

ಆಂಧ್ರರಾಜ್ಯ ನಿರ್ಮಾಣಕ್ಕೆ ಕನ್ನಡಿಗರಿಗಿಂತಲೂ ಬಲವಾದ ವಿರೋಧವು ರಾಯಲಸೀಮೆಯವರಿಂದ ತೋರಿಸಲ್ಪಟ್ಟಿರುವುದು; ಆರ್ಥಿಕ ದೃಷ್ಟಿಯಿಂದ ಕೊರತೆಯಾಗಿರುವ ಆಂಧ್ರ ರಾಜ್ಯವು ರಾಯಲಸೀಮೆಯ ಅಭಿವೃದ್ಧಿ ಯೋಜನೆಯನ್ನು ಕೈಗೊಳ್ಳಲಾರದ್ದರಿಂದ-ಅನಿಶ್ಚಿತ ಭವಿತವ್ಯವಿರುವ ಈ ಹೊಸ ರಾಜ್ಯದೊಂದಿಗೆ ತಮ್ಮ ಬದುಕನ್ನು ಹೊಸೆಯಗೊಡಲಾರೆವೆಂದು ರಾಯಲಸೀಮಾ ಮಹಾಸಭೆಯ ಪ್ರತಿನಿಧಿಗಳು ನ್ಯಾಯಮೂರ್ತಿಗಳಿಗೆ ಹೇಳಿರುವರು. ವಿಶಾಲಾಂಧ್ರ ಮಹಾಸಭೆಯ ಅಭಿಪ್ರಾಯದಂತೆ ಪ್ರಕೃತ ಆಂಧ್ರದ ರಾಜಧಾನಿಯು ಮದ್ರಾಸಿನಲ್ಲಿಯೇ ಇರಬೇಕು ಹೈದರಾಬಾದನ್ನು ಒಡೆದು ಆಂಧ್ರಪ್ರಾಂತ್ಯವನ್ನು ವಿಸ್ತರಿಸಿದಾಗ ಹೈದರಾಬಾದು ನಗರವೇ ಆಂಧ್ರಪ್ರಾಂತ್ಯದ ರಾಜಧಾನಿಯಾಗುವುದು. ಆದರೆ ಹೈದರಾಬಾದು ಸಂಸ್ಥಾನವನ್ನೊಡೆದು ಹೊಸ ಭಾಷಾವಾರು ಪ್ರಾಂತ್ಯಗಳನ್ನು ನಿರ್ಮಾಣ ಮಾಡುವ ಪ್ರಶ್ನೆಯು ಇನ್ನು ಕೆಲವು ವರ್ಷಗಳವರೆಗಾದರೂ ಹಿಂದೂಡಲ್ಪಟ್ಟಂತೆ ಎಂದೇ ಭಾವಿಸಬೇಕಾಗಿದೆ. ಮೊನ್ನೆ ತಾನೆ ಹೈದರಾಬಾದಿನಲ್ಲಿ ಸೇರಿರುವ ಅಖಿಲಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಭಾಷಾವಾರು ಪ್ರಾಂತ ನಿರ್ಮಾಣದ ಸಂಬಂಧದಲ್ಲಿ ಸ್ವೀಕರಿಸಿದ ಗೊತ್ತುವಳಿಯನ್ನು ಗಮನಿಸಿದರೆ ಈ ಸಂಗತಿ ಸ್ಪಷ್ಟಗೊಳ್ಳುತ್ತದೆ. ಆದರೆ ಆಂಧ್ರ ರಾಜ್ಯವನ್ನು ಶ್ರೀ ರಾಮುಲು ಕೈಕೊಂಡ ಉಪವಾಸದ ಪರಿಣಾಮವಾಗಿಯೇ ಪ್ರಕೃತ ಕೈಗೊಳ್ಳಲಾಗಿದೆ ಎಂಬ ಭಾವನೆಯು ಹಲವರಲ್ಲಿ-ವಿಶೇಷತಃ ಕನಡಿಗರಲ್ಲಿ ಹಬ್ಬಿದಂತಿದೆ. ಏಕೆಂದರೆ ಆತ್ಮಶುದ್ಧಿಯ ನೆವವನ್ನು ಹೇಳಿದರೂ ಸಂಯುಕ್ತ ಕರ್ನಾಟಕವನ್ನು ರಚಿಸಬೇಕೆಂಬ ಕಾಂಕ್ಷೆಯಿಂದಲೇ ಇರಬೇಕು— ಅಂದಾನೆಪ್ಪ ದೊಡ್ಡಮೇಟಿಯಂಥವರು ಉಪವಾಸ ವ್ರತವನ್ನು ಕೈಗೊಂಡಿರುವರು. ಮತ್ತು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಈ ತೆರನಾದ ಎಚ್ಚರಿಕೆಗಳಿಂದ ಜಾಗೃತಗೊಳ್ಳಬೇಕೆಂದು ತಂತಿಯೂ ಹೋಗಿದೆ.

ಹೊಸ ರಾಜ್ಯಗಳ ನಿರ್ಮಾಣ

ನಾನಲ ನಗರದಲ್ಲಿ ಸೇರಿದ ಈ ಬಾರಿಯ ಕಾಂಗ್ರೆಸ್ ಅಧಿವೇಶನದ ಕಾರ್ಯವನ್ನು ವಿಮರ್ಶಾತ್ಮಕ ದೃಷ್ಟಿಯಿಂದ ನೋಡಿದರೆ ಭಾಷಾವಾರು ಪ್ರಾಂತ ನಿರ್ಮಾಣದ ಸಂಗತಿಯಲ್ಲಿ ವರಿಷ್ಠರಿಗೆ ಎಳ್ಳಷ್ಟೂ ಆಸ್ಥೆ ಉಳಿದಿಲ್ಲವೆಂದೇ ಹೇಳಬೇಕು. ರಾಜ್ಯಗಳ ಪುನರ್ಘಟನೆಯೆಂದು ಮಂಡಿಸಲ್ಪಟ್ಟ ಗೊತ್ತುವಳಿಯಲ್ಲಿ ಆಂಧ್ರ ಪ್ರಾಂತರಚನೆಯ ಸಂಬಂಧದಲ್ಲಿ ಕೇಂದ್ರ ಸರಕಾರವು ಕೈಕೊಂಡಿರುವ ಕ್ರಮವು ಸಾಧುವಾದುದೆಂದೂ ಈ ಹಿಂದಿನ ಹೆಜ್ಜೆಗಳಿಗೆ ಅನುಗುಣವಾಗಿದೆಯೆಂದೂ ಹೇಳಿ, ಯಾವುದೇ ಹೊಸ ರಾಜ್ಯವನ್ನು ನಿರ್ಮಾಣಮಾಡುವುದಕ್ಕೆ ಆಂಧ್ರ ರಾಜ್ಯದ ಭದ್ರತೆಯು ಸಾಕ್ಷಿಯಾಗಬೇಕೆಂದು ಹೇಳಿರುವುದು. ಭಾಷಾನುಗುಣ ಪ್ರಾಂತರಚನೆಯಲ್ಲಿ ವಿಶೇಷ ಕುತೂಹಲವನ್ನು ತೋರಿಸಿದ ಕರ್ನಾಟಕದ ಧುರೀಣರು ಆಂಧ್ರ ರಾಜ್ಯದ ಯಶಾಪಯಶಗಳ ಮೇಲೆಯೇ ಹೊಸ ರಾಜ್ಯಗಳ ನಿರ್ಮಾಣ ಕಾರ್ಯವು ಹೊಂದಿಕೊಂಡಿದೆ ಎಂಬಂಶವನ್ನು ತೆಗೆದು ಹಾಕಬೇಕೆಂದು ತಂದ ತಿದ್ದುಪಡಿ ಸೂಚನೆ ನಿರಾಕೃತವಾಯಿತು ಆಂಧ್ರ ರಾಜ್ಯವು ಈಗಾಗಲೇ ಕೊರತೆಯ ಪ್ರದೇಶವಿದೆ. ಈ ಕಾರಣದಿಂದ ಅದು ಇನ್ನು ಹತ್ತಿಪ್ಪತ್ತು ವರ್ಷಗಳು ಕಳೆದ ಮೇಲೆಯೂ ಭದ್ರವಾದ ನೆಲಗಟ್ಟಿನಲ್ಲಿ ನಿಲ್ಲಲಾರದು. ಅರ್ಥಾತ್ ಸಂಯುಕ್ತಕರ್ನಾಟಕವೇ ಮೊದಲಾದ ಉಳಿದ ಭಾಷಾನುಗುಣ ಪ್ರಾಂತರಚನೆಯ ಕಾರ್ಯವು ಅಷ್ಟು ಸಮಯ ಹಿಂದೂಡಲ್ಪಟ್ಟಂತೆಯೇ ಎಂಬಲ್ಲಿ ಸಂದೇಹಕ್ಕೆಡೆಯಿಲ್ಲ.

ಮೈಸೂರಿನ ಆಸ್ಥೆ

ಈ ವಿಷಯದಲ್ಲಿ ಮಾತನಾಡಿದ ರಾಜಗೋಪಾಲಾಚಾರಿ, ಮೌಲಾನಾ ಅಬುಲ್ ಕಲಂ ಅಜಾದ ಮುಂತಾದ ಪ್ರಭೃತಿಗಳು ಕಾಂಗ್ರೆಸು ೧೯೨೧ರಲ್ಲಿ ಸ್ವೀಕರಿಸಿದ ಗೊತ್ತುವಳಿಯ ನಂತರ ತಮ್ಮ ಮನೋವೃತ್ತಿಯಲ್ಲಿ ಉಂಟಾಗಿರುವ ಪರಿವರ್ತನೆಯನ್ನು ಸೂಚಿಸಿರುವರು. ಭಾಷಾನುಗುಣ ಪ್ರಾಂತ ನಿರ್ಮಾಣದ ಯೋಜನೆಯು ಕಾಡು ಜನರ ವಿಚಾರವೆಂದು ರಾಜಾಜಿ ವರ್ಣಿಸಿದರು. ಅಜಾದರು ಈ ಪ್ರಶ್ನೆಯು ಹಿಂದೂಡಲ್ಪಟ್ಟಿದೆಯೆಂದೇ ತಿಳಿಯಬೇಕಾಗಿ ಸಾರಿದರು. ಆದರೆ ಮೈಸೂರಿನವರು ಮಾತ್ರ ಸಂಯುಕ್ತಕರ್ನಾಟಕ ನಿರ್ಮಾಣದ ಬಗ್ಗೆ ತುಂಬ ಆಸಕ್ತಿಯನ್ನು ತೋರಿಸಿ—ಎಲ್ಲರನ್ನೂ ಆಶ್ಚರ್ಯಗೊಳಿಸಿದರು. ಅದರಲ್ಲೂ ಮುಖ್ಯಮಂತ್ರಿ ಹನುಮಂತಯ್ಯನವರು ತಮ್ಮ ಕಟು ಮಾತಿನಿಂದ ಕಾಂಗ್ರೆಸು ವರಿಷ್ಠರ ಮನೋವೃತ್ತಿಯನ್ನು ಬಲವಾಗಿ ಖಂಡಿಸಿದರು. ಸಂಬಂಧಿಸಿದೆಲ್ಲರಲ್ಲಿ ಒಮ್ಮತವಾಗಿಯೇ ಹೊಸ ಪ್ರಾಂತರಚನೆಯಾಗಬೇಕೆನ್ನುವ ತರ್ಕ ಸರಣಿಯು ಹಿಂದಿನ ವೈಸರಾಯರಾದ ಜನರಲ್ ಲಿನ್‌ಲಿತ್‌ಗೋರವರ ವಿಚಾರದಂತಿದೆ ಎಂದರು. ಶ್ರೀ ಎಚ್. ಸಿ. ದಾಸಪ್ಪನವರು ಮೈಸೂರಿನವರೆಲ್ಲರೂ ಸಂಯುಕ್ತ ಕರ್ನಾಟಕ ಪ್ರಾಂತರಚನೆಗೆ ಅನುಕೂಲರು ಎಂದಾಗ ನೆಹರೂ ಭಾವಾವೇಶದಿಂದ "ಮೈಸೂರಿನವರು ಇದಕ್ಕೆ ಪ್ರತಿಕೂಲಾಭಿಪ್ರಾಯವುಳ್ಳವರು-ಅಲ್ಲಿಯ ಧುರೀಣರು ನನ್ನೆದುರಿಗೇ ಇದನ್ನು ಸ್ಪಷ್ಟಗೊಳಿಸಿರುವರು'' ಎಂದು ಗುಡುಗಿದರು. ಹಾರನಹಳ್ಳಿ ರಾಮಸ್ವಾಮಿಯವರೂ ಸಂಯುಕ್ತ ಕರ್ನಾಟಕ ಪ್ರಾಂತರಚನೆಯ ಅಗತ್ಯವನ್ನು ಬಿಂಬಿಸಿದರು. ಆದರೆ ಅಧಿವೇಶನದಲ್ಲಿ ನೆಹರೂ ಮುಂತಾದ ವರಿಷ್ಠರ ಮಾತಿಗೇ ಬೆಲೆ ಬಂತು ಶ್ರೀ ದುಭೆಯವರ ತಿದ್ದುಪಡಿಯನ್ನು ಮತಕ್ಕೆ ಹಾಕಿದಾಗ ಶ್ರೀ ನಿಜಲಿಂಗಪ್ಪ ಹಾಗೂ ಶ್ರೀನಿವಾಸ ಮಲ್ಯರು ವಿರುದ್ಧ ಮತ ಕೊಟ್ಟರು. ಹೀಗಿದ್ದರೂ "ಸಂಯುಕ್ತ ಕರ್ನಾಟಕ"ದಲ್ಲಿ ವರದಿಯಾದಂತೆ ಅಧ್ಯಕ್ಷ ನಿಜಲಿಂಗಪ್ಪನವರಿಗೆ "ವೈಯಕ್ತಿಕವಾಗಿ ಗೊತ್ತುವಳಿಯ ಬಗ್ಗೆ ಸಮಾಧಾನವಿಲ್ಲ" ಮತ್ತು ಕಾರ್ಯದರ್ಶಿ ಗುಡ್ಲೆಪ್ಪ ಹಳ್ಳಿಕೇರಿಯವರಿಗೆ "ಸಂಪೂರ್ಣ ಅಸಮಾಧಾನ' ಆಗಿದೆ.

"ಭಾಷೆಯೊಂದೇ ಸಾಲದು"

ಗೊತ್ತುವಳಿಯು ಸ್ವೀಕಾರಗೊಂಡ ಬಳಿಕ ನೆಹರೂ ಮಾತನಾಡಿ ವೈಯಕ್ತಿಕವಾಗಿ ತಾನು ರಾಜ್ಯಗಳ ಪುನರ್ಘಟನೆಗೆ ಪ್ರತಿಕೂಲಾಭಿಪ್ರಾಯವುಳ್ಳವನಲ್ಲವೆಂದೂ ಆದರೆ ಹಾಗೆ ಹೊಸತಾಗಿ ಪ್ರಾಂತ್ಯಗಳನ್ನು ರಚಿಸುವಾಗ ಭಾಷೆಯೊಂದನ್ನೇ ತಳಹದಿಯಾಗಿಟ್ಟುಕೊಳ್ಳಲು ಸಾಧ್ಯವಿಲ್ಲವೆಂದೂ ತಿಳಿಸಿದರು. ಭಾಷೆಯೊಡನೆ ಹಣಕಾಸಿನ ಪ್ರಶ್ನೆಯೂ ಭೌಗೋಲಿಕ ಸ್ಥಿತಿಗತಿಯೂ ರಾಷ್ಟ್ರೀಯ ಐಕ್ಯ ಹಾಗೂ ಸ್ವಾತಂತ್ರ್ಯ ರಕ್ಷಣೆ ಯಂಥ ಹತ್ತು ಜಟಿಲ

೬ನೇ ಪುಟ ನೋಡಿರಿ.

PLEACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policyholders and Representatives At whatever stage we welcome your association with the POPULAR.

The Popular Insurance Co. Ltd.
"Popular Buildings", MANGALORE—1.

ZANDU KESARI JIVAN

ಝಾಂಡೂ ಕೇಸರಿ ಜೀವನ

ಕೆಮ್ಮು, ನೆಗಡಿ, ರಾಜಯಕ್ಷ್ಮ, ಮಿದುಳು ನಿತ್ರಾಣ, ಅಕಾಲಿಕ ವೃದ್ಧಾಪ್ಯ, ಸರ್ವಸಾಮಾನ್ಯ ಬಲಹೀನತೆಗಳಿಗೆಲ್ಲಾ **ಕೇಸರಿ ಜೀವನವು** ಹೆಸರುವಾಸಿಯಾದದ್ದು ಅಲ್ಲದೆ ದೇಹಾರೋಗ್ಯವನ್ನು ಸಮತೂಕದಲ್ಲಿರಿಸಲು ಆದರ್ಶ ಟೊನಿಕ್ ಆಹಾರವಾಗಿದೆ. 1 ರಾತ್ಲ: ರೂ. 6-8-0 ¼ ರಾತ್ಲ: ರೂ 1-14-0

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್, ಕೆಮಿಸ್ಟ್ಸ ಎಂಡ್ ಡ್ರಗ್ಗಿಸ್ಟ್ಸ, ಉಡುಪಿ
2 ಶ್ರೀ ವಿ ವಿ ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು
4 ಎಲ್ ಎನ್ ಶರ್ಮ, ಹಜೂರು ರಸ್ತೆ ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ.

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರಿ ಶರತ್ತುಗಳಿಗಾಗಿ ಬರೆಯಿರಿ.

DAMODAR & CO.,
Nainiappa Naicken Street, Park Town-**MADRAS** 3.

The Canara Banking Corporation Limited.

ಸುಲಭ ಶರ್ತಗಳಿದ್ದು, ಸಾಲಿಯಾನ್ ಸೇಕಡಾ 4ರಂತೆ ಬಡ್ಡಿ ಗಳಿಸುವ ನಮ್ಮ

ಪಂಚವಾರ್ಷಿಕ ಯೋಜನೆಯ ಠೇವಣಾತಿಗಳು.

ಈಗಾಗಲೇ ಎಲ್ಲಾ ಕಡೆಗಳಲ್ಲಿಯೂ ಜನಾದರಣೀಯವಾಗಿವೆ. ನೀವೂ ಕೂಡಾ ನಿಮ್ಮ ಹಣವನ್ನು ಈ ಠೇವಣಾತಿಗಳಲ್ಲಿ ಏಕೆ ವಿನಿಯೋಗಿಸಬಾರದು?

ವಿಶೇಷ ಮಾಹಿತಿಗೆ,

ನಿಮಗೆ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ, ಉಡುಪಿ. (ದ ಭಾರತ)

ಮಧ್ಯಪೂರ್ವ ಸಂರಕ್ಷಣೆಯ ಪ್ರಶ್ನೆ

ಭಾರತವು ಸಪರ್ಕ ದೃಷ್ಟಿಯನ್ನು ಇಟ್ಟುಕೊಂಡಿದೆ

ಕಳೆದ ವಾರ ಸೂಚಿಸಿದಂತೆ, ಮಧ್ಯಪೂರ್ವ ಸಂರಕ್ಷಣಾ ಯೋಜನೆಯಲ್ಲಿ ಪಾಕಿಸ್ತಾನದ ಸೇರ್ಪಡೆಯಿಂದ ಭಾರತಕ್ಕೆ ಗಂಡಾಂತರವಿದೆ ಎಂಬ ಮಾತನ್ನು ನೆಹರೂ ಕೂಡ ಮನವರಿಕೆ ಮಾಡಿಕೊಳ್ಳುವಲ್ಲಿ ತಡಮಾಡಿಲ್ಲ. ಕಾಂಗ್ರೆಸ ವಿಷಯ ನಿಯಾಮಕ ಸಮಿತಿಯಲ್ಲಿ ವಿದೇಶ ಧೋರಣೆಯ ಸಂಬಂಧದ ಗೊತ್ತುವಳಿಯ ಮೇಲೆ ಚರ್ಚೆ ನಡೆಯುತಿದ್ದಾಗ ಆಂಗ್ಲೋ ಅಮೆರಿಕನ್ನರು ಪಾಕಿಸ್ತಾನವನ್ನು ತಮ್ಮ ಬುಟ್ಟಿಯಲ್ಲಿ ಹಾಕಿಕೊಳ್ಳಲು ನೋಡಿದ್ದೇ ಆದರೆ ಅದನ್ನು ಮೈತ್ರಿಭಂಗದ ಚಟುವಟಿಕೆ ಎಂಬುದಾಗಿ ಭಾರತವು ಸ್ಪಷ್ಟ ಮಾತುಗಳಲ್ಲಿ ಎಚ್ಚರಿಕೆ ನೀಡಬೇಕೆಂದು ಒಬ್ಬರು ಸೂಚಿಸಿದ್ದರಿಂದ-ನೆಹರೂ ಭಾರತ ಸರಕಾರದ ನಿಲುಮೆಯನ್ನು ಸ್ಪಷ್ಟಪಡಿಸುವಂತಾಯಿತು. ಭಾರತವು ಈ ವಿಷಯವನ್ನು ಗಂಭೀರವಾಗಿ ಪರ್ಯಾಲೋಚಿಸುವುದೆಂದು ನೆಹರೂ ನುಡಿದರಲ್ಲದೆ ಘಟನೆ ಹಾಗೂ ಪರಿಸ್ಥಿತಿಗಳು ಬದಲಾದಂತೆ ಸರಕಾರವಾದರೂ ಅದಕ್ಕೆ ಹೊಂದಿಕೊಂಡು ನಡೆಯುವುದು ತೀರ ಸ್ವಾಭಾವಿಕವೆಂದು ಹೇಳಿದರು. 'ನೆಹರೂರ ಹೇಳಿಕೆಯ ಮಥಿತಾರ್ಥವೇನೆಂಬುದನ್ನು ಈಗಲೇ ಊಹಿಸಲು ಬಾರದಿದ್ದರೂ ಸಾಮಾನ್ಯವಾಗಿ ವಿದೇಶ ನೀತಿಯಲ್ಲಿ ಮಹತ್ವದ ಪರಿವರ್ತನೆಯುಂಟಾಗಲಿಕ್ಕಿಲ್ಲವೆಂದೇ ಹೇಳಬಹುದು. ಪಾಕಿಸ್ತಾನವನ್ನು ಆಂಗ್ಲೋ ಅಮೆರಿಕನ್ನರು ತಮ್ಮ ಬಲೆಯಲ್ಲಿ ಕೆಡವಿಕೊಳ್ಳಲಿಕ್ಕೆ ಪ್ರಯತ್ನಿಸುತ್ತಿದ್ದರೂ ಪಾಕಿಸ್ತಾನದ ಪ್ರಧಾನಿ ನಾಜಿಮುದ್ದೀನರಿಗೆ ಇನ್ನೂ ಅಧಿಕೃತವಾಗಿ ಏನೂ ತಿಳಿದಿಲ್ಲವೆಂಬುದರಿಂದ-ಮಾತುಕತೆಗಳು——ಈಗ ಪ್ರಾರಂಭಿಕಾವಸ್ಥೆಯಲ್ಲಿವೆ ಎಂದೂಹಿಸಬಹುದು. ಆದರೆ ಇಷ್ಟು ಮಾತ್ರ ನಿಜ-ಮಧ್ಯಪೂರ್ವ ಸಂರಕ್ಷಣಾ ಯೋಜನೆಯಲ್ಲಿ ಪಾಕಿಸ್ತಾನ ಸೇರ್ಪಡೆ ಹೊಂದಿದರೆ, ಭಾರತಕ್ಕೆ ಮಾತ್ರ ಗಂಡಾಂತರವಲ್ಲ, ಸಮಗ್ರ ದಕ್ಷಿಣ ಹಾಗೂ ಆಗ್ನೇಯ ಏಶಿಯಾದ ಸಮತೋಲವು ಕುಸಿಯುವುದು ನಿಶ್ಚಯ.

ಜೋಲಿ ಹೊಡೆದರೆ—

ಹೀಗೆ ನಾವು ಜೋಲಿಹೊಡೆದದ್ದೇ ಆದರೆ-ಭಾರತದ ಗಡಿಯಾಚೆಗಿನ ರಶಿಯಾ ಚೀನಾಗಳು ತಂದ್ರಾವಸ್ಥೆಯನ್ನು ತೊರೆದು ಜಾಗ್ರತರಾಗುವ ಸನ್ನಿವೇಶ ತನ್ನಿಂದ ತಾನೆ ಬರುವುದು. ಮೇಲಾಗಿ ಆಂಗ್ಲೋ ಅಮೇರಿಕನ್ನರು ಪಾಕಿಸ್ತಾನದಲ್ಲಿ ಸೈನ್ಯಕ್ಕಾಗಿ ಠಾಣ್ಯ ಕಟ್ಟಿಕೊಳ್ಳಲು ಹವಣಿಸುತ್ತಿರುವುದರಿಂದ—ಇನ್ನೊಂದು ಮಹಾಯುದ್ಧ ನಡೆದರೆ, ಅದನ್ನು ಮಧ್ಯಪೂರ್ವ ಏಶಿಯದಲ್ಲಿಯೇ ನಡೆಯಗೊಡುವ ಮತ್ತು ಹಾಗೆ ರಶಿಯಾದ ವಿರುದ್ಧ ಕತ್ತಿ ಕಟ್ಟುವ ಹೊಂಚು ಇದೆಂದು ಯಾರೂ ಹೇಳಬಹುದು. ಅರಬ ರಾಷ್ಟ್ರಗಳು, ಇರಾಣ, ಈಜಿಪ್ತಗಳು ಪ್ರತಿಯೊಂದೂ ಆಂತರಿಕ ಕ್ಷೋಭೆಯಿಂದ ಕುದಿಯುತ್ತಿರುವ ಈ ದಿನಮಾನದಲ್ಲಿ ಆಂಗ್ಲೋ ಅಮೇರಿಕನ್ನರು ಯುರೋಪಿನಿಂದ ಮಧ್ಯಪೂರ್ವಕ್ಕೆ ರಣರಂಗವನ್ನು ಸ್ಥಾನಾಂತರಿಸಿದುದ್ದು

ನವಯುಗ

ಉಡುಪಿ. ಗುರುವಾರ ೨೨-೧-'೫೩

ಸಿಂಹಾವಲೋಕನ

ಹೈದರಾಬಾದಿನಲ್ಲಿ ಈ ಸಲ ಸೇರಿದ ಐವತ್ತೆಂಟನೇ ಕಾಂಗ್ರೆಸ ಅಧಿವೇಶನವು ದೇಶದಲ್ಲಿ ಪ್ರಜಾರಾಜ್ಯವು ನೆಲೆಗೊಂಡ ಮೇಲೆ ಸರ್ವ ಪ್ರಥಮವಾಗಿ ಕೂಡಿದುದೆಂಬುದರಿಂದ ಅತ್ಯಂತ ಮಹತ್ವದ ಸ್ಥಾನವನ್ನು ಪಡೆಯುತ್ತದೆ. ಹೈದರಾಬಾದಿನಂಥ ಒಂದು ಹಳೆಯ ದೇಶೀಯ ಸಂಸ್ಥಾನದಲ್ಲಿ ಕಾಂಗ್ರೆಸ ಅಧಿವೇಶನ ಸೇರಿದ್ದು ಇದು ಎರಡನೆಯ ಸಲ. ಸಹಸ್ರಾರು ಪ್ರತಿನಿಧಿಗಳಿಗೂ ಪ್ರೇಕ್ಷಕ-ಸಂದರ್ಶಕರಿಗೂ ಕೂಡ ಅನುವಾಗುವಂತೆ ರಚಿಸಿದ ಭವ್ಯಮಂಟಪವನ್ನು ನಾನಲನಗರವೆಂಬುದಾಗಿ ಹೈದರಾಬಾದು ಕಾಂಗ್ರೆಸಿನ ಪ್ರಥಮ ಅಧ್ಯಕ್ಷರ ಹೆಸರಿನ ಮೇಲಿಂದ ಗೌರವಿಸಿದ್ದರು. ಕಾಂಗ್ರೆಸಿನಲ್ಲಿ ಸಾಮಾನ್ಯ ಸದಸ್ಯರ ಸಂಖ್ಯೆಯು ೯೦ ಲಕ್ಷದಷ್ಟಿದೆ ಮತ್ತು ಸಕ್ರಿಯ ಸದಸ್ಯರ ಸಂಖ್ಯೆ ೩೯೦೦೦೦ ಇದೆ ಎಂಬ ಮಾತೊಂದರಿಂದಲೇ ರಾಷ್ಟ್ರೀಯ ರಂಗದಲ್ಲಿ ಕಾಂಗ್ರೆಸು ಪಡೆದಿರುವ ಮಹತ್ವದ ಸ್ಥಾನವನ್ನು ಹೃದಯಂಗಮ ಮಾಡಿಕೊಳ್ಳಬಹುದಾಗಿದೆ. ಆದರೂ ಈ ಬಾರಿಯ ಅಧಿವೇಶನಕ್ಕೆ ಈ ಹಿಂದಿನಷ್ಟು ಪ್ರತಿನಿಧಿಗಳಾಗಲೀ ಪ್ರೇಕ್ಷಕರಾಗಲೀ ಬರಲಿಲ್ಲೆಂದು ಪತ್ರಿಕೆಗಳು ವರದಿ ಮಾಡಿರುವುದರಿಂದ ದೇಶದಲ್ಲಿ ಕಾಂಗ್ರೆಸು ತನ್ನ ಜನಪ್ರಿಯತೆಯನ್ನು ಮೆಲ್ಲಮೆಲ್ಲನೆ ಕಳೆದುಕೊಳ್ಳುತ್ತಾ ಬರುತ್ತಿದೆಯೋ ಎಂಬ ಬಗ್ಗೆ ಸಂದೇಹ ಮಾಡುವುದು ಸ್ವಾಭಾವಿಕ. ಚುನಾವಣೆಗಳ ಕಾಲದಲ್ಲಿ ಹಾಗೂ ಆ ಬಳಿಕ ಅನೇಕ ಪಕ್ಷಗಳು ಕಾಂಗ್ರೆಸ್ಸನ್ನು ಮಣಿಸುವ ಏಕಮೇವ ಉದ್ದೇಶದಿಂದ ಹುಟ್ಟಿಕೊಂಡು ಜನರಿದುರು ಸುಖ ಸ್ವಪ್ನದ ಆಮಿಷವನ್ನು ಇಡಹತ್ತಿದ್ದರಿಂದ ಪರಿಶ್ರಮದಿಂದಲೇ ಸಮೃದ್ಧಿ ಎಂಬ ಪಲ್ಲವಿ ಹಾಡುವ ರಾಷ್ಟ್ರೀಯ ಧುರೀಣರ ಸತ್ಯ ಹಾಗೂ ಅನುಭವಿಕ ಮಾತಿಗೆ ಪುರಸ್ಕಾರ ದೊರೆಯುವುದು ಕಡಿಮೆಯಾಗುತ್ತಿದೆ. ಇದು ದೇಶದ ಆಂತರಿಕ ವಾತಾವರಣವಾದರೆ, ಲೋಕದ ವಾತಾವರಣ ಇದಕ್ಕಿಂತ ಭಿನ್ನವಾಗಿದೆ. ಯುದ್ಧ ಹಾಗೂ ಶಾಂತಿಗಳೆಂಬ ಪರಸ್ಪರ ವಿರುದ್ಧವಾದ ಮಾರ್ಗಗಳಲ್ಲಿ ಯುದ್ಧವನ್ನೆ ಬೆಂಬಲಿಸಲು ಮಹಾರಾಷ್ಟ್ರಗಳು ಆತುರವನ್ನು ತೋರಿಸುತ್ತಿವೆ. ಮಾನವೀಯತೆಗೆ ಕಳಂಕಪ್ರಾಯವಾದ ವರ್ಣದ್ವೇಷವೇ ಮೊದಲಾದ ಹೇಯ ನಡವಳಿಕೆಗಳಿಂದ ವಿಶ್ವ ಕುಟುಂಬದ ಕಲ್ಪನೆಗೇ ಕುಠಾರಘಾತವಾಗಿರುವುದು. ಇಂಥದರಲ್ಲಿ ಕಾಂಗ್ರೆಸು ಮಹತ್ವದ ವಿಷಯಗಳಲ್ಲಿ ತನ್ನ ನೀತಿಯನ್ನು ಸ್ಪಷ್ಟಪಡಿಸುವುದರಿಂದ ಯೋಗ್ಯ ಮಾರ್ಗದರ್ಶನವನ್ನು ಮಾಡಿದಂತಾಗುತ್ತದೆ. ಈ ಕಾರಣದಿಂದಲೇ ಕೆಲವು ಗೊತ್ತುವಳಿಗಳು ಸ್ವೀಕಾರಗೊಂಡಿವೆ. ಅವುಗಳಲ್ಲಿ ಪಂಚವಾರ್ಷಿಕ ಯೋಜನೆಯ ಯಶಸ್ಸಿಗಾಗಿ ಸಾರ್ವಜನಿಕರ ಸಹಕಾರವನ್ನು ಪಡೆಯಬೇಕೆಂಬುದು ಮತ್ತು ಕಾಂಗ್ರೆಸ ಕಾರ್ಯಕರ್ತರು ಹುಮ್ಮಸ್ಸಿನಿಂದ ರಾಷ್ಟ್ರ ನಿರ್ಮಾಣದ ಈ ಮಹೋದ್ಯಮದಲ್ಲಿ ತಮ್ಮ ಪೂರ್ಣ ಶಕ್ತಿಯನ್ನು ಪಯೋಗಿಸಿ ದುಡಿಯಬೇಕೆಂಬ ಆಶಯದ ಗೊತ್ತುವಳಿಯು ಅತ್ಯಂತ ಪ್ರಾಮುಖ್ಯವಾದದ್ದೆನ್ನಬಹುದು. ಪಂಚವಾರ್ಷಿಕ ಯೋಜನೆಯು ಸರಕಾರೀ ಮಟ್ಟದಲ್ಲಿ ಸಿದ್ಧಗೊಳಿಸಿದುದರಿಂದ ಎಲ್ಲ ವರ್ಗಗಳಿಗೂ ಇದರ ಯಶಾಪಯಶದ ಪರಿಣಾಮವಾಗುವುದು ಸ್ವಾಭಾವಿಕವೇ. ಆದರೂ-ಕೇಂದ್ರ ಸರಕಾರದಲ್ಲಿ ಕಾಂಗ್ರೆಸ ಬಹುಮತವಿದೆ ಎಂಬ ಕಾರಣಕ್ಕಾಗಿ ಯೋಜನೆಯಲ್ಲಿ ಕಾಂಗ್ರೆಸಿನ ತತ್ವಧ್ಯೇಯಗಳು ಮೈವೆತ್ತಿವೆ ಎಂದರೂ ಸಲ್ಲುವುದು. ಮತ್ತು ಈ ಯೋಜನೆಯನ್ನು ಜನತೆಯ ಮುಂದಿಟ್ಟು ಅದರ ಬಲದಿಂದಲೇ ಕಳೆದ ಚುನಾವಣೆಯಲ್ಲಿ ಕಾಂಗ್ರೆಸು ಜನತೆಯ ಬೆಂಬಲವನ್ನು ಪಡೆಯಿತೆಂದರೂ ಕೆಲಮಟ್ಟಿಗೆ ಸಲ್ಲುವುದು. ಆದುದರಿಂದಲೇ ಕಾಂಗ್ರೆಸ್ ಕಾರ್ಯಕರ್ತರ ಹೊಣೆಗಾರಿಕೆಯು ಈ ಸಂಗತಿಯಲ್ಲಿ ಅತ್ಯಧಿಕ. ಆಂತರಿಕ ಧೋರಣೆಗೆ ಸಂಬಂಧಿಸಿದ ರಾಜ್ಯಗಳ ಪುನರ್ಘಟನೆಯ ಕುರಿತು ಸ್ವೀಕರಿಸಿದ ಗೊತ್ತುವಳಿಯನ್ನು ಮುತ್ಸದ್ದಿತನದಿಂದ ಸಿದ್ಧಗೊಳಿಸಿದ್ದರೂ ಇದರಿಂದ ದಾಕ್ಷಿಣಾತ್ಯರ ಮನಸ್ಸಿಗೆ ತುಂಬ ಅಸಮಾಧಾನವಾಗಿದೆ. ಭಾಷಾನುಗುಣ ಪ್ರಾಂತರಚನೆಗಳ ಆಶೆಯನ್ನು ಬಹಳಕಾಲದಿಂದ ಮನಸಿನಲ್ಲಿ ಇಟ್ಟುಕೊಂಡಿದ್ದ ಇಲ್ಲಿಯ ಧುರೀಣರಿಗೂ ಜನತೆಗೂ ಭಾಷೆಯೊಂದೇ ತಳಹದಿಯಾಗಲಾರದೆಂಬುದರಿಂದ ಹಾಗೂ ಆಂಧ್ರಪ್ರಾಂತ ನಿರ್ಮಾಣದ ಯಶಾಪಯಶಗಳ ತುಲನೆಯ ಮೇಲಿಂದಲೇ ಉಳಿದ ಭಾಷಾವಾರು ಪ್ರಾಂತಗಳ ರಚನೆ ಎಂಬುದರಿಂದ ನಿರಾಶೆಯಾಗಿದೆ. ನಾವೀಗ ಭಾಷಾವಾರು ಪ್ರಾಂತರಚನೆಯ ಗೊಂದಲದಲ್ಲಿ ಬಿದ್ದರೆ ಪಂಚವಾರ್ಷಿಕ ಯೋಜನೆಯನ್ನು ಬೆಂಬಲಿಸಲು ಅಸಮರ್ಥರಾಗುವೆವು. ಪರಿಣಾಮವಾಗಿ ಕಾಂಗ್ರೆಸಿನ ಪ್ರಯತ್ನಗಳು ಫಲಿಸದೇ ಹೋದಾವು ಎಂಬ ಅಂಜಿಕೆ ಕಾಂಗ್ರೆಸ ವರಿಷ್ಠರಲ್ಲಿದೆ. ಕಾಂಗ್ರೆಸ್ಸು ಸ್ವೀಕರಿಸಿದ ಇನ್ನೊಂದು ಗೊತ್ತುವಳಿ ಗಡಿನಾಡ ಗಾಂಧೀ ಎಂದು ಹೆಸರಾಂತ ಖಾನ ಅಬ್ದುಲ್ ಗಫಾರಖಾನರ ಶೋಚನೀಯ ಪರಿಸ್ಥಿತಿಯ ಕುರಿತು ಕಳವಳ ವ್ಯಕ್ತಪಡಿಸಿದೆ. ಭಾರತ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಬಾದಶಹಾ ಖಾನರನ್ನು ಸ್ವಾತಂತ್ರ್ಯ ಪ್ರಾಪ್ತಿಯ ಬೆನ್ನಿಗೇ ತುರಂಗಕ್ಕೆ ಅಟ್ಟಿ ಪಾಕಿಸ್ತಾನ ಸರಕಾರವು ವೀರ ಪುರುಷರ ತೇಜೋವಧೆ ಮಾಡಿರುವುದು ನಿಜಕ್ಕೂ ಗರ್ಹಣೀಯ. ನೆಹರೂ ಹೇಳಿದಂತೆ ಬಾದಶಹಾ ಖಾನರಂಥ ಮಹಾ ಪುರುಷರು ಸ್ವಾತಂತ್ರ್ಯ ಪ್ರಿಯ ರಾಷ್ಟ್ರಗಳಿಗೂ ವಂದ್ಯರು. ಅಂಥವರನ್ನು ಪಾಕಿಸ್ತಾನವು ಜೈಲಿನಲ್ಲಿ ಕೊಳೆಯಿಸುತ್ತಿರುವುದು ಹೇಯವೇ ನಿಜ. ಅವರ ಕುರಿತು ನಾವೇನು ಮಾಡುವಂತಿಲ್ಲದಿರುವುದು ದೈವದುರ್ವಿಪಾಕವೇ ಸೈ. ಆದರೂ ಈ ಗೊತ್ತುವಳಿ ಕಾಂಗ್ರೆಸಿನ ಸದಿಚ್ಛೆ ಸದಭಿಪ್ರಾಯಗಳನ್ನು ಬಿಂಬಿಸುತ್ತದೆ. ಮತ್ತು ತನ್ನ ಕಳವಳನ್ನು ಸ್ಪಷ್ಟ ಮಾತಿನಲ್ಲಿ ವ್ಯಕ್ತಗೊಳಿಸುತ್ತದೆ. ಪಾಕಿಸ್ತಾನದೊಡನೆ ನಮಗಿರುವ ಸಂಬಂಧ ಕೆಡುವ ಭಯವಿದ್ದುದರಿಂದಲೇ ಇಂಥ ಮಹತ್ವದ ಗೊತ್ತುವಳಿ ಇಷ್ಟು ತಡವಾಗಿ ಸ್ವೀಕರಿಸಲ್ಪಟ್ಟಿದೆ. ಆ ದೇಶವೊಂದರೊಡನೆ ಮಾತ್ರ ನಮ್ಮ ಸಂಬಂಧ ಸೌಮ್ಯವಾಗಿಲ್ಲ. ಆದರೂ ಸಾಮಾನ್ಯವಾಗಿ ಭಾರತದ ವಿದೇಶ ನೀತಿ ಸರ್ವತ್ರ ಪ್ರಶಂಸೆಯನ್ನು ಗಳಿಸಿದೆ. ಇದಷ್ಟೆ ಮೆಚ್ಚುಗೆಯನ್ನು ಸೂಚಿಸುವ ಗೊತ್ತುವಳಿಯನ್ನು ಕಾಂಗ್ರೆಸು ಸ್ವೀಕರಿಸಿದ್ದು ಸಮಂಜಸ. ದಕ್ಷಿಣ ಆಫ್ರಿಕೆಯಲ್ಲಿ ನಡೆಯುತ್ತಿರುವ ವರ್ಣೀಯರ ಅಹಿಂಸಾತ್ಮಕ ಸತ್ಯಾಗ್ರಹಕ್ಕೆ ಬೆಂಬಲವೂ ಸಿಂಹಳದಲ್ಲಿ ಸರಕಾರವು ಭಾರತೀಯರ ಕುರಿತು ತೋರುವ ಅನುಚಿತ ವರ್ತನೆಯ ಖಂಡನೆಯೂ ಕಾಂಗ್ರೆಸಿನ ಆದರ್ಶಕ್ಕೂ ನೀತಿಗೂ [illegible]ಳಿಸಿದ ನಿಲುಮೆಯಾಗಿದೆ. ಜಾತೀಯತೆಯನ್ನು ಖಂಡಿಸುವ ಗೊತ್ತುವಳಿಯನ್ನು ಕಾಂಗ್ರೆಸು ಸ್ವೀಕರಿಸಿದ್ದು ತನ್ನ ಪರಂಪರೆಗೆ ಅನುಗುಣವಾಗಿಯೇ ಇದೆ. ಹೀಗೆ [illegible] ಕಾಂಗ್ರೆಸು ಅಧಿವೇಶನವು ಭಾರತೀಯ ಹಾಗೂ ವಿದೇಶೀಯ ವಾತಾವರಣವನ್ನು ಲಕ್ಷ್ಯದಲ್ಲಿಟ್ಟುಕೊಂಡು ತನ್ನ ಧೋರಣವನ್ನು ಸ್ಪಷ್ಟಗೊಳಿಸಿದೆ. ಜೊತೆಗೆ ಘಟನೆಯಲ್ಲಿ ಕೆಲವೊಂದು ಸಮರ್ಪಕ ತಿದ್ದುಪಡಿಗಳನ್ನು ಸ್ವೀಕರಿಸಿದುದರಿಂದ ಬಲವಾದ ಪರಿಸ್ಥಿತಿಗೆ ಕಾಂಗ್ರೆಸು ಹೊಂದಿಕೊಂಡು ಹೋಗುವಂತಾಗಿದೆ, ಎನ್ನಬಹುದು. ನೆಹರೂರ ಅಧ್ಯಕ್ಷ ಭಾಷಣದಲ್ಲಿ ಕಾಂಗ್ರೆಸಿನಲ್ಲಿ ಕಂಡುಬರುವ ಅಕ್ರಮ ನಡವಳಿಕೆಯನ್ನು ಕಟು ವಚನಗಳಲ್ಲಿ ಖಂಡಿಸಲಾಗಿದ್ದರೂ-ಯೋಗ್ಯ ಹೆಜ್ಜೆಗಳನ್ನು ಕಾಂಗ್ರೆಸು ಮುಂದಿಡದಿದ್ದಲ್ಲಿ ಈ ಬಾಯಿ ಮಾತಿನ ಬೆದರಿಕೆಗಳು ಪ್ರಯೋಜನಕ್ಕೆ ಬಾರವು, ಕಾಂಗ್ರೆಸ್ಸು ಚೈತನ್ಯಪೂರ್ಣವಾದ ಸಂಸ್ಥೆಯಾಗಿ ಜನಪ್ರಿಯತೆಯನ್ನು ಗಳಿಸಿ ವಿಶ್ವವಿಖ್ಯಾತಿಯನ್ನು ಹೊಂದಬೇಕೆಂಬ ಪ್ರಾಮಾಣಿಕ ಆಶೆಯಿರುವ ನಾವೆಲ್ಲರೂ-ಕಾಂಗ್ರೆಸಿನ ಕೊಳೆಯನ್ನು ನಿರ್ಮೂಲಿಸಿ ಅದನ್ನು ಶುದ್ಧಗೊಳಿಸಿ, ಆದರ್ಶರೀತಿಯಲ್ಲಿ ವಿಧಾಯಕ ಕಾರ್ಯದಲ್ಲಿ ಧುಮುಕುವುದು ಶ್ರೇಯಸ್ಕರ.

ಮುತ್ಸದ್ದಿತನದ ದ್ಯೋತಕವೆನ್ನಲಡ್ಡಿಯಿಲ್ಲ. ಆದರೆ-ಈ ರೀತಿಯ ಮೌನ ಕಾರ್ಯಕ್ರಮದ ಪರಿಣಾಮವಾಗಿ ಭಾರತೀಯರಾದ ನಾವು ಹೊಡೆತ ತಿನ್ನುವ ಅನಿವಾರ್ಯ ಪರಿಸ್ಥಿತಿ ಏರ್ಪಡುತ್ತದಲ್ಲ ಎಂದು ಆನಿಕರಿಸಬೇಕು. ಶಾಂತಿಗಾಗಿ ನಾವೆಷ್ಟು ಕಳಕಳಿಯನ್ನು ತೋರಿಸಿದರೂ ಯುದ್ಧ ಸನ್ನಾಹವು ಭರದಿಂದ ನಡೆಯುತ್ತಿರುವುದನ್ನು ನೋಡುವಾಗ-ಭಾರತವೂ ಬಲಿಷ್ಠ ಸೈನ್ಯ ಕಟ್ಟಿಕೊಳ್ಳುವುದು ಅಗತ್ಯವೆಂದು ತೋರುತ್ತದೆ. ಪಾಕಿಸ್ತಾನ-ಭಾರತ ಗಳೊಳಗಿನ ಈಗಿರುವ ಸೈನ್ಯ ಪ್ರಮಾಣ ಒಡ್ಡವಾಗಿದೆ. ಹಾಗೆಂದು, ಆಂಗ್ಲೋ ಅಮೇರಿಕನ್ನರ ತಂತ್ರ ಫಲಿಸಿದರೆ—ಕಾಶ್ಮೀರವೇ ಮುಂತಾದ ಈಗಿರುವ ನೆವವೇ ನಮಗೆ ಗಂಡಾಂತರವನ್ನೊಡ್ಡಬಹುದು.

ಮೈಸೂರು ಭಿಕ್ಷುಕರ ಬೇಡಿಕೆ

ಹೀಗೆಲ್ಲ ತಾವು ಸಂದೇಹ ತಾಳಿದರೂ-ಅಂಜುಗುಳಿಗಳಾಗ-ವುದಸಲ್ಲವಿಲ್ಲ. ಪ್ರಸ್ತುತ ಅಂಥ ಹೆದರಿಕೆಯನ್ನೇನೂ ನಾವು ತಾಳುವುದು ಬೇಡ ಏಕೆಂದರೆ ಎಲ್ಲ ರಾಷ್ಟ್ರಗಳಿಗೂ ಅವಗಳ ತಲೆಭಾರವೇ ಅಸಹನೀಯವೆನಿಸಿದೆ. ಇಂಗ್ಲೆಂಡಿನಲ್ಲಿ ಎಷ್ಟು ಬಿಸ್ಕತ್ತು ಇನ್ನೂ ಒಗೆಕರಿಸುವುದರಿಂದ ಅದು ಕಡು ದಾರಿದ್ರ್ಯದ ಬೀಡಾಗಿ ಪರಿವರ್ತಿಸ್ಪಡೆ. ಹಣಾಭಾವದಿಂದ ಇಂಗ್ಲೆಂಡು ತತ್ತರಿಸುತ್ತಿರುವುದನ್ನು ಕಂಡೇ—ಅಮೇರಿಕ ಮರಳಿ ಧನಸಹಾಯದ ಮಾತೆತ್ತಿದೆ. ಬ್ರಿಟನು ಕೂಡ ಹೊಸತಾಗಿ ಸಂಧಾನಕ್ಕೆ ಹವಣಿಸಿದೆ. ಇಕ್ಕೆಳದಲ್ಲಿ ಇಂಗ್ಲೆಂಡದ ಮುಂದಾಳಿಕರು ಸಿಕ್ಕಿಬಿದ್ದು ಪೇಚಾಡುತ್ತಾರೆ-ಇಷ್ಟರವರೆಗೆ ತಮ್ಮ ಕೈಯಲ್ಲೇ ವಿಶೇಷಾಧಿಕಾರವನ್ನು ಇಟ್ಟುಕೊಂಡು ಅವರು ಮುನ್ನಡೆದರು. ಮರಳಿ ವಿಶೇಷಾಧಿಕಾರ ಕೇಳುತ್ತಿ. ಆದರೆ ಮಜ್ಲೀಸಿನ ಸ್ಪೀಕರ ಕರಾನಿ ಪ್ರಜಾಪ್ರಭುತ್ವ ಪದ್ಧತಿಗೆ ವಿರುದ್ಧದ ಬೇಡಿಕೆ ಎಂದಿರುವರು. ಮುಸಾರಿಗೆ ಸರ್ವಾಧಿಕಾರ ದೊರಯದಿ- ಅವರು ಕೆಲಸ ಸಿನ ಒಸುವ ಸ್ಥಿತಿ ಇಲ್ಲ. ಜನತೆಯಾದರೂ ತನ್ನ ಭೀ ಮುಂತಾದವುಗಳಿಂದ ಮುಸಾದಿಕನ್ನ ಬೆಂಬಲಿಸುತ್ತಿದೆ.

ಮಾರಕ ಪ್ರೇಕ್ಷಕರು

ಇತ್ತ ಈಜಿಪ್ಟಿನಲ್ಲಿಯೂ ನಗೀಬರ ಸರ್ವಾಧಿಕಾರ ನಡೆಯುತ್ತಿದೆ. ಹಿಂದಿನ ಕೈ ಪಕ್ಷದ ವಿಚಾರಣೆ ಎಂಬುದು ನಟ ನಾಟಕ ಜನಾನೆಗಳು ಮುಂದಿದ್ದವೆ. ಹಳೆಯ ಪಕ್ಷಗಳನ್ನು ರದ್ದುಗೊಳಿಸಿದ್ದರೂ-ನೂತನ ಘಟನೆಯ ಉದ್ದವನ್ನೇನೂ ಕೈಗೊಂಡಿರುವುದಿಲ್ಲ. ಅದೇ ಬಳಿ ವೇಳೆ ಇಲ್ಲ. ತಾನು ನಾಯಕನಾಗಿರುವ ಮತ್ತು ರಾಷ್ಟ್ರ ನೇ ಮುಕಗೊಳಿಸಿದ ಮಂತ್ರಿ ಮಂಡಳದ ಮೂಲಕ ಆಡಳಿತ ನಡೆಸುವನಾಗಿಬರೂ ಮುಸಾದಿಕರಂತೆ ವಿಶೇಷಾಧಿಕಾರ ಬೇಡುತ್ತಿರುವರು. ಯಾರು ಅವರಿಗೆ ವಿಶೇಷಾಧಿಕಾರ ನೀಡಬೇಕೋ ತಿಳಿಯದಂಥ ಪರಿಸ್ಥಿತಿ ಈಜಿಪ್ಟಿನಲ್ಲಿದೆ. ತನ್ನ ಕೈಗೊಂಬೆಗಳೆಂದಿರುವ ಮಂತ್ರಿಗಳಿಂದನಾಗಿಯು ವಿಶೇಷಾಧಿಕಾರ ಪಡೆದರೆ ಅದರಲ್ಲಿ ಸ್ವಾರಸ್ಯವೇನೂ ಇಲ್ಲ. ನಿಜವಾಗಿ ಪ್ರಜಾಪ್ರಭುತ್ವದ ಆಸೆ ಇಟ್ಟುಕೊಂಡಿದ್ದ ಈಜಿಪ್ಟಿಯನರಿಗೆ ಸೈನ್ಯ ಕ್ರಾಂತಿಯಿಂದ ಏನೂ ಉಪಯೋಗವಾಯಿತೆನ್ನುವಂತಿಲ್ಲ. ಜನತೆ ಮೂತಾಡುವ ಬಾಯಿ ಯಿಲ್ಲದೆ, ಮೂಕವಾಗಿ ಈ ನಾಟಕ ನೋಡುತ್ತಿದೆ.

ಉಡುಪಿ

ಭಯಂಕರ ಕೊಲೆ— ಸುಪ್ರಸಿದ್ಧ ಅಲೆವೂರು ಮನೆತನಕ್ಕೆ ಸೇರಿದ ಶ್ರೀ ಅಲೆವೂರು ವೆಂಕಟರಾಯರು ಇದೇ ತಾ. 17ರಲ್ಲು ರಾತ್ರಿ ಅಂಬಲಪಾಡಿಯ ತಮ್ಮ ನಿವಾಸದಲ್ಲಿಯೇ ಇರಿತ ಕೊಲೆಪಾತಕಕ್ಕೆ ಗುರಿಯಾಗಿ ಕಾಲವಶರಾದರೆಂದು ತಿಳಿಸಲು ತುಂಬ ವಿಷಾದವೆನಿಸುತ್ತದೆ. ಶ್ರೀ ರಾಯರು ಆ ದಿನ ರಾತ್ರಿ ಸ್ಥಳೀಯ ಕ್ಲಬ್ಬಿನಲ್ಲಿ ಸುಮಾರು 11 ಗಂಟೆಯ ತನಕ ವಿದ್ದು ಬಳಿಕ ಮನೆಗೆ ಹೊರಟು ಮೋಟಾರ್ ಬದ್ದಿನಲ್ಲಿ ತನ್ನ ಮೋಟಾರ್ ಕಾರನ್ನು ಇಟ್ಟು ಹಿಂತಿರುಗುವಷ್ಟರಲ್ಲೇ ಈ ದುಷ್ಕೃತ್ಯ ಈಡಾಪರಿಗಾ ಹೇಳಲಾಗಿದೆ. ಮರುದಿನ ಪ್ರೇತಪರೀಕ್ಷೆಯ ಪೋಸ್ಟುಮಾರ್ಟಮ್ ಸ್ಥಳೀಯ ಆಸ್ಪತ್ರೆಯಲ್ಲಿ ನಡೆಸಲ್ಪಟ್ಟಿತು. ನಂತರ ದಹನಕ್ರಿಯೆಗಾಗಿ ಶವವನ್ನು ಅವರ ಹುಟ್ಟೂರಾದ ಅಲೆವೂರಿಗೆ ಒಯ್ಯಲಾಯಿತು. ಶ್ರೀ ರಾಯರ ಅಕಾಲ ನಿಧನದಿಂದುಂಟಾದ ಅಪಾರ ವೇದನೆ, ಬಂಧುಬಳಗ ಮೊದಲಾದವರೊಡನೆ ನಮ್ಮ ಸಂತಾಪವನ್ನು ಸೂಚಿಸುವೆವು.

ಬಾಪೂಜಿ ಪುಣ್ಯದಿನಾಚರಣೆ ಕಾರ್ಯಕ್ರಮ — ಉಡುಪಿಯ ಸರ್ವೋದಯ ಹಾಗೂ ಕಾರ್ಯ ಮಂಡಳದ ಆಶ್ರಯದಲ್ಲಿ ಬಾಪೂಜಿ ಪುಣ್ಯತಿಥಿಯು ಇದೇ ತಾ. 30 ರಲ್ಲು ಈ ಕೆಳಗಿನ ಕಾರ್ಯಕ್ರಮಗಳಿಂದ ಆಚರಿಸಲ್ಪಡುವುದು. ಬೆಳಿಗ್ಗೆ 6 ಗಂಟೆಗೆ ನಗರ ಸ್ವಚ್ಛಂದತೆ, ಮಧ್ಯಾಹ್ನ 4ರಿಂದ 4.45 ಗಂಟೆಯ ತನಕ ಬೋರ್ಡ್ ಹಾಯ್ಸ್ಕೂಲ್ ಪೀಪಲ್ಸ್ ಹಾಲಿನಲ್ಲಿ ಸಾಮೂಹಿಕ ನೂಲುವುದು; ನಂತರ ಸಾಮೂಹಿಕ ಪ್ರಾರ್ಥನೆ, ಸಭೆ, ಭಾಷಣ ಇತ್ಯಾದಿ

ಶ್ರೀ ಪುರಂದರದಾಸರ ಪುಣ್ಯದಿನಾಚರಣೆಯು — ಉಡುಪಿಯ ಕಲಾಪ್ರೇಮ ದಲ್ಲಿ ತಾ. 15ರಲ್ಲು ಬೆಂಗಳೂರಿನ ಡಾ॥ ಬಿ. ವೆಂಕಟೇಶಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು.

ಶ್ರೀ ರಾಮನವಮಿ ಉತ್ಸವವನ್ನು ಉಡುಪಿಯಲ್ಲಿ ಶಾಶ್ವತವಾಗಿ ಆಚರಿಸುವರ ಸಂಕಲ್ಪದೊಂದನ್ನು ಸ್ಥಾಪಿಸುವ ಸಭೆಯೊಂದು ತಾ. 18ರಲ್ಲು ಸಂಜೆ ಶ್ರೀ ಮಧ್ವನಾತೀರ್ಥರ ಸ್ವಾಮಿ ಸನ್ನಿಧಿಯಲ್ಲಿ ಡಾ॥ ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘವನ್ನು ರಚಿಸಿ ನಡಸುವರೆ ನಿಯಮಾವಳಿಗಳನ್ನು ತಯಾರಿಸುವರೆ ಎಡ್ವೋಕೇಟ್ ಶ್ರೀ ಬಿ. ವಾಸುದೇವರಾಯರಿಗೆ ಅಧಿಕಾರವೀಯಲಾಯಿತು.

ಪೆರ್ಡೂರು—ಇಲ್ಲಿಯ ಶ್ರೀ ಅನಂತಪದ್ಮನಾಭ ಸ್ವಾಮಿಯ ಸನ್ನಿಧಿಯಲ್ಲಿ ಇದೇ ತಾ. 15ನೇ ರಾತ್ರಿ ಶ್ರೀ ಪುರಂದರ ದಾಸರ ಪುಣ್ಯದಿನಾಚರಣೆಯು ಶ್ರೀ ಎಮ್. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು.

ಬೆಳುವಾಯಿ—ಸ್ಥಳೀಯ ಬೋರ್ಡ್ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ಇದೇ ತಾ. 10ರಲ್ಲು ರಾವ್‌ಬಹಾದೂರ್ ಪಿ. ರಂಗನಾಥ ಪುಂಜರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾಬೋರ್ಡು ಪ್ರೆಸಿಡೆಂಟ್ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ಪಾರಿತೋಷಕ ವಿತರಣೆ ಮಾಡಿದರು. ಸಭೆಯಲ್ಲಿ ಕಡಂದಲೆ ಶ್ರೀಗ ಳಾದ ಪಿ. ಪದ್ಮಯ್ಯ ಹೆಗ್ಡೆ, ಕಾಂತಪ್ಪ ಶೆಟ್ಟಿ, ಎನ್. ರಾಘವ ಶೆಟ್ಟಿ ಮೊದಲಾದವರು ಮಾತನಾಡಿದರು. ಮಕ್ಕಳ ವಿನೋದಾವಳಿಗಳೊಡನೆ ಸಂತರ ಶ್ರೀ ಬಿ. ಸೀತಾರಾಮ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಗುಡ್ಡೆ ಅಂಗಡಿ—ಇದೇ ತಾ. 12ರಲ್ಲು ಹಿರಿಯಡ್ಕ ಅರ್ಬಿ ಸಮಾಜದ ಕಡೆಯಿಂದ ಪ್ರಚಾರ ಸಭೆಯು ಶ್ರೀ ಮುದ್ರಾಡಿ ಕೃಷ್ಣಯ್ಯ ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಿ, ಡಾ॥ ಯು. ಕೃಷ್ಣ, ಎಮ್. ಗೋವಿಂದ ಶೆಟ್ಟಿ, ಕೆ. ಅನಂತಯ್ಯ ಮೊದಲಾದವರ ಭಾಷಣಗಳಾದುವು.

ವಿಚಾರ ಪ್ರಚೋದಕವಾದ ಪ್ರತಿಯೊಬ್ಬರೂ ಓದಲೇಬೇಕಾದ ನವನವೀನ ಪುಸ್ತಕಗಳು!

ಗೀತಾ ರಹಸ್ಯವನ್ನು ತಿಳಿಯ ಬಯಸುವವರಾರು?

ಡಾ. ಹೊಸಕೆರೆ ಚಿದಂಬರಯ್ಯ ಕೃತ **ಗೀತೆಯ ಕೈಗನ್ನಡಿ** ಭಗವದ್ಗೀತೆಯ ಸಮಾಲೋಚನಾ ಭಾಷಾಂತರ

ಪುಟಗಳು 428 ಬೆಲೆ 0-12-0 ಅಂಚೆವೆಚ್ಚ 0-4-0

100 ಪ್ರತಿಗಳಿಗೆ ರೂ. 60; 200ಕ್ಕೆ ರೂ. 110; 500ಕ್ಕೆ ರೂ. 250

ಕಥೆ, ಕಾದಂಬರಿ, ನಾಟಕ, ಚಿತ್ರ, ಪ್ರಬಂಧ, ಹರಟೆ ಮೊದಲಾದ, ನೋಡಿದರೆ ಬಿಡದಿರುವ ಅಂತರಂಗ ಪ್ರಕಟನಾಲಯದ ರೂ 30 ಕ್ಕಿಯದ 86 ಪ್ರಕಟಿತ ಗಳನ್ನು ಒಮ್ಮೆಯೇ ಕೊಂಡುಕೊಳ್ಳುವವರಿಗೆ ರೂ. 24ಕ್ಕೆ ಕೊಡಲಾಗುವುದು.

ನಾರೀಹೃದಯ ರೂ.	1	8	ಪ್ರಕಾಶ ರೂ.	2	8	ನನಪಿಗಾಗಿ ರೂ.	2	0
ಭಾರತೀಯ ಕತೆಗಳು	1	12	ಮಾನವನ	3	0	ಕಾಶ್ಮೀರ ಕಥಾಮಾಲೆ	1	8
ಕನ್ನಡಿಯ ನೋಡಿಗನಲ್ಲಿ	1	12	ಫಂಚಿಪಾರಾ	2	0	ಪ್ರೇಮ ವಿಜಯ	1	4
ಕವಿತಾ ಕುಸುಮ	2	0	ನಂದಾದೀಪ	1	0	ರಂಗಭೂಮಿ	0	10
ಕುಬೇರನಿಲ್ಲದ ಹಣ	2	0	ಜಯಮಾನ್ಯರ	1	8	ಭಾರತದಲ್ಲಿ ಜಾತಿಭೇದ	1	0
ವೈಚಿತ್ರಾಪಿತ ಯಕ್ಷ	1	4	ದೇಶಭಕ್ತ	1	4	ನೀತಿ ಸಾವರ್ಕರ	1	4
ಸುಲಭದಲ್ಲಿ ಇಂಗ್ಲಿಷ್	2	0	ಮನೆ ಮದ್ದು	2	8	ಕದಂಬ	1	4
ನೀತಿವಿನೋದ ಕತೆಗಳು	..	..	ಸರಸ್ವತಿ	0	12	ಜಾಗೃತಿ	1	4
ಜೀವನ ಸಂಗ್ರಾಮ	1	8	ಸೀತಾಪತಿ	0	8	ರೇಖಾವಿಚಿತ್ರ	0	8

ಇವೇ ಮೊದಲಾದ ನೂರಾರು ಬಗೆಯ ಉಪಯುಕ್ತ ಪುಸ್ತಕಗಳ ಕೆಟಲಾಗಿಗೆ ಬರೆಯಿರಿ ವ್ಯಾಪಾರಿಗಳಿಗೂ, ಪುಸ್ತಕಭಂಡಾರಗಳಿಗೂ ವಿಶೇಷ ಸವಲತ್ತುಗಳಿವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ದಿ

ನ್ಯೂ ಕರ್ನಾಟಕ ಪ್ರಾವಿಡೆಂಟ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಉಡುಪಿ, ದ. ಕನ್ನಡ

ಒಂದು ಸಾವಿರ ರೂಪಾಯಿ ವರೆಗೆ ವಿಮೆ ಮಾಡಲಿಕ್ಕೂ, ಏಜನ್ಸಿ ಯಾ ಸ್ಪೆಶ್ಯಲ್ ಏಜನ್ಸಿ ಪಡೆದು ದುಡಿತಕ್ಕೆ ತಕ್ಕ ಪ್ರತಿಫಲ ಪಡೆಯಲಿಕ್ಕೂ ಯೋಗ್ಯವಾದ ಪ್ರಾವಿಡೆಂಟ್‌ವಿಮಾ ಕಂಪೆನಿ.

ನಿಯಮಗಳಿಗೆ ಬರೆಯಿರಿ

THE NEW KARNATAKA PROVIDENT INSURANCE CO. LTD. UDIPI

ಬರುವವಾರ ನವಯುಗವು

ಪ್ರಜಾಪ್ರಭುತ್ವ

ವಿಶೇಷ ಸಂಚಿಕೆಯಾಗಿ ಹೊರಡಲಿದೆ.

100 ಪುಟಗಳು ಬೆಲೆ 0—8—0

ಏಜಂಟರು ತಮಗೆ ಬೇಕಾದ ಪ್ರತಿಗಳಿಗೆ ಒಡನೆ ಬರೆದುಕೊಳ್ಳುವುದು,

ಮೆನೇಜರ್, ನವಯುಗ ಉಡುಪಿ.



ವೆಲ್ಕಿನ್ಸ್ ಟೂತ್ ಪೇಸ್ಟ್

ಮಿಂಚುವ ನಗುವಿಗೆ, ಮತ್ತು ಒಸಡಿನ ಆರೋಗ್ಯಕ್ಕೆ!

ಯು ಎಸ್ ಎ. ರಾಜ್ಯದ ಪ್ರಸಿದ್ಧ ಡಾಕ್ಟರರೊಬ್ಬರ ತಯಾರಿಕೆ

Welkin Laboratory (N)
Calcutta 3.

ಉಡುಪಿ ಪೇಟೆಗಳ ಮೋಟೆಸ್ಟಾಕಿಸ್ಟರು ಬೇಕಾಗಿದ್ದಾರೆ



ಭಾರತವು ಯಾವ ವಿಷಯದಲ್ಲೂ ಹಿಂದುಳಿದಿಲ್ಲ. ಇದರ ಸೂಚನೆಗಾಗಿ ಲಕ್ಷಾಂತರ ಸುರಿದು ತಂದ ಸಂಕಲ್ಪಿತ ಸೊತ್ತು.

ಮೆಹಬೂಬರ ನೊಟ್ಟಮೊದಲ ಪ್ರಯತ್ನದ ಫಲಿತಾಂಶ.

ಆ ನ್ (ವರ್ಣರಂಜಿತ)

ಪ್ರೇಮನಾಥ್, ದಿಲೀಪ್, ನಿಮ್ಮಿ ಹೊಸ ನಟಿ ನಾದಿರಾ.

ತಾ. **28—1—1953**ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.



ಮೇಧಾವಿಯಾದ ಮಹಾ ದಂಡನಾಯಕ

೩ನೇ ಪುಟದಿಂದ

ತವು ಸುಮಾರು ಏಳುಕೋಟಿ ರುಪಾಯಿ ಬೆಲೆ ಬಾಳುವ ಆಡಿನ ತೊಗಲೇ ಮುಂತಾದುವನ್ನು ವರ್ಷವರ್ಷವೂ ನಿರ್ಯಾತ ಮಾಡುತ್ತಾರೆ. ತೊಗಲನ್ನು ಹದಗೊಳಿಸುವಲ್ಲಿ ಸುಧಾರಿತ ಕ್ರಮಗಳನ್ನು ಕೈಗೊಂಡರೆ ಅದರಿಂದ ದೇಶದ ಆದಾಯವು ಹೆಚ್ಚಲಿಕ್ಕೆ ಆಸ್ಪದವುಂಟಾಗುತ್ತದೆ ಈ ಉದ್ದೇಶದಿಂದಲೇ ಈ ಕ್ಷೇತ್ರದಲ್ಲಿ ಸಂಶೋಧನೆಯು ನಡೆಯಬೇಕು. ಇವಲ್ಲದೆ ಕರೈಕುಡಿಯಲ್ಲಿ ಡಾ ರಾಧಾಕೃಷ್ಣನ್ನರಿಂದ ವಿದ್ಯುತ್ ರಾಸಾಯನಿಕ ಪ್ರಯೋಗಶಾಲೆಯೊಂದನ್ನೂ ಕಳೆದವಾರ ಉದ್ಘಾಟಿಸಲ್ಪಟ್ಟಿತು. ವಿಜ್ಞಾನವು ವಿನಾಶವನ್ನು ತಂದೊಡ್ಡಬಲ್ಲುದಾದರೂ ಈ ದೃಷ್ಟಿಯಿಂದ ಅದನ್ನು ಪೂಜಿಸುವಾತ ಮಾನವನಲ್ಲ—ರಾಕ್ಷಸನೇ ಸೈ. ವಿಜ್ಞಾನವು ಮನುಷ್ಯನ ಸುಖಸಾಧನಗಳನ್ನು ಹೆಚ್ಚಿಸಿ ಅನುಕೂಲತೆಯನ್ನು ಕಲ್ಪಿಸಿ ಕೊಡಬೇಕು. ಭಾರತವು ವಿಜ್ಞಾನ ಪ್ರಪಂಚಕ್ಕೆ ಈ ಹಿಂದೆ ಅತ್ಯಮೂಲ್ಯವಾದ ಕಾಣಿಕೆಯನ್ನು ನೀಡಿರುತ್ತದೆ. ಗಣಿತ ಶಾಸ್ತ್ರದಲ್ಲಿ ಅತ್ಯಂತ ಪ್ರಾಮುಖ್ಯವೆನಿಸಿದ ಸಂಖ್ಯಾಜ್ಞಾನವನ್ನು ಮೊದಲು ಮಾಡಿಸಿ ಕೊಟ್ಟವರು ಭಾರತೀಯರು ಬರ್ಟ್ರೆಂಡ್ ರಸೆಲ್ಲರು ಹೇಳುವಂತೆ ಶೂನ್ಯದ ಕಲ್ಪನೆಯನ್ನಾದರೂ ಭಾರತೀಯರೇ ಸೂಚಿಸಿಕೊಟ್ಟರು. ಛಾಂದೋಗ್ಯೋಪನಿಷತ್ತಿನಲ್ಲಿ ವರ್ಣಿಸಲ್ಪಟ್ಟಿರುವ ಹಲವು ಸಂಗತಿಗಳು ಇಂದಿನ ವಿಜ್ಞಾನ ಸಾಧನೆಗೆ ಕನ್ನಡಿ ಹಿಡಿಯುವಂತಿವೆ. ಭಾರತೀಯರು ವಿಜ್ಞಾನ ದೃಷ್ಟಿಯನ್ನು ಹೆಚ್ಚಿಸಿಕೊಳ್ಳುವುದು ಯೋಗ್ಯವೆಂದು ಉಪರಾಷ್ಟ್ರಾಧ್ಯಕ್ಷರು ಹೇಳಿದರು.

೪ನೇ ಪುಟದಿಂದ

ಹಲವು ಪ್ರಾಮುಖ್ಯ ಪ್ರಶ್ನೆಗಳು ಉದ್ಭವಿಸುತ್ತವೆಂದೂ ನೆಹರೂ ಹೇಳಿದರು. ಭಾಷೆ ಅಥವಾ ಸಂಸ್ಕೃತಿಯು ಹೊಸರಾಜ್ಯಗಳ ನಿರ್ಮಾಣ ಪ್ರಶ್ನೆಯಲ್ಲಿ ಪ್ರಧಾನ ಪಾತ್ರ ವಹಿಸುವಂತಿಲ್ಲ ಉಳಿದ ಸಂಗತಿಗಳಿಗೂ ಅಷ್ಟೇ ಮಹತ್ವವು ಪ್ರಾಪ್ತವಾಗುತ್ತದೆ. ಎಂದು ನೆಹರೂ ನುಡಿದಿರುವುದು ಈ ಆಂದೋಲನವನ್ನು ಕೊನೆಗೊಳಿಸುವುದಕ್ಕೆ ಪೂರ್ವಭಾವಿಯಾದ ಸೂಚನೆ ಎಂದೆನ್ನಬಹುದೇನೋ! ಕಾಂಗ್ರೆಸಿನ ಮೇಲೆ ಭಾರತದ ನವ ನಿರ್ಮಾಣ ಕಾರ್ಯದಂಥ ಭಾರವಾದ ಹೊರೆ ಬಿದ್ದಿರುವುದರಿಂದ ಈಗ ತನ್ನೆಲ್ಲ ಶಕ್ತಿಯನ್ನು ಅದು ಈ ಕಾರ್ಯಕ್ಕಾಗಿ ವ್ಯಯಿಸಬೇಕಿದೆ. ಎಂತಲೇ ಪಂಚವಾರ್ಷಿಕ ಯೋಜನೆಯಲ್ಲಿ ಎಲ್ಲರೂ ಉತ್ಸಾಹದಿಂದ ಸಹಕರಿಸಬೇಕೆಂದು ಗೊತ್ತುವಳಿಯನ್ನು ಸ್ವೀಕರಿಸಿದೆ ಕಾಂಗ್ರೆಸಾಧ್ಯಕ್ಷರು ಬಹಿರಂಗ ಅಧಿವೇಶನದಲ್ಲಿ ಮಾಡಿದ ಭಾಷಣದಲ್ಲಿ ಭಾರತದ ಶಾಂತಿ ಧೋರಣೆಯ ಪುನಸ್ಮರಣೆ ಇತ್ತು; ಕಾಂಗ್ರೆಸು ಸುವ್ಯವಸ್ಥೀಕರಣವಾಗಬೇಕೆಂಬ ಬಗ್ಗೆ ಕಳಕಳಿ ತುಂಬಿತ್ತು. ಮತ್ತು ವಿದೇಶ ನೀತಿಯ ಬಗ್ಗೆ ಸರಕಾರವು ಅನುಸರಿಸಿಕೊಂಡು ಬಂದ ನಿಲುಮೆಗೆ ಮೆಚ್ಚುಗೆಯೂ ಇತ್ತು.

ಮಂಗಳೂರು

ಮಹಾಸಭೆ— ದ. ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ವಾರ್ಷಿಕ ಮಹಾ ಸಭೆಯು ಇದೇ ತಾ. 25ನೇ ಆದಿತ್ಯವಾರ ಸಾಯಂಕಾಲ ಗಂಟೆ 4ಕ್ಕೆ ಶ್ರೀ ಸಾಕೂರೂ ಅಂಕಯ ಸೆಟ್ರ ಅಧ್ಯಕ್ಷತೆಯಲ್ಲಿ ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಜರಗುವುದೆಂದೂ ಸಂಘದ ಮೆಂಬರೂ ಹಿತೈಷಿಗಳೂ ಸಭೆಗೆ ದಯವಿಟ್ಟು ಬರಬೇಕೆಂದೂ ಕಾರ್ಯದರ್ಶಿ ಶ್ರೀ ಕೆ. ಸುಂದರರಾಮ ಶೆಟ್ಟರು ವಿನಂತಿಸುತ್ತಾರೆ.

ಮುನಿಸಿಪಲ್ ಕೌನ್ಸಿಲಿನ ಸಾಮಾನ್ಯ ಸಭೆಯು— ಇದೇ ತಾ. 10 ರಂದು ಜರಗಿದಾಗ ಆರ್ಥಿಕ ಸಮಿತಿಯವರು ತಯಾರಿಸಿದ 1953-54ನೇ ವರ್ಷದ ಅಂದಾಜು ಮುಂಗಡ ಪತ್ರವು ವಿಶೇಷ ಚರ್ಚೆ, ಬದಲಾವಣೆಗಳಿಲ್ಲದೆ ಮಂಜೂರಾಯಿತು. ಕೌನ್ಸಿಲಿನ ಒಟ್ಟು ಆದಾಯವು ರೂ. 36,20,500 ಮತ್ತು ಒಟ್ಟು ವೆಚ್ಚವು ರೂ. 34,20,680 ಮತ್ತು ವರ್ಷಾಂತ್ಯದ ಉಳಿಕೆ ರೂ. 2,62,550 ಎಂದು ಮುಂಗಡ ಪತ್ರದಲ್ಲಿ ತೋರಿಸಲಾಗಿದೆ ನಗರ ಸಭೆಯು 'ಗ್ರೇಂಡ್ ಫನ್ ಫೇರ್' ಎಂಬ ಹೆಸರಿನ ಆಟಗಳಿಗೆ ಲೈಸನ್ಸನ್ನು ಕೊಡುವ ವಿಚಾರದಲ್ಲಿ ಶ್ರೀ ಬಿ. ಎಸ್. ಭಾಸ್ಕರ ರೈಗಳು ತಂದ ಗೊತ್ತುವಳಿಯು ತೀವ್ರವಾದ ಚರ್ಚೆಗೊಳಗಾಗಿ ಸಭಿಕರು ಹಲವರು ಅಂತಹ ಆಟಗಳನ್ನು ಖಂಡಿಸಿ ವ್ಯಾಖ್ಯಾನ ಮಾಡಿದರು. ಕೊನೆಯಲ್ಲಿ ಅಧ್ಯಕ್ಷ ಶ್ರೀ ಸೂರ್ಯನಾರಾಯಣ ಅಡಿಗರ ಹಾಗೂ ಕಮಿಶನರ ಉತ್ತರದ ಬಳಿಕ ಮತಗಣನೆಯಾಗಿ ಗೊತ್ತುವಳಿಯ ಪರವಾಗಿ ಎಂಟು ಮತಗಳೂ ವಿರೋಧವಾಗಿ ಹದಿನೇಳು ಮತಗಳೂ ದೊರೆತು ಗೊತ್ತುವಳಿಯು ಬಿದ್ದುಹೋಯಿತು.

ಭಾಷಣ—ದಕ್ಷಿಣ ಭಾರತ ರೈಲು ಮಜೂರರ ಮುಖಂಡರೂ ಶಾಸನ ಸಭೆಯ ಸದಸ್ಯರೂ ಆದ ಶ್ರೀ ಕಲ್ಯಾಣ ಸುಂದರಂ ಅವರು ಇದೇ ತಾ. 14ರಂದು ಮಂಗಳೂರಿಗೆ ಬಂದಿದ್ದು ಇಲ್ಲಿಯ ರೈಲು ಮಜೂರ ಸಂಘದ ನೇತೃತ್ವದಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ರೈಲು ಮಜೂರರ ಸಂಘಟನೆಯ ಕುರಿತು ಭಾಷಣವಿತ್ತರು. ಶ್ರೀ ಎ. ಕೃಷ್ಣ ಸೆಟ್ಟರು ಸಭಾಧ್ಯಕ್ಷತೆ ವಹಿಸಿದ್ದರು

ಶ್ರೀ ಪುರಂದರ ದಾಸರ ದಿನಾಚರಣೆಯು— ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಶ್ರೀಮತಿ ವತ್ಸಲಾ ದೇವಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಕುಮಾರಿ ಪಿ. ತಾರಾ ಸ್ವಾಗತ ಮಾತುಗಳನ್ನಾಡಿದರು ಶ್ರೀಮತಿ ಎಮ್. ಸತ್ಯಭಾಮಾದೇವಿಯವರು ಪುರಂದರ ದಾಸರ ಜೀವನ ವೃತ್ತಾಂತವನ್ನು ತಿಳಿಸಿದರು. ವಿದ್ಯಾರ್ಥಿನಿಯರು ಪುರಂದರ ದಾಸರೂ ಕೀರ್ತನೆಗಳನ್ನು ಹಾಡಿದರು. ಅಧ್ಯಕ್ಷರ ಭಾಷಣವಾದ ನಂತರ ಶ್ರೀಮತಿ ಎಸ್. ಕೃಷ್ಣಾಬಾಯಿಯವರು ಧನ್ಯವಾದಗಳನ್ನರ್ಪಿಸಿದರು. ಸ್ಥಳೀಯ ಥಿಯೋಸೋಫಿಕಲ್ ಸೊಸೈಟಿ ಮತ್ತು ಕರ್ನಾಟಕ ಗಾನ ಕಲಾಮಂಡಳಿಯ ನೇತೃತ್ವದಲ್ಲಿ ಶ್ರೀ ಪುರಂದರ ದಾಸರ ದಿನಾಚರಣೆಯು ಕೀರ್ತನೆ ಮೊದಲಾದ ಕಾರ್ಯಕ್ರಮಗಳಿಂದ ಜರಗಿತು.

ದ. ಕ. ಜಿಲ್ಲಾ ರಜಕ ಕುಲೋದ್ಧಾರಕ ಸಂಘದ ವಿಶೇಷ ಮಹಾ ಸಭೆಯು— ಇದೇ ತಾ. 11ರಲ್ಲು ಶ್ರೀ. ಜಿ. ಎ. ಸಾಲಿಯನ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ದಿವಂಗತ ಶ್ರೀ ಎಮ್. ರಾಮಪ್ಪ ಸಾಲಿಯಾನರ ನಿಧನಕ್ಕೆ ದುಃಖ ಸೂಚಿಸುವ, ಅವಿವಾದ ಪ್ರದೇಶಗಳನ್ನೊಳಗೊಂಡ ಆಂಧ್ರ ಪ್ರಾಂತ ನಿರ್ಮಾಣದಲ್ಲಿ ಕೇಂದ್ರ ಸರಕಾರವು ಕೈಕೊಂಡ ಕಾರ್ಯಕ್ರಮವನ್ನು ಸ್ವಾಗತಿಸುವ, ಕರ್ನಾಟಕ ಪ್ರಾಂತ ನಿರ್ಮಾಣ ಕಾರ್ಯವನ್ನೂ ಕೈಗೊಳ್ಳಬೇಕೆಂದು ಕೇಂದ್ರ ಸರಕಾರವನ್ನೂ ಪ್ರಾರ್ಥಿಸುವ ಮೊದಲಾದ ನಿರ್ಣಯಗಳಾದುವು.

ತೆಂಗಿನ ತೋಟಗಾರರಿಗೆ ಸೂಚನೆ— 'ನೆಫಾಂಟಿಸ್'. ಎಂಬ ಕ್ರಿಮಿಗಳು ತೆಂಗಿನ ಸಸಿಗಳಿಗೆ ತುಂಬಾ ಹಾನಿಯನ್ನುಂಟು ಮಾಡುತ್ತಿವೆ. ಈ ಕ್ರಿಮಿಗಳು ತೆಂಗಿನ ಮರದ ಸೋಗೆಗಳ ಹಸುರಿನ ಭಾಗವನ್ನು ತಿಂದು ಸೋಗೆಗಳನ್ನು ಬರಿದಾಗಿ ಮಾಡುತ್ತವೆ. ಈ ಕ್ರಿಮಿಗಳ ಹಾವಳಿಗೀಡಾದ ತೆಂಗಿನ ಮರಗಳು ಫಲವತ್ತಾಗುವುದಿಲ್ಲ. ನೇತ್ರಾವತಿ ನದಿಯ ದಕ್ಷಿಣದ ದಡದಲ್ಲಿ ಮತ್ತು ಇತರ ಕೆಲವು ಸ್ಥಳಗಳಲ್ಲಿ ಈ ಕ್ರಿಮಿಗಳ ಹಾವಳಿ ಇದೆಯೆಂದು ತಿಳಿದು ಬರುತ್ತದೆ. ಈ ಕ್ರಿಮಿಗಳನ್ನು ನಾಶಮಾಡುವ ಒಂದು ಸುಲಭೋಪಾಯವನ್ನು ಸರಕಾರದವರು ಕಂಡು ಹಿಡಿದಿರುತ್ತಾರೆ. ಕೃಷಿ ಇಲಾಖೆಯ ಆಫೀಸುಗಳಲ್ಲಿ ಈ ಕ್ರಿಮಿಗಳನ್ನು ನಾಶ ಮಾಡುವ ವಿಧಾನವನ್ನು ಪ್ರತಿಯೊಬ್ಬರೂ ತಿಳಕೊಳ್ಳಬಹುದು. ಮಾತ್ರವಲ್ಲದೆ ಅಗತ್ಯವುಳ್ಳ ಮದ್ದನ್ನು ಪಡಕೊಳ್ಳಬಹುದಾಗಿದೆ.

ದ. ಕ. ಜಿಲ್ಲಾ ಬೋರ್ಡಿನ— ಅರ್ಜೆಂಟ್ ಸಭೆಯು ಇದೇ ತಾ. 24ನೆ ಶನಿವಾರ ಪೂರ್ವಾಹ್ನ 10 ಗಂಟೆಗೂ ಸಾಮಾನ್ಯ ಸಭೆಯು ಅದೇ ದಿನ ಪೂರ್ವಾಹ್ನ 10 30 ತಾಸಿಗೂ ಜರಗಲಿವೆ.

ಹೊಸ್ಟೆಲ್ ದಿನಾಚರಣೆ— ಮಂಗಳೂರಿನ ಎಸ್. ಆರ್. ಎಸ್. ಹೋಮಿನ ಹೊಸ್ಟೆಲ್ ದಿನಾಚರಣೆಯು ಇದೇ ತಾ 1-2-'53ನೆ ಆದಿತ್ಯವಾರ ಸಂಜೆ 5 ಗಂಟೆಗೆ ಗವರ್ನಮೆಂಟ್ ಕಾಲೇಜಿನ ಪ್ರಿನ್ಸಿಪಾಲ್ ಜನಾಬ್ ಎಸ್ [illegible] ಅವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಸಂಟರಗಳಿ ಪರಿಹಾರ ಕಮಿಟಿ ಸಭೆ—ಇದೇ ತಾ. 16ರಲ್ಲು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲೆಯ ಬ್ಯಾಂಕುಗಳು, ವಕೀಲ ಸಂಘಗಳು, ವಿದ್ಯಾಸಂಸ್ಥೆಗಳು ಇತ್ಯಾದಿ ಸಂಘ ಸಂಸ್ಥೆಗಳು ಧನ ಸಹಾಯ ನೀಡುವಂತೆ ವಿನಂತಿಸುವ ನಿರ್ಣಯವಾಯಿತು. ಈ ಕಮಿಟಿಗೆ ಜಿಲ್ಲಾ ಕಲೆಕ್ಟರರು ಅಧ್ಯಕ್ಷರಾಗಿಯೂ, ಡೆಪ್ಯುಟಿ ಕಲೆಕ್ಟರರು ಕೋಶಾಧಿಕಾರಿಗಳಾಗಿಯೂ ಶ್ರೀಗಳಾದ ಪಿ ಆರ್. ಆರ್. ಪೂಂಜ ಮತ್ತು ಕೆ. ಟಿ. ಸೆಟ್ಟರು ಜತೆ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿರುವರು ಕಮಿಟಿಯ ಮುಂದಿನ ಸಭೆಯು ತಾ. 4—2—1953 ರಲ್ಲಿ ಸೇರುವುದು.

ಹಂಗಾರಕಟ್ಟೆ- ಜನಾಬ್ ಟಿ. ಎಸ್. ಅಬ್ದುಲ್ ರಹಮಾನ್ ಸಾಹೇಬರ ಪುತ್ರ ಶೇಕ್ ಎಮ್ ಕಾಸಿಂ ಸಾಹೇಬರು ಬೊಂಬಾಯಿಯ ಮಾಜಿ ಎಮ್. ಎಲ್. ಸಿ ಜನಾಬ್ ಶೇಕ್ ಅಬ್ದುಲ್ ಖಾದರ್ ಜಮಾಲುದ್ದೀನ ಬಂಗಿ, ಅವರ ಮಗಳು ಬೇಗಮ್ ಸಲೀಮಳನ್ನು ಇದೇ ತಾ 18ರಲ್ಲು ಹೊನ್ನಾವರದಲ್ಲಿ ಮದುವೆಯಾದರು. ಈ ಸಂಬಂಧ ವರನ ಮನೆಯಲ್ಲಿ ತಾ 21ರಲ್ಲು ಸತ್ಕಾರ ಸಮಾರಂಭ ನಡೆಯಿತು.

ಕುಂಬಳೆ— ದ. ಕ. ಜಿಲ್ಲಾ ರೂರಲ್ ವೆಲ್ಫೇರ್ ಕಮಿಟಿಯ ಸಭೆಯು ತಾ 18 ರಂದು ಜಿಲ್ಲಾ ಕಲೆಕ್ಟರ್ ಶ್ರೀ ಸಿ. ಎ. ರಾಮಕೃಷ್ಣನ್ ಅವರ ಅಧ್ಯಕ್ಷತೆಯಲ್ಲಿ ಜರಗಿತು ಕಡಲು ದಡಕ್ಕೆ ಹೋಗಲು ಸಂಕದ ಅವಶ್ಯಕತೆ, ಆಸ್ಪತ್ರೆ ಸ್ಥಾಪನೆ ಇತ್ಯಾದಿ ವಿಚಾರಗಳಲ್ಲಿ ಸಭಿಕರು ಕೊಟ್ಟ ಸಲಹೆಗಳನ್ನು ಪರಿಶೀಲಿಸಿ ಠರಾವು ಮಾಡಲಾಯಿತು. ಸ್ಥಳೀಯ ಕಮ್ಯೂನಿಟಿಪ್ರೊಜೆಕ್ಟಿನವರ ವತಿಯಿಂದ ಏರ್ಪಡಿಸಲಾದ ವಸ್ತು ಪ್ರದರ್ಶನವನ್ನ ಜಿಲ್ಲಾ ಕಲೆಕ್ಟರರು ತೆರೆದರು.

ಶ್ರೀ ಯಕ್ಷೇಶ್ವರಿ ಪ್ರಸನ್ನ:
ತಲಮಕ್ಕಿ ಹುಣ್ಸೆಮಕ್ಕಿ ಪೇಟೆ ಕುಂದಾಪುರ ತಾಲ್ಲು,

ಮಹಾಶಯರೆ,

ಇದೇ ಬರುವ ಫೆಬ್ರವರಿ ತಾ 19-2-53ನೇ ಗುರುವಾರ ಶ್ರೀ ಯಕ್ಷೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ವರ್ಷಂಪ್ರತಿ ನಡೆಯುವ ಮಂಡ್ಲ ಸೇವೆ ಮತ್ತು ಗೆಂಡ ಸೇವೆಗೆ ತಾವು ತಮ್ಮ ಇಷ್ಟಮಿತ್ರರೊಡನೆ ಬಂದು ಸದ್ರಿ ಸೇವೆಗಳನ್ನು ಪೂರೈಸಿ, ಶ್ರೀಮುಡಿ ಗಂಧ ಪ್ರಸಾದ ಪಡೆದು ಶ್ರೀ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಸನ್ನಿಧಿ ಕಡೆಯಿಂದ ಅಪೇಕ್ಷಿಸುವ,

ಆಡಳ್ತೆದಾರರು-

ಎಚ್. ಮಹಾಬಲ ಭಂಡಾರ್ಕಾರ್

More & More
PEOPLE BUY
PLATO
REGD.
PLATO FOUNTAIN PEN No. 66
The pen of the day
M. P. P. I. LTD BOMBAY 4

THE BOMBAY LIFE ASSURANCE COMPANY, LTD.
ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೋ. ಲಿಮಿಟೆಡ್.
(ಸ್ಥಾಪನೆ: 1908)
ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದ
ಪ್ರಧಾನ ಏಜಂಟರು:
ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ
ಇತರ ಶಾಖಾ ಕಚೇರಿಗಳು:-
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂದ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.
ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ
ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು
ಸಲ್ಲಿಸುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.
ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಮೂಲ್ಕಿ ಬೆಂಕ್;
ಲಿಮಿಟೆಡ್, ಮೂಲ್ಕಿ.
1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು
The Moolky Bank Ltd.,
Moolky, S K

ಖಾದೀ ಆಂದೋಲನವೇಕೆ?

ಈ ವರ್ಷ ಚರಖಾ ಜಯಂತಿಯ ಕಾಲದಲ್ಲಿ ಚರಖಾ ಸಂಘವು 'ಖಾದೀ ಆಂದೋಲನ'ದ ಕಾರ್ಯಕ್ರಮವನ್ನು ದೇಶದ ಮುಂದಿಟ್ಟಿತು. ಆ ಸಂಬಂಧದಲ್ಲಿ ಹೆಚ್ಚಿನ ಸ್ಪಷ್ಟೀಕರಣವನ್ನು ಮಾಡುವುದು ಅಗತ್ಯವಿದೆ. ಖಾದೀ ಆಂದೋಲನದಿಂದಾಗಿ ಈ ವರ್ಷ ಖಾದಿಯ ಕಡೆಗೆ ಜನರ ಮನಸ್ಸು ಪುನಃ ಸ್ವಲ್ಪ ಹೆಚ್ಚು ಆಕರ್ಷಿಸಲ್ಪಟ್ಟದೆನ್ನಲು ಸಂಘವು ಸಂತೋಷಪಡುತ್ತದೆ. ಗತ ಕೆಲವು ವರ್ಷಗಳಲ್ಲಿ ಅದು ಕಡಿಮೆಯಾಗಿತ್ತು. ಈ ವರ್ಷ ಕೆಲವು ಮುಖಂಡರೂ ಪ್ರಭಾವಿ ಮತ್ತು ಜವಾಬ್ದಾರಿ ವ್ಯಕ್ತಿಗಳೂ ತಮ್ಮ ನಿವೇದನೆಗಳನ್ನು ಹೊರಡಿಸಿ, ಜನರು ಖಾದಿಯನ್ನು ಹೆಚ್ಚು ಹೆಚ್ಚಾಗಿ ಖರೀದಿ ಮಾಡಬೇಕೆಂದು ಬಿನ್ನವಿಸಿದರು. ಕೆಲವು ಕಡೆಗಳಲ್ಲಿ ಅವರು ಸ್ವತಃ ಖಾದಿ ವಿಕ್ರಯ ಯೋಜನೆಯನ್ನು ರಚಿಸುವುದರಲ್ಲಿ ಅಗ್ರ ಭಾಗವನ್ನು ವಹಿಸಿ ಸಹಾಯ ಮಾಡಿರುವರು. ಅದಕ್ಕಾಗಿ ಚರಕಾ ಸಂಘವು ಅಂಥಾ ಜನರಿಗೆ ತನ್ನ ಧನ್ಯವಾದಗಳನ್ನರ್ಪಿಸುತ್ತದೆ. ಆದರೆ ಅಷ್ಟರಿಂದಲೇ ಖಾದೀ ಕಾರ್ಯದ ಉದ್ದೇಶವು ಪೂರ್ತಿಯಾಗಿಲ್ಲ. ಆದಕಾರಣವೇ 'ಖಾದಿ ಆಂದೋಲನ'ದ ವಿಚಾರವನ್ನು ಪುನಃ ಜನರ ಮುಂದಿಟ್ಟದೆ. ಖಾದಿ ಖರೀದಿಸಬೇಕೆಂದು ಬಿನ್ನವಿಸುವುದು ಮಾತ್ರವೇ ಸಾಲದು.

ಖಾದೀ ಆಂದೋಲನದ ಎರಡು ಪಾರ್ಶ್ವಗಳವೆನ್ನಬಹುದು, "ವಿಧಾಯಕ"ವೊಂದು 'ನಿಷೇಧಾತ್ಮಕ' ವಿನ್ನೊಂದು. ಖಾದಿಯನ್ನು ತಯಾರಿಸಿ ಉಡುವುದು 'ವಿಧಾಯಕವು' ಖಾದಿಯಲ್ಲದೆ ಅನ್ಯ ವಸ್ತ್ರಗಳನ್ನು ಉಪಯೋಗಿಸದೆ ಅವುಗಳನ್ನು ಬಹಿಷ್ಕರಿಸುವುದು 'ನಿಷೇಧಾತ್ಮಕ'ವು. ಗತ ಮೂವತ್ತು ವರುಷಗಳಿಂದ ವಿಧಾಯಕ ಪಾರ್ಶ್ವದ ಪ್ರಚಾರವು ದೇಶದಲ್ಲೆಲ್ಲ ನಡೆದಿರುತ್ತದೆ. ಆದರೂ ನಿಷೇಧಾತ್ಮಕ ಪ್ರಚಾರವಾಗಿರುವುದಿಲ್ಲ, ಅದೀಗ ಆಗಬೇಕು. ಅದು ಅಗತ್ಯವೆಂಬುದನ್ನು ಚರಖಾ ಸಂಘವೂ ಖಾದೀ ಪ್ರೇಮಿಗಳೂ ದಿನೇ ದಿನೇ ಅನುಭವಪಡುತ್ತಾರೆ. ವಿಶೇಷತಃ ಇಂದು ದೇಶದಲ್ಲಿ ರಾಜ್ಯಾಧಿಕಾರವು ವಿದೇಶಿಯರ ಕೈಯಿಂದ ತಪ್ಪಿ ನಮ್ಮ ದೇಶಸ್ಥರ ವಶದಲ್ಲಿರುವಾಗ ಅದು ಬಹಳ ಅಗತ್ಯವು. ವಿಧಾಯಕ ಖಾದೀ ಕಾರ್ಯದಷ್ಟೇ ಅಗತ್ಯವಾಗೀಗ ನಿಷೇಧಾತ್ಮಕ ಪಾರ್ಶ್ವದ ಕಡೆಗೂ ಜನರ ಧ್ಯಾನವನ್ನಾಕರ್ಷಿಸಿ ಜನ ಮತವನ್ನು ತಯಾರಿಸುವುದೂ ನಡೆಯಬೇಕೆಂದು ಚರಕಾ ಸಂಘವು ಅಭಿಪ್ರಾಯಪಡುತ್ತದೆ. ಆದಕಾರಣ ಖಾದಿಯನ್ನು ಮಾರಬೇಕೆಂಬ ಪ್ರಯತ್ನದೊಡನೆ ನಮ್ಮ ಮುಖಂಡರೂ ಸರ್ವ ಖಾದೀ ಪ್ರೇಮಿಗಳೂ ಗಿರಣೀ ವಸ್ತ್ರವನ್ನು ತ್ಯಜಿಸುವುದರ ಅಗತ್ಯವೇನೆಂಬುದನ್ನು ಜನರಲ್ಲಿ ಹೆಚ್ಚಿನ ಉತ್ಸಾಹದಿಂದ ಪ್ರಚಾರಿಸಬೇಕೆಂದು ಚರಕಾ ಸಂಘದ ವಿನಂತಿ.

ವರ್ತಮಾನ ಖಾದೀ ಸಂಗ್ರಹವನ್ನು ಬೇಗಾದರೂ ಉಪಯೋಗಿಸಿ ಮುಗಿಸುವುದರಿಂದಲೇ ಖಾದಿ ಕಾರ್ಯಕ್ಕೆ ಸ್ಥಿರವಾದ ಪ್ರಯೋಜನವು ಸಿಗಲಾರದು. ಖಾದಿಯ ಉಪಯೋಗವು ಕಡಿಮೆಯಾಗಿರುವುದರಿಂದ ಅದು ಈಗ ಕಡಿಮೆಯಾಗಿ ತಯಾರಾಗುತ್ತದೆ. ಈಗಿರುವ ಸಂಗ್ರಹದ ಎಷ್ಟೋ ಪಾಲು ಹೆಚ್ಚು ಉತ್ಪನ್ನವಾಗಬಹುದಾಗಿದೆ. ಉತ್ಪಾದನೆಯ ಆ ಕಾರ್ಯವೂ, ಜನರಿಗೆ ಸಿಗಬೇಕೆಂಬುದರ ಆವಶ್ಯಕತೆಯೂ ದಿನಂಪ್ರತಿ ಹೆಚ್ಚುತ್ತಿದೆ. ನಿರುದ್ಯೋಗ ಕ್ಷಾಮಗಳ ಭೀಷಣ ನೃತ್ಯವು ದಿನೇ ದಿನ ಹೆಚ್ಚುತ್ತ ಸಾವಿರಾರು ಜನರು ಹಸಿದು ಬಳಲುತ್ತ ಹಳ್ಳಿಗಳನ್ನು ಬಿಡಲಾರಂಭಿಸಿರುತ್ತಾರೆ. ಇದರ ಉಪಾಯವೇನೆಂದರೆ, ವಸ್ತ್ರದುತ್ಪಾದನೆಯು ಕೇವಲ ಗೃಹ ಉದ್ಯೋಗವೆಂದು ಸುರಕ್ಷಿತವಾಗಿರಿಸುವುದೊಂದೇ. ಯಂತ್ರಗಳಿಂದ ವಸ್ತ್ರವನ್ನು ತಯಾರಿಸುವುದರಲ್ಲಿ ನಿರ್ಬಂಧವನ್ನಿಡಬೇಕು. ಈ ವಿಚಾರವನ್ನು ದೇಶವೆಲ್ಲ ಒಪ್ಪಿಕೊಂಡು ಸರಿಯಾಗಿ ಪಾಲಿಸುವಂತೆ ಮಾಡಿಸುವುದೇ ಖಾದಿ ಆಂದೋಲನದ ಮುಖ್ಯೋದ್ದೇಶವು.

ತಮ್ಮ ಗುಲಾಮತನದಿಂದ ಮುಕ್ತವಾಗಲು ಯಾವ ಸಂಸ್ಥೆಯನ್ನುಪಯೋಗಿಸಬೇಕೆಂಬುದನ್ನು ವಿವೇಕಿ ಜನರು ಚೆನ್ನಾಗಿ ಆಲೋಚಿಸಿ ತಿಳಿದಿದ್ದರು. ಕೊನೆಗೆ ಪೂಜ್ಯ ಗಾಂಧೀಜಿಯವರು, ತೋರಿಸಿರುವ ಅಹಿಂಸಾತ್ಮಕ ಸಾಧನೆಗಳೇ ಶ್ರೇಷ್ಠವೆಂದರವರೆಲ್ಲರು ಒಪ್ಪಿಕೊಂಡರು. ಅದೇ ನೀತಿ ಕ್ರಮವು ದೇಶದ ಉತ್ಥಾನಕ್ಕೂ ಹಿತಕರವಾಗುವುದು. ಕೋಟ್ಯಾವಧಿ ಜನರ ಹಿತದೃಷ್ಟಿಯಿಂದ ಉತ್ಪಾದನೆಯ ಸಾಧನೆಗಳನ್ನು ಕೂಡ ನಾವು ವಿವೇಕಪೂರ್ವವಾಗಿ ನಿಶ್ಚಯಿಸಬೇಕು. ಲಕ್ಷೋಪ ಲಕ್ಷ ಜನರು ಅನ್ನವಿಲ್ಲದೆ ಸಾಯುತ್ತಾರೆ. ಅವರ ವಶದಲ್ಲಿದ್ದ ರಾಟೆ ಮತ್ತು ಮಗ್ಗಗಳ ಉದ್ಯೋಗವು ವಿಸ್ತೃತ ಗಿರಣಿಗಳಿಂದಾಗಿ ನಾಶವಾಗಿದೆ. ಗಿರಣಿಗಳ ಈ ಸ್ಪರ್ಧೆಯು ನಮ್ಮ ದೇಶದಲ್ಲಿ ದೂರವಾಗಬೇಕು. ಈ ಖಾದೀ ಆಂದೋಲನದ ಧ್ಯೇಯವು ಈ ಸಾಧನೆಗಾಗಿ ಜನರೆಲ್ಲರು ತಮ್ಮ ಸಹಯೋಗವನ್ನೀಯಬೇಕಾಗಿ 'ಚರಕಾ' ಸಂಘವು ಎಲ್ಲರೊಡನೆ ಪ್ರಾರ್ಥಿಸುತ್ತದೆ.

—ಅ. ಭಾ. ಚ. ಸಂಘ ಕರ್ನಾಟಕ ಮಂಡಲ ವಿಭಾಗ ದ. ಕ. ಮತ್ತು ಕೊಡಗು ಶಾಖೆ ಮಂಗಳೂರು.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ,
ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು
ಯಾವಾಗಲೂ ಸಿದ್ಧವಿವೆ.
ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

THE VIJAYA BANK LTD.

Head Office - - - MANGALORE.

1953

ನವವರ್ಷದ ಶುಭಾಶಯ!

ಕಳೆದ 22 ವರ್ಷಗಳ ನಮ್ಮ ಗಿರಾಕಿಗಳ ಯಥಾರ್ಥ ಸೇವೆ, ಪರಿಪಕ್ವ ಅನುಭವ, ಪ್ರಾಮಾಣಿಕತೆ, ಮತ್ತು ಉತ್ಸಾಹದಿಂದಾಗಿ ಮುಂದೆಯೂ ಯಥಾಪ್ರಕಾರ ನಿಮ್ಮ ಪ್ರೋತ್ಸಾಹ ಕೋರುವ,

ದಿ ವಿಜಯಾ ಬೇಂಕ್ ಲಿಮಿಟೆಡ್

ಹೆಡ್ ಆಫೀಸು - - - ಮಂಗಳೂರು.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 15/51 R. E. P. No. 386/1952

ಖಾದಿ ಗೋಪಾಲ ಪೈ- ಇವರ ಡೆಕ್ರಿದಾರ ಪಾರ ಮೂಡಕರೆ ಅಂಗಡಿ— ಅರ್ಜಿದಾರ ನೋಮಕ್ಕೆ ಕೊರಗ 5ಜನರು ಎದುರು. 3ನೇ ಎದುರು- ಕಮಲ- ದುಗ್ಗಪ್ಪನವರ ಮಗಳು ವ ಡಾಕ್ಟರ್ ಶ್ರೀ. ನಾರಾಯಣ ರೈಗಳ ಹೆಂಡತಿ- ಕೆಯ್ಯೂರು ಗ್ರಾಮ, ಈಗ ಖಾಲಿ ಮೂಡಬಿದರೆಯಲ್ಲಿ ಅವರ ಕೆರೆ ಬಳಿಯಲ್ಲಿ ದಿವಸದು— ಇವರೀಗೆ ಎದುರು ವ್ಯವಹಾರದಲ್ಲಿ ಎದುರು ಡಿಕ್ರಿ ಆಸ್ತಿ ಮಾರಾಟ ಪಕ್ಕ ಮಾಡಿಯೆಂದ ಅರ್ಜಿದಾರರಿಗೆ ಆದ ತಾ. 25-8-1952ನೇ ರಿಜಿಸ್ಟ್ರರ್ ಭಾರಿ ಮೋರಿಗೆ ಬಂದಿರುವದರಿಂದ ಎದುರು ಡಿಕ್ರಿ ಪಕ್ಕ ಪರಭಾರೆ ಮಂಜೂರು ಕುರಿತು ಎದುರ ನೋಟೀಸಿನ ತನಿಖೆ ವ್ಯಾಜ್ಯ ತಾ. 27-1-1953ಕ್ಕೆ ಇಟ್ಟಿರುತ್ತದೆ. ಆದ್ದರಿಂದ ಆ ವ್ಯಾಜ್ಯಕ್ಕೆ ಎದುರು ಆಕ್ಷೇಪಣೆಗಳೇನಾದರೂ ಹೇಳುವದಿದ್ದರೆ 11 ಘಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಬರಹ ಮೂಲಕ ಹೇಳಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದರೆ ಎದುರರನ್ನು ಶಿವಾಯಿ ಎಂತ ಮಾಡಿ ಈ ವ್ಯವಹಾರವನ್ನು ಮುಂದಿನ ತನಿಖೆಯಿಂದ ತೀರ್ಮಾನಿಸಲಾದೀತು. ಎಂತ ಈ ಕೋರ್ಟಿನವರ ಹುಕುಂ ಮೇರೆಗೆ ಈ ನೋಟೀಸು ಮಾಡಿಸಿಯದೆ.

(Sd) B. Ramachandra Rao
M A, B L
Pleader for petitioners
ಪುತ್ತೂರು, ದ. ಕ. ತಾರೀಕು 3-1-1953

THE CATHOLIC BANK LIMITED, COONDAPOOR
ದಿ ಕಥೊಲಿಕ್ ಬ್ಯಾಂಕ್ ಲಿಮಿಟೆಡ್ ಕುಂದಾಪುರ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಚಿನ್ನದ ನಗಗಳ ಅಡವಿನ ಮೇಲೆ ಪಡೆದ ಸಾಲವನ್ನು ಕ್ಲಪ್ತ ವ್ಯಾದೆಗೆ ಪಾವತಿ ಮಾಡದೆ ಬಾಕಿ ಮಾಡಿಕೊಂಡಿರುವುದರಿಂದ ಸದ್ರಿಯವರ ನಗಗಳನ್ನು ಇದೇ ಫೆಬ್ರವರಿ ತಿಂಗಳ ತಾರೀಕು 6ರಲ್ಲು (ಶುಕ್ರವಾರ) ಮಧ್ಯಾಹ್ನ ಗಂಟೆ 2ಕ್ಕೆ ಸರಿಯಾಗಿ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು.

ಸಾಲದ ನಂ.	ಅಡವಿಟ್ಟವರ ಹೆಸರು ಮತ್ತು ವಿಳಾಸ	ಸಾಲದ ಅಸಲು ಮೊಬಲಗು
		Rs.As.Ps
26/1018	ಫಿಲಿಪ್ ಡಿಸೋಜ, ಬೆಂಜಮಿನ್ ಡಿಸೋಜರ ಮಗ, ಕಂಟ್ರಾಕ್ಟರ್, ಆನಗಳ್ಳಿ- ಕುಂದಾಪುರ	45-0-0
26/1800	ರಾಮಚಂದ್ರ ಶೇಟ್, ಲಕ್ಷ್ಮಣ ಶೇಟ್ರ ಮಗ, ವಿರಾಯಿ ವ್ಯಾಪಾರಿ, ವಡೇರ ಹೋಬಳಿ, ಕುಂದಾಪುರ	40-0-0
26/1801	ಶೀನಪ್ಪ ಸೆಟ್ಟಿ, ಸುಬ್ಬಯ್ಯ ಸೆಟ್ರ ಅಳಿಯ, ಸೇನಾಪುರ, ಗುಡ್ಡೆ ಅಂಗಡಿ, ಗಂಗೊಳ್ಳಿ ಪೋಸ್ಟ್	50-0-0
27/ 546	ಗಾಂಜೂಜಿ ನಾರಾಯಣ ತಾಂಡೇಲ್, ಗಣೇಶ ತಾಂಡೇಲರ ಮಗ, ಮೀನುವ್ಯಾಪಾರಿ, ಗಂಗೊಳ್ಳಿ ಪೋಸ್ಟ್	640-0-0
27/105 ಬ	ಜಿ ಗಣೇಶ ಸೇಟ್, ಬಾಬಾ ಶೇಟ್ರ ಮಗ, ಶ್ರಾಫ್ ಗಂಗೊಳ್ಳಿ ಪೋಸ್ಟ್.	25-0 0
28/ 43	ಕೆ ಅಬ್ದುಲ್ ಖಾದರ್ ಸಾಹೇಬ್ ಹಾಜೀ ಸಾಹೇಬರ ಮಗ, ಕಾವರಾಡಿ ಪೋಸ್ಟ್-ಕುಂದಾಪುರ.	100-0-0
28/ 263	ಶ್ರೀಧರ ಸೇಟ್, ವಾಮನ್ ಸೇಟ್ರ ಮಗ, ಪೋಚ್ ರಿಪೇರರ್ ಕುಂದಾಪುರ	30-0-0
28/ 496	ಕೆ. ಶೇಷಾ ಸೇಟ್, ಸುಬ್ರಾಯ ಸೇಟ್ರ ಮಗ, ಕುಂದಾಪುರ ಸ್ಟಾಂಡ್	34-0-0

COONDAPOOR, 17—1—1953
I. Menezes
Agent.

ಸ್ವೀಕಾರ

ಪೊಪ್ಯುಲರ್ ಇನ್ಸ್ಯೂರೆನ್ಸ್ ಕಂಪೆನಿ, ಲಿಮಿಟೆಡ್ ಮಂಗಳೂರು.
ಶಾರದಾ ಛಾಪಖಾನೆ, ಮಂಗಳೂರು.
ನಂದಿ ಬಾರ್ ಸೋಪು ಮಂಗಳೂರು.
ಎಸ್. ಎಲ್. ಶೇಟ್ ಡಯಮಂಡ್ ಹೌಸ್, ಮಂಗಳೂರು.
ನೋರ್ಟನ್ಸ್ ಮತ್ತು ಕಂಪೆನಿ, ಮದ್ರಾಸು.
ಫಿಟ್ಸ್‌ಕ್ಯೂರ್ ಮತ್ತು ಗ್ರೋವ್ಸ್ ಓಯಿಲ್, ಉಡುಪಿ.
ಎಸ್. ಆರ್. ಬೀಡೀಸ್, ಉಡುಪಿ.
ಉಡುಪಿ ಪ್ರೆಸ್, ಉಡುಪಿ.
ಹಿಂದುಸ್ಥಾನ್ ಪೇಪರ್ ಮಾರ್ಟ್, ಉಡುಪಿ.
ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ಇವರ ಸುಂದರವಾದ ಕೆಲೆಂಡರುಗಳನ್ನು ಆತ್ಯಾದರದಿಂದ ಸ್ವೀಕರಿಸಿದ್ದೇವೆ.

In the Court of the Subordinate Judge of S. Kanara

O. S. 146/1952.

Ramakke & Others — — Plffs,
Appaya Bhandary & others — Defts,

To,

2nd defendent, Kunhanna Bhandary alias Kunha Deva Kanthu Naika, residing at Belia Veetil Kappil Therakke uriyil of Krishnapur Pravarthil, Karunaja Palli Taluq Quilon District, Travancore State.

The above named Plaintiffs have filed the above suit against all the members of the family for partition and delivery of all the family properties and that the said suit is posted to 29-1-1953 for your appearance, you are herby informed to appear on that date, failing which the same will be decided exparte.

Yours faithfully,
K. Balakrishna Rao
Advocate for Plffs.
Manglore 31-12 1952.

ಮಹಾ ಪುರುಷರ ವಿಫಲ ಮನೋರಥಗಳು

(೨ನೇ ಪುಟದಿಂದ)

ದಾಗ ರವೀಂದ್ರರ ಸುಪ್ತ ಮನಸ್ಸಿನ ವಿರಾಟ್ ಸ್ವರೂಪದ ದರ್ಶನವಾಯಿತಷ್ಟೆ.

ಬರ್ನಾರ್ಡ್ ಶಾ ಅವರ ಹೆಸರನ್ನು ಕೇಳದವರಿರಲಿಕ್ಕಿಲ್ಲ-ಅವರು ಖ್ಯಾತನಾಮರಾದ ಸಾಹಿತ್ಯಕಾರರು. ಆದರೆ ಪ್ರಾರಂಭಿಕ ಜೀವನದಲ್ಲಿ ಅವರಿಗೆ ಸಾಹಿತ್ಯದ ಕಲ್ಪನೆಯೇ ಹೊಳೆದಿರಲಿಲ್ಲ. ಅವರ ನಿಜವಾದ ಬಯಕೆಗೂ ಕೊನೆಗೆ ಅವರ ಕೊರಳಿಗೆ ಗಂಟುಬಿದ್ದ ಕೀರ್ತಿಗೂ ಯಾವಬಗೆಯ ಸಮಾನತೆಯೂ ಇರಲಾರದು. ಅವರಿಗೆ ತಾನೊಬ್ಬ ಪಾದ್ರಿಯಾಗಿ ಬಾಳಬೇಕೆಂಬ ಹಂಬಲವಿತ್ತು. ಅವರಿಗೆ ಶಿಕ್ಷಣವನ್ನಾದರೂ ಈ ಉದ್ದೇಶದಿಂದಲೇ ಕೊಟ್ಟಿದ್ದರು. ಈ ಪ್ರಿಯ ವ್ಯವಸಾಯದಲ್ಲಿ ನಿಷ್ಣಾತನಾಗಬೇಕೆಂದು ಬಯಸಿ ಇವರೆಷ್ಟು "ಸರ್ಮನ್"ಗಳನ್ನು ಬರೆದರೋ- ಲೆಕ್ಕವಿಲ್ಲ. ಅವುಗಳನ್ನೆಲ್ಲ ತುಂಬ ಆಸ್ಥೆಯಿಂದ ಬಾಯಿಪಾಠ ಮಾಡುತ್ತಿದ್ದರು. ಆದರೆ ಇಷ್ಟು ಅರ್ಹತೆಯನ್ನು ಹೊಂದಿದ್ದರೂ ಶಾರಿಗೆ ಪಾದ್ರಿಪದವಿಯು ದೊರಯಲಿಲ್ಲ. ಅವರು ತೀರಾ ಸಿರ ಶೆಯಿಂದ ಎಚ್ಚಿನ ಕರಡನ್ನು (ಪ್ರೂಫ್) ತಿದ್ದುವ ಕೆಲಸಕ್ಕೆ ಕೈ ಇಕ್ಕಿದರು. ಇಲ್ಲಿಂದಲೇ ಅವರಲ್ಲಿ ಸುಪ್ತವಾಗಿದ್ದ ಸಾಹಿತ್ಯಶಕ್ತಿ ಜಾಗೃತಗೊಂಡು, ಪ್ರತಿಭೆಯನ್ನು ಬೀರಿತು.

ಲೋಕ ಮಾನ್ಯ ತಿಲಕರೊಡನೆ ಸ್ವರಾಜ್ಯ ದೊರೆತಮೇಲೆ ನೀವೇನು ಮಾಡುವೆರೆಂದು ಕೇಳಿದಾಗ- ಯಾವುದಾದರೊಂದು ಕಾಲೇಜಿನಲ್ಲಿ ಗಣಿತದ ಪ್ರಾಧ್ಯಾಪಕನಾಗಿ ಶಾಂತಜೀವನ ಕಳೆಯುವೆನೆಂದು ಉತ್ತರ ಬಂತು.

ವಿಶ್ವವಿಖ್ಯಾತ ತತ್ವ ಜ್ಞಾನಿಯಾದ, ಮೊನ್ನೆತಾನೆ ತನ್ನ ೮೨ನೇ ವಯಸ್ಸಿನಲ್ಲಿ ನಾಲ್ಕನೇ ಮದುವೆಯಾದ ಬರ್ಟ್ರಂಡ್ ರಸ್ಸೆಲ್ಲರಿಗೆ ಕಮಿಶನ್ ಏಜಂಟರಾಗಬೇಕೆಂಬ ಅಭಿಲಾಷೆ ಇತ್ತು. ತನ್ನ ಜೀವನ ಆರಂಭದ ದಿನಗಳಲ್ಲಿ ಕೆಲಸಮಯ ಅವರು ಆ ಕೆಲಸವನ್ನೂ ನಿರ್ವಹಿಸಿದ್ದರು.

೪

ವಿಧಿಯ ವಿಡಂಬನೆಯನ್ನು ನಮ್ಮ ಉಪರಾಷ್ಟ್ರಪತಿ ಸರ್ವಪಳ್ಳಿ ರಾಧಾಕೃಷ್ಣನ್ನರ ಜೀವನದಲ್ಲಿಯೂ ನೋಡಬಲ್ಲೆವು. ಇಂದಿಗೆ ಐವತ್ತು ವರ್ಷಗಳ ಹಿಂದೆ ರಾಧಾಕೃಷ್ಣನ್ನರು ಜೀವನರಂಗದಲ್ಲಿ ಟಿಕೇಟ್ ಕಲೆಕ್ಟರನ ರೂಪದಲ್ಲಿ ತಾನು ಪ್ರವೇಶಿಸುವೆನೆಂದು ಸುಖಸ್ವಪ್ನವನ್ನು ನೋಡುತ್ತಿದ್ದರು. ಒಂದು ವೇಳೆ ಈ ಕೆಲಸ ಕೈಗೆ ಸಿಗದಿದ್ದರೆ ಪೋಲೀಸು ಇನ್ಸ್ಪೆಕ್ಟರನಾಗಿ ಬಿಳಿಕುದುರೆಯ ಮೇಲೆ ಕುಳಿತು ಗಸ್ತು ತಿರುಗುವೆನೆಂದು ಕೊಂಡಿದ್ದರು, ಆದರೆ ಅವರ ಈ ಮನೋರಥಗಳೆರಡೂ ವಿಫಲಗೊಂಡವು. ಟಿಕೆಟ್ ಕಲೆಕ್ಟರ್ ಅಥವಾ ಪೋಲೀಸು ಇನ್ಸ್ಪೆಕ್ಟರ್ ಆಗುವ ಬದಲು ತಾನು ದಾರ್ಶನಿಕ ಜೀವನವನ್ನು ಹೊಂದಿದುದಕ್ಕೆ ರಾಧಾಕೃಷ್ಣನ್ನರಿಗೇ ಆಶ್ಚರ್ಯವಾಗಿರಬಹುದು. ರೇಲ್ವೆಯಲ್ಲಿ ಏನಾದರೊಂದು ಕೆಲಸ ಹಿಡಿಯಬೇಕೆಂಬ ಕಲ್ಪನೆ ರಾಧಾಕೃಷ್ಣನ್ನರಿಗೆ ಮಾತ್ರವಲ್ಲ- ಇನ್ನೂ ಅನೇಕರಿಗೆ ಇತ್ತು. ರಶಿಯಾದ ಭಾಗ್ಯವಿಧಾತ ನೆನಿಸಿದ ಲೆನಿನ್, ನವಚೀನದ ಸರ್ವಾಧಿಕಾರಿ ಮಾವೋತ್ಸೆಟಂಗ್, ರಾಷ್ಟ್ರೀಯ ಚೀನದ ಚ್ಯಾಂಗ್ ಕೈ ಶೇಕ ಈ ಮೂವರೂ ರೈಲ್ವೆ ಗಾರ್ಡ್ ಆಗ ಬೇಕೆಂದು ಬಯಸಿದ್ದರು. ನಮ್ಮ ಭಾರತ ಸರಕಾರದಲ್ಲಿ ರೈಲ್ವೆ ಮಂತ್ರಿ ಯಾಗಿರುವ ಶ್ರೀ ಲಾಲ ಬಹಾದ್ದೂರ ಶಾಸ್ತ್ರಿಗಳಿಗೂ ಬಾಲ್ಯದಲ್ಲಿ ರೈಲ್ವೆ ಗಾರ್ಡನಾಗಿ, ರೈಲನ್ನು ನಡೆಸುವ ಅಧಿಕಾರಿಯಾಗ ಬೇಕೆಂಬ ಆಶೆ ಇತ್ತು. ಈಗ ರೈಲ್ವೆ ಗಾರ್ಡ್ ಅಲ್ಲವಾದರೂ, ರೈಲ್ವೆ ಮಂತ್ರಿಯಾಗಿ ಎಲ್ಲ ರೇಲ್ವೆಗಳ ಮೇಲೆ ಅಧಿಕಾರ ನಡೆಸುತ್ತಾರೆ ಅಷ್ಟೆ.

ಸಂಸತ್ತಿನ ಅಧ್ಯಕ್ಷ, ಶ್ರೀ ಮಾವಳಣಕರರೂ ಮನೋರಂಜಕ ಸಂಗತಿಯನ್ನು ತಿಳಿಸುತ್ತಾರೆ. ಅವರ ತಂದೆ ಮುನಸೀಫರಾಗಿದ್ದರು. ಅಜ್ಜ, ಮುತ್ತಜ್ಜ ಎಲ್ಲರೂ ಸರಕಾರೀ ನೌಕರರಾಗಿದ್ದರು. ಆದರೆ ಇವರ ಮನಸ್ಸಿನಲ್ಲಿ ಸರಕಾರೀ ನೌಕರಿಯ ವಿಚಾರವೇ ಬರಲೊಲ್ಲದು. ವೈದ್ಯಕೀಯ ವೃತ್ತಿಯನ್ನು ಕೈಗೊಳ್ಳಬೇಕೆಂದು ಇವರ ಸಂಕಲ್ಪವಾಗಿತ್ತು! ದುಃಖ ಪೀಡಿತರನ್ನು ನೋಡಿ ಮನಸ್ಸಿಗೆ ಅಸಹ್ಯ ವೇದನೆಯಾಗುತಿತ್ತು. ಅವರಿಗೆ ನೆರವಾಗಿ ಸೇವೆ ಮಾಡಬೇಕೆಂಬ ಪ್ರಬಲಾಕಾಂಕ್ಷೆ ಮನದಲ್ಲಿ ಉದಯಿಸಿತು. ಆದರೇನು? ಇನ್ನೂ ೧೬ ವರ್ಷ ವಯಸ್ಸಿನವರಿದ್ದಾಗಲೇ ಅವರ ತಂದೆ ಮರಣಗೊಂಡರು. ಅಹಮ್ಮದಬಾದನ್ನು ಬಿಟ್ಟು ಹೊರಗೆ ಹೋಗಲಾರದವರಾಗಿ- ಮಾವಳಣಕರರು ವಕೀಲರಾದರು! ಈ ವಕೀಲ ಜೀವನದಲ್ಲಿ ಏನೆಲ್ಲಕಂಡರೋ- ಅಬಳಿಕ ಇನ್ನುಳಿದ ಶೇಷಾಯುಷ್ಯವನ್ನು ಸನ್ಯಾಸಿಯಂತೆ ಕಳೆಯುವ ಹಂಬಲ ಅವರಿಗೆ!

೫

ಮೇಲೆ ಹೇಳಿದವುಗಳು ಕನಸೋ, ಹಗಲುಗನಸೋ ಏನೇ ಇರಲಿ ಈ ಸ್ವಪ್ನಗಳು ನಮ್ಮ ಅಮೂಲ್ಯ ನಿಧಿಯೆಂಬಲ್ಲಿ ಪ್ರತಿಮಾತಿಲ್ಲ. ಈ ನಿಧಿಯಿಂದ ನಾವೆಷ್ಟು ತೆಗೆದುಕೊಂಡು ಉಪಯೋಗಿಸಿದರೂ ಅದು ಕಡಿಮೆಯಾಗದು. ಜರ್ಮನಿಯ ಮಹಾ ಪುರುಷ ಗೆಟೆ ಹೇಳುವಂತೆ "ನನ್ನ ಯಥಾರ್ಥದಿಂದಲ್ಲಿಗಿಂತಲೂ ಸ್ವಪ್ನದಿಂದಲೇ ಜೀವನ ನಡೆಸುತ್ತೇವೆ. ಸ್ವಪ್ನ ಜ್ಯೋತಿ ಒಮ್ಮೆ ನಂದಿ ಹೋದ ಕೂಡಲೇ—ನಾವೂ ಜಡಸ್ವರೂಪರಾಗುತ್ತೇವೆ."

ಇಂಥ ಕನಸುಗಳ ಗರ್ಭದಲ್ಲಿಯೇ ನಮ್ಮ ಉತ್ಕರ್ಷದ ಅಮೃತ ಕುಂಭ ಮುಚ್ಚಿಡಲ್ಪಟ್ಟಿದೆ ಎಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ನಮ್ಮ ಆಶೆ, ಮಹತ್ವಾಕಾಂಕ್ಷೆ ಉತ್ಸಾಹ, ಸ್ಫೂರ್ತಿ, ಅಭಿರುಚಿ, ಮೆಚ್ಚಿಗೆ ಎಲ್ಲವನ್ನೂ ಈ ಅಮೃತ ಕುಂಡದಲ್ಲೇ ಬಚ್ಚಿಡುತ್ತೇವೆ. ಇದರಲ್ಲಿ ಪ್ರಾಣರಸವಿದೆ. ಕರ್ಮದ ಸಂಯೋಗದಿಂದ ಈ ಪ್ರಾಣರಸ ಇನ್ನಷ್ಟು ಸ್ವಾದಿಷ್ಟವೆನಿಸುತ್ತದೆ. ಶಂಕರಾಚಾರ್ಯರು ಹೇಳುವಂತೆ "ಕರ್ಮ ಜಡವಾಗಿದೆ; ಸ್ವಪ್ನವೇ ಚೇತನ ನೋವು ಬೇಸರಗಳಿಂದ ತುಂಬಿ ದುಃಖವನ್ನೂ ಪೀಡೆಯನ್ನೂ ಯಾತನೆಯನ್ನೂ ಕೊಡುವ ಈ ಕರ್ಮರ ಜೀವನದಲ್ಲಿ ನಮ್ಮ ಮನೋರಥಗಳು ಸ್ವಪ್ನರೂಪದಲ್ಲಿ ಸಾಕಾರಗೊಂಡು ನವಚೇತನವನ್ನು ತುಂಬುತ್ತವೆ. ಹೀಗಿಲ್ಲದಿದ್ದರೆ ನಮ್ಮ ಬಾಳು ಬರಡೆನಿಸಿ, ಅಸಹ್ಯವಾಗುವುದು ನಿಶ್ಚಯ. ವಾಸ್ತವಿಕ ಜಗತ್ತಿನ ಭಾವಾತ್ಮಕವಾದ ಅಭಾವಗಳನ್ನು ಸ್ವಪ್ನವು ದೂರೀಕರಿಸುವುದರ ಜೊತೆಗೆ ಜೀವನದ ಕರ್ಕಶತೆಯನ್ನೂ ಹೋಗಲಾಡಿಸುವುದು. ವಿಶ್ವವಿಖ್ಯಾತ ಪುಸ್ತಕ "ಜೀವನ ಕಲೆ"ಎಂಬುದರಲ್ಲಿ ಆಂಡ್ರ್ಯೂ ಮೊರಾವುಸ ಹೀಗೆ ಬರೆದಿರುವರು—

"ಬುದ್ಧಿಯ ಅಸಂಯುತ ಹೊರೆಯಿಂದಲೂ ವಿವೇಕದ ಬಿಗಿಯಾದ ಅಂಕುಶದಿಂದಲೂ ಜೀವನದ ಕವಿತೆ ವಿರಸಿತಗೊಳ್ಳಲಾರದಾಗ ನಿನ್ನನ್ನು ಈ ಮರುಭೂಮಿಯಿಂದ ದೂರ ಒಯ್ಯಲು ಅಸಂಖ್ಯ ತೃಷ್ಣೆಗಳು ಒಪ್ಪದಿದ್ದರೆ ಒಂದೋ ಬದುಕಿದ್ದಂತೆಯೋ ಮರಣವನ್ನು ಸ್ವೀಕರಿಸು; ಅಥವಾ ನನ್ನ ಈ ಸಾಲುಗಳಲ್ಲಿ ಹೇಳುವಂತೆ ಮಾಡು. ನಿನ್ನನ್ನು ಮೃಗ ಮರೀಚಿಯಂತೆ ಈ ತೃಷ್ಣೆಗಳು ಒಯ್ದರೂ ಚಿಂತೆಯಿಲ್ಲ-ಒಂದು ಕ್ಷಣಕಾಲವಾದರೂ ಪರವಾ ಇಲ್ಲ-ಇಡೀ ಬ್ರಹ್ಮಾಂಡದ ಚೈತನ್ಯವನ್ನು ನೀನು ಸ್ಪರ್ಶಿಸಬೇಕು. ನಿನ್ನ ಜೀವನ ನದಿಯಲ್ಲಿ ಮನಸೆಂಬವಾಯು ತರಂಗಗಳನ್ನುಂಟುಮಾಡಲಾರವಾದರೆ ದವ ಮೇಲೆ ಕಲ್ಪನೆಯೆಂಬ ಅಮೃತವನ್ನು ಸೇವಿಸು. ಮನಸ್ಸಿನ ದ್ವಾರವನ್ನು ತೆರೆದು ಮಗುವಿನಂತೆ ಹಗಲು ಗನಸನ್ನು ಆಕ್ರಮಿಸು ಎಂದರೆ ನಿನ್ನ ರೋಮ ರೋಮದಲ್ಲೂ ಅಮೃತ ವರ್ಷವಾದಂತೆನಿಸಿ, ಜೀವನ ಆನಂದಮಯ ವಾಗಿ ಭಾಸವಾಗುವುದು. —ನವನೀತ

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬಗೆ, ತಾಮ್ರ ಹಿತ್ತಾಳಿ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನು ಳೂ ರಾಶಿ ಆಗಿ ರಖಂ ಮತ್ತು ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ಚಾತುಕೊಳ್ಳುವುದು ಚೇಳುವಿಷ ಮೊದಲಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಎಲ್ಲಾ ಕಡೆ, ಪ್ರತಿಯೊಂದು ಪೇಟೆಯಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.
ಮದರಾಸು, ಬೊಂಬಾಯಿ ಮತ್ತು ಕಲ್ಕತ

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ಸ್ನಾನ, ಊಟ, ಉಪಹಾರ, ಚ್ಯೈರ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

"ಗೋಪಾಲ ಬೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ ವಿ. ಶಾಸ್ತ್ರೀ,

ಬಾಣಂತಿಯರ ಹಲವಾಗಿಯೇ ಸೇವಿಸಿ ಮತ್ತು ಪ್ರಕೃತದ ದೀಕ್ಷಿತರಿಯನ್ನು ಸಿದ್ಧಗೊಳಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರವಾದ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ ಭಾಗ್ಯಶಾಲಿಗಳಿಗೂ ಲಭವಾಗಿರುವುದು.

—ವರ
ನವಜೀವಾತು
ಎಂಬ
ಸೂತಿಕಾ ರಸಾಯನ



ಪೆಟ್ಟಿನ ಮಾಹಿತಿಗೆ—ಡಾ! ಯಂ ಸಿ ಶಾಸ್ತ್ರೀ, ಯಲ್. ಐ ಎಂ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಥಾಪಕರು:—ಡಾ! ಬಿ. ಕೆ. ಶಿವರಾಮರಾವ್, ಕುಂಜಬೆಟ್ಟು

ಅಳಿಯ ಸಂತಾನ ಕಾನೂನು

ಇದರ ಪ್ರತಿಗಳು ದೊರೆಯುತ್ತವೆ
ಕನ್ನಡ ಪ್ರತಿಗೆ 0-8-0
ಇಂಗ್ಲಿಷ್ ಪ್ರತಿಗೆ 0-8-0
ನವಯುಗ ಪ್ರೆಸ್, ಉಡುಪಿ.

ವಾರದ ಒಳಿತು ಕೆಡುಕುಗಳು

ತಾ 23—1—53ರಿಂದ ತಾ. 28—1—53ರ ವರೆಗೆ.

ಮೇಷ— ಉದ್ಯೋಗ ಪಥದಲ್ಲಿ ಮುನ್ನಡೆವ ನಿಮಗೆ ಸರ್ವತೋಮುಖದಿಂದ ಸಹಕಾರ ಸೌಲಭ್ಯಗಳು ಲಭಿಸುವವು. ಎಂತಹ ಮಹತ್ಕಾರ್ಯವೇ ಇರಲಿ ನಿಮಗಿಂದು ಅದು ತೃಣ ಸಮಾನೆನಿಸುವದು. ಸಮಾಜದಲ್ಲಿ ಸ್ಥಾನಮಾನಗಳನ್ನು ಪಡೆವಿರಿ. ರಾಜಕೀಯ ಕ್ಷೇತ್ರದಲ್ಲಿ ತುಂಬಾ ವಿಜಯಿಗಳಾಗುವಿರಿ. ಸೇವಕ ವರ್ಗದವರಿಗೂ ಲೇಖಕ ಜನತೆಗೂ ಕೊಂಚ ಬಿಕ್ಕಟ್ಟು ಕಾಣಿಸ ಬಹುದು. ತಾ. 24. 25. ಹೊರತಾಗಿ ಉಳಿದೆಲ್ಲಾ ದಿನಗಳೂ ನಿಮ್ಮ ಶ್ರೇಯಸ್ಸಿಗೆ ಕಾರಣಗಳಾಗಿವೆ.

ವೃಷಭ— ಜನತೆಯೊಡನೆ ಹಿಂದಿನಂತೆ ಕಲಹ ನಿಷ್ಠುರಗಳಾಗಲಾರವು. ವ್ಯಾಪಾರದಲ್ಲಿ ಉತ್ತಮ ಫಲಪ್ರಾಪ್ತಿಯಿದೆ. ನಿಮ್ಮ ಲಾಭ ಸ್ಥಾನಗಳಿರತಕ್ಕ ಉಚ್ಚ ಶುಕ್ರನು ದೇಹ ಸುಖ ಮತ್ತು ಆರ್ಥಿಕ ಸಂಪತ್ತನ್ನು ಹೆಚ್ಚಿಸುವನು. ಷಷ್ಠೇಶ ಉಪಚಯ ಸ್ಥಾನದಲ್ಲಿ ಉಚ್ಚನಾಗಿರತಕ್ಕ ಶನೈಶ್ವರನು ನಿಮ್ಮ ಸರ್ವತೋಮುಖವಾದ ಏಳ್ಗೆಗೆ ಕಾರಣನಾಗುವನು. ಆದರೆ ಆರೋಗ್ಯ ಚೆನ್ನಾಗಿರದು ದುಡಿಮೆಯ ಬಹ್ವಂಶವನ್ನು ಸದ್ವಿನಿಯೋಗ ಮಾಡುವಿರಿ. ತಾ 24, 25, ಅನುಕೂಲದಿನಗಳು.

ಮಿಥುನ— ಈ ವಾರದಲ್ಲಿ ನಿಮ್ಮ ಆರೋಗ್ಯವು ಉತ್ತಮವಾಗುವದು. ಖರ್ಚಿನ ಸಲುವಾಗಿ ಪರರನ್ನಾಶ್ರಯಿಸ ಬೇಕಾಗಿಲ್ಲವು. ಆಕಸ್ಮಿಕವಾಗಿ ಧನಲಭಿಸುವ ಯೋಗವು ಇದೆ. ಎಷ್ಟೇ ಬುದ್ಧಿವಂತರಿದ್ದರೂ ಕೂಡ ಈ ವಾರದಲ್ಲಿ ವಾಕ್ಕಲಹವು ಅನಿವಾರ್ಯವಾಗುವದು. ಸಾಂಸಾರಿಕ ತಾಪತ್ರಯಗಳ ಪೀಡೆಗೆ ಗುರಿಯಾಗಲಿರುವಿರಿ. ಬಂಧುಗಳ ಮತ್ತು ಜನತೆಯ ಬೆಂಬಲವುಳ್ಳ ನಿಮಗೆ ತಾ. 22, 23, 26, 27, 28, ಈ ದಿನಗಳಲ್ಲಿ ಸುಖಲಾಭವಿಜಯಗಳು ಪ್ರಾಪ್ತವಾಗುವವು

ಕರ್ಕಟ—ನಿಮ್ಮ ಭಾಗ್ಯ ಸ್ಥಾನದಲ್ಲಿ ಸುಖಲಾಭ ಪತಿಯಾಗಿ ಕುಳಿತಿರತಕ್ಕ ಉಚ್ಚ ಶುಕ್ರಾಚಾರ್ಯರೊಬ್ಬರೇ ನಿಮ್ಮ ಭಾಗಕ್ಕೆ ಅನುಕೂಲರಾಗಿರುವರು. ಮಿಕ್ಕವರೆಲ್ಲಪ್ರತಿಕೂಲರೇ. ಆದ್ದರಿಂದ ಕೇವಲ ವ್ಯಾಪಾರ ವ್ಯವಹಾರಗಳಲ್ಲಿ ಮಗ್ನರಾಗಿರತಕ್ಕವರಿಗೆ ಈ ವಾರವು ತುಂಬಾ ಪ್ರಯೋಜನ ಕಾರಿಯಾದೀತು ಮನೋದೌರ್ಬಲ್ಯದಿಂದಾಗಿ ಯಾವ ಕಾರ್ಯವನ್ನು ಕಡೆಹಾಯಿಸುವಶಕ್ತಿ ನಿಮಗಿರದು. ಪ್ರತೀಕಾರಾತ್ಮಕರಾದ ಶತ್ರುಗಳ ಪೀಡೆಯು ಅಸಹನೀಯ ವಿರುವದು ವಾರಾದಿಯ 4 ದಿನಗಳು ಹೆಚ್ಚಿನ ಅನಿಷ್ಟಗಳಲ್ಲವು.

ಸಿಂಹ— ಇಂದೀಗ ಸುದೈವಿಗಳೆಂದರೆ ನೀವೇ ಸರಿ ಅಂಗಾರಕನೊಬ್ಬನನ್ನುಳಿದು ಮಿಕ್ಕೆಲ್ಲಾ ಗ್ರಹರು ನಿಮ್ಮಮೇಲೆ ಕೃಪಾ ದೃಷ್ಟಿಯನ್ನು ಬೀರಿರುವಕಾರಣ ಯಾವಭಾಗದಲ್ಲೂ ಕೂಡಾ ನೀವು ಮುಂದಿಟ್ಟ ಹೆಜ್ಜೆಯನ್ನು ಹಿಂದಿಡ ಬೇಕಾಗಿಲ್ಲವು. ನಿಮ್ಮ ಬಯಕೆಯು ಸಕಲವು ಸಿದ್ಧಿಸುವವು ನಿಮ್ಮ ಜೀವನದಲ್ಲಿ ಯಾವೊಂದು ತರದ ಕುಂದು ಕೊರತೆಗಳಿಗೂ ಅವಕಾಶವಿಲ್ಲವು ವಾರಾದಿಯ 2 ದಿನಗಳಲ್ಲಿ ಅರ್ಧಾಂಗಿಯ ಮುನಿಸಿಗೆ ಗುರಿಯಾದೀರಿ

ಕನ್ಯಾ—ನಿಮ್ಮ ದೈವವಿಂದು ಅತೀ ದುರ್ಬಲವಿರುವದು ಏನೇ ಬಂದರು ಬರಲಿ ಅನುಭವಿಸಿಯೇ ಸಿದ್ಧವೆಂಬ ದೃಢ ಸಂಕಲ್ಪಚಿತ್ತರಾದ ನಿಮಗೆ ಶಕ್ತಿ ಸಾಹಸ ಸಾಧ್ಯ ಕಾರ್ಯಗಳಲ್ಲಿ ವಿಜಯವು ಕಟ್ಟಿಟ್ಟ ಗಂಟಿನಂತಿರುತ್ತದು ಮನೆಯಲ್ಲಿ ತಂದೆ ಮಕ್ಕಳೊಳು ಗಂಡ ಹೆಂಡಿರೊಳು ಪರಸ್ಪರ ಬಿಕ್ಕಟ್ಟು ಕಾಣಿಸಲಿದೆ. ವಿಶೇಷತ ಸ್ತ್ರೀ ವರ್ಗದಿಂದ ಅನಿಷ್ಟ ಅಪವಾದಾದಿಗಳು ಪ್ರಾಪ್ತವಾದಾವು. ಎರುಹಿರಿಯರ ಅಗ್ರಹಕ್ಕೆ ಪಾತ್ರರಾಗುವಿರಿ. ವಾರಾಂತ್ಯದ 3ದಿನಗಳು ಉತ್ತಮವಿವೆ.

ತುಲಾ— ಹೆಚ್ಚಿನ ಗ್ರಹರು ಪ್ರತಿಕೂಲವಿದ್ದರೂ ಗುರು ಅನುಗ್ರಹವು ನಿಮಗೆ ಉತ್ತಮವಿರುವುದರಿಂದ ಹೆಚ್ಚಿನ ಕಷ್ಟಗಳನ್ನು ಉಪಾಯದಿಂದ ಪಾರಾಗುವಿರಿ. ಸಾಂಸಾರಿಕ ಕ್ಲೇಶಗಳಿಂದಲೂ ವ್ಯಾಪಾರದಲ್ಲಿನ ನಷ್ಟಗಳಿಂದಲೂ ವಿಶೇಷವಾದ ಚಿಂತೆಗೆ ಗುರಿಯಾಗುವಿರಿ. ಆಪ್ತೇಷ್ಟರ ವಿಯೋಗ ದುಃಖ ಪ್ರಾಪ್ತವಾಗಲಿದೆ. ಬಂಧುವರ್ಗದವರ ಸಹಕಾರದಿಂದ ನಿಮ್ಮ ಆರ್ಥಿಕ ಬಿಕ್ಕಟ್ಟು ದೂರವಾದೀತು. ವಾತದೋಷದಿಂದಾಗಿ ಆರೋಗ್ಯಕ್ಕೆ ಧಕ್ಕೆಯಿದೆ. ವಾರಾದಿಯ 2 ದಿನಗಳು ಇತರ ದಿನಗಳಿಗಿಂತ ಉತ್ತಮ.

ವೃಶ್ಚಿಕ— ಈ ವಾರದಲ್ಲಿ ನಿಮಗೆ ಪುತ್ರಮುಖದಿಂದ ವಿಶೇಷ ಲಾಭ ಮತ್ತು ಕಾರ್ಯಸಿದ್ಧಿಗಳಾಗಲಿವೆ ರಾಜಕೀಯ ರಂಗದಲ್ಲಿ ಇದ್ದ ಇಷ್ಟಪ್ರಾಪ್ತಿಯಾದರೂ ಆತ್ಮೀಯರ ವಂಚನೆಗೆ ಸಿಲುಕುವಿರಿ ನೌಕರ ಜನರಿಗೂ ವಿದ್ಯೋಪಜೀವಿಗಳಿಗೂ ಕೊಂಚ ಅನಿಷ್ಟಪ್ರದಗೀತು ಹಣದ ಬಿಕ್ಕಟ್ಟು ಕೆಲವೊನ್ಮೆ ಮಾನಚ್ಯುತಿಗೆ ಅವಕಾಶವನ್ನುಂಟು ಮಾಡಲಿದೆ ವಾರಾದಿಯ 4ದಿನಗಳಲ್ಲಿ ಬಾಲ್ಯ ಸ್ನೇಹಿತರ ನೆರವಿನಿಂದಾಗಿ ದುಃಖವು ದೂರತೊಲಗಲಿದೆ

ಧನು—ಇಂದಿನ ಪರಿಸ್ಥಿತಿಯಲ್ಲಿ ನಿಮಗಾವತರನಾದ ಚಿಂತೆಗೂ ಅವಕಾಶವಿಲ್ಲವು ಯಾವ ಭಾಗದಲ್ಲಿ ನೋಡಿದರೂ ನಿಮ್ಮ ಸಂಕಲ್ಪದಂತೆ ಕಾರ್ಯವು ಸಿದ್ಧಿಸುವುದಲ್ಲದೆ ನಿಮ್ಮೆಣಿಕೆಗಿಂತಲೂ ಲಾಭವಾದ ಫಲ ಲಭಿಸುವದು ಸಾಮಾಜಿಕ ರಾಜಕೀಯ ಕ್ಷೇತ್ರಗಳಲ್ಲಿ ಕೀರ್ತಿಶಾಲಿಗಳಾಗುವಿರಿ. ಕನ್ಯಾಮಣಿಗಳಿಗೆ ಸದಾ ಸುಖ ನೆಮ್ಮದಿ ದೊರೆಯಲಿದೆ ಆರ್ಥಿಕ ಭಾಗವು ವಿಶೇಷತಃ ಸುಧಾರಿಸಲಿದೆ ವಾರಾಂತ್ಯದ 5ದಿನಗಳು ಸರ್ವಾರ್ಥೇಷ್ಟದಾಯಿಗಳಾಗಿವೆ

ಮಕರ— ನಿಮ್ಮ ಸಂಕಲ್ಪಗಳು ಗಗನ ಗೋಪುರಗಳಂತಾಗುವುದು. ಆತ್ಮೀಯರು ಆಶೆ ಮಾತನು ಗೊಟ್ಟು ಮೋಸಗೊಳಿಸಲಿರುವರು. ಉಷ್ಣ ಪಿತ್ತದೋಷದಿಂದಾಗಿ ಅನಾರೋಗ್ಯವುಂಟಾಗಲಿದೆ. ವ್ಯರ್ಥ ವಾಕ್ಕಲಹ ನಿಷ್ಠುರಗಳಿಗೆ ಗುರಿಯಾಗುವಿರಿ ಹೆಚ್ಚಿನ ನಿಮ್ಮ ತನುಮನಗಳಿಗೆ ಸ್ವಪ್ನದಲ್ಲೂ ಸುಖಶಾಂತಿಗಳು ಲಭಿಸವೆಂದರೆ ತಪ್ಪಾಗದು. ಆದಕಾರಣ ವಾರಾದಿಯ 4 ದಿನಗಳಲ್ಲಿ ಬಲು ಜಾಗರೂಕರಾಗಿರಿ.

ಕುಂಭ-- ಇಂದು ನಿಮ್ಮ ಧನ ಸ್ಥಾನದಲ್ಲಿ ಸುಖಭಾಗ್ಯಾಧಿಪನಾದ ಶುಕ್ರನು ಉಚ್ಚನಾಗಿ ನಿಂತಿರುವ ಕಾರಣ ಆರ್ಥಿಕ ಅಡಚಣೆಗಳಾಗಲಿ ಮನೋನೆಮ್ಮದಿಗೆ ಭಂಗವಾಗಲಿ ಉಂಟಾಗಲಾರದು. ಆದರೆ ನೆನೆದಂತೆ ಕಾರ್ಯವು ಸಿದ್ಧಿಸದು ಹೆಚ್ಚಿನ ಸಮಯವನ್ನು ಪರ್ಯಾಟನದಲ್ಲಿ ಕಳೆಯಬೇಕಾಗುವದು. ಮಾತ್ರವಲ್ಲ ಆಕಸ್ಮಿಕ ಅವಘಡಾದಿಗಳು ಸಂಭವಿಸಬಹುದು ಹೃದ್ರೋಗದಿಂದ ಬಳಲುವಿರಿ, ವಾರಾದಿಯ 2ದಿನಗಳಲ್ಲಿ ಹೆಚ್ಚಿನ ತೊಂದರೆ ಕಾಣಿಸದು.

ಮೀನ— ಸದ್ಯ ನಿಮ್ಮ ದುರ್ದೈವವು ದೂರವಾಯಿತು ಸಂಕಲ್ಪಗಳು ಕಾರ್ಯರೂಪಕ್ಕೆ ಬರಲಿವೆ ಪ್ರಯತ್ನಕ್ಕಿಂತ ಅಧಿಕವಾದ ಫಲವನ್ನು ಹೊಂದುವಿರಿ. ನಿಮ್ಮ ಸುಖೋಪಭೋಗಗಳಿಗೆ ಬೇಕಾದ ವಸ್ತ್ರ ಒಡವೆಗಳು ಅನಾಯಾಸದಿಂದ ಲಭಿಸುವವು ವ್ಯಾಪಾರ ವ್ಯವಹಾರಗಳಲ್ಲಿ ಉತ್ತಮ ಫಲಪ್ರಾಪ್ತಿಯಾಗುವದು ವಾಧ್ಯೆ ಪಿತ್ತ ದೋಷದಿಂದ ದೇಹಾಲಸ್ಯವೂ ಸ್ತ್ರೀ ಕಲಹ ಆತ್ಮೀಯರ ವಿರಹವು ಉಂಟಾಗಲಿದೆ. ತಾ. 24 25. ಉತ್ತಮ ದಿನಗಳಾಗಿವೆ.

ತೃಪ್ತಿಕರವಾದ ವಸತಿ— ಹಿತಕರವಾದ ಊಟ— ರುಚಿಕರವಾದ ಉಪಾಹಾರ ಇವುಗಳಿಗೆ

ಆದರ್ಶ ನಿಲಯವೆಂದರೆ

ವುಡ್ ಲೇಂಡ್ಸ್

ಉ ಡು ಪಿ.

ಯಾತ್ರಿಕರಿಗೂ ಪ್ರಯಾಣಿಕರಿಗೂ ಸರ್ವ ಅನುಕೂಲವಾಗುವಂತೆ ನಗರದ ಕೇಂದ್ರಭಾಗದಲ್ಲಿದೆ

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹಠಾತ್ತಾಗಿ ಋತುಸ್ರಾವವಾಗುವುದು, ಸಕೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾಧಾರಣ ಮುಂದಿಗೆ ಖಾತ್ರಿ ಗುಣವಾಗಿದೆ. ಬೆಲೆ: ರೂ. 3-; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8- [ಪಿ ಕೆ ಹೆಚ್ಚಿನದಾಗಿ ಪ್ರತ್ಯೇಕ]

Mrs D. DEVEE, F DS. (N. J.)
Tollygunge CALCUTTA
ಪ್ರತಿನಿಧಿ: ಕಮಾಕಂಪೆನಿ, ಮಂಗಳೂರು

For Protection and Provision Consult

The New Guardian of India Life Insurance Co., Ltd.

Estd] Head office: MADRAS [1934

NEW BUSINESS Exceeds	...	66½	Lakhs
PREMIUM INCOME	„	... 15	„
LIFE FUND	„	... 54¼	„
ASSETS	„	... 60¼	„
BUSINESS IN FORCE	Nearly	3	Crores

A Policy in this Progressive Life Office is good investment; its Agency is valuable business connection.

Applications for Representation are invited from energetic influential persons, with good connection. *Please apply to:*

G. Wallia, *Branch Manager*,
Diamond Building, Hampankatta, MANGALORE, S. K.

ಗಮನಿಸಿರಿ ! ಪರೀಕ್ಷಿಸಿ ನೋಡಿರಿ !! ಸುಖಪಡೆಯಿರಿ !!!

ನಿಮ್ಮ ಮೋಕ್ಷಕ್ಕಾಗಿ ಲಕ್ಷಿಸಿರಿ.

ಹೆಚ್ಚು ಹೇಳುವುದರಿಂದೇನು? ಹಸಿವೇ ಇಲ್ಲದಿದ್ದರೂ, ಜೀರ್ಣಶಕ್ತಿ ಸಂಪೂರ್ಣವಾಗಿ ಹೋಗಿದ್ದರೂ, ದೇಹವು ಬಹಳವಾಗಿ ಕ್ಷೀಣಿಸಿ ಮೂಳೆ (ಎಲುಬು) ಚರ್ಮಗಳು ಕಾಣುವಹಾಗಿದ್ದರೂ, ಕಣ್ಣುಗುಳಿಗಳು ಬಿದ್ದಿದ್ದು ಹಿಂದಲೆಯನ್ನು ಹೋಗಿ ಸೇರಿದ್ದರೂ, ಬಲ, ಚಟುವಟಿಕೆ, ಧೈರ್ಯ ಇವುಗಳು ಇಲ್ಲದೆ ಹೋದರೂ, ಶುಕ್ಲವೂ, ಇಂದ್ರಿಯವೂ, ಪೂರ್ತಿಯಾಗಿ ನಿಂತು ಹೋಗಿದ್ದರೂ, ಮೇಹವ್ಯಾಧಿಗಳೇ ಮೊದಲಾದ ವ್ಯಾಧಿಗಳಿಂದ ನರಳುತ್ತಿದ್ದರೂ ನಮ್ಮ "ಮನ್ಮಥ ಚಿಂತಾಮಣಿ ಲೇಹ್ಯ" ಸೇವನೆಯಿಂದ ಸಂಪೂರ್ಣ ಸುಖ ದೊರೆಯುವದು. ಅಲ್ಲದೆ ಆರೋಗ್ಯಭಾಗ್ಯವನ್ನೂ ಪಡೆಯಬಹುದು. ಇಂತಹ ಜೀವದಾಯಕವಾದ ಅಮೃತ ಸಮಾನವಾದ ರಸಾಯನವು.

ಬೆಲೆ ಎಂಟೂಲಾ ಡಬ್ಬಿ ಒಂದಕ್ಕೆ ರೂ **2-8-0**

ಮುಲೆಯಾಳ ಮೆಡಿಕಲ್ ಹಾಲ್ ತಿರುವನಂತಪುರಂ- (TRIVANDRUM)

ಲಕ್ಷಾಂತರ ಜನರು ಗುಣಹೊಂದಿದ್ದಾರೆ!

ಸರ್ ಜೀವನ್ ಶಿಲಾಜಿತ್ ಲೇಹ

ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರು ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

ಹಳ್ಳದಿನದ ಲೇಹ್ಯ ರೂ ೫/೪, ೩೦ ದಿನದ ಲೇಹ್ಯ ರೂ ೩೪

(ಪೋಸ್ಟೇಜು ಮಾಫಿ)

ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋನಿನಲ್ಲಿ ಕೇಳಿರಿ.

ರಂಗಭೂಮಿಯ ರಂಗಿನ ತರಂಗ

ಎಸ್. ವೆಂಕಟರಾಜರು ಬರೆದ

ವಿನೋದ ಪ್ರಧಾನ ನಾಟಕ

- ನಡೆದ-ನಡೆಯುವ ವಿದ್ಯಮಾನದ ಒಂದು ಪಡಿಯಚ್ಚು
- ಒಂದು ನಾಟಕವಾಡಲು ಸುಲಭದಲ್ಲಿ ಸಿಕ್ಕಿದ ಸಾಮಾನ್ಯ ಘಟನೆಯೊಂದರ ಸ್ವೈಜ ಚಿತ್ರ
- ಆಕರ್ಷಕ ಪುಸ್ತಕ, ಬೆಲೆ 0 10 0

Edited, Printed & Published By K. H. Shetty at the Navayuga Press, Udipi, S. India,

Regd. No. M. 3618 | Licensed to Post without Prepayment

12-2-1953

Estd 1921 ಸ್ಥಾಪನೆ.
32ನೆಯ ವರ್ಷ

Founder: Sri A. B. Shetty,
Minister for Medical & Public Health

ನವಯುಗ
ಆರೋಗ್ಯ ಮಂತ್ರಿ
ಶ್ರೀ. ಎ. ಬಿ. ಶೆಟ್ಟರಿಂದ
ಸ್ಥಾಪಿತವಾದ ವಾರಪತ್ರಿಕೆ,
ಉಡುಪಿ, ದ. ಕನ್ನಡ

ವಾರ್ಷಿಕ ಚಂದಾ 5-12-0
6 ತಿಂಗಳಿಗೆ 3-0-0
ಬಿಡಿ ಪ್ರತಿಗೆ 0-2-0

ಅಂತರಂಗ
ಕನ್ನಡ ಪತ್ರಿಕೆಯು
[illegible]
86 ಪುಸ್ತಕಗಳು
[illegible] 20 [illegible]
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ

ನವಯುಗ

Vol 32
No 31

NAVAYUGA WEEKLY POST BOX NO 22 UDIPI

ವರ್ಷ ೩೨
ವಾರ ೩೧

ವಿಡಂಬನಕಾರರಲ್ಲಿ ಹೆಸರು ಪಡೆದ ಜಾರ್ಜ ಬರ್ನಾರ್ಡ ಶಾ ಪ್ರಜಾಪ್ರಭುತ್ವವೆಂದರೆ ನಮ್ಮನ್ನು ನಮಗಿಂತ ಹೆಚ್ಚು ಯೋಗ್ಯತೆಯುಳ್ಳವರು ಆಳದಂತೆ ಮಾಡುವ ಪದ್ಧತಿ ಎಂದು ವರ್ಣಿಸಿರುವರು. ಪ್ರತಿಯೊಬ್ಬ ಪ್ರಜೆಗೂ ಆಡಳಿತಾಧಿಕಾರದಲ್ಲಿ ಕೈ ಹಾಕುವ ಅವಕಾಶ ವಿರುವುದರಿಂದ, ಮತ್ತು ಬಹು ಮತದ ಆಶೆ ಅಭಿಲಾಷೆಗಳಿಗೆನೇ ಬೆಲೆ ಬರುವುದರಿಂದ. ಸಮಾಜದಲ್ಲಿರುವ ಸಾಮಾನ್ಯ ಜನರ ಬುದ್ಧಿಯ ಮಟ್ಟದಂತೆಯೇ ಎಲ್ಲವೂ ನಡೆಯುವುದು ಹೊರತು, ಅದಕ್ಕೂ ಹೆಚ್ಚಿನದನ್ನು ಕೆಲವೇ ಬುದ್ಧಿವಂತರು ಅತ್ಯಂತ ಧೈರ್ಯದಿಂದ ಕಾರ್ಯನ್ವಿತಗೊಳಿಸಬಹುದಾದ ಸಾಹಸಗಳನ್ನು ನಾವು ಪ್ರಯೋಗಕ್ಕೆ ತರುವಂತಿಲ್ಲ. ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಎದ್ದು ಕಾಣುವ ಈದೊಂದು ದೋಷದಿಂದಾಗಿ ಮಹಾ ಪುರುಷರ ಅನೇಕಾನೇಕ ಮಹತ್ವದ ಬೋಧನೆಗಳಿಗೆ ಸ್ಥಾನಮಾನ ದೊರೆಯದಂತಾಗಿದೆ. ಅವನ್ನು ಕಾಯಿದೆ-ಕಾನೂನುಗಳ ಮೂಲಕ ಚಿರಸ್ಥಾಯಿಯಾಗಿಸುವ ಹವ್ಯಾಸ ಸಾಮಾನ್ಯ ಜನಕ್ಕೆ ಉಂಟಾಗುವುದಿಲ್ಲ. ಈ ಬೋಧನೆಗಳ ಸಾರ ಸರ್ವಸ್ವವನ್ನು ಅರಿತು ಕೊಳ್ಳುವ ಕುತೂಹಲವಾಗಲೀ ಜಿಜ್ಞಾಸೆಯಾಗಲೀ ಸಾಮಾನ್ಯ ಜನರಲ್ಲಿರುವುದಿಲ್ಲ. ಹೀಗೆ ಅವು ಬೆಳಕಿಗೆ ಬರದೆ ವ್ಯರ್ಥವೊಂದಲು ಎಡೆಯಾಗಿದೆ.

ಗಾಂಧೀಜಿಯಂಥ ಪವಾಡ ಪುರುಷರ ಬೋಧನೆಗಳು ಅವರ ಮರಣದ ಬಳಿಕದ ಈ ಐದು ವರ್ಷಗಳ ಅಲ್ಪಕಾಲದಲ್ಲಿಯೇ ಮೂಲೆ ಗುಂಪಾಗುವ ಲಕ್ಷಣಗಳನ್ನು ನೋಡಿ ಈ ರೀತಿ ವಿಷಾದಿಸಬೇಕಾಗಿದೆ. ಗಾಂಧೀಜಿಯ ಮಾನಸ ಪುತ್ರರೆನಿಸುವವರು ಕೂಡ ಗಾಂಧೀನೀತಿಯನ್ನು ಸಂಪೂರ್ಣ ಕಾರ್ಯಾಚಾರಣೆಯಲ್ಲಿ ತರುವ ಭಕ್ತರಾಗಿಲ್ಲದಿರುವುದೊಂದು ಕೊರತೆ. ಗಾಂಧೀಯಿಂದ ಚೈತನ್ಯವನ್ನೂ ಸ್ಫೂರ್ತಿಯನ್ನೂ ಪಡೆದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹತ್ವದ ಪಾತ್ರವನ್ನು ವಹಿಸಿದ ಕಾಂಗ್ರೆಸು ಸಂಸ್ಥೆಯು ಸ್ವಾತಂತ್ರ್ಯ ಪ್ರಾಪ್ತಿಯ ಬೆನ್ನಿಗೇ ಗಾಂಧೀ ನೀತಿಯ ಉಪೇಕ್ಷೆಗೈಯಲು ತೊಡಗಿತು. ಸಂಭಾವಿತರು ಪ್ರಿಯವಾದ ಸತ್ಯವನ್ನೆ ನುಡಿಯಬೇಕೆಂಬ ಸುಭಾಷಿತವಿದ್ದರೂ ಇಂದಿನ ಪರಿಸ್ಥಿತಿಯ ಗಾಂಭೀರ್ಯವರನ್ನು ಅನುಲಕ್ಷಿಸಿ ಈ ರೀತಿ ನುಡಿಯುವುದವಶ್ಯವೆನಿಸಿದೆ. ಹರಿಜನ ಅಗ್ರಲೇಖದಲ್ಲಿ ಮಗನ ಭಾಯಿ

ಮಧುಪರ್ಕ

ಕಂಫ್ಯೂಶಿಯಸನ ಶಿಷ್ಯನಾದ ಸೇಕುಂಗ ಒಂದು ಸಲ ದೇಶ ಸಂಚಾರದಲ್ಲಿ ನಡೆಯುತಿರುವಾಗ ಬದಿಯ ತೋಟದಲ್ಲಿ ಮುದುಕ ರೈತನೊಬ್ಬ ಕೆಲಸ ಮಾಡುತ್ತಿರುವುದನ್ನು ನೋಡಿದ. ತನ್ನ ಕಾಯಿಪಲ್ಯದ ತೋಟಕ್ಕೆ ನೀರುಣಿಸುವುದಕ್ಕಾಗಿ ಅವನು ಸುತ್ತಲೂ ಕಾಲುವೆಯನ್ನು ಅಗಿಯುತಿದ್ದ. ಮತ್ತು ಬಾವಿಯಿಂದ ಗಡಿಗೆಯಲ್ಲಿ ನೀರೆತ್ತಿ ಆ ಕಾಲುವೆಯಲ್ಲಿ ನೀರು ತುಂಬುತಿದ್ದ. ಅವನ ಪ್ರಯತ್ನಕ್ಕೆ ಪೂರ್ಣ ಫಲ ದೊರೆಯದೆ ನುಗ್ಗದ ಎಷ್ಟು ಕಾಣುತಿತ್ತು.

ಸೇಕುಂಗ ಇದನ್ನು ಕಂಡು "ಅಜ್ಜಾ, ನೀನು ಯಂತ್ರವನ್ನು ಉಪಯೋಗಿಸುವುದಿಲ್ಲ? ಅದೇ ಹಳ್ಳಿಯಲ್ಲಿ ರೈತರು ಯಂತ್ರವನ್ನು ಉಪಯೋಗಿಸಿದುದರಿಂದ ಎರಡೇ ವರ್ಷದಲ್ಲಿ ಧನಿಕರಾಗಿರುವರು" ಎಂದು ಮುದುಕನಿಗೆ ಹೇಳಿದ.

'ನೀನು ಹೇಳುವ ಮಾತು ನನಗೂ ತಿಳಿದಿದೆ, ತಮ್ಮಾ ಆದರೆ ನನ್ನ ಗುರು ನನಗೇನು ಉಪದೇಶಿಸಿರುವನು, ಗೊತ್ತೆ? ಅಂತಾ ಸಾಧನಗಳನ್ನು ಉಪಯೋಗಿಸುವವರು ವ್ಯವಹಾರದಲ್ಲಿ ಧೂರ್ತರು. ಅಂಥವರು ಅಂತಃಕರಣದ ದೃಷ್ಟಿಯಿಂದಲೂ ಒಳ್ಳೆಯವರಲ್ಲ. ಅವರ ಹೃದಯ ಪರಿಶುದ್ಧವಾಗಿರುವುದಿಲ್ಲ. ವ್ಯವಹಾರದಲ್ಲಿ ಲಾಭಪಡೆಯುವುದೇ ಅವರ ಉದ್ದೇಶವು. ಇದು ಅಗುತ್ತದೆ. ಹೀಗೆ ಕಪಟ, ವಂಚನೆ, ಅಸತ್ಯ, ಅನ್ಯಾಯಗಳನ್ನು ಅವರು ಅಪ್ಪಿಕೊಳ್ಳುವರು. ಸರ್ವರಿಗೂ ಸುಲಭದಲ್ಲಿ ಉಪಯೋಗಿಸಬಹುದಾದ ಸಾಧನಗಳನ್ನು ಬಳಸುವುದರಿಂದ ಈ ಬಗೆಯ ವ್ಯರ್ಥವಾದ ಯೋಚನೆಗಳು ನಮ್ಮನ್ನು ತಟ್ಟುವುದಿಲ್ಲ.

ಸೇಕುಂಗ ಈ ಮಾತು ಕೇಳಿ ಲಜ್ಜಿತನಾದ. ಸರ್ವರ ಉಪಯೋಗಕ್ಕೆ ದುರ್ಲಭವಾದ ಯಂತ್ರದಿಂದ ನಿಶ್ಚಿತ ಲಾಭಪಡೆದರೂ ಅಂತಃಕರಣದ ಐಶ್ವರ್ಯ ದೊರಕದೆಂದು ಅವನರಿತುಕೊಂಡ.

ಸರ್ವೋದಯ ನೀತಿ

ದೇಸಾಯರು ಬರೆದಂತೆ ಸ್ವರಾಜ್ಯ ದೊರೆತೊಡನೆಯೇ ರಾಷ್ಟ್ರಪಿತನಿಂದ ನಮಗೆ ಆಗ ಬೇಕಾದ್ದು ಮುಗಿಯಿತೆಂಬ ನಮ್ಮ ತಿಳಿದು ಕೊಂಡೆವು. ಮತ್ತಿನಿಂದ ಆಗಲಿ ಹೋದೆವು ದುರ್ಯೋಧನನು ಶ್ರೀಕೃಷ್ಣನ ಬಳಿಗೆ ಹೋದಾಗ 'ನಿನಗೆ ನಾನು ಬೇಕೋ ಅಥವಾ ಅಪಾರವಾದ ಯುದ್ಧ ಸಮಗ್ರ ಸಾಮಗ್ರಿಯ ಸೈನ್ಯವೋ' ಎಂದಾತನನ್ನು ಶ್ರೀಕೃಷ್ಣನು ಕೇಳಿದನೆಂದು ಮಹಾಭಾರತದಲ್ಲಿ ಹೇಳಿದೆ. ದುರ್ಯೋಧನನು ಸ್ವಾರ್ಥಕ್ಕೆ ಕಟ್ಟು ಬಿದ್ದು, ಸತ್ಯವನ್ನು ಮನಗಾಣದೆ ಯಾದವ ಸೈನ್ಯವೇ ತನಗಿರಲಿ ಎಂದನು. ನಾವು ಕೂಡಾ ಇಂಥದೇ ತಪ್ಪು ನಿರ್ಣಯ ಮಾಡಿರುವೆವೆಂದು ಬರಬರುತ್ತಾ ಗೋಚರಿಸುತ್ತಿದೆ.

ರಾಷ್ಟ್ರಪಿತನ ನಮಗಾಗಿ ಸ್ವಾತಂತ್ರ್ಯವನ್ನು ಸಂಪಾದಿಸಿಕೊಟ್ಟರು. ಅದು ನಮಗೆ ದೊರೆತೊಡನೆ ಹೆಚ್ಚು ಕಡಿಮೆ ನಾವು ತನ್ನು ಮರೆತು ಬಿಟ್ಟೆವು. ನಮ್ಮ ಸುತ್ತಲಿನ ಘಟನೆಗಳನ್ನು ವೀಕ್ಷಿಸಿದಂತೆ ದಿನ ಕಳೆದಂತೆ ನಾವಾತನನ್ನು ಹೆಚ್ಚು ಹೆಚ್ಚು ಮರೆಯುತ್ತಿರುವೆವೆಂಬುದು ಸ್ಪಷ್ಟವಾಗುತ್ತಿದೆ. ಇದಕ್ಕಾಗಿ ನಾವು ಯಾರದೂ ಬ್ಬರ ಮೇಲೆ ದೋಷಾರೋಪಣೆಯನ್ನು ಮಾಡುವಂತಿಲ್ಲ. ನಮ್ಮಲ್ಲಿ ಪ್ರತಿಯೊಬ್ಬನೂ ಅವನವನ ಸಂಸ್ಕಾರ ಮತ್ತು ಸ್ವಭಾವಧರ್ಮದಂತೆ ನಡೆದುಕೊಳ್ಳುತ್ತೇವೆ, ಮತ್ತು ತೀರ ಸ್ವಾಭಾವಿಕವೂ ಹೌದು. ನಮ್ಮ ವಂಶ ಪರಂಪರಾಗತವಾದ ಸಂಸ್ಕಾರವನ್ನು ಜೀವನದಲ್ಲಿ ಹೊಂದಲೂ ಒಳಿತಾದ ನೆಲೆಗಟ್ಟನ್ನು ಸ್ಥಾಪಿಸಲೂ ಉತ್ತಮ ಶಿಕ್ಷಣದ ಅಗತ್ಯವಿದೆ ನಮಗಿಂದು ಇದರ ಅಭಾವವೆನಿಸಿದೆ. ಆದರೂ ಕಳೆದ ರಡು ವರ್ಷಗಳು ಆಚರಿಸಿದ ಸರ್ವೋದಯ ದಿನಾಚರಣೆ ಇಂಥ ಎಳ್ಳಷ್ಟು ಲಕ್ಷಣವನ್ನು ಜನಸಾಮಾನ್ಯಕ್ಕೆ ತಿಳಿಸಿಕೊಟ್ಟು ನಿಯಮಾದ ದೊಡ್ಡದೊಂದು ಸಾಹಸ ಅಸ್ಪೃಶ್ಯವಿದೆ.

ಸರ್ವೋದಯ ದಿನವನ್ನು ಸ್ವಾರಕವೆಂದು ಮರೆದಲ್ಲಿ ಆಚರಿಸಿದರು. ಗಾಂಧೀಜಿ ನಮಗೆ ವಿಧಿಸಿದ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಂಡ ವಿಷಯದ ಚರ್ಚೆಗಳನ್ನು ನಡೆಸಿ ಪ್ರತಿಯೊಬ್ಬರ ಜೀವನದ ಭಾಗವಾಗಬೇಕೆಂಬುದು ಸರ್ವೋದಯದ ಉದ್ದೇಶವಾಗಿರುತ್ತದೆ. ಗಾಂಧೀಜಿಯ ಬೋಧನೆಗಳನ್ನು ನಮ್ಮಲ್ಲಿ ಪ್ರತಿಯೊಬ್ಬರೂ ತಮ್ಮ ತಮಗೆ ತಿಳಿದಂತೆ ಇದರ ಉಪದೇಶವನ್ನು ಜೂಕು ವಾಂಛಿತ್ಯಕ್ಕೆ ಅರ್ಥವಿಲ್ಲ. ಗಾಂಧೀವಾದಕ್ಕೆ ಪರಿಸ್ಥಿತಿ ಕಟ್ಟು ಹಾಕಾಗಿದ ಎಂದರೂ ಸಲ್ಲುವುದು. ಗಾಂಧೀವಾದವೆಂದೂ ಗಾಂಧೀಜಿಯ ಉಪದೇಶವೆಂದೂ ಮನಬಂದಂತೆ ವ್ಯಾಖ್ಯೆಮಾಡಿ ಪರಸ್ಪರ

(ಮುಂದೆ ಪುಟ ನೊ ೩)

[illegible] ಆಚಾರ್ಯ ವಿನೋಬಾ ಭಾವೆಯವರು [illegible] ನಡೆದ ಸರ್ವೋದಯ [illegible] ಯಲ್ಲಿ [illegible] ಪ್ರತಿಭಾ ಪರಿಷತ್ತಿನಲ್ಲಿ ಮಾತನಾಡುತ್ತಿರುವ ದೃಶ್ಯ. ಇವರೊಡನೆ ಪ್ರದೇಶದ [illegible] ರಾಮಸ್ವಾಮಿ [illegible] ಅವರು ಕುಳಿತಿರುವುದನ್ನು ಚಿತ್ರದಲ್ಲಿ ಕಾಣಬಹುದು.

★ ನಿಮ್ಮ ವ್ಯಕ್ತಿ ವೈಶಿಷ್ಟ್ಯದ ಕನ್ನಡಿ—ಕಣ್ಣು ★

ಬೋಧಾಯನನೆಂಬ ಸಂಸ್ಕೃತ ಕವಿಯು ರಚಿಸಿದೊಂದು ಪ್ರಹಸನದ ಕಥಾವಸ್ತು ತುಂಬ ಮೋಜಿನಿಂದ ಕೂಡಿದೆ. ಒಬ್ಬ ವೇಶ್ಯೆಯು ಅಕಾಲ ಮೃತ್ಯುವುಂಟಾಗಲು ಅವಳ ಶರೀರದಲ್ಲಿ ಒಬ್ಬ ಪರಿವ್ರಾಜಕ ಸನ್ಯಾಸಿಯ ಆತ್ಮ ಪ್ರವೇಶಿಸುತ್ತದೆ. ಯಮರಾಜನಿಂದ ವೇಶ್ಯೆಯ ಆತ್ಮವನ್ನು ಮೊದಲಿದ್ದಲ್ಲಿಗೇ ಬಿಟ್ಟುಬಾರೆಂದು ಆಜ್ಞಾಪಿಸಲ್ಪಟ್ಟು ಯಮದೂತನು ಹಿಂದೆ ಬಂದರೆ—ವೇಶ್ಯೆಯ ಶವ ಈಗ ಸಪ್ರಾಣವಾಗಿದೆ! ಆದಕಾರಣ ಉಪಾಯಕಾಣದ ಯಮದೂತನು ವೇಶ್ಯೆಯ ಆತ್ಮಕ್ಕೆ ಹತ್ತಿರದಲ್ಲಿಯೇ ಬಿದ್ದುಕೊಂಡಿದ್ದ ಪರಿವ್ರಾಜಕ ಸನ್ಯಾಸಿಯ ಶರೀರದಲ್ಲಿ ಪ್ರವೇಶಕೊಡುತ್ತಾನೆ. ತುಸು ಸಮಯದ ಬಳಿಕ ಪರಿವ್ರಾಜಕ ಸನ್ಯಾಸಿಯ ಶಿಷ್ಯರು ಗುರುವಿನ ಬಳಿಗೆ ಬಂದರೆ, ಅವನ ಕಣ್ಣುಗಳ ಹಾವ ಭಾವನನ್ನು ನೋಡಿ ಚಕ್ಕಿತ ಬೆರಗಾಗುತ್ತಾರೆ! ಪೂರ್ವ ವೇಶ್ಯೆಯ ವಿಲಾಸ ವಿಭ್ರಮದ ಸ್ಪಷ್ಟ ರೂಪರೇಷೆ ಆ ಕಣ್ಣುಗಳಲ್ಲಿದ್ದುವು. ಹೀಗೆಯೇ ವೇಶ್ಯೆಯ ಸಮೀಪದಂದ ಹಾಗೂ ಇತರ ಸ್ನೇಹಿತರು ಅವಳ ಬಳಿಗೆ ಬಂದಾಗ ಅವಳ ಕಣ್ಣುಗಳಲ್ಲಿ ಗೃಹತ್ಯಾಗಿಯಾದೊಬ್ಬ ಪುರುಷನ ಪ್ರಶಾಂತಿ ನೆಲಸಿರುವುದು ಗೋಚರಿಸಿತು. ಇದೀ ನಾಟಕ ಈ ರೀತಿ ಮನೋರಂಜಕವಾದ ಘಟನೆಗಳಿಂದ ಹೆಣೆಯಲ್ಪಟ್ಟಿದೆ.

ಕಣ್ಣುಗಳು ಮನುಷ್ಯನ ವ್ಯಕ್ತಿತ್ವದ, ಅವನ ಆತ್ಮದ ಪ್ರತಿಬಿಂಬ ಸ್ವರೂಪವಾಗಿವೆ. ಹಾಸ್ಯರಸದ ಮೂಲಕ ಬೋಧಾಯನನು ಈ ಸತ್ಯವನ್ನು ನಿರೂಪಿಸಲು ಪ್ರಯತ್ನಿಸಿದನು.

ವ್ಯಕ್ತಿತ್ವದ ಕನ್ನಡಿ

ನಮ್ಮ ಮಾತು ಸ್ವಾಭಾವಿಕವಾಗಿ ಪ್ರಕಟಪಡಿಸಲಾರದುದನ್ನು ಕಣ್ಣುಗಳು ಬಹಳ ಸುಲಭದಲ್ಲಿ ವ್ಯಕ್ತಗೊಳಿಸುತ್ತವೆ. ಒಬ್ಬ ವ್ಯಕ್ತಿಯ ಕಣ್ಣುಗಳು ಅವನ ಚಾರಿತ್ರ್ಯ, ವ್ಯಕ್ತಿತ್ವ, ಮತ್ತು ಅಂತಃ ಪ್ರವೃತ್ತಿಯ ಕನ್ನಡಿ ಎಂದರೂ ಸಲ್ಲುವುದು. ಆಂತರಿಕ ಭಾವವನ್ನು ಗ್ರಹಿಸುವುದರಲ್ಲಿ ನಮ್ಮ ಕಣ್ಣುಗಳು ನಿಸ್ಸಂಶಯವಾಗಿ ಸಹಾಯಕವಾಗುತ್ತವೆ. ಒಬ್ಬನ ಪ್ರಸಂಗವನ್ನು ನೋಡಿದೊಡನೆಯೇ ನೇತ್ರಗಳು ಅವನತಗೊಂಡರೆ. ಆನಂದದ ಆ

ಮನಃಸ್ಥಿತಿಯ ಸ್ಪಷ್ಟ ಚಿತ್ರಣ ಕೊಡುವ ನೇತ್ರದ್ವಯ

ನುಭವವೆನಿಸಿದೊಡನೆಯೇ ಹೊಳೆದು ಮಿಂಚುವುವು: ರೋಷೋತ್ಪನ್ನವಾದರೆ ಕೆಂಡಕಾರುವುವು, ಕರುಣೆ ತುಂಬಿಬಂದರೆ ವ್ಯಾಕುಲಗೊಂಡು ನೀರುಸುರಿಸುವುವು! ಇಷ್ಟು ವಿಚಿತ್ರದಿಂದ ಕೂಡಿದ ಕಣ್ಣುಗಳನ್ನು ಬಗೆಬಗೆಯಾಗಿ ವರ್ಣಿಸಿ ಚಿತ್ರಿಸುವಲ್ಲಿ ಲಲಿತ ಕಲೆಗಳು ತಮ್ಮೆಲ್ಲ ಶಕ್ತಿಯನ್ನು ಉಪಯೋಗಿಸಿದರೆ ಆಶ್ಚರ್ಯವೇನಿಲ್ಲ! ದಕ್ಷಿಣ ಭಾರತದಲ್ಲಿ ಶ್ರೇಷ್ಠವೆನಿಸಿದ ನಟರಾಜನ ಮೂರ್ತಿಗೆ ಕೇವಲ ನೇತ್ರಭಂಗಿಯೊಂದೇ ಜೀವಕಳೆಯನ್ನು ನೀಡಿದೆಯೋ ಎಂಬ ಭಾಸವಾಗುತ್ತದೆ. ಉಳಿದೆಲ್ಲ ಉಪಾಂಗಗಳಿಗಿಂತಲೂ ಕಣ್ಣುಗಳ ಹಾವಭಾವ ಈ ಮೂರ್ತಿಗೆ ಅಧಿಕ ಶೋಭೆ ಕೊಟ್ಟಿರುತ್ತದೆ. ಅಜಂತದ ಭಿತ್ತಿ ಚಿತ್ರಗಳಲ್ಲಾಗಲೀ ಪ್ರಾಚೀನ ದೇವಾಲಯಗಳ ಶಿಲಾ ಪ್ರತಿಮೆಗಳಲ್ಲಾಗಲೀ ಅವುಗಳು ಜೀವಂತವಿವೆ ಎಂಬ ಭ್ರಮೆಯನ್ನು ನಮ್ಮಲ್ಲಿ ಹುಟ್ಟಿಸಲಿಕ್ಕೆ, ಕಣ್ಣುಗಳ ವೈಶಿಷ್ಟ್ಯವೇ ಕಾರಣ. ಇಟಾಲಿಯನ್ ಕಲಾವಿದ ಲಿಯೋನಾರ್ಡೋನ "ಮೋನಾಲೀಸಾ" ಎಂಬ ಕೃತಿರತ್ನವು ತನ್ನ ನೇತ್ರಗಳ ಭಾವವ್ಯಂಜಕತೆಯಿಂದಲೇ ಸುಪ್ರಸಿದ್ಧವಾಗಿದೆ. ಈ ಕಲಾವಿದನು ತನ್ನ ಆಯುಷ್ಯದ ಬಹುಭಾಗವನ್ನು ಇದಕ್ಕಾಗಿ ವಿನಿಯೋಗಿಸಿದುದು ವ್ಯರ್ಥವಾಗಲಿಲ್ಲ. ವಿಶ್ವಸಾಹಿತ್ಯದಲ್ಲಿ ಕೂಡ ಕಣ್ಣುಗಳ ವರ್ಣನೆಗೆ ಇನ್ನಿಲ್ಲದ ಮಹತ್ವವಿದೆ. ಅಲೌಕಿಕವಾದ ಮಾನಸಿಕ ಭಾವನೆಗಳ ಪ್ರತೀಕವೆನಿಸಿದ ಕಣ್ಣುಗಳು ಸಾಹಿತ್ಯ ಕ್ಷೇತ್ರದಲ್ಲಿ ಬಗೆಬಗೆಯಾಗಿ ಬಣ್ಣಿಸಲ್ಪಟ್ಟಿವೆ. ಪಂಡಿತ ರಾಜ ಜಗನ್ನಾಥನು ವಿರಹ ವೇದನೆಯನ್ನು ತಡೆಯದ ಪ್ರಿಯನೋರ್ವನಿಂದ ಪ್ರೇಯಸಿಯ ನೇತ್ರವರ್ಣನೆಯನ್ನು ಮಾಡಿಸಿದ ಬಗೆ ನೋಡಿರಿ—"ಎಲ್ಲವನ್ನು ಮರೆತು ಬಿಟ್ಟರೂ ಆ ನೇತ್ರಗಳ ನೆನಪು ಅಚ್ಚಳಿಯದೆ ಉಳಿಯುವುದು. ಪ್ರಿಯಗಮನದ ಕಾಲದಲ್ಲಿ ಗುರು ಜನರ ಭಯದಿಂದ ಅವಳು ಇದಿರಿಗೆ ತೋರಿಬರುತ್ತಿರಲಿಲ್ಲ. ಇನ್ನು ಅವನತಗೊಂಡರೆ ಕಣ್ಣೀರ ಧಾರೆಯಲ್ಲಿ ಹರಿಯುವುದೋ ಎಂಬುದರಿಂದ ಅವಳದನ್ನು ಎತ್ತಿ ಹಿಡಿದಿದ್ದಳು. ಹೀಗೆ ಅವಳ ನೇತ್ರಗಳು ಈಗ ತಾನೆ ಅರಳುತ್ತಿರುವ ಕಮಲ ಪುಷ್ಪಗಳನ್ನು ಹೋಲುತಿದ್ದವು. ಬಾಯಿಂದ ಏನೊಂದು ಮಾತನ್ನೂ ವ್ಯಕ್ತಪಡಿಸದಿದ್ದರೂ ಆ ಕಣ್ಣುಗಳೇ ಮನಸ್ಸಿನ ವ್ಯಗ್ರತೆಯನ್ನೂ ಕರುಣಾಪ್ರಹೃದಯವನ್ನೂ ಬಿಚ್ಚಿತೋರಿಸುತಿದ್ದುವು"

ಸಾಹಿತ್ಯ ಕ್ಷೇತ್ರದಲ್ಲಿ

ಮಹಾ ಭಾರತದಲ್ಲಿ ಕಣ್ಣುಗಳು ತೋರ್ಪಡಿಸುವ ಹಾವಭಾವದ ಸಂಬಂಧದ ಒಂದು ಕತೆ ಇದೆ—ತನ್ನ ಹನ್ನೆರಡನೇ ಯಸ್ಸಿನಲ್ಲಿಯೇ ವ್ಯಾಸಮಹರ್ಷಿಯ [...] ಗ ಶುಕದೇವನು ತಪಸ್ಸಿಗಾಗಿ ಓಡಿಹೋ[...]ದ್ದನು. ನಗ್ನಾವಸ್ಥೆಯಲ್ಲಿಯೇ ಅವ[...] ಓಡುತ್ತಿರಲು, [...] ದಾರಿಯ [...] ಒಂದೆಡೆ ಅಪ್ಸರೆಯರು ತಮ್ಮ ವಸ್ತ್ರವೆಪನ್ನೂ ಬಿಚ್ಚಿಕೊಟ್ಟು ಸ್ನಾನಗೈಯುತಿ[...]ರು. ಶುಕದೇವನನ್ನು ನೋಡಿದ-ಮೇ[...]ಯೂ ಅವರು ಬಟ್ಟೆ ಉಟ್ಟುಕೊಳ್ಳ[...] ಯುತ್ತಲೇ ಇದ್ದರು. ಅಷ್ಟರಲ್ಲಿ ಶು[...]ದೇವನ ತಂದೆ ವ್ಯಾಸರು ಮಗನನ್ನು [...]ನೆಗೆ ಕರೆದೊಯ್ಯಬಯಸಿ ಅದಾರಿಯ[...] ಬಂದರು. ಅವರು ಬರುವುದನ್ನು ನೋ[...]ದವರೇ ಅಪ್ಸರೆಯರು ವಸ್ತ್ರ ಧರಿಸಹತ್ತಿರು. ವ್ಯಾಸರಿಗೆ ಮಹದಾಶ್ಚರ್ಯವಾಂತು—"ನನ್ನ ತರುಣ ಪುತ್ರನು ಈ ದಾ[...]ಯಲ್ಲಿ ಬರುವಾಗ ನಿಮಗೆ ನಾಚಿಕೆಯಾ[...]ಲಿಲ್ಲ. ಆದರೆ ವೃದ್ಧನೂ ಬ್ರಹ್ಮಜ್ಞಾನಿಯ[...]ಆದ ನಾನು ಬಂದರೆ ನಿಮಗೆ ಲಜ್ಜೆಯ[...]ಯುತ್ತಲ್ಲವೆ! ಇದರ ಕಾರಣವೇನು?" [...]ದು ವ್ಯಾಸರು ಪ್ರಶ್ನಿಸಲು, ಅಪ್ಸರೆಯ[...] ಹೀಗೆ ಮಾರ್ನುಡಿದರು— "ಮಹರ್ಷಿ, [...]ರುಣನಿದ್ದರೂ ಶುಕದೇವನ ಕಣ್ಣುಗಳ[...] ಸಂಭಾವಿತನ ಭಾವ ಹುದುಗಿದ್ದುದ[...] ಕಂಡೆವು. ಅಬೋಧ ಶಿಶುವಿನ ಮನ[...]ಸ್ಸು ಆ ಕಣ್ಣುಗಳು ವ್ಯಕ್ತಗೊಳಿಸುತಿ[...]ವು. ಆದರೆ ವಯಸ್ಸಿನಲ್ಲಿ ವೃದ್ಧರಾದ[...] ನಿಮ್ಮ ಕಣ್ಣುಗಳಲ್ಲಿ ಶಿಶು ಭಾವವಿಲ್ಲ. [...]ಕದೇವನು ಈ ದಾರಿಯಲ್ಲಿ ಬರುವಾ[...] ಒಬ್ಬ ಮನುಷ್ಯ ನಮ್ಮ ಮುಂದೆ ನಡೆಯ[...]

(೧೧ನೇ ಪುಟ ನೋಡಿರಿ.)

ವಿವೇಕವುಳ್ಳ ದೂರದರ್ಶಿ ಸಂಪನ್ನ ಪಿಗ್ಮಿ ಠೇವಣಾತಿದಾರ

ಅವನಿಗೆ ಯಾವ ಚಿಂತೆಯೂ ಇಲ್ಲ. ನಮ್ಮ ಜನವೇ ಆತನಿದ್ದಲ್ಲಿಗೆ ದಿನಾಲು ಹೋಗಿ ಆತನು ಕೊಡುವ ಉಳಿತಾಯದ ಹಣವನ್ನು ಒಟ್ಟು ಮಾಡುವನು ಏಳು ವರುಷಗಳ ಅವಧಿಯಲ್ಲಿ ಆ ಠೇವಣಾತಿದಾರರ ಲೆಖ್ಖದಲ್ಲಿ ದೊಡ್ಡ ಮೊತ್ತವು ಜಮೆಯಾಗುವುದು. ನೀವು ಕೂಡಾ ಆತನಂತೆ ಪಿಗ್ಮಿ ಡಿಪೋಜಿಟ್ ಯೋಜನೆಗೆ ಇಂದೇ ಸೇರಿ ಆತನಂತೆ ಏಳುವರುಷಗಳಲ್ಲಿ ಸಿರಿವಂತರಾಗಿರಿ.

ಆಧಾರ ವಹಿವಾಟಿನ ನಿಧಿಯು ರೂ **5,00,00,000**ಕ್ಕೂ ಜಾಸ್ತಿ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925　　ಹೆಡ್ ಆಫೀಸು: ಉಡುಪಿ.

THE CANARA INDUSTRIAL & BANKING SYNDICATE LIMITED

Estd: 1925　　H. O: **UDIPI**

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧]　　[ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕೆ ಪಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

The Canara Mutual Assurance Company Limited.

Head Office: UDIPI, S. India.

NOTICE.

Notice having been given by the claimants under Policy No 26200 issued by the Company on the life of late Sri G R. Pangal, S/o P. Sarvothama Rao, Land-lord, Santhekatte, Udipi that the said Policy is not available, the Company will dispose off the claim thereunder unless valid objections if any are received at this Office within 30 days from the date hereof.

UDIPI, 3—2—1953 | T. R A. Pai Managing Director

ಉಡುಪಿ ಡಿ. ಮು. ಕೋರ್ಟಿನಲ್ಲಿ

S. C. 596/195[...]

ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ ಕಡೆಯಿಂದ ರಿಕವರಿ ಆಫೀಸರ್ ಎಮ್. ಎಸ್. ಭಂಡಾರಿ — ವಾದಿ

ಮತ್ತು

ಕೆ. ಬೂದ ಕುಂದರ್ ಕೂಡಾ–ಪ್ರತಿವಾದಿಯವರೊಳಗೆ

1ನೇ ಪ್ರತಿವಾದಿ ಕೆ. ಬೂದ ಕುಂದರ್ ಕಡೆಕಾರು ಗ್ರಾಮ — ಇವರಿಗೆ

1ನೇ ಪ್ರತಿವಾದಿಯು 2ನೇ ಪ್ರತಿವಾದಿ[...] ಮೇಲೆ ತಾರೀಕು 21-1-1952ರಲ್ಲಿ ರೂಪ[...] 600ಕ್ಕೆ ಡ್ರಾ ಮಾಡಿ ವಾದಿಯ ಶಾಲುವಾ[...] ಬ್ರೇಂಚಿನಲ್ಲಿ ಡಿಸ್ಕೌಂಟ್ ಮಾಡಿ ಹಣ[...]ದ ಹುಂಡಿಯಾನೆ ಪ್ರೋಮಿಸರಿ ನೋಟಿ[...] 2ನೇ ಪ್ರತಿವಾದಿಯು ಎಕ್ಸೆಪ್ಟ್ ಮಾಡ[...] ಮೇರೆಗೆ ಸದರಿ ಹುಂಡಿಯಾನೆ ಪ್ರೋಮಿ[...]ರಿ ನೋಟಿನ ಬಾಬ್ತು ಪ್ರತಿವಾದಿರಿಂದ [...]ದಿಗೆ ಬರಬೇಕಾದ ಅಸಲು ಬಾಕಿ ವ ಬಡ್ಡಿ ಬಾ[...] ಕೂಡಾ ರುಪಾಯಿ 239-12-2ಕ್ಕೆ ವಾದಿಯ[...] ಪ್ರತಿವಾದಿ ಮೇಲೆ ಮಾಡಿದ ಸದರಿ ದಾ[...]ವು ತಾರೀಕು 16-2-1953ಕ್ಕೆ ಪ್ರಥಮ[...] ನಪಿ ಬಗ್ಗೆ ಇಡೋಣವಾಗಿಯದೆ—ಆ ದಿ[...] 1ನೇ ಪ್ರತಿವಾದಿಯು ಸ್ವತಹಾ ಯಾ ವಕೀ[...]ರ ಮುಖಾಂತ್ರ ಸದರಿ ಕೋರ್ಟಿನ ಮು[...] ಹಾಜರಾಗಿ ಉತ್ತರಕೊಡಬೇಕು[...] 1ನೇ ಪ್ರ[...]ವಾದಿಯು ಗೈರು ಹಾಜರಿಯಿಂದ ಸದರಿ [...] ಜ್ಯವು ತೀರ್ಮಾನವಾಗುವುದೆಂದು ಸದರಿ 1 ಪ್ರತಿವಾದಿಗೆ ಈ ಮೂಲಕ ತಿಳಿಯ[...] ಕೊಡಲಾಗಿದೆ.

M. Damodar Kamath
Advocate For Plaintiff.

ಉಡುಪಿ, ತಾ. 2-2-1953

ಜನಹಿತದ ಯೋಜನೆಗಳು

ಸರಕಾರದ ಚಟುವಟಿಕೆಯೊಂದಿಗೆ ಜನರ ಲವಲವಿಕೆಯೂ ಸೇರಲಿ!

ನಮ್ಮ ದೇಶವು ಸಾರ್ವಾಂಗಿಕ ಅಭಿವೃದ್ಧಿಯನ್ನು ಸಾಧಿಸುವುದರ ಮೂಲಕ ಜನರು ಉತ್ತಮ ಜೀವನ ಮಟ್ಟವನ್ನು ನಿರ್ವಹಿಸುವಂತಾಗಬೇಕೆಂದು ಬಯಸುವುದು ತೀರ ಸ್ವಾಭಾವಿಕವೂ ಕ್ರಮಪ್ರಾಪ್ತವೂ ಆಗಿದೆ. ರಾಷ್ಟ್ರೀಯ ಸರಕಾರ ಕೂಡ ಯೋಜನಾ ಆಯೋಗವನ್ನು ನೇಮಿಸಿ, ಅದು ಸಿಫಾರಸು ಮಾಡಿದ ಪ್ರಥಮ ಪಂಚವಾರ್ಷಿಕ ಯೋಜನೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ಸಾಕಷ್ಟು ಪ್ರಗತಿಯನ್ನು ತೋರಿದೆ. ಎಲ್ಲರಿಗೂ ಈಗಾಗಲೇ ತಿಳಿದಿರುವಂತೆ, ನಮ್ಮ ಮುಂದಿರುವ ಈ ಪಂಚವಾರ್ಷಿಕ ಯೋಜನೆ ಮೊದಲೇ ಅಂದಾಜು ಮಾಡಿದಂತೆ ಸಂಪೂರ್ಣ ಯಶಸ್ಸು ಹೊಂದಿದಲ್ಲಿ ಅನ್ನ ಬಟ್ಟೆಯ ಮಟ್ಟಿಗೆ ನಾವು ಸ್ವಾವಲಂಬಿಗಳಾಗುವೆವಲ್ಲದೆ, ಜೀವನಮಟ್ಟವು ದ್ವಿತೀಯ ಮಹಾಯುದ್ಧಕ್ಕೆ ಮೊದಲಿದ್ದ ಸ್ಥಿತಿಗೆ ಬರುತ್ತದೆ. ಮೇಲಿಂದ ಮೇಲೆ ಈ ಪ್ರಗತಿ ಅಸಾಧಾರಣವೆಂದು ತೋರಿಬರದಿದ್ದರೂ, ನಮ್ಮ ಒಡದೇಶದ ಮಟ್ಟಿಗೆ ಈ ಧ್ಯೇಯದ ಸಾಧನೆಯಾದರೂ ಸಾಕು—ಮಹಾ ಸಾಹಸದ ಕಾರ್ಯವನ್ನೇ ಕೈಗೂಡಿಸಿದ ಕೀರ್ತಿ ದೊರೆಯುವುದು. ಅಧಿಕಾರಾರೂಢವಾದ ಪಕ್ಷವೆನಿಸಿದ ಕಾಂಗ್ರೆಸಿನ ಭವಿತವ್ಯವು ಬಹಳಮಟ್ಟಿಗೆ ಪಂಚವಾರ್ಷಿಕ ಯೋಜನೆಯ ಯಶಸ್ಸನ್ನು ಹೊಂದಿಕೊಂಡಿದೆ ಎಂದು ಬಲವಾದ ಅಭಿಪ್ರಾಯ ಈಗ ತಳವೂರುತ್ತಿದೆ. ಎರಡು ಸಾವಿರ ಕೋಟಿ ರುಪಾಯಿಗಳನ್ನು ದೇಶದೊಳಗಿಂದಲಾಗಲೀ ವಿದೇಶಗಳ ನೆರವು ಅಥವಾ ಸಾಲಗಳಿಂದಾಗಲೀ ಸಂಗ್ರಹಿಸಿಕೊಂಡು ಲೋಕೋಪಯೋಗಿ ಕಾರ್ಯಗಳಿಗೆ ವ್ಯಯಿಸುವ ಮಹತ್ವದ ಜವಾಬ್ದಾರಿಯನ್ನು ಸರಕಾರ ಹೊತ್ತಿದೆ. ಇಷ್ಟು ಹಣವನ್ನು ವಿನಿಯೋಗಿಸುವಲ್ಲಿ ಒಂದು ಪೈಯಾದರೂ ಪೋಲಾಗದಂತೆ ಅತ್ಯಂತ ಜಾಗರೂಕತೆಯನ್ನು ವಹಿಸುವುದು ದೇಶದೇಳಿಗೆಯ ದೃಷ್ಟಿಯಿಂದಲೂ ನಾಗರಿಕ ಹಿತಸಾಧನೆಯ ದೃಷ್ಟಿಯಿಂದಲೂ ಅಗತ್ಯವಿದೆ.

ವಿಳಂಬ ಧೋರಣೆ

ಆದರೆ ನಾವೆಷ್ಟು ಹೇಳಿದರೂ ಯೋಜನೆಗೆ ಮೀಸಲಿರಿಸಿದ ಎರಡು ಸಾವಿರ ಕೋಟಿ ರೂಪಾಯಿಗಳ ಪೂರ್ಣ ಪ್ರಯೋಜನ ದೇಶಕ್ಕೆ ದೊರೆಯುವುದೆಂದು ನಂಬುವಂತಿಲ್ಲ. ಇದಕ್ಕೆ ಪ್ರಥಮವಾದ ಕಾರಣವೆಂದರೆ, ಸಾಮಾನ್ಯ ಜನರಿಗೆ ಸರಕಾರದ ಕಾರ್ಯಕಲಾಪಗಳು ಎಣಿಸಿದಷ್ಟು ಪ್ರಾಮಾಣಿಕವಾಗಿಯೂ ತ್ವರಿತರೂಪದಲ್ಲಿಯೂ ನಡೆಯುತ್ತವೆಂಬ ನಂಬಿಕೆ ಇಲ್ಲ. ದೀರ್ಘ ಸೂತ್ರಕ್ಕೆ ಹೆಸರಾದ ಸರಕಾರೀ ನೌಕರಶಾಹಿಯು ಪಂಚವಾರ್ಷಿಕ ಯೋಜನೆಯಂಥ ಅತ್ಯಂತ ಜರೂರಿಯ ಕೆಲಸವನ್ನಾದರೂ ಸ್ವಭಾವಜನ್ಯವೆಂದೇ ಹೇಳಬಹುದಾದ ಔದಾಸೀನ್ಯದಿಂದ ನೋಡುವುದು ನಿಶ್ಚಯ. ಮೊದಲೇ ಗೊತ್ತುಪಡಿಸಿದ ಶಿಷ್ಟ ರೀತಿಯಲ್ಲಿ ಯೋಜನೆಯು ಪ್ರತಿಯೊಂದು ಘಟ್ಟದಲ್ಲಿಯೂ ಮುಂದುವರಿಯುವುದೆಂದು ಜನಸಾಮಾನ್ಯರು ನಂಬುವ ಪರಿಸ್ಥಿತಿಯೇ ಈಗ ಉಳಿದಿಲ್ಲ. ಸರಕಾರದ ದೀರ್ಘ ಸೂತ್ರದ ಮಟ್ಟಿಗೆ ಬ್ರಿಟಿಷ ಆಳಿಕೆಯ ದಿನಗಳಿಗೂ ರಾಷ್ಟ್ರ ಪುನರ್ರಚನೆಯ ಈ ದಿನಗಳಿಗೂ ಏನೇನೂ ವ್ಯತ್ಯಾಸವನ್ನು ನಾವು ಕಾಣಲಾರೆವು. ಹಿಂದೊಮ್ಮೆ ಹರಿಜನ ಪತ್ರಿಕೆಯಲ್ಲಿ ಆಗ ಸಂಪಾದಕರಾಗಿದ್ದ ಕಿಶೋರಿಲಾಲ ಮಶ್ರೂವಾಲಾರು ಸರಕಾರವು ಅತ್ಯಂತ ಜರೂರಿಯ ಕೆಲಸಗಳನ್ನು ಕೂಡ ಸಾವಧಾನ ಚಿತ್ತದಿಂದ ನೋಡುವ ಕಾಲಹರಣ ನೀತಿಯನ್ನು ಕಟು ಮಾತಿನಲ್ಲಿ ಟೀಕಿಸಿದ್ದುಂಟು. ಜನರು ಚುನಾಯಿಸಿ ಕಳಿಸಿದ ಶಾಸನಸಭಾ ಪ್ರತಿನಿಧಿಗಳಂಥ ಹೊಣೆಗಾರ ಮಹನೀಯರು ಬರೆದ ಅಗತ್ಯದ ಪತ್ರಗಳಿಗೆ ಕೂಡ ಸರಕಾರದ ಕಡೆಯಿಂದ ತಿಂಗಳೆರಡು ತಿಂಗಳು ಕಳೆದರೂ ಉತ್ತರ ಸಿಗುತ್ತಿಲ್ಲವೆಂದಮೇಲೆ—ಸರಕಾರದ ದೀರ್ಘಸೂತ್ರದ ಧೋರಣೆ ಮೊದಲಿಗಿಂತಲೂ ಇಂದು ಹೆಚ್ಚಿದೆ ಎಂಬುದಕ್ಕೆ ಬೇರೆ ಸಾಕ್ಷ್ಯ ಬೇಡ.

ಎದೆಗಾರಿಕೆ ಸಾಲದು—

ಇದನ್ನು ಏಕಾಗಿ ಉಲ್ಲೇಖಿಸಿದೆವೆಂದರೆ—ಸರಕಾರದ ವರಿಷ್ಠ ಸ್ಥಾನದಲ್ಲಿರುವ ಒಬ್ಬ ಜವಾಹರಲಾಲ ನೆಹರೂ ಅಥವಾ ರಾಜಗೋಪಾಲಾಚಾರಿ ಅತ್ಯಂತ ಕಳಕಳಿಯನ್ನು ತೋರಬಹುದು ಆದರೆ ಅತಿ ಕೆಳಗಿನ ವರ್ಗದಲ್ಲಿರುವ ಕಾರಕೂನ ಮತ್ತು ಪೇದೆಗಳಿಗೂ ದೇಶವನ್ನು ಉನ್ನತ ಸ್ಥಿತಿಗೆ ತರುವಲ್ಲಿ ತನ್ನ ಕೈಲಾದ ರೀತಿಯ ಸೇವೆಯನ್ನು ನಿಷ್ಠೆಯಿಂದ ಮಾಡಿಯೇ ತೀರಬೇಕೆಂಬ ಸದ್ಬುದ್ಧಿ ಇರಬೇಕು ತಾನೆ! ಇಂ ಈ ಬಗೆಯ ಜೆಲ್ಲೋ ನಡವಳಿಕೆಯ ಅಭಾವವೆನಿಸಿದೆ. ನಮ್ಮ ಕಣ್ಣ ಮುಂದಿರುವ ಉದಾಹರಣೆಯನ್ನೇ ಹೇಳುವುದಾದರೆ—ಜಿಲ್ಲೆಯಲ್ಲಿ ತೊಡಗಿರುವ ಜನಪದ ಅಭಿವೃದ್ಧಿ ಯೋಜನಾ ಕೇಂದ್ರದ ಚಟುವಟಿಕೆಯನ್ನು ನಿರೀಕ್ಷಿಸಬಹುದು. ತನ್ನ ದೀರ್ಘಸೂತ್ರದ ಧೋರಣೆಯಿಂದ ಕಡುಕು ಸಂಭವಿಸುವುದು ಅನಿವಾರ್ಯವೆಂದು ತಿಳಿದ ಸರಕಾರವು ಜನಪದ ಅಭಿವೃದ್ಧಿ ಯೋಜನೆಗಳ ಮಟ್ಟಿಗೆ. ಅವು ಶೀಘ್ರಾತಿಶೀಘ್ರ ನಿರ್ದಿಷ್ಟ ಯೋಜನೆಯಂತೆ ಕಾರ್ಯರೂಪಕ್ಕೆ ಇಳಿದು ಬರಬೇಕೆಂದು ವಿಶೇಷ ಸಿಬಂಧಿಯನ್ನು ನೇಮಿಸಿದೆ. ಹೀಗಿದ್ದರೂ ನಮ್ಮ ಜಿಲ್ಲೆಯ ಜನಪದ ಅಭಿವೃದ್ಧಿ ಯೋಜನಾ ಕೇಂದ್ರಕ್ಕೆ ಇನ್ನೂ ತನ್ನ ಚಟುವಟಿಕೆಗಳ ರೂಪರೇಷೆಯನ್ನೇ ಹಾಕುವುದಾಗಿಲ್ಲ. ಪರಿಸ್ಥಿತಿ ಹೀಗಿರುವಾಗ ಕೆಲಸ ಏನೂ ನಡೆದಿಲ್ಲವೆಂದು ಬೇರೆ ಹೇಳುವುದಗತ್ಯವಿಲ್ಲ. ಹಾಗೆಂದು ಸೂರ್ಯ ಮೂಡಿ ಮುಳುಗುವುದೇನು ನಿಂತಿಲ್ಲ. ಯೋಜನೆಯ ಅಧಿಕಾರಿಗಳ ಸಂಬಳಕ್ಕೂ ತಕರಾರು ಇಲ್ಲ. ಪಾಪದ ಅಮೇರಿಕನರು ನಮಗಾಗಿ ಹಣ ಸುರುವಲು ಸಿದ್ಧರಿರುವಷ್ಟು ದಿನ ನಮ್ಮ ಜನಪದ ಅಭಿವೃದ್ಧಿ ಯೋಜನೆಗಳ ನೆಪದಲ್ಲಿ ಕೆಲವು ಮಂದಿಯ ಉದರ ಭರಣ ಕಾರ್ಯ ನಿರ್ವಿಘ್ನವಾಗಿ ನೆರವೇರೀತು ಹೊರತು ಜನತೆಗೆ ನ್ಯಾಯವಾದ ಲಾಭ ಸಿಗುವುದೆಂದು ನಾವು ಆಶಿಸಲಾರೆವು. ಇಂಥದೊಂದು ಜರೂರಿ ಕೆಲಸದ ಅವಸ್ಥೆಯೇ ಈ ಮಟ್ಟಕ್ಕಿಳಿದ ಮೇಲೆ (ಅಮೇರಿಕನ್ ತಜ್ಞರು ವಿಳಂಬವನ್ನು ಸಹಿಸುವಂತಿಲ್ಲವೆಂಬುದು ಸ್ಮರಣೆಯಲ್ಲಿರಲಿ) ಇನ್ನು ಬೇ[illegible]ಯರ ಸಾಹಸದಿಂದ ನಡೆಯಬೇಕಾದ ಪಂಚವಾರ್ಷಿಕ ಯೋಜನೆಯ ಭವಿಷ್ಯ ಉಜ್ವಲವಿದೆಯೆಂದು ಹೇಳುವ ಎದೆಗಾರಿಕೆ ಸಾಲದು.

ಸ್ವಂತ ಜವಾಬ್ದಾರಿ

ಹೀಗೆ ನಮ್ಮ ಪ್ರಯತ್ನಗಳು ನಿಷ್ಫಲವಾಗುವುವೆಂದು ನಿರಾಶೆಯನ್ನು ತಳೆಯುವುದರಿಂದ ಪುರುಷಾರ್ಥವಿದೆ ಎಂದು ನಮ್ಮ ಅಭಿಪ್ರಾಯ ಸರ್ವಥಾ ಅಲ್ಲ. ನಮ್ಮ ಮಾರ್ಗದ ಅಡಚಣೆಗಳೂ ಕುಂದುಕೊರತೆಗಳೂ ಯಾವ ರೀತಿಯಲ್ಲಿ ಉಪಸ್ಥಿತವಾಗಿವೆ ಎಂಬುವದರ ಸಾಮಾನ್ಯ ಜ್ಞಾನವನ್ನು ಮಾತ್ರ ಮೇಲೆ ವಿವರಿಸಿದ ಆಕ್ಷೇಪಗಳು ಮಾಡಿ ಕೊಡುತ್ತವೆ. ಇಂಥ ಸಾವಿರ ಆಪತ್ತುಗಳೂ ನಮ್ಮ ಪ್ರಗತಿಯ ಮಾರ್ಗದಲ್ಲಿ ಅಡ್ಡ ಒಂಡೆಗಳಾಗಿ ನಿಂತರೂ ಅವನ್ನು ಬಲವಂತದಿಂದ ಆಚೆಸರಿಸಿ ಮುನ್ನಡೆಯುವ ಕೆಚ್ಚು ನಮ್ಮಲ್ಲಿ ಉ[illegible]ಬಲ್ಲಿ ಪ್ರತಿಮಾತಿಲ್ಲ. ಸರಕಾರವು ತನ್ನ ಧೋರಣೆಯನ್ನು ಬದಲಿಸಿ ನಿಜವಾದ ಜನಹಿತ ಕಾರ್ಯದಲ್ಲಿ ಚಟುವಟಿಕೆಯಿಂದ ತೊಡಗುವುದು ಎಷ್ಟು ಅವಶ್ಯವೋ—ಸಾರ್ವಜನಿಕರೂ ಈ ಮಹಾ ಹೊಣೆಯಲ್ಲಿ ತಮ್ಮ ಪಾಲು ಎಷ್ಟೆಂಬುದನ್ನು ತಿಳಿದುಕೊಂಡು ಲವಲವಿಕೆಯನ್ನು ತೋರುವುದೂ ಅಷ್ಟೇ ಮುಖ್ಯವೆಂದು ಒತ್ತಿ ಹೇಳುವುದು ಕರ್ತವ್ಯವಾಗಿದೆ. ಪಂಚವಾರ್ಷಿಕ ಯೋಜನೆಯು ನಮ್ಮ ದೇಶದ ನೈಜ ಪರಿಸ್ಥಿತಿಯ ಸ್ಪಷ್ಟವಾದ ಕಲ್ಪನೆಯನ್ನೂ ಸಾಂಪತ್ತಿಕ ಸ್ಥಿತಿಗತಿಯ ವ್ಯವಹಾರ್ಯ ಮುಖವನ್ನೂ ಸಮಂಜಸವಾದ ರೀತಿ ಅಳವಡಿಸಿಕೊಂಡು ಸಿದ್ಧಪಡಿಸಿದ ಪ್ರಾಮಾಣಿಕ ಪ್ರಯತ್ನವೆಂಬುದಾಗಿ ದೇಶ ವಿದೇಶದ ತಜ್ಞರು ಕೂಡ ಪ್ರಶಂಸೆ ಮಾಡುತ್ತಿರುವರು. ಈ ಯೋಜನೆಯ ಬಗ್ಗೆ ಜನಸಾಮಾನ್ಯರು ಹೆಚ್ಚು ತೆರಿಗೆಯನ್ನು ಕೊಡಬೇಕಾಗಿದೆ. ಹೆಚ್ಚು ಪರಿಶ್ರಮವನ್ನು ವಹಿಸಿ ದುಡಿಯಬೇಕಾಗಿದೆ. ಹೆಚ್ಚು ಹೆಚ್ಚು ಜನರು ಕೆಲಸದಲ್ಲಿ ಶ್ರದ್ಧೆಯಿಂದ ಧುಮುಕುವುದವಶ್ಯವಿದೆ. ಹೀಗಿರುವುದರಿಂದ ನಮ್ಮ ಹಣವು ವ್ಯರ್ಥವಾಗದಂತೆ ನೋಡಿಕೊಳ್ಳುವಲ್ಲಿ ನಮ್ಮ ಸ್ವಂತ ಜವಾಬ್ದಾರಿಯೂ ಕೆಲಮಟ್ಟಿಗೆ ಇದೆ. ಪ್ರತಿಯೊಬ್ಬನ ಮೇಲೂ ಈ ಹೊಣೆಗಾರಿಕೆ ಸಮವಾಗಿ ಹಂಚಿಹೋಗಿದೆ.

"ನಾವೇಕೆ ಕೂಡದು?"

ಇದನ್ನು ತಿಳಿದುಕೊಂಡು, ತಕ್ಕ ವರ್ತನೆಯನ್ನಿಟ್ಟುಕೊಂಡು ನಡೆಯುವುದರಲ್ಲಿಯೇ ನಮ್ಮೆಲ್ಲರ ಶ್ರೇಯಸ್ಸು ಇದೆ ಎಂದು ಭಾವಿಸುತ್ತೇನೆ. ಇಂದು ಒಡದೇಶದ ನಾಗರಿಕರಾಗಿರುವ ನಾವು ಧನದ ರೂಪದಲ್ಲಿ ಅಧಿಕ ನೆರವನ್ನು ನೀಡುವುದು ಸಾಧ್ಯವಿಲ್ಲದಿರಬಹುದು. ಆದರೆ ಅಮೇರಿಕಾದಂಥ ರಾಷ್ಟ್ರವು ಔದಾರ್ಯದಿಂದ ನೆರವು ನೀಡಿದ ಹಣವನ್ನು ಪೋಲು ಮಾಡುವ ಅಧಿಕಾರ ಮಾತ್ರ ನಮಗಿಲ್ಲವೆಂಬುದನ್ನು ಪ್ರತಿಕ್ಷಣವೂ ಜ್ಞಾಪಿಸಿಕೊಳ್ಳತಕ್ಕದ್ದು. ಈ ಹಣಸಹಾಯವನ್ನು ನೀಡಿದವರ ಔದಾರ್ಯಕ್ಕೆ ಸಹಾನುಭೂತಿ ರೂಪದಲ್ಲಿ ನಾವು ಅತ್ಯಂತ ಶ್ರದ್ಧೆಯಿಂದಲೂ ಪರಿಶ್ರಮಪೂರ್ವಕವಾಗಿಯೂ ದುಡಿಯುವುದು ಧರ್ಮವಿರುತ್ತದೆ. ರಾಜಗೋಪಾಲಾಚಾರಿ ಹಿಂದೊಮ್ಮೆ ಹೇಳಿದಂತೆ, ಸಿರಿವಂತರು ತೆರಿಗೆಯನ್ನು ನಿಷೇಧಿಸುವಂತೆ—ಬಡಜನರು ಕೆಲಸದಲ್ಲಿ ವಂಚನೆಗೆಳಸುವರು. ತೆರಿಗೆಯನ್ನು ಏರಿಸುವಾಗ ಬೊಬ್ಬಿಡುವ ಸಿರಿವಂತರ [illegible]ದಲ್ಲಿ ಕೂಲಿಕಾರರು ತಮ್ಮ ದುಡಿಮೆಯ ಅವಧಿ ತಗ್ಗಬೇಕೆಂದು ಬೇಡುವರು. ಆದರೆ ನಮ್ಮ ದೇಶದಲ್ಲಿ ರಾಮರಾಜ್ಯದ ಮಾದರಿಯ ಸುಖಸಂತೋಷ ಸಮೃದ್ಧಿ ಸಂಪನ್ನವಾದ ಪರಿಸ್ಥಿತಿಯನ್ನು ನಿರ್ಮಾಣ ಮಾಡಬೇಕೆನ್ನುವ ಯಾವನೇ ಇರಲಿ—ಕೆಲಸವನ್ನು ಕಡಿಮೆ ಮಾಡಬೇಕೆಂಬ ಅಭಿಪ್ರಾಯವನ್ನು ಆತನು ಸ್ವೀಕರಿಸಲಾರನು. ಎಂಟು ತಾಸಿನ ಕೆಲಸವನ್ನು ಹತ್ತು ತಾಸಿಗೋ, ಹನ್ನೆರಡು ತಾಸಿಗೋ ಏರಿಸುವುದಕ್ಕೆ ಸಮ್ಮತಿಯನ್ನು ಕೊಟ್ಟಾನೇ ಹೊರತು ಆರು ತಾಸಿಗೋ, ನಾಲ್ಕು ತಾಸಿಗೋ ಇದನ್ನು ಇಳಿಸಲು ಸುತರಾಂ ಒಡಂಬಡಲಿಕ್ಕಿಲ್ಲ. ನಾವು ಅಮೇರಿಕಾ ರಶಿಯಾಗಳಲ್ಲಿ ಸಂಪತ್ತನ್ನು ಕಂಡು ಅಸೂಯೆ ಪಡುತ್ತಿದ್ದಂತೆಯೇ.. ಅಲ್ಲಿನ ಜನರ [illegible]ವನ್ನು [illegible]ನ ನೋಡತಕ್ಕದ್ದು. ಅವರು ಅವಿಶ್ರಾಂತವಾಗಿ ದುಡಿದು ಸಮೃದ್ಧಿಯನ್ನು ಹೊಂದಬಲ್ಲರಾದರೆ, ನಾವೇಕೆ ಕೂಡದು ಎಂಬ ಛಲ ಮಾಡಬೇಕೇ ಹೊರತು, [illegible] ನಲ್ಲದು.

([illegible])

ದಿ ಕೆನರಾ ಮ್ಯೂಚುವಲ್
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಪ್ರಧಾನ ಕಾರ್ಯಾಲಯ ಉಡುಪಿ, ದ. ಭಾರತ] [ಸ್ಥಾಪನೆ: ೧೯೩೫
"ಕೆನರಾ ಮ್ಯೂಚುವಲ್" ಪರಸ್ಪರಾವಲಂಬಿಕವಾದ ಸಂಸ್ಥೆ.
ಸ್ಥಾಪನೆಯಿಂದಲೂ ಎಲ್ಲ ವರ್ಗಗಳಿಗೂ
ಬೋನಸ್ ಹಂಚಿ, ಪಾಲಿಸಿದಾರರ ನಂಬಿಕೆ ಪಡೆದಿದೆ.
ಈ ಕಂಪೆನಿಯಲ್ಲಿ ಇಂದೇ ವಿಮೆ ಇಳಿಸಿ,
ನಿಮ್ಮ ಕುಟುಂಬವನ್ನು ಭದ್ರವಾಗಿರಿಸಿರಿ.
The CANARA MUTUAL ASSURANCE CO., Ltd.,
Head Office: **UDIPI**, S INDIA. ESTD 1935

ನಮಗೆ ಜಪಾನಿನ ಮಾರ್ಗದರ್ಶನ

ಗ್ರಾಮೋದ್ಯೋಗಗಳ ಉತ್ಕರ್ಷ

ಪ್ರಜಾರಾಜ್ಯದ ತೃತೀಯ ವಾರ್ಷಿಕೋತ್ಸವವನ್ನೂ ಚತುರ್ಥ ವರ್ಧಂತಿಯನ್ನೂ ಆಚರಿಸಿದ ಬೆನ್ನಿಗೇ ಗಾಂಧೀಜಿಯ ಪುಣ್ಯದಿನವನ್ನೂ ಗಂಭೀರದೊಂದಿಗೆ ದೇಶ ಆಚರಿಸಿದೆ. ಗಾಂಧೀಗೆ ಪ್ರಿಯವೆನಿಸಿದ ವಿಧಾಯಕ ಕಾರ್ಯಗಳನ್ನು ಕೈಗೊಂಡು ಮಹಾತ್ಮಗೆ ಶ್ರದ್ಧಾಂಜಲಿಯನ್ನು ಅರ್ಪಿಸುವ ಹೊಸ ಸಂಪ್ರದಾಯವು ಸ್ತುತ್ಯ. ಇಂತಹ ಸ್ಮೃತಿಗಳ [illegible], ಅದರಲ್ಲೂ ಜನಹಿತಕ್ಕೆ ಕಾರಣವಾದ ರಚನಾತ್ಮಕ ಕಾರ್ಯಕ್ರಮಗಳಿಗೆ ಅತ್ಯಂತ ಮಹತ್ವವಿದೆ. ರಾಜಕೀಯವಾಗಿ ನಾವು ಸ್ವತಂತ್ರರಿದ್ದರೂ ಆರ್ಥಿಕ ದಾಸ್ಯವನ್ನು ನಾವು ಬಿಟ್ಟುಗೊಟ್ಟಿಲ್ಲ. ಗಾಂಧೀಜಿಯ ನೇತೃತ್ವದಲ್ಲಿ ಸ್ವಾತಂತ್ರ್ಯ ಸಮರದಲ್ಲಿ ನಾವು ವಿಜಯವನ್ನು ಸಂಪಾದಿಸಿದಂತೆ ಆರ್ಥಿಕ ಕ್ಷೇತ್ರದಲ್ಲಿಯೂ ಗಾಂಧೀ ನೀತಿಯನ್ನು ಅನುಸರಿಸುವುದರಿಂದ ಪ್ರಯೋಜನವನ್ನು ಪಡೆಯಬಹುದು. ಆದರೆ ದುರ್ದೈವದಿಂದ ಸರಕಾರ ಈ ಕಡೆಗೆ ಹೆಚ್ಚು ಲಕ್ಷ್ಯ ಕೊಡುತ್ತಲಿಲ್ಲ. ಪಂಚವಾರ್ಷಿಕ ಯೋಜನೆಯಂಥ ಸ್ತುತ್ಯ ಉಪಕ್ರಮದಲ್ಲಿ ಕೂಡ ಗಾಂಧೀ ಪ್ರತಿಪಾದಿತ ಗ್ರಾಮೋದ್ಯೋಗಗಳಿಗೆ ಸಾಕಷ್ಟು ಪುರಸ್ಕಾರವು ಪ್ರಾಶಸ್ತ್ಯವೂ ದೊರೆತಿಲ್ಲ. ಆದರೂ ಸರಕಾರ ಖಾದಿ ಮತ್ತು ಗ್ರಾಮೋದ್ಯೋಗಗಳನ್ನು ಮರೆತಿಲ್ಲ ಎಂದು ನಾವು ತಿಳಿಯಬಹುದು. ಗ್ರಾಮೋದ್ಯೋಗಗಳ ಉತ್ಕರ್ಷಕ್ಕಾಗಿ ಶ್ರೀ ದೇಬರಭಾಯಿ ಅವರ ಅಧ್ಯಕ್ಷತೆಯಲ್ಲಿ ನೇಮಕಗೊಂಡ ಸಮಿತಿಯೇ ಸರಕಾರದ ಈ ಬಗ್ಗೆ ಆಸ್ಥೆಗೆ ಸಾಕ್ಷಿ. [illegible] ಈ ಮಂಡಳಿಯ ಪ್ರಥಮ ಸಭೆಯನ್ನು ಉದ್ಘಾಟಿಸುತ್ತ ಪ್ರಧಾನಿ ನೆಹರೂ ಅವರು [illegible] ಗ್ರಾಮೋದ್ಯೋಗಗಳನ್ನು [illegible] ಬೆಳೆಸುವುದರಿಂದ ಯಾವುದೇ ದೇಶದ ಹಾನಿಯುಂಟಾಗುವುದಿಲ್ಲವೆಂದೂ, ಕೇವಲ ಗುಡಿ ಕೈಗಾರಿಕೆಗಳನ್ನು ಸಾಧಿಸುವುದರಿಂದ ನಿರುದ್ಯೋಗದ ಸಮಸ್ಯೆ ಬಗೆಹರಿಯದೆಂದೂ ಹೇಳಿ, ಸರಕಾರವು ಯಂತ್ರೋದ್ಯೋಗ ಮತ್ತು ಗ್ರಾಮೋದ್ಯೋಗಗಳನ್ನು ಒಟ್ಟಿಗೆ [illegible] ಬೆಳೆಸುವುದೆಂದು ತಿಳಿಸಿದರು. [illegible] ಕಾಂಗ್ರೆಸ್ ಕಾರ್ಯಕರ್ತರಿಗೂ ಪ್ರಸಿದ್ಧ ಅರ್ಥಶಾಸ್ತ್ರ ವಿಚಾರಕರಿಗೂ ಇದು ಒಪ್ಪಿಗೆಯಾಗುವಂತಿದೆ.

ಸಹಕಾರ ಸಂಘಗಳ ಸಹಾಯ(?)

ಹೀಗಿರುವುದರಿಂದ ನಮ್ಮ ದೇಶದಷ್ಟು ದೊಡ್ಡ ಪ್ರಮಾಣದ ಕೈಗಾರಿಕ ರಾಷ್ಟ್ರವಾಗಿ ಪರಿವರ್ತಿಸುವುದರಿಂದ ಏನೇನೂ ಉಪಯೋಗವಿಲ್ಲ. ನಮ್ಮ ಜನಕ್ಕೆ ಕೈತುಂಬ ಕೆಲಸವನ್ನೂ ಹೊಟ್ಟೆ ತುಂಬ ಅನ್ನವನ್ನೂ ಒದಗಿಸಿಕೊಡುವುದು ಸರಕಾರದ ಮೇಲಿನ ಹೊಣೆಯಾಗಿರುವಂತೆ ಇಂದಿನ ಸಮಸ್ಯೆಯ ಮೂಲಸ್ವರೂಪವೂ ಇಷ್ಟೇ ಇದೆ. ಜನಶಕ್ತಿಯ ಸದುಪ

ಭಾರತವು ಬಂಜರು ಭೂಮಿಯಾಗಲು ಬಿಡಬಾರದು

ತ ಉಪಯೋಗವನ್ನು ಮಾಡಿಕೊಳ್ಳುವುದರಲ್ಲಿಯೇ ನಾವು ಭಾರತದ ಪುನರ್ನಿರ್ಮಾಣ ಕಾರ್ಯವನ್ನು ಯಶಸ್ವಿಗೊಳಿಸಿಯೇವು. ಅನ್ಯಥಾ ನಮ್ಮ ಉದ್ಧಾರದ ವಿಚಾರವನ್ನೆ ಬಿಟ್ಟುಗೊಡಬೇಕಾದೀತು. ಈ ದಿಸೆಯಲ್ಲಿ ನಮಗೆ ಅಮೇರಿಕೆಗಿಂತಲೂ ಜಪಾನು ಮಾರ್ಗದರ್ಶನಮಾಡುವಂತಿದೆಯೆಂದು ಕೇಳಿ ತಿಳಿದಿದ್ದೇವೆ. ಅಲ್ಲಿ ಗೃಹೋದ್ಯಮಗಳೇ ಪ್ರಚಲಿತವಿದ್ದು, ಅವು ದೊಡ್ಡ ದೊಡ್ಡ ಉದ್ದಿಮೆಗಳಿಗೆ ಪೂರಕವಾಗಿಯೇ ನಡೆಯುತ್ತಿವೆ. ಒಂದು ಯಂತ್ರನಿರ್ಮಾಣಕ್ಕೆ ಬೇಕಾಗುವ ಸಾವಿರಾರು ಬಿಡಿಭಾಗಗಳಲ್ಲಿ ಒಂದೊಂದೂ ಬೇರೆಬೇರೆ ಮನೆಯಲ್ಲಿ ಕುಶಲ ಕೆಲಸಗಾರರಿಂದ ತಯಾರಿಸಲ್ಪಟ್ಟವೆಂದೂ ಇವನ್ನೆಲ್ಲ ವ್ಯವಸ್ಥೆಯಿಂದ ರಚಿಸಲಾಗುತ್ತಿರುವುದರಿಂದ ಅವುಗಳನ್ನು ಜೋಡಿಸಿ ಸೈಕಲಿನಂಥದೊಂದು ಯಂತ್ರವನ್ನು ಸಿದ್ಧಗೊಳಿಸಲು ಬರುವಂತಾಗಿದೆಯೆಂದೂ ಕೇಳಿರುತ್ತೇವೆ. ನಮ್ಮ ದೇಶದಲ್ಲಿ ಕೂಡಾ ಈ ಬಗೆಯ ಸಹಕಾರ ಮನೋಭಾವವನ್ನು ನಿರ್ಮಿಸಿ, ಯೋಗ್ಯ ವಾತಾವರಣವನ್ನು ಕಲ್ಪಿಸಿ, ಗ್ರಾಮೋದ್ಯೋಗಗಳು ಉತ್ಕರ್ಷವನ್ನು ಹೊಂದುವಂತೆ ಮಾಡಬಲ್ಲೆವು. ಖಾದಿಯ ಮಟ್ಟಿಗೂ ಈ ಮಾತು ಅನ್ವಯಿಸುತ್ತವೆ. ಇಂದು ಕೇವಲ ಭಾವನಾತ್ಮಕವಾದ ಮಹತ್ವದಿಂದ ಕೂಡಿದ ಚರಕ ಮತ್ತು ಖಾದಿಗೆ ಮನೆಮನೆಯಲ್ಲೂ ಉನ್ನತ ಸ್ಥಾನದೊರೆಯುವುದವಶ್ಯವಿದೆ. ಖಾದಿಯ ಕುರಿತು ತೀವ್ರಪ್ರಚಾರದ ಅಗತ್ಯವೂ ಈಗ ಕಂಡು ಬರುತ್ತಿದೆ. ಜನಸಾಮಾನ್ಯರಲ್ಲಿ ಖಾದಿಯ ಬಗ್ಗೆ ಪ್ರೇಮೋತ್ಪನ್ನ ಮಾಡುವುದು ಬಡನೇಕಾರರ ಹಿತದೃಷ್ಟಿಯಿಂದಲಾದರೂ ಜರೂರಾದ ಕಾರ್ಯವೆಂಬುವನ್ನು ಎಲ್ಲರೂ ಒಪ್ಪಬೇಕು.

ಭತ್ತ ಬೆಳೆಯುವ ಹೊಸ ಪದ್ಧತಿ

ಜಪಾನು ನಮಗೆ ಇನ್ನೊಂದು ರೀತಿಯಲ್ಲಿಯೂ ಸರಿಯಾದ ದಾರಿಯನ್ನು ತೋರಿಸಬಲ್ಲದೆಂದು ತಿಳಿದಿದೆ. ನಮ್ಮಂತೆ ಜಪಾನೀಯರೂ ಭತ್ತವನ್ನು ಬೆಳೆಯುವರು. ಆದರೆ ಅವರು ಅನುಸರಿಸುವ ಕ್ರಮದಂತೆ, ನಮ್ಮ ಉತ್ಪನ್ನದ ಎಂಟು-ಹತ್ತು ಪಾಲು ಧವಸವು ಕೈಗೆ ಬರುವುದು ಸಾಧ್ಯವಿದೆ. ಈ ಕಾರಣದಿಂದ ಸರಕಾರದವರು ನಮ್ಮ ರೈತರಿಗೆ ತಕ್ಕ ತರಬೇತಿಯನ್ನು ಕೊಟ್ಟು ನವೀನವಾದ ಪದ್ಧತಿಯಿಂದ ಭತ್ತ ಬೆಳೆಯುವಲ್ಲಿ ಉತ್ಸಾಹವನ್ನು ತುಂಬಲಾಗುವಂತೆ ಜಪಾನಿನಿಂದ ಒಕ್ಕಲಿಗರ ಕುಟುಂಬಗಳನ್ನು ಭಾರತಕ್ಕೆ ಆಮಂತ್ರಿಸಿರುವರೆಂದೂ ತಿಳಿದಿದೆ. ಮಹಾತ್ಮಾ ಗಾಂಧೀ ಸ್ಮಾರಕ ಟ್ರಸ್ಟಿನವರು ಈ ಮಾದರಿಯಲ್ಲಿ ಭತ್ತ ಬೆಳೆಯುವುದಕ್ಕೆ ಪ್ರೋತ್ಸಾಹ ಕೊಡುವ ಉದ್ದೇಶದಿಂದ ಕೆಲವು ಲಕ್ಷ ರುಪಾಯಿಗಳನ್ನು ತೆಗೆದಿಟ್ಟಿರುವರು. ಕೇಂದ್ರ ಸರಕಾರದ ಕೃಷಿ ಮಂತ್ರಿ ಡಾ| ಪಂಜಾಬ ರಾವರು ಮಾಡಿದ ಭಾಷಣದಂತೆ, ಈ ವರ್ಷ ಮಾರ್ಚ ೧೫ರಿಂದಲೇ ಭಾರತದಾದ್ಯಂತ ಜಪಾನಿ ಪದ್ಧತಿಯಲ್ಲಿ ಭತ್ತ ಬೆಳೆಯುವ ಬಗ್ಗೆ ಪ್ರಚಾರ ಕಾರ್ಯವನ್ನು ರಭಸದಿಂದ ತೊಡಗಲಾಗುವುದು. ಶಾಲೆಗಳ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ, ಸಾಮಾನ್ಯ ಓದು ಬರಹ ಬಲ್ಲ ರೈತರಿಗೂ ಕರಪತ್ರಗಳ ಮೂಲಕ ಈ ಬಗ್ಗೆ ಯೋಗ್ಯ ಮಾಹಿತಿಯನ್ನು ನೀಡಲಾಗುವುದು. ಸಾವಿರ ಸಂಖ್ಯೆಯಲ್ಲಿ ತರಬೇತಿ ಕೇಂದ್ರಗಳನ್ನು ತೆರೆಯುವ ಸಂಕಲ್ಪವೂ ಇದೆ. ನಮ್ಮ ರೈತರು ಇವರಲ್ಲಿ ಭಾಗವಹಿಸಿ, ಹೊಸ ಕ್ರಮವನ್ನು ಅನುಸರಿಸಲು ಸಮರ್ಥರಾದರೆ, ಅದನ್ನು ಭಾಗ್ಯವೆಂದೇ ಪರಿಗಣಿಸ ಬಹುದು. ಆದರೆ ಸರಕಾರದ ಪ್ರತಿಯೊಂದೂ ಒಳ್ಳೆಯ ಕೆಲಸದಲ್ಲಿ ನಾವು ತಳೆಯುತ್ತಿರುವ ಅನಾಸ್ಥೆಯೇ ಈ ಬಗ್ಗೆಯೂ ಉಳಿದರೆ—ಆಗ ನಾವೇ ತಪ್ಪುಗಾರರೆನಿಸುತ್ತೇವೆ.

ಫಲವತ್ತಾದ ಮಣ್ಣಿನ ರಕ್ಷಣೆ

ಕೃಷಿಗೆ ಸಂಬಂಧಿಸಿದಂತೆ ಇರುವ ಇನ್ನೊಂದು ಮುಖ್ಯ ಸಮಸ್ಯೆ ವರ್ಷವರ್ಷವೂ ಫಲವತ್ತಾದ ಮಣ್ಣಿನ ಕೊಚ್ಚಿಹೋಗುವಿಕೆ. ಇದನ್ನು ಹೇಗೆ ತಡೆಗಟ್ಟಬಹುದೆಂಬುದನ್ನು ವಿಚಾರಿಸುವುದಕ್ಕಾಗಿ ಹೊಸ ದಿಲ್ಲಿಯಲ್ಲಿ ತಜ್ಞರ ಸಭೆಯೊಂದು ಸೇರಿದ್ದಿತು. ಅರ್ಥಸಚಿವ ಶ್ರೀ ಚಿಂತಾಮಣಿ ದೇಶಮುಖರು ಈ ಸಂದರ್ಭದಲ್ಲಿ ಮಾತನಾಡಿ ಭಾರತವು ಮರು ಭೂಮಿಯಾಗಿ ಮಾರ್ಪಡುವುದು ಬೇಡವೆಂದಿದ್ದರೆ ಮಣ್ಣಿನ ರಕ್ಷಣೆಯ ಬಗ್ಗೆ ಈಗಿಂದೀಗಲೇ ಯೋಗ್ಯ ಕ್ರಮಗಳನ್ನು ಕೈಗೊಳ್ಳುವುದವಶ್ಯವಿದೆ ಎಂದರು. ಅರಣ್ಯಗಳ ನಾಶವೇ ಮಣ್ಣು ಕೊಚ್ಚಿಕೊಂಡು ಹೋಗುವುದಕ್ಕೆ ಮುಖ್ಯವಾದ ಕಾರಣವಿರುತ್ತದೆ. ಮುನ್ಶಿಯವರು ವನ ಮಹೋತ್ಸವದ ಕಲ್ಪನೆಯನ್ನು ಮಾಡಿದಾಗ—ಅದನ್ನಾಕ್ಷೇಪಿಸಿ, ಹೀಯ್ಯಾಳಿಸಿದ ಜನರು ಅವರ ಸದುದ್ದೇಶವನ್ನು ಉಪೇಕ್ಷಿಸಿದ್ದರೆಂಬುದು ಸ್ಪಷ್ಟವಿದೆ. ಭಾರತವು ಪುರಾತನ ಕಾಲದಿಂದಲೂ ಸಸ್ಯಶ್ಯಾಮಲವಾಗಿತ್ತಾದುದರಿಂದ, ಸಂಪತ್ಸಂಪನ್ನವಾಗಿತ್ತು. ಮಹಾಭಾರತ, ರಾಮಾಯಣಗಳಂಥ ಆಖ್ಯಾಯಿಕೆಗಳಲ್ಲಿ ಕೂಡ ತಪೋವನಗಳೂ ವಿಶಾಲವಾದ ಅರಣ್ಯಗಳೂ ಆಸೇತು ಹಿಮಾಚಲಪರ್ಯಂತ ವ್ಯಾಪಿಸಿದ್ದುವೆಂದು ವರ್ಣಿಸಲ್ಪಟ್ಟಿದ. ಈ ಅರಣ್ಯಗಳ ಕಾರಣದಿಂದಲೇ ದನಕರುಗಳಿಗೆ ಯಥೇಷ್ಟ ಮೇವು ದೊರಕುತಿತ್ತು. ಮಳೆಗಾಲಗಳು ಸಕಾಲದಲ್ಲಿ ಬೀಸಿ, ಕೆರೆಬಾವಿಗಳನ್ನೂ ನದಿಗಳನ್ನೂ ನೀರಿನಿಂದ ತುಂಬುತಿದ್ದುವು. ರಭಸದಿಂದ ಬೀಳುವ ಮಳೆಯಿಂದ ಮಣ್ಣು ಕೊಚ್ಚಿ ಹೋಗದಂತೆ ಗಿಡಮರಗಳು ಸಂರಕ್ಷಣೆ ನೀಡುತಿದ್ದುವು.

ಆದರೆ ಇಂದು ನಾಗರಿಕತೆ ಹೆಚ್ಚಿಕೊಂಡತೆ ಕಾಡುಕಡಿದು ನೆಲಸಮ ಮಾಡುತಿದ್ದೇವೆ. ಈ ರೀತಿ ಪ್ರಕೃತಿಯ ನಾಶವನ್ನು ನಮ್ಮ ಸ್ವಂತ ಕೈಯಿಂದ ಮಾಡಗೊಟ್ಟರೆ, ಸರ್ವನಾಶವಾಗುವ ದಿನ ಬಹಳ ದೂರವಿಲ್ಲವೆಂಬುದನ್ನು ಗಂಭೀರವಾದ ಎಚ್ಚರಿಕೆಯೆಂದೇ ತಿಳಿದು ನಾವು ವರ್ತಿಸಬೇಕಾಗಿದೆ.

ಆರೋಗ್ಯ ಕ್ಷೇತ್ರದಲ್ಲಿ

ವಾರದ ವಾರ್ತೆಗಳಲ್ಲಿ ಆರೋಗ್ಯ ಮತ್ತು ವೈದ್ಯಕೀಯ ಕ್ಷೇತ್ರದ ಚಟುವಟಿಕೆಗಳಿಗೂ ಪ್ರಾಶಸ್ತ್ಯ ದೊರೆತಿದೆ. ನಮ್ಮ ದೇಶದಲ್ಲಿ ಮಲೇರಿಯಾ ಮತ್ತು ಕ್ಷಯ ರೋಗಗಳು ಮಹಾ ಪಿಡುಗುಗಳಾಗಿ, ಜನಬಲದ ಹ್ರಾಸಕ್ಕೆ ಕಾರಣಭೂತವಾಗಿ ಪರಿಣಮಿಸಿವೆ. ಇವುಗಳ ಹಾವಳಿಯನ್ನು ತಡೆಗಟ್ಟಲು ಸರಕಾರಿ ಹಾಗು ಖಾಸಗಿ ಪ್ರಯತ್ನಗಳು ವಿಸ್ತೃತ ಪ್ರಮಾಣದಲ್ಲಿ ನಡೆಯುತಿದ್ದರೂ ಈ ಉಪಖಂಡದ ವೈಶಾಲ್ಯದ ದೃಷ್ಟಿಯಿಂದ ಅವು ಏತಕ್ಕೂ ಸಾಲವು. ಈ ಕಾರಣದಿಂದ—ರೋಗಗಳನ್ನು ನಿವಾರಿಸುವುದಕ್ಕಿಂತಲೂ ಬಾರದಂತೆ ಪ್ರತಿಬಂಧಕೋಪಾಯಗಳನ್ನು ಕೈಗೊಳ್ಳುವುದೇ ಅತ್ಯಂತ ವ್ಯವಹಾರ್ಯವಾದ ಮಾರ್ಗವೆಂದು ಪದೇ ಪದೇ ಹೇಳಲಾಗುತ್ತಿದೆ. ಆರೋಗ್ಯ ಮಂತ್ರಿ ರಾಜಕುಮಾರಿ ಅಮೃತ ಕೌರರು ಕೂಡ ಈ ಮಾತಿಗೇ ಜೋರುಕೊಟ್ಟರು. ಅಧಿಕಾರಿಗೂ ಸಾಮಾನ್ಯ ಜನರಿಗೂ ಸಂಬದ್ಧವಾದ ಜೀವನವನ್ನು ನಿರ್ವಹಿಸಲಾಗುವಂತೆ ಯೋಗ್ಯ ಶಿಕ್ಷಣವನ್ನು ಕೊಟ್ಟು, ಆರೋಗ್ಯ ರಕ್ಷಣೆಯ ಉಪಾಯಗಳನ್ನು ಅವರೆಲ್ಲರೂ ಕನಿಷ್ಠ ಮಟ್ಟದಲ್ಲಿ ಅನುಸರಿಸಲಾಗುವಂತೆ ನೋಡಿಕೊಳ್ಳಬೇಕು. ಹೀಗೆ ಮನುಷ್ಯ ತನ್ನ ಸ್ವಸಾಮರ್ಥ್ಯದಿಂದ ರೋಗದ ಹಾವಳಿಯನ್ನು ಹತೋಟಿ

THE VIJAYA BANK LTD.

Head Office - - - MANGALORE

1953

ನವವರ್ಷದ ಶುಭಾಶಯ!

ಕಳೆದ 22 ವರ್ಷಗಳ ನಮ್ಮ ಗಿರಾಕಿಗಳ ಯಥಾರ್ಥ ಸೇವೆ, ಪರಿಪಕ್ವ ಅನುಭವ, ಪ್ರಾಮಾಣಿಕತೆ, ಮತ್ತು ಉತ್ಸಾಹದಿಂದಾಗಿ ಮುಂದಯೂ ಯಥಾಪ್ರಕಾರ ನಿಮ್ಮ ಪ್ರೋತ್ಸಾಹ ಕೋರುವ,

ದಿ ವಿಜಯಾ ಬೇಂಕ್ ಲಿಮಿಟೆಡ್

ಹೆಡ್ ಆಫೀಸು - - - ಮಂಗಳೂರು.

ಪಾರ್ಲಿಮೆಂಟಿನ ಬಜೆಟು ಅಧಿವೇಶನ

ಸಂಸತ್ತಿನ ಅಧಿವೇಶನ

ಭಾರತ ಪಾರ್ಲಿಮೆಂಟಿನ ಎರಡೂ ಮನೆಗಳ ಅಧಿವೇಶನ ಬುಧವಾರ (ದಿನಾಂಕ ೧೧) ಸೇರಿದೆ. ಇದು ಮುಂಗಡ ಪತ್ರದ ಅಧಿವೇಶನವೆಂದು ಹೇಳಲ್ಪಡುವುದು. ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ಎರಡೂ ಮನೆಗಳ ಸದಸ್ಯರನ್ನುದ್ದೇಶಿಸಿ ಭಾಷಣ ಮಾಡಿ, ಸಂಸತ್ತು ವಿಚಾರಿಸಬೇಕಾದ ಪ್ರಮೇಯಗಳ ಸ್ಥೂಲರೂಪ ರೇಷೆಯನ್ನು ಹಾಕಿ ಕೊಟ್ಟಿರುವರು. ಈ ಬಾರಿಯ ಅಧಿವೇಶನದಲ್ಲಿ ಕಳೆದ ಅಧಿವೇಶನದಲ್ಲಿ ಬಾಕಿಯುಳಿದ ೨೫ ವಿಧೇಯಕಗಳಲ್ಲದೆ ಬೇರೆ ೪೦ ಹೊಸ ವಿಧೇಯಕಗಳೂ ಚರ್ಚೆಗೆ ಸಿದ್ಧವಾಗಿ ಕುಳಿತಿವೆ ಎಂದು ವರದಿಯಾಗಿದೆ. ಸಂಸತ್ತು ಅಧಿವೇಶನದಲ್ಲಿ ಸೇರಿದೆ ಎಂಬುದನ್ನು ಲೋಕಕ್ಕೆ ತಿಳಿಸುವುದಕ್ಕಾಗಿ ಸಂಸತ್ ಭವನದ ಮೇಲೆ ತಿರುಗುವ ಚಕ್ರವನ್ನು ಇಟ್ಟು, ರಾತ್ರಿಯ ಹೊತ್ತು ಇದನ್ನು ದೀಪಗಳಿಂದ ಅಲಂಕರಿಸುವ ವ್ಯವಸ್ಥೆ ಈಗ ತಾನೆ ನೆರವೇರಿದೆ ಪಾರ್ಲಿಮೆಂಟಿನ ಧ್ವಜಸ್ತಂಭದ ಅಡಿಯಲ್ಲಿ ಈ ಚಕ್ರವನ್ನು ಕೂಡಿಸಿರುವರು. ಇಂಗ್ಲಂಡದಲ್ಲಿ ಪಾರ್ಲಿಮೆಂಟು ಸಭೆ ಸೇರಿದೆ ಎಂಬುದನ್ನು ತಿಳಿಸುವುದಕ್ಕಾಗಿ ಬಿಗ್‌ಬೆನ್‌ದಲ್ಲಿ ಕೆಂಪು ದೀಪವನ್ನು ಉರಿಸುವ ಪರಿಪಾಟವಿದೆ. ನಮ್ಮ ಸಂಸತ್ ಭವನಕ್ಕೆ ಗೋಪುರವಿಲ್ಲದಿರುವುದರಿಂದ ಈ ಚಕ್ರದ ವ್ಯವಸ್ಥೆಯಾಯಿತು. ಪಾರ್ಲಿಮೆಂಟಿನ ಸದಸ್ಯರಿಗೆ ಕೊಡಲು ಹೊಸತಾಗಿ ಆಸನಗಳನ್ನು ಹಾಕಲಾಗಿದೆಯಲ್ಲದೆ, ಪ್ರಧಾನ ಮಂತ್ರಿಗಳ ಕೋಣೆಗೆ ಸಮಶೀತೋಷ್ಣ ವ್ಯವಸ್ಥೆಯನ್ನೂ ಏರ್ಪಡಿಸಿದೆ.

ವಾಂಚೂರ ವರದಿ

ಪಾರ್ಲಿಮೆಂಟಿನ ಬಜೆಟುಅಧಿವೇಶನದಲ್ಲಿ ಆಂಧ್ರಪ್ರಾಂತ ರಾಜ್ಯ ನಿರ್ಮಾಣದ ಬಗ್ಗೆ ಸರಕಾರದ ಕಡೆಯಿಂದ ಅಧಿಕೃತ ಘೋಷಣೆಯಾಗುವ ನಿರೀಕ್ಷೆ ಇದೆ ಎಂದು ನಾವು ನಂಬಲಡ್ಡಿಯಿಲ್ಲ. ಆಂಧ್ರಪ್ರಾಂತದ ರಚನೆಯಲ್ಲಿರುವ ಆರ್ಥಿಕ ಮತ್ತಿತರ ಸಂಗತಿಗಳನ್ನು ವಿಚಾರಿಸಿ ವರದಿ ಮಾಡಲು ನೇಮಕಗೊಂಡಿದ್ದ ನ್ಯಾಯಮೂರ್ತಿ ವಾಂಚೂ ತಮ್ಮ ಕೆಲಸಗಳೆಲ್ಲವನ್ನೂ ಮುಗಿಸಿ ದಿನಾಂಕ ೭ರಂದು ಭಾರತ ಸರಕಾರಕ್ಕೆ ತಮ್ಮ ವರದಿಯನ್ನು ಒಪ್ಪಿಸಿರುವರು. ಸರಕಾರವು ಇದನ್ನು ಪರಿಶೀಲಿಸುತ್ತಿದ್ದು ವರದಿಯನ್ನು ಬೇಗನೆ ಪ್ರಕಟಿಸುವುದೆಂದು ಹಾರೈಸಲಾಗಿದೆ. ನ್ಯಾಯಮೂರ್ತಿ ವಾಂಚೂರ ವರದಿಯಸಂಗತಿಗಳಲ್ಲಿ ಯಾವುದಾದರ ಕುರಿತು ಸ್ಪಷ್ಟೀಕರಣವನ್ನು ಮದ್ರಾ

ಹೈದರಾಬಾದು ರಾಜ್ಯದಲ್ಲಿ ಮಂತ್ರಿಮಂಡಳದ ಬಿಕ್ಕಟ್ಟು

ಸು ರಾಜ್ಯದೊಂದಿಗೆ ಕೇಳುವುದಿದ್ದರೆ ಕೇಳಿಕೊಂಡು—ಆ ಕೂಡಲೇ ಕೇಂದ್ರ ಸರಕಾರ ಮುಂದಿನ ಕಾರ್ಯದಲ್ಲಿ ಪ್ರವೃತ್ತವಾಗುವುದು ನಿಶ್ಚಯವೆಂದು ಎಲ್ಲರೂ ನಂಬಿರುವರು. ಮದ್ರಾಸು ಸರಕಾರ ಕೂಡ ಕೇಂದ್ರದಿಂದ ಈ ಸಂಬಂಧದಲ್ಲಿ ಬರಬಹುದಾದ ಯಾವುದೇ ಆದೇಶದಂತೆ ನಡೆಯುವುದು ತ್ವರಿತದಲ್ಲಿಯೇ ಸಾಧ್ಯವಾಗಬೇಕೆಂಬುದರಿಂದ, ತಕ್ಕ ವ್ಯವಸ್ಥೆಗಳನ್ನು ಈಗಲೂ ಮಾಡುತ್ತಿದೆ. ನ್ಯಾಯಮೂರ್ತಿ ವಾಂಚೂರಿಗೆ ನೆರವಾಗಲೆಂದು ನೇಮಿಸಲ್ಪಟ್ಟಿದ್ದ ವಿಶೇಷಾಧಿಕಾರಿಯು ಇನ್ನೂ ತಮ್ಮ ಕಾರ್ಯಭಾರದಿಂದ ಮುಕ್ತರಾಗಿರುವುದಿಲ್ಲ. ಆಂಧ್ರಕ್ಕೆ ಸಂಬಂಧಿಸಿದ ಸರಕಾರೀ ಕಾಗದ ಪತ್ರಗಳನ್ನು ಫೈಲುಗಳಿಂದ ಹುಡುಕಿ ತೆಗೆದು ಪ್ರತ್ಯೇಕಿಸಿಡುವುದು ಒಂದು ಕಠಿಣ ಕಾರ್ಯವೆನಿಸಿದೆ. ಹಾಗೆಯೇ ಆಂಧ್ರಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಅಂಕೆ ಸಂಖ್ಯೆಗಳನ್ನು ಕೂಡಿಸುವುದೂ ಪ್ರಯಾಸದ ಕೆಲಸವಾಗಿತ್ತು. ಆದರೆ ಇವೆಲ್ಲವನ್ನೂ ಗಮನಿಸದೆ ಕೇಂದ್ರ ಸರಕಾರದ ಮನೀಷೆಗೆ ತೊಂದರೆ ಬರದಂತೆ ಎಲ್ಲವನ್ನೂ ದಕ್ಷತೆಯಿಂದ ಮದ್ರಾಸು ಸರಕಾರ ನಿರ್ವಹಿಸಿದ್ದು ಪ್ರಶಂಸನೀಯ.

ಆಂಧ್ರ ರಾಜ್ಯ ನಿರ್ಮಾಣ

ಮದ್ರಾಸು ಸರಕಾರವು ನ್ಯಾಯಮೂರ್ತಿ ವಾಂಚೂರಿಗೆ ಸಾದರಪಡಿಸಿದ ಅಂಕಸಂಖ್ಯೆಗಳಂತೆ ಆಂಧ್ರವು ಸುಮಾರು ಐದು ಕೋಟಿ ರೂಪಾಯಿಗಳ ಕೊರತೆಯ ಪ್ರದೇಶವಾಗಿ ಉಳಿಯುವುದು. ಆಂಧ್ರರಾಜ್ಯವು ಏನಿಲ್ಲವೆಂದರೂ ಆರೇಳು ತಿಂಗಳುಗಳಿಗೆ ಮೊದಲೇ ನಿರ್ಮಾಣಗೊಳ್ಳುವುದು ಸಾಧ್ಯವಿಲ್ಲವೆಂಬುದಾಗಿ ನಿರೀಕ್ಷಕರ ಅಭಿಪ್ರಾಯವಿದೆ. ಈ ಕಾರಣದಿಂದಲೇ ಇರಬೇಕು—ಮದ್ರಾಸು ಸರಕಾರವು ಒಂದೇ ಮುಂಗಡ ಪತ್ರವನ್ನು ತಯಾರಿಸುವ ನಿಶ್ಚಯ ಮಾಡಿದ ಎಂದು ರಾಜಗೋಪಾಲಾಚಾರಿ ಹೇಳಿರುವರು. ಆದರೂ ಕೇಂದ್ರ ಕೇಳಿದರೆ ಆಂಧ್ರಕ್ಕೆ ಸಂಬಂಧಿಸಿದ ಆಯವ್ಯಯಗಳನ್ನು ಕೊಡುವುದು ಕೂಡಲೇ ಸಾಧ್ಯವಾಗಬೇಕೆಂಬುದರಿಂದ ಮುಂಗಡ ಪತ್ರವನ್ನು ಇದಕ್ಕೆ ಅನುಕೂಲಿಸುವಂತೆ ರಚಿಸಲಾಗುವುದೆಂದು ಅವರು ಹೇಳಿರುವರು. ಆಂಧ್ರರಾಜ್ಯದರಚನೆಯಲ್ಲಿ ಸರಕಾರೀ ಮಟ್ಟದಿಂದ ಈ ರೀತಿ ವಿಳಂಬವಿಲ್ಲದೆ ಕೆಲಸಗಳು ನಡೆಯುತ್ತಿದ್ದರೂ ಆಂಧ್ರ-ತಮಿಳರೊಳಗಿನ ದ್ವೇಷ ಕಡಿಮೆಯಾಗಿದ್ದಿಲ್ಲ. ಮದ್ರಾಸು ಸರಕಾರವು ಆಂಧ್ರ ದೇಶಕ್ಕೆ ನ್ಯಾಯವಾಗಿ ವೆಚ್ಚಮಾಡಬೇಕಿದ್ದಷ್ಟು ಹಣವನ್ನು ಖರ್ಚುಮಾಡಿಲ್ಲವಾದುದರಿಂದ ೫೦ ಕೋಟಿರೂಪಾಯಿ ಪರಿಹಾರ ನೀಡಬೇಕೆಂದು ತೆಲುಗರ ಬೇಡಿಕೆ ಇತ್ತು. ತಮಿಳರು ಇಂಥದೇ ಕಾರಣದಿಂದ ಮದ್ರಾಸು ಸರಕಾರದ ಸಾಲದಲ್ಲಿ ಒಂದಂಶವನ್ನು ಆಂಧ್ರರಾಜ್ಯಕ್ಕೆ ಒಪ್ಪಿಸಬೇಕೆಂದಿರುವರು. ಈ ಎಲ್ಲ ವಾದ ವಿವಾದಗಳು ಏನಿದ್ದರೂ ನ್ಯಾಯ ಮೂರ್ತಿ ವಾಂಚೂರವರ ವರದಿ ನಿಷ್ಪಕ್ಷಪಾತತನದಿಂದ ಈ ವಿವಾದವನ್ನು ತೀರ್ಮಾನಿಸುವುದೆಂದು ಆಶಿಸುವುದು ಯಥೋಚಿತವಾಗಿದೆ. ತಾವು ಎರಡು ಸಾವಿರಕ್ಕೂ ಮಿಕ್ಕಿ ಮನವಿಗಳನ್ನು ಪರಿಶೀಲಿಸಿರುವೆವೆಂದು ವಾಂಚೂ ಹೇಳಿರುವರು.

ಕನ್ನಡಿಗರ ಅಸಂತೃಪ್ತಿ

ಭಾಷಾವಾರು ಪ್ರಾಂತರಚನೆಯ ಪ್ರಶ್ನೆಯು ಈಚೆಗೆ ಹೊಸದಿಲ್ಲಿಯಲ್ಲಿ ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ಸೇರಿದ ರಾಜ್ಯಪಾಲರ ಮತ್ತು ರಾಜಪ್ರಮುಖರ ಪರಿಷತ್ತಿನಲ್ಲಿ ಕೂಡ ಚರ್ಚಿಸಲ್ಪಟ್ಟಿತೆಂದು ತಿಳಿಯುತ್ತೇವೆ. ಆಂಧ್ರ ಪ್ರಾಂತರಚನೆಯು ಭದ್ರವಾಗುವ ವರೆಗೆ ಬೇರೆ ಹೊಸ ರಾಜ್ಯಗಳ ನಿರ್ಮಾಣವಿಲ್ಲವೆಂಬ ಹೈದರಾಬಾದು ಕಾಂಗ್ರೆಸಿನ ಗೊತ್ತುವಳಿಯ ಬಗ್ಗೆ ಬಿಹಾರದ ಗವರ್ನರರಾದ ಶ್ರೀ ದಿವಾಕರರು ಸ್ಪಷ್ಟೀಕರಣಕೇಳಿದರೆಂದೂ ಅದಕ್ಕೆ ಆಡಳಿತ ದೃಷ್ಟಿಯಲ್ಲಿ ಸುವ್ಯವಸ್ಥೆ ಸ್ಥಾಪಿಸಲ್ಪಡಬೇಕೆಂಬುದೇ ಇದರ ಅರ್ಥವೆಂದು ವಿವರಿಸಲಾಯಿತಾಗಿಯೂ ವರದಿಯಾಗಿದೆ. ಆಂಧ್ರವು ಆರ್ಥಿಕವಾಗಿ ಎಂದಿಗೂ ಭದ್ರ ಬುನಾದಿಯನ್ನು ಹೊಂದಲಾರದಾದುದರಿಂದ ಈ ರೀತಿ ಸ್ಪಷ್ಟೀಕರಣವನ್ನು ಕೇಳುವ ಅಗತ್ಯ ಬಿತ್ತು. ದಿವಾಕರರೂ, ಶ್ರೀ ಪ್ರಕಾಶರೂ, ಮೈಸೂರಿನ ರಾಜಪ್ರಮುಖರೂ ಈ ವಿಷಯದಲ್ಲಿ ಕುತೂಹಲವನ್ನು ತೋರಿಸಿದರೆಂದು ತಿಳಿದು ಬಂದಿದೆ. ಕನ್ನಡ ಪ್ರಾಂತದ ರಚನೆಯ ಬಗ್ಗೆ ಸರಕಾರದವರು ಯೋಗ್ಯ ಕ್ರಮಗಳನ್ನು ಕೈಗೊಳ್ಳಲು ಮುಂದುವರಿಯದ್ದರಿಂದ ಅಸಂತೃಪ್ತಿ ತಲೆದೋರಿದೆ ಎಂಬುದನ್ನೂ ರಾಜ್ಯಪಾಲ ದಿವಾಕರರು ಉಲ್ಲೇಖಿಸಿದರೆಂದೂ ತಿಳಿಯುತ್ತೇವೆ. ಕನ್ನಡಿಗರ ಬೇಡಿಕೆಯು ಹೊಸರಾಜ್ಯ ನಿರ್ಮಾಣದ್ದು ಇರದೆ, ಮೈಸೂರಿನೊಡನೆ ಬೇರೆ ಬೇರೆ ರಾಜ್ಯಗಳಲ್ಲಿ ಹಂಚಿಹೋದ ಕರ್ನಾಟಕ ಪ್ರದೇಶಗಳ ಸೇರ್ಪಡೆಯೇ ಆಗಿರುವುದರಿಂದ ಇದರ ಕಾರ್ಯಾಚರಣೆಗೆ ಹೈದರಾಬಾದಿನ ಗೊತ್ತುವಳಿಯು ಬಾಧಕವಾಗುವುದಿಲ್ಲೆಂಬ ಅರ್ಥವನ್ನು "ಸಂಯುಕ್ತ ಕರ್ನಾಟಕ" ತನ್ನ ಅಗ್ರ ಲೇಖನದಲ್ಲಿ ಸಯುಕ್ತಿಕವಾಗಿ ಪ್ರತಿಪಾದಿಸಿದೆ. ಇತ್ತ ನಿಜಲಿಂಗಪ್ಪನವರೂ ಕರ್ನಾಟಕ ಪ್ರಾಂತ ರಚನೆಗಾಗಿ ಕೇಂದ್ರವನ್ನು ಒತ್ತಾಯಿಸುವ ತಮ್ಮ ಪೃಥನಿರ್ಧಾರವನ್ನು ಪುನರುಚ್ಚರಿಸಿರುವರು.

ಹೈದರಾಬಾದು ಮಂತ್ರಿಮಂಡಲ

ಆದರೆ ಸದ್ಯಕ್ಕೆ ಹೆಚ್ಚು ಲಕ್ಷ್ಯವನ್ನು ವೇಧಿಸಿರುವುದು ಹೈದರಾಬಾದಿನಲ್ಲಿ ಮಂತ್ರಿಮಂಡಲವು ಕಾಂಗ್ರೆಸು ಪಕ್ಷಕ್ಕೆ ಕೊಟ್ಟಿರುವ ರಾಜೀನಾಮೆಯಾಗಿದೆ. ಶಾಸನ ಸಭೆಯಲ್ಲಿ ಕಾಂಗ್ರೆಸಿಗೆ ಇರುವ ಬಹುಮತವು ಬಹಳ ಸೂಕ್ಷ್ಮವಾಗಿದೆ; ಮಾತ್ರವಲ್ಲ-ಕಾಂಗ್ರೆಸು ಟಿಕೇಟಿನಿಂದ ಆರಿಸಿ ಬಂದವರಲ್ಲಿಯೇ ಕೆಲವರು ಹಿಂದಿನ ಅಧಿವೇಶನದಲ್ಲಿ ವಿರೋಧಿ ಪಕ್ಷದವರು ಸರಕಾರದ ಮೇಲೆ ಅವಿಶ್ವಾಸ ಗೊತ್ತುವಳಿಯನ್ನು ತಂದಾಗ ಕಾಂಗ್ರೆಸ್ಸಿಗೆ ವಿರುದ್ಧ ಮತಕೊಟ್ಟು, ಕಾಂಗ್ರೆಸು ಪಕ್ಷದ ಬಲವನ್ನು ಕುಗ್ಗಿಸಿದರು. ಈ ಕಾರಣದಿಂದ ಮಂತ್ರಿ ಮಂಡಳವು ಕೆಲಸ ನಿರ್ವಹಿಸುವುದು ಕಷ್ಟಕ್ಕಿಟ್ಟುಕೊಂಡಿತು. ಇದಕ್ಕೆ ಪುಟವಿಡುವಂತೆ ಮಂತ್ರಿಮಂಡಳವು ದೊಡ್ಡದಿದೆಯೆಂದೂ ಅದರ ಸದಸ್ಯ ಸಂಖ್ಯೆಯನ್ನು ಕಡಿಮೆ ಮಾಡಬೇಕೆಂದೂ ನೆಹರೂ ಮುಂತಾದ ಮಹನೀಯರೂ ಹೇಳಿದ್ದರು. ಈ ಎಲ್ಲ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ಹೈದರಾಬಾದಿನ ಮುಖ್ಯ ಮಂತ್ರಿ ರಾಮಕೃಷ್ಣ ರಾಯರು ತಮ್ಮ ಹಾಗೂ ಇತರ ೧೨ ಮಂದಿ ಸಹೋದ್ಯೋಗಿಗಳ ರಾಜೀನಾಮೆಯನ್ನು ಸಲ್ಲಿಸಿದರು. ಶಾಸನ ಸಭೆಯ ಕಾಂಗ್ರೆಸ ಪಕ್ಷವು ಪರಿಸ್ಥಿತಿಯ ಸೂಕ್ಷ್ಮಾವಲೋಕನಮಾಡಿ, ಇದೀಗ ರಾಮಕೃಷ್ಣ ರಾಯರ ಧುರೀಣತ್ವದಲ್ಲಿ ವಿಶ್ವಾಸವನ್ನು ಪ್ರಕಟಿಸಿದೆಯಲ್ಲದೆ, ಮಂತ್ರಿಮಂಡಲದ ಪುನರ್ಘಟನೆಯಾಗುವ ವರೆಗೆ, ಸದ್ಯದ ಮಂತ್ರಿಗಳು ಕೆಲಸದಲ್ಲಿರುವಂತೆ ನೋಡಬೇಕೆಂದೂ ಕೇಳಿದೆ. ಕಾಂಗ್ರೆಸು ಪಕ್ಷ ನೇಮಿಸಿದ ಉಪಸಮಿತಿಯೊಂದು ಮಂತ್ರಿಮಂಡಳದಲ್ಲಿ ೯ ಮಂದಿ ಸದಸ್ಯರಿರಬೇಕೆಂದೂ, ೪ ಉಪಸಚಿವರ ಮತ್ತು ೩ ಮಂದಿ ಪಾರ್ಲಿಮೆಂಟರಿ ಕಾರ್ಯದರ್ಶಿಗಳ ನೇಮಕವಾಗಬೇಕೆಂದೂ ಸೂಚಿಸಿದ್ದು—ರಾಮಕೃಷ್ಣ ರಾಯರು ಇದರಂತೆ ನಡೆಯುವ ಭರವಸೆ ಇದೆ.

ಟಿಗೆ ತಂದುಕೊಂಡರೆ, ಪರಿಸ್ಥಿತಿಯ ಪ್ರಕೋಪದಿಂದ ಉದ್ಭವಿಸಬಹುದಾದ ರೋಗಗಳ ಉಪಚಾರವನ್ನು ವೈದ್ಯಕೀಯ ಕ್ಷೇತ್ರದಲ್ಲಿ ಹೆಚ್ಚು ವಿಚಕ್ಷಣತೆಯಿಂದ ನಡೆಸಬಹುದು. ಜಾಗತಿಕ ಆರೋಗ್ಯ ಸಂಸ್ಥೆಯ ಕಡೆಯಿಂದ ಭಾರತದಲ್ಲಿ ಎರಡು ತಿಂಗಳ ಸಂಚಾರಕ್ಕೆ ಬಂದಿರುವ ತಜ್ಞ ವೈದ್ಯರು ತಮ್ಮ ತಿಳುವಳಿಕೆಯ ಲಾಭವನ್ನು ಭಾರತೀಯರಿಗೆ ಮಾಡಿಕೊಟ್ಟು ಭಾರತದಿಂದ ಕಲಿಯಬಹುದಾದನ್ನು ಕಲಿತು ಮರಳುವರೆಂದು ಹಾರೈಸುತ್ತೇವೆ.

PLACE YOUR LIFE ASSURANCE WITH A COMPANY OF YOUR OWN - - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policyholders and Representatives. At whatever stage we welcome your association with the POPULAR.

The Popular Insurance Co. Ltd.

"Popular Buildings", MANGALORE—1.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ. ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,

Moolky S. K.

ಸ್ಥಾಪನೆ 1906
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
ಪ್ರಧಾನ ಕಾರ್ಯಾಲಯ ಉಡುಪಿ, (ದ. ಭಾರತ)
ಜಿಲ್ಲೆಯಲ್ಲಿ ಅತಿ ಹಿರಿಯ ಬ್ಯಾಂಕು ಇವರ ಕೂಡೆ ವ್ಯವಹಾರ ನಡೆಸಲು—
ಮದ್ರಾಸು, ಮೈಸೂರು, ಮುಂಬಾಯಿ, ಕೊಡಗು ಮತ್ತು
ಕೊಚ್ಚಿ-ತಿರುವಾಂಕೂರು ಸಂಸ್ಥಾನಗಳಲ್ಲಿ ಎಲ್ಲಿಯೂ,
ಯಾರಿಗೂ, ಯಾವಾಗಲೂ ನೀವು ಇವನ್ನು ಶಿಫಾರಾಸು ಮಾಡಬಹುದು.
THE CANARA BANKING CORPORATION LTD
Estd 1906] [H O · UDIPI, (S India)

ನವಯುಗ

ಉಡುಪಿ, ಗುರುವಾರ ೧೨-೨-'೫೩

ಜಮ್ಮುವಿನಲ್ಲಿ

ಕಾಶ್ಮೀರಕ್ಕೆ ಸೇರಿಕೊಂಡಿರುವ ಜಮ್ಮು ಪ್ರದೇಶದ ಪ್ರಜಾಪರಿಷತ್ತು ಈಗ್ಗೆ ಕೆಲಸಮಯದಿಂದ ಭಾರತದೊಡನೆ ಅನಿರ್ಬಂಧವಾಗಿ ಜಮ್ಮು ಸೇರ್ಪಡೆ ಹೊಂದಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಆಂದೋಲನ ನಡೆಸುತ್ತಿದ್ದಿತು. ಶೇಖ್ ಅಬ್ದುಲ್ಲಾರ ಸರಕಾರವು ನಿರ್ದಾಕ್ಷಿಣ್ಯದಿಂದ ಈ ತೆರನಾದ ಚಳವಳಿಯನ್ನು ಹತ್ತಿಕ್ಕಲು ಎಲ್ಲ ಕ್ರಮಗಳನ್ನು ಕೈಗೊಂಡುದರ ಜೊತೆಗೇ ಪರಿಸ್ಥಿತಿಯನ್ನು ಭಾರತದ ಧುರೀಣರಲ್ಲಿ ನಿವೇದಿಸಿ. ಚರ್ಚಿಸಿ, ಯೋಗ್ಯ ಪರಿಹಾರ ಮಾರ್ಗವನ್ನು ಕಂಡುಹಿಡಿಯಲೂ ಎಂದು ಉದ್ಯುಕ್ತವಾಯಿತು ಹೈದರಾಬಾದ ಕಾಂಗ್ರೆಸ್ ಅಧಿವೇಶನ ಕಾಲಕ್ಕೆ ಶೇಖ್ ಅಬ್ದುಲ್ಲಾ ಮತ್ತು ಪ್ರಧಾನಿ ನೆಹರೂ ಭೇಟಿಯಾದಾಗ ಅವಶ್ಯವಾಗಿ ಈ ಸಂಬಂಧದಲ್ಲಿ ವಿಚಾರವಿನಿಮಯ ನಡೆಸಿದರು ಪ್ರಜಾಪರಿಷತ್ತಿನ ಆಂದೋಲನದ ಹಿಂದೆ ರಾಜಕೀಯವಾದ ಹೇತುವಿಗಿಂತಲೂ ಮುಖ್ಯವಾಗಿ ಆರ್ಥಿಕ ಕಾರಣಗಳು ಇವೆ ಎಂಬುದರಿಂದ, ಚಳುವಳಿಯು ಕೇವಲ ದುರುದ್ದೇಶ ಪ್ರೇರಿತವಿದೆ ಎಂದು ಹೇಳಲು ಬಾರದು ಮುಖ್ಯವಾಗಿ ಶೇಖ್ ಅಬ್ದುಲ್ಲಾರ ಸರಕಾರವು ಕೈಗೊಂಡ ಭೂಸುಧಾರಣೆ, ಮತ್ತು ಅವಶ್ಯಕ ಸರಕುಗಳ ವ್ಯಾಪಾರದ ಮೇಲಿನ ನಿಯಂತ್ರಣ ಕಾಯಿದೆ ಮುಂತಾದವುಗಳಿಂದ ಜನಸಾಮಾನ್ಯರು ಸಾಹುಕಾರರನ್ನು ನಡೆಸಲು ಆತಂಕವುಂಟಾಗಿದೆ ಭೂಸ್ವಾಮಿಯ ಅಗತ್ಯವನ್ನು ಸ್ವಂತದಿಂದ ಒಪ್ಪಿಕೊಳ್ಳುವ ಪ್ರಧಾನಿ ನೆಹರೂರಂಥವರೂ ಜಮ್ಮುವಿನ ಹಿಂದೂ ಸಂಸ್ಥೆಯನ್ನು ಟೀಕಿಸಿದಲ್ಲಿ—ಇದರಿಂದ ಕೋಮುವಾದಿಗಳ ಒಂದು ಅಕ್ಷರಶಃ ಸತ್ಯ ಕೇವಲ ಕಲ್ಲು ಬಂಡೆಗಳಿಂದ ತುಂಬಿದ ಜಮ್ಮು ಪ್ರದೇಶದಲ್ಲಿರುವ ಸ್ವಲ್ಪ ಭೂಮಿಯು ಕಸಿಸ್ಥಿತಿಯನ್ನು ಇಟ್ಟುಕೊಂಡ ವ್ಯವಸಾಯಕ್ಕೆ ಒದಗಿ ಬರಬಲ್ಲ ಭೂಮಿ ಅತ್ಯಲ್ಪವಾಗಿದೆ. ಹೀಗೆ ಕುಟುಂಬದ ಆರ್ಥಿಕ ತಳಹದಿಯೇ ಕುಸಿದು ಬಿದ್ದಿದೆ ಜೊತೆಗೆ ಪರಿಹಾರಕೊಡದೆ ಭೂಮಿಯನ್ನು ಸರಕಾರದ ಕೈವಶಪಡಿಸುವ ಸುಧಾರಣೆ ಇದಾಗಿರುವುದರಿಂದ–ಸಣ್ಣ ಪುಟ್ಟ ಜಮೀನ್ದಾರೀ ವರ್ಗಗಳಲ್ಲಿ ದ್ವೇಷ ಹೆಚ್ಚಿದೆ ಇವರ ದ್ವೇಷವು ಹೆಚ್ಚುವುದಕ್ಕೆ ಕಾಶ್ಮೀರ ಸರಕಾರ ವಿಸರ್ಜಿಸಿದ ಸೈನ್ಯವೂ ಒಂದು ಕಾರಣವಾಗಿದೆ ಇದರಲ್ಲಿ ರಾಜಪುತರೇ ಅತ್ಯಧಿಕ ಸಂಖ್ಯೆಯಲ್ಲಿದ್ದರು. ಇಂದವರು ಉದ್ಯೋಗವಿಲ್ಲದೆ ಅಲೆಯುತ್ತಿದ್ದಾರೆ. ಹಿಂದೆ ಡೋಗ್ರಾ ಮನೆತನದ ರಾಜರು ಅಧಿಕಾರ ನಡೆಸುತಿದ್ದಾಗ ಇದ್ದಷ್ಟು ಸುರಕ್ಷಿತೆಯಾಗಲೀ ಆಗ ಸರಕಾರ ಜಮ್ಮು ಜನರಿಗೆ ನೀಡುತಿದ್ದ ಸಹಾಯ ಸೌಕರ್ಯಗಳಾಗಲೀ ಇಂದು ದೊರೆಯುತ್ತಿಲ್ಲವೆಂಬುದು ಕೊನೆಯ ದೂರು ಇದಕ್ಕೆ ನಿದರ್ಶನವೆಂಬುವಾಗಿ ಹಿಂದೂ ನಿರಾಶ್ರಿತರಿಗೆ ಏನೇನೂ ಸೌಲಭ್ಯವನ್ನು ಒದಗಿಸಿಕೊಟ್ಟಿಲ್ಲವೆಂದು ಹೇಳುತ್ತಿರುವರು ಸರಕಾರವು ಮುಸ್ಲಿಂ ಪಕ್ಷಪಾತಿಯಾಗಿದೆ ಎಂದು ಧ್ವನಿಸುವ ಜನರಿಗೂ ಕಡಿಮೆ ಇಲ್ಲ. ಹೀಗೆ ಜಮ್ಮುವಿನ ಜನತೆ ಶೇಖ್ ಅಬ್ದುಲ್ಲಾರ ಕಾಶ್ಮೀರೀ ಸರಕಾರ ತಮ್ಮ ಮೇಲೆ ಅಧಿಕಾರವನ್ನು ನಡೆಸುವುದಕ್ಕೆ ಇಷ್ಟಪಡುವುದಿಲ್ಲ ಅವರ ಅಸಂತೃಪ್ತಿಯು ಬೆಳೆಯುವುದಕ್ಕೆ ಕಾಶ್ಮೀರದ ಅರಸೊತ್ತಿಗೆಯನ್ನು ನಿರ್ಮೂಲಿಸಲು ಗೊತ್ತುಮಾಡಿ, ಚುನಾಯಿತ ರೀತಿಯಿಂದ ರಾಜ್ಯದ ಪರಿಷ್ಕನನ್ನು ನೇಮಿಸಿದ್ದು ಆಜ್ಯಾಹುತಿಯನ್ನಿತ್ತಿತೆನ್ನಬಹುದು. ಜಮ್ಮು ಜನತೆಗೆ ತಮ್ಮವನೇ ಎಂದಿದ್ದ ಮಹಾರಾಜರು ಸಿಂಹಾಸನ ಚ್ಯುತರಾದ ಸಂಗತಿ ಎಳ್ಳಷ್ಟೂ ಮನಸ್ಸಿಗೆ ಬಂದಿಲ್ಲ. ಆರ್ಥಿಕ ಪರಿಸ್ಥಿತಿ ಹದಗೆಟ್ಟುಹೋಗುತ್ತಿರುವುದರ ಜೊತೆಗೆ–ಮಾನಸಿಕವಾಗಿಯೂ ಜಮ್ಮು ಜನತೆ ವಿಕ್ಷಿಣ್ಣಗೊಂಡಿದೆ ಇದು ಕೇವಲ ರಾಜಕೀಯವೆನ್ನಲು ಬರುವಂತಿಲ್ಲವಾದುದರಿಂದ ಶೇಖ್ ಅಬ್ದುಲ್ಲಾರು ಈಚೆಗೆ ಜಮ್ಮು ಪರಿಸ್ಥಿತಿಯನ್ನು ವಿವೇಚಿಸಿ ವರದಿ ಮಾಡಲು ಒಂದು ಸಮಿತಿಯನ್ನು ನೇಮಿಸಿದ್ದು ಯಥೋಚಿತವಾಗಿದೆ. ನಿಷ್ಪಕ್ಷಪಾತತನದಿಂದ ಈ ವಿಚಾರಣೆ ನಡೆಯುವುದು ಇಷ್ಟವಾಗಿರುವುದರಿಂದ ಕಾಶ್ಮೀರ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು ಸಮಿತಿಯ ಅಧ್ಯಕ್ಷಸ್ಥಾನದಲ್ಲಿರುವರು ಜಮ್ಮುವಿನ ಸ್ಥಿತಿಗತಿಯೊಡನೆ ಅಲ್ಲಿಯ ಜನರೊಡನೆ ಒಡನಾಟವಿಟ್ಟುಕೊಂಡು, ಪರಿಚಿತರಾಗಿರುವ ಒಬ್ಬಿಬ್ಬರು ಧುರೀಣರನ್ನಾದರೂ ಈ ಸಮಿತಿಯಲ್ಲಿ ಸೇರಿಸುವುದು ಒಳಿತೆಂದು ಸೂಚಿಸುತ್ತೇವೆ. ಚಳುವಳಿಯನ್ನು ನಡೆಸುತ್ತಿರುವವರು ಸಮಿತಿಯ ಕಾರ್ಯಕಲಾಪಗಳಿಗೆ ಬಾಧಕ ಬರುವಂತೆ ವರ್ತಿಸದೆ– ತಮ್ಮ ಆಂದೋಲನವನ್ನು ಸ್ಥಗಿತಗೊಳಿಸುವುದೂ ಅಪೇಕ್ಷಣೀಯವಿದೆ ಆದರೆ ಪರಿಸ್ಥಿತಿ ಇಷ್ಟು ಸೌಮ್ಯ ರೀತಿಯಲ್ಲಿಲ್ಲವೆಂದು ಈಚೆಗೆ ಬಂದ ವರದಿಗಳು ಹೇಳುತ್ತಿವೆ ಈ ಆಂದೋಲನವು ಜಮ್ಮು ಕಾಶ್ಮೀರದ ಗಡಿಯನ್ನು ಮೀರಿ, ಭಾರತಕ್ಕೂ ವ್ಯಾಪಿಸಿದ ಸಂಗತಿ ತಿಳಿದಿದೆ. ಪೂರ್ವ ಪಂಜಾಬದಲ್ಲಿ ಮೊನ್ನೆ ತಾನೆ ಜಾತೀಯವಾದೀ ಪಕ್ಷಗಳನ್ನುಳ್ಳ ರಾಷ್ಟ್ರೀಯ ಸ್ವಯಂಸೇವಕ ಸಂಘ, ಹಿಂದು ಮಹಾಸಭೆ ಜನಸಂಘ ಮುಂತಾದುವು ಸಭೆಕೂಡಿಸಿ ಜಮ್ಮುವಿನ ಆಂದೋಲನಕ್ಕೆ ತಮ್ಮ ಬೆಂಬಲ ಸೂಚಿಸಲು ಮಾಡಿದ ಪ್ರಯತ್ನವನ್ನು ಸರಕಾರ ಭಂಗಮಾಡಿದೆ. ಸಭೆ ಮೆರವಣಿಗೆಗಳ ಮೇಲೆ ಎರಡು ತಿಂಗಳ ಕಾಲ ನಿರ್ಬಂಧವನ್ನು ಹೇರಿರುವುದಲ್ಲದೆ—ಜಾತೀಯವಾದಿಗಳ ಧುರೀಣರನ್ನು ಬಂಧಿಸಿರುವರು. ಪ್ರಜಾಪರಿಷತ್ತಿನ ಆಂದೋಲನಕ್ಕೆ ಬೆಂಬಲ ನೀಡಲು ಜಾತೀಯವಾದಿಗಳು ಸಂಘಟಿಸಿದ ಸಭೆ ಮೆರವಣಿಗೆಗಳ ವಿರುದ್ಧ ಕಾಂಗ್ರೆಸಿಗರೂ ಚಳುವಳಿಯ ನಿಷೇಧಾರ್ಥವಾಗಿ ಸಭೆ ಮೆರವಣಿಗೆ ತೆಗೆಯಲು ನಿರ್ಧರಿಸಿದ್ದರಿಂದ–ಸಾರ್ವಜನಿಕ ಶಾಂತಿಗೆ ತೊಂದರೆ ಬಂದೀತೆಂಬುದರಿಂದ ಈ ಕ್ರಮವನ್ನು ಕೈಗೊಳ್ಳಬೇಕಾಯಿತೆಂದು ಸರಕಾರ ಸ್ಪಷ್ಟೀಕರಿಸಿದೆ ಗಡಿನಾಡಾದ ಪಂಜಾಬಿನಂಥ ಆಯಕಟ್ಟಿನ ಪ್ರದೇಶದಲ್ಲಿ ಸರಕಾರದ ಬಲ ಗುಂದಿಸುವ ಯಾವುದೇ ವಿಧ್ವಂಸಕ ಕೃತ್ಯಗಳನ್ನು ಭಾರತ ಸಹಿಸುವಂತಿಲ್ಲವೆಂಬುದು ಇದರಿಂದ ವ್ಯಕ್ತಗೊಳ್ಳುತ್ತದೆ.

ಉಡುಪಿ

ಪ್ರಜಾರಾಜ್ಯ ದಿನಾಚರಣೆಯು:— ಬೆಳಿಗ್ಗೆ ಅಜ್ಜರಕಾಡು ಮೈದಾನಿನಲ್ಲಿ ಶ್ರೀ ಪಿ. ಗೋಪಾಲ ನಾಯ್ಕರಿಂದ ಧ್ವಜಾರೋಹಣ, ಬಳಿಕ ಆಟಗಳ ಸ್ಪರ್ಧೆಯೊಂದಿಗೆ ನಡೆಯಿತು. ಸಂಜೆ ಶ್ರೀ ಕೆ. ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಸೇರಿ ಪಂದ್ಯಾಟಗಳಲ್ಲಿ ಗೆದ್ದವರಿಗೆ ಬಹುಮಾನ ಹಂಚಲಾಯಿತು

ಉಡುಪಿ ಆಫೀಸರ್ಸ್ ಕ್ಲಬ್ಬಿನಲ್ಲಿ—ಗಣರಾಜ್ಯ ದಿನಾಚರಣೆ ನಿಮಿತ್ತ ರಾತ್ರಿ, ಭೋಜನ ಕೂಟವಿತ್ತು. ಬಳಿಕ ಡಿ। ಮುನ್ಸಿಫ್ ಜನಾಬ್ ಅಬ್ದುಲ್ ರಹೀಂ ಅಹಮ್ಮದ್, ಅವರ ಅಧ್ಯಕ್ಷತೆಯಲ್ಲಿ ಸಭೆಸೇರಿ, ಹಲವರ ಕಾಲೋಚಿತ ಮಾತುಗಳಾದುವು. ಅ। ಸ। ಪ್ರೊಸಿಕ್ಯೂಟರ್ ಶ್ರೀ ವಿ ಕೆ. ಸೆಟ್ಟರು ಧನ್ಯವಾದಗಳನ್ನಿತ್ತರು.

ಸ್ಕೂಲ್ ಡೇ ಸಮಾರಂಭ— ಸ್ಥಳೀಯ ಕ್ರಿಶ್ಚಿಯನ್ ಹೈಸ್ಕೂಲಿನ ಶಾಲಾ ವರ್ಧಂತಿ ಸಮಾರಂಭವು ಕಳೆದ ತಾ 31 ರಂದು ಸಂಜೆ ಡಿ। ಮುನ್ಸಿಫ್ ಜನಾಬ್ ಅಬ್ದುಲ್‌ರಹೀಂ ಅಹಮ್ಮದ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯ ಶ್ರೀ ಎಸ್. ಎನ್. ಮಾತಾಯಸರು ಶಾಲಾವರದಿಯನ್ನೋದಿದರು ಬಾಸೆಲ್‌ಮಿಶನ್ ಚರ್ಚಿನ ರೆ। ಪಾದ್ರಿ ನ್ನರು ಶಾಲಾ ಸ್ತುತಿವಾಚನಮಾಡಿದರು. ಬಹುಮಾನ ವಿತರಣೆ, ಅಧ್ಯಕ್ಷರ ಭಾಷಣ ಭಾಷಣಗಳಾದನಂತರ ವಿವಿಧ ವಿನೋದಾವಳಿಗಳಾದುವು.

ಉಳಿತಾಯ ಪಕ್ಷ ಉದ್ಘಾಟನಾ ಸಮಾರಂಭ— ದಿನಾಂಕ 4 ರಂದು ಸಂಜೆ ತಾಲೂಕು ಕಚೇರಿಯಲ್ಲಿ ಮುನಿಸಿಪಲ್ ಕಮಿಶನರ್ ಶ್ರೀ ಕೆ ಗೋಪಾಲ ಮೆನೊನ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ತಹಶಿಲ್ದಾರ್ ಶ್ರೀ ವೆಂಕಪ್ಪನವರು ಉಳಿತಾಯಪಕ್ಷದ ಗೊತ್ತುಗುರಿಗಳನ್ನು ವಿವರಿಸಿದರು

ಸದಸ್ಯತನ ರದ್ದತಿ— ಉಡುಪಿ ಆಫೀಸರ್ಸ್ ಕ್ಲಬ್ಬಿನ ಮೆಂಬರ ಹಾಗೂ ಕೋಶಾಧಿಕಾರಿಯಾಗಿದ್ದ ಮುನಿಸಿಪಲ್ ಕಮಿಶನರ್ ಶ್ರೀ ಕೆ. ಗೋಪಾಲ ಮೆನೊನ್, ಅವರ ಮೆಂಬರಿಕೆಯನ್ನು ಕ್ಲಬ್ಬಿನ ಕಾರ್ಯನಿರ್ವಾಹಕ ಸಮಿತಿಯವರು ರದ್ದುಗೊಳಿಸಿದ್ದರು. ಆ ಕುರಿತು ಶ್ರೀ ಮೆನೊನರು ಮಹಾಸಭೆಗೆ ಅಪೀಲು ಮಾಡಿದುದನ್ನು ಮಹಾಸಭೆಯು ತಾ 5ರಲ್ಲಿ ಪರಿಶೀಲಿಸಿ ಕಾರ್ಯನಿರ್ವಾಹಕ ಸಮಿತಿಯ ತೀರ್ಮಾನವನ್ನು ಎತ್ತಿಹಿಡಿಯಿತು.

ನಿಧನ—ಪಾಂಗಳ ನಾಯಕ್ ಬ್ಯಾಂಕ್ ಲಿಮಿಟೆಡ್–ಈ ಸಂಸ್ಥೆಯ ಸಂಸ್ಥಾಪಕರಾದ ದಿವಂಗತ ಪಾಂಗಾಳ ಹೊದ್ದಾಮರ್ ನಾಯ್ಕರ ಧರ್ಮಪತ್ನಿಯವರು ಕಳೆದ ತಾ 30ರಂದು ತಮ್ಮ 72ನೆ ವಯಸ್ಸಿನಲ್ಲಿ ದೈವಾಧೀನರಾದರು ಕಟಪಾಡಿ ನಾಯಕ ಮನೆತನದವರನೇಕರೂ ಇತರರೂ ಬಂದು ಶ್ರದ್ಧಾಂಜಲಿಯನ್ನರ್ಪಿಸಿದ ನಂತರ ಮೃತರ ಪುತ್ರ ಶ್ರೀ ಪಾಂಗಾಳ ವೆಂಕಟೇಶ ನಾಯ್ಕರು ಅಂತಿಮ ಸಂಸ್ಕಾರವನ್ನೂ ನೆರವೇರಿಸಿದರು

ಹೊಸ ನೇಮಕ:–ಉಡುಪಿಯ ಸ್ಪೆಶಲ್ ಫರ್ಸ್ಟ್‌ಕ್ಲಾಸ್ ಒನೆರರಿ ಮೆಜಸ್ಟ್ರೇಟರಾಗಿ ನಿವೃತ್ತ ಸಬ್ ಕಲೆಕ್ಟರ್ ರಾ। ಸಾ। ಕೆ। ಕೃಷ್ಣಯ್ಯನವರು ನೇಮಕಹೊಂದಿ ಈಗಾಗಲೇ ಚಾರ್ಜುವಹಿಸಿರುವರು. ಈ ತನಕ ಈ ಹುದ್ದೆಯಲ್ಲಿ ಶ್ರೀ ಪಿ. ಗೋಪಾಲನಾಯ್ಕರಿದ್ದರು.

ವರ್ಧಂತಿ ಸಮಾರಂಭ—ಉಡುಪಿ ಸರಕಾರಿ ಗಂಡಸರ ಟ್ರೈನಿಂಗ್ ಶಾಲೆಯ ವರ್ಧಂತಿ ಸಮಾರಂಭವು ತಾ. 7ರಲ್ಲು ಸಂಜೆ ದ. ಕ. ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಉಗ್ರಾಣ ಕೃಷ್ಣರಾಯರು ಸ್ವಾಗತ ಮಾತುಗಳನ್ನಾಡಿ ಶಾಲಾ ವರದಿಯನ್ನೋದಿದರು. ಶ್ರೀ ವಿಶ್ವಂಭರ ಉಪಾಧ್ಯಾಯರು ಸ್ತುತಿವಾಚನ ಮಾಡಿದರು. ಬಹುಮಾನ ವಿತರಣೆ, ಅಧ್ಯಕ್ಷ ಭಾಷಣ ಮೊದಲಾದ ಕಾರ್ಯಕ್ರಮಗಳಿಂದ ಸಮಾರಂಭವು ಮುಕ್ತಾಯವಾಯಿತು. ಮರುದಿನ ಈ ಶಾಲೆಯ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಶ್ರೀ ಎಚ್. ಸಂಜೀವರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಮುನಿಸಿಪಲ್ ಕೌನ್ಸಿಲು ಸಭೆಯು:— ತಾ 9ರಲ್ಲು ಸಂಜೆ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ನಾಯ್ಕರು ಜರೂರು ಕೆಲಸ ನಿಮಿತ್ತ ಸಭೆಯನ್ನು ಬಿಟ್ಟು ಹೋದ ಬಳಿಕ ಉಪಾಧ್ಯಕ್ಷ ಡಾ। ಟಿ ವಿ ಪೈ ಸರಾಯ ಅಧ್ಯಕ್ಷತೆಯಲ್ಲಿ ಕೌನ್ಸಿಲಿನ 1952-53 ಮತ್ತು 53-54ನೆ ವರ್ಷದ ಬಜೆಟ್ ಚರ್ಚಿಸಲ್ಪಟ್ಟು ಪಾಸಾಯಿತು.

ಬಹುಮಾನ ವಿತರಣ ಸಮಾರಂಭ— ಉಡುಪಿ ಡಿವಿಜನಿನ ಎತ್ಲೆಟಿಕ್ ಎಸೋಸಿಯೇಶನಿನ ಕಡೆಯಿಂದ ಇದೇ ತಾ. 7ರಲ್ಲು ನಡೆದ ಆಟ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ಹಂಚುವ ಸಮಾರಂಭವು ಶ್ರೀ ಟಿ ಎ. ಪೈ, ಎಮ್. ಎಲ್. ಎ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿಗಳಾದ ಶ್ರೀ ಕೆ ಗೋಪಾಲ ಸೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಉಡುಪಿ ಪಾತ್ರೆಗಳು

ಕಲ್ಕುಂಜೆಯವರ ಖ್ಯಾತಿ— ಉಡುಪಿ ಪರಿಸರ ಹಾಗೂ ಅಕ್ಕ ಪಕ್ಕದ ಗ್ರಾಮಗಳ ನಿವಾಸಿಗಳು ಅಡಿಗೆ ಮಾಡಲು, ದೇವತಾರ್ಚನೆ ಮಾಡಲು ಬೇಕಾಗುವ ಉಪಕರಣಗಳ ಅಭಾವದಿಂದ ಹಾ ಪಾ ತೊಡೆಯುತ್ತಿದ್ದುದನ್ನು 1919 ರಲ್ಲಿ ಮನಗಂಡು ಶ್ರೀ ಕಲ್ಕುಂಜೆ ವ್ಯಾಸಾಚಾರ್ಯರು ಉಡುಪಿ ರಥಬೀದಿಯ ಶ್ರೀ ಮಾಧವನಂತೇಶ್ವರ ಸ್ವಾಮಿ ಸನ್ನಿಧಿಯ ಪಕ್ಕದಲ್ಲಿ ಪಾತ್ರೆಯಂಗಡಿಯೊಂದನ್ನು ತೆರೆದು ಅಂದಿನಿಂದ ಇಂದಿನ ತನಕವೂ ಗಿರಾಕಿಗಳ ಮನಸ್ಸೊಪ್ಪುವ, ಸಂತೃಪ್ತಿಯನ್ನುಂಟುಮಾಡುವ ಮಹೋದ್ಯೋಗವನ್ನು ಮುಂದಿಟ್ಟುಕೊಂಡು ಬಂದುದು ಅಭಿನಂದನೀಯವಿರುವುದಲ್ಲದೆ, ಈಚೆಗೆ ತೆರೆಯಲ್ಪಟ್ಟ ಇತರ ಪಾತ್ರೆ ವ್ಯಾಪಾರಿಗಳಿಗೂ ಮಾರ್ಗ ದರ್ಶನ ಮಾಡಿರುವುದು. ಪಾತ್ರೆ ಪಗಡಿಗಳ ನೆನಪು ಬಂದೊಡನೆ: ಶ್ರೀ ಕಲ್ಕುಂಜೆಯವರ ಅಂಗಡಿ ಆ ಬಾಲವೃದ್ಧರೆಲ್ಲರ ಕಣ್ಣ ಮುಂದೆ ಕುಣಿದಾಡುತ್ತಿರುವುದು. 'ಶ್ರೀ ಕಲ್ಕುಂಜೆ' ಎಂಬುದೀಗ ಮನೆ ಮಾತಾಗಿ ಪರಿಣಮಿಸಿರುವುದೇ ಅವರ ಜನಪ್ರಿಯತೆಗೆ ಯೋಗ್ಯ ಹಾಗೂ ಸಮರ್ಥ ನಿದರ್ಶನ. ಶ್ರೀ ಆಚಾರ್ಯರು ಇದೇ ಪ್ರಗತಿ ಪಥದಲ್ಲಿ ಮುನ್ನಡೆದು ಜನತಾ ಜನಾರ್ದನನ ಸೇವೆಯನ್ನು ಮಾಡುತ್ತ ಬಂದು ಅಖಿಲ ಕರ್ನಾಟಕ, ಹೆಚ್ಚೇಕೆ ಅಖಂಡ ಭಾರತದಲ್ಲಿ 'ಪಾತ್ರೆ ದೇವತಾರ್ಚನೆಗಳಿಗೆ ಶ್ರೀ ಕಲ್ಕುಂಜೆಯವರಂಗಡಿಯನ್ನು ಬಿಟ್ಟರೆ ಇನ್ನೊಂದಿಲ್ಲ' ಎನ್ನುವಂತಾಗಲೆಂದು ಹಾರೈಸುವೆವು.

ದೂರಪೂರ್ವದ ವಾತಾವರಣ ಕದಡಿತು!

ಐಸೆಸ ಹಾವರರ ನೀತಿಯಿಂದ ರಾಜಕಾರಣಿಗಳಿಗೆ ಚಿಂತೆ

ಜನರಲ್ ಐಸೆನ್ ಹಾವರರು ಅಮೇರಿಕಾದ ಸಂಯುಕ್ತ ರಾಜ್ಯಗಳ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ ಕೆಲವೇ ದಿನಗಳಲ್ಲಿ ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಗೊಂದಲವನ್ನು ಉಂಟುಮಾಡಲು ಸಮರ್ಥರಾದರು. ಚುನಾವಣೆಯ ಪ್ರಚಾರ ಭರದಲ್ಲಿ ತಾವು ಏಶಿಯದಲ್ಲಿ ಏಶಿಯನರನ್ನೇ- ಯುದ್ಧಕ್ಕಾಗಿ ಉಪಯೋಗಿಸುತ್ತೇವೆಂದು ಅಮೆರಿಕಾದ ಜನತೆಗೆ ಕೊಟ್ಟ ಭರವಸೆಯನ್ನು ಅವಸರದಲ್ಲಿಯೇ ಕಾರ್ಯರೂಪಕ್ಕೆ ತರುವ ಹವಣಿಕೆಯನ್ನು ಅವರೆಸಗಿದ್ದಾರೆ. ರಾಷ್ಟ್ರೀಯ ಚೀನಾ ಸರಕಾರವು ಆಶ್ರಯ ಹೊಂದಿರುವ ಫೋರ್ಮೋಸಾ ದ್ವೀಪ ಮತ್ತು ಚೀನಾದ ವಿಶಾಲ ಭೂಖಂಡಗಳ ನಡುವೆ ಅಧ್ಯಕ್ಷ ಟ್ರೂಮನ್ನರು ನಿಲ್ಲಿಸಿದ್ದ ಅಮೇರಿಕಾದ ಏಳನೇ ನೌಕಾಪಡೆಯನ್ನು ಹಿಂತೆಗೆದುಕೊಂಡು ಕಮ್ಯೂನಿಸ್ಟ್ ಚೀನಾದ ಮೇಲೆ ರಾಷ್ಟ್ರೀಯಪಕ್ಷದವರು ಯುದ್ಧವನ್ನು ಮಾಡಲು ಮುಕ್ತದ್ವಾರವನ್ನು ಐಸೆನ ಹಾವರರು ಒದಗಿಸಿಕೊಟ್ಟದ್ದೇ ಈ ರೀತಿಯ ಕೋಲಾಹಲದ ಮೂಲ. ಅಮೇರಿಕಾಧ್ಯಕ್ಷರ ಈ ನಿರ್ಣಯದಿಂದ ದೂರಪೂರ್ವದ ದಿಗಂತದಲ್ಲಿ ಮರಳಿ ಘನವಾದ ಕಾರ್ಮೋಡಗಳು ಕಾಣಿಸಿಕೊಂಡಿವೆ. ಎಲ್ಲ ರಾಜಕಾರಣಿಗಳೂ ಶಾಂತಿಪ್ರಿಯರೂ ಅಮೇರಿಕದ ಬದಲಿಸಿದ ನಿಲುಮೆಯ ಪರಿಣಾಮ ಹೇಗಾಗಬಹುದೆಂಬ ಚಿಂತೆಯಲ್ಲಿಯೇ ಮುಳುಗಿರುವರು. ಯುದ್ಧ ನೀತಿ ವಿಶಾರದರೆಂದು ಐಸನಹಾವರರು ಹೆಸರು ಪಡೆದಿದ್ದರೂ ಈ ಹೊಸ ತಂತ್ರದಿಂದ ಯುದ್ಧ ವಿಸ್ತರಣ ಹೊಂದುವ ಭಯವೇ ಲೋಕವನ್ನು ತಲ್ಲಣಿಸಿರುವುದು. ಕೊರಿಯಾದ ಕದನರಂಗದ ಬೇಗೆ ಇನ್ನೂ ಆರದಿರುವಾಗ ಈ ರೀತಿ ವ್ಯಾಪಕವಾದ ಕ್ಷೇತ್ರಕ್ಕೆ ಯುದ್ಧವನ್ನೊಯ್ಯುವುದು ಮುತ್ಸದ್ದಿತನವೆಂದು ಒಪ್ಪಿಕೊಳ್ಳಲು ಕಷ್ಟವೆನಿಸುವುದು ಸ್ವಾಭಾವಿಕವೇ.

ಟ್ರೂಮನ್ನರ ಸ್ವಾರ್ಥ

ಅಮೇರಿಕನರು ಏಳನೆಯ ನೌಕಾ ಪಡೆಯನ್ನು ಫೋರ್ಮೋಸಾ ಕಡಲುಗಾಲಿವೆಯಲ್ಲಿ ತಮ್ಮ ಸ್ವಾರ್ಥಕ್ಕಾಗಿಯೇ ಇಟ್ಟಿದ್ದರು. ನವಜೀವನವು ಕಮ್ಯುನಿಸ್ಟರ ಕೈವಶವಾದ ಮೇಲೆ, ದೂರಪೂರ್ವದಲ್ಲಿ ಕಮ್ಯೂನಿಸಮನ್ನು ಬಗ್ಗುಬಡೆಯಲು ತನಗೆಲ್ಲಿಯೂ ಆಸ್ಪದವುಳಿಯಲಾರದೆಂದುಕೊಂಡ ಅಮೇರಿಕ-ಚಿಯಾಂಗ ಕೈಶೇಕರು ಫೋರ್ಮೋಸಾ ದ್ವೀಪದಲ್ಲಿ ಆಶ್ರಯಪಡೆದುದನ್ನು ಕಂಡು ಅವರನ್ನು ಬೆಂಬಲಿಸಿತು. ಕಮ್ಯೂನಿಸ್ಟರು ಈ ನಡುಗಡ್ಡೆಯ ಮೇಲೂ ಧಾಳಿಮಾಡುವುದು ಅಸಾಧ್ಯವಲ್ಲವಾದುದರಿಂದ ಅಮೇರಿಕದ ನೌಕಾಪಡೆ ಅಲ್ಲಿ ತಳವೂರಿತು. ಆದರೆ ಅಧ್ಯಕ್ಷ ಟ್ರೂಮನ್ನರು ಮಾತ್ರ ನಿಜವಾದ ಕಾಂಕ್ಷೆಯನ್ನು ಪ್ರಕಟಪಡಿಸದೆ ಕಮ್ಯೂನಿಸ್ಟ್ ಚೀನಾದ ಮೇಲೆ ರಾಷ್ಟ್ರೀಯರು ಧಾಳಿ ನಡೆಸದಂತೆ ನೋಡಿಕೊಳ್ಳುವುದೇ ಇದರ ಉದ್ದೇಶವೆಂದು ಹೇಳಿ, ತಮ್ಮ ಮುಖವುಳಿಸಿಕೊಂಡರು. ಕೊರಿಯಾ ಕದನ ಕಾವೇರುತ್ತಿದ್ದಗಳಿಗೆ ಅದು. ಆದುದರಿಂದ ಕಮ್ಯೂನಿಸ್ಟ ಚೀನೀಯರು ಇದರ ವಿರುದ್ಧ ಬೊಬ್ಬೆ ಹೊಡೆಯುವಷ್ಟಕ್ಕೆ ಸುಮ್ಮನಾದರು—ಹೊರತು ಪ್ರತ್ಯಕ್ಷ ಪ್ರತಿಭಟನೆಯನ್ನೇನು ತೋರಲಿಲ್ಲ. ಹೀಗೆ ಕಮ್ಯೂನಿಸ್ಟರ ಧಾಳಿಯ ಚಿಂತೆ ತಪ್ಪಿದ ಸಮಯದಲ್ಲಿ ಚಿಯಾಂಗರ ಸೇನೆಯನ್ನು ಚೆನ್ನಾಗಿ ಸಂಘಟಿಸುವ, ಅದಕ್ಕೆ ಯೋಗ್ಯ ತರಬೇತಿಯನ್ನು ಕೊಡುವ, ಕೆಲಸವನ್ನು ಅಮೇರಿಕಾ ಮಾಡಿತೆನ್ನಬಹುದು.

ಚಿಯಾಂಗರ ಕೋಲಾಹಲ

ಇಂದು ಚಿಯಾಂಗರ ವಶದಲ್ಲಿ ಆರು ಲಕ್ಷ ಸುಸಜ್ಜಿತ ಸೈನ್ಯಪಡೆ ಇದೆ ಎಂದು ಹೇಳುತ್ತಿರುವರು. ಇದನ್ನುಪಯೋಗಿಸಿ ಚೀನಾದ ಭೂಖಂಡದ ಮೇಲೆ ರಾಷ್ಟ್ರೀಯರು ದಾಳಿ ನಡೆಸುವುದಕ್ಕೆ ಐಸನಹಾವರರ ಪ್ರಕೃತಾಜ್ಞೆ ಅನುಕೂಲ ಮಾಡಿಕೊಟ್ಟಿದೆ.ಆದರೆ ಅದೇ ಸಮಯದಲ್ಲಿ ಕಮ್ಯೂನಿಸ್ಟರು ಫಾರ್ಮೋಸಾ ದ್ವೀಪವನ್ನು ಆಕ್ರಮಿಸ ಬಯಸಿದರೆ, ಅದನ್ನು ತಡೆಗಟ್ಟಬೇಕೆಂಬ ಟ್ರೂಮನ್ನರ ಆಜ್ಞೆ ಹಿಂದೆಗೆಯಲ್ಪಟ್ಟಿಲ್ಲವೆಂಬುದು ಅರ್ಥಪೂರ್ಣವಿದೆ! ಕೊರಿಯಾದಲ್ಲಿ ಕಮ್ಯೂನಿಸ್ಟರು ತ್ರಾಹಿ ತ್ರಾಹಿ ಎಂದು ತಾವಾಗಿ ಮೊಂಡಿಯೂರಿ ಬರುವಂತಾಗಬೇಕೆಂದು ದಕ್ಷಿಣ ಚೀನಾದ ಕಡೆ ಪೀಕಿಂಗ ಸರಕಾರದ ಲಕ್ಷ್ಯವನ್ನು ಸೆಳೆಯುವುದೂ, ತನ್ಮೂಲಕ ಅವರ ಶಕ್ತಿಯನ್ನು ಭಾಗಮಾಡುವುದೂ ಐಸನಹಾವರರ ಮೂಲತಂತ್ರ. ಆದರೆ ಚೀನಾದ ಬಳಿಯಿರುವ ಮಿಲಿಯಾವಧಿ ಸೈನ್ಯಪಡೆಯನ್ನು ಲಕ್ಷಿಸಿ ಹೇಳುವುದಾದಲ್ಲಿ ಚಿಯಾಂಗರ ಕೈಮೇಲಾಗುವುದು ಸರ್ವಥಾ ಅಸಾಧ್ಯವೆಂದು ತೋರುವುದು. ಚಿಯಾಂಗರೂ ಅವರ ಪಕ್ಷದ ಧುರೀಣರೂ ಬಾಯಿ ಮಾತಿನಿಂದ ಕಮ್ಯೂನಿಸ್ಟರನ್ನು ಹುಡಿ ಹಾರಿಸಿಬಿಡುವೆವೆಂದು ಆಟೋಪ ಗೈಯುತಿದ್ದರೂ ಕಡಲುಗಾಲಿವೆಯನ್ನು ಹಾಯ್ದು ಹೋಗಿ ದಾಳಿ ಮಾಡುವಷ್ಟರ ಮಟ್ಟಿನ ಹಡಗು ಪಡೆಯಾಗಲೀ, ವೈಮಾನಿಕ ದಳವಾಗಲೀ ಯುದ್ಧ ಸಾಧನವಾಗಲೀ ಅವರ ಬಳಿಯಿಲ್ಲ!

ಚರ್ಚಿಲರ ಮುಖಭಂಗ

ಚಿಯಾಂಗರ ಎಲ್ಲ ಕೋಲಾಹಲವೂ ಐಸೆನಹಾವರರು ತಮ್ಮ ಬೆನ್ನ ಹಿಂದಿನಿಂದ ಪ್ರೋತ್ಸಾಹವನ್ನು ಕೊಟ್ಟೇ ತೀರುವರೆಂಬ ಕಲ್ಪನೆಯನ್ನು ಆಧರಿಸಿ ನಿಂತಿದೆ. ಇದು ನಿಜವಿರಲಿ, ಇಲ್ಲದಿರಲಿ—ದೂರ ಪೂರ್ವದ ವಾತಾವರಣವನ್ನು ಐಸೆನಹಾವರರು ಹದಗೆಡಿಸಿದುದಂತೂ ನಿಶ್ಚಯ ಅಮೇರಿಕದ ನೀತಿಯನ್ನು ಕಮ್ಯೂನಿಸ್ಟರು ಖಂಡಿಸಿದರೆ ಐಸನಹಾವರರ ಬದಲಿದ ಧೋರಣೆ ಬ್ರಿಟನಿನ ಅಭಿಮಾನಕ್ಕೆ ಧಕ್ಕೆ ಕೊಟ್ಟಿದೆ. ಮಹತ್ವದ ವಿಷಯಗಳಲ್ಲಿ ಪರಸ್ಪರ ಒಮ್ಮತವಿರಬೇಕೆಂದು ಈ ಎರಡು ರಾಷ್ಟ್ರಗಳು ಹೇಳುತ್ತಿದ್ದಂತೆಯೇ—ವ್ಯವಹಾರದಲ್ಲಿ ಮತಭೇದವು ವ್ಯಾಪಕಗೊಳ್ಳುತ್ತಾ ನಡೆದಿದೆ. ಚರ್ಚಿಲರು ಈಚೆಗೆ ಐಸೆನಹಾವರರೊಡನೆ ಭೇಟಿ ಮಾಡಿದಾಗಲಾಗಲೀ ಡಲ್ಲೇಸರು ಈಡನರೊಡನೆ ಮಾತುಕತೆ ನಡೆಸಿದಾಗಲಾಗಲೀ- ತಮ್ಮ ಗುಟ್ಟನ್ನು ಹೊರಗೆಡವಲಿಕ್ಕೆ ಅಮೇರಿಕ ಸಿದ್ಧವಿರಲಿಲ್ಲವೆಂಬುದು ಇದೀಗ ಸ್ಪಷ್ಟಗೊಂಡಿದೆ. ಆದುದರಿಂದ ಬ್ರಿಟನು ಚಿಂತಾಕುಲವಾಗಿರುವುದು ಸ್ವಾಭಾವಿಕ. ಇತರ ಯುರೋಪ ರಾಷ್ಟ್ರಗಳಲ್ಲಿ ಇಂಡೋಚೀನಾದಲ್ಲಿ ಕಾದುತ್ತಿರುವ ಫ್ರೆಂಚರಿಗೆ ಐಸೆನ ಹಾವರರ ನೀತಿಯಿಂದ ಒಳಿತಾಗುವ ಭರವಸೆ ಕಾಣುವುದಿಲ್ಲ. ಅಮೇರಿಕದ ಮೇಲಿನ ರೊಚ್ಚಿನಿಂದವಾದರೂ ವೀತನಾಮಿ ದುರೀಣರಿಗೆ ಚೀನೀ ಕಮ್ಯೂನಿಸ್ಟರು ಅಧಿಕ ನೆರವು ನೀಡಿ, ಈಗಾಗಲೇ ಸೋಲುತಂದು ಜರ್ಜರಿತರಾಗಿರುವ ಫ್ರೆಂಚರನ್ನು ಗೋಳುಹೊಯ್ದುಕೊಳ್ಳುವುದು ನಿಶ್ಚಯ. ಮಲಯಾ ಬರ್ಮಗಳಿಗೂ ಇದರಿಂದ ಉಂಟಾಗುವ ಗಂಡಾಂತರ ಉಪೇಕ್ಷಣೀಯವಿಲ್ಲ.

ಮದ್ರಾಸು ಆಂಧ್ರದ ತಾತ್ಪೂರ್ತಿಕ ರಾಜಧಾನಿ

ತೆಲುಗ-ತಮಿಳರ ಸಂಘರ್ಷದ ನಾಂದಿ?

ಆಂಧ್ರ ರಾಜ್ಯದ ಬಗ್ಗೆ ನ್ಯಾಯಮೂರ್ತಿ ವಾಂಚೂ ಒಪ್ಪಿಸಿದ ವರದಿಯು ಇನ್ನೂ ಪ್ರಕಟಗೊಂಡಿಲ್ಲವಾದರೂ ಈ ತನ್ಮಧ್ಯೆ ಆಂಧ್ರ ರಾಜ್ಯದ ರಾಜಧಾನಿಯನ್ನು ಪ್ರಥಮದ ಐದು ವರ್ಷಗಳ ಕಾಲ ಮದ್ರಾಸಿನಲ್ಲಿಯೇ ನೆಲೆಸಗೊಡಬೇಕೆಂದು ಅವರು ಹೇಳಿರುವರೆಂದು ವಿಶ್ವಾಸನೀಯವಾಗಿ ತಿಳಿದುಬಂದಿದೆ. ತಮಿಳರು ಪ್ರಾರಂಭದಿಂದಲೂ ಇದನ್ನು ವಿರೋಧಿಸುತಿದ್ದುದರಿಂದ, ಪರಸ್ಪರ ಘರ್ಷಣೆಗೆ ಇದು ತಳಹದಿಯಾಗುವುದೆಂದು ನಿರೀಕ್ಷಕರ ಅಭಿಪ್ರಾಯ. ತಮ್ಮ ಶಾಶ್ವತ ರಾಜಧಾನಿ ಎಲ್ಲಿರಬೇಕೆಂಬುದನ್ನು ಆಂಧ್ರರೇ ನಿರ್ಧರಿಸಿಕೊಳ್ಳಲು ನ್ಯಾಯಮೂರ್ತಿ ವಾಂಚೂ ಬಿಟ್ಟಿರುವರು.

ರಾಷ್ಟ್ರೀಯ ಪಕ್ಷಗಳು

ಚುನಾವಣಾ ಕಮೀಶನಿನವರು ಅಖಿಲ ಭಾರತ ತಳಹದಿಯ ಮೇಲೆ ಚಿನ್ಹೆಗಳನ್ನು ನೀಡುವ ಸಂಬಂಧದಲ್ಲಿ ಕಾಂಗ್ರೆಸು ಪಕ್ಷ, ಪ್ರಜಾ-ಸಮಾಜವಾದೀ ಪಕ್ಷ, ಕಮ್ಯೂನಿಸ್ಟ ಪಕ್ಷ ಮತ್ತು ಜನಸಂಘಗಳೆಂಬ ನಾಲ್ಕಕ್ಕೆ ರಾಷ್ಟ್ರೀಯ ಪಕ್ಷಗಳೆಂದು ಮನ್ನಣೆ ಕೊಟ್ಟಿದೆ. ಕಳೆದ ಚುನಾವಣೆಯು ಸಮಯ ರಾಷ್ಟ್ರೀಯ ಪಕ್ಷಗಳೆಂದು ಮನ್ನಣೆ ಕೊಟ್ಟಿದ್ದ ಬೇರೆ ಅನೇಕ ಪಕ್ಷಗಳಿಗೆ, ಅವುಗಳಿಗೆ ಚುನಾವಣೆಯಲ್ಲಿ ದೊರೆತ ಜನಮತದ ತಳಹದಿಯ ಮೇಲೆ ರಾಜಪಕ್ಷಗಳೆಂಬ ಮನ್ನಣೆ ಸಿಕ್ಕಿದೆ.

ಶ್ರದ್ಧಾಂಜಲಿ

ಈಗ ತಾನೆ ತಿಳಿದು ಬಂದಿರುವ ಭಾರತ ಸರಕಾರದ ಸಂರಕ್ಷಣಾ ಮಂತ್ರಿ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರರ ನಿಧನವಾರ್ತೆ ಭಾರತೀಯರಿಗೆ ಸಂತಾಪದಾಯಕವೆಂಬುದು ನಿಶ್ಚಯ. ಅಯ್ಯಂಗಾರರ, ದಕ್ಷ ಆಡಳಿತಗಾರರಿದ್ದಂತೆ ರಾಜಕಾರಣದಲ್ಲಿ ಮುತ್ಸದ್ಧಿತನದಿಂದ ನಡೆದುಕೊಳ್ಳುತಿದ್ದರು. ಪ್ರಧಾನಿ ನೆಹರೂರ ವಿದೇಶ ನೀತಿಯನ್ನು ಪ್ರಭಾವಿಕಗೊಳಿಸುವುದರಲ್ಲಿ ಅಯ್ಯಂಗಾರರ ಕೈವಾಡವಿದ್ದೇ ಇತ್ತು. ಕಾಶ್ಮೀರ ಪ್ರಶ್ನೆಯಲ್ಲಿ ಭಾರತದ ನಿಲುಮೆಯನ್ನು ಸ್ಪಷ್ಟವಾಗಿ ಮುಂದಿಡುವಲ್ಲಿ ಅಯ್ಯಂಗಾರರು ತೋರಿಸಿದ್ದ ಜಾಣ್ಮೆ ಪ್ರಶಂಸಾರ್ಹವಿತ್ತೆಂಬುದು ನಿರ್ವಿವಾದ. ಪ್ರಕೃತ ಮಂತ್ರಿಮಂಡಲದಲ್ಲಿ ನೆಹರೂ ಕೈಯನ್ನು ಬಲಪಡಿಸುವಲ್ಲಿ ದಿವಂಗತರ ಅಸಾಧಾರಣ ಸಹಕಾರ ನೀಡಿದ್ದರು. ರಾಜ್ಯಪರಿಷತ್ತಿನಲ್ಲಿ ಸರಕಾರೀ ಪಕ್ಷದ ಧುರೀಣತ್ವವನ್ನು ವಹಿಸಿ, ನೆಹರೂ ವ್ಯಕ್ತಿತ್ವದ ಉಪಸ್ಥಿತಿಯ ಅಭಾವವನ್ನು ಅಯ್ಯಂಗಾರರು ನೀಗಿಸುವುದಕ್ಕೆ ಸಮರ್ಥರಾಗಿದ್ದರು. ದೇಶವು ಅವರ ಬಗ್ಗೆ ತಳೆದಿದ್ದ ಗೌರವಾದರಗಳಿಗೆ ಸರಕಾರೀ ಹಾಗೂ ಸಾರ್ವಜನಿಕ ಧುರೀಣರು ವ್ಯಕ್ತಗೊಳಿಸಿದ ಅಭಿಪ್ರಾಯಗಳೇ ಸಾಕ್ಷಿ. ಕೆಲಸಮಯದಿಂದ ಹೃದ್ರೋಗದಿಂದ ಬಳಲುತಿದ್ದ ಅಯ್ಯಂಗಾರರು ಮದ್ರಾಸಿನಲ್ಲಿ ತಾ ೧೦ರಂದು ಮೃತಿಯನ್ನೈದಿದರು. ಅವರ ಅಂತ್ಯ ವಿಧಿಯನ್ನು ಸಕಲ ಮಿಲಿಟರಿ ಗೌರವಗಳೊಂದಿಗೆ ನೆರವೇರಿಸಲಾಯಿತು. ಅಯ್ಯಂಗಾರರ ಮಗ ಪಾರ್ಥಸಾರಥಿಯವರು ಸ್ವಂತ ಕೈಯಿಂದ ಚಿತೆಗೆ ಅಗ್ನಿ ಸ್ಪರ್ಶ ಮಾಡಿದರು. ದಿವಂಗತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವುದರ ಮೂಲಕ ನಮ್ಮ ಶ್ರದ್ಧಾಂಜಲಿಯನ್ನು ಅತ್ಯಂತ ನಮ್ರತೆಯಿಂದ ಅರ್ಪಿಸುತ್ತೇವೆ.

ತಿದ್ದುಪಡಿ

ತಾ 29-1-53ರ ಸಂಚಿಕೆಯ 110ನೇ ಪುಟದಲ್ಲಿ ವಕೀಲ್ ಶ್ರೀ ಪಿ ನಿ ಆಚಾರ್ಯರು ಪ್ರಕಟಿಸಿದ ಉಡುಪಿ ಡಿ. ಮು. ಕೋರ್ಟಿನ ನೋಟೀಸಿನ ವ್ಯಾಜ್ಯ ನಂಬ್ರ S. C. No. 13/53 ಎಂತ ಸೇರಿಸಿ ಓದ ಬೇಕಾಗಿ ವಿನಂತಿ. ಸಂ. ನ.

ಮೂಲ್ಕಿ— ಉಡುಪಿ ಬೋರ್ಡ್ ಹೈಸ್ಕೂಲಿನ ಅಧ್ಯಾಪಕ ಶ್ರೀ ಕೆ ಮಂಜುನಾಥ ಮಧ್ಯಸ್ಥ ಬಿ. ಎ. ಎಲ್. ಟಿ. ಇವರ ಮಗ ಡಾ| ಕೆ. ಪಟ್ಟಾಭಿರಾಮ ಮಧ್ಯಸ್ಥರು ಇಲ್ಲಿಯ ಟಿಪ್ಪಾಲು ಕಟ್ಟೆಯ ಎದುರುಗಡೆಯ ಕಮಾರಿ ಬಿಲ್ಡಿಂಗಿನಲ್ಲಿ ಹೊಸತಾಗಿ ಡಿಸ್ಪೆನ್ಸರಿಯೊಂದನ್ನು ಕಳೆದ ವಾರ ತೆರೆದಿರುವರು. ಈ ಸಮಾರಂಭಕ್ಕೆ ಸ್ಥಳೀಯ ಅಧ್ಯಕ್ಷರೇ ಸಂಬಂದು ನೂತನ ಡಿಸ್ಪೆನ್ಸರಿಗೆ ಶ್ರೇಯಸ್ಸನ್ನು ಕೋರಿದರು

ನಿರೀಕ್ಷಿಸಿರಿ—

ರಾಜಾ ಹರಿಶ್ಚಂದ್ರ

ಚಿತ್ರ

ಪ್ರೇಮ್ ಅದೀಬ್, ಸುಮಿತ್ರಾ, ಲಲಿತ್ ಪವರ್ ಮತ್ತು ಗೋಪ್.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ನಾಮಾನುಗಳೂ ರಖಂಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ

ರಥಬೀದಿ ಉಡುಪಿ.

ಮಂಗಳೂರು.

ಸಾಂಸ್ಕೃತಿಕ ಉತ್ಸವ- ಮಂಗಳೂರಿನ ಜನಪದ ಕಲಾ ಮಂಡಳಿಯ ಆಶ್ರಯದಲ್ಲಿ ಮಂಗಳೂರಿನ ಕೇಂದ್ರ ಮೈದಾನದಲ್ಲಿ ಇದೇ ತಾ. 3ರಿಂದ ಮೂರು ದಿವಸಗಳ ಸಾಂಸ್ಕೃತಿಕ ಉತ್ಸವವು ಯಶಸ್ವಿಯಾಗಿ ಜರಗಿತು ಪ್ರಾರಂಭ ದಿವಸ ಸಂಜೆ ಶ್ರೀ ಕೆ. ಬಿ ಜಿನರಾಜ ಹೆಗ್ಡೆಯವರು ಸ್ವಾಗತ ಭಾಷಣಮಾಡಿದರು. ನಗರ ಸಭಾಧ್ಯಕ್ಷ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಈ ಉತ್ಸವವನ್ನೂ ಕಲಾ ಪ್ರದರ್ಶನವನ್ನೂ ಉದ್ಘಾಟನೆ ಮಾಡುತ್ತ ಇಂತಹ ಉತ್ಸವಗಳು ಪ್ರತಿ ವರ್ಷವೂ ಆಗಬೇಕಲ್ಲದೆ ದಕ್ಷಿಣ ಕನ್ನಡದ ಸಂಸ್ಕೃತಿ ಕಲೆಗಳಿಗೆ ಸಂಬಂಧಪಟ್ಟ ಒಂದು ಪ್ರದರ್ಶನಾ ಮಂದಿರವು ಮಂಗಳೂರಲ್ಲಿ ಅಗತ್ಯವಾಗಿ ಆಗಬೇಕೆಂದರು. ಬಳಿಕ ಶ್ರೀ ಶಿವರಾಮ ಕಾರಂತರು ದಕ್ಷಿಣ ಕನ್ನಡದ ಜಾನಪದ ಕಲೆಗಳ ಕುರಿತು ಮಾತನಾಡುತ್ತಾ ಎಲ್ಲಾ ಕಲೆಗಳಲ್ಲೂ ಮಾರ್ಗದೇಸಿಗಳೆಂಬ ವಿಭಾಗವು ವಿದ್ವಾಂಸರು ಮತ್ತು ಸಾಮಾನ್ಯ ಜನತೆಯವುಗಳಾಗಿ ಬೆಳೆದಿವೆ ಎಂಬುದನ್ನು ತಿಳಿಸಿ ಜಾನಪದ ಗೀತೆ ಮತ್ತು ಕುಣಿತಗಳ ವಿಚಾರವಾಗಿ ಭಾಷಣವಿತ್ತರು. ಅಧ್ಯಕ್ಷರ ಭಾಷಣಾನಂತರ ಗಿ ಡಾ। ಸುಬ್ಬರಾವ್ ಮತ್ತು ಶ್ರೀನಿವಾಸ ಉಡುಪರಿಂದ ಕವಿತೆ ವಾಚನ ಮತ್ತು ಸಂಗೀತಗಳಾದವು. ಶ್ರೀ ರಾಜನ್ ಅಯ್ಯರ್ ಮತ್ತು ಪಾರ್ಟಿಯವರ ನೃತ್ಯಗಳಾದವು.

ಎರಡನೇ ದಿವಸ ಶ್ರೀ ಬಿ ವಿ ಕಕ್ಕಿಲ್ಲಾಯರು ಜನತೆ ಮತ್ತು ಕಲೆ ಎಂಬ ವಿಚಾರವಾಗಿ ಮಾತನಾಡಿದರು, ಶ್ರೀ ಹರೀಂದ್ರನಾಥ ಚಟ್ಟೋಪಾಧ್ಯಾಯರು ತಮ್ಮ ಹಿಂದೀ ಕವನಗಳನ್ನು ಹಾಡಿದರು, ಬಳಿಕ ವಾದ್ಯಮೇಳ ಸಂಗೀತ, ನೃತ್ಯಗಳಾದ ಮೇಲೆ ರಾತ್ರಿ ಶ್ರೀ ಧರ್ಮಸ್ಥಳ ಮೇಳದವರಿಂದ ಬಯಲಾಟವು ಜರಗಿತು.

ಮೂರನೆ ದಿವಸದ ಕಾರ್ಯಕ್ರಮದಲ್ಲಿ ರಾಷ್ಟ್ರಕವಿ ಶ್ರೀ ಎಮ್. ಗೋವಿಂದ ಪೈಗಳು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಜಿ. ಕೆ. ಭಟ್ಟರು 'ಯಕ್ಷಗಾನ ಕಲೆ' ಯ ಕುರಿತು ಮಾತನಾಡಿದರು, ಅಧ್ಯಕ್ಷರು ತಮ್ಮ ಭಾಷಣದಲ್ಲಿ ಉತ್ತಮ ಕಲೆಗಳು ಸಂಸ್ಕೃತಿಯ ಅಂಗಗಳೆಂಬುದನ್ನು ವಿವರಿಸಿ ತುಳುನಾಡಾದ ಈ ಜಿಲ್ಲೆಯಲ್ಲಿ ಯಕ್ಷಗಾನದಲ್ಲಿ, ಆಟ ಆಯನಗಳಲ್ಲಿ, ಕೋಳಿಕಟ್ಟ ಕಂಬಳಗಳಲ್ಲಿ ಅಡಕವಾಗಿರುವ ದಿವ್ಯ ಕುಣಿತಗಳಲ್ಲಿ ನವ ಸಂಸ್ಕೃತಿಯನ್ನು ತಿಳಿಸಿದರು. ಸಾಹಿತ್ಯ ಶಿಲ್ಪಗಳಲ್ಲಿ ಒಡೆದು ತೋರುವ ಸಂಸ್ಕೃತಿಯನ್ನು ತಿಳಿಸಿ, ಆರಾಧನೆಯ ಭಕ್ತಿ ಮುಖ್ಯವಲ್ಲದೆ, ಮೂರ್ತಿ ಮುಖ್ಯವಲ್ಲವೆಂಬುದನ್ನು ವಿವರಿಸಿದರು ನಂತ ಉತ್ಸವ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ, ಎಮ್. ವಿ. ಹೆಬ್ಬಾರ್ ಮಂಡಿಸಿದರು. ಉತ್ಸವಕ್ಕೆ ಶುಭವನ್ನು ಕೋರಿಬಂದ ಸಂದೇಶಗಳನ್ನೋದಿದರು. ಆ ಮೇಲೆ ಶ್ರೀಗಳಾದ ಸೇಡಿಯಾಪು ಕೃಷ್ಣಭಟ್, ವರ್ದಮಾನ ಹೆಗ್ಗಡೆ ಮತ್ತು ಬಿ. ವಿ. ಬಾಳಿಗರು ತಂತಮ್ಮ ಕವಿತೆಗಳನ್ನು ಹಾಡಿದರು. ಕುಡುಂಬಿನೃತ್ಯ ನಾಟಕಾದಿ ವಿನೋದಾವಳಿಗಳಾಗಿ ಮೂರುದಿವಸಗಳ ಉತ್ಸವ ಕೊನೆಗೊಂಡಿತು,

ವರ್ಧಂತಿಯುತ್ಸವ- ಮಂಗಳೂರಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ವರ್ಧಂತ್ಯುತ್ಸವವು ಇದೇ ತಾ. 1ರಲ್ಲಾ ಗವರ್ನ್‌ಮೆಂಟ್ ಕಾಲೇಜಿನ ಪ್ರಿನ್ಸಿಪಾಲ್ ಜನಾಬ್ ಎಮ್. ಐ. ಹಫೀಜ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಭವನದ ಸುಪರಿಂಟೆಂಡೆಂಟರಾದ ಶ್ರೀ ಬಿ ಬಿ. ಸೆಟ್ಟರು ಸ್ವಾಗತ ಮಾತುಗಳನ್ನಾಡಿದರು. ಕಾರ್ಯದರ್ಶಿಗಳಾದ ಶ್ರೀ ಬಿ. ಜಗನ್ನಾಥ ಹೆಗ್ಡೆಯವರು ವರದಿಯನ್ನೋದಿದರು. ಶ್ರೀ ಕೆ. ನಾರಾಯಣ ರೈಗಳು ಭವನದ ಸ್ವಿವಾಚನ ಮಾಡಿದರು ಶ್ರೀ ವೈ. ತಿಮ್ಮಪ್ಪ ಹೆಗ್ಡೆಯವರು ಅದಕ್ಕೆ ಉತ್ತರವಿತ್ತರು. ಅಧ್ಯಕ್ಷ ಭಾಷಣ, ವಿವಿಧ ವಿನೋದಾವಳಿಗಳೊಡನೆ ಉತ್ಸವ ಕೊನೆಗೊಂಡಿತು.

ಮಹಾಧಿವೇಶನ- ಅಖಿಲ ಭಾರತ ವೀರಶೈವ ಮಹಾಸಭೆಯ ಅಧಿವೇಶನವು ಮಂಗಳೂರಲ್ಲಿ ಮೇ ತಿಂಗಳ ತಾ 13ರಿಂದ 15ರ ತನಕ ಜರಗಲಿರುವುದೆಂದೂ, ಸಮಾಜ ಬಾಂಧವರು ವಿವಿಧ ರೂಪದಲ್ಲಿ ಸಹಾಯ ಸಹಕಾರಗಳನ್ನಿತ್ತು ಪ್ರೋತ್ಸಾಹಿಸಬೇಕಾಗಿ ಸ್ವಾಗತ ಸಮಿತಿಯ ವಿನಂತಿಯಿದೆ.

ನೇಪಾಳದ ಕಟ್ಮಾಂಡು ಕಣಿವೆಯನ್ನು— ಸಂದರ್ಶಿಸಲಪೇಕ್ಷಿಸುವವರು ಇನ್ನೂ ಮುಂದೆ ಆಯಾಯ ಜಿಲ್ಲೆಯ ಕಲೆಕ್ಟರರಿಂದ ಗುರುತು, ಚೀಟುಗಳನ್ನು ಪಡಕೊಳ್ಳಬೇಕಾಗಿದೆ, ಈ ಗುರುತು ಚೀಟುಗಳು ಧರ್ಮಾರ್ಥವಾಗಿ ಜಿಲ್ಲಾ ಕಲೆಕ್ಟರರಿಂದ ಕೊಡಲ್ಪಡುವವು. ನೇಪಾಳ ಸರಕಾರದಿಂದ ಇನ್ನು ಮುಂದೆ ಸಂದರ್ಶನದ ಬಗ್ಗೆ ಪರ್ಮಿಟುಗಳನ್ನು ಪಡೆಯುವ ಆವಶ್ಯಕತೆಯಿಲ್ಲ.

ಸರ್ವೋದಯ ವಾರಪತ್ರಿಕೆಯು— ಸಂಪಾದಕರು ಆಕಸ್ಮಾತ್ತಾಗಿ ಕಾಯಿಲೆ ಬಿದ್ದುದರಿಂದ ಪ್ರಕೃತ ಕೆಲವು ದಿನಗಳ ಮಟ್ಟಿಗೆ ಪತ್ರಿಕೆಯನ್ನು ನಿಲ್ಲಿಸಲಾಗಿದೆ ಎಂದೂ ಚಂದಾ ಬಾಕಿಯಿರುವವರು ದಯವಿಟ್ಟು ಕಳುಹಿಸಿಕೊಡಬೇಕೆಂದೂ ಪತ್ರಿಕೆಯ ಮೆನೇಜರರು ತಿಳಿಸುತ್ತಾರೆ.

ಶ್ರೀ ಮೊಳಹಳ್ಳಿ ಶಿವರಾಯರು- 'ಅನಾರೋಗ್ಯದ ದೆಸೆಯಿಂದ ಇದುವರೆಗೆ ನಾನು ಮಾಡಿಕೊಂಡು ಬಂದ ಸಾರ್ವಜನಿಕ ಸೇವೆಯನ್ನು ಅಂತ್ಯಪಡಿಸಬೇಕಾಗಿ ಬಂದು ಈ ಜಿಲ್ಲೆಯನ್ನು ಬಿಟ್ಟು ಹೋಗಲಿರುವುದನ್ನು ನನ್ನ ಸಮಸ್ತ ಹಿರಿಯ ಕಿರಿಯ ಮಿತ್ರರಿಗೂ, ಹಿತಚಿಂತಕರಿಗೂ ತಿಳಿಸಲು ವಿಷಾದಪಡುತ್ತೇನೆ. ಸಾರ್ವಜನಿಕರ ಸಹಾನುಭೂತಿ, ಸೌಹಾರ್ದ, ಪ್ರೋತ್ಸಾಹಗಳು ಧಾರಾಳವಾಗಿ ನನಗೆ ದೊರಕಿದ ದೆಸೆಯಿಂದಲೇ ಸ್ವಲ್ಪವಾದರೂ ಸೇವೆ ಮಾಡಲು ನನ್ನಿಂದ ಸಾಧ್ಯವಾಯಿತು' ಈ ಬಗ್ಗೆ ನನ್ನ ಕೃತಜ್ಞತೆ ಮತ್ತು ಉಪಕಾರಗಳ ಕಾಣಿಕೆಯನ್ನು ಪ್ರತಿಯೊಬ್ಬರಿಗೆ ಸ್ವತಃ ಸಲ್ಲಿಸಲು ಸಾಧ್ಯವಿಲ್ಲ- ಈ ಬಗ್ಗೆ ಎಲ್ಲರ ಕ್ಷಮಾಪಣೆಯನ್ನು ಕೇಳಿಕೊಳ್ಳುತ್ತೇನೆ. ಈ ಕರ್ತವ್ಯವನ್ನು ತಮ್ಮ ಪತ್ರಿಕೆಯ ಮೂಲಕ ಬಹಿರಂಗವಾಗಿ ನೆರವೇರಿಸಲು ತಮ್ಮ ಆಶ್ರಯವನ್ನು ಬಯಸುತ್ತೇನೆ' ಎಂದು ತಿಳಿಸಿರುವರು.

ತೆಂಗು ಕೃಷಿಕರಿಗೆ- ಭಾರತದ ಕೇಂದ್ರ ತೆಂಗಿನ ಕಮಿಟಿಯಲ್ಲಿ ಕೃಷಿ ಉದ್ಯೋಗಸ್ಥರಾದ ಶ್ರೀ ಓ. ರಾಮನ್ ಮೆನೊನ್‌ರವರು ಇದೇ ತಿಂಗಳ ತಾ. 10ರಿಂದ 28ರ ತನಕ ಹೊಸ ಪಂಗ‍ಡಬ್ ತಾಲೂಕು ಮತ್ತು ಕಾಸರಗೋಡು ತಾಲೂಕುಗಳಲ್ಲಿಯ ತೆಂಗು ಬೆಳೆಯುವ ಪ್ರದೇಶಗಳಲ್ಲಿ ಸಂಚರಿಸಿ, ಕೃಷಿ ವಿಧಾನವನ್ನೂ, ಕೃಷಿಯ ರೋಗಗಳ ನಿವಾರಣಾ ಮಾರ್ಗಗಳನ್ನೂ ಕುರಿತು ತೆಂಗು ವ್ಯವಸಾಯಿಗಳಿಗೆ ಉಪದೇಶ ಕೊಡುವರು- ಹೆಚ್ಚಿನ ಮಾಹಿತಿಯನ್ನು ಆಯಾಯ ಗ್ರಾಮ ಪಟೇಲರಿಂದ ಪಡೆಯಬಹುದು.

ಶ್ರೀ ಮೊಳಹಳ್ಳಿ ಶಿವರಾಯರಿಗೆ ಸನ್ಮಾನ:- ದ. ಕ. ಜಿಲ್ಲೆಯ ಶುದ್ಧ ಅಧ್ಯಕ್ಷಸಹಕಾರಿಗಳಾದ ಶ್ರೀ ಮೊಳಹಳ್ಳಿ ಶಿವರಾಯರು ದ. ಕ. ಸೆಂಟ್ರಲ್ ಕೊಪರೇಟಿವ್ ಬ್ಯಾಂಕ್ ಮೊದಲಾದ ಪ್ರಮುಖ ಸಂಸ್ಥೆಗಳ ಅಧ್ಯಕ್ಷ ಪದವಿಯಿಂದ ನಿವೃತ್ತರಾಗಿ ಮದ್ರಾಸಿಗೆ ತೆರಳುವ ಸಂದರ್ಭದಲ್ಲಿ ಶ್ರೀ ರಾಯರನ್ನು ಗೌರವಿಸುವ ಸತ್ಕಾರ ಸಮಾರಂಭವೊಂದು ಜರಗಿತು. ಮುನ್ಸಿಪಲ್ ಚೇರ್ ಮೆನ್ ಶ್ರೀ. ಕೆ. ಎಸ್. ಎನ್ ಅಡಿಗ, ದ ಕ. ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ಶ್ರೀ ಮೊಳಹಳ್ಳಿ ಶಿವರಾಯರು ಸಹಕಾರಿ ಚಳುವಳಿಯನ್ನು ಈ ಜಿಲ್ಲೆಯಲ್ಲಿ ಹೇಗೆ ಮುಂದೊತ್ತುತ್ತಿದ್ದರು ಅದರ ಮೂಲಕ ಸರ್ವರಾಗಿ ಸಂಸ್ಥಾನದಲ್ಲಿಯೇ ಈ ಜಿಲ್ಲೆಗೊಂದು ಗಣ್ಯಸ್ಥಾನವನ್ನು ದೊರಕಿಸಿಕೊಟ್ಟರು, ಧಾನ್ಯಸಂಗ್ರಹ ಮತ್ತು ವಿತರಣೆಯ ಕಾರ್ಯವನ್ನು ಹೇಗೆ ಆದರ್ಶವಾಗಿ ನಡಸಿದರು ಎಂಬಿತ್ಯಾದಿ ವಿಷಯಗಳನ್ನೆತ್ತಿ ವಿವರಿಸಿ ಮಾತನಾಡಿದರು. ಶ್ರೀ ಶಿವರಾಯರು ತಮ್ಮ ಸಂಭಾವನೆಗಳಲ್ಲಿ ಉತ್ತರ ನೀಯುತ್ತ ತಾವು ಈತನಕ ದುಡಿಯುತ್ತಿದ್ದ ಸಂಸ್ಥೆಗಳ ಶ್ರೇಯಸ್ಸನ್ನು ಹಾರೈಸಿದರು ಶ್ರೀ ಐ ಎಸ್. ನರಸಪ್ಪಯ್ಯನವರು ಧನ್ಯವಾದಗಳನ್ನರ್ಪಿಸಿದರು.

ರಿಪಬ್ಲಿಕ್ ದಿನಾಚರಣೆಯು- ಈ ಬಾರಿ ವಿಶೇಷ ಕಾರ್ಯಕ್ರಮಗಳಿಂದ ಆಚರಿಸಲ್ಪಟ್ಟಿತು. ಫ್ರೀಡಂಫೈಟರ್ಸ್ ಪಂದ್ಯಾಟಗಳಲ್ಲಿ ಗೆದ್ದವರಿಗೆ ಶ್ರೀಮತಿ ಯು. ಶ್ರೀನಿವಾಸ ಮಲ್ಲಯ್ಯನವರು ಬಹುಮಾನಗಳನ್ನು ಹಂಚಿದರು. ಬೆಳಿಗ್ಗೆ ಬಡವರಿಗೆ ಅಕ್ಕಿ ಹಂಚಲಾಯಿತು- ಜಿಲ್ಲಾ ಕಲೆಕ್ಟರರು ರಾಷ್ಟ್ರಧ್ವಜವನ್ನು ಅರಳಿಸಿದರು. 'ಮಾರ್ಚ್ ಫಾಸ್ಟ್' ಪ್ರದರ್ಶನ ನಡೆಯಿತು- ಸಂಜೆ ಶ್ರೀ ಕೆ. ಸದಾನಂದ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಕೇಂದ್ರ ಮೈದಾನದಲ್ಲಿ ಸಾರ್ವಜನಿಕ ಸಭೆ ಜರಗಿ ಶ್ರೀ ಬಿ. ವೈಕುಂಠ ಬಾಳಿಗ ಮೊದಲಾದವರ ಭಾಷಣಗಳಾದುವು.

ದ: ಕ, ಜಿಲ್ಲಾ ಅಧ್ಯಾಪಕರ ಗಿಲ್ಡಿನ ಸಭೆಯು— ಇದೇ ತಾ 8ರಲ್ಲಿ ರೆ. ಫಾ, ಡಬ್ಲ್ಯು ಎಫ್, ಸಿಕೇರರ ಅಧ್ಯಕ್ಷತೆಯಲ್ಲಿ ಜರಗಿತು, ಶಾಲಾ ಕಾಲೇಜುಗಳಲ್ಲಿ ಅಧ್ಯಾಪಕರ ನಿವೃತ್ತಿ ಹೊಂದುವ ಪ್ರಾಯವು 55 ರಿಂದ 60ಕ್ಕೆ ಏರಿಸಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು, ಕಾರ್ಯಕಾರೀ ಮಂಡಳಿಗೆ ಸದಸ್ಯರ ಆಯ್ಕೆಯಾಗಿ ಮದ್ರಾಸು ಪ್ರಾಂತೀಯ ಶೈಕ್ಷಣಿಕ ಸಮ್ಮೇಳನವನ್ನೂ ಮುಂದಿನ ಮೆ ತಿಂಗಳಲ್ಲಿ ಕೆನರಾ ಹೈಸ್ಕೂಲಿನಲ್ಲಿ ಜರಗಿಸುವುದೆಂದು ನಿರ್ಧರಿಸಲಾಯಿತು, ಆ ಬಗ್ಗೆ ಅಧಿಕಾರಿಗಳೂ ಆರಿಸಲ್ಪಟ್ಟರು.

ಬೊಂಬಾಯಿ

ಮೊಗವೀರ ವ್ಯವಸ್ಥಾಪಕ ಮಂಡಲಿಯ ಸುವರ್ಣ ಮಹೋತ್ಸವವು—

ಇದೇ ವರುಷದಲ್ಲಿ ಜರಗಲಿರುವದು. ಮಂಡಳಿಯ ಹಿತಚಿಂತಕರು, ಮಂಡಳಿಯಿಂ ಸಹಾಯ ಪಡೆದವರೂ ಮಂಡಳಿಯ ಕಾರ್ಯಕಲಾಪಗಳಲ್ಲಿ ಸಹಾನುಭೂತಿಯುಳ್ಳವರು ಇತರ ಸಾರ್ವಜನಿಕರೂ ಸುವರ್ಣ ಮಹೋತ್ಸವ ನಿಧಿಗೆ ಉದಾರ ಮನಸ್ಸಿನಿಂದ ಕೊಡುಗೈದಾನವಿತ್ತು ಸಹಕರಿಸ ಬೇಕಾಗಿ ಮಂಡಳಿಯ ವಿನಂತಿಯಿದೆ.

All Secondary Schools may Subscribe to "Navayuga" weekly Sicne it has been approved by the Director of Public Instruc Stion, Madras

THE CATHOLIC BANK LTD., UDIPI BRANCH

ದಿ ಕೆಥೋಲಿಕ್ ಬೇಂಕ್ ಲಿಮಿಟೆಡ್, ಉಡ್ಪಿ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲದ ಮೊಬಲಗನ್ನಾಗಲೀ ಯಾ ಅದಕ್ಕಾಗುವ ಈ ತನಕದ ಬಡ್ಡಿಯನ್ನಾಗಲೀ ಕೊಡದೆ ಇರುವುದರಿಂದಲೂ ಅಲ್ಲದೆ ಕ್ರಮವಾದ ರಿಜಿಸ್ತ್ರಿ ನೋಟೀಸು ಕೊಟ್ಟದ್ದರಲ್ಲಿ ಕೆಲವರು ಪಡಕೊಂಡು ಕೆಲವರು ಊರಿನಲ್ಲಿ ಇಲ್ಲವೆಂತ ವಾಪಾಸು ಬಂದಿರುವುದರಿಂದಲೂ, ನಗಗಳನ್ನು ಅವರವರು ಬಿಡಿಸಿಕೊಂಡು ಹೋಗದಿರುವುದರಿಂದಲೂ ಸದರೀಯವರಿಗೆ ಯಾ ಸದರಿಯವರ ವಾರೀಸುದಾರರಿಗೆ ಈ ಮೂಲಕ ತಿಳಿಸುವುದೇನಂದರೆ ಸದರೀಯವರು ಈಡಿಟ್ಟ ನಗಗಳನ್ನು ಫೆಬ್ರವರಿ ತಿಂಗಳ ತಾರೀಕು 21–2–53ನೇ ಶನಿವಾರ ದಿವಸ ಗಂಟೆ 3ಕ್ಕೆ ಯಾ ಬೇಂಕಿಗೆ ಯುಕ್ತ ಕಂಡ ಇನ್ನಿತರ ದಿನಗಳಲ್ಲಿ ಪುನಹಾ ನೋಟೀಸು ಕೊಡದನೇ ಬ್ಯಾಂಕಿನ ಪರಾಂಬದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಸಾಲದನಂಬ್ರ.	ಹೆಸರು ಮತ್ತು ವಿಲಾಸ.	ಮೊಬಲಗು,		
27/271	ಶ್ರೀ ನ ಸಿಂಹದಾಸ ಸೆಟ್ಟಿ, ದಾಸ ಸೆಟ್ಟಿಯ ಮಗ ವ್ಯಾಪಾರಿ ಉದಿಯಾವರ	50	0	0
27/519	ಡಿ ಡಿ	60	0	0
27/1304	ಶ್ರೀ ಕೊರಗಾಚಾರಿ, ಬಸಪ್ಪ ಆಚಾರಿಯ ಮಗ, ಚಿಟ್ಪಾಡಿ, ಉಡ್ಪಿ,	90	0	0
27/1481	ಬಿ ಪಿರಿಯಣ್ಣ ಸೆಟ್ಟಿ, ಮೊನ್ನ ಸೆಟ್ಟಿಯ ಅಳಿಯ, ಬೆಳ್ಳೆ	50	0	0
27/1797	ಸಮಿಲ್ಲ ಸಹೇಬ, ಹಾಕಿಮ್ ಜಮಾಲುದ್ದೀನ್ ಸಹೇಬರ ಮಗ, ಕುಂಜಿಬೆಟ್ಟು ಉಡ್ಪಿ.	25	0	0
27/2194	,,	50	0	
27/1999	ಎಸ್.ಆರ್ ಕುಂದೂರ, ಆರ್, ಆರ್, ಕುಂದೂರರ ಮಗ, ಅಜ್ಜರ ಕಾಡು, ಉಡ್ಪಿ,	100	0	0
27/22.2	ಚಂದಪ್ಪ ಮರಕಾಲ, ಕೊರಗ ಮರಕಾಲನ ಮಗ, ಉಪ್ಪೂರು ಗ್ರಾಮ, ಕಲ್ಯಾಣಪುರ P O	35	0	0
28/799	ಸಲ್ವೇದರ್ ಮೆಂಡೋನ್ಸ, ಮಾನ್ವೆಲ್ ಮೆಂಡೋನ್ಸರ ಮಗ, ಮೂಡು ಬೆಳ್ಳೆ P O	170	0	0
28/802	ಲಿಯೋನಾಡ್ ಶಿರಿ, ಇಮಾನ್ವೆಲ್ ಶಿರಿಯ ಮಗ, ಅಜ್ಜರ ಕಾಡು, ಉಡ್ಪಿ	45	0	0
28/372	ಹಾಯಾತ್ ಅಬ್ದುಲ್ ಕಾದರ್, ಅಬ್ದುಲ್ ಕಾದರ ಸಹೇಬರ ಮಗ, ವೈಟ್ ಆಫ್ ಇಂಡಿಯಾ ಹೋಟೆಲ್ ಸಂತೆಕಟ್ಟೆ, ಉಡ್ಪಿ,	85	0	0

V. J. Andrade, *Agent.*

ಕಟಪಾಡಿ— ಎಸ್. ವಿ. ಎಸ್. ಹೈಸ್ಕೂಲಿನ ಎಂಟನೇ ವಾರ್ಷಿಕೋತ್ಸವವು ಕಳೆದ ತಾ. 31ರಲ್ಲಿ ಉಡುಪಿಯ ಗೌರವ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟ್ ರಾವ್ ಸಾಹೇಬ್ ಕೆ. ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ದೇವತಾ ಪ್ರಾರ್ಥನೆಯಾದ ಬಳಿಕ ಸಮಾರಂಭಕ್ಕೆ ಶುಭವನ್ನು ಕೋರಿ ಬಂದ ಸಂದೇಶಗಳನ್ನು ಶ್ರೀ ಎಮ್. ಎಸ್. ಭಟ್ಟರು ಓದಿದರು. ಶ್ರೀ ಕೆ. ವಿಶ್ವನಾಥ ಕಾಮತರು ಶಾಲಾ ಸ್ವಾಗತ ಭಾಷಣ ಮಾಡಿದರು. ಮುಖ್ಯೋಪಾಧ್ಯಾಯ ಶ್ರೀ ಪಿ. ರಾಮದಾಸ ನಾಯ್ಕರು ಶಾಲೆಯ ಪ್ರಗತಿಪರ ವರದಿಯನ್ನೋದಿದರು. ಪಾರಿತೋಷಕ ವಿತರಣೆ, ಅಧ್ಯಕ್ಷರ ಬೋಧಪ್ರದ ಭಾಷಣಗಳಾದ ನಂತರ ಶ್ರೀ. ಕೆ. ಆರ್. ಶೆಣೈಯವರು ಧನ್ಯವಾದಗಳನ್ನರ್ಪಿಸಿದರು. ಶಾಲಾ ವಿದ್ಯಾರ್ಥಿಗಳಿಂದ 'ಕುಶಲವ' ನಾಟಕವು ಅಭಿನಯಿಸಲ್ಪಟ್ಟಿತು.

ಶಿರ್ವ— ಸೈಂಟ್ ಮೇರಿ ಹೈಸ್ಕೂಲಿನ ವರ್ಧಂತ್ಯುತ್ಸವವು ಕಳೆದ ತಾ. 31ರಲ್ಲಿ ಶ್ರೀ ಟಿ. ಎ. ಪೈ. ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೆನೇಜರ್ ಫಾ. ಹೆಚ್. ಗೊನ್ಸಾಲ್ವಿಸರು ಸ್ವಾಗತ ವಿತ್ತ ಬಳಿಕ ಶಾಲಾ ಹೆಡ್ಮಾಸ್ತರರು ಅಭಿವೃದ್ಧಿ ವರದಿಯನ್ನೋದಿದರು. ಸಭಾಧ್ಯಕ್ಷರು ಬಹುಮಾನ ವಿತರಣೆ ಮಾಡಿ, ದಕ್ಷಿಣಕನ್ನಡದಲ್ಲಿ ವಿದ್ಯಾಕ್ಷೇತ್ರದಲ್ಲಿ ಕೆಥೋಲಿಕ್ ಬಂಧುಗಳು ಸಲ್ಲಿಸುತ್ತಿರುವ ನಿಸ್ವಾರ್ಥ ಸೇವೆಯನ್ನೂ ಪಡುತ್ತಿರುವ ಶ್ರಮವನ್ನು ಶ್ಲಾಘಿಸಿದರು. ಸರಕಾರದ ಪಂಚವಾರ್ಷಿಕ ಯೋಜನೆಯಲ್ಲಿ ಸಾರ್ವಜನಿಕರು ಸರ್ಕಾರಕ್ಕೆ ಸಹಕಾರವನ್ನು ಧಾರಾಳವಾಗಿ ನೀಡಿ ಅದು ಯಶಸ್ವಿಯಾಗುವಂತೆ ಪ್ರಯತ್ನಿಸಬೇಕೆಂದರು. ವೇದಿಕೆಯಲ್ಲಿ ನಿರುದ್ಯೋಗಿಗಳಾಗಿರುವುದಕ್ಕಾಗಿ ಮಾತ್ರ ಸರಕಾರಿ ವಿದ್ಯಾಸಂಸ್ಥೆಗಳ ಪ್ರಯೋಜನವನ್ನು ತರುಣ ತರುಣಿಯರು ಪಡೆಯಬೇಕೆಂದು ವಿನಂತಿಸಿದರು. ಕುಲೀನ ಕನ್ನಡ ನಾಟಕಾಭಿನಯಗಳಿಂದ ಸಭಾಂತ್ಯವಾಯಿತು.

ಬೆಳ್ವಾಡಿ— ಶ್ರೀ ವಿಷ್ಣುಮೂರ್ತಿ ಪಾಠಶಾಲೆಯ ವಾರ್ಷಿಕ ವರ್ಧಂತಿಯು ಕಳೆದ ತಾ. 28ರಲ್ಲಿ ಶ್ರೀ ಹರಿಯಪ್ಪ ರಾಮಕೃಷ್ಣ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯರಿಂದ ವರದಿ ವಾಚನವಾದ ಬಳಿಕ ಶಾಲಾ ಮಕ್ಕಳ ವಿವಿಧ ಚಟುವಟಿಕೆಗಳ ಪ್ರದರ್ಶನವಾಯಿತು.

ಉಳ್ಳಾಲ— ಆನಂದಾಶ್ರಮ ಹೈಸ್ಕೂಲಿನ ದಿನಾಚರಣೆಯು ಇತ್ತೀಚೆಗೆ ಸಾಂಗವಾಗಿ ಜರಗಿತು. ಶ್ರೀ ಇಡ್ಯ ವೆಂಕಟ್ರಾಯರ ಅಧ್ಯಕ್ಷತೆಯಲ್ಲಿ ಹಸ್ತಪ್ರದರ್ಶನ ಉದ್ಘಾಟನ ಮತ್ತು ಹೆತ್ತವರ ಕೂಟದ ಸಭೆಗಳಾದವು. ಶ್ರೀ ಮಹಾಬಲ ಸೆಟ್ಟರ ಅಧ್ಯಕ್ಷತೆಯಲ್ಲಿ ಪ್ರಜಾಪ್ರಭುತ್ವ ದಿನಾಚರಣೆ, ಆಟಪಂದ್ಯಾಟ ಕಾರ್ಯಗಳು ನಡೆದವು. ಶ್ರೀ. ಕೆ. ಎಸ್. ಎಸ್. ಅಡಿಗರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ವರದಿ ವಾಚನ ಪಾರಿತೋಷಕ ವಿತರಣೆ ಇತ್ಯಾದಿ ಜರಗಿದವು.

ಕೋಟೇಶ್ವರ— ಸ್ಥಳೀಯ ಹಿಂದೀ ಪ್ರೇಮಿ ಮಂಡಲದ ವಾರ್ಷಿಕೋತ್ಸವವು ಇದೇ ತಾ.1ರಲ್ಲಿ ಶ್ರೀ ಬಿ. ಎಲ್. ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು.

ಹಂಗಾರಕಟ್ಟೆ— ಸ್ಥಳೀಯ ಬೋರ್ಡ್ ಹಾ. ಎ. ಶಾಲೆಯ ಹಳೆವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಕಳೆದ ತಾ. 25ರಲ್ಲಿ ಕಾರ್ಕಳ ಡಿ॥ ಮ್ಯಾಜಿಸ್ಟ್ರೇಟ್ ಶ್ರೀ. ಕೆ. ಚಂದ್ರಶೇಖರ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಕಟ್ಟಡ ವಿಸ್ತರಣದ ಬಗ್ಗೆ ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ. ಬಿ. ಮಂಜಯ್ಯ ಹೆಗ್ಡೆಯವರ ಹಸ್ತ ರೂ. 1001ರ ನಿಧಿ ಕೊಡಲಾಯಿತು. ಶ್ರೀ ಹೆಗ್ಡೆಯವರೂ ಈ ಉದಾರದಾನದ ಬಗ್ಗೆ ಕೃತಜ್ಞತೆ ಸಲ್ಲಿಸಿದರು.

ತಾ 26ರಲ್ಲಿ ನಾಗರಿಕರ ಬೋರ್ಡ್ ಹಾ. ಎ. ಶಾಲೆಗೆ ವಿಸ್ತರಿಸಲಾದ ಕಟ್ಟಡವನ್ನೂ ಶಾಲೆಗೆ ಬೇಕಾದ ಇತರ ಸಾಮಗ್ರಿಗಳನ್ನೂ ಗ್ರಾಮಸ್ಥರು ದಾನ ವಿತ್ತುದನ್ನು ಜಿಲ್ಲಾ ಬೋರ್ಡಿನ ಪರವಾಗಿ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ಸ್ವೀಕರಿಸಿದರು.

ಕುಂದಾಪುರ— ಕಳೆದ ತಾ 31ರಲ್ಲಿ ಜರಗಬೇಕಾಗಿದ್ದ ಒಂದು ದಿನದ ಜಾನುವಾರು ಪ್ರದರ್ಶನವು ಕಾರಣಾಂತರಗಳಿಂದ ಇದೇ ತಿಂಗಳ ತಾ. 11ನೇ ರವಿವಾರ ಬೆಳಿಗ್ಗೆ ಗಂಟೆ 8ಕ್ಕೆ ಮುಂದೆ ಹಾಕಲಾಗಿದೆ. ಪ್ರದರ್ಶನವು ಸಂಜೆ ಗಂಟೆ 3ರ ತನಕ ಬೋರ್ಡ್ ಹೈಸ್ಕೂಲು ವಠಾರದಲ್ಲಿ ಜರಗಿ ಉತ್ತಮ ಜಾನುವಾರುಗಳಿಗೆ ಅದೇ ದಿನ ಬಹುಮಾನಗಳನ್ನು ಮದ್ರಾಸು ಮಂತ್ರಿ ಡಾ॥ ನಾಗಪ್ಪ ಆಳ್ವರು ವಿತರಣೆ ಮಾಡಲಿರುವರೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಮಿಜಾರು— ಎಡಪದವು ಸೆಂಟರಿನಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ. ರಾಮ ಕೃಷ್ಣನ್ ಅವರು ಭಾರತ ಸೇವಾ ಸಮಾಜದ ಆಶ್ರಯದಲ್ಲಿ ಸಾರ್ವಜನಿಕ ವಾಚನಾಲಯ ವೊಂದನ್ನು ತೆರೆದರು.

ಬೊಬ್ಬೆಕೇರಿ— ಪಕ್ಕದೂರು ತಾಲೂಕಿನ ಬೊಬ್ಬೆಕೇರಿ ಎಂಬಲ್ಲಿ ಈಚೆಗೆ ಬ್ರಾಂಚ್ ಪೋಸ್ಟಾಫೀಸು ತೆರೆಯಲ್ಪಟ್ಟಿದೆ. ಈ ಕೇಂದ್ರಕ್ಕೆ ಸೇರಿರುವ ಆರು ಗ್ರಾಮಗಳಿಗೆ ತುಂಬಾ ಅನುಕೂಲ ಮಾಡಿದಂತಾಯಿತು.

ಮೂಲ್ಕಿ— ಸ್ಥಳೀಯ ಪಂಚಾಯತು ಬೋರ್ಡ್ ಚುನಾವಣೆ ನಡೆದು ಶ್ರೀ ಎಮ್. ಭೋಜ ಹೆಗ್ಡೆಯವರು ಅಧ್ಯಕ್ಷರಾಗಿಯೂ ಇತರ ಐದು ಮಂದಿ ಸದಸ್ಯರಾಗಿಯೂ ಅವಿರೋಧವಾಗಿ ಆರಿಸಲ್ಪಟ್ಟರು.

ಬಾಯಾರು— ಪಂಚಾಯತ ಬೋರ್ಡಿಗೆ ಅಧ್ಯಕ್ಷರಾಗಿ ಶ್ರೀ ಕೆ. ರಾಮ ಭಟ್ಟರು ಬಹುಮತದಿಂದ ಆರಿಸಲ್ಪಟ್ಟರು.

ಮೂಡುಬೆಳ್ಳೆ— ಇಲ್ಲಿಯ ಪಂಚಾಯತ ಬೋರ್ಡ್ ಅಧ್ಯಕ್ಷ ಸ್ಥಾನಕ್ಕೆ ಶ್ರೀ ಕೆ. ಗೋಪಾಲಕೃಷ್ಣ ಬಲ್ಲಾಳರು ಅವಿರೋಧವಾಗಿ ಆರಿಸಲ್ಪಟ್ಟರು.

ಕಟಪಾಡಿ— ಸ್ಥಳೀಯ ಪಂಚಾಯತ ಬೋರ್ಡಿಗೆ ಶ್ರೀ ಪಿ. ವೆಂಕಟ್ರಮಣ ನಾಯ್ಕರು ಬಹುಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ಬನ್ನಾಡಿ— ಇಲ್ಲಿಯ ಪಂಚಾಯತ ಬೋರ್ಡಿಗೆ ಶ್ರೀ ಬಿ. ಸಂಜೀವ ಶೆಟ್ಟರು ಎರಡನೇ ಸಲಕ್ಕೆ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ಮುಕ್ಕ— ಸುರತ್ಕಲ್ಲಿನ ಹತ್ತಿರದ ಎಯಿಡೆಡ್ ಹಾ. ಎ. ಶಾಲೆಯ ವರ್ಧಂತ್ಯುತ್ಸವವು ಕಳೆದ ತಾ 31ರಲ್ಲಿ ಮುಕ್ಕದ ರೇಂಜಿನ ಶಾಲಾ ಡಿಪ್ಯುಟಿ ಇನ್ಸ್ಪೆಕ್ಟರ್ ಶ್ರೀ ಬಿ. ಶ್ರೀನಿವಾಸಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಅದೇ ದಿನ ಮೂರ್ನಾಲ್ಕು ವರ್ಷ ಶಾಲೆಯ ಸ್ಥಾಪಕರಾಗಿಯೂ ಮೆನೇಜರರಾಗಿದ್ದ ದಿವಂಗತ ಸುಬ್ಬಣ್ಣ ಶೆಟ್ಟಿಗಳ ಭಾವಚಿತ್ರವನ್ನು ಶ್ರೀ ಎ. ಶಂಕರ ಜೋಯಿಸರು ಅನಾವರಣ ಮಾಡಿದರು.

ಮುದ್ರಾಡಿ— ಇಲ್ಲಿಯ ಹಳೇ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಮುಕ್ಕದ ರೇಂಜಿನ ವಿದ್ಯಾಧಿಕಾರಿ ಶ್ರೀ ಮಾಲಿಂಗನವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಜರಗಿತು.

ಪಂಜಿಮೊಗರು— ಕೊಳಕೆ ಬೈಲು ವಿದ್ಯಾಪ್ರಚಾರಿಣೀ ಹಿರಿಯ ಶಾಲೆಯಲ್ಲಿ ಬುನಾದಿ ಶಿಕ್ಷಣದ ಬೇಸಿಕ್ ಉಪಾಧ್ಯಾಯರಾಗಿದ್ದ ಶ್ರೀ ಬಿ. ಬಿ. ಸೆಟ್ಟಿ ರು ಕಳೆದ ತಾ 25ರಲ್ಲಿ ಪೂರ್ವ ವಯಸ್ಸಿನಲ್ಲೆ ದೈವಾಧೀನರಾದರೆಂದು ವಿಷಾದಪಡುತ್ತೇವೆ.

ಬಾರಕೂರು— ಉಡುಪಿ ಡಿವಿಜನಿನ ಎತ್ಲೆಟಿಕ್ ಎಸೋಸಿಯೇಶನಿನ ನೇತೃತ್ವದಲ್ಲಿ ಜರಗಿದ ಬ್ಯಾಡ್ಮಿಂಟನ್ ಪಂದ್ಯಾಟದಲ್ಲಿ ಈ ಬಾರಿಯೂ ಸ್ಥಳೀಯ ನೇಶನಲ್ ಹೈಸ್ಕೂಲಿನ ಟೀಮಿನವರೇ ವಿಜಯಶಾಲಿಗಳಾಗಿ ಸ್ಪರ್ಧೆಯ ಕಪ್ಪನ್ನು ಖಾಯಮಾಗಿ ಪಡೆದರು.

ಶಿರ್ವ— ಇಲ್ಲಿಯ ಪಂಚಾಯತ ಬೋರ್ಡಿನ ಚುನಾವಣೆಯು ಇದೇ ತಾ. 7ರಂದು ನಡೆದು ಶ್ರೀ ಎಸ್. ಅಣ್ಣಯ್ಯ ಹೆಗ್ಡೆಯವರು ಅವಿರೋಧವಾಗಿ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಶ್ರೀ ಹೆಗ್ಡೆಯವರು ಹಲವಾರು ವರುಷಗಳಿಂದ ಈ ಬೋರ್ಡಿನ ಅಧ್ಯಕ್ಷರಾಗಿರುವರು. ಚುನಾವಣಾಕಾಲದಲ್ಲಿ ನಡೆದ ಸಮಾರಂಭದಲ್ಲಿ ಹಲವರು ಮಾತನಾಡಿ ಶ್ರೀ. ಹೆಗ್ಡೆಯವರ ಅವಿರೋಧ ಆಯ್ಕೆ ಕುರಿತು ಜಯಘೋಷ ಮಾಡಿದರು.

ಅಥವಾರು— ತಾ 6-2-53ರಲ್ಲಿ ಬೋರ್ಡ್ ಹೈಸ್ಕೂಲಿನ ವಾರ್ಷಿಕೋತ್ಸವವು ನಮ್ಮ ಜಿಲ್ಲಾ ಕಲೆಕ್ಟರರಾದ ಶ್ರೀ. ಸಿ. ಎ. ರಾಮಕೃಷ್ಣನ್ I. C. S. ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಮುಖ್ಯೋಪಾಧ್ಯಾಯರಾದ ಶ್ರೀ ಎಸ್. ಆರ್. ಬಂಗಾರ್ B. A. L. T ಇವರ ಶಾಲೆಯ ವರದಿಯನ್ನೋದಿದ ಬಳಿಕ ಕಲೆಕ್ಟರರು ಶಾಲೆಯ ಸ್ವಸ್ತಿವಾಚನವನ್ನು ಮಾಡಿದರು. ಶಾಲೆಯ ಸ್ಥಾಪನೆಗೆ ಕಾರಣರಾದ ಹಾಗೂ ಅಲ್ಲಿಯ ದಾತಾರರಾದ ಅದಮಾರು ಮಠಾಧೀಶ ಶ್ರೀ ವಿಬುಧೇಶತೀರ್ಥ ಶ್ರೀ ಪಾದಂಗಳವರು ಶಾಲೆಗೆ ಶುಭವನ್ನು ಕೋರಿ ಆಶೀರ್ವದಿಸಿದರು. ಬಹುಮಾನ ವಿತರಣೆ ಅಧ್ಯಕ್ಷರ ಭಾಷಣ ವಿವಿಧ ವಿನೋದಾವಳಿಗಳೊಂದಿಗೆ ಸಭಾಂತ್ಯವಾಯಿತು.

ಬಂಟರ ಯಾನೆ ನಾಡವರ ಸಂಘದ ಮಾಸಿಕ ಸಭೆಯು— ಶ್ರೀ ಸೀತಾರಾಮ ಶೆಟ್ಟಿ ಅಧ್ಯಕ್ಷತೆಯಲ್ಲಿ ನಡೆದು, ಸಂಘದ ವರದಿ, ಕೋಶಾಧಿಕಾರಿಗಳ ವರದಿ, ಬಡವಿದ್ಯಾರ್ಥಿ ಸಂಘದ ವರದಿ ಮತ್ತು ಮಕ್ಕಳ ವಿದ್ಯಾರ್ಥಿನಿಯರ ಸಂಘದ ವರದಿಗಳು ಓದಲ್ಪಟ್ಟವು. [illegible] ಅಧ್ಯಕ್ಷರು ಭಾಷಣ ಮಾಡುತ್ತಾ ಈಚೆಗೆ ನಮ್ಮ ಜನಾಂಗದಲ್ಲಿ ಪ್ರಗತಿ ತೋರಿಬರುತ್ತಿದ್ದರೂ ಸ್ವಜಾತಿ ಸ್ವಾರ್ಥ ಮನೋಭಾವದಿಂದ ವಿದ್ಯಾರ್ಥಿಗಳಿಗೆ ಸಹಾಯ ಸಿಗುತ್ತಿರುವುದು ಕಡಿಮೆ. ಸಂಘದ ಮೂಲಕ ಅನುಕೂಲವಿದ್ದಷ್ಟು ಮಟ್ಟಿಗೆ ನೆರವು ನೀಡಬೇಕೆಂದೂ, ಅದಕ್ಕಾಗಿ ಎಲ್ಲರೂ ಸಹಕರಿಸಬೇಕೆಂದೂ ಹೇಳಿದರು. [illegible]

ಕಾರ್ಕಳ— ಶ್ರೀ ಭುವನೇಂದ್ರ ಸಂಸ್ಕೃತ ಮಹಾ ವಿದ್ಯಾಲಯದ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ತಾ 8ರಂದು ಶ್ರೀ ಕೆ. ರಾಮ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಕೆ. ಪರಮೇಶ್ವರ ಮಯ್ಯ ಶ್ರೀ ಶ್ರೀಧರ ತಂತ್ರಿ, ಹರಿದಾಸ್ ಇವರ ಭಾಷಣಗಳಾದವು, ಬಳಿಕ ವಿದ್ಯಾರ್ಥಿಗಳಿಂದ ಕಾವ್ಯ ನಾಟಕ ವಿತ್ತು.

ತೃಪ್ತಿಕರವಾದ ವಸತಿ— ಹಿತಕರವಾದ ಊಟ— ರುಚಿಕರವಾದ ಉಪಾಹಾರ ಇವುಗಳಿಗೆ

ಆದರ್ಶ ನಿಲಯವೆಂದರೆ

ವುಡ್ ಲೇಂಡ್ಸ್

ಉಡುಪಿ.

ಯಾತ್ರಿಕರಿಗೂ ಪ್ರಯಾಣಿಕರಿಗೂ ಸರ್ವ ಅನುಕೂಲವಾಗುವಂತೆ ನಗರದ ಕೇಂದ್ರಭಾಗದಲ್ಲಿದೆ

ಧಾತುಸ್ರಾವ ನಿಂತಿತು

'ಆಂಬೂರಾ' ಪಿಲ್ಸ್‌ಗಳನ್ನು ಉಪಯೋಗಿಸಿದರೆ ಹಡೆತಪ್ಪಿ ಧಾತುಸ್ರಾವಾಗುವುದು, ಪಡೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದುವುದು. ಯಾವ ಬಾಧಕವೂ ಇಲ್ಲ. ಸಾಕಷ್ಟು ರಾರು ಕುಂದಿಗೆ ಸಾಕ್ಷ್ಯ ಗುಣವಾಗಿದೆ. ಬೆಲೆ: ರೂ. 3-1 ಸ್ಪೆಶಲ್ ರೂ. 5- ಅತಿಬಾಧಿಕ ಸ್ಪೆಶಲ್ ರೂ. 8-1 [illegible] ಹಣ್ಣಿರಡಾದ ಪ್ರತ್ಯೇಕ]

Mrs. D. DEVEE, F. DS. (N. J.)
Tollygunge CALCUTTA

ಸ್ತ್ರೀತಜ್ಞರು, ಶಕ್ತಿಕರಸ್ತ್ರೀಮಂಗಳೂರು

ವಿಚಾರ ಪ್ರಚೋದಕವಾದ ಪ್ರತಿಯೊಬ್ಬರೂ ಓದಲೇಬೇಕಾದ ನವನವೀನ ಪುಸ್ತಕಗಳು!

ಗೀತಾ ರಹಸ್ಯವನ್ನು ತಿಳಿಯ ಬಯಸುವವರಾರು?

ದಿ॥ ಮೊಸಕೆರೆ [illegible] ಕೃತ ಗೀತೆಯ ಕೈಗನ್ನಡಿ [illegible]

ಪುಟಗಳು 428 ಬೆಲೆ 0-12-0 ಅಂಚೆವೆಚ್ಚ 0-4-0

100 ಪ್ರತಿಗಳಿಗೆ ರೂ. 60; 250ಕ್ಕೆ ರೂ 140; 500ಕ್ಕೆ ರೂ 250

ಕಥೆ, ಕಾದಂಬರಿ, ನಾಟಕ, ಚಿತ್ರ, ಪ್ರಬಂಧ, ಹರಟೆ ಮೊದಲಾದ, ನೋಡಿದರೆ ಬಿಡಲಿರದ ಅಂತರಂಗ ಪ್ರಕಟನಾಲಯದ ರೂ. 30 ಕ್ರಯದ 86 ಪ್ರಕಟಣೆಗಳನ್ನು ಒಟ್ಟೊಯ್ಯೇ ಕರಿಸಿಕೊಳ್ಳುವವರಿಗೆ ರೂ. 24ಕ್ಕೆ ಕೊಡಲಾಗುವುದು.

ನಾರೀಹೃದಯ ರೂ.	1	8	ಪ್ರಹಾರ ರೂ.	2	8	ನವನಿರ್ಗಾನ ರೂ.	2	0
ಭಾರತೀಯ ಕಥೆಗಳು	1	12	ಮರುಮನೆ	3	0	ಕಾವ್ಯಸಾಮ್ರಾಜ್ಯ	1	8
ಸನ್ಯಾಸಿಯ ಸೋಗಿನಲ್ಲಿ	1	12	ಘಂಟೆಮಾರ	2	0	ಪ್ರೇಮವಿಜಯ	1	4
ಕವಿತಾ ಕೌಮುದಿ	2	0	ನಂದಾದೀಪ	1	0	ರಂಗಭೂಮಿ	0	10
ಕುಲಕಲ್ಪದ ಹಣ್ಣು	2	0	ಜಯಪ್ರಾಸ್ತ	1	8	ಭಾರತದಲ್ಲಿ ಜಾಗೃತಿ	1	0
ವ್ಯಭಿಚಾರಿಣಿ ಯಾರು	1	4	ದೇಶಭಕ್ತ	1	4	ವೀರ ಸಾವರ್ಕರ	1	4
ಕುಲಭಂಡನಲ್ಲಿ ಇಂಗ್ಲಿಷ್	2	0	ಮನೆ ಮದ್ದು	2	8	ಕದಂಬ	1	4
ನೀತಿವಿನೋದ ಕಥೆಗಳು	0	12	ಸರಸ್ವತಿ	0	12	ಭಾಗ್ಯಲಕ್ಷ್ಮಿ	1	4
ಜೀವನ ಸಂಗ್ರಾಮ	1	8	ಸೇವಾಪಥ	0	8	ಲೋಕಾಭಿರಾಮ	0	8

ಇವೇ ಮೊದಲಾದ ನೂರಾರು ಬಗೆಯ ಉಪಯುಕ್ತ ಪುಸ್ತಕಗಳ ಕೆಟಲಾಗಿಗೆ ಬರೆಯಿರಿ ವ್ಯಾಪಾರಿಗಳಿಗೂ, ಪುಸ್ತಕಭಂಡಾರಗಳಿಗೂ ವಿಶೇಷ ಸವಲತ್ತುಗಳಿವೆ

ನವಭಾರತ ಪುಸ್ತಕ ಭಂಡಾರ, ಉಡುಪಿ. ದ. ಕ.



ವೆಲ್ಕಿನ್ಸ್ ಟೂತ್ ಪೇಸ್ಟ್

ಮಿಂಚುವ ನಗುವಿಗೆ, ಮತ್ತು ಒಸಡಿನ ಆರೋಗ್ಯಕ್ಕೆ!

ಯು ಎಸ್ ಎ ರಾಜ್ಯದ ಪ್ರಸಿದ್ಧ ಡಾಕ್ಟರರೊಬ್ಬರ ತಯಾರಿಕೆ

Welkin Laboratory (N)
Calcutta 3.

ಉದಾರ ಶರ್ತಗಳ ಮೇಲೆ ಸ್ಟಾಕಿಸ್ಟರು ಬೇಕಾಗಿದ್ದಾರೆ

ಸ್ವೀಕಾರ-ವಿಮರ್ಶೆ

ಹೊಸೂರಿನ ಹಲವರು—

ಬರೆದವರು— ಶ್ರೀ ಟಿ. ಮಹಾಬಲೇಶ್ವರ ಭಟ್ಟರು. ಪ್ರಕಾಶಕರು: ವಸಂತ ಗ್ರಂಥಮಾಲೆ, ಸಾಗರ ಬೆಲೆ ರೂ. ೧-೮-೦

ಕನ್ನಡದಲ್ಲಿ ವಿಡಂಬನಾ ಸಾಹಿತ್ಯ ಇತರ ಭಾಷೆಗಳಲ್ಲಿ ಬೆಳೆದು ಬಂದಿರುವಷ್ಟು ಪುಷ್ಟವಾಗಿಲ್ಲ, ಶ್ರೀಯುತ ಕಾರಂತ, ಗೊರೂರು ಶ್ರೀರಂಗ ಮುಂತಾದ ಕೆಲವರು ಈ ಕ್ಷೇತ್ರದಲ್ಲಿ ಸಾಕಷ್ಟು ಕೃಷಿಯನ್ನು ಮಾಡಿದ್ದರೂ ಅದು ಸಾಕಷ್ಟಿಲ್ಲವೆಂದೇ ತೋರುತ್ತದೆ. ಈ ಪುಸ್ತಕದ ಮುನ್ನುಡಿಯಲ್ಲಿ ಶ್ರೀ ವಿದ್ವಾನ್ ಬಂಡೇಶ್ವರ ಗಣಪತಿರಾಯರು ಹೇಳಿರುವಂತೆ ವ್ಯಕ್ತಿಗಳನ್ನಾಗಲೀ ವ್ಯಕ್ತಿ ಸಮುದಾಯವೇ ಆಗಿರುವ ಯಾವೊಂದು ಸಮಾಜವನ್ನಾಗಲಿ ಮನಸೋಯಿಚ್ಛೆ ಹಳಿಯುವುದು ವಿಡಂಬನೆಯಲ್ಲ—ಮೂಗಿನ ಮೇಲೆ ಮಸಿ ಇರುವವನೆದುರು ಕನ್ನಡಿಯನ್ನು ಹಿಡಿಯುವುದಷ್ಟೇ ವಿಡಂಬನಕಾರನ ಉದ್ದೇಶವಿರುತ್ತದೆ. ವಿಡಂಬನಕಾರನು ಟೀಕಿಸಿರುವ ದೋಷವು ನಮ್ಮಲ್ಲಿದ್ದರೆ ತಿದ್ದಿಕೊಳ್ಳಬೇಕು, ನಿರ್ದೋಷವಾಗಿದ್ದರೆ ನಕ್ಕು ಬಿಡಬೇಕಾದ್ದು ನ್ಯಾಯ. ಈ ದೃಷ್ಟಿಯಿಂದ ನೋಡಿದರೆ ಶ್ರೀ ಭಟ್ಟರು ಇಲ್ಲಿ ಚಿತ್ರಿಸಿರುವ ಜೀವನ ದರ್ಶನದಿಂದ ವಿಡಂಬನದ ಉದ್ದೇಶ ಸಾಕಷ್ಟು ಫಲಿಸಿದೆ ಯೆನ್ನಬಹುದು, ಸಾಂಸ್ಕೃತಿ ಸಂಪನ್ನವಾದ ಈ ದೇಶದಲ್ಲಿ ನುಡಿಗೂ ನಡೆಗೂ ಇರುವ ಅಂತರವನ್ನು ಆಚಾರ ವಿಚಾರಗಳಲ್ಲಿ ಕಂಡು ಬರುವ ಪರಿವರ್ತನೆಯನ್ನೂ ಬಿಂಬಿಸಲು ಲೇಖಕರು ವಿಡಂಬನೆಯ ತಂತ್ರವನ್ನು ಉಪಯೋಗಿಸಿರುವರು. ವಿಷಯ ನಿರೂಪಣೆಯ ದೃಷ್ಟಿಯಿಂದ ಕೆಲವೆಡೆ ಅಸಮಂಜಸ ವಿಚಾರಗಳು ಕಂಡು ಬಂದರೂ ಸಮಗ್ರವಾಗಿ ಈ ಪ್ರಯತ್ನ ಸ್ವಾಗತಾರ್ಹವಿದೆ.

ಪಕ್ಷಿದೃಷ್ಟಿ—

● "ಶ್ರೀ ಮಧ್ವಾಚಾರ್ಯರು" ಎಂಬುದಾಗಿ ಶ್ರೀ ಎಸ್. ದೇವರಾಯ ನಾಯಕ್ ರಥಬೀದಿ, ಉಡುಪಿ—ಇವರು ಬರೆದು ಪ್ರಕಟಿಸಿರುವ ಜೀವನಚರಿತ್ರೆ ಆಚಾರ್ಯರ ಕುರಿತು ಸಾಮಾನ್ಯ ಜ್ಞಾನವನ್ನು ಪ್ರದಿಸಿಕೊಡುವಂತಿದೆ.

● "ಟ್ರೇಡ್ ಯೂನಿಯನ್" ಎಂಬುದು ದ. ಕ. ಟ್ರೇಡ್ ಯೂನಿಯನ್ ಸೆಂಟ್ರಲ್ ಕೌನ್ಸಿಲಿನ ಮುಖ ಪತ್ರವಾಗಿದೆ. ಶ್ರೀ ಕೆ. ಮೋನಪ್ಪ ಶೆಟ್ಟಿಯವರು ಸಂಪಾದಕರು. ಈ ಮಾಸಿಕ ತನ್ನ ಉದ್ದೇಶಕ್ಕೆ ಅನುಗುಣವಾದ ಲೇಖನಗಳಿಂದ ಕೂಡಿದೆ.

● "ಚಿತ್ರಸಿನಿಮಾ"ವೆಂಬ ಮಾಸಪತ್ರಿಕೆಯನ್ನು ಚಂದಮಾಮಾ ಪಬ್ಲಿಕೇಶನ್ಸ್, ವಡಪಳನಿ, ಮದ್ರಾಸು ೨೬ ಇವರು ಹೊರಡಿಸಿರುವರು. ಚಲಚಿತ್ರ ಪ್ರಪಂಚದ ಕುರಿತು ಯೋಗ್ಯ ಮಾಹಿತಿಯನ್ನು ಕೊಡುವುದಕ್ಕೆ ಅದರಲ್ಲಿ ಪ್ರಯತ್ನಿಸಿರುವರು.

ರಾಯಭಾರಿ—

ವಾರ ಪತ್ರಿಕೆಯು ಮಾಧ್ವ ತತ್ವಜ್ಞಾನ ಸಮ್ಮೇಳನಾಂಕ, ೧೯೫೩ ಸಂಚಿಕೆಯಲ್ಲಿ ವಿದ್ವತ್ಪೂರ್ಣವಾದ ಪ್ರೌಢ ಬರಹಗಳಿವೆ. ಶ್ರೀ ಮಂಜೇಶ್ವರ ಗೋವಿಂದ ಪೈ, ಡಾ. ನಾಗರಾಜ ಶರ್ಮ, ಸುಬೋಧ ರಾಮರಾಯರು, ಪ್ರಿನ್ಸಿಪಾಲ್ ಶೇಷಾಚಾರ್ಯರು, ಅಲೂರು ವೆಂಕಟರಾಯರು, ಬಿ. ಎ. ಕೃಷ್ಣಸ್ವಾಮಿರಾಯರು, ವಿದ್ಯಾರತ್ನ ಪಂಚಮುಖಿಯವರು ಮುಂತಾದ ಪ್ರಾಜ್ಞರು ಲೇಖನಗಳನ್ನಿತ್ತಿರುವರು, ಸಂಚಿಕೆ ಸಂಗ್ರಾಹ್ಯವಾಗಿದ್ದು, ಎಂಟಾಣೆ ಬೆಲೆಗೆ ಉಡುಪಿಯ ರಾಯಭಾರಿ ಕಛೇರಿಯಿಂದ ಪ್ರಕಟಗೊಂಡಿದೆ. ಸಂಪಾದಕ ಎಸ್ಸೆಲ್ಲರ ಪರಿಶ್ರಮ ಸ್ತುತ್ಯ.

ಪ್ರಜಾ—ವಾರ ಪತ್ರಿಕೆಯು ಹೈದರಾಬಾದಿನ ೫೮ನೇ ಕಾಂಗ್ರೆಸ್ ಮಹಾಧಿವೇಶನದ ಸ್ಮಾರಕ ಹೊರಡಿಸಿದ ವಿಶೇಷ ಸಂಚಿಕೆ ಪಂಚವಾರ್ಷಿಕ ಯೋಜನೆ, ಗಾಂಧೀ ದೃಷ್ಟಿಯಲ್ಲಿ ಸಮಾಜವಾದ, ಕಾಂಗ್ರೆಸ್ ಸಂಸ್ಥೆಯ ಸಿಂಹಾವಲೋಕನ ಮುಂತಾದ ಬರೆಹಗಳಿಂದ ಕೂಡಿದೆ. ಸಂಪಾದಕರಾದ ಆರ್. ಜಿ. ಜಾಗೀರದಾರರು ಅಬೀದ್ ರೋಡ್, ಹೈದರಾಬಾದು [ದಕ್ಷಿಣ]ದಿಂದ ಪ್ರಕಟಿಸಿರುವರು.

ಬೊಂಬಾಯಿ ದ. ಕ. ಬ್ರಾಹ್ಮಣರ ಸಂಘದ ರಜತೋತ್ಸವ— ವನ್ನು ನೆರವೇರಿಸುವುದಕ್ಕಾಗಿ ಸ್ಥಾಪಿತವಾದ ಸಮಿತಿಗೆ ಡಾ। ಯು. ಬಿ. ನಾರಾಯಣ ರಾಯರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ. ಮಾರ್ಚ ತಿಂಗಳ ತಾ. ೧ರಲ್ಲಿ ವಾರ್ಷಿಕ ಕಾರ್ಯಕ್ರಮವು ಉಡುಪಿಯ ಅಧಮಾರು ಮಠದ ಶ್ರೀ ವಿಬುಧೇಶ ತೀರ್ಥ ಸ್ವಾಮಿಗಳವರಿಂದ ಉದ್ಘಾಟಿಸಲ್ಪಡುವುದು. ಮದ್ರಾಸಿನ ಮಾಜಿ ಮಂತ್ರಿ ಡಾ। ಯು. ಕೃಷ್ಣರಾಯರು ಸಮಾರಂಭದ ಅಧ್ಯಕ್ಷತೆ ವಹಿಸುವರು.

ಸಂಘದ ವಾರ್ಷಿಕ ಮಹಾ ಸಭೆಯು ಕಳೆದ ತಾ. 18ರಲ್ಲಿ ಜರಗಿತು. ಕಾರ್ಯಕಾರಿ ಮಂಡಳಿಗೆ ಶ್ರೀಗಳಾದ ಕೆ. ಭುಜಂಗ ರಾವ್ (ಅಧ್ಯಕ್ಷ) ಡಾ। ಯು. ಬಿ. ನಾರಾಯಣ ರಾವ್ (ಉಪಾಧ್ಯ) ಕೆ. ನಾರಾಯಣ ತಂತ್ರಿ ಮತ್ತು ಟಿ. ವೆಂಕಟ್ರಾವ್ (ಜತೆಕಾರ್ಯದರ್ಶಿಗಳು) ಬಿ. ಕೆ. ರಘುರಾಮ ರಾವ್ (ಕೋಶಾಧಿಕಾರಿ) ಮೊದಲಾದವರು ಆರಿಸಲ್ಪಟ್ಟರು.

ಬಂಟರ ಯಾನೆ ನಾಡವರ ಸಂಘದ— ರಜತ ಮಹೋತ್ಸವವನ್ನು ತಾ. 26-4-53ರಲ್ಲು ಸರ್. ಕವಾಸ್ಜಿ ಜಹಂಗೀರ್ ಹಾಲಿನಲ್ಲಿ ಜರಗಿಸುವುದಾಗಿ ನಿಶ್ಚಯಿಸಲ್ಪಟ್ಟಿದೆ. ಈ ಮಹೋತ್ಸವವು ಯಶಸ್ವಿಯಾಗುವಂತೆ ದ. ಕ. ಜಿಲ್ಲೆಯ ಸಮಾಜ ಬಂಧುಗಳು ಸ್ವಾಗತ ಸಮಿತಿಯ ಸದಸ್ಯರಾಗಿ ಸೇರಿ ಸಹಕರಿಸ ಬೇಕಾಗಿ ಗೌರವ ಕಾರ್ಯದರ್ಶಿ ಕೆ. ಚಂದ್ರಶೇಖರ ಹೆಗ್ಡೆಯವರ ವಿನಂತಿಯಾಗಿದೆ.

ಪ್ರಕಟಣೆ

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವದೇನೆಂದ್ರೆ--

ಕುಂದಾಪುರ ತಾಲೂಕು ನಂಬ್ರ 61ನೇ ಆನಗಳ್ಳಿ ಗ್ರಾಮದಲ್ಲಿಯಿರುವ ಮರಿಯಪ್ಪ ಹೆಬ್ಬಾರರ ಮನೆ ವೆಂಕಟ್ರಮಣ ಹೆಬ್ಬಾರರ ಹೆಂಡ್ತಿ ವ ಆನಗಳ್ಳಿ ಪಡುಕೆರೆ ಸೀತಗಿರಿ ಹೆಬ್ಬಾರರ ಮಗಳು ಗಂಗಮ್ಮನು ಸ್ವತಹ ಮತ್ತು ತನ್ನ ಸಂರಕ್ಷಣೆಯಲ್ಲಿರುವ ಪ್ರಾಯದ ಮಕ್ಕಳು, ತಿಂಮಪ್ಪ ಹೆಬ್ಬಾರ। ಮರಿಯಪ್ಪ ಹೆಬ್ಬಾರ। ಸೀತಗಿರಿ ಹೆಬ್ಬಾರ। ವಾಸುದೇವ ಹೆಬ್ಬಾರ। ಕೂಡಾ 4 ಜನ ಗಂಡುಮಕ್ಕಳ ಗಾರ್ಡಿಯನಳಾಗಿ ಕೂಡಾ ತಿಳಿಯಪಡಿಸುವದೇನಂದ್ರೆ--

ನನ್ನ ಗಂಡ ವ ಆನಗಳ್ಳಿ ತಿಂಮಪ್ಪ ಹೆಬ್ಬಾರರ ಮಗ ವೆಂಕಟ್ರಮಣ ಹೆಬ್ಬಾರರು ಮಿತ್ರರಾಗಿ ಆರು ತಿಂಗಳಿಂದ ಬುದ್ಧಿ ಭ್ರಮಣೆ ಉಂಟಾಗಿ ತನ್ನ ಹಿತಾಹಿತಗಳನ್ನು ಅರಿಯುವಷ್ಟು ವಿಚಾರ ಶಕ್ತಿ ಇರುವದಿಲ್ಲ. ಅವರ ಈಗಿನ ಪರಿಸ್ಥಿತಿಯನ್ನು ತಿಳಿದು ಕೆಲವರು ಅವರಿಂದ ನನಗೂ, ನನ್ನ ಪ್ರಾಯದ ಮಕ್ಕಳಿಗೂ, ಮೋಸಕರವಾದ ರಿಕಾರ್ಡುಗಳನ್ನು ಮಾಡಿಸಿ ಕೊಳ್ಳುವ ಇರಾದೆಯಲ್ಲಿರುತ್ತಾರಾಗಿ ನಾನು ತಿಳಿಯುತ್ತೇನೆ-

ನನ್ನ ಗಂಡ ಮೇಲೆ ಹೇಳಿದ ವೆಂಕಟ್ರಮಣ ಹೆಬ್ಬಾರರಿಗಾಗಲೀ ವ ಅವರ ಅವಿಭಕ್ತ ಕುಟುಂಬಕ್ಕಾಗಲೀ ಯಾವ ಸಾಲಗಳು ಇರುವದಿಲ್ಲ. ಹಾಗೆ ಸಾಲ ಮಾಡುವ ಅವಶ್ಯಕತೆ ಸಹಾ ಬರುವದಿಲ್ಲ. ಅದ್ದರಿಂದ ಯಾರಾದರೂ ಸದ್ರಿ ವೆಂಕಟ್ರಮಣ ಹೆಬ್ಬಾರರಿಗೆ ಭೋಧಿಸಿ ಅವರಿಂದ ಯಾವ ತರದ ರಿಕಾರ್ಡುಗಳನ್ನು ಯಾರಾದ್ರು ಮಾಡಿಸಿಕೊಂಡರೆ ಯಾ ಯಾರನ್ನಾದ್ರು ಸಾಲಗಳು ಕೊಟ್ಟರೆ ಅವುಗಳಿಗೆ ನಾನು ವ ನನ್ನ ಪ್ರಾಯದ ಮಕ್ಕಳು ವ ಅವರ ಕುಟುಂಬದ ಯಾವದೊಂದು ಸ್ಥಿರಚರ ಸೊತ್ತುಗಳು ಬದ್ಧವಾಗತಕ್ಕದ್ದಲ್ಲ. ಸದ್ರಿ ವೆಂಕಟ್ರಮಣ ಹೆಬ್ಬಾರರ ಸ್ವಾಧೀನದಲ್ಲಿರುವ ಪಿತ್ರಾರ್ಜಿತ ಸ್ಥಿರಚರ ಸೊತ್ತುಗಳು ಪಿತ್ರಾರ್ಜಿತ ಹಕ್ಕಿನವುಗಳಾಗಿರುವದರಿಂದ ವಿಳಸಂಚಿನಿಂದ ರಿಕಾರ್ಡು ವಗೈರೆ ಮಾಡಿಸಿಕೊಂಡರೆ ಅವುಗಳು ಪ್ರಯೋಜನಕ್ಕೆ ಬರಲಾರದು ಎಂಬ ಸಂಗ್ತಿ ಈ ಮೂಲಕ ತಿಳಿಸಿರುತ್ತೇನೆ ಈಗ ಸುಮಾರು ಒಂದು ತಿಂಗಳಿಂದೀಚೆಗೆ ನಾನು ನನ್ನ ಪ್ರಾಯದ ಮಕ್ಕಳು ಕೂಡಾ ನನ್ನ ತಂದೆಮನೆಗೆ ಅವರ ಸಂರಕ್ಷಣೆಯಲ್ಲಿರುತ್ತೇವೆ.

ಗಂಗಮ್ಮನರುಜು.

22—1—'53.

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10. } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ

ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ, ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು.

The Bombay Life Assurance Co., Ltd., Bombay

ZANDU

ಝಂಡೂ ಫಾರ್ಮಸಿಯ ಮನೆಮದ್ದುಗಳನ್ನೇ ಸದಾ ಉಪಯೋಗಿಸಿರಿ.

ಝಂಡೂ ಬ್ರಾಹ್ಮೀ ಹೇರ್ ಆಯಿಲ್:- ಮೆದುಳಿಗೆ ತಂಪು- ಮನಸ್ಸಿಗೆ ಉಲ್ಲಾಸವೀಯುವುದು. 1 ಪೌಂಡಿಗೆ ರೂ. 3-8-0 ಕಾಲು ರಾತ್ಲಿಗೆ ರೂ. 1.

ಝಂಡೂ ಸರಸಪರಿಲ್ಲಾ:- ರಕ್ತವನ್ನು ಶುದ್ಧಗೊಳಿಸಲು ಹೆಸರುವಾಸಿಯಾದುದು. ಚರ್ಮರೋಗಗಳನ್ನು ಗುಣಪಡಿಸಬಲ್ಲುದು.
4 ಔನ್ಸ್ ಬಾಟ್ಲೆ 1ರ ರೂ. 1-5-0

ಝಂಡೂ ಬಾಲಾಮೃತ:-ಅನಾರೋಗ್ಯವುಳ್ಳ ಮಕ್ಕಳಿಗೆ ಆದರ್ಶ ಟಾನಿಕ್.
4 ಔನ್ಸ್ ಬಾಟ್ಲೆ 1ರ ರೂ. 1-2-0

ಝಂಡೂ ಬಾಮ್:-ತಲೆ ಸಿಡಿತ ಮೊದಲಾದ ಬೇನೆಗಳಿಗೆ 1 ಸೀಸೆಗೆ ರೂ1.

ಝಂಡೂ ಫಾರ್ಮಸಿಯ ದ. ಕ. ಜಿಲ್ಲೆಯ ಎಲ್ಲಾ ಏಜಂಟರಲ್ಲೂ ದೊರೆಯುವುವು.

ಸವಿವರ ಕ್ಯಾಟಲಾಗಿಗೆ ಈ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ;-

DAMODER & CO.,

Nainiappa Naicken Street, MADRAS. 3

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 387/39 R. E. P. No 466/1952

ವಾದಿ, ಶ್ರೀನಿವಾಸ ಅಡಿಗಳ್.

ಪ್ರತಿವಾದಿಯು ವೆಂಕಟ್ರಮಣ ಸೆಟ್ಟಿ ಕೂಡಾ 5ನೇ ಪ್ರತಿವಾದಿ, ಶ್ರೀನಿವಾಸ ಸೆಟ್ಟಿ ವೆಂಕಟ್ರಮಣ ಸೆಟ್ಟಿ ಮಗ, ಕೋಟೇಶ್ವರ ಗ್ರಾಮ.

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದ್ರೆ—

ಮೇಲಿನ ಡಿಕ್ರಿ ಹಣದ ವಸೂಲಿ ಕುರಿತು ವಾದಿಯು ಮೇಲಿನ R. E. P. 466/52 ನೇದಿಗೆ ಅನ್ಸಲ್ಟ್ ರಿ ಮಾಡಿರುತ್ತಾನೆ. ಆದುದರಿಂದ ಆ ಲಟ್ಟರಿ ಯಾಕೆ ನಡೆಸ ಕೂಡದೆಂಬುವದಕ್ಕೆ ಸಬಬು ತೋರಿಸಲಿಕ್ಕೆ ತಾ. 17-2-1953ನೇ ದಿವಸ ಹಗಲು 11 ಘಂಟೆಗೆ ಈ ಕೋರ್ಟಿನ ಮುಂದೆ ನೀವು ಹಾಜರಾಗಬೇಕೆಂತ ಇದರಿಂದ ನಿಮಗೆ ನೋಟೀಸು ಕೊಡೋಣವಾಗುತ್ತದೆ.

By order of the court

Y. Tejappa Shetty

Advocate for plaintiff.

Coondapoor, 6—2—1953

ಪ್ರಕಟಣೆ

ಮಂಗಳೂರು ಜಯಲಕ್ಷ್ಮಿ ಬೇಂಕಿನ ಮೇಲೆ ರೂಪಾಯಿ 101-8-0 ಕ್ಕೆ ಮತ್ತು ಮಂಗಳೂರು ಬೇಂಕಿನ ಮೂಡಬಿದ್ರಿ ಶಾಖೆಯ ಮೇಲೆ ರೂಪಾಯಿ 101—0—0 ಕ್ಕೆ ತಾರೀಕು 23-1-53 ರಲ್ಲು ಶ್ರೀ ಧರ್ಮಸ್ಥಳ ಮಂಜಯ್ಯ ಹೆಗಡೆಯವರ ಹೆಸರಲ್ಲಿ ಮಂಗಳೂರಿನ ಬಳ್ಳಾಲ ಬಾಗದಲ್ಲಿರುವ ಶ್ರೀ ಕೆ. ಬಿ. ಎಸ್. ಬಳ್ಳಾಲರವರು ಮತ್ತು ಮೂಡಬಿದ್ರಿ ಪೇಟೆಯಲ್ಲಿರುವ ಶ್ರೀ ಪಟ್ಟ ಶೆಟ್ಟಿ ಪದ್ಮರಾಜ ಶೆಟ್ಟರು ಕೊಟ್ಟ ಬೇರಾರ್ ಚೆಕ್ಕು ಒಂದು ಮತ್ತು ಆರ್ಡರ್ ಚೆಕ್ ಒಂದು ಕೂಡಾ ಎರಡು ಚೆಕ್ಕುಗಳು ಹೋಗಾಡಿ ಹೋಗಿರುವದರಿಂದ ಅವುಗಳನ್ನು ಯಾರಾದ್ರು ಬೇಂಕುಗಳಲ್ಲಿ ಯಾ ಇತರ ಸೊಸೈಟಿ ಸಂಘಗಳಲ್ಲಿ ಹಾಜರುಪಡಿಸುವರೇ; ತಂದದ್ದಾದ್ರೆ ಅವುಗಳ ಹಣವನ್ನು ಯಾವ ಬೇಂಕಿನವರಾಗಲೀ ಸೊಸೈಟಿ ಸಂಘದವರಾಗಲೀ ಕೊಡಬಾರದಾಗಿಯೂ ಸದ್ರಿ ಎರಡು ಚೆಕ್ಕುಗಳನ್ನು ರದ್ದು ಪಡಿಸುವದಾಗಿಯೂ ಇದ್ರ ಮೂಲಕ ಪ್ರಕಟಿಸೋಣವಾಗುತ್ತದೆ. ತಿಳಿದಿರುವದು. ತಾರೀಕು 26-1-53.

B Shanker Rao,

HEAD CLERK,

SRI DHARMASTALA.

26—1—1953.

ನಿಮ್ಮ ವ್ಯಕ್ತಿ ವೈಶಿಷ್ಟ್ಯದ ಕನ್ನಡಿ—ಕಣ್ಣು

(೨ನೇ ಪುಟದಿಂದ)

ತಿರುವನೆಂಬುದೇ ಹೊಳೆಯಲಿಲ್ಲ. ಆದರೆ ನಿಮ್ಮನ್ನು ಕಂಡಮಾತ್ರಕ್ಕೆ ಕಣ್ಣುಗಳು ಲಜ್ಜೆಯಿಂದ ಕೆಳಗೆ ತಗ್ಗುವುವು."

ಈ ಕತೆಯನ್ನೂ ನಾವು ನಂಬದಿರಬಹುದು: ಹಾಗೆಂದು ಮನುಷ್ಯನ ಚಾರಿತ್ರ್ಯ, ಅಂತಃ ಪ್ರವೃತ್ತಿ ಹಾಗೂ ವ್ಯಕ್ತಿತ್ವದ ಕನ್ನಡಿಯಂತೆ ಕಣ್ಣುಗಳಿವೆ ಎಂಬುದನ್ನು ಈ ಕತೆ ವ್ಯಕ್ತಗೊಳಿಸುತ್ತದೆಂಬ ಸಂಗತಿ ನಿಶ್ಚಯ.

ಆಧುನಿಕ ಕತೆಗಾರರಲ್ಲಿ ಅಗ್ರಗಣ್ಯರೆನಿಸಿದ ಸ್ಟೀವನ್‌ಜ್ವಿಗ್ ಅವರು ಭಾರತೀಯ ಹಿನ್ನೆಲೆಯಲ್ಲಿ ವಿರಾಟಾ ಎಂಬ ಕತೆಯೊಂದನ್ನು ಬರೆದಿರುವರು. ಓರ್ವ ಸೇನಾಪತಿಯು ತನ್ನ ಮುಂದೆ ಮೃತಪ್ರಾಯನಾಗಿ ಬಿದ್ದಿರುವ ವೈರಿ ಸೇನಾಪತಿಯನ್ನು ದಿಟ್ಟಿಸಿ ನೋಡಿದಾಗ, ಮರಣಗೊಂಡ ಮೇಲೂ ಆ ಸೇನಾಪತಿಯ ಕಣ್ಣುಗಳಲ್ಲಿ ರೋಷ ಹಾಗೂ ಸೇಡಿನ ಭಾವ ಹುದುಗಿರುವುದು ತೋರುತ್ತದೆ. ಇದರ ಸ್ಮೃತಿ ಮಾತ್ರದಿಂದಲೇ ಬದುಕಿ ಉಳಿದ ಈ ವಿಜಯಿ ಸೇನಾಪತಿಯ ಜೀವನ ಕ್ರಮದಲ್ಲಿ ಚಾಂಚಲ್ಯವುಂಟಾಗುತ್ತದೆ.

ರಶಿಯಾದ ಕಾದಂಬರಿಕಾರರಲ್ಲಿ ಶ್ರೇಷ್ಠನೆನಿಸಿದ ಡಾಸ್ಟಾವಸ್ಕಿ ತನ್ನ ಸುಪ್ರಸಿದ್ಧ ಕೃತಿ "ಅಪರಾಧ ಮತ್ತು ದಂಡ" ಎಂಬುದರಲ್ಲಿ ಒಂದು ರೋಮಾಂಚಕ ಪ್ರಸಂಗವನ್ನು ವರ್ಣಿಸಿರುವನು. ಕೊಲೆಪಾತಕಿಯಾದ ಕಥಾ ನಾಯಕನು ತನ್ನ ಕಣ್ಣುಗಳ ಪ್ರತಿಬಿಂಬವನ್ನು ನೋಡಿಯೇ ಭಯಚಕಿತನಾಗುವನು. ತನ್ನ ಕಣ್ಣುಗಳನ್ನು ನೋಡಿದೊಡನೆಯೇ ಜನರು ಕೊಲೆಪಾತಕಿ ತಾನೆಂದು ಗುರುತಿಸುವರಾಗಿ ಅವನಿಗೆ ಸದಾ ಭಯವಿರುತ್ತದೆ. ಈ ಕಾರಣದಿಂದ ಜನರ ಮುಂದೆ ಕಣ್ಣೆತ್ತಿ ನಡೆಯುವಲ್ಲಿ ಅವನು ಹೆದರುತ್ತಾನೆ.

ಮಸ್ತಿಷ್ಕ ಮತ್ತು ಕಣ್ಣು

ಮಸ್ತಿಷ್ಕಕ್ಕೂ ಕಣ್ಣುಗಳಿಗೂ ಘನಿಷ್ಟಸಂಬಂಧವಿದೆ. ಒಂದು ಉಪಮೆ ಕೊಡುವುದಾದರೆ ಕಣ್ಣು ಕೆಮೆರಾದ ಮಸೂರದಂತಿದೆ; ಮತ್ತು ಮಸ್ತಿಷ್ಕವು ಫೋಟೋ ಗ್ರಹಿಸುವ ಪಟಲದಂತಿದೆ. ಕಣ್ಣುಗಳು ಕುಸುಮ ಕೋಮಲವಿವೆ. ಮತ್ತು ನಮ್ಮೆಲ್ಲ ಅಂಗ ಪ್ರತ್ಯಂಗಗಳಲ್ಲಿ ಕಣ್ಣಿನ ಸ್ಥಾನ ಬಹಳ ಮಹತ್ವದ್ದು. ಆದುದರಿಂದಲೇ ನೇತ್ರ ರಕ್ಷಣೆಗಾಗಿ ಭಗವಂತನು ಸುದೃಢವಾದ ಎಲುಬುಗೂಡನ್ನು ರಚಿಸಿರುವನು. ಕಣ್ಣಿನ ಮೇಲೆ ಏನಾದರೂ ಆಕ್ರಮಣವಾಗುವುದೆಂಬ ಸಂಶಯ ರೂಪೀ ಭಯವುಂಟಾದರೂ ಸಾಕು—ತಕ್ಷಣ ಕಣ್ಣನ್ನು ಮುಚ್ಚಿಬಿಡುವ ಏರ್ಪಾಡು ಇದೆ!

ಕಣ್ಣಿಲ್ಲದ ಮನುಷ್ಯನ ಜೀವನವು ಪೃಥ್ವಿಯ ಮೇಲೆ ಅಭಿಶಾಪವೆಂದೇ ಹೇಳಬೇಕು. ವಿಜ್ಞಾನವು ಈ ಅಭಾವವನ್ನು ದೂರೀಕರಿಸುವುದಕ್ಕೆ ಸಾಕಷ್ಟು ಪ್ರಯತ್ನವನ್ನು ಮಾಡಿ ಯಶಸ್ಸು ಹೊಂದಿದ್ದರೂ ದೃಷ್ಟಿಶಕ್ತಿಸಂಪನ್ನವಾದ ಕಣ್ಣುಗಳನ್ನು ಸೃಷ್ಟಿಸುವುದರಲ್ಲಿ ವಿಜ್ಞಾನಿಗಳಿಗೆ ಸಂಪೂರ್ಣ ಸಾಫಲ್ಯ ದೊರೆತಿಲ್ಲ. ಹಾಗೆಂದು ಬಿಟ್ಟ ವ್ಯಕ್ತಿಯ ಕಣ್ಣುಗಳನ್ನು ಇನ್ನೊಬ್ಬನಿಗೆ ಇಡಿಸುವಲ್ಲಿ, ಮತ್ತು ತನ್ಮೂಲಕ ದೃಷ್ಟಿಶಕ್ತಿ ನೀಡುವಲ್ಲಿ ವಿಜ್ಞಾನಿಗಳು ಸಮರ್ಥರಾಗಿದ್ದಾರೆ. ಇಂಗ್ಲೆಂಡು ಮತ್ತಿತರ ದೇಶಗಳಲ್ಲಿ ಈ ಪ್ರಯೋಗದ ಮೂಲಕ ಸಹಸ್ರಾರು ಕುರುಡರು ದೃಷ್ಟಿ ಶಕ್ತಿಯನ್ನು ಪಡೆದಿರುವರು. ಇಂಥವರ ಉಪಯೋಗಾರ್ಥವಾಗಿ ಕಣ್ಣಿನ ಬೇಂಕುಗಳನ್ನು ತೆರೆದಿರುವರು. ಸಾಯುವ ಕಾಲದಲ್ಲಿ ತಮ್ಮ ಕಣ್ಣುಗಳನ್ನು ಸ್ವೇಚ್ಛೆಯಿಂದ ಈ ಬೇಂಕುಗಳಿಗೆ ದಾನವಾಗಿ ಅರ್ಪಿಸುವ ಉದಾರಿಗಳು ಅನೇಕರಿರುವರು. ಫಾಸೀ ಶಿಕ್ಷೆಯನ್ನು ಹೊಂದಿದ ಅಪರಾಧಿಗಳಲ್ಲಿ ಕೂಡ ಹಲವರು ತಮ್ಮ ಕಣ್ಣುಗಳು ಯಾರಾದರೊಬ್ಬ ಕುರುಡನ ಅಂಧತ್ವವನ್ನು ನೀಗಿಸುವುದರಲ್ಲಿ ನೆರವಾಗಲೆಂದು ಬಯಸಿ, ದಾನಕೊಟ್ಟದುಂಟು.

ಆದರೆ ಕಣ್ಣಿಗೂ ಮಸ್ತಿಷ್ಕಕ್ಕೂ ಇರುವ ನಿಕಟ ಸಂಬಂಧದ ಪರಿಣಾಮವಾಗಿ ದೃಷ್ಟಿ ಲಾಭಕ್ಕಾಗಿ ಕಣ್ಣನ್ನು ಸ್ವೀಕರಿಸಿದವನ ಮನಃ ಪ್ರವೃತ್ತಿಯು ಅಕ್ಷಿದಾನವಿತ್ತವನ ಮನಸ್ಸನ್ನೇ ಹೋಲುವ ವಿಚಿತ್ರ ಸಂಗತಿ ಘಟಿಸದಿಲ್ಲ! ಫ್ರಾನ್ಸಿನ ನೆನರೀಸರ್ವಾರ್ ಎಂಬೊಂದು ಗ್ರಾಮದಲ್ಲಿ ಜೆನೆಟ್ ಎಂಬ ಹುಡುಗಿ ಹುಟ್ಟಿನಿಂದಲೇ ಕುರುಡಳಿದ್ದಳು. ನೋಡಲಿಕ್ಕೆ ಸುಂದರಳೂ ದೃಢಕಾಯಳೂ, ಸ್ವಚ್ಛಚಿತ್ತಳೂ, ವ್ಯವಹಾರದಲ್ಲಿ ಕುಶಲಳೂ ಆಗಿದ್ದಳು. ಆದರೆ ತಂದೆತಾಯಿಗಳಿಗೆ ಮಗಳು ಕುರುಡಿ ಎಂಬ ಚಿಂತೆ. ಕೊನೆಗೊಮ್ಮೆ ಓರ್ವ ವೈದ್ಯನು ಜೆನೆಟ್‌ಗೆ ಹದಿನಾರನೇ ವಯಸ್ಸಿನಲ್ಲಿ ಶಸ್ತ್ರ ಚಿಕಿತ್ಸೆಯ ಮೂಲಕ ಹೊಸಕಣ್ಣುಗಳ ಜೋಡಣೆಯಿಂದ ದೃಷ್ಟಿಶಕ್ತಿಯನ್ನು ದಯಪಾಲಿಸಿದ. ಈ ಕಣ್ಣುಗಳು ಪೇರಿಸ್ ನಗರದ ಕಣ್ಣಿನ ಬೇಂಕಿನಿಂದ ತರಲಾಗಿದ್ದವು.

ಮೊದಮೊದಲಿಗೆ ಈ ರೀತಿ ಕಣ್ಣುಗಳನ್ನು ಕೂಡಿಸಿಕೊಂಡವರಿಗೆ ಸ್ವಾಭಾವಿಕವಾಗಿಯೇ ತೊಡಕೆನಿಸುತ್ತದೆ. ದೃಷ್ಟಿಗೂ ಮಸ್ತಿಷ್ಕಕ್ಕೂ ನಿಕಟ ಸಂಬಂಧವನ್ನು ಸುಲಭದಲ್ಲಿ ಏರ್ಪಡಿಸಲಾಗುವುದಿಲ್ಲವೆಂಬುದೇ ಇದಕ್ಕೆ ಕಾರಣ. ಈ ಹುಡುಗಿಗೂ ಆರಂಭದಲ್ಲಿ ಹೀಗೇ ಆಯಿತು. ಕೆಲದಿನಗಳ ಉಪಚಾರದ ಬಳಿಕ ದೃಷ್ಟಿ ಸಂಬಂಧ ಚೆಲುವಾಗಿ ಏರ್ಪಟ್ಟಿತು. ಆದರೆ ಈ ಶಕ್ತಿ ಸಮುಸ್ಥಿಯದ ಜೊತೆಯಲ್ಲೇ ಹುಡುಗಿಯ ನಡವಳಿಕೆಯಲ್ಲಿ ಆಶ್ಚರ್ಯಜನಕ ಪರಿವರ್ತನೆ ಕಂಡುಬಂತು. ಸರಳ, ಸುಶೀಲ ಹಾಗು ದಯಾಳುವೆನಿಸಿದ್ದ ಹುಡುಗಿ ಒಮ್ಮೆಗೇ ಕ್ರೂರ ಹಾಗೂ ದುಷ್ಟಳಾಗಿ ಬದಲ್ಗೊಂಡಳು! ಒಂದು ದಿನ ಅವಳು ಎಲ್ಲರೂ ನೋಡುತ್ತಿದ್ದಂತೆ ಅಕಾರಣವಾಗಿ ಒಂದು ಚೆಕ್ಕನ್ನು ಎತ್ತಿ ದೂರ ಎಸೆದು ಘಾತಗೊಳಿಸಿದಳು, ಹಲವರು ಸಮಾಧಾನ ಹೇಳಲು "ಯಾರಿಗಾದರೂ ನಾಲ್ಕು ಹೊಡೆಯಬೇಕೆಂದು ನನಗೆನಿಸುತ್ತದೆ. ಯಾರನ್ನಾದರೂ ಕೊಂದೇ ಬಿಡುತ್ತೇನೆ" ಎಂದಳು

ಈ ರೀತಿ ಸ್ವಭಾವ ಪರಿವರ್ತನೆಯ ರಹಸ್ಯವನ್ನು ಯಾರಿಗೂ ತಿಳಿಯಲು ಸಾಧ್ಯವಾಗಲಿಲ್ಲ. ಅವಳನ್ನು ಆಸ್ಪತ್ರೆಗೆ ಸಾಗಿಸಲು, ಅಲ್ಲಿ ಪ್ರಾಣ ಕಳೆದು ಕೊಳ್ಳಲು ಅವಳು ಉದ್ಯುಕ್ತಳಾದಳು. ಕಾರಣ ಕೇಳಿದಾಗ ಎಲ್ಲರೂ ತನ್ನನ್ನು ಶಂಕಿತ ದೃಷ್ಟಿಯಿಂದ ನೋಡುತ್ತಿರುವರೆಂಬುದಾಗಿ ಹೇಳಿದಳು. ಮದ್ದು ಕುಡಿಸಿ ಬಹುವಾಗಿ ಸಮಾಧಾನ ಮಾಡಿದ ಬಳಿಕ ಅವಳು, ತನಗೆ ಯಾರ ಕಣ್ಣನ್ನು ಕೊಡಲಾಗಿದೆಯೋ ಅವನು ಸಾಂತ್ವನ ನೀಡಿರುವನೆಂದು ತಿಳಿಸಿದಳು.

ಸೃಷ್ಟಿಯ ಸೂಕ್ಷ್ಮ ಕೌಶಲ್ಯ

ಇದರಿಂದ ಕುತೂಹಲಗೊಂಡು ಕಣ್ಣಿನ ಬೇಂಕಿನಲ್ಲಿ ವಿಚಾರಿಸಲು, ಬಹಳ ಕಷ್ಟದಿಂದ ಆದಾನಿಯ ಹೆಸರು ತಿಳಿಯಿತು. ಮನುಷ್ಯ ಹತ್ಯೆಯನ್ನು ಗೈದೊಬ್ಬ ಅಪರಾಧಿಯು ದಾನ ನೀಡಿದ್ದ ಕಣ್ಣುಗಳೇ ಅವೆಂದು ಗೊತ್ತಾಯಿತು. ಮರಣಕ್ಕೆ ಮೊದಲು ಅವನೊಂದು ಪತ್ರ ಬರೆದು ತನಗೆ ನಿಧನಯುಕ್ತವಾದ ಕಣ್ಣುಗಳನ್ನು ಯಾರಿಗಾದರೂ ಉಪಯೋಗಕ್ಕೆ ಬರುವಂತೆ ದಾನಮಾಡ ಬೇಕೆಂದಿದ್ದ.

ಈ ಘಟನೆಗೆ ಮುಂಚೆ ಕಣ್ಣಿನ ಪ್ರತಿಕ್ಷೇಪಣೆಯಿಂದ ಮನೋವೃತ್ತಿಯಲ್ಲಿ ಕೂಡ ಪರಿವರ್ತನೆ ಸಂಭವಿಸುವುದೆಂದು ವೈದ್ಯರು ನಂಬುತ್ತಿರಲಿಲ್ಲ. ಆದರೆ ಜೆನ್ನಿಯ ನಡತೆ ಇದಕ್ಕೆ ವಿಪರೀತವಾದ ಸಾಕ್ಷ್ಯವನ್ನು ಕೊಟ್ಟಿತು.

ಈ ಕಣ್ಣುಗಳಾದರೂ ಎಂಥವು! ದಿಕ್ಕಾಣುವಿನಿಂದಾಗಿ ಮನುಷ್ಯನ ನಿರ್ಮಾಣವಾದಂತೆ, ಕಣ್ಣುಗಳ ರಚನೆಯೂ ಅತ್ಯಂತ ಸೂಕ್ಷ್ಮವಿದೆ; ನಿಗೂಢವಿದೆ. ಪ್ರೋಟೀನು ಶರ್ಕರ, ಮೇಧಸ್ಸು, ಕ್ಷಾರ ಮತ್ತು ನೀರುಗಳೆಂಬ ರಾಸಾಯನಿಕ ದ್ರವ್ಯಗಳಿಂದ ಕಣ್ಣಿನ ರಚನೆಯಾಗಿದೆ. ಇದರಲ್ಲಿ ೮೦% ಜಲಾಂಶವೇ ಇದೆ. ಕಣ್ಣುಗೊಂಬೆಯೇ ಮಸೂರ. ಇದರ ಹಿನ್ನೆಲೆಯಲ್ಲಿ ಅಕ್ಷಿಪಟಲವಿದೆ. ಆಜೀವನ ಪರ್ಯಂತ ಈ ಅಕ್ಷಿಪಟಲ ಅತ್ಯುಪಯೋಗಿಯಾಗಿದೆ. ಒಂಭತ್ತು ರಹಸ್ಯಮಯ ತಂತುಗಳಿಂದ ಇದು ನಿರ್ಮಾಣಗೊಂಡಿದೆ. ಸೂಕ್ಷ್ಮವಾದ ರೋಮನಾಳಗಳು ಮಸ್ತಿಷ್ಕಕ್ಕೂ ಇದಕ್ಕೂ ಸಂಬಂಧವೇರ್ಪಡಿಸುವುವು. ಈ ರಕ್ತನಾಳಗಳ ಸಂಖ್ಯೆ ಹತ್ತುಲಕ್ಷಕ್ಕೂ ಮಿಕ್ಕಿವೆ ಎಂದರೆ ನಂಬುವಿರಾ? ಅಕ್ಷಿಬಿಂಬದಲ್ಲಿ ಹನ್ನೊಂದುಲಕ್ಷ ದೃಷ್ಟಿ ತಂತುಗಳು ಹರಡಿವೆ ಎಂದರೆ ಚಕ್ಕಿತ ಚಕಿತರಾಗುವಿರಾ? ನಾವು ಏನಾದರೊಂದು ವಸ್ತುವನ್ನು ನೋಡಿದೊಡನೆಯೇ ಅಕ್ಷಿಪಟಲದಲ್ಲಿ ಅದರ ಚಿತ್ರ ರೂಪಿತಗೊಳ್ಳುತ್ತದೆ; ಮತ್ತು ಮನಸ್ಸು ಅದರಲ್ಲಿ ಬಣ್ಣ ತುಂಬಿಸುವ ಕಲಾತ್ಮಕ ಕಾರ್ಯವೆಸಗುತ್ತದೆ. ಹೀಗೆ ಒಮ್ಮೆ ಚಿತ್ರಿತಗೊಂಡ ದೃಶ್ಯ ಮರಣಪರ್ಯಂತ ಇದ್ದುದಿದ್ದಂತೆ ಇರುತ್ತದೆ! ಈ ಕಾರಣದಿಂದಲೇ ನಾವೊಮ್ಮೆ ನೋಡಿದುದನ್ನು ಮರಳಿ ಗುರುತಿಸಬಲ್ಲೆವು! ಇಂಥ ಸಹಸ್ರಾರು ಚಿತ್ರಫಲಕಗಳು ಈ ಸಣ್ಣಕಣ್ಣುಗಳಲ್ಲಿ ಜೀವಂತವಿವೆ. ವ್ಯಕ್ತಿಯು ಕಣ್ಣಮುಂದ ಇಲ್ಲದಿದ್ದರೂ ನಮಗೆ ಬೇಕೆನಿಸಿದಾಗ ಮನಃಪಟಲದಲ್ಲಿ ಅವನ ಚಿತ್ರವನ್ನು ತರಲಾಗುವುದಕ್ಕೆ ಈ ಸಂಗ್ರಹವೇ ಕಾರಣ. ವ್ಯ... ... ಆಲಂಕಾರಿಕ ಭಾಷೆ ಹೇಳುವುದು ಇದನ್ನೇ ಅಲ್ಲವೇ?

—ನವನೀತ,

For Protection and Provision Consult

The New Guardian of India Life Insurance Co., Ltd.

Estd] Head office: **MADRAS** [1934

NEW BUSINESS Exceeds	...	66½ Lakhs.
PREMIUM INCOME „	...	15 „
LIFE FUND „	...	54¾ „
ASSETS „	...	60¼ „
BUSINESS IN FORCE Nearly		3 Crores.

A Policy in this Progressive Life Office is good investment; its Agency is valuable business connection.

Applications for Representation are invited from energetic influential persons, with good connection. *Please apply to:*

G. R. Wallia. *Branch Manager,*
Diamond Building, Hampankatta, MANGALORE, S. K.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರಸ್ಥ ವಿಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ವಿಶಾಲ ಸ್ನಾನ, ಊಟ, ಉಪಹಾರ, ಟೈಲೆಟ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರ ವರ್ಗ!

ಮೋಟಾರಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಿಸು, ಇಷ್ಟಾದ ಮಿತ ದರ ಬೇಕಾದರೆ

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ಬಾತುಕೊಳ್ಳುವುದು ಚೇಳುವಿಷ ಮುಂತಾದುವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧಿ.

REDG.

ಹಳು ಕಡ್ಡಿ ... ... ದೊರೆಯುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು ... ...

(೧ನೇ ಪುಟದಿಂದ)

ಚರ್ಚೆಯಲ್ಲಿ ಕಾಲಕಳೆಯುವುದಕ್ಕಿಂತ ಗಾಂಧೀಜಿಯನ್ನು ಮರೆತು ಬಿಟ್ಟಂ ಹೀಗೆ ವ್ಯರ್ಥವಾಗುವ ಸಮಯವನ್ನು ಜೀರಾವುದಾದರೂ ಯೋಗ್ಯ ಕೆಲಸಕ್ಕೆ ಉಪಯೋಗಿಸಬಹುದೆಂದು ತೋರುತ್ತದೆ. ಇದರಿಂದ ನಾವು ಪರಸ್ಪರ ದೋಷಾರೋಪಣೆ, ಜಗಳ, ಸುಲಿಗೆ ಮುಂತಾದವುಗಳಿಂದಲಾದರೂ ಉಳಿದು ಕೊಂಡೇವು.

ನಾವಿಂದು ಮಾಡಬೇಕಾದ ಕಾರ್ಯ ಆಡಂಬರದ ವರ್ತನೆಯಲ್ಲ, ಉದ್ಧಿಷ್ಟ ಭಾಷಣ-ಲೇಖನಗಳೂ ಅಲ್ಲ. ಗಾಂಧೀಜಿಯ ಉಪದೇಶ ಸಾರವನ್ನು ನಾವೆಷ್ಟುತಿಳಿದಿದ್ದೇವೆ ಅವರನ್ನು ತಿಳಿದು ಕೊಳ್ಳುವಲ್ಲಿ ನಾವೆಷ್ಟು ಮಟ್ಟಿಗೆಯವರನ್ನು ಸಂಪಾದಿಸಿದ್ದೇವೆ ಅವರ ಬೋಧನೆಗಳಂತೆ ನಡೆಯಲು ಎಷ್ಟರ ಮಟ್ಟಿಗೆ ಪ್ರಯತ್ನಿಸಿರುತ್ತೇವೆ ಎಂದು ನಾವೆಲ್ಲರೂ ನಮಗೇನೆ ಪ್ರಶ್ನೆಯನ್ನು ಹಾಕಿಕೊಳ್ಳ ತಕ್ಕದ್ದು. ಗಾಂಧೀಜಿಯ ಜೀವನದ ಅರ್ಥ ಮತ್ತು ವ್ಯರ್ಥ ಗೊಳಿಸಿದ್ದೇವೆ. ನಾವು ಅವರಿಂದ ಕಲಿತ ಕಲಿತ ಸಂಗತಿಗಳನ್ನೂ ಮರೆತು. ಅವ್ಯವಸ್ಥೆ ಹಿಡಿಯುವ ಭಯವಿದೆ. ನಮ್ಮದು ಎಂದು ಪ್ರಜಾರಾಜ್ಯದ ನಿರ್ಮಾಣ ಕಾರ್ಯ ಭರದಿಂದ ರೂಪುಗೊಳ್ಳುತ್ತಿದೆ. ನಮಗೆ ರಾಜಕೀಯ ಧ್ಯೇಯವಾಗಿ ರಾಮ ರಾಜ್ಯವನ್ನು ಗಾಂಧೀಜಿ ಮುಂದಿಟ್ಟಿರುವರು. ಸಾಧನಾ ರೂಪದಲ್ಲಿ ಸರ್ವೋದಯ ಮಾರ್ಗವನ್ನು ನಿರ್ದೇಶಿಸಿರುವರು. ನಾವೆಲ್ಲರೂ ಈ ಉಚ್ಚ ಆದರ್ಶಗಳನ್ನು ಮುಟ್ಟುವಲ್ಲಿ ಏನು ಪ್ರಗತಿಯಾಗಿದೆಯೆಂದು ಪರಸ್ಪರ ಪ್ರಶ್ನಿಸಿಕೊಳ್ಳತ್ತೇವೆ. ಇದು ಸರಿಯಾದ ಕ್ರಮವಲ್ಲ. ಪ್ರಶ್ನೆಯನ್ನು ನಮಗೇ ಹಾಕಿಕೊಳ್ಳತಕ್ಕದ್ದಿದೆ. ನಮ್ಮ ಪ್ರಜಾಸತ್ತಾತ್ಮಕ ಸಾರ್ವಭೌಮ ಗಣರಾಜ್ಯದ ಅತ್ಯಂತಿಕವಾದ ಧ್ಯೇಯ ಸರ್ವೋದಯ ಅಥವಾ ಬಹುಜನರ ಏಳಿಗೆ. ಸರಕಾರವೂ ಜನರೂ ಬಹುಜನರ ಕಲ್ಯಾಣವಾಗಬೇಕೆಂದು ಆಡಳಿತವನ್ನು ನಡೆಸುವವರಾಗಬೇಕು. ಕಾಯಿದೆ ಕಾನೂನುಗಳು ಬಹುಜನರ ಹಿತ ಸಾಧಿಸಬೇಕು. ಜನರ ಮನೋಭೂಮಿಕೆಯಲ್ಲೂ ಸರ್ವೋದಯವೆಂಬ ಉನ್ನತ ಆದರ್ಶಕ್ಕೆ ಎಡೆ ದೊರೆತು, ಅದು ಫಲದಾಯಕ ರೀತಿಯಲ್ಲಿ ಪರಿವರ್ತನೆಯನ್ನು ಉಂಟುಮಾಡಬೇಕು.

ವಿನೋಬಾಜೀ ಆರಂಭಿಸಿರುವ ಭೂದಾನ ಚಳುವಳಿಯಾಗಲೀ ಸಾಂಪತ್ತಿಕ ಯಜ್ಞವಾಗಲೀ ಸರ್ವೋದಯ ಮಾರ್ಗದ ಸ್ವಾವಲಂಬನಗಳಾದರೆ ಹೇಗೆ ಅವು ಕೊನೆಯವರಗೂ ನಮ್ಮ ಕೈಬಿಡದು. ನಡೆಸುವಂತಿಲ್ಲ. ಸರ್ವೋದಯ ಸಾಧನೆಯಲ್ಲಿ ಇನ್ನೂ ಅನೇಕಾನೇಕ ಕೆಲಸಗಳು ಬಾಕಿ ಇವೆ. ಖಾದಿ ಗ್ರಾಮೋದ್ಯೋಗಗಳು ಪಂಚಾಯತು ರಾಜ್ಯ, ಮೂಲಶಿಕ್ಷಣ ಇವೇ ಮುಂತಾದ ಪಕ್ಷಾತೀತ ಸಾರ್ವತ್ರಿಕ ವಿಧಾಯಕ ಕಾರ್ಯಗಳು ನಮ್ಮ ಮುಂದಿವೆ. ಸರಕಾರ ಇತ್ತಕಡೆ ಎಷ್ಟು ಗಮನ ಕೊಡಬೇಕೋ ಅಷ್ಟು ಕೊಟ್ಟಿರುವುದಿಲ್ಲವೆಂಬುದು ನಿಜ. ಸರಕಾರವು ಆಕಾಶದ ಗಾಳಿಯನ್ನು ನೋಡಿ, ಪ್ರಜೆಗಳಲ್ಲಿ ಒಬ್ಬೊಬ್ಬನ ಕೈಗೂ ಹಾಲುಮಿಜಿದ ಕೊಡವನ್ನು ಹಿ

ವಾರದ ಒಳಿತು ಕೆಡುಕುಗಳು

ತಾ 12-2-53ರಿಂದ ತಾ. 18-2—53ರ ವರೆಗೆ.

ಮೇಷ—ಈ ವಾರವು ಹಿಂದಿನ ದಿನಗಳಂತಲ್ಲವಾದರೂ ಆಷ್ಟೊಂದು ಹೀನವಾಗಿರದು. ಉದ್ಯಮದಲ್ಲಿ ಮುಂದಿಟ್ಟ ಹೆಜ್ಜೆಯನ್ನು ಹಿಂತೆಗೆಯುವ ಸಂಭವ ಬಾರದ ಹೆಚ್ಚಿನ ಕಾಲವನ್ನು ಮಾರ್ಗತಿಕ್ರಮಣದಲ್ಲಿ ಕಳೆವಿರಿ. ಕಫದೋಷದಿಂದ ಆರೋಗ್ಯಕ್ಕೆ ಹಾನಿಯಿದೆ ಸೇವಕ ಜನತೆಗೆ ಪ್ರಯತ್ನ ತಕ್ಕ ಫಲಲಭಿಸದು. ಬಂಧು ಮಿತ್ರರ ನೆರವು ಬೇಕಾಗಿರುತ್ತದೆಂದ ಹಿಡಿದ ಕಾರ್ಯವು ಕೊನೆಗಾಣುವದು. ಹಣದ ಬಿಕ್ಕಟ್ಟು ಕಾಣಲು. ತಾ. 16 17. ಬಿಟ್ಟುಳಿದ ದಿನಗಳಲ್ಲಿ ಮಿತ್ರ ಭೆಟ್ಟಿಲಾಭದಿಂದ ವಿಜಯಗಳುಂಟಾಗುವವು.

ವೃಷಭ— ಒಮ್ಮೊಮ್ಮೆಗೆ ನಿಮ್ಮ ಜೀವನದಲ್ಲಿ ಹಣದ ಬವಣೆ ದಾಟಿಗಳುಂಟಾಗಲಿವೆ. ಈ ವರೆಗೆ ನಿಮ್ಮ ಶತ್ರುಗಳೆನಿಸಿದ್ದವರು ಕೂಡ ಈಗ ನಿಮ್ಮ ಮಿತ್ರರಾಗಲಿರುವರು ನಿಮ್ಮ ಸಂಕಲ್ಪಗಳೆಲ್ಲವೂ ನಿರ್ವಿಘ್ನದಿಂದ ಕಾರ್ಯರೂಪಕ್ಕೆ ಬರಲಿವೆ. ಹಿಂದಿನ ಸಾಲಗಳಿಂದ ಮುಕ್ತರಾಗಿ ನಿಶ್ಚಿಂತೆಯಿಂದ ಕಾಲಕಳೆವಿರಿ. ಜನರಲ್ಲಿ ಸನ್ಮಾನಗಳೂ ಜಗಳದಲ್ಲಿ ವಿಜಯಶ್ರೀಯೂ ಲಭಿಸಲಿವೆ ತಾ. 14, 15, 16, 17 ಈ ದಿನಗಳು ಅತೀವ ಪ್ರಶಸ್ತಗಳಿವೆ.

ಮಿಥುನ— ಸುತ ಗುಣಗಳನ್ನು ಹೊರತಾಗಿ ನಿಕೃಷ್ಟ ಗ್ರಹಗಳ ಪ್ರತಿಕೂಲದಿಂದಾಗಿ ದುಷ್ಟದಿಂದ ಕಷ್ಟದ ದಿನಗಳು ನಿಮಗೆ ಬಹು

ಹುವ ಕಾಮಧೇನುವಿನಂತಿರಬೇಕಾಗಿ ನಾ ಸಾಧ್ಯ ಜನರ ಅಪೇಕ್ಷೆ ಎಂದು ಕ್ಲೆರೆನ್ಸ್ ಮೆನಿಯನ್ ನಗೆಯಾಡಿರುವನು. ಹೀಗಾಗದೆ ನಾವು ಸ್ವಯಂಪ್ರೇರಣೆಯಿಂದ ರಚನಾತ್ಮಕ ಕಾರ್ಯಗಳಲ್ಲಿ ಧುಮುಕುವದೇ ಶ್ರೇಷ್ಠ ಆದರ್ಶದ ಸಾಧನಾ ಮಾರ್ಗ. ಇದನ್ನು ಎಲ್ಲರೂ ಹೃತ್ಪೂರ್ವಕ ಸ್ವೀಕರಿಸಿ, ನಡೆಯೋಣ!

—ಓಂತತ್ಸತ್॥

ಅಶಕ್ತವಾದವುಗಳಾಗಿ ಕಾಣಿಸಬಹುದು ವ್ಯಾಪಾರ ವ್ಯವಹಾರಗಳಲ್ಲಿ ವ್ಯಥಾ ಕಲಹ ನಿಷ್ಠುರಗಳ ನಷ್ಟವೂ ಸಂಭವಿಸಲಿದೆ. ಲೇವಾದೇವಿ ನಿಮಿತ್ತ ಕೋರ್ಟು ಕಛೇರಿಗೆ ಹೋಗುವ ಪ್ರಸಂಗ ಒದಗಬಹುದು. ಪ್ರವಾಸದಲ್ಲಿ ನಾನಾ ತೆರನಾದ ಕಷ್ಟ ನಷ್ಟಗಳುಂಟಾಗುವವು. ಸತಿಯರ ಆರೋಗ್ಯವು ಕೆಡಲಿದೆ. ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ತುಂಬಾ ವಿಘ್ನಗಳು ಕೊಡದುಗಳುಂಟಾಗುವವು. ವಾರಾಂತ್ಯದ 3 ದಿನಗಳಲ್ಲಿ ಗುರ್ವನುಗ್ರಹದಿಂದ ಕಿಂಚಿತ್ ಸುಖಲಾಭಗಳನ್ನು ಕಾಣುವಿರಿ.

ಕರ್ಕಟ— ಕಳೆದವಾರಕ್ಕಿಂತ ಈ ವಾರವು ನಿಮಗೆ ಸ್ವಲ್ಪ ಉತ್ತಮವೆನಿಸುವದು ಶತ್ರು ಜನರಿಂದ ನಾನಾ ತರದ ಪೀಡೆಗಳು ಸಂಭವಿಸಿದರೂ ಹಿಡಿದ ಕಾರ್ಯವನ್ನು ಕೊನೆ ಮುಟ್ಟಿಸುವಿರಿ. ದಿನನಿತ್ಯದ ಖರ್ಚಿನ ಸಲುವಾಗಿ ಹೆರವರ ಮುಖವನ್ನು ನೋಡುವ ಪ್ರಸಂಗ ಬರಲಾರದು. ಮನಸ್ಸಿನ ಚಂಚಲದಿಂದಾಗಿ ಹೊಸದಾದ ಯಾವ ಕಾರ್ಯವನ್ನೂ ಕೈಗೊಳ್ಳಲಾರಿರಿ. ಪಿತ್ತದೋಷದಿಂದ ದೇಹದಲ್ಲಿ ನಿಶ್ಶಕ್ತಿ ಸ್ಥಿತಿಗಳು ಕಾಣುವವು. ತಾ. 12, 13, 18. ಈದಿನಗಳಲ್ಲಿ ಹೆಚ್ಚಿನ ನಿಮ್ಮ ಬಯಕೆಗಳು ಸಿದ್ಧಿಸುವವು.

ಸಿಂಹ— ಸುಖ ಸಂತೋಷದಿಂದ ವಿಹಾರಕ್ಕೆ ಸಿದ್ಧ ನಿಮಗೆ ಒಂದೊಮ್ಮೆಗೇ ಹಲವಾರು ಶಿಕ್ಷೆ ತಾಪಗಳು ಬಂದು ಆವರಿಸಲಿವೆ ಶತ್ರು ಜನರ ಕಾಟಕ್ಕೆ ಸಿಲುಕಿ ಕಷ್ಟ ನಷ್ಟ ಮಾನಚ್ಯುತಿಗಳನ್ನು ಹೊಂದುವ ಪ್ರಸಂಗ ಬರಬಹುದು. ಪ್ರತೀಕಾರ ಸಮರ್ಥರಾದ ನೀವು ಯಾವ ಕಾರ್ಯವನ್ನೂ ಕೊನೆಗಾಣಿಸದೆ ಬಿಡಲಾರಿರಿ. ಹಣದ ಬಿಕ್ಕಟ್ಟು ಬಂದರು ಜನತೆಯ ಬೆಂಬಲವೂ ಸಾಕಷ್ಟಿರುವುದರಿಂದ ವಾರಾದಿಯ 4 ದಿನಗಳಲ್ಲಿ ನಿಮ್ಮ ಇಷ್ಟಾರ್ಥಗಳು ಕೈಗೂಡುವವು

ಕನ್ಯಾ— ಕಾಲವು ವಿಶೇಷ ಪ್ರತಿಕೂಲವಿದೆ. ನಿಮ್ಮ ಯತ್ನಗಳೂ ನೀರಲ್ಲಿ ಗೈದ ಹೋಮದಂತೆ ವಿಫಲಗಳಾಗುವವು. ಶತ್ರುಕೃತ ಅಪಚಾರದಿಂದ ಅಸಹ್ಯ ದುಃಖಕ್ಕೀಡಾಗುವಿರಿ ಆದಾಯವು ಅಲ್ಪವಾಗಿದ್ದು ಖರ್ಚು ಅತ್ಯಧಿಕವಾಗುವುದರಿಂದ ಸಿಕ್ಕಸಿಕ್ಕವರೊಡನೆ ಸಾಲ ಕಡಗಳನ್ನು ಮಾಡುವ ಪ್ರಸಂಗ ಬರುವದು. ಮನೆಯಲ್ಲಿ ಪರಸ್ಪರ ಕಲಹ ಕಚ್ಚಾಟಗಳು ಹೆಚ್ಚುವವು ಸ್ತ್ರೀನಿಮಿತ್ತವಾದ ಅನಿಷ್ಟ ಅಪವಾದಗಳು ಪ್ರಾಪ್ತವಾಗಲಿವೆ. ತಾ 14, 15, 16, 17, ಇಷ್ಟರಲ್ಲಿ ಉತ್ತಮ ದಿನಗಳು.

ತುಲಾ— ಕೈ ಕೆಸರಾದರೆ ಬಾಯಿ ಮೊಸರಾಗುತ್ತೆಂಬ ಮಾತನ್ನು ನೆನಪಿನಲ್ಲಿಡಿರಿ. ನಿಮ್ಮ ಪೌರುಷಕ್ಕೆ ದೈವವೂ ಕೂಡ ಅನುಕೂಲವಿದ್ದುದರಿಂದ ನಿರೀಕ್ಷೆಗಿಂತಲೂ ಹೆಚ್ಚಿನ ಧನಲಾಭವಾಗಲಿರುವುದು. ರಾಜಕೀಯ ಸಾಮಾಜಿಕ ಕ್ಷೇತ್ರಗಳಲ್ಲಿ ನಿಮ್ಮ ಬಯಕೆಯಂತೆ ಫಲಸಿದ್ಧಿಸಲಿದೆ. ಆಪ್ತಜನರ ವಿರಹ ಎಷ್ಟಾಗಿಗಳ ಭಯ ವಿರೋಧಿಗಳ ಪೀಡೆಗಳು ಕಾಣಲಿವೆ.

ವೃಶ್ಚಿಕ—ವಿಪತ್ಪರಂಪರೆಗಳು ಸಮುದ್ರದಲೆಗಳಂತೆ ಮೇಲಿಂದ ಮೇಲೆ ಬರಲಿವೆ ದುಡಿಮೆಯು ದ್ವಿಗುಣವಾದಾಗಲೂ ಎಂದಿಗಿಂತ ಹಣದ ಬಿಕ್ಕಟ್ಟು ಹೆಚ್ಚುವದು. ಗುರುಹಿರಿಯರ ಮನಸ್ತಾಪ ಬಂಧುಜನರ ವಿರಹಗಳಿಂದ ವ್ಯಸನಾಕ್ರಾಂತರಾದ ನಿಮಗೆ ಬಾಲ್ಯಮಿತ್ರರ ಸಹಕಾರದಿಂದಾಗಿ ಸುಖನೆಮ್ಮದಿಗಳು ಲಭಿಸುವವು ವ್ಯಾಪಾರೀ ವೃಂದಕ್ಕೆ ವಾರವು ಉತ್ತಮವಿರುವದು ತಾ 12, 13 18, ರಲ್ಲಿ ಕೊಂಚ ಆರ್ಥಿಕ ಚೇತರಿಕೆ ಲಕ್ಷಣಗಳು ಕಾಣಿಸುವವು

ಧನು— ದೈವಾನುಗ್ರಹ ಸಂಪನ್ನರಾದ ನಿಮಗೆ ಉದ್ಯೋಗದಲ್ಲಿ ಪ್ರಗತಿಯೂ ವ್ಯಾಪಾರ ವ್ಯವಹಾರಗಳಲ್ಲಿ ಉತ್ತಮ ಧನಪ್ರಾಪ್ತಿಯೂ ಉಂಟಾಗಲಿದೆ. ಧನ ಧಾನ್ಯಸಂಪನ್ನರಾದ ನಿಮಗೆ ಸಂಸಾರಿಕ ತಾಪತ್ರಯಗಳು ದೂರವಾಗುವವು. ಶತ್ರು ಜನರನ್ನು ಪರಾಭವಗೊಳಿಸುವಿರಿ. ಜನತೆಯ ಮಾನ್ಯತೆ ಗಳಿಗೆ ಪಾತ್ರರಾದ ನಿಮಗೆ ಲೇಖನ ವ್ಯವಸಾಯ ನೌಕರಿ ಸೇವಾವೃತ್ತಿ ವ್ಯಾಪಾರಾದಿಗಳಲ್ಲಿ ಶ್ರೇಯಸ್ಸಿದೆ. ಕೆಲವೊಮ್ಮೆ ಜನ ಬಲಿಗೆ ತುತ್ತಾಗುವ ಸಂಭವವಿದೆ ತಾ. 14, 15 ರಲ್ಲಿ ಬಾಧೆಗೊಳಗಾಗಲಿರಿ.

ಮಕರ—ಕರ್ಮ ಲಾಭಪತಿಗಳಿಂದು ಉತ್ತಮ ಸ್ಥಾನಗತರಿರುವುದರಿಂದ ನೀವೀ ವಾರದಲ್ಲಿ ಪರಿಶ್ರಮಕ್ಕೆ ತಕ್ಕದಾದ ಫಲವನ್ನು ಪಡೆಯಲಿರುವಿರಿ ಆದರೆ ನಿಮ್ಮ ಮನಸ್ಸು ಕ್ಷಣಿಕವಾಗಿ ಸ್ಥಿರವಾಗಿ ನಿಲ್ಲದು ಮಾತ್ರವಲ್ಲ ಅವಮಾನದ ಭಯ ನಿಮ್ಮನ್ನು ಸೆಳೆಯುವುದು. ಬಂಧುವರ್ಗದವರ ಕೂಡ ಕಲಹವಾದೀತು. ಹಚ್ಚೇಕೆ ಮಾತು ಮಾತಿಗೆ ಕಲಹವೆದ್ದು ಹೆಟ್ಟವರೊಡನೆ ಜಗಳವಾಡುವಿರಿ, ಚಂಚಲವಾದ ನಿಮ್ಮ ಮನಸ್ಸು ಆಪ್ತ ಮಿತ್ರರಲ್ಲೂ ವಿಶ್ವಾಸವಿಡದು. ವಾರಾದಿಯ 5 ದಿನಗಳು ಇದ್ದುದರಲ್ಲಿ ಉತ್ತಮವಿದೆ.

ಕುಂಭ— ನಿಮ್ಮ ಧನ ಸ್ಥಾನದಲ್ಲಿ ರತಿಕ ಸುಖಭಾಗ್ಯಗಳ ಪತಿಯಾದ ಉಚ್ಚ ಶುಕ್ರನೊಬ್ಬನ ಹೊರತು ಉಳಿದ ಎಲ್ಲಾ ಗ್ರಹರೂ ಪ್ರತಿಕೂಲರಾಗಿರುವರು. ಆದ್ದರಿಂದ ಎಷ್ಟೋ ಕಷ್ಟನಷ್ಟಗಳು ಪ್ರಾಪ್ತವಾದರೂ ನಿಮಗೆ ಆರ್ಥಿಕ ಬಿಕ್ಕಟ್ಟು ಬಾರದು. ಮನಸ್ಸಿಗೆ ಖೇದವೂ ಉಂಟಾಗದು. ಹೆಚ್ಚಿನ ಕಾರ್ಯಗಳು ವಿಫಲಗಳಾಗುವವು ಆರೋಗ್ಯವು ಕೆಡಲಿದೆ, ಬಂಧುಗಳಿಂದಲೂ ಗುರುಹಿರಿಯರಲ್ಲೂ ಮನಸ್ತಾಪವುಂಟಾದೀತು. ಹೆಚ್ಚಿನ ಕಾಲವನ್ನು ಮಾರ್ಗದಲ್ಲೇ ಕಳೆವಿರಿ. ಶ್ರಮಜೀವಿಗಳಿಗೂ ಲೇಖಕ ನೌಕರಿ ವರ್ಗದವರಿಗೂ ದಿನಂಪ್ರತಿ ಬವಣೆಯು ದುಸ್ತರವಾದೀತು. ವಾರಾಂತ್ಯದ 3 ದಿನಗಳಲ್ಲಿ ವೈಲ್ಯಾಣವ ಅನಿಷ್ಟಗಳು ಕೊಂಚ ಕಡಿಮೆಯಾಗಲಿವೆ

ಮೀನ— ಜನ್ಮದಲ್ಲಿರತಕ್ಕ ಅಂಗಾರಕನೂ ಅಷ್ಟಮದಲ್ಲಿರುವ ಶನಿಯೂ ಕೂಡ ಪ್ರಕೃತ ನಿಮಗೆ ಅನಾರೋಗ್ಯ ಧನಹಾನಿ ಪ್ರವಾಸಾದಿ ಅನಿಷ್ಟಗಳನ್ನುಂಟು ಮಾಡಲಿರುವರಾದರೂ ಇತರ ಎಲ್ಲಾ ಗ್ರಹರೂ ಅನುಕೂಲವಾಗಿದ್ದ ಕಾರಣ ನೀವೇನೂ ಚಿಂತಿಸಬೇಕಾಗಿಲ್ಲ. [illegible] ದಿನಗಳು ಕೊಡುವ [illegible] ಉಯಕ್ಕುಂತೆ ಅಡೆತಡೆ ಆರ್ಥಿಕ ಭಾಗವು ಉತ್ತಮ ಸ್ಥಿತಿಗೆ ಬಂದೀತು. ಜನತೆಯ ಬೆಂಬಲ ಸಾಕಷ್ಟಿದ್ದ ಕಾರಣ ಶತ್ರುಜನರೂ ಕೂಡ ಇದಿರಿಗೆ ಬರಲಾರರು ಗೃಹಕೃತ್ಯಗಳೆಲ್ಲವೂ ಸಾಂಗವಾಗಲಿರುವವು. ವಾರಾದಿಯ 2 ದಿನಗಳಲ್ಲಿ ವಿಜಯ ಭೋಗಲಾಭಗಳು ಅತೀವ ಉತ್ತಮ ಸ್ಥಿತಿಯಲ್ಲಿ ಲಭಿಸುವವು

ಲಕ್ಷಾಂತರ ಜನರು ಗುಣಹೊಂದಿದ್ದಾರೆ!

ಸರ್ ಜೀವನ್ ಶಿಲಾಜಿತ್ ಲೇಹ

ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗಗಳಿಗಾಗಿ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರು ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ [illegible] ವ ಮುದುಕರಿಗೂ ಸರ್ವರಿಗೂ ಅನುಕೂಲವುಂಟು.

(೪೫ ದಿನದ ಲೇಹ್ಯ ರೂ ೫/೪, ೨೨ ದಿನದ ಲೇಹ್ಯ ರೂ ೩/೪ ಪೋಸ್ಟು ಖರ್ಚು ಮಾಫ)

ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ

ನವಜೀವಾತು

ಎಂಬ

ಸೂತಿಕಾರಸಾಯನ

ಬಾಣಂತಿಯರ ಸಬಿನಾಗಿಯೇ ದೇಹ ಮತ್ತು ಪ್ರಕೃತದ ದೇಹ ಸ್ಥಿತಿಯನ್ನುಸರಿಸಿ ತಯಾರಿಸ ಲ್ಪಟ್ಟತಿಪೋಷಣಾದ ದ ರುರಪ್ರವರಸಾಯನ.



ಪೆಟ್ಟಿನ ಮಾಹಿತಿಗೆ— ಡಾ| ರಾಮ ಸಿ. ಶಾಸ್ತ್ರೀ, ಯಲ್. ಐ. ಎಂ. ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ನಿವ್ವಿಶಿಷ್ಟರು — ಡಾ| ವಿ. ಕೆ. ಶಿವರಾಮರಾವ್. ಕುಂಜಿಬೆಟ್ಟು.

Edited, Printed & Published By K. H. Shetty at the Navayuga Press, Udipi, S. India.

Regd. No. M. 8818 | LICENCE NO. 31
Licensed to Post without Prepayment

19-2-1953

Estd. 1921 ಸ್ಥಾಪನೆ.
32ನೆಯ ವರ್ಷ

Founder: Sri A. B. Shetty,
Minister for Medical & Public Health

ನವಯುಗ
ಆರೋಗ್ಯ ಮಂತ್ರಿ
ಶ್ರೀ. ಎ. ಬಿ. ಶೆಟ್ಟರಿಂದ
ಸ್ಥಾಪಿತವಾದ ವಾರಪತ್ರಿಕೆ,
ಉಡುಪಿ, ದ. ಕನ್ನಡ

ವಾ| ಚಂದಾ 5-12-0
6 ತಿಂಗಳಿಗೆ 3-0-0
ಬಿಡಿ ಪ್ರತಿಗೆ 0-2-0

ನವಯುಗ

ಅಂತರಂಗ
ಪುಸ್ತಕ ಪತ್ರಿಕೆಯ
ಉಪಯುಕ್ತವಾದ
86 ಪುಸ್ತಕಗಳು
ರೂ. 20ಕ್ಕೆ ಸಿಗುತ್ತವೆ.
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ

Vol 32
No 24

NAVAYUGA WEEKLY POST BOX NO 22 UDIPI

ವರ್ಷ ೩.
ವಾರ ೨.

ಮಧುಪರ್ಕ

ಹಿರಿಯ ಅನುಭವಿಯಾದ ವೃದ್ಧ ವ್ಯಾಪಾರಿ ತನ್ನ ಮಗನನ್ನು ಕರೆದು "ಮಗನೇ, ನೀನು ಎರಡು ವಿಶಿಷ್ಟ ಗುಣಗಳನ್ನು ನಿನ್ನಲ್ಲಿ ವಿಕಸಿತಗೊಳಿಸಿ ನಿತ್ಯವ್ಯವಹಾರದಲ್ಲಿ ಅವುಗಳನ್ನು ಸಾಕಾರಗೊಳಿಸದಿದ್ದ ಪಕ್ಷದಲ್ಲಿ, ವ್ಯಾಪಾರ ವ್ಯವಹಾರದಲ್ಲಿ ನಿನಗೆ ಯಶಸ್ಸು ದೊರೆಯಲಾರದು' ಎಂದು ಉಪದೇಶಿಸಿದರು

"ಅಪ್ಪಾ, ಆ ಎರಡು ಗುಣಗಳೇನೆಂಬುದನ್ನು ವಿವರಿಸಿದರೆ, ನಾನು ಸರ್ವ ಶಕ್ತಿಯಿಂದಲೂ ಅವನ್ನು ಬೆಳೆಸಲಿಕ್ಕೆ ಪ್ರಯತ್ನಿಸುವೆನು" ಎಂದು ಮಗನು ಕುತೂಹಲದಿಂದ ಭರವಸೆ ಕೊಟ್ಟ

"ಒಂದನೆಯದಾಗಿ ಪ್ರಾಮಾಣಿಕತೆ, ಎರಡನೆಯದು ಚಾತುರ್ಯ. ಸಫಲತೆಯ ಗಾಡಿಗೆ ಇವೆರಡು ಚಕ್ರಗಳಿದ್ದಂತೆ!"

"ಪ್ರಾಮಾಣಿಕತೆ ಮತ್ತು ಚಾತುರ್ಯ ಎಂದರೇನು, ಅಪ್ಪಾ?"

'ತನ್ನ ವಚನಗಳನ್ನು ಯಾವಾಗಲೂ ಪೂರೈಸುವುದೇ ಪ್ರಾಮಾಣಿಕತೆ - ಎಷ್ಟು ಕಷ್ಟ ಬಂದರೂ ನಷ್ಟ ಬಂದರೂ ಕೊಟ್ಟ ಮಾತನ್ನು ನಡೆಸಿ ಕೊಡತಕ್ಕದ್ದು. ಇನ್ನು ಚಾತುರ್ಯ ಎಂದರೆ, ಯಾರಿಗೂ ಎಂದಿಗೂ ವಚನವನ್ನು ನೀಡದಿರುವುದು"

ವಿರೋಧಾಭಾಸ

ನಮ್ಮಲ್ಲಿ ಪರಸ್ಪರ ವಿನೋದವಾಡಿಕೊಳ್ಳುವಾಗ- "ಹರಿದಾಸರು ಹೇಳಿದಂತೆ ಮಾಡಬೇಕೇ ಹೊರತು, ಮಾಡಿದಂತೆ ಮಾಡಹೋಗುವುದಲ್ಲ-" ಎಂದೆನ್ನುತ್ತೇವೆ. ಹರಿದಾಸರು ತುಂಬಿದ ಸಭೆಯಲ್ಲಿ ಉಪದೇಶಿಸುವ ಮಾತುಗಳಿಗೂ ಅವರ ನಿತ್ಯಜೀವನದ ವ್ಯವಹಾರಕ್ಕೂ ಅಂತರವಿದೆ ಎಂಬುದನ್ನು ಮಾರ್ಮಿಕವಾಗಿ ಸೂಚಿಸುವುದು ಇಲ್ಲಿ ನಮ್ಮ ಉದ್ದೇಶವಾಗಿರುತ್ತದೆ. ನಮ್ಮ ಮುಂದಾಳುಗಳೆನಿಸಿದವರಿಂದ ತೊಡಗಿ, ನಾಳಿನ ಮುಂದಾಳುಗಳಾಗಬೇಕೆಂದಿರುವವರೆಲ್ಲರ ವರೆಗೂ ದೃಷ್ಟಿಕ್ಷೇಪ ಮಾಡಿದಲ್ಲಿ-ಅವರು ಪರೋಪದೇಶ ಪಾಂಡಿತ್ಯವನ್ನು ಪ್ರದರ್ಶಿಸುವುದರಲ್ಲಿಯೇ ಅಗ್ರಗಣ್ಯರೆಂದು ಸ್ವಯಂವೇದ್ಯವಾಗುತ್ತದೆ. ಸ್ವಂತ ನಡೆನುಡಿಗಳನ್ನು ಒಮ್ಮುಖವಾಗಿಡುವ ಹವ್ಯಾಸಕ್ಕೆ ಅವರು ಹೋಗದೆ, ತಮ್ಮ ಅನುಯಾಯಿಗಳೆನಿಸುವವರ ಬಗ್ಗೆ ಮಾತ್ರ ಅಪಮಾನ ಜನಕ ಮಾತುಗಳಿಂದ ಜರೆಯುತ್ತಿರುವರು. ನಮ್ಮ ಧುರೀಣರ ಮತದಂತೆ, ಪ್ರಕೃತ ಎಲ್ಲೆಡೆಯಲ್ಲಿಯೂ ಭ್ರಷ್ಟಾಚಾರ, ಆಲಸ್ಯ, ಹೇಣಿ ಹಾರಿಸಿಕೊಳ್ಳುವ ಪ್ರವೃತ್ತಿ, ಅಕ್ಷಮತೆ, ಅಸತ್ಯ, ಕಲಸಗಳ್ಳತನ ಇವೇ ಮುಂತಾದ ದುಷ್ಟ ಚಟಗಳು ತಾವೇ ತಾವಾಗಿ ಮೆರೆಯುತ್ತವೆ, ಮತ್ತು ನಮ್ಮನ್ನು ನೈತಿಕ ಸಂಕಟದ ಉತ್ಕಟ ಪರಿಸ್ಥಿತಿಯಲ್ಲಿ ನೂಕಿವೆ. ನಮ್ಮ ಲೋಪದೋಷಗಳೂ ನ್ಯೂನಾತಿರೇಕಗಳೂ ಬಹಳವಾಗಿವೆಯೆಂದು ಹೇಳಿ, ನಮಗೆ ಬುದ್ಧಿ ಹೇಳುವುದರಲ್ಲಿಯೇ ಪುರುಷಾರ್ಥವನ್ನು ಕಂಡ ಮುಖಂಡರೇ ಹಜ್ಜೆ. ಆದರೆ ಒಳ್ಳೆಯ ಉದ್ದೇಶವನ್ನಿಟ್ಟುಕೊಂಡು ಮಾಡುವ ಉಪದೇಶದಲ್ಲಿಯೂ ಅಹಂಮನ್ಯತೆಯು ತಾನೇ ತಾನಾಗಿ ಮೆರೆಯುತ್ತಿರುವಾಗ ಅದು ವ್ಯರ್ಥವೆನಿಸುತ್ತದೆ. ಅಭಿನವ ಸೂತ ಪುರಾಣಿಕರಂತೆ ನೀತಿ ಪಾಠವನ್ನು ನುರುವುದರಿಂದ ಸಮಾಜದ ನೈತಿಕ ಮಟ್ಟವನ್ನು ಮೇಲೆತ್ತುವುದು ಸಾಧ್ಯವಿಲ್ಲ

ನಾವಿಷ್ಟು ಮಂದಿ ರಾಮರಾಜ್ಯದ ಒಗ್ಗ ದಿನ ಬೆಳಗಾದರೆ ಚರ್ಚೆಯನ್ನು ಮಾಡುತ್ತೇವೆ. ಗಾಂಧೀಜಿ ನಮ್ಮ ಮುಂದಿಟ್ಟ ಆದರ್ಶ ಕಲ್ಪನೆ ಇದು ಎಂಬುದಾಗಿ ಕೂಚ್ಚಿಕೊಳ್ಳುತ್ತೇವೆ. ಜನತಾಹಿತವನ್ನು ಧ್ಯೇಯವಾಗುಳ್ಳ ಸರಕಾರ ಕೂಡ ತನ್ನ ಕೈಲಾದಷ್ಟು ಪ್ರಯತ್ನವನ್ನು ಮಾಡುತ್ತಾ ಕಲ್ಯಾಣ ರಾಷ್ಟ್ರವೆಂಬ ಅಭಿದಾನಕ್ಕೆ ಅರ್ಹವೆನಿಸಲು ನೋಡುತ್ತದೆ. ಆದರೆ ನಮ್ಮಲ್ಲಿ ಪ್ರತಿಯೊಬ್ಬನೂ ಸಮಾಜಸೇವೆ,ರಾಷ್ಟ್ರೋದ್ಧಾರ ಮುಂತಾದಲ್ಲ ಸಂಗತಿಗಳಲ್ಲಿಯೂ ಸ್ವಾರ್ಥದ ಸಂಕುಚಿತ ಬುದ್ಧಿಯನ್ನು ಮುಚ್ಚಿಟ್ಟಿರುತ್ತೇವೆ. ಮತ್ತು ಸ್ವಾರ್ಥ ಲಾಲಸೆಗೆ ಪಟ್ಟು ಬೀಳುವ ಪ್ರಸಂಗ ಉದ್ಭವಗೊಂಡಾಕ್ಷಣ ತನ್ನ ನಗ್ನ ಸ್ವರೂಪವನ್ನು ತೋರಿ, ಸ್ವಾರ್ಥ ತಾಂಡವಗೈಯುತ್ತದೆ. ಈ ಸ್ವಾರ್ಥವನ್ನು ಸಂಯಮದಿಂದ ಕಲಿಮುಷ್ಟಿಗೆ ನಿಯಂತ್ರಣ [illegible] ಹಿಡಿ. ಸಮಾಜದ ಬಹುಜನರ ನಡುವೆ ಅನ್ಯೋನ್ಯ ಸಂಬಂಧವನ್ನು ಬೆಳೆಸಿಕೊಂಡು ಸುಖ ದುಃಖಗಳಲ್ಲಿ ಸಹಭಾಗಿಗಳಾಗಿ ಜನರ ಮನದೊಲವನ್ನು ಹಿಡಿದುಕೊಳ್ಳುವಷ್ಟರ ಮಟ್ಟಿನ ಯೋಗ್ಯತೆಯಿದ್ದಲ್ಲಿ ಮಾತ್ರ, ಮನೋಭಾವನೆ ಮಾರ್ಪಾಡುಗೊಂಡು ಸ್ವಾರ್ಥದ ಕಿಚ್ಚು ತಣ್ಣಗಾದೀತು.

ನಮ್ಮ ಜನರಿಗೆ ಕೇವಲ ನೀತಿಯ ಉಪದೇಶವನ್ನು ನೀಡಿದರೆ ಫಲವಾಗದು- ಏಕೆಂದರೆ, ಉತ್ತಮ ಗುಣಶೀಲಗಳೂ ಆಚಾರ ವಿಚಾರಗಳೂ ವ್ಯಕ್ತಿಯ ಸ್ವಪ್ರಯತ್ನದಿಂದ ಸಂಪಾದಿಸಿ [illegible] ಬೆಳೆಸಿಕೊಳ್ಳತಕ್ಕ [illegible] ನಿಧಿಯಾಗಿರುತ್ತದೆ. ಬಾಹ್ಯ ವಾತಾವರಣವು ನಮ್ಮ ಗುಣಶೀಲಗಳನ್ನು ರೂಪಿಸುವಲ್ಲಿ ಪ್ರಭಾವವನ್ನು ಬೀರಬಲ್ಲುದಾದರೂ ವ್ಯಕ್ತಿಯ ಸ್ವಂತ ಪ್ರತಿಭೆ, ಆತ್ಮ ವಿಶ್ವಾಸ ಮತ್ತು ಧ್ಯೇಯದ ಕಲ್ಪನೆ ಮುಂತಾದವುಗಳೇ ನೀತಿಯ ತಳಹದಿಯನ್ನು ಹಾಕುತ್ತವೆ. ಮನುಷ್ಯನು ತನ್ನ ಜನ್ಮತಃ ಹಾಗೂ ಸೌಂದರ್ಯಗಳಿಂದ ದೃಷ್ಟಿಯನ್ನು [illegible] ಉನ್ನತ ಧ್ಯೇಯವೊಂದನ್ನು ಇಟ್ಟುಕೊಂಡರೆ [illegible] ದು ಉತ್ಕೃಷ್ಟ ವಿಕಾಸ [illegible] ಸ್ವಾರ್ಥ ಲಾಲಸೆಯ ದಗ್ಧ ವ್ಯಕ್ತಿ ಅದನ್ನು ಅತಿಕ್ರಮಿಸಿ ಮೇಲೇರುತ್ತಾನೆ. ಹಾಗೆಂದು ಇದ್ದದಿದ್ದಂತೆ ನೀಚ ಸ್ವಭಾವವನ್ನು [illegible] ಎಂದೊಬ್ಬನಿಗ ಹೇಳುವುದು, ಸ್ವಾಭಾವಿಕವಾದ ಹೀನ ಪ್ರವೃತ್ತಿಗಳನ್ನು ಉದಾತ್ತೀಕರಿಸಬೇಕೆಂದು ಅವನಿಗೆ ಉಪದೇಶಿಸುವುದೂ ನಿನ್ನೆ ಹಗಲು ಹೇಳಿ ನಿನ್ನನ್ನು ಹೊಡೆದು ಕೋ ಎಂದಂತೆಯೇ

ಭಾರತದ ಮಟ್ಟಿಗೆ ಧರ್ಮವು ಇಂಥದೊಂದು ಆದರ್ಶವನ್ನು ಕಲ್ಪಿಸಿ ಕೊಟ್ಟಿದೆ. ಪ್ರಾಚೀನ ಕಾಲದಿಂದಲೂ ಧರ್ಮವೇ ತಳಹದಿಯಾಗಿರುವ ಸಂಸ್ಕೃತಿ ನಮ್ಮ ಜನರನ್ನು ಏಕ ಸೂತ್ರದಲ್ಲಿ ಬಂಧಿಸಿದೆ. ಜೀವಂತ ಪೂರ್ಣವಾದ ಸಂಸ್ಕೃತಿಯ ಒಂದಂಗವಾಗಿ ಧರ್ಮವಿದೆ ಎಂಬುದೇ [illegible] ರೂ ಅದು ಅನಾದಿಯಾಗಿದ್ದುದರಿಂದ ನಮ್ಮ ಜೀವನ ವಿಧಾನವಾಗಲೀ ಆಚಾರ ವಿಚಾರಗಳಾಗಲೀ ಚಟುವಟಿಕೆ ಕಾರ್ಯಗಳಾಗಲೀ ಸಾಹಿತ್ಯ ಸಂಗೀತಗಳಾಗಲೀ [illegible] ಎಲ್ಲವೂ ಧರ್ಮದ ಕಕ್ಷೆಯನ್ನು [illegible] ನಿಸ್ಪ್ರುತಿ ರವಿಲ. ಆದರೆ ಭಾರತ ಸಂವಿಧಾನವನ್ನು ನಿಷ್ಠೆಯಿಂದ ಸ್ವೀಕರಿಸಿರುವ ನಾವು ಜಾತ್ಯತೀತ ರಾಷ್ಟ್ರವೆಂದು [illegible] ಪಟ್ಟುಕೊಳ್ಳುತ್ತೇವೆ. ನಮ್ಮಲ್ಲಿ ಬಹಳ ಜನರು ಧರ್ಮವೆಂಬುದು ಸ್ಮಶಾನದ ಒ ದ್ದಿಯೆಂದು ವಿನಿಸಿದ ಮಹಾ ಮೋಸವೆಂದು ಭಾವಿಸಿದ್ದು ಅದರ ಹೆಸರನ್ನು ಸುಸಂಸ್ಕೃತ ಸಮಾಜದಲ್ಲಿ ಉಚ್ಚರಿಸುವುದೂ ಅಸಭ್ಯಾಚಾರ ವಿರುದ್ಧವೆಂದು ತಿಳಿದುಕೊಂಡಿದ್ದೇವೆ. ಹಾಗೆಂದು ಗಾಂಧೀಜಿಯು ನುಡಿದಂತೆ —ಧರ್ಮವಿಲ್ಲದ ರಾಜಕಾರಣ ಕೇವಲ ಶೋಷಣ.

ಆಧ್ಯಾತ್ಮಿಕ ಪುನರುಜ್ಜೀವನದ ಅಗತ್ಯ [illegible] ಕಲ್ಯಾಣಕ್ಕೆ ಉದಾರಚರಿತರ [illegible] ಒಂದು ವಿಶಿಷ್ಟ ತತ್ವಜ್ಞಾನದ ಅಗತ್ಯ [illegible] ಗ ಇಂದ ತತ್ವಜ್ಞಾನವೇ [illegible] ಮತ್ತು ನಮ್ಮ [illegible] ಸುಧರಿಸುವುದರಲ್ಲಿಯೇ ಹಿತವಿದೆ [illegible]

(ಮುಂದೆ ೩ನೇ ಪುಟಕ್ಕೆ)

[illegible] ತಾ. 14ರಂದು ಕುಂದಾಪುರದಲ್ಲಿ ಜರಗಿದ ದ. ಕ. ಜಿ. ಕೃ. ಪ್ರದರ್ಶನದಲ್ಲಿ [illegible] ಪಾರಿತೋಷಕಗಳನ್ನು ವಿತರಣೆ ಮಾಡಿದ

ಮದ್ರಾಸಿನ ಕೃಷಿ ಮಂತ್ರಿ ಡಾ. ಆರ್. ನಾಗಣ್ಣ ಗೌಡರು.

ವರುಣ ದೇವರ ವರದಾನ

ಮತ್ಸ್ಯ ವ್ಯವಸಾಯವನ್ನು ಅಭಿವೃದ್ಧಿಗೊಳಿಸುವ ಪ್ರಯತ್ನ

ಭಾರತವು ಇದಿರಿಸುತ್ತಿರುವ ಸಮಸ್ಯೆಗಳಲ್ಲಿ ಆಹಾರ ಪ್ರಾಮುಖ್ಯವಾದುದೆಂಬ ಸಂಗತಿ ಸರ್ವಶ್ರುತವಿದೆ. ಅಧಿಕ ಆಹಾರ ಬೆಳೆಯುವ ಚಳುವಳಿಯನ್ನು ತೊಡಗಿರುವ ನಾವು ಕೇವಲ ನೆಲದ ಮೇಲೆ ಉತ್ಪಾದಿಸ ಬಹುದಾದುದನ್ನು ಮಾತ್ರ ಗಮನದಲ್ಲಿ ಇಟ್ಟಂತಿದೆ. ಭಾರತಕ್ಕೆ ಸುಮಾರು ನಾಲ್ಕು ಸಾವಿರ ಮೈಲುಗಳಷ್ಟು ಉದ್ದದ ಕರಾವಳಿ ಪ್ರದೇಶವಿದೆ ಮತ್ತು ಇವಕ್ಕೆ ಹೊಂದಿಕೊಂಡಿರುವ ಅರಬೀ ಸಮುದ್ರ ಮತ್ತು ಬಂಗಾಳ ಕೊಲ್ಲಿಯಲ್ಲಿ ಮತ್ಸ್ಯವ್ಯವಸಾಯವನ್ನು ಅಭಿವೃದ್ಧಿಗೊಳಿಸಲಿಕ್ಕೆ ಬಹಳ ಅವಕಾಶವಿದೆ ಎಂಬುದನ್ನು ನಾವಿನ್ನೂ ಗಂಭೀರವಾಗಿ ವಿಚಾರಿಸಲು ತೊಡಗಿಲ್ಲ. ನಮ್ಮ ಜನ ಸಂಖ್ಯೆಯಲ್ಲಿ ಮುಕ್ಕಾಲಂಶ ತಮ್ಮ ಆಹಾರವಾಗಿ ಮೀನು ತೆಗೆದುಕೊಳ್ಳುತ್ತಿರುವರಾದರೂ ವರ್ಷಕ್ಕೆ ತಲಾ ಒಂದರ ಮೂರುವರೆ ಔನ್ಸುಗಳಷ್ಟು ಡಿಮೆ ಈ ಪ್ರಮಾಣವಿದೆ ಎಂದು ಯೋಜನಾ ಆಯೋಗ ಹೇಳುತ್ತದೆ. ಆದುದರಿಂದ ಪಂಚವಾರ್ಷಿಕ ಯೋಜನೆಯಲ್ಲಿ ಮತ್ಸ್ಯೋತ್ಪಾದನೆಯನ್ನು ಹೆಚ್ಚು ಜನಪ್ರಿಯವೆನಿಸುವ ರೀತಿಯಲ್ಲಿ ಪ್ರಯತ್ನಗಳನ್ನು ಮಾಡತಕ್ಕುದೆಂದು ಅಮೂಲ್ಯ ಸಲಹೆಗಳನ್ನು ಮಾಡಲಾಗಿದೆ. ಈ ಉದ್ದೇಶಕ್ಕಾಗಿ ೧೯೫೧-೫೬ರ ಅವಧಿಯಲ್ಲಿ ಒಟ್ಟಿಗೆ ೨೨೦ ಲಕ್ಷ ರೂಪಾಯಿಗಳನ್ನೂ ವ್ಯಯಿಸುವ ವಿಚಾರವಿದೆ. ಇದರಲ್ಲಿ ಕೇಂದ್ರ ಸರಕಾರವು ೦೨ ಲಕ್ಷ ರುಪಾಯಿಗಳನ್ನೂ 'ಅ' ವರ್ಗದ ರಾಜ್ಯಸರಕಾರಗಳು ೩೩೩ ಲಕ್ಷ ರುಪಾಯಿಗಳನ್ನೂ 'ಬ' ವರ್ಗದವು ೭೩ ಲಕ್ಷ ರುಪಾಯಿಗಳನ್ನು 'ಕ' ವರ್ಗದವು ... ಲಕ್ಷ ರೂಪಾಯಿಗಳನ್ನೂ ವ್ಯಯಿಸುವುವು. ಮದ್ರಾಸ ಸರಕಾರವೊಂದೇ ಒಂದು ಕೋಟಿ ರುಪಾಯಿಯನ್ನು ಮತ್ಸ್ಯವ್ಯವಸಾಯದ ಅಭಿವೃದ್ಧಿಗಾಗಿ ವಿನಿಯೋಗಿಸುವುದು. ನಿರ್ದಿಷ್ಟ ಪಡಿಸಿದ ಯೋಜನೆಗಳ ಅಭಿವೃದ್ಧಿಯು ಸಂಪನ್ನವಾದಲ್ಲಿ ಪ್ರಕೃತದ ಹತ್ತು ಲಕ್ಷ ಟನ್ನುಗಳ ಉತ್ಪಾದನೆಯು ೧೯೫೬ರ ಸುಮಾರಿಗೆ ೧೫ ಲಕ್ಷ ಟನ್ನುಗಳಿಗೇರೀತೆಂದು ಎಣಿಸಿರುವರು.

ಅಮೇರಿಕೆಯ ನೆರವು

ನಮ್ಮ ದೇಶದಲ್ಲಿ ಸಮುದ್ರದಲ್ಲಿ ಮೀನು ಹಿಡಿಯುವ ಉದ್ಯೋಗದ ಜೊತೆಗೆ ಒಳನಾಡಿನಲ್ಲಿ ನದಿಗಳು, ವಿಶಾಲವಾದ ಕೆರೆಗಳು ಮತ್ತು ಕಾಲುವೆಗಳು ಮುಂತಾದುವಲ್ಲಿ ಕೂಡಾ ಮೀನುಗಾರಿಕೆಗೆ ಅವಕಾಶವಿದೆ. ಬಂಗಾಳದಲ್ಲಿ ಪ್ರತಿಯೊಂದು ಮನೆಯವರೂ ಕೊಳದಲ್ಲಿ ರುಚಿಕರವಾದ ಮೀನನ್ನು ಸಾಕುತ್ತಿರುವರೆಂದು ನಾವೆಲ್ಲರೂ ಕೇಳಿದ್ದೇವೆ. ಆದುದರಿಂದ ಅತ್ಯುತ್ತಮ ಆಹಾರವೆನಿಸಬಲ್ಲ ಮತ್ಸ್ಯವನ್ನು ಶಾಸ್ತ್ರೀಯ ರೀತಿಯಲ್ಲಿ ಉಪಯೋಗಕ್ಕೆ ತರುವ ಉದ್ದೇಶದಿಂದ ಸರಕಾರೀ ಮಟ್ಟದಲ್ಲಿ ಪ್ರಯತ್ನಗಳು ನಡೆದದ್ದು ಕ್ರಮಪ್ರಾಪ್ತವಾಗಿದೆ. ಮದ್ರಾಸು ಸರಕಾರವು ಸರ್ ಫ್ರೆಡರಿಕ್ ನಿಕೊಲ್ಸನ್ ಎಂಬವರ ಶಿಫಾರಸಿನಂತೆ ೧೯೦೭ರಲ್ಲಿ ಮೀನುಗಾರಿಕೆಯ ಇಲಾಖೆಯನ್ನು ತೆರೆಯಿತು. ನಿಕೊಲ್ಸನರು ಮತ್ಸ್ಯವ್ಯವಸಾಯವನ್ನು ಅಭಿವೃದ್ಧಿಗೊಳಿಸುವುದಕ್ಕೆ ತಮ್ಮ ಜೀವಮಾನದಲ್ಲಿ ಬಹಳವಾಗಿ ದುಡಿದರು. ಮತ್ಸ್ಯವ್ಯವಸಾಯ ಮಂಡಳವೆಂಬುದಾಗಿ ಸಣ್ಣ ಸ್ವರೂಪದಲ್ಲಿ ಕೆಲಸವನ್ನು ತೊಡಗಿದ ಈ ಇಲಾಖೆಯು ಈಗ ತನ್ನ ಕಾರ್ಯಕ್ಷೇತ್ರವನ್ನು ಮದ್ರಾಸು ರಾಜ್ಯದ ಪೂರ್ವ ಹಾಗು ಪಶ್ಚಿಮ ಕರಾವಳಿ ಪ್ರದೇಶಗಳಿಗೆ ವಿಸ್ತರಿಸಿಕೊಂಡಿದೆಯಲ್ಲದೆ ಒಳನಾಡಿನ ಮತ್ಸ್ಯವ್ಯವಸಾಯದ ಅಭಿವೃದ್ಧಿಯನ್ನೂ ಲಕ್ಷ್ಯದಲ್ಲಿಟ್ಟುಕೊಂಡಿದೆ. ಅತ್ಯಾಧುನಿಕವಾದ ಸಾಧನ ಸಲಕರಣೆಗಳನ್ನು ಉಪಯೋಗಿಸುವ ಮಾಹಿತಿಯನ್ನು ಒದಗಿಸಿ ಕೊಡುತ್ತಿದೆಯಲ್ಲದೆ, ಶಾಸ್ತ್ರೀಯ ವಿಚಾರದಲ್ಲಿಯೂ ಸಂಶೋಧನೆಗಳನ್ನು ನಡೆಸುತ್ತದೆ. ಮೀನುಗಾರಿಕೆಯ ಸಂಬಂಧದಲ್ಲಿ ವಿಶೇಷ ಮಾಹಿತಿಯನ್ನು ಪಡೆಯಲು ಇಂಗ್ಲೆಂಡಕ್ಕೆ ತೆರಳಿದ್ದ ಪ್ರಥಮ ಭಾರತೀಯರು ಶ್ರೀ ವಿ ವಿ ಗೋವಿಂದನ್ ಎಂಬವರಾಗಿದ್ದರು. ಈಗಿನ ದಿಗ್ದರ್ಶಕರಾದ ಶ್ರೀ ಕೆ ಎಸ್ ಅನಂತರಾಮನ್ನರು ಈಚೆಗೆ ಅಮೇರಿಕದ ತಾಂತ್ರಿಕ ಸಹಾಯ ಯೋಜನೆಯಲ್ಲಿ ನೆರವಾಗಲು ನೇಮಕಗೊಂಡಿದ್ದರು. ಅಮೇರಿಕದ ಈ ಯೋಜನೆಯನ್ವಯ ಮುಂದಿನ ಐದು ವರ್ಷಗಳಲ್ಲಿ ನೌಕೆಗಳನ್ನುಪಯೋಗಿಸಿ ಮತ್ಸ್ಯ ವ್ಯವಸಾಯವನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ೧,೧೫,೩೯,೦೦೦ ರುಪಾಯಿ ಭಾರತ ಸರಕಾರಕ್ಕೆ ದೊರೆಯುವುದು.

ಸಹಕಾರದ ತಳಹದಿ

ಮೀನುಗಾರನ ಜೀವನವು ಕಠಿನತರವಾದುದು. ಮುಂಜಾನೆ ಸೂರ್ಯ ಮೂಡುವುದಕ್ಕೆ ಬಹಳ ಮುಂಚೆಯೇ ಅವನು ತನ್ನ ಕಟುಮರದಲ್ಲಿಯೋ ದೋಣಿಯಲ್ಲಿಯೋ ಕೆಲಸದಲ್ಲಿ ನಿಮಗ್ನನಾಗುವನು. ಏಳೆಂಟು ತಾಸಿನವರೆಗೆ ನೀಲಸಮುದ್ರದಲ್ಲಿ ದುಡಿದು, ದಂಡೆಗೆ ಮರಳುವನು. ಅದೃಷ್ಟವಿದ್ದಪಕ್ಷದಲ್ಲಿ ಅವನ ಬಲೆ ಯಥೇಷ್ಟ ಮೀನಿನ ಕೊಳ್ಳೆಯಿಂದ ತುಂಬುತ್ತದೆ. ಆದರೆ ಏನೇನೂ ಮೀನು ದೊರೆಯದ ದಿನವನ್ನೂ ಅವನು ಕಾಣದಿಲ್ಲ.

ಸಾಮಾನ್ಯವಾಗಿ ಮೀನುಗಾರರೆಲ್ಲರೂ ಪರಿಶ್ರಮ ಜೀವಿಗಳು, ಗಂಡಸು, ಹೆಂಗಸು, ಹುಡುಗರೆಲ್ಲರೂ ತಮ್ಮ ಕೆಲಸದಲ್ಲಿ ಶ್ರದ್ಧೆಯುಳ್ಳವರು. ಎಲ್ಲರೂ ಹೊಟ್ಟೆಬಟ್ಟೆಯ ಆವಶ್ಯಕತೆಯನ್ನು ಪೂರೈಸುವಷ್ಟರಮಟ್ಟಿಗೆ ಮಾತ್ರ ಅನುಕೂಲವುಳ್ಳ ಬಡವರು. ಮೀನಿನಿಂದ ಹಣ ಸಂಪಾದಿಸಲು ಬಾರದ ದಿನಗಳಲ್ಲಿ ಇವರು ಉದರ ಪೋಷಣೆಗಾಗಿ ಸಾಲಗಾರರ ಮನೆ ಹೋಗುವರು. ಈ ಮಧ್ಯಸ್ಥರು ಮೀನುಗಾರರ ಆಪತ್ಕಾಲದಲ್ಲಿ ನೆರವಿತ್ತು ಸಹಕರಿಸಿದರೂ — ಮೀನು ಬಲೆಹಾಕುವ ಕಾಲದಲ್ಲಿ ಇವರ ಹಿಂದಿದ್ದು ತಾವು ಕೊಟ್ಟುದಕ್ಕೆ ಇಮ್ಮಡಿ ಮುಮ್ಮಡಿ ಬೆಲೆಯ ಮೀನನ್ನು ಪಡೆಯುವರು. ಹೀಗೆ ಮೀನುಗಾರನ ಪರಿಶ್ರಮಕ್ಕೆ ದೊರೆಯುವ ಪ್ರತಿಫಲ ಅತ್ಯಲ್ಪವೆನಿಸುತ್ತದೆ. ಈ ಮಧ್ಯಸ್ಥರ ಉಪಟಳವನ್ನು ನಿಯಂತ್ರಿಸಿದರೆ, ಮೀನುಗಾರರ ಕುಟುಂಬಕ್ಕೆ ಕ್ಷೇಮವಾದೀತೆಂದು ಕೊಂಡು ಸರಕಾರವು ಸಹಕಾರೀ ಪದ್ಧತಿಗೆ ಪ್ರೋತ್ಸಾಹವನ್ನು ಕೊಡುತ್ತದೆ. ಪಂಚವಾರ್ಷಿಕ ಯೋಜನೆಯಲ್ಲಿಯೂ ಈ ಬಗ್ಗೆ ಸೂಕ್ತವಾದ ಸೂಚನೆಗಳಿವೆ.

ಮೀನುಗಾರರಿಗೆ ಬಲೆ ಹೆಣೆಯುವುದಕ್ಕಾಗಿ ಸರಕಾರ ವಿಶೇಷ ನೂಲಿನ ಪೂರೈಕೆಯನ್ನೂ ಮಾಡಿದೆ. ಪಶ್ಚಿಮ ಕರಾವಳಿಯಲ್ಲಿ ರಂಪಣಿ ಬಲೆಯನ್ನು ಉಪಯೋಗಿಸಿಕೊಂಡು ಉತ್ತಮ ಪ್ರತಿಫಲವನ್ನು ಪಡೆಯುವುದಕ್ಕೆ ಈಗೀಗ ಮೀನುಗಾರರು ಹೆಚ್ಚು ಗಮನವನ್ನು ಕೊಡುತ್ತಿರುವರು. ಸುಮಾರು ಒಂದು ಸಾವಿರ ಪಾಥಮುಗಳಷ್ಟು ಉದ್ದದ ಈ ಬಲೆಯು ಅನೇಕ ಸಣ್ಣ ಪುಟ್ಟ ತುಂಡು ಬಲೆಗಳಿಂದಲೇ ನಿರ್ಮಿತವಾಗಿದೆ. ೫೦—೬೦ ಜನರು ಸೇರಿ ರಂಪಣಿ ಬಲೆಯ ಮೂಲಕ ಮೀನು ಹಿಡಿಯಲು ಉದ್ಯುಕ್ತರಾಗುವುದರಿಂದ ಈ ಪ್ರಯತ್ನಕ್ಕೆ ಸಹಕಾರೀ ಪದ್ಧತಿಯೇ ತಳಹದಿ ಎನ್ನಬಹುದು. ಇದನ್ನು ಮನಗಂಡೇ ಸರಕಾರವು ರಂಪಣಿ ಬಲೆಯಮೇಲೆ ತೆರಿಗೆ ಹೊರಿಸುವುದನ್ನು ರಿಯಾಯತಿಯಿಂದ ನೋಡಿದೆ.

(೧೧ನೇ ಪುಟ ನೋಡಿರಿ)

ದಿ ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಾರ್ಯಾಲಯ: ಉಡುಪಿ, ದ ಭಾರತ) [ಸ್ಥಾಪನೆ ೧೯೩೫

"ಕೆನರಾ ಮ್ಯೂಚುವಲ್" ಪರಸ್ಪರಾವಲಂಬಕವಾದ ಸಂಸ್ಥೆ

ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ

ಬೋನಸು ಕೊಟ್ಟು, ಪಾಲಿಸಿದಾರರ ನಂಬಿಕೆ ಪಡೆದಿದೆ

ಈ ಕಂಪೆನಿಯಲ್ಲಿ ಇಂದೇ ವಿಮೆ ಇಳಿಸಿ,

ನಿಮ್ಮ ಕುಟುಂಬವನ್ನು ಭದ್ರವಾಗಿರಿಸಿ

The CANARA MUTUAL ASSURANCE CO. Ltd,

Head Office UDIPI, S INDIA ESTD 1935





ರಾಮತೀರ್ಥ

ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ. ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0

ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಅಮೃತಾಂಜನ

ತಲೆನೋವು, ನೆಗಡಿ, ಶೀತ, ಉಳುಕು ಕುತ್ತಿಗೆ, ಭುಜ ಹಲ್ಲು ನೋವು, ಎದೆ ನೋವು, ಗಾಯಗಳು ಜಾತುಕೊಳ್ಳುವುದು ಚೇಳುವಿಷ ಮುಂತಾದುವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧಿ



REDG

ಹುಸಿ ಕಡ್ಡಿ ಮುಮ್ಮು ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು ಬೊಂಬಾಯಿ ಮತ್ತು ಕಲ್ಕತ್ತ

ವಿಧಾಯಕ ಕಾರ್ಯಕರ್ತರ ಹೊಣೆ

ಜನಹಿತದ ಯೋಜನೆಗಳಲ್ಲಿ ಸರಕಾರದ ಚಟುವಟಿಕೆಗಳೊಡನೆ ಜನರ ಉವಲವಿಕೆಯೂ ಸೇರುವುದು ಅಗತ್ಯವೆಂದು ಹೇಳಿದಮೇಲೆ–ಜನರ ಮನೋಭೂಮಿಕೆಯಲ್ಲಿ ಉಂಟಾಗಬೇಕಿರುವ ಪರಿವರ್ತನೆಯ ಬಗೆಯನ್ನೂ ವಿವೇಚಿಸುವುದು ಉಚಿತ. ಸಾಮಾನ್ಯವಾಗಿ ಇಂದು ಜನರನ್ನು ಸ್ಫೂರ್ತಿಯುತರನ್ನಾಗಿ ಮಾಡುವುದೂ ರಚನಾತ್ಮಕ ಕಾರ್ಯಗಳ ಕಡೆಗೆ ಅವರಲ್ಲಿ ಆಸ್ಥೆಯನ್ನುಂಟು ಮಾಡುವುದೂ ಕಠಿನವೆನಿಸಿದ. ಏಕೆಂದರೆ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿದ್ದ ಉತ್ಸಾಹವಾಗಲೀ ಶಿಸ್ತಾಗಲೀ ಇಂದು ಉಳಿದಿರುವುದಿಲ್ಲ. ಅಂದು ದೇಶದ ಮೂವತ್ತು ಮೂರು ಕೋಟಿ ಜನತೆಯ ಮುಂದೆ ಸ್ವಾತಂತ್ರ್ಯವೆಂಬ ಏಕಮೇವ ಧ್ಯೇಯವಿತ್ತು. ಮತ್ತು ಜನರನ್ನು ಆ ಧ್ಯೇಯದತ್ತ ಮುಂದೊಯ್ಯಬಲ್ಲ ಸಾಹಸಿಗಳಾದ ಧುರೀಣರೂ ಇದ್ದರು. ಜನರ ಸಂಪರ್ಕ ಮತ್ತು ಸಹಕಾರವೇ ಸ್ವಾತಂತ್ರ್ಯಸಂಗ್ರಾಮದಲ್ಲಿ ನೇತೃತ್ವವಹಿಸಿದ ಗಾಂಧಿ, ನೆಹರೂರಂಥವರ ಬಂಡವಾಳವಾಗಿದ್ದುದರಿಂದ—ಅವರು ಜನತೆಯೊಡನೆ ನಿಕಟ ಸಂಪರ್ಕವನ್ನಿಟ್ಟು ಕೊಂಡಿದ್ದರು. ಅನ್ಯೋನ್ಯ ಮೈತ್ರಿಯ ಭಾವವನ್ನೂ ಧ್ಯೇಯಕ್ಕಾಗಿ ಮೃತ್ಯುವನ್ನಪ್ಪಿದರೂ ವೀರ ಸ್ವರ್ಗವೆಂಬ ಮಹಾ ಆದರ್ಶವನ್ನೂ ಅವರು ನಮ್ಮ ಮುಂದಿಟ್ಟು ಆ ಕಡೆ ಆಕರ್ಷಿತರನ್ನಾಗಿ ಮಾಡಲು ಸಮರ್ಥರಾದರು. ಆದರೆ—ಸ್ವಾತಂತ್ರ್ಯದ ಬಳಿಕ ಜನತೆಯೊಡನೆ ನಿಕಟ ಸಂಪರ್ಕವನ್ನಿಟ್ಟುಕೊಂಡಿದ್ದ ಕಾಂಗ್ರೆಸ್ ಮಹಾ ಸಂಸ್ಥೆ ಅಧಿಕಾರವನ್ನು ಏರಿದುದರಿಂದಲೋ ಏನೋ– ಜನತೆಯೊಡನೆ ಅದು ಸಮೀಪ ಬಾಂಧವ್ಯವನ್ನು ಸ್ಥಾಪಿಸಿಕೊಳ್ಳಲಾರದಾಗಿದೆ. ಜನತೆಯ ಬೇಡಿಕೆಯನ್ನು ಮುನ್ನಿಡುವುದು ಹಿಂದೆ ಕಾಂಗ್ರೆಸಿನ ಕರ್ತವ್ಯವೆನಿಸಿದ್ದರೆ, ಇಂದು ಕಾಂಗ್ರೆಸು ಜನರ ಬೇಡಿಕೆಯನ್ನು ಮನ್ನಿಸಬೇಕಾದ ಸ್ಥಾನದಲ್ಲಿದೆ. ಹೀಗಿರುವುದರಿಂದ ತನಗೆ ಮನ್ನಿಸಲಿಕ್ಕೆ ಬಾರದ ಬೇಡಿಕೆಗಳ ಸಂಗತಿಯಲ್ಲಿ ಏನೇನೂ ಆಸಕ್ತಿಯನ್ನು ತೋರಿಸದೆ – ಜನರ ಮನದೊಲವನ್ನು ಉಪೇಕ್ಷೆಯಿಂದ ಕಾಣಲಿಕ್ಕೂ ಅವಕಾಶ ಉಂಟಾಗಿದೆ. ಭಾಷಾನುಗುಣ ಪ್ರಾಂತರಚನೆಯ ಪ್ರಶ್ನೆ ಇಂಥ ಬುದ್ಧಿಪೂರ್ವಕವಾದ ಉಪೇಕ್ಷೆಗೊಂದು ನಿದರ್ಶನ.

ರಾಷ್ಟ್ರ ಕಲ್ಯಾಣಕ್ಕಾಗಿ ಜನರಲ್ಲಿ ಜಾಗೃತಿ ಮೂಡಿಸುವ ಅಗತ್ಯ

ಜನಪ್ರಿಯತೆಯ ಗುಟ್ಟು

ಇದು ಹೇಗೇ ಇರಲಿ ಪ್ರಕೃತ ಜನಹಿತ ಯೋಜನೆಗಳ ಮಟ್ಟಿಗೆ ನಮ್ಮ ವಿಚಾರವನ್ನು ಸೀಮಿತವಾಗಿಟ್ಟು ಕೊಂಡು ಹೇಳುವುದಾದಲ್ಲಿ ಅಧಿಕಾರಾರೂಢವಾಗಿರುವ ಕಾಂಗ್ರೆಸು ಜನರ ಸಂಬಂಧವನ್ನು ಬಹಳ ಮಟ್ಟಿಗೆ ಕಳೆದು ಕೊಂಡಿದೆ ಎಂದು ಹೇಳಲೇ ಬೇಕಾಗುವುದು ಕಾಂಗ್ರೆಸು ಸಂಸ್ಥೆಯ ಐಕ್ಯಕ್ಕೂ ಸರಕಾರೀ ಯೋಜನೆಗಳ ಯಶಸ್ಸಿಗೂ ಕೂಡಿಯೇ ಇದರಿಂದ ಕೆಡುಕಿದೆ. ಜನತೆಯ ಸ್ಥಿತಿಗತಿಯನ್ನು ಚೆನ್ನಾಗಿ ತಿಳಿದುಕೊಂಡು ಮತ್ತು ನಿಜವಾದ ಕಲ್ಯಾಣ ರಾಷ್ಟ್ರವಾಗಿ ಭಾರತವನ್ನು ಪುನಃ ನಿರ್ಮಾಣಗೈಯ್ಯಬೇಕೆಂಬ ಉದ್ದೇಶವಿಟ್ಟು ಕೊಂಡು ಸರಕಾರ ಕಾರ್ಯ ನಿರ್ವಹಿಸುತ್ತಿದೆ ಎಂದು ಒಪ್ಪಿಕೊಂಡರೂ ಜನತೆ ಬಯಸುವ ಧುರೀಣತ್ವವು ಸರಕಾರೀ ಮಟ್ಟದಿಂದ ಒರುವಂತಿಲ್ಲ. ಜನರೊಳಗಿಂದಲೇ ಸರಿಯಾದ ಧುರೀಣತ್ವ ದೊರೆತಿಲ್ಲ. ಕಾಂಗ್ರೆಸು ಸಂಸ್ಥೆಯಲ್ಲಿರುವ ಕಾರ್ಯಕರ್ತರು ಈ ಸಂಗತಿಯನ್ನು ಸಹೃದಯತೆಯಿಂದ ವಿಚಾರಿಸುವುದು ಯೋಗ್ಯವಿದೆ. ಜನರಿಂದ ಸಾಮಾಜಿಕ ಹಿತದ ಕೆಲಸಗಳನ್ನು ಒಟ್ಟಾಗಿ ಮಾಡಿಸುವ ಪ್ರಮೇಯಗಳೊದಗಿ ಬರುವಾಗಲೆಲ್ಲ ಯೋಗ್ಯ ಧುರೀಣತ್ವದ ಅಗತ್ಯ ಬಹಳಷ್ಟಿದೆ ಎಂಬುದನ್ನು ಯಾರೂ ಅಲ್ಲಗಳೆಯಲಿಕ್ಕಿಲ್ಲ- ಕಾಂಗ್ರೆಸಿನ ಕಾರ್ಯಕರ್ತರು ಇಂದು ಸರಕಾರೀ ಆಡಳಿತದಲ್ಲಿ ತಮಗೊಂದು ಸ್ಥಾನವನ್ನು ದೊರಕಿಸಿಕೊಳ್ಳುವುದಕ್ಕಾಗಿ ಹಪಾಪಿಸುತ್ತಿರುವರಲ್ಲದೆ ಜನತೆಯ ಹೃದಯ ಪೀಠದಲ್ಲಿ ಸ್ಥಾನಪನ್ನರಾಗುವ ಆದರ್ಶವನ್ನು ಇಟ್ಟುಕೊಂಡಂತೆ ಕಾಣುವುದಿಲ್ಲ. ಆದರೆ ಸ್ವಾತಂತ್ರ್ಯ ಸಂಗ್ರಾಮದ ಸೇನಾಧಿಪತಿಯಾಗಿದ್ದ ಗಾಂಧೀಜಿ ಯಾವುದೇ ಸರಕಾರದಲ್ಲಿ ಹೊಣೆಗಾರ ಸ್ಥಾನವನ್ನು ವಹಿಸಿ ಕೊಳ್ಳದೆ ಇದ್ದುದರಿಂದಲೇ ಭಾರತೀಯರ ಹೃದಯದಲ್ಲಿ ಮಾತ್ರವಲ್ಲ, ವಿಶ್ವದ ಇತಿಹಾಸದಲ್ಲಿಯೇ ಅಮರರಾಗಿ ಉಳಿಯುವರು ಎಂಬುದನ್ನು ಜ್ಞಾಪಿಸಿಕೊಳ್ಳೋಣ. ನಮ್ಮ ಕಣ್ಣ ಮುಂದಿನ ಇನ್ನೊಂದು ಉದಾಹರಣೆಯಾಗಿ ನೆಹರೂರನ್ನೇ ನೋಡಬಹುದು. ಸ್ವಾತಂತ್ರ್ಯ ಯೋಧರಾಗಿದ್ದ ನೆಹರೂ ಗಳಿಸಿದ ಕೀರ್ತಿ ಇಂದು ಪ್ರಧಾನಿ ಪಟ್ಟವೆಂಬ ಮುಳ್ಳಿನ ಕಿರೀಟವನ್ನು ಅವರು ಹೊತ್ತುಕೊಂಡ ಮೇಲೆ ಮಸುಕಾಗುತ್ತಾ ಬಂದಿದೆ. ಜನರು ಅಂದು ನೆಹರೂಗೆ ಕೊಡುತ್ತಿದ್ದ ಗೌರವವನ್ನು ಮತ್ತು ತೋರಿಸುತ್ತಿದ್ದ ಆದರವನ್ನು ಇಂದು ತೋರಿಸುತ್ತಿಲ್ಲವೆಂಬುದು ಸ್ಪಷ್ಟವಿದೆ. ಜನ ನಾಯಕ ನೆಹರೂ ಹಿಂದಿನಷ್ಟು ಇಂದು ಜನಪ್ರಿಯರಾಗಿ ಉಳಿದಿಲ್ಲ.

ಕಾಂಗ್ರೆಸಿನ ಧುರೀಣತ್ವ

ಇವನ್ನೆಲ್ಲ ಏಕೆ ಪ್ರಸ್ತಾಪಿಸಬೇಕೆಂದರೆ ಸರಕಾರದ ಅಧಿಕಾರಸ್ಥಾನದಲ್ಲಿದ್ದು ಸಾಮಾಜಿಕ ಹಿತದ ಕೆಲಸಗಳನ್ನು ನಿರ್ವಹಿಸುವುದಕ್ಕಿಂತಲೂ ಜನರೊಡನೆ ಸಮರಸನಾಗಿ ಬೆರೆತು ಮಾಡುವ ವಿಧಾಯಕ ಕಾರ್ಯಗಳಿಂದ ಸಾವಧಾನ್ಯ ಜೀವನವನ್ನು ನಡೆಸುವುದು ಸುಲಭವಿದೆ; ಮತ್ತು ಶ್ರೇಯಸ್ಕರವಾದ ಮಾರ್ಗವಾದರೂ ಇದೇ. ಇದನ್ನು [illegible]ರ ದರ್ಶಿತ್ವದಿಂದ ಮನಗಂಡೇ ಗಾಂಧೀಜಿ ಕಾಂಗ್ರೆಸು ಸಂಸ್ಥೆ ಇನ್ನು ಮುಂದಕ್ಕೆ ರಚನಾತ್ಮಕ ಕಾರ್ಯಗಳಲ್ಲಿ ತೊಡಗುವ ಸರ್ವೋದಯ ಸಂಘವಾಗಿ ಪರಿವರ್ತನೆಯನ್ನು ಹೊಂದಬೇಕೆಂದು ಆಶಿಸಿದ್ದರು. ಇಂದಿಗೂ ವಿಧಾಯಕ ಕಾರ್ಯವೇ ಆದರ್ಶವಾಗಿ ಸರ್ವ ಸೇವಾ ಸಂಘ ತನ್ನ ಚಟುವಟಿಕೆಗಳನ್ನು ವಿಸ್ತರಿಸುತ್ತಿದೆ. ಇಂಥವರಲ್ಲಿ ವಿನೋಬಾಜಿಯವರು ನಡೆಸುತ್ತಿರುವ ಭೂದಾನ ಚಳವಳಿಯೂ ಸಾಂಪತ್ತಿಕ ಯಜ್ಞವೂ ಉಲ್ಲೇಖನೀಯವೆ. ಗ್ರಾಮೋದ್ಯೋಗ, ಮೂಲ ಶಿಕ್ಷಣ, [illegible] ಆರೋಗ್ಯ ಮತ್ತು ನೈರ್ಮಲ್ಯ, ಇವೇ ಮುಂತಾದ ಕ್ಷೇತ್ರಗಳಲ್ಲಿ ಜನರು [illegible] ಹಲಿದಿಂದ ಭಾಗವಹಿಸಿ ನಡೆಯುವಂತೆ [illegible]

(೧೧ನೇ ಪುಟ ನೋಡಿರಿ.)

THE VIJAYA BANK LTD.

Head Office - - - MANGALORE.

1953

ನವವರ್ಷದ ಶುಭಾಶಯ!

ಕಳೆದ 22 ವರ್ಷಗಳ ನಮ್ಮ ಗಿರಾಕಿಗಳ ಯಥಾರ್ಥ ಸೇವೆ, ಪರಿಪಕ್ವ ಅನುಭವ, ಪ್ರಾಮಾಣಿಕತೆ, ಮತ್ತು ಉತ್ಸಾಹದಿಂದಾಗಿ ಮುಂದೆಯೂ ಯದಾಸ್ತ್ರಕಾರ ನಿಮ್ಮ ಪ್ರೋತ್ಸಾಹ ಕೋರುವ,

ದಿ ವಿಜಯಾ ಬೇಂಕ್ ಲಿಮಿಟೆಡ್

ಹೆಡ್ ಆಫೀಸ್ - - ಮಂಗಳೂರು.

ZANDU

ಝಂಡೂ ಫಾರ್ಮಸಿಯ ಮನೆಮದ್ದುಗಳನ್ನೇ ಸದಾ ಉಪಯೋಗಿಸಿರಿ.

ಝಂಡೂ ಬ್ರಾಹ್ಮೀ ಹೇರ್ ಆಯಿಲ್:– ಮೆದುಳಿಗೆ ತಂಪು– ಮನಸ್ಸಿಗೆ ಉಲ್ಲಾಸವೀಯುವುದು. (ಪೌಂಡಿಗೆ ರೂ. 3–3–) ಕಾಲು ಬಾಟ್ಲಿಗೆ ರೂ. 1.

ಝಂಡೂ ಸರಸಪರಿಲ್ಲಾ:– ರಕ್ತವನ್ನು ಶುದ್ಧಗೊಳಿಸಲು ಹೆಸರುವಾಸಿಯಾ ಮದು. ಚರ್ಮರೋಗಗಳನ್ನು ಗುಣಪಡಿಸಬಲ್ಲಿದು. 4 ಔನ್ಸ್ ಬಾಟ್ಲಿ ದರ ರೂ. 1–5–0

ಝಂಡೂ ಬಾಲಾಮೃತ:–ಅನಾರೋಗ್ಯವುಳ್ಳ ಮಕ್ಕಳಿಗೆ ಆದರ್ಶ ಟಾನಿಕ್- 4 ಔನ್ಸ್ ಬಾಟ್ಲಿ ದರ ರೂ. 1–2–0

ಝಂಡೂ ಬಾಮ್:–ತಲೆ ನೋವು ಮೊದಲಾದ ಬೇನೆಗಳಿಗೆ ಸೀಸೆಗೆ ರೂ1.

ಝಂಡೂ ಫಾರ್ಮಸಿಯ ದ. ಕ. ಜಿಲ್ಲೆಯ ಎಲ್ಲಾ ಏಜಂಟರಲ್ಲೂ ದೊರೆಯುವವು

ವಿವರ ಕ್ಯಾಟಲಾಗಿಗೆ ಈ ಕೆಳಗಿನ ಹೋಲ್ ಏಜಂಟರಿಗೆ ಬರೆಯಿರಿ;-

DAMODER & CO.,

Nainiappa Naicken Street, MADRAS. 3

ಋತುಸ್ರಾವ ಚಿಂತಿಸಬೇಡಿ

"ಸುಮಾರಿ" ಬಿಲ್ಲೆಗಳನ್ನು [illegible] ಋತುಸ್ರಾವದ ತೊಂದರೆಗಳು [illegible] ನಿವಾರಣೆಯಾಗುವುವು. ಈ ಔಷಧ ಸೇವನೆಯಿಂದ ಶೀಘ್ರ ಗುಣವೊಂದುವುದು. [illegible] ಫ್ಯಾಮಿಲಿ, [illegible] ರೂ. [illegible] ರೂ. ೬- [illegible]

Mrs P DEV E. F DS (N J) Tollygunge CALCUTTA

[illegible] ಮಂಗಳೂರು.

ವಿವಿಧ ಪಾತ್ರೆಗಳು



[illegible] ಪಾತ್ರೆಗಳು [illegible] ಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ [illegible] ಬಡಿ [illegible]

The Moolky Bank Ltd, Moolky.

NOTICE

The 23rd Ordinary Annual General Body Meeting of the Bank will be held at the Registered Office of the Bank on Sunday the 8th March 1953, at 10–30 a. m.

The Transfer Books & Register of Members of the Bank will remain closed from 21—2—1953 to 10—3—1953 both days inclusive

(By Order)

(Sd) M. R. H. Punja
Manager.

ಭಾರತದ ಸರ್ವಾಂಗೀಣ ಏಳಿಗೆ

ಪಾರ್ಲಿಮೆಂಟಿನ ಬಜೆಟು ಅಧಿವೇಶನ

ರಾಷ್ಟ್ರಾಧ್ಯಕ್ಷರ ಭಾಷಣ

ಹೊಸ ದಿಲ್ಲಿಯಲ್ಲಿ ಈಗ ಪಾರ್ಲಿಮೆಂಟು ಸಭೆ ಸೇರಿದ್ದು, ದೇಶಕ್ಕೆ ಸಂಬಂಧಿಸಿದ ಅನೇಕ ಸಂಗತಿಗಳನ್ನು ಪರಿಶೀಲಿಸುತ್ತಿರುವುದು. ಕಳೆದ ಬುಧವಾರ ದಿನ ರಾಷ್ಟ್ರಾಧ್ಯಕ್ಷರು ಪಾರ್ಲಿಮೆಂಟಿನ ಎರಡೂ ಮನೆಗಳ ಸಂಯುಕ್ತ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ರಾಷ್ಟ್ರದ ಧೋರಣೆಯು ರೂಪ ರೇಷೆಯು ರಾಷ್ಟ್ರಾಧ್ಯಕ್ಷರು ಮಾಡುವ ಈ ತೆರನಾದ ಭಾಷಣದಲ್ಲಿ ಚಿತ್ರಿತವಾಗುವುದರಿಂದ-ಸಾಮಾನ್ಯವಾಗಿ ವಿದೇಶೀಯರಿಗೂ ದೇಶೀಯರಿಗೂ ಕೂಡ ಅದನ್ನು ಕೇಳಿ ಸ್ವಾಗತ ಮಾಡಿಕೊಳ್ಳುವ ಕುತೂಹಲಿಕೆ ಇರುತ್ತದೆ. ಆದುದರಿಂದಲೇ ಎಲ್ಲ ರಾಯಭಾರೀ ವರ್ಗಗಳೂ ಈಗ ಭಾರತದಲ್ಲಿರುವ ಪತಿ ಪ್ರಿನ್ಸ್ ಸತಿ ಮೌಂಟಬೇಟನ್ನ ಮತ್ತು ಲ್ಯಸುರಿನ್ ಬೇವಾನರೂ ಇತರ ನೂರಾರು ಜನರೂ ಸಭಾ ಭವನದಲ್ಲಿ ನೆರೆದು ರಾಷ್ಟ್ರಾಧ್ಯಕ್ಷರ ಭಾಷಣವನ್ನು ಸಾವಧಾನ ಚಿತ್ತದಿಂದ ಕೇಳಿಕೊಂಡರು. ರಾಷ್ಟ್ರಾಧ್ಯಕ್ಷರು ದೇಶದಲ್ಲಿ ಸರ್ವಾಂಗೀಣವಾದ ಪ್ರಗತಿಯು ಕೈಗೂಡಿರುವುದೆಂದೂ ಇದು ಸಾಮಾನ್ಯವಾಗಿ ತೃಪ್ತಿಕರವಿದೆಯಾಗಿಯೂ ನುಡಿದರು. ಒಂಭತ್ತು ತಿಂಗಳುಗಳ ಹಿಂದೆ ತಾವು ಮಾನ್ಯ ಸದಸ್ಯರನ್ನು ಉದ್ದೇಶಿಸಿ ಭಾಷಣ ಮಾಡಿದ ಬಳಿಕದ ಅವಧಿಯಲ್ಲಿ ಪ್ರತಿಯೊಂದೂ ಕ್ಷೇತ್ರದಲ್ಲಿ ಅಭಿವೃದ್ಧಿಯಾಗಿರುತ್ತದೆ ಎಂಬ ಸಂಗತಿಯನ್ನು ಅಂಕೆಸಂಖ್ಯೆಗಳ ಮೂಲಕವೂ ಘಟನೆಗಳ ವಿಮರ್ಶೆಯಿಂದಲೂ ರಾಷ್ಟ್ರಾಧ್ಯಕ್ಷರು ಸಮರ್ಥಿಸಿಕೊಂಡರು. ಸರಕಾರವು ಪಂಚವಾರ್ಷಿಕ ಯೋಜನೆಯನ್ನು ಪೂರ್ಣರೂಪದಲ್ಲಿ ಸಿದ್ಧಗೊಳಿಸಿ ಪ್ರಕಟಿಸಿದೆ. ಆಹಾರದ ಪರಿಸ್ಥಿತಿ ಈಗಿರುವ ದಾನ್ಯಾಸು ತೃಪ್ತಿಕರವಿದೆ. [illegible] ಈ ರಾಜ್ಯಗಳಲ್ಲಿ [illegible] ಮೊಂ[illegible] ರಾಜ್ಯಗಳಲ್ಲಿ [illegible] ಸರಕಾರದ ಧೋರಣೆಯಾ[illegible] ಯೋಜನೆಯು ಉ[illegible] ಸ್ವಾ[illegible] ಎಂಬ [illegible] ಯಂತ್ರಗಳನ್ನು [illegible] ಪ್ರಯೋಗ[illegible] ಎಂದರು.

ರಾಜ್ಯಗಳ ಪುನರ್ಘಟನೆ

ಭಾಷಾನುಗುಣ ಪ್ರಾಂತರಚನೆಯ ಸಂಬಂಧದಲ್ಲಿ ಸರಕಾರವು ಯೋಗ್ಯವಾದ ಕಾರ್ಯಕ್ರಮಗಳನ್ನು ಕೈಗೊಂಡಿದೆ. ದೇಶವನ್ನು ಹೊಸ ರಾಜ್ಯಗಳಾಗಿ ಪುನರ್ಘಟಿಸುವ ಕಾರ್ಯಕ್ಕೆ ಭಾಷೆ ಮತ್ತು ಸಂಸ್ಕೃತಿಯನ್ನು ಮಾತ್ರ ತಳಹದಿಯಾಗಿಟ್ಟುಕೊಳ್ಳಲು ಬರುವುದಿಲ್ಲ. ಹಾಗೆಂದು ಜನರ ಅಪೇಕ್ಷೆಗಳನ್ನು ಪೂರೈಸುವುದಕ್ಕಾಗಿ ಸಂಬಂಧಿಸಿದೆಲ್ಲ ಸಂಗತಿಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಜನತೆಯ ಆರ್ಥಿಕ ಹಾಗೂ ಸಾಂಸ್ಕೃತಿಕ ಉನ್ನತಿಯು ಸಂಪನ್ನವಾಗುವಂತೆ ಭಾಷೆಯ ತಳಹದಿಯ ಮೇಲೆ ರಾಜ್ಯಗಳ ಪುನರ್ಘಟನೆಯ ವಿಚಾರವನ್ನು ನಿರ್ವಿಕಾರ ಮನಸ್ಸಿನಿಂದ ಮಾಡುವುದಕ್ಕೆ ಆತಂಕವೇನೂ ಇಲ್ಲ ಎಂಬುದಾಗಿ ರಾಷ್ಟ್ರಾಧ್ಯಕ್ಷರು ನುಡಿದರು. ಪ್ರಕೃತ ಕಾಂಗ್ರೆಸು ಅಧಿಕಾರ ಸ್ಥಾನದಲ್ಲಿರುವುದರಿಂದ, ಹೈದರಾಬಾದು ಅಧಿವೇಶನದಲ್ಲಿ ಕಾಂಗ್ರೆಸು ಸ್ವೀಕರಿಸಿದ ಗೊತ್ತುವಳಿಯ ಕಕ್ಷೆಯನ್ನು ಮೀರಿ ರಾಷ್ಟ್ರಾಧ್ಯಕ್ಷರು ಹೋದಂತೆ ತೋರುವುದಿಲ್ಲ. ಹೀಗಿದ್ದರೂ ರಾಜ್ಯಗಳ ಪುನರ್ಘಟನೆಯ ವಿಚಾರವನ್ನು ಮಾಡಲಿಕ್ಕೆ ಅಡ್ಡಿ ಇಲ್ಲವೆಂದು ನುಡಿದದ್ದು ಸಂಬಂಧಿಸಿದೆಲ್ಲರಿಗೂ ಆಹ್ಲಾದಾಯಕವಾಗಿ ಕಾಣುತ್ತದೆ. ಕ್ರಮಬದ್ಧವಾದ ಮತ್ತು ವ್ಯವಹಾರ್ಯವಾದ ಕಾರ್ಯಕ್ರಮಗಳ ಮೂಲಕ ಈ ಪ್ರಶ್ನೆಯನ್ನು ಇತ್ಯರ್ಥಗೊಳಿಸಬೇಕೆಂದು ರಾಷ್ಟ್ರಾಧ್ಯಕ್ಷರ ಸೂಚನೆ ಎಂದು ಹೇಳಬಹುದು. ಭಾವನಾತ್ಮಕಕ್ಷೇತ್ರದಿಂದ ಭಾಷಾನುಗುಣ ಪ್ರಾಂತರಚನೆಯ ಪ್ರಶ್ನೆಯನ್ನು ರಾಷ್ಟ್ರಾಧ್ಯಕ್ಷರು ವಿವೇಕದ ಅಂಚಿಗೆ ಒಯ್ದಿರುವರು.

ಯುದ್ಧ ನಿಷೇಧ

ನಮ್ಮ ವಿದೇಶ ಧೋರಣೆಯ ಯಶಸ್ಸನ್ನು ರಾಷ್ಟ್ರಾಧ್ಯಕ್ಷರು ಪ್ರಸ್ತಾಪಿಸಿದರು. ಕೊರಿಯಾದ ಯುದ್ಧವು ವ್ಯಾಪಕಗೊಳ್ಳುವ ಭಯವು ಕೆಲವೊಂದು ಘಟನೆಗಳಿಂದ ನಿಚ್ಚಳವಾಗಿದೆ ಎಂದು ಹೇಳಿ ಸೂಚ್ಯವಾಗಿ ಅಮೇರಿಕದ ನೂತನಾಧ್ಯಕ್ಷ ಐಸನ್‌ಹಾವರರು ದೂರಮಾರ್ಗದ ವಾತಾವರಣವನ್ನು ಕದಡಿಸಿದ ಬಗ್ಗೆ ಕಳವಳವನ್ನು ವ್ಯಕ್ತಗೊಳಿಸಿದರು. ಆದರೂ ಭಾರತವು ಶಾಂತಿಧೋರಣೆಯನ್ನು ಬಿಡುವುದಿಲ್ಲವೆಂದರು. ಎಲ್ಲ ರಾಷ್ಟ್ರಗಳೊಡನೆಯೂ ಸ್ನೇಹಸಂವರ್ಧನವನ್ನು ಭಾರತ ಇಟ್ಟುಕೊಂಡಿದೆ. ನೆರೆಯ ನಾಡಾದ ಪಾಕಿಸ್ತಾನದೊಡನೆ ಕೆಲಮಟ್ಟಿಗೆ ಮನಸ್ತಾಪವಿದ್ದರೂ ಅದು ಯುದ್ಧಕ್ಕೆ ಅಂಟಿಕೊಳ್ಳದೆನೇ ಬಗೆಹರಿಯುವುದೆಂದು ದೃಢವಾದ ವಿಶ್ವಾಸವಿದೆ. "ನಾವು ಯುದ್ಧ ನಿಷೇಧದ ಘೋಷಣೆಯನ್ನು ಮಾಡಲು ಸದಾ ಸಿದ್ಧರಿದ್ದೇವೆ. ಪಾಕಿಸ್ತಾನ ಸರಕಾರವೂ ಇದರಂತೆ ನಡೆದರೆ ಸೌಹಾರ್ದಮಯವಾದ ವಾತಾವರಣದಲ್ಲಿ ಎಲ್ಲ ವಿವಾದಗಳೂ ಬಿಡಿಸಲ್ಪಡುವುವು" ಎಂದು ರಾಷ್ಟ್ರಾಧ್ಯಕ್ಷರು ನುಡಿದದ್ದು ಯಥೋಚಿತವಿದೆ. ಕಾಶ್ಮೀರ ಪ್ರಶ್ನೆ, ಕಾಲುವೆ ನೀರಿನ ತಂಟೆ ಮುಂತಾದುವುಗಳು ಪಾಕಿಸ್ತಾನ ಸರಕಾರದೊಡನೆ ಸ್ನೇಹದಿಂದಿರುವ ಮಾರ್ಗದ ಆತಂಕಗಳಾಗಿವೆ. ಕಾಶ್ಮೀರ ಸಮಸ್ಯೆಯ ಬಗ್ಗೆ ಪ್ರಕೃತ ಜನಿವಾದಲ್ಲಿ ಸಂಯುಕ್ತ ರಾಷ್ಟ್ರಸಂಘದ ಮಧ್ಯಸ್ಥರೊಡನೆ ಮಾತುಕತೆ ನಡೆಯುತ್ತಿದ್ದರೂ- ವಿಶೇಷವಾದ ಪ್ರಗತಿ ಏನೂ ಕಂಡುಬರುವುದಿಲ್ಲ. ಈ ನಡುವೆ ಜಮ್ಮುವಿನಲ್ಲಿ ಪ್ರಜಾಪರಿಷತ್ತು ನಡೆಸುತ್ತಿರುವ ಆಂದೋಲನವು ತನ್ನ ಉದ್ದೇಶಕ್ಕೆ ವ್ಯತಿರಿಕ್ತವಾದ ಪರಿಣಾಮವನ್ನೇ ತರುವುದೆಂದು ರಾಷ್ಟ್ರಾಧ್ಯಕ್ಷರು ನುಡಿದು ಜಾತೀಯವಾದಿಗಳಿಂದ ಪ್ರಚೋದಿತವಾದ ಈ ಚಳುವಳಿಯಿಂದ ಶ್ರೇಯಸ್ಸಿಲ್ಲವೆಂಬುದನ್ನು ಸ್ಪಷ್ಟಗೊಳಿಸಿದರು. ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ವಿರುದ್ಧ ನಡೆಸುವ ದಬ್ಬಾಳಿಕೆಯ ಕುರಿತೂ ರಾಷ್ಟ್ರಾಧ್ಯಕ್ಷರು ವಿವಂಚನೆ ವ್ಯಕ್ತಪಡಿಸಿದರು.

ಸರಕಾರದ ಟೀಕೆ

ಪಾರ್ಲಿಮೆಂಟಿನ ಎರಡೂ ಮನೆಗಳೂ ರಾಷ್ಟ್ರಾಧ್ಯಕ್ಷರ ಭಾಷಣವನ್ನು ಸಾವಧಾನ ಚಿತ್ತದಿಂದ ಕೇಳಿಕೊಂಡು, ಈಗ ಬೇರೆ ಬೇರೆಯಾಗಿಯೇ ಕೂಡುತ್ತಿವೆ. ರಾಷ್ಟ್ರಾಧ್ಯಕ್ಷರ ಭಾಷಣದ ಕುರಿತು ಆಭಾರವನ್ನು ಸೂಚಿಸುವ ಗೊತ್ತುವಳಿಯನ್ನು ಲೋಕಸಭೆಯಲ್ಲಿ ಕಾಂಗ್ರೆಸು ಕಾರ್ಯದರ್ಶಿ ಶ್ರೀಮನ್ನಾರಾಯಣ ಅಗ್ರವಾಲರೂ ರಾಜ್ಯಪರಿಷತ್ತಿನಲ್ಲಿ ಶ್ರೀ ಕೆ. ರಾಮರಾಯರು ತಂದಿರುವರು. ರಾಷ್ಟ್ರಾಧ್ಯಕ್ಷರು ದೇಶದ ಭವ್ಯ ಚಿತ್ರವನ್ನು ಕೊಡಲು ಪ್ರಯತ್ನಿಸಿದ್ದು, ಬರಗಾಲ, ನಿರುದ್ಯೋಗ, ಆರ್ಥಿಕ ವೈಷಮ್ಯ ಮುಂತಾದ ಸಂಗತಿಗಳ ಉಲ್ಲೇಖವನ್ನೂ ಮಾಡಿಲ್ಲವೆಂದು ವಿರೋಧೀ ಗುಂಪಿನವರು ನುಡಿದರು. ಕೊರಿಯಾದಲ್ಲಿ ಯುದ್ಧವಿರಾಮವು ಕೈಗೂಡುವಂತೆ ಭಾರತ ಪ್ರಯತ್ನಿಸಿದ್ದರಿಂದ ಅದರ ಪ್ರತಿಷ್ಠೆ ಹೆಚ್ಚಿತೆಂಬುದಾಗಿ ರಾಷ್ಟ್ರಾಧ್ಯಕ್ಷರು ಹೇಳಿದರೂ - ಭಂಡವಾಳಗಾರ ರಾಷ್ಟ್ರಗಳೆನಿಸಿದ ಬ್ರಿಟನು ಅಮೇರಿಕೆಗಳ ಬಾಲಬಡಿಯುವುದೇ ಭಾರತಕ್ಕೆ ಭೂಷಣವಾಯಿತೆಂದುಕಮ್ಯೂನಿಸ್ಟರು ಟೀಕಿಸಿದರು. ಕಾಶ್ಮೀರದ ಪ್ರಶ್ನೆಯೂ ವಿವರವಾಗಿ ಚರ್ಚಿಸಲ್ಪಟ್ಟಿತು ಕಳೆದ ಜುಲೈತಿಂಗಳಿನಲ್ಲಿಆದಒಡಂಬಡಿಕೆಯನ್ನು ತ್ವರ್ಯದಲ್ಲಿಯೇ ಕಾರ್ಯರೂಪಕ್ಕೆ ಇಳಿಸ ತಕ್ಕದ್ದು ಎಂದು ಕಾಂಗ್ರೆಸಿನ ಕೆಲವು ಸದಸ್ಯರು ಹೇಳಿದರೆ ಹಿಂದೂ ಮಹಾಸಭೆಯ ಡಾ| ಖರೆ ಮುಂತಾದವರು ಕಾಶ್ಮೀರದಲ್ಲಿ ಮತಗಣನೆ ನಡೆಸುವುದೆಂದರೇನೆ ಅಸಂಗತ ವಿಚಾರವೆಂದೂ ಅನಿರ್ಬಂಧವಾಗಿ ಜಮ್ಮು ಪ್ರದೇಶವನ್ನು ಭಾರತದಲ್ಲಿ ಸೇರಿಸಿಕೊಳ್ಳತಕ್ಕದ್ದೆಂದೂ ಪ್ರತಿಪಾದಿಸಿದರು.

ಕನ್ನಡ ರಾಜ್ಯ

ಚರ್ಚೆಯ ಕಾಲದಲ್ಲಿ ಕರ್ನಾಟಕ ಪ್ರಾಂತರಚನೆಯ ಸಂಗತಿಯೂ ಉಲ್ಲೇಖಿಸಲ್ಪಟ್ಟಿತು. ಬಳ್ಳಾರಿಯ ಸುಬ್ರಹ್ಮಣ್ಯಮರೂ ಮೈಸೂರಿನ ಗುರುಪಾದ ಸ್ವಾಮಿಯವರೂ ಕರ್ನಾಟಕ ಪ್ರಾಂತರಚನೆಯ ಕುರಿತು ಆವಶ್ಯಕ ಕ್ರಮಗಳನ್ನು ಒಡನೆಯೇ ಕೈಕೊಳ್ಳತಕ್ಕದ್ದೆಂದು ನುಡಿದರು. ಇನ್ನೊಬ್ಬ ಪೊಟ್ಟಿ ಶ್ರೀರಾಮುಲು ಉಪವಾಸವನ್ನು ಕೈಗೊಂಡು ಮೃತ್ಯುವನ್ನಪ್ಪುವಂಥ ಪರಿಸ್ಥಿತಿ ನಿರ್ಮಾಣವಾಗುವುದಕ್ಕೆ ಬಿಡಲಾಗದೆಂದು ಕೆಲವು ಸದಸ್ಯರು ಹೇಳಿದರು. ನಿರಾಶ್ರಿತರ ಸಮಸ್ಯೆಯ ಸುದ್ದಿಯನ್ನೇ ರಾಷ್ಟ್ರಾಧ್ಯಕ್ಷರು ಎತ್ತದಿರುವುದು ಶೋಚನೀಯವೆಂದೊಬ್ಬರು ಉದ್ಗರಿಸಿದರು. ಸಾಮಾನ್ಯವಾಗಿ ವಿರೋಧಿ ಗುಂಪಿನವರಲ್ಲದೆ ಉಳಿದೆಲ್ಲರೂ ಸರಕಾರದ ವಿದೇಶ ನೀತಿಯನ್ನು ಮನಃಪೂರ್ವಕ ಸಮರ್ಥಿಸಿದರು. ಪಂಚವಾರ್ಷಿಕ ಯೋಜನೆಯು ಹೊಂದುತ್ತಿರುವ ಪ್ರಗತಿಯನ್ನೂ ಸಂಪಾದಿಸುತ್ತಿರುವ ಜನಪ್ರಿಯತೆಯನ್ನೂ ಪ್ರಶಂಸಿಸಿ ಮಾತನಾಡಿದವರೇ ಅಧಿಕ. ವಿರೋಧೀ ಗುಂಪಿನವರು ತಮ್ಮ ಟೀಕಾಸ್ತ್ರಗಳನ್ನು ಪ್ರಯೋಗಿಸಿ ಸಭೆಯಲ್ಲಿ ತುರುಸಿನ ಚರ್ಚೆಗೆ ಆಸ್ಪದ ಮಾಡಿಕೊಡಲು ಬಯಸಿದ್ದರೂ—ಅವರ ಮಾತುಗಳಲ್ಲಿ ತೂಕ ಕಂಡುಬರಲಿಲ್ಲವಾದುದರಿಂದ, ಸಪ್ಪೆತನವು ಪ್ರಕಟಗೊಂಡಿತು. ಪ್ರಶ್ನೋತ್ತರ ಕಾಲದಲ್ಲಿ ಕೂಡ ಸ್ವಾರಸ್ಯವುಳಿಯಲಿಲ್ಲ. ಉಪಪ್ರಶ್ನೆಗಳಲ್ಲಿ ಹಲವು ಮುಖ್ಯ ಪ್ರಶ್ನೆಗಳಿಗೆ ಸಂಬಂಧಿಸಿಲ್ಲವೆಂಬ ಕಾರಣಕ್ಕಾಗಿ ತಿರಸ್ಕೃತಗೊಂಡವು. ಜಪಾನಿನ ಸಹಕಾರದಿಂದ ಭಾರತದಲ್ಲಿ ಸ್ಥಾಪಿಸಬೇಕೆಂದಿದ್ದ ಉಕ್ಕಿನ ಕಾರ್ಖಾನೆಯ ವಿಚಾರವನ್ನು ಬಿಟ್ಟುಗೊಡಲಾಗಿದೆ ಎಂದೂ, ವಿದೇಶೀಯರ ನಿಯಂತ್ರಣದಲ್ಲಿ ಇಂಥದೊಂದು ಮೂಲೋದ್ಯೋಗವನ್ನು ತೊಡಗುವುದು ಇಷ್ಟವಲ್ಲವೆಂಬುದೇ ಇದಕ್ಕೆ ಕಾರಣವೆಂದೂ ನೆಹರೂ ವಿವರಿಸಿದರು. ಹಾಗೆಯೇ ನೇಪಾಳದಿಂದ ಗುರ್ಖಾ ಜನರು ಬ್ರಿಟಿಷ ಸೈನ್ಯದಲ್ಲಿ ಭರ್ತಿಯಾಗಲೆಂದು ಭಾರತದ ಮೂಲಕ ಹೋಗಗೊಡುವ ಸವಲತ್ತು ತಾತ್ಪೂರ್ತಿಕ ಸ್ವರೂಪದ್ದೆಂದು ಸಂಬಂಧಿಸಿದ ರಾಷ್ಟ್ರಗಳಿಗೆ ಸ್ಪಷ್ಟೀಕರಿಸಲಾಗಿದೆಯೆಂದೂ ನೆಹರೂ ಹೇಳಿದರು.

ರಾಜ್ಯ ಸರಕಾರಗಳ ಒತ್ತಾಯ

ಆದರೆ ಪ್ರಕೃತದ ಅಧಿವೇಶನದಲ್ಲಿ ರಾಷ್ಟ್ರಾಧ್ಯಕ್ಷರ ಭಾಷಣದಷ್ಟೇ ಪ್ರಾಮುಖ್ಯವೆನಿಸಿದ ಸಂಗತಿಯೆಂದರೆ ಹಣಕಾಸಿನ ಆಯೋಗದ ವರದಿಯಾಗಿದೆ. ಭಾರತವು ಸ್ವತಂತ್ರಗೊಂಡಂದಿನಿಂದ ರಾಜ್ಯಸರಕಾರ

ಏಳು ವರುಷಗಳಲ್ಲಿ ಫಲ

ನಮ್ಮ ಪಿಗ್ಮಿ ಮುಡಿಪುದಾರರಲ್ಲಿ ದಿನವಿಡಿ ಕೆಲಸ ಮಾಡುವ ಶ್ರಮಜೀವಿಗಳು, ಅಂಗಡಿಗಾರರು, ವಕೀಲರು, ಡಾಕ್ಟರರು, ಎಂಜಿನಿಯರರು, ಬೇಸಾಯಗಾರರು, ವರ್ಗದಾರರು ಇತ್ಯಾದಿ ಪರಗತಿಯವರಿರುವರು. ಅವರ ಪಿಗ್ಮಿ ಮುಡಿಪುಗಳು ಚಿಕ್ಕ ಪುಟ್ಟ ರೇವಣಾತಿಗಳಿಂದ ಪ್ರಾರಂಭವಾದುವು ಅಂದು ಇಲಿಯಂತಿದ್ದವು ಇಂದು ಹುಲಿಯಂತಾಗಿವೆ. ಅಂತಹ ವಿವೇಕಪುಳ್ಳ ದೂರ ದರ್ಶಿ ಸಂಪನ್ನ ಪಿಗ್ಮಿ ರೇವಣಾತಿದಾರರ ಕೂಟಕ್ಕೆ ನೀವೂ ಕೂಡಾ ಸೇರಿ ಭಾಗ್ಯವಂತರಾಗ ಬೇಕಾಗಿ ಆಹ್ವಾನಿಸುತ್ತೇವೆ.

ಆಧಾರ ವಹಿವಾಟು ರೂ 5,00,00,000 ಕ್ಕೂ ಮಿಕ್ಕಿದೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925 ಹೆಡ್ ಆಫೀಸು: ಉಡುಪಿ

THE CANARA INDUSTRIAL & BANKING SYNDICATE LIMITED

Estd: 1925 H. O: UDIPI

ಹಣಕಾಸಿನ ಆಯೋಗದ ವರದಿ

ಮದ್ರಾಸು ರಾಜ್ಯಕ್ಕೆ ಹಣದ ಕೊರತೆ ತಪ್ಪಿಲ್ಲ

ಗಳು ನಿರ್ವಹಿಸಬೇಕಾಗಿ ಬಂದ ಹೊಣೆಗಾರಿಕೆಯು ಸ್ವಾಭಾವಿಕವಾಗಿ ಹೆಚ್ಚಿಕೊಂಡಿದೆ. ಕಲ್ಯಾಣ ರಾಷ್ಟ್ರವೆಂಬುದನ್ನು ಸಾರ್ಥಕಗೊಳಿಸಲಿಕ್ಕಾಗಿ, ಜನಹಿತದ ಅನೇಕ ಯೋಜನೆಗಳನ್ನು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಕೈಗೊಳ್ಳುವ ಅಗತ್ಯ ಬಿತ್ತು. ರಾಜ್ಯಸರಕಾರಗಳ ಆದಾಯ ಪರಿಮಿತವಿದ್ದುದರಿಂದ, ಅವು ಈ ಕಾರ್ಯಗಳಿಗಾಗಿ ಕೇಂದ್ರದಿಂದ ವಿಶೇಷ ಸಹಾಯವನ್ನೋ ಸಾಲವನ್ನೋ ಪಡೆಯುತಿದ್ದುವು. ಆದರೆ ಸಾಮಾನ್ಯವಾಗಿ ರಾಜ್ಯ ಸರಕಾರಗಳು ತಮಗೆ ಅಧಿಕ ಉತ್ಪನ್ನ ದೊರೆಯುವಂತೆ ಕೇಂದ್ರ ಸರಕಾರ ಕ್ರಮಗಳನ್ನು ಕೈಗೊಳ್ಳತಕ್ಕದೆಂದು ಪದೇಪದೇ ಒತ್ತಾಯಿಸುತಿದ್ದುವು. ಮುಂಬಯಿ, ಮದ್ರಾಸದಂಥ ರಾಜ್ಯಗಳು ರಾಜ್ಯಘಟನೆಯಲ್ಲಿ ನಿರ್ದೇಶಿಸಲ್ಪಟ್ಟ ಮೂಲತತ್ವಗಳನ್ನು ಅನುಷ್ಠಾನಕ್ಕೆ ತರಲು ಬಯಸಿ ಪಾನಪ್ರತಿಬಂಧದಂಥ ಹೆಜ್ಜೆಯನ್ನು ಮುಂದಿಟ್ಟುದರಿಂದ—ಅವುಗಳಿಗೆ ಇದರಿಂದ ಬರುವ ಹಲವು ಕೋಟಿ ರೂಪಾಯಿಗಳ ಆದಾಯ ಕಡಮೆಯಾಯಿತು ಹೀಗೆ ಒಂದೆಡೆ ವೆಚ್ಚದ ಪ್ರಮಾಣ ಏರುತಿದ್ದಂತೆ- ಆದಾಯವು ಕುಗ್ಗಿತು. ಇವುಗಳನ್ನು ಬಾಯಿಗೂಡಿಸುವುದಕ್ಕೆ ಕರಭಾರವನ್ನು ಹೆಚ್ಚಿಸುವುದವಶ್ಯವೆನಿಸಿತು ಆದರೂ ಕೇಂದ್ರದ ವಶವಿರುವ ಆದಾಯಕರ ಅಬಕಾರಿ ಸುಂಕ ಮುಂತಾದವುಗಳಲ್ಲಿ ತಮ್ಮ ಪಾಲು ಹೆಚ್ಚಿದರೆ ಆದೀತೆಂಬ ಭಾವನೆ ರಾಜ್ಯ ಸರಕಾರಗಳಿಗೆ ಇದ್ದೇ ಇತ್ತು

ಆದಾಯದಲ್ಲಿ ಅಧಿಕ ಪಾಲು

ಕೇಂದ್ರ ಸರಕಾರ ಶ್ರೀ ಕೆ. ಸಿ. ನಿಯೋಗಿಯವರ ಅಧ್ಯಕ್ಷತೆಯಲ್ಲಿ ಹಣಕಾಸಿನ ಆಯೋಗವನ್ನು ೧೯೫೦ ರಲ್ಲಿ ರಚಿಸಿತು ಇದು ಎಲ್ಲ ರಾಜ್ಯ ಸರಕಾರಗಳ ಹೇಳಿಕೆಯನ್ನು ಸಾವಧಾನದಿಂದ ಕೇಳಿಕೊಂಡು. ಕಳೆದ ಡಿಸೆಂಬರದಲ್ಲಿ ತನ್ನ ವರದಿಯನ್ನು ಒಪ್ಪಿಸಿತು. ಅರ್ಥಸಚಿವ ಶ್ರೀ ದೇಶಮುಖರು ಈ ವರದಿಯನ್ನು ಪಾರ್ಲಿಮೆಂಟಿಗೆ ಸಾದರ ಪಡಿಸಿದರು. ಆಯೋಗವು ಮಾಡಿದ ಎಲ್ಲ ಶಿಫಾರಸುಗಳನ್ನೂ ಸರಕಾರವು ಒಪ್ಪಿಕೊಂಡಿದೆ. ಪರಿಣಾಮವಾಗಿ ಇಷ್ಟು ಸಮಯ ರಾಜ್ಯ ಸರಕಾರಗಳಿಗೆ ಕೊಡುತಿದ್ದ ೬೫ ಕೋಟಿ ರುಪಾಯಿಯ ಬದಲು ಇನ್ನು ಮುಂದಕ್ಕೆ ೮೬ ಕೋಟಿ ರುಪಾಯಿನ್ನು ಕೇಂದ್ರ ಕೊಡುವಂತಾಗಿದೆ ಕಳೆದ ವರ್ಷ ಪಂಚವಾರ್ಷಿಕ ಯೋಜನೆಯ ಕುರಿತು ಮಾತನಾಡುವಾಗ ಅರ್ಥಸಚಿವರು ರಾಜ್ಯ ಸರಕಾರಗಳಿಗೆ ಅಧಿಕ ಹಣವನ್ನು ಕೊಡುವ ಸಂದರ್ಭ ಬರಬಹುದೆಂದು ನುಡಿದದ್ದು ಈಗ ನಿಜವೆನಿಸಿದೆ. ಆಯೋಗವು ಆದಾಯ ಕರದಲ್ಲಿ ೫೫ % ರಾಜ್ಯ ಸರಕಾರಗಳಿಗೆ ಸಲ್ಲತಕ್ಕದೆಂದು ಹೇಳಿದೆ. ಕೆಲವು ವಸ್ತುಗಳ ಅಬಕಾರಿ ಸುಂಕದಲ್ಲಿ ೪೦% ಕೊಡಬೇಕೆಂದು ಸೂಚಿಸಿದೆ. ಈ ಸೂಚನೆಗಳನ್ವಯ ರಾಜ್ಯಸರಕಾರಗಳ ಪಾಲನ್ನು ನಿರ್ಧರಿಸುವಾಗ ಮಾತ್ರ ಮಿಶ್ರ ಯೋಜನೆಯೊಂದನ್ನು ಅನುಸರಿಸಿದುದರಿಂದ ಮುಂಬಯಿ ಸರಕಾರವೊಂದಕ್ಕೆ ಈಗಿನದಕ್ಕಿಂತ ೪೦ ಲಕ್ಷ ರುಪಾಯಿ ಕಡಿಮೆ ಸಿಗುವಂತಾಗಿದೆ.

ಮಿಶ್ರ ಯೋಜನೆಯ ತಳಹದಿ

ಮದ್ರಾಸು ರಾಜ್ಯ ಸರಕಾರವೇ ಮೊದಲಾದುವುಗಳು ಆಯೋಗಕ್ಕೆ ತಮ್ಮ ಹೇಳಿಕೆಯನ್ನೊಪ್ಪಿಸುವಾಗ ರಾಜ್ಯಸರಕಾರಗಳಿಗೆ ಅಲ್ಲಿಯ ಜನಸಂಖ್ಯೆ ಪ್ರಮಾಣವನ್ನು ಅನುಸರಿಸಿಯೇ ಆದಾಯಕರ ಮತ್ತು ಅಬಕಾರಿ ಸುಂಕಗಳಲ್ಲಿ ಪಾಲು ದೊರೆಯತಕ್ಕದ್ದೆಂದು ಪ್ರತಿಪಾದಿಸಿದ್ದುವು. ಪ್ರಗತಿಯನ್ನು ಹೊಂದಲು ಎಲ್ಲರಿಗೂ ಸಮಾನಾವಕಾಶವಿದೆಯಾದುದರಿಂದ ಒಟ್ಟು ಉತ್ಪನ್ನವನ್ನು ಸಮಪ್ರಮಾಣದಲ್ಲಿ ಹಂಚುವುದು ಇಷ್ಟವಾಗಿದೆ ಎಂದವು ಅಭಿಪ್ರಾಯಪಟ್ಟಿದ್ದುವು. ಆಯೋಗವು ಈ ಸೂಚನೆಯನ್ನು ಬಹಳ ಮಟ್ಟಿಗೆ ಮಾನ್ಯಮಾಡಿದೆ. ರಾಜ್ಯಸರಕಾರಗಳಿಗೆ ಸಲ್ಲತಕ್ಕ ಆದಾಯಕರದಲ್ಲಿ ೨೦% ಆಯಾ ರಾಜ್ಯಗಳ ವಸೂಲಿಯ ಪ್ರಮಾಣದಲ್ಲಿಯೂ ಉಳಿದಂಶವು ೧೯೫೧ನೇ ಜನಗಣತಿಯನ್ವಯ ಇದ್ದ ಜನಸಂಖ್ಯಾ ಪ್ರಮಾಣದಲ್ಲಿಯೂ ಹಂಚಲ್ಪಡಬೇಕು ಎಂದದು ಹೇಳಿದೆ. ಅಬಕಾರಿ ಸುಂಕದ ಹಂಚುವಿಕೆಗೂ ಜನಸಂಖ್ಯಾ ಪ್ರಮಾಣ ಆಧಾರವೆನಿಸಿದೆ. ಈ ಕಾರಣದಿಂದ ಮುಂಬಯಿಗೆ ಸಿಗುವ ಪಾಲು ಕಡಿಮೆಯಾಯಿತು. ಮದ್ರಾಸು ರಾಜ್ಯಕ್ಕೆ ಇಷ್ಟರ ತನಕ ಸಿಗುತಿದ್ದ ೮೫೬ ಲಕ್ಷ ರೂಪಾಯಿಯ ಬದಲು ೧೧೧೦ ಲಕ್ಷ ರೂಪಾಯಿ ದೊರೆಯುತ್ತದೆ. ಆದರೆ ಕೇಂದ್ರವು ಹೊಗೆಸೊಪ್ಪಿನ ಮೇಲಿನ ಸುಂಕದ ಬಗ್ಗೆ ಕೊಡುತಿದ್ದ ಪರಿಹಾರಧನವನ್ನು ಮಾತ್ರ ನಿಲ್ಲಿಸಲಾಗುವುದು.

ಕೊರತೆಯ ಬಜೆಟು

ಒಟ್ಟಾರೆ ಮದ್ರಾಸು ರಾಜ್ಯಕ್ಕೆ ೩೪೧ ಲಕ್ಷ ರೂಪಾಯಿಗಳ ಲಾಭವಾಗುವುದಾದರೂ—ರಾಜ್ಯದ ಬಜೆಟಿನಲ್ಲಿ ಇನ್ನೂ ಐದಾರು ಕೋಟಿ ರೂಪಾಯಿಗಳ ಕೊರತೆ ನಿಶ್ಚಿತವೆಂದು ಹೇಳುತ್ತಿರುವರು. ಅನಾವೃಷ್ಟಿ ಮತ್ತು ಬರಗಾಲಗಳ ಪರಿಣಾಮವಾಗಿ ಮದ್ರಾಸು ಸರಕಾರವು ೧೦ ಕೋಟಿ ರೂಪಾಯಿಗಳಿಗೂ ಮಿಕ್ಕಿ ವೆಚ್ಚ ಮಾಡಿರುವುದರಿಂದ ಈ ರೀತಿ ದೊಡ್ಡ ಪ್ರಮಾಣದಲ್ಲಿ ಕೊರತೆಯುಂಟಾಗಿದೆ ಬಿರುಗಾಳಿಯ ಅನಾಹುತವೂ, ಪರಿಣಾಮವಾಗಿ ಸರಕಾರವು ಸಾರಿದ ತೀರ್ವೆ ರಿಯಾಯತಿಯೂ, ಬರಗಾಲದ ಪ್ರದೇಶಗಳಲ್ಲಿ ಕೈಗೆಂಡ ಪರಿಹಾರ ಕ್ರಮಗಳೂ—ಎಲ್ಲ ಕೂಡಿ ಈ ಕೊರತೆಯನ್ನುಂಟುಮಾಡಿದ್ದರಿಂದ, ಹೊಸ ತೆರಿಗೆಗಳು ಹೇರಲ್ಪಡುವ ಅಥವಾ ಇದ್ದ ತೆರಿಗೆಗಳೇ ಹೆಚ್ಚಿಸಲ್ಪಡುವ ಭಯವುಂಟಾಗಿದೆ ಮಾರಾಟ ಕರದ ವಸೂಲಿಯು ಹೋದ ವರ್ಷ ಬಜೆಟಿನಲ್ಲಿ ಅಪೇಕ್ಷಿತವಾದ ಪ್ರಮಾಣದಲ್ಲಿ ಆಗಿಲ್ಲವೆಂದು ತಿಳಿದು ಬಂದಿದೆ. ವ್ಯಾಪಾರದಲ್ಲಿ ಮಂದಿಯು ಕಾಣಿಸಿಕೊಂಡಿದ್ದು, ಬೆಲೆಗಳು ನಿಧಾನವಾಗಿ ಇಳಿಯುತ್ತಿರುವುದರಿಂದಲೂ ಪೇಟೆಯಲ್ಲಿ ಭರಾಟೆ ತಗ್ಗಿರುವುದರಿಂದಲೂ ಸರಕಾರದ ಅಂದಾಜು ಕಲಮಟ್ಟಿಗೆ ತಪ್ಪಿದೆ. ಕೇಂದ್ರ ಸರಕಾರವು ಅಬಕಾರಿ ಸುಂಕದಲ್ಲಿ ಮದ್ರಾಸು ರಾಜ್ಯಕ್ಕೆ ಇನ್ನು ಮುಂದೆ ಪಾಲುಕೊಡುವುದರಿಂದ ಮತ್ತು ಹೊಗೆ ಸೊಪ್ಪಿನ ಮೇಲೆ ಸುಂಕವನ್ನು ಹೇರಬಾರದೆಂಬುದಕ್ಕಾಗಿ ಕೇಂದ್ರ ನೀಡುತ್ತಿದ್ದ ಪರಿಹಾರವನ್ನು ಹಣಕಾಸಿನ ಆಯೋಗ ಇನ್ನು ಮುಂದೆ ಕೊಡ ಬಾರದೆಂದಿರುವುದರಿಂದ ಮದ್ರಾಸು ರಾಜ್ಯ ಸರಕಾರವು ಹೊಗೆ ಸೊಪ್ಪಿನ ಮೇಲೆ ಸುಂಕ ಹೇರುವ ಕಾನೂನನ್ನು ಮಾಡಲಿಕ್ಕೂ ಸಾಕು.

ರೇಲ್ವೆಗಳ ಉತ್ಪನ್ನ

ರೇಲ್ವೆ ಬೋರ್ಡಿನವರು ೧೯೫೧-೫೨ ನೇ ವರ್ಷದ ಬಗ್ಗೆ ವರದಿಯನ್ನು ಪ್ರಕಟಿಸಿದ್ದು, ಅದರಲ್ಲಿ ಸುಮಾರು ೨೬೫೪ ಲಕ್ಷ ರುಪಾಯಿಗಳ ನಿಕ್ಕಿ ಉಳಿತಾಯವನ್ನು ತೋರಿಸಿರುವರು. ಕಳೆದ ವರ್ಷದ ನಿಕ್ಕಿ ಉಳಿತಾಯವು ೨೩೮೯ ಲಕ್ಷ ರೂಪಾಯಿಗಳಾಗಿದ್ದುವು ವರದಿಯ ವರ್ಷದಲ್ಲಿ ರೇಲ್ವೇಗಳು ಸಂಪಾದಿಸಿದ ೨೯೦೨೨ ಲಕ್ಷ ರೂಪಾಯಿಗಳಲ್ಲಿ ಪ್ರಯಾಣಿಕರ ಟಿಕೇಟಿನಿಂದ ೧೧೯೨೮ ಲಕ್ಷ ರೂಪಾಯಿಗಳೂ ಸಾರಿಗೆ ವ್ಯವಹಾರದಿಂದ ೧೫೬೭೯ ಲಕ್ಷ ರೂಪಾಯಿಗಳೂ ಇತರ ಒಕ್ಕರೆ ಬಾಬುಗಳಿಂದ ೨೪೧೫ ಲಕ್ಷ ರೂಪಾಯಿಗಳೂ ದೊರೆತುವು. ಕಳೆದ ವರ್ಷಕ್ಕಿಂತ ಈ ವರ್ಷ ೧೩೪೮೧ ಲಕ್ಷ ರೂಪಾಯಿಯಷ್ಟು ಮಾತ್ರ ಹೆಚ್ಚು ವೆಚ್ಚವಾಗಿದ್ದು, ಈ ಪ್ರಮಾಣ ೧೯೪೦೪ ಲಕ್ಷ ರೂಪಾಯಿಯಾಗಿದೆ. ಸರಕಾರದ ಬಂಡವಾಳಕ್ಕೆ ಬಡ್ಡಿಯ ರೂಪದಲ್ಲಿ ೩೩೪೧ ಲಕ್ಷ ರೂಪಾಯಿಯನ್ನು ಸಂದಾಯ ಮಾಡಿದ ಬಳಿಕ, ಮತ್ತು ಸವಕಳಿ ನಿಧಿ ಮುಂತಾದೆಲ್ಲ ರೀತಿಯ ವ್ಯಯವನ್ನೂ ಲೆಕ್ಕಕ್ಕೆ ಹಿಡಿದು ದೊಡ್ಡ ಮೊತ್ತದ ನಿಕ್ಕಿ ಲಾಭವುಂಟಾಗಿರುವುದು ಸ್ತುತ್ಯ. ಹಾಗೆಂದು ಈ ರೀತಿಯ ಲಾಭಾಂಶವು ಎಲ್ಲಿಂದ ಬಂತೆಂಬುದನ್ನು ವಿಚಾರಿಸುವುದು ಅಪ್ರಸಂಗಿಕವಾಗಲಾರದು ಸರಕಾರದವರು ರೇಲ್ವೆಗಳಲ್ಲಿ ಪ್ರಯಾಣಿಕರ ಟಿಕೇಟಿನ ದರಗಳನ್ನು ಏರಿಸಿರುವರು. ಮೂರನೇ ವರ್ಗದ ಪ್ರಯಾಣಿಕರು ಮುಂತಾದವರಿಗೆ ಅಧಿಕ ಅನುಕೂಲತೆಗಳನ್ನೂ ಸೌಕರ್ಯಗಳನ್ನೂ ಕೊಡಬೇಕೆಂಬ ಬೇಡಿಕೆಯನ್ನು ಉಪೇಕ್ಷಿಸಿರುವರು. ರೇಲ್ವೆಗಳನ್ನು ಅಭಿವೃದ್ಧಿಪಡಿಸುವ ವಿಚಾರವೂ ಸರಕಾರದ ತೀವ್ರ ಗಮನವನ್ನು ಸೆಳೆಯುತ್ತಿಲ್ಲ. ಹೀಗೆ ಜನರಿಂದ ಅಧಿಕ ಹಣವನ್ನು ಮಾತ್ರ ಸೂರೆಮಾಡಿ, ಜನಹಿತಕಾರಿಯಾದ ಕೆಲಸಗಳನ್ನು ಮಾಡದೆ ಇದ್ದು ದೊಡ್ಡ ಲಾಭವನ್ನು ತೋರಿಸುವುದು ಮಹತ್ವದ ಸಂಗತಿಯಾಗಲಿಕ್ಕಿಲ್ಲ. ಸರಕಾರವು ಇದನ್ನು ಮನಗಂಡು ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು ಅಪೇಕ್ಷಣೀಯ.

ವಿಚಾರ ಪ್ರಚೋದಕವಾದ ಪ್ರತಿಯೊಬ್ಬರೂ ಓದಲೇಬೇಕಾದ ನವನವೀನ ಪುಸ್ತಕ ಇದು!

ಗೀತಾ ರಹಸ್ಯವನ್ನು ತಿಳಿಯ ಬಯಸುವಿರಾ?

ಡಾ|| ಹೊಸಕೆರೆ ಚಿದಂಬರಯ್ಯ ಕೃತ **ಗೀತೆಯ ಕೈಗನ್ನಡಿ** ಭಗವದ್ಗೀತೆಯ [illegible]

ಪುಟಗಳು 428 ಬೆಲೆ 0-12-0 ಅಂಚೆವೆಚ್ಚ 0-4-0

100 ಪ್ರತಿಗಳಿಗೆ ರೂ. 60, 250ಕ್ಕೆ ರೂ. 140; 500ಕ್ಕೆ ರೂ 250

ಕತೆ, ಕಾದಂಬರಿ, ನಾಟಕ, ಚಿತ್ರ, ಪ್ರಬಂಧ, ಹರಟೆ ಮೊದಲಾದ, [illegible] ಕೂಡಿರುವ ಅಂತರಂಗ ಪ್ರಕಟನಾಲಯದ ರೂ 30 ಬೆಲೆಯ 56 ಪ್ರಕಟನೆಗಳನು ಒಮ್ಮೆಯೇ ತರಿಸಿಕೊಳ್ಳುವವರಿಗೆ ರೂ. 24ಕ್ಕೆ ಕೊಡಲಾಗುವುದು.

ನಾರೀಹೃದಯ ರೂ.	1	8	ಪ್ರಸಾದ ರೂ.	[illegible]	8	[illegible] ರೂ.	2	0
ಭಾರತೀಯ ಕತೆಗಳು	1	12	ಮಧುವನ	1	0	ಕಾವ್ಯ ಕುಸುಮ	1	8
[illegible] ಸೋಗಿನಲ್ಲಿ	1	12	ಘಂಟೆ [illegible]	2	0	ಪ್ರೇಮ ವಿಜಯ	1	4
[illegible]	2	0	ಸಂಧ್ಯಾದೀಪ	1	[illegible]	ರಂಗಭೂಮಿ	0	10
ಕುಲವಿಲ್ಲದ ಹೆಣ್ಣು	2	0	ಬಲಿದಾನ	[illegible]	[illegible]	ಭಾರತದಲ್ಲಿ ಜಾತಿಭೇದ	1	0
[illegible]	1	4	ದೇಶಭಕ್ತ	1	4	ವೀರ ಸಾವರ್ಕರ	1	4
[illegible] ಇಂಗ್ಲಿಷ್	2	0	ಮನೆ ಮದ್ದು	2	[illegible]	ಕದಂಬ	1	4
ನೀತಿವಿನೋದ ಕತೆಗಳು	0	12	[illegible]	0	12	[illegible]	1	4
ಜೀವನ ಸಂಗ್ರಾಮ	1	8	ಸೇವಾಪಥ	0	[illegible]	[illegible]	0	8

ಇವೇ ಮೊದಲಾದ ನೂರಾರು ಬಗೆಯ ಉಪಯುಕ್ತ ಪುಸ್ತಕಗಳ ಕೆಟಲಾಗಿಗೆ ಬರೆಯಿರಿ ವ್ಯಾಪಾರಿಗಳಿಗೂ, ಪುಸ್ತಕಭಂಡಾರಗಳಿಗೂ ವಿಶೇಷ ಸವಲತ್ತುಗಳಿವೆ

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಉಡುಪಿ ಡಿ. ಮು. ಕೋರ್ಟಿನಲ್ಲಿ.

O. S No 5/1953

[illegible] —ವಾದಿ

ಮತ್ತು

1 [illegible]

[illegible] 3 [illegible] —ಪ್ರತಿವಾದಿ

[illegible] 387 [illegible] 1 1 50 [illegible] ರೂ. 465-2-0 [illegible] 6 2 5 [illegible] 10ಕ್ಕೆ [illegible]

Gratian C. Rego

Vakil for plaintiff

ಉಡುಪಿ, ತಾ 16 2-53

ಶಾಲೆಗಳಿಗೆ ಬೇಕಾಗುವ ರಿಜಿಸ್ಟ್ರಿ ಫಾರ್ಮುಗಳು ಸಿಗುತ್ತವೆ.

ಮಗ್ಗಿ ಪುಸ್ತಕಗಳು

ರಖಂ ಆಗಿಯೂ, ಚಿಲ್ಲರೆಯಾಗಿಯೂ ಮಾರಲ್ಪಡುತ್ತವೆ.

ಬೆಲೆ ಪ್ರತಿ 1ಕ್ಕೆ 0—1—0

„ „ 100ಕ್ಕೆ 5—0—0

ನವಯುಗ ಪ್ರೆಸ್, ಉಡುಪಿ.

ಸ್ಥಾಪನೆ 1906

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಪ್ರಧಾನ ಕಾರ್ಯಾಲಯ ಉಡುಪಿ, (ದ ಭಾರತ)

ಜಿಲ್ಲೆಯಲ್ಲಿ ಅತಿ ಹಿರಿಯ ಬ್ಯಾಂಕು ಇದರ ಕೂಡ ವ್ಯವಹಾರ ನಡೆಸಲು—
ಮದ್ರಾಸು, ಮೈಸೂರು, ಮುಂಬಾಯಿ, ಕೊಡಗು ಮತ್ತು
ಕೊಚ್ಚಿ-ತಿರುವಾಂಕೂರು ಸಂಸ್ಥಾನಗಳಲ್ಲಿ ಎಲ್ಲಿಯೂ,
ಯಾರಿಗೂ, ಯಾವಾಗಲೂ ನೀವು ಇದನ್ನು ಶಿಫಾರಸು ಮಾಡಬಹುದು

THE CANARA BANKING CORPORATION LTD

Estd 1906] [H O UDIPI, (S India)

ನವಯುಗ

ಉಡುಪಿ, ಗುರುವಾರ ೧೯-೨-೫೩

ಸೌಹಾರ್ದ ಸಂಬಂಧ

ಕೆಲವು ದಿನಗಳ ಹಿಂದೆ ಕರಾಚಿಯ ಭಾರತೀಯ ಹೈಕಮಿಶನರ ಕಚೇರಿಯಲ್ಲಿ ಪ್ರಜಾರಾಜ್ಯೋತ್ಸವದ ನಿಮಿತ್ತ ಮಾತನಾಡುವಾಗ ಪಾಕಿಸ್ತಾನದ ಪ್ರಧಾನಿ ನಾಜಿಮುದ್ದೀನರು ಅತ್ಯಂತ ಸೌಹಾರ್ದಯುತವಾದ ನುಡಿಗಳನ್ನು ಆಡಿದ್ದರು. ಯುದ್ಧವು ಇಬ್ಬಣಗಳಿಗೂ ಅಪಾಯಕಾರಿಯಾದುದೆಂದೂ ಇದರ ಕುರಿತು ಮಾತನಾಡುವುದು ಕೂಡ ಘಾತಕವಾದುದೆಂದೂ ನಾಜಿಮುದ್ದೀನರು ನುಡಿದುದರಿಂದ -ಭಾರತ ಪಾಕಿಸ್ತಾನಗಳೆಂಬೀ ಸಹೋದರ ರಾಷ್ಟ್ರಗಳಲ್ಲಿ ಈಗ ವಿದ್ಯಮಾನವಿರುವ ವೈಷಮ್ಯ ಭಾವವೂ ತಿಕ್ಕಾಟವೂ ದೂರವಾಗುವುದೆಂದು ಪ್ರಾಮಾಣಿಕವಾಗಿ ಎಲ್ಲರೂ ಆಶಿಸಿದ್ದರು. ಈ ಆಶೆಗೆ ಪುಟವಿಡುವಂತೆ ನೆಹರೂ- ನಾಜಿಮುದ್ದೀನರಲ್ಲಿ ಉಚ್ಚ ಮಟ್ಟದ ಪತ್ರವ್ಯವಹಾರಗಳು ನಡೆಯುತ್ತಿವೆ ಎಂಬ ಸುದ್ದಿಯೂ ಇತ್ತು. ಈ ಸಂಗತಿಯನ್ನು ನಾಜಿಮುದ್ದೀನರು ತಮ್ಮ ಭಾಷ [illegible] ನೆಹರೂ [illegible] ಪತ್ರವ್ಯ [illegible] ನಡೆಯುತ್ತಿವ [illegible] ಸಂಬಂಧಿಸಿದ [illegible] ಸಿರಾಶ್ರಿ [illegible] ನದಿಯ [illegible] ಪರಿ [illegible] ಕ್ಕೆ [illegible] ಕ್ಷೇಪ [illegible] ಸಂಸ್ಥಾನವನ್ನು [illegible] ವುದು. ಭಾರತ [illegible] ನಿಯಾಗಿರುತ್ತದ [illegible] ತೊಡಗಿ ಎರಡೂ ರಾಷ್ಟ್ರಗಳು ಯುದ್ಧ ನಿಷೇಧ ಘೋಷಣೆಯನ್ನು ಮಾಡಿದಲ್ಲಿ ಸಮಸ್ಯೆಗಳನ್ನು ಬಿಡಿಸುವಲ್ಲಿ ಹೆಚ್ಚಿನ ಯಶಸ್ಸು ಲಭ್ಯವಾದೀತೆಂದು ಹೇಳಿರುವರು. ಅದರ ಯುದ್ಧವಿಲ್ಲವೆಂದು ಘೋಷಣೆ ಮಾಡುವಲ್ಲಿ ನಾಜಿಮುದ್ದೀನರು ಹಿಂದು ಮುಂದು ನೋಡುತ್ತಿರುವುದು ಸಂಶಯಕ್ಕೆ ಕಾರಣವಾಗಿದೆ. ಪ್ರಾಯಶಃ ಮಧ್ಯಪೂರ್ವ ಸಂರಕ್ಷಣೆಯಲ್ಲಿ ಪಾಕಿಸ್ತಾನವು ಸೇರಲಿಕ್ಕಿರುವುದರಿಂದ ತನ್ಮೂಲಕ ಭಾರತದ ಎದೆಗೆ ಗುಂಡಿಡಲು ಸಾಧ್ಯವಾಗುವುದಾದಲ್ಲಿ ಯುದ್ಧ ನಿಷೇಧ ಘೋಷಣೆ ತಮಗೇ ಬಂಧಕಾರಿಯಾದೀತೆಂದು ನಾಜಿಮುದ್ದೀನರ ವಿಚಾರವಿರಬಹುದು. ಹೀಗೆ ನಿರಾಶೆಯು ಕವಿದಿದ್ದರೂ ಇದೀಗ ಪತ್ರಿಕಾ ಪರಿಷತ್ತಿನಂದರಲ್ಲಿ ನಾಜಿಮುದ್ದೀನರು ಭಾರತ-ಪಾಕಿಸ್ತಾನದ ಸಂಬಂಧದಲ್ಲಿ ಪುನಃ ಆಡಿದ ಮಾತುಗಳು ಮರಳಿ ಆಶೆಯನ್ನು ಹುಟ್ಟಿಸುತ್ತವೆ. ನಾಜಿಮುದ್ದೀನರು ನೆಹರೂರನ್ನು ಭೇಟಿಯಾಗಿ ಉಭಯ ರಾಷ್ಟ್ರಗಳಿಗೆ ಸಂಬಂಧಿಸಿದ ಸಮಸ್ಯಾತ್ಮಕ ವಿಷಯಗಳನ್ನು ಚರ್ಚಿಸಲು ತಾವು ಸಿದ್ಧರಿರುವುದಾಗಿ ಸಾರಿ ಎಲ್ಲರ ಕುತೂಹಲವನ್ನೂ ಕೆರಳಿಸಿರುವರು. ಆದರೆ ಒಂದು ಶರ್ತವನ್ನು ಮಾತ್ರ ಮುಂದೊಡ್ಡಿರುವರು. ಅದೇನೆಂದರೆ, ಚರ್ಚೆಗೆ ಸಂಬಂಧಿಸಿದ ವಿಷಯಗಳನ್ನು ಮೊದಲೇ ಗೊತ್ತುಪಡಿಸಿ, ಎರಡೂ ಪಕ್ಷಗಳು ಅದನ್ನು ಸ್ವೀಕರಿಸತಕ್ಕದ್ದು. ಇಲ್ಲಿ ಕೂಡ ನೆಹರೂರ ಸಂಪರ್ಕದಿಂದ ಅನಿವಾರ್ಯವಾಗಿ ಯುದ್ಧ ನಿಷೇಧ ಘೋಷಣೆಯನ್ನು ಹೊರಡಿಸಬೇಕಾಗಿ ಒಂದೀತೋ ಏನೋ ಎಂಬ ಭಯವೇ ನಾಜಿಮುದ್ದೀನರನ್ನು ಬಾಧಿಸುತಿದ್ದಂತೆ ತೋರುತ್ತದೆ. ವಿಷಯಪಟ್ಟಿಯನ್ನು ಮೊದಲೇ ನಿರ್ಧರಿಸುವ ಅಗತ್ಯವೇ ಬೀಳದಿರುವಲ್ಲಿ ಅದಕ್ಕಾಗಿ ಒತ್ತಾಯಿಸುವುದು ನಿರರ್ಥಕ. ಉಭಯ ರಾಷ್ಟ್ರಗಳ ನೀತಿ-ಧೋರಣೆಯನ್ನು ರೂಪಿಸುವ ಪರಿಷ್ಕೃಸ್ಥಾನದ ಮಹನೀಯರು ಒಟ್ಟಿಗೆ ಸೇರಿ ಚರ್ಚಿಸುವ ಕಾಲಕ್ಕೆ – ಯಾವುದೇ ಸಂಗತಿಯೂ ಅವರ ಕದಿಕಾರಕಕ್ಷೆಯಿಂದ ಹೊರಗುಳಿಯಲಾರದು, ಮತ್ತು ಈ ಪ್ರಧಾನಿಗಳು ಮಾಡಿಕೊಳ್ಳಬಹುದಾದ ಯಾವುದೇ ಒಪ್ಪಂದವಾದರೂ ಜನರಿಂದ ಅಮಾನ್ಯವಾಗಲಾರದು. ಸ್ನೇಹದಿಂದಲೂ ಸೌಹಾರ್ದ ವಾತಾವರಣದಲ್ಲಿಯೂ ಸಮಸ್ಯೆಗಳು ಪರಿಹಾರಗೊಂಡು ಉಭಯ ರಾಷ್ಟ್ರಗಳಲ್ಲಿ ದ್ವೇಷ ಕಡಿಮೆಯಾಗಬೇಕೆಂಬ ನಿಜವಾದ ಇಚ್ಛೆಯಿದ್ದಲ್ಲಿ—ಇಂಥದೊಂದು ಭೇಟಿಯಿಂದ ಬಹಳ ಲಾಭವಾಗಲಿಕ್ಕಿದೆ. ಏನಿಲ್ಲೆಂದರೂ ಆಯಾ ರಾಷ್ಟ್ರಗಳ ಜನತೆಯಲ್ಲಿ ಧೈರ್ಯವೂ ವಿಶ್ವಾಸವೂ ಉಂಟಾಗಿ ದ್ವೇಷಭಾವನೆಯು ತೊಲಗುವುದು ನಿಶ್ಚಯ. ಈ ಹಿಂದ ನೆಹರೂ ಲಿಯಾಕತ ಭೇಟಿಯ ಪರಿಣಾಮವಾಗಿ ಕದಡಿದ ವಾತಾವರಣವು ಎಷ್ಟೋ ಮಟ್ಟಿಗೆ ತಿಳಿಯಾಗಿತ್ತು. ಅಂದು ಮಾಡಿದ ಒಪ್ಪಂದವು ಈ ವರೆಗೆ ಸಾಧಿಸಿದ ಪ್ರಗತಿಯ ಸಿಂಹಾವಲೋಕನವನ್ನು ಮಾಡಿದರೂ ಸಾಕು-ಮಹಾ ಪ್ರಧಾನಿಗಳ ಭೇಟಿಯು ಸಾರ್ಥಕವೆಂದೇ ಹೇಳಬೇಕು. ನಾಜಿಮುದ್ದೀನರು ಭಾರತದ ನಿಜವಾದ ಧೋರಣೆಯನ್ನು ಸ್ಪಷ್ಟತಮಾಡಿಕೊಂಡು, ನೆಹರೂರನ್ನು ಬೇಗನೇ ಭೇಟಿಯಾಗುವುದೊಳ್ಳೇಯದು. ಮೊದಲಿಂದಲೂ ಶಾಂತಿ ಮಾರ್ಗವನ್ನೇ ಅನುಸರಿಸುತ್ತ ಬಂದಿರುವ ಭಾರತವು ಇನ್ನು ಮುಂದೆ ಕೂಡ ಅದನ್ನು ಬಿಟ್ಟುಗೊಡುವುದಿಲ್ಲವೆಂದು ರಾಷ್ಟ್ರಾಧ್ಯಕ್ಷರು ಸಂಸತ್ತನ್ನು ಉದ್ಘಾಟಿಸುವಾಗ ಮಾಡಿದ ತಮ್ಮ ಭಾಷಣದಲ್ಲಿ ಸಾರಿ ಹೇಳಿರುವರು. ಭಾರತ–ಪಾಕಿಸ್ತಾನಗಳಿಗೆ ಸಂಬಂಧಿಸಿದ ತಂಟೆಗಳು ಜಿಲ್ಲೋದಾಗಿ ಪರಿಹಾರ ಹೊಂದಬೇಕಾದಲ್ಲಿ ಯುದ್ಧ ಭಯ ದೂರಾಗುವುದು ಪ್ರಥಮಾವಶ್ಯಕತೆ ಎನ್ನುವುದು ಸತ್ಯ. ಇದಕ್ಕೆ ಅನುಕೂಲಿಸುವಂತೆ ಉಭಯ ರಾಷ್ಟ್ರಗಳ ಧುರೀಣರೂ ಮುತ್ಸದ್ದಿತನದಿಂದ ನಡೆದುಕೊಳ್ಳುವರೆಂದು ಆಶಿಸುವುದು ಯೋಗ್ಯ. ನಾಜಿಮುದ್ದೀನರು ಸಂಕೋಚವನ್ನೂ ಸಂಶಯವನ್ನೂ ಬಿಟ್ಟುಗೊಟ್ಟು ನೆಹರೂ ಭೇಟಿಯ ದಿನವನ್ನು ಶೀಘ್ರವಲ್ಲಿಯೇ ನಿಶ್ಚಯಿಸುವಂತಾದರೆ ಅದರಿಂದ ಸಂತೋಷ.

ಸುಡಾನೀಯರಿಗೆ ಸಂತೋಷ ವಾರ್ತೆ

ಇನ್ನು ಮೂರುವರ್ಷಗಳಲ್ಲಿ ಭವಿಷ್ಯ ನಿರ್ಣಯಿಸುವ ಸ್ವಾತಂತ್ರ್ಯ

ಜನರಲ್ ಮಹಮ್ಮದ ನಗೀಬರು ಈಜಿಪ್ತದಲ್ಲಿ ಸೈನ್ಯ ಕ್ರಾಂತಿಯನ್ನು ಮಾಡಿ ಸರ್ವಾಧಿಕಾರಿತ್ವವನ್ನೇ ಪ್ರಸ್ಥಾಪಿಸಿದ್ದರೂ-ಅವರು ಸಮಸ್ಯೆಗಳನ್ನು ಮುತ್ಸದ್ದಿತನದಿಂದ ಬಿಡಿಸಬಲ್ಲರೆಂದು ಈಗ ತಾನೆ ಸುಡಾನದ ಸಂಬಂಧದಲ್ಲಿ ಮಾಡಿಕೊಂಡ ಒಪ್ಪಂದದಿಂದ ತೋರಿಸಿಕೊಟ್ಟಿರುವರು. ಸುಡಾನದ ಮೇಲೆ ಈಜಿಪ್ತದ ಅಧಿಕಾರ ಮತ್ತು ಸುಯೇಜ ಕಾಲುವೆ ಪ್ರದೇಶದಿಂದ ಬ್ರಿಟಿಷ ಪಡೆಗಳ ನಿರ್ಗಮನ ಈ ಎರಡು ವಿಷಯಗಳ ಮೇಲೆ ಈಗ್ಗೆ ಕೆಲವು ವರ್ಷಗಳಿಂದ ಬ್ರಿಟನು ಮತ್ತು ಈಜಿಪ್ತಗಳೊಳಗೆ ತೀವ್ರ ಮನಸ್ತಾಪವುಂಟಾಗಿದ್ದಿತು. ಇವೆರಡು ಬಿಕ್ಕಟ್ಟಿನ ಸಮಸ್ಯೆಗಳಲ್ಲಿ ಸುಡಾನದ ಪ್ರಶ್ನೆ ಸ್ನೇಹದಲ್ಲಿಯೇ ಇತ್ಯರ್ಥಗೊಂಡ ಸಂಗತಿಯಿಂದ ಸಂಬಂಧಿಸಿದೆಲ್ಲರಿಗೂ ಹರ್ಷವಾಗಿರುವುದು ಸ್ವಾಭಾವಿಕ. ಸುಡಾನವು ಬ್ರಿಟಿಷ ಹಾಗು ಈಜಿಪ್ತ ಸೈನ್ಯಗಳ ಸಂಯುಕ್ತ ಬಲದಿಂದ ಗೆದ್ದುಕೊಂಡ ಪ್ರದೇಶವಾಗಿದ್ದುದರಿಂದ ೧೮೯೯ರಷ್ಟು ಹಿಂದಿನಿಂದಲೇ ಇವೆರಡೂ ಸರಕಾರಗಳ ಸಂಯುಕ್ತ ಆಡಳಿತವು ನಡೆಯುತಿದ್ದಿತು. ಆದರೂ ಈಜಿಪ್ತವು ಸುಡಾನದ ಗವರ್ನರ ಜನರಲನಾಗಿ ಯಾರಾದರೊಬ್ಬ ಬ್ರಿಟಿಷರವನನ್ನೇ ನೇಮಿಸುತಿದ್ದುದರಿಂದ ಬ್ರಿಟಿಷರ ಮಾತೇ ಅಲ್ಲಿ ನಡೆಯುತಿತ್ತೆಂಬುದು ನಿರ್ವಿವಾದ. ಆದರೆ ದ್ವಿತೀಯ ಮಹಾಯುದ್ಧದ ಬಳಿಕ ಈಜಿಪ್ತದಲ್ಲಿ ರಾಷ್ಟ್ರೀಯ ಮನೋವೃತ್ತಿಯು ಪ್ರಾಬಲ್ಯಕ್ಕೆ ಬಂದು, ಬ್ರಿಟಿಷರ ಅಧಿಕಾರದ ವಿರುದ್ಧ ಚಳುವಳಿಯನ್ನು ಸಂಘಟಿಸ ಹತ್ತಿದರು. ಜಾಗೃತಗೊಂಡ ರಾಷ್ಟ್ರೀಯ ಭಾವನೆಗೆ ಆಸ್ಪದ ಕೊಟ್ಟಿದ್ದಾದರೆ ತಮ್ಮ ಅಸ್ತಿತ್ವಕ್ಕೆ ಧಕ್ಕೆ ಬರುವದೆಂದುಕೊಂಡ ಬ್ರಿಟನು ಒಂದಲ್ಲೊಂದು ನೆವವನ್ನು ಮುಂದು ಮಾಡಿಕೊಂಡು ತನ್ನ ಅಧಿಕಾರ ಸುರಕ್ಷಿತವಾಗಿರುವಂತೆ ನೋಡಿಕೊಳ್ಳಲೆತ್ನಿಸಿತು.

ನಗೀಬರ ಸಾಹಸ

ಈ ಉಪಾಯಗಳಲ್ಲಿ ಸುಡಾನಿನ ಜನತೆಗೆ ಸ್ವಯಂ ನಿರ್ಣಯಾಧಿಕಾರವನ್ನು ಕೊಡದಿದ್ದರೆ, ಪ್ರಕೃತದ ಪರಿಸ್ಥಿತಿಗೆ ಅದು ಸಲ್ಲದ ವಿಚಾರವೆಂದು ಬ್ರಿಟಿಷರು ನೆವವನ್ನು ಮುಂದೊಡಿದ್ದು ಮುಖ್ಯವಾದದ್ದು. ಈಜಿಪ್ತದಲ್ಲಿ ನಗೀಬರಿಗೆ ಮುಂಚೆ ಅಧಿಕಾರದಲ್ಲಿದ್ದ ಸರಕಾರವು ಸುಡಾನದ ಮೇಲೆ ತನಗೆ ಸಾರ್ವಭೌಮಾಧಿಕಾರವಿದೆ ಎಂದು ಸಾರಿದ್ದುದರಿಂದ ಬ್ರಿಟಿಷರ ಆಕ್ಷೇಪಕ್ಕೆ ನ್ಯಾಯದ ಮುಖವಾಡ ದೊರೆಕಿತು. ಜೊತೆಗೆ ಸುಡಾನದ ದಕ್ಷಿಣ ಪ್ರದೇಶದಲ್ಲಿರುವ ಹಿಂದುಳಿದ ಜನರನ್ನು ಎತ್ತಿಕಟ್ಟಿ, ಈ ಜನರ ಸಂಗತಿಯಲ್ಲಿ ತಮಗೆ ಅಧಿಕಹೊಣೆಯಿದೆಯಾಗಿಯೂ ವಾದಿಸಿದರು. ಹೀಗೆ ಪರಸ್ಪರರಲ್ಲಿ ಒಮ್ಮತವುಂಟಾಗುವುದೇ. ಅಶಕ್ಯವೆಂದಿದ್ದ ಕಾಲದಲ್ಲಿ ಜನರಲ್ ನಗೀಬರು ಅಧಿಕಾರಕ್ಕೆ ಬಂದರು. ನಗೀಬರಲ್ಲಿ ಸುಡಾನದ ರಕ್ತವೂ ಅರೆವಾಸಿ ಇತ್ತು, ಆ ಕಾರಣ ಅವರು ಸುಡಾನಿಗಳೊಡನೆಯೇ ನೇರಾಗಿ ಈ ಪ್ರಶ್ನೆಯನ್ನು ಎತ್ತುವ ಸಾಹಸ ಮಾಡಿದರು. ಸುಡಾನೀಯರ ವಿಶ್ವಾಸವನ್ನು ಸಂಪಾದಿಸದೆ ಪರಿಣಾಮಕಾರಿಯಾದ ಹೆಜ್ಜೆಯನ್ನು ಮುನ್ನಿಡುವುದು ಸಾಧ್ಯವಾಗಲಾರದೆಂದು ಅವರು ಕಂಡುಕೊಂಡರು. ತಮ್ಮ ಈ ಕಾರ್ಯದಲ್ಲಿ ಆತಂಕವೊಡ್ಡಬಹುದಾಗಿದ್ದ ಈಜಿಪ್ತದ ಎಲ್ಲ ರಾಜಕೀಯ ಪಕ್ಷಗಳನ್ನೂ ಬರಖಾಸ್ತುಗೊಳಿಸಲಿಕ್ಕೂ ನಗೀಬರು ಹಿಂಜರಿಯಲಿಲ್ಲ.

ಮೂರು ವರ್ಷಗಳಲ್ಲಿ ಸ್ವಾತಂತ್ರ್ಯ

ಸುಡಾನಿಗಳೊಡನೆ ನೇರಾಗಿ ಮಾತುಕತೆಯನ್ನು ನಡೆಸಿದುದರಿಂದ ಪರಿಣಾಮ ತುಂಬ ಆಶಾದಾಯಕವಾಗಿ ಪರಿಣಮಿಸಿತು. ಮುತ್ಸದ್ದಿತನ ಮತ್ತು ಕಾರ್ಯಸಾಮರ್ಥ್ಯದಿಂದ ಸುಡಾನದ ಎಲ್ಲ ಪಕ್ಷಗಳ ಬಲವನ್ನೂ ನಗೀಬರು ಸಂಪಾದಿಸಿಕೊಂಡರು. ಮೇಲಾಗಿ--ರಾಷ್ಟ್ರೀಯ ವಾದಿಗಳು ಘೋಷಿಸಿದ್ದ ಸುಡಾನದ ಮೇಲೆ ಈಜಿಪ್ತದ ಸಾರ್ವಭೌಮಾಧಿಕಾರವೆಂಬ ಸಂಗತಿಯನ್ನು ಮೂಲೆಗುಂಪುಮಾಡಿ--ಸುಡಾನೀಯರಿಗೇ ಈ ಪ್ರಶ್ನೆಯನ್ನು ನಿರ್ಣಯಿಸುವ ಅಧಿಕಾರವಿದೆಯೆಂದರು. ಹೀಗೆ ಸುಡಾನೀಯರಿಂದ ತನಗೆ ಬೆಂಬಲವನ್ನು ಪಡೆದು ನಗೀಬರು ಬ್ರಿಟಿಷ ಸರಕಾರದೊಡನೆ ಮಾತುಕತೆಯನ್ನು ಕೈಗೊಂಡರು. ಇದೀಗ ಆಂಗ್ಲೋ ಈಜಿಪ್ಶಿಯನ್ ಒಪ್ಪಂದವಾಗಿದ್ದು, ಅದರನ್ವಯ ಇನ್ನು ಮೂರು ವರ್ಷಗಳಲ್ಲಿ ಸುಡಾನೀಯರಿಗೆ ಸ್ವಾತಂತ್ರ್ಯದ ಆಶ್ವಾಸನೆಯನ್ನು ಕೊಡಲಾಗಿದೆ. ಚುನಾವಣೆಗಳು ಪ್ರಾಯಶಃ ಮುಂದಿನ ತಿಂಗಳಿನಲ್ಲಿಯೇ ನಡೆದು, ಪಾರ್ಲಿಮೆಂಟು ರಚಿಸಲ್ಪಡುವುದು. ಈ ಪಾರ್ಲಿಮೆಂಟಿನಲ್ಲಿ ದಕ್ಷಿಣದ ಕಾಡು ಸ್ಥಿತಿಯಲ್ಲಿರುವ ಜನರಿಗೆ ೨೫ /. ಸ್ಥಾನವನ್ನು ಮೀಸಲಾಗಿಟ್ಟಿರುವುದರಿಂದ ಯಾರಿಗೂ ದೂರುವದಕ್ಕೆ ಅವಕಾಶವುಂಟಾಗಿಲ್ಲ. ಪಾರ್ಲಿಮೆಂಟು ಘಟನಾಸಮಿತಿಯನ್ನು ಆರಿಸುವ ಕಾಯಿದೆಯನ್ನು ಮಾಡುವುದು. ಘಟನಾ ಸಮಿತಿಯು ಸುಡಾನು ಸ್ವತಂತ್ರವಾದ ರಾಜ್ಯವಾಗಬೇಕೇ ಅಥವಾ ಈಜಿಪ್ತದೊಡನೆ ಸೇರಬೇಕೆ ಎಂಬುದನ್ನು ನಿರ್ಧರಿಸುವುದು.

ಮಧ್ಯಂತರದ ಅವಧಿಯಲ್ಲಿ

ಮಧ್ಯಂತರದ ಮೂರು ವರ್ಷಗಳ ಅವಧಿಯಲ್ಲಿ ಗವರ್ನರ ಜನರಲ್ಲರು ಅಧಿಕಾರ

ನಡೆಸುತ್ತಿದ್ದರೂ ಅವರ ಮೇಲೆ ಬ್ರಿಟಿಷ ಈಜಿಪ್ಶಿಯನ್ ಮತ್ತು ಪಾಕಿಸ್ತಾನೀ ಸದಸ್ಯರಿಂದ ಕೂಡಿದ ಒಂದು ಸಮಿತಿಯು ಪಾರ್ಲಿಮೆಂಟಿನ ಸಮ್ಮತಿಯಿಂದ ಸ್ಥಾಪಿಸಲ್ಪಟ್ಟು ನಿಯಂತ್ರಣವನ್ನಿಡುವುದು ಪಾರ್ಲಿಮೆಂಟಿಗೆ ಚುನಾವಣೆ ನಡೆಯುವಾಗ ಹಸ್ತಕ್ಷೇತವಾಗದಂತೆ ಮೂವರು ಸುಡಾನೀಯರು, ಮತ್ತು ಬ್ರಿಟನು, ಅಮೇರಿಕ, ಈಜಿಪ್ಟ ಮತ್ತು ಭಾರತಗಳ ಒಬ್ಬೊಬ್ಬ ಪ್ರತಿನಿಧಿಯುಳ್ಳ ಒಂದು ಆಯೋಗ ರಚಿಸಲ್ಪಡುವುದು. ಭಾರತೀಯ ಪ್ರತಿನಿಧಿಯು ಇದರ ಅಧ್ಯಕ್ಷಸ್ಥಾನದಲ್ಲಿರುವನು. ಈಗ ಬಂದಿರುವ ವರದಿಗಳಂತೆ ಭಾರತದ ಚುನಾವಣ ಕಮಿಶನರಾಗಿರುವ ಶ್ರೀ ಸುಕುಮಾರ ಸೇನರು ಭಾರತವನ್ನು ಪ್ರತಿನಿಧೀಕರಿಸಬಹುದು. ಹೀಗೆ ಎಲ್ಲರಿಗೂ ಸಂತೋಷಕರವಾದ ರೀತಿ ನಗೀಬರು ಸುಡಾನದ ನವ ಪ್ರಶ್ನೆಯನ್ನು ಬಗೆಹರಿಸಿದ್ದರಿಂದ, ಸಮಾಧಾನಕರವಾದ ವಾತಾವರಣವುಂಟಾಗಿದೆ. ಸುಯೇಜ ಪ್ರದೇಶದಲ್ಲಿ ಬ್ರಿಟಿಷರ ಸೇನೆಯಿರಲಾರದೆಂಬ ಸಂಗತಿಯಲ್ಲಿ ಒಡನೆಯೇ ಬ್ರಿಟನಿನೊಡನೆ ನಗೀಬರು ಮಾತುಕತೆಯನ್ನು ತೊಡಗಲಿರುವರು. ಬಹುಶಃ ಬ್ರಿಟಿಷರು ಈ ಬೇಡಿಕೆಗೂ ಸಮ್ಮತಿಸಬಹುದು. ಪರಿಸ್ಥಿತಿಯು ದಿನದಿಂದ ದಿನಕ್ಕೆ ಬದಲಾಗುತ್ತ ನಡೆದಿರುವುದರಿಂದ ಭೂಮಧ್ಯ ಸಮುದ್ರದಲ್ಲಾಗಲೀ ಮಧ್ಯಪೂರ್ವದಲ್ಲಾಗಲೀ ಎಲ್ಲಾ ಸರೊಂದು ಹೊಸ ರಾಜ್ಯವನ್ನು ಅದು ಇಷ್ಟರಲ್ಲಿಯೇ ಹುಡುಕಿಟ್ಟಿರಬಹುದು; ಅಥವಾ ಇನ್ನಾದರೂ ಆ ಕಾರ್ಯದಲ್ಲಿ ಪ್ರವೃತ್ತವಾದೀತು.

ದುಡುಕಿನ ಸೂಚನೆಗಳು

ಇತ್ತ ಇನ್ನೊಬ್ಬ ವಿಖ್ಯಾತ ಸೇನಾಪತಿ ಐಸೆನ ಹಾವರರು ತಮ್ಮ ದೂರದೃಷ್ಟಿ ವಿಲ್ಲದ ಧೋರಣೆಯನ್ನು ಕೆಲಮಟ್ಟಿಗೆ ಬಹಿರಂಗಗೊಳಿಸಿ ಚೀನಾದೊಡನೆ ಬಿಗಿತನದಿಂದ ನಡೆದುಕೊಳ್ಳಬೇಕೆಂದು ನಿಶ್ಚಯಿಸಿದುದರಿಂದ ಯುದ್ಧಪ್ರಿಯರೆನಿಸಿದವರು ಭುಜಕುಣಿಸುವಂತಾಗಿದೆ. ರಾಷ್ಟ್ರೀಯ ಚೀನಾದ ಚ್ಯಾಂಗ ಕೈಶೇಕರು ಕಮ್ಯೂನಿಸ್ಟ್ ಚೀನಾದ ವಶದಲ್ಲಿರುವ ಅಮೋಯಿ ದ್ವೀಪದಲ್ಲಿ ತಮ್ಮ ಸೈನ್ಯವನ್ನು ಇಳಿಸಿದರೆಂದು ದಟ್ಟವಾದ ವದಂತಿ ಬರುತಿದ್ದರೂ ಅದರ ಸತ್ಯವನ್ನು ಅರಿಯುವುದಾಗಿಲ್ಲ. ಕೇವಲ ಪ್ರಚಾರಕಾರ್ಯವೆಂದೂ ಅಮೇರಿಕದ ಒಲವನ್ನು ಅಧಿಕಾಧಿಕ ಸಂಪಾದಿಸುವ ಉಪಾಯವೆಂದೂ ಇದನ್ನು ವರ್ಣಿಸಬಹುದು. ಐಸೆನ ಹಾವರರ ಪರಿವರ್ತಿತ ನೀತಿಯ ಪರಿಣಾಮವಾಗಿ ಫೊರ್ಮೋಸ ಸ್ಥಾನದಲ್ಲಿರುವ ಅಮೇರಿಕನ್ ಅಧಿಕಾರಿಗಳೂ ತಮ್ಮ ಯುದ್ಧ ಪಿಪಾಸೆಯನ್ನು ಸ್ಪಷ್ಟ ಮಾತುಗಳಲ್ಲಿ ಹೊರಗೆಡವುತ್ತಿರುವರು. ಅಣುಬಾಂಬಿನ ಪ್ರಯೋಗವನ್ನು ಮಾಡುವ ವರೆಗೂ ಈ ಸೂಚನೆಗಳು ದುಡುಕಿವೆ.

ತಿಳಿವಳಿಕೆ ಮೂಡಿದೆ

ಆದರೆ ಈ ಆಟೋಪಗಳ ನಡುವೆಯೂ ಸಾವಧಾನಕರವಾದ ವರ್ತನೆಯನ್ನು ಇಟ್ಟುಕೊಳ್ಳುವುದು .ಐಸೆನಹಾವರರಿಗೆ ಅಗತ್ಯವೆನಿಸಿದೆ. ಮುಖ್ಯವಾಗಿ ಅಮೇರಿಕದ ಸ್ನೇಹಿತರೆನಿಸಿದ ರಾಷ್ಟ್ರಗಳಿಂದಲೇ ಯುದ್ಧಾ ವಿಸ್ತರಣೆಯ ಯಾವುದೇ ಕ್ರಮವನ್ನು ಕೈಗೊಳ್ಳಲಾಗದೆಂದೂ ಬಲವತ್ತರವಾದ ಬೇಡಿಕೆ ಬಂದಿರುತ್ತವೆ. ಅದುದರಿಂದ ಪ್ರಕೃತ ಕಮ್ಯೂನಿಸ್ಟ ಚೀನಾದ ಮೇಲೆ ನೌಕಾ ನಿರ್ಬಂಧವನ್ನಾಗಲೀ ಆರ್ಥಿಕ ಹತೋಟಿಯನ್ನಾಗಲೀ ಐಸೆನ ಹಾವರರು ನಡೆಸುವ ಸಂಭವ ಕಡಿಮೆ ಎಂದೂ—ಈ ವಿಚಾರವನ್ನು ಬಿಟ್ಟುಗೊಡುವುದೇ ನಿಜವೆಂದೂ ಹೇಳುತ್ತಿರುವರು. ಕೊರಿಯಾ ಕದನ ರಂಗದಲ್ಲಿ ದಕ್ಷಿಣ ಕೊರಿಯನ್ನರ ಕೈಗಳನ್ನು ಬಲಪಡಿಸುವ ಮೂಲಕ ಕಮ್ಯೂನಿಸ್ಟರನ್ನು ಹಣಿಸುವ ಕಾರ್ಯಕ್ರಮವನ್ನು ಮಾತ್ರ ಒತ್ತರದಿಂದ ಮುಂದು ವರಿಸುವುದು ನಿಶ್ಚಯ.

ಮುರಿದ ಸಂಬಂಧ

ಕಮ್ಯೂನಿಸ್ಟ ಚೀನಾದ ಮೇಲೆ ನೇರಾಗಿ ಕೈಮಾಡಿದರೆ ಸೋವಿಯಟ ರಶಿಯವನ್ನು ಬೇಕೆಂದೇ ಕೆಣಕಿದಂತಾಗುತ್ತದೆ. ಪರಿಣಾಮವಾಗಿ ಬ್ರಿಟನು, ಫ್ರಾನ್ಸು ಮುಂತಾದ ಮಿತ್ರ ರಾಷ್ಟ್ರಗಳ ಮೇಲೆ ರಶಿಯಾ ಸೇಡು ತೀರಿಸಿಕೊಳ್ಳಲು ಉದ್ಯುಕ್ತವಾದೀತು. ಈಗಾಗಲೇ ರಶಿಯಾ ಮಧ್ಯ ಪೂರ್ವದಲ್ಲಿ ತನ್ನ ವರ್ಚಸ್ಸನ್ನು ಸ್ಥಾಪಿಸಿ ಕೊಳ್ಳಲು ನೋಡುತ್ತಿದೆ ಬ್ರಿಟನು ಅಮೇರಿಕೆಗಳು ಮಧ್ಯಪೂರ್ವಸಂರಕ್ಷಣೆಯ ಸ್ಪಷ್ಟ ಕಾಣುತ್ತಿರುವುದರಿಂದ ರಶಿಯನ ಹಿಂತ ಇನ್ನು ತೂಕಡಿಕೆಯಲ್ಲಿರುವುದು ಸಾಧ್ಯವಿಲ್ಲ. ಭಾವೀ ಯೋಜನೆಗಳ ಸರದಿಯೋ ಎಂಬಂತೆ ರಶಿಯಾ ಯೆಹೂದಿ ರಾಷ್ಟ್ರವಾದ ಇಸ್ರೇಲದೊಡನೆ ಸಂಬಂಧವನ್ನು ಕಡಿದುಕೊಂಡಿದೆ. ರಶಿಯಾದ ವಿರುದ್ಧ ಯೆಹೂದೀಯರಲ್ಲಿ ಸ್ವಾಭಾವಿಕವಾಗಿರುವ ತಿರಸ್ಕಾರ ಬುದ್ಧಿಯನ್ನು ನಿಯಂತ್ರಣದಲ್ಲಿಡಲು ಇಸ್ರೇಲ ಸರಕಾರಕ್ಕೆ ಸಾಧ್ಯವಾಗಲಿಲ್ಲವೆಂಬುದೇ ಇದಕ್ಕೆ ನೆಪ. ಇಸ್ರೇಲದ ಸಂಬಂಧವನ್ನು ಮುರಿದುಕೊಂಡದ್ದರಿಂದ ಇನ್ನು ಮುಂದೆ ಅರಬ ರಾಷ್ಟ್ರಗಳ ಸ್ನೇಹವನ್ನು ರಶಿಯಾ ಸಂಪಾದಿಸಲು ಪ್ರಯತ್ನಿಸೀತು.

ಉಡುಪಿ

ಸಿಟಿ ಬಸ್ ಚಲಾವಣೆಗೆ ಮಂಜೂರಾತಿ— ಉಡುಪಿಯಿಂದ ಕೆಮ್ಮಣ್ಣಿಗೂ ಉಡುಪಿಯಿಂದ ಅಲೆವೂರಿಗೂ ಉಡುಪಿಯಿಂದ ಕೊಡವೂರಿಗೂ ಎರಡು ಬಸ್ಸುಗಳ ಸಿಟಿಬಸ್ಸುಗಳನ್ನು ಚಾಲು ಮಾಡುವರೆ ಸೆಂಟ್ರಲ್ ರೋಡ್ ಟ್ರಾಫಿಕ್ ಬೋರ್ಡಿನ ಚೆಯರ್ ಮನರ ಅನುಮತಿ ದೊರೆತಿದೆಯೆಂದೂ ಹಿರಿಯಡ್ಕದಲ್ಲಿ ಸಬ್ ಪೋಸ್ಟ್ ಆಫೀಸು ಮತ್ತು ಟೆಲಿಫೋನ್ ಆಫೀಸು ತೆರೆಯುವ ವ್ಯವಸ್ಥೆ ನಡೆಸುವದಾಗುವೆನಾಗಿಯೂ ತಿಂಗಳಾಂತ್ಯದೊಳಗೇ ಸಬ್ ಪೋಸ್ಟ್ ಆಫೀಸು ತೆರೆಯಲ್ಪಡುವುದಾಗಿಯೂ ಶ್ರೀ, ಟಿ ಎ. ಪೈ ಎಮ್. ಎಲ್. ಎ ಅವರು ಮಹಾಜನರ ತಿಳುವಳಿಕೆಯ ಬಗ್ಗೆ ತಿಳಿಸಿರುತ್ತಾರೆ.

ಬಹುಮಾನ ವಿತರಣೆ— ಸ್ಥಳೀಯ ಸೈಂಟ್ ಸಿಸಿಲೀಸ್ ಕಾನ್ವೆಂಟ್ ಹೈಸ್ಕೂಲಿನ ವರ್ಷಾವಧಿ ಬಹುಮಾನ ವಿತರಣೆ ಸಮಾರಂಭವು ಇದೇ ತಾ. 15ರಲ್ಲು ಸಂಜೆ ಸ್ಥಳೀಯ ಡಿ. ಮುನ್ಸಿಫ್ ಜನಾಬ್ ಎ. ರಹೀಂ ಅಹಮ್ಮದ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ವರದಿ ವಾಚನ, ವಿವಿಧ ವಿನೋದಾವಳಿ ಅಧ್ಯಕ್ಷರ ಭಾಷಣ, ಧನ್ಯವಾದಾರ್ಪಣೆ ಮೊದಲಾದ ಕಾರ್ಯಕ್ರಮಗಳಾದವು.

ಕಾಲಾವಧಿ ರಥೋತ್ಸವ— ಶ್ರೀ ಮಹನಂತೇಶ್ವರ, ಚಂದ್ರೇಶ್ವರ ದೇವಸ್ಥಾನಗಳಲ್ಲಿ ಕಾಲಾವಧಿ ಜರಗುವ ಶಿವರಾತ್ರಿ ರಥೋತ್ಸವವು ಇದೇ ತಾ. 16ರಲ್ಲು ದೇವಸ್ಥಾನದ ಗೌರವ ಟ್ರಸ್ಟಿ ವಕೀಲ್ ಶ್ರೀ ಪಿ. ವಿ ಆಚಾರ್ಯರ ನೇತೃತ್ವದಲ್ಲಿ ಸಾಂಗವಾಗಿ ಜರಗಿತು.

ಶ್ರೀ ವೆಂಕಟೇಶ ದೇವಸ್ಥಾನದ— ಎದುರು ಪಾರ್ಶ್ವದಲ್ಲಿ ಹೊಸತಾಗಿ ಕಟ್ಟಿಸಿದ ಪ್ರಾಸಾದ ಶಿಖರ ಕಲಶ ಪ್ರತಿಷ್ಠೆ ಮತ್ತು ಶ್ರೀ ಸುಕೃತೀಂದ್ರ ಸಭಾ ಸದನದ ಉದ್ಘಾಟನಾ ಸಮಾರಂಭವು ಇದೇ ತಾ. 26ನೇ ಗುರುವಾರ ಶ್ರೀ ಕಾಶೀಮಠಾಧೀಶ ಶ್ರೀಮತ್ ಸುಧೀಂದ್ರ ತೀರ್ಥ ಶ್ರೀಪಾದಂಗಳವರ ಸಮಕ್ಷಮ ಜರಗಲಿರುವುದು. ಈ ಸಮಾರಂಭದ ಸಲುವಾಗಿ ಸ್ವಾಮಿಗಳವರು ತಾ. 22ನೆ ಆದಿತ್ಯವಾರ ಸಂಜೆ ಉಡುಪಿಗೆ ಆಗಮಿಸಲಿದ್ದು ಅವರನ್ನು ಕುಂಜಿಬೆಟ್ಟಿನಿಂದ ಸ್ವಾಗತಿಸುವ ಕಾರ್ಯಕ್ರಮ ನಿಶ್ಚಯಿಸಲಾಗಿದೆ. ಉಡುಪಿ, ಮಲ್ಪೆ ಮತ್ತು ಅಲೆವೂರು ಪೇಟೆಯ ಸ್ವಜಾತಿ ಗೃಹಸ್ಥರು ತಮ್ಮ ಯಾವತ್ತು ವ್ಯವಹಾರಗಳನು ತಾ. 26ರಂದು ಮುಚ್ಚಿ ಮುಂದೆ, ಮಹೋತ್ಸವದಲ್ಲಿ ಭಾಗಿಗಳಾಗಬೇಕಾಗಿ ಶ್ರೀಗಳಾದ ಯು.ಕೇಶವ ಕಾಮತ್, ಡಾ ಯು. ಸುಂದರರಾವ ಪೈ ಮತ್ತು ಎ. ತ್ರಿವಿಕ್ರಮ ನ್ಯಾಯಕ್ರರ ವಿನಂತಿಯಿದೆ.

ವಿವಾಹ ಸಮಾರಂಭ— ಸ್ಥಳೀಯ ಎಮ್ ಜಿ. ಕಾಲೇಜಿನ ಉಪನ್ಯಾಸಕರಾದ ಶ್ರೀ ಕು, ಶಿ, ಹರಿದಾಸ ಭಟ್ಟರು ಶ್ರೀ ಕೆ, ಎಲ್, ವ್ಯಾಕರಣ ಶಾಸ್ತ್ರಿಗಳ ಪುತ್ರಿ ಶ್ರೀಮತಿ ಸುಮತಿಯನ್ನು ಇದೇ ತಾ. 16ನೇ ಸಂಜೆ ಮತ್ತೂರು ದೇವಸ್ಥಾನದಲ್ಲಿ ವಿವಾಹವಾದರು, ತಾ. 18ರಲ್ಲು ಶ್ರೀ ಭಟ್ಟರ ಕುಂಜಿಬೆಟ್ಟು ನಿವಾಸದಲ್ಲಿ ಈ ಸಂಬಂಧ ಚಹಾ ಸತ್ಕಾರ ಸಮಾರಂಭ ಜರಗಿತು. ನೂತನ ದಂಪತಿಗಳಿಗೆ ಶುಭಾಶಯಗಳು.

ಶ್ರೀ ಪಾಂಗಾಳ ಪಾಂಡುರಂಗ ನಾಯ್ಕರ ನಿಧನ— ಉಡುಪಿ ಬಾರಿನ ಹಿರಿಯ ಸದಸ್ಯರೂ ಪಾಂಗಾಳ ಮನೆತನದ ಆಧ್ಯವ್ಯಕ್ತಿಗಳೂ ಆದ ಶ್ರೀ ಪಾಂಗಾಳ ಪಾಂಡುರಂಗ ನಾಯ್ಕರು ತಮ್ಮ 69ನೇ ವಯಸ್ಸಿನಲ್ಲಿ ಬೊಂಬಾಯಿಯಲ್ಲಿ ಬೊಂಬಾಯಿ ಕಾರ್ಪರೇಶನಿನ ಕಮಿಶನರ್ ಆಗಿರುವ ತನ್ನ ಪುತ್ರ ಶ್ರೀ ಪಿ, ಆರ್ ನಾಯಕರ ನಿವಾಸದಲ್ಲಿ ನಿಧನ ಹೊಂದಿದರೆನ್ನಲು ವಿಷಾದಿಸುವೆವು ಮೃತರ ದುಃಖೀ ಬಂಧು ಬಳಗದೊಡನೆ ಸಹಸಂತಾಪವನ್ನೂ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವೆವು

ಸಂಗೀತ ಕಚೇರಿ— ಇದೇ ತಾ. 13ರಲ್ಲು ರಾತ್ರಿ ಭಾರತದ ಸುಪ್ರಸಿದ್ಧ ಗಾಯಕರಾದ ಶ್ರೀ ಭೀಮಸೇನ ಜೋಶಿಯವರ ಸಂಗೀತ ಕಚೇರಿಯು ಸ್ಥಳೀಯ ಸಂಸ್ಕೃತ ಕಾಲೇಜಿನಲ್ಲಿ ಯಶಸ್ವಿಯಾಗಿ ಜರಗಿತು. ಪ್ರಿನ್ಸಿಪಾಲ್ ಕೌಲಗಿ ಕೇಶವಾಚಾರ್ಯರು ಮಾನ್ಯ ಅತಿಥಿಯ ಪರಿಚಯ ಮಾಡಿಕೊಟ್ಟರು. ಸಂಗೀತ ಮುಕ್ತಾಯಕಾಲದಲ್ಲಿ ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯ್ಕರು ಉಡುಪಿಯ ನಾಗರಿಕರ ಕಡೆಯಿಂದ ಶ್ರೀ ಜೋಶಿಯವರಿಗೆ ಗೌರವ ನಿಧಿಯನ್ನು ಅರ್ಪಿಸಿದರು.

ಕಾಲೇಜು ಪಂದ್ಯಾಟ— ಸ್ಥಳೀಯ ಎಮ್ ಜಿ ಎಮ್. ಕಾಲೇಜಿನ ವರ್ಷಾವಧಿ ಪಂದ್ಯಾಟ ಸ್ಪರ್ಧೆಗಳು ಇದೇ ತಾ. 14ರಲ್ಲು ಆಡಲ್ಪಟ್ಟು ನಡೆಯಿತು. ಸಂಜೆ ಜರಗಿದ ಸಭೆಯಲ್ಲಿ ಅಧ್ಯಕ್ಷ ... ವಹಿಸಿದ ಜನಾಬ್ ಅಬ್ದುಲ್ ರಹೀಂ ಅಹಮ್ಮದ ... ಮುನ್ಸೀಫ್ ಅವರು ಪಾರಿತೋಷಕ ವಿತರಣೆ ಮಾಡಿದರು.

ಡಾ। ಎ. ಸಿ. ರೆಬೆಲ್ಲೊರವರಿಗೆ ಸತ್ಕಾರ— ಚರ್ಮ ಮತ್ತು ಗುಪ್ತರೋಗಗಳ ತಜ್ಞರೂ ಹಿಂದ್ ಕುಷ್ಟ ನಿವಾರಿ ಸಂಘದ ಉಪಾಧ್ಯಕ್ಷರೂ ಆದ ಡಾ। ಎ ಸಿ. ರೆಬೆಲೊರವರಿಗೆ ಶ್ರೀಗಳಾದ ವಕೀಲ್ ಬಿ. ಶೀನಪ್ಪ ಹೆಗ್ಡೆ, ಕೆ. ಜಗನ್ನಾಥ ನಾಯ್ಕ, ಮತ್ತು ಡಾ। ಬಿ. ಬಿ. ಪಟೆರು ಇದೇ ತಾ. 15ರಂದು ಮೊಡರ್ನ ಕಾಫಿ ಹೌಸಿನಲ್ಲಿ ಸತ್ಕಾರ ಕೂಟವೊಂದನ್ನು ಏರ್ಪಡಿಸಿದರು. ಶ್ರೀ ಹೆಗ್ಡೆಯವರು ಅತಿಥಿಗಳ ಪರಿಚಯ ಭಾಷಣ ಮಾಡಿದರು, ಅತಿಥಿಗಳು ಕುಷ್ಟ ರೋಗ ಪರೀಕ್ಷಾ ವಿಧಾನ, ಚಿಕಿತ್ಸೆಗಳ ಕುರಿತು ಭಾಷಣ ವಿತ್ತರು ಶ್ರೀ ಕೆ. ಜಗನ್ನಾಥ ನಾಯ್ಕರು ಧನ್ಯವಾದಗಳನ್ನರ್ಪಿಸಿದರು.

ಪೋಲಿಸ್ ಅಧಿಕಾರಿಗಳ ಆಗಮನ— ಮದ್ರಾಸಿನ ಇನ್ಸ್‌ಪೆಕ್ಟರ್ ಜನರಲ್ ಒಫ್ ಪೋಲೀಸ್ ಶ್ರೀ ಟಿ, ಜಿ. ಸಂಜೀವಿ ಮತ್ತು ಶ್ರೀ ಎಮ್. ಕೆ. ಸೆಟ್ಟಿ, ... ಡೈರೆಕ್ಟರ್ ಒಫ್ ಸೆಂಟ್ರಲ್ ಇಂಟೆಲಿಜೆನ್ಸ್ ಬ್ಯುರೊ ಅವರು ತಾ. 9ರಲ್ಲು ಬೆಳಗ್ಗೆ ಉಡುಪಿಗೆ ಆಗಮಿಸಿ ಅಂದೇ ಸಂಜೆ ಹಿಂದೆರಳಿದರು. ಶ್ರೀ ಎಂ. ಕೆ ಸೆಟ್ಟಿರು ಸ್ಥಳೀಯ ಕ್ರಿಶ್ಚಿಯನ್ ಹೈಸ್ಕೂಲನ್ನು ಸಂದರ್ಶಿಸಿದಾಗ ಅಲ್ಲಿ ವಿದ್ಯಾರ್ಥಿ ಸಂಘದ ಕಡೆಯಿಂದ ಸ್ವಾಗತ ವೀಯಲಾಯಿತು.

ನೋಟೀಸು.

ದಿ ಹಿಂದುಸ್ಥಾನ್ ಡೈಲಿ ಆಕ್ಷನ್ ಚಿಟ್ಟಿ ಫಂಡ್, ಉಡ್ಪಿ.

ಶ್ರೀ. ಯು. ನಾಗೇಶ ಶೆಣೈ, ಶ್ರೀ ಎ. ಅಂಣಯ್ಯ ನಾಯಕ್. ಶ್ರೀ ಯುಸ್ ವಿಠಲ ನಾಯಕ್, ಮತ್ತು ನಾನು ಕೂಡಾ 4 ಜನರು ಪಾಲುಗಾರಿಕೆಯಿಂದ ಮೇಳ್ನಾಯಿಸಿದ ಚಿಟ್ಟಿ ಫಂಡನ್ನು ತಾರೀಗು 6-6-1951ರ ಲಾಗ್ಯಾತು ಕ್ರಮಪ್ರಕಾರ ನಡ್ಸಿಕೊಂಡು ಬರುತ್ತಿರುವಲ್ಲಿ ಮೇಲೆ ಹೆಸರು ಕಾಣಿಸಿರುವ ಶ್ರೀ ಯು. ನಾಗೇಶ ಶೆಣೈಯವರು ಸದ್ರಿ ಚಿಟ್ಟಿ ಫಂಡಿನ ಬಾಬ್ತು ಅವರ ಕೈಯಲ್ಲಿ ಇದ್ದ ನಗದಿ ಶಿಲ್ಕು 528-12-6 ಮತ್ತು ತಾರೀಕು 11-2-53ಕ್ಕೆ ಅಂತ್ಯವಾಗುವ ದಿನದ ವರೇಗಿನ ಸದ್ರಿ ಚಿಟ್ಟಿ ಫಂಡಿನ ಮೆಂಬರರಿಂದ ವಸೂಲಾದ ಕಂತಿನ ಮೊಬಲಗು ರೂಪಾಯಿ 260 ಕೂಡಾ ರೂಪ್ಯಾ 788-12-6 ಮತ್ತು ಸದ್ರಿ ಪಾಲುಗಾರಿಕೆ ಹಕ್ಕಿನ ಬಾಬ್ತು 52ನೇ ಇಸವಿ ಡಿಶಂಬ್ರ ಅಖೈರು ವರೇಗಿನ ಮುನಾಫೆ ರೂಪ್ಯಾ 960 ಕೂಡಾ ರೂಪ್ಯಾ 1748-12-6 ಮತ್ತು ಸದ್ರಿ ಚಿಟಿಫಂಡಿನ ಕೆಲವು ಕಾಗದಗಳ ಸಮೇತ ತಾರೀಕು 12-2-53ರಿಂದ ಉಡ್ಪಿ ಪೇಟೆಯಿಂದ ಫರಾರ್ ಯಾಗಿರುತ್ತಾರೆ. ಈ ಸಂಗತಿಯನ್ನು ಸದ್ರಿ ಚಿಟ್ಟಿಫಂಡಿನ ಎಲ್ಲಾ ಮೆಂಬರರ ತಿಳುವಳಿಕೆಗೆ ಈ ಮುಂಚಿಯೇ ಬರಹ ಮೂಲಕ ತಿಳಿಸಿ, ಸದ್ರಿ, ಚಿಟ್ಟಿಗೆ ಕೊಡತಕ್ಕ ಯಾವತ್ತು ಹಣಗಳನ್ನು ಚಿಟ್ಟಿಫಂಡಿನ ಆಫೀಸಿನಲ್ಲಿ ಮೆನೇಜರರ ವಶಕೊಟ್ಟು ತಕ್ಕ ಕರಾಯಿತಿಗಳನ್ನು ದಸ್ತುರುಸಿ ಬರಾಯಿಸಿಕೊಳ್ಳಬೇಕಾಗಿಯೂ ಮಿಕ್ಕ ಯಾರ ವಶ ಕೊಡಕೂಡದಾಗಿಯೂ ಆದಕ್ಕೆ ವಿರೋಧವಾಗಿ ಕೊಟ್ಟಲ್ಲಿ ಸದ್ರಿ ಹಣಗಳ ಜವಾಬ್ದಾರಿಯು ಸದ್ರಿ ಚಿಟ್ಟಿಫಂಡಿನ ಮೇಲೆ ಸಿಂಧು ಆಗತಕ್ಕದ್ದಲ್ಲವೆಂದೂ ತಿಳಿಸಿರುತ್ತದೆಂತ ಈ ಮೂಲಕ ಸರ್ವ ಜನರಿಗೆ ತಿಳಿಸೋಣಾಗಿರುತ್ತದೆ.

ಪಾಲುಗಾರರ ಅನುಮತಿ ಮೇರೆಗೆ,

ಯು. ಕೃಷ್ಣ ಭಟ್,
ಮೆನೇಜರ್.

ಉಡ್ಪಿ, 17-2-1953.

ಬರ್ಸಾತ್ ನೋಡಿ ತೃಪ್ತಿಪಟ್ಟವರಿದ್ದರೆ—ರಾಜಕಪೂರ್ ಮತ್ತು ನಿಮ್ಮೊಳಗಿರುವ ನಿಮ್ಮ ತೃಪ್ತಿ ಇದ್ದರೆ— ಕೆ. ಎನ್. ಸಿಂಗ್, ಲಲಿತಾ ಪವರ್ ನಿಮ್ಮ ಪ್ರೀತಿಗೆ ಪಾತ್ರರಾಗಿದ್ದರೆ—
ಇಂದು ಒಂದು ಸುಯೋಗ ಒದಗಿಬಂದಿದೆಂದು ಮುಂದೆ ಬಂದು ಕೊಳಿತುಕೊಳ್ಳಿ. ಹಣ್ಣು ಸುಂಗಿ ನಿಮ್ಮ ಆದರ್ಶ ನಟನಟಿಯರ ಅದ್ಭುತ ಅಭಿನಯ ನೋಡಿ ಹರ್ಷಚಿತ್ತರಾಗಿರಿ. ಇದೇ:—

ಬಾ ವ ರಾ

ತಾ. 18—2—53ರಿಂದ
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಮಂಗಳೂರು

ಕನ್ನಡ ಮೊಯಿಲಿಯವರ ಸಮಾಜ ಸುಧಾರಕ ಸಂಘದ—ವರ್ಧಂತ್ಯುತ್ಸವವು ತಾ.8 ರಲ್ಲು ಶ್ರೀ ಬಿ. ಎಲ್. ಭಾಸ್ಕರಯ್ಯ, ಎಡ್ವೊಕೇಟ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎಮ್. ಗೋವಿಂದಪ್ಪ ಬಿ ಹರಿಶ್ಚಂದ್ರ ಅಚಾರ್, ಕೆ. ಕೃಷ್ಣರಾವ್, ನವೀನಚಂದ್ರಪಾಲ್, ಪಿ ಮಂಜುನಾಥ ಮೊದಲಾದವರು ಮೊಯಿಲಿ ಸಮಾಜದ ಸುಧಾರಣೆ ಬಗ್ಗೆ ಕಳಕಳಿಗಳನ್ನಿತ್ತು ತಮ್ಮಿಂದ ಕೈಲಾದ ಸಹಾಯ ನೀಡುವುದಾಗಿ ಹೇಳಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಜಾತಿಯ ಸರ್ವರೂ ಒಕ್ಕಟ್ಟಿನಿಂದಿರಬೇಕೆಂದೂ ಹಾಗೆ ಒಕ್ಕಟ್ಟಿನಿಂದ ದುಡಿದರೆ ಸಂಘದ ಉದ್ದೇಶಗಳಿಗೆ ತಮ್ಮ ಕೈಲಾದ ಸಹಾಯವನ್ನು ಕೊಡುವುದಾಗಿಯೂ ಆಶ್ವಾಸನೆಯಿತ್ತರು. ಧನ್ಯವಾದ ಅರ್ಪಣೆಯೊಂದಿಗೆ ಸಭಾಕಾರ್ಯವಾಯಿತು. ಆ ದಿನ ಬೆಳಿಗ್ಗೆ ಕಾರ್ಯಕಾರೀ ಮಂಡಳಿಯ ಅಧಿಕಾರಿಗಳ ಚುನಾವಣೆ ನಡೆದು ಶ್ರೀಗಳಾದ ಕೆ. ಬಾಬು ಅಧ್ಯಕ್ಷ, ಎಚ್. ಕೃಷ್ಣ ಶೆಟ್ಟಿಯಾನ್ ಉಪಾಧ್ಯಕ್ಷ, ಎಮ್. ಗುರುವಪ್ಪ ಕಾರ್ಯದರ್ಶಿ, ಬಿ. ಪದ್ಮನಾಭ ಜತೆಕಾರ್ಯದರ್ಶಿ, ಜಿ. ಕೃಷ್ಣಪ್ಪ ಖಜಾನ್ಜಿಯಾಗಿ ಆರಿಸಲ್ಪಟ್ಟರು.

ನಿಧಿ ಸಮರ್ಪಣೆ— ಪೋಸ್ಟು ಮತ್ತು ಟೆಲಿಗ್ರಾಫ್ ಉದ್ಯೋಗಿಗಳ ಕ್ಷೇಮ ಚಿಂತನೆಯ ನಿಧಿಗೆ, ಗ್ರೇಂಡ್ ಫನ್ ಫೇರ್ ವ್ಯವಸ್ಥಾಪಕ ಶ್ರೀ ರಂಗನಾಥ ಸುಬ್ಬಯ್ಯವರು ರೂಪಾಯಿ 7500ನ್ನು ಸಮರ್ಪಣೆ ಮಾಡುವ ಸಮಾರಂಭವು ತಾ. 6ರಲ್ಲು ಸಂಜೆ ಪಾರ್ಲಿಮೆಂಟ್ ಸದಸ್ಯ ಶ್ರೀ ಕೆ ಎಸ್, ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು, ಶ್ರೀ ಬಿ. ಎನ್ ರಾಯರು ನಿಧಿಯನ್ನು ಸ್ವೀಕರಿಸಿದರು.

ಶ್ರೀಕೃಷ್ಣ ಗೋಸೇವಾಶ್ರಮ—ನಾಮಧೇಯದಿಂದ ಬೋಳಾರದಲ್ಲಿ ನಿವೃತ್ತ ವೆಟರಿನರಿ ಸರ್ಜನ್ ಶ್ರೀ ಬಿ, ಸೀತಾರಾಮರಾಯರ ನೇತೃತ್ವದಲ್ಲಿ ಆಶ್ರಮವೊಂದು ಸ್ಥಾಪಿತವಾಗಿದೆ, ಗೋವಧೆ ನಿಷೇಧ. ಗೋಚಿಕಿತ್ಸೆ ಬಗ್ಗೆ ಆಸ್ಪತ್ರೆಗಳ ಸ್ಥಾಪನೆ, ಗೋಸಂತಾನವನ್ನು ಕಾಪಾಡಿಕೊಳ್ಳುವುದು ಮತ್ತು ಅವುಗಳನ್ನು ವೃದ್ಧಿಪಡಿಸುವುದಕ್ಕೆ ಎಲ್ಲಾ ಗ್ರಾಮಗಳಲ್ಲಿಯೂ ಪ್ರಚಾರಕಾರ್ಯ, ಎಲ್ಲಾ ಪಥಲ್ಲಿಯೂ ಗೋಸಂರಕ್ಷಣೆ ಕಾರ್ಯ ಮತ್ತು ಅವುಗಳ ಮೇವಿಗಾಗಿ ಇಂಗ್ಲಿಷ್, ಗಿನಿ, ನೇಪಿಯರ್, ಮುಂತಾದ ಹುಲ್ಲುಗಳನ್ನು ಗ್ರಾಮಗಳಲ್ಲಿ ಪ್ರಚಾರಪಡಿಸುವುದು ಇತ್ಯಾದಿ ಉದ್ದೇಶಗಳು ಸಾಧಿಸಲ್ಪಡಬೇಕೆಂದು ಹೇಳಲಾಗಿದೆ.

ಸಂಚಾರೀ ವೈದ್ಯ ವಾಹನ— ಬಡವರು, ಮುಖ್ಯವಾಗಿ ಗ್ರಾಮಜೀವಿಗಳ ಹಿತವನ್ನೇ ಸಾಧಿಸಲು ನಗರದ ಸಮಾಜಮಿತ್ರರು ಸ್ಥಾಪಿಸಿರುವ ಸಂಪರ್ಕ ಸಮಿತಿಯು (ಲಿಯೇಸನ್ ಕಮಿಟಿ) ಒಂದು ಸಂಚಾರೀ ವೈದ್ಯರ ಮತ್ತು ಶುಶ್ರೂಷಾ ದಳದವರ ಸಹಾಯದಿಂದ ನಗರದ ಬಡವರಿಗೂ ಗ್ರಾಮಜೀವಿಗಳಿಗೂ ವೈದ್ಯಸಹಾಯವನ್ನು ಕೊಡಲಾಗುವುದು. ಅಲ್ಲದೆ, ರೋಗರುಜಿನಗಳಿಗೆ ಬಡತನವೇ ಮುಖ್ಯ ಕಾರಣವಾಗಿರುವುದರಿಂದ, ರೋಗಿಗಳಿಗೆ ಬೇಕಾಗುವ ಆಹಾರ, ಬಟ್ಟೆ, ಸಾಧನಗಳನ್ನೂ ಹಂಚುವ ಉದ್ದೇಶವಿದೆ. ಕ್ಷಯ, ಸನ್ನಿಪಾತ, ಆನೆಕಾಲು ಮೊದಲಾದುವು ದಿನದಿಂದ ದಿನ ಹೆಚ್ಚುತ್ತಿರುವುದನ್ನು ತಡೆಯಲಿಕ್ಕೂ ಯತ್ನಿಸಲಾಗುವುದು. ಇಷ್ಟೆಲ್ಲಾ ಸಾಧ್ಯವಾಗಬೇಕಾದರೆ ಸಾರ್ವಜನಿಕರು ಉದಾರಹಸ್ತದಿಂದ ಸಹಾಯ ನೀಡಬೇಕಾಗಿದೆ.

ಸಾಲಿಗ್ರಾಮ—ಸ್ಥಳೀಯ ಪಂಚಾಯತ ಬೋರ್ಡ್ ಚುನಾವಣೆಯು ಇದೇ ತಾ 5ರಲ್ಲು ನಡೆದು ಶ್ರೀ ಪಿ, ಹರಿಕೃಷ್ಣ ಪಾಂಡೇರು ಅಧ್ಯಕ್ಷರಾಗಿ ಆರಿಸಲ್ಪಟ್ಟರು,

ಕೋಟ— ಇಲ್ಲಿಯ ಶ್ರೀ ಗುರುನರಸಿಂಹ ದೇವರ ದೇವಸ್ಥಾನದ ದುರಸ್ತಿಗಾಗಿಯೂ ಇನ್ನಿತರ ಅಗತ್ಯಗಳಿಗಾಗಿ ನಿಧಿ ಕೂಡುವದಕ್ಕೂ ಭಕ್ತ ವೃಂದದವರು 'ಕೋಟ ಜಗತ್ತಿನ ಭಕ್ತ ಮಂಡಲಿ, ಸಾಲಿಗ್ರಾಮ' ಎಂಬ ನಾಮಧೇಯದಿಂದ ಸಂಘವನ್ನು ಸ್ಥಾಪಿಸಿದ್ದಾರೆ. ಸದ್ರಿ ಮಂಡಳಿಯ ಸದಸ್ಯರಾಗಿ ಆಸ್ತಿಕ ಮಹಾಶಯರು ಸೇರಿ ಧನಸಹಾಯವಿತ್ತು ಶ್ರೀದೇವರ ಕೃಪೆಗೆ ಪಾತ್ರರಾಗಬೇಕೆಂದು ಸಂಘದ ಅಧ್ಯಕ್ಷ ಶ್ರೀ ಬಲರಾಮ ಹಂದೆರ ವಿನಂತಿಯಿದೆ.

ಬೆಳ್ಮಣ್ಣು— ಸ್ಥಳೀಯ ಬೋರ್ಡ್ ಹೈಸ್ಕೂಲಿನ ವರ್ಧಂತ್ಯುತ್ಸವವು ಇದೇ 8ರಲ್ಲು ಶ್ರೀ ಎಸ್. ನರಸಪ್ಪಯ್ಯ. ಎಮ್. ಎಲ್ ಸಿ ಯವರ ಅಧ್ಯಕ್ಷತೆಯಲ್ಲಿ ಜರಗಿತು. ರೂರಲ್ ವೆಲ್‌ಫೇರ್ ಆಫೀಸರ್ ಶ್ರೀ ಬಾಬು ಶೆಟ್ಟರು ಹಾಜರಿದ್ದರು. ಸಭಾ ಪ್ರಾರಂಭದಲ್ಲಿ ಶಾಲಾ ಕಟ್ಟೋಣದ ಜಮಾ ಖರ್ಚಿನ ವರದಿಯನ್ನು ಶಾಲಾ ಕಮಿಟಿ ಅಧ್ಯಕ್ಷ ಶ್ರೀ ನಾರಾಯಣ ಶೇಕರು ಓದಿ ಹೇಳಿದರು. ಸ್ವಾಗತ ಭಾಷಣ, ಅಧ್ಯಕ್ಷರ ಭಾಷಣ, ವಿನೋದಾವಳಿ ಮೊದಲಾದ ಕಾರ್ಯಕ್ರಮಗಳಿಂದ ಉತ್ಸವವು ಕೊನೆಗೊಂಡಿತು.

ಬೆಳ್ಮಣ್ಣು— ಬೆಳ್ಮಣ್ಣಿನಿಂದ ಮುಲ್ಕಿಗೆ ಬೆಳಿಗ್ಗೆ 7, 8-30, 10, 10-30, 12 ಮಧ್ಯಾಹ್ನ 2, 4-30, 5-30, 6-30ಕ್ಕೆ ಒಂಭತ್ತು ಸರ್ವೀಸುಗಳು ಬರುತ್ತಿದ್ದು ಮಾಮೂಲು ಮುಲ್ಕಿಗೆ ಹೋಗುವ ಊರ ಜನರ ಸೌಕರ್ಯಕ್ಕೆ ಇರುತ್ತಿತ್ತು. ಈ ಸರ್ವೀಸುಗಳು ಮುಲ್ಕಿಗೆ ಕೋರ್ಟು ಕಚೇರಿಗಳಿಗೆ ಹೋಗಲು ಅನುಕೂಲತೆಗಳನ್ನು ಒದಗಿಸಿ ಕೊಡುತ್ತಿದ್ದುವು. ಆದರೆ ಇದೇ ತಾ 12 ರಿಂದ ಮಧ್ಯಾಹ್ನ 12-30ರ ತನಕ ಯಾವ ಸರ್ವೀಸುಗಳೂ ಇಲ್ಲದೆ ಪ್ರಯಾಣಿಕರಿಗೆ ತುಂಬಾ ತೊಂದರೆಯಾಗಿದೆ. ಆದರೆ ಮಧ್ಯಾಹ್ನದ ನಂತರ ಮೇಲಿನ ಸರ್ವೀಸುಗಳು ಅನಾವಶ್ಯಕ ಚಲಾವಣೆ ನಡೆಸುತ್ತಾ ಇವೆ. ಇಂಥಾ ಅವ್ಯವಸ್ಥೆಯನ್ನು ಹೋಗಲಾಡಿಸಿ ಹಿಂದಿನ ಕ್ರಮವನ್ನು ಊರ್ಜಿತಕ್ಕೆ ತರಬೇಕಾಗಿಯೂ ಕನಿಷ್ಠ ಬೆಳಿಗ್ಗೆ 8 ಮತ್ತು 10 ಗಂಟೆಯ ಸಮಯಕ್ಕಾದರೂ ಬೆಳ್ಮಣ್ಣಿನಿಂದ ಮುಲ್ಕಿಗೆ ಎರಡು ಸರ್ವೀಸುಗಳನ್ನಾದರೂ ಪ್ರಾರಂಭಿಸುವಂತೆ ಕಂಪೆನಿಯವರು ನಿಗಾ ಕೊಡಬೇಕಾಗಿಯೂ ಆ ಕುರಿತು ಸಂಬಂಧಪಟ್ಟವರಿಗೆ ಅರ್ಜಿಗಳು ಹೋಗಿರುವುದಾಗಿಯೂ ಗ್ರಾಮಸ್ಥರೊಬ್ಬರು ತಿಳಿಸುತ್ತಾರೆ.

ಕುಂದಾಪುರದಲ್ಲಿ ಮಾನ್ಯ ಕೃಷಿ ಮಂತ್ರಿ ಡಾ| ಆರ್. ನಾಗಣ್ಣ ಗೌಡರು.

ಕುಂದಾಪುರದಲ್ಲಿ ಮಾನ್ಯ ಕೃಷಿಮಂತ್ರಿ ಡಾ. ಆರ್ ನಾಗಣ್ಣ ಗೌಡರು — ಮದ್ರಾಸು ಸರಕಾರದ ಮಾನ್ಯ ಕೃಷಿ ಮಂತ್ರಿ ಡಾ. ಆರ್ ನಾಗಣ್ಣ ಗೌಡರು ಇದೇ ತಾ. 14ರಲ್ಲು ಸೌಜನ್ಯ ಧರ್ಮಪತ್ನಿ ಸಮೇತರಾಗಿ ಕುಂದಾಪುರಕ್ಕೆ ಆಗಮಿಸಿದರು ಶ್ರೀಗಳಾದ ವೈ ಮಂಜಯ್ಯ ಸೆಟ್ಟಿ ಎಮ್, ಎಲ್. ಎ, ಎಸ್. ಎಸ್. ಕೊಳ್ಕೆಬೈಲ್ ಎಮ್. ಎಲ್. ಎ. ಮೊದಲಾದವರಿಂದ ಕೂಡಿಕೊಂಡು ಸ್ಥಳೀಯ ಬೋರ್ಡ್ ಹೈಸ್ಕೂಲಿನ ಮಟಾರದಲ್ಲಿ ವ್ಯವಸ್ಥೆಗೊಳಿಸಲಾದ ಜಾನುವಾರು ಪ್ರದರ್ಶನವನ್ನು ನೋಡಿದರು. ನಂತರ ಉತ್ತಮ ಜಾನುವಾರುಗಳನ್ನು ಪ್ರದರ್ಶಿಸಿದವರಿಗೆ ಬಹುಮಾನ ವಿತರಣೆ ಮಾಡುವ ಕಾರ್ಯವನ್ನು ನೆರವೇರಿಸಿದರು. ಕುಂದಾಪುರ ಕಾಂಗ್ರೆಸ್ ಕಮಿಟಿ ಪ್ರೆಸಿಡೆಂಟ್ ಶ್ರೀ ಎಮ್. ಎಮ್. ಹೆಗ್ಡೇರು ಸ್ವಾಗತ ಭಾಷಣ ಮಾಡಿದರು, ಡಾ. ಗೌಡರು ಮಾತನಾಡುತ್ತಾ, ಜಾನುವಾರು ಪ್ರದರ್ಶನದಲ್ಲಿ ಸಂಖ್ಯೆ ಕಡಿಮೆಯಾದರೂ ಒಳ್ಳೆಯವುಗಳು ಪ್ರದರ್ಶಿಸಲ್ಪಟ್ಟಿವೆ, ಎಂದರು, ಕುಂದಾಪುರವು ಯೋಗ್ಯರೀತಿಯಲ್ಲಿ ಮಾರ್ಗದರ್ಶನ ಮಾಡಿದೆ ಎಂಬುದಕ್ಕೆ ಸಂತೋಷಪಟ್ಟರು. ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಾ ಶಾಲಾಬಿಡುವಿನ ಕಾಲದಲ್ಲಿ ಮನೆಯಲ್ಲಿ ತಂದೆ ತಾಯಿಗಳೊಡನೆ ಬೆರೆತು, ಅವರು ಮಾಡುತ್ತಿರುವ ಕೆಲಸಗಳನ್ನು ಕೂಡಾ ಮಾಡಬೇಕೆಂದರು. ವಂದನಾರ್ಪಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ಮುಖ್ಯೂರು ಬಸ್ತಾರ ಸಭೆಗೆ ಭೇಟಿ—ಡಾ. ನಾಗಣ್ಣ ಗೌಡರು ಕಾಲು ನಡುಗೆಯಿಂದ ಕೋಟೆಯಿಂದ ಪಶ್ಚಿಮದಿಕ್ಕಿಗಿರುವ ಮುಖ್ಯೂರು ಸಮುದ್ರ ತೀರಕ್ಕೆ ರಾತ್ರಿ ಕಾಲದಲ್ಲಿ ಬ್ಯಾಂಡ್ ವಾದ್ಯದೊಡನೆ ಬಂದರು. ಅಲ್ಲಿ ಕೂಡಿದ ಸಾಧಾರಣ ಐದು ಸಾವಿರ ಜನ ಸಮೂಹದ ಮುಂದೆ ಬಸ್ತಾರ ಗುರಿಕಾರರು ಮಾನ್ಯ ಮಂತ್ರಿಗಳಿಗೆ ಪುಷ್ಪ ಮಾಲಿಕೆಗಳನ್ನು ಹಾಕಿದರು ನಂತರ ಶ್ರೀ ಎಸ್, ಎಸ್, ಕೊಳ್ಕೆಬೈಲ್, ಎಮ್, ಎಲ್, ಎ. ಅವರ ಅಧ್ಯಕ್ಷತೆಯಲ್ಲಿ ಮಾನ್ಯ ಮಂತ್ರಿಗಳಿಗೆ ಶ್ರೀ ತೋಮ ಮರಕಾಲರು ಮಾನ ಪತ್ರವನ್ನರ್ಪಿಸಿದರು, ಈ ಮಾನ ಪತ್ರವು ಶ್ರೀಗಳಾದ ವೈ, ಮಂಜಯ್ಯ ಸೆಟ್ಟಿ, ಎಸ್. ಎಸ್. ಕೊಳ್ಕೆಬೈಲ್ ಎಮ್, ಎಲ್. ಎ, ಗಳನ್ನೂ ಒಳಗೊಂಡು ಸಂಯುಕ್ತ ಮಾನ ಪತ್ರವಾಗಿತ್ತು, ಕೋಟದಿಂದ ಮುಖ್ಯೂರು ಸಮುದ್ರ ತೀರದ ವರೆಗೆ ಸಾಧಾರಣ ಆರು ಫರ್ಲಾಂಗ್ ದೂರದ ಭೂಮಿಯಲ್ಲಿ ರಸ್ತೆಯಾಗಬೇಕೆನ್ನುವ ಇತ್ಯಾದಿ ಬೇಡಿಕೆಗಳು ಮಾನ ಪತ್ರದಲ್ಲಿ ಹೇಳಲ್ಪಟ್ಟಿದ್ದುವು. ಶ್ರೀಗಳಾದ ವೈ, ಮಂಜಯ್ಯ, ಸೆಟ್ಟಿ ಎಮ್, ಎಲ್, ಎ ಕೆ, ಎಲ್, ಕಾರಂತ, ಶ್ರೀಮತಿ ನಾಗಣ್ಣ ಗೌಡರು ಮಾತನಾಡಿದರು, ಮಂತ್ರಿಗಳು ಉತ್ತರ ನೀಡುತ್ತಾ ರಸ್ತೆಯ ಆವಶ್ಯಕತೆಯನ್ನು ತಾನು ಮನಗಂಡಿರುವುದಾಗಿಯೂ ಈ ಕಾರ್ಯವನ್ನ ಜಿಲ್ಲಾ ಬೋರ್ಡಿನಿಂದ ಜರೂರು ಆಗತಕ್ಕದ್ದೆಂದೂ ಸೂಚಿಸಿದರು, ಇತರ ಕೇಳಿಕೆಗಳ ಕುರಿತು ವಿಚಾರ ವಿನಿಮಯ ನಡೆಸುವುದಾಗಿ ಆಶ್ವಾಸನೆಯಿತ್ತರು ಶ್ರೀ. ಜಿ. ಗೋವಿಂದ ಸೆಟ್ಟರು, ಧನ್ಯವಾದಗಳನ್ನರ್ಪಿಸಿದರು. ಮಂಗಳಗೀತೆಯಾಗಿ ಮಂತ್ರಿಗಳು ಪುನಃ ಕಾಲುನಡಿಗೆಯಿಂದಲೇ ಕೋಟಕ್ಕೆ ಹಿಂತಿರುಗಿ ಅಲ್ಲಿಂದ ಮೂಡ್ಲಕಟ್ಟೆಗೆ ಮೋಟಾರು ಮೇಲೆ ಪ್ರಯಾಣ ಬೆಳಸಿದರು. ಶ್ರೀ ಅತ್ರಿ ಮಂಜಯ್ಯ ಸೆಟ್ಟರು ಏರ್ಪಡಿಸಿದ ಘನತರ ಡಿನ್ನರ್ ಪಾರ್ಟಿಯಲ್ಲಿ ಭಾಗವಹಿಸಿದರು, ಶ್ರೀ ಸೆಟ್ಟರ ಆಮಂತ್ರಣವನ್ನು ಮನ್ನಿಸಿದ ಬಗ್ಗೆ ಶ್ರೀ ಎಮ್, ಎಮ್, ಹೆಗ್ಡೆರು ಮಂತ್ರಿಗಳಿಗೆ ಆಭಾರ ಸೂಚಿಸಿದರು. ಸಂತೋಷಚಿತ್ತರಾದ ಮಂತ್ರಿಗಳು ಕರ್ನಾಟಕ ಪ್ರಾಂತ ರಚನೆಯು ಬೇಗನೇ ಆಗಿ ನಮ್ಮ ನಿಮ್ಮ ಸಂಪರ್ಕವು ಚಿರಕಾಲದಾಗಿ ನಡೆಯುವಂತಾಗಲೆಂದು ಬಯಸಿದರು.

ಗಂಗೊಳ್ಳಿ— ಮಾನ್ಯ ಕೃಷಿ ಮಂತ್ರಿಗಳು ತಾ 15 ರಲ್ಲು ಬೆಳಿಗ್ಗೆ ಗಂಗೊಳ್ಳಿಗೆ ಪ್ರಯಾಣ ಬೆಳೆಸಿ ಅಲ್ಲಿಯ ಫಿಶರೀಸ್ ಯಾರ್ಡನ್ನು ಸಂದರ್ಶಿಸಿ, ಬೆಸ್ತರ ಸಹಕಾರ ಸಂಘದ ಬಿನ್ನವತ್ತಳೆಯನ್ನು ಸ್ವೀಕರಿಸಿ ಅವರ ಹಾಲಾಹವಾಲೆಗಳನ್ನು ಕೇಳಿ ಕೈಲಾದುದನ್ನು ಮಾಡುವುದಾಗಿ ಹೇಳಿದರು, ಬಳಿಕ ಅಲ್ಲಿಯ ಹೈಸ್ಕೂಲ್ ಆಡಳಿತ ಮಂಡಳಿಯವರು ಏರ್ಪಡಿಸಿದ ಟೀಪಾರ್ಟಿಯಲ್ಲಿ ಭಾಗವಹಿಸಿ, ಗಂಗೊಳ್ಳಿ ಮತ್ತು ಆಸುಪಾಸಿನ ಜನತೆಯ ಸಂಕಷ್ಟಗಳು ನಿವೇದಿಸಲ್ಪಟ್ಟ ಮನವಿಯನ್ನು ಸ್ವೀಕರಿಸಿದರು. ಶಾಲೆಯ ಭವ್ಯ ಕಟ್ಟಡವನ್ನು ನೋಡಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರಲ್ಲದೆ ಹೆಚ್ಚಿದ ಭಾಗದಲ್ಲಿ ಪ್ರಭುತ್ವವು ಕೊಟ್ಟ ಗ್ರಾಂಟು ಅಲ್ಪವೆಂಬ ದಕ್ಕೆ ಸಹಾನುಭೂತಿಯನ್ನೂ ವ್ಯಕ್ತಪಡಿಸಿದರು. ಅಲ್ಲಿಂದ ಬೈಂದೂರುತ್ತರ ಕಡೆ ಪ್ರಯಾಣ ಬೆಳಸಿದರು.

ಪ್ರಕಟಣೆ

ಉಡುಪಿ ತಾಲೂಕು ಹೆಗ್ಗುಂಜೆ ಗ್ರಾಮದ ಮಂದಾರ್ತಿ ಶ್ರೀ ದುರ್ಗಾ ಪರಮೇಶ್ವರಿ ಅಮ್ಮನವರ ದೇವಸ್ಥಾನದ ಎಕ್ಸಿಕ್ಯೂಟಿವ್ ಆಫೀಸರ ಆಫೀಸಿನಿಂದ ಈ ಮೂಲಕ ಸದ್ರಿ ದೇವಸ್ಥಾನದ ಭಕ್ತರಿಗೆ ತಿಳಿಸುವುದೇನೆಂದರೆ—

ಮೇಲ್ಕಾಣಿಸಿದ ದೇವಸ್ಥಾನದ ಗರ್ಭಗೃಹದ ಜೀರ್ಣೋದ್ಧಾರದ ಕೆಲಸವನ್ನು ಈ ವರ್ಷ ಮಾಡಬೇಕೆಂದಿದೆ ಆ ಬಗ್ಗೆ ಸಹಾಯ ನಿಧಿಯಾಗಿ ಹಣ ಕೊಡತಕ್ಕವರು ಮೇಲ್ಕಂಡ ದೇವಸ್ಥಾನದ ಎಕ್ಸಿಕ್ಯೂಟಿವ್ ಆಫೀಸರರು ಸ್ವಹಸ್ತ ಪಾವತಿ ಇದ್ದಲ್ಲಿ ಬೇರೆ ಯಾರಿಗೂ ಹಣ ಕೊಡಬಾರದು ಹಾಗೆ ಕೊಟ್ಟಲ್ಲಿ ಅದು ಶ್ರೀ ಅಮ್ಮನವರ ಗರ್ಭಗೃಹದ ಜೀರ್ಣೋದ್ಧಾರದ ಬಗ್ಗೆ ಸೇರುವುದಿಲ್ಲವೆಂಬ ಸಂಗತಿ ಈ ಮೂಲಕ ಎಲ್ಲರಿಗೂ ತಿಳಿಯಪಡಿಸಲಾಗಿದೆ ಈ ವರೆಗೆ ಕೆಲವು ಜನರು ಅಲ್ಲಲ್ಲಿ ವಂತಿಗೆ ವಸೂಲು ಮಾಡುತ್ತಿದ್ದಾರೆಂಬ ಸಂಗತಿ ತಿಳಿದು ಬಂದಿದೆ. ಸದ್ರಿ ವಂತಿಗೆ ವಸೂಲು ಮಾಡಿದ ಜನರು ಭಂಡಾರದ ಕಡೆ ಯಾವರಕ್ಕವಾದುದರಿಂದ ಇನ್ನು ಮುಂದೂ ಅಂಥವರಿಗೆ ಹಣ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿಯದೆ.

N. R. Bolar

(ಸಹಿ) ಎಕ್ಸಿಕ್ಯೂಟಿವ್ ಆಫೀಸರ್
ಶ್ರೀ ಮಂದಾರ್ತಿ ದೇವಸ್ಥಾನ ತಾ 11-2-52

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ

ನವಜೀವಾತು

ಎಂಬ

ಸೂತಿಕಾರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನನುಸರಿಸಿ ತಯಾರಿಸಲ್ಪಟ್ಟ ಅಮೋಘವಾದ ವಧುರದ್ರವರಸಾಯನ.



ಹೆಚ್ಚಿನ ಮಾಹಿತಿಗೆ— ಡಾ| ಯಂ. ಸಿ. ಶಾಸ್ತ್ರೀ, ಯಲ್. ಐ. ಎಂ.
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:— ಡಾ| ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು.

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಉಡುಪಿ, ದ ಕನ್ನಡ

ಒಂದು ಸಾವಿರ ರೂಪಾಯಿ ವರೆಗೆ ವಿಮೆ ಮಾಡಲಿಕ್ಕೂ, ಏಜನ್ಸಿ ಯಾ ಸ್ಪೆಶ್ಯಲ್ ಏಜನ್ಸಿ ಪಡೆದು ದುಡಿತಕ್ಕೆ ತಕ್ಕ ಪ್ರತಿಫಲ ಪಡೆಯಲಿಕ್ಕೂ ಯೋಗ್ಯವಾದ ಪ್ರೊವಿಡೆಂಟ್ ವಿಮಾ ಕಂಪೆನಿ.

ನಿಯಮಗಳಿಗೆ ಬರೆಯಿರಿ

THE NEW KARNATAK PROVIDENT INSURNCE CO LTD ,UDIPI

ಹಿರಿಯಡಕ— ಇದೇ ತಾ. 12ರಲ್ಲು ಸ್ಥಳೀಯ ಆರ್ಯ ಸಮಾಜದ ವತಿಯಿಂದ ಸಂಜೆ ಬೋರ್ಡ್ ಹಾ[ಯರ್] ಎ[ಲಿಮೆಂಟರಿ] ಶಾಲಾವಠಾರದಲ್ಲಿ ಶ್ರೀ ಕಬ್ಬಿನಾಡಿ ಶ್ರೀನಿವಾಸ ಶೆಣ್ಯೆಯವರ ಅಧ್ಯಕ್ಷತೆಯಲ್ಲಿ 'ಋಷಿ ಬೋಧೋತ್ಸವ'ವು ಆಚರಿಸಲ್ಪಟ್ಟಿತು. ಪ್ರಾರ್ಥನಾನಂತರ ಶ್ರೀಗಳಾದ ಹಿ. ಕೆ. ಅನಂತಯ್ಯ, ಮುದ್ರಾಡಿ ಕೃಷ್ಣಯ್ಯ ಸೆಟ್ಟಿ, ಸಂಜೀವ ಕಾಮತ್ ಮೊದಲಾದವರು ಶ್ರೀ ದಯಾನಂದ ಸರಸ್ವತಿಯವರ ಜೀವನ ಮೊದಲಾದ ವಿಷಯಗಳನ್ನೆತ್ತಿ ಮಾತನಾಡಿದರು.

ಕಟೀಲು— ಸ್ಥಳೀಯ ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಶ್ರೀ ದೇವಿಗೆ ಬ್ರಹ್ಮಕಲಶಾಭಿಷೇಕ ಮಹೋತ್ಸವವು ಮಾರ್ಚಿ ತಿಂಗಳ ತಾ. 30ರಲ್ಲು ಮಧ್ಯಾಹ್ನ 12-35ರ ತನಕ ಜರಗಲಿರುವುದೆಂದೂ ಭಕ್ತಾದಿಗಳು ಈ ಉತ್ಸವದಲ್ಲಿ ಭಾಗವಹಿಸಿ ಶ್ರೀ ದೇವಿ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಆಡಳಿತೆ ಮುಕ್ತೇಸರರು ವಿನಂತಿಸುತ್ತಾರೆ.

ಸುಳ್ಯ— ಸ್ಥಳೀಯ ಗೌಡ ವಿದ್ಯಾರ್ಥಿ ಭವನದ ಆಡಳಿತದಲ್ಲಿ ಈಚೆಗೆ ದೋಷಗಳು ಮಿತಿ ಮೀರಿ ಹೋಗುತ್ತಾ ಇರುವುದರಿಂದ ಎರಡು ವರ್ಷಗಳ ಹಿಂದೆ ಭವನದಲ್ಲಿ ಇದ್ದ ವಿದ್ಯಾರ್ಥಿಗಳ ಸಂಖ್ಯೆ ಈಗ ಅರ್ಧಾಂಶಕ್ಕೆ ಇಳಿದಿರುವುದೆಂದೂ ಹಿಂದಿನ ಊರ್ಜಿತ ಸ್ಥಿತಿಗೆ ತರುವಂತೆ ಸಂಬಂಧ ಪಟ್ಟವರು ಈಗಲೇ ನಿಗಾ ಕೊಡಬೇಕಾಗಿದೆಯೆಂದೂ ಸುಳ್ಯ ನಿವಾಸಿಗಳೊಬ್ಬರು ತಿಳಿಸುತ್ತಾರೆ.

ಕುಂಬಳೆ— ಸ್ಥಳೀಯ ಗಾಂಧಿ ಮೈದಾನದಲ್ಲಿ ಇದೇ ತಾ. 11ರಲ್ಲು ಶ್ರೀ. ಎ. ಕೃಷ್ಣಯ್ಯ ಸೆಟ್ಟಿ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ರೈತರು ಸಂಘಟಿತರಾಗಿ ನಿಂತು ತಮ್ಮ ಸಂರಕ್ಷಣೆಗೆ ಬೇಕಾದ ಕೇಳಿಕೆಗಳನ್ನು ಸರಕಾರದ ಮುಂದಿಟ್ಟು ಒತ್ತಾಯಿಸಬೇಕೆಂದು ಅಭಿಪ್ರಾಯವಾಯಿತು.

ಮಾಯಿಪಾಡಿ ಬುನಾದಿ ಶಿಕ್ಷಣ ಕೇಂದ್ರ ಶಾಲೆಯ ವರ್ಷಾಂತ್ಯೋತ್ಸವವು ಇದೇ ತಾ. 8ರಲ್ಲು ಶ್ರೀ ಕೆ. ಸದಾನಂದ ಹೆಗ್ಡೆ ಎಮ್. ಸಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ. ಕೆ. ರಾಮಕೃಷ್ಣ ಸೆಟ್ಟಿಯವರು ವರದಿಯನ್ನು ಓದಿದರು. ಶ್ರೀ ಸೋಮಪ್ಪನವರು ಶಾಲಾ ಸ್ವಸ್ತಿವಾಚನ ಮಾಡಿದರು. ಶ್ರೀ ಶಿವ [illegible] ಉತ್ತರ[illegible] ಜನಾಬ್ ಎಮ್. ಎಸ್. ಮೊಗ್ರಾಲ್, ಎಮ್. ಎಲ್. ಎ. ಅವರು ವಸ್ತು ಪ್ರದರ್ಶನವನ್ನು ಉದ್ಘಾಟಿಸಿದರು.

ಅಜೆಕಾರು— ಸ್ಥಳೀಯ ಬೋರ್ಡ್ ಹಾ[ಯರ್] ಎ[ಲಿಮೆಂಟರಿ] ಶಾಲಾ ಪ್ರತಾಪ ಸ್ಕೌಟುದಳದವರು ಕಳೆದ ತಾ. 13ರಲ್ಲು ರೆ[ವ]| ಫಾ[ದರ್] ಎಸ್. ಫೆರ್ನಾಂಡೀಸ್ ಅವರ ನೇತೃತ್ವದಲ್ಲಿ "[illegible]"ಯನ್ನು ಜರಗಿಸಿದರು. ವಿವಿಧ ವಿನೋದಾವಳಿಗಳಾದ ನಂತರ ಸ್ಕೌಟ್ ಮಾಸ್ಟರ್ ಶ್ರೀ ಎಮ್. ಸುಂದರ ಶೆಟ್ಟಿಯವರು ಧನ್ಯವಾದಗಳನ್ನರ್ಪಿಸಿದರು.

ಕಾರ್ಕಳ— ಶ್ರೀ ಭುವನೇಂದ್ರ ಸಂಸ್ಕೃತ ಕಾಲೇಜಿನ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಇದೇ ತಾ. 8ರಲ್ಲು ಪೆರ್ಡಾಲ ಮಹಾಜನ ಸಂಸ್ಕೃತ ಕಾಲೇಜು ಪ್ರಿನ್ಸಿಪಾಲ್ ಶ್ರೀ ಕೆ. ಶ್ಯಾಮ ಭಟ್, ಅವರ ಅಧ್ಯಕ್ಷತೆಯಲ್ಲಿ ಜರಗಿತು.

The Vijaya Bank Ltd, Bombay.

ದಿ ವಿಜಯಾ ಬೇಂಕ್ ಲಿಮಿಟೆಡ್, ಬೊಂಬಾಯಿ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲದ ಮೊಬಲಗನ್ನಾಗಲೀ ಯಾ ಅದಕ್ಕಾಗುವ ಈ ತನಕದ ಬಡ್ಡಿಯನ್ನಾಗಲೀ ಕೊಡದೆ ಇರುವುದರಿಂದಲೂ ಅಲ್ಲದೆ ಕ್ರಮವಾದ ರಿಜಿಸ್ಟ್ರಿ ನೋಟೀಸು ಕೊಟ್ಟಲ್ಲಿ ಕೆಲವರು ಪಡಕೊಂಡು ಕೆಲವರು ಊರಿನಲ್ಲಿ ಇಲ್ಲವೆಂತ ವಾಪಾಸು ಬಂದಿರುವುದರಿಂದಲೂ, ನಗಗಳನ್ನು ಅವರವರು ಬಿಡಿಸಿಕೊಂಡು ಹೋಗದಿರುವುದರಿಂದಲೂ ಸದರೀಯವರಿಗೆ ಯಾ ಸದರಿಯವರ ವಾರೀಸುದಾರರಿಗೆ ಈ ಮೂಲಕ ತಿಳಿಸುವುದೇನಂದರೆ ಸದರೀಯವರು ಈಡಿಟ್ಟ ನಗಗಳನ್ನು ಫೆಬ್ರವರಿ ತಿಂಗಳ ತಾರೀಕು 28-2-53ನೇ ಶನಿವಾರ ದಿವಸ ಗಂಟೆ 2ಕ್ಕೆ ಯಾ ಬೇಂಕಿಗೆ ಯುಕ್ತ ಕಂಡ ಇನ್ನಿತರ ದಿನಗಳಲ್ಲಿ ಮುಂದಿನ ನೋಟೀಸು ಕೊಡದನೇ ಬ್ಯಾಂಕಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಲೋನು ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು		
158/51 19-10-51	ಆರ್. ಎಸ್. ಗೊಡಸಪ್ಪ. 82, ಮಾಟ್ಟುಲಿವಾರ್, ವರ್ಸೋವ ರೋಡ್, ಅಂಧೇರಿ, ಬೊಂಬಾಯಿ.	111	0	0
150/51 6-11-51	ಕೃಷ್ಣ ಮಂಜಪ್ಪ, ಆವರ್ ಹಿಂದೂ ರೆಸ್ಟೋರೆಂಟ್. 223, ಲೆಮಿಂಗ್ಟನ್ ರೋಡ್, ಬೊಂಬಾಯಿ, 7.	401	0	0
171/51 1-12-51	ಯು. ಪತ್. ಸೂರಣ್ಣ ಶೆಟ್ಟಿ, ಕೃಷ್ಣ ವಿಲಾಸ ಹಿಂದೂ ಹೋಟೆಲ್, ಟೇಂಬಾರ್ ರೋಡ್, ಭಿವಂಡಿ, ಥಾನಾ ಡಿಸ್ಟ್ರಿಕ್ಟ್	276	0	0

HASSAN CHAMBERS
PARSEE BAZAR St.
FORT BOMBAY 1.
6—2—1953.

P. P. L. Prabhu
MANAGER,

ಕಾಪಾವರ— ಸ್ಥಳೀಯ ಗ್ರಾಮ ಸೇವಾ ಸಂಘದವರು ಸರಕಾರದ ಧನ ಸಹಾಯ ಪಡೆದು ಹೊಸತಾಗಿ ಕಟ್ಟಿಸಿದ 'ಕಮ್ಯೂನಿಟಿ' ಹಾಲ್ ಕಟ್ಟಡದ ಪ್ರವೇಶೋತ್ಸವವು ಇದೇ ತಾ. 14ರಲ್ಲು ಮದ್ರಾಸು ಸರಕಾರದ ಮಾನ್ಯ ಕೃಷಿ ಮಂತ್ರಿ ಡಾ| ಆರ್. ನಾಗಣ್ಣ ಗೌಡರಿಂದ ನೆರವೇರಿಸಲ್ಪಟ್ಟಿತು. ಶ್ರೀ ವೈ. ಮಂಜಯ್ಯ ಸೆಟ್ಟಿ, ಎಮ್. ಎಲ್. ಎ. ಅವರು ಸಭಾಪ್ರಾರಂಭದಲ್ಲಿ ಮಂತ್ರಿಗಳ ಪರಿಚಯ ಮಾಡಿಕೊಟ್ಟರು, ಬಳಿಕ ಗ್ರಾಮ ಸೇವಾ ಸಂಘ ಮತ್ತು ಪಂಚಾಯತ ಬೋರ್ಡುಗಳ ಕಡೆಯಿಂದ ಶ್ರೀ ಕಾಪು ಸಂಜೀವ ಸೆಟ್ಟಿಯವರು ಮಾನಪತ್ರ ಅರ್ಪಿಸಿದರು. ಈ ಸಮಾರಂಭಕ್ಕೆ ಶ್ರೀಗಳಾದ ಎಸ್. ಎಸ್. ಕೊಳಿಬೈಲ್, ಎಮ್. ಎಲ್. ಎ., ಸಬ್ ಕಲೆಕ್ಟರ್ ಡಿ. ಕೃಷ್ಣ, ಜಿಲ್ಲಾ ಕೃಷಿ ಆಫೀಸರ್ ರಾಮಣ್ಣ ರೈ, ಸಹಕಾರಿ ಸಂಘಗಳ ಡೆಪ್ಯುಟಿ ರಿಜಿಸ್ಟ್ರಾರ್ ಕೆ. ಕೇಶವ ಶೆಟ್ಟಿ ಎಂ.ಎ., ಎಲ್.ಟಿ., ಹೆಗ್ಡೆ ಮೊದಲಾದವರು ಬಂದಿದ್ದರು.

ಕೋಟೇಶ್ವರ— ಸ್ಥಳೀಯ ಬೋರ್ಡ್ ಹೈಸ್ಕೂಲಿನ ವಾರ್ಷಿಕ ಸಮಾರಂಭವು ಇದೇ ತಾ. 14ರಲ್ಲು ಮಾನ್ಯ ಕೃಷಿಮಂತ್ರಿ ಡಾ| ಗೌಡರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯ ಶ್ರೀ ಟಿ. ಶಂಕರ[illegible] ಸಮಾರಂಭಕ್ಕೆ ಶುಭವನ್ನು ಕೋರಿ ಬಂದ ಸಂದೇಶಗಳನ್ನು, ಶಾಲಾ ವರದಿಯನ್ನು ಓದಿದರು. ಶ್ರೀ. ಎಸ್. ಪ್ರಭಾಕರ ಆಚಾರ್ಯರು ಸ್ವಾಗತ ಭಾಷಣ ಮಾಡಿದರು. ಶ್ರೀಮತಿ ಸಾವಿತ್ರಿ ಬಾಯಿ ನಾಗಣ್ಣ ಗೌಡರು ಬಹುಮಾನ ವಿತರಣೆ ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶಾಲೆಯ ಚಟುವಟಿಕೆಗಳನ್ನು ಪ್ರಶಂಸಿಸಿ ಕೆಲವು ಹಿತಸೂಚನೆಗಳನ್ನಿತ್ತರು. ವಿನೋದಾವಳಿಗಳಾಗಿ ಸಮಾರಂಭ ಕೊನೆಗೊಂಡಿತು.

ಉಳ್ಳಾಲ— ಕುಂದಾಪುರ ತಾಲೂಕಿನ ನಂಬ್ರ 74ನೆ ಉಳ್ಳೂರು ಗ್ರಾಮದ ಚಟ್ಟೆ ಎಂಬಲ್ಲಿ ಮದ್ರಾಸು ಸರಕಾರದ ಕೃಷಿ ಮಂತ್ರಿ ಡಾ| ನಾಗಣ್ಣ ಗೌಡರನ್ನು ತಾ. 14ರಲ್ಲು ಊರವರ ಸ್ವಾಗತಿಸಿದರು. ಶ್ರೀ [illegible] ಗೋವಿಂದ ಸೆಟ್ಟಿಯವರು ಪುಷ್ಪಮಾಲಿಕೆಗಳನ್ನು ಅರ್ಪಿಸಿದರು. ಶ್ರೀ ವೈ. ಮಂಜಯ್ಯ ಸೆಟ್ಟಿ ಎಮ್. ಎಲ್. ಎ. ಅವರು ಮಂತ್ರಿಗಳ ಪರಿಚಯವನ್ನು ಜನತೆಗೂ, ಜನತೆಯ ಪರಿಚಯವನ್ನು ಮಂತ್ರಿಗಳಿಗೂ ಮಾಡಿಕೊಟ್ಟರು. ಶ್ರೀ ಸಿ. ಶಂಕರ ಸೆಟ್ಟಿಯವರು ಮಾನಪತ್ರವನ್ನೊಪ್ಪಿಸಿದರು. ಮಂತ್ರಿಗಳು ಉತ್ತರ[illegible] ಕೃಷಿಯ ಉದ್ಧಾರವೇ ಸರಕಾರದ ಗುರಿಯಾಗಿರುವುದೆಂದು ಹೇಳಿ [illegible] ಕಟ್ಟು [illegible] ಕೆಲಸವನ್ನು [illegible] ಪ್ರಾರಂಭಿಸಿದರು.

ಬೊಂಬಾಯಿ— ಇಲ್ಲಿಯ ಬಿಲ್ಲವರ ಎಸೋಸಿಯೇಶನಿನ 2[illegible]ನೆ ವಾರ್ಷಿಕೋತ್ಸವವು ಇದೇ ತಾ. 8ರಲ್ಲು [illegible] ಗಿರ್ಗಾಂ ಸಾರ್ವಜನಿಕ ಸಭಾ ಸದನದಲ್ಲಿ ಎಡ್ವೊಕೇಟ್ ಶ್ರೀ. ಬಿ. ನಾರಾಯಣ ಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನಾನಂತರ ಎಸೋಸಿಯೇಶನಿನ ಅಧ್ಯಕ್ಷರು ಸ್ವಾಗತ ಭಾಷಣ ಮಾಡಿ, ಸಮಾರಂಭಕ್ಕೆ ಶುಭವನ್ನು ಕೋರಿ ಬಂದ ಹಲವಾರು ಸಂದೇಶಗಳನ್ನು ಓದಿದರು. ಬಹುಮಾನ ವಿತರಣೆ ಮಾಡಿದ ಬಳಿಕ ಅಧ್ಯಕ್ಷರು ಭಾಷಣ ಮಾಡುತ್ತಾ ಮುಂಬಯಿ ನಿವಾಸಿಗ[illegible] ಸಂಸ್ಥೆಗಳಲ್ಲಿ [illegible] ಅಭಿಪ್ರಾಯ [illegible] ಮುಂದೆ [illegible] ಮಹೋತ್ಸವಾದಿಗಳನ್ನು ಆಚರಿಸುವ [illegible] ಶ್ರೀಗಳಾದ ವೆಂಕಟೇಶ ಮಾಸ್ತರ್, ಕೆ. [illegible] ಗಾಯತ್ರಿ [illegible] ಶ್ರೀಮತಿಗಳಾದ ರಾಜೇಶ್ವರಿ [illegible] ವಿಜಯ, ಕೆ. ಸೆಟ್ಟಿ ಮೊದಲಾದವರ [illegible] ಶ್ರೀ ಎಸ್. ಪಿ. [illegible] ವಿವಿಧ ವಿನೋದಗಳು, ಗಾಯನ ನರ್ತನ [illegible] ಕಾರ್ಯಕ್ರಮಗಳಿಂದ ಉತ್ಸವವು ಸಾಂಗವಾಗಿ ಕೊನೆಗೊಂಡಿತು.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ಖಾತ್ರಿ ಚಿನ್ನದ ನೆಕ್‌ಲೇಸ್ ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರ್‌ಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಇಷ್ಟು ಕಡಿಮೆ ಬೆಲೆಗೆ
ಇನ್ನೆಲ್ಲಿಯೂ ಸಿಗದು

ಎರಡಾಣೆಯಿಂದ ಹಿಡಿದು,
ಎರಡು ರೂಪಾಯಿ ಬೆಲೆ ವರೆಗೆ
'ಅಂತರಂಗ'ದ 100 ಪ್ರಕಟಣೆಗಳು

ಕೇವಲ ರೂ. 25ಕ್ಕೆ!

ಶಾಲೆ, ಹೈಸ್ಕೂಲ್, ಪಂಚಾಯತ ಬೋರ್ಡು ಮೊದಲಾದುವುಗಳ
ಸಕಲ ಪುಸ್ತಕ ಭಂಡಾರಗಳಿಗೆ ಯೋಗ್ಯವಾದ ಪುಸ್ತಕಗಳು!

ಅನೇಕವಿಧದ, ಸರ್ವೋಪಯೋಗೀ ಸರಸ ಸಾಹಿತ್ಯ!

ಎಲ್ಲೆಲ್ಲಿಯೂ ಮಾರಾಟಕ್ಕೆ ಸಿಗುವುದು. ಸಿಗದಿದ್ದರೆ ನವಭಾರತ ಪುಸ್ತಕ ಭಂಡಾರ ಉಡುಪಿ
ಅಥವಾ ಅಂತರಂಗ ಕಾರ್ಯಾಲಯ ಉಡುಪಿ ಇವರಿಗೆ ಬರೆದು ತರಿಸಿಕೊಳ್ಳಿರಿ.

ವಿರೋಧಾಭಾಸ

(೧ನೇ ೯ಟದಿಂದ)

ನಮಗೆ ಉಪದೇಶಿಸುತ್ತಿರುವರು. ಆದರೆ ಈ ಮೊದಲೇ ಹೇಳಿದಂತೆ ಗಾಂಧೀಜಿಯ ನೀತಿಗೂ ಸರಕಾರದ ಇಂದಿನ ವರ್ತನೆಗೂ ವಿರೋಧಾಭಾಸ ಬಹಳವಿದೆ ನಾವು ಪ್ರಜಾಪ್ರಭುತ್ವ ಪದ್ಧತಿಯನ್ನು ಸ್ವೀಕರಿಸಿದ್ದರೂ ಅದು ಮುಮುಕ್ಷುತನವಾಯಿತೇ ಎಂದು ಸಂತಪಿಸುವ ಕಾಲ ಸನ್ನಿಹಿತವಾಗಿದೆ. ಭಾರತದ ಸ್ಥಿತಿಗತಿಗಳ ಕಡೆಗೆ ವಿಶೇಷ ಗಮನವನ್ನು ಕೊಡದೆ ಪಾಶ್ಚಾತ್ಯ ಸಂಪ್ರದಾಯಗಳ ನಕಲು ತೆಗೆದುದು ಎಷ್ಟರ ಮಟ್ಟಿಗೆ ಚೆನ್ನಾಯಿತೋ ಹೇಳಲು ಬಾರದು. ಏಕೆಂದರೆ ನಮ್ಮ ಈಗಿನ ಸ್ಥೋರಣೆಯ ವಿರೋಧಾಭಾಸಕ್ಕೆ ಮೂಲದಲ್ಲಿ ಈ ಪ್ರಮೇಯವಿದೆ. ನಮ್ಮ ನಿರುದ್ಯೋಗದ ಸಮಸ್ಯೆಯಾಗಲೀ ಅವಶ್ಯಕ ವಸ್ತುಗಳ ತೀವ್ರಕೊರತೆಯಾಗಲೀ ಬಿಡಿಸಲ್ಪಟ್ಟಿರುವುದಿಲ್ಲ ಅತ್ತ ನಮ್ಮನ್ನು ಕಂಗೆಡಿಸಿರುವುದರಿಂದ ವಾದವಾತಾವರಣದಲ್ಲಿಯೇ ಬಾಳಬಹುದಾದ ಸಂಯಮ ಕಟ್ಟೊಡೆದು ನಿಶ್ಚಿಂತ್ರವು ತೀರ ಸಹಜ. ಸ್ವಾರ್ಥ ಸರ್ವ ಹೆಡೆಯರಳಿಸಿ ತಲೆ ಎತ್ತುವುದಕ್ಕೆ ಈ ಪ್ರಕ್ಷುಬ್ಧ ಪರಿಸ್ಥಿತಿ ಹೊಣೆಯಾಗಿದೆ.

ಹೀಗಿರುವಾಗ - ನೀತಿಯಿಂದ ವರ್ತಿಸಿರಿ ಎಂಬ ಉಪದೇಶ ಕೆಲಸಕ್ಕೆ ಬಾರದಿದ್ದಲ್ಲಿ ಜನತೆಯನ್ನು ಮಾತ್ರ ದೂಷಿಸಲಿಕ್ಕೆ ಸಾಧ್ಯವಿಲ್ಲ. ಪ್ರತಿಯೊಬ್ಬನೂ ಹಾಳಿದ್ದಾಗಬಬ್ಬವಾದುವುದು ಸ್ವಾಭಾವಿಕವೇ. ಒಂದು ಹೊಸಜಗತ್ತಿನಕಲ್ಪನೆಯನ್ನು ಜನರ ಮುಂದಿಟ್ಟು ಅದರ ಶಿಲ್ಪಿಗಳಾಗಲು ಅವರಿಗೆ ತಕ್ಕ ತರಬೇತಿಯನ್ನೂ ಸೌಕರ್ಯ ಸೌಲಭ್ಯಗಳನ್ನೂ ಒದಗಿಸಿ ಕೊಟ್ಟಲ್ಲಿಮಾತ್ರ ನಮ್ಮ ಉದ್ದೇಶ ನೆರವೇರೀತು ಈ ದಿಸೆಯಲ್ಲಿ ಮಾಡಿದ ಪ್ರಯತ್ನ ಚಿರಸ್ಥಾಯಿಯಾದ ಉತ್ತಮ ಪರಿಣಾಮವನ್ನು ತರಬಲ್ಲದು. ಶರೀರಶ್ರಮದ ಮಹತ್ವವನ್ನು ಕಡೆಗಣಿಸದೆಯೂ ಬೌದ್ಧಿಕ ಸೈತಿಕ ಸಾಮರ್ಥ್ಯಗಳ ಪ್ರಾಧಾನ್ಯ [illegible] [illegible] [illegible] ನಮ್ಮ ಇಂದಿನ ಸಂಸ್ಕೃತಿ [illegible] [illegible]

ಓಂ ತತ್ಸತ್—

ವಿಧಾಯಕ ಕಾರ್ಯಕರ್ತರ ಹೊಣೆ

(೬ನೇ ಪುಟದಿಂದ)

ತೊಡಗಿದರೆ, ನಮ್ಮ ದೇಶ ಬಹಳ ಮಟ್ಟಿಗೆ ಮುಂದಕ್ಕೆ ಬಂದಂತಾಗುತ್ತದೆ. ಯೋಗ್ಯ ಮುಂದಾಳುತನವು ದೊರೆತರೆ ಜನರು ಸಹಕರಿಸಿಯೇ ತೀರುವರೆಂಬುದಕ್ಕೆ ವಿನೋಬಾಜೀಯ ಯಾತ್ರೆಯೇ ಸಾಕ್ಷಿಯಾಗಿದೆ. ಜನರು ಉದ್ಯೋಗಶೀಲರೂ ಪರಿಶ್ರಮಿಗಳೂ ನೀತಿವಂತರೂ ಸಹೃದಯರೂ ವಿವೇಕಿಗಳೂ ಆದ ಸುಶಿಕ್ಷಿತ ನಾಗರಿಕರಾಗ ಬೇಕಿದ್ದರೆ ವಿಧಾಯಕ ಕಾರ್ಯ ಕರ್ತರು ತಮ್ಮ ಚಟುವಟಿಕೆಗಳನ್ನು ಭರದಿಂದ ಬೆಳೆಸುವುದು ಇಷ್ಟವಿದೆ. ವಿಧಾಯಕ ಕಾರ್ಯ ಕರ್ತರೆಂದ ಮಾತ್ರಕ್ಕೆ ಇಂಥವರದೊಂದು ಬೇರೆಯೇ ಗುಂಪು ಇದೆ ಎಂದು ಭಾವಿಸಲಾಗದು. ನಮ್ಮ ದೃಷ್ಟಿಯಲ್ಲಿ ಹೇಳುವುದಾದಲ್ಲಿ ದೇಶದ ಪ್ರತಿಯೊಬ್ಬ ನಾಗರಿಕನೂ ವಿಧಾಯಕ ಕಾರ್ಯ ಕರ್ತನೆನಿಸಿಕೊಳ್ಳತಕ್ಕದ್ದು. ಕಡಿಮೆ ಪಕ್ಷ ಕಾಂಗ್ರೆಸು ಸದಸ್ಯರಾದರೂ ವಿಧಾಯಕ ಕಾರ್ಯಗಳಿಗೆ ಗಮನಕೊಡಬೇಕು ಹಿಂದೆ ಸ್ವರಾಜ್ಯ ಚಳುವಳಿಯನ್ನು ಸುಸಂಬದ್ಧವಾಗಿ ಸಂಘಟಿಸಿದ ಬಗೆಯಲ್ಲಿಯೇ ಇಂದು ವಿಧಾಯಕ ಕಾರ್ಯಗಳ ಸಾಧನೆಗಾಗಿ ಜನರನ್ನು ಹುರಿದುಂಬಿಸಿ, ಒಟ್ಟಿಗೆ ತರುವುದು ಅವಶ್ಯವಿದೆ.

ಯುವಜನರು ಮುಂಬರಲಿ!

ಆದರೆ ಈ ಸಂದರ್ಭದಲ್ಲಿ ಒಂದು ಆಕ್ಷೇಪ ಸಹಜವಾಗಿ ಬರಬಹುದು. ಹಿಂದೆ ಕಾಂಗ್ರೆಸಿನಲ್ಲಿದ್ದು ಕೊಂಡು ಕೆಲಸ ಮಾಡಿದವರು ಇಂದು ವಯೋವೃದ್ಧರಾಗಿರುವರು. ಕಠಿಣವಾದ ವಿಧಾಯಕ ಕ್ಷೇತ್ರಗಳಲ್ಲಿ ಅವರು ಪರಿಶ್ರಮ ಪೂರ್ವಕ ದುಡಿಯುವುದು ಶಕ್ಯವಾಗಲಿಕ್ಕಿಲ್ಲ. ಇದನ್ನು ಒಪ್ಪಿಕೊಂಡಂತೆಯೇ ಅಂಥವರು ಉತ್ತಮ ಸಲಹೆ ಸೂಚನೆಗಳನ್ನು ಕೊಟ್ಟು ಮಾರ್ಗದರ್ಶನವನ್ನು ನೀಡಲು ಸಾಧ್ಯವಿದೆ ಎಂದೂ ಹೇಳಬಹುದು. ಮುಂದಿನ ಪೀಳಿಗೆಯವರಿಗೂ ಎಡೆಮಾಡಿಕೊಡುವುದು ನಿಸರ್ಗ ನಿಯಮಕ್ಕನುಗುಣವಾದ ನೀತಿ ಎಂಬುದರಿಂದ-ಯುವಜನರು ಸ್ವೇಚ್ಛೆಯಿಂದ ಮುಂಬಂದು ಹಿರಿಯರಿಂದ ಬಂದ ಹೊಣೆಗಾರಿಕೆಗೆ ಹೆಗಲುಕೊಡುವುದು ಅಪೇಕ್ಷಣೀಯವಿದೆ. ವಿಧಾಯಕ ಚಟುವಟಿಕೆಗಳಲ್ಲಿ ಈ ಯುವಜನರು ಮನಃ ಪೂರ್ವಕ ಭಾಗವಹಿಸಿ ದುಡಿದರೆ ಭಾರತದ ಸ್ವರೂಪವೇ ಬೇರೆಯಾಗುವುದು ನಿಶ್ಚಯ ನಮ್ಮ ಯುವಕರ ಶಕ್ತಿ ಸಾಮರ್ಥ್ಯಗಳ ಮೇಲೆ ಅವಿಶ್ವಾಸವನ್ನು ತೋರಿಸುವುದೆಂದರೆ ಅನುಚಿತ ವಿಚಾರವೇ ಸೈ. ಏಕೆಂದರೆ—ಕಳೆದ ಮಹಾಚುನಾವಣೆಯ ಸಮಯ ಕೂಡ--ನಾವು ಸಂಘಟಿತರಾಗಿ ಒಂದು ಉದ್ದೇಶವನ್ನಿಟ್ಟುಕೊಂಡು ದುಡಿದರೆ, ಎಷ್ಟರ ಮಟ್ಟಿಗೆ ಕೆಲಸವನ್ನು ಮಾಡಿ ಪೂರೈಸ ಬಹುದೆಂದು ಲೆಕ್ಕ ಹಾಕಿ ನೋಡಿರುವೆವು ನಾವು ಚುನಾವಣಾ ಕಾಲದಲ್ಲಿ ವ್ಯಯಿಸಿದ ತನು ಮನ ಧನ ಸ್ವರೂಪದ ಶಕ್ತಿ ಸಾಮರ್ಥ್ಯಗಳಲ್ಲಿ ಕೆಲವಂಶವನ್ನಾದರೂ ವಿಧಾಯಕ ಕಾರ್ಯಗಳಿಗೆ ವಿನಿಯೋಗಿಸುತಿದ್ದರೆ, ಆಗ ನಾವು ಕನಸು ಮನಸುಗಳಲ್ಲಿಯೂ ಎಣಿಸದ ರೀತಿ ಪುನರುಜ್ಜೀವನ ಕಾರ್ಯ ನೆರವೇರುತಿತ್ತು. ಆದರೆ ವಿಧಾಯಕ ಕಾರ್ಯಗಳ ಕುರಿತು ಅಂಥ ಕುತೂಹಲವನ್ನು ಯಾರೂ ಹುಟ್ಟಿಸಿಲ್ಲವೆಂದು ವ್ಯಥೆಯಾಗುತ್ತಿದೆ. ಸಾಮಾಜಿಕ ಪುನರುಜ್ಜೀವನದ ಬಗ್ಗೆ ಜನರಲ್ಲಿ ಜಾಗೃತಿಯನ್ನು ನಾವುಂಟುಮಾಡಿಲ್ಲ. ಯುದ್ಧ ಮುಗಿದ ಆರೇಳು ವರ್ಷಗಳ ಅಲ್ಪಾವಧಿಯಲ್ಲಿಯೇ ಯುರೋಪದ ಭಗ್ನ ರಾಷ್ಟ್ರಗಳೂ ಅಣುಬಾಂಬಿನಿಂದ ಜರ್ಜರಿತವಾದ ಜಪಾನೂ ಸಾಧಿಸಿದ ಅತ್ಯದ್ಭುತ ಪ್ರಗತಿಯನ್ನು ನೋಡಿದರೆ ನಮ್ಮ ಜನರೇಕೆ ಎಚ್ಚತ್ತುಕೊಂಡು ರಾಷ್ಟ್ರ ಕಲ್ಯಾಣಕ್ಕಾಗಿ ಟೊಂಕ ಕಟ್ಟುವುದಿಲ್ಲ ಎಂದೆನಿಸುತ್ತದೆ ಜನರಲ್ಲಿ ಈ ತಿಳಿವಳಿಕೆಯನ್ನು ಮೂಡಿಸುವ ಗುರುತರವಾದ ಹೊಣೆಗಾರಿಕೆ ವಿಧಾಯಕ ಕಾರ್ಯ ಕರ್ತರ ಮೇಲೂ ಯುವಜನರ ಮೇಲೂ ಇದೆ.

In the Court of the subordinate Judge of S Kanara

R I. A. 3345/1952 in O. S No. 50/1952.

Between,

Daramma and others— Pititioners (Plaintiffs)

and

Somappa Shetty and others— Respondents (Defendants)

Notice to the respondents.

3. Rukmaya Shetty son of Thungu.
8 Jinnu, daughter of Somakke.

9. Boobu—
12 Manjayya } Children of Nokku.

13 Sampa
14. Sadu
15. Sanjiva
16. Gulabi
17. Krishna
} minors, represented by their guardian adhtem and mother 9th (defendant) Respondent Boobu.

38 Sundara—
39. Narayana—
40 Hpnnaya
41 Jarappa
42 Girija
43 Vanaja
} Minors (40 to 43)
} Children of Jinnu, Respondents 40 to 43 are represented by their guardian adhtem & mother 8th respondent Jinnu.

Respondents 8 and 40 to 43 are residing in Mulkadu House, Kavur village of Mangalore Taluk, respondents 3 and 12 are residing in Kenya House, Kuthethoor village of Mangalore Taluk, respondents 9 and 13 to 17 are residing in Madyar House, Kotekar village of Mangalore Taluk, respondents 38 and 39 are residents of Kenya House, Kuthethoor village of Mangalore Taluk

Please take notice that the above application filed by the petitioner praying that the court may be pleased to appoint a commisioner to divide the family properties and allot Shares to the petitioners, to decide the issues left open and to pass a final decree for partition etc stands posted to 21—2—1953 and if you have any objections to the said application, you may appear before the above Court at 10 a. m on the said date and state your objections, failing which the application will be heard and decided in your absence.

B. P. Hola

Advocate for petitioner.

Mangalore, Dated 10—2—1953

ಉಡುಪಿಗೆ ಹೋಗಬೇಕು! ಆದರೆ ಉಳಿಯುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ನ್ಯಾಯಾರಣ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ವಿಶ್ರಾಂತಿ, ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಬೇರಾಗಿ ಉಡುಪಿ ಬ್ರಾಹ್ಮಣ ಅಡಿಗೆ, ತಂಡಿತಿನಸು, ಇವುಗಳ ಬಿಸಿಬಿಸಿ ಪೇಠಬೇಳೆ

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

ತೃಪ್ತಿಕರವಾದ ವಸತಿ— ಹಿತಕರವಾದ ಊಟ— ರುಚಿಕರವಾದ ಉಪಾಹಾರ ಇವುಗಳಿಗೆ

ಆದರ್ಶ ನಿಲಯವೆಂದರೆ

ವುಡ್ ಲೇಂಡ್ಸ್

ಉಡುಪಿ.

ಯಾತ್ರಿಕರಿಗೂ ಪ್ರಯಾಣಿಕರಿಗೂ ಸರ್ವ ಅನುಕೂಲವಾಗುವಂತೆ

ನಗರದ ಕೇಂದ್ರಭಾಗದಲ್ಲಿದೆ

ಚಂದಾಹಣವನ್ನು ಸಕಾಲದಲ್ಲಿ ಕಳುಹಿಸಿ ಕೊಡುವುದೂ ಚಂದಾದಾರರನ್ನು ಒದಗಿಸಿಕೊಡುವುದೂ ನೀವು ಪತ್ರಿಕೆಗಳಿಗೆ ಮಾಡಬಹುದಾದ ಮಹತ್ತ್ವದ ಉಪಕಾರ

ವರುಣ ದೇವರ ವರದಾನ

(೨ನೇ ಪುಟದಿಂದ)

ಪೋಷಕಾಂಶವುಳ್ಳ ಆಹಾರ

ಮೀನು ಉತ್ತಮ ಪೋಷಕಾಂಶಗಳಿಂದ ಕೂಡಿದ ಸ್ವಾದಿಷ್ಟವಾದ ಆಹಾರವಾಗಿರುತ್ತದೆ. ಖನಿಜ ಪದಾರ್ಥಗಳು, ಜೀವಸತ್ವಗಳು, ಮೇಧಸ್ಸು, ಮತ್ತು ಸಾರಜನಕಗಳು ಮೀನಿನಲ್ಲಿ ಅತ್ಯಧಿಕ ಪ್ರಮಾಣದಲ್ಲಿವೆ. ಆದರೂ ಮದ್ರಾಸು ರಾಜ್ಯದಲ್ಲಿ ವರ್ಷಕ್ಕೆ ತಲಾ ಒಂದರ ಮೂರುವರೆ ರಾತಲಿನಷ್ಟು ಮಾತ್ರ ಮೀನು ತೆಗೆದುಕೊಳ್ಳಲ್ಪಡುತ್ತದೆ. ಇದು ಭಾರತದ ಸರಾಸರಿಗಿಂತ ಹೆಚ್ಚು ಕಂಡುಬಂದರೂ ಬ್ರಿಟನಿನಲ್ಲಿ ಈ ಪ್ರಮಾಣ ೪೦ ರಾತಲಿನಷ್ಟಿದೆ. ಮತ್ತು ಜಪಾನಿನಲ್ಲಿ ೧೧೦ ರಾತಲಿನಷ್ಟಿದೆ ಎನ್ನುವಾಗ—ನಮ್ಮ ಜನಕ್ಕೆ ಇನ್ನೂ ಹೆಚ್ಚು ಮೀನು ತಿನ್ನುವ ಅಭ್ಯಾಸವಾಗಬೇಕೆಂದು ತೋರುತ್ತದೆ.

ಮೀನು ಹೆಚ್ಚು ಹೆಚ್ಚಾಗಿ ಜನರಿಗೆ ದೊರೆಯುವಂತಾಗಬೇಕಾದಲ್ಲಿ—ಅದನ್ನು ಶೀಘ್ರವಾಗಿ ಸಂಪಾದಿಸುವ, ಮತ್ತು ವಿತರಿಸುವ ಪ್ರಯತ್ನಗಳು ನಡೆಯಬೇಕಷ್ಟೇ. ಮೀನುಗಾರಿಕೆಯ ಇಲಾಖೆಯವರು ಸಮುದ್ರದಲ್ಲಿ ಒಳಹೊಕ್ಕು ಮೀನನ್ನು ಹಿಡಿಯುವ ಉದ್ಯಮಕ್ಕೆ ಈಗೀಗ ಹೆಚ್ಚು ಉತ್ತೇಜನವನ್ನು ಕೊಡುತ್ತಿರುವರು. ದೋಣಿಗಳಿಗೆ ಯಂತ್ರಗಳನ್ನು ಬಿಗಿದು ಆಳವಾದ ಸಮುದ್ರದಲ್ಲಿ ಬಹುದೂರದವರೆಗೆ ಹೋಗಿ ಬರುವುದಕ್ಕೆ ಸೌಕರ್ಯವನ್ನು ಒದಗಿಸಿರುವರು. ತನ್ಮೂಲಕ ಈ ಹೊಸ ಕ್ರಮವು ಹಳೆಯ ಪದ್ಧತಿಗಿಂತ ಅಧಿಕ ಲಾಭಪ್ರದವೆಂದು ತೋರಿಸಲು ಪ್ರಯತ್ನ ನಡೆದಿದೆ. ಈ ದೋಣಿಗಳು ಅತ್ಯಲ್ಪ ಸಮಯದಲ್ಲಿಯೇ ಅತ್ಯಧಿಕ ಮೀನಿನೊಡನೆ ದಡ ಸೇರಲು ಸಾಧ್ಯವಾಗುವುದರಿಂದ ಮೀನು ಕೆಡುವ ಸಂಭವ ಕಡಿಮೆ. ಉತ್ತಮ ಸಾರಿಗೆ ಸೌಕರ್ಯವಿದ್ದಲ್ಲಿ ಹಿಡಿದು ತಂದ ಮೀನನ್ನು ಆ ಕೂಡಲೇ ದೂರದೂರುಗಳಿಗೆ ಕಳಿಸಲಿಕ್ಕೆ ಸಾಧ್ಯವಾಗುತ್ತದೆ.

ತಿರುಕೊಚ್ಚಿಯಲ್ಲಿ ಒಂದು ಜಟ ದೋಣಿಗೆ ಪತ್ರಾರು ಸಾಮಾನ್ಯ ಮೀನುಗಾರರ ದೋಣಿಯನ್ನು ಕಟ್ಟಿ, ದೂರ ಸಮುದ್ರಕ್ಕೆ ಒಯ್ದು ಮುಟ್ಟಿಸುವ ಮತ್ತು ಬಲೆ ಹಾಕಿ ಮೀನು ಹಿಡಿದ ಬಳಿಕ ದಡ ಕಾಣಿಸುವ ಪ್ರಯತ್ನಗಳು ನಡೆಯುತ್ತವೆ. ಇವುಗಳಿಂದ ಸಮಯದ ಉಳಿತಾಯವಾಗುವುದಲ್ಲದೆ, ಕಾರ್ಯಕ್ಷೇತ್ರದ ವೈಶಾಲ್ಯವೂ ಹೆಚ್ಚುತ್ತದೆ.

ಮತ್ಸ್ಯವ್ಯವಸಾಯಿಗಳ ಅನಾಸ್ಥೆ

ಸರಕಾರವು ಇಷ್ಟು ಉತ್ಸಾಹದಿಂದ ಮತ್ಸ್ಯವ್ಯವಸಾಯದ ಅಭಿವೃದ್ಧಿಗಾಗಿ ಎಲ್ಲ ಸೌಲಭ್ಯಗಳನ್ನು ಒದಗಿಸಲು ಪ್ರಯತ್ನಿಸುತ್ತಿದ್ದರೂ ಮೀನುಗಾರಿಕೆಯಲ್ಲಿ ನಿರತರಾಗಿರುವ ಜನರಿಂದ ದೊರೆತ ಸಹಕಾರವಾಗಲೀ ಅವರು ಸರಕಾರೀ ಯೋಜನೆಗಳ ಕುರಿತು ತೋರುವ ಆಸ್ಥೆಯಾಗಲೀ ಪ್ರೋತ್ಸಾಹಕರವಾಗಿಲ್ಲ. ಆಧುನಿಕ ಸಲಕರಣೆಗಳಿಂದ ಈಗಿನ ಪರಿಸ್ಥಿತಿಯನ್ನು ಬಹಳವಾಗಿ ಸುಧಾರಿಸಬಹುದೆಂದು ಸರಕಾರದ ಅಭಿಪ್ರಾಯವಿದ್ದರೂ ನಮ್ಮ ಪೂರ್ವ ಕರಾವಳಿಯ ಮತ್ಸ್ಯವ್ಯವಸಾಯಿಗಳು ಕಟಮರನ್ನಥ ಸಾಧನಗಳಲ್ಲಿಯೂ ಪಶ್ಚಿಮ ತೀರದವರು ಸಣ್ಣ ಪುಟ್ಟ ದೋಣಿಗಳಲ್ಲಿಯೂ ಮೀನು ಹಿಡಿದರೆ ಯಥೇಷ್ಟವಾಯಿತೆಂದೆಣಿಸಿರುವರು. ಹಾಗೆಂದು ಆಧುನಿಕ ಸಲಕರಣೆಗಳೆಂದರೆ ಅಂಜಿಕೆ ಎಂಬುದಕ್ಕಾಗಿ ಈ ನಿರುತ್ಸಾಹವೆಂದಾಗಲೀ ಪರಂಪರಾಗತವಾಗಿ ಅನುಸರಿಸಿಕೊಂಡು ಬಂದ ಕ್ರಮಗಳನ್ನು ಬಿಟ್ಟುಕೊಡುವುದೆಂದರೆ ಸಂಸ್ಕೃತಿಯ ವಿನಾಶವೆಂಬುದಾಗಿ ಮತ್ಸ್ಯವ್ಯವಸಾಯಿಗಳು ಭಾವಿಸಿರುವರೆಂದಾಗಲೀ ನಾವು ಹೇಳಲು ಬರುವುದಿಲ್ಲ. ಅತ್ಯಾಧುನಿಕ ಸಲಕರಣೆಗಳ ಮೂಲಕ ಆಳವಾದ ಸಮುದ್ರದಲ್ಲಿ ಹೊಕ್ಕು ಟ್ರಾಲರ್ ಮುಂತಾದ ಬಲೆಗಳನ್ನುಪಯೋಗಿಸಿ ಮೀನನ್ನು ಹಿಡಿಯುವುದಕ್ಕೆ ಇಂದು ಉತ್ತೇಜನ ಸರಕಾರದ ಕಡೆಯಿಂದ ದೊರೆತಿದ್ದರೂ-, ಈ ಮುಂಚೆ ನಡೆದ ಪ್ರಾಯೋಗಿಕ ಪ್ರಯತ್ನಗಳು ನಿರಾಶೆಯನ್ನೇ ತಂದಿವೆ. ಉದಾಹರಣೆಗಾಗಿ ೧೯೫೧ರಲ್ಲಿ ಮದ್ರಾಸು ಸರಕಾರ ನೇಮಿಸಿದ ಸಮಿತಿಯೊಂದು -- "ಅನುಕೂಲವಾದ ರೇವು ಸೌಕರ್ಯಗಳೂ ಶೀತಕಾರಿ ಕೋಣೆಯ ಸೌಲಭ್ಯವೂ ದೊರೆಯುವವರೆಗೆ ಆಳವಾದ ಸಮುದ್ರವನ್ನುಹೊಕ್ಕು ಟ್ರಾಲರ್ ಮುಂತಾದ ಬಲೆಗಳಿಂದ ಮೀನನ್ನು ಹಿಡಿಯುವ ಉದ್ಯಮ ಸಾಕಷ್ಟು ಫಲಕಾರಿಯಾಗಲಿಕ್ಕಿಲ್ಲ. ವ್ಯಾಪಾರೀ ಮಟ್ಟದಲ್ಲಿ ಲಾಭಪ್ರದವೆನಿಸುವಂತೆ ಇದನ್ನು ನಡೆಸುವುದು ಕಷ್ಟಸಾಧ್ಯ" ಎಂದು ಹೇಳಿದೆ.

ನಿಧಾನವಾದ ಸುಧಾರಣೆ

ತನ್ನ ಈ ನಿರ್ಣಯಕ್ಕೆ ಕಾರಣವನ್ನು ಕೊಡುವಾಗ "ಟ್ರಾಲರು ಬಲೆಯನ್ನು ಬೀಸುವುದಕ್ಕೆ ಅನುಕೂಲವಾದ ನೆಲ ಬಹಳ ಕಡಿಮೆ ಇದೆ. ಘನವಾದ ಕೆಸರು ತುಂಬಿದ ತಳವೂ ಚಿಪ್ಪಿನ ಬಂಡೆಗಳೂ ಇಂಥ ಬಲೆಗಳ ಉಪಯೋಗಕ್ಕೆ ಅಡ್ಡಿಯನ್ನು ಉಂಟು ಮಾಡುತ್ತವೆ. ಭಾರತದಲ್ಲಿ ತಿನ್ನಲು ಯೋಗ್ಯವಾದ ಉತ್ತಮ ಜಾತಿಯ ಮೀನುಗಳು ನಡು ನೀರಿನಲ್ಲಿಯೇ ನೆಲಸಿರುತ್ತವೆ. ಹಡಿ ದೋಣಿ ಮುಂತಾದುವನ್ನುಪಯೋಗಿಸಿ ಮೀನುಗಾರಿಕೆಯನ್ನು ನಡೆಸಿದಲ್ಲಿ ಇದಕ್ಕೆ ತಗಲಬಹುದಾದ ವೆಚ್ಚವನ್ನು ಮೀನಿನ ಗಿರಾಕಿಗಳಿಗೆ ಹೊರಿಸುವುದು ಅಸಾಧ್ಯ" ಎಂದು ಸಮಿತಿಯು ತಿಳಿಸಿದೆ. ಅಗ್ಗವಾದ ಸಾಧನ ಸಲಕರಣೆಗಳ ಮೂಲಕ ಈಗಿನ ಕರಾವಳಿ ಪ್ರದೇಶದಲ್ಲಿಯೇ ಸ್ವಲ್ಪ ಹೆಚ್ಚು ದೂರವಾಗಿ ಮೀನುಗಾರಿಕೆಯನ್ನು ಲಾಭಪ್ರದಗೊಳಿಸಬಹುದೆಂದು ಸಮಿತಿ ನಿರ್ಧರಿಸಿದೆ.

ಆಳವಾದ ಸಾಗರದಲ್ಲಿ ಒಳ ಹೊಕ್ಕು ನಡೆಸುವ ಮೀನುಗಾರಿಕೆ ಒಂದೆಡೆ ಲಾಭಪ್ರದವಿಲ್ಲದಿರುವಂತೆ, ಅಪಾಯಕಾರಿಯೂ ಹೌದು. ನಮ್ಮ ಮೀನುಗಾರರು ಈ ವಿಧಾನವನ್ನು ಸುಲಭದಲ್ಲಿ ಉಪಯೋಗಿಸುವಂತಿಲ್ಲ. ಅವರ ಕೌಶಲ್ಯ ಹೆಚ್ಚುವುದು ಅಗತ್ಯ ಬೀಳುತ್ತದೆ. ವಿಶೇಷವಾದ ತರಬೇತಿ ಮತ್ತು ಶಿಕ್ಷಣವೂ ಅವಶ್ಯವಿದೆ. ಈಗಿನ ಕ್ರಮದಂತೆಯೇ ಮುನ್ನಡೆದರೆ ಪರಿಶ್ರಮಕ್ಕೂ ಹೆಚ್ಚಿನ ಲಾಭ ದೊರಕುವುದೆಂದು ಸಾಮಾನ್ಯ ವಿಶ್ವಾಸವಿದೆ. ಅದನ್ನು ಒಮ್ಮಿಂದೊಮ್ಮೆಗೆ ಪರಿವರ್ತಿಸಲಿಕ್ಕೆ ಬರುವುದಿಲ್ಲ. ಆರ್ಥಿಕವಾಗಿ ಭದ್ರವಿಲ್ಲವೆಂಬುದಕ್ಕಾಗಿಯೇ ಆಳವಾದ ಸಮುದ್ರದಲ್ಲಿ ಹೊಕ್ಕು ಮೀನುಗಾರಿಕೆಯನ್ನು ನಡೆಸುವ ವಿಚಾರವನ್ನು ಸಾಮಾನ್ಯವಾಗಿ ಈ ಹಿಂದೆ ಬಿಟ್ಟು ಕೊಟ್ಟಿದ್ದರು. ಭಾರತದಲ್ಲಿಯೇ ಪ್ರಖ್ಯಾತ ಮೀನುಗಾರಿಕೆಯ ಕೇಂದ್ರವೆನಿಸಿದ ಉಡುಪಿಯ ಸಮೀಪದ ಮಲ್ಪೆಯಲ್ಲಿಯೂ ಕಡಲತಡಿಯ ಮೀನುಗಾರಿಕೆಯೇ ಪ್ರಾದುರ್ಭಾವ ಹೊಂದುತ್ತಿದೆಯಲ್ಲದೆ ವಿಶೇಷವಾದ ಲಾಭವನ್ನೂ ಸಂಪಾದಿಸುತ್ತದೆ. ನಮ್ಮ ಮತ್ಸ್ಯವ್ಯವಸಾಯಿಗಳು ಹಳೆಯ ಪದ್ಧತಿಯನ್ನು ಉಪಯೋಗಿಸಿಕೊಂಡು ಬಂದಿದ್ದರೂ ಅದನ್ನು ಇದ್ದುದಿದ್ದಂತೆ ನಾವು ಅತ್ಯಾಧುನಿಕ ಸಲಕರಣೆಗಳಿಂದ ಪ್ರತೀಕ್ಷಿಸಲು ಬರುವುದಿಲ್ಲೆಂಬ ಮಾತನ್ನು ನಾವೆಲ್ಲರೂ ಒಪ್ಪಿಕೊಂಡರೇನೆ ವಿಹಿತ. ಸರಕಾರವು ಸುಧಾರಣೆಗಳು ನಿಧಾನವಾಗಿ ಜನರ ಮನೋಭೂಮಿಯಲ್ಲಿ ಬೇರೂರ ಕ ಕಾರ್ಯವೆಸಗಿದರೇನೆ ಚಂದ.

ಸೌಲಭ್ಯಗಳ ಅಗತ್ಯ

ಪಡುಕರಾವಳಿಯು ಲೋಕದಲ್ಲಿಯೇ ತುಂಬ ಚಲೋದಾದ ಮೀನುಗಾರಿಕೆಯ ಕೇಂದ್ರವೆಂಬುದಾಗಿ ಪ್ರಸಿದ್ಧಿ ಪಡೆದಿದೆ. ಭಾರತದಲ್ಲಿ ಸಮುದ್ರದಲ್ಲಿ ಹಿಡಿದ ಮೀನಿನ ಉತ್ಪಾದನೆಯಲ್ಲಿ ಪಡುಗಡಲ ತಡಿಯ ಕೇರಳ ಹಾಗೂ ಕೊಂಕಣ ಪ್ರದೇಶದಿಂದ ಬಂದುದು ಅರೆಪಾಸಿಗೂ ಅಧಿಕವೆಂದು ತಿಳಿದಿದೆ. ಮಳೆಗಾಲದ ನಾಲ್ಕು ತಿಂಗಳ ಕಾಲ ಮೀನುಗಾರಿಕೆಯನ್ನು ನಡೆಸುವುದೇ ಅಸಾಧ್ಯವೆಂದಿದ್ದರೂ ಇಷ್ಟು ಅಧಿಕ ಪ್ರಮಾಣದಲ್ಲಿ ಮೀನು ಹಿಡಿಯುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ. ಈ ಕರಾವಳಿಯಲ್ಲಿ ಸಿಗುವ ಮೀನೂ ಉತ್ತಮ ಜಾತಿಯದ್ದು. ಎಣ್ಣೆಗೆ ಉಪಯೋಗಿಸುತ್ತಿದ್ದ ಸಾರ್ಡೈನ್ ಮೀನುಗಳು ಈಗ್ಗೆ ೨೦ ವರ್ಷಗಳಿಂದ ಈ ಕರಾವಳಿಯಲ್ಲಿ ಕಾಣೆಯಾಗುತ್ತಿವೆ. ಇದಕ್ಕೆ ಕಾರಣಗಳನ್ನು ಕಂಡು ಹಿಡಿಯುವ ಪ್ರಯತ್ನವನ್ನು ಸರಕಾರದ ಪ್ರಾಣಿಶಾಸ್ತ್ರ ಸಂಶೋಧನಾಲಯದಲ್ಲಿ ಮಾಡುತ್ತಿರುವರು. ಈಗ ಈಚೆಗೆ ಮೀನಿನೆಣ್ಣೆಯನ್ನು ತೆಗೆಯುವ ಉದ್ಯಮ ಹೆಚ್ಚು ಕಡಿಮೆ ಮಾಯವಾಗಿದೆ ಎಂದರೂ ಸಲ್ಲುವುದು. ಆದರೂ "ಶಾರ್ಕ್" ಎಂಬ ಇನ್ನೊಂದು ಜಾತಿಯ ಮೀನು ಧಾರಾಳವಾಗಿ ದೊರೆಯುತ್ತಿರುವುದರಿಂದ ಅದನ್ನು ಎಣ್ಣೆಗೆ ಉಪಯೋಗಿಸುತ್ತಿರುವರು. ಕಾಡ್ ಮೀನಿನೆಣ್ಣೆಯಷ್ಟೇ ಪೋಷಕಾಂಶಗಳಿಂದ ಶಾರ್ಕ್ ಮೀನಿನೆಣ್ಣೆಯೂ ಕೂಡಿದೆ ಎಂದು ತಜ್ಞರು ನಿರ್ಧಾರ ಮಾಡಿರುವುದರಿಂದ ಇದು ದಿನದಿಂದ ದಿನಕ್ಕೆ ಉಚ್ಛ್ರಾಯ ಸ್ಥಿತಿಗೇರುತ್ತಿದೆ. ಪ್ರಕೃತ ಸರಕಾರದ ಪರದಲ್ಲಿಯೇ ಈ ಉದ್ಯಮವಿದೆ. ಕಲ್ಲಿಕೋಟೆಯ ಸರಕಾರೀ ಯಂತ್ರಾಲಯದಲ್ಲಿ ಇದು ಸಿದ್ಧಗೊಳ್ಳುತ್ತದೆ.

ಮೀನುಗಾರಿಕೆಯ ಅಭಿವೃದ್ಧಿಗೆ ತಡೆಯೊದಗಿರುವುದು ಯೋಗ್ಯ ಸಾರಿಗೆಯ ಅಭಾವದಿಂದಲೂ ಇರಬಹುದು. ಒಳನಾಡಿಗೆ ತಾಜಾ ಮೀನನ್ನು ಒದಗಿಸುವುದಕ್ಕೆ ನಮ್ಮ [illegible] ಅನುಕೂಲತೆ ಸಾಲದು. ಅತ್ಯಧಿಕ ಮೀನು ಉತ್ಪಾದನೆಗೊಂಡಲ್ಲಿ ಅದನ್ನು ಕೆಡದಿರುವಂತೆ ಸಂರಕ್ಷಿಸಿಡುವ ಅನುಕೂಲತೆಗಳೂ ಇಲ್ಲ. ಶೀತಕಾರಿ ಕೋಣೆಗಳ ಸೌಲಭ್ಯ ದೊರೆತಲ್ಲಿ ಮೀನು ಕೆಡದಂತೆ ಬಹುಕಾಲ ಇಡಲಿಕ್ಕೆ ಸಾಧ್ಯವಾಗುತ್ತದೆ. ಕಲ್ಲಿಕೋಟೆ ಮತ್ತು ಮಂಗಳೂರುಗಳಲ್ಲಿ ಇಂಥವೆರಡು ಶೀತಾಲಯಗಳನ್ನು ಒದಗಿಸುವ ವಿಚಾರದು ಸರಕಾರಕ್ಕಿದೆ ಎಂದು ಕೇಳಿದ್ದೇವೆ. ಅದು ಕಾರ್ಯರೂಪದಲ್ಲಿ ಬಂದ ಬಳಿಕವೂ ಮೀನನ್ನು ಒಣಗಿಸಿ, ರಫ್ತು ಮಾಡುವ ಈಗಿನ ಪದ್ಧತಿಗೆ ಪೆಟ್ಟು ಬೀಳಲಿಕ್ಕಿಲ್ಲ. ಒಣಮೀನಿನ ವ್ಯಾಪಾರದಲ್ಲಿ ಕೂಡ ತೆರಿಗೆ ರಿಯಾಯಿತಿಯನ್ನು ಸರಕಾರ ಮಾಡಿದೆ.

ಏನೇ ಇರಲಿ- ವರುಣ ದೇವರ ವರದಾನವೆನಿಸಿದ ಮತ್ಸ್ಯವ್ಯವಸಾಯದ ಅಭಿವೃದ್ಧಿಯಿಂದ ನಮ್ಮ ಘನವಾದ ಸಮಸ್ಯೆ ಕೆಲಮಟ್ಟಿಗೆ ಪರಿಹಾರ ಹೊಂದೀತೆಂದು ಆಶಿಸುವುದರಲ್ಲಿ ತಪ್ಪಿಲ್ಲ.

ರಕ್ಷಣೆಗೂ ಉಳಿತಾಯ ವ್ಯವಸ್ಥೆಗೂ
ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್
ಸ್ಥಾಪನೆ: 1934. ಪ್ರಧಾನ ಕಚೇರಿ: ಮದ್ರಾಸು.
66½ ಲಕ್ಷಕ್ಕೂ ಮಿಕ್ಕಿದ ಹೊಸ ವ್ಯವಹಾರ, 15 ಲಕ್ಷಕ್ಕೂ ಮಿಕ್ಕಿದ ಪ್ರೀಮಿಯಮ್ ಉತ್ಪತ್ತಿ, 45½ ಲಕ್ಷಕ್ಕೂ ಮಿಕ್ಕಿದ ಜೀವವಿಮಾ ನಿಧಿ, 10½ ಲಕ್ಷಕ್ಕೂ ಮಿಕ್ಕಿದ ಮೂಲಗಳು, ಸಾಧಾರಣ 3 ಕೋಟಿಯಷ್ಟು ಊರ್ಜಿತದಲ್ಲಿ ಇದ್ದ ವಹಿವಾಟು.
ಪ್ರಗತಿಪರವಾದ ಈ ಕಂಪೆನಿಯಲ್ಲಿ ಒಂದು ಪೋಲಿಸಿ ಇಳುವುದು ಉತ್ತಮ ಕ್ಷೇಮ ಸಾಧನ. ಅಂತೆಯೇ ಇದರ ಏಜನ್ಸಿ ಇರುವುದು ಚಲೋ ವ್ಯವಹಾರ ಸಾಧನ
ಉತ್ಸಾಹಿ, ಜನಾನುರಾಗಿಯ, ಸಮರ್ಥ ಸ್ತ್ರೀ ಪುರುಷರಿಂದ ಕಂಪೆನಿ ಪ್ರಾತಿನಿಧ್ಯದ ಬಗ್ಗೆ ಅರ್ಜಿಗಳು ಸ್ವಾಗತಾರ್ಹವು. ದಯವಿಟ್ಟು ಬರೆಯಿರಿ:-
ಜಿ. ಆರ್ ವಾಲ್ಕೆ, ಬ್ರಾಂಚ್ ಮೆನೇಜರ್,
ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು [ದ ಕ]



ವೆಲ್ಕಿನ್ಸ್ ಟೂತ್ ಪೇಸ್ಟ್
ಮಿಂಚುವ ನಗುವಿಗೆ, ಮತ್ತು ಒಸಡಿನ ಆರೋಗ್ಯಕ್ಕೆ!
ಯು ಎಸ್ ಎ ರಾಜ್ಯದ ಪ್ರಸಿದ್ಧ ಡಾಕ್ಟರರೊಬ್ಬರ ತಯಾರಿಕೆ.
Welkin Laboratory (N)
Calcutta 3.
ಉದಾರ ಶರತುಗಳ ಮೇಲೆ ಸ್ಟಾಕಿಸ್ಟರು ಬೇಕಾಗಿದ್ದಾರೆ

ವಾರದ ಒಳಿತು ಕೆಡುಕುಗಳು

ತಾ 19-2-53ರಿಂದ ತಾ. 25-2-53ರ ವರೆಗೆ.

ಮೇಷ— ನೀವೆಣಿಸಿದ ಕಾರ್ಯಗಳು ನಿರೀಕ್ಷೆಯಂತೆಯೇ ಆಗುವವು. ಆದರೆ ಖರ್ಚು ವಿಪರೀತವಾದ್ದರಿಂದಾಗಿ ಲಾಭವಾಗುವದು ಸಮಾಜದಲ್ಲಿ ಒಳ್ಳೆಹೆಸರನ್ನು ಪಡೆವಿರಿ. ಹಣದ ಅಡಚಣೆಯು ಕಾಣಿಸದು ಪತ್ನೀಪುತ್ರರ ಆರೋಗ್ಯಕ್ಕೆ ಹಾನಿಯಿದೆ. ಕಫ ಪಿತ್ತದೋಷದಿಂದ ನಿಮ್ಮ ಆರೋಗ್ಯವು ಸರಿಯಿರದು ಪ್ರವಾಸವು ವ್ಯರ್ಥ ಶ್ರಮದಾಯಿಯಾಗವುದು. ತಾ. 19, 23, 24 ಈ ದಿನಗಳಲ್ಲಿ ಬಂಧುಮಿತ್ರರ ಸಮಾಗಮದಿಂದಾಗಿ ಸಂತೋಷದಿಂದ ಕಾಲ ಕಳೆವಿರಿ.

ವೃಷಭ— ಶುಭದಿನಗಳು ಸನ್ನಿಹಿತವಾಗಿರುವವು. ನಿಮ್ಮ ಎಲ್ಲಾ ಆಧಿವ್ಯಾಧಿಗಳೂ ದೂರವಾಗಲಿವೆ. ವಿಪಕ್ಷೀಯರೆಲ್ಲರೂ ದಿವಾಕರನ ಕಂಡ ದಿವಾಂಧಗಳಂತೆ ಮರೆಯಾಗುವರು ನಿಮ್ಮ ಸರ್ವಾಭೀಷ್ಟಗಳೂ ಇಂದು ನಿರಾಯಾಸದಿಂದ ಫಲಿಸಲಿವೆ. ರಾಜಕೀಯ ರಂಗದಲ್ಲಿ ವಿಜಯವೂ ಸಮಾಜದಲ್ಲಿ ಆದರ ಪುರಸ್ಕಾರಗಳೂ ಲಭಿಸಲಿವೆ. ಯಾವೊಂದು ಭಾಗದಲ್ಲೂ ನ್ಯೂನಾತಿರೇಕಗಳು ಕಾಣಿಸವು ಬಂಧುಮಿತ್ರರಿಂದ ಕೂಡಿ ಸುಖದಿಂದ ಕಾಲಯಾಪನೆ ಮಾಡತಕ್ಕ ನಿಮಗೆ ಈ ವಾರವು ಕಳೆದುದೇ ತಿಳಿಯಲೊಲ್ಲದು

ಮಿಥುನ— "ಉಪಾಯೇನ ಹಿ ಯಚ್ಛಕ್ಯಂ ನತಚ್ಛಕ್ಯಂ ಪರಾಕ್ರಮೈ:" ಎಂಬ ಲೋಕೋಕ್ತಿಯಂತೆ ಯುಕ್ತಿಯಿಂದ ಸಾಧ್ಯವಾಗುವ ಕಾರ್ಯಗಳು ಶಕ್ತಿಯಿಂದ ಸಾಧಿಸಲಾಗುವು. ಈ ವಾರದಲ್ಲಿ ನಿಮ್ಮ ಅದೃಷ್ಟವು ಬಹಳ ದುರ್ಬಲವಿರುವುದರಿಂದ ನೀವು ಯಾವ ಸಾಹಸ ಕಾರ್ಯಗಳಿಗೆ ಕೈ ಹಚ್ಚಬೇಡಿರಿ. ಜನತೆಯೇ ನಿಮಗೆ ವಿರೋಧವಾಗಿರುವದು ಪೂತನಾದದ ಮೂಕನಂತಿದ್ದರೂ ಕೂಡ ಕಲಹ ಏರದೆ ತಪ್ಪಲೊಲ್ಲದು. ಆರ್ಥಿಕ ಮುಗ್ಗಟ್ಟಿನಿಂದಾಗಿ ಮಾನವುಳಿಸಿ ಕೊಳ್ಳುವದು ಕಷ್ಟವೆನಿಸೀತು. ತಾ. 20, 21, 22 ದೊರತಾಗಿ ಉಳಿದ ದಿನಗಳಲ್ಲಿ ನಿಮ್ಮ ಬಯಕೆಯು ಉಪಾಯದಿಂದ ಸಾಧ್ಯವಾಗಲಿದೆ.

ಕರ್ಕಟ— ನಿಮ್ಮ ಭಾಗ್ಯಗತನಾದ ಉಚ್ಚ ಶುಕ್ರನಿಂದಾಗಿ ನೀನಿಂದ, ಅಲ್ಪಯತ್ನದಿಂದ ಮಹತ್ಫಲವನ್ನು ಹೊಂದುವಿರಿ ಅನವಶ್ಯಕ ಹಲವಾರು ಖರ್ಚುಗಳು ಪ್ರಾಪ್ತವಾದರೂ ನಿಮಗಿಂದು ಹಣದ ತಾಪತ್ರಯ ಕಾಣಿಸದು. ಸಂಸಾರದಲ್ಲಿ ಸಣ್ಣ ಪುಟ್ಟ ಕಲಹಗಳು ಉಂಟಾಗಲಿವೆ ಅಧಿಕಾರಿವರ್ಗದವರಿಂದಲೂ ನೀಚಜನರಿಂದಲೂ ಅನಿಷ್ಟ ಧನಹಾನಿ ಮಾನಚ್ಯುತಿಗಳು ಸಂಭವಿಸಲಿವೆ ಆತ್ಮೀಯರ ವಿರಹದಿಂದ ಸಂಕ್ರಾಂತರಾದ ನಿಮಗೆ ವಾರಾದಿಯ 4 ದಿನಗಳು ಸ್ವಲ್ಪ ಶಾಂತಿಯನ್ನೀಯಲಿವೆ.

ಸಿಂಹ— ಅನಿಷ್ಟಕಾರಿಯಾದ ಅಂಗಾರಕನು ಅಷ್ಟಮ ಮನೆ ಹೊಂದಿದರೂ ನಿಮ್ಮ ಭಾಗ್ಯಕ್ಕಿಂದು ಎಣೆಯಿಲ್ಲ ಏನ್ನಬಹುದು. ಶಾರದ ವಿಕ್ರಮ ಸ್ಥಾನದಲ್ಲಿ ಉಚ್ಚಶನೈಶ್ಚರನೂ ಭಾಗ್ಯದಲ್ಲಿ ಬೃಹಸ್ಪತ್ಯಾಚಾರ್ಯರೂ ಇದ್ದು ನಿಮ್ಮ ಸಕಲ ಮನೋರಥಗಳನ್ನು ಪೂರೈಸಲು ಬದ್ಧಕಂಕಣರಾಗಿದ್ದಾರೆ. ವಿದ್ವಾನರನ್ನೂ ಕೂಡ ಸಿಂಹದ ಮುಂದಿನ ಮರಿಗಳಂತೆ ಬಲಶಾಲಿಗಳಾದ ಶತ್ರುಗಳನ್ನೂ ಕೂಡ ಪರಾಭವಗೊಳಿಸುವಿರಿ ಸಂಪದ್ಭಾಗವು ಉತ್ತಮ ರೀತಿಯಲ್ಲಿರುವುದು. ವಾರದ ಅದ್ಯಂತ ದಿನಗಳನ್ನು ಬಿಟ್ಟು ಉಳಿದ ದಿನಗಳೂ ಅತೀವ ಶ್ರೇಯಸ್ಕರವಿವೆ

ಕನ್ಯಾ— ದುರ್ದೈವದಿಂದ ನಿಮ್ಮನ್ನು ಬಲವಾಗಿ ಪೀಡಿಸಲಿವೆ. ಕಫ ವಾತಗಳ ಪ್ರಕೋಪದಿಂದಾಗಿ ಹೆಚ್ಚಿನ ಬಾಧೆಗೆ ಸಿಲುಕುವಿರಿ ಅನಿರೀಕ್ಷಿತ ಪರ್ಯಟನಗಳೊದಗಿ ನಷ್ಟ ಕಷ್ಟಗಳಿಗೀಡು ಮಾಡಲಿದೆ. ನೀವೆಷ್ಟೇ ದುಡಿದರೂ ಸಧಾ ಕೈಬರಿದಾಗಿಯೇ ಇದ್ದೀತು. ವ್ಯವ ನೆ ಯಾಕೆಂದು ಚಡಿಸುವಂತೆ ಹರ ಹಿಡಿವಳ್ಳ ಸಾಮಾನ್ಯವಾಗಿ ಸ್ತ್ರೀವರ್ಗವೇ ನಿಮಗೆ ಪ್ರತಿಕೂಲವಾಗಿ ನಿಲ್ಲಲಿದೆ. ಇದ್ದುದರಲ್ಲಿ ತೃಪ್ತಿಯೆಂದರೆ ದಿನನಿತ್ಯದ ಆಗುಹೋಗು ಖರ್ಚುವೆಚ್ಚಗಳ ನಿಯತ್ತರವರ ಸ್ತ್ರೀಯರು ವ ಪ್ರಸಂಗಬಾರದು ವಾರಾಂತ್ಯದ ದಿನಗಳಲ್ಲಿ ಸ್ವಲ್ಪ ಸುಖ ಅವಕಾಶವಿದೆ.

ತುಲಾ— ಬಲೀಯರಾದ ಕುಜಗುರಗಳಿಂದು ನಿಮ್ಮ ಬಲಭುಜವಾಗಿರುವರು. ಎಂತಹ ಕಾರ್ಯವೇ ಇರಲಿ ಅದು ನಿಮ್ಮ ಭಾಗ್ಯಕ್ಕೆ ತುಚ್ಛವಾಗಿ ಪರಿಣಮಿಸುವದು ನಿಮ್ಮ ಧೈರ್ಯಸಾಹಸ ಕಾರ್ಯ ಕುಶಲತೆಯನ್ನು ಕಂಡ ಶತ್ರುವರ್ಗವು ಕೂಡ ನಿಮ್ಮ ಮೈತ್ರಿಯನ್ನು ಯಾಚಿಸಲು ಮುಂದೆ ಬಂದೀತು. ವ್ಯಾಪಾರ ವ್ಯವಹಾರಗಳಲ್ಲಿ ನಿಮ್ಮ ನಿರೀಕ್ಷೆಯು ತಪ್ಪಿದಿಳಲಿದೆ. ಸಂಸಾರದಲ್ಲಿ ಒಡಕುಗಳುಂಟಾಗುವವು ದೇಹದಲ್ಲಿ ವಾತ ಪ್ರಕೋಪದಿಂದಾಗಿ ಅಲ್ಲಲ್ಲಿ ನೋವು ಕಾಣಿಸೀತು. ವಾರದ ಆದ್ಯಂತ ದಿನಗಳು ನಿಮ್ಮ ಬಯಕೆಯನ್ನು ಪೂರೈಸಗೊಳಿಸಲಿವೆ.

ವೃಶ್ಚಿಕ— ದಿನೇ ದಿನೇ ಪ್ರಬಲವಾಗುತ್ತಿರುವ ನಿಮ್ಮ ಮನೋರೋಗವು ಆರೋಗ್ಯವನ್ನು ಕೂಡ ಕೆಡಿಸಲಿದೆ. ಸಾಂಸಾರಿಕ ತಾಪತ್ರಯಗಳು ಹೆಚ್ಚಿ ನಿಮ್ಮನ್ನು ದಿಙ್ಮೂಢರನ್ನಾಗಿ ಮಾಡುವವು. ವಿರೋಧಿವರ್ಗದವರು ಪ್ರತೀಕಾರಾಸಕ್ತರಾಗುವರು ಹೆಚ್ಚೇಕೆ ಅನರ್ಥ ಪರಂಪರೆಗಳು ಒಂದರ ಹಿಂದೆ ಒಂದರಂತೆ ಬರಲಿವೆ. ನಿಮ್ಮ ಉದ್ಯೋಗದಲ್ಲಿ ಫಲವು ಪ್ರಯತ್ನಕ್ಕುಚಿತವಾಗಿರುವುದರಿಂದ ದಿನಯಾಪನೆಯು ಕಷ್ಟವಾಗಲಾರದ. ವಾರಾದಿಯ 4 ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳನ್ನು ಕಾಣಲಿರಿ.

ಧನು— ಸುಖಸ್ಥಾನದಲ್ಲಿ ಉಚ್ಚ ಶುಕ್ರನೂ ಲಾಭದಲ್ಲಿ ಉಚ್ಚ ಶನೈಶ್ಚರನೂ ಇರುವುದರಿಂದ ನಿಮಗಾವ ತೆರನಾದ ಚಿಂತೆಗೂ ಅವಕಾಶವಿಲ್ಲವು ಕತ್ತಾಪಿ ನಿಮ್ಮ ದೇಹ ಸುಖ ಪತಿಯ ಪೂರ್ಣ ದೃಷ್ಟಿಯು ನಿಮ್ಮ ಮೇಲಿರುವುದರಿಂದ ಮೇಲೆ ನಿಮಗಿನ್ನಾವ ತೆರನಾದ ಅಂಜಿಕೆಗೂ ಕಾರಣವಿಲ್ಲವು ನಿಮ್ಮ ಸಂಪದ್ಭಾಗವೆಂತೂ ಅತ್ಯುಚ್ಚ ಮಟ್ಟಕ್ಕೇರುವುದು. ಕೆಲವೊಂದು ದುರ್ಜನರ ಸ್ನೇಹಕ್ಕೆ ಬಲಿಬಿದ್ದ ನೀವು ಜನನಿಂದೆಗೆ ಗುರಿಯಾದೀರಿ ವಾರದ ಆದ್ಯಂತ ದಿನಗಳನ್ನುಳಿದು ಮಿಕ್ಕ ದಿನಗಳು ಸದ್ಫಲಕಾರಿಗಳಾಗಿವೆ.

ಮಕರ— ನಿಮಗೀ ವಾರದಲ್ಲಿ ಸುಖ ದುಃಖಗಳು ಮಿಶ್ರವಾಗಿ ಫಲಿಸುವವು. ಕಷ್ಟಸಾಧ್ಯವಾದ ಕಾರ್ಯವನ್ನು ಕೊನೆಹೊಂದಿಸಿ ಇಷ್ಟಾರ್ಥವನ್ನು ಪಡೆವಿರಿ. ಬಂಧುವರ್ಗ ಸ್ನೇಹಿತ ವೃಂದವು ನಿಮ್ಮ ಬೆಂಬಲಕ್ಕೆ ಸದಾ ಸಿದ್ಧವಿರುವುದರಿಂದ ವಿರೋಧಿ ಜನರ ಆಟವು ನಿಮ್ಮ ಮುಂದೆ ಸಾಗದು. ಕೆಲವೊಮ್ಮೆ ಮಿತ್ರಜನತೆಯೊಳು ಬಂಧುವರ್ಗದೊಳು ಮನಸ್ತಾಪವುಂಟಾಗುವ ಪ್ರಸಂಗಗಳೊದಗಲಿವೆ. ಜಾಗ್ರತೆ ವಾರಾಂತ್ಯದ 3 ದಿನಗಳಲ್ಲಿ ನಿಮ್ಮ ಸಂಕಲ್ಪವು ನಿರಾಯಾಸದಿಂದ ಸಿದ್ಧಿಸುವದು.

ಕುಂಭ— ನಿಮ್ಮ ಸುಖಭಾಗ್ಯಪತಿಯಾದ ಶುಕ್ರನೊಬ್ಬನೇ ಇಂದು ನಿಮ್ಮ ಧನಸ್ಥಾನದಲ್ಲಿ ಉಚ್ಚನಾಗಿ ಕುಳಿತಿರುವನ. ಆದಕಾರಣ ಮಿಕ್ಕೆಲ್ಲಾ ಗ್ರಹರೂ ಹೇಗೇನೇ ಇರಲಿ ನಿಮ್ಮ ಮನಸ್ಸಿಗೆ ನೋವುಂಟಾಗದು. ಖರ್ಚುವೆಚ್ಚಗಳು ಆದಾಯವನ್ನತಿಕ್ರಮಿಸಲಿರವು. ರಾಜಕೀಯ ರಂಗದಿಂದ ದೂರವಾಗಿರಿ, ಫಲವು ಅನಿಷ್ಟದಾಯಿಯಾದೀತು. ಅಧಿಕಾರಿ ವರ್ಗದವರಿಂದ ಆಗಾಗ ಪೀಡೆಯುಂಟಾಗುವ ಸಂಭವವಿದೆ. ಅನಿರೀಕ್ಷಿತ ಪ್ರವಾಸವು ಪ್ರಾಪ್ತವಾಗುವದು. ವಾರದ ಆದ್ಯಂತ ದಿನಗಳು ಹಿತಕರವಿವೆ.

ಮೀನ— ಆದಾಯವೊಂದು ವೆಚ್ಚವೆರಡು ಎಂಬಂತೆ ಇಂದು ನಿಮ್ಮ ಪರಿಸ್ಥಿತಿಯಾಗಲಿದೆ. ದ್ವಾದಶ ಜನ್ಮಸ್ಥಾನಗಳಲ್ಲಿರತಕ್ಕ ರವಿ ಕುಜ ಶನಿಗಳು ನಿಮ್ಮನ್ನು ಅನಾರೋಗ್ಯಕ್ಕೆ ಗುರಿಮಾಡಲಿವೆ. ಸದಾ ಪರ್ಯಟನದಲ್ಲೇ ಕಾಲಕಳೆವ ಪ್ರಸಂಗ ಬಂದೀತು. ಖರ್ಚು ವಿಪರೀತ ಹೆಚ್ಚಲಿದೆ. ಶಸ್ತ್ರಾಸ್ತ್ರಗಳಿಂದ ದೇಹಕ್ಕೆ ಗಾಯಾದಿಗಳು ಉಂಟಾದಾವು. ಎಷ್ಟಾದರೂ ನಿಮ್ಮ ಸ್ವಂತ ಉಪಭೋಗಕ್ಕೆ ಬೇಕಾದ ವಸ್ತು ಒಡವೆಗಳು ಅನಾಯಾಸದಿಂದ ಪ್ರಾಪ್ತವಾಗುವವು. ತಾ. 20, 21, 22 ರಲ್ಲಿ ವಿಜಯ ಗೃಹಸುಖ ಸ್ಥಾನಮಾನಗಳು ಲಭಿಸುವವು

ಲಕ್ಷಾಂತರ ಜನರು ಗುಣಹೊಂದಿದ್ದಾರೆ!

ಸರ್ ಜೀವನ್ ಶಿಲಾಜಿತ್ ಲೇಹ

ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಆನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ, ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೪ ದಿನದ ಲೇಹ್ಯ ರೂ ೫/೪, ೨೨ ದಿನದ ಲೇಹ್ಯ ರೂ ೩೪

(ಪೋಸ್ಟೇಜು ಮಾಫಿ)

ನೀಲಗಿರಿ ಡಿಪೋ, ಅತ್ತಿಪೇಟೆ ಚೌಕ, ಬೆಂಗಳೂರು ಸಿಟಿ

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

ಇದೀಗ ಹೊಸ ಆವೃತ್ತಿ ಪ್ರಕಟವಾಗಿದೆ

ಸುಲಭದಲ್ಲಿ ಇಂಗ್ಲಿಷ್

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ಬೇಡಿಕೆ ಹೆಚ್ಚಾಗಿರುವುದೇ ಇದರ ಜನಪ್ರಿಯತೆಯನ್ನು ಸೂಚಿಸುತ್ತದೆ.

ಹೊಸ ಮುದ್ರಣ—ಸಾದಾಪ್ರತಿ 1—8—0 ಉತ್ತಮ 2—0—0

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. 552/1952

ಅನಂತ ಪದ್ಮನಾಭ ಭಟ್ಟ — ವಾದಿ ಮತ್ತು ನಾಗಪ್ಪ ನ್ಯಾಕ-ರಾಜಾವರಿ ಪಟ್ಟಿ ನ್ಯಾಕರ ಮಗ—ಉಡುಪಿ ತಾಲೂಕು, ಹೆರ್ಗ ಗ್ರಾಮದ ಪರ್ಕಳ—1 ನೇ ಪ್ರತಿವಾದಿ ಇವರೊಳಗೆ ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯ ಪಡಿಸುವುದೇನಂದರೆ—

ವಾದಿಗೆ ನೀವು ತಾರೀಕು 12-5-1941ರಲ್ಲು ರಿಜಿಸ್ಟ್ರಿನಿಸಿಗೆ ಬರಕೊಟ್ಟ ಸ್ಥಿರಾಸ್ತಿ ಈಡು ದಸ್ತಾವೇಜಿನ ಅಸಲು ಬಡ್ಡಿ ಖರ್ಚುಗಳನ್ನು ಬಾವಡಾಡಿ ಕೊಳ್ಳುವರೆ ಸಂತರದವರ ಧೀನಗಾರರಾದ 2ರಿಂದ 4ರ ವರೇಗಿನ ಪ್ರತಿವಾದಿಗಳನ್ನು ಸೇರಿಸಿ ಅವರ ಪರಾಧೀನಗಳ ಉಜೂರು ಶಿವಾಯಿ ಡಿಕ್ರಿಕೇಳಿ ವಾದಿಯು ದಾಖಲು ಮಾಡಿದ ಮೇಲ್ಕಂಡ ದಾವೆಯು ತಾರೀಕು 25-2-53ಕ್ಕೆ ಇಟ್ಟಿದೆ.—ಉಜಾರಿರುವದು ಇದ್ದಲ್ಲಿ ಆ ದಿವಸ ಪೂರ್ವಾಹ್ನ 10 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜವಾಬು ಮಾಡಿಕೊಳ್ಳಬಹುದು ತಪ್ಪಿದ್ದರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲ್ಪಡುವದು.

K. Ramakrishna Rao.
Vakil for plaintiff.
UDIPI Date 12-2-1953

ವಿಶೇಷ ಸವಲತ್ತಿನಲ್ಲಿ

ಪಂಚಾಯತ ಬೋರ್ಡು ಗಾಲೆ ನೆಸ್ಟ್‌ಡ್ರಾವರ್ಗಳ ಲೈಬ್ರರಿಗಳಿಗೆ ಉತ್ತಮ ಕನ್ನಡ ಪುಸ್ತಕಗಳನ್ನು ತೊಡಲಾಗುತ್ತದೆ. ಕೆಟಲಾಗಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

Edited, Printed & Published By K. H. Shetty at the Navayuga Press, Udipi, S. India.

M. 8618 | Licensed to Post without Prepayment

26-2-1953

Estd 1921 ಸ್ಥಾಪನೆ.
32ನೆಯ ವರ್ಷ

Founder: **Sri A. B. Shetty,**
Minister for Medical & Public Health

ನವಯುಗ
ಆರೋಗ್ಯ ಮಂತ್ರಿ
ಶ್ರೀ. ಎ. ಬಿ. ಶೆಟ್ಟರಿಂದ
ಸ್ಥಾಪಿತವಾದ ವಾರಪತ್ರಿಕೆ,
ಉಡುಪಿ, ದ. ಕನ್ನಡ

ವಾ। ಚಂದಾ	5-12-0
6 ತಿಂಗಳಿಗೆ	3-0-0
ಬಿಡಿ ಪ್ರತಿಗೆ	0-2-0

ನವಯುಗ

Vol 32
No 25

NAVAYUGA WEEKLY POST BOX NO 22 UDIPI

ವರ್ಷ ೩೨
ವಾರ ೨೫

ಅಂತರಂಗ
ಪುಸ್ತಕ ಪತ್ರಿಕೆಯು
ಉಪಯುಕ್ತವಾದ
86 ಪುಸ್ತಕಗಳು
ರೂ 20ಕ್ಕೆ ಸಿಗುತ್ತವೆ
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ

ಮಧುಪರ್ಕ

ಒಬ್ಬ ಪಾದ್ರಿಗೆ ಬೈಬಲ್ಲಿನಲ್ಲಿ ಅತ್ಯಂತ ಶ್ರದ್ಧೆ ಇತ್ತು. ಅದರ ಪ್ರತಿಯೊಂದೂ ಮಾತು ಪ್ರತ್ಯಕ್ಷವಾಗಿ ದೇವರ ಆಜ್ಞೆ ಎಂದವನ ಅಭಿಪ್ರಾಯ. ಯಾವಾಗಲೂ ಅದರ ಪುಟಗಳನ್ನು ತಿರುವಿ ಹಾಕುತ್ತಾ, ಯಾವ ಪಂಕ್ತಿಯ ಮೇಲೆ ತನ್ನ ದೃಷ್ಟಿಯು ಸರ್ವಪ್ರಥಮವಾಗಿ ಬಿತ್ತೋ, ಅದರಂತೆ ನಡೆಯುವುದನ್ನು ತನ್ನ ಧರ್ಮವೆಂದು ತಿಳಿದುಕೊಂಡಿದ್ದ.

ಒಂದು ದಿನ ಮುಂಜಾನೆ ಎದ್ದವನೆ ಬೈಬಲ್ಲಿನ ಪುಟ ತಿರುಗಿಸಿದಾಗ "ಜುದಾಸನು ತನನ್ನೆ ತಾನು ಗಲ್ಲಿಗೇರಿಸಿಕೊಂಡನು" ಎಂಬ ವಾಕ್ಯ ಕಣ್ಣಿಗೆ ಬಿತ್ತು. ಇದು ಪಾದ್ರಿಯನ್ನು ಅಸಮಂಜಸದಲ್ಲಿ ಕೆಡವಿತು. ಏಕೆಂದರೆ ಈ ಆಜ್ಞೆಯಂತೆ ನಡೆಯುವುದು ಅಸಾಧ್ಯವೆಂದು ತೋರಿತು.

ಉದಾಸೀನತೆಯಿಂದ ಇನ್ನೊಂದು ಪುಟತೆರೆದಾಗ "ನೀನೂ ಅವನಂತೆಯೇ ನಡೆದುಕೊಳ್ಳತಕ್ಕದ್ದು" ಎಂದೋದಿದ. ಈ ಪಾದ್ರಿ, ಕಕ್ಕಾಬಿಕ್ಕಿಯಾದ. ಆದರೂ ಪರಿಸ್ಥಿತಿ ತನ್ನ ಅನುಕೂಲಕ್ಕೆ ಒದಗಲಿಕ್ಕಿಲ್ಲವೆಂಬುದರಿಂದ ಮೂರನೆಯ ಬಾರಿ ಪುಟತಿರುಗಿಸಿದ. ಈ ಬಾರಿ ತನ್ನನ್ನು ವಿಪತ್ತಿನಲ್ಲಿ ಕೆಡವುವಂಥದೇನೂ ಸಾಲು ಕಣ್ಣಿಗೆ ಬೀಳಲಿಕ್ಕಿಲ್ಲವೆಂದು ಭಾವಿಸಿದ್ದ. ಆದರೇನು? "ಏನು ಮಾಡುತ್ತೀ, ಕೂಡಲೇ ಹೇಳಿದಂತೆ ಮಾಡು" ಎಂಬ ವಾಕ್ಯ ಓದಿ, ಕಣ್ಣುಗಾಬರಿ!

ಒಂದು ಮಹಾದೋಷ

ನಮಗೆ ಉಪದೇಶಿಸುವಷ್ಟರ ಮಟ್ಟಿನ ಪಾಂಡಿತ್ಯವನ್ನು ಪಡೆದಿರುವ ಧುರೀಣರು ಕೂಡ ಹಲವು ಸಂದರ್ಭಗಳಲ್ಲಿ ತಮ್ಮ ನುಡಿಯಿಂದ ವಿರೋಧಾಭಾಸಕ್ಕೆ ಎಡೆಕೊಡುತ್ತಿರುವರು. ಅನಿಶ್ಚಿತವಾದ ವಿಚಾರ ಪ್ರಣಾಳಿಯ ಪರಿಣಾಮವಾಗಿಯೋ ಅಥವಾ ಗಾಳಿ ಬಂದಂತೆ ಕೊಡೆ ಹಿಡಿಯುವ ಅಭ್ಯಾಸದ ಬಲದಿಂದಲೋ ತಾವು ಹಿಂದೆ ಹೇಳಿದುದಕ್ಕೆ ತೀರ ವ್ಯತಿರಿಕ್ತವಾದುದನ್ನು ಇಂದು ನುಡಿಯಲಿಕ್ಕೆ ಮುಖಂಡರು ಹಿಂಜರಿಯುವುದಿಲ್ಲ. ಎಲ್ಲ ಪರಿಸ್ಥಿತಿಯನ್ನೂ ತಮ್ಮ ಅನುಕೂಲಕ್ಕೆ ಹೊಂದಿಸಿಕೊಳ್ಳಬೇಕೆಂಬ ಪ್ರವೃತ್ತಿಯ ಪರಿಣಾಮವಾಗಿ ಈ ರೀತಿ ಅಸಮಂಜಸ ಧೋರಣೆಯ ಮೊರೆ ಹೋಗುವುದು ಅನಿವಾರ್ಯವೆನಿಸುತ್ತದೆ. ನಾವು ಎಲ್ಲರನ್ನೂ ಎಲ್ಲ ಕಾಲಕ್ಕೂ ತೃಪ್ತಿಪಡಿಸುತ್ತಾ ಕುಳಿತುಕೊಳ್ಳಲಾರೆವೆಂಬುದನ್ನು ಸದಾ ಸ್ಮರಣೆಯಲ್ಲಿ ಇಟ್ಟಿರುವುದೊಳಿತು. ಅನ್ಯಥಾ ನಾವು ಸ್ವಂತ ವ್ಯಕ್ತಿತ್ವದ ವೈಶಿಷ್ಟ್ಯವನ್ನು ಕಳೆದುಕೊಂಡೇವು.

ಉತ್ತರ ಪ್ರದೇಶದ ಗವರ್ನರರಾಗಿರುವ ಶ್ರೀ ಮುನ್ಷೀಜಿಯವರು ಮೊನ್ನೆ ತಾನೆ ಭಾರತದ ಯಾವ ಪ್ರಾದೇಶಿಕ ಭಾಷೆಗೂ ಶಿಕ್ಷಣದ ಮಾಧ್ಯಮವಾಗುವ ಯೋಗ್ಯತೆ ಇಲ್ಲವೆಂದು ಹೇಳಿದರು. ಅದೇ ಅವರು ಇನ್ನೊಂದು ಸಂದರ್ಭದಲ್ಲಿ ಮಾತನಾಡುವಾಗ ಹಿಂದೀಯನ್ನು ರಾಷ್ಟ್ರಭಾಷೆಯಾಗಿ ನಾವು ಸ್ವೀಕರಿಸಿಯಾಗಿದೆ ಎಂದೂ ಅದರ ಅಭಿವೃದ್ಧಿಯನ್ನು ಸಾರ್ವಾಂಗಿಕಗೊಳಿಸಬೇಕೆಂದೂ ಅಪ್ಪಣೆ ಕೊಡಿಸಿದರು. ಇಂಥ ಅಸಮಂಜಸ ವಿಚಾರಗಳು ವರಿಷ್ಠ ಸ್ಥಾನಾಪನ್ನರಿಂದಲೇ ಬರುತ್ತಿವೆ. ನಮಗೆ ಯಾವುದೋ ಒಂದು ತತ್ವದಲ್ಲಿ ಶ್ರದ್ಧೆ ಇದೆ, ಅಥವಾ ಅದು ಒಳ್ಳೆಯದೆಂದು ತೋರುತ್ತದೆ. ಹಾಗೆಂದು ಅದನ್ನು ಪ್ರತ್ಯಕ್ಷ ರೀತಿಯಲ್ಲಿ ಆಚರಿಸುವ ಪ್ರಶ್ನೆ ಬಂದಾಗಲೆಲ್ಲ—ಪೂರ್ವಗ್ರಹ ಪೀಡಿತವಾದ ಮನೋಭಾವನೆ, ನಮ್ಮ ಈ ವಿಚಾರವನ್ನು ಪ್ರತಿಭಟಿಸುತ್ತದೆ. ಆಗ ಹತಾಶರಾಗಿ ನಾವು ಕೈಗಟ್ಟಿ ಕುಳಿತುಕೊಳ್ಳುತ್ತೇವೆ. ಒಳ್ಳೆಯದೆನಿಸಿದ್ದನ್ನು ಧೈರ್ಯದಿಂದ ಸ್ವೀಕರಿಸುವ ಸಾಮರ್ಥ್ಯವಮಗಿಲ್ಲ, ಹಾಗೆಂದು ನಾವು ಈಗ ಹೇಗಿರುವೆವೋ ಹಾಗೆಯೇ ಇರುವ ಎಂಬ ಸಮಾಧಾನವೂ ಅಶಕ್ಯವೆನಿಸಿದೆ. ಇಂಥ ಕೊಂದಾಣಿಕೆ ಇಲ್ಲದ ರಂಗಗಳಲ್ಲಿ ಪ್ರಕೃತ ಶೈಕ್ಷಣಿಕ ಕ್ಷೇತ್ರವೂ ಒಂದು.

ಇದೇ ಬರುವ ಎಪ್ರಿಲ್ 27ರಿಂದ ಮೇ 8ರ ತನಕ ಲಂಡನ್ ಮತ್ತು ಬರ್ಮಿಂಗಾಮುಗಳಲ್ಲಿ ನಡೆಯಲಿರುವ ಬ್ರಿಟಿಷ್ ಇಂಡಸ್ಟ್ರೀಸ್ ಫೇರಿನಲ್ಲಿ ಪ್ರದರ್ಶಿಸಲ್ಪಡಲಿರುವ
ಪತ್ರಗಳನ್ನಿಡುವ ನವಾಲೋಚಿತ ಟ್ರೇಗಳು

ಶೈಕ್ಷಣಿಕ ಕ್ಷೇತ್ರದಲ್ಲಿ ಕಂಡು ಬರುತ್ತಿರುವ ನ್ಯೂನಾತಿರೇಕಗಳೆಂದರೆ—ಇಂದಿನ ವಾತಾವರಣವೇ ಕಲುಷಿತಗೊಂಡಿದೆ. ನಮ್ಮ ಶಿಕ್ಷಣ ಕೇವಲ ಕಾರಕೂನಿಕೆಗೇ ಹೇಳಿಸಿದುದೇ ಹೊರತು, ಅನ್ಯಥಾ ಪ್ರಯೋಜನಕಾರಿಯಾಗಿಲ್ಲವೆಂದು ಎಲ್ಲರೂ ದೂರುತ್ತಿರುವರು. ಹಾಗೆಂದು, ಪ್ರಯೋಜನಕಾರಿ ಎನಿಸಿದ ರೀತಿಯಲ್ಲಿ ಶೈಕ್ಷಣಿಕ ಕ್ಷೇತ್ರವನ್ನು ಪುನರ್ಘಟಿಸುವ ಪಣ್ಣೆಯನ್ನುಮಾತ್ರ ಯಾರೊಬ್ಬರೂ ಸಾಹಸದಿಂದ ಕೈಗೆತ್ತಿಕೊಳ್ಳಲಾರರು. ಈ ರೀತಿಯ ನಡವಳಿಕೆಯಿಂದ ಮಾನಸಿಕವಾದ ತೊಳಲಾಟ ಬಹಳ ಹೆಚ್ಚಿದೆ. ಈ ಅನಿಶ್ಚಿತ ಪರಿಸ್ಥಿತಿಯು ಇನ್ನು ಕೆಲಸಮಯದ ವರೆಗೆ ಹಾಗೆಯೆ ಮುಂದುವರಿದದ್ದೇ ಆದರೆ—ಅದರಿಂದ ಇನ್ನಷ್ಟು ಕೆಡುಕಿದೆ. ದೂರಾಲೋಚನೆಯಿಂದ ಏನಾದರೊಂದು ಪರಿಣಾಮಕಾರಿಯಾದ ಕ್ರಮವನ್ನು ಈಗಿಂದೀಗಲೆ ಕೈಗೊಳ್ಳದಿದ್ದರೆ, ರಾಷ್ಟ್ರದ ಭವ್ಯಭವಿಷ್ಯವನ್ನು ಕಟ್ಟುವ ನಮ್ಮ ಸಂಕಲ್ಪಕ್ಕೆ ವ್ಯತ್ಯಯ ಬಂದೀತೋ ಎಂಬ ಭಯವಿದೆ.

ನಮಗೆ ಗಾಂಧೀಜಿಯ ಮೂಲಶಿಕ್ಷಣದಲ್ಲಿ ಅಪಾರವಾದ ವಿಶ್ವಾಸ, ಮತ್ತು ಭಕ್ತಿ! ಏಕೆಂದರೆ ಅದನ್ನು ಪ್ರತಿಪಾದಿಸಿದವರು ಜಗದ್ವಂದ್ಯರಾದ ಮಹಾತ್ಮಾಜೀ! ಆ [illegible]ವನ್ನು ಚಾಚೂ ಬಿಡದೆ ಅನುಸರಿಸೋಣವೆಂದರೆ, ಎರಡು ಶತಕಗಳಷ್ಟು ದೀರ್ಘಾವಧಿಯ ದಾಸ್ಯ ಮನೋವೃತ್ತಿ ಒಪ್ಪುವುದಿಲ್ಲ. ಈ ಒಗಿಯ ತೂಗುಯ್ಯಾಲೆಯಾಟ ಶೈಕ್ಷಣಿಕ ಕ್ಷೇತ್ರಕ್ಕಷ್ಟೆ ಮೀಸಲಿಲ್ಲವೆಂಬುದು ನಿಜವಾದರೂ – ಶಿಕ್ಷಣ ಕ್ಷೇತ್ರದ ನೆಲಗಟ್ಟಿನ ಮೇಲೆಯೇ ರಾಷ್ಟ್ರದ ಉಜ್ವಲ ಭವಿಷ್ಯ ನಿಂತಿದೆ ಎಂಬುದರಿಂದ ಇದನ್ನು ಒತ್ತಿಯೊತ್ತಿ ಹೇಳಬೇಕಾಗಿದ್ದೇವೆ. ನಮ್ಮ ನೈತಿಕ ಸಂಕಟಗಳಿಗೂ ಒಂದು ಔಷಧಿ ಇದ್ದರೆ ಅದು ಯೋಗ್ಯ ಶಿಕ್ಷಣವೆಂಬ ಮಾತು ಪೂರಾ ನಿಜ. ಆದರೆ ಇಂದು ಶಾಲ ಕಾಲೇಜುಗಳಿಂದ ಹೊರಬರುವ ವಿದ್ಯಾರ್ಥಿಗಳ ಸಂಖ್ಯೆ ಹಿಂದಿನವಕ್ಕಿಂತ ಹತ್ತು ಪಟ್ಟು ಹೆಚ್ಚಿರಬಹುದಾದರೂ—ಇಂಥವರಲ್ಲಿ ಹಬ್ಬಿರುವ ನಿರುದ್ಯೋಗ ಸಮಸ್ಯೆ ಕೂಡ ಚಿಂತಾಜನಕ [illegible] ಕಂಡೊಡ್ಡಿದ ನಮ್ಮ ಶಿಕ್ಷಣ ಕ್ರಮವೆಂತೆ, ಸಾಹಿತ್ಯ, ಕಲೆ ಮುಂತಾದ ಜೀವನದ [illegible] ವಿಷಯಗಳಿಗೇನೇ ಪ್ರಾಧಾನ್ಯವನ್ನು ಕೊಟ್ಟು, ಅ

(೧೧ನೇ ಪುಟ ನೋಡಿರಿ)

ಹಿರಾಕುಡ್ ಯೋಜನೆಯ ದರ್ಶನ

ಒಡಿಸಾ ರಾಜ್ಯದ ಅಭಿವೃದ್ಧಿಗಾಗಿ ನಿರ್ಮಾಣಗೊಳ್ಳುತ್ತಿರುವ ಅಣೆಕಟ್ಟು

೧

ಒಂದು ದಂತ ಕತೆಗನುಸಾರವಾಗಿ– ಸುಮಾರು ಇನ್ನೂರು ವರ್ಷಗಳಿಗೆ ಹಿಂದೆ ಮಹಾ ನದಿಯ ನಡುವಿನ ದ್ವೀಪವೊಂದರಲ್ಲಿ ವಜ್ರದೊರೆಯುವುದೆಂದು ಪ್ರತೀತಿ ಇತ್ತು. ಈ ದಿವ್ಯ ಭಂಡಾರವನ್ನು ಅರಸುವುದಕ್ಕಾಗಿ ಗಂಡಸರೂ ಹೆಂಗಸರೂ ದೊಡ್ಡದೊಡ್ಡ ಗುಂಪುಗಳಲ್ಲಿ ನೂರಾರು ಮೈಲಿ ಕಾಡುಗಳನ್ನೂ ಗುಡ್ಡ ಬೆಟ್ಟಗಳನ್ನೂ ಸುತ್ತಿ ಬಂದರು. ಅವರ ಪ್ರಯತ್ನ ಫಲಿಸಿತೋ ಇಲ್ಲವೋ—ತಿಳಿಯದು. ಹಾಗೆಂದು, ಇಲ್ಲಿ ವಜ್ರದೊರೆಯುವುದೆಂಬ ಸಂಗತಿಯಿಂದಲೇ ಆ ಪುಟ್ಟ ದ್ವೀಪವನ್ನು ಹಿರಾಕುಡ್ ಎಂದು ಕರೆದರು.

ಈಗ ಮರಳಿ ಹಿರಾಕುಡವು ವರ್ತಮಾನ ಪತ್ರಗಳಲ್ಲಿ ದೊಡ್ಡ ಅಕ್ಷರಗಳಿಂದ ಕಾಣಿಸುತ್ತಿದೆ. ಮಹಾ ನದೀ ಕಣಿವೆಯಲ್ಲಿರುವ ಈ ದ್ವೀಪಕ್ಕೆ ಹೊಂದಿಕೊಂಡು ಮಹಾ ನೀರಾವರೀ ಹಾಗೂ ವಿದ್ಯುತ್ ಯೋಜನೆಯೊಂದನ್ನು ಅಣಿಗೊಳಿಸುತ್ತಿರುವುದೇ ಈ ರೀತಿಯ ಪ್ರಸಿದ್ಧಿಗೆ ಕಾರಣ. ಒಡಿಸಾದ ಜನತೆಗೆ ಇಲ್ಲಿ ಈಗ ಕಟ್ಟುತ್ತಿರುವ ಬಲವಾದ ಅಣೆಕಟ್ಟು ನೆರೆಯಿಂದಲೂ ಅನಾವೃಷ್ಟಿಯಿಂದಲೂ ರಕ್ಷಣೆಯನ್ನು ನೀಡುವುದು; ರಾಷ್ಟ್ರಕ್ಕೆ ಈ ಅಣೆಕಟ್ಟು ಅಧಿಕ ಆಹಾರವನ್ನೂ ಉತ್ಪಾದನೆಯನ್ನೂ ಕೈಗಾರಿಕೆಯನ್ನೂ ವ್ಯಾಪಾರೋದ್ಯಮವನ್ನೂ ಕೊಟ್ಟು ಸಹಕರಿಸುವುದು.

೨

ಮಹಾನದಿಯು ಮಧ್ಯಪ್ರದೇಶದ ರಾಯಪುರ ಜಿಲ್ಲೆಯ ಸಿಹಾವಾದ ಬಳಿ ಉದ್ಭವಿಸುತ್ತದೆ; ಅಲ್ಲಿಂದ ೫೩೩ ಮೈಲಿದೂರದ ವರೆಗೆ ಹರಿದು ಬಂದು, ಬಂಗಾಳ ಕೊಲ್ಲಿಯನ್ನು ಸೇರುತ್ತದೆ. ಹಿರಾಕುಡದ ಬಳಿಗೆ ಬರುವಷ್ಟರಲ್ಲಿ ಅದು ರಾಯಪುರದ ಜೊತೆಗೆ ಬಿಲಾಸಪುರ ಜಿಲ್ಲೆಯನ್ನೂ ದಾಟಿರುತ್ತದೆ. ಮತ್ತು ಒಂದು ಮೈಲು ಅಗಲವಾಗಿ ಬೆಳೆದಿರುತ್ತದೆ. ಬಳಿಕ ಅತ್ಯಂತ ಶೀಘ್ರವಾಗಿ ಹರಿದು ಬರುತ್ತಾ ಪೂರ್ವ ಘಟ್ಟಗಳ ಕಿರಿದಾದ ಕಣಿವೆಯಲ್ಲಿ ೧೪ ಮೈಲು ದೂರ ಕ್ರಮಿಸಿ ಒಂದು ಧೋಲಪುರದ ಪರ್ವತಗಳಿಂದಾಗಿ ಛಿನ್ನಭಿನ್ನಗೊಂಡು, ನರಾಜದ ಬಳಿ ಎರಡು ಬೆಟ್ಟಗಳ ನಡುವೆ ಒಡಿಸಾದ ಡೆಲ್ಟಾ ಪ್ರದೇಶಕ್ಕೆ ಧುಮುಕುತ್ತದೆ. ಅಲ್ಲಿಂದ ಹಲವಾರು ಕವಲುಗಳಿಂದ ಸಮುದ್ರ ಸೇರುತ್ತದೆ.

ಈ ನದಿಯು ವರ್ಷಕ್ಕೆ ೭೪೦ ಲಕ್ಷ ಎಕ್ರೆ ಅಡಿ ನೀರನ್ನು ತುಂಬಿ ಒಯ್ಯುತ್ತದೆ. ಈ ಪ್ರಮಾಣ ಅಮೇರಿಕದ ಟೆನೆಸ್ಸಿ ನದೀ ಕಣಿವೆಯದಕ್ಕಿಂತ ಅತ್ಯಧಿಕವಿದೆ. ಆದರೆ ಪ್ರಕೃತ ಮಹಾ ನದಿಯ ನೀರಿನಲ್ಲಿ ೫% ಪ್ರಮಾಣವನ್ನಾದರೂ ನೀರಾವರಿಗೆ ಬಳಸುತ್ತಿಲ್ಲ. ಮಳೆಗಾಲದ ದಿನಗಳಲ್ಲಿ ನದಿಯು ಅತ್ಯಧಿಕ ಎಂದರೆ, ೧೨,೦೫,೨೦೦ ಕ್ಯೂಸೆಕ್ಸ್ ನೀರನ್ನು ಹರಿಯಗೊಟ್ಟರೆ ಕಡು ಬೇಸಿಗೆಯಲ್ಲಿ ಈ ಪ್ರಮಾಣ ೨೦೦ ಕ್ಯೂಸೆಕ್ಸ್‌ಗೆ ತಗ್ಗುತ್ತದೆ.

ಮಹಾನದೀ ಕಣಿವೆಯಲ್ಲಿ ಕಟ್ಟುತ್ತಿರುವ ಹಿರಾಕುಡ ಅಣೆಕಟ್ಟಿನಿಂದ ಮುಖ್ಯವಾಗಿ ಲಾಭಹೊಂದುವ ಪ್ರದೇಶ ಒಡಿಸಾ. ದೇಶೀಯ ಸಂಸ್ಥಾನಗಳು ಈ ರಾಜ್ಯದಲ್ಲಿ ಸಮಾವೇಶಗೊಂಡ ಬಳಿಕ ಈಗ ಒಡಿಸಾದ ವಿಸ್ತೀರ್ಣ ೫೯,೦೧೮ ಚದರ ಮೈಲು; ಮತ್ತು ಜನಸಂಖ್ಯೆ ಸುಮಾರು ೧೪೦ ಲಕ್ಷ. ಈ ಜನರು ಅಣೆಕಟ್ಟು ಮುಗಿಯುತ್ತಿರುವುದನ್ನೇ ಇದಿರು ನೋಡುತ್ತಿರುವರು. ಈ ಪ್ರದೇಶದ ಪ್ರಾಕೃತಿಕ ಖನಿಜ ಸಂಪತ್ತನ್ನೂ ಕೃಷಿಯ ಉದ್ಯಮವನ್ನೂ ಅತ್ಯಂತ ಲಾಭಪ್ರದವಾಗಿ ಪ್ರವರ್ಧಮಾನಗೊಳಿಸಲು ಇಲ್ಲಿಯ ಪರಿಶ್ರಮಿಗಳಾದ ಯುವಜನರು ಆತುರಗೊಂಡಿರುವರು.

೩

ಕಳೆದ ೫೦ ವರ್ಷಗಳಲ್ಲಿ ಮಹಾನದಿ ಮತ್ತು ವೈತರಣಿ ಹಾಗು ಬ್ರಾಹ್ಮಣೀ ನದಿಗಳಲ್ಲಿ ಏರಿಬರುತ್ತಿರುವ ಮಹಾಪೂರವನ್ನು ಹೇಗೆ ನಿಯಂತ್ರಿಸಬಹುದೆಂದು ಕಾಲಾನುಕಾಲಕ್ಕೆ ವಿಚಾರಿಸುತಿದ್ದರು. ಇಂಥ ಸಮಾಲೋಚನೆಗಳಲ್ಲಿ ಸರ್. ಆರ್ಥರ್ ಕಾಟನ್ ಮತ್ತು ಮೋಕ್ಷಗುಂಡಂ ವಿಶ್ವೇಶ್ವರಯ್ಯನಂಥ ಪ್ರತಿಭಾಸಂಪನ್ನರೂ ಭಾಗವಹಿಸಿದ್ದರು. ಹಾಗೆಂದು ಕೊನೆಯದಾದ ಮತ್ತು ಪರಿಣಾಮಕಾರಿಯಾದ ನಿರ್ಣಯವೇನೂ ಆಗಲಿಲ್ಲ.

೧೯೪೫ನೇ ನವೆಂಬರದಲ್ಲಿ ಭಾರತ ಸರಕಾರ, ಮಧ್ಯ ಪ್ರದೇಶ ಮತ್ತು ಒಡಿಸಾಗಳ ಪ್ರತಿನಿಧಿಗಳು ಒಂದು ಪರಿಷತ್ತಿನಲ್ಲಿ ಸೇರಿ, ಕೇಂದ್ರದ ಜಲ ಹಾಗೂ ವಿದ್ಯುತ್ ಸಮಿತಿಯನ್ನು ಮಹಾ ನದಿಗಾಗಿ ಒಂದು ವಿವಿಧೋದ್ದೇಶದ ಅಣೆಕಟ್ಟಿಗಾಗಿ ಅಂದಾಜುಗಳನ್ನು ಸಿದ್ಧಗೊಳಿಸಲು ಕೇಳಿಕೊಂಡಿತು ಮಹಾ ನದಿಯ ನೆರೆನಿಯಂತ್ರಣ,ನೀರಾವರಿ,ನೌಕಾಯಾನ,ಮತ್ತು ಜಲವಿದ್ಯುತ್ತು ಇಷ್ಟೂ ಉಪಯೋಗಕ್ಕೆ ಅಣೆಕಟ್ಟು ಬರಬೇಕೆಂದು ಪರಿಷತ್ತು ಸೂಚಿಸಿತು.

ಕೇಂದ್ರದ ಜಲ ಹಾಗೂ ವಿದ್ಯುತ್ ಸಮಿತಿಯು ಮಹಾ ನದಿಯ ನೀರಿನ ಸ್ರೋತದ ಪೂರ್ಣ ಪ್ರಯೋಜನವು ಲಭ್ಯವಾಗ ಬೇಕಿದ್ದರೆ ಹಿರಾಕುಡ, ತಿಕರ್ಪರಾ ಮತ್ತು ನರಾಜಗಳಲ್ಲಿ ಸ್ವತಂತ್ರವಾದ ಮೂರು ಅಣೆಕಟ್ಟನ್ನು ರಚಿಸಬೇಕೆಂದು ಹೇಳಿತು. ಈ ಅಣೆಕಟ್ಟುಗಳು ನೆರೆಯ ಹಾವಳಿಯನ್ನು ನಿಲ್ಲಿಸುವುದಲ್ಲದೆ ೨೦ ಲಕ್ಷ ಎಕ್ರೆ ಭೂಮಿಗೆ ನೀರುಣಿಸುವುವೆಂದೂ ೨ ಲಕ್ಷ ಕಿಲೋವಾಟು ವಿದ್ಯುತ್ತನ್ನು ಉತ್ಪಾದಿಸುವುವೆಂದೂ ಕಡಿಮೆ ಯೆಂದರೆ ೯ ಅಡಿ ಆಳವಿರುವ ೩೮೦ ಮೈಲುದ್ದದ ನೌಕಾ ಮಾರ್ಗವನ್ನು ಒದಗಿಸುವುವೆಂದೂ ಕಂಡು ಬಂತು. ಈ ಮಾರ್ಗದ ವ್ಯಾಪಾರೋದ್ಯಮಗಳೂ ಸಾರಿಗೆ ಸರಂಜಾಮುಗಳೂ ಬೆಳೆದು ಬಂದು, ಕಾಲಾನುಕ್ರಮದಲ್ಲಿ ಚಾಂದಬಾಲಿ ಅಥವಾ ಧಮ್ರಾಗಳಲ್ಲಿ ಎಲ್ಲಾದರೊಂದೆಡೆ ಸಮುದ್ರ ರೇವನ್ನು ಕಟ್ಟಿಸುವ ಅಗತ್ಯ ಬಿದ್ದೀತು. ವಿಶಾಲವಾದ ನೀರ ಸಾಗರವನ್ನು ಸೀಪ್ಲೇನುಗಳ ಮನೆಯಾಗಿ, ಅಥವಾ ಕೆರೆಯ ಮೀನುಗಳ ವ್ಯವಸಾಯಕ್ಕಾಗಿ, ಎನಿಲ್ಲೆಂದರೂ ಸಂತೋಷದ ನೌಕಾಪ್ರವಾಸಕ್ಕಾಗಿ ಉಪಯೋಗಿಸಬಹುದು.

೪

ಈ ಸಮಿತಿಯು ಪ್ರಥಮವಾಗಿ ಹಿರಾಕುಡದಲ್ಲಿ ಅಣೆಕಟ್ಟನ್ನು ಕಟ್ಟಬೇಕೆಂದು ಸಿಫಾರಸು ಮಾಡಿತು. ನದಿಯ ಮೇಲ್ಗಡಿಯಲ್ಲಿ ಈ ಅಣೆಕಟ್ಟು ಇದೆ. ರಚನಾದೃಷ್ಟಿಯಿಂದ ಇದು ಸುಲಭ ತರವಾಗಿದೆ ಮಾತ್ರವಲ್ಲ, ಶೀಘ್ರ ಪ್ರತಿಫಲವನ್ನು ಕೊಟ್ಟು, ಅಣೆಕಟ್ಟು ಆರ್ಥಿಕವಾಗಿ ಸ್ವಾವಲಂಬನವನ್ನು ಹೊಂದಲು ನೆರವಾಗುತ್ತದೆ.

(೧೦ನೇ ಪುಟ ನೋಡಿರಿ)

ದಿ ಕೆನರಾ ಮ್ಯೂಚುವಲ್
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ] [ಸ್ಥಾಪನೆ: ೧೯೩೫.
"ಕೆನರಾ ಮ್ಯೂಚುವಲ್" ಪರಸ್ಪರಾವಲಂಬಕವಾದ ಸಂಸ್ಥೆ.
ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ
ಬೋನಸು ಹಂಚಿ, ಪಾಲಿಸಿದಾರರ ನಂಬಿಕೆ ಪಡೆದಿದೆ.
ಈ ಕಂಪೆನಿಯಲ್ಲಿ ಇಂದೇ ವಿಮೆ ಇಳಿಸಿ,
ನಿಮ್ಮ ಕುಟುಂಬವನ್ನು ಭದ್ರವಾಗಿರಿಸಿರಿ.
The CANARA MUTUAL ASSURANCE CO. Ltd.,
Head Office: UDIPI, S. INDIA. ESTD: 1935

ರಾಮತೀರ್ಥ
ಬ್ರಾಹ್ಮಿ ತೈಲ
ಸ್ಪೆಶಲ್ ನಂ ೧] [ಮೆಡಿಕೇಟೆಡ್
ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ. ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.
ಸ್ಪೆಶಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0
ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಸೇವನೆಯು ಆನಂದಕರ,
ಅತ್ಯುತ್ತಮವಾದುದನ್ನೇ ಪಡೆಯಿರಿ
ಎಸ್. ಆರ್.
ತಾಜಾ ಸಪ್ಪಾಗ್ ತಂಬಾಕು
ಮತ್ತು
ಬೊಂಬಾಯಿ ಎಲೆ
ಇವುಗಳಿಂದ ತಯಾರಿಸಿದ
ಬೀಡಿಗಳಾಗಿರುತ್ತವೆ.
S. R. Beedi Works.

In the Court of the Subordinate Judge of South Kanara.

O. S. No. 201/1949.

Between

Sankamma and others— Plaintiffs

and

Guddappa Bhandary and others —Defendants.

NOTICE.

To

Defendants— No. 25 Venkatramana Hegde, No. 26 Shankernarayana, No. 31 Bhujanga Hegde, No. 34 Raja Mohan Hegde, No. 37 Kutti Hegde, No. 38 Subbayya Hegde, No. 100 Shiva Punja.

Please take notice that the Court will hold a sale on 10-3-1953 at 11 A. M. of a family house in S. No. 43/12 and its site in Pavoor village, of Mangalore Taluk valued at Rs. 15,000/ by the Commissioner and of the equity of the redemption in property of plaint item 11 in Manchi village of Puttur Taluk.

S. Nagarajiah.
Commissioner.

Mangalore, 19-2-1953.

ಲೇಖಾಂಕ: ೧

ಜಪಾನಿನಲ್ಲಿ ಭತ್ತದ ವ್ಯವಸಾಯ

ತರಿಗೆ ಸಂಶೋಧನಾಲಯಗಳ ಪ್ರಯೋಗ ಫಲವನ್ನು ಮುಟ್ಟಿಸುವ ತಜ್ಞರ ಪ್ರಯತ್ನ

— ೧ —

ಜಪಾನು ದೇಶದ ಮಾರ್ಗ ದರ್ಶನವನ್ನು ಅನುಸರಿಸಿ ನಮ್ಮ ದೇಶದಲ್ಲಿ ಭತ್ತದ ವ್ಯವಸಾಯ ಪದ್ಧತಿಯಲ್ಲಿ ಸುಧಾರಣೆಯನ್ನುಂಟು ಮಾಡಬೇಕೆಂದು ಇದೀಗ ಕೇಂದ್ರ ಸರಕಾರವು ಪರ್ಯಾಲೋಚಿಸುತ್ತಿದೆ. ಆದುದರಿಂದ ಜಪಾನೀಯರ ಭತ್ತ ವ್ಯವಸಾಯ ಪದ್ಧತಿಯ ಕುರಿತು "ಇಂಡಿಯನ್ ಫಾರ್ಮಿಂಗ್" ಎಂಬ ಪತ್ರಿಕೆಯಲ್ಲಿ ಶ್ರೀ ಕೆ. ರಾಮಯ್ಯ ಮತ್ತು ಮೋತಿ ಕೆ. ವಾಟಾನಿ ಎಂಬೀರ್ವರು ಈ ಕುರಿತು ಬರೆದ ಪ್ರೌಢ ಲೇಖನವೊಂದು ಸಂಬಂಧಿಸಿದೆಲ್ಲರ ಗಮನವನ್ನು ಸೆಳೆದಿರುವುದು ಸ್ವಾಭಾವಿಕವಾಗಿದೆ ಈ ಲೇಖನದಲ್ಲಿ ಹೇಳಿದಂತೆ ಜಪಾನಿನಲ್ಲಿ ಭತ್ತದ ವ್ಯವಸಾಯವೇ ಪ್ರಾಮುಖ್ಯವಾಗಿದೆ. ಒಟ್ಟು ವ್ಯವಸಾಯಕ್ಕೆ ಉಪಯೋಗಿಸುವ ಭೂಮಿಯಲ್ಲಿ ಶೇಕಡಾ ೫೩ರಷ್ಟು, ಎಂದರೆ ೭೮ ಲಕ್ಷ ಎಕ್ರೆ ಭೂಮಿಯನ್ನು ಭತ್ತ ಬೆಳೆಗೆ ಉಪಯೋಗಿಸುವರು. ಒಟ್ಟು ಅಕ್ಕಿಯ ಉತ್ಪಾದನೆಯು ೧೦೪ ಲಕ್ಷ ಟನ್ನುಗಳು. ಎಂದರೆ, ಪ್ರತಿ ಎಕ್ರೆಗೆ ೨೯೫೦ ರಾತಲು

ಆರ್ಥಿಕ ಕ್ಷೇತ್ರದಲ್ಲಿ ಅಕ್ಕಿಗೆ ಇರುವ ಮಹತ್ವವನ್ನು ಮನಗಂಡು ಜಪಾನೀ ಸರಕಾರವು ಇದರ ಕಡೆಗೆ ಬಹಳ ಗಮನವನ್ನು ಕೊಡುತ್ತಾ ಬಂದಿದೆ. ಕಳೆದ ೬೦ ವರ್ಷಗಳಲ್ಲಿ ವ್ಯವಸಾಯ ಕ್ಷೇತ್ರವು ೨೫% ಹೆಚ್ಚಿಕೊಂಡಿದೆಯಲ್ಲದೆ ಉತ್ಪಾದನಾ ಪ್ರಮಾಣವು ಇದಕ್ಕೂ ಹೆಚ್ಚು, ಎಂದರೆ ೭೦% ಹೆಚ್ಚಿಕೊಂಡಿದೆ.

ಪ್ರತಿ ಎಕ್ರೆಗೆ ಸಿಗುವ ಉತ್ಪಾದನೆಯು ಹೆಚ್ಚಿರುವುದರಿಂದಲೇ ಜಪಾನಿಗೆ ತನ್ನ ೭೮೦ ಲಕ್ಷ ಜನರಿಗೆ ೧೫೦ ಲಕ್ಷ ಎಕ್ರೆ ಭೂಮಿಯಲ್ಲಿ ಉತ್ಪಾದಿಸುವ ಧಾನ್ಯಗಳಿಂದಲೇ ಹೊಟ್ಟೆ ತುಂಬಿಸಲು ಸಾಧ್ಯವೆನಿಸಿದೆ.

— ೨ —

ಜಪಾನಿನಲ್ಲಿ ವ್ಯವಸಾಯಕ್ಕೆ ಒದಗಿಬರುವ ಭೂಮಿಯು ಸಾಮಾನ್ಯವಾಗಿ ನೇರಾದ ಕರಾವಳಿ ಬಯಲುಗಳು, ಮತ್ತು ನದೀ ದಂಡೆಗಳಾಗಿವೆ. ಸಾಮಾನ್ಯವಾಗಿ ಇಲ್ಲಿಯ ಮಣ್ಣು ತೀರ ನಿಕೃಷ್ಟವಾದುದು ಲಾವಾ ಮತ್ತಿತರ ಜ್ವಾಲಾಮುಖಿಯ ಪರಿಣಾಮವನ್ನುಂಡ ಭೂಮಿಯು ಏನೇನೂ ಫಲವತ್ತಾಗಿರುವುದಿಲ್ಲ ಆದುದರಿಂದ ಭೂಮಿಯ ಫಲವತ್ತತೆಯ ಕಾರಣದಿಂದ ಜಪಾನಿನಲ್ಲಿ ಸಮೃದ್ಧಿಯಾದ ಬೆಳೆಯಾಗುತ್ತಿದೆ ಎನ್ನಲಾರೆವು. ಅಧಿಕ ಉತ್ಪಾದನೆಯು ಸಾಧ್ಯವಾಗಲಿಕ್ಕೆ ಅಲ್ಲಿಯ ರೈತರು ವ್ಯವಸಾಯ ಪದ್ಧತಿಯಲ್ಲಿ ಸಂಶೋಧನೆಗಳನ್ನು ನಡೆಸಿ, ಅವನ್ನು ಪ್ರತ್ಯಕ್ಷವಾಗಿ ಕಾರ್ಯರೂಪಕ್ಕೆ ತಂದುದೇ ಕಾರಣ.

ಸಂಶೋಧನೆಗಳ ಪ್ರಯೋಜನವನ್ನು ಸಂಪೂರ್ಣ ಹೊಂದುವುದಕ್ಕೆ ಜಪಾನೀಯ ರೈತರೂ ವಿದ್ಯಾವಂತರಾಗಿರುವುದು ಬಹಳ ಸಹಕಾರವನ್ನು ನೀಡಿದೆ. ಅಕ್ಷರಸ್ಥರ ಪ್ರಮಾಣವು ಬಹಳ ಹೆಚ್ಚಿರುವುದರಿಂದ ಸಂಶೋಧನೆಗಳ ಮಾಹಿತಿಯನ್ನು ಪಡೆಯುವಲವಲವಿಕೆಯೂ ಜಾಣ್ಮೆಯೂ ರೈತರಲ್ಲಿ ಕಂಡುಬರುತ್ತದೆ.

ಇಡೀ ದೇಶವನ್ನು ಪ್ರತಿಯೊಂದೂ ೫೦೦ ಚದರ ಮೈಲು ವಿಸ್ತೀರ್ಣವಿರುವ ೪೬ ಕೃಷೀವಲಯಗಳಾಗಿ ವಿಂಗಡಿಸಿರುವರು. ಪ್ರತಿಯೊಂದಕ್ಕೂ ಒಂದು ಕೇಂದ್ರ ಸಂಶೋಧನಾಲಯವಿದೆ, ಮತ್ತು ಇಲ್ಲಿ ಸುಮಾರು ೨೫೦ ತಂತ್ರಜ್ಞರು ಕೆಲಸದಲ್ಲಿರುವರು. ಎಂದರೆ ಪ್ರತಿಯೊಂದು ಹಳ್ಳಿಗೆ ಒಬ್ಬ ತಂತ್ರಜ್ಞನ ಸಹಾಯ ದೊರೆತಂತಾಯಿತು. ಪ್ರತಿ ಎರಡು ನೂರು ಮೈಲು ಪ್ರದೇಶಕ್ಕೆ ಒಬ್ಬನಂತಿರುವ ಈ ತಂತ್ರಜ್ಞರು ರೈತರಿಗೆ ಸಂಶೋಧನಾಲಯಗಳಲ್ಲಿ ಮಾಡಿದ ಪ್ರಗತಿಯನ್ನು ವಿವರಿಸಿ ಹೇಳಿ, ಹೊಸ ಹೊಸ ಪದ್ಧತಿಯನ್ನು ಪ್ರಯೋಗಕ್ಕೆ ತರಲು ಪ್ರೋತ್ಸಾಹಿಸುತ್ತಾರೆ; ಅದೇ ಸಮಯ ರೈತರು ತಮ್ಮ ವ್ಯವಸಾಯದಲ್ಲಿ ಇದಿರಿಸುತ್ತಿರುವ ಸಮಸ್ಯೆಗಳ ಪರಿಚಯವನ್ನು ಇವರು ಸಂಶೋಧನಾಲಯಕ್ಕೆ ಮಾಡಿಕೊಡುತ್ತಾರೆ. ಹೀಗೆ ಪರಸ್ಪರ ನಿಕಟ ಸಂಪರ್ಕವನ್ನು ಇಟ್ಟುಕೊಂಡಿರುವ ಈ ತಜ್ಞರು ಒಂದೋ ಕೃಷಿಪದವೀಧರರಿರುವರು, ಅಥವಾ ಇದಕ್ಕಾಗಿ ಯೋಗ್ಯ ತರಬೇತಿ ಹೊಂದಿದ ರೈತರು

— ೩ —

ಇದಲ್ಲದೆ ಇಂಪೀರಿಯಲ್ ವಿಶ್ವವಿದ್ಯಾಲಯಗಳ ವ್ಯವಸಾಯ ಶಾಖೆಯು ಅಲ್ಲಲ್ಲಿ ಶಾಖೆಗಳನ್ನು ತೆರೆದು ವಿಶಿಷ್ಟ ಬೆಳೆಯ ಕುರಿತು ಹಾಗೂ ಸುಧಾರಿತ ಬೀಜಗಳ ಕುರಿತು ಸಂಶೋಧನೆಗಳನ್ನು ನಡೆಸುತ್ತದೆ. ಬೀಜಗಳನ್ನು ಸುಧಾರಿಸಿದ ಬಳಿಕ ಅವುಗಳನ್ನು ರೈತರಿಗೆ ನೀಡುವುದಕ್ಕಾಗಿ ಸಹಕಾರೀ ಸಂಘಗಳು ಇವೆ. ದೇಶದ ತುಂಬಾ ಅನೇಕಾನೇಕ ಸಂಶೋಧನಾಲಯಗಳು ವ್ಯಾಪಿಸಿದ್ದು, ಇವುಗಳು ವ್ಯಾಪಕವಾದ ಚಟುವಟಿಕೆಯನ್ನು ನಡೆಸುತ್ತವೆ. ಮತ್ತು ಇಲ್ಲಿನ ಪ್ರಗತಿಯನ್ನು ರೈತರಿಗೆ ಮನನ ಮಾಡಿಸುವುದಕ್ಕೆ ಕುಶಲ ತಂತ್ರಜ್ಞರು ಇರುವರು. ರೈತರೊಡನೆ ಈರೀತಿ ನೇರವಾದ ಸಂಬಂಧ ಇಟ್ಟುಕೊಂಡಿರುವುದರಿಂದ ಕೃಷಿಗೆ ಉತ್ತಮ ಪ್ರಯೋಜನ ದೊರೆತಿದೆ.

ಕೈಗಾರಿಕೆಯಲ್ಲಿ ಭರದಿಂದ ಉನ್ನತಿಯನ್ನು ಹೊಂದುತ್ತಿದ್ದರೂ ಇನ್ನೂ ಜಪಾನು ಕೃಷಿ ಪ್ರಧಾನವಾದ ದೇಶವೇ ನಿಜ. ೪೩% ಕುಟುಂಬಗಳು ಈಗಲೂ ಕೃಷಿಯನ್ನು ಅವಲಂಬಿಸಿರುವುವು. ೫೪ ಲಕ್ಷ ರೈತ ಕುಟುಂಬ ೧೫೦ ಲಕ್ಷ ಎಕ್ರೆ ಭೂಮಿಯನ್ನು ಸಾಗುಮಾಡುತ್ತಿರುವುವು, ಎಂದರೆ ಪ್ರತಿಯೊಂದೂ ಕುಟುಂಬಕ್ಕೆ ಎರಡೂವರೆ ಎಕ್ರೆ ಭೂಮಿ ದೊರೆಯುತ್ತದೆ. ಗೈಮೆಯ ಕ್ಷೇತ್ರವು ಇಷ್ಟು ಸಣ್ಣದಿರುವುದರಿಂದ ಕುಟುಂಬದ ಪ್ರತಿಯೊಬ್ಬ ಸದಸ್ಯನೂ ಲಕ್ಷ್ಯಗೊಟ್ಟು ಕೃಷಿಯ ಜೋಪಾನಿಗೆಯನ್ನು ಪರಿಶೀಲಿಸುತ್ತಾನೆ. ನಿಜ ಹೇಳಬೇಕೆಂದರೆ ಕುಟುಂಬವು ತನ್ನ ಹೊಲವನ್ನು ತೋಟದಂತೆಯೇ ಪರಿಗಣಿಸಿ ಪ್ರತಿಯೊಂದು ಸಸಿಯ ಆರೈಕೆಯನ್ನೂ ಮನವಿಟ್ಟು ಮಾಡುತ್ತದೆ. ಜಪಾನು ಉತ್ತರ ಅಕ್ಷಾಂಶದಲ್ಲಿರುವುದರಿಂದ ಭತ್ತದ ವ್ಯವಸಾಯವು ಎಪ್ರಿಲಿನಿಂದ ಅಕ್ಟೋಬರದಲ್ಲಿ ನಡೆಯುತ್ತದೆ.

— ೪ —

ಬೆಳೆಗಳು ಕೈಗೆ ಬರುವ ಸರ್ತಿಯ ಮೇಲಿಂದ ಜಪಾನನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು. ತೀರ ದಕ್ಷಿಣದ ಪ್ರದೇಶಗಳಲ್ಲಿ ವರ್ಷಕ್ಕೆ ಒಂದರ ಹಿಂದೆ ಒಂದಾಗಿ ಎರಡು ಭತ್ತದ ಬೆಳೆಯಾಗುತ್ತದೆ. ನಡುವಣ ಜಪಾನಿನಲ್ಲಿ ದಕ್ಷಿಣಾರ್ಧವು ಒಂದು ಭತ್ತದ ಬೆಳೆಯನ್ನೂ ಇನ್ನೊಂದು ಒಣ ಬೆಳೆಯನ್ನೂ ಬೆಳೆಲಿಕ್ಕೆ ಅನುಕೂಲವಿದ್ದರೆ ಉತ್ತರಾರ್ಧವು ಕೇವಲ ಭತ್ತದ ಬೆಳೆಯೊಂದನ್ನು ಮಾತ್ರ ಬೆಳೆಯಲು ಯೋಗ್ಯವಾಗಿದೆ. ತೀರ ಉತ್ತರದಲ್ಲಿ ಉಷ್ಣತೆಯು ಕಡಿಮೆ ಇರುವುದರಿಂದ ಭತ್ತವನ್ನು ಬೆಳೆಯ ಎಷ್ಟಿಲ್ಲ

... ಭತ್ತದ ಗದ್ದೆಗಳನ್ನು ಚಳಿಗಾಲದಲ್ಲಿ ಪಾಳು ಬಿಡುತ್ತಾರೆ ಒಂದರ ಹಿಂದೊಂದೆಂಬಂತೆ ಎರಡು ಭತ್ತದ ಬೆಳೆಯನ್ನು ಪಡೆಯಲು ಅನುಕೂಲದಲ್ಲಿ ರೈತರು ಬೇಗ ಕೊಯ್ಲಿಗೆ ಬರುವ ಬೀಜವನ್ನು ಮೊದಲಿಗೂ ತಡವಾಗಿ ಫಸಲು ಕೊಡುವುದನ್ನು ಅನಂತರವೂ ಉಪಯೋಗಿಸುವರು. ಮಾರ್ಚ ತಿಂಗಳ ಅಖೈರಿಗೆ ಬೀಜವನ್ನು ನೇಜಿಯ ಹೊನಾದಿ ಬಿತ್ತುವರು ಒಂದು ತಿಂಗಳ ಬಳಿಕ ನೇಜಿಯನ್ನು ಕಿತ್ತು ತಂದು ಗದ್ದೆಗಳಲ್ಲಿ ನೆಡುವರು. ಆಗೋಸ್ತು ತಿಂಗಳಿಗೆ ಫಸಲು ಕೊಯ್ಲಿಗೆ ಸಿದ್ಧವಾಗುತ್ತದೆ. ಎರಡನೇ ಬೆಳೆಗೆ ನೇಜಿಯನ್ನು ಜುಲೈ ತಿಂಗಳಲ್ಲಿಯೇ ಬಿತ್ತಿರುವರು. ಮೊದಲನೆ ಬೆಳೆಯನ್ನು ಕೊಯ್ದೊಡನೆಯೇ ನೇಜಿಯನ್ನು ಅಗೆಯಿಂದ ಕಿತ್ತು ತಂದು ನೆಡುವರು. ಎರಡನೆ ... ... ಬೆಳೆಯು ೬೦–೭೦% ಉತ್ಪಾದನೆಯನ್ನು ಕೊಡುತ್ತದೆ. ಬೀಜಗಳನ್ನು ನೇಜಿಯ ಹೊದಲ್ಲಿ ಬಿತ್ತಿ, ಚೆನ್ನಾಗಿ ನೀರುಣಿಸಿ, ಸಾಕಿ, ಅನಂತರ ಕಿತ್ತು ತಂದು ಗದ್ದೆಗಳಲ್ಲಿ ನೆಡುವ ಪದ್ಧತಿ ಶೇಕಡಾ ೯೫ ಬಳಕೆಯಲ್ಲಿದೆ. ಗದ್ದೆಗಳಲ್ಲಿಯೇ ಬೀಜ ಬಿತ್ತುವುದು ಬಹಳ ಕಡಿಮೆ.

(ಇನ್ನೂ ಇದೆ)

ಏಳು ವರುಷಗಳಲ್ಲಿ ಫಲ

ನಮ್ಮ ಪಿಗ್ಮಿ ಮುಡಿಮದಾರರಲ್ಲಿ ದಿನಪಡಿ ಕೆಲಸ ಮಾಡುವ ಶ್ರಮಜೀವಿಗಳು, ಅಂಗಡಿಗಾರರು, ವಕೀಲರು, ಡಾಕ್ಟರರು, ಎಂಜಿನಿಯರರು, ಬೇಸಾಯಗಾರರು, ವರ್ಗದಾರರು ಇತ್ಯಾದಿ ತರಗತಿಯವರಿರುವರು. ಅವರ ಪಿಗ್ಮಿ ಮುಡಿಪುಗಳು ಚಿಕ್ಕ ಪುಟ್ಟ ಠೇವಣಾತಿಗಳಿಂದ ಪ್ರಾರಂಭವಾದುವು ಅಂದು ಇಲಿಯಂತಿದ್ದುವು ಇಂದು ಹುಲಿಯಂತಾಗಿವೆ. ಅಂತಹ ವಿವೇಕವುಳ್ಳ ದೂರ ದರ್ಶಿ ಸಂಪನ್ನ ಪಿಗ್ಮಿ ಠೇವಣಾತಿದಾರರ ಕೂಟಕ್ಕೆ ನೀವೂ ಕೂಡಾ ಸೇರಿ ಭಾಗ್ಯವಂತರಾಗಬೇಕಾಗಿ ಆಹ್ವಾನಿಸುತ್ತೇವೆ.

ಆಧಾರ ವಹಿವಾಟು ರೂ 5,00,00,000 ಕ್ಕೂ ಮಿಕ್ಕಿದೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925 ಹೆಡ್ ಆಫೀಸು: ಉಡುಪಿ.

THE CANARA INDUSTRIAL & BANKING SYNDICATE LIMITED

Estd: 1925 H. O: **UDIPI**

ZANDU

ಝಂಡೂ ಫಾರ್ಮಸಿಯ ಮನೆಮದ್ದುಗಳನ್ನೇ ಸದಾ ಉಪಯೋಗಿಸಿರಿ.

ಝಂಡೂ ಬ್ರಾಹ್ಮೀ ಹೇರ್ ಆಯಿಲ್:– ಮೆದುಳಿಗೆ ತಂಪು– ಮನಸ್ಸಿಗೆ ಉಲ್ಲಾಸನೀಯುವುದು. 1 ಪೌಂಡಿಗೆ ರೂ. 3–8–0 ಕಾಲು ರಾತ್ಲಿಗೆ ರೂ. 1.

ಝಂಡೂ ಸರಸಪರಿಲ್ಲಾ:– ರಕ್ತವನ್ನು ಶುದ್ಧಗೊಳಿಸಲು ಹೆಸರುವಾಸಿಯಾದುದು. ಚರ್ಮರೋಗಗಳನ್ನು ಗುಣಪಡಿಸಬಲ್ಲುದು. 4 ಔನ್ಸ್ ಬಾಟ್ಲಿ 1ರ ರೂ. 1–5–0

ಝಂಡೂ ಬಾಲಾಮೃತ:–ಅನಾರೋಗ್ಯವುಳ್ಳ ಮಕ್ಕಳಿಗೆ ಬಲವರ್ಧಕ ಟಾನಿಕ್– 4 ಔನ್ಸ್ ಬಾಟ್ಲಿ 1ರ ರೂ. 1–2–0

ಝಂಡೂ ಬಾಮ್:–ತಲೆ ಸಿಡಿತ ಮೊದಲಾದ ಬೇನೆಗಳಿಗೆ 1 ಸೀಸೆಗೆ ರೂ 1.

ಝಂಡೂ ಫಾರ್ಮಸಿಯ ದ. ಕ. ಜಿಲ್ಲೆಯ ಎಲ್ಲಾ ಏಜಂಟರಲ್ಲೂ ದೊರೆಯುವುವು.

ಸವಿವರ ಕ್ಯಾಟಲಾಗಿಗೆ ಈ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ:–

DAMODER & CO.,

Nainiappa Naicken Street, MADRAS. 3

೭ ಕೋಟಿ ರೂಪಾಯಿಗಳ ಉಳಿತಾಯ

ರೈಲ್ವೆ ಮುಂಗಡಪತ್ರದಲ್ಲಿ ಹಾಸನ—ಮಂಗಳೂರು ಮಾರ್ಗಕ್ಕೆ ಆಸ್ಪದ.

ದಕ್ಷಿಣದಲ್ಲಿ ರಾಷ್ಟ್ರಾಧ್ಯಕ್ಷರು

ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ಕೆಲದಿನಗಳ ದಕ್ಷಿಣ ಭಾರತ ಪ್ರವಾಸವನ್ನು ಕೈಗೊಂಡು, ಮುಖ್ಯವಾಗಿ ತಮಿಳು ನಾಡಿನಲ್ಲಿ ಸಂಚರಿಸಿದರು. ದಿನಾಂಕ ೧೫ರಂದು ಅವರು ವಿಮಾನ ಮೂಲಕ ವಿಶಾಖ ಪಟ್ಟಣಕ್ಕೆ ಆಗಮಿಸಿದಾಗ, ಗವರ್ನರ ಶ್ರೀ ಪ್ರಕಾಶರೇ ಮುಂತಾದವರು ಸಂಭ್ರಮದ ಸ್ವಾಗತ ನೀಡಿದರು. ವಿಶಾಖ ಪಟ್ಟಣದಲ್ಲಿ ಈಗ ಹಡಗುಕಟ್ಟುವ ಭಾರತೀಯ ಕಾರ್ಖಾನೆ ಇರುವುದರಿಂದ ಅದನ್ನು ರಾಷ್ಟ್ರಾಧ್ಯಕ್ಷರು ಸಂದರ್ಶಿಸಿದರು. ಭಾರತವು ವ್ಯಾಪಾರ ವ್ಯವಹಾರದಲ್ಲಿ ಮುಂಬರುವುದಕ್ಕೆ ಹಡಗುಗಳ ಅಗತ್ಯವಿದೆ ಎಂದು ಅವರು ಆಗ ಹೇಳಿದ್ದು ನಿಜವಾದ ಸಂಗತಿ. ಹಾಗೆಯೇ ಭಾರತದ ವಿಶಾಲ ಕರಾವಳಿ ಪ್ರದೇಶವನ್ನು ಜಾಗರೂಕತೆಯಿಂದ ಸಂರಕ್ಷಿಸುವ ಹೊಣೆಯನ್ನಾದರೂ ಹಡಗುಪಡೆಯೇ ಹೊರಬೇಕೆಂಬುದರಲ್ಲಿ ಭಿನ್ನಾಭಿಪ್ರಾಯವಿರಲಿಕ್ಕಿಲ್ಲ. ರಾಷ್ಟ್ರಾಧ್ಯಕ್ಷರು ಆ ಬಳಿಕ ಕೊಯಮುತ್ತೂರಿಗೆ ಬಂದು, ಭವಾನಿಸಾಗರ ಅಣೆಕಟ್ಟಿನ ಕಾರ್ಯವನ್ನು ಪರಿಶೀಲಿಸಿದರು. ಮಧುರೆ, ರಾಮೇಶ್ವರ, ಚಿದಂಬರಂ, ಶ್ರೀರಂಗ ಪಟ್ಟಣ ಮುಂತಾದ ಹತ್ತಾರು ಪ್ರಾಚೀನ ಶಿಲ್ಪ ವೈಭವ ಹಾಗೂ ಪವಿತ್ರ ದೇವಸ್ಥಾನಗಳಿಂದ ಸುಶೋಭಿತವಾದ ನಗರಗಳನ್ನು ರಾಷ್ಟ್ರಾಧ್ಯಕ್ಷರು ತಮ್ಮ ಪತ್ನೀ ಪರಿವಾರ ಸಹಿತ ಸಂದರ್ಶಿಸಿ, ದೇವರಿಗೆ ಪೂಜೆ ಮುಂತಾದುವನ್ನು ಅರ್ಪಿಸಿದರು. ಈ ಸಂದರ್ಭದಲ್ಲಿ ಹಲವು ಸಾರ್ವಜನಿಕ ಸಭೆಗಳಲ್ಲೂ ಭಾಗವಹಿಸಿ ಮಾತನಾಡಿದರು. ಹಿಂದಿಯನ್ನು ಯಾವುದೇ ಪ್ರಾದೇಶಿಕ ಭಾಷೆಗಿಂತಲೂ ಮೇಲ್ಮಟ್ಟದಲ್ಲಿ— ಎಂದರೆ ರಾಷ್ಟ್ರಭಾಷೆಯ ಸ್ಥಾನದಲ್ಲಿ ಸರಕಾರ ಇಟ್ಟಿದೆ ಎಂಬುದನ್ನು ಸ್ಪಷ್ಟಗೊಳಿಸಿ, ಹಿಂದೀಯ ಅಭ್ಯಾಸವನ್ನು ದಾಕ್ಷಿಣಾತ್ಯರು ಕೈಗೊಳ್ಳತಕ್ಕದ್ದು ಎಂದರು. ಹಾಗೆಯೇ ಭಾರತವನ್ನು ಸ್ವಪ್ರಯತ್ನದಿಂದ ಪುನರುಜ್ಜೀವನಗೊಳಿಸಿ ಅದನ್ನು ಸಮೃದ್ಧಿ ಸಂಪನ್ನವಾಗುವಂತೆ ಕಟ್ಟಬೇಕೆಂದು ಕರೆಕೊಟ್ಟರು. ಆಂಧ್ರ ರಾಜ್ಯವು ಸೌಹಾರ್ದಮಯವಾದ ವಾತಾವರಣದಲ್ಲಿ ರೂಪುಗೊಳ್ಳುವಂತೆ ಎಲ್ಲ ಜನರೂ ಸಹಕರಿಸುವರೆಂದು ಹಾರೈಸಿದರು. ದಕ್ಷಿಣದ ಪ್ರಾಚೀನ ದೇವಾಲಯಗಳಲ್ಲಿ ಕಂಡುಬರುತ್ತಿರುವ ಶಿಲ್ಪ ಕೌಶಲ್ಯ ಮತ್ತು ಪ್ರೌಢಿಮೆಗಳು ನಮ್ಮ ಅಭೇದ್ಯ ಹಾಗೂ ಅಭಿನ್ನ ಸಂಸ್ಕೃತಿಯ ಪ್ರತೀಕವಾಗಿವೆ ಎಂಬುದನ್ನು ಸ್ಮರಣೆಗೆ ತಂದುಕೊಟ್ಟರು. ಈ ಸಂಸ್ಕೃತಿಯನ್ನೂ ಐಕ್ಯಭಾವವನ್ನೂ ಪೋಷಿಸಿಕೊಂಡು ಭಾರತೀಯರಾದ ನಾವೆಲ್ಲರೂ ಮುನ್ನಡೆಯಬೇಕೆಂದರು.

ರಾಷ್ಟ್ರದ ಒಗ್ಗಟ್ಟು

ಕಳೆದ ಆದಿತ್ಯವಾರ ರಾಷ್ಟ್ರಾಧ್ಯಕ್ಷರು ಮದ್ರಾಸಿಗೆ ಆಗಮಿಸಿದರು. ರಾಜಾಜಿ ಭವನದಲ್ಲಿ ಅವರನ್ನು ಸ್ವಾಗತಿಸಲಾಯಿತು. ಜನರ ಪ್ರಚಂಡ ಸ್ವಾಗತದ ನಡುವೆಯೂ ದ್ರಾವಿಡ ಕಜಗಮಿನ ಒಂದು ನೂರು ಮತಪ್ರದರ್ಶಕರು ಔತ್ತರೇಯರ ಆಧಿಪತ್ಯಕ್ಕೆ ಧಿಕ್ಕಾರ ಎಂದು ಮುಂತಾಗಿ ಕರಿ ಪತಾಕೆಯನ್ನು ಹಿಡಿದು ತಮ್ಮ ಅಸಂತೋಷವನ್ನು ವ್ಯಕ್ತಪಡಿಸಿದರು. ರಾಷ್ಟ್ರಾಧ್ಯಕ್ಷರು ಇಲ್ಲಿಯೂ ಜನರಿಗೆ ಭೇದಭಾವವನ್ನು ಮರೆತು ಒಗ್ಗಟ್ಟಿನಿಂದ ಕೆಲಸಮಾಡಬೇಕೆಂದು ಕೇಳಿಕೊಂಡರು. ಮುಖ್ಯವಾಗಿ ಭಾಷಾನುಗುಣ ಪ್ರಾಂತರಚನೆಯಿಂದ ಸಂಸ್ಕೃತಿಯ ಭಿನ್ನತೆಗೆ ಎಡೆಗೊಡುವುದೂ ನಾವು ಬೇರೆ ಅವರು ಬೇರೆ ಎಂಬ ಮನೋಭಾವಕ್ಕೆ ಅವಕಾಶ ನೀಡುವುದೂ ದೇಶದ ಏಳಿಗೆಗೆ ಕುಂದು ತರುವುದೆಂದು ಅವರ ಅಭಿಪ್ರಾಯ. ದಕ್ಷಿಣ ಮತ್ತು ಉತ್ತರ ಭಾರತಗಳು ಪರಸ್ಪರ ಹೊಂದಿಕೊಂಡು ಸಾರ್ವಾಂಗಿಕ ಪ್ರಗತಿಯನ್ನು ಸಾಧಿಸಬೇಕೆಂದು ರಾಷ್ಟ್ರಾಧ್ಯಕ್ಷರು ಹೇಳುವುದು ಎಲ್ಲ ವಿವೇಕಿಗಳಿಗೂ ನಿಜವೆಂದು ತೋರುತ್ತದೆ. ಭಾರತೀಯರಲ್ಲಿ ನಾವೆಲ್ಲರೂ ಒಂದೇ ಎಂಬ ಭಾವನೆಯನ್ನು ಉದ್ದೀಪನಗೊಳಿಸುವುದಕ್ಕೆ ಧುರೀಣರು ಪ್ರಯತ್ನಿಸುತ್ತಿರುವರು. ಜನರಾದರೂ ಭಾಷಾನುಗುಣ ಪ್ರಾಂತರಚನೆಯ ಬೇಡಿಕೆ ಮುಂತಾದುವನ್ನು ಭಾರತದಿಂದ ಬೇರೆಯಾದ ಸಂಕುಚಿತಕ್ಷೇತ್ರವೊಂದರಲ್ಲಿ ಚಟುವಟಿಕೆ ನಡೆಸಲು ಕೇಳುತ್ತಿರದೆ ಪ್ರಾದೇಶಿಕ ವೈಶಿಷ್ಟ್ಯವನ್ನು ಉಳಿಸಿಕೊಳ್ಳಲಿಕ್ಕೂ, ಅನುಕೂಲತೆಯನ್ನು ಹೆಚ್ಚಿಸಿಕೊಳ್ಳಲಿಕ್ಕೂ ಇದರಿಂದ ಅವಕಾಶವಿದೆ ಎಂಬುದಕ್ಕಾಗಿ ಈ ಕುರಿತು ಆಗ್ರಹ ನಡೆಸುತ್ತಿರುವರು.

ಆಂಧ್ರ ರಾಜ್ಯ ನಿರ್ಮಾಣ

ಆಂಧ್ರ ರಾಜ್ಯವು ಎಂದು ನಿರ್ಮಾಣಗೊಂಡೀತೆಂಬ ಬಗ್ಗೆ ನಿಶ್ಚಿತ ದಿನವನ್ನು ಹೇಳುವುದು ಗೃಹ ಮಂತ್ರಿಗಳಿಗೂ ಆಗಿಲ್ಲ. ವಾಂಚೂರ ವರದಿಯು ಸರಕಾರದ ಪರಿಶೀಲನೆಯಲ್ಲಿದೆ ಎಂದೂ ಆದಷ್ಟು ಬೇಗನೆ ಒಂದು ನಿರ್ಧಾರಕ್ಕೆ ಸರಕಾರ ಬರುವುದೆಂದೂ ಅವರು ಪಾರ್ಲಿಮೆಂಟಿನಲ್ಲಿ ಪ್ರಶ್ನೋತ್ತರ ಕಾಲದಲ್ಲಿ ತಿಳಿಸಿದರು. ರಾಜಗೋಪಾಲಾಚಾರಿಯವರು ಪತ್ರಿಕಾ ಪರಿಷತ್ತಿನಲ್ಲಿ ಈಚೆಗೆ ಮಾತನಾಡುವಾಗ ಕೇಂದ್ರ ಸರಕಾರದ ಆದೇಶ ಬಂದೊಡನೆಯೇ ಅದರಂತೆ ನಡೆದು ಹೊಸ ರಾಜ್ಯದ ರಚನೆ ಶೀಘ್ರದಲ್ಲಿ ನೆರವೇರುವಂತೆ ಕ್ರಮ ಕೈಗೊಳ್ಳಲು ತಕ್ಕ ಸಿದ್ಧತೆ ನಡೆದಿದೆ ಎಂದು ಹಿಂದೆ ನುಡಿದುದನ್ನೆ ಪುಷ್ಟೀಕರಿಸಿದರು. ವಾಂಚೂರ ವರದಿಯ ಸಂಬಂಧದಲ್ಲಿ ಮದ್ರಾಸು ಸರಕಾರಕ್ಕೆ ಏನೇನೂ ವರ್ತಮಾನವಿಲ್ಲವೆಂದು ಅವರು ಹೇಳಿದ್ದಲ್ಲದೆ—ಕೇಂದ್ರವೇ ಈ ಸಂಗತಿಯಲ್ಲಿ ಅಂತಿಮ ನಿರ್ಣಯ ಕೈಗೊಳ್ಳತಕ್ಕದ್ದಿದೆ ಎಂದು ಸ್ಪಷ್ಟಪಡಿಸಿದರು. ಆಂಧ್ರವು ಕೊರತೆಯ ಪ್ರದೇಶವಾಗುವುದೆಂಬುದನ್ನು ತೋರಿಸಲು ಬುದ್ಧಿಪೂರ್ವಕವಾಗಿ ದೋಷಪೂರ್ಣ ಅಂಕೆಸಂಖ್ಯೆಗಳನ್ನು ಸರಕಾರದ ಕಡೆಯಿಂದ ವಾಂಚೂರಿಗೆ ಸಾದರಪಡಿಸಲಾಗಿದೆ ಎಂಬ ಆರೋಪ ದುರುದ್ದೇಶಪ್ರೇರಿತವಾದುದೆಂದು ರಾಜಗೋಪಾಲಾಚಾರಿ ನುಡಿದರು. ವಾಂಚೂರ ವರದಿಯ ಅಂಗಗಳ ಕುರಿತು ಊಹಾಪೋಹೆಗಳು ನಡೆದಿದ್ದು, ಇವುಗಳನ್ನು ಆಧರಿಸಿ ಈಗ ಅಲ್ಲಲ್ಲಿ ವಿಶೇಷವಾದ ಚಟುವಟಿಕೆಗಳು ನಡೆಯುತ್ತಿವೆ. ಮುಖ್ಯವಾಗಿ ಮದ್ರಾಸು ಆಂಧ್ರ ರಾಜ್ಯದ ತಾತ್ಕಾಲಿಕ ರಾಜಧಾನಿಯಾಗಬೇಕೆಂಬ ಮತ್ತು ಬಳ್ಳಾರಿ ಜಿಲ್ಲೆಯನ್ನು ಆಂಧ್ರದಲ್ಲಿ ಸೇರಿಸತಕ್ಕುದೆಂಬ ಅಂಶಗಳ ವಿರುದ್ಧ ತೀವ್ರ ಪ್ರತಿಭಟನೆ ವ್ಯಕ್ತಗೊಳಿಸಲ್ಪಟ್ಟಿದೆ. ಪ್ರಧಾನಿ ನೆಹರೂ ಮತ್ತು ರಾಷ್ಟ್ರಾಧ್ಯಕ್ಷರವರೆಗೂ ಈ ಕುರಿತು ಅವಸರದ ನಿರ್ಣಯ ಕೈಗೊಳ್ಳಕೂಡದೆಂದು ಮನವಿಗಳು ಹೋಗಿವೆ. ಮದ್ರಾಸಿನ ಮಾಜಿ ಮಂತ್ರಿ ಭಕ್ತವತ್ಸಲಮರಿಗೆ ನೆಹರೂರು ಬರೆದ ಪತ್ರವೊಂದರಲ್ಲಿ- ಸರಕಾರವು ಎಲ್ಲ ಸಂಗತಿಗಳನ್ನೂ ಸಾವಧಾನದಿಂದ ಪರಿಶೀಲಿಸುವುದೆಂಬ ಆಶ್ವಾಸನೆ ಇದೆ.

ರೇಲ್ವೆಯ ಉಳಿತಾಯ ತಗ್ಗಿತು

ಪ್ರಾಯಶಃ ಮಾರ್ಚಿ ೮ನೇ ದಿನಾಂಕ ಕಾಂಗ್ರೆಸದ ಹೊಸ ಕಾರ್ಯಕಾರೀ ಸಮಿತಿಯು ತನ್ನ ಮೊದಲನೇ ಸಭೆಯನ್ನು ನಡೆಸಿದಾಗ, ವಾಂಚೂರ ವರದಿಯ ಸಂಗತಿಯಲ್ಲಿ ಯಾವ ನಿರ್ಣಯವನ್ನು ಸರಕಾರ ಕೈಗೊಳ್ಳತಕ್ಕದೆಂದು ನಿಶ್ಚಯಗೊಂಡೀತು. ವಾಂಚೂರ ವರದಿಯನ್ನು ಆ ಬಳಿಕ ಪಾರ್ಲಿಮೆಂಟಿನ ಮುಂದೆ ಮಂಡಿಸಬಹುದು. ಪ್ರಕೃತ ಪಾರ್ಲಿಮೆಂಟು ರೇಲ್ವೆ ಬಜೆಟನ್ನು ಪರಿಶೀಲಿಸಿ ಮುಗಿಸಿದೆ. ಲಾಲಬಹಾದ್ದೂರ ಶಾಸ್ತ್ರಿಗಳು ೧೯೫೩-೫೪ನೇ ವರ್ಷಕ್ಕೆ ಸಂಬಂಧಿಸಿದ ರೇಲ್ವೆಗಳ ಮುಂಗಡ ಪತ್ರವನ್ನು ಪಾರ್ಲಿಮೆಂಟಿಗೆ ಒಪ್ಪಿಸಿರುವರು. ಇದನ್ನು ನೋಡಿದೊಡನೆಯೇ ಹೊಳೆಯುವ ಸಂಗತಿ ಏನೆಂದರೆ ರೇಲ್ವೆಯ ಆದಾಯವು ಕಡಿಮೆಯಾಗುತ್ತಾ ನಡೆದಿದೆ. ೧೯೫೧ರಲ್ಲಿ ದರಗಳನ್ನು ಏರಿಸಿದಾಗ ಇದರಿಂದ ಆದಾಯವು ಹೆಚ್ಚಿ, ಅಧಿಕ ಉಳಿತಾಯವು ದೊರೆತೀತೆಂದೂ, ಪರಿಣಾಮವಾಗಿ ರೇಲ್ವೆಗಳ ಅಭಿವೃದ್ಧಿಗಾಗಿ ಮತ್ತು ಪ್ರಯಾಣಿಕರ ಸೌಕರ್ಯಕ್ಕಾಗಿ ಹೆಚ್ಚು ಗಮನವನ್ನು ಕೊಡುವುದಾದೀತೆಂದೂ ಆಶಿಸಿದ್ದರು. ೧೯೫೧-೫೨ರಲ್ಲಿ ರೇಲ್ವೆಗಳ ಉಳಿತಾಯವು ಶಿಖರ ಪ್ರಮಾಣವನ್ನು ಮುಟ್ಟಿದ್ದರಿಂದ ಈ ಕುರಿತು ಹೆಚ್ಚು ಉತ್ಸಾಹದ ವಾತಾವರಣ ಏರ್ಪಟ್ಟಿತು. ಆದರೆ ೧೯೫೨-೫೩ರ ಪುನರ್ವಿಮರ್ಶಿತ ಅಂದಾಜುಗಳನ್ನು ನೋಡಿದರೆ, ಮೊದಲು ಉಳಿತಾಯವಾದೀತೆಂದು ಎಣಿಸಿದ ೨೩೪೭ ಲಕ್ಷ ರೂಪಾಯಿಯು ೯೩೧ ಲಕ್ಷ ರೂಪಾಯಿಗೆ ಇಳಿದುದನ್ನು ಕಾಣುತ್ತೇವೆ ಎಂದರೆ, ಸುಮಾರು ೧೪ ಕೋಟಿ ರೂಪಾಯಿಗಳ ಲಾಭವು ಕಡಿಮೆಯಾಯಿತು. ಈ ರೀತಿ ಉಳಿತಾಯವು ತಗ್ಗಲಿಕ್ಕೆ ಪ್ರವಾಸಿಕರ ಆದಾಯದಲ್ಲಿ ೧೦ ಕೋಟಿ ರೂಪಾಯಿ ಕಡಿಮೆಯಾದುದೂ ಸಾಗಿಗೆಯ ಮೂಲಕ ದೊರೆಯುವ ಆದಾಯವೂ ಇಳಿದುದೂ ಕಾರಣವೆಂದು ರೇಲ್ವೆ ಮಂತ್ರಿಗಳು ಸ್ಪಷ್ಟೀಕರಣ ಕೊಟ್ಟರು.

ಸೂಕ್ಷ್ಮ ಪರಿಶೀಲನೆಯ ಅಗತ್ಯ

ರೇಲ್ವೆ ಪ್ರಯಾಣಿಕರ ಸಂಖ್ಯೆಯು ಈಗ ತಗ್ಗುತ್ತಾ ಬಂದಿದೆ ಎಂದು ಮಂತ್ರಿಗಳು ಹೇಳಿದುದು ಕೆಲ ಮಟ್ಟಿಗೆ ನಿಜವಿದ್ದೀತು. ಏಕೆಂದರೆ ಈಗ ಪೇಟೆಯಲ್ಲಿ ಮಂದಿಯು ಕಾಣಿಸಿಕೊಂಡಿದೆ: ಜನರ ಕ್ರಯ ಶಕ್ತಿಯು ಹ್ರಾಸಗೊಳ್ಳುತ್ತಾ ನಡೆದಿದೆ. ಮ

PLACE YOUR LIFE ASSURANCE WITH A COMPANY OF YOUR OWN — — —

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policyholders and Representatives. At whatever stage We welcome your association with the POPULAR.

The Popular Insurance Co. Ltd.

"Popular Buildings", MANGALORE—1.

ದಿ ವಿಜಯ ಬ್ಯಾಂಕ್, ಲಿಮಿಟೆಡ್

ಸ್ಥಾಪನೆ: 1931.] ಪ್ರಧಾನ ಕಛೇರಿ: **ಮಂಗಳೂರು.**

ಮೂಲಧನ	ರೂ.	20,00,000
ಕೊಟ್ಟ ಪಾಲು ಭಂಡವಾಳ	,,	8,77,860
ಕ್ಷೇಮ ನಿಧಿ	,,	2,65,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವ್ಯಾಧಿ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4½ /. ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬ್ಯಾಂಕಿನ ಶಾಖೆಗಳಿರುತ್ತವೆ.

ಬಿ. ಮಂಜಯ್ಯ ಹೆಗ್ಡೆ,
ಬ್ಯಾಂಕಿನ ಆಡಳಿತೆ ಕಮಿಟಿ ಅಧ್ಯಕ್ಷರು,
(ಮತ್ತು ದ. ಕ- ಜಿಲ್ಲಾ ಬೋರ್ಡಿನ ಅಧ್ಯಕ್ಷರು.)

THE VIJAYA BANK, Limited.

ಸಾರ್ವಜನಿಕ ಹಣದ ವಿನಿಯೋಗ

ಆಡಳಿತದಲ್ಲಿ ಕಾರ್ಯಕ್ಷಮತೆ ಮತ್ತು ಮಿತವ್ಯಯ ಹೆಚ್ಚುವ ಅಗತ್ಯ

ಶ್ತ್ರು ಜೊತೆಗೇ ರೇಲ್ವೆಗಳ ಪ್ರವಾಸ ದರವನ್ನು ಏರಿಸಿರುವುದರಿಂದ ಪ್ರಯಾಣಿಸಲಿಕ್ಕೆ ಒಂದು ರೀತಿಯಿಂದ ನಿರುತ್ಸಾಹವೇ ಉಂಟಾಗಿದೆ. ಹೀಗೆ ಪ್ರಯಾಣಿಕರ ಆದಾಯವೂ ಕಡಿಮೆಯಾದಂತೆ ಸಾರಿಗೆ ವ್ಯವಹಾರದ ಆದಾಯವೂ ಇಳಿಯಿತು. ಇದು ಹೀಗೆಯೇ ಮುನ್ನಡೆಯುವುದು ಎಷ್ಟರಮಟ್ಟಿಗೆ ಒಳ್ಳೆಯದೆಂದು ಸೂಕ್ಷ್ಮವಾಗಿ ಪರಿಶೀಲಿಸುವುದವಶ್ಯ. ಹಣದ ಉಬ್ಬರವು ಕಡೆಮೆಯಾಗುತ್ತಾ ಪರಿಸ್ಥಿತಿಯು ಸ್ಥಿಮಿತಕ್ಕೆ ಬರುತ್ತಿರುವುದರ ಸೂಚನೆ ಇದಾಗಿರಬಹುದೆಂದು ಮಂತ್ರಿಗಳು ಹೇಳಿದ್ದನ್ನು ಕೂಲಂಕುಷವಾಗಿ ವಿಚಾರಿಸುವುದೊಳಿತು. ಏನಿದ್ದರೂ ಪ್ರಯಾಣಿಕರ ಪ್ರವಾಸವನ್ನು ಹೆಚ್ಚಿಸಲಿಕ್ಕೆ ತಕ್ಕ ಕ್ರಮಗಳನ್ನು ಕೈಗೊಳ್ಳುವುದರ ಜೊತೆಗೆ, ಸಾರಿಗೆ ವ್ಯವಹಾರವು ತೀವ್ರವಾದ ಅಭಿವೃದ್ಧಿಯನ್ನು ಹೊಂದುವಂತೆ ಯೋಜಿಸಬೇಕೆಂದು ಎಲ್ಲರ ಅಭಿಪ್ರಾಯವಿದೆ. ಸಾರಿಗೆ ವ್ಯವಹಾರದ ಆದಾಯಕ್ಕೆ ಪ್ರಾಶಸ್ತ್ಯವನ್ನೂ ಪ್ರಾಧಾನ್ಯವನ್ನೂ ಕೊಡತಕ್ಕುದೆಂಬ ಸಂಗತಿಯನ್ನು ಗಂಭೀರವಾಗಿ ಪರ್ಯಾಲೋಚಿಸಬೇಕು. ಪ್ರಯಾಣಿಕರನ್ನು ಆಕರ್ಷಿಸುವುದಕ್ಕೆ ದರಗಳನ್ನು ಇಳಿಸಬೇಕೆಂದು ಪಾರ್ಲಿಮೆಂಟಿನಲ್ಲಿ ಅನೇಕ ಸೂಚನೆಗಳು ಬಂದರೂ ರೇಲ್ವೆ ಮಂತ್ರಿಗಳು ವರೆಗಿನ ಇದ್ದಂತೆಯೇ ಇರುವುವೆಂದು ಹೇಳಿರುವರು. ಹಾಗೆಯೇ ಸಾರಿಗೆ ವ್ಯವಹಾರದಲ್ಲಿ ಅಭಿವೃದ್ಧಿಯನ್ನುಂಟುಮಾಡುವಂತೆ ಸಾಕರ್ಯಗಳನ್ನೇರ್ಪಡಿಸತಕ್ಕುದೆಂದೂ ಸೂಚನೆಗಳಿವೆ. ರೇಲ್ವೆಗಳ ಪರಿಸ್ಥಿತಿಯು ೧೯೫೩-೫೪ ನೇ ವರ್ಷದಲ್ಲಿ ಹೆಚ್ಚು ಸುಧಾರಿಸಲಿಕ್ಕಿಲ್ಲವೆಂಬುದರಿಂದ ಉಳಿತಾಯವು ಈ ವರ್ಷದ ಪುನರ್ನಿರ್ಮಿತ ಮಟ್ಟಕ್ಕೇನೆ ಬಂದೀತೆಂದು ಆಶಿಸಿರುವರು ಪಂಚವಾರ್ಷಿಕ ಯೋಜನೆಯು ಪರಿಣಾಮವಾಗಿ ಸಾರಿಗೆ ವ್ಯವಹಾರವು ಶೇಕಡಾ ಎರಡರಷ್ಟು ಹೆಚ್ಚಿಕೊಂಡೀತೆಂದೂ, ಪ್ರಯಾಣಿಕರ ಆದಾಯ ಈಗಿನಂತೆಯೇ ಉಳಿದೀತೆಂದೂ ಮುಂಗಡಪತ್ರ ಸೂಚಿಸುತ್ತದೆ.

ಮಂಗಳೂರು-ಹಾಸನ ಮಾರ್ಗ

ಮುಂಗಡ ಪತ್ರದ ವೈಶಿಷ್ಟ್ಯಗಳಲ್ಲಿ ಒಟ್ಟು ಹನ್ನೆರಡು ರೈಲು ಮಾರ್ಗಗಳ ಉಲ್ಲೇಖವಿರುವುದು ಮುಖ್ಯವೆನ್ನಬಹುದು. ಈಗಾಗಲೇ ತೊಡಗಿರುವ ಅಥವಾ ಇನ್ನು ಸರ್ವೆನಡೆಸಬೇಕಿರುವ ಯೋಜನೆಗಳ ಪಟ್ಟಿಯೊಂದನ್ನು ರೇಲ್ವೆ ಮಂತ್ರಿಗಳು ಕೊಟ್ಟಿದ್ದು, ಮಂಗಳೂರು-ಹಾಗೂ ಹಾಸನಗಳ ನಡುವೆ ರೈಲ್ವೆ ಸರ್ವೆಯನ್ನು ಮುಂದಿನ ವರ್ಷದಲ್ಲಿ ಪ್ರಾರಂಭಿಸಲಾಗುವುದೆಂದು ಅವರು ಹೇಳಿರುವರು. ಹಾಸನ-ಮಂಗಳೂರು ರೇಲ್ವೆಗಾಗಿ ಅನೇಕ ವರ್ಷಗಳಿಂದ ಒತ್ತಾಯವಿತ್ತು; ಇದು ಮೈಸೂರನ್ನು ಮಂಗಳೂರಿನಂಥ ಬಂದರಕ್ಕೆ ಜೋಡಿಸುವುದರಿಂದ, ಮತ್ತು ಮಲೆನಾಡು ಪ್ರದೇಶದ ಮೂಲಕ ಹಾದು ಬರುವುದರಿಂದ ವ್ಯಾಪಾರದ ಅಭಿವೃದ್ಧಿಯನ್ನು ನೆರವೇರಿಸಲಿಕ್ಕೆ ತುಂಬ ಪ್ರಯೋಜನ ದೊರೆತೀತು. ಈ ಕುರಿತು ಎಲ್ಲರದೆಯೂ

ಸಂತೋಷವನ್ನು ಪ್ರದರ್ಶಿಸಿರುವರು. ಹಾಗೆಯೇ ಲಂಚಗುಳಿತನದ ಪ್ರಶ್ನೆಯನ್ನು ವಿಚಾರಿಸುವುದಕ್ಕಾಗಿ ಪಾರ್ಲಿಮೆಂಟು ಸದಸ್ಯರಿಂದ ಕೂಡಿದ ಒಂದು ಸಮಿತಿಯ ನೇಮಕವನ್ನೂ ಹರ್ಷಪೂರ್ವಕ ಸ್ವಾಗತಿಸಿರುವರು. ರೇಲ್ವೆಗಳಲ್ಲಿ ಪ್ರಥಮ ವರ್ಗವನ್ನು ಇದೇ ಎಪ್ರಿಲ ೧ನೇ ತಾರೀಕಿನಿಂದ ಪೂರ್ಣವಾಗಿ ಬರಖಾಸ್ತುಗೊಳಿಸಲಾಗುವುದು. ಪ್ರಥಮ ವರ್ಗದ ಪ್ರಯಾಣಿಕರ ಕಾರಣದಿಂದ ದೊರೆಯುವ ಆದಾಯ ವರ್ಷಕ್ಕೆ ೫೦% ದಷ್ಟು ಅಧಿಕ ಪ್ರಮಾಣದಲ್ಲಿ ತಗ್ಗುತ್ತಾ ನಡೆದಿರುವುದು. ರೇಲ್ವೆಮಂತ್ರಿಗಳ ಈ ನಿರ್ಣಯಕ್ಕೆ ಪ್ರಚೋದನೆಯನ್ನು ಕೊಟ್ಟಿರಬಹುದು. ಏನಿದ್ದರೂ ಈ ರೀತಿಯ ಸುಧಾರಣೆಯಿಂದ ಯಾರಿಗೂ ಕಷ್ಟನಷ್ಟಗಳಾಗಲಿಕ್ಕಿಲ್ಲ. ಬದಲು ಮೂರನೇ ವರ್ಗದಲ್ಲಿ ಈಗ ಕಂಡು ಬರುತ್ತಿರುವ ನೂಕು ನುಗ್ಗು ಕೆಲಮಟ್ಟಿಗೆ ಕಡಿಮೆಯಾದೀತು. ರೇಲ್ವೆಗಳ ನೌಕರರು ಹಾಗೂ ಆಡಳಿತಗಳಲ್ಲಿ ಪರಸ್ಪರ ಸೌಹಾರ್ದ ಭಾವವಿದೆಯೆಂದು ಹೇಳಿ ಇದಕ್ಕಾಗಿ ಕೃತಜ್ಞತೆಯನ್ನು ರೇಲ್ವೆ ಮಂತ್ರಿಗಳು ಸೂಚಿಸಿದ್ದರಿಂದ ಕಾರ್ಮಿಕ ವರ್ಗದ ಸಂತೋಷಕ್ಕೆ ಸರಕಾರ ಪಾತ್ರವಾಗಿದೆ ಎಂದು ಹೇಳಬಹುದು. ಹಾಗೆಯೇ ರೇಲ್ವೆ ಶತಮಾನೋತ್ಸವದ ಸ್ಮಾರಕಾರ್ಥ ಎಪ್ರಿಲು ೧ನೇ ದಿನಾಂಕದಿಂದ ೧೫ ದಿನಗಳ ವರೆಗೆ ಸ್ವೇಚ್ಛಾಪ್ರವಾಸದ ಟಿಕೇಟುಗಳನ್ನು ಒದಗಿಸಲಾಗುವುದೆಂದು ಘೋಷಿಸಿದ್ದು ಪ್ರಯಾಣಿಕರಿಗೆ ಆಕರ್ಷಕವಾಗಿ ತೋರದಿರದು. ಈ ಟಿಕೇಟಿನ ಬೆಲೆಯು ೭೦ ರುಪಾಯಿಗಳೆಂದೂ ಇದರ ಬಲದಿಂದ ೫೦೦೦ ಮೈಲು ಪ್ರದೇಶದಲ್ಲಿ ಮನ ಬಂದಲ್ಲಿಗೆ ಮನ ಬಂದಂತೆ ಪ್ರಯಾಣಿಸಬಹುದೆಂದೂ ತಿಳಿದಿದೆ.

ಚೈತನ್ಯ ತುಂಬುವ ಉದ್ಯಮ

ಇಷ್ಟಲ್ಲದೆ ಇನ್ನೂ ಕೆಲವು ಅನುಕೂಲತೆಗಳನ್ನು ರೇಲ್ವೆ ಮಂತ್ರಿಗಳು ಕಲ್ಪಿಸಿಕೊಡುವುದಾಗಿ ಹೇಳಿರುವರು. ಭಾರತದಲ್ಲಿ ಚಿತ್ತರಂಜನ ಕಾರ್ಖಾನೆ ಟಾಟಾ ಲೋಕೊ ಮೋಟಿವ್ ವರ್ಕ್ಸ್, ಪೆರಂಬೂರಿನ ಕಾರ್ಖಾನೆ ಮುಂತಾದವುಗಳ ಚಟುವಟಿಕೆಯಿಂದ ಸಮಗ್ರ ರೇಲ್ವೆ ವಾಗೀನುಗಳು, ಕೋಚುಗಳು, ಪಟ್ಟಿಗಳು ಮುಂತಾದವುಗಳ ಕೊರತೆಯಾಗದೆಂದು ಹೇಳಿದ ಸಂಗತಿ ತೃಪ್ತಿ ನೀಡುತ್ತದೆ. ಹೀಗೆ ಭಾರತವು ಒಂದೊಂದೇ ಕ್ಷೇತ್ರದಲ್ಲಿ ಸ್ವಾವಲಂಬನವನ್ನು ಹೊಂದುತ್ತಾ ನಡೆದರೆ ಭವಿಷ್ಯದ ಬಗ್ಗೆ ಸುಂದರ ಚಿತ್ರವನ್ನು ನಾವು ಕಟ್ಟಿಕೊಳ್ಳಲು ಅವಕಾಶವಿದೆ. ಇಂಥದರಲ್ಲಿ ಪ್ರಧಾನಿ ನೆಹರೂರವರು ಮೊನ್ನೆ ತಾನೆ ಉದ್ಘಾಟಿಸಿದ ದಾಮೋದರ ನದೀಕಣಿವೆ ಪ್ರದೇಶದ ತಿಲೈಯಾ ಅಣೆಕಟ್ಟು ಮತ್ತು ಬೊಕಾರೋ ವಿದ್ಯುತ್ ಕೇಂದ್ರಗಳು ಪ್ರಗತಿಯ ಇನ್ನೊಂದು ಸುದೃಢ ಹೆಜ್ಜೆ ಎಂದೇ ಹೇಳಬೇಕು. ದಾಮೋದರ ನದೀಕಣಿವೆಯ ಕಾರ್ಪೊರೇಶನಿನ ಚಟುವಟಿಕೆಯ ಮೊದಲ ಘಟ್ಟ ಇದಾಗಿದೆ. ಇನ್ನೂ ಮೂರು ಅಣೆಕಟ್ಟುಗಳೂ ವಿದ್ಯುತ್‌ಕೇಂದ್ರಗಳೂ ನಿರ್ಮಾಣಗೊಳ್ಳಲಿವೆ. ತಿಲೈಯಾ ಅಣೆಕಟ್ಟಿನಿಂದ ೭೫೦೦೦ ಎಕ್ರೆ ಪ್ರದೇಶ ನೀರಾವರಿಗೊಳಗಾಗುತ್ತದೆ; ಅಲ್ಲದೆ ೩,೭೭,೦೦೦ ಕಿಲೋವಾಟು ವಿದ್ಯುಚ್ಛಕ್ತಿ ಉತ್ಪಾದನೆಗೊಳ್ಳುತ್ತದೆ. ಬೊಕಾರೋದ ವಿದ್ಯುತ್ ಕೇಂದ್ರವು ಪೌರ್ವಾತ್ಯ ದೇಶಗಳಲ್ಲಿಯೇ ಹಿರಿಯದೆನಿಸಿದೆ. ಈಗ ೫೦೦೦೦ ಕಿಲೋವಾಟುಗಳ ಒಂದು ಭಾಗ ಮಾತ್ರವಿದೆ ಇನ್ನೆರಡು ಭಾಗಗಳ

ನ್ನು ಇದೇ ಜೂನಿನೊಳಗೆ ಜೋಡಿಸಲಾಗುವುದು. ನಾಲ್ಕನೆಯ ಭಾಗವೊಂದ[illegible] ಆ ಬಳಿಕ ಜೋಡಣೆಗೊಳ್ಳುವುದು. [illegible] ಟ್ಟಾರೆ ಇದರಿಂದ ಎರಡು ಲಕ್ಷ ಕಿಲೊ[illegible] ವಾಟು ವಿದ್ಯುಚ್ಛಕ್ತಿ ದೊರೆಯುತ್ತದ[illegible] ಇಂಥ ಮಹಾಸಾಹಸದ ಕೆಲಸಗಳನ್ನು [illegible] ಜ್ಞೆಸ ತ್ತಾ ನೆಹರೂ ದೇಶಕ್ಕೆ ಚೈತನ್ಯ[illegible] ನ್ನೂ ಸ್ಫೂರ್ತಿಯನ್ನೂ ನೀಡುವ ಉದ[illegible] ಮಗಳಿವು ಎಂದು ಪ್ರಶಂಸಿಸಿದರು. ದಾ[illegible] ದ್ರ್ಯವನ್ನು ಹೊಡೆದೋಡಿಸುವುದಕ್ಕೆ ನೆ[illegible] ವಾಗಬಲ್ಲ ಇಂಥ ನೂರಾರು ಯೋಜ[illegible] ಗಳ ಚಿತ್ರ ತನ್ನ ಕಣ್ಣ ಮುಂದೆ ಕು[illegible] ಯುತ್ತಿರುವುದಾಗಿ ನೆಹರೂ ಹೇಳಿದರ[illegible] ಹಳ್ಳಿಹಳ್ಳಿಯನ್ನು ಬೆಳಗಿಸಬಲ್ಲ, ನೂರ[illegible] ರು ಜನರಿಗೆ ಉದ್ಯೋಗವನ್ನು ದೊರಕಿ[illegible] ಬಲ್ಲ, ದೇಶವನ್ನು ಸಂಪತ್ಸಮೃದ್ಧ ಮಾ[illegible] ಬಲ್ಲ ಇಂಥ ಮಹಾಯೋಜನೆಗಳು ಲಕ್ಷ[illegible] ಗಟ್ಟಳೆ ಕಾರ್ಮಿಕರ ಅವಿಶ್ರಾಂತ ಪರಿಶ್ರ[illegible] ಮ ಮತ್ತು ಭಾರತೀಯ ಇಂಜೀನಿಯ[illegible] ರ ಕೌಶಲ ಹಾಗೂ ವಿದೇಶೀ ತಜ್ಞರ ನೆ[illegible] ವಿನಿಂದ ನೆರವೇರುತ್ತಿರುವುದು ಅಭಿಮಾ[illegible] ನದ ವಿಷಯ.

ಕಾರ್ಯಾಂಗದ ಹೊಣೆಗೇಡಿತನ

ದೇಶವು ಈ ರೀತಿ ನವನಿರ್ಮಾಣ[illegible] ದ ಪ್ರತಿಜ್ಞೆಯನ್ನು ಮಾಡಿ, ಮುನ್ನ[illegible] ಯುತ್ತಿರುವಾಗ ದಟ್ಟ ದರಿದ್ರರಾದ ನಮ[illegible] ಹಣದಲ್ಲಿ ದುಂದುಗಾರಿಕೆಯಾಗದಂತೆ ಒಂದು ಪೈಯಾದರೂ ಪೋಲಾಗದಂ[illegible] ಜಾಗರೂಕತೆ ವಹಿಸಬೇಕಾದುದು ನ್ಯಾ[illegible] ಯ. ಅದರಲ್ಲೂ ಬಡ ಜನರಿಂದ ತೆರಿ[illegible] ಮುಂತಾದುವನ್ನು ಎತ್ತಿ, ಆಡಳಿತ ನಾ[illegible] ಸುವ ಸರಕಾರವು ಸಾರ್ವಜನಿಕ ಹಣ[illegible] ಕುರಿತ ಎಷ್ಟು ಜಾಗರೂಕತೆಯಿಂದ [illegible] ರ್ತಿಸಿದರೂ ಸಾಲದು. ಹಣವನ್ನು ವಿ[illegible] [illegible] ಯೊಂದು ಘಟ್ಟದಲ್ಲಿ ಯೂ ಕೂಲಂಕುಷವಾದ ವಿವೇಚನೆಯ[illegible] ಯ ಮೂಲಕ ಮಿತವ್ಯಯವನ್ನು ಸಾಧಿಸಲಿಕ್ಕೆ ಮತ್ತು ವಿನಿಯೋಗಿಸಿದ ಹಣ[illegible] ಪೂರ್ಣ ಲಾಭ ದೊರೆಯುವಂತೆ ಯೋ[illegible] ಜಿಸಬೇಕಾದುದು ಅತ್ಯಗತ್ಯ.

ಇಂಥ ಜಾಗರೂಕತೆಯನ್ನು ತೋರಿಸಿದರೆ ಮಾತ್ರ ಸಾರ್ವಜನಿಕರ ವಿಶ್ವಾಸಕ್ಕೆ ಸರ[illegible] ಕಾರವು ಅರ್ಹವಾಗಬಲ್ಲುದು. ಆದರೆ ಪಾರ್ಲಿಮೆಂಟಿನಲ್ಲಿ ಸಾದರ ಪಡಿಸಿರುವ ಸರಕಾರೀ ಲೆಕ್ಕಪತ್ರ ಸಂಶೋಧನೆಯ ವರದಿಯು ಸರಕಾರದ ಕಾರ್ಯಾಂಗವು ಪ್ರಜಾಪ್ರಭುತ್ವದ ಈ ದಿನಗಳಲ್ಲಿಯೂ ಅಸಡ್ಡೆಯಿಂದ ಕೆಲಸ ನಿರ್ವಹಿಸುತ್ತಿ[illegible] ಎಂಬುದನ್ನು ಎತ್ತಿ ತೋರಿಸುತ್ತದೆ. ರೈ[illegible] ಲ್ವೆ ಮತ್ತು ಅಂಚೆ-ತಂತಿ ಶಾಖೆಗಳ ಲ[illegible] ಕ್ಕ ಪತ್ರಗಳಲ್ಲಿನ ಅನೇಕ ನ್ಯೂನಾತಿರೇಕ[illegible] ಗಳನ್ನು ವರದಿಯು ಬಹಿರಂ[illegible] ಗೊಳಿಸಿದೆ. ರೇಲ್ವೆಗಳಲ್ಲಿ ಅನಾವಶ್ಯಕವಾ[illegible] ಗಿ ವಿಶೇಷ ಸವಲತ್ತುಗಳನ್ನು ನೀಡಿರುವುದೇ ಮುಂತಾದ ಲೋಪಗಳು ಇದ್ದರೆ ಅಂಚೆ-ತಂತಿ ಇಲಾಖೆಯಲ್ಲಿ ಸಂಕೀರ[illegible] ಸಾಮಗ್ರಿಗಳ ಕಳವು, ಅದಾಯಗಳಂತ ವಿ[illegible] ಪರೀತವಾದ ವೆಚ್ಚ ಮುಂತಾದ ಗಂಭೀರ ತಪ್ಪುಗಳು ಕಂಡು ಬರುತ್ತವೆ. ಕೆಲವು

(೫ನೇ ಪುಟ ನೋಡಿ.)

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10.) ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8) ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯದೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ, ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು.

The Bombay Life Assurance Co., Ltd., Bombay



ಮಿತ ದರದಲ್ಲಿ
ಚಲೋ ಗಡಿಯಾರಗಳೂ
ಟೈಮ್‌ಪೀಸುಗಳೂ
ದೊರೆಯುತ್ತವೆ.
ವಿವರಗಳಿಗೆ ಬರೆಯಿರಿ:

MUBARAK & CO
Watch & Clock
Specialists,
MADRAS 3.

ಮುಬಾರಕ್ & ಕೊ
ವಾಚ್ ಎಂಡ್ ಕ್ಲಾಕ್
ಸ್ಪೆಶಲಿಸ್ಟ್ಸ್,
ಮದ್ರಾಸು 3.

ಸ್ಥಾಪನೆ 1906
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
ಪ್ರಧಾನ ಕಾರ್ಯಾಲಯ ಉಡುಪಿ, (ದ ಭಾರತ)
ಜಿಲ್ಲೆಯಲ್ಲಿ ಅತಿ ಹಿರಿಯ ಬ್ಯಾಂಕು ಇದರ ಕೂಡೆ ವ್ಯವಹಾರ ನಡೆಸಲು—
ಮದ್ರಾಸು, ಮೈಸೂರು, ಮುಂಬಾಯಿ, ಕೊಡಗು ಮತ್ತು
ಕೊಚ್ಚಿ-ತಿರುವಾಂಕೂರು ಸಂಸ್ಥಾನಗಳಲ್ಲಿ ಎಲ್ಲಿಯೂ,
ಯಾರಿಗೂ, ಯಾವಾಗಲೂ ನೀವು ಇದನ್ನು ಶಿಫಾರಸು ಮಾಡಬಹುದು

THE CANARA BANKING CORPORATION LTD
Estd 1906] [H O **UDIPI**, (S India)

ನವಯುಗ

ಉಡುಪಿ, ಗುರುವಾರ ೨೬-೨-'೫೩

ಸುಧಾರಣಾಲಯಗಳು

ಸಂಯುಕ್ತ ರಾಷ್ಟ್ರಸಂಘದ ತಾಂತ್ರಿಕ ನೆರವಿನ ಯೋಜನೆಯಂತೆ ದೊರೆತ ಡಾ. ವಾಲ್ಟರ್ ರೆಕ್‌ಲೆಸರು ಭಾರತೀಯ ಕೈದಿ ಮತ್ತು ಕಾರಾಗೃಹಗಳ ಸುಧಾರಣೆಯ ಸಂಬಂಧದಲ್ಲಿ ಮಾಡಿದ ಸೂಚನೆಗಳು ಸಮಾಜದ ಧುರೀಣರ ಮನಸ್ಸನ್ನು ಸೆಳೆಯುವಷ್ಟು ಮಹತ್ವದಿಂದ ಕೂಡಿವೆ. ಮನೋವಿಜ್ಞಾನ, ಸಮಾಜ ವಿಜ್ಞಾನಗಳು ವಿಸ್ತಾರವಾಗಿ ಅಭಿವೃದ್ಧಿಯನ್ನು ಹೊಂದಿ ಮಾನವ ಜೀವನದ ಪ್ರತಿಯೊಂದು ಅಂಗದಲ್ಲಿಯೂ ಪ್ರಾಬಲ್ಯಕ್ಕೆ ಬಂದಿರುವ ಮತ್ತು ಮಾನವೀಯತಾ ಭಾವವು ಜಾಗೃತಿಯೊಂದುತ್ತಿರುವ ಈ ದಿನಗಳಲ್ಲಿ ಕೈದಿಗಳನ್ನು ಬಂಧನ ಗೃಹಗಳಲ್ಲಿ ಇಡುವುದರ ಉದ್ದೇಶ ಪೂರಾ ಪರಿವರ್ತನೆಗೊಂಡಿರುವುದು ತೀರಾ ಸ್ವಾಭಾವಿಕವೆನ್ನಬೇಕು. ಅಪರಾಧಿಗಳಿಗೆ ಉಗ್ರವಾದ ಶಿಕ್ಷೆಯನ್ನು ವಿಧಿಸಿ ಪರಿಣಾಮದಿಂದ ದಂಡಿಸುವುದಕ್ಕೆ ಈಗ ಯಾವ ಪ್ರೋತ್ಸಾಹವಿರುವುದಿಲ್ಲ; ಬದಲಿಗೆ ಕಾರಾಗೃಹ ವಾಸದ ಅವಧಿಯಲ್ಲಿ ಅಪರಾಧಿಯು ತನ್ನ ನಡತೆಯನ್ನೂ ಗುಣಶೀಲಗಳನ್ನೂ ತಿದ್ದಿಕೊಂಡು ಯೋಗ್ಯ ನಾಗರಿಕನ ರೀತಿಯಲ್ಲಿ ಜೀವನ ನಿರ್ವಹಿಸುವಂತೆ ತಕ್ಕುದಾದ ತರಬೇತಿಯನ್ನು ಕೊಡುವುದಕ್ಕೆ ಈಗ ಮಹತ್ವವು ಪ್ರಾಪ್ತವಾಗಿದೆ.

ಪಾಶ್ಚಾತ್ಯದೇಶಗಳಲ್ಲಿ ಕಾರಾಗೃಹಗಳು ಸುಧಾರಣಾಲಯಗಳಾಗಿ ನಿಧಾನವಾಗಿ ಪರಿವರ್ತನೆಯನ್ನು ಹೊಂದುತ್ತಿವೆ. ಭಾರತದಲ್ಲಿಯೂ ಕೆಲವೊಂದು ಕಡೆ ಹರೀಕ್ಷಾರ್ಥವಾಗಿ ಇಂಥ ಸುಧಾರಣೆಗಳನ್ನು ಆಗಿಂದಾಗ್ಗೆ ಕೈಗೊಂಡಿರುವರು. ಇತ್ತೀಚಿನ ಉದಾಹರಣೆಗಳನ್ನು ಹೇಳುವುದಾದಲ್ಲಿ ತಿರುಕೊಚ್ಚಿಯಲ್ಲಿ ಮೊನ್ನೆ ತಾನೆ ಕೈದಿಗಳನ್ನು ಒಂದು ವಸ್ತುಪ್ರದರ್ಶನವನ್ನು ನೋಡಲಿಕ್ಕಾಗಿ ಒಟ್ಟಿದ್ದರು. ಕಾರಾಗೃಹದ ನಾಲ್ಕು ಗೋಡೆಗಳ ನಡುವೆ ಮಾತ್ರ ಸೀಮಿತವಾದ ಕ್ಷೇತ್ರಗಳಲ್ಲಿ ಇದ್ದುಕೊಂಡು ಬಾಹ್ಯ ಜಗತ್ತಿನೊಡನೆ ಸಂಬಂಧವನ್ನೇ ಕಡಿದುಕೊಂಡು ಜೀವನವನ್ನು ನಡೆಸುತ್ತಿದ್ದ ಕೈದಿಗಳಿಗೆ ಈ ಪ್ರಸಂಗ ಎಷ್ಟರ ಮಟ್ಟಿಗೆ ಸಂತೋಷವನ್ನು ತಂದೀತೆಂಬುದು ಊಹಿಸಿದರೆ ಸಾಕು ಮನಸ್ಸು ಸಂತೋಷಗೊಳ್ಳುವುದು. ಉತ್ತರ ಪ್ರದೇಶದಲ್ಲಿಯೂ ಕೆಲಸಮಯ ಪೂರ್ವದಲ್ಲಿ ಅಲ್ಲಿನ ಕೆಲವು ಜೈಲುಗಳ ಕೈದಿಗಳನ್ನು ಒಂದು ಜಾತ್ರೆಗೆ ಹೋಗಲು ಬಿಟ್ಟರು. ಮಾತ್ರವಲ್ಲ ಅಲ್ಲಿ ಕೈದಿಗಳು ತಮ್ಮ ಸತ್ವಿಕ ಕೌಶಲ್ಯವನ್ನು ತೋರಿಸಲು ಅವಕಾಶವಮಾಡಿಕೊಟ್ಟರು. ಕವಿತೆಗಳನ್ನು ಹಾಡಲೂ, ಕೈಗಾರಿಕೆಗಳನ್ನು ಪ್ರದರ್ಶಿಸಲೂ ಅಸ್ಪದವಿತ್ತು. ಜನರೊಡನೆ ಈ ರೀತಿ ಸಂಬಂಧವನ್ನು ಸ್ಥಾಪಿಸಿಕೊಳ್ಳಲು ಕೈದಿಗಳು ಸಮರ್ಥರಾದರು. ಹೀಗೆ ಬಂಧನದಿಂದ ಹೊರಗೆ ಬಿಟ್ಟ ಅವಧಿಯಲ್ಲಿ ಕೈದಿಗಳ ನಡತೆ ಯೋಗ್ಯವಾಗಿದ್ದಿತು. ಇದೀಗ ಮುಂಬಯಿ ಸರಕಾರದವರು ಕೈದಿಗಳಿಗೆ ತಮ್ಮ ಬಂಧುಬಳಗದವರನ್ನು ನೋಡಿಕೊಂಡು ಬರಲು ಅವಕಾಶ ದೊರೆಯುವಂತೆ, ಕೆಲವು ದಿನಗಳ ರಜೆಯನ್ನು ಕೊಡುವುದಕ್ಕೆ ಯೋಜಿಸಿರುವರು. ದೀರ್ಘಾವಧಿಯ ಕಾರಾಗೃಹ ಶಿಕ್ಷೆಯನ್ನು ಹೊಂದಿದ ಅಪರಾಧಿಗಳಿಗೆ ಇದು ತುಂಬ ಉತ್ತೇಜನಕರವಾದ ಮತ್ತು ಸಾಂತ್ವನ ನೀಡುವ ಸುಧಾರಣೆಯಾಗಿದೆ.

ಡಾ ರೆಕ್‌ಲೆಸರು ತಮ್ಮ ಶಿಫಾರಸುಗಳಲ್ಲಿ ಭಾರತದ ಪೀನಲ್‌ಕೋಡು ಮತ್ತು ಜೈಲ್ ಮ್ಯಾನುಯೆಲ್‌ಗಳ ತಳಹದಿಯೇ ಬದಲಾಗತಕ್ಕದೆಂದೂ ಈ ಕುರಿತು ಸರಕಾರ ಒಂದು ಸಮಿತಿಯ ನೇಮಕ ಮಾಡಬೇಕೆಂದೂ ಹೇಳಿರುವುದು ಕ್ರಾಂತಿಕಾರಿ ಸೂಚನೆಯೇ ನಿಜ. ಜೈಲುಗಳಲ್ಲಿ ಕೈದಿಗಳಿಗೆ ಯೋಗ್ಯ ಶಿಕ್ಷಣವನ್ನು ಕೊಟ್ಟು ಅವರ ಮನಸ್ಸನ್ನು ಸರಿದಾರಿಗೆ ತರಲೆತ್ನಿಸತಕ್ಕುದೆಂದೂ ಈ ಉದ್ದೇಶಕ್ಕಾಗಿ ಅಪರಾಧ ಶಾಸನಗಳಲ್ಲಿ ತಿದ್ದುಪಡಿಗಳಾಗುವುದವಶ್ಯವೆಂದೂ ಹೇಳಿದರೆ ತಪ್ಪಾಗಲಿಕ್ಕಿಲ್ಲ. ಒಂದು ನಾನಾ ಅಪರಾಧಗಳ ನೆಪದಿಂದ ಕಾರಾಗಾರವನ್ನು ಸೇರುತ್ತಿರುವ ಜನರಲ್ಲಿ ಎಲ್ಲಿಯೋ ಬಹಳ ಕಡಿಮೆ ಜನರು ಮಾತ್ರ ಯಾವ ರೀತಿಯಿಂದಲೂ ಸುಧಾರಿಸಲು ಬಾರದ ಪುಂಡರಿರಬಹುದೇ ಹೊರತು—ಹೆಚ್ಚಿನವರು ಯೋಗ್ಯ ಪ್ರಜೆಗಳಾಗಬಲ್ಲರು ಎಂದು ತಜ್ಞರ ಅಭಿಪ್ರಾಯವಿದೆ. ಆದುದರಿಂದ ಜೈಲಿನ ಅಧಿಕಾರಿಗಳು ಕೈದಿಗಳು ಓಡಿಹೋಗದಂತೆ ಬಲವಾದ ಕಾವಲು ಏರ್ಪಡಿಸುವುದೇ ತಮ್ಮ ಕರ್ತವ್ಯವೆಂದೂ ಕೈದಿಗಳನ್ನು ಪಶುಸಮಾನರೆಂದೇ ಪರಿಗಣಿಸಿ ಶಿಕ್ಷಿಸುವುದರಲ್ಲಿ ಪುರುಷಾರ್ಥವಿದೆಯೆಂದೂ ಎಣಿಸತಕ್ಕದ್ದಲ್ಲ. ಸಾಮಾಜಿಕ ಹಿತಚಿಂತನೆಯಿಂದ ಕೂಡಿದ ಎಲ್ಲ ಜನರೂ ಕಾರಾಗಾರವನ್ನು ಸುಧಾರಣಾಲಯವಾಗಿ ಪರಿವರ್ತಿಸಲು ಅಗತ್ಯವಿರುವ ಪ್ರತಿಯೊಂದು ಕ್ರಮವನ್ನು ಸರಕಾರವು ಕೈಗೊಳ್ಳಬೇಕೆಂದು ಒತ್ತಾಯಿಸಿ, ನೆರವಾಗಲಿ ಎಂದು ಹಾರೈಸುತ್ತೇವೆ.

— —

ದಯಮಾಡಿ ನಿಮ್ಮ ಚಂದಾಹಣ ಕಳುಹಿಸಿಕೊಡಿರಿ.

ಉಡುಪಿ

ಎಮ್. ಜಿ. ಎಮ್. ಕಾಲೇಜಿನಲ್ಲಿ ಉಪನ್ಯಾಸಗಳು—ಸ್ಥಳೀಯ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ಇದೇ ತಾ 20ರಲ್ಲು ಬೊಂಬಾಯಿಯ ಡಾ. ಎ. ಸಿ. ರೆಬೆಲ್ಲೊರವರು ಸಾಯನ್ಸ್ ಶಾಖೆಯ ಆಶ್ರಯದಲ್ಲಿ 'ಚರ್ಮರೋಗವೂ ವಿಜ್ಞಾನ ಶಾಸ್ತ್ರವೂ' ಎಂಬೀ ವಿಷಯದಲ್ಲಿ ಉಪನ್ಯಾಸವಿತ್ತರು. ಡಾ ಟಿ ಮಾಧವ ಪೈಗಳು ಸಭಾಧ್ಯಕ್ಷತೆ ವಹಿಸಿದ್ದರು. ಮರುದಿನ ಅದೇ ಕಾಲೇಜಿನ ಯೂನಿಯನ್ ನೇತೃತ್ವದಲ್ಲಿ ಅಮೇರಿಕಾ ಇನ್‌ಫೋರ್ಮೇಶನ್ ಲೈಬ್ರರಿ ಆಫೀಸರ್ ಮಿ. ರಾಲ್ಫ್ ಹರ್ಸೆಲ್‌ರವರು 'ಅಮೇರಿಕದ ಶಿಕ್ಷಣವೂ ಸಮಾಜವೂ' ಎಂಬೀ ವಿಷಯದಲ್ಲಿ ಉಪನ್ಯಾಸವಿತ್ತರು. ಪ್ರಿನ್ಸಿಪಾಲ್ ಎಚ್. ಸುಂದರರಾಯರು ಸಭಾಧ್ಯಕ್ಷತೆ ವಹಿಸಿದ್ದರು.

ಡಿನ್ನರ್ ಪಾರ್ಟಿ—ಸಿಂಡಿಕೇಟ್ ಬೇಂಕಿನ ಮುಕುಂದ ನಿವಾಸದಲ್ಲಿ ಡಾ. ಎ. ಸಿ. ರೆಬೆಲ್ಲೊ ಮತ್ತು ರಾಲ್ಫ್ ಹರ್ಸೆಲ್ ದಂಪತಿಗಳಿಗೆ ತಾ 21ರಲ್ಲು ರಾತ್ರಿ ಡಿನ್ನರ್ ಪಾರ್ಟಿ ನಡೆಯಿತು. ಊರ ಅನೇಕ ಮಹನೀಯರನೇಕರೂ ಆಹ್ವಾನಿಸಲ್ಪಟ್ಟಿದ್ದರು.

ಕೊಲೆ ಸಂಬಂಧ ಚಾರ್ಜ ಶೀಟು ..ಅರೂರು ವೆಂಕಟ್ರಾಯರ ಕೊಲೆಯ ಸಂಬಂಧ ಶ್ರೀಗಳಾದ ಲೋರೆನ್ಸ್ ಮಸ್ಕರೆಂಞ, ಇನಾಸ ಮಸ್ಕರೆಂಞ, ಗೋವಿಂದ ಸೆಟ್ಟಿ, ವಿಷ್ಣುಮೂರ್ತಿ ಭಟ್ಟ, ಮಹಾಬಲ ಹೆಗ್ಡೆ, ಐ. ಸದಾಶಿವ ಸೆಟ್ಟಿ, ಐ. ನಾರಾಯಣ ಸೆಟ್ಟರ ಮೇಲೆ ಪೋಲೀಸು ಅಧಿಕಾರಿಗಳು ಚಾರ್ಜ ಶೀಟು ಹಾಕಿರುವರೆಂದು ತಿಳಿದುಬರುತ್ತದೆ.

ಕೇರಳ ಸಮಾಜ— ಎಂಬ ಸಂಘವೊಂದು ಇಲ್ಲಿರುವ ಮಲಯಾಳಿಗಳ ಪರಿಶ್ರಮದಿಂದ ಹಾಗೂ ಊರವರ ಸಹಾನುಭೂತಿಯಿಂದ ಪರಸ್ಪರ ಸೌಹಾರ್ದ ಹಾಗೂ ಸಾಹಿತ್ಯ ಚಟುವಟಿಕೆಗಳ ಉದ್ದೇಶದಿಂದ ಇತ್ತೀಚೆಗೆ ಸ್ಥಾಪಿತವಾಗಿದೆ. ಇದರ ಕಾರ್ಯ ನಿರ್ವಾಹಕ ಸಮಿತಿಯ ಅಧ್ಯಕ್ಷರಾಗಿ ಶ್ರೀ ಕೆ. ಕುಂಜಕಣ್ಣನ್, ಉಪಾಧ್ಯಕ್ಷರಾಗಿ ಡಾ. ಟಿ ಎಸ್. ಕೇಳುನಂಬಿಯಾರ್, ಪ್ರಧಾನ ಕಾರ್ಯದರ್ಶಿಯಾಗಿ ಶ್ರೀ ಕೆ ಬಾಲಕೃಷ್ಣನ್, ಸಹ ಕಾರ್ಯದರ್ಶಿಯಾಗಿ ಶ್ರೀ ಪಿ ಮೇಲಾಯುಧನ್, ಕೋಶಾಧಿಕಾರಿಯಾಗಿ ಶ್ರೀ ಟಿ. ವಿ. ನಾಸುದೇವನ್ ಅವರು ಆರಿಸಲ್ಪಟ್ಟಿದ್ದಾರೆ. ಈಗಾಗಲೇ ಇದರ ವತಿಯಿಂದ ದರ್ಮಾರ್ಥ ವಾಚನಾಲಯವೊಂದು ತೆರಯಲ್ಪಟ್ಟಿದೆ.

ಮುನಿಸಿಪಲ್ ಆಡಳಿತದ ಮೇಲೆ ಸರಕಾರಿ ವಿಮರ್ಶೆ . ಮದ್ರಾಸು ಸರಕಾರವು ಉಡುಪಿ ಮುನಿಸಿಪಾಲಿಟಿಯ 1951 52 ನೆ ವರ್ಷದ ಆಡಳಿತ ವರದಿಯನ್ನು ವಿಮರ್ಶಿಸಿ ತೆರಿಗೆ ವಸೂಲಿ ಕೆಲಸವು ಸಮರ್ಪಕವಾಗಿ ಆಗಿಲ್ಲವೆಂದೂ ಚಾಲ್ತಿ ವರುಷದಲ್ಲಿ ಹೊರಬಾಕಿ ತೆರಿಗೆ ಐವೇಜನ್ನು ಪೂರ್ಣ ವಸೂಲು ಮಾಡಬೇಕೆಂದೂ ಸೂಚಿಸಿಯದೆ. ಆಡಳಿತದ ಸರ್ವಸಾಮಾನ್ಯ ಸ್ಥಿತಿಯು 'Fair' ಎನ್ನಲಾಗಿದೆ. ವರದಿ ವರುಷದಲ್ಲಿ ಮೆಂಬರರು ಸಭೆಗಳಿಗೆ ಬಂದ ಸರಾಸರಿ ಹಾಜರಿಯು ಹಿಂದಿನ ವರುಷಕ್ಕಿಂತ ಕಡಿಮೆಯಾದುದರಿಂದ ಮುಂದಕ್ಕೆ ಮೆಂಬರರು ಹೆಚ್ಚಿನ ಸಭೆಗಳಿಗೆ ಬಂದು ನಗರಾಡಳಿತ ವಿಚಾರದಲ್ಲಿ ಜಾಸ್ತಿ ನಿಗಾ ಕೊಡಬೇಕಾಗಿದೆ. ಮುನಿಸಿಪಲ್ ಎಲಿಮೆಂಟರಿ ಶಾಲೆಗಳಲ್ಲಿಯ ಮಕ್ಕಳ ಸಂಖ್ಯೆಯು ವರದಿ ವರುಷದಲ್ಲಿ ಏರಿದ್ದರೂ, ಮಕ್ಕಳು ಶಾಲೆಗೆ ಹಾಜರಾದ ಸರಾಸರಿ ಸಂಖ್ಯೆಯು ಕೆಳಮೊಗವಾಗಿದೆ. ಮುನಿಸಿಪಲ್ ಕ್ಷೇತ್ರದ ಹೆಚ್ಚಿನ ಮನೆಗಳು ಪಾಯಿಖಾನೆಗಳನ್ನು ಕಟ್ಟಿಕೊಳ್ಳುವಂತೆ ಮದ್ರಾಸ್ ಪಬ್ಲಿಕ್ ಹೆಲ್ತ್ ಆಕ್ಟನ್ನು ಕಠಿಣವಾಗಿಯಾದರೂ ಕಾರ್ಯರೂಪಕ್ಕೆ ತಂದುಕೊಂಡು ಆ ಕಾರ್ಯವು ಪ್ರಗತಿಪಥದಲ್ಲಿ ಮುನ್ನಡೆಯಬೇಕಾಗಿದೆ.

ಡೈರೆಕ್ಟರ್ ಒಫ್ ಪೋಸ್ಟಲ್ ಸರ್ವಿಸಸ್ .ಮದ್ರಾಸಿನ ಡ್ಯಾರೆಕ್ಟರ್ ಒಫ್ ಪೋಸ್ಟಲ್ ಸರ್ವಿಸಸ ಮೇಜರ್ ಎಚ್ ಕೆ. ರಾಮರು ತಾ 18ರಲ್ಲಿ ಉಡುಪಿ ಹೆಡ್ ಪೋಸ್ಟಾಫೀಸನ್ನೂ ಮಲ್ಪೆ ಸಬ್ ಆಫೀಸನ್ನೂ ಸಂದರ್ಶಿಸಿದರು.

ಕೋರ್ಟು ಧಾನ್ಯ ಗೇಣಿ ಸಂದಾಯದ ಬಗ್ಗೆ ಡಿ] ಮು.] ಕೋರ್ಟಿನಿಂದ ಪ್ರಸಿದ್ಧ ಪಡಿಸಲಾದ ದರಗಳ ವಿವರ:- ಕಜೆ (ಮುಡಿಗೆ] ರೂ 20-0-0, ತೊಳಸಲು ರೂ 20-8-0; ಮಸ್ಕತಿ ರೂ 21-8 0, ಒಂದನೆ ತರಗತಿ ಬೆ

IN THE HIGH COURT OF JUDICATURE
AT MADRAS.

Ordinary Original Civil Jurisdiction
O P No 73 of 1953
In the matter of the Indian Companies Act 1913
and
In the matter of the Agricultural & Industrial Bank Limited
Coondapoor

The Agricultural & Industrial Bank Limited,
Coondapoor— Petitioner

Notice is hereby given that a petition under Sections 162 and 166 of the Indian Companies Act, 1913 for winding up the Agricultural & Industrial Bank Limited was presented by the petitioner on the 18th day of February 1953 and the said petition is directed to be heard before the Judge sitting in Chambers on the 30th day of March 1953. Any person desirous of supporting or opposing the making of an order as prayed in the petition should appear at the time of hearing by himself or by his Advocate, and a copy of the petition will be furnished to any person requiring the same by the undersigned on payment of the regulated charge for the same

1-A, Dr Thomas Road,
T Nagar, Madras 17
22nd February, 1953
(Signed) **A Narayana Pai,**
Advocate for Petitioner

NOTE Any person who intends to appear on the hearing of the said petition must serve on or send by post to the abovenamed notice of his intention so to do The notice must state the name and address of the person or if a firm the name and address of the firm and must be signed by the person or firm or his or their advocate and must be served or if posted must be sent by post so as to reach the abovenamed not later than 3 o'clock in the afternoon of 29—3—1953

ಡೇನಿಯಲ್ ಮಲಾನರು ದಕ್ಷಿಣ ಅಫ್ರಿಕದಲ್ಲಿನ ವರ್ಣಭೇದ ಚಳುವಳಿಯನ್ನು ಉಗ್ರ ರೀತಿಯಿಂದ ಹತ್ತಿಕ್ಕ ಬಯಸಿ ಶಾಸನ ಸಭೆಯಲ್ಲಿ ತಂದಿರುವ ಸಾರ್ವಜನಿಕ ಸುರಕ್ಷಿತಾ ಕಾನೂನು ಮತ್ತು ಕ್ರಿಮಿನಲ್ ಕೋಡ್ ತಿದ್ದುಪಡಿ ಮಸೂದೆಗಳು ಅತ್ಯಂತ ಕರಾಳವೆನಿಸಿದ ಶಾಸನ

ಕ್ಕಿಗೆ ರೂ 25-0-0; ಎರಡನೆ ತರಗತಿ ಬೆಳ್ತಿಗೆ ರೂ 14-0-0; ಉದ್ದು ರೂ 24-0-0; ತೆಂಗಿನಕಾಯಿ 100ಕ್ಕೆ ರೂ 18-0-0, ತೆಂಗಿನೆಣ್ಣೆ ಮಣಕ್ಕೆ ರೂ 30-0-0; ಬೈಹುಲ್ಲು 100ಕ್ಕೆ ಕಡಿಗೆರೂ 32-0-0, ಹಸ್ರುವಾಣಿ ಹೊರೆಗೆ ರೂ 1-0-0, ಕೋಳಿ ರೂ 1-0-0

ಶಾಲಾ ವರ್ಧಂತಿ - ಕಡಿಯಾಳಿ ಹಾ। ಪ್ರಾ। ಶಾಲೆಯ ವರ್ಧಂತಿ ಸಮಾರಂಭವು ತಾ 21ರಲ್ಲು ಸಂಜೆ ಶಾಲಾ ಡೆಪ್ಯೂಟಿ ಇನ್ಸ್‌ಪೆಕ್ಟರ್ ಶ್ರೀ ಪಿ. ಚಂದ್ರಶೇಖರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯ ಶ್ರೀ ವಿ. ಶ್ರೀನಿವಾಸ ಭಟ್ಟರು ಶಾಲಾ ವರದಿವಾಚನ ಮಾಡಿದರು. ಶ್ರೀ ಪಿ. ಹರಿದಾಸ ತಂತ್ರಿಗಳು ಶಾಲಾ ಶ್ರೇಯಃ ಪ್ರಾರ್ಥನೆ ಮಾಡಿದರು. ಬಹುಮಾನ ವಿತರಣೆ, ಅಧ್ಯಕ್ಷ ಭಾಷಣ ವಿನೋದಾವಳಿಗಳಿಂದ ಸಭಾಂತ್ಯವಾಯಿತು.

ತಾ 22ರಲ್ಲು ಈ ಶಾಲೆಯ ಮತ್ತು ಗುಂಡಿಬೈಲು ಎಲಿಮೆಂಟರಿ ಶಾಲಾ ವ್ಯವಸ್ಥಾಪಕರಾದ ಶ್ರೀ ಪಿ. ನಾರ್ಣಪ್ಪಯ್ಯನವರು ಅಧ್ಯಾಪಕ ವೃತ್ತಿಯಿಂದ ನಿವೃತ್ತರಾಗ ಪಕಾರಣ ಅವರಿಗೆ ವಿದಾಯ ಸತ್ಕಾರವೂ ಮಾನಪತ್ರ ಸಮರ್ಪಣೆ ಸಮಾರಂಭವೂ ಡಾ। ಪಿ. ರಾಘವೇಂದ್ರ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು ತಾ 23ರಲ್ಲು ಕಡಿಯಾಳಿ ಶಾಲೆಯ ಹಳೆ ವಿದ್ಯಾರ್ಥಿ ಸಂಘದ ಹುಟ್ಟು ಹಬ್ಬವು ಡಾ। ಕೆ. ಮೋಹನದಾಸ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು.

ಬೈಲೂರು — (ನಂಬ್ರ 76 ಬಡಗಬೆಟ್ಟು) ಪಂಚಾಯತ ಬೋರ್ಡು ಚುನಾವಣೆಯು ತಾ 25ರಲ್ಲಿ ನಡೆದು ಉತ್ಸಾಹಿಗಳೂ ಜನಪ್ರಿಯರೂ ಶ್ರೀ ಬಿ. ಕಾಳಪ್ಪ ಶೆಟ್ಟರು ಅವಿರೋಧವಾಗಿ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ

ಪ್ರಕಟಣೆ

ಉಡುಪಿ ತಾಲೂಕು ಶಿವಳ್ಳಿ ಗ್ರಾಮದ ಕುಂಜಿಬೆಟ್ಟಿನಲ್ಲಿರುವ ಆಗಸರ ಜಾತಿ ವ್ಯಕ್ತಿ ಹೆಂಗ್ಸಿನ ಮಗಳು ಚೀಂಕರು ಈ ಮೂಲಕ ಸರ್ವರಿಗೂ ತಿಳಿಯಪಡಿಸುವುದೇನೆಂದ್ರೆ-

ನನ್ನ ಮಗ ಲೋಕಯ್ಯ ಮಡಿವಾಳನು ಉಡುಪಿ ತಾಲೂಕು ಶಿವಳ್ಳಿ ಗ್ರಾಮದ ಕುಂಜಿಬೆಟ್ಟಿನಲ್ಲಿರುವ ನನ್ನ ಅಕ್ಕನ ಸ್ವಂತ ಆಸ್ತಿಯ ಕೆಲವು ಅಂಶಗಳನ್ನು ಸ್ವಾಧೀನಪಡಿಸಿಕೊಳ್ಳುವಂತೆ ಏಕ ಹೇಳಿ, ನೊದಲೇ ಬರ್ಸಿ ತಯಾರಿಸಿದ ಕಾಗದಗಳ ಮೇಲೆ ನನ್ನ ಎಡಗೈ ಹೆಬ್ಬೆಟ್ಟು ಪಡ್ದು, ಸದ್ರಿ ನನ್ನ ಎಡಗೈ ಹೆಬ್ಬೆಟ್ಟುಗಳ ಆಧಾರದಿಂದ ಬಿನಾಮೆ ರಿಕಾರ್ಡುಗಳನ್ನು ಬರ್ಸಿ, ಉಡುಪಿ ತಾಲೂಕು, ಶಿವಳ್ಳಿ ಗ್ರಾಮದ ಕುಂಜಿ ಬೆಟ್ಟು ಗ್ರಾಮ ಮತ್ತು ನಂಬ್ರ 76ನೇ ಬಡಗು ಬೆಟ್ಟು ಗ್ರಾಮಗಳಲ್ಲಿರುವ ನನ್ನ ಸ್ವಂತ ಹಕ್ಕಿನ ಸ್ಥಿರಾಸ್ತಿಗಳನ್ನು ತನ್ನ ಹೆಸರಿಗೆ ಧರ್ಮ ಸಾಧನ ಮಾಡಿ ಕೊಂಡಿರುತ್ತಾನೆಂದು ನನ್ನ ತಿಳುವಳಿಕೆಗೆ ಬಂದಿರುತ್ತದೆ, ಹೀಗೆ ನನ್ನನ್ನು ವಂಚಿಸಿ ಪಡೆದ ನನ್ನ ಹೆಬ್ಬೆಟ್ಟಿನ ಆಧಾರದಿಂದ ಬರ್ಸಿಕೊಂಡ ಧರ್ಮಸಾಧನವು, ಸಿಂಧುವಾಗತಕ್ಕದ್ದಲ್ಲ, ಸದ್ರಿ ಬಿನಾಮೆ ದರ್ಮ ಸಾಧನದಲ್ಲಿ ತೋರುವ ಆಸ್ತಿಗಳ ಮೇಲೆ ಯಾರೂ ಲೋಕಯ್ಯ ಮಡಿವಾಳನಿಗೆ ಸಾಲಕೊಡ ಕೂಡದು ಅಲ್ಲದೆ ಸದ್ರಿ ಆಸ್ತಿಗಳನ್ನು ಯಾರೂ ಕ್ರಯಕ್ಕೆ ಪಡಕೊಳ್ಳ ತಕ್ಕದ್ದಲ್ಲ ಮೇಲೆ ಕಾಣಿಸಿದ ಸ್ಥಿರಾಸ್ತಿಗಳು ನನ್ನ ಜೀವ ಮಾನದ ವರೆಗೆ ನನ್ನ ಹಕ್ಕಿನದಾಗಿ ಉಳಿಯುವುದು ಎಂತ ಈ ಮೂಲಕ ಜಾಹೀರು ಮಾಡುತ್ತೇನೆ

● ಈ ಎಡಗೈ ಹೆಬ್ಬೆಟ್ಟಿನ ಗುರುತು ಚೀಂಕರು ಹೆಂಗಸಿನ ಗುರುತು,

ಉಡುಪಿ, ತಾ 23-2-53

ಮಲಾನ ಸರಕಾರದ ಕರಾಳ ಶಾಸನಗಳು

ರತಿಯಾವು ಭಾರತದ ಮೇಲೆ ಮರಳಿ ಬಲೆ ಬೀಸಿದೆಯೇ?

ಗಳೇ ನಿಜ. ಸ್ವಾಭಾವಿಕವಾಗಿ ಇವುಗಳನ್ನು ಆಫ್ರಿಕನ್ ಹಾಗೂ ಭಾರತೀಯ ನಿವಾಸಿಗಳು ಪ್ರತಿಭಟಿಸಿರುವರು. ಜೊಹಾನ್ಸಬರ್ಗದಲ್ಲಿ ಸೇರಿದ ಸಭೆಯೊಂದರಲ್ಲಿ ಸರಕಾರದ ದಬ್ಬಾಳಿಕೆಯ ಪ್ರವೃತ್ತಿಯನ್ನು ಸಾರ್ವತ್ರಿಕ ಮುಷ್ಕರದ ರೂಪದಲ್ಲಿ ನಿಷೇಧಿಸಬೇಕೆಂದು ನಿರ್ಣಯವನ್ನು ಮಾಡಿರುವರು. ಮಲಾನರ ಉಗ್ರಶಾಸನಗಳಿಂದ ಸಾತ್ವಿಕ ಮನೋಭಾವದ ಬಿಳಿಯರು ಕೂಡ ಅಂಜರುವರು ಚರ್ಚ ಅಧಿಕಾರಿಗಳು ಇಂಥ ಶಾಸನದ ಅಗತ್ಯವನ್ನು ಪ್ರಶ್ನಿಸಿ ಪ್ರಕಟಣೆ ಹೊರಡಿಸಿರುವರಲ್ಲದೆ— ಈ ರೀತಿಯ ಕಾಯಿದೆಗಳಿಂದ ಚಳವಳವನ್ನು ಒಗ್ಗುಬಡೆಯುವುದು ಸರಕಾರಕ್ಕೆ ಸರ್ವಥಾ ಭೂಷಣವಲ್ಲ ಎಂಬ ಅಭಿಪ್ರಾಯಕ್ಕೆ ಪುಷ್ಟಿಯನ್ನು ನೀಡಿರುವರು. ಈ ಕಾಯಿದೆಗಳಿಂದಾಗಿ ಸಾರ್ವಜನಿಕ ಸುರಕ್ಷತೆಗೆ ಗಂಡಾಂತರವಿದೆಯೆಂದು ಯಾವಾಗ ಬೇಕೆಂದರಾಗ ಸರಕಾರ ಸಾರಲಡ್ಡಿಯಿಲ್ಲ, ಮತ್ತು ಸರಕಾರದ ಯಾವುದೇ ಕಾನೂನಿನ ವಿರುದ್ಧವಾದರೂ ಯಾರೇ ಆಗಲಿ, ಯಾವ ಭಾಷೆಯಲ್ಲಿಯೇ ಆಗಲಿ, ಎಲ್ಲಿಯೇ ಆಗಲಿ—ಘಟಿ ಪಿಟಕ್ಕೆನ್ನುವಂತಿಲ್ಲ ಈ ನಿರ್ಬಂಧವನ್ನು ಉಲ್ಲಂಘಿಸಿದವರಿಗೆ ದಂಡ, ಕಾರಾವಾಸ ಮತ್ತು ಚಮ್ಮಟಿಕೆಯ ಏಟು-ಈ ಮಾದರಿಯ ಶಿಕ್ಷೆ ಕಾದಿದೆ. ಸ್ವತಃ ಬಿಳಿಯರಿಗೇ ಈ ಕಾಯಿದೆ ಕ್ಷೇಮ ತರುವುದೆಂದು ಊಹಿಸುವಂತಿಲ್ಲ! ಆದರೂ ಚುನಾವಣೆಗಳು ಮುಂದಿರುವಾಗ—ಮತ್ತು ಬಿಳಿಯರಿಗೆ ಮಾತ್ರ ಮತಾಧಿಕಾರವಿರುವಾಗ, ಬಿಳಿಯರಿಗ ಕರಿಜನರಿಂದ ರಕ್ಷಣೆ ಇದೆ ಎಂಬುದನ್ನು ತೋರಿಸಿಕೊಡುವ ನೆಪದಲ್ಲಿ ಸರಕಾರ ಈತೆರನಾದ ಹಂಚಿಕೆ ಹೂಡಿದೆ

ಬಿಳಿಯರ ಜಂಬೂ ಸವಾರಿ

ದಕ್ಷಿಣ ಆಫ್ರಿಕಕ್ಕೆ ಒತ್ತಿಕೊಳ್ಳಿರುವ ಇತರ ಬ್ರಿಟಿಷ ವಸಾಹತು ಪ್ರದೇಶಗಳ ಸ್ಥಿತಿಯಾದರೂ ಕರಿ ಜನರಿಗೆ ಅನುಕೂಲವಿಲ್ಲ ಕೆನಿಯಾದಲ್ಲಿ ಜೋಮೋ ಕೆನ್ಯಾಟರಂಥ ಜನವಾದೀ ಧುರೀಣರ ವಿಚಾರಣಾ ಸತ್ರ ನಡೆಯುತ್ತಿದೆ. ಈ ಪ್ರದೇಶದ ಬಹುಭಾಗ ಫಲವತ್ತಾದ ಭೂಮಿಯು ಯುರೋಪಿಯನರಿಗೆ ಸೇರಿದೆ, ಈ ಭೂಮಿಯ ಮೇಲಿನ ಬಯಕೆ ಎಷ್ಟರಮಟ್ಟಿಗೆ ಹಬ್ಬಿದೆಯೆಂದರೆ ಮೂಲನಿವಾಸಿಗಳಿಗೆ ಮೀಸಲಿರಿಸಿದ್ದ ಅಡವಿಯ ಅಂಶಗಳನ್ನು ಆಕ್ರಮಿಸುವುದಕ್ಕೂ ಯುರೋಪಿಯನರು ಹೇಸುವುದಿಲ್ಲ. ಇವರ ವಿರುದ್ಧ ಉಗ್ರ ಪ್ರತಿಭಟನೆಯನ್ನು ಕೊಟ್ಟ ಮಾವ್ ಮಾವ್ ಚಳುವಳಿಗಾರರನ್ನು ಗುಂಡಿಕ್ಕಿ ಬೇಟೆಯಾಡುತ್ತಿರುವರು ಅದೇ ಮಧ್ಯ ಆಫ್ರಿಕದ ಬಗ್ಗೆಯೂ ಲಂಡನಿನಲ್ಲಿ ಒಂದು ನಾಟಕ ನಡೆದಿದೆ. ದಕ್ಷಿಣ ಆಫ್ರಿಕದಂತೆ ಬ್ರಿಟಿಷ ವಸಾಹತು ರಾಜ್ಯವಾದ ದಕ್ಷಿಣ ರೊಡೇಶಿಯವನ್ನು ಬ್ರಿಟಿಷ್ ಸಂರಕ್ಷಿತ ರಾಜ್ಯಗಳಾದ ಉತ್ತರ ರೊಡೇಶಿಯಾ ಮತ್ತು ನ್ಯಾಸಾಲ್ಯಾಂಡಗಳೊಡನೆ ಸೇರಿಸಿ ಸಂಯುಕ್ತ ರಾಜ್ಯವಾಗಿ ಮಾಡುವ ಯೋಜನೆ ಸಿದ್ಧಗೊಂಡಿದೆ ಪರಿಣಾಮವಾಗಿ ಬ್ರಿಟಿಷರು ಕರಿಯರನ್ನು ಕೂಲಿಗರಂತೆ ಉಪಯೋಗಿಸಿಕೊಂಡು ಇಲ್ಲಿಯ ಸಂಪತ್ತನ್ನು ಲೂಟಿಮಾಡಲು ಅನುಕೂಲವೆನಿಸಿದೆ. ಒಬ್ಬ ಬಿಳಿಯನಿಗೆ ಮೂವತ್ತರಂತಿರುವ ನಿಗ್ರೋಗಳು ಲಂಡನ್ ಪರಿಷತ್ತನ್ನು ಬಹಿಷ್ಕರಿಸಿ ಎಲಿಜಬೆಥ್ ರಾಣಿಯ ವರೆಗೆ ದೂರನ್ನು ಒಯ್ದಿರುವರಾದರೂ—ಪರಿಸ್ಥಿತಿ ಅವರಿಗೆ ಲಾಭವಾಗಿ ತಿರುಗಲಿಕ್ಕಿಲ್ಲ. ಏಕೆಂದರೆ ಬ್ರಿಟಿಷ ರಾಷ್ಟ್ರಕೂಟದಿಂದ ಮಲಾನರ ಸರಕಾರ ಇಂದೋ ನಾಳೆಯೋ ಸಂಬಂಧವಿಚ್ಛೇದ ಮಾಡಿಕೊಳ್ಳುವುದು ನಿಶ್ಚಯ. ಕಾರಣ ಆಫ್ರಿಕದ ಬ್ರಿಟಿಷ ಹಿತ ಸಂಬಂಧವನ್ನು ಹಾಗೂ ತಪ್ಪದೆ ಉಳಿಸಿಕೊಂಡು ಕರಿಯರ ಮೇಲೆ ಜಂಬೂಸವಾರಿ ಮಾಡಬೇಕಿದ್ದರೆ ಮಧ್ಯ ಆಫ್ರಿಕದಲ್ಲಿ ಇನ್ನೊಂದು ದಕ್ಷಿಣ ಆಫ್ರಿಕವನ್ನು ಸೃಷ್ಟಿಸುವುದು ಅನಿವಾರ್ಯವೆನಿಸಿದೆ

ಪೂರ್ವ ಪೀಠಿಕೆಯೋ?

ಎರಡು ತಿಂಗಳುಗಳ ವಿರಾಮದ ಬಳಿಕ ಇದೀಗ ಮಂಗಳವಾರದಿನ (ತಾ. ೨೪) ಸಂಯುಕ್ತರಾಷ್ಟ್ರಸಂಘದ ಸಾಮಾನ್ಯಾಧಿವೇಶನ ಮರಳಿ ಸೇರಿದೆ ಈ ಅಧಿವೇಶನದಲ್ಲಿ ಏನೊಂದು ಉತ್ಸಾಹವೂ ತೋರಿಬರುತ್ತಿಲ್ಲ. ಏಕೆಂದರೆ ಜಾಗತಿಕ ಸಮಸ್ಯೆಗಳನ್ನು ಬಿಡಿಸುವುದಕ್ಕೆ ನೆರವಾಗಬಲ್ಲ ರೀತಿಯಲ್ಲಿ ಪರಿಸ್ಥಿತಿ ಊರ್ಜಿತಗೊಂಡಿರುವುದಿಲ್ಲ ಕೊರಿಯಾದ ಚರ್ಚೆಯು ಅಗತ್ಯವಾಗಿ ಆದೀತಾದರೂ ಕಳೆದ ಅಧಿವೇಶನದಲ್ಲಿ ಸಳರಾಷ್ಟ್ರಗಳ ಪ್ರಚಂಡ ಬಹುಮತದಿಂದ ಸ್ವೀಕಾರಗೊಂಡಿದ್ದ ಭಾರತದ ಕೊರಿಯಾ ಸಂಬಂಧದ ಗೊತ್ತುವಳಿ ರಶಿಯಾ ಚೀನಾಗಳಿಂದ ತಿರಸ್ಕೃತಗೊಂಡಿರುವ ಪ್ರಯುಕ್ತ— ಆ ದಿಸೆಯಲ್ಲೇನೂ ಪ್ರಗತಿಯಾಗಲಿಕ್ಕಿಲ್ಲ ಜೊತೆಗೆ ಅಮೇರಿಕದಲ್ಲಿ ಅಧ್ಯಕ್ಷ ಐಸೆನ್ ಹೋವರರ ಈಚಿಗಿನ ನೀತಿ ಯುದ್ಧವನ್ನು ವ್ಯಾಪಕಗೊಳಿಸುವುದಕ್ಕೆ ಉತ್ತೇಜನ ನೀಡಿದಂತಿದೆ ಎಂದು ಎಲ್ಲರ ಅಭಿಪ್ರಾಯ ಭಾರತೀಯ ಸಂಸತ್ತಿನಲ್ಲಿ ರಾಷ್ಟ್ರಾಧ್ಯಕ್ಷರೂ, ಪ್ರಧಾನಿ ನೆಹರೂರವರೂ ಇದೇ ಭೀತಿಯನ್ನು ವ್ಯಕ್ತಗೊಳಿಸಿರುವರು ಆದರೂ ಪ್ರಕೃತದ ಅಧಿವೇಶನ ಸೇರುವುದಕ್ಕೆ ಕೆಲವೇ ದಿನಗಳ ಪೂರ್ವದಲ್ಲಿ ಮಾರ್ಷಲ್ ಸ್ಟಾಲಿನ್ನರು ಇಬ್ಬರು ಭಾರತೀಯ ರಾಯಭಾರಿಗಳಿಗೆ ಸಂದರ್ಶನ ಕೊಟ್ಟುದರಿಂದ—ಎಲ್ಲರ ಕುತೂಹಲ ಕೆರಳಿದೆ ಸ್ಟಾಲಿನ್ನರ ಸಂದರ್ಶನ ಪಡೆದವರಲ್ಲಿ ಒಬ್ಬರು ಮಾಸ್ಕೋದಲ್ಲಿ ಭಾರತದ ರಾಯಭಾರಿಯಾದ ಶ್ರೀ ಕೆ ಪಿ ಎಸ್ ಮೆನನ್ನರು, ಇನ್ನೊಬ್ಬರು ಸ್ಟಾಲಿನ್ ಶಾಂತಿ ಪಾರಿತೋಷಕವನ್ನು ಪಡೆದ ಡಾ। ಕಿಚಲೂ. ಕಳೆದ ಬಾರಿ ಡಾ। ರಾಧಾಕೃಷ್ಣನ್ನರಿಗ ಭೇಟಿಕೊಟ್ಟಾಗ ಜಗತ್ತಿನ ಎಲ್ಲ ಕಡೆಯಿಂದಲೂ ಊಹಾಪೋಹಗಳೆದ್ದಿದ್ದುವು. ಪರಿಣಾಮವಾಗಿ ಭಾರತ ಕೊರಿಯಾದ ಶಾಂತಿಸೂಚನೆಯನ್ನು ತಂದಿತೆಂದರೂ ಸಲ್ಲುವುದು. ಈ ಬಾರಿ ಕೂಡ ಇಂದೇ ಏನಾದರೊಂದು ಉಪಕ್ರಮವನ್ನು ಕೈಗೊಳ್ಳುವುದಕ್ಕೆ ಪೂರ್ವಪೀಠಿಕೆ ಇದಾಗಿರಬಹುದೆಂದು ಹೇಳುತ್ತಿರುವರಾದರೂ—ಭಾರತವು ರಶಿಯಾದ ಸಮಿಮಾತಿಗ ಬಲಿಬೀಳದ ರೀತಿ ಮೊದಲೇ ವಿಶಿಂಸ್ಕಿಯವರಿಂದ ಮಾನಭಂಗಹೊಂದಿದೆ ಎಂಬುದನ್ನು ಸ್ಮರಿಸುವುದೊಳಿತು.

ಶ್ರೀ ದ. ಕೃ. ಭಾರದ್ವಾಜರ ನಿಧನ



ಇತ್ತೀಚೆಗೆ ಕೆಲಸಮಯದಿಂದ ಅಸ್ವಸ್ಥರಾಗಿದ್ದ ಸುಪ್ರಸಿದ್ಧ ಗ್ರಂಥಕರ್ತರೂ ಆಯುರ್ವೇದ ಶಾಸ್ತ್ರ ನಿಪುಣರೂ ಆದ ಶ್ರೀ ದ. ಕೃ. ಭಾರದ್ವಾಜರು ಬಂಗಳೂರಲ್ಲಿ ತಾ 22 ರಲ್ಲಿ ತಮ್ಮ 61ನೇ ವರ್ಷದಲ್ಲಿ ನಿಧನರಾದುದು ವಿಷಾದಕರವಿದೆ. ಶ್ರೀಯುತರು ಕುಂಟಗೋಳದಲ್ಲಿ ಜನ್ಮವೆತ್ತಿ ಕನ್ನಡದಲ್ಲಿ ರಾಜಕೀಯ ಜೀವನವನ್ನು ಆರಂಭಿಸಿ, ಕಾಂಗ್ರೆಸ್ ಚಳವಳದಲ್ಲಿ ಧುಮುಕಿ ಕಾರಾಗೃಹ ವಾಸವನ್ನು ಅನುಭವಿಸಿದ್ದರು ಮಂಗಳೂರು ತಿಲಕ ವಿದ್ಯಾಲಯದ ಪ್ರಾಧ್ಯಾಪಕರಾಗಿ ಮಡಿದಿದ್ದರು. ಅನಂತರ ಪಂಡಿತ ಆ ರಾಮಾಧರ ಶಿಷ್ಯರಾಗಿ ಬೆಂಗಳೂರಲ್ಲಿ ವೈದ್ಯಕೀಯ ವೃತ್ತಿಯನ್ನವಲಂಬಿಸಿದ್ದರು ಕಾಂಗ್ರೆಸ್ ಇತಿಹಾಸ, ದಾಂಪತ್ಯ ವಿಜ್ಞಾನ, ಜನನ ನಿಯಂತ್ರಣ ಮೊದಲಾದ ಉತ್ತಮ ಗ್ರಂಥಗಳನ್ನೂ ಇಂಗ್ಲಿಷ್ ಕನ್ನಡ ನಿಘಂಟನ್ನೂ ಬರೆದಿದ್ದಾರೆ ಇವರ ನಿಧನದಿಂದ ನಾಡಿಗೂ ನುಡಿಗೂ ಆಗಿರುವ ಹಾನಿಯು ಅಪಾರವಾಗಿದೆ

ಡೈರೆಕ್ಷನ್. K ರಾಮನಾಥ

"ಏಳೈ ಪಡುಂ ಪಾಡು"

ಭೂಮಿಕೆಯಲ್ಲಿ:— V. ನಾಗಯ್ಯ, T. S. ಬಾಲಯ್ಯ, ಮೊಹ್ಯಿರಾಜ್, ಕಾಳಿ ಎನ್. ರತ್ನಂ, ಲಲಿತ, ಪದ್ಮಿನಿ. ಮೊದಲಾದವರು

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಮಂಗಳೂರು

ಕಳ್ಳಮಾಲು— ಗೋವೆಯಿಂದ ಕಳ್ಳತನದಿಂದ ತರಿಸಿದ ಆರೇಳು ಸಾವಿರ ರೂಪಾಯಿಗಳಿಗೂ ಮಿಕ್ಕಿದ ಬೆಲೆಯ ಕುಟಿಕ್ಯುರಾ ಪೌಡರ್, ಸಿಗರೇಟುಗಳು ಶರಾಬಿನ ಬಾಟ್ಲಿಗಳು ಮತ್ತು ಇತರ ಸಾಮಾನುಗಳನ್ನು ಇಲ್ಲಿನ ಸುಂಕದ ಮತ್ತು ಅಬಕಾರಿಖಾತೆಗಳ ಅಧಿಕಾರಿಗಳು ಇತ್ತೀಚೆಗೆ ಪತ್ತೆ ಹಚ್ಚಿರುವರು.

ಆಹಾರಧಾನ್ಯಗಳ ವಿಚಾರ— ಜಿಲ್ಲೆಯಲ್ಲಿ ಆಹಾರ ಧಾನ್ಯಗಳನ್ನು ವ್ಯಾಪಾರ ಮಾಡುವವರು ಲೈಸೆನ್ಸು ಪಡಕೊಳ್ಳಬೇಕಾಗಿ ಸರಕಾರದವರು ನಿಯಮಿಸಿದ್ದಾರೆ. ಎಲ್ಲಾ ರೀತಿಯ ವ್ಯಾಪಾರಗಾರರೂ ಈ ಲೈಸೆನ್ಸು ಪಡೆಯಬೇಕು. ಈ ವರ್ಷದ ಮಟ್ಟಿಗೆ ರೂ. 18 ತೆರಬೇಕಾಗುವುದು. ಇನ್ನು ಮುಂದೆ ಪ್ರತಿ ವರ್ಷ ರೂ. 42 ತೆರಬೇಕು. ಲೈಸನ್ಸು ಪಡಕೊಳ್ಳುವ ಕೊನೆಯ ತಾರೀಕು 20. ಆಹಾರೋತ್ಪತ್ತಿ ಮಾಡುವವರಿಗೆ ಈ ಲೈಸೆನ್ಸಿನ ನಿಯಮವನ್ನು ವಿನಾಯತಿಗೊಳಿಸಲಾಗಿದೆ. ಉಪಯೋಗಿಸುವವರು 15 ಮಣಕ್ಕಿಂತ ಹೆಚ್ಚು ದಾಸ್ತಾನು ಮಾಡುವವರು ಆ ಬಗ್ಗೆ ಸರ್ಟಿಫಿಕೇಟು ಪಡೆಯಬೇಕು ಮತ್ತು ಹೊಸ್ಟೆಲುಗಳ್, ಹೊಟೇಲುಗಳು ಇತರ ಸಂಸ್ಥೆಗಳು ಕೂಡಾ ದಾಸ್ತಾನು ಮಾಡಲು ಸರ್ಟಿಫಿಕೇಟು ಪಡೆಯಬೇಕೆಂದು ವ್ಯಾಪಾರಿತೆರಿಗೆಯ ಜಿಲ್ಲಾಧಿಕಾರಿಗಳು ತಿಳಿಸುತ್ತಾರೆ.

ಜಿಲ್ಲಾ ಬಿರುಗಾಳಿ ಸಮಿತಿಯ ಸಭೆಯೊಂದು— ಈಚೆಗೆ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಮಿತಿಯು ಈಗಾಗಲೇ ರೂ. 1500 ಸಂಗ್ರಹಿಸಿರುತ್ತದೆ.

ಮುನ್ಸಿಪಲ್ ಕೌನ್ಸಿಲಿನ ಸಭೆಯು— ತಾ 14ರಲ್ಲಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಮಂಗಳಾದೇವಿ ದೇವಸ್ಥಾನದ ಪಾಂಡೇಶ್ವರ ಓಲ್ಡ್ ಕೆಂಟ್ ರಸ್ತೆಯ ಓಣಿಗೆ ಎರಡು ಬದಿಯಲ್ಲಿ ದೀಪಗಳನ್ನೊದಗಿಸುವುದು, ಈಶ್ವರಾನಂದ ಮಹಿಳಾ ಸೇವಾಶ್ರಮಕ್ಕೆ ರೂ. 500, ಸ್ವಾಮಿ ಶ್ರದ್ಧಾನಂದ ಸೇವಾಶ್ರಮಕ್ಕೆ ರೂ. 250, ಶ್ರೀ ರಾಮಕೃಷ್ಣಾಶ್ರಮಕ್ಕೆ 250, ಭಾರತದ ಸ್ಕೌಟ್ ಸಂಘದ ಜಿಲ್ಲಾ ಶಾಖೆಗೆ ರೂ 100 ಸಹಾಯಧನವಾಗಿ ಕೊಡಬಹುದೆಂದಾಯಿತು. ಆರೋಗ್ಯಖಾತೆಯ ಕೆಳತರಗತಿಯ ಕೆಲಸಗಾರರಿಗೆ ಸಂಬಳದಲ್ಲಿ ಮೂರು ರೂಪಾಯಿ ಬಡ್ತಿಯನ್ನೂ ಮನೆ ಬಾಡಿಗೆ ಬತ್ತೆ ರೂ. 3ನ್ನು ಕೊಡಬೇಕೆಂದು ಈ ಮೊದಲು ಮಾಡಿದ ನಿರ್ಣಯವನ್ನೇ ಸಮರ್ಥಿಸಿ ಸರಕಾರವನ್ನು ಮಂಜೂರಾತಿಗಾಗಿ ಕೇಳಿಕೊಳ್ಳಲಾಯಿತು. ನಂದಿಗುಡ್ಡೆ ರಸ್ತೆಯಿಂದ ಸಿಲ್ವಾ ರಸ್ತೆಯ ತನಕ ವಿದ್ಯುದ್ದೀಪ ಹಾಕುವ ನಿರ್ಣಯವಾಯಿತು.

ಸರಕಾರಿ ಕಾಲೇಜಿಗೆ ವಿದ್ಯಾರ್ಥಿನಿಯರ ಐವತ್ತು ವರ್ಷವಾದ— ಅದರ ಸ್ವರ್ಣೋತ್ಸವವು ತಾ. 15ರಲ್ಲಿ ಶ್ರೀ ಕೆ. ಬಿ. ಅಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಮ್. ಬಿ. ಹಸೀಮಿಯವರು, ಸ್ವಾಗತಿಸಿದರು. ಬಳಿಕ ಬಹುಮಾನ ವಿತರಣೆಯಾಯಿತು. ಅನಂತರ ಕುಮಾರಿ ರೋಹಿಣಿರಾವ್ ಮತ್ತು ಕುಮಾರಿ ಕೆ. ಎಸ್. ಗಿರಿಜಾ ಅವರು ಕಾಲೇಜಿಗೆ ಶುಭವನ್ನು ಕೋರಿ ಮಾತನಾಡಿದರು. ಕುಮಾರಿ ಎ. ನಳಿನಿ ಮತ್ತು ಕುಮಾರಿ ವಿಶಾಲಾಕ್ಷಿ ಮಲ್ಯ ಇವರು ಮೊದಲಿನವರ ಸ್ವಸ್ತಿ ವಾಚನಕ್ಕೆ ಉತ್ತರವಿತ್ತರು. ಸಭಾಧ್ಯಕ್ಷರು ತಮ್ಮ ಭಾಷಣದಲ್ಲಿ ಈ ಕಾಲೇಜು ಶಿಕ್ಷಣ ವಿಚಾರದಲ್ಲಿ ಸಲ್ಲಿಸಿದ ಸೇವೆಯನ್ನು ತಿಳಿಯಪಡಿಸಿದರು. 'ಪುರುಷನ ಸ್ತ್ರೀದರ್ಶನ' ಎಂಬ ವಿಚಾರದ ಮೇಲೆ ಹಸೀಮಿಯವರ ಭಾಷಣವಾದ ಮೇಲೆ ವಂದನೋಕ್ತಿ, ವಿನೋದಾವಳಿಗಳೊಂದಿಗೆ ಸಮಾರಂಭ ಕೊನೆಗೊಂಡಿತು.

ಬೀಳ್ಕೊಡುವ ಸಮಾರಂಭ— ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ವಾರ್ಷಿಕ 'ಮೂನ್ ಲೈಟ್ ಡಿನ್ನರ್' ಮತ್ತು ಹಿರಿಯ ವಿದ್ಯಾರ್ಥಿಗಳನ್ನು ಬೀಳ್ಕೊಡುವ ಸಮಾರಂಭವು ತಾ. 14ರಲ್ಲಿ ವಿಜೃಂಭಣೆಯಿಂದ ಜರಗಿತು. ಅಮೇರಿಕದ ವೈಸ್ ಕೌನ್ಸಲರಾದ ಡಾ| ರಾಲ್ಫ್ ಫ್ರಾಂಸೆಲ್, ರ. ಫಾ. ಇ. ಜೆ. ಜೇಕಬ್ಸ್ ಮತ್ತು ಶ್ರೀ ಪಿ. ಟಿ. ರಾಮನ್ ನಾಯರ್, ಇವರು ಮುಖ್ಯ ಅತಿಥಿಗಳಾಗಿದ್ದರು. ಭವನದ ಸುಪರಿಂಟೆಂಡರಾದ ಶ್ರೀ ಬಿ. ಬಿ. ಸೆಟ್ಟಿ ಸ್ವಾಗತ ಭಾಷಣವನ್ನಿತ್ತ ನಂತರ ಶ್ರೀ ದಯಾನಂದ ಸೆಟ್ಟರು ಸ್ವಸ್ತಿ ವಾಚನವನ್ನು ಮಾಡಿದರು. ಶ್ರೀ ಶಿವಪ್ಪ ಹೆಗ್ಡೆಯವರು, ಉತ್ತರವಿತ್ತ ನಂತರ ಭವನದ ಜತೆ ಮ್ಯಾನೇಜರರಾದ ಎ ಜಗನ್ನಾಥ ಸೆಟ್ಟರು ಧನ್ಯವಾದಗಳನ್ನು ಅರ್ಪಿಸಿದರು.

ವಾರ್ಷಿಕ ಮಹಾಸಭೆ— ಸೈಂಟ್ ಎಲೋಸಿಯಸ್ ಕಾಲೇಜಿನ ಸಮಾಜ ಸೇವಾ ಸಂಘದ ವಾರ್ಷಿಕ ಮಹಾಸಭೆಯು ತಾ 16ರಲ್ಲಿ ಸಂಜೆ ಸಮಾಜ ವಿಕಾಸ ಯೋಜನೆಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಟಿ ಎಸ್ ರಾಮಚಂದ್ರನ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಟಿ. ಶ್ರೀನಿವಾಸ ಪೈಗಳ ಸ್ವಾಗತ ಭಾಷಣ, ಕಾರ್ಯದರ್ಶಿ ಶ್ರೀ ವಿ. ಮಹಾಲಿಂಗೇಶ್ವರ ಭಟ್ಟರ ವರದಿ ವಾಚನಗಳಾದ ನಂತರ ಕಾಲೇಜಿನ ರೆ| ಫಾ| ರೆಕ್ಟರರೂ ಶ್ರೀಗಳಾದ ಬಿ. ವೈಕುಂಠ ಬಾಳಿಗ, ಕೆ. ಎಸ್. ಎನ್. ಅಡಿಗ ಬಿ. ಮಂಜಯ್ಯ ಹೆಗ್ಡೆ, ವಿ. ಆರ್. ಕೃಷ್ಣಸ್ವಾಮಿ ಅಯ್ಯರ್ ಮೊದಲಾದವರು ಸಂಘದ ಕಾರ್ಯಕಲಾಪಗಳನ್ನು ಶ್ಲಾಘಿಸಿ ಮಾತನಾಡಿದರು. ಸೇವಕರಿಗೆ ಪದಕಗಳನ್ನೂ ಪ್ರಶಸ್ತಿಗಳನ್ನೂ ಕೊಟ್ಟಮೇಲೆ ಅಧ್ಯಕ್ಷರ ಭಾಷಣ, ಧನ್ಯವಾದಾರ್ಪಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ವಿಶೇಷ ಸವಲತ್ತಿನಲ್ಲಿ

ಪಂಚಾಯತ ಬೋರ್ಡ ಶಾಲೆ ಮೊದಲಾದವುಗಳ ಲೈಬ್ರೆರಿಗಳಿಗೆ ಉತ್ತಮ ಕನ್ನಡ ಪುಸ್ತಕಗಳನ್ನು ಕೊಡಲಾಗುವುದು. ಕೆಟಲಾಗಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

THE CATHOLIC BANK LTD., Shirva Branch.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ಸದ್ರಿ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲದ ಮೊಬಲಗನ್ನಾಗಲೀ ಯಾ ಆದಕ್ಕಾಗುವ ಈ ತನಕದ ಬಡ್ಡಿಯನ್ನಾಗಲೀ ಕೊಡದೆ ಇರುವುದರಿಂದಲೂ ಅಲ್ಲದೆ ಕ್ರಮಪ್ರಕಾರ ರಿಜೀಸ್ತ್ರಿ ನೋಟೀಸು ಕೊಟ್ಟಲ್ಲಿ ಕೆಲವರು ಪಡಕೊಂಡು ಕೆಲವರು ಊರಿನಲ್ಲಿ ಇಲ್ಲವೆಂತ ವಾಪಾಸು ಬಂದಿದ್ದುದರಿಂದಲೂ, ನಗಗಳನ್ನು ಅವರವರು ಬಿಡಿಸಿಕೊಂಡು ಹೋಗದಿರುವುದರಿಂದಲೂ, ಸದ್ರಿಯವರಿಗೆ ಯಾ ಸದರಿಯವರ ವಾರೀಸುದಾರರಿಗೆ ಈ ಮೂಲಕ ತಿಳಿಸುವುದೇನೆಂದರೆ ಸದ್ರಿಯವರು ಈಡಿಟ್ಟ ನಗಗಳನ್ನು ಬರುವ ತಿಂಗಳ ಮಾರ್ಚ ತಾ. 7ನೇ ಶನಿವಾರ ದಿವಸ ಮಧ್ಯಾಹ್ನ ಗಂಟೆ 12ಕ್ಕೆ ಯಾ ಬ್ಯಾಂಕಿಗೆ ಯುಕ್ತಕಂಡ ಇನ್ನಿತರ ದಿನಗಳಲ್ಲಿ ಪುನಃ ನೋಟೀಸು ಕೊಡದನೇ ಸದ್ರಿ ಬ್ಯಾಂಕಿನ ವರಾಂಡದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವದು.

ತಾರೀಕು	J. L. No.	ಹೆಸರು ಮತ್ತು ವಿಳಾಸ	ಮೊಬಲಗು	ಬಾಕಿ.
5-7-50	26/1106	ಪಾಸು ಸೆಟ್ಟಿ N/o ಚಂದಯ ಸೆಟ್ಟಿ, ಕಂಜನ ಬಿಲಾರು.	120 0 0	90 0 0
4-2-52	28/200	—Do—	41 0 0	
19-8-50	26/1459	ಜೋಸೆಫ್ ಮತಾಯಸ್ S/o ಅಲಾಸ್ಕೀರ್ ಮತಾಯಸ್ ಮೇಲ್ ಮನೆ, ಶಿರ್ವ.	75 0 0	
29-8-50	15/35	ಕೊಲ್ಲು ಸೆಡ್ತಿ D/o ಮೈರೆ ಸೆಡ್ತಿ, ಕಲತ್ತೂರು ಬರೆಬೆಟ್ಟು, ಪಾದೂರು.	40 0 0	33 0 0
8-3-51	27/475	ಲೂವಿಸ್ ಅಂದ್ರಾದ್ S/o ಪಾಸ್ಕಲ್ ಅಂದ್ರಾದೆ, ಕುದ್ರೆಬೆಟ್ಟು, ಸೂಡ.	32 0 0	27 0 0
18-12-50	26/2231	ಯುಸ್. ಅಬ್ದುಲ್ ಕಾದರ್ S/o ಯೂಸುಬ್, ನ್ಯಾರ್ಮ, ಶಿರ್ವ.	75 0 0	
10-5-51	27/843	—Do—	75 0 0	
21-5-51	928	—Do—	30 0 0	
1-12-51	2195	—Do—	42 0 0	
6-6-51	1022	ಜೆರೋಮ್ ಡಿ'ಸೋಜ S/o ನಿಕ್ಲಾಂವ್ ಡಿ'ಸೋಜ, ಶಂಕರಪುರ,	130 0 0	
2-7-51	1143	ಗುರುವ ಪೂಜಾರಿ N/o ಸಿದ್ದು ಪೂಜಾರಿ, ಮಂಗಾಂಡಾಡಿ, ಕುತ್ಯಾರು.	35 0 0	
14-9-51	27/1715	ಕೃಷ್ಣಯ್ಯ S/o ಗೋವಿಂದ ರಾವ್, ಪಳ್ಳಿಗ್ರಾಮ, ಪಳ್ಳಿ.	115 0 0	104 0 0
3-1-52	28/2	ಸೆಲೆಸ್ತೀನ್ ಡಿಸೋಜ W/o ಅಲೆಕ್ಸ್ ಡಿಸೋಜ ಬೆಳ್ಳೆ ಕಿಪ್ಪಂಡ ಕರಿಯ ಮೂಡು ಬೆಳ್ಳೆ.	55 0 0	
19-2-52	299	ಗುಡ್ಡು ಪೂಜಾರಿ N/o ಸಂಕರು ಪೂಜಾರಿ ಪಡುಬೆಳ್ಳೆ ಗರಡಿ, ಮೂಡುಬೆಳ್ಳೆ.	325 0 0	305 0 0
20-2-52	306	ಅಬ್ದುಲ್ ಸತರ್ ಸಾಹೇಬ್ S/o ಅಬ್ಬಾಸ್ ಸಾಹೇಬ್ ನ್ಯಾರ್ಮ ಶಿರ್ವ.	55 0 0	

C. D'Souza
Agent.

ಶಿರ್ವ, ತಾ. 23—2—1953.

(೫ನೇ ಪುಟದಿಂದ)

ಕೆಲಸಗಳಿಗೆ ಬೇಕಿದ್ದುದಕ್ಕಿಂತ ಕಡಿಮೆ ವೆಚ್ಚವನ್ನು ಅಂದಾಜು ಮಾಡಿ ಪೂರಕ ಬೇಡಿಕೆಯನ್ನು ಮುಂದಿಡುವುದೂ, ಇನ್ನು ಕೆಲವು ಕೆಲಸಗಳಿಗಾಗಿ ಮೀಸಲಿರಿಸಿದ ಹಣವನ್ನು ಉಪಯೋಗಿಸದೆ ಇರುವುದೂ ತನ್ಮೂಲಕ ಮುಂಗಡ ಪತ್ರದ ಅಂದಾಜನ್ನೆ ಬುಡ ಮೇಲು ಮಾಡುವುದೂ ಕಂಡು ಬಂದಿದೆ ಎಂದು ಸಮಿತಿಯ ವರದಿ ಹೇಳುತ್ತದೆ.

ತೂಕ ತಪ್ಪಿದ ಅಂದಾಜು

ಸ್ಪಷ್ಟವಾದ ಪೂರ್ವ ಕಲ್ಪನೆ ಮತ್ತು ಆಯುವ್ಯಯಗಳ ಸಮಂಜಸವಾದ ಹೊಂದಾಣಿಕೆಯನ್ನು ಇಟ್ಟು ಕೊಳ್ಳದೆ ಒಟ್ಟಾರೆ ಕೆಲಸಗಳನ್ನು ನಡೆಸುವುದರಿಂದ ಈ ರೀತಿ ತಪ್ಪುಗಳು ಸಂಭವಿಸುತ್ತವೆ. ಹಣಕಾಸಿನ ಮಟ್ಟಿಗೆ ಸರಕಾರವು ಲೋಕಸಭೆಗೆ ಹೊಣೆಗಾರವಿದೆ ಎಂಬ ಸಂಗತಿಯನ್ನು ಸರಕಾರದ ಕಾರ್ಯಾಂಗ ದುರ್ಲಕ್ಷಿಸಿದ್ದು ಮಹಾಪರಾಧ. ಜಪಾನಿನಿಂದ ಪಡೆದುಕೊಂಡ ಬಟ್ಟೆಯ ಸಂಬಂಧದ ಪ್ರಕರಣವೊಂದನ್ನು ಸಮಿತಿಯು ಉಲ್ಲೇಖಿಸಿ ಈ ವ್ಯವಹಾರದಿಂದ ಸರಕಾರದ ಬೊಕ್ಕಸಕ್ಕೆ ೩೦ ಲಕ್ಷ ರುಪಾಯಿಗಳ ನಷ್ಟವುಂಟಾಯಿತೆಂದು ಹೇಳಿದೆ. ಇದಕ್ಕೆ ಸಂಬಂಧಿಸಿದ ಎಲ್ಲ ಹೊಣೆಗಾರಿಕೆಯನ್ನೂ ಕಾರ್ಯಾಂಗದ ಸದಸ್ಯರೇ ಹೆಚ್ಚೇನೆಂದರೆ ಡಿಪ್ಯೂಟಿ ಸೆಕ್ರೆಟರಿ ಮಟ್ಟದ ಅಧಿಕಾರಿ ತೆಗೆದು ಕೊಂಡದ್ದಾಗಿಯೂ ಮಂತ್ರಿಗಳ ಕಿವಿಗೆ ಈ ಸಂಗತಿಯೇ ಬಿದ್ದಿರಲಿಕ್ಕಿಲ್ಲವೆಂದೂ ಸಮಿತಿ ಹೇಳಿದೆ. ಆಡಳಿತದಲ್ಲಿ ವಿಕೇಂದ್ರೀಕರಣ ಇರಬೇಕೆನ್ನುವುದು ನಿಜವಾದರೂ ಅದರ ಅರ್ಥ ಆಡಳಿತದ ಬಿಗಿ ತಪ್ಪಿ ಶೈಥಿಲ್ಯಕ್ಕೆ ಅವಕಾಶ ಕೊಡುವುದಲ್ಲ. ಕಾರ್ಯಾಂಗಗಳು ಹೊಣೆಗೇಡಿತನದಿಂದ ನಡೆದುಕೊಂಡಾಗಲೆಲ್ಲ ಅದಕ್ಕೆ ಸಂಬಂಧಿಸಿದ ಅಧಿಕಾರಿಗಳಿಗೆ ಯೋಗ್ಯ ದಂಡನೆಯನ್ನು ಕೊಟ್ಟು ಸರಿದಾರಿಗೆ ತರಲೆತ್ನಿಸಬೇಕು. ಕಡಿಮೆ ಎಂದರೆ ಸಾರ್ವಜನಿಕರ ಹಣದ ಮಟ್ಟಿಗೆ ಗೌರವ ಭಾವವನ್ನಾದರೂ ಅಧಿಕಾರೀವರ್ಗ ತಳೆಯುವಂತಾಗಬೇಕು. ಇದೇ ಸಂಗತಿ ಮುಂಗಡ ಪತ್ರವನ್ನು ಮಂಡಿಸುವ ಮಂತ್ರಿಗಳಿಗೂ ಅನ್ವಯಿಸುತ್ತದೆ. ಆಯುವ್ಯಯಗಳ ಅಂದಾಜು ತೂಕ ತಪ್ಪಿದ ನಿದರ್ಶನಗಳೇ ಈಚೆಗೆ ಪ್ರತಿಯೊಂದೂ ಕಡೆ ಕಂಡು ಬರುತ್ತದೆ. ದೂರ ದರ್ಶಿತ್ವದ ಅಭಾವದಿಂದಲೇ ಹೀಗಾಗುತ್ತಿದೆ ಎನ್ನೋಣವೇ

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ಸ್ನಾನ, ಊಟ, ಉಪಹಾರ, ಪೈಶರ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಿಸು, ಇವುಗಳ ರುಚಿರುಚಿ ಹೇಳಬೇಕೆ

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ



ಯೆಳಚಿತ— ತಾ. 15-2-53ರಲ್ಲು ಪ್ರಾಂತ್ಯದ ಕೃಷಿ ಮಂತ್ರಿಗಳಾದ ಡಾ। ನಾಗಣ್ಣ ಗೌಡರು ಆಗಮಿಸಿದ್ದರು. ಪುರಜನರು ಮಂತ್ರಿಗಳನ್ನು ಸಂಭ್ರಮದ ಸ್ವಾಗತವನ್ನಿತ್ತರು. ಶ್ರೀ ವ್ಯಾ. ನರಸಿಂಹ ಶ್ಯಾನುಭಾಗರು ಮಂತ್ರಿಗಳಿಗೆ ಪುಷ್ಪಹಾರವನ್ನು ಅರ್ಪಿಸಿದ ಬಳಿಕ ಮಾನಪತ್ರವನ್ನು ಓದಿ ಹೇಳಿದರು. ಮಂತ್ರಿಗಳು ಮಾನಪತ್ರಗಳಲ್ಲಿನ ಹೆಚ್ಚಿನ ವಿಷಯಗಳಿಗೆ ಗಮನಕೊಡುವೆನೆಂದು ಆಶ್ವಾಸನೆಯನ್ನಿತ್ತರು-ಲಘು ಉಪಾಹಾರದೊಂದಿಗೆ ಸಭೆಯು ಮುಕ್ತಾಯವಾಯಿತು.

ಹೆಜಮಾಡಿ ಕೋಡಿ- ಮೂಲ್ಕಿ— ಸ್ಥಳೀಯ ಗವರ್ನಮೆಂಟ್ ಫಿಷರಿಸ್ ಹಾಯರ್ ಎಲಿಮೆಂಟರಿ ಶಾಲೆಯ ಹೊಸ ಕಟ್ಟಡದ ಉದ್ಘಾಟನಾ ಸಮಾರಂಭವು ತಾ 16ರಲ್ಲು ಸಮಾಜ ವಿಕಾಸ ಯೋಜನೆಯ ಮದ್ರಾಸಿನ ಡೈರೆಕ್ಟರಾದ ಶ್ರೀ ಟಿ. ಎಸ್. ರಾಮಚಂದ್ರನ್, ಐ. ಸಿ. ಎಸ್. ಇವರ ದಿವ್ಯ ಹಸ್ತದಿಂದ ಜರಗಿತು. ಅಧ್ಯಕ್ಷರು ಶಾಲಾ ಮಕ್ಕಳಿಂದ ಪ್ರದರ್ಶಿಸಲ್ಪಟ್ಟ ಹಾರಿಜಗ್ಗದ ಕೈಗಾರಿಕೆ, ದೋಣಿ ಓಟ ಹಾಗೂ ಈಜಾಟದ ಸ್ಪರ್ಧೆಗಳನ್ನು ನೋಡಿದರು. ಊರ ಯುವಕರು ವ್ಯಾಯಾಮ ಪ್ರದರ್ಶನವನ್ನು ಏರ್ಪಡಿಸಿದ್ದರು. ಶಾಲಾ ಕಟ್ಟೋಣ ಸಮಿತಿಯವರು ಶಾಲೆಗೆ ೨೦೦ ಮಕ್ಕಳಿಗೆ ಬೇಕಾಗುವ ಕಟ್ಟಡವನ್ನು ಕಟ್ಟುವರೆ ಸಮಾಜ ವಿಕಾಸ ಯೋಜನೆಯ ನೆರವನ್ನು ಕೋರಿ ಒಂದು ಮನವಿಯನ್ನು ಸಮರ್ಪಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ತಮ್ಮಿಂದ ಆಗುವ ಪ್ರಯತ್ನವನ್ನು ಮಾಡಿ ಸರಕಾರದ ಸಹಾಯವನ್ನು ಶಾಲಾ ಕಟ್ಟೋಣ ಸಮಿತಿಗೆ ದೊರಕಿಸುವ ಆಶ್ವಾಸನೆಯಿತ್ತರು ಅದೇ ದಿನ ಸಂಜೆ ಮಂಗಳೂರಿನ ಫಿಷರೀಸ್ ಇನ್ಸ್ಪೆಕ್ಟರಾದ ಶ್ರೀ. ಕೆ ನೂಮಪ್ಪ ಇವರ ಅಧ್ಯಕ್ಷತೆಯಲ್ಲಿ ಶಾಲಾ ಮಕ್ಕಳ ವಿವಿಧ ಚಟುವಟಿಕೆಗಳು ಜರಗಿದುವು.

ಕುಂದಾಪುರ— ಹಿರಿಕಾಮ್ರ ದೊಡ್ಡಮನೆ ಶ್ರೀಮತಿ ಗಿರಿಯಮ್ಮ ಶೆಡ್ತಿಯವರು ತಾ. 17-2-53ರಂದು ತಮ್ಮ 73ನೇ ವಯಸ್ಸಿನಲ್ಲಿ ವೃದ್ಧಾಪ್ಯದ ದೆಸೆಯಿಂದ ದೈವಾಧೀನರಾದರು. ಇವರು ಧರ್ಮಿಷ್ಠರಾಗಿಯೂ ಬಡವರಕ್ಷಿ ಕರುಣೆಯುಳ್ಳವರಾಗಿಯೂ ಇದ್ದರು.

ಕೊಕ್ಕರ್ಣೆ— ತಾ. 11ರಲ್ಲಿ ಪಂಚಾಯತ್ ಬೋರ್ಡ್ ಚುನಾವಣೆಯು ಜರಗಿ ಶ್ರೀ ಕೃಷ್ಣರಾಯ ಪಾಮನ್ ನಾಯ್ಕರು ಅಧ್ಯಕ್ಷರಾಗಿಯೂ ಶ್ರೀಗಳಾದ ಎಸ್. ವೆಂಕಟ್ರಮಣ ಮಡಿ, ವಿ. ಗೋವಿಂದ ಶೆಟ್ಟಿ, ಎಚ್. ನಾರಾಯಣ ಶೆಟ್ಟಿ, ಕೆ. ಮಹಾಬಲ ಶೆಟ್ಟಿ, ಎಚ್ ಕೃಷ್ಣಪ್ಪ ನಾಯ್ಕ ಹೊಲಿಗಾಳಿ, ಕೆ. ಗೋವಿಂದ ಶೆಟ್ಟಿ, ರಾಮ ನಾಯ್ಕ ಕುಡ್ಪಿ ಇವರು ಸದಸ್ಯರಾಗಿಯೂ ಅವಿರೋಧವಾಗಿ ಆರಿಸಲ್ಪಟ್ಟರು.

ಕುಂಬಳೆ— ಸ್ಥಳೀಯ ಪಂಚಾಯತ್ ಬೋರ್ಡ್ ಚುನಾವಣೆಯು ತಾ. ೧೮ರಂದು ನಡೆದು, ಶ್ರೀ ಕೆ. ಕಣ್ಣಪ್ಪನವರನ್ನು ಅಧ್ಯಕ್ಷರಾಗಿಯೂ, ಶ್ರೀಯುತರಾದ, ಕೆ. ವೀರನ್, ವಾಸುದೇವ ಪ್ರಭು, ನಾರಾಯಣ ನಾವೋಡ, ನಾರಾಯಣ ಕಾಮತ್, ಕಿಂಞಣ್ಣ ಆಳ್ವ, ಮೊಯ್ದೀನ್ ಕುಂಞ, ಕುಂಞಾಲು, ಕೆ. ಎಸ್.ಪೆರುವಾಡ್ ಇವರು ಸದಸ್ಯರಾಗಿಯೂ ಚುನಾಯಿಸಲ್ಪಟ್ಟರು

ಸ್ಥಳೀಯ ಹೋಲಿಫೇಮಿಲಿ ಹುಡುಗಿಯರ ಹಯರ್ ಎಲಿಮೆಂಟರಿ ಶಾಲಾ ದಿನವು ತಾ ೧೫ರಂದು, ಮದ್ರಾಸ್ ಶಾಸನಾ ಸಭಾ ಸದಸ್ಯರಾದ ಜನಾಬ್ ಎಂ ಎಸ್. ಮೊಗ್ರಾಲರವರ ಅಧ್ಯಕ್ಷತೆಯಲ್ಲಿ ಜರಗಿತು.

ದಕ್ಷಿಣ ಕನ್ನಡಕ್ಕೆ ವನಮಹೋತ್ಸವ ಸಂಬಂಧವಾಗಿ ಕೇಂದ್ರ ಸರಕಾರದಿಂದ ದೊರೆತ ಶೀಲ್ಡನ್ನು ತಾ. ೧೯ರಂದು ಇಲ್ಲಿನ ರೆವಿನ್ಯೂ ಇನ್ಸ್ಪೆಕ್ಟರು ಸಾರ್ವಜನಿಕರ ದರ್ಶನಕ್ಕೆ ಇಟ್ಟಿದ್ದರು.

ಕಾಸರಗೋಡು— ಬೋರ್ಡ್ ಹಾ] ಎ] ಶಾಲೆಯ ಹೊಸ ಕಟ್ಟಡದ ಪ್ರಾರಂಭೋತ್ಸವವು ತಾ|14ರಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ರಾಮಕೃಷ್ಣನ್ ಅವರ ಹಸ್ತದಿಂದ ನೆರವೇರಿತು ಸಮಾರಂಭದ ಅಧ್ಯಕ್ಷತೆಯನ್ನು ಕಾಸರಗೋಡು ತೆಂಗು ಸಂಶೋಧನಾ ಡೈರೆಕ್ಟರ್ ಶ್ರೀ ಎಮ್. ಜೋನ್‌ರವರು ವಹಿಸಿದ್ದರು. ಶಾಲಾ ಕಮಿಟಿ ಅಧ್ಯಕ್ಷ ಡಾ| ಪಿ ವಿ. ಭಂಡಾರಿಯವರು ಹತ್ತು ಸಮಸ್ತರಿಂದ ಕಟ್ಟಿಸಲಾದ ರೂ 8000 ಬೆಲೆಯ ಹೊಸ ಕಟ್ಟಡವನ್ನು ಜಿಲ್ಲಾ ಬೋರ್ಡ್ ಅಧ್ಯಕ್ಷರಿಗೊಪ್ಪಿಸಿದರು.

ಕೊಳಲಗಿರಿ— ಸ್ಥಳೀಯ ಸೈಂಟ್ ಕ್ಸೇವಿಯರ್ ಹಾ] ಎ] ಶಾಲೆಯ ಮತ್ತು ಇದಕ್ಕೆ ಸಂಬಂಧಪಟ್ಟ ಪೆರಂಪಳ್ಳಿ, ಆಮ್ಮುಂಜೆ, ಬೆಳ್ಳಾರು ಎಲಿಮೆಂಟರಿ ಶಾಲೆಗಳ ವಾರ್ಷಿಕೋತ್ಸವವು ಇದೇ ತಾ ೧೨ರಲ್ಲು ಶ್ರೀ ಎಚ್. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಸಿರಿಲ್ ಡಿ'ಸೋಜರು ಶಾಲೆಗಳ ವರದಿಯನ್ನರ್ಪಿಸಿದರು.

ಬೊಂಬಾಯಿ

ನೇಶನಲ್ ಕಾಲೇಜ್ ಕರ್ನಾಟಕ ವಿದ್ಯಾರ್ಥಿ ಸಂಘ—ಇದರ ವಾರ್ಷಿಕೋತ್ಸವವು ಇತ್ತೀಚೆಗೆ ಪ್ರಿನ್ಸಿಪಾಲ್ ಕೆ. ಎಮ್. ಕುಂದನಾನಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಮುಂಬಯಿ ಸರಕಾರದ ಮಾಜಿ ಮಂತ್ರಿ ಶ್ರೀ ಎಮ್. ಪಿ. ಪಾಟೀಲರು ಮುಖ್ಯ ಅತಿಥಿಗಳಾಗಿದ್ದರು. ಪ್ರಾರ್ಥನೆಯಾದ ಬಳಿಕ ಸಂಘದ ಅಧ್ಯಕ್ಷ ಶ್ರೀ ಬಿ. ವಿ. ನಾಥ ಸೆಟ್ಟರು ಅತಿಥಿಗಳ ಪರಿಚಯ ಮಾಡಿಕೊಟ್ಟರು. ಕಾರ್ಯದರ್ಶಿ ಶ್ರೀ ಪಿ. ಶಂಕರ ಸೆಟ್ಟರು ಸಮಾರಂಭಕ್ಕೆ ಬಂದ ಶುಭ ಸಂದೇಶಗಳನ್ನೂ ವರದಿಯನ್ನೂ ಓದಿದರು. ಮುಖ್ಯ ಅತಿಥಿಗಳು ತಮ್ಮ ಭಾಷಣದಲ್ಲಿ ಇಂದಿನ ವಿದ್ಯಾಭ್ಯಾಸ ಕ್ರಮವನ್ನು ಟೀಕಿಸಿದುದಲ್ಲದೆ ವಿದ್ಯಾರ್ಥಿಗಳು ಹಳ್ಳಿಗಳಿಗೆ ಹೋಗಿ ವಿದ್ಯಾ ಪ್ರಚಾರ ಮಾಡಬೇಕೆಂದು ಬೋಧಿಸಿದರು. ಅಧ್ಯಕ್ಷರ ಭಾಷಣವಾಗಿ ಶ್ರೀ ಪಿ. ಆರ್. ಮಲ್ಯರ ವಂದನಾರ್ಪಣೆ, ವಿವಿಧ ವಿನೋದಾವಳಿ ಕಾರ್ಯಕ್ರಮಗಳೊಂದಿಗೆ ಸಭೆ ಮುಕ್ತಾಯವಾಯಿತು ನಾಟಕಗಳಲ್ಲಿ ಪಾತ್ರ ವಹಿಸಿದ ಶ್ರೀ ಎಚ್. ವಿ. ಶೆಣೈ ಮತ್ತು ಕುಮಾರಿ ಸೀತಾ ಕುಂಬಳೆ ಇವರು ಬಹುಮಾನಗಳನ್ನು ಪಡೆದರು.

ಜಪಾನಿನಲ್ಲಿ ಭತ್ತದ ವ್ಯವಸಾಯ

(೩ನೇ ಪುಟದಿಂದ)

೫

ಸುಧಾರಿತ ರೀತಿಯ ಬೀಜಗಳನ್ನು ತಯಾರಿಸುವುದಕ್ಕೆ ಜಪಾನಿನಲ್ಲಿ ಬಹಳ ಮಹತ್ವವನ್ನು ಕೊಡುತ್ತಿರುವರು. ಈಗೀಗ ವಿಶಿಷ್ಟ ವಾತಾವರಣ, ಹವಾಮಾನ, ಮತ್ತು ಪರಿಸ್ಥಿತಿಗಳಿಗೆ ಭತ್ತದ ಸಸಿಯು ನೀಡುವ ಪ್ರತಿಕ್ರಿಯೆಯ ಕುರಿತಾಗಿಯೂ ಅಧಿಕ ಮಹತ್ವ ನೀಡುತ್ತಿರುವರು. ೯೦ ಲಕ್ಷದಷ್ಟು ಹಿಂದಿನಿಂದಲೇ ಜಪಾನಿನಲ್ಲಿ ಬೀಜವನ್ನು ಸುಧಾರಿಸುವ ಕ್ರಮ ಆರಂಭವಾಗಿತ್ತು. ಕೃಷಿ ಹಾಗೂ ಅರಣ್ಯ ಇಲಾಖೆಯು ಕೃಷಿಯಲ್ಲಿ ಪ್ರಯೋಗ ನಡೆಸುವ ಕೇಂದ್ರವನ್ನು ಟೋಕಿಯೋದಲ್ಲಿ ಆವರ್ಷ ಸ್ಥಾಪಿಸಿ, ಆರು ಶಾಖಾ ಕೇಂದ್ರಗಳನ್ನೂ ಬೇರೆ ಬೇರೆ ಜಿಲ್ಲೆಗಳಲ್ಲಿ ತೆರೆಯಿತು. ದೇಶದ ವಿವಿಧ ಮೂಲೆಗಳಿಂದ ಸುಮಾರು ನಾಲ್ಕುಸಾವಿರ ಭತ್ತದ ಜಾತಿಗಳನ್ನು ಸಂಗ್ರಹಿಸಿ, ಈ ಕೇಂದ್ರದವರು ಪ್ರತಿಯೊಂದರ ಗುಣ ವಿಶೇಷಗಳನ್ನೂ ನೀಡುವ ಫಸಲಿನ ಪ್ರಮಾಣವನ್ನೂ ಸಾವಧಾನದಿಂದ ನಿರೀಕ್ಷಿಸಿದರು. ಎಷ್ಟೋ ಉತ್ತಮ ಜಾತಿಯ ಬೀಜಗಳ ಗುಣವು ಬಹಿರಂಗಗೊಂಡು, ಅವುಗಳ ಬಳಕೆ ಹೆಚ್ಚಿಕೊಂಡಿತು. ೧೯೨೦ರ ಸುಮಾರಿಗೆ ೪೫೦ ಹೊಸ ನಮೂನೆಯ ಬೀಜಗಳನ್ನು ಜಪಾನು ಸಿದ್ಧಗೊಳಿಸಿ, ಹಳ್ಳಿ ಹಳ್ಳಿಯಲ್ಲೂ ಪ್ರಚಾರ ಮಾಡಿತು. ಮಿಶ್ರ ಪದ್ಧತಿಯಿಂದ ಹೊಸ ಬೀಜವನ್ನು ಸಿದ್ಧಗೊಳಿಸುವ ಪ್ರಯತ್ನ ೧೯೦೪ರಿಂದ ಜೋರಾಯಿತು. ಒಂದೇ ಸಸಿಯಲ್ಲಿ ಉತ್ತಮ ಬೆಳೆ ಕೊಡುವ ಗುಣ, ರೋಗಗಳನ್ನು ಪ್ರತಿಭಟಿಸಿ ಬದುಕಬಲ್ಲ ಶಕ್ತಿ, ಮುಂತಾದುವುಗಳನ್ನು ಉಂಟು ಮಾಡಲು ಮಿಶ್ರಪದ್ಧತಿ ನೆರವಾಗಿದೆ. ಈ ಪದ್ಧತಿಯಿಂದ ೧೯೩೫ರಷ್ಟು ಹೊತ್ತಿಗಾಗಲೇ ೫೦ ಹೊಸ ನಮೂನೆಯ ಬೀಜಗಳನ್ನು ಸಿದ್ಧಗೊಳಿಸಿದರು. ೧೯೨೭ ರಿಂದ ಮಿಶ್ರ ಪದ್ಧತಿಯನ್ನೂ ಸುಧಾರಿತ ಬೀಜಗಳನ್ನು ಸಿದ್ಧ... ಕ್ರಮವು ಸುಧಾರಣೆ ಗೊಂಡಿತು ಇಡೀ ದೇಶಗಳನ್ನು ಭೂಗುಣ, ವಾತಾವರಣ, ಹವಾಮಾನ ಮುಂತಾದ ಪರಿಸ್ಥಿತಿಗೆ ಹೊಂದಿಕೊಂಡು ವಿಂಗಡಿಸಿ, ಅಲ್ಲಲ್ಲಿಯ ಪ್ರಾದೇಶಿಕ ಸ್ಥಿತಿಗತಿಯನ್ನು ಅನುಸರಿಸಿ, ಬೀಜಗಳನ್ನು ಸುಧಾರಿಸುವುದಕ್ಕೆ ಈಗ ಗಮನ ಕೊಡುತ್ತಿರುವರು.

— ೬ —

ಹೊಸ ಬೀಜಗಳ ಉಪಯುಕ್ತತೆಯನ್ನು ಪ್ರಯೋಗಗಳಿಂದ ಸಿದ್ಧಗೊಳಿಸಿದ ಬಳಿಕವೇ ರೈತರಲ್ಲಿ ಹಂಚುವರು. ಸುಧಾರಿತ ಬೀಜಗಳು ಈಗ ಎಷ್ಟು ಜನಪ್ರಿಯತೆಯನ್ನು ಗಳಿಸಿವೆ ಯೆಂದರೆ ೬೫°/. ವ್ಯವಸಾಯಕ್ಕೆ ಈ ಬೀಜಗಳನ್ನು ಉಪಯೋಗಿಸುತ್ತಿರುವರು. ಸಹಕಾರೀ ಸಂಘಗಳ ಮೂಲಕ ತಮಗೆ ಬೇಕಾಗುವ ಜಾತಿಯ ಬೀಜಗಳನ್ನು ಒದಗಿಸಿ ಕೊಳ್ಳಲಿಕ್ಕೆ ಜಪಾನೀ ರೈತರು ಸಮರ್ಥರಾಗಿರುವರು. ಬೀಜಗಳು ಮೊಳಕೆಯೊಡೆದು ಸಸಿಯಾಗುವಾಗ ಹುಳ ಹುಪ್ಪಡಿಗಳಿಂದ ಬಾಧೆಯೊಂದದಂತೆ ರಸಾಯನಿಕ ದ್ರವ್ಯಗಳಿಂದ ಅವುಗಳನ್ನು ಸಿಂಪಡಿಸುವುದು ವಾಡಿಕೆ. ನೇಜಿಯನ್ನು ಕೂಡ ಬಹಳ ಜಾಗರೂಕತೆಯಿಂದ ಸಿದ್ಧಗೊಳಿಸುವರು. ಪ್ರತಿಯೊಂದು ಸಸಿಯ ಆರೈಕೆಯನ್ನು ನೋಡುವುದರಲ್ಲಿ ಜಪಾನೀ ರೈತರು ಹಿಂದುಳಿಯುವುದಿಲ್ಲ. ಎತ್ತರವಾಗಿ ಸಿದ್ಧಗೊಳಿಸಿದ ಸುಮಾರು ನಾಲ್ಕಡಿ ಅಗಲದ ನೇಜಿಯ ಕಳಗಳಲ್ಲಿ ಬೀಜಗಳನ್ನು ಬಿತ್ತಿ, ಚೆನ್ನಾಗಿ ಸಸಿಗಳ ಲಾಲನೆಪಾಲನೆಯನ್ನು ಮಾಡುವರು. ನೇಜಿಯ ಕಳವನ್ನು ಸಸ್ಯಜನ್ಯ ಮತ್ತು ಧಾತು ಜನ್ಯ ಗೊಬ್ಬರಗಳಿಂದ ಸಮೃದ್ಧವಾಗಿಡುವುದರಿಂದ ಸಸಿ ಚೆನ್ನಾಗಿ ಪುಷ್ಟವಾಗಿ ಬೆಳೆಯುತ್ತದೆ. ಕಳೆಯನ್ನು ಕೀಳುವ ಕೆಲಸವೂ ಹುಳ ಹಿಡಿದರೆ ಅವನ್ನು ಕೈಯಿಂದ ತೆಗೆಯುವ ಕಾರ್ಯವೂ, ಸ್ಥಳಾಂತರ ಕೀಟದ ಹಾವಳಿಯನ್ನು ತಡೆಯುವ ಕ್ರಮವೂ ರೈತನಿಂದ ನೆರವೇರುತ್ತದೆ. ಈ ಮಟ್ಟಿಗೆ ಸ್ವಲ್ಪವೂ ಉದಾಸೀನತೆಯನ್ನು ರೈತರು ತೋರಿಸುವುದಿಲ್ಲ. ಸಸಿಗಳಿಗೆ ಚೆನ್ನಾಗಿ ನೀರುಣಿಸುವ ಕೆಲಸ ಕೂಡ ನಡೆಯುತ್ತದೆ.

ಜಪಾನಿನಲ್ಲಿ ಹಿಡುವಳಿಯು ಬಹಳ ಕಡಿಮೆ ವಿಸ್ತೀರ್ಣದ್ದಿರುವುದರಿಂದ ಯಂತ್ರಗಳು ಉಪಯೋಗಿಸಲ್ಪಡುವುದಿಲ್ಲವೆಂದರೂ ಸಲ್ಲುವುದು. ಪರಿಶ್ರಮಿಯಾದ ಜಪಾನೀ ರೈತ ತನ್ನ ಕುಟುಂಬದವರನ್ನು ಕೂಡಿಕೊಂಡು ತಂತ್ರಜ್ಞರು ವಿವರಿಸಿದ ಮೇರೆಗೆ ಕೃಷಿ ಪದ್ಧತಿಯನ್ನು ಚಾಚೂ ಬಿಡದೆ ಅನುಸರಿಸುವನು.

(ಸಕ್ಷೇಪ)

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. P. No. 4/1953

ಚಂದು ಹೆಂಗಸು— ಅರ್ಜಿದಾರಳು

1. ಕೊರಗ ಸಪಳಿಗ 2ನೇ ಎದ್ರಿಯ ಮಗ
2. ಪದ್ದು ಸಪಳಿಗ ತುಕ್ರ ಸಪಳಿಗನ ಮಗ ಮಂಗಳೂರು ತಾಲ್ಕು ಮುಂಡ್ಕೂರು ಗ್ರಾಮದ ಸಂಕಲ ಕರಿಯ ಎಂಬಲ್ಲಿರುವವರು, ಎದ್ರಿಯು—

2ನೇ ಎದ್ರಿಯ ಮಗ ಮೃತ ಬಾಬು. ಪಿ, ಸಪಳಿಗನಿಗೆ ಬರ ಬೇಕಾದ ಸಾಲಗಳ ಅರ್ಧಾಂಶದ ವಸೂಲಿ ಬಗ್ಗೆ ಮೃತನ ವಿಧವೆಯಾದ ಅರ್ಜಿದಾರಳಿಗೆ ಪಾರಿಸುವ ಸರ್ಟಿಫಿಕೇಟು ಕೊಡಬೇಕಾಗಿ ಅಪೇಕ್ಷಿಸಿ ಅರ್ಜಿದಾರಳು ಕೊಟ್ಟ ಸದ್ರಿ ಅರ್ಜಿಯ ಕುರಿತು ಆಕ್ಷೇಪ ಉಳ್ಳಂಥವರು ತಾ. 11-3-1953 ನೇ ಹಗಲು 10ಘಂಟೆಗೆ ಮೇಲ್ಕಾಣಿಸಿದ ಕೋರ್ಟ ಮುಂದೆ ಹಾಜರಾಗಿ ಆಕ್ಷೇಪಣೆಗಳನ್ನು ಕೊಡತಕ್ಕದ್ದು. ತಪ್ಪಿದರೆ ಅರ್ಜಿ ಪ್ರಕಾರ ಅರ್ಜಿದಾರಳ ಗುಣಕ್ಕೆ ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸಲಾಗಿದೆ.

K. M. Hegde

ಅರ್ಜಿದಾರಳ ಕಡೆ ವಕೀಲ್

ಕಾರ್ಕಳ, ತಾರೀಕು, 21—2—1953.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,

Moolky, S. K.

ಋತುಸ್ರಾವ ನಿಂತಿತು

'ಕುಮಾರಿ' ಮಾತ್ರೆಗಳನು ಉಪಯೋಗಿಸಿದರೆ ಸದಕ್ಕೆ ಋತುಸ್ರಾವವಾಗುವುದು. ಹೊಟ್ಟೆಗೆ ಬರುವುದು, ... ಸೇವನೆಯಿಂದ ತೀವ್ರ ಗುಣಹೊಂದು... ... ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ; ರೂ. 3-; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ, 6- [ಪಿ. ಪಿ. ಹಣ ರವಾನೆ ಪ್ರತ್ಯೇಕ]

MRS. D. DEVEE, F. DS. (N. J.)

Tollygunge CALCUTTA.

ಸ್ಟಾಕಿಸ್ಟರು: ಕಹಾಕಂಪೆನಿ, ಮಂಗಳೂರು

ಹಿರಾಕುಡ ಯೋಜನೆಯ ದರ್ಶನ

(೨ನೇ ಪುಟದಿಂದ)

ಹಿರಾಕುಡದ ಯೋಜನೆಯಿಂದಾಗಿ ನಿರ್ಮಾಣಗೊಳ್ಳುವ ವಿಶಾಲ ನೀರಸಾಗರವು ೨೯೬೦೦೦ ಎಕ್ರೆ ಸ್ಥಳವನ್ನು ಮುಳುಗಿಸುವುದು ಇದರಲ್ಲಿ ೧,೨೪,೩೦೦ ಎಕ್ರೆ ಭೂಮಿಯು ಈಗ ಕೃಷಿಗೆ ಒಳಗಾಗಿರುವ ಪ್ರದೇಶವಾಗಿದೆ ಸುಮಾರು ೩೦೦೦೦ ಎಕ್ರೆ ಜಾಗದಲ್ಲಿ ನೀರಸಾಗರದಲ್ಲಿ ನೀರು ತಗ್ಗಿದಾಗ ಒಂದು ಬೆಳೆಯನ್ನು ತೆಗೆಯಬಹುದು. ಆದರೆ ನೆರೆಯಿಂದ ದೊರೆತ ರಕ್ಷಣೆಯ ಪರಿಣಾಮವಾಗಿ ಇಲ್ಲಿಯ ಬೆಳೆ ಇಮ್ಮಡಿಯಾಗವುದು ಆದುದರಿಂದ ಸುಮಾರು ೬೫೦೦೦ ಎಕ್ರೆ ಭೂಮಿಯು ಶಾಶ್ವತವಾಗಿ ಕೃಷಿಗೆ ಎರವಾಗುತ್ತದೆ ಇದಕ್ಕೆ ಪ್ರತಿಯಾಗಿ— ಈ ಯೋಜನೆಯ ಪ್ರಥಮ ಘಟ್ಟವು ಪೂರ್ತಿಗೊಂಡಾಗ ಸಾಂಬಲಪುರ ಜಿಲ್ಲೆಯಲ್ಲಿ ೫,೫೦,೦೦೦ ಎಕ್ರೆ ಜಾಗದಲ್ಲಿ ನೀರಾವರಿ ನಡೆಯುತ್ತದೆ ಇದರಲ್ಲಿ ೪೬೫೦೦೦ಎಕ್ರೆ ಕಾಲುವೆ ನೀರಿನಿಂದಲೂ, ೯೧,೦೦೦ಎಕ್ರೆ ಏತ ಮುಂತಾದವುಗಳಿಂದಲೂ ಆಗುತ್ತದೆ ೧೯೪೪ರಲ್ಲಿ ನೇಮಿಸಿದ ಸಲಹೆಗಾರ ಸಮಿತಿಯ ವರದಿಯಂತೆ ಏತದ ಮೂಲಕ ನೀರೆತ್ತುವುದು ಆರ್ಥಿಕವಾಗಿ ಲಾಭಪ್ರದವಾಗಲಾರದೆಂಬುದರಿಂದ ಪ್ರಥಮವಾಗಿ ಒಂದು ಮೂರಾಂಶ ಮಾತ್ರ ಉಪಯೋಗವಾದೀತು ಏನಿದ್ದರೂ ಕಾಲುವೆಗಳಿಂದ ನೀರುಂಡ ಪ್ರದೇಶದ ಉತ್ಪಾದನೆಯು ೧೯೪ ./, ನೀರೆತ್ತುವ ಏತಗಳಿಂದ ನೀರುಂಡ ಪ್ರದೇಶದ ಉತ್ಪಾದನೆಯು ೧೩೫ ./ ಹೆಚ್ಚುವುದು. ಎಂದರೆ, ಒಟ್ಟಾರೆ—೪,೦೦,೦೦೦ ಎಕ್ರೆ ಸಾಮಾನ್ಯ ಭೂಮಿಯಲ್ಲಿ ನೀರಾವರಿ ನೆರವೇರಿದಂತಾಗುತ್ತದೆ

೫

ಒಬ್ಬ ಸಾಮಾನ್ಯ ಸಂದರ್ಶಕನು ಅಣೆಕಟ್ಟಿಗೆ ಸಮೀಪದ ಭೂಶಿರವೊಂದರಲ್ಲಿ ನಿಂತರೆ ಎಲ್ಲ ದೃಶ್ಯಗಳೂ ಕಣ್ಣಿಗೆ ಬೀಳುತ್ತವೆ. ಇಡೀ ಲೋಕದಲ್ಲಿಯೇ ಅತ್ಯಂತ ದೀರ್ಘವೆನಿಸಿದ ಈ ಅಣೆಕಟ್ಟು ಮೂರು ಮೈಲಿನಷ್ಟು ಉದ್ದವಿದೆ, ಮತ್ತು ನದಿಯ ತಳದಿಂದ ಮೇಲ್ಭಾಗದ ೧೯೫ ಅಡಿ ಎತ್ತರವಿದೆ ನಾಲ್ಕು ಭಾಗಗಳಾಗಿ ಈ ಅಣೆಕಟ್ಟನ್ನು ವಿಂಗಡಿಸುವರು ಪ್ರಥಮದ ೩೨೦೦ ಅಡಿ ಉದ್ದದ ಅಂಶವು ಕಾಂಕ್ರೀಟಿನಿಂದ ರಚಿಸಲ್ಪಟ್ಟು, ಇದನ್ನು ಆಧಾರದ ೭೬೭೪ ಅಡಿ ಉದ್ದದ ಮಣ್ಣಿನ ಅಣೆಕಟ್ಟಿಗೆ ಜೋಡಿಸುವರು. ಮೂರನೆಯ ಭಾಗ ಕೂಡ ೧೬೮೦ ಅಡಿ ಉದ್ದದ ಕಾಂಕ್ರೀಟಿನ ಗೋಡೆಯಾಗುತ್ತದೆ ತದನಂತರ ಪುನಃ ಮಣ್ಣಿನಿಂದ ರಚಿಸಲ್ಪಡುವ ೬೬೮೦ ಅಡಿ ಉದ್ದದ ಅಣೆಕಟ್ಟು ಬರುತ್ತದೆ. ಹೀಗೆ ನಾಲ್ಕು ವಿಭಾಗಗಳ ಒಟ್ಟು ಉದ್ದ ೧೫೭೪೫ ಅಡಿ. ಮಣ್ಣಿನ ಗೋಡೆಯು ನದಿಯ ತಳದಲ್ಲಿ ೬೦೦ ಅಡಿಯಷ್ಟು ಅಗಲವಿದ್ದರೆ, ಕಾಂಕ್ರೀಟು ಗೋಡೆ ೧೬೬ ಅಡಿ ಮಾತ್ರ ಅಗಲವಿದೆ ಇಳಿಜಾರಾಗಿ ಈ ಗೋಡೆ ರಚಿಸಲ್ಪಡುವುದರಿಂದ ಮೇಲ್ತುದಿಯಲ್ಲಿ ಎರಡೂ ಗೋಡೆಗಳ ಅಗಲ ೫೦ ಅಡಿಯಷ್ಟಾಗುವುದು. ಇದರ ಮೇಲಿಂದ ವಾಹನಗಳು ಓಡಾಡಲು ಅನುಕೂಲವಿದೆ

ಇಷ್ಟರವರೆಗೆ ಕೆಲಸವು ಭರದಿಂದ ನಡೆದಿದೆ ಕೆಲಸಕ್ಕೆ ಅನುಕೂಲವೆನಿಸಿದ ಸಮಯದಲ್ಲಿ ಇಲ್ಲಿಯ ಇಂಜಿನಿಯರರು ಸಮಯದೊಡನೆ ನಾಗಾಲೋಟವನ್ನು ಹೂಡಿ ಕಾರ್ಯಮಗ್ನರಾದರು ಮುಖ್ಯಪ್ರವಾಹವನ್ನು ಇದಿರಿಸುವ ಮಣ್ಣುಗೋಡೆಯು ನೀರಿನ ಮಟ್ಟದಿಂದ ಮೇಲೆ ನಿಲ್ಲುವಂತೆ ಮಾಡುವುದು ಬಹಳ ಪ್ರಯಾಸದ ಕೆಲಸ ಈ ಅಣೆಕಟ್ಟು ಅತ್ಯಂತ ಬಲವಾದುದಿರಬೇಕು. ಮತ್ತು ನೀರು ಕೊಚ್ಚಿಕೊಂಡು ಹೋಗದಂತೆ ಜಾಗ್ರತೆಯಿಂದ ಕಟ್ಟರಬೇಕು ಮಳೆಗಾಲದಲ್ಲಿ ಮಹಾಪೂರದಿಂದ ತುಂಬಿ ಮಹಾನದಿ ಹರಿದು ಬರುವಾಗ ಅದರ ಅಬ್ಬರವನ್ನು ತಡೆಯುವುದೇನ ಸುಲಭದ ಕೆಲಸವೇ? ಇಂಜೀನಿಯರರ ಸಾಹಸಪೂರ್ವಕವಾದ ಪ್ರಯತ್ನದ ಪರಿಣಾಮವಾಗಿ ಇದೀಗ ಆ ಮಹಾ ಗೋಡೆ ಸಿದ್ಧಗೊಂಡಿದೆ ಕಳೆದ ವರ್ಷ ೭೨ಅಂಗುಲ ಮಾತ್ರ ಈ ಪ್ರದೇಶದ ಮಳೆಯಾಗಿತ್ತು, ಈ ವರ್ಷ ೯೦ಅಂಗುಲದಷ್ಟು ಹೆಚ್ಚು ಮಳೆಬಂದಿತು ಆಗಿನ ಮಹಾ ಪ್ರವಹವನ್ನೂ ಈ ಅಣೆಕಟ್ಟು ತಡೆದುಹಿಡಿಯಿತು.

೬

ಕಾಲುವೆ ಮೂಲಕ ನೀರನ್ನು ಹರಿಯಿಸಿ ನಾಲ್ಕು ಜಲವಿದ್ಯುಚ್ಛಕ್ತಿಯ ಕೇಂದ್ರಗಳನ್ನು ರಚಿಸಲಾಗುವುದು. ಈಗಾಗಲೇ ನೆಲಗಟ್ಟನ್ನು ಹಾಕುವ ಕೆಲಸ ನಡೆಯುತ್ತಿದೆ ಈ ಕೇಂದ್ರಗಳು ಕೆಲಸವನ್ನು ತೊಡಗಿದಾಗ ೧೨೩೦೦೦ ಕಿಲೋವಾಟು ವಿದ್ಯುಚ್ಛಕ್ತಿ ದೊರೆಯುತ್ತದೆ. ಇನ್ನೆರಡು ಕೇಂದ್ರಗಳನ್ನು ಜೋಡಿಸುವ ವಿಚಾರವೂ ಇರುವುದರಿಂದ ಕೊನೆಗೆ ೧೯೮೦೦೦ ಕಿಲೋವಾಟಿನಷ್ಟು ವಿದ್ಯುತ್ತು ಉತ್ಪಾದನೆಗೊಂಡೀತೆಂದು ಅಂದಾಜು. ರಾಯಪುರ, ಕೇಂಜಾರಪುರ, ತಲ್ಚಾರ್, ಕಟಕ್ ಮತ್ತಿತರ ಮುಖ್ಯ ಕೇಂದ್ರಗಳಿಗೆ ವಿದ್ಯುಚ್ಛಕ್ತಿಯು ಪೂರೈಕೆಯಾಗುತ್ತದೆ ಇದನ್ನೇ ವಿಸ್ತರಿಸಿ ದಾಮೋದರ ಕಣಿವೆಯ ಮತ್ತು ಮಾಚಕುಂದ ಕೇಂದ್ರದ ವಿದ್ಯುತ್ ಪ್ರಸಾರದೊಡನೆ ಜೋಡಿಸಲಾಗುವುದು ಆಗ ವಿದ್ಯುಚ್ಛಕ್ತಿಯ ಪ್ರಯೋಜನ ಇನ್ನೂ ಹೆಚ್ಚಿನ ಪ್ರದೇಶಕ್ಕೆ ದೊರೆಯುತ್ತದೆ.

ಅಣೆಕಟ್ಟಿನ ಎಡಬಲಗಳಲ್ಲಿ ವಿಶಾಲವಾದ ನೀರ ಸಾಗರವೇರ್ಪಟ್ಟು, ಅಲ್ಲಿಂದ ಕಾಲುವೆಗಳನ್ನು ಹೊರಡಿಸಲಾಗುವುದು. ಎಡ ಬದಿಯ ನೀರ ಸಾಗರ ೬ ಮೈಲು ಉದ್ದವಿದ್ದರೆ ಬಲಬದಿಯದು ೧೧ ಮೈಲಿದೆ ಎಡ ಬದಿಯಿಂದ ಎರಡು, ಮತ್ತು ಬಲಬದಿಯಿಂದ ಒಂದು ನೀರಿನ ಕಾಲುವೆಗಳು ಹೊರಟು ಒಟ್ಟು ೩೬೫ ಮೈಲು ದೂರ ಸಾಗುತ್ತವೆ

—ಸಾರಾಂಶವೆಂದರೆ, ನಮ್ಮ ಭಾರತವನ್ನು ಪುನರ್ನಿರ್ಮಾಣ ಮಾಡಿ ಜನರ ಜೀವನ ಮಟ್ಟವನ್ನು ಉನ್ನತಗೊಳಿಸಬೇಕೆನ್ನುವ ದೃಢ ಸಂಕಲ್ಪದಿಂದಲೇ ಇಂಥ ಮಹಾಯೋಜನೆಗಳು ಭರದಿಂದ ಮುನ್ನಡೆಯುತ್ತಿವೆ ಇಂಥ ಇನ್ನೂ ಹಲವು ಯೋಜನೆಗಳು ಕಾರ್ಯರೂಪಕ್ಕೆ ಒಂದು ಜನರು ಅವುಗಳಿಂದ ಪ್ರಯೋಜನ ಹೊಂದುವಂತಾಗಲೆಂದ ಆಶಿಸುವುದು ಸಾಧುವಾಗಿದೆ.

ಬಂಟರ ಯಾನೆ ನಾಡವರ ಸಂಘ, ಮುಂಬಯಿ.

ಗತ ನಲ್ವತ್ತು ವರ್ಷಗಳಿಂದ ನಮ್ಮ ಜಾತಿಯ ಜನರು ದಕ್ಷಿಣ ಕನ್ನಡ ಜಿಲ್ಲೆಯನ್ನು ಬಿಟ್ಟು ತಮ್ಮ ಜೀವನೋಪಾಯವನ್ನು ಹುಡುಕಲು ಮುಂಬಾಯಿ ನಗರಕ್ಕೆ ಬರಲು ಪ್ರಾರಂಭಿಸಿದರು, ಮೊತ್ತ ಮೊದಲು ಪರಜಾತಿ ಜನರ ಉಪಹಾರ ಗೃಹಗಳಲ್ಲಿಯೂ, ಇಲ್ಲಿಯ ವ್ಯಾಪಾರಸ್ಥರ ಖಾಸಗಿ ಆಫೀಸುಗಳಲ್ಲಿಯೂ ನೌಕರಿಗೆ ಸೇರಿ ದುಡಿದ ಹಣದಿಂದ ತಮ್ಮ ಸ್ವಂತ ಜೀವನ ಕಳೆದು, ಉಳಿದ ಹಣವನ್ನು ಊರಲ್ಲಿರುವ ಸಂಬಂಧಿಕರಿಗೆ ಸಹಾಯ ಮಾಡಿ ಜೀವನ ಮಾಡುತ್ತಿದ್ದರು 1918ರ ಒಂದನೇ ಮಹಾಯುದ್ಧವು ಮುಗಿದ ನಂತರ ಬಂದ ಆರ್ಥಿಕ ಅಡಚಣೆಯನ್ನು ದೂರಮಾಡಲಿಕ್ಕಾಗಿ, ಮುಂಬಯಿಗೆ ಉದ್ಯೋಗಾನ್ವೇಷಣೆಯಿಂದ ನಮ್ಮ ಜನರು ಬಹಳ ಸಂಖ್ಯೆಯಿಂದ ಬರಹತ್ತಿದರು ಜಿಲ್ಲೆಯಲ್ಲಿ ಬೇಸಾಯವನ್ನೇ ಅವಲಂಬಿಸಿದ್ದವರೂ ಮಾಧ್ಯಮ ವರ್ಗದ ಹೈಸ್ಕೂಲ್ ವಿದ್ಯಾಭ್ಯಾಸ ಮುಗಿದ ತರುಣರೂ, ಊರಲ್ಲಿ ತಮಗೆ ಬೇಕಾದ ನೌಕರಿಯು ದೊರೆಯದ್ದರಿಂದ, ಹಿಂದೂಸ್ಥಾನದ ಒಂದನೇ ಕೈಗಾರಿಕೆ ಮತ್ತು ವ್ಯಾಪಾರದ ಕೇಂದ್ರವಾದ ಮುಂಬಾಯಿಗೆ ಬರಹತ್ತಿದರು, ಬಂದವರಿಗೆಲ್ಲಾ ದೊರೆಯುತ್ತಾ ಹೋದದ್ದರಿಂದಲೂ, ಉಪಹಾರಗೃಹ ಮುಂತಾದ ವ್ಯಾಪಾರ ಸಂಸ್ಥೆಗಳ ಒಡೆಯುತ್ತಾ ಹೋದುದರಿಂದಲೂ, ಮತ್ತಷ್ಟು ಸ್ವಜಾತಿ ಉತ್ಸಾಹಿ ತರುಣರನ್ನು ಮುಂಬಾಯಿ ನಗರವು ಆಕರ್ಷಿಸಿತು 1926-1927ರಲ್ಲಿ ನಮ್ಮ ಜಾತಿಯ ಜನಸಂಖ್ಯೆಯು, ನೂರು ಗಟ್ಟಲೆಯನ್ನು ಬಿಟ್ಟು ಸಾವಿರಗಟ್ಟಲೆಗೆ ಏರಿತು ಆಗ ಜಾತಿಯ ಏಳಿಗೆಯ ವಿಚಾರದ ಆವಶ್ಯಕತೆಯು ಬರಹತ್ತಿತು 1926ನೇ ನವಂಬರದಲ್ಲಿ ಕೆಲವು ಉತ್ಸಾಹಿ ತರುಣರು ಒಟ್ಟುಗೂಡಿ ಜಾತಿಯ ಸಂಘ ಸ್ಥಾಪಿಸಬೇಕಾಗಿ ನಿಶ್ಚಯಿಸಿ, 1927ರಲ್ಲಿ 'ಬಂಟರ ಯಾನೆ ನಾಡವರ ಸಂಘ ಮುಂಬಾಯಿ' ಎಂಬ ಹೆಸರಿನಿಂದ ಸಂಘವು ಸ್ಥಾಪಿಸಲ್ಪಟ್ಟಿತು.

ಸಂಘವು ಕಳೆದ 25 ವರ್ಷಗಳಿಂದ ಸಮಾಜದ ಏಳಿಗೆಗಾಗಿ ದುಡಿಯುತ್ತಿದೆ ಕಷ್ಟದಲ್ಲಿದ್ದ ಜಾತಿಯ ಜನರನ್ನು ಊರಿಗೆ ಹಿಂತೆರಳುವರೆ ಧನ ಸಹಾಯ ಮಾಡುತ್ತಲೂ, ಜಾತಿಯ ಬಡ ವಿದ್ಯಾರ್ಥಿಗಳಿಗೆ ಸಾಧ್ಯವಾದಷ್ಟು ವಿದ್ಯಾವೇತನವನ್ನು ಕೊಡುತ್ತಲೂ ಬಂದಿರುತ್ತದೆ. 1944ರಲ್ಲಿ ಬಂಟರ ಯುವಕ ಸಂಘವನ್ನು ಒಟ್ಟು ಸೇರಿಸಿ, 'ಕರ್ನಾಟಕ ಫ್ರಿ ನೈಟ್ ಹೈಸ್ಕೂಲ್' ಎಂಬ ವಿದ್ಯಾ ಸಂಸ್ಥೆಯನ್ನು ಇಷ್ಟರವರೆಗೆ ನಡೆಸಿಕೊಂಡು ಬರುತ್ತದೆ ಈ ಶಾಲೆಯಲ್ಲಿ ಸುಮಾರು 650 ಹುಡುಗರು, ಮಾಧ್ಯಮಿಕ ಶಿಕ್ಷಣವನ್ನು ಪಡೆಯುತ್ತಾರೆ. ಶಾಲೆಯ ವರ್ಷಾವಧಿ ಖರ್ಚು ಸುಮಾರು ರೂಪಾ 18,000/-ವಾದರೂ, ಸಂಘವು ಶಾಲೆಯನ್ನು ಯೋಗ್ಯರೀತಿಯಿಂದ ನಡಿಸಿಕೊಂಡು ಬರುತ್ತದೆ. ಈ ಶಾಲೆಯು ಮುಂಬಾಯಿ ನಗರದ ಮೊದಲನೇ ದರ್ಜೆಯ ನೈಟ್ ಹೈಸ್ಕೂಲ್ ಆಗಿರುತ್ತದೆಂಬುದಾಗಿ ಮುಂಬಯಿ ಸರಕಾರದ ವಿದ್ಯಾ ಇಲಾಖೆಯವರಿಂದ, ಶಿಫಾರಸು ಪಡೆದಿರುತ್ತದೆ ಕಳೆದವರ್ಷ ಈ ಹೈಸ್ಕೂಲಿನಲ್ಲಿ ಮತ್ತು ಬೇರೆ ಶಾಲೆಗಳಲ್ಲಿ ವಿದ್ಯಾಭ್ಯಾಸ ಮುಗಿದು, ಕೊಲೇಜು ವಿದ್ಯಾಭ್ಯಾಸಕ್ಕೆ ಹೋಗುವ 8ಮಂದಿ ಸ್ವಜಾತಿ ವಿದ್ಯಾರ್ಥಿಗಳಿಗೆ ರೂ. 800/- ವಿದ್ಯಾರ್ಥಿ ವೇತನ ಕೊಟ್ಟಿರುತ್ತದೆ.

ಇಂದಿಗೆ ನಮ್ಮ ಜಿಲ್ಲೆಯನ್ನು ಬಿಟ್ಟರೆ ನಮ್ಮ ಜಾತಿಯ ಜನ ಸಂಖ್ಯೆಯು ಮುಂಬಾಯಿ ನಗರದಷ್ಟು ಬೇರೆ ಎಲ್ಲಿಯೂ ಇಲ್ಲವೆಂಬುದು ನಿರ್ವಿವಾದ. ಮುಂಬಾಯಿಯು ಬಂಟರಿಗೆ ಎರಡನೇ ವಸತಿ ಸ್ಥಾನವೆಂದರೂ ಅತಿಶಯೋಕ್ತಿಯಾಗಲಾರದು. ಈ ವರ್ಷ ನಮ್ಮ ಸಂಘದ 25ನೇ ವರ್ಷದ ರಜತ ಮಹೋತ್ಸವವನ್ನು ಬಹಳ ವಿಜೃಂಭಣೆಯಿಂದ ಆಚರಿಸಬೇಕೆಂದು ನಿರ್ಧರಿಸಿ ಎಪ್ರಿಲ್ ತಿಂಗಳ 26ನೇ ತಾರೀಕಿಗೆ ಕೋಟೆಯಲ್ಲಿರುವ ಸರ್ ಕವಾಸ್ಜಿ ಜಹಾಂಗೀರ್ ಹೋಲನ್ನು ವಹಿಸಿಕೊಂಡಿರುತ್ತದೆ ಈ ಮಹಾ ಅಧಿವೇಶನಕ್ಕೆ ಜಿಲ್ಲೆಯಿಂದ ಗಣ್ಯರಾದ ವ್ಯಕ್ತಿಗಳು ಆಗಮಿಸಲಿದ್ದಾರೆ. ಸಂದ್ಯಾಟ, ನಾಟಕ, ನರ್ತನ, ಭಾಷಣ ಮುಂತಾದ ಮನೋರಂಜಕ ಕಾರ್ಯಕ್ರಮಗಳಿರುತ್ತವೆ ರಜತ ಮಹೋತ್ಸವದ ಕಾರ್ಯ ಕಲಾಪಗಳನ್ನು ನಡೆಸಲಿಕ್ಕೆ ಒಂದು ಉಪ ಸಮಿತಿಯನ್ನು ಮಾಡಿರುತ್ತದೆ ಸಮಾಜ ಸೇವಾ ಪ್ರಿಯರೂ ಸಂಘದ ಹಿತೈಷಿಗಳೆಲ್ಲರೂ ರೂಪಾಯಿ ಹತ್ತರಂತೆ ತೆತ್ತು ಸ್ವಾಗತ ಸಮಿತಿಯ ಸದಸ್ಯರಾಗಿ ಸೇರಿ ಸಂಘದ ಶಕ್ತಿಯನ್ನು ಬಲಗೊಳಿಸಬೇಕಾಗಿ ವಿನಂತಿ. ಸಂಘವು ಬಲಗೊಂಡರೆ ಜಾತಿಯ ಏಳಿಗೆಯೂ ಆಗಬಹುದು—ಜಾತಿಯ ಏಳಿಗೆಯಾದರೆ ಜಿಲ್ಲೆಯ ಸಾವಿರಾರು ಕುಟುಂಬಗಳ ಏಳಿಗೆಯಾಗಬಹುದು ಆದುದರಿಂದ ಅಲ್ಲಲ್ಲಿ ಇರುವ ಪ್ರತಿಯೊಬ್ಬ ಬಂಟನೂ ಒಟ್ಟಾಗಿ ಸೇರಿ ಈ ಅಧಿವೇಶನದಲ್ಲಿ ಭಾಗವಹಿಸಿ, ಮುಂಬಾಯಿಯಲ್ಲಿ ನಮ್ಮ ಜಾತಿಯ ಮುಂದಿನ ಜನಾಂಗಕ್ಕೆ ಉಪಯುಕ್ತವಾಗುವ ಮಹತ್ಕಾರ್ಯಗಳನ್ನು ನೆರವೇರಿಸಲು ಪ್ರೋತ್ಸಾಹಿಸಬೇಕಾಗಿ ವಿನಂತಿ.

ರಜತ ಮಹೋತ್ಸವದ ಉಪ ಸಮಿತಿ— ಸದಸ್ಯರು

ಡಾಕ್ಟರ್ ಪಿ ಜಗನ್ನಾಥ ಶೆಟ್ಟಿ, ಅಧ್ಯಕ್ಷ
ಡಾಕ್ಟರ್ ಎಮ್. ವಿಶ್ವನಾಥ ಆಳ್ವ, ಅಂತಾಯ, ಗಾಮದೇವಿ
ಪಾಂಗಾಳ ಮಹಾಬಲ ಶೆಟ್ಟಿ, ಕೆ ಇ. ಯಮ್ ಹೋಸ್ಪಿಟಲ್ ಪರೇಲ್
ಮದನ ಶೆಟ್ಟಿ, ಶಿವಾಜಿ ಪಾರ್ಕ್, ಚೇರ್ಮೇನ್, ಶಾಲಾ ಕಮಿಟಿ
ಬಾರ್ಕೂರು ಉಜ್ಜಣ್ಣ ಶೆಟ್ಟಿ, ಮಾಟುಂಗ, ಪ್ರೆಸಿಡೆಂಟ್, ಬಂಟ್ಸ್ ಕೋಓಪರೇಟಿವ್ ಸ್ಟೋರ್ಸ್
ಬಜ್ಪೆ ಬಾಲು ಸಂಜೀವ ಶೆಟ್ಟಿ, ವಿಲ್ಲೆಪಾರ್ಲೆ
ಕಾಪು ಕಾಂತಪ್ಪ ಶೆಟ್ಟಿ, ಕೋಟೆ
ಕಡೆಕಾರು ಕೃಷ್ಣ ಶೆಟ್ಟಿ, ಕೋಟೆ, ಕೋಶಾಧಿಕಾರಿ
ಮಾಸು ಎ, ಶೆಟ್ಟಿ, ಸ್ಟೇಶನ್ ಚಾಕಿ, ಡಿರೆಕ್ಟರ್ ಮೋನ್ ಬಂಟ್ಸ್ ಕೋಓಪರೇಟಿವ್ ಸ್ಟೋರ್ಸ್
ಕೆ ಚಂದ್ರಶೇಖರ ಹೆಗ್ಡೆ, ಕಾರ್ಯದರ್ಶಿ
ಸೂಡ ಸಂಜೀವ ಶೆಟ್ಟಿ, ದಾದರ್
ಬೊಳ್ಳೂರು ರಾಘು ಶೆಟ್ಟಿ, ಬಾರ್
ಬೋಜ ಶೆಟ್ಟಿ, ಕೋಟೆ
ಕೆ ಶ್ಯಾಮ ರಾಯ ಶೆಟ್ಟಿ, ಕಾರ್ಯದರ್ಶಿ, ಶಾಲಾ ಕಮಿಟಿ
ಎನ್ ಶ್ರೀಧರ ಶೆಟ್ಟಿ,

೧೩, ಕುಮಾಸ್ಟ್ರೀಟ್, ಕೋಟೆ,
ಮುಂಬಯಿ.

ಅಮೃತಾಂಜನ

ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ಎದೆ ನೋವುಗಳಿಗೂ ಘಾಯಗಳು, ಬಾತುಕೊಳ್ಳುವುದು ಚೇಳುವಿಷ ಮುಂತಾದುವು, ಪಕ್ಷವಾತ, ಮೊಡಿವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧಿ

ಹುಳು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ

REDG

ಅಮೃತಾಂಜನ ಲಿಮಿಟೆಡ್

ಮದರಾಸು ಬೊಂಬಾಯಿ ಮತ್ತು ಕಲ್ಕತ

ಸ್ವೀಕಾರ— ವಿಮರ್ಶೆ

ತುಂತುರು—

ಬರೆದವರು: ಬಿ. ಡಿ ಗಣಪತಿ. ಪ್ರಕಾಶಕರು: ಕೊಡಗು ಕಂಪೆನಿ, ಮಡಿಕೇರಿ. ಬೆಲೆ: ಹನ್ನೆರಡಾಣೆ.

ಇದರಲ್ಲಿ ಹನ್ನೆರಡು ಸಣ್ಣ ಕತೆಗಳಿವೆ. ದೇವ ವಿರೋಧಿ, ಅರು ಅಶಿ, ಮುಗಿಯದ ಅಕ್ಕ ಎಂಬ ಮೂರು ಟಾಲ್‌ಸ್ಟಾಯರ ಕತೆಗಳಿಂದೂ ನರೋತ್ತಮವೆಂಬುದು ರವೀಂದ್ರ ಬಾಬುಗಳದೆಂದೂ ಲೇಖಕರು ಹೇಳಿರುವರು. ಉಳಿದ ಕತೆಗಳನ್ನು ಸ್ವಂತ ಅನುಭವಕ್ಕೆ ಬಂದ ಸಂಗತಿಗಳ ಮತ್ತು ಘಟನೆಗಳ ಮೇಲೆ ಹೆಣೆಯಲಾಗಿದೆ ಎಂದಿರುವರು. ಕತೆಗಳು ಚಲೋದಾದ ಮತ್ತು ಸುಂದರವಾದ ಭಾಷೆಯಲ್ಲಿ ಬರೆಯಲ್ಪಟ್ಟಿವೆ. ಅಲ್ಲದೆ ಪ್ರತಿಯೊಂದೂ ಕತೆ ನೀತಿಯ ತಳಹದಿಯ ಮೇಲೆ ನಿಂತಿದ್ದು ಓದುಗನ ಸದ ಸದ್ವಿವೇಕವನ್ನು ಜಾಗೃತಗೊಳಿಸುತ್ತದೆ. "ಸ್ವಾತಂತ್ರ್ಯ" ಮತ್ತು "ನರೋತ್ತಮ" ಕತೆಗಳಿಗೆ ರಾಜಕೀಯದ ಹಿನ್ನೆಲೆ ಇದೆ. "ಜೆಬುನ್ನೀಸಾ" ನಿರಾಶ್ರಿತರ ದುಗುಡದ ವಾತಾವರಣ ಪಡೆದರೂ ಅಲ್ಲಿ ಮನುಷ್ಯನ ಧರ್ಮಬುದ್ಧಿ ಜಾಗೃತವಾಗಿರುವುದನ್ನು ಕಾಣುತ್ತೇವೆ. ಸಹೋದರರು ಮತ್ತು ನೀಲು ಎಂಬ ಕತೆಗಳು ಕುಟುಂಬ ಜೀವನದ ಎರಡು ಆದರ್ಶ ಚಿತ್ರಗಳನ್ನು ನೀಡುತ್ತವೆ. ತುಂತುರು ಎಂಬ ಕತೆ ಮಾಗುವು ಬ್ರಾಹ್ಮಣ ಜಾತಿಯಲ್ಲಿ ಹುಟ್ಟಲಿ ನೀಚವೆನಿಸಿದ ಹರಿಜನರದಿರಲಿ-ಅದರ ಮನಸ್ಸು ಹೂವಿನಂತಿದೆ ಎಂಬುದನ್ನು ಪ್ರತಿಪಾದಿಸಿದೆ. ಈ ಎಲ್ಲ ಕತೆಗಳಲ್ಲೂ ಚರಿತ್ರ ಚಿತ್ರಣ ಇನ್ನೂ ಸ್ಫುಟವಾಗುವಂತೆ ಮಾಡಲು ಅವಕಾಶವಿದೆ. ನೀತಿಬೋಧೆಯೇ ಇಲ್ಲಿ ಉದ್ದಿಷ್ಟವಾಗಿದೆ ಎಂಬುದನ್ನು ಎತ್ತಿ ತೋರಿಸುವುದಕ್ಕಿಂತಲೂ, ಅದನ್ನು ಹಿನ್ನೆಲೆಯಲ್ಲಿಟ್ಟು ಪ್ರಭಾವಿಯಾಗಿ ಬರೆಯುವ ತಂತ್ರ ಹೆಚ್ಚು ಸ್ವಾರಸ್ಯವೆನಿಸುತ್ತಿತ್ತು. ಈ ರೀತಿಯ ಕೌಶಲವನ್ನು ಲೇಖಕರು ತಿಳಿಗತಮಾಡಿಕೊಳ್ಳಬೇಕೆನ್ನುತ್ತೇವೆ.

ಗರತಿ—

ಲೇಖಕ ಮತ್ತು ಪ್ರಕಾಶಕರು— "ಆತ್ಮರಾಮ" ಸದ್ಗುರು ಸೇವಾ ಸಾಹಿತ್ಯಮಾಲೆ ಪರಮಾನಂದ ಮಠ. ಶೀಗೇ ಹಳ್ಳಿ, ಶಿರ್ಸಿ ಬೆಲೆ: ರೂ. ೨—೪—೦.

ಸಂಸಾರದಲ್ಲಿಯ ಸಾರಸ್ಯ ರೂಪಳಾದ ಸ್ತ್ರೀಯನ್ನು ಕುರಿತಾದ ಗ್ರಂಥಗಳು ಕನ್ನಡದಲ್ಲಿ ವಿರಳ. ತಾಯಿ, ತಂಗಿ, ಪತ್ನಿ, ಪುತ್ರಿ ಈ ನಾಲ್ಕು ಬಗೆಗಳಲ್ಲಿ ಸ್ತ್ರೀಯು ಪುರುಷನನ್ನು ಉತ್ಕರ್ಷಕ್ಕೇರಿಸುವುದಕ್ಕೆ ನೆರವಾಗುವಳು. ಪುರುಷಾರ್ಥ ಸಾಧನೆಯಲ್ಲಿ ಸ್ತ್ರೀಯು ಪುರುಷನಿಗೆ ಪೂರಕ ಸ್ಥಾನದಲ್ಲಿರುವಳು. ಸ್ತ್ರೀಚಾರಿತ್ರ್ಯದ ಪಾರಿಶುದ್ಧ್ಯವನ್ನೆ ಎಲ್ಲವೂ ಹೊಂದಿಕೊಂಡಿದೆಯೆಂದು ಸೂಚಿಸುವ ಗೀತಾ ವಾಕ್ಯವನ್ನು ನೆನೆದರೆ ಉತ್ತಮ ಗೃಹಿಣಿಯನ್ನಾಗಿ ಸ್ತ್ರೀಯನ್ನು ತರಬೇತಿಗೊಳಿಸುವುದಕ್ಕೆ ನಾವು ಯೋಗ್ಯ ಶಿಕ್ಷಣಕಾರ್ಯವನ್ನು ಒದಗಿಸಬೇಕೆಂಬುದು ಸತ್ಯ. ಸಾಹಿತ್ಯವೂ ಶಿಕ್ಷಣದ ಕಾರ್ಯವನ್ನು ಕೆಲಮಟ್ಟಿಗೆ ಮಾಡುವುದರಿಂದ ಸ್ತ್ರೀಯರ ಜ್ಞಾನಸಂವರ್ಧನೆಗೆ ನೆರವಾಗಬಲ್ಲ ಎಲ್ಲಾ ಕೃತಿಗಳೂ ಸ್ವಾಗತಾರ್ಹವೆಂಬಲ್ಲಿ ಸಂದೇಹವಿಲ್ಲ. ಅಂಥಾದರಲ್ಲಿ ಆತ್ಮರಾಮರು ಘನಪಾಂಡಿತ್ಯದಿಂದ ಸಿದ್ಧಗೊಳಿಸಿದ ಈ ಗ್ರಂಥವು ತನ್ನ ಉದ್ದೇಶವನ್ನು ಚೆಲುವಾಗಿ ಸಾಧಿಸಿರುವುದೆನ್ನಬಹುದು. ನಮ್ಮ ಸಂಸ್ಕೃತಿಯ ಜಾಯಮಾನಕ್ಕೆ ಒಪ್ಪುವಂತೆ ಸ್ತ್ರೀಯು ಸ್ವಕಲ್ಯಾಣವನ್ನೂ ಸಮಾಜ ಹಿತವನ್ನೂ ಸಾಧಿಸುವುದಕ್ಕೆ ಹೇತುವಾಗ ಬಹುದಾದ ಅನೇಕ ಬೋಧಪ್ರದ ಸಂಗತಿಗಳನ್ನೂ ಲೇಖಕರು ಇಲ್ಲಿ ವಿದ್ವತ್ಪೂರ್ಣ ಶೈಲಿಯಿಂದ ವಿವರಿಸಿರುವರು ಗ್ರಂಥದ ಎರಡನೆ ಭಾಗದಲ್ಲಿ ಪ್ರಾಚೀನ ಅರ್ವಾಚೀನ ಜಗತ್ತಿನಲ್ಲಿ ತಮ್ಮ ಚಾರಿತ್ರ ಬಲದಿಂದ ವಿಖ್ಯಾತರಾಗಿರುವ ಹಲವಾರು ಸ್ತ್ರೀಯರ ಜೀವನ ಚಿತ್ರಣವನ್ನೂ ಮಾಡಿ ಸಿಕೊಟ್ಟಿರುವುದು ಸ್ತುತ್ಯವಿದೆ. ಕಥಾರೂಪದ ಈ ನಿಜ ಜೀವನವನ್ನು ಓದಿ ಮನನ ಮಾಡಿಕೊಂಡು, ನಮ್ಮ ಮಹಿಳೆಯರು ಆದರ್ಶ ಜೀವನವನ್ನು ಅವಲಂಬಿಸ ಬಹುದು.

ಹೊಸ ಬೆಳಕು—

ಲೇಖಕರು: ವೆಂ. ಮು. ಜೋಶಿ. ಪ್ರಕಾಶಕರು: ಪ್ರತಿಭಾಗ್ರಂಥ ಮಾಲೆ' ಧಾರವಾಡ. ಬೆಲೆ. ರೂ. ೧-೮-೦

ಕನ್ನಡ ಸಾಹಿತ್ಯದಲ್ಲಿಯೇ ಅತ್ಯಪೂರ್ವವಾದ ಯುದ್ಧಾಕ್ಷೇತ್ರದ ಹಿನ್ನೆಲೆಯನ್ನಿಟ್ಟುಕೊಂಡು ಬರೆದ ಕತೆಗಳನ್ನು ಚಿನ್ನದ ಪದಕವೆಂಬ ಸಂಗ್ರಹದಲ್ಲಿ ನೀಡಿ ಖ್ಯಾತರಾದ ಜೋಶಿಯವರು, ಇದೀಗ ತಮ್ಮ ಎರಡನೆ ಸಂಗ್ರಹವನ್ನು ಕನ್ನಡಿಗರಿಗೊಪ್ಪಿಸಿರುವರು. ಪ್ರಕೃತ ಸಂಗ್ರಹದಲ್ಲಿರುವ ಕತೆಗಳಲ್ಲಿ ಸಮಾಜ ಜೀವನದ ನಾನಾ ಮುಖಗಳನ್ನು ಚಿತ್ರಿಸುವುದಕ್ಕೆ ಪ್ರಾಧಾನ್ಯವನ್ನು ಕೊಟ್ಟಿರುವರು. ಹೆಣ್ಣು ಗಂಡಿನ ಸಮಸ್ಯೆ. ಬಡತನ ಸಿರಿತನಗಳ ಸಮಸ್ಯೆ ಮುಂತಾದವುಗಳನ್ನು ಸಹಾನುಭೂತಿಯಿಂದ ನೋಡಿ ವಿವೇಚಿಸುವುದಕ್ಕೆ ಲೇಖಕರು ಪ್ರಯತ್ನಿಸಿರುವರು. ಎಲ್ಲ ಕತೆಗಳಲ್ಲಿಯೂ ಹಿನ್ನೆಲೆಯನ್ನು ಸೂಕ್ಷ್ಮ ದೃಷ್ಟಿಯಿಂದ ಅವಲೋಕಿಸಿ ಸ್ಫುಟವಾದ ಚಿತ್ರವನ್ನು ನೀಡಲಿಕ್ಕೆ ಲೇಖಕರು ಸಮರ್ಥರಾಗಿರುವರು. ಅವರು ಬಳಸಿದ ತಂತ್ರವೂ ಪ್ರಭಾವಿಯಾಗಿದೆ. ಓದುಗನ ಕುತೂಹಲವನ್ನು ಕ್ಷಣಕ್ಷಣಕ್ಕೂ ಕೆರಳಿಸಿ ರಸೋತ್ಕರ್ಷದೆಡೆಗೆ ಸ್ವಾರಸ್ಯವಾಗಿ ಮುನ್ನಡೆಯಿಸುವ ಕಲೆಯಲ್ಲಿ ಜೋಶಿ ಪಳಗಿರುವರು. ಚಮತ್ಕಾರದಿಂದ ಘಟನೆಗಳನ್ನು ಪೋಣಿಸಿಕೊಂಡು, ರಸಭಂಗವಾಗದಂತೆ, ಸೌಂದರ್ಯ ಕೆಡದಂತೆ ಚೆಲೋದಾಗಿ ಈ ಕತೆಗಳು ಬರೆಯಲಾಗಿವೆ ಪ್ರತಿಯೊಂದೂ ಕತೆ ತನ್ನ ವೈಶಿಷ್ಟ್ಯದಿಂದ ಮೆಚ್ಚುಗೆಯನ್ನು ಪಡೆಯುತ್ತದೆ, ಕಥನ ಕಲೆಯಲ್ಲಿ ಜೋಶಿಯವರು ಇನ್ನು ಹೆಚ್ಚಿನ ನೈಪುಣ್ಯವನ್ನು ಪಡೆದು ಖ್ಯಾತನಾಮರಾಗಲಿ ಎಂದು ಹಾರೈಸುತ್ತೇವೆ.

ಪಕ್ಷಿದೃಷ್ಟಿ—

ಲಂಡನ್ನಿನಲ್ಲಿರುವ ಭಾರತದ ಕೇಂದ್ರ ಸರಕಾರದ ಸಮಿತಿಯವರು ತಮ್ಮ ಮಾಸಿಕ ಪತ್ರದ ಕನ್ನಡ ಆವೃತ್ತಿಯನ್ನು ಇದೇ ಜನವರಿಯಿಂದ ಪ್ರಕಟಿಸ ತೊಡಗಿರುವರು. ತೆಂಗಿನ ವ್ಯವಸಾಯಗಳಿಗೆ ಉಪಯುಕ್ತವಾದ ಸಲಹೆ ಸೂಚನೆಗಳನ್ನು ಈ ಪತ್ರಿಕೆ ಒದಗಿಸಿ ಕೊಡುತ್ತದೆ. ವರ್ಷಕ್ಕೆ ಕೇವಲ ಹನ್ನೆರಡಾಣೆ ಚಂದಾವನ್ನು ಸಮಿತಿಯ ಕಾರ್ಯದರ್ಶಿಗಳಿಗೆ ರವಾನಿಸಿ, ಇದನ್ನು ಪಡೆಯ ಬಹುದು. ಪತ್ರಿಕೆಯ ಭಾಷಾ ಶುದ್ಧಿಯ ಮಟ್ಟಿಗೆ ಸಂಪಾದಕೀಯ ವಿಭಾಗ ಹೆಚ್ಚು ಶ್ರಮ ವಹಿಸಬೇಕು.

ಉಡುಪಿ ಡಿ. ಮು. ಕೋರ್ಟಿನಲ್ಲಿ—
O. S: No. 3/53.

ಸುಬ್ರಹ್ಮಣ್ಯಾಚಾರ್ಯ— ವಾದಿ.
ಮತ್ತು
ಅಜೀಜ್ ಅಹಮ್ಮದ್ ಕೂಡಾ— ಪ್ರತಿವಾದಿರು ಯವರೊಳಗೆ—

ಈ ವ್ಯಾಜ್ಯದ 2ನೇ ಪ್ರತಿವಾದಿ— ಅಂಡಾರ್ ಸಯ್ಯದ್ ಬಶೀರ್ ಅಹಮ್ಮದ್. ಹಾಜಿ ಸಯ್ಯದ್ ಹುಸೇನ್ ಸಾಹೇಬರ ಮಗ ಕಾರ್ಕಳ ಕಸಬಾ— ಇವರಿಗೆ ಈ ಮೂಲಕ ತಿಳಿಸುವುದೇನಂದ್ರೆ—

ವಾದಿಗೆ ಪ್ರತಿವಾದಿರು ತಾ. 7-1-1950 ರಲ್ಲು ರೂ. 1000-0-0ಕ್ಕೆ ಬರಕೊಟ್ಟ ಡಿಮಾಂಡ್ ನೋಟಿನ ಬಾಬ್ತು ಅಸಲು ಬಡ್ಡಿ ನೋಟೀಸು ಖರ್ಚು ಕೂಡಾ ರೂಪಾಯಿ 1169—11—4ಕ್ಕೆ ವಾದಿಯು ಪ್ರತಿವಾದಿರ ಮೇಲೆ ಮಾಡಿರುವ ನೋಲ್ದಂಡ ವ್ಯಾಜ್ಯವು ತಾ 28-2-53ಕ್ಕೆ 2ನೇ ಪ್ರತಿವಾದಿಯಾದ ನಿಮ್ಮ ನೋಟೀಸು ಬಗ್ಗೆ ಇಟ್ಟಿದೆ. ಆದ್ದರಿಂದ ನೀವು ಸದ್ರಿ ತಾ. 28-2-53ನೇ ದಿನ್ನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹ ವ ವಕೀಲರ ಮುಖಾಂತ್ರ ಹಾಜರಾಗಿ ನಿಮ್ಮ ಉದಾಹರಣೆ ಯಿದ್ದಲ್ಲಿ ದಾಖಲು ಮಾಡತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಗೈರ್ಹಾಜರಿ ಮಾಡಿ ಸದ್ರಿ ವ್ಯಾಜ್ಯವು ಫೈಸಲು ಮಾಡಲ್ಪಡುವುದು.

P. V. Acharya
Vakil for plaintiff·

ಉಡುಪಿ, ತಾ. 17-2-53.

For Protection and Provision Consult

The New Guardian of India Life Insurance Co., Ltd.

Estd] Head office: **MADRAS** [1934

NEW BUSINESS	Exceeds	...	66½ Lakhs·
PREMIUM INCOME	„	...	15 „
LIFE FUND	„	...	54¾ „
ASSETS	„	...	60¾ „
BUSINESS IN FORCE	Nearly		3 Crores·

A Policy in this Progressive Life Office is good investment; its Agency is valuable business connection.

Applications for Representation are invited from energetic influential persons, with good connection· *Please apply to:*

G. R· Wallia, *Branch Manager,*
Diamond Building, Hampankatta, MANGALORE, S. K·

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು.-ಆಯುರ್ವೇದ ಭೂಷಣ| ಯಂ. ವಿ. ಶಾಸ್ತ್ರೀ,

ಇವರ
ನವಜೀವಾತು
ಎಂಬ
ಸೂತಿಕಾರಸಾಯನ|

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರ ರಸಾಯನ.

ಹೆಚ್ಚಿನ ಮಾಹಿತಿಗೆ— ಡಾ| ಯಂ. ಸಿ. ಶಾಸ್ತ್ರೀ, ಯಲ್. ಐ. ಎಂ.
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ವಾಮಿಸ್ಥರು:— ಡಾ| ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು.

ವಿಚಾರ ಪ್ರಚೋದಕವಾದ ಪ್ರತಿಯೊಬ್ಬರೂ ಓದಲೇಬೇಕಾದ ನವನವೀನ ಪುಸ್ತಕಗಳು!

ಗೀತಾ ರಹಸ್ಯವನ್ನು ತಿಳಿಯ ಬಯಸುವವರಾರು?

ವಿ. ಹೊಸಕೆರೆ ಚಿದಂಬರಯ್ಯ ಕೃತ **ಗೀತೆಯ ಕೈಗನ್ನಡಿ** ಭಗವದ್ಗೀತೆಯ ಸಮೂಲ ಭಾಷಾಂತರ

ಪುಟಗಳು 428 ಬೆಲೆ 0-12-0 ಅಂಚೆವೆಚ್ಚ 0-4-0

100 ಪ್ರತಿಗಳಿಗೆ ರೂ. 60; 250ಕ್ಕೆ ರೂ. 140; 500ಕ್ಕೆ ರೂ 250

ಕತೆ, ಕಾದಂಬರಿ, ನಾಟಕ, ಚಿತ್ರ, ಪ್ರಬಂಧ, ಹರಟೆ ಮೊದಲಾದ, ನೂರಿದರ ಮೀರಿರುವ ಅಂತರಂಗ ಪ್ರಕಟನಾಲಯದ ರೂ. 30 ಕ್ರಯದ 26 ಪ್ರಕಟನೆಗಳನ್ನು ಒಮ್ಮೆಯೇ ತರಿಸಿಕೊಳ್ಳುವವರಿಗೆ ರೂ. 24ಕ್ಕೆ ಕೊಡಲಾಗುವುದು.

ನಾರೀಹೃದಯ ರೂ.	1	8	ಪ್ರಕಾಶ ರೂ.	2	8	ನನಗಿಗಾಗಿ ರೂ.	2	0
ಭಾರತೀಯ ಕತೆಗಳು	1	12	ಮಧುವನ	3	0	ಕಾವ್ಯಸಾಮ್ರಾಜ್ಯ	1	8
ಸನ್ಯಾಸಿಯ ಸೋಗಿನಲ್ಲಿ	1	12	ಘಟವಾರಿ	2	0	ಪ್ರೇಮ ವಿಜಯ	1	4
ಕವಿತಾ ಕಾಮಿನಿ	2	0	ಸಂದಾದೀಪ	1	0	ರಂಗಭೂಮಿ	0	10
ಕುಲವಿಲ್ಲದ ಜೇನು	2	0	ಜಮೀನ್ದಾರ	1	8	ಭಾರತದಲ್ಲಿ ಜಾತಿಭೇದ	1	0
ವ್ಯಭಿಚಾರಿಣಿ ಯಾರು	1	4	ದೇಶಭಕ್ತ	1	4	ವೀರ ಸಾವರ್ಕರ	1	4
ಸುಲಭದಲ್ಲಿ ಇಂಗ್ಲಿಷ್	2	0	ಮನೆ ಮದ್ದು	2	8	ಕದಂಬ	1	4
ನೀತಿವಿನೋದ ಕತೆಗಳು	0	12	ಸರಸ್ವತಿ	0	12	ಭಾಗ್ಯಲಕ್ಷ್ಮಿ	1	4
ಜೀವನ ಸಂಗ್ರಾಮ	1	8	ಸೇವಾಪಥ	0	8	ಲೋಕಾಪವಾದ	0	8

ಇವೇ ಮೊದಲಾದ ನೂರಾರು ಬಗೆಯ ಉಪಯುಕ್ತ ಪುಸ್ತಕಗಳ ಕೆಟಲಾಗಿಗೆ ಬರೆಯಿರಿ. ವ್ಯಾಪಾರಿಗಳಿಗೂ, ಪುಸ್ತಕಭಂಡಾರಗಳಿಗೂ ವಿಶೇಷ ಸವಲತ್ತುಗಳಿವೆ

ನವಭಾರತ ಪುಸ್ತಕ ಭಂಡಾರ, ಉಡುಪಿ, ದ ಕ.



ಒಂದು ಮಹಾದೋಷ

(೧ನೇ ಪುಟದಿಂದ)

ತ್ಯಂತ ಅಗತ್ಯದ್ದಾಗಿರುವ ಸಾಮಾಜಿಕ ಮತ್ತು ಪ್ರತ್ಯಕ್ಷ ಜೀವನರಂಗದಲ್ಲಿ ಪಾತ್ರವಹಿಸಿ ಅದನ್ನು ಸಾಗಿಸಿಕೊಂಡು ಹೋಗಲು ಅವಶ್ಯವೆನಿಸಿದ ಶಿಕ್ಷಣವನ್ನು ಕೊಡದಿದ್ದುದು ಇದೆಲ್ಲ ಅನರ್ಥಕ್ಕೆ ಕಾರಣ.

ಅನುಭವಿಕ ಹಿರಿಯರೂ ವಿಖ್ಯಾತ ಅರ್ಥಶಾಸ್ತ್ರಜ್ಞರೂ ಆದ ಶ್ರೀ ಮೋಕ್ಷ ಗುಂಡಂ ವಿಶ್ವೇಶ್ವರಯ್ಯನವರು "ಜೀವನವನ್ನು ಸಾಗಿಸಿಕೊಂಡು ಹೋಗಲಿಕ್ಕೆ ಅವಶ್ಯವಾದ ಶಿಕ್ಷಣವನ್ನು ವಿಶ್ವವಿದ್ಯಾಲಯಗಳು ಮತ್ತು ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಕೊಡಬೇಕು" ಎಂದಿರುವರು. ತಾವು ಕಲಿತುದನ್ನು ವ್ಯವಹಾರದಲ್ಲಿ ಉಪಯೋಗ ಮಾಡಿಕೊಳ್ಳುವ ವಿಧಾನವನ್ನು ಅವರು ಅರಿತಿರಬೇಕು. ಈ ಕ್ಷೇತ್ರದ ವ್ಯಾಪ್ತಿಯು ಕಾರಕೂನಿಕೆಗಷ್ಟೇ ಸೀಮಿತವಿರದೆ, ಜೀವನದ ಎಲ್ಲ ರಂಗಗಳಿಗೂ ಹಬ್ಬಿರಬೇಕು. ಕೃಷಿ, ರಸಾಯನ ಶಾಸ್ತ್ರ ಮುಂತಾದವುಗಳಲ್ಲಿ ತಾಂತ್ರಿಕ ಶಿಕ್ಷಣವನ್ನು ನೀಡಬಹುದು ಮೆಕ್ಯಾನಿಕಲ್ ಇಂಜಿನಿಯರಿಂಗ್ ಅರ್ಥಶಾಸ್ತ್ರ, ಮುಂತಾದವುಗಳ ಹೆಚ್ಚಿನ ಜ್ಞಾನವನ್ನು ಮಾಡಿಕೊಡಬಹುದು. ಹೀಗ ಉಚ್ಚ ಶಿಕ್ಷಣವನ್ನು ಪಡೆದವರು ವ್ಯವಹಾರವನ್ನು ಸಾಗಿಸಲು ಯೋಗ್ಯರೆನಿಸಿದ ಮ್ಯಾನೇಜರರು, ಅಥವಾ ತಜ್ಞರಾಗಿ ಜೀವನ ನಿರ್ವಹಿಸಿದರೆ ಸಾಮಾನ್ಯ ಶಿಕ್ಷಣ ಪಡೆದವರು ಪ್ರತ್ಯಕ್ಷ ಕೆಲಸಮಾಡುವ ಕಾರ್ಯ ಪಟುಗಳಾಗಿ ಪರಿಣಮಿಸುವರು. ಆದರೆ ಇಂದು ವಿಶ್ವವಿದ್ಯಾಲಯಗಳು ಉದರ ಪೋಷಣೆಗೆ ನೆರವಾಗುವ ಶಿಕ್ಷಣ ಕೊಡುವುದನ್ನೇ ಮರೆತು ಬಿಟ್ಟಿವೆ. ನಾವೆಲ್ಲರೂ ದಟ್ಟದರಿದ್ರರಾಗಿರವಷ್ಟು ನಮಗು ನಮ್ಮ ಪ್ರಸ್ತುತದ ಶಿಕ್ಷಣ ಪದ್ಧತಿಯಿಂದ ಅಪಾರ ಹಾನಿಯನ್ನು ಹೊಂದುವುದೇ ನಿಶ್ಚಯ.

ಪರಿಣಾಮವಾಗಿ ಒಬ್ಬ ರೈತನು ತನ್ನ ಮಗನನ್ನು ಶಾಲೆಗೆ ಕಳಿಸಲು ಈಗ ಇಚ್ಛಿಸುವುದಿಲ್ಲ. ಜೀವನ ವಾದವು ಸಬಲವಾಗಿದೆ; ಏಕೆಂದರೆ, ಬಿ. ಎ. ಪದವೀಧರನಾಗಿ ಮನೆಗೆ ಮರಳಿದ ಮಗನು ನಿರುದ್ಯೋಗಿಯಾಗುತ್ತಾನೆ. ಮನೆಯಲ್ಲಿ ಒಕ್ಕಲುತನವನ್ನು ಕೈಗೊಳ್ಳುವುದೆಂದರೆ- ಅವನ ಆಯುಷ್ಯನಿಧೀ ಪುಸ್ತಕವನ್ನು ಗಿಳಿಪಾಠ ಮಾಡುವುದಕ್ಕೆ ಮಾಸಲಾಗಿದೆ ಹೊರತು, ನೇಗಿಲು ಹಿಡಿಯುವ ಅಭ್ಯಾಸ ಅವನಿಗಿರುವುದಿಲ್ಲ. ಇಂದು ನಾವು ಜೀವನದ ಪ್ರತಿಯೊಂದೂ ರಂಗದಲ್ಲಿ ಕಾಣುವ ಅನಾಹುತಕ್ಕೆ ಮೂಲದಲ್ಲಿ ಈ ತೆರನಾದ ದ್ವಂದ್ವವಿರುವುದನ್ನು ಕಾಣುತ್ತೇವೆ. ರಾಜಾಜಿ ಒಂದು ಸಭೆಯಲ್ಲಿ ಹೇಳಿದಂತೆ, ಹಿಂದೆ ಹುಡುಗಿಯರು ಮನೆಯಲ್ಲಿ ಒಲೆಗಳ್ಳಿಗೆ ಕೈಗೊಟ್ಟು ಹಾಡುತಿದ್ದಂತೆ, ಗೃಹಕೃತ್ಯದಲ್ಲಿ ನಿಷ್ಣಾತರಾಗುತಿದ್ದರು. ಜವಂಪರ ಮನೆಯನ್ನು ಚೊಕ್ಕಟವಾಗಿ ಜೆಲೋದಾಗ ಹೇಗೆ ಸಾಗಿಸಬಹುದೆಂಬುದನ್ನು ಹಿರಿಯರ ನೆರವಿನಿಂದ ಮನೆಯಲ್ಲಿಯೇ ಕಲಿತು ಕೊಳ್ಳುತಿದ್ದರು. ಇಂದು ಈ ಕೆಲಸಕ್ಕಾಗಿ ಅವರು ಕಾಲೇಜು ಸೇರಿರುವರು. ಮನೆಯಲ್ಲಿ ಪ್ರತ್ಯಕ್ಷ ಕಲಿಯತಕ್ಕುದನ್ನು ದಪ್ಪದಪ್ಪ ಪುಸ್ತಕಗಳಲ್ಲಿರುವ ವರ್ಣನೆ ಓದಿ ಮನನಮಾಡಿಕೊಳ್ಳಲು ಪ್ರಯತ್ನಿಸುತ್ತಿರುವವರು ಹೇಗೆ ಬಾಯಿಪಾಠ ಮಾಡಿ, ಲೇಖಿ ಪರೀಕ್ಷೆಯಲ್ಲಿ ಚೆನ್ನಾಗಿ ಬರೆದು, ಗೃಹಕೃತ್ಯದಲ್ಲಿ ವಿಶೇಷ ಜ್ಞಾನಪಡೆದವಳೆಂಬ ಪದವಿಯನ್ನು ಪಡೆದುಕೊಂಡಷ್ಟಕ್ಕೆ- ಸಮಾಜ ಅವಳನ್ನು ಆದರದಿಂದ ನೋಡುವುದು ಆದರೆ ಅಡಿಗೆ ಮನೆಯ ಮುಂದೆ ಹೋಗ ವಾಗ ಮಾತ್ರ ಅವಳಿಗೆ ಕೈಯಲ್ಲಿ ಪಾಕಶಾಸ್ತ್ರ ಪುಸ್ತಕ ಬೇಕಾಗುವುದು.

ಕೊನೆಯದಾಗಿ— ಜನತೆಯ ಖಾಸಗೀ ಜೀವನವನ್ನು ವಿಶುದ್ಧಗೊಳಿಸುವುದು ಶಿಕ್ಷಣದ ಕರ್ತವ್ಯವೆಂದು ಶಿಕ್ಷಣ ವಿಷಯದಲ್ಲಿ ತಜ್ಞರಾದ ಕಾರ್ಡಿನಲ್ ನ್ಯೂಮನ್ ಹೇಳಿರುವರು. ಆದುದರಿಂದ ನೈತಿಕ ಮತ್ತು ಧಾರ್ಮಿಕ ಶಿಕ್ಷಣವನ್ನು ನಾವು ಜಾತ್ಯತೀತ ರಾಷ್ಟ್ರವೆಂಬ ಹೆಸರಿನಲ್ಲಿ ದುರ್ಲಕ್ಷಿಸಿದ್ದು ಅಕ್ಷಮ್ಯ ಅಪರಾಧವಾಗಿದೆ. ನಿಜವಾದ ಧರ್ಮವು ಸರ್ವಧರ್ಮ ಸಮನ್ವಯವಾಗಿದ್ದು, ಮಾನವನ ವಿಶ್ವಬಂಧುತ್ವವನ್ನೂ ಪರಮಾತ್ಮನ ಜಗತ್ಪಿತೃತ್ವವನ್ನೂ ಜೋರಾಗಿ ಪ್ರತಿಪಾದಿಸುತ್ತದೆ. ವಿದ್ಯಾರ್ಥಿಗಳ ಶೀಲಸ್ವಭಾವಗಳನ್ನು ರೂಪಿಸುವ ಹೊಣೆಯು ಕೂಡ ಶಿಕ್ಷಣಕ್ಕಿರುವುದರಿಂದ ಇದನ್ನು ಅಲಕ್ಷ್ಯದಿಂದ ನೋಡುವುದೆಂದರೆ ಮಹಾದೋಷ. ಶಿಕ್ಷಣದ ಸರ್ವಾವಸ್ಥೆಗಳಲ್ಲಿಯೂ ವಿದ್ಯಾರ್ಥಿಗಳ ಗುಣಶೀಲಗಳಿಗೆ ಮತ್ತು ನೀತಿ ನಡವಳಿಕೆಗಳಿಗೆ ಅತ್ಯಧಿಕ ಗಮನವನ್ನು ಕೊಡತಕ್ಕದ್ದೆಂದು ರಾಷ್ಟ್ರಾಧ್ಯಕ್ಷರು ಹೇಳಿರುವುದು ಸಮಂಜಸವಾಗಿದೆ. ವಿದ್ಯಾರ್ಥಿಗಳಿಗೆ ಜೀವನದ ರಹಸ್ಯವನ್ನು ತಿಳಿಸಿಕೊಡದೆ ಇರುವುದರಿಂದ ಅವರು ಬದುಕಿನ ಉದ್ದೇಶ, ಅದನ್ನು ಸಾಧಿಸಲು ಬೇಕಿರುವ ನಿಷ್ಠೆ ಮುಂತಾದವುಗಳ ಸಂಗತಿಯಲ್ಲಿ ಅಸಹಾಯರಾಗಿರುವರು. ಎಲ್ಲ ಧರ್ಮಗಳಲ್ಲಿಯೂ ತಿರುಳು ಒಂದೇಯಾಗಿರುವುದರಿಂದ ಇಂಥ ಸಾಮಾನ್ಯ ನೀತಿಯನ್ನು ಬೋಧಿಸುವುದು ಕ್ರಮಪ್ರಾಪ್ತವೆಂಬುದಾಗಿ ಗಾಂಧೀಜಿ ಹೇಳಿದ್ದರು.

ನಾವು ಶಿಕ್ಷಣವನ್ನು ಭಾರತದ ಪ್ರಸ್ತುತ ಪರಿಸ್ಥಿತಿಗೆ ಒಗ್ಗುವಂತೆ ಇನ್ನೂ ಅಳವಡಿಸಿಕೊಳ್ಳದಿರುವುದು ಮಹಾದೋಷವೆನಿಸುತ್ತದೆ. ಅದನ್ನು ದೂರೀಕರಿಸಲು ಪ್ರಯತ್ನಿಸುವುದು ಕರ್ತವ್ಯವೆಂದು ತಿಳಿದು ಬಾಳೋಣ!—ಓಂತತ್ಸತ್॥

ವಾರದ ಒಳಿತು ಕೆಡುಕುಗಳು

ತಾ 26-2-53ರಿಂದ ತಾ. 4-3-53ರ ವರೆಗೆ.

ಮೇಷ— ಕೆಲವೊಂದು ವಾರಗಳಿಂದ ನಿಮ್ಮ ಜೀವನ ಮಟ್ಟವು ಸಾಕಷ್ಟು ಉತ್ತಮ ಸ್ಥಿತಿಗೆ ಬಂದಿತ್ತು. ಆದರೆ ಈ ವಾರದಲ್ಲಿ ಆರೋಗ್ಯ ಮತ್ತು ಆರ್ಥಿಕ ಭಾಗಕ್ಕೆ ಕೊಂಚ ಧಕ್ಕೆ ತಗಲಲಿದೆ, ಉತ್ಪತ್ತಿಗಿಂತ ದ್ವಿಗುಣವ್ಯಯವಾಗುವದು. ಶತ್ರುಜನರಿಂದ ಪರಾಭವವುಂಟಾಗಲಿದೆ. ಪಿತ್ಥ ಪ್ರಕೋಪದಿಂದಾಗಿ ಆರೋಗ್ಯವು ಕೆಡುವದು, ವಿನಾಕಾರಣ ಕಲಹ ಸ್ಥಾನಚಲನೆಗಳ ಯೋಗವಿದೆ. ಬಂಧುವರ್ಗದವರ ಸಹಕಾರವು ಲಭಿಸದು. ಗೃಹ ಸುಖಭೋಗಗಳಿಗೆ ಹಾನಿಯಾಗದು. ವಾರಾಂತ್ಯದ 3 ದಿನಗಳಲ್ಲಿ ಶುಭಲಾಭ ವಿಜಯಗಳಿವೆ.

ವೃಷಭ— ನಿಮ್ಮ ಅದೃಷ್ಟವಿಂದು ಉತ್ತಮ ತೆರನಾಗಿದೆ. ಯಾವ ಕಾರ್ಯದಲ್ಲೂ ನೀವು ಮುಂದಿಟ್ಟ ಹೆಜ್ಜೆಯನ್ನು ಹಿಂದಿಡಲಾರಿರಿ. ಸಂಕಲ್ಪದಂತೆ ಪ್ರತಿಯೊಂದು ಕಾರ್ಯಗಳೂ ಫಲಿಸಲಿವೆ. ನೀಚಜನರಿಂದಾಗಿ ವಿಶೇಷ ಧನಪ್ರಾಪ್ತಿಯಾಗುವದು. ಸೇವಕ ವರ್ಗದವರಿಗೂ ಶ್ರಮಜೀವಿಗಳಿಗೂ ದಿನಯಾಪನೆಯು ಸುಖಕರವಾಗಿ ಪರಿಣಮಿಸಲಿದೆ. ಸಮಾಜದಲ್ಲಿ ಸ್ಥಾನಮಾನಗಳೂ ರಾಜಕೀಯದಲ್ಲಿ ಕೀರ್ತಿಯೂ ಲಭಿಸಲಿದೆ ತಾ. 26, 27, ಈ ದಿನಗಳು ಅತೀವಪ್ರಶಸ್ತವಿವೆ

ಮಿಥುನ— ಸದ್ಯ ಶುಭಗ್ರಹರೆಲ್ಲರ ಅನುಗ್ರಹವು ನಿಮಗೆ ಲಭಿಸಲಿದೆ. ವ್ಯಾಪಾರ ವ್ಯವಹಾರಗಳಲ್ಲೂ ಉದ್ಯಮಗಳಲ್ಲೂ ಉತ್ತಮವಾದ ಫಲಪ್ರಾಪ್ತಿಯಾಗಲಿದೆ, ಜನತೆಯ ಸಹಕಾರವು ಬಂಧುಮಿತ್ರರ ನೆರವು ಚೆನ್ನಾಗಿರುವುದರಿಂದ ನಿಮ್ಮ ಸಂಕಲ್ಪಗಳು ಅನಾಯಾಸದಿಂದ ಸಿದ್ಧಿಸಲಿವೆ, ಕೆಲವೊಂದು ಗೃಹಛಿದ್ರಗಳಿಂದಾಗಿ ಮನಃಕ್ಲೇಶಕ್ಕೆಡೆಯುಂಟಾದೀತು. ಹಣದ ಸಲುವಾಗ ಲೇವಾದೇವಿಗಳಲ್ಲಿ ಕಲಹವುಂಟಾದೀತು. ತಾ. 28, 1. ಈ ದಿನಗಳು ಇದ್ದುದರಲ್ಲಿ ಪ್ರಶಸ್ತವಿವೆ.

ಕರ್ಕಟ— ದುರ್ವಿಧಿಯು ನಿಮ್ಮನ್ನು ಬಲವತ್ತರವಾಗಿ ಕಾಡುತ್ತಲಿದೆ. ಸಕಲ ಗೃಹವೃಂದವೇ ನಿಮಗೆ ವಿಮುಖರಾಗಿರುವರು. ದೈವಬಲವಿಲ್ಲದೆ ನಿಮ್ಮ ಪೌರುಷವು ಎಂದೂ ಸಫಲವಾಗದು ಮಧು ಹೀನ ಕುಸುಮವನ್ನು ಮಧುಕರಗಳು ದೂರೀಕರಿಸುವಂತೆ ಆಪ್ತೇಷ್ಟರೂ ಬಂಧುವರ್ಗದವರೂ ನಿಮ್ಮ ಸಮೀಪ ಬರಲೊಲ್ಲರು. ಪ್ರತೀಕಾರಾಸಕ್ತರಾದ ವಿರೋಧಿವರ್ಗದವರಿಂದ ಹಲವಾರು ತರದ ಕಷ್ಟನಷ್ಟಗಳುಂಟಾಗುವವು ತಾ. 26, 27, 2, 3, ಈ ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳು ಕಾಣಿಕವು

ಸಿಂಹ— ಅನಿರೀಕ್ಷಿತ ಪರ್ಯಟನಗಳಿಂದಲೂ ಶತ್ರುಜನರ ಪೀಡೆಯಿಂದಲೂ ನಿಮಗೆ ಹೆಚ್ಚಿನ ಕಷ್ಟನಷ್ಟಗಳು ಪ್ರಾಪ್ತವಾಗಬಹುದು. ಆದರೆ ದೈವಬಲಸಂಪನ್ನರಾದ ನೀವು ಉಪಾಯದಿಂದ ಅನಿಷ್ಟಗಳನ್ನು ಪಾರುಗಾಣುವಿರಿ. ವಿದ್ಯೋಪಜೀವಿಗಳೂ ವ್ಯಾಪಾರಿವರ್ಗವೂ ಸೇವಕ ಜನತೆಯೂ ಕೂಡ ಅನಾಯಾಸದಿಂದ ಇಷ್ಟಾರ್ಥವನ್ನು ಪಡೆವುದು ಸಾಂಸಾರಿಕ ತಾಪತ್ರಯಗಳು ಮಾಯವಾಗುವವು ತಾ, 28, 1, 4 ದಿನಗಳಲ್ಲಿ ನಿಮ್ಮ ಬಯಕೆಯು ಸುಖದಿಂದ ಸಿದ್ಧಿಸುವದು.

ಕನ್ಯಾ— ಕೈ ಕೆಸರಾದರೆ ಬಾಯಿ ಮೊಸರಾದೀತೆಂಬ ಲೋಕೋಕ್ತಿಯಿದ್ದರೂ ಇಂದು ನಿಮ್ಮ ಪರಿಶ್ರಮಕ್ಕೆ ತಕ್ಕ ಫಲಪ್ರಾಪ್ತಿಯು ಕಾಣಸದು. ಮನೆಯಲ್ಲಿ ಪರಸ್ಪರ ಸಹೋದರರೊಳಗೂ ಗಂಡ ಹೆಂಡಿರೊಳಗೂ ಒಡಕುಗಳು ಹುಟ್ಟಿ ಗೃಹಸ್ಥ ಜೀವನದಲ್ಲಿ ಬೇಸರವನ್ನು ಹುಟ್ಟಿಸಲಿವೆ. ಕಫ ವಾತ ಪ್ರಕೋಪದಿಂದ ಆರೋಗ್ಯಕ್ಕೆ ಧಕ್ಕೆಯುಂಟಾದೀತು. ಹೆಚ್ಚೇಕೆ ದಿನನಿತ್ಯದ ಖರ್ಚಿನ ಸಲುವಾಗಿ ಹೆರವರ ಮುಖ ನೋಡುವ ಪ್ರಸಕ್ತಿ ಬರಲಿದೆ. ತಾ 26, 27, 2, 3, ಇದ್ದುದರಲ್ಲಿ ಉತ್ತಮ ದಿನಗಳು.

ತುಲಾ— ನಿಮ್ಮ ದೈವವಿಂದು ಉತ್ತಮವಿರುವುದು. ಪರಿಶ್ರಮವು ಸಫಲವಾಗಲಿದೆ. ಮಹತ್ಕಾರ್ಯವನ್ನು ಕೂಡ ಅನಾಯಾಸದಿಂದ ಸಾಧಿಸಲಿರುವಿರಿ. ಜನತೆಯ ಬೆಂಬಲವು ಚೆನ್ನಾಗಿರುವುದರಿಂದ ಶತ್ರುವರ್ಗದವರು ನಿಮ್ಮ ದೃಷ್ಟಿಗೆ ಗೋಚರಿಸಲಾರರು. ಸ್ತ್ರೀಜನರಿಂದಾಗಿ ಅನಿಷ್ಟ ಅಪವಾದಗಳೂ ಪ್ರಾಪ್ತವಾಗುವ ಸಂಭವವಿದೆ ವಿಷಾಗ್ನಿಗಳ ಭಯಕ್ಕೆ ಸಿಲುಕಲಿರುವಿರಿ. ತಾ 2, 3ರಲ್ಲಿ ಹೆಚ್ಚಿನ ಜಾಗ್ರತೆ ವಹಿಸಿರಿ.

ವೃಶ್ಚಿಕ— ದುರ್ದೈವವು ನಿಮ್ಮನ್ನು ಬಹು ವಿಧದಿಂದ ಕಾಡುತ್ತಿರುವುದು. ಬಗ್ಗಿದವನಿಗೆ ಒಂದು ಗುದ್ದು ಎಂಬ ಗಾದೆಯಂತೆ ಕಷ್ಟದಲ್ಲಿ ಸಿಲುಕಿ ನಿಮ್ಮ ಮೇಲೆ ಕಲ್ಲೆಸೆಯುವರೇ ಬಹಳ ಮಂದಿ ಹೆರವರ ವಿಚಾರವಂತಿರಲಿ ನಿಮ್ಮ ಮನೆಯವರೇ ಕರ್ಪರಿ ಕೈಹಿಡಿದ ಅರ್ಧಾಂಗಿ ಹುಟ್ಟಿದ ಮಕ್ಕಳೇ ನಿಮ್ಮನ್ನು ಪ್ರತಿಭಟಿಸುವರೆಂದ ಮೇಲೆ ಇತರರನ್ನು ದೂರಿ ಫಲವೇನು? ಚಿನ್ನವನು ಹಿಡಿದರೂ ಸದ್ಯದ ಪರಿಸ್ಥಿತಿಯಲ್ಲದು ಮಣ್ಣಾದೀತು. ತಾ 26, 27, 4 ಈ ದಿನಗಳು ಅತೀವ ಅನಿಷ್ಟಕರಗಳಿವೆ.

ಧನು— ಸುಖಸ್ಥಾನದಲ್ಲಿದ್ದ ಅಂಗಾರಕನೊಬ್ಬನನ್ನುಳಿದು ಇತರ ಎಲ್ಲಾ ಗ್ರಹರೂ ನಿಮಗೆ ಅನುಕೂಲರಾಗಿರುವರೆಂದ ಮೇಲೆ ಕೇಳಬೇಕೇ. ದೈವಮಾತ್ರಕ್ಕೆ ನಿಮ್ಮ ಪ್ರಯತ್ನವು ಕಾರ್ಯವು ತಾನಾಗಿಯೇ ಸಿದ್ಧಿಸುವದು ಸಕಲ ಜನವೃಂದವೂ ನಿಮ್ಮ ಮೇಲೆ ಸಂಪೂರ್ಣ ಸಹಾನುಭೂತಿಯುಳ್ಳದಾಗುವುದು. ನಿಮ್ಮ ತಾಪತ್ರಯಗಳೆಲ್ಲವೂ ಮಾಯವಾಗಿ ಸುಖದಿಂದ ಕಾಲಯಾಪನೆಮಾಡುವಿರಿ, ಅವ್ಯಾಧಿಗಳಿಂದ ಮುಕ್ತರಾದ ನಿಮಗೆ ವಾರಾಂತ್ಯದ 3 ದಿನಗಳು ಇಷ್ಟಪ್ರದಗಳಿವೆ.

ಮಕರ— ಶ್ರಮಪಟ್ಟು ದುಡಿವಿರಿ ಆದ ನಿಮ್ಮ ಪ್ರಯತ್ನಕ್ಕೆ ತಕ್ಕ ಫಲಲಭಿಸದು. ನಷ್ಟವಾದ ವಸ್ತು ಒಡವೆಗಳು ಪುನಃ ನಿಮ್ಮ ಕೈಸೇರುವವು, ನಿರುದ್ಯೋಗ ಸಮಸ್ಯೆ ಪೀಡಿತರು ಸಮುದ್ಯೋಗವನ್ನು ಹೊಂದಿ ಸುಖಜೀವನ ನಡೆಸಲಿರುವರು ಅಧಿಕಾರಿಗಳ ಭಯ. ಬಂಧು ದ್ವೇಷವೊದಗಾದುವು ಹೆಚ್ಚಬಹುದು ಹೆಚ್ಚಿನ ಸಮಯವನ್ನು ಪರ್ಯಟನದಲ್ಲಿ ಕಳೆವಿರಿ. ತಾ, 26, 27, 4 ದಿನಗಳಲ್ಲಿ ಕಿಂಚಿತ್ಸುಖ ಲಾಭಗಳು ಕಾಣಿಸುವವು,

ಕುಂಭ— ನೆನೆದಂತೆ ಕಾರ್ಯಗಳು ಸಿದ್ಧಿಸಲಾರವು, ಪಿತ್ಥೋಷ್ಣ ಪ್ರಕೋಪದಿಂದ ದೇಹರಕ್ಷಾ ಸುಖವಿರದು ವಿಶೇಷ ಸೇವಕನರಿಗೂ ಶ್ರಮ ಜೀವಿಗಳಿಗೂ ಕಾಲಯಾಪನೆಯು ಕಷ್ಟವೆನಿಸುವುದು, ಆತ್ಮೀಯರ ವಿಯೋಗದಿಂದಲೂ ಗೃಹತಾಪತ್ರಯಗಳಿಂದಲೂ ಪೀಡಿತರಾಗುವಿರಿ. ದುಡಿಮೆಗಿಂತ ದ್ವಿಗುಣ ವ್ಯಯವಾಗುವುದರಿಂದ ಸಿಕ್ಕ ಸಿಕ್ಕವರ ಕೂಡ ಸಾಲ ಕಡಮಾಡ ಬೇಕಾದ ಪ್ರಸಂಗ ಬರಲಿವೆ ವಾರಾದಿಯ 4 ದಿನಗಳು ಹೆಚ್ಚಿನ ದೋಷಕಾರಿಗಳಾಗಲಿರುವವು.

ಮೀನ— ಆರೋಗ್ಯವೇ ಭಾಗ್ಯವೆಂದು ತಿಳಿದವರೆಂದಿರುವರು, ನಿಮಗೆ ಸಾಕಷ್ಟು ಧನವಿದ್ದರೇನು ಆರೋಗ್ಯವು ಚೆನ್ನಾಗಿಲ್ಲವಾದ ಮೇಲೆ ಸುಖವೆಂದ ಪ್ರತಿಯೊಂದೂ ಇರುವುದು. ಸುಖಕ್ಕಾಗಿಯೇ ಹಂಬಲಿಸುವ ನಿಮ್ಮ ಬಯಕೆಯು ನಿಜವಾಗಿಸಲು ದೃಷ್ಟಿ ಮೇಲೆ ಸುಖ ನಾನಾವಲ್ಲಿ ತ್ರಿದೋಷಜನಿತ ಕಾಹಿಲೆಯಿಂದಾಗಿ ಆರೋಗ್ಯವೂ ಕೆಡಲಿದೆ. ಹೆಂಡತಿ ಮಕ್ಕಳ ವಿರಹವೂ ಕೂಡ ಪ್ರಾಪ್ತವಾದೀತು, ತಾ, 28ರಿಂದ 3ರ ವರೆಗಿನ ದಿನಗಳು ಹೆಚ್ಚಿನ ದೋಷದಾಯಿಗಳಾಗಲಾರವು.

ಲಕ್ಷಾಂತರ ಜನರು ಗುಣಹೊಂದಿದ್ದಾರೆ!

ಸರ್ ಜೀವನ್ ಶಿಲಾಜಿತ್ ಲೇಹ

ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ ನೀರಡಿಂಲಕೆ, ಕೆಮ್ಮು ದಮ್ಮು, ಬಹುಮೂತ್ರ, ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರಸ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೭ ಳು ದಿನದ ಲೇಹ್ಯ ರೂ ೫/೪, ೨೨ ದಿನದ ಲೇಹ್ಯ ರೂ ೩೪

(ಪೋಸ್ಟೇಜು ಪ್ರತ್ಯೇಕ)



ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

Edited, Printed & Published By K. H. Shetty at the Navayuga Press, Udipi, S. India.

ಮಧುಪರ್ಕ

ಒಂದು ಸಲ ಯಾವುದೋ ಮಹತ್ವದ ವಿಷಯದಲ್ಲಿ ನೆಹರೂ ಹಾಗೂ ಇನ್ನೋರ್ವ ಮಹನೀಯರ ನಡುವೆ ವಾಗ್ವಾದ ನಡೆಯುತ್ತಿತ್ತು. ನೆಹರೂರ ವಿಚಾರ ಸರಣಿಯು ತಪ್ಪೆಂದು ಪ್ರಮಾಣಿಸುವುದಕ್ಕಾಗಿ ಬಗೆ ಬಗೆಯ ತರ್ಕಗಳನ್ನು ಈ ಮಹನೀಯರು ಮುಂದಿಟ್ಟರೂ— ಅವರು ಸಫಲತೆ ಪಡೆಯಲಿಲ್ಲ. ಕೊನೆಗೆ ವ್ಯಗ್ರ ಭಾವದಿಂದ "ನೆಹರೂಜೀ, ಪ್ರಾಯಶಃ ಪ್ರತಿಯೊಂದೂ ಸಂಗತಿಗೂ ಭಿನ್ನ ಭಿನ್ನವಾದ ಎರಡು ಮುಖಗಳಿವೆ ಎಂಬ ಸಂಗತಿಯನ್ನು ನೀವು ಮರೆತಿದ್ದೀರಿ!" ಎಂದರು.

ನೆಹರು ಒಡನೆಯೇ ಮಾರ್ನುಡಿದರು —"ಸರಿಯೇ, ಹಾಗಾದರೆ ಇದಕ್ಕಾಗಿಯೇ ನೀವು ಸಂಗತಿಯ ತಪ್ಪು ಮುಖವನ್ನೇ ಸರಿಯೆಂದು ಸಮರ್ಥಿಸುತ್ತಿದ್ದೀರಾ?"

ತರ್ಕ ವಿತರ್ಕ

ಒಂದು ವಿಷಯದ ಕುರಿತು ಭಿನ್ನ ಭಿನ್ನವಾದ ಅಭಿಪ್ರಾಯಗಳನ್ನಿಟ್ಟು ವಾದ ಮಾಡಿದ್ದಾದರೆ, ಅದರಿಂದ ಆ ಸಂಗತಿಯ ಪೂರ್ಣ ಸ್ವರೂಪದ ದರ್ಶನವಾಗುತ್ತದೆ ಸಾಮಾನ್ಯವಾಗಿ ಈ ರೀತಿ ತರ್ಕ ವಿತರ್ಕಗಳನ್ನು ನಡೆಸಿದ ಕೊನೆಯ ಘಟ್ಟದಲ್ಲಿ ತಾತ್ವಿಕವಾದ ಒಂದು ನಿರ್ಣಯಕ್ಕೆ ಬರುವುದೂ ಸಾಧ್ಯವೆನಿಸುತ್ತದೆ. ಧರ್ಮ—ಅಧರ್ಮ, ಅಥವಾ ಸಾಮಾನ್ಯ ಮಾತುಗಳಲ್ಲಿ ಒಳ್ಳೆಯದು—ಕೆಟ್ಟದು ಎಂಬ ಸೂಕ್ಷ್ಮದ ಯಥಾರ್ಥ ಜ್ಞಾನವಾಗಬೇಕಿದ್ದರೆ ಪ್ರತಿಯೊಂದೂ ಪ್ರಸಂಗದಲ್ಲಿ ವಿಸ್ತೃತವಾದ ವಿವೇಕಪೂರ್ಣ ವಿವೇಚನೆ ಅಗತ್ಯ. ಆದುದರಿಂದ ನಾವು ನಂಬಿರಬಹುದಾದ, ಮತ್ತು ನಮ್ಮ ವಿಶ್ವಾಸ ಉಳಿದಿರಬಹುದಾದ ಒಂದು ಸಂಗತಿಯೇ ಶಾಶ್ವತ ಸತ್ಯವೆಂದು ಹೇಳುವುದು ಸರಿಯಾಗಲಿಕ್ಕಿಲ್ಲ. ಇದು ಅರ್ಧ ಸತ್ಯವಾಗಿರಬಹುದು; ಅಥವಾ ಪೂರಾ ಸುಳ್ಳಿದ್ದರೂ ಇದ್ದೀತು. ಅಂತೂ ಪೂರ್ಣ ಸತ್ಯವೆನಿಸುವುದು ಬಹಳ ಕಷ್ಟ.

ನಮ್ಮ ನಿತ್ಯದ ವ್ಯವಹಾರದಲ್ಲಿ ಅದೆಷ್ಟೋ ಪ್ರಸಂಗಗಳನ್ನು ಇದಿರಿಸುವ ಸಂದರ್ಭಗಳು ನಮಗೆ ಬರುತ್ತವೆ. ಅಂಥ ಪ್ರತಿಯೊಂದು ಸಂದರ್ಭದಲ್ಲಿಯೂ ಒಳಿತು ಕೆಡುಕಿನ ಪೂರ್ಣ ವಿಚಾರವನ್ನು ಮಾಡಿಯೇ ಒಂದು ನಿರ್ಣಯಕ್ಕೆ ಬರುವಂಥ ಜಾಣ್ಮೆಯಾಗಲೀ ತಾಳ್ಮೆಯಾಗಲೀ ನಮ್ಮಲ್ಲಿ ಕೆಲವೇ ಮಂದಿಗೆ ಇದ್ದ ಬಹುದೋ ಏನೋ. ಆದರೂ ಸಾಧಾರಣವಾಗಿ ನಾವೆಲ್ಲರೂ ಅನುಭವದ ಬಲದಿಂದ ಇದು ಸರಿ, ಇದು ತಪ್ಪು ಎಂಬುದನ್ನು ಚಿಲ್ಲರೆ ಸಂಗತಿಗಳ ಮಟ್ಟಿಗೆ ನಿರ್ಣಯಿಸಲು ಸಮರ್ಥರಾಗುತ್ತೇವೆ. ಹಿಂದಿನಿಂದ ನಡೆದುಕೊಂಡು ಬಂದಿದ್ದ ಪದ್ಧತಿ, ಮತ್ತು ರೀತಿನೀತಿಗಳ ಮೇಲಿಂದ ಈ ಬಗೆಯ ನಿರ್ಧಾರವನ್ನು ಕೈಗೊಳ್ಳಲು ಸಾಧ್ಯವೆನಿಸಿದೆ. ಪರಿಣಾಮವಾಗಿ, ಟಿಕೇಟು ಇಲ್ಲದೆ ಪ್ರಯಾಣಿಸಿದವನು ತಪ್ಪುಗಾರನೆಂದೂ; ಅಂಗಡಿಗೆ ಕನ್ನಹಾಕಿದವನು ಅಪರಾಧಿಯೆಂದೂ, ಸಿರಿವಂತನ ಗಂಟಲು ಹಿಚುಕಿ ಕೊಂದವನು ಕೊಲೆ ಪಾತಕಿಯೆಂದೂ ಒಡನೆಯೇ ತೀರ್ಮಾನಿಸಿ ಬಿಡುತ್ತೇವೆ.

ಆದರೆ ಕಾಲಮಹಿಮೆಯಿಂದ, ಜನಪದದ ವಿಚಾರ ಧಾರೆಯು ಮುಖ ಬಗಲಾಗುತ್ತಾ ಬಂದ ಹಾಗೆ ಹಿಂದೆ ಸರಿ ಎನಿಸಿದುದು, ಇಂದು ತಪ್ಪಾಗಿ ಕಾಣುತ್ತದೆ. ಅದರಲ್ಲೂ ಆಗಿನ ದಿನಮಾನಗಳಲ್ಲಿ ಮಾನುಷ್ಯ ಅತ್ಯಪೂರ್ವವಾದ ಸಂಕ್ರಮಣ ಕಾಲವನ್ನು ಕ್ರಮಿಸುತ್ತಿರುವಂತೆ ಕಾಣುತ್ತದೆ ಹೊಸತು ಹಳೆಯದರ ಘರ್ಷಣೆ ಪ್ರತಿಯೊಂದೂ ಕ್ಷೇತ್ರದಲ್ಲಿ ಕಂಡು ಬರುತ್ತದೆ ಮೇಲೆ ಉದಾಹರಿಸಿದ ಸಂಗತಿಗಳನ್ನೆ ತೆಗೆದು ಕೊಂಡರೆ ಕೊಲೆಪಾತಕಿ, ಕಳ್ಳ, ಮೋಸಗಾರನೆಂದು ಮನುಷ್ಯನನ್ನು ಶಿಕ್ಷಿಸುವುದು ತಪ್ಪು ಎನ್ನುವ ವಿಚಾರವಂತನನ್ನು ನಾವಿಂದು ಕಾಣುತ್ತೇವೆ. ಅವನು ಅಂಥ ಕೆಲಸ ಮಾಡಲಿಕ್ಕೆ ತಾನೊಬ್ಬನೇ ಹೊಣೆಗಾರನಿರಲಿಕ್ಕಿಲ್ಲವೆಂದೂ, ಅಂಥ ಹೇಯ ಕೆಲಸಕ್ಕೆ ಪ್ರಚೋದನೆಯನ್ನು ಕೊಟ್ಟ ನೂರಾರು ಸಂಗತಿಗಳು ಬೇರೆಯೇ ಇರುವುವೆಂದೂ ಈಗಿನ ವಿಚಾರವಂತರು ಸಿದ್ಧಮಾಡಿ ತೋರಿಸಿರುವರು. ಫಲಸ್ವರೂಪವಾಗಿ ಓರ್ವನು ಅಪರಾಧ ಮಾಡಿದರೆ, ಅದರ ಹೊಣೆ ಸಮಾಜದ ಮೇಲೆ, ಸರಕಾರದ ಮೇಲೆ ಅವನಿರುವ



ಎಲಿಜಬೆತ್ II ಮಹಾರಾಣಿಯ ಮೊಹರಿನ ಹೊಸ ಬ್ರಿಟಿಷ್ ನಾಣ್ಯಗಳು

ಪರಿಸ್ಥಿತಿಯ ಮೇಲೆ ಅವನ ಸಹವಾಸಕ್ಕೆ ಬಂದ ಜನರ ಮೇಲೆ ಅವನ ಬುದ್ಧಿಯ ನಿಯಂತ್ರಣವಿಲ್ಲದ ಅಜ್ಞಾತ ಮನಸ್ಸಿನ ಮೇಲೆ—ಹೀಗೆ ಹಂಚಿಬೀಳುತ್ತದೆ. ನಾವು ಮಹಾಪರಾಧವೆಂದು ಗಣಿಸಿ, ಕ್ರೂರವಾಗಿ ಶಿಕ್ಷೆಯನ್ನು ಹಿಂದೆ ಯಾವುದಕ್ಕೆ ನೀಡುತ್ತಿದ್ದೆವೋ—ಇಂದು ಅದನ್ನು ದುರ್ಲಕ್ಷಿಸಿದರೂ ಆಶ್ಚರ್ಯವಿಲ್ಲ.

ಅಪರಾಧಗಳ ಮಟ್ಟಿಗೆ ಮಾತ್ರ ಇಂಥ ಪರಿವರ್ತಿತ ಮನೋಭಾವ ಮೂಡಿದೆ ಎಂದೇನಲ್ಲ-ಎಲ್ಲ ರಂಗದಲ್ಲಿಯೂ ಇಂದು ಒಳಿತು ಕೆಡುಕುಗಳ ಮೂಲ್ಯಾಂಕನದ ಬಗೆ ಹೊಸ ರೀತಿಯಿಂದ ನಡೆಯುತ್ತಿದೆ. ಸಾಧಕಬಾಧಕಗಳನ್ನು ನಿರ್ಧರಿಸುವಾಗ ನಾನಾ ನಿಲುವೆಯಿಂದ ತರ್ಕವಿತರ್ಕಗಳನ್ನು ಮುಂದೆಮಾಡುತ್ತಿರುವರು. ನಮ್ಮ ಶಾಸನ ಸಭೆಗಳಾಗಲೀ ಪಾರ್ಲಿಮೆಂಟಾಗಲೀ—ವಿಚಾರ ವೈವಿಧ್ಯದಿಂದ ಕೂಡಿದ ಗುಂಪಿನ ಸಮ್ಮೇಳನವೇ ನಿಜ. ಈ ವೈವಿಧ್ಯದ ವ್ಯಾಪ್ತಿ ಎಷ್ಟರ ಮಟ್ಟಿಗೆ ಇದೆಯೆಂದರೆ-ಪರಸ್ಪರ ವಿರುದ್ಧವಾದ ಸಿದ್ಧಾಂತವನ್ನು ಎತ್ತಿಹಿಡಿಯುವುದಕ್ಕೆ ಈ ಗುಂಪುಗಳು ಹಿಂಜರಿಯುವುದಿಲ್ಲ. ಒಂದು ಗುಂಪು ಈಗ ಹಗಲೆಂದರೆ, ಇನ್ನೊಂದು ಗುಂಪು ಈಗ ರಾತ್ರಿ ಎಂದೇ ಸಾಧಿಸಬಹುದು. ಇದನ್ನು ಓದಿದೊಡನೆಯೇ ನಿಮ್ಮಲ್ಲಿ ಎಷ್ಟೋ ಜನ—"ಹೀಗೂ ವಿಚಾರಭೇದ [illegible] ಸಾಧ್ಯವೇ?" ಎಂದುಕೊಂಡೀರಿ! ಆದರೆ, ರಾಜಕೀಯ ಕ್ಷೇತ್ರದ ಚಟುವಟಿಕೆಗಳನ್ನು ಕುತೂಹಲದಿಂದ ನಿರೀಕ್ಷಿಸಿದಾಗ, ಇಂಥ ವಿರೋಧಾಭಾಸಗಳೇ ಬಹಳವಾಗಿ ಕಂಡುಬರುತ್ತವೆ.

ಸರಕಾರದ ನೀತಿಯನ್ನು ಸದಾ ಸಮರ್ಥಿಸುವುದರಲ್ಲಿಯೇ ಸಂತೋಷವನ್ನು ಕಂಡ ಜನರು ಇದ್ದಂತೆ ಸರಕಾರದ ವಿರುದ್ಧ ಆಕ್ರೋಶ ಗೈಯುವುದರಲ್ಲಿಯೇ ಪುರುಷಾರ್ಥವನ್ನು ಕಂಡವರೂ ಇರುವರು. ಇವರಲ್ಲಿ ಯಾರು ಸರಿ, ಯಾರು ತಪ್ಪು ಎಂಬುದನ್ನು ನಿರ್ಣಯಿಸುವುದು ಕೆಲವೊಮ್ಮೆ ಪೇಚಿನ ಪ್ರಸಂಗವಾಗುತ್ತದೆ. ಆದರೂ ಕಲ್ಯಾಣರಾಷ್ಟ್ರವೆಂಬ ಸೂತ್ರಕ್ಕೆ ಅನುಗುಣವಾಗಿ ಸರಕಾರವನ್ನು ಇಂದು ನಡೆಸಬೇಕೆಂಬುದಾಗಿ ಬಹುಜನರ ಅಭಿಪ್ರಾಯವಿರುವುದರಿಂದ ಎರಡೂ ಗುಂಪಿನ ವಾ[illegible] ಯೋಗ್ಯತೆಯನ್ನು ಇವರೆಲ್ಲಿಗೆ ಹಚ್ಚಬೇಕು. ಸರಕಾರ ಸರ್ವಾಸರ್ವಾ ಸರಿಯಾದ ರೀತಿಯಲ್ಲಿ ನಡೆಯುತ್ತಿದೆ

(ಮುಂದೆ ಪುಟ ನೋಡಿರಿ)

ಲೇಖಾಂಕ: ೨

ಜಪಾನಿನಲ್ಲಿ ಭತ್ತದ ವ್ಯವಸಾಯ

ನಮ್ಮ ರೈತರೊಡನೆ ನಿಕಟ ಬಾಂಧವ್ಯವನ್ನು ಬೆಳೆಸಿಕೊಳ್ಳುವುದು ವ್ಯವಸಾಯ ಕ್ಷೇತ್ರದ ತಜ್ಞರ ಕರ್ತವ್ಯ.

— ೧ —

ಮೊದಲೇ ಹೇಳಿದಂತೆ, ಜಪಾನಿನ ನೆಲವು ಫಲವತ್ತತೆಯಲ್ಲಿ ಬಹಳ ಹಿಂದೆ: ಭತ್ತದ ಬೆಳೆಯು ಚೆನ್ನಾಗಿ ಆಗಲಿಕ್ಕೆ ಬೇಕಿರುವ ಭೂಸತ್ವದಲ್ಲಿ ಕೇವಲ ಮೂರರಲ್ಲಿ ಎರಡಂಶಮಾತ್ರ ಇಲ್ಲಿಯ ನೆಲ ಪಡೆದಿದೆ. ಆದುದರಿಂದ ದೇಶದಾದ್ಯಂತ ಅನೇಕ ಸಂಶೋಧನೆಗಳನ್ನು ನಡೆಸಿ, ಭೂಮಿಯ ಸಾರವನ್ನು ಹೆಚ್ಚಿಸುವುವೆಂದು ಸಿದ್ಧಗೊಂಡ ಬಗೆ ಬಗೆಯ ಕೃತಕ ಗೊಬ್ಬರಗಳನ್ನು ಉಪಯೋಗಿಸುತ್ತಾರೆ. ಮಣ್ಣಿನೊಡನೆ ಈ ಫಲವರ್ಧಕ ಗೊಬ್ಬರಗಳನ್ನು ಚೆನ್ನಾಗಿ ಮಿಶ್ರಮಾಡಿ, ಭೂಮಿಯನ್ನು ಬಿತ್ತನೆಗೆ ಹದಗೊಳಿಸುವರು ಈ ರೀತಿ ಸಂಪೂರ್ಣವಾಗಿ ಫಲವರ್ಧಕ ಗೊಬ್ಬರಗಳನ್ನು ಉಪಯೋಗಿಸುವುದರಿಂದ ಬಹಳ ಲಾಭವಿದೆ ಎಂದು ಕಂಡುಬಂದಿದೆ. ಸಾಮಾನ್ಯ ನೆಲದಲ್ಲಿನ ಫಲವತ್ತತೆಯನ್ನು ಹೊಂದಿಕೊಂಡು ಎಕ್ರೆಯೊಂದಕ್ಕೆ ೮೦–೧೦೦ ರಾತಲು ನೈಟ್ರೋಜನ್, ಮತ್ತು ೭೦–೮೦ ರಾತಲು ಗಂಧಕ ಮತ್ತು ಪೊಟಾಶನ್ನು ಉಪಯೋಗಿಸುವರು.

ಸಸ್ಯಜನ್ಯ ಹಾಗೂ ಧಾತುಜನ್ಯ ಗೊಬ್ಬರಗಳನ್ನು ಮಿಶ್ರಮಾಡಿ ಉಪಯೋಗಿಸುವ ಪದ್ಧತಿಯೇ ಅತ್ಯಧಿಕ ಬಳಕೆಯಲ್ಲಿದೆ. ಹಸುರೆಲೆ ಸಸ್ಯವನ್ನು. ಮುಖ್ಯವಾಗಿ ಸೋಯಾ ಧಾನ್ಯವನ್ನು, ಗದ್ದೆಗಳಲ್ಲಿ ಬೆಳೆಸಿ, ಅನಂತರ ಅವುಗಳನ್ನು ಅಲ್ಲಿಯೇ ಕಡಿದುಹಾಕಿ, ನೇಜಿ ನೆಡಲು ಮೂರುವಾರಗಳಿರುವಾಗ ಉತ್ತುಬಿಡುವುದು ವಾಡಿಕೆ. ಈ ರೀತಿಯಲ್ಲಿ ಭೂಮಿಗೆ ಸಿಕ್ಕುವ ಹಸುರೆಲೆ ಗೊಬ್ಬರವು ಎಕ್ರೆಗೆ ನಾಲ್ಕೈದು ಟನ್ನುಗಳಷ್ಟಾಗುತ್ತದೆ. ಅನಂತರ ಗದ್ದೆಗೆ ನೀರುಣಿಸಿ, ಎಕ್ರೆಗೆ ೧೩ ಟನ್ನಿನಂತೆ ಸುಣ್ಣವನ್ನು ಬೆರೆಸುವರು. ಇದರಿಂದ ಹಸುರೆಲೆ ಗೊಬ್ಬರವು ಬೇಗನೇ ಮಣ್ಣುಗೂಡುವುದಕ್ಕೆ ಸಹಾಯವಾಗುತ್ತದೆ. ಹಸುರೆಲೆ ಗೊಬ್ಬರವಲ್ಲದೆ ಸೋಯಾಧಾನ್ಯದ ಹಿಂಡಿ, ಕಂಪೋಸ್ಟು, ಮತ್ತು ಹಳ ತಿಪ್ಪೆಗೊಬ್ಬರಗಳನ್ನೂ, ಧಾರಾಳವಾಗಿ ಉಪಯೋಗಿಸುವರು. ಉಳುಮೆಗೆ ಮುಂಚಿತವಾಗಿಯೇ ಇಷ್ಟೂ ಸಸ್ಯಜನ್ಯ ಗೊಬ್ಬರವನ್ನು ಒದಗಿಸಿ ಭೂಸಾರವನ್ನು ಹೆಚ್ಚಿಸುವರು.

— ೨ —

ಭತ್ತದ ಗುಣ ವಿಶೇಷಗಳನ್ನು ಗಮನದಲ್ಲಿಇಟ್ಟುಕೊಂಡು ಧಾತುಜನ್ಯ ಗೊಬ್ಬರಗಳನ್ನು ನೆಲಕ್ಕೆ ಒದಗಿಸುವರು. ಪ್ರಥಮದಲ್ಲಿ ಅಮೋನಿಯಂ ಸಲ್ಫೇಟ್, ಫೋಸ್ಫೇಟ್ ಮತ್ತು ಪೋಟಾಶುಗಳಲ್ಲಿ ಮೂರರಲ್ಲಿ ಎರಡಂಶವನ್ನು ನೆಲಕ್ಕೆ ಹಾಕಿದರೆ ಉಳಿದುದನ್ನು ನೇಜಿನೆಟ್ಟಬಳಿಕ ಮೂರುವಾರಗಳಲ್ಲಿ ಒಮ್ಮೆ ಮತ್ತು ತೆನೆಬಿಡುವುದಕ್ಕೆ ಎರಡುವಾರಗಳಿರುವಾಗ ಒಮ್ಮೆ ಉಪಯೋಗಿಸುವರು. ನೈಟ್ರೋಜನನ್ನು ಭತ್ತದ ಸಸಿಗಳಿಗೆ ಒದಗಿಸಲು ಅಮೋನಿಯಂ ಸಲ್ಫೇಟನ್ನು ಜಪಾನಿನಲ್ಲಿ ಉಪಯೋಗಿಸುವರು ಯುದ್ಧಕ್ಕೆ ಮುಂಚೆ ೧೦ಲಕ್ಷ ಟನ್ನುಗಳಷ್ಟು ಅಮೋನಿಯಂ ಸಲ್ಫೇಟು ಜಪಾನಿನಲ್ಲಿ ಉತ್ಪಾದನಗೊಳ್ಳುತಿತ್ತು. ಯುದ್ಧ ಸಮಯದಲ್ಲಿ ಈ ಫಲವರ್ಧಕವು ಸಾಕಾದಷ್ಟು ಪ್ರಮಾಣದಲ್ಲಿ ದೊರೆಯದ್ದರಿಂದ, ಉತ್ಪಾದನೆ ತಗ್ಗಿತು.

ಜಪಾನೀ ತಜ್ಞರ ಅಭಿಪ್ರಾಯದಂತೆ ಸುಧಾರಿತ ಬೀಜಗಳಿಂದ ಉತ್ಪಾದನೆಯು ಹೆಚ್ಚಬೇಕಿದ್ದರೆ, ಫಲವರ್ಧಕ ಗೊಬ್ಬರಗಳನ್ನು ಉಪಯೋಗಿಸುವುದು ಅತ್ಯಗತ್ಯವಾಗಿದೆ. ಹಾಗೆಯೇ ಫಲವರ್ಧಕಗಳ ಪ್ರಯೋಜನದ ಅರಿವಾಗ ಬೇಕಿದ್ದರೆ, ಸುಧಾರಿತ ಬೀಜಗಳನ್ನು ಉಪಯೋಗಿಸಬೇಕು. ಇವೆರಡೂ ಪರಸ್ಪರ ಹೊಂದಿಕೊಂಡಿವೆ.

— ೩ —

ನೀರಾವರಿಯಿಂದ ನೀರುಣಿಸುವ ಕ್ರಮವು ಕೇವಲ ಭತ್ತದ ಗದ್ದೆಗಳಿಗೆ ಮಾತ್ರವೆಂದೇ ಹೇಳಬೇಕು. ಸಾಮಾನ್ಯವಾಗಿ ೯೦% ಭತ್ತದ ಗದ್ದೆಗಳು ನೀರಾವರಿಗೆ ಒಳಗಾಗಿವೆ. ಬಿತ್ತನೆಯ ಹಾಗೂ ನೇಜಿ ನೆಡುವ ಸಮಯ ಬೇಕಾದಷ್ಟು ನೀರಿನ ಪೂರೈಕೆಯಿರುತ್ತದೆ. ಈ ನೀರಿನ ಪೂರೈಕೆ ಇರುವಾಗಲೇ ಇವೆರಡೂ ಕೆಲಸಗಳನ್ನು ಮುಗಿಸಿ ಬಿಡುವ ಆತುರವನ್ನು ಜಪಾನೀ ರೈತರು ತೋರಿಸುತ್ತಾರೆ. ಕೊನೆಕೊನೆಗೆ ನೀರಿನ ಅಭಾವವೆನಿಸಿದರೂ, ಅದರಿಂದ ಹಾನಿಯುಂಟೆಂದು ಜಪಾನೀ ರೈತರು ತಿಳಿಯುವುದಿಲ್ಲ. ಪ್ರಾರಂಭದಲ್ಲಿ ಚೆನ್ನಾಗಿ ನೀರಿನ ಆಸರೆ ದೊರೆತರೆ ಅದರಿಂದ ಸಸ್ಯವು ಚೆನ್ನಾಗಿ ಪುಷ್ಟವಾಗಿ ಬೆಳೆಯುತ್ತದೆ ಎಂದೂ, ಅವೈರಿಗೆ ನೀರಿನ ಕೊರತೆಯಿದ್ದರೂ ಅದನ್ನು ಉಪೇಕ್ಷಿಸ ಬಹುದೆಂದೂ ಜಪಾನೀ ರೈತರ ಹೇಳಿಕೆ ಇದೆ. ಆದರೆ ನಮ್ಮ ಭಾರತದಲ್ಲಿ ಪ್ರಾರಂಭದಲ್ಲಿ ಮೊನ್ಸೂನು ಮಾರುತುಗಳಿಂದ ಬರುವ ಮಳೆಯ ಅನಿಶ್ಚಿತತೆಯಿಂದಾಗಿ ಅನೇಕಾವರ್ತಿ ನೀರಿನ ಪೂರೈಕೆ ನಿಂತು ಹೋಗುತ್ತದೆ. ಭತ್ತದ ಸಸಿಯು ಪೋಷಣೆಗೆ ಅಗತ್ಯ ವೆನಿಸಿದ ನೀರು ಮೊದಲಿಗೇ ಇಲ್ಲದ ಹೋಗುವುದರಿಂದ–ಬೆಳೆಯು ಹಾನೀಡಾಗುತ್ತದೆ. ಕಾಲುವೆಗಳ ಮೂಲಕ ನೀರಾವರಿಯನ್ನು ನಡೆಸುವುದಕ್ಕಾದರೂ ನೀರಿನ ಅಭಾವದ ಮೂಲಕ ಅವಕಾಶವಿರುವುದಿಲ್ಲ. ಒಡಿಸಾ ಮುಂತಾದೆಡೆಗಳಲ್ಲಿ ಮೊನ್ಸೂನು ಮಳೆಯಿಂದ ನದಿ ತುಂಬಿದುವಾಗಲೇ, ಕಾಲುವೆಗಳೂ ತುಂಬಿ ಹರಿದು ನದಿ ಒತ್ತಿದಂತೆ, ಕಾಲುವೆಯಲ್ಲಿಯೂ ನೀರು ತಗ್ಗುತ್ತದೆ.

ಭತ್ತದ ಬೆಳೆಯೇ ಜಪಾನೀಯರ ಪ್ರಧಾನ ವ್ಯವಸಾಯ ವಾಗಿರುವುದರಿಂದ ಮತ್ತು ಎಲ್ಲರೂ ಅಕ್ಕಿಯನ್ನು ತಿನ್ನುವವರೇ ಆಗಿರುವುದರಿಂದ ರೈತರ ಜವಾಬ್ದಾರಿ ಬಹಳ ಹೆಚ್ಚು. ಈ ಗುರುತರವಾದ ಭಾರವನ್ನು ಹೊತ್ತು ಕೊಂಡು ಜಪಾನೀ ರೈತರು ತಮ್ಮ ಪರಿಶ್ರಮದಿಂದಲೂ, ಜಾಣತನದ ಕೃಷಿಪದ್ಧತಿಯಿಂದಲೂ; ಫಲವರ್ಧಕ ಗೊಬ್ಬರಗಳ ಉಪಯೋಗದಿಂದಲೂ. ಶಾಸ್ತ್ರೀಯ ಸಂಶೋಧನೆಗಳ ನೆರವಿನಿಂದಲೂ ಅಸಾಧಾರಣ ಪ್ರಗತಿಯನ್ನು ಸಾಧಿಸಿರುವುದು ಪ್ರಶಂಸನೀಯ.

— ೪ —

ಒಟ್ಟಾರೆ ಹೇಳುವುದಾದಲ್ಲಿ–ಜಪಾನಿನಲ್ಲಿ ಎಕ್ರೆಯೊಂದಕ್ಕೆ ಉತ್ಪಾದಿಸಲಾಗುವ ಅಕ್ಕಿಯ ಪ್ರಮಾಣ ಅತ್ಯಧಿಕವಿರಲಿಕ್ಕೆ ಈ ಕೆಳಗಿನ ಎಂಟು ಅಂಶಗಳು ಹೊಣೆ ಎನ್ನಬಹುದು.

(೧೧ನೇ ಪುಟ ನೋಡಿರಿ.)

ದಿ ಕೆನರಾ ಮ್ಯೂಚುವಲ್
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಪ್ರಧಾನ ಕಾರ್ಯಾಲಯ. ಉಡುಪಿ, ದ. ಭಾರತ] [ಸ್ಥಾಪನೆ: ೧೯೩೫.
"ಕೆನರಾ ಮ್ಯೂಚುವಲ್" ಪರಸ್ಪರಾವಲಂಬಕವಾದ ಸಂಸ್ಥೆ.
ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ
ಬೋನಸು ಹಂಚಿ, ಪಾಲಿಸಿದಾರರ ನಂಬಿಕೆ ಪಡೆದಿದೆ.
ಈ ಕಂಪೆನಿಯಲ್ಲಿ ಇಂದೇ ವಿಮೆ ಇಳಿಸಿ,
ನಿಮ್ಮ ಕುಟುಂಬವನ್ನು ಭದ್ರವಾಗಿರಿಸಿರಿ.
The CANARA MUTUAL ASSURANCE CO. Ltd,
Head Office: UDIPI, S. INDIA ESTD: 1935


ರಾಮತೀರ್ಥ
ಬ್ರಾಹ್ಮಿ ತೈಲ
ಸೀರಿಯಲ್ ನಂ ೧] [ಮೆಡಿಕೇಟೆಡ್
ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ. ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.
ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0
ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಕುಂದಾಪುರ ಡಿ.ಮು. ಕೋರ್ಟಿನಲ್ಲಿ
ಸ. O. 687/52
H. ಸದಾಶಿವಯ್ಯ—ವಾದಿ
ಲಿಯೊ ಫೆರ್ನಾಂಡಿಸ್—ಪ್ರತಿವಾದಿ
ಸದ್ರಿ ದಾವೆಯಲ್ಲಿ ಪ್ರತಿವಾದಿಯಾದ ಉಡುಪಿ ತಾಲೂಕು ಉದ್ಯಾವರ ಗ್ರಾಮದ ಬಸ್ತ್ಯಾಂ ಫೆರ್ನಾಂಡಿಸರ ಮಗ ಲಿಯೋ ಫೆರ್ನಾಂಡಿಸರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ-
ಬಾಡಿಗೆ ಬಾಕಿ ಬಗ್ಗೆ ವಾದಿಯು ನಿಮ್ಮ ಮೇಲೆ ಸದ್ರಿ ದಾವೆ ಹಾಕಿದ್ದು ವಿಚಾರಣೆ ಆದು ತಾ. 17-3-53ಕ್ಕೆ ನಿಶ್ಚಗೆ ಇದೆ. ಸದ್ರಿ ದಿವಸ 11 ಘಂಟೆಗೆ ಕೋರ್ಟು ಮುಂದೆ ಹಾಜರಾಗಿ ನಿಮ್ಮದೇನಾದರೂ ಆಕ್ಷೇಪಗಳಿದ್ದಲ್ಲಿ ಹೇಳಿಕೊಳ್ಳತಕ್ಕದ್ದು ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ದಾವೆಯು ತೀರ್ಮಾನಿಸಲ್ಪಡುವುದು
(ಹುಕುಂ ಪ್ರಕಾರ)
Halasnad Laxminarayanayya.
Coondapoor 25—2—53

SR
ಸೇವನೆಯ ಆನಂದಕ್ಕೆ
ಅತ್ಯುತ್ತಮವಾದುದನ್ನೇ ಪಡೆಯಲಿಕ್ಕೆ
ಎಸ್. ಆರ್.
ತಾಜಾ ನಿಪ್ಪಾಣಿ ತಂಬಾಕು
ಬೊಂಬಾಯಿ ಎಲೆ
ಇವುಗಳಿಂದ ತಯಾರಿಸಿದ
ಬೀಡಿಗಳಾಗಿರುತ್ತವೆ
S.R.Beedi Works

ಕರ್ನಾಟಕದ ಕಾಮಧೇನು

ಘಟಪ್ರಭಾ ನೀರಾವರಿ ಯೋಜನೆಯ ಪ್ರಗತಿ

— ೧ —

ಕರ್ನಾಟಕದ ಉತ್ತರ ಪ್ರದೇಶದ ಬೆಳಗಾಂವಿ ಮತ್ತು ಬಿಜಾಪುರ ಜಿಲ್ಲೆಗಳು ಬರಗಾಲ ಗ್ರಸ್ತವಾಗಿರುವ ಸಂಗತಿ ಎಲ್ಲರಿಗೂ ವೇದ್ಯವಿದೆ. ಹಾಗೆಂದು ಈ ಪ್ರದೇಶದ ಬಯಲು ಭೂಮಿ ತುಂಬ ಫಲವತ್ತಾಗಿದೆ; ಮತ್ತು ವರ್ಷಕ್ಕೆ ೫೦–೨೦೦ ಇಂಚು ಮಳೆಯೂ ಬರುತ್ತದೆ. ನೀರಿನಿಂದ ತುಂಬಿ ಹರಿಯುವ ನದಿಗಳಿಗೂ ತೊಂದರೆಯಿಲ್ಲ. ಆದರೆ ನದಿಯ ನೀರನ್ನು ಉಪಯೋಗಿಸುವುದಕ್ಕೆ ತಕ್ಕುದಾದ ಅನುಕೂಲತೆ ಇಲ್ಲದಿರುವುದರಿಂದ ಅಧಿಕ ಆಹಾರವನ್ನು ಬೆಳೆಯಲಾರದೆ ಇಲ್ಲಿ ಜನ-ಜಾನುವಾರಗಳು ಕಷ್ಟವನ್ನು ಅನುಭವಿಸಬೇಕಾಗುತ್ತದೆ. ಇದನ್ನು ಕೆಲಮಟ್ಟಿಗೆ ಪರಿಹರಿಸಬೇಕೆಂಬ ಉದ್ದೇಶದಿಂದ ಸರಕಾರದವರು ಈ ಪ್ರದೇಶದಲ್ಲಿ ಹರಿಯುವ ಘಟಪ್ರಭಾ ನದಿಯ ಎಡದಂಡೆಯಿಂದ ಕಾಲುವೆಯನ್ನು ಹೊರಡಿಸಿ, ಭೂಮಿಗೆ ನೀರುಣಿಸುವ ಯೋಜನೆಯನ್ನು ಕೈಗೊಂಡಿರುವರು. ಈ ನದಿಯಲ್ಲಿ ವರ್ಷಕ್ಕೆ ೧೨೫೦೦೦ ಲಕ್ಷ ಘನ ಅಡಿ ನೀರು ಹರಿಯುತಿದ್ದರೂ ಪ್ರಕೃತ ಅತ್ಯಲ್ಪ ನೀರನ್ನು ಮಾತ್ರ ಬಳಸುತ್ತಿರುವರು. ಬರಗಾಲವನ್ನು ನಿವಾರಿಸುವುದಕ್ಕಾಗಿ, ವ್ಯರ್ಥ ಹರಿಯುವ ಈ ನೀರನ್ನು ಎಲ್ಲಿಯಾದರೂ ಸಂಗ್ರಹಿಸಿ, ನೀರಾವರಿಗೆ ಉಪಯೋಗಿಸಿ ಶಾಶ್ವತವಾಗಿ ಕ್ಷಾಮದೇವತೆಯನ್ನು ಹೊಡೆದೋಡಿಸಬೇಕೆಂಬ ವಿಚಾರ ಮೊದಲು ೧೮೫೦ರಲ್ಲಿ ಮೂಡಿತು. ಮುಂದೆ ೧೯೦೮ರಲ್ಲಿ ದಡ್ಡಿಯೋಜನೆ ಎಂದು ಹೆಸರಾದ ಯೋಜನೆಯನ್ನು ಸಿದ್ಧಗೊಳಿಸಿದರು. ಇದರನ್ವಯ ದಡ್ಡಿ ಎಂಬಲ್ಲಿ ಘಟಪ್ರಭೆಗೆ ಅಣೆಕಟ್ಟನ್ನು ಹಾಕಿ ೪೫೦೦೦ ಲಕ್ಷ ಘನ ಅಡಿ ನೀರನ್ನು ಸಂಗ್ರಹಿಸಿ ಎರಡೂ ದಂಡೆಗಳಲ್ಲಿ ಕಾಲುವೆ ತೋಡಿ ನೀರಾವರಿ ಮಾಡಬೇಕೆಂದು ಯೋಜಿಸಿದ್ದರು. ೧೯೨೮ರ ಸುಮಾರಿಗೆ ಈ ಯೋಜನೆಯಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡಿ ಎಡದಂಡೆಯ ಕಾರ್ಯವನ್ನು ಮೊದಲಿಗೆ ಕೈಗೊಳ್ಳುವ ನಿಶ್ಚಯವಾಯಿತು. ಆದರೆ ಇದರಿಂದ ತಾಮ್ರಪರ್ಣಿ ನದಿಯ ಬಯಲು ಗದ್ದೆಗಳೆಲ್ಲ ಮುಳುಗಿ ಹೋಗಿ ಲಾಭಕ್ಕಿಂತ ಹಾನಿಯೇ ಹೆಚ್ಚಾಗುವುದೆಂದೆನಿಸಿದ್ದರಿಂದ ಇದನ್ನು ಬಿಟ್ಟುಕೊಟ್ಟರು. ೧೯೪೭ರಲ್ಲಿ ಪುನಃ ಇದನ್ನು ವಿಚಾರಿಸಿ, ದಡ್ಡಿ ಯೋಜನೆಯನ್ನು ಬಿಟ್ಟು ಬೇರೆಯೇ ಸ್ಥಳವನ್ನು ಆರಿಸಿ, ಪ್ರಕೃತದ ಯೋಜನೆಯನ್ನು ಕಾರ್ಯರೂಪಕ್ಕೆ ಇಳಿಸಹತ್ತಿದರು.

— ೨ —

ಘಟಪ್ರಭಾ ಯೋಜನೆಯು ಮೂರು ಘಟ್ಟಗಳಿಂದ ಕೂಡಿದೆ. ಪ್ರಕೃತ ಮೊದಲನೆಯ ಹಂತವನ್ನಷ್ಟೆ ಕೈಗೊಂಡಿರುವರು. ೧೯೪೮ರಲ್ಲಿ ಇದು ಮುಗಿಯುವುದೆಂದು ಎಣಿಸಿದ್ದರೂ ಹಣದ ತಡಚಣೆಯುಂಟಾದುದರಿಂದ ಕಾರ್ಯವು ವಿಳಂಬವಾಗಿದೆ. ಈಗ ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನು ಸೇರಿಸಿರುವುದರಿಂದ ೧೯೫೭ರೊಳಗಾಗಿ ಇದು ಪೂರ್ಣವಾಗುವ ಭರವಸೆ ಇದೆ. ಪ್ರಕೃತದ ಪ್ರಥಮ ಘಟ್ಟಕ್ಕೆ ೫೪೫ ಲಕ್ಷ ರುಪಾಯಿಗಳ ವೆಚ್ಚ ಬರುತಿದ್ದು, ಘಟಪ್ರಭಾ ಎಡದಂಡೆಯ ಕಾಲುವೆ ಯೋಜನೆಯೆಂಬ ಹೆಸರಿನಿಂದ ಕರೆಯುವರು. ಇದರಲ್ಲಿ ಸದ್ಯಕ್ಕೆ ಅಣೆಕಟ್ಟಿನ ಪ್ರಶ್ನೆ ಇರುವುದಿಲ್ಲ. ಧೂಪದಾಳ ವೇಯರದಿಂದ ೪೪ ಮೈಲು ಉದ್ದದ ಮುಖ್ಯ ಕಾಲುವೆ, ಮತ್ತು ಕ್ರಮವಾಗಿ ೧೩ ಮೈಲು ಮತ್ತು ೧೮ ಮೈಲು ಉದ್ದದ ರಾಯಬಾಗ ಮತ್ತು ಜಮಖಂಡಿ ವಿಭಾಗಗಳ ಉಪಕಾಲುವೆಯನ್ನು ನಿರ್ಮಿಸಿ ನೀರಾವರಿಗೆ ವ್ಯವಸ್ಥೆ ಮಾಡುವುದೇ ಇದರ ಉದ್ದೇಶ. ಧೂಪದಾಳವೇಯರದ ಲಾಭಪಡೆದು ಅಲ್ಲಿಂದ ಮಳೆಗಾಲದಲ್ಲಿ ಹೆಚ್ಚಾಗಿ ನದಿಯಲ್ಲಿ ಹರಿದುಹೋಗುವ ನೀರನ್ನು ಕಾಲುವೆಗೆ ತಿರುಗಿಸಲಾಗುವುದು. ಈ ಕಾಲುವೆ ಸುಮಾರು ೩೦ ಅಡಿ ಅಗಲ ೧೨ ಅಡಿ ಆಳವಿರುತ್ತದೆ. ಕೆಲವೆಡೆ ಭೌಗೋಲಿಕಸ್ಥಿತಿಯನ್ನು ಹೊಂದಿಕೊಂಡು ಹೆಚ್ಚು ಅಗಲ ತೋಡಿದ್ದರೆ, ಇನ್ನು ಕೆಲವೆಡೆ ೪೫ ಅಡಿಯಷ್ಟು ಆಳ ಕಾಲುವೆಯನ್ನು ಅಗೆಸಿರುವರು ಈ ಭಾಗದಲ್ಲಿ ಕಲ್ಲು ಭೂಮಿಯೇ ಬಹಳವಿರುವುದರಿಂದ, ಕಾಲುವೆ ತೋಡುವ ಕೆಲಸ ಬಹಳ ಪ್ರಯಾಸದ್ದು. ಕಾಲುವೆಯನ್ನು ಅಗೆಯುವ ಕೆಲಸವು ಜನರಿಂದಲೇ ನೆರವೇರುತ್ತದೆ. ಸಂಕಮುಂತಾದುವನ್ನು ಕಟ್ಟುವುದಕ್ಕೆ ಮಾತ್ರ ಯಂತ್ರಶಕ್ತಿಯನ್ನು ಉಪಯೋಗಿಸುತ್ತಿರುವರು. ಆದುದರಿಂದ ಇದುವರೆಗೆ ಈ ಯೋಜನೆಗಾಗಿ ವೆಚ್ಚವಾದ ೧೭೫ ಲಕ್ಷ ರುಪಾಯಿಯಲ್ಲಿ ೧೨೫ ಲಕ್ಷ ರೂಪಾಯಿ ಜನರಿಗೆ ಕೂಲಿ ರೂಪದಲ್ಲಿ ಹಂಚಲ್ಪಟ್ಟಿವೆ. ಸದ್ಯಕ್ಕೆ ಅಲ್ಲಿ ಎರಡೂವರೆ ಸಾವಿರ ಜನ ಕೆಲಸದಲ್ಲಿರುವರು. ಒಮ್ಮೆ ಈ ಸಂಖ್ಯೆ ಒಂಭತ್ತು ಸಾವಿರದಷ್ಟಿದ್ದಿತು. ರಾಯಬಾಗ ಶಾಖೆಯನ್ನು ಈಗ ಬರಗಾಲ ಕಾಮಗಾರಿ ಎಂದು ಕೈಗೊಂಡಿದ್ದಾರೆ

— ೩ —

ಈ ಯೋಜನೆಯು ೧೯೪೯ನೇ ಜನವರಿಯಲ್ಲಿ ಮಂಜೂರಾಗಿ ಅದೇ ವರ್ಷ ಜೂನು ತಿಂಗಳಲ್ಲಿ ಕೆಲಸ ತೊಡಗಿತು. ಇದನ್ನು ಮೊದಲಿಗೆ ಅಧಿಕ ಆಹಾರ ಯೋಜನೆಯ ಅಂಗವೆಂದು ತೆಗೆದುಕೊಂಡಿದ್ದರು ಘಟಪ್ರಭೆಯ ಕಾಲುವೆ ೧೫೦೦ ಕ್ಯೂಸೆಕ್ಸ್ (ಎಂದರೆ, ಒಂದು ಸೆಕುಂದಿಗೆ ೧೫೦೦ ಘನಅಡಿ) ನೀರು ಹರಿಯುವಂತೆ ಯೋಜಿಸಲ್ಪಟ್ಟಿರುವುದು. ಇದರ ಮೊದಲನೆಯ ೮ ಮೈಲು ೧೯೫೧ ಜೂನಿನಲ್ಲಿ ಪೂರ್ಣವಾಗಿದೆ. ಇದರಿಂದ ೭೫೦ ಎಕ್ರೆ ಭೂಮಿ ಸಾಗುವಳಿಗೆ ಒಳಗಾಗಿದೆ. ಈ ವರ್ಷ ಜೂನಿನಲ್ಲಿ ಮತ್ತೆ ೯ ಮೈಲು ಪೂರ್ಣವಾಗಿ ೧೫೦೦೦ ಎಕ್ರೆಗೆ ನೀರು ದೊರೆಯುತ್ತದೆ. ೧೯೫೪ರಲ್ಲಿ ಒಟ್ಟು ೩೨ ಮೈಲು ಉದ್ದದ ಕಾಲುವೆ ನೀರಾವರಿಗೆ ಸಿದ್ಧಗೊಳ್ಳುತ್ತದೆ. ೧೯೫೫ ಜೂನು ತಿಂಗಳಲ್ಲಿ ರಾಯಬಾಗ ಶಾಖೆ ಪೂರ್ಣವಾಗುತ್ತದೆ. ಕೊನೆಗೆ ೧೯೫೭ ಜೂನಿನಲ್ಲಿ ಮುಖ್ಯ ಕಾಲುವೆಯೂ ಜಮಖಂಡಿಯ ಉಪ ಶಾಖೆಯೂ ಪೂರ್ಣವಾಗುತ್ತವೆ. ಆಗ ಒಟ್ಟಾರೆ ೧೨೦೦೦೦ ಎಕ್ರೆ ಭೂಮಿಗೆ ನೀರುಸಿಗುವುದು. ಈ ಕಾಲುವೆ ಕ್ಷೇತ್ರದಲ್ಲಿ ಒಟ್ಟು ಎರಡೂವರೆ ಲಕ್ಷ ಎಕ್ರೆ ಭೂಮಿ ಬರತಿದ್ದರೂ ನಿರುಪಯುಕ್ತ ಮುಂತಾದ ಭೂಮಿಯನ್ನು ಹೊರತುಪಡಿಸಿ ೧೨೦೦೦೦ ಎಕ್ರೆ ಭೂಮಿಗೆ ನಿಃಸಂಶಯವಾಗಿ ನೀರೊದಗುವುದೆಂದು ತಿಳಿದಿದೆ. ಇದರಲ್ಲಿ ೮೦೦೦೦ ಎಕ್ರೆ ಬೆಳಗಾಂವಿ ಜಿಲ್ಲೆಯಲ್ಲಿಯೂ ೪೦೦೦೦ ಎಕ್ರೆ ಬಿಜಾಪುರ ಜಿಲ್ಲೆಯಲ್ಲಿಯೂ ಇರುತ್ತದೆ. ಇಷ್ಟು ಪ್ರದೇಶದ ನೀರಾವರಿಯಿಂದ ವರ್ಷಕ್ಕೆ ಒಂದು ಕೋಟಿ ರೂಪಾಯಿ ಬೆಲೆಯ ಅಧಿಕ ಆಹಾರ ಬೆಳೆಯುವುದೆಂದು ಅಂದಾಜು ಮಾಡಿರುವರು.

— ೪ —

ಗೋಕಾಕ ಮತ್ತು ಮೊದಲಿನ ಹುಕ್ಕೇರಿ ರೋಡ ರೇಲ್ವೆ ನಿಲ್ದಾಣದ ನಡುವೆ ಘಟಪ್ರಭಾಯೋಜನೆಯನ್ನು ಕಾರ್ಯಗತ ಮಾಡಲಿಕ್ಕಾಗಿ ಒಂದು ಹೊಸ ನಗರವೇ ತಲೆ ಎತ್ತಿದೆ. ಸಮೀಪದ ಧೂಪದಾಳದಲ್ಲಿ ೭೧ ವರ್ಷಗಳಿಗೆ ಹಿಂದೆ ಕಟ್ಟಿಸಿದ ವೇಯರದಿಂದ ಈ ಕಾಲುವೆ ಪ್ರಾರಂಭವಾಗಿ ಜಗನೂರಿನ ಮೇಲಿಂದ ಹಾಯ್ದು ಹೋಗುತ್ತದೆ. ರಾಯಬಾಗ ಶಾಖೆಯು ೩೨ನೇ ಮೈಲಿಗೂ ಜಮಖಂಡಿ ಶಾಖೆಯು ೪೪ನೇ ಮೈಲಿಗೂ ಒಡೆಯುತ್ತವೆ. ಧೂಪದಾಳ ವೇಯರದಿಂದ ಮೊದಲು ಚಿಕ್ಕ ಗೋಕಾಕ ಕಾಲುವೆ ಇದ್ದಿತು. ಇದರಿಂದ ೧೫೦೦೦ ಎಕ್ರೆ ಭೂಮಿಗೆ ನೀರೊದಗುತಿತ್ತು. ಅದು ಈಗಲೂ ಪ್ರತ್ಯೇಕವಾಗಿ ಉಳಿದರೂ ಪ್ರಾರಂಭದಿಂದ ಎರಡು ಮೈಲುಗಳ ವರೆಗೆ ಘಟಪ್ರಭಾ ಮತ್ತು ಗೋಕಾಕ ಕಾಲುವೆ ಒಂದೇಯಾಗಿದೆ. ಇದಕ್ಕಾಗಿ ೧೧ ಅಡಿ ಅಗಲ ೪ ಅಡಿ ಆಳವಾಗಿದ್ದ ಗೋಕಾಕ ಕಾಲುವೆಯನ್ನು ಈಗ ೩೦ ಅಡಿ ಅಗಲ ಮತ್ತು ೧೨ ಅಡಿ ಆಳ ಮಾಡಿರುವರು.

—ಇದಿಷ್ಟು ಮೊದಲನೆಯ ಹಂತದ ವಿವರಣೆ. ಇನ್ನು ಉಳಿದ ಎರಡು ಹಂತಗಳನ್ನು ಕಾರ್ಯರೂಪಕ್ಕೆ ಇಳಿಸುವುದಾದಲ್ಲಿ ಒಟ್ಟು ೩೦ ಕೋಟಿ ರೂಪಾಯಿ ವೆಚ್ಚ ಬಂದೀತು. ಆರು ಲಕ್ಷ ಎಕ್ರೆ ಭೂಮಿಗೆ ನೀರು ಒದಗೀತು ಎಂದು ಅಂದಾಜು. ಪಂಚವಾರ್ಷಿಕ ಯೋಜನೆಯಲ್ಲಿ ಮೊದಲನೆಯ ಘಟ್ಟವನ್ನು ಮಾತ್ರ ಸೇರಿಸಿದ್ದರೂ, ಬಿಜಾಪುರ ಜಿಲ್ಲೆ ಮುಂತಾದವುಗಳ ಬರಗಾಲ ಪರಿಸ್ಥಿತಿಯನ್ನು ಅಭ್ಯಸಿಸಿ ವರದಿ ಮಾಡಲು ನೇಮಿಸಿದ್ದ ರಾಮಮೂರ್ತಿ ಸಮಿತಿಯು ಎರಡನೆಯ ಹಂತವನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿರುತ್ತದೆ. ಮೂರನೆಯ ಹಂತವ

(೧೦ನೇ ಪುಟ ನೋಡಿರಿ)

THE CANARA MUTUAL ASSURANCE COMPANY, LIMITED.

Head Office UDIPI, S. India

NOTICE IS HEREBY GIVEN that the Eighteenth Ordinary General Meeting of the Company will be held at the Company's Registered Office at "Canara Mutual Building", Udipi, on Thursday, the 30th April 1953 at 3-15 P. M. to transact the following business—

1 To receive and adopt the Annual Report, Audited Statement of Accounts and Balance Sheet for the year ending 31st December, 1952.

2. To elect a Director in place of Sri B Vaikunta Baliga, [illegible], who retires by rotation and is eligible for re-election under Article 37

3 To elect a Director in place of Sri P Padmanabha Rao, [illegible], who retires by rotation and is eligible for re election under Article 37

4 To appoint an Auditor or Auditors for the year 1953 and to fix the remuneration payable to him or them. [illegible] year's Auditors, Sri A. Umanath Rao, [illegible], Mangalore-3 [illegible], Car Street, Mangalore, retire and are eligible for re-appointment

5 To transact any other business which may be brought before the meeting with the permission of the Chairman.

N. B:- If a member is unable to attend the meeting he may appoint any other member as his proxy and the instrument appointing him, must be duly stamped, signed and attested and should be in the prescribed form (Vide Article No 32) and should reach the Head Office not less than 72 hours before the time appointed for holding the meeting

(By Order of the Board)

Dated at UDIPI, 27th January, 1953.

T. R. A. Pai,
Managing Director.

The Canara Mutual Assurance Company, Limited.

Head Office UDIPI, (S India)

Summary of Balance Sheet and Revenue Account of the Company in respect of total business.

REVENUE ACCOUNT FOR THE YEAR ENDING 31—12—1952.

PARTICULARS.	Rs.	As.	Ps.	PARTICULARS.	Rs.	As.	Ps.
Claims and Surrenders less reinsurances	4,47,308	5	2	Balance of Fund at the beginning of the year	71,62,553	1	6
Expenses of Management including Commission	3,61,201	5	1	Premiums less reinsurances	17,55,933	0	0
Bad Debts ..	Nil			Interest, dividend and rents less Income tax	2,38,693	12	3
Other Items	10,606	5	9	Other Income	6 305	8	10
Transfer to Investment Reserve Fund	95,800	0	0				
Balance of Fund at the end of the year	82,48,569	6	5				
Total	91,63,485	6	5	*Total*	91 63,485	6	5

BALANCE SHEET AS AT 31—12—1952.

LIABILITIES.	Rs.	As.	Ps.	ASSETS	Rs.	As.	Ps.
Life Insurance Fund	82,48,569	6	5	Government Securities	39,13,176	15	0
Investment Reserve Fund	3,73,400	0	0	Other Approved Securities	18,55,907	7	0
Loans & Advances	Nil			Fictitious Items and bad assets	Nil		
Outstanding Claims	2,18,926	8	4	Approved Investments & other assets	32 43 521	3	7
Other Liabilities	1,71,.07	10	10				
Total	90,12,603	9	7	*Total*	90 12 603	9	7

UDIPI, 27—1—1953

T. R. A. PAI,
MANAGING DIRECTOR

ಪಂಚವಾರ್ಷಿಕ ಯೋಜನೆಯ ಕೊನೆಯ ಹಂತ

ಮೈಸೂರಿನಲ್ಲಿ ಶೈಕ್ಷಣಿಕ ಕ್ಷೇತ್ರದ ಸುಧಾರಣೆಯ ಕುರಿತು ಹನುಮಂತಯ್ಯ ಸಮಿತಿಯ ಅಭಿಪ್ರಾಯ

ರೈಲ್ವೇಗಳ ಅಭಿವೃದ್ಧಿ

ಪಾರ್ಲಿಮೆಂಟಿನಲ್ಲಿ ರೈಲ್ವೆ ಮುಂಗಡ ಪತ್ರದ ಕುರಿತು ಸದಸ್ಯರು ಮಾಡಿದ ಟೀಕೆಗಳಿಗೂ ಸೂಚನೆಗಳಿಗೂ ಉತ್ತರವನ್ನು ಕೊಡುವಾಗ ಮಂತ್ರಿ ಲಾಲಬಹಾದ್ದುರ ಶಾಸ್ತ್ರಿಗಳು ಬಹಳ ಚಾಣಾಕ್ಷತೆಯಿಂದ ನಡೆದುಕೊಂಡರು. ಟೀಕೆಗಳನ್ನು ಸಾವಧಾನಚಿತ್ತದಿಂದ ಕೇಳಿಕೊಂಡು ತಕ್ಕ ಸಮಾಧಾನವನ್ನು ಕೊಡುವ ಜಾಣ್ಮೆ ತನ್ನಲ್ಲಿದೆಯೆಂಬುದನ್ನವರು ವ್ಯಕ್ತಗೊಳಿಸಿದರು. ರೈಲ್ವೆಯ ಆದಾಯವು ಈ ವರ್ಷ ಕಡಿಮೆಯಾಗಲಿಕ್ಕೆ ಪ್ರವಾಸದ ಮತ್ತು ಸರಕುಗಳ ಸಾಗಾಟದ ದರಗಳನ್ನು ಏರಿಸಿದುದೇ ಕಾರಣವೆಂಬ ಸಂಗತಿಯನ್ನು ಅವರು ಅಲ್ಲಗಳೆಯಲು ಪ್ರಯತ್ನಿಸಿದರೂ ಆದಾಯವನ್ನು ಹೆಚ್ಚಿಸಲು ಯಾವ ಕ್ರಮಗಳನ್ನು ಕೈಗೊಳ್ಳತಕ್ಕದೆಂಬುದನ್ನು ಪರಿಶೀಲಿಸಲು ತಮ್ಮ ಒಪ್ಪಿಗೆಯನ್ನು ತೋರಿಸಿದರು. ಈಗತಾನೆ ತೋರಿಸಿರುವ ಕೆಲವು ವಿನಾಯತಿ ಹಾಗೂ ಸೌಕರ್ಯಗಳ ಪರಿಣಾಮವಾಗಿ ರೈಲ್ವೆಯಲ್ಲಿ ಪ್ರಯಾಣಿಸುವವರ ಸಂಖ್ಯೆ ಹೆಚ್ಚಿ, ಆದಾಯವು ಏರಿದರೆ, ಈ ಅನುಕೂಲತೆಗಳನ್ನು ಮುಂದಕ್ಕೂ ಉಳಿಸಿಕೊಂಡು ಹೋಗುವ ಇಚ್ಛೆಯನ್ನು ಪ್ರಕಟಪಡಿಸಿದರು. ರೈಲ್ವೆಗಳಲ್ಲಿ ಲಂಚಗುಳಿತನ, ಅಪ್ರಾಮಾಣಿಕತೆ ತುಂಬಿ ತುಳುಕುತ್ತಿದೆ ಎಂಬ ವರ್ಣನೆಯು ಅತಿರೇಕ ಮಟ್ಟದ್ದೆಂದು ಸಚಿವರು ತೋರಿಸಿಕೊಟ್ಟಿದ್ದಲ್ಲದೆ ನಿಷ್ಪಕ್ಷಪಾತವನ್ನು ಆದಷ್ಟು ಸಾಧಿಸುವುದಕ್ಕೆ ಪ್ರಯತ್ನಿಸುವ ಆಶ್ವಾಸನೆಯನ್ನಿತ್ತರು. ಶ್ಯಾಮಪ್ರಸಾದ ಮುಖರ್ಜಿಯಂಥ ಪ್ರತಿ ಪಕ್ಷದ ಧುರೀಣರು ಕೂಡ ರೈಲ್ವೆಯ ಆಡಳಿತವು ಮೇಲಿಂದ ಮೇಲೆ ಸಮರ್ಪಕವಿದೆ ಎಂದು ಪ್ರಶಂಸಿಸಿದ್ದಲ್ಲದೆ ಚಿತ್ತರಂಜನದಂಥ ಕಾರ್ಖಾನೆಗಳು ಭಾರತವನ್ನು ಸ್ವಾವಲಂಬನದ ಧ್ಯೇಯದೆಡೆಗೆ ಒಯ್ಯುತ್ತಿರುವ ಬಗ್ಗೆ ಹರ್ಷೋದ್ಗಾರಗೈದರು. ಸಚಿವರು ಈ ಕಾರ್ಖಾನೆಗಳ ವೃದ್ಧಿಯನ್ನೆತ್ತಿ ಉದಾಹರಿಸಿದ ರೈಲ್ವೆ ಡಬ್ಬಿ ಮತ್ತು ಎಂಜಿನುಗಳಿಗೆ ತಗಲುವ ವೆಚ್ಚಕ್ಕಿಂತಲೂ ಕಡಿಮೆ ಕರ್ಚಿನಲ್ಲಿ ಭಾರತದಲ್ಲಿ ಅವು ತಯಾರಾಗುತ್ತಿವೆ ಎಂದರು. ಸಭೆಯು ಸಂತೋಷದಿಂದ ಈ ಹೇಳಿಕೆಯನ್ನು ಸ್ವಾಗತಿಸಿದ್ದು ಸ್ವಾಭಾವಿಕವಾಗಿದೆ. ರೈಲ್ವೆ ಯಂತ್ರವನ್ನು ಕೂಡ ಕಡಿಮೆ ಕರ್ಚಿನಲ್ಲಿ ನಿರ್ಮಿಸುವುದು ಸಾಧ್ಯವಾದೀತೆಂಬ ಮಂತ್ರಿಗಳ ಹಾರೈಕೆಯೂ ಬೇಗನೇ ನಿಜವಾಗಲಿ ಎನ್ನುತ್ತೇವೆ.

ಅನ್ನ ಸ್ವಾವಲಂಬನ

ಪ್ರಶ್ನೋತ್ತರ ವೇಳೆಯಲ್ಲಿ ಭಾರತದ ಆಹಾರ ಸ್ಥಿತಿಯು ಚೆನ್ನಾಗಿದೆ ಎಂಬ ಸಂಗತಿ ತಿಳಿದು ಬಂತು. ಮುಂದಿನ ವರ್ಷದಿಂದ ಅಕ್ಕಿಯ ಆಯಾತವನ್ನು ನಿಲ್ಲಿಸುವುದು ಸಾಧ್ಯವಾದೀತೆಂದು ಕಿದ್ವಾಯಿಯವರು ಲೋಕಸಭೆಯಲ್ಲಿ ತಿಳಿಸಿದರು. ಒಡಿಸಾ ರಾಜ್ಯದಲ್ಲಿ ಈ ವರ್ಷ ಚೆನ್ನಾಗಿ ಬೆಳೆಯಾಗಿದೆ ಎಂದೂ ಆಹಾರ ಧಾನ್ಯದ ಪೂರೈಕೆಯ ಪ್ರಶ್ನೆಗಿಂತಲೂ ಅದನ್ನು ಒಯ್ದು ಮುಟ್ಟಿಸುವ ಬಗೆಯೇ ಒಂದು ಸಮಸ್ಯೆಯಾಗಿದೆ ಎಂದೂ ಮಂತ್ರಿಗಳು ವರ್ಣಿಸಿದರು. ಇಂಥ ಪರಿಸ್ಥಿತಿಯನ್ನು ತುಂಬಿದೆದೆಯಿಂದ ಸ್ವಾಗತಿಸುವುದಾಗಿ ಸಚಿವರು ಹೇಳಿದ್ದು ಸಮಂಜಸವಾಗಿದೆ. ನಮ್ಮ ಉತ್ಪಾದನೆಯು ಸಮೃದ್ಧಿಗೊಂಡರೆ, ಆಗ ಸಾಗಾಟದಂಥ ಪ್ರಶ್ನೆಯು ಗಡಚಾಗಲಿಕ್ಕಿಲ್ಲ. ಏನಾದರೂ ವ್ಯವಸ್ಥೆ ಮಾಡಿಕೊಂಡು ಆಹಾರ ಧಾನ್ಯದ ಅಗತ್ಯವಿರುವ ಪ್ರದೇಶಕ್ಕೆ ಅವನ್ನೊಯ್ಯಬಹುದು. ಆದರೆ ಆಹಾರದ ಉತ್ಪಾದನೆಯೇ ಕಡಿಮೆಯಾದರೆ, ನಾವು ಪರದೇಶಗಳ ಔದಾರ್ಯದ ಉರುಳಿಗೆ ಕುತ್ತಿಗೆ ಕೊಡಬೇಕಾಗುವುದು. ಸ್ವಾತಂತ್ರ್ಯಪ್ರಿಯ ರಾಷ್ಟ್ರವಾದ ಭಾರತಕ್ಕೆ ಅನ್ನ ಬಟ್ಟೆಯ ಮಟ್ಟಿಗಾದರೂ ಉಳಿದ ದೇಶಗಳ ಹಂಗಿಗೆ ಒಳಗಾಗುವುದು ಶೋಭೆ ನೀಡದು. ಇದೇ ಸಂಗತಿಯನ್ನು ಈಗ ಭಾರತದಲ್ಲಿ ಸಂಚರಿಸುತ್ತಿರುವ ಬ್ರಿಟಿಷ್ ಕಾರ್ಮಿಕ ನಾಯಕರಾದ ಆ್ಯನುರಿನ್ ಬೇವಾನರು ಜೋರಾಗಿ ಪ್ರತಿಪಾದಿಸುತ್ತಾರೆ. ಕೃಷಿಯನ್ನು ಸುಧಾರಿಸಿ ಅನ್ನ ಸ್ವಾವಲಂಬನವನ್ನು ಸಾಧಿಸುವುದೇ ಭಾರತೀಯರ ಪ್ರಕೃತ ಧರ್ಮವೆಂದು ಅವರೆನ್ನುತ್ತಾರೆ.

ಅವಶ್ಯಕ ವ್ಯವಸ್ಥೆಗಳು

ಇದನ್ನು ಮನಗಂಡೇ ಪಂಚವಾರ್ಷಿಕ ಯೋಜನೆಯಲ್ಲಿ ಆಹಾರ ವಿಷಯಕ್ಕೆ ಇನ್ನಿಲ್ಲದ ಪ್ರಾಶಸ್ತ್ಯವನ್ನು ಕೊಟ್ಟದ್ದಾಗಿರುತ್ತದೆ. ದೇಶದ ಅನೇಕ ಕೇಂದ್ರಗಳಲ್ಲಿ ತೆರೆದಿರುವ ಜನಪದ ಅಭಿವೃದ್ಧಿ ಯೋಜನೆಗಳಲ್ಲಿಯೂ ಕೃಷಿಕ್ರಮಕ್ಕೆ ಉತ್ತೇಜನವನ್ನು ಕೊಡುವಂತೆ ಕಾರ್ಯಪ್ರಣಾಳಿಯನ್ನು ರೂಪಿಸಿರುವರು. ಕಳೆದ ಅಕ್ಟೋಬರದಲ್ಲಿ ಉದ್ಘಾಟಿಸಲ್ಪಟ್ಟ ಈ ಕೇಂದ್ರಗಳು ಇದುವರೆಗೆ ಮಾಡಿದ ಪ್ರಗತಿಯು ಸಮಾಧಾನಕರವೆಂದು ಸರಕಾರದ ಪ್ರಕಟಣೆಯಿಂದ ತಿಳಿದುಬರುತ್ತದೆ. ಅನೇಕ ಹಳ್ಳಿಯಲ್ಲಿ ಮಾರ್ಗಗಳು, ಶಾಲೆಗಳು, ಆರೋಗ್ಯ ಕೇಂದ್ರಗಳು, ಮುಂತಾದುವು ನಿರ್ಮಾಣಗೊಂಡಿವೆ ಎಂದೂ ಜನರು ಅತ್ಯಂತ ಉತ್ಸಾಹದಿಂದ ಸರಕಾರದ ತಜ್ಞರೊಡನೆ ಸಹಕರಿಸುತ್ತಿರುವರೆಂದೂ ಈ ಪ್ರಕಟಣೆ ಹೇಳುತ್ತದೆ. ಕೆಲವು ರಾಜ್ಯ ಸರಕಾರಗಳು ಚಟುವಟಿಕೆಯಲ್ಲಿ ಹಿಂದೆ ಬಿದ್ದಿದ್ದರೂ, ಮುಂದಿನ ಮಳೆಗಾಲದಲ್ಲಿ ಎಲ್ಲ ಕೇಂದ್ರಗಳೂ ಲವಲವಿಕೆಯಿಂದ ಕಾರ್ಯಮಗ್ನವಾಗುವಂತೆ ಆದೇಶಗಳನ್ನು ಇಷ್ಟರಲ್ಲಿ ಕಳಿಸಿರುವರು. ಒಕ್ಕಲಿಗರಿಗೆ ಸುಧಾರಿತ ಬೀಜ, ಗೊಬ್ಬರ ಮತ್ತು ಉಪಕರಣಗಳನ್ನು ಮುಟ್ಟಿಸುವುದಕ್ಕೆ ಅವಶ್ಯಕವೆನಿಸಿದ ವ್ಯವಸ್ಥೆಗಳನ್ನು ಕೈಗೊಳ್ಳತಕ್ಕದ್ದೆಂದೂ ಕೃಷಿತಜ್ಞರ ನೆರವು ಒಕ್ಕಲಿಗರಿಗೆ ಸುಲಭದಲ್ಲಿ ದೊರೆಯುವಂತೆ ನೋಡತಕ್ಕದೆಂದೂ ತಿಳಿಸಲಾಗಿದೆ.

ಶಿಕ್ಷಣಕ್ರಮದ ಪುನರ್ಘಟನೆ

ನಮ್ಮ ಕೃಷಿಯಲ್ಲಿ ಸುಧಾರಣೆಯನ್ನು ಮಾಡುವುದೆಂದರೆ ಟ್ರ್ಯಾಕ್ಟರುಗಳಿಂದಲೇ ಭೂಮಿಯನ್ನು ಉತ್ತು ಯಂತ್ರದಿಂದಲೇ ಕೊಯ್ಯುವ ಅಭ್ಯಾಸವನ್ನು ರೂಢಿಸಿಕೊಳ್ಳುವುದೆಂದು ಅರ್ಥಮಾಡಲಾಗದು. ಭಾರತದ ಪರಿಸ್ಥಿತಿಯು ಇಂಥ ವಿಪರೀತ ಪರಿವರ್ತನೆಗೆ ಆಸ್ಪದವನ್ನು ಕೊಡುವುದಿಲ್ಲವೆಂದು ವ್ಯವಸಾಯ ಮಂತ್ರಿ ಡಾ| ಪಂಜಾಬರಾವ ದೇಶಮುಖರು ಹೇಳಿದ್ದು ಗಮನಾರ್ಹವಿದೆ. ನಮ್ಮಲ್ಲಿಯ ಸಾಮಾನ್ಯ ಹಿಡುವಳಿಯ ಕ್ಷೇತ್ರ ಸಣ್ಣದಿರುವುದರಿಂದ ಕೃಷಿಯಲ್ಲಿ ಟ್ರ್ಯಾಕ್ಟರುಗಳನ್ನು ಬಳಸುವುದು ಅಪ್ರಯೋಜಕವೆನಿಸೀತು. ವಿಸ್ತಾರವಾದ ಹೊಲಗಳಿರುವಲ್ಲಿ ಮಾತ್ರ ಲಾಭಪ್ರದವಾದ ಈ ಪ್ರಯೋಗ ನಡೆಸಬಹುದೆನ್ನುವ ಮಾತು ನಿಜ. ನಿರುದ್ಯೋಗ ಮುಂತಾದ ಸಾಮಾಜಿಕ ಕೇಡುಗಳನ್ನು ದೂರೀಕರಿಸುವುದರ ಕಡೆಗೆ ನಾವು ವಿಶೇಷ ಗಮನವನ್ನು ಈಗ ಕೊಡಬೇಕಾಗಿದೆ. ಅದುದರಿಂದ ಕೇವಲ ಯಾಂತ್ರೀಕರಣದ ಮೋಹದಿಂದ ನಾವು ಲಾಭವನ್ನು ಹೊಂದುವಂತಿಲ್ಲ. ಹತ್ತು ಹಲವು ಸಲ ಸೂಚಿಸಿದಂತೆ ನಮ್ಮ ಶಿಕ್ಷಣ ಕ್ರಮವನ್ನು ಕ್ರಾಂತಿಕಾರಿ ರೀತಿಯಲ್ಲಿ ಪುನರ್ಘಟಿಸಿ, ಸಾಮಾನ್ಯ ವಿದ್ಯಾರ್ಥಿಗೂ ಸ್ವಾವಲಂಬನದ ದೀಕ್ಷೆಯನ್ನು ಕೊಡುವ ಮೂಲಕ, ಮತ್ತು ದೇಹಶ್ರಮದ ಮಹತ್ವವನ್ನು ಮನಗಾಣಿಸುವುದರ ಮೂಲಕ ಕೃಷಿಯಲ್ಲಿ ಅಭಿವೃದ್ಧಿಯನ್ನು ಸಾಧಿಸಬಹುದು. ಈ ಮಟ್ಟಿಗೆ ಮಾಧ್ಯಮಿಕ ಶಿಕ್ಷಣ ಆಯೋಗಕ್ಕೆ ಪ್ರೊ. ಎಸ್. ಎನ್. ಅಗ್ರವಾಲಾರು ನೀಡಿದ ಸಲಹೆಗಳು ಅತ್ಯಂತ ಉಪಯುಕ್ತವಾಗಿವೆ.

ಮೈಸೂರಿನ ಹೊಸ ಪ್ರಯೋಗ

ಸಾಮಾನ್ಯ ಶಿಕ್ಷಣದ ಪುನರ್ಘಟನೆಗೆ ಮೂಲ ಶಿಕ್ಷಣವೇ ತಳಹದಿಯಾಗತಕ್ಕುದೆಂದು ಅಗ್ರವಾಲಾ ಪ್ರತಿಪಾದಿಸಿರುವರು. ಹಾಗೆಯೇ ಬೋಧ ಭಾಷೆಯ ಸಂಗತಿಯಲ್ಲೂ ಮಾತೃ ಭಾಷೆ ಅಥವಾ ಪ್ರಾದೇಶಿಕ ಭಾಷೆಗೆ ಅವರ ಮನ್ನಣೆ ಇದೆ. ಮೈಸೂರಿನಲ್ಲಿ ಮುಖ್ಯಮಂತ್ರಿ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಘಟಿಸಲ್ಪಟ್ಟ ಶೈಕ್ಷಣಿಕ ಸುಧಾರಣಾ ಸಮಿತಿಯು ಮೊನ್ನೆ ತಾನೆ ಸಾದರಪಡಿಸಿದ ೪೦೦ ಪುಟಗಳ ಸುದೀರ್ಘ ವರದಿಯಲ್ಲಿ ಬೋಧ ಭಾಷೆಯು ಪ್ರಾದೇಶಿಕ ಭಾಷೆಯಾಗತಕ್ಕುದೆಂದು ಶಿಫಾರಸು ಮಾಡಿದೆ. ಮುಂದಿನ ಜೂನು ತಿಂಗಳಿಂದ ಈ ವರದಿಗೆ ಕಾಯಿದೆ ರೀತ್ಯಾ ಮನ್ನಣೆ ದೊರೆತು ಅದು ಜ್ಯಾರಿಗೆ ಬರಲಿರುವುದೆಂದು ಕೇಳುತ್ತೇವೆ. ಈ ಶಿಫಾರಸುಗಳಂತೆ, ಇಂಟರ್ ಮೀಡಿಯೇಟ್ ವರೆಗಿನ ಶಿಕ್ಷಣವನ್ನು ಪ್ರಾದೇಶಿಕ ಭಾಷೆಯಾದ ಕನ್ನಡದಲ್ಲಿಯೇ ಕೊಡಲಾಗುವುದು. ಪದವೀ ವರ್ಗಗಳಿಗೆ ಮಾತ್ರ ಇಂಗ್ಲೀಷು ಇರುವುದು. ಶಿಕ್ಷಣದ ಪ್ರಾಥಮಿಕ ಘಟ್ಟದಲ್ಲಿ ಕೃಷಿ, ತೋಟಗಾರಿಕೆ, ನೂಲುವುದು, ನೇಯುವುದು, ಬಡಗಿ ಕೆಲಸ ಮುಂತಾದುವನ್ನೂ ಜಾನಪದ ಗೀತ ಮುಂತಾದ ಕುಶಲ ಕಲೆಗಳನ್ನೂ ಕಲಿಸಲಾಗುವುದು. ಮಾಧ್ಯಮಿಕ ಘಟ್ಟದಲ್ಲಿ ಸ್ವಯಂ ಪರಿಪೂರ್ಣವಾದ ಶಿಕ್ಷಣವನ್ನು ನೀಡುವರು. ವಿದ್ಯಾಭ್ಯಾಸವನ್ನು ಮುಂದುವರಿಸ ಬಯಸುವವರಿಗೆ ಸಹಾಯಕವಾದ ಶಿಕ್ಷಣವನ್ನೂ ಕೊಡಲಾಗುವುದು. ಪ್ರಾಥಮಿಕ ಘಟ್ಟದಲ್ಲಿ ಸಹಶಿಕ್ಷಣಕ್ಕೆ ಸಮಿತಿಯು ಒಪ್ಪಿದ್ದರೂ ಮಾಧ್ಯಮಿಕಶಿಕ್ಷಣದ ಸಮಯ ಸ್ತ್ರೀಯರಿಗೆ ಪ್ರತ್ಯೇಕ ಶಾಲೆಗಳಿರಬೇಕೆಂದು ಹೇಳಿದೆ. ಇಲ್ಲಿ ಹೆಂಗಸರಿಗೆ ಉಪಯೋಗಕ್ಕೆ ಬೀಳುವ ಸಂಗತಿಗಳಲ್ಲಿ ವಿದ್ಯಾಭ್ಯಾಸ ನೀಡುವುದಕ್ಕೆ ಪ್ರಾಶಸ್ತ್ಯ ಕೊಡಬೇಕು. ನರ್ಸ ಕೆಲಸ, ಸಮಾಜ ಸೇವೆ ಮುಂತಾದವುಗಳಲ್ಲಿ ತರಬೇತಿ ನೀಡಬೇಕು ಎಂದು ಮುಂತಾಗಿ ಸಮಿತಿ ಸೂಚಿಸಿದೆ. ಗಂಡಸರಿಗೂ-ಹೆಂಗಸರಿಗೂ ನೀಡುವ ಶಿಕ್ಷಣ ಪದ್ಧತಿ ಅವರ ಭಿನ್ನ ಪ್ರಕೃತಿ ಮತ್ತು ಸ್ವಭಾವಗಳ ಕಾರಣದಿಂದ ವೈವಿಧ್ಯಪೂರ್ಣವಿರಬೇಕೆನ್ನುವುದು ಸಮಂಜಸ. ಈ ಮಟ್ಟಿಗೆ ಸ್ತ್ರೀ ಪುರುಷರು ಸಮಾನರೆಂಬ ತತ್ವಕ್ಕೆ ಸಮ್ಮತಿಸಲು ಬರುವುದಿಲ್ಲ.

ಔದ್ಯಮಿಕ ಕ್ಷೇತ್ರದಲ್ಲಿ

ಕಾರ್ಯಾಲಯಗಳಲ್ಲಿ ದುಡಿಯುವವರಿಗೆ, ಲೆಕ್ಕ ಪತ್ರಗಳನ್ನಿಡುವವರಿಗೆ, ಟೈಪಿಸ್ಟರಿಗೆ, ಬ್ಯಾಂಕ ಅಧಿಕಾರಿಗಳಿಗೆ, ಸುದ್ದಿಗಾರರಿಗೆ, ರೆವೆನ್ಯೂ ಸರ್ವೇಯರರಿಗೆ ಇತ್ಯಾದಿಯಾಗ ತರಬೇತಿಯನ್ನು ಕೊಡುವ ವ್ಯಾವಹಾರಿಕ ಕಲೆಗಳ ಶಿಕ್ಷಣ ಸಂಸ್ಥೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಬೇಕೆಂದು ಸಮಿತಿ ಸೂಚಿಸಿದೆ. ಈ ರೀತಿಯಲ್ಲಿ ಭಾರತದ ಯುವಜನರ ಮನದೊಲವನ್ನು ಸ್ವದೇಶಿ ಪ್ರವೃತ್ತಿಯ ರೂಪಕ್ಕೆ ಪರಿವರ್ತಿಸಿ ಕೊಂಡಲ್ಲಿ ರಾಷ್ಟ್ರಾಭ್ಯುದಯ

ಏಳು ವರುಷಗಳಲ್ಲಿ ಫಲ

ನಮ್ಮ ಪಿಗ್ಮಿ ಮುಡಿಪುದಾರರಲ್ಲಿ ದಿನವಿಡಿ ಕೆಲಸ ಮಾಡುವ ಶ್ರಮಜೀವಿಗಳು, ಅಂಗಡಿಗಾರರು, ವಕೀಲರು, ಡಾಕ್ಟರರು, ಎಂಜಿನಿಯರರು, ಬೇಸಾಯಗಾರರು, ವರ್ಗದಾರರು ಇತ್ಯಾದಿ ತರಗತಿಯವರಿರುವರು. ಅವರ ಪಿಗ್ಮಿ ಮುಡಿಪುಗಳು ಚಿಕ್ಕ ಪುಟ್ಟ ಠೇವಣಾತಿಗಳಿಂದ ಪ್ರಾರಂಭವಾದುವು ಅಂದು ಇಲಿಯಂತಿದ್ದುವು ಇಂದು ಹುಲಿಯಂತಾಗಿವೆ. ಅಂತಹ ವಿವೇಕಪೂರ್ಣ ದೂರದರ್ಶಿ ಸಂಪನ್ನ ಪಿಗ್ಮಿ ಠೇವಣಾತಿದಾರರ ಕೂಟಕ್ಕೆ ನೀವೂ ಕೂಡಾ ಸೇರಿ ಭಾಗ್ಯವಂತರಾಗಬೇಕಾಗಿ ಆಹ್ವಾನಿಸುತ್ತೇವೆ.

ಆಧಾರ ವಹಿವಾಟು ರೂ 5,00,00,000ಕ್ಕೂ ಮಿಕ್ಕಿದೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925 ಹೆಡ್ ಆಫೀಸು: ಉಡುಪಿ

THE CANARA INDUSTRIAL & BANKING SYNDICATE LIMITED

ESTD: 1925 H. O: UDIPI.

ಸಮತೂಕ ಸಾಧಿಸಿದ ಹೊಸ ವರ್ಷದ ಬಜೆಟು

ಕರಭಾರ ಪದ್ಧತಿಯನ್ನು ಪುನರ್ವಿಮರ್ಶಿಸಲು ಜಾನ್ ಮಥಾಯರ ಅಧ್ಯಕ್ಷತೆಯಲ್ಲಿ ಆಯೋಗದ ನೇಮಕ

ಕ್ಕೆ ನೆರವುದೊರೆತೀ ತೀರುವುದು. ಪಂಚವಾರ್ಷಿಕ ಯೋಜನೆಯಲ್ಲಿ ಕೃಷಿಯ ಜೊತೆಗೆ ಕೈಗಾರಿಕಾ ಕ್ಷೇತ್ರದಲ್ಲಿಯೂ ಅಭಿವೃದ್ಧಿಯನ್ನು ಸಾಧಿಸತಕ್ಕುದೆಂದು ಸ್ಪಷ್ಟವಾಗಿ ಹೇಳಿದ್ದರಿಂದ ಇಂಥ ಶಿಕ್ಷಣ ಸಂಸ್ಥೆಯ ಸ್ಥಾಪನೆ ಸ್ತುತ್ಯ ಉಪಕ್ರಮವೆಂದೇ ಹೇಳಬೇಕು. ಭಾರತ ಸರಕಾರ ಈಗ ತಾನೇ ಪ್ರಕಟಿಸಿರುವ ಔದ್ಯೋಗಿಕ ಅಭಿವೃದ್ಧಿಯ ಕಾರ್ಯಕ್ರಮವೆಂಬ ಹೆಸರಿನ ಪಂಚವಾರ್ಷಿಕ ಯೋಜನೆಯ ಮೂರನೆ ಹಾಗೂ ಕೊನೆಯ ಪುಸ್ತಕ ಭಾರತವು ಮುನ್ನಡಿ ಇಡಬೇಕಾದ ಮಾರ್ಗವನ್ನು ನಿರ್ದೇಶಿಸುತ್ತದೆ. ಇದರನ್ವಯ ಸರಕಾರೀ ಮತ್ತು ಖಾಸಗೀ ಕ್ಷೇತ್ರಗಳಲ್ಲಿ ಒಟ್ಟು ೪೭೭ ಕೋಟಿರೂಪಾಯಿಯ ಅಭಿವೃದ್ಧಿ ಯೋಜನೆಗಳು ಕೈಗೊಳ್ಳುವುವು. ಕೇಂದ್ರ ಸರಕಾರವೂ ರಾಜ್ಯ ಸರಕಾರಗಳೂ ಕೆಲವೊಂದು ಸರಕಾರೀ ಸಂಸ್ಥೆಗಳೂ ಈಗಾಗಲೇ ಕೆಲವು ಉದ್ಯಮಗಳನ್ನು ಸ್ಥಾಪಿಸಿವೆ. ಶಸ್ತ್ರಾಸ್ತ್ರಗಳು ಮುಂತಾದ ಉದ್ದಿಮೆ ಸರಕಾರದ ವಶದಲ್ಲಿರುವುದಂತೂ ಸರಿಯೇ,-ಜೊತೆಗೆ, ಕಲ್ಲಿದ್ದಲು, ಭೂಗರ್ಭದ ಎಣ್ಣೆ, ಉಕ್ಕು, ಕಬ್ಬಿಣ, ವಿಮಾನಗಳು, ಹಡಗು ಕಟ್ಟುವುದು. ಟೆಲಿಫೋನ, ಟೆಲಿಗ್ರಾಫ್, ವಾಯರ್‌ಲೆಸ್ ಮುಂತಾದ ಉಪಕರಣಗಳ ಭಾವೀ ಅಭಿವೃದ್ಧಿಗೆ ಕೂಡ ಸರಕಾರವೇ ಹೊಣೆಗಾರವಿದೆ. ಹೀಗೆ ೯೪ ಕೋಟಿ ರುಪಾಯಿಗಳ ಪಾಲು ಸರಕಾರಕ್ಕೆ ಬಂದಿದೆ. ಉಳಿದ ಸುಮಾರು ೪೨ ಉದ್ದಿಮೆಗಳನ್ನು ಖಾಸಗಿ ಕ್ಷೇತ್ರಕ್ಕೆ ಬಿಡಲಾಗಿದೆ. ಅವುಗಳ ಉತ್ಪಾದನೆಯ ಗುರಿ, ಬಂಡವಾಳದ ಪೂರೈಕೆ, ಮುಂತಾದ ಅನೇಕ ಸಂಗತಿಗಳ ಬಗ್ಗೆ ಸರಕಾರದ ಈ ಪ್ರಕಟಣೆ ವಿವರಣೆಯನ್ನು ಒದಗಿಸುತ್ತದೆ. ಈ ಗುರಿಯಂತೆ ಬಟ್ಟೆ ಸೆಣಬಿನ ಸಿದ್ಧ ವಸ್ತುಗಳು, ಗಾಜು, ಸಿಮೆಂಟು, ಸೈಕಲ್, ಹೊಲಿಗೆ ಯಂತ್ರ, ಸಕ್ಕರೆ, ವನಸ್ಪತಿ, ಅಮೂಲ್ಯ ಮೃತ್ತಿಕೆ ಮುಂತಾದ ಕೆಲವು ವಸ್ತುಗಳ ನಿರ್ಯಾತಕ್ಕೂ ಆಸ್ಪದ ದೊರೆಯುತ್ತದೆ.

ಕೊರತೆ ತೋರಿಸುವ ಬಜೆಟುಗಳು

ಪಂಚವಾರ್ಷಿಕ ಯೋಜನೆಯಲ್ಲಿ ಅಪೇಕ್ಷಿಸಿದಂತೆ ಎಲ್ಲ ಕೆಲಸಗಳೂ ನಿರಾತಂಕವಾಗಿ ನೆರವೇರಬೇಕಾದಲ್ಲಿ ಅದಕ್ಕಾಗಿ ಅಪಾರ ಹಣದ ಪೂರೈಕೆಯೂ ಅಗತ್ಯವಿದೆ. ದೇಶದ ಜನರೊಳಗಿಂದಲೇ ಈ ರೀತಿ ಬಂಡವಲು ಸಂಗ್ರಹಿಸಲ್ಪಡುವುದು ಕ್ಷೇಮವೆಂದು ಹೇಳುವುದು ಭದ್ರತೆಯ ದೃಷ್ಟಿಯಿಂದ ಸಮರ್ಪಕವಿದೆ. ಆದರೆ, ಪ್ರಕೃತ ಭಾರತದ ಸ್ಥಿತಿಗತಿಯನ್ನು ಪರಿಶೀಲಿಸಿದಾಗ, ಸಾಕಷ್ಟು ಬಂಡವಳವನ್ನು ಕೂಡಿಸುವುದು ಶಕ್ಯವಾದೀತೇ ಎಂಬ ಸಂದೇಹ ತಲೆದೋರುವುದು ನಿಶ್ಚಯ. ದಟ್ಟದರಿದ್ರರ ನಾಡಾದ ನಮ್ಮಲ್ಲಿ ಹಣಸಂಚಯದ ಮನೋಭಾವವೇ ಉಂಟಾಗಿಲ್ಲದಿರುವುದು ಆಶ್ಚರ್ಯಕರವಾದ ಸಂಗತಿಯಲ್ಲ. ಸ್ವಾತಂತ್ರ್ಯೋತ್ತರದಲ್ಲಿ ಭಾರತವನ್ನು ಕಲ್ಯಾಣ ರಾಷ್ಟ್ರವಾಗಿ ರೂಪಿಸಬೇಕೆನ್ನುವ ಮಹತ್ವಾಕಾಂಕ್ಷೆ ಸರಕಾರೀ ಸೂತ್ರವನ್ನು ಕೈಗೆ ತೆಗೆದುಕೊಂಡಿರುವ ಪ್ರಭೃತಿಗಳಲ್ಲಿ ಇದ್ದರೂ—ರಾಜ್ಯ ಸರಕಾರಗಳೂ ಕೇಂದ್ರ ಸರಕಾರವೂ ಮಂಡಿಸುತ್ತಿರುವ ಮುಂಗಡ ಪತ್ರಗಳು ಕೊರತೆಯನ್ನೇ ಎತ್ತಿತೋರಿಸುತ್ತವೆ. ಆಡಳಿತ ಯಂತ್ರದ ಮೇಲಿನ ವೆಚ್ಚವು ದಿನದಿನಕ್ಕೆ ಹೆಚ್ಚುತ್ತಾ ನಡೆದಿದೆ; ಮತ್ತು ಸರಕಾರದ ಮೇಲೆ ವಿವಿಧ ಲೋಕೋಪಯೋಗಿ ಕೆಲಸಗಳಿಗಾಗಿ ಧನ ವಿನಿಯೋಗಿಸಬೇಕೆನ್ನುವ ಹೊಸ ಹೊಣೆಗಾರಿಕೆಯೂ ಬಿದ್ದಿದೆ. ಆದುದರಿಂದ ಮಿತವ್ಯಯವನ್ನು ಸಾಧಿಸಿಯೋ, ಯೋಜನೆಗಳಲ್ಲಿ ಅಷ್ಟೊಂದು ಅನಗತ್ಯದ್ದೆನಿಸಿದವುಗಳನ್ನು ಕೆಲಸಮಯ ಹಿಂದೂಡಿಯೋ, ಅಥವಾ ಕೊರತೆ ಧನ ವಿನಿಯೋಗ ಪದ್ಧತಿಗೆ ಶರಣೆಂದೋ ಎಂತಾದರೂ ಬಜೆಟಿನ ಸಮತೂಕವನ್ನು ಸಾಧಿಸುವ ಪ್ರಯತ್ನ ಅಗತ್ಯದ್ದೆನಿಸಿದೆ. ಮದ್ರಾಸು ರಾಜ್ಯದಲ್ಲಿ ಮೊನ್ನೆ ತಾನೆ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ದುಡಿಯುತಿದ್ದ ಸುಮಾರು ೪ ಸಾವಿರ ಮಂದಿಯನ್ನು ಮನೆಗೆ ಕಳಿಸಲಾಯಿತು. ಬಜೆಟಿನಲ್ಲಿ ಮಂಜೂರಾದ ಎಲ್ಲ ಹಣವೂ ವೆಚ್ಚವಾದುದರಿಂದ, ಮತ್ತು ಇನ್ನೂ ಹಣವನ್ನು ಕೊಡಲು ಸಾಧ್ಯವಿಲ್ಲವೆನಿಸಿದ್ದರಿಂದ, ಈ ರೀತಿಯ ಕ್ರಮ ಕೈಗೊಂಡರು.

ದೇಶಮುಖರ ಜಾಣತನ

ಇಷ್ಟು ನಾಜೂಕು ಪರಿಸ್ಥಿತಿ ದೇಶದಲ್ಲಿ ಇರುವಾಗ, ಕೇಂದ್ರ ಸರಕಾರದ ಹಣಕಾಸಿನ ಸಚಿವರಾದ ಚಿಂತಾಮಣಿ ದೇಶಮುಖರು ಪಾರ್ಲಿಮೆಂಟಿಗೆ ಸಾದರಪಡಿಸಿದ ೧೯೫೩-೫೪ನೇ ವರ್ಷದ ಬಜೆಟು ಸೂಕ್ಷ್ಮದೃಷ್ಟಿಯಿಂದ ಎಲ್ಲ ಸಂಗತಿಗಳನ್ನೂ ವಿಚಾರಿಸಿ ಸಿದ್ಧಗೊಳಿಸಿದ್ದೆಂಬುದು ಸ್ವಯಂವೇದ್ಯವಾಗುತ್ತದೆ. ಹೊಸ ಕರಗಳನ್ನು ಹೇರದೆ, ಇದ್ದ ತೆರಿಗೆಗಳಲ್ಲಿಯೇ ಸಾಮಾನ್ಯವಾದ ಬದಲಾವಣೆಗಳನ್ನು ಮಾಡಿ ೩೪೫ ಲಕ್ಷ ರುಪಾಯಿಗಳ ನಾಮಮಾತ್ರ ಉಳಿತಾಯವನ್ನು ತೋರಿಸುವ ಮುಂಗಡ ಪತ್ರವಿದು. ಪಂಚವಾರ್ಷಿಕ ಯೋಜನೆಯು ಈಗ ತನ್ನ ಮೂರನೇ ವರ್ಷದಲ್ಲಿ ಕಾಲಿಟ್ಟಿದೆಯಾದುದರಿಂದ ಅದನ್ನು ಕಾರ್ಯಗತಗೊಳಿಸಲಿಕ್ಕೆ ಬೇಕಿರುವ ಬಂಡವಳು,ಪೂರೈಕೆಯನ್ನೂ ದೇಶದಲ್ಲಿ ವಿದ್ಯಮಾನವಿರುವ ಆರ್ಥಿಕ ಸಾಮರ್ಥ್ಯದ ಕಲ್ಪನೆಯನ್ನೂ ಕಣ್ಣ ಮುಂದಿಟ್ಟುಕೊಂಡು ಜಾಣತನದಿಂದ ಬಜೆಟನ್ನು ತಯಾರಿಸಿದುದಕ್ಕೆ ದೇಶಮುಖರು ಪ್ರಶಂಸಾರ್ಹರು. ಹಣದ ಆಗತ್ಯವಿದ್ದರೂ ಕೂಡ ಅವರು ಕೆಲವು ವಿನಾಯತಿಗಳನ್ನು ತೋರಿಸಿ ಮಧ್ಯಮ ವರ್ಗಕ್ಕೆ ನೆರವು ನೀಡಲು ಯತ್ನಿಸಿರುವರು. ಇದರಲ್ಲಿ ಆದಾಯ ತೆರಿಗೆಯನ್ನು ಕೊಡುವುದರಿಂದ ಮುಕ್ತಿ ದೊರೆಯುವ ಕನಿಷ್ಠ ಮಿತಿಯನ್ನು ವ್ಯಕ್ತಿಯ ಸಂಗತಿಯಲ್ಲಿ ೪೨೦೦ ರೂಪಾಯಿಗಳಿಗೂ ಹಿಂದೂ ಅವಿಭಕ್ತ ಕುಟುಂಬದ ಸಂಗತಿಯಲ್ಲಿ ೮೪೦೦ ರುಪಾಯಿಗಳಿಗೂ ಏರಿಸಿದುದು ಮುಖ್ಯವೆನ್ನಬೇಕು. ಕೈಗಾರಿಕಾ ಕ್ಷೇತ್ರದಲ್ಲಿ ಈಗ ವಿದೇಶೀ ಪೇಟೆಯಲ್ಲಿ ಯಶಸ್ವಿಯಾದ ರೀತಿಯಲ್ಲಿ ಸ್ಪರ್ಧಿಸಲಾರದೆ ಮಂದಗತಿಯಿಂದ ಸಾಗಿರುವ ಸೆಣಬಿನ ಉದ್ದಿಮೆಗೆ ಸಹ ಸ್ವಲ್ಪಮಟ್ಟಿಗೆ ಕರಭಾರದಿಂದ ಮುಕ್ತಿ ದೊರೆತಿದೆ. ಗೋಣಿಯ ನಿರ್ಯಾತದ ಮೇಲೆ ಟನ್ನಿಗೆ ೧೭೫ ರುಪಾಯಿಗಳಷ್ಟಿದ್ದ ತೆರಿಗೆಯನ್ನು ಈಗ ೮೦ ರುಪಾಯಿಗಳಿಗೆ ಇಳಿಸಿರುವರು. ಮೊದಲನೆ ರಿಯಾಯತಿಯನ್ನು ತೆರಿಗೆ ವಸೂಲಿ ಕೆಲಸ ನಿರಾತಂಕವಾಗಿ ನಡೆಸಬೇಕೆನ್ನುವ ಇರಾದೆಯಿಂದಲೇ ತೋರಿಸಲಾಯಿತೆಂದು ಅರ್ಥಸಚಿವರ ಬಜೆಟು ಭಾಷಣದಿಂದ ತಿಳಿಯುತ್ತದೆ. ಎರಡನೆ ರಿಯಾಯತಿಯನ್ನು ಸಾಮಾನ್ಯವಾಗಿ ಸಂಬಂಧಿಸಿದ ವರ್ಗಗಳು ಸ್ವಾಗತಿಸಿವೆ. ಭಾರತಕ್ಕೆ ಡಾಲರು ಸಂಪಾದಿಸಿಕೊಡುವ ಉದ್ಯಮ ಇದಾಗಿರುವುದರಿಂದ ಅದರ ಅಭಿವೃದ್ಧಿಗೆ ಎಲ್ಲಬಗೆಯ ಪ್ರೋತ್ಸಾಹವೂ ಬೇಕು. ಆದರೆ ಇಂದು ಅತ್ಯಂತ ನಿಕೃಷ್ಟಾವಸ್ಥೆಗೆ ಬಂದಿಳಿದಿರುವ ಚಹಾ ತೋಟಗಳ ಉದ್ಯಮಕ್ಕೆ ಏನೊಂದೂ ಸೌಲಭ್ಯಗಳನ್ನು ಒದಗಿಸದಿದ್ದುದು ಕೆಲವು ವರ್ಗಗಳಿಗೆ ನಿರಾಸೆಯುಂಟುಮಾಡಿದೆ.

ಹಿತಾಹಿತ ಅಂಶಗಳು

ದೇಶಮುಖರ ಬಜೆಟು ಮೂಲದಲ್ಲಿ ೧೦೫ ಲಕ್ಷ ರೂಪಾಯಿಗಳ ಕೊರತೆ ತೋರಿಸುತ್ತದೆ; ಮೇಲಿನ ಎರಡು ಬಗೆಯ ವಿನಾಯತಿಗಳಿಂದಾಗಿ ಈ ಕೊರತೆ ೪೯೫ ಲಕ್ಷ ರೂಪಾಯಿಗೆ ಏರುತ್ತದೆ. ಇದನ್ನು ತುಂಬಿಸಿ ಒಟ್ಟಾರೆ ೪೫ ಲಕ್ಷ ರೂಪಾಯಿಗಳ ಉಳಿಕೆಯನ್ನು ತೋರಿಸಲು ಸಾಧ್ಯವಾಗುವಂತೆ ಕೆಲವು ತೆರಿಗೆಗಳನ್ನು ಅಲ್ಲಲ್ಲಿ ಹೊಂದಿಸಿಕೊಂಡಿರುವರು. ಮುಖ್ಯವಾಗಿ ಭೋಗವಿಲಾಸದ ಆಯಾತ ಸುಂಕವನ್ನು ಹೆಚ್ಚಿಸುವುದು, ಅಡಿಕೆಯ ಆಯಾತದ ಮೇಲಿದ್ದ ಸುಂಕವನ್ನು ಪ್ರತಿ ರಾತಲಿಗೆ ಎರಡಾಣೆಯಷ್ಟು ಏರಿಸುವುದು, ಅಂಚೆಯ ದರಗಳನ್ನು ಸ್ವಲ್ಪ ಮಟ್ಟಿಗೆ ಹೆಚ್ಚಿಸುವುದು— ಮುಂತಾದ ಕ್ರಮಗಳನ್ನು ಕೈಗೊಳ್ಳಬೇಕೆಂದು ಸರಕಾರದ ಇಚ್ಛೆ. ಅಡಿಕೆಯ ಆಯಾತದ ಮೇಲಿನ ಸುಂಕವನ್ನು ಏರಿಸಿದ್ದರಿಂದ ದೇಶೀಯ ವ್ಯವಸಾಯಕ್ಕೆ ಉತ್ತೇಜನ ದೊರೆತೀತೆಂದು ಬಗೆದಿದೆ. ಹಾಗೆಯೇ ಮೋಟಾರುಕಾರುಗಳು, ಭೋಗವಿಲಾಸದ ಸಾಮಗ್ರಿಗಳು ಮುಂತಾದವುಗಳ ಮೇಲಿನ ಕರಭಾರವನ್ನು ಹೆಚ್ಚಿಸಿದ್ದರಿಂದ ಬಡವರಿಗೆ ನಷ್ಟವಿಲ್ಲ. ಇದಕ್ಕೆ ಪ್ರತಿಯಾಗಿ ಕೆಲವು ಔಷಧಗಳ ಹಾಗು ಆಹಾರಗಳ ಮೇಲಿನ ತೆರಿಗೆಯನ್ನು ಕಡಿಮೆಮಾಡಿ, ಸರಕಾರ ಜನಸಾಮಾನ್ಯಕ್ಕೆ ಉಪಕಾರ ಮಾಡಿದೆಎನ್ನಬೇಕು. ಬಟ್ಟೆಯ ಮೇಲಿನ ಅಬಕಾರಿ ಸುಂಕದ ಸಂಗತಿಯಲ್ಲೂ ನಿರ್ದಿಷ್ಟ ಕ್ರಮವನ್ನು ಅನುಸರಿಸುವ ಸೂಚನೆ ಇರುವುದರಿಂದ, ವ್ಯಾಪಾರಿ ಹಾಗು ಸರಕಾರ ಉಭಯತರಿಗೂ ಹಿತವಿದೆ. ಸ್ವಲ್ಪ ಮಟ್ಟಿಗೆ ಬೇಸರವನ್ನು ತರುವ ಸಂಗತಿ ಎಂದರೆ ಟಪ್ಪಾಲು ದರಗಳನ್ನು ಏರಿಸಿದ್ದೇ ನಿಜ. ರಿಜಿಸ್ಟ್ರೇಶನ್ ಚಾರ್ಜನ್ನು ಆರಾಣೆಗೆ, ಒಂದು ರಾತಲು ಪಾರ್ಸೆಲಿನ ಚಾರ್ಜನ್ನು ಎಂಟಾಣೆಗೆ ಇತ್ಯಾದಿಯಾಗಿ ಹೆಚ್ಚಿಸಿದ್ದರಿಂದ ಜನರು ಅಂಚೆ ಇಲಾಖೆಯ ಉಪಯೋಗವನ್ನು ಕಡಿಮೆಮಾಡಿಕೊಳ್ಳುವ ಭಯವಿದೆ. ಆದರೂ ಕಳೆದ ಮೂರು ವರ್ಷಗಳಲ್ಲಿ ಅಂಚೆ ಇಲಾಖೆಯು ನಷ್ಟವನ್ನು ಸಹಿಸುತ್ತಾ ಬಂದಿರುವುದರಿಂದ, ಮತ್ತು ಸಾಮಾನ್ಯವಾಗಿ ಟಪ್ಪಾಲು ವೆಚ್ಚ ಎಲ್ಲ ಜನರಲ್ಲಿ ಹಂಚಿಹೋಗುವುದರಿಂದ ದರಗಳ ಏರಿಕೆ ಸರಿ ಎಂದು ದೇಶಮುಖರು ಸಮರ್ಥಿಸಿಕೊಂಡಿರುವರು.

ಸಂರಕ್ಷಣೆಯ ವೆಚ್ಚ

ಬಜೆಟಿನಲ್ಲಿ ಈಗಲೂ ಸೈನ್ಯ ಖಾತೆಯ ವೆಚ್ಚವೇ ಅತ್ಯಧಿಕ ಮಟ್ಟದಲ್ಲಿರುತ್ತದೆ.

(೮ನೇ ಪುಟ ನೋಡಿರಿ)

ZANDU

ಝಂಡೂ ಫಾರ್ಮಸಿಯ ಮನೆಮದ್ದುಗಳನ್ನೇ ಸದಾ ಉಪಯೋಗಿಸಿರಿ.

ಝಂಡೂ ಬ್ರಾಹ್ಮೀ ಹೇರ್ ಆಯಿಲ್:- ಮೆದುಳಿಗೆ ತಂಪು- ಮನಸ್ಸಿಗೆ ಉಲ್ಲಾಸವೀಯುವುದು. 1 ಪೌಂಡಿಗೆ ರೂ. 3-8-0 ಕಾಲು ರಾತ್ಲಿಗೆ ರೂ. 1.

ಝಂಡೂ ಸರಸಪರಿಲ್ಲಾ:- ರಕ್ತವನ್ನು ಶುದ್ಧಗೊಳಿಸಲು ಹೆಸರುವಾಸಿಯಾದುದು. ಚರ್ಮರೋಗಗಳನ್ನು ಗುಣಪಡಿಸಬಲ್ಲುದು. 4 ಔನ್ಸ್ ಬಾಟ್ಲಿ 1ರ ರೂ. 1-5-0

ಝಂಡೂ ಬಾಲಾಮೃತ:-ಅನಾರೋಗ್ಯವುಳ್ಳ ಮಕ್ಕಳಿಗೆ ಆದರ್ಶ ಟಾನಿಕ್- 4 ಔನ್ಸ್ ಬಾಟ್ಲಿ 1ರ ರೂ. 1-2-0

ಝಂಡೂ ಬಾಮ್:-ತಲೆ ಸಿಡಿತ ಮೊದಲಾದ ಬೇನೆಗಳಿಗೆ! ಸೀಸೆಗೆ ರೂ1.

ಝಂಡೂ ಫಾರ್ಮಸಿಯ ದ. ಕ. ಜಿಲ್ಲೆಯ
ಎಲ್ಲಾ ಏಜಂಟರಲ್ಲೂ ದೊರೆಯುವುವು
ಸವಿವರ ಕ್ಯಾಟಲಾಗಿಗೆ ಈ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ:-

DAMODER & CO.,
Nainiappa Naicken Street, MADRAS. 3

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸುರಕ್ಷಿತತೆ, ಭದ್ರತೆ ಮತ್ತು ಸೇವಾತತ್ಪರತೆ
ಇವುಗಳಿಗೆ
ತವರುಮನೆಯಂತಿದ್ದು, ನಿಮ್ಮೆಲ್ಲರ ಸ್ನೇಹ, ಸಹಕಾರಗಳನ್ನು
ಅಪೇಕ್ಷಿಸುವ ಬೇಂಕು.

THE CANARA BANKING CORPORATION LTD.
Estd: 1906] [H. O.: UDIPI, (S. India)

ನವಯುಗ

ಉಡುಪಿ, ಗುರುವಾರ ೫-೩-'೫೩

ಔದ್ಯಮಿಕ ಅಭಿವೃದ್ಧಿ

ಪಂಚವಾರ್ಷಿಕ ಯೋಜನೆಯಲ್ಲಿ ಕೈಗಾರಿಕೆಗಳ ಅಭಿವೃದ್ಧಿಯ ಸಂಬಂಧದಲ್ಲಿ ಯೋಜನಾ ಆಯೋಗವು ಮಾಡಿದ ವರದಿ ಮತ್ತು ಸಿಫಾರಸುಗಳನ್ನೊಳಗೊಂಡಿರುವ ಪುಸ್ತಕ ಈಗ ತಾನೆ ಪ್ರಸಿದ್ಧಿಗೊಂಡಿರುವುದು. ನಮ್ಮದೇಶದಲ್ಲಿ ಕೃಷಿಯೇ ಪ್ರಧಾನವಾದ ವೃತ್ತಿಯಾಗಿದ್ದರೂ ಜೀವನ ಮಟ್ಟವನ್ನು ಎತ್ತರಿಸಬೇಕೆನ್ನುವ ಚಳುವಳಿಯು ನಡೆಯುತ್ತಿರುವಷ್ಟು ಕಾಲ ನಾವು ಔದ್ಯಮಿಕ ಅಭಿವೃದ್ಧಿಯ ಪ್ರಶ್ನೆಯನ್ನೂ ಗಂಭೀರತೆಯಿಂದ ವಿವೇಚಿಸುತ್ತಿರಬೇಕಾಗುತ್ತದೆ. ನಮ್ಮ ಹೆಚ್ಚುತ್ತಿರುವ ಜನಸಂಖ್ಯೆಯು ಬಡತನ ಮತ್ತು ಹಸಿವೆಯಿಂದಲೂ ನಿರುದ್ಯೋಗದಿಂದಲೂ ಮುಕ್ತಗೊಂಡು ಸುಖಜೀವನ ನಡೆಸುವುದು ಸಾಧ್ಯವಾಗಬೇಕಿದ್ದರೆ ರಾಷ್ಟ್ರದಲ್ಲಿ ಔದ್ಯೋಗೀಕರಣ ಭರದಿಂದ ಬೆಳೆದುಬರಬೇಕೆಂದು ಅರ್ಥಶಾಸ್ತ್ರಜ್ಞರ ಅಭಿಪ್ರಾಯವಿದೆ. ಆದುದರಿಂದ ಪಂಚವಾರ್ಷಿಕ ಯೋಜನೆಯಲ್ಲಿ ಅನ್ನಸ್ವಾವಲಂಬನಕ್ಕೆ ಪ್ರಥಮ ಪ್ರಾಶಸ್ತ್ಯವನ್ನು ಕೊಡಲಾಗಿದ್ದರೂ ಜೊತೆಗೇ ರಾಷ್ಟ್ರದ ಸರ್ವಾಂಗಿಕ ಪ್ರಗತಿಯನ್ನು ಸಾಧಿಸುವ ಹವಣಿಕೆಯನ್ನೂ ಮಾಡಿರುವರು. ದೇಶಾದ್ಯಂತ ಅನೇಕ ಬಗೆಯ ಕೈಗಾರಿಕೆಗಳು ನಡೆಯುತ್ತಿದ್ದು ಅವುಗಳ ಅಭಿವೃದ್ಧಿಯ ವಿಸ್ತೃತ ರೂಪರೇಷೆಯನ್ನು ಯೋಜನಾ ಆಯೋಗ ಹಾಕಿಕೊಟ್ಟಿದೆ. ನಮ್ಮಲ್ಲಿ ಕೈಗಾರಿಕೆಗಳು ಅಭಿವೃದ್ಧಿಹೊಂದಲಿಕ್ಕೆ ದ್ವಿತೀಯ ಮಹಾಯುದ್ಧದಂಥ ಸಂಕ್ರಮಣ ಕಾಲವೇ ಪ್ರೋತ್ಸಾಹ ನೀಡಿತೆಂದರೂ ಸಲ್ಲುವುದು. ಯುದ್ಧ ಕಾಲದಲ್ಲಿ ಆಂಶಿಕವೂ ಅನೇಕ ಬಗೆಯ ಉದ್ದಿಮೆಗಳು ಭರದಿಂದ ಪ್ರಗತಿಯನ್ನು ಹೊಂದಿದುವು. ಕೈಗಾರಿಕೆಗಳಲ್ಲಿ ಈ ತೆರನಾದ ಅಭಿವೃದ್ಧಿಯು ಈಗಾಗಲೇ ಕೈಗೂಡಿರುವುದನ್ನು ಯೋಜನಾ ಆಯೋಗ ಕಂಡು ಸಂತುಷ್ಟಿಯನ್ನು ವ್ಯಕ್ತಗೊಳಿಸಿದೆ. ಇದರಂತೆ ನಮ್ಮ ವಿದೇಶ ವ್ಯಾಪಾರ ಕೂಡ ದಿನದಿಂದ ದಿನಕ್ಕೆ ಪ್ರವರ್ಧಮಾನ ಸ್ಥಿತಿಗೆ ಬರುತ್ತಿರುವುದು ಸಂತೋಷವನ್ನು ಉಂಟು ಮಾಡುತ್ತದೆ. ಈಗಾಗಲೇ ನಾವು ಬಟ್ಟೆ ಬರೆಗಳು, ಬೆಂಕಿ ಪೆಟ್ಟಿಗೆ, ಸಿಮೆಂಟು, ಹೊಲಿಗೆ ಯಂತ್ರ, ವಿದ್ಯುತ್ ಬೀಸಣಿಗೆ ಮುಂತಾದ ಅನೇಕ ವಸ್ತುಗಳನ್ನು ವಿದೇಶಗಳಿಗೆ ನಿರ್ಯಾತ ಮಾಡುತ್ತೇವೆ. ಆದರೆ ಈ ಪ್ರಮಾಣ ಬೆನ್ನು ತಟ್ಟಿಕೊಳ್ಳುವಷ್ಟು ಹೆಚ್ಚು ಇಲ್ಲ. ಈ ಕೈಗಾರಿಕೆಗಳನ್ನು ಯೋಜನಾ ಬದ್ಧವಾಗಿ ಅಭಿವೃದ್ಧಿಗೆ ಒಳಪಡಿಸಿ ನಿರ್ಯಾತವನ್ನು ಹೆಚ್ಚಿಸಬೇಕೆಂದು ಯೋಜನಾ ಆಯೋಗ ಹೇಳಿರುತ್ತದೆ ೧೯೫೫ರ ಸುಮಾರಿಗೆ ಪ್ರಮುಖ್ಯವಾದ ೪೨ ಉದ್ದಿಮೆಗಳು ಹೇಗೆ ಬೆಳೆದು ಬರಬೇಕೆಂಬುದರ ವಿವರವಾದ ವರ್ಣನೆ ವರದಿಯಲ್ಲಿದೆ. ಸಣಬು, ಸಕ್ಕರೆ, ಬಟ್ಟೆ, ಸಾಬೂನು, ವನಸ್ಪತಿಗಳಂಥ ಉದ್ದಿಮೆಗಳು ಈಗಿರುವ ಅನುಕೂಲತೆಗಳ ಪೂರ್ಣ ಪ್ರಯೋಜನವನ್ನು ಹೊಂದಿ, ಅಭಿವೃದ್ಧಿಯ ಗುರಿಯನ್ನು ಮುಟ್ಟಬಹುದೆಂದು ತಿಳಿಯುತ್ತದೆ. ಕಬ್ಬಿಣ ಮತ್ತು ಉಕ್ಕು, ಫಲವರ್ಧಕ ಗೊಬ್ಬರಗಳು ಅಲ್ಯುಮಿನಿಯಂ, ಸಿಮೆಂಟು ಮುಂತಾದವುಗಳನ್ನು ವ್ಯಾಪಕಗೊಳಿಸಿಯೇ ಅಭಿವೃದ್ಧಿಯನ್ನು ಸಾಧಿಸಬೇಕೆಂದು ಯೋಜನಾ ಆಯೋಗದ ಸೂಚನೆ ಇದೆ. ಸಾರ್ವಜನಿಕರಿಂದಲೇ ಬಂಡವಳವನ್ನು ಒದಗಿಸಿ ಈ ರೀತಿ ವ್ಯಾಪಕತೆಯನ್ನು ಸಾಧಿಸಬೇಕೆಂದು ಅದು ಹೇಳುತ್ತದೆ. ಹೀಗೆ ಪ್ರತಿಯೊಂದೂ ಕೈಗಾರಿಕೆಯು ಪ್ರವರ್ಧಮಾನಸ್ಥಿತಿಗೆ ಬಂದಂತೆ-ದೇಶದ ಆರ್ಥಿಕ ಸ್ಥಿತಿಯು ಸುಧಾರಿಸುತ್ತಾ ಬರುವುದೆಂದು ಆಶಿಸಬಹುದ. ಇಂಥ ಅಭಿವೃದ್ಧಿಗಾಗಿ ಸ.ಮಾರು ೪೭೭ ಕೋಟಿ ರೂಪಾಯಿಗಳ ಬಂಡವಳು ವೆಚ್ಚ ಬಂದೀತೆಂದು ಯೋಜನಾ ಆಯೋಗ ಲೆಕ್ಕ ಹಾಕಿದೆ. ಇದರಲ್ಲಿ ಸರಕಾರದ ಪಾಲಿಗೆ ೯೪ ಕೋಟಿ ರೂಪಾಯಿಗಳು ಬರುತ್ತವೆ. ದೇಶದ ಕೈಗಾರಿಕಾಭಿವೃದ್ಧಿಗೆ ಅತ್ಯಗತ್ಯವಾಗಿ ಬೇಕಾಗಿರುವ ಕಬ್ಬಿಣ ಮತ್ತು ಉಕ್ಕುಗಳ ಉತ್ಪಾದನೆಯನ್ನು ಹೆಚ್ಚಿಸುವುದಕ್ಕಾಗಿ ಸರಕಾರವು ೮೦ ಕೋಟಿ ರೂಪಾಯಿಗಳಷ್ಟನ್ನು ವ್ಯಯಿಸುತ್ತದೆ. ಇದರಿಂದ ಕಡಿಮೆ ಎಂದರೆ ಎರಡು ಲಕ್ಷ ಟನ್ನು ಕಬ್ಬಿಣ ಹಾಗೂ ಮೂರುವರೆ ಲಕ್ಷ ಟನ್ನು ಉಕ್ಕು ದೊರೆಯುವ ಭರವಸೆ ಇದೆ. ಡಿ. ಡಿ. ಟಿ., ಪೆನಿಸಿಲಿನ್ ಮುಂತಾದ ಔಷಧಗಳ ಕಾರ್ಖಾನೆ ಮತ್ತು ವಿದ್ಯುದುಪಕರಣಗಳಿಗಾಗಿಯೂ ಸರಕಾರದ ಕಡೆಯಿಂದ ಹಣ ವ್ಯಯಿಸಲ್ಪಡುತ್ತದೆ. ಸರಕಾರವು ತನ್ನ ನಿಯಂತ್ರಣದಲ್ಲಿರುವ ಉದ್ದಿಮೆಗಳ ಮಟ್ಟಿಗೆ ಯೋಜನಾಬದ್ಧವಾದ ಪ್ರಗತಿಯನ್ನು ಕೈಗೂಡಿಸುವುದು ಸಾಧ್ಯವಾದೀತೆಂದು ಆಶಿಸಬಹುದು. ಆದರೆ ಖಾಸಗೀ ಕ್ಷೇತ್ರಗಳ ಪಾಲಿಗೆ ಬಿಟ್ಟಿರುವ ಸುಮಾರು ೨೩೩ ಕೋಟಿ ರುಪಾಯಿಗಳ ಹೊಸ ಬಂಡವಳದ ಮಟ್ಟಿಗೆ ಮಾತ್ರ ಈ ರೀತಿ ಪೂರ್ಣ ಆಶೆಯನ್ನು ಕಟ್ಟಿ ಕೊಳ್ಳುವಂತಿಲ್ಲ. ಎಲ್ಲ ಉದ್ಯಮಗಳ ಪ್ರಗತಿಯೂ ಯೋಜನಾ ಆಯೋಗ ಎಣಿಸಿದ ಮಾದರಿಯಲ್ಲಿ ಆದೀತೆಂದು ಆಶಿಸುವುದಕ್ಕೆ ಬಲವಾದ ಕಾರಣಗಳಿರುವುದಿಲ್ಲ. ಹೊಸ ಬಂಡವಾಳದ ಜೊತೆಗೇ ಖಾಸಗಿ ಕ್ಷೇತ್ರದಲ್ಲಿ ೧೫೦ ಕೋಟಿ ರುಪಾಯಿಗಳಷ್ಟು ಬಂಡವಾಳವನ್ನು ಈಗಿನ ಜೀರ್ಣ ಯಂತ್ರೋಪಕರಣಗಳ ಸ್ಥಾನದಲ್ಲಿ ಹೊಸಯಂತ್ರೋಪಕರಣಗಳನ್ನು ಜೋಡಿಸುವುದಕ್ಕೆ ವೆಚ್ಚ ಮಾಡಬೇಕೆಂದು ಯೋಜಿಸಿರುವರು. ಈ ಮಟ್ಟಿಗೂ ಪ್ರಾಮಾಣಿಕವಾದ ಆಶೆಯು ಹುಟ್ಟುವುದಿಲ್ಲ. ಸರಕಾರವು ತನ್ನ ಅಭಿವೃದ್ಧಿಯೋಜನೆಗಳಿಗಾಗಿ ತೆರಿಗೆ ಏರಿಸುತ್ತಾ ಬಂದರೆ ಜನರ ಧನಸಂಚಯದ ಬಲ ತಾನಾಗಿಯೇ ಕುಗ್ಗುತ್ತದೆ. ಎಂದ ಮೇಲೆ ಖಾಸಗೀ ಕ್ಷೇತ್ರಗಳಿಗೆ ನಿಶ್ಚಿತ ಪ್ರಮಾಣದಲ್ಲಿ ಬಂಡವಳಿನ ಪೂರೈಕೆಯಾದೀತೆಂದು ಹೇಗೆ ಹೇಳೋಣ? ಆದರೂ ಬಂಡವಳವನ್ನು ಒದಗಿಸಿ ಕೊಡಲು ಬೇರೆಯೇ ಕೊರ್ಪೊರೇಶನುಗಳಿವೆ. ಎಂದು ಕೊಂಡರೂ ಇಷ್ಟು ಹೆಚ್ಚು ಹಣವನ್ನು ಅವುಗಳಿಗೆ ಒದಗಿಸಿ ಕೊಡಲು ಕಷ್ಟವಾದೀತು. ಏನಿದ್ದರೂ ಖಾಸಗೀ ಕ್ಷೇತ್ರಗಳು ಬಂಡವಳವನ್ನು ಕೂಡಿಸಲು ಎಲ್ಲ ಬಗೆಯ ಸಾಹಸವನ್ನು ಪ್ರದರ್ಶಿಸಬೇಕೆಂಬುದು ಮಾತ್ರ ಸ್ಪಷ್ಟವಿದೆ. ಉದ್ದಿಮೆಗಳ ಅಭಿವೃದ್ಧಿಗೆ ಬಂಡವಳಿನ ಪೂರೈಕೆಯೊಂದೇ ದೊಡ್ಡ ಸಮಸ್ಯೆಯಾಗಿಲ್ಲದೆ-ಇತರ ಪ್ರಶ್ನೆಗಳೂ ಸಮಾಧಾನಕರವಾಗಿ ಬಿಡಿಸಲ್ಪಡಬೇಕಾಗುತ್ತವೆ. ಕಚ್ಚಾ ಸರಕುಗಳ ಕೊರತೆ, ಸಾರಿಗೆ ಸೌಕರ್ಯಗಳ ಅಭಾವ, ತಜ್ಞರ ಸಹಾಯ ದೊರಕುವಲ್ಲಿ ಇರುವ ಕಷ್ಟ ಮುಂತಾದವುಗಳು ನಿಜವಾಗಿಯೂ ಕೈಗಾರಿಕೆಗಳ ಅಭಿವೃದ್ಧಿಗೆ ಘಾತಕವಾಗಿವೆ. ಸರಕಾರವು ಖಾಸಗೀ ಕ್ಷೇತ್ರಗಳ ಬೆಳವಣಿಗೆಗೆ ಇರುವ ಈ ಆತಂಕಗಳನ್ನು ನೀಗಿಸುವುದರಲ್ಲಿ ಮನವಾರೆ ದುಡಿಯಬೇಕೆಂದು ಕೇಳಿಕೊಳ್ಳುತ್ತೇವೆ. ಹಾಗೆಯೇ ಯೋಜನಾ ಬದ್ಧವಾದ ಅಭಿವೃದ್ಧಿಯು ಪೂರೈಸಲ್ಪಡುವಂತೆ ಪ್ರತಿಯೊಂದು ಘಟ್ಟದಲ್ಲಿಯೂ ಸೂಕ್ಷ್ಮದೃಷ್ಟಿಯಿಂದ ಪರಿಸ್ಥಿತಿಯ ಅವಲೋಕನವನ್ನು ಮಾಡುತ್ತಿರುವುದೂ ಅಗತ್ಯ.

ಆಭಾರ ಸೂಚನೆ

ಕಳೆದ ತಾ 3-2-53ರಲ್ಲಿ ನಡೆದ ಕಟಪಾಡಿ ಪಂಚಾಯತ ಬೋರ್ಡ ಪ್ರೆಸಿಡೆಂಟ್ ಚುನಾವಣೆಯಲ್ಲಿ ನನಗೆ ಬೆಂಬಲವಿತ್ತು ನನ್ನನ್ನು ಬಹುಮತದಿಂದ ಆರಿಸಿದುದಕ್ಕಾಗಿ ಎಲ್ಲಾ ಮತದಾರರಿಗೂ ವ ಇತರ ಸಹಾಯಕರಿಗೂ ನಾನು ಬಹಳ ಆಭಾರಿಯಾಗಿರುತ್ತೇನೆ

ಇತಿ ತಮ್ಮವ

ಪಿ. ವೆಂಕಟ್ರಾಯ ನಾಯಕ್,

ಬಿ. ಎಸ್. ಸಿ.

PHOTO-HYPNOTISM

You can influence or hypnotise to anybody by photograph or portrait without his knowledge. Experimented, simple & effective method invented by the great MAGICIAN PROF. R. R. BANERJEE. Ask for free particulars:—

MITALI:
Agartala (Tripura State).

ಉಡುಪಿ

ಶಾಲಾ ವರ್ಧಂತಿ— ಸ್ಥಳೀಯ ಬಿ. ಇ. ಎಮ್. ಹಾ.ಎ. ಶಾಲೆಯ ವರ್ಧಂತಿ ಸಮಾರಂಭವು. ತಾ. 28ರಲ್ಲು ಸಂಜೆ ಸರಕಾರ ತರಬೇತಿ ಶಾಲೆಯ ಹೆಡ್ಮಾಸ್ತರ್ ಶ್ರೀ, ಯು. ಕೃಷ್ಣರಾಯರ —ಧ್ಯಕ್ಷತೆಯಲ್ಲಿ ಯಥಾ ಸಾಂಗವಾಗಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು.

ಸಭೆಗಳು— ಕಮ್ಯೂನಿಸ್ಟ ಪಾರ್ಟಿಯ ಆಶ್ರಯದಲ್ಲಿ ತಾ 27ರಲ್ಲು ಶ್ರೀ ಕೆ. ರಂಗಪ್ಪ ರೈಗಳ ಅಧ್ಯಕ್ಷತೆಯಲ್ಲಿ ತೇರು ಬೀದಿಯಲ್ಲಿ ಶ್ರೀ ಎ. ಕೃಷ್ಣಯ್ಯ ಸೆಟ್ಟಿ ಮೊದಲಾದವರು ಭಾಷಣವಿತ್ತರು.

ಆರ್ಯ ಸಮಾಜದ ನೇತೃತ್ವದಲ್ಲಿ ತಾ|ರಲ್ಲಿ ಸಂಜೆ ರಥಬೀದಿಯಲ್ಲಿ ದಿಲ್ಲಿಯ ಶ್ರೀ ಶಿವಸ್ವಾಮಿಯವರು ವೈದಿಕ ಧರ್ಮದ ಮಹತ್ವವನ್ನು ವಿವರಿಸಿ ಹಿಂದಿಯಲ್ಲಿ ಭಾಷಣವಿತ್ತರು

ಎಂ. ಜಿ. ಎಂ. ಕಾಲೇಜಿನ ನಾಲ್ಕನೆ ಕಾಲೇಜ್ ದಿನಾಚರಣೆಯು ಇದೇ ತಾ. 4ರಲ್ಲಿ ಶ್ರೀ ಟಿ. ಎ. ಪೈ, ಎಂ. ಎಲ್. ಎ.ಗಳ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಶ್ರೀಮತಿ ಪ್ರೇಮಾ ಎ. ಪೈಗಳು ಪಾರಿತೋಷ ವಿತರಣೆ ಮಾಡಿದರು. ಮರುದಿನ ರಾತ್ರಿ 9 ಗಂಟೆಗೆ ನಾಟಕಾದಿ ಕಾರ್ಯಕ್ರಮಗಳಿವೆ.

ಪೆರ್ಡೂರು— ಶ್ರೀ ಅನಂತ ಪದ್ಮನಾಭ ದೇವಸ್ಥಾನದ ರಥೋತ್ಸವವು ಇದೇ ತಾ. 11ರಿಂದ 18ರವರೆಗೆ ಜರಗಲಿರುವುದೆಂದೂ ಸರ್ವರೂ ಬಂದು ಗಂಧಪ್ರಸಾದಗಳನ್ನು ಸ್ವೀಕರಿಸಬೇಕೆಂದೂ ಎಕ್ಸಿಕ್ಯೂಟಿವ್ ಆಫೀಸರ್ ಶ್ರೀ ಕೋಲ್ಯಾರ್ ಭೋಜರಾಜ ಶೆಟ್ಟರು ತಿಳಿಸುತ್ತಾರೆ.

ಕುಂದಾಪುರ— ಮದ್ರಾಸು ಎಸೆಂಬ್ಲಿಯ ಕುಂದಾಪುರ ಮತದಾರ ಕ್ಷೇತ್ರದ ಹಾಗೂ ದ. ಕ. ಜಿಲ್ಲೆಯ ಉತ್ತರ ಭಾಗದ ಪಾರ್ಲಿಮೆಂಟ್ ಸೀಟಿನ ಕುಂದಾಪುರ ಮತದಾರ ಭಾಗದ ವೋಟರರ ಪಟ್ಟಿಯು ತಾ. 28-2-53ರಲ್ಲು ಪ್ರಕಟಿಸಲಾಗಿದೆ ಎಂದು ಕುಂದಾಪುರ ಚುನಾವಣಾ ತಹಶಿಲ್ದಾರರು ತಿಳಿಸುತ್ತಾರೆ.

ಬೆಳ್ಮಣ್ಣು— ಡಾ| ಕೊರಡ್ಕಲ್ ವೆಂಕಟ್ರಾಯರು ಕಳೆದ ತಾ 22ರಲ್ಲು "ಕೊರಡ್ಕಲ್ಸ್ ಕ್ಲಿನಿಕ್" ಎಂಬ ಹೊಸ ಡಿಸ್ಪೆನ್ಸರಿಯೊಂದನ್ನು ಬೆಳ್ಮಣ್ಣಿನಲ್ಲಿ ಆರಂಭಿಸಿದರು. ಈ ಸಮಾರಂಭದ ಉದ್ಘಾಟನೆಯನ್ನು ಅಲ್ಲಿಯ ಇಗರ್ಜಿ ಫಾದರ್ ಪಿ. ಎಲ್. ಬೊತೆಲ್ಲೊ ಅವರು ನೆರವೇರಿಸಿದರು. ಈ ಸಮಾರಂಭಕ್ಕೆ ಬೆಳ್ಮಣ್ಣು ಗ್ರಾಮದ ಹಾಗೂ ಆಸುಪಾಸಿನ ಜನರು ಬಂದಿದ್ದರು. ಅವರೆಲ್ಲರಿಗೂ ಚಹಾ ಸತ್ಕಾರವಾದ ಬಳಿಕ ಡಾ| ಕೆ. ಕೃಷ್ಣ ರಾವ್ ಕಟಪಾಡಿ ಅವರು ಧನ್ಯವಾದಗಳನ್ನರ್ಪಿಸಿದರು ನಂತರ ಸಭಾರಂಭ ಕೊನೆಗೊಂಡಿತು.

ಕೊಕ್ಕರ್ಣೆ— ಸ್ಥಳೀಯ ಬೋರ್ಡ್ ಹಾ| ಎ| ಶಾಲೆಯ ವರ್ಧಂತ್ಯುತ್ಸವವು ಕಳೆದ ತಾ. 28ರಲ್ಲು ಶ್ರೀ ಎಸ್ ಎಸ್ ಕೊಳ್ಕೆಬೈಲ್ ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯ ಶ್ರೀ ಎ ಹಿರಿಯಣ್ಣ ಸೆಟ್ಟರು ವರದಿಯನ್ನು ಓದಿದರು. ಈ ಕೇಂದ್ರಕ್ಕೆ ಹೈಸ್ಕೂಲಿನ ಅವಶ್ಯಕತೆಯನ್ನು ಕೂಡಾ ಸೂಚಿಸಿದರು. ಸಭಾಧ್ಯಕ್ಷರು ತಮ್ಮ ಭಾಷಣದಲ್ಲಿ ಅಧ್ಯಾಪಕ ವೃಂದದವರೂ ಊರ ಮಹನೀಯರೂ ಶಾಲಾ ಏಳಿಗೆ ಬಗ್ಗೆ ದುಡಿಯುತ್ತಿರುವುದು ಪ್ರಶಂಸನೀಯವೆಂದರು. ತಾನೂ ತನ್ನಿಂದ ಕೈಲಾದ ಸಹಕಾರವನ್ನೀಯಲು ಸದಾ ಸಿದ್ಧನಾಗಿರುವುದಾಗಿಯೂ ತಿಳಿಸಿದರು. ನಂತರ ಶಾಲಾ ಬಾಲಕಿಯರಿಂದ 'ಸ್ವರ್ಣ ಮಾಲಿನಿ' ಎಂಬ ಪೌರಾಣಿಕ ನಾಟಕವೂ, ಬಾಲಕರಿಂದ '[illegible]' ಎಂಬ ಯಕ್ಷಗಾನ ನಾಟಕವೂ ಅಭಿನಯಿಸಲ್ಪಟ್ಟು ನಂತರ ಧನ್ಯವಾದಾರ್ಪಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ರಶಿಯಾದೊಡನೆ ಬಿಗಿ ಧೋರಣವಹಿಸುವ ನೀತಿ

ಸ್ಟಾಲಿನ್ನರನ್ನು ಭೆಟ್ಟಿಯಾಗಲು ಐಕ್ ಸಿದ್ಧ!

ಐಸೆನ್ ಹೋವರರ ಅಮೇರಿಕವು ಟ್ರೂಮನ್ನರ ಅಮೇರಿಕಕ್ಕಿಂತ ಭಿನ್ನವೆಂಬ ಸಂಗತಿ ಸಂಯುಕ್ತ ರಾಷ್ಟ್ರಸಂಘದ ಅಧಿವೇಶನ ಕಳೆದ ಮಂಗಳವಾರ ದಿನ ಸೇರಿದಾಗಲೇ ಸ್ಪಷ್ಟವಾಗಿ ಪ್ರಕಟಗೊಂಡಿತು. ಕಮ್ಯೂನಿಜಮ್ಮನ್ನು ಬಲವಾಗಿ ವಿರೋಧಿಸುವ ಮತ್ತು ರಶಿಯಾ ಹಾಗೂ ಅದರ ಬೆಂಬಲಿಗ ರಾಷ್ಟ್ರಗಳೊಡನೆ ಬಿಗಿತನದಿಂದ ವರ್ತಿಸುವ ಐಸೆನ್ ಹೋವರ ನೀತಿ ಎಲ್ಲಿಯ ವರೆಗೆ ಮುಟ್ಟಿದೆಯೆಂದರೆ ಅಮೇರಿಕನ್ ಪ್ರತಿನಿಧಿ ಸಿನೇಟರ ಲಾಜರು ರಶಿಯನ್ ಪ್ರತಿನಿಧಿ ಮಾನ್ಯರ್ ವಿಶಿಂಸ್ಕಿಯವರೊಡನೆ ಹಸ್ತಾಂದೋಲನವನ್ನೂ ತಿರಸ್ಕರಿಸಿ, ಶಿಷ್ಟಾಚಾರವನ್ನು ಮುರಿದರು. ಕೊರಿಯಾದ ವಿಷಯವು ಸಂಯುಕ್ತ ರಾಷ್ಟ್ರ ಸಂಘದ ಮುಂದೆ ಈಗಲೂ ಮಹತ್ವದ ಸಂಗತಿಯಾಗಿ ಉಳಿದಿದ್ದರೂ—ಇದನ್ನು ನೋಡುವ ಅಮೇರಿಕನ್ ದೃಷ್ಟಿಯು ಪೂರಾ ಪರಿವರ್ತನೆಗೊಂಡುದು ನಿಚ್ಚಳವಾಗುತ್ತದೆ. ಸಂಯುಕ್ತ ರಾಷ್ಟ್ರ ಸಂಘವು ಉತ್ತರ ಕೊರಿಯಾವನ್ನು ಆಕ್ರಮಣಕಾರಿ ಎಂದು ಕರೆದು ಅದರೊಡನೆ ಹೋರಾಟ ನಡೆಸುತ್ತಾ ಬಂದಿದೆ. ಈ ಸಂದರ್ಭದಲ್ಲಿ ಕಮ್ಯೂನಿಸ್ಟ ಚೀನಾದ ಸ್ವಯಂ ಸೇವಕ ಪಡೆಗಳು ಉತ್ತರಕೋರಿಯನ್ ಕಮ್ಯೂನಿಸ್ಟರಿಗೆ ನೆರವಾಗುತ್ತಿರುವುದರಿಂದ, ಮತ್ತು ಕಮ್ಯೂನಿಸ್ಟ ಚೈನಾ ಇವರಿಗೆ ಪ್ರತ್ಯಕ್ಷವಾಗಿ ಪ್ರೋತ್ಸಾಹ ಕೊಡುತ್ತಿರುವುದರಿಂದ-ಚೀನಾದ ಮೇಲೂ ಸಂಯುಕ್ತ ರಾಷ್ಟ್ರಸಂಘ ತಪ್ಪಿನ ಹೊಣೆಗಾರಿಕೆಯನ್ನು ಹಾಕಿದೆ. ಆದರೆ ರಶಿಯಾವನ್ನು ಸ್ಪಷ್ಟ ಮಾತುಗಳಲ್ಲಿ ಆಕ್ರಮಣಕಾರಿ ಎಂದು ಘೋಷಿಸುವುದಕ್ಕೆ ಅದು ಇಷ್ಟಪಡಲಿಲ್ಲ. ಇದೀಗ ಅಮೇರಿಕಾ ಇಂಥ ಸಾಹಸವನ್ನು ಕೈಗೊಂಡಿದೆ.

ರಶಿಯಾದ ಮೇಲೆ ಆರೋಪ

ಸಿನೇಟರ ಲಾಜರು ರಶಿಯಾದ ಮೇಲೆಯೇ ಆಕ್ರಮಣದ ಆರೋಪವನ್ನು ನಿಶ್ಚಿತ ಮಾತುಗಳ ಮೂಲಕ ಹೊರಿಸಿ ಯುದ್ಧವನ್ನು ನಿಲ್ಲಿಸುವುದೂ ಬಿಡುವುದೂ ರಶಿಯಾದ ನಿಲುವೆಯನ್ನೇ ಹೊಂದಿಕೊಂಡಿದೆ ಎಂಬುದನ್ನು ತೋರಿಸಿಕೊಟ್ಟರು ಹತ್ತು ಅಂಶಗಳನ್ನು ಉದ್ಧರಿಸುತ್ತಾ ಸಿನೇಟರ ಲಾಜರು ರಶಿಯಾವೇ ಕೊರಿಯಾ ಸಮಸ್ಯೆಯ ಮೂಲದಲ್ಲಿದೆ ಎಂಬುದನ್ನು ಆದರದೊಡನೆ ಪ್ರಕಟಪಡಿಸಿ, ಇವು ಸುಳ್ಳಿದ್ದರೆ ಅದನ್ನು ಸಿದ್ಧಪಡಿಸಿರೆಂದು ವಿಶಿಂಸ್ಕಿಯವರಿಗೆ ಆಹ್ವಾನ ಕೊಟ್ಟರು. ವಿಶಿಂಸ್ಕಿಯವರು ಆ ಕ್ಷಣವೇ ಈ ಆರೋಪಗಳು ನಿರಾಧಾರವಾದವುಗಳೆಂದು ನಿರಾಕರಿಸಿ ಬಿಟ್ಟರು. ಮರುದಿನದ ಅಧಿವೇಶನದಲ್ಲಿ ವಿಶಿಂಸ್ಕಿಯವರು ಲಾಜರು ಹೊರಿಸಿದ ಆರೋಪಗಳನ್ನು ತಿರಸ್ಕರಿಸುತ್ತಾ ಭಾಷಣ ಮಾಡಬಹುದೆಂದು ಆಶಿಸಿದ ಪ್ರತಿನಿಧಿಗಳಿಗೆ ನಿರಾಸೆಯಾಯಿತು. ಏಕೆಂದರೆ ವಿಶಿಂಸ್ಕಿಯವರು ಸಭೆಗೆ ಹಾಜರಾಗದೇ, ಸಭೆ ಮುಂದೂಡಲ್ಪಟ್ಟಿತು. ಪ್ರಾಯಶಃ ವಿಶಿಂಸ್ಕಿಯವರು ಅಮೇರಿಕದ ಆರೋಪದ ಸಂಗತಿಯಲ್ಲಿ ಮೋಸ್ಕೋದಿಂದ ಆದೇಶವನ್ನು ನಿರೀಕ್ಷಿಸುತ್ತಾ ಕುಳಿತಿದ್ದಾರು.

ಐಸೆನ್ ಹೋವರರ ಒಸಗೆ

ಇಂಥ ಪ್ರಸಂಗದಲ್ಲಿ ಐಸೆನ ಹೋವರರು ಸ್ಟಾಲಿನ್ನರೊಡನೆ ತಾವು ಭೇಟಿಯಾಗಲು ಸಿದ್ಧರಿರುವೆವೆಂದು ಸಾರಿದ್ದು, ಅದರ ಪರಿಣಾಮ ಏನಾದೀತೆಂಬ ಕುರಿತು ಈಗಲೇ ಏನೂ ಹೇಳುವಂತಿಲ್ಲ. ಐಸೆನ್ ಹೋವರರು ಸ್ಟಾಲಿನ್ನರ ಭೇಟಿಯ ಬಗ್ಗೆ ಕೆಲವು ಕರಾರುಗಳನ್ನು ಹಾಕಿದ್ದುನೋಡುವಾಗ, ಈ ಭೇಟಿ ನಡೆಯುವುದು ದೂರ ಭವಿಷ್ಯದ ಸಂಗತಿ ಎಂದು ಹೊಳೆಯುವುದು. ಶಾಂತಿಗೆ ಪೋಷಕವಾಗುವಂತಿದ್ದರೆ ಸ್ಟಾಲಿನ್ನರೊಡನೆ ವಾಷಿಂಗಟನ್ನಿನಲ್ಲಿ ತಾನು ಭೇಟಿಯಾಗಲು ಸದಾ ಸಿದ್ಧನೆಂದು ಮಾಜಿ ಅಧ್ಯಕ್ಷ ಟ್ರೂಮನ್ನರು ಹೇಳುತಿದ್ದರು. ಈಗಿನ ಅಧ್ಯಕ್ಷ ಐಸೆನ ಹೋವರರು ತಮ್ಮ ಭೇಟಿಯಿಂದ ಶಾಂತಿಸ ಘನಗೆ ನೆರವಾಗಬೇಕೆಂದು ಬಯಸುತಿದ್ದಂತೆಸ್ಟಾಲಿನ್ನರಿಗೆ ಸ್ವಲ್ಪ ರಿಯಾಯಿತಿ ತೋರಿಸಿಟ್ಟಾರೆ. ಮೋಸ್ಕೋ ಮತ್ತು ವಾಷಿಂಗಟನ್ನುಗಳಿಗೆ ನಡುವೆ ಎಲ್ಲಿಯಾದರೂ ತಾನು ಸ್ಟಾಲಿನ್ನರನ್ನು ಭೇಟಿಯಾಗಲು ಸಿದ್ಧನೆಂದು ಐಸೆನ್ ಹೊವರ್ ತಿಳಿಸಿರುವರು. ಈ ಜನವರಿ ತಿಂಗಳಲ್ಲಿ ಸ್ಟಾಲಿನ್ನರು ಇಂಥ ಭೇಟಿಯಿಂದ ಸಮಸ್ಯೆಗಳು ಯೋಗ್ಯರೀತಿಯಲ್ಲಿ ಬಿಡಿಸಲ್ಪಡ ಬಹುದೆಂದು ಆಶಿಸಿದ್ದರ ಮೇಲಿಂದ ಮತ್ತು ಸಂಯುಕ್ತ ರಾಷ್ಟ್ರ ಸಂಘದ ಪ್ರಕೃತದ ಅಧಿವೇಶನ ತೊಡಗುವುದಕ್ಕೆ ಕೆಲವು ದಿನಗಳ ಮುಂಚಿತವಾಗಿ ಭಾರತೀಯ ರಾಯಭಾರಿ ಮೆನನ್ನರನ್ನು ಕಂಡು ಮಾತನಾಡಿದ್ದರಿಂದ ಸ್ಟಾಲಿನ್ನರು ಈಗಲೂ ಶಾಂತಿಗಾಗಿ ಹಾತೊರೆಯುತ್ತಿರುವರೆಂದು ಸಾಮಾನ್ಯವಾಗಿ ಎಣಿಸಬಹುದು.

ಸಣ್ಣ ರಾಷ್ಟ್ರಗಳ ಒತ್ತಾಯ

ಆದರೆ ಮೊದಲೇ ಹೇಳಿದಂತೆ ಐಸೆನ್ ಹೋವರರ ಅಮೇರಿಕಾ ತುಸು ಬಿಗಿಧೋರಣೆವಹಿಸಿ, ರಶಿಯಾಕ್ಕೆ ಬಿಸಿ ಮುಟ್ಟಿಸುತ್ತಿದೆ. ೫೪ ರಾಷ್ಟ್ರಗಳ ಬೆಂಬಲ ಪಡೆದುಕೊಂಡ ಭಾರತದ ಕೊರಿಯಾ ಸಂಬಂಧದ ಗೊತ್ತುವಳಿಯ ಭವಿಷ್ಯ ಆಶಾ ಜನಕವಾಗಿಲ್ಲದಿರುವುದರಿಂದ ಅಮೇರಿಕ ಸ್ವತಃ ಇನ್ನೊಂದು ಗೊತ್ತುವಳಿಯನ್ನು ತರುವ ಎತ್ತಗಡೆಯಲ್ಲಿದೆ ಎಂದು ಕೇಳುತ್ತೇವೆ. ಸ್ವಾಭಾವಿಕವಾಗಿ ಈ ಗೊತ್ತುವಳಿ ಕಮ್ಯೂನಿಸ್ಟರನ್ನು ರೊಚ್ಚಿಗೆಬ್ಬಿಸುವ ಮಾದರಿಯಲ್ಲಿಯೇ ಇದ್ದೀತು ಆದರೆ ಭಾರತವೇ ಮೊದಲಾಗಿ ಲೋಕದ ಶಾಂತಿಪ್ರಿಯ ರಾಷ್ಟ್ರಗಳು ಯಾವುದೇ ಉಗ್ರಕ್ರಮವನ್ನು ಪುರಸ್ಕರಿಸಲಾರವೆಂದು ತೋರುತ್ತದೆ. ಬಹುಶಃ ಈ ಕಾರಣದಿಂದಲೇ ಭಾರತದ ಗೊತ್ತುವಳಿಯ ಅಧ್ವರ್ಯುಗಳಾದ ಶ್ರೀ ಕೃಷ್ಣ ಮೆನನ್ನರು ಈಗ ವಹಿಸಿರುವ ಮೌನವನ್ನು ಮುರಿದ ಚಟುವಟಿಕೆಯಿಂದ ಶಾಂತಿ ಸಾಧನೆಗೆ ಪ್ರಯತ್ನಿಸಬೇಕೆಂದು ಅವರನ್ನು ಕೇಳಿಕೊಳ್ಳಲು ಸಣ್ಣ ರಾಷ್ಟ್ರಗಳ ಪ್ರತಿನಿಧಿಗಳನೇಕರು ಉದ್ಯುಕ್ತರಾಗಿರುವರು. ಈ ಸಣ್ಣ ರಾಷ್ಟ್ರಗಳ ಬೆಂಬಲವನ್ನು ಭಾರತದಂಥ ರಾಷ್ಟ್ರ ಪಡೆದಷ್ಟು ಹೆಚ್ಚಾಗಿ, ಅಮೇರಿಕ ಪಡೆಯಲಾರದೆಂಬುದು ಸ್ಪಷ್ಟವಿದೆ ಆದುದರಿಂದ ಅಮೇರಿಕ ಈಗಿನ ನೀತಿಯಂತೆ ಪರಾಕ್ರಮ ಪ್ರದರ್ಶಿಸಲಿಕ್ಕೆ ಸಂಯುಕ್ತ ರಾಷ್ಟ್ರ ಸಂಘ ಯೋಗ್ಯ ರಂಗಸ್ಥಳವೆನಿಸಲಿಕ್ಕಿಲ್ಲ. ಕೊರಿಯಾದ ಯುದ್ಧಭೂಮಿಯಲ್ಲಿಯೇ ತನ್ನ ಬೆಂಬಲಿಗರಾದ ೧೫ ರಾಷ್ಟ್ರಗಳನ್ನು ಕೂಡಿಕೊಂಡು ರಭಸದಿಂದ ಕಮ್ಯೂನಿಸ್ಟರನ್ನು ಒಗ್ಗಿಬಡಿಯುವುದರಲ್ಲಿಯೇ ಹಿತವಿದೆ ಎಂದು ಅಮೇರಿಕಾವಿಗೆ ಈಗ ತಿಳಿದಿದೆ ಶಾಂತಿಗಾಗಿ ಕಮ್ಯುನಿಸ್ಟರೇ ಹಾತೊರೆಯುವಂತೆ ಮಾಡುವೆನೆಂದು ಐಸೆನ್ ಹಾವರು ಹೇಳದುದಾದರೂ ಯುದ್ಧಭೂಮಿಯ ಶೌರ್ಯವನ್ನೇ ಅಥರಿಸಿ ಎಂದು ಬೇರೆ ಹೇಳುವ ಅಗತ್ಯವಿಲ್ಲ.

ಜಾತೀಯತೆಯ ವಿಷ

ಜಾತೀಯತೆಯ ವಿಷಬೀಜದಿಂದ ಆವಿರ್ಭವಿಸಿದ ಪಾಕಿಸ್ತಾನದಲ್ಲಿ ಇಂದು ಗೊಂದಲವೆದ್ದಿದೆ. ಮುಸ್ಲಿಮರಿಗಾಗಿ ಪ್ರತ್ಯೇಕ ರಾಷ್ಟ್ರವನ್ನು ಕೇಳಿದ ಜಿನ್ನಾ ಮತ್ತವರ ಬೇಡಿಕೆಯನ್ನು ಪುರಸ್ಕರಿಸಿದ ಮುಸ್ಲಿಮರ ನಿಲುವೆ ಪಾಕಿಸ್ತಾನಕ್ಕೆ ಮುಳುವಾಗಿ ಈಗ ಪರಿಣಮಿಸಿದೆ ಎಂದರೂ ಸಲ್ಲುವುದು ಇಸ್ಲಾಮಿನ ಧರ್ಮಸೂತ್ರಗಳಿಗನುಗುಣವಾಗಿ ರಾಜ್ಯಭಾರವನ್ನು ನಿರ್ವಹಿಸಬೇಕೆಂದು ಮೂಲಭೂತ ಸಮಿತಿಯು ಕೆಲವು ಸಮಯದ ಹಿಂದೆ ಶಿಫಾರಸು ಮಾಡಿದ್ದಿತು. ಅಲ್ಪ ಸಂಖ್ಯಾಕರನ್ನು ನರಪಶುಗಳೆಂದು ತೋರಿಸಿಕೊಡುವಂತೆ ಘಟನೆಯು ಕರಡಿನ ಕಲಮುಗಳಿದ್ದುವು. ಈಗ ಜಾತೀಯತೆಯ ಕಾವು ಎಲ್ಲಿಯವರೆಗೆ ಮುಟ್ಟಿದೆ ಎಂದರೆ, ಕೇವಲ ಹದಿನಾರಾಣೆ ಮುಸ್ಲಿಮರಿಗಷ್ಟೆ ಪಾಕಿಸ್ತಾನದ ರಾಜ್ಯಭಾರದಲ್ಲಿ ಸ್ಥಾನವಿದೆಯಾಗಲಿ, ಹದಿನೈದಾಣೆ ಮುಸ್ಲಿಮರಿಗೆ ಆ ಹಕ್ಕು ಇರುವುದಿಲ್ಲ ಎಂದು ಮೌಲವಿಗಳು ಬೊಬ್ಬಿರಿಯುತ್ತಿರುವರು. ಇದರ ಪರಿಣಾಮವಾಗಿ ವಿದೇಶ ಮಂತ್ರಿ ಜಾಫರುಲ್ಲಾಖಾನರ ಪಂಗಡದವರಾದ ಅಹಮದೀಯಾ ಮುಸ್ಲಿಮರನ್ನು ಹಿಂದು. ಪಾರ್ಸಿಗಳಂತೆ ಅಲ್ಪ ಸಂಖ್ಯಾಕರೆಂದು ಪರಿಗಣಿಸಬೇಕಾಗಿ ಪಕ್ಕಾ ಮುಸ್ಲಿಮರ ಬೇಡಿಕೆ ಇದೆ. ಪಾಕಿಸ್ತಾನ ಸರಕಾರವು ಅಹಮದೀಯ ಮುಸ್ಲಿಮರೇ ಮುಂತಾದ ಜನಕ್ಕೆ ಬಂದಿರುವ ಗಂಡಾಂತರ ಪರಿಸ್ಥಿತಿಯನ್ನು ಮನಸ್ಸಿಗೆ ಹಚ್ಚಿಕೊಳ್ಳಲಿ ಬಿಡಲಿ-ಜಾಫರುಲ್ಲಾಖಾನರಂಥ ಮುತ್ಸದ್ದಿಯನ್ನು ಕಳೆದುಕೊಳ್ಳಲು ಪ್ರಾಯಶಃ ಸಿದ್ಧವಿಲ್ಲ. ಭಾರತದೊಡನೆ ಕಾಶ್ಮೀರ ಪ್ರಸಂಗದಲ್ಲಿ ವಾದ ಹೂಡಲಿಕ್ಕೂ ಮುಸ್ಲಿಂ ರಾಷ್ಟ್ರಗಳ ಪರಿಷತ್ತು ಸೇರಿಸುವ ಸಂಬಂಧ ಪ್ರಚಾರ ಮಾಡಲಿಕ್ಕೂ ಜಾಫರುಲ್ಲಾಖಾನರು ಪಾಕಿಸ್ತಾನಕ್ಕೆ ಬೇಕೇ ಬೇಕು. ಆದುದರಿಂದ ಧರ್ಮನಿಷ್ಠ ಮುಸ್ಲಿಮರು ಎಬ್ಬಿಸಿರುವ ಈ ಚಳುವಳಿಯನ್ನು ಅತ್ಯುಗ್ರರೀತಿಯಿಂದ ಹತ್ತಿಕ್ಕುತ್ತಿರುವರು. ಚಳವಳಿಯ ಮುಂದಾಳುಗಳನ್ನು ಬಂಧಿಸಿರುವುದರ ಜೊತೆಗೆ-ಈ ಚಳವಳಿಯ ಹೊಣೆಯನ್ನು ಹಿಂದೊಮ್ಮೆ ಪಾಕಿಸ್ತಾನದ ಸ್ಥಾಪನೆಗೆ ವಿರೋಧ ತೋರಿಸಿದ್ದ ಅಹ್ರಾರರಕೊರಳಿಗೆ ಗಂಟು ಹಾಕುವ ಮನೋಭಾವವನ್ನೂ ಅಲ್ಲಿಯ ಸರಕಾರ ತೋರಿಸುತ್ತಿದೆ.

ನೋಟೀಸು

ಈ ಮೂಲಕ ತಿಳಿಯಪಡಿಸುವುದೇನೆಂದರೆ,- 1953-54ನೇ ವರ್ಷದಲ್ಲಿ ಕಟಪಾಡಿ ಪಂಚಾಯತ ಬೋರ್ಡಿನ ಅಧಿಕಾರಕ್ಕೆ ಒಳಪಟ್ಟ ಮಾರ್ಕೆಟು, ಇಳಿಯುವ ಸ್ಥಳ (Jetty), ಮತ್ತು ಕಡವು, ಇವುಗಳಲ್ಲಿ ಪರಿವಸೂಲು ಮಾಡುವ ಹಕ್ಕನ್ನು ಪಂಚಾಯತ ಬೋರ್ಡಿನ ಪ್ರೆಸಿಡೆಂಟರು ತಾ. 13-3-53ನೇ ಶುಕ್ರವಾರ ಅಪರಾಹ್ನ ಘಂಟೆ 3ಕ್ಕೆ ಪಂಚಾಯತ ಬೋರ್ಡು ಆಫೀಸಿನಲ್ಲಿ ಆ ಕುರಿತು ಜ್ಯಾರಿಯಲ್ಲಿರತಕ್ಕ ನಿಯಮಗಳಿಗನುಸಾರವಾಗಿ ಬಹಿರಂಗವಾಗಿ ಏಲಂ ಮೂಲಕ ಮಾರಾಟ ಮಾಡುವರು.

ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಆಫೀಸು ಸಮಯ ಪಂಚಾಯತ ಬೋರ್ಡು ಆಫೀಸಿಗೆ ಬಂದು ತಿಳಿದುಕೊಳ್ಳಬಹುದು,

P. Venkatraya Nayak,
President B. Sc.

ನಡೆಯುವ ಚಿತ್ರ—
ಪಳ್ಳಿ ಪಡುಂ ಪಾಡು
ನಾಗಯ್ಯ, ಲಲಿತ, ಪದ್ಮಿನಿ ಮೊದಲಾದವರು.

ಬರುವ ಚಿತ್ರ-
ಪ್ರಸನ್ನ (ಮಲಯಾಳಂ)
ಲಲಿತ, ಪದ್ಮಿನಿ ಮುಖ್ಯ ಭೂಮಿಕೆಯಲ್ಲಿ

ನಿರೀಕ್ಷಿಸಿರಿ-
ಶ್ರೀನಿವಾಸ ಕಲ್ಯಾಣ, ಗುಣಸಾಗರಿ, ಜಾನ್ಸಿಕಿ-ರಾಣಿ, ಇತ್ಯಾದಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಮಿತ್ರ ಪ್ರಿಯ ನಿಂತಿತು
'ಕುವಹಾರ' ಚಿಕ್ಕಿಗಳನು ಉಪಯೋಗಿಸಿದರೆ ಹದಕಟ್ಟಿ ಮುತುಸ್ರಾವನಾಗ-ಡು. ಹಕೋಟಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂಯಿಲ್ಲ. ಸಾಧಾರಣ ಮುಂದಿಗೆ ಶಾಂತಿ ಗುಣವಾಗಿದೆ- ಬೆಲೆ: ರೂ. 3-; ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ, 8-]ವಿ ಹನೆರವಾಗ ಪ್ರತ್ಯೇಕ]
MIS D. DEVEE, F. DS. (N. J.)
Tollygunge CALCUTTA
ಏಜೆಂಟರು: ಕಹಾಕಂಪನಿ, ಮಂಗಳೂರು

(೫ನೇ ಪುಟದಿಂದ)

ಮಾತ್ರವಲ್ಲ ಆಡಳಿತ ಯಂತ್ರದ ವೆಚ್ಚದಂತೆ ಇದು ಇನ್ನೂ ಏರುತ್ತಲೇ ಇದೆ. ಸುದೃಢವಾದ ಸೈನ್ಯವು ರಾಷ್ಟ್ರದ ರಕ್ಷಣೆಗೆ ಅಗತ್ಯವೆಂಬುದು ನಿಃಸಂಶಯವಾದ ವಿಷಯ ಹೌದಾದರೂ—ಸೈನ್ಯ ಶಾಖೆಯ ವೆಚ್ಚವನ್ನು ಆದಾಯದ ಕಾಲಂಶಕ್ಕೂ ಮಿಕ್ಕಿ ಇಡುವುದು ಎಷ್ಟರ ಮಟ್ಟಿಗೆ ಹಿತವೆಂದು ಹೇಳಲಾರೆವು. ಇದರಂತೆ ಪಂಚವಾರ್ಷಿಕ ಯೋಜನೆಯು ಸರಕಾರದ ಮೇಲೆ ಹೇರಿರುವ ಹೊಣೆಗಾರಿಕೆಯನ್ನು ನಿಭಾಯಿಸುವುದಕ್ಕಾಗಿ ದೇಶಮುಖರು ಕೊರತೆ ಧನ ವಿನಿಯೋಗ ಪದ್ಧತಿಯನ್ನು ಅನುಸರಿಸ್ಸುವ ಚಪಲ ತೋರಿಸಿದ್ದು ಸಹ ಕೆಲಮಟ್ಟಿಗೆ ಕಳವಳಕ್ಕೆ ಕಾರಣವೆನಿಸಿದೆ. ದೇಶದ ಆರ್ಥಿಕ ಸ್ಥಿತಿಯು ಈಗ ಸುಧಾರಿಸಿದೆಯೆಂದೂ ಹಣದ ಉಬ್ಬರವು ಕಡಿಮೆಯಾಗಿರ್ರುವುದರಿಂದ ಕೊರತೆ ಧನವಿನಿಯೋಗ ಪದ್ಧತಿಯನ್ನು ಸರಕಾರ ಅನುಸರಿಸಲು ಇದೇ ಯೋಗ್ಯ ಸಂದರ್ಭವೆಂದೂ ಹಣಕಾಸಿನ ಸಚಿವರು ತಮ್ಮ ಅನುಭವದ ಬಲದಿಂದ ಹೇಳುತ್ತಿರುವರು. ಆದರೂ ಪಂಚವಾರ್ಷಿಕ ಯೋಜನೆಯ ೪ ಮತ್ತು ೫ನೇ ವರ್ಷಗಳಲ್ಲಿ ಈಗಿನದಕ್ಕಿಂತ ಬಹಳ ಹೆಚ್ಚು ಹಣವನ್ನು ವ್ಯಯಿಸಬೇಕಿರುವುದರಿಂದ ಕೊರತೆ ಧನ ವಿನಿಯೋಗಕ್ಕೆ ಕನಿಷ್ಟ ಮಿತಿಯನ್ನು ಗೊತ್ತುಪಡಿಸುವುದೊಳ್ಳೆಯದು; ಹಾಗೆಯೇ ಈ ಪದ್ಧತಿಯ ಅನುಚಿತ ಲಾಭವನ್ನು ಖಾಸಗಿ ಕ್ಷೇತ್ರ ಮಾಡಿಕೊಳ್ಳುವಂತೆ ಸರಕಾರದ ಸತರ್ಕ ದೃಷ್ಟಿಯನ್ನು ಇಟ್ಟಿರಬೇಕು. ಇದುವರೆಗಿನ ಅನುಭವದಂತೆ, ಸರಕಾರದ ಆಡಳಿತ ಯಂತ್ರವು ಇಂಥ ಸೂಕ್ಷ್ಮ ಪರಿಸ್ಥಿತಿಗಳನ್ನು ಅಭ್ಯಸಿಸಿ, ಅವುಗಳ ಮೇಲೆ ಪ್ರಭಾವಿಯಾದ ನಿಯಂತ್ರಣವನ್ನು ಇಡುವಷ್ಟು ಬಲವಿಲ್ಲವೆಂದೇ ತೋರುತ್ತದೆ. ಅದ್ಯಹೇಗಿದ್ದರೂ-ದೇಶಮುಖರ ಧೋರಣೆಯಿಂದ ದೇಶಕ್ಕೆ ಅಹಿತವಾಗದೆಂದು ನಂಬುವುದಕ್ಕೆ ಅಡ್ಡಿಯೇನಿಲ್ಲ. ಅವರಿಗೆ ಆರ್ಥಿಕ ಕ್ಷೇತ್ರದ ಪೂರ್ಣ ಜ್ಞಾನವಿದೆ. ದೇಶದ ಆಶೋತ್ತರಗಳ ಬಗ್ಗೆ ಶ್ರದ್ಧೆ ಇದೆ. ಜನಸಾಮಾನ್ಯರ ಕಷ್ಟದ ತಿಳುವಳಿಕೆಯೂ ಇದೆ. ಎಲ್ಲ ರಾಜ್ಯ ಸರಕಾರಗಳೂ ಹೊಸ ತೆರಿಗೆಗಳನ್ನು ಹೊರಿಸುವುದಕ್ಕೆ ಉದ್ಯುಕ್ತವಾಗಿರುವಾಗ, ದೇಶಮುಖರು ಕರಭಾರವನ್ನು ಹೆಚ್ಚಿಸದೆ, ಇದ್ದುದರಲ್ಲಿಯೇ ತಕ್ಕ ಮಟ್ಟಿನ ವ್ಯವಸ್ಥೆ ಮಾಡಲು ನೋಡಿದ್ದಾರೆ. ಸಾಲದುದಕ್ಕೆ ಒಂಭತ್ತು ತಿಂಗಳುಗಳಿಗೆ ಹಿಂದೆ ತಾವು ಕೊಟ್ಟ ಆಶ್ವಾಸನದಂತೆ ಕರಭಾರ ವಿಚಾರಣಾ ಆಯೋಗವೊಂದನ್ನು ನೇಮಿಸುವ ಘೋಷಣೆಯನ್ನೂ ಮಾಡಿರುವರು. ಆಯೋಗದ ಅಧ್ಯಕ್ಷರಾಗಿ ಹಿಂದೆ ಕೇಂದ್ರದಲ್ಲಿ ಅರ್ಥ ಸಚಿವರಾಗಿದ್ದ ಡಾ| ಜಾನ್ ಮಥಾಯಿರು ದುಡಿಯುವರು. ಕೇಂದ್ರ ಸರಕಾರ, ರಾಜ್ಯಸರಕಾರಗಳು ಮತ್ತು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಮುಂತಾಗಿ ಎಲ್ಲ ಘಟಕಗಳ ಕರಭಾರ ಪದ್ಧತಿಯನ್ನು ಕೂಲಂಕಷವಾಗಿ ಈ ಆಯೋಗ ಪರಿಶೀಲಿಸುವುದು. ಸುಮಾರು ಎರಡು ವರ್ಷಗಳಲ್ಲಿ ಆಯೋಗ ತನ್ನ ವರದಿಯನ್ನು ಒಪ್ಪಿಸಬಹುದು.

ಮಂಗಳೂರು

ದುಃಖಸೂಚಕ ಸಭೆ— ಕನ್ನಡಿಗರಿಗೆ ಶ್ರುತಿಯೊಂದು. ವಿಷಂಗದಲ್ಲಿ ಆಲಸ್ಯ, ಅಲಕ್ಷಗಳಿದ್ದ ಕಾಲದಲ್ಲಿ ದಿವಂಗತ ಭಾರದ್ವಾಜರು ತಮ್ಮ ಸಂಸಾರಿಕ ಸಂಕಷ್ಟಗಳನ್ನು ಲಕ್ಷಿಸದೆ ಅತ್ಯಂತ ದುರ್ಗಮವಾದ ದಾರಿಯಲ್ಲಿ ನಡೆದು ಜೀವನದ ವಿಶಾಲ ಕ್ಷೇತ್ರಗಳಲ್ಲಿ ಅಸಂಖ್ಯ ಕಾರ್ಯಗಳನ್ನು ಮಾಡಿದರು, ಮತ್ತು ವಿವಿಧ ವಿಷಯಗಳ ಕುರಿತು ಗ್ರಂಥಗಳನ್ನು ಬರೆದರು ಎಂದು ಡಾ| ಗೋಪಾಲಕೃಷ್ಣರಾಯರು ತಾ. 1ರಲ್ಲಿ ಸಿಟಿಜನ್ ಲ್ಯಾಟ್ರೆರಿಯಲ್ಲಿ ಶ್ರೀ ದ ಕೃ ಭಾರದ್ವಾಜರ ನಿಧನಕ್ಕೆ ಸಂತಾಪ ಸೂಚಿಸಲು ಸೇರಿದ ಸಭೆಯಲ್ಲಿ ಅಧ್ಯಕ್ಷಸ್ಥಾನದಿಂದ ಹೇಳಿದರು. ಶ್ರೀಗಳಾದ ಬಿ. ಶಂಕರ ಭಟ್, ಪಿ. ಕೆ. ನಾರಾಯಣ, ಬಿ. ಈಶ್ವರ ಭಟ್, ಮೊದಲಾದವರು ಮಾತನಾಡಿದರು. ಕೊನೆಗೆ ಶ್ರೀ ಭಾರದ್ವಾಜರ ನಿಧನಕ್ಕೆ ದುಃಖವನ್ನು ಸೂಚಿಸುವ ನಿರ್ಣಯವಾಯಿತು. ಶ್ರೀ ಸದಾಶಿವ ಅವರು ಧನ್ಯವಾದಗಳನ್ನರ್ಪಿಸಿದರು.

ನಗರ ಸಭೆ— ಮಂಗಳೂರು ನಗರ ಸಭೆಯು ತಾ 28ರಲ್ಲು ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ನಗರಕ್ಕೆ ಸರಿಯಾದ ದೀಪದ ಸೌಕರ್ಯವನ್ನು ಒದಗಿಸಲು ಒಂದು ನಿಶ್ಚಿತ ಧೋರಣೆಯನ್ನು ಕೈಕೊಳ್ಳುವ ಕಾರ್ಯವನ್ನು ದೀಪಗಳ ವಿಷಯದ ಉಪಸಮಿತಿಗೆ ಒಪ್ಪಿಸಲಾಯಿತು. ಬಸ್ ನಿಲ್ದಾಣದಲ್ಲಿ ಲೈಸೆನ್ಸ್ ಪಡೆಕೊಂಡೇ ಕೂಲಿಗಳು ಕೆಲಸಮಾಡುವ ಯೋಜನೆಯನ್ನು ಮತ್ತು ಅವರು ನಿಶ್ಚಿತ ಕೂಲಿದರಗಳನ್ನು ಮುಂದಿನ ಎಪ್ರಿಲ್ ತಾ 1ರಿಂದ ಜ್ಯಾರಿಗೆ ತರಬೇಕೆಂದು ನಿಶ್ಚಯಿಸಲಾಯಿತು. ಮದ್ರಾಸಿನಲ್ಲಿ ಎಪ್ರಿಲ್ ತಿಂಗಳ ಕೊನೆಯವಾರದಲ್ಲಿ ಸೇರಲಿರುವ ಅ. ಭಾ ಸ್ಥಳೀಯ ಸಂಸ್ಥೆಗಳ ಸಮ್ಮೇಲನಕ್ಕೆ ನಗರ ಸಭೆಯ ಪ್ರತಿನಿಧಿಯಾಗಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರನ್ನು ಆರಿಸಲಾಯಿತು. ಫಸ್ಟ್ ಗ್ರೇಡ್ ಲೇಡಿ ಮೆಡಿಕಲ್ ಆಫೀಸರರು ಇಲ್ಲದಿರುವುದರಿಂದ ಎಲ್. ಐ. ಎಮ್. ಅಥವಾ ಎಲ್. ಎಮ್. ಪಿ. ಕಲಿತ ಸ್ತ್ರೀ ಡಾಕ್ಟರನ್ನ ಅವರ ಸ್ಥಾನಕ್ಕೆ ನೇಮಿಸಲು ಸರಕಾರದ ಅನುಮತಿಯನ್ನು ಕೇಳಬೇಕೆಂಬ ಶ್ರೀ ಎಮ್ ಸಿ ಶಾಸ್ತ್ರಿಯವರ ನಿರ್ಣಯ ಮಂಜೂರಾಯಿತು.

ಗ್ರಾಮ ವೈದ್ಯರ ಸಭೆ— ಕಳೆದ ತಾ 22ರಲ್ಲು ಮಂಗಳೂರಿನ ಕೇಂದ್ರ ಮೈದಾನಿನಲ್ಲಿ ಕರ್ನಾಟಕ ಮತ್ತು ಕೇರಳ ಪ್ರಾಂತೀಯ ಗ್ರಾಮವೈದ್ಯ ಸಂಘದ ಆಶ್ರಯದಲ್ಲಿ ಸಾರ್ವಜನಿಕಸಭೆಯೊಂದು ಶ್ರೀ ಎನ್. ಎಸ್. ಸುವರ್ಣ, ಎಮ್. ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರಂಭದಲ್ಲಿ ಶ್ರೀ ವಾಮನ ಕೊಡಿಯಾಲ ಬೈಲ್, ಅವರು ಗ್ರಾಮ ವೈದ್ಯರ ಸಂಕಷ್ಟಗಳನ್ನು ವಿವರಿಸಿದರು. ಬಳಿಕ ಡಾ| ಎಮ್. ಗೋಪಾಲ ಕೃಷ್ಣ ರಾವ್, ಶ್ರೀಗಳಾದ ಬಿ, ಎಸ್. ಭಾಸ್ಕರ ರೈ, ಎ. ಕೃಷ್ಣ ಸೆಟ್ಟಿ, ಅವರುಗಳು ಸರಕಾರದಿಂದ ತರಬೇತಿ ಹೊಂದಿದ ಗ್ರಾಮ ವೈದ್ಯರಿಗೆ ಸರಕಾರವು ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು ಮುಂತಾಗಿ ಹೇಳಿದರು. ಗ್ರಾಮವೈದ್ಯರಿಗೆ ಇದಾಶ್ಲಿನಿಕ ಪೋಲ್ತರಗತಿಯ ಗ್ರಾಮ ವೈದ್ಯ ಎಂಬ ಪ್ರತ್ಯೇಕ ರಜಿಸ್ಟ್ರೇಶನ್ ಕೊಡಬೇಕೆನ್ನುವ ಅವರು ಶಿಕ್ಷಣ ಹೊಂದಿರುವ ಅಂತಸ್ತಿಗೆ ತಕ್ಕಂತೆ ಎಲ್ಲಾ ಅಧುನಿಕ ಔಷಧಿಗಳು ಅವರಿಗೆ ನಿರಂತರವಾಗಿ ದೊರೆಯ ಬೇಕೆನ್ನುವ ಡಿ ಬೋ. ಮತ್ತು ಪಂಚಾಯತ್ ಬೋರ್ಡ್ ಆಸ್ಪತ್ರೆಗಳಲ್ಲಿ ಅವರನ್ನು ವೈದ್ಯರಾಗಿ ನೇಮಿಸ ಬೇಕೆನ್ನುವ ನಿರ್ಣಯಗಳಾದವು.

ಅಭಿನಂದನ ಪತ್ರ— ಸ್ಥಳೀಯ ಸೈಂಟ್ ಎಲೋಶಿಯಸ್ ಕಾಲೇಜಿನ ಸೀನಿಯರ್ ಬಿ. ಎ. ತರಗತಿಯ ವಿದ್ಯಾರ್ಥಿಗಳು ತಾ. 27ರಲ್ಲು ತಾವು ಕಾಲೇಜನ್ನು ಬಿಡುವ ಸಂದರ್ಭದಲ್ಲಿ ನಮ್ಮ ಕನ್ನಡ ಪ್ರಾಧ್ಯಾಪಕರಾದ ಶ್ರೀ ಬಿ. ವಿಷ್ಣು ಕೆದಿಲಾಯರನ್ನು ಅಭಿನಂದನ ಪತ್ರ ಕೊಟ್ಟು ಗೌರವಿಸಿದರು, ಶ್ರೀ ಕೆದಿಲಾಯರು ವಿದ್ಯಾರ್ಥಿಗಳಿಗೆ ಕೆಲವು ಹಿತವಚನಗಳನ್ನಾಡಿದರು ಶ್ರೀ, ಬಿ, ಈಶ್ವರ, ಭಟ್ಟರು ಧನ್ಯವಾದಗಳನ್ನರ್ಪಿಸಿದರು,

ಹುಟ್ಟಿದ ದಿನಾಚರಣೆಯು— ತಾ, 2ರಲ್ಲು ಸ್ಥಳೀಯ ಕಲಾವೃಂದದ ಆಶ್ರಯದಲ್ಲಿ ಶ್ರೀ ಎಚ್, ಭೀಮರಾಯರ ಅಧ್ಯಕ್ಷತೆಯಲ್ಲಿ ಜರಗಿತು, ಶ್ರೀಗಳಾದ ಕೆ, ಪರಮೇಶ್ವರ ಮಯ್ಯ, ಸೀತಾರಾಮ ಮೊದಲಾದವರು ಮಾತನಾಡಿದರು ಸಭಾರಂಭದಲ್ಲಿ ಅಧ್ಯಕ್ಷರು ದಿವಂಗತ ದ, ಕೃ ಭಾರದ್ವಾಜರ ನಿಧನದ ಕುರಿತು ಪ್ರಸ್ತಾಪಿಸಿ ಅವರ ಆತ್ಮಕ್ಕೆ ಶಾಂತಿಕೋರಿದರು,

ವಾರ್ಷಿಕೋತ್ಸವ— ಎಲೋಶಿಯಸ್ ಕಾಲೇಜಿನ ಕನ್ನಡ ಸಂಘದ ವಾರ್ಷಿಕೋತ್ಸವವು ತಾ 21ರಂದು ಸಂಜೆ ಶ್ರೀ ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಜಿ. ಕೆ. ಭಟ್ಟರ ಸ್ವಾಗತ ಭಾಷಣ ಶ್ರೀ ಕೆ. ನಾರಾಯಣ ಭಟ್ಟರ ವರದಿವಾಚನಗಳಾದ ಬಳಿಕ ಶ್ರೀಗಳಾದ ಕೆ, ವಿ, ಹರಿದಾಸ್, ಪಿ. ಕೆ. ನಾರಾಯಣ ಮೊದಲಾದವರು ಮಾತನಾಡಿದರು. ಅಭ್ಯಾಸ, ಅನುಭವಗಳಿಲ್ಲದ ಸಾಹಿತ್ಯಕ್ಕೆ ಜಾಗದದ ಬೆಲೆಯೂ ಇಲ್ಲವೆಂದೂ ಸಭಾಧ್ಯಕ್ಷರ ತಿಳಿಸಿದರು.

ಉದ್ಘಾಟನೆ— ಶ್ರೀ ನಾರಾಯಣ ಮಿಶನ್ ಎಂಬ ಸಂಸ್ಥೆಯೊಂದು ಮಂಗಳೂರಲ್ಲಿ ಸ್ಥಾಪಿಸಲ್ಪಟ್ಟು ಅದರ ಉದ್ಘಾಟನೆಯು ಈಚೆಗೆ ಶ್ರೀ ಕೆ. ಪಿ, ಕೇಶವ ಮೆನನ್ ಅವರಿಂದ ನೆರವೇರಿಸಲ್ಪಟ್ಟಿತು. ಜಿಲ್ಲಾ ಜಡ್ಜರಾದ ಶ್ರೀ ಪಿ, ಟಿ, ರಾಮನ್ ನಾಯರರು ಸಭಾದಕ್ಷತೆ ವಹಿಸಿದ್ದರು ಶ್ರೀ ಬಿ. ಅಪ್ಪಯ್ಯನವರು ಸ್ವಾಗತ ಭಾಷಣ ಮಾಡಿದರು, ಶ್ರೀ ಕೇಶವ ಮೆನೊನರು ಮಾತನಾಡುತ್ತಾ ಶ್ರೀ ನಾರಾಯಣಗುರುಸ್ವಾಮಿಯ ತತ್ವವಿಂದು ಎಲ್ಲೆಡೆಯಲ್ಲು ಪಸರುತ್ತಿರುವಾಗ ಮಂಗಳೂರಲ್ಲಿ ಈ ಖಾತೆ ತೆರೆಯಲ್ಪಟ್ಟಿದು ಒಳೆಯದಾಯಿತೆಂದು ಸಂತೋಷ ಸೂಚಿಸಿದರು

ಕಿನ್ನಿಕಂಬಳ— ಇಲ್ಲಿಯ ಬ್ರಾಂಚ್ ಟಪ್ಪಾಲು ಕಚೇರಿಯನ್ನು ತಾ 22ರಿಂದ ಸಬ್ ಪೋಸ್ಟ್ ಆಫೀಸಾಗಿ ಮಾಡಲ್ಪಟ್ಟಿದೆ.

ಪರ್ಕಳ— ಕಳೆದ ತಾ 24ರಲ್ಲು ಶ್ರೀ ಪಿ. ಮಂಜುನಾಥ ಶೆಣೈಯವರ ಅಧ್ಯಕ್ಷತೆಯಲ್ಲಿ ಹೆರ್ಗ, ಬಡಗಬೆಟ್ಟು, ಹಿರೆಬೆಟ್ಟು, ಅತ್ರಾಡಿ ಮತ್ತು ಅಂಜಾರು ಗ್ರಾಮಗಳ ವರ್ಗದಾರರ ಸಭೆಯು ಜರಗಿತು. ಮಂಗಳೂರಿನ ಶ್ರೀ ಎಸ್. ನರ್ಸಪ್ಪಯ್ಯ ಎಮ್. ಎಲ್. ಸಿ ಅವರ ನೇತೃತ್ವದಲ್ಲಿ ತಯಾರಿಸಲಾದ ಒಕ್ಕಲುತನ ಮಸೂದೆಯು ಕರಡು ಜನತೆಯಲ್ಲಿ ಸಾಕಷ್ಟು ಪ್ರಚಾರವಾಗದಿದ್ದುದರಿಂದಲೂ ಅದರಲ್ಲಿ ಕೆಲವು ದೋಷಗಳಿರುವುದರಿಂದಲೂ ಈ ತಿಂಗಳಲ್ಲಿ ಸೇರುವ ಮದ್ರಾಸು ಎಸೆಂಬ್ಲಿಯಲ್ಲಿ ಸದ್ರಿ ಮಸೂದೆಯನ್ನು ಮುಂದೆ ತರಕೂಡದಾಗಿಯೂ ಅಪೇಕ್ಷಿಸುವ ನಿರ್ಣಯವಾಯಿತು.

ಶಿರ್ವ— ಸ್ಥಳೀಯ ಸೈಂಟ್ ಮೇರೀಸ್ ಹೈಸ್ಕೂಲಿನಲ್ಲಿ ತಾ 22ರಲ್ಲು ಶ್ರೀ ಎಲ್. ಸಿ. ಪಾಯಸ್, ಅವರ ತೈಲಚಿತ್ರ ಅನಾವರಣವನ್ನು ರೆ| ಫಾ| ಎಚ್. ಗೊನ್ಸಾಲ್ವಿಸರು ನೆರವೇರಿಸಿದರು, ಇಗರ್ಜಿ ಜನತೆಯ ಕಡೆಯಿಂದ ಶ್ರೀ ಪಾಯಸರಿಗೆ ಮಾನಪತ್ರವನ್ನು ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎಲ್. ಮೊಂಡೋನ್ಸ್, ಅವರು ಅರ್ಪಿಸಿದರು. ಶ್ರೀ ಪಾಯಸರು ತನಗಿತ್ತ ಗೌರವಕ್ಕಾಗಿ ಸಾರ್ವಜನಿಕರನ್ನು ಅಭಿನಂದಿಸಿದರು. ಎಸೆಂಬ್ಲಿ ಸಭೆಗಳನ್ನು ಪ್ರವೇಶಿಸಿ ಉದ್ದುದ್ದ ಭಾಷಣ ಮಾಡುವುದರಿಂದ ದೇಶೋದ್ಧಾರವಾಗುವಂತಿಲ್ಲವೆಂದೂ ವಿದ್ಯಾ ಪ್ರಚಾರದಿಂದಲೇ ದೇಶೋದ್ಧಾರವಾಗುವುದೆಂದೂ ಹೇಳಿದರು. ಜನರ ಏಳಿಗೆಗಾಗಿ ದುಡಿಯಲು ಸದಾ ಸಿದ್ಧನಿರುವೆನೆಂದು ತಿಳಿಸಿದರು.

ಬೈಲೂರು— ಸ್ಥಳೀಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯ 8ನೇ ತರಗತಿಯಲ್ಲಿ ಕಲಿಯುತ್ತಿರುವ ರಮಾನಂದಕಿಣಿ (ಸದ್ರಿ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ, ಯು. ಕೃಷ್ಣರಾಯ ಕಿಣಿಯವರ ಮಗ) 24-2-53ರಲ್ಲಿ ಮಧ್ಯಾಹ್ನ 12-45 ಗಂಟೆಗೆ ಮನೆಗೆ ಊಟಕ್ಕೆ ಹೋಗುವಾಗ ದಾರಿಯಲ್ಲಿ ಒಂದು ಪಾಕೆಟ್ ಸಿಕ್ಕಿತು. ಅದರೊಳಗೆ ರೂ 70-0-6 ಮತ್ತು ಕೆಲವು ರಶೀದಿಗಳು. ಇದ್ದವು. ಕನ್ನಡಕ ಪ್ರಿಸ್ಕ್ರಿಪ್ಶನಿನಲ್ಲಿ B. B. Shetty Kasaragod ಎಂಬ ವಿಳಾಸವಿದ್ದುದರಿಂದಲೂ, B. B. Shetty, ಎಂಬ ವಿಸಿಟಿಂಗ್ ಕಾರ್ಡು ಇದ್ದುದರಿಂದಲೂ, ಈ ವಿಷಯವನ್ನು ಅವರಿಗೆ ತಿಳಿಸಲಾಗಿ ಅವರು ಕೂಲಂಕುಶ ವಿವರಗಳನ್ನು ಕಳುಹಿಸಿದರು. ಅವರ ಅಪೇಕ್ಷೆಯ ಮೇರೆಗೆ ರೂ. 70-0-6 ಮತ್ತು ಕೆಲವು ರಶೀದಿಗಳು ವಗೈರೆ ಇರುವ ಹಣದ ಪಾಕೇಟನ್ನು ಉಡುಪಿ ನವಯುಗದ ಎಡಿಟರರಾದ ಶ್ರೀ ಕೆ. ಎಚ್ ಸೆಟ್ರಿಗೆ ಕಳುಹಿಸಲಾಯಿತು

THE VIJAYA BANK LIMITED.

NOTICE.

Notice is hereby given that the 21st Ordinary Meeting of the Share-holders of the Bank, will be held at the Registered Office of the Bank, Kadri Road, Mangalore, on Sunday the 29th March, 1953, at 3 P. M.

The Register of Members and the Transfer Books of the Bank, will remain closed from 25-3-1953 to 13-4-1953, (both days inclusive).

Mangalore, 2-3-1953. (Sd) **B. Mahabala Shetty,** Secretary.

In the Court of the Subordinate Judge of South Kanara.

O. S. No 234/52.

Between

Bhagi Alvathi & others— Plaintiffs.

Vs.

K T. Alva & others— Defendants.

To

6th Defendant: Mrs Kausalya wife of Sri. Sarvothama Shetty. Advocate, residing at No 6 Subbayya Naidu Street, "God with us House" Vepery, Madras.

Take notice that the Plaintiffs abovenamed instituted a suit against you and others for partition of the properties belonging to the family and for other reliefs and the same is posted to 24-3-1953 for your appearance. If you fail to appear on that day either in person or through a duly authorised pleader, the suit will be decided in your absence.

By order of the Court.

(Sd) **S Venkat Rao.** Vakil for Plaintiffs.

Mangalore, 2-3-1953.

ಇದೇ ನಂದನ ಸಂ। ಫಾಲ್ಗುನ ಬಹುಳ ಏಕಾದಶೀ ನಿರ್ಣಯಃ

ಪ್ರಿಯ ಸದ್ಧರ್ಮಾಭಿಮಾನಿಗಳೇ,

ಕೃಷ್ಣಾಚಾರಸ್ಮೃತೌ:— ಸರ್ವಕರ್ಮಸು ಕಃ ಶ್ರೇಯಾನ್ ವಿಷ್ಣುಧರ್ಮೇಷು ಯೋಧಿಕಃ ಇತಿ॥ ಆರ್ಯಭಟೇನ ಗಣನಂ ದಶಮ್ಯಾದಿದಿನತ್ರಯೇ ॥ ಮತ್ತು, ದಶಮ್ಯಾದಿ ತ್ರಯಾಣಾಂ ತು ಆರ್ಯೋಕ್ತ್ಯೈವ ವಿನಿರ್ಣಯಃ ॥ ಇತ್ಯಾದಿ.

ಉಡುಪಿ ಶ್ರೀಮನ್ಮಧ್ವಾಚಾರ್ಯ ಶುಭ ಸಂಪ್ರದಾಯ ಧರ್ಮಶಾಸ್ತ್ರಗಳಲ್ಲಿ ಆರ್ಯಭಟ ಗಣಿತ ಪ್ರಕಾರವೇ ದಶಮ್ಯಾದಿ ದಿನತ್ರಯಗಳನ್ನು ನಿರ್ಣಯಿಸಬೇಕೆಂತ ತೋರುವದು

ತಥಾಚ— ವ್ಯಕ್ತೇರಂದೊಪ್ಯಾರ್ಯಮತ ರಾನ್ಯ ವಿರತಿಯೋಗಾಚ್ಚ ತಿಥಿಕ್ಷಯೋಗಾಸ್ಯಃ ನಿಜನಿಜಗತಿತಃ ಸಾಧ್ಯಂ ಗತ್ಯೈಷ್ಯಮಾನೇನ ಯಾನ್ಯೈಷ್ಯಂ । ಚರದೇಶಾಂತರಕಾಭ್ಯಾಮ್ಯಣ ಸಂಜ್ಞಾಭ್ಯಾಮನೋದಯಾದುಪರಿ ॥ ಇತಿ ॥

ಶ್ರೀಮನ್ನಾರಾಯಣಭಟ್ಟಾಚಾರ್ಯ ಸಿದ್ಧಾಂತ ರೀತ್ಯಾ— ತತ್ಕಾಲ ದೇಶಾಂತರ, ಅಹಮಾನ ಸಂಸ್ಕಾರ, ಸ್ಫುಟಗತ್ಯಾದಿ ಸೂಕ್ಷ್ಮ ಕ್ರಿಯೆಗಳಿಂದ—

ಬರುವ ಫಾಲ್ಗುನ ಬಹುಳ ದಶಮಿ ಕುಜವಾರ ಉದಯಾದಿ ಘಟಿ ೫೭-೫ ಶ್ರೀಮತ್ಪಂಡಿತಾಚಾರ್ಯೋಕ್ತಿ ಪ್ರಕಾರ... ೧೦ ವಿಘಟಿ ಸೇರಿಸಿದರೆ...೫೭-೧೫ ದಶಮಿ ಅರುಣೋದಯ ವೇದೆಯು ಕಾಣುವದರಿಂದ ೧೧ ಯು ಬುಧವಾರ ಸ್ಮಾರ್ತೈಕಾದಶೀ. ಮರುದಿನ ೧೨ಯು ಗುರುವಾರ ಮಾಧ್ವ-ವೈಷ್ಣವರಿಗೆ ಏಕಾದಶೀ ನಿಮಿತ್ತ ಉಪವಾಸವು ಎಂಬುದರಲ್ಲಿ ಸಂದೇಹವೇ ಇಲ್ಲ.

ಅಥವಾ ಪರಹಿತ (ಪಂಚಬೋಧ) ಪ್ರಕಾರ ದಶಮಿ ಘಟಿ ೫೬॥ ತೋರಿದರೂ ಸೂಕ್ಷ್ಮ ಸಂಸ್ಕಾರ ಶೋಧನೆಯಿಂದ ದಶಮಿ ಘಟಿ ೫೬-೧ ಇದೆ.

ಯಾವ ಸಂದೇಹಕ್ಕೆ ಎಡೆಯೇ ಇರುವದಿಲ್ಲ- ಗಮನಿಸಿರಿ!!

ಶ್ಲೋ:— ಕಲಾರ್ಧೇನಾಪಿ ವಿದ್ಧಾ ಸ್ಯಾದ್ದಶಮ್ಯೈಕಾದಶೀ ಯದಾ। ತದಾ ಹ್ಯೇಕಾದಶೀಂ ತ್ಯಕ್ತ್ವಾ ದ್ವಾದಶೀಂ ಸಮುಪೋಷ್ಯಯೇತ್ ॥ ದ್ವಾದಶ್ಯಾಮುಪವಾಸೋತ್ರ ತ್ರಯೋದಶ್ಯಾಂತು ಪಾರಣಾ ॥ ಸ್ಮೃತಿಚಂದ್ರಿಕಾ ಪುಟ 73 ॥ ಅರುಣೋದಯೇ ತು ದಶಮೀ ಗಂಧಮಾತ್ರಂ ಭವೇದ್ಯದಿ ॥ ದೃಷ್ಟವ್ಯಂ ತತ್ಪ್ರಯತ್ನೇನ ವರ್ಜನೀಯಂ ನರಾಧಿಪ । ಇತಿ ಹೇಮಾದ್ರಿ ಪುಟ 271,

ಅರುಣೋದಯ ಕಾಲದಲ್ಲಿ ದಶಮಿ ಶೇಷವು "ಕಲಾರ್ಧ" (ಅಂದರೆ 4 ಸೆಕಂಡ) ಇದ್ದರೂ ಮತ್ತು "ಗಂಧಮಾತ್ರ"ವಿದ್ದರೂ, ವೇಧದೋಷ, ಆ ಏಕಾದಶೀಯನ್ನು ಬಿಟ್ಟು ಬಿಡಬೇಕೆಂತ ಸೂಕ್ಷ್ಮ ವಿಚಾರ ಶೋಧನೆಯು ತೋರುವದರಿಂದ ಮಾಧ್ವಗ್ರಂಥವಾದ ಕೃಷ್ಣಾಚಾರ ಸ್ಮೃತಿಯಲ್ಲಿ "ಏಕಾದಶ್ಯಾಂ ಅರುಣೋದಯತಃ ಪೂರ್ವ ಷಟ್ಪಂಚಾಶತ್ ಘಟಿಕಾಯಾಂ ಯದಾ ದಶಮೀಸಂಬಂಧಃ ಪ್ರತೀಯತೇ ಸೈಕಾದಶೀ ವಿದ್ಧೈಕಾದಶೀತಿ ಕೋಪೋಕ್ಷ್ಯತಿ ತಾತ್ಪರ್ಯಾರ್ಥಃ" ಅರು ಣೋದಯಕ್ಕೆ ಮೊದಲು 56ನೇ ಘಟಿಯಲ್ಲಿ) ದಶಮಿ ತೋರಿದರೆ ವಿದ್ಧೈಕಾದಶೀಯಾಗುತ್ತದೆ. ಉಪೋಷ್ಯ ಮಾಡಬಾರದೆಂತ ಹೇಳಲು ಕಾರಣ—

ಸ್ಮೃತಿತತ್ವೆ–ಪುಟ 55, ಶ್ಲೋ:– ಯ್ಯೇ ಕೃತಾ ದಶಮೀ ವಿದ್ಧಾ ಜಡವಾಕ್ಯತ್ತು ಮಾನವೈಃ ತೇ ಗತಾ ನರಕಂ ಘೋರಂ ಯುಗಾನಾಮೇಕವಿಂಶತಿಂ॥ ಯೇ ಕಾರಯಂತಿ ಕುರ್ವಂತಿ ದಶಮ್ಯೈಕಾದಶೀ ಯುತಾಂ। ಅಲೋಕ ತನ್ಮುಖಂ ಬ್ರಹ್ಮನ್ ಸೂರ್ಯದರ್ಶನಮಾಚರೇತ್॥ ಒಂದುವೇಳೆ ವಿದ್ಧೈಕಾದಶಿಯನ್ನು ಮಾಡಿದವರಿಗೂ ಮಾಡಿಸಿದವರಿಗೂ ಸಹ ವಿಮೋಚನೆ ಇಲ್ಲದ ಘೋರ ನರಕ ಪ್ರಾಪ್ತಿ. ಅಲ್ಲದೆ ದಶಮಿಯು ವಿಷ – ಏಕಾದಶೀ ಅಮೃತ. ವಿಷವನ್ನು ಪ್ರಯತ್ನದಿಂದ ಬಿಡಬೇಕೆಂತ ಶ್ರೀಮದಾಚಾರ್ಯರ ವಚನವೇ ಕಾಣುವದು

ಮಾಧ್ವಮತವನ್ನೇ ಪ್ರತಿಷ್ಠಿಸಿದ ಶ್ರೀ ಮದಾಚಾರ್ಯರು ತಮ್ಮ ಶಿಷ್ಯವರ್ಗವು ಈ ಮಹಾಪಾಪಕ್ಕೆ ಗುರಿಯಾಗ ಬಾರದೆಂತಲೇ ಇದನ್ನೆಲ್ಲಾ ಯೋಚಿಸಿ, ಕಾಲವಶಾತ್ ಒಂದು ವೇಳೆ ವೇಧ ಸಂದೇಹ ಉತ್ಪತ್ತಿಯಾದಗೂ ಕೂಡಾ ಕೂರ್ಮ ಪುರಾಣೋಕ್ತಿಯನ್ನು ಉದಾಹರಿಸಿ ಸ್ವಕೀಯ ಕೃಷ್ಣಾಮೃತ ಮಹಾರ್ಣವದಲ್ಲಿ- ಶ್ಲೋ: ಬಹ್ವಾಗಮ ವಿರೋಧೇಷು ಬ್ರಾಹ್ಮಣೇಷು ವಿವಾದಿಷು ॥ ಉಪೋಷ್ಯ ದ್ವಾದಶೀ ಶುದ್ಧಾ ತ್ರಯೋದಶ್ಯಾಂತು ಪಾರಣಂ॥ ಎಂಬುದಾಗಿ ಶ್ರೀ ಮದಾಚಾರ್ಯರು ಏಕಾದಶೀ ಉಪೋಷ್ಯ ನಿಮಿತ್ತ ಹೇಳಿರುವರು. ಅಲ್ಲದೆ ಗ್ರಹಣಾದಿ ವಿಚಾರಗಳಿಗೆ ಅಲ್ಲವೆಂಬುದು ಈ ಉಕ್ತಿಯಿಂದಲೇ ಕಾಣುತ್ತದೆ. ಕಾಲವಶಾತ್ ಸುಧಾರಣೆ ಮಾಡಬೇಕೆಂತ ಇದ್ದರೆ. ಶ್ರೀ ಮದಾಚಾರ್ಯರೇ ಹೇಳುತ್ತಿದ್ದರು.

ಯಾವ ಧರ್ಮಶಾಸ್ತ್ರಕಾರಾಗಲೀ, ಯಾವ ಸ್ವಾಮಿಗಳವರಾಗಲೀ, ತಿಥಿ ಘಟಿಕಾ ಸಾಧನೆಯನ್ನು ಹೇಳಲೇ ಇಲ್ಲ.

ಸಿದ್ಧಾಂತ ಪಂಚಾಂಗವನ್ನು ಆಚರಿಸ ತಕ್ಕ ವಿದೇಶಸ್ಥ ಮಾಧ್ವ ಮಠಾಧಿಪತಿಗಳೂ ದಶಮ್ಯಾದಿ ದಿನತ್ರಯಗಳನ್ನು ಆರ್ಯಭಟೀಯ ರೀತ್ಯಾ ಆಚರಿಸುವರು. ರಾಘವೇಂದ್ರ ಮಠ, ಉತ್ತರಾದಿ ಮಠ, ತಂಜಾವೂರು, ಕೇರಳ, ದಕ್ಷಿಣ ಕನ್ನಡ ಜಿ ಸದ 22 ಪಂಚಾಂಗಗಳಲ್ಲಿ ಸಹ ೧೧ಯು ಬುಧವಾರ ಸ್ಮಾರ್ತೈಕಾದಶಿಯೇ ಕಾಣುತ್ತದೆ.

ಪರಂತು ಯಾವ ಸಂದೇಹಕ್ಕೂ ಯಾವ ಸ್ವಾಮಿಗಳವರ ಉಕ್ತಿಗೂ ಮತ್ತು ಆಕಿರಿ ಶ್ಚೈಕಾದಶೀ ಅಥವಾ 2 ಏಕಾದಶೀ ಎಂಬ ಶಬ್ದೋಚ್ಚಾರಕ್ಕೂ ಸಹ ಎಡೆಯಿಲ್ಲದೆ ಫಾಲ್ಗುನ ಬಹುಳ ೧೧ ಯು ಬುಧವಾರ ಸ್ಮಾರ್ತೈಕಾದಶೀ— ಮರುದಿನ ೧೨ ಯು ಗುರುವಾರ ಮಾಧ್ವ ವೈಷ್ಣವ ಏಕಾದಶೀ ಉಪವಾಸ ಯೋಗ್ಯವಾಗಿರುತ್ತದೆ.

ನಮ್ಮ ಗುರುವರ್ಯರಾದ ಪರ್ಯಾಯ ಶ್ರೀಪಾದಂಗಳವರ ಕಳೆದ ಜುಲೈ ತಿಂಗಳ ತಾ. 23ನೇ ಆಜ್ಞಾಪತ್ರ ಪ್ರಕಾರ ಈ ವಿಷಯಗಳಿಗೆ ನಾನು ಶಾಸ್ತ್ರ ಮತ್ತು ಸಂಪ್ರದಾಯ ರೀತ್ಯಾ ವಿಸ್ತಾರವಾಗಿ ಬರೆದು ಕಳುಹಿಸಿರುವ ನಿರ್ಣಯವು ಪೂಜ್ಯ ಗುರುಗಳಿಗೆ ಸಂಪೂರ್ಣ ಸಮ್ಮತವೆಂತ ಕಾಣುತ್ತದೆ.

ಇತಿ ಸಜ್ಜನ ವಿಧೇಯ,

ಅತ್ತೂರು ವಾಸುದೇವ ಉಡುಪ

ಉಡುಪಿ ಪಂಚಾಂಗ ಸಂಪಾದಕ.

ಕೊಯಂಬತ್ತೂರು, 27-12-52

ತಾರಾನಾಥ ಆಯುರ್ವೇದ ವಿದ್ಯಾಪೀಠ, ಬಳ್ಳಾರಿ.

ತಾರಾನಾಥ ಆಯುರ್ವೇದ ಕೋಲೇಜ್, ಮತ್ತು ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಕಳೆದ ತಾ 16ರಂದು ಮೈಸೂರು ಸರಕಾರದ ಕಂದಾಯ ಮಂತ್ರಿಗಳಾದ ಶ್ರೀ. ಕಡಿದಾಳ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. ಮೊದಲು ವಿದ್ಯಾರ್ಥಿ ಸಂಘದ ಕ್ರಿಯಾಸಮಿತಿ ಸಭೆಯು ಮುಂಚಾನೆ ಮೈಸೂರು ಆಯುರ್ವೇದ ಕಾಲೇಜಿನ ಪ್ರಿನ್ಸಿಪಾಲರಾದ ಡಾ. ಸಿ. ದ್ವಾರಕನಾಥ ಅವರ ಅಧ್ಯಕ್ಷತೆಯಲ್ಲಿ ಸೇರಿ ವಿದ್ಯಾಪೀಠದಲ್ಲಿ ಅಭ್ಯಾಸಮಾಡುವ ವಿದ್ಯಾರ್ಥಿಗಳ ಅಂತಸ್ತನ್ನು ಹೆಚ್ಚಿಸುವ ಕುರಿತು ಹೊಸ ಯೋಜನೆ ಕೈಕೊಳ್ಳುವುದು ಗೊತ್ತಾಗಿ ಈ ಕುರಿತು ಸರಕಾರದವರಲ್ಲಿ ವ್ಯವಹರಿಸಲು ಶ್ರೀ ಟೇಕೂರ ಸುಬ್ರಮಣ್ಯಂ ಅವರ ನೇತೃತ್ವದಲ್ಲಿ ಒಂದು ಪ್ರಾತಿನಿಧಿಕ ಮಂಡಲಿಯನ್ನು ನೇಮಿಸಲಾಯಿತು. ಶ್ರೀ ಬಿ ಕೆ. ಮಾಳಗಿ ಅವರು ಸಂಚಾಲಕರಾಗಿ ನಿಯೋಜಿಸಲ್ಪಟ್ಟರು.

ಸಂಜೆ ಮೂರು ಗಂಟೆಗೆ ಶ್ರೀ. ಕಡಿದಾಳರವರ ಅಧ್ಯಕ್ಷತೆಯಲ್ಲಿ ಮುಖ್ಯ ಕಾರ್ಯಕ್ರಮ ಆರಂಭವಾಯಿತು. ಶ್ರೀ ಬಿ. ವೇಣುಗೋಪಾಲಾಚಾರ್ಯರು ಸ್ವಾಗತ ಭಾಷಣ ಮಾಡಿದರು. ಪ್ರಿನ್ಸಿಪಾಲ' ಡಾ. ಕೆ. ಅಚ್ಯುತ್ಯನವರು ವಾರ್ಷಿಕ ವರದಿಯನ್ನೂ ಯೂನಿಯನ್ನಿನ ಸೆಕ್ರೆಟರಿ ಶ್ರೀ ಬಿ. ಕುಶಲ ಶೆಟ್ಟಿಯವರು ಯೂನಿಯನ್ನದ ವರದಿಯನ್ನೂ ಓದಿದರು. ಅನಂತರ ಸುಪ್ರಸಿದ್ಧ ಸಾಹಿತಿಗಳಾದ ಶ್ರೀ. ಅ.ನ. ಕೃಷ್ಣರಾಯರು ಹಾಗು ಡಾ. ಸಿ. ದ್ವಾರಕನಾಥರು ಭಾಷಣಮಾಡಿ ತಾರಾನಾಥರ ಆದರ್ಶಜೀವನ ಹಾಗೂ ಆಯುರ್ವೇದದ ಸೇವೆಯ ಮಹತ್ವ ತಿಳಿಸಿದಮೇಲೆ, ತಾರಾನಾಥರ ವ್ಯಕ್ತಿತ್ವ ಹಾಗು ಚಿಕಿತ್ಸಾರಂಗದಲ್ಲಿ ಆಯುರ್ವೇದದ ಅದ್ವಿತೀಯ ಸ್ಥಾನದ ಕುರಿತು ಅಧ್ಯಕ್ಷರ ಭಾಷಣವಾಯಿತು. ತರುವಾಯ ಶ್ರೀ. ಯಚ್. ಲಿಂಗಾರೆಡ್ಡಿಯವರು ವಿದ್ಯಾರ್ಥಿಗಳಿಗೆ ಪಾರಿತೋಷಕ ಹಂಚಿದರು. ಕನ್ನಡದಲ್ಲಿ "ವೆಗ್ರೀಹಿ" ಹಾಗು ತೆಲುಗಿನಲ್ಲಿ 'ಅತ್ಮಹತ್ಯ' ಎಂಬ ನಾಟಕಗಳು ಅಭಿನಯಿಸಲ್ಪಟ್ಟು ಕಾರ್ಯಕ್ರಮ ಮುಗಿಯಿತು. (ವಿ. ಸು.)

ಕುಂಬಳೆ-— ಭತ್ತ ಮತ್ತು ಅಕ್ಕಿಯ ಬೆಲೆಯು ದಿನೇದಿನೇ ಜಾಸ್ತಿಯಾಗುತ್ತಲಿದೆ. ಬೇರೆ ಕಡೆಗೆ ಕಳ್ಳ ಸಾಗಟವೇ ಬೆಲೆ ಜಾಸ್ತಿಯಾಗಲು ಕಾರಣವೆನ್ನಲಾಗಿದೆ.

ಎಡನಾಡ್-— ಸ್ಥಳೀಯ ಪಂಚಾಯತ ಬೋರ್ಡು ಚುನಾವಣೆಯು ನಡೆದು ಶ್ರೀ ಕೆ. ರಾಮಕೃಷ್ಣ ಭಟ್ಟರು ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

ಮೂಡ್ಲ ಕಟ್ಟೆ-— ಮೂಡ್ಲಕಟ್ಟೆಯ ಯಜಮಾನರಾದ ಶ್ರೀ ವೆಂಕಪ್ಪ ಶೆಟ್ಟರು ಕಳೆದ ತಾ 24ರಲ್ಲಿ ಬೆಳಿಗ್ಗೆ ತನ್ನ 72ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರೆನ್ನಲು ವಿಷಾದವಾಗುತ್ತದೆ. ದಿವಂಗತರು ಬಸ್ರೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಮೊಕ್ತೇಸರರಾಗಿ ಅನೇಕ ವರ್ಷಗಳ ತನಕ ಸೇವೆ ಸಲ್ಲಿಸಿದರು ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವೆವು.

ಪಡುಬಿದ್ರೆ-— ಸ್ಥಳೀಯ ಪಂಚಾಯತ ಬೋರ್ಡು ಅಧ್ಯಕ್ಷ ಚುನಾವಣೆಯಲ್ಲಿ ಶ್ರೀ ಕೆ. ಗೋಪಾಲ ಹೆಗ್ಡೆಯವರು ಬಹುಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ಮಣಿಪಾಲ-— ಪ್ರಾಥಮಿಕ ಶಾಲೆಯ ತೃತೀಯ [illegible] ನೀಲಗಿರಿ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಎಚ್. ಸಂಜೀವರಾಯರ ಅಧ್ಯಕ್ಷತೆಯಲ್ಲಿ ಜರುಗಿತು. ಮುಖ್ಯೋಪಾಧ್ಯಾಯರು ವರದಿ[illegible] ಓದಿದರು. ವಸಂತ ಕುಮಾರಿಯವರು ಪ್ರಾರ್ಥನೆ ಮಾಡಿದರು ಪಾರಿತೋಷ ವಿತರಣೆ, ನಾಟಕಾಭಿನಯಗಳಿಂದ ಸಭಾಂತ್ಯವಾಯಿತು.

ವಿಜಾಪುರ – ಎಡಪದವು ಬೋರ್ಡು ಶಾಲಾ ಹೊಸ ಕಟ್ಟಡದ ಶಂಕುಸ್ಥಾಪನಾ ಸಮಾರಂಭವನ್ನು ಜಿಲ್ಲಾ ಕಲೆಕ್ಟರ್ ಶ್ರೀ ರಾಮಕೃಷ್ಣನ್ ಅವರು ತಾ.22ರಲ್ಲು ನೆರವೇರಿಸಿದರು. ಶ್ರೀಗಳಾದ ದೇವರಾವ್, ಕೆ. ಕೆ. ಶೆಟ್ಟಿ, ಕೆ. ರಾಮರಾವ್, ಜಿ ಮಂಜಯ್ಯ ಹೆಗ್ಡೆ, ಕೆ. ಸೂರ್ಯನಾರಾಯಣರಾವ್, ಡಾ. ನಾಗಪ್ಪ ಆಳ್ವ ಮೊದಲಾದವರು ಮಾತನಾಡಿದರು ಶಾಲಾ ಕಮಿಟಿ ಅಧ್ಯಕ್ಷರು ಶ್ರೀ ಎಮ್ ಆನಂದ ಆಳ್ವರು ಧನ್ಯವಾದಗಳನ್ನರ್ಪಿಸಿದರು.

ಅಜೆಕಾರ — ಸ್ಥಳೀಯ ಬೋರ್ಡು ಹಾಯಸ್ಕೂಲಿನ ಪ್ರವಾಸ ಹೊರಟು ದೇವರ ಬೆಟ್ಟ ಲ್ವರಗತಿಯ ವಿದ್ಯಾರ್ಥಿಗಳು ಮತ್ತು ಶಿಕ್ಷಕವರ್ಗದವರು ತಾ 21ರಲ್ಲಿ ಮಣಿಪಾಲು ಪಡು ಕುದುರು ಮಾರ್ಗವಾಗಿ ಶಿವಪುರಕ್ಕೆ ತೆರಳಿ ಅಲ್ಲಿಯ ಶಾಲಾವಠಾರದಲ್ಲಿ ರಾತ್ರಿ ಶಿಬಿರಾಗ್ನಿಯನ್ನು ನೆರವೇರಿಸಿದರು. ಮರುದಿನ ಬೆಳಿಗ್ಗೆ ಅಲ್ಲಿಯ ಪ್ರೇಕ್ಷಣೀಯ ವಿಷಯಗಳನ್ನು ನೋಡಿ ಸಂಜೆ ಹಿಂತಿರುಗಿದರು.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತನಾಥನೆಯನ್ನು ಮಾಡುತ್ತಿರುವುದು.

The Moolky Bank Ltd.,

Moolky, S. K.

ಈಗತಾನೇ ಪ್ರಕಟವಾಗಿದೆ!

ಜನತಾ ಸಾಹಿತ್ಯ ಮಾಲೆಯ ಮೊದಲ ಮಣಿ

ಜೀವನ ಶಿಕ್ಷಣ

ವಿದ್ಯಾರ್ಥಿಗಳು ಜೀವನ ಹೋರಾಟವನ್ನೆದುರಿಸಲು ಯಾವ ರೀತಿಯ ತರಬೇತಿ ಪಡೆಯಬೇಕೆಂದು ಬೋಧಪರ ಘಟನೆಗಳಿಂದ ಚಲಚಿತ್ರದಂತೆ ಚಿತ್ರಿಸುವ

ಶ್ರೀ ಕೆ. ಕೆ. ಶೆಟ್ಟರ ನವೀನ ಮಾದರಿಯ ನಾಟಕ

ಓದಲು ಸ್ವಾರಸ್ಯದ ಕತೆ! ಅಭಿನಯಿಸಲು ಆದರ್ಶ ನಾಟಕ!

ಬೆಲೆ: ರೂ. ೧–೨–೦. ಅಂಚೆ ವೆಚ್ಚ ಸಹಿತ ರೂ. ೧–೪–೦.

ಜನತಾ ಸಾಹಿತ್ಯ ಮಾಲೆಯ ವಾರ್ಷಿಕ ಚಂದಾ ರೂ. ೫–೦–೦.

ವರ್ಷಕ್ಕೆ ಸುಮಾರು ೫೦೦ ಪುಟಗಳ ೩. ಯಾ ೪ ಪುಸ್ತಕಗಳು ಪ್ರಕಟಿಸಲ್ಪಡುವುವು. ಚಂದಾದಾರರಾಗಲಿಚ್ಛಿಸುವವರು ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಜನತಾ ಸಾಹಿತ್ಯ ಮಾಲೆ,

ಕೆನರಾ ಛಾಪಖಾನೆ, ಮಂಗಳೂರು—1.

ಭೋಗ ವಿಜಯ—

ಶೃಂಗಾರ ಶ್ರೀ ಕವಿ ಹಂಸರಾಜ ರತ್ನಾಕರ ಮಹಾಕವಿ ಭರತೇಶ ವೈಭವದ ಸರಳ ಗದ್ಯ ಸ್ವರೂಪ —೧. ಪ್ರಕಾಶಕರು. ಸ್ವರ್ಣ ಸಾಹಿತ್ಯ, ಬೆಂಗಳೂರು ಬೆಲೆ ರೂ ೧

ದಕ್ಷಿಣ ಕನ್ನಡದಲ್ಲಿ ಜೈನ ಅರಸರ ಪ್ರಾಬಲ್ಯ ಭಾವಕಾಲದಲ್ಲಿ ಕನ್ನಡ ಸಾಹಿತ್ಯದ ಸಿರಿಯನ್ನು ಹೆಚ್ಚಿಸಿದ ಕವಿಪುಂಗವರಲ್ಲಿ ರತ್ನಾಕರ ವರ್ಣಿಯ ಹೆಸರು ವಿಖ್ಯಾತವಾಗಿರುವುದೆ ಅವನು ಸಾಹಿತ್ಯ ಕ್ಷೇತ್ರದಲ್ಲಿ ಅತ್ಯಪೂರ್ವ ಛಂದಸ್ಸೆನಿಸಿದ ಸಾಂಗತ್ಯದಲ್ಲಿ ಭರತೇಶ ವೈಭವವನ್ನು ಲಲಿತ ಮನೋಹರವಾಗಿ ಬರೆದು ಸೌಂದರ್ಯಾನುಭೂತಿಯ ವಿಶೇಷ ದರ್ಶನವನ್ನು ಮಾಡಿಸಿ ಕೊಟ್ಟನು. "ಭೋಗಿಯೋಗಿಗಳ ಎದೆ ಜುಮ್ಮ ಜುಮ್ಮೆನ್ನುವಂತೆ ರಚಿಸುವೆನು" ಎಂಬ ಮಾತನ್ನು ಕವಿಯು ತನ್ನ ಕೃತಿಯಲ್ಲಿ ಸಂಪೂರ್ಣವಾಗಿ ಸಾಧಿಸಿರುವನೆಂದು ವಿದ್ವಾಂಸರ ಅಭಿಪ್ರಾಯವಿದೆ. ತನ್ನ ಆಯುಧ ಶಾಲೆಯಲ್ಲಿ ಚಕ್ರ ರತ್ನವು ಆವಿರ್ಭವಿಸಿದುದನ್ನು ಕೇಳಿ ಷಟ್ಖಂಡಗಳ ದಿಗ್ವಿಜಯಕ್ಕೆ ಭರತ ಚಕ್ರವರ್ತಿಯು ಹೊರಡುವುದಕ್ಕೆ ಮುಂಚಿನ ಮೂರು ದಿನಗಳ ವರ್ಣನೆ ಈ ಭೋಗವಿಜಯದಲ್ಲಿರುತ್ತದೆ. ಸಾಹಿತ್ಯದಲ್ಲಿ ಶೃಂಗಾರವನ್ನು ಔಚಿತ್ಯವರಿತು ಉಪಯೋಗಿಸುವಲ್ಲಿ ರತ್ನಾಕರನನ್ನು ಮೀರಿಸಿದವರು ಇರಲಾರರೆಂದೇ ಹೇಳಬಹುದು. ಅವನ ಶೃಂಗಾರವನ್ನು ಯಾರೊಬ್ಬರೂ ಅಶ್ಲೀಲವೆಂದು ಹೀನೈಸುವಂತಿಲ್ಲ. ಕಡೇಮಲಾಂಗಿನಿಯರ ಸಹವಾಸದ ನಡುವೆಯೂ ಯೋಗದ ಕಡೆಗೆ ಮನವನ್ನು ಹರಿಯಗೊಡುವ ಭರತನ ವ್ಯಕ್ತಿತ್ವದ ವೈಖರಿಯನ್ನು ನೋಡಿ ನಾವು ವಿಸ್ಮಯ ಪಟ್ಟು ಕೊಳ್ಳುತ್ತೇವೆ. "ಕುಟ್ಟುಮೀನಾಕ್ಷಿಯ ಕೆಲದಲ್ಲಿ ಆತ್ಮಧ್ಯಾನದ ಸಿರಿಯೆ" ಎಂದು ಬೆಕ್ಕಸ ಬೆರಗಾಗುತ್ತೇವೆ. ಆದರೆ ಇದೇ ರತ್ನಾಕರನ ಶೃಂಗಾರ—ರತ್ನಾಕರನ ಯೋಗ ಇಂಥ ಉತ್ತಮ ಕೃತಿಯನ್ನು ಕನ್ನಡಿಗರು ತುಂಬಾ ಅಭಿಮಾನದಿಂದ ಓದಿಕೊಳ್ಳಬೇಕು. ಮೂಲ ಗ್ರಂಥವು ಪದ್ಯರೂಪದಲ್ಲಿರುವುದರಿಂದ ಆದರಸಾರಸರ್ವಸ್ವವನ್ನು ಗ್ರಹಿಸಲು ಅಸಮರ್ಥರೆನಿಸಿದ ರಸಿಕರು ಈಗ ಸ್ವರ್ಣ ಸಾಹಿತ್ಯದವರು ಪ್ರಕಟಿಸಿರುವ ಸರಳ ಗದ್ಯವನ್ನು ಅಭ್ಯಸಿಸ ಬಹುದು. ಗದ್ಯ ಶೈಲಿಯು ಮೂಲದ ಸಾಂಗತ್ಯ ಕಾವ್ಯದ ಸತ್ವವನ್ನು ಕಳೆದು ಕೊಂಡಿಲ್ಲ ಇದೊಂದು ವೈಶಿಷ್ಟ್ಯವೆನ್ನಬೇಕು. ಪುಸ್ತಕವನ್ನು ಓದುತ್ತಿದ್ದಂತೆ ರಸಾನುಭೂತಿಯು ನಮ್ಮ ನರನಾಡಿಯಲ್ಲಿ ಸ್ಪಂದಿಸುತ್ತದೆ; ಮನಸ್ಸು ಪ್ರಫುಲ್ಲಿತವಾಗುತ್ತದೆ. ಒಂದು ಸರಸ ಕಾದಂಬರಿಯನ್ನು ಓದುವಷ್ಟು ಸುಲಭದಲ್ಲಿ ಇದನ್ನು ವಾಚಿಸ ಬಹುದಲ್ಲದೆ ಆನಂದ ತುಂದಿಲತೆಯನ್ನು ಹೊಂದಬಹುದು. ರಸಿಕರು ಉಳಿದೆರಡು ಭಾಗಗಳನ್ನು ಇದಿರು ನೋಡುತ್ತಿರುವರೆಂದು ಧಾರಾಳವಾಗಿ ಸೂಚಿಸಬಹುದು.

ಕರ್ನಾಟಕದ ಕಾಮಧೇನು

(೭ನೇ ಪುಟದಿಂದ)

ನ್ನೂ ಬೇಗನೇ ಕೈಗೊಳ್ಳಬೇಕೆಂದು ಕನ್ನಡಿಗರು ಒತ್ತಾಯಿಸುತಿದ್ದಾರೆ. ಎರಡನೆಯ ಹಂತದ ತೆ, ಈಗಿನ ಘಟಪ್ರಭಾ ಎಡ ದಂಡೆಯ ಕಾಲುವೆಯನ್ನು ಬಿಜಾಪುರ ಜಿಲ್ಲೆಯ ಬೀಳಗಿ ವರೆಗೆ ವಿಸ್ತರಿಸಬೇಕು. ಇದಕ್ಕೆ ೧೦ ೧೧ ಕೋಟಿ ರೂಪಾಯಿ ಬೇಕು. ಇದರಲ್ಲಿ ಅಣೆಕಟ್ಟಿಗಾಗಿಯೇ ಐದಾರು ಕೋಟಿ ರೂಪಾಯಿ ವೆಚ್ಚವಾದೀತು. ಈ ಎರಡನೆಯ ಹಂತದಿಂದ ಬಿಜಾಪುರ ಜಿಲ್ಲೆಯಲ್ಲಿ ೧೩೦೦೦೦ ಎಕ್ರೆ ಭೂಮಿಗೆ ನೀರು ದೊರೆತು, ಒಟ್ಟು ೭೩ ಮೈಲುದ್ದದ ಎಂಟು ಕಾಲುವೆಯಲ್ಲಿ ತಿಂಗಳು ನೀರು ಲಭ್ಯವಿರುತ್ತದೆ ಮೂರನೆಯ ಹಂತದಂತೆ ಇನ್ನೊಂದು ಅಣೆಕಟ್ಟು ಕಟ್ಟಿ ಬಲದಂಡೆಯ ಕಾಲುವೆ ತೋಡುವ ವಿಚಾರವಿದೆ ಈ ಕಾಲುವೆ ಬಿಜಾಪುರ ಜಿಲ್ಲೆಯ ಹುನಗುಂದದ ವರೆಗೂ ಹೋಗಿ ಘಟಪ್ರಭಾ ಮತ್ತು ಮಲಪ್ರಭಾ ನದಿಗಳ ನಡುವಿನ ಬಹುಭಾಗ ಭೂಮಿಗೆ ನೀರು ಸಿಗುತ್ತದೆ. ಘಟಪ್ರಭಾ ನದಿಗೆ ಒಂದೆಡೆ ಚಿಕ್ಕ ಅಣೆಕಟ್ಟನ್ನು ನಿರ್ಮಿಸಿ ಆ ನೀರನ್ನು ಉತ್ತರದಿಂದ ಕೆಳವೆ ಮಾರ್ಗದಲ್ಲಿ ಇಳಿಸಿ ೧೦,೦೦೦ ಕಿಲೋವಾಟ್ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲಿಕ್ಕೂ ಅವಕಾಶವಿದೆ. ಈ ನೀರು ಧೂಪದಾಳಕ್ಕೆ ಹರಿದು ಬರುವುದರಿಂದ ಅನುಪಯುಕ್ತವಾಗುವುದಿಲ್ಲ ಎಂಬ ಸಮಾಧಾನವಿದೆ.

ಅಮೃತಾಂಜನ

ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಕಲ್ಲು ಎದೆ ನೋವುಗಳಿಗೂ ಗಾಯಗಳು, ಚಾತುಕೊಳ್ಳುವುದು ಜೇಳುವಿಷಮುಂತಾದುವು, ಪಕ್ಷವಾತ. ನೊಡಿವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧಿ

ಪುಟ್ಟ ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

REDG.

ಅಮೃತಾಂಜನ ಲಿಮಿಟೆಡ್

ಮದರಾಸು ಬೊಂಬಾಯಿ ಮತ್ತು ಕಲ್ಕತ್ತ

ಸ್ವೀಕಾರ—ವಿಮರ್ಶೆ

ಜನನ ನಿಯಂತ್ರಣ—

ಲೇಖಕರು: ದ.ಕೃ. ಭಾರದ್ವಾಜ ಪ್ರಕಾಶಕರು: ಆನಂದ ಬ್ರದರ್ಸ್, ಕೆಂಪೆಗೌಡರಸ್ತೆ, ಬೆಂಗಳೂರು ೨. ಬೆಲೆ: ರೂ ೩-೦.

ಸಂತತಿ ನಿಯಮನ, ಕುಟುಂಬಯೋಜನೆ ಮುಂತಾದುವುಗಳನ್ನು ಬಲವಾಗಿ ಪ್ರತಿಪಾದಿಸುವ ಜನರನ್ನು ನಾವು ಇಂದು ಎಲ್ಲೆಲ್ಲಿಯೂ ಕಾಣುತ್ತೇವೆ. ಮಾನ್ಯ ಆರೋಗ್ಯ ಮಂತ್ರಿಗಳಿಂದ ಹಿಡಿದು ಮಹಿಳಾ ಸಮಾಜದ ಸದಸ್ಯರ ವರೆಗೆ ಎಲ್ಲರೂ ಕುಟುಂಬ ಯೋಜನೆಯು ಜನನ ನಿಯಂತ್ರಣವನ್ನು ಸಾಧಿಸತಕ್ಕದ್ದು ಎಂದು ಪ್ರಚಾರ ಮಾಡುತ್ತಿರುವ ಈ ಕಾಲದಲ್ಲಿ ಈ ಕುರಿತು ಶಾಸ್ತ್ರೀಯವಾದ ಮಾಹಿತಿಯನ್ನು ಕೊಡಬಲ್ಲ ಗ್ರಂಥ, ಬಹಳ ಉಪಕಾರ ಮಾಡುವುದೆಂಬಲ್ಲಿ ಸಂದೇಹವಿರಲಾರದು. ಸಾಮಾನ್ಯವಾಗಿ ಗರ್ಭನಿರೋಧ, ಸಂತತಿ ಸಂಯಮನದಂಥ ವಿಷಯಗಳ ಕುರಿತು ಬರೆಯುವಾಗ ಏಕಪಕ್ಷೀಯವಾದ ತೀರ್ಮಾನವನ್ನು ಕೊಡುವವರೇ ಹೆಚ್ಚು. ಈ ಸಂಗತಿಯಲ್ಲಿ ಅಡಕವಾಗಿರುವ ಎಲ್ಲ ಪ್ರಶ್ನೆಗಳನ್ನು ಸೂಕ್ಷ್ಮದೃಷ್ಟಿಯಿಂದ ವಿವೇಚಿಸಿ, ದಂಪತಿಗಳಿಗೆ ಮಾರ್ಗದರ್ಶನ ಮಾಡುವುದಕ್ಕೆ ಉದ್ಯುಕ್ತರಾದ ಲೇಖಕರು ವಿರಳ. ಭಾರದ್ವಾಜರು ತಮ್ಮ ಈ ಸಚಿತ್ರ ಗ್ರಂಥದಲ್ಲಿ ಯಾವುದೊಂದು ಪಕ್ಷದ ಪುರಸ್ಕರ್ತರೆನಿಸಿಕೊಳ್ಳುವಂತೆ ವಾದವನ್ನು ಮಾಡದೆ—ಪ್ರತಿಯೊಂದೂ ಸಂಗತಿಯ ಒಳಿತು ಕೆಡುಕುಗಳನ್ನು ನಿರ್ವಿಕಾರ ಚಿತ್ತದಿಂದ ಪರಿಶೀಲಿಸಿರುವರು. ಸ್ವತಃ ಅನುಭವಿಗಳಾದ ವೈದ್ಯರಾಗಿದ್ದುದರಿಂದ ಅವರ ಲೇಖನಿ ಇಂಥ ಮಹತ್ವದ ವಿಷಯದ ಕುರಿತು ಬರೆಯಲು ಅಧಿಕಾರ ಸಂಪನ್ನವಾಗಿದೆ. ಅನುಭವ ಹಾಗೂ ವಿವೇಕಗಳ ಜೊತೆಗೆ ಗಹನವಾದ ಅಭ್ಯಾಸವನ್ನು ಅವರು ಕೈಗೊಂಡಿರುವರೆಂದು ಈ ಪುಸ್ತಕ ಓದಿದಲ್ಲಿ ಮನವರಿಕೆಯಾಗುತ್ತದೆ. ಜನನ ನಿಯಂತ್ರಣದ ಬಗ್ಗೆ ನಮ್ಮಲ್ಲಿ ವಾಡಿಕೆಯಲ್ಲಿರುವ ಪುರುಷ ಹಾಗೂ ಸ್ತ್ರೀಯರಿಗೆ ಪ್ರತ್ಯ ಪ್ರತ್ಯೇಕವಾದ ಕೃತ್ರಿಮ ಸಾಧನೆಗಳ ಪರಿಚಯ ಮಾಡಿಸಿ ಅವುಗಳ ಲಾಭ ಹಾನಿಗಳನ್ನು ಭಾರದ್ವಾಜರು ಕೂಲಂಕುಷವಾಗಿ ವಿವೇಚಿಸಿರುವರು. ದಂಪತಿಗಳಿಗೆ ಜನನ ನಿಯಂತ್ರಣ ಸಂಬಂಧದಲ್ಲಿ ಆಗತ್ಯವಾಗಿ ಇರಲೇಬೇಕಾದ ಹಾಗು ಇರತಕ್ಕುದಾದ ಲೈಂಗಿಕ ಶರೀರ ಮತ್ತು ಕ್ರಿಯೆಗಳ ವಿಜ್ಞಾನದ ಪರಿಚಯವನ್ನು ಗರ್ಭನಿರೋಧದ ಕುರಿತು ಗಾಂಧೀಜೀಯವರು ತಳೆದಿದ್ದ ವಿಚಾರವನ್ನೂ ಮೊದಲಿಗೆ ಕೊಟ್ಟಿರುವ ೨ ಜನನ ನಿಯಂತ್ರಣಕ್ಕಾಗಿ ಕೃತ್ರಿಮ ಸಾಧನೆಗಳಿಗಿಂತಲೂ ನೈಸರ್ಗಿಕ ವಿಧಾನವನ್ನು ಅನುಸರಿಸುವುದೇ ಶ್ರೇಯಸ್ಕರವೆಂದು ಹೇಳುವ ಜನರೂ ಇರುವುದರಿಂದ ಈ ವಿಧಾನದ ಪರಿಶೀಲನೆಯನ್ನೂ ಲೇಖಕರು ಮಾಡಿರುವರು. ತಮ್ಮ ಹಿನ್ನುಡಿ ಹಾಗು ಹಿತವಚನದಲ್ಲಿ ಭಾರದ್ವಾಜರು ಸಾಮಾನ್ಯವಾಗಿ ಈ ತತ್ವವನ್ನೆ ಎತ್ತಿ ಹಿಡಿದಿರುವುದು ವ್ಯಕ್ತವಾಗುತ್ತದೆ. "ನೈಸರ್ಗಿಕ ವಿಧಾನದಲ್ಲಿ ನೀವು ಬೇಕಾದಷ್ಟು ಮಕ್ಕಳನ್ನು ಪಡೆಯಲೂ ಬಹುದು; ಪಡೆಯದೆಯೂ ನಿಯಂತ್ರಣ ಮಾಡಬಹುದು ಆ ವಿಧಾನದಿಂದ ಆಪತ್ತು ನಿಮ್ಮ ಭೃತ್ಯನಂತಾಗುವುದು ಅದನ್ನನುಸರಿಸುವುದರಲ್ಲಿ ಯಾವ ಅಪಾಯವೂ ಇಲ್ಲ" ಎಂಬ ಅವರ ಅಭಿಪ್ರಾಯ ಮನ್ನಣೆಗೆ ಯೋಗ್ಯವಿದೆ ಕನ್ನಡ ನಾಡಿನ ನೂತನ ವಿವಾಹಿತ ದಂಪತಿಗಳಿಗೂ ವಧೂವರರಿಗೂ ಆರ್ಪಿತವಾದ ಈ ಗ್ರಂಥ ಜನಾದರಣೀಯವಾಗುವುದೆಂದು ಆಶಿಸುತ್ತೇವೆ, ಕನ್ನಡದಲ್ಲಿ ಇದರಷ್ಟು ವಿಷಯ ವಿಸ್ತಾರದಿಂದ ಕೂಡಿದ ಶಾಸ್ತ್ರೀಯ ಗ್ರಂಥ ಜನನ ನಿಯಂತ್ರಣದ ಸಂಬಂಧದಲ್ಲಿ ಬೇರೆ ಇಲ್ಲ

ವಿಹಗಂಮ ನೋಟ

● "ಶ್ರೀ ಬಿ. ವೆಂಕಟಾಚಾರ್ಯರ ಸಂಕ್ಷೇಪ ಜೀವನ ಚರಿತ್ರೆ"—ಎಂಬ ಪುಟ್ಟ ಪುಸ್ತಕವನ್ನು ಶ್ರೀಮಾನ್ ಬಿ ಗುರುರಾಜಾಚಾರ್ಯರು ಬರೆದು ಕನ್ನಡನಾಡಿನಲ್ಲಿ ಉಜ್ವಲ ಭಾಷಾಭಿಮಾನದಿಂದ ಶ್ರಮಿಸಿ ಸಾಹಿತ್ಯದ ಬೆಳವಣಿಗೆಗೆ ನೆರವಾದ ಹಿರಿಯರೊಬ್ಬರ ಪರಿಚಯವನ್ನು ಕನ್ನಡಿಗರಿಗೆ ಮಾಡಿಸಿಕೊಟ್ಟಿರುವರು. ಬಂಗಾಳಿ ಭಾಷಾ ಪ್ರಕಟಣೆಗಳಿಂದ ಪ್ರೇರಣೆಯನ್ನು ಪಡೆದು. ಶ್ರೀಮಾನ್ ಬಿ ವೆಂಕಟಾಚಾರ್ಯರು ಒಂಬತ್ತಕ್ಕಿಂತಲೂ ಹೆಚ್ಚು ಸರಸ ಸುಂದರ ಗ್ರಂಥಗಳನ್ನು ಕನ್ನಡಕ್ಕೆ ಒದಗಿಸಿ ಕೊಟ್ಟರು. ಆದಿ ಕನ್ನಡ ಕಾದಂಬರಿ ಕಾರರಲ್ಲಿ ಬಿ. ವೆಂಕಟಾಚಾರ್ಯರೂ ಗಳಗನಾಥರೂ ಅಗ್ರಗಣ್ಯರೆಂದೂ ಈಗಿನ ಕಾದಂಬರೀ ಲೇಖಕರಿಗೆ ಅವರಿಂದಲೇ ಸ್ಫೂರ್ತಿ ಪ್ರದಾನವಾಯಿತೆಂದೂ ಹೇಳಬಹುದು ವೆಂಕಟಾಚಾರ್ಯರ ಜೀವನದ ಸ್ವಾರಸ್ಯ ಘಟನೆಗಳಿಂದ ಕೂಡಿದ ಈ ಸಣ್ಣ ಪುಸ್ತಕವನ್ನು ಓದಿ, ಸಂತೋಷವಾಗುತ್ತದೆ.

IN THE COURT OF THE SUBORDINATE JUDGE SOUTH KANARA

O. S. No 125/1952

Between --Kavamma and others —Plaintiffs
Rudramma and others--and- —Defendants

To

1 Kamala 3rd deft. d/o Rudramma
2 Pushpa 6th deft d/o Kamala
3 Satyapala 7th deft. minor by guardian father Krishnappa
4. Prakashini 8th Deft } minors by guardian
5. Prasanna 9th Deft } grand father Krishnappa
6. Susheela 18th deft. d/o Rudramma
7 Prakasha 19th D
8. Prapulla 20th D
9. Praboth 21 st D } Minors by guardian mother 18th defendant
10 Pramodini 22nd
11 Pramila 23rd
12 Prakashini 24th

All reside in Puthubrabhu lane Mangalore Town

Please take notice that the suit filed by the plaintiffs stands posted to 26--3 1953 for final notice to respondents (defendant) mentioned above and if the defendants above named have any objection they may appear before the abovecourt on 26--3--53 at 11A M and file their statements. On their failure to appear before the court on the said date the same will be heard in their absence

By Order.

Dated 23 2 1953 } P. Shridhar Rao
Mangalore } ADVOCATE for Plaintiffs

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ

ಫೋನು ನಂಬ್ರ 66

ಜಪಾನಿನಲ್ಲಿ ಭತ್ತದ ವ್ಯವಸಾಯ

(೨ನೇ ಪುಟದಿಂದ)

೧) ಸುಧಾರಿತ ಬೀಜಗಳ ಉಪಯೋಗ

೨) ಫಲವರ್ಧಕಗಳ ಧಾರಾಳವಾದ ಬಳಕೆ

೩) ಭತ್ತದ ಬೆಳೆಗೆ ಧಾರಾಳವಾದ ನೀರಿನ ಪೂರೈಕೆ

೪) ರೋಗಗಳು ಹಬ್ಬದಂತೆ ನಿಯಂತ್ರಿಸುವ ಉಪಾಯಗಳು.

೫) ರೈತರಿಗೆ ಯೋಗ್ಯವಾದ ಸಲಹೆ ಸೂಚನೆಗಳನ್ನಿತ್ತು ಸಹಕರಿಸುವುದಕ್ಕೆ ಸದಾ ಪ್ರಯತ್ನಿಸುವ ಅಧಿಕ ಸಂಖ್ಯೆಯ ತಜ್ಞರ ಗುಂಪು.

೬) ಅನೇಕ ಸಂಖ್ಯೆಯ ವ್ಯವಸಾಯ ಸಹಕಾರ ಸಂಘಗಳು

೭) ಜನರಲ್ಲಿರುವ ಅಧಿಕ ಪ್ರಮಾಣದ ಸಾಕ್ಷರತೆ

೮) ಪ್ರತಿಯೊಬ್ಬ ಬೇಸಾಯಗಾರನೂ ತನ್ನ ಹೊಲವನ್ನು ಹೂತೋಟವೆಂದೇ ತಿಳಿದು, ಪ್ರತಿಯೊಂದೂ ಗಿಡದ ಆರೈಕೆಯನ್ನು ನೋಡುವ ಪದ್ಧತಿ.

—ಹೀಗೆ ಜಪಾನಿನ ಪ್ರಗತಿಯ ಚಿತ್ರವನ್ನು ಕೊಟ್ಟಬಳಿಕ, ಭಾರತದಲ್ಲಿ ಈ ಪದ್ಧತಿಯನ್ನು ಎಷ್ಟರಮಟ್ಟಿಗೆ ಉಪಯೋಗಿಸಬಹುದೆಂದು ವಿಚಾರಿಸುವುದು ಯೋಗ್ಯ. ಸುಧಾರಿತ ಬೀಜಗಳ ಮಟ್ಟಿಗೆ ಭಾರತವು ವಿಶೇಷ ಪ್ರಗತಿಯನ್ನು ತೋರಿಸಿದೆ. ಆದರೂ ಅವುಗಳ ಉಪಯೋಗವನ್ನು ಪರೀಕ್ಷಿಸಿ ಸಿದ್ಧಗೊಳಿಸಿದ ಪ್ರಯೋಗಗಳು ಎಲ್ಲ ರಾಜ್ಯಗಳಲ್ಲಿಯೂ ಒಂದೇತೆರನಾದ ಪ್ರಗತಿಯನ್ನು ಹೊಂದಿಲ್ಲ ಆಯಾಯ ಪ್ರದೇಶಗಳಿಗೆ ಒಗ್ಗುವ ಮಾದರಿಯನ್ನು ನಿಷ್ಕರ್ಷಿಸಿ ಹಂಚುವುದಕ್ಕೆ ಪ್ರಾಶಸ್ತ್ಯವನ್ನು ಕೊಟ್ಟು ಪರಿಶೀಲನೆ ನಡೆಸುವುದು ತೀರಾ ಅಗತ್ಯ.

— ೫ —

ತಜ್ಞರಮಟ್ಟಿಗೆ ಮಾತ್ರ ನಮ್ಮ ದೇಶ ಬಹಳ ಹಿಂದುಳಿದಿದೆ. ವ್ಯವಸಾಯದಲ್ಲಿ ನುರಿತ ತಜ್ಞರ ಅಭಾವವನ್ನು ಕೆಲವು ದಶಕಗಳವರೆಗೆ ಅನುಭವಿಸ ಬೇಕಾಗುವುದೋ ಏನೋ. ಹಾಗೆಯೇ ಸಂಶೋಧನಾಲಯಗಳೂ ಪ್ರಾಯೋಗಿಕ ಕೇಂದ್ರಗಳೂ ನಮ್ಮಲ್ಲಿ ಬಹಳ ಕಡಿಮೆ ಇವೆ. ಸುಧಾರಿತ ಬೀಜಗಳ ಜಾತಿಯನ್ನು ವೃದ್ಧಿಗೊಳಿಸುವಲ್ಲಿ ಮತ್ತು ಇವನ್ನು ರೈತರಿಗೆ ಒದಗಿಸಿಕೊಡುವಲ್ಲಿ ಈಚೆಗಿನ ವರ್ಷಗಳು ಹೆಚ್ಚು ಅಭಿವೃದ್ಧಿಯನ್ನು ತೋರಿಸಿದರೂ ಜಪಾನಿಗೆ ಹೊಯ್ ಕೈಯಾಗಿ ನಿಲ್ಲುವ ಸಾಮರ್ಥ್ಯ ನಮಗೆ ಇನ್ನು ಕೆಲವು ವರ್ಷಗಳ ವರೆಗೆ ಬರಲಾರದು. ಪ್ರತಿಯೊಂದೂ ಹಳ್ಳಿಯು ತನ್ನ ಆವಶ್ಯಕತೆಗೆತಕ್ಕಂತೆ ಬೀಜದ ಪೂರೈಕೆಯನ್ನು ಮಾಡಿಕೊಡುವ ವ್ಯವಸಾಯಿಕ ಸಹಕಾರಿ ಸಂಘಗಳನ್ನು ಪಡೆಯುವುದು ಬಹುದೂರದ ಮಾತು. ಆದರೂ ಜಪಾನು ವ್ಯವಸಾಯ ಕ್ಷೇತ್ರದಲ್ಲಿ ಇಂದು ಅದ್ಭುತ ಪ್ರಗತಿಯನ್ನು ಸ್ಥಾಪಿಸಿದ್ದರೆ ಅದು ಇಂಥ ಸಣ್ಣ ಪುಟ್ಟ ಸಹಕಾರೀ ಸಂಘಗಳ ನೆರವಿನಿಂದಲೇ ಎಂಬುದನ್ನು ಮರೆಯದೆ ನಾವು ಈ ದಿಸೆಯಲ್ಲಿ ಪ್ರಯತ್ನಿಸಬೇಕು.

ಇನ್ನು ಫಲವರ್ಧಕ ಗೊಬ್ಬರಗಳ ಕುರಿತು ಹೇಳುವುದಾದರೆ ಮದ್ರಾಸಿನಲ್ಲಿ ನಡೆಸಿದ ಪ್ರಯೋಗಗಳು ಸುಧಾರಿತಬೀಜದ ಉಪಯೋಗದ ಪೂರ್ಣ ಪ್ರಯೋಜನ ಪಡೆಯಲು ಫಲವರ್ಧಕ ಗೊಬ್ಬರಗಳನ್ನು ಉಪಯೋಗಿಸಬೇಕೆಂದು ಸಿದ್ಧಗೊಳಿಸಿವೆ. ನಮ್ಮ ರೈತರು ಉತ್ಪಾದಿಸುವ ದವಸಧಾನ್ಯಗಳಿಗೆ ಕಡಿಮೆ ಬೆಲೆಯು ಪೇಟೆಯಲ್ಲಿ ದೊರೆಯುವುದರಿಂದ ಫಲವರ್ಧಕ ಗೊಬ್ಬರಗಳನ್ನು ಹೆಚ್ಚು ದುಡ್ಡುಕೊಟ್ಟು ಪಡೆದು ಉಪಯೋಗಿಸುವಲ್ಲಿ ತಡೆಯಾಗಿದೆ ಎನ್ನಬಹುದು. ಆದರೂ ಈಚೆಗೆ ಕೇಂದ್ರ ವ್ಯವಸಾಯ ಸಚಿವರು ಇದಕ್ಕೊಂದು ಸುಲಭದ ಪರಿಹಾರ ಮಾರ್ಗವನ್ನು ಸೂಚಿಸಿರುವರು. ಒಂದು ಮಣ ಫಲವರ್ಧಕ ಗೊಬ್ಬರವನ್ನು ಸರಕಾರದಿಂದ ಪಡೆದುಕೊಂಡನಂತರ ಇದಕ್ಕೆ ಪ್ರತಿಯಾಗಿ ಒಂದು ಮಣ ಅಕ್ಕಿಯನ್ನು ಕೊಡಬಹುದು ಎಂದಿರುವರು. ಈ ಕಾರಣದಿಂದ ನಮ್ಮ ರೈತರು ಹೆಚ್ಚುಹೆಚ್ಚು ಫಲವರ್ಧಕಗಳನ್ನು ಉಪಯೋಗಿಸಲು ನೆರವು ದೊರೆತಿದೆ.

— ೬ —

ಸಾಧಾರಣವಾಗಿ ಹಿಂಡಿ, ಎಲುಬು ಹುಡಿ ಕಂಪೋಸ್ಟು, ಹಸುರೆಲೆ ಮುಂತಾದ ಗೊಬ್ಬರಗಳನ್ನು ಬಳಸುವಲ್ಲಿ ನಾವು ಎಷ್ಟು ಮಾತ್ರಕ್ಕೂ ಹಿಂದುಳಿಯಬಾರದು. ಹಸುರೆಲೆ ಗೊಬ್ಬರದ ಮೂಲಕ ಭತ್ತದ ವ್ಯವಸಾಯಕ್ಕೆ ಯೋಗ್ಯವಾಗುವ ರೀತಿ ಭೂಸಾರವನ್ನು ಹೆಚ್ಚಿಸುವುದು ತೀರಾ ಸರಳ ಹಾಗೂ ಸುಲಭಕರ್ಚಿನ ಸಂಗತಿಯೆಂಬುದನ್ನು ನಾವು ಮರೆಯಲೇ ಕೂಡದು. ನಮ್ಮ ಪರಿಸ್ಥಿತಿಗನ್ವಯಿಸಿ ಹೇಳುವುದಾದಲ್ಲಿ ಧಾರಾಳವಾಗಿ ಹಸುರೆಲೆ ಗೊಬ್ಬರವನ್ನೂ ಕಂಪೋಸ್ಟನ್ನೂ ಉಪಯೋಗಿಸಿ, ಸ್ವಲ್ಪ ಮಟ್ಟಿಗೆ ಫಲವರ್ಧಕಗಳನ್ನು ಉಪಯೋಗಿಸಿದರೆ ಚೆನ್ನಾದ ಬೆಳೆ ತೆಗೆಯ ಬಹುದು.

ನಿಜ ಹೇಳಬೇಕೆಂದರೆ-ಫಲವರ್ಧಕಗಳ ಉಪಯೋಗಕ್ಕೂ ನಮ್ಮಲ್ಲಿ ಒಂದು ಮಿತಿ ಇದೆ. ನಮ್ಮ ಭೂಗುಣವನ್ನು ಹೊಂದಿಕೊಂಡು ನಡೆಸಿದ ಪ್ರಯೋಗಗಳಿಗನುಸಾರವಾಗಿ, ನಾವು "ಅಧಿಕ ಆಹಾರ ಬೆಳೆಯಿಸಿ" ಎಂಬ ಚಳುವಳಿಯಲ್ಲಿ ಉಪಯೋಗಿಸುವ ಫಲವರ್ಧಕಗಳ ಮೂರು-ನಾಲ್ಕು ಪಟ್ಟು ಮಾತ್ರ ಜಪಾನಿನಲ್ಲಿ ಬಳಸುತ್ತಾರೆ. ನಾವು ಹೆಚ್ಚೆಂದರೆ ಈಗಿನ ಪ್ರಮಾಣವನ್ನು—ಅದೂ ಮಿತವಾದ ಕ್ಷೇತ್ರದಲ್ಲಿ—ಇಮ್ಮಡಿಯಾಗಿಸಬಹುದು, ಹೊರತು, ಅದಕ್ಕೂ ಹೆಚ್ಚಲ್ಲ. ಆದುದರಿಂದ ಫಲವರ್ಧಕಗಳನ್ನು ಅತಿರೇಕವಾಗಿ ಬಳಸುವ ಮೋಹಕ್ಕೆ ನಾವು ಒಳಗಾಗುವ ಅಗತ್ಯವಿಲ್ಲ ಸ್ವಲ್ಪಮಟ್ಟಿಗೆ ಉಪಯೋಗಿಸಿದರೂ, ಯಥೇಷ್ಟವಾಯಿತು.

ಕಂಪೋಸ್ಟು ಅಥವಾ ಮಿಶ್ರ ಗೊಬ್ಬರಗಳು ಜಪಾನಿನಲ್ಲಿ ತುಂಬ ಜನಾದರಣೀಯವಾಗಿವೆ. ನಾವು ಇವುಗಳನ್ನು ಬಳಸಿಕೊಂಡರೆ, ಅದರಿಂದ ಲಾಭವಿದೆ. ಹಾಗೆಂದು ಪ್ರಕೃತ ಈ ವಿಚಾರವನ್ನು ದುರ್ಲಕ್ಷಿಸುವ ರೈತರೇ ನಮ್ಮಲ್ಲಿ ಹೆಚ್ಚಿಕೊಂಡಿರುವರು. ಅವರಿಗೆ ಯೋಗ್ಯ ಮಾರ್ಗದರ್ಶನವನ್ನು ಕೊಟ್ಟು ಹಾಳಾಗುವ ಅಮೂಲ್ಯ ವಸ್ತುಗಳ ಸದುಪಯೋಗವಾಗುವಂತೆ ಮಾಡಬಹುದು.

— ೭ —

ಜಪಾನಿನಲ್ಲಿ ನೇಜಿಯನ್ನು ನೆಟ್ಟು ಭತ್ತದ ವ್ಯವಸಾಯ ಮಾಡುವ ಕ್ರಮವೇ ಕಂಡು ಬರುತ್ತದೆ. ನಮ್ಮಲ್ಲಿ ಕೂಡ ಇದು ಜ್ಯಾರಿಯಲ್ಲಿದ್ದರೂ. ನೇರಾಗಿ ಗದ್ದೆಯಲ್ಲಿಯೇ ಬೀಜ ಬಿತ್ತಿ ಕೊಯ್ಯುವ ಪರಿಪಾಟ ಜಪಾನಿನಲ್ಲಿರುವುದಕ್ಕಿಂತ ಅಧಿಕವಿದೆ. ಕೆಲವೆಡೆ ನಿಜವಾಗಿ ನೇಜಿಯನ್ನು ನೆಟ್ಟು ಬೆಳೆಸಬಹುದಾದ ಭೂಮಿಯಿದ್ದರೂ, ಅಲ್ಲಿ ಬೀಜ ಬಿತ್ತಿಯೇ ಭತ್ತದ ಕೃಷಿ ಮಾಡುವ ಪದ್ಧತಿಗೆ ರೈತರು ಅಂಟಿಕೊಂಡಿರುವರು. ನೇಜಿಯನ್ನು ಕಿತ್ತುತಂದು ನೆಡುವುದರಿಂದ ಕಳೆಯ ಉಪದ್ರವ ಕಡಿಮೆಯಾಗುತ್ತದೆ; ಮತ್ತು ಉತ್ಪಾದನೆಯೂ ಹೆಚ್ಚುತ್ತದೆ.

ಇನ್ನು ಕೊನೆಯದಾಗಿ–ಜಪಾನಿನಲ್ಲಿ ಜನರು ಹೆಚ್ಚು ಅಕ್ಷರಸ್ಥರಾಗಿರುವುದರಿಂದ ಸಂಶೋಧನೆಗಳ ಫಲವನ್ನು ರೈತರು ಅರಿತುಕೊಳ್ಳುವಷ್ಟು ಸಾಮರ್ಥ್ಯ ಪಡೆದಿರುವರು. ಕೃಷಿಯಲ್ಲಿ ತಜ್ಞರಾದವರು ಕೂಡ ಅತ್ಯಧಿಕ ಸಂಖ್ಯೆಯಲ್ಲಿರುವುದರಿಂದ ಹಳ್ಳಿ ಹಳ್ಳಿಗೂ ಅವರು ಸುಧಾರಿತಕ್ರಮಗಳ ಪ್ರಚಾರವನ್ನು ಕೈಗೊಂಡು ತಿರುಗಲು ಅವಕಾಶವಿದೆ. ನಮ್ಮಲ್ಲಿ ಪ್ರತಿಯೊಂದು ತಾಲೂಕಿಗೂ ಎಗ್ರಿಕಲ್ಚರಲ್ ಡೆಮೊನ್‌ಸ್ಟ್ರೇಟರರು ಇದ್ದರೂ-ರೈತರಿಗೂ ಅವರಿಗೂ ನಿಕಟಸಂಬಂಧ ಇನ್ನೂ ಏರ್ಪಟ್ಟಿಲ್ಲ ರೈತರೊಡನೆ ಬೆರೆತು ಅವರಿಗೆ ಕೃಷಿಯ ... ನ್ನು ತಿಳಿಸಿ, ಪ್ರೋತ್ಸಾಹಿಸುವ ವಿಚಾರವನ್ನು ಮಾಡದಷ್ಟು ತಾವು ಅನ್ಯಕಾರ್ಯಗಳಲ್ಲಿ ಮಗ್ನರು! ಇಂಥ ಪರಿಸ್ಥಿತಿಯು ಬೇಗನೇ ಸುಧಾರಣೆ ಹೊಂದೀತೆಂದು ನಾವು ಆಶೆಯನ್ನು ಕಟ್ಟಿಕೊಳ್ಳುವಷ್ಟು ಚೆಲೋ ವಾತಾವರಣ ಇರುವುದಿಲ್ಲ. ಆದಾಗ್ಯೂ ಪರಿಶ್ರಮದಿಂದಲೂ ಶ್ರದ್ಧೆಯಿಂದಲೂ ರಾಷ್ಟ್ರವು ಉನ್ನತಿಯನ್ನು ಹೊಂದಬೇಕೆಂಬ ಪ್ರಾಮಾಣಿಕವಾದ ಇಚ್ಛೆಯಿಂದಲೂ ದುಡಿದು, ರೈತರಲ್ಲಿ ಜ್ಞಾನದ ಜ್ಯೋತಿಯನ್ನು ಬೆಳಗಿಸುವುದು ಅಗತ್ಯವೆಂದು ಹೇಳಲೇಬೇಕಾಗಿದೆ.

ನಮ್ಮ ಮುಖಂಡರು ಆಹಾರದ ಅಭಾವದ ಕುರಿತು ಅಧಿಕ ಆಹಾರ ಬೆಳೆಯುವ ಚಳುವಳಿಯ ಕುರಿತು; ಅನ್ನದ ಮಟ್ಟಿಗೆ ಸ್ವಾವಲಂಬನವೆಂಬ ಧ್ಯೇಯದ ಕುರಿತು-ಭಾಷಣಗಳನ್ನು ಕೊಟ್ಟು ಜನರಲ್ಲಿ ಜಾಗ್ರತಿಯನ್ನು ಹುಟ್ಟಿಸಲು ಪ್ರಯತ್ನಿಸುತ್ತಾರೆ. ಏನೂ ತಿಳಿಯದ ಜನರಿಗೆ ಇಂಥ ಬೋಧನೆ ... ಪ್ರಯೋಜನವಾಗದೆ ... ತೀವ್ರ ... ದು ... ಅದರ ... ಪ್ರಯೋಜನವು ಈ ಸಲಹೆ ಸೂಚನೆಗಳನ್ನು ಪ್ರತ್ಯಕ್ಷ ಕಾರ್ಯದಲ್ಲಿ ಪ್ರಯೋಗಿಸಿದಾಗಲೇ ದೊರೆಯುವುದು.

ವಿವಿಧ ಪಾತ್ರೆಗಳು



ಧಯಾವತ್ತೂ ವಿಧ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗುಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂಆಗಿಯೂ, ಚಿಲ್ಲರೆಯಾಯೂ ಸಿಗುತ್ತವೆ.

ಕಲ್ಯಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

ರಕ್ಷಣೆಗೂ ಉಳಿತಾಯ ವ್ಯವಸ್ಥೆಗೂ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್.

ಸ್ಥಾಪನೆ: 1934.   ಪ್ರಧಾನ ಕಚೇರಿ: ಮದ್ರಾಸು.

66½ ಲಕ್ಷಕ್ಕೂ ಮಿಕ್ಕಿದ ಹೊಸ ವ್ಯವಹಾರ, **15** ಲಕ್ಷಕ್ಕೂ ಮಿಕ್ಕಿದ ಪ್ರೀಮಿಯಮ್ ಉತ್ಪತ್ತಿ. **4**½ ಲಕ್ಷಕ್ಕೂ ಮಿಕ್ಕಿದ ... ನಿಧಿ. **10**½ ಲಕ್ಷಕ್ಕೂ ... ಮೂಲಧನಗಳು. ... **3** ಕೋಟಿಯನ್ನು ಊರ್ಜಿತದಲ್ಲಿರುವ ಪಾಲಿಸಿಗಳು.

ಪ್ರಗತಿಪರವಾದ ಈ ಕಂಪೆನಿಯಲ್ಲಿ ಒಂದು ಪೋಲಿಸಿ ಇರುವುದು ಉತ್ತಮ ದೇಶಸೇವೆ. ಅಂತೆಯೇ ಇದರ ಏಜನ್ಸಿ ಇರುವುದು ಚಲೋ ವ್ಯವಹಾರ ಸಾಧನ.

ಉತ್ಸಾಹಿ, ಜನಾನುರಾಗಿ, ಸಮರ್ಥ ಸ್ತ್ರೀ ಪುರುಷರಿಂದ ಕಂಪೆನಿ ಪ್ರಾತಿನಿಧ್ಯ ಬಗ್ಗೆ ಅರ್ಜಿಗಳು ಸ್ವಾಗತಾರ್ಹವು. ದಯಮಾಡಿ ಬರೆಯಿರಿ:-

ಜಿ. ಆರ್. ನಾಯ್ಕ, ಬ್ರಾಂಚ್ ಮೆನೇಜರ್,
ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು [ದ. ಕ.]

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ

ನವಜೀವಾತು
ಎಂಬ
ಸೂತಿಕಾರಸಾಯನ

ಬಾಣಂತಿಯರ ಸಲುವಾಗಿಯೇ ದೇಹ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಮಹಾಗುಣಪ್ರದ ರಸಾಯನ



ಹೆಚ್ಚಿನ ಮಾಹಿತಿಗೆ— ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ. ಎಂ.
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ವಾಕಿಸ್ಟರು:— ಡಾ। ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು.

ವಾರದ ಒಳಿತು ಕೆಡುಕುಗಳು

ತಾ 5-3-53ರಿಂದ ತಾ. 11-3-53ರ ವರೆಗೆ.

ಮೇಷ— ವ್ಯಾವಹಾರಿಕ ದೃಷ್ಟಿಯಿಂದ ಈ ವಾರವು ನಿಮಗೆ ಕೊಂಚ ಅನಿಷ್ಟಕಾರಿ ಎನ್ನಬಹುದು. ಪ್ರತಿ ಒಂದು ಉದ್ಯಮ ವ್ಯವಹಾರಗಳಿಗೆ ಅಡೆತಡೆಗಳು ಹೆಚ್ಚುವುವು, ಶಕ್ತಿ ಸಾಹಸಗಳು ಕುಗ್ಗಲಿವೆ. ವಿರೋಧಿ ಜನರಿಂದ ಕೆಲವೊಮ್ಮೆ ಪರಾಭವ ಉಂಟಾದೀತು ದುಡಿಮೆಯ ಬಹ್ವಂಶವು ನೀಚ ಜನತೆಯ ಕೈಸೇರುವದು. ಆದರೂ ಸ್ವಂತ ಉಪಭೋಗಗಳಿಗೆ ತೊಂದರೆಯುಂಟಾಗದು. ತಾ. 5, 6, 11, ಈ ದಿನಗಳಲ್ಲಿ ಸ್ತ್ರೀ ಧನವಾಹನಾದಿಗಳ ಲಾಭವಾದೀತು.

ವೃಷಭ— ವ್ಯಯಗತರಾದ ಕುಜಗುರುಗಳು ತನುಪೀಡೆ ಮನೋರೋಗ ಸವಾಪರ್ಯಟನಾದಿಗಳನ್ನು ತಂದೊಡ್ಡಲಿರುವರು ಆದರೂ ಶಕ್ತಿ ಸಾಹಸಗಳಲ್ಲಿ ಅದ್ವಿತೀಯರಾದ ನೀವು ಆದಾವುದಕ್ಕೂ ಹೆದರದೆ ಧೈರ್ಯದಿಂದ ಮುನ್ನುಗ್ಗುವಿರಿ. ನಿಮ್ಮ ಬಯಕೆಯು ಯಾವೊಂದು ವಿಘ್ನಗಳಿಲ್ಲದೆ ಈಡೇರುವದು ಬಂಧು ಜನರ ಸಹಕಾರವು ಸನ್ನಿತ್ರರ ಬೆಂಬಲವು ಸಾಕಷ್ಟಿರುವುದರಿಂದ ವಾರಾದಿಯ ನಾಲ್ಕು ದಿನಗಳಲ್ಲಿ ನಿಮ್ಮ ಸಂಕಲ್ಪಗಳು ಕಾರ್ಯರೂಪಕ್ಕೆ ಬರಲಿವೆ.

ಮಿಥುನ— ಇಂದಿನ ಗ್ರಹಮಾನವು ಅತೀವ ಪ್ರಶಸ್ತವಿದೆ. ನಿಮ್ಮ ಸಕಲ ಅಭಿಷ್ಟಗಳು ಇಂದು ನೆರವೇರುವುದರಲ್ಲಿ ಸಂದೇಹವಿಲ್ಲವು. ನಿಮ್ಮ ಪ್ರಯತ್ನಕ್ಕಿಂತ ದ್ವಿಗುಣವಾದ ಫಲವನ್ನು ಹೊಂದಲಿರುವಿರಿ. ಸಮಾಜದಲ್ಲಿ ಸ್ಥಾನಮಾನಗಳನ್ನು ರಾಜಕೀಯ ರಂಗದಲ್ಲಿ ವಿಜಯವನ್ನು ಪಡೆದು ಸುಖದಿಂದ ಕಾಲಕಳೆವಿರಿ. ಕೆಲವೊಂದು ಸಾಂಸಾರಿಕ ತಾಪತ್ರಯಗಳು ಕಾಣಿಸಿಕೊಂಡರೂ 7ರಿಂದ 10ರ ವರೆಗಿನ ದಿನಗಳಲ್ಲಿ ಅನೇಕ ಸುಖಭೋಗಲಾಭಗಳನ್ನು ಹೊಂದಲಿರುವಿರಿ.

ಕರ್ಕಟ— ಇತ್ತೀಚೆಗಂತೂ ದುರ್ದೈವವು ನಿಮ್ಮನ್ನು ಬಲವಾಗಿ ಪೀಡಿಸುತ್ತಿರುವುದು. ಮುಟ್ಟಿದ್ದು ಮಸಿಯೆಂಬಂತೆ ಯಾವ ಉದ್ಯಮವನ್ನು ಕೈಗೊಂಡರೂ ಕಷ್ಟನಷ್ಟಗಳೇ ಹೆಚ್ಚುವವು ಆತ್ಮೀಯರ ವಿರೋಧಗಳು ಜನರ ಮಾನಸ್ತಾಪಗಳಿಗೆ ಸಿಲುಕುವಿರಿ. ಆದಾಯವು ಅತ್ಯಲ್ಪವಾಗಿದ್ದು ಬಹುತೆರನಾದ ಖರ್ಚುವೆಚ್ಚಗಳು ಪ್ರಾಪ್ತವಾಗಿ ಮುಂದಾಗದೆಯಿಂದ ದಿನಗಳೆಯುವುದು ಅಸಾಧ್ಯವಾದೀತು. ಆದಕಾರಣ ನಿಮ್ಮ ಶಕ್ತಿ ಯುಕ್ತಿ ಧೈರ್ಯ ಸಾಹಸಗಳು ವಾಯುಪಾಗಿ ಮನಸ್ಸು ಪೆವರಿದ ಯಟ್ಲೆಯಂತೆ ಅತೀವ ಚಂಚಲವಾಗಲಿವೆ. ವಾರಾಂತ್ಯದ 3 ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳೊದಗಲಾರವು.

ಸಿಂಹ— ಕೈಕೆಸರಾದರೆ ಬಾಯಿ ಮೊಸರು ದೀನೆಂಬಂತೆ ಪ್ರಯತ್ನಿಸಿದರೆ ನಿಮಗಾವ ಕಾರ್ಯವು ಅಶಕ್ಯವೆನಿಸಲಾರದು ಈ ವಾರದಲ್ಲಿ ಪಶುಭೃತ್ಯಾದಿ ಗಳಿಂದ ಕೂಡಿದ ಗೃಹಪರಿವಾರದಲ್ಲಿ ಅವ ತೆರನಾದ ಚಿಂತೆಗೂ ಅವಕಾಶವಿಲ್ಲವು. ವಿರೋಧ ವರ್ಗದವರು, ಸದ್ಯ ನಿಮ್ಮ ದೃಗ್ಗೋಚರಕ್ಕೆ ಬರಲಾರರು. ಆಕಸ್ಮಿಕ ಧನಪ್ರಾಪ್ತಿ ಯೋಗವಿದೆ, ಸೇವಕ ವರ್ಗದವರೂ ವ್ಯಾಪಾರಿಗಳೂ ನೌಕರ ಜನರೂ ಇಚ್ಛಾಧಿಕ ಫಲವನ್ನು ಹೊಂದಲಿರುವರು. ತಾ. 5, 6, 11, ಈ ದಿನಗಳಲ್ಲಿ ನಿಮ್ಮ ಕನಸು ನನಸಾಗುವದು.

ಕನ್ಯಾ— ನಿಮ್ಮ ಪ್ರಯತ್ನಕ್ಕೆ ತಕ್ಕ ಫಲ ದೊರೆಯುವುದು, ಆದರೆ ಖರ್ಚುಗಳು ಹಲವಾರು ಮುಖದಿಂದ ಪ್ರಾಪ್ತವಾಗುವುದರಿಂದ ಹಣದ ಬಿಕ್ಕಟ್ಟಿಗೆ ಸಿಲುಕುವಿರಿ. ವಿದ್ಯಾರ್ಥಿಗಳಿಗೂ ವಿದ್ಯೋಪಜೀವಿಜನತೆಗೂ ಸದ್ಯದ ದಿನಗಳು ಅನಿಷ್ಟಕಾರಿಗಳಾಗಲಿವೆ. ಅನಿರೀಕ್ಷಿತ ಪ್ರವಾಸದಿಂದಾಗಿ ಕಷ್ಟ ನಷ್ಟಗಳಿಗೆ ಸಿಲುಕುವಿರಿ, ಕಫ ಪಿತ್ತ ಪ್ರಕೋಪದಿಂದಾಗಿ ಆರೋಗ್ಯವು ಕೆಡಲಿದೆ. ಹಂದಿನ ಮಕ್ಕಳ ಆರೋಗ್ಯ ದಿಂದಾಗಿ ಹೆಚ್ಚಿನ ಧನವ್ಯಯ ವಾದೀತು ತಾ. 7, 8, ಮಾತ್ರ ಕೊಂಚ ಸುಖದಾಯಿ ಯಾಗಿ ಪರಿಣಮಿಸೀತು.

ತುಲಾ— ಇಲ್ಲ ಸಲ್ಲದ ದೋಷಾರೋಪಗಳಿಗೆ ನೀವೀವಾರದಲ್ಲಿ ಸಿಲುಕಲಿರುವಿರಿ. ವಿಷ ಅಗ್ನಿಗಳ ಬಾಧೆಗೆ ಸಿಲುಕಿ ಕಷ್ಟಕ್ಕೀಡಾಗುವ ಸಂಭವವಿದೆ. ಗೃಹತಾಪತ್ರಯಗಳು ದಿನೇ ದಿನೇ ಹೆಚ್ಚುವವು. ಸತಿ ಪತಿಗಳಲ್ಲಿ ಮನಸ್ತಾಪಕ್ಕೆಡೆಯುಂಟಾಗುವದು, ಆಪ್ತೇಷ್ಟರ ವಿಯೋಗ ದುಃಖಕ್ಕೊಳಗಾಗುವಿರಿ. ಅದರೂ ಬೃಹಸ್ಪತಿಯು ಅನುಗ್ರಹವೊಂದು ನಿಮಗೆ ಬಲವಾಗಿರುವುದರಿಂದ ತಾ. 5, 6, 9, 10ಈ ದಿನಗಳಲ್ಲಿ ನಿಮ್ಮ ಸಂಕಲ್ಪಗಳು ಸಿದ್ಧಿಸಲಿವೆ.

ವೃಶ್ಚಿಕ— ನಿಮ್ಮ ದೇಹಪತಿಯಾದ ಅಂಗಾರಕನೊಬ್ಬನೇ ನಿಮಗೀವಾರದಲ್ಲಿ ಅನುಕೂಲನಾಗಿರುವನು ಮಿಕ್ಕೆಲ್ಲ ಗ್ರಹರೂ ಅನಿಷ್ಟದಾಯಿಗಳಾಗಿರುವುದರಿಂದ ನಿಮ್ಮ ಸಂಕಲ್ಪಗಳೆಂಬ ಗಗನ ಗೋಪುರಗಳಾಗುವವು. ಸಮುದ್ರದಲ್ಲಿನ ತೆರೆಗಳಂತೇ ರೋಗಾನಿಷ್ಟಗಳು ನೋಲಿಂದ ಮೇಲೆ ಬರಲಿವೆ ಜನತೆಯ ವಿರೋಧವು ಹೆಚ್ಚುವದು. ಹೆಚ್ಚೇಕೆ ತಂದೆ ಮಕ್ಕಳೊಳು ಗಂಡ ಹೆಂಡಿರೊಳು ನಿತ್ಯ ಕಲಹ ತಪ್ಪದು. ನೌಕರ ಜನರಿಗೂ ವ್ಯಾಪಾರಿ ವರ್ಗದವರಿಗೂ ನೆನೆದಂತೆ ಕಾರ್ಯ ನೆರವೇರುವ. ತನು ಪೀಡೆ ಮನೋರೋಗಗಳು ದಿನಹೋದಂತೆ ಹೆಚ್ಚಲಿವೆ. ತಾ. 7, 8 11, ಈ ದಿನಗಳು ಇದ್ದುದರಲ್ಲಿ ಉತ್ತಮ.

ಧನು— ಸದ್ಯ ನಿಮಗೆ ಸರಿ ಸಾಟಿ ಬೇರೆಯಿಲ್ಲವೆಂದರೂ ಅತಿಶಯೋಕ್ತಿ ಯೆನಿಸದು, ಅಂಗಾರಕನೊಬ್ಬನನ್ನುಳಿದು ಇತರ ಎಲ್ಲಾ ಗ್ರಹರ ಅನುಗ್ರಹಕ್ಕೆ ಪಾತ್ರರಾದ ನಿಮಗೆ ಯಾವರತದ ಶೋಕತಾಪಗಳೂ ಒದಗಲಾರವು ಮನಸ್ಸಿನಲ್ಲಿನ ಸಕಲ ಬಯಕೆಗಳೂ ನಿರ್ವಿಘ್ನದಿಂದ ಶೀಘ್ರದಲ್ಲೇ ನೆರವೇರಲಿವೆ. ಸಾಮಾಜಿಕ ರಾಜಕೀಯ ಕ್ಷೇತ್ರಗಳಲ್ಲಿ ಕೀರ್ತಿ ಲಾಭಗಳನ್ನು ಪಡೆಯುವಿರಿ. ತಾ. 5, 7 9, 10, ಈ ದಿನಗಳಲ್ಲಿ ನಾನಾವಿಧಲಾಭಭೋಗ ಸಂತಸಗಳನ್ನು ಪಡೆಯುವಿರಿ.

ಮಕರ— ಸದ್ಯದ ದಿನಗಳು ಕೊಂಚ ಬಿಕ್ಕಟ್ಟಿನವುಗಳಾಗಿವೆ, ಚಂಚಲ ವಿದ್ದ ನಿಮ್ಮ ಮನಸ್ಸು ಯಾವ ಕಾರ್ಯವನ್ನು ಕೊನೆತನಕ ಮುಂದರಿಸಲು ಬಿಡಲೊಲ್ಲದು. ಮಾತ್ರವಲ್ಲ ಕುಕರ್ಮಗಳತ್ತ ನಿಮ್ಮನ್ನು ಸೆಳೆಯಲಿರುವದು ಸಮಾಜದಲ್ಲಿ ನಿಂದಾಪವಾದಗಳಿಗೆ ಗುರಿಯಾಗಲಿರುವಿರಿ. ದುರ್ಜನರ ಸಹವಾಸಕ್ಕೆ ಸಿಲುಕಿ ಕಷ್ಟನಷ್ಟಗಳನ್ನು ಹೊಂದುವಿರಿ ನಿಮ್ಮ ಬಂಧುವರ್ಗದವರಿಗೂ ನಿಮ್ಮ ಗುಣ ನಡತೆಗಳು ಸರಿದೋರದ ಕಾರಣ ಪರಸ್ಪರ ಮನಸ್ತಾಪ ಹುಟ್ಟೀತು. ತಾ 9, 10, ಅನಿಷ್ಟಕಾರಿ ದಿನಗಳು.

ಕುಂಭ— ಕಷ್ಟದ ದಿನಗಳು ಕೊಂಚ ಹೋಗರಿದುವು, ದಿನ ನಿತ್ಯದ ಖರ್ಚು ವೆಚ್ಚಗಳಿಗಾಗಿ ಹೆರವರ ಮುಖ ನೋಡುವ ಅವಶ್ಯಕತೆಯಿರದು. ನಿರುದ್ಯೋಗಿಯು ಕೂಡ ಒಳ್ಳೆ ಕರ್ಮ ನಿರತನಾಗುವನು ಕಳೆದು ಹೋದ ವಸ್ತು ಒಡವೆಗಳೂ ಪುನಃ ಕೈಸೇರುವ ಸಂಭವವಿದೆ ಹಿಡಿದ ಕಾರ್ಯಕ್ಕೆ ಶತ್ರುಜನರಿಂದ ವಿಘ್ನಗಳೊದಗಿ ಕೆಲವೊಮ್ಮೆ ಕಾರ್ಯಹಾನಿಯಾದೀತು. ತಾ. 7ರಿಂದ 10ರವರೆಗಿನ ದಿನಗಳಲ್ಲಿ ನಿಮ್ಮ ಶ್ರಮವು ಸಫಲವಾಗಲಿದೆ.

ಮೀನ— ನಿಮ್ಮ ಮನಸ್ಸಿಗೆ ನೆಮ್ಮದಿಯಿರದು ಗೃಹತಾಪತ್ರಯಗಳಿಂದಾಗಿ ಸದಾ ದುಃಖ ಭಾಗಿಗಳಾಗುವಿರಿ. ಹೆಂಡತಿ ಮಕ್ಕಳ ವಿರಹ ಶತ್ರುಜನರಿಂದ ಪರಾಭವ ರಾಜಕೀಯ ಅಧಿಕಾರಿಗಳ ಪೀಡೆ ಪಿತ್ತೋಷ್ಣ ದೋಷದಿಂದುಂಟಾದ ಅನಾರೋಗ್ಯ ಇವುಗಳಿಂದಾಗಿ ನೊಂದು ಬೆಂಡ ನಿಮಗೆ ವಾರಾಂತ್ಯದ 3 ದಿನಗಳಲ್ಲಿ ಕೊಂಚ ಸುಖ ನೆಮ್ಮದಿ ಲಭಿಸಲಿದೆ.

ತರ್ಕ ವಿತರ್ಕ

(ಗತ ಸಂಚಿಕೆಯಿಂದ)

ಎಂದು ನಾವು ಹೇಳಬಹುದು ಬರುವುದಿಲ್ಲ. (ಉದಾಹರಣೆಗಾಗಿ ಕಾಶ್ಮೀರ ಪ್ರಶ್ನೆಯನ್ನು ಸಂಯುಕ್ತ ರಾಷ್ಟ್ರಕ್ಕೆ ಕೊಂಡೊಯ್ದುದೇ ತಪ್ಪೆಂದು ನೆಹರೂ ಕಂಡುಕೊಂಡಗಳಿಗೆಗಳು ಅನೇಕ ಬಂದಿವೆ) ಇದೇ ರೀತಿ ಸರಕಾರವನ್ನು ವಿರೋಧಿಸುವ ಗುಂಪೂ ಸರಿ ಎನ್ನಲಾರೆವು. (ಉದಾಹರಣೆಗೆ ನಿಯಂತ್ರಣ ಪದ್ಧತಿಯಾಗುವ ಹಾಗೆ, ಅಂಥ ಕ್ರಮದ ಆಗತ್ಯವಿದೆ ಎಂದಿದ್ದ ಕಮ್ಯೂನಿಷ್ಟರು, ನಿಯಂತ್ರಣ ಜಾರಿಗೆ ಬಂದೊಡನೆಯೇ, ಸೇಠಿಯ ಧಾರಣೆಏರಿದುದರಿಂದ ಒಡವರ ಹೊಟ್ಟೆಗೆ ಪೆಟ್ಟು ಬಿತ್ತೆಂದು ಬೊಬ್ಬಿರಿದರು!) ಎರಡೂ ಪಕ್ಷಗಳ ತರ್ಕದ ಸರಣಿಯನ್ನು ಅನುಸರಿಸಿ, ಒಳ್ಳೆಯ ಅಂಶಗಳನ್ನು ಪರಿಗ್ರಹಿಸಿದಾಗ ನಿಜವಾದ ತತ್ವಜ್ಞಾನವುಂಟಾಗುತ್ತದೆ.

ನಮ್ಮಿಂದು ನವಜೀವನ ದರ್ಶನದ ಆಪೇಕ್ಷೆ ಒಂದೇ. ಈ ಅಖಿಲಾಂಡ ನೆಂಬುದೇ ರಚನೆಕಾರರ ಎಲ್ಲ ಸಂಗತಿಗಳ ತಿರುಳನ್ನು ಒಂದುಗೂಡಿಸುವ ಕಾರ್ಯ ನಡೆಯಬೇಕು. ಸಮಾಜ ಪುನರ್ಘಟನೆಯನ್ನು ಬಯಸುವ ಜನರಾಗಲೀ ರಾಷ್ಟ್ರವನ್ನು ಮರಳಿ ಕಟ್ಟಬೇಕೆನ್ನುವ ಮುಖಂಡರಾಗಲೀ ಸಮನ್ವಯ ದೃಷ್ಟಿಯಿಂದ ಪ್ರತಿಯೊಂದು ಸಂಗತಿಯ ಮೂಲ್ಯಾಂಕನ ಮಾಡಿಕೊಳ್ಳಬೇಕು. ಪರಿಪಕ್ವವಾದ ನಿರ್ಣಯ ಹೆಚ್ಚಿನ ಪ್ರಸಂಗಗಳಲ್ಲಿ ಸರಿಯಾಗಲಿಕ್ಕಿಲ್ಲ ಇದು ಕಪ್ಪು, ಇದು ಬಿಳುಪು ಎಂದು ನೋಡಿದೊಡನೆಯೇ ಹೇಳಿಬಿಡುವಷ್ಟು ಸುಲಭದ ಸಮಸ್ಯೆಗಳನ್ನು ಮಾತ್ರ ನಾವು ಜೀವನ ರಂಗದಲ್ಲಿ ಇದಿರಿಸಲಿಕ್ಕಿಲ್ಲ—ನಾವಿರುವ ಗಜಿಬಿಜಿಯ ಪ್ರಸಂಗಗಳು ಕ್ಷಣಕ್ಷಣಕ್ಕೂ ನಮ್ಮ ಸಹನೆಯನ್ನು, ಬುದ್ಧಿಯನ್ನು, ವಿವೇಕವನ್ನು ಒರೆಗಲ್ಲಿಗೆ ಹಚ್ಚಬಯಸಿ, ಆಹ್ವಾನವನ್ನು ಕೊಡುತ್ತಿವೆ ಅಂಥ ಆಹ್ವಾನವನ್ನು ಸ್ವೀಕರಿಸಿ, ಅವುಗಳನ್ನು ಉತ್ತರಿಸುವ ಬಗೆಯಲ್ಲೇ ನಮ್ಮ ವ್ಯಕ್ತಿತ್ವದ ಪ್ರತಿಭೆ ವ್ಯಕ್ತಗೊಳ್ಳುತ್ತದೆ. ಧರ್ಮಸೂಕ್ಷ್ಮವನ್ನರಿತುಕೊಂಡು ಸನ್ಮಾರ್ಗದಲ್ಲಿ ನಡೆಯುವ ಜಾಣರಾಗಿ ನಾವೆಲ್ಲ ಕೀರ್ತಿಪಡೆಯೋಣ!

— ಪಂಡಿತಶ್ರೀ.

ದಿ ವಿಜಯ ಬ್ಯಾಂಕ್, ಲಿಮಿಟೆಡ್

ಸ್ಥಾಪನೆ: 1931.] ಪ್ರಧಾನ ಕಛೇರಿ: ಮಂಗಳೂರು.

ಮೂಲಧನ	ರೂ. 20,00,000
ತೆತ್ತ ಪಾಲು ಭಂಡವಾಳ	„ 8,77,860
ಕ್ಷೇಮ ನಿಧಿ	„ 2,65,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 21 ತಿಂಗಳಿನ ಮ್ಯಾದೆ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ $4\frac{1}{2}$ % ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬ್ಯಾಂಕಿನ ಶಾಖೆಗಳಿರುತ್ತವೆ.

ಬಿ. ಮಂಜಯ್ಯ ಹೆಗ್ಡೆ,
ಬ್ಯಾಂಕಿನ ಆಡಳಿತೆ ಕಮಿಟಿ ಅಧ್ಯಕ್ಷರು,
(ಮತ್ತು ದ. ಕ. ಜಿಲ್ಲಾ ಬೋರ್ಡಿನ ಅಧ್ಯಕ್ಷರು.)

THE VIJAYA BANK, Limited.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವೆಲ್ಲಕ್ಕೂ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

ಲಕ್ಷಾಂತರ ಜನರು ಗುಣಹೊಂದಿದ್ದಾರೆ!

ಸರ್ ಜೀವನ್ ಶಿಲಾಜಿತ್ ಲೇಹ

ಶಿಲಾಜಿತ್ ಹಿಮಾಲಯದ ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅವ ಸೇರದಿಂಲಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೧೪ ದಿನದ ಲೇಹ್ಯ ರೂ ೫/೪, ೨೨ ದಿನದ ಲೇಹ್ಯ ರೂ ೩/೪

(ಪೋಸ್ಟೇಜು ಮಾಫಿ)

ನೀಲಗಿರಿ ಡಿಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

Edited, Printed & Published By K. H. Shetty at the Navayuga Press, Udipi, S. India,

ನವಯುಗ
ಆರೋಗ್ಯ ಮಂತ್ರಿ
ಶ್ರೀ. ಎ. ಬಿ. ಶೆಟ್ಟರಿಂದ
ಸ್ಥಾಪಿತವಾದ ವಾರಪತ್ರಿಕೆ,
ಉಡುಪಿ, ದ. ಕನ್ನಡ.

ವಾ। ಚಂದಾ 5-12-0
6 ತಿಂಗಳಿಗೆ 3-0-0
ಬಿಡಿ ಪ್ರತಿಗೆ 0-2-0

M. 3618

Licensed to Post without Prepayment

ನವಯುಗ

12-3-1953

Vol 32
No 27

NAVAYUGA WEEKLY POST BOX NO 22 UDIPI

ವರ್ಷ ೩೨
ವಾರ ೨೭

ಅಂತರಂಗ
ಪುಸ್ತಕ ಪತ್ರಿಕೆಯು
ಉಪಯುಕ್ತವಾದ
90 ಪುಸ್ತಕಗಳು
ರೂ 24ಕ್ಕೆ ಸಿಗುತ್ತವೆ.
ವಿವರಕ್ಕೆ ಬರೆಯಿರಿ
ಮೆನೇಜರ್,
ಅಂತರಂಗ, ಉಡುಪಿ

ಮಧುಪರ್ಕ

ಓರ್ವ ಮಹಾಕವಿಯು ತನ್ನ ಶ್ರೇಷ್ಠ ಕಾವ್ಯಗಳಿಗಾಗಿ ಪ್ರಸಿದ್ಧನಾಗಿದ್ದ. ಅವನ ಪದ್ಯದ ಸಾಲುಗಳಲ್ಲಿ ಮಾನವನ ಅಂತಃಕರಣವನ್ನು ವಿವಿಧ ಮನೋಭಾವವನ್ನು ಕೆಣಕಿ, ಭಾವ ಸಮಾಧಿಯನ್ನು ತರಿಸುವ ಶಕ್ತಿ ಇದ್ದಿತು. ಪ್ರಣಯ, ಶೃಂಗಾರ ಪ್ರೇಮ, ವಾತ್ಸಲ್ಯ, ಕರುಣೆ, ಸಹಾನುಭೂತಿ, ದಯೆ, ನೀತಿ ಮುಂತಾದವೆಲ್ಲವಕ್ಕೂ ಈ ಕಾವ್ಯಗಳಲ್ಲಿ ಸ್ಥಾನವಿತ್ತು.

ಒಂದು ದಿನ ಮಹಾಕವಿಯು ಪತ್ನಿಯ ಪ್ರಾಣೋತ್ಕ್ರಮಣ ಕಾಲಸನ್ನಿಹಿತವಾಯಿತು. ಆವಳು ಪ್ರಿಯನನ್ನು ತನ್ನ ಬಳಿಕರೆದು "ಸ್ವಾಮಿ, ನಿಮ್ಮ ಅನುರಾಗಕ್ಕೆ ಒಳಗಾದ ನಾನು ನಿಮ್ಮನ್ನು ತ್ಯಜಿಸಿ ಸ್ವರ್ಗ ಸೇರಿದ ಬಳಿಕ, ನಿಜಕ್ಕೂ ನೀವು ಕಣ್ಣೀರು ಸುರಿಸಿ ಗೋಳಿಡುವಿರಲ್ಲವೇ?" ಎಂದು ನುಡಿದಳು.

ಈ ಮಹಾಕವಿಗೆ ಕಣ್ಣೀರೆಂದರೇನೆಂಬುದೇ ತಿಳಿಯದು. ಇಷ್ಟು ಕಾವ್ಯಗಳನ್ನು ಬರೆದಿದ್ದರೂ, ತಾನೆಂದೂ ಕಣ್ಣೀರು ಸುರಿಸಿದವನಲ್ಲ. ಅವನು ಕ್ಷಣಕಾಲ ಯೋಚಿಸಿ ಹೇಳಿದ – "ಚಿ, ಛಿ, ಎಲ್ಲಾದರೂ ಉಂಟೆ, ಪ್ರಿಯೆ! ನಾನೆಂದಿಗೂ ಕಣ್ಣೀರು ಸುರಿಸಲಾರೆ. ನಿನ್ನ ಅನುರಾಗ ಹಾಗು ಪ್ರೇಮದ ಅಗಾಧ ವರ್ಣನೆಯನ್ನು ಮಾಡಿ ಒಂದು ಮಹಾಕಾವ್ಯವನ್ನು ಬರೆದು, ನನ್ನ ಶೋಕ ಸಂತಪ್ತ ಹೃದಯವನ್ನು ಪ್ರಕಟಿಸಿಕೊಳ್ಳುತ್ತೇನೆ. ಈ ಕಾವ್ಯ ಓದಿದ ಪ್ರತಿಯೊಬ್ಬನ ಕಣ್ಣಿಂದಲೂ ಧಾರಾಕಾರವಾಗಿ ಹನಿಯುದುರುವಂತೆ ಮಾಡುತ್ತೇನೆ. ಇಂಥ ಅಮೂಲ್ಯ ಸಂದರ್ಭ ನನಗೆ ಇನ್ನೊಮ್ಮೆ ದೊರೆಯದೆನ್ನುವಾಗ – ಸಿಕ್ಕಿದ ಸಂದರ್ಭವನ್ನು ನಿನಗಾಗಿ ಅತ್ತು ಗೋಗರೆದು ವ್ಯರ್ಥ ಹೋಗಗೊಡಲಾ!"

ನಮ್ಮ ಮೇಲಾಟದ ಮೂಲದಲ್ಲಿರುವ ನೀತಿ ಇದೇ!

ಮುಗಿಯದ ಮೇಲಾಟ

ತಪಸ್ಸು ಮತ್ತು ಸಿದ್ಧಿಯ ಕುರಿತು ಕಾಕಾಕಾಲೇಲ್ಕರರು ಒಂದು ಸಂದರ್ಭದಲ್ಲಿ ಹೀಗೆ ಹೇಳಿರುವರು–ಪುರಾತನಕಾಲದಲ್ಲಿ ಜನರು ಸಾವಿರಾರು ವರ್ಷಗಳವರೆಗೆ ಘೋರವಾದ ತಪಸ್ಸನ್ನು ಗೈದು ಇಷ್ಟಾರ್ಥಸಿದ್ಧಿಯನ್ನು ಪಡೆಯುತಿದ್ದರು. ಅಂದವರಲ್ಲಿ ಲೋಕೋದ್ಧಾರವೇ ಧ್ಯೇಯವಾಗುಳ್ಳ ಋಷಿಮುನಿಗಳೂ ಇದ್ದರು, ಇನ್ನು ತಪಃ ಪ್ರಭಾವದಿಂದ ಪರಪೀಡನೆಗೈಸುವ ರಾಕ್ಷಸರೂ ಇದ್ದರು. ಆದರೂ ಧರ್ಮಕ್ಕೆಯೇ ಸದಾಸರ್ವದಾ ಜಯ ಲಭಿಸುತಿತ್ತು. ಇಂದು ನಾವೂ ತಪಸ್ಸುಮಾಡುತ್ತಿದ್ದೇವೆ, ನಮ್ಮ ಶಕ್ತಿಸಾಮರ್ಥ್ಯಗಳನ್ನು ಒಂದಾಗಿಸಿ ನಿಶ್ಚಿತ ಸಂಶೋಧನೆಯೊಂದು ಕೈಗೂಡಿಬರಬೇಕೆಂದು ವರ್ಷಗಟ್ಟಳೆ ವೈಜ್ಞಾನಿಕ ಕ್ಷೇತ್ರದಲ್ಲಿ ತಪಸ್ಸುಮಾಡುತ್ತೇವೆ. ಅಪಾರವಾದ ಜನ—ಧನ ಬಲಗಳ ವ್ಯಯದ ಬಳಿಕವೇ ನಮಗೇನಾದರೂ ಸಿದ್ಧಿಯು ದೊರಕುತ್ತದೆ. ಆದರೆ ಆದರ ಸ್ವರೂಪ ಇದು ಕೃತಯುಗವಲ್ಲ ಕಲಿಯುಗ ಎಂಬುದನ್ನು ಎತ್ತಿತೋರಿಸುತ್ತದೆ. ನಮ್ಮ ಸಿದ್ಧಿಯಫಲವಾಗಿ ಹೊಸತೊಂದು ಭಾಗೀರಥಿಯು ಭಾರತದಲ್ಲಿ ಹರಿದುಬರಲಿಲ್ಲ; ಆಟಂಬಾಂಬು, ಹೈಡ್ರೋಜನ ಬಾಂಬು, ನಾಪಾಲಂ ಮುಂತಾದ ಅತ್ಯಂತ ಭಯಂಕರವಾದ ಸ್ಫೋಟಕಗಳ ಉಪಯೋಗದ ಬಗೆ ತಿಳಿಯಿತು. ಮಾನವಕುಲವನ್ನು ಧ್ವಂಸಗೈವ ಮಾರ್ಗ ನಿಷ್ಕಂಟಕವಾಯಿತು!

ಪೂರ್ವದಲ್ಲಿ ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ರಕ್ಷಿಸುವುದಕ್ಕಾಗಿ ಧರ್ಮ ಯುದ್ಧ ನಡೆಯುತಿದ್ದರೆ ಇಂದು ಯುದ್ಧಗಳ ಮೂಲದಲ್ಲಿ ಮಾನವನ ಸಂಕುಚಿತ ಮನೋಭಾವ, ಸ್ವಾರ್ಥ ಬುದ್ಧಿ, ವಿಧ್ವಂಸಕ ವೃತ್ತಿಗಳು ಇರುವುದನ್ನು ಕಾಣುತ್ತೇವೆ. ಯುದ್ಧದ ಭಯ ಇಂದು ಎಷ್ಟು ಬಲಯುತವಾಗಿದೆ ಎಂದರೆ, ಮಾನವ್ಯಕ್ತಿಗೇ ಅದು ಆಹ್ವಾನವನ್ನು ಕೊಡುತ್ತಿದೆ. ಲೋಕದ ಜನರು ಇನ್ನಾದರೂ ಎಚ್ಚತ್ತು ಯುದ್ಧವನ್ನು ನಾಶಗೈಯಬೇಕು ಎಂದು ಕಾಲವು ಕೇಳುತ್ತಿದೆ, ತಪ್ಪಿದರೆ ಯುದ್ಧವೇ ಲೋಕದ ಎಲ್ಲ ಜನರನ್ನೂ ನಿರ್ನಾಮ ಮಾಡುವುದು ನಿಶ್ಚಯ. ಈ ಕಾಲನಕರೆಯನ್ನು ಮನ್ನಿಸಿ, ಆದರಲ್ಲಿರುವ ಬುದ್ಧಿವಂತಿಕೆಯನ್ನು ಮೆಚ್ಚಿದ ಜನರು ಈಗ ಎಷ್ಟು ಮಂದಿ ಇದ್ದಾರೆ?

ನೋಬೆಲ್ ಪುರಸ್ಕಾರವನ್ನು ಪಡೆದ ಫೌಲಕನರು ಮೂರನೇ ಮಹಾಯುದ್ಧ ಸಂಭವಿಸಿದರೆ ಆ ಬಳಿಕ ಜಗತ್ತಿನ ಸ್ಥಿತಿ ಏನಾದೀತೆಂಬುದನ್ನು ವಿಡಂಬನಾತ್ಮಕವಾಗಿ ಈ ರೀತಿ ನಿರೂಪಿಸಿದ್ದಾರೆ–ತೃತೀಯ ಮಹಾಯುದ್ಧವು ಸಮಾಪ್ತಿಗೊಂಡ ಬಳಿಕ ಎಲ್ಲಿಯೋ ಅವಿತು ಕುಳಿತುಕೊಂಡಿದ್ದ ಮಂಗವೊಂದು ಮೆಲ್ಲನೆ ಹೊರಗೆ ಬರುತ್ತದೆ. ಸುತ್ತಲೂ ದೃಷ್ಟಿಕ್ಷೇಪಮಾಡಿದಾಗ ಪ್ರತಿಯೊಂದೆಡೆಯಲ್ಲಿಯೂ ವಿಧ್ವಂಸಕ ಕೃತ್ಯಗಳು ತಾಂಡವ ಮಾಡಿದುದನ್ನು ನೋಡಿ ಮಂಗಕ್ಕೆ ದುಃಖ ಬರುತ್ತದೆ. ಹೆಸರಿಗಾದರೂ ಒಂದು ಮನುಷ್ಯನ ಪಿಳ್ಳೆ ನೋಡಲು ಸಿಗುವುದಿಲ್ಲ. ಅತ್ಯಾಧುನಿಕವಾದ ಶಸ್ತ್ರಾಸ್ತ್ರಗಳ ಉಪಯೋಗದಿಂದ ಎಲ್ಲರೂ ನಿರ್ನಾಮವಾಗಿದ್ದರು. ಈ ಶೋಕವನ್ನು ತಡೆದು ಕೊಳ್ಳಲಾರದೆ, ಮಂಗವು ತಾನು ಪ್ರಾಣತ್ಯಾಗ ಮಾಡುವುದೇ ಯೋಗ್ಯವೆಂದು ನಿಶ್ಚಯಿಸಿ, ಒಂದು ದೊಡ್ಡ ಕೊಡುಗಲ್ಲನ್ನು ಏರುತ್ತದೆ. ಇನ್ನೇನು, ಧಬಕ್ಕನೆ ಕೆಳಗ ಹಾರಿ ಬೀಳಬೇಕು ಎನ್ನುವಾಗ ಆದಕ್ಕೆ ಅನತಿ ದೂರದಲ್ಲಿಯೇ ಚಿರಪರಿಚಿತವಾದ ಧ್ವನಿ ಕೇಳುತ್ತದೆ. ಯಾರಪ್ಪ ಈಗ ಬದುಕಿರುವವರು? ಎಂದರ ಆಶ್ಚರ್ಯದಿಂದಲೇ ಆಕಡೆ ನೋಡಿದಾಗ ಅಲ್ಲಿಯೊಂದು ಹೆಣ್ಣು ಮಂಗ ಬರುತಿತ್ತು. ಈ ಗಂಡು ಮಂಗವನ್ನು ನೋಡಿ ಅದು ಹೇಳಿತು "ಅಯ್ಯೋ! ಇನ್ನು ಮರಳಿ ನಾವೇ ಸೃಷ್ಟಿಕಾರ್ಯವನ್ನು ಪ್ರಾರಂಭಿಸಬೇಕಾಯಿತಲ್ಲವೇ?'

ಇದನ್ನು ಯುದ್ಧಪಿಪಾಸುಗಳು ಓದಿದಲ್ಲಿ ನಾ... ತಲೆತಗ್ಗಿಸಬೇಕು. ಸುಖ ಶಾಂತಿ ಸಮಾಧಾನಗಳಿಂದ ಹಾಯಾಗಿ ಜೀವನ ನಿರ್ವಹಿಸುವುದನ್ನು ಬಿಟ್ಟು ...ಟ್ಟ ಸರ್ವನಾಶಕಾರಿಯಾದ ಯುದ್ಧವನ್ನು ಆತ್ಯಾದರದಿಂದ ಸ್ವಾಗತಿಸುವ ಜನರನ್ನು ಕಂಡು ಅಳಬೇಕೋ ನಗಬೇಕೊ ತಿಳಿಯದು. ನಮ್ಮ ವೈಜ್ಞಾನಿಕರು ಇಂದ ತಮ್ಮ ಅವಿಶ್ರಾಂತ ಪರಿಶ್ರಮದ ಫಲವಾಗಿ ನಮಗೆ ವಿಧ್ವಂಸಕ ಆಯುಧಗಳನ್ನು ದಾನ ನೀಡಿದ್ದಾರೆ. ತಮ್ಮ ಸಂಶೋಧನೆಗಳಿಗೆ ನೆರವಾಗಬೇಕೆಂದು ಕೋಟ್ಯಾಂತರ ರೂಪಾಯಿಗಳನ್ನೂ ಸಾಧನ ಬಲವನ್ನೂ ಕೇಳಿದ್ದಾರೆ. ಆದರೆ ಇಷ್ಟಕ್ಕೇ ಮಾನವತೆಯ ವಿನಾಶದ ಹೊಣೆ ವಿಜ್ಞಾನಿಗಳ ಮೇಲಿದೆ ಎಂದು ನಾವು ದೂರುವುದು ಯೋಗ್ಯವಲ್ಲ ಎಂದು ಸುಪ್ರಸಿದ್ಧ ಸಂರಕ್ಷಣ ವಿಜ್ಞಾನಿಗ ಕೋಪ... ...ಗೆ ... ನುಡಿಯುತ್ತಾರೆ. ಆಯಾ ಸರಕಾರದ ಅಪೇಕ್ಷಾನುಸಾರವಾಗಿ ವೈಜ್ಞಾನಿಕರು ತಮ್ಮ

(...ನೇ ಪುಟ ನೋಡಿರಿ)

ಬ್ರಿಟನ್‌ನ 'ಸಬ್‌ಮೆರೀನ್' ಕಾರ್
ಇದು ಸಂಪೂರ್ಣ 'ವಾಟರ್ ಪ್ರೂಫಿಂಗ್' ಇದ್ದು ಆಳವಾದ ಕೆರೆಗೊಯ್ಯುವುದನ್ನು ಈ ಚಿತ್ರದಲ್ಲಿ ನೋಡಬಹುದು.

ನಯ ನಾಜೂಕಿಗೆ ಹೆಸರಾದ ಜವುಳಿ

ಬಟ್ಟೆಯ ಉದ್ಯಮದ ವಿವಿಧ ಕ್ಷೇತ್ರಗಳಲ್ಲಿ ಮೈಸೂರುರಾಜ್ಯದ ಅಭಿವೃದ್ಧಿ

ಕನ್ನಡ ಕವಿಗಳಲ್ಲಿ ಹೆಸರಾದ ಬಿ. ಎಂ. ಶ್ರೀ. ಅವರು "ಕನ್ನಡ ನಾಡಿದು ಮೈಸೂರು, ಚಿನ್ನದ ನಾಡಿದು ಮೈಸೂರು" ಎಂದು ಮೈಸೂರಿನ ಸಿರಿಯ ಗುಣಗಾನ ಮಾಡಿದ್ದಾರೆ. ಕರ್ನಾಟಕದಲ್ಲಿಯೇ ಅಲ್ಲ- ಸಮಗ್ರ ಭಾರತದಲ್ಲಿ ಮೈಸೂರಿನಷ್ಟು ಪ್ರಗತಿಯನ್ನು ಹೊಂದಿದ ಬೇರೆ ಯಾವ ರಾಜ್ಯವೂ ಇಲ್ಲ. ಇದನ್ನು ಮನಗಂಡೇ ಇರಬೇಕು, ಗಾಂಧೀಜಿ ಮೈಸೂರೊಂದು ಮಾದರಿ ಎಂದು ಕರೆದರು. ಕೃಷೀವಲರ ಬೀಡಾದ ಈ ಪ್ರದೇಶದಲ್ಲಿ ಔದ್ಯೋಗೀಕರಣವನ್ನು ಯಶಸ್ವಿಯಾಗಿ ಕೈಗೂಡಿಸಿದ ಶ್ರೇಯಸ್ಸು ಮೈಸೂರಿಗೆ ಸೇರಿದೆ. ಬಹುಮುಖವಾದ ಔದ್ಯಮಿಕ ಅಭಿವೃದ್ಧಿಯ ದೆಸೆಯಿಂದಾಗಿ ಮೈಸೂರು ಸಾರ್ವಾಂಗಿಕ ಪ್ರಗತಿಯನ್ನು ಹೊಂದಲು ಸಾಧ್ಯವಾಯಿತು. ಉಳಿದೆಲ್ಲ ಉದ್ದಿಮೆಗಳ ಜೊತೆಗೆ-ಮೈಸೂರು ಜವುಳಿ ಕ್ಷೇತ್ರದಲ್ಲಿಯೂ ಬಹಳ ಅಭಿವೃದ್ಧಿಯನ್ನು ಸಾಧಿಸಿರುತ್ತದೆ; ಮತ್ತು ತನ್ನದೇ ಆದ ಕೆಲವು ವೈಶಿಷ್ಟ್ಯಗಳನ್ನೂ ಕಾಪಾಡಿಕೊಂಡು ಬಂದಿವೆ. ಬೆಂಗಳೂರು, ಮೈಸೂರು, ಮತ್ತು ದಾವಣಗೆರೆಯ ಎರೆ ಮಣ್ಣಿನ ಹತ್ತಿ ಬೆಳೆಯುವ ಪ್ರದೇಶದಲ್ಲಿ ದೊಡ್ಡ ದೊಡ್ಡ ಗಿರಣಿಗಳು ಇವೆ. ಸಾವಿರಾರು ಕೈಮಗ್ಗಗಳೂ ವಿದ್ಯುಚ್ಛಕ್ತಿಯ ಬಲದಿಂದ ನಡೆಯುವ ಮಗ್ಗಗಳೂ ಚೆನ್ನಾಗಿ ಕೆಲಸಮಾಡುತ್ತಿವೆ. ಕಳೆದ ದಶಕದಲ್ಲಿ ಜವುಳಿ ಗಿರಣಿಗಳು ಗಣನೀಯವಾದ ರೀತಿಯಲ್ಲಿ ವಿಸ್ತಾರವನ್ನು ಹೊಂದಿದುವು. ಉದ್ಯೋಗಗಳಿಗೆ ನೆರವು ನೀಡುವ ಪ್ರಶಂಸಾರ್ಹವಾದ ಧೋರಣೆಯಂತೆ— ಸರಕಾರವು ಈ ಗಿರಣಿಗಳಲ್ಲಿ ಕೆಲವಕ್ಕೆ ಸ್ವಂತ ಕಾಲಿನ ಮೇಲೆ ನಿಲ್ಲಲು ಸಾಧ್ಯವಾಗುವಂತೆ ಧನಸಹಾಯವನ್ನು ಕೊಟ್ಟಿದೆ.

ಸುಪ್ರಸಿದ್ಧ ರೇಶ್ಮೆ

ಮೈಸೂರಿನ ರೇಶ್ಮೆಯು ಅತ್ಯಂತ ಪ್ರಸಿದ್ಧವಾದುದಾಗಿದ್ದು-ಭಾರತದಲ್ಲಿ ಒಟ್ಟು ಉತ್ಪಾದನೆ ಯಾಗುವ ರೇಶ್ಮೆಯಲ್ಲಿ ಶೇಕಡಾ ೬೦ ಮೈಸೂರಿನಿಂದಲೇ ಬರುತ್ತದೆ. ಸರಕಾರದವರೇ ಮೈಸೂರಿನಲ್ಲಿ ರೇಶ್ಮೆ ನೇಯಿಗೆ ಕಾರ್ಖಾನೆಯೊಂದನ್ನು ನಡೆಸುತ್ತಿರುವರು. ಅಂತಾರಾಷ್ಟ್ರೀಯ ಮಟ್ಟವನ್ನು ಮುಟ್ಟಿ, ಪೇಟೆಯಲ್ಲಿ ಯಶಸ್ವಿಯಾದ ಸ್ಪರ್ಧೆಯನ್ನು ಹೂಡಲು ಸಾಧ್ಯವಾಗುವಂತೆ ಈ ನೇಯಿಗೆ ಕಾರ್ಖಾನೆಯನ್ನು ಅತ್ಯಾಧುನಿಕ ಯಂತ್ರೋಪಕರಣಗಳಿಂದ ಸುಸಜ್ಜಿತಗೊಳಿಸುವ ವ್ಯವಸ್ಥೆಗಳು ನಡೆದಿವೆ. ಮೈಸೂರು ರಾಜ್ಯದಲ್ಲಿ ಬಗೆಬಗೆಯ ಕಚ್ಚಾ ಸಾಮಾಗ್ರಿಗಳು ಧಾರಾಳವಾಗಿ ಸಿಗುತ್ತಿರುವುದರಿಂದ-ಜವುಳಿಯ ಕ್ಷೇತ್ರದಲ್ಲಿ ಕೇವಲ ಬಟ್ಟೆಬರೆ ಮಾತ್ರವಲ್ಲ, ಉಳಿದ ವಸ್ತುಗಳೂ (ಉದಾಹರಣೆಗೆ, ಹಗ್ಗಗಳು, ಟ್ವೈನ್ ನೂಲು, ರಿಬ್ಬನು, ಜಮಖಾನೆ, ಉಣ್ಣೆಯ ರತ್ನಗಂಬಳಿ ಇತ್ಯಾದಿ) ಸಿದ್ಧಗೊಳ್ಳುತ್ತವೆ. ಆರು ಸಾವಿರ ಕದರುಗಳಿಂದ ಕೂಡಿದ ಭಾರತದಲ್ಲಿ ಒಂದೇ ಒಂದಾದ ರೇಶ್ಮೆ ನೇಯ್ಗೆ ಕಾರ್ಖಾನೆಯು ಮೈಸೂರಿನಲ್ಲಿರುತ್ತದೆ. ಬೆಂಗಳೂರು ಮೈಸೂರು ಮಾರ್ಗದಲ್ಲಿ, ಬೆಂಗಳೂರಿನಿಂದ ೩೭ ಮೈಲುಗಳ ಮೇಲೆ ಚೆನ್ನಪಟ್ಟಣದಲ್ಲಿ ಈ ಕಾರ್ಖಾನೆ ಇದೆ.

ಮೈಸೂರು ರತ್ನಗಂಬಳಿಯ ಸಂಗತಿಯಲ್ಲಿ ಸಂಯುಕ್ತ ರಾಜ್ಯ ಅಮೇರಿಕೆಯೊಡನೆ ದೊಡ್ಡಮಟ್ಟದ ವ್ಯಾಪಾರವನ್ನು ನಡೆಸುತ್ತಿದೆ. ಉಣ್ಣೆಯ ಜಮಖಾನೆಗಳು (ರತ್ನಗಂಬಳಿ) ಡಾಲರು ಸಂಪಾದನೆಗೆ ಬಹಳ ಹೆಸರಾಗಿವೆ. ಭಾರತದಲ್ಲಿ ಈ ಉದ್ಯೋಗಕ್ಕೆ ಹೆಸರಾದ ಮೈಸೂರು ಮತ್ತು ಮದ್ರಾಸು ರಾಜ್ಯಗಳು ಒಂದು ಸಂಯುಕ್ತ ಸಮಿತಿಯ ಮೂಲಕ ಉಣ್ಣೆಯ ಜಮಖಾನೆಗಳ ರಫ್ತು ವ್ಯಾಪಾರವನ್ನು ನಿಯಂತ್ರಿಸುತ್ತವೆ. ಉಣ್ಣೆಯ ಬಟ್ಟೆಬರೆಗಳನ್ನು ತಯಾರಿಸುವಲ್ಲಿ ಹಾಳಾಗುವ ಪದಾರ್ಥವು ಈ ಜಮಖಾನೆಗಳಲ್ಲಿ ಉಪಯೋಗಿಸಲ್ಪಡುತ್ತದೆ; ಇಡೀ ಭಾರತದಲ್ಲಿ ಅರ್ಧದಷ್ಟನ್ನು ಮೈಸೂರೊಂದೇ ಪೂರೈಸುತ್ತದೆ.

ಕೈಮಗ್ಗದ ಬಟ್ಟೆ

ಖಾಸಗೀ ಉದ್ದಿಮೆದಾರರ ಕೈವಾಡವು ರಾಜ್ಯದ ಜವುಳಿ ಕ್ಷೇತ್ರದ ಪ್ರಗತಿಯಲ್ಲಿ ಸ್ಥಾನವನ್ನು ಪಡೆದಿದ್ದರೂ- ಔದ್ಯಮಿಕ ಅಭಿವೃದ್ಧಿಗೆ ಸದಾ ಪ್ರೋತ್ಸಾಹವನ್ನು ನೀಡುತ್ತಿರುವ ಸರಕಾರವು ಸಣ್ಣ ಕೈಮಗ್ಗಗಳನ್ನು ಇಟ್ಟುಕೊಂಡು ದುಡಿಯುವ ನೇಕಾರ ಬಂಧುಗಳಿಗೆ ನೆರವು ನೀಡುತ್ತಾ ಬಂದಿದೆ. ಕಚ್ಚಾ ಸಾಮಗ್ರಿಗಳ ಬೆಲೆಯ ಏರಿಕೆಯಿಂದ ಮತ್ತು ಕೃತಕ ರೇಶ್ಮೆಯು ಪೇಟೆಯಲ್ಲಿ ಪ್ರಾದುರ್ಭಾವವನ್ನು ಹೊಂದುತ್ತಿರುವುದರಿಂದ- ಕೈಮಗ್ಗದ ನೇಕಾರರ ಸ್ಥಿತಿ ಇಂದು ಚಿಂತಾಜನಕವೆನಿಸಿದೆ. ಇದರ ಪರಿಣಾಮವಾಗಿ ಮೊದಲಿದ್ದ ೫೦೦೦ ಕೈಮಗ್ಗಗಳ ಸಂಖ್ಯೆ ಒಮ್ಮಿಂದೊಮ್ಮೆಗೆ ೧೦೦೦ಕ್ಕೆ ಬಂದಿಳಿದಿದೆ ಸುಮಾರು ಹತ್ತು ಸಾವಿರಕ್ಕೂ ಹೆಚ್ಚಿನ ಕುಟುಂಬಗಳು ಕೈಮಗ್ಗದ ಉದ್ದಿಮೆಯನ್ನು ನೇರಾಗಿ ಅವಲಂಬಿಸಿರುವುವು. ಮುಂಚೆ ವರ್ಷಕ್ಕೆ ೨೦ ಲಕ್ಷ ಗಜದಷ್ಟು ಬಟ್ಟೆಯು ಕೈಮಗ್ಗಗಳಿಂದ ಉತ್ಪಾದನೆಗೊಳ್ಳುತಿದ್ದರೆ ಈಗ ಇದು ಎರಡೂವರೆ ಲಕ್ಷಕ್ಕೆ ಇಳಿದಿದೆ. ಮೈಸೂರಿನ ಕೈಮಗ್ಗದ ಬಟ್ಟೆಗಳಿಗೆ ಸಿಂಹಳ, ಬ್ರಹ್ಮದೇಶ, ಸಿಂಗಾಪುರಗಳಲ್ಲಿ ಚೆನ್ನಾದ ಪೇಟೆ ದೊರೆಯುತ್ತಿದೆ. ಆದರೂ ಸಿಂಹಳ ಮುಂತಾದ ರಾಷ್ಟ್ರಗಳು ಅಧಿಕ ಸುಂಕವನ್ನು ಹೇರುತ್ತಿರುವುದರಿಂದ ಈಗ ಮೈಸೂರಿನ ನಿರ್ಯಾತ ವ್ಯಾಪಾರದ ಮೇಲೆ ಇದು ಕೆಟ್ಟಪರಿಣಾಮವುಂಟು ಮಾಡಿದೆ. ಕೈಮಗ್ಗ ಹಾಗೂ ಗಿರಣಿಗಳಿಗೆ ನಡುವೆ ವಿದ್ಯುಚ್ಛಕ್ತಿಯಿಂದ ನಡೆಯುವ ಮಗ್ಗದ ಸ್ಥಾನವಿದೆ. ವಿದ್ಯುಚ್ಛಕ್ತಿಯನ್ನು ಔದ್ಯಮಿಕ ಕ್ಷೇತ್ರದಲ್ಲಿ ಅತ್ಯಂತ ಯಶಸ್ವಿಯಾಗಿ ಬಳಕೆಗೆ ತಂದುಕೊಂಡ ರಾಜ್ಯವು ಭಾರತದಲ್ಲಿ ಮೈಸೂರೇ ಎಂದರೆ ಸಲ್ಲುತ್ತದೆ. ಇಲ್ಲಿ ಹಳ್ಳಿಯ ಮೂಲೆ ಮೂಲೆಗೂ ವಿದ್ಯುಚ್ಛಕ್ತಿ ದೊರೆಯುವುದು ಸಾಧ್ಯವೆನಿಸಿದೆ. ಈ ಕಾರಣದಿಂದ ವಿದ್ಯುಚ್ಛಕ್ತಿಯ ಮಗ್ಗವು ಸಾಮಾನ್ಯ ನೇಕಾರರ ಮತ್ತು ಸಣ್ಣಪುಟ್ಟ ಬಂಡವಳಗಾರರ ಕಲ್ಪನೆಯನ್ನು ಕೆಣಕಿದೆ. ಈ ಉದ್ಯಮಕ್ಕೆ ಭವ್ಯ ಭವಿಷತ್ತು ಇದೆ ಎಂಬ ಸಂಗತಿಯೂ ಚೆನ್ನಾಗಿ ವ್ಯಕ್ತಗೊಳ್ಳುತ್ತಿದೆ. ಪೇಟೆಯಲ್ಲಿ ತಮ್ಮ ಸರಕುಗಳಿಗೆ ಒಳ್ಳೆಯ ಗಿರಾಕಿ ದೊರೆಯಬೇಕೆನ್ನುವ ಇಚ್ಛೆಯಿಂದ ಹೊಸ ಹೊಸ ನಮೂನೆಗಳನ್ನು ಕಂಡು ಹಿಡಿಯುವುದಕ್ಕೆ ಈ ಉದ್ದಿಮೆ ಪ್ರಯತ್ನಿಸುತ್ತಿದೆ

ಸರಕಾರದ ಸಹಾಯ

ಭಾರತ ಸರಕಾರದವರು ಕೈಮಗ್ಗದ ಉದ್ದಿಮೆಗೆ ಪ್ರೋತ್ಸಾಹ ಕೊಡಬೇಕೆಂದು ಕೈಗೊಂಡ ಕ್ರಮಗಳನ್ನು ಅನುಸರಿಸಿ, ಮೈಸೂರು ರಾಜ್ಯ ಸರಕಾರವೂ ತಕ್ಕುದಾದ ರೀತಿಯಲ್ಲಿ ಉತ್ತೇಜನವನ್ನು ಕೊಟ್ಟಿರುತ್ತದೆ. ಮೈಸೂರು ರಾಜ್ಯದ ಕೈಮಗ್ಗದ ನೇಕಾರರ ಸಹಕಾರೀ ಸಂಘವೆಂಬ ಸಂಸ್ಥೆಯೊಂದು ರಚನೆಗೊಂಡು, ಕೈಮಗ್ಗದ ಸರಕುಗಳ ಮಾರಾಟದ ವ್ಯವಸ್ಥೆ ಮಾಡುತ್ತದೆ ಸರಕಾರವು ನೂಲನ್ನು ರಖಮಾಗಿ ಕ್ರಯಕ್ಕೆ ಪಡೆದುಕೊಂಡು, ಅದನ್ನು ಚಿಕ್ಕಚಿಕ್ಕ ಸಹಕಾರೀ ಸಂಘಗಳ ಮೂಲಕ ನೇಕಾರ ಸದಸ್ಯರಿಗೆ ಹಂಚುತ್ತದೆ. ಲಾಭದ ಪ್ರಶ್ನೆಯೇ ಇಲ್ಲದೆ ಸುಲಭ ದರದಲ್ಲಿ ನೇಕಾರರು ನೂಲನ್ನು ಪಡೆಯಲು ಈ ಏರ್ಪಾಡು ನೆರವಾಗಿದೆ. ಹೀಗಿದ್ದರೂ ಕೈಮಗ್ಗದ ಉದ್ದಿಮೆಯ ಆವಶ್ಯಕತೆಯನ್ನು ಪೂರೈಸುವಷ್ಟರ ಮಟ್ಟಿಗೆ ನೂಲು ದೊರೆಯುತ್ತಿಲ್ಲ ಎಂದು ಹೇಳುತ್ತಿರುವರು.

ಮೊದಲು ಸೂಚಿಸಿದಂತೆ ದೊಡ್ಡ ದೊಡ್ಡ ಗಿರಣಿಗಳು ಬೆಂಗಳೂರು, ಮೈಸೂರು ಮತ್ತು ದಾವಣಗೆರೆಯಲ್ಲಿವೆ ಬೆಂಗಳೂರಿನಲ್ಲಿ ಸಾಮಾನ್ಯವಾಗಿ ಬಿನ್ನಿ ಮಿಲ್ಲಿ

(೧೧ನೇ ಪುಟ ನೋಡಿರಿ)

ದಿ ಕೆನರಾ ಮ್ಯೂಚುವಲ್
ಎಶ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ] [ಸ್ಥಾಪನೆ: ೧೯೩೫.
"ಕೆನರಾ ಮ್ಯೂಚುವಲ್" ಪರಸ್ಪರಾವಲಂಬಕವಾದ ಸಂಸ್ಥೆ.
ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ
ಬೋನಸು ಹಂಚಿ, ಪಾಲಿಸಿದಾರರ ನಂಬಿಕೆ ಪಡೆದಿದೆ.
ಈ ಕಂಪೆನಿಯಲ್ಲಿ ಇಂದೇ ವಿಮೆ ಇಳಿಸಿ,
ನಿಮ್ಮ ಕುಟುಂಬವನ್ನು ಭದ್ರವಾಗಿರಿಸಿರಿ.
The CANARA MUTUAL ASSURANCE CO. Ltd,
Head Office: UDIPI, S INDIA. ESTD: 1935

ರಾಮತೀರ್ಥ
ಬ್ರಾಹ್ಮಿ ತೈಲ
ಸ್ಪೆಶಲ್ ನಂ. ೧] [ಮೆಡಿಕೇಟೆಡ್
ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ. ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ
ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0
ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಸೇವನೆಯ ಆನಂದಕ್ಕೆ
ಅತ್ಯುತ್ತಮವಾದುದನ್ನೇ ಪಡೆಕೊಳ್ಳಿರಿ
ಎಸ್. ಆರ್.
ತಾಜಾ ನಿಪ್ಪಾಣಿ ತಂಬಾಕು
ಟೆಂಬುರ್ಣಿ ಎಲೆ
ಇವುಗಳಿಂದ ತಯಾರಿಸಿದ
ಬೀಡಿಗಳಾಗಿರುತ್ತವೆ
S.R. Beedi Works

ಬೆಳಕಿನಂತೆ ಅಂಧಕಾರವೂ ಅನಿವಾರ್ಯ

ಸಸ್ಯಗಳು ಹೂ ಬಿಟ್ಟು ಫಲಕೊಡುವುದಕ್ಕೆ ಕತ್ತಲೆ ಅತ್ಯಂತ ಅಗತ್ಯ

ಗಿಡಮರಗಳು ಬೆಳೆದು ಬಾಳಬೇಕಾದರೆ ಬೆಳಕು ತೀರ ಅನಿವಾರ್ಯವೆಂಬುದನ್ನು ನಮ್ಮಲ್ಲಿ ಎಲ್ಲರೂ ತಿಳಿದುಕೊಂಡಿದ್ದೇವೆ. ಆದರೆ ಪುಷ್ಪಗಳು ಅರಳುವಂತೆ ಮಾಡುವ ಸಂಗತಿ ಮಾತ್ರ ಕತ್ತಲೆಯಾಗಿದೆ. ಹಗಲಿನಲ್ಲಿ ಸೂರ್ಯ ಪ್ರಕಾಶದಿಂದ ಎಲೆಗಳು ಶಕ್ತಿಯನ್ನು ಪಡೆದು ಮಣ್ಣಿನಿಂದ ಸಸ್ಯದ ಬೆಳವಣಿಗೆಗೆ ಅಗತ್ಯವಿರುವ ಸಾರವನ್ನು ಹೀರಿಯೂ ಗಾಳಿಯನ್ನು ಸೇವಿಸಿಯೂ ಗಿಡಮರಗಳ ಪೋಷಣೆಗೆ ಅಗತ್ಯವಿರುವ ಆಹಾರವನ್ನು ಒದಗಿಸುತ್ತವೆ. ನೀರು ಮತ್ತು ಅಂಗಾರಾಮ್ಲವನ್ನು ರಾಸಾಯನಿಕವಾಗಿ ಸಂಯೋಜಿಸಿ ಬೇರುಗಳು ಕಾಂಡ ಎಲೆಗಳು ಮುಂತಾದ ಎಲ್ಲ ಸಸ್ಯಭಾಗಗಳಿಗೂ ಅನ್ನವನ್ನು ಮುಟ್ಟಿಸಲಾಗುತ್ತದೆ ಎಂದು ವಿಜ್ಞಾನಿಗಳು ಈಗಾಗಲೇ ಕಂಡುಹಿಡಿದಿರುವರು. ಅವರ ಹೇಳಿಕೆಯಂತೆ, ಸೂರ್ಯ ಪ್ರಕಾಶವಿಲ್ಲದೆ ಸಸ್ಯಗಳು ಬದುಕುವಂತಿಲ್ಲ. ಪರಿಣಾಮವಾಗಿ ಯಾವ ಪ್ರಾಣಿಗೂ ಆಹಾರ ದೊರೆಯಲಾರದು. ಎಂದರೆ ಯಾವ ಪ್ರಾಣಿಯೂ ಬದುಕಲು ಸಾಧ್ಯವಿಲ್ಲವಾದುದರಿಂದ ಲೋಕವು ನಿರ್ಜೀವವೆನಿಸುತ್ತದೆ. ಸೂರ್ಯನ ಬೆಳಕಿನಿಂದಲೇ ಲೋಕವು ಬದುಕಿದೆ ಎಂಬ ಇಂದಿನ ವಿಜ್ಞಾನಿಗಳ ಮತವನ್ನು ನಮ್ಮ ಪೂರ್ವಜರ ಸಹಸ್ರಾರು ವರ್ಷಗಳಿಗೆ ಹಿಂದೆಯೇ ಕಂಡುಕೊಂಡಿದ್ದರು. ಮತ್ತು ಸೂರ್ಯನನ್ನು ಸವಿತೃದೇವನೆಂದು ಕರೆದು ಗಾಯತ್ರಿ ಮಂತ್ರದಿಂದ ಆರಾಧಿಸುತ್ತಿದ್ದರು.

ಪ್ರಕೃತ ವಿಷಯಕ್ಕೆ ತಿರುಗಿ ಹೇಳುವುದಾದರೆ—ಗಿಡಮರಗಳ ಸಂತಾನವು ಅಭಿವೃದ್ಧಿಯನ್ನು ಹೊಂದಲಿಕ್ಕೆ ಬೀಜಗಳು ಅತ್ಯಗತ್ಯವಾಗಿವೆ. ಈ ಬೀಜಗಳು ಸಾಮಾನ್ಯವಾಗಿ ಗಿಡಮರಗಳು ಬಿಡುವ ಹೂವಿನಿಂದಲೇ ಉಂಟಾಗುತ್ತವೆ. ಇತ್ತೀಚೆಗೆ ಸಸ್ಯ ಶಾಸ್ತ್ರದಲ್ಲಿ ನಡೆಸಿದ ಪ್ರಯೋಗಗಳನ್ನು ಆಧರಿಸಿ ಹೇಳುವುದಾದಲ್ಲಿ ಪುಷ್ಪಗಳು ಅರಳಿ ವಿಕಸಿತಗೊಳ್ಳುವ ಕ್ರಿಯೆಯು ಕತ್ತಲೆಯ ಅವಧಿಯನ್ನೇ ಹೊಂದಿಕೊಂಡಿದೆ! ಸಾಕಷ್ಟು ಕತ್ತಲು ಇಲ್ಲದಿದ್ದಲ್ಲಿ ಆರೋಗ್ಯಕರವಾಗಿ ಬೆಳೆದ ಗಿಡಮರಗಳಾದರೂ ಹೂಬಿಡುವುದಿಲ್ಲ; ಅರ್ಥಾತ್ ಬೀಜವಾಗಲಿಕ್ಕೆ ಆಸ್ಪದವಿರುವುದಿಲ್ಲ ಫಲಸ್ವರೂಪದಲ್ಲಿ ಲೋಕದಲ್ಲಿರುವ ಅಸಂಖ್ಯ ಸಸ್ಯ ಜಾತಿಗಳು ಸತ್ತೇ ಹೋಗಬೇಕಾದೀತು. ಹೀಗೆ ಬೆಳಕು ಕತ್ತಲೆಗಳ ಕಾರಣದಿಂದಲೇ ಭೂಮಿಯಲ್ಲಿ ಜೀವರಾಶಿ ಉಳಿದಿದೆ. ಅವುಗಳಲ್ಲಿ ಒಂದು ಸಂಗತಿ ಇಲ್ಲವೆಂದಾದರೆ—ಲೋಕದಲ್ಲಿ ಬದುಕುವುದೇ ಕಷ್ಟವೆನಿಸುತ್ತದೆ. ಬೆಳಕಿನ ಬೆನ್ನಲ್ಲೇ-ಕತ್ತಲೆ ಕತ್ತಲೆಯ ಬೆನ್ನಲ್ಲೇ ಬೆಳಕು ಎನ್ನುವುದು ಜೀವನ ರಹಸ್ಯವನ್ನು ವಿಶದೀಕರಿಸುವ ಸಿದ್ಧಾಂತವೆಂದೇ ಹೇಳಬಹುದು.

ಕತ್ತಲೆಯ ನಿಯಂತ್ರಣ ಶಕ್ತಿ

ಆದರೆ ಭೌಗೋಲಿಕವಾದ ಕಾರಣಗಳಿಂದಾಗಿ—ಲೋಕದ ಎಲ್ಲ ಕಡೆಯಲ್ಲೂ ಬೆಳಕು—ಕತ್ತಲೆಗಳನ್ನು ನೀಡುವ ಹಗಲು—ರಾತ್ರಿಗಳು ಒಂದೇ ಸಮನಾಗಿರುವುದಿಲ್ಲ. ಆದುದರಿಂದ ಭೌಗೋಲಿಕ ವ್ಯತ್ಯಾಸವನ್ನು ಹೊಂದಿಕೊಂಡು ಅಲ್ಲಿಯ ಸಸ್ಯಗಳ ಬೆಳವಣಿಗೆಯನ್ನು ಹಗಲಿನಂತೆ ಕತ್ತಲೂ ನಿಯಂತ್ರಿಸುತ್ತದೆ ಎನ್ನಬಹುದು. ಆದುದರಿಂದ ಭೂಮಧ್ಯರೇಖಾ ಪ್ರದೇಶದಿಂದ ಉತ್ತರ—ದಕ್ಷಿಣದಲ್ಲಿ ದೂರ ದೂರ ಸರಿದಂತೆ, ಸಸ್ಯಗಳ ಜಾತಿಯಲ್ಲಿ ವೈವಿಧ್ಯವುಂಟಾಗುವುದು ತೀರ ಸ್ವಾಭಾವಿಕ. ಹಗಲು ರಾತ್ರಿಗಳೆರಡೂ ಹೆಚ್ಚುಕಡಿಮೆ ಸಮಾನಾವಧಿಯಲ್ಲಿರುವ ಭೂಮಧ್ಯ ಪ್ರದೇಶದಲ್ಲಿ ಅರ್ಥಾತ್ ಉಷ್ಣವಲಯದಲ್ಲಿ ಬೆಳೆಯುವ ಗಿಡಮರಗಳು ಸಮಶೀತೋಷ್ಣವಲಯದಲ್ಲಾಗಲೀ, ಶೀತವಲಯದಲ್ಲಾಗಲೀ ಬೆಳೆಯುವುದು ಸಾಧ್ಯವಿಲ್ಲ. ಕೇವಲ ಸೂರ್ಯನ ಬೆಳಕಿನ ಪ್ರಶ್ನೆಯೊಂದನ್ನೇ ಸಸ್ಯಗಳು ಹೊಂದಿಕೊಂಡಿಲ್ಲದೆ, ಕತ್ತಲೆಯ ಅವಧಿಯನ್ನೂ ಸಸ್ಯ ಜಾತಿಗಳು ಆಧರಿಸಿವೆ ಎಂಬ ಈಚೆಗಿನ ಶೋಧದಿಂದ ನೋಡಿದರೆ ಇನ್ನಷ್ಟು ಗಂಭೀರವೆನಿಸುತ್ತದೆ. ಧ್ರುವಗಳ ಕಡೆಗೆ ಸರಿಯುತ್ತಾ ಹೋದಂತೆ ಬೇಸಗೆಯಲ್ಲಿ ದೀರ್ಘ ಹಗಲೂ ಗಿಡ್ಡ ರಾತ್ರಿಯೂ ಇರುತ್ತದಾದುದರಿಂದ ಇಷ್ಟು ಅಲ್ಪಸಮಯದ ಕತ್ತಲನ್ನು ಉಪಯೋಗಿಸಿ ಹೂ ಬಿಡಬಲ್ಲ ಗಿಡಮರಗಳು ಮಾತ್ರ ಬಾಳಿಯಾವು.

ಉದಾಹರಣೆಗಾಗಿ ಕಬ್ಬನ್ನು ತೆಗೆದುಕೊಳ್ಳಬಹುದು. ಅದು ಹೂ ಬಿಡಬೇಕಾದಲ್ಲಿ ಭರ್ತಿ ಹನ್ನೆರಡು ತಾಸಿನಷ್ಟು ದೀರ್ಘವಾದ ರಾತ್ರಿ ಬೇಕು. ಈ ಕಾರಣಕ್ಕಾಗಿಯೇ ಉಷ್ಣವಲಯದ ಹೊರ ಪ್ರದೇಶದಲ್ಲಿ ಅದನ್ನು ನೆಟ್ಟರೆ, ಕಬ್ಬು ಹೂ ಬಿಡುವುದೇ ಇಲ್ಲ. ಇನ್ನೊಂದು ಜಾತಿಯ ಸಸ್ಯಕ್ಕೆ ಒಂಭತ್ತು ತಾಸಿನ ಕತ್ತಲೇ ಯಥೇಷ್ಟವಾಯಿತು. ಆದುದರಿಂದ ೫೦° ಅಕ್ಷಾಂಶಗಳಷ್ಟು ದೂರದಲ್ಲೂ ಇದು ಬೆಳೆಯಬಹುದು. ನೆಲವನ್ನು ಹಿಮ ಆವರಿಸುವ ಬದಲು ಮುಂಚೆ ಎಂದರೆ ಆಗೋಸ್ತು ತಿಂಗಳ ಸುಮಾರಿಗೆ ಇಷ್ಟು ಕತ್ತಲು ಇರುತ್ತದೆ. ೫೦° ಅಕ್ಷಾಂಶಕ್ಕೂ ಆಚೆಗೆ ಇಷ್ಟು ದೀರ್ಘಕತ್ತಲಿನ ಕಾಲವು ತಡವಾಗಿ ಬರುವುದರಿಂದ ಬೀಜಗಳು ಚೆನ್ನಾಗಿ ಬಲಿಯಲು ಪುರಸೊತ್ತು ಸಿಗದೆ, ಸಸ್ಯ ಸಾಯುತ್ತದೆ. ತೀರಾ ಉತ್ತರ ಅಥವಾ ದಕ್ಷಿಣದಲ್ಲಿ ಬೆಳೆಯುವ ಸಸ್ಯ ಜಾತಿಗಳು ಹೂ ಬಿಡುವುದಕ್ಕೆ ಅಲ್ಪಾವಧಿಯ ಕತ್ತಲು ಸಾಕಾಗುತ್ತದೆ ಎಂದೂಹಿಸಬಹುದು.

ಆರಂಭದ ಸಂಶೋಧನೆಗಳು

ಸಸ್ಯ ಜಾತಿಗಳ ಸಂತಾನೋತ್ಪಾದನಾ ಕಾರ್ಯದಲ್ಲಿ ಕತ್ತಲು ವಹಿಸುವ ಪಾತ್ರದ ವರ್ಣನೆಯನ್ನು ಅಮೇರಿಕದ ಯೇಲ್ ವಿಶ್ವವಿದ್ಯಾಲಯದ ಪ್ರೊ. ಎ. ಡಬ್ಲ್ಯು. ನೇಲರ್ ಎಂಬವರು "ಸಾಯಂಟಿಫಿಕ್ ಅಮೇರಿಕನ್" ಎಂಬ ಪತ್ರಿಕೆಯ ಈಚಿನ ಸಂಚಿಕೆಯೊಂದರಲ್ಲಿ ಮಾಡಿರುವರು. ಸಸ್ಯಗಳು ಹೂಬಿಡುವುದನ್ನು ನಿಯಂತ್ರಿಸುವ ಸಂಗತಿಯು ಕತ್ತಲೆಯ ಅವಧಿ ಎಂಬುದು ತೀರಾ ಸರಳವಾದ ಸಂಶೋಧನೆಯೆನಿಸೀತು. ಕ್ರೈಸಾಂತೆಮಮ್ ಎಂಬ ಸಸ್ಯಜಾತಿಯು ದಿನವು ಸಣ್ಣದಾಗಿದ್ದು ರಾತ್ರಿಕಾಲ ದೀರ್ಘವಿದ್ದಾಗ ಮಾತ್ರ ಹೂಬಿಡುತ್ತದೆ. ಹಗಲುಹೊತ್ತಿನಲ್ಲಿ ಈ ಸಸ್ಯವನ್ನು ಕತ್ತಲಿನಲ್ಲಿಟ್ಟರೆ ಅದರಿಂದ ಪುಷ್ಪ ಅರಳುವ ಕ್ರಿಯೆಗೇನೂ ಬಾಧಕಬರುವುದಿಲ್ಲ; ಆದರೆ, ಸ್ವಲ್ಪ ಸಮಯದ ಮಟ್ಟಿಗಾದರೂ ಕೃತಕ ಬೆಳಕನ್ನು ರಾತ್ರಿಹೊತ್ತು ಈ ಸಸ್ಯದ ಮೇಲೆ ಚೆಲ್ಲಿದರೆ ಸಾಕು, ಇದು ಹೂಬಿಡುವುದಿಲ್ಲ. ಏಕೆಂದರೆ ಸಾಕಾದಷ್ಟು ಕತ್ತಲೆ ಅದಕ್ಕೆ ದೊರೆಯುವುದಿಲ್ಲ. ಈ ಕತ್ತಲೆಯ ಅವಧಿಯ ... ಜಾತಿಗೆ ಒಪ್ಪುವ ರೀತಿಯಲ್ಲಿ ಅಳವಡಿಸಿಕೊಂಡು—ಬೇಕೆಂದಾಗ ಹೂ ಅರಳುವಂತೆ ಮಾಡುವ ಕಲೆಯನ್ನು ಹೂವಾಡಿಗರು ಈಗೀಗ ಕರಗತಮಾಡಿಕೊಳ್ಳುತ್ತಿರುವರು! ಆದರೆ ಹೂ ಗಿಡಗಳೆಂದರೆ ಪ್ರೀತಿಪಡುವ ಜನರು ಉತ್ತರ ಅ

(೧೦ನೇ ಪುಟ ನೋಡಿರಿ)



ಮಿತ ದರದಲ್ಲಿ
ಚಲೋ ಗಡಿಯಾರಗಳೂ
ಟೈಮ್‌ಪೀಸುಗಳೂ
ದೊರೆಯುತ್ತವೆ.
ವಿವರಗಳಿಗೆ ಬರೆಯಿರಿ:
MUBARAK & CO
Watch & Clock
Specialists,
MADRAS 3.
ಮುಬಾರಕ್ & ಕೋ
ವಾಚ್ ಎಂಡ್ ಕ್ಲಾಕ್
ಸ್ಪೆಶ್ಯಲಿಸ್ಟ್ಸ್
ಮದ್ರಾಸು 3

ZANDU

ಝಂಡೂ ಫಾರ್ಮಸಿಯ
ಮನೆಮದ್ದುಗಳನ್ನೇ ಸದಾ
ಉಪಯೋಗಿಸಿರಿ.

ಝಂಡೂ ಬ್ರಾಹ್ಮೀ ಹೇರ್ ಆಯಿಲ್:– ಮಿದುಳಿಗೆ ತಂಪು– ಮನಸ್ಸಿಗೆ ಉಲ್ಲಾಸವೀಯುವುದು. 1ಪೌಂಡಿಗೆ ರೂ. 3–8–0 ಕಾಲು ರಾತ್ಲಿಗೆ ರೂ. 1.
ಝಂಡೂ ಸರಸಪರಿಲ್ಲಾ:– ರಕ್ತವನ್ನು ಶುದ್ಧಗೊಳಿಸಲು ಹೆಸರುವಾಸಿಯಾದುದು ಚರ್ಮರೋಗಗಳನ್ನು ಗುಣಪಡಿಸಬಲ್ಲುದು. 4ಔನ್ಸ್ ಬಾಟ್ಲಿ 1ರ ರೂ 1–5–0
ಝಂಡೂ ಬಾಲಾಮೃತ:–ಅನಾರೋಗ್ಯವುಳ್ಳ ಮಕ್ಕಳಿಗೆ ಆದರ್ಶ ಟಾನಿಕ್. 4ಔನ್ಸ್ ಬಾಟ್ಲಿ 1ರ ರೂ. 1–2–0
ಝಂಡೂ ಬಾಮ್:–ತಲೆ ಸಿಡಿತ ಮೊದಲಾದ ಬೇನೆಗಳಿಗೆ 1 ಸೀಸೆಗೆ ರೂ1.

ಝಂಡೂ ಫಾರ್ಮಸಿಯ ದ. ಕ. ಜಿಲ್ಲೆಯ
ಎಲ್ಲಾ ಏಜಂಟರಲ್ಲೂ ದೊರೆಯುವುವು.
ಸವಿವರ ಕ್ಯಾಟಲಾಗಿಗೆ ಈ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ;–

DAMODER & CO.,
Nainiappa Naicken Sreet, MADRAS. 3

ಪ್ರಕಟಣೆ

ಶಿರ್ವ ಪಂಚಾಯತ್ ಬೋರ್ಡಿಗೆ ಒಳಪಟ್ಟ ಮಂಚಕಲ್ಲು ಸಂತೆಮಾರ್ಕೆಟನಲ್ಲಿ ಮತ್ತು ದಿನಚರಿ ಮಾರ್ಕೆಟ್‌ನಲ್ಲಿ 1953ನೇ ಇಸವಿ ಎಪ್ರಿಲ್ ತಿಂಗಳ ತಾರೀಕು 1ರಿಂದ 1954ನೇ ಇಸವಿ ಮಾರ್ಚ್ ತಾರೀಕು 31ರವರೆಗೆ ಸುಂಕ ವಸೂಲು ಮಾಡುವ ಸ್ವತಂತ್ರವನ್ನು ಮತ್ತು ಮಾರ್ಕೆಟ್ ಶೈಡು ಕಟ್ಟೋಣಗಳನ್ನು 3 ವರ್ಷದವರೆಗೆ ಬಾಡಿಗೆಗೆ ವಹಿಸಿಕೊಳ್ಳುವ ಹಕ್ಕನ್ನು ಕೂಡಾ ತಾ. 28–3–53ನೇ ಶನಿವಾರ ದಿನ ಸಾಯಂಕಾಲ ಗಂಟೆ 4ಕ್ಕೆ ಪಂಚಾಯತ್ ಬೋರ್ಡ್ ಆಫೀಸಿನ ಬಳಿ ಪ್ರೆಸಿಡೆಂಟರಿಂದ ಯಾ ಅವರಿಂದ ಅಧಿಕಾರ ಹೊಂದಿದವರಿಂದ ಬಹಿರಂಗವಾಗಿ ಏಲಂ ಮಾಡೋಣಾಗುವದು, ಏಲಂನ ಎಲ್ಲಾ ಶರ್ತಗಳನ್ನು ಆಫೀಸಿನಲ್ಲಿ ಬಂದು ತಿಳಿಯಬಹುದು ಎಂಬುದನ್ನು ಈ ಮೂಲಕ ಎಲ್ಲಾ ಜನರಿಗೆ ತಿಳಿಸೋಣಾಗುತ್ತದೆ.

ಎಸ್. ಅಣ್ಣಯ್ಯ ಹೆಗ್ಡೆ.
ಪ್ರೆಸಿಡೆಂಟ್
ಪಂಚಾಯತ್ ಬೋರ್ಡ್ ಶಿರ್ವ
ಶಿರ್ವ ತಾ. 26-2-53

ಪುತ್ತೂರು ಡಿ. ಮು. ಕೋರ್ಟಿನಲ್ಲಿ

S. C 301/1952

K R. ಅಚಾರ್—ವಾದಿ

ಕೂವಾದ ಶೆಟ್ಟಿ, ರಾಮಯ್ಯ ಶೆಟ್ಟಿ ಮಗ, ಬಂಟ್ವಾಳ ತಾಲೂಕು ಅಲಂಕಾರು ಗ್ರಾಮದಲ್ಲಿರುವವ—ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ–

ನಿಮ್ಮಿಂದ ವಾದಿಗೆ ಸಲ್ಲತಕ್ಕ ಗೇಣಿ ಬಾಕಿಗೆ ದಾಕಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 19-3-1953ಕ್ಕೆ ಇಟ್ಟಿರುವುದರಿಂದ ನೀವು ಸದ್ರಿ ವ್ಯಾದೆ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ಉತ್ತರ ... ಇಲ್ಲವಾದರೆ ಸದ್ರಿ ದಾವೆಯಲ್ಲಿ ನಿಮ್ಮನ್ನು ಏಕಪಕ್ಷ ಮಾಡಿ ತೀರ್ಪು ಕೊಡಲಾಗುವುದು.

(ಕೋರ್ಟಿನ ಹುಕುಂ ಪ್ರಕಾರ

S. Soorappya
Vakil for Plaintiff.
ಪುತ್ತೂರು ಮಂಗಳೂರು, ತಾ 3-3-1953

ರಶಿಯಾದ ಜನತೆಗೆ ಭಾರತದ ಸಂದೇಶ

ತನ್ನ ವ್ಯಕ್ತಿತ್ವದ ವರ್ಚಸ್ಸನ್ನು ವಿಶ್ವಶಾಂತಿಯ ಪ್ರಸ್ಥಾಪನೆಗಾಗಿ ವ್ಯಯಿಸಿದ ಸ್ಟಾಲಿನ್ನರ ಮೃತ್ಯು

ಗವರ್ನರರ ಭಾಷಣ

ಮದ್ರಾಸು ರಾಜ್ಯದ ಎರಡೂ ಶಾಸನ ಸಭೆಗಳ ಸಂಯುಕ್ತ ಅಧಿವೇಶನವನ್ನು ಉದ್ದೇಶಿಸಿ ಗವರ್ನರ ಶ್ರೀ ಪ್ರಕಾಶರು ದಿನಾಂಕ ೬ರಂದು ಮಾತನಾಡಿದರು. ಆಂಧ್ರ ರಾಜ್ಯವು ಸದ್ಯದಲ್ಲಿಯೇ ನಿರ್ಮಾಣಗೊಳ್ಳಲಿರುವುದರಿಂದ, ಆಂಧ್ರ ಪ್ರತಿನಿಧಿಗಳಿಂದ ಕೂಡಿದ ಮದ್ರಾಸಿನ ಶಾಸನಸಭಾಧಿವೇಶನಗಳಲ್ಲಿ ಇದೇ ಕೊನೆಯದಾಗುತ್ತದೆ. ಗವರ್ನರರು ತಮ್ಮ ಭಾಷಣದಲ್ಲಿ ಈ ಸಂಗತಿಯನ್ನು ಪ್ರಸ್ತಾಪಿಸುತ್ತಾ, ಹೊಸರಾಜ್ಯದ ಶಾಸನಸಭೆಯಾದರೂ ಮದ್ರಾಸು ರಾಜ್ಯದ ಸಭೆಯಂತೆ ಗೌರವಯುತವಾಗಿ ಕೆಲಸವನ್ನು ನಿರ್ವಹಿಸುವಂತಾಗಲೆಂದು ಹಾರೈಸಿ, ಆಂಧ್ರ ಸದಸ್ಯರಿಗೆ ಶುಭ ಕೋರಿದರು. ವಾಂಚೂರ ವರದಿಯು ಇನ್ನೂ ಕೇಂದ್ರ ಸರಕಾರದ ಪರಿಶೀಲನೆಯಲ್ಲಿ ಇದೆ ಈ ಬಗ್ಗೆ ಕೇಂದ್ರವು ಒಂದು ನಿರ್ಣಯಕ್ಕೆ ಬಂದಕೂಡಲೇ, ಮದ್ರಾಸು ರಾಜ್ಯ ಸರಕಾರವು ನೂತನ ರಾಜ್ಯವು ಬೇಗನೇ ಅಸ್ತಿತ್ವಕ್ಕೆ ಬರುವಂತೆ ಅಗತ್ಯವಿರುವ ಎಲ್ಲ ಕಾರ್ಯಗಳನ್ನೂ ವಿಳಂಬವಿಲ್ಲದೆ ನೆರವೇರಿಸುವುದೆಂದು ಗವರ್ನರರು ಆಶ್ವಾಸನೆಕೊಟ್ಟರು. ಗವರ್ನರರು ಕಳೆದ ಅಧಿವೇಶನದಿಂದ ಇಂದಿನವರೆಗಿನ ಪರಿಸ್ಥಿತಿಯನ್ನು ವಿಹಂಗಮ ದೃಷ್ಟಿಯಿಂದ ತಮ್ಮ ೩೦ ನಿಮಿಷಗಳ ಭಾಷಣದಲ್ಲಿ ಅವಲೋಕಿಸಿದರು. ಬರಗಾಲ ಮತ್ತು ಬಿರುಗಾಳಿಗಳಿಂದ ಪೀಡಿತವಾದ ಜನತೆಯ ಕಷ್ಟಗಳನ್ನು ಪರಿಹರಿಸುವುದಕ್ಕೆ ಸರಕಾರವು ಮನಃಪೂರ್ವಕ ನೋಡಿದೆ ಎಂಬುದನ್ನು ವರ್ಣಿಸಿದರು. ಭೂಕಂದಾಯದಲ್ಲಿರಿಯಾಯತಿತೋರಿಸಲಾಗಿದೆಯೆಂದೂ ಪುನರ್ನಿವೇಶನದ ಬಗ್ಗೆ ಪರಿಹಾರ ಧನವನ್ನು ನೀಡಲಾಗಿದೆಯೆಂದೂ ಗವರ್ನರರು ಹೇಳಿದರು ಸರಕಾರದ ಹಣಕಾಸಿನ ಪರಿಸ್ಥಿತಿಯು ಇನ್ನಷ್ಟು ಬಿಗಡಾಯಿಸಿರುವುದರಿಂದ ಹೊಸ ಯೋಜನೆಗಳಾವುವನ್ನೂ ಕೈಗೊಳ್ಳುವಂತಿಲ್ಲ; ವಿದ್ಯುಚ್ಛಕ್ತಿ ಮತ್ತು ನೀರಾವರಿಯ ಯೋಜನೆಗಳಲ್ಲಿಯೂ ಕೆಲವನ್ನು ನಿಲ್ಲಿಸಬೇಕಾಗಿ ಬಂತೆಂದು ಗವರ್ನರರೆಂದರು. ಕೇಂದ್ರ ಸರಕಾರವು ಆಪತ್ಕಾಲದಲ್ಲಿ ನೆರವಿಗೆ ಬಂದು ಒಂದೂವರೆ ಕೋಟಿ ರೂಪಾಯಿಗಳ ಧನಸಹಾಯ ವಿತ್ತುದರಿಂದ ತುಂಗಭದ್ರಾ ಮತ್ತು ಕೆಳಭವಾನಿ ಸಾಗರದ ಅಣೆಕಟ್ಟಿನ ಕಾರ್ಯವು ನಿರ್ದಿಷ್ಟ ರೀತಿಯಲ್ಲಿ ಪ್ರಗತಿ ಹೊಂದುತ್ತದೆ ಎಂದರು.

ಭೂಕಂದಾಯದ ಸರ್‌ಚಾರ್ಜ

ಗವರ್ನರರು ತಮ್ಮ ಭಾಷಣದಲ್ಲಿ ಭೂಕಂದಾಯದ ಮೇಲ್ತೆರಿಗೆಯನ್ನು (ಸರ್‌ಚಾರ್ಜ) ಹೇರಿಸುವ ವಿಚಾರವನ್ನು ಸರಕಾರವು ಪ್ರಕೃತ ಬಿಟ್ಟುಕೊಟ್ಟಿದೆ ಎಂದು ಸಾರಿದರು. ಆಂಧ್ರರಾಜ್ಯವು ಅಸ್ತಿತ್ವಕ್ಕೆ ಬರಲಿರುವುದರಿಂದ ಅವರಿಗೆ ಇಂಥದೊಂದು ಮಹತ್ವದ ಕಾಯಿದೆಯನ್ನು ತಡೆದು ನಿಲ್ಲಿಸಲು ಸರಕಾರ ನಿರ್ಧರಿಸಿದೆ ಶಾಸನ ಸಭೆಯ ಪ್ರಕೃತ ಅಧಿವೇಶನವು ವಿಚಾರಿಸತಕ್ಕ ಆರು ಮಸೂದೆಗಳನ್ನೂ ಸಂಕ್ಷೇಪವಾಗಿ ಗವರ್ನರರು ವಿವರಿಸಿದರು. ಅವುಗಳಲ್ಲಿ ಒಂದು ಚುನಾವಣೆಯ ಸಂಬಂಧದ ಶಾಸನಕ್ಕೆ ತಿದ್ದುಪಡಿಯಾಗಿರುತ್ತದೆ. ತಮ್ಮ ಭಾಷಣದ ಅಂತ್ಯದಲ್ಲಿ ಗವರ್ನರರು ರಶಿಯಾದ ಸರ್ವಾಧಿಕಾರಿ ಮಾರ್ಶಲ್ ಸ್ಟಾಲಿನ್ನರು ಮೃತ್ಯು ಹೊಂದಿದ ಸಂಗತಿಯನ್ನು ಉಲ್ಲೇಖಿಸಿ, ದಿವಂಗತರ ಗೌರವಾರ್ಥ ಎದ್ದು ನಿಂತು ಮೌನ ಪ್ರಾರ್ಥನೆ ಸಲ್ಲಿಸಬೇಕೆಂದು ಕೇಳಿಕೊಂಡರು. ಮಾರ್ಶಲ್ ಸ್ಟಾಲಿನ್ನರು ಮೊನ್ನೆ ಗುರುವಾರ ೫ನೇ ದಿನಾಂಕ ರಾತ್ರಿ ೯ ತಾಸಿನ ಸುಮಾರಿಗೆ ಮರಣಗೊಂಡ ಸಂಗತಿ ಇಷ್ಟರಲ್ಲಿಯೇ ಲೋಕಕ್ಕೆಲ್ಲಾ ತಿಳಿದಿದೆ. ದೇಶವಿದೇಶಗಳಲ್ಲಿ ಸ್ಟಾಲಿನ್ನರ ಮೃತ್ಯುವಿನ ಬಗ್ಗೆ ಸಂತಾಪ ವ್ಯಕ್ತಗೊಳಿಸಿದ್ದಲ್ಲದೆ- ರಶಿಯಾವನ್ನು ಇಂದಿನ ಮಟ್ಟಕ್ಕೆ ಒಯ್ದು ಮುಟ್ಟಿಸಿದ ಮಹಾನುಭಾವನೆಂದು ಅವರ ಕೀರ್ತಿಗಾನವನ್ನ ಅನೇಕಾನೇಕ ಧುರೀಣರು ಮಾಡಿದರು. ಸ್ಟಾಲಿನ್ನರು ಪ್ರತಿಪಾದಿಸುವ ಕಮ್ಯೂನಿಸ್ಟ ತತ್ವವು ಪ್ರಜಾಪ್ರಭುತ್ವಕ್ಕೆ ತೀರಾ ವಿಸಂಗತವಾಗಿದೆ ನಿಜವಾದರೂ- ಅವರು ತಮ್ಮದೇ ಆದ ದಾರಿಯಲ್ಲಿ ದೃಢವಾಗಿ ಹೆಜ್ಜೆಯಿಟ್ಟು ರಶಿಯಾವಿಗೆ ಗೌರವಸ್ಥಾನವನ್ನು ದೊರಕಿಸಿ ಕೊಟ್ಟರೆಂಬುದನ್ನು ಮರೆಯಲಾಗದು. ಇಂದು ಜಗತ್ತಿನಲ್ಲಿ ಅಮೇರಿಕೆಗೆ ಸಮಬಲವಾಗಿ ಉಳಿದಿರುವ ಒಂದೇ ಒಂದಾದ ರಾಷ್ಟ್ರ ರಶಿಯಾವೆಂದು ಎಲ್ಲರೂ ಬಲ್ಲರು. ಉಕ್ಕಿನ ಪರದೆಯ ರಕ್ಷಣೆಯನ್ನು ಪಡೆದು ಸ್ಟಾಲಿನ್ನರು ತಮ್ಮ ವ್ಯಕ್ತಿತ್ವದ ಪ್ರಭಾವದಿಂದ ಝಾರರ ಕಾಲದಲ್ಲಿ ಜರ್ಜರಿತವಾಗಿದ್ದ ರಶಿಯಾದ ಜನತೆಯನ್ನು ಉದ್ಧರಿಸಿದರೆಂದು ಹೇಳುವುದಕ್ಕೆ ಸಂಕೋಚಪಡುವ ಅಗತ್ಯವಿಲ್ಲ. ಪ್ರಾಮಾಣಿಕವಾದ ಮತಭೇದಗಳಿದ್ದರೂ ಕೂಡ- ವ್ಯಕ್ತಿಯ ಕತೃತ್ವ ಶಕ್ತಿಗೆ ತಲೆತಗ್ಗಿಸುವುದರಲ್ಲಿ ನಾಚಿಕೆ ಇಲ್ಲ.

ಸ್ಟಾಲಿನ್ನರಿಗೆ ಶ್ರದ್ಧಾಂಜಲಿ.

ಆದುದರಿಂದಲೇ ಭಾರತವು ಸ್ಟಾಲಿನ್ನರ ನಿಧನವನ್ನು ಕುರಿತು ತನ್ನ ಸಂತಾಪವನ್ನು ವ್ಯಕ್ತಗೊಳಿಸಿದ್ದು ಯೋಗ್ಯವಿದೆ. ಭಾರತದ ಪಾರ್ಲಿಮೆಂಟಿನ ಎರಡೂ ಸಭೆಗಳಲ್ಲಿ ನೆಹರೂರವರು ಸ್ಟಾಲಿನ್ನರ ಗುಣಗಾನ ಮಾಡಿ, ದಿವಂಗತರ ಗೌರವಾರ್ಥ ಸಭೆಯನ್ನು ಮುಂದೂಡಬೇಕೆಂದು ಕೇಳಿಕೊಂಡರು. ಸ್ಟಾಲಿನ್ನರು ತನ್ನ ವ್ಯಕ್ತಿತ್ವದ ಪ್ರಭಾವವನ್ನು ಲೋಕಶಾಂತಿಯನ್ನು ಪ್ರಸ್ಥಾಪಿಸುವ ಕಾರ್ಯಕ್ಕೆ ಉಪಯೋಗಿಸಿದರೆಂದು ನಮ್ಮ ತಿಳಿವಳಿಕೆ ಹೇಳುತ್ತದೆ —ಎಂದು ನೆಹರೂ ನುಡಿದರು. ಲೋಕಶಾಂತಿಯನ್ನು ಸ್ಟಾಲಿನ್ನರು ಮನಃಪೂರ್ವಕ ಬಯಸುತ್ತಿದ್ದರೆಂದು ನೆಹರೂರಂಥ ಹೊಣೆಗಾರ ಜನರು ಹೇಳುವುದೆಂದರೆ, ಅದಕ್ಕಿಂತ ಮಿಗಿಲಾದ ಗೌರವ ಸಂಶಯದೃಷ್ಟಿಗೆ ಸದಾ ಒಳಗಾಗಿರುವ ಸ್ಟಾಲಿನ್ನರಿಗೆ ಬೇರೆ ಇರಲಿಕ್ಕಿಲ್ಲ. ರಶಿಯಾದಲ್ಲಿ ಭಾರತದ ರಾಯಭಾರಿಯಾಗಿ ಎರಡೂವರೆ ವರ್ಷ ಕಾಲವಿದ್ದು, ಮತ್ತು ಎರಡು ಸಲ ಸ್ಟಾಲಿನ್ನರನ್ನು ಕಂಡು ಮಾತನಾಡುವ ಅಪೂರ್ವ ಅವಕಾಶವನ್ನು ದೊರಕಿಸಿಕೊಂಡ ಉಪರಾಷ್ಟ್ರಾಧ್ಯಕ್ಷ ಡಾ| ರಾಧಾಕೃಷ್ಣನ್ನರೂ ಸ್ಟಾಲಿನ್ನರು ತಮ್ಮ ದೇಶವನ್ನು ಅಭಿವೃದ್ಧಿಗೆ ತಂದರೆಂದು ಕೊಂಡಾಡಿದರು. ರಶಿಯಾದಲ್ಲಿ ವ್ಯಕ್ತಿಸ್ವಾತಂತ್ರ್ಯಕ್ಕೆ ಆಸ್ಪದವಿಲ್ಲದಿರುವುದೊಂದು ಕೊರತೆ ಎಂಬ ಅಭಿಪ್ರಾಯವನ್ನು ಸ್ಟಾಲಿನ್ನರು ಮನ್ನಿಸುತ್ತಿದ್ದರೂ ರಶಿಯಾದ ಪ್ರಕೃತ ಪರಿಸ್ಥಿತಿಯನ್ನು ನೋಡಿದರೆ ಅಂಥ ದಾಸ್ಯ ಅನಿವಾರ್ಯವೆಂದು ಸ್ಟಾಲಿನ್ನರು ಹೇಳುತ್ತಿದ್ದರು. ಸಕಲ ಅನುಕೂಲತೆಗಳೂ ಸೌಭಾಗ್ಯಗಳೂ ಜನಸಾಮಾನ್ಯಕ್ಕೆ ಒದಗಿ ಬಂದಾಗಲೇ ವ್ಯಕ್ತಿಸ್ವಾತಂತ್ರ್ಯವು ಉಪಯೋಗಕ್ಕೆ ಬಂದೀತೆಂದು ಅವರ ಅಭಿಪ್ರಾಯ. ವಿಶಿಷ್ಟ ಪ್ರಸಂಗಗಳಲ್ಲಿ ಪ್ರಜಾಪ್ರಭುತ್ವದಂಥ ಉದಾರ ವರ್ತನೆಯು ಉಪಯೋಗಕ್ಕೆ ಬರದೆಂದೂ ಬಿಗಿಯಾದ ಕಡಿವಾಣದ ಬಲವೇ ಬೇಕಾಗುತ್ತದೆ ದೂ ನಮ್ಮ ಅನುಭವಕ್ಕೂ ಬಾರದಿಲ್ಲ. ಭಾರತದ ರಾಜ್ಯಘಟನೆಯಲ್ಲಿ ಕೂಡ ಗಂಡಾಂತರ ಪರಿಸ್ಥಿತಿ ಸನ್ನಿಹಿತವಾಗಿದೆ ಎಂದು ರಾಷ್ಟ್ರಾಧ್ಯಕ್ಷರಿಗೆ ಮನವರಿಕೆಯಾದರೆ ಎಲ್ಲ ಶಾಸನ ಸಭೆಗಳನ್ನೂ ವಿಸರ್ಜಿಸಿ, ತಾವೇ ಆಡಳಿತ ಸೂತ್ರವನ್ನು ತಮ್ಮ ಕೈಯಲ್ಲಿ ತೆಗೆದುಕೊಳ್ಳಲು ಅವಕಾಶವಿದೆ. ಶಾಂತಿ ಸಮಾಧಾನಗಳು ನೆಲಸಿದ್ದಾಗ ಮಾತ್ರ

ಏಳು ವರುಷಗಳಲ್ಲಿ ಫಲ

ನಮ್ಮ ಪಿಗ್ಮಿ ಮುಡಿಮದಾರರಲ್ಲಿ ದಿನಪಿಡಿ ಕೆಲಸ ಮಾಡುವ ಶ್ರಮಜೀವಿಗಳು, ಅಂಗಡಿಗಾರರು, ವಕೀಲರು, ಡಾಕ್ಟರರು, ಎಂಜಿನಿಯರರು, ಬೇಸಾಯಗಾರರು, ವರ್ಗದಾರರು ಇತ್ಯಾದಿ ತರಗತಿಯವರಿರುವರು. ಅವರ ಪಿಗ್ಮಿ ಮುಡಿಮುಗಳು ಚಿಕ್ಕ ಪುಟ್ಟ ರೇವಣಾತಿಗಳಿಂದ ಪ್ರಾರಂಭವಾದುವು ಅಂದು ಇಲಿಯಂತಿದ್ದುವು ಇಂದು ಹುಲಿಯಂತಾಗಿವೆ. ಅಂತಹ ವಿವೇಕವುಳ್ಳ ದೂರ ದರ್ಶಿ ಸಂಪನ್ನ ಪಿಗ್ಮಿ ಠೇವಣಾತಿದಾರರ ಕೂಟಕ್ಕೆ ನೀವೂ ಕೂಡಾ ಸೇರಿ ಭಾಗ್ಯವಂತರಾಗ ಬೇಕಾಗಿ ಆಹ್ವಾನಿಸುತ್ತೇವೆ.

ಆಧಾರ ವಹಿವಾಟು ರೂ 5,00,00,000ಕ್ಕೂ ಮಿಕ್ಕಿದೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925 ಹೆಡ್ ಆಫೀಸು: ಉಡುಪಿ.

THE CANARA INDUSTRIAL & BANKING SYNDICATE LIMITED

ESTD: 1925 H. O: **UDIPI**

PLACE YOUR LIFE ASSURANCE WITH A COMPANY OF YOUR OWN — — —

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policyholders and Representatives At whatever stage We welcome your association with the POPULAR.

The Popular Insurance Co. Ltd.

"Popular Buildings", MANGALORE—I.

In the Court of the Subordinate Judge of South Kanara.

A. S; No. 243/1952

Between:—

Keshava Ballulaya and another—
Appellants

and

Shankara and others—
Respondents

NOTICE

To

R—2 Padmanabha Ballulaya son of Krishna Ballulaya.

R—3 Krishna Ballulaya alias Krishna Embrandri, son of Padmanabha Ballulaya.

Both are residing at Thiruvalla Temple in Travancore State within the jurisdiction of Thiruvalli District Munsif's Court.

Please take notice that the Appellants have filed the above appeal, against the decree and judgement of the D. M. C. Kasaragod in O. S. No. 568/1949 dated 7—8—1952, and the said appeal now stands posted to 17—3—1953 for hearing. Should you fail to appear on that day either in person or by pleader the appeal will be decided in your absence.

By order.

Sd. G. Somashekar Rao, B.A.B.L.
Vakil for Appellant.

Mangalore, Dated 5—3—1953.

ಜಾತೀಯವಾದಿಗಳ ಅನುಚಿತ ಆಂದೋಲನ

ಪೆಪ್ಸು ರಾಜ್ಯದ ಅನಿಶ್ಚಿತ ಪರಿಸ್ಥಿತಿಯ ಪರಿಣಾಮವಾಗಿ ರಾಷ್ಟ್ರಾಧ್ಯಕ್ಷರ ಆಡಳಿತೆಯ ಪ್ರಾರಂಭ

ಪ್ರಜಾಪ್ರಭುತ್ವದ ಮೂಲಕ ಆಡಳಿತವನ್ನು ವಿಕೇಂದ್ರೀಕರಿಸಿ, ಹೊಣೆಗಾರಿಕೆಯನ್ನು ಹಂಚಿಕೊಳ್ಳಲು ಬರುತ್ತದೆ; ಅನ್ಯಥಾ ಸಾಧ್ಯವಿಲ್ಲ.

ಪೆಪ್ಸುವಿನ ಪರಿಸ್ಥಿತಿ

ಇಂಥ ಉತ್ಕಟ ಪರಿಸ್ಥಿತಿಗೆ ಉದಾಹರಣೆಯಾಗಿ ಪ್ರಕೃತ ಪೆಪ್ಸು ರಾಜ್ಯವನ್ನು ತೆಗೆದುಕೊಳ್ಳಬಹುದು. ರಾಷ್ಟ್ರಾಧ್ಯಕ್ಷರು ರಾಜ್ಯಘಟನೆಯನ್ವಯ ತನಗೆ ಪ್ರಾಪ್ತವಾದ ಅಧಿಕಾರದ ಬಲದಿಂದ ಪೆಪ್ಸುದಲ್ಲಿ ಶಾಸನ ಸಭೆಯನ್ನು ವಿಸರ್ಜಿಸಿ, ತಾನೇ ರಾಜ್ಯಸೂತ್ರವನ್ನು ವಹಿಸಿರುವರು. ಪೆಪ್ಸುವಿನ ರಾಜಪ್ರಮುಖರು ರಾಷ್ಟ್ರಾಧ್ಯಕ್ಷರ ಹೆಸರಿನಲ್ಲಿ ಅವರು ನೇಮಿಸಿದ ಪ್ರತಿನಿಧಿಯೊಬ್ಬನ ಸಲಹೆಗಳಿಗನುಸಾರ ಅಧಿಕಾರ ಚಲಾಯಿಸುವರು. ರಾಷ್ಟ್ರಾಧ್ಯಕ್ಷರೇ ನೇರಾಗಿ ಈ ರೀತಿ ಅಧಿಕಾರವನ್ನು ಕೈಗೆ ತೆಗೆದು ಕೊಳ್ಳುವುದೆಂದರೆ ಪ್ರಜಾ ಸತ್ತೆಯನ್ನು ಸಿದಿಗೇರಿಸಿದಂತೆಯೇ ಎಂಬುದು ಅಕ್ಷರಶಃ ಸತ್ಯ. ಆದರೆ ಪೆಪ್ಸುದಲ್ಲಿನ ಪರಿಸ್ಥಿತಿಯು ಪ್ರಜಾಪ್ರಭುತ್ವಕ್ಕೆ ಅನುಗುಣವಾದ ರೀತಿಯಲ್ಲಿ ಆಡಳಿತವನ್ನು ನಿರ್ವಹಿಸುವುದಕ್ಕೆ ಸರ್ವಥಾ ಅನುಕೂಲವಿಲ್ಲ ಎಂಬುದರಿಂದ ಈ ಕ್ರಮವನ್ನು ತೆಗೆದುಕೊಂಡರು. ಚುನಾವಣೆಗಳ ಕಾಲದಲ್ಲಿ ಅಕ್ರಮ ನಡೆದ ಘಟನೆಗಳು ಪೆಪ್ಸು ರಾಜ್ಯದಲ್ಲಿ ಇದ್ದಷ್ಟು ಬೇರೆಲ್ಲಿಯೂ ಇದ್ದಿರಲಿಕ್ಕಿಲ್ಲ. ಕಾಂಗ್ರೆಸಿನಂಥ ಮಹಾಸಂಸ್ಥೆಯ ಘನತೆ ಗೌರವಗಳನ್ನು ಗಾಳಿಗೆತೂರಿದ ಅಪಮಾನಜನಕ ಘಟನೆ ನೆರವೇರಿದ್ದಾದರೂ ಇಲ್ಲಿಯೇ. ಈ ಕಾರಣದಿಂದಲೇ-- ಕಾಂಗ್ರೆಸಿಗರು ಪ್ರಥಮವಾಗಿ ರಚಿಸಿದ ಮಂತ್ರಿಮಂಡಳವು ಅತ್ಯಲ್ಪಾವಧಿಯಲ್ಲಿಯೇ ಉರುಳಿ ಬಿತ್ತು. ಮತ್ತು ಗ್ಯಾನಸಿಂಗ ರಾಡೇವಾಲರ ಧುರೀಣತ್ವದಲ್ಲಿ ಸಂಯುಕ್ತರಂಗವು ಅಧಿಕಾರಕ್ಕೆ ಬಂತು. ಪೆಪ್ಸು ರಾಜ್ಯದ ಶಾಸನ ಸಭೆಗೆ ಆರಿಸಿ ಬಂದವರಲ್ಲಿ ಹಲವರ ಮೇಲೆ ತಕರಾರು ಅರ್ಜಿಗಳು ಸ್ವಾಭಾವಿಕವಾಗಿಯೇ ಬಂದುವು. ಅವುಗಳ ವಿಚಾರಣೆಯ ಪರಿಣಾಮವಾಗಿ ಐವರು ಮಂತ್ರಿಗಳನ್ನೊಳಗೊಂಡು ೧೦ ಮಂದಿಯ ಚುನಾವಣೆಯು ಇಷ್ಟರ ವರೆಗೆ ರದ್ದುಗೊಂಡಿದೆ. ಸ್ವತಃ ರಾಡೇವಾಲರರ ಚುನಾವಣೆಯೇ ಅಕ್ರಮವೆಂದು ಸಾರಲ್ಪಟ್ಟಿದೆ. ಈ ಕಾರಣದಿಂದ ರಾಡೇವಾಲರಿಗೆ ತಮ್ಮ ಮಂತ್ರಿಮಂಡಳದ ರಾಜೀನಾಮೆಯನ್ನೊಪ್ಪಿಸದೆ ಗತ್ಯಂತರವಿಲ್ಲನಾಯಿತು. ಯಾವುದೇ ಪಕ್ಷಕ್ಕಾದರೂ ನಿಚ್ಚಳವಾದ ಬಹುಮತವು ಶಾಸನ ಸಭೆಯಲ್ಲಿಲ್ಲದಿರುವುದರಿಂದ-- ರಾಷ್ಟ್ರಾಧ್ಯಕ್ಷರು ಶಾಸನಸಭೆಯನ್ನೆ ವಿಸರ್ಜಿಸಿದರು

ಧುರೀಣರ ಅಕ್ರಮ ನಡವಳಿಕೆ

ರಾಷ್ಟ್ರಾಧ್ಯಕ್ಷರ ಆಳಿಕೆಯಿಂದ ಈಗ ಪೂರಾ ಶಿಥಿಲಗೊಂಡಿರುವ ಆಡಳಿತವು ಬಿಗಿಯೇರೀತು. ಪೂರ್ವ ಪಂಜಾಬದಲ್ಲಿ ಕೆಲವು ಸಮಯಕ್ಕೆ ಹಿಂದೆ ಇದ್ದ ಪರಿಸ್ಥಿತಿಯೊಡನೆ ಪೆಪ್ಸುವಿನ ಪ್ರಕೃತ ಸ್ಥಿತಿಯನ್ನು ಹೋಲಿಸಬಹುದೇನೊ. ರಾಷ್ಟ್ರಾಧ್ಯಕ್ಷರ ಆಡಳಿತದಿಂದ ಪೂರ್ವಪಂಜಾಬದಲ್ಲಿ ವ್ಯವಸ್ಥೆಯು ನೆಲೆನಿಂತು ವಾತಾವರಣವು ಬಹಳ ಮಟ್ಟಿಗೆ ಸುಧಾರಿಸಿತು. ಪೆಪ್ಸು ರಾಜ್ಯದಲ್ಲಿ ಕೂಡ ಇದೇ ಪರಿಣಾಮವಾದೀತೆಂದು ವಿಶ್ವಾಸವಿದೆ. ಆದರೆ ರಾಷ್ಟ್ರಾಧ್ಯಕ್ಷರ ಆಡಳಿತೆಯ ವಿರುದ್ಧ ಕೆಲವು ವರ್ಗಗಳಲ್ಲಿ ಅಸಂತೋಷ ಹುಟ್ಟಿದ್ದು ಸ್ವಾಭಾವಿಕವೇ. ಸಭೆ ಮೆರವಣಿಗೆಗಳ ಮೂಲಕ ಮತಪ್ರದರ್ಶನ ಮಾಡಿ, ರಾಷ್ಟ್ರಾಧ್ಯಕ್ಷರ ಆಳಿಕೆಗೆ ಅಸಮ್ಮತಿಯನ್ನು ಸೂಚಿಸುವ ಪ್ರಯತ್ನಗಳು ಹಲವೆಡೆ ನಡೆದುವು. ಪಾರ್ಲಿಮೆಂಟಿನಲ್ಲಿ ಗೃಹಮಂತ್ರಿ ಕಟಜೂರವರು ಪೆಪ್ಸುವಿನ ಪರಿಸ್ಥಿತಿಯ ಹಿನ್ನೆಲೆಯನ್ನು ವಿಶದೀಕರಿಸಿ ಮಾತನಾಡಿದುದರಿಂದ-- ರಾಷ್ಟ್ರಾಧ್ಯಕ್ಷರ ಕ್ರಮದ ಬಗ್ಗೆ ಎಲ್ಲರಿಗೂ ಸಮಾಧಾನವುಂಟಾಗಿದೆ. ಮಾತ್ರವಲ್ಲ--ಬೇಗನೇ ಪೆಪ್ಸು ರಾಜ್ಯದಲ್ಲಿ ಹೊಸ ಚುನಾವಣೆಗಳು ನಡೆದು, ಪ್ರಜಾಪ್ರಭುತ್ವ ಪದ್ಧತಿಯನ್ವಯ ಶಾಸನವು ಜಾರಿಗೆ ಬರುವ ಭರವಸೆ ಇದೆ. ಪೆಪ್ಸುವಿನ ಪ್ರಕೃತ ಪರಿಸ್ಥಿತಿಗೆ ಅಲ್ಲಿಯ ಜನತೆಯ ಧುರೀಣರಲ್ಲಿರುವ ಕುಂದು ಕೊರತೆಗಳೇ ಕಾರಣವೆಂದೂ ಅಕ್ರಮವಾದ ನಡವಳಿಕೆಯನ್ನಿಟ್ಟುಕೊಂಡು ಹೇಗಾದರೂ ಅಧಿಕಾರ ಸ್ಥಾನವನ್ನು ಆಕ್ರಮಿಸಿಕೊಳ್ಳುವ ಮನೋವೃತ್ತಿಯಿಂದಾಗಿಯೇ ಇಂಥ ವಿಪತ್ತು ಬಂತೆಂದೂ ಯಾರಿಗೂ ಹೊಳೆಯದಿರದು. ಸ್ವತಃ ಕಾಂಗ್ರೆಸಿಗರೇ ತಪ್ಪು ದಾರಿ ತುಳಿದು ಜನತೆಯ ಆಗ್ರಹಕ್ಕೆ ಪಾತ್ರರಾದುದು ನೆಹರೂರಿಗೆ ತೀರಾ ಅಸಮಾಧಾನವನ್ನುಂಟು ಮಾಡಿದೆ. ಪೆಪ್ಸು ಕಾಂಗ್ರೆಸಿನ ಚಟುವಟಿಕೆಗಳನ್ನು ವಿಮರ್ಶಿಸಿ ವರದಿ ಮಾಡಲು ನೇಮಕ ಹೊಂದಿದ ಪಖ್ತರ್ ಮಲ್ ಜೈನರು ಪೂರ್ವ ಪಂಜಾಬ ಕಾಂಗ್ರೆಸಿನೊಡನೆ ಪೆಪ್ಸು ಕಾಂಗ್ರೆಸನ್ನು ವಿಲೀನಗೊಳಿಸಿದರೆ ಅದರಿಂದ, ಕಾಂಗ್ರೆಸಿನ ಶುದ್ಧೀಕರಣಕ್ಕೆ ಅನುಕೂಲವಾದೀತು ಎಂದಿರುವರು.

ಜಾತೀಯ ಚಳುವಳಿ

ಜಾತೀಯ ವಾದಿಗಳ ಪ್ರಚೋದನೆಯ ಪ್ರಭಾವದಿಂದ ಬೇಕೆಂದೇ ಗಂಡಾಂತರವನ್ನು ಸ್ವಾಗತಿಸುವ ಧಾರ್ಷ್ಟ್ಯಕ್ಕೆ ಭಾವನಾತ್ಮಕವಾಗಿ ಬಲಿಬೀಳುವ ಹುಚ್ಚು ಬುದ್ಧಿಯನ್ನು ನಮ್ಮಲ್ಲನೇಕರು ತೋರಿಸುತ್ತಿರುವುದು ವಿಷಾದಕರ. ಜಾತೀಯತೆಯನ್ನು ಎತ್ತಿಹಿಡಿಯುವ ಯಾವ ಪಕ್ಷಕ್ಕೂ ಸಾಮಾನ್ಯ ಜನತೆಯ ಪುರಸ್ಕಾರವಿಲ್ಲೆಂಬುದು ಮಹಾಚುನಾವಣೆಯಲ್ಲಿ ಸಿದ್ಧಗೊಂಡಿದೆ. ನೂರಕ್ಕೆ ಒಬ್ಬನಾದರೂ ಜಾತೀಯತಾವಾದಿಗಳಿಗೆ ಬೆಂಬಲ ಕೊಡಲು ಸಿದ್ಧನಿಲ್ಲ. ಇಂಥದರಲ್ಲಿ ಜನಸಂಘ, ಹಿಂದೂ ಮಹಾಸಭೆ, ರಾಮರಾಜ್ಯ ಪರಿಷತ್ತಿನಂಥ ಪಕ್ಷಗಳು ಜಮ್ಮು ಪ್ರಶ್ನೆಯೇ ಮುಂತಾದುವನ್ನು ಮುಂದುಮಾಡಿಕೊಂಡು ಅನಾವಶ್ಯಕವಾದ ಅಪಪ್ರಚಾರವನ್ನು ಕೈಗೊಂಡಿರುವುದು ತೀರಾ ಹೇಯವೆನಿಸಿದೆ. ಜನಸಂಘದ ಅಧ್ಯಕ್ಷರಾದ ಡಾ। ಶ್ಯಾಮ ಪ್ರಸಾದ ಮುಖರ್ಜಿಯವರು ಜಮ್ಮುವಿನ ಪರಿಸ್ಥಿತಿಯ ಕುರಿತು ಪ್ರಧಾನಿ ನೆಹರೂ ಹಾಗೂ ಶೇಖ ಅಬ್ದುಲ್ಲರೊಡನೆ ನಡೆಸಿದ ಪತ್ರವ್ಯವಹಾರಗಳಲ್ಲಿ ಜಮ್ಮು ಪ್ರಶ್ನೆಯನ್ನು ಬಿಡಿಸಲು ತಕ್ಕ ಕ್ರಮಗಳನ್ನು ಅನುಸರಿಸಲು ಒತ್ತಾಯಿಸಿದ್ದರೂ--ಪ್ರಧಾನಿ ನೆಹರೂರ ಕೇಳಿಕೆಯಂತೆ ಅನಗತ್ಯದ ಚಳುವಳಿಯನ್ನು ಅನಿರ್ಬಂಧವಾಗಿ ನಿಲ್ಲಿಸಲು ಮಾತ್ರ ಒಪ್ಪಿಗೆ ಸೂಚಿಸಲ್ಪಡಲಿಲ್ಲ. ಶೇಖ ಅಬ್ದುಲ್ಲಾರಂತೂ ಜಮ್ಮುವಿನ ಪ್ರಜಾಪರಿಷತ್ತು ಕೇವಲ ಜಾತೀಯ ಸ್ವರೂಪದಿಂದ ಕೂಡಿದೆ ಎಂಬುದನ್ನು ಸ್ಪಷ್ಟ ಮಾತುಗಳಲ್ಲಿ ವ್ಯಕ್ತಪಡಿಸಿರುವರು. ಪರಿಣಾಮವಾಗಿ ಶ್ಯಾಮ ಪ್ರಸಾದ ಮುಖರ್ಜಿಯವರು ತಮ್ಮ ಪ್ರಯತ್ನ ಅಸಫಲಗೊಂಡಿತೆಂದರುವರು. ಅಷ್ಟೇ ಅಲ್ಲ-- ಚಳುವಳಿಗೆ ಉಗ್ರ ಸ್ವರೂಪ ಕೊಡಲೆತ್ನಿಸಿ, ಜಮ್ಮು ವೀರರ ಭಸ್ಮದ ಮೆರವಣಿಗೆಯಲ್ಲಿ ಭಾಗವಹಿಸಿದರು. ಅಕ್ರಮವಾಗಿ ಈ ಮೆರವಣಿಗೆ ತೆಗೆದಿದ್ದುದರಿಂದ—ದಿಲ್ಲಿಯ ಮೇಜಿಸ್ಟ್ರೇಟರು ಶ್ಯಾಮಪ್ರಸಾದ ಮುಖರ್ಜಿ, ಮತ್ತು ಎನ್. ಸಿ. ಚಟರ್ಜಿಯವರನ್ನು ಬಂಧಿಸಿದರು. ಪಾರ್ಲಿಮೆಂಟಿನ ಸದಸ್ಯರ ಈ ಬಂಧನವು ಅನ್ಯ[illegible] ದೂರುಗಳು ಒಡನೆಯೇ ಬಂದುವು. ಆದರೆ ಪಾರ್ಲಿಮೆಂಟಿನ ಸದಸ್ಯರೆಂಬ ಗೌರವ ಸ್ಥಾನವನ್ನು ಅಲಂಕರಿಸಿದ ಕಾರಣದಿಂದಲೇ ನ್ಯಾಯವನ್ನು ಮುರಿಯುವ ಅಕ್ರಮ ವರ್ತನೆ ಖಂಡನೀಯ ವೆಂಬುದನ್ನು ಅವರು ಮರೆತಂತಿದೆ. ಈ ಘಟನೆಯ ಕುರಿತು ಪಾರ್ಲಿಮೆಂಟಿನಲ್ಲಿ ಉಂಟಾದ ಗೊಂದಲವಂತೂ ವಿರೋಧಿ ಗುಂಪಿನ ನಡವಳಿಕೆಯ ಮೇಲೆ ಕಲಂಕ ತರುವಂತಿದೆ

ಸಾರ್ವಾಂಗಿಕ ಏಳಿಗೆಯ ಕನಸು

ದೇಶದ ಭವಿಷ್ಯವನ್ನು ರೂಪಿಸುವ ಘನವಾದ ಹೊಣೆ ಹೊತ್ತಿರುವ ಜನರ ಪ್ರತಿನಿಧಿಗಳು ಬೇಜವಾಬ್ದಾರಿ ವರ್ತನೆಯನ್ನು ಇಟ್ಟುಕೊಳ್ಳುವುದಕ್ಕೆ ಬಲವಾದ ವಿರೋಧ ಸೂಚಿಸುವುದು ತೀರಾ ಅಗತ್ಯವೆನಿಸಿದೆ. ಯಾವುದೇ ರೀತಿಯಿಂದಲೂ ಅನ್ಯಾಯ ಮತ್ತು ಅಕ್ರಮಗಳಿಗೆ ಹಾಗು ವಿಧ್ವಂಸಕ ಚಟುವಟಿಕೆಗಳಿಗೆ ಬೆಂಬಲ ದೊರೆಯದೆ ರಾಷ್ಟ್ರದ ಪ್ರಗತಿಗೆ ಸಾಧಕವಾಗುವ ಕ್ರಿಯೆಗಳೇ ದೇಶಾದ್ಯಂತ ಜರಗುತ್ತಿರಬೇಕು. ನೆಹರೂ ಹೇಳಿದಂತೆ ನಾವು ಹಿಂದೆಯೂ ತಪ್ಪು ಮಾಡಿದ್ದೇವೆ, ಮುಂದೆಯೂ ಮಾಡಬಹುದು. ಆದರೆ ದೇಶವನ್ನು ಸಮೃದ್ಧಿ ಸಂಪನ್ನವಾಗಿಸುವ ಪ್ರಯತ್ನಗಳಲ್ಲಿ ಈ ಸೋಲು ಸಂಭವಿಸಿತೆಂಬುದನ್ನು ಮರೆಯಲಾಗದು. ಇಂಥ ಪ್ರತಿಯೊಂದೂ ಸೋಲು ನಮಗೆ ಹೊಸ ಅನುಭವವನ್ನು ನೀಡುತ್ತದೆ. ನಮ್ಮ ದೃಷ್ಟಿಯನ್ನು [illegible]ಸುತ್ತದೆ. ನಾವು ಐದಾರು ವರ್ಷಗಳಲ್ಲಿ ಏನು ಮಾಡಿದೆವೆಂಬುದನ್ನು ಇಷ್ಟು ಅಲ್ಪಾವಧಿಯಲ್ಲಿಯೇ ಅರಿತುಕೊಳ್ಳಲಾರೆವು. ರಾಷ್ಟ್ರಾಧ್ಯಕ್ಷರು ಇವನ್ನೆ ಇನ್ನೊಂದು ಮಾತಿನಲ್ಲಿ ಹೇಳುತ್ತಾ "ಕಣ್ಣಿಗೆ ತೀರಾ ಸಮೀಪವಾಗಿ ಒಂದು ವಸ್ತುವನ್ನು ಹಿಡಿದರೆ, ಅದರ ನಿಜಕಲ್ಪನೆಯನ್ನು ಮಾಡಿಕೊಳ್ಳಲು ಬರುವುದಿಲ್ಲ" ಎಂದಿರುವರು. ನವಭಾರತದ ನಿರ್ಮಾಣ ಕಾರ್ಯದಲ್ಲಿ ಸರಕಾರವು ಈಗ ಮಗ್ನವಾಗಿದೆ. ಪಂಚವಾರ್ಷಿಕ ಯೋಜನೆಯಂಥ ಸಾಹಸದ ಕಾರ್ಯದಲ್ಲಿ ತೊಡಗಿ ಪಕ್ಷಪಂಗಡಗಳ ಭೇದವಿಲ್ಲದೆ ಸಹಕಾರ ಹಾಗೂ ಸಹಾಯದ ಯಾಚನೆ ಮಾಡುತ್ತಿದೆ. ನಾವು ಸಾಧಿಸಿದ್ದೇನೆಂಬುದನ್ನು ಮುಂದಿನ ಪೀಳಿಗೆ [illegible]ಸಬೇಕು. ಇತಿಹಾಸಕಾರರು ವರ್ಣಿಸಬೇಕು ದೀರ್ಘಾವಧಿಯ ಪರಿಶೀಲನೆಯೇ ಸ್ಪಷ್ಟ ಚಿತ್ರವನ್ನು ತಂದೀತು. ಉದಾಹರಣೆಗೆ--ರೈಲ್ವೆಗಳು ಭಾರತದಲ್ಲಿ ಕಳೆದ ನೂರು ವರ್ಷಗಳಲ್ಲಿ ಮಾಡಿದ ಅಭಿವೃದ್ಧಿಯನ್ನು ನೋಡಬಹುದು. ಹೊಸದಿಲ್ಲಿಯಲ್ಲಿ ರೈಲ್ವೆಗಳ ಶತಮಾನೋತ್ಸವದ ಸಂಬಂಧ ಜರಗಿಸಿದ್ದ ಪ್ರದರ್ಶನಿಯ ಉದ್ಘಾಟನೆ ಮಾಡುತ್ತಾ ನೆಹರೂ ಭಾರತದ ಸಾರ್ವಾಂಗಿಕ ಏಳಿಗೆಯ ಕನಸು ನನಸಾಗುತ್ತಿರುವುದನ್ನು ನೋಡಿ ತಮಗಾದ ಹರ್ಷವನ್ನು ವ್ಯಕ್ತಗೊಳಿಸಿದರು. ರೈಲ್ವೆಯು ಇಂದು ದೇಶವನ್ನು ಕಟ್ಟುವ ಅಂಗಗಳಲ್ಲಿ ಪ್ರಾಮುಖ್ಯವಾದುದೆಂದು ಪರಿಗಣಿಸಲ್ಪಟ್ಟಿದೆ. ಮತ್ತು ಅಸಾಧಾರಣ ಪ್ರಗತಿಯನ್ನು ಹೊಂದಿ, ಜನರಿಗೆ ಸುಖಸೌಕರ್ಯವನ್ನು ತಂದಿದೆ. ಸರಕಾರಕ್ಕೆ [illegible] ರೂಪಾಯಿ ಆದಾಯ ತರುವ ರಾಷ್ಟ್ರೀಯ ಉದ್ಯಮವೆನಿಸಿದೆ.

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್‌ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10. } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ನೀಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ, ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು.

The Bombay Life Assurance Co., Ltd., Bombay

ದಯಮಾಡಿ ನಿಮ್ಮ ಚಂದಾ ಹಣವನ್ನು ಕಳುಹಿಸಿಕೊಡಿರಿ.

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ ಉಡುಪಿ (ದ ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸುರಕ್ಷಿತತೆ, ಭದ್ರತೆ ಮತ್ತು ಸೇವಾತತ್ಪರತೆ
ಇವುಗಳಿಗೆ
ತವರುಮನೆಯಂತಿದ್ದು, ನಿಮ್ಮೆಲ್ಲರ ಸ್ನೇಹ, ಸಹಕಾರಗಳನ್ನು
ಅಪೇಕ್ಷಿಸುವ ಬೇಂಕು.

THE CANARA BANKING CORPORATION LTD.
Estd 1906] [H. O. UDIPI, (S. India)

ನವಯುಗ

ಉಡುಪಿ, ಗುರುವಾರ ೧೨-೩-'೫೩

ಸಹಕಾರದ ಯಾಚನೆ

ಈ ತಿಂಗಳ ಪ್ರಾರಂಭದಿಂದ ಕೆಲ ಮಟ್ಟಿಗೆ ಕುತೂಹಲವನ್ನು ಕೆರಳಿಸಿರುವ ಒಂದು ಪ್ರಾಮುಖ್ಯ ಸಂಗತಿಯೆಂದರೆ ಕಾಂಗ್ರೆಸಾಧ್ಯಕ್ಷ ನೆಹರೂ ಹಾಗು ಪ್ರಜಾ ಸೋಶಿಯ ಲಿಸ್ಟ್ ಪಕ್ಷದ ನಾಯಕರುಗಳಾದ ಶ್ರೀ ಜಯಪ್ರಕಾಶನಾರಾಯಣ, ಆಚಾರ್ಯ ನರೇಂದ್ರದೇವ ಆಚಾರ್ಯ ಕೃಪಲಾನಿ ಮುಂತಾದವರೊಡನೆ ನಡೆದ ಮಾತುಕತೆಯಾಗಿದೆ. ಕಾಂಗ್ರೆಸ್ ಮತ್ತು ಪ್ರಜಾಸೋಶಿಯಲಿಸ್ಟ್ ಪಕ್ಷಗಳ ವಿಚಾರ ಪ್ರಣಾಳಿಯಲ್ಲಿ ತತ್ವತಃ ವಿಶೇಷ ಭೇದವಿಲ್ಲದಿರುವುದರಿಂದ ಇವೆರಡು ಪಕ್ಷಗಳು ಪರಸ್ಪರ ಕೂಡಿಕೊಂಡು ದೇಶದ ಸಾರ್ವಾಂಗಿಕ ಏಳಿಗೆಗೆ ಪ್ರಯತ್ನಿಸಲು ಸಾಧ್ಯವೆಂದು ಭಾವಿಸಿ, ಈ ರೀತಿಯ ಮಾತುಕತೆಗಳನ್ನು ತೊಡಗಲಾಗಿದೆ ಎಂದು ತಿಳಿಯುತ್ತೇವೆ. ಶ್ರೀ ನೆಹರೂರೇ ಈ ವಿಷಯದಲ್ಲಿ ಆಸ್ಥೆಯನ್ನು ವಹಿಸಿ ಒಣ ಪ್ರತಿಷ್ಠೆ ಮತ್ತು ಅಭಿಮಾನದ ಗರ್ವಕ್ಕೆ ಒಳಗಾಗದೆ ವಿಚಾರವಿನಿಮಯವನ್ನು ಆರಂಭಿಸಿದರೆಂದೂ ಗೊತ್ತಾಗಿದೆ. ಪ್ರಧಾನ ಮಂತ್ರಿಗಳಾದ ಜವಾಹರಲಾಲರ ಮನಸ್ಸು ಈಗ ಭಾರತವನ್ನು ಮರಳಿ ಬಲವಾದ ರಾಷ್ಟ್ರವಾಗಿ ಕಟ್ಟುವ ಒಂದೇ ಧ್ಯೇಯದತ್ತ ಹರಿದಿದೆ, ಮತ್ತು ಈ ಕಾರ್ಯಕ್ಕೆ ಪೋಷಕವಾಗಬಲ್ಲ ಯಾವುದೇ ಕ್ರಮವನ್ನು ಕೈಗೊಳ್ಳುವುದಕ್ಕೆ ಅವರು ಸಂಕೋಚ ಪಡುವುದಿಲ್ಲೆಂಬುದು ಈಗಾಗಲೇ ಸಾಮಾನ್ಯತಃ ಎಲ್ಲರಿಗೂ ಮನವರಿಕೆ ಯಾಗಿದೆ. ಪಂಚವಾರ್ಷಿಕ ಯೋಜನೆಯನ್ನು ಎಣಿಸಿದಂತೆ ಯಶಸ್ವಿಯಾಗಿ ಕಾರ್ಯರೂಪಕ್ಕೆ ಇಳಿಸಿಯೇ ತೀರಬೇಕೆಂದು ನೆಹರೂ ದೃಢ ಸಂಕಲ್ಪವನ್ನು ಮಾಡಿದ್ದು—ಈ ಕೆಲಸದಲ್ಲಿ ಕಾಂಗ್ರೆಸ್ ಮತ್ತು ಪ್ರಜಾ ಸೋಶಿಯಲಿಸ್ಟ ಪಕ್ಷಗಳು ಪರಸ್ಪರ ಸಹಕಾರದಿಂದ ದುಡಿಯುವುದು ಸಾಧ್ಯವಿದೆಯೆಂದು ನೆಹರೂರ ಅಭಿಪ್ರಾಯವಿದೆ. ಎಲ್ಲರಿಗೂ ಸಾಮಾನ್ಯವಾದ ಕಾರ್ಯಕ್ರಮವನ್ನು ಇಟ್ಟುಕೊಂಡು ಕೆಲಸವನ್ನು ನಿರ್ವಹಿಸಲು ಸಾಧ್ಯವಿದೆ ಎಂಬ ಸಂಗತಿಯನ್ನು ನೆಹರೂರವರು ಪದೇಪದೇ ಬಿಂಬಿಸುತ್ತಾ ಬಂದಿರುವರು. ಭಾರತ ಸೇವಕ ಸಮಾಜದಂಥ ಸಂಘಟನೆಯಾದರೂ ಪಕ್ಷ ಪಂಗಡಗಳ ಭೇದಭಾವವಿಲ್ಲದೆ ರಾಷ್ಟ್ರೋದ್ಧಾರದ ಕಾರ್ಯದಲ್ಲಿ ಪ್ರತಿಯೊಬ್ಬ ಪ್ರಜೆಯೂ ಒಬ್ಬನಿನ್ನೊಬ್ಬನ ಭುಜಕ್ಕೆ ಭುಜಕೊಟ್ಟು ದುಡಿಯುವುದಕ್ಕೆ ಅವಕಾಶ ಮಾಡಿಕೊಡುವ ಸಂಸ್ಥೆಯೆನಿಸಿವೆ. ಈಗ ಬಂದಿರುವ ವರದಿಗಳಂತೆ, ನೆಹರೂರವರು ಆಚಾರ್ಯ ನರೇಂದ್ರದೇವ ಹಾಗು ಜಯಪ್ರಕಾಶ ನಾರಾಯಣ ಮುಂತಾದವರಿಗೆ ಕಾಂಗ್ರೆಸು ಸರಕಾರವು ದೇಶದ ಶಕ್ತಿಸಾಮರ್ಥ್ಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸಾಕಷ್ಟು ಪ್ರಗತಿಶೀಲವಾದ ಅಭಿವೃದ್ಧಿ ಯೋಜನೆಯನ್ನು ಕೈಗೊಂಡಿದೆ ಎಂಬುದಾಗಿ ತಿಳಿಸಿ ಹೇಳಿರುವರು. ಈ ರಂಗದಲ್ಲಿ ಇನ್ನೂ ಹೆಚ್ಚಿನ ಪ್ರಗತಿಯು ಆಗಬೇಕಾದರೆ—ಸಾಮಾನ್ಯತಃ ಒಂದೇ ರೀತಿಯ ಧ್ಯೇಯಧೋರಣೆಯಿರುವ ಕಾಂಗ್ರೆಸ ಹಾಗು ಪ್ರಜಾ ಸೋಶಿಯಲಿಸ್ಟ ಪಕ್ಷಗಳಲ್ಲಿ ಹೆಚ್ಚಿನ ಸಹಕಾರ ಮತ್ತು ಸಹಾಯ ಅಗತ್ಯವೆನಿಸಿದೆ. ಜನಬಲದಂತೆ ಧನ ಬಲವೂ ಬೇಕೆಂಬಲ್ಲಿ ಸಂದೇಹವಿಲ್ಲ. ತಮ್ಮ ಮಾತುಕತೆಗಳ ಸಂಬಂಧದಲ್ಲಿ ಮೊನ್ನೆ ಹೊಸದಿಲ್ಲಿಯಲ್ಲಿ ಸೇರಿದ ಕಾಂಗ್ರೆಸ ಕಾರ್ಯಕಾರಿಣಿಗೆ ಒಪ್ಪಿಸಿದ ವರದಿಯಲ್ಲಿ ನೆಹರೂರವರು ದೇಶದ ಪ್ರಗತಿಗೆ ವಿಘಾತಕವಾದ ಜಾತೀಯ ಹಾಗೂ ವಿಧ್ವಂಸಕ ಚಟುವಟಿಕೆಗಳನ್ನು ಹತ್ತಿಕ್ಕುವುದಕ್ಕೂ, ಆರ್ಥಿಕ ಕಾರ್ಯಪ್ರಣಾಳಿಯಲ್ಲಿ ಚೈತನ್ಯ ತುಂಬುವುದಕ್ಕೂ ಕಾಂಗ್ರೆಸ ಮತ್ತು ಪ್ರಜಾ ಸೋಶಿಯಲಿಸ್ಟ ಪಕ್ಷಗಳೆರಡು ಸಹಕರಿಸುವುದು ಇಷ್ಟವೇ, ಅದು ಸಾಧ್ಯವೇ, ಮತ್ತು ತೀರ ಅಗತ್ಯವೇ—ಎಂದು ಮುಂತಾಗಿ ವಿಚಾರಿಸಿದೆವೆಂದು ಹೇಳಿದರು. ಈ ಬಗ್ಗೆ ಯಾವುದೇ ಪಕ್ಷಗಳು ಕೊನೆಯ ನಿರ್ಣಯವನ್ನು ಇನ್ನೂವರೆಗೆ ಮಾಡಿಲ್ಲ; ಆದುದರಿಂದ ಈ ಎರಡು ಪಕ್ಷಗಳು ಕೂಡಿಕೊಂಡರೆ ಹೇಗೆ, ಕೂಡದಿದ್ದರೆ ಹೇಗೆ ಎಂದು ವಿಚಾರಿಸಿದರೆ ಅನುಚಿತವಾಗದು. ಈ ಸಂಬಂಧದಲ್ಲಿ ಅನೇಕ ರೀತಿಯ ಅಭಿಪ್ರಾಯಗಳನ್ನು ಎರಡೂ ಪಕ್ಷಗಳವರು ವ್ಯಕ್ತಗೊಳಿಸುತ್ತಿರುವುದು ಕಂಡುಬರುತ್ತದೆ. ಆಂಧ್ರರಾಜ್ಯ ನಿರ್ಮಾಣವು ಸದ್ಯದಲ್ಲಿಯೇ ಆಗಲಿರುವುದರಿಂದ ಕಮ್ಯೂನಿಸ್ಟರ ಪ್ರಾಬಲ್ಯವಿರುವ ಈ ಪ್ರದೇಶದಲ್ಲಿ ಬಲವಾದ ಮತ್ತು ದೃಢವಾದ ಸರಕಾರವನ್ನು ಸ್ಥಾಪಿಸಬೇಕಾದಲ್ಲಿ ಕಾಂಗ್ರೆಸಿಗೆ ಪ್ರಜಾ ಸೋಶಿಯಲಿಸ್ಟ ಪಕ್ಷದ ಸಹಕಾರ ಅಗತ್ಯವೆನಿಸಬಹುದು, ಹಾಗೆಯೇ ಪ್ರಕೃತ ಕ್ಷೀಣ ಬಹುಮತವನ್ನು ಪಡೆದು ಹೊಯ್ದಾಡುತ್ತಿರುವ ಹೈದರಾಬಾದು ಹಾಗು ತಿರುಕೊಚ್ಚಿಗಳ ಕಾಂಗ್ರೆಸು ಸರಕಾರಕ್ಕೆ ಆಡಳಿತವನ್ನು ಚೆಲೋದಾಗಿ ನಿರ್ವಹಿಸಲು ಪ್ರಜಾ ಸೋಶಿಯಲಿಸ್ಟ ಪಕ್ಷದ ಸಹಕಾರ ಅಗತ್ಯವೆಂದು ಕಂಡುಬಂದಿರಬಹುದು. ಹೀಗೆ ರಾಜ್ಯಗಳ ಅಂತಸ್ತಿನಲ್ಲಿ ಸಹಕಾರದ ಯಾಚನೆ ಮಾಡುವಾಗ ಕೇಂದ್ರದಲ್ಲಿ ಸಹಕಾರ ಬೇಡವೆಂದರೆ ಒಪ್ಪಗಾದುದರಿಂದ—ಮತ್ತು ಉಳಿದ ರಾಜ್ಯಗಳಲ್ಲಿ ಕೂಡ ಪ್ರಜಾ ಸೋಶಿಯಲಿಸ್ಟರ ನೆರವು ದೊರೆತರೆ ಒಳ್ಳೆಯದೆಂಬುದರಿಂದ—ಈ ರೀತಿ ವಿಚಾರ ವಿನಿಮಯವನ್ನು ನಡೆಸಲಾಯಿತೆಂದು ಹಲವರ ಅಭಿಪ್ರಾಯವಿದೆ. ಪ್ರತಿಪಕ್ಷಗಳ ಸಹಕಾರವನ್ನು ನೆಹರೂ ಪದೇಪದೇ ಕೇಳುತ್ತಿರುವ ಸಂಗತಿಯನ್ನು ಎತ್ತಿಕೊಂಡು ಪಾರ್ಲಿಮೆಂಟಿನಲ್ಲಿ ಎನ್. ಜಿ. ರಂಗಾರವರು, ಸರಕಾರದಲ್ಲಿಯೂ ಪ್ರತಿಪಕ್ಷಗಳಿಗೆ ಸ್ಥಾನ ಕೊಡತಕ್ಕದ್ದೆಂದು ಪ್ರತಿಪಾದಿಸಿದ್ದನ್ನು ನೋಡುವಾಗ—ಸಮ್ಮಿಶ್ರ ಸರಕಾರದ ರಚನೆಯಾಗಬೇಕೆಂಬಲ್ಲಿ ವರೆಗೆ ಮಾತುಕತೆಗಳು ಮುಂದುವರಿದಿರುವವೋ ಎಂಬ ಸಂಶಯವೇಳುತ್ತದೆ. ಆದರೆ ಪ್ರಜಾ ಸೋಶಿಯಲಿಸ್ಟಪಕ್ಷದ ಸಹಕಾರದೊರೆಯುವುದೆಂಬ ಸಂಗತಿಯಲ್ಲಾಗಲೀ, ದೊರೆಯುವುದು ಅನಿವಾರ್ಯವೆಂಬ ಕುರಿತಾಗಲೀ—ಕಾಂಗ್ರೆಸಿಗರಲ್ಲಿ ಹೆಚ್ಚಿನವರಿಗೆ ಆಸೆಇಲ್ಲ. ಪ್ರಜಾ ಸೋಶಿಯಲಿಸ್ಟ ಪಕ್ಷದ ಧುರೀಣರು ಕಾಂಗ್ರೆಸಿನೊಡನೆ ಸಹಕರಿಸಿದ್ದರಿಂದ ಜನತೆಯ ಮೇಲೆ ಒಳ್ಳೆಯ ಪರಿಣಾಮವಾದೀತೆಂದು ಹೇಳಲು ಬರುವಂತಿಲ್ಲ. ಮೇಲಾಗಿ ಪ್ರಜಾ ಸೋಶಿಯಲಿಸ್ಟ ಪಕ್ಷವು ಕಾಂಗ್ರೆಸಿನಷ್ಟು ಬಲಾಢ್ಯವಾಗಿಲ್ಲದಿರುವುದರಿಂದ—ಕಾಂಗ್ರೆಸಿನೊಡನೆ ಸಹಕರಿಸಲು ಅದು ತೊಡಗಿದರೆ, ಕಾಲಾನುಕಾಲದಲ್ಲಿ ಕಾಂಗ್ರೆಸಿನೊಡನೆ ವಿಲೀನಗೊಳ್ಳುವ ಸಂಭವವೇ ಹೆಚ್ಚಾಗಿದೆ. ಇನ್ನೊಂದು ರೀತಿಯಿಂದ ನೋಡಿದರೆ ಈ ಎರಡು ಪಕ್ಷಗಳೊಳಗೆ ಪರಸ್ಪರ ಸಹಕಾರವೆಂಬುದೇ ಚೆಲೋದಲ್ಲ-ಏಕೆಂದರೆ ಕಾಂಗ್ರೆಸಿನ ನಡವಳಿಕೆಯಿಂದ ಬೇಸತ್ತು ಹೊಸದಾರಿ ತುಳಿಯಬೇಕೆಂದು ಬಯಸಿದ, ಮತ್ತು ಮಹಾಚುನಾವಣೆಯಲ್ಲಿ ಕಾಂಗ್ರೆಸಿನ ವಿರುದ್ಧ ಹೋರಾಡಿದ ಧುರೀಣರ ಕೂಟ ಪ್ರಜಾಸೋಶಿಯಲಿಸ್ಟ ಪಕ್ಷವಾಗಿದೆ. ಕಾಂಗ್ರೆಸಿಗೆ ಬಲವಾದ ಪ್ರತಿಸ್ಪರ್ಧೆಯನ್ನು ಕೊಡುವುದೇ ಪ್ರಜಾ ಸೋಶಿಯಲಿಸ್ಟ ಪಕ್ಷದ ಹುಟ್ಟಿನಲ್ಲಿದ್ದ ಧ್ಯೇಯವೆಂಬುದು ಸರ್ವಶ್ರುತವಿರುವಾಗ—ಈಗ ಪರಸ್ಪರ ಸಹಕಾರ ಮತ್ತು ಐಕ್ಯದ ಸಂಗತಿಯನ್ನೆತ್ತುವುದು ಜಾಣತನವೆನಿಸಲಿಕ್ಕಿಲ್ಲ. ಕಾಂಗ್ರೆಸು ಮತ್ತು ಪ್ರಜಾ ಸೋಶಿಯಲಿಸ್ಟ ಪಕ್ಷಗಳು ಪರಸ್ಪರ ಒಂದುಗೂಡಿ ಕೆಲಸಕ್ಕೆ ತೊಡಗಿದರೆ, ಈಗ ಕಾಂಗ್ರೆಸಿನೊಡನೆ ಮತಭೇದವಿರುವ ಜನಕ್ಕೆ ಕಮ್ಯೂನಿಸ್ಟ ಪಕ್ಷ ಅಥವಾ ಜಾತೀಯ ಪಕ್ಷಗಳ ವಿನಹ ಬೇರಾವುದೇ ಪಕ್ಷದ ನೆರಳು ದೊರೆಯುವುದಿಲ್ಲ. ಇದರ ಪರಿಣಾಮ ಎಷ್ಟು ಭೀಕರವಾಗಬಹುದೆಂಬುದನ್ನು ಎಲ್ಲರೂ ಬಲ್ಲರು. ಪ್ರಜಾಸೋಶಿಯಲಿಸ್ಟ ಪಕ್ಷವು ಕಳೆದ ಚುನಾವಣೆಯಲ್ಲಿ ಒಟ್ಟಿಗೆ ೨೦% ಮತಗಳನ್ನು ಪಡೆದದ್ದು ನೋಡುವಾಗ ಮತ್ತು ದಕ್ಷಿಣ ಭಾರತದಲ್ಲಿ ನಡೆದ ಮುನ್ಸಿಪಲ್ ಚುನಾವಣೆಗಳಲ್ಲಿ ಕಮ್ಯೂನಿಸ್ಟರು ಹೊಂದಿದ ಬಲವಾದ ಸೋಲನ್ನು ನೋಡುವಾಗ ಕಾಂಗ್ರೆಸ್ ಸರಕಾರದ ಆಡಳಿತದ ಮೇಲೆ ರಚನಾತ್ಮಕವಾದ ರೀತಿಯಲ್ಲಿ ನಿಯಂತ್ರಣವನ್ನಿಡಲು ಪ್ರಜಾ ಸೋಶಿಯಲಿಸ್ಟ್ ಪಕ್ಷ ಪ್ರಯತ್ನಿಸಿದರೆ ಅದರಿಂದ ಹಿತವಿದೆ ಎಂದು ಪ್ರಾಮಾಣಿಕವಾದ ಅಭಿಪ್ರಾಯ ಕಂಡು ಬರುತ್ತದೆ. ಪ್ರಜಾ ಸೋಶಿಯಲಿಸ್ಟ ಪಕ್ಷವು ವಿಸರ್ಜನೆ ಹೊಂದಿ ಕಾಂಗ್ರೆಸಿನೊಡನೆ ವಿಲೀನವಾಗುವುದು ಯಾರಿಗೂ ಸಮ್ಮತವೆನಿಸಲಿಕ್ಕಿಲ್ಲ. "ಪಕ್ಷವನ್ನು ವಿಸರ್ಜಿಸುವುದಲ್ಲ, ಊರ್ಜಿತದಲ್ಲಿ ಇಟ್ಟುಕೊಂಡೇ ಘರ್ಷಣೆ ಏಳದಂತೆ ಮತ್ತು ಪಕ್ಷದ ವೈಶಿಷ್ಟ್ಯಕ್ಕೆ ಕುಂದು ಬಾರದಂತೆ ಕಾರ್ಯಮಾಡುವುದು" ಎಂಬುದಾದರೂ ಎಷ್ಟರ ಮಟ್ಟಿಗೆ ವ್ಯವಹಾರ್ಯವೆಂದು ಹೇಳಲು ಬಾರದು.

ಉಡುಪಿ

ಪ್ರಜಾ ಸೋಶಲಿಸ್ಟ್ ಪ್ರಚಾರ ಸಭೆಯು— ಇದೇ ತಾ. ೯ರಲ್ಲು ಸಂಜೆ ರಥಬೀದಿಯಲ್ಲಿ ಡಾ| ಸಂಜೀವನಾಥರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ವಿ. ಶ್ರೀನಿವಾಸ ಸೆಟ್ಟಿ, ಎಮ್. ಜಿ. ಹೆಗ್ಡೆಯವರು ಪಕ್ಷದ ಧ್ಯೇಯಧೋರಣೆಗಳನ್ನು ವಿವರಿಸಿದರಲ್ಲದೆ ಆಹಾರ ಪರಿಸ್ಥಿತಿಯು ಮತ್ತು ಒಕ್ಕಲುತನ ಮಸೂದೆಯ ಕುರಿತು ಮಾತನಾಡಿದರು

ಬೀಳ್ಕೊಡುವ ಸಮಾರಂಭ— ಸ್ಥಳೀಯ ಸರಕಾರಿ ಉಪಾಧ್ಯಾಯರ ತರಬೇತಿ ಶಾಲಾ ಹಿರಿಯ 40 ವಿದ್ಯಾರ್ಥಿಗಳನ್ನು ಬೀಳ್ಕೊಡುವ ಸಭೆಯು ಇದೇ ತಾ. ೯ರಲ್ಲಿ ಜರಗಿತು. ದ. ಕ. ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ. ಕೆ. ಸಂಜೀವ ಭಟ್ ಮತ್ತು ನೀಲಗಿರಿಯ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಎಚ್. ಸಂಜೀವರಾಯರು ವಿಶೇಷತಃ ಹಾಜರಿದ್ದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಯು. ಕೃಷ್ಣ ರಾಯರು ಸರಕಾರಿ ಪರೀಕ್ಷೆಯಲ್ಲಿ ಎಲ್ಲರೂ ತೇರ್ಗಡೆ ಹೊಂದುವಂತೆ ಆಶೀರ್ವಚಿಸಿದರು. ಅತಿಥಿಗಳೂ ಹಾಗೆಯೇ ಆಗಲೆಂದು ಬಯಸಿದರು. ಶ್ರೀ ಕೆ ಎಸ್ ಬನ್ನಾಡಿ ರಾವರು ಧನ್ಯವಾದಗಳನ್ನರ್ಪಿಸಿದ ನಂತರ ಸಭಾಂತ್ಯವಾಯಿತು

ಸಬ್ ಕೋರ್ಟು ದಾವೆಯಲ್ಲಿ ಗುಣ— ಜೆಪ್ಪು ಕೂ ಪಟ್ಣನ ಶ್ರೀ ಪಾವ್ಲ್ ಎ. ಪಿರೇರ ಮತ್ತು ಶ್ರೀಮತಿ ಕಲ್ಯಾಣಿ ಬಾಯಿ (ಶ್ರೀ ಶಿವರಾಯ ಶೇಟರಪತ್ನಿ) ಇವರೊಳಗಿನ ಎ. ಎಸ್. 229/51ನೇ ನಂಬ್ರದ್ದು ಮಂಗಳೂರು ಸಬ್ ಕೋರ್ಟಿನಲ್ಲಿ ತನ್ಖಿಯಾಗಿ ವಾದಿನವರಿಗೆ ಗುಣವಾಗಿದೆ ಎಂದು ತಿಳಿದು ಬರುತ್ತದೆ

ಅಕ್ಕಿಧಾರಣೆ— ದಿನದಿಂದ ದಿನಕ್ಕೆ ಏರುತ್ತಿದೆ ಬಡಬಗ್ಗರು ತುಂಬಾ ಕಂಗೆಟ್ಟಿರುವರು.

ವಾರ್ಷಿಕೋತ್ಸವ— ಕಳೆದವಾರ ಪ್ರಕಟಿಸಿದಂತೆ ಎಂ. ಜಿ. ಎಂ ಕಾಲೇಜಿನ ನಾಲ್ಕನೆ ವಾರ್ಷಿಕೋತ್ಸವವು ಶ್ರೀ. ಟಿ. ಎ. ಪೈ ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ವಾಯಿಸ್ ಪ್ರಿನ್ಸಿಪಾಲ್ ಶ್ರೀ ಪಿ. ನಾರಾಯಣ ಅಯ್ಯಂಗಾರರ ಸ್ವಾಗತ ಭಾಷಣವಾದ ಮೇಲೆ ಹಳೆ ವಿದ್ಯಾರ್ಥಿನಿ ಕು| ಟಿ. ನಿರ್ಮಲಾ ಪೈ ಅವರು ಸ್ವಸ್ತಿ ವಾಚನ ಮಾಡಿದರು. ಶ್ರೀಮತಿ ಶಾಲಿನಿಯವರು ಉತ್ತರ ವಿತ್ತರು. ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರು ಕಾಲೇಜಿನ ಪ್ರಗತಿಪರ ವರದಿಯನ್ನೋದಿ ಹೊಸ ವರುಷದಲ್ಲಿ ಪ್ರಥಮ ವರ್ಗದ ಕಾಲೇಜಿನ ಸಿದ್ಧತೆಗಳಾಗುತ್ತಿದೆಯೆಂದೂ ಸರ್ವರೂ ಸಕಲ ಸಹಾಯಗಳನ್ನೀಯ ಬೇಕೆಂದೂ ಹೇಳಿದರು. ಶ್ರೀಮತಿ ಪ್ರೇಮಾ ಎ. ಪೈಗಳು ಇನಾಂಗಳನ್ನು ಹಂಚಿದ ಮೇಲೆ ಅಧ್ಯಕ್ಷರು ಭಾಷಣ ಮಾಡುತ್ತ ಕಾಲೇಜಿನ ಸರ್ವತೋಮುಖ ಅಭಿವೃದ್ಧಿಗಾಗಿ ಸಹಕರಿಸುವೆನೆಂದರು. ಮರುದಿನ ನಾಟಕ, ಪ್ರಹಸನಾದಿ ಕಾರ್ಯಕ್ರಮಗಳು ಜಯಪ್ರದವಾಗಿ ನೆರವೇರಿದವು.

ಕಟಪಾಡಿ— ಇಲ್ಲಿಯ ಎಸ್. ವಿ. ಎಸ್. ಹಾ. ಎ. ಶಾಲೆಯ ವಾರ್ಷಿಕೋತ್ಸವವು ಇದೇ ತಾ. ೩೦ರಲ್ಲು ಉಡುಪಿ ಸರಕಾರಿ ಟ್ರೈನಿಂಗ್ ಶಾಲೆಯ ಹೆಡ್ಮಾಸ್ತರ್ ಶ್ರೀ ಯು. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಕರೆಸ್ಪೊಂಡೆಂಟ್ ಶ್ರೀ ಪಿ. ರಾಮದಾಸ ನಾಯ್ಕರು ಸ್ವಾಗತ ಭಾಷಣ ಮಾಡಿದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಮಯ್ಯರಿಂದ ವರದಿ ವಾಚನವಾಯಿತು. ಹಳೆ ವಿದ್ಯಾರ್ಥಿಯ ಸ್ವಸ್ತಿವಾಚನ ಅಧ್ಯಕ್ಷರ ಭಾಷಣ, ಮಕ್ಕಳ ವಿವಿಧ ವಿನೋದಾವಳಿ ಯಕ್ಷಗಾನ ಕಾಲಕ್ಷೇಪ ಕಾರ್ಯಕ್ರಮಗಳು ಆದ ನಂತರ ಶ್ರೀ ಕೆ. ಆರ್. ಶೆಟ್ಟಿಯವರ ಧನ್ಯವಾದಾರ್ಪಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ಮೆಲೆಂಕೋವರು ರಶಿಯಾದ ಹೊಸ ಸರ್ವಾಧಿಕಾರಿ

ಸ್ಟಾಲಿನ್ನರ ಆಕಸ್ಮಿಕ ಮೃತ್ಯುವಿನಿಂದ ಯುದ್ಧಭೀತಿ ತಗ್ಗುವ ಆಶೆ ಬಹಳ ಮಟ್ಟಿಗೆ ಇಲ್ಲ

ಪ್ರಕೃತ ಲೋಕದಲ್ಲಿ ಅಗ್ರಗಣ್ಯ ಸ್ಥಾನವನ್ನು ಏರಿದ ಕೆಲವೇ ಧುರೀಣರಲ್ಲಿ ದಿವಂಗತ ಸ್ಟಾಲಿನ್ನರೂ ಒಬ್ಬರು. ಪಕ್ಷವಾತ ಮತ್ತು ಮೆದುಳಿನ ರುಧಿರ ಸ್ರಾವದಿಂದ ಬಳಲುತ್ತಿರುವರೆಂದು ಸುದ್ದಿ ಬಂದ ನಾಲ್ಕೈದು ದಿನಗಳಲ್ಲಿಯೇ ಸ್ಟಾಲಿನ್ನರು ಮೃತ್ಯುವಶರಾದರೆಂದು ಮೋಸ್ಕೋ ರೇಡಿಯೋ ಪ್ರಕಟಪಡಿಸಿತು. ಈ ವಾರ್ತೆ ತಿಳಿದೊಡನೆಯೇ ಲೋಕದ ನಾನಾ ಮೂಲೆಗಳಿಂದ ದಿವಂಗತರಿಗೆ ಶ್ರದ್ಧಾಂಜಲಿಯು ಅರ್ಪಿತವಾಯಿತು. ಸ್ಟಾಲಿನ್ನರ ಕುರಿತು ನಮ್ಮ ಅಭಿಪ್ರಾಯವು ಎಷ್ಟೇ ಭಿನ್ನವಿದ್ದರೂ ಈ ಯುಗದ ಮಹಾಪುರುಷರಲ್ಲಿ ಇವರೊಬ್ಬರೆಂದು ಎಲ್ಲರೂ ಒಪ್ಪಬೇಕು. ಈ ಬಗ್ಗೆ ಸಂದೇಹ ಸಾಧ್ಯವಿಲ್ಲ. ಭಾರತದ ಸಂಸತ್ತು ದಿವಂಗತರ ಗೌರವಾರ್ಥವಾಗಿ ಶ್ರದ್ಧಾಂಜಲಿಯನ್ನರ್ಪಿಸಿ, ತನ್ನ ಕೆಲಸಗಳನ್ನು ಸ್ಥಗಿತಗೊಳಿಸಿದರೆ-ಸಂಯುಕ್ತ ರಾಷ್ಟ್ರ ಸಂಘದಲ್ಲಿ ಸ್ಟಾಲಿನ್ನರ ಮೃತ್ಯುವಿನಿಂದ ವಿಶ್ವಸಂಸ್ಥೆಯ ಸ್ಥಾಪಕರಲ್ಲಿ ಓರ್ವರು ಕಣ್ಮರೆಯಾದರೆಂದು ಸಂತಾಪವನ್ನು ಅಧ್ಯಕ್ಷ ಪಿಯರ್ಸನ್ನರು ಸೂಚಿಸಿದರು. ಒಂದುನಿಮಿಷ ಮೌನವನ್ನಾಚರಿಸಿ ದಿವಂಗತರ ಪ್ರತಿ ಶ್ರದ್ಧೆಯನ್ನು ವ್ಯಕ್ತಪಡಿಸಿದರು. ಪಾಕಿಸ್ತಾನ, ಸಿಲೋನ ಬರ್ಮಾ, ಅಮೇರಿಕಾ ಮುಂತಾದ ಅನೇಕ ದೇಶಗಳು ರಶಿಯಾದ ಸರ್ವಾಧಿಕಾರಿಯ ನಿಧನದ ಕುರಿತು ಶೋಕ ಸಂದೇಶವನ್ನು ಕಳಿಸಿದುವು. ಸಂಯುಕ್ತ ರಾಷ್ಟ್ರ ಸಂಘದ ಕಾರ್ಯದರ್ಶಿಯಾಗಿರುವ ಟ್ರಿಗ್ವೆಲೀಯವರೂ ತಮ್ಮ ಸಂತಾಪವನ್ನು ಪ್ರಕಟಪಡಿಸಿರುವರು.

ಉಕ್ಕಿನ ಮನುಷ್ಯ

ಸ್ಟಾಲಿನ್ನರು, ಹೆಸರೇ ಸೂಚಿಸುವಂತೆ ಉಕ್ಕಿನ ಮನುಷ್ಯ. ಕಳೆದ ೨೫ ವರ್ಷಗಳಿಂದ ಅವರು ರಶಿಯಾದ ಸರ್ವಾಧಿಕಾರಿಯಾಗಿ ಅಧಿಕಾರವನ್ನು ನಡೆಸಿಕೊಂಡು ಬಂದಿರುವರು. ಪ್ರಕೃತ ೮೦ ಕೋಟಿ ಜನರು ಕಮ್ಯೂನಿಸಂ ಪ್ರಭಾವಕ್ಕೆ ಬಿದ್ದಿದ್ದು ಸ್ಟಾಲಿನ್ನರನ್ನು ದೇವರೆಂದೇ ತಿಳಿದು ಆರಾಧಿಸುತ್ತಿರುವರು. ಸ್ಟಾಲಿನ್ನರ ವರ್ಚಸ್ಸನ್ನು ಕುಗ್ಗಿಸಲು ಮೊದಲಿಂದಲೂ ನಡೆದ ಪ್ರಯತ್ನಗಳು ಯಾವುವೂ ಫಲಿಸದೆ ಸ್ಟಾಲಿನ್ನರ ಪ್ರಭಾವವು ಬಲವಾಗಿ ಬೇರೂರುತ್ತಾ ಬಂದಿದೆ. ಝಾರರ ಆಳಿಕೆಯ ವಿರುದ್ಧ ದಂಡೆಬ್ಬಿಸಿದ ಕ್ರಾಂತಿಕಾರರಲ್ಲಿ ಸೇರಿಕೊಂಡು ಸ್ಟಾಲಿನ್ನರು ಚಾತುರ್ಯದಿಂದ ಕೆಲಸ ನಿರ್ವಹಿಸುತಿದ್ದರು. ೧೯೦೫ರಲ್ಲಿ ಫಿನ್ಲಂಡದಲ್ಲಿ ಕೂಡಿದ ಪರಿಷತ್ತಿನಲ್ಲಿ ಸ್ಟಾಲಿನ್ನರಿಗೆ ಲೆನಿನ್ ಮಹಾನುಭಾವರ ಪರಿಚಯವಾಗಿ ಅದು ಕೊನೆಯವರೆಗೂ ನಿಂತಿತು. ಝಾರರ ಪೋಲೀಸರ ಕಾಟದಿಂದ ತಪ್ಪಿಸಿಕೊಳ್ಳಲು ಭೂಗತರಾಗುತಿದ್ದರು. ಐದು ಸಲ ಸೆರೆಮನೆಯನ್ನು ಕಂಡರೂ ಉಪಾಯದಿಂದ ಅಲ್ಲಿಂದ ತಪ್ಪಿಸಿಕೊಂಡು ಗುಪ್ತಚಟುವಟಿಕೆಗಳನ್ನು ನಡೆಸುತಿದ್ದರು. ೧೯೧೭ರಲ್ಲಿ ಬೋಲ್ಶೆವಿಕರು ರಶಿಯಾದಲ್ಲಿ ನಡೆದ ಕ್ರಾಂತಿಯ ಪರಿಣಾಮವಾಗಿ ಅಧಿಕಾರಸ್ಥಾನಕ್ಕೇರಿದಾಗ, ಸ್ಟಾಲಿನ್ನರಿಗೂ ಮಹತ್ವದ ಹುದ್ದೆ ದೊರೆಯಿತು. ೧೯೨೨ರಲ್ಲಿ ಕಮ್ಯೂನಿಸ್ಟ ಪಕ್ಷದ ಕೇಂದ್ರ ಸಮಿತಿಯ ಕಾರ್ಯದರ್ಶಿಯಾಗಿ ನೇಮಕಗೊಂಡರು.

ವಜ್ರಮುಷ್ಟಿಯ ಸಾಮರ್ಥ್ಯ

ಲೆನಿನರ ಮರಣದ ತರುವಾಯ ಸ್ಟಾಲಿನ್ನರೇ ಸರ್ವಾಧಿಕಾರಿ ಸ್ಥಾನಕ್ಕೇರಿದರು. ತನಗೆದುರಾಗಿ ಬಂದ ಟ್ರಾಟ್ಸ್ಕಿ ಮುಂತಾದವರನ್ನು ಅಟ್ಟಿಕೊಂಡು ಹೋಗಿ, ಕೊನೆಗೆ ಮೆಕ್ಸಿಕೋದಲ್ಲಿ ಕೊಲ್ಲಿಸಿದರು. ಕಮ್ಯೂನಿಸಮನ್ನು ಪ್ರಚಾರಪಡಿಸಬೇಕೆಂದು ಟ್ರಾಟ್ಸ್ಕಿ ಹೇಳುತಿದ್ದರೆ—ಸ್ಟಾಲಿನ್ನರು ರಶಿಯಾದಲ್ಲಿ ಅದನ್ನು ಸ್ಥಿರವಾಗಿ ಬೇರೂರಿಸಬೇಕೆಂದು ಪ್ರತಿಪಾದಿಸುತಿದ್ದರು. ಈ ಭಿನ್ನಾಭಿಪ್ರಾಯವೇ ಇವರೊಳಗೆ ವೈಮನಸ್ಯ ತಂದು, ಭೀಕರ ಪರಿಣಾಮವನ್ನುಂಟು ಮಾಡಿತು. ಜೊತೆಗೆ ಸ್ಟಾಲಿನ್ನರಿಗೆ ಅಧಿಕಾರ ಲಾಲಸೆಯು ಹೇಳತೀರದಷ್ಟು ಇತ್ತು. ಸ್ವತಃ ಲೆನಿನ್ನರಿಗೆ ಸ್ಟಾಲಿನ್ನರ ಕೈಗೆ ಅಧಿಕಾರ ಬರುವುದು ಇಷ್ಟವಿರಲಿಲ್ಲವೆಂದು ಹೇಳುತ್ತಾರೆ. ವಜ್ರಮುಷ್ಟಿಯ ಉಪಯೋಗದಿಂದಲೇ ಸ್ಟಾಲಿನ್ನರು ತನ್ನ ವಿರೋಧಕರನ್ನು ಬಗ್ಗು ಬಡೆದು ಧ್ವಂಸಗೈದರು. ೧೯೨೭-೧೯೩೩ರ ಅವಧಿಯಲ್ಲಿ ಸಾಮೂಹಿಕ ಕೃಷಿಪದ್ಧತಿಯನ್ನು ವಿರೋಧಿಸಿದ ೧೦ ಲಕ್ಷ ಚಿಕ್ಕ ಹಿಡುವಳಿದಾರರನ್ನು ಅಮಾನುಷವಾದ ರೀತಿಯಲ್ಲಿ ಕೊಲ್ಲಿಸಿದರು. ಇದು ಬಹಳ ಕಠಿಣವಾದ ಮತ್ತು ಕೆಟ್ಟ ಕಾರ್ಯವಾಗಿದ್ದರೂ ಅವಶ್ಯಕವಾಗಿತ್ತು ಎಂದು ಚರ್ಚಿಲರಿಗೆ ಸ್ಟಾಲಿನ್ನರು ಹೇಳಿದ್ದಾರಂತೆ!

ಕಮ್ಯೂನಿಸಮ್ಮಿನ ವರ್ಚಸ್ಸು

ಹೀಗಿದ್ದರೂ ಸ್ಟಾಲಿನ್ನರು ರಶಿಯಾದ ಅಭಿವೃದ್ಧಿಗಾಗಿ ತನ್ನದೇ ಆದ ಕಾರ್ಯಪ್ರಣಾಳಿಯನ್ನು ಇಟ್ಟುಕೊಂಡು ದುಡಿದದ್ದು ಪ್ರಶಂಸನೀಯ. ಒಂದರ ಹಿಂದೊಂದೆಂಬಂತೆ ಪಂಚವಾರ್ಷಿಕ ಯೋಜನೆಗಳನ್ನು ಕಾರ್ಯರೂಪಕ್ಕೆ ಇಳಿಸಿ, ರಶಿಯಾವನ್ನು ಇಂದಿನ ಊರ್ಜಿತ ಸ್ಥಿತಿಗೆ ತಂದ ಕೀರ್ತಿ ಸರ್ವಾಧಿಕಾರಿ ಸ್ಟಾಲಿನ್ನರಿಗೆ ಸೇರಿದೆ. ಇಂದು ರಶಿಯಾದಲ್ಲಿ ಸಾಕ್ಷರತೆಯ ಪ್ರಮಾಣ ಬಹಳ ಹೆಚ್ಚಿದೆ. ಔದ್ಯೋಗೀಕರಣವು ಪ್ರಾದುರ್ಭಾವಕ್ಕೆ ಬಂದಿದೆ. ಅಮೇರಿಕೆಗೆ ಇದಿರು ನಿಲ್ಲುವ ಸಾಮರ್ಥ್ಯವಿರುವುದು ರಶಿಯಕ್ಕೊಂದೇ ಎನ್ನುವವರೆಗೆ ರಶಿಯಾದ ಶಕ್ತಿ ಸಾಮರ್ಥ್ಯಗಳನ್ನು ಸ್ಟಾಲಿನ್ನರು ಹೆಚ್ಚಿಸಿದ್ದಾರೆ. ಈ ಸಾಮರ್ಥ್ಯದ ಸ್ಪಷ್ಟಕಲ್ಪನೆಯಾದುದು ಎರಡನೇ ಮಹಾ ಯುದ್ಧದ ಕಾಲದಲ್ಲಿ ಹಿಟ್ಲರನ ನಾಜೀ ಸೇನೆಯನ್ನು ನುಗ್ಗು ನುರಿಮಾಡಿದ ಸಾಹಸಿ ಸ್ಟಾಲಿನ್ನರು, ಈ ಗೆರೆಯನ್ನು ದಾಟಬರಕೂಡದೆಂದು ಹಿಟ್ಲರನಿಗೆ ಎಚ್ಚರಿಕೆ ಕೊಟ್ಟು ಅಲ್ಲಿಂದಲೇ ಅವನನ್ನು ಹೆಜ್ಜೆಹೆಜ್ಜೆಗೂ ಹಿಮ್ಮೆಟ್ಟಿಸಿ ಮಣ್ಣುಮುಕ್ಕಿಸಿದಧೀರ ಯೋಧ ಮಾರ್ಶಲ್ ಸ್ಟಾಲಿನ್. ಯುದ್ಧಾನಂತರ ಯುರೋಪಿನಲ್ಲಿ ಕಮ್ಯೂನಿಸ್ಟ ವರ್ಚಸ್ಸಿಗೆ ಹಲವು ದೇಶಗಳನ್ನು ಗುರಿಮಾಡಿಯೂ, ಚೈನಾದಲ್ಲಿ ಕಮ್ಯೂನಿಸ್ಟ ಚಳುವಳಿಗೆ ನೆರವಾಗಿಯೂ—ಸ್ಟಾಲಿನ್ನರು ಒಂದು ಬಣವನ್ನು ಕಟ್ಟಿಕೊಂಡರು. ಬಹುಶಃ ಈ ರೀತಿ ಶಕ್ತಿಪ್ರದರ್ಶನಗೈದುದರಿಂದಲೇ ಇರಬೇಕು-ಲೋಕದಲ್ಲಿ ಇಂದು ಶೀತ ಯುದ್ಧಕ್ಕೆ ಆಸ್ಪದ ದೊರೆತಿದೆ.

ಹೊಸ ನೇಮಕಗಳು

ಟ್ರಾಟ್ಸ್ಕಿಯು ಪ್ರತಿಪಾದಿಸಿದ ತತ್ವಕ್ಕೆ ವಿರೋಧ ಸೂಚಿಸಿದ ಸ್ಟಾಲಿನ್ನರು, ಅದೇ ತತ್ವವನ್ನು ಕಳೆದ ನವಂಬರದಲ್ಲಿ ಸೇರಿದ ಕಮ್ಯೂನಿಸ್ಟ ಪಕ್ಷದ ಕಾಂಗ್ರೆಸದಲ್ಲಿ ಪುನರುಚ್ಚರಿಸಿದ್ದು ವಿರೋಧಾಭಾಸವೆನಿಸಿದರೂ-ಕಾಲನ ಆಟಕ್ಕೆ ಇದೊಂದು ನಿದರ್ಶನ. ಕಮ್ಯೂನಿಸಮನ್ನು ಆದಷ್ಟು ಹೆಚ್ಚು ಜನರು ಸ್ವೀಕರಿಸುವುದು ಅಗತ್ಯವೆಂದು ಆಗ ಸ್ಟಾಲಿನ ಹೇಳಿದರು. ಸ್ಟಾಲಿನ್ನರ ಸ್ಥಾನದಲ್ಲಿ ಈಗ ಸರ್ವಾಧಿಕಾರಿಯಾಗಿರುವ ಜಾರ್ಜಿ ಮೆಲೆಂಕೋವರು ಬಂಡವಾಳಶಾಹಿ ಮತ್ತು ಸಮಾಜವಾದಗಳ ನಡುವೆ ಸಮಂಜಸವಾದ ಸಹಕಾರವನ್ನು ರೂಪಿಸುವುದೇ ತನ್ನ ಸರಕಾರದ ಧೋರಣೆ ಎಂದು ಸಾರಿರುವರು. ಶಾಂತಿ ಮತ್ತು ನ್ಯಾಯಗಳಿಂದ ನಡೆದುಕೊಳ್ಳಲು ರಶಿಯಾ ಬಯಸುತ್ತಿದೆ ಎಂದವರು ಘೋಷಿಸಿದರು. ಸ್ಟಾಲಿನ್ನರ ನಿಧನವಾದ ಕೆಲ ತಾಸಿನೊಳಗಾಗಿಯೇ ಮೆಲೆಂಕೋವರು ಮುಖ್ಯಮಂತ್ರಿ ಸ್ಥಾನಕ್ಕೆ ಬಂದ ಕುರಿತು ಘೋಷಣೆ ಹೊರಟುದರಿಂದ--ಅಧಿಕಾರಕ್ಕಾಗಿ ಒಳಜಗಳ ನಡೆದೀತೆಂಬುವುದೆಂಬ ಅಮೇರಿಕವೇ ಮುಂತಾದ ಪಾಶ್ಚಾತ್ಯ ರಾಷ್ಟ್ರಗಳ ಎಣಿಕೆ ಬುಡಮೇಲಾಯಿತು. ಮೆಲೆಂಕೋವರು ಹತ್ತು ಮಂದಿಯ ಮಂತ್ರಿಮಂಡಳವನ್ನು ರಚಿಸಿದ್ದು, ಸ್ಟಾಲಿನ್ನರ ಬಲಗೈಯಂತಿದ್ದ ಮೊಲೊಟೋವರು ವಿದೇಶ ಮಂತ್ರಿಗಳಾಗಿ ನೇಮಕ ಹೊಂದಿರುವರು. ಗುಪ್ತ ಪೋಲೀಸ ದಳದ ಮುಖ್ಯಸ್ಥರಾದ ಬೇರಿಯಾ ಕೂಡ ಮಂತ್ರಿಮಂಡಲದಲ್ಲಿರುವರು.

ಯುದ್ಧ ಭಯ ತಗ್ಗಿಲ್ಲ

ಆಕಸ್ಮಿಕವೆನ್ನಬಹುದಾದ ಸ್ಟಾಲಿನ್ನರ ಮೃತ್ಯುವಿನಿಂದ ಯುದ್ಧ ಭಯ ತಗ್ಗೀತೇ ಎಂಬ ಆಶೆಹುಟ್ಟುವುದು ಸ್ವಾಭಾವಿಕ. ಆದರೆ ಯಾವ ದೃಷ್ಟಿಯಿಂದ ನೋಡಿದರೂ ರಶಿಯಾದ ಇಂದಿನ ನಿಲುವಿನಲ್ಲಿ ಬದಲಾವಣೆಯಾಗುವುದು ಸಾಧ್ಯವಿಲ್ಲ. ಆಡಳಿತ ಸೂತ್ರವನ್ನು ವಹಿಸಿದ ಕೈಬದಲಾದುದರ ಪರಿಣಾಮವಾಗಿ ರಶಿಯಾದ ಧೋರಣೆಯಲ್ಲಿ ಬಿಗಿ ಹೆಚ್ಚಿಕೊಂಡೀತೇ ಹೊರತು, ಸಡಿಲು ಕಾಣಿಸಲಿಕ್ಕಿಲ್ಲ. ಮೆಲೆಂಕೋವರಲ್ಲಿ ಸ್ಟಾಲಿನ್ನರ ವ್ಯಕ್ತಿತ್ವವಾಗಲೀ ವರ್ಚಸ್ಸಾಗಲೀ, ಮೇಧಾವಿತನವಾಗಲೀ ಇದೆಯೆಂದು ಅನಿಸುವುದು ಸರಿಯಾಗದು. ಬುದ್ಧಿವಂತಿಕೆಯಿಂದ ತೃತೀಯ ಮಹಾಯುದ್ಧವನ್ನು ಸ್ಟಾಲಿನ್ನರು ಮುಂದೆ ದೂಡುತ್ತಾ ಬಂದಿರುವರು. ಆದರೆ ಈ ಜಾಣ್ಮೆ ಅವರ ಉತ್ತರಾಧಿಕಾರಿಗಳಿಗೆ ಇದೆ ಎಂದು ಭರವಸೆ ಇಲ್ಲ.

ಪ್ರಕಟಣೆ

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನಂದರೆ ಕಾರ್ಕಳ ಪಂಚಾಯತ ಬೋರ್ಡಿನ ವಾರ ಸಂತೆ, ದಿನವಹಿ ಮೀನು ಮಾರ್ಕೇಟು ಮತ್ತು ಗಾಡಿ ಚಾವಡಿಗಳಲ್ಲಿ ಇದೇ ಬರುವ ಎಪ್ರಿಲ್ ತಾರೀಕು ೧ರಿಂದ 1954ನೇ ಇಸವಿ ಮಾರ್ಚ್ ತಾರೀಕು 31ರ ವರೆಗೆ ಪೂರ್ತಿ ಒಂದು ವರ್ಷದಲ್ಲಿ ಸುಂಕ ವಸೂಲಿ ಮಾಡುವ ಹಕ್ಕುಗಳನ್ನು ಇದೇ ಮಾರ್ಚ ತಿಂಗಳ ತಾರೀಕ 21ನೇ ಶನಿವಾರ ಸಾಯಂಕಾಲ ಗಂಟೆ 3ಕ್ಕೆ ಪ್ರಾರಂಭವಾಗಿ ಬೋರ್ಡ್ ಆಫೀಸಿನಲ್ಲಿ ಬಹಿರಂಗವಾಗಿ ಪ್ರತ್ಯೇಕ ಪ್ರತ್ಯೇಕವಾಗಿ ಏಲಂ ಮಾಡಲಾಗುವುದು.

ಉಮೇದ್ವಾರಿಗಳು ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ನೋಟೀಸು ಬೋರ್ಡಿನಲ್ಲಿ ಹಾಕಿರುವ ವಿವರವಾದ ಪ್ರಕಟಣೆಯಿಂದ ಯಾ ಮುಖತಃ ವಿಚಾರಿಸಿ ತಿಳಿಯಬಹುದು.

(ಸಹಿ) S. ಹಿರಿಯಣ್ಣ ಹೆಗ್ಡೆ
ಪ್ರೆಸಿಡೆಂಟ್.

ಪಂಚಾಯತ ಬೋರ್ಡ್ ಆಫೀಸು. ಕಾರ್ಕಳ
ತಾರೀಕು, 10-3-53

ನಡಿಯುವ ಚಿತ್ರ

ನಗುವಾಗಲೇ ಬಾಯಿಯಿಂದ ನವರತ್ನಗಳು ಉದುರುವಂತಹ ಉತ್ತಮತರದ ಊಹನಾತೀತ ಹಾಸ್ಯಮಯ ಚಿತ್ರ.

ನವ್ವಿತೇ ನವರತ್ನಲು (ತೆಲುಗು)

ನಾಗೇಶ್ವರ್, ಅಂಜಲಿ, ಕೃಷ್ಣಕುಮಾರಿ, ರಾವಾ.

ಬರುವುದು:— ತಾಯಿ ಉಳ್ಳಂ (ತಮಿಳು)

V. ನಾಗಯ್ಯ. ಮನೋಹರ್, ರಾಮಸ್ವಾಮಿ, M. V. ರಾಜಮ್ಮ ಮಾಧುರಿ ದೇವಿ, ಮತ್ತು ಲಕ್ಷ್ಮಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ತಿದ್ದುಪಡಿ

ತಾ. 26-2-53ರ ನವಯುಗ ಸಂಚಿಕೆಯ 2ನೇ ಪುಟದಲ್ಲಿ ಪ್ರಕಟವಾದ ದ. ಕ. ಜಿಲ್ಲಾ ಗೆಜೆಟ್ ಜಪ್ತಿ ನೋಟೀಸಿನ L. S. No. 201/49ನೇ ನ್ಯಾಯದ ನೋಟೀಸಿನ 13ನೇ ಲೈನಿನಲ್ಲಿ ಪಾವೂರು ಗ್ರಾಮದ ಬದಲಿಗೆ ಪರೋಳಗಾಮ ಎಂದಾಗಬೇಕೆಂದೂ 18ನೇ ಲೈನಿನಲ್ಲಿ ಪುತ್ತೂರು ತಾಲೂಕಿನ ಬದಲಿಗೆ ಮಂಗಳೂರು ತಾಲೂಕು ಎಂದಾಗಬೇಕೆಂದೂ ಕಮಿಶನರ್ ಶ್ರೀ ಎಸ್. ನಾಗರಾಜಯ್ಯನವರು ತಿಳಿಸುತ್ತಾರೆ.

ನಾವು ಹೊಸ ಪ್ರಿಂಟಿಂಗ್ ಮೆಶೀನ್ ತರಿಸಿರುವುದರಿಂದ, ನಮ್ಮ ಹಳೆಯ ಚಾಲೂ ಸ್ಥಿತಿಯಲ್ಲಿರುವ ಕ್ರೌನ್ ಸ್ಟಾಪಿನ ಸಿಲಿಂಡರ್ ಪ್ರಿಂಟಿಂಗ್ ಮೆಶೀನು ಮಾರಾಟಕ್ಕಿದೆ.

ನವಯುಗ ಪ್ರೆಸ್, ಉಡುಪಿ.



ಮಂಗಳೂರು

ಜಿಲ್ಲಾ ಬೋರ್ಡ್ ಪ್ರೆಸಿಡೆಂಟರುಗಳ ಸಭೆ—ಮದ್ರಾಸು ಪ್ರಾಂತದ ಜಿಲ್ಲಾ ಬೋರ್ಡುಗಳ ಪ್ರೆಸಿಡೆಂಟರ ಕಾರ್ಯನಿರ್ವಾಹಕ ಮಂಡಳಿಯ ಸಭೆಯು ಇದೇ ತಾ. 3ರಲ್ಲಿ, ಕೊಯಮುತ್ತೂರು ಜಿಲ್ಲಾ ಬೋರ್ಡಿನ ಅಧ್ಯಕ್ಷ ಶ್ರೀ ವಿ. ಕೆ. ಪಳನಿಸ್ವಾಮಿ ಗೌಂಡರ್, ಎಮ್. ಎಲ್. ಎ ಅವರ ಅಧ್ಯಕ್ಷತೆಯಲ್ಲಿ ಮಂಗಳೂರಲ್ಲಿ ಜರಗಿತು, ಚೆಂಗಲ್ಪಟ್ಟು, ರಾಮನಾಡ್ ಮತ್ತು ದ. ಕ ಜಿಲ್ಲಾ ಬೋರ್ಡ್ ಪ್ರೆಸಿಡೆಂಟರು ಶ್ರೀಗಳಾದ ಎ. ಕೆ. ರಾಮಸ್ವಾಮಿ ಮುದಲಿಯಾರ್, ಎಮ್. ಎಲ್. ಎ ಎಸ್. ಟಿ ಎಸ್. ಸುಬ್ಬಯ್ಯ, ಎಮ್. ಎಲ್. ಸಿ, ಹಾಜರಿದ್ದರು,

ಹೊಸ ಪದವಿಗಳನ್ನು ಆಗಿಸುವ ಅಧಿಕಾರವನ್ನು ಹಿಂದೆ ಇದ್ದಂತೆ ಜಿಲ್ಲಾ ಬೋರ್ಡುಗಳಿಗೇನೇ ಕೊಡಬೇಕೆಂದು ಸರಕಾರವನ್ನು ಒತ್ತಾಯಿಸುವ ಹಾಗೇ ನೀರು ಸ್ಥಾರ್ಕ ನಿಧಿಯನ್ನು ಜಿಲ್ಲಾ ಬೋರ್ಡುಗಳಿಗೇನೇ ವರ್ಗಾಯಿಸಬೇಕೆನ್ನುವ ಜಿಲ್ಲಾ ಬೋರ್ಡುಗಳ ಜನರಲ್ ಫಂಡಿನಲ್ಲಿ ಉಳಿಕೆಯಿದ್ದಾಗ್ಗೂ ಎಲಿಮೆಂಟರಿ ಶಾಲೆಗಳ ಉಪಾಧ್ಯಾಯರಿಗೆ ಕೊಡುವ ತುಟ್ಟಿಭತ್ತೆಯನ್ನು ಸರಕಾರವೇ ಗ್ರಾಂಟಿನ ಸ್ವರೂಪದಲ್ಲಿ ಕೊಡ ಬೇಕೆನ್ನುವ ಕೊರತೆಯಿರುವ ಎಲಿಮೆಂಟರಿ ಎಜ್ಯುಕೇಶನ್ ಫಂಡಿಗೆ ಜನರಲ್ ಫಂಡಿನಿಂದ ಹಣವನ್ನು ಟ್ರಾನ್ಸ್‌ಫರ್ ಮಾಡಬೇಕೆಂದು ಜಿಲ್ಲಾ ಬೋರ್ಡುಗಳನ್ನು ಒತ್ತಾಯಿಸ ಬಾರದೆನ್ನುವ ಎಲಿಮೆಂಟರಿ ಶಾಲೆಗಳಿಗೆ ಸುಪರ್ ವೈಜರರನ್ನು ನೇಮಿಸುವರೇ ಜಿಲ್ಲಾ ಬೋರ್ಡುಗಳಿಗೆ ಸರಕಾರವು ಅನುಮತಿ ಸೆಕ್ಷನ್ ಕೊಡಬೇಕೆನ್ನುವ ಜಿಲ್ಲಾ ಬೋರ್ಡುಗಳಿಗೆ ಎಜ್ಯುಕೇಶನಲ್ ಆಫೀಸರರ ಬದಲಾಗಿ ಅಸಿಸ್ಟೆಂಟ್ ಸೆಕ್ರೆಟರಿಗಳ ಹುದ್ದೆಗಳನ್ನು ಮಂಜೂರು ಮಾಡಬೇಕೆನ್ನುವ, ಲೋಕಲ್ ಫಂಡ್ ಮೆಡಿಕಲ್ ಆಫೀಸರರಿಗೆ ಸರಕಾರೀ ಸ್ಕೇಲಿನಂತೆ ಸಂಬಳ ಕೊಡಲು ಅನುಮತಿ ಸಿಗಬೇಕೆನ್ನುವ, ಜಿಲ್ಲಾ ಬೋರ್ಡುಗಳ ಆಸ್ಪತ್ರೆಗಳಿಗೆ ಮೆಡಿಕಲ್ ಸ್ಟೋರ್ಸಿನ ಬದಲು, ರಿಜಿಸ್ಟರ್ಡ್ ಫಾರ್ಮಸ್ಯೂಟಿಕಲ್ ಫರ್ಮುಗಳಿಂದ ಔಷಧಿಗಳನ್ನು ಪಡೆಯಲು ಒಪ್ಪಿಗೆ ದೊರೆಯ ಬೇಕೆನ್ನುವ, ಯುದ್ಧೋತ್ತರ ರಸ್ತೆ ಸಾರಿಗೆಯೋಜನೆಯಂತೆ ಜಿಲ್ಲಾ ಬೋರ್ಡುಗಳ ಅಂಕಿತದಲ್ಲಿರುವ ಗ್ರಾಮಾಂತರ ರಸ್ತೆ ನಿರ್ಮಾಣ ಕಾರ್ಯಗಳಿಗೆ ಸಂಪೂರ್ಣ ಗ್ರಾಂಟು ಸಿಗಬೇಕೆಂದು ಸರಕಾರವನ್ನು ವಿನಂತಿಸುವ ನಿರ್ಣಯಗಳಾದುವು. ಎಜ್ಯುಕೇಶನ್ ಮತ್ತು ಪಬ್ಲಿಕ್ ಹೆಲ್ತ್ ಕುರಿತು ಜಿಲ್ಲಾ ಬೋರ್ಡುಗಳ ಮುಂದಿರುವ ಸಮಸ್ಯೆಗಳ ಕುರಿತು ವಿಚಾರ ವಿನಿಮಯ ನಡೆಸುವರೆ, ಸಂಬಂಧ ಇಲಾಖೆಗಳ ಮಂತ್ರಿಗಳನ್ನು ಭೆಟ್ಟಿಯಾಗ ಬೇಕೆಂದೂ ನಿರ್ಧಾರವಾಯಿತು.

ದ. ಕ. ಜಿಲ್ಲಾ ಬೋರ್ಡಿನ ಸ್ಪೆಶಲ್ ಸಭೆಗಳು — ಇದೇ ತಿಂಗಳ ತಾ, 23ನೇ ಸೋಮವಾರ ಬೆಳಗ್ಗೆ 10 30ಕ್ಕೆ ದ. ಕ. ಜಿಲ್ಲಾ ಬೋರ್ಡಿನ ಸ್ಪೆಶ್ಯಲ್ ಸಭೆಯು ಬೋರ್ಡಿನ ಆಫೀಸಿನಲ್ಲಿ ಪಬ್ಲಿಕ್ ಹೆಲ್ತ್ ಸ್ಟೇಂಡಿಂಗ್ ಕಮಿಟಿಗೆ ಇಬ್ಬರು ಸದಸ್ಯರನ್ನು ಆರಿಸುವರೇ ಜರಗುವುದು. ನಂತ 10-45ಕ್ಕೆ ಬೇರೊಂದು ವಿಶೇಷ ಸಭೆಯು ವರ್ಕ್ಸ್ ಮತ್ತು ಕಮ್ಯೂನಿಕೇಶನ್ ಕಮಿಟಿಗೆ ಇಬ್ಬರು ಸದಸ್ಯರನ್ನು ಆರಿಸುವರೆ ಕೂಡಾ ಜರಗುವುದು ಎಂದು ಜಿಲ್ಲಾ ಬೋರ್ಡ್ ಅಧ್ಯಕ್ಷರು ತಿಳಿಸುತ್ತಾರೆ,

ತೆಂಗಿನ ಕಮಿಟಿ—ಭಾರತದ ಕೇಂದ್ರ ತೆಂಗಿನ ಕಮಿಟಿಯಲ್ಲಿ ಕೃಷಿ ಉದ್ಯೋಗಸ್ಥರಾದ ಶ್ರೀ ಟಿ. ರಾಮನ್ ಮೆನೋನ್‌ರವರು ಇದೇ ತಾ, 11ರಿಂದ ಎಪ್ರಿಲ್ ತಿಂಗಳ ದಿನಾಂಕ 4ರ ತನಕ ದ. ಕ. ಜಿಲ್ಲಾ ಸಂಚಾರವನ್ನು ಕೈಕೊಂಡು ತೆಂಗು ಬೆಳೆಯುವ ಪ್ರದೇಶಗಳನ್ನು ಸಂದರ್ಶಿಸಿ ತೆಂಗು ವ್ಯವಸಾಯಿಗಳಿಗೆ ಬೇಕಾದ ಉಪದೇಶಗಳನ್ನು ಕೊಡಲಿರುವರು.

ಜಿಲ್ಲೆಯ ರಚನಾತ್ಮಕ ಕಾರ್ಯ ಕರ್ತರ ಸಭೆ—ಯೊಂದು ಕಳೆದ ತಾ. 26ರಲ್ಲಿ ಜರಗಿತು ಅಖಿಲ ಭಾರತ ಗ್ರಾಮ ಕೈಗಾರಿಕೆ ಸಂಘದ ಕಾರ್ಯ ದರ್ಶಿಗಳಾದ ಶ್ರೀ. ಜಿ. ರಾಮಚಂದ್ರನ್‌ರವರು ಮಾತನಾಡುತ್ತ ಗಾಂಧೀಜಿಯವರ ರಚನಾತ್ಮಕ ಕಾರ್ಯ ಕ್ರಮದಲ್ಲಿ ವಿಶ್ವಾಸ ಹಿಡಿಸಿ ಶ್ರದ್ಧೆ ಹಾಗೂ ತ್ಯಾಗ ಬುದ್ಧಿಯಿಂದ ಅದನ್ನು ಮುಂದುವರಿಸಿಕೊಂಡು ಹೋಗ ಬೇಕೆಂದು ಸೂಚಿಸಿದರು.

ನವಭಾರತ ರಾತ್ರಿ ಶಾಲೆಯ ವಾರ್ಷಿಕೋತ್ಸವವು—ಇದೇ ತಾ. 1ರಲ್ಲಿ ಜಿಲ್ಲಾ ಜಡ್ಜರಾದ ಶ್ರೀ. ಪಿ. ಟಿ ರಾಮನ್ ನಾಯರ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ನಾಯರ್ ಇವರು ಬಹುಮಾನ ವಿತರಣೆ ಮಾಡಿದರು, ಶ್ರೀ ಎಸ್ ರಮಾನಾಥರವರು ಮಾತನಾಡುತ್ತಾ ಶಾಲೆಗೆ ಶುಭವನ್ನು ಕೋರಿದರು, ಬಳಿಕ ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿಯವರು ಅಭಿನಂದಿಸಿದರು.

ನೀರಾ ಅಂಗಡಿಯೊಂದು- ಕಳೆದ ತಾ 28ರಲ್ಲಿ ಬೆಳಗ್ಗೆ ಜಿಲ್ಲಾ ಕಲೆಕ್ಟರ್ ಶ್ರೀ ಸಿ. ಎ. ರಾಮಕೃಷ್ಣನ್ ಅವರಿಂದ ಉದ್ಘಾಟಿಸಲ್ಪಟ್ಟಿತು. ಶ್ರೀ ಎಲ್. ಸಿ. ಪಾಯಸರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಮಾರಂಭಕ್ಕೆ ಸೇರಿದ ನಾಗರೀಕರಿಗೆ ನೀರಾ ಹಂಚಲಾಯಿತು. ಈ ಅಂಗಡಿಯು ಅಡ್ಯಾರು ಸಹಕಾರಿ ಬೆಲ್ಲದ ಸಂಘದವರಿಂದ ನಡೆಸಲ್ಪಡುತ್ತಿದೆ.

ಲಿಯೊಸಾನ್ ಲಿಸಮಿತಿಯ ಚಿಕಿತ್ಸೆ ಮೋಟಾರ್ ವೇನಿನ— ಉದ್ಘಾಟನೆಯು ಇದೇ ತಾ 5ರಲ್ಲಿ ಬೆಳಗ್ಗೆ ಕಲೆಕ್ಟರರ ಹಸ್ತದಿಂದಾಯಿತು, ಈ ಮೋಟಾರು ನಗರದ ಕೆಲವು ಭಾಗ್ಗಳನ್ನು ಸಂದರ್ಶಿಸಿದಾಗ ಕಲೆಕ್ಟರರೇ ಮೊದಲಾದವರ ಭಾಷಣಗಳಾದುವು, ಒಂದೆರಡು ಕಡೆಗಳಲ್ಲಿ ರೋಗಿಗಳನ್ನೂ ಪರೀಕ್ಷಿಸಲಾಯಿತು.

ಹರಿಜನ ಶಾಲೆಗಳ ವರ್ಧಂತಿ—ಮಂಗಳೂರು ನಗರದಲ್ಲಿಯೂ ನೆರೆಕೆರೆಯ ಐದು ಹರಿಜನ ಶಾಲೆಗಳ ವಾರ್ಷಿಕೋತ್ಸವವು, ಕಳೆದ ತಾ, 28ರಲ್ಲಿ ಜಿಲ್ಲಾ ಕಲೆಕ್ಟರ್, ಶ್ರೀ ಸಿ, ಎ ರಾಮಕೃಷ್ಣನ್ ಇವರ ಅಧ್ಯಕ್ಷತೆಯಲ್ಲಿ ಜರಗಿತು ಡಾ. ಯು. ಪಿ ಮಲ್ಯರು ಸ್ವಾಗತ ಭಾಷಣ ಮಾಡಿದ ಮೇಲೆ ಶ್ರೀ. ಬಿ. ವೈಕುಂಠ ಬಾಳಿಗರು ಮಹಾತ್ಮಾಗಾಂಧಿಯವರ ಭಾವಚಿತ್ರದ ಅನಾವರಣ ಮಾಡಿದರು, ಕುಮಾರಿ ಸುಂದರಿಯರ ಸ್ವಸ್ತಿ ವಾಚನ ಮಾಡಿದರು ಶ್ರೀಮತಿ ಪಿ, ಜೆ, ಪ್ರಭುಗಳು ಬಹುಮಾನ ಬಹುಮಾನ ವಿತರಣೆ ಮಾಡಿದರು, ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹರಿಜನ ವಿದ್ಯಾವಂತರಿಗೆ ಬರೇ ಸರಕಾರೀ ನೌಕರಿಗೆ ಹಾತೊರೆಯ ಬಾರದೆಂದೂ ಕೃಷಿಮುಂತಾದ ಕಸುಬು ಮಾಡಬೇಕೆಂದೂ ಕೇಳಿಕೊಂಡರು.

ವಿವಿಧ ಪಾತ್ರೆಗಳು



ದಯಾವತ್ತೂ ವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂಆಗಿಯೂ. ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ

ರಥಬೀದಿ ಉಡುಪಿ.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮ ಸಂಖ್ಯೆ 66/1953

ಬುಡಾನ್ ಸಾಹೇಬ್ —ವಾದಿ

ಮತ್ತು

ಗಿರಿಯಮ್ಮ ಪೂಜಾರ್ತಿ —ಪ್ರತಿವಾದಿ

ಇವರೊಳಗೆ

ಗಿರಿಯಮ್ಮ ಪೂಜಾರ್ತಿ, ಚೆನ್ನಯ್ಯ ಪೂಜಾರಿ ಸೊಸೆ ಮತ್ತು ಪೂಜಾರ್ತಿ ಮಗಳು, ಉಡುಪಿ ತಾಲೂಕು ಪಡುಕೋಣೆ ಗ್ರಾಮದ ತಿಮ್ಮಣ್ಣ ಕುದ್ರುವಿನಲ್ಲಿರುವವಳು —ಪ್ರತಿವಾದಿ

ಸದ್ರಿ ವ್ಯಾಜ್ಯದ ಪ್ರತಿವಾದಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ .

ಪ್ರತಿವಾದಿಳು ತಾ 2-6-1943 ರಲ್ಲಿ ರೂ 1000ಕ್ಕೆ ಬರೆದು ಕೊಟ್ಟ ಡಿಮಾಂಡ್ ಪ್ರಾಮಿಸರಿ ನೋಟ್ ... ಈ ದಸ್ತಾವೇಜಿನ ಅಸಲು ಬಡ್ಡಿಯನ್ನು ವಸೂಲು ಮಾಡುವ ಹಕ್ಕನ್ನು ತಾ 16-10-52 ರಲ್ಲಿ ಟ್ರಾನ್ಸ್‌ಫರ್ ಪಡೆದ ವಾದಿಯು ಪ್ರತಿವಾದಿ ಮೇಲೆ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ಪ್ರತಿವಾದಿಗೆ ಅಪ್ಪೀರ್ ನೋಟೀಸಿನ ಬಗ್ಗೆ 25-3-1953ಕ್ಕೆ ಇಡಲಾಗಿಯದೆ. ಪ್ರತಿವಾದಿಳು ಸದ್ರಿ ತನಖಿ ದಿವಸ ಹಗಲು ಗಂಟೆ 11ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉದಾಹರಣೆ ಇದ್ದರೆ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ಇಲ್ಲದಿದ್ದರೆ ಪ್ರತಿವಾದಿಳ ಗೈರು ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು.

K- Varadarya Pai,
Advocate for Plaintiff.

ಉಡುಪಿ, ತಾ 9-3-1953

The Catholic Bank Ltd., Udipi.

ದಿ ಕೆಥೋಲಿಕ್ ಬ್ಯಾಂಕ್ ಲಿಮಿಟೆಡ್, ಉಡ್ಪಿ ಬ್ರಾಂಚ್.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬ್ಯಾಂಕಿನಿಂದ ಚಿನ್ನಾಭರಣಗಳ ಆಧಿನ ಮೇಲೆ ಪಡಕೊಂಡ ಸಾಲದ ಮೊಬಲಗನ್ನಾಗಲೀ, ಯಾ ಅದಕ್ಕಾಗುವ ಈ ತನಕದ ಬಡ್ಡಿಯನ್ನಾಗಲೀ ಕೊಡದೆ ಇರುವುದರಿಂದಲೂ ಅಲ್ಲದೆ ಕ್ರಮವಾದ ರಿಜಿಸ್ತ್ರಿ ನೋಟೀಸು ಕೊಟ್ಟಲ್ಲಿ ಕೆಲವರು ಪಡಕೊಂಡು, ಕೆಲವರು ಊರಿನಲ್ಲಿ ಇಲ್ಲವೆಂತ ವಾಪಾಸು ಬಂದಿರುವುದರಿಂದಲೂ ನಗಗಳನ್ನು ಅವರವರು ಬಿಡಿಸಿಕೊಂಡು ಹೋಗದಿರುವುದರಿಂದಲೂ ಸದ್ರಿಯವರಿಗೆ ಯಾ ಸದ್ರೀಯವರ ವಾರೀಸುದಾರರಿಗೆ ಈ ಮೂಲಕ ತಿಳಿಸುವುದೇನೆಂದರೆ ಸದ್ರಿಯವರು ಈಡಿಟ್ಟ ನಗಗಳನ್ನು 1953ನೇ ಇಸವಿ ಮಾರ್ಚ ತಿಂಗಳ ತಾರೀಕು 21 ನೇ ಶನಿವಾರ ದಿವಸ ಅಪರಾಹ್ನ ಗಂಟೆ 3ಕ್ಕೆ ಯಾ ಬ್ಯಾಂಕಿಗೆ ಯುಕ್ತ ಕಂಡ ಇನ್ನಿತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಸದ್ರಿ ಬ್ಯಾಂಕಿನ ಮಠಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವದು.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು
27/492A	ಯಚ್. ನಾರಾಯಣ ಪೈ, ಯಚ್- ರಾಮಚಂದ್ರ ಪೈಯ ಮಗ, ಕಾಡಬೆಟ್ಟು, ಉಡ್ಪಿ	ರೂ. 130
1635	ಸೋಮಯ್ಯ ಪೂಜಾರಿ, ಕೊರಗ ಪೂಜಾರಿಯ ಅಳಿಯ, ಗುಂಡಿಬೈಲು ಉಡ್ಪಿ	„ 140
2098	ಅಬ್ದುಲ್ ರಹಿಮ್ ಪಿ. ಇಸ್ಮೈಲ್ ಸಹೇಬ, ಇಸ್ಮೈಲ್ ಸಾಹೇಬರ ಮಗ, ಉದಿಯಾವರ ಪೋಸ್ಟ್	„ 45
28/135	ಎನ್. ಶ್ರೀನಿವಾಸ ಭಟ್ಟ, ನಾರಾಯಣ ಭಟ್ಟರ ಮಗ, ಬಡಗಬೆಟ್ಟು, ಬೈಲೂರು ಉಡ್ಪಿ	„ 300
177	ಪಿ. ರಾಘವೇಂದ್ರ ತಂತ್ರಿ ಪಿ. ರಾಮ ತಂತ್ರಿಯ ಮಗ, ಬಡಗಬೆಟ್ಟು, ಬೈಲೂರು, ಉಡ್ಪಿ	„ 100
180	ವಿಮ್. ವಿಠ್ಠಲ ಪೈ, ಜನಾರ್ಧನ ಪೈಯವರ ಮಗ, ಹೋಟೆಲ್ ಕೀಪರ್, ಮಾರ್ಕೆಟ ರೋಡು, ಉಡ್ಪಿ	„ 75
132	ಯು. ಭವಾನಿ ಶಂಕರ ಶೇಟ್, ಯು. ಮಂಜುನಾಥ ಶೇಟರ ಮಗ, ಪಡುಪೇಟೆ, ಉಡ್ಪಿ	„ 45
194	ಕೆ. ನಾರಾಯಣ ಸೆಟ್ಟಿ, ಯಮ್. ದೇಜು ಸೆಟ್ಟಿಯ ಮಗ, ಕುಂಜಿಬೆಟ್ಟು, ಉಡ್ಪಿ	„ 200
215	ನಾಗ ಮೇಸ್ತ್ರಿ, ತೋಮನ ಮಗ, ಕುತ್ಪಾಡಿ ಪೋಸ್ಟ್	„ 30
27/665	ಬಿ. ಹಿರಿಯಣ್ಣ ಸೆಟ್ಟಿ, ಮೊನ್ನ ಸೆಟ್ಟಿಯ ಅಳಿಯ, ಮೂಡುಬೆಳ್ಳೆ ಪೋಸ್ಟ್	„ 35
27/747	ಕೆ. ಲಕ್ಷ್ಮೀನಾರಾಯಣ ಭಟ್, ರಾಮಣ್ಣ ಭಟ್ಟರ ಮಗ, ಬಲರಾಮ ಭವನ, ಮಲ್ಪೆ	„ 65
1296	ಎ ವ್ಯಾಸ ಬಲ್ಲಾಳ, ವಾದಿರಾಜ ಬಲ್ಲಾಳರ ಮಗ, ಜೋಲಿ ಕ್ಲಬ್ ಹೋಟೆಲ್, ಚರ್ಚ ರೋಡು, ಉಡ್ಪಿ	„ 100
1343	ಬಿ. ಹಿರಿಯಣ್ಣ ಹೆಗ್ಡೆ, ತೇಜಪ್ಪ ಹೆಗ್ಡೆಯವರ ಮಗ, ತೋನ್ಸೆ ಈಸ್ಟ್, ಕಲ್ಯಾಣಪುರ ಪೋಸ್ಟ್	„ 210

V. J. Andrade,
Agent-

ಅಮೃತಾಂಜನ

ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ಎದೆ ನೋವುಗಳಿಗೂ ಘಾಯಗಳು, ಬಾತುಕೊಳ್ಳುವುದು ಚೇಳುವಿಷಮುಂತಾದುವು, ಪಕ್ಷಪಾತ, ಮೂರ್ಛೆ ಮೊದಲಾದ ಎಲ್ಲಾ ರೋಗಳಿಗೂ ಸಿದ್ಧೌಷಧಿ.

ಹುಳು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

REGD.

ಅಮೃತಾಂಜನ ಲಿಮಿಟೆಡ್

ಮದರಾಸು ಬೊಂಬಾಯಿ ಮತ್ತು ಕಲ್ಕತ

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದಕಟ್ಟಿ ಋತುಸ್ರಾವವಾಗುವದು, ಹೊಟ್ಟೆಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದುವುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಶಾಶ್ವತ ಗುಣವಾಗಿದೆ- ಬೆಲೆ, ರೂ. 3-1 ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ. 8- [ವಿ ಪಿ ಹಣವಿರಬಾರ ಪ್ರತ್ಯೇಕ]

MIS. P. DEVEE, F. DS. (N. J.)
Tollygunge CALCUTTA.
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ಬೊಂಬಾಯಿ

ಬೊಂಬಾಯಿಯ ದ. ಕ ಬ್ರಾಹ್ಮಣ ಸಂಘದ ರಜತೋತ್ಸವ— ಬೊಂಬಾಯಿಯಲ್ಲಿ ವಾಸಿಸುತ್ತಿರುವ ದಕ್ಷಿಣ ಕನ್ನಡದ ಬ್ರಾಹ್ಮಣರ ಸಂಘದ ರಜತಮಹೋತ್ಸವವು ಇದೇ ತಾ 1ರಲ್ಲಿ ಮದ್ರಾಸಿನ ಮಂಜೂರವಂತ್ರಿ ಡಾ। ಯು. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಉಡುಪಿಯ ಶ್ರೀ ಅಧಮಾರುಮಠದ ಶ್ರೀ ಪಾದಂಗಳವರು ಉತ್ಸವದ ಉದ್ಘಾಟನೆಯನ್ನು ನೆರವೇರಿಸಿದರು. 'ಜಾತೀಯ ಹಿತಗಳು ರಾಷ್ಟ್ರದ ಹಿತಕ್ಕೆ ದಕ್ಕೆಯನ್ನುಂಟುಮಾಡದ ತನಕ ಮತ್ತು ಅವುಗಳು ಕೇವಲ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುತ್ತಿರುವಷ್ಟು ಕಾಲ ದೇಶದಲ್ಲಿ ಅವುಗಳಿಗೆ ಸ್ಥಾನವಿದೆ. ಬೊಂಬಾಯಿಯಲ್ಲಿರುವ ದಕ್ಷಿಣಕನ್ನಡದ ಬ್ರಾಹ್ಮಣರ ಈ ಸಂಘದ ಉದ್ದೇಶವು ಸ್ವಸಮಾಜದ ಸಾಂಸ್ಕೃತಿಕ ಉನ್ನತಿಯೇ ಆಗಿರುವುದರಿಂದ ಇದು ಜಾತೀಯ ಸಂಸ್ಥೆಯಾಗಲಾರದು ಎಂದು ಮುಂತಾಗಿ ಡಾ। ಕೃಷ್ಣರಾಯರು ತಮ್ಮ ಭಾಷಣದಲ್ಲಿ ಹೇಳಿದರು. ಸಮಾರಂಭದ ಪೂರ್ವದಲ್ಲಿ ಡಾ। ಯು. ಬಿ. ನಾರಾಯಣರಾಯರು ಸ್ವಾಗತ ಭಾಷಣಮಾಡಿದರು.

ಕಳೆದ ತಾ 22ರಲ್ಲಿ ಈ ರಜತೋತ್ಸವದ ಕಾರ್ಯಕ್ರಮಗಳು ಪ್ರಾರಂಭವಾಗಿದ್ದುವು. ಸಂದ್ಯಾಟಗಳ ಸ್ಪರ್ಧೆ, ಕಸೂತಿ ಮತ್ತು ಚಿತ್ರಗಳ ಪ್ರದರ್ಶನ, ನೃತ್ಯ, ಸಂಗೀತ, ನಾಟಕಾದಿ ಕಾರ್ಯಕ್ರಮಗಳಿದ್ದುವು. ಆಟದ ಸ್ಪರ್ಧೆಗಳಲ್ಲಿ ಶ್ರೀ ಕುಡ್ವಿ ಭುಜಂಗರಾಯರು ಡಾ। ಯು. ಬಿ. ನಾರಾಯಣ ರಾವ್ ಮೊದಲಾದವರು ಭಾಗವಹಿಸಿದ್ದರು. ಶ್ರೀ ಕೆ. ವ್ಯಾಸರಾವ್ ಮತ್ತು ಅವರ ಪತ್ನಿ ಶ್ರೀಮತಿ ಪ್ರಭಾ ರಾವ್ ಮತ್ತು ಶಂಕರನಾರಾಯಣ ರಾವ್ ಇವರು 'ಹೋಂರೂಲ್' ನಾಟಕವನ್ನು ತುಳು ಭಾಷೆಯಲ್ಲಿ ಉತ್ತಮ ರೀತಿಯಲ್ಲಿ ಅಭಿನಯಿಸಿದರು.

ಕುಂಬಳೆ—ಇಲ್ಲಿಯ ಪಂಚಾಯತ ಬೋರ್ಡ್ ಹೊಸ ಸದಸ್ಯರ ಸಭೆಯು ಇದೇ ತಾ 5ರಲ್ಲಿ ಪ್ರೆಸಿಡೆಂಟ್ ಶ್ರೀ, ಕೆ. ಕಣ್ಣಪ್ಪನವರ ಅಧ್ಯಕ್ಷತೆಯಲ್ಲಿ ಜರಗಿ ಜನಾಬ್ ಕೆ. ಎಸ್. ಪೆರುವಾಡ್, ಅವರು ಉಪಾಧ್ಯಕ್ಷರಾಗಿ ಆರಿಸಲ್ಪಟ್ಟರು,

ಇನ್ನ—ಸ್ಥಳೀಯ ಪಂಚಾಯತಬೋರ್ಡ್ ಚುನಾವಣೆಯು ಕಳೆದ ತಾ, 27ರಲ್ಲಿ ಜರಗಿತು ಶ್ರೀ ಇನ್ನ ಮಧ್ಯಣ ಗುತ್ತು ಶಿವಣ್ಣ ಸೆಟ್ಟರು ಬಹುಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟರು

ಹಿರಿಯಡಕ— ಮದ್ರಾಸು ಪ್ರಾಂತದ ಜಿಲ್ಲಾ ಬೋರ್ಡುಗಳ ಚೇಂಬರಿನ ಕಾರ್ಯಕಾರೀ ಮಂಡಲದ ಕೆಲವು ಸದಸ್ಯರು ಇದೇ ತಾ. 4ರಲ್ಲಿ ಹಿರಿಯಡಕ ಬೋರ್ಡ್ ಹೈಸ್ಕೂಲನ್ನು ಸಂದರ್ಶಿಸಿದರು ಶಾಲಾ ಉಪಾಧ್ಯಾಯ ವೃಂದದವರೂ. ಹಾಗೂ ಹಿರಿಯಡ ಎಜ್ಯುಕೇಶನಲ್ ಸೊಸೈಟಿಯವರು ಅವರಿಗೊಂದು ಉಪಹಾರ ಕೂಟ ಏರ್ಪಡಿಸಿ ಗೌರವಿಸಿದರು, ಶಾಲಾಹೆಡ್ಮಾಸ್ತರ್ ಶ್ರೀ ಬಿ.ಎ ಸಾಮಕರು ಸ್ವಾಗತ ಭಾಷಣ ಮಾಡಿ ಶಾಲೆಯನ್ನು ಸಂದರ್ಶಿಸಿದ ಬಗ್ಗೆ ಅತಿಥಿಗಳ ಉಪಕಾರ ಸ್ಮರಿಸಿದರು. ಅತಿಥಿಗಳು ಹಾಗೂ ಸಭ್ಯರ ಸಮಾರಂಭದ ಅಧ್ಯಕ್ಷತೆ ವಹಿಸಿದ ಶ್ರೀ ಬಿ, ಮಂಜಯ್ಯ ಹೆಗ್ಡೆಯವರು ಸಂದರ್ಭೋಚಿತ ಮಾತುಗಳನ್ನಾಡಿದರು. ಶಾಲಾ ಕಮಿಟಿ ಕಾರ್ಯದರ್ಶಿ ಡಾ ಬಿ ಚಂದಯ್ಯ ಹೆಗ್ಡೆಯವರು ಧನ್ಯವಾದಗಳನ್ನರ್ಪಿಸಿದರು.

ಕಾಸರಗೋಡು— ಈ ತಾಲೂಕಿನ ಬೆಳ್ಳೂರು ಬೋರ್ಡು ಹಾ। ಎ। ಶಾಲಾ ಮತ್ತು ಸ್ಥಳೀಯ ಪಯಸ್ವಿನಿ ಕೂಟದ ವಾರ್ಷಿಕೋತ್ಸವವು ಕಳೆದ ತಾ 28ರಲ್ಲಿ ಶ್ರೀ ಎಮ್. ಉಮೇಶ ರಾವ್ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ವರದಿ, ಶಾಲಾ ಸಮಾಜದ ವರದಿ, ವಯಸ್ಕರ ಕೂಟದ ವರದಿಗಳು ಓದಲ್ಪಟ್ಟ ನಂತರ ಬಹುಮಾನ ವಿತರಣೆಯಾಯಿತು. ಸಭಿಕರ ಮತ್ತು ಅಧ್ಯಕ್ಷರ ಭಾಷಣಗಳಾದ ತರುವಾಯ ಶಾಲಾ ಮಕ್ಕಳಿಂದ "ದಲಾಲಿ" ಎಂಬ ತುಳುನಾಟಕ, ಯಕ್ಷಗಾನ ನಾಟಕ ಮೊದಲಾದ ವಿನೋದಾವಳಿಗಳಾದವು, ಮಕ್ಕಳ ಚಟುವಟಿಕೆಗಳನ್ನು ಕಂಡು ಸಂತೋಷಚಿತ್ತರಾದ ಶ್ರೀಗಳಾದ ಪಟೇಲ್ ಸುಬ್ರಾಯ ಕಡಂಬಳಿತ್ತಾಯರೂ, ಎಮ್, ಎಸ್ ಕಡಂಬಳಿತ್ತಾಯರೂ ಮುಂದಿನ ವರುಷದ ಶಾಲಾ ವಾರ್ಷಿಕೋತ್ಸವಕ್ಕೆ ಬೇಕಾದಪದಕಗಳನ್ನೂ ಪರೀಕ್ಷೆಯಲ್ಲಿ ಪ್ರತಿ ದರ್ಜೆಯಲ್ಲೂ ಪ್ರಥಮ ಸ್ಥಾನಗಳಿಸಿದವರಿಗೆ ಬಹುಮಾನವನ್ನೂ ವರ್ಷಂಪ್ರತಿಯೂ ಕೊಡುವುದಾಗಿ ಪಾಗ್ದಾನ ವಿತ್ತರು ಮರುದಿನ ಬೆಳಗ್ಗೆ ಪ್ರಭಾತ ಫೇರಿ ಧ್ವಜ ವಂದನೆ, ಸೂತ್ರಯಜ್ಞ ಇತ್ಯಾದಿ ಕಾರ್ಯಕ್ರಮಗಳಿದ್ದುವು.

ಕಾಳಾವರ— ಪಂಚಾಯತ್ ಬೋರ್ಡಿನ ಚುನಾವಣೆಯು ತಾ, 25ರಲ್ಲಿ ನಡೆಯಿತು. ಸದ್ರಿ ಬೋರ್ಡಿನ ಅಧ್ಯಕ್ಷ ಸ್ಥಾನಕ್ಕೆ ಕಾಳಾವರ ಪಂಚಾಯತ ಬೋರ್ಡಿಗೆ ಒಳಪಟ್ಟ ಕದೂರು ಆಸೋಡು, ಕೊರ್ಗಿ ಮತ್ತು ಕಾಳಾವರ ಗ್ರಾಮಗಳ ಜನರು ಶ್ರೀ ಕಾಪು ಸಂಜೀವ ಸೆಟ್ರನ್ನು ಒಮ್ಮತದಿಂದ ಆರಿಸಿದರು.

ಕೊಲ್ಲೂರು— ಕಳೆದ ತಾ. 20ರಲ್ಲಿ ಪಂಚಾಯತ ಬೋರ್ಡು ಚುನಾವಣೆಯು ಕೊಲ್ಲೂರು ಬೋರ್ಡು ಎಲಿಮೆಂಟರಿ ಪಾಠಶಾಲೆಯಲ್ಲಿ ಜರಗಿ ಶ್ರೀ ಕೆ. ಎನ್. ಗುಂಡು ಭಟ್ಟರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ,

ಈ ಮೊದಲು ಕೊಲ್ಲೂರಿನಿಂದ ಬೈಂದೂರಿಗೆ ಪ್ರಾತಃಕಾಲ ಕಟ್ ಸರ್ವಿಸು ಬಸ್ಸು ಇದ್ದು ಕೊಲ್ಲೂರಿನಿಂದ ಹೊರಟ ಪ್ರಯಾಣಿಕರಿಗೆ ಅದೇ ದಿನ ಮಂಗಳೂರಿಗೆ ಹೋಗಲಿಕ್ಕೂ ಅಂದೇ ಬೆಳಗ್ಗೆ ಮಂಗಳೂರಿನಿಂದ ಬಂದಿದ್ದ ಪ್ರಯಾಣಿಕರಿಗೆ ಸಂಜೆ ಕೊಲ್ಲೂರಿಗೆ ಬರಲಿಕ್ಕೂ ಅನುಕೂಲವಿತ್ತು. ಆದರೆ ಈಗಿನ ಬಸ್ಸು ಸಮಯವು ಪ್ರಯಾಣಿಕರಿಗೆ ಅತೀ ಅನಾನುಕೂಲವಿದೆ. ದಿನಂಪ್ರತಿ ಬೇರೆಬೇರೆ ಕಡೆಗಳಿಂದ ಕೊಲ್ಲೂರಿಗೆ ನೂರಾರು ಜನರು ಬಂದು ಹೋಗುವವರಿರುತ್ತಾರೆ. ಬರೇ ಒಂದು ಸರ್ವಿಸನ್ನು ಓಡಿಸುವುದರಿಂದ ಜನರ ಪ್ರಯಾಣಕ್ಕೆ ತುಂಬಾ ತೊಂದರೆಯಾಗಿದೆ. ಸಂಬಂಧಪಟ್ಟವರು ಜನರ ಸೌಕರ್ಯಗಳಿಗೆ ಗಮನವಿಟ್ಟು ಕನಿಷ್ಠ ಎರಡು ಸರ್ವಿಸುಗಳನ್ನಾದರೂ ಇಡಬೇಕೆಂದೂ ಮುಂಚಿನಂತೆಯೇ ಕೊಲ್ಲೂರುವರೆಗೆ ಕಟ್‌ಸರ್ವಿಸನ್ನು ಇಡಗೊಡಿಸಬೇಕೆಂದೂ ನೊಂದವರೊಬ್ಬರು ... ತಾರೆ

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R E. P. 771/52 O. S, 79/49

ವಾದಿಳು—ಶಂಕರಮ್ಮ.

ಪ್ರತಿವಾದಿರು—ಗಣಪಯ್ಯ ಭಟ್ಟ ಕೂಡಾ 2-ನೇ ಪ್ರತಿವಾದಿ ಸುಬ್ರಾಯ ಭಟ್ಟ ಮಹಾಬಲೇಶ್ವರ ಭಟ್ಟರ ಮಗ 3. ಮ್ಯಾನರ್ ಗಣಪತಿ 4. ಮ್ಯಾನರ್ ಸದಾಶಿವ - 2ನೇ ಪ್ರತಿವಾದಿ ಮಕ್ಕಳು -ಬೈಂದೂರು ಗ್ರಾಮ.

ಯಿವರೀಗೆ ಈ ಮೂಲಕ ತಿಳಿಯಪಡಿಸುವುದೇನದಂರೆ -

ವಾದಿಳು ನಿಮ್ಮ ಮೇಲೆ ನಡ್ಸಿದ ಅಮ್ಲ ಜಾರಿಯಲ್ಲಿ ನಿಮಗೆ ನೋಟೀಸು ಬಗ್ಗೆ ಸದ್ರಿ ಅಮ್ಲಜ್ಯಾರಿಯನ್ನು ತಾ. 18-3-53ಕ್ಕೆ ಇಟ್ಟಿರುತ್ತದೆ. ಆ ದಿವ್ಸ ನೀವು ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜರಾಗದಿದ್ದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ಅಮ್ಲಜ್ಯಾರಿಯ ಮುಂದಿನ ಕ್ರಮ ವಗೈರೆ ನಡಿಸಲ್ಪಡುತ್ತದೆಂಬ ಸಂಗ್ತಿ ಈ ಮೂಲ್ಕ ತಿಳಿಸಿಯದೆ.

By order of the Court

A. N. Rao

Advocate for plaintiff

Kundapoor, 7—3—53

ಕುಂದಾಪ್ರುರ ಡಿ. ಮು. ಕೋರ್ಟಿನಲ್ಲಿ

S C. 728/1953

ಎಸ್. ರಘುರಾಮ ಪೈ ವಾದಿ.

ಗಣಪತಿ ಕಂಮ್ತಿ ಪ್ರತಿವಾದಿ.

ಪ್ರತಿವಾದಿ ಗಣಪತಿ ಕಂಮ್ತಿ ಸಂಜೀವ ಕಂಮ್ತಿಯವರ ಮಗ ವ್ಯಾಪಾರ ಕ್ಸಬು ಕುಂದಾಪುರ ತಾಲ್ಕು ಕೋಟೇಶ್ವರಗ್ರಾಮ ಪೋಸ್ಟು ಕೋಟೇಶ್ವರ ಇವರಿಗೆ-

ವಾದಿಯ ಬಾಬ್ತು ಕುಂದಾಪುರ ಅಂಗಡಿಯಲ್ಲಿ ತಾರೀಕು 24-11-1951ರಿಂದ 21-12-1951ರ ವರೇಗೆ ತಡ್ಸಿದ ಲೇವಾದೇವಿ ರೂ. 225-9-4ಕ್ಕೆ ಮೇಲ್ಕಂಡ ದಾವೆ ಮಾಡಿರುವುದರಿಂದ ಆ ಕುರಿತು ನಿಮ್ಮದೇನಾದ್ರು ಆಕ್ಷೇಪ ವಿದ್ದಲ್ಲಿ ತಾರೀಕು 23-3-53ನೇ ದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಯೋಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ನಿಮಗೆ ಯಿಮೂಲಕ ತಿಳಿಸೋಣಾಗುತ್ತದೆ.

K. Raghunatha Shenai

Pleader for Plaintiff,

Coondapoor, Date 2—3—1953.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ,
ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು
ಯಾವಾಗಲೂ ಸಿದ್ಧವಿವೆ.
ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.
ಯು. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.
ಫೋನು ನಂಬ್ರ 66

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್

ಪ್ರಕಟಣೆ

ತೋನ್ಸೆ ಪಂಚಾಯತ ಬೋರ್ಡ್.

ಈ ಬೋರ್ಡು ವ್ಯವಹಾರ ಕ್ಷೇತ್ರಕ್ಕೆ ಒಳಪಟ್ಟ, ಕೆಮ್ಮಣ್ಣು ಹಪ್ತೆವಾರು ಸಂತೆ, ದಿನಚರ್ಯದ ಮೀನು ಮಾರ್ಕೆಟು ಮತ್ತು ಪಡುಕುದ್ರು ಬಾರಿಯಲ್ಲಿ ಕೂಡ 1953ನೇ ಇಸವಿ ಏಪ್ರಿಲ್ ತಾರೀಕು 1ರಿಂದ 1954ನೇ ಇಸವಿ ಮಾರ್ಚ್ ತಾರೀಕು 31ರ ವರೇಗೆ ವಸೂಲು ಮಾಡುವ ಸ್ವಾತಂತ್ರ್ಯವನ್ನು, ಇದೇ ಮಾರ್ಚ್ ತಿಂಗಳು ತಾರೀಕು 19ನೇ ಗುರುವಾರ, ಸಾಯಂಕಾಲ ಘಂಟೆ 3ಕ್ಕೆ ಬೋರ್ಡ್ ಆಫೀಸಿನಲ್ಲಿ ಪ್ರತ್ಯ ಪ್ರತ್ಯೇಕ ಬಹಿರಂಗವಾಗಿ ಏಲಂ ಮಾಡೋಣಾಗುವುದು. ಏಲಮಿನ ಶರತು ವಗೈರೆ ಇತರ ವಿವರಗಳನ್ನು ಸದರಿ ಬೋರ್ಡು ಅಫೀಸಿನಲ್ಲಿ ತಿಳಿದು ಕೊಳ್ಳ ಬಹುದು ಎಂತ ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸೋಣಾಗುತ್ತದೆ.

ಟಿ. ಗೋವಿಂದ ಉಡುಪ.

ಪ್ರೆಸಿಡೆಂಟ್

ತೋನ್ಸೆ ಪಂಚಾಯತ್ ಬೋರ್ಡ್

ಪ್ರಕಟಣೆ

ತಾ. 17-3-1953ರ ಸಂಜೆ ಗಂಟೆ 4ರ ಒಳಗೆ ಮುಟ್ಟುವಂತೆ ರೂ. 5ರ ಪ್ರಥಮ ಠೇವಣಾತಿಯೊಂದಿಗೆ

ಟೆಂಡರುಗಳನ್ನು ಕರೆದಿದೆ

ನಿಡಂಬೂರು ಪಂಚಾಯತ ಬೋರ್ಡ್ ಪ್ರೆಸಿಡೆಂಟರಿಂದ

ಬರುವ 1953 54 (ತಾ, 1-4-1953ರಿಂದ ತಾ. 31-3-54) ನೇ 1 ವರ್ಷದ ಅವಧಿಗೆ ಬಾರ್ಕೇರ ಕಟ್ಟೆ ಕಡವಿನ ಫೀಸು ವಸೂಲಿಯ ಹಕ್ಕಿನ ಗುತ್ತೆಯ ಕುರಿತು.

ಅತ್ಯಧಿಕ ಟೆಂಡರುಗಳನ್ನು ಮಾತ್ರ ಸ್ವೀಕರಿಸಲಾಗುವುದು ಕಳೆದ ವರ್ಷ ಸಿಕ್ಕಿರುವ ಮೌಲ್ಯಕ್ಕೂ ಕಡಿಮೆಯಾದ ಮೌಲ್ಯವನ್ನು ಸ್ವೀಕರಿಸಲಾಗುವುದಿಲ್ಲ. ತಾ. 17-3-53ರ ಸಂಜೆ ಗಂಟೆ 4½ಗೆ ಸರಿಯಾಗಿ ಪ್ರೆಸಿಡೆಂಟರು ಟೆಂಡರುಗಳನ್ನು ಒಡೆದು ನೋಡುವರು.

ಬಹಿರಂಗವಾದ ಏಲಂ

ನಿಡಂಬೂರು ಪಂಚಾಯತ ಬೋರ್ಡು ಪ್ರೆಸಿಡೆಂಟರಿಂದ ತಾ. 17-3-1953ರ ಸಂಜೆ ಗಂಟೆ 4ಕ್ಕೆ ಬೋರ್ಡಿನ ಆಫೀಸಿನಲ್ಲಿ ಕಿನ್ನಿಮೂಲ್ಕಿ ... ದಿನವಹಿ ಮೀನು ಮಾರ್ಕೆಟುಗಳಲ್ಲಿ ಫೀಸು ವಸೂಲಿಯ ಗುತ್ತೆಗಳ ಕುರಿತು, ಬರುವ 1953-54ನೇ 1 ವರ್ಷದ ಅವಧಿಗೆ ಮಾತ್ರ ಪ್ರಥಮ ವಾರು ಕರೆಯುವ ಮೊಬಲಗು ಪ್ರತಿಯೊಂದು ಗುತ್ತೆಗೆ ರೂಪಾಯಿ 25/ ಏಲಮಿಗೆ ನಿಲ್ಲುವವರು ಪ್ರತಿಯೊಬ್ಬರು ಪ್ರತಿಯೊಂದು ಗುತ್ತೆಗೆ ರೂಪಾಯಿ 5/ರಂತೆ ಪ್ರಥಮ ಠೇವಣಾತಿಯನ್ನು ಇಡತಕ್ಕದ್ದು. ಅತ್ಯಧಿಕ ಮೌಲ್ಯದ ಬಿಡ್ಡನ್ನೇ ಸ್ವೀಕರಿಸಲಾಗುವುದು. ಅದನ್ನು ಪ್ರೆಸಿಡೆಂಟರು ಸ್ವೀಕರಿಸಿದೊಡನೆ ಬಿಕ್ಕವರ ಠೇವಣಾತಿಗಳು ಹಿಂದಿರುಗಿಸ್ಪಡುವುದು. ಏಲಂ ಕಾಯಂ ಆದೊಡನೆ ಪ್ರಥಮ ಠೇವಣಾತಿಯನ್ನು ಕೂಡಿ ಏಲಂನ ಸಂಪೂರ್ಣ ಮೊಬಲಗಿನ ಕನಿಷ್ಠ ಅರ್ಧಾಂಶವನ್ನು ಗುತ್ತೆದಾರನು ಪ್ರೆಸಿಡೆಂಟರಿಗೆ ಪಾವತಿಮಾಡಿ ರಶೀದಿ ಪಡೆಯತಕ್ಕದ್ದು. ಏಲಂಕೂಗಿದ ಅರ್ಧಾಂಶವು ರೂ. 25ಕ್ಕೆ ಮೀರಿದರೆಮಾತ್ರ ಕಂತುಗಳನ್ನು ಕೊಡಲಾಗುವುದು ಇಲ್ಲವಾದರೆ ಅದನ್ನು ಕೂಡಾ ಮೇಲಿನ ಮೊಬಲಗಿನೊಂದಿಗೆ ಕಟ್ಟತಕ್ಕದ್ದು

ಎನ್, ರಾಜಗೋಪಾಲಕೃಷ್ಣರಾವ್

President Nidamboor Panchayat Board.

ನಿಡಂಬೂರು ಪಂಚಾಯತ ಬೋರ್ಡ್

ತಾರೀಕು 7-3-1953.

ಬೆಳಕಿನಂತೆ ಅಂಧಕಾರವೂ ಅನಿವಾರ್ಯ

(೯ನೇ ಪುಟ ನೋಡಿರಿ)

ಥವಾ ದಕ್ಷಿಣಾಭಿಮುಖವಾಗಿ ನೂರೈವತ್ತು ಮೈಲು ಕ್ರಮಿಸಿದರೂ ಸಾಕು-ತಾವು ಕೈಯಲ್ಲಿ ತೆಗೆದುಕೊಂಡು ಬಂದ ಹೂ ಗಿಡದಿಂದ ಅರಳಲು ತಯಾರಾಗಿದ್ದ ಹೂ ಕೂಡ ಅರಳುವುದಿಲ್ಲೆಂಬುದನ್ನು ಕಾಣಬಹುದು. ಎಲ್ಲ ಜಾತಿಯ ಸಸ್ಯಗಳಿಗೂ ಈ ಮಾತು ಅನ್ವಯಿಸುವುದಿಲ್ಲ. ಆದರೆ, ಇಷ್ಟು ಸ್ವಲ್ಪ ದೂರವನ್ನು ಕ್ರಮಿಸಿದುದರಿಂದ ಉಂಟಾದ ಹಗಲು ರಾತ್ರಿಗಳ ವ್ಯತ್ಯಾಸವೇ ಕೆಲವು ಸಸ್ಯಜಾತಿಗಳ ಹೂ ಬಿಡುವ ಕ್ರಿಯೆಯ ಮೇಲೆ ಗಂಭೀರವಾದ ಪರಿಣಾಮ ಮಾಡುತ್ತದೆ. ಇದು ಅನುಭವ ಸಿದ್ಧವಾದ ವಿಷಯ.

ಸಂಶೋಧನೆ ಆರಂಭವಾದುದು ಹೀಗೆ: ಆದರೆ ಕತ್ತಲಿನ ಅವಧಿಯ ಪ್ರಭಾವವು ಸಸ್ಯಜಾತೀಯ ಬಾಳ್ವೆಯ ಮೇಲೆ ಇಷ್ಟೊಂದು ಮಹತ್ವದ ಪರಿಣಾಮವನ್ನು ಮಾಡುವುದರ ರಹಸ್ಯವೇನೆಂಬುದು ತಿಳಿದು ಬಂದ ಹೊರತು ವಿಜ್ಞಾನಿಗಳಿಗೆ ಸಮಾಧಾನವಾಗುವಂತಿಲ್ಲ. ಬೆಳಕು ಇಲ್ಲವೆಂಬುದೇ ಕತ್ತಲೆ ಎಂದು ಎಲ್ಲರಿಗೂ ಗೊತ್ತು. ಈ ಕತ್ತಲಿನಲ್ಲಿ ಸಸ್ಯವು ಹೂ ಬಿಟ್ಟು ಪುಷ್ಪ ಅರಳುವಂತೆ ಮಾಡುವ ವಸ್ತು ವಿಶೇಷ ಯಾವುದು? ಆಗ ನಡೆಯುವ ಕ್ರಿಯೆಗಳೇನು? ಬೆಳವಣಿಗೆಗೆ ಆಧಾರಭೂತವಾದುದು ರಾಸಾಯನಿಕ ಪ್ರತಿಕ್ರಿಯೆಎಂಬುದೇನೊ ಸಿದ್ಧಗೊಂಡಿದೆ.ಹಾಗಾದರೆ ಕತ್ತಲಿನಲ್ಲಿ ಗಿಡಮರಗಳು ಗುಟ್ಟಾಗಿ ಒಂದು ವಿ ಶಿ ಷ್ಟ ರಾ ಸಾ ಯ ನಿ ಕ ವ ಸ್ತು ವ ನ್ನು ಸಿ ದ್ಧ ಮಾ ಡಿ ತನ್ಮೂಲಕ, ಪುಷ್ಪಗಳು ಅರಳುವಂತೆ ನೋಡುತ್ತವೆಯೆ? ಈ ರೀತಿ ವಿಜ್ಞಾನಿಗಳು ಮಾಡುತ್ತಾಬಂದ ಊಹನೆಗಳು ಈಗ ಸರಿ ಎಂದು ಗೊತ್ತಾಗಿದೆ. ಆದರೂ ಈ ವಿಶಿಷ್ಟ ರಾಸಾಯನಿಕ ವಸ್ತು ಏನೆಂಬ ಸಂಗತಿ ಅಭೇದ್ಯವಾಗಿಯೇ ಉಳಿದಿದೆ. ಅಂಥದೊಂದು ವಸ್ತುವಿದೆ ಎಂಬ ಬಗ್ಗೆ ಮಾತ್ರ ಈಗ ಸಂಶಯವಿಲ್ಲ.

ಎಲೆ ಇಲ್ಲದೆ ಪುಷ್ಪವಿಲ್ಲ

ಈ ರಾಸಾಯನಿಕ ವಸ್ತುವೊಂದಿದೆ ಎಂಬುದಕ್ಕೆ ಹಲವು ಪ್ರಯೋಗಾಲಯಗಳಿಂದ ಸಾಕ್ಷಿದೊರೆಯಿತು. ಅಮೇರಿಕಾ, ರಶಿಯಾ, ನೆದರ್ಲೆಂಡ್ ಮುಂತಾದ ದೇಶಗಳಲ್ಲಿ ಈ ಪ್ರಯೋಗ ನಡೆದುವು. ಸುಮಾರು ೩೦ ವರ್ಷಗಳಿಗೆ ಮುಂಚೆ ಕಾರ್ನೆಲ್ ವಿಶ್ವವಿದ್ಯಾಲಯದ ಪ್ರೊ. ನೋಟ್ ಎಂಬವರು ಕಡಿಮೆ ಕತ್ತಲಿನ ದಿನಗಳಲ್ಲಿ ಹೂಬಿಡುವ ಒಂದು ಸಸ್ಯ ಜಾತಿಯನ್ನು ತೆಗೆದುಕೊಂಡು, ಹೂಬಿಡುವ ಅದರ ಕಾಂಡಪ್ರದೇಶವನ್ನು ಹಗಲಿನಲ್ಲಿ ಮುಚ್ಚಿಟ್ಟರು. ಕಾಂಡದ ತುಟ್ಟಿಗೆ ಹಗಲು--ರಾತ್ರಿಗಳ ಅವಧಿಯನ್ನು ಈ ರೀತಿ ವ್ಯತ್ಯಾಸ ಮಾಡಿದ್ದರ ಪರಿಣಾಮ ಮಾತ್ರ ಏನೂ ಆಗಲಿಲ್ಲ. ಸಸ್ಯ ಎಂದಿನಂತೆ ಹೂಬಿಟ್ಟಿತು. ಆಗ ಅವರು ಎಲೆಗಳಿಗೆ ಕಡಿಮೆ ಅವಧಿಯ ಕತ್ತಲೆಯನ್ನು ಕೊಟ್ಟರು. ಆಗ ಮಾತ್ರ ಹೂ ಬಿಡುವ ಕಾರ್ಯ ನೆರವೇರಲಿಲ್ಲ. ಈ ಪ್ರಯೋಗದಿಂದ ಕತ್ತಲೆಯ ಪ್ರಭಾವ ಎಲೆಗಳ ಮೇಲೆ ಆಗುತ್ತದೆಯಲ್ಲದೆ, ಸಸ್ಯದ ಕಾಂಡದಲ್ಲಿರುವ ಹೂಮೊಗ್ಗೆಯ ಮೇಲೆ ಅಲ್ಲವೆಂದು ಸಿದ್ಧವಾಯಿತು.

ಇದೇ ಪ್ರಯೋಗವನ್ನು ಬೇರೆ ಸಂಶೋಧಕರು ಇನ್ನೂ ವಿಸ್ತರಿಸಿ ಪರೀಕ್ಷಿಸಿದರು. ಆ ಗಿಡದಲ್ಲಿ ಒಂದು ಎಲೆಯನ್ನು ಬಿಟ್ಟರೂ ಸಾಕು, ಹಗಲು ರಾತ್ರಿಗಳು ಬೇಕಾದ ಪ್ರಮಾಣದಲ್ಲಿ ದೊರೆತರೆ ಪುಷ್ಪಗಳು ಅರಳುತ್ತಿದ್ದುವು. ಚಿಕಾಗೋ ವಿಶ್ವವಿದ್ಯಾಲಯದ ಹ್ಯಾಮ್ನರ್ ಮತ್ತು ಬೋನ್ನರ್ ಎಂಬೀರ್ವರು ಪ್ರಾಧ್ಯಾಪಕರು ಗಿಡದಲ್ಲಿ ಒಂದು ಎಲೆಯ ಎಂಟರಲ್ಲಿ ಒಂದು ಪಾಲು ಮಾತ್ರ ಇಟ್ಟು ನೋಡಿದಾಗಲೂ-ಹಗಲು ರಾತ್ರಿಗಳ ಪ್ರಭಾವ ಕೇವಲ ಎಲೆಯ ಮೇಲಷ್ಟೆ ಬೀಳುವುದೆಂದು ಸ್ಪಷ್ಟಗೊಂಡಿತು. ಆದುದರಿಂದ ಇಡೀ ಗಿಡವು ಹೂ ಬಿಟ್ಟು ಅರಳಲಿಕ್ಕೆ ಬೇಕಾಗುವ ವಿಶಿಷ್ಟ ರಾಸಾಯನಿಕ ವಸ್ತುವನ್ನು ಒಂದು ಎಲೆಯ ಅತ್ಯಲ್ಪ ಭಾಗ ಉತ್ಪಾದಿಸುತ್ತದೆಂದು ತಿಳಿಯಿತು.

ಇದಕ್ಕೂ ಆಶ್ಚರ್ಯದ ಸಂಗತಿ ಎಂದರೆ-ಯಾವ ಜಾತಿಯ ಸಸ್ಯವೇ ಇರಲಿ, ಹೂ ಬಿಡುವ ಕ್ರಿಯೆಯನ್ನು ನೆರವೇರಿಸುವ ಆ ರಾಸಾಯನಿಕ ದ್ರವ್ಯವು ಎಲ್ಲದರಲ್ಲಿಯೂ ಒಂದೇ. ಹೂ ಬಿಡಲು ಸಿದ್ಧವಾದ ಗಿಡದ ಎಲ್ಲ ಎಲೆಗಳನ್ನೂ ಕಿತ್ತೆಗೆದು, ಯಾವುದಾದರೂ ಬೇರೊಂದು ಗಿಡದ ಎಲೆಯೊಂದನ್ನು ಅದರ ಕಾಂಡಕ್ಕೆ ಹಚ್ಚಿದರೂ ಸಾಕು ಗಿಡ ಹೂ ಬಿಡುತ್ತದೆ!

ಕೃತ್ರಿಮ ಜಗತ್ತಿನ ಪ್ರಯೋಗ

ಈ ವಿಶಿಷ್ಟ ರಾಸಾಯನಿಕ ದ್ರವ್ಯವೇನೆಂಬುದನ್ನು ಸಂಶೋಧಿಸುವ ಹುಚ್ಚು ಈಗ ವಿಜ್ಞಾನಿಗಳಿಗೆ ತಗುಲಿದೆ. ಇದನ್ನು ನಾವಾಗಿ ಪರಿಶುದ್ಧ ರೂಪದಲ್ಲಿ ತಯಾರಿಸ ಬಲ್ಲೆವಾದರೆ, ಗಿಡಮರಗಳಿಗೆ ಈ ದ್ರವ್ಯವನ್ನು ಇಂಜೆಕ್ಷನಿನಂತೆ ಚುಚ್ಚಿ, ಬೇಕಾದ ಸಮಯ ಪುಷ್ಪಗಳನ್ನು ಪಡೆಯಬಹುದು. ಇದರ ಪರಿಣಾಮವಾಗಿ ಹೂ ಗಿಡಗಳನ್ನು ಅವುಗಳ ಸ್ವಾಭಾವಿಕ ವಾತಾವರಣದಿಂದ ಕೃತ್ರಿಮ ಜಗತ್ತಿಗೇ ತಂದು ಬೆಳೆಸಬಹುದು. ಹಗಲು ಬೆಳಕಿನ ಯೋಗ್ಯ ಪ್ರಯತ್ನದಿಂದ ಪ್ರಕೃತಿಯು ಸಿದ್ಧಪಡಿಸುವ ಈ ರಾಸಾಯನಿಕ ದ್ರವ್ಯವನ್ನು ಮನುಷ್ಯ ಬುದ್ಧಿ ಸಂಶೋಧಿಸಿದಲ್ಲಿ, ಹೂವಾಡಿಗರು ಪುಷ್ಪಗಳಿಗಾಗಿ ನಿಸರ್ಗದತ್ತ ನೋಡುತ್ತಾ ಕುಳಿತಿರುವ ಅಗತ್ಯಬೀಳದು

ಕೃಷೀವಲರಿಗಾದರೂ ಬೇರೆ ಬೇರೆ ಕಾಲದಲ್ಲಿ ಹೂ ಬಿಟ್ಟು ಫಸಲು ಕೊಡುವ ಬೀಜ ಜಾತಿಗಳನ್ನು ಹೊಸ ವಿಧಾನದಿಂದ ತಮಗೆ ಬೇಕೆನಿಸಿದಂತೆ ಬಳಸಲು ಬರುತ್ತದೆ. ಈಗ ಅಸಾಧ್ಯವೆನಿಸಿದ್ದ ಅಸಂಖ್ಯ ಮಿಶ್ರಜಾತಿಯ ಬೀಜಗಳನ್ನು ಆಗ ಸೃಷ್ಟಿಸಬಹುದು.

ಸಸ್ಯಗಳು ಹೂ ಬಿಡುವಲ್ಲಿ ಮಹತ್ವದ ಪಾತ್ರವನ್ನು ವಹಿಸುವ ಪ್ರಕೃತ ರಾಸಾಯನಿಕ ದ್ರವ್ಯದ ಉಪಸ್ಥಿತಿಯು ನವೀನವಾದ ಸಂಶೋಧನೆ ಎಂದೆನಿಸಿದೆ. ಹಾಗೆಂದು ಸಸ್ಯದ ಬೇರುಗಳು, ಕಾಂಡ, ಎಲೆ, ಪುಷ್ಪ ಮುಂತಾದವುಗಳ ಬೆಳವಣಿಗೆಯ ಮೇಲೆ ಪರಿಣಾಮ ಬೀರಬಲ್ಲ ಇತರ ರಾಸಾಯನಿಕ ದ್ರವ್ಯಗಳೂ ಇವೆ ಎಂದು ಬಹಳ ಹಿಂದೆಯೇ ತಿಳಿದಿತ್ತು. ಈ ದ್ರವ್ಯಗಳನ್ನು ಸಸ್ಯ ಹಾರ್ಮೋನುಗಳೆನ್ನಬಹುದು. ಪುಷ್ಪಗಳ ಸಂಖ್ಯೆ ಅಧಿಕವಾಗುವಂತೆ ಗಿಡಮರಗಳ ಎತ್ತರದಲ್ಲಿ ಹೆಚ್ಚು ಕಡಿಮೆಯಾಗುವಂತೆ ಕೆಲವು ರಾಸಾಯನಿಕ ದ್ರವ್ಯಗಳನ್ನು ಸ್ಪ್ರೇ ಮೂಲಕ ಉಪಯೋಗಿಸಿ ನೋಡಿರುವರು. ಈ ಪ್ರಯೋಗಗಳು ಸಾಮಾನ್ಯವಾಗಿ ಜಯಶೀಲವೆನಿಸಿವೆ. ಉದಾಹರಣೆಗೆ ಹವಾಯಿ ದ್ವೀಪಗಳಲ್ಲಿ ಫರಂಗಿ ಹಣ್ಣುಗಳು ಬೇಸಗೆಯಿಡೀ ಹೂ ಬಿಡುತ್ತಲೇ ಇರುತ್ತವೆ. ಆದಕಾರಣ ಒಂದು ಸಲಕ್ಕೆ ಎಷ್ಟೋ ಸ್ವಲ್ಪ ಫರಂಗಿ ಹಣ್ಣುಗಳನ್ನು ಕೊಯ್ದು ಸಂಗ್ರಹಿಸಬಹುದು. ಆದರೆ ನಫ್ತಾಲೀನ್ ಎಸಿಟಿಕ್ ಎಸಿಡ್ ಎಂಬ ದ್ರವ್ಯದಿಂದ ಫರಂಗಿ ಹಣ್ಣುಗಳ ಹೊಲವನ್ನು ಸ್ಪ್ರೇ ಮಾಡಿದರೆ ಆರೆಂಟು ವಾರಗಳೊಳಗಾಗಿ ಇಡೀ ಹೊಲದಲ್ಲಿ ಫರಂಗಿ ಹಣ್ಣುಗಳು ಹೂ ಬಿಟ್ಟು ಏಕಕಾಲಕ್ಕೆ ಕೊಯ್ಲಿಗೆ ಸಿದ್ಧವಾಗುತ್ತವೆ. ಪರಿಣಾಮವಾಗಿ ಯಂತ್ರವನ್ನುಪಯೋಗಿಸಿ ಒಂದೇ ಸಲ ಇಡೀ ಹೊಲದ ಕೊಯ್ಲನ್ನು ನೆರವೇರಿಸಿ, ವೆಚ್ಚವನ್ನು ತಗ್ಗಿಸಬಹುದು.

ಹವಾಯಿಯಲ್ಲಿ ಒಂದು ಜಾತಿಯ ಬೀಜದ ಮರಗಳಿವೆ. ಈ ಬೀಜಗಳು ತಿನ್ನಲು ಬಹಳ ರುಚಿಕರ. ಆದರೆ ಈ ಮರಗಳಲ್ಲಿ ನೂರಕ್ಕೆ ನಾಲ್ಕರಷ್ಟು ಮರಗಳೂ ಹೂ ಬಿಡುವುದಿಲ್ಲ. ಆದುದರಿಂದ ಈ ಕಾಯಿಗಳನ್ನು ತಿನ್ನುವ ಆಶೆಯನ್ನು ತಗ್ಗಿಸ ಬೇಕಾಗಿದೆ. ಈಗ ಮಾತ್ರ ಮೇಲೆ ವಿವರಿಸಿದಂತೆ ಸ್ಪ್ರೇ ಪ್ರಯೋಗವನ್ನು ಮಾಡಿ-ನೂರರಲ್ಲಿ ತೊಂಭತ್ತು ಮರಗಳು ಹೂ ಬಿಡುವಂತೆ ನೋಡಿದ್ದಾರೆ. ಪರಿಣಾಮವಾಗಿ ಹವಾಯಿ ದ್ವೀಪಗಳಲ್ಲಿ ಈ ಕಾಯಿಯ ಸಂಬಂಧದಲ್ಲಿಯೇ ಹೊಸತೊಂದು ಕೈಗಾರಿಕೆ ಹುಟ್ಟಿಕೊಂಡರೂ ಆಶ್ಚರ್ಯವಿಲ್ಲ. ಈ ಕಾಯಿ ತಿನ್ನಲು ಅಷ್ಟು ಜನ ಕಾದಿರುವರು!

ನಿಸರ್ಗದ ವಿರುದ್ಧ ಬಂಡಾಯ

ಇನ್ನು ಕೆಲವು ಸಸ್ಯಗಳಲ್ಲಿ ಹೂ ಬಿಡುವುದನ್ನೆ ನಿಲ್ಲಿಸುವ ಅಗತ್ಯ ಬೀಳಬಹುದು. ಹೂ ಮತ್ತು ಬೀಜಗಳಿಗಿಂತಲೂ ಎಲೆಗಳೇ ಮಹತ್ವವಾಗುಳ್ಳ ಕೆಲವು ಸಸ್ಯ ಜಾತಿಗಳಲ್ಲಿ-ರಾಸಾಯನಿಕ ದ್ರವ್ಯದ ಪ್ರಯೋಗದಿಂದ ಹೂ ಬಿಡುವುದನ್ನು ತಡೆದು ನಿಲ್ಲಿಸಬಹುದು.

ಈ ರೀತಿಯಾಗಿ ಸ್ವಾಭಾವಿಕವಾಗಿ ಪ್ರಕೃತಿಯ ಮಡಿಲಲ್ಲಿ ಸಸ್ಯಗಳು ಬೆಳೆಯುತ್ತಿರುವುದರ ಮೇಲೆ ಮನುಷ್ಯ ವೈಜ್ಞಾನಿಕ ಪ್ರಭಾವವನ್ನು ಬೀರುತ್ತಲೇ ಬಂದಿರುವನು. ಮಾನವನ ಈ ಪ್ರಯತ್ನವು ಮುಂದುವರಿದು ಸಸ್ಯಜಾತಿಯು ಹೂ ಬಿಡುವುದನ್ನು ನಿಯಂತ್ರಿಸುವ ಕತ್ತಲಿನ ಗಹ್ವರದಲ್ಲಿ ನಡೆಯುವ ರಹಸ್ಯ ಕ್ರಿಯೆಯ ಮರ್ಮವನ್ನು ಅರಿತು ಆ ವಿಶಿಷ್ಟ ರಾಸಾಯನಿಕ ದ್ರವ್ಯವನ್ನುಕಂಡುಕೊಂಡನೆಂದರೆ,ಆಗನಿಸರ್ಗದ ವಿರುದ್ಧಬಂಡಾಯವನ್ನೆಬ್ಬಿಸಿದಂತಾಗುವುದು.ಈಗ ಸಸ್ಯವು ರಾತ್ರಿಹೊತ್ತಿನಲ್ಲಿ ಕತ್ತಲೆಯ ಆಶ್ರಯವನ್ನು ಪಡೆದು ಈ ರಾಸಾಯನಿಕ ದ್ರವ್ಯವನ್ನು ಸೃಷ್ಟಿಸುತ್ತದೆ. ಆದರೆ ಮನುಷ್ಯನ ಪ್ರಯತ್ನ ಯಶಸ್ವಿಗೊಂಡರೆ, ಗಿಡಮರಗಳಿಗೆ ರಾತ್ರಿಯ ಅಗತ್ಯವೇ ಬೀಳಲಿಕ್ಕಿಲ್ಲ. ನಡುಹಗಲಿನಲ್ಲಿಯೂ ಅವುಗಳು ನಿರಾಂತಕವಾಗಿ ಹೂ ಬಿಡುವಂತೆ ಮಾಡಬಹುದು. ಇದನ್ನು ಮನುಷ್ಯ ಜಾತಿಗೆ ಅನ್ವಯಿಸಿ ಹೇಳುವುದಾದರೆ ನಮಗೆ ನಿದ್ರೆಯ ಅಗತ್ಯವೇ ಬೀಳಲಿಕ್ಕಿಲ್ಲ. ಪ್ರಾಣಿ ಜಾತಿಗಳಿಗೂ ಹಾಗೆಯೇ. ಮಾತ್ರವಲ್ಲ ಭೂಮಿಯ ಉತ್ತರ ಮತ್ತು ದಕ್ಷಿಣ ತುದಿಯ ಪ್ರದೇಶಗಳ ಉತ್ಪಾದನೆಯು ಅತ್ಯದ್ಭುತವಾಗಿ ಹೆಚ್ಚಿಕೊಂಡೀತು. ಸೂರ್ಯನ ಬೆಳಕಿನಿಂದ ಸಸ್ಯಗಳ ಸಂತಾನೋತ್ಪಾದನಾ ಕಾರ್ಯಕ್ಕೆ ಯಾವ ತರದ ವಿಘ್ನವೂ ಬರುವುದಿಲ್ಲವೆಂಬುದರಿಂದ ಈ ಧೈರ್ಯ! ನಾವು ಬೇಕಾದಷ್ಟು ಆಹಾರವನ್ನು ಬೆಳೆದು ಸುಖಿ ಪಟ್ಟೇವು. ಆದರೆ ಸೂರ್ಯನ ಬೆಳಕಿನಿಂದ ಸಸ್ಯಗಳು ಆಹಾರವನ್ನು ಸಿದ್ಧಪಡಿಸಿಕೊಳ್ಳುವುದರ ರಹಸ್ಯವನ್ನು ಸಂಪೂರ್ಣವಾಗಿ ನಾವಿನ್ನೂ ಕಂಡುಕೊಂಡಿಲ್ಲದಿರುವಂತೆ ಈ ಮರ್ಮವನ್ನೂ ಕರಗತಮಾಡಿಕೊಳ್ಳುವುದು ಕಷ್ಟ ಸಾಧ್ಯ. ಎಷ್ಟಾದರೂ ನಿಸರ್ಗ ಮನುಷ್ಯನನ್ನು ಸ್ವಚ್ಛಂದವಾಗಿರಲು ಬಿಡದು!

ದಿ ವಿಜಯ ಬೇಂಕ್, ಲಿಮಿಟೆಡ್

ಸ್ಥಾಪನೆ: 1931.] ಪ್ರಧಾನ ಕಛೇರಿ: **ಮಂಗಳೂರು.**

ಮೂಲಧನ	. .	ರೂ. 20,00,000
ತೆತ್ತ ಪಾಲು ಭಂಡವಾಳ	. .	,, 8,77,860
ಕ್ಷೇಮ ನಿಧಿ	. .	,, 1,65,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವ್ಯಾದೆ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4¼% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಬಿ. ಮಂಜಯ್ಯ ಹೆಗ್ಡೆ,
ಬೇಂಕಿನ ಆಡಳಿತೆ ಕಮಿಟಿ ಅಧ್ಯಕ್ಷರು,
(ಮತ್ತು ದ. ಕ- ಜಿಲ್ಲಾ ಬೋರ್ಡಿನ ಅಧ್ಯಕ್ಷರು.)

THE VIJAYA BANK, Limited.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ನಮ್ಮ ನಾಜೂಕಿಗೆ ಹೆಸರಾದ ಜವಳಿ

[೨ನೇ ಆ ಪುಟದಿಂದ]

ಎಂದು ಹೆಸರಾದ ಬೆಂಗಳೂರ್ ವೂಲನ್ ಕೋಟನ್ ಎಂಡ್ ಸಿಲ್ಕ್ ಮಿಲ್ಸ್ ಎಂಬುದಲ್ಲದೆ ಮೈಸೂರು ಸ್ಪಿನ್ನಿಂಗ್ ಎಂಡ್ ಮೆನ್ಯುಫೆಕ್ಚರಿಂಗ್ ಕಂಪೆನ್ನಿ, ದಿ ಮಿನರ್ವಾ ಮಿಲ್ಸ್, ಶ್ರೀಕೃಷ್ಣ ಸ್ಪಿನ್ನಿಂಗ್ ಮಿಲ್ಸ್ ಎಂಬ ಬೇರೆ ಮೂರು ಗಿರಣಿಗಳೂ ಇವೆ ಇವುಗಳಲ್ಲಿ ಕೊನೆಯದು ಬೆಂಗಳೂರು ಕೊರ್ಪೊರೇಶನಿನ ಹೊರ ವಲಯದಲ್ಲಿದೆ; ಮತ್ತು ವ್ಯವಸಾಯ ನಿರತರಾದ ಹಳ್ಳಿಯ ಕೃಷಿಕರು ತಮ್ಮ ಬಿಡುವಿನ ಸಮಯದ ಸದುಪಯೋಗ ಮಾಡಿಕೊಂಡು ನಾಲ್ಕುಕಾಸು ಸಂಪಾದಿಸುವುದಕ್ಕೆ ಇದು ಅವಕಾಶಮಾಡಿಕೊಟ್ಟಿದೆ. ಈ ಕಾರಣದಿಂದ ಕೃಷಿ ಹಾಗು ಕೈಗಾರಿಕೆಯ ಸಮನ್ವಯವನ್ನು ಈ ಗಿರಣಿ ಸಾಧಿಸಿದೆಎನ್ನಬಹುದು. ಬೆಂಗಳೂರಿನ ಈ ನಾಲ್ಕು ಗಿರಣಿಗಳಲ್ಲಿ ಕೆಲವರೂರು ಸ್ತ್ರೀಯರನ್ನೊಳಗೊಂಡು ಒಟ್ಟು ೧೫೦೦೦ ಜನರು ದುಡಿಯುತ್ತಾರೆ. ಬಿನ್ನಿ ಮಿಲ್ಲು ಮೈಸೂರಿನಲ್ಲಿ ತೀರಾ ಹಳೆಯ ಜವಳಿ ಗಿರಣಿಯಾಗಿದೆ. ಇದರ ಸ್ಥಾಪನೆ ೧೮೮೪ ರಲ್ಲಿ ಆಯಿತು. ಈ ಗಿರಣಿಯು ವರ್ಷಕ್ಕೆ ೭೮೪೪೩೦೦ ರಾತಲು ಹತ್ತಿಯ ವಸ್ತ್ರ, ೨೨೪೪೬೦೦ ರಾತಲು ಉಣ್ಣೆಯ ವಸ್ತ್ರ ಮತ್ತು ೧೪೬೦೫ ರಾತಲು ಕಚ್ಚಾ ರೇಶ್ಮೆಯನ್ನೂ ಉತ್ಪಾದಿಸುತ್ತದೆ

ಸರಕಾರವು ದಾವಣಗೆರೆಯ ಶ್ರೀ ಗಣೇಶ ಹಾಗೂ ಶ್ರೀ ಶಂಕರ ಜವಳಿ ಗಿರಣಿಗಳಿಗೆ ಧನಸಹಾಯವನ್ನು ಕೊಟ್ಟು ಅವುಗಳು ಅಭಿವೃದ್ಧಿಯನ್ನು ಹೊಂದುವಂತೆ ನೋಡಿದೆ. ದಾವಣಗೆರೆಯು ಫಲವತ್ತಾದ ಹತ್ತಿ ಬೆಳೆಯುವ ಪ್ರದೇಶದಲ್ಲಿ ದಾವಣಗೆರೆ ಕೋಟನ್ ಮಿಲ್ಸ್ ಎಂಬ ಇನ್ನೊಂದ. ಗಿರಣಿಯೂ ಇದೆ. ಇವುಗಳೆಲ್ಲ ಒಟ್ಟಿಗೆ ಮೈಸೂರಿನ ಜವಳಿಯ ಸಂಪತ್ತನ್ನು ಹೆಚ್ಚಿಸುವುದು ನಿಶ್ಚಯ.

ತಾಂತ್ರಿಕ ಶಿಕ್ಷಣದ ವ್ಯವಸ್ಥೆ

ಶ್ರೀ ಕೃಷ್ಣ ರಾಜೇಂದ್ರ ಟೆಕ್ನೊಲಾಜಿಕಲ್ ಇನ್ಸ್ಟಿಟ್ಯೂಟ್ ಎಂಬ ಸಂಸ್ಥೆಯನ್ನು ೧೯೩೬ರಲ್ಲಿ ತೆರೆದುದರಿಂದ, ರಾಜ್ಯದ ಜವಳಿಯ ಉದ್ದಿಮೆಯು ಪ್ರಗತಿಯ ದಿಸೆಯೇ ಬದಲಾಯಿತೆನ್ನಬೇಕು. ಸರಕು, ಯಂತ್ರ ಮತ್ತು ಮನುಷ್ಯ ಬಲ ಇವು ಮೂರನ್ನೂ ಪ್ರಭಾವಿಯಾಗಿ ಸಂಯೋಜಿಸುವುದಕ್ಕೆ ತಾಂತ್ರಿಕ ಶಿಕ್ಷಣದ ಅಗತ್ಯ ಬಹಳಷ್ಟಿದೆ. ಈ ಉದ್ದೇಶವನ್ನು ಮುಂದಿಟ್ಟುಕೊಂಡೇ ಮೈಸೂರಿನ ಹಿಂದಿನ ಮಹಾರಾಜರಾದ ಶ್ರೀಕೃಷ್ಣ ರಾಜೇಂದ್ರ ಒಡೆಯರ್ ಬಹಾದೂರರ ಇಪ್ಪತ್ತೈದು ವರ್ಷಗಳ ಸಂಭ್ರಮದ ಆಳಿಕೆಯ ಸ್ಮರಣಾರ್ಥವಾಗಿ ತಾಂತ್ರಿಕ ಶಿಕ್ಷಣವನ್ನು ಕೊಡುವ ಈ ಸಂಸ್ಥೆ ಜನ್ಮಕ್ಕೆ ಬಂತು. ಜವಳಿಕ್ಷೇತ್ರದಲ್ಲಿ ಪದವೀ ವರ್ಗಗಳ ವರೆಗೆ ತಾಂತ್ರಿಕ ಶಿಕ್ಷಣವನ್ನು ಈ ಸಂಸ್ಥೆ ಕೊಡುತ್ತದೆ. ಅತ್ಯಾಧುನಿಕವಾದ ತರಬೇತಿಯನ್ನು ಕೊಡುವುದು ಅನುಕೂಲವಾಗಬೇಕೆಂದು ಈ ಸಂಸ್ಥೆಯು ಯೋಗ್ಯ ಯಂತ್ರೋಪಕರಣಗಳಿಂದ ಸುಸಜ್ಜಿತವಿದೆ. ಈ ಸ್ಪರ್ಧೆಯ ಕಾಲದಲ್ಲಿ ನಮೂನೆ ಹಾಗೂ ವರ್ಣಕ್ಕೆ ಅತ್ಯಂತ ಮಹತ್ವ ಪ್ರಾಪ್ತವಾಗಿರುವುದರಿಂದ– ಈ ವಿಭಾಗಕ್ಕೆ ವಿಶೇಷವಾದ [illegible]

ತ್ತಿರುವರು. ಈ ವಿಭಾಗವು ಬಗೆಬಗೆಯ ನಮೂನೆಗಳನ್ನು ಈಗಾಗಲೇ ತಯಾರಿಸಿದೆ. ಸರಕಾರದ ಔದ್ಯೋಗಿಕ ಮತ್ತು ವಾಣಿಜ್ಯ ಇಲಾಖೆಯು ಸಣ್ಣ ಪುಟ್ಟ ಮಗ್ಗಗಳನ್ನಿರಿಸಿಕೊಂಡಿರುವ ನೇಕಾರರ ಅಭಿವೃದ್ಧಿಯ ಇಚ್ಛೆಯಿಂದ ತನ್ನ ಅಧಿಕಾರೀ ವರ್ಗವನ್ನು ಈ ಹೊಸ ನಮೂನೆಗಳನ್ನು ಅಭ್ಯಸಿಸಲು ಹಚ್ಚಿದರೆ ಅದರಿಂದ ಹಿತವಿದೆ. ಈ ಸಂಗತಿಯಲ್ಲಿ ತಾಂತ್ರಿಕ ಶಿಕ್ಷಣ ನೀಡುವ ಈ ಸಂಸ್ಥೆ ಹಾಗೂ ಸರಕಾರದ ಔದ್ಯೋಗಿಕ ಇಲಾಖೆಯು ಬಹಳವಾಗಿ ಸಹಕರಿಸಲು ಅವಕಾಶವಿದೆ. ನೂಲು ತೆಗೆಯುವ ಹಾಗೂ ನೇಯುವ ವಿಭಾಗಗಳಲ್ಲಿ ವಿಶೇಷವಾದ ತರಬೇತಿಯನ್ನು ಕೊಡುವುದಕ್ಕಾಗಿ ಅತ್ಯಾಧುನಿಕವಾದ ಯಂತ್ರವೊಂದನ್ನು ತರಿಸಲು ನಿಶ್ಚಯಿಸಿದ್ದು, ಅದನ್ನು ಬೇಗನೇ ಸ್ಥಾಪಿಸಲಾಗುವುದೆಂದು ಕೇಳುತ್ತೇವೆ.

ಮೈಸೂರು ರಾಜ್ಯದಲ್ಲಿ ಅತ್ಯುತ್ತಮ ತರಗತಿಯ (M. A. 5) ಹತ್ತಿಯು ಬೆಳೆಯುತ್ತದೆ. ಹಾಗೆಯೇ ರೇಶ್ಮೆಯ ಕ್ಷೇತ್ರದಲ್ಲಿಯೂ ಉತ್ತಮ ವರ್ಗದ ರೇಶ್ಮೆಯನ್ನು ಉತ್ಪಾದಿಸುತ್ತದೆ. ಉಣ್ಣೆಯ ಮಟ್ಟಿಗೂ ಇದು ಚೆನ್ನಾಗಿ ಅನ್ವಯಿಸುತ್ತದೆ. ದೊಡ್ಡ ದೊಡ್ಡ ಗಿರಣಿಗಳಲ್ಲದೆ, ಗುಡಿಕೈಗಾರಿಕೆಯ ಸ್ವರೂಪದಲ್ಲಿ ಅನೇಕಾನೇಕ ರೇಶ್ಮೆ, ಹತ್ತಿ ಮತ್ತು ಉಣ್ಣೆ ನೇಯುವ ಮಗ್ಗಗಳು ಹಳ್ಳಿ ಹಳ್ಳಿಗಳಲ್ಲಿ ಹಂಚಿ ಹೋಗಿವೆ.

ಸ್ವೀಕಾರ—ವಿಮರ್ಶೆ

ಸರ್ವಜ್ಞ ಮೂರ್ತಿ (ಕವಿಕಾವ್ಯ ವಿಮರ್ಶೆ)

ಬರೆದವರು:– ಬ. ಶಿವಮೂರ್ತಿ ಶಾಸ್ತ್ರೀ. ಪ್ರಕಾಶಕರು: ವಿದ್ಯಾರ್ಥಿ ಪ್ರಕಟನ ಮಂದಿರ, ಬಳೇಪೇಟೆ, ಬೆಂಗಳೂರು ೨ ರೂ. ೧—೦—೦.

ಪಂಡಿತರತ್ನರೆನಿಸಿದ ಶಿವಮೂರ್ತಿ ಶಾಸ್ತ್ರೀಯವರು ಈ ಗ್ರಂಥದಲ್ಲಿ ಕನ್ನಡದ ಜಾಣನೆನಿಸಿದ ಸರ್ವಜ್ಞ ಮೂರ್ತಿಯ ಜೀವನ ವಿಮರ್ಶೆಯನ್ನೂ ಅವನ ಕಾವ್ಯದ ವಿಶಾವಳಿಯನ್ನೂ ತಮ್ಮ ಸರಳ ಸುಂದರವಾದ ಶೈಲಿಯಲ್ಲಿ ಮಾಡಿರುವರು "ಒಬ್ಬನಲ್ಲದೆ ಜಗಕೆ ಇಬ್ಬರುಂಟೇ ಮತ್ತೆ, ಒಬ್ಬ ಸರ್ವಜ್ಞ ಕರ್ತನು ಜಗಕೆಲ್ಲ" ಎಂದು ಹೇಳಿದ ಸರ್ವಜ್ಞ ನಿಜಕ್ಕೂ ಕನ್ನಡನಾಡಿನ ಗಂಡು ಕವಿ; ಜನಪ್ರಿಯ ಕವಿ ತ್ರಿಪದಿಯೆಂಬ ಛಂದಸ್ಸಿನಲ್ಲಿ ಸರ್ವಜ್ಞನ ಕೈಪಳಗಿದಂತೆ, ಸರಸವಾದಂತೆ, ಭಾವಪೂರ್ಣವಾದಂತೆ, ಚಿತ್ತಾಕರ್ಷಕವಾದಂತೆ, ಮತ್ತಾವ ಕವಿಯಿಂದಲೂ ಆಗಿಲ್ಲ. ವಿನೋದ ಪ್ರಿಯತೆಗೆ ಸರ್ವಜ್ಞನು ಸರ್ವ ಶ್ರೇಷ್ಠನೇ ನಿಜ. ಇವನು ವೀರಶೈವನಿದ್ದರೂ ವಚನಕಾರರಿಗಿಂತಲೂ ಮಿಗಿಲಾದ ಗುಣವಿಶೇಷಗಳು ಇವನಲ್ಲಿವೆ, ಉದಾರ ಭಾವಗಳಿವೆ. ಸರ್ವಜ್ಞನು ಲೋಕಾನುಭವದಲ್ಲಿ ವಚನಕಾರರಿಗಿಂತ ಮೇಲಿರುವನು. ಇವನ ಮಾತಿನಲ್ಲಿ ಜಾಣ್ಮೆಯೂ ಮೊನಚಕತೆಯೂ ಮಿಗಿಲಾಗಿವೆ ಸರ್ವಜ್ಞ ಕ್ರಾಂತಿಕಾರನೂ ಹೌದು. ಅಂಥ ಶ್ರದ್ಧೆಯಿಂದ ತೊಳಲಿ ಬಳಲುತಿದ್ದ ಒಂದೂ ಸಮಾಜದ ಉದ್ಧಾರಕ್ಕಾಗಿ ಹುಟ್ಟಿದ ಕವಿಗಳಲ್ಲಿ ಕ್ರಾಂತಿಕಾರಕರಲ್ಲಿ ಸರ್ವಜ್ಞ ಮೂರ್ತಿಯು ಮೂರ್ಧನ್ಯನೆಂದು ಹೇಳಬೇಕು ಇವನು ಘನಪಾಂಡಿತ್ಯವನ್ನೂ ಲೋಕಾನುಭವವನ್ನೂ ಹೊಂದಿದ್ದರೂ ವಿಷಯವು ಎಷ್ಟು ಅಗಮ್ಯವಾಗಿದ್ದರೂ ಅದನ್ನು ನೂರರಲ್ಲಿ ತೊಂಭತ್ತೊಂಭತ್ತು ಮಂದಿಗೆ ತಿಳಿಯುವಂತೆ ಮಾಡುವುದರಲ್ಲಿ ನಿಷ್ಣಾತನು. ಇವನ ಪ್ರತಿಯೊಂದೂ ನುಡಿಯು 'ಅವನ ನೈಪುಣ್ಯದ ದ್ಯೋತಕವಾಗಿದೆ ಸರ್ವಜ್ಞನ ಪದ್ಯಗಳನ್ನೆಲ್ಲ ಕಲೆಹಾಕಿದರೆ ಅದೊಂದು ವಿಶ್ವಕೋಶದಂತೆಯೇ ಆಗುವುದು ಎಂಬ ಮಾತೇನು ಅತಿಶಯೋಕ್ತಿಯಲ್ಲ. ಸ್ವಾತಂತ್ರ್ಯ ಪ್ರಿಯನಾದ ಈ ಕವಿಯ ಮಾತಿನಲ್ಲಿ ಯಾವ ದಾಕ್ಷಿಣ್ಯವೂ ಕಂಡು ಬರುವುದಿಲ್ಲ ಯಾತರದು ಹೂವೇನು ನಾತವಿದ್ದರೆ ಸಾಲದೇ!" ಎಂದು ಕೇಳಿದ ಈ ಸುಧಾರಕ ಸದ್ಧರ್ಮ ಪ್ರತಿಪಾದಕನಾಗಿದ್ದನೆಂದರೆ ಸಲ್ಲುವುದು. ಶಾಸ್ತ್ರಿಗಳು ಸಂಗತಿಗಳ ನಿಜಸ್ವರೂಪದ ಕುರಿತು ಇವನು ವ್ಯಕ್ತಗೊಳಿಸಿದ ಅಭಿಪ್ರಾಯಗಳೂ ಬೋಧನೆಗಳೂ ಪಂಡಿತ ಪಾಮರರೆಲ್ಲರ ಅಭ್ಯಾಸಕ್ಕೆ ಅತ್ಯಂತ ಯೋಗ್ಯವಿವೆ. ಕನ್ನಡದ ಸಾಹಿತ್ಯ ಕ್ಷೇತ್ರದಲ್ಲಿ ಅಭ್ಯಾಸ ದೃಷ್ಟಿಯನ್ನಿಟ್ಟುಕೊಂಡಿರುವ ವಿದ್ಯಾರ್ಥಿಗಳಿಗೆ ಈ ಗ್ರಂಥ ಬಹಳ ಉಪಯುಕ್ತವಾದೀತು.

ವಿಹಂಗಮ ನೋಟ

○ "ಜಯಕರ್ನಾಟಕ" ವಾರ ಹಾಗೂ ಮಾಸಪತ್ರಿಕೆಗಳವರು ದಿವಂಗತ ಬಸವನಾಳರ ಸ್ಮಾರಕಾರ್ಥ ಒಂದು ವಿಶೇಷ ಸಂಚಿಕೆಯನ್ನು ಹೊರಡಿಸಿರುವರು ಇದರಲ್ಲಿ ಪ್ರಥಮದ ಭಾಗವು ಬಸವನಾಳರ ಜೀವನ, ವಿದ್ವತ್ತು, ಭಾಷಾಸೇವೆ ಮುಂತಾದವುಗಳ ಕುರಿತು ಮಹನೀಯರನೇಕರು ಬರೆದ ಪರಿಚಯಾತ್ಮಕ ಬರೆಹಗಳನ್ನು ಒಳಗೊಂಡಿದೆ ಎರಡನೆಯ ಭಾಗದಲ್ಲಿ ಸಾಹಿತ್ಯದ ಕುರಿತು ಪ್ರೌಢ ಬರೆಹಗಳಿವೆ. ಸಂಚಿಕೆ ಸಂಗ್ರಾಹ್ಯವಿದೆ

❖ ವಿಜಯ ಸಂವತ್ಸರದ ಉಡುಪಿ ಪಂಚಾಂಗ— ಶ್ರೀಗಳಾದ ಅತ್ತೂರು ಲಕ್ಷ್ಮೀನಾರಾಯಣ ಉಪಾಧ್ಯ ಮತ್ತು ಬಡಾನಿಡಿಯೂರು ಕೃಷ್ಣದಾಸ ಭಟ್ಟರಿಂದ ಗುಣಿಸಿ ಶ್ರೀ. ಎ. ಸೀತಾರಾಮಾಚಾರ್ಯ ಮತ್ತು ಅತ್ತೂರು ವಾಸುದೇವ ಉಪಾಧ್ಯರಿಂದ ಪರಿಶೋಧಿಸಿ ಪ್ರಕಟವಾದ ಈ ಪಂಚಾಂಗವು ಕೆಲವು ವರ್ಷಗಳಿಂದ ಪ್ರಚಾರದಲ್ಲಿದ್ದು ವಿಶೇಷ ಜನಪ್ರಿಯವಾಗಿಯದೆ. ಸರ್ವ ವಿಷಯಗಳೂ ಅಡಕವಾಗಿವೆ. ಬೆಲೆ 0-6-0 ದೊರೆಯುವ ಸ್ಥಳ ರವಿ ಪ್ರಸಾದ ಜ್ಯೋತಿಷಾಲಯ, ಕೊಯಮುತ್ತೂರು.

For Protection and Provision Consult

The New Guardian of India Life Insurance Co., Ltd.

Estd] Head office: **MADRAS** [1934

NEW BUSINESS Exceeds	...	66½ Lakhs.
PREMIUM INCOME ,,	...	15 ,,
LIFE FUND ,,	...	54¾ ,,
ASSETS ,,	...	60¼ ,,
BUSINESS IN FORCE Nearly		5 Crores.

A Policy in this Progressive Life Office is good investment: its Agency is valuable business connection.

Applications for Representation are invited from energetic influential persons, with good connection. *Please apply to:*

G. R. Wallia. *Branch Manager,*
Diamond Building, Hampankatta, MANGALORE, S. K.

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:–ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ

ನವಜೀವಾತು

ಎಂಬ

ಸೂತಿಕಾರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹ ಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ ಅತ್ಯುಪಯೋಗವಾದ ಮಧುರದ್ರವರಸಾಯನ.



ಹೆಚ್ಚಿನ ಮಾಹಿತಿಗೆ— ಡಾ। ಯಂ ಸಿ ಶಾಸ್ತ್ರೀ, ಯಲ್ ಐ. ಎಂ. ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಸ್ಥಾನಿಕರು:— ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು.

ನೋಟೀಸು

ಉಡ್ಪಿ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 39/53

ದಿ. ಮಂಗಳೂರ ನಾಯರ್ ಬೇಂಕ್ ಲಿಮಿಟೆಡ್ ಟೌನ್ ಬ್ರಾಂಚ್ ಉಡ್ಪಿ ವಾದಿ

ಮತ್ತು

ಐ. ರಘುರಾಮ ಶೆಟ್ಟಿ ಕೂಡ 3ಜನರು ಪ್ರತಿವಾದಿಗಳು–

2ನೇ ಪ್ರತಿವಾದಿ– ಐ. ನಾರಾಯಣ ಶೆಟ್ಟಿ ದುಗ್ಗಪ್ಪ ಶೆಟ್ಟಿ ಮೊಮ್ಮಗ ಉಡ್ಪಿ ತಾಲೂಕು ಹಾವಂಜೆ ಗ್ರಾಮದ ಇಮಾರ್ಡಿಯಲ್ಲಿರುವರಿಗೆ–

ನೀವು ಕೂಡ 3ಜನ ಪ್ರತಿವಾದಿಗಳು ವಾದಿ ಬೇಂಕಿಗೆ ತಾ. 6-8-52ರಲ್ಲಿ 67 ದಿವ್ಸಗಳ ವ್ಯಾದೆಯಿಂದ ಕೊಡುವದಾಗಿ ತಪಸಿಲು ರೂ. 1000-0-0 ಒಂದು ಸಾವಿರಕ್ಕೆ ಬರೆಕೊಟ್ಟ ಹುಂಡಿ ಪ್ರಕಾರ ಬಡ್ಡಿಸಹಿತ ಅಸಲು ಬಗ್ಗೆ ವಗೈರೆ ಐವೇಜು ಕುರಿತು ದಾಖಲು ಮಾಡಿದ ಮೊಕದ್ದಮೆಯ ದಾವೆಯು ತಾ. 23-3 53 ಕ್ಕೆ ತನಿಖೆಗಾಗಿ ಇಟ್ಟಿರುತ್ತದೆ ಯಾದ ಕಾರಣ ನೀವು ಸದ್ರಿ ತಾರೀಕು ಬೆಳಗ್ಗೆ 10-45 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಬೇಕಾಗಿ ಈ ಮೂಲಕ ನಿಮಗೆ ತಿಳಿಸಲಾಗುತ್ತದೆ.

(By order of court)

K Vittal Nayak

Vakil for plaintiff.

ಉಡ್ಪಿ ತಾ. 6-3-53

ಮುಗಿಯದ ಮೇಲಾಟ

(೧ನೇ ಪುಟದಿಂದ)

ಕಾರ್ಯಪ್ರಣಾಳಿಯನ್ನು ಇಟ್ಟುಕೊಂಡು, ಬೇಕಿದ್ದರೆ ವಿಧ್ವಂಸಿಕೆಗಳನ್ನೆ ಸೃಷ್ಟಿಗೈದರೂ—ಯುದ್ಧದಂಥ ಸರ್ವನಾಶಕಾರಿಯಾದ ಕ್ರಮವನ್ನು ಕೈಗೊಳ್ಳಿರಿ ಎಂದವರೇನು ಬೋಧಿಸುವುದಿಲ್ಲ. ಯುದ್ಧ ಸಂಬಂಧದಲ್ಲಿ ನಿರ್ಣಯಾತ್ಮಕ ಅಧಿಕಾರವು ರಾಜಕೀಯ ಸೂತ್ರಧಾರಿಗಳಿಗೆನೇ ಸೇರಿದೆ ಆದುದರಿಂದ ವೈಜ್ಞಾನಿಕ ಕ್ಷೇತ್ರಕ್ಕಿಂತಲೂ ರಾಜಕೀಯವನ್ನೆ ಯುದ್ಧದಂಥ ಅನಪೇಕ್ಷಿತ ಕ್ಷೋಭೆಗೆ ಹೊಣೆಗಾರವಾಗಿಸುವುದರಲ್ಲಿ ನ್ಯಾಯವಿದೆ.

ಲೋಕದ ಪ್ರಕೃತ ಸ್ಥಿತಿಯನ್ನು ನಿರ್ವಿಕಾರ ಚಿತ್ತದಿಂದ ಅವಲೋಕಿಸಿದಾಗ ಈ ಸಂಗತಿ ಸ್ವಯಂ ವ್ಯಕ್ತಗೊಳ್ಳುತ್ತದೆ. ಕೊರಿಯಾದಂಥ ಯುದ್ಧ ಕ್ಷೇತ್ರವನ್ನು ಇನ್ನಷ್ಟು ವ್ಯಾಪಕಗೊಳಿಸುವ ಹವಣಿಕೆಯನ್ನು ರಾಜಕಾರಣಿಗಳೂ ಅವರ ಬೆಂಬಲಿಗರೂ ಮಾಡುತ್ತಿರುವುದನ್ನು ಇಂದು ಕಾಣುತ್ತೇವೆ. ವಿಜ್ಞಾನಿಗಳು ಆಟಂ ಬಾಂಬನ್ನು ತಯಾರಿಸಿದ್ದರೂ. ಅದನ್ನು ಉಪಯೋಗಿಸುವುದೂ ಬಿಡುವುದೂ ರಾಜಕಾರಣಿಯ ಕೈಯಲ್ಲಿದೆ; ಒಂದು ರಾಷ್ಟ್ರದ ಸೇನೆಯನ್ನು ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತಗೊಳಿಸಿದರೂ— ಆ ಸೇನೆಯನ್ನು ಪರರಾಷ್ಟ್ರಗಳ ಆಕ್ರಮಣದಂಥ ಅನ್ಯಾಯಕ್ಕಾಗಿ ಉಪಯೋಗಿಸುವುದಕ್ಕೆ ಹಿಟ್ಲರನಂಥ ಅದೂರದರ್ಶಿ ರಾಜಕಾರಣಿಯೇ ಕಾರಣ. ಆದುದರಿಂದಲೇ ವಿಶ್ವದಲ್ಲಿ ಹಬ್ಬಿರುವ ಭೀತಿಯ ಕಾರ್ಮೋಡ ಚದುರಿಹೋಗಿ, ಶಾಂತಿಯ ಸೂರ್ಯಪ್ರಕಾಶ ಬೀರುವಂತಾಗಲು—ಧುರೀಣರು ಯುದ್ಧ ನಿಷೇಧ ಘೋಷಣೆಯನ್ನು ಹೊರಡಿಸಿ, ಎಷ್ಟೇ ಮಹತ್ವದ ವಿವಾದವನ್ನಾದರೂ ಶಾಂತಿಯುತವಾದ ಮಾರ್ಗದಿಂದ ಬಿಡಿಸುವುದಕ್ಕೆ ಪ್ರಯತ್ನಿಸಬೇಕೆಂದು ಪ್ರಥಾನಿ ನೆಹರೂ ಹೇಳುವುದರಲ್ಲಿ ಸತ್ಯವಿದೆ.

ವೈಜ್ಞಾನಿಕ ಕ್ಷೇತ್ರದಲ್ಲಿ ಇಂದು ಸಾಧಿಸಲಾಗಿರುವ ಅಸಾಧಾರಣ ಪ್ರಗತಿಗೆ ಮಹಾಯುದ್ಧಗಳೇ ಪ್ರಚೋದನೆಯನ್ನು ಕೊಟ್ಟವೆಂಬುದು ಸ್ಪಷ್ಟವಿದೆ. ಯುದ್ಧದ ಅವಶ್ಯಕತೆಗಳನ್ನು ಅನಿವಾರ್ಯವಾಗಿ ಪೂರೈಸಲು ಹುಟ್ಟಿಕೊಂಡ ಅನೇಕ ಸಾಧನ ಸಲಕರಣೆಗಳ ಉಪಯೋಗವು ಶಾಂತಿಕಾಲದಲ್ಲೂ ಮಾನವನ ಜೀವನವನ್ನು ಕೆಲಮಟ್ಟಿಗೆ ಸುಖಮಯವಾಗಿಸಿದೆ. ಉದಾಹರಣೆಗಳಿಗೆ ಔಷಧಿಗಳನೇಕವನ್ನು ಹೆಸರಿಸಬಹುದು. ಯುದ್ಧದಲ್ಲಿ ಗಾಯಾಳುಗಳಾಗಿ ಗಂಡಾಂತರಕ್ಕೆ ಬಲಿಯಾದವರನ್ನು ಬದುಕಿಸಲಿಕ್ಕಾಗಿ ವಿಜ್ಞಾನಿಗಳು ಅತ್ಯಪೂರ್ವವಾದ ಈ ಶೋಧಗಳನ್ನು ಮಾಡಿದರು. ಯುದ್ಧ ಮುಗಿದಬಳಿಕವೂ ನಾವು ಅವುಗಳ ಸದುಪಯೋಗವನ್ನು ಮಾಡಿಕೊಳ್ಳುತ್ತಿದ್ದೇವೆ. ಮನುಷ್ಯನ ಸುಖಜೀವನಕ್ಕೆ ಎಷ್ಟರ ಮಟ್ಟಿಗೆ ಹೇತುವಾಯಿತೋ ಅಷ್ಟರ ಮಟ್ಟಿಗೆ ವೈಜ್ಞಾನಿಕರ ಪರಿಶ್ರಮ ಶ್ರೇಯಸ್ಸನ್ನು ತಂದಿತು ಎಂದೇವು. ಆದರೆ ಈ ಲಾಭವು ನಷ್ಟದೊಡನೆ ತುಲನೆ ಮಾಡಲ್ಪಟ್ಟಾಗ ಅತ್ಯಲ್ಪವೆಂಬುದು ಗೋಚರಿಸುತ್ತದೆ. ಆದುದರಿಂದಲೇ ಶಾಂತಿಕಾಲದಲ್ಲಿ ಮಾನವರಿಗೆ ದೊರಕಬಹುದಾದ ಅತ್ಯಲ್ಪ ಸುಖಕ್ಕಾಗಿ— ಯುದ್ಧದ ಚಟುವಟಿಕೆಗಳನ್ನು ವಿಸ್ತಾರಗೊಳಿಸುವುದು ಮುತ್ಸದ್ದಿತನವಲ್ಲ.

ಆದರೆ ಪ್ರಕೃತ ಹೀಗಿಲ್ಲ. ನಮಗೆ ಶಾಂತಿ ಸುಖ ಸಮಾಧಾನ ಎಂದ ಮುಂತಾಗಿ ಯೋಚಿಸಲೂ ಬಿಡುವಿಲ್ಲ. ರಾಜಕಾರಣಿಗಳ ಕೈಯಲ್ಲಿ ವಿಧ್ವಂಸಕ ಅಸ್ತ್ರಶಸ್ತ್ರಗಳನ್ನು ಉಪಯೋಗಿಸುವ ಅಥವಾ ಬಿಡುವ ಅಧಿಕಾರವಿದ್ದರೂ ಕ್ಷೇಮವಿಲ್ಲ. ಅವರೆಲ್ಲರೂ ಒಟ್ಟಾಗಿ ಯುದ್ಧ ಸನ್ನಾಹವನ್ನು ಬಿಟ್ಟುಬಿಡಲು ಸಿದ್ಧರಿಲ್ಲ. ಶಾಂತಿ ಪಾಠವನ್ನು ಪಠಿಸುತಿದ್ದಂತೆಯೇ ಪ್ರತಿಯೊಂದು ರಾಷ್ಟ್ರವೂ ಯುದ್ಧ ಸನ್ನಾಹವನ್ನು ಭರದಿಂದ ಹೆಚ್ಚಿಸುತ್ತಿದೆ. ತನ್ನ ಘಾತಕ ಚಟುವಟಿಕೆಗೆ ಸಂರಕ್ಷಣೆಯ ಉದ್ದೇಶವೆಂದು ಘನವಾದ ಮುಸುಕನ್ನು ಹಾಕಿಕೊಳ್ಳುತ್ತದೆ. ಎಲ್ಲ ರಾಷ್ಟ್ರಗಳೂ ಕಲುಷಿತ ಮನೋಭಾವಕ್ಕೊಳಪಟ್ಟು ಪರಸ್ಪರರ ಪ್ರೀತಿವಿಶ್ವಾಸವನ್ನು ಕಳೆದುಕೊಂಡು ಯುದ್ಧ ಸಿದ್ಧತೆಯಲ್ಲಿ ತೊಡಗಿರುವುದರಿಂದ- ಭಾರತದಂಥ ಶಾಂತಿ ಘೋಷಣೆಯ ರಾಷ್ಟ್ರ ಕೂಡ ಸಂರಕ್ಷಣಾ ಕಾರ್ಯದಲ್ಲಿ ಲಗುಬಗೆಯಿಂದ ತನ್ಮಯಗೊಳ್ಳಬೇಕಾಗುತ್ತದೆ. ನಾವು ನಮ್ಮ ನಡವಳಿಕೆ ಮತ್ತು ನೀತಿಯ ಮಟ್ಟಿಗೆ ಅತ್ಯುಚ್ಚ ಆದರ್ಶದ ಅನುಸರಣ ಮಾಡಬಹುದು. ಆದರೆ ಯಾವುದಾದರೊಂದು ರಾಷ್ಟ್ರವು ಬುದ್ಧಿಗೆಟ್ಟು ನಮ್ಮ ಆಕ್ರಮಣಗೈದರೆ, ಆಗ ಅದನ್ನು ಯಶಸ್ವಿಯಾಗಿ ಇದಿರಿಸಿ ಹಿಮ್ಮೆಟ್ಟಿಸಲು ನಮಗೆ ಸೈನ್ಯವೇ ಬೇಕು ನಾವಾಗಿ ಬೇರೆಯವರ ತಂಟೆಗೆ ಹೋಗದಿರಬಹುದು; ಆದರೆ ಇತರರು ನಮಗೆ ಕೇಡುಂಟು ಮಾಡುವುದಿಲ್ಲವೆಂದು ಹೇಗೆ ನಂಬೋಣ?

ಇಂಥ ಗೊಂದಲಮಯ ಪರಿಸ್ಥಿತಿಯಲ್ಲಿ ಲೋಕ ಇಂದು ಮುನ್ನಡೆಯುತ್ತದೆ ಆದರೂ ನೆಹರೂರಂಥ ಮೇಧಾವಿಗಳು ವೈಜ್ಞಾನಿಕ ಕ್ಷೇತ್ರದಲ್ಲಿ ವಿನಾಶಕ ಚಟುವಟಿಕೆಗಳ ಸಾವಿರ ಪಾಲು ಹೆಚ್ಚಾಗಿ ವಿಧಾಯಕ ಸಂಶೋಧನೆಗಳು ಜರಗಬೇಕು ಎನ್ನುತ್ತಾರೆ. ಇಲ್ಲದಿದ್ದರೆ ಸರ್ವನಾಶವೇ ಕಟ್ಟಿಟ್ಟದ್ದು ಎಂದು ಶಾಂತಿ ಪ್ರಿಯರು ಭಯವಿಹ್ವಲರಾಗಿದ್ದಾರೆ. ಆದರೆ ಯುದ್ಧಪಿಪಾಸುಗಳೋ ಅತ್ಯಂತ ತೀವ್ರ ಗತಿಯಿಂದ ಸ್ಪರ್ಧಾತ್ಮಕವಾದ ವ್ಯವಹಾರದಲ್ಲಿ ಪರಸ್ಪರ ತೊಡಗಿದ್ದಾರೆ. ಜನರ ಶಾಂತಿಯ ಬಯಕೆಯನ್ನೂ ತಮ್ಮ ಸ್ವಾರ್ಥಕ್ಕಾಗಿ ಉಪಯೋಗಿಸಲು ನೋಡುತ್ತಾರೆ. ಅತ್ಯಂತ ಉತ್ಕಟವಾದ ಪರಿಸ್ಥಿತಿಯೇ ಸನ್ನಿಹಿತವಾಗಿದ್ದರೂ ಈ ಕಡೆ ಗಮನಕೊಟ್ಟು ಯುದ್ಧಭಯ ನಿವಾರಿಸುವುದಕ್ಕೆ ಅವರು ಮನಸ್ಸು ಗೊಡುವುದಿಲ್ಲ, ತಮ್ಮ ಕಾರ್ಯಭಾರವೇ ಅವರಿಗೆ ಹೆಚ್ಚು ಮಹತ್ವದ್ದಾಗಿ ತೋರುತ್ತದೆ. ಈ ಮೇಲಾಟ ಸರ್ವಥಾ ಅಹಿತಕಾರಿಯಾದುದು ಎಂದು ಎಲ್ಲರೂ ಹೇಳುತಿದ್ದರೂ ಅವರಿದಕ್ಕೆ ಕಿವಿಗೊಡುವುದಿಲ್ಲ. ಮುಗಿಯದ ಈ ಮೇಲಾಟ ನಿಲ್ಲಲೇಬೇಕು; ಮತ್ತು ಪ್ರಕೃತದ ಪರಿಸ್ಥಿತಿ ಪೂರಾ ವಿಪರ್ಯಾಸಗೊಳ್ಳಬೇಕು. ವಿನಾಶಕ ಕಾರ್ಯಗಳ ಬದಲು ವಿಧಾಯಕ ಕಾರ್ಯಗಳಿಗೇನೆ ಎಲ್ಲರ ಮನ್ನಣೆ ದೊರೆಯಬೇಕು. ಅಂತಾಗಲಿ ಎನ್ನುತ್ತೇವೆ.

— ಓಂತತ್ಸತ್.

ವಾರದ ಒಳಿತು ಕೆಡುಕುಗಳು

ತಾ. 12—3—53ರಿಂದ ತಾ. 18—3—53ರ ವರೆಗೆ.

ಮೇಷ— ದಿನಗಳೆದಂತೆ ಗ್ರಹ ಸ್ಥಿತಿಯು ಕೆಡುತ್ತಲೇ ಬರುತ್ತಿದೆ. ದ್ವಾದಶ ಜನ್ಮಸಪ್ತಮಗಳಲ್ಲಿರತಕ್ಕ ಗ್ರಹವೃಂದವೇ ಸದ್ಯ ನಿಮ್ಮ ಭಾಗಕ್ಕೆ ಅತೀವ ಪ್ರತಿಕೂಲವಾಗಿರುವುದರಿಂದ ಅಧಿಕವ್ಯಯ ಅನಾರೋಗ್ಯ ಹೆಂಡತಿ ಮಕ್ಕಳ ಸಲುವಾದ ಚಿಂತೆ ಹಣದ ಬಿಕ್ಕಟ್ಟು ಶತ್ರುಜನರ ಪೀಡೆ ಇದಿಷ್ಟೂ ನಿಮ್ಮ ಏಕಕಾಲದಲ್ಲಿ ಬಾಧಿಸಲಿವೆ. ಅದಲ್ಲದೆ ಇದ್ದುದರಲ್ಲಿ ಕೃಪ್ತಿಯೇನಂದರೆ ನಿಮ್ಮ ಸ್ವಂತದ ಉಪಭೋಗಕ್ಕೆ ಬೇಕಾದ ವಸ್ತುವಡವೆಗಳಿಗೆ ಕೊರತೆಯಾಗದು. ತಾ 15, 16, 17 ಈ ದಿನಗಳು ಅಷ್ಟೊಂದು ಪ್ರಶಸ್ತವಾಗಿಲ್ಲ.

ವೃಷಭ— ನಿಮ್ಮ ಶ್ರಮಕ್ಕೆ ತಕ್ಕುದಾದ ಫಲಪ್ರಾಪ್ತಿಯಿದೆ. ಪ್ರಬಲರಾದ ಶತ್ರುಗಳೂ ಕೂಡ ಇಂದು ನಿಮ್ಮ ಕಾರ್ಯದಕ್ಷತೆಯನ್ನು ಕಂಡು ದೂರ ಸರಿಯಲಿರುವರು. ವ್ಯಾಪಾರ ವ್ಯವಹಾರಗಳಲ್ಲಿ ನಿರೀಕ್ಷೆಗಿಂತಲೂ ಅಧಿಕ ಲಾಭವಿದೆ ಆದರೆ ಆಕಸ್ಮಿಕ ಪ್ರವಾಸ ಕನ್ನಿಮಿತ್ತ ದೇಹಪೀಡೆ ಧನ ವ್ಯಯಾದಿಗಳು ಸಂಭವಿಸಲಿದೆ. ವಿನಾಕಾರಣ ಸ್ತ್ರೀಯರ ಕೋಪಕ್ಕೆ ಸಿಲುಕಲಿರುವಿರಿ. ವಾರದ ಆದ್ಯಂತ ದಿನಗಳನ್ನು ಬಿಟ್ಟುಳಿದ ದಿನಗಳೆಲ್ಲವೂ ಹಿತಕರಗಳೇ.

ಮಿಥುನ— ಶನೈಶ್ಚರನೊಬ್ಬನನ್ನುಳಿದು ಮಿಕ್ಕೆಲ್ಲಾ ಗ್ರಹರೂ ನಿಮಗೆ ಅನುಕೂಲರಿರುವುದರಿಂದ ನೀವೀ ವಾರದಲ್ಲಿ ಬೇಕು ಬೇಕಾದ ಸುಖಸಂತಸಗಳನ್ನು ಹೊಂದಲು ಸಮರ್ಥರಿರುವಿರಿ. ನಿಮ್ಮ ಕರ್ಮಲಾಭ ಸ್ಥಾನಗಳಲ್ಲಿ ಗ್ರಹವೃಂದವು ನಿಮ್ಮ ಬಯಕೆಯನ್ನು ಈಡೇರಿಸುವುದರಲ್ಲಿ ತಲ್ಲೀನವಾಗಿರುವುದು. ಯಾವ ಭಾಗದಲ್ಲೂ ನಿಮಗಿಂದು ಕಾಸ್ಸಿನ ಕೊರತೆಗಳು ಕಾಣಿಸಲೊಲ್ಲವು. ವಾರಾಂತ್ಯದ 4 ದಿನಗಳಲ್ಲಿ ನಿಮ್ಮ ಸಕಲ ಇಷ್ಟಾರ್ಥಗಳೂ ಅನಾಯಾಸದಿಂದ ಫಲಿಸಲಿವೆ.

ಕರ್ಕಟ— ನಿಮ್ಮ ದುರ್ದೈವವೇ ಇಂದು ಮೂರ್ತಿಮತ್ತಾಗಿನಿಂದು ನಿಮ್ಮನ್ನು ಪೀಡಿಸುತ್ತಿರುವದೆಂದರೂ ಅತಿಶಯೋಕ್ತಿಯೆನಿಸದು ಸಂಪೂರ್ಣ ಗ್ರಹಮಂಡಲವೇ ನಿಮಗಿಂದು ಪ್ರತಿಕೂಲವಾಗಿರುವದರಿಂದ ಮೇಲೆ ಕೇಳಬೇಕೇ. ಇಂದು ನಿಮ್ಮ ಪೌರುಷವು ನೀರಲ್ಲಿ ಗೈದ ಹೋಮದಂತೆ ವಿಫಲವಾಗುವದು. ಜನತೆಯ ಬೆಂಬಲವಾಗಲಿ ಬಂಧು ಮಿತ್ರರ ನೆರವಾಗಲಿ ಕಿಂಚಿತ್ತೂ ಲಭಿಸಲಾರದು. ಆತ್ಮೀಯರೇ ವಿರೋಧಿಗಳಾಗಿ ಪರಿವರ್ತಿಸುವರು. ಅಂತೂ ಅತೀವ ಕಷ್ಟದಿಂದ ಕಾಲಕಳೆವ ನಿಮಗೆ ವಾರದ ಆದ್ಯಂತ ದಿನಗಳು ಕೊಂಚ ನೆಮ್ಮದಿಯನ್ನೀಯುವವು.

ಸಿಂಹ— ಅಧಿಕ ಬಲರಾದ ಶತ್ರುಗಳನ್ನೂ ಪರಾಭವಗೊಳಿಸುವ ಅಸದೃಶಶಕ್ತಿ ನಿಮಗಿಂದು ಲಭಿಸಿದೆ. ಶತ್ರುಗಳ ಪ್ರತೀಕಾರಕ್ಕೆ ಕಕ್ಕಸೇಡನ್ನು ತೀರಿಸಿ ಕೃತಕೃತ್ಯರಾಗುವಿರಿ. ಧನಧಾನ್ಯಾದಿಗಳಲ್ಲಿ ಕುಂದು ಕೊರತೆಗಳಿಲ್ಲದ ಕಾರಣ ಸಂಸಾರವು ಸುಗಮವಾಗಿ ಸಾಗುವದು. ಸಮಾಜದಲ್ಲಿ ಒಳ್ಳೆಯ ಹೆಸರನ್ನು ಗಳಿಸುವಿರಿ. ಆದರೆ ರಾಜಕೀಯದಲ್ಲಿ ನಿಮಗೆ ಗೆಲವಿಂದಾದ ಕಾರಣ ಆ ಕಾರ್ಯಗಳಿಗೆ ಸದ್ಯ ಪ್ರವೇಶಿಸದಿರಿ. ವಾರಾದಿಯ 3 ದಿನಗಳು ಅತೀವ ಪ್ರಶಸ್ತವಿದೆ.

ಕನ್ಯಾ— ನಿಮ್ಮ ಪೌರುಷಕ್ಕೆ ತಕ್ಕುದಾದ ದೈವಬಲವಿಲ್ಲದ್ದರಿಂದ ನೀವಿಂದು ವ್ಯರ್ಥಪರಿಶ್ರಮಕ್ಕೊಳಗಾಗುವಿರೇ ವಿನಹ ಫಲವನ್ನು ಹೊಂದಲಾರಿರಿ, ದುಡಿದ ಅಲ್ಪಸ್ವಲ್ಪ ಧನವೂ ವ್ಯರ್ಥ ಖರ್ಚುಗಳಿಗೇ ಹೋಗುವದು. ದಿನನಿತ್ಯದ ಖರ್ಚಿಗಾಗಿ ಜನರ ಕೂಡೆ ಸಾಲಕಡಗಳನ್ನೇ ಮಾಡಬೇಕಾಗುವದು. ದೇಹದಲ್ಲಿ ಗಾಯ ಹುಣ್ಣು ವಗೈರೆ ಚರ್ಮ ರೋಗಗಳು ಕಾಣಿಸುವವು. ಶತ್ರುಜನರಿಂದಾಗಿ ಧನಮಾನಗಳಿಗೆ ಹಾನಿಯೊದಗಲಿದೆ. ಕಷ್ಟದಿಂದ ಕಾಲಕಳೆಯುತ್ತಿರುವ ನಿಮಗೆ ವಾರದ ಮಧ್ಯದ 5 ದಿನಗಳು ಕೊಂಚ ಉತ್ತಮವೆನಿಸುವವು

ತುಲಾ— ನಿಮ್ಮ ಅದೃಷ್ಟವಿಂದು ಸ್ವೋತ್ತಮಗೊಂಡಿದೆ. ಆದುದರಿಂದ ನಿಮ್ಮ ದಿನನಿತ್ಯದ ಖರ್ಚುವೆಚ್ಚಗಳ ಸಲುವಾಗಿ [illegible]ಯಂದುಡಿಯಲು ಸಮರ್ಥರಿರುವಿರಿ. ಅಂ[illegible]ಯೇ ದುಡಿಯುವಿರಿ. ಜನತೆಯ ಬೆಂಬಲ[illegible]ಚೆನ್ನಾಗಿರುವುದು. ಮಾತ್ರವಲ್ಲ ಸಮಾಜದಲ್ಲೂ ಗಣ್ಯ ಸ್ಥಾನವನ್ನು ಪಡೆವಿರಿ. ಉದ್ಯೋಗದಲ್ಲಿ ಪ್ರಗತಿಯುಂಟಾಗುವದು. ಸ್ತ್ರೀಜರಿಂದ ವಿಶೇಷತಃ ಮನೆಯಾಕೆಯೊಡನೆ ಜಗಳವುಂಟಾದೀತು. ವಾರಾಂತ್ಯದ 4 ದಿನಗಳು ಕೊಂಚ ಉತ್ತಮವಿವೆ

ವೃಶ್ಚಿಕ— ನೀವೇನೋ ಒಳ್ಳೇ ಕಾರ್ಯಕುಶಲರಿರುವಿರಿ ಆದರೆ ದೈವವು ಪ್ರತಿಕೂಲವಾಗಿರುವ ಕಾಲದಲ್ಲಿ ನಿಮ್ಮ ಪೌರುಷವೂ ಫಲಕಾರಿಯಾಗದು. ಗ್ರಹತಾಪತ್ರಯಗಳು ದಿನದಿಂದ ದಿನಕ್ಕೆ ಹೆಚ್ಚಲಿವೆ. ಹಣ ಬಿಕ್ಕಟ್ಟು ಶತ್ರುಜನರ ಪೀಡೆ ಸ್ವಜನರ ವಿರೋಧ ಗುರುಜನರ ಮನಸ್ತಾಪಗಳಿಗೀಡಾ ನಿಮ್ಮ ಮನುಮನಗಳಿಗೆ ಉಪಶಮ ಸುಖಶಾಂತಿ ಲಭಿಸದು ವಾರದ ಆದ್ಯಂತ ದಿನಗಳಲ್ಲಿ ನಿಮ್ಮ ಪ್ರಯತ್ನವು ವ್ಯರ್ಥವಾಗದು, ಕಾರ್ಯದ ವಿಜಯವಿದೆ.

ಧನು— ಹಿಂದಿನ ದಿನಗಳಂತಲ್ಲವಾದರೂ ಸದ್ಯದ ದಿನಗಳು ನಿಮ್ಮ ಭಾಗಕ್ಕೆ ಉತ್ತಮವಾಗಿಯೇ ಇರುವವು. ಲಾಭಗತನಾದ ಶನೈಶ್ಚರನು ನಿಮ್ಮ ಆರ್ಥಿಕ ಬಿಕ್ಕಟ್ಟನ್ನು ದೂರಮಾಡುವನು ಮಾತ್ರವಲ್ಲ ಪರಿಸ್ಥಿತಿಯ ಥವನ್ನು ಕೊಡಿಸಲು ಸಮರ್ಥನಿರುವನು ಸಂಸಾರವು ನಿರಾಮಯವಾಗಿರುವದು. ವಿದ್ಯೋಪಜೀವೀ ಜನತೆಗೂ ವಿದ್ಯಾರ್ಥಿವೃಂದಕ್ಕೂ ಈ ವಾರವು ಅತೀವ ಪ್ರಶಸ್ತವಿದೆ. ತಾ. 14 ಈ ದಿನಗಳಲ್ಲಿ ನಿಮ್ಮ ಅಭೀಷ್ಟಗಳು ಪೂರ್ಣವಾಗುವವು.

ಮಕರ— ಕಳೆದ ವಾರಕ್ಕಿಂತ ಈ ವಾರ ನಿಮ್ಮ ಭಾಗಕ್ಕೆ ಸ್ವಲ್ಪ ಉತ್ತಮವಿದೆ, ಹಿಂದಿನಂತೆ ಅಡಚಣೆಯು ಇಂದು ಇರಲಾರದು ಆದರೆ ಅಧಿಕಾರಿ ಜನರ ವಕ್ರದೃಷ್ಟಿಯು ದಾ ನಿಮ್ಮ ಮೇಲಿರುವುದು ವಾತಪ್ರಕೋಪದಿಂದಾಗಿ ದೇಹದಲ್ಲಿ ಸಂಧು ಗೊಂದುಗಳ ನೋವು ಕಾಣಿಸೀತು. ಕುಜನರ ಮಾಂತ್ರಿಕಾಲಕ್ಕೆ ಸಿಲುಕಿ ವ್ಯರ್ಥ ಕಷ್ಟನಷ್ಟಗಳನ್ನು ಹೊಂದುವಿರಿ. ವಿದ್ಯಾರ್ಥಿಗಳಿಗೆ ಹಾನಿ ತಗಲಿದೆ. ತಾ. 12, 15, 16, 17 ಈ ದಿನಗಳಲ್ಲಿ ಸುಖ ಭೋಜನ ವಿಜಯ ಲಾಭಗಳಿವೆ

ಕುಂಭ— ನಿಮ್ಮ ವಿಕ್ರಮ ಪತಿಯೂ ಕ್ರೂರನೂ ಆದ ಅಂಗಾರಕ ನಿಮ್ಮ ಕ್ಷೇತ್ರಗನಾಗಿರುವುದರಿಂದ ಶಕ್ತಿಸಾಧ್ಯವಾದ ಕಾರ್ಯಗಳಲ್ಲಿ ನೀವು ಸರ್ವವಿಜಯಿಗಳಾಗುವಿರಿ. ಶತ್ರುಜನರು ನಿಮ್ಮ ಮುಂದೆ ಕಾಣಿಸಲಾರರು. ನಿಮ್ಮ ಪ್ರಯತ್ನಕ್ಕೆ ತಕ್ಕುದಾದ ಫಲವು ನಿಶ್ಚಯವಾಗಿ ಲಭಿ[illegible] ಆದರೆ ಮನಸ್ಸು ಚಂಚಲವಾಗಿ ಕೆಲವೊಮ್ಮೆ ಆಪ್ತ ಮಿತ್ರರಲ್ಲೂ ಸಂದೇಹಗೊಳ್ಳುವ ಸಂಭವವುಂಟಾದೀತು. ಧರ್ಮಕರ್ಮಗಳಲ್ಲಿ ಆಸಕ್ತಿ ಗುರುಹಿರಿಯರಲ್ಲಿ ಅನಾದರವೂ ಬೆಳೆದೀತು ತಾ 13, 14, 18 ಈ ದಿನಗಳಲ್ಲಿ ಗ್ರಹ ಸುಖಭೋಗಗಳು ಲಭಿಸುವವು.

ಮೀನ— ಮನಸ್ಸಿನ ಧೈರ್ಯವು ಮಾಯವಾಗುವದು ಯಾವ ಕಾರ್ಯವನ್ನೂ ಕೊನೆತನಕ ಹಿಡಿದು ಪೂರೈಸುವ ಮನೋದಾರ್ಢ್ಯ ನಿಮ್ಮಲ್ಲಿರದು. ವಿನಾಕಾರಣ ಜನತೆಯೊಡನೆ ಕಲಹವಾಗುವದು ಆತ್ಮೀಯರಿಂದ ವಿದ್ರೋಹ ದುಃಖಕ್ಕೀಡಾಗುವಿರಿ ಧನಸ್ಥಾನಗತರಾದ ಗುರು ಶುಕ್ರರ ಅನುಗ್ರಹದಿಂದಾಗಿ ನಿಮಗೆ ವಾರದಲ್ಲಿ ಹಣದ ಕೊರತೆಯುಂಟಾಗದು ಸಾಂಸಾರಿಕ ತಾಪತ್ರಯಗಳು ಕೊಂಚ ಕಡಿಮೆಯಾಗಲಿವೆ ತಾ 12, 15, 16, 17 ಈ ದಿನಗಳಲ್ಲಿ ನಿಮ್ಮ ಬಯಕೆಯು ನಿರ್ವಿಘ್ನದಿಂದ ನೆರವೇರಲಿದೆ.

ಶರೀರ ಪುಷ್ಟಿತೂಕತೆಗೆ- ಸರ್ವ ರೋಗ ನಿವಾರಣೆಗೆ
ನವಚೇತನ, ಅಮೂಲ್ಯ ಶಕ್ತಿವರ್ಧಕವೆಂದರೆ— ಸುಪ್ರಸಿದ್ಧ
ಸರ್ ಜೀವನ್ ಶಿಲಾಜಿತ್ ಲೇಹ್ಯ
ಸಕಲ ಋತುವಿನಲ್ಲಿ ಸರ್ವರಿಗೂ ಅನುಕೂಲವುಂಟು.
44 ದಿನದ ಲೇಹ್ಯ ರೂ. 5-4-0, 22 ದಿನದ ಲೇಹ್ಯ ರೂ. 3-4-0
(ಪೋಸ್ಟೇಜ್ ಮಾಫಿ)
ನೀಲಗಿರಿ ಡಿಪೋ, ಅಕ್ಕಿಪೇಟೆ ಚಾಕ, ಬೆಂಗ್ಳೂರ ಸಿಟಿ
ಶುದ್ಧ ನೀಲಗಿರಿ ಎಣ್ಣೆ ಸಿಗುತ್ತೆ.

Edited, Printed & Published By K. H. Shetty at the Navayuga Press, Udipi, S. India

Regd. No.
M. 3618

LICENCE No. 31
Licensed to Post without Prepayment

ನವಯುಗ
ಶ್ರೀ. ಎ. ಸಿ. ಶೆಟ್ಟರಿಂದ
ಉಡುಪಿ, ದ. ಕನ್ನಡ.

ವಾರ್ಷಿಕ ಚಂದಾ 5-12-0
6 ತಿಂಗಳಿಗೆ 3-0-0
ಬಿಡಿ ಪ್ರತಿಗೆ 0-2-0

ನವಯುಗ

19-3-1953

Vol 32
No. 28

NAVAYUGA WEEKLY POST BOX NO 22 UDIPI

ವರ್ಷ ೩೨
ವಾರ ೨೮

ಅಂತರಂಗ
[illegible] ಪತ್ರಿಕೆಯು
ಉಪಯುಕ್ತವಾದ
90 ಪುಟಗಳು
ರೂ. 24ಕ್ಕೆ ಸಿಗುತ್ತವೆ.
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ

ಮಧು ಪರ್ಕ

ಮಹರ್ಷಿ ಟಾಲಸ್ಟಾಯರು ಒಮ್ಮೆ ಸಾಧಾರಣ ಪೋಷಾಕಿನಲ್ಲಿ ಸ್ಟೇಶನಿನ ಪ್ಲಾಟ್‌ಫಾರ್ಮಿನ ಮೇಲೆ ತಿರುಗಾಡುತ್ತಿದ್ದರು ಒಬ್ಬ ಮಹಿಳೆಯು ಇವರನ್ನು ಕೂಲಿಯೆಂದು ತಿಳಿದು 'ಏ, ಈ ಪತ್ರವನ್ನು ತೆಗೆದುಕೊಂಡು ಎದುರಿನ ಆ ಹೋಟೇಲಿನಲ್ಲಿರುವ ನನ್ನ ಪತಿಗೆ ಕೊಟ್ಟು ಬಾ. ಎಂದರೆ, ನಿನಗೆರಡು ರೂಬಲು ಸಿಗುವವು' ಎಂದಳು

ಟಾಲಸ್ಟಾಯರು ಅವಳೆಂದಂತೆ ಮಾಡಿ, ರೂಬಲುಗಳನ್ನು ಪಡೆದರು ಕೆಲವೇ ಕ್ಷಣಗಳಲ್ಲಿ ಅವರ ಮಿತ್ರರೊಬ್ಬರು ಅಲ್ಲಿಗೆ ಬಂದು ಟಾಲಸ್ಟಾಯರನ್ನು "ಕೌಂಟ್" (ಪ್ರಭು) ಎಂದು ಸಂಬೋಧಿಸಿದರು, ಮತ್ತು ಮಾತಿಗೆ ತೊಡಗಿದರು ಇದನ್ನು ನೋಡಿದ ಆ ಮಹಿಳೆಗೆ ಹಣೆಗೆ ಏಟು ಕೊಟ್ಟಂತಾಯಿತು ಅವಳು ಬಳಿಗೆ ಬಂದು ಈ ಮಹಾಶಯರು ಯಾರೆಂದು, ಮಿತ್ರವರ್ಯರೊಡನೆ ಕೇಳಿದಳು ಮಿತ್ರರು ಆಶ್ಚರ್ಯದಿಂದ "ಏನು, ನಿಮಗೆ ಗೊತ್ತಿಲ್ಲವೆ? ಕೌಂಟ್ ಲಿಯೋ ಟಾಲಸ್ಟಾಯರೆಂದರೆ ಇವರೇ" ಎಂದರು

ಮಹಿಳೆಗೆ ದಿಗ್ಭ್ರಮೆ ಹಿಡಿದಂತಾಯಿತು ಟಾಲಸ್ಟಾಯರ ಬಳಿ ಬಂದು ಕ್ಷಮೆ ಯಾಚಿಸುತ್ತಾ "ದಯವಿಟ್ಟು ನಾನು ನಿಮಗೆ ಕೊಟ್ಟ ರೂಬಲುಗಳನ್ನು ವಾಪಸು ಕೊಡಬೇಕು ನಿಮ್ಮ ಅನಾದರವನ್ನು ನಾನು ಮಾಡಿದೆ ಪರಮಾತ್ಮ ನನ್ನನ್ನು ಕ್ಷಮಿಸಲಿ' ಎಂದಳು ಅದಕ್ಕೆ ಟಾಲಸ್ಟಾಯರು "ಸರಿಯೇ, ಆದರೆ, ನಾನು ಕೆಲಸ ಮಾಡಿ ಎರಡು ರೂಬಲು ಗಳಿಸಿದ್ದೇನೆ ಅದನ್ನೇಕೆ ಮರಳಿ ಕೊಡಲಿ?' ಎಂದು ಬಿಟ್ಟರು'

ಗಳಿಸಿದುದನ್ನು ಉಳಿಸುವ ಬುದ್ಧಿಗೆ ಇದು ನಿದರ್ಶನ

ಮನಸಿನ ಹಿರಿಮೆ

ಸಾಂಪ್ರದಾಯಿಕವಾಗಿ ಹೇಳುವುದಾದಲ್ಲಿ ಸಮಾಜದಲ್ಲಿ ಮಧ್ಯಮ ವರ್ಗವೆನಿಸಿಕೊಂಡವರೇ ಬುದ್ಧಿ ಜೀವಿಗಳಿರುತ್ತಾರೆ ಭಾರತದಲ್ಲಿಯೂ ಇತರ ಪಾಶ್ಚಿಮಾತ್ಯ ಪ್ರಜಾ ಪ್ರಭುತ್ವದ ರಾಷ್ಟ್ರಗಳಲ್ಲಿಯೂ ಮನಸ್ಸು ದೇಹಕ್ಕಿಂತ ಉಚ್ಚವೆಂದು ಪರಿಗಣಿಸಲ್ಪಟ್ಟಿದೆ. ಸಮಾಜದ ಹಿತದೃಷ್ಟಿಯಿಂದ ಬೌದ್ಧಿಕ ಕೆಲಸವೇ ದೈಹಿಕ ಶ್ರಮಕ್ಕಿಂತ ಹೆಚ್ಚಿನ ಬೆಲೆಯುಳ್ಳದ್ದೆಂದು ತಿಳಿದುಕೊಳ್ಳಲ್ಪಟ್ಟಿದೆ ಪರಿಣಾಮವಾಗಿ ದೈಹಿಕ ಪರಿಶ್ರಮಗೈದು ಪಡೆಯುವ ಕೂಲಿಗಿಂತ ಬೌದ್ಧಿಕ ಕೆಲಸಕ್ಕೆ ದೊರಕುವ ಸಂಬಳವು ಹೆಚ್ಚಾಗಿರುತ್ತದೆ. ಇವೆರಡು ರೀತಿಯ ಮಜೂರಿಯಲ್ಲಿ ಕೆಲವೊಮ್ಮೆ ಒಂದಕ್ಕೆ ನೂರರಷ್ಟು ಅಂತರವೂ ಕಂಡುಬರುತ್ತದೆ ಆದರೆ ಈಚೆಗೆ ಈ ಅಭಿಪ್ರಾಯವು ನಿಧಾನವಾಗಿ ಬದಲಾಗುತ್ತಾ ಬರುತ್ತಿದೆ ಮತ್ತು ಕೂಲಿಯ ದರವೇ ಏರುತ್ತಿರುವುದನ್ನು ನಾವು ಕಾಣುತ್ತೇವೆ. ಕೆಳಮಟ್ಟದ ಬೌದ್ಧಿಕ ಕೆಲಸವನ್ನು ನಿರ್ವಹಿಸುವ ಸಾಮಾನ್ಯ ಕ್ಲಾರ್ಕನ ಸಂಬಳಕ್ಕಿಂತಲೂ ಹೆಚ್ಚು ಹಣವನ್ನು ಕುಶಲ ಕೆಲಸಗಾರನೊಬ್ಬನು ಕೂಲಿಯಾಗಿ ಪಡೆಯುವುದನ್ನು ನಾವಿಂದು ಎಲ್ಲಿಯೂ ನೋಡಬಹುದು ಪದವೀಧರನಾದ ತರುಣನೊಬ್ಬನು ಯಾವುದಾದರೊಂದು ಆಫೀಸಿನ ಕುರ್ಚಿಯಲ್ಲಿ ಕುಳಿತು ಸಂಪಾದಿಸುವುದರ ಎರಡು ಪಟ್ಟು ಹಣವನ್ನು ಸಾಮಾನ್ಯ ಕೆಲಸಗಾರನು ತನ್ನ ಪರಿಶ್ರಮದ ಫಲವಾಗಿ ಪಡೆಯುತ್ತಾನೆ ಈಗ ಬೌದ್ಧಿಕ ಕೆಲಸದ ಮಹತ್ವವು ತಗ್ಗುತ್ತಾ ಬಂದಿರುವುದರಿಂದ ಶಾಲಾ ಕಾಲೇಜುಗಳಿಂದ ಹೊರಬೀಳುತ್ತಿರುವ ಲಕ್ಷಾಂತರ ತರುಣ-ತರುಣಿಯರು ನಿರುದ್ಯೋಗಿಗಳಾಗಿ ಅಲೆಯುತ್ತಿರುವುದು ಅನಿವಾರ್ಯವೆನಿಸಿದೆ ಅನ್ಯಥಾ ಇವರು ದೈಹಿಕ ಪರಿಶ್ರಮ ಅಗತ್ಯವೆನಿಸಿದ ಕೆಲಸವನ್ನು ಅವಲಂಬಿಸಬೇಕಾಗಿದೆ

ಭಾರತದಲ್ಲಿ ಹೀಗೆ ಮಧ್ಯಮ ವರ್ಗದ ಪರಿಸ್ಥಿತಿಯು ಪರಿವರ್ತನೆಗೆ ಒಳಗಾಗುತ್ತಿದ್ದಂತೆಯೇ ಸೋವಿಯೆಟ ರಶಿಯಾದಂಥ ದೇಶಗಳಲ್ಲಿ ಒಂದು ನವೀನವಾದ ತತ್ವಜ್ಞಾನ ಉದಿಸಿರುವುದನ್ನು ಕಾಣುತ್ತೇವೆ ಅಲ್ಲಿ ಬೌದ್ಧಿಕ ಕ್ರಿಯೆಗಿಂತಲೂ ದೈಹಿಕ ಪರಿಶ್ರಮವೇ ಅಮೂಲ್ಯವಾದುದೆಂದು ಪರಿಗಣಿಸಲ್ಪಟ್ಟಿದೆ ಮನಸ್ಸಿಗಿಂತಲೂ ಶರೀರಕ್ಕೆ ಹೆಚ್ಚಿನ ಮಹತ್ವವು ಆ ದೇಶಗಳಲ್ಲಿ ಪ್ರಾಪ್ತವಾಗಿರುತ್ತದೆ ಇದರ ಪರಿಣಾಮವಾಗಿ ಒಂದು ಕಾರ್ಖಾನೆಯಲ್ಲಿ ಯಂತ್ರದೊಂದಿಗೆ ದುಡಿಯುವ ಕಾರ್ಮಿಕ ವರ್ಗವು ಸಮಾಜದಲ್ಲಿ ಸಾಮಾನ್ಯ ಬುದ್ಧಿ ಜೀವಿಗಳಿಗಿಂತ ಉನ್ನತ ಸ್ಥಾನವನ್ನು ಹೊಂದಿರುತ್ತದೆ ಸ್ವಾಭಾವಿಕವಾಗಿಯೇ ಸಾಧಾರಣ ಬುದ್ಧಿಜೀವಿಗಳಿಗಿಂತ ಕಾರ್ಮಿಕ ವರ್ಗದ ದುಡಿಮೆಗೆ ಅಧಿಕ ಪ್ರತಿಫಲ ಸಿಗುತ್ತದೆ ಈ ತತ್ವಜ್ಞಾನವನ್ನು ಎಲ್ಲಿಂ ವರೆಗೆ ವಿಸ್ತರಿಸಿದರೆಂದರೆ ಅಧ್ಯಾಪಕ ವರ್ಗ ಹಾಗು ವೈದ್ಯಕೀಯ ವೃತ್ತಿಯವರನ್ನು ಸಹ ಸಾಧಾರಣ ಬುದ್ಧಿ ಜೀವಿಗಳೆಂದು ಪರಿಗಣಿಸಲಾಯಿತು. ಆದರೆ ಈ ಕೆಳ ಅಂತಸ್ತನ್ನು ಒಪ್ಪಿಕೊಂಡು ಮನ ಪೂರ್ವಕ ಕೆಲಸ ಮಾಡಲು ಈ ಜನರು ಒಪ್ಪದುದರಿಂದ, ಅವರನ್ನು ಕಾರ್ಖಾನೆಯ ಕಾರ್ಮಿಕರ ಪಂಕ್ತಿಗೆ ಏರಿಸಿದರು

ಆದರೆ ಪ್ರಜಾ ಪ್ರಭುತ್ವದ ಆದರ್ಶದಿಂದಾಗಲೀ ಕಮ್ಯೂನಿಸ್ಟ ಆದರ್ಶದಿಂದಾಗಲೀ ಪ್ರತಿಭಾಸಂಪನ್ನರೂ ಮೇಧಾವಿಗಳೂ ಕಾರ್ಯಪಟುಗಳೂ ಆದ ಜನರಿಗೆ ಸಾಮಾಜಿಕವಾಗಿಯೂ ಆರ್ಥಿಕವಾಗಿಯೂ ಅತ್ಯುನ್ನತ ಸ್ಥಾನವಿದೆ ಎಂಬುದನ್ನು ಮರೆಯಲಾಗದು ಸರಕಾರದ ಸೂತ್ರವನ್ನು ವಹಿಸಿಕೊಂಡು ಜನರನ್ನು ಪ್ರಗತಿ ಪಥದಲ್ಲಿ ಮುನ್ನಡೆಸುವ ವಿಶಿಷ್ಟ ಯೋಗ್ಯತೆ ಈ ಮಹಾಪುರುಷರಿಗೆ ಇದೆ ಪ್ರಜಾಪ್ರಭುತ್ವ ಪದ್ಧತಿ ಪ್ರಕಾರ ಇವರ ಬಳಿಕ ಸಮಾಜದಲ್ಲಿ ನಾನಾ ರೀತಿಯ ವೃತ್ತಿಗಳನ್ನು ಅವಲಂಬಿಸಿಯೂ ಸಂಸ್ಥೆಗಳನ್ನು ಕಟ್ಟಿಕೊಂಡೂ ಜೀವನ ನಿರ್ವಹಿಸುವ ಬುದ್ಧಿಜೀವಿಗಳ ವರ್ಗವಿರುತ್ತದೆ ಇವರನ್ನು ನಾವು ಮಧ್ಯಮ ವರ್ಗದವರೆಂದು ಕರೆಯುತ್ತೇವೆ ಆ ಬಳಿಕ ಕೂಲಿಗಾರರು ಕಾರ್ಮಿಕರ ಮುಂತಾದವರ ಸ್ಥಾನವಿರುತ್ತದೆ. ಕಮ್ಯುನಿಸ್ಟ ತತ್ವಜ್ಞಾನದನ್ವಯಗು ಕೊನೆಯ ವರ್ಗ [illegible] ಸ್ಥಾನವನ್ನೂ ಎರಡನೆ ವರ್ಗ [illegible] ವನ್ನೂ ಹೊಂದುತ್ತಾರೆ ಮೇಧಾವಿಗಳಾದ ಮಹಾಪುರುಷರ ಸ್ಥಾನ ಮಾತ್ರ ಅಪ್ರತಿಹತವಾಗಿ ಎರಡೂ ಪದ್ಧತಿಗಳಲ್ಲಿ ಉಳಿದು ಕೊಳ್ಳುತ್ತದೆ ಅದಕ್ಕೆ ಚ್ಯುತಿ ಇಲ್ಲ

ಈಗಿನ ವಾತಾವರಣವನ್ನು ವೀಕ್ಷಿಸಿದರೆ ಕಮ್ಯುನಿಸ್ಟ ತತ್ವಜ್ಞಾನವೇ ಪ್ರಾಬಲ್ಯ ಹೊಂದುತ್ತಾ ಬರುತ್ತಿದ್ದು, ಪ್ರಜಾಪ್ರಭುತ್ವದ ರೀತಿನೀತಿಯನ್ನು ತನ್ನ ವರ್ಚಸ್ಸಿಗೆ ಗುರಿಮಾಡುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ ಹಾಗೆಂದ ಮಾತ್ರಕ್ಕೆ ಮನಸ್ಸಿಗಿಂತಲೂ ಶರೀರವೆ ಪ್ರಧಾನವಾದುದೆಂದು ಹೇಳುವುದು ಸರಿಯಾಗದು ಭಾರತೀಯ ಸಂಸ್ಕೃತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಮಾತನ್ನು ಸ್ಪಷ್ಟೀಕರಿಸುವುದು ಅಗತ್ಯವಿದೆ-ತೈತ್ತಿರೀಯೋಪನಿಷತ್ತಿನಲ್ಲಿ ಬ್ರಹ್ಮದ ಕಲ್ಪನೆಯನ್ನು ಮಾಡುತ್ತಾ ಈ ಚೈತನ್ಯದಿಂದಲೇ ಎಲ್ಲವಸ್ತುಗಳೂ ಜನಿಸುತ್ತವೆ, ಅಸ್ತಿತ್ವದಲ್ಲಿ ಉಳಿಯುತ್ತವೆ, ಮತ್ತು ಕೊನೆಗೆ ಅದರಲ್ಲಿಯೇ ಲೀನಗೊಳ್ಳುತ್ತವೆ ಎಂದು ಹೇಳಿರುವರು ಬ್ರಹ್ಮ ಚೈತನ್ಯವು ಅನ್ನ, ಪ್ರಾಣ, ಚಿತ್ತ, ವಿಜ್ಞಾನ ಮತ್ತು ಆನಂದಮಯವಾಗಿದೆ ಎಂದು ಪುರಾತನ ಋಷಿಗಳ ಅಭಿಪ್ರಾಯವಿದೆ. ಇದರಿಂದ ಶರೀರಕ್ಕಿಂತ ಮನಸ್ಸು ಮೇಲೆ, ಮತ್ತು ಇವೆರಡಕ್ಕಿಂತಲೂ ಆತ್ಮತತ್ವವು ಮೇಲೆ ಎಂಬುದು ವ್ಯಕ್ತವಾಗುತ್ತದೆ ಭಾರತದಲ್ಲಿ ಸಾಮಾನ್ಯವಾಗಿ ಈ ಆದರ್ಶವೇ ಅನಾದಿ ಕಾಲದಿಂದಲೂ ಮನ್ನಿಸಲ್ಪಟ್ಟಿರುತ್ತದೆ ಆದರೆ ದೇವರ ಅಸ್ತಿತ್ವಕ್ಕೆ ಪುರಸ್ಕಾರವನ್ನು ಕೊಡದ ಕಮ್ಯೂನಿಸ್ಟ ತತ್ವಜ್ಞಾನವು ಭೌತಿಕ ಚೈತನ್ಯಕ್ಕೇನೇ ಮಹತ್ವಕೊಟ್ಟು ಆಧ್ಯಾತ್ಮಿಕ ತತ್ವವನ್ನು ಮೂಲೆಗುಂಪುಮಾಡಿದೆ. ಹೀಗಿರುವುದರಿಂದಲೇ, ಮನಸ್ಸಿಗೂ ಮಿಗಿಲಾದ ಆತ್ಮತತ್ವ ಉಂಟೆಂಬುದನ್ನು ಕಮ್ಯೂನಿಸ್ಟರು ಒಪ್ಪುವುದಿಲ್ಲ— ಮಾತ್ರವಲ್ಲ, ಮನಸ್ಸಿಗಿಂತಲೂ ಶರೀರವೇ ಶ್ರೇಷ್ಠವೆಂದು ಪ್ರತಿಪಾದಿಸುತ್ತಿರುವರು

ಸಾಮಾನ್ಯವಾಗಿ ದೇವರನ್ನು ಒಪ್ಪುವ ಎಲ್ಲ ಮತಧರ್ಮಗಳೂ ಶರೀರಕ್ಕಿಂತ ಮನಸ್ಸಿಗೆ ಅಧಿಕ ಮಹತ್ವವನ್ನು ಕೊಟ್ಟಿವೆ ಜಡಪದಾರ್ಥಗಳಿಗೇನೇ ಪ್ರಾಶಸ್ತ್ಯಕೊಟ್ಟು ಅನುಸಂಧಾನಕ್ಕೆ ತೊಡಗಿದ ಆಧುನಿಕ ವಿಜ್ಞಾನ ಕೂಡ ಈಗೀಗ ಭೌತಿಕ ಜಗತ್ತಿನಲ್ಲಿ ಮನಸ್ಸಿಗೆ ಉನ್ನತಸ್ಥಾನವಿದೆ ಎಂಬುದನ್ನು ಒಪ್ಪಿಕೊಳ್ಳಲು ಸಿದ್ಧವಾಗಿದೆ ಸಮಾಜದ ಏಳಿಗೆಯ ಕನಸು ಕಾಣುವ ಮಹಾಜನರು ಈ ತಥ್ಯವನ್ನು ಉಪೇಕ್ಷಿಸುವುದು ಚೆನ್ನಾಗಲಿಕ್ಕಿಲ್ಲ. ಮನುಷ್ಯನು ಶರೀರ ಮನಸ್ಸು ಮತ್ತು ಆತ್ಮ ಎಂಬೀ ಮೂರು ತತ್ವಗಳಿಂದ ಒಳಗೊಂಡಿರುವಂತೆ, ಸಮಾಜಕ್ಕಾದರೂ ದೈಹಿಕ ಬೌದ್ಧಿಕ ಹಾಗೂ ಆಧ್ಯಾತ್ಮಿಕ ಸ್ವರೂಪ ಇದ್ದೇ ಇದೆ ಸಮಾಜದ

(೧೦ನೇ ಪುಟ ನೋಡಿ)

ಮಹಾರಾಣಿ ಎಲಿಜಬೆತ್ತಳ ಕೊರೊನೇಶನ್ ದರ್ಬಾರ್ ಸ್ಮಾರಕ ಮೊಹರಿನ ಮಾದರಿ

ದಾಮೋದರ ನದೀ ಕಣಿವೆ

ಜಗತ್ತಿನ ಪ್ರಮುಖ ಔದ್ಯಮಿಕ ಕೇಂದ್ರಗಳಲ್ಲಿ ಒಂದಾಗಿ ಮೆರೆಯಬಲ್ಲುದು.

ಭಾರತದ ದಾಮೋದರ ನದೀ ಕಣಿವೆಯ ಯೋಜನೆಯು ಅತ್ಯಪೂರ್ವವಾದ ಉದ್ಯಮವೆನಿಸಿದೆ. ವ್ಯಾಪಾರೀಕ್ಷೇತ್ರದಲ್ಲಿ ಪ್ರತಿಯೊಂದೂ ಉದ್ಯಮವು ಲಾಭಗಳಿಸುವ ಮುಖ್ಯೋದ್ದೇಶದಿಂದ ಕೂಡಿರುತ್ತದೆ. ಹಾಗೆಂದು ಈ ಯೋಜನೆಯ ಧ್ಯೇಯ ಮಾತ್ರ ಭಾರತದ ಸಂಪತ್ತನ್ನು ಬೆಳೆಸುವುದೂ ಹೆಚ್ಚುಹೆಚ್ಚು ಉತ್ಪಾದನೆಯನ್ನು ಉಂಟುಮಾಡುವುದೂ ಆಗಿದೆ. ನವಭಾರತದ ನಿರ್ಮಾಣ ಕಾರ್ಯದಲ್ಲಿ ದಾಮೋದರ ನದೀ ಕಣಿವೆ ಯೋಜನೆಯು ಮಹತ್ವದ ಪಾತ್ರವನ್ನು ವಹಿಸಲಿದೆ. ಇದರ ಪ್ರಗತಿಯ ಫಲವಾಗಿ ಔದ್ಯೋಗಿಕ ಅಭಿವೃದ್ಧಿಯು ಕೈಗೂಡುವುದು ನಿಶ್ಚಯ. ಇದಕ್ಕೆ ಬೇಕೆನಿಸಿದ ಅಪಾರ ನೈಸರ್ಗಿಕ ಸಂಪತ್ತು, ಸಾಧನಗಳು ಹಾಗು ಇತರ ಅನುಕೂಲತೆಗಳು ಈ ಪ್ರದೇಶದಲ್ಲಿ ಇವೆ.

ಇಂಜಿನಿಯರಿಂಗ್ ಕೆಲಸಗಳು

ಸರಕಾರವು ದಾಮೋದರ ನದೀ ಕಣಿವೆ ಪ್ರದೇಶದ ಎಲ್ಲ ಕೆಲಸ ಕಾರ್ಯಗಳನ್ನೂ ನಿರಂತರವಾಗಿ ನೆರವೇರಿಸಿಕೊಂಡು ಹೋಗಲು ಅನುಕೂಲವಾಗುವಂತೆ ಒಂದು ಕಾರ್ಪೋರೇಶನನ್ನು ರಚಿಸಿರುತ್ತದೆ. ದಾಮೋದರ ನದಿಗೆ ಕಟ್ಟುವ ನಾಲ್ಕು ಅಣೆಕಟ್ಟುಗಳಲ್ಲಿ ತಿಲೈಯಾ ಅಣೆಕಟ್ಟು ಈಗಾಗಲೇ ಪೂರ್ಣಗೊಂಡಿದೆ. ಮೊನ್ನೆ ನೇತಾ ಪ್ರಧಾನಿ ನೆಹರೂರವರು ಇದನ್ನು ಸಂದರ್ಶಿಸಿದ್ದು ನಿಮ್ಮ ಜ್ಞಾಪಕದಲ್ಲಿರಬಹುದು. ಇದಕ್ಕೆ ಹೊಂದಿಕೊಂಡು ಬೊಕಾರೋ ವಿದ್ಯುಚ್ಛಕ್ತಿಯ ಕೇಂದ್ರವಿದೆ. ಎರಡನೆಯದಾದ ಕೊನಾರ ಅಣೆಕಟ್ಟು ಬರುವ ಮಳೆಗಾಲದೊಳಗಾಗಿ ಮುಗಿಯುವ ಭರವಸೆ ಇದೆ. ಪ್ರಧಾನ ಅಣೆಕಟ್ಟುಗಳಾದ ಮೈಥೋನ ಮತ್ತು ಪಂಚೆತ್ ಹಿಲ್ ಅಣೆಕಟ್ಟುಗಳು ೧೯೫೫ರಲ್ಲಿ ಪೂರ್ಣವಾಗುವುವೆಂದು ಕೇಳುತ್ತೇವೆ. ಇವುಗಳಿಗೆ ಸಂಬಂಧಿಸಿರುವ ನೀರಾವರಿ ಕಾಲುವೆಗಳೂ ಜಲಮಾರ್ಗಗಳೂ ೧೯೫೬-೫೭ರ ಸುಮಾರಿಗೆ ಪೂರ್ತಿಯಾಗಿ ನಿರ್ಮಾಣಗೊಂಡು, ಈ ಯೋಜನೆಯ ಇಡೀ ನೀರಾವರಿ ಕಾರ್ಯವು ಆರಂಭವಾಗುವುದು. ಹೀಗೆ ಇಂಜಿನಿಯರಿಂಗ್ ಕೆಲಸಗಳೆಲ್ಲ ಮುಗಿದುದರ ಪರಿಣಾಮವಾಗಿ ದಾಮೋದರ ನದಿಗೆ ಸದಾ ಬರುತ್ತಿರುವ ನೆರೆಯ ನಿಯಂತ್ರಣ ಕಾರ್ಯವು ಯಶಸ್ವಿಯಾಗಿ ನೆರವೇರುತ್ತದೆ. ಹತ್ತು ಲಕ್ಷ ಎಕ್ರೆ ಭೂಮಿಯು ನೀರುಂಡು ಕೃಷಿ ಸಂಪನ್ನವಾಗುತ್ತದೆ. ಒಟ್ಟು ೩೯೪೦೦೦ ಕಿಲೋವಾಟು ವಿದ್ಯುಚ್ಛಕ್ತಿಯು ಉತ್ಪಾದನೆಯಾಗುವುದರಿಂದ ಅಪಾರವಾದ ಉತ್ಪಾದನಾ ಕಾರ್ಯ ನೆರವೇರುತ್ತದೆ. ಸಾರಿಗೆ ಸಂಪರ್ಕದ ಸಾಧನವೂ ಭರದಿಂದ ಬೆಳೆದು ವ್ಯಾಪಕಗೊಳ್ಳುತ್ತದೆ ಎಂದೆಲ್ಲ ಯೋಚಿಸಿರುವರು.

ಪ್ರಮುಖ ಖನಿಜ ದ್ರವ್ಯಗಳು

ಈ ಪ್ರದೇಶವು ಖನಿಜ ದ್ರವ್ಯಗಳಿಗೆ ಅತ್ಯಂತ ಪ್ರಸಿದ್ಧವೆನಿಸಿದೆ. ಆದುದರಿಂದ ಲೋಕದಲ್ಲಿಯೇ ವಿಶಿಷ್ಟವರ್ಗದ ಮಹತ್ವದ ಉದ್ದಿಮೆಗಳನ್ನು ಕಟ್ಟಿ ಬೆಳೆಸಲಿಕ್ಕೆ ಇದು ತೀರಾ ಪ್ರಶಸ್ತವಾದ ಪ್ರದೇಶವಾಗಿರುತ್ತದೆ. ಕಬ್ಬಿಣ, ಕಲ್ಲಿದ್ದಲು, ಅಭ್ರಕ, ಲೋಹ ಮುಂತಾದ ಅಮೂಲ್ಯ ಖನಿಜ ಸಂಪತ್ತು ಇಲ್ಲಿಯ ಭೂಮಿಯಲ್ಲಿ ನಿಕ್ಷೇಪಿಸಲ್ಪಟ್ಟಿದೆ. ಈ ಪ್ರಮುಖ ಖನಿಜ ದ್ರವ್ಯಗಳನ್ನು ಉಪಯೋಗಿಸಿ ದಾಮೋದರ ನದೀ ಕಣಿವೆಯು ಭಾರತದ ಸಂರಕ್ಷಣೆಗೆ ಅಗತ್ಯವೆನಿಸಿದ ಅನೇಕ ಉದ್ದಿಮೆಗಳಿಗೆ ಕೇಂದ್ರಸ್ಥಾನವಾಗಬಲ್ಲುದು. ಈಗ ಕೂಡ ಈ ಪ್ರದೇಶವು ಔದ್ಯಮಿಕವಾಗಿ ಭಾರತದ ಇತರ ಪ್ರದೇಶಗಳಿಗಿಂತ ಮುಂದುವರಿದಿದೆ. ಇಲ್ಲಿರುವ ಕುಲ್ಟಿ ಬರ್ನಪುರ ಮತ್ತು ಜಮಶೇದಪುರಗಳಲ್ಲಿ ಉಕ್ಕಿನ ಕಾರ್ಖಾನೆಗಳು ಸಿಂಧ್ರಿಯಲ್ಲಿ ಗೊಬ್ಬರದ ಕಾರ್ಖಾನೆ, ಚಿತ್ತರಂಜನದಲ್ಲಿ ರೈಲ್ವೆ ಇಂಜಿನಿನ ಕಾರ್ಖಾನೆ ಮುಂತಾದವುಗಳಿವೆ. ಗಾಜಿನ ಕಾರ್ಖಾನೆ, ತಾಮ್ರ ಕರಗಿಸುವ ಕಾರ್ಖಾನೆ, ಅಲುಮಿನಿಯಂ ಕಾರ್ಖಾನೆ ಇತ್ಯಾದಿಗಳೂ ಇಲ್ಲಿವೆ. ೧೯೫೨ನೇ ದಶಂಬರ ಮಾಸಾಂತ್ಯದಲ್ಲಿ ವಿಶ್ವಬ್ಯಾಂಕು ಬರ್ನಪುರದ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ವಿಸ್ತರಿಸುವುದಕ್ಕೋಸ್ಕರ ಇಂಡಿಯನ್ ಆಯರ್ನ್ ಎಂಡ್ ಸ್ಟೀಲ್ ಕಂಪೆನಿಗೆ ೩೧೫ ಲಕ್ಷ ಡಾಲರುಗಳ ಸಾಲವನ್ನು ಕೊಟ್ಟು ಸಹಕರಿಸಿದೆ.

ಕಬ್ಬಿಣ ಮತ್ತು ಉಕ್ಕಿನ ಉತ್ಪಾದನೆ

ಕಬ್ಬಿಣ ಮತ್ತು ಉಕ್ಕಿನ ಉತ್ಪಾದನೆಯು ದೇಶದಲ್ಲಿ ಹೆಚ್ಚಿಕೊಳ್ಳುವುದು ಅಗತ್ಯವೆನಿಸಿದೆ. ಭಾರತದ ಅಭಿವೃದ್ಧಿಯಾಗಬೇಕಾದಲ್ಲಿ ಈ ಉದ್ದಿಮೆಯು ಭರದಿಂದ ಪ್ರಗತಿಯನ್ನು ಹೊಂದಲೇಬೇಕು. ಕಬ್ಬಿಣಮತ್ತು ಕಲ್ಲಿದ್ದಲುಗಳ ಹೇರಳ ಭಂಡಾರ ಇಲ್ಲಿಯ ಭೂಮಿಯಲ್ಲಿರುವುದರಿಂದ, ಅದನ್ನು ಯಥೇಚ್ಛವಾಗಿ ಬಳಸುವುದಕ್ಕೆ ನಾವು ಪ್ರಯತ್ನಿಸಲು ಯಾವ ತೊಂದರೆಯೂ ಇರುವುದಿಲ್ಲ. ಮಾತ್ರವಲ್ಲ ಕಬ್ಬಿಣ ಮತ್ತು ಉಕ್ಕುಗಳೇ ಕಚ್ಚಾ ಸಾಮಾಗ್ರಿಯಾಗಿರುವ ಇತರ ಭಾರಿ ಉದ್ದಿಮೆಗಳನ್ನೂ ಈ ಪ್ರದೇಶದಲ್ಲಿ ನಡೆಸಬಹುದು. ಭಾರತದಲ್ಲಿ ಉತ್ಪಾದನೆಯಾಗುವ ಉಕ್ಕು, ಕಲ್ಲಿದ್ದಲು, ಅಭ್ರಕ, ತಾಮ್ರ ಮುಂತಾದುವುಗಳಲ್ಲಿ ಅಧಿಕಾಂಶ ಈ ಪ್ರದೇಶದಿಂದಲೇ ಬರುವುವೆಂಬುದನ್ನು ಮರೆಯಲಾಗದು. ಇಲ್ಲಿಯ ಕಲ್ಲಿದ್ದಲು ಪ್ರದೇಶದಲ್ಲಿ ಸುಮಾರು ೨೫೫೦೦ ಲಕ್ಷ ಟನ್ನು ಕಲ್ಲಿದ್ದಲು ಇದೆ ಎಂದು ಅಂದಾಜು ಮಾಡಿರುವರು. ಕಬ್ಬಿಣ ಮತ್ತು ಉಕ್ಕುಗಳ ಹೇರಳವಾದ ಪೂರೈಕೆಯಾದಲ್ಲಿ ವ್ಯವಸಾಯ, ವಾಹನಗಳು, ಸೇತುವೆಗಳು, ಅನೇಕಬಗೆಯ ಉದ್ದಿಮೆಗಳು ಇನ್ನಿತರ ನೂರಾರು ಕಾರ್ಯಗಳಿಗೆ ಇದರಿಂದ ನೆರವಾಗುವುದು.

ಉದ್ದಿಮೆಗಳ ವಿಸ್ತರಣ ಕಾರ್ಯ

ಇಲ್ಲಿಯ ನೈಸರ್ಗಿಕ ಸಂಪತ್ತಿನ ಪೂರ್ಣ ಪ್ರಯೋಜನವನ್ನು ಹೊಂದುವುದಕ್ಕೆ 'ಈಗಿರುವ ಉದ್ಯಮಗಳ ವಿಸ್ತರಣ ಹಾಗು ಹೊಸತಾಗಿ ಉದ್ದಿಮೆಗಳ ಆರಂಭವಾದರೆ ಒಳ್ಳೆಯದು. ಇದಕ್ಕೆ ಸಂಬಂಧಿಸಿದಂತೆ ಒಂದು ಯೋಜನೆಯನ್ನು ತಯಾರಿಸಿ ಸುಸಂಬದ್ಧವಾಗಿ ಕೆಲಸಗಳನ್ನು ನಡೆಸಿಕೊಂಡು ಬರುವುದು ಅಪೇಕ್ಷಣೀಯ. ಖಾಸಗಿ ಉದ್ದಿಮೆಗಳ ಮತ್ತು ಸರಕಾರದ ನೆರವಿನಿಂದ ಮಾತ್ರವೇ ಉತ್ತಮ ಪ್ರತಿಫಲ ದೊರೆತೀತೆಂದೂ ಕೇವಲ ದಾಮೋದರ ಕಣಿವೆಯ ಕಾರ್ಪೋರೇಶನೊಂದೇ ಈ ಹೊಣೆಗಾರಿಕೆಯನ್ನು ನಿರ್ವಹಿಸಲಾರದೆಂದೂ ಕೊರ್ಪೋರೇಶನಿನ ಸದಸ್ಯ ಶ್ರೀ ವರ್ಮಾ ಹೇಳುತ್ತಾರೆ. ಇಂಥ ಕಾರ್ಯ ಯೋಜನೆಗಾಗಿ ವಿಚಾರ ವಿನಿಮಯ ಮಾಡಿ ತಕ್ಕ ಕ್ರಮ ತೆಗೆದುಕೊಳ್ಳಲು ಉನ್ನತ ಮಟ್ಟದ ಒಂದು ಸಮಿತಿಯನ್ನು ನೇಮಿಸುವ ಕಾಲ ಹತ್ತಿರಕ್ಕೆ ಬಂದಿದೆ ಎಂದವರ ಅಭಿಪ್ರಾಯ. ಏಕೆಂದರೆ ಇಲ್ಲಿಯ ಸಂಪತ್ತಿನ ಉಪಯೋಗವನ್ನೆ, ಭಾರತದ ಔದ್ಯಮಿಕ ಭವಿತವ್ಯ ಹೆಚ್ಚಾಗಿ ಅವಲಂಬಿಸಿದೆ.

ಹೊಸ ಯೋಜನೆಗಳು

ಮೊದಲಿಗೆ ಇಲ್ಲಿ ಉಕ್ಕು ಮತ್ತು ಕಬ್ಬಿಣ, ವಿದ್ಯುಚ್ಛಕ್ತಿಯ ಉಪಕರಣಗಳು, ಹೆಚ್ಚಿನ ವಿದ್ಯುಚ್ಛಕ್ತಿಯ ಉತ್ಪಾದಕ ಯಂತ್ರಗಳು, ಅಭ್ರಕದ ಕಾರ್ಖಾನೆ ಈ ನಾಲ್ಕು ಉದ್ದಿಮೆಗಳನ್ನು ತೊಡಗಲು ಸಾಧ್ಯವಿದೆ. ಪ್ರಥಮದ ಎರಡು ಉದ್ದಿಮೆಗಳ ಸಂಬಂಧದಲ್ಲಿ ಅನೇಕ ಕಂಪೆನಿಗಳು ಸರಕಾರದ ಮುಂದೆ ತಮ್ಮ ಆಲೋಚನೆಯನ್ನು ಇಟ್ಟಿವೆ ಎಂದು ತಿಳಿಯುತ್ತದೆ. ಬಿಹಾರ ಸರಕಾರವು ಹಝಾರಿಬಾಗ ಜಿಲ್ಲೆಯಲ್ಲಿ ಗ್ರಾಮೋದ್ಯೋಗಗಳ ಬೆಳವಣಿಗೆ ಮತ್ತು ವಿಕಾಸಕ್ಕಾಗಿ ಒಂದು ಯೋಜನೆಯನ್ನು ಪರಿಶೀಲಿಸುತ್ತಿದೆ. ದೊಡ್ಡ ಕಾರ್ಖಾನೆಗಳಲ್ಲಿ ದೊರೆಯುವ ನಿರುಪಯುಕ್ತ ವಸ್ತುಗಳನ್ನು ಉಪಯೋಗಿಸಿಕೊಳ್ಳಲು ಸಾಧ್ಯವಾಗುವಂಥ ಅನೇಕ ಚಿಕ್ಕ ಪುಟ್ಟ ಕೈಗಾರಿಕೆಗಳಿಗೆ ಕೂಡ ಈ ಪ್ರದೇಶದಲ್ಲಿ ಆಸ್ಪದವಿದೆ.

ದಾಮೋದರ ನದೀ ಕಣಿವೆಯ ಯೋಜನೆಯು ನಿರ್ದಿಷ್ಟ ರೀತಿಯಲ್ಲಿ ಮುಂದುವರಿಯುತ್ತಿದೆ. ಆದುದರಿಂದ ಈ ಪ್ರದೇಶದ ನೈಸರ್ಗಿಕ ಸಂಪತ್ತನ್ನು ಶೀಘ್ರದಲ್ಲಿಯೇ ಉಪಯೋಗಕ್ಕೆ ಪಡೆಯಲು ತಕ್ಕ ಕಾರ್ಯಕ್ರಮವನ್ನು ಇಟ್ಟುಕೊಳ್ಳುವುದವಶ್ಯ.

ದಿ ಕೆನರಾ ಮ್ಯೂಚುವಲ್
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ] [ಸ್ಥಾಪನೆ: ೧೯೩೫.

"ಕೆನರಾ ಮ್ಯೂಚುವಲ್" ಪರಸ್ಪರಾವಲಂಬಕವಾದ ಸಂಸ್ಥೆ.
ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ
ಬೋನಸು ಹಂಚಿ, ಪಾಲಿಸಿದಾರರ ನಂಬಿಕೆ ಪಡೆದಿದೆ.
ಈ ಕಂಪೆನಿಯಲ್ಲಿ ಇಂದೇ ವಿಮೆ ಇಳಿಸಿ,
ನಿಮ್ಮ ಕುಟುಂಬವನ್ನು ಭದ್ರವಾಗಿರಿಸಿರಿ.

The CANARA MUTUAL ASSURANCE CO., Ltd.,
Head Office: UDIPI, S. INDIA. ESTD: 1935

ರಾಮತೀರ್ಥ
ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ. ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ. ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

SP
ಸೇವನೆಯು ಆನಂದಕ್ಕೆ
ಅತ್ಯುತ್ತಮವಾದುದನ್ನೇ ಪಡೆಯಿರಿ
ಎಸ್. ಆರ್.
ತಾಜಾ ನಿಪ್ಪಾಣಿ ತಂಬಾಕಿನ
ಬೊಂಬಾಯಿ ಬೀಡಿ
ಇವುಗಳಿಂದ ತಯಾರಿಸಿದ
ಬೀಡಿಗಳಾಗಿರುತ್ತವೆ.
S.R. Beedi Works.

ಸುಲಭ ರೀತಿಯ ಉಪಕರಣಗಳ ಶೋಧ

ಗೃಹೋದ್ಯಮಗಳ ಅಭ್ಯುದಯಕ್ಕೆ ಹೆಚ್ಚು ಕಾರ್ಯಕ್ಷಮವುಳ್ಳ ಯಂತ್ರದ ಆವಿಷ್ಕಾರ ಅವಶ್ಯ

— ೧ —

ಮಹೋದ್ಯಮ ಮತ್ತು ಗೃಹೋದ್ಯಮಗಳ ನಡುವೆ ಸಂಘರ್ಷ ಎದ್ದುಕೊಂಡು ನಮ್ಮ ಔದ್ಯೋಗಿಕ ನೀತಿಯ ಮೇಲೆ ಪರಿಣಾಮಕಾರಿಯಾದ ಪ್ರಭಾವವನ್ನು ಬೀರುವ ಕಾಲ ಇದೀಗ ಸನ್ನಿಹಿತವಾಗಿದೆ. ಗೃಹೋದ್ಯಮವು ಸಣ್ಣಮಟ್ಟದಲ್ಲಿ ನಡೆಯುತ್ತಿದೆ. ಈ ಕಾರಣದಿಂದ ದೊಡ್ಡ ಪ್ರಮಾಣದಲ್ಲಿ ಕೆಲಸ ನಿರ್ವಹಿಸುತ್ತಿರುವ ಮಹೋದ್ಯಮವು ಅದನ್ನು ಸದೆಬಡಿಯುವುದು ನಿಶ್ಚಯವೆಂದು ಹೇಳುವವರು ಅನೇಕ. ಆದರೆ ಇದನ್ನು ನಾವು ಸಂಪೂರ್ಣವಾಗಿ ಒಪ್ಪಿಕೊಳ್ಳಲಿಕ್ಕೆ ಬರುವುದಿಲ್ಲ. ಹಾಗೆಯೇ ಮಹೋದ್ಯಮದಿಂದ ಗೃಹೋದ್ಯಮದ ಬೆಳವಣಿಗೆಗೆ ಆತಂಕ ಒದಗುವುದಿಲ್ಲೆಂಬುದನ್ನೂ ನಾವು ಹೇಳಲಾರೆವು. ಇವೆರಡರಲ್ಲಿ ಪ್ರತಿಯೊಂದಕ್ಕೂ ತನ್ನದೇ ಆದ ವೈಶಿಷ್ಟ್ಯವಿದೆ, ವ್ಯಾಪ್ತಿಯಿದೆ, ಕಾರ್ಯಕ್ಷೇತ್ರವಿದೆ; ಶಕ್ತಿಸಾಮರ್ಥ್ಯಗಳು ಇದ್ದಂತೆಯೇ ಇವೆರಡರಲ್ಲಿ ಕುಂದು ಕೊರತೆಗಳೂ ಇವೆ.

ದೊಡ್ಡ ಗಿರಣಿಯೊಂದು ತನ್ನ ಉತ್ಪಾದನಾ ಶಕ್ತಿಯ ಹೆಚ್ಚಳದಿಂದಾಗಿ ತಲೆ ಎತ್ತಿ ಬಾಳುತ್ತಿದೆ; ಅದರ ಸಾಮರ್ಥ್ಯವನ್ನು ಮುರಿಯುವುದು ಕೈಮಗ್ಗಗಳಿಂದ ಆಗದ ಕೆಲಸವೆಂದು ಇಟ್ಟುಕೊಳ್ಳಲಿಕ್ಕೆ ಅಡ್ಡಿಯಿಲ್ಲ. ರಾಜಗೋಪಾಲಾಚಾರಿಯಂಥ ಧುರೀಣರು ಗಿರಣಿಗಳ ಬಟ್ಟೆಯು ಕೈಮಗ್ಗಗಳ ಬಟ್ಟೆಗಿಂತ ಅಗ್ಗವಾಗಿ ದೊರೆಯುತ್ತಿರುವುದರಿಂದ ಕೈಮಗ್ಗಗಳ ಬಟ್ಟೆಗೆ ಗಿರಾಕಿ ತಗ್ಗಿದೆ ಎಂದೂ ಹೀಗಾಗಿ ನೇಕಾರರು ಬದುಕಿ ಉಳಿಯುವುದೇ ಕಷ್ಟಕ್ಕಿಟ್ಟುಕೊಂಡಿದೆಯೆಂದೂ ಘೋಷಿಸುವರು. ಇದಕ್ಕೆ ಪರಿಹಾರವಾಗಿ ಅವರು ಹೇಳುವ ಉಪಾಯವೆಂದರೆ ಗಿರಣಿಗಳ ಉತ್ಪಾದನಾ ಶಕ್ತಿಯ ಮೇಲೆ ನಿಯಂತ್ರಣವನ್ನು ಹೇರುವುದು. ಸೀರೆ, ಧೋತರಗಳನ್ನು ನೇಯುವ ಗುತ್ತಿಗೆಯನ್ನು ಕೈಮಗ್ಗಗಳಿಗೇ ಬಿಟ್ಟುಕೊಡಬೇಕೆಂದು ಅವರ ಹೇಳಿಕೆ. ಹೀಗೆ ಮಾಡಿದಲ್ಲಿ ಗಿರಣಿಗಳ ಉತ್ಪಾದನೆಯಲ್ಲಿ ಹ್ರಾಸವಾಗುತ್ತದೆ ಎನ್ನುವುದು ಖಂಡಿತ. ಇದರಿಂದ ದೇಶಕ್ಕೆ ಹಾನಿಯುಂಟಾಗುವುದು ನಿಜ. ಕೈಮಗ್ಗದ ಬಟ್ಟೆಗಳ ಬೆಲೆಯಾದರೂ ತಗ್ಗಿದರೆ ಕೊಂಚ ಮಟ್ಟಿಗೆ ಈ ಬೇಸರ ದೂರಾದೀತು. ಆದರೆ ಹಾಗೆ ಆಗುವುದೆಂಬ ಆಶ್ವಾಸನೆಯೂ ಇಲ್ಲ.

— ೨ —

ಮಹೋದ್ಯಮಗಳು ಗೃಹೋದ್ಯಮಗಳ ಮೇಲೆ ದುಷ್ಪ್ರಭಾವವನ್ನು ಬೀರುತ್ತಿವೆ ಎಂಬುದಕ್ಕೆ ಮೇಲಿನ ಸಂಗತಿ ಪುಷ್ಟಿ ಕೊಡುತ್ತಿದ್ದಂತೆಯೇ ಗೃಹೋದ್ಯಮಗಳಲ್ಲಿ ಕಂಡು ಬರುವ ಕೊರತೆ ಏನೆಂಬುದನ್ನೂ ಅದು ಸೂಚಿಸುತ್ತದೆ. ಕೈಮಗ್ಗದ ಬಟ್ಟೆಯ ಬೆಲೆ ಏರಿಕೆಯಲ್ಲಿಯೇ ಉಳಿಯಲು ಅದರ ಉತ್ಪಾದನಾಶಕ್ತಿ ಕಡಿಮೆ ಇರುವುದೇ ಕಾರಣ. ಕೈಮಗ್ಗಗಳ ಕಾರ್ಯಕ್ಷಮತೆ ಹೆಚ್ಚಿಕೊಂಡಲ್ಲಿ, ಉತ್ಪಾದನಾಸಾಮರ್ಥ್ಯವೂ ಏರಿ, ಬೆಲೆಯು ತಾನಾಗಿ ಇಳಿಯುತ್ತದೆ. ಗಿರಣಿಯಲ್ಲಿರುವ ಮಹಾಯಂತ್ರಗಳಷ್ಟೇ ಒಳ್ಳೆಯ ಮಟ್ಟಕ್ಕೆ ನಮ್ಮ ಕೈಮಗ್ಗ ಏರುವುದು ಅವಶ್ಯವಿಲ್ಲವಾದರೂ ಈಗಿರುವ ಪರಿಸ್ಥಿತಿಗಿಂತ ಸುಧಾರಣೆ ಹೊಂದುವ ಅಗತ್ಯ ಮಾತ್ರ ಬಹಳಷ್ಟಿದೆ.

ಗಾಂಧೀಜೀಯವರು ಭಾರತೀಯರ ಮುಂದೆ ಚರಖಾದ ಆದರ್ಶವನ್ನು ಇಟ್ಟರು; ಚರಖಾವನ್ನು ಪ್ರಚಾರ ಮಾಡಿದರು. ರಾಜಕೀಯ ಕಾರಣಗಳಿಂದಲೇ ಎನ್ನಬಹುದು. ಭಾವನಾತ್ಮಕವಾದ ವಾತಾವರಣದಲ್ಲಿ ಚರಖಾವು ಭಾರತದಲ್ಲಿ ನೆರೆಗೊಂಡಿತು. ಆದರೆ, ಇದರಿಂದ ಉತ್ತಮ ಪರಿಣಾಮವಾಯಿತೇ–ಎಂದರೆ, ಸಂಶಯದ ಮಾತನ್ನಾಡಬೇಕಾಗುತ್ತದೆ. ಚರಖಾದ ಉತ್ಪಾದನಾ ಶಕ್ತಿ ಕಡಿಮೆ ಇದ್ದುದನ್ನು ಸ್ವತಃ ಗಾಂಧೀಜಿಯೇ ಮನಗಂಡಿದ್ದರು. ಈ ಕಾರಣಕ್ಕಾಗಿಯೇ ಅವರು ಅನೇಕ ವರ್ಷಗಳಿಗೆ ಹಿಂದೆ ಒಮ್ಮೆ ಹೊಸರೀತಿಯ ಚರಖಾವೊಂದನ್ನು ಕಂಡು ಹಿಡಿದವರಿಗೆ ಒಂದು ಲಕ್ಷ ರೂಪಾಯಿಗಳ ಪಾರಿತೋಷಕ ಕೊಡುವುದಾಗಿ ಘೋಷಿಸಿದ್ದರು. ಈ ಚರಖಾವು ಹಳೆಯ (ಅಂದರೆ ಈಗಿನ) ಚರಾಖಾಕ್ಕಿಂತ ಹೆಚ್ಚು ಸುಧಾರಿಸಿದ್ದಾಗಿರಬೇಕು; ಅದರ ಕಾರ್ಯಕ್ಷಮತೆಯೂ ಹೆಚ್ಚಿರಬೇಕು. ಅದೇ ಕಾಲಕ್ಕೆ ಗಿರಣಿಯಲ್ಲಿರುವ ಯಂತ್ರದ ಮಾದರಿಯಲ್ಲಿ ಇರಬಾರದು. ಈ ಚರಖವನ್ನು ಉಪಯೋಗಿಸಿ ದುಡಿಯುವವನಿಗೆ ದಿನವೊಂದಕ್ಕೆ ಸಾಮಾನ್ಯ ಗಿರಣಿಯ ಕೂಲಿಕಾರನಿಗೆ ಸಿಗುವಷ್ಟು ಹಣ ದೊರೆಯುವಂತಾಗಬೇಕು. — ಹೀಗೆ ಗಾಂಧೀಜಿ ಆಶಿಸಿದ್ದರು.

— ೩ —

ಈ ದಿಸೆಯಲ್ಲಿ ಸಫಲ ಪ್ರಯತ್ನಗಳೇನೂ ನಡೆಯಲಿಲ್ಲ. ಆದರೂ ಗಾಂಧೀಜಿ ಸೂಚಿಸಿದಂತೆ ನಮ್ಮ ಗೃಹೋದ್ಯಮಗಳಲ್ಲಿ ಉಪಯೋಗಿಸಲ್ಪಡುವ ಯಾಂತ್ರಿಕ ಸಾಧನೆಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಂಡಲ್ಲಿ – ಗೃಹೋದ್ಯಮಗಳು ದೃಢವಾದ ನೆಲಗಟ್ಟಿನ ಮೇಲೆ ನಿಲ್ಲುವುದು ಸಾಧ್ಯ. ಮಾತ್ರವಲ್ಲ– ಮಹೋದ್ಯಮಗಳ ಮೇಲೆ ಗೃಹೋದ್ಯಮಗಳು ನಿಯಂತ್ರಣವನ್ನು ಹೇರಿದರೂ ಆಶ್ಚರ್ಯವಿಲ್ಲ. ಒಂದು ಉದಾಹರಣೆಯಿಂದ ಈ ಮಾತನ್ನು ಸ್ಪಷ್ಟೀಕರಿಸಬಹುದು–ಒಂದು ಸಣ್ಣ ಮುದ್ರಣಾಲಯದಲ್ಲಿನ ಬಿಲ್ಲು ಸ್ವಾಭಾವಿಕವಾಗಿಯೇ ಕಡಿಮೆ ಇರುತ್ತದೆ; ಅದೇ ದೊಡ್ಡ ಛಾಪಖಾನೆಗೆ ಈ ಕೆಲಸ ಒಪ್ಪಿಸಿದರೆ, ಅವರ ಬಿಲ್ಲಿನ ಮೊತ್ತವೂ ದೊಡ್ಡದಿರುತ್ತದೆ. ದೊಡ್ಡ ಕರ್ಮಶಾಲೆಗಳಲ್ಲಿ ಅವುಗಳ ಮೇಲ್ವಿಚಾರಣೆ, ಆಡಳಿತೆ ಕಾಯಿದೆ ಕಾನೂನುಗಳ ಆತಂಕ ಮುಂತಾದುವೆಲ್ಲ ಕಾರಣಗಳಿಂದ–ಖಾ[illegible] ಖರ್ಚು ಹೆಚ್ಚಾಗುತ್ತದೆ. ಯಂತ್ರಗಳ [illegible]ನಾ ಶಕ್ತಿಯನ್ನೂ, ಉತ್ಪಾದನಾ ವೆಚ್ಚವನ್ನೂ ತೂಗಿಸಿ ಕೊಂಡು ಹೋಗುವುದರಲ್ಲಿಯೇ ವ್ಯವಹಾರದ ಜಾಣ್ಮೆ ಅಡಗಿದೆ. ಸಣ್ಣ ಪ್ರೆಸ್ಸಿನಲ್ಲಿರುವ ಯಂತ್ರದ ಕಾರ್ಯಕ್ಷಮತೆಯು ದೊಡ್ಡ ಪ್ರೆಸ್ಸಿನಲ್ಲಿರುವ ಯಂತ್ರದಷ್ಟೇ ಇರುತ್ತದೆ; ಆದರೆ ಉತ್ಪಾದನಾ ವೆಚ್ಚ ಮಾತ್ರ ಕಡಿಮೆ ಇರುತ್ತದೆ ಈ ಕಾರಣದಿಂದ, ಅಲ್ಲಿಯ ಬಿಲ್ಲು ಕಡಿಮೆಯಾಯಿತು.

ಸಾರಾಂಶವೇನೆಂದರೆ–ಗೃಹೋದ್ಯಮಗಳನ್ನು ಭಾರತದ ಹಳ್ಳಿಹಳ್ಳಿಯಲ್ಲೂ ನಾವು ಪ್ರಚಾರಕ್ಕೆ ತರುವುದು ಅವಶ್ಯವಿದ್ದಂತೆ, ನಾವು ಬಳಸುವ ಯಂತ್ರಗಳ ಮಾದರಿಯನ್ನು ಸುಧಾರಿಸುವುದೂ ಅಷ್ಟೇ ಅಗತ್ಯ. ನೂರಾರು ವರ್ಷಗಳಿಂದ ಪ್ರಚಾರದಲ್ಲಿರುವ ಎತ್ತಿನಗಾಡಿಯಲ್ಲಿ ಏನೊಂದೂ ಬದಲಾವಣೆಯಾಗದಿದ್ದಲ್ಲಿ ಈಗಿನ ಮೋಟಾರುಕಾರುಲಾರಿಗಳೊಡನೆ ಸೆಣಸಾಡುವುದು ಅದಕ್ಕೆ ಕಷ್ಟವೇ. ಭೂಮಿಯನ್ನು ಉಳುವುದಕ್ಕೆ ಬಹಳ ಹಿಂದಿನಿಂದ ಉಪಯೋಗಿಸುತ್ತಾ ಬಂದಿರುವ ನೇಗಿಲಿನಲ್ಲಿ ಸ್ವಲ್ಪ ಮಟ್ಟಿನ ಅವಶ್ಯಕ ಪರಿವರ್ತನೆಯೂ ಆಗದಿದ್ದಲ್ಲಿ ಇಂದಿನ ಅಪರಿಮಿತ ಜನರ ಹೊಟ್ಟೆಗೆ ಎಲ್ಲಿಂದ ಹಿಟ್ಟು ದೊರಕಿಸಬಹುದು ಭೂಮಿಯನ್ನು ಆಳವಾಗಿ ಉತ್ತು, ಹೆಚ್ಚು ಉತ್ಪಾದನೆಯಾಗುವ ರೀತಿಯಲ್ಲಿ ನೇಗಿಲಿನ ರಚನೆಯನ್ನು ಸುಧಾರಿಸದಿದ್ದರೆ, ಹೇಗೆ? ಕಾಲ ಮೊದಲಿನಂತೆ ಈಗ ಉಳಿದಿಲ್ಲ. ಗಂಜಿಯುಂಡು, ನೀರು ಕುಡಿದು, ಗುಡಿಸಲಿನಲ್ಲಿ ನೆಲದ ಮೇಲೆ ಹಾಯಾಗಿ ಮಲಗುವ ಮನೋವೃತ್ತಿ ಈಗ ಇಲ್ಲ. ಮನುಷ್ಯ ಈಗ ಅಲ್ಪತೃಪ್ತನಾಗಿ ಉಳಿದಿಲ್ಲ. ಮೊದಲು ಐದಾರಾಣೆ ದೊರಕಿದರೆ ಯಥೇಷ್ಟವಾಯಿತೆಂದಿದ್ದಲ್ಲಿ– ಈಗ ಅವನ ಸುಖಜೀವನಕ್ಕೆ ದಿನವೊಂದಕ್ಕೆ ಐದಾರು ರೂಪಾಯಿಗಳೇ ಬೇಕಾದಾವು. ಹೀಗಿರುವುದರಿಂದ ಕೈಗೆ ಯಂತ್ರ ರಾಕ್ಷಸನನ್ನು ಕೊಟ್ಟೇ, ಮನುಷ್ಯನ ಸುಖಬಾಳ್ವೆಯ ಸ್ವಪ್ನವನ್ನು ನಿಜಗೊಳಿಸುವುದು ಹಿತವೆನಿಸಿದೆ. ಸುಖೋಪಭೋಗಗಳಿಗೆ ಬಲಿಯಾದ ಮನುಷ್ಯ ಆ ಯಂತ್ರದ ಒಂದು ಭಾಗವೇ ಆದಾನು! – ಆದರೆ ಉಪಾಯವಿಲ್ಲ. ಕಾಲನ ಕರೆಗೆ ಓಗೊಡಬೇಕಷ್ಟೆ!

ಅಮೃತಾಂಜನ

ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ಎದೆ ನೋವುಗಳಿಗೂ ಘಾಯಗಳು, ಬಾತುಕೊಳ್ಳುವುದು ಚೇಳುವಿಷಮುಂತಾದುವು, ಪಕ್ಷವಾತ. ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧಿ.

ಪುಳು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

REGD.

ಅಮೃತಾಂಜನ ಲಿಮಿಟೆಡ್

ಮದರಾಸು ಬೊಂಬಾಯಿ ಮತ್ತು ಕಲ್ಕತ

ZANDU

ಝಂಡೂ ಫಾರ್ಮಸಿಯ ಮನೆಮದ್ದುಗಳನ್ನೇ ಸದಾ ಉಪಯೋಗಿಸಿರಿ.

ಝಂಡೂ ಬ್ರಾಹ್ಮೀ ಹೇರ್ ಆಯಿಲ್:– ಮೆದುಳಿಗೆ ತಂಪು– ಮನಸ್ಸಿಗೆ ಉಲ್ಲಾಸನೀಯುವುದು. 1 ಪೌಂಡಿಗೆ ರೂ. 3–8–0 ಕಾಲು ರಾತ್ತಿಗೆ ರೂ. 1.

ಝಂಡೂ ಸರಸಪರಿಲ್ಲಾ:– ರಕ್ತವನ್ನು ಶುದ್ಧಗೊಳಿಸಲು ಹೆಸರುವಾಸಿಯಾದುದು. ಚರ್ಮರೋಗಗಳನ್ನು ಗುಣಪಡಿಸಬಲ್ಲುದು. 4 ಔನ್ಸ್ ಬಾಟ್ಲಿ 1 ರ ರೂ. 1–5–0

ಝಂಡೂ ಬಾಲಾಮೃತ:–ಅನಾರೋಗ್ಯವುಳ್ಳ ಮಕ್ಕಳಿಗೆ ಆದರ್ಶ ಟಾನಿಕ್- 4 ಔನ್ಸ್, ಬಾಟ್ಲಿ 1 ರ ರೂ. 1–2–0

ಝಂಡೂ ಬಾಮ್:–ತಲೆ ಸಿಡಿತ ಮೊದಲಾದ ಬೇನೆಗಳಿಗೆ 1 ಸೀಸೆಗೆ ರೂ 1.

ಝಂಡೂ ಫಾರ್ಮಸಿಯ ದ. ಕ. ಜಿಲ್ಲೆಯ ಎಲ್ಲಾ ಏಜಂಟರಲ್ಲೂ ದೊರೆಯುವುವು.

ಸವಿವರ ಕ್ಯಾಟಲಾಗಿಗೆ ಈ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ:–

DAMODER & CO.,

Nainiappa Naicken Street, MADRAS. 3

ದಯಮಾಡಿ ನಿಮ್ಮ ಚಂದಾ ಹಣವನ್ನು ಕಳುಹಿಸಿಕೊಡಿರಿ

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದಿನಾಲ್ಕು ಋತುಸ್ರಾವವಾಗದ [illegible]

MIS D. DEVEE, [illegible] (N. J.)

Tollygange CALCUTTA.

[illegible]

ಉಳಿಕೆ ತೋರಿಸುವ ನಡುಗಾಲದ ಬಜೆಟು

ಮದ್ರಾಸು ನಗರವನ್ನು ಆಂಧ್ರದ ತಾತ್ಪೂರ್ತಿಕ ರಾಜಧಾನಿಯನ್ನಾಗಿಸುವ ಬಗ್ಗೆ ತೀವ್ರ ಭಿನ್ನಾಭಿಪ್ರಾಯ

ಗವರ್ನರರ ಅಭಿನಂದನೆ

ಮದ್ರಾಸಿನ ಎರಡೂ ಶಾಸನ ಸಭೆಗಳಲ್ಲಿ ಗವರ್ನರರ ಭಾಷಣದ ಕುರಿತು ಉಪಕಾರವನ್ನು ಸೂಚಿಸುವ ಠರಾವುಗಳು ಮಂಡಿಸಲ್ಪಟ್ಟಾಗ, ರಾಜ್ಯದ ಪ್ರಕೃತ ಪರಿಸ್ಥಿತಿಯ ವಿಸ್ತೃತವಾದ ಪರಿಶೀಲನೆಯನ್ನು ಸಾಮಾನ್ಯವಾಗಿ ಎಲ್ಲ ಭಾಷಣಕಾರರೂ ಮಾಡಿತೋರಿಸಿದರು. ಶಾಸನ ಸಭೆಯಲ್ಲಿ ಉಡುಪಿಯ ಶ್ರೀ ಟಿ. ಎ. ಪೈಗಳು ಗವರ್ನರರ ಭಾಷಣದ ಬಗ್ಗೆ ಅವರನ್ನು ಅಭಿನಂದಿಸುವ ಗೊತ್ತುವಳಿಯನ್ನು ಮಂಡಿಸಿದರು. ರಾಜಾಜಿಯವರು ಮಂತ್ರಿಮಂಡಳವು ಅಧಿಕಾರವನ್ನು ವಹಿಸಿದ ಎಂಟು ತಿಂಗಳುಗಳಲ್ಲಿ ವಿರೋಧಿ ಗುಂಪಿನ ಅನೇಕ ಸದಸ್ಯರು ಸರಕಾರದೊಡನೆ ಸಹಮತರಾಗುವಂತೆ ದಕ್ಷತೆಯನ್ನು ತೋರಿಸಿದೆ ಎಂದು ಶ್ರೀ ಪೈಗಳು ಸರಕಾರವನ್ನು ಪ್ರಶಂಸಿಸಿದರು. ಮದ್ರಾಸು ರಾಜ್ಯವು ಇಬ್ಭಾಗವಾಗಿ ಒಡೆದು ಹೋಗಲಿರುವುದರಿಂದ ಈಗ ಎಲ್ಲರ ಮನಸ್ಸು ಉದ್ವೇಗಕ್ಕೆ ಒಳಗಾಗಿದೆ. ತೆಲುಗ ಬಂಧುಗಳನ್ನು ಪ್ರತ್ಯೇಕ ರಾಜ್ಯಕ್ಕೆ ಒಯ್ಯುವ ಈ ಸಂಕ್ರಾಂತಿಕಾಲದಲ್ಲಿ ನಾವು ಅತ್ಯಂತ ಸಹನೆಯಿಂದ ವರ್ತಿಸುವುದವಶ್ಯ ಎಂದು ಶ್ರೀ ಪೈಗಳು ಹಿತನುಡಿದರು. ಆನುಷಂಗಿಕವಾಗಿ ಪೈಗಳು ಬಿರುಗಾಳಿ ಮತ್ತು ಬರಗಾಲದ ಅನಾಹುತಗಳ ಸಂಗತಿಯನ್ನೆತ್ತಿಕೊಂಡು ಸರಕಾರವು ಕಾರ್ಯಕ್ಷಮ ರೀತಿಯಲ್ಲಿ ನಿಸರ್ಗದ ಕೋಪದೊಡನೆ ಹೋರಾಡಿದೆ ಎಂದರು. ದಕ್ಷಿಣ ಕನ್ನಡ ಜಿಲ್ಲೆಯಿಂದ ಮಲಬಾರಿಗೆ ಅಕ್ಕಿಯ ಕಳ್ಳ ಸಾಗಾಟ ನಡೆಯುತ್ತಿರುವುದರ ಕಡೆಗೆ ಸರಕಾರದ ಲಕ್ಷ್ಯವನ್ನು ಸೆಳೆದು ತಕ್ಕ ಪ್ರತಿಬಂಧಕೋಪಾಯವನ್ನು ಕೈಕೊಳ್ಳುವ ಅಗತ್ಯವನ್ನು ವಿಶದೀಕರಿಸಿದರು. ಸಣ್ಣ ಸಣ್ಣ ಬಂದರುಗಳ ಅಭಿವೃದ್ಧಿಯ ಕುರಿತು ಸರಕಾರವು ಹೆಚ್ಚು ನಿಗಾ ಕೊಡಲು ನೋಡಬೇಕೆಂದು ಕೇಳಿಕೊಂಡರು. ವಿದ್ಯಾ ಕ್ಷೇತ್ರದಲ್ಲೂ ವೈದ್ಯಕೀಯ ರಂಗದಲ್ಲೂ ಖಾಸಗಿ ಪ್ರಯತ್ನಗಳಿಗೆ ಸರಕಾರ ಕೈಲಾದಷ್ಟು ಪ್ರೋತ್ಸಾಹ ಕೊಟ್ಟು ನೆರವಾಗಲೆಂದು ಹಾರೈಸಿದರು.

ಮದ್ರಾಸು ನಗರದ ಹಕ್ಕು

ಉಳಿದ ಸದಸ್ಯರಲ್ಲಿ ಹೆಚ್ಚಿನವರು ಇನ್ನೂ ಅಸ್ತಿತ್ವಕ್ಕೆ ಬರಲಿರುವ ಆಂಧ್ರ ರಾಜ್ಯದ ಪ್ರಶ್ನೆಯನ್ನು ತಮ್ಮ ಚರ್ಚೆಯ ವಿಷಯವಾಗಿ ಮಾಡಿಕೊಂಡರು. ಮದ್ರಾಸು ರಾಜ್ಯದಲ್ಲಿ ಆಂಧ್ರದ ರಾಜಧಾನಿಯು ತಾತ್ಪೂರ್ತಿಕವಾಗಿ ಇದ್ದರೆ ಅದರಿಂದ ಯಾರಿಗೂ ಕೆಡುಕಿಲ್ಲವೆಂಬುದಾಗಿ ತೆಲುಗ ಸದಸ್ಯರು ಬಲವಾಗಿ ಪ್ರತಿಪಾದಿಸುತ್ತಿದ್ದರು. ಇದನ್ನು ಅಷ್ಟೇ ಉಗ್ರರೀತಿಯಿಂದ ತಮಿಳರು ಪ್ರತಿಭಟಿಸುತ್ತಿದ್ದರು. ಮದ್ರಾಸು ನಗರದಲ್ಲಿ ಎರಡೂ ರಾಜ್ಯಗಳ ರಾಜಧಾನಿಯು ಉಳಿದರೆ ನಿತ್ಯ ಮನಸ್ತಾಪವು ತಪ್ಪಿದ್ದಲ್ಲ ಹೊಸತಾಗಿ ರಾಜ್ಯ ನಿರ್ಮಾಣ ಕಾರ್ಯ ನಡೆಯುವಾಗ ರಾಜಧಾನಿಯೂ ಹೊಸತಾಗಿ ಏರ್ಪಡಲಿ. ಹೀಗೆ ಹೊಸ ರಾಜಧಾನಿಯನ್ನು ನಿರ್ಮಿಸುವುದೇನು ದೊಡ್ಡ ಸಮಸ್ಯೆಯಾಗಲಿಕ್ಕಿಲ್ಲ ಎಂದು ತಮಿಳು ಸದಸ್ಯರು ತಮ್ಮ ನಿಲುಮೆಯನ್ನು ಸಮರ್ಥಿಸಿಕೊಂಡರು. ತಮಿಳರ ಈ ಅಭಿಪ್ರಾಯಕ್ಕೆ ಮುಖ್ಯ ಮಂತ್ರಿ ರಾಜಗೋಪಾಲಾಚಾರಿಯವರು ನೂರಕ್ಕೆ ನೂರರಷ್ಟು ಬೆಂಬಲ ಕೊಟ್ಟಿರುವರು. ಆಂಧ್ರ ಪ್ರಾಂತದ ರಾಜಧಾನಿಯನ್ನು ನೆಲೆಗೊಳಿಸುವ ತಮ್ಮ ಇಚ್ಛೆಯನ್ನು ದೂರೀಕರಿಸಬೇಕೆಂದು ಅವರು ಬಹು ವಿಧವಾಗಿ ಕೇಳಿಕೊಂಡಿರುವರು. ಓರ್ವ ತೆಲುಗ ಸದಸ್ಯರಂತೂ ಮದ್ರಾಸಿನಲ್ಲಿ ಎರಡೂ ರಾಜ್ಯಗಳ ರಾಜಧಾನಿಗಳು ಇರಬಲ್ಲುವೆಂಬುದನ್ನು ಮುಖ್ಯ ಮಂತ್ರಿ ರಾಜಗೋಪಾಲಾಚಾರಿಯವರಿಗೆ ಮನಗಾಣಿಸುವುದಕ್ಕೆ ಎಂಬಂತೆ ನೇರವಾದ ಒಂದು ಪ್ರಶ್ನೆಯನ್ನೆ ಹಾಕಿದರು: ಮಹಾ ಭಾರತದಲ್ಲಿ ದ್ರೌಪದಿಯೊಬ್ಬಳೇ ಪಂಚಪಾಂಡವರ ಮಡದಿಯಾಗಿದ್ದಳು. ಹೀಗಿರುವಾಗ ಮದ್ರಾಸು ನಗರ ಎರಡು ರಾಜ್ಯಗಳಿಗೆ ರಾಜಧಾನಿಯಾಗಲಾರದೋ ಎಂದವರು ಮಹಾ ಭಾರತದಲ್ಲಿ ಅಪಾರ ಶ್ರದ್ಧೆಯುಳ್ಳ ರಾಜಗೋಪಾಲಾಚಾರಿಯವರಿಗೆ ಸವಾಲು ಹಾಕಿದರು. "ಅದು ಎಲ್ಲರೂ ಧರ್ಮದಿಂದ ನಡೆಯುತಿದ್ದ ಕಾಲ ಇಂದು ಯಾರೂ ಹಾಗೆ ನಡೆದುಕೊಳ್ಳುತ್ತಿಲ್ಲ" ಎಂಬ ಉತ್ತರ ಒಡನೆಯೇ ಬಂತು.

ನಿರ್ಣಯ ನೆಹರೂರಿಗೆ ಸೇರಿದೆ

ತಮಿಳರ ವಾದದಲ್ಲಿ ಹಾಗೂ ರಾಜಗೋಪಾಲಾಚಾರಿಯವರ ನಿಲುಮೆಯಲ್ಲಿ ಸತ್ಯವಿದೆ. ನೂತನ ರಾಜ್ಯದೊಡನೆ ಹೊಸ ರಾಜಧಾನಿ ತಲೆ ಎತ್ತುವುದೂ ಆಂಧ್ರದ ಹಿತದೃಷ್ಟಿಯಿಂದ ಒಳ್ಳೆಯದೇ. ವಾಂಚೂರ ವರದಿಯಲ್ಲಾದರೂ ಮದ್ರಾಸಿನಲ್ಲಿ ತಾತ್ಪೂರ್ತಿಕ ರಾಜಧಾನಿಯನ್ನು ಸ್ಥಾಪಿಸಬೇಕೆಂಬಷ್ಟೆ ಕೇಳಿರುವುದಾಗಿ ವರದಿ ಯಾಗಿದೆ. ಇದರ ಮೇಲಿಂದ ಆಂಧ್ರ ರಾಜ್ಯಕ್ಕೆ ಹೊಸತೊಂದು ರಾಜಧಾನಿಯನ್ನು ನಿರ್ಮಿಸುವ ಅಗತ್ಯವಿದೆ ಎಂದೇ ಸ್ಪಷ್ಟವಾಗುತ್ತದೆ. ಹೀಗಿದ್ದ ಪಕ್ಷದಲ್ಲಿ ತೆಲುಗು ಬಂಧುಗಳು ಅನಾವಶ್ಯಕವಾದ ಕ್ಷೋಭೆಗೆ ಕಾರಣವೆನಿಸುವ ಮದ್ರಾಸು ನಗರದ ಹಂಬಲವನ್ನು ಬಿಟ್ಟುಬಿಡುವುದೇ ವಿಹಿತವೆಂದು ಸಾಮಾನ್ಯ ಜನರಿಗೆ ಸ್ವಾಭಾವಿಕವಾಗಿ ಹೊಳೆಯುತ್ತದೆ. ಕಾಂಗ್ರೆಸ ಕಾರ್ಯಕಾರಿಣಿಯು ಹೊಸ ದಿಲ್ಲಿಯಲ್ಲಿ ಕಳೆದ ವಾರದ ಆದಿಯಲ್ಲಿ ಸೇರಿದಾಗ ರಾಜಗೋಪಾಲಾಚಾರಿ ಹಾಗು ಕಾಮರಾಜ ನಾಡರರು ಮದ್ರಾಸಿನಲ್ಲಿ ಆಂಧ್ರದ ತಾತ್ಪೂರ್ತಿಕ ರಾಜಧಾನಿಗೂ ಅವಕಾಶವಿರಕೂಡದೆಂದು ಬಲವಾಗಿ ವಾದಿಸಿದರೆಂದು ತಿಳಿಯುತ್ತದೆ. ಆಂಧ್ರ ಕಾಂಗ್ರೆಸ್ಸಿನ ಅಧ್ಯಕ್ಷ ಸಂಜೀವ ರೆಡ್ಡಿಯವರು ಈ ಮಾತನ್ನು ಅಷ್ಟೇ ಉಗ್ರ ರೀತಿಯಿಂದ ಖಂಡಿಸಿದ್ದರೂ–ನಿರೀಕ್ಷಕರ ಅಭಿಪ್ರಾಯದಂತೆ, ಆಂಧ್ರದ ರಾಜಧಾನಿಗಾಗಿ ಯಾವುದಾದರೂ ಬೇರೊಂದು ನಗರವನ್ನು ಹುಡುಕಿ ಇಡುವುದರಲ್ಲಿಯೇ ಹಿತವಿದೆ. ಮದ್ರಾಸಿನ ಶಾಸನ ಸಭೆಯಲ್ಲಿ ಮಾತನಾಡುವಾಗ ರಾಜಗೋಪಾಲಾಚಾರಿಯವರು ಕೇಂದ್ರ ಸರಕಾರವು ನಿಧಾನವಾಗಿ ತನ್ನ ಅಭಿಪ್ರಾಯದ ಕಡೆಗೆ ವಾಲುತ್ತಿರುವುದಾಗಿ ಹೇಳಿರುವರು. ಇದನ್ನು ನೋಡಿದರೆ–ಪರಸ್ಪರ ವಿರುದ್ಧವಾದ ಅಭಿಪ್ರಾಯವನ್ನು ಕೇಳಿದ ನೆಹರೂರವರೇ ತಮ್ಮ ವಿವೇಕಕ್ಕೆ ಒಪ್ಪುವಂತೆ ಸ್ವಯಂ ನಿರ್ಣಯವನ್ನು ಕೈಗೊಳ್ಳುವುದು ನಿಶ್ಚಯ. ರಾಜಗೋಪಾಲಾಚಾರಿಯವರಲ್ಲಿ ನೆಹರೂರಿಗೆ ವೈಯಕ್ತಿಕವಾಗಿ ಶ್ರದ್ಧೆ–ವಿಶ್ವಾಸಗಳು ಇವೆ ಎಂಬುದರಿಂದ–ಮದ್ರಾಸು ಆಂಧ್ರದ ರಾಜಧಾನಿಯಾಗಲಾರದೆಂದು ಸ್ಪಷ್ಟವಾಗಿ ಹೇಳಬಹುದು.

ಬಳ್ಳಾರಿ ಆಂಧ್ರಕ್ಕಿಲ್ಲ

ಇದರಲ್ಲಿ ಕನ್ನಡಿಗರಿಗೆ ಸಂಬಂಧಿಸಿದ ಅಂಶವೆಂದರೆ ಬಳ್ಳಾರಿ ಜಿಲ್ಲೆಯ ಭವಿತವ್ಯ. ಆಂಧ್ರ ರಾಜ್ಯದಲ್ಲಿ ಇಡೀ ಬಳ್ಳಾರಿ ಜಿಲ್ಲೆಯನ್ನು ತಾತ್ಪೂರ್ತಿಕವಾಗಿ ಸೇರಿಸಬೇಕೆಂದು ವಾಂಚೂರವರು ವರದಿಮಾಡಿರುವರೆಂದು ಹೇಳಲಾದಾಕ್ಷಣದಿಂದ ಕನ್ನಡಿಗರು ಇದಕ್ಕೆ ತಮ್ಮ ಬಲವಾದ ವಿರೋಧವನ್ನು ಸೂಚಿಸುತ್ತಾ ಬಂದಿರುವರು. ಬಳ್ಳಾರಿ ಜಿಲ್ಲೆಯಲ್ಲಿ ಏಳು ತಾಲೂಕುಗಳು ನಿರ್ವಿವಾದವಾಗಿ ಕರ್ನಾಟಕಕ್ಕೆ ಸೇರಿ ವುಗಳು. ಇನ್ನುಳಿದ ಮೂರು ತಾಲೂಕಗಳ ಸಂಗತಿಯಲ್ಲಾದರೂ ಕೊನೆಯ ನಿರ್ಣಯವನ್ನು ಗಡಿಸಮಿತಿಯನ್ನು ನೇಮಿಸಿಯೂ ಜನತೆಯ ಅಭಿಪ್ರಾಯವನ್ನು ತಿಳಿದೂ ಮಾಡುವ ಅಗತ್ಯವಿದೆ. ಹೀಗೆ ಕ್ರಮಪ್ರಾಪ್ತವಾದ ಹೆಜ್ಜೆಯಿಡುವುದರ ಬದಲು ಇಡೀ ಬಳ್ಳಾರಿ ಜಿಲ್ಲೆಯನ್ನೆ ಆಂಧ್ರದೊಡನೆ ಸೇರಿಸಬೇಕೆನ್ನುವುದು ದಾಷ್ಟ್ಯವೇ ಸೈ. ಈ ಕಾರಣದಿಂದಲೇ ಬಳ್ಳಾರಿ ಜಿಲ್ಲೆಯು ಮದ್ರಾಸಿನಲ್ಲಿ ಉಳಿಯಬೇಕು ಒಂದು ವೇಳೆ ಅದು ಸಾಧ್ಯವಿಲ್ಲವಾದರೆ ನೆರೆಯ ಮೈಸೂರಿನೊಡನೆ ಸೇರ್ಪಡೆ ಹೊಂದಬೇಕು ಎಂದು ಮುಂತಾದ ಹೊಣೆಗಾರ ಧುರೀಣರು ನೂರಾರು ಮನವಿಗಳನ್ನು ಸಲ್ಲಿಸಿರುವರು. ಬಳ್ಳಾರಿಯ ಸುಬ್ರಹ್ಮಣ್ಯಮರು ರಾಜಗೋಪಾಲಾಚಾರಿಯವರ ಕಿವಿಗೆ ಕನ್ನಡಿಗರ ಕೂಗನ್ನು ಮುಟ್ಟಿಸಿದರೆಂದೂ, ಕಾಂಗ್ರೆಸ ಕಾರ್ಯಕಾರಿಣಿಯಲ್ಲಿ ರಾಜಗೋಪಾಲಾಚಾರಿಯವರು ಈ ಪ್ರಸಂಗವನ್ನು ಎತ್ತಿದುದರ ಪರಿಣಾಮವಾಗಿ ಬಳ್ಳಾರಿ ಜಿಲ್ಲೆಯನ್ನು ಆಂಧ್ರಕ್ಕೆ ಸೇರಿಸಬಾರದೆಂಬ ನಿರ್ಣಯಕ್ಕೆ ಬರಲಾಗಿದೆಯೆಂದೂ ಕೇಳುತ್ತೇವೆ. ಮದ್ರಾಸಿನ ಮುಂಗಡಪತ್ರದಲ್ಲಿ ಬಳ್ಳಾರಿ ಜಿಲ್ಲೆಯನ್ನು ಆಂಧ್ರದ ಲೆಕ್ಕಕ್ಕೆ ಹಿಡಿಯದೆ ಮದ್ರಾಸಿನೊಡನೆಯೇ ಉಳಿಸಿಕೊಂಡುದನ್ನು ನೋಡುವಾಗ ಬಳ್ಳಾರಿಯ ಕನ್ನಡಿಗರ ಚಳುವಳಿ ಫಲಿಸಿತೆಂಬ ಅಭಿಪ್ರಾಯ ದೃಢಗೊಳ್ಳುತ್ತದೆ.

ಮದ್ರಾಸಿನ ಮುಂಗಡ ಪತ್ರ

ಹಣಕಾಸಿನ ಸಚಿವರಾದ ಶ್ರೀ ಸುಬ್ರಹ್ಮಣ್ಯಮರು ಮದ್ರಾಸು ಶಾಸನಸಭೆಯಲ್ಲಿ ಮಂಡಿಸಿರುವ ನಡುಗಾಲದ ಬಜೆಟು ಇಪ್ಪತ್ತು ಸಾವಿರ ರುಪಾಯಿಗಳ ನಾಮ ಮಾತ್ರ ಉಳಿತಾಯವನ್ನು ತೋರಿಸುತ್ತದೆ. ೧೯೫೪-೫೫ನೇ ವರ್ಷದಲ್ಲಿ ಆದಾಯವು ೬೫೭೪.೭೧ ಲಕ್ಷ ರುಪಾಯಿಗಳೆಂದೂ ವೆಚ್ಚವು ೬೫೭೪.೫೧ ಲಕ್ಷ ರುಪಾಯಿಗಳೆಂದೂ ಲೆಕ್ಕಕ್ಕೆ ಹಿಡಿದಿರುವರು. ಸರಕಾರದವರು ಹೊಗೆಸೊಪ್ಪಿನ ಮೇಲೆ ಮಾರಾಟಕರವನ್ನು ಹೊರಿಸುವ ಇಚ್ಛೆಯುಳ್ಳವರಾಗಿರುವರೆಂದು ಅರ್ಥಿಕ ಮಂತ್ರಿಗಳು ಹೇಳಿರುವರು. ಕೇಂದ್ರ ಸರಕಾರವು ಇಷ್ಟರವರೆಗೆ ಈ ಸಂಬಂಧದಲ್ಲಿ ಕೊಡುತಿದ್ದ ಪರಿಹಾರ ಧನವನ್ನು ನಿಲ್ಲಿಸಿರುವುದರಿಂದ ಮದ್ರಾಸು ಸರಕಾರ ತೆರಿಗೆಯನ್ನು ಹೇರಿಸುವ ನಿಶ್ಚಯಕ್ಕೆ ಬಂದಿದೆ. ಇದನ್ನು ಈ ಮೊದಲೇ ಊಹಿಸಿದ್ದೆವು. ಬಜೆಟಿನಲ್ಲಿ ಸೂಚಿಸಲ್ಪಟ್ಟಿರುವ ಆದಾಯದ ಹೊಸ ಮಾರ್ಗವೆಂದರೆ ಕೋರ್ಟು ದರಗಳನ್ನು ಸುಮಾರು ೫೦ ಲಕ್ಷ ರೂಪಾಯಿಗಳ ವರಮಾನ ಬರುವ ರೀತಿಯಲ್ಲಿ ಪುನರ್ವಿಮರ್ಶಿಸುವುದಾಗಿದೆ. ಇದಕ್ಕೆ ಅವಕಾಶ ಮಾಡಿಕೊಡುವ ತಿದ್ದುಪಡಿ ಮಸೂದೆಯು ಬೇಗನೆ ಶಾಸನಸಭೆಯಲ್ಲಿ ಮಂ

ಏಳು ವರುಷಗಳಲ್ಲಿ ಫಲ

ನಮ್ಮ ಠೇವಣಿ ಮುಡಿಪುದಾರರಲ್ಲಿ ದಿನವಿಡಿ ಕೆಲಸ ಮಾಡುವ ಶ್ರಮಜೀವಿಗಳು, ಅಂಗಡಿಗಾರರು, ವಕೀಲರು, ಡಾಕ್ಟರರು, ಎಂಜಿನಿಯರರು, ವ್ಯಾಪಾರಗಾರರು, ವರ್ಗದಾರರು ಇತ್ಯಾದಿ ತರಗತಿಯವರಿರುವರು. ಅವರ ಠೇವಣಿ ಮುಡಿಪುಗಳು ಚಿಕ್ಕ ಪುಟ್ಟ ಠೇವಣಾತಿಗಳಿಂದ ಪ್ರಾರಂಭವಾದುವು ಅಂದು ಇಲಿಯಂತಿದ್ದುವು ಇಂದು ಹುಲಿಯಂತಾಗಿವೆ. ಅಂತಹ ವಿವೇಕವುಳ್ಳ ದೂರ ದರ್ಶಿ ಸಂಪನ್ನ ಠೇವಣಾತಿದಾರರ ಕೂಟಕ್ಕೆ ನೀವೂ ಕೂಡಾ ಸೇರಿ ಭಾಗ್ಯವಂತರಾಗಬೇಕಾಗಿ ಆಹ್ವಾನಿಸುತ್ತೇವೆ.

ಆಧಾರ ವಹಿವಾಟು ರೂ 5,00,00,000ಕ್ಕೂ ಮಿಕ್ಕಿದೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925 ಹೆಡ್ ಆಫೀಸು: ಉಡುಪಿ

THE CANARA INDUSTRIAL & BANKING SYNDICATE LIMITED

ESTD: 1925 H. O: UDIPI

ಕೊರತೆ ಧನ ವಿನಿಯೋಗವು ಕೇಡು ತಾರದು

ಬಂಡವಳದ ಪೂರೈಕೆಯನ್ನು ಹೆಚ್ಚಿಸಿ ಉದ್ದಿಮೆಗಳನ್ನು ಯಥೇಷ್ಟ ಬೆಳೆಸುವುದೇ ನಿರುದ್ಯೋಗ ಸಮಸ್ಯೆಗೆ ಮದ್ದು

ಪಲ್ಪಡುವುದು ಆಂಧ್ರರಾಜ್ಯವು ಬೇಗನೆ,
ಂದರೆ; ಇನ್ನು ಆರು ತಿಂಗಳುಗಳಲ್ಲಿ ಅಸ್ತಿ
ತ್ವಕ್ಕೆ ಬಂದೇ ಬರುವುದು. ಆದುದರಿಂದ
ಥಮದ ಆರು ತಿಂಗಳುಗಳ ಮಟ್ಟಿಗೆ
ಗಾತ್ರ ವೆಚ್ಚಕ್ಕೆ ಹಣವನ್ನು ಕೇಳಲು ಸರ
ಕಾರ ನಿಶ್ಚಯಿಸಿದೆ. ಹೊಸ ರಾಜ್ಯವು
ಹುಟ್ಟಿಕೊಂಡ ಬಳಿಕ-ಎರಡೂ ರಾಜ್ಯಗಳು
ತಮ್ಮ ಮುಂಗಡಪತ್ರವನ್ನು ಪರಿಶೀಲಿಸು
ವ ಅಗತ್ಯವಿದೆ. ಆಂಧ್ರರಾಜ್ಯಕ್ಕೆ ಸಂಬಂ
ಧಿಸಿದ ಜಿಲ್ಲೆಗಳ ಪ್ರತ್ಯೇಕ ಲೆಕ್ಕವನ್ನು ಈ
ಬಜೆಟಿನಲ್ಲಿ ಕಾಣಿಸಿದ್ದು, ಇದರನ್ವಯ
ಆಂಧ್ರದ ಆದಾಯ ೨೦೭೭ ಲಕ್ಷ ರೂಪಾ
ಯಿ, ವೆಚ್ಚ ೨೨೮೦ ಲಕ್ಷ ರೂಪಾಯಿ ಅ
ರ್ಥಾತ್ ೨೦೩ ಲಕ್ಷ ರೂಪಾಯಿಗಳ ಕೊ
ರತೆಯ. ಪ್ರದೇಶವಾಗಿ ಆಂಧ್ರವು ಉಳಿ
ಯುತ್ತದೆ. ಈಗಾಗಲೇ ಕೈಗೊಂಡಿರುವ
ಯೋಜನೆಗಳ ಮುಂದಿನ ಮೆಟ್ಟಿಲಾಗಿರು
ವ ಕೆಲವೇ ಯೋಜನೆಗಳನ್ನು ಬಿಟ್ಟರೆ
ಬೇರಾವುದೇ ಹೊಸ ಯೋಜನೆಗಳನ್ನು
ಸರಕಾರ ಪ್ರಕೃತ ಇಟ್ಟುಕೊಂಡಿಲ್ಲ. ಹೊ
ಸ ಯೋಜನೆಗಳಿಗಾಗಿ ಅತ್ಯಲ್ಪ, ಎಂದರೆ
೫ ಲಕ್ಷ ರೂಪಾಯಿಗಳನ್ನು ತೆಗೆದಿಟ್ಟರು
ವರು. ತುಂಗಾಭದ್ರಾ ಹಾಗು ಕೆಳಭವಾ
ನಿ ಸಾಗರದ ಅಣೆಕಟ್ಟು ಮುಂತಾದ ಕಾ
ಮಗಾರಿಗಳು ಈಗ ಮುಗಿಯುವ ಮಟ್ಟ
ದಲ್ಲಿರುವುದರಿಂದ, ಕೇಂದ್ರ ಸರಕಾರದ ನೆ
ರವು ಪಡೆದು, ಅವನ್ನು ಬೇಗನೆ ಕೊನೆಗಾ
ಣಿಸಲಾಗುವುದು.

ಸಾಧಾರಣವಾದ ಕಳವಳ

ಲೋಕಸಭೆಯಲ್ಲಿ ಹಣಕಾಸಿನ ಸಚಿ
ವರು ಬಜೆಟಿನ ಮೇಲೆ ನಡೆದ ಸುದೀರ್ಘ
ಚರ್ಚೆಯ ಕಾಲಕ್ಕೆ ಸದಸ್ಯರು ಎತ್ತಿದ ಆ
ಕ್ಷೇಪಗಳಿಗೆ ಸಮರ್ಪಕವಾದ ಉತ್ತರವ
ನ್ನು ಕೊಡಲು ಪ್ರಯತ್ನಿಸಿದರು. ಸದಸ್ಯ
ರಲ್ಲಿ ಅನೇಕರು ಪಾಕಿಸ್ತಾನದಿಂದ
ಬರಬೇಕಾಗಿರುವ ೧೮ ಕೋಟಿ ರುಪಾಯಿ
ಗಳು ಇನ್ನೂ ವಸೂಲಾಗದಿರುವುದರ ಕು
ರಿತು ವಿಪಂಚನೆಯನ್ನು ವ್ಯಕ್ತಗೊಳಿಸಿದ
ರು. ಭಾರತ-ಪಾಕಿಸ್ತಾನಗಳು ವಿಭಜನೆ
ಗೊಂಡುವಾಗ ಆದ ಒಡಂಬಡಿಕೆಯಂತೆ
ವಿಭಾಜ್ಯ ಭಾರತದ ಸಾಲದಲ್ಲಿ ಸ್ವಲ್ಪಾಂ
ಶವನ್ನು ಪಾಕಿಸ್ತಾನವೂ ಹೊರಬೇಕಾಗಿ
ದ್ದು, ಇದನ್ನು ೧೯೫೨ನೇ ವರ್ಷದಿಂದ
೦ ಕಂತುಗಳಲ್ಲಿ ಪಾವತಿ ಮಾಡಬೇಕಾ
ದೆ. ಕಳೆದ ವರ್ಷ ಪಾಕಿಸ್ತಾನದ ಅರ್ಥ
ಸಚಿವರು ಮುಂಗಡ ಪತ್ರದಲ್ಲಿ ಭಾರತಕ್ಕೆ
ಕೊಡಬೇಕಾದ ಹಣವೆಂದು ೫ ಕೋಟಿ
ರೂಪಾಯಿಗಳನ್ನು ತೆಗೆದಿಟ್ಟರೂ-ಭಾರತ
ದಿಂದ ಪಾಕಿಸ್ತಾನಕ್ಕೆ ಸಲ್ಲಲಿರುವ ಹಣ
೧೦೦ ಕೋಟಿಗೂ ಹೆಚ್ಚಿದೆ ಎಂದು
ಹಿಡಿದಿದ್ದರು. ಇದು ರಿಜರ್ವ ಬೇಂಕಿನ
ಹವಾಟು, ಆಸ್ತಿಪಾಸ್ತಿಗಳು ಮುಂತಾ
ದವಕ್ಕೆ ಸಂಬಂಧಿಸಿದ. ದೇಶಮುಖರು
ತಮ್ಮ ಉತ್ತರದಲ್ಲಿ ಇದನ್ನು ಪ್ರಸ್ತಾಪಿಸಿ
ದ್ದು ಕೊನೆಯ ನಿರ್ಣಯವನ್ನು ಈ ವಿ
ಷಯಗಳಲ್ಲಿ ಕೈಗೊಳ್ಳುವ ಹಾಗಿಲ್ಲವೆಂ
ದು. ಇದು ಏನಿದ್ದರೂ-ಭಾರತಕ್ಕೆ ಪಾಕಿ
ಸ್ತಾನವು ಕೊಡಲಿರುವ ಹಣವು ಸಕಾಲ
ದಲ್ಲಿ ಪಾವತಿಯಾಗದಿದ್ದರೆ, ಹೆಸರಿಗಷ್ಟೆ
ಉಳಿತಾಯವನ್ನು ತೋರಿಸಿರುವ
ದೇಶಮುಖರ ಬಜೆಟು, ಅನಪೇಕ್ಷಿತವಾ
ದ ನಷ್ಟವನ್ನು ಕಾಣಿಸುವುದು ನಿಶ್ಚಯ.
ಇದರ ಪರಿಣಾಮ ಅಶ್ಮೆರಿಗೆ ಭಾರತದ
ತೆರಿಗೆದಾರರ ಮೇಲೆ ಬೀಳುವುದರಿಂದ-
ಈ ಕುರಿತು ಸದಸ್ಯರು ವ್ಯಕ್ತಗೊಳಿಸಿದ
ಕಳವಳ ಸಾಧಾರಣವೇ ಆಗಿದೆ. ಎರಡೂ
ದೇಶಗಳ ಮುಖ್ಯಮಂತ್ರಿಗಳು, ಅಥವಾ
ಹಣಕಾಸಿನ ಮಂತ್ರಿಗಳು ಒಟ್ಟಿಗೆ ಸಭೆ
ಸೇರಿ ಈ ಸಂಗತಿಯನ್ನು ಗಂಭೀರವಾಗಿ
ಪರ್ಯಾಲೋಚಿಸುವುದರಿಂದ ಮಾತ್ರ
ಐದಾರು ವರ್ಷಗಳಿಂದ ಮೂಲೆಗುಂಪಾ
ಗಿರುವ ಸಂಗತಿ ಬಗೆಹರಿದೀತು.

"ಡ್ರಾೖವರನಲ್ಲಿ ವಿಶ್ವಾಸವಿರಲಿ"

ಸದಸ್ಯರು ಸಂರಕ್ಷಣ ಶಾಖೆಯ ವೆ
ಚ್ಚವು ಅಪಾರವಾಗಿದೆಯೆಂದೂ ದೂರಿದ
ರು. ದೇಶಮುಖರು ಇದಕ್ಕೆ ಕೊಟ್ಟ ಉ
ತ್ತರ ಮಾತ್ರ ಆಶಾದಾಯಕವಾಗಿಲ್ಲ.
ಸಂರಕ್ಷಣ ಶಾಖೆಯು ಅತ್ಯಂತ ಮಿತವ್ಯ
ಯದಿಂದ ಕಾರ್ಯ ನಿರ್ವಹಿಸುತ್ತದೆ ಎಂ
ದು ದೇಶಮುಖರು ತಿಳಿಸಿದರು; ಜೊತೆ
ಗೇ ಹಾಗೆ ಮಿತವ್ಯಯಮಾಡಿ ಉಳಿಸಿದ
ಹಣವನ್ನು ಸಂರಕ್ಷಣೆಯ ಕ್ಷೇತ್ರದಲ್ಲಿ ಈ
ಗ ಹಿಂದೆ ಬಿದ್ದಿರುವ ಸಂಗತಿ
ಗಳ ಅಭಿವೃದ್ಧಿಗೆ ಉಪಯೋಗಿಸ
ಲಾಗುತ್ತಿದೆ ಎಂದೂ ಹೇಳಿದರು.
ದೇಶದ ಸಂರಕ್ಷಣೆಯಕಾರ್ಯವು ಹೊಣೆ
ಗಾರಿಕೆಯದ್ದೆಂಬ ಸಂಗತಿಯಲ್ಲಿ ಮತಭೇ
ದವಿಲ್ಲ. ಆದರೂ ಸಂರಕ್ಷಣೆಯ ವೆಚ್ಚ
ವನ್ನು ತಗ್ಗಿಸುವಬಗ್ಗೆ ತಕ್ಕ ಕ್ರಮಗಳನ್ನು
ಕೈಗೊಂಡರೆ, ರಾಷ್ಟ್ರಾಭಿವೃದ್ಧಿಯ ಉಳಿದ
ಕೆಲಸಗಳಿಗೆ ನೆರವಾದೀತೋ ಎಂಬ ಆಶೆ
ಏಳುತ್ತದೆ. ಸದಸ್ಯರು ಗವರ್ನರರ ಸ್ಥಾನ
ವನ್ನು ಕೊನೆಗಾಣಿಸಬೇಕೆಂದೂ ಬ ವರ್ಗ
ದರಾಜ್ಯಗಳನ್ನು ನೆರೆಯ ರಾಜ್ಯಗಳೊಡನೆ
ವಿಲೀನಗೊಳಿಸಬೇಕೆಂದೂ ಹಿಂದಿನ ರಾಜ
ಮಹಾರಾಜರಿಗೆ ಕೊಡುವ ಪರಿಹಾರಧನ
ವನ್ನು ನಿಲ್ಲಿಸಬೇಕೆಂದೂ ಸೂಚಿಸಿದರು.
ಆದರೆ ಪ್ರಕೃತ ಇವೆಲ್ಲ ಅವ್ಯವಹಾರ್ಯ
ವಾದ ಸೂಚನೆಗಳೆನಿಸುತ್ತವೆ. ಪಂಚ
ವಾರ್ಷಿಕ ಯೋಜನೆಯನ್ನು ಕಾರ್ಯ
ಕಾರಿಯಾಗಿಸುವುದಕ್ಕೆ ಕೊರತೆ ಧನ ವಿನಿ
ಯೋಗವನ್ನು ಎಷ್ಟರಮಟ್ಟಿಗೆ ಅನುಸರಿಸ
ಬಹುದೆಂದು ಸದಸ್ಯರು ಮಾಡಿದ ಚರ್ಚೆ
ಯೇ ಪ್ರಾಮುಖ್ಯವಾದ ಅಂಶವೆನ್ನಲಡ್ಡಿ
ಯಿಲ್ಲ. ಹಣದ ಉಬ್ಬರವನ್ನು ಯಶಸ್ವಿ
ಯಾಗಿ ನಿಯಂತ್ರಿಸುವ ಶಕ್ತಿ ಸರಕಾರ
ಕ್ಕಿದೆಯೆ ಎಂದು ಕೇಳಿದುದಕ್ಕೆ ದೇಶ
ಮುಖರು ಮಾರ್ಮಿಕವಾದ ಉತ್ತರವನ್ನೆ
ಕೊಟ್ಟರು, ಅನಿಷ್ಟ ಚಿಂತನೆಯಲ್ಲಿ
ನಾವು ಕಳೆಯಲಾಗದು; ಡ್ರಾೖವರನಲ್ಲಿ
ವಿಶ್ವಾಸವಿಟ್ಟು ನಾವು ಪ್ರಯಾಣಿಸುವಂತೆ
ಸದಸ್ಯರೆಲ್ಲರೂ ತನ್ನಲ್ಲಿ ಭರವಸೆ ಇಟ್ಟು ವ
ರ್ತಿಸಬೇಕು ಎಂದರು. ಕೊರತೆ ಧನ ವಿ
ನಿಯೋಗ ಪದ್ಧತಿಯನ್ನು ಅನುಸರಿಸುವು
ದಕ್ಕೆ ಒಳ್ಳೆಯ ಅವಕಾಶ ಈಗ ದೊರಕಿ
ದೆ. ಕೆಟ್ಟದೇನಾದರೂ ಘಟಿಸಿದರೆ, ಅದ
ನ್ನು ದೂರೀಕರಿಸಲು ತಾನು ಸದಾ ಸಿದ್ಧ
ನೆಂಬುದೇ ದೇಶಮುಖರ ಆಶ್ವಾಸನೆಯ
ಸಾರಾಂಶ.

ನಿರುದ್ಯೋಗ ಸಮಸ್ಯೆ

ಹಣಕಾಸಿನ ಕ್ಷೇತ್ರದಲ್ಲಿ ವಿಶಾಲಾನು
ಭವವುಳ್ಳ ದೇಶಮುಖರ ಮೇಲೆ ನಾವು
ನಂಬುಗೆಯಿಡುವುದಕ್ಕೆ ಏನೂ ಅಡ್ಡಿಯಿ
ಲ್ಲ. ಪಂಚವಾರ್ಷಿಕ ಯೋಜನೆಯ ಅ
ಧ್ವರ್ಯಗಳಲ್ಲಿ ಒಬ್ಬರಾದ ದೇಶಮುಖರ
ಕೈಯಲ್ಲಿಯೇ ಭಾರತದ ಭದ್ರತೆಯ ಗಂ
ಟು ಇದೆ ಎಂದರೂ ಅತಿಶಯೋಕ್ತಿ ಯಾ
ಗದು. ಜನ ಬಲಕ್ಕೂ ಮಿಗಿಲಾಗಿ ಧನ
ಬಲವೇ ತನ್ನ ವರ್ಚಸ್ಸನ್ನು ಬೀರುವ ಈ
ಕಾಲದಲ್ಲಿ ದೇಶಮುಖರ ಹೊಣೆಗಾರಿಕೆ
ಅಪರಿಮಿತವೆಂದೇ ಹೇಳಬೇಕು. ನೆಹರೂ
ಅವರು ಪ್ರಧಾನಿ ಪಟ್ಟದಲ್ಲಿ... ರಾ
ಷ್ಟ್ರೋದ್ಧಾರದ ಕಾರ್ಯಕ್ಕೆ ಹಣದ ಪೂ
ರೈಕೆ ಯಾಗಲೇ ಬೇಕಿರುವುದರಿಂದ, ನವ
ಭಾರತದ ನಿರ್ಮಾಣ ಕಾರ್ಯವನ್ನು
ಹದ್ದಿನ ಗಣ್ಣಿನಿಂದ ವೀಕ್ಷಿಸುತ್ತಿರ
ಬೇಕಾದವರು ದೇಶಮುಖರೇ ನಿಜ.
ಬಂಡವಳು ಹೆಚ್ಚಿಕೊಂಡಲ್ಲಿ ಮಾತ್ರ ಅಭಿ
ವೃದ್ಧಿ ಕಾರ್ಯಗಳು ಕೈಗೂಡುತ್ತವೆ;
ಮತ್ತು ದೇಶದಲ್ಲಿ ಕಾಮಗಾರಿಗಳು ಹೆ
ಚ್ಚಿಕೊಂಡಂತೆ ನಿರುದ್ಯೋಗವು ತೊಲಗಿ
ಎಲ್ಲ ಜನಕ್ಕೂ ಕೈತುಂಬಾ ಕೆಲಸ, ಹೊ
ಟ್ಟೆ ತುಂಬಾ ಅನ್ನ ಸಿಗುತ್ತದೆ. ನಿರು
ದ್ಯೋಗ ಸಮಸ್ಯೆಯನ್ನು ಬಿಡಿಸುವುದಕ್ಕೆ
ಸರಕಾರ ಏನೊಂದೂ ಪ್ರಯತ್ನ ಮಾಡಿ
ಲ್ಲವೆಂದು ಕೆಲವು ಸದಸ್ಯರು ಎತ್ತಿದ ಆ
ಕ್ಷೇಪಕ್ಕೆ ದೇಶಮುಖರು ಮೇಲಿನಂತೆ ಸ
ಮಾಧಾನ ಹೇಳಿದರು. ಈ ಬಂಡವಳದ
ಪೂರೈಕೆಯಾದರೂ ಮೊದಲೇ ಬಡತನ
ದಿಂದ ಬಳಲುವ ನಾಗರಿಕರ ಮೂಲಕ
ವೇ ನೆರವೇರಬೇಕಾಗಿದೆ. ನಮ್ಮ ಜನರ
ಮೇಲೆ ಬಿದ್ದಿರುವಷ್ಟು ಕರಭಾರವು ಇಂ
ಗ್ಲೆಂಡು ಮತ್ತು ಅಮೇರಿಕೆಗಳನ್ನುಳಿದು
ಬೇರಾವುದೇ ರಾಷ್ಟ್ರದಲ್ಲಿಲ್ಲ ಎಂದು ದೇಶ
ಮುಖರು ಒಪ್ಪಿಕೊಂಡಿರುವುದನ್ನು ನೋ
ಡಿದರೆ—ನಮ್ಮಲ್ಲಿ ಇನ್ನೂ ಹೆಚ್ಚಿನ ತೆರಿಗೆ
ಕೊಡುವ ಸಾಮರ್ಥ್ಯವಾಗಲೀ, ಹೊಸ
ಬಂಡವಳವನ್ನು ಒದಗಿಸುವ ಬಲವಾಗ
ಲೀ ಇದೆಯೇ ಎಂಬ ಸಂದೇಹವುಂಟಾ
ಗುತ್ತದೆ. ಆದರೆ—ತ್ಯಾಗ ಮತ್ತು ಕಷ್ಟ ಸ
ಹಿಷ್ಣುತೆಗಳಿಂದಲೇ ಭವ್ಯ ಭವಿತವ್ಯವ
ನ್ನು ಕಟ್ಟಲು ಸಾಧ್ಯವೆಂಬುದು ಸದಾ
ಸ್ಮರಣೆಯಲ್ಲಿರಲಿ— ಎಂದು ಹಿರಿಯರು
ಉಪದೇಶಿಸುತ್ತಿರುವರು.

ದಿ ವಿಜಯ ಬೇಂಕ್, ಲಿಮಿಟೆಡ್

ಸ್ಥಾಪನೆ: 1931.] ಪ್ರಧಾನ ಕಛೇರಿ: ಮಂಗಳೂರು.

ಮೂಲಧನ	.	.	ರೂ. 20,10,000
ತೆತ್ತ ಪಾಲು ಭಂಡವಾಳ	.	.	,, 8,77,860
ಕ್ಷೇಮ ನಿಧಿ	.	.	,, 1,65,000

ಠಾಯಿಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವ್ಯಾಡೆ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4½ /. ಬಡ್ಡಿ ಪಡೆ ಗಳಿಸಿಕೊಳ್ಳಬಹುದು.

ಜಿಲ್ಲೆಗಳ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಬಿ. ಮಂಜಯ್ಯ ಹೆಗ್ಡೆ,
ಬೇಂಕಿನ ಆಡಳಿತ ಕಮಿಟಿ ಅಧ್ಯಕ್ಷರು,
(ಮತ್ತು ದ. ಕ. ಜಿಲ್ಲಾ ಬೋರ್ಡಿನ ಅಧ್ಯಕ್ಷರು.)

THE VIJAYA BANK, Limited.

ನಿಮಗೆ
ಇಂಗ್ಲಿಷ್ ಕಲಿಯಬೇಕೆ?
ಹಾಗಿದ್ದರೆ

ಕೊರಡ್ಕಲ್
ಶ್ರೀನಿವಾಸ
ರಾವ್
ವಿರಚಿತ

ಸುಲಭದಲ್ಲಿ ಇಂಗ್ಲಿಷ್

English Made Easy

ಆಂಗ್ಲ ಸ್ವಯಂಬೋಧಿನಿ ಪುಸ್ತಕ
ಅತ್ಯುಪಯುಕ್ತವಾದುದು
ಬೆಲೆ: 1 - 8—0
ಉತ್ತಮ ಪ್ರತಿ ರೂ. 2—0—0
ನವಭಾರತ ಪುಸ್ತಕ ಭಂಡಾರ ಉಡುಪಿ

ದರ ಬಹಳ ಕಡಿಮೆ ಮಾಡಿದೆ!
ಸರ್ವತರದ ಮುದ್ರಣ ಕಾರ್ಯಗಳಿಗೆ
ವಿಚಾರಿಸಿರಿ—

ನವಯುಗ ಪ್ರೆಸ್

ಸಂತೆಕಟ್ಟೆ, ಉಡುಪಿ.
ಮದುವೆ, ಉಪನಯನ, ಮತ್ತಿತರ
ಸಮಾರಂಭಗಳ ಆಮಂತ್ರಣ ಪತ್ರಿಕೆ
ಗಳನ್ನು ನಾಲ್ಕೇ ಗಂಟೆಗಳಲ್ಲಿ ತಯಾರಿಸಿ
ಕೊಡಲಾಗುವುದು.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸುರಕ್ಷಿತತೆ, ಭದ್ರತೆ ಮತ್ತು ಸೇವಾತತ್ಪರತೆ
ಇವುಗಳಿಗೆ
ತವರುಮನೆಯಂತಿದ್ದು, ನಿಮ್ಮೆಲ್ಲರ ಸ್ನೇಹ, ಸಹಕಾರಗಳನ್ನು
ಅಪೇಕ್ಷಿಸುವ ಬೇಂಕು.

THE CANARA BANKING CORPORATION LTD.

Estd: 1906] [H. O.: **UDIPI**, (S. India)

ನವಯುಗ

ಉಡುಪಿ, ಗುರುವಾರ ೧೯-೩-'೫೩

ಮದ್ರಾಸಿನ ಮುಂಗಡಪತ್ರ

ಮದ್ರಾಸು ಶಾಸನ ಸಭೆಯಲ್ಲಿ ಮುಂಗಡಪತ್ರದ ಮೇಲೆ ಚರ್ಚೆಯು ನಡೆಯುತ್ತಿರುವ ಈ ಪ್ರಸಂಗದಲ್ಲಿ– ಅರ್ಥಸಚಿವರು ಮುತ್ಸದ್ದಿತನದಿಂದ ಹಣಕಾಸಿನ ಸಮತೋಲವನ್ನು ಸಾಧಿಸಿಕೊಂಡು ಉಳಿಕೆಯ ಬಜೆಟನ್ನು ಮುಂದಿಟ್ಟುದಕ್ಕೆ ಅಭಿನಂದನೆಗಳು ಬರುವುವೆಂದು ನಿರೀಕ್ಷಿಸಬಹುದು. ಅರ್ಥಸಚಿವರು ಈ ರೀತಿಯ ಅಭಿನಂದನೆಗೆ ಅರ್ಹರೇ ಇರುವರು. ಸದಸ್ಯರ ಮುಂದೆ ಮಂಡಿಸಿರುವ ಮುಂಗಡಪತ್ರವು ಸದ್ಯದಲ್ಲಿಯೇ ಅಸ್ತಿತ್ವಕ್ಕೆ ಬರಲಿರುವ ಆಂಧ್ರರಾಜ್ಯದ ಕಾರಣದಿಂದ "ನಡುಗಾಲ"ದ ಏರ್ಪಾಡೆಂದು ಕಂಡುಬಂದರೂ ಸೂಕ್ಷ್ಮ ಅಭ್ಯಾಸ ಹಾಗೂ ಪರಿಸ್ಥಿತಿಯ ಪರಿಶೀಲನೆಗಳ ಪರಿಣಾಮವಾಗಿ ಇದು ಸಿದ್ಧಗೊಂಡಿದೆ ಎಂದು ವ್ಯಕ್ತವಾಗುತ್ತದೆ. ಮದ್ರಾಸು ರಾಜ್ಯದಲ್ಲಿ ಕಳೆದ ಐದಾರು ವರ್ಷಗಳಿಂದ ಇದ್ದ ಬರಗಾಲ ಪರಿಸ್ಥಿತಿಯು ೧೯೫೨-೫೩ನೇ ವರ್ಷದಲ್ಲಿ ಬಹಳ ಭೀಕರ ಮಟ್ಟವನ್ನು ಮುಟ್ಟಿತು. ಪರಿಣಾಮವಾಗಿ ಹೋದ ವರ್ಷ ಆರು ಕೋಟಿ ರೂಪಾಯಿಗಳ ವೆಚ್ಚವು ಬರಗಾಲ ಪರಿಹಾರದ ಕಾರ್ಯಕ್ಕೆ ಬಂದೀತೆಂದು ಊಹಿಸಿದ್ದರೂ, ಪುನರ್ವಿಮರ್ಶಿತ ಲೆಕ್ಕವು ಹತ್ತು ಕೋಟಿ ರೂಪಾಯಿಗಳ ವೆಚ್ಚವನ್ನು ತೋರಿಸುತ್ತದೆ. ಬರಗಾಲದ ಜೊತೆಗೆ ಬಿರುಗಾಳಿಯ ಅನಾಹುತವೂ ಪೂರ್ವ ಕರಾವಳಿ ಪ್ರದೇಶಗಳನ್ನು ಧ್ವಂಸಗೊಳಿಸಿದುದರಿಂದ ಸರಕಾರ ಈ ರೀತಿ ಕಷ್ಟನಷ್ಟಗಳನ್ನು ಎದುರಿಸುವುದವಶ್ಯವೆನಿಸಿತು. ಮಳೆಯ ಅಭಾವದಿಂದಾಗಿ ಮೆಟ್ಟೂರು, ಪೈಕರಾಗಳ ವಿದ್ಯುಚ್ಛಕ್ತಿಯ ಉತ್ಪಾದನೆಯೂ ತಗ್ಗಿದೆ. ಹೀಗೆ ಪೂರೈಕೆಯಲ್ಲಿ ಕಟ್ಟಾದುದರಿಂದ ಉದ್ಯಮಗಳು ಹಾನಿಯನ್ನು ಅನುಭವಿಸುತ್ತಿವೆ. ಇಂಥ ಹಾಗು ಪೇಟೆಯಲ್ಲಿ ಕಾಣಿಸಿಕೊಂಡಿರುವ ಮಂದಿಯ ಪರಿಣಾಮವಾಗಿ ಸರಕಾರಕ್ಕೆ ಮಾರಾಟಕರದ ರೂಪದ ಆದಾಯವೂ ಕಡಿಮೆಯಾಗುವುದು ಸ್ವಾಭಾವಿಕ. ಸರಕಾರವು ಕಾದಿರಿಸಿದ ನಿಧಿಯಿಂದ ಎಲ್ಲ ಹಣವನ್ನೂ ಸ್ವಾತಂತ್ರ್ಯೋತ್ತರದ ಐದಾರು ವರ್ಷಗಳಲ್ಲಿ ಜನಹಿತದ ಯೋಜನೆಗಳಿಗಾಗಿ ಉಪಯೋಗಿಸಿರುವುದರಿಂದ, ಇನ್ನು ಅದಕ್ಕೆ ಕೇಂದ್ರಸರಕಾರದ ನೆರವು ಅಥವಾ ಸಾರ್ವಜನಿಕ ಸಾಲದ ಹೊರತು ಅನ್ಯ ಮಾರ್ಗ

ತೆರೆದಿಲ್ಲ. ಪಂಚವಾರ್ಷಿಕ ಯೋಜನೆಯಂತೆ ಜರುಗಬೇಕಾದ ಕೆಲಸಗಳೆಲ್ಲ ನಿರ್ದಿಷ್ಟ ರೀತಿಯಲ್ಲಿ ಪ್ರಗತಿ ಹೊಂದುತ್ತಿವೆಯೆಂಬುದಕ್ಕೆ ಸಕಾಲದಲ್ಲಿ ದೊರೆತ ಸಹಾಯವೇ ಕಾರಣ. ಈ ವರ್ಷದ ಆದಿಯಲ್ಲಿ ೪೪೩ ಲಕ್ಷ ರೂಪಾಯಿಗಳಷ್ಟು ಇದ್ದ ಕೊರತೆ ಶಿಲ್ಕು ಅಂತ್ಯದಲ್ಲಿ ೯೧೯ ಲಕ್ಷ ರೂಪಾಯಿಗೆ ಏರಿದೆ. ಆದಾಯದಲ್ಲಿ ಮೂರೂವರೆ ಕೋಟಿ ರೂಪಾಯಿಗಳ ಕೊರತೆಯಾದೀತೆಂದು ಕಳೆದ ವರ್ಷ ಎಣಿಸಿದ್ದಾರೆ. ಈಗ ಅದು ಐದೂವರೆ ಕೋಟಿಗೆ ಹೆಚ್ಚಿಕೊಂಡಿದೆ. ಆರ್ಥಿಕ ಆಯೋಗದ ಸಿಫಾರಸಿನಂತೆ ಮದ್ರಾಸಿಗೆ ೭೭೧ ಲಕ್ಷ ರೂಪಾಯಿಗಳ ಸಹಾಯ ದೊರೆತ ಬಳಿಕವೂ ಇಷ್ಟು ಕೊರತೆಯಾದೀತು. ಬರಗಾಲದ ಬಗ್ಗೆ ಸರಕಾರದ ವೆಚ್ಚ ಬೆಳೆದುದೂ ಆದಾಯದಲ್ಲಿ ಖೋತಾ ಕಂಡುಬಂದುದೂ ಈ ವಿಷಮ ಪರಿಸ್ಥಿತಿಗೆ ಕಾರಣವಾದಂತೆ—ಕೇಂದ್ರ ಸರಕಾರವು ಬರಗಾಲ ಪರಿಹಾರ ಕಾರ್ಯದ ಸಂಗತಿಯಲ್ಲಿ ನೆರವು ಕೊಟ್ಟಿರದೆ, ಇಡೀ ಹೊರೆಯನ್ನು ರಾಜ್ಯ ಸರಕಾರದ ಮೇಲೆಯೇ ಹೇರಲು ನೋಡುತ್ತಿರುವುದೂ ಬಲವಾದ ಹೇತು. ರಾಜ್ಯ ಸರಕಾರವು ಕೇಂದ್ರವನ್ನು ಈ ಬಗ್ಗೆ ಒತ್ತಾಯಿಸುತ್ತಲೇ ಬಂದಿದೆ. ಸುಮಾರು ಹತ್ತು ಕೋಟಿ ರುಪಾಯಿಗಳ ಧನ ಸಹಾಯವಾದರೂ ದೊರೆತಲ್ಲಿ ಕೊರತೆ ಶಿಲ್ಕನ್ನು ಉಳಿಕೆಯ ಶಿಲ್ಕಿಗೆ ಪರಿವರ್ತಿಸಬಹುದು. ಆರ್ಥಿಕ ದುಸ್ಥಿತಿಯ ಕಾರಣದಿಂದ ಹೊಸ ಯೋಜನೆಗಳಿಗೆ ಅವಕಾಶವನ್ನು ಕೊಟ್ಟಿರುವುದಿಲ್ಲ. ಬಂಡವಳ ವೆಚ್ಚವು ೧೮೪೩ ಲಕ್ಷ ರುಪಾಯಿಗಳಷ್ಟಾದೀತೆಂದು ಎಣಿಕೆ. ಕಾದಿರಿಸಿದ ನಿಧಿಯು ವೆಚ್ಚ ಹೊಂದಿದ ಬಳಿಕ ಈ ಹಣ ಎಲ್ಲಿಂದ ಬಂದೀತೊ ಎಂದು ಸಂಶಯ ಪೇಳುವುದು ಸಹಜ. ಕೇಂದ್ರದ ನೆರವಿನ ಜೊತೆಗೆ ಸಾರ್ವಜನಿಕರಿಂದ ಐದು ಕೋಟಿ ರುಪಾಯಿಗಳ ಸಾಲವನ್ನು ಎತ್ತುವ ವಿಚಾರ ಸರಕಾರಕ್ಕೆ ಇದೆ. ಹೋದ ವರ್ಷ ಇಂಥದೇ ಸಾಲವು ಬಹಳ ಸುಲಭದಲ್ಲಿ ಕೂಡಿ ಬಂದುದನ್ನು ನೋಡಿದರೆ ಸರಕಾರ ಈ ಪ್ರಯತ್ನದಲ್ಲಿ ಯಶಸ್ವಿಯಾದೀತು ಎಂದೆನ್ನಲಡ್ಡಿಯಿಲ್ಲ. ಗಂಭೀರವಾದ ಹೊಸ ತೆರಿಗೆಯ ಸೂಚನೆಗಳೇನೂ ಮುಂಗಡ ಪತ್ರದಲ್ಲಿ ಕಾಣುವುದಿಲ್ಲ. ಇದು ಸಂತೋಷದ ಸಂಗತಿ. ಶಿಕ್ಷಣ ಕಾರ್ಯಕ್ಕೆ ೧೩ ಕೋಟಿ ರುಪಾಯಿಗಳು ವೈದ್ಯಕೀಯ ನೆರವಿಗೆ ೩೫೭ ಲಕ್ಷ ರೂಪಾಯಿಗಳು ಇಡಲಾಗಿವೆ. ಪೋಲಿಸು ಶಾಖೆಯ ವೆಚ್ಚವು ಸ್ವಲ್ಪ ಮಟ್ಟಿಗೆ ತಗ್ಗುವ ನಿರೀಕ್ಷೆ ಇದೆ. ತುಂಗಭದ್ರಾ ಹಾಗು ಭವಾನಿ ಅಣೆಕಟ್ಟುಗಳು ಪೂರ್ಣಗೊಂಡಲ್ಲಿ ಅವುಗಳಿಂದ

ಹೀಗೆ ಶಾಶ್ವತ ಆದಾಯವನ್ನು ನೀಡುವ ಉದ್ಯಮಗಳಿಗೆ ಸರಕಾರವು ೧೩೪ ಕೋಟಿ ರುಪಾಯಿಯಷ್ಟನ್ನು ಇಷ್ಟರ ವರೆಗೆ ವೆಚ್ಚಮಾಡಿದೆ. ಈ ವೆಚ್ಚವೇ ಆದಾಯದ ಬಾಬೆಂದು ಲೆಕ್ಕಕ್ಕೆ ಹಿಡಿದಲ್ಲಿ ಸಾರ್ವಜನಿಕ ಸಾಲ ಇರುವುದು ೯೭ ಕೋಟಿ ರುಪಾಯಿಗಳು ಮಾತ್ರ. ಆದುದರಿಂದ ಸರಕಾರದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ ಎಂದು ಯಾರೂ ಕಳವಳ ಪಡಬೇಕಾಗಿಲ್ಲ. ಬಹಳ ಹಿಂದಿನಿಂದಲೂ ಮದ್ರಾಸು ಸರಕಾರವು ಆರ್ಥಿಕ ಕ್ಷೇತ್ರದಲ್ಲಿ ಜಾಣತನದಿಂದ ಮುನ್ನಡಿಯಿಡುತ್ತಾ ಬಂದಿದೆ. ಈ ಸಂಪ್ರದಾಯದಂತೆ ಈ ಸಲವೂ ಸಮಾಧಾನಕರವಾದ ಮುಂಗಡ ಪತ್ರವನ್ನೆ ಸಿದ್ಧಗೊಳಿಸಿದೆ.

ಸೋವಿಯೆಟಿನ ಶಾಂತಿ ಧೋರಣೆಯ ಕುರಿತು ತರ್ಕ ವಿತರ್ಕ

ರಾಷ್ಟ್ರಸಂಘದ ಕಾರ್ಯದರ್ಶಿಯ ಆಯ್ಕೆಯ ಸಂಬಂಧದಲ್ಲಿ ರಶಿಯಾದ ಮನವೊಲಿಸುವ ಪ್ರಯತ್ನ.

ರಶಿಯಾದ ಸರ್ವಾಧಿಕಾರಿಯಾಗಿದ್ದ ಮಾರ್ಶಲ್ ಸ್ಟಾಲಿನ್ನರ ನಿಧನದ ಬಳಿಕ ಲೋಕದ ಸ್ಥಿತಿಗತಿಯಲ್ಲಿ ಎಂಥ ಬದಲಾವಣೆಗಳು ಆದಾವು, ಮುಖ್ಯವಾಗಿ ರಶಿಯಾ ದೊಳಗೆಯೇ ಯಾವ ನಮೂನೆಯ ಬೇಗೆ ಹಬ್ಬಿಕೊಂಡೀತು-ಎಂದು ಮುಂತಾಗಿ ಬಗೆಬಗೆಯ ಊಹಾಪೋಹೆಗಳಲ್ಲಿ ಅಮೇರಿಕದಮುಂದಾಳು ತನದಲ್ಲಿ ಪಶ್ಚಿಮ ರಾಷ್ಟ್ರಗಳು ತೊಡಗಿದ್ದವು. ಆದರೆ ಇವರೆಲ್ಲರ ಆಶಾಭಂಗವಾಗುವ ರೀತಿಯಲ್ಲಿ ಸ್ಟಾಲಿನ್ನರ ಮೃತ್ಯುವಿನ ಇಪ್ಪತ್ತನಾಲ್ಕು ತಾಸುಗಳಲ್ಲಿಯೇ ಮೆಲೆಂಕೋವರು ಹೊಸ ಸರ್ವಾಧಿಕಾರಿಯೆಂದು ಘೋಷಿಸಲ್ಪಟ್ಟರು. ಮತ್ತು ರಶಿಯಾದ ನೂತನ ಆಡಳಿತ ವರ್ಗವೂ ನೇಮಕಗೊಂಡಿತು. ಉತ್ತರಾಧಿಕಾರದ ಬಗ್ಗೆ ತೀವ್ರವಾದ ಭಿನ್ನಾಭಿಪ್ರಾಯಗಳು ಏಳುವುದು ನಿಶ್ಚಯವೆಂದೂ ಅಧಿಕಾರ ಲಾಲಸೆಯೇ ಕಾರಣಭೂತವಾದ ಅಂತ:ಕಲಹ ತಪ್ಪಿದ್ದಲ್ಲವೆಂದೂ ಅಮೇರಿಕದಂಥ ರಾಷ್ಟ್ರಗಳು ಕಾಣುತ್ತಿದ್ದ ಸ್ವಪ್ನ ನಿರಸನ ಹೊಂದಿತು. ಆದರೂ ಅಮೇರಿಕನ್ ಪ್ರಚಾರ ತಂತ್ರವೆಂದೇ ಹೇಳಬಹುದು, ವ್ಹೈಸ್ ಆಫ್ ಅಮೇರಿಕಾ ೪೬ ಭಾಷೆಗಳಲ್ಲಿ ಕಮ್ಯೂನಿಸ್ಟ ರಾಷ್ಟ್ರಗಳಲ್ಲಿರುವ ಜನತೆಯನ್ನುದ್ದೇಶಿಸಿ ಪ್ರಸಾರ ಮಾಡಿದ ಹೇಳಿಕೆಯಲ್ಲಿ—ಮೆಲೆಂಕೋವರ ನೂತನ ನೇಮಕದಿಂದಲೇ ಅಧಿಕಾರಕ್ಕಾಗಿ ಒಳಜಗಳ ಪ್ರಾರಂಭವಾಯಿತೆಂದು ಊಹಿಸಬೇಕಾಗಿ ಹೇಳಿತು. ಇದಕ್ಕೆ ಯಾವ ಆಧಾರವೂ ಗೋಚರಿಸುವುದಿಲ್ಲ.

ಮೆಲೆಂಕೋವರ ಭರವಸೆ

ಅಧಿಕಾರಕ್ಕಾಗಿ ಅಂತಃಕಲಹವೇ ಇನ್ನು ಮುಂದೆ ಏಳಲಾರದೆಂದು ಮೊನ್ನೆ ಆದಿತ್ಯವಾರ ಮೊಸ್ಕೋದಲ್ಲಿ ಸೇರಿದ ಸುಪ್ರೀಮ್ ಸೋವಿಯೆಟಿನ ೧೩೦೦ ಪ್ರತಿನಿಧಿಗಳ ಸಭೆಯ ಕಾರ್ಯಕಲಾಪವನ್ನು ಪರಿಶೀಲಿಸಿದರೆ ಇನ್ನಷ್ಟು ಸ್ಪಷ್ಟವಾಗುತ್ತದೆ. ವಿಶೇಷ ರೂಪದಿಂದ ಕರೆಯಲ್ಪಟ್ಟ ಈ ಸಭೆಯು ಅತ್ಯಲ್ಪ ಕಾಲದಲ್ಲಿಯೇ ತನ್ನ ಕರ್ತವ್ಯವನ್ನು ನೆರವೇರಿಸಿದೆ. ಸ್ಟಾಲಿನ್ನರ ನಿಧನದಿಂದ ಖಾಲಿಯಾದ ಪ್ರಧಾನಿಪಟ್ಟಕ್ಕೆ ಮೆಲೆಂಕೋವರ ನೇಮಕವನ್ನೂ ಅವರ ಹೊಸ ಮಂತ್ರಿಮಂಡಲವನ್ನೂ ಮಂಜೂರು ಮಾಡುವ ಉದ್ದೇಶದಿಂದ ಈ ಸಭೆಯನ್ನು ಕರೆದಿದ್ದರು. "ಲೆನಿನ ಹಾಗೂ ಸ್ಟಾಲಿನ್ನರ ಪ್ರತಿಭಾನ್ವಿತ ಶಿಷ್ಯ ಎನಿಸಿದ ಮೆಲೆಂಕೋವರು ಪ್ರಧಾನಿ ಪಟ್ಟಕ್ಕೆ ನೇಮಕಗೊಂಡುದಕ್ಕೆ ಒಪ್ಪಿಗೆ ಸೂಚಿಸಬೇಕೆಂದು ಬೆರಿಯಾರವರು ಕೇಳಿಕೊಂಡಾಗ, ಸಭೆಗೆ ಸಭೆಯೇ ಪ್ರಚಂಡ ಕರತಾಡನದಿಂದ ಇದಕ್ಕೆ ಸಮರ್ಥನೆ ಕೊಟ್ಟಿತು. ಇಲ್ಲಿ ಕೂಡ ಮೆಲೆಂಕೋವರು ಜಾಗತಿಕ ಶಾಂತಿಗಾಗಿ ದುಡಿಯುವ ತಮ್ಮ ಇಚ್ಛೆಯನ್ನು ದೃಢವಾಗಿ ವ್ಯಕ್ತಗೊಳಿಸಿದರು. "ಸಂಯುಕ್ತ ರಾಜ್ಯ ಅಮೆರಿಕೆಯನ್ನೊಳಗೊಂಡು ಲೋಕದ ಯಾವುದೇ ಶಾಂತಿ ಇಚ್ಛುಕ ರಾಷ್ಟ್ರವಾದರೂ ರಶಿಯಾ ಶಾಂತಿ ಧೋರಣೆಗೆ ಅಂಟಿಕೊಳ್ಳುವುದೆಂಬ ಭರವಸೆಯಲ್ಲಿರಲಿ" ಎಂದು ಮೆಲೆಂಕೋವರು ಮರಳಿ ಸಾರಿದರು. ಉದ್ದೇಶಪೂರ್ವಕವಾಗಿಯೇ ಅವರು ಅಮೇರಿಕೆಯ ಹೆಸರೆತ್ತಿದ್ದರೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಪಾಶ್ಚಾತ್ಯ ಬಣದ ಧುರೀಣತ್ವವನ್ನು ಅಮೇರಿಕವೇ ಪ್ರತಿಯೊಂದು ರಂಗದಲ್ಲಿಯೂ ವಹಿಸಿಕೊಂಡು ಬಂದಿದೆ; ಮತ್ತು ಕಮ್ಯುನಿಜಮ್ಮಿನ ಕಟ್ಟಾ ವಿರೋಧಿಯಾಗಿ ಅಮೇರಿಕ ಕೆಲಸ ಮಾಡುತ್ತಾ ಬಂದಿದೆ. ಕಾರಣ, ಅದರ ಹೆಸರನ್ನು ಎತ್ತಿ ಶಾಂತಿಯ ಆಶ್ವಾಸನೆ ನೀಡುವುದರಲ್ಲಿ ಮೆಲೆಂಕೋವರು ಮುತ್ಸದ್ದಿತನವನ್ನು ಕಂಡಿದ್ದಾರು.

ನಿರಾಧಾರವಾದ ತರ್ಕ

ಪಾಶ್ಚಾತ್ಯ ರಾಷ್ಟ್ರಗಳು ತರ್ಕಿಸಿದ್ದ ಇನ್ನೊಂದು ಪರಿಣಾಮವೆಂದರೆ ಕಮ್ಯುನಿಸ್ಟರಾಷ್ಟ್ರಗಳಲ್ಲಿಯೇ ಒಡಕು ಉಂಟಾಗಿ ಅವುಗಳು ಒಂದೊಂದಾಗಿ ಸಿಡಿದುಕೊಂಡು ರಶಿಯಾದಿಂದ ಬೇರೆಯಾಗಿ ನಿಂತಾವು ಎಂಬುದಾಗಿದೆ. ಈ ಕುರಿತು ಈಗಲೇ ಏನನ್ನೂ ಹೇಳುವುದಾಗದಿದ್ದರೂ–ಕಮ್ಯುನಿಷ್ಟ ರಾಷ್ಟ್ರಗಳಿಗೆ ಸ್ನೇಹಹಸ್ತವನ್ನು ನೀಡುವುದರಲ್ಲಿ ಮೆಲೆಂಕೋವರು ಹಿಂದಾಗಿಲ್ಲ. ಯುಗೋಸ್ಲಾವಿಯಾದ ಮಾರ್ಶಲ್ ಟಿಟೋ ಕಮ್ಯುನಿಸಮ್ಮಿಗೆ ತನ್ನದೇ ಅರ್ಥ ಕಟ್ಟಿಕೊಂಡು ಬೇರೆಯಾದಂತೆ, ಚೀನಾದಂಥ ಏಶಿಯನ್ ಮಹಾರಾಷ್ಟ್ರವು ರಶಿಯಾದ ದಾರಿಯನ್ನು ಬಿಟ್ಟು ಬೇರೆಯೇ ಮಾರ್ಗಕ್ರಮಿಸಲು ತೊಡಗೀತೆಂದು ಬಲವಾಗಿ ನಂಬಿದ್ದರು. ಆದರೆ ಇದು ತೀರ ನಿರಾಧಾರವಾದ ತರ್ಕವೆಂದು ಈಗ ಸಂಭವಿಸಿರುವ ಘಟನೆಗಳು ಸಿದ್ಧಮಾಡಿವೆ. ಸ್ಟಾಲಿನ್ನರ ಅಂತ್ಯಕ್ರಿಯೆಯಲ್ಲಿ ಚೀನಾದ ಪ್ರಜಾರಾಜ್ಯದ ಅಧ್ಯಕ್ಷ ಮಾವೊತ್ಸೆತುಂಗರು ಭಾಗವಹಿಸದಿದ್ದರೂ–ಅಲ್ಲಿಯ ಮುಖ್ಯ ಮಂತ್ರಿ ಚೌಎನ್ ಲಾಯರು ಮೆಲೆಂಕೋವರ ನಿಕಟ ಸಹವರ್ತಿಗಳಂತೆ ನಡೆದುಕೊಂಡದ್ದು ಗಮನಾರ್ಹವಾಗಿದೆ. ರಶಿಯಾವು ಈ ರೀತಿಯ

ದಕ್ಕೆ ಮೆಲೆಂಕೋವರು ತಮ್ಮ ಭಾಷಣಗಳಲ್ಲಿ 'ಚೀನಾದ ಪ್ರಜಾರಾಜ್ಯದೊಡನೆ ನಮ್ಮ ಸಂಬಂಧವನ್ನು ಬೆಳೆಸಲು ನಾವು ಹಾತೊರೆಯುತ್ತೇವೆ" ಎಂದು ಎತ್ತಿ ಹೇಳಿರುವುದೇ ನಿದರ್ಶನ.

ಟಿಟೋಗೆ ಹೊಸ ಹುರುಪು

ಯುಗೋಸ್ಲಾವಿಯಾದ ಮಾರ್ಶಲ್ ಟಿಟೋ ಯುದ್ಧೋತ್ತರದ ಬ್ರಿಟಿಷ ಇತಿಹಾಸದಲ್ಲಿಯೇ ಪ್ರಥಮ ಬಾರಿ ಲಂಡನಿನ ಥೇಮ್ಸ ನದಿಯನ್ನು ಪ್ರವೇಶಿಸಿ, ಚರ್ಚಿಲರನ್ನು ಕಾಣುವ ಅಪೂರ್ವ ಘಟನೆ ನಡೆದಿದೆ. ಸ್ಟಾಲಿನ್ನರ ಮರಣಾನಂತರ ಕಮ್ಯೂನಿಸ್ಟ ರಾಷ್ಟ್ರಗಳ ಪ್ರತಿಕ್ರಿಯೆಯ ಸೂಕ್ಷ್ಮ ಅಭ್ಯಾಸವನ್ನು ಚರ್ಚಿಲರು ಟಿಟೋರೊಡನೆ ಮಾಡಬಹುದು. ಮಾರ್ಶಲ್ ಟಿಟೋಗೆ ಸ್ಟಾಲಿನ್ನರ ಮರಣದಿಂದ ಹೊಸ ಹುರುಪು ಬಂದಿರಬೇಕು. ರಶಿಯಾದ ಅಣಕವಾಡಲು ಮಾರ್ಶಲ್ ಟಿಟೋಗೆ ಇದು ಅನುಕೂಲ ಸಂಧಿಯಾಗಿ ಕಾಣಿಸಿರಬಹುದು. ಇಲ್ಲದಿದ್ದರೆ ಇಷ್ಟು ದೂರ ಬ್ರಿಟನ್ನಿಗೆ ಚಿತ್ತೈಸಿ, ಚರ್ಚಿಲ್ಲರ ಭೇಟಿ ತೆಗೆದು ಕೊಳ್ಳುವ ಅಗತ್ಯವಿದ್ದಿರಲಿಲ್ಲ. ಯುಗೋಸ್ಲಾವಿಯಾದ ಮೇಲೆ ಸ್ಟಾಲಿನ್ನರ ಅಧಿಕಾರ ಏನೇನೂ ನಡೆಯುತ್ತಿಲ್ಲದಿದ್ದರೂ—ಕಮ್ಯುನಿಸ್ಟ ರಾಷ್ಟ್ರಗಳಿಗೆ ಸ್ಟಾಲಿನ್ನರ ವೈಯಕ್ತಿಕ ವರ್ಚಸ್ಸೆಂಬ ಮಾಂತ್ರಿಕ ಮೋಡಿಯಿಂದ ಬಿಡುಗಡೆ ದೊರೆತಿದೆ-ಅಥವಾ ದೊರೆತೀತು ಎಂದು ಆಶಿಸುವ ಜನರು ಅನೇಕ.

ಮಾವೋರ ಬೆಂಬಲ

ಈ ದೃಷ್ಟಿಯಿಂದಲೇ ಚೀನಾದ ಮಾವೋರವರು ಕಮ್ಯೂನಿಸ್ಟರಿಗೆ ಹೊಸ ನಾಯಕರಾಗಿ ತೋರಬಹುದೆಂದು ಎಣಿಸಲಾಗಿತ್ತು. ರಾಷ್ಟ್ರೀಯ ಚೀನೀ ಸೈನಿಕರೊಡನೆ ಹೋರಾಡುವ ಸಮಯದಲ್ಲಿ ರಶಿಯಾದಿಂದ ಮಾವೋಗೆ ದೊರೆತ ನೆರವು ಏನೇನೂ ಇರಲಿಲ್ಲ. ಸ್ವಂತ ನೈಪುಣ್ಯದ ಬಲದಿಂದಲೇ ಮಾವೋ ಚೀನೀ ಪ್ರಜಾರಾಜ್ಯವನ್ನು ಕಟ್ಟಿಕೊಂಡು, ಅದರ ಅಧ್ಯಕ್ಷರಾದರು. ಕಮ್ಯುನಿಸ್ಟ ಸಿದ್ಧಾಂತವನ್ನು ಅಂಗೀಕರಿಸಿದುದರ ಪರಿಣಾಮವೋ ಎಂಬಂತೆ-ರಶಿಯಾ ಚೀನಾದ ಸ್ನೇಹ ಸಂಪಾದಿಸಿಕೊಂಡಿತು. ಸ್ಟಾಲಿನ್ನರ ವರ್ಚಸ್ಸಿನ ಅದೃಶ್ಯದೊಂದಿಗೆ ಆ ಸಂಬಂಧವೂ ಮಾಯವಾದೀತೆಂಬ ಊಹೆ ಮಾವೋ ಬರೆದ ಲೇಖನದಿಂದ ಸುಳ್ಳಾಗಿ ಪರಿಣಮಿಸಿದೆ. ಚೀನೀ ಪತ್ರಿಕೆಯಲ್ಲಿ ಬರೆದ ಮತ್ತು ಪ್ರಾವ್ಡಾವು ಮರು ಪ್ರಕಾಶನಗೈದ ಈ ಲೇಖನದಲ್ಲಿ ಅಸಂದಿಗ್ಧ ಶಬ್ದಗಳಲ್ಲಿ ಸೋವಿಯಟ್ ಕಮ್ಯೂನಿಸ್ಟ ಪಕ್ಷದ ಹಿರಿಮೆಯನ್ನು ಮಾವೊ ಹೊಗಳಿರುವರಲ್ಲದೆ ಇದರ ಸಂಪೂರ್ಣ ನೇತೃತ್ವದ ಅಪೇಕ್ಷೆಯನ್ನು ವ್ಯಕ್ತಗೊಳಿಸಿರುವರು. ಹೀಗೆ ಮೆಲೆಂಕೊವರಿಗೆ ಬೆಂಬಲ ನೀಡಿರುವರು.

ಪಾಶ್ಚಾತ್ಯರ ಆಸ್ಥೆಯ ರಹಸ್ಯ

ಮಾವೋರ ಚೀನವು ರಶಿಯಾದೊಡನೆ ಅನೇಕ ಬಗೆಯ ಒಡಂಬಡಿಕೆಗಳನ್ನು ಮಾಡಿಕೊಂಡಿವೆ. ಪಂಚವಾರ್ಷಿಕ ಯೋಜನೆಯಂತೆ ಕಾರ್ಯಮಾಡುವುದಕ್ಕೆ ಚೀನಾ ರಶಿಯಾದ ಸಹಾಯವನ್ನೆ ಹೊಂದಿಕೊಂಡಿದೆ. ಕೊರಿಯಾ ಯುದ್ಧದಲ್ಲಿ ಭಾಗವಹಿಸಿದ ಬಳಿಕವಂತೂ ಚೀನಾವಿಗೆ ರಶಿಯಾದಿಂದಲೇ ಎಲ್ಲ ಯುದ್ಧ ಸಾಮಗ್ರಿಗಳೂ ಬರಬೇಕಾಗಿವೆ. ಸ್ಟಾಲಿನ್ನರು ಜೀವಿಸಿದ್ಧ ಕಾಲದಲ್ಲಿಯೂ ರಶಿಯಾ ಜನತೆಯ ನಿತ್ಯಜೀವನವನ್ನು ಗೌಣವಾಗಿ ತಿಳಿದುಕೊಂಡು ಮಹೋದ್ಯಮಗಳನ್ನೂ ಯುದ್ಧ ಬಲವನ್ನೂ ಹೆಚ್ಚಿಸಿಕೊಳ್ಳುವುದಕ್ಕೆ ಪ್ರಾಶಸ್ತ್ಯ ನೀಡಿತ್ತು. ಈ ಕಾರಣದಿಂದ ಚೀನಾವಿಗೆ ಬೇಕಷ್ಟು ನೆರವು ದೊರೆಯಿತು. ಆದರೆ ಹೊಸ ಆಡಳಿತವು ರಶಿಯಾದ ಜನತೆಗೆ ನಿತ್ಯ ಜೀವನದ ಮಟ್ಟವನ್ನು ಎತ್ತರಿಸುವ ಆಶ್ವಾಸನೆಯನ್ನು ಕೊಟ್ಟಿದೆ. ಜನರ ಪ್ರೀತಿ ಸಂಪಾದನೆಗಾಗಿ ಕೂಡಿದ ಉಪಾಯವಿದೆಂದು ಸಂಶಯಾತ್ಮಕ ದೃಷ್ಟಿಯುಳ್ಳವರು ಹೇಳಬಹುದಾದರೂ ಈ ಹೇಳಿಕೆಯಿಂದ ರಶಿಯಾದ ಯುದ್ಧ ಸಿದ್ಧತೆಯ ಕಾರ್ಯ ತನ್ನ ಭರವನ್ನು ತಗ್ಗಿಸಿಕೊಳ್ಳುವುದೆಂದು ಪ್ರಾಮಾಣಿಕವಾಗಿ ಆಶಿಸಲು ಅವಕಾಶವಿದೆ. ಜನತೆಯ ಸುಖಸೌಕರ್ಯಗಳ ಅಭಿವೃದ್ಧಿಯ ಕಡೆಗೆ ಸೋವಿಯಟ ಸರಕಾರವು ಲಕ್ಷ್ಯ ಪೂರೈಸಿದ್ದೇ ಆದಲ್ಲಿ ಚೀನಾದಂಥ ರಾಷ್ಟ್ರಗಳಿಗೆ ಅದು ಇಷ್ಟರವರೆಗೆ ಕೊಡುತ್ತಾ ಬಂದ ಸಹಾಯದ ಪ್ರಮಾಣ ಸ್ವಾಭಾವಿಕವಾಗಿ ತಗ್ಗಲೇಬೇಕು. ಹೀಗಾದ ಪಕ್ಷದಲ್ಲಿ ಚೀನಾವಿಗೆ ನಡುನೀರಿನಲ್ಲಿ ಮುಳುಗೇಳುವ ಪ್ರಸಂಗ ಬಂದೀತು. ಅಂಥ ಸಂಕ್ರಾಂತಿಯ ಕಾಲದಲ್ಲಿ ಚೀನಾಕ್ಕೆ ದಿಗ್ಬಂಧವನ್ನು ಹೇರುವಲ್ಲಿ ಪಶ್ಚಿಮದ ರಾಷ್ಟ್ರಗಳು ಯಶಸ್ವಿಯಾದರೆ ಬಹಳ ಸುಲಭದಲ್ಲಿ ಮಹಾ ಸಾಹಸವನ್ನು ಮಾಡಿದಂತಾಯಿತು. ಈ ಗತ್ತುಗಾರಿಕೆಯಿಂದಲೇ ಇರಬೇಕು ರಶಿಯಾದ ನೂತನ ನಾಯಕರು ಕಮ್ಯೂನಿಸ್ಟ ವಿರೋಧಿಗಳನ್ನು ಹೀನೈಸಿ ಮಾತನಾಡಿದ್ದಕ್ಕೂ ಹೆಚ್ಚಾಗಿ, ರಶಿಯಾದ ಶಾಂತಿಘೋಷಣೆಯ ಕಡೆಗೆ ಪಾಶ್ಚಾತ್ಯ ರಾಷ್ಟ್ರಗಳು ಆಕರ್ಷಿಸಲ್ಪಟ್ಟಿವೆ.

ರಾಷ್ಟ್ರ ಸಂಘದಲ್ಲಿ

ಇದು ಸುದೀರ್ಘ ಪರಿಣಾಮದ ಕಲ್ಪನೆಯಾಯಿತು. ಪ್ರಕೃತ ರಶಿಯಾದ ಘೋಷಣೆ ಶಾಂತಿಯುತವಾಗಿದೆಯೆಂಬುದಕ್ಕೆ ಯಾವ ಪುಷ್ಟಿಯೂ ದೊರಕುತ್ತಿಲ್ಲ. ಸಂಯುಕ್ತ ರಾಷ್ಟ್ರ ಸಂಘದಲ್ಲಿ ಕಾರ್ಯದರ್ಶಿ ಸ್ಥಾನಕ್ಕೆ ಹೊಸಬರನ್ನು ಆರಿಸುವ ಪ್ರಯತ್ನ ನಡೆದಾಗ ಸೋವಿಯಟ ರಶಿಯಾ ಅಸಹಕಾರವನ್ನೆ ತೋರಿಸಿದೆ. ಟ್ರಿಗ್ವಿಲೀಯವರು ತನ್ನ ರಾಜಿನಾಮೆಯ ಹಿನ್ನೆಲೆಯನ್ನು ವಿವರಿಸುವಾಗ ಎರಡು ಸಂಗತಿಗಳನ್ನು ಎತ್ತಿಹಿಡಿದರು- ಮೊದಲನೆಯದಾಗಿ, ಉತ್ತರ ಕೊರಿಯಾವನ್ನು ಆಕ್ರಮಕ ರಾಷ್ಟ್ರವೆಂದು ಕರೆದು ಸಂಯುಕ್ತ ರಾಷ್ಟ್ರ ಸಂಘದ ಆಶ್ರಯದಲ್ಲಿ ಅದರೊಡನೆ ಹೋರಾಟ ಕೈಗೊಂಡ ಕ್ಷಣದಿಂದ, ಸೋವಿಯಟ ರಶಿಯಾ ಹಾಗೂ ಅದರ ಬೆಂಬಲಿಗ ಕಮ್ಯೂನಿಸ್ಟ ರಾಷ್ಟ್ರಗಳು ತನ್ನ ಸ್ಥಾನಗೌರವವನ್ನೂ ಲೆಕ್ಕಿಸದೆ ಅಸಭ್ಯ ರೀತಿಯಿಂದ ವರ್ತಿಸಿವೆ. ಇಂಥ ತಿರಸ್ಕಾರ ಬುದ್ಧಿ ಹಾಗು ಅಸಹಕಾರ ನೀತಿಯ ಪರಿಣಾಮವಾಗಿ, ಕಾರ್ಯದರ್ಶಿಯ ಹೊಣೆಗಾರಿಕೆಯನ್ನು ಯಶಸ್ವಿಯಾಗಿ ನಿರ್ವಹಿಸುವುದೇ ಅಸಾಧ್ಯವೆನಿಸಿದೆ ಎಂದು ಟ್ರಿಗ್ವೇಲೀ ಹೇಳಿದರು. ಎರಡನೆಯದು ಕಾರ್ಯದರ್ಶಿಯ ಸ್ಥಾನದಿಂದ ಸ್ವಾತಂತ್ರ್ಯ ಹಾಗೂ ಶಾಂತಿಯ ಕುರಿತು ಘೋಷಣೆ ಹೊರಟ ಪ್ರತಿಯೊಂದು ಸಂದರ್ಭದಲ್ಲಿಯೂ ಅದಕ್ಕೆ ಘಟನಾತ್ಮಕವಾಗಿ ಬಂದ ಅಧಿಕಾರದ ಬಲವೊಂದೇ ಉಳಿಯದೆ— ಭದ್ರತಾ ಮಂಡಳದಲ್ಲಿರುವ ಐವರು ಶಾಶ್ವತ ಪ್ರತಿನಿಧಿಗಳಿಂದ ಹಾಗೂ ಸಂಯುಕ್ತರಾಷ್ಟ್ರಸಂಘದ ಎಲ್ಲ ಸದಸ್ಯರಾಷ್ಟ್ರಗಳಿಂದ ನೇಮಕಗೊಂಡ ಪ್ರತಿನಿಧಿಯೊಬ್ಬನ ಉದ್ಗಾರವಿದು ಎಂಬೋಪಾದಿಯಲ್ಲಿ ರಾಜಕೀಯ ಕ್ಷೇತ್ರಗಳ ಒಮ್ಮತದ ಬೆಂಬಲ ಹಾಗೂ ವರ್ಚಸ್ಸು ದೊರೆಯುವಂತಾಗಬೇಕು. ಈ ಹೇಳಿಕೆಯು ಅತ್ಯಂತ ಮಹತ್ವದ್ದೆನ್ನಬಹುದು. ಮಹಾ ಕಾರ್ಯದರ್ಶಿಯನ್ನು ಸಂಶಯಾತ್ಮಕ ದೃಷ್ಟಿಯಿಂದ ನೋಡುವ ಅವಕಾಶವೇ ಇಲ್ಲದ ರೀತಿ ಅವಿರೋಧ ಆಯ್ಕೆ ನಡೆಯುವ ಕಾಲ ಬಂದರೆ—ಆಗ ಲೋಕ ಶಾಂತಿಯ ಕುರಿತು ಭರವಸೆ ಮೂಡೀತು.

ರಶಿಯಾದ ಅಸಹಕಾರ

ಆದರೆ ಪ್ರಕೃತ ರಶಿಯಾದ ನೀತಿ ಬದಲಾಯಿಸುವ ಸಂಜ್ಞೆ ಇನ್ನೂ ಗೋಚರಕ್ಕೆ ಬಂದಿಲ್ಲ. ಕೆನಡಾದ ಪಿಯರ್ಸನ್ನರು (ಈಗ ಇವರು ರಾಷ್ಟ್ರಸಂಘದ ಸಾಮಾನ್ಯ ಸಭೆಯ ಅಧ್ಯಕ್ಷ) ಮಹಾ ಕಾರ್ಯದರ್ಶಿ ಪದಕ್ಕೆ ಬರಬೇಕೆಂದು ಭದ್ರತಾ ಮಂಡಳದಲ್ಲಿ ಡೆನ್ಮಾರ್ಕ್‌ನವು ಮಾಡಿದ ಸೂಚನೆಗೆ ಅವಶ್ಯವಿದ್ದ ಏಳು ಮತಗಳಿಗಿಂತಲೂ ಹೆಚ್ಚು ಅಂದರೆ ಒಂಭತ್ತು ಮತಗಳು ದೊರೆತರೂ ಶಾಶ್ವತ ಸದಸ್ಯರಲ್ಲಿ ಒಂದಾದ ರಶಿಯಾ ಒಪ್ಪಿಗೆ ಸೂಚಿಸಿಲ್ಲದಿರುವುದರಿಂದ ಪ್ರತಿಷೇಧಾಧಿಕಾರವನ್ನು ಉಪಯೋಗಿಸಿ, ಪಿಯರ್ಸನ್ನರ ನೇಮಕವನ್ನು ಅಸಾಧ್ಯಗೊಳಿಸಿದಂತಾಯಿತು. ಮಹಾ ಕಾರ್ಯದರ್ಶಿಯ ಸ್ಥಾನಕ್ಕೆ ಭಾರತದ ವಿಜಯಲಕ್ಷ್ಮಿ ಪಂಡಿತರ ಹೆಸರು ಆಗಾಗ್ಗೆ ಕೇಳಿಬರುತ್ತಿದ್ದರೂ ಅದನ್ನು ಬಿಟ್ಟುಕೊಟ್ಟಿರುವಂತೆಯೇ ಆಗಿದೆ. ರಶಿಯಾದ ಮನವೊಲಿಸಿಕೊಂಡು ಪಿಯರ್ಸನ್ನರೇ ಮಹಾ ಕಾರ್ಯದರ್ಶಿ ಪದಕ್ಕೆ ಆಯ್ಕೆ ಹೊಂದುವಂತೆ ಮಾಡುವ ಪ್ರಯತ್ನಗಳು ಈಗ ನಡೆಯುತ್ತಿವೆ. ಈ ಗುರುವಾರ ದಿನ ಭದ್ರತಾ ಮಂಡಳ ಮರಳಿ ಮತದಾನದ ಕಾರ್ಯ ನಿರ್ವಹಿಸುವುದೆಂದು ನಿರೀಕ್ಷೆ. ಪಶ್ಚಿಮ ರಾಷ್ಟ್ರಗಳ ವರ್ಚಸ್ಸಿಗೆ ಬಲಿಷ್ಠರಿವರನ್ನು ಒಪ್ಪಿಕೊಳ್ಳಲು ಸೋವಿಯೆಟ ರಶಿಯಾ ಹಿಂದು ಮುಂದು ನೋಡುತ್ತದೆ. ಅದರಂತೆ ಪಾಶ್ಚಾತ್ಯ ರಾಷ್ಟ್ರಗಳೂ ಕಮ್ಯೂನಿಸ್ಟರೆಂದರೆ ಭಯ ಪಡುವುವು.

ಅಚಾತುರ್ಯದ ಘಟನೆ

ಈನಡುವೆ ಜರ್ಮನಿಯಲ್ಲಿ ರಶಿಯನ್ನರು ಬ್ರಿಟನ್ ಹಾಗೂ ಅಮೇರಿಕೆಗಳ ಎರಡು ವಿಮಾನಗಳನ್ನು ಹೊಡೆದುರುಳಿಸಿದರೆಂಬ ವಾರ್ತೆ ರಶಿಯಾದ ಶಾಂತಿಘೋಷಣೆಯ ಸಂಬಂಧದಲ್ಲಿ ಉಗ್ರವಾದ ಟೀಕೆಗಳಿಗೆ ಅ[illegible]ಮಾಡಿಕೊಟ್ಟಿದೆ. ರಶಿಯಾದ ಸ್ನೇಹ ಸೌಹಾರ್ದದ ನೀತಿಗೆ ಇದು ಪೋಷಕನಾಗಿಲ್ಲವೆಂದು ಪಾಶ್ಚಾತ್ಯ ರಾಷ್ಟ್ರಗಳು ದೃಢವಾಗಿ ನಂಬಿ, ಕಮ್ಯುನಿಸ್ಟರನ್ನು ಕೆಂಗಣ್ಣಿನಿಂದ ನೋಡುವಂತೆ ಈ ಘಟನೆ ಪ್ರೇರೇಪಿಸಿದೆ. ಬ್ರಿಟಿಷ್ ವಿಮಾನವು ಬ್ರಿಟಿಷ ಆಕ್ರಮಿತ ಜರ್ಮನಿಯ ಪ್ರದೇಶದಲ್ಲಿಯೇ ಹಾರಾಡುತ್ತಿರುವಾಗ ರಶಿಯಾದ ವಿಮಾನಗಳು ಅದನ್ನು ಘಾಸಿಗೊಳಿಸಿದುದು ತೀರ ಉದ್ಧಟತನವೆಂದು ತೀಕ್ಷ್ಣ ಮಾತುಗಳಲ್ಲಿ ಪ್ರತಿಭಟನೆಯನ್ನು ವ್ಯಕ್ತಗೊಳಿಸಿರುವರು. ಆದರೆ ರಶಿಯಾದ ಹೇಳಿಕೆಯಂತೆ ವಿಮಾನವು ರಶಿಯಾದ ಗಡಿಯೊಳಗೆ [illegible] ಮೈಲುದೂರ ಹಾರಿ ಬಂದುದರಿಂದ, ಅದನ್ನು ಹೊಡೆದು ಕೆಡವಲಾಯಿತು. ಸೌಹಾರ್ದ ಸಂಬಂಧವನ್ನು ಹೆಚ್ಚಿಸಿಕೊಳ್ಳಬೇಕಿರುವ ಈ [illegible] ಉದ್ದೇಶಪೂರ್ವಕ ಅಚಾತುರ್ಯಗಳು ನಡೆಯುವುದು ಹಿತಕರವಲ್ಲವೆಂದಿಷ್ಟೇ ಹೇಳಬಲ್ಲೆವು.

—:೦:—

ರಾಷ್ಟ್ರಕವಿ ಎಮ್. ಗೋವಿಂದ ಪೈಗಳವರಿಂದ ಉದ್ಘಾಟಿಸಲ್ಪಟ್ಟ
ಕೊರಡ್ಕಲ್ ಸ್ಮಾರಕ ಸಮಿತಿಯವರಿಂದ
(ದಿವಂಗತ ಕೊರಡ್ಕಲ್ ಶ್ರೀನಿವಾಸ ರಾಯರ ನೆನಪಿಗಾಗಿ)
ಪ್ರಕಟಿಸಲ್ಪಟ್ಟ **ನೆನಪಿಗಾಗಿ** ನಾವೀನ್ಯಪೂರ್ಣ ಪುಸ್ತಕ
ಕರ್ನಾಟಕದ ಹೆಸರಾಂತ ಲೇಖಕರನೇಕರ ವಿವಿಧ ಬರಹಗಳಿಂದ ಕೂಡಿದೆ.
ಬೆಲೆ ರೂ- 2—0—0 ಮಾತ್ರ. ರೂ 2—6—0 ಕಳುಹಿಸಿದರೆ
ಒಂದು ಪ್ರತಿಯನ್ನು ಟಪ್ಪಾಲು ದ್ವಾರಾ ಕಳುಹಿಸಬಹುದು.
ಕೊರಡ್ಕಲ್ಲರ ಶಿಷ್ಯ ವೃಂದವೂ ಮಿತ್ರಮಂಡಳಿಯೂ ಈ ಗ್ರಂಥವನ್ನು
ಕೊಂಡುಕೊಂಡು ಸ್ಮಾರಕ ಸಮಿತಿಗೆ ನೆರವು ನೀಡಬೇಕಾಗಿ
ವಿಶೇಷತಃ ಕೋರಲಾಗಿದೆ.
ಪ್ರತಿಗಳು ಸಿಗುವ ಸ್ಥಳಗಳು:-
1) ಕೊರಡ್ಕಲ್ ಸ್ಮಾರಕ ಸಮಿತಿ, ಉಡುಪಿ 2) ನವಯುಗ ಪ್ರೆಸ್, ಉಡುಪಿ
3) ಸ್ಟ್ಯಾಂಡರ್ಡ್ ಬುಕ್ ಕಂಪೆನಿ, ಮಂಗಳೂರು, 4) ನವಭಾರತ ಬುಕ್ ಡಿಪ್ಪೊ, ಉಡುಪಿ.

ತಾರೀಕು 17—3—53ರಿಂದ ಡಾರ್ಲಿಂಗ್ ಪಿಕ್ಚರ್ಸ್‌ನವರ
ಲತಾಮಂಗೇಶಕರ್ ಮತ್ತು ಮುಕೇಶರ ನಿರ್ಮಾಪಕತ್ವದಲ್ಲಿ
ಮಲ್ಹಾರ್
ಮುಖ್ಯ ಭೂಮಿಕೆಯಲ್ಲಿ:- ಶಮ್ಮಿ ಮತ್ತು ಅರ್ಜುನ್.
ಆನಂತರ: ಕನ್ನಡ ಚಿತ್ರ— **ಗುಣಸಾಗರಿ**
ಬರುತ್ತದೆ. [illegible] ತಾಯಿ ಉಳ್ಳಂ, ಶ್ರೀನಿವಾಸ ಕಲ್ಯಾಣ,
ಕುಮಾರಿ, ಕನ್ನಿಕ ಇತ್ಯಾದಿ.
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಮಂಗಳೂರು

ನಗರ ಸಭೆಯು— ಇದೇ ತಾ 14ರಲ್ಲು ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಸೇರಿತು. ಶ್ರೀ ಕೊರಗಪ್ಪ ರೈಯವರು ನಗರಸಭೆಯ ಚರ್ಚೆಯನ್ನು ಕನ್ನಡದಲ್ಲಿ ಮಾಡಬೇಕು ಹಾಗೂ 'ಏಜೆಂಡಾ'ವನ್ನು ಕೂಡಾ ಕನ್ನಡದಲ್ಲಿಯೇ ತಯಾರಿಸಬೇಕೆಂಬ ಠರಾವನ್ನು ಮಂಡಿಸಿದರು. ಕೆಲವರು ಈ ಠರಾವನ್ನು ಸಮರ್ಥಿಸಿ ಮಾತನಾಡಿದರು. ಹಲವರು ವಿರೋಧಿಸಿ ಅದನ್ನು ಕಾರ್ಯರೂಪಕ್ಕೆ ತರಲು ಬಹಳ ಕಠಿಣವಾಗುವುದೆಂದರು. ಅಧ್ಯಕ್ಷರು ಕೂಡಾ ಈ ಠರಾವನ್ನು ಕಾರ್ಯಾಚರಣೆಗೆ ತರಲುಳ್ಳ ಇರುವ ತೊಡಕುಗಳನ್ನು ವಿವರಿಸಿ ಸಭೆಯ ಚರ್ಚೆಯನ್ನು ಕನ್ನಡದಲ್ಲಿ ಮಾಡಲು ಪ್ರಯತ್ನಿಸಬಹುದೆಂದೂ ಆದರೆ ಠರಾವು ಮತ್ತು ಏಜಂಡಾಗಳನ್ನು ಇಂಗ್ಲಿಷಿನಲ್ಲಿಯೇ ಇಡುವುದು ಉಚಿತವೆಂದೂ ಹೇಳಿದರು. ಇದೇ ಆಶಯದ ಠರಾವು ಹಿಂದೊಮ್ಮೆ ಮಂಜೂರಾಗಿರುವುದರಿಂದ ಹೊಸ ಠರಾವಿನ ಆಗತ್ಯವಿಲ್ಲೆಂದು ಅವರು ಹೇಳಿದುದರಿಂದ ಶ್ರೀ ಕೊರಗಪ್ಪ ರೈಯವರು ಠರಾವನ್ನು ಒತ್ತಾಯಿಸಲಿಲ್ಲ. ಮದ್ರಾಸಿನ ಗವರ್ನರ್ ಶ್ರೀ ಶ್ರೀಪ್ರಕಾಶರು ಏಪ್ರಿಲ್ ತಾ 21ರಿಂದ 25ರ ತನಕ ಜಿಲ್ಲೆಯನ್ನು ಸಂಚರಿಸಲಿರುವುದರಿಂದ ಅವರು ಮಂಗಳೂರನ್ನು ಸಂದರ್ಶಿಸುವಾಗ ನಗರಸಭೆಯ ಪರವಾಗಿ ಬಿನ್ನವತ್ತಳೆ ಕೊಡುವುದಾಗಿ ಸಭೆಯು ನಿರ್ಣಯಿಸಿತು.

ಅಕ್ಕಿ ಮಾರಾಟಕ್ಕಾಗಿ ಲೈಸೆನ್ಸು ಪಡಕೊಳ್ಳುವವರು, ವ್ಯಾಪಾರಿ ತೆರಿಗೆ ಹಾಗೂ ಆದಾಯ ತೆರಿಗೆಗಳನ್ನು 'ಸಂದಾಯಮಾಡಿದ ಬಗ್ಗೆ ಪಡಕೊಂಡ ಸರ್ಟಿಫಿಕೇಟನ್ನು ಒಪ್ಪಿಸತಕ್ಕದ್ದು—ಎಂದು ಜಿಲ್ಲಾ ಕಮಾಶಿರ್ಯಲ್ ಟೇಕ್ಸ್ ಆಫೀಸರ ಪ್ರಕಟಣೆ ಹೊರಟಿದೆ.

ಕುಂಬಳೆ— ಇಲ್ಲಿಯ ಪಂಚಾಯತ ಬೋರ್ಡ್ ಚುನಾವಣೆಯು ತಾ 6-3-1953ರಲ್ಲಿ ನಡೆದು ಕೆಳಗಿನ ಉಮೇದ್ವಾರಿಗಳು ಅವಿರೋಧವಾಗಿ ಆರಿಸಿ ಬಂದಿರುವರು.

ಡಾ| ಎ. ಸುಬ್ಬರಾವು (ಅಧ್ಯಕ್ಷ), ಚೇರ್ಕಾಡಿ ಮಹಾಬಲ ಸೆಟ್ಟಿ, ಚೇರ್ಕಾಡಿ ಕೃಷ್ಣಯ್ಯ ಹೆಗ್ಡೆ, ಚೇರ್ಕಾಡಿ ಪುಟ್ಟ ಮರಿ ಮಂಜ, ಕುಂಬಳೆ ರಘುನಾಥ ಪ್ರಭು, ತಡೆಕಲ್ಲು ರಗುರಾಮ ಹೆಗ್ಡೆ, ಆರೂರು ಗೋವಿಂದ ರಾವ್, ಲಕ್ಷ್ಮೀನಾರಾಯಣಾಚಾರ್ಯ ಕುಂಬಳೆ ಗುಂಡಪ್ಪಯ್ಯ ಪೈ, ಆರೂರು ಕರಿಯ, ವಿನ್ಸೆಂಟ್ ಇ. ಲುವಿಸ್. (ಇತರ ಸದಸ್ಯರು)

ಮೊಳಹಳ್ಳಿ— ಕೆಲವು ದಿವಸಗಳಿಂದ ಇಲ್ಲಿಯ ಆಸುಪಾಸುಗಳಲ್ಲಿ ಉಪದ್ರವ ಕೊಡುತ್ತಿದ್ದ ಒಂದು ಚಿಟ್ಟೆ ಹುಲಿಯನ್ನು ಸುವಸೆಳೆ ಸುಬ್ಬಯ್ಯ ಗೌಡರು ತಾ 14ರಲ್ಲಿ ಕೊಂದಿರುವರು.

ಕೊಡ್ಯಾರು— ಪಂಚಾಯತ ಬೋರ್ಡ್ ಚುನಾವಣೆಯು ತಾ 3ರಲ್ಲಿ ಜರಗಿ ಶ್ರೀ ಶ್ರೀನಿವಾಸಯ್ಯನವರು ಅಧ್ಯಕ್ಷರಾಗಿ ಅವಿರೋಧವಾಗಿ ಆರಿಸಲ್ಪಟ್ಟರು.

ಕುಂಬಳೆ— ಇಲ್ಲಿಯ ಉಪಾಧ್ಯಾಯರ ಕೇಂದ್ರ ಸಭೆಯು ತಾ ೧೪ರಂದು ಎಸ್. ಇ ಶಾಲೆಯಲ್ಲಿ ಶ್ರೀ ಬಿ ಪಟ್ಟಾಭಿರಾಮರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಯುತರಾದ ಪಿ. ಭುಜಂಗ ರಾವ್, ಕೆ. ಕೇಶವನ್, ಕೆ. ನರಸಿಂಹ ಇವರು ಯಥಾಪ್ರಕಾರ ಚಟುವಟಿಕೆ, ಭಾಷಣ, ಸಮನ್ವಯ ಪಾಠ ಇವನ್ನು ನಡೆಸಿದರು.

ತಾ. ೧೪ರಂದು ಮಂಗಳೂರು ಜಿಲ್ಲಾ ಬೋರ್ಡು ಆಫೀಸ್ ಕಂಪೌಂಡಿನಲ್ಲಿ ನಡೆದ ಕೃಷ್ಣಪ್ಪ ಮೆಮೋರಿಯಲ್ ಬ್ಯಾಡ್ಮಿಂಟನ್ ಟೂರ್ನಮೆಂಟ್ ಫೈನಲ್ಸ್ ಆಟವು, ಇಲ್ಲಿನ ಲಕ್ಕಿ ಸ್ಟಾರ್ ಟೀಮಿನವರೂ, ಮಂಗಳೂರು ಓರಿಯಂಟಲ್ 'ಎ' ಟೀಮಿನವರೂ ಆಡಿದ್ದಲ್ಲಿ ಇಲ್ಲಿನ ಟೀಮಿನವರು ಜಯಿಸಿದರು. ಕಪ್ಪನ್ನೂ ಪದಕಗಳನ್ನೂ ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಗಡೆಯವರು ಹಂಚಿದರು. ಕಳೆದ ವರುಷವೂ ಇಲ್ಲಿನವರೇ ಕಪ್ಪನ್ನು ಪಡೆದಿದ್ದರು.

ಫರಂಗಿಪೇಟೆ— ತಾ 23-3-53ನೇ ಸೋಮವಾರ ಸಾಯಂಕಾಲ ಘಂಟೆ 6ಕ್ಕೆ ಶ್ರೀ ರಾಮಾ ಹಾ| ಎ| ಶಾಲಾ ವರ್ಧಂತಿಯು ಶ್ರೀ ಕೆ ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಲಿದೆ ಎಲ್ಲರೂ ಈ ಸಮಾರಂಭವನ್ನು ಯಶಸ್ವಿಗೊಳಿಸಲು ಸಹಕರಿಸಬೇಕಾಗಿ ಶಾಲಾ ಮುಖ್ಯೋಪಾಧ್ಯಾಯರು ವಿನಂತಿಸುತ್ತಾರೆ

ಹೆಜಮಾಡಿ— ಇಲ್ಲಿಯ ಹೈಸ್ಕೂಲು ಕಟ್ಟಡದ ಶಂಕುಸ್ಥಾಪನೆ ಸಮಾರಂಭವು ಕಳೆದ ತಾ. 27ರಲ್ಲು ಮಾಥ್ಯೂ ಸೇವಾ ಗ್ರಾಮದ ಆಲ್ ಇಂಡಿಯಾ ವಿಲೇಜ್ ಇಂಡಸ್ಟ್ರೀಸ್ ಎಸೋಸಿಯೇಶನ್ ಸೆಕ್ರೆಟರಿಗಳಾದ ಶ್ರೀ ಜಿ ರಾಮಚಂದ್ರನ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಮದ್ರಾಸಿನ ರೂರಲ್ ವೆಲ್‌ಫೇರ್ ಡೈರೆಕ್ಟರಾದ ಶ್ರೀ ಜಿ. ವೆಂಕಟಾಚಲಪತಿಯವರಿಂದ ವಿಧಿಪೂರ್ವಕವಾಗಿ ಕಟ್ಟಡದ ಅಡಿಗಲ್ಲು ಸ್ಥಾಪಿಸಲ್ಪಟ್ಟಿತು. ಮಾನ್ಯ ಅತಿಥಿಗಳ ಭಾಷಣಗಳನ್ನು ಜಿಲ್ಲೆಯ ರೂರಲ್ ವೆಲ್‌ಫೇರ್ ಆಫೀಸರರಾದ ಶ್ರೀ ಬಾಬು ಸೆಟ್ಟರು ಕನ್ನಡ ಭಾಷೆಗೆ ಪರಿವರ್ತಿಸಿದರು.

ಅದಿ ಉಡುಪಿ— ತಾ 13-3-53 ರಂದು ಇಲ್ಲಿಯ ಹಾಯರ್ ಎಲಿಮೆಂಟರಿ ಶಾಲೆಯ 8ನೇ ತರಗತಿಯ ವಿದ್ಯಾರ್ಥಿಗಳನ್ನು ಬೀಳ್ಕೊಡುವ ಸಮಾರಂಭವು ಶ್ರೀ ಎ ಜೆ. ಅಲ್ಸೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಮಕ್ಕಳ ಕೂಟದ ಕಾರ್ಯದರ್ಶಿಯು ಅಧ್ಯಕ್ಷರನ್ನು ಸ್ವಾಗತಿಸಿ 8 ನೇ ತರಗತಿಯ ಮಕ್ಕಳು ತಮ್ಮ ನೆನಹಿಗಾಗಿ ಶಾಲೆಗೆ ಕೊಟ್ಟಿದ್ದ ಸುಭಾಸಚಂದ್ರ ಭೋಸರ ಚಿತ್ರದ ಅನಾವರಣ ಸಮಾರಂಭವನ್ನು ನೆರವೇರಿಸಬೇಕಾಗಿ ಕೇಳಿಕೊಂಡರು. ಅಧ್ಯಕ್ಷರು ಚಿತ್ರ ಅನಾವರಣ ಮಾಡುತ್ತ ಸುಭಾಸ ಚಂದ್ರರ ಗುಣಕಥನ ಮಾಡಿ ನಮಗೆ ಅವರು ಹೇಗೆ ಆದರ್ಶ ಪ್ರಾಯರಾಗಿರುವರು ಎಂಬದನ್ನು ವಿವರಿಸಿದರು ಮಕ್ಕಳ ಭಾಷಣ ಅಧ್ಯಾಪಕರ ಹಿತೋಕ್ತಿ ಹಾಗೂ ಅಧ್ಯಕ್ಷರ ಸಮಾರೋಪಣ ಭಾಷಣ ದೊಂದಿಗೆ ಸಭೆಯು ಕ್ತಾಯ ವಾಯಿತು.

ಉಡುಪಿ

ಶ್ರೀ ಲಕ್ಷ್ಮೀ ವೆಂಕಟೇಶ ದೇವಸ್ಥಾನದ— ಎದುರು ಪಾರ್ಶ್ವದಲ್ಲಿ ಹೊಸತಾಗಿ ಕಟ್ಟಿಸಿದ ಪ್ರಾಸಾದದ "ಶಿಖರ ಕಲಶ ಪ್ರತಿಷ್ಠೆ ಮತ್ತು ಶ್ರೀಸುಕೃತೀಂದ್ರ ಸಭಾ ಸದನ" ಇದರ ಉದ್ಘಾಟನಾ ಸಮಾರಂಭವನ್ನು ಇದೇ ತಾ 22ನೆ ಆದಿತ್ಯವಾರ ಪ್ರಾತಃಕಾಲದಲ್ಲಿ ಕಾಶಿ ಮಠಾಧೀಶ ಶ್ರೀಸುಧೀಂದ್ರ ತೀರ್ಥ ಶ್ರೀಪಾದಂಗಳವರು ನೆರವೇರಿಸಲಿರುವರು. ಅಂದು ಮಹಾ ಸಮಾರಾಧನೆ, ಉತ್ಸವಾದಿ ಕಾರ್ಯ ಕ್ರಮಗಳಿವೆ ಸ್ವಾಮಿಗಳವರು ಇದೇ ತಾ 14 ರಲ್ಲು ಸಂಜೆ ಉಡುಪಿಗೆ ಆಗಮಿಸಿದರು. ಅವರನ್ನು ಕುಂಜಿಬೆಟ್ಟಿನಲ್ಲಿ ಇದಿರ್ಗೊಂಡು ಮೆರವಣಿಗೆಯಿಂದ ಶ್ರೀ ಲಕ್ಷ್ಮೀ ವೆಂಕಟೇಶ ದೇವಸ್ಥಾನಕ್ಕೆ ಕರೆತರಲಾಯಿತು.

ಮುನಿಸಿಪಲ್ ಸಭೆಯು ಇದೇ ತಾ. 14 ರಲ್ಲು ಸಂಜೆ ಚೇರ್‌ಮೆನ್ ಶ್ರೀ. ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು, ಸರಕಾರಿ ಜಿ. ಓ. ಗಳು ರಿಕಾರ್ಡು ಮಾಡಲಾದ ಬಳಿಕ ಮಾರುತಿ ವೀಥಿಕಾ ಮತ್ತು ಮಸೀದಿ ರಸ್ತೆಗಳನ್ನು ಧೂಳು ಹಾರದ ರಸ್ತೆಗಳನ್ನಾಗಿ ಮಾಡುವರೆ ಸರಕಾರದಿಂದ ರೂ. 25,800 ಸಾಲ ಪಡೆಯುವ ಅರ್ಜಿ ಮಂಜೂರಾಯಿತು. ಉಪಕಮಿಟಿಗಳಿಗೆ ಕೋರಂ ನಾಲ್ಕು ಇರತಕ್ಕದೆಂದಾಯಿತು. ಬೊಬ್ಬರ್ಯ ಒಣಿಯಿಂದ ರಥಬೀದಿ ವರೆಗಿನ ಚರಂಡಿ ರಿಪೇರಿ ಬಗ್ಗೆ ರೂ. 1630 ಸೆಂಕ್ಷನ್ ಮಾಡಲಾಯಿತು. ಮುನಿಸಿಪಲ್ ಬಸ್ ಸ್ಟೇಂಡಿನ ಹಿಂದಿನ ಕಟ್ಟಡವನ್ನು ವರ್ಷಾವಧಿ ಬಾಡಿಗೆಗೆ ಕೊಡಬೇಕೆಂದೂ ಬಾಡಿಗೆಯನ್ನು ಆಡ್ವಾನ್ಸ್ ಕೊಡಬೇಕೆಂದೂ ನಿರ್ಣಯವಾಯಿತು. ಸೊಳ್ಳೆ ಕಾಟ ನಿವಾರಣಾ ಕಾರ್ಯಕ್ಕೆ ಹಂಗಾಮಿಯಾಗಿ ಒಬ್ಬ ಮೇಸ್ತ್ರಿಯನ್ನೂ ನಾಲ್ಕು ಕೂಲಿಗಾರರನ್ನೂ ಸೆಂಕ್ಷನ್ ಮಾಡಲಾಯಿತು.

ದ. ಕ. ಜಿಲ್ಲಾ ಕಮ್ಯೂನಿಸ್ಟ್ ಪಾರ್ಟಿಯ— ಸಮ್ಮೇಳನವು ಈಮೊದಲು ನಿರ್ಣಯಿಸಿದಂತೆ ಇದೇ ತಿಂಗಳ ತಾ 22 23 ರಂದು ನಡೆಯಲಿಕ್ಕಿದ್ದು ಕಾರಣಾಂತರದಿಂದ ಮುಂದುವರಿಸಲಾಗಿದೆ ಎಂದು ಸಮ್ಮೇಳನದ ಸ್ವಾಗತಸಮಿತಿ ಕಾರ್ಯದರ್ಶಿಯವರು ತಿಳಿಸುತ್ತಾರೆ

ಸತ್ಕಾರ ಸಮಾರಂಭ— ಇದೇ ತಾ 15 ರಲ್ಲಿ ಇಲ್ಲಿಯ ಕೇರಳ ಸಮಾಜದಲ್ಲಿ ಶ್ರೀ ಟಿ. ಎನ್. ಕೇಳು ನಂಬಿಯಾರ್ ಮತ್ತು ಅವರ ಸಹಧರ್ಮಿಣಿ ಶ್ರೀಮತಿ ಮೀನಾಕ್ಷಿಅಮ್ಮಾಳ್ ಅವರನ್ನು ಸತ್ಕರಿಸುವ ಸಮಾರಂಭವೊಂದು ಡಾ| ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಸತ್ಕಾರ ಸಮಿತಿ ಪರವಾಗಿ ಶ್ರೀಮತಿ ಕುಂಞಿಕಣ್ಣನವರು ಸ್ವಾಗತ ಭಾಷಣವಿತ್ತರು ಅನಂತರ ಶ್ರೀ ನಂಬಿಯಾರರ ಕಾರ್ಯ ಕುಶಲತೆ ಜನಸೇವಾ ಬುದ್ಧಿ, ಜನ ಪ್ರಿಯತೆಗಳನ್ನು ಕೊಂಡಾಡಿ ಶ್ರೀಗಳಾದ ಬಾಲ ಗಂಗಾಧರ ಪಣ್ಣೀಕರ್, ಕೆ. ಎ. ದೇವದಾಸ್, ಡಾ| ಕೆ. ಎಲ್. ಐತಾಳ್, ಎ. ಜೆ. ಅಲ್ಸೆ, ಬಾಲಕೃಷ್ಣನ್, ಆರ್. ಆರ್. ಕುಂಜೂರ್, ಶಂಕರನ್ ಕುಟ್ಟಿ ಮೆನೋನ್ ಮೊದಲಾದವರು ಭಾಷಣ ಮಾಡಿದರು. ಶ್ರೀ ನಂಬಿಯಾರರು ತಮಗಿತ್ತ ಸತ್ಕಾರಕ್ಕಾಗಿ ಅಭಾರ ಸೂಚಿಸಿ ಉತ್ತರವಿತ್ತರು. ಅಧ್ಯಕ್ಷ ಡಾ| ಪೈಗಳು ಸ್ವಾಭಾವಿಕವಾದ ಸ್ಫೂರ್ತಿದಾಯಕ ಭಾಷಣದಲ್ಲಿ ಶ್ರೀ ನಂಬಿಯಾರರ ಮತ್ತು ಸಮಾಜದ ಶ್ರೇಯೋಭಿವೃದ್ಧಿಯನ್ನು ಹಾರೈಸಿದರು, ಶ್ರೀಮತಿ ಕುಂಞಿಕಣ್ಣನ್‌ರವರು ಧನ್ಯವಾದಗಳನ್ನಿತ್ತರು. ಸಮಾರಂಭದಲ್ಲಿ ಉಪಾಹಾರವಿತ್ತು.

ಸ್ವೀಕಾರ ವಿಮರ್ಶೆ

ಬಾಳ್ಗೊಂಚಲುಗಳು— ಬರೆದವರು: ಬನ್ನಂಜೆ ರಾಮಾಚಾರ್ಯ. ಪ್ರಕಾಶಕರು: ಟಿ. ಶ್ರೀಪತಿ, ಕೃಷ್ಣವಿಹಾರ ಕವಿ ದೇವಾಲಯದ ರಸ್ತೆ, ಕಂಕನಾಡಿ, ಮಂಗಳೂರು ಬೆಲೆ: ರೂ. ೧—೪—೦.

ಈ ಸಂಕಲನದಲ್ಲಿರುವ ಐದು ಸ್ವತಂತ್ರ ಕಥೆಗಳ ಮೂಲಕ ಬನ್ನಂಜೆಯವರು ತಾವು ಉತ್ತಮ ಮಟ್ಟದ ಕಥೆಗಳನ್ನು ಬರೆಯಬಲ್ಲೆವೆಂದು ಕನ್ನಡ ಜನಕ್ಕೆ ತೋರಿಸಿಕೊಟ್ಟಿರುವರು ಬನ್ನಂಜೆಯವರ ಗಂಡು ಶೈಲಿಯನ್ನು ಎಲ್ಲ ಭಾಷಾಭಿಮಾನಿಗಳೂ ಈಗಾಗಲೇ ಮೆಚ್ಚಿಕೊಂಡಿರುವರು ಅವರದು ತೀರ ಸ್ವತಂತ್ರವಾದ ಮಾರ್ಗ, ಭಾಷೆ ನಿರ್ದುಷ್ಟವಾದುದು, ತುಂಡ ತುಂಡವಾದುದು ಶೈಲಿ ಆಕರ್ಷಕ ಮತ್ತು ಮಾತೂ ಮಿತ ಕಥನಕಲೆಯಲ್ಲಿ ಬನ್ನಂಜೆಯವರಿಗೆ ನೈಪುಣ್ಯವಿದೆ ಎಂಬುದಕ್ಕೆ ಈ ಸಂಗ್ರಹದ "ಚವನ ಹೆಂಡ್ತಿ" ಜೀವಂತ ನಿದರ್ಶನವಾಗಬಲ್ಲುದು ಇದಕ್ಕೆ ಸರಿಸಾಟಿಯಾಗಿ ನಿಲ್ಲಬಲ್ಲ ಇನ್ನೊಂದು ಕಥೆ "ಪ್ರೊಫೆಸರರ ಏಕಾಲಕ್ತು" ಬನ್ನಂಜೆಯವರ ನ್ಯಾಯ ದೃಷ್ಟಿಯನ್ನು ನಾವಿಲ್ಲಿ ಗುರುತಿಸಬಲ್ಲೆವು "ಕೊಂದದ್ದು ಯಾರನ್ನು" ಎಂಬ ಮೂರನೆಯ ಕಥೆ ಹಿಂದು—ಮುಸ್ಲಿಂ ಗಲಭೆಯ ಹಿನ್ನೆಲೆಯನ್ನು ಇಟ್ಟುಕೊಂಡು ಬರೆಯಲ್ಪಟ್ಟಿದೆ. ನಮ್ಮ ಕಣ್ಣಿಂಟಿನಿಂದ ನೀರನ್ನು ಹರಿಸುವಷ್ಟರ ಮಟ್ಟಿನ ಪ್ರಭಾವ ಇದಕ್ಕಿದೆಯಾದರೂ, ಒಂದು ಉದ್ದೇಶವನ್ನು ಇಟ್ಟುಕೊಂಡು ಬರೆದ ಹಾಗೆ ಈ ಕಥೆ ನಿರ್ದುಷ್ಟವಾದ ಕಣ್ಣಿಗೆ ಕಾಣುತ್ತದೆ ಇದೇ ದೋಷವನ್ನು "ಹೆಂಗಸಿನ ಮನಸ್ಸು" ಎಂಬ ಕಥೆಯಲ್ಲಿಯೂ ನಾವು ಗುರುತಿಸಬಹುದು. ಸಾಮಾನ್ಯವಾಗಿ ಕಣ್ಣಿಗೆ ಬೀಳದ ಆದರ್ಶ ಚಿತ್ರವೊಂದನ್ನು ನಾವಿಲ್ಲಿ ನೋಡುತ್ತೇವೆ. ಹೊಲಸು ರಾಡಿಯ ಬದುಕಿಗಿಂತ ಪವಿತ್ರ ಜೀವನ ಎಷ್ಟಕ್ಕೂ ಲೇಸೆಂಬುದರಿಂದ, ನಮ್ಮ ಮನಸ್ಸು ಈ ಕಥೆಯನ್ನೋದಿದ ಬಳಿಕ ಒಂದು ಮೆಟ್ಟಲು ಮೇಲೇರುತ್ತದೆ. ಕೊನೆಯ "ವೈವಾಹಿಕ ದುರಂತ"ವೆಂಬ ಕಥೆಯ ವಸ್ತು ತೀರ ನವೀನವೆನ್ನಬಹುದು. ಸತ್ಯವನ್ನು ಮುಚ್ಚಿಡಲು ಸ್ವಾರ್ಥಿಗಳು ಯತ್ನಿಸಿ, ಅದಕ್ಕೆ ಸರಕಾರದ ರಕ್ಷೆಯನ್ನು ದೋಚಿಸಿಕೊಳ್ಳುವ ಪರಿಯನ್ನು ಇಲ್ಲಿ ಚಿತ್ರಿಸಿರುವರು. ಒಟ್ಟಿನಲ್ಲಿ ಇಲ್ಲಿರುವ ಎಲ್ಲ ಕಥೆಗಳೂ ಹೃದಯಂಗಮವಾಗಿವೆ. ಭಾಷೆಯಲ್ಲಿ ಪೈಸೂರು ಕನ್ನಡದ ಮೋಹ ಬನ್ನಂಜೆಯವರಿಗೆ ಕೆಲವು ಟ್ಟಿಗೆ ಅಂಟಿಕೊಂಡಂತಿರುವುದನ್ನು ದಕ್ಷಿಣ ಕನ್ನಡ ಜಿಲ್ಲೆಯ ನಾವು ಒಂದು ಕುಂದಾಗಿ ಪರಿಗಣಿಸಿದರೆ, ಅದಕ್ಕೆ ಆಕ್ಷೇಪ ಇರದೆಂದು ಎಣಿಸಿದ್ದೇವೆ, ಬನ್ನಂಜೆಯವರ ಸಾಹಿತ್ಯ ಸೇವೆ ಕತೋಽಪೃತಿಕರವಾಗಿ ನೆರವೇರಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಮದುವೆಯಾದ ಸ್ತ್ರೀ ಪುರುಷರ ಸಲುವಾಗಿ
ಬರೆಯಲ್ಪಟ್ಟ ಪುಸ್ತಕ

ಮಿತಸಂತತಿ

ಹುಟ್ಟುವ ಮಕ್ಕಳು ಆರೋಗ್ಯ ಸಂಪತ್ತು ಸೌಭಾಗ್ಯ ಮೊದಲಾದುವನ್ನು ಸಾಕಷ್ಟು ಪಡೆಯುವ ಹಾಗೆ ಯತ್ನವರು ಸಾಧಿಸಲಾಗುವಂತೆ ಆತ್ಮನುಕೂಲವಾದ ಪರಿಸ್ಥಿತಿ ಯಾವುದೋ ಅದರಂತೆ ದಂಪತಿಗಳು ಮಕ್ಕಳನ್ನು ಹೆರುವ ಹಾಗೆ ಅವಶ್ಯವಾದ ತತ್ವಗಳನ್ನು ಬೋಧಿಸುವ ನವೀನ ಪುಸ್ತಕ ಬೆಲೆ 0-8-0

ಬರೆಯಿರಿ. ನವಭಾರತ ಪುಸ್ತಕ ಭಂಡಾರ, ಉಡುಪಿ.

ಅಸಾಧಾರಣ ವಾಗ್ಮಿಗಳೂ ಗ್ರಂಥಕರ್ತರೂ ಆದ
ಶ್ರೀ. ಎಸ್. ಪಂಚಪಕೇಶ ಐಯ್ಯರ್, ಎಂ. ಎ., ಐ. ಸಿ. ಎಸ್., ಬಾರ್-ಎಟ್-ಲಾ, ಎಸ್. ಎಸ್. ಎಲ್. ಅವರು ಬರೆದ Tales of Ind ಎಂಬ ಕಥಾವಳಿಯ ಅನುವಾದ

ಭಾರತೀಯ ಕತೆಗಳು

ಅನುವಾದಕರು— ಶ್ರೀ. ಕೊರಡ್ಕಲ್ ಶ್ರೀನಿವಾಸ ರಾವ್.

ಪ್ರತಿಯೊಬ್ಬನಿಗೂ ತನ್ನ ಸಾಮಾಜಿಕ ಹಾಗೂ ವ್ಯಾವಹಾರಿಕವಾದ ಮಾತುಗಾರಿಕೆಯು ಸ್ವಾರಸ್ಯವಾಗಿ, ಪರಿಣಾಮಕಾರಿಯಾಗಬೇಕೆಂಬ ಹಿರಿಯಾಸೆ ಇದ್ದೇ ಇದೆ. ಇದು ಸಿದ್ಧಿಸಬೇಕಾದರೆ ಮಾತಿನ ನಡುನಡುವೆ ಸಂದರ್ಭೋಚಿತವಾದ ಉಪಮೆ, ಗಾದೆ, ಕಥೆ ದೃಷ್ಟಾಂತ ಇತ್ಯಾದಿಗಳು ಬರಬೇಕು ಅಂತಹ ಅಮೂಲ್ಯ ಭಂಡಾಗಾರವೇ ಈ ಭಾರತೀಯ ಕತೆಗಳು.

ಎಲ್ಲರೂ ಅವಶ್ಯವಾಗಿ ಓದತಕ್ಕ ಅಪೂರ್ವ ಗ್ರಂಥ

151 ಪುಟಗಳು ಬೆಲೆ ರೂ. 1-12-0

ನವಭಾರತ ಪುಸ್ತಕ ಭಂಡಾರ, ಉಡುಪಿ.

The Canara Industrial & Banking Syndicate Ltd. BYNDOOR

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್ ಬೈಂದೂರು.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಮೇಲ್ಕಂಡ ಬ್ಯಾಂಕಿನಲ್ಲಿ ನಗಗಳ ಆಡವಿನ ಮೇಲೆ ಸಾಲ ಪಡೆದುದರಿಂದ ಸದ್ರಿ ಸಾಲ ಮತ್ತು ಬಡ್ಡಿ ವಗೈರೆ ಬಗ್ಗೆ ರಿಜಿಸ್ಟ್ರಿ ನೋಟೀಸು ಕೊಟ್ಟಲ್ಲಿ, ಕೆಲವರು ನೋಟೀಸನ್ನು ಪಡೆದು ಹಣ ಪಾವತಿ ಮಾಡದೆ ಇರುವುದರಿಂದಲೂ, ಕೆಲವು ನೋಟೀಸುಗಳು ವಾಪಾಸು ಬಂದದ್ದರಿಂದಲೂ, ಒಬ್ಬರು ಮೃತಪಟ್ಟಿರುವುದರಿಂದಲೂ, ಈ ಮೂಲ್ಯ ಸದ್ರಿಯವರಿಗೂ ಯಾ ಅವರ ವಾರಿಸುದಾರರಿಗೂ ತಿಳಿಯಪಡಿಸುವುದೇನೆಂದರೆ:- ಅವರು ತಮ್ಮ ಸಾಲದ ಮೊಬಲಗನ್ನು ಮತ್ತು ಅದರ ಮೇಲಣ ಬಡ್ಡಿ ವಗೈರೆಯನ್ನು ಇದೇ ತಾರೀಖು 23ನೇ ಸೋಮವಾರ ಪಾವತಿ ಮಾಡದಿದ್ದಲ್ಲಿ ಆಡವಿಟ್ಟ ನಗಗಳನ್ನು ಇದೇ ತಾರೀಖು ಮಾರ್ಚ 27ನೇ ಶುಕ್ರವಾರ (27-3-53) ಮಧ್ಯಾಹ್ನ 3 ಗಂಟೆಗೆ ಯಾ ಬ್ಯಾಂಕಿಗೆ ಯುಕ್ತಕಂಡ ಇನ್ನಿತರ ದಿನಗಳಲ್ಲಿ ಪುನಃ ನೋಟೀಸು ಕೊಡದೆ ಬಹಿರಂಗವಾಗಿ ಏಲಂ ಮಾಡಲಾಗುತ್ತದೆ,

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಸಾಲದ ಮೊಬಲಗು-
306/50, 1157/52	ಸುಬ್ರಾಯ ಶೇರುಗಾರ್, ವೆಂಕಟ್ರಮಣ ಶೇರುಗಾರರ ಮಗ, ಬಾಡದಲ್ಲಿರುವವರು, ಬೈಂದೂರು.	ರೂ. 84/- 12/-
331/50, 1208/50 105/51, 386/51 743/51	ಎಮ್. ಎ. ಮೊಹಿದ್ದೀನ್ ಸಾಹೇಬ್ ಅಬ್ದುಲ್ ಖಾದರ್ ಸಾಹೇಬರ ಮಗ, ಬೈಂದೂರು.	67/- 15/- 15/- 45/- 150/-
548/50, 396/50 112/50, 524/50 95/51, 388/52	ದುಗ್ಗಪ್ಪ ಶೇರುಗಾರ, ಅಣ್ಣಪ್ಪ ಶೇರುಗಾರರ ಮಗ, ಕೋಟೆಬಾಗಿಲು, ಪಡುವರಿ ಪೋಸ್ಟ್.	15/- 13/- 13/- 22/- 15/- 75/-
424/50, 362/51 079/51, 770/52 152/52	ಯು. ನಾರಾಯಣನಾಯಕ್ ವೆಂಕಟನಾಯ್ಕರ ಮಗ, ಟೀಚರ್, ಬೈಂದೂರು	60/- 10/- 60/- 42/- 72/-
33/50, 968/50	ಬಿ. ಲಕ್ಷ್ಮಣ ಆಚಾರಿ, ಕೃಷ್ಣಾಚಾರಿ ಮಗ, ಕಾರ್ಪೆಂಟರ್, ಬೈಂದೂರು.	44/- 11/-
463/50	ಬಾಲಯ್ಯ ಶೇರುಗಾರ, ವೆಂಕಟ್ರಮಣ ಶೇರುಗಾರರ ಮಗ, ರೈತ, ಬಾಡದಲ್ಲಿರುವವರು, ಬೈಂದೂರು.	50/-
682/50	ಎಂ. ಎ. ಯೆಸ್ಸೀಮ್, ಮೊಹಿದ್ದೀನ್ ಸಾಹೇಬರ ಮಗ, ಬೈಂದೂರು.	54/-
791/50	ಬಿ. ನಾರಾಯಣ ಶ್ಯಾನಭಾಗ, ಸುಬ್ರಾಯ ಶ್ಯಾನುಭಾಗರ ಮಗ ಕೆರ್ಗಾಲ್ ಗ್ರಾಮ, ಕೆರ್ಗಾಲು ಪೋಸ್ಟು.	100/-
320/50, 600/51 805/51	ಮಲ್ಲಯ್ಯ ಶೇರುಗಾರ, ಟಪಾಲ್ ಅಣ್ಣಪ್ಪ ಶೇರುಗಾರರ ಮಗ, ಪಡುವರಿ ಪೋಸ್ಟು.	11/- 10/- 8/-
1504/50	ಕೆ. ರುದ್ರಪ್ಪ ಆಚಾರಿ, ಮಹಾಬಲ ಆಚಾರಿ ಮಗ, ನಾಗೂರು ಗ್ರಾಮ, ಕಿರಿಮಂಜೇಶ್ವರ ಪೋಸ್ಟು.	65/-
59/51, 494/51 26/51, 772/51 50/52, 554/52	ಎಮ್. ಗಣಪಯ್ಯ ಶೇರುಗಾರ, ಸುಬ್ರಾಯ ಶೇರುಗಾರರ ಮಗ, ಮಾಡಿಕ್ಕೇರಿ, ಮೈಯ್ಯಾಡಿ ಪೋಸ್ಟು	649/- 10/- 170/- 75/- 110/- 35/-
0/51, 1193/51	ಬಿ. ರಾಮಪ್ಪ, ಬೈಂದೂರು ಕ್ಲಬ್ ಹೋಟೆಲ್, ಬೈಂದೂರು.	28/- 14/-
244/51	ವೆಂಕಟ್ರಮಣ ಶೇರುಗಾರ, ದಾಸ ಶೇರುಗಾರರ ಮಗ, ಕೋಟೆ ಬಾಗಿಲು, ಪಡುವರಿ ಪೋಸ್ಟು.	21/-
8/51, 501/51 4/51, 595/51 5/52, 241/52	ಬಿ. ಪುರುಷೋತ್ತಮ ಜೋಯಿಸ್, ಕೃಷ್ಣ ಜೋಯಿಸರ ಮಗ, ಬಾಡದಲ್ಲಿರುವವರು, ಬೈಂದೂರು.	1193/- 925/- 850/- 705/- 35/- 35/-
444/51	ಕಾಕು ಬಿನಗಯ್ಯ, ದುರ್ಗ ಕಾಮತಿ ಮಗ, ಉಪ್ಪುಂದ.	28/-
817/51	ಬಿ. ಕೃಷ್ಣಪ್ಪ ಶೆಟ್ಟಿ, ವೆಂಕಪ್ಪ ಶೆಟ್ಟರ ಮಗ, ಬಿಯಾರ್, ಬೈಂದೂರು.	330/-
997/51	ಜಿ. ಎಮ್. ಮೀರಾಸಾಹೇಬ್, ಹೈದರ್ ಸಾಹೇಬರ ಮಗ ಮರ್ಚಂಟ್, ಗೋಳಿಹೊಳೆ ಪೋಸ್ಟು.	89/-
0/51, 580/51	ಯು. ಗೋವಿಂದರಾಯ ಶೇಟ್, ಸುಬ್ರಾಯ ಶೇಟರ ಮಗ, ಉಪ್ಪುಂದ.	75/- 95/-
823/51	ವೆಂಕಟಮ್ಮ, ಮಾಸ್ತಿಮಗಳು, ಕರಿಕಟ್ಟು ಮನೆ ಪಡುವರಿ ಪೋಸ್ಟು.	65/-
1397/51	ಮ್ಯಾನುಯಲ್ ಡಯಾಸ್, ಕಾಸ್ಮಿರ್ ಡಯಾಸ್ ಕೋಟೆ ಬಾಗಿಲು, ಪಡುವರಿ ಪೋಸ್ಟು	180/-
47/51, 336/52 508/52	ಗೋವಿಂದ ಶೇರುಗಾರ, ಮಂಜಯ್ಯ ಶೇರುಗಾರರ ಮಗ ಕೋಟೆ ಬಾಗಿಲು, ಪಡುವರಿ ಪೋಸ್ಟು	35/- 20/- 10/-
233/52	ನಾಗ, ಸುಬ್ಬನ ಅಳಿಯ, ನಾವುಂದ ಗ್ರಾಮ, ಕೊಲ್ಲೂರು.	65/-
217/52	ಪುಟ್ಟಮ್ಮ, ಗೊಂಡಿಮನೆ ನಾರಾಯಣ ಶೇರುಗಾರರ ಹೆಂಡತಿ, ಬಿಜೂರು ಪೋಸ್ಟು.	142/-
294/52	ಎಚ್. ಅಣ್ಣಪ್ಪ ಶೇರುಗಾರ, ದುಗ್ಗಪ್ಪ ಶೇರುಗಾರರ ಮಗ, ಪಡುವರಿ ಪೋಸ್ಟು.	20/-
324/52	ಬಿ. ಖಾದಿರ್ ಸಾಹೇಬ್, ಮಹಮ್ಮದ್ ಸಾಹೇಬರ ಮಗ ಮರ್ಚಂಟ್, ಗೋಳಿಹೊಳೆ ಪೋಸ್ಟು.	90/-

ಬೈಂದೂರು
14-3-53

K. P. Urala
ಏಜಂಟ್

ಮಂಗಳೂರು

ಹೆಸರು ಬದಲಾವಣೆ-- ಇಷ್ಟರ ತನಕ ದ. ಕ. ತೆಂಗು ಅಡಿಕೆ ಮಾರ್ಕೆಟ್ ಕಮಿಟಿ ಎಂದು ಇದ್ದುದನ್ನು 'ದಿ ಸೌತ್ ಕೆನರಾ ಮಾರ್ಕೆಟ್ ಕಮಿಟಿ' ಎಂಬುದಾಗಿ ರೂಪಾಂತರ ಮಾಡಲಾಗಿದೆ. ತೆಂಗು ಅಡಿಕೆ ವ್ಯಾಪಾರಸ್ಥರು ಇನ್ನು ಮುಂದೆ 'ಸೆಕ್ರೆಟರಿ ಸೌತ್ ಕೆನರಾ ಮಾರ್ಕೆಟ್ ಕಮಿಟಿ, ಪೋಸ್ಟ್ ಬೋಕ್ಸ್ ನಂಬ್ರ 63 ಮಂಗಳೂರು.] ವಿಳಾಸಕ್ಕೆ ಪತ್ರ ವ್ಯವಹಾರ ನಡೆಸ ಬೇಕಾಗಿ ಸಂಬಂಧಪಟ್ಟವರು ತಿಳಿಸುತ್ತಾರೆ.

ದ. ಕ. ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯು ಇದೇ ತಾ. 23ನೇ ಸೋಮವಾರ ಪೂರ್ವಾಹ್ನ 11 ಘಂಟೆಗೆ ಬೋರ್ಡಿನ ಸಭಾಭವನದಲ್ಲಿ ಜರಗುವುದಾಗಿ ಅಧ್ಯಕ್ಷರು ತಿಳಿಸುತ್ತಾರೆ.

ಶೈಕ್ಷಣಿಕ ವಸ್ತುಪ್ರದರ್ಶನ-- ಸ್ಥಳೀಯ ಸರಕಾರಿ ತರಬೇತಿ ಕಾಲೇಜಿನಲ್ಲಿ ಇದೇ ತಾ. 14ರಂದು ಬೆಳಿಗ್ಗೆ ಕೆನರಾ ಹೈಸ್ಕೂಲಿನ [ಉರ್ವ] ಮುಖ್ಯೋಪಾಧ್ಯಾಯರಾದ ಶ್ರೀಯು. ಶೇಷಮರಾಯರು. ಶೈಕ್ಷಣಿಕ ವಸ್ತುಪ್ರದರ್ಶನವನ್ನು ತೆರೆದರು. ಈ ವಸ್ತುಪ್ರದರ್ಶನವನ್ನು ವೈಜ್ಞಾನಿಕ ಮತ್ತು ಚಾರಿತ್ರಿಕ ಎಂದು ಎರಡು ವಿಭಾಗಗಳಾಗಿ ಮಾಡಲಾಗಿದೆ. ವೈಜ್ಞಾನಿಕ ವಿಭಾಗದಲ್ಲಿ ವಿದ್ಯುಚ್ಛಕ್ತಿಯ ರೈಲು ವಿವಿಧ ಗೇಸ್ ಟ್ಯೂಬ್‌ಗಳಿಂದ ವಿವಿಧ ಬಣ್ಣದ ದೀಪಗಳು ಸೈರನ್ ಮೊದಲಾದುವು ಇದ್ದವು. ಚಾರಿತ್ರಿಕ ವಿಭಾಗದಲ್ಲಿ ಜಗತ್ತಿನ ವಿವಿಧ ಮನುಷ್ಯರ ಚಿತ್ರಗಳನ್ನು, ದೇಶದ ಮನೆ, ಹಣ, ಸಹಜ ಸಸ್ಯಗ ನಕಾಶೆಗಳನ್ನೂ ಜಗತ್ತಿನ ಏಳು ಅದ್ಭುತಗಳ ನಕಾಶೆಗಳನ್ನೂ ಇತರ ಕಲೆ ಮತ್ತು ಕೈಗಾರಿಕೆಗಳನ್ನೂ ಪ್ರದರ್ಶಿಸಲಾಯಿತು.

ವಿದೇಶ ಪ್ರವಾಸ--ಶ್ರೀ ಎನ್. ಮಹಾಲಿಂಗ ಅಡ್ಯಂತಾಯ ನಿವೃತ್ತ ಜಾಯಿಂಟ್ ಡೈರೆಕ್ಟರ್ ಒಫ್ ಇಂಡಸ್ಟ್ರೀಸ್, ಅವರು ತಮ್ಮ ಪತ್ನಿ ಶ್ರೀಮತಿ ನಾಗಮ್ಮ ಅಡ್ಯಂತಾಯರೊಂದಿಗೆ ಮತ್ತು ಡಾ. ಕೆ. ಬಾಲಪ್ಪ ಸೆಟ್ಟರು ತಮ್ಮ ಸಹಧರ್ಮಿಣಿ ಶ್ರೀಮತಿ ಹೀರಾ ಸೆಟ್ಟರೊಂದಿಗೆ ಗೋತ್ರಾಗಳ ದಿನಾಂಕ 9ರಂದು ಬೊಂಬಾಯಿಂದ ವಿದೇಶಕ್ಕೆ ಪ್ರವಾಸ ಕೈಗೊಳ್ಳುವರು. ಡಾ| ಸೆಟ್ಟರು ಆರು ತಿಂಗಳು ವಿಯನ್ನದಲ್ಲಿ ಪೋಸ್ಟ್ ಗ್ರಾಜುವೇಟ್ ಕೋರ್ಸ್ ಪಡೆಯಲಿರುವರು. ಶ್ರೀ ಅಡ್ಯಂತಾಯರು ಸ್ವಲ್ಪ ಕಾಲದವರೆಗೆ ಇಂಗ್ಲೆಂಡಿನಲ್ಲಾಗಲಿ ಫ್ರಾನ್ಸಿನಲ್ಲಾಗಲಿ ತಂಗುವರು. ಮಹಾರಾಣಿ [illegible] ಪಟ್ಟಾಭಿಷೇಕ ಮಹೋತ್ಸವದ ಧಾರಣ ಸಮಾರಂಭವನ್ನು ನೋಡಿ ಜುಲೈ ದಿನಾಂಕ 19ರಲ್ಲಿ ಹೆನ್ಸಿಂಕಿನಲ್ಲಿ ನಡೆಯುವ ರೇಡಿಯೋಲೋಜಿಕಲ್ ಪರಿಷತ್ತಿಗೆ ಹೋಗಲಿರುವರೆಂದು ತಿಳಿದು ಬಂದಿದೆ.

ಸೈಂಟ್ ಎಲೋಸಿಯಸ್ ಕಾಲೇಜಿನ ನೇಶನಲ್ ಕೇಡೆಟ್- ಕೋರಿನವರು ಇದೇ ತಾ 4ರಲ್ಲು ರಾತ್ರಿ ಮೋಹಿನೀ ವಿಲಾಸದಲ್ಲಿ ಒಂದು ಬೆಳದಿಂಗಳೂಟವನ್ನು ಏರ್ಪಡಿಸಿದ್ದರು. ಕೋರಿನ ಮುಖ್ಯಾಧಿಕಾರಿಗಳು ಕೆಪ್ಟನ್ ವಿ. ಕೆ. ನಂಬಿಯಾರರು, ಕಾಲೇಜಿನ ಪ್ರಿನ್ಸಿಪಾಲರು, ವೈಸ್ ಪ್ರಿನ್ಸಿಪಾಲರು ದಯಮಾಡಿಸಿದ್ದರು. ಶ್ರೀ ಕೆ. ಎ ಅಯ್ಯಪ್ಪನವರು ಸ್ವಾಗತವನ್ನು ಬಯಸಿದರು ಕೇಡೆಟ್ ಏಮ್ ಮಂಜುನಾಥ ಮಲ್ಯರು ತನ್ನ ಕೋರಿನ ಅಧ್ಯಾಪಕರ ಸ್ತುತಿವಾಚನವನ್ನು ನುಡಿದರು ಸೆಕೆಂಡ್ ಲೆಫ್ಟಿನೆಂಟ್ ಜಿ. ಟಿ ನಾರಾಯಣರಾಯರು ಉಚಿತವಾದ ಉತ್ತರವನ್ನಿತ್ತರು.

ಸರಕಾರಿ ತರಬೇತಿ ಕಾಲೇಜು ವಾರ್ಷಿಕೋತ್ಸವವು— ಇದೇ ತಾ. 13ರಲ್ಲು ಪಾರ್ಲಿಮೆಂಟಿನ ಸದಸ್ಯ ಶ್ರೀ ಕೆ. ಸದಾನಂದ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ಎಸ್ ಅಂಚನ್ ಇವರು ಸ್ವಾಗತ ಭಾಷಣ ಮಾಡಿದರು. ರೆ. ಫಾ. ವಿ. ಜಿ. ಎಫ್. ರೇಗೋರವರು ಕಾಲೇಜಿಗೆ ಶುಭವನ್ನು ಕೋರಿದರು, ಶ್ರೀ. ಕೆ. ಕೆ. ವೀರಪ್ಪನವರು ಅದಕ್ಕೆ ಉತ್ತರವಿತ್ತರು. ಅದರಂತೆ ತರಬೇತಿ ಶಾಲೆಯ ವಿಚಾರವಾಗಿ ಸ್ವಸ್ತಿವಾಚನ ಹೇಳಿದ ಶ್ರೀ ಗುರುರಾಜ ಭಟ್ಟರ ಭಾಷಣಕ್ಕೆ ಶ್ರೀ ಶೇಖ್ ಸಾಬಮ್ಮನವರು ಉತ್ತರವಿತ್ತರು. ಅನಂತರ ತರಬೇತಿ ಕಾಲೇಜಿನ ವರದಿಯನ್ನು ಶ್ರೀ ರಾಘವ ಬಾಳಿಗರೂ ತರಬೇತಿ ಶಾಲೆಯ ವರದಿಯನ್ನು ಶ್ರೀ. ಎ. ಬಿ. ಲೋಬೋರವರೂ ಓದಿದರು. ಬಹುಮಾನ ವಿತರಣೆಯಾದ ಮೇಲೆ ಅಧ್ಯಕ್ಷರ ಭಾಷಣವಾಗಿ ವಿನೋದಾವಳಿಯೊಂದಿಗೆ ಸಮಾರಂಭವು ಕೊನೆಗೊಂಡಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಉಪಾಧ್ಯಾಯರು ತಮ್ಮ ಕೇಳಿಕೆಗಳಿಗಾಗಿ ಮುಷ್ಕರ ಸತ್ಯಾಗ್ರಹ ಮಾಡಬಾರದೆಂದು ಎಚ್ಚರಿಕೆಯಿತ್ತರು.

ಗೇರುಬೀಜ ಮಜೂರರ ಸಭೆಯು--ತಾ. 10ರಲ್ಲು ಸಂಜೆ ಕಾರ್ಲ್ ಹೇಬಿಚರ ಕೈಕಂಬದ ಬಳಿ ಗೇರುಬೀಜ ಕೆಲಸಗಾರರ ಸಂಘದ ಆಶ್ರಯದಲ್ಲಿ ಜರಗಿತು. ಶ್ರೀ ಎ ಶಂಕರನಾರಾಯಣರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಬಿ. ಲಿಂಗಪ್ಪ ಸುವರ್ಣರು ಮಾತನಾಡಿದ ಬಳಿಕ ಅಧ್ಯಕ್ಷರು ಮಾತನಾಡಿ ಅಕ್ಕಿಯ ಕ್ರಯ ದಿನೇ ದಿನೇ ಏರುತ್ತಿರುವುದನ್ನು ಖಂಡಿಸಿದರು.

ದೇವಸ್ಥಾನಗಳ ಎಂಡೋಮೆಂಟ್ಸ ಡೆಪ್ಯುಟಿ ಕಮಿಶನರರು- ಇದೀಗ ಈ ಜಿಲ್ಲೆಯ ದೇವಸ್ಥಾನಗಳನ್ನೂ ಅವುಗಳಿಗೆ ಸಂಬಂಧಿಸಿದ ಸಂಸ್ಥೆಗಳನ್ನೂ ಸಂದರ್ಶಿಸುತ್ತಾರೆ. ಮಂಗಳೂರಲ್ಲಿ ಅವರು ಶ್ರೀ ವೆಂಕಟ್ರಮಣ ದೇವಸ್ಥಾನವನ್ನು ಸಂದರ್ಶಿಸಿ ಆ ದೇವಸ್ಥಾನದ ವತಿಯಿಂದ ನಡೆಯುವ ಶಾಲೆಗೂ ಭೇಟಿಯಿತ್ತರು. ಉಡುಪಿಯ ಶ್ರೀಕೃಷ್ಣ ದೇವಾಲಯವನ್ನೂ, ಸುಬ್ರಹ್ಮಣ್ಯದ ದೇವಾಲಯವನ್ನೂ ಬಂಟ್ವಾಳ ಮತ್ತು ಪೆರ್ಡೂರುಗಳ ದೇವಾಲಯಗಳನ್ನೂ ಸಂದರ್ಶಿಸುತ್ತಾರೆ

ಆಹಾರ ಪರಿಸ್ಥಿತಿ--ಇದೇ ತಾ 8ರಲ್ಲು ಸಂಜೆ ಜಿಲ್ಲಾ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಕೇಂದ್ರ ಮೈದಾನಿನಲ್ಲಿ ಸಾರ್ವಜನಿಕ ಸಭೆಯೊಂದು ಜರಗಿ ಏರುತ್ತಿರುವ ಅಕ್ಕಿಯ ಬೆಲೆಯ ಕುರಿತು ಚರ್ಚಿಸಿತು. ಹೊಸದುರ್ಗ ಮತ್ತು ಮಲಬಾರು ಜಿಲ್ಲೆಗಳಿಗೆ ಸಮುದ್ರ ಹಾಗೂ ನೆಲದಾರಿಗಳಿಂದ ಅಕ್ಕಿಯ ಕಳ್ಳ ಸಾಗಾಟವಾಗುತ್ತಿದೆ. ಇದನ್ನು ತಡೆಯುವಲ್ಲಿ ಮಳೆಗಾಲದ ಜಿಲ್ಲೆಯ [illegible] ಪರಿಸ್ಥಿತಿ ಕಲೆದೋರುವುದು. ದ. ಕ. ಸರಕಾರ ಕಂಟ್ರೋಲು [illegible] ಪ್ರಚಲಿತ ಬಜಾರು ಧಾರಣೆಗಳಲ್ಲಿ ಅಕ್ಕಿಯನ್ನು ಕೊಂಡು ಕೊಂಡು ಸಂಗ್ರಹಿಸಿ ನಿರ್ಧರಿಸಿದ ಬೆಳೆಯ [illegible] ಎಂಬ ಮತವು ಕೇಳಿ ಬಂದುದರಿಂದ ಸರಕಾರವು ಈಗ ಬಜಾರು ಧಾರಣೆಯಲ್ಲಿ ಕೊಂಡು ಕೊಳ್ಳುವುದನ್ನು ನಿಲ್ಲಿಸಿದುದರಿಂದ ಬೆಲೆಯೂ ಸ್ಥಿಮಿತಕ್ಕೆ ಬರುತ್ತಿದೆ ಎಂದು ಮುಂತಾಗಿ [illegible] ಅಭಿಪ್ರಾಯಗಳು ಸೂಚಿಸಲ್ಪಟ್ಟವು. ಕೊನೆಗೆ ಸಭೆಯಲ್ಲಿ ಈ ಕೆಳಗಿನ ನಿರ್ಣಯಗಳಾದುವು: ದಕ್ಷಿಣಕನ್ನಡದಿಂದ ಹೊರಪ್ರದೇಶಕ್ಕೆ ಅಕ್ಕಿಯ ಸಾಗಾಟವಾಗದಂತೆ ತಡೆಯಲು ಸರಕಾರವನ್ನು ವಿನಂತಿಸಿಕೊಳ್ಳಬೇಕು. 2. ಮಿತಧಾರಣೆಯ ಅಂಗಡಿಗಳ ಸಂಖ್ಯೆಯನ್ನೂ ಹೆಚ್ಚಿಸುವುದಲ್ಲದೆ ಎಂಟು ಔನ್ಸ್ ಮಿತಿಯು ನಿತ್ಯ ನೆಯೂಗುವಂತೆ ಸರಕಾರವನ್ನು ವಿನಂತಿಸಿ ಕೊಳ್ಳಬೇಕು. ಈ ನಿರ್ಣಯಗಳನ್ನು ಜಿಲ್ಲಾ ಕಲೆಕ್ಟರರಿಗೆ ವಿವರಿಸುವುದಕ್ಕಾಗಿ ಶ್ರೀಗಳಾದ ಬಿ. ಆರ್. ಕರ್ಕೇರ್, ಎ. ಶಂಕರ ಆಳ್ವ ಮತ್ತು ಬಿ. ಜಿ. ಸೆಟ್ಟಿ ಇವರುಗಳಿಂದೊಡಗೂಡಿದ ನಿಯೋಗವೊಂದು ಜಿಲ್ಲಾ ಕಲೆಕ್ಟರನ್ನು [illegible] ಕಾಣವಿಯೊಂದ ನೇಮಿಸಿತು.

ಮನಸಿನ ಹಿರಿಮೆ

(೧ನೇ ಪುಟದಿಂದ)

ಕೆಲಸದ ರೇಖಾ ಚಿತ್ರವೊಂದನ್ನು ಬಿಡಿಸಿದರೆ ಅದು ಸರಳ ರೇಖೆಯಾಗಿರುವುದು ಶಕ್ಯವಿಲ್ಲ. ಒಂದು ಕಂಸ (ಅಥವಾ ವೃತ್ತಾಂಶ)ದ ರೂಪದಲ್ಲಿ ಅದು ಇರಲೇ ಬೇಕಾಗುವುದು. ಬುದ್ಧಿಜೀವಿಗಳ ಸ್ಥಾನವು ಈ ಕಂಸದ ನಡುಮಧ್ಯದಲ್ಲಿರುತ್ತದೆ. ಇಡೀ ಸಮಾಜದ ಶ್ರೇಯಸ್ಸಿನ ದೃಷ್ಟಿಯನ್ನು ಇಟ್ಟುಕೊಂಡಿರುವವರೇ ಮಧ್ಯಮ ವರ್ಗದ ಜನರೆಂದು ಹೇಳಬಹುದು. ಈ ಮಧ್ಯಮ ವರ್ಗದ ಜನರ ಸ್ಥಿತಿಗತಿಯನ್ನೇ ಹೊಂದಿಕೊಂಡು ಸಮಾಜ ಉನ್ನತಿ ಅವನತಿಗಳ ಮೆಟ್ಟಲನ್ನು ತುಳಿಯುತ್ತದೆ.

ಆದುದರಿಂದ ಸಮಾಜದ ಪುನಃ ನಿರ್ಮಾಣ ಮಾಡಬೇಕೆಂದು ಕಾರ್ಯಕ್ರಮವನ್ನು ರೂಪಿಸುವಾಗ ಬುದ್ಧಿಜೀವಿಗಳೆನಿಸಿದ ಮಧ್ಯಮ ವರ್ಗವನ್ನು ಮಟ್ಟಹಾಕುವುದು ಒಳ್ಳೆಯದಲ್ಲ. ಅವರು ಅಭಿವೃದ್ಧಿ ಹೊಂದುವಂತೆ ಸಕಲಾನುಕೂಲತೆಗಳನ್ನೂ ಕಲ್ಪಿಸಿಕೊಟ್ಟು ಸಮಾಜದ ಉಚ್ಚ-ನೀಚ ವರ್ಗಗಳ ನಡುವೆ ಸೇತುವೆಯನ್ನು ಕಟ್ಟಬೇಕು. ಶರೀರಕ್ಕೆ ಇದಿರಿದ್ದುದನ್ನು ಕಾಣುವ ದೃಷ್ಟಿಯಿದ್ದರೆ, ಮನಸ್ಸಿಗೆ ದೂರದರ್ಶಿತ್ವವೆಂಬ ಅದ್ಭುತ ಶಕ್ತಿ ಇದೆ. ದೈಹಿಕ ಪರಿಶ್ರಮದಿಂದ ನಾವು ಹಣ ಸಂಪಾದಿಸಬಹುದು; ಆದರೆ ಕೊಂಚ ಬುದ್ಧಿಯನ್ನು ಉಪಯೋಗಿಸಿಯೇ ನಾವು ಆ ಹಣದ ಸದುಪಯೋಗವನ್ನು ಮಾಡಬಲ್ಲೆವು. ದೈಹಿಕ ಶ್ರಮವನ್ನು ಅನುಕೂಲಕ್ಕೆ ಒಪ್ಪುವ ರೀತಿಯಲ್ಲಿ ಹೆಚ್ಚುಹೆಚ್ಚು ಸುಗಮವಾಗುವ ರೀತಿಯಲ್ಲಿ ಹೇಗೆ ಅಳವಡಿಸಿಕೊಳ್ಳಬಹುದೆಂಬುದನ್ನು ಮನಸ್ಸೇ ತಿಳಿಸಿ ಹೇಳುತ್ತದೆ. ಕಾರ್ಖಾನೆಯ ಕಾರ್ಮಿಕನು ತನ್ನ ದೈಹಿಕ ಶಕ್ತಿಯಿಂದ ದುಡಿದರೆ, ಪ್ರಯೋಗಶಾಲೆಯಲ್ಲಿರುವ ವಿಜ್ಞಾನಿಯು ತನ್ನ ಬುದ್ಧಿಶಕ್ತಿಯನ್ನು ಸಹ ಉಪಯೋಗಿಸುತ್ತಾನೆ. ವಿಜ್ಞಾನದ ಎಲ್ಲ ಅದ್ಭುತಗಳೂ ದೈಹಿಕ ಶ್ರಮದಿಂದ ಕೈಗೂಡಿದೆ— ಬೌದ್ಧಿಕ ಅನುಸಂಧಾನಕ್ಕೆ ಒಲಿದು ಬಂದವುಗಳಾಗಿವೆ ಎಂದು ಎಲ್ಲರಿಗೂ ಗೊತ್ತು.

ಮಧ್ಯಮವರ್ಗಕ್ಕೆ ಸಮಾಜದಲ್ಲಿ ಮಹತ್ವದ ಸ್ಥಾನವಿದೆ; ಮತ್ತು ಉಜ್ವಲ ಭವಿತವ್ಯವಿದೆ ಸಮಾಜವನ್ನು ಸಾರ್ವಾಂಗಿಕ ಪ್ರಗತಿಯ ಪಥದಲ್ಲಿ ಮುನ್ನಡೆಸಬಲ್ಲಿಯೋದ್ಧರೇ ಮಧ್ಯಮವರ್ಗದಬುದ್ಧಿಜೀವಿಗಳು. ಸ್ಟೀವೆನ್‌ಸನನು ಕಲ್ಲಿದ್ದಲನ್ನು ಕಂಡುಹಿಡಿದು ಅದರ ಉಪಯೋಗವನ್ನು ತಿಳಿಸಿ ಹೇಳುವವರೆಗೆ, ಅದು ಒಂದು ಜಾತಿಯ ಕೆಸರು ಮಣ್ಣಾಗಿಯೇ ಉಳಿದಿತ್ತು. ಇಂದಿನ ವಿದ್ಯುಚ್ಛಕ್ತಿ ಯಾಗಲೀ ಅಣು ಶಕ್ತಿಯಾಗಲೀ ಮನಸ್ಸಿನ ಜಿಜ್ಞಾಸೆಯ ಫಲವಾಗಿಯೇ ಮನುಷ್ಯನ ಉಪಯೋಗಕ್ಕೆ ಬರುವಂತಾಯಿತು. ಈ ಎಲ್ಲ ಕಾರಣಗಳಿಂದ ಮನಸ್ಸೇ ದೇಹಕ್ಕೆ ಮಿಗಿಲಾದುದೆಂದು ಸ್ಪಷ್ಟೀಕರಿಸಬಹುದು. ರಾಷ್ಟ್ರದ ಪುನರುದ್ಧಾರ ಕಾರ್ಯದಲ್ಲಿ ಮಧ್ಯಮ ವರ್ಗ ವಹಿಸುವ ಪಾತ್ರ ಅನನ್ಯಸಾಧ್ಯವೆಂಬುದನ್ನು ಇದರಿಂದ ನಾವು ಮನಗಾಣಬಹುದು. ಹೀಗೆಂದ ಮಾತ್ರಕ್ಕೆ-ದೈಹಿಕ ಪರಿಶ್ರಮವನ್ನು ಅಲಕ್ಷಿಸಬೇಕೆಂದು ಹೇಳುವುದು ಧಾರ್ಷ್ಟ್ಯವೇ ಸೈ. ಏಕೆಂದರೆ ಮನಸ್ಸಿನ ಬೆಳಗಿಗೆ ದೇಹ ಆಶ್ರಯ ಸ್ಥಾನ; ಶರೀರ ಹಾಗೂ ಮನಸ್ಸುಗಳೆರಡೂ ಚೆನ್ನಾಗಿದ್ದಲ್ಲಿ ಮಾತ್ರ ಆಧ್ಯಾತ್ಮಿಕ ಶ್ರೇಯಸ್ಸನ್ನು ಹೊಂದಬಹುದು. ಪರಸ್ಪರ ಪೂರಕವಾಗಿರುವ ಈ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು-ಸಮಾಜದ, ರಾಷ್ಟ್ರದ ಸಾರ್ವಾಂಗಿಕ ಏಳಿಗೆಗಾಗಿ ಸರ್ವ ಶಕ್ತಿಯನ್ನುಪಯೋಗಿಸಿ ಎಲ್ಲ ಜನರೂ ದುಡಿಯುವಂತಾಗಲಿ!

ಓಂ ತತ್ಸತ್!

ಪ್ರಕಟಣೆ

ಶಿರ್ವ ಪಂಚಾಯತ್ ಬೋರ್ಡಿಗೆ ಒಳಪಟ್ಟ ಮಂಚಕಲ್ಲು ಸಂತೆಮಾರ್ಕೆಟಿನಲ್ಲಿ ಮತ್ತು ದಿನಚರಿ ಮಾರ್ಕೆಟಿನಲ್ಲಿ 1953ನೇ ಇಸವಿ ಎಪ್ರಿಲ್ ತಿಂಗಳ ತಾರೀಕು 1ರಿಂದ 1954ನೇ ಇಸವಿ ಮಾರ್ಚ್ ತಾರೀಕು 31ರ ವರೇಗೆ ವಸೂಲು ಮಾಡುವ ಸ್ವತಂತ್ರವನ್ನು ಮತ್ತು ಮಾರ್ಕೇಟು ಲೈನು ಕಟ್ಟೋಣಗಳನ್ನು 3 ವರ್ಷದ ವರೇಗೆ ಬಾಡಿಗೆಗೆ ವಹಿಸಿಕೊಳ್ಳುವ ಹಕ್ಕನ್ನು ಕೂಡಾ ತಾ. 28-3-53ನೇ ಶನಿವಾರ ದಿನ ಸಾಯಂಕಾಲ ಗಂಟೆ 4ಕ್ಕೆ ಪಂಚಾಯತ್ ಬೋರ್ಡ್ ಆಫೀಸಿನ ಬಳಿ ಪ್ರೆಸಿಡೆಂಟರಿಂದ ಯಾ ಅವರಿಂದ ಅಧಿಕಾರ ಹೊಂದಿದವರಿಂದ ಬಹಿರಂಗವಾಗಿ ಏಲಂ ಮಾಡಲಾಗುವದು. ಏಲಂನ ಎಲ್ಲಾ ಶರ್ತಗಳನ್ನು ಆಫೀಸಿನಲ್ಲಿ ಬಂದು ತಿಳಿಯಬಹುದು, ಎಂಬುದನ್ನು ಈ ಮೂಲಕ ಎಲ್ಲಾ ಜನರಿಗೆ ತಿಳಿಸಲಾಗುತ್ತದೆ.

ಎಸ್. ಅಣ್ಣಯ ಹೆಗ್ಡೆ.
ಪ್ರೆಸಿಡೆಂಟ್

ಪಂಚಾಯತ್ ಬೋರ್ಡ್ ಶಿರ್ವ
ಶಿರ್ವ, ತಾ. 26—2—1953.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ

ಪ್ರೊಪ್ರೈಟರ್:— ಕೆ. ವೆಂಕಟ್ರಮಣ ಭಟ್ಟ

The CATHOLIC BANK Ltd, KALLIANPUR,

ದಿ ಕೆಥೋಲಿಕ್ ಬೇಂಕ್ ಲಿಮಿಟೆಡ್, ಕಲ್ಯಾಣಪುರ ಬ್ರಾಂಚ್.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ಸದ್ರಿ ಬ್ಯಾಂಕಿನಲ್ಲಿ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲದ ಅಸಲು ಬಡ್ಡಿ ವಗೈರೆ ಐವೇಜನ್ನು ಕ್ಲಪ್ತ ವಾಯಿದೆಗೆ ಕೊಡದೆ ಬಾಕಿ ಮಾಡಿರುವುದರಿಂದಲೂ, ಅಲ್ಲದೆ ಕ್ರಮಪ್ರಕಾರ ರಿಜಿಸ್ತ್ರಿ ನೋಟೀಸು ಕೊಟ್ಟಲ್ಲಿ ಕೆಲವರು ಪಡಕೊಂಡೂ ಕೆಲವರು ಪಡಕೊಳ್ಳದೆ ವಾಪಾಸು ಮಾಡಿರುವುದರಿಂದಲೂ ಸದ್ರಿಯವರಿಗೆ ಯಾ ಸದ್ರಿಯವರ ವಾರಿಸುದಾರರಿಗೆ ಈ ಮೂಲಕ ತಿಳಿಸುವುದೇನಂದರೆ ಸದ್ರಿಯವರು ಈಡಿಟ್ಟ ನಗಗಳನ್ನು ಇದೇ 1953ನೇ ಇಸವಿ ಮಾರ್ಚ್ ತಿಂಗಳ ತಾ. 28ನೇ ಶನಿವಾರ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಯಾ ಬ್ಯಾಂಕಿಗೆ ಯುಕ್ತ ಕಂಡ ಇನ್ನಿತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಸದ್ರಿ ಬ್ಯಾಂಕಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವದು.

ಸಾಲದನಂಬ್ರ	ಹೆಸರು ಮತ್ತು ವಿಳಾಸ	ಅಸಲು ಮೊಬಲಗು
26/669	ಮುಕ್ತಪ್ಪ ಮರಕಾಲ, ಅನಂತಮರಕಾಲನ ಅಳಿಯ ಕುದ್ರು ಬೆಟ್ಟು ಉಪ್ಪೂರು.	ರೂ. 90.
26/1117	ಅಣ್ಣಪ್ಪಯ್ಯ ಸೇರೆಗಾರ, ಶಿವಯ್ಯ ಸೇರೆಗಾರನ ಮಗ, ಕಂಬ್ಳಕಟ್ಟ ಉಪ್ಪೂರು.	ರೂ. 115
26/1675	ಹೊನ್ನು ಮರಕಾಲ್ತಿ, ಅಪ್ಪುಮರಕಾಲನಹೆಂಡತಿ, ಕಡವಿನ ಬಳಿ, ಕಲ್ಯಾಣಪುರ.	ರೂ. 240
26/1909	ಎಸ್ ದಾಸಪ್ಪ, ಗುಡ್ಡಪೂಜಾರಿ ಅಳಿಯ, ಸಂತೆಕಟ್ಟೆ ಕಲ್ಯಾಣಪುರ,	ರೂ. 270
26/2182	ನಾರಾಪೂಜಾರಿ ಕೃಷ್ಣಪೂಜಾರಿ ಮಗ ಮೂಡುಪೆರಂಪಳ್ಳಿ ಕಲ್ಯಾಣಪುರ.	ರೂ. 25
27/167	ಬಾಬ ಉಪ್ಪಾರ, ಬಡಿಯ ಉಪ್ಪಾರನ ಮಗ, ಕುದ್ರುಬೆಟ್ಟು ಉಪ್ಪೂರು P. O.	ರೂ. 32
27/431	ಟಿ. ಹರಿಕೃಷ್ಣ ಪೈ, ಟಿ. ವಿಠಲ್ ಪೈ ಮಗ ತೆಂಕನಿಡಿಯೂರು, ತೊಟ್ಟಮ್ P. O.	ರೂ. 105

ಕಲ್ಯಾಣಪುರ
14—3—1953

S. Rebello
Agent

ಬೊಂಬಾಯಿ

ಬಂಟರ ಯಾನೆ ನಾಡವರ ಸಂಘ ಮುಂಬಯಿ:— ಇದರ ರಜತ ಮಹೋತ್ಸವ ಸಮಾರಂಭವು ಮದ್ರಾಸಿನ ಮಾನ್ಯಮಂತ್ರಿ ಶ್ರೀ ಎ. ಬಿ. ಶೆಟ್ಟರ ಅಧ್ಯಕ್ಷತೆಯಲ್ಲಿ ಎಪ್ರೀಲ್ ತಿಂಗಳ ತಾ 26ಕ್ಕೆ ಜರಗಲಿರುವುದು. ಈ ಕಾರ್ಯವನ್ನು ಸುಗಮವಾಗಿ ನೆರವೇರಿಸಿಕೊಂಡು ಹೋಗುವರೇ ಈ ಕೆಳಗಿನ ಮಹಾನುಭಾವರಿಂದ ಕೂಡಿದ ಉಪಸಮಿತಿಗಳು ಏರ್ಪಟ್ಟಿರುವುವು. ಡಾಕ್ಟರ್ ವೆಂಕಟ್ರಾವ್ ಶೆಟ್ಟಿ ಜೆ. ಪಿ. (ಅಧ್ಯಕ್ಷ), ಶ್ರೀ. ಮದನ್ ಶೆಟ್ಟಿ, (ಉಪಾಧ್ಯಕ್ಷ), ಶ್ರೀ. ಕೆ. ಶ್ಯಾಮರಾಯ ಶೆಟ್ಟಿ. (ಪ್ರಧಾನ ಕಾರ್ಯದರ್ಶಿ), ಶ್ರೀ. ಗಂಗಯ್ಯ ಶೆಟ್ಟಿ, ಶ್ರೀ. ಚಂದ್ರಶೇಖರ ಹೆಗ್ಡೆ, (ಜತೆ ಕಾರ್ಯದರ್ಶಿಗಳು) ಅಲ್ಲದೆ ಅನೇಕ ಸದಸ್ಯರಿಂದ ಕೂಡಿದ ಉಪಸಮಿತಿಗಳೂ ರಚಿಸಲ್ಪಟ್ಟಿವೆ.

ಮುಕ್ರೂರು:— ಈ ತಾಲೂಕಿನ ಕಾಣಾರ್ಪ ಕೇಂದ್ರದಲ್ಲಿ ಸಾಧಾರಣ ರೂ. 5000/- ಖರ್ಚು ಮಾಡಿ ಗ್ರಾಮ ದಿಸ್ಪೆನ್ಸರಿಗಾಗಿ ಕಟ್ಟಿಸಿದ ಕಟ್ಟೋಣದ ಉದ್ಘಾಟನೆಯನ್ನು ಜಿಲ್ಲಾ ಕಲೆಕ್ಟರ್ ಶ್ರೀ ಸಿ. ಎ ರಾಮಕೃಷ್ಣನ್ ರವರು ಇದೇ ತಾ. 7ರಲ್ಲು ನೆರವೇರಿಸಿದರು. ದ. ಕ ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ ಮುಂಜಯ್ಯ ಹೆಗ್ಡೆಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದು, ಬೋರ್ಡಿನ ಪರವಾಗಿ ಈ ಕಟ್ಟಡವನ್ನು ಸ್ವೀಕರಿಸಿದರು. ಮುಕ್ರೂರು ಗ್ರಾಮ ಕಮಿಟಿಯವರನ್ನೂ ಗ್ರಾಮಸ್ಥರನ್ನು ಅಭಿನಂದಿಸುತ್ತಾ ಈ ಆಸ್ಪತ್ರೆಯ ಉಪಯೋಗವನ್ನು ಸರ್ವರೂ ಪಡೆಯಬೇಕೆಂದು ವಿನಂತಿಸಿದರು.

ಹಿರಿಯಡಕ-ಇದೇ ತಾ 8ರಲ್ಲು ಸ್ಥಳೀಯ ಆರ್ಯ ಸಮಾಜದ ವಾರ್ಷಿಕೋತ್ಸವವು ಶ್ರೀ ಕೆ. ಶಂಕರನಾರಾಯಣ ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು. ಸಭಿಕರಲ್ಲಿ ಶ್ರೀಗಳಾದ ಕೇಶವ ರಾಮಚಂದ್ರ ಶೆಣೈ, ಬಿ. ಲಕ್ಷ್ಮೀನಾರಾಯಣ ನೆಲ್ಲಿ ಹಿ. ಕೆ. ಅನಂತಯ್ಯ, ಸಂಜೀವ ಕಾಮತ್, ಮುದ್ರಾಡಿ ಕೃಷ್ಣಯ್ಯ ಸೆಟ್ಟಿ ಮೊದಲಾದವರು ವೇದಗಳ ಮಹತ್ವ, ಸರ್ವ ಧರ್ಮ ಸಮಾನತೆಯ ಕುರಿತು ನಮ್ಮಲ್ಲಿರುವ ತಪ್ಪು ಭಾವನೆ, ಆರ್ಯಸಮಾಜವು ಈ ತನಕ ಮಾಡಿದ ಮತ್ತು ಮಾಡುತ್ತಿರುವ ರಚನಾತ್ಮಕ ಕಾರ್ಯಗಳ ಕುರಿತು ಮಾತನಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ವೇದಗಳು ಮತ್ತು ಇತರ ಗ್ರಂಥಗಳ ತುಲನೆಗಳನ್ನು ಮಾಡಿ ವೇದಗಳೇ ಸರ್ವ ಶ್ರೇಷ್ಠವೆಂದೂ ಸ್ತ್ರೀಯರು ಕೂಡಾ ಈಗ ಅನುಸರಿಸುತ್ತಿರುವ ಆಚಾರ ವಿಚಾರಗಳು ಧರ್ಮ ದೃಷ್ಟಿಯಿಂದ ಯೋಗ್ಯವಲ್ಲವೆಂದೂ ಹೇಳಿದರು.

ಮೂಲ್ಕಿ— ಸ್ಥಳೀಯ ಮೇಜರ್ ಪಂಚಾಯತ ಬೋರ್ಡಿನ ಅಧ್ಯಕ್ಷಸ್ಥಾನಕ್ಕೆ ಚುನಾವಣೆ ನಡೆದು ಶ್ರೀ ಬಿ. ಬೋಜರಾಯರು ಪ್ರಚಂಡ ಬಹುಮತದಿಂದ ಆರಿಸಲ್ಪಟ್ಟಿರುವರು. ಇದೇ ತಾ. 6ರಲ್ಲು ಚಿತ್ರಾಪಿನ ಮಠದವರು ಶ್ರೀ ಬಿ. ಬೋಜರಾಯರನ್ನು ತಮ್ಮ ಗ್ರಾಮಕ್ಕೆ ಬರಮಾಡಿಸಿಕೊಂಡು ಸತ್ಕರಿಸಿದರು.

ನಂದಳಿಕೆ— ಸ್ಥಳೀಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಉತ್ಸವವು ಇದೇ ತಾ 30ರಲ್ಲು ಪ್ರಾರಂಭವಾಗಿ ಎಪ್ರಿಲ್ ತಾ. 3ರಲ್ಲು ಮಹಾರಥೋತ್ಸವ ಜರಗುವುದು. ಭಕ್ತಾದಿಗಳೆಲ್ಲರಿಗೂ ಸ್ವಾಗತವಿದೆಯೆಂದು ದೇವಸ್ಥಾನದ ಎಕ್ಸಿಕ್ಯೂಟಿವ್ ಆಫೀಸರರು ತಿಳಿಸುತ್ತಾರೆ.



ಕನ್ನಡಿಗರ ಹೆಸರುಗಳಲ್ಲಿ ತನ್ನತನ

ಯ. ನಾ. ಉಡುಪ, ವಿದ್ವಾನ್, ಐರೋಡಿ.

ಪ್ರತಿಯೊಂದು ದೇಶಕ್ಕೂ ಪ್ರಾಂತಕ್ಕೂ ಉಡುಗೆ ತೊಡುಗೆ, ಭಾಷಾವೈಖರಿ, ಆಚಾರ ಸಂಪ್ರದಾಯ ಮತ್ತು ಲಲಿತಕಲೆಗಳಲ್ಲಿ ಒಂದು ವೈಶಿಷ್ಟ್ಯವಿದ್ದಂತೆ, ಮಕ್ಕಳ ನಾಮಕರಣದಲ್ಲೂ ಒಂದು ಪ್ರತ್ಯೇಕ ತನ್ನತನವಿದೆ. ಈಗೀಗ ಜನರಲ್ಲಿ ಆತ್ಮಾಭಿಮಾನ, ದೇಶಾಭಿಮಾನ ಮೊದಲಾದ ಗೌರವಾರ್ಹವಾದ ರಚನಾತ್ಮಕ ಸುಗುಣಗಳು ಲೋಪವಾಗುತ್ತಾ ಬಂದಂತೆ, ಆಯಾ ದೇಶ ಮತ್ತು ಪ್ರಾಂತಗಳು ನಾಡಿನ ಜೀವಾಳವಾದ ತನ್ನತನವನ್ನು ಕಳೆದುಕೊಳ್ಳುತ್ತಾ ಬರುತ್ತಿವೆ. ಎಷ್ಟೆಷ್ಟು ಆಯಾ ಜನತೆಯು ಜನ್ಮಭೂಮಿಯನ್ನು ಸ್ವರ್ಗಕ್ಕಿಂತ ಹೆಚ್ಚಿನದೆಂದು ಭಾವಿಸುವುದೋ, ಅದನ್ನು ಹಾಗೆ ರೂಪಿಸಲು ದುಡಿಯುವುದೋ, ಅಷ್ಟಷ್ಟು ಆ ದುರ್ಬಲ ನಾಡಿನ ಸಂಪ್ರದಾಯಗಳಿಗೆ ಬಲ ಹೋಗುವುದು. "ಸ್ವಧರ್ಮದಲ್ಲಿ ನಿಧನವಾದರೂ ಶ್ರೇಯಸ್ಸಿದೆ; ಪರಧರ್ಮವು ಭಯಾವಹವಾದುದು" ಎಂಬ ಗೀತೋಕ್ತಿಯು ನಾಡಿನ ತನ್ನತನಕ್ಕೂ ಹೊಂದಿಕೆಯಾಗುವುದು. ಯಾವ ರಾಷ್ಟ್ರವಾಗಲಿ, ತನ್ನ ಸಂಸ್ಕೃತಿಯ ತ್ಯಾಗ ಮತ್ತು ತಿದ್ದುಪಡಿಯ ಮೊದಲು ಅದರಿಂದ ತನಗಾದ ಅಪಘಾತಗಳೇನೆಂದು ಆಳವಾಗಿ ವಿಮರ್ಶಿಸಿ ಅದರಿಂದ ತನಗೆ ಅಧಃಪತನವೇ ಪ್ರಾಪ್ತವಾಗುವಂತಿದ್ದರೆ ಅದನ್ನು ಹಿಂದು ಮುಂದು ನೋಡಬೇಕಲ್ಲದೆ, ತಮ್ಮ ಸಂಸ್ಕೃತಿಯ ಪೋಷಕಗಳನ್ನು ದುರ್ಬಿನಿನಿಂದ ನೋಡುತ್ತಾ, ಪರಸಂಸ್ಕೃತಿಯ ಸೊಟ್ಟು ಡೊಂಕುಗಳ ಕಡೆಗೆ ಗಮನ ಕೊಡದೆ ಆಚರಿಸತ್ತೊಡಗುವುದು ನಾಡಿನ ನಿಕೃಷ್ಟ ಅವಮಾನವಲ್ಲದೆ ಮತ್ತೇನು?

ನಮ್ಮ ನಾಡಿನ ಹಲವು ಸಂಸ್ಕೃತಿಗಳು ಇಂದು ನಾಮಾವಶೇಷವಾಗಿವೆ ಏನಾದರೂ ಅವುಗಳಲ್ಲಿ ಕೆಲವು ನಮ್ಮ ಕಣ್ಣಿಗೆ ಬೀಳುವುದಿದ್ದರೆ ಇಂದಿನ ಹಳ್ಳಿಗಳಲ್ಲಿ. ನಮ್ಮ ನಾಡ ಸಂಸ್ಕೃತಿಯು ಯಾನ ಪುಟದಲ್ಲೂ, ಶರೀರವನ್ನು ರಕ್ಷಿಸಿ ಕಾಪ್ಪಂತೆ ಮಾಡಿಕೊಂಡು, ಅದಕ್ಕೆ ಸ್ವಚ್ಛಂದದ ವಿವಿಧ ತೊಡುಗೆಗಳನ್ನು ತೊಡಿಸಿ ಬಾಯಿಯಿಂದ ಮುಸಮುಸನೆ ಹೋಗಿ ಜಾರುವುದರ ಕುರಿತಾಗಿ ಒಂದಕ್ಷರವನ್ನೂ ಬರೆದಿಲ್ಲ. ಅದು, ಹುರಿಗಟ್ಟಿದ ಮಾಂಸಖಂಡಗಳು ಮೈ — ಅವುಗಳಿಗೆ ರಳ ಉಡುಗೆ ತೊಡುಗೆಯ ಧ್ಯಾನ, ಅಪೂರ್ವ ಪ್ರತಿಭೆ, ಇವುಗಳೆಡೆಗೇ ನಮ್ಮವರ ಮನವನ್ನು ವಿಶೇಷ ಸೆಳೆಯುತ್ತಿದೆ ನಮ್ಮವರಿಗೆ ಅಲಂಕರಿಸಿಕೊಂಡ ಕೇವಲ ದೇಹಕ್ಕಿಂತ ಅರ್ಧ ಬತ್ತಲೆಯಾದ ಶರೀರದ ಕಡೆಗೇ ಒಲವು ಹೆಚ್ಚು. ಇದಕ್ಕೆ ಬೇಲೂರು, ಶೃಂಗೇರಿ, ಅಜಂತ ಮೊದಲಾದ ಕಡೆಯ ಶಿಲ್ಪಮೂರ್ತಿಗಳೇ ಸಾರುತ್ತಿವೆ. ಇರಾನದ ರಾಯಭಾರಿಯನ್ನು ಕಾಣುತ್ತ ಬಾದಾಮಿಯ ಚಾಲುಕ್ಯರ ಪುಲಿಕೇಶಿಯು ಎಷ್ಟು ಸರಳ ಉಡುಗೆಗಳನ್ನುಟ್ಟುಕೊಂಡಿದ್ದನೆಂದು ಅಜಂತೆಯ ಸುಂದರ ಚಿತ್ರವಿನ್ನೂ ಕನ್ನಡಿಗರಿಗೆ ಮನದಟ್ಟು ಮಾಡುತ್ತಿದೆ! ನಾವಿಗೂ ಸಾಮಾನ್ಯಕ್ಕೊಪ್ಪುವ ಭಾಗವತೋಕ್ತಿಯ ಅಂಶವನ್ನು ಇಲ್ಲಿ ತುಸು ವಿಚಾರಿಸಿಯೇವು.

ಕನ್ನಡಿಗರು ಹೊರಗಿನ ಆಡಂಬರಕ್ಕೆ ಎಂದು ಬೆಲೆಕೊಡುತ್ತಿರಲಿಲ್ಲವೆಂದು ಅವರಿಗೆ ಇರುತ್ತಿದ್ದ ಸರಳವಾದ ಹೆಸರೇ ಸೂಚಿಸುವುವು. ಆ ಹೆಸರುಗಳಲ್ಲೂ ಕನ್ನಡಿಗರ ತನತನವು ಸಾರುತ್ತಿದೆ. ಅವುಗಳಲ್ಲಿ ಕೆಲವು ಸಂಸ್ಕೃತಪದಗಳ ತದ್ಭವದಂತೆ ತೋರಿದರೂ, ಅವುಗಳಿಂದಲೇ ಆ ಸಂಸ್ಕೃತ ರೂಪವು ಉತ್ಪನ್ನವಾಯಿತೆಂಬುದಕ್ಕೆ ಸಾಕಷ್ಟು ದೃಷ್ಟಾಂತಗಳನ್ನೊದಗಿಸಬಹುದು. ನಾಗರಿಕತೆಯ ಸೋಂಕು ಸೋಕದ ದೂರದ ಹಳ್ಳಿಗಾಡಿನ ಜನರಿಗೆ ತದ್ಭವ ಪದಗಳನ್ನು ಅವರ ಮಕ್ಕಳಿಗೆ ಹೆಸರಿಡಲು ಕಲಿಸುವವರಾರು? ಅವರಿಗೆ ಅವರ ಸಂಸ್ಕೃತ ರೂಪವನ್ನೇ ಇಟ್ಟರಾಗುವುದೇನು? ಇದು ವಿವೇಚಿಸಬೇಕಾದ ವಿಚಾರ. ಅವೆಲ್ಲ ಶುದ್ಧ ಕನ್ನಡಪದಗಳು. ನಾಗರಿಕರಾದ ಪಟ್ಟಣಿಗರು ಕನ್ನಡಿಗರ ತನ್ನತನವನ್ನು ಮರೆತು ಆರ್ಯ ಸಂಸ್ಕೃತಿಗೆ ಸಂಪೂರ್ಣ ತಲೆಬಾಗಿ ಪುರುಷೋತ್ತಮ, ಪಾರ್ಥಸಾರಥಿ, ಯತಿರಾಜ, ಗಾಯತ್ರಿ ದೇವಿ ಮೊದಲಾದ ಹೆಸರುಗಳಿಂದ ಹೆಚ್ಚುದ್ದರೂ, ಹಳ್ಳಿಗರು ಮುದ್ದ, ಹೊನ್ನ ಮೊದಲಾದ ಹೆಸರುಗಳಿಂದ ಕನ್ನಡಿಗರ ತಮ್ಮತನವನ್ನು ಉಳಿಸಿಕೊಂಡು ಬಂದಿರುವುದೊಂದು ಆಶ್ಚರ್ಯ ಮತ್ತು ಅಭಿಮಾನದ ವಿಚಾರವಾಗಿದೆ. ಕನ್ನಡಿಗರಿಗೆ ತಂದೆ ತಾಯಿಗಳಿಟ್ಟ ಹೆಸರಿಗಿಂತಲೂ ಸ್ವತಃ ಸಂಪಾದಿಸಿದ ಕೀರ್ತಿರೂಪದ ಹೆಸರಿನ ಕಡೆಗೇ ಮನಸ್ಸು ವಿಶೇಷ ಹರಿಯುತ್ತಿತ್ತು. ಅವರು ಇಂದು ಉಪಯೋಗಿಸುತ್ತಿರುವ ಹೆಸರುಗಳು ಗ್ರಾಮ್ಯವಾಗಿ ಕಾಣಿಸಿದರೂ ಅವಕ್ಕೂ ಸಾಕಷ್ಟು ಅರ್ಥವಿದೆ ಎಂಬುದನ್ನು ಕನ್ನಡ ವಾಚಕರು ಗಮನಿಸಬೇಕು.

ಪುರುಷರ ಹೆಸರುಗಳು

೧ ಅಣ್ಣ (ಹಿರಿಯ) ೨ ಪಕ (ಕರೆದಾಗ ಬರುವವ) ೩ ಕರಿಯ (ಕಪ್ಪಗಿದ್ದವ, ಕೆಲಸಗಾರ) ೪. ಕಾಳ (ಕಪ್ಪಗಿದ್ದವ, ಯಮನಂತೆ ಭೀಕರ) ೫. ಕುಪ್ಪ (ಸಂಘಪ್ರಿಯ. ಹೆಂಡದಲ್ಲಿ ಹಾಕಿಕೆಗೆದವ) ೬ ಕೊರಗ (ಕಪ್ಪಗಿದ್ದವ ಕೊರವರ್ತನೆಯವ) ೭. ಕಂಬಳಿ (ಬಿಸಿರಕ್ತ ಹರಿಯುವವ, [ಕಮ್ಮಿತು+ಬಳಿ] ಉತ್ತಮ ವಂಶದವ) ೮. ಕೂಸ (ಸರಳಸ್ವಭಾವದವ) ೯. ಚಿಕ್ಕ (ಬಲಿಷ್ಠವಾದವದಷ್ಟಗಿದ್ದವ) ೧೦. ಚಿನ್ನ (ಸುಂದರ) ೧೧. ಚೆಲ್ಲ ಚೆಲುವ, ಉದಾರಿ) ೧೨. ಜಟ್ಟಿಗ (ಧೀರ, ಬಲಿಷ್ಠ) ೧೩. ತಿಮ್ಮಯ (ರಸಿಕ) ೧೪. ತಿಮ್ಮ (ಚಪಲ) ೧೫. ತಮ್ಮ (ಕಿರಿಯವ) ೧೬ ದಾಸ (ಇತರರನ್ನು ಹೊಕ್ಕು ಕಾರ್ಯ ಸಾಧಿಸುವದರಲ್ಲಿ ಜಾಣ) ೧೭. ದಮ್ಮ (ಧರ್ಮ, ಯಮ) ೧೮. ಲಿಂಗ (ಲಿಂಗ) ೧೯. ಬಚ್ಚ (ಪಚ್ಚ—ಆಭರಣ, ವಸ್ತ್ರ—ಮಾಗುವಿನಂತೆ ಪ್ರಿಯ) ೨೦. ಪುಟ್ಟ (ಚಿಕ್ಕ) ೨೧. ಬಡ್ಡ (ಬತ್ತಿದವ ಮುಸೆಇದ್ದವ) ೨೨. ಬೋಳ [ಬಹುಳ, ವೃದ್ಧಿಯಾಗುವವ, ದೇವಕಿ, ಪಿಂಗಿ] ೨೩. ಬುದ್ಧ [ಸ್ಥೂಲ, ಜ್ಞಾನಿಯಾಗಿ ಬಿದ್ದವ] ೨೪. ಮಾದ [ಮಾಧವ, ಅಹಂಕಾರ ಉಳ್ಳವ] ೨೫. ಹಪ್ಪ [ಹುಚ್ಚ] ೨೬. ರೇವ ಸರ್ವರಾಜ, ಕನ್ನಡಿಗರು, ಸರ್ವಾರಾಧಕರು, ಉತ್ತರದವರಲ್ಲಿ] ೨೭. ಸೂರ [ಸೂರ್ಯ, ಶುದ್ಧಿ] ೨೮. ಸಣ್ಣ [ಕಿರಿಯವ, ವಿನಯವುಳ್ಳವ]

ಸ್ತ್ರೀಯರ ಹೆಸರುಗಳು

೧ ಸಿಂಗಿ, ೨. ಬಚ್ಚಿ, ೩. ಕೊರತಿ, ಮೊಂಕು ೫ ಕೇಶಿ, ೬. ಅಕ್ಕ ೭. ತಂಗಮ್ಮ [ಸುಂದರವಾದ ಕಣ್ಣುಗಳುಳ್ಳವಳು] ೮. ತಿಮ್ಮಕ್ಕ ೯. ಚೆನ್ನ ೧೦ ದುಮುಕಿ [ಕಾರ್ಯೋತ್ಸಾಹವುಳ್ಳವಳು] ೧೧ ದಬ್ಬಿ [ಸಂಪ—ಸ್ತ್ರೀಲಿಂಗ] ೧೨. ದಾಸು. ೧೩. ಸೂರು ೧೪ ಕುಪ್ಪಿ ೧೫. ಸಣ್ಣ ೧೬. ಪಿಲ್ಲಿ [ನವಿಲು ಗರಿಯಂತೆಯೇ ಸುಂದರಳು] ೧೭ ಚೀರು ೧೮. ಕಾಳಿ ೧೯ ಮಾಚಿ [ಗುರುತುಳ್ಳವಳು] ೨೦ ಸಂಕಿ [ಚಂಚಲೆ] ೨೧ ಚೇಂಪಿ (ಸಂಪಗೆಯ ವರ್ಣದವಳು) ೨೨. ಅಮ್ಮ (ಅಹಂಕಾರವುಳ್ಳವಳು)

ಇಂಥಾ ಹೆಸರುಗಳೆಲ್ಲಾ ನಾಲ್ಕೈದು ಶತಮಾನಗಳ ಹಿಂದೆ ಸಾಮಾನ್ಯ ವಿಚಾರವಾಗಿತ್ತು. ಕನ್ನಡಿಗರ ಪ್ರಸಿದ್ಧ ವೀರನಾದ ಕುಮಾರರಾಮನಿಗೆ ಶತ್ರುಗಳನ್ನು ಸೈರಿಸಲಾರದೆ ಯೆರಗಿ ಎಸೆಸುವ ಹುಲ್ಲನು ಪ್ರಮುಖ ಸೇನಾಪತಿಯಾಗಿದ್ದನು. ವಿಜಯನಗರ ಸ್ಥಾಪಕರಾದ ಸಂಗಮ ವಂಶದ ರಾಜಕುಮಾರರಿಗೆ ಹುಕ್ಕ, ಬುಕ್ಕ, ಕಂಪ, ಮಾರ, ಮುದ್ದ ಎಂಬ ಹೆಸರುಗಳಿದ್ದುವು. ತಮ್ಮ ಸ್ವಾರ್ಥದ ಕರುಣ ವಿಲಾಸದಲ್ಲಿ ಎತ್ತಿ ಹೊಗಳಿದ ಮಲ್ಲನು ಭೀಮಾರಾಯನೂ ಮಲ್ಲ ವಿದ್ಯಾ ವಿಶಾರದನೂ ಆಗಿದ್ದನು. ಖಗೇಂದ್ರ ಮಣಿದರ್ಪಣವೆಂಬ ಔಷಧಿ ಗ್ರಂಥವನ್ನು ಬರೆದವನ ಹೆಸರು ಮೊದಲನೆಯ ಮಂಗರಸ. ಇನ್ನೊಬ್ಬನು ಇದೇ ಹೆಸರಿನವನು ಮಂಗರಾಜ ನಿಘಂಟು, ಜಯನೃಪಕಾವ್ಯ ಮೊದಲಾದ ಯಶಸ್ವಿ ಗ್ರಂಥಗಳನ್ನು ಪೂರೈಸಿ ಸಾಹಿತ್ಯಸೇವೆಯಲ್ಲಿ ಮುಂಚೂಣಿಯ ಸೇವೆಗೈದಿದ್ದಾನೆ. ಮಂಗರಸ ಎನ್ನುವ ಹೆಸರೇ ನಮ್ಮವರಿಗೆ ಹಾಸ್ಯಾಸ್ಪದವಾಗಿ ಕಂಡರೂ, ಅದರಲ್ಲಿ ಕನ್ನಡಿಗರ ನಾಮವೈಶಿಷ್ಟ್ಯವು ಅಡಗಿದೆ ಎಂಬುದನ್ನು ಸರಿಯಾಗಿ ಬಲ್ಲೆವು. ನಮ್ಮ ಆದಿಕವಿಯ ಹೆಸರೇನು ಬಲ್ಲಿರಾ? ಪಂಪ ಅಥವಾ ಪಂಪ. ಸಾಂಗತ್ಯದ ಮಹಾಕಾವ್ಯವನ್ನು ಬರೆದ ಮಹಾಕವಿ ರನ್ನನಿಗೆ ಒತ್ತಾಯದ ಕರೆಸಿಕೊಳ್ಳುವುದಕ್ಕಿಂತಲೂ, ರನ್ನ ಎಂಬ ಹೆಸರೇ ಪ್ರಿಯವಾಗಿತ್ತೆಂದು "ಕವಿಚಕ್ರವರ್ತಿ ಹೆಸರಂ ರನ್ನಂ ಸಂಪದಂ ಸೊಗಯಿಸೆ ಕವಿತೆಯೊಳಿರ್ಪ ಕವಿರನ್ನಂ ರನ್ನನಕ್ಕರ್ತ್ತ ಮುಮಂ ಪೇಳ್ ಪರೀಕ್ಷಿಪರಿಗೆ ಟೆರ್ದೆಯೋ" "ಸಿಂಹಾವಲೋಕನ ಕ್ರಮ ದಿವರಿಪಿದಂ ಕವಿರನ್ನಂ" ಮೊದಲಾದ ಅವನ ಹೇಳಿಕೆಗಳಿಂದಲೇ ಸ್ಪಷ್ಟವಾಗುತ್ತದೆ. ಇಂದೂ ಆ ಮಹಾಕವಿಗೆ ರನ್ನನೆಂಬ ಹೆಸರೇ ಪ್ರಸಿದ್ಧವಾಗಿದೆ. ಹಾಗೆಯೇ ಯಶೋಧರ ಚರಿತೆಯನ್ನು ಬರೆದ ಜನಾರ್ದನನಿಗೆ ಜನ್ನನೆಂಬ ಹೆಸರಿನಲ್ಲೇ ಪರಮ ವಿಶ್ವಾಸ. ಶಾಂತಿ ಪುರಾಣವನ್ನು ಬರೆದ ಪೊನ್ನ ಕವಿಯ ಹೆಸರು ಸಂಪೂರ್ಣ ಕನ್ನಡವೇ. ಶುದ್ಧ ಕನ್ನಡತನಕ್ಕಾಗಿ ಹಂಬಲಿಸಿ ಕಬ್ಬಿಗರ ಕಾವವನ್ನು ಬರೆದ ಮಹಾಕವಿಗೆ ಅಂಡಯ್ಯನೆಂಬ ಹೆಸರು. ಇನ್ನು ಚಾಮರಸ ಮೊದಲಾದ ಕವಿಗಳ ನಾಮವೂ ನಮ್ಮ ನಾಡಿಗೇ ಹೊಂದಿಕೆಯಾದುದಲ್ಲವೆ? ರಾಮಾಶ್ವಮೇಧವನ್ನು ಬರೆದ ನಂದಳಿಕೆ ಮಹಾಕವಿಯು ತನಗೇ ಮುದ್ದಣನೆಂದೇ ಹೆಸರನ್ನು ಕರಣಮಾಡಿಕೊಂಡನು. ಇವೆಲ್ಲ ಕರ್ನಾಟಕ ಸಂಸ್ಕೃತಿಯ ಒಂದು ವಿಶಿಷ್ಟ ಲಕ್ಷಣಗಳು ಅಲ್ಲವೇ?

ನೀರ ಶೈವರಲ್ಲಂತೂ ಕನ್ನಡದ ಸಂಸ್ಕೃತಿಗೆ ಒಳಿತಾದ ಹೆಸರುಗಳೇ ರೂಢಿಯಲ್ಲಿವೆ. ಬಸವ, ಚೆನ್ನಬಸವ, ಅಕ್ಕಮ್ಮ, ಮಾಚಮ್ಮ, ಹುಚ್ಚಯ್ಯ ಮೊದಲಾದ ಹೆಸರುಗಳು ಅವರ ನಾಡನಲ್ಮೆಯ ಧ್ವಜಪಟವಾಗಿ ಇನ್ನೂ ಉಳಿದಿವೆ. ಅವರು ಕನ್ನಡ ಸಾಹಿತ್ಯದಲ್ಲೂ ಇಂದಿನವರೆಗೆ ತನ್ನತನವನ್ನು ಉಳಿಸಿಕೊಂಡು ಬಂದ ನಾಡತಾಯಿಯ ನೆಚ್ಚಿನ ಬಂಟರು! ಈಗಲೂ ಅವರು ನಡೆ ದೇವಿಯ ಗುಡಿಕಟ್ಟಲು ತಮ್ಮ ಶರೀರವನ್ನು ಹುಲ್ಲಿಗಿಂತ ಕೀಳೆಂದು ಭಾವಿಸಿಕೊಂಡು ದುಡಿಯುತ್ತಿದ್ದಾರೆ. ನಾವು ನಾಡತಾಯಿಯ ಗುಡಿನಿರ್ಮಾಣಕ್ಕೆ ಎಲ್ಲರೊಡನೆ ಸಹಕರಿಸಬೇಡವೇ? ನಮ್ಮ ತನ್ನತನವನ್ನು ಅಳಿಸಿಕೊಳ್ಳದೆ ಇದ್ದಷ್ಟು ಉಳಿಸಿಕೊಳ್ಳಲು ನೋಡಬೇಡವೇ?

ಸಾರಾಂಶ—ನಾಡಿನ ತನ್ನತನದ ರಕ್ಷಣೆಯೇ ನಾಡಿನ ಜೀವಾಳ

ರಕ್ಷಣೆಗೂ ಉಳಿತಾಯ ವ್ಯವಸ್ಥೆಗೂ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್.

ಸ್ಥಾಪನೆ: 1934. ಪ್ರಧಾನ ಕಚೇರಿ: ಮದ್ರಾಸು.

೮೦ ಲಕ್ಷಕ್ಕೂ ಮಿಕ್ಕಿದ ಹೊಸ ವ್ಯವಹಾರ, 15 ಲಕ್ಷಕ್ಕೂ ಮಿಕ್ಕಿದ ಪ್ರೀಮಿಯಮ್ ಉತ್ಪತ್ತಿ, 45¾ ಲಕ್ಷಕ್ಕೂ ಮಿಕ್ಕಿದ ಜೀವವಿಮಾ ನಿಧಿ. 10 ... ಮೂಲ್ಯಗಳು. ... 3 ಕೋಟಿಯಷ್ಟು ಊರ್ಜಿತದಲ್ಲಿರುವ ಪಾಲಿಸಿಗಳು.

ಪ್ರಗತಿಪರವಾದ ಈ ಕಂಪೆನಿಯಲ್ಲಿ ಒಂದು ಪೊಲಿಸಿ ಇರುವುದು ಉತ್ತಮ ರೀತಿಯಂತೆಯೇ ಇದರ ಏಜನ್ಸಿ ಇರುವುದು ಚಲೋ ವ್ಯವಹಾರ ಸಾಧನ.

ಉತ್ಸಾಹಿ, ಜನಾನುರಾಗಿಯ, ಸಮರ್ಥ ಸ್ತ್ರೀ ಪುರುಷರಿಂದ ಕಂಪೆನಿ ಪ್ರಾತಿನಿಧ್ಯ ಬಗ್ಗೆ ಅರ್ಜಿಗಳು ಸ್ವಾಗತಾರ್ಹವು. ದಯಮಾಡಿ ಬರೆಯಿರಿ:-

ಜೆ. ಆರ್ ವಾಲ್ಕ, ಬ್ರಾಂಚ್ ಮೆನೇಜರ್,
ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು [ದ. ಕ.]

'ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಹಾಂತ್ರ ರಸಾಯನ.



ಹೆಚ್ಚಿನ ಮಾಹಿತಿಗೆ— ಡಾ| ಯಂ. ಸಿ. ಶಾಸ್ತ್ರೀ, ಯಲ್ ಐ. ಎಂ.
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಥಾನಿಕರು:— ಡಾ| ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು.

ವಿವಿಧ ಪಾತ್ರೆಗಳು

ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಚಿಲ್ಲರೆಯಾಯೂ ಸಿಗುತ್ತವೆ.
ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

ಪ್ರಿಂಟಿಂಗ್ ಮೆಶೀನ್ ಮಾರಾಟಕ್ಕಿದೆ

ನಾವು ಹೊಸ ಪ್ರಿಂಟಿಂಗ್ ಮೆಶೀನ್ ತರಿಸಿರುವುದರಿಂದ, ನಮ್ಮ ಹಳೆಯ ಚಾಲೂ ಸ್ಥಿತಿಯಲ್ಲಿರುವ ಕ್ರೌನ್ ಸೈಜಿನ ಸಿಲಿಂಡರ್ ಪ್ರಿಂಟಿಂಗ್ ಮೆಶೀನು ಮಾರಾಟಕ್ಕಿದೆ.

ನವಯುಗ ಪ್ರೆಸ್, ಉಡುಪಿ.

ವಾರದ ಒಳಿತು ಕೆಡುಕುಗಳು

ತಾ 19-3 53ರಿಂದ ತಾ. 25-3—53ರ ವರೆಗೆ.

ಮೇಷ— ಹಿಂದು ಹೋದ ದಿನಗಳಿಗಿಂತ ಈಬಾರಿನವಾರವು ನಿಮಗೆ ಉತ್ತಮವೆನಿಸೀತು ಆದಾಯದ ಮಾರ್ಗಗಳು ಮುಂಚಿಗಿಂತ ಹೆಚ್ಚಲಿವೆ, ಆದರೆ ಸದಾಹಯೋಟನದಲ್ಲೇ ಹೆಚ್ಚಿನ ಕಾಲ ಕಳೆವಿರಿ ತನ್ನಿಮಿತ್ತ ಕಫಪಿತ್ತಗಳು ಹೆಚ್ಚಿ ಅನಾರೋಗ್ಯಕ್ಕೆ ಗುರಿಮಾಡಲಿವೆ ಪ್ರಯಾಣದಲ್ಲಿ ಆಕಸ್ಮಿಕ ಅಪಘಾತಗಳಿಗವಕಾಶವಿದೆ ಸ್ಥಾನಚ್ಯುತಿಯೂ ಒಂದೊಮ್ಮೆ ಸಂಭವಿಸೀತು, ತಾ 19, 22, 23, ಈ ದಿನಗಳಲ್ಲಿ ನಿಮ್ಮ ಬಯಕೆಯು ನಿರಾಯಾಸದಿಂದ ನೆರವೇರೀತು.

ವೃಷಭ—ಇಂದಿನ ನಿಮ್ಮ ಭವಿಷ್ಯವು ಉತ್ತಮವಿರುವುದು. ಮಹತ್ಕಾರ್ಯವನ್ನು ಸ್ವಲ್ಪ ಪರಿಶ್ರಮದಿಂದ ಸಾಧಿಸುವಿರಿ. ನಿಮ್ಮ ಕರ್ಮಕುಶಲತೆಗೆ ಶತ್ರುಜನರು ಬೆರಗಾಗಲಿರುವರು. ನಡುವೆಯು ಚಿಪ್ಪಾಂಶವು ರಾಜಕೀಯ ಭಾಗದಲ್ಲೂ ಸತ್ಕಾರ್ಯಗಳ ಸಲುವಾಗಿಯೂ ವ್ಯಯವಾದೀತು ಗೃಹತಾಪತ್ರಯಗಳಿಂದ ಮುಕ್ತರಾದ ನಿಮಗೆ ಅನಿರೀಕ್ಷಿತ ಪರ್ಯಟನದಿಂದಲೂ ಪಿತ್ತಪ್ರಕೋಪದಿಂದಲೂ ತಾ. 19, 22, 23 ಈ ದಿನಗಳಲ್ಲಿ ಕನುಮನಗಳಿಗೆ ಸುಖಶಾಂತಿಯಿರದು.

ಮಿಥುನ— ಮನದ ಬಯಕೆಗಳು ಕಾರ್ಯರೂಪಕ್ಕೆ ಬರಲಿವೆ. ನಿರೀಕ್ಷಿಸಿದುದಕ್ಕಿಂತಲೂ ಅಧಿಕವಾದ ಫಲಪ್ರಾಪ್ತಿಯು ನಿಮಗಾಗಲಿದೆ ಸನ್ಮಿತ್ರರ ಮತ್ತು ಬಂಧುವರ್ಗದವರ ಬೆಂಬಲದಿಂದಾಗಿ ಪ್ರಬಲರಾದ ಶತ್ರುಗಳನ್ನು ಪರಾಭವಗೊಳಿಸುವುದಲ್ಲದೆ ಸಾಮಾಜಿಕ ರಾಜಕೀಯ ರಂಗಗಳಲ್ಲಿ ಪ್ರಶಸ್ತವಾದ ಕೀರ್ತಿಯನ್ನು ಸಂಪಾದಿಸುವಿರಿ, ತಾ, 20, 21, 24, 25, ಈ ದಿನಗಳಲ್ಲಿ ಕೊಂಚ ಗೃಹ ತಾಪತ್ರಯಗಳು ಕಾಣಿಸಿಯಾವು,

ಟೆಂಡರ ನೋಟೀಸು

1-4 1953 ರಿಂದ 31-3-54ರ ವರೆಗೆ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಆಫೀಸು ಮತ್ತು ಇದರ ತಾಬೆಯಲ್ಲಿರುವ ಬೇರೆ ಆಫೀಸುಗಳ ಪ್ರಿಂಟಿಂಗು, ಬೈಂಡಿಂಗ್ ಇತ್ಯಾದಿ ಕೆಲಸಾವಳಿಗಳ ಬಗ್ಗೆ ಸೀಲ್ಡು ಟೆಂಡರುಗಳನ್ನು "1953-54" ನೇ ವರ್ಷದಬಾಬ್ತು ಪ್ರಿಂಟಿಂಗ್ ಬೈಂಡಿಂಗ್ ವಗೈರೆ ಕೆಲಸಾವಳಿಗಳಬಾಬ್ತು ಟೆಂಡರು ಎಂತ ಸೀಲ್ಡು ಮಾಡಿದ ಲಕೋಟೆಯ ಮೇಲೆ ಪ್ರೆಸಿಡೆಂಟ್, ದ. ಕನ್ನಡ ಜಿಲ್ಲಾ ಬೋರ್ಡು, ಮಂಗಳೂರು ಎಂತ ವಿಳಾಸ ಬರೆದು 1953ನೇ ಇಸವಿ ಮಾರ್ಚ ತಿಂಗಳ ತಾರೀಕು 25 3 53ನೇ ಬುಧವಾರ ಅಪರಾಹ್ನ ಘಂಟೆ 5ರ ವಳಗೆ ದ ಕ. ಜಿಲ್ಲಾ ಬೋರ್ಡು ಆಫೀಸಿಗೆ ತಲಪುವಂತೆ ಕಳುಹಿಸಿ ಕೊಡಬೇಕಾಗಿ ಕೇಳಿ ಕೊಳ್ಳಲಾಗುತ್ತದೆ ಮೇಲ್ಕಾಣಿಸಿದ ತಾರೀಕಿನ ನಿಯಮಿತ ಕಾಲದ ನಂತರ ತಲಪುವ ಟೆಂಡರುಗಳನ್ನು ಅಂಗೀಕರಿಸಲಾಗಲಿಕ್ಕಿಲ್ಲ. ಟೆಂಡರುಗಳು ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಪ್ರೆಸಿಡೆಂಟರಿಂದ ಅಥವಾ ಅವರಿಂದ ಅಧಿಕಾರ ಹೊಂದಲ್ಪಟ್ಟವರಿಂದ 1953ನೇ ಇಸವಿ ಮಾರ್ಚ ತಿಂಗಳ ತಾರೀಕು 26ನೇ ಬ್ರಹಸ್ಪತಿವಾರ ಅಪರಾಹ್ನ ಘಂಟೆ 4-30ಕ್ಕೆ ದ. ಕ. ಜಿಲ್ಲಾ ಬೋರ್ಡು ಆಫೀಸಿನಲ್ಲಿ ಆ ಸಮಯ ಹಾಜರಿರುವ ಟೆಂಡರುದಾರರ ಸಮಕ್ಷಮ ತೆರೆಯಲ್ಪಡಲಾಗುವುದು

2. ಪ್ರಿಂಟಿಂಗ್ ಇತ್ಯಾದಿ ಕೆಲಸಗಳ ಸಂಬಂಧ ಪ್ರಿಂಟ್ ಮಾಡಿದ ಟೆಂಡರ್ ಫ್ಹಾರ್ಮ ಮತ್ತು ಟೆಂಡರು ಸಂಬಂಧದ ಕ್ರಮಾನುಬಂಧನೆಗಳನ್ನು ಪ್ರತಿಯೊಂದು ಎರಡು ಫಾರ್ಮುಗಳ ಒಂದು ಸೆಟ್ಟಿಗೆ ರೂ (1-0-0) ಒಂದು ರೂಪಾಯಿ ಪಾವತಿ ಮಾಡಿ ಬರಹ ಮೂಲಕ ಕೇಳಿಕೊಂಡಲ್ಲಿ ಒದಗಿಸಿ ಕೊಡಲಾಗುವುದು

B. M. Hegde,
President,
ದ. ಕ. ಜಿಲ್ಲಾ ಬೋರ್ಡು ಆಫೀಸು
ಮಂಗಳೂರು, 6-3-53

ಕರ್ಕಟ—ಹಿಂದಿನಂತಹ ಕಷ್ಟಪರಿಸ್ಥಿತಿಯು ನಿಮಗೀವಾರದಲ್ಲಿ ಕಾಣಸಿಗದು ಆರ್ಥಿಕಭಾಗದಲ್ಲಿ ಕೆಲಂಚ ಸುಧಾರಿಸುವಿರಿ, ನಿಷ್ಕಾರಣವಾಗಿ ಜನರೊಡನೆ ಕಲಹ ನಿಮ್ಮಿಂದಾಗಲಿವೆ, ಶತ್ರುಜನರ ಪೀಡೆಯಿಂದಾಗಿ ಯಾವಕಾರ್ಯವನ್ನೂ ಮುಂದರಿಸಲಾರಿರಿ, ಅಪ್ತೇಷ್ಟರ ಹಿರಿಯ ಬಂಧುವರ್ಗದವರ ಮನಸ್ತಾಪಕ್ಕೊಳಗಾದ ನಿಮಗೆ ಯಾರೊಬ್ಬರ ಬೆಂಬಲವು ದೊರೆಯಲಾರದು, ತಾ, 22, 23, ಈ ದಿನಗಳಲ್ಲಿ ಅನಿರೀಕ್ಷಿತ ಖರ್ಚು ದೇಹಾಲಸ್ಯ ಚಿಂತೆಗಳು ಹೆಚ್ಚುವವು,

ಸಿಂಹ—ಸಾಹಸಿಗಳಾದ ನಿಮಗೆ ದೈವವು ಬಹಳಷ್ಟು ಉತ್ತಮವಿರುವುದರಿಂದ ಹಿಡಿದ ಕಾರ್ಯದಲ್ಲಿ ವಿಜಯವು ಲಭಿಸುವದು, ಧನಧಾನ್ಯ ಪಶುಭೃತ್ಯರಿಂದೊಡಗೂಡಿದ ಗೃಹಕೃತ್ಯದಲ್ಲಿ ಚಿಂತೆಗೆ ಅವಕಾಶದೊರೆಯಲಾರದು ಪಿತ್ತದೋಷದಿಂದಾಗಿ ಅನಾರೋಗ್ಯವು ತಲೆದೋರೀತು, ಕೆಲವೊಮ್ಮೆ ಸತಪತಿಗಳಲ್ಲಿ ಮನಸ್ತಾಪವುಂಟಾಗಲಿದೆ ವಿಜಾತಿಯವರೊಡನೆ ಕಲಹವಾದೀತು. ತಾ. 20, 21. 22, 23, ಈ ದಿನಗಳಲ್ಲಿ ನಿಮ್ಮ ಸಂಕಲ್ಪವು ನಿರ್ವಿಘ್ನದಿಂದ ನೆರವೇರುವದು.

ಕನ್ಯಾ—ಅರ್ಥಸ್ಥಾನದಲ್ಲಿ ಶನ್ಯೈಶ್ವರನು ಅನಿಷ್ಟನಾದ ಅಷ್ಟಮದಲ್ಲಿ ಕುಜಗುರುಗಳು ನಿಂತಿರುವುದರಿಂದ ನಿಮಗೀವಾರವು ಬಹಳ ಕಷ್ಟದಾಯಿಯಾಗಿ ಪರಿಣಮಿಸಲಿದೆ. ಎಷ್ಟೇ ಕಷ್ಟಪಟ್ಟು ದುಡಿದರು ದಿನಾಂತ್ಯದಲ್ಲಿ ಕೈಯಲ್ಲಿ ಕಾಸೂ ಉಳಿಯಲಾರದು. ಶತ್ರುಜನರಿಂದಾಗಿ ಧನಮಾನಗಳಿಗೆ ಧಕ್ಕೆತಗಲಲಿದೆ. ತಲೆಶೂಲೆ ಉದರ ರೋಗಗಳು ಕಾಣಿಸುವವು. ವಾರಾಂತ್ಯದ 4 ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳಿಗವಕಾಶವಿರದ .

ತುಲಾ— ಸಾಂಸಾರಿಕ ತಾಪತ್ರಯಗಳು ದಿನೇ ದಿನೇ ಹೆಚ್ಚಲಿವೆ ತಂದೆ ಮಕ್ಕಳೊಳು ಗಂಡಹೆಂಡಿರೊಳು ನಿತ್ಯ ಜಗಳ ತಪ್ಪದು. ವ್ಯಾಪಾರ ವ್ಯವಹಾರಗಳಲ್ಲಿ ಅನಿರೀಕ್ಷಿತ ನಷ್ಟಕಷ್ಟಗಳು ಕಂಡು ಬಂದಾವು. ಸ್ತ್ರೀ ಜನರಿಂದಾಗಿ ಜನಾಪವಾದವು ಪ್ರಾಪ್ತವಾದೀತು

ಶರೀರ ಸಮತೂಕತೆಗೆ-ಸರ್ವ ರೋಗ ನಿವಾರಣೆಗೆ
ನವಚೇತನ, ಅಮೂಲ್ಯ ಶಕ್ತಿವರ್ಧಕವೆಂದರೆ— ಸುಪ್ರಸಿದ್ಧ

ಸರ್ ಜೀವನ ಶಿಲಾಜಿತ್ ಲೇಹ್ಯ

ಸಕಲ ಋತುವಿನಲ್ಲಿ ಸರ್ವರಿಗೂ ಅನುಕೂಲವುಂಟು.
44 ದಿನದ ಲೇಹ್ಯ ರೂ. 5-4-0, 22 ದಿನದ ಲೇಹ್ಯ ರೂ. 3-4-0
(ಪೋಸ್ಟೇಜ್ ಮಾಫಿ)

ನೀಲಗಿರಿ ಡಿಪ್ಪೋ, ಅಕ್ಕಿಪೇಟೆ ಚೌಕ, ಬೆಂಗಳೂರ ಸಿಟಿ

ಶುದ್ಧ ನೀಲಗಿರಿ ಎಣ್ಣೆ ಸಿಗುತ್ತೆ.

The Canara Industrial & Banking Syndicate Ltd.
Hangarcutta Branch.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ಹಂಗಾರಕಟ್ಟೆ ಬ್ರ್ಯಾಂಚ್.

AUCTION NOTICE

ಈ ಕೆಳಗೆ ಕಾಣಿಸಿದ ಸಾಲಗಾರರು ಮೇಲಿನ ಬ್ಯಾಂಕಿನಲ್ಲಿ ನಗಗಳ ಈಡಿನಲ್ಲಿ ಸಾಲ ಪಡಕೊಂಡು ಕ್ಲುಪ್ತ ಮ್ಯಾದೆಗೆ ಅಸಲು ಬಡ್ಡಿ ವಗೈರೆ ಪಾವತಿ ಮಾಡದೆ ಬಾಕಿ ಮಾಡಿಕೊಂಡು ರಿಜಿಸ್ಟ್ರಿ ನೋಟೀಸು ಬಿಟ್ಟದ್ದು ಕೆಲವರಿಗೆ ಸದ್ರಿ ನೋಟೀಸು ಮುಟ್ಟದೆ ವಾಪಸ್ಸು ಬಂದಿರುವುದರಿಂದ ಇನ್ನು ಕೆಲವರು ವಸೂಲು ಕೊಡಲು ತಪ್ಪಿದ್ದರಿಂದ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸದ್ರಿ ಸಾಲಗಾರರು ಬ್ಯಾಂಕಿಗೆ ಸಲ್ಲತಕ್ಕ ಅಸಲು ಬಡ್ಡಿ ವ ನೋಟೀಸು ಖರ್ಚು ಸಮೇತ ಪಾವತಿ ಮಾಡದಿದ್ದಲ್ಲಿ ಸದರಿಯವರು ಈಡಿಟ್ಟ ನಗಗಳನ್ನು ಇದೇ ತಾರೀಕು 30-3-53ನೇ ಸೋಮವಾರ ಮಧ್ಯಾಹ್ನ ಘಂಟೆ 3ಕ್ಕೆ ಸರಿಯಾಗಿಯೂ ಅನಂತರ ನಮಗೆ ಯುಕ್ತ ಕಂಡ ತಾರೀಕಿನಲ್ಲಿ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು.

ಸಾಲದ ನಂಬ್ರ ತಾರೀಕು	ಸಾಲಗಾರರ ಹೆಸರು ಮತ್ತು ವಿಳಾಸ	ಸಾಲದ ಮೊಬಲಗು
469/52 13-9-52	Janab T. S Mohamed Usman, S/o T. S. Abdul Rahiman Saheb, Bengre, Hungarkatta.	ರೂ. 250
79/52 10-8-52	Fakeera Marakala N/o Pappu Marakala Bengre, Hungarkatta.	10
116/51 24-3 51	Marshal Souza S/o Anthone Francis Souza, Airody Hangarkatta.	25
819/50 10-12-50	Narasimha Marakala, S/o Aitha Marakala, Hangarkatta	15
101/50 6-3-50	Johny Lawrence Ludric S/o Kojma Ludric, Merchant, Airody, Sastan.	40
302/52 11-7-52	Fakeera Marakala N/o Pappu Marakala, Bengre, Hangarkatta.	10
440/50 12-7-50	Janab Alli Saheb S/o Papa alias Budan Saheb, Parampalli, Saligram.	70
549/50 5-8-50	Benedict Ludric S/o Lores Ludric Airody, Sastan.	10
140/52 28-3-52	Hammad Beary S/o Modin Beary, Sastan.	20

Hangarcutta, 10-3-1953.

K. Govinda Baliga
Agent.

ಆದರೂ ಗ್ರಹಗಳ ಲಗ್ನದ ರವಿ ಮತ್ತು ಗುರುಗಳಾದ ಬೃಹಸ್ಪತ್ಯಾಚಾರ್ಯರು ಶೀಘ್ರದ ಅನುಗ್ರಹದಿಂದಾಗಿ ತಾ. 19 25 ಈ ದಿನಗಳಲ್ಲಿ ನಿಮ್ಮ ಬಯಕೆಯು ನೇರಲಿದೆ.

ವೃಶ್ಚಿಕ— ಎಂತಹ ವಿಪತ್ತೇ ಬರಲಿ ಗಣಿಸದೆ ಮುಂದೆಸಾಗುವ ಧೈರ್ಯ ಗಳು ನಿಮ್ಮಲ್ಲಿರುವುದರಿಂದ ಈ ವಾರವು ನಿಮಗೆ ಸಾಕಷ್ಟು ಉತ್ತಮವಾಗಿ ಪರಿಣಮಿಸುವುದು. ಔದಾಸೀನ್ಯದಿಂದ ಕುಳಿತರೆ ಕಷ್ಟಗಳು ತಪ್ಪಲಾರವು. ಸ್ವಕ್ಷೇತ್ರಗತ ಅಂಗಾರಕನು ನಿಮಗೆ ಹೆಚ್ಚಿನ ಸಹಾಯಾಗಿ ನಿಲ್ಲುವನು ಆರ್ಥಿಕ ತಾಪತ್ರಯ ದೂರವಾದೀತು. ಆರೋಗ್ಯವು ಸಾಧಾರಣವಾದೀತು 3 ದಿನಗಳಲ್ಲಿ ಸಂಕಲ್ಪ ನಾಯಾಸದಿಂದ ಸಿದ್ಧಿಸದೆ.

ಧನು— ಈಗಲೀಗ ದಿನದಿಂದ ನಿಮ್ಮ ಅದೃಷ್ಟವು ಕುಗ್ಗುತ್ತ ಬರುತ್ತಿದರೂ ನಿಮ್ಮ ಕಾರ್ಯಗಳು ನಿರ್ವಿಘ್ನ ಕೊನೆಹೊಂದುವವು. ಆರ್ಥಿಕ ಪರಿಸ್ಥಿತಿ ಅತ್ಯುತ್ತಮಗೊಳ್ಳಲಿದೆ. ವಿಶೇಷತಃ ನರಿಂದ ಧನಾಗಮವಾಗುವದು. ಸಂಸಾರ ಮಕ್ಕಳು ಮರಿಗಳ ಅನಾರೋಗ್ಯವು ದೋರೀತು. ಕೆಲವೊಮ್ಮೆ ಕೈಯಲ್ಲಿನ ಬಾಯಿಗೆ ಬರಲಿಕ್ಕಿಲ್ಲವೆಂಬಂತಹ ಪರಿಸ್ಥಿತಿ ಕಾಣಿಸಲಿದೆ. ತಾ 20, 21, 22, 23 ನಗಳು ಇಷ್ಟುದಲ್ಲಿ ಉತ್ತಮವೆನಿಸೀ

ಮಕರ—ಈ ವಾರವು ನಿಮಗೆ ಸುಖ ಗಳಿಂದ ಸಮ್ಮಿಶ್ರವಾದ ಫಲವನ್ನು ಕೊನಾನಾತೆರನಾದ ಖರ್ಚುಗಳಿದ್ದರೂ ಆವು ಸಾಕಷ್ಟಿದ್ದ ಕಾರಣ ಹಣಕ್ಕಾಗಿ ಬೇಕಾಗಿಲ್ಲ, ಕೆಲವೊಮ್ಮೆ ದುರ್ಜನರ ಮಾಜಾಲಕ್ಕೆ ಸಿಲುಕಿ ಜನಾಪವಾದ ನಷ್ಟಗಳಿಗೆ ಗುರಿಯಾದೀರಿ, ಚಂಚಲವಾದ ಮನದಾಕಾಂಕ್ಷೆಗಳು ನಿಮ್ಮನ್ನು ಸೆಳೆಯ ಆದರೂ ವಾರಾಂತ್ಯದ 4 ದಿನಗಳಲ್ಲಿ ಭೋಗ ಕಾರ್ಯವಿಜಯಗಳನ್ನು ಪಡೆದೀರಿ,

ಕುಂಭ—ಮನಸ್ಸಿನ ಧೈರ್ಯೋತ್ಸಾಹಗಳು ಗ್ಗುವುದರಿಂದ ಯಾವಕಾರ್ಯವನ್ನು ದರಿಸುವ ಧೈರ್ಯವಿರದು. ಆದರೆ ಹಿಡಿದ ಕಾರ್ಯದಲ್ಲಿ ವಿಜಯವು ಕಟ್ಟಿಟ್ಟಗಂಟಿನ ವುದು ಮಾನಸಿಕ ದೌರ್ಬಲ್ಯವು ಆಪ್ತರಲ್ಲೂ ಅವಿಶ್ವಾಸವನ್ನು ಹುಟ್ಟಿಸಲಿದೆ ಕರ್ಮಗಳಲ್ಲೂ ಗುರುಹಿರಿಯರಲ್ಲೂ ದಾಕ ತಾತ್ಸಾರಗಳು ಹೆಚ್ಚುವವು. ತಾ. 24, 25, ಈ ದಿನಗಳಲ್ಲಿ ಧನಲಾಭ ಲಾಭವ ಗೃಹಸುಖಾದಿಗಳನ್ನು ಪಡೆಸಿ

ಮೀನ— ನಿಮ್ಮ ದೇಹಾರೋಗ್ಯವು ಮವಿರುವದು ಹಿಡಿದ ಕಾರ್ಯದಲ್ಲಿ ವು ನಿರೀಕ್ಷಿಸಿದುದಕ್ಕಿಂತಲೂ ಅಧಿಕ ಭಸಲಿದೆ. ಹೆಚ್ಚಿನ ಕಾಲವನ್ನು ಧರ್ಮ ಕಳೆವ ಪ್ರಸಂಗ ಬರಲಿದೆ. ಅಧಿಕಾರ ದ ವಿಶೇಷತೊಂದರೆಗಳುಂಟಾಗುವ ದ್ಧಜೀವಗಳಿಗೀವಾರವು ಸುಖದಾಯಿ ಪರಿಣಮಿಸಲಾರದು. ಜಠರದ ಬಿಕಟ್ಟು ಕಾಣಿಸಲಿವೆ, ತಾ. 23, 21ರಲ್ಲಿ ಮಾತ್ರ ಬಯಕೆಯು ಸಿದ್ಧಿಸುವ ಸಂಭವವಿ

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾ ವರುಷಗಳಿಂದ ಊರ ಜನರ ಗಿ ಡಿಪೋಸಿಟ್ ಹಣಕ್ಕೆ ನ್ಯಾಯ ಬಡ್ಡಿಯಿಂದಲೂ, ಸಾಲದ ಹೇತೀ ಕಡಿಮೆ ದರದ ಬಡ್ಡಿಯಿಂ ಜನ ಹಿತಸಾಧನೆಯನ್ನು ಮಾ ರುವುದು.

The Moolky Bank
Moolky, S. K.

Edited, Printed & Published By K. H. Shetty at the Navayuga Press, Udipi, S. India

Licensed to Post without Prepayment

ನವಯುಗ ಆರೋಗ್ಯ ಭಂಡಾರ, ಶ್ರೀ ಎ. ಬಿ. ಶೆಟ್ಟಿಯವರಿಂದ ಸ್ಥಾಪಿತವಾದ ... ಉಡುಪಿ, ದ. ಕನ್ನಡ

ವಾರ್ಷಿಕ ಚಂದಾ 5-12-0
6 ತಿಂಗಳಿಗೆ 3-0-0
ಬಿಡಿಪ್ರತಿಗೆ 0-2-0

ನವಯುಗ

ಚಿತ್ರತರಂಗ
ಪ್ರತ್ಯೇಕ ಪತ್ರಿಕೆಯು
ಉಪಯುಕ್ತವಾದ
90 ಪುಸ್ತಕಗಳು
ರೂ. 24ಕ್ಕೆ ಸಿಗುತ್ತವೆ.
ವಿವರಕ್ಕೆ ಬರೆಯಿರಿ:
ಮೆನೇಜರ್,
ಚಿತ್ರತರಂಗ, ಉಡುಪಿ

26-3-1953

Vol 32 No 29 NAVAYUGA WEEKLY POST BOX NO 22 UDIPI ವರ್ಷ ೩೨ ವಾರ ೨೯

ನಮ್ಮ ಅನೇಕ ಪ್ರಯತ್ನಗಳು ವ್ಯರ್ಥಗೊಂಡು ನಮಗೆ ನಿರಾಸೆಯನ್ನು ತರುತ್ತವೆ; ಕೆಲವೊಮ್ಮೆ ಇವೇ ಪ್ರಯತ್ನಗಳು ನಾವು ಎಣಿಸದ ರೀತಿಯಲ್ಲಿ ಸಾಫಲ್ಯವನ್ನು ಪಡೆಯುತ್ತವೆ. ಸಫಲತೆ-ಮತ್ತು ಅಸಫಲತೆಗಳ ನಮ್ಮ ನಿತ್ಯಜೀವನದಲ್ಲಿ ಒಂದರ ಹಿಂದೆಯೇ ಇನ್ನೊಂದೆಂಬಂತೆ ಬರುತ್ತವೆ. ಹೀಗಿದ್ದರೂ, ನಾವೊಂದು ಸಂಗತಿಯನ್ನು ನೆನಪಿನಲ್ಲಿ ಇಟ್ಟುಕೊಳ್ಳಬಹುದು. ಅದೇನೆಂದರೆ—ನಾವು ಅಸಫಲರಾಗಬೇಕೆಂದು ದೈವ ನಿಯಮವೇನಿಲ್ಲ, ನಾವು ಯಾವ ಕಾರ್ಯದಲ್ಲಿಯೂ ಅಸಫಲರಾಗಬೇಕೆಂಬುದೇ ಇಲ್ಲ! ನಮ್ಮಲ್ಲಿ ಪ್ರತಿಯೋರ್ವನೂ ಸಫಲನಾಗಬಲ್ಲನು. ನಮ್ಮ ಸಮಸ್ಯೆಗಳು ಎಷ್ಟೇ ಜಟಿಲವಿರಲಿ, ಗಂಭೀರಸ್ವರೂಪದ್ದಾಗಿರಲಿ, ಅವುಗಳು ಬಿಡಿಸಲ್ಪಡಲಾರವೆಂಬಷ್ಟು ವಿಶೇಷತೆ ಅವುಗಳಲ್ಲಿಲ್ಲ! ಯಾವುದೊಂದು ಪರಿಹಾರ ಮಾರ್ಗವೂ ಇರಲಾರದ ಸಮಸ್ಯೆ ಅಪವಾದದ ರೂಪದಲ್ಲಿ-ಸಾವಿರಕ್ಕೆ ಒಂದು—ಇದ್ದೀತು. ಇಂಥ ಗಹನತರವಾದ ಸಮಸ್ಯೆ ಕೂಡ, ನಮ್ಮ ಮನಸ್ಸಿನ ಸಾಮಂಜಸ್ಯವನ್ನು ಕಾಪಾಡಿಕೊಂಡು ಬಂದು, ಬುದ್ಧಿವಂತಿಕೆಯಿಂದ ಅದನ್ನು ಸ್ವೀಕರಿಸುವುದಕ್ಕಾಗಿಯೇ ಇದಿರಾಗುತ್ತದೆಂಬುದು ಸ್ಮರಣೆಯಲ್ಲಿದ್ದರೆ ಒಳ್ಳೇದು. ಆಗ ವಿವೇಕವು ನಮ್ಮೊಳಗೆ ನವ್ಯ ಸ್ಫೂರ್ತಿಯನ್ನೂ ಹೊಸ ಬೆಳಕನ್ನೂ ಹೊತ್ತುಕೊಂಡು ಬರುವುದು. ಬಿಡಿಸಲ್ಪಡಲಾರದೆಂದು ಇಟ್ಟುಕೊಂಡ ಗಂಭೀರತಮವಾದ ಸಮಸ್ಯೆಗೂ ಆಗ ಪರಿಹಾರಮಾರ್ಗವೊಂದು ಗೋಚರಿಸೀತು.

ಗೀತೆಯಲ್ಲಿ "ಉದ್ಧರೇದಾತ್ಮನಾತ್ಮಾನಂ" ಎಂದು ಹೇಳಿದೆ. ನಮ್ಮ ಪರಿಸ್ಥಿತಿಯನ್ನೂ ನಮ್ಮ ಪ್ರಯತ್ನಗಳು ಅಸಫಲಗೊಳ್ಳುವುದರ ಕಾರಣವನ್ನೂ ಪರಿಶೀಲಿಸಿ ನೋಡಿದಲ್ಲಿ ಈ ಗೀತಾವಾಕ್ಯ ನೆನಪಿಗೆಬರುತ್ತದೆ. ನಮ್ಮ ಭವಿಷ್ಯವು ಸಂಪೂರ್ಣವಾಗಿ ನಮ್ಮನ್ನೇ ಹೊಂದಿಕೊಂಡಿದೆ ಎಂಬ ಸತ್ಯ ಆಗ ಹೃದಯಂಗಮವಾಗುತ್ತದೆ. ಈ ನಿಯಮವು ನಮ್ಮ ಕೆಲಸ ಕಾರ್ಯಗಳಲ್ಲಿ ಉದ್ಯೋಗಗಳಲ್ಲಿ, ಸಾಮಾಜಿಕ ಅಥವಾ ವೈವಾಹಿಕ ಜೀವನದಲ್ಲಿ- ಅಥವಾ ಬದುಕಿನ ಯಾವುದೇ ಕ್ಷೇತ್ರದಲ್ಲಿ ಚೆನ್ನಾಗಿ ಅನ್ವಯಿಸುತ್ತದೆ.

ಅಸಫಲತೆಯಿಂದ ಖಿನ್ನ ಮನಸ್ಕರಾಗುವುದಕ್ಕಿಂತ ಮೊದಲು ಸಫಲತೆ ಮತ್ತು ಅಸಫಲತೆಗಳಲ್ಲಿ ಇರುವ ಅಂತರವಾದರೂ ಏನೆಂಬುದನ್ನು ತಿಳಿದುಕೊಳ್ಳಬೇಡವೆ? "ಸಫಲತೆ" ಎಂಬೊಂದು ಶಬ್ದ ವ್ಯವಹಾರ

ಮಧುಪರ್ಕ

ಪಾಲೆಸ್ತೀನದಲ್ಲಿ ಶಾಂತಿ ಪ್ರಯತ್ನ ನಡೆಸಿದ್ದಕ್ಕೆ ನೋಬೆಲ್ ಪಾರಿತೋಷಕವನು ಪಡೆದ ರಾಲ್ಫ್ ಬುಂಚರು ಈಚೆಗೆ ಭಾರತದಲ್ಲಿ ಸಂಚಾರ ಕಾರ್ಯಕ್ರಮ ಇಟ್ಟುಕೊಂಡಿದ್ದಾಗ, ಒಂದು ಭಾಷಣದಲ್ಲಿ ಹೇಳಿದ ಸಂಗತಿ ಸ್ಮರಣೀಯವಾಗಿದೆ.

ತನ್ನನ್ನು ಲೋಕವೇ ಅಭಿನಂದನೆಯ ಮಳೆಗರೆದು ಗೌರವಿಸುತ್ತಿರುವಾಗ, ಮಹನೀಯರ ಮಹಿಳೆಯರೂ, ಪತ್ರಿಕೆ ರೇಡಿಯೋಗಳೂ ತನ್ನ ಕೀರ್ತಿಗಾನ ಮಾಡುತ್ತಿದ್ದಾಗ, ಸ್ವಂತ ಮಗನು ಇದಾವುದನ್ನೂ ಲಕ್ಷಿಸಲಿಲ್ಲ. ಒಬ್ಬ ಪತ್ರಿಕಾ ಪ್ರತಿನಿಧಿಯು ಈ ಹುಡುಗನೊಡನೆ "ನಿನ್ನ ತಂದೆಯವರು ವಿಶ್ವ ಶಾಂತಿ ಸ್ಥಾಪಕರೆಂದು ಎನಿಸುತ್ತಿರುವರು" ಎಂದು ಕೇಳಿದಕ್ಕೆ, ಅವನು ಕೊಟ್ಟ ಉತ್ತರ ಹೀಗಿದೆ:

"ನಾನು ಅಪ್ಪನನ್ನು ಶಾಂತಿಸ್ಥಾಪಕನೆಂದು ಕರೆಯಲಾರೆ. ಮನೆಯಲ್ಲಿ ನನ್ನ ತಂಗಿಗೂ ನನಗೂ ನಿತ್ಯ ನಡೆಯುತ್ತಿರುವ ಜಗಳವನ್ನು ನಿಲ್ಲಿಸಲಿಕ್ಕೆ ಅವನಿಂದಾಗುವುದಿಲ್ಲ!"

ಅಸಫಲತೆಯ ಮೂಲ

ದಲ್ಲಿ ಭಿನ್ನ ಭಿನ್ನ ಸ್ವರೂಪದಿಂದ ಕೂಡಿದೆ. ಒಬ್ಬನಿಗೆ ಅನ್ನಸಮಾನವಾದುದ ಇನ್ನೊಬ್ಬನಿಗೆ ಕಂಬುಪಾಷಾಣವಾಗಿಯೇ ಪರಿಣಮಿಸೀತು. ಸಫಲತೆಗೆ ಈ ಮಾತು ಅಷ್ಟು ಚೆನ್ನಾಗಿ ಅನ್ವಯಿಸುತ್ತದೆ. ತನ್ನ ಉದ್ಯೋಗದಲ್ಲಿ ಉಚ್ಚಾಧಿಕಾರಿಯ ಸ್ಥಿತಿಯನ್ನು ಹೊಂದಿ ಲಕ್ಷಾಧಿಪತಿಯಾದೊಬ್ಬನು ಧನಾರ್ಜನೆಯ ದೃಷ್ಟಿಯಲ್ಲಿ ಸಫಲನಾಗಿದ್ದಾನೆ. ಆದರೆ ಸ್ವಾಸ್ಥ್ಯ ಜೀವನದ ದೃಷ್ಟಿಯಿಂದ ನೋಡಿದರೆ, ಅವನು ಅಸಫಲನಿರಬಹುದು. ಒಬ್ಬ ಮಹಿಳೆಯು ವಿದ್ಯಾಕ್ಷೇತ್ರದಲ್ಲಿ ಅತ್ಯಂತ ಪ್ರಗತಿಯನ್ನು ಹೊಂದಿ ಡಿಗ್ರಿಗಳ ಸರಮಾಲೆಯನ್ನೇ ಪಡೆದು ಸಮಾಜದ ನಡುವೆ ಮೆರೆದಿದ್ದಾಳೆ. ಆದರೆ ಗಾರ್ಹಸ್ಥ್ಯ ಜೀವನ ಹಾಗೂ ಸ್ತ್ರೀತ್ವಕ್ಕೆ ಪೋಷಣ ನೀಡುವ ದೃಷ್ಟಿಯಿಂದ [illegible] ಅಸಫಲತೆಯನ್ನು ಹೊಂದಿದ್ದಾಳು. ವಿಶ್ವವಿದ್ಯಾಲಯದ ಪ್ರತಿಯೊಂದೂ ಪರೀಕ್ಷೆಯಲ್ಲಿ ಉಚ್ಚ ಶ್ರೇಣಿಯಿಂದ ತೇರ್ಗಡೆ ಹೊಂದುತ್ತಿರುವ ವಿದ್ಯಾರ್ಥಿ ಸರಸ್ವತೀ ದೇವಿಯ ಕೃಪೆಗೆ ಸಂಪೂರ್ಣ ಪಾತ್ರನಾಗಿರುವನೆಂದು ತಿಳಿದುಕೊಳ್ಳುವುದಕ್ಕೆ ಅಡ್ಡಿಯಿಲ್ಲ. ಆದರೆ ಧನಲಕ್ಷ್ಮಿಯ ಕೃಪಾಕಟಾಕ್ಷವನ್ನು ಸಫಲತೆಯ ಮಾನದಂಡವಾಗಿಟ್ಟು ನೋಡಿದಲ್ಲಿ ಈ ವಿದ್ಯಾರ್ಥಿ ಪೂರಾ ಅಸಫಲನೆಂಬಲ್ಲಿ ಸಂದೇಹವಿಲ್ಲ. ಒಂದು ಕುಟುಂಬದಲ್ಲಿ ಗಂಡಹೆಂಡಿರು ಅನ್ಯೋನ್ಯವಾಗಿದ್ದುಕೊಂಡು ಸರಳ ಜೀವನದಿಂದಲೇ ತೃಪ್ತರಾಗಿರಬಹುದು. ಆದರೆ ನೋಡುವ ಜನರ ಕಣ್ಣಿಗೆ ಅವರು ತೀರಾ ಬಡವರಾಗಿ ಭೂಮಿಯ ಮೇಲೆ ಬದುಕಲಿಕ್ಕೂ ಅನರ್ಹರೆಂದು ಕಂಡೀತು. ತನ್ನ ಕಾರ್ಯ[illegible]ರದ ದೃಷ್ಟಿಯಿಂದ ಓರ್ವ ಮಹೋದಯರು [illegible] ಸಾಫಲ್ಯದಿಂದ ಕೂಡಿದ್ದಾರೆ. [illegible] ಮನೆಯ ಮಕ್ಕಳು [illegible] ಮೇಲೆ [illegible] ಮಾತು ನಡೆಯುವುದಿಲ್ಲವಾದರೆ, ಅದು ಅಸಫಲತೆಯಲ್ಲವೆ?

ಸಫಲತೆ-ಅಸಫಲತೆಗಳ ಪರಸ್ಪರ ವಿರುದ್ಧವಾದ ಮುಖಗಳ ಕೆಲವು ಚಿತ್ರಗಳನ್ನು ಪರಿಶೀಲಿಸಿದ ಬಳಿಕ, ನಾವೊಂದು ನಿರ್ಣಯಕ್ಕೆ ಬರಲು ಸಮರ್ಥರಾಗಿದ್ದೇವೆ. ಅದೇನೆಂದರೆ—ಬಾಳ್ವೆಯಲ್ಲಿ ಸಾಮಂಜಸ್ಯವನ್ನು ಸ್ಥಾಪಿಸಿಕೊಳ್ಳುವುದರಲ್ಲಿಯೇ ಎಲ್ಲ ವೈಶಿಷ್ಟ್ಯವೂ ಸಮಾವಿಷ್ಟವಾಗಿದೆ. ನಮ್ಮ ಬದುಕು ಸರ್ವದೃಷ್ಟಿಯಿಂದಲೂ ಶ್ರೇಯೋದಾಯಕವಾಗಬೇಕು—ಈ ಆಸೆಯನ್ನಿಟ್ಟುಕೊಂಡು ಅದರ ಪ್ರತಿಯೊಂದು ಅಂಗವನ್ನೂ ರೂಪಿಸುವುದು ಒಳಿತು. ಮಾತಾಪಿತರ ಕೂಡೆ ಮಕ್ಕಳ ಸಂಬಂಧ ನಯವೂ ಸುಖವೂ ಮತ್ತು ಆನಂದದಾಯಕವೂ ಆಗಿದ್ದರೆ ಅದರಿಂದ ಗೃಹಸ್ಥಜೀವನ ಧನ್ಯವೆನಿಸುತ್ತದೆ. ನಮ್ಮ ಉಡಿಗೆ ತೊಡಿಗೆ, ಆಹಾರ ವಿಹಾರಗಳೆಲ್ಲವೂ ಸುಂದರವೂ ಸರಳವೂ ಶಾಂತ ಚಟುವಟಿಕೆಯಿಂದ ಕೂಡಿದವೂ ಆಗಿದ್ದರೆ ಅದರಿಂದ ಸಾತ್ವಿಕ ಸುಖ ದೊರೆಯುತ್ತದೆ. ಸಲುಗೆಯ ಸ್ನೇಹಿತರು, ಹೊತ್ತುಗಳೆಯುವುದಕ್ಕೆ ಉಪಯೋಗಿಯಾದ ಒಂದು ಸದುಪಾಯ ಮನೋರಂಜನೆಗಾಗಿ ಉಚಿತ ಕಲೆಗಳಲ್ಲಿ ಆಸಕ್ತಿ ಮುಂತಾದವೆಲ್ಲ ಇದ್ದರೆ, ಬದುಕು ಬಂಗಾರವೆನಿಸುತ್ತದೆ. ವಿದ್ಯೆಯೂ ಸಂಪತ್ತೂ ಎರಡೂ ಸಮ ಪ್ರಮಾಣದಲ್ಲಿ ಕೂಡಿದ್ದರೆ—ಆಗ ಜೀವನದಾರಿಯು ಸಂಘರ್ಷಗಳಿಲ್ಲದೆ ಸುಗಮವಾಗಿ, ನಿರಂತರವಾಗಿ ಹರಿಯಬಲ್ಲುದು. ನಮ್ಮ ಆವಶ್ಯಕತೆಗಳ ಪೂರೈಸಿಕೊಂಡು ಧನೋಪಾರ್ಜನ ಮಾಡುವುದರಲ್ಲಿ ಯಾವ ತಪ್ಪೂ ಇಲ್ಲ. ಮಾತ್ರವಲ್ಲ ಅದು ಅತ್ಯಂತ ಆವಶ್ಯವೂ ಆಗಿದೆ. ನಮ್ಮ ಆಗತ್ಯವನ್ನು ಮನಗಂಡು ಸಾವಿರ ರುಪಾಯಿಗಳ ಸಾಲಕೊಡಲು ಸದ್ಗೃಹಸ್ಥರೊಬ್ಬರು ಮುಂಬಂದರೂ, ಅದನ್ನು ಸ್ವೀಕರಿಸದೆ ನಮ್ಮ ಶ್ರಮ ಪಟ್ಟು ದುಡಿದು ಹಣ ಸಂಪಾದಿಸಲಾರೆವೆ ಎಂದು ಯೋಚಿಸಿಕೊಳ್ಳುವುದರಲ್ಲಿ ಹಿತವಿದೆ. ನಮಗೆ ಆಕಸ್ಮಿಕವಾಗಿ ಒದಗಿ ಬಂದಂಥಾದ ಕಷ್ಟಗಳಿಗಾಗಿ (ಉದಾ: ದವಾಖಾನೆಯ ಖರ್ಚಿಗಾಗಿ ದೊಡ್ಡ ಮೊತ್ತದ ಹಣ ಕೊಡಬೇಕಾಗಿ ಬಂದಾಗ ಮದುವೆ ಮುಂಜಿಗಳಿಗಾಗಿ ಹಣ ವ್ಯಯಿಸಬೇಕಾಗಿ ಬಂದಾಗ) ಕೂಡ, ಸ್ವಂತ ದುಡಿಮೆಯಿಂದಲೇ ಅದನ್ನು ಸಂಪಾದಿಸುವುದು ಶ್ರೇಯಸ್ಕರ.

ಅಸಫಲತೆಯ ಮೂಲದಲ್ಲಿರುವ ಕೆಲವು ಕಾರಣಗಳು ಅತ್ಯಂತ ಸ್ಪಷ್ಟವಿವೆ. ನಮ್ಮ ಆವಶ್ಯಕತೆಯ ಸಮ್ಯಕ್ ಜ್ಞಾನವಿ

(೬ ನೇ ಪುಟ ನೋಡಿರಿ)



ಬ್ರಿಟನಿನಲ್ಲಿ ಇತ್ತೀಚೆಗೆ ಸಂಭವಿಸಿದ ನೆರೆ ಹಾವಳಿಯ ದೃಶ್ಯವೊಂದು.

ಭಾರತೀಯರ ಮುಂದಿರುವ ಮಹಾ ಕಾರ್ಯ

ರಾಷ್ಟ್ರದ ಕೃಷಿಯೋಗ್ಯ ಭೂಮಿಯ ಸಂರಕ್ಷಣೆಯಲ್ಲಿ ವೃಕ್ಷಾರೋಪಣದ ಮಹತ್ವ

ಇದೊಂದು ಪ್ರಾಚೀನ ಕಥೆ—ಓರ್ವ ಋಷಿಯೊಡನೆ ಜಿಜ್ಞಾಸು ಪ್ರೊಬ್ಬನು "ಆಶ್ರಮದಲ್ಲಿರುವ ವೃಕ್ಷಗಳ ಸೇವೆಯನ್ನು ನೀವು ಇಷ್ಟೊಂದು ಹೆಚ್ಚಾಗಿ ನಡೆಸುತ್ತೀರಿ! ಇದರ ಕಾರಣವೇನು?" ಎಂದು ಕೇಳಿದ. ಋಷಿಯು "ಅದರ ಕಾರಣ ಸುಲಭ ಗ್ರಾಹ್ಯವೇ ಆಗಿದೆ. ನಾನಿಲ್ಲಿ ಇಲ್ಲದಾಗ, ನನ್ನಲ್ಲಿಗೆ ಬರಬಹುದಾದ ಅತಿಥಿಗಳ ಸೇವೆಯನ್ನು ಈ ಮರಗಿಡಗಳೇ ಮಾಡುವುವು. ತಮ್ಮ ಸ್ವಾದಿಷ್ಟವಾದ ಹಣ್ಣುಗಳನ್ನು ನೀಡುವುವು. ಬಿಸಿಲಿಂದಲೂ ನೆರಳು ಕೊಟ್ಟು ಕಾಪಾಡುವುವು" ಎಂದು ಉತ್ತರಿಸಿದನು.

ಕ್ರಿಸ್ತಿಯನ್ನರಲ್ಲಿಯೂ ಇಂಥದೇ ಒಂದು ಆಖ್ಯಾಯಿಕೆ ರೂಢಿಯಲ್ಲಿದೆ—ತನ್ನ ಶಿಷ್ಯಂದಿರನ್ನು ಕೂಡಿಕೊಂಡು ನಡೆಯುತ್ತಿದ್ದ ಸಂತ ಪಾವ್ಲ ಬೆಟ್ಟದ ಕಿಬ್ಬದಿಯಲ್ಲಿ ನಿಂತುಬಿಟ್ಟರು; ಅಲ್ಲಿಯೇ ಒಂದು ಹೊಂಡ ತೋಡಿ, ಸಣ್ಣ ಸಸಿಯೊಂದನ್ನು ನಟ್ಟರು. ಗುರುವಿನ ಈ ಕೃತ್ಯವನ್ನು ನೋಡಿ ಶಿಷ್ಯಂದಿರು ಆಶ್ಚರ್ಯಾನ್ವಿತರಾದರು. ಕೊನೆಗೆ ಅವರಲ್ಲಿ ಒಬ್ಬನು ಧೈರ್ಯ ತಂದುಕೊಂಡು 'ಸ್ವಾಮಿ, ವೃಕ್ಷಾರೋಪಣವೂ ಪರಮಾತ್ಮನ ಸೇವೆಗಳಲ್ಲಿ ಸೇರಿದೆಯೆ?" ಎಂದು ಕೇಳಿದ. ಸಂತ ಪಾವುಲರು ವಿಸ್ಮಿತವಾಣಿಯಲ್ಲಿ ಕೇಳಿದರು—'ಏನು, ಹಸಿದವರಿಗೂ ದಣಿದವರಿಗೂ ಅನ್ನ ಹಾಗೂ ನೆರಳನ್ನು ಕೊಡುವುದಕ್ಕಿಂತ ಮಿಗಿಲಾದ ಸೇವೆ ಬೇರೊಂದಿಲ್ಲವೆಂಬುದನ್ನು ಮರೆತಿಯಾ?' ತಮ್ಮ ಸಂದೇಹಕ್ಕೆ ಯೋಗ್ಯ ಸಮಾಧಾನ ದೊರೆತರೂ ಕೂಡ ಇನ್ನೊಬ್ಬ ತಾರ್ಕಿಕ ಶಿಷ್ಯನು ಪ್ರಸಂಗವನ್ನು ಅಲ್ಲಿಗೇ ಬಿಡದೆ ಮರಳಿ ಪ್ರಶ್ನಿಸಿದ—"ಹಸಿದವರಿಗೆ ಅನ್ನ ಬೇಕಿದ್ದರೆ, ಧರ್ಮಛತ್ರ ತೆರೆದು ಭೋಜನ ನೀಡಬೇಕು; ದಣಿದವರಿಗೆ ನೆರಳು ಕೊಡುವುದಿದ್ದರೆ, ಭವ್ಯ ಬಂಗಲೆ ಕಟ್ಟಿಸಬೇಕು". ಶಿಷ್ಯನ ಈ ತರ್ಕ ಬದ್ಧ ಮಾತುಗಳಿಂದ ಸಂತ ಪಾವುಲರ ತುಟಿಯ ಮೇಲೆ ನಸುನಗು ಮಿಂಚಿ ಹರಿಯಿತು. "ಸರಿಯೇ, ಆದರೆ ಸಂತ ಪಾವುಲ ಮೃತ್ಯುವನ್ನು ಅಪ್ಪಿಕೊಂಡಾಕ್ಷಣ ಭವ್ಯ ಬಂಗಲೆ ಮುರಿದು ಬೀಳುತ್ತದೆ; ಧರ್ಮಛತ್ರ ಮುಚ್ಚಿ ಹೋಗುತ್ತದೆ. ಹಾಗೆಂದು ಈ ಮರವೋ, ಪಾವುಲನ ಮರಣದ ನಂತರ ಕೂಡ ಅನೇಕ ವರ್ಷಗಳವರೆಗೆ ತಾನು ಬದುಕಿರುವುದು ಮತ್ತು ತನ್ನ ಕರ್ತವ್ಯವನ್ನು ಯಶಸ್ವಿಯಾಗಿ ನಿರ್ವಹಿಸುವುದು. ಮಹಾತ್ಮಾ ಯೇಸುವು 'ಇಗರ್ಜಿಯನ್ನು ಏಕಾಗಿ ಕಟ್ಟಿಸುತ್ತೀರಾ! ಮರದ ನೆರಳಿಗಿಂತಲೂ ಪವಿತ್ರವೆನಿಸಿದ ಮಂದಿರ ಭಗವಂತನಿಗೆ ಬೇರಾವುದಿದೆ!' ಎಂದು ಕೇಳಿದ್ದರು, ನೆನಪಿದೆಯೆ, ನಿನಗೆ" ಎಂದರು.

ನಿರಂತರ ಧಾಳಿ

ವೃಕ್ಷಾರೋಪಣದಂಥ ಕೆಲಸವನ್ನು ಹೀನೈಸಿ ಮಾತನಾಡುವ ಅನೇಕ ಜನರನ್ನು ಕಂಡು ಮೇಲಿನಂತೆ ಅವರಿಗೆ ತಿಳಿಸಿ ಹೇಳಬೇಕಾಗಿದೆ. ಮರಗಿಡಗಳನ್ನು ನಡುವುದು ಪುಣ್ಯಕಾರ್ಯವಿರಲಿ, ಬಿಡಲಿ—ಅದರಿಂದ ಅತ್ಯಂತ ಪ್ರಯೋಜನವಿದೆ ಎಂಬುದನ್ನು ಎಲ್ಲರೂ ಒಪ್ಪಬೇಕು. ಒಂದು ರೀತಿಯಿಂದ ನೋಡಿದರೆ, ಮಾನವನ ಸಭ್ಯತೆಯ ವಿಕಾಸಕ್ಕೆ ಮರಗಿಡಗಳು ನೀಡಿದ ದೇಣಿಗೆ ಅತ್ಯಪೂರ್ವವಾದುದು. ಕೃಷಿಯ ಆವಿಷ್ಕಾರವಾದ ದಿನದಿಂದ ನಮ್ಮ ಸಭ್ಯತೆ ಪ್ರಾದುರ್ಭಾವವನ್ನು ಹೊಂದುತ್ತಾ ಬಂದಿರುತ್ತದೆ. ಇದಕ್ಕೂ ಮುಂಚೆ ಮನುಷ್ಯನು ಸಾಯುವವರೆಗೆ ಹೇಗಾದರೂ ಬದುಕಬೇಕೆಂದು ಬಯಸಿ ಪ್ರತಿಕೂಲ ಪರಿಸ್ಥಿತಿಗಳೊಡನೆ ಹೋರಾಡುತ್ತಿದ್ದ. ಕೃಷಿಯ ಆವಿಷ್ಕಾರವು ಮನುಷ್ಯನ ಬದುಕಿಗೆ ನವ್ಯ ಅರ್ಥವನ್ನು ಕೊಟ್ಟಿತಲ್ಲದೆ, ಹೊಸ ಸ್ಫೂರ್ತಿಯನ್ನೂ ಚೈತನ್ಯವನ್ನೂ ತುಂಬಿತು. ಕೃಷಿಯ ಆಧಾರಭೂತ ವಸ್ತು ಭೂಮಿಯಾಗಿದೆ; ಮರಗಿಡಗಳಾಗಿವೆ. ಮನುಷ್ಯನು ತನ್ನ ಸ್ವಾರ್ಥದ ಕಾರಣಗಳಿಂದ, ಭೂಮಿಯ ಮೇಲೂ ಮರಗಿಡಗಳ ಮೇಲೂ ನಿರಂತರ ಧಾಳಿಯನ್ನು ನಡೆಸಿಕೊಂಡು ಬಂದಿರುವನು. ಭೂಮಿಯ ಮೇಲಿದ್ದ ಘನವಾದ ಅರಣ್ಯಗಳನ್ನೆಲ್ಲ ನಿರ್ದಯತೆಯಿಂದ ಕಡಿದುರುಳಿಸಿರುವನು; ಕೃಷಿಯೋಗ್ಯವಾದ ಭೂಮಿಯನ್ನು ಸಿದ್ಧಗೊಳಿಸುವ ನೆಪದಲ್ಲಿ ಭೂಮಿಯ ಫಲವತ್ತತೆಗೆ ಕೊಡಲಿಯೇಟು ಹಾಕಲು ನೋಡಿರುವನು. ಇಂಥ ಕೆಟ್ಟ ಕೆಲಸಗಳ ಪರಿಣಾಮವಾಗಿ ಭೂಮಿಯು ನಿಧಾನವಾಗಿ ಬಂಜರು ನೆಲವಾಗುತ್ತಾ ನಡೆದಿದೆ ಎಂದು ವಿಜ್ಞಾನಿಗಳ ಒಮ್ಮತದ ಅಭಿಪ್ರಾಯವಿದೆ. ಭೂಮಿಯ ಫಲವತ್ತತೆ ಇದೇ ಪ್ರಕಾರ ಕುಂದುತ್ತಾ ನಡೆದರೆ, ಇನ್ನು ಕೆಲವೇ ನೂರು ವರ್ಷಗಳಲ್ಲಿ ಮನುಷ್ಯ ಜಾತಿಯು ದೊಡ್ಡ ಸಂಕಟವನ್ನು ಎದುರಿಸಬೇಕಾಗಿ ಬರುವುದು ನಿಶ್ಚಯ.

ಹ್ರಾಸೋನ್ಮುಖ ಪರಿಸ್ಥಿತಿ

ಭೂಮಿಯ ಫಲವತ್ತತೆಯು ಅದರ ಒಂದಿಂಚಿನ ಮೇಲ್ಪದರಿನಲ್ಲಿ ನಿಹಿತವಿದೆ ಎಂದು ಬಲ್ಲವರ ಹೇಳಿಕೆ. ಭೂಮಿಯಲ್ಲಿ ಒಂದಲ್ಲ ಒಂದು ರೀತಿಯ ಪೈರನ್ನು ಬೆಳೆಸುವಾಗ, ಭೂಮಿಯ ಸಾರವು ನಷ್ಟವಾಗುತ್ತಾ ಹೋಗುತ್ತದೆ. ಇದನ್ನು ಆಗಿಂದಾಗ್ಗೆ ಗೊಬ್ಬರಗಳನ್ನೊದಗಿಸಿ ಭರ್ತಿಮಾಡದಿದ್ದ ಪಕ್ಷದಲ್ಲಿ—ಕೃಷಿಯೋಗ್ಯವಾಗಿ ಭೂಮಿಯು ಉಳಿಯಲಾರದು. ಭೂಮಿಯ ಫಲವತ್ತತೆಯ ನಾಶವು ಒಂದನೆಯದಾಗಿ ಭೂಸಾರವನ್ನು ಹೆಚ್ಚಿಸಬಲ್ಲ ಗೊಬ್ಬರಗಳ ಅಭಾವದಿಂದ ನೆರವೇರುತ್ತದೆ. ಎರಡನೆಯ ಕಾರಣವು ನದಿ ಹಾಗೂ ನೆರೆನೀರುಗಳಿಂದ ಭೂಮಿಯ ಮೇಲ್ಭಾಗವು ಕೊಚ್ಚಿಕೊಂಡುಹೋಗುವುದೂ ಸುಂಟರಗಾಳಿ, ಬಿರುಗಾಳಿಯಿಂದ ಈ ಫಲವತ್ತಾದ ಮಣ್ಣು ಧೂಳಾಗಿ ಪರಿವರ್ತನೆ ಹೊಂದುವುದೂ ಆಗಿದೆ. ಸುಂಟರಗಾಳಿ ಬಿರುಗಾಳಿಗಳ ಪ್ರಭಾವವು ಶುಷ್ಕ ಭೂಮಿಯಲ್ಲಿಯೇ ಹೆಚ್ಚು ನಡೆಯುತ್ತದೆ. ಹೀಗೆ ಅತ್ಯಂತ ಫಲವತ್ತಾದ ಪ್ರದೇಶ ಕೂಡ ಕಾಲಾನುಕಾಲದಲ್ಲಿ ಮರುಭೂಮಿಯಾಗಬಲ್ಲುದು. ಆಫ್ರಿಕದ ಸಹಾರಾ ಮರುಭೂಮಿಯು ಒಂದೇ ಸಮನೆ ದಕ್ಷಿಣಾಭಿಮುಖವಾಗಿ ವ್ಯಾಪಿಸುತ್ತಿದೆ. ಕೆಲಿಫೋರ್ನಿಯಾದಲ್ಲಿ ಬಿರುಗಾಳಿಯ ಪರಿಣಾಮವಾಗಿ ಹಸುರಾದ ಮೈದಾನ ಹ್ರಾಸೋನ್ಮುಖವಾಗುತ್ತಿದೆ. ಭಾರತದಲ್ಲಿಯೂ ಮರುಭೂಮಿಯ ಭಯ ಹೆಚ್ಚಿಕೊಂಡಿದೆ. ಉತ್ತರ ಪ್ರದೇಶದ ಪಶ್ಚಿಮದ ಜಿಲ್ಲೆಗಳು ರಾಜಪುತಾನದ ಮರುಭೂಮಿಯ ಹೊಗೆಯಿಂದ ಮುಚ್ಚುತ್ತಾ ಬರುತ್ತಿವೆ. ಈ ರೀತಿಯಲ್ಲಿ ಫಲವತ್ತಾದ ಭೂಮಿಯ ವಿನಾಶವಾಗುವುದಕ್ಕೆ ಮರಗಿಡಗಳಿರುವ ಕಾಡುಗಳನ್ನು ಕಡಿಯುವ, ಹುಲ್ಲುಗಾವಲುಗಳನ್ನು ಮಾನವ ವಾಸಕ್ಕೆ ಯೋಗ್ಯವಾಗಿಸುವ ಹುಚ್ಚು ಸಾಹಸಗಳೇ ಮೂಲಕಾರಣ. ಪಶ್ಚಿಮ ರಾಷ್ಟ್ರಗಳಲ್ಲಿ ವಿಜ್ಞಾನದ ನೆರವು ಪಡೆದು ಈ ಉಪಟಳವನ್ನು ಕೆಲವಟ್ಟಿಗೆ ನಿಯಂತ್ರಿಸಿರುವರು. ಆದರೆ ಬಡ ಭಾರತದಲ್ಲಿ ವಿಜ್ಞಾನದಿಂದ ಅಧಿಕ ಲಾಭವನ್ನು ನಾವು ಹೊಂದುವಂತಿಲ್ಲ. ಪ್ರಾಚೀನಕಾಲದ ಐಶ್ವರ್ಯಗಳಲ್ಲಿಯೇ ತೃಪ್ತಿ ಕಾಣುವುದನ್ನು ನಾವಿನ್ನೂ ಬಿಟ್ಟುಗೊಟ್ಟಿಲ್ಲ. ನಮಗೆ ಭೂಮಿಯ ರಚನೆ, ಅದರ ಸಾರವನ್ನು ಹೆಚ್ಚಿಸುವುದು ಮುಂತಾದವುಗಳ ಕುರಿತು ಸಜ್ಜಿನ ಜ್ಞಾನವಿಲ್ಲ.

ಅರಣ್ಯ ಪ್ರದೇಶದ ನಷ್ಟ

ಅಸಾಮಿನ ಕಾಡುಗಳಲ್ಲಿರುವ ಆದಿವಾಸಿಗಳು ಅನುಸರಿಸುವ "ಝೂಂ" ಕೃಷಿ ಪದ್ಧತಿಯು ವಿಚಿತ್ರವಾಗಿದೆ. ಸಾಮಾನ್ಯವಾಗಿ ಎಲ್ಲ ಆದಿವಾಸಿಗಳಲ್ಲೂ ಇದೇ ಪ್ರಥೆ ರೂಢಿಯಲ್ಲಿರುವುದನ್ನು ಕಾಣುತ್ತೇವೆ. ಈ ಆದಿವಾಸಿಗಳು ಇಡೀ ಅರಣ್ಯವನ್ನ ಬೆಂಕಿಕೊಟ್ಟು ಸುಟ್ಟುಬಿಡುವರು; ಹೀಗೆ ಭೂಮಿಯನ್ನು ಕೃಷಿ ಯೋಗ್ಯ ಮಾಡುವರು. ಒಂದೆರಡು ವರ್ಷ ಕಾಲ ಮಾತ್ರ ಈ ಪ್ರದೇಶದಲ್ಲಿ ಬೇಸಾಯ ಮಾಡಿ, ಬಳಿಕ ಇನ್ನೊಂದೆಡೆಗೆ ಸಾಗುವರು. ಅಲ್ಲಿ ಮರಳಿ ವನಗಳನ್ನು ನಾಶಗೈದು ಕೃಷಿಯನ್ನು ತೊಡಗುವರು. ಹೀಗೆ ವರ್ಷವರ್ಷವೂ ಲಕ್ಷಗಟ್ಟಳೆ ಎಕ್ರೆ ಅರಣ್ಯ ಪ್ರದೇಶವು ನಷ್ಟ ಹೊಂದಿ, ಬಂಜರಾಗುತ್ತದೆ. ಆದಿವಾಸಿಗಳ ಮೇಲೆ ಹತೋಟಿಯನ್ನಿಡುವ ಬಗ್ಗೆ ಸಂಬಂಧಿಸಿದ ಸರಕಾರಗಳು ಪ್ರಯತ್ನಿಸುತ್ತಿದ್ದರೂ ಅವು ಪೂರ್ಣರೂಪದಲ್ಲಿ ಸಾಫಲ್ಯ ಪಡೆದಿಲ್ಲ. ಒಂದೇ ಸಮ ಬಂಜರು ಭೂಮಿಯನ್ನು ನಾವು ಸೃಷ್ಟಿಸುತ್ತಿದ್ದರೆ, ಭಾರತದ ಹೆಚ್ಚುತ್ತಿರುವ ಜನ ಹೊಟ್ಟೆ ಉಪವಾಸ ಬೀಳದೆ ಮತ್ತೇನು? ಮೊದಲೇ ಹೇಳಿದಂತೆ ಎರಡು ವಿಧವಾಗಿ ಭೂಮಿಯ ಫಲವತ್ತಾದ ಮಣ್ಣು ನಾಶ ಹೊಂದುತ್ತದೆ. ಯಮುನಾ, ಚಂಬಲ್ ಹಾಗೂ ಮಧ್ಯ ಪ್ರದೇಶ, ಮಧ್ಯಭಾರತ

(೧೧ನೇ ಪುಟ ನೋಡಿರಿ)

ದಿ ಕೆನರಾ ಮ್ಯೂಚುವಲ್
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಪ್ರಧಾನ ಕಾರ್ಯಾಲಯ ಉಡುಪಿ, ದ. ಭಾರತ] [ಸ್ಥಾಪನೆ: ೧೯೩೫.
"ಕೆನರಾ ಮ್ಯೂಚುವಲ್" ಪರಸ್ಪರಾವಲಂಬಕವಾದ ಸಂಸ್ಥೆ.
ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ
ಬೋನಸು ಹಂಚಿ, ಪಾಲಿಸಿದಾರರ ನಂಬಿಕೆ ಪಡೆದಿದೆ.
ಈ ಕಂಪೆನಿಯಲ್ಲಿ ಇಂದೇ ವಿಮೆ ಇಳಿಸಿ,
ನಿಮ್ಮ ಕುಟುಂಬವನ್ನು ಭದ್ರವಾಗಿರಿಸಿರಿ.
The CANARA MUTUAL ASSURANCE CO. Ltd,
Head Office: **UDIPI**, S. INDIA. ESTD: 1935

ರಾಮತೀರ್ಥ
ಬ್ರಾಹ್ಮಿ ತೈಲ
ಸ್ಪೆಶಲ್ ನಂ ೧] [ಮೆಡಿಕೇಟೆಡ್
ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ. ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.
ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0
ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

★ ಕಾಲನ ಪರದೆ ಸರಿಸುವ ಸಾಹಸ ★

ವೈಜ್ಞಾನಿಕರು ಕಂಡುಕೊಂಡ ಬ್ರಹ್ಮಾಂಡ ರಶ್ಮಿಯ ಅದ್ಭುತ ರಹಸ್ಯ

— ೧ —

ನಾವೊಂದು ವಸ್ತು ಪ್ರದರ್ಶನಾಲಯವನ್ನು ಹೊಕ್ಕಲ್ಲಿ, ಅನೇಕಬಗೆಯ ಪ್ರಾಚೀನ ವಸ್ತುಗಳನ್ನು ಸಂಗ್ರಹಿಸಿ ಇಟ್ಟಿರುವುದನ್ನು ಕಾಣುತ್ತೇವೆ. ಚಿಪ್ಪುಗಳು, ಕವಡೆಗಳು, ಮಣ್ಣಿನ ಪಾತ್ರೆಗಳು, ಚಿತ್ರಗಳು, ಕಲ್ಲು ಹರಳುಗಳು ಇನ್ನೂ ಸಹಸ್ರಾರು ಬಗೆಯ ವಿಚಿತ್ರ ವಸ್ತುಗಳು ಅಲ್ಲಿರುತ್ತವೆ. ಈ ಚಿಪ್ಪು ಮೂರುಸಾವಿರ ವರ್ಷಕ್ಕೆ ಹಿಂದಿನದು, ಆ ಮಣ್ಣಿನ ಪಾತ್ರೆ ಐದುಸಾವಿರದಷ್ಟು ಪ್ರಾಚೀನವಾದುದು, ಆಚೆಯ ಚಿತ್ರ—೩೦೦ ವರ್ಷದಷ್ಟು ಹಿಂದೆ ಬರೆಯಲ್ಪಟ್ಟಿತು ಎಂದೆಲ್ಲ ವರ್ಣನೆಯನ್ನು ಕೇಳುತ್ತೇವೆ. ಒಂದು ಚಿತ್ರದ ಸಂಬಂಧದಲ್ಲಿ ಪುರಾತತ್ವ ವಿಶಾರದರು ಅದರ ಶೈಲಿಯ ಮೇಲಿಂದ ಕಾಲ ನಿರ್ಧಾರಮಾಡುವ ಪರಿಪಾಠವಿದೆ. ಆದರೆ ಇಂದು ತಂದ ಒಂದು ಚಿಪ್ಪನ್ನು ಮೂರುಸಾವಿರ ವರ್ಷಗಳ ಹಿಂದಿನದೆಂದು ಮೋಸಮಾಡಬಾರದೇಕೆ? ಚಿಪ್ಪಿನ ಆಯುಷ್ಯವನ್ನು ಅಳೆಯುವ ಸಾಧನವೇನಾದರೂ ಇದೆಯೆ?—ಎಂದರೆ, ಇಂದಿನ ವೈಜ್ಞಾನಿಕರು ಇಂಥದೊಂದು ಅದ್ಭುತವನ್ನು ಕಂಡುಹಿಡಿದಿರುವರು. ಗಣಿತದ ಮೂಲಕ ಒಂದು ವಿಶಿಷ್ಟ ವಸ್ತುವಿನ ನಿರ್ಮಾಣವು ಎಂದಾಯಿತೆಂಬುದನ್ನು ಅತ್ಯಂತ ಸ್ಪಷ್ಟವಾಗಿ ತಿಳಿಸಿ ಹೇಳಬಲ್ಲ ಉಪಾಯವನ್ನು ಅನ್ವೇಷಿಸಿರುವರು. ಯಾವುದೇ ಲೋಹವಿರಲಿ, ಇದ್ದಲಿರಲಿ, ಮೂರ್ತಿಯಿರಲಿ, ಕಟ್ಟಿಗೆಯಿರಲಿ ಏನೇ ಇರಲಿ, ಈಗ ಅದರ ಆಯುಃ ಪ್ರಮಾಣವನ್ನು ನಿರ್ಧರಿಸುವುದು ಕಷ್ಟವಾಗಿಲ್ಲ.

— ೨ —

ವೈಜ್ಞಾನಿಕರು ಮಾಡಿದ ಅನೇಕ ಪ್ರಯತ್ನಗಳ ಪರಿಣಾಮವಾಗಿ ಆಶ್ಚರ್ಯಕಾರಕ ಸಂಗತಿಗಳು ಹೊಳೆದವು. ಫ್ರಾನ್ಸಿನ ದೋರ ದೋನ್ಯ ಪ್ರದೇಶದಲ್ಲಿರುವ ಲಾಸ್ಕೋದ ಅತ್ಯಂತ ಪ್ರಸಿದ್ಧವಾದ ಗುಹೆಗಳಲ್ಲಿ ಆಗಿನ ಕಾಲದ ಕಲಾವಿದರು ಭೂಮಿಯಲ್ಲಿ ಆಗ ಸಂಚರಿಸುತ್ತಿದ್ದ ಪ್ರಾಣಿಗಳ ಚಿತ್ರವನ್ನು ಬರೆದಿರುವರು. ಅಲ್ಲಿ ವಿಶಾಲಕಾಯದ ಪ್ರಾಗೈತಿಹಾಸಿಕ ಜಂತುಗಳೊಂದರ ಅತ್ಯಂತ ಸುಂದರ ಚಿತ್ರ ಕಂಡುಬರುತ್ತದೆ. ಸೌಂದರ್ಯದಲ್ಲಿ ಅದಕ್ಕೆ ಎಣೆಯಿಲ್ಲ. ಈ ಚಿತ್ರವನ್ನು ತಯಾರಿಸಲು ಕಲಾವಿದನು ಕಲ್ಲಿನಲ್ಲಿ ಗೆರೆಗಳನ್ನು ತೋಡಿ ತೆಗೆದು ಆ ಬಳಿಕ ಸುಟ್ಟ ಎಲುಬಿನಿಂದ ರೇಖೆಗಳನ್ನು ತುಂಬಿಟ್ಟಿರುವನು. ಈ ಎಲುಬಿನ ಇದ್ದಲನ್ನು ಚಿಕಾಗೋ ವಿಶ್ವವಿದ್ಯಾಲಯಕ್ಕೆ ತೆಗೆದುಕೊಂಡು ಹೋಗಿ ಪರೀಕ್ಷಿಸಿದಾಗ ಕಡಿಮೆ ಎಂದರೆ ೧೫,೫೧೦ ವರ್ಷಗಳಷ್ಟು ಪುರಾತನವಾದುದೆಂದು ಸಿದ್ಧಗೊಂಡಿತು.

ಪ್ರಾಚೀನ ಕಾಲದಲ್ಲಿ ಕಲ್ಲಿಂದ ನಿರ್ಮಾಣಗೊಂಡ ಅನೇಕ ಪೂಜಾ ಸ್ಥಾನಗಳ ಶೋಧವೂ ಈಗ ಮಾಡಲ್ಪಟ್ಟಿದೆ. ಆ ಕಾಲದ ಜನರು ಇಂಥ ಸ್ಥಳಗಳಿಗೆ ಬಂದು ಉತ್ಸವಗಳನ್ನು ಆಚರಿಸುತ್ತಿದ್ದರು. ಈ ಕಲ್ಲುಗಳಲ್ಲಿ ಕೆಲವು ಭೇದಗಳು ಕಂಡುಬರುತ್ತವೆ. ಸಂಭವತಃ ಈ ಭೇದಗಳಲ್ಲಿ ಗೊಂಡ ಗೀವಟಿಗೆಗಳನ್ನು ಜನರು ಉರಿಸಿಟ್ಟು ಉತ್ಸವಗಳಲ್ಲಿ ಭಾಗ ವಹಿಸುತ್ತಿದ್ದರು. ದೀವಟಿಗೆಯ ಅರ್ಧಸುಟ್ಟ ಭಾಗವು ಭೇದದ ಒಳಗೆಯೇ ಉಳಿದುಕೊಂಡಿತು. ಈಗ ಆ ಇದ್ದಿಲನ್ನು ತೆಗೆದು ಪರೀಕ್ಷಿಸಿದಾಗ ಸುಮಾರು ೩೭೭೮ ವರ್ಷಗಳಷ್ಟು ಹಿಂದಿನದೆಂದು ಕಂಡುಬಂತು.

ಮೃತ ಸಾಗರ (Dead sea)ದ ಸಮೀಪ ದೊರೆತ ಬೈಬಲಿನ ಪ್ರತಿಯೊಂದು ಅಕ್ಷತ ವಸ್ತ್ರವೊಂದರಲ್ಲಿ ಸುತ್ತಲ್ಪಟ್ಟಿತ್ತು. ಇದರ ಪರೀಕ್ಷೆಯನ್ನು ನಡೆಸಿದಾಗ ಕ್ರಿ. ಪೂ ೩೩ನೇ ಇಸವಿಯಲ್ಲಿ ಈ ಬೈಬಲನ್ನು ಮರುಭೂಮಿಯ ನಡುವಿನ ಗುಹೆಯಲ್ಲಿ ಇಟ್ಟಿದ್ದರೆಂದು ತಿಳಿಯಿತು. ಇದನ್ನು ಕೇಳಿದ ಕ್ರಿಶ್ಚಿಯನ್ ಕ್ಷೇತ್ರಗಳಲ್ಲಿ ವಿಸ್ಮಯವೇ ಉಂಟಾಯಿತು ಏಕೆಂದರೆ ಇದೇ ಸಮಯ ಮಹಾತ್ಮಾ ಯೇಸುವನ್ನು ಸಿಲುಬೆಗೇರಿಸಿದ್ದರು!

— ೩ —

ವಿಜ್ಞಾನ ಹಾಗು ಗಣಿತದ ನೆರವಿನಿಂದ ನಾವು ಇಷ್ಟು ನಿರ್ದಿಷ್ಟವಾದ ರೀತಿಯಲ್ಲಿ ಕಾಲಗಣನೆಯನ್ನು ಮಾಡುವುದಕ್ಕೆ ಹೇಗೆ ಸಾಧ್ಯವಾಯಿತು? ಇದನ್ನು ವಿವರಿಸವುದು ಸ್ವಲ್ಪ ಕಷ್ಟದ ಕೆಲಸ. ವಿಜ್ಞಾನದ ಜಟಿಲತಮವಾದ ಸಿಕ್ಕುಗಳಲ್ಲಿ ಇದೂ ಒಂದು. ಆದರೂ ಸ್ಥೂಲವಾಗಿ ನಾವೀ ರಹಸ್ಯವನ್ನು ಹೃದಯಂಗಮ ಮಾಡಿಕೊಳ್ಳಬಲ್ಲೆವು.

ಪರೀಕ್ಷಣ ವಿಜ್ಞಾನದ ಈ ರಹಸ್ಯವೇ ಬ್ರಹ್ಮಾಂಡ ರಶ್ಮಿ ಅಥವಾ 'ಎ-ರೇ' ಯಾಗಿದೆ. ಈ ರಹಸ್ಯಮಯ ರಶ್ಮಿಗಳು ಒಂದ ಶಕ್ತಿಯರೂಪದಲ್ಲಿ ವಿಕೀರ್ಣಗೊಂಡು ಪೃಥ್ವಿಯ ವಾಯು ಮಂಡಲದಲ್ಲಿ ಇರುತ್ತವೆ. ಈ ಅದ್ಭುತ ಶಕ್ತಿಯನ್ನೆ ತೂಗಿ ನೋಡಿ ಇಂದಿನ ವಿಜ್ಞಾನಿಗಳು ಒಂದು ದೊಡ್ಡ ಸಮಸ್ಯೆಯನ್ನು ಬಿಡಿಸಿರುವರು. ಇತಿಹಾಸದ ಕಾಲ ನಿರ್ಣಯ ಮತ್ತು ಪ್ರಾಣಿಶಾಸ್ತ್ರದ ಮೇಲೆ ಈ ಸಂಶೋಧನೆಯಿಂದ ಅಪಾರ ಲಾಭವುಂಟಾಗಿದೆ.

ಅಣುಬಾಂಬಿನಲ್ಲಿ ಯುರೇನಿಯಮಿನ ಪರಮಾಣುಗಳ ವಿಸ್ಫೋಟನದಿಂದ ಉತ್ಪನ್ನವಾಗುವ ಶಕ್ತಿಯ ಅನೇಕ ಪಾಲು ಅಧಿಕ ಶಕ್ತಿಯು ಬ್ರಹ್ಮಾಂಡ ರಶ್ಮಿಯ ಪ್ರಭಾವದಿಂದ ಉಂಟಾಗುತ್ತದೆ. ಆದರೆ ಈ ಶಕ್ತಿಯ ಉತ್ಪತ್ತಿಯು ಬಹಳ ಎತ್ತರದಲ್ಲಿ—ಎಂದರೆ ಮನುಷ್ಯನು ಶಕ್ತಿಸ್ರೋತ್ರದ ರೂಪದಲ್ಲಿ ಇದನ್ನು ಉಪಯೋಗಿಸಲಾರದಷ್ಟು ಎತ್ತರದಲ್ಲಿ—ಆಗುತ್ತದೆ. ಈ ರಶ್ಮಿಗಳು ಪೃಥ್ವಿಯಿಂದ ೪೦ ಸಾವಿರದಿಂದ ೬೦ ಸಾವಿರ ಅಡಿಗಳಷ್ಟು ಎತ್ತರದಲ್ಲಿ ವಾಯುಮಂಡಲದಲ್ಲಿ ಪರಸ್ಪರ ಘರ್ಷಿಸುತ್ತವೆ; ಮತ್ತು ಅಲ್ಲಿಯ ಪರಮಾಣುಗಳೆಲ್ಲವೂ ಚೂರುಚೂರಾಗಿ ಸಿಡಿಯುತ್ತವೆ. ಈ ಸಂಘರ್ಷದ ಫಲವಾಗಿ ವೈಜ್ಞಾನಿಕರು 'ರೇಡಿಯೋ ಆ್ಯಕ್ಟಿವ್ ಕಾರ್ಬನ್" ಎಂದು ಕರೆಯುವ ಪದಾರ್ಥದ ಸೃಷ್ಟಿಯಾಗುತ್ತದೆ. ಈ ಕಾರ್ಬನ್ ಅಥವಾ ಅಂಗಾರವು ನಿಧಾನವಾಗಿ ವಾಯು ಮಂಡಲವನ್ನೆಲ್ಲ ಕವಿಯುತ್ತದೆ. ಈ ಅಂಗಾರದಲ್ಲಿ ರೇಡಿಯೋ ಆ್ಯಕ್ಟಿವ ಶಕ್ತಿಯು ಬಹಳ ಕಡಿಮೆ ಇದ್ದರೂ ಅದರ ಜೀವನ ಕಾಲ ಸುದೀರ್ಘವಾಗಿರುತ್ತದೆ ೫೬೮೦ ವರ್ಷ ಕಳೆದ ಬಳಿಕ ಆ ರಶ್ಮಿಗಳ ಕೇವಲ ಅರ್ಧಭಾಗ ಮಾತ್ರನಷ್ಟವಾಗುತ್ತದೆ ಎಂಬುದರ ಮೇಲಿಂದ ಜೀವನ ಕಾಲದ ದೀರ್ಘವನ್ನು ಗುರುತಿಸಬಹುದು. ಇದರ ಜೊತೆಗೆ ಈ ಶಕ್ತಿಯ ವಿನಾಶಕಾರ್ಯ ಕೂಡ ಎಷ್ಟು ನಿಯಮಿತ ರೂಪದಲ್ಲಿ ನಡೆಯುತ್ತದೆಂದರೆ ಒಂದು ಸಲ ನಾವಿದನ್ನು ಕಲಿತುಕೊಂಡು ಬಿಟ್ಟರೆ ಗ್ರಹ ಹಾಗು ನಕ್ಷತ್ರಗಳ ಗತಿಯನ್ನು ಗಣಿತದ ಸಹಾಯದಿಂದ ನಾವಿಂದು ತಿಳಿದುಕೊಳ್ಳುವಂತೆ, ಇದನ್ನೂ ತಿಳಿದುಕೊಳ್ಳಬಲ್ಲೆವು. ಯಾವುದಾದರೊಂದು ವಸ್ತುವು ಕೊಡುವ ರೇಡಿಯೋ ಆ್ಯಕ್ಟಿವ್ ಕಾರ್ಬನನ್ನು ನೋಡಿಕೊಂಡು, ಈ ವಿಷಯದಲ್ಲಿ ಪಾರಂಗತನಾದ ವಿಜ್ಞಾನಿಯು ಈ ಕಾರ್ಬನ್ ಯಾವಾಗ ರೇಡಿಯೋ ಆ್ಯಕ್ಟಿವ್ ಆಗಿ ಪರಿಣಮಿಸಿತೆಂಬುದನ್ನೂ ಅದರ ಶಕ್ತಿಯು ಇಷ್ಟು ಕುಗ್ಗಿಹೋಗಲಿಕ್ಕೆ ಎಷ್ಟು ಸಮಯ ಹಿಡಿದಿರಬೇಕೆಂಬುದನ್ನೂ ಒಡನೆಯೇ ಹೇಳಬಲ್ಲನು.

— ೪ —

ಈ ರಹಸ್ಯಮಯ ಶಕ್ತಿಯ ಅನ್ವೇಷಣದಿಂದ ಮಾನವಜಾತಿಗೆ ತುಂಬ ಉಪಕಾರವೇ ಆಗಿದೆ. ಸೃಷ್ಟಿಯ ಇತಿಹಾಸದ ಹೆಚ್ಚಿನ ಪರಿಚಯವನ್ನು ಮಾಡಿಕೊಳ್ಳುವುದಕ್ಕೆ ಬ್ರಹ್ಮಾಂಡ ರಶ್ಮಿಯ ರಹಸ್ಯ ನೆರವಾಗಿದೆ. ಒಂದು ವಸ್ತುವಿನ ಜೀವನ ಸಮಾಪ್ತಿಯಾದೊಡನೆಯೇ—ಅದು ಮನುಷ್ಯನಿರಲಿ, ಪ್ರಾಣಿಯಿರಲಿ, ವನಸ್ಪತಿಯಿರಲಿ—ವಾಯುಮಂಡಲದಿಂದ ತಾಜಾ ರೇಡಿಯೋ ಆ್ಯಕ್ಟಿವ್ ಕಾರ್ಬನನ್ನು ತೆಗೆದುಕೊಳ್ಳುವ ಕ್ರಿಯೆ ನಿಂತುಹೋಗುತ್ತದೆ. ಈ ಕಾರಣದಿಂದ ವಸ್ತುವಿನ ಆಯುಃಪ್ರಮಾಣವನ್ನು ಇಂದು ಗೊತ್ತುಹಚ್ಚುವುದು ಸಾಧ್ಯವಾಗಿದೆ.

ಪೃಥ್ವಿಯಲ್ಲಿರುವ ಪ್ರತಿಯೊಂದು ವಸ್ತುವೂ ರೇಡಿಯೋ ಆ್ಯಕ್ಟಿವ್ ಶಕ್ತಿಯನ್ನು ಸದಾ ಗ್ರಹಿಸುತ್ತಿರುತ್ತದೆ. ನಾವು ಸಹ ನಮ್ಮ ಶ್ವಾಸೋಚ್ಛ್ವಾಸದಲ್ಲಿ ಅಥವಾ ಭೋಜನದಲ್ಲಿ ರೇಡಿಯೋ ಆ್ಯಕ್ಟಿವ್ ಕಾರ್ಬನ್ ತೆಗೆದುಕೊಳ್ಳುತ್ತೇವೆ. ಆದುದರಿಂದ ನಾವು ಸತ್ತು ಎಷ್ಟು ವರ್ಷಗಳಾದುವೆಂಬುದನ್ನು ಕಂಡುಹಿಡಿಯಲು ಬರುತ್ತದೆ. ಹಾಗೆಂದು ಸತ್ತನಂತರವೂ ರೇಡಿಯೋ ಆ್ಯಕ್ಟಿವ್ ಕಾರ್ಬನು ಮನುಷ್ಯ ಶರೀರದ ಸಂಸರ್ಗಕ್ಕೆ ಬರುತ್ತಿದ್ದರೆ ಇದು ಸಾಧ್ಯವಾಗುತ್ತಿರಲಿಲ್ಲ. ವೈಜ್ಞಾನಿಕರ ಸಂಶೋಧನೆಯಿಂದಾಗಿ, ನಿಷ್ಪ್ರಾಣಸ್ಥಿತಿಯಲ್ಲಿ ರೇಡಿಯೋ ಆ್ಯಕ್ಟಿವ್ ಕಾರ್ಬನಿನ ಗ್ರಹಣ ಕಾರ್ಯ ನಡೆಯುವುದಿಲ್ಲೆಂದು ಸಿದ್ಧಗೊಂಡಿದೆ. ಆದುದರಿಂದ ಹೀಗೆ ಕಾರ್ಬನನ್ನು ತೆಗೆದುಕೊಳ್ಳುವುದನ್ನು ನಿಲ್ಲಿಸಿ ಎಷ್ಟು ಸಮಯ ಸಂದಿತೆಂದು ಸುಲಭದಲ್ಲಿ ಹೇಳಲು ಸಾಧ್ಯವೆನಿಸಿತು.



ಮಿತ ದರದಲ್ಲಿ
ಚಲೋ ಗಡಿಯಾರಗಳೂ
ಟೈಮ್‌ಪೀಸುಗಳೂ
ದೊರೆಯುತ್ತವೆ.
ವಿವರಗಳಿಗೆ ಬರೆಯಿರಿ:

MUBARAK & CO
Watch & Clock
Specialists,
MADRAS 3.

ಮುಬಾರಕ್ & ಕೊ
ವಾಚ್ ಎಂಡ್ ಕ್ಲಾಕ್
ಸ್ಪೆಶ್ಯಲಿಸ್ಟ್ಸ್
ಮದ್ರಾಸು 3

ZANDU

ಝಂಡೂ ಫಾರ್ಮಸಿಯ
ಮನೆಮದ್ದುಗಳನ್ನೇ ಸದಾ
ಉಪಯೋಗಿಸಿರಿ.

ಝಂಡೂ ಬ್ರಾಹ್ಮೀ ಹೇರ್ ಆಯಿಲ್:- ಮೆದುಳಿಗೆ ತಂಪು- ಮನಸ್ಸಿಗೆ ಉಲ್ಲಾಸವೀಯುವುದು. 1 ಪೌಂಡಿಗೆ ರೂ. 3-8-0 ಕಾಲು ರಾತ್ತಲಿಗೆ ರೂ. 1.
ಝಂಡೂ ಸರಸಪರಿಲ್ಲಾ:- ರಕ್ತವನ್ನು ಶುದ್ಧಗೊಳಿಸಲು ಹೆಸರುವಾಸಿಯಾದುದು. ಚರ್ಮರೋಗಗಳನ್ನು ಗುಣಪಡಿಸಬಲ್ಲುದು.
4 ಔನ್ಸ್ ಬಾಟ್ಲಿ 1ರ ರೂ. 1-5-0
ಝಂಡೂ ಬಾಲಾಮೃತ:-ಅನಾರೋಗ್ಯವುಳ್ಳ ಮಕ್ಕಳಿಗೆ ಆದರ್ಶ ಟಾನಿಕ್-
4 ಔನ್ಸ್ ಬಾಟ್ಲಿ 1ರ ರೂ. 1-2-0
ಝಂಡೂ ಬಾಮ್:-ತಲೆ ಸಿಡಿತ ಮೊದಲಾದ ಬೇನೆಗಳಿಗೆ 1 ಸೀಸೆಗೆ ರೂ 1.

ಝಂಡೂ ಫಾರ್ಮಸಿಯ ದ. ಕ. ಜಿಲ್ಲೆಯ
ಎಲ್ಲಾ ಏಜಂಟರಲ್ಲೂ ದೊರೆಯುವುವು.
ಸವಿವರ ಕ್ಯಾಟಲಾಗಿಗೆ ಈ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ:-

DAMODER & CO.,
Nainiappa Naicken Street, MADRAS. 3

ಕರಾವಳಿಯ ವಿದೇಶೀ ಉಪನಿವೇಶಗಳು

ಸೈನಿಕ ಠಾಣ್ಯವಾಗುವುದರ ವಿರುದ್ಧ ನೆಹರೂರ ಗಂಭೀರ ಎಚ್ಚರಿಕೆ.

ವಿದೇಶ ಧೋರಣೆ

ಪಾರ್ಲಿಮೆಂಟಿನಲ್ಲಿ ಒಂದೊಂದೇ ಶಾಖೆಯ ಬೇಡಿಕೆಗಳು ಮಂಡಿಸಲ್ಪಟ್ಟು ಅವುಗಳಿಗೆ ಮಂಜೂರಾತಿಯು ದೊರೆತಿರುವುದು. ವಿದೇಶ ಖಾತೆಯ ವೆಚ್ಚಕ್ಕಾಗಿ ಮಂಡಿಸಿದ ಬೇಡಿಕೆಯ ಮೇಲೆ ಚರ್ಚೆ ನಡೆದಾಗ-- ಕಾಂಗ್ರೆಸ ಸದಸ್ಯರು ನೆಹರೂರವರ ಧೋರಣೆಯನ್ನು ಬಲವಾಗಿ ಸಮರ್ಥಿಸಿದರು. ಪ್ರತಿಪಕ್ಷದವರ ಉಗ್ರ ಟೀಕೆಗಳಿಗೆ ಸಮರ್ಪಕವಾಗಿ ಪ್ರತ್ಯುತ್ತರ ಕೊಟ್ಟು ಅವರ ಬಾಯಿ ಕಟ್ಟಿಸುವಷ್ಟು ಪ್ರಭಾವಿಯಾಗಿ ಕಾಂಗ್ರೆಸ ವರ್ಗಗಳ ಸಮರ್ಥನೆ ಇದ್ದಿತು. ಸ್ವತ ನೆಹರೂರವರೇ ಭಾರತದ ಈಗಿನ ವಿದೇಶ ಧೋರಣದ ಕುರಿತು ಸುದೀರ್ಘ ಭಾಷಣಮಾಡಿ, ಸದಸ್ಯರಿಗೆ ನಮ್ಮದು ಜಾಣತನದ ನೀತಿಯಾಗಿದೆ ಎಂಬುದನ್ನು ಮನವರಿಕೆ ಮಾಡಿಸಿಕೊಟ್ಟರು ಈ ಸಂದರ್ಭದಲ್ಲಿ ಅವರು ದಕ್ಷಿಣ ಆಫ್ರಿಕಾ ಮತ್ತು ಸಿಂಹಳದ ಹಿಂದೀಯರ ಕಷ್ಟನಷ್ಟಗಳ ಸಂಗತಿಯನ್ನೆತ್ತಿಕೊಂಡು ಆ ಸರಕಾರಗಳು ನ್ಯಾಯಬದ್ಧವಾದ ರೀತಿಯಲ್ಲಿ ನಡಕೊಳ್ಳುವುದರಲ್ಲಿಯೇ ಹಿತವಿದೆಯೆಂದು ನುಡಿದದ್ದು ಯಥೋಚಿತವಾಗಿದೆ. ದಕ್ಷಿಣ ಆಫ್ರಿಕದ ವರ್ಣಭೇದ ನೀತಿಯು ವಿಧ್ವಂಸಕ ಪರಿಸ್ಥಿತಿಯನ್ನೇ ಪ್ರಕೃತ ಸೃಷ್ಟಿ ಗೈದಿದೆ. ಇಂಥ ಉತ್ಕಟಾವಸ್ಥೆಯಲ್ಲಿ ಅಲ್ಲಿಯ ಸರಕಾರವು ಎಚ್ಚತ್ತುಕೊಂಡು ವರ್ಣೀಯರ ಮನವೊಲುಮೆಯನ್ನು ಸಂಪಾದಿಸದಿದ್ದರೆ, ಅವರ ಬಗ್ಗೆ ಸಹಾನುಭೂತಿ ಇರುವ ರಾಷ್ಟ್ರಗಳು ದಕ್ಷಿಣ ಆಫ್ರಿಕದ ಸರಕಾರದೊಡನೆ ಬಿಗಿಯಾದ ನಿಲುಮೆಯನ್ನೇ ವಹಿಸಬೇಕಾದೀತು ಇದೇ ಮಾತು ಸಿಂಹಳಕ್ಕಾದರೂ ಅನ್ವಯಿಸುತ್ತದೆ ಆ ದ್ವೀಪದ ಅಭಿವೃದ್ಧಿಯಲ್ಲಿ ಭುಜಕೊಟ್ಟು ಬೆವರಿಳಿಸಿ ದುಡಿದ ಭಾರತೀಯರಿಗೆ ನಾಗರಿಕ ಹಕ್ಕುಗಳನ್ನು ಕೊಡದೆ ವಂಚಿಸುವುದು ಸರಿಯಲ್ಲ. ಸಿಂಹಳ ಸರಕಾರವು ಮಾಡಿದ ತಪ್ಪಿಗೆ ಪಶ್ಚಾತ್ತಾಪಪಟ್ಟು ಅದನ್ನು ಬೇಗನೇ ಸರಿಪಡಿಸಿಕೊಳ್ಳುವುದೆಂದು ನಮ್ಮ ಹಾರೈಕೆ ಇದೆ.

ರಾಷ್ಟ್ರಕೂಟದ ಸದಸ್ಯತ್ವ

ವಿದೇಶ ಧೋರಣವನ್ನು ವಿರೋಧಿಗುಂಪಿನವರು ಟೀಕಿಸುವಾಗ ಭಾರತವು ಸರ್ವತಂತ್ರ ಸ್ವತಂತ್ರವಾದ ಪ್ರಜಾರಾಜ್ಯವಾಗಿರುವುದರಿಂದ ಇನ್ನೂ ಬ್ರಿಟಿಷ ರಾಷ್ಟ್ರಕೂಟದ ಸದಸ್ಯನಾಗಿ ಉಳಿದುದರ ಔಚಿತ್ಯದ ಬಗ್ಗೆ ಅಸಂತೃಪ್ತಿಯನ್ನು ವ್ಯಕ್ತಗೊಳಿಸಿದ್ದರು. ಪ್ರಧಾನಿ ನೆಹರೂರವರು ಬಹಳ ಹಿಂದಿನಿಂದ ಹೇಳಿಕೊಂಡು ಬಂದ ಸಂಗತಿಯನ್ನೇ ಪುನರುಚ್ಚರಿಸಿದರು ಭಾರತವು ಸ್ವೇಚ್ಛೆಯಿಂದ ರಾಷ್ಟ್ರಕೂಟದ ಸದಸ್ಯ ರಾಷ್ಟ್ರವಾಗಿದೆ. ರಾಷ್ಟ್ರಕೂಟದ ಸದಸ್ಯ ರಾಷ್ಟ್ರಗಳ ಮೇಲೆ ಯಾವುದೇ ತರದ ವಿಶಿಷ್ಟ ಹೊಣೆಗಾರಿಕೆಯನ್ನು ಹೇರಿಲ್ಲ. ಭಾರತವು ತನಗೆ ಉಚಿತವೆಂದು ತೋರಿದಾಗ ಈ ಸಂಬಂಧವನ್ನು ಕಡಿದುಕೊಳ್ಳುವುದಕ್ಕೆ ಯಾವ ಅಡ್ಡಿಯೂ ಇಲ್ಲ. ಬ್ರಿಟನಿನೊಡನೆ ಭಾರತದ ಸಂಬಂಧವು ಇತರ ರಾಷ್ಟ್ರಕೂಟದ ಸಂಬಂಧದಂತೆ ಘಟನಾತ್ಮಕವಾಗಿಯೂ ಇರುವುದಿಲ್ಲ. ಕಾಲಕಾಲಕ್ಕೆ ಭಾರತವು ರಾಷ್ಟ್ರಕೂಟದ ಪರಿಷತ್ತಿನಲ್ಲಿ ಭಾಗವಹಿಸುತ್ತಾ ಬಂದುದರಿಂದ ಪರಸ್ಪರ ಹಿತಸಂಬಂಧಗಳು ಸಂವರ್ಧನೆಗೊಳ್ಳುತ್ತಿವೆ. ಇಂಥ ಸ್ನೇಹವನ್ನು ಹೆಚ್ಚಿಸಿಕೊಳ್ಳುವುದು ಎಲ್ಲರಿಗೂ ಇಷ್ಟವಾಗಿದೆ. ಏಶಿಯದ ರಾಷ್ಟ್ರಗಳಲ್ಲಿ ಕೂಡ ಇಂಥ ಸ್ನೇಹ ಹಾಗು ಸೌಹಾರ್ದ ಸ್ಥಾಪನೆಗೊಂಡರೆ ಬಹಳ ಸಂತೋಷ ಎಂಬ ನೆಹರೂರ ಮಾತುಗಳನ್ನು ಸಂಶಯ ಪ್ರವೃತ್ತಿಯಿಂದ ನೋಡುವುದು ಸರಿಯಲ್ಲ ಬ್ರಿಟಿಷರ ದಾಸ್ಯದಿಂದ ನಿವೃತ್ತಿ ಹೊಂದಿ; ಸಾರ್ವಭೌಮಾಧಿಕಾರವುಳ್ಳ ಸ್ವತಂತ್ರ ರಾಜ್ಯವನ್ನು ನಾವು ಸ್ಥಾಪಿಸಿಕೊಂಡಿದ್ದರೂ ಬ್ರಿಟಿಷ ಜನತೆಯ ಸ್ನೇಹವನ್ನೂ ಕಳಕೊಳ್ಳುವುದರಲ್ಲಿ ಅರ್ಥವಿಲ್ಲ ಈ ಬಗೆಯ ಸ್ನೇಹ ಸಂಬಂಧವನ್ನು ಇಟ್ಟುಕೊಳ್ಳುವ ಆತುರದಿಂದಲೇ ಭಾರತವು ಸ್ವೇಚ್ಛೆಯಿಂದ ರಾಷ್ಟ್ರಕೂಟದ ಸದಸ್ಯತನವನ್ನು ಅಪೇಕ್ಷಿಸಿದೆ. ಹಾನಿಗಿಂತ ಅಧಿಕ ಲಾಭವೇ ಈ ಸಂಬಂಧದಿಂದ ಉಂಟಾಗಿದೆ ಎಂಬುದು ಇದುವರೆಗಿನ ಅನುಭವವಾಗಿದೆ. ಆದುದರಿಂದ ನಮಗೆ ಯಾವ ರೀತಿಯಿಂದಲೂ ಅನ್ಯಾಯವಾಗದಿರುವಷ್ಟು ಕಾಲ ಈ ರೀತಿ ಸ್ನೇಹ ಸಂಬಂಧವನ್ನು ಕಾಪಾಡಿಕೊಂಡು ಬರುವುದರಲ್ಲಿ ಅಸಮಂಜಸವಾದುದೇನೂ ಇಲ್ಲ.

ಮಹತ್ವದ ಎಚ್ಚರಿಕೆ

ಮೇಲಿನೆಲ್ಲ ಅಂಶಗಳನ್ನು ನೆಹರೂ ಪದೇ ಪದೇ ವಿವರಿಸಿದ್ದರೂ—ತಮ್ಮ ಈ ಸಲದ ಭಾಷಣದಲ್ಲಿ ಮಹತ್ವದ ಎಚ್ಚರಿಕೆಯೊಂದನ್ನು ಭಾರತದೊಳಗಿನ ವಿದೇಶೀ ಉಪನಿವೇಶನಗಳ ಸಂಬಂಧದಲ್ಲಿ ಕೊಟ್ಟಿರುವರು. ಈ ಎಚ್ಚರಿಕೆಯ ಗಾಂಭೀರ್ಯವನ್ನು ಸಂಬಂಧಿಸಿದ ರಾಷ್ಟ್ರಗಳು ಮನದಟ್ಟು ಮಾಡಿಕೊಳ್ಳದಿದ್ದ ಪಕ್ಷದಲ್ಲಿ ಅದರಿಂದ ಹಿತವಾಗಲಿಕ್ಕಿಲ್ಲ. ಭಾರತದಲ್ಲಿರುವ ವಿದೇಶೀ ಉಪನಿವೇಶಗಳ ಜನತೆಯು ನಮ್ಮಂತೆ ಸ್ವಾತಂತ್ರ್ಯವನ್ನು ಅನುಭವಿಸುವ ಅದೃಷ್ಟ ಪಡೆದಿಲ್ಲವಷ್ಟೆ ಅಲ್ಲ - ವಿದೇಶೀ ಆಳಿಕೆಯ ಪರಮಾವಧಿ ಸಂಕಟವನ್ನೂ ಅವರು ಇದಿರಿಸಬೇಕಾಗಿದೆ. ಭಾರತ ಸರಕಾರವು ಈ ಉಪನಿವೇಶಗಳಲ್ಲಿರುವ ಬಾಂಧವರ ಸಂಗತಿಯಲ್ಲಿ ತೀರ ಕಳಕಳಿಯನ್ನು ವ್ಯಕ್ತಗೊಳಿಸಿದ್ದರೂ ಅದರಿಂದ ಆ ಜನರ ಸ್ವಾತಂತ್ರ್ಯ ಚಳುವಳಿಗೆ ನೈತಿಕ ಬಲವೊಂದು ದೊರೆಯಿತಲ್ಲದೆ ಹೆಚ್ಚಿಗೆ ಪರಿಣಾಮವುಂಟಾಗಲಿಲ್ಲ. ರಾಜಕೀಯ ಹಂತದಲ್ಲಿ ಭಾರತ ಸರಕಾರವು ಫ್ರೆಂಚ ಹಾಗು ಪೋರ್ಚುಗೀಸ ಸರಕಾರಗಳೊಡನೆ ಪತ್ರವ್ಯವಹಾರ ಮತ್ತು ಮಾತುಕತೆಗಳನ್ನು ನಡೆಸಿದ್ದಕ್ಕೆ ಅಧಿಕ ಪ್ರಯೋಜನ ದೊರೆಯದೆ ಹೋಯಿತು. ಇದನ್ನು ದುರ್ದೈವವೆಂದೇ ಹೇಳಬೇಕು. ಈ ಪರಿಸ್ಥಿತಿಯಲ್ಲಿ ಯುದ್ಧಕ್ಕೆ ಶರಣು ಹೋಗದವಿನಃ ಈ ವಿದೇಶೀ ಉಪನಿವೇಶಗಳನ್ನು ಭಾರತದೊಡನೆ ಸೇರಿಸುವ ವ್ಯವಹಾರ್ಯ ಮಾರ್ಗವಾವುದೆಂಬುದನ್ನು ನಿರ್ಣಯಿಸುವುದಕ್ಕೆ ಅಪಾರ ಸಹನೆ ತಾಳ್ಮೆ ಹಾಗು ವಿವೇಕ ಅಗತ್ಯ. ನೆಹರೂರವರು ಶಾಂತಿಧೋರಣೆಯಿಂದಲೇ ಎಲ್ಲ ಕೆಲಸವನ್ನೂ ಪೂರೈಸಬೇಕೆಂಬ ದೃಢ ಸಂಕಲ್ಪವುಳ್ಳವರು. ಯುದ್ಧವು ಸರ್ವಥಾ ಅನಪೇಕ್ಷಣೀಯವಾದುದೆಂಬ ಮನೋಭಾವವು ಕೇವಲ ನೆಹರೂರವರದ್ದು ಮಾತ್ರ-ಪ್ರತಿಯೊಬ್ಬನ ಅಭಿಪ್ರಾಯದ ಬಲವೂ ನೆಹರೂರಿಗೆ ಈ ಸಂಗತಿಯಲ್ಲಿದೆ. ಆದುದರಿಂದ ಭಾರತವು ಇನ್ನೂ ಹೆಚ್ಚಿನ ಒತ್ತಾಯದಿಂದ ಉಪನಿವೇಶಗಳನ್ನು ಬಿಟ್ಟು ಹೊರಡಬೇಕೆಂದು ಫ್ರೆಂಚ್ ಹಾಗು ಪೋರ್ತುಗೀಜರನ್ನು ಕೇಳಿಕೊಂಡೀತಲ್ಲದೆ ಅದಕ್ಕೂ ಹೆಚ್ಚಿನದನ್ನೇನೂ ಮಾಡಲಾರದಾಗಿದೆ.

ಯೋಗ್ಯ ಯುದ್ಧ ಠಾಣ್ಯಗಳು

ಭಾರತದ ನೀತಿಯು ಸ್ಪಷ್ಟ ಕಲ್ಪನೆಯನ್ನು ಮಾಡಿಕೊಂಡೇ ವಿದೇಶೀಯರು ಸ್ವೇಚ್ಛೆಯಿಂದ ಉಪನಿವೇಶಗಳನ್ನು ಬಿಟ್ಟು ಹೊರಡಲು ಬಯಸುವುದಿಲ್ಲ. ಭಾರತದ ಕರಾವಳಿ ಪ್ರದೇಶದಲ್ಲಿರುವ ಈ ವಿದೇಶೀ ವಸಾಹತುಗಳು ಪ್ರಸಂಗ ಬಂದರೆ ಆಗ್ನೇಯ ಏಶಿಯಾದಲ್ಲಿ ಯೋಗ್ಯ ಯುದ್ಧ ಠಾಣ್ಯಗಳಾಗಬಲ್ಲುವೆಂದು ಪಾಶ್ಚಾತ್ಯ ರಾಷ್ಟ್ರಗಳ ಅಭಿಪ್ರಾಯವಿದೆ. ಉತ್ತರ ಅಟ್ಲಾಂಟಿಕ ಒಪ್ಪಂದಕ್ಕೆ ಸೇರಿದ ರಾಷ್ಟ್ರಗಳಲ್ಲಿ ಪೋರ್ತುಗಲ್ ಹಾಗು ಫ್ರಾನ್ಸುಗಳೂ ಇವೆ. ಆದುದರಿಂದ ಬ್ರಿಟಿಷರ ಹೆಜ್ಜೆಯನ್ನನುಸರಿಸಿಕೊಂಡು ಭಾರತದಲ್ಲಿರುವ ಈ ಅಮೂಲ್ಯ ಠಾಣ್ಯಗಳನ್ನು ಖಾಲಿ ಮಾಡಿ ಹೊರಟು ಹೋಗುವುದೆಂದರೆ ಅವರಿಗೆ ಖುಶಿ ಇಲ್ಲ. ಈ ಉಪನಿವೇಶಗಳು ಪರಕೀಯರ ಕೈಯಲ್ಲಿ ಇರುವಷ್ಟು ದಿನ ಭಾರತಕ್ಕೆ ಗಂಡಾಂತರ ತಪ್ಪಿದ್ದಲ್ಲ. ಇದನ್ನು ಮುಂದಾಗಿ ತಿಳಿದುಕೊಂಡೇ ಭಾರತ ಸರಕಾರವು ಈ ಪ್ರದೇಶಗಳನ್ನು ಭಾರತದೊಡನೆ ವಿಲೀನೀಕರಿಸಬೇಕೆಂದು ಪ್ರಯತ್ನಿಸುತ್ತಾ ಬಂದದ್ದಾಗಿರುತ್ತದೆ. ಆದರೆ ಇದಾವುದೂ ಸಫಲಗೊಳ್ಳದೆ ಇರುವುದರಿಂದ ನೆಹರೂರವರು ಕೊನೆಯ ಎಚ್ಚರಿಕೆಯೊಂದನ್ನು ನೀಡಿರುವರು ಅದೇನೆಂದರೆ- ಈ ಉಪನಿವೇಶಗಳನ್ನು ಸೈನಿಕ ಕಾರ್ಯಕ್ರಮಗಳಿಗಾಗಿ ವಿದೇಶೀ ರಾಷ್ಟ್ರಗಳು ಉಪಯೋಗಿಸಲು ಹವಣಿಸಿದ್ದೇ ಆದಲ್ಲಿ —ಅಂಥ ಕೃತಿಯನ್ನು ಭಾರತದ ಹಿತಸಂಬಂಧಕ್ಕೆ ವಿರುದ್ಧವಾದುದೆಂದು ಪರಿಗಣಿಸಲಾಗುವುದು. ಈ ಎಚ್ಚರಿಕೆಯನ್ನು ಬಹಳ ಹಿಂದೆಯೇ ಕೊಡುವ ಅಗತ್ಯವಿತ್ತು. ಒಹುಶಃ ನೆರೆಯ ಪಾಕಿಸ್ತಾನದಲ್ಲಿ ಮಧ್ಯ ಪೂರ್ವಸಂರಕ್ಷಣಾಯೋಜನೆಯು ಕೃಪಾ ಛತ್ರದಡಿಯಲ್ಲಿ ಸೈನಿಕಠಾಣ್ಯ ಏರ್ಪಡಿಸುವ ಮಾತುಕತೆಗಳು ಕೇಳಿಬರಹತ್ತಿದ್ದರಿಂದ ನೆಹರೂರವರು ಪಾಕಿಸ್ತಾನಕ್ಕಿಂತಲೂ ಸುಲಭವಾಗಿ ಸೈನಿಕಠಾಣ್ಯವಾಗಬಲ್ಲ ಉಪನಿವೇಶಗಳ ಕುರಿತು ಸ್ಪಷ್ಟ ಮಾತುಗಳಲ್ಲಿ ಸರಕಾರದ ಧೋರಣವನ್ನು ನಿರೂಪಿಸುವ ಅಗತ್ಯ ಕಂಡಿದ್ದಾರು. ಏನೇ ಇರಲಿ- ಇಂಥ ಎಚ್ಚರಿಕೆಯನ್ನು ಹಗುರಾಗಿ ತಿಳಿದ ಕೊಳ್ಳದೆ ಸಂಬಂಧಿಸಿದ ರಾಷ್ಟ್ರಗಳು ವಿವೇಕದಿಂದ ನಡೆದುಕೊಂಡರೆ ಕ್ಷೇಮವಿದೆ.

ಭಾರತ-ಪಾಕ್ ವ್ಯಾಪಾರ ಸಂಬಂಧ

ಭಾರತ ಸರಕಾರವು ಪಾಕಿಸ್ತಾನದೊಡನೆ ಸ್ನೇಹದಿಂದ ಇರಬೇಕೆಂದು ಎಷ್ಟೇ ಪ್ರಯತ್ನಿಸಿದರೂ ಅದಕ್ಕೆ ಆಚೆಕಡೆಯಿಂದ ಯೋಗ್ಯ ಮನ್ನಣೆ ದೊರೆಯದ್ದರಿಂದ ಎಲ್ಲ ಉಪಕ್ರಮಗಳೂ ವ್ಯರ್ಥಗೊಂಡವು ಈ ಮನಸ್ತಾಪ ಎಲ್ಲಿಯವರೆಗೆ ಬೆಳೆಯಿತೆಂದರೆ- ಎರಡೂ ರಾಷ್ಟ್ರಗಳೊಳಗೆ ವಿಭಜನೆಗೆ ಪೂರ್ವದಲ್ಲಿ ನಡೆಯುತಿದ್ದ ನಿರಾತಂಕ ವ್ಯಾಪಾರದ ಭವಿಷ್ಯವೇ ಬಾಡ ಹೋಲಾಯಿತು. ಭಾರತ-ಪಾಕ್ ವ್ಯಾಪಾರೀ ಸಂಬಂಧಗಳು ತೀರ ಹದಗೆಟ್ಟು ಹೋದವು. ಇದರಿಂದ ಇಕ್ಕಡೆಯವರಿಗೂ ತ್ರಾಸ ಹೆಚ್ಚಿತು: ಜನತೆಯು ಕಷ್ಟನಷ್ಟಗಳನ್ನು ಇದಿರಿಸಬೇಕಾಗಿ ಬಂತು ಹೀಗಿದ್ದರೂ ಪಾಕಿಸ್ತಾನ ಸರಕಾರ ಸೌಮನಸ್ಯವನ್ನು ತೋರದೆ ಹೋಗಿ ಭಾರತದ ವಸ್ತುಗಳ ಮೇಲೆ ಅಧಿಕ ಸುಂಕ ಹಾಕುವುದನ್ನು ಹೇರಲು ಹವಣಿಸಿತು ವಿದೇಶೀ ವಸ್ತುಗಳ ಮೇಲೆ ಸುಂಕ ಹೇರುವ ಪರಿಪಾಟ ಸಾಮಾನ್ಯವಾಗಿ ಪ್ರಚಲಿತವಿದೆ ಆದರೆ ವಿದೇಶಗಳಲ್ಲಿ ನಮಗೆ ಬೇಕಾದವುಗಳು, ಬೇಡಾದವುಗಳು ಎಂದು ಇಬ್ಬಗೆಯಿಂದ ನೋಡುವ ಅವ್ಯಾಪಕ್ಕೆ ಪಾಕಿಸ್ತಾನವು ಇಳಿಯಿತು. ಭಾರತ ಅರ್ಥಸ

ಏಳು ವರುಷಗಳಲ್ಲಿ ಫಲ

ನಮ್ಮ ಸಿಗ್ಮಿ ಮುಡಿಪುದಾರರಲ್ಲಿ ದಿನವಿಡಿ ಕೆಲಸ ಮಾಡುವ ಶ್ರಮಜೀವಿಗಳು, ಅಂಗಡಿಗಾರರು, ವಕೀಲರು, ಡಾಕ್ಟರರು, ಎಂಜಿನಿಯರರು, ಬೇಸಾಯಗಾರರು, ವರ್ಗದಾರರು ಇತ್ಯಾದಿ ತರಗತಿಯವರಿರುವರು ಅವರ ಸಿಗ್ಮಿ ಮುಡಿಪುಗಳು ಚಿಕ್ಕ ಪುಟ್ಟ ಠೇವಣಾತಿಗಳಿಂದ ಪ್ರಾರಂಭವಾದುವು ಅಂದು ಇಲಿಯಂತಿದ್ದುವು ಇಂದು ಹುಲಿಯಂತಾಗಿವೆ ಅಂತಹ ವಿವೇಕವುಳ್ಳ ದೂರ ದರ್ಶಿ ಸಂಪನ್ನ ಸಿಗ್ಮಿ ಠೇವಣಾತಿದಾರರ ಕೂಟಕ್ಕೆ ನೀವೂ ಕೂಡಾ ಸೇರಿ ಭಾಗ್ಯವಂತರಾಗ ಬೇಕಾಗಿ ಆಹ್ವಾನಿಸುತ್ತೇವೆ.

ಆಧಾರ ವಹಿವಾಟು ರೂ 5,00,00,000ಕ್ಕೂ ಮಿಕ್ಕಿದೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ 19_5 ಹೆಡ್ ಆಫೀಸ.. ಉಡುಪಿ

THE CANARA INDUSTRIAL & BANKING SYNDICATE LIMITED

Estd: 1925 H. O: UDIPI.

ಭಾರತ—ಪಾಕ್ ಒಡಂಬಡಿಕೆಯಿಂದ ಲಾಭ

ಉಭಯ ರಾಷ್ಟ್ರಗಳ ವ್ಯಾಪಾರೀ ಒಪ್ಪಂದವು ಪರಸ್ಪರ ದ್ವೇಷ ತಗ್ಗಿಸಲಿ!

ಮಾಡಿಕೊಂಡ ಸಣಬಿನ ಮೇಲೆ ವಿಶೇಷವಾದ ನಿರ್ಯಾತ ಸುಂಕವನ್ನು ಹೇರುವ ಹಾಗೂ ವಿಶೇಷ ಲೈಸೆನ್ಸು ಪಡೆಯಬೇಕೆನ್ನುವ ಕ್ರಮಗಳನ್ನು ಪಾಕಿಸ್ತಾನ ಕೈಗೊಂಡುದರಿಂದ ಭಾರತದಲ್ಲಿ ಸಣಬಿನ ಬೆಲೆಯು ಟನ್ನಿಗೆ ೧೩೫ ರುಪಾಯಿಗಳಷ್ಟು ಹೆಚ್ಚಿಕೊಂಡಿತು. ಮೌಲ್ಯವಿಚ್ಛೇದನದ ಪರಿಣಾಮವಾಗಿ ಪಾಕಿಸ್ತಾನದ ಎರಡು ರುಪಾಯಿಗಳಿಗೆ ಭಾರತವು ಮೂರು ರುಪಾಯಿ ತೆರುವ ಪರಿಸ್ಥಿತಿಯುಂಟಾಗಿರುವಾಗ ಈ ರೀತಿ ವೈಮನಸ್ಯಧೋರಣೆಯನ್ನು ಇಟ್ಟುಕೊಂಡು ಪಾಕಿಸ್ತಾನವು ಭಾರತವನ್ನು ಹಣ್ಣುಮಾಡಲು ನೋಡಿತು. ಭಾರತದ ಸಣಬಿನ ಗಿರಣಿಗಳು ಕೆಲಸವಿಲ್ಲದೆ ನಿಂತವು. ಅತ್ತ ಪಾಕಿಸ್ತಾನಕ್ಕಾದರೂ ಕಚ್ಚಾ ಸಣಬಿಗೆ ಸಾಕಷ್ಟು ಗಿರಾಕಿಗಳು ದೊರೆಯದೆ ಹೋದರು. ಭಾರತ ಸರಕಾರವು ಕೊನೆಗೆ ಪಾಕಿಸ್ತಾನದ ವಿರುದ್ಧ ದೂರನ್ನೆ ಕೊಂಡುಹೋಯಿತು. ಇದನ್ನು ಕಂಡು ಪಾಕಿಸ್ತಾನವು ನಿಧಾನವಾಗಿ ಮನಸ್ಸು ಬದಲಾಯಿಸಿ, ದೀರ್ಘಕಾಲೀನ ವ್ಯಾಪಾರೀ ಒಡಂಬಡಿಕೆ ಮಾಡಿಕೊಳ್ಳುವ ಇಚ್ಛೆಯನ್ನು ವ್ಯಕ್ತಪಡಿಸಿತು. ಎರಡೂ ರಾಷ್ಟ್ರಗಳ ಪ್ರತಿನಿಧಿಗಳು ಈ ವಿಷಯವನ್ನು ಚರ್ಚಿಸಿ, ಇದೀಗ ಸಮಾಧಾನಕರವಾದ ರೀತಿಯಲ್ಲಿ ಮಹತ್ವದ ವಿಷಯಗಳು ತೀರ್ಮಾನಗೊಂಡಿವೆ.

ಸಮಾಧಾನಕರವಾದ ಒಡಂಬಡಿಕೆ

ಭಾರತ ವಿಭಜನೆಯಾದ ಬಳಿಕ ಆರ್ಥಿಕ ಹಿತಾಹಿತಗಳನ್ನು ಲೆಕ್ಕಿಸದೆ ಪಾಕಿಸ್ತಾನವು ರಾಜಕೀಯ ಧೋರಣೆಗೆ ಪ್ರಾಶಸ್ತ್ಯವನ್ನು ಕೊಟ್ಟುದರಿಂದ ವ್ಯಾಪಾರ ವ್ಯವಹಾರಗಳಲ್ಲಿ ಇಬ್ಬರವರಿಗೆಲ್ಲಾ ಬಿಕ್ಕಟ್ಟು ತಲೆದೋರಿತು. ಪ್ರಕೃತ ಹೊಸದಿಲ್ಲಿಯಲ್ಲಿ ಮಾಡಿಕೊಂಡ ಒಡಂಬಡಿಕೆಯಿಂದ ವಾತಾವರಣವು ಕೆಲ ಮಟ್ಟಿಗೆ ತಿಳಿಯಾದೀತೆಂದು ಆಶಿಸಿರುವರು. ಭಾರತವು ಸಣಬಿನ ಬೆಳೆಯನ್ನು ಒಂದೇ ಸವನೆ ಹೆಚ್ಚಿಸಿಕೊಂಡು ಮುಕ್ಕಾಲಂಶ ಸ್ವಾವಲಂಬನವನ್ನು ಪಡೆದಿದೆ. ಆ ಕಾಲದಲ್ಲಿ ಪಾಕಿಸ್ತಾನವು ಭಾರತವನ್ನುಳಿದ ವಿದೇಶಗಳಲ್ಲಿ ತನ್ನ ಉತ್ಪಾದನೆಯ ಅರ್ಧಾಂಶಕ್ಕೆ ಮಾತ್ರ ಗಿರಾಕಿಯನ್ನು ಪಡೆಯಲು ಸಮರ್ಥವಾಗಿದೆ. ಈಗ ಆದ ಒಡಂಬಡಿಕೆಯಂತೆ ಭಾರತವು ಹೆಚ್ಚು ಕಡಿಮೆ ೧೮ರಿಂದ ೨೫ ಲಕ್ಷ ಬೇಲುಗಳಷ್ಟು ಸಣಬನ್ನು ಪಾಕಿಸ್ತಾನದಿಂದ ಪಡೆಯುವುದು ಎಂದರೆ ಪಾಕಿಸ್ತಾನದ ಗಿರಾಕಿ ಇಲ್ಲದ ಅರ್ಧಾಂಶ ಸಣಬಿಗೆ ಭಾರತವು ಗಿರಾಕಿಯಾದಂತಾಯಿತು. ಪಾಕಿಸ್ತಾನವು ಒಂದು ಕಣ್ಣಿಗೆ ಬೆಣ್ಣೆ, ಇನ್ನೊಂದಕ್ಕೆ ಸುಣ್ಣ ಎಂಬ ಧೋರಣೆಯನ್ನು ಬದಲಿಸಿ, ಭಾರತವನ್ನೂ ಇತರ ವಿದೇಶಗಳಂತೆಯೇ ನೋಡುವುದು, ಈ ರಿಯಾಯತಿಯನ್ನು ಭಾರತೀಯ ಚಲಚಿತ್ರಗಳ ಸಂಗತಿಯಲ್ಲೂ ತೋರಿಸಲು ಪಾಕಿಸ್ತಾನವು ಒಪ್ಪಿಕೊಂಡಿದೆ. ಈ ಒಡಂಬಡಿಕೆಯಾಗುವುದಕ್ಕೆ ಎರಡು ದಿನಗಳಿಗೆ ಮುಂಚೆ ಪಾಕಿಸ್ತಾನವು ಭಾರತೀಯ ಚಲಚಿತ್ರಗಳ ಮೇಲೆ ವಿಶೇಷವಾದ ಸುಂಕ ಮೊದಲಾದ ಅಸಾಮಾನ್ಯ ನಿರ್ಬಂಧಗಳನ್ನು ಹೊರಿಸಿದ್ದಿತು. ಈ ಶರ್ತಗಳು ಹಿಂದೆಗೆಯಲ್ಪಟ್ಟುದರಿಂದ —ಭಾರತೀಯ ಚಲಚ್ಚಿತ್ರೋದ್ಯಮಕ್ಕೆ ವ್ಯಾಪಕವಾದ ಪೇಟೆ ದೊರೆಯುವಂತಾಗಿದೆ. ಭಾರತ ಸರಕಾರವು ಇದಕ್ಕೆ ಪ್ರತಿಯಾಗಿ ಪಾಕಿಸ್ಥಾನಕ್ಕೆ ಕಲ್ಲಿದ್ದಲು ಪೂರೈಸುತ್ತಿದೆ. ಭಾರತದೊಳಗೆ ಯಾವ ದರದಲ್ಲಿ ಮಾರಾಟ ನಡೆಯುತ್ತದೋ ಅದೇ ದರಗಳಲ್ಲಿ ಪಾಕಿಸ್ಥಾನಕ್ಕೆ ನಿರ್ಯಾತ ಮಾಡಲಾಗುವುದು. ಮೊದಲು ಪಾಕಿಸ್ಥಾನಕ್ಕೆ ನಿರ್ಯಾತವಾಗುತ್ತಿದ್ದ ಭಾರತದ ಕಲ್ಲಿದ್ದಲಿನ ದರವು ಇಲ್ಲಿನ ಬೆಲೆಗಿಂತ ಟನ್ನಿಗೆ ಹತ್ತು ಮುಕ್ಕಾಲು ರೂಪಾಯಿಯಷ್ಟು ಹೆಚ್ಚಿದ್ದಿತು. ಒಡಂಬಡಿಕೆಯ ಇನ್ನೊಂದು ಮಹತ್ವದ ಅಂಶವೆಂದರೆ - ಪೂರ್ವ ಪಾಕಿಸ್ತಾನ ಮತ್ತು ಪಶ್ಚಿಮ ಬಂಗಾಳ, ಅಸ್ಸಾಮು, ತ್ರಿಪುರಗಳ ಗಡಿಪ್ರದೇಶದಲ್ಲಿ ಮೊದಲಿನಂತೆಯೇ ನಿರಾತಂಕ ವ್ಯಾಪಾರವನ್ನು ಪುನರುಜ್ಜೀವಿಸಲು ಒಪ್ಪಿಕೊಂಡದ್ದು ಎನ್ನಬಹುದು. ಈ ಗುಡ್ಡಗಾಡು ಪ್ರದೇಶದ ಜನರು ಪರಸ್ಪರ ವ್ಯಾಪಾರವಿನಿಮಯದ ಸೌಕರ್ಯವಿಲ್ಲದೆ ಆರ್ಥಿಕ ಸಂಕಟವನ್ನು ಇದಿರಿಸುತ್ತಿದ್ದರು. ಅವರ ಶೋಚನೀಯ ಪರಿಸ್ಥಿತಿಯು ಇನ್ನು ಸುಧಾರಿಸುವ ಭರವಸೆ ಇದೆ.

ಹಿಂದುಳಿದವರ ಏಳಿಗೆ

ಹಿಂದುಳಿದ ವರ್ಗಗಳ ಏಳಿಗೆಯ ಕಾರ್ಯಕ್ರಮವನ್ನು ನಿರೂಪಿಸುವ ಬಗ್ಗೆ ರಾಷ್ಟ್ರಾಧ್ಯಕ್ಷರು ಕಾಕಾ ಕಾಲೇಲ್ಕರರಂಥ ಹಿರಿಯ ವಿಧಾಯಕ ಕಾರ್ಯಕರ್ತರ ಅಧ್ಯಕ್ಷತೆಯಲ್ಲಿ ಆಯೋಗವೊಂದನ್ನು ರಚಿಸಿರುವ ಸಂಗತಿ ಈ ಮೊದಲೇ ಪ್ರಕಾಶಗೊಂಡಿದೆ. ಮೊನ್ನೆ ಈ ಆಯೋಗದ ಉದ್ಘಾಟನಾ ಕಾರ್ಯವನ್ನು ಮಾಡಿದಾಗ, ರಾಷ್ಟ್ರಾಧ್ಯಕ್ಷರೂ ಪ್ರಧಾನಿ ಜವಾಹರಲಾಲ ನೆಹರೂರವರೂ ಹಿಂದುಳಿದವರ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳುವ ಮಹತ್ವವನ್ನು ಚೆನ್ನಾಗಿ ಬಿಂಬಿಸಿದರು. ವರ್ಗರಹಿತ ಸಮಾಜದ ರಚನೆಯ ಕಡೆಗೆ ಈ ಆಯೋಗದ ರಚನೆಯೊಂದು ಪ್ರಗತಿಪರವಾದ ಹೆಜ್ಜೆಯೆಂದು ರಾಷ್ಟ್ರಾಧ್ಯಕ್ಷರು ವರ್ಣಿಸಿದರು. ಅವರು ತಮ್ಮ ಭಾಷಣದಲ್ಲಿ ಪರಿಶಿಷ್ಟ ವರ್ಗಗಳು, ಗುಡ್ಡಗಾಡು ಜಾತಿಗಳು, ಹಿಂದುಳಿದ ವರ್ಗಗಳು ಎಂದು ಸುಮಾರಾಗಿ ೧೨ ಕೋಟಿಗೂ ಹೆಚ್ಚಿನ ಜನರು ಇರುವರು ಎಂದು ಹೇಳಿದ್ದು ಯಾರಿಗೂ ಆಶ್ಚರ್ಯವನ್ನು ಉಂಟುಮಾಡದಿರದು. ಭಾರತದ ಜನಸಂಖ್ಯೆಯಲ್ಲಿ ಅರ್ಧಾಂಶದಷ್ಟು ಹಿಂದುಳಿದ ವರ್ಗಗಳಿಗೆ ಸೇರಿರುವರೆಂದರೆ ನಂಬುವುದೇ ಕಷ್ಟವಾದೀತು. ಆದರೆ ನಿಜಸ್ಥಿತಿ ಹೀಗಿದೆ. ಇವರು ಜಾತಿಯಲ್ಲಿ ಮಾತ್ರ ಹಿಂದುಳಿದವರಲ್ಲ —ಆರ್ಥಿಕವಾಗಿಯೂ ಈ ಜನರ ಸ್ಥಿತಿ ಚಿಂತಾಜನಕವಿದೆ. ಭಾರತದಲ್ಲಿ ಮೇಲ್ಜಾತಿಯವರೆಂದು ಹೇಳಿಕೊಳ್ಳುವ ಬ್ರಾಹ್ಮಣರು ಕೂಡ ಜೀವನ ಮಟ್ಟದ ದೃಷ್ಟಿಯಿಂದ ಹೀನ ಬದುಕನ್ನೆ ನಡೆಸುತ್ತಿರುವುದು ಕಂಡು ಬರುತ್ತದೆ. ಆದುದರಿಂದ ಭಾರತದಲ್ಲಿ ಆರ್ಥಿಕವಾಗಿ ಎಲ್ಲರೂ ಒಂದೇ ವರ್ಗಕ್ಕೆ—ಬಡವರ ವರ್ಗಕ್ಕೆ—ಸೇರಿದವರೇ ನಿಜ. ಮೇಲ್ಜಾತಿಯ ಜನರು ಧನಿಕರೆಂದೂ ಮಧ್ಯಮ ವರ್ಗದವರೆಂದೂ ಮಾಡಿಕೊಂಡ ಭೇದಕ್ಕೆ ನಿಜವಾದ ತಳಹದಿಯಿರಲಿಕ್ಕಿಲ್ಲ. ಆದುದರಿಂದಲೇ ಹಿಂದುಳಿದವರನ್ನು ಮುಂದಕ್ಕೆ ತರುವುದಕ್ಕೆ ಪ್ರಯತ್ನಿಸುವುದು ನಮ್ಮ ಧರ್ಮ. ಈ ಕೆಲಸವನ್ನು ಕೈಗೊಳ್ಳುವಾಗ ನಾವು ದೊಡ್ಡವರೆಂಬ ಬಹಳ ಮುಂದುವರಿದವರೆಂಬ ದರ್ಪವನ್ನು ತೋರಿಸಿದರೆ ಅದರಿಂದ ಇಷ್ಟಸಿದ್ಧಿಯಾಗಲಿಕ್ಕಿಲ್ಲವೆಂದು ನೆಹರೂ ಹೇಳಿದರು. ಹಿಂದುಳಿದವರ ಹೃದಯಕ್ಕೆ ಯೋಗ್ಯ ಸಂಸ್ಕಾರವನ್ನು ನೀಡಿಯೇ ಅವರನ್ನು ಉದ್ಧರಿಸಬೇಕೆಂಬ ಮತ್ತು ನಮ್ಮ ಪ್ರಯತ್ನಗಳು ದಾಂಭಿಕತನದ ಸೋಗಿರದೆ ಪ್ರಾಮಾಣಿಕತೆ [illegible] ವದ್ಯೋತಕವಾಗಿರಬೇಕೆಂಬ ನೆಹರೂರ ಮಾತು ಅಕ್ಷರಶಃ ಸತ್ಯ. ಕಾಕಾ ಕಾಲೇಲ್ಕರರಂಥ ಅನುಭವಿಗಳ ನೇತೃತ್ವದಲ್ಲಿ ಈ ಆಯೋಗ ತನ್ನ ಧ್ಯೇಯ ಸಾಧನೆಯಲ್ಲಿ ಹಿಂದುಳಿಯಲಿಕ್ಕಿಲ್ಲವೆಂದು ಅನಿಸುವುದು ನ್ಯಾಯ.

ಆಂಧ್ರರಾಜ್ಯದ ನಿರ್ಮಾಣ

ಮದ್ರಾಸು ಶಾಸನ ಸಭೆಯಲ್ಲಿ ಮುಂಗಡಪತ್ರದ ಮೇಲೆ ನಡೆದ ಚರ್ಚೆಗೆ ಉತ್ತರಿಸುತ್ತಾ ಅರ್ಥಸಚಿವರು ಹೊಗೆಸೊಪ್ಪಿನ ಮೇಲೆ ತೆರಿಗೆ ಹೊರಿಸುವ ವಿಚಾರದ ಕುರಿತು ಸ್ಪಷ್ಟೀಕರಣವನ್ನು ಕೊಟ್ಟರು. ಬಡಬಗ್ಗರ ಸುಖ ಸಾಧನವೆನಿಸಿದ ಬೀಡಿಯ ಹೊಗೆಸೊಪ್ಪಿನ ಮೇಲೆ ಸುಂಕ ಹೇರುವುದು ಸರಕಾರದ ಇಚ್ಛೆಯಿಲ್ಲವೆಂದು ಅವರು ಹೇಳಿದ್ದರಿಂದ ಹೊಗೆಸೊಪ್ಪಿನ ಚಟ ಹತ್ತಿದವರಿಗೆ ಸಮಾಧಾನವಾದೀತು. ಸಿಗಾರ್, ಸಿಗರೇಟು ಮುಂತಾಗಿ ಹೊಗೆಸೊಪ್ಪಿನಿಂದ ತಯಾರಾಗುವ ವಿಲಾಸ ವಸ್ತುಗಳ ಮೇಲೆ ಮಾತ್ರ ಏಕಸ್ವನೀಯಕರವನ್ನು ಹೇರುವ ವಿಚಾರ ಸರಕಾರಕ್ಕಿದೆ. ಆದರೆ ಈಗ ಶಾಸನಸಭೆಯಲ್ಲಾಗಲೀ ರಾಜ್ಯದ ಇತರೆಡೆಗಳಲ್ಲಾಗಲೀ ಸರಕಾರದ ನಿತ್ಯ ವ್ಯವಹಾರದ ಕುರಿತು ಉತ್ಸುಕತೆ ಕಂಡುಬರದೆ— ಆಂಧ್ರ ಪ್ರಾಂತದ ನಿರ್ಮಾಣವೆಂಬ ಒಂದೇ ಸಂಗತಿಯ ಸಂಬಂಧದಲ್ಲಿ ಎಲ್ಲರೂ ವಿಚಾರ ಮಾಡುತ್ತಿರುವರು; ಆಸ್ಥೆ ತೋರುತ್ತಿರುವರು. ರಾಜಾಜಿಯವರಾದರೂ—ಕೇಂದ್ರ ಸರಕಾರವು ಮದ್ರಾಸಿನ ನೆರವಿಗೆ ಬಂದು ಧನ ಸಹಾಯವನ್ನಿತ್ತು ಸಹಕರಿಸಬೇಕೆಂದು ಕೇಳಿಕೊಂಡಂತೆಯೇ, ಆಂಧ್ರ ಪ್ರಾಂತದ ಸಂಬಂಧದಲ್ಲಿ ಸದಸ್ಯರ ಭಾವನೆಗಳನ್ನು ಮೆಚ್ಚಿಯೇ ಮಾತನಾಡಿದರು. ಆಂಧ್ರ ಪ್ರಾಂತವು ಎಷ್ಟು ಬೇಗನೆ ಆಯಿತೋ ಅಷ್ಟು ಒಳ್ಳೆಯದೆಂದವರು ನುಡಿದರು, ಮಾತ್ರವಲ್ಲ, ಆಂಧ್ರಪ್ರಾಂತವಾದರೆ ತನಗೆ ಆಗುವಷ್ಟು ಸಂತೋಷ ಬೇರಾರಿಗೂ ಆಗಲಾರದೆಂದು ತಿಳಿಸಿದರು. ಆಂಧ್ರ ರಾಜ್ಯವು ಅಕ್ಟೋಬರ ತಿಂಗಳ ಸುಮಾರಿಗೆ ನಿರ್ಮಾಣಗೊಂಡೀತೆಂದೂ ಜೂಲೈ—ಆಗೋಸ್ತುಗಳಲ್ಲಿ ಪಾರ್ಲಿಮೆಂಟಿನ ಮುಂದೆ ಸಂಬಂಧಿಸಿದ ವಿಧೇಯಕವನ್ನು ಮಂಡಿಸಲಾದೀತೆಂದೂ ಊಹೆ.

ಸಂಭಾವ್ಯ ಸ್ವತಂತ್ರ ನಿರ್ಣಯಗಳು

ಆಂಧ್ರ ಪ್ರಾಂತ ನಿರ್ಮಾಣಕ್ಕೆ ಮುಂಚೆ ಮದ್ರಾಸು ನಗರದ ಮೇಲಿನ ಹಕ್ಕು ಬಾಧ್ಯತೆಗಳ ಕುರಿತಿರುವ ವಿವಾದ ಮತ್ತು ಬಳ್ಳಾರಿ ಜಿಲ್ಲೆಯ ಭವಿತವ್ಯ ಈ ಸಂಗತಿಗಳಲ್ಲಿ ಒಂದು ನಿರ್ಣಯಕ್ಕೆ ಬರುವುದು ಆವಶ್ಯಕವೆನಿಸಿದೆ. ಕೇಂದ್ರ ಸರಕಾರವು ವಾಂಚೂ ವರದಿಯನ್ನು ಪರಿಶೀಲಿಸಿ

(೬ನೇ ಪುಟ ನೋಡಿರಿ)

PLACE YOUR LIFE ASSURANCE WITH A COMPANY OF YOUR OWN — — —

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policyholders and Representatives At whatever stage We welcome your association with the POPULAR.

The Popular Insurance Co. Ltd.

"Popular Buildings", MANGALORE—1.

ಶರೀರ ದುರ್ಬಲತೆಗೆ ಸರ್ವ ರೋಗ ನಿವಾರಣೆಗೆ
ನವಜೀವನ, ಆಯುಷ್ಯ, ಶಕ್ತಿವರ್ಧಕವೆಂದರೆ— ಸುಪ್ರಸಿದ್ಧ
ಸರ್ ಜೀವನ್ ಶಿಲಾಜಿತ್ ಲೇಹ್ಯ
ಸಕಲ ಋತುವಿನಲ್ಲಿ ಸರ್ವರಿಗೂ ಅನುಕೂಲವುಂಟು.
44 ದಿನದ ಲೇಹ್ಯ ರೂ. 5 4 0, 22 ದಿನದ ಲೇಹ್ಯ ರೂ 3 4 0
(ಪೋಸ್ಟೇಜ್ ಮಾಫಿ)
ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರ ಸಿಟಿ
ಶುದ್ಧ ನೀಲಗಿರಿ ಎಣ್ಣೆ ಸಿಗುತ್ತೆ.

SR
ಸೇವನೆಯ ಆನಂದಕ್ಕೆ
ಎಸ್. ಆರ್.
ತಾಜಾ ನಿಪ್ಪಾಣಿ ತಂಬಾಕು
ಬೊಂಬಾಯಿ ಎಲೆ
ಬೀಡಿಗಳಾಗಿರುತ್ತವೆ.
S.R. Beedi Works.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸುರಕ್ಷಿತತೆ, ಭದ್ರತೆ ಮತ್ತು ಸೇವಾತತ್ಪರತೆ
ಇವುಗಳಿಗೆ
ತವರುಮನೆಯಂತಿದ್ದು, ನಿಮ್ಮೆಲ್ಲರ ಸ್ನೇಹ, ಸಹಕಾರಗಳನ್ನು
ಅಪೇಕ್ಷಿಸುವ ಬೇಂಕು.

THE CANARA BANKING CORPORATION LTD.
Estd: 1906] [H. O.: UDIPI, (S. India)

ನವಯುಗ

ಉಡುಪಿ, ಗುರುವಾರ ೨೬-೩-'೫೩

ವಿಫಲ ಸಂಧಾನ

ಮೊದಲೇ ಊಹಿಸಿದಂತೆ, ಕಾಂಗ್ರೆಸ್ ಹಾಗು ಪ್ರಜಾ ಸೋಶಲಿಸ್ಟ ಪಕ್ಷಗಳೊಳಗೆ ಪರಸ್ಪರ ಸಹಕಾರ ಏರ್ಪಡಬೇಕೆಂಬ ಬಗ್ಗೆ ತೊಡಗಿದ ಮಾತುಕತೆಗಳು ವಿಫಲಗೊಂಡ ವಾರ್ತೆಯು ಬಂದಿದೆ. ಕಾಂಗ್ರೆಸಾಧ್ಯಕ್ಷ ನೆಹರೂರವರು ಜಯಪ್ರಕಾಶ ನಾರಾಯಣರೊಡನೆ ಸಂಬಂಧ ಬೆಳೆಸಿಕೊಂಡು ಆರಂಭಿಸಿದ ಈ ಮಾತುಕತೆಗಳು ಸದುದ್ದೇಶದಿಂದಲೇ ಪ್ರೇರಿತವಾಗಿದ್ದುವೆಂಬಲ್ಲಿ ಸಂದೇಹವಿಲ್ಲ. ಆದರೆ, ನೆಹರೂರವರು ತೋರಿಸಿದ ಔದಾರ್ಯದ ಮನೋಭಾವವನ್ನು ಸಮಂಜಸವಾಗಿ ಅರಿತುಕೊಳ್ಳುವಷ್ಟು ವಿವೇಕವನ್ನು ಪ್ರಜಾ ಸೋಶಲಿಸ್ಟರು ತೋರಿಸದೆ ಹೋದರು. ರಾಷ್ಟ್ರ ಪುನರುದ್ಧಾರದ ಮಹಾಕಾರ್ಯದಲ್ಲಿ ಸಾಮಾನ್ಯವಾಗಿ ಒಂದೇ ತತ್ವ ಪ್ರಣಾಳಿಯಿರುವ ಪಕ್ಷಗಳೆಲ್ಲ ಒಟ್ಟಿಗೆ ಸಹಕರಿಸಿ ದುಡಿದರೆ ಅದರಿಂದ ಇಡಿ ರಾಷ್ಟ್ರಕ್ಕೆ ಕ್ಷೇಮವುಂಟೆಂಬ ವಿಶಾಲ ಭಾವನೆಯೇ ನೆಹರೂರವರನ್ನು ಈ ರೀತಿಯ ಸಂಧಾನಕ್ಕೆ ನೂಕಿತೆನ್ನಬಹುದು. ವಿಧಾಯಕ ಕ್ಷೇತ್ರದಲ್ಲಿ ಮತ್ತು ಜನಸೇವೆಯಲ್ಲಿ ಹಿಂದೊಮ್ಮೆ ಕಾಂಗ್ರೆಸಿಗರೇ ಆಗಿದ್ದ ಮತ್ತು ಈಗಲೂ ಧೋರಣದಲ್ಲಿ ವಿಶೇಷ ಅಂತರವಿರದ ಪ್ರಜಾಸೋಶಲಿಸ್ಟರಿಗೆ ಯೋಗ್ಯ ಅವಕಾಶವನ್ನು ಕಲ್ಪಿಸಿಕೊಡಬೇಕೆಂಬ ಇರಾದೆಯಿಂದ ನೆಹರೂರವರು ಮಾತುಕತೆಯನ್ನು ಆರಂಭಿಸಿದರು. ಪ್ರಜಾ ಸೋಶಲಿಸ್ಟರು ಇದನ್ನು ತಪ್ಪಾಗಿ ಅರ್ಥಮಾಡಿಕೊಂಡರೆಂದು ಹೇಳಬಹುದು. ಕಾಂಗ್ರೆಸು ನಿಃಸತ್ವವಾಗಿದೆ; ಆದುದರಿಂದಲೇ ಇಂದು ತಮ್ಮ ಸಹಕಾರದ ಯಾಚನೆ ಮಾಡುತ್ತಿದೆ ಎಂದವರು ಭಾವಿಸಿರಬೇಕು. ಆದುದರಿಂದ ತಮ್ಮ ಪಕ್ಷದ ವರ್ಚಸ್ಸನ್ನು ಬೆಳೆಸಿಕೊಳ್ಳುವುದಕ್ಕೂ ಕಾಂಗ್ರೆಸಿನ ಮೇಲೆ ತಮ್ಮ ಪ್ರತಿಷ್ಠೆಯನ್ನು ಪ್ರಸ್ಥಾಪಿಸುವುದಕ್ಕೂ ಈ ಸಂಧಿಯನ್ನು ಉಪಯೋಗಿಸಬೇಕೆಂದು ಅವರು ಹೊಂಚುಹಾಕಿದರು. ಜಯಪ್ರಕಾಶ ನಾರಾಯಣರು ಸಹಕಾರದ ಕನಿಷ್ಠ ಕಾರ್ಯಕ್ರಮಗಳಿಗೆ ತಳಹದಿಯಾಗಿ ಹದಿನಾಲ್ಕು ಅಂಶಗಳ ಯೋಜನೆಯೊಂದನ್ನು ನೆಹರೂರವರ ಮುಂದಿಟ್ಟರು. ಈ ಯೋಜನೆಯು ಕುರಿತು ನೆಹರೂರವರು ಸ್ವಾಭಾವಿಕವಾಗಿ ಒಳ್ಳೆಯ ಮಾತುಗಳನ್ನು ಆಡಿದ್ದರೂ ಅದನ್ನು ಸ್ವೀಕರಿಸಿ ಬಂಧನವನ್ನೊಪ್ಪಲು ಒಪ್ಪಂಬಡಲಿಲ್ಲ. ಇದು ಯೋಗ್ಯವೇ ಆಗಿದೆ ಏಕೆಂದರೆ, ಈ ಹದಿನಾಲ್ಕು ಅಂಶಗಳ ಯೋಜನೆಯು ಎಷ್ಟು ಗಂಭೀರಸ್ವರೂಪದ್ದಿರುವುದೆಂದರೆ—ರಾಜ್ಯಘಟನೆಗೆ ತಿದ್ದುಪಡಿ ಮಾಡುವುದರಿಂದ ತೊಡಗಿ, ಭೂಮಿಯನ್ನೆಲ್ಲ ರಾಷ್ಟ್ರೀಕರಿಸುವ, ಹೊಲದೊಡೆಯರಿಗೆ ಪರಿಹಾರ ನೀಡಬಾರದೆನ್ನುವ ವರೆಗೆ ಇವುಗಳು ವ್ಯಾಪಕವಾಗಿವೆ. ಒಂದು ದೃಷ್ಟಿಯಿಂದ ನೋಡಿದರೆ, ಈ ಕಾರ್ಯಕ್ರಮಗಳಲ್ಲಿ ಅನುಚಿತವಾದವುಗಳೆಂದು ಎಲ್ಲವನ್ನೂ ತಳ್ಳಿಬಿಡುವುದು ಸಾಧ್ಯವಿಲ್ಲ ಆದರೆ ಇಂಥ ಸಾಹಸದ ಕಾರ್ಯಕ್ರಮಗಳಿಗೆ ಈಗಿನ ಕಾಲ ಪ್ರಶಸ್ತವಾದುದೇ, ಮತ್ತು ಅವು ತೀರಾ ಅನಿವಾರ್ಯವಾದವುಗಳೇ ಎಂದು ಮುಂತಾದ ಸಂಗತಿಗಳನ್ನು ನಿರ್ವಿಕಾರ ಚಿತ್ತದಿಂದ ವಿವೇಚಿಸಿದರೆ— ಪ್ರಜಾ ಸೋಶಲಿಸ್ಟ ಧುರೀಣರು ಒಪ್ಪಿಸಿದ ಯೋಜನೆಯು ಕಾಂಗ್ರೆಸಿಗೆ ಪ್ರಕೃತ ಪರಿಸ್ಥಿತಿಯಲ್ಲಿ ಅಗ್ರಾಹ್ಯವಾಗಿ ಕಂಡು ಬಂದುದು ಸ್ವಾಭಾವಿಕ. ಪಂಚವಾರ್ಷಿಕ ಯೋಜನೆಯನ್ನು ಯಶಸ್ವಿಯಾಗಿಸುವುದಕ್ಕೆ ಕಾಂಗ್ರೆಸಿನೊಡನೆ ಪ್ರಜಾ ಸೋಶಲಿಸ್ಟರು ಯಾವ ರೀತಿ ಸಹಕರಿಸಬಹುದು, ಮತ್ತು ಜಾತೀಯತಾವಾದಿ ಹಾಗು ಕಮ್ಯುನಿಸ್ಟರ ಚಟುವಟಿಕೆಗಳನ್ನು ತಡೆಗಟ್ಟಲು ಏನು ಪಾಯ ಕೈಗೊಳ್ಳಬಹುದು ಎಂದು ಮುಂತಾಗಿ ಯೋಚಿಸುವುದು ನೆಹರೂರವರ ನಿಜವಾದ ಉದ್ದೇಶ. ಇದನ್ನು ತಿಳಿದುಕೊಳ್ಳದೆ ಕನಿಷ್ಠ ಕಾರ್ಯಕ್ರಮದ ಸುದೀರ್ಘ ಪಟ್ಟಿಯನ್ನು ಸಿದ್ಧಗೊಳಿಸಿ ಒಪ್ಪಿಸಲು ಹೊರಟದ್ದು ಪ್ರಜಾ ಸೋಶಲಿಸ್ಟ ಪಕ್ಷದ ದೃಷ್ಟಿಯಿಂದ ಇಷ್ಟವಾದ ಹೆಜ್ಜೆಯಾಗಿದ್ದರೂ—ಉದ್ದೇಶ ಸಾಧನೆಗೆ ಅದು ಪೋಷಕವಾಗುವಂತಿರಲಿಲ್ಲ; ಮತ್ತು ಆಗಲಿಲ್ಲ ಕೂಡ. ನೆಹರೂರವರು ತೋರಿಸಿದ ಉದಾರ ಮನೋಭಾವವನ್ನು ಮೆಚ್ಚುವ ಜನರು ಇದ್ದಂತೆ—ಪಡೆದ ಅನುಭವಕ್ಕಾಗಿ ಖೇದಗೊಳ್ಳುವವರೂ ಇದ್ದಾರೆ. ಸ್ವತಃ ಕಾಂಗ್ರೆಸಿಗರಲ್ಲಿ ಅನೇಕರಿಗೆ ನೆಹರೂರವರು ದುಡುಕಿದರೇ ಎಂಬ ಸಂದೇಹ ಮೂಡಿದೆ. ಇತರ ಪಕ್ಷಗಳ ಸಹಕಾರ ದೊರೆತರೆ ಅದರಿಂದ ಶ್ರೇಯಃಸಾಧನೆಯಾಗುವುದೆಂದೇನು ನಿಯಮವಿದೆಯೆ? ಅಲ್ಲದೆ ಕಾಂಗ್ರೆಸ್ ಕೇಳುವ ಸಹಕಾರವು ಪ್ರಕೃತ ಆಕಾಲಿಕವಲ್ಲವೆ? ಕಾಂಗ್ರೆಸಿನ ಶಕ್ತಿ ಸಾಮರ್ಥ್ಯಗಳಿಗೆ ದರ್ಪಣಪ್ರಾಯವಾಗಿ ಪಂಚವಾರ್ಷಿಕ ಯೋಜನೆಯಿದೆ ಎಂಬುದನ್ನು ತಿಳಿದು ಕಾರ್ಯಾಚರಣೆಯಲ್ಲಿ ಪ್ರವೃತ್ತವಾಗುವುದರಲ್ಲಿಯೇ ಹಿತವಿದೆ. ಕಾಂಗ್ರೆಸಾಧ್ಯಕ್ಷರ ಪ್ರಕೃತದ ವರ್ತನೆಯಿಂದ ಪ್ರಜಾ ಸೋಶಲಿಸ್ಟರ ಪ್ರತಿಷ್ಠೆ ಬೆಳೆಯುವುದಕ್ಕೆ ಆಸ್ಪದ ದೊರೆಯಿತೇ ಹೊರತು—ಕಾಂಗ್ರೆಸಿಗಾಗಲೀ ಸರಕಾರಕ್ಕಾಗಲೀ ಅಧಿಕ ಪ್ರಯೋಜನ ದೊರೆಯಲಿಲ್ಲ. ನೆಹರೂರವರಷ್ಟೆ ವಿಶಾಲವಾದ ಮನೋಭೂಮಿಕೆಯು ಪ್ರಜಾ ಸೋಶಲಿಸ್ಟರಲ್ಲಿ ಇಲ್ಲದಿದ್ದದ್ದು ಇದಕ್ಕೆ ಕಾರಣ. ಕನಿಷ್ಠ ಕಾರ್ಯಕ್ರಮವನ್ನು ಕಾಂಗ್ರೆಸು ಒಪ್ಪಿಕೊಳ್ಳುವ ವರೆಗೆ ಪರಸ್ಪರ ಸಹಕಾರ ಸಾಧ್ಯವಿಲ್ಲವೆಂದು ಪ್ರಜಾ ಸೋಶಲಿಸ್ಟ ಪಕ್ಷ ನಿರ್ಧರಿಸಿದ್ದನ್ನು ನೋಡಿದರೆ—ಕಾಂಗ್ರೆಸಿಗೂ ಈ ಪಕ್ಷಕ್ಕೂ ಸಾಕಷ್ಟು ಮತಭೇದವಿದೆ ಎಂಬುದು ವ್ಯಕ್ತವಾಗುತ್ತದೆ. ಮೇಲಿಂದ ಮೇಲೆ ನೋಡಿದರೆ ಎರಡೂ ಪಕ್ಷಗಳ ಕಾರ್ಯಕ್ರಮಗಳು ಒಂದೇಯಾಗಿ ಕಂಡುಬಂದರೂ ಅವುಗಳನ್ನು ಕಾರ್ಯರೂಪಕ್ಕೆ ಇಳಿಸುವ ಹೆಜ್ಜೆಯಲ್ಲಿ ವ್ಯಾಪಕವಾದ ಅಂತರವಿದೆ ಎಂಬುದು ಈಗ ಸ್ಪಷ್ಟವಾಯಿತು.

—೦—

ರಶಿಯಾ—ಅಮೇರಿಕಾ ಸಂಬಂಧ

ಮಧ್ಯಪೂರ್ವ ಏಷಿಯದ ಬಿಕ್ಕಟ್ಟಿನ ಪ್ರಶ್ನೆಗಳು

ರಶಿಯಾದ ನೂತನ ಸರ್ವಾಧಿಕಾರಿ ಮೆಲೆಂಕೋವರು ಶಾಂತಿ ಧೋರಣವನ್ನು ತಮ್ಮ ಸರಕಾರವು ಅನುಸರಿಸುವುದೆಂದು ಆಶ್ವಾಸನೆ ಕೊಟ್ಟಂದಿನಿಂದ—ರಶಿಯಾ ಅಮೇರಿಕಗಳ ಸಂಬಂಧ ಹೆಚ್ಚು ಸೌಹಾರ್ದಮಯವಾದೀತೆ ಎಂದು ಎಲ್ಲಕಡೆಯೂ ಸ್ವಾಭಾವಿಕವಾಗಿ ಆಶೆ ತುಂಬಿದೆ. ಆದರೆ ಅಮೇರಿಕನ್ನರ ದೃಷ್ಟಿಯು ರಶಿಯಾದ ಮಟ್ಟಿಗೆ (ಮತ್ತು ಕಮ್ಯೂನಿಸ್ಟರ ಹೇಳಿಕೆಯ ಕುರಿತು) ಯಾವಾಗಲೂ ಸಂದೇಹದಿಂದ ಕೂಡಿರುತ್ತದೆ. ಆದುದರಿಂದ ಮೆಲೆಂಕೋವರು ಶಾಂತಿ ಧೋರಣವನ್ನು ತಾವು ಅನುಸರಿಸುವೆವೆಂದು ಲೋಕದ ಮುಂದೆ ಹೇಳಿದ್ದಷ್ಟಕ್ಕೆ ಅದರಿಂದ ಸಂತುಷ್ಟರಾಗುವ ಪರಿಸ್ಥಿತಿ ಅಮೇರಿಕನ್ನರಿಗಿಲ್ಲ. ಸ್ವಾತಂತ್ರ್ಯ, ದಾಸ್ಯದಿಂದ ನಿವೃತ್ತಿ ಮುಂತಾದ ಆಕರ್ಷಕ ಶಬ್ದಗಳಿಗೆ ಕಮ್ಯುನಿಸ್ಟರ ಅರ್ಥಕೋಶದಲ್ಲಿರುವ ವಿವರಣೆ ತೀರಾ ಭಿನ್ನವಿರುವಂತೆ ಶಾಂತಿಯ ಬಗೆಗಾದರೂ ಇಂಥ ವಿಪರೀತಾರ್ಥವಿರಬೇಕೆಂದು ಅಮೇರಿಕನ್ನರ ಹೇಳಿಕೆ ಇದೆ. ಆದುದರಿಂದ ರಶಿಯಾದ ಶಾಂತಿಯು ಯುದ್ಧವನ್ನು ಪ್ರಚೋದಿಸಲಿಕ್ಕೂ ಆಕ್ರಮಣವನ್ನು ಪ್ರೋತ್ಸಾಹಿಸಲಿಕ್ಕೂ ನೆರವಾಗುವುದು ಸಾಧ್ಯವಿದೆ. ಎಂತಲೇ ಮೆಲೆಂಕೋವರು ಮಾತುಗಳಿಂದ ಅಮೇರಿಕನ್ನರ ಸಂಶಯ ಕಲುಷಿತ ಹೃದಯವನ್ನು ಗೆದ್ದುಕೊಳ್ಳಲಾರರೆಂಬುದು ಅತ್ಯಂತ ಸ್ಪಷ್ಟವಾಗಿದೆ.

ಮಾತಿಗಲ್ಲ—ಕೃತಿಗೆ ಮಹತ್ವ

ಈ ಆಶಯನ್ನೆ ಐಸೆನಹಾವರು ತಮ್ಮ ಪತ್ರಿಕಾ ಪರಿಷತ್ತಿನಲ್ಲಿ ಬಿಂಬಿಸಿದರೆನ್ನಲು ಅಡ್ಡಿಯಿಲ್ಲ. ಮೆಲೆಂಕೋವರ ಶಾಂತಿಧೋರಣವು ಕೇವಲ ಬಾಯಿಮಾತಿನಲ್ಲಿ ಉಳಿಯದೆ ನಿಜವಾಗಿಯೂ ಪ್ರಾಮಾಣಿಕವಾಗಿದ್ದರೆ, ಅಷ್ಟರಮಟ್ಟಿಗೆ ಆದರಿಂದ ಹಿತವಿದೆ ಎಂದು ಐಕರು ಹೇಳಿರುವುದು ಗಮನಾರ್ಹವಾಗಿದೆ. ರಶಿಯವು ತನ್ನ ಕೃತಿಗಳ ಮೂಲಕವೇ ಶಾಂತಿಧೋರಣವನ್ನು ವ್ಯಕ್ತಗೊಳಿಸಬೇಕೆಂಬುದಕ್ಕೆ ಈಗ ಹೆಚ್ಚಿನ ಮಹತ್ವ ದೊರೆತಿರುತ್ತದೆ. ಆದರೆ ಬ್ರಿಟನಾಗಲೀ, ಫ್ರಾನ್ಸಾಗಲೀ, ಆ ಮಾತಿಗೆ ಉಳಿದ ಸಣ್ಣ ಪುಟ್ಟ ರಾಷ್ಟ್ರಗಳಾಗಲೀ ರಶಿಯಾದ ಹೇಳಿಕೆಯನ್ನು ಅಮೇರಿಕನ್ನರಷ್ಟು ಸಂದೇಹದಿಂದ ನೋಡುತ್ತಿರದೆ— ಮೆಲೆಂಕೋವರು ಪ್ರಾಮಾಣಿಕವಾದ ಆಶಯವನ್ನೆ ವ್ಯಕ್ತಗೊಳಿಸಿರುವರೆಂದು ನಂಬಿರುವುವು. ಮೆಲೆಂಕೋವರಿಗೆ ಅನುಕೂಲವಾಗಿರುವ ಈ ರಾಷ್ಟ್ರಗಳ ಅಭಿಪ್ರಾಯವು ಅಮೇರಿಕದ ಮೇಲೆ ಸ್ವಲ್ಪ ಮಟ್ಟಿನ ಒತ್ತಾಯವನ್ನು ತಂದರೂ ಆಶ್ಚರ್ಯಪಡಬೇಕಿಲ್ಲ ಆದುದರಿಂದ ಅಮೇರಿಕದ ಅಧ್ಯಕ್ಷರು—ರಶಿಯಾವು ರಾಜಕೀಯ ವಿಧಾನದ ಮೂಲಕ ಏನಾದರೊಂದು ವಿಧಾಯಕ ಕಾರ್ಯಕ್ರಮವನ್ನು ಸೂಚಿಸಿ, ರಶಿಯಾ ಅಮೇರಿಕೆಗಳ ವೈಮನಸ್ಯವನ್ನು ತಗ್ಗಿಸಲು ಬಯಸಿದರೆ, ಅದನ್ನು ಸ್ವಾಗತಿಸಲಾಗುವುದೆಂದು ಮರಳಿ ಹೇಳಿರುವರು. ಆದರೆ ಅಂತಹ ಶಾಂತಿ ಸೂಚನೆಯು ರಶಿಯಾದಿಂದಲೇ ಬರಬೇಕೆಂದು ಐಕರ ಅಭಿಪ್ರಾಯವಿದೆ. ಏಕೆಂದರೆ ರಶಿಯಾವೇ ಈಗ ಮಿದು ಮಾತಿಗೆ ತೊಡಗಿರುವ ರಾಷ್ಟ್ರ. ಅಮೇರಿಕೆಯು ನಿಲುಮೆ ಮೊದಲಿಂದಲೂ ನಿಶ್ಚಿತವಾಗಿತ್ತು.

ನಯವಿದರ ನಡವಳಿಕೆ

ಐಕರು ಕಮ್ಯೂನಿಸ್ಟರ ಮೇಲೆ ಕಿಡಿಕಾರುವುದಿಲ್ಲ; ಅವರನ್ನು ಸಹಾನುಭೂತಿಯಿಂದ ನೋಡುವ ಮನಸ್ಸು ಕೂಡ ತಮ್ಮಲ್ಲಿದೆಂಬುದನ್ನು ತೋರಿಸ ಹತ್ತಿದ್ದಾರೆ ಈ ತೆರನಾದ ಪರಿವರ್ತನೆಗೆ ರಶಿಯಾವು ಶಾಂತಿಯ ಕುರಿತು ಆಡಿದ ಮಾತೇ ತಳಹದಿಯಾಗಿದೆ. ಆದುದರಿಂದ ಕಳೆದ ವಾರ ಜರ್ಮನಿ ಪ್ರದೇಶದಲ್ಲಿ ಅಮೇರಿಕನ್ ಹಾಗೂ ಬ್ರಿಟಿಷ್ ವಿಮಾನಗಳನ್ನು ಹೊಡೆದುರುಳಿಸಿದ ಘಟನೆಯಲ್ಲಿ ಏನೇನೂ ಮಹತ್ವವಿಲ್ಲವೆಂದು ಐಕರು ಹೇಳುವಂತಾಯಿತು. ಅದೊಂದು ಆಕಸ್ಮಿಕ ಘಟನೆ ಎಂದು ಐಕರು ಹಗುರಾಗಿ ತಿಳಿದುಕೊಂಡರು ಹೊರತು ರಶಿಯಾದ ವರ್ತನೆಯಲ್ಲಿ ದುರುದ್ದೇಶವನ್ನು ಆಘ್ರಾಣಿಸಲಿಲ್ಲ. ಐಕರ ಈ ಮಾತಿಗೆ ನಿದರ್ಶನವೋ ಎಂಬಂತೆ ಮರುದಿನವೇ ರಶಿಯಾದ ಕಡೆಯಿಂದ ಬ್ರಿಟನಿಗೆ ಈ ಸಂಗತಿಯಲ್ಲಿ ಒಂದು ಸಂದೇಶ ಕೊಡಲ್ಪಟ್ಟಿತು. ಅದರಲ್ಲಿ ಸೋವಿಯಟ ರಶಿಯಾದ ಇತಿಹಾಸದಲ್ಲಿಯೇ ಮೊದಲ ಸಲವೆಂಬಂತೆ—ವಿಮಾನಗಳು ನಷ್ಟಗೊಂಡು ಅದರಲ್ಲಿರುವ ಎಲ್ಲ ವೈಮಾನಿಕರಿಗೂ ಪ್ರಾಣಹಾನಿಯಾದುದಕ್ಕೆ ವಿಷಾದವನ್ನು ವ್ಯಕ್ತಗೊಳಿಸಿದ್ದರು. ರಶಿಯಾಕ್ಕೆ ತಾನು ಮಾಡಿದ ಕೃತಿಯ ಕುರಿತು ಖೇದವನ್ನು ಪ್ರಕಟಿಸುವ ಅಭ್ಯಾಸವೇ ಈ ಮೊದಲು ಇದ್ದಿರಲಿಲ್ಲ. ಈಗ ನಯವಿದರ ನಡವಳಿಕೆಯನ್ನು ಅದು ಅನುಸರಿಸಿದ್ದು ಮಾತ್ರವಲ್ಲದೆ—ವಿಮಾನ ಅಪಘಾತಗಳನ್ನು ತಡೆಯುವ ಬಗ್ಗೆ ಮಾತುಕತೆಯನ್ನು ಆರಂಭಿಸಿದರಾದೀತೆಂಬ ಸೂಚನೆಯನ್ನೂ ಮಾಡಿದೆ. ಇದು ರಶಿಯಾದ ಮನಃಪರಿವರ್ತನೆಯಾಗಿದೆ ಎಂಬುದಕ್ಕೆ ಸಾಕ್ಷಿ ಎಂದು ಬ್ರಿಟನು ಬಲವಾಗಿ ನಂಬಿದೆ.

ಮಹಾ ಕಾರ್ಯದರ್ಶಿ

ಹೀಗಿದ್ದರೂ ರಶಿಯಾವನ್ನು ಇದ್ದುದಿದ್ದಂತೆ ನಂಬುವ ಬುದ್ಧಿ ಪಶ್ಚಿಮದ ರಾಷ್ಟ್ರಗಳಿಗೆ ಇಲ್ಲವೆಂಬುದನ್ನು ಅವಶ್ಯ ಗಮನಿಸಬೇಕು. ಉದಾಹರಣೆಗಾಗಿ—ಸಂಯುಕ್ತ ರಾಷ್ಟ್ರ ಸಂಘದ ಕಾರ್ಯದರ್ಶಿ

ಸ್ಥಾನಕ್ಕೆ ಈಗ ಯಾರಾದರೊಬ್ಬರನ್ನು— ಐದು ಮಹಾ ರಾಷ್ಟ್ರಗಳಾದ ಅಮೇರಿಕಾ, ಬ್ರಿಟನ್, ಫ್ರಾನ್ಸ್, ರಶಿಯಾ ಮತ್ತು ಚೈನಾ (ರಾಷ್ಟ್ರೀಯ)ಗಳ ಒಮ್ಮತದಿಂದ-ಆರಿಸಬೇಕಾಗಿದೆಯಷ್ಟೆ. ಕೆನಡಾದ ಪಿಯರ್ಸನ್ನರ ಆಯ್ಕೆಯನ್ನು ಭದ್ರತಾ ಮಂಡಳದಲ್ಲಿ ರಶಿಯಾವು ತನ್ನ ವಿಶೇಷಾಧಿಕಾರದಿಂದ ತಡೆದು ಹಿಡಿದುದರಿಂದ, ಮರಳಿ ರಶಿಯಾದ ಮನವೊಲಿಸುವ ಪ್ರಯತ್ನಗಳು ನಡೆದುವು. ಪರಿಣಾಮವಾಗಿ ಭಾರತದ ಶ್ರೀಮತಿ ವಿಜಯ ಲಕ್ಷ್ಮಿ ಪಂಡಿತ ಹಾಗು ಈಗ ಅಂತರರಾಷ್ಟ್ರೀಯ ನ್ಯಾಯಸ್ಥಾನದ ನ್ಯಾಯ ಮೂರ್ತಿಗಳಾಗಿರುವ ಸರ್ ಬೆನಗಲ್ ನರಸಿಂಗರಾಯರನ್ನೊಳಗೊಂಡು ಒಟ್ಟು ಒಂಭತ್ತು ಪ್ರತಿನಿಧಿಗಳ ಹೆಸರಿನ ಪಟ್ಟಿ ಹೊರಬಿದ್ದಿದೆ. ಭಾರತೀಯನೊಬ್ಬನು ಮಹಾಕಾರ್ಯದರ್ಶಿಪದಕ್ಕೆ ಬರುವುದನ್ನು ರಶಿಯಾ ತಡೆಯುವುದಿಲ್ಲೆಂಬ ವಾರ್ತೆ ಇತ್ತು. ಭದ್ರತಾ ಸಮಿತಿಯು ಗೌಪ್ಯವಾಗಿ ಸೇರಿದಾಗ ಶ್ರೀಮತಿ ವಿಜಯಲಕ್ಷ್ಮಿಯವರ ಹೆಸರು ಸೂಚಿಸಲ್ಪಟ್ಟು ಮತದಾನ ನಡೆಯಿತು. ರಶಿಯಾ ಹಾಗು ಲೆಬನಾನಗಳು ಪರವಾಗಿ ಮತ ಕೊಟ್ಟವು. ರಾಷ್ಟ್ರೀಯ ಚೀನಾ ವಿರುದ್ಧ ಮತ ಕೊಟ್ಟಿತು. ಬ್ರಿಟನು ಅಮೇರಿಕಾ, ಫ್ರಾನ್ಸು, ಪಾಕಿಸ್ತಾನ ಮುಂತಾದ ಉಳಿದ ಎಂಟು ರಾಷ್ಟ್ರಗಳು ತಟಸ್ಥ ಉಳಿದವು

ಒಮ್ಮತದ ಆಯ್ಕೆಗೆ ವಿಘ್ನ

ಹೀಗೆ ವಿಜಯಲಕ್ಷ್ಮಿಯವರ ಆಯ್ಕೆಯ ಪ್ರಶ್ನೆ ಮೂಲೆಗೆ ಸರಿದು ನಿಂತಿತು ಆದರೆ ಇದರಿಂದ ಭಾರತಕ್ಕೆ ಆಗಲೀ, ಸ್ವತಃ ಶ್ರೀಮತಿ ಪಂಡಿತರಿಗಾಗಲೀ ಏನೇನೂ ಭೇದವಾಗಿಲ್ಲ. ಏಕೆಂದರೆ ಈ ಹುದ್ದೆಗಾಗಿ ಸ್ಪರ್ಧಿಸುವ ಇಚ್ಛೆಯೇ ಅವರಿಗಿದ್ದಿಲ್ಲ. ಆದರೆ ಈ ಮತದಾನ ನಡೆದುದರಿಂದ ಒಂದು ಸಂಗತಿ ಮಾತ್ರ ಸ್ಪಷ್ಟಗೊಂಡಿದೆ—ಏನೆಂದರೆ ಅಮೇರಿಕನ್ ಬಣವು ತನ್ನ ಕೈಗೊಂಬೆಯಾಗಿ ಕೆಲಸಮಾಡಲಾರದ ರಾಷ್ಟ್ರವೊಂದರ ಪ್ರತಿನಿಧಿಯನ್ನು ಎಂದಿಗೂ ಮೆಚ್ಚುವುದಿಲ್ಲ. ಇದರ ಮೇಲೆ ಶ್ರೀಮತಿ ಪಂಡಿತರು ಹೆಂಗಸೆಂಬ ಕಾರಣವೂ ಹಿನ್ನೆಲೆಯಲ್ಲಿದೆ. ಬ್ರಿಟನು ಅಮೇರಿಕಗಳು ಪ್ರತ್ಯಕ್ಷವಾಗಿ ವಿರುದ್ಧ ಮತ ಕೊಡುವ ದಾಷ್ಟ್ಯವನ್ನು ತೋರಿಸಲಿಲ್ಲ. ಮತದಾನದಲ್ಲಿ ಭಾಗ ವಹಿಸದೆ ಸುಮ್ಮನೆ ಕುಳಿತವು. ರಶಿಯಾವು ತನ್ನ ಮನಸ್ಸಿಗೆ ಬಾರದ ನೇಮಕವನ್ನು ವಿಶೇಷಾಧಿಕಾರದ ಬಲದಿಂದ ತಳ್ಳಿಹಾಕುವ ಅಭ್ಯಾಸ ಇಟ್ಟುಕೊಂಡಿದ್ದರೆ ಅಮೇರಿಕಾ ಬ್ರಿಟನುಗಳು ತಟಸ್ಥವಾಗಿ ಉಳಿದು ನಿಶ್ಚಿತ ಬಹುಮತ ದೊರೆಯದಂತೆ ನೋಡುತ್ತವೆ. ಆ ಎರಡರ ನಡುವೆ ಇರುವ ಭೇದ ಇಷ್ಟೆ! ಈಗ ಇನ್ನೊಂದು ಆಯ್ಕೆಯ ಪ್ರಯತ್ನಗಳು ನಡೆಯುತ್ತಿವೆ. ಯಾರ ಕೊರಳಿಗೆ ಒಮ್ಮತದ ಮಾಲೆ ಬೀಳುವುದೋ ಹೇಳಲು ಬರುವುದಿಲ್ಲ. ಕೋರಿಯಾದಲ್ಲಿ ಎದ್ದಿರುವ ಜ್ವಾಲೆಯ ಕಾರಣದಿಂದಲೇ ಈ ರೀತಿ ಆಯ್ಕೆಗೆ ವಿಘ್ನ ಉಂಟಾಗಿದೆ ಎಂಬುದಂತೂ ಖಂಡಿತ. ಇಲ್ಲದಿದ್ದರೆ ಇಷ್ಟರೊಳಗಾಗಿ ಈ ಸ್ಥಾನ ಭರ್ತಿಯಾಗುತಿತ್ತು.

ಮಧ್ಯ ಪೂರ್ವದಲ್ಲಿ—

ಮಧ್ಯಪೂರ್ವ ಏಶಿಯಾದ ರಾಷ್ಟ್ರಗಳಲ್ಲಿರುವ ಭಾರತೀಯ ರಾಯಭಾರಿಗಳ ಪರಿಷತ್ತೊಂದು ಹೊಸಡಿಲ್ಲಿಯಲ್ಲಿ ಆಯೋಜಿಸಲ್ಪಟ್ಟಿದೆ. ಮಧ್ಯ ಪೂರ್ವ ಸಂರಕ್ಷಣಾ ಯೋಜನೆಯ ಮಾತುಕತೆಗಳು ಕೇಳಿ ಬಂದ ಕ್ಷಣದಿಂದ ಭಾರತವು ಈ ವಿಷಯದಲ್ಲಿ ಸತರ್ಕ ದೃಷ್ಟಿಯನ್ನು ಇಟ್ಟುಕೊಂಡಿರುತ್ತದೆ ಈ ಪ್ರದೇಶದಲ್ಲಿರುವ ಎಲ್ಲ ರಾಷ್ಟ್ರಗಳೂ ಮುಸ್ಲಿಂ ಸಂಪ್ರದಾಯ ಶರಣವಾಗಿವೆ: ಮತ್ತು ಸಂಭವತಃ ಆಂಗ್ಲೊ ಅಮೇರಿಕನ್ ಜಾಲದೊಳಗೆ ಬೀಳಲು ಸಿದ್ಧವಿವೆ. ಆದುದರಿಂದ ಈ ಸಂರಕ್ಷಣಾ ಯೋಜನೆಯು ಮೂಲದಲ್ಲಿ ಧರ್ಮ ದೃಷ್ಟಿಯಿಂದ ಪ್ರೇರಿತಗೊಂಡಿದೆಯೆ, ಅಥವಾ ಆರ್ಥಿಕ ಹಾಗೂ ರಾಜಕೀಯ ಒತ್ತಡಗಳ ಪರಿಣಾಮವಾಗಿ ಈ ಯೋಜನೆಯ ಮಾತು ಕೇಳುತ್ತಿದೆಯೆ ಎಂಬುದನ್ನು ಸ್ಪಷ್ಟವಾಗಿ ತಿಳಿಯುವ ಆವಶ್ಯಕತೆ ಇದೆ. ಇರಾಣದ ಎಣ್ಣೆ ಹಾಗು ಸುಯೇಜ ಕಾಲುವೆಯ ಪ್ರಶ್ನೆಯಂಥ ಗಹನವಾದ ಸಮಸ್ಯೆಗಳು ಇದಕ್ಕೆ ಸಂಬಂಧಿಸಿದಂತಿವೆ. ಮುಸಾದಿಕರು ಆಂಗ್ಲೊ ಅಮೇರಿಕನ್ನರು ಈಚೆಗೆ ಮಾಡಿದ ಹೊಸ ಸೂಚನೆಯನ್ನು ಸಹ ತಿರಸ್ಕರಿಸಿರುವುದರಿಂದ, ಸಮಸ್ಯೆ ಬಗೆ ಹರಿಯುವ ಲಕ್ಷಣವೇನು ತೋರುವುದಿಲ್ಲ. ಬ್ರಿಟನು ತನ್ನ ಹಿತಕ್ಕೆ ಧಕ್ಕೆ ಬಾರದ ರೀತಿಯಲ್ಲಿಯೇ ಹೊಸ ಸೂಚನೆಗಳನ್ನು ಮಾಡಿತ್ತು ಮತ್ತು ಇರಾಣಿಗೆ ಇದು ಅನ್ಯಾಯ ಮಾಡುತ್ತದೆಂಬ ಕಾರಣಕ್ಕಾಗಿಯೇ ಮುಸಾದಿಕರು ಸೂಚನೆಯನ್ನು ತಿರಸ್ಕರಿಸಿದರು. ಸುಯೇಜ ಕಾಲುವೆಯ ಪ್ರಶ್ನೆಯಲ್ಲಿ ಕೂಡ ಆಂಗ್ಲೊ ಅಮೇರಿಕನ್ ಪ್ರತಿಷ್ಠೆಯ ಸಮಸ್ಯೆ ಇದೆ. ಯಾವ ಕರಾರುಗಳಿಲ್ಲದ ಬ್ರಿಟಿಷ ಸೈನ್ಯ ಸುಯೇಜ ಪ್ರದೇಶವನ್ನು ಬಿಟ್ಟು ಹೋಗಬೇಕೆಂದು ರಾಷ್ಟ್ರೀಯ ಮನೋವೃತ್ತಿಯ ಈಜಿಪ್ಟಿಯನರ ಬೇಡಿಕೆ ಇದೆ. ಆದರೆ ಬ್ರಿಟನು ಅಮೇರಿಕೆಗಳು ಈಜಿಪ್ಟವು ಮಧ್ಯ ಪೂರ್ವ ಸಂರಕ್ಷಣಾ ಯೋಜನೆಯಲ್ಲಿ ಸೇರಬೇಕೆಂದು ಇಚ್ಛಿಸುತ್ತವೆ. ಈ ಇಚ್ಛೆಯಂತೆ ಈಜಿಪ್ಟವು ನಡೆದುಕೊಳ್ಳುವುದೆಂದರೆ ಆಂಗ್ಲೊ ಅಮೇರಿಕನ್ ನೊಗಕ್ಕೆ ಹೆಗಲು ಕೊಟ್ಟಂತೆಯೇ ಎಂದು ಬೇರೆ ಹೇಳುವುದನಗತ್ಯ. ಇದಕ್ಕೆ ಒಪ್ಪಿಕೊಂಡದ್ದೇ ಆದರೆ ನಜೀಬರು ತನ್ನ ಜನಪ್ರಿಯತೆಯನ್ನು ಕಳೆದುಕೊಳ್ಳಬೇಕಾಗುವುದಷ್ಟೆ ಅಲ್ಲ. ಈಚೆಗೆ ರಶಿಯಾವು ಮಾಡಿದ "ಗಂಭೀರ ಎಚ್ಚರಿಕೆ"ಯ ಪರಿಣಾಮವನ್ನೂ ಇದಿರಿಸಬೇಕಾದೀತು. ಮಧ್ಯ ಪೂರ್ವ ಸಂರಕ್ಷಣಾಯೋಜನೆಯಂಥ ಯಾವುದೇ ಕ್ರಮದಲ್ಲಿ ಈಜಿಪ್ಟವು ಭಾಗ ವಹಿಸುವುದನ್ನು ರಶಿಯಾ ಸಹಿಸಿ ಸುಮ್ಮನುಳಿಯದೆಂಬ ಮಾತು ವಿಶ್ವಾಸ ನಡೆಯುವುದು ಘೋಕರ ಸಾಹಸಕ್ಕೆ ಆಹ್ವಾನ ಕೊಟ್ಟಂತೆಯೇ

ಮಂಜೂರು— ಪಂಚಾಯತ್ ಬೋರ್ಡಿನ ಅಧ್ಯಕ್ಷಸ್ಥಾನಕ್ಕೆ ತಾ 21ರಲ್ಲಿ ನಡೆದ ಚುನಾವಣೆಯಲ್ಲಿ ಶ್ರೀ M. ನಾರಾಯಣ ಭಟ್ B A.L T.ಯವರು ಬಹುಮತದಿಂದ ಆರಿಸಲ್ಪಟ್ಟರು.

ಚಂದಾಹಣ ಬಾಕಿ ಇರುವವರು ನಾವು ಕಳುಹಿಸುವ ವಿ. ಪಿ.ಯನ್ನು ಮರೆನಾಡಿ ಸಕಾಲದಲ್ಲಿ ಬಿಡಿಸಿಕೊಳ್ಳುವಂತೆ ವಿನಂತಿ

ಮಂಗಳೂರು

ಜಿಲ್ಲಾ ಬೋರ್ಡ್ ಸಭೆ-ಜಿಲ್ಲಾ ಬೋರ್ಡಿನ ಸಭೆಯು ೨ ತಾ. ೩೯ರಲ್ಲಿ ಬೋರ್ಡಿನ ಅಧ್ಯಕ್ಷ ಶ್ರೀ ಬಿ. ಧನಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸೇರಿದಾಗ ಜಿಲ್ಲಾ ಬೋರ್ಡುಗಳಿಗೆ ಮದ್ರಾಸು ಸರಕಾರವು ವಿಶೇಷಾಧಿಕಾರಗಳನ್ನು ನೇಮಿಸುವ ಕುರಿತು ಬೋರ್ಡು ತನ್ನ ಚಿಂತೆಯನ್ನು ವ್ಯಕ್ತಪಡಿಸಿತು. ಈ ವಿಚಾರವು ಪ್ರಜಾಪ್ರಭುತ್ವ ತತ್ವಕ್ಕೆ ವಿರುದ್ಧವಾಗಿದ್ದು ಜನತೆಯ ಹಿತಕ್ಕೆ ಹಾಗೂ ಸ್ಥಳೀಯ ಸಂಸ್ಥೆಗಳ ಒಳ್ಳೆಯ ಆಡಳಿತಕ್ಕೆ ಅಡ್ಡತರುವಂತಹುದಾಗಿದೆ. ಜನಹಿತ ಯೋಜನೆಯ ಕಾರ್ಯವನ್ನು ನೆರವೇರಿಸಕೊಂಡು ಹೋಗಲು ಚುನಾಯಿತ ಸದಸ್ಯರ ಒಂದು ಸಂಸ್ಥೆಯು ಅಗತ್ಯ. ಆದ್ದರಿಂದ ಹೊಸ ಚುನಾವಣೆಗಳಾಗುವ ತನಕ ಈ ಬೋರ್ಡುಗಳ ಅವಧಿಯನ್ನು ಮುಂದುವರಿಸಬೇಕು ಎಂದು ಈ ರಿಜಾ ವಿನಲ್ಲಿ ಕೇಳಿಕೊಳ್ಳಲಾಗಿದೆ.

ಸಂಡೂ, ಬಳ್ಳಾರಿ, ಸಂಡೂ ಆಡಮಾರು ಮತ್ತು ಹಿರಿಯಡ್ಕ ಬೋರ್ಡ್ ಹೈಸ್ಕೂಲುಗಳ ಹೇದೆಗಳ ಸ್ಥಾನಗಳನ್ನು ಕಾಯಂ ಮಾಡಲು ಸಭೆಯು ಒಪ್ಪಿಗೆ ಕೊಟ್ಟಿತು. ಹಾಗೆಯೇ ಹಿರಿಯಡ್ಕ ಹೈಸ್ಕೂಲಿನ ಲೋವರ್ ಡಿವಿಜನ್ ಕ್ಲಾರ್ಕರ ಸ್ಥಾನವನ್ನೂ ಕಾಯಂಗೊಳಿಸಲಾಯಿತು.

ಬೋರ್ಡಿನ ಸಿಬ್ಬಂದಿಯ ಮನೆಬಾಡಿಗೆ ಭತ್ತೆಯನ್ನು ಮುಂದರಿಸಬೇಕೆಂಬ ಠರಾವನ್ನು ಸಭೆಯು ಮಂಜೂರು ಮಾಡಿತು, ಮಂಜೇಶ್ವರದ ಲೋಕಲ್ ಫಂಡ್ ಆಸ್ಪತ್ರೆಯ ದುರಸ್ತಿಗೆ ಹಣ ಮಂಜೂರಾಯಿತು.

ಮಂಗಳೂರು ೨- ಹಾಸನ ರೈಲು ಮಾರ್ಗವನ್ನು ರಚಿಸುವ ಕಾರ್ಯವನ್ನು ಕೇಂದ್ರ ಸರಕಾರವು ಕೈಕೊಳ್ಳಲು ನಿರ್ಧರಿಸಿದ ಬಗ್ಗೆ ಅದಕ್ಕೆ ಧನ್ಯವಾದಗಳನ್ನು ಕೊಡುವ ಠರಾವನ್ನು ಸಭೆಯು ಕೈಗೊಂಡಿತು

ಕೋಡಿ ಬಂಗ್ರಿಯಲ್ಲಿನ ಬೋರ್ಡ್ ಎಲಿಮೆಂಟರಿ ಶಾಲೆಯನ್ನು ಮುಚ್ಚಲು ನಿರ್ಧರಿಸಲಾಯಿತು.

ಮದರಾಸಿನ ಗವರ್ನರರು ಮಂಗಳೂರನ್ನು ಸಂದರ್ಶಿಸುವಾಗ ಅವರಿಗೆ ಮಾನಪತ್ರವನ್ನರ್ಪಿಸಲು ನಿರ್ಧರಿಸಲಾಯಿತು.

ಉಡುಪಿ

ಎಂ. ಆರ್ (ಮಾರುತಿ) ವಾಚನಾಲಯ ಮತ್ತು ಪುಸ್ತಕಾಲಯದ ಆಶ್ರಯದಲ್ಲಿ ಚಾಂದ್ರಮಾನ ಯುಗಾದಿಯ ನಿಮಿತ್ತ ಒಂದು ವಿಶೇಷ ಸಮಾರಂಭವು ಕಟಪಾಡಿ ಶಂಭವ ಸಮೀಪ ಶ್ರೀ ಶ್ರೀನಿವಾಸ ರಾವ್ ಫಲಿಮಾರುರ ಅಧ್ಯಕ್ಷತೆಯಲ್ಲಿ ಜರಗಿತು, ಶ್ರೀ ಎಂ. ವಿ. ಪಡಿಯಾರರು ಸ್ವಾಗತ ಭಾಷಣವನ್ನು ಮಾಡಿದರು ಶ್ರೀ ಗೋಪೀಚಂದರಾಯರು ಸಾಧಕ ಸ್ಥಾಲ ಪಂಚಾಂಗವನ್ನು ಮಾಡಿಕೊಟ್ಟರು. ಶ್ರೀಗಳಾದ ಕೆ. ವಾದಿರಾಜ ಭಟ್, ಶ್ರೀನಾಥ ಆಚಾರ್, ಯು. ಲಕ್ಷ್ಮೀನಾರಾಯಣ ಶೆಣೈ ಇವರ ಭಾಷಣಗಳಾದ ಮೇಲೆ ಶ್ರೀ ಕೆ. ರಾಮಕೃಷ್ಣ ಹೆಬ್ಬಾರರು ಕಾವ್ಯ ವಾಚನವನ್ನು ಮಾಡಿದರು. ತದನಂತರ ಸ್ಥಾಲ್ ದೇ ಮತ್ತು ಬ್ಲಾಕ್ ಮಾರ್ಕೆಟ್ ಎಂಬ ನಾಟಕವು ಅಧ್ಯಕ್ಷರ ಭಾಷಣವಾದ ಮೇಲೆ ಅಭಿನಯಿಸಲ್ಪಟ್ಟಿತು ಧನ್ಯವಾದ ಜನಗಣ ಮನದೊಂದಿಗೆ ಸಭೆ ಮುಕ್ತಾಯವಾಯಿತು ಶ್ರೀ ಕೆ. ವಾಸುಕೃಷ್ಣ ಆಚಾರ್ಯರ ಮೇಳವಾದವೂ ಈ ಸಮಯ ಇದ್ದಿತು.

In the Court of the Subordinate Judge S. K.

O. S. No 1/1953

Bet:

Gregory Pinto — Plaintiff

-vs

Sooramma Shedthi & another-Defendants

To the 2nd Defendant Muddu Shetty son of Sooramma Shedthi residing in Shirva village, Udipi Taluq.

Please take notice that the Plaintiff has filed the above suit for recovery of the sum of Rs 3378—8—0 due by you towards the principal and interest due on a simple mortgage dated 13-9-1945 and that the same stands posted for your appearance in person or by pleader at 11 O'clock on the 15th April 1953.

Cyril Gonsalves,
Advocate for Plaintiff

Mangalore, 24-3-1953.

ಮದುವೆಯಾದ ಸ್ತ್ರೀ ಪುರುಷರ ಸಲುವಾಗಿ
ಬರೆಯಲ್ಪಟ್ಟ ಪುಸ್ತಕ

ಮಿತಸಂತತಿ

ಹುಟ್ಟುವ ಮಕ್ಕಳು ಆರೋಗ್ಯ ಸಂಪತ್ತು ಸೌಭಾಗ್ಯ ಮೊದಲಾದುವನ್ನು ಸಾಕಷ್ಟು ಪಡೆಯುವ ಹಾಗೆ ಹೆತ್ತವರು ಸಾಧಿಸಲಾಗುವಂತೆ ಅತ್ಯನುಕೂಲವಾದ ಪರಿಸ್ಥಿತಿ ಯಾವುದೋ ಅದರಂತೆ ದಂಪತಿಗಳು ಮಕ್ಕಳನ್ನು ಹೆರುವ ಹಾಗೆ ಅವಶ್ಯವಾದ ತತ್ವಗಳನ್ನು ಬೋಧಿಸುವ ನವೀನ ಪುಸ್ತಕ ಬೆಲೆ 0-8 0

ಬರೆಯಿರಿ: ನವಭಾರತ ಪುಸ್ತಕ ಭಂಡಾರ, ಉಡುಪಿ.

ಇಂದಿನವರೆಗೆ ತಯಾರಾದ ಕನ್ನಡ ಚಿತ್ರಗಳು ಮುಂದಿನ ದಿಕ್ಕು ಕಾಣದೆ ಮೂಲೆ ಸೇರಿದುವಂತೆ— ಕಾರಣ ಕನ್ನಡದ ಕೀರ್ತಿ ಹೆಚ್ಚಿಸಿದ ಖ್ಯಾತಿಯಿಂದು ಗುಬ್ಬಿ ಕರ್ನಾಟಕ ಪ್ರೊಡಕ್ಷನ್ಸ್ ನವರ ಗುಣಸಾಗರಿಗೆ ಸಂದಿದಂತೆ.

ಗುಣಸಾಗರಿ (ಕನ್ನಡ ಚಿತ್ರ)

ಜಿ. ಎಚ್. ವೀರಣ್ಣ, ಸಿ. ಹೊನ್ನಪ್ಪ, ಟಿ. ಎಸ್. ಬಾಲಯ್ಯ, ಜಯಮ್ಮ, ಪಂಡರೀಬಾಯಿ, ಕೃಷ್ಣಕುಮಾರಿ ಮೊದಲಾದವರು.

ತಾ. **3—4—1953** ರಿಂದ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಪ್ರಿಂಟಿಂಗ್ ಮೆಶೀನ್ ಮಾರಾಟಕ್ಕಿದೆ

ನಾವು ಹೊಸ ಪ್ರಿಂಟಿಂಗ್ ಮೆಶೀನ್ ತರಿಸಿದುದರಿಂದ, ನಮ್ಮ ಹಳೆಯ ಚಾಲೂ ಸ್ಥಿತಿಯಲ್ಲಿರುವ ಕ್ರೌನ್ ಸೈಜಿನ ಸಿಲಿಂಡರ್ ಪ್ರಿಂಟಿಂಗ್ ಮೆಶೀನು ಮಾರಾಟಕ್ಕಿದೆ.

ನವಯುಗ ಪ್ರೆಸ್, ಉಡುಪಿ.

(೫ನೇ ಪುಟದಿಂದ)

"ಬೇಗನೇ', ತನ್ನ ನಿರ್ಣಯವನ್ನು ಪ್ರಕಟಪಡಿಸುವುದೆಂದು ಹೇಳುತಿದ್ದರೂ ಇನ್ನೂ ಈ ಬಗ್ಗೆ ಯಾವುದೂ ನಿಶ್ಚಯವಾದ ಅಧಿಕೃತ ವಾರ್ತೆಯಿಲ್ಲ. ಕಳೆದ ವಾರ ಪಾರ್ಲಿಮೆಂಟಿನಲ್ಲಿ ಕಟಜೂರವರು ಇತ್ತ ಹೇಳಿಕೆಯನ್ನು ನೋಡಿದರೆ, ಸರಕಾರವು ವಾಂಚೂವರದಿಗಿಂತ ತೀರ ಭಿನ್ನವಾದ ಸ್ವತಂತ್ರ ನಿರ್ಣಯಗಳನ್ನು ತೆಗದುಕೊಳ್ಳುವ ಸಂಭವವೇ ಹೆಚ್ಚು. ಇದನ್ನು ಆಧರಿಸಿ ಬಂದ ಸಮಾಚಾರಗಳಂತೆ-ಮದ್ರಾಸಿನ ಪ್ರಶ್ನೆಯನ್ನು ಸಂಪೂರ್ಣ ಬಿಟ್ಟುಕೊಟ್ಟು ಆಂಧ್ರಪ್ರಾಂತ ಜನನಕ್ಕೆ ಬರುತ್ತದೆ. ಆಂಧ್ರಕ್ಕೆ ಸೇರಿದ ನಿರ್ವಿವಾದ ಪ್ರದೇಶದೊಳಗಿಂದಲೇ ರಾಜಧಾನಿಯ ಆಯ್ಕೆ ನಡೆಯುತ್ತದೆ. ಆಂಧ್ರದ ಶಾಸನ ಸಭಾಸದಸ್ಯರೇ ತಮ್ಮಲ್ಲಿ ಪರ್ಯಾಲೋಚಿಸಿ ಈ ರಾಜಧಾನಿಯನ್ನು ನಿರ್ಧರಿಸಬೇಕು. ಬಳ್ಳಾರಿ ಜಿಲ್ಲೆಯನ್ನು ಇಡಿಯಾಗಿ ಆಂಧ್ರಕ್ಕೆ ಸೇರಿಸದೆ ಪ್ರಕೃತ ಆಂಧ್ರಪ್ರದೇಶಕ್ಕೆ ಒತ್ತಾಗಿರುವ ಮೂರು ತಾಲೂಕುಗಳನ್ನು ಮಾತ್ರ ಸೇರಿಸುವರು. ಬಳ್ಳಾರಿಯ ಉಳಿದ ಭಾಗ ಮದ್ರಾಸದಲ್ಲಿ ಉಳಿಯುವ ಸಂಭವವೂ ಕಡಿಮೆ. ಅದು ಮೈಸೂರಿನೊಂದಿಗೆ ಸಮಾವೇಶಗೊಳ್ಳುತ್ತದೆ. ಇದು ಅಖಂಡಕರ್ನಾಟಕಪ್ರಾಂತ ರಚನೆಗೆ ಸಹಾಯಕವಾದ ಹೆಜ್ಜೆ ಎನ್ನುವ ಜನರೂ ಇದ್ದಾರೆ. ರಾಷ್ಟ್ರಾಧ್ಯಕ್ಷರ ಆಡಳಿತೆಯ ಸಂಭವವೂ ಕಡಿಮೆ. ದೃಢವಾದ ಸರಕಾರದ ಸ್ಥಾಪನೆಯಾಗುವ ಸಾಧ್ಯಾಸಾಧ್ಯತೆಯನ್ನು ಈಗ ಪರಿಶೀಲಿಸುತ್ತಿರುವರು. ಸಂಜೀವ ರೆಡ್ಡಿಯವರನ್ನು ಆಂಧ್ರ ಪ್ರದೇಶದ ಕಾಂಗ್ರೆಸ ಶಾಸನಸಭಾ ಸದಸ್ಯರು ತಮ್ಮ ಧುರೀಣರನ್ನಾಗಿ ಆರಿಸಿಕೊಂಡಿದ್ದು — ಪ್ರಜಾಪ್ರಭುತ್ವದಲ್ಲಿ ವಿಶ್ವಾಸವುಳ್ಳ ಇತರ ಪಕ್ಷಗಳ ಸಹಕಾರ ಪಡೆಯುವ ಪ್ರಯತ್ನಗಳು ಈಗ ನಡೆಯುತ್ತಿವೆ. ಮದ್ರಾಸು ಹೈಕೋರ್ಟಿನ ಅಧಿಕಾರ ವ್ಯಾಪ್ತಿಯನ್ನು ಆಂಧ್ರಕ್ಕೆ ವಿಸ್ತರಿಸುವ ವಿಚಾರ ಕೇಂದ್ರಕ್ಕಿದೆ. ಪೂರ್ವ ಪಂಜಾಬದ ಗವರ್ನರರಾಗಿದ್ದ ಚಂದೂಲಾಲ ತ್ರಿವೇದಿಯವರ ನೆರವಿನಿಂದ ಆಂಧ್ರದ ಸಮಸ್ಯೆಯನ್ನು ಸಮಾಧಾನಕರವಾಗಿ ಬಿಡಿಸುವ ಪ್ರಯತ್ನವೂ ನಡೆದಿದೆ ಎಂದು ಕೇಳುತ್ತೇವೆ

—:೦:—

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. P. 9/1953

ಅರ್ಜಿದಾರಳು ಕಾವೇರಮ್ಮ
ಎದುರು ಇಲ್ಲ.

ಕುಂದಾಪುರ ತಾಲ್ಲೂಕು ಕೋಟೇಶ್ವರ ಗ್ರಾಮದಲ್ಲಿರುವ ತಂತ್ರಿ ಕೋಟೇಶ್ವರ ಭಟ್ಟರವರ ವಿಧವೆ ಕಾವೇರಮ್ಮನು ಈ ಮೂಲಕ ತಿಳಿಯಪಡಿಸುವುದೇನೆಂದರೆ-

ಅರ್ಜಿದಾರಳ ಮೃತ ಮಗಳು ಪದ್ಮಾವತಿ ಅಮ್ಮನ ಗಂಡ ಸುಬ್ರಾಯಭಟ್ಟರು ಓರಿಯಂಟಲ್ ಗವರ್ನಮೆಂಟು ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್‌ನಲ್ಲಿ ಪೋಲಿಸಿ ನಂಬ್ರ 420329ನೇಗೆ ಡಿಪೋಜಿಟನಲ್ಲಿರುವ ರೂ. 761-0-0ನ್ನು ಪಡಕೊಳ್ಳುವ ಬಗ್ಗೆ ಅರ್ಜಿದಾರಳ ಹೆಸರಿಗೆ ಸಾಕ್ಸೆಸ್ ಸರ್ಟಿಫಿಕೇಟು ಕೊಡಿಸಬೇಕೆಂತ ಅರ್ಜಿದಾರಳು ದಾಖಲು ಮಾಡಿದ ಮೇಲಿನ ಅರ್ಜಿಯು ತಾ 30 3 53ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ವಿವಾದವೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಹಗಲು 11 ಗಂಟೆಗೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಲ್ಪಟ್ಟಿದೆ.

N. S. Parameshwariah
Advocate for Petr.
Coondapoor: Date 15—3—1953.

ಮಂಗಳೂರು

ಪ್ರಾಂತಿಕ ಶಿಕ್ಷಣ ಸಮ್ಮೇಳನ- ಮದ್ರಾಸ್ ಪ್ರಾಂತಿಕ 43ನೇ ಶಿಕ್ಷಣ ಸಮ್ಮೇಳನವು ಬರುವ ಮೇ ತಿಂಗಳ 7ಕ್ಕೆ ಕೆನರಾ ಹೈಸ್ಕೂಲಿನಲ್ಲಿ ಜರಗಲಿರುವುದೆಂದೂ ಇದರ ಉದ್ಘಾಟನೆ ಮಾಡಲು ಮೈಸೂರಿನ ಮುಖ್ಯ ಮಂತ್ರಿ ಹನುಮಂತಯ್ಯನವರು ಒಪ್ಪಿರುವರೆಂದೂ ಮದ್ರಾಸ್ ಕ್ರಿಶ್ಚಿಯನ್ ಹೈಸ್ಕೂಲಿನ ಮುಖ್ಯಾಧ್ಯಾಪಕ ಶ್ರೀ ಕುರುವಿಲ ಜಕೋಬ್ ಅವರು ಅಧ್ಯಕ್ಷರಾಗುವರೆಂದೂ ನಿಶ್ಚಿತ ದಿನಗಳನ್ನು ಹಿಂದಿನಿಂದ ತಿಳಿಸಲಾಗುವುದೆಂದೂ ಸ್ವಾಗತ ಸಮಿತಿಯ ಕಾರ್ಯದರ್ಶಿ ಶ್ರೀ ಯು. ಶ್ರೀನಿವಾಸ ಕಿಣಿಯವರು ತಿಳಿಸುತ್ತಾರೆ.

ಬಟ್ಟೆ ಅಂಗಡಿಗೆ ಲೈಸೆನ್ಸ್—ನೂಲಿನ ಮತ್ತು ಮಿಲ್ ಬಟ್ಟೆಯ ಎಲ್ಲಾ ವ್ಯಾಪಾರಸ್ಥರು ಎಂದಿನಂತೆಯೇ ಎಪ್ರಿಲ್ ತಿಂಗಳಾರಂಭದಿಂದ ಒಂದು ವರ್ಷದ ಲೈಸನ್ಸನ್ನು ಪುನಃ ಪಡೆಯಬೇಕು. ಈ ತಿಂಗಳಾಂತ್ಯದೊಳಗೆ ಹೊಸ ಲೈಸನ್ಸಿಗಾಗಿ ಜಿಲ್ಲಾ ಕಲೆಕ್ಟರಿಗೆ ಅರ್ಜಿ ಮಾಡಬೇಕು, ಅರ್ಜಿಯೊಡನೆ ತಮ್ಮ ಹಳೆಯ ಲೈಸನ್ಸನ್ನೂ ಲೈಸನ್ಸ್ ರಿನ್ಯೂವಲ್ ಫೀಸಾಗಿ ನೂಲಿನವ್ಯಾಪಾರಸ್ಥರು ರೂಪಾಯಿ 100ರ, ಬಟ್ಟೆ ವ್ಯಾಪಾರಸ್ಥರು ರೂ 25ರ ಚಲನನ್ನು ಲಗ್ತೀಕರಿಸತಕ್ಕದ್ದು. ಒಂದು ವರ್ಷಕ್ಕಿಂತ ಕಡಿಮೆ ಅವಧಿಗೆ ಲೈಸನ್ಸು ಕೊಡಲಾಗುವುದಿಲ್ಲವಾದುದರಿಂದ ರಿನ್ಯೂವಲ್ ಫೀಯನ್ನು ಸಂಪೂರ್ಣವಾಗಿ ಕೊಡಬೇಕು ಎಂದು ಜಿಲ್ಲಾ ಕಲೆಕ್ಟರು ತಿಳಿಸುತ್ತಾರೆ

ಶ್ರೀ. ಡೇ ಅವರ ಆಗಮನ—ಸಮಾಜ ಕಲ್ಯಾಣ ಯೋಜನೆಯ ಗೌ. ಡೈರೆಕ್ಟರರೂ ಪ್ರಸಿದ್ಧ ಇಂಜನೀಯರರೂ ಆದ ಶ್ರೀ. ಡೇ ಅವರು ಡಿಲ್ಲಿಯಿಂದ ನಮ್ಮಜಿಲ್ಲೆಗೆ ಬಂದಿದ್ದು ಸ್ಥಳೀಯ ಅಧಿಕಾರಿ ಹಾಗೂ ಕಾರ್ಯಕರ್ತರೊಡನೆ ವಿಚಾರ ವಿನಿಮಯ ಮಾಡಿ ಮಡಿಕೇರಿಗೆ ತೆರಳಿರುತ್ತಾರೆ.

ಜಿಲ್ಲಾ ಕಲೆಕ್ಟರ್ ಶ್ರೀ ಸಿ. ಎ. ರಾಮಕೃಷ್ಣನ್, ಶ್ರೀ ಕೆ. ಸದಾನಂದ ಹೆಗ್ಡೆ, ಎಂ. ಪಿ. ಶ್ರೀ. ಬಿ. ಮಂಜಯ್ಯ ಹೆಗ್ಡೆ, ಶ್ರೀ ಕೆ. ಪಿ. ಮುಕುಂದ ಪ್ರಭು, ರಾವ್ ಸಾಹೇಬ್ ರಂಗನಾಥಪೂಂಜ ಮೊದಲಾದವರು ಯೋಜನೆಯ ಕೆಲಸಗಳನ್ನು ಇನ್ನೂ ಅಭಿವೃದ್ಧಿಗೆ ತರುವಂತ ಕೆಲವು ಸೂಚನೆಗಳನ್ನಿತ್ತರು.

ಮಿಲಿಟರಿ ಶಿಕ್ಷಣ—ಇಲ್ಲಿಯ N. C. C. ಯ ನೇತೃತ್ವದಲ್ಲಿ ಇದೇ ಬರುವ ಮೇ ತಿಂಗಳಲ್ಲಿ ಮಿಲಿಟರಿ ಶಿಕ್ಷಣ ಕೇಂದ್ರವೊಂದನ್ನು ತೆರೆಯಲಾಗುವುದೆಂದೂ ಇದಕ್ಕೆ ಹೈಸ್ಕೂಲ್, ಕಾಲೇಜ್ ವಿದ್ಯಾರ್ಥಿಗಳನ್ನು ಮಾತ್ರ ಸೇರಿಸಿಕೊಳ್ಳಲಾಗುವುದೆಂದೂ ಆಹಾರ ವ್ಯವಸ್ಥೆಯನ್ನು ಅವರವರೇ ನೋಡಿಕೊಳ್ಳಬೇಕಾಗುವುದೆಂದೂ ತಿಳಿದು ಬರುತ್ತದೆ. ಹೆಚ್ಚಿನ ಮಾಹಿತಿಯನ್ನು ಗವರ್ನಮೆಂಟ್ ಆರ್ಟ್ಸ ಕಾಲೇಜಿನ N. C. C. ಆಫೀಸಿನಿಂದ ತಿಳಿದು ಕೊಳ್ಳಬಹುದಾಗಿದೆ.

85ಗಂಟೆ ಅವಿರತ ಸೈಕಲ್ ಸವಾರಿ— ಮುಂಬಯಿಯ ಜಿ. ಹೈದರಾಲಿಖಾನ್ ಎಂಬವರು ಕೇಂದ್ರಮೈದಾನಿನಲ್ಲಿ ಸ್ಪೋರ್ಟ್ಸ್ ಪೆವಿಲಿಯನಿನ ಎದುರು ಭಾಗದಲ್ಲಿ ತಾ. 19ನೇ ಬೆಳಿಗ್ಗೆ 6ಗಂಟೆಯಿಂದ 22ನೇ ಸಂಜೆವರೆಗೆ ಹಗಲು ರಾತ್ರೆ ಎಡೆಬಿಡದೆ 85ಗಂಟೆ ಕಾಲ ಸೈಕಲ್ ಸವಾರಿ ಮಾಡುವ ಪ್ರದರ್ಶನವೊಂದನ್ನು ಮಾಡಿರುತ್ತಾರೆ. ವಾಹನಗಳನ್ನು ಸವಾರಿ ಮಾಡುವಾಗಲೇ ಊಡಿಯುತ್ತಿದ್ದರು, ಮೂತ್ರ ವಿಸರ್ಜನೆಯನ್ನು ಕೂಡ ಒಂದು ರಬ್ಬರ್ ಟ್ಯೂಬ್ ಮೂಲಕ ಮಾಡುತ್ತಿದ್ದರೆನ್ನಲಾಗಿದೆ. ನಿದ್ರಾಹಾರಗಳಿಲ್ಲದ ಈ ಸಾಹಸವು ಪ್ರದರ್ಶನವನ್ನು ನೋಡಲು ದಿನನಿತ್ಯ ಸಾವಿರಾರು ಜನರು ಸೇರುತ್ತಿದ್ದರು. ಟಿಕೇಟುಗಳಿಲ್ಲದಿದ್ದರೂ ಪ್ರೇಕ್ಷಕರು ತಾವಾಗಿ ಹಣವನ್ನು ಕೊಡುತ್ತಿದ್ದರು, ಇದು ದಿನಂಪ್ರತಿ ನೂರಾರು ರೂಪಾಯಿಗಳಾಗುತ್ತಿತ್ತೆಂದು ತಿಳಿದು ಬರುತ್ತದೆ. ರಾತ್ರಿ ಸೈಕಲ್ ಸವಾರಿ ಮಾಡುತ್ತಿದ್ದ ವೃತ್ತದ ಸುತ್ತಲೂ ಲೈಟಿನ ವ್ಯವಸ್ಥೆ ಮಾಡಲಾಗಿತ್ತು.

ಡಾ. ರೈಗಳ ಆಗಮನ - ಮದ್ರಾಸಿನ ಬರ್ನಾರ್ಡ್ ಇನ್ಸ್ಟಿಟ್ಯೂಟ್ ಆಫ್ ರೇಡಿಯೋಲಜಿಯ ಡೈರೆಕ್ಟರರಾದ ಡಾ. ಕೆ. ಎಂ ರೈಗಳು ಖಾಸಗಿ ಕೆಲಸದ ನಿಮಿತ್ತ ಇದೇ ತಾ. 21 ನೇ ಸಂಜೆ ವಿಮಾನ ಮೂಲಕ ಇಲ್ಲಿಗೆ ಬಂದಿದ್ದು ತಾ 24ರಲ್ಲಿ ಹಿಂತೆರಳಿರುತ್ತಾರೆ.

ಶ್ರೀ ಕಿಲ್ಲೆಯವರ ಆರೋಗ್ಯ ವಿಚಾರ — ಸರ್ವೋದಯ ಪತ್ರಿಕೆಯ ಸಂಪಾದಕರೂ ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರಲ್ಲೊಬ್ಬರೂ ಆದ ಶ್ರೀ ಎನ್ ಎಸ್. ಕಿಲ್ಲೆಯವರು ಒಂದೆರಡು ತಿಂಗಳಿಂದ ಕಾಯಿಲೆ ಬಿದ್ದಿದ್ದು ಅವರನ್ನು ಚಿಕಿತ್ಸೆಗಾಗಿ ಮದ್ರಾಸಿಗೆ ಕೊಂಡೊಯ್ಯಲಾಗಿತ್ತಷ್ಟೆ! ಅಲ್ಲಿ ಜನರಲ್ ಹೊಸ್ಪಿಟಲಿನಲ್ಲಿ ತಜ್ಞ ಡಾಕ್ಟರರಿಂದ ರೋಗಪರಿಶೀಲನೆ ನಡೆದು ಚಿಕಿತ್ಸೆಯ ಸರ್ವ ಪ್ರಯತ್ನಗಳು ನಡೆದರೂ ಬೇಗನೆ ಸಂಪೂರ್ಣ ಗುಣವಾಗುವುದು ಕಷ್ಟಸಾಧ್ಯವೆಂದು ತಿಳಿದು ಬರುತ್ತದೆ. ಅವರು ಬೇಗನೆ ಊರಿಗೆ ಬರುವ ಸಂಭವವಿದೆಯೆಂದು ಕೇಳುತ್ತೇವೆ

ಪೊಳಲಿ- ಶ್ರೀ ರಾಜರಾಜೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಜರಗುವ ಕಾಲಾವಧಿ ಉತ್ಸವಗಳು ಇದೇ 14 ರಲ್ಲಿ ಪ್ರಾರಂಭವಾಗಿ ಇದೇ ತಾ 28 ಮತ್ತು ಎಪ್ರಿಲ್ 3ಕ್ಕೆ ದಂಡಮಾಲೋತ್ಸವಗಳೂ ತಾ 6ಕ್ಕೆ ಚೆಂಡಾಟ ಪ್ರಾರಂಭವಾಗಿ ತಾ 19ಕ್ಕೆ ಚಂದ್ರ ಮಂಡಲೋತ್ಸವವೂ 10ಕ್ಕೆ ಕಡೆ ಚೆಂಡು, 11ಕ್ಕೆ ಮಹಾರಥೋತ್ಸವವೂ ಜರಗಲಿದೆ

ಕುಳಾಯಿ- ಪಂಚಾಯತ ಬೋರ್ಡು ಅಧ್ಯಕ್ಷ ಚುನಾವಣೆಯು ತಾ. 17ರಲ್ಲಿ ಜರಗಿ ಶ್ರೀ ನರಸಿಂಹಾಚಾರ್ಯರು ಆರಿಸಲ್ಪಟ್ಟಿದ್ದಾರೆ.

ನೀಲಾವರ- ಮಹಿಷಮರ್ದಿನಿ ಅಮ್ಮನವರ ರಥೋತ್ಸವಾದಿಗಳು ಇದೇ ತಾ 29ರಿಂದ ಬರುವ ತಾ 4ರ ವರೆಗೆ ಜರಗಲಿವೆ ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಕುಂಬಳೆ- ತಾ 21 ರಂದು ಮಾರ್ಕೆಟಿಗೆ ಸಮೀಪವಿರುವ ಓಲೆ ಮಾಡಿನ 6 ಅಂಗಡಿಗಳು ಬೆಂಕಿ ಬಿದ್ದು ಸುಟ್ಟುಹೋಗಿ ಸುಮಾರು ಐದು ಸಾವಿರ ರೂಪಾಯಿ ನಷ್ಟವಾದೀತೆಂದು ಹೇಳಲಾಗಿದೆ.

ಬಂಟ್ವಾಳ ಹೊಳೆಗೆ ಕಟ್ಟುಕಟ್ಟುವ ಕುರಿತು ತಾ 19ರಂದು ಪುತ್ತೂರು ಆರ್ ಡಿ ಓ ವೆಂಕಟಾಚಲ ನಾಯ್ಡು ಅವರ ಅಧ್ಯಕ್ಷತೆಯಲ್ಲೊಂದು ಸಭೆ ಜರಗಿತು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. O. 183/1950. S. E. P. 709/1952.

ಮುತ್ತಯ್ಯ ಸೆಟ್ಟಿ. ವಾದಿ.
ರಾಮು ಪೂಜಾರಿ. ಪ್ರತಿವಾದಿ

ಪ್ರತಿವಾದಿ ರಾಮು ಪೂಜಾರಿ ಹಳೆಪೈಕ ಚಿಕ್ಕಿ ಹೆಂಗ್ಸಿನ ಮಗ ಕುಂದಾಪುರ ತಾಲ್ಲೂಕು ವಂಡ್ಸೆ ಗ್ರಾಮ ಪೋಸ್ಟು ವಂಡ್ಸೆ ಇವರಿಗೆ-

ವಾದಿಯು ಮೇಲ್ಕಂಡ ಡಿಕ್ರಿ ಹಣಗಳ ವಸೂಲಿ ಬಗ್ಗೆ ಪ್ರತಿವಾದಿ ಯಕ್ಕನ ಬಾಬ್ತು ಚರ ಸೊತ್ತುಗಳನ್ನು ಜಪ್ತಿ ಮಾಡಿಸಿ ಲೈಲಾಮಿಗೆ ಅಪೇಕ್ಷಿಸಿ ಸದ್ರಿ ಅಮ್ಲಜ್ಯಾರಿ ನಡಿರುವುದರಿಂದ ಸದ್ರಿ ಅಮ್ಲ ಜ್ಯಾರಿಯಲ್ಲಿ ದಾಖಲ್ಲು ಆದ ಯೇಲಂ ಯಿಸ್ತಿಹಾರಿನ ಶರ್ತ ನಿರ್ಣಯದ ಬಗ್ಗೆ ತಾರೀಕು 28—3—1953 ಕ್ಕೆ ಸದ್ರಿ ಕೋರ್ಟಿನಲ್ಲಿರುವುದರಿಂದ ಆ ಕುರಿತು ನಿಮ್ಮದೇನಾದ್ರು ಆಕ್ಷೇಪವಿದ್ದಲ್ಲಿ ಸದ್ರಿ ದಿವಸ ಹಗಲು 11 ಗಂಟೆಗೆ ಯಿ ಕೋರ್ಟಿನಲ್ಲಿ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಯೇಕ ಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸಲಾಗುತ್ತದೆ.

K. Raghunatha Shenai
Pleader for Petr.
Coondapoor, Date 23—3—1953.

ಉಡುಪಿ

ಭಾಷಣ— ಮುಂಬಯಿಯ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಸಂಬುದ್ಧಾನಂದರು ತಾ 24ನೇ ಸಂಜೆ ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ಉಪನ್ಯಾಸ ಭವನದಲ್ಲಿ ಹಿಂದೂ ಧರ್ಮದ ಕುರಿತು ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ಪ್ರಾರಂಭದಲ್ಲಿ ಮಂಗಳೂರಿನ ಸ್ವಾಮಿ ಆದಿದೇವಾನಂದರು ಸ್ವಾಮಿ ಸಂಬುದ್ಧಾನಂದರ ಪರಿಚಯವನ್ನು ಮಾಡಿಸಿಕೊಟ್ಟರು. ಸ್ವಾಮೀಜಿಯವರು ತಮ್ಮ ಭಾಷಣದಲ್ಲಿ ಹಿಂದೂ ಧರ್ಮದ ಹಿರಿಮೆಯನ್ನು ವಿಶದೀಕರಿಸಿದರು. ಆಧ್ಯಾತ್ಮಕ್ಷೇತ್ರದಲ್ಲಿ ಉಜ್ವಲ ಪರಂಪರೆಯನ್ನು ಕಾಯ್ದುಕೊಂಡು ಬಂದುದರಿಂದಲೇ ಭಾರತವು ಸರ್ವ ಶ್ರೇಷ್ಠವೆನಿಸಿದೆ ಎಂದು ಚೆಲೋದಾಗಿ ಸಮರ್ಥಿಸಿದರು. ಭಾರತೀಯರ ವೇದಾಂತ ಧರ್ಮವು ಪ್ರತಿಯೊಬ್ಬನಿಗೂ ಆಚರಣೀಯವಾಗಿದೆ ಎಂದು ಪ್ರತಿಪಾದಿಸಿದರು. ಭಾರತೀಯರು ತಮ್ಮ ಶ್ರೇಯಃ ಸಾಧನೆಗಾಗಿ ಅಮೇರಿಕಾ ಮುಂತಾದ ಪಾಶ್ಚಾತ್ಯ ರಾಷ್ಟ್ರಗಳ ಕಡೆಗೆ ನೋಡುವ ಮತ್ತು ಅವರನ್ನು ಅನುಕರಿಸುವ ಆಗತ್ಯವಿಲ್ಲೆಂದು ಒತ್ತಿಹೇಳಿದರು. ಧರ್ಮವು ಒಳ್ಳೆಯದನ್ನು ಎತ್ತಿ ಹಿಡಿಯುವುದೆಂದೂ ಸತ್ಯವೇ ಅದಕ್ಕೆ ಆಧಾರಭೂತವೆಂದೂ ವರ್ಣಿಸಿದರು. ಧರ್ಮವು ನಮ್ಮ ನಡವಳಿಕೆಯನ್ನೂ ಶೀಲವನ್ನೂ ತಿದ್ದಿ ಉತ್ತಮ ಮಾನುಷ್ಯನಾಗಿಸುವುದೆಂದೂ ರಾಷ್ಟ್ರದ ಸತ್ವ ಜೀವಾಗಿ ಬಾಳುವುದನ್ನು ಕಲಿಸುವುದೆಂದೂ ಸ್ವಾಮೀಜಿ ಹೇಳಿದರು. ಭಾರತದ ರಾಜಕೀಯ ಧುರೀಣರು ನಮ್ಮ ವೇದಾಂತ ಧರ್ಮದ ಬಗ್ಗೆ ಶ್ರದ್ಧೆ ತೋರಿಸದಿರುವುದಕ್ಕೆ ಸ್ವಾಮೀಜಿ ವಿಷಾದಪಟ್ಟರು. ನಮ್ಮ ಶಿಕ್ಷಣ ಪದ್ಧತಿಯಲ್ಲಿ ಧಾರ್ಮಿಕ ಶಿಕ್ಷಣಕ್ಕೆ ಯೋಗ್ಯ ಸ್ಥಾನ ದೊರೆಯಬೇಕೆಂದು ಅವರು ಅಪೇಕ್ಷಿಸಿದರು. ಧರ್ಮವು ಆಚರಣೆಯಲ್ಲಿನ ಸದಾಚಾರ ಸದ್ವಿಚಾರಗಳ ಮಾರ್ಗ ಹಿಡಿದೇ ನಾವು ಪರಮಾತ್ಮನ ಕೃಪೆಯನ್ನು ಹೊಂದಬಲ್ಲೆವೆಂದು ಸ್ವಾಮೀಜಿ ಸಾರಿದರು. ವಿಜ್ಞಾನವು ವಿಶ್ವಶಕ್ತಿಯೆಂದು ಕರೆಯುವ ಪರಮಾತ್ಮ ಚೈತನ್ಯದೊಡನೆ ನಾವು ನಿಕಟಸಂಬಂಧ ಬೆಳೆಸಿಕೊಂಡಲ್ಲಿ—ಪರಮಾತ್ಮನು ನಮ್ಮ ಪ್ರಾರ್ಥನೆಯನ್ನು ಮನ್ನಿಸುವನು. ಭಾರತವು ವಿಶ್ವಕ್ಕೆ ಈ ಸಂದೇಶವನ್ನು ನೀಡಿದೆ, ಎಂದು ಹೇಳಿ ಸ್ವಾಮೀಜಿ ಭಾಷಣವನ್ನು ಮುಗಿಸಿದರು. ಡಾ. ಟಿ. ಮಾಧವ ಪೈಗಳು ಸ್ವಾಮೀಜಿಯವರ ವಿದ್ವತ್ಪೂರ್ಣ ಭಾಷಣಕ್ಕಾಗಿ ಆಭಾರ ಸೂಚಿಸಿದರ,

ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ— ಇದೇ ತಾ. 22ರಲ್ಲಿ ಪ್ರಾತಃಕಾಲದಲ್ಲಿ ಶ್ರೀ ಕಾಶಿ ಮಠಾಧೀಶರು ಶ್ರೀ ಸುಕೃತೀಂದ್ರ ಸಭಾ ಸದನವನ್ನು ಉದ್ಘಾಟಿಸಿದರು, ಈ ಸಂದರ್ಭದಲ್ಲಿ ಸದನಕ್ಕೆ ಕಲಶ ಪ್ರತಿಷ್ಠಾ ಕಾರ್ಯವೂ ನಡೆಯಿತು, ಆಪರಾಹ್ನ ದೇವಸ್ಥಾನದಲ್ಲಿ ಮಹಾ ಸಂತರ್ಪಣೆ ನಡೆಯಿತು. ರಾತ್ರಿ ಉತ್ಸವ ಜರಗಿತು, ಈ ಭವ್ಯ ಸದನದ ಪೂರ್ತಿಗಾಗಿ ದಿನಂಪ್ರತಿ ರಾತ್ರಿ 9 ಗಂಟೆಯಿಂದ 12ರ ಗಂಟೆ ವರೆಗೆ ನೂರಾರು ಸ್ವಯಂಸೇವಕರು ಸ್ವಯಂಸ್ಫೂರ್ತಿಯಿಂದ ಏನೊಂದೂ ಸಂಕುಚಿತತೆ ಇಲ್ಲದೆ ಸಮಾನತಾ ಭಾವದಿಂದ ಶ್ರಮವಹಿಸಿ ದುಡಿದಿರುವುದು ಅತ್ಯಂತ ಅಭಿನಂದನೀಯವೂ ಅನುಕರಣೀಯವೂ ಆಗಿದೆ.

ಊರು ಒಡ್ಡರಸೆ

ಲೇ:- ಯು. ನಾ. ಉಡುಪ, ವಿದ್ವಾನ್, ಐರೋಡಿ.

'ಊರೆಂದರೆ ಒಡರಸೆ' 'ನಿನ್ನ ಊರು ಯಾವುದು?' 'ಊರು ಒಡರಸೆ' ಊರೆಂದರೆ ಒಡರಸೆ ಎನ್ನುತ್ತಾನೆ' ಇವು ನಮ್ಮ ಕಡೆಯ ಹಳ್ಳಿಗರು ಮಾತಿನ ಎಡೆ ಎಡೆಯಲ್ಲಿ ಉಪಯೋಗಿಸುವ ವಾಕ್ಯಗಳು, ಅಥವಾ ವಾಕ್ಯಖಂಡಗಳು. ಇವುಗಳಲ್ಲಿ ಕೆಲವನ್ನು ಗಾದೆಯಂತೆಯೂ ಉಪಯೋಗಿಸುತ್ತಾರೆ. ಈ ವಾಕ್ಯಗಳಿಗೆ ಅರ್ಥವಿಲ್ಲವೆಂದಲ್ಲ. ನಮ್ಮ ಕಡೆಯ ಜನರು ಕೆಲವು ಶತಮಾನಗಳಹಿಂದೆ ಆಳಿ ಹೋದ ಒಡ್ಡರ ಅರಸುತನವನ್ನು ಇನ್ನೂ ವಂಶಪಾರಂಪರ್ಯವಾಗಿ ನೆನೆಯುತ್ತಿದ್ದಾರೆ. ಮೇಲಿನವುಗಳಲ್ಲಿ ಕೊನೆಯದು ಮಾತ್ರ ಹಾಳು ಬಿದ್ದ ಒಡ್ಡರಸೆ ಪ್ರಾಂತವನ್ನು ಸೂಚಿಸುತ್ತಿದೆ. ಹೆಡ್ಡನಾದರೂ ಒಡ್ಡನಾಗಿ ಕಾಣಿಸಿಕೊಳ್ಳಬೇಕು' ಎಂಬುದೂ ಈ ಒಡ್ಡರಿಗೆ ಸಂಬಂಧಪಟ್ಟ ಗಾದೆಯೇ. ಈ ಮನೆತನದ ಒಬ್ಬ ಅರಸನು ಸ್ವಭಾವತಃ ಹೆಡ್ಡನಾಗಿದ್ದರೂ ಮುಖಂಡನಂತೆ ವರ್ತಿಸುತ್ತಿದ್ದುದರಿಂದ ಅವನನ್ನೇ ಜನರು ಆ ಗಾದೆಗೆ ಆಧಾರವಾಗಿಟ್ಟುಕೊಂಡಿರಬಹುದು. ಇಲ್ಲಿ ಒಡ್ಡ ಎಂಬ ಪದವು ಮುಖಂಡ ಎನ್ನುವ ಅರ್ಥವನ್ನು ಸೂಚಿಸುವುದು. ಇವರು ಕನ್ನಡ ನಾಡಿನ ಒಂದು ಪಾಳೆಯಗಾರ ಕುಟುಂಬದವರು. ಇವರು ಕೋಟ ಮಾಗಣೆಯ ಸಾಲಿಗ್ರಾಮದಿಂದ ಎರಡು ಮೈಲು ಈಶಾನ್ಯದಲ್ಲಿದ್ದ ಒಂದು ಗುಡ್ಡದಲ್ಲಿ ಕೋಟೆ ಕಟ್ಟಿಕೊಂಡು ಕೆಲವು ಶತಮಾನಗಳಾದರೂ ರಾಜ್ಯವಾಳಿರಬೇಕು. ಈಗ ಅಲ್ಲಿ ಬಾರಕೂರಿನಷ್ಟೇ ಜೀರ್ಣವಾದ ಚಿಕ್ಕ ಕೋಟೆ ಮತ್ತು ಕಂದಕಗಳ ಅವಶೇಷಗಳಿವೆ. ಈ ದುರ್ಗದ ಮಹಾದ್ವಾರವು ಪೂರ್ವಕ್ಕಿದೆ. ಇದರೊಳಗೆ ಈಗ ಅರಮನೆಯ ತಳಗಟ್ಟು, ಕೆಲವು ಕಟ್ಟಡಗಳ ಚಿಹ್ನೆಗಳು, ಆನೆ ಕಟ್ಟುವ ಕೆಲವು ಕಂಬಗಳು ಮಾತ್ರ ಉಳಿದಿವೆ. ಈ ಕೋಟೆಯನ್ನು ನಿರ್ಮಾಣ ಮಾಡಿದವರು ಭದ್ರತೆಗಿಂತಲೂ ಸೌಂದರ್ಯದಲ್ಲಿ ವಿಶೇಷ ಪಕ್ಷಪಾತವುಳ್ಳವರೆಂದು ತೋರುತ್ತದೆ.

ಈ ಕೋಟೆಯ ಪಕ್ಕದ ಕಾಡಿನ ಭಾಗಕ್ಕೆ ಈಗಲೂ ನೂಳಿಕೇರಿ ಎಂಬ ಹೆಸರಿರುವುದರಿಂದ, ಕೋಟೆಯ ಮಗ್ಗುಲಿನಲ್ಲೇ ಚಿಕ್ಕ ನಗರವಿದ್ದಂತೆ ತೋರುತ್ತದೆ. ಇಲ್ಲಿಂದ ಎರಡು ಫರ್ಲಾಂಗು ಪೂರ್ವದಲ್ಲಿ ಹಿಂದು ದೇವಾಲಯವಿದ್ದು ಇಲ್ಲಿ ವರ್ಷಂಪ್ರತಿ ರಥೋತ್ಸವ ಜರಗುತ್ತದೆ. ಈ ದೇವಸ್ಥಾನದ ಇತಿಹಾಸದೊಡನೆ ಈ ಒಡ್ಡರರಸರ ಮನೆತನದ ಸ್ವಲ್ಪಾಂಶ ತಿಳಿಯುತ್ತದೆ.

ಒಡ್ಡರಸೆಯು ಚಿಕ್ಕದೊಂದು ನಗರವಾಗಿದ್ದ ಕಾಲ. ಆಗ, ಈಗ ದೇವಸ್ಥಾನವಿದ್ದ ಕಡೆಯಲ್ಲಿ ಕುಂಟಲು ಗಿಡಗಳು ತುಂಬಾ ಬೆಳೆದಿದ್ದಂತೆ ತೋರುತ್ತದೆ ಆಗ ದುರ್ಗದ ಗೋಪಾಲಕರು ಗೋವುಗಳನ್ನು ನಿತ್ಯವೂ ಈ ಪ್ರದೇಶದಲ್ಲೇ ಮೇಯಿಸುತ್ತಿದ್ದರು. ಒಂದು ಸಾರಿ, ಅರಮನೆಗೆ ಸೇರಿದ ಒಂದು ದನವು ನಿತ್ಯವೂ ಬರಿ ಕೆಚ್ಚಲಿನಿಂದ ಹಟ್ಟಿಯನ್ನು ಸೇರುತ್ತಿದ್ದುದು ಸೇವಕರಿಂದ ಪಾಳೆಯಗಾರನ ಕಿವಿಯ ವರೆಗೆ ಮುಟ್ಟಲು ಅವನು ಗೋವಳರನ್ನು ಗದರಿಸಿದನು. ಆ ಗಂಡುಗಳು ಮರುದಿನದಿಂದ ಆ ದನದ ಕಾರ್ಯಕ್ರಮಗಳನ್ನು ಪರೀಕ್ಷಿಸ ತೊಡಗಿದರು. ಅದು ಮರುದಿನವೂ ಎಂದಿನಂತೆ ಹಟ್ಟಿಗೆ ಬರುವ ಮೊದಲು ತನ್ನ ಗುಂಪನ್ನು ಬಿಟ್ಟು ಒಂದು ಪೊದೆಯ ಬಳಿಗೆ ಬಂದು ಅದರ ಮೇಲೆ ಹಾಲು ಸುರಿಸುವುದನ್ನು ಕಂಡು, ಗೋವಳರು ಆ ಪಾಳೆಯಗಾರನಿಗೆ ದೂರು ಕೊಟ್ಟರು. ಅವನಿಗೂ ಈ ವಿಚಾರ ಆಶ್ಚರ್ಯವನ್ನುಂಟು ಮಾಡಿತು. ಅವನು ಮರುದಿನ ಆ ದನವನ್ನು ತಾನೇ ಹಿಂಬಾಲಿಸಿ ಅಡಗಿದ್ದು, ಅದು ಆ ಪೊದೆಯ ಮೇಲೆ ಹಾಲು ಸುರಿಸುವಾಗ ತಟ್ಟನೆ ಅದಕ್ಕೆ ಕಾಣಿಸಿಕೊಳ್ಳಲು ಅದು ಬೆದರಿ ಆ ಪೊದೆಯನ್ನು ತುಳಿದುಕೊಂಡು ಓಡಿತು. ಆ ಪಾಳೆಯಗಾರನು ಆ ಪೊದೆಯನ್ನು ಸವರಿ ನೋಡುವಾಗ ಅದರೊಳಗೆ ಪುತ್ತಗಾವ ಒಂದು ಶಿವಲಿಂಗವಿದ್ದು, ಆಗ ತಾನೇ ಆ ದನವು ಊರಿದ ಅದರ ಗೊರಸು ಆ ಲಿಂಗದ ನೆತ್ತಿಯ ಮೇಲೆ ಕೊರೆದಿಟ್ಟಂತೆ ಕಾಣಿಸಿತು. ಪಾಳೆಯಗಾರನು ಅಲ್ಲೇ ಒಂದು ದೇವಸ್ಥಾನವನ್ನು ಕಟ್ಟಿಸಿ, ಅದಕ್ಕೆ ಸಾಕಷ್ಟು ಭೂಮಿಯನ್ನು ಉಂಬಳಿ ಬಿಟ್ಟು ರಥೋತ್ಸವ ಮೊದಲಾದ ಉತ್ಸವಗಳನ್ನೇರ್ಪಡಿಸಿದನು. ಈಗಲೂ ಆ ಶಿವಲಿಂಗದ ಮೇಲೆ ದನದ ಗೊರಸಿನ ಗುರುತನ್ನು ಕಾಣಬಹುದು.

ಈ ಪಾಳೆಯಗಾರರೂ ದುರ್ಗವೂ ಬಾರಕೂರಿನ ಅರಸು ಮನೆತನಕ್ಕೆ ಅಧೀನವಾಗಿದ್ದು, ಹೈದರಲ್ಲಿಯಿಂದ ಸಂಪೂರ್ಣ ಹಾಳು ಗೆಡಹಲ್ಪಟ್ಟಿತು. ಈಗ ಆ ಅರಸು ಮನೆತನದವರೇನಾದರೆಂದು ನಿರ್ಧಾರವಾಗಿ ಹೇಳುವವರಿಲ್ಲ. ಆದರೆ ಈ ಕೋಟೆಯ ನಿಮಿತ್ತ ವಿಶೇಷ ಕಷ್ಟನಷ್ಟಗಳಿಗೆ ಗುರಿಯಾಗುತ್ತಿದ್ದ ಇದರ ಸಮೀಪದ ಹಳ್ಳಿಗೆ ಇಂದೂ ಬನ್ನಾಡಿ ಎನ್ನುತ್ತಾರೆ.

ಒಡ್ಡರಸನು ದೊಡ್ಡ ದೇವಸ್ಥಾನವಿಲ್ಲದ ಊರಿಗೊಂದು ದೇವಾಲಯ ಕಟ್ಟಿಸಿ ಅಲ್ಲಿ ನಡೆಯುವ ಉತ್ಸವಗಳಿಗೆಲ್ಲಾ ಏರ್ಪಾಡುಮಾಡಿದುದನ್ನೂ, ಪ್ರಜೆಗಳ ನೆಮ್ಮದಿ ಜೀವನಕ್ಕೆ ಶ್ರಮವಹಿಸಿದುದನ್ನೂ, ಇಂದೂ ಆ ಊರವರೂ ಅದರ ನೆರೆಕರೆಯ ಹಳ್ಳಿಯವರೂ ಮರೆತಿಲ್ಲವೆಂಬುದನ್ನು ಈ ಜನಪದ ಸಾಹಿತ್ಯದ ಪದ್ಯವು ಸಾರುವುದು.

॥ ತ್ರಿಪದಿ ॥

ಒಡ್ಡ ಊರೀಲಿ ನಾಬಾಳ್ವೆ ಸಣ್ಣಕ್ಕ
ಒಡ್ಡರಿಲ್ಲದ ಊರು ಹೊಲಸೂ,
ಒಡ್ಡರಿಲ್ಲದ ಊರು ಹೊಲ
ಸೂ[illegible] ಸಣ್ಣಕ್ಕ, ಹೆಡ್ಡಾಗಿ ಇ[illegible]
ನಿಸ್ಸಿಂದೆ ॥

ಈ ರಾಜ ಮನೆತನದ ಕುರಿತು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸವು ಒಂದು ವಾಕ್ಯವನ್ನೂ ಹೇಳಿಲ್ಲ. ಇದರಂತೆಯೇ ಸಾಲಿಗ್ರಾಮದ ಅರ್ಧಮೈಲು ದಕ್ಷಿಣಕ್ಕೆ ರಸ್ತೆಯ ಪಶ್ಚಿಮ ಪಾರ್ಶ್ವದಲ್ಲಿ ಹಾಳುಕೋಟೆ ಅಥವಾ ಹಳೇ ಕೋಟೆ ಎಂಬ ಸಂಪೂರ್ಣ ಜೀರ್ಣವಾದ ಇನ್ನೊಂದು ಐತಿಹಾಸಿಕ ಸ್ಥಳವಿದೆ. ಇಲ್ಲಿ ಈಶಾನ್ಯಮೂಲೆಯ ಒಂದು ಕೋಣೆಯ ಚೂರು ಮತ್ತು ಜಟ್ಟಿಗನ ಕಲ್ಲೆಂದು ಕರೆಯಲ್ಪಡುವ ಒಂದು ವೀರಗಲ್ಲಿದೆ. ಇಲ್ಲಿ [illegible]ವೀರನು ತನ್ನ ಊರಿನ ಹತ್ತು ಸಮೃದ್ಧಿಗಾಗಿ ವೀರಸ್ವರ್ಗವನ್ನು ಹೊಂದಿದ್ದಾನೆ! ಈ ಪ್ರದೇಶವು ಕೆಲವು ಶತಮಾನಗಳಿಂದ 'ಗೋಚರಾವು' ಭೂಮಿಯಾಗಿದ್ದು, ಈಗ ಆ ಪ್ರಾಂತದ ಶ್ರೀಮಂತರ ಆಕ್ರಮಣಕ್ಕೆ ಒಳಗಾಗಿ ಚಟುಕಿನ ಕಾಡುಮಾಡಲ್ಪಡುತ್ತಿದೆ! ಇನ್ನೊಂದುದಿನ ಆ ವೀರಗಲ್ಲು—ವೀರ ಕನ್ನಡಿಗನೊಬ್ಬನ ಸ್ಮಾರಕವು—ಅಲ್ಲಿಯ ಜನತೆಯ ಮನೆಯ ಮೆಟ್ಟಿಲುಗಳಿಗೆ ಉಪಯೋಗಿಸಲ್ಪಡದಿರದು ಅಂತೆಯೇ ಒಡ್ಡರಸೆ ಕೋಟೆಯೂ ಅಂಥಾ ದಿನವನ್ನು ಕಾಣುವ ಮೊದಲೇ ಕನ್ನಡಿಗರು ಅದರ ಪರಿಚಯಹೊಂದಲಿ; ಅದು ಕೃಷೀ ಫಲಕ್ಷೇತ್ರದ ನಟನೆಯನ್ನು ಧರಿಸುವ ಮೊದಲೇ ಕನ್ನಡಿಗರ ದೃಷ್ಟಿಪಥಕ್ಕೊಮ್ಮೆ ಒಂದು ಹೋಗಲಿ—ಎಂಬುದೇ ಈ ಲೇಖನದ ಉದ್ದೇಶ.

— o —

ಮುಂಬಾಯಿ

ರಾಜಪುರ ಸಾರಸ್ವತ ಸಂಘ ಮುಂಬಯಿ— ಇದರ ೩೦ನೇ ವಾರ್ಷಿಕ ಮಹಾ ಸಭೆಯು ತಾ. 15-3-53ರಲ್ಲು ಶ್ರೀ ಮಾಧವ ರಾಮ ಪೈ ರವರ ಅಧ್ಯಕ್ಷತೆಯಲ್ಲಿ ಸಂಘದ ಆಫೀಸಿನಲ್ಲಿ ಜರಗಿತು. ವಾರ್ಷಿಕ ವರದಿಯನ್ನು ಕಾರ್ಯದರ್ಶಿ ಶ್ರೀ ಡಿ. ಟಿ. ಪ್ರಭುಗಳವರು ಓದಿ ಹೇಳಿ ಸರ್ವಾನುಮತದಿಂದ ಮಂಜೂರಾದ ಬಳಿಕ ಕೋಶಾಧಿಕಾರಿ ಶ್ರೀ ಸೋಮಯ ನಾಯ್ಕರು ಸಂಘದ ಲೆಕ್ಕಪತ್ರಗಳನ್ನು ಸಭಿಕರ ಮುಂದಿಟ್ಟು ಲೆಕ್ಕಪತ್ರ ಪರಿಶೋಧಿಸಲಾದ ಬಳಿಕ ಸಭಿಕರಲ್ಲಿ ಶ್ರೀ ಯಸ್. ಆರ್ ನಾಯ್ಕ, ಶ್ರೀ ಶಿವರಾಯ ಡಿ. ನಾಯ್ಕ, ಶ್ರೀ ರಾಮಚಂದ್ರ ಭಟ್, ಶ್ರೀ ಯು. ಆರ್. ಪ್ರಭು, ಶ್ರೀ ವ್ಯಾಸರಾಯ ನಾಯ್ಕ, ಶ್ರೀ ರಾಘವೇಂದ್ರ ಪ್ರಭು, ಶ್ರೀ ಶ್ಯಾಮರಾಯ ಬೋರ್ಕರ್ ಮೊದಲಾದವರು ಸಂಘದ ಕಾರ್ಯ ಕಲಾಪಗಳ ಕುರಿತು ಯಥೋಚಿತ ಭಾಷಣ ಮಾಡಿದರು. ಒಳಿಕ ರಾಜಪುರ ಸಾರಸ್ವತ ಸಮಾಜದ ಅತೀ ಬಡ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಧರ್ಮಾರ್ಥ ವಿದ್ಯಾರ್ಥಿವೇತನವನ್ನು ಕೊಡುವದಾಗಿಯೂ ಅಂತಹ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಪರವಾಗಿ ಅವರ ರಕ್ಷಕರು ತಾ. 31-4-53ರ ಒಳಗೆ ಸಂಘದ ಆಫೀಸಿನ ವಿಳಾಸದಲ್ಲಿ ಅರ್ಜಿ ಮಾಡತಕ್ಕದ್ದೆಂದೂ ಸರ್ವಾನುಮತದಿಂದ ಮಂಜೂರಾಯಿತು ಅಧ್ಯಕ್ಷರ ಭಾಷಣದ ತರುವಾಯ ಸಭೆಯು ಮುಕ್ತಾಯ ವಾಯಿತು.

ಸಂಘದ ವಿಳಾಸ
ರಾಜಾಪುರ ಸಾರಸ್ವತ ಸಂಘ, ಮುಂಬಯಿ
ಪರೇಲ್‌ನಾಕಾ, ೨ನೇ ಮಹಡಿಗೆ,
[illegible] ಚಾಳ್ [illegible],
ಪರೇಲ್ ಟೆಂಕ್ ರೋಡ್,
ಮುಂಬಯಿ ೧೨.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. S. 315/52 R. I. A 23/53

ವಾಸುದೇವ ಕಿಣಿ -ವಾದಿ

ಮತ್ತು

ಲೊರೆನ್ಸ್ ಲುವಿಸ್ ಬಾಲ್ತಿಜಾರ್ ಲುವಿಸರ ಮಗ- St. Mary's Club, Zevere Building II Floor 3rd Nanabhoy Lane, Fort Bombay. ಪ್ರತಿವಾದಿ

ವಾದಿಯು ಪ್ರತಿವಾದಿಯ ಮೇಲೆ ಪಡೆದ ಪ್ರಿಲಿಮಿನರಿ ಡಿಕ್ರಿಯನ್ನು ಫೈನಲ ಡಿಕ್ರಿ ಮಾಡುವ ಬಗ್ಗೆ ದಾಖಲು ಮಾಡಿದ ಮೇಲಿನ ಅರ್ಜಿಯು ಪ್ರತಿವಾದಿಯ ನೋಟೀಸಿನ ಬಗ್ಗೆ ತಾ. 31-3-53ಕ್ಕೆ ಇಟ್ಟಿದೆ. ಸದರಿ ದಿವಸ ಪೂರ್ವಾಹ್ನ ೧೧ಟೆ 10ಕ್ಕೆ ಮೇಲಿನ ಅರ್ಜಿಯಲ್ಲಿ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗುವರೆ ತಪ್ಪಿದರೆ ಸದ್ರಿ ಅರ್ಜಿಯನ್ನು ಪ್ರತಿವಾದಿಯ ಗೈರುಹಾಜ್ರಿಯಿಂದ ತೀರ್ಮಾನಿಸಲ್ಪಡುವದು.

Gratian C. Rego

Vakil for Petitioner.

Udipi, Date 13—3—53

ವಿಚಾರ ಪ್ರಚೋದಕವಾದ ಪ್ರತಿಯೊಬ್ಬರೂ ಓದಲೇಬೇಕಾದ ನವನವೀನ ಪುಸ್ತಕಗಳು

ಗೀತಾ ರಹಸ್ಯವನ್ನು ತಿಳಿಯ ಬಯಸದವರಾರು?

ದಿ। ಹೊಸಕೆರೆ ಚಿದಂಬರಯ್ಯ ಕೃತ **ಗೀತೆಯ ಕೈಗನ್ನಡಿ** ಭಗವದ್ಗೀತೆಯ ಸಮೂಲ ಭಾಷಾಂತರ

ಪುಟಗಳು 428 ಬೆಲೆ 0-12-0 ಅಂಚೆವೆಚ್ಚ 0-4-0

100 ಪ್ರತಿಗಳಿಗೆ ರೂ. 60; 250ಕ್ಕೆ ರೂ. 140; 500ಕ್ಕೆ ರೂ 250

ಕತೆ, ಕಾದಂಬರಿ, ನಾಟಕ, ಚಿತ್ರ, ಪ್ರಬಂಧ, ಹರಟೆ ಮೊದಲಾದ, ಸೊಗಸಾದ ಬಿಡದಿರುವ ಅಂತರಂಗ ಪ ಕಟನಾಲಯದ ರೂ. 30 ಕ್ರಯದ 86 ಪ್ರಕಟಣೆಗಳನ್ನು ಒಮ್ಮೆಯೇ ತರಿಸಿಕೊಳ್ಳುವವರಿಗೆ ರೂ. 24ಕ್ಕೆ ಕೊಡಲಾಗುವುದು.

ನಾರೀಹೃದಯ ರೂ.	1	8	ಪ್ರಕಾಶ ರೂ.	2	8	ನೆನಪಿಗಾಗಿ ರೂ.	2	0
ಭಾರತೀಯ ಚಿತ್ರಗಳು	1	12	ಮಧುವನ	3	0	ಕಾವ್ಯಸಾಮ್ರಾಜ್ಯ	1	8
ಸನ್ಯಾಸಿಯ ಸೋಗಿನಲ್ಲಿ	0	12	ಘಂಟಿಮಾರಿ	2	0	ಪ್ರೇಮ ವಿಜಯ	1	4
ಕವಿಗಳ ಕಾಣಿಕೆ	2	0	ನಂದಾದೀಪ	1	0	ರಂಗಭೂಮಿ	0	10
ಕುಲವಿಲ್ಲದ ಹೆಣ್ಣು	2	0	ಜಮಾನ್ಯಾರ	1	8	ಭಾರತದಲ್ಲಿ ಜಾತಿಭೇದ	1	0
ಸ್ವಭಿಮಾನ [illegible]	1	4	ದೇಶಭಕ್ತ	1	4	ವೀರ ಸಾವರ್ಕರ	1	4
ಕಾಲಭದಲ್ಲಿ ಇಂಗ್ಲೆಂಡ್	2	0	ಮನೆ ಮದ್ದು	2	8	ಕದಂಬ	1	4
ನೀತಿವಿನೋದ ಕತೆಗಳು	0	12	ಸರಸ್ವತಿ	0	12	ಭಾಗ್ಯಲಕ್ಷ್ಮಿ	1	4
ಜೀವನ ಸಂಗ್ರಾಮ	1	8	ಸೇವಾಪಥ	0	8	ಲೋಕಾಪವಾದ	0	8

ಇವೇ ಮೊದಲಾದ ನೂರಾರು ಬಗೆಯ ಉಪಯುಕ್ತ ಪುಸ್ತಕಗಳ ಕೆಟಲಾಗಿಗೆ ಬರೆಯಿರಿ ವ್ಯಾಪಾರಿಗಳಿಗೂ, ಪುಸ್ತಕಭಂಡಾರಗಳಿಗೂ ವಿಶೇಷ ಸವಲತ್ತುಗಳಿವೆ

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಉಡುಪಿ ಡಿ. ಮು. ಕೋರ್ಟಿನಲ್ಲಿ

O.S.No. 546/52R I.A 124/53

ಕೆ. ಅನ್ನಪ್ಪ ಕಾಮತ್ - ಅರ್ಜಿದಾರ

ಮತ್ತು

ಕೆ ವೆಂಕಪ್ಪ ಹೆಗಡೆ-ಕೌಡೂರು ಸುಬ್ಬಯ್ಯ ಹೆಗ್ಡೆಯರ ಅಳಿಯ-ಕಾರ್ಕಳ ತಾಲೂಕು ನೀರೆ ಬೈಲೂರು ಗ್ರಾಮ- ಯದ್ರಿ

ಇವರಿಗೆ

ಸದ್ರಿ ಯದ್ರಿಗೆ ಈ ಮೂಲಕ ತಿಳಿಸುವುದೇನೆಂದರೆ—

ಮೇಲ್ಕಂಡ ವ್ಯಾಜ್ಯದಲ್ಲಿ ಕೊಡಲ್ಪಟ್ಟ ಪ್ರಿಲಿಮಿನರಿ ಡಿಕ್ರಿಪ್ರಕಾರ— ಫೈನಲ ಡಿಕ್ರಿ ಕೊಡಬೇಕೆಂದು-ಅರ್ಜಿದಾರನು ದಾಖಲು ಮಾಡಿದ ಸದ್ರಿ ಅರ್ಜಿಯಲ್ಲಿ ಯದ್ರಿಯ ನೋಟೀಸು ಬಗ್ಗೆ ತಾ. 7-4-53ಕ್ಕೆ ಮುಂದೂಡಲಾಗಿಯದೆ. ಆಕ್ಷೇಪ ಹೇಳತಕ್ಕದಿದ್ದರೆ ಸದ್ರಿ ಯದ್ರಿಯು ಆ ದಿವಸ 11 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜ್ರಾಗಿ ದಾಖಲು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ತಿಳಿಸಲಾಗಿದೆ.

N. V. Kamath.

Advocate for Petitioner

ಉಡ್ಪಿ. 23-3-53

ಸ್ವೀಕಾರ—ವಿಮರ್ಶೆ

ಪಂಚಾಮೃತ—ಲೇಖಕರು: ಬಿ. ಡಿ. ಗಣಪತಿ. ಪ್ರಕಾಶಕರು: ಕೊಡಗು ಕಂಪೆನಿ, ಮಡಿಕೇರಿ. ಬೆಲೆ: ರೂ. ೧.

ಇದೊಂದು ಬೋಧನಾ ರೂಪದ ಲೇಖಮಾಲೆಯ ಸಂಗ್ರಹ. "ಇದರಲ್ಲಿರುವ ವಿಚಾರಗಳು ಹೆಚ್ಚಾಗಿ ಪ್ರಸಿದ್ಧ ಗ್ರಂಥಕರ್ತರಿಂದ ವಿರಿಯರಿಂದ ಬರೆಯಲ್ಪಟ್ಟ ಜೀವನ ಪುಸ್ತಕದಿಂದ ಆಯ್ದುಕೊಂಡುವಾಗಿವೆ" ಎಂದು ಹೇಳಿದ್ದರೂ, ಲೇಖಕರ ಅಭಿಪ್ರಾಯಗಳೂ ಇದರೊಡನೆ ಸೇರಿಕೊಂಡಿವೆ. ಐದು ಪತ್ರಗಳ ರೂಪದಲ್ಲಿರುವ ಈ ಸಂಗ್ರಹದಲ್ಲಿ ಮೊದಲಿನದು ದೇಶದ ಯುವಕನಿಗೆ ಸಂಬೋಧಿಸಲ್ಪಟ್ಟಿದೆ. ಈಗ ತಾನೆ ಹರೆಯದ ಮೆಟ್ಟಲನ್ನು ಹತ್ತಿರುವ ತರುಣನ ಭವಿಷ್ಯ ಬಾಳ್ವೆಯು ಉಜ್ವಲವೆನಿಸಲಿಕ್ಕೆ ಬೇಕಿರುವ ಜೀವನದ ತತ್ವಜ್ಞಾನವನ್ನು ಈ ಪತ್ರ ಒಳಗೊಂಡಿದೆ. ಇಲ್ಲಿ ಲೇಖಕರು ಪ್ರತಿಪಾದಿಸಿರುವ ಅಭಿಪ್ರಾಯಗಳು ನಿರ್ದುಷ್ಟವಾದುವೂ ಪ್ರಾಮಾಣಿಕವಾದುವೂ ಆಗಿವೆ. ಎರಡನೆಯ ಪತ್ರ ಪ್ರೇಮಿಗೆ ಬರೆಯಲಾಗಿದೆ. ಯುವಕನು ತನ್ನ ಬಾಳ ಜೊತೆಗಾತಿಯನ್ನು ಹುಡುಕುವ ಸಾಹಸವನ್ನು ಕೈಗೊಳ್ಳುವುದು ಸಹಜವೇ. ಅಂಥ ಸಂದರ್ಭದಲ್ಲಿ ಅವನಿಗೆ ಅನುಭವಿಕರ ಸಲಹೆ ಸೂಚನೆಗಳು ತೀರ ಅಗತ್ಯ. "ಇಂದಿನ ಸಮಾಜದಲ್ಲಿ ಯುವಕ ಯುವತಿಯರು ತಮ್ಮ ಪರಸ್ಪರ ಗುಣ ನಡತೆಗಳನ್ನು ತಿಳಿದು ಕಮ್ಮಗೊಪ್ಪಿದವರೊಡನೆ ಪ್ರೇಮ ಬೆಳೆಸಿ ಮದುವೆಯಾಗುವ ಅನುವಿಲ್ಲ" ಎಂದು ಲೇಖಕರು ಹೇಳಿದರೂ "ಈಗೀಗ ಮದುವೆಗೆ ಮೊದಲೇ ತಮಗೆ ಇಷ್ಟವಿರುವವರ ಪರಿಚಯ ಮಾಡಿಕೊಂಡು ತಮ್ಮ ತಮ್ಮ ನಿರ್ಧಾರ ಮಾಡಿಕೊಳ್ಳುವ ಅನುವು ಹೆಚ್ಚುತ್ತಿದೆ" ಎಂದೂ ಬಿನ್ನಲ್ಲೇ ನುಡಿದಿರುವರು. ಈ ರೀತಿಯ ಅನುಕೂಲತೆ ದೊರೆತಲ್ಲಿ ಯುವಕನು ತನ್ನ ಜೀವನ ಸಂಗಾತಿಯನ್ನು ಆರಿಸುವಾಗ ಗಮನಿಸತಕ್ಕ ಸಂಗತಿಗಳ ಕೂಲಂಕಷ ವಿವೇಚನೆಯನ್ನು ಈ ಪತ್ರದ ಮುಂದಿನ ಭಾಗ ಚೆನ್ನಾಗಿ ಮಾಡುತ್ತದೆ. ಚಾರಿತ್ರ್ಯ ಮತ್ತು ಸಚ್ಛೀಲಗಳಿಗೆ ಲೇಖಕರು ತುಂಬ ಮಹತ್ವವನ್ನು ಕೊಟ್ಟಿರುವುದು ಉಲ್ಲೇಖನೀಯವಾಗಿದೆ. ಮೂರನೆಯ ಪತ್ರ ಮನವೊಪ್ಪಿದ ತರುಣಿಯನ್ನು ವರಿಸಿ, ಗೃಹಸ್ಥಾಶ್ರಮವನ್ನು ಸ್ವೀಕರಿಸಿದ ಪತಿಯನ್ನು ಉದ್ದೇಶಿಸಿದೆ. ದಾಂಪತ್ಯ ಜೀವನದಲ್ಲಿ ಸುಖ ಸಂತೋಷಗಳು ನಲಿಯಲಿಕ್ಕೆ ಅವಶ್ಯವಿರುವ ಸಂಗತಿಗಳ ವರ್ಣನೆ ಇಲ್ಲಿದೆ. ನಾಲ್ಕನೆಯದು ಮಕ್ಕಳಿಂದೆ ತಾಯಿಗಳಿಗೆ ಬರೆಯಲಾಗಿದೆ. ಮಕ್ಕಳು ಕೊಜೆ ಮಣ್ಣಿನ ಮುದ್ದೆ ಇದ್ದಂತೆ. ತಂದೆ ತಾಯಿಗಳು ಕುಶಲರಾದರೆ ಅದಕ್ಕೆ ಬೇಕಾದ ರೂಪ ಅಲಂಕಾರಗಳನ್ನು ಕೊಡಬಲ್ಲರು. ಮಾತಾಪಿತೃಗಳು ಇಂಥ ಕೌಶಲ್ಯವನ್ನು ತೋರಿಸುವ ಬಗೆಯನ್ನು ಈ ಪತ್ರ ಒಳಗೊಂಡಿದೆ. ಕೊನೆಯದು ದೇಶದ ನಾಗರಿಕನ ಹೊಣೆಗಾರಿಕೆಯನ್ನು ತಿಳಿಸಿ ಹೇಳುವುದಕ್ಕೆ ಪ್ರಯತ್ನಿಸಿದೆ. ಈ ಪತ್ರದಲ್ಲಿ ದೇಶೋದ್ಧಾರಕ್ಕೆ ಆರ್ಥಿಕ ಪುನರ್ಘಟನೆಯಾಗುವ ಅಗತ್ಯವನ್ನು ಲೇಖಕರು ಪ್ರತಿಪಾದಿಸಿರುವರು. ನಾಗರಿಕನು ಹಕ್ಕಿಗಾಗಿ ಹೊಡೆದಾಡುವವನಾಗದೆ ನಿಯಮ ಪಾಲಿಸುವ ಪ್ರಜೆಯಾಗಬೇಕೆಂದು ಹೇಳಿರುವರು. ಹಾಗೆಯೇ ಶಾರೀರಕ ಪರಿಶ್ರಮದ ಮಹತ್ವವನ್ನೂ ತರ್ಕಬದ್ಧವಾಗಿ ಮನವರಿಕೆ ಮಾಡಿಸಿಕೊಟ್ಟಿರುವರು. ಹೀಗೆ ಇಡೀ ಪುಸ್ತಕವು ಒಳ್ಳೆಯ ಬಾಳ್ವೆಯನ್ನು ಕೈಗೊಂಡು ಸತ್ಪ್ರಜೆಯಾಗಿ ಆದರ್ಶ ಜೀವನವನ್ನು ಅವಲಂಬಿಸುವುದಕ್ಕೆ ಅಗತ್ಯವಿರುವ ಸಲಹೆಗಳಿಂದ ಕೂಡಿದೆ. ಭಾಷೆಯು ಸರಳ ಹಾಗೂ ಸುಂದರವಿದೆ. ಮುದ್ರಣ ದೋಷವೇ ಇಲ್ಲವೆಂಬಷ್ಟು ಚೆಲೋದಾಗಿ ಅಚ್ಚಿನ ಕಾರ್ಯ ನೆರವೇರಿದೆ. ಎಲ್ಲರೂ ಓದಿ ಮನವರಿಕೆ ಮಾಡಿಕೊಳ್ಳಲು ಶಕ್ಯವಾದ ಪುಸ್ತಕವೆಂದು ಒಂದೇ ಮಾತಿನಲ್ಲಿ ಇದರ ಗುಣವರ್ಣಿಸಬಹುದು.

ಆಶಾಬಾಳು—ಬರೆದವರು: ಪಿ. ಶ್ರೀಧರರಾವ್. ಪ್ರಕಾಶಕರು: ಪ್ರತಿಭಾ ಗ್ರಂಥ ಮಾಲೆ, ಭಗತಸಿಂಗ ಬೀದಿ, ಧಾರವಾಡ. ಬೆಲೆ: ರೂ. ೧-೪-೦.

ಇದನ್ನು ಸ್ವತಂತ್ರ ಸಾಮಾಜಿಕ ಕಾದಂಬರಿ ಎಂದು ವರ್ಣಿಸಲಾಗಿದೆ. ಆದರೆ ಇದಕ್ಕೆ ಆ ಯೋಗ್ಯತೆಯೇ ಇಲ್ಲವೆಂದು ಕಂಡು ಬರುತ್ತದೆ. ಕಥಾವಸ್ತುವಿನ ವಿಷಯವಂತಿರಲಿ, ನಿರೂಪಣಾ ಶೈಲಿಯ ದೃಷ್ಟಿಯಿಂದ ಕೂಡ ಈ ಲೇಖನಿ ಅಪಕ್ವವೆಂದು ಹೊಳೆಯುತ್ತದೆ. ಲೇಖನಿಯೊಡನಿರುವ ಹುಮ್ಮಸ್ಸು ತಡೆದುಕೊಳ್ಳಲಾರದೆ ಮತ್ತು ತಾವು ಬರೆದುದು ಅಚ್ಚಿನಲ್ಲಿ ಮೂಡಿ ಬಂದುದನ್ನು ಕಂಡು ಹರ್ಷಿಸಬೇಕೆಂದು ಹಾತೊರೆಯುತ್ತಿರುವ ತರುಣಭಾಷಾಸೇವಕರ ಚಪಲಕ್ಕೆ ಇದು ನಿದರ್ಶನ. ವಾಸ್ತವವಾಗಿ ಇದಕ್ಕೆ ಮಿಗಿಲಾದ ಯೋಗ್ಯತೆಯನ್ನು ನಾವಿಲ್ಲಿ ಕಾಣುವುದಿಲ್ಲ. ಇದನ್ನು ಲೇಖಕರು ಮೊದಲೇ ಊಹಿಸಿಕೊಂಡಿರುವರೋ ಎಂಬಂತೆ—ವಿಮರ್ಶಕರ ಮೇಲೆ ಗಧಾಪ್ರಹಾರವನ್ನು ತಮ್ಮ ಮುನ್ನುಡಿಯಲ್ಲಿ ಮಾಡಿರುವರು, "ಹಚ್ಚ ಪೈರನ್ನು ಕಂಡೊಡನೆ ಬುಡಸಹಿತ ಕಿತ್ತು ತಿನ್ನುವ ಪಶುಗಳಂತೆ ಕನ್ನಡದಲ್ಲಿನ ಕೃತಿಗಳಿಗೆ... ತಪ್ಪಿದ್ದಲ್ಲಿ ಸೂಕ್ತ ಸಲಹೆಯನ್ನೀಯುವ ಬದಲು, ಮುಂದಕ್ಕೆ ತಲೆಯೆತ್ತದಂತೆ ಸದೆಬಡೆಯುತ್ತಿರುವ ವಿಮರ್ಶಕರ ಲೇಖನಿಗೆ ಮಾತ್ರ ಇದೊಂದು ರಸದೂಟವಾಗಲೂ ಬಹುದು" ಎಂದಿರುವರು. ಪ್ರಾಮಾಣಿಕರಾದ ವಿಮರ್ಶಕರ ಕುರಿತು ಈ ರೀತಿಯ ಗಂಭೀರ ಆರೋಪವನ್ನು ಮಾಡುವುದಕ್ಕೆ ಬದಲಾಗಿ—ಲೇಖಕರು ತಮ್ಮ ಕೃತಿಯನ್ನೆ ಅಚ್ಚಿಗೆ ಕೊಡುವುದಕ್ಕೆ ಮುಂಚೆ ಸಾಹಿತ್ಯದ ತಕ್ಕಡಿಯಲ್ಲಿ ತೂಗಿ ನೋಡುತಿದ್ದರೆ—ಈ ರೀತಿ ಹಲುಬಲು ಎಡೆ ಇರುತಿದ್ದಿಲ್ಲ. ಪ್ರಕಾಶಕರಾದರೂ ಇಂಥ "ಮೊದಲ ಕೃತಿ"ಯ ಬರಹಗಾರರು ತಮ್ಮ ಕೈಯನ್ನು ಚೆನ್ನಾಗಿ ಪಳಗಿಸಿಕೊಳ್ಳುವುದಕ್ಕೆ ಅನುಕೂಲವಾಗುವಂತೆ ಅವರನ್ನು ನಿರುತ್ಸಾಹಗೊಳಿಸಬೇಕೆಂದು ನಾವೆನ್ನುತ್ತೇವೆ. ಕಥನ ಕಲೆಯು ಯಾವ ವೈಶಿಷ್ಟ್ಯವನ್ನೂ ಈ ಪುಸ್ತಕ ಹೊರಗೆಡಹುವುದಿಲ್ಲ. ಇಲ್ಲಿ ಚಿತ್ರಿತವಾಗಿರುವ ತಾರೆಯಂಥ ಸ್ತ್ರೀಯರು ಅನೇಕರಿರಬಹುದು. ಅವರು ಇರಬಾರದೇ ಎಂದು ಲೇಖಕರು ಪ್ರಶ್ನಿಸುವುದು ಅಗತ್ಯವಿಲ್ಲ. ಆದರೆ ತಾರೆಯ ಅನುಭವವನ್ನು ಸಾಹಿತ್ಯದ ಅಚ್ಚಿನಲ್ಲಿ ಮೂಡಿಸುವಾಗ ಲೇಖಕರು ಸಜ್ಜೆ ಹೆಜ್ಜೆಗೂ ತಪ್ಪಿ ಬಿದ್ದಿರುವರು. ಸಾಹಿತ್ಯಾಭ್ಯಾಸವನ್ನು ಇನ್ನಷ್ಟು ಮನಸ್ಸುಗೊಟ್ಟು ಮಾಡಬೇಕೆಂಬುದೂ, ಬರೆದುದೆಲ್ಲವೂ ಅಚ್ಚಿನಲ್ಲಿ ಮೂಡಬೇಕೆಂಬ ಆಶೆಯನ್ನು ಪಳಗುವವರೆಗೆ ಮೂಲೆಗುಂಪಾಗಿಸುವುದೂ—ತಪ್ಪು ಹೆಜ್ಜೆಯನ್ನು ಸರಿಪಡಿಸುವ ಏಕಮೇವ ಮಾರ್ಗ; ವಿಮರ್ಶಕ ಲೇಖಕರಿಗೆ ನೀಡುವ ಸಲಹೆ ಇದೇ.

— ವಿಹಂಗಮ ನೋಟ —

● SPEEDIER COMMUNICATIONS—ಎಂಬ ಭಾರತ ಸರಕಾರ ಈಗಿನ ಪ್ರಕಾಶನ ಅಂಚೆ ಮತ್ತು ತಂತಿ ತಾಯ ವ್ಯವಹಾರದ ವರ್ಣನೆಯಿಂದ ಕೂಡಿ: ಸಾರ್ವಜನಿಕರಿಗೆ ಅತ್ಯುಪಯುಕ್ತವಾದ ಇಲಾಖೆಯ ಅನೇಕ ಮುಖ್ಯವಾದ ಚಟುವಟಿಕೆಯ ಪರಿಚಯವನ್ನು ಈ ಪುಸ್ತಕ ಪಠನದಿಂದ ಮಾಡಿಕೊಳ್ಳಬಹುದು. ಇದರ ಬೆಲೆ: ಎಂಟಾಣೆ.

● ಮುಂಬಯಿಯಲ್ಲಿರುವ ದಕ್ಷಿಣ ಕನ್ನಡ ಬ್ರಾಹ್ಮಣರ ಸಂಘವು ತಮ್ಮ ರಜತೋತ್ಸವದ ಸಂದರ್ಭದಲ್ಲಿ ಒಂದು ಸ್ಮಾರಕ ಗ್ರಂಥವನ್ನು ಹೊಂದಿಸಿರುವರು. ಇದರಲ್ಲಿ ಸಂಘದ ಚಟುವಟಿಕೆಯ ವರದಿ, ಡಾ. ಯು. ಬಿ. ನಾರಾಯಣ ರಾವ್, ಕುಡ್ವಿ ಭುಜಂಗ ರಾವ್ ಮುಂತಾದವರ ಲಘು ಪರಿಚಯ ಹಾಗೂ ಸಂಘದ ೫೦೦ ಸದಸ್ಯರ ಹೆಸರು ವಿಳಾಸಗಳಿವೆ. ನಮ್ಮ ಜಿಲ್ಲೆಯಿಂದ ಮುಂಬಯಿಗೆ ಹೋಗುವ ಬ್ರಾಹ್ಮಣರಿಗೆ ಈ ಸೊವೆನೀರ್ ಉಪಯೋಗಕ್ಕೆ ಬಂದೀತು.

— —

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 133/1950

S. E. P. 709/1952

ವಾದಿ— ಮುತ್ತಯ್ಯ ಸೆಟ್ಟಿ.

ಪ್ರತಿವಾದಿರು- ರಾಮು ಪೂಜಾರಿ.

ಪ್ರತಿವಾದಿ ರಾಮು ಪೂಜಾರಿ ಹಳೆಪೈಕ ಚಿಕ್ಕ ಹೆಂಗ್ಸಿನ ಮಗ ಕುಂದಾಪುರ ತಾಲ್ಲೂಕು ವಂಡ್ಸೆ ಗ್ರಾಮದಲ್ಲಿರುವ. Post Vandse,

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದ್ರೆ:—

ಮೇಲ್ಕಂಡ ಡಿಕ್ರಿಪ್ರಕಾರ ಬರತಕ್ಕ ಹಣಗಳ ವಸೂಲಿ ಬಗ್ಗೆ ಪ್ರತಿವಾದಿ ಹಕ್ಕಿನ ಬಾಬ್ತು ಚರಸೊತ್ತುಗಳನ್ನು ಜಪ್ತು ಮಾಡಿ ಲೈಲಾಮಿಗೆ ಅಪೇಕ್ಷಿಸಿ ಯೋಲಂ ಯಿಸ್ತಿಹಾರು ದಾಖಲು ಮಾಡಿರುವುದರಿಂದ, ಸದ್ರಿ ಯೇಲಂ ಯಿಸ್ತಿಹಾರಿನ ಶರ್ತ ನಿರ್ಣಯಿಸುವ ಬಗ್ಗೆ ತಾ 23-3-53ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಇರುವುದರಿಂದ ಆ ಕುರಿತು ನಿಮ್ಮ ಆಕ್ಷೇಪವಿದ್ದಲ್ಲಿ ಸದ್ರಿದಿವಸ ಹಾಜ್ರು ಆಗಿ ಹ್ಯಾಹಿರ್ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಯೋಗ್ಯಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟು ಹುಕುಂನ್ನು ಮೇರೆಗೆ ನಿಮಗೆ ತಿಳಿಸೋಣಾಗುತ್ತದೆ.

K. Raghunatha Shenai

Pleader for Petitioner

Coondapoor, 17—3—53

ವಿವಿಧ ಪಾತ್ರೆಗಳು

ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಕುಂಜೆ ವ್ಯಾಸಾಚಾರ್ಯ

ರಥಬೀದಿ ಉಡುಪಿ.

ಅಮೃತಾಂಜನ

ಶಿರೋವೇದನೆ, ಉಳುಕು ಕುತ್ತಿಗೆ ಭುಜ ಚಲ್ಲು ಎದೆ ನೋವುಗಳಿಗೂ ಘಾಯಗಳು,ಬಾತುಕೊಳ್ಳುವುದು ಜೇಳುವಿಷಮುಂತಾದುವು, ವಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಳಿಗೂ ಸಿದ್ಧೌಷಧಿ.

ಹಳು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

REGD.

ಅಮೃತಾಂಜನ ಲಿಮಿಟೆಡ್

ಮದರಾಸ್ಸು,ಬೊಂಬಾಯಿ ಮತ್ತು ಕಲ್ಕತ

ದಿ ವಿಜಯ ಬೇಂಕ್, ಲಿಮಿಟೆಡ್

ಸ್ಥಾಪನೆ: 1931.] ಪ್ರಧಾನ ಕಛೇರಿ: ಮಂಗಳೂರು.

ಮೂಲಧನ	. .	ರೂ. 20,00,000
ತೆತ್ತ ಪಾಲು ಭಂಡವಾಳ	. .	,, 8,77,860
ಕ್ಷೇಮ ನಿಧಿ	. .	,, 1,65,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವ್ಯಾದೆ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ $4\frac{1}{4}$% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಬಿ. ಮಂಜಯ್ಯ ಹೆಗ್ಡೆ,

ಬೇಂಕಿನ ಆಡಳಿತೆ ಕಮಿಟಿ ಅಧ್ಯಕ್ಷರು,

(ಮತ್ತು ದ. ಕ- ಜಿಲ್ಲಾ ಬೋರ್ಡಿನ ಅಧ್ಯಕ್ಷರು)

THE VIJAYA BANK, Limited.

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್‌ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೋಲಿಸಿಗಳ ಮೇಲೆ ರೂ. 10- } ವರ್ಷ ಒಂದರ

ಜೀವಾವಧಿ ಪೋಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯ ಹೊಂದಲಿಕ್ಕಾಗಲೀ

ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ, ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು.

The Bombay Life Assurance Co., Ltd., Bombay

ಋತುಸ್ರಾವ ನಿಂತಿತು

'ಕಾಮರೂಪ' ಬಿಲ್ಲೆಗಳನ್ನು ಉಪಯೋಗಿಸಿದರೆ ಸಪಕಲ್ಪ ಋತುಸ್ರಾವವಾಗುವುದು. ಪಕೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂಯಿಲ್ಲ. ಸಾಕಿದಾರರು ಮುಂದಿಗ ಶಾಸ್ತ್ರ ಗುಣವಾಗಿದೆ— ಬೆಲೆ; ರೂ. 3-1 ಸ್ಪೆಶ್ಯಲ್ ರೂ. 5— ಅಧಿಕಾಧಿಕ ಸ್ಪೆಶ್ಯಲ್ ರೂ. ೬-]ಸಿ ಕ ಹವಿ ರಹಾಣ ಪ್ರಕ್ಯೇಕ]

Mrs D. DEVEE, F. DS. (N. J.)

Tollygunge CALCUTTA.

ಪ್ರತಿನಿಧಿ: ಕಮಾಕರಪೈ, ಮಂಗಳೂರು

ಭಾರತೀಯರ ಮುಂದಿರುವ ಮಹಾ ಕಾರ್ಯ

(೨ನೇ ಪುಟದಿಂದ)

ಗ್ವಾಲಿಯರ್ ಪ್ರದೇಶಗಳಲ್ಲಿ ಹರಿಯುವ ಬೇರೆ ನದಿಗಳ ದಂಡೆಗಳು ವರ್ಷ ವರ್ಷವೂ ಭಯಾನಕವಾದ ರೀತಿಯಲ್ಲಿ ಕೊಚ್ಚಿಕೊಂಡು ಹೋಗುತ್ತವೆ. ಈ ಎಲ್ಲ ಮಣ್ಣು ಬಂಗಾಳಾಖಾತವನ್ನು ಸೇರುತ್ತದೆ. ನದಿ ದಂಡೆಯ ಒಂದೆಕರೆ ಪ್ರದೇಶದಿಂದ ೫೦-೬೦ ಟನ್ನುಗಳಷ್ಟು ಫಲವತ್ತಾದ ಮಣ್ಣು ನೀರಿನೊಡನೆ ಕೊಚ್ಚಿ ಹೋಗುತ್ತದೆ ಎಂದರೆ ಚೋದ್ಯವಾಗುತ್ತದೆ. ಮಣ್ಣು ಕೊಚ್ಚಿ ಹೋಗುವ ಕೆಲಸ ಆರಂಭದಲ್ಲಿ ಮೆಲ್ಲ ಮೆಲ್ಲಗೆ ಜರುಗಿದರೂ-ಕೊನೆಕೊನೆಗೆ ಅದರ ತೀವ್ರತೆ ಅಸಾಧಾರಣವಾಗಿ ವೃದ್ಧಿಯಾಗುತ್ತದೆ. ಪ್ರೊ. ರಾಧಾಕಮಲ ಮುಕರ್ಜಿಯವರ ಅಭಿಪ್ರಾಯದಂತೆ—ಭಾರತೀಯ ಕೃಷಿಗೆ ಇದಕ್ಕೂ ಮಿಕ್ಕಿದ ಹಾನಿ ಬೇರೆ ಇಲ್ಲ.

ಕುಗ್ಗುತ್ತಿರುವ ಜಲಧಾರಾಪಾತ್ರ

ಭಾರತದಲ್ಲಿ ಮಳೆಯು ಹೆಚ್ಚಾಗಿ ಒಂದೇ ಋತುವಿನಲ್ಲಿ ಬೀಳುತ್ತದೆ; ಅದು ಕೂಡ ಒಂದೋ ಅತ್ಯಧಿಕ ಪ್ರಮಾಣದಲ್ಲಿ; ಅಥವಾ ಅತ್ಯಲ್ಪವಾಗಿ. ಅಧಿಕ ಮಳೆಯಾಗುವ ಪ್ರದೇಶಗಳಲ್ಲಿ ಮಳೆ ನೀರಿನ ರಭಸಕ್ಕೆ ಭೂಮಿಯ ಮೇಲ್ಪದರು ಕೊಚ್ಚಿ ಹೋಗುತ್ತದೆ; ಕಡಿಮೆ ಬೀಳುವಲ್ಲಿ ಭೂಮಿಯಲ್ಲಿ ತೇವವಿಲ್ಲದಿರುವುದರಿಂದ ಫಲವತ್ತಾದ ಮೇಲ್ಪದರು ಗಾಳಿಯಲ್ಲಿ ಹಾರಿಹೋಗುತ್ತದೆ. ಬಿದ್ದ ಮಳೆಯನ್ನು ಯೋಗ್ಯರೀತಿಯಲ್ಲಿ ಸಂಗ್ರಹಿಸಿ ಇಡುವ ಪ್ರಯತ್ನವನ್ನೂ ಭಾರತದಲ್ಲಿ ಮಾಡುವುದಿಲ್ಲ. ಈ ಕಾರಣದಿಂದ ಭೂಮಿಯ ತಳದಲ್ಲಿರುವ ಜಲಧಾರಾ ಪಾತ್ರವು ನಿರಂತರ ಕುಗ್ಗುತ್ತಿದೆ. ಭೂಮಿಯಲ್ಲಿ ನೀರಿನ ಪಸೆಯೇ ಇಲ್ಲದೆ, ಅದು ಒಣಗುತ್ತಾ ಬರುವುದೆಂದರೆ ಮರುಭೂಮಿಯಲ್ಲಿ ಪರಿವರ್ತನೆಗೊಳ್ಳುವುದೆಂದೇ ಅರ್ಥ. ದಕ್ಷಿಣ ಭಾರತದಲ್ಲಿ ಅನೇಕ ಕಡೆ ಕ್ಷಾಮ ಕಾಣಿಸಿಕೊಳ್ಳಲು ಭೂಮಿಯಲ್ಲಿ ಜಲಸಂಗ್ರಹ ಇಲ್ಲದಿರುವುದೇ ಕಾರಣವೆಂದು ಕಂಡುಬಂದಿದೆ ನಮ್ಮ ದೇಶದಲ್ಲಿ ಹಿಂದೊಮ್ಮೆ ಘನವಾದ ಅರಣ್ಯಗಳು ಇದ್ದಿರಬಹುದಾದರೂ— ಈಗ ಅವೆಲ್ಲವನ್ನೂ ನೆಲಸಮ ಮಾಡಿಬಿಟ್ಟಿರುತ್ತೇವೆ. ಹಳ್ಳಿಯ ಪಕ್ಕದಲ್ಲಿರುವ ಗೋಚರಾವಿನ ಭೂಮಿಯಲ್ಲಿ ಇರುವ ಕುರುಚಲು ಗಿಡಗಳನ್ನು ಕೂಡ ಸೊಪ್ಪು ಸೆದೆಗಾಗಿ ಕಡಿಯುತ್ತೇವೆ ಪರಿಣಾಮವಾಗಿ ಭರದಿಂದ ಬೀಳುವ ವರ್ಷಾಧಾರೆಯನ್ನು ಸಮರ್ಥವಾಗಿ ತಡೆಯಬಲ್ಲ ಯಾವ ವಸ್ತುವೂ ಉಳಿದಿಲ್ಲ; ಭೂಮಿಯ ಮೇಲ್ಪದರಿನ ಮೆದು ಮಣ್ಣನ್ನು ರಕ್ಷಿಸುವುದು ಸಾಧ್ಯವಾಗಿಲ್ಲ. ಭಗೀರಥನು ಗಂಗೆಯ ಧಾರೆಯ ಜೋರನ್ನು ತಡೆದು ನಿಲ್ಲಿಸಲು ಭಗವಾನ್ ಶಿವನನ್ನು ಪ್ರಾರ್ಥಿಸಿಕೊಂಡನೆಂದು ನಮ್ಮ ಪುರಾಣಗಳಲ್ಲಿ ಹೇಳಿದೆ. ಮಳೆಯ ನೆಳಕುಗಳನ್ನು ತಡೆಹಿಡಿಯಲು ಗಿಡಮರಗಳೇ ಸಾಕಾಗುತ್ತವೆ. ಇದಕ್ಕಾಗಿ ನಾವು ಶಿವನನ್ನು ಒಲಿಸುವುದು ಬೇಡ ಆದರೆ ಗಿಡಮರಗಳ ಅನಾದರವನ್ನು ಮಾಡಿದರೆ, ನಮ್ಮ ಕೆಲಸ ಸಾಗದು.

ಪ್ರಮಾಣ ಬದ್ಧ ಅರಣ್ಯ

ಭೂಮಿಯ ಮೇಲೆ ಮರಗಿಡಗಳು, ಹುಲ್ಲು ಮುಂತಾದವುಗಳು ಯಥೇಷ್ಟ ಪ್ರಮಾಣದಲ್ಲಿದ್ದರೆ ಮಳೆಯ ರಭಸವನ್ನವು ತಡೆಯಬಲ್ಲುವು. ಭೂಮಿಯ ಫಲವತ್ತತೆಯನ್ನು ಸಂರಕ್ಷಿಸಬಲ್ಲುವು. ಬಿರುಗಾಳಿಯ ಪ್ರಭಾವವೂ ಇಂಥ ಪ್ರದೇಶಗಳ ಮೇಲೆ ಆಗುವುದಿಲ್ಲ. ಭೂಮಿಯ ಸಾರ ತೇವಭರಿತವಾಗಿದ್ದುಕೊಂಡು, ಕೃಷಿ ಯೋಗ್ಯವಾಗಿಯೇ ಉಳಿಯುತ್ತದೆ. ಆದುದರಿಂದ ನಾವು ವನಗಳನ್ನು ಬೆಳೆಸುವುದರ ಕಡೆಗೆ ಹಿಂದೆಂದೂ ಇರದಷ್ಟು ಹೆಚ್ಚು ಗಮನವನ್ನು ನೀಡಬೇಕೆಂದು ಒತ್ತಾಯಿಸುವುದರಲ್ಲಿ ತಥ್ಯವಿದೆ ಭಾರತದಲ್ಲಿ ಸದ್ಯ ೯ ಕೋಟಿ ಎಕ್ರೆಯಷ್ಟು ಪ್ರದೇಶಗಳಲ್ಲಿ ಅರಣ್ಯಗಳು ವ್ಯಾಪಿಸಿವೆ. ಭಾರತದ ವಿಸ್ತೀರ್ಣದಲ್ಲಿ ಇದು ನೂರಕ್ಕೆ ಹದಿಮೂರರಷ್ಟಾಯಿತು. ವಿಶೇಷಜ್ಞರ ಅಭಿಪ್ರಾಯದಂತೆ ಕಡಿಮೆಯೆಂದರೆ ೨೦% ಆದರೂ ವನ ಪ್ರದೇಶವಿರುವುದು ಅಗತ್ಯ. ಆದುದರಿಂದ ಭೂಮಿಯ ಫಲವತ್ತತೆಯನ್ನು ಹೆಚ್ಚಿಸುವ ಸದಿಚ್ಛೆಯನ್ನು ಇಟ್ಟುಕೊಂಡು ವನಗಳನ್ನು ಬೆಳೆಸುವುದು ಚಲೋದು. ಈಗ ಇರುವ ವನಗಳು ಪ್ರತಿಯೊಂದೂ ರಾಜ್ಯದಲ್ಲಿ ಕ್ರಮಬದ್ಧವಾಗಿ ಹರಡಿರುವುದಿಲ್ಲ ಕೆಲವೆಡೆ ಅತ್ಯಧಿಕವಿದ್ದರೆ, ಇನ್ನು ಕೆಲವೆಡೆ ಅವುಗಳ ಪ್ರಮಾಣ ಅತ್ಯಲ್ಪವಿರುತ್ತದೆ ಮಧ್ಯ ಪ್ರದೇಶದಲ್ಲಿ ಒಟ್ಟು ಭೂಮಿಯ ೪೭.೫% ವನಗಳಿದ್ದರೆ, ಪಂಜಾಬಿನಲ್ಲಿ ೪.೧% ಇದೆ ಆದುದರಿಂದ ಪ್ರತಿಯೊಂದು ರಾಜ್ಯದಲ್ಲಿಯೂ ವನಗಳನ್ನು ಪ್ರಮಾಣಬದ್ಧವಾಗಿ ಇರುವುದಕ್ಕೆ ಹೆಚ್ಚು ಲಕ್ಷ್ಯವನ್ನು ಪೂರೈಸುವುದು ಒಳ್ಳೆಯದು. ಇಂಥ ವನಗಳಿಂದ ಮಳೆಯನ್ನು ಸಮಾನ ರೀತಿಯಲ್ಲಿ ವಿತರಿಸುವ ಕಾರ್ಯವೂ ಚೆನ್ನಾಗಿ ನಡೆದೀತು; ಅನುಕೂಲ ಸಮಯಕ್ಕೆ ಮಳೆ ಬೀಳುವಂತೆ ಈ ರೀತಿಯ ವನಗಳು ನೆರವು ನೀಡಿಯಾವು. ಭಾರತೀಯ ಕೃಷಿಯು ಈಗಲೂ ಮಳೆನೀರನ್ನೇ ಆಧರಿಸಿರುವುದರಿಂದ ಸಮಯಕ್ಕೆ ಸರಿಯಾಗಿ ಚೆನ್ನಾಗಿ ಮಳೆ ಬರುವುದರ ಅಗತ್ಯ ಹೇಳತೀರದು. ಆದುದರಿಂದ ಮರಗಿಡಗಳನ್ನು ನಟ್ಟು ಬೆಳೆಸುವುದರಿಂದ ಮಳೆರಾಯನನ್ನು ಒಲಿಸಿ, ಕೃಷಿ ಸಂಪನ್ನತೆಯನ್ನು ಹೊಂದಲಿಕ್ಕೂ ಅಸ್ಪದವಿದೆ.

ಮರುಭೂಮಿಯನ್ನು ಗೆಲ್ಲುವ ಆಯುಧ

ಈ ಸಂದರ್ಭದಲ್ಲಿ ಆಕಸ್ಮಿಕವಾಗಿ ಲೋಕದ ಲಕ್ಷಾಂತರ ಚದರ ಮೈಲು ಪ್ರದೇಶದ ಮರುಭೂಮಿಗಳಿಗೆ ಆಶೋದಯವನ್ನು ಮಾಡಿಸಿರುವ ಒಂದು ಭಾರತೀಯ ಪೊದೆಯ ಶೋಧದ ಕುರಿತು ನಾಲ್ಕು ಮಾತನ್ನಾಡಬಹುದು- ಐದು ವರ್ಷಗಳ ಹಿಂದೆ ಈಜಿಪ್ಟದ ಅಲೆಗ್ಝಾಂಡ್ರಿಯಾ ನಗರದ ಸುತ್ತುಮುತ್ತಲಿರುವ ಮರು ಪ್ರದೇಶದಲ್ಲಿ ಸುಮಾರು ನಾಲ್ಕೈದು ಅಡಿ ಎತ್ತರದ, ಬೆರಳಗಾತ್ರದ ಕಾಂಡವಿರುವ, ವಸಂತಕಾಲದಲ್ಲಿ ಹುಟ್ಟಿ ಬೇಸಗೆಯಲ್ಲಿ ಒಣಗಿ ಹೋಗುವ ಒಂದು ಜಾತಿಯ ಗಿಡವನ್ನು ಕಂಡು ಜನರು ಮಂತ್ರ ಮುಗ್ಧರಾದರು! ದನಗಳೂ ಒಂಟೆಗಳೂ ಈ ಗಿಡದ ಎಲೆಗಳನ್ನು ತಿಂದರೆ, ಜನರು ಕಾಂಡ ಹಾಗೂ ರೆಂಬೆಗಳನ್ನು ಕಟ್ಟಿಗೆಯಾಗಿ ಉಪಯೋಗಿಸಿದರು. ಈ ಹೊಸ ಜಾತಿಯ ಗಿಡವನ್ನು ಪೂರಾ ಧ್ವಂಸಮಾಡಿಬಿಟ್ಟರೂ ಅದು ಮರಳಿ ಚಿಗುರಿತು. ಇನ್ನೂ ಹೆಚ್ಚು ಪ್ರದೇಶಕ್ಕೆ ಹಬ್ಬಿಕೊಂಡಿತು. ಈ ಚೋದ್ಯದ ಕತೆಯು ಫರೂಕ ವಿಶ್ವವಿದ್ಯಾಲಯದ ಸಸ್ಯ ಶಾಸ್ತ್ರಾಧ್ಯಾಪಕರಾದ ಪ್ರೊ. ಘೋಡೆಯವರ ಕಿವಿಗೆ ಬೀಳಲು ಅವರು ಕುತೂಹಲದಿಂದ ಇದರ ಹೆಸರು, ದೆಸೆಗಳನ್ನು ಕಂಡುಹಿಡಿಯಲು ಪ್ರಯತ್ನಿಸಿದರು. ಅನೇಕ ಜನರ ಕೂಡೆ ಮಾಹಿತಿ ಕೇಳಿದರೂ ತಕ್ಕ ಸಮಾಧಾನ ದೊರೆಯಲಿಲ್ಲ ಕೊನೆಗೆ ಲಂಡನಿನ ಪ್ರಸಿದ್ಧ ಸಸ್ಯ ಸಿಲಯವಾದ ಕ್ಯೂ ಗಾರ್ಡನ್ನಿನ ಅಧಿಕಾರಿಗಳಿಂದ ಈ ಗಿಡ ಭಾರತದಲ್ಲಿ ಬೆಳೆಯುವ 'ಬುಯಿ' ಎಂಬ ಗಿಡವೇ ಆಗಿರಬಹುದೆಂದು ತಿಳಿಯಿತು. ಭಾರತದ ಪೂಸಾ ಸಂಸ್ಥೆಗೆ ಈ ವಿಷಯದಲ್ಲಿ ಬರೆದು ಕೇಳಿದಾಗ ಅದರ ಅಧಿಕಾರಿಯಾದ ಡಾ. ದೇವವ್ರತರು ಈ ಭಾರತೀಯ ಗುಲ್ಮವನ್ನು ಗುರುತಿಸಿದರು ದಕ್ಷಿಣಪಂಜಾಬ, ಡೆಲ್ಲಿ, ಕೊಯಮುತ್ತೂರು ಜಿಲ್ಲೆಗಳಲ್ಲಿ ಮಾತ್ರ ಈ ಸಸ್ಯ ಬೆಳೆಯುತ್ತದೆ. ಇದರ ಶಾಸ್ತ್ರೀಯ ನಾಮ "ಕೋಚಿಯಾ ಇಂಡಿಕಾ" ಎಂದಾಗಿದೆ. ಭಾರತದ ಸಸ್ಯ ಕೋಶ ಗ್ರಂಥದಲ್ಲಿ ಈ ಸಸ್ಯವು ಜೂನಿನಲ್ಲಿ ಚಿಗುರಿ ನವಂಬರದಲ್ಲಿ ಒಣಗುವುದೆಂದೂ ಇದರ ಬೀಜಗಳು ರಂಬೆ ... ಅಂಟಿಕೊಂಡಿದ್ದು ಅಲುಗಿಸಿದರೆ ಉದುರುತ್ತವೆಂದೂ ಬೀಜವು ಮಂದ ದೃಷ್ಟಿಯವರಿಗೆ ಕಾಣಿಸದೆ ಸೂಕ್ಷ್ಮ ದೃಷ್ಟಿಯವರಿಗೂ ಸೂಕ್ಷ್ಮದರ್ಶಕದ ಸಹಾಯ ಬೇಕಾದೀತೆಂದೂ ಮೂರು ವಾಕ್ಯಗಳಿಂದ ಮಹಾ ಮಹಿಮಾವಾಗಿ ಗುಲ್ಮದ ವರ್ಣನೆ ಮಾಡಿರುವರು. ಈ ಪೊದೆಯನ್ನು ಯಶಸ್ವಿಯಾಗಿ ಬೆಳೆಸಿಕೊಂಡು ಮರುಭೂಮಿಯನ್ನು ನಂದನ ವನವಾಗಿಸಬಹುದೆಂದು ಆಶಿಸುವ ಜನರು ಅನೇಕ. ಡಾ. ದೇವವ್ರತ ಚಟರ್ಜಿಯವರಂತೂ ಈ ಗುಲ್ಮದ ಬೀಜ ಸಂಗ್ರಹ ಕಾರ್ಯವನ್ನು ತತ್ಪರತೆಯಿಂದ ಗೈಯುತ್ತಿರುವರು.

ವನಮಹೋತ್ಸವದ ಅಗತ್ಯ

ಆದರೆ ಇಂಥ ಸಾಹಸಗಳು ಒಂದೆರಡು ವರ್ಷಗಳಲ್ಲಿಯೇ ಫಲ ಪ್ರದವಾಗುವುವೆಂದು ನಿರೀಕ್ಷಿಸುವುದು ತಪ್ಪು. ಈ ಪೊದೆಯೊಂದೇ ಬೆಳೆದರೆ ನಂದನ ವನವಾಗಲಾರದು. ಮರುಭೂಮಿಯನ್ನು ಗೆಲ್ಲುವ ಆಯುಧ ಮಾತ್ರ ಈ ಸಸ್ಯ. ಒಮ್ಮೆ ಹಸುರು ಬೆಳೆದರೆ ನೆಲ ಮೆತ್ತಗಾಗಿ ಫಲ್ಯಗೆ ಮಣ್ಣಾಗುತ್ತದೆ. ಭೂಮಿಯೂ ತಂಪಾಗುತ್ತದೆ. ಹಸಿರು ಬೆಳೆದಂತೆ ಮಳೆಯೂ ಬರುತ್ತದೆ. ಮಳೆಯಿಂದಲೇ ಬೆಳೆ. ಇದು ಒಂದು ರೀತಿಯ ಪ್ರಯೋಗವಾದರೆ—ಭಾರತ ಸರಕಾರವು ಇನ್ನೊಂದು ರೀತಿಯ ಉಪಾಯವನ್ನು ಈಗಾಗಲೇ ಕೈಗೊಂಡಿದೆ. ಇದರಿಂದ ತೀವ್ರ ಪರಿಣಾಮವಾದೀತೆಂದು ಊಹಿಸಿರುವರು. ನೆರೆಗಳನ್ನು ನಿಯಂತ್ರಿಸಲೂ ಭೂಮಿಯು ಕೊಚ್ಚಿ ಹೋಗುವುದನ್ನು ತಡೆಯಲೂ ವನಮಹೋತ್ಸವವನ್ನು ಆಚರಿಸುವುದರ ಅಗತ್ಯವಿದೆ ಎಂದು ಸರಕಾರ ಪ್ರಚಾರ ಮಾಡುತ್ತಿದೆ. ಸರಕಾರದ ಈ ಉಪಕ್ರಮ ಸ್ತುತ್ಯ; ಇದಕ್ಕೆ ಜನತೆಯ ಪ್ರೋತ್ಸಾಹವೂ ಅವಶ್ಯವಾಗಿ ದೊರಕಬೇಕು. ಕೇಂದ್ರೀಯ ಭೂಮಿ ಸಂರಕ್ಷಣಾ ಸಂಸ್ಥೆಯೊಂದನ್ನು ಸ್ಥಾಪಿಸಿ, ಕೃಷಿ ವೈಜ್ಞಾನಿಕರ ಸಲಹೆಯಂತೆ ಕಾರ್ಯಕ್ರಮವನ್ನು ರೂಪಿಸಬೇಕು. ಮೊಸತಾಗಿ ವೃಕ್ಷಾರೋಪಣ ಕಾರ್ಯವನ್ನು ಜರುಗಿಸುವಾಗ ಶಾಸ್ತ್ರೀಯ ತಳಹದಿಯ ಮೇಲೆ ಇದನ್ನು ನಡೆಸುವುದು ಇಷ್ಟವಾಗಿದೆ. ಗ್ರಾಮೀಣ ಜನತೆಗೆ ವನಗಳ ಮಹತ್ವವನ್ನು ತಿಳಿಸಿ ಹೇಳಬಲ್ಲ ಪ್ರಯತ್ನಗಳು ಬಗೆಬಗೆಯಾಗಿ ನೆರವೇರಬೇಕು. ಭಾರತದ ಜನಶಕ್ತಿಯನ್ನು ಚೆನ್ನಾಗಿ ಉಪಯೋಗಿಸಿಕೊಂಡಲ್ಲಿ ವನಗಳನ್ನು ಮರಳಿ ಸೃಷ್ಟಿಸುವ ಕೆಲಸ ಕಷ್ಟಕರವೇನಲ್ಲ. ಈ ಪ್ರಯತ್ನಗಳು ದೀರ್ಘಾವಧಿಯವೆಂದು ತಿಳಿದು ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನು ಸೇರಿಸಿಲ್ಲ. ಇದು ನಿಜವಾದರೂ—ಭಾರತೀಯ ಜನತೆ ತಾವಾಗಿಯೇ ಕೈಗೊಳ್ಳತಕ್ಕ ಕಾರ್ಯವಿದೆಂದು ಮರೆಯಲಿಕ್ಕಾಗದು. ಭೂಮಿಯ ಮೇಲೆ ಅನಾದಿ ಕಾಲದಿಂದ ನಡೆಸಿದ ಅತ್ಯಾಚಾರಕ್ಕೆ ಪ್ರಾಯಶ್ಚಿತ್ತರೂಪದಲ್ಲಿಯಾದರೂ ನಾವು ವೃಕ್ಷಾರೋಪಣ ಕಾರ್ಯವನ್ನು ಆಗತ್ಯವಾಗಿ ಗೊಳ್ಳಬೇಕು ಕೃಷಿಯ ಬಹುಮುಖವಾದ ಉನ್ನತಿ ಹಾಗೂ ಕ್ಷಾಮದೇವತೆಯ ಉಚ್ಚಾಟನೆಯಂಥ ಗುರುತರವಾದ ಕಾರ್ಯಕ್ಕೆ ಪೀಠಿಕಾರೂಪದಲ್ಲಿ ಮರಗಿಡಗಳನ್ನು ಬೆಳೆಸುವ ಕಾರ್ಯವಿದೆ. ನಾವೆಲ್ಲರೂ ಒಂದಾಗಿ ಪ್ರಯತ್ನಿಸಿ ಭಾರತವನ್ನು ಸಸ್ಯಶ್ಯಾಮಲವಾಗಿಸಲು ನೋಡೋಣ!

— ೦ —

'ಗೋಪಾಲ ಭೇಷಜಾಶ್ರಮ' ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ| ಯಂ. ವಿ. ಶಾಸ್ತ್ರೀ,

ಇವರ

ನವಜೀವಾತು

ಎಂಬ

ಸೂತಿಕಾರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಸುತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಂದ್ರಪಿರಸಾಯನ.



ಚಿಟ್ಟಿನ ಮಾಹಿತಿಗೆ— ಡಾ| ಯಂ. ಸಿ ಶಾಸ್ತ್ರೀ, ಯಲ್. ಐ. ಎಂ.

ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಸ್ಥಾಪಿಸ್ಟರು:— ಡಾ| ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು.

ದಯಮಾಡಿ ನಿಮ್ಮ ಚಂದಾ ಹಣವನ್ನು ಕಳುಹಿಸಿಕೊಡಿರಿ

ಮೇಷ— ನಿಮ್ಮ ಅದೃಷ್ಟವಿಂದು ಸಾಕಷ್ಟು ಉತ್ತಮವಾಗಿರುವದಿಲ್ಲವು. ಆದಕಾರಣ ಕೆಲವೊಂದು ನಿಮ್ಮ ಕಾರ್ಯಗಳು ವ್ಯರ್ಥ ಪರಿಶ್ರಮದಾಯಿಗಳಾಗುವವೇ ಹೊರತು ಫಲಕಾರಿಗಳಾಗಲಾರವು. ಅಮಾಧಿಕವ್ಯಯ ಅನಾರೋಗ್ಯ ಗೃಹಕಾಪತ್ರ್ಯ ಸ್ಥಾನಚಲನಾದಿಗಳಿಂದ ಸತತಪೀಡಿತರಾದ ನಿಮಗೆ ತಾ. 30, 31, 1 ಈ ದಿನಗಳಲ್ಲಿ ಬಂಧುಮಿತ್ರರ ಸಹಕಾರದಿಂದಾಗಿ ಕಿಂಚಿದ್ಧನಾಪ್ತಿ ಸುಖ ವಿಜಯಗಳು ಲಭಿಸಲಿವೆ.

ವೃಷಭ— ಕಷ್ಟಪಡದೆ ಇಷ್ಟಪ್ರಾಪ್ತಿಯಾಗುವ ಕಾಲವೀಗ ಬಂದಿದೆ ಉದಾಸೀನರಾಗದಿರಿ. ನಿಮ್ಮ ಸಹಾಯಕ್ಕೆ ಆಪ್ತೇಷ್ಟ ವರ್ಗದವರು ಬದ್ಧಕಂಕಣರಿರುವರು. ನಿರೀಕ್ಷೆಗಿಂತ ದ್ವಿಗುಣ ಫಲ ಲಭಿಸೀತು ಗೃಹತಾಪತ್ರ್ಯಗಳು ದೂರವಾಗಿ ನೆಮ್ಮದಿಯಿಂದ ಕಾಲಯಾಪನೆ ಮಾಡುವಿರಿ. ಆಕಸ್ಮಿಕ ಪ್ರವಾಸದಿಂದಾಗಿ ತನುಪೀಡೆ ಧನಹಾನಿಗಳು ಕಂಡು ಬಂದರೂ ವಾರದ ಆದ್ಯಂತ ದಿನಗಳು ಶ್ರೇಯೋದಾಯಿಗಳಾಗಿವೆ.

ಅಸಫಲತೆಯ ಮೂಲ

(೧ನೇ ಪುಟದಿಂದ)

ಲ್ಲದಿರುವುದೂ ಕಾರ್ಯ ಪ್ರವಿಷ್ಟರಾಗುವುದಕ್ಕೆ ಬೇಕಿರುವ ಇಚ್ಛಾ ಶಕ್ತಿ ಇಲ್ಲದಿರುವುದೂ ಅಸಫಲತೆಯ ಕಾರಣಗಳಾಗಬಲ್ಲುವು. ಇದರಂತೆ ನಮ್ಮ ಗುರಿಯನ್ನು ಮುಟ್ಟುವುದಕ್ಕಾಗಿ ಕೈಗೊಳ್ಳಬೇಕಾದ ಕಾರ್ಯ ಪ್ರಣಾಳಿಯ ಸ್ಪಷ್ಟ ಕಲ್ಪನೆಯ ಅಭಾವ ಮತ್ತು ನಮ್ಮ ದುರಾಭ್ಯಾಸಗಳು ಕೂಡ ಅಸಫಲತೆಯನ್ನು ತರಬಹುದು. ಜನರನ್ನು ಪ್ರೀತಿಯಿಂದ ಕಾಣುವ ಬುದ್ಧಿ ಇಲ್ಲದಿದ್ದರೆ, ಅವಿನಯ ನಿಷ್ಠುರತೆಗಳೇ ನಮ್ಮ ನಡವಳಿಕೆಯಲ್ಲಿ ಎದ್ದು ಕಾಣುತಿದ್ದರೆ ನಾವೆಂತು ಸಫಲರಾಗಲು ಸಾಧ್ಯ? ಆಧ್ಯಾತ್ಮಿಕ ಜ್ಞಾನದ ವಿಕಾಸವೂ ಅಸಫಲತೆಯನ್ನು ದೂರೀಕರಿಸಲು ಕೆಲವೊಮ್ಮೆ ಅಗತ್ಯವೆನಿಸುತ್ತದೆ. ಮಹಾತ್ಮಾ ಗಾಂಧೀಯವರು "ನನ್ನನ್ನು ನಿರಾಶೆಯು ಕವಿದಾಗ.. ಗೀತೆಯನ್ನು ಓದುತ್ತೇನೆ" ಎಂದು ಮುಂತಾಗಿ ಹೇಳಿರುವುದು ಗಮನಾರ್ಹವಾಗಿದೆ. ಮನುಷ್ಯನು ಪ್ರಯತ್ನವನ್ನಷ್ಟೆ ಮಾಡಿಯಾನು ಹೊರತು, ಫಲಾಫಲವು ದೇವರ ಕೈಯಲ್ಲಿದೆ ಎನ್ನುವ ಸುಭಾಷಿತ ಇಲ್ಲಿ ನೆನಪಿಗೆ ಬರುತ್ತದೆ.

ಈ ಮಾತನ್ನು ಇಂದಿನ ಜನರು ಅಷ್ಟಾಗಿ ಮೆಚ್ಚಲಿಕ್ಕಿಲ್ಲ. ಮನುಷ್ಯನೇ ಸರ್ವ ಶಕ್ತನೆಂದು ಮದಭರಿತರಾಗಿರುವ ಜನ ಆಧ್ಯಾತ್ಮ್ಯವು ಪಲಾಯನವಾದಿತ್ವವನ್ನು ಎತ್ತಿಹಿಡಿಯುತ್ತದೆ ಎಂದೇ ಹೇಳಿಯಾರು. ಅದು ಹೇಗೇ ಇರಲಿ—ಮನುಷ್ಯ ಪ್ರಯತ್ನಗಳು ಸದುದ್ದೇಶದಿಂದ ಕೂಡಿರಬೇಕಾಗಿವೆ ಇಲ್ಲದಿದ್ದರೆ, ಆರಂಭದಲ್ಲಿಯೇ ಅವುಗಳು ವಿಘ್ನಗಳನ್ನು ಇದಿರಿಸುವ ಸಂಕಟ ಪರಿಸ್ಥಿತಿ ಬರುತ್ತದೆ. ಒಳ್ಳೆಯ ಉದ್ದೇಶಕ್ಕೆ ಕೈಗೊಳ್ಳುವ ಪ್ರಯತ್ನಗಳಿಗೆ ಒಳ್ಳೆಯ ಚಾರಿತ್ರ್ಯವುಳ್ಳವನೇ ಆಧಾರವಾಗಿದ್ದರೆ—ಆಗ ಕುಂದಣಕ್ಕೆ ನವರತ್ನ ಜೋಡಿಸಿದ ಶೋಭೆ ಬರುತ್ತದೆ. ಕೊರಿಯಾ ಸಂಬಂಧದಲ್ಲಿ ಭಾರತ ತಂದ ಗೊತ್ತುವಳಿಗಳು ರಾಷ್ಟ್ರಗಳು ಅನುಕೂಲಮತ ಕೊಟ್ಟಿರುವದರ ರಹಸ್ಯ ಈ ಮಾತಿನಲ್ಲಿ ಹುದುಗಿದೆ. ನಾವೆಲ್ಲರೂ ಪ್ರಾಮಾಣಿಕರಾಗಿ, ಸದುದ್ದೇಶಕ್ಕಾಗಿ ದುಡಿಯುತ್ತಿದ್ದರೆ, ಅಸಫಲತೆ ಹತ್ತಿರ ಸುಳಿಯದು.

—ಓಂತತ್ಸತ್

ವಾರದ ಒಳಿತು ಕೆಡುಕುಗಳು

ತಾ. ೨೬—೩—೫೩ರಿಂದ ತಾ. ೧—೪—೫೩ರ ವರೆಗೆ.

ಮಿಥುನ— ಕೈ ಕೆಸರಾಗದೆ ಬಾಯಿ ಮೊಸರಾಗದು ಎಂಬಗಾದೆಯಂತೆ ನೀವು ಈವಾರದಲ್ಲಿ ಕಾರ್ಯಪ್ರವೃತ್ತರಾಗಿರಿ. ಅದೆಂತಹ ಮಹತ್ಕಾರ್ಯವೇ ಇರಲಿ ನಿಮ್ಮ ಭಾಗಕ್ಕೆ ಅತೀವ ಸುಲಭಸಾಧ್ಯವಾಗಲಿದೆ. ರಾಜಕೀಯ ಸಾಮಾಜಿಕ ಕ್ಷೇತ್ರಗಳಲ್ಲಿ ಒಳ್ಳೇ ಕೀರ್ತಿ ವಿಜಯಗಳನ್ನು ಪಡೆವಿರಿ. ಕೆಲವೊಮ್ಮೆ ಸೇವಕಜನರು ನಿಯಮ ಬಾಹಿರರಾದಾರು. ತಾ. 27 28, 29, ಈ ದಿನಗಳಲ್ಲಿ ಇಷ್ಟಾರ್ಥವು ಸಫಲವಾಗುವದು.

ಕರ್ಕಟ— ಗಗನ ಗೋಪುರಗಳಂತೆ ನಿಮ್ಮ ಸಂಕಲ್ಪಗಳೆಲ್ಲವೂ ಕುಸಿದು ಬೀಳಲಿವೆ. ಬುಧೇತರ ಸಕಲ ಗ್ರಹರೂ ವಿಮುಖರಾಗಿರುವುದರಿಂದ ಚಿನ್ನ ಹಿಡಿದರೂ ಮಣ್ಣಾದೀತು. ಮನಸ್ಸು ಅತೀವ ಚಂಚಲವಾಗಲಿದೆ ಆರ್ಥಿಕ ಮುಗ್ಗಟ್ಟಿನಿಂದಾಗಿ ದಿನ ಯಾಪನೆಯು ಬಹಳ ಕಷ್ಟವಾಗುವದು. ಆಪ್ತೇಷ್ಟರ ವಿರಹ ದುಃಖಕ್ಕೊಳಗಾದ ನಿಮಗೆ ತಾ. 26, 30, 31 ಈ ದಿನಗಳಲ್ಲಿ ಕೊಂಚ ಸುಖ ನೆಮ್ಮದಿ ಲಭಿಸೀತು.

ಸಿಂಹ— ಎಂತಹ ವಿಘ್ನ ವಿದ್ರೋಹಗಳು ಬಂದರೂ ಮುಂದಿಟ್ಟ ಹೆಜ್ಜೆಯನ್ನು ಹಿಂದಿಡಲಾರಿ. ಗುರ್ವನುಗ್ರಹದಿಂದಾಗಿ ನಿಮ್ಮ ಸಂಕಲ್ಪಗಳು ವ್ಯರ್ಥವಾಗಲಾರವು. ಪ್ರಬಲರಾದ ಇದಿರಾಳಿಗಳನ್ನೂ ಪರಾಭವಗೊಳಿಸುವ ಶಕ್ತಿಯುಕ್ತಿಗಳು ನಿಮ್ಮಲ್ಲಿರುವ ಕಾರಣ ನಿಮ್ಮ ಪ್ರತಿಯೊಂದು ಕಾರ್ಯಗಳೂ ನಿರೀಕ್ಷೆಗಿಂತ ಅಧಿಕ ಫಲವೀಯುವವು. ತಾ. 26, 30, 31 ರಲ್ಲಿ ಸ್ವಲ್ಪ ಅನಾರೋಗ್ಯ ಗೃಹಕಲಹಗಳು ಕಾಣಿಸುವವು.

ಕನ್ಯಾ— ಶ್ರಮವಹಿಸಿ ದುಡಿಯುವಿರಿ. ಆದರೆ ತಕ್ಕ ಫಲಮಾತ್ರ ಕಾಣಿಸದು. ಶತ್ರುಜನರು ಪ್ರತೀಕಾರಾಸಕ್ತರಾಗುವರು. ಅನಿರೀಕ್ಷಿತ ಪರ್ಯಟನದಿಂದಾಗಿ ಕಷ್ಟನಷ್ಟಗಳಿಗೀಡಾಗುವಿರಿ. ಕಫ ಪಿತ್ಥ ಪ್ರಕೋಪವು ವಿಶೇಷವಾಗಿ ಬಾಧಿಸಲಿದೆ. ಖರ್ಚಿನ ಭಾಗಗಳು ಅತಿಯಾಗಿದ್ದರೂ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಲಾರಿರಿ. ತಾ. 26, 30, 31ರಲ್ಲಿ ಮಿತ್ರಭೆಟ್ಟಿ ಸುಖಭೋಗ ಭೋಜನಗಳು ಲಭಿಸುವದು.

ತುಲಾ— ಗೃಹಕೃತ್ಯದಲ್ಲಿನ ಅವ್ಯವಸ್ಥೆಯಿಂದಲೂ ಪತ್ನೀಪುತ್ರರೊಳಗಣ ಮನಸ್ತಾಪದಿಂದಲೂ ನಿಮಗೆ ಸಂಸಾರದಲ್ಲಿ ವಿರಕ್ತಿ ಕಾಣಿಸಬಹುದು. ವ್ಯಾಪಾರ ವ್ಯವಹಾರಗಳಲ್ಲಿ ನಷ್ಟವೇ ಅಧಿಕವಾದೀತು. ಆದರೆ ಗುರುಬಲಯುಕ್ತರಾದ ನಿಮಗೆ ಸನ್ಮಿತ್ರರ ಮತ್ತು ಬಂಧುಜನತೆಯ ಸಹಕಾರವು ಲಭಿಸಲಿದೆ. ಬಹುಕಾಲ ಅನಿಷ್ಟಗಳು ದೂರವಾಗುವವು ಹಣದ ಬಿಕ್ಕಟ್ಟೂ ಉಂಟಾಗದು. ತಾ. 30, 31 ಹೊರತಾಗಿ ಉಳಿದ ದಿನಗಳಲ್ಲಿ ಸುಖನೆಮ್ಮದಿಗಳನ್ನು ಪಡೆವಿರಿ.

ವೃಶ್ಚಿಕ— ಕುಜಬುಧರ ಅನುಗ್ರಹದಿಂದಾಗಿ ನಿಮಗೀವಾರವು ಅಷ್ಟೊಂದು ಕೆಡುಕೆನಿಸದು. ಕಷ್ಟಸಾಧ್ಯವಾದ ಕೆಲಸವು ಕೂಡ ನಿಮ್ಮ ಭಾಗಕ್ಕೆ ತೃಣಪ್ರಾಯವಾದೀತು ಆದರೆ ಅನಿರೀಕ್ಷಿತವಾಗಿ ಪ್ರಾಪ್ತವಾಗತಕ್ಕ ಶೋಕಪರಂಪರೆಗಳಿಂದಲೂ ಶತ್ರುಪೀಡೆ ವ್ಯರ್ಥ ಖರ್ಚುಗಳಿಂದಲೂ ನಿಮ್ಮ ತನುಮನಗಳಿಗೆ ಸುಖನೆಮ್ಮದಿಯಿರದು. ವಾತ ಕಫ ದೋಷದಿಂದ ಆರೋಗ್ಯವು ಕೆಡಲಿದೆ. ವಾರದ ಆದ್ಯಂತ ದಿನಗಳನ್ನು ಬಿಟ್ಟು ಉಳಿದ ದಿನಗಳು ಕೊಂಚ ಉತ್ತಮವೆನಿಸುವವು.

ಧನು— ಕರ್ಮಕುಶಲರಾದ ನಿಮಗೆ ಸದ್ಯದ ದಿನಗಳಲ್ಲಿ ಯಾವೊಂದೂ ತಾಪತ್ರಯಗಳುಂಟಾಗವು. ಪರಿಶ್ರಮಕ್ಕೆ ತಕ್ಕ ಫಲವು ಲಭಿಸಲಿದೆ. ಆರ್ಥಿಕ ಭಾಗವು ಉತ್ತಮವಾಗಿಯೇ ಇರುವದು. ಗೃಹತಾಪತ್ರಯಗಳೂ ಬಹುತೇಕ ಮಾಯವಾಗುವವು. ನೌಕರಿ ಜನರಿಗೆ ಅಧಿಕಾರಿಗಳಿಂದ ಕೊಂಚ ತಾಪತ್ರಯವೆನಿಸೀತು. ರಾಜಕೀಯದಲ್ಲೂ ಕೂಡ ಫಲವು ಉತ್ತಮವಿರಲಾರದು ವಾರಾಂತ್ಯದ 3 ದಿನಗಳಲ್ಲಿ ನಿಮ್ಮ ಬಯಕೆಯು ಸಫಲವಾಗಲಿದೆ.

ಮಕರ— ಹಿಂದಿಗಿಂತ ಇಂದಿನ ದಿನಗಳು ಎಷ್ಟೋ ಉತ್ತಮವೆನಿಸುವವು. ನಿರುದ್ಯೋಗ ಸಮಸ್ಯೆಯಿಂದ ಮುಕ್ತರಾಗುವಿರಿ. ಹಣದ ಬಿಕ್ಕಟ್ಟೂ ಪರಿಹಾರವಾಗುವದು ದುರ್ಜನರ ಸಹವಾಸದಿಂದಾಗಿ ಅಪವಾದಕ್ಕೆ ಗುರಿಯಾಗುವ ಸಂಭವವಿದೆ. ನಿಮ್ಮ ಆಪ್ತೀಯರೇ ನಿಮಗೆ ವಿರೋಧವಾಗಿ ವರ್ತಿಸಲಿರುವರು. ಪಿತ್ಥೋಷ್ಣ ದೋಷದಿಂದ ಆರೋಗ್ಯ ಕೆಡಲಿದೆ. ವಾರದ ಆದ್ಯಂತ ದಿನಗಳು ಇತರ ದಿನಗಳಿಕಿಂತ ಉತ್ತಮವಿವೆ.

ಕುಂಭ— ಹಿಡಿದ ಕಾರ್ಯವನ್ನು ಕೊನೆಗೊಳಿಸದೆ ಮಧ್ಯದಲ್ಲಿ ಬಿಡಲಾರಿ. ಆದರೆ ನಿಮ್ಮ ಶ್ರಮಕ್ಕೆ ತಕ್ಕುದಾದ ಫಲ ಲಭಿಸಲಾರದು, ಕಳೆದು ಹೋದ ಒಡವೆ ವಸ್ತುಗಳೂ ನಷ್ಟವಾದ ದ್ರವ್ಯಗಳೂ ಪುನಃ ಕೈಸೇರುವ ಸಂಭವವಿದೆ. ವಿದ್ಯೋಪಜೀವಿಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ಕೊಂಚ ಎಡರುತೊಡರುಗಳು ಹೆಚ್ಚಲಿವೆ. ನಿಷ್ಕಾರಣವಾಗಿ ಹಲವರೊಡನೆ ವಾಕ್ಕಲಹವಾದೀತು. ವಾರಾದಿಯ 4 ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳಿಗವಕಾಶವಿಲ್ಲವು.

ಮೀನ— ಧನಭಾಗ್ಯಪತಿಯಾದ ಅಂಗಾರಕನು ಗುರುಶುಕ್ರರಿಂದೊಡಗೂಡಿ ಧನಸ್ಥಾನದಲ್ಲೇ ಇರುವುದರಿಂದ ನ್ಯಾಯವಿಹಿತವಾದ ಸತ್ಯಮಾರ್ಗಗಳಲ್ಲಿ ಒಳ್ಳೆಯ ಲಾಭವಿದೆ ಆಕಸ್ಮಿಕವಾಗಿ ಪ್ರವಾಸಗಳು ಸಂಭವಿಸುವವು. ಪತ್ರವ್ಯವಹಾರಕ್ಕಿಂತಲೂ ಮುಖ್ಯತಃ ಭೆಟ್ಟಿಯು ಸಫಲವಾಗಲಿದೆ. ವಾದದಲ್ಲಿ ವಿಜಯವಿದೆ. ಆರೋಗ್ಯದ ಸಲುವಾಗಿ ಸ್ವಲ್ಪ ಜಾಗ್ರತೆ ವಹಿಸಿರಿ. ತಾ. 27ರಿಂದ 31ರ ವರೆಗಿನ ದಿನಗಳು ಸಫಲದಾಯಿಗಳಿವೆ.

ರಕ್ಷಣೆಗೂ ಉಳಿತಾಯ ವ್ಯವಸ್ಥೆಗೂ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್.

ಸ್ಥಾಪನೆ: 1934. ಪ್ರಧಾನ ಕಚೇರಿ: ಮದ್ರಾಸು.

66½ ಲಕ್ಷಕ್ಕೂ ಮಿಕ್ಕಿದ ಹೊಸ ವ್ಯವಹಾರ, **15** ಲಕ್ಷಕ್ಕೂ ಮಿಕ್ಕಿದ ಪ್ರೀಮಿಯಮ್ ಉತ್ಪತ್ತಿ, **45¾** ಲಕ್ಷಕ್ಕೂ ಮಿಕ್ಕಿದ ಜೀವನಿಮಾ ನಿಧಿ. **10¾** ಲಕ್ಷಕ್ಕೂ ಮಿಕ್ಕಿದ ಮೂಲಧನಗಳು. ಸಾಧಾರಣ **3** ಕೋಟಿಯಷ್ಟು ಊರ್ಜಿತದಲ್ಲಿರುವ ವಹಿವಾಟು.

ಪ್ರಗತಿಪರವಾದ ಈ ಕಂಪೆನಿಯಲ್ಲಿ ಒಂದು ಪೋಲಿಸಿ ಇರುವುದು ಉತ್ತಮ ರೀವನಾತಿ ಅಂತೆಯೇ ಇದರ ಏಜನ್ಸಿ ಇರುವುದು ಚಲೋ ವ್ಯವಹಾರ ಸಾಧನ.

ಉತ್ಸಾಹಿ, ಜನಾನುರಣೀಯ, ಸಮರ್ಥ ಸ್ತ್ರೀ ಪುರುಷರಿಂದ ಕಂಪೆನಿ ಪ್ರಾತಿನಿಧ್ಯ ಬಗ್ಗೆ ಅರ್ಜಿಗಳು ಸ್ವಾಗತಾರ್ಹವು. ದಯಮಾಡಿ ಬರೆಯಿರಿ:-

ಜೆ. ಆರ್ ವಾಲ್ಕ, ಬ್ರಾಂಚ್ ಮೆನೇಜರ್,

ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು [ದ. ಕ.]

ಖಾತ್ರಿ ಚಿನ್ನದ ನೆಕ್ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಅವುಗಳ ರುಚಿರುಚಿ ಹೇಳಬೇಕೆ

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd., Moolky, S. K.

Edited, Printed & Published By K. H. Shetty at the Navayuga Press, Udipi, S. India

Regd. No. M 3618

LICENCE No. 31
nsed to Post without Pre-payment

ನವಯುಗ
ಆರೋಗ್ಯ ಮಂತ್ರಿ
[illegible] ಶೆಟ್ಟರಿಂದ
ಸ್ವೀಕೃತ ವಾರಪತ್ರಿಕೆ,
ಉಡುಪಿ, ದ. ಕನ್ನಡ.

ಚಂದಾ 5-12-0
ತಿಂಗಳಿಗೆ 0-0-0
ಪ್ರತಿಗೆ 0-2-0

ಅಂತರಂಗ
ತ್ರೈಮಾಸಿಕ ಪತ್ರಿಕೆಯ
ಉಪಯುಕ್ತವಾದ
90 ಪುಸ್ತಕಗಳು
ರೂ. 24ಕ್ಕೆ ಸಿಗುತ್ತವೆ.
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ

ನವಯುಗ

2-4-1953

Vol 32 No 30 NAVAYUGA WEEKLY POST BOX NO 22 UDIPI

ವರ್ಷ ೩೨ ವಾರ ೩೦

ಸಮ್ಮ ಕೆಲಸ ಕಾರ್ಯಗಳ ಕುರಿತು ಮತ್ತು ಚಟುವಟಿಕೆಗಳ ಸಂಬಂಧದಲ್ಲಿ ಯಾರಾದರೂ ನಾಲ್ಕು ಒಳ್ಳೆಯ ಮಾತನ್ನಾಡಬೇಕು, ನಮ್ಮನ್ನು ಮೆಚ್ಚಿ ಪ್ರಶಂಸಿಸಬೇಕು ಎಂದು ಯಾರು ಬಯಸುವುದಿಲ್ಲ? ಇಂಥ ಸೇರಿಕೆಯ ಮಾತು ಸಕಾಲದಲ್ಲಿ ಕೇಳಲು ಸಿಗದಿದ್ದರೆ ನಮಗೆ ನಿರಾಸೆಯಾಗುತ್ತದೆ, ಆತ್ಮವಿಶ್ವಾಸವೂ ತಗ್ಗುತ್ತದೆ ನಾವು ತಪ್ಪಿಬಿದ್ದಿರುವೆವೋ ಎಂಬ ಖೇದದ ಸಂಶಯ ತಲೆ ಎತ್ತುತ್ತದೆ. ಇದನ್ನೆಲ್ಲ ನಿವಾರಿಸಲಿಕ್ಕೆ ನಮ್ಮಲ್ಲಿ ಪ್ರತಿಯೊಬ್ಬನಿಗೂ ಮೆಚ್ಚುಗೆಯ ನುಡಿ ಅಥವ ಪ್ರೋತ್ಸಾಹಕಗಳು ಅತ್ಯವಶ್ಯವಾಗಿವೆ. ಜನ ತುಂಬಿದ ಸಭೆಯ ಮುಂದೆ ಬಗೆಬಗೆಯ ವಿನೋದಪೂರ್ಣ ಕತೆಗಳನ್ನು ಹೇಳುತಿದ್ದಂತೆಯೂ ಚಣಕವಾಡುಗಳನ್ನು ಹಾಡುತಿದ್ದಂತೆಯೂ ಪ್ರಸಿದ್ಧ ಹಾಸ್ಯಗಾರನೊಬ್ಬನ ಕನಸು ಕಂಡನಂತೆ. ಆದರೆ ದುರ್ದೈವದಿಂದ ಅಲ್ಲಿ ನೆರೆದ ಸಾವಿರಾರು ಸ್ತ್ರೀಪುರುಷರಲ್ಲಿ ಯಾರೊಬ್ಬರೂ ವಾಹವಾ' 'ಶಾಭಾಷ್" ಎಂದು ಮುಂತಾಗಿ ಪ್ರಶಂಸೋದ್ಗಾರಗಳನ್ನೆತ್ತಲಿಲ್ಲ! ನಗಲೂ ಇಲ್ಲ, ಕೈಚಪ್ಪಾಳೆ ಬಡೆಯಲೂ ಇಲ್ಲ! ಇಂಥ ಕಹಿಯನುಭವವನ್ನು ಕನಸಿನಲ್ಲಿ ಪಡೆದದ್ದೇ ಆದರೂ — ಆ ವಿದೂಷಕ 'ನನಗೆ ವಾರಕ್ಕೆ ೫೦,೦೦೦ ಪವನುಗಳ ಗಳಿಕೆಯಾದರೂ ಸ್ವಲ್ಪವೂ ಮೆಚ್ಚುಗೆಯನ್ನು ವ್ಯಕ್ತಪಡಿಸದ ಮೊದ್ದುಗಳ ನಡುವೆ ಬದುಕುವುದೇ ಸಾಧ್ಯವಿಲ್ಲ. ಅದು ಘೋರ ನರಕ" ಎಂದನಂತೆ.

ಇದರ ಮೇಲಿಂದ ಅನ್ಯರು ನಮ್ಮನ್ನು ಮೆಚ್ಚಿ ಕೊಂಡಾಡಬೇಕೆಂಬ ಅಭಿಲಾಷೆ ಎಲ್ಲರಲ್ಲೂ ಇದೆಯೆಂಬ ಸಂಗತಿ ವ್ಯಕ್ತಗೊಂಡಿತು. ಆದರೆ ಈ ರೀತಿ ಸೇರಿಕೆಯ ಮಾತುಗಳನ್ನು ಕೇಳುವುದಕ್ಕಾಗಿ ಮಾತ್ರ ಕಿವಿ ನಿಗುರಿಸಿ ಕುಳಿತರೆ ಆಗದು. ಬೇರೆಯವರ ಸಂಗತಿಯಲ್ಲಿ ನಾವು ಹೇಗೆ ಕೊಂಡಾಡಬೇಕೆಂಬುದನ್ನೂ ಕಲಿಯುವುದು ಅವಶ್ಯ. ಹೀಗೆ ಅನ್ಯರನ್ನು ಮೆಚ್ಚಿ ಪ್ರಶಂಸಿಸುವುದಕ್ಕೆ ಸಾಮಾನ್ಯ ಕೌಶಲ್ಯ ಸಾಲಲಿಕ್ಕಿಲ್ಲ. ನಮ್ಮ ಹೊಗಳಿಕೆಯು ಸರಿಯಾದ ರೀತಿಯುಳ್ಳದ್ದಿರಬೇಕು. ಅದು ಡೋಂಗಿ ಎಂದೂ ಮುಖಸ್ತುತಿ ಮಾತ್ರವೆಂದೂ ಸ್ವಾರ್ಥಪರತೆಯಿಂದ ಕೂಡಿದೆ ಎಂದೂ ಸಂದೇಹಪಡುವಂತಿರಬಾರದು. ಅದು ಯಥಾರ್ಥವಾದುದಾಗಿರಬೇಕು. ವಿವೇಚನೆ ಮತ್ತು ವಾಸ್ತವತೆಗಳೇ ನಮ್ಮ ಸೇರಿಕೆಯ ಮಾತಿನ ಅಡಿಪಾಯವಾಗಿರಬೇಕಾದುದು. ಒಬ್ಬ ಮನುಷ್ಯನ ಸಾಮಾನ್ಯ ಪ್ರವೃತ್ತಿಯ

— ನಮ್ಮ ಮಾತು —

[illegible] ತಪ್ಪು ಮಾಡುತ್ತಿರುವವನ್ನೆ [illegible] ಒಂದು ದಿನ [illegible] ತಪ್ಪೆನ್ನೆ [illegible] ಒಂದು [illegible] ಮಾಡಲಿಲ್ಲ.

ಆ ದಿನ ರಾತ್ರಿ [illegible] ಮಲಗಿ [illegible] ಅಳುತ್ತಿರುವುದನ್ನು [illegible] ಎಂದವಳು [illegible]

[illegible] ಈ ಕೃತಿ [illegible] ಒಂದು ಮೆಚ್ಚುಗೆಯ [illegible] ಇರಲಿಲ್ಲ.

ಸೇರಿಕೆಯ ಮಾತು

ನ್ನು ಕಂಡು ಅದ ಅತ್ಯದ್ಭುತವೆಂದು ವರ್ಣಿಸಲು ಹೋದರೆ ನಮ್ಮ ಪ್ರಶಂಸೆಯಿಂದ ಆ ಮನುಷ್ಯನ [illegible] ಗವೇ ಅಧಿಕ. ಹಾಗೆಂದು ಕಲ್ಪನೆ [illegible] ಮಹಾ ಸಾಹಸದ ಕೆಲಸವನ್ನೇ ನಾವು ಮೆಚ್ಚಿ ಹೊಗಳಿದರೂ [illegible] ಸಂತುಷ್ಟನಾಗಲಿಕ್ಕಿಲ್ಲ. ಅವನ ದೃಷ್ಟಿಯಲ್ಲಿ ಅದೊಂದು ಪ್ರಶಂಸನೀಯವಾದ ಕಾರ್ಯವೇ ಆಗಿರಲಿಕ್ಕಿಲ್ಲ. [illegible] ಒಂದು ಸಂಗತಿಯನ್ನು ಉಲ್ಲೇಖಿಸು [illegible] ಸೇನಾಧಿಪತಿಯು [illegible] ಯವನ್ನು ಕುರಿತ ಪ್ರಸ್ತಾಪಿಸಿ [illegible] ಸೇನಾಪತಿ [illegible] ಕೃತಜ್ಞತಾ ಭಾವವನ್ನೂ ವ್ಯಕ್ತಗೊಳಿಸಲಿಲ್ಲ. ಆದರೆ ಒಬ್ಬ ಹುಡುಗನು ಆ ಸೇನಾಪತಿಯ ಮಿಂಚು ಕಣ್ಣುಗಳನ್ನು ಪ್ರಶಂಸಿಸಿದಾಗ, ಅವನು ಹರ್ಷದಿಂದ ಕೆಂಪಾದನು [illegible]

ನಮ್ಮ [illegible] ಮೆಚ್ಚುಗೆಯ ವಾಕ್ಯಗಳು, [illegible] ಮಾತಿನ ಮೋಡಿಗೆ ಮರುಳಾಗದೇ [illegible] ಇರಲಿಕ್ಕಿಲ್ಲ. ಮಹಾ ವ್ಯಕ್ತಿಗಳೇ ಜನಸಾಮಾನ್ಯರ [illegible] ರೀತಿಯ ಮೆಚ್ಚುಗೆಯನ್ನು ಕೇಳಿ [illegible] ಕೃತಜ್ಞತೆಯಿಂದ ತಲೆತಗ್ಗಿಸುವುದನ್ನು ನಾವು ಕಾಣುತ್ತೇವೆ. [illegible] ಈ ಸಂಗತಿಯನ್ನು ಕೇಳಿದ [illegible] 'ಲೋಕವನ್ನೆಲ್ಲ [illegible]

[illegible]

[illegible] ರಿಂದ ನನ್ನನ್ನು ನೋಡುತ್ತಿರುವಾಗ ಈ [illegible] ಎರಡು, ಒಳ್ಳೆಯ ಮಾತನ್ನಾಡಿದರಲ್ಲ ಎಂದು ತೃಪ್ತಿಪಟ್ಟುಕೊಂಡನಂತೆ. ಇದಕ್ಕೆ [illegible] ವರ್ಷಗಳಲ್ಲಿ ಅಲ್ಲಿಗೆ ಬಂದ ಎಷ್ಟು ಗಿರಾಕಿಗಳೂ ತಿನಿಸುಗಳು ರುಚಿಯಾಗಿತ್ತು [illegible] ಹೇಳಿದ [illegible] ವಿಪರೀತವೆಂದು [illegible] ಮೆಚ್ಚಿ ನುಡಿದಿರಲಿಲ್ಲ.

ನಮ್ಮ ಮೆಚ್ಚುಗೆಯ ಮಾತುಗಳು [illegible] ಅದಕ್ಕೆ ವಿಚಾರಶಕ್ತಿ [illegible] ಸತ್ಯದ ಕಷ್ಟದ ದುಡಿಮೆಯನ್ನು ಮುಗಿಸಿ [illegible] ಗಳಿಸಿದವನು [illegible] ಸಾಕು! ಬೇರೆ ಮಾತೇ ಬೇಡ! [illegible] ಸ್ವರ್ಗಸುಖದ ಅನುಭವವಾಗುತ್ತದೆ. ಇದೇ ರೀತಿ ಮಕ್ಕಳು [illegible] ಎಂದು ಎದ್ದು ಓಡಿಯೋಡಿ ಬಂದರೆ ಅಷ್ಟರಿಂದಲೇ ಸಂಸಾರದ ನಿಜ ಸುಖದ ಅರಿವು ದಂಪತಿಗಳಿಗಾಗುವುದು. ಈ ಮೂಕ ಭಾಷೆಯು ಅನೇಕ ವೇಳೆ ವ್ಯಕ್ತ [illegible] ಮಾತಿನದಕ್ಕಿಂತ ಅಧಿಕ ಸಂವೇದನೆಯಿಂದ ಕೂಡಿದ್ದೆಂಬುದನ್ನು ಅನುಭವದಿಂದ ಬಲ್ಲೆವು.

ಮೊದಲೇ ಹೇಳಿದಂತೆ ಇತರರನ್ನು ಮೆಚ್ಚಿ ಅಭಿನಂದಿಸಲು ತಿಳಿದಿರುವುದೊಂದು ಅಮೂಲ್ಯ ಕಲೆ. ಜನರು ಅಭಿನಂದನೆಗಳನ್ನು ಅಪೇಕ್ಷಿಸುತ್ತಾರೆ. ಆದುದರಿಂದ ಅವರನ್ನು ಯಥಾರ್ಥವಾಗಿ ಅಭಿನಂದಿಸಲು ನಾವು ಕಲಿತಿರಬೇಕು. ಯಾವ ಯಾವ ಸಂಗತಿಗಳು ಅಭಿನಂದನಾರ್ಹವೆಂಬುದನ್ನು ಹುಡುಕಿ [illegible] ಈ ಕಾರ್ಯದಲ್ಲಿ [illegible] ಅಗತ್ಯ. ಇದನ್ನೆ [illegible] [illegible] ನಮ್ಮ ವ್ಯವಹಾರದಲ್ಲಿ [illegible] ಇಂಥದೊಂದು ಅಮೂಲ್ಯ ಕಲೆಯನ್ನು [illegible] ಇನ್ನೊಬ್ಬನನ್ನು ಮೆಚ್ಚಿ ನುಡಿಯುವ ಮಾತುಗಳು ಸೌಹಾರ್ದ ಸಂಬಂಧವನ್ನು ಬೆಳೆಸಲಿಕ್ಕೆ ಅನುವು ಮಾಡಿಕೊಡುತ್ತವೆ. ಪರಸ್ಪರ ಬಾಂಧವ್ಯವನ್ನೂ ತಿಳುವಳಿಕೆಯನ್ನೂ ಹೆಚ್ಚಿಸಿ ಕೊಡುತ್ತವೆ. ಒಬ್ಬ ಮಹನೀಯರು ಒಂದು ಔಷಧಶಾಲೆಯನ್ನು ತೆರೆ

(೧೦ನೇ ಪುಟ ನೋಡಿರಿ)

ನಿರಾಶೆಯ ನಡುವೆ ಆಶೋದಯ

ನಮ್ಮ ಅರ್ಥ ವ್ಯವಸ್ಥೆಯಲ್ಲಿ ಗೃಹೋದ್ಯಮಕ್ಕಿರುವ ಸ್ಥಾನ ಪ್ರಾಶಸ್ತ್ಯ.

— ೧ —

ಭಾರತದಂಥ ಹಿಂದುಳಿದ ರಾಷ್ಟ್ರಗಳಿಗೆ ಔದ್ಯೋಗಿಕ ಕ್ಷೇತ್ರದಲ್ಲಿ ಮುನ್ನಡೆಯನ್ನು ಸಾಧಿಸಿರುವ ಪಾಶ್ಚಾತ್ಯ ರಾಷ್ಟ್ರಗಳು ತಾಂತ್ರಿಕ ಸಹಾಯವನ್ನು ಕೊಡುವುದು ಹೆಚ್ಚಾದಂತೆ, ಮತ್ತು ಇದರ ಪರಿಣಾಮವಾಗಿ ದೊಡ್ಡ ದೊಡ್ಡ ಕಾರಖಾನೆಗಳು ಹುಟ್ಟುವುದು ಅನಿವಾರ್ಯವಾದಂತೆ— ಗೃಹೋದ್ಯಮಗಳು ಉಳಿಯಬೇಕೆ ಅಥವಾ ಅಳಿಯಬೇಕೆ ಎಂಬ ಪ್ರಶ್ನೆಗೆ ಮಹತ್ವ ಬರುತ್ತದೆ. ಕೆಲವು ಕ್ಷೇತ್ರಗಳ ಅಭಿಪ್ರಾಯದಂತೆ ಗೃಹೋದ್ಯಮಗಳು ಹಿಂದಿನ ಪರಂಪರೆಯಿಂದ ಬಂದೊಂದು ಹೊರೆಯಾಗಿವೆ; ಮಾತ್ರವಲ್ಲ, ದೊಡ್ಡ ಉದ್ಯಮಗಳು ಬೆಳೆದು ಅಭಿವೃದ್ಧಿ ಹೊಂದುವುದಕ್ಕೆ ಆತಂಕಗಳಾಗಿ ನಿಂತಿವೆ. ನಮ್ಮ ದೇಶವು ಸಾರ್ವಾಂಗಿಕ ಏಳಿಗೆಯನ್ನು ಹೊಂದಲಿಕ್ಕೆ ಔದ್ಯೋಗೀಕರಣವೇ ಏಕಮಾತ್ರ ಉಪಾಯವೆಂದೂ ಈ ಕಾರಣದಿಂದ ಮಹೋದ್ಯಮಗಳ ವಿಕಾಸಕ್ಕೆ ವಿಘ್ನವನ್ನೊಡ್ಡುವ ಈ ಎಲ್ಲ ಗೃಹೋದ್ಯಮಗಳನ್ನು ತಳ ಸಹಿತ ಕಿತ್ತೊಗೆಯಬೇಕೆಂದೂ ಈ ಜನರ ಅಪೇಕ್ಷೆ. ಇದಕ್ಕೆ ತೀರಾ ವಿರುದ್ಧವಾಗಿ ಮಾತನಾಡುವ ಅರ್ಥಶಾಸ್ತ್ರಜ್ಞರೂ ಇಲ್ಲದಿಲ್ಲ. ಪುರಾತನ ಭಾರತದ ಸಂಪತ್ತು ಹಾಗು ಸಮೃದ್ಧಿಗಳಿಗೆ ಗೃಹೋದ್ಯಮಗಳೇ ಹೊಣೆಯಾಗಿದ್ದುವೆಂದೂ ಈ ಕಾರಣದಿಂದ ಭಾರತದ ಶುಭೇಚ್ಛುಗಳೆಲ್ಲರೂ ಗೃಹೋದ್ಯಮಗಳ ವಿಕಾಸ ಮತ್ತು ಅಭಿವೃದ್ಧಿಯ ಕಾರ್ಯವನ್ನು ಶೀಘ್ರಗತಿಯಿಂದ ಕೈಗೊಳ್ಳತಕ್ಕದ್ದೆಂದೂ ಈ ಕೆಲಸದಲ್ಲಿ ಉದಾಸೀನ ಸಲ್ಲದೆಂದೂ ಇವರು ಪ್ರತಿಪಾದಿಸುತ್ತಾರೆ.

— ೨ —

ಈ ವಾದವಿವಾದಗಳನ್ನು ನಿಷ್ಪಕ್ಷಪಾತತನದಿಂದ ಪರಿಶೀಲಿಸಿದಲ್ಲಿ ಮುಖದ ಮೇಲಿನ ನೇಡು ತೀರಿಸಿಕೊಳ್ಳಲು ಮೂಗನ್ನು ಕೊಯ್ದಂತೆ ಈ ಸಮಸ್ಯೆ ಇದೆಂಬ ಸಂಗತಿ ವ್ಯಕ್ತವಾಗುತ್ತದೆ. ಔದ್ಯಮಿಕ ಪ್ರಗತಿಯಾಗಬೇಕೆಂದು ಬಯಸುವ ಮೊದಲನೆ ವರ್ಗವು ಭಾರತದಲ್ಲಿ ಔದ್ಯಮಿಕ ಅಭಿವೃದ್ಧಿಯು ತೀರಾ ನಿಧಾನ ಗತಿಯಿಂದ ನೆರವೇರುತ್ತಿರುವುದನ್ನು ಅಸಮಾಧಾನದಿಂದ ನೋಡಿದೆ; ಮತ್ತು ಭಾರತದ ಇತಿಹಾಸ ಹಾಗೂ ಸಾಮಾಜಿಕ ವ್ಯವಸ್ಥೆಯಲ್ಲಿ ಗೃಹೋದ್ಯಮಗಳಿಗಿರುವ ಉನ್ನತ ಸ್ಥಾನವನ್ನು ಸಂಪೂರ್ಣ ಉಪೇಕ್ಷಿಸಿದೆ. ಎರಡನೆಯ ವಾದದ ಪುರಸ್ಕರ್ತರ ಕಣ್ಣುಗಳ ಮುಂದೆ ಹಿಂದಿನ ಭವ್ಯ ಭಾರತದ ಚಿತ್ರವೇ ಕುಣಿಯುತ್ತಿದ್ದು ಆ ವೈಭವ ಪ್ರಕಾಶದಿಂದ ಅವರ ದೃಷ್ಟಿಯೇ ಮಂದವಾಗಿದೆ. ಪರಿಣಾಮವಾಗಿ ಕಾಲವು ಬದಲಾಗಿದೆ ಎಂಬ ಸಂಗತಿಯನ್ನೂ ಜನರ ಅಭಿರುಚಿ ಹಾಗು ಅಪೇಕ್ಷೆಗಳು ಪರಿವರ್ತನೆಗೊಂಡಿವೆ ಎಂಬುದನ್ನೂ ಅವರು ಲಕ್ಷಿಸಿಲ್ಲ ಮಾತ್ರವಲ್ಲ, ಗೃಹೋದ್ಯಮಗಳ ತಾಂತ್ರಿಕ ಹಾಗೂ ವ್ಯಾವಹಾರಿಕ ಕ್ಷೇತ್ರದಲ್ಲಿ ಹಿಂದಿನ ನೈಪುಣ್ಯ ಈಗ ಉಳಿದಿಲ್ಲೆಂಬ ಸಂಗತಿಯನ್ನು ಅವರು ಗಮನಿಸುವುದಿಲ್ಲ. ಆದುದರಿಂದ ಯಾರೊಬ್ಬರ ವಾದವೇ ಸರಿಎಂದು ನಿರ್ಣಯಿಸುವುದು ತೀರಾ ಅವಸರದ್ದಾಗಿ ಪರಿಣಮಿಸುವ ಭಯವಿದೆ. ಉತ್ಪಾದನೆ, ಉದ್ಯೋಗ ಮತ್ತು ಕಾರ್ಯಕ್ಷಮತೆಯಲ್ಲಿ ಏನೊಂದೂ ಅಸಮಂಜಸತೆ ಉಂಟಾಗದ ರೀತಿಯಲ್ಲಿ ಮತ್ತು ರಾಷ್ಟ್ರವು ಔದ್ಯಮಿಕ ಕ್ಷೇತ್ರದಲ್ಲಿ ದೃಢವಾದ ಪ್ರಗತಿಯನ್ನು ಹೊಂದುವುದಕ್ಕೆ ಆಸ್ಪದ ಕಲ್ಪಿಸಿಕೊಡುವ ರೀತಿಯಲ್ಲಿ ಈ ಪ್ರಶ್ನೆಯನ್ನು ವಿಚಾರಿಸುವುದು ಅಗತ್ಯ.

— ೩ —

ನಮ್ಮ ಪ್ರಾಚೀನ ಇತಿಹಾಸದ ಕಾಲದಲ್ಲಿ ಗೃಹೋದ್ಯಮಗಳು ಉಚ್ಛ್ರಾಯಾವಸ್ಥೆಯಲ್ಲಿದ್ದುವೆಂಬುದು ನಿಜ. ಸುಮಾರು ೭೫ ವರ್ಷಗಳಿಗೆ ಹಿಂದೆ ಭಾರತದಲ್ಲಿ ಔದ್ಯಮಿಕಕ್ರಾಂತಿಯು ಆರಂಭವಾದ ಕಾಲದಲ್ಲಿ ಈ ಗೃಹೋದ್ಯಮಗಳು ಅತ್ಯಂತ ಅಭ್ಯುದಯದಲ್ಲಿದ್ದುವೆಂಬುದಕ್ಕೆ ಅನೇಕ ದಾಖಲೆಗಳನ್ನು ಒದಗಿಸಬಹುದು. ಆದರೆ ಔದ್ಯಮಿಕ ಕ್ರಾಂತಿಯ ಬೆನ್ನಿಗೇ ಗೃಹೋದ್ಯಮಗಳ ಅವನತಿಯೂ ಬಂದಿತು. ಹೊಸ ಔದ್ಯಮಿಕ ನೀತಿಯ ಪರಿಣಾಮವಾಗಿ ಬೆಳೆದುಕೊಂಡ ಕಾರ್ಖಾನೆಗಳು ಗೃಹೋದ್ಯಮದ ತಳಪಾಯವನ್ನೇ ನಡುಗಿಸಿದುವು. ಗುಡಿಕೈಗಾರಿಕೆಗಳ ಮೇಲೆ ದೊಡ್ಡ ಕಾರ್ಖಾನೆಗಳು ಜಂಬೂ ಸವಾರಿಯನ್ನು ಮಾಡತೊಡಗಿದುದರಿಂದ—ಗೃಹೋದ್ಯಮಗಳಲ್ಲಿ ನಿರತರಾದ ಜನರ ಮನೋಭಾವನೆಯು ಖಿನ್ನಗೊಂಡಿತು. ಈ ಖೇದದ ಪರಿಣಾಮವಾಗಿಯೇ ಕೌಶಲ್ಯವನ್ನು ಉಪಯೋಗಿಸುವಲ್ಲಿ ಔದಾಸೀನ್ಯವು ಮೂಡಿಕೊಂಡಿತು. ಕೊನೆಗೆ ಇದರ ಪರಿಣಾಮ ಎಲ್ಲಿಗೆ ಬಂದು ಮುಟ್ಟಿತೆಂದರೆ—ಉತ್ಪಾದನೆಯ ಮಟ್ಟವು ನಿಧಾನವಾಗಿ ತಗ್ಗುತ್ತಾ ಬಂದು ಪೇಟೆಯ ಸ್ಪರ್ಧೆಯಲ್ಲಿ ಅದು ಜಯಿಸಲಾರದಾಯಿತು.

— ೪ —

ಗೃಹೋದ್ಯಮಗಳು ಬಳಲುತ್ತಿರುವ ಲೋಪದೋಷಗಳು ಅನೇಕವಿವೆ. ಅನೇಕ ಸಂದರ್ಭಗಳಲ್ಲಿ ಗೃಹೋದ್ಯಮದಲ್ಲಿ ಬಳಸಲ್ಪಡುವ ಯಂತ್ರ ಹಾಗೂ ಉಪಕರಣಗಳು ತೀರಾ ಒರಟಾಗಿವೆ. ಈ ಉದ್ಯಮದಲ್ಲಿ ನಿರತರಾದ ಜನರು ಉಪಯೋಗಿಸುವ ತಂತ್ರ ವೈಜ್ಞಾನಿಕ ಸಂಶೋಧನೆಯ ದೃಷ್ಟಿಯಿಂದ ತೀರಾ ಹಿಂದುಳಿದಿದೆ. ತಮ್ಮ ಕೌಶಲ್ಯವನ್ನು ಹೆಚ್ಚಿಸಿಕೊಳ್ಳುವ ಮಾದರಿಯಲ್ಲಿ ತಾಂತ್ರಿಕ ಸುಧಾರಣೆಯನ್ನು ಈ ಜನ ಅಪೇಕ್ಷಿಸುತ್ತಲೂ ಇಲ್ಲ. ಆದುದರಿಂದಲೇ ಸುಧಾರಣೆಗೆ ಹೇತುವಾಗಬಹುದಾದ ಯಾವುದೇ ರೀತಿಯ ತರಬೇತಿಯ ಕಡೆಗೂ ಲಕ್ಷ್ಯ ಪೂರೈಸಲ್ಪಟ್ಟಿಲ್ಲ. ಉತ್ಪಾದಿತ ಸರಕುಗಳನ್ನು ಪೇಟೆಯಲ್ಲಿ ಮಾರುವ ವ್ಯವಸ್ಥೆಯಲ್ಲಿ ಸಹ ಅನೇಕ ಕೊರತೆಗಳು ಕಂಡುಬರುತ್ತವೆ. ಅವುಗಳು ವ್ಯವಸ್ಥಾಬದ್ಧವಾಗಿಲ್ಲದಿರುವುದರಿಂದ, ಲಾಭದಾಯಕವಾಗಿ ಪರಿಣಮಿಸಿಲ್ಲ. ಗೃಹೋದ್ಯಮಗಳಿಗೆ ಬೇಕಾದ ಹಣದ ಅನುಕೂಲತೆಯು ಮಧ್ಯಸ್ಥರಿಂದ ಬರುತ್ತದೆ. ಈ ಮಧ್ಯಸ್ಥರಿಗೆ ತಮ್ಮ ಬೊಕ್ಕಸ ಬೆಳೆಸಿಕೊಳ್ಳುವ ಕಾಂಕ್ಷೆ ಇದೆಯೇ ಹೊರತು, ಉದ್ಯೋಗದ ಅಭಿವೃದ್ಧಿಯ ಕುರಿತು ಅವರು ಚಿಂತಿಸುವುದಿಲ್ಲ. ಹೊಸ ನಮೂನೆಗಳನ್ನೂ ತಂತ್ರಗಳನ್ನೂ ಬಳಸುವುದೆಂದರೆ ಅದೇಕೋ ನಮ್ಮ ಗೃಹೋದ್ಯಮಿಗಳು ಸಂಕೋಚಪಡುತ್ತಾರೆ. ಇದಕ್ಕೆ ತಕ್ಕ ಪ್ರೋತ್ಸಾಹವನ್ನು ಒದಗಿಸಿಕೊಟ್ಟ ಸಂದರ್ಭದಲ್ಲಿ ಸಹ ಯೋಗ್ಯ ಸ್ಫೂರ್ತಿಯಿಂದ ಕೆಲಸಮಾಡಲಾರದವರಾಗಿ ನಮ್ಮ ಗೃಹೋದ್ಯಮಿಗಳು ಕಂಡುಬರುತ್ತಾರೆ. ಇನ್ನೊಂದು ತೊಂದರೆ ಎಂದರೆ— ಪೇಟೆಯಲ್ಲಿ ಯೋಗ್ಯ ಬೆಲೆಗೆ ತನ್ನ ಸರಕುಗಳನ್ನು ಮಾರಾಟಮಾಡಲಾಗುವಂತೆ, ಅದನ್ನು ಕಾಯ್ದಿಟ್ಟುಕೊಳ್ಳುವ ವ್ಯವಧಾನವೇ ಗೃಹೋದ್ಯಮಿಗಿಲ್ಲ. ಹಣವನ್ನು ಪೂರೈಸಿದ ಮಧ್ಯಸ್ಥನ ಉಪಟಳವನ್ನು ಬೇಗನೇ ತಪ್ಪಿಸಲಿಕ್ಕೆ ಬಹಳ ಅಗ್ಗದರದಲ್ಲಿ ಸರಕುಗಳನ್ನು ಮಾರುವ ಅಗತ್ಯ ಬೀಳುತ್ತದೆ. ಅಸಲಿಗೂ ಮೋಸಬರುವ ಇಂಥ ವ್ಯಾಪಾರದ ಸಂಗತಿಯಲ್ಲಿ ಗೃಹೋದ್ಯಮಿಗ ಅಸ್ತಿ ಹೇಗೆ ಉಳಿದೀತು?

— ೫ —

ಈ ಎಲ್ಲ ಆಂತರಿಕ ಬಾಧೆಗಳ ಜೊತೆಗೆ ಬಾಹ್ಯ ಒತ್ತಡದ ಮೂಲಕವೂ ಗೃಹೋದ್ಯಮವು ನಿಕೃಷ್ಟಾವಸ್ಥೆಗಿಳಿದಿದೆ. ಇವುಗಳಲ್ಲೆಲ್ಲ ಪ್ರಾಮುಖ್ಯವಾದದ್ದು ಆಯಾತ ಮಾಡಿದ ಸರಕುಗಳ ಹಾಗು ನಮ್ಮಲ್ಲಿರುವ ಕಾರ್ಖಾನೆಗಳೇ ಉತ್ಪಾದಿಸಿದ ವಸ್ತುಗಳ ಕೂಡೆ ಪೈಪೋಟಿಯನ್ನು ಯಶಸ್ವಿಯಾಗಿ ಗೃಹೋದ್ಯಮ ಹೂಡಲಾರದ ಪರಿಸ್ಥಿತಿಯಾಗಿದೆ. ತಮ್ಮ ಸೌಂದರ್ಯದಿಂದ, ಹೊಳಪಿನಿಂದ, ಅಗ್ಗದರದಿಂದ ಯಥೇಷ್ಟ ಪೂರೈಕೆಯಿಂದ, ನಯ ನಾಜೂಕಿನಿಂದ ಆಯಾತಮಾಡಿದ ಹಾಗೂ ದೇಶದ ಕಾರ್ಖಾನೆಗಳು ಉತ್ಪಾದಿಸಿದ ಈ ಸರಕುಗಳು ಪೇಟೆಯಲ್ಲಿ ಗೃಹೋದ್ಯಮಗಳು ಉತ್ಪಾದಿಸಿದ ಸರಕುಗಳನ್ನು ಕಿತ್ತೊಗೆಯಲು ಕಂಕಣಬದ್ಧವಾಗಿವೆ. ಕಾರ್ಖಾನೆ ಹಾಗೂ ಗೃಹೋದ್ಯಮಗಳೆರಡಕ್ಕೂ ಆಯಾತ ಮಾಡಿದ ಸರಕುಗಳು ಅಗತ್ಯವೆನಿಸಿದ ಸಂದರ್ಭದಲ್ಲಿಯೂ ಕಾರ್ಖಾನೆಗಳು ದೊಡ್ಡ ಪ್ರಮಾಣದಲ್ಲಿ ಆಯಾತವನ್ನು ಮಾಡಿ, ರಿಯಾಯತಿ ದರದ ಲಾಭಪಡೆದು ಗೃಹೋದ್ಯಮದ ಸರಕುಗಳ ಕೂಡೆ ಸ್ಪರ್ಧೆಗೆ ನಿಲ್ಲುತ್ತವೆ. ಈ ಸ್ಪರ್ಧೆ ಕೆಲವೊ

(೧೦ನೇ ಪುಟ ನೋಡಿರಿ)

ದಿ ಕೆನರಾ ಮ್ಯೂಚುವಲ್
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ] [ಸ್ಥಾಪನೆ: ೧೯೩೫.

"ಕೆನರಾ ಮ್ಯೂಚುವಲ್" ಪರಸ್ಪರಾವಲಂಬಕವಾದ ಸಂಸ್ಥೆ.
ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ
ಬೋನಸು ಹಂಚಿ, ಪಾಲಿಸಿದಾರರ ನಂಬಿಕೆ ಪಡೆದಿದೆ.
ಈ ಕಂಪೆನಿಯಲ್ಲಿ ಇಂದೇ ವಿಮೆ ಇಳಿಸಿ,
ನಿಮ್ಮ ಕುಟುಂಬವನ್ನು ಭದ್ರವಾಗಿರಿಸಿರಿ.

The CANARA MUTUAL ASSURANCE CO. Ltd.
Head Office: UDIPI, S. INDIA. ESTD. 1935

ರಾಮತೀರ್ಥ
ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ. ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಸೇದನೆಯ ಆನಂದಕ್ಕೆ,
ಅತ್ಯುತ್ತಮವಾದುದನ್ನೇ ಪಡಕೊಳ್ಳಿರಿ
ಎಸ್. ಆರ್.
ತಾಜಾ ನಿಪ್ಪಾಣಿ ತಂಬಾಕು
ಮತ್ತು
ಬೊಂಬಾಯಿ ಎಲೆ
ಇವುಗಳಿಂದ ತಯಾರಾದ
ಬೀಡಿಗಳಾಗಿರುತ್ತವೆ.
S.R. Beedi Works.

ಪುಟಿದು ನೆಗೆಯುವ ಚೆಂಡಿನ ಕತೆ

ವಿಜ್ಞಾನಯುಗದಲ್ಲಿ ಅಮೂಲ್ಯವಸ್ತುವೆಂದು ಪರಿಗಣಿಸಲ್ಪಟ್ಟಿರುವ ರಬ್ಬರು

ಕೊಲಂಬಸನು ಅಮೇರಿಕವನ್ನು ೧೫ನೇ ಶತಮಾನದಲ್ಲಿ ಕಂಡುಹಿಡಿದಾಗ ಅವನಿಗೆ ರಬ್ಬರಿನ ಪರಿಚಯವಾಯಿತು! ಇಗಿನ ನಾಗರಿಕತೆಯಲ್ಲಿ ಪ್ರಾಮುಖ್ಯಸ್ಥಾನ ಪಡೆದಿರುವ ರಬ್ಬರಿಗೆ ಕೊಲಂಬಸನ ಸಾಹಸವೇ ಹೊಸ ಉಪಯೋಗದ ಮಾರ್ಗವನ್ನು ಕಲ್ಪಿಸಿಕೊಟ್ಟಿತು. ರಬ್ಬರು ಬಳಕೆಗೆ ಬಂದ ಪ್ರಾಚೀನ ಇತಿಹಾಸ ಕ್ರಿ. ಪೂ. ಆರನೇ ಶತಮಾನದಷ್ಟು ಹಿಂದೆ ಸರಿಯುತ್ತದೆ. ಆ ಕಾಲದ ಕಾಡು ಜನರು ಭೂತ ಪೂಜೆಯನ್ನು ಮಾಡುವುದಕ್ಕೆ ಭಯಂಕರ ರಬ್ಬರು ಬೊಂಬೆಗಳನ್ನು ಉಪಯೋಗಿಸುತ್ತಿದ್ದರಂತೆ. ಈ ವಿಗ್ರಹಗಳನ್ನು ನೋಡುವಾಗಲೇ ಭೀಕರವೆನಿಸುತ್ತಿತ್ತು; ಮತ್ತು ಅವುಗಳ ವಾಸನೆ ಕೂಡ ಕಟ್ಟುಗ್ರವಾಗಿತ್ತು! ಮೆಕ್ಸಿಕೋ ಮತ್ತು ಯುರೋಪ್ರದೇಶದಗಳಲ್ಲಿ ೧೩೦೦ರ ಸುಮಾರಿಗೆ ರಬ್ಬರಿನಿಂದ ಮಾಡಿದ ಚೆಂಡಿನಿಂದ ಆಟವಾಡುತ್ತಿದ್ದರು. ಈ ಬಗ್ಗೆ ಬರೆದ ಚಿತ್ರಗಳು ಪ್ರಸಿದ್ಧ ಇತಿಹಾಸಕಾರರ ಕೂಡೆ ಇವೆ. ಅಮೇರಿಕದ ಐತಿಹಾಸಿಕ ದಾಖಲೆಗಳ ಮೇಲಿಂದ ಹೇಳುವುದಾದರೆ— ಕೊಲಂಬಸನು ಅಮೇರಿಕವನ್ನು ಪ್ರವೇಶಿಸಿದ ಕಾಲದಲ್ಲಿ ಅಗ ಅಲ್ಲಿದ್ದ ಅಜಟೆಕ್ ಜನರು ರಬ್ಬರನ್ನು ಚೆಂಡಾಟಕ್ಕೆ ಉಪಯೋಗಿಸುತ್ತಿದ್ದರು. ಈ ಆಟವನ್ನು ಆಡುವಾಗ ಕೈಕಾಲುಗಳಿಗೂ ಮೈಗೂ ಕೈಚೀಲವನ್ನು ಕಟ್ಟಿಕೊಳ್ಳುವ ಪದ್ಧತಿ ಇದ್ದಿತು. ೧೫೪೫ರಲ್ಲಿ ಬರೆದ ಚೆಂಡಾಟದ ಒಂದು ವರ್ಣಚಿತ್ರ ಈಗಲೂ ಅಮೇರಿಕದ ವಸ್ತು ಸಂಗ್ರಹಾಲಯವೊಂದರಲ್ಲಿದೆ.

ರೋಗೋಪಶಮನದ ಗುಣ

ಮೆಕ್ಸಿಕೋವಿನ ಅಜಟೆಕ ಜನರು ರಬ್ಬರಿನ ಉಂಡೆಗಳನ್ನು ಅನೇಕ ವೈದ್ಯಕೀಯ ಉಪಚಾರಕ್ಕೆ ಉಪಯೋಗಿಸುತ್ತಿದ್ದಾರೆಂದೂ ತಿಳಿದಿದೆ. ಅವರು "ಓಲಿನ್" ಎಂದು ರಬ್ಬರನ್ನು ಕರೆಯುತ್ತಿದ್ದರು. ಬಣ್ಣ ಬಣ್ಣದ ರಬ್ಬರಿನಿಂದ ದೇವರ ಚಿತ್ರಗಳನ್ನು ಬರೆದು ರೋಗಿಗಳನ್ನು ಬೇಗನೇ ಗುಣಪಡಿಸುವಂತೆ ಪ್ರಾರ್ಥಿಸುವ ಪರಿಪಾಟವೂ ಇತ್ತು. ಗಂಟಲಿನ ಅನೇಕ ರೋಗಕ್ಕೆ ರಬ್ಬರನ್ನು ಸುಟ್ಟು ಹಚ್ಚುವುದರ ಮೂಲಕ ಮದ್ದು ಮಾಡುತ್ತಿದ್ದರು. ಭಯಂಕರವಾದ ಕ್ಷಯರೋಗವನ್ನು ಸಹ ಅಜಟೆಕ್ ವೈದ್ಯರು ರಬ್ಬರು ಮತ್ತು ಕೋಕೋದ ಮಿಶ್ರಣ ದ್ರವವೊಂದರಿಂದ ಪೂರ್ಣ ಗುಣ ಪಡಿಸುತ್ತಿದ್ದರು. ಹೊಟ್ಟೆಯ ರೋಗಗಳ ಉಪಶಮನಕ್ಕಾಗಿ ರಬ್ಬರಿನ ಇನ್ನೊಂದು ಔಷಧವನ್ನು ಬಳಸುತ್ತಿದ್ದರು ಆದರೆ ಈಗ ರಬ್ಬರಿನ ವೈದ್ಯಕೀಯ ಗುಣದ ಪರಿಚಯ ಯಾರಿಗೂ ಉಳಿದಿಲ್ಲ.

ಅನ್ವರ್ಥನಾಮ

ರಬ್ಬರನ್ನು ಇಂಡಿಯಾ ರಬ್ಬರೆಂದು ಕರೆಯುವ ವಾಡಿಕೆಯುಂಟು. ಕೊಲಂಬಸನು ಅಮೇರಿಕವನ್ನು ಕಂಡು ಹಿಡಿದಾಗ ತಾನು ಭಾರತವನ್ನೆ ಮುಟ್ಟಿದ್ದೇನೆಂಬ ಭ್ರಮೆ ಅವನಿಗಿತ್ತು. ಆದುದರಿಂದ ಅಲ್ಲಿಯ ಜನ [illegible] ಉಪಯೋಗಿಸುತ್ತಿದ್ದ ರಬ್ಬರಿಗೆ ಇಂಡಿಯಾದ ವಿಶೇಷಣವನ್ನು ಕೊಟ್ಟನು. ಕೊಲಂಬಸನು ರಬ್ಬರಿನ ಗುಣ ವಿಶೇಷಗಳಿಂದ ಚಕಿತಗೊಂಡರೂ ಮೋಹಿತನಾಗಲಿಲ್ಲ. ಆದ ಕಾರಣ ಯುರೋಪಿನಲ್ಲಿ ರಬ್ಬರಿನ ಕುರಿತು ಅಧಿಕವಾಗಿ ಹಿತಿ ಯಾರಿಗೂ ಇರಲಿಲ್ಲ. ೧೭೩೫ರಲ್ಲಿ ಫ್ರೆಂಚ್ ಪ್ರವಾಸಿಗನೋರ್ವನು ದಕ್ಷಿಣ ಅಮೇರಿಕಾದ ಅಮೆಜಾನ ನದೀ ದಂಡೆಯಲ್ಲಿ ತಿರುಗಾಡಿದ್ದಾಗ ರಬ್ಬರನ್ನು ನೋಡಿ, ಯುರೋಪಿಗೆ ತಂದ. ಆದರೆ ಅದರ ಉಪಯೋಗ ಮಾತ್ರ ಹೆಚ್ಚಾಗಲಿಲ್ಲ. ತೊಗಲಿನ ಚೂರಿನ ಸ್ಥಾನದಲ್ಲಿ ಕೆಲವೊಮ್ಮೆ ರಬ್ಬರನ್ನು ಉಪಯೋಗಿಸುವಷ್ಟರ ಮಟ್ಟಿಗೆ ಮಾತ್ರ ಮಿತವಾಗಿತ್ತು. ಆದರೇಕೋ— ಫ್ರೆಂಚ ವಿಜ್ಞಾನಿಗಳಿಗೆ ರಬ್ಬರಿನ ಕುರಿತು ಸ್ವಲ್ಪ ಆಸಕ್ತಿ ಮೂಡಿತು. ಅನೇಕ ಪ್ರಯೋಗಗಳನ್ನು ಮಾಡಿ ನೋಡಿ ರಬ್ಬರಿನ ಗುಣ ವಿಶೇಷಗಳೇನೆಂಬ ಸಂಗತಿಯನ್ನು ತಿಳಿಯಲು ಅವರು ಕ್ರಮೇಣ ಶಕ್ತರಾದರು. ಸೀಸದ ಕಡ್ಡಿಯಿಂದ ಬರೆದುದನ್ನು ಅಳಿಸಿಬಿಡಬಲ್ಲ ವಿಶಿಷ್ಟ ಗುಣದಿಂದ ಕೂಡಿರುವ ಈ ಪದಾರ್ಥವನ್ನು "ರಬ್ಬರ್" ಎಂಬ ಅನ್ವರ್ಥ ನಾಮದಿಂದ ಕರೆದರು.

ಅಮೂಲ್ಯ ವಸ್ತು

ರಬ್ಬರು ಮರದ ಹಾಲು. ಇದನ್ನು ಬೇರೆ ಬೇರೆ ರಾಸಾಯನಿಕ ದ್ರವ್ಯಗಳಲ್ಲಿ ಕರಗಿಸಿ ಉಪಯೋಗಿಸಲಾಗುತ್ತದೆಯೋ ಎಂದು ವಿಜ್ಞಾನಿಗಳು ತುಂಬ ಪ್ರಯತ್ನಪಟ್ಟರು. ಥಾಮಸ್‌ಹ್ಯಾನ್‌ಕಾಕ ಎಂಬ ಆಂಗ್ಲ ವಿಜ್ಞಾನಿಯು ಟರ್‌ಪೆಂಟೈನ್ ದ್ರಾವಕದಲ್ಲಿ ಹಾಲನ್ನು ಕರಗಿಸಿದಾಗ ತೆಳುವಾದ ರಬ್ಬರಿನ ದ್ರಾವಕ ದೊರಕಿತು. ೧೮೨೩ರಲ್ಲಿ ಚಾರ್ಲ್ಸ್‌ಮ್ಯಾಕಿಂಟಾಶೆಂಬವನು ಡಾಮರಿನಲ್ಲಿ ರಬ್ಬರನ್ನು ಕರಗಿಸಿ ಬಟ್ಟೆಗಳ ಮೇಲೆ ಹಾಕುವುದನ್ನು ಕಲಿತುಕೊಂಡ. ಇಂಥ ಬಟ್ಟೆಗಳಿಗೆ ನೀರು ತಗಲುತ್ತಿರಲಿಲ್ಲ. ಹೀಗಿದ್ದರೂ ರಬ್ಬರು ಚಳಿಗಾಲದಲ್ಲಿ ತೀರ ಗಟ್ಟಿಯಾಗಿ ಮತ್ತು ಬೇಸಗೆಯಲ್ಲಿ ಅಂಟಾಗಿ ಪರಿವರ್ತನೆಗೊಳ್ಳುತ್ತಿದ್ದುದರಿಂದ, ಯಾವ ಕೈಗಾರಿಕೆಗೂ ಅದರಿಂದ ಅಧಿಕ ಪ್ರಯೋಜನ ದೊರೆಯದಾಯಿತು. ಕೊನೆಗೆ ೧೮೩೯ರಲ್ಲಿ ಚಾರ್ಲ್ಸ್ ಗುಡ್ ಇಯರ್ ಎಂಬಾತನು ನಡೆಸಿದ ಪ್ರಯೋಗದ ಪರಿಣಾಮವಾಗಿ ರಬ್ಬರಿನ ಇತಿಹಾಸವೇ ಬದಲಾಯಿತು. ಗಂಧಕದೊಡನೆ ನಿರ್ದಿಷ್ಟ ಉಷ್ಣಾಂಶದಲ್ಲಿ ರಬ್ಬರಿನ ದ್ರವವನ್ನು ಕಾಯಿಸುವುದರಿಂದ ಅದರ ಗುಣ ಪರಿವರ್ತನೆಯಾಗುವುದನ್ನು ಗುಡ್ ಯರ್ ಕಂಡು ಹಿಡಿದ. ಇಂಥ ರಬ್ಬರು ಚಳಿ–ಸೆಕೆಗಳ ಸಾಧಾರಣ ಪರಿಣಾಮವಿಲ್ಲದೆ ಸಂಕುಚಿತ–ವಿಕಾಸಗೊಳ್ಳದೆ ಹೆಚ್ಚು ಬಾಳಿಕೆಯಿಂದ ಕೂಡಿತು. ಥಾಮಸ್ ಹ್ಯಾನಕಾಕನೂ ೧೮೪೩ರಲ್ಲಿ ಅನಿರೀಕ್ಷಿತವಾಗಿ ಈ ಸಿದ್ಧಾಂತವನ್ನು ಕಂಡುಕೊಂಡ. ಗುಡ್ ಇಯರ್ ಮತ್ತು ಹ್ಯಾನ್‌ಕಾಕ ಪ್ರಯೋಗದ ಫಲವಾಗಿ ರಬ್ಬರಿನಂಥ ಅಮೂಲ್ಯ ವಸ್ತು ಇಂದು ಅನೇಕ ಕೈಗಾರಿಕೋದ್ಯಮಗಳಲ್ಲಿ ಬಳಸಲ್ಪಡಲಾರಂಭಿಸಿತು.

ಡನ್‌ಲಪರ ಶೋಧ

ಈಚೆಗೆ ರಬ್ಬರಿನ ಚರಿತ್ರೆಯೇ ಬದಲಾಗಿದೆ. ಆಧುನಿಕ ವಿಜ್ಞಾನಿಗಳು ರಬ್ಬರನ್ನು ಎಡೆಬಿಡದೆ ನೂತನ ಸಂಶೋಧಗಳಿಗೆ ಗುರಿಮಾಡುತ್ತಿರುವರು. ಇಂದು ರಬ್ಬರು ಅತ್ಯಂತ ಉಪಯುಕ್ತ ವಸ್ತುವಾಗಿ ಐರ್ಲೆಂಡಿನ ಪ್ರಾಣಿಶಾಸ್ತ್ರ ಚಿಕಿತ್ಸಕರಾಗಿದ್ದ ಜಾನ್ ಬಾಯ್ಡ ಡನಲಪರು ವಾಯು ತುಂಬುವ ಗಾಲಿಗಳನ್ನು ಕಂಡ ಹಿಡಿದ ಬಳಿಕವಂತೂ ರಬ್ಬರಿನ ಬಳಕೆ ಮಿತಿಮೀರಿ ಹೆಚ್ಚಿಕೊಂಡಿದೆ. ಈಗ ತಯಾರಾಗುರುವ ರಬ್ಬರಿನ ನೂರಕ್ಕೆ ಎಪ್ಪತ್ತರಷ್ಟು ಮೋಟಾರು ಕೈಗಾರಿಕೆಯಲ್ಲಿಯೇ ಉಪಯೋಗಿಸುತ್ತಿದ್ದಾರೆ. ಮೊನ್ನೆ ಮೊನ್ನೆ ಡನ್‌ಲಪ್ ಕಂಪೆನಿಯವರು "ಲಾಟೆಕ್ಸ ಫೋಮ್" ಎಂಬ ಹೊಸ ರಬ್ಬರು ಕೈಗಾರಿಕೆಯನ್ನು ತೊಡಗಿರುವರು. ಕುರ್ಚಿ ಮೆತ್ತೆಗಳು, ಮಿದುವಾದ ಹಾಸಿಗೆ ಮುಂತಾದುವುಗಳಿಗಾಗಿ ಈ ನೂತನ ರಬ್ಬರನ್ನು ಉಪಯೋಗಿಸುವ ಹಂಚಿಕೆ. ಇದು ಸದಾ ರಬ್ಬರಿನ ಸಾಮಗ್ರಿಗಳಷ್ಟು ಅಗ್ಗದ ದೊರೆಯದಿದ್ದರೂ ನಿಧಾನವಾಗಿ ಜನಪ್ರಿಯವಾಗುತ್ತಿದೆ. ನಮ್ಮೆಲ್ಲರ ಆರ್ಥಿಕ ಸ್ಥಿತಿ ಸುಧಾರಿಸಿದರೆ ರಬ್ಬರಿನ ಬಳಕೆ ಈಗಿನದಕ್ಕಿಂತ ಇಮ್ಮಡಿಯಾದೀತಂತೆ! ಆ ರಬ್ಬರನ್ನು ಬೆಳೆಸುವ ಜಾಗದ ವಿಸ್ತೀರ್ಣ [illegible] ಹೆಚ್ಚಾಗಬೇಕಾದೀತು. ಪ್ರಾರಂಭದಲ್ಲಿ ದಕ್ಷಿಣಾ ಅಮೇರಿಕಾದ ಅಮೆಜಾನ್ ಪ್ರದೇಶದಲ್ಲಿ ಮಾತ್ರ ಬೆಳೆಯುತ್ತಿದ್ದ ರಬ್ಬರು ಸಸಿಯು ಭಾರತಕ್ಕೆ ತರಲ್ಪಟ್ಟಿತು. ೧೮೭೬ರಲ್ಲಿ ಈ ರಬ್ಬರಿನ ಕೆಲ ಸಸಿಗಳನ್ನು ಸಿಲೋನು ಮತ್ತು ಮಲಯಾಗಳಿಗೂ ಕಳಿಸಿದರು. ಅಲ್ಲಿ ಭೂಮಿಯನ್ನ ಕೊಂಡುಕೊಂಡು, ರಬ್ಬರು ತೋಟವನ್ನೆ ಮಾಡಿದ ಸಾಹಸಿಗರು ಇದ್ದಾರೆ. ಈಗ ಹೆಚ್ಚು ಕಡಿಮೆ ಉಷ್ಣವಲಯದ ಎಲ್ಲ ಕಡೆ ರಬ್ಬರು ಬೆಳೆಯುತ್ತದೆ.

ZANDU

ಝೂಂಡೂ ಫಾರ್ಮಸಿಯ ಮನೆಮದ್ದುಗಳನ್ನೇ ಸದಾ ಉಪಯೋಗಿಸಿರಿ.

ಝೂಂಡೂ ಬ್ರಾಹ್ಮೀ ಹೇರ್ ಆಯಿಲ್:– ನೆದುಳಿಗೆ ತಂಪು– ಮನಸ್ಸಿಗೆ ಉಲ್ಲಾಸವೀಯುವುದು. 1 ಪೌಂಡಿಗೆ ರೂ. 3–8–0 ಕಾಲು ರಾತ್ಲಿಗೆ ರೂ. 1.

ಝೂಂಡೂ ಸರಸಪರಿಲ್ಲಾ:– ರಕ್ತವನ್ನು ಶುದ್ಧಗೊಳಿಸಲು ಹೆಸರುವಾಸಿಯಾದುದು. ಚರ್ಮರೋಗಗಳನ್ನು ಗುಣಪಡಿಸಬಲ್ಲುದು. 4 ಔನ್ಸ್ ಬಾಟ್ಲಿ 1ರ ರೂ. 1–5–0

ಝೂಂಡೂ ಬಾಲಾಮೃತ:–ಅನಾರೋಗ್ಯವುಳ್ಳ ಮಕ್ಕಳಿಗೆ ಅಪರ್ವ ಟಾನಿಕ್ 4 ಔನ್ಸ್ ಬಾಟ್ಲಿ 1ರ ರೂ. [illegible]

ಝೂಂಡೂ ಬಾಮ್:–ತಲೆ ಸಿಡಿತ ಮೊದಲಾದ ಬೇನೆಗಳಿಗೆ 1 ಸೀಸೆಗೆ ರೂ1.

ಝೂಂಡೂ ಫಾರ್ಮಸಿಯ ದ. ಕ. ಜಿಲ್ಲೆಯ ಎಲ್ಲಾ ಏಜಂಟರಲ್ಲೂ ದೊರೆಯುವುವು.

ಸವಿವರ ಕ್ಯಾಟಲಾಗಿಗೆ ಈ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ;–

DAMODER & CO.,

Nainiappa Naicken Street, MADRAS. 3

ದಿ ವಿಜಯ ಬೇಂಕ್, ಲಿಮಿಟೆಡ್

ಸ್ಥಾಪನೆ: 1931.] ಪ್ರಧಾನ ಕಛೇರಿ: ಮಂಗಳೂರು.

ಮೂಲಧನ	.	.	ರೂ. 20, [illegible],000
ತೆತ್ತ ಪಾಲು ಭಂಡವಾಳ	.	.	,, [illegible],77,860
ಕ್ಷೇಮ ನಿಧಿ	.	.	,, 1,65,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವ್ಯಾಪ್ತಿ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4½% ಬಡ್ಡಿ [illegible] ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಬಿ. ಮಂಜಯ್ಯ ಹೆಗ್ಡೆ,
ಬೇಂಕಿನ ಆಡಳಿತೆ ಕಮಿಟಿ ಅಧ್ಯಕ್ಷರು,
(ಮತ್ತು ದ. ಕ. ಜಿಲ್ಲಾ ಬೋರ್ಡಿನ ಅಧ್ಯಕ್ಷರು.)

THE VIJAYA BANK, Limited.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ [illegible] ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky. S. K.

ತೆಲುಗರಿಗೆ ಸಂತೋಷವೀಡುವ ನೆಹರೂ ಹೇಳಿಕೆ

ಅಕ್ಟೋಬರ ೧ನೇ ತಾರೀಕಿಗೆ ಆಂಧ್ರರಾಜ್ಯ ಅಸ್ತಿತ್ವಕ್ಕೆ ಬರುವುದು.

ಆಂಧ್ರರಾಜ್ಯ ನಿರ್ಮಾಣ

ಬಹುದಿನಗಳಿಂದ ನಿರೀಕ್ಷಿಸುತ್ತಿದ್ದ ಆಂಧ್ರರಾಜ್ಯ ನಿರ್ಮಾಣ ಸಂಬಂಧದ ಘೋಷಣೆಯು ಪ್ರಧಾನಿ ನೆಹರೂರವರಿಂದ ಈಗ ತಾನೆ ಮಾಡಲ್ಪಟ್ಟಿರುವುದು. ಹೋದ ಬುಧವಾರ (ದಿನಾಂಕ ೨೫) ಪ್ರಧಾನಿ ನೆಹರೂರವರು ಪಾರ್ಲಿಮೆಂಟಿನಲ್ಲಿ ಆಂಧ್ರ ರಾಜ್ಯ ನಿರ್ಮಾಣದ ಸಂಗತಿಯಲ್ಲಿ ವಾಂಚೂರವರು ಒಪ್ಪಿಸಿದ ವರದಿಯನ್ನೂ ಸರಕಾರವು ಮಾಡಿದ ನಿರ್ಣಯಗಳನ್ನೂ ಸಭೆಯ ಮುಂದಿಟ್ಟರು. ನ್ಯಾಯಮೂರ್ತಿ ವಾಂಚೂರವರ ವರದಿಯನ್ನೂ ನೆಹರೂರ ಹೇಳಿಕೆಯನ್ನೂ ತುಲನಾತ್ಮಕ ದೃಷ್ಟಿಯಿಂದ ನೋಡಿದಲ್ಲಿ-ಸರಕಾರವು ಮುಖ್ಯವಾದ ರಾಜಕೀಯ ವಿಷಯಗಳಲ್ಲೆಲ್ಲ ಸ್ವತಂತ್ರವಾದ ನಿರ್ಣಯವನ್ನು ತೆಗೆದುಕೊಂಡಿದೆಂಬ ಸಂಗತಿ ಸ್ಪಷ್ಟವಾಗಿ ವ್ಯಕ್ತಗೊಳ್ಳುತ್ತದೆ. ಇನ್ನು ಹಣಕಾಸಿನ ಹಾಗೂ ಸರಕಾರೀ ನೌಕರರ ಭವಿಷ್ಯ ಮುಂತಾದ ಸಂಗತಿಗಳ ಕುರಿತು ಹೇಳಬೇಕೆಂದರೆ—ಸರಕಾರವು ವಾಂಚೂರವರದಿಯ ಈ ಅಂಶಗಳನ್ನು ಇನ್ನೂ ಪರಿಶೀಲಿಸುತ್ತಿದೆ. ಕೆಲದಿನಗಳಿಂದ ಎಡೆಬಿಡದೆ ಊಹಾಪೋಹೆಗಳು ನಡೆಯುತಿದ್ದ ರಾಜಕೀಯ ಪ್ರಾಧಾನ್ಯವುಳ್ಳ ವಿಷಯಗಳ ಮಟ್ಟಿಗೆ ಮಾತ್ರ ಸರಕಾರವು ಕ್ಷಿಪ್ರನಿರ್ಣಯವನ್ನು ಕೈಗೊಂಡಿರುತ್ತದೆ. ನೆಹರೂ ಹೇಳಿಕೆಯಂತೆ (೧) ಆಂಧ್ರರಾಜ್ಯವು ಈ ವರ್ಷದ ಅಕ್ಟೋಬರ ಒಂದನೇ ತಾರೀಕಿಗೆ ಅಸ್ತಿತ್ವದಲ್ಲಿ ಬರುವುದು. (೨) ಆಂಧ್ರ ರಾಜ್ಯದ ರಾಜಧಾನಿಯು ಆಂಧ್ರದ ಸೀಮೆಯೊಳಗೇನೆ ಇರತಕ್ಕದ್ದು. ಆಂಧ್ರ ಶಾಸನ ಸಭೆಯ ಸದಸ್ಯರು ತಮ್ಮಲ್ಲೆ ಪರ್ಯಾಲೋಚಿಸಿಕೊಂಡು ರಾಜಧಾನಿಯಾಗಿ ಯಾವ ನಗರವನ್ನು ಮಾಡಿದರಾಗಬಹುದೆಂದು ನಿರ್ಣಯಿಸಿ, ಭಾರತ ಸರಕಾರಕ್ಕೆ ಜುಲೈ ಒಂದನೇ ತಾರೀಕಿನೊಳಗಾಗಿ ತಿಳಿಸಬೇಕು. (೩) ವಾದಗ್ರಸ್ತ ಪ್ರದೇಶವಾದ ಬಳ್ಳಾರಿ ಜಿಲ್ಲೆಯ ಮಟ್ಟಿಗೆ ಪೂರ್ವದ ಆದವಾನಿ, ಆಲೂರು ಮತ್ತು ರಾಯದುರ್ಗ ತಾಲೂಕುಗಳು ಆಂಧ್ರಕ್ಕೆ ಸೇರಬೇಕು. ಹರಪನಹಳ್ಳಿ, ಹಡಗಲಿ, ಉತ್ತರ ಮತ್ತು ದಕ್ಷಿಣ ಹೊಸಪೇಟೆ, ಸೊಂಡೂರು ಮತ್ತು ಸಿರುಗುಪ್ಪ ಎಂಬ ಆರು ತಾಲೂಕುಗಳು ಮೈಸೂರಿನೊಡನೆ ವಿಲಯನ ಗೊಳ್ಳುವವು. ಬಳ್ಳಾರಿ ತಾಲೂಕಿನ ಬಗ್ಗೆ ಏನನ್ನೂ ನಿಶ್ಚಯಿಸಿಲ್ಲ. ಸರಕಾರವು ಇನ್ನೂ ಹೆಚ್ಚಿನ ವಿಚಾರ ಮಾಡಿ ನಿರ್ಣಯವನ್ನು ಸ್ವೀಕರಿಸುವುದು.

ಇತರ ಅಂಶಗಳು

ಮೇಲೆ ಹೇಳಿದ ಮೂರು ಪ್ರಾಮುಖ್ಯ ಅಂಶಗಳಲ್ಲದೆ, ನೆಹರೂರವರು ಇನ್ನಿತರ ಸಂಗತಿಗಳನ್ನು ತಮ್ಮ ಹೇಳಿಕೆಯಲ್ಲಿ ವಿಶದೀಕರಿಸಿರುವರು. ಆಂಧ್ರ ರಾಜ್ಯಕ್ಕೆ ಮೇಲ್ಮನೆ ಇರದೆ, ಕೆಳಮನೆ ಮಾತ್ರ ಇರುತ್ತದೆ. ಹೊಸ ರಾಜ್ಯವು ಉದಯಕ್ಕೆ ಬಂದ ಮೇಲೆ ಹೈಕೋರ್ಟಿನ ಸ್ಥಳವನ್ನು ಆಂಧ್ರದ ಶಾಸನ ಸಭೆಯು ಆರಿಸಬೇಕು. ಅಲ್ಲಿಯ ವರೆಗೆ ಮದ್ರಾಸು ಹೈಕೋರ್ಟಿನ ಅಧಿಕಾರವನ್ನೆ ಆಂಧ್ರ ರಾಜ್ಯದ ಮೇಲೆಯೂ ವಿಸ್ತರಿಸಲಾಗುವುದು. ತುಂಗಭದ್ರಾ ಯೋಜನೆಯ ಮಟ್ಟಿಗೆ, ಆಂಧ್ರರಾಜ್ಯದ ಉದಯವಾಗುವವರೆಗೆ ಮದ್ರಾಸು ಸರಕಾರವೇ ಆಡಳಿತವನ್ನು ಸಾಗಿಸುತ್ತದೆ. ಆ ಬಳಿಕ ಮೈಸೂರು ಹಾಗು ಆಂಧ್ರರಾಜ್ಯಗಳು ಕೇಂದ್ರ ಸರಕಾರ ಸಿದ್ಧಗೊಳಿಸಿದ ಯೋಜನೆಯಂತೆ ಈ ಆಣೆಕಟ್ಟಿನ ಸಂಬಂಧದಲ್ಲಿ ವಿಶೇಷ ಆಸ್ಥೆ ವಹಿಸಿ ದುಡಿಯುವುದು ಅಗತ್ಯವೆನಿಸಿದೆ. ಆಂಧ್ರರಾಜ್ಯ ನಿರ್ಮಾಣದ ಬಳಿಕ ರಾಜ್ಯದ ಸರಿಯಾದ ಮೇರೆಗಳನ್ನು ನಿರ್ಧರಿಸುವ ಉದ್ದೇಶದಿಂದ ಗಡಿ ನಿರ್ಣಾಯಕಸಮಿತಿಯನ್ನು ನೇಮಿಸುವುದು ಸರಕಾರಕ್ಕೆ ಸೇರಿದೆ. ಆಂಧ್ರ-ಮೈಸೂರು ಹಾಗು ಆಂಧ್ರ — ಮದ್ರಾಸು ರಾಜ್ಯಗಳ ಮೇರೆಗಳನ್ನು ಸರಿಪಡಿಸಲಾಗುವುದು. ಸರಕಾರೀ ನೌಕರರ ಮಟ್ಟಿಗೆ, ಈಗ ಆಂಧ್ರದಲ್ಲಿ ಇರುವ ಎಲ್ಲರನ್ನೂ ಅಲ್ಲಿಯೇ ಉಳಿಸಿಕೊಳ್ಳಲು ನೋಡಲಾಗುವುದು. ರಾಜಧಾನಿಯ ವಿಷಯಕ್ಕಾಗಲೀ ಕೇಂದ್ರ ಸರಕಾರದಿಂದ ಅಪೇಕ್ಷಿಸಬಹುದಾದ ಧನಸಹಾಯದ ಮಟ್ಟಿಗಾಗಲೀ ಭಾರತ ಸರಕಾರದ ಒಪ್ಪಿಗೆ ದೊರೆಯುವುದು ಅವಶ್ಯ. ಹೊಸ ರಾಜ್ಯವನ್ನು ಸ್ಥಾಪಿಸುವ ಬಗ್ಗೆ ವಿಧೇಯಕವನ್ನು ಮುಂದಿನ ಅಧಿವೇಶನದಲ್ಲಿ ಮಂಡಿಸಲಾಗುವುದು.

ಶಾಶ್ವತ ರಾಜಧಾನಿಯ ಪ್ರಶ್ನೆ

ಮೇಲಿನದು ನೆಹರೂ ಹೇಳಿಕೆಯ ಸಾರಾಂಶ: ಇದನ್ನು ವಿಮರ್ಶಾತ್ಮಕ ದೃಷ್ಟಿಯಿಂದ ನೋಡಿದರೆ, ರಾಜಾಜಿಯು ಮದ್ರಾಸು ನಗರದ ಸಂಬಂಧದಲ್ಲಿ ತಮಿಳರ ಪಕ್ಷ ಹಿಡಿದು ಬಲವಾಗಿ ವಾದಿಸಿದ್ದಕ್ಕೆ ಪುಷ್ಟಿ ದೊರೆತದ್ದು ಕಂಡುಬರುತ್ತದೆ. ನ್ಯಾಯಮೂರ್ತಿ ವಾಂಚೂರವರು ತಮ್ಮ ವರದಿಯಲ್ಲಿ ಮದ್ರಾಸು ನಗರವನ್ನು ಆಂಧ್ರದ ತಾತ್ಪೂರ್ತಿಕ ರಾಜಧಾನಿಯನ್ನಾಗಿ ಮಾಡಬೇಕೆಂದು ಶಿಫಾರಸನ್ನೇನೊ ಮಾಡಿದ್ದರು ಆದರೆ ಇದರಿಂದ ಒಳ್ಳೆಯದಾಗಲಿಕ್ಕಿಲ್ಲವೆಂಬ ಭಯ ಅವರಿಗೂ ಇತ್ತು. ಏಕೆಂದರೆ ಒಂದು ಸಲ ತೆಲುಗರಿಗೆ ಮದ್ರಾಸಿನಲ್ಲಿ ಅನಿವಾರ್ಯವೆಂಬ ಅಭಿಪ್ರಾಯದಿಂದಲಾದರೂ ಸ್ಥಳ ಕೊಟ್ಟದ್ದಾದಲ್ಲಿ— ಅವರು ಮತ್ತೆ ಬೇರೆಡೆಗೆ ಹೋಗಲು ಬಯಸಲಾರರು ಎಂದು ತಮಿಳರು ಹೆದರುತ್ತಿರುವರೆಂದು ವಾಂಚೂ ಹೇಳಿರುವರು. ಈ ಕಾರಣದಿಂದಲೇ ಆಂಧ್ರರು ತಮಿಳರಿಗೆ ಯೋಗ್ಯ ಆಶ್ವಾಸನೆಗಳನ್ನು ಕೊಡಬೇಕು ಎಂದಿರುವರು. ಇಷ್ಟೆಲ್ಲ ತೊಡಕಿನಿಂದ ರಾಜಧಾನಿಯನ್ನು ಮದ್ರಾಸಿನಲ್ಲಿ ನೆಲೆಗೊಳಿಸುವುದರಲ್ಲಿ ಅರ್ಥವಿಲ್ಲ. ಮಾತ್ರವಲ್ಲ ನೆಹರೂರವರು ಆಂಧ್ರ ರಾಜ್ಯ ನಿರ್ಮಾಣವಾಗಬೇಕೆಂದು ಸರಕಾರ ನಿರ್ಧರಿಸಿದ ಸಂಬಂಧದಲ್ಲಿ ಕಳೆದ ದಶಂಬರದಲ್ಲಿ ಹೇಳಿಕೆ ಕೊಟ್ಟಾಗ, "ಮದ್ರಾಸು ನಗರವನ್ನು ಬಿಟ್ಟು" ಎಂದು ಸ್ಪಷ್ಟವಾಗಿ ಉಲ್ಲೇಖಿಸಿದ್ದರು. ವಾಂಚೂರ ಅಭಿಪ್ರಾಯದಂತೆ ಮದ್ರಾಸನ್ನು ಬಿಟ್ಟರೆ, ರಾಜಧಾನಿಗೆ ಯೋಗ್ಯವಾದ ಸ್ಥಳವು ಗುಂಟೂರು ಮತ್ತು ಕೃಷ್ಣಾ ನದಿಗೆ ನಡುವಿರಬೇಕು, ಇಲ್ಲವೆ ತಿರುಪತಿಯಲ್ಲಿ ಇರಬೇಕು. ಈ ಸಂಬಂಧದಲ್ಲಿ ಕೊನೆಯ ನಿರ್ಣಯವನ್ನು ಕೈಗೊಳ್ಳುವ ಅಧಿಕಾರವು ಆಂಧ್ರಗೆ ಸೇರಿದ್ದರೂ, ಅವರು ಅವಶ್ಯವಾಗಿ ಗಮನದಲ್ಲಿ ಇಟ್ಟುಕೊಳ್ಳಬೇಕಾದ ವಿಷಯವೊಂದಿದೆ. ಅದೇನೆಂದರೆ ರಾಯಲಸೀಮೆಯ ಮತ್ತು ಉತ್ತರ ಸರಕಾರದ ಜಿಲ್ಲೆಯ ಜನರು ತಮ್ಮೊಳಗೆ ಮಾಡಿಕೊಂಡ ೧೯೩೭ನೇ ಇಸವಿಯ ಶ್ರೀಭಾಗ ಒಪ್ಪಂದವಾಗಿದೆ. ಇದರಂತೆ ಆಂಧ್ರರಾಜ್ಯವು ಅಸ್ತಿತ್ವದಲ್ಲಿ ಬಂದಾಗ ಹೈಕೋರ್ಟು ಅಥವಾ ರಾಜಧಾನಿಗಳಲ್ಲಿ ಒಂದನ್ನು ರಾಯಲಸೀಮೆಯಲ್ಲಿಡತಕ್ಕದ್ದು. ಮತ್ತು ತಮಗಾವುದು ಬೇಕೆಂಬುದನ್ನು ರಾಯಲಸೀಮೆಯೇ ಮೊದಲು ನಿರ್ಧರಿಸಿಕೊಳ್ಳುವುದು.

ಕನ್ನಡಿಗರಿಗೆ ಅನ್ಯಾಯ

ಮದ್ರಾಸು ನಗರದಲ್ಲಿ ಆಂಧ್ರದ ತಾತ್ಪೂರ್ತಿಕ ರಾಜಧಾನಿಗೂ ಅವಕಾಶ ದೊರೆಯಲಿಲ್ಲೆಂಬುದನ್ನು ತೆಲುಗರು ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಂಡಿರುವಂತೆ ತೋರುವುದಿಲ್ಲ. ಆದರೂ ಮದ್ರಾಸಿನಲ್ಲಿ ತಾತ್ಪೂರ್ತಿಕ ರಾಜಧಾನಿ ಇರಬಾರದಾದರೆ, ಮದ್ರಾಸು ಹೈಕೋರ್ಟಿನ ಅಧಿಕಾರವನ್ನಾದರೂ ತಾತ್ಪೂರ್ತಿಕವಾಗಿ ಏಕೆ ಆಂಧ್ರದ ಮೇಲೆ ಹೇರಬೇಕು? ಎಂದವರು ಪ್ರಶ್ನಿಸಿ, ತಾವೂ ಅಭಿಮಾನಧರರೆಂಬುದನ್ನು ತೋರಿಸಿರುವರು. ತಾತ್ಪೂರ್ತಿಕ ರಾಜಧಾನಿಯಾಗಿ ವಾಂಚೂರವರು 'ವಾಲ್ಟೇರ ಅಥವಾ ವಿಶಾಖಪಟ್ಟಣಗಳನ್ನು ಸೂಚಿಸಿರುವರು. ನ್ಯಾಯ ಮೂರ್ತಿ ವಾಂಚೂರವರು ಬಳ್ಳಾರಿ ಜಿಲ್ಲೆಯ ವಿಷಯವನ್ನೆತ್ತಿಕೊಂಡು ಇಡೀ ಬಳ್ಳಾರಿಯನ್ನು ಆಂಧ್ರದೊಡನೆ ಸೇರಿಸಬೇಕೆಂದು ಶಿಫಾರಸು ಮಾಡಿರುವರು. ಆದರೆ, ಈ ವ್ಯವಸ್ಥೆಯು ತಾತ್ಕಾಲಿಕ ಸ್ವರೂಪದ್ದಿರಬೇಕು; ಮತ್ತು ಕರ್ನಾಟಕ ರಾಜ್ಯ ನಿರ್ಮಾಣಗೊಂಡಾಗ ಬಳ್ಳಾರಿ ಜಿಲ್ಲೆಯ ಭವಿತವ್ಯದ ಪುನರ್ವಿಮರ್ಶೆ ಅಗತ್ಯವೆಂದವರು ಕಂಡು ಕೊಂಡಂತೆ ಕಾಣುತ್ತದೆ. ಆದರೆ ಕನ್ನಡಿಗರ ದೃಷ್ಟಿಯಲ್ಲಿ ಇದು ತೀರಾ ತಿಳಿಗೇಡಿ ನಿರ್ಣಯವಾಗಿದೆ. ಬಳ್ಳಾರಿಯು ಕನ್ನಡಕ್ಕೆ ಸೇರಿದ ಪ್ರದೇಶವೆಂದು ಇತಿಹಾಸ ಪ್ರಸಿದ್ಧವಾಗಿರುವಾಗ ಅದನ್ನು ಆಂಧ್ರಕ್ಕೆ ಸೇರಿಸುವುದು ಮೂರ್ಖತನವಾದೀತೆಂದೂ ಕನ್ನಡಿಗರಿಗೆ ಪರಮಾವಧಿಯ ಅನ್ಯಾಯವನ್ನು ಮಾಡಿದಂತಾಗುವುದೆಂದೂ ಪದೇ ಪದೇ ಎಚ್ಚರಿಕೆಯನ್ನು ಕೊಟ್ಟದ್ದುಂಟು. ಬಹುಶಃ ಈ ಎಚ್ಚರಿಕೆಗಳ ಗಂಭೀರ ಸ್ವರೂಪವನ್ನು ತಿಳಿದು ಕೊಂಡು ಸರಕಾರವು ಪೂರ್ವದ ಮೂರು ತಾಲೂಕುಗಳನ್ನು ಮಾತ್ರ ಆಂಧ್ರ ರಾಜ್ಯದಲ್ಲಿ ಸೇರಿಸುವ ನಿರ್ಣಯ ಮಾಡಿತು.

ಅಸಮಂಜಸ ನಿರ್ಣಯ

ಹೀಗೆ ಬಳ್ಳಾರಿಯನ್ನು ವಿಚ್ಛೇದಿಸಿದರಿಂದ ಹಿತವಾಗಿದೆಯೆಂದು ಯಾ ದೂರದರ್ಶಿಯೂ ಹೇಳುವಂತಿಲ್ಲ. ಸ ಕಾಭಿಪ್ರಾಯಗಳಾಗಲೀ ಜನಾಭಿಪ್ರಾಯವಾಗಲೀ ಭಾರತ ಸರಕಾರ ಈ ರೀತಿ ಳ್ಳಾರಿ ವಿಚ್ಛೇದನಾ ನಿರ್ಣಯವನ್ನು ಕೊಂಡುದನ್ನೂ ಈ ನಡುವೆ ಬಳ್ಳಾರಿ ತಾ ಲೂಕಿನ ಪ್ರಶ್ನೆಯನ್ನು ತ್ರಿಶಂಕು ಸ್ವರ್ಗದ ಸ್ಥಾನದಲ್ಲಿ ಇಟ್ಟುದನ್ನೂ ಟೀಕಿಸಿ ಬಳ್ಳಾರಿ ಜಿಲ್ಲೆಯ ಸಮಸ್ಯೆಯನ್ನು ಅರ್ಥಪೂರ್ಣವಾಗಿ ಬಿಡಿಸುವ ಬದಲು-ಅದನ್ನ ಇಡಿಯಾಗಿ ಹಿಂದಿನಿಂದ ನಿರ್ಣಯ ಕೊಳ್ಳಲು ಬಿಟ್ಟಿದ್ದರೂ ತೊಂದರೆ ಇ ಲಿಲ್ಲ. ಆದರೆ ಈಗ ಬಳ್ಳಾರಿ ಜಿಲ್ಲೆ ಭವಿಷ್ಯವನ್ನು ನಿರ್ಣಯಿಸಿದ ರೀತಿಯಿಂ ಯಾರಿಗೂ ಹಿತವೆನಿಸಿಲ್ಲ. ಬಳ್ಳಾರಿ ಜಿ ಯ ಪ್ರಶ್ನೆಯಲ್ಲಿ ಅಡಕವಾಗಿರುವ ವಿ ದಾಸ್ಪದ ಸಂಗತಿಗಳಲ್ಲಿ ಯಾವುದೊಂ ಕ್ಕೂ ನೇರವಾದ ಸಮಂಜಸವಾದ ಸಮಾಧಾನ ದೊರೆತಿರುವುದಿಲ್ಲ. ಉದಾಹರಣೆ — ಬಳ್ಳಾರಿ ತಾಲೂಕಿನ ಪ್ರಶ್ನೆಯನ್ನು ಹಿ ದಕ್ಕೆ ನಿರ್ಣಯಿಸಬಹುದಾದಲ್ಲಿ, ಇ ಬಳ್ಳಾರಿ ಜಿಲ್ಲೆಯ ಪ್ರಶ್ನೆಯನ್ನೇಕೆ ಹಾ ಮಾಡಲು ಬಾರದು? ಬಳ್ಳಾರಿಯ ಪೂರ್ವದ ತಾಲೂಕುಗಳ ಬಗ್ಗೆ ಕನ್ನ ಗರು ಹಾಗೂ ಆಂಧ್ರರ ನಡು ಇನ್ನೂ ತಿಕ್ಕಾಟ ನಡೆದಿರುವಾ

ವಿಚಾರ ಪ್ರಚೋದಕವಾದ ಪ್ರತಿಯೊಬ್ಬರೂ ಓದಲೇಬೇಕಾದ ನವನವೀನ ಪುಸ್ತಕಗಳು!

ಗೀತಾ ರಹಸ್ಯವನ್ನು ತಿಳಿಯ ಬಯಸುವವರಾರು?

ದಿ। ಹೊಸಕೆರೆ ಚಿದಂಬರಯ್ಯ ಕೃತ **ಗೀತೆಯ ಕೈಗನ್ನಡಿ** ಭಗವದ್ಗೀತೆಯ ಸಮೂಲ ಭಾಷಾಂತರ

ಪುಟಗಳು 428 ಬೆಲೆ 0-12-0 ಅಂಚೆವೆಚ್ಚ 0-4-0

100 ಪ್ರತಿಗಳಿಗೆ ರೂ. 60; 250ಕ್ಕೆ ರೂ 140; 500ಕ್ಕೆ ರೂ. 250

ಕತೆ, ಕಾದಂಬರಿ, ನಾಟಕ, ಚಿತ್ರ, ಪ್ರಬಂಧ, ಹರಟೆ ಮೊದಲಾದ, ನೋಡಿದರೆ ಬಿಡದಿರುವ ಅಂತರಂಗ ಪ್ರಕಟನಾಲಯದ ರೂ. 30 ಕ್ರಯದ 86 ಪ್ರಕಟಣೆಗಳನು ಒಮ್ಮೆಯೇ ತರಿಸಿಕೊಳ್ಳುವವರಿಗೆ ರೂ. 24ಕ್ಕೆ ಕೊಡಲಾಗುವುದು.

ನಾರೀಹೃದಯ	ರೂ. 1	8	ಪ್ರಕಾಶ	ರೂ. 2	8	ನೆನಪಿಗಾಗಿ	ರೂ. 2	0
ಭಾರತೀಯ ಕತೆಗಳು	1	12	ಮಧುವನ	3	0	ಕಾವ್ಯಸಾಮ್ರಾಜ್ಯ	1	8
ಸನ್ಯಾಸಿಯ ಸೋಗಿನಲ್ಲಿ	[illegible]	12	ಘಂಟೆಮಾರಾ	2	0	ಪ್ರೇಮ ವಿಜಯ	1	4
ಕವಿತಾ ಕಾಮಿನಿ	2	0	ನಂದಾದೀಪ	1	0	ರಂಗಭೂಮಿ	0	10
ಕುಲವಿಲ್ಲದ ಹೆಣ್ಣು	2	0	ಜಮೀನ್ದಾರ	1	8	ಭಾರತದಲ್ಲಿ ಜಾತಿಭೇದ	1	0
ವ್ಯಭಿಚಾರಿಣಿ ಯಾರು	1	4	ದೇಶಭಕ್ತ	1	4	ವೀರ ಸಾವರ್ಕರ	1	4
ಸುಲಭದಲ್ಲಿ ಇಂಗ್ಲಿಷ್	2	0	ಮನೆ ಮದ್ದು	2	8	ಕದಂಬ	1	4
ನೀತಿವಿನೋದ ಕತೆಗಳು	0	12	ಸರಸ್ವತಿ	0	12	ಭಾಗ್ಯಲಕ್ಷ್ಮಿ	1	4
ಜೀವನ ಸಂಗ್ರಾಮ	1	8	ಸೇವಾಪಥ	0	8	ಲೋಕಾವಮಿತ್ರ	0	8

ಇವೇ ಮೊದಲಾದ ನೂರಾರು ಬಗೆಯ ಉಪಯುಕ್ತ ಪುಸ್ತಕಗಳ ಕಟಲಾಗಿಗೆ ಬರೆಯಿರಿ ವ್ಯಾಪಾರಿಗಳಿಗೂ, ಪುಸ್ತಕಭಂಡಾರಗಳಿಗೂ ವಿಶೇಷ ಸವಲತ್ತುಗಳಿವೆ

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಭಾರತ—ಬರ್ಮಾ ದೇಶಗಳ ಗಡಿ ಪರಿಶೀಲನೆ

ಪ್ರಧಾನಿ ನೆಹರೂ ಮತ್ತು ಯು ನೂ ಭೇಟಿಯ ರಹಸ್ಯ

ಪರಸ್ಪರ ಸೌಹಾರ್ದಯುತ ಒಪ್ಪಂದ ವಾಗದೇನೆ ಭಾರತ ಸರಕಾರ ತನ್ನ ನಿರ್ಣ ಯ ಹೇರಿದುದು ಸರಿಯಾದ ರೀತಿಯೆ? ಬಳ್ಳಾರಿಯ ಕನ್ನಡ ಪ್ರದೇಶಗಳನ್ನೇ ಆ ದರೂ ಮೈಸೂರಿನಲ್ಲಿ ಈಗ ವಿಲಯನ ಗೊಳಿಸುವುದು ಇಷ್ಟವೆ? ಅಲ್ಲಿಯ ಕನ್ನಡ ಜನತೆಯು ಮದ್ರಾಸು ರಾಜ್ಯದಲ್ಲಿಯೇ ಬಳ್ಳಾರಿಯನ್ನು ಉಳಿಯಗೊಡಬೇಕೆಂ ಬುದೇ ತಮ್ಮ ಇಚ್ಛೆ ಹೊರತು ಮೈಸೂರಿ ನೊಡನೆ ಸೇರ್ಪಡೆ ಹೊಂದುವುದಲ್ಲವೆಂ ಬ ವಾಂಚೂರ ಮುಂದೆ ನುಡಿದಿರುವ ರೆಂದು ತಿಳಿದಿದೆ. ಹೀಗೆ ಬಳ್ಳಾರಿಯ ಆರು ಕನ್ನಡ ತಾಲೂಕುಗಳನ್ನು ಮೈಸೂರಿನೊ ಡನೆ ಸೇರಿಸುವುದಕ್ಕಾದರೂ— ರಾಜ್ಯ ಘ ಟನೆಯ ಮೂರನೆಯ ಕಲಮಿನಂತೆ ವಿ ಧೇಯಕವನ್ನು ಪಾಸು ಮಾಡಿಸಿಕೊಳ್ಳು ವ ಅಗತ್ಯವಿದೆ. ಕರ್ನಾಟಕ ಏಕೀಕರಣ ವಾದರೂ ಇಂಥದೇ ಕ್ರಮ ಸಾಕಾಗಿದೆ. ಹೀಗಿರುವಾಗ ಉಳಿದ ಕನ್ನಡ ಪ್ರದೇಶ ಗಳನ್ನೂ ಮೈಸೂರಿನೊಡನೆ ಈಗಲೇ ಸೇ ರಿಸಲು ಭಾರತ ಸರಕಾರ ಏಕಾಗಿ ಅಪೇ ಕ್ಷಿಸಿಲ್ಲ?

ಮುರಿದ ಭರವಸೆ

ಇನ್ನೂ ಒಂದು ಮಹತ್ವದ ವಿವಾ ದಾಂಶವನ್ನು ಎತ್ತಿಕೊಂಡಲ್ಲಿ ಭಾರತ ಸ ರಕಾರವು ಪದೇಪದೇ ಕೊಡುತ್ತಾ ಬಂದ ಆಶ್ವಾಸನವನ್ನು ಮುರಿದೇ ಬಳ್ಳಾರಿಯ ವಿಚ್ಛೇದನಗೈಯುವ ನಿರ್ಣಯವನ್ನು ಕೈ ಗೊಂಡಿದೆ ಎನ್ನಬಹುದು. ನೆಹರೂರವರು ವಿರ್ವಿವಾದ ಆಂಧ್ರಪ್ರದೇಶಗಳನ್ನು ಮಾತ್ರ ಆಂಧ್ರದಲ್ಲಿ ಸೇರಿಸಿಕೊಳ್ಳಲಾಗುವುದೆಂದಿ ದ್ದವರು. ಯಾವುದೇ ವಾದಗ್ರಸ್ತ ಪ್ರದೇ ಶಗಳ ಸುದ್ದಿಯನ್ನೂ ಎತ್ತುವುದಿಲ್ಲ, ಏಕೆಂ ದರೆ ಹಾಗೆ ಮಾಡಿದಲ್ಲಿ ಇತರ ಸಮಸ್ಯೆಗಳು ತಲೆ ಎತ್ತುವುವು ಎಂದಿದ್ದರು. ಈ ದೃಷ್ಟಿ ಯಿಂದ ನೋಡಿದರೆ ಆಂಧ್ರ ರಾಜ್ಯವೊಂ ದನ್ನು ಮಾತ್ರ ನಿರ್ಮಿಸುವಹೊಣೆಹೊತ್ತ ಭಾರತ ಸರಕಾರ ಕನ್ನಡಿಗರ ಅಧಿಕಾರವಿ ರುವ ಬಳ್ಳಾರಿಯನ್ನು ಬಿಟ್ಟು ಗೊಟ್ಟೀ ಉಳಿದ ೧೧ಜಿಲ್ಲೆಗಳಿಂದ ಆ ರಾಜ್ಯನಿರ್ಮಿ ಸಬೇಕಾದ್ದು ನ್ಯಾಯ. ಎಲ್ಲ ಭಾಷಾ ವಾರು ಪ್ರಾಂತಗಳೂ ಏಕಕಾಲಕ್ಕೆ ನಿ ರ್ಮಾಣಗೊಳ್ಳುವುದಾದಲ್ಲಿ ವಿವಾದ ಗ್ರ

ಸ್ತ ಪ್ರದೇಶಗಳ ಸಂಬಂಧದಲ್ಲಿ ಆಗಾಗಲೇ ನಿರ್ಣಯ ಸ್ವೀಕರಿಸಲು ಅವಕಾಶ ಸಿಗು ತ್ತದೆ. ಬಳ್ಳಾರಿ ಜಿಲ್ಲೆಯನ್ನು ಇಡಿಯಾ ಗಿ ಬಿಟ್ಟರೆ ಅದು ಮದ್ರಾಸು ರಾಜ್ಯದ ಸಂ ಪರ್ಕವನ್ನು ಕಳೆದುಕೊಂಡ ನಡು ಗುಡ್ಡೆ ಯಾಗಿ ಉಳಿಯುವುದೆಂಬ ಒಂದೇ ಒಂದು ತೋರಿಕೆಯ ಕಾರಣಕ್ಕೆ ಇಷ್ಟೆಲ್ಲ ಹೊಸ ವಿವಾದಾಂಶಗಳಿಗೆ ಜನನ ಕೊಟ್ಟ ನಿರ್ಣ ಯಕ್ಕೆ ಬಂದುದು ಚೆನ್ನಾಗಲಿಲ್ಲ. ಜೆ. ವಿ. ಪಿ. ವರದಿಯಲ್ಲಿ ಕೂಡ ಆಂಧ್ರವು ವಿವಾ ದಾಸ್ಪದವಲ್ಲದ ಜಿಲ್ಲೆಗಳನ್ನು ಮಾತ್ರ ಒಳಗೊಂಡು ಉದಯವಾಗ ಬೇಕೆಂದು ಸೂಚಿಸಲಾಗಿದ್ದಿತು. ಈ ಎಲ್ಲ ತಳಹದಿಗಳನ್ನು ಬಿಟ್ಟುಗೊಟ್ಟು ಬಳ್ಳಾರಿ ಯ ಪ್ರಶ್ನೆಯನ್ನು ಅವಸರದಿಂದ ಇತ್ಯರ್ಥ ಮಾಡಿದುದರಿಂದ ಕನ್ನಡಿಗರ ಅಸಮಾ ಧಾನ ಕೆರಳಿ ನಿಂತಿದೆ. ಪರಿಣಾಮವಾಗಿ ಕನ್ನಡಿಗರು ಸರಕಾರದ ನಿರ್ಣಯದ ವಿರು ದ್ಧ ಟೀಕೆಯನ್ನೂ ಚಳುವಳಿಯನ್ನೂ ಮಾಡುತ್ತಿರುವರು ನೆಹರೂ ಹೇಳಿಕೆಯ ಬೆನ್ನಲ್ಲೆ ಬಳ್ಳಾರಿ ಜಿಲ್ಲೆಯಲ್ಲಿ ನಡೆಯು ತ್ತಿರುವ ಕನ್ನಡಿಗರ ಚಳುವಳಿಯು ಉ ಪೇಕ್ಷಣೀಯವಾಗಿ ಉಳಿವಿಲ್ಲ.

ನೆಹರೂ-ಯು ನೂ ಭೇಟಿ

ಪ್ರಧಾನಿ ನೆಹರೂರವರು ಪ್ರಕೃತ ಅ ಸ್ಸಾಮಿನ ಗುಡ್ಡಗಾಡು ಪ್ರದೇಶದ ಸಂ ಚಾರದಲ್ಲಿರುವರು. ಬರ್ಮಾ ಮತ್ತು ಭಾರತದ ಗಡಿ ಪ್ರದೇಶದಲ್ಲಿರುವ ಈ ಗು ಡ್ಡಗಾಡುಗಳಲ್ಲಿ ಅನಾಗರಿಕ ಪಂಗಡಗಳು ವಾಸಿಸುತ್ತಿವೆ. ಇವರಲ್ಲಿ ಹೆಚ್ಚಿನವರು ಮಂಗೋಲೀ ವಂಶಜರು. ಕೆಳಗಿನ ಕಣಿ ವೆ ಪ್ರದೇಶಗಳಲ್ಲಿರುವ ಜನರು ಭಾರತದ ಹಳ್ಳಿಗಾಡಿನ ರೈತರಂತೆ ಸಾಮಾನ್ಯ ಜೀ ವನವನ್ನು ಸಾಗಿಸುತ್ತ ನಾಗರಿಕರಾಗಿ ದ್ದಾರೆ. ಗುಡ್ಡಗಾಡಿನ ಉಳಿದ ಪ್ರದೇಶ ಗಳಲ್ಲಿರುವ ಆದಿವಾಸಿಗಳ ಸ್ಥಿತಿಗತಿ ಮಾ ತ್ರ ಏನೇನೂ ಚೆನ್ನಾಗಿಲ್ಲ. ಸಾರಿಗೆ ಸಾ ಕರ್ಯಗಳ ಅಭಾವವು ಇಲ್ಲಿ ಎಷ್ಟರಮಟ್ಟಿ ಗೆ ತೀವ್ರವಾಗಿದೆ ಎಂದರೆ— ಏನೇನೂ ಸ ಮಾಚಾರ ದೊರೆಯುವುದು ಸಾಧ್ಯವಿಲ್ಲ ದಂಥ ಪರಿಸ್ಥಿತಿ ಇದೆ. ಈ ಅನಾಗರಿಕ ಜನರನ್ನು ಸುಧಾರಿಸಲು ಬ್ರಿಟಿಷರ ಕಾಲ ದಲ್ಲಿ ಮಿಶನರಿಗಳು ಬಹಳ ಪ್ರಯತ್ನಪಾ ಡಿದ್ದುಂಟು. ಸ್ವಾತಂತ್ರ್ಯೋತ್ತರದಲ್ಲಿ ಭಾರತ ಸರಕಾರವೂ ಈ ವಿಷಯದಲ್ಲಿ ಆ ಸಕ್ತಿಯನ್ನು ವಹಿಸಿ ದುಡಿಯಿತು. ಈ

ಎಲ್ಲ ಕಾರಣಗಳಿಂದ ಅನಾಗರಿಕ ಜನರಲ್ಲಿ ಯೂ ರಾಷ್ಟ್ರೀಯ ಜಾಗೃತಿ ಮೂಡಿದೆ. ಆದರೂ ಕೆಲವೊಮ್ಮೆ ಅವರು ತಂತಮ್ಮೊಳ ಗನೇ ಹೊಡೆದಾಟವನ್ನು ಕೈಗೊಳ್ಳುತ್ತಾ ರೆ. ಸರಕಾರೀ ನಿಯಂತ್ರಣವನ್ನು ಬಿಗು ಮಾನದಿಂದ ಹೇರುವುದು ಇಲ್ಲಿರುವ ನೈ ಸರ್ಗಿಕ ತೊಂದರೆ ತಾಪತ್ರಯಗಳಿಂದ ಅ ಸಾಧ್ಯವೆನಿಸಿದೆ. ಬರ್ಮಾ ಮತ್ತು ಭಾರ ತದ ಗಡಿಯಲ್ಲಿ ಕೂಡ ಅನಾಗರಿಕ ಪಂಗ ಡಗಳ ನಡುವೆ ಪರಸ್ಪರ ಘರ್ಷಣೆಗಳು ನ ಡೆದ ಉದಾಹರಣೆ ಇದೆ. ಇಲ್ಲಿಯ ಸಮ ಸ್ಯೆಯನ್ನು ಚೆನ್ನಾಗಿ ತಿಳಿದುಕೊಂಡು, ಗ ಡಿ ಪ್ರದೇಶದ ಭದ್ರತೆಯನ್ನು ಕಾಯ್ದು ಕೊಳ್ಳುವುದು ಎರಡೂ ದೇಶಗಳಿಗೆ ಇಷ್ಟ ವಾಗಿದೆ. ಎಂತಲೇ ಪ್ರಧಾನಿ ನೆಹರೂ ರವರು ಬರ್ಮಾದ ಪ್ರಧಾನಿ ಯುನೂರ ನ್ನು ಕಾಣಲು ಇಂಫಾಲಕ್ಕೆ ಹೋದರು

ಗಡಿ ಪ್ರದೇಶದ ಸಮಸ್ಯೆ

ಬರ್ಮಾ ಮತ್ತು ಭಾರತಗಳಿಗೆ ಸು ಮಾರು ೮೫೦ ಮೈಲು ಉದ್ದದ ಸಾಮಾ ನ್ಯ ಸೀಮಾ ಪ್ರದೇಶವಿದೆ. ಬರ್ಮಾದಲ್ಲಿ ಕರೆನ್ ದಂಗೆಗಾರರು ಕೆಲ ವರ್ಷಗಳಿಗೆ ಪೂರ್ವದಲ್ಲಿ ಗಲಭೆ ಎಬ್ಬಿಸುತಿದ್ದರೆ, ಸ್ವ ಲ್ಪ ಸಮಯದಿಂದೀಚೆಗೆ ರಾಷ್ಟ್ರೀಯ ಚೀ ನಾದ ಸೈನ್ಯಗಳು ಬರ್ಮಾದ ಗಡಿಪ್ರದೇಶ ವನ್ನು ಹೊಕ್ಕು ಹಾವಳಿ ನಡೆಸುತ್ತಿರುವ ವಾರ್ತೆ ಬಂದಿದೆ. ಇಂಥ ಆಕ್ರಮಣಗಳ ನ್ನು ಯಶಸ್ವಿಯಾಗಿ ಬರ್ಮಾವು ತಡೆಯ ಲೇಬೇಕು. ಬರ್ಮಾ ಈ ಸಂಗತಿಯನ್ನು ಉದಾಸೀನದಿಂದ ನೋಡುವುದು ಸಾಧ್ಯ ವಿಲ್ಲ; ಮತ್ತು ಒಂದು ವೇಳೆ ಔದಾಸೀ ನ್ಯ ವಹಿಸಿದ ಪಕ್ಷದಲ್ಲಿ ಭಾರತದ ಈಶಾ ನ್ಯ ಗಡಿಪ್ರದೇಶಕ್ಕೆ ಗಂಡಾಂತರ ತಪ್ಪಿದ್ದ ಲ್ಲ. ಭಾರತ ಸರಕಾರದ ಆಡಳಿತವು ಏನೇ ನೂ ನಡೆಯದ ಘೋರಾರಣ್ಯ ... ಗಳು ಈಗಲೂ ಈ ಸರಹದ್ದಿನಲ್ಲಿವೆ. ಆ ದುದರಿಂದ ಎರಡೂ ರಾಷ್ಟ್ರಗಳ ಪ್ರಧಾನಿ ಗಳು ಒಂದೆಡೆ ಸೇರಿ ಸಂಬಂಧಿಸಿದಲ್ಲ ಸಂ ಗತಿಗಳನ್ನು ವಿವೇಚಿಸುವುದು ಉಚಿತವೇ ಆಗಿದೆ. ಬರ್ಮಾಕ್ಕೆ ರಾಷ್ಟ್ರೀಯ ಚೀನೀ ಯರ ಆಕ್ರಮಣದಿಂದ ತೀರಾ ವಿವಂಚನೆ ಯಾಗಿದ್ದು, ಅದು ಇಷ್ಟರಲ್ಲಿಯೇ ಸಂ ಯುಕ್ತ ರಾಷ್ಟ್ರ ಸಂಘಕ್ಕೆ ದೂರನ್ನು ಒ ಯ್ದಿದೆ. ಭಾರತವು ಬರ್ಮಾದ ದೂರಿನ ಸಂಗತಿಯಲ್ಲಿ ಸಾಮಾನ್ಯವಾಗಿ ಬೆಂಬಲ ನೀಡುವುದೆಂದು ನೆಹರೂ ಪಾರ್ಲಿಮೆಂಟಿ

ನಲ್ಲಿ ಘೋಷಿಸಿರುವರು. ಪಾರ್ಲಿಮೆಂಟಿ ನಲ್ಲಿ ಸರಕಾರದ ಪಕ್ಷಕ್ಕೆ ಅಯಾ ಇಲಾ ಖೆಯ ಮುಂಡಿಸಿದ ಬೇಡಿಕೆಗಳೆಲ್ಲ ಚರ್ಚಿ ಸಲ್ಪಡುತ್ತವೆ; ಮತ್ತು ಬಹುಮತದಿಂದ ಈ ಕೇಳಿಕೆಗಳು ಮಂಜೂರಾಗುತ್ತಿವೆ ಸಂರಕ್ಷಣ ಖಾತೆಯ ಕೆಲಸ ಕಾರ್ಯಗಳ ಟೀಕೆ ಹಾಗೂ ಸಂರಕ್ಷಣ ಉದ್ದಿಮೆ ಬೆಳ ಯಬೇಕೆಂಬ ಬಗ್ಗೆ ಮಾಡಿದ ಸಲಹೆಗಳ ಸಂಬಂಧದಲ್ಲಿ ನೆಹರೂರವರು ಸಮಂಜಸ ವಾದ ರೀತಿಯಲ್ಲಿ ಸ್ಥಿತಿಯನ್ನು ಸ್ಪಷ್ಟೀಕ ರಿಸಿರುವರು. ಭಾರತದ ಗಡಿಯನ್ನು ಸಂರಕ್ಷಿಸಲು ಸಾಧ್ಯವಾದ ರೀತಿಯಲ್ಲಿ ನ ಮ್ಮ ಸೈನ್ಯಗಳಿಗೆ ತರಬೇತಿ ದೊರೆತಿದೆ. ವಾಯು ಹಾಗು ಹಡಗುಪಡೆಗಳಲ್ಲಿ ಸಹ ಕೆಲವೇ ಬ್ರಿಟಿಷ ಅಧಿಕಾರಿಗಳಿದ್ದು ಅಲ್ಲಿ ಯೂ ಭಾರತೀಕರಣವನ್ನು ನೆರವೇರಿಸು ವ ಉದ್ದೇಶ ಸರಕಾರಕ್ಕಿದೆ.

ಕೊರತೆ ಧನವಿನಿಯೋಗ

ಕೊರತೆ ಧನವಿನಿಯೋಗದ ಸಂಬಂಧ ದಲ್ಲಿ ಬಹಳಷ್ಟು ಟೀಕೆಯ ಮಾತುಗಳು ನಮ್ಮ ಅರ್ಥ ಶಾಸ್ತ್ರಜ್ಞರಿಂದ ಕೇಳಿಬರು ತಿದ್ದುವು. ಆದರೆ ಇವಾವುದಕ್ಕೂ ಯೋ ಗ್ಯ ತಳಹದಿ ಇಲ್ಲೆಂಬ ಸಂಗತಿಯನ್ನು ಅಂತಾರಾಷ್ಟ್ರೀಯ ಹಣಕಾಸಿನ ಮಂಡ ಳದ ಶಿಷ್ಟಮಂಡಳದ ಧುರೀಣನಾಗಿ ಬಂದಿ ಬಂದ ಇ. ಎಂ. ಬರ್ನಸ್ಟೀನರು ಸ್ಪಷ್ಟ ಮಾತುಗಳಲ್ಲಿ ಹೇಳಿರುವರು. ಭಾರತದ ಆರ್ಥಿಕ ಪರಿಸ್ಥಿತಿಯು ಆಂತರಿಕವಾಗಿ ಭ ದ್ರವಾಗಿದೆ. ಇದರ ಆಯಾತ-ನಿರ್ಯಾತ ವ್ಯಾಪಾರ ಧೋರಣೆಯು ಸಮತೋಲವ ನ್ನು ಸಾಧಿಸಿದೆ. ಹೀಗಿರುವುದರಿಂದ ಅಭಿ ವೃದ್ಧಿಯೋಜನೆಗಳ ಉದ್ದೇಶಕ್ಕೆ ಕೆಲ ವೊಂದು ಮಿತಿಯಲ್ಲಿ ಕೊರತೆ ಧನವಿನಿ ಯೋಗವನ್ನು ನಡೆಸಿದರೆ ಹಾ ನಿಯಾಗಲಿಕ್ಕಿಲ್ಲ ಎಂದವರು ಹೇಳಿರುವ ರು. ಭಾರತ ಸರಕಾರವು ಅತಿಪ್ರಸರಣ ... ಯಾಗದಂತೆ ಯೋಗ್ಯ ಕ್ರಮಗಳನ್ನು ಕೈಗೊಂಡು ಪೇಟೆಯ ಏರಿ ಳಿತಗಳ ಮೇಲೆ ಹದ್ದುಗಣ್ಣಿನ ದೃಷ್ಟಿಯ ನ್ನಿಟ್ಟುಕೊಂಡರೆ, ಪಂಚವಾರ್ಷಿಕಯೋ ಜನೆಯ ಸಂಬಂಧದಲ್ಲಿ ರಿಜರ್ವ ಬ್ಯಾಂಕಿ ನಿಂದ ಸಾಲವನ್ನು ಪಡೆದು ವಿನಿಯೋಗಿ ಸಲಿಕ್ಕೆ ಅಡ್ಡಿಯಿಲ್ಲ. ರಿಜರ್ವ ಬ್ಯಾಂಕಿ ನಿಂದ ಸಾಲ ತೆಗೆಯುವುದೆಂದರೆ, ಹೆಚ್ಚು ನೋಟುಗಳನ್ನು ಮುದ್ರಿಸಿ ಚಲಾವಣೆ ಯಲ್ಲಿ ತರುವುದೇ ಆಗಿದೆ.

— —

ಅಮೃತಾಂಜನ

ಶಿರೋವೇದನೆ, ಉಳುಕು ಕುತ್ತಿಗೆ ಭುಜ ಹಲ್ಲು ಎದೆ ನೋವುಗಳಿಗೂ ಘಾ ಯಗಳು, ಬಾತುಕೊಳ್ಳುವುದು ಚೇಳುವಿ ಷಮುಂತಾದುವು, ಪಕ್ಷವಾತ, ಮೂಲ ವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧಾಷಧಿ.

ಹುಳು ಕಡ್ಡಿ ಮದ್ದು ನಮ್ಮ ಲ್ಲಿ ಸಿಕ್ಕು ತ್ತದೆ.

REGD.

ಅಮೃತಾಂಜನ ಲಿಮಿಟೆಡ್

ಮದ್ರಾಸು ಬೊಂಬಾಯಿ ಮತ್ತು ಕಲ್ಕತ

ರಕ್ಷಣೆಗೂ ಉಳಿತಾಯ ವ್ಯವಸ್ಥೆಗೂ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್.

ಸ್ಥಾಪನೆ: 1934. ಪ್ರಧಾನ ಕಚೇರಿ: ಮದ್ರಾಸು.

66½ ಲಕ್ಷಕ್ಕೂ ಮಿಕ್ಕಿದ ಹೊಸ ವ್ಯವಹಾರ, 15 ಲಕ್ಷಕ್ಕೂ ಮಿಕ್ಕಿದ ಪ್ರೀಮಿ ಯಮ್ ಉತ್ಪನ್ನ. 45½ ಲಕ್ಷಕ್ಕೂ ಮಿಕ್ಕಿದ ಜೀವವಿಮಾ ನಿಧಿ. 10½ ಲಕ್ಷಕ್ಕೂ ಮಿಕ್ಕಿದ ಮೂಲಧನ. ಸುಮಾರು 3 ಕೋಟಿಯಷ್ಟು ಊರ್ಜಿತದಲ್ಲಿರುವ ವಹಿವಾಟು.

ಪ್ರಗತಿಪರವಾದ ಈ ಕಂಪೆನಿಯಲ್ಲಿ ಒಂದು ಪೋಲಿಸಿ ಇರುವುದು ಉತ್ತಮ ರೀತಿ. ಅಂತೆಯೇ ಇದರ ಏಜನ್ಸಿ ಇರುವುದು ಚಲೋ ವ್ಯವಹಾರ ಸಾಧನ.

ಉತ್ಸಾಹಿ, ಜವಾಬ್ದಾರಿಯ, ಸಮರ್ಥ ಸ್ತ್ರೀ ಪುರುಷರಿಂದ ಕಂಪೆನಿ ಪ್ರಾತಿನಿಧ್ಯದ ಬಗ್ಗೆ ಅರ್ಜಿಗಳು ಸ್ವಾಗತಾರ್ಹವು. ದಯಮಾಡಿ ಬರೆಯಿರಿ:

ಜಿ. ಆರ್. ವಾಲ್ಕಿ, ಬ್ರಾಂಚ್ ಮೆನೇಜರ್,

ದಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು [ದ. ಕ.]

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಚಿಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಪಾರಾಲಯ

ರಥಬೀದಿ ಉಡುಪಿ.

ಸ್ಥಾಪನೆ. 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸುರಕ್ಷಿತತೆ, ಭದ್ರತೆ ಮತ್ತು ಸೇವಾತತ್ಪರತೆ
ಇವುಗಳಿಗೆ
ತವರುಮನೆಯಂತಿದ್ದು, ನಿಮ್ಮೆಲ್ಲರ ಸ್ನೇಹ, ಸಹಕಾರಗಳನ್ನು
ಅಪೇಕ್ಷಿಸುವ ಬೇಂಕು.

THE CANARA BANKING CORPORATION LTD.

Estd: 1906] [H. O.: **UDIPI**, (S. India)

ನವಯುಗ

ಉಡುಪಿ, ಗುರುವಾರ ೨-೪-'೫೩

ಸರಕಾರೀ ಜಾಹೀರಾತು

ಮುಂಬಯಿಯಲ್ಲಿ "ಟ್ಯಾಮ್ಸ್" ಗುಂಪಿನ ಪತ್ರಿಕೆಗಳಿಗೆ ಸರಕಾರದವರು ಜಾಹೀರಾತು ಕೊಡುವುದನ್ನು ನಿಲ್ಲಿಸಿದ ಸಂಗತಿಯಲ್ಲಿ ಒಲವಾದ ವಿರೋಧವು ಕಂಡು ಬಂದಿದೆ. ಸರಕಾರದ ನಿರ್ಣಯವು ಪುನರ್ವಿಮರ್ಶೆಗೆ ಗುರಿಯಾಗಬೇಕೆಂದು ಅಖಿಲ ಭಾರತ ವೃತ್ತ ಪತ್ರಿಕಾ ಮಂಡಳವೇ ಮುಂತಾದ ಸಂಸ್ಥೆಗಳು ಬೇಡಿದರೆ, ಮುರಾರಜೀ ದೇಸಾಯರು ಈ ಕುರಿತು ಸರಕಾರದ ನಿಲುವೆ ತೀರಾ ಸಮಂಜಸವಾದುದೆಂದು ಸಮರ್ಥಿಸಿಕೊಂಡರು. ಸರಕಾರವು ಟ್ಯಾಮ್ಸ್ ಗುಂಪಿನ ಪತ್ರಿಕೆಗಳಿಗೆ ಜಾಹೀರಾತು ಕೊಡುವುದನ್ನು ನಿಲ್ಲಿಸಿದ ಕಾರಣ ಹೇಳುವಾಗ ಮುರಾರಜಿ ದೇಸಾಯರು ಮೊದಲು ಅವು ಸರಕಾರವನ್ನು ಟೀಕಿಸುವ ಸಾಧನಗಳಾಗಿ ಪರಿಣಮಿಸಿವೆ ಎಂದು ಮಾತ್ರ ನುಡಿದರು. ಹೀಗಿದ್ದ ಪಕ್ಷದಲ್ಲಿ ಸರಕಾರವನ್ನು ಹೊಗಳುವ ಪತ್ರಿಕೆಗಳಿಗೆ ಮಾತ್ರ ಜಾಹೀರಾತನ್ನು ಕೊಡುವುದು ಮುರಾರಜಿಯವರ ನಿಲುವೆಯಿದ್ದಂತಾಗುವುದು. ಈ ರೀತಿಯ ಧೋರಣೆಯು ಪತ್ರಿಕೋದ್ಯಮದ ಅಭಿವೃದ್ಧಿಯ ದೃಷ್ಟಿಯಿಂದ ಹಾಗೂ ಜನಾಭಿಪ್ರಾಯವನ್ನು ರೂಪಿಸುವ ಸ್ವಾತಂತ್ರ್ಯದ ದೃಷ್ಟಿಯಿಂದ ಅಹಿತಕರವೆಂದು ಹೇಳಲೇಬೇಕು. ಪತ್ರಿಕಾ ಸ್ವಾತಂತ್ರ್ಯವನ್ನು ಸರಕಾರವೂ ಮನ್ನಿಸಿರುತ್ತದೆ. ಜನರ ಅಭಿಪ್ರಾಯಗಳಿಗೆ ಮನ್ನಣೆಯು ದೊರಕಬೇಕಾದ್ದು ನ್ಯಾಯವೆಂದು ಎಲ್ಲರ ಸಮ್ಮತಿ ಇದೆ. ಹೀಗಿರುವಾಗ, ಸರಕಾರವನ್ನು ಟೀಕಿಸುವರೆಂಬ ಒಂದು ಕಾರಣವನ್ನು ಮುಂದು ಮಾಡಿ ಜಾಹೀರಾತು ನೀಡುವುದನ್ನು ನಿಲ್ಲಿಸಿದರೆ, ಅದು ಪಕ್ಷಪಾತ ಬುದ್ಧಿಯನ್ನು ತೋರಿಸಿದಂತಾಗುತ್ತದೆ. ಮಾತ್ರವಲ್ಲ, ಪತ್ರಿಕಾ ಸ್ವಾತಂತ್ರ್ಯದ ಸಂಗತಿಯಲ್ಲಿ ಅನ್ಯಾಯವನ್ನು ಮಾಡಿದಂತಾಗುತ್ತದೆ. ಸರಕಾರವು ತನ್ನ ಎಲ್ಲ ಕಾರ್ಯಗಳನ್ನೂ ನ್ಯಾಯಬದ್ಧವಾದ ರೀತಿಯಲ್ಲಿ ನಡೆಸಿಕೊಂಡು ಹೋಗತಕ್ಕದ್ದು. ಟ್ಯಾಮ್ಸ್ ಪತ್ರಿಕೆಗಳು ಸರಕಾರದ ಚಟುವಟಿಕೆಗಳನ್ನು ಟೀಕಿಸುತ್ತವೆ ಎಂಬದೊಂದು ಕಾರಣಕ್ಕಾಗಿ ಅವುಗಳಿಗೆ ಜಾಹೀರಾತು ಕೊಡುವುದನ್ನು ನಿಲ್ಲಿಸಲು ಬಾರದು. ಜಾಹೀರಾತುಗಳು ಪತ್ರಿಕೆಗಳಿಗೆ ಆದಾಯವನ್ನು ತರುವ ಬಾಬುಗಳಾಗಿರುವುದರಿಂದ, ಸುದೃಢವಾದ ಆರ್ಥಿಕ ನೆಲಗಟ್ಟು ಇರದ ಪತ್ರಿಕೆಗಳು ಬದುಕಬೇಕಾದರೆ ಸರಕಾರದ ಭಟ್ಟಂಗಿಗಳಾಗಿಯೇ ವ್ಯವಹಾರವನ್ನು ಸಾಗಿಸಿಕೊಂಡು ಹೋಗುವ ಪ್ರಮೇಯ ಬರುತ್ತದೆ. ಸರಕಾರವು ತನ್ನ ನೀತಿಯನ್ನು ಸಮರ್ಥಿಸಿಕೊಳ್ಳುವ ಉದ್ದೇಶದಿಂದ ಜಾಹೀರಾತುಗಳನ್ನೊದಗಿಸಿ ಕೆಲವೊಂದು ಪತ್ರಿಕೆಗಳನ್ನು ಬುಟ್ಟಿಗೆ ಹಾಕಿಕೊಳ್ಳಲಿಚ್ಛಿಸುವ ಪ್ರಯತ್ನವು ತೀರಾ ಹೇಯವಾಗಿದೆ. ಮತ್ತು ಅನಿಷ್ಟಸಂಪ್ರದಾಯವಾಗಿದೆ. ಮುರಾರಜಿಯವರು ಕೊಟ್ಟ ಕಾರಣವು ಎಷ್ಟು ತಿಳಿಗೇಡಿತನದ್ದೆಂದರೆ-ಪತ್ರಿಕೆಗಳ ಮೂಲಭೂತ ಸ್ವರೂಪವನ್ನೇ ಅರಿಯದೆ ನುಡಿದಂತಿದೆ. ಟ್ಯಾಮ್ಸ್ ಪತ್ರಿಕೆಯ ಮಟ್ಟ ಕೆಳಗಿಳಿದಿದೆ ಎಂದು ಅವರು ಇನ್ನೊಂದು ಕಾರಣಕೊಟ್ಟಿರುವರು. ಉಚ್ಚಮಟ್ಟದ ಪತ್ರಿಕೆಗಳಿಗೆ ಮಾತ್ರ ಜಾಹೀರಾತುಕೊಡುವುದೆಂಬ ಸರಕಾರದನೀತಿಯನ್ನು ಸಮರ್ಥಿಸಲು ಆಧಾರ ಸಾಲದು. ಜಾಹೀರಾತು ನೀಡುವುದರ ಉದ್ದೇಶವು ಅಧಿಕ ಜನರಿಗೆ ವಿಷಯವನ್ನು ತಿಳಿಸುವುದಾಗಿದೆ. ಪರಿಣಾಮವಾಗಿ ಹೆಚ್ಚು ಸಂಖ್ಯೆಯಲ್ಲಿ ಪ್ರಚುರವಿರುವ ಪತ್ರಿಕೆಗಳನ್ನು ಆಯ್ದುಕೊಂಡು ಸರಕಾರವು ಜಾಹೀರಾತು ಕೊಡುವುದು ಕ್ರಮ ಪ್ರಾಪ್ತವಾದ ಹೆಜ್ಜೆ. "ಟ್ಯಾಮ್ಸ್" ಪತ್ರಿಕೆಗಳು ಅತ್ಯಧಿಕ ಪ್ರಚಾರದಲ್ಲಿವೆ ಎಂಬುದು ಸರ್ವಶ್ರುತವಿದೆ. ಹೀಗಿರುವಾಗ ಅವುಗಳಿಗೆ ಜಾಹೀರಾತನ್ನು ನಿರಾಕರಿಸಲು ಬಾರದು. ಈ ಎಲ್ಲ ಅಂಶಗಳನ್ನು ಕೇಳಿಕೊಂಡ ಬಳಿಕ ಮುರಾರಜಿ ದೇಸಾಯರು ಟ್ಯಾಮ್ಸ್ ಪತ್ರಿಕೆಯ ಜಾಹೀರಾತಿನ ದರವು ಹೆಚ್ಚಿದೆ ಎಂಬ ಕಾರಣವನ್ನು ಮುಂದು ಮಾಡಿದರು. ಇದು ತಮ್ಮ ನಿರ್ಣಯವನ್ನು ಸಮರ್ಥಿಸಿಕೊಳ್ಳಲು ಕಂಡುಕೊಂಡ ದಾರಿ ಮಾರ್ಗ ಮಾತ್ರ ಎಂದು ಹೇಳುವುದರಲ್ಲಿ ಔಚಿತ್ಯವಿದೆಯೇ ಹೊರತು ಜಾಹೀರಾತನ್ನು ನಿಲ್ಲಿಸುವುದಕ್ಕೆ ಸಬಲ ಕಾರಣವಾಗಲಾರದು. ಹೆಚ್ಚು ಜನರು ಓದುವ ಪತ್ರಿಕೆಗಳ ಜಾಹೀರಾತಿನ ದರ ಅಧಿಕ ಇರುವುದು ಸ್ವಾಭಾವಿಕ. ಸರಕಾರವು ಜಾಹೀರಾತುಗಳನ್ನು ನೀಡುವಾಗ ಪ್ರಚಾರ ದೃಷ್ಟಿಯನ್ನು ಮುಖ್ಯವಾಗಿ ಇಟ್ಟುಕೊಳ್ಳಬೇಕಲ್ಲದೆ, ಪತ್ರಿಕೆಯ ಧ್ಯೇಯಧೋರಣೆಗಳನ್ನಲ್ಲ. ಅವುಗಳ ಕುರಿತು ನಿಗಾ ತೆಗೆದುಕೊಳ್ಳಲು ಸಾರ್ವಜನಿಕರಿದ್ದಾರೆ; ಪತ್ರಿಕಾ ಸ್ವಾತಂತ್ರ್ಯವನ್ನು ಉಲ್ಲಂಘಿಸಿ ನಡೆದಿದ್ದರೆ ದಂಡನೆ ವಿಧಿಸಲು ನ್ಯಾಯಾಲಯಗಳಿವೆ. ಜಾಹೀರಾತು ನೀಡುವುದು ವ್ಯಾಪಾರೀ ಉದ್ದೇಶದಿಂದ ಎಂಬುದನ್ನು ತಿಳಿದುಕೊಂಡು ವರ್ತಿಸಬೇಕು ಎಂದು ಸೂಚಿಸುತ್ತೇವೆ.

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

"ಸಿಂಡಿಕೇಟ್" ಎಂಬುದು ಜನರು ಮೇಲಿನ ಸಂಸ್ಥೆಗೆ ಪ್ರೀತಿಯಿಂದ ಮತ್ತು ಸಲುಗೆಯಿಂದ ಕೊಟ್ಟ ಹೆಸರು. ಎಲ್ಲರಿಗೂ ತಿಳಿದಿರುವಂತೆ ಇದು ಬ್ಯಾಂಕಿಂಗ್ ವ್ಯವಹಾರದಲ್ಲಿ ನುರಿತ ಸಂಸ್ಥೆ. ಈಗ ತಾನೆ ತನ್ನ ಇಪ್ಪತ್ತೆಂಟನೆಯ ವರ್ಷದಲ್ಲಿ ಪದಾರ್ಪಣ ಮಾಡಿದೆ. ಪ್ರಾರಂಭದಲ್ಲಿ ಅತಿ ಸಣ್ಣ ಸಂಸ್ಥೆಯಾಗಿ ಉಡುಪಿಯಲ್ಲಿ ಕಾರ್ಯವನ್ನು ತೊಡಗಿದ "ಸಿಂಡಿಕೇಟು" ಇಂದು ವಿಶಾಲವಾದ ನ್ಯಗ್ರೋಧ ವೃಕ್ಷದ ಸ್ವರೂಪವನ್ನು ತಳೆದಿದೆ. ದೃಢವಾಗಿ ಮುನ್ನಡೆಯುತ್ತಾ ಬಂದು ಇದೀಗ ಸುಮಾರು ಐದು ಕೋಟಿ ರೂಪಾಯಿಗಳ ವಹಿವಾಟನ್ನು ನಡೆಸುವಷ್ಟರ ಮಟ್ಟಿನ ಸಾಮರ್ಥ್ಯವನ್ನು ಹೊಂದಿದೆ; ಮಾತ್ರವಲ್ಲ ದಕ್ಷಿಣ ಭಾರತದಲ್ಲೆಲ್ಲ ಎಂಭತ್ತೈದು ಶಾಖೆಗಳನ್ನು ತೆರೆದು ಜನಸೇವೆಯಲ್ಲಿ ಉನ್ನತ ಸ್ಥಾನವನ್ನು ಗಳಿಸಿದೆ. ಸಂಸ್ಥೆಯ ಬೆಳವಣಿಗೆಗೆ ಜನತೆಗೆ ಅದು ಸಲ್ಲಿಸುವ ಸೇವೆಯೇ ತಳದಿ ಎಂಬುದೊಂದು ಸುವರ್ಣ ಸೂತ್ರ. ಈ ಒರೆಗಲ್ಲಿಗೆ ಹಚ್ಚಿದಾಗ ಸಿಂಡಿಕೇಟಿನ ಅಭಿವೃದ್ಧಿಗೂ ಸೇವಾ ಭಾವನೇ ಕಾರಣಭೂತವಾಯಿತೆಂದು ಸಿದ್ಧಗೊಂಡಿದೆ. ಸಂಸ್ಥೆಯು ತನ್ನ ವ್ಯವಹಾರವನ್ನು ಕಠಿಣವಾದ ನಿಯಮ ನಿರ್ಬಂಧಗಳಗೊಳಪಟ್ಟು ನಡೆಸುವುದು ಅನಿವಾರ್ಯವಾಗಿದ್ದರೂ ಜನತೆಗೆ ಬ್ಯಾಂಕಿಂಗ ವ್ಯವಹಾರದಲ್ಲಿ ಸೇವೆ ಸಲ್ಲಿಸುವಾಗ ಮಾನವೀಯತಾ ಭಾವನೆಗೆ ಆಸ್ಪದ ಕೊಟ್ಟು, ಗಿರಾಕಿಗಳ ಮನಸ್ಸನ್ನು ತೃಪ್ತಿಗೊಳಿಸುವುದಕ್ಕೆ ಬರುತ್ತದೆಂಬಲ್ಲಿ ಸಂದೇಹವಿಲ್ಲ. ಈ ಕಾರ್ಯದಿಂದ ವ್ಯವಹಾರದಲ್ಲಿ ಜನತೆಯ ವಿಶ್ವಾಸ ದೊರಕುತ್ತದೆ; ಸಂಸ್ಥೆಯ ಉಪಯೋಗಿತೆಯು ಹೆಚ್ಚಿಕೊಂಡಂತೆ ಅದರ ಗೌರವ ಘನತೆಯೂ ಮೇಲೇರುತ್ತದೆ. ಸಿಂಡಿಕೇಟಿನೊಡನೆ ಸಂಬಂಧವಿಟ್ಟುಕೊಂಡವರೆಲ್ಲರೂ ಇಂಥ ಉದಾತ್ತ ಭಾವನೆಯನ್ನು ತಳೆಯುವಂತೆ ಈ ಸಂಸ್ಥೆ ವರ್ತಿಸಿದೆ. ಇದು ಶ್ಲಾಘನೀಯವೂ ಇತರ ಸಂಸ್ಥೆಗಳಿಗೆ ಮಾರ್ಗದರ್ಶಕವೂ ಆಗಿರುತ್ತದೆ. ಸಿಂಡಿಕೇಟಿನ ನೌಕರರಲ್ಲಿ ಈ ರೀತಿ ಸೇವಾಭಾವನೆಯು ಒಡಮೂಡುವುದಕ್ಕೆ ಪ್ರೇರೇಪಣೆ ದೊರೆತದ್ದು ಸಂಸ್ಥೆಯ ಶಿಖರ ಸ್ಥಾನದಲ್ಲಿರುವ ಡಾ| ಟಿ. ಎಂ. ಎ. ಪೈ ಹಾಗೂ ಶ್ರೀ. ಟಿ. ಎ. ಪೈಯವರಿಂದ ಎಂದು ಹೇಳಿದರೂ ಸಲ್ಲುವುದು. ಸಂಸ್ಥೆಯ ವಿಚಕ್ಷಣತೆಯನ್ನು ಲಕ್ಷಿಸಿದ ಗಿರಾಕಿಗೆ ಸಂಸ್ಥೆಯ ಮಿದುಳಿನಂತಿರುವ ಈ ಮಹನೀಯರ ಕರ್ತೃತ್ವ ಶಕ್ತಿಯ ಪರಿಚಯವಾಗುವುದು ಸ್ವಾಭಾವಿಕ. ಡಾ| ಪೈಯವರು ವಾಣಿಜ್ಯವ್ಯವಹಾರ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ನಮ್ಮ ಜಿಲ್ಲೆಗೆ ಮಾತ್ರವಲ್ಲ ಕರ್ನಾಟಕಕ್ಕೆ ಸಲ್ಲಿಸಿರುವ ಸೇವೆಯು ಅದ್ವಿತೀಯವಾಗಿದೆ. ಇವರಲ್ಲಿ ಕಾರ್ಯ ಮಾಡಬೇಕೆಂಬ ಲವಲವಿಕೆಯೂ ಹುರುಪೂ ಇದ್ದಷ್ಟೇ ಆ ಕೆಲಸವನ್ನು ಪೂರೈಸಬಲ್ಲ ಛಲವೂ ಸಾಮರ್ಥ್ಯವೂ ಕರ್ತೃತ್ವ ಶಕ್ತಿ[illegible]ದೆ. ಡಾ| ಪೈಯವರ ವ್ಯಕ್ತಿತ್ವವೇ [illegible] ಸಿಂಡಿಕೇಟಿನ ಪ್ರತಿಯೊಂದೂ ಆಡಳಿತ ಕ್ರಮದಲ್ಲಿ ವ್ಯಕ್ತಗೊಂಡುದನ್ನು ಕಾಣುತ್ತೇವೆ. ಅವರ ಜನಾನುರಾಗತ್ವವನ್ನೂ ಮೇಧಾವಿತನವನ್ನೂ ಮೆಚ್ಚಿ ಕೊಂಡಾಡದವರಿಲ್ಲ. ಒಂದು ದೃಷ್ಟಾಂತದಿಂದ ಇದನ್ನು ಉದಾಹರಿಸುವುದಾದಲ್ಲಿ—ಪಿಗ್ಮಿ ಠೇವಣಾತಿಯ ಅಪೂರ್ವ ಯೋಜನೆಯನ್ನು ತೆಗೆದು ಕೊಳ್ಳಬಹುದು. ತೀರಾ ಬಡವನೆನಿಸಿದವನೂ ದಿನಕ್ಕೆ ಎರಡಾಣೆಯೋ ನಾಲ್ಕಾಣೆಯೋ ತನ್ನ ಮನೆಬಾಗಿಲಿಗೆ ಬರುವ ಸಿಂಡಿಕೇಟಿನ ನೌಕರನೊಡನೆ ಕೊಟ್ಟರೆ ಸಾಕು, ಏಳು ವರ್ಷದ ಅಂತ್ಯದಲ್ಲಿ ಬಡ್ಡಿ ಸಮೇತ ದೊಡ್ಡ ಮೊತ್ತವು ಅವನಿಗೆ ದೊರಕುತ್ತದೆ. ಹೀಗ ಧನ ಸಂಚಯದ ವ್ಯವಹಾರ್ಯ ಮಾರ್ಗವನ್ನು ತೋರಿಸಿಕೊಟ್ಟು ಡಾ| ಪೈಗಳು ಜನಪ್ರಿಯರಾಗಿದ್ದಾರೆ.

ಶ್ರೀ ಟಿ. ಎ. ಪೈಯವರೂ ತಮ್ಮ ಸ್ನೇಹಸ್ವಭಾವ ಹಾಗೂ ನಯವಿದರ ನಡವಳಿಕೆಯಿಂದ ಜನಾನುರಾಗವನ್ನು ಗಳಿಸಿರುವರು. ಸಿಂಡಿಕೇಟು ಈಚೆಗಿನ ವರ್ಷಗಳಲ್ಲಿ ಹೊಂದಿದ ಅಪೂರ್ವ ಯಶಸ್ಸಿನಲ್ಲಿ ಶ್ರೀ ಟಿ. ಎ. ಪೈ ಗಳ ವಿಚಕ್ಷಣತೆಯ ಅಂಗವೂ ಇದೆ. ಪ್ರಕೃತ ಮದ್ರಾಸು ಶಾಸನ ಸಭಾ ಸದಸ್ಯರಾಗಿ ಅವರು ಮೆರೆಯುತ್ತಿರುವುದು ಜನತೆ ಅವರ ಮೇಲಿಟ್ಟ ವಿಶ್ವಾಸ ಹಾಗೂ ಪ್ರೀತಿಗೆ ನಿದರ್ಶನ.

ಸಿಂಡಿಕೇಟು ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದುತ್ತಾ ಬರುತ್ತಿದೆ. ಪೇಟೆಯಲ್ಲಿ ಅನಿಶ್ಚಿತ ಪರಿಸ್ಥಿತಿ ಕಂಡು ಬಂದಂದಿನಿಂದ ಹಣಕಾಸಿನ ವಹಿವಾಟಿನಲ್ಲಿ, ಹೊರಗೆ ಸಾಲ ಕೊಡುವುದರಲ್ಲಿ ಸ್ವಲ್ಪ ಬಿಗುಮಾನದಿಂದಲೂ ಜಾಗರೂಕತೆಯಿಂದಲೂ ನಡೆದುಕೊಳ್ಳುವುದು ಅವಶ್ಯವೆನಿಸಿದ್ದರಿಂದ-ಸಿಂಡಿಕೇಟಿನ ಕಳೆದ ವರ್ಷದ ಮುನಾಫೆ ಎಷ್ಟೋ ಸ್ವಲ್ಪ ಇಳಿಮುಖವಾಯಿತು. ಆದರೆ ಇದರಿಂದ ಸಿಂಡಿಕೇಟಿನ ಬೆಳೆಯುತ್ತಿರುವ ಗಿರಾಕಿಗಳ ಸಂಖ್ಯೆಯಾಗಲೀ ಇನ್ನಿತರ ಪ್ರಗತಿಯಾಗಲೀ ಕುಂಠಿತವಾಗಿಲ್ಲ. ತೆತ್ತು ಬಂದ ಬಂಡವಾಳವು ರೂ. ೨೯,10,526 ಯಷ್ಟಾದರೆ, ಕ್ಷೇಮನಿಧಿಯು ಹನ್ನೆರಡು ಲಕ್ಷ ರೂಪಾಯಿಗಳಷ್ಟಿದೆ. ಠೇವಣಾತಿಯ ಮೊತ್ತವು ನಾಲ್ಕು ಕೋಟಿ ರೂಪಾಯಿಯನ್ನು ಮುಟ್ಟಿದೆ. ಸಿಂಡಿಕೇಟು ಯಾವಾಗಲೂ ಭದ್ರತೆ ಮೊದಲೆಂಬ ಧೋರಣಕ್ಕೆ ಅಂಟಿಕೊಂಡಿದ್ದು, ಇನ್ನು ಮುಂದೆಯೂ ಅದನ್ನು ಅನುಸರಿಸುವುದೆಂಬಲ್ಲಿ ಸಂದೇಹವಿಲ್ಲ. ಜನತೆಗೆ ಕ್ಲಪ್ತ ಸಮಯಕ್ಕೆ ವಿಚಕ್ಷಣವಾದ ರೀತಿಯಲ್ಲಿ ಸೇವೆಯನ್ನು ಒದಗಿಸಿಕೊಡುತ್ತಾ ಬಂದಿರುವ ಈ ಸಂಸ್ಥೆ ಇತೋಪ್ಯತಿಶಯವಾಗಿ ಅಭಿವೃದ್ಧಿ ಹೊಂದುವುದೆಂದು ನಮಗೆ ಸಂಪೂರ್ಣ ವಿಶ್ವಾಸವಿದೆ. ಅದರ ವ್ಯವಹಾರಗಳಲ್ಲ ಆಧುನಿಕ ರೀತಿನೀತಿಯಲ್ಲಿದ್ದು ತ್ವರಿತಗತಿಯಿಂದ ನೆರವೇರುತ್ತವೆ. "ಸಿಂಡಿಕೇಟು ನಮ್ಮ ಬ್ಯಾಂಕು" ಎಂದು ಎಲ್ಲರೂ ಯಾವಾಗಲೂ ಅಭಿಮಾನದಿಂದ ನುಡಿಯುವಂತೆ ಈ ಸಂಸ್ಥೆ ದಿನೇದಿನೇ ಶುಕ್ಲಪಕ್ಷದ ಚಂದ್ರನೋಪಾದಿಯಲ್ಲಿ ಪ್ರವರ್ಧಮಾನಸ್ಥಿತಿಗೆ ಬರಲೆಂದು ಹೃತ್ಪೂರ್ವಕ ಹಾರೈಸುತ್ತೇವೆ.

ಕೊರಿಯಾದಲ್ಲಿ ಯುದ್ಧ ನಿಲ್ಲಿಸುವ ಹೊಸ ಪ್ರಯತ್ನ

ಬರ್ಮಾದಲ್ಲಿರುವ ರಾಷ್ಟ್ರೀಯ ಚೀನೀ ಸೈನ್ಯಗಳ ವಿರುದ್ಧ ರಾಷ್ಟ್ರಸಂಘಕ್ಕೆ ದೂರು.

ಕಮ್ಯೂನಿಸ್ಟರ ನಡವಳಿಕೆಯಲ್ಲಿ ಪರಿವರ್ತನೆ ಕಂಡು ಬರುತ್ತಿದೆ ಎಂಬುದನ್ನು ತೋರಿಸಿ ಕೊಡುವ ಘಟನೆಗಳು ಈ ವಾರವೂ ಘಟಿಸಿರುವು. ಕೆಲ ಸಮಯದಿಂದ ಚರ್ಚೆಗೆ ಮೂಲೆಗುಂಪಾಗಿದ್ದ ಕೊರಿಯಾ ಕದನ ವಿರಾಮ ಸಂಧಾನದ ಮಾತುಕತೆಗಳು ಮರಳಿ ಆರಂಭವಾಗುವ ಶುಭಚಿಹ್ನೆಗಳು ಈಗ ಕಂಡು ಬರುತ್ತಿದೆ. ಸುಮಾರು ಹತ್ತು ತಿಂಗಳುಗಳ ಕಾಲ ಎಡೆಬಿಡದೆ ಪಾನ್‌ಮುಂಜಾಮಿನಲ್ಲಿ ಸಭೆ ಸೇರಿ ಮಾತುಕತೆ ನಡೆಸಿದ್ದರ ಪರಿಣಾಮವಾಗಿ ಸಂಯುಕ್ತ ರಾಷ್ಟ್ರ ಸಂಘ ಹಾಗು ಕಮ್ಯೂನಿಸ್ಟ ಪಕ್ಷಗಳ ನಡುವೆ ಸಾಮಾನ್ಯವಾಗಿ ಎಲ್ಲ ತತ್ವಗಳಿಗೂ ಸಮ್ಮತಿ ಸೂಚಕ ಒಪ್ಪಂದ ನಡೆದಿತ್ತು. ಆದರೆ ಯುದ್ಧಕೈದಿಗಳ ವಿನಿಮಯದ ಪ್ರಶ್ನೆಯೊಂದು ಬಗೆಹರಿಯದ್ದರಿಂದ, ಕಳೆದ ಅಕ್ಟೋಬರದಲ್ಲಿ ಕದನ ವಿರಾಮ ಮಾತುಕತೆಗಳನ್ನು ಸ್ಥಗಿತಗೊಳಿಸಿದ್ದರು. ಈಗ ಬಂದಿರುವ ವಾರ್ತೆಗಳನ್ವಯ—ಕಮ್ಯೂನಿಸ್ಟರು ರೋಗಗ್ರಸ್ತ ಹಾಗೂ ಗಾಯಗೊಂಡ ಯುದ್ಧಕೈದಿಗಳನ್ನು ಜಿನೀವಾ ಒಡಂಬಡಿಕೆಯ [illegible]ನೇ ಕಲಮಿನಂತೆ ಪರಸ್ಪರ ಅದಲು ಬದಲು ಮಾಡಿಕೊಳ್ಳಲು ಒಪ್ಪಿಗೆಯನ್ನು ವ್ಯಕ್ತಪಡಿಸಿರುವರು. ಈ ಬಗ್ಗೆ ಎರಡೂ ಪಕ್ಷಗಳು ಮರಳಿ ಮಾತುಕತೆಗಳನ್ನು ತೊಡಗುವುದಕ್ಕೆ ಅವರು ಸಮ್ಮತಿ ಸೂಚಿಸಿರುವರು. ಈ ಸೂಚನೆಯನ್ನು ಮುಂದು ಮಾಡಿದವರು ಸಂಯುಕ್ತರಾಷ್ಟ್ರ ಸಂಘದ ವರಿಷ್ಠ ಸೇನಾಧಿಪತಿ ಮಾರ್ಕ ಕ್ಲಾರ್ಕರೆಂದೂ ತಿಳಿದಿದೆ. ರಾಷ್ಟ್ರಸಂಘದ ಕಡೆಯಿಂದ ಬಂದ ಈ ಸೂಚನೆಯನ್ನು ಒಪ್ಪಿಕೊಳ್ಳಲು ಕಮ್ಯೂನಿಸ್ಟರು ಸಿದ್ಧಗೊಂಡದ್ದು ಹೊಸತಾಗಿ ಆಶೆಯನ್ನು ಉಂಟುಮಾಡಿದೆ.

ಹೊಸ ಸೂಚನೆಗಳು

ರೋಗಗ್ರಸ್ತ ಹಾಗು ಗಾಯಗೊಂಡ ಯುದ್ಧ ಕೈದಿಗಳ ವಿನಿಮಯಕ್ಕೆ ಕಮ್ಯೂನಿಸ್ಟರು ಒಪ್ಪಿಕೊಂಡುದರಿಂದ ಕೊರಿಯಾಕದನವಿರಾಮವನ್ನು ಸಾಧಿಸುವ ಪ್ರಯತ್ನಗಳಿಗೆ ಯಶ ದೊರೆಯುವ ಸಂಭವವಿದೆ ಎಂದು ಹೇಳುತ್ತಿರುವರು. ಬ್ರಿಟನಿನಲ್ಲಿ ಜನಾಭಿಪ್ರಾಯವು ಕಮ್ಯೂನಿಸ್ಟರು ಪೂರ್ವ ಪಶ್ಚಿಮಗಳ ನಡುವೆ ತಿಕ್ಕಾಟವನ್ನು ನಿಲ್ಲಿಸಬೇಕೆಂದು ಈಗೀಗ ಬಯಸುತ್ತಿದ್ದಾರೆಂಬ ಸಂಗತಿಯತ್ತ ಹೆಚ್ಚು ಹೆಚ್ಚು ವಾಲುತ್ತಿದೆ. ಸ್ಟಾಲಿನ್ನರ ಮರಣಾನಂತರ ಕಮ್ಯೂನಿಸ್ಟ ಚೀನಾದ ಅಧ್ಯಕ್ಷ ಮಾವೋ ಕೆಲವು ದಿಟ್ಟ ಹೆಜ್ಜೆಗಳನ್ನು ಇಟ್ಟು ಪಶ್ಚಿಮದೊಡನೆ ಶಾಂತಿಯಿಂದಿರುವ ಹೊಸ ಧೋರಣವನ್ನು ರೂಪಿಸುತ್ತಿರುವರೆಂದು ಪತ್ರಿಕೆಗಳು ಬರೆಯುತ್ತಿವೆ. ಈಗ ಚೀನೀ ಪ್ರಧಾನಿ ಚೌಎನ್‌ಲಾಯರು ಯುದ್ಧ ಕೈದಿಗಳ ವಿವಾದಾತ್ಮಕ ಪ್ರಶ್ನೆಯನ್ನು ಬಗೆಹರಿಸುವ ಕುರಿತು ಮಾಡಿದ ಸೂಚನೆಗಳು ಇದಕ್ಕೆ ನಿದರ್ಶನ. ಕೊರಿಯಾ ಕದನ ವಿರಾಮದ ಸಂಗತಿಯಲ್ಲಿ ಅಡ್ಡ ಬಂಡೆಯಾಗಿ ನಿಂತಿರುವ ಒಂದೇ ಒಂದು ವಿಷಯವನ್ನು ಇತ್ಯರ್ಥ ಮಾಡುವುದಕ್ಕೆ ಅವರು ಸೂಚಿಸಿದ ಮಾರ್ಗ ಹೀಗಿದೆ: ವಿನಿಯಮದ ಬಗ್ಗೆ ಉತ್ಸುಕರಾಗಿರುವ ಎಲ್ಲಾ ಕೈದಿಗಳನ್ನು ಅದಲು ಬದಲು ಮಾಡಬೇಕು; ಒಲ್ಲದವರನ್ನು ತಟಸ್ಥ ರಾಷ್ಟ್ರದ ರಕ್ಷಣೆಗೆ ಒಪ್ಪಿಸಬೇಕು ಈ ಪರಿಸ್ಥಿತಿಯಲ್ಲಿ ಭಾರತವು ಕೊರಿಯಾ ಸಂಧಾನದ ಕುರಿತು ತಂದಿದ್ದ ಗೊತ್ತುವಳಿಯನ್ನು ಪುನಃ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಸೂಚಿಸುವ ಸಂಭವವಿದೆ. ಆದರೆ ಸೂಕ್ಷ್ಮದೃಷ್ಟಿಯಿಂದ ನೋಡಿದರೆ, ಭಾರತದ ಗೊತ್ತುವಳಿಯ ಪುನಃ ಪರಿಶೀಲನೆ ನಡೆದೀತೆನ್ನಲು ಬಾರದು ಆದರೂ ಕಮ್ಯೂನಿಸ್ಟರು ಶಾಂತಿ ಪ್ರಸ್ಥಾಪನೆಯ ಕಾರ್ಯದಲ್ಲಿ ಯಾವುದೇ ವಿಧದಿಂದ ಸಹಕರಿಸಲು ಸಿದ್ಧರಿದ್ದರೆ ಅವರ ಕೂಡೆ ಮಾತುಕತೆಗಳನ್ನು ಆರಂಭಿಸುವುದಕ್ಕೆ ಯಾವ ಅಭ್ಯಂತರವೂ ಇರಲಾರದು. ಭಾರತದ ಪ್ರತಿನಿಧಿಮಂಡಳದ ಸದಸ್ಯ ಶ್ರೀ ವಿ. ಕೆ. ಕೃಷ್ಣ ಮೇನನ್ನರು ಕಮ್ಯೂನಿಸ್ಟರು ತೋರಿಸಿರುವ ಸೌಹಾರ್ದವನ್ನು ಸ್ವಾಗತಿಸಿದ್ದು, ಪಾನ್‌ಮುಂಜಾಮಿನ ಮಾತುಕತೆಗಳು ವಿಳಂಬವಿಲ್ಲದೆ ತೊಡಗಲೆಂದು ಆಶಿಸಿರುವರು.

ಬರ್ಮಾದ ದೂರು

ಆದರೆ ಸಂಯುಕ್ತ ರಾಷ್ಟ್ರ ಸಂಘದ ಹೊಣೆಗಾರಿಕೆಗಳೇನು ಕಡಿಮೆಯಾದಂತೆ ಕಾಣುವುದಿಲ್ಲ. ಪ್ರಪಂಚದಲ್ಲಿ ಆಕ್ರಮಣ ಮನೋವೃತ್ತಿಯು ಇದ್ದಷ್ಟು ಸಮಯ ರಾಷ್ಟ್ರ ರಾಷ್ಟ್ರಗಳೊಳಗೆ ಶಾಂತಿಯನ್ನು ಸ್ಥಾಪಿಸುವ ಉದ್ದೇಶದಿಂದ ಕೆಲಸಮಾಡುತ್ತಿರುವ ಸಂಯುಕ್ತರಾಷ್ಟ್ರ ಸಂಘ ಎಷ್ಟು ಜಾಗರೂಕತೆಯಿಂದ ನಡೆದುಕೊಂಡರೂ ಸಾಲದು. ಒಂದು ಸಮಸ್ಯೆಯ ಪರಿಹಾರದ ಬೆನ್ನಲ್ಲೇ ಮತ್ತೊಂದು ತಲೆ ಎತ್ತುತ್ತಿದೆ. ಭಾರತದ ನೆರೆಯಲ್ಲಿರುವ ಬರ್ಮಾ ದೇಶವು ಸಂಯುಕ್ತರಾಷ್ಟ್ರ ಸಂಘಕ್ಕೊಂದು ದೂರು ಕಳಿಸಿ, ರಾಷ್ಟ್ರೀಯ ಚೀನೀಯರ ಪಡೆಗಳು ಬರ್ಮಾದ ನೆಲದಲ್ಲಿ ದಾಳಿ ನಡೆಸುತ್ತಿವೆ ಎಂದು ಹೇಳಿದೆ. ಈ ಸೈನ್ಯಗಳು ಒಡನೆಯೇ ಶಸ್ತ್ರಾಸ್ತ್ರಗಳನ್ನು ಒಪ್ಪಿಸತಕ್ಕದ್ದೆಂದು ನಿರ್ಬಂಧಿಸಿ, ಬರ್ಮಾದ ಹಿತರಕ್ಷಣೆ ಮಾಡಬೇಕೆಂದು ಅದು ಕೇಳಿಕೊಂಡಿದೆ. ರಾಷ್ಟ್ರಸಂಘ ಈ ವಿಷಯವನ್ನು ತನ್ನ ಕಾರ್ಯಕ್ರಮದಲ್ಲಿ ಸೇರಿಸಿಕೊಳ್ಳಲೇಬೇಕು. ಏಕೆಂದರೆ, ಇದು ಒಂದು ರಾಷ್ಟ್ರದ ಸಾರ್ವಭೌಮಾಧಿಕಾರವನ್ನು ಧಿಕ್ಕರಿಸಿ ಆಕ್ರಮಿಸುವ ಪ್ರಶ್ನೆಯಾಗಿದೆ. ಪ್ರಧಾನಿ ನೆಹರೂ ಹೇಳಿದಂತೆ ರಾಷ್ಟ್ರೀಯ ಚೀನೀ ಪಡೆಗಳಿಗೆ ಬರ್ಮಾದ ನೆಲದಲ್ಲಿ ಕಾಲೂರುವ ಅಧಿಕಾರವೇ ಇಲ್ಲ. ಆದರೆ ರಾಷ್ಟ್ರಸಂಘವು ಇಂಥ ಆಕ್ರಮಣಗಳನ್ನು ಯಶಸ್ವಿಯಾಗಿ ತಡೆಗಟ್ಟಬಲ್ಲ ಸಂಸ್ಥೆಯಾಗಿ ಉಳಿದಿದೆಯೆ ಎಂಬ ಸಂಶಯ ಅದರ ವ್ಯವಹಾರಗಳನ್ನು ನಿರೀಕ್ಷಿಸಿದಲ್ಲಿ ಉಂಟಾಗುತ್ತದೆ ಏಕೆಂದರೆ ರಾಷ್ಟ್ರಸಂಘದಲ್ಲಿ ತನ್ನ ನಿರ್ಣಯವನ್ನು ಕಾರ್ಯಕಾರಿ ಮಾಡುವ ಬಲವೇ ಇಲ್ಲ.

ಅಮೇರಿಕಾದ ಹೊಣೆ

ಕೊರಿಯಾದಂಥ ಕಡೆಗಳಲ್ಲಿ ರಾಷ್ಟ್ರಸಂಘದ ಹೆಸರಿನಲ್ಲಿ ಸೈನ್ಯ ಪಡೆಗಳು ಯುದ್ಧ ನಡೆಸುತಿದ್ದರೂ ಅಮೇರಿಕಾ ಈ ಕುರಿತು ಅಧಿಕ ಆಸಕ್ತಿ ವಹಿಸಿದುದರಿಂದಲೇ ಈ ಪಡೆಗಳು ಕಾರ್ಯಾಚರಣೆಯಲ್ಲಿ ರೂಪತಾಳಿವೆಯೆಂಬುದನ್ನು ಲಕ್ಷಿಸಬೇಕು. ಈಗಲೂ ಕೊರಿಯಾದಲ್ಲಿ ರಾಷ್ಟ್ರಸಂಘದ ಕಡೆಯಿಂದ ಹೋರಾಡುವ ಯೋಧರಲ್ಲಿ ಅಮೇರಿಕನ್ನರೇ ಅಧಿಕ. ಬರ್ಮಾದಲ್ಲಿ ರಾಷ್ಟ್ರೀಯ ಚೀನಾದ ಪಡೆಗಳಿಗೆ ಅದೇ ಅಮೇರಿಕನ್ನರು ಶಸ್ತ್ರಾಸ್ತ್ರ ಪೂರೈಸುತ್ತಿರುವುದರಿಂದ, ಬರ್ಮಾದ ದೂರನ್ನು ರಾಷ್ಟ್ರಸಂಘ ವಿಚಾರಿಸುವಾಗ, ಅಮೇರಿಕೆಯು ನ್ಯಾಯ ಪಕ್ಷಪಾತಿಯಾಗಿ ನಡೆದುಕೊಳ್ಳುವ ಭರವಸೆ ಇದೆ ಎಂದೆನಿಸುವುದಿಲ್ಲ. ಆದರೆ ಒಂದು ಸಂಗತಿಯನ್ನು ವಿಮರ್ಶಿಸಿದರೆ ಅಮೇರಿಕ ಆದಷ್ಟು ಬೇಗನೇ ಈ ದೂರನ್ನು ಇತ್ಯರ್ಥಗೊಳಿಸಲು ಪ್ರಯತ್ನ ನಡೆಸೀತೆಂದು ಕಾಣುತ್ತದೆ. ಬರ್ಮಾದಲ್ಲಿ ಸದ್ಯ ೧೨೦೦೦ ರಾಷ್ಟ್ರೀಯ ಚೀನೀ ಪಡೆ ಸೈನಿಕರಿದ್ದು ಇವರು ಕರೇನ್ ದಂಗೆಗಾರರಿಗೆ ನೆರವು ನೀಡುತ್ತಿರುವರು. ಕರೇನರು ಕಮ್ಯೂನಿಸ್ಟರ ಕೂಡೆ ಸ್ನೇಹದಿಂದಿರುವುದರಿಂದ ರಾಷ್ಟ್ರೀಯ ಚೀನೀಯರ ಸಹಾಯವು ಕಮ್ಯೂನಿಸ್ಟರಿಗೆ ಲಾಭದಾಯಕವಾಗಿಯೇ ಪರಿಣಮಿಸುವುದು. ಕಮ್ಯೂನಿಸ್ಟರ ಬಲವನ್ನು ಕುಗ್ಗಿಸಬೇಕೆನ್ನುವ ಇರಾದೆಯುಳ್ಳ ಅಮೇರಿಕಾ ಈ ಕಾರಣದಿಂದ ಚಿಯಾಂಗ ಕೈಶೇಕರ ಸರಕಾರದ ಮೇಲೆ ಈ ಪಡೆಗಳನ್ನು ಹಿಂದೆಗೆಯಲು ಒತ್ತಾಯ ತಾರದೆ ಆಗಬಹುದು. ಈ ಸಂಗತಿಯಲ್ಲಿ– ಅಮೇರಿಕಾದ ಪ್ರತಿಕ್ರಿಯೆ ಏನೆಂಬುದನ್ನು ಕಂಡುಕೊಂಡೇ ಮುಂದಿನ ಹೆಜ್ಜೆಯನ್ನು ನಿರ್ಣಯಿಸಬೇಕು. ಬರ್ಮಾ ಪ್ರಧಾನರಾದ ಯುನೂ ಅವರು ಕೊಟ್ಟ ಹೇಳಿಕೆಯಂತೆ, ಬರ್ಮಾದ ದೂರಿಗೆ ಚಿಕ್ಕ ಪುಟ್ಟ ರಾಷ್ಟ್ರಗಳ ಬೆಂಬಲ ದೊರೆತೀತು. ಪಾಕಿಸ್ತಾನವು ಭಾರತದಂತೆ ಬರ್ಮಾದ ಪರವಾಗಿ ವಾದಿಸುವ ನಿರ್ಧಾರ ಮಾಡಿದೆ.

ಪಾಕಿಸ್ತಾನದಲ್ಲಿ ಕ್ಷೋಭೆ

ಪಾಕಿಸ್ತಾನದೊಳಗೆ ಇನ್ನೂ ಅಶಾಂತಿ ಇದೆ. ಅಲ್ಲಿಯ ಆಂತರಿಕ ಪರಿಸ್ಥಿತಿ ದಿನದಿಂದ ದಿನಕ್ಕೆ ಕೆಡುತ್ತಾ ಬರುತ್ತಿದ್ದು ಹೊರಗಿನವರಿಗೆ ಗೊಂದಲಮಯವಾಗಿ ತೋರುತ್ತದೆ. ಪಾಕಿಸ್ತಾನದ ಅಂತರಂಗ ಶಾಖೆಯ ಮಂತ್ರಿಗಳಾದ ಗುರುಮಾನಿಯವರು ಸರಕಾರವು ಹೆಚ್ಚಿನ ಅಧಿಕಾರವನ್ನು ತನ್ನ ಕೈಯಲ್ಲಿ ತೆಗೆದುಕೊಳ್ಳುವ ಸಂಭವವನ್ನು ವ್ಯಕ್ತಗೊಳಿಸಿದರು. ದೇಶದ ಭದ್ರತೆಯ ದೃಷ್ಟಿಯಿಂದ ಇಂಥ ಗಂಭೀರ ಕ್ರಮ ಅಗತ್ಯವೆಂದು ಅವರು ಹೇಳಿರುವರು. ಅಹಮದೀಯಾ ಚಳುವಳಿಯು ಇನ್ನೂ ಶಾಂತಗೊಂಡಿಲ್ಲ. ಇಂಥವರಲ್ಲಿ ಪಾಕಿಸ್ತಾನ ಪಂಜಾಬದ ದೌಲತಾನಾ ಮಂತ್ರಿಮಂಡಳವು ರಾಜೀನಾಮೆ ಕೊಟ್ಟಿದ್ದು ಅರ್ಥಪೂರ್ಣವಾಗಿದೆ. ಪ್ರಧಾನಿ ನಾಜಿಮುದ್ದೀನರ ಒತ್ತಾಯವೇ ಈ ರಾಜೀನಾಮೆಗೆ ಕಾರ[illegible] ಬಂದಿದೆ. ಪೂರ್ವ ಬಂಗಾಳದ ಗವರ್ನರರಾಗಿದ್ದ ಸರ್ ಫಿರೋಜ್ ಖಾನನೂನರು ಪಾಕಿಸ್ತಾನಪಂಜಾಬಿನ ಮುಸ್ಲಿಂ ಲೀಗ್ ಎಸೆಂಬ್ಲಿಯ ಧುರೀಣರಾಗಿ ಆಯ್ಕೆ ಹೊಂದಿದ್ದು, ಹೊಸ ಮಂತ್ರಿಮಂಡಳವನ್ನು ರಚಿಸುವ ಪ್ರಯತ್ನದಲ್ಲಿರುವರು. ಧರ್ಮದ ಹೆಸರಿನಲ್ಲಿ ಪಾಕಿಸ್ತಾನವು ರಭಸದ ಪ್ರಚಾರಗಳನ್ನು ಮಾಡುತ್ತಿದ್ದರೂ ಅದರ ಪರಿಣಾಮವು ಪಾಕಿಸ್ತಾನಕ್ಕೆ ಪ್ರತಿಕೂಲವಾಗಿರುವುದನ್ನು ಕಾಣುತ್ತೇವೆ

ಋತುಸ್ರಾವ ನಿಂತಿತು

'ಕುಮಾರಿ' ಪಿಲ್ಲುಗಳನ್ನು ಉಪಯೋಗಿಸಿದರೆ ಹಿಡಿತಪ್ಪಿ ಋತುಸ್ರಾವವಾಗ-ದ್ದು, ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾಧಾರಣ ಬುಂದಿಗೆ ಮಾತ್ರ ಗುಣವಾಗ-ದಿದ್ದರೆ ರೂ. 3-; ಸ್ಪೆಶಲ್ ರೂ. 5- ಅಧಿಕ ಶಕ್ತಿಯ ಸ್ಪೆಶಲ್ ರೂ. 8-] ಪಿ ಪಿ ಖರ್ಚು ಬೇರೆ}

MRS. D. DEVEE, F. DS. (N. J.)
Tollygunge CALCUTTA
ಸ್ಟಾಕಿಸ್ಟರು: ಕಟಾಕಂಪನಿ, ಮಂಗಳೂರು

ಇಂದಿನವರೇಗೆ ತಯಾರಾದ ಕನ್ನಡ ಚಿತ್ರಗಳು ಮುಂದಿನ ದಿಕ್ಕು ಕಾಣದೆ ಮೂಲೆ ಸೇರಿದಂತಿ— ಕಾರಣ ಕನ್ನಡದ ಕೀರ್ತಿ ಹೆಚ್ಚಿಸಿದ ಖ್ಯಾತಿಯಿಂದು ಗುಬ್ಬಿ ಕರ್ನಾಟಕ ಪ್ರೊಡಕ್ಷನ್ಸ್ ನವರ ಗುಣಸಾಗರಿಗೆ ಸಂದಿತಂತೆ.

ಗುಣಸಾಗರಿ (ಕನ್ನಡ ಚಿತ್ರ)

ಜಿ. ಎಚ್. ವೀರಣ್ಣ, ಸಿ. ಹೊನ್ನಪ್ಪ, ಟಿ. ಎಸ್. ಬಾಲಯ್ಯ, ಜಯಮ್ಮ, ಪಂಡರೀಬಾಯಿ, ಕೃಷ್ಣಕುಮಾರಿ ಮೊದಲಾದವರು.

ತಾ. 3—4—1953 ರಿಂದ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.



ಮಂಗಳೂರು

ಜಿಲ್ಲಾ ಕಲೆಕ್ಟರರಿಗೆ ವರ್ಗ— ನಮ್ಮ ಜಿಲ್ಲೆಯ ಕಲೆಕ್ಟರರಾಗಿರುವ ಶ್ರೀ ಸಿ. ಎ. ರಾಮಕೃಷ್ಣನ್ ಐ. ಸಿ. ಎಸ್. ಅವರು ಮಧುರೆಯ ಜಿಲ್ಲಾ ಕಲೆಕ್ಟರರಾಗಿ ವರ್ಗಾಯಿಸಲ್ಪಟ್ಟಿರುವರು. ತಂಜಾವೂರು ಜಿಲ್ಲಾ ಕಲೆಕ್ಟರರ ಪರ್ಸನಲ್ ಅಸಿಸ್ಟ್ಂಟ್ ಆಗಿರುವ ಶ್ರೀ ಮಹಾಲಿಂಗಂ ಚೆಟ್ಟಿಯಾರ್ ಅವರು ಇಲ್ಲಿಯ ಹಂಗಾಮಿ ಕಲೆಕ್ಟರಾಗಿ ನೇಮಕ ಗೊಂಡಿದ್ದಾರೆ.

ಅನಪೇಕ್ಷಿತ ಮರಣ— ಸ್ಥಳೀಯ ರೆವಿನ್ಯೂ ಡಿವಿಜನಲ್ ಆಫೀಸರರ ಹೆಡ್‌ಕ್ಲಾರ್ಕ್ ಶ್ರೀ ಡಬ್ಲ್ಯು. ಜೆ. ಎಂ. ಗೊನ್ಸಾಲ್ವಿಸರು ತಾ. 23 ರಂದು ಸೈಕಲಿನಲ್ಲಿ ಬರುತ್ತಿದ್ದಾಗ ಜಂಸನ್ ಕಟ್ಟೆ ರೋಮನ್ ಕಥೋಲಿಕ್ ಕ್ಲಬ್ಬಿನಬಳಿ ಬಿದ್ದು ಹಿಂದುಗಡೆಯಿಂದ ಬರುತ್ತಿದ್ದ ಲಾರಿಯೊಂದರ ಚಕ್ರ ತಗುಲಿ ಕೂಡಲೇ ನಿಧನಗೊಂಡರು. ಅವರ ಪ್ರಾಯ ಸುಮಾರು 45 ವರ್ಷ.

ಭಾರತ್ ರಷ್ಯಾ ಮೈತ್ರಿ— ಎಂಬೀಕಂದಿತು ಸ್ಥಳೀಯ ಜನಪದ ಕಲಾ ಮಂಡಳಿಯ ಆಶ್ರಯದಲ್ಲಿ ಕಳೆದ ತಾ. 22ರಲ್ಲಿ ಸಿಟಿಜನ್ಸ್ ಲೈಬ್ರೆರಿಯಲ್ಲಿ ಮುಂಬಯಿ ಹೈಕೋರ್ಟ್ ವಕೀಲರ್ ಶ್ರೀ ಟಿ. ಎಸ್. ಹೆಗ್ಡೆಯವರು ಶ್ರೀ ವಿ. ಕೃಷ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ಭಾಷಣವಿತ್ತರು. ನಾವು ನಿಷ್ಪಕ್ಷಪಾತ ದೃಷ್ಟಿಯಿಂದ ಪ್ರತಿಯೊಂದು ರಾಷ್ಟ್ರದೊಡನೆಯೂ ಕಲೆ ಸಂಸ್ಕೃತಿಯ ವಿಷಯದಲ್ಲಿ ಸಂಪರ್ಕ ಇಟ್ಟುಕೊಳ್ಳಬೇಕೆಂದೂ, ವಿಶೇಷವಾಗಿ ರಷ್ಯಾದ ಇಂದಿನ ಕಲೆ ಸಂಸ್ಕೃತಿ ಎಷ್ಟು ಮೇಲೇರಿದೆ ಎಂಬುದನ್ನು ತಿಳಿಯಬೇಕೆಂದೂ ಸಾದೋಹರಣವಾಗಿ ವಿವರಿಸಿದರು.

ಪ್ರೆಸ್ ಕೆಲಸಗಾರರ ಸಮ್ಮೇಳನ— ಕಳೆದ ತಾ. 29ರಲ್ಲಿ ಕೇಂದ್ರ ಮೈದಾನದಲ್ಲಿ ಮಲಬಾರಿನ ಮಜದೂರ ನಾಯಕ ಶ್ರೀ. ಎಚ್. ಮಂಜುನಾಥ ರಾಯರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪ್ರೆಸ್ ಕೆಲಸಗಾರರ ದ್ವಿತೀಯ ಸಮ್ಮೇಳನವು ನಡೆಯಿತು. ಶ್ರೀ ಕುಳುಕುಂದ ಶಿವರಾಯರು ಸಮ್ಮೇಳನವನ್ನು ಉದ್ಘಾಟಿಸಿದರು.

ಶ್ರೀ. ಪಿ. ಯಂ. ಎನ್. ಮೂರ್ತಿಯವರು ಅಧ್ಯಕ್ಷರ ಪರಿಚಯ ಮಾಡಿಕೊಟ್ಟ ಬಳಿಕ ಶ್ರೀ ಶಿವರಾಯರು ಸಮ್ಮೇಳನವನ್ನು ಉದ್ಘಾಟಿಸುತ್ತ 'ನಮ್ಮಲ್ಲಿ ಪ್ರೆಸ್ ಕೈಗಾರಿಕೆಯು ಬೆಳವಣಿಗೆ ಚೆನ್ನಾಗಿ ಆಗಿಲ್ಲ ಹೊರಗಿನ ಪುಸ್ತಕಗಳಿಗೆ ತುಂಬಾ ಪ್ರೋತ್ಸಾಹ ಕೊಡಲಾಗುತ್ತಿದೆ. ನಮ್ಮ ಪುಸ್ತಕಗಳೂ ನಾವಿರಗಟ್ಟಲೆ ಯಲ್ಲಿ ಪ್ರಿಂಟಾಗುವಂತಾದರೆ ಪ್ರೆಸ್ ಕೈಗಾರಿಕೆಯು ಬೆಳೆಯುವುದು ಆಗ ಪ್ರೆಸ್ ಕೆಲಸಗಾರರ ಸ್ಥಿತಿಯೂ ಸುಧಾರಿಸುವುದು. ಕರ್ನಾಟಕ ಪ್ರಾಂತ ರಚನೆಯಲ್ಲಿ ಈ ಉದ್ಯಮದ ಬೆಳವಣಿಗೆಗೆ ಬೇಕಿನ ಸಹಾಯವಾಗುವುದು. ಎಂದಿತ್ಯಾದಿ ಹೇಳಿದರು.

ಬಳಿಕ ಅಧ್ಯಕ್ಷರು ಮಜೂರರ ಸ್ಥಿತಿ ಹಾಳಾಗಿದೆ, ಸ್ವಾತಂತ್ರ್ಯಸಿಕ್ಕಿದರೂ ಅದರ ಫಲ ಸಿಕ್ಕಿಲ್ಲ, ಪ್ರೆಸ್ ಮಜೂರರ ಜೀವನಮಟ್ಟ ಸುಧಾರಿಸ ಬೇಕು, ಮಜೂರರು ನವಭಾರತ ರಚನೆಗಾಗಿ- ವಿಶ್ವ ಶಾಂತಿಗಾಗಿ ಹೋರಾಡಬೇಕೆಂದರು.

ಶ್ರೀ ಶಾಂತರಾಮ ಪೈಗಳು ಜನತೆಯ ಒಗ್ಗಟ್ಟಿನ ಆವಶ್ಯಕತೆಯನ್ನು ವಿವರಿಸಿ ಭಾಷಣ ಮಾಡಿದರು.

ಕೊನೆಗೆ ಕರ್ನಾಟಕ ಪ್ರಾಂತ್ಯರಚನೆಯಾಗಬೇಕು, ಅಕ್ಕಿಯ ಬೆಲೆ ಇಳಿಸಬೇಕು ಮಜೂರರ ಪರಿಸ್ಥಿತಿಯನ್ನು ಒಂದು ಮಟ್ಟಕ್ಕೆ ತರಬೇಕು ಇವೇ ಮೊದಲಾದ ಠರಾವುಗಳಾದವು. ಶ್ರೀ ಪಿ. ಎಂ. ಯನ್. ಮೂರ್ತಿಗಳು ಧನ್ಯವಾದಗಳನ್ನಿತ್ತರು.

ಪ್ರಗತಿ ಶೀಲ ಲೇಖಕರ ಸಂಘಟನೆ— ಯಕುಂದಿತು ಕಳೆದ ತಾ 29ರಲ್ಲಿ ಪ್ರಗತಿಶೀಲ ಬರಹಗಾರ ಶ್ರೀ. ಕುಳಕುಂದ ಶಿವರಾಯರು ಪ್ರಗತಿಶೀಲ ಲೇಖಕರ ಸಂಘದ ಆಶ್ರಯದಲ್ಲಿ ಭಾಷಣವಿತ್ತರು. ಶ್ರೀ. ಎಸ್. ಮುಕುಂದರಾಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀಯು ಎಸ್. ಶ್ರೀನಿವಾಸ ಭಟ್ಟರು ಧನ್ಯವಾದಗಳನ್ನರ್ಪಿಸಿದರು.

ಸಿನೇಟಿಗೆ ನಾಮಪತ್ರಗಳು— ಮಂಗಳೂರು ಮತ್ತು ಉಡುಪಿ ನಗರಸಭೆಗಳಿಗೆ ಮದ್ರಾಸು ವಿಶ್ವವಿದ್ಯಾಲಯದ ಸಿನೇಟಿಗೆ ಇರುವ ಒಂದು ಸ್ಥಾನಕ್ಕೆ ತಾ 27-3-53ರಲ್ಲಿ ಏಳು ಜನರು ನಾಮಪತ್ರ ಸಲ್ಲಿಸಿರುವರೆಂದು ತಿಳಿದುಬರುತ್ತದೆ. ಮಂಗಳೂರು ನಗರಸಭೆಯಿಂದ ಶ್ರೀ ಮತಿ ಬಿ. ಎಸ್. ಪಿಂಟೋ, ಶ್ರೀ. ಕೆ. ಪ್ರಭಾಕರ ಪೈ, ಶ್ರೀ. ಎಂ. ರಘುನಾಥ, ಶ್ರೀ. ಎಸ್. ಗೋಪಾಲ ಸಾಲಿನ್ಸ, ಮತ್ತು ಶ್ರೀ. ಮೋಹನ ಶೆಟ್ಟಿ. ಉಡುಪಿ ನಗರ ಸಭೆಯಿಂದ ಡಾ. ಕೆ. ಎಲ್. ಐತಾಳ ಮತ್ತು ಶ್ರೀ. ಎಸ್. ಸೀತಾರಾಮ ಕಾಮತ್.

ನಿಧನ— ಬಹುಕಾಲದಿಂದ ಸಾಬೂನು ತಯಾರಿಕರಾಗಿದ್ದ ವಾಣಿಜ್ಯ ಪ್ರಪಂಚದಲ್ಲಿ ಹೆಸರಾಗಿದ್ದ ಶ್ರೀ. ಉಳ್ಳಾಲ ವಾಮನಮಲ್ಯರು ತಾ. 27-3-53ರಲ್ಲಿ ಕೊಡಿಯಾಲಬೈಲಿನ ತಮ್ಮ ಮನೆಯಲ್ಲಿ 77ನೇ ವಯಸ್ಸಿನಲ್ಲಿ ನಿಧನಗೊಂಡರೆನ್ನಲು ವಿಷಾದವಾಗುತ್ತದೆ.

ದಕ್ಷಿಣಕನ್ನಡ

ಕೆಂಕ್ರೇ ಹಳ್ಳಿ— ಈ ಗ್ರಾಮದಲ್ಲಿ ಸುಮಾರು ಆರು ತಿಂಗಳಿಂದ ಫೋರೆಸ್ಟ್ ಇಲಾಖೆಯ ಪ್ರಕರಣವೊಂದು ನಡೆಯುತ್ತಿದೆ ಎಂದು ಸಂಬಂಧಪಟ್ಟ ಅಧಿಕಾರಿಗಳು ತಕ್ಕ ತನಿಖೆ ನಡೆಸಿ ನಿಷ್ಪಕ್ಷಪಾತವಾಗಿ ಸತ್ಯ ಶೋಧನೆ ನಡೆಸಬೇಕೆಂದೂ ಮಹನೀಯರೊಬ್ಬರು ಬರೆಯುತ್ತಾರೆ.

ಪುತ್ತೂರು— ತಾ. 23-3-53ರಲ್ಲಿ ಶ್ರೀ ವಿವೇಕಾನಂದ ವಾಚನಾಲಯದ ಉದ್ಘಾಟನಾ ಸಮಾರಂಭವು ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಶ್ರೀ. ಎ. ಯಂ ಹೇಗಾ ಬಿ. ಎ. ಎಲ್. ಎಲ್. ಬಿ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಈ ವಾಚನಾಲಯಕ್ಕೆ ಉದಾರ ಮನಸ್ಸಿನಿಂದ ಧನ ಸಹಾಯ ಮತ್ತು ಪುಸ್ತಕಗಳನ್ನು ದಾನಮಾಡಿ ಸಹಕರಿಸಿದವರ ಕುಂತಿ ಅಧ್ಯಕ್ಷರು ಕೃತಜ್ಞತೆಯನ್ನು ಸೂಚಿಸಿದರು.

Bunts alias Nadavar Sangha,

South Kanara, Mangalore.

NOTICE

House sites plotted as 5B1/C, 5B1/D, 5B1/E, 5B1/F, 5B1/G, 5B1/H, 5B1 J and 4A/7 together, 5B1/A, 5B1/M, 5B1/N, 5B1/O, 5B1/K and 4A/3 together 4A/4 and 4A/5 in the sketch of field No. 90/5B1-4A of Karkala Village, will be sold by public auction on Saturday the 18th of April 1953 commencing from 10 a. m. by the President of the above shown Sangha or any one authorised by him. The terms and conditions of the same are as follows.-

1. The sale will be held with reference to the sketch prepared and kept with Sri K Mahabala Hegde, Vakil, Karkala and demarcated on ground at the site. Copies of the sketch are also available for inspection with the President, Sri K. T. Alva, Bjai, Mangalore and the Secretary, Sri K. Sunderram Shetty, Vakil, Kadr. Road, Mangalore.

2. No person will be permitted to bid unless he has deposited a sum of Rs 100/– The deposits of all except the highest bidder will be refunded at the close of the sale.

3. If the highest bid amount is to the satisfaction of the person holding the sale, the bidder shall immediately pay 25 percent of the amount of his purchase money to the person conducting the sale and in default of such payment the sites are liable to be forthwith resold at the risk of the highest bidder and his initial deposit forfeited to the Sangha He will be liable for any loss caused but he will not be entitled to any share in the resultant profits.

4. The balance of the purchase money less the advance deposit of Rs. 100 shall be paid by the purchaser and necessary stamp papers furnished by the purchaser within ten days of the confirmation of the sale.

5. All the costs of the conveyance, viz. the value of stamp paper, registration fees, the charges for preparing the sale deed etc shall be borne by the purchaser.

6. In the event of the purchaser not paying the balance of the purchase amount or of supplying the necessary stamp paper within the time limit fixed, the site will be resold after a fresh notification at the risk of the defaulter who will be liable for any deficiency in the price at the resale but shall not be entitled to participate in any excess. The deposit and 25 percent purchase money paid by the defaulter will be liable to be forfeited

7 The site will be given possession to the purchaser after the sale deed is executed and registered.

8 No purchaser is entitled to trespass or in any way interfere with the plots 5B1/B, 531/1, 4A 2 and 4A/6 set apart for the road and all purchasers are bound to keep the road abutting their plots in good condition. If the owner of any of the plots is obstructed or prevented from making use of the road for men, cattle and vehicles he will have the right of obtaining the necessary redress from revenue, civil or criminal Courts against the obstructor.

9. The bidder should satisfy himself regarding the measurement and area of the plot which he intends to purchase.

K. T. Alva

President,

Bunt alias Nadavar Sangha, Mangalore.

Dated 23—3—1953.

ರೆ. ಇನ್ನು ಮುಂದೆಯೂ ಎಲ್ಲರೂ ತನುಮನಧನ ಸಹಾಯ ಮಾಡಿ ವಾಚನಾಲಯದ ಅಭಿವೃದ್ಧಿಗೊಳಿಸಬೇಕಾಗಿ ವಿನಂತಿ.

ಸೂಡಾ— ಬೋರ್ಡ್ ಶಾಲೆಯ ಹೆತ್ತವರ ಕೂಟದ ಸಭೆಯು ತಾ. 23-3-53ರಲ್ಲಿ ಶ್ರೀ S. ಜಯರಾಮ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಗ್ರಾಮಸಕ್ಕೊಂದು ಹಾಯರ್ ಎಲಿಮೆಂಟರಿ ಶಾಲೆಯನ್ನು ತೆರೆಯುವ ಪ್ರಯತ್ನಕ್ಕೆ ಆಲೋಚಿಸಿ, ಬಾಲ್ಟಿ ವರ್ಷದ ಬಗ್ಗೆ 9 ಮಂದಿ ರಿರುಳ್ಳ ಒಂದು ಸ್ಕೂಲ್ ಕಮಿಟಿಯನ್ನು ನೇಮಿಸಿದ್ದಲ್ಲದೆ ಶ್ರೀ ಎಸ್ ವಿಠಲ್ ಶೆಟ್ಟಿ ಮತ್ತು ಶ್ರೀ ಕೆ. ಕೃಷ್ಣ ಶೆಟ್ಟಿ ಇವರನ್ನು ಸ್ಕೂಲ ಕಮಿಟಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನಾಗಿ ಚುನಾಯಿಸಲಾಯಿತು.

ಕಾಸರಗೋಡು— ತಾಲೂಕುಬೋರ್ಡು ಪ್ರಾಥಮಿಕ ಶಾಲಾ ಅಧ್ಯಾಪಕರ ಯೂನಿಯನಿನ ಕಾರ್ಯಕಾರಿ ಮಂಡಲದ ಸಭೆಯು ಕಳೆದ ತಾ. 29ರಲ್ಲಿ ತೆರುವತ್ತು ಶಾಲೆಯಲ್ಲಿ ಶ್ರೀ. ಪಿ. ಶಿವರಾಯರ ಅಧ್ಯಕ್ಷತೆಯಲ್ಲಿ ಜರಗಿ ಉಪಯುಕ್ತ ನಿರ್ಣಯಗಳಾದುವು.

ಮುಂಬಾಯಿ

ಬಂಟರ ಯಾನೆ ನಾಡವರ ಸಂಘ, ಮುಂಬಯಿ— ಮಾನ್ಯ ಮಂತ್ರಿ ಶ್ರೀ. ಎ. ಬಿ. ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಲಿರುವ ಸಂಘದ ರಜತ ಮಹೋತ್ಸವದ ಅಂಗವಾಗಿ ಗ್ರಾಂಟ್ ಮೆಡಿಕಲ್ ಕೊಲೇಜಿನ ಜಮಖಾನದಲ್ಲಿ (ಕೆನಡಿ ಸೀಫೇಸ್, ಚರ್ನಿರೋಡು ಸ್ಟೇಶನ್ ಬಳಿ) ತಾ. 12-4-53ಕ್ಕೆ ಬೆಳಿಗ್ಗೆ 7ರಿಂದ 11ರ ತನಕ ಪಂದ್ಯಾಟಸ್ಪರ್ಧೆಯೂ ತಾ 19-4-53ಕ್ಕೆ ಕೋಟೆ ಕ್ರೋಸ್ ಮೈದಾನದಲ್ಲಿ ಕ್ರಿಕೆಟೂ ಜರಗಲಿವೆ ಎಂದೂ ಎಲ್ಲರಿಗೂ ಸ್ವಾಗತವಿದೆಯೆಂದೂ ಸಂಬಂಧಪಟ್ಟವರು ತಿಳಿಸುತ್ತಾರೆ.

ಉಡುಪಿ

ವಿವಾಹ ಸಮಾರಂಭ— ಕೆನರಾ ಮ್ಯೂಚುವಲ್ ಎಸ್ಯೂರೆನ್ಸ್ ಕಂಪೆನಿಯ ಮನೇಜಿಂಗ್ ಡೈರೆಕ್ಟರ್ ಶ್ರೀ. ಟಿ. ಆರ್. ಎ. ಪೈಗಳ ಪುತ್ರಿ ಕುಮಾರಿ ನಿರ್ಮಲಾದೇವಿಯ ವಿವಾಹೋತ್ಸವವು ಮುದ್ರಾಸಿನ ಶ್ರೀ. ಪಿ ರಘುನಾಥ ಪೈಗಳ ಪುತ್ರ ಶ್ರೀಮಾನ್ ಪಿ. ಮಂಜುನಾಥ ಪೈಗಳೊಡನೆ ತಾ. 29-3-53ರಲ್ಲಿ ಮಣಿಪಾಲದ ನಿವಾಸದ ವಧೂಗೃಹದಲ್ಲಿ ವಿಜೃಂಭಣೆಯಿಂದ ಜರಗಿತು. ಸಂಜೆ ತತ್ಸಂಬಂಧ ನಾಗರಿಕರಿಗೆ ಉಪಾಹಾರ ಸಮಾರಂಭವೂ ನೆರವೇರಿತು.

ಡಿ ಬೋ, ಮೆಂಬರ್ ಶ್ರೀ. ಮುದ್ರಾಡಿ ಕೃಷ್ಣ ಶೆಟ್ಟಿ ಪುತ್ರ ಸೌ ರಂಭಾಳ ವಿವಾಹವು ಗುಂಡಿಬೈಲಿನ ಗಣ್ಯ ವ್ಯಾಪಾರಿ ಶ್ರೀ. ಸಿಟ್ಟೂರು ವಿಟ್ಠಲ ಶೆಟ್ಟರೊಡನೆ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಕಳೆದ ತಾ. 29ರಲ್ಲಿ ವೈಭವದಿಂದ ನೆರವೇರಿತು.

ದಿವಂಗತ ಕೊರಡ್ಕಲ್ ಶ್ರೀನಿವಾಸ ರಾಯರ ಪುತ್ರ ಕಟಪಾಡಿಯಲ್ಲಿ ಪ್ರಾಕ್ಟೀಸು ಮಾಡುತ್ತಿರುವ ಡಾ। ಕೊರಡ್ಕಲ್ ಕೃಷ್ಣರಾಯರು ಕೊಡವೂರು ಪಟೇಲ್ ಶ್ರೀ. ಬಿ. ವೆಂಕಟರಾಯರ ಪುತ್ರಿ ಸೌ ಯಶೋದಾ ಬಾಯಿಯನ್ನು ಕಳೆದ ತಾ. 21ರಲ್ಲಿ ವಡಭಾಂಡೇಶ್ವರ ದೇವಸ್ಥಾನದಲ್ಲಿ ವಿವಾಹವಾದರು.

ನೂತನ ವಧೂವರರಿಗೆಲ್ಲ ಶುಭಾಶಯಗಳು.

ಹೃದಯಸ್ತಂಭನದಿಂದ ಮರಣ— ಜನಪ್ರಿಯ ವ್ಯಾಪಾರಿಗಳೂ ಜನಸೇವಾಸಕ್ತರೂ ಆದ ಶ್ರೀ. ಯು. ವಾಸುದೇವ ನಾಯ್ಕರ ತಾ. 29-3-53ರಲ್ಲಿ ಹೃದಯ ನಿಂತು ಅಲ್ಲ ನಿಧನಗೊಂಡರೆನ್ನಲು ವಿಷಾದವಾಗುತ್ತದೆ ಇವರು 7-8 ಸಾವಿರ ರೂ. ವೆಚ್ಚಮಾಡಿ ಹೊಸ ಮನೆಯೊಂದನ್ನು ಕಟ್ಟಿಸಿದ್ದು ಅದರ ಪ್ರವೇಶ ಸಮಾರಂಭವು ಈ ವಾರದಲ್ಲೇ ನಡೆಯುತ್ತಿಂದು ತಿಳಿದುಬರುತ್ತದೆ.

ಕಂಪೆನಿ ಸಭೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

ತಾ. ೧೫—೩—೫೩ರಲ್ಲಿ ಜರಗಿದ ಪಾಲುದಾರರ ೨೭ನೇ ಮಹಾಸಭೆಯಲ್ಲಿ ಆಡಳಿತ ಮಂಡಳಿಯ ಅಧ್ಯಕ್ಷರಾದ

ಡಾ| ಟಿ. ಎಂ. ಎ. ಪೈ, ಎಂ. ಬಿ. & ಬಿ. ಎಸ್. ಇವರು ಮಾಡಿದ ಭಾಷಣ.

ಕೇಂದ್ರ ಮತ್ತು ಅನೇಕ ಪ್ರಾಂತೀಯ ಸರಕಾರಗಳ ಮುಂಗಡಪತ್ರ ಮಂಡಿಸಿದ ಬಳಿಕ ನಾವಿಲ್ಲಿ ಸೇರಿರುವೆವು. ಈ ಮುಂಗಡಪತ್ರಗಳ ಪರಿಶೀಲನೆಯಿಂದ ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳು ಪಂಚವಾರ್ಷಿಕ ಯೋಜನೆಯ ಮೂರನೆಯ ವರ್ಷದಲ್ಲಿ ನಿರೀಕ್ಷಿಸಿದ 568 ಕೋಟಿ ರೂಪಾಯಿಯ ಮಿಗಿತ ದೊರೆಯುವುದು ದುರ್ಲಭವೆಂದು ತೋರುವುದು. ಪ್ರಾಂತೀಯ ಸರಕಾರಗಳಿಗೆ ಇನ್ನೂ ಹೆಚ್ಚಿನ ತೆರಿಗೆಗಳನ್ನು ಹೊರಿಸಲು ಸಾಧ್ಯವಿಲ್ಲದಿರುವಾಗ, ಉಳಿತಾಯ ಅಥವಾ ಸಾಲವಾಗದಿರುವಲ್ಲಿ ಸರಕಾರಕ್ಕೆ ಕೊರತೆಯ ಮುಂಗಡಪತ್ರವಲ್ಲದೆ ಬೇರೆ ಮಾರ್ಗವಿಲ್ಲ. ಯೋಜನಾ ನಿಯೋಗವು ಈ ರೀತಿಯಲ್ಲಿ ಸುಮಾರು 290 ಕೋಟಿ ರೂಪಾಯಿಯನ್ನು ಶೇಖರಿಸಬಹುದೆಂದು ಸೂಚಿಸಿರುವುದು. ಆದರೆ ಈ ಸೂತ್ರವು ಯೋಗ್ಯ ಹಾಗೂ ಅಗತ್ಯವೆಂದು ನಾವು ಒಮ್ಮೆ ಸ್ವೀಕಾರ ಮಾಡಿದರೆ, ಅದರ ಪರಿಮಾವಧಿ ಮತ್ತು ಪ್ರತಿಫಲ ಮುಂದೆ ಸರಕಾರದ ಕೈಯಲ್ಲಿ ಹಾಗೂ ಜನತೆಯ ಶಿಸ್ತಿನ ಮೇಲೆ ಹೊಂದಿಕೊಂಡಿರುವುದು.

ಜನತೆ ತೆರಿಗೆಯನ್ನು ಹೊರುವ ಮಿತಿಯನ್ನು ಮುಟ್ಟಿರುವಾಗ, ಸಾಲವೆತ್ತಲು ಕುಂದುಕೊರತೆಗಳಿರುವಾಗ, ಈಗಾಗಲೆ ಸರಕಾರ ತೊಡಗಿರುವ ಯೋಜನೆಗಳನ್ನು ಪೂರೈಸಲು ವಿದೇಶದ ಸಹಾಯವೆತ್ತಬೇಕು, ಇಲ್ಲವೆ ದೇಶದ ಇತರ ಆರ್ಥಿಕ ಆಸರೆಯನ್ನು ಹುಡುಕಬೇಕು. ದೇಶೀಯ ಸಹಾಯ ನಿಯಮಿತವಾಗಿರುವುದು. ಪ್ರಾಂತೀಯ ಸರಕಾರಗಳು ಬೆಳಸಿಟ್ಟ ಕ್ಷೇಮನಿಧಿ ಅದೃಶ್ಯವಾಗುತ್ತಿದೆ. ಆದರೆ ಖರ್ಚು ನಿಲ್ಲದೆ ನಡೆಯುತ್ತಿದೆ. ಆದುದರಿಂದ ಸ್ವಾತಂತ್ರ್ಯದ ನಂತರ ಕೆಲವು ವರುಷಗಳಲ್ಲಿ ನಾವು ನಮ್ಮ ಹಣಕಾಸಿನ ಆಸರೆಯನ್ನು ಹೇಗೆ ವ್ಯಯಿಸಿರುವೆವು, ಸಾರ್ವಜನಿಕ ರಾಜ್ಯಕ್ಕಾಗಿ ಮಾಡಿದ ಖರ್ಚಿಗೆ ತಕ್ಕ ಪ್ರಗತಿ ಸಾಧಿಸಿರುವೆವೇ ಎಂದು ಲಾಕ್ಷಣಿಕ ಪರಿಮಾಣ ವಿಮರ್ಶೆ ಮಾಡಲು, ಹಿಂದಾದುದರ ಕುರಿತು ಪರ್ಯಾಲೋಚಿಸಲು ನಿಲ್ಲಬೇಕಾದ ಸಮಯ ಬಂದಿರುವುದೆಂಬುದು ನನಗನಿಸುತ್ತಿದೆ. ಮುಂದಿನ ಭವಿತವ್ಯಕ್ಕಾಗಿ ಹೂಡಿದ ಯೋಜನೆಗಳು ಹಿಂದಾದುದರ ಮೇಲೆ ಹೊಂದಿರಲೇಬೇಕು. ಎಷ್ಟೇ ಅಪೇಕ್ಷಣೀಯ ಉದ್ದೇಶಗಳಾದರೂ, ಅತೀ ಕಡಿಮೆ ಸಮಯದಲ್ಲಿ ಅತೀ ಹೆಚ್ಚಿನ ಕೆಲಸಗಳನ್ನು ನಾವು ಮಾಡಲು ಪ್ರಯತ್ನಿಸಿಲ್ಲವೆ? ನಾವು ಕೊಟ್ಟ ಅಗ್ರಮಾನಗಳು ಸರಿಯೋ? ಒಬ್ಬ ವ್ಯಕ್ತಿಯು ತನಗಾಗಿ ಅನೇಕ ವಿಷಯಗಳನ್ನು ಬಯಸಬಹುದು, ಆದರೆ ಅವುಗಳು ಆವನಿಗೆ ಸಾಧ್ಯವಾಗದಿರಬಹುದು. ತನಗೆ ಶಕ್ಯವಿರುವುದು ಮಾತ್ರ ಲಭ್ಯವೆಂದು ಅವನಿಗೆ ಕೊನೆಗೆ ತಿಳಿಯುವುದು. ಆದರೆ ಸಾಮೂಹಿಕವಾಗಿ ಸರಕಾರ ನಮಗೆ ಬೇಕಾದುದನ್ನೆಲ್ಲ ಅಮಿತವಾಗಿ ಪೂರೈಸಬೇಕೆಂದು ನಾವು ಎಣಿಸಲು ಬಹುದು; ಆದರೆ ಇದಕ್ಕೆ ಹಣ ಎಲ್ಲಿಂದಲೊ ಬರಬೇಕು, ಕೊನೆಗೆ ಇದಕ್ಕೆ ಬೇಕಾಗುವ ಹಣ ಜನತೆಯ ಕಿಸೆಯಿಂದಲೇ ಬರಬೇಕಾಗುವುದು ಎಂಬುದನ್ನು ನಾವು ಖಚಿತಮಾಡಿಕೊಂಡಿಲ್ಲ. ಪ್ರಜಾಪ್ರಭುತ್ವದಲ್ಲಿ ಈ ತತ್ವವನ್ನು ನಮ್ಮ ಜನರೂ, ರಾಜಕಾರಣಿಗಳೂ ಅಂಗೀಕರಿಸಿದರೆ ಮಾತ್ರ ಆರ್ಥಿಕ ಹಾಗೂ ಹಣಕಾಸಿನ ಧೋರಣೆಯಲ್ಲಿ ಸ್ಥಿರತೆ ಬರುವುದು. ನಮ್ಮ ಆಸರೆಯು ಅತೀವ ಮಿತವಾಗಿರುವುದರಿಂದ ಅತೀ ಹೆಚ್ಚಿನ ಪ್ರಯೋಜನ ಸಿಗುವಂತೆ ಅದನ್ನು ಉಪಯೋಗಿಸಿಕೊಳ್ಳಬೇಕು. ಯೋಜನಾ ನಿಯೋಗದ ಅಧಿವೇಶನದ ಮುಂಚೆ ನಮ್ಮ ದೇಶವು ಸಂಪತ್ಸಮೃದ್ಧವೆಂಬ ಭ್ರಮೆ ನಮ್ಮಲ್ಲಿದ್ದುದರಿಂದ ಬಿಟ್ಟುಬಿಡಬಹುದಾದ ಅಥವಾ ಮುಂದುವರಿಸಬೇಕಿದ್ದ ಅನೇಕ ಯೋಜನೆಗಳನ್ನು ನಾವು ತೊಡಗಿದೆವು. ಇಂದು ನಿಜವಾಗಿಯೂ ಪ್ರಯೋಜನಕಾರಿಯಾದ ಯೋಜನೆಗಳನ್ನು ತೊಡಗಬೇಕಾದರೆ ನಮ್ಮಲ್ಲಿ ಹಣವಿಲ್ಲವೆಂದು ಕಂಡುಬರುವುದು. ಇದರಿಂದಾದರೂ ನಮ್ಮ ವ್ಯಯದಲ್ಲಿ ಬಿಗುಪಡಿಯಾಗಬೇಕಿತ್ತು. ಆದರೆ ಕೊರತೆಯ ಮುಂಗಡಪತ್ರದ ಮೂಲಕ ಹಣ ದೊರಕಿಸಿಕೊಳ್ಳಲು ಸಾಧ್ಯವಿದೆ ಎಂಬ ಅಭಿಪ್ರಾಯವನ್ನುಂಟುಮಾಡಬೇಕೆಂದಿದ್ದರೆ, ಈ ಶಸ್ತ್ರ ರಾಜಕೀಯ ಒತ್ತಡದ ಕೈಗೊಂಬೆಯಾಗದಂತೆ ನೋಡಿಕೊಳ್ಳಲು ವಿಶೇಷ ನಿಯಂತ್ರಣಬೇಕು. ಇಲ್ಲವಾದರೆ ಕಷ್ಟ ಕೆಲಸ ಮತ್ತು ವಿವೇಕ ಪೂರ್ವಕ ಖರ್ಚಿನಿಂದ ದೊರೆತ ಉಳಿತಾಯದಿಂದಲೆ ಭಂಡವಾಳ ಒದಗಿಬರಬೇಕೆಂಬುದು ನಮ್ಮ ಜನತೆಗೆ ಎಂದಿಗೂ ಮನನವಾಗದು. ಆರ್ಥಿಕ ಧೋರಣೆಯು ಫಲಪ್ರದವಾಗಬೇಕಾದರೆ, ಬೇಂಕುಗಳು ಕೊಡುವ ಸಾಲದ ಲಕ್ಷಣದ ಮೇಲೆ ಸ್ವಯಂ ಹತೋಟಿಯನ್ನಿಡುವುದು ಒಳ್ಳೆಯದು. 'ಯೋಜನೆಯಲ್ಲಿ ಅಗ್ರಮಾನ ಕೊಟ್ಟಿರುವ ಉತ್ಪಾದಕ ವಿಚಾರಗಳಿಗೆ ಹಣ ಒದಗಿಸುವ ವ್ಯವಸ್ಥೆಗಾಗಿ ವಿಶೇಷತರದ ಪ್ರಯತ್ನವನ್ನು ಮಾಡಬೇಕು' ಎಂದು ಪಂಚವಾರ್ಷಿಕ ಯೋಜನೆಯಲ್ಲಿ ಸ್ಪಹಿಕೆ ಇದೆ.

ಈ ಹಿನ್ನೆಲೆಯಲ್ಲಿ ನಮ್ಮ 1952ರ ಕೆಲಸವನ್ನು ನಾನು ವಿಮರ್ಶಿಸಬಯಸುತ್ತೇನೆ. ಬೇಂಕಿನ ಸಹಿವಾಟಿನಲ್ಲಿ ಅತ್ಯಂತ ಮಹತ್ವದ ವಿಷಯವೆಂದರೆ ವರುಷಾವಧಿಯಲ್ಲಿ ಠೇವಣಾತಿಯು 4,01,07,199 ಇದ್ದು ಈ ವರುಷ ಸುಮಾರು 40 ಲಕ್ಷ ರೂಪಾಯಿಯಷ್ಟು ಏರಿದುದು. ಇದರಿಂದ 1951ನೇ ದಶಂಬರ 31ರಂದು ಇತರ ಬೇಂಕುಗಳಿಂದ ಪಡೆದ ಸಾಲವಾದ ರೂ. 46,85,019ನ್ನು ಈ ವರುಷ 15,083ಕ್ಕೆ ಇಳಿಸಲು ಸಾಧ್ಯವಾಯಿತಲ್ಲದೆ ಬೇಂಕಿನ ಸ್ವಂತ ಹಣಕಾಸಿನಿಂದಲೆ ಹೊರಗೆ ಸಾಲಕೊಡುವಂತಾಯಿತು. 1952ನೇ ದಶಂಬರ 31ರಂದು ಬೇಂಕಿನ ಶೇರು ಭಂಡವಾಳ ರೂ. 25,01,526ರಷ್ಟು, ಕ್ಷೇಮನಿಧಿ 11 ಲಕ್ಷದಷ್ಟೂ ಇರುತ್ತದೆ. ಠೇವಣಾತಿಯ ಏರಿಕೆಯನ್ನು ಗಮನಿಸುವಾಗ, ಪಾಲುಭಂಡವಾಳದ ಏರಿಕೆಗೆ ಅನು ದೊರೆತಂತಾದರೂ ನಮ್ಮ ಪಡೆದ ಪಾಲುಭಂಡವಾಳ 32,10,987ರಷ್ಟಿರುವುದರಿಂದ, ತಾತ್ವಿಕವಾಗಿ ಏನು ಹೇಳಿದರೂ ನನ್ನ ಅನುಭವದಂತೆ ಬೇಂಕುಗಳಲ್ಲಿ ಅಧಿಕ ಪಾಲುಭಂಡವಾಳದಿಂದ ಅನೇಕ ಕಷ್ಟಗಳುಂಟಾಗುವುವು. ಇದಕ್ಕಿಂತ ಶೀಘ್ರವಾಗಿ ಕ್ಷೇಮನಿಧಿ ಬೆಳೆಯಲು ಬಿಡುವುದರಿಂದ ಪ್ರಯೋಜನವಿದೆ. ಕಳೆದ ವರುಷಕ್ಕಿಂತ ಸುಮಾರು ಸೇಕಡಾ 11ರಷ್ಟು ಹೆಚ್ಚಾಗಿರುವ ಠೇವಣಾತಿಯು ನಿಮ್ಮ ಬೇಂಕಿನ ಸುಮಾರು 1,60,000 ಠೇವಣಾತಿದಾರರಿಂದ ಸಾಧ್ಯವಾಯಿತು. ಹೆಚ್ಚಿನ ಇತರ ಬೇಂಕುಗಳಲ್ಲಿ ಈ ವಿಷಯದಲ್ಲಿ ವಿಷಮ ಪರಿಸ್ಥಿತಿ ಕಾಣುತ್ತಿರುವಾಗ, ನಮ್ಮ ಅನುಭವವು ಬೇರೆಯಾದುದು ತುಂಬಾ ತೃಪ್ತಿಕರ. ಇದರಿಂದ ಸಾಮಾನ್ಯವಾಗಿ ದಕ್ಷಿಣಾಪಥದಲ್ಲಿರುವ ಬೇಂಕುಗಳು ಇದಿರಿಸುತ್ತಿರುವ ಒಂದು ಸಮಸ್ಯೆಯ ಕಡೆ ನಮ್ಮ ಆಲೋಚನೆ ಹರಿಯುವುದು. ದಕ್ಷಿಣ ಹಿಂದುಸ್ಥಾನದಲ್ಲಿ ನಮ್ಮಲ್ಲಿ ಅತೀ ದೊಡ್ಡ ಬ್ಯಾಂಕುಗಳಲ್ಲಿ ಹೆಚ್ಚಿನ ಠೇವಣಾತಿ ಬರುವ ಸಮಯದಲ್ಲಿ ಕೂಡಾ 25 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಠೇವಣಾತಿಗಳು ಬಂದಿಲ್ಲ. ಆ ಮೇಲೆ ಅವುಗಳ ಪರಿಣಾಮ ಕ್ಷೀಣಿಸುತ್ತಾ ಬರುತ್ತಿದೆ. ಬ್ಯಾಂಕುಗಳು ಅವುಗಳ ನಿಜವಾದ ಬೃಹದಾಕಾರವನ್ನು ಪಡೆಯಬೇಕಾದರೆ ಒಂದೋ ಅವುಗಳು ವ್ಯವಹಾರ ಕೇಂದ್ರವನ್ನು ವಿಸ್ತರಿಸಬೇಕು, ಅಲ್ಲವೇ ಸಮಾಜದ ಪ್ರತಿಯೊಬ್ಬನ ಸಂಪರ್ಕವನ್ನು ಇಟ್ಟುಕೊಳ್ಳುವಂತೆ ಆಗಬೇಕು. ಅಂತಾದರೆ ಮಾತ್ರ ನಿಶ್ಚಿತವಾದ ಧ್ಯೇಯ ಸಾಧನೆಯನ್ನು ಮಾಡಿದಂತಾಗುವುದು. ಪ್ರಸ್ತುತ ಪರಿಸ್ಥಿತಿಯಲ್ಲಿ ದಕ್ಷಿಣ ಭಾರತದಲ್ಲಿ ಹೆಸರಿಸಿ ಹೇಳತಕ್ಕಂತ ಕೈಗಾರಿಕೆ ಉದ್ಯಮಗಳಿಲ್ಲ. ಇದರಿಂದಾಗಿ ಬ್ಯಾಂಕುಗಳಿಗೆ — ಸೇವಿಂಗ್ಸ್ ಬ್ಯಾಂಕು ಠೇವಣಾತಿಗಳೂ ಕಡಿಮೆ. ಇರತಕ್ಕ ಒಂದೆರಡು ಕೈಗಾರಿಕೆಗಳೂ ಚಿಕ್ಕವುಗಳಾಗಿ ಅವುಗಳೂ ಬ್ಯಾಂಕಿನ ಸಾಲದ ಆಧಾರದ ಮೇಲಿನಿಂದಲೇ ನಡೆಯತಕ್ಕವುಗಳಾಗಿದ್ದಾವೆ. ಇದರಿಂದಾಗಿ ದಕ್ಷಿಣ ಭಾರತದ ಬ್ಯಾಂಕುಗಳ ದಿವಾಂಡು ಸಾಲಗಳ ಸಂಖ್ಯೆಯು ಯುದ್ಧಕಾಲದಲ್ಲೂ ಕೂಡಾ ಹುಂಡಿ ಸಾಲಗಳ ಸಂಖ್ಯೆಗಿಂತ ಕಡಿಮೆಯಾಯಿತು. ಹುಂಡಿ ಸಾಲಗಳು ಚಾಲ್ತಿಯೋ ಹೆಚ್ಚಾಗಿ ಬ್ಯಾಂಕುಗಳಲ್ಲಿ ಸಾಲ ವಹಿವಾಟುಗಳ ಸಂಖ್ಯಾ ಜಾಸ್ತಿಯಾಯಿತು. ನಮ್ಮ ಈ ಸಂದರ್ಭದಿಂದ ವಿರಹಿತವಾಗಿಲ್ಲ. ಬ್ಯಾಂಕುಗಳ ಆಡಳಿತದ ಖರ್ಚುಗಳು ದಿನೇ ದಿನೇ ಏರುತ್ತಾ ಹೋದಂತೆ ಸಾಲಗಳ ಬಡ್ಡಿಯೂ ತುಸು ಏರಬೇಕಾಯಿತು. ವ್ಯಾಪಾರೋದ್ಯಮಗಳಲ್ಲಿ ಅಪಾರ ಲಾಭವಿಲ್ಲದೆ ಇದ್ದಲ್ಲಿ ಹೆಚ್ಚು ಬಡ್ಡಿಯನ್ನು ತೆತ್ತು ವ್ಯವಹಾರವನ್ನು ಬೆಳೆಸಲು ಸಾಧ್ಯವಿಲ್ಲ. ಕೈಗಾರಿಕೆಗಳ ಅಭಿವೃದ್ಧಿಯೋ ದೇಶದ ಕಲ್ಯಾಣವಾದುದರಿಂದ ಅವುಗಳ ಏಳಿಗೆಗಾಗಿ ಬ್ಯಾಂಕುಗಳು ತಮ್ಮ ಬಡ್ಡಿಯ ದರವನ್ನು ಇಳಿಸಬೇಕು. ಬಡ್ಡಿಯ ದರವನ್ನು ಇಳಿಸಬೇಕಾದರೆ ತಮ್ಮ ಆಡಳಿತದ ಖರ್ಚನ್ನು ಕಡಿಮೆಮಾಡಬೇಕು.

ನಿರಖು ಠೇವಣಾತಿಯ ಸೇ. 60% ದಾಮಾಶಯದಲ್ಲಿ ಸಾಲಗಳೂ, ಕೈಯಲ್ಲಿನ ಶಿಲ್ಕು ಸೇ. 19% ದಾಮಾಶಯದಲ್ಲೂ, ಸರಕಾರಿ ಭದ್ರತೆಯಲ್ಲಿ 32·5% ದಾಮಾಶಯದಲ್ಲೂ ಇದ್ದವು. ಕಚ್ಚಾಮಾಲುಗಳ ಹಾಗೂ ದೇಶೀಯ ವಸ್ತುಗಳ ಕ್ರಯದ ಇಳಿತದಿಂದಾಗಿ ವ್ಯಾಪಾರ ವ್ಯವಹಾರಗಳಿಂದ ದೊರೆಯುವ ಮನ್ನಣೆಯು ಬ್ಯಾಂಕಿಗೆ ದೊರೆಯಲಿಲ್ಲ. ಸಮಸ್ತ ಸಂಪಾದನೆಯು ಸಾಧಾರಣ ಹಿಂದಿನಂತೆಯೇ ಇದ್ದರೂ ನಿಕ್ಕಿ ಮುನಾಫೆಯ ಅಂಶವು ಈ ಭಾರಿ ಸೇ. 22%ರಷ್ಟು ಕಡಿಮೆಯಾಗಲು ಬ್ಯಾಂಕಿನ ಆಡಳಿತವೆಚ್ಚ ಮತ್ತು ಠೇವಣಾತಿಗೆ ಸಂದ ಬಡ್ಡಿಯ ಏರಿಕೆಗಳೇ ಕಾರಣ. ಆಡಳಿತದ ವೆಚ್ಚಗಳನ್ನು ಮಿತಿಗೊಳಿಸುವುದರಲ್ಲಿ ಬ್ಯಾಂಕಿನ ನೌಕರರ ಕೈವಾಡ ಸಹಕಾರಗಳು ಮುಖ್ಯವಾಗಿರುವುದರಿಂದ ಅವರಿಗೆ ಕೊಡತಕ್ಕ ಶಿಕ್ಷಣ ಮತ್ತು ತೇರ್ಗಡೆಯತ್ತ ಈ ವಿಚಾರವನ್ನು ಮುಖ್ಯವಾಗಿ ಗಮನಿಸಲಾಗುತ್ತದೆ. ಸಿಂಡಿಕೇಟಿನ ನೌಕರರೆಲ್ಲಾ ಅವರವರ ಪಾಲಿನ ಕರ್ತವ್ಯವನ್ನು ಬಹಳ ದಕ್ಷತೆಯಿಂದ ಮಾಡಿರುತ್ತಾರೆಂಬುದರಿಂದ ಆಡಳಿತ ಮಂಡಳಿಯವರು ಅವರ ಅಗತ್ಯದ ಅನುಕೂಲತೆಗಳನ್ನು ಒದಗಿಸಿಕೊಡುವುದರಲ್ಲಿ ಉತ್ಸಾಹಿಗಳಾಗಿದ್ದಾರೆ. ಜನರಲ್ ಮೆನೇಜರರಾದ ಶ್ರೀ ಟಿ. ಎ. ಪೈ ಮತ್ತು ಅವರ ಅನುಯಾಯಿಗಳಾದ ಹೆಡ್ಡಾಫೀಸಿನ ಮತ್ತು ಇತರ ಆಫೀಸಿನ ಅಧೀನಾಂಗಳೂ ತೋರಿದ ದಾಢ್ಯಗಾಗಿ ಅವರನ್ನು ಕೊಂಡಾಡಬೇಕಾಗಿದೆ. ಸಿಂಡಿಕೇಟು ಬ್ಯಾಂಕಿನ ಸರ್ವತೋಪರಿಸ್ಯಗತಿಗಾಗಿ ಇವರೆಲ್ಲಾ ತುಂಬಾ ದುಡಿದಿದ್ದಾರೆ. ಬ್ಯಾಂಕಿನ ಮೇಲೆ ಅಭಿಮಾನವನ್ನು ತೋರಿಸುತ್ತಿರುವ ನಿಮ್ಮೆಲ್ಲರನ್ನು ನಾನು ಅಭಿನಂದಿಸುತ್ತೇನೆ. ಬ್ಯಾಂಕಿನ ಕಾರ್ಯಕಲಾಪಗಳಿಂದ ಸಂತುಷ್ಟರಾದವರು ಗಿರಾಕಿಯಾಗಿರಲೀ ಅಥವಾ ಪಾಲುದಾರನಾಗಲೀ—ಅಂಥವರ ಸಮೂಹವೇ ಬ್ಯಾಂಕಿನ ಏಳಿಗೆಯ ಸೋಪಾನ. ಆದುದರಿಂದ ಬ್ಯಾಂಕಿನ ಪ್ರಗತಿ ಕಾರಣರಾದ ಎಲ್ಲರಿಗೂ ನನ್ನ ಅಭಿವಂದನೆಗಳು.

ಬಂಗಾಳದಲ್ಲಿ ಉಡುಪಿ ಕಿರಿಯರ ವಿಜಯ ಭೇರಿ.

ಉಡುಪಿಯಿಂದ ಶ್ರೀಗಳಾದ ಕೆ ಎ ಸೇವದಾಸ ಹಾಗೂ ಕೆ. ಸತ್ಯೇಂದ್ರ ಶೆಣೈಯವರ ಸಂಪಾದಕತ್ವದಿಂದ ಪ್ರಕಟವಾಗುತ್ತಿರುವ "ಚೇತನಾ" ಎಂಬ ಹಸ್ತಲಿಖಿತ ತ್ರೈಮಾಸಿಕ ಪತ್ರಿಕೆಗೆ ಪಶ್ಚಿಮ ಬಂಗಾಳದ ಗವರ್ನರರ ಪದಕವೊಂದು ಬಹುಮಾನ ದೊರಕಿರುವುದು ಉಡುಪಿಯ ಹಾಗೂ ಜಿಲ್ಲೆಯ ಜನರಿಗೊಂದು ಅಭಿಮಾನದ ವಿಚಾರವಾಗಿದೆ.

ಕಳೆದ ತಿಂಗಳು ಬಂಗಾಳದ 'ಛಾತ್ರ ಸಂಘಾತ'ಯವರು ಆ ಭಾಷೆ ಹಸ್ತಲಿಖಿತ ಪತ್ರಿಕೆಗಳ ಮೇಳಾವನ್ನು ಏರ್ಪಡಿಸಿದ್ದರು. ಈ ಸ್ಪರ್ಧೆಗೆ 10 ಭಾಷೆಗಳ ಸುಮಾರು 500 ಹಸ್ತಲಿಖಿತ ಪತ್ರಿಕೆಗಳು ಭಾಗವಹಿಸಿದ್ದುವು. ಅವುಗಳಲ್ಲಿ ಬಂಗಾಳಿಯ 'ವೈಶಾಖಿ' ಕನ್ನಡದ 'ಚೇತನಾ' ತಮಿಳಿನ 'ನಿಲವು' ಬಹುಮಾನಗಳಿಸಿರುವುವು. ಈ ಬಹುಮಾನಗಳನ್ನು ನೀಡುವ ಸಮಾರಂಭವು ಪಶ್ಚಿಮ ಬಂಗಾಳದ ಗವರ್ನರರ ಹಸ್ತದಿಂದ ತಾ. 15-3-53 ರಂದು ಕಲ್ಕತ್ತದಲ್ಲಿ ಏರ್ಪಟ್ಟಿತ್ತು. ಈ ಸಂಬಂಧವಾಗಿ ಒಂದು ಕಲಾಪ್ರದರ್ಶನದ ಏರ್ಪಾಡೂ ಇದ್ದಿತು. ಅಂತೂ ಕನ್ನಡದ ಕಿರಿಯರು ಇದೇ ಬಾರಿ ಮೊದಲನೆ ಸಲ ಬಂಗಾಳದಲ್ಲಿ ಸುಸಂಸ್ಕೃತ ನಾಡಿನಲ್ಲಿ ವಿಜಯಭೇರಿ ಮೊಳಗಿಸಿದುದಕ್ಕಾಗಿ ನಿಜಕ್ಕೂ ಅಭಿನಂದನೀಯರು.

ಏಳು ವರುಷಗಳಲ್ಲಿ ಫಲ

ನಮ್ಮ ಪಿಗ್ಮಿ ಮುಡಿಮವಾರರಲ್ಲಿ ದಿನವಿಡಿ ಕೆಲಸ ಮಾಡುವ ಶ್ರಮಜೀವಿಗಳು, ಅಂಗಡಿಗಾರರು, ವಕೀಲರು, ಡಾಕ್ಟರರು, ಎಂಜನಿಯರರು, ಬೇಸಾಯಗಾರರು, ವರ್ಗದಾರರು ಇತ್ಯಾದಿ ತರಗತಿಯವರಿರುವರು. ಅವರ ಪಿಗ್ಮಿ ಮುಡಿಸುಗಳು ಚಿಕ್ಕ ಪುಟ್ಟ ಠೇವಣಾತಿಗಳಿಂದ ಪ್ರಾರಂಭವಾದುವು ಅಂದು ಇಲಿಯಂತಿದ್ದುವು ಇಂದು ಹುಲಿಯಂತಾಗಿವೆ. ಅಂತಹ ವಿವೇಕಪೂರ್ಣ ದೂರದರ್ಶಿ ಸಂಪನ್ನ ಪಿಗ್ಮಿ ಠೇವಣಾತಿದಾರರ ಕೂಟಕ್ಕೆ ನೀವೂ ಕೂಡಾ ಸೇರಿ ಭಾಗ್ಯವಂತರಾಗ ಬೇಕಾಗಿ ಆಹ್ವಾನಿಸುತ್ತೇವೆ

ಅಪಾರ ವಹಿವಾಟು ರೂ 5,00,00,000ಕ್ಕೂ ಮಿಕ್ಕಿದೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925 ಹೆಡ್ ಆಫೀಸು. ಉಡುಪಿ

THE CANARA INDUSTRIAL & BANKING SYNDICATE LIMITED

ESTD: 1925 H. O: UDIPI.

ನಿರಾಶೆಯ ನಡುವೆ ಆಶೋದಯ

[೩ನೇ ಪುಟದಿಂದ]

ಷ್ಟು ಎಷ್ಟು ತೀವ್ರವಿರುತ್ತವೆಂದರೆ—ಗೃಹೋದ್ಯಮಗಳಿಗೆ ಕಚ್ಚಾ ವಸ್ತುವಿನ ಪೂರೈಕೆಯೇ ಆಗುವುದಿಲ್ಲ. ದೊಡ್ಡ ದೊಡ್ಡ ಕಾರ್ಖಾನೆಗಳೆಲ್ಲ ಒಂದಾಗಿ ಕೂಡಿಕೊಂಡು ತಮ್ಮ ಕುಂದು ಕೊರತೆಗಳನ್ನು ಆಗಿಂದಾಗ್ಗೆ ವಿಮರ್ಶಿಸುತ್ತವೆ; ಸರಕಾರದ ನೀತಿಯಿಂದ ಅನ್ಯಾಯವಾಗಿದ್ದರೆ ಸಾಮೂಹಿಕವಾಗಿ ಪ್ರತಿಭಟಿಸುತ್ತವೆ. ಆದರೆ ಗೃಹೋದ್ಯಮಗಳು ಈ ರೀತಿ ಸಂಘಟನಾಬದ್ಧವಾಗಿಲ್ಲದಿರುವುದರಿಂದ, ತಮ್ಮ ಕಷ್ಟನಷ್ಟಗಳ ಸಂಗತಿಯನ್ನು ಯೋಗ್ಯ ರೀತಿಯಲ್ಲಿ ನಿವೇದಿಸಿಕೊಂಡು ಪರಿಹಾರ ಪಡೆಯಲು ಅದಕ್ಕೆ ಸಾಧ್ಯವಾಗಿಲ್ಲ.

ಪರಿಸ್ಥಿತಿ ಹೀಗಿದ್ದರೂ ನಮ್ಮ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಗೃಹೋದ್ಯಮಗಳಿಗೆ ಮಹತ್ವದ ಸ್ಥಾನ ಪ್ರಾಶಸ್ತ್ಯವಿದೆ ಎಂಬುದನ್ನು ಮರೆಯಲು ಸಾಧ್ಯವಿಲ್ಲ. ಪ್ರಾಚೀನ ಪರಂಪರೆಯ ಬಲದಿಂದಲೂ ಕಾರ್ಖಾನೆಗಳು ನೀಡಲಾರದ ಕೆಲವೊಂದು ಅಮೂಲ್ಯ ಸೌಕರ್ಯಗಳನ್ನು ಗೃಹೋದ್ಯಮಗಳು ಒದಗಿಸಿ ಕೊಡಬಲ್ಲುವೆಂಬುದರಿಂದಲೂ ಈ ರೀತಿ ಹೇಳಬೇಕಾಗಿದೆ. ಈ ಅನುಕೂಲತೆಗಳು ಯಾವುವು, ಮತ್ತು ಗೃಹೋದ್ಯಮಗಳನ್ನು ಉಳಿಸಿಕೊಂಡಂತೆಯೇ ರಾಷ್ಟ್ರದ ಕೈಗಾರಿಕಾಭಿವೃದ್ಧಿಯನ್ನು ನಾವೆಂತು ಯಶಸ್ವಿಯಾಗಿ ಕೈಗೂಡಿಸಬಲ್ಲೆವು ಎಂಬ ಸಂಗತಿಯನ್ನು ಮುಂದಿನ ಲೇಖಾಂಕದಲ್ಲಿ ವರ್ಣಿಸಲಾಗುವುದು.

(ಅಪೂರ್ಣ)

— —

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. I. A. 1807/1952
(O. S. 38/1951)

ಹಾಜಿ ಹುಸೇನ್—ವಾದಿ- ಅರ್ಜಿದಾರ.
ಖತೀಜಮ್ಮ ಸಹಾ—ಪ್ರತಿವಾದಿಯ
—ಎದ್ರಿರು.

6ನೇ ಎದ್ರಿ:— ಅಹಮ್ಮದ್. ಉಪ್ಪಳ ಮಮ್ಮದೆ ಬ್ಯಾರಿ ಮಗ, ಮಂಗ್ಳೂರು ಶಹರ್ ಬಂದರದಲ್ಲಿದ್ದಾನೆ-ರೀಗೆ.

ಈ ಮೂಲಕ ಕೋರ್ಟು ಹುಕುಂ ಪ್ರಕಾರ ತಿಳಿಯಪಡಿಸುವದೇನೆಂದ್ರೆ:-

ಮೇಲ್ಕಂಡ ಅರ್ಜಿದಾರನು ಆತಗೆ ಬರತಕ್ಕ ವ್ಯಾವೇಗೇಣಿ ಬಾಕಿ ವಗೈರೆ ನಿವೃತ್ತಿಗೋಸ್ಕರ ಮಾಡಿದ ಮೇಲ್ಕಂಡ O. S. 38/51 ನೇ ದಾವೆಯಲ್ಲಿ ಆದ ಡಿಗ್ರಿ ವಿಧಿ ಮೇರೆಗೆ ಪೈಸ್ಲೆ ಕೈಪಿಡಿಗೆ ಜವಾಬ್ದಾರಿ ಇದ್ದ ಆಸ್ತಿಯನ್ನು R. E. P. 482/51 ನೇ ಅಮ್ಲುಜ್ಯಾರೀ ಪ್ರಕಾರ ಏಲಂ ಹಾಕಿ, ಏಲಂನಲ್ಲಿ ಅರ್ಜಿದಾರನೇ ದರಖಾಸ್ತಿಗೆ ಪಡೆದಂತೆ ವಸೂಲಾದ ರೂ. 75- ಕಳೆದು, ಉಳಿಕೆ ಬರಬೇಕಾದ, ರೂ. 1079-4 6 ಮುಂದಿನ ಬಡ್ಡಿ, ಅರ್ಜಿ ಖರ್ಚು ವ ಮುಂದಿನ ವಿಶಿಷ್ಟ ಖರ್ಚು ಸಹಾ ಪ್ರವೃತ್ತ ಮಾಮ್ಮದೆ ಬ್ಯಾರಿ ಬಾಬ್ತು ಎದ್ರಿರ ಕೈಯ್ಯಲ್ಲಿ ಇರುವ ಸೊತ್ತುಗಳಿಂದ ವಸೂಲು ಪಡಿಯುವಂತೆ ವಗೈರೆನಿವೃತ್ತಿ ನ್ನಿ ತನ್ನ ಗುಣಕ್ಕೆ ಪರ್ಸನಲ ಡಿಕ್ರಿ ಕೊಡಿಸಬೇಕೆಂತ ಅರ್ಜಿದಾರ ಕೊಟ್ಟ ಮೇಲ್ಕಂಡ ಅರ್ಜಿ ತಾ 4 4 53 ಕ್ಕೆ ವಿಚಾರಣೆಗೆ ಇಟ್ಟಿರುತ್ತದೆ. ಆ ಕುರಿತು ನಿಮಗೇನಾದರೂ ಆಕ್ಷೇಪ ಇದ್ದರೆ ಸದ್ರಿ ವ್ಯಾದೆ ದಿನ ಪೂರ್ವಾಹ್ನ ಗಂಟೆ 11ಕ್ಕೆ ನೀವು ಸ್ವತಃ ಯಾ ವಕೀಲದ್ವಾರಾ ಕೋರ್ಟುಮುಂದೆ ಹಾಜ್ರಾಗಿ ಉದಾಹರಿಸತಕ್ಕದ್ದು- ತಪ್ಪಿದ್ರೆ ನಿಮ್ಮನ್ನು ಶಿವ್ಯಾಮಾಡಿ ಯುಕ್ತಕಂಡಂತೆ ತೀರ್ಮಾನಿಸಲಾದೀತು.

M. Sadashiva Rao.
Pleader for petitioner
ಪುತ್ತೂರು, ತಾ. 15-3-53

ಸೇರಿಕೆಯ ಮಾತು

[೧ನೇ ಪುಟದಿಂದ]

ದರು. ಅದಕ್ಕಿಂತ ಮೊದಲೇ ವಿ॥ ಬಾಲೋರ್ವ್ ಎಂಬವರೊಬ್ಬರು ಆ ಬೀದಿಯಲ್ಲಿ ಅದೇ ವ್ಯಾಪಾರ ಮಾಡುತ್ತಿದ್ದರು. ಈ ಜನ ಮುದುಕ. ಹೊಸಬನನ್ನು ಕಂಡು ಕಾರತೊಡಗಿದರು. "ಅವರ ಔಷಧಗಳು ಪ್ರಯೋಜನವಿಲ್ಲ; ಅವರಿಗೆ ಮದ್ದಿನ ಮಿಶ್ರಣ ಮತ್ತು ವಿವರಣೆಗಳ ಜ್ಞಾನವಿಲ್ಲ" ಎಂದು ಹೊಸಬನನ್ನು ಬಾಲೋರ್ವ್ ದೂರಿದರು. ಇದರಿಂದ ಹೊಸಬನೇನು ಬೇಸರ ಪಡಲಿಲ್ಲ. "ಇರಬಹುದು—ನಾನಿನ್ನೂ ಹೊಸಬ. ಕೈ ಪಳಗಿಲ್ಲ. ಆದರೆ ಬಾಲೋರ್ವ್ ತುಂಬಾ ಅನುಭವಸ್ಥರು. ಅವರು ತೀರಾ ಸಮರ್ಥರು; ನಮಗೆಲ್ಲ ಮಾದರಿ ವ್ಯಕ್ತಿ. ಅವರ ಅಂಗಡಿಯಂತೆಯೇ ನನ್ನದೂ ಆಗಬೇಕೆಂದು ನನ್ನ ಆಸೆ—"ಎಂದು ಹೊಸಬ ಗಿರಾಕಿಗಳ ಮುಂದೆ ತನ್ನನ್ನು ಪ್ರಶಂಸಿಸಿದ ಸುದ್ದಿ ಕೇಳಿದರೋ ಇಲ್ಲವೊ—ಆ ಮುದುಕ ಬಾಲೋರ್ವ್ ಉಬ್ಬಿ ಹೋದರು. ತಾವೇ ಸ್ವತಃ ಹೊಸಬನಲ್ಲಿಗೆ ಬಂದು, ಅನೇಕ ಹಿತಸೂಚನೆಗಳನ್ನು ಕೊಟ್ಟು, ಹರಸಿ ಹೋದರು!

ಇಂಥದೆಲ್ಲ ಸಂದರ್ಭಗಳನ್ನು ನೆನೆದರೆ-ನಾವು ಇತರರನ್ನು ಮೆಚ್ಚಿ ಆಡುವುದರಿಂದ ಎಷ್ಟು ಪ್ರಯೋಜನವಿದೆ ಎಂಬ ಸಂಗತಿ ಅಧಿಕ ಮನನೀಕೆಯಾದೀತು. ಯೋಗ್ಯ ಸಂದರ್ಭಗಳು ದೊರೆತಾಗವೆಲ್ಲ ಸೇರಿಕೆಯ ಮಾತು ಆಡುವುದು ಹಿತಕರ. ಬಂದ ಸಂದರ್ಭವನ್ನು ಉದಾಸೀನದಿಂದ ನೋಡಿದರೆ ಮುಂದೆಂದಿಗೂ ಅಂಥ ಇನ್ನೊಂದು ಸಂದರ್ಭ ದೊರೆಯದು. ನಾವೇ ಪರಿತಪಿಸಬೇಕಾದೀತು. ಒಮ್ಮೆ ಆಗಂತುಕನೊಬ್ಬನು ಬಂದು ಮನೆಯ ಅಂಗಳದ ಮುಂದೆ ತನ್ನ ಸಾಮಾನುಗಳನ್ನು ಹರವಿ, ವ್ಯಾಪಾರಕ್ಕೆ ಇಟ್ಟನು. ಈ ಮನುಷ್ಯ ಭಾರಿ ಒಳ್ಳೆಯವ. ಆ ಮನೆಯ ಗೃಹಿಣಿಗೆ ಇವನನ್ನು ನಾಲ್ಕು ಒಳ್ಳೆಯ ಮಾತುಗಳಿಂದ ಆದರಿಸಬೇಕೆಂದು ತೋರಿತು. ಆದರೆ ಸಂಕೋಚದಿಂದ ಸುಮ್ಮನುಳಿದಳು. ಮುಂದಿನ ಬೇಸಗೆಯಲ್ಲಿ ಅಲ್ಲಿಗೆ ಬಂದವನೊಬ್ಬನು ತಾನು ಹಿಂದಿನ ಬೇಸಗೆಯಲ್ಲಿ ಬಂದ ವ್ಯಾಪಾರಿಯ ಮಗನೆಂದೂ, ತನ್ನ ತಂದೆ ತೀರಿಕೊಂಡರೆಂದೂ ಹೇಳಿದ. ಆಗ ಗೃಹಿಣಿ "ನಿನ್ನ ತಂದೆಯ ಕೊನೆಯ ದರ್ಶನ ನಮಗಾಗಿತ್ತು. ಅವರು ಭಾರಿ ಒಳ್ಳೆಯವರು" ಎಂದಳು. ಆ ಹುಡುಗ ಕಣ್ಣುಗಳಲ್ಲಿ ನೀರು ತಂದುಕೊಂಡು "ನೀವು ನನ್ನ ತಂದೆಗೆ ತುಂಬ ಹಿತವನ್ನುಂಟುಮಾಡಿದಿರಿ. ಅವರಿಗೆ ಪ್ರಶಂಸೋದ್ಗಾರಗಳೆಂದರೆ ಅಚ್ಚುಮೆಚ್ಚು" ಎಂದಾಡಿದ. ಗೃಹಿಣಿ ತಾನು ಅಂದೇ ಅವನೆದುರು ಒಳ್ಳೆಯ ಮಾತನ್ನಾಡದೆ, ಸುಮ್ಮನುಳಿದೆನಲ್ಲಾ ಎಂದು ಪರಿತಪಿಸಿದಳು.

ಮನುಷ್ಯ ಸಂಘ ಜೀವಿಯಾಗಿರುವುದರಿಂದ ತನಗಾಗಿ ಮಾತ್ರ ಬದುಕುವುದಿಲ್ಲ. ತನ್ನವರಿಗಾಗಿಯೂ ಅವನು ಜೀವನದ ಕೆಲವು ಕ್ಷಣಗಳನ್ನು ಮೀಸಲಿಡುತ್ತಾನೆ. ನಾವು ಬೇರೆಯವರನ್ನು ಮೆಚ್ಚಿ ಮಾತನಾಡಿದರೆ, ಅದು ವ್ಯರ್ಥವಾಗುವುದಿಲ್ಲ. ನಮ್ಮನ್ನೂ ಮೆಚ್ಚಿ ಮಾತನಾಡುವ ಜನರು ದೊರೆಯುತ್ತಾರೆ. ಉಭಯತರಿಗೂ ತೃಪ್ತಿ ಹಾಗೂ ಸಂತೋಷಗಳನ್ನು ಸೇರಿಕೆಯ ಮಾತು ಕೊಡಬಲ್ಲುದು. ಮನಸ್ಸಿನ ಆರೋಗ್ಯಕ್ಕೆ ಹಿಡಿದಿರಬಹುದಾದ ಕಿಲ್ಬಿಷವನ್ನು ಹೋಗಲಾಡಿಸುವುದಕ್ಕೆ ಪ್ರಶಂಸೋದ್ಗಾರಗಳು ಸಂಜೀವಿನಿ ಎಂದರೂ ಸಲ್ಲುವುದು. ಪ್ರತಿಯೊಬ್ಬನ ಸಂಗತಿಯಲ್ಲಿಯೂ ಕೆಲವಾದರೂ ಒಳ್ಳೆಯ ವಿಷಯಗಳಿರುತ್ತವೆ. ಅವುಗಳನ್ನು ಹುಡುಕಿ, ಮೆಚ್ಚುಗೆಯ ನುಡಿಯನ್ನಾಡುವ ಜಾಣ್ಮೆ ನಮ್ಮಲ್ಲಿ ಪ್ರತಿಯೊಬ್ಬರಿಗೂ ಕರಗತವಾಗಲಿ!

—ಓಂ ತತ್ಸತ್॥

—:o:—

ದಿ. ವಿಜಯಾ ಬೇಂಕ್ ಲಿಮಿಟೆಡ್, ಬೈಂದೂರು. (ದ. ಕ.)

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಲ್ಲಿ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೇ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ ಅಸ್ಲು-ವ-ಬಡ್ಡಿ, ಯಾವುದನ್ನೂ, ಈತನಕವೂ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದ ಸದ್ರಿಯವರು ನಮ್ಮಲ್ಲಿ ಒತ್ತೆಯಿಟ್ಟ ಚಿನ್ನಾಭರಣ ನಗವನ್ನು ಇದೇ ಎಪ್ರಿಲ್ ತಿಂಗಳ ತಾರೀಕು 10ನೇ ಶುಕ್ರವಾರ ಅಪರಾಹ್ನ ಗಂಟೆ 2-0ಕ್ಕೆ ಯಾ ಬೇಂಕಿಗೆ ಯುಕ್ತಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಹರಾಜು ಮಾಡಲಾದೀತು. ತಿಳಿದಿರಲಿ.

ಸಾಲದ ಜಂಜ್ರಾ ನಂಬ್ರ	ಹೆಸರು ಮತ್ತು ವಿಳಾಸ.	ಮೊಬಲಗು. ರೂ. ಆ. ಪೈ.
349/50	ಶ್ರೀ ಬಿ. ಹಿರಿಯಣ್ಣ ಸೆಟ್ಟಿ ಕಾರಿಕಟ್ಟೆ ತಿಮ್ಮಪ್ಪ ಸೆಟ್ಟರ ಮಗ ಬಾಳೆಕೆರೆ ದೇವಲ್ಕುಂದ ಗ್ರಾಮ ಬೀಲ್ತೂರು.	66—11—0
5_9/50	ಕೋಡ್ಗದ್ದೆ ಮುತ್ತಯ್ಯ ಸೆಟ್ಟಿ ತಿಮ್ಮಪ್ಪ ಸೆಟ್ಟರ ಅಳಿಯ ಮೂರೂರು ಕಾಲ್ತೋಡು ಗ್ರಾಮ ಕಾಲ್ತೋಡು	66-- 5--0
1417/50	ಜನಾಬ್ ಬಿ ಇಸ್ಮಾಯಿಲ್ ಬಸ್ ಏಜಂಟ್ ಬೈಂದೂರು	15--14--0
746/51	ಕೆಂಚೈಯ್ಯನಮಂಜಪ್ಪ ಸೇರುಗಾರ ಸುಬ್ಬಯ್ಯ ಸೇರುಗಾರರ ಮಗ ಕೋಟೆ ಬಾಗಿಲು ಪಡುವರಿ.	52-- 8--0
875/51	ಯು. ಬಾಬುರಾಜು ಸೇಟ್ ಗಣಪಯ್ಯ ಸೇಟರ ಮಗ ಉಪ್ಪುಂದ.	465— 5—0
415/51	- ಡಿ -	175— 4—0
892/51	ನುಗ್ಗಿಬೆಟ್ಟು ಕೃಷ್ಣಪ್ಪ ಸೆಟ್ಟಿ ಮಂಜಯ್ಯ ಸೆಟ್ಟರ ಅಳಿಯ ಉಪ್ಪುಂದ.	49 -14--0
1354/51	ಗಣಪಯ್ಯ ಸೇಟ್ ದುರ್ಗಯ್ಯ ಸೇಟರಮಗ ಉಪ್ಪುಂದ.	80 — 1--0
1211/51	ಹೋಬಳೆದಾರ ನಾರಾಯಣ ಸೇರುಗಾರ ಮಂಜುನಾಥ ಸೇರುಗಾರರ ಮಗ ವ್ಯಾಪಾರಿ, ಬೈಂದೂರು.	44-- 9--0
54/52	- ಡಿ -	66-- 9--0
1356/50	ಕೆ. ಕೃಷ್ಣ ಭಕ್ತ ಮಾಜಿ ಪ್ರೆಸಿಡೆಂಟ್ ಪಂಚಾಯ್ತ ಬೋರ್ಡ್, ಬೈಂದೂರು.	514-- 1--0
309/51	- ಡಿ -	44-- 4- 0

ಎಚ್. ರಾಜೀವ ಸೆಟ್ಟಿ,
ಏಜಂಟ್.

ಬೈಂದೂರು, 26 3-'53.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಅವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ

ಪ್ರೊಪ್ರೈಟರ್ :— ಕೆ. ವೆಂಕಟಸುಬ್ರಮಣ್ಯಭಟ್ಟ

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C No. 276/1952

ಕೃಷ್ಣ ಭಟ್ಟ, ನೂಜಿಬೈಲು, ರಾಮಚಂದ್ರ ಭಟ್ಟರ ಮಗ, ಪುತ್ತೂರು ತಾಲೂಕು ನೆಟ್ಟಣಿಗೆಮುಡ್ನೂರು ಗ್ರಾಮದ ನೂಜಿಬೈಲು ಎಂಬಲ್ಲಿ— —ವಾದಿ

ಮತ್ತು

ನಾರಾಯಣ ಭಟ್ಟ, ಸುಬ್ಬಣ್ಣ ಭಟ್ಟರ ಮಗ, ಕಾಸರಗೋಡು ತಾಲೂಕು, ಕಾಟುಕುಕ್ಕೆ ಗ್ರಾಮದ ಕೊಡುಮುಡು ಎಂಬಲ್ಲಿ— —ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ—ನೀವು ತಾ. 24-7-50 ರಲ್ಲು ಸದ್ರಿ ವಾದಿಗೆ ರೂ 100ಕ್ಕೆ ಬರಕೊಟ್ಟ ಡಿ. ಪ್ರೊ. ನೋಟಿನ ಅಸಲು ಬಡ್ಡಿ ಹಣಗಳ ವಸೂಲಿ ಬಗ್ಗೆ ಸದ್ರಿ ವಾದಿಯು ಮೇಲ್ಕಂಡ ದಾವಾ ಮಾಡಿರುತ್ತಾನೆ. ಸದ್ರಿ ದಾವೆಯು ತಾ. 6—4—1953ಕ್ಕೆ ವ್ಯಾದೆಯಿರುತ್ತದಾದ್ದರಿಂದ, ನೀವು ಆ ದಿವಸ ಬೆಳಿಗ್ಯೆ 11 ಗಂಟೆಗೆ ಮೇಲ್ಕಂಡ ಕೋರ್ಟಿಗೆ ಹಾಜ್ರಾಗಿ ಉದಾಹರಿಸಿಕೊಳ್ಳತಕ್ಕದ್ದೆಂತಲೂ, ತಪ್ಪಿದ್ರೆ ನಿಮ್ಮನ್ನು ಶಿವ್ಯಾಮಾಡಿ ತೀರ್ಮಾನಿಸಲಾಗುವದೆಂತಲೂ ಕೋರ್ಟು ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸಲಾಗಿಯದೆ.

(Sd) **P. Krishna Bhat,**
Vakil for Plff
Camp. Puttur 16-3-53.

ದಯಮಾಡಿ ನಿಮ್ಮ ಚಂದಾ ಹಣವನ್ನು ಕಳುಹಿಸಿಕೊಡಿರಿ

ಪ್ರಾಚೀನ ಭಾರತೀಯರ ಜ್ಯೋತಿಷ್ಯ ಜ್ಞಾನ

(ಸ್ಥಾಲೀ ಪುಲಾಕ)

ಯು. ನಾ. ಉಡುಪ, ವಿದ್ವಾನ್, ಐರೋಡಿ.

ನಮ್ಮ ಜಿಲ್ಲೆಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗಾಗಿ ಬರೆದ ಭೂಗೋಲ ಮತ್ತು ಖಗೋಲ ಸಂಬಂಧ ಪಠ ಪಾಠಗಳಲ್ಲಿ, ಭೂಮಿಯು ವೃತ್ತಾಕಾರವಾಗಿದೆ—ಭೂಮಿಗೆ ಆಕರ್ಷಣ ಶಕ್ತಿ ಇದೆ—ಭೂಮಿಯು ತನ್ನ ಅಚ್ಚಿನಲ್ಲೇ ತಿರುಗುತ್ತದೆ ಗ್ರಹಣಕ್ಕೆ ಚಂದ್ರ ಮತ್ತು ಭೂಮಿಯ ತಡೆಯೇ ಕಾರಣ, ಇತ್ಯಾದಿಗಳ ಸಂಶೋಧನೆಯು ಕ್ರಮವಾಗಿ ಕೊಪರ್ನಿಕಸ್, ನ್ಯೂಟನ್ ಮೊದಲಾದ ವಿದೇಶೀಯರಿಗೇ ಸಲ್ಲಬೇಕೆಂದು ಬರೆಯುವುದೂ, ಮಾತುಗಳಲ್ಲಿ ತೋರುವುದೂ ಇನ್ನೂ ಮುಗಿದಿಲ್ಲ. ನಮ್ಮ ದೇಶದಲ್ಲಿ ಅವರಿಗಿಂತಲೂ ಹಲವು ಶತಮಾನಗಳ ಮೊದಲಿದ್ದ ಆರ್ಯಭಟ್ಟ ಮತ್ತು ಭಾಸ್ಕರಾಚಾರ್ಯರು ಈ ಕುರಿತು ಪುರಾಣ ಮತವನ್ನೆ ಅನುಸರಿಸಿದ್ದಾರೋ, ಅಥವಾ ನವೀನ ಸಂಶೋಧನಾ ಮಾರ್ಗದಲ್ಲಿ ಉಪಸ್ಥಿತರಾಗಿದ್ದಾರೋ ಎಂಬುದೆ ನಮ್ಮ ತರುಣ ಬೋಧಕರ ಗಮನವು ಇನ್ನೂ ತಿರುಗದಿದ್ದುದು ಆಶ್ಚರ್ಯ. ಪಾಠಶಾಲೆಗಳಿಂದ ನಿನ್ನೆ ತಾನೆ ಇಳಿದು ಬಂದ ಪ್ರಜ್ಞಾವೇಟರರು ಬಾಲ ವಿದ್ಯಾರ್ಥಿಗಳ ಎಳೆ ಮಿದುಳಿನಲ್ಲಿ ಪಾಶ್ಚಾತ್ಯ ಸಂಸ್ಕೃತಿಯೆಂಬ ವಿಚಾರಶೂನ್ಯವಾದ ಅಮೂಲ್ಯ ಸಂಸ್ಕೃತಿಯವರಿಂದಲೇ ಸಮಸ್ತ ಸಂಶೋಧನೆಗಳೂ ಹೊರಬಿದ್ದುವು- ಎಂಬ ಮುದ್ರೆಯೊತ್ತಲು ಯತ್ನಿಸುವುದು (ಇದಕ್ಕೆ ಅಪವಾದ ಇರುವವರೂ ಇಲ್ಲದಿಲ್ಲ) ಅವರ ಗುರುತರವಾದ ಅಪರಾಧ. ಅವರಾದರೂ ಏನು ಮಾಡಿಯಾರು? ಕಾಲೇಜಿನಲ್ಲಿ ಅವರು ಕಲಿತ ವಿಷಯಗಳನ್ನು ಶಾಲೆಯಲ್ಲೋ, ಪಠ್ಯಪುಸ್ತಕದಲ್ಲೋ ಅವರು ಬರೆಯುತ್ತಿದ್ದಾರಷ್ಟೆ! ಈ ಇಪ್ಪತ್ತನೆಯ ಶತಮಾನದಲ್ಲೂ—ಇಂಗ್ಲಿಷರು ಈ ದೇಶ ಬಿಟ್ಟರೂ— ಆಂಗ್ಲಭಾಷೆಯು ತನ್ನ ಕಾರ್ಯಕವನ್ನು ನಡೆಸುವುದೆಂದರೆ ಅರಸಿಯ ಆಶ್ಚರ್ಯವಲ್ಲದೆ ಮತ್ತೇನು? ಭಾರತೀಯರಿಗೆ ಇನ್ನೂ ಇಂಗ್ಲಿಷರೇ ಪ್ರಸಾದ ನೀಡಬೇಕೆಂದರೆ—?

ಭೂಮಿಯು ಗೋಳಾಕಾರವಾಗಿದೆ ಎಂಬ ಮಾತು ಪಾಶ್ಚಾತ್ಯರಿಂದ ನಮಗೆ ತಿಳಿದು ಬಂದುದಲ್ಲ. ಅವರಲ್ಲಿ ಮೊತ್ತಮೊದಲು ಈ ತತ್ವವನ್ನು ಕಂಡುಕೊಂಡವನು ಜರ್ಮನ್ ದೇಶದ ನಿಕೋಲಸ್ ಕೊಪರ್ನಿಕಸ್ (೧೪೭೩-೧೫೪೩) ಎಂಬವನು. ಇವನು 'ಭೂಮಿಯು ಗೋಳವಾಗಿದೆ; ಇದು ಚಲಿಸುತ್ತಿದೆ' ಎಂಬುದನ್ನು ಮೊತ್ತಮೊದಲು ಕಂಡುಹಿಡಿದನೆನ್ನುವರು. ಆದರೆ ಇವನು ಈ ಸಿದ್ಧಾಂತವನ್ನು ಕಂಡುಹಿಡಿಯುವ ಕೆಲವು ಶತಮಾನಗಳ ಹಿಂದೆಯೇ ನಮ್ಮ ದೇಶದ ಬಂಗಾಳದಲ್ಲಿದ್ದ ಪ್ರಸಿದ್ಧ ಜ್ಯೋತಿಷ್ಯನಾದ ಆರ್ಯಭಟ್ಟನು ಈ ಸಿದ್ಧಾಂತವನ್ನು ಕಂಡುಹಿಡಿದು ಪ್ರಚಾರ ಮಾಡಿದನು. ಆಗ ಪಾಶ್ಚಾತ್ಯರಲ್ಲಿ ಈಜಿಪ್ಟ್ ದೇಶದವನಾದ ಪ್ಟೊಲೆಮಿಯಾ ಎಂಬವನ ಸಿದ್ಧಾಂತವಾದ ಭೂಮಿಯೇ ಸ್ಥಿರವಾಗಿದ್ದು ಸೂರ್ಯ ನಕ್ಷತ್ರಾದಿಗಳೆಲ್ಲಾ ಅದರ ಸುತ್ತು ಸುತ್ತುತ್ತಿವೆ ಎಂಬುದೇ ಪ್ರಚಾರದಲ್ಲಿತ್ತು. ಆರ್ಯಭಟ್ಟನು ಈ ಕುರಿತು-

ಶ್ಲೋ॥ ಭಪಂಜರ ಸ್ಥಿರೋಭೂರೇವಾ ಭೂ
ಮಿರೇವಾ ವೃತ್ಯಾವೃತ್ಯ ।
ಪ್ರಾತಿದೈವಸಿಕ ಮುದಯಾಸ್ತಮಾನಂ
ಸಂಪಾದಯತಿ ನಕ್ಷತ್ರ ಗ್ರಹಾಣಾಂ ॥

'ನಕ್ಷತ್ರ ಗುಂಪುಗಳು ಸ್ಥಿರವಾಗಿದ್ದು ಭೂಮಿಯೇ ತನ್ನ ಪ್ರಮಸುತ್ತಲೂ ತಿರುತಿರುಗಿ ಪ್ರತಿದಿವಸವೂ ಸೂರ್ಯನಕ್ಷತ್ರಾದಿಗಳಿಗೆ ಉದಯಾಸ್ತವನ್ನುಂಟುಮಾಡುತ್ತಿವೆ ಎಂದು ಹೇಳಿರುವನು. ಹೀಗೆ ಅದು ಸುತ್ತುತ್ತಿರುವಾಗ ನಮಗೆ ತಿಳಿಯದ ಕಾರಣವನ್ನು ಅವನು ಹೀಗೆ ಹೇಳುತ್ತಾನೆ.

ಶ್ಲೋ॥ ಅನುಲೋಮಗತಿರ್ನೌಸ್ಥಃ
ಪಶ್ಯತ್ಯಚಲಂ ವಿಲೋಮಗಂ ಯದ್ವತ್
ಅಚಲಾನಿ ಭಾನಿ ತದ್ವತ್ ಸಮಪಶ್ಚಿಗಾ
ನಿ ಲಂಕಾಯಾಂ॥

'ಶಾಂತವಾದ ನದಿಯ ನೀರಲ್ಲಿ ಅಲ್ಲಾಡದೆ ಒಂದೇ ಮುಂದಕ್ಕೆ ಹೋಗುತ್ತಿರುವ ನಾವೆಯಲ್ಲಿ ಕುಳಿತಿರುವವನಿಗೆ ಆ ನದಿಯ ತೀರದಲ್ಲಿರುವ ಮರಗಿಡ ಗುಡ್ಡ ಬೆಟ್ಟ ಮೊದಲಾದ ಅಚಲ ಪದಾರ್ಥಗಳೆಲ್ಲಾ ನಾವೆಯು ಮುಂದೆ ಹೋಗುವಷ್ಟೇ ವೇಗದಿಂದ ಹಿಂದಕ್ಕೆ ಸರಿದು ಹೋಗುವಂತೆ, ಲಂಕೆಯಲ್ಲಿದ್ದು ನೋಡುವವನಿಗೆ ಆಕಾಶದಲ್ಲಿರುವ ಅಚಲಗಳಾದ ಸೂರ್ಯನಕ್ಷತ್ರಾದಿಗಳೆಲ್ಲಾ ಪೂರ್ವ ದಿಕ್ಕಿನಲ್ಲಿ ಮೂಡಿ ಪಶ್ಚಿಮದಲ್ಲಿ ಕಂತುವಂತೆ ತೋರುವುದು.'

ಭೂಮಿಯ ಆಕಾರದ ಕುರಿತು ಇವನು ಹೀಗೆ ಅಭಿಪ್ರಾಯಪಡುತ್ತಾನೆ-

ಶ್ಲೋ॥ ವೃತ್ತ ಭಪಂಜರ ಮಧ್ಯೇ ಕಕ್ಷ್ಯಾ
ಪರಿವೇಷ್ಟಿತಃ ಖಮಧ್ಯಗತಃ ಮೃಜ್ಜಲ ಶಿಖಿ
ವಾಯುಮಯೋ ಭೂಗೋಲ:
ಸರ್ವತೋವೃತ್ತಃ ॥

'ಭೂಮಿಯು ಆಕಾಶ ಗೋಳಗಳ ನಡುವೆ ಇದ್ದು ಗ್ರಹಕಕ್ಷೆಯಿಂದ ಸುತ್ತಲ್ಪಟ್ಟು ಪಂಚಭೂಮಿಗಳಿಂದ ರಚಿತವಾಗಿ ಗೋಳಾಕಾರವಾಗಿರುವುದು' ಭೂಮಿಯು ಗೋಳಾಕಾರವಾಗಿದೆಯೆಂಬ ವಿಷಯವನ್ನು ಐತರೇಯ ಬ್ರಾಹ್ಮಣದಲ್ಲಿಯೂ ಕವಷನೆಂಬ ಋಷಿ ಶುಕ್ರನಾದ ತುರಾ ಎಂಬವನು ಇಂದ್ರನಿಗೆ ಹೇಳಿರುವನು. ಇದರಿಂದ ಈ ವಿಚಾರವು ವಿಲಾಯತಿಯವರ ತಿಳಿವಿನಲ್ಲಿ ಬರುವ ಮೊದಲೇ ನಮ್ಮವರಿಗೆ ಗೊತ್ತುಂಟು ಎಂಬ ಭರದಲ್ಲಿ ಏನಾದರೂ ಸಂದೇಹವುಂಟೆ?

ಭೂಮಿಯು ಗೋಳವಾಗಿದ್ದರೂ ನಮಗೇಕೆ ತೋರುವುದಿಲ್ಲ ಎಂಬುದಕ್ಕೆ ಇನ್ನೊಬ್ಬ ಪ್ರಸಿದ್ಧ ಜೋಯಿಸನಾದ ಭಾಸ್ಕರಾಚಾರ್ಯನು ತನ್ನ ಸಿದ್ಧಾಂತ ಶಿರೋಮಣಿ ಎಂಬ ಗ್ರಂಥದಲ್ಲಿ ಹೀಗೆ ಹೇಳಿರುವನು-

ಶ್ಲೋ॥ ಸಮೋಯತಃ ಸ್ಯಾತ್ ಪರಿಧೇಃ
ಶತಾಂಶಃ
ಪೃಥ್ವೀಚ ಪೃಥ್ವೀ ನಿತರಾಂತನೀಯಾನ್॥
ನರಶ್ಚತತ್ಪೃಷ್ಠಗತಸ್ಯ ಕೃತ್ಸ್ನಾ
ಸಮೇವ ತಸ್ಯ ಪ್ರತಿಭಾತ್ಯತಃ ಸಾ॥

'ಒಂದು ವೃತ್ತದ ಪರಿಧಿಯ ನೂರನೆಯ ಒಂದಂಶವು ನೋಡಲಾಗಲೂ ಸರಳ ರೇಖೆಯಾಗಿಯೇ ತೋರುವುದು. ಈ ಭೂಮಿಯಾದರೂ ಅದ್ಭುತವಾದ ಗೋಳವು. ಇದರ ಮುಂದೆ ಮನುಷ್ಯನೇ ಮಹಾ ಸೂಕ್ಷ್ಮದೇಹಿಯು. ಇದರಿಂದ ... ಗೋಲದಲ್ಲಿ ಇವನಿಗೆ ತೋರುವುದು ಸ್ವಲ್ಪಾಂಶ, ಇದರಿಂದಲೇ ಭೂಮಿಯು ಕನ್ನಡಿಯ ಹಾಗೆ ಸಮತಟ್ಟಾಗಿ ತೋರುವುದು' ಇದೇ ವಿಷಯವನ್ನೇ ಐತರೇಯ ಬ್ರಾಹ್ಮಣದಲ್ಲಿ

ಶ್ಲೋ॥ ಅಥಯತೀನು ಪ್ರಾತರು ದೇತೀತಿ
ಮನ್ಯಂತೇ ರಾತ್ರೇ ರೇವತದಂತ ಮಿತ್ವಾ
ಅಥಾತ್ಮಾನಂ ವಿಪರ್ಯಸ್ಯತೇ ಅಹರೇವಾ
ವಸ್ತಾತ್ ಕುರುತೇ ರಾತ್ರಿಂ ಪರಸ್ತಾತ್ ।
ನವಾ ಏಷ ಕದಾಚನ ನಿಮ್ರೋಚತಿ-

'ಈ ಸೂರ್ಯನನ್ನು ನೋಡಿ ಜನರು ಬೆಳಗ್ಗೆ ಮೂಡಿ ರಾತ್ರಿ ಮುಳುಗುವನು ಎಂದು ತಿಳಿದು ತಮ್ಮಿಂದ ತಾವೇ ವಂಚನೆಯಲ್ಲಿ ಬೀಳುವರು. ಈತನು ಯಾವಾಗಲೂ ಮೂಡುವುದೂ ಇಲ್ಲ, ಮುಳುಗುವುದೂ ಇಲ್ಲ.

ಪಾಶ್ಚಾತ್ಯರ ಪ್ರವಾಸಿಕರು ಈಚೆಗೆ ದಕ್ಷಿಣ ಧ್ರುವ ಉತ್ತರ ಧ್ರುವಗಳನ್ನು ಕಂಡುಹಿಡಿದ ಮೇಲೆ ದಕ್ಷಿಣಾಯನದಲ್ಲಿ ಸೂರ್ಯನು ತುಲಾ ಸಂಕ್ರಮಣದ ದಿನ ಭೂಮಧ್ಯವನ್ನು ದಾಟಿ ದಕ್ಷಿಣಕ್ಕೆ ಹೋದ ಮೇಲೆ ಉತ್ತರದಲ್ಲಿ ಸೂರ್ಯನು ಮುಳುಗಿ ದೀರ್ಘ ರಾತ್ರಿ ಪ್ರಾರಂಭವಾಗುವುದು. ಆ ಮೇಲೆ ತಿರುಗಿ ಮೇಷ ಸಂಕ್ರಾಂತಿಯಾಗುವ ವರೆಗೆ ಆರು ತಿಂಗಳ ಕಾಲ ಉತ್ತರ ಧ್ರುವದಲ್ಲಿ ರಾತ್ರಿಯೂ ದಕ್ಷಿಣ ಧ್ರುವದಲ್ಲಿ ಅಷ್ಟೇ ದೀರ್ಘಕಾಲ ಹಗಲೂ ಆಗುವುದಾಗಿ ಪಶ್ಚಿಮ ದೇಶದ ಸಿದ್ಧಾಂತಿಗಳೂ ಭೂಸಂಚಾರಿಗಳೂ ಹೇಳುವರು. ಈ ಮಾತನ್ನು ಎಷ್ಟೋ ವರುಷಗಳ ಹಿಂದೆಯೇ ನಮ್ಮ ಪಂಡಿತಾಗ್ರಣಿ ಆರ್ಯಭಟ್ಟನು ಹೀಗೆ ಹೇಳಿರುವನು.

ಶ್ಲೋ॥ ವಿಷು ದಧ್ವಗಾ ಮ್ಯಸವಾಕ್ಷಿತೇ ವೃತ್ತ
ಮಿತಂ ತಥಾ ಚಸ್ವೈಕ್ಯಾನಾಂ
ಉತ್ತರಯಾಮ್ಯೌ ಕ್ಷಿ ಮತೋ ಮಧ್ಯಾ
ರ್ಧಗಾಹ್ಯದಾಹವಾಮತಸ್ತೋಯಾಂ॥
ಹಸ್ತಂ ಕ್ರಿದೇ ಸಕತಂ ಪಶ್ಯಂತ್ಯಸುರಾಃ
ಅಸಸ್ಯಗಂ ಯಾಮ್ಯ॥

'ಭೂಮಿಯ ಸರಿಯರ್ಧದಲ್ಲಿ ವಿಷುವ ವೃತ್ತ ಅಥವಾ ನಿರಕ್ಷ ರೇಖೆಯೆಂದು ನಮ್ಮ ಪ್ರಾಚೀನ ಸಿದ್ಧಾಂತಿಗಳೆಲ್ಲಾ ತಮ್ಮ ಲೆಕ್ಕಕ್ಕೆ ಅನುಕೂಲವಾಗುವಂತೆ ಒಂದು ರೇಖೆಯನ್ನು ಕಲ್ಪಿಸಿಕೊಂಡಿರುವರು. ಇದನ್ನೆ ಪಶ್ಚಿಮ ದೇಶೀಯರೆಲ್ಲಾ 'ಇಕ್ವೇಟರ್' ಎಂದು ಕರೆಯುವರು. ಈ ಇಕ್ವೇಟರಿನಿಂದ ಉತ್ತರಕ್ಕೆ ಅಂದರೆ ಭೂಮಿಯು ಅತ್ಯಂತ ಉತ್ತರ ತುದಿಯಲ್ಲಿರುವ ಧ್ರುವಕ್ಕೆ ಉತ್ತರ ಧ್ರುವನೆನ್ನುತ್ತಾರೆ. ಇದನ್ನೆ ಇಂಗ್ಲಿಷಿನಲ್ಲಿ 'ನೋರ್ತ್ ಪೋಲ್' ಎನ್ನುವರು. ಇಲ್ಲಿ ದೇವತೆಗಳಿರುವರೆಂದು ಆರ್ಯಭಟ್ಟಾದಿಗಳು ಹೇಳಿರುವರು ಅಂತೆಯೇ ಭೂಮಿಯ ದಕ್ಷಿಣ ತುದಿಯನ್ನು ದಕ್ಷಿಣ ಧ್ರುವನೆಂದು ಕರೆಯುವರು ಈ ದಕ್ಷಿಣ ಧ್ರುವವೇ ... ಉತ್ತರ ಧ್ರುವದಲ್ಲಿ ಆರು ತಿಂಗಳು ಹಗಲಿರುವಾಗ ಅಲ್ಲಿ ಸೂರ್ಯನು ಯಾವಾಗಲೂ ನೆತ್ತಿಯ ಮೇಲೆ ಬಾರದೆ ಕ್ಷಿತಿಜ ಅಥವಾ ದಿಗಂತದಲ್ಲಿ ಸುತ್ತಲೂ ಸುತ್ತುತ್ತಿರುವಂತೆ ತೋರುವನು. ಆಗ ದಕ್ಷಿಣ ಧ್ರುವ ... ದಕ್ಷಿಣ ಧ್ರುವದಲ್ಲಿ ದೈತ್ಯರಿಗೆ ... ಆರು ತಿಂಗಳ ರಾತ್ರಿ ... ಈಗ ... ವನ್ನು ಪಶ್ಚಿಮ ದೇಶಿಯರು ಹೇಳುವಂತೆ ಎಷ್ಟೋ ವರುಷಗಳ ಹಿಂದೆಯೇ ನಮ್ಮ ಆರ್ಯಭಟ್ಟನು ಕಂಡು ಕೊಂಡಿದ್ದನು!

ಭೂಮಿಯು ಗೋಳಾಕಾರವಾಗಿದೆ ಎನ್ನುವುದನ್ನು ಭಾಸ್ಕರಾಚಾರ್ಯನು ಬೇರೊಂದು ವಿಧವಾಗಿ ಸಿದ್ಧಾಂತಪಡಿಸಿದನು.

ಶ್ಲೋ॥ ಲಂಕಾಪುರೇರ್ಕಸ್ಯ ಯದೋದಯಃ
ಸ್ಯಾತ್ ತದಾದಿನಾರ್ಧಂ ಯಮಕೋಟಿ
ಪುರ್ಯಾಂ ।
ಅಧಸ್ತದಾ ಸಿದ್ಧಪುರೇಸ್ತಕಾಲ ಸ್ಯಾದ್ರೋ
ಮಕೇ ರಾತ್ರಿದಲಂ ತದೈವ ॥

'ಲಂಕಾಪುರಿಯು ಭೂಮಧ್ಯದಲ್ಲಿದೆ ಎಂದೆಣಿಸಿ ಅಲ್ಲಿ ಸೂರ್ಯೋದಯವಾಗುವಾಗ ಅದರ ಪೂರ್ವಕ್ಕೆ ೯೦ ಭೂಮಿಯ ಕಾಲುಭಾಗದ ದೂರದಲ್ಲಿರುವ ಜಪಾನ್ ದ್ವೀಪದಲ್ಲಿ ಮಧ್ಯಾಹ್ನವೂ, ಅಷ್ಟೇ ದೂರ ಪೂರ್ವಕ್ಕಿರುವ ಸಿಸ್ಪುರ ಅದವಾ ಅಮೇರಿಕದಲ್ಲಿ ಅಸ್ತಮಯ ಕಾಲವೂ, ಅಷ್ಟೇ ದೂರ ಲಂಕೆಯಿಂದ ಪಶ್ಚಿಮಕ್ಕಿರುವ ರೋಮನಗರದಲ್ಲಿ ಅರ್ಧರಾತ್ರಿಯೂ ಆಗುವುದು ಭೂಮಿಯು ಚಪ್ಪಟೆಯಾಗಿರುತ್ತಿದ್ದರೆ ಎಲ್ಲಾ ಕಡೆಗೂ ಒಮ್ಮೆಯೇ ರಾತ್ರಿಯೂ ಹಗಲೂ ಆಗುತ್ತಿದ್ದಿತು. ಇವನೇ ಮುಂದೆ ಭೂಮಿಯ ಪರಿಧಿಯನ್ನು ಕುರಿತು ಹೇಳುವಾಗ-

ಶ್ಲೋ॥ ಪ್ರೋಕ್ತೋ ಯೋಜನ ಸಂಖ್ಯ
ಯಾ ಕು ಪರಿಧಿಃ ಸಪ್ತಾಂಗನಂದಾಬ್ಧಯಃ
ತದ್ವ್ಯಾಸಃ ಕುಭುಜಂಗ ಸಾಯಕ ಭುವಃ
ಸಿದ್ಧಾಂಶಕೇನಾಧಿಕಾಃ ॥

ಈ ಭೂಮಿಯ ಪರಿಧಿ ಎಂದರೆ ಸುತ್ತಳತೆಯು ೪೯೬೭ ಯೋಜನಗಳು. ಅದರ ವ್ಯಾಸ ಎಂದರೆ ಡಯಾಮೀಟರ್ ೧೫೮೧/೨೪ ಯೋಜನ ಒಂದು ಯೋಜನವೆಂದರೆ ಸುಮಾರು ೫ ಇಂಗ್ಲಿಷ್ ಮೈಲಿನ ಸರಿಎನ್ನಬೇಕು ಸಮಸ್ತ ಭೂಮಿಯ ಕ್ಷೇತ್ರಫಲವು ೭೮,೫೩,೦೭೪ ಯೋಜನಗಳು. ಈಗಿನ ಪಶ್ಚಿಮ ದೇಶೀಯರು ಭೂಮಿಯ ಪರಿಧಿಯು ೨೪,೦೦೦ ಮೈಲೆನ್ನುವರು ಭಾಸ್ಕರಾಚಾರ್ಯನು ೨೪,೮೩೫ ಮೈಲೆನ್ನುವನು, ಹಾಗೆಯೇ ಭೂಮಿಯ ವ್ಯಾಸವು ೭೯೦೫ ೫/೧೪ ಮೈಲುಗಳಾಗುತ್ತವೆ. ಆ ಕಾಲದಲ್ಲಿ ಇಷ್ಟು ಸಮಂಜಸವಾಗಿ ಹೇಗೆ ಅಳೆದಿ ಬಹುದು?

ಇನ್ನು ಭಾಸ್ಕರಾಚಾರ್ಯನು ಭೂಮಿಯ ಆಕರ್ಷಣ ಶಕ್ತಿಯ ಕುರಿತು ವಿಚಾರಮಾಡಿದವನು ನ್ಯೂಟನನು ಆದರೆ ಇವನಿಗಿಂತ ಎಷ್ಟೋ ಪೂರ್ವದಲ್ಲಿ ನಮ್ಮ ದೇಶದ ಆರ್ಯಭಟ್ಟಾದಿಗಳು ಇದನ್ನೇ ವಿಚಾರಮಾಡಿ ಸಿದ್ಧಾಂತಗೊಳಿಸಿದ್ದಾರೆ.

ಶ್ಲೋ॥ ಆಕೃಷ್ಟಿ ಶಕ್ತಿಶ್ಚ ಮಹೀತಯಾ
ಯತ್
ಖಸ್ಥಂ ಗುರು ಸ್ವಾಭಿಮುಖಂ ಸ್ವಶಕ್ತ್ಯಾ
ಆಕೃಷ್ಯತೇ ತತ್ ಪತತೀವಭಾತಿ
ಸಮೇ ಸಮಂತಾತ್ ಕ್ವ ಪತತ್ವಿಯಂ ಖೇ॥

'ಈ ಭೂಮಿಯಲ್ಲಿ ತನ್ನ ಕಡೆಗೆ ಎಳೆಯುವ ಕೆಳಳ್ಳುವ ಒಂದು ಶಕ್ತಿ ಇದೆ ಅದು ಆಕಾಶದಲ್ಲಿರುವ ಗುರು ಪದಾರ್ಥಗಳನ್ನೆಲ್ಲಾ ತನ್ನ ಕಡೆಗೆ ಎಳೆಯುವಾಗ ಅದು ನಮಗೆ ಮೇಲಿನಿಂದ ಕೆಳಗೆಬಿದ್ದಂತೆ ತೋರುವುದು. ಅಲ್ಲದೆ ಚಂದ್ರನಿಗೂ ಗ್ರಹಗಳಿಗೂ ಸ್ವಂತ ಪ್ರಕಾಶವಿಲ್ಲ. ಅವುಗಳಿಗೆ ಪ್ರಕಾಶವೆಲ್ಲಾ ಸೂರ್ಯನಿಂದ ಬರುವುದು.'

ಶ್ಲೋ॥ ಭೂಗ್ರಹಭಾನಾಂ ಗೋಲಾರ್ಧಾ
ನಿಸ್ವ ಛಾಯಯಾ ವಿವರ್ಣಾನಿ
ಅರ್ಧಾನಿ ಯಥಾ ಸಾರಂ ಸೂರ್ಯಾಭಿ
ಮುಖಾನಿ ದೀಪ್ಯಂತೇ ॥

'ಭೂಮಿಗೂ ಗ್ರಹಗಳಿಗೂ ಸ್ವಂತ ಪ್ರಕಾಶವಿಲ್ಲ ಇವುಗಳ ಯಾವ ಭಾಗವು ಸೂರ್ಯನಿಗೆ ಅಭಿಮುಖವಾಗಿದೆಯೋ ಆ ಭಾಗವು ಪ್ರಕಾಶಮಾನವಾಗಿ ತೋರುವುದು' ಈ ವಿಚಾರವನ್ನು ಋಗ್ವೇದದಲ್ಲಿಯೂ ಹೇಳಿದೆ.

ಶ್ಲೋ॥ ಚಂದ್ರಮಾ ಮನಸೋ ಜಾತಃ
'ಚಂದ್ರನು ಪ್ರಕಾಶಕ್ಕಾಗಿ ಸೂರ್ಯನನ್ನು ಆಶ್ರಯಿಸಿರುವನು'

ಇವರು ನಾಯುಮಂಡಲದ ಎತ್ತರವೆತ್ತ ದವರೆಗೆ ಇದೆಯೆಂಬುದನ್ನು ಹೇಳಿದ್ದಾರೆ.

(೧೩ನೇ ಪುಟ ನೋಡಿರಿ)

'ಗೋಪಾಲ ಭೇಷಜಾಶ್ರಮ' ಮಂಗಳೂರು.
(ಸ್ಥಾಪಿತ 1910)
ಸ್ಥಾಪಕರು:-ಆಯುರ್ವೇದ ಭೂಷಣ, ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾರಸಾಯನ
ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಧುರದ್ರವರಸಾಯನ.

ಪೆಟ್ಟಿನ ಮಾಹಿತಿಗೆ-- ಡಾ॥ ಯಂ ಸಿ ಶಾಸ್ತ್ರೀ, ಯಲ್ ಐ ಎಂ
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಥಾನಿಕ ಪ್ರತಿನಿಧಿ:— ಡಾ| ಐ. ಕೆ. ಶಿವರಾಮರಾವ್. ಕುಂಜಿಬೆಟ್ಟು

(...ನೇ ಪುಟದಿಂದ)

ಶ್ಲೋ॥ ಭೂಮೇರ್ಬಹಿರ್ದ್ವಾದಶಯೋಜನಾನಿ ಭೂಭಾ ಖಂ ಸ್ಥಾಂ
ಬುಧವಿದ್ಯುದಾದ್ಯಾಃ

'ಭೂಮಿಯ ಹೊರಗೆ ೧೨ ಯೋಜನ ಎಂದರೆ ೬೦ ಮೈಲು ದೂರ ವಾಯುಮಂಡಲವಿದೆ. ಅಲ್ಲಿಯೇ ಮೋಡವಾಗುವುದು.'

ಆರ್ಯಭಟ್ಟ ಭಾಸ್ಕರಾಚಾರ್ಯರು ಸೂರ್ಯ ಚಂದ್ರ ಗ್ರಹಣಗಳಿಗೆ ಸರಿಯಾದ ಕಾರಣವನ್ನು ಹೇಳಿರುವರು. ಸೂರ್ಯ ಸಿದ್ಧಾಂತವೂ ಗ್ರಹಣ ವಿಚಾರದಲ್ಲಿ ಆ ಪಂಡಿತವರ್ಯರು ಹೇಳುವಂತೆಯೇ ಹೇಳುವುದು.

ಶ್ಲೋ॥ ಛಾದಯತ್ಯರ್ಕಮಿಂದುರ್ವಿಧುಂ ಭೂಮಿಭಾಃ॥

'ಸೂರ್ಯನನ್ನು ಚಂದ್ರನು ಮರೆಮಾಡಿ ಸೂರ್ಯಗ್ರಹಣಕ್ಕೆ ಕಾರಣನಾಗುವನು ಭೂಛಾಯೆಯು ಚಂದ್ರನಮೇಲೆ ಬಿದ್ದು ಚಂದ್ರಗ್ರಹಣವಾಗುವುದು. ಇದು ಆರ್ಯಭಟ್ಟನ ಮತವು. ಭಾಸ್ಕರಾಚಾರ್ಯನು ಈ ಕುರಿತು ಹೀಗೆ ಹೇಳುವನು 'ಚಂದ್ರನು ಪ್ರಕಾಶವಿಲ್ಲದ ಗೋಳವಾದ ಕಾರಣ ಅವನ ಪ್ರಕಾಶವಿಲ್ಲದ ಭಾಗವು ತೋರದಂತೆ ಕಾಣುವನು. ಹೀಗೆ ಪ್ರಕಾಶಹೀನನಾದ ಚಂದ್ರನು ಪಶ್ಚಿಮದಿಕ್ಕಿನಿಂದ ಪೂರ್ವಕ್ಕೆ ತಿರುಗುತ್ತಾ ಮೋಡದಂತೆ ಬಂದು ಕಪ್ಪಾದ ತನ್ನ ಮಂಡಲದಿಂದ ಸೂರ್ಯನನ್ನು ಮರೆಮಾಡುವನು. ಇದರಿಂದ ಸೂರ್ಯಗ್ರಹಣವು ಪಶ್ಚಿಮದಿಂದ ಪ್ರಾರಂಭಿಸಿ ಪೂರ್ವದಲ್ಲಿ ಮೋಕ್ಷವಾಗುವುದು. ಚಂದ್ರನ ಕಕ್ಷಾಭೇದದಿಂದ ಕೆಲವು ಕಡೆ ಇದ್ದವರಿಗೆ ಪೂರ್ಣ ಗ್ರಹಣವೂ, ಕೆಲವೆಡೆಯವರಿಗೆ ಅರ್ಧಗ್ರಹಣವೂ ಕಾಣಿಸಿ, ಕೆಲವು ಸ್ಥಳದವರಿಗೆ ಗ್ರಹಣವು ತೋರುವುದೇ ಇಲ್ಲ. ಇದು ಹೇಗೆಂದರೆ ಮುಗಿಲುಗಳಲ್ಲಿ ನೋಡಿದರೆ ಸೂರ್ಯನನ್ನು ಮರೆಮಾಡಿದಲ್ಲಿ ಕೆಲವೆಡೆಯವರಿಗೆ ಸೂರ್ಯನು ಕಾಣಿಸುವುದೇ ಇಲ್ಲ ಕೆಲವೆಡೆಯವರಿಗೆ ಸ್ವಲ್ಪ ಕಾಣಿಸುವುದು. ಕೆಲವು ಸ್ಥಳದವರಿಗೆ ಸೂರ್ಯನು ಮರೆಯಾಗುವುದೇ ಇಲ್ಲ.'

ಇನ್ನು ಇವನು ಚಂದ್ರಗ್ರಹಣದ ಕುರಿತು 'ಚಂದ್ರನು ಪೂರ್ವಾಭಿಮುಖನಾಗಿ ಹೋಗುತ್ತಾ ಭೂಛಾಯೆಯನ್ನು ಹೊಗುವನು. ಇದರಿಂದ ಚಂದ್ರಗ್ರಹಣದಲ್ಲಿ ಪೂರ್ವದಿಕ್ಕಿನಿಂದ ಸ್ಪರ್ಶವೂ ಪಶ್ಚಿಮದಿಂದ ಮೋಕ್ಷವೂ ಆಗುವುದು.' ಎಂದಿರುವನು; ಅಲ್ಲದೆ 'ಸೂರ್ಯನು ಅಪಾರವಾದ ದೊಡ್ಡ ಗೋಲವು ಭೂಮಿಯು ಅದಕ್ಕಿಂತ ಎಷ್ಟೋ ಸಣ್ಣದು. ಇದರಿಂದ ಗ್ರಹಣಕಾಲದಲ್ಲಿ ಭೂಮಿಯ ಹಿಂದೆ ಬೀಳುವ ನೆರಳು ತುದಿ ಸಣ್ಣವಾಗಿ ಚಂದ್ರಕಕ್ಷೆಯ ಹೊರಗೂ ಎಷ್ಟೋ ದೂರದವರೆಗೆ ವ್ಯಾಪಿಸುವುದು ಚಂದ್ರನು ಭೂಮಿಗಿಂತ ಬಹಳ ಸಣ್ಣ ಗೋಳವಾದ ಕಾರಣ ಚಂದ್ರನನ್ನು ಕಾಣುವಲ್ಲೆಲ್ಲಾ ಈ ಗ್ರಹಣವು ಒಂದೇ ವಿಧವಾಗಿ ತೋರುವುದು. ಅಂತೂ ರಾಹು ಕೇತುಗಳಿಂದ ಗ್ರಹಣವಾಗುವುದಿಲ್ಲವೆಂದು ಭಾಸ್ಕರಾಚಾರ್ಯನು ಪುರಾಣಮತವನ್ನು ತಿರಸ್ಕರಿಸುತ್ತಾನೆ.

ಮಹಾಕವಿ ಕಾಳಿದಾಸನು ತನ್ನ ರಘುವಂಶ ಮಹಾಕಾವ್ಯದಲ್ಲಿ 'ಛಾಯಾಹಿ ಭೂಮೇಃ ಶಶಿನೋಮಲತ್ವೇನಾರೋಪಿತಾ ಶುದ್ಧಿಮತಃ ಪ್ರಜಾಭಿಃ॥' 'ಚಂದ್ರನ ಮೇಲೆ ಬಿದ್ದ ಭೂಮಿಯ ನೆರಳನ್ನು ಜನರು ಅದರ ಕಳಂಕವನ್ನಾಗಿ ತಿಳಿಯುವರು' ಈ ಪ್ರಕಾರ ಸಿದ್ಧಾಂತಿಗಳಲ್ಲದ ಮಹಾಕವಿಗಳು ಕೂಡ ಗ್ರಹಣದ ಸಿದ್ಧಾಂತವನ್ನು ತಿಳಿದಿದ್ದರು.

ನಮ್ಮ ಹಿಂದುಸ್ಥಾನವು ಬಹು ಪೂರ್ವಕಾಲದಿಂದಲೇ ತತ್ವಜ್ಞಾನಿಗಳಿಗೂ, ಮಹಾಕವಿಗಳಿಗೂ, ಗಣಿತಜ್ಞರಿಗೂ ಜನ್ಮಸ್ಥಾನವಾಗಿದ್ದಂತೆ, ಸಿದ್ಧಾಂತಿಗಳಾದ ಜ್ಯೋತಿಷ್ಯರಿಗೂ ತಾಯ್ಮನೆಯಾಗಿತ್ತು. ಸುಮಾರು ಎರಡೂವರೆ ಶತಮಾನದ ಮೊದಲು ರಾಜಸ್ಥಾನದ ಜಯಪುರವೆಂಬ ಪ್ರಾಂತದೊಡೆಯನಾದ ಜಯಸಿಂಹನು ತನ್ನ ರಾಜಧಾನಿ ಮತ್ತು ಮಥುರಾ,

ವಾರದ ಒಳಿತು ಕೆಡುಕುಗಳು

ತಾ. ೨—೪—೫೩ರಿಂದ ತಾ. ೮—೪—೫೩ರ ವರೆಗೆ.

ಮೇಷ — ಜನ್ಮಗತರಾದ ರಾಹು ಗುರುಗಳೂ ವ್ಯಯಗತನಾದ ರವಿಯೂ ನಿಮಗೀವಾರದಲ್ಲಿ ನಾನಾತರದ ಕಷ್ಟಗಳನ್ನು ಕೊಡಲಿರುವರು. ಸಾಮಾಜಿಕ ರಾಜಕೀಯ ಕ್ಷೇತ್ರಗಳಲ್ಲಿ ಪರಾಭವವುಂಟಾದೀತು, ನೀಚಜನರಿಂದ ವಿಶೇಷತಃ ನಷ್ಟ ಸಂಭವಿಸಲಿದೆ ಶರೀರದ ಆರೋಗ್ಯ ಕೆಡಲಿದೆ ಶತ್ರುವರ್ಗದವರ ಪೀಡೆಯಿಂದಾಗಿ ಮಾನಹಾನಿ ಕಾರ್ಯಹಾನಿ ಚಿಂತೆಗಳು ಹೆಚ್ಚುವವು. ಪ್ರವಾಸದಲ್ಲೇ ಹೆಚ್ಚಿನ ಸಮಯವನ್ನು ವ್ಯಯಿಸಬೇಕಾಗುವದು. ವಾರದ ಅಂತ್ಯದ ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳಿಗವಕಾಶವಿಲ್ಲವು.

ವೃಷಭ — ಕಾಲವು ನಿಮಗೆ ಅನುಕೂಲವಾಗಿರುವದು ನಾನಾ ತೆರದಿಂದ ಧನವನ್ನು ದುಡಿಯುವಿರಿ ವ್ಯಾಪಾರ ವ್ಯವಹಾರ ನೌಕರಿ ಸೇವಾವೃತ್ತಿ ಇವೇ ಮೊದಲಾದವುಗಳಲ್ಲಿ ಒಳ್ಳೆಯ ಫಲಪ್ರಾಪ್ತಿ ಇದೆ. ಆದರೆ ಖರ್ಚು ಕೂಡ ನಿಮಗೆ ಕಡಿಮೆಯೆನಿಸದು. ದುಡಿಮೆಯ ಬಹ್ವಂಶವನ್ನು ಸದ್ವಿನಿಯೋಗಕ್ಕಾಗಿ ವ್ಯಯಿಸುವಿರಿ. ಪಿತ್ತದೋಷದಿಂದ ನಿದ್ರಾರಾಹಿತ್ಯ ದುಃಸ್ವಪ್ನಗಳು ಕಾಣಿಸಬಹುದು ಪ್ರಯಾಣದಲ್ಲಿ ಕಷ್ಟ ನಷ್ಟಗಳೂ ಪ್ರಾಪ್ತವಾದಾವು ವಾರಾದಿಯ ೩ ದಿನಗಳಲ್ಲಿ ನಿಮ್ಮ ಒಲುಮೆಯು ಸಿದ್ಧಿಸಲಿದೆ

ಮಿಥುನ— ನಿಮ್ಮ ಲಾಭಸ್ಥಾನದಲ್ಲಿರತಕ್ಕ ಗ್ರಹಸ್ತ್ರಯರು ಈ ಹಿಂದಿನ ನಿಮ್ಮ ಸಾಲಕಡ ಮೊದಲಾದವುಗಳನ್ನು ನಿವಾರಿಸಿ ಕೈಯ್ಯಲ್ಲಿ

ಕಾಶಿ, ದಿಲ್ಲಿ, ಉಜ್ಜಯನಿ ನಗರಗಳಲ್ಲಿ ನಕ್ಷತ್ರಗಳ ಚಲನೆಯನ್ನು ಅನುಲಕ್ಷಿಸುವ ವೇಧಶಾಲೆಗಳನ್ನು ಕಟ್ಟಿಸಿದ್ದನು. ಇವುಗಳಲ್ಲಿ ಕಾಶಿಯ ವೇಧಶಾಲೆಯು ಈಗಲೂ ಇರುವುದು

ನಮ್ಮಲ್ಲಿಯ ತರುಣ ಅಧ್ಯಾಪಕರು ಈ ವಿಚಾರಗಳನ್ನು ಮಾತ್ರವಲ್ಲ ಪಾಶ್ಚಿಮಾತ್ಯ ತತ್ವಗಳನ್ನೂ ಪ್ರತಿಪಾದಿಸುವಾಗ ಆ ಕುರಿತು ಇನ್ನೊಂದು ಪಕ್ಷದವರು ಹೇಳುವುದೇನೆಂಬುದನ್ನು ಸಂಪೂರ್ಣ ಅರಿತಿರಬೇಕು. ದೇವರಿಲ್ಲವೆಂಬ ನಾಸ್ತಿಕವಾದವನ್ನು ಹರಡುವವರು ಆಸ್ತಿಕ ವಿಚಾರದ ಗ್ರಂಥಗಳನ್ನೂ ಅವಲೋಕಿಸಬೇಕು. ಒಂದೇ ಪಕ್ಷವನ್ನು ಅಧ್ಯಯನಮಾಡಿ ವಿದ್ಯಾರ್ಥಿಗಳ ತಲೆತಿರುಗಿಸುವುದರಿಂದ ಕೇವಲ ವಿಷ ಬೀಜಗಳಿಂದ ಕೋಮಲ ಮನಸ್ಸಿನ ಬಾಲಕರ ಮನಸ್ಸನ್ನು ಕೆಡಿಸಿದ ತಪ್ಪಿಗೆ ಅವರನ್ನು ಗುರಿಪಡಿಸಿದಲ್ಲಿ ತಪ್ಪೇನು?

ಸ ಕಷ್ಟು ಧನಸಂಗ್ರಹವಾಗುವಂತೆ ಮಾಡಲು ಸಮರ್ಥರಿರುವರು. ಆತನಿಮಿತ್ತ ನಿಮಗೆ ಸಮಾಜದಲ್ಲಿ ಒಳ್ಳೆ ಗೌರವಾದರಾದಿಗಳು ಲಭಿಸಲಿವೆ ರಾಜಕೀಯರಂಗದಲ್ಲಿ ನಿಮ್ಮ ಪಂಥವು ಮೇಲಾಗುವದು. ಆದರೆ ಗೃಹಕೃತ್ಯದಲ್ಲಿ ಮಕ್ಕಳ ಅನಾರೋಗ್ಯದಿಂದೆಯಿಂದ ಕೊಂಚ ಧನವ್ಯಯವಾಗಲಿದೆ. ವಾರದ ಅಂತ್ಯದ ದಿನಗಳನ್ನು ಬಿಟ್ಟರೆ ಉಳಿದ ದಿನಗಳು ಕೀರ್ತಿ ವಿಜಯ ಲಾಭಕಾರಿಗಳಿರುವವು.

ಕರ್ಕಟ— ದೈನವು ತೀರಾ ದುರ್ಬಲವಾಗಿರುವ ಈ ವಾರದಲ್ಲಿ ನೀನೇನುಮಾಡಿದರೂ ಕೂಡ ವ್ಯರ್ಥ ಪರಿಶ್ರಮದಾಯಿಯಾದೀತೇ ವಿನಹ ಫಲದಾಯಿಯಾಗಲಾರದು. ವಿಪತ್ತೀಯರು ನೀಡಿಸುವದರ ತಿರಲಿ ಆಪ್ತೇಯರೇ ನಿಮಗೆ ವಿರೋಧವಾಗಿ ವರ್ತಿಸುವರೆಂದ ಮೇಲೆ ಉಳಿದುದೇನು ರಿಕ್ತಹಸ್ತರಾದ ನಿಮ್ಮಬಳಿ ಆಪ್ತ ಬಂಧುಗಳೂ ಸಹ ಬಾರಲಾರರು. ವಿಷಯಾದಿಗಳಿಗೆ ಸಿಲುಕಿದ ನಿಮ್ಮ ಮನಸ್ಸು ಮತ್ತಷ್ಟು ಚಂಚಲವಾಗಲಿದೆ ಹೆಚ್ಚೇಕೆ ನಿಮಗೀವಾರದಲ್ಲಿ ಕನಸಿನಲ್ಲೂ ಸುಖವಿಲ್ಲೆಂದರೆ ತಪ್ಪಾಗದು. ವಾರಾಂತ್ಯದ ೪ ದಿನಗಳಲ್ಲಿ ಹಿಂದಿನಷ್ಟು ಅನಿಷ್ಟಗಳಿರಲಾರವು.

ಸಿಂಹ— ಯುಕ್ತಿ ಸಾಹಸಗಳಿಂದ ಕಾರ್ಯ ಸಾಧಿಸುವಿರಿ ಕಾರ್ಯದಲ್ಲಿ ಫಲವೂ ಕೂಡ ತೃಪ್ತಿಕರವಾಗಿ ಲಭಿಸಲಿದೆ. ಪರಭೃತ್ಯವರ್ಗ ಧನಧಾನ್ಯ ಪಶ್ವಾದಿ ಸಂಪತ್ತಿನಿಂದ ಕೂಡಿದ ನಿಮ್ಮ ಗೃಹಕೃತ್ಯದಲ್ಲಿ ಯಾವುದೊಂದರ ನ್ಯೂನಾತಿರಿಕ್ತಗಳು ಕಾಣವು ಆದರೆ ಪಿತ್ತಪ್ರಕೋಪದಿಂದ ದೇಹದಲ್ಲಿ ತಾಪ ದೌರ್ಬಲ್ಯಗಳು ಕಾಣಿಸಬಹುದು. ವಾರದ ಅಂತ್ಯದ ದಿನಗಳು ನಿಮ್ಮ ಸಂಕಲ್ಪವನ್ನು ಪೂರೈಸುವುದರಲ್ಲಿ ಬದ್ಧ ಕಂಕಣಗಳಾಗಿವೆ.

ಕನ್ಯಾ— ನಿಮ್ಮ ಪರಿಶ್ರಮವು ಸಫಲವಾಗುವದು. ದಳರೆ ಜೀವನ್ನು ದುಡಿದುದರಿಂದರೂ ನಿಮ್ಮ ಖರ್ಚು ವೆಚ್ಚಗಳನ್ನು ಪೂರೈಸಿಕೊಳ್ಳಲು ಕಷ್ಟವೆನಿಸುವದು. ಗುರು ದೃಷ್ಟಿಯ ಅಗ್ರಹಕ್ಕೆ ಗುರಿಯಾದ ನಿಮಗೆ ಬಂಧುವರ್ಗವೂ ಪ್ರತಿಕೂಲವಾಗಿ ನಿಲ್ಲಲಿದೆ ಅಪಧ್ವನವು ದಿಗಸಿಟ್ಟಿನ್ನೂ ಕೂಡ ಈ ಕಾಲದಲ್ಲಿ ಉಳಿಯಲಾರದು. ಸಾಮಾಜಿಕ ರಾಜಕೀಯಾದಿ ಕ್ಷೇತ್ರಗಳಲ್ಲಿ ಪರಾಭವ ಅಪಕೀರ್ತಿಗಳಿಗೇ ಪೀಡೆಯುಂಟಾಗುವದು. ತಾ ೩, ೪ನ್ನು ಹೊರತಾಗಿ ಮಿಕ್ಕ ದಿನಗಳು ಹೆಚ್ಚಿನ ಅನಿಷ್ಟಕಾರಿಗಳವೆ

ತುಲಾ— "ಚಿತಾ ದಹತಿ ನಿರ್ಜೀವಂ ಚಿಂತಾ ದಹತಿ ಜೀವಿನಂ" ಎಂದು ಪ್ರಾಜ್ಞರಂದಿರುವರು. ಚಿತೆಯು ಶವವನ್ನು ದಹಿಸುವದಾದರೆ ಚಿಂತೆಯು ಸಜೀವನರನ್ನೇ ದಹಿಸುವದು ಎಂದು ಈ ತೆರನಾದ ಮನೋರೋಗಕ್ಕೆ ನೀವು ಗುರಿಯಾಗಲಿರುವಿರಿ. ಆರ್ಥಿಕ ವಿಭಾಗದಲ್ಲೇನೂ ಕೊರತೆಗಳಿಲ್ಲದಿದ್ದರೂ ಆರೋಗ್ಯವು ಚೆನ್ನಾಗಿರದು. ಸಂಸಾರದಲ್ಲಿ ನಿತ್ಯ ದುಃಖವು ತಲೆತೋರೀತು. ವ್ಯಾಪಾರ ಉದ್ಯೋಗದಲ್ಲಿ ಅಕಸ್ಮಾತ್ ನಷ್ಟ ಸಂಭವಿಸಲಿದೆ ತಾ. 2, 5, 6, 7 ಈ ದಿನಗಳಲ್ಲಿ ವಿಜಯಲಾಭ ಗೃಹಸುಖಾದಿಗಳು ಲಭಿಸುವುವು

ವೃಶ್ಚಿಕ — ಶಕ್ತಿಗಿಂತ ದೃಢವಾದ ಯುಕ್ತಿ ಇಲ್ಲದಿರುವುದರಿಂದ ಕಾರ್ಯದಲ್ಲಿ ಹೆಚ್ಚಿನ ಪರಿಶ್ರಮಪಡಬೇಕಾದರೂ ಫಲಲಾಭಕ್ಕೆ ಕೊರತೆಯಾಗದು, ದೈನಂದಿನ ಖರ್ಚು ವೆಚ್ಚಗಳಿಗೆ ತಕ್ಕಷ್ಟು ಧನವನ್ನು ದುಡಿವಿರಿ, ವಿಪತ್ಪರಂಪರೆಗಳು ನೆಳಲಿನಂತೆ ನಿಮ್ಮನ್ನು ಬೆಂಬಿಡದೆ ಪೀಡಿಸಲಿವೆ. ದೇಹಾರೋಗ್ಯವೂ ಉತ್ತಮವಾಗಿರದು. ವಿದ್ಯಾರ್ಥಿಗಳಿಗೆ ಅಧ್ಯಯನ ಭಾಗಕ್ಕೆ ತುಂಬಾ ವಿಘ್ನಗಳು ಬರಲಿವೆ ಪ್ರವಾಸಕ್ಕೀಕಾಲವು ಯೋಗ್ಯವಾಗಿಲ್ಲವು. ತಾ 3, 4, 8, ಈ ದಿನಗಳಲ್ಲಿ ಹೆಚ್ಚಿನ ಇಷ್ಟಾರ್ಥವು ಸಿಕ್ಕಲಿವೆ.

ಧನು— ಸದ್ಯದ ದಿನಗಳು ಹಿಂದಿನಷ್ಟು ಉತ್ತಮವಿರವು ಉದ್ಯೋಗದಲ್ಲಿ ಫಲಪ್ರಾಪ್ತಿಯು ಚೆನ್ನಾಗಿದ್ದರೂ ಅಧಿಕಾರಿ ಜನರ ವಕ್ರದೃಷ್ಟಿಗೆ ಗುರಿಯಾಗಲಿರುವಿರಿ. ಕೃಷಿಜೀವಿಗಳು ಚೇಣಿಕರು ವ್ಯಾಪಾರಿಗಳೇ ಮೊದಲಾದವರಿಗೆ ಕಾಲವು ಬಹು ಉತ್ತಮವಿರುವದು ವ್ಯವಹಾರ ನಿಮಿತ್ತ ಕೆಲವರೊಡನೆ ಜಗಳಾಡುವ ಪ್ರಸಂಗ ಬರಲಿದೆ. ಸಾಂಸಾರಿಕ ತಾಪತ್ರಯಗಳಿಂದ ಮುಕ್ತರಾದ ನಿಮಗೆ ತಾ. 2, 5, 6, 7, ಈ ದಿನಗಳಲ್ಲಿ ಸುಖಭೋಗಗಳು ಲಭಿಸುವವು

ಮಕರ— ಕಡಿವಾಣ ವಿಲ್ಲದ ಕುದುರೆಯಂತಿರುವ ನಿಮ್ಮ ಚಿತ್ತವು ಕುಮಾರ್ಗದಲ್ಲಿ ನಿಮ್ಮನ್ನು ಸೆಳೆಯಲಿದೆ. ಮಾತ್ರವಲ್ಲ ಸಾಂಸರ್ಗಿಕ ದೋಷಕ್ಕೆ ಸಿಲುಕಿ ವೃಥಾ ಜನನಿಂದೆಗೆ ಗುರಿಯಾಗಲಿರುವಿರಿ. ಉದ್ಯೋಗದಲ್ಲಿ ಪರಿಶ್ರಮಕ್ಕೆ ತಕ್ಕುದಾದ ಫಲಪ್ರಾಪ್ತಿಯಿರುವುದರಿಂದ ದಿನಯಾಪನೆಯು ಹೆಚ್ಚಿನ ಕಷ್ಟದಾಯಿಯಾಗದು. ಶತ್ರುಜನರಿಂದ ಧನಮಾನಗಳಿಗೆ ಹಾನಿ ಸಂಭವಿಸೀತು. ಉಷ್ಣಪಿತ್ತ ಪ್ರಯೋಗದಿಂದ ಅನಾರೋಗ್ಯ ಮತ್ತು ಉದರಶೂಲೆಗಳು ಕಾಣಿಸಲಿವೆ ತಾ. 2, 3, 4, 8, ಈ ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳಿಗೆಡೆಯಿಲ್ಲವು.

ಕುಂಭ— ನಿಮ್ಮ ಧೈರ್ಯಸ್ಥೈರ್ಯಗಳು ಮಾಯವಾಗುವುದರಿಂದ ಯಾವ ಕಾರ್ಯವನ್ನೂ ಸಾಧಿಸಲು ಶಕ್ತರಾಗುವಿರಿ. ಈ ಹಿಂದೆ ಪುರಸ್ಕಾರವನ್ನು ಪಡೆದ ಸ್ಥಳಗಳಲ್ಲಿ ನೀನಿಂದು ತಿರಸ್ಕಾರವನ್ನೂ ಹೊಂದಲಿರುವಿರಿ. ವ್ಯರ್ಥವಾಕ್ಕಲಹಕ್ಕೆ ಸಿಲುಕಿ ಜನರೊಡನೆ ನಿಷ್ಠುರಗಳಾಗಬೇಕಾದೀತು. ಕೈಗೊಂಡ ಕಾರ್ಯವನ್ನು ಅರ್ಧಕ್ಕೆ ನಿಲ್ಲಿಸದೆ ಕೊನೆಗಾಣಿಸುವ ಹಠವಾದಿಗಳಾದ ನಿಮಗೆ ವಾರದ ಅತ್ಯಂತ ದಿನಗಳನ್ನು ಬಿಟ್ಟು ಇತರ ದಿನಗಳು ಉತ್ತಮವಿವೆ.

ಮೀನ— ನಿಮಗೀವಾರದಲ್ಲಿ ಇಷ್ಟಕ್ಕಿಂತ ದ್ವಿಗುಣ ಅನಿಷ್ಟಗಳು ತಲೆದೋರಲಿವೆ. ರಾಜಕೀಯ ಅಧಿಕಾರಿಜನರ ಪೀಡೆಗೆ ಗುರಿಯಾಗುವಿರಿ. ಮತ್ತು ಪಿತ್ತೋಷ್ಣ ದೋಷದಿಂದ ಆರೋಗ್ಯಕ್ಕೆ ಧಕ್ಕೆಯಿದೆ. ಹೆಚ್ಚಿನ ಕಾಲವನ್ನು ಪ್ರವಾಸದಲ್ಲಿ ಕಳೆಯಬೇಕಾದ ಸಂದರ್ಭ ಬರಲಿದೆ. ಸ್ತ್ರೀಪುತ್ರರಿಂದ ದುಃಖಿತರಾಗಲಿರುವಿರಿ. ಸಾಹಸಿಗರಾದ ಕರಣಿಕ ಜನತೆಗೆ ಈ ವಾರದಲ್ಲಿ ಹೆಚ್ಚಿನ ಫಲಪ್ರಾಪ್ತಿಯಿದೆ. ಆಪ್ತರಿಂದಲೂ ಹಣದ ಬಿಕಟ್ಟು ನಿವಾರಣೆಯಾಗದು. ವಾರಾಂತ್ಯದ ೪ ದಿನಗಳಲ್ಲಿ ನಿಮ್ಮ ಅಭೀಷ್ಟವು ನಿರ್ವಿಘ್ನದಿಂದ ಸಿದ್ಧಿಸಲಿದೆ.

ಶರೀರ ಸಮರ್ಪಕತೆಗೆ ಸರ್ವ ರೋಗ ನಿವಾರಣೆಗೆ
ನವಚೇತನ, ಅಮೂಲ್ಯ ಶಕ್ತಿವರ್ಧಕವೆಂದರೆ— ಸುಪ್ರಸಿದ್ಧ
ಸರ್ ಜೀವನ್ ಶಿಲಾಜಿತ್ ಲೇಹ್ಯ
ಸಕಲ ಋತುವಿನಲ್ಲಿ ಸರ್ವರಿಗೂ ಅನುಕೂಲವುಂಟು.
44 ದಿನದ ಲೇಹ್ಯ ರೂ. 5-4-0, 22 ದಿನದ ಲೇಹ್ಯ ರೂ. 3-4-0
(ಪೋಸ್ಟೇಜ್ ಮಾಫಿ)
ನೀಲಗಿರಿ ಡಿಪ್ಪೋ, ಅಕ್ಕಿಪೇಟೆ ಚೌಕ, ಬೆಂಗಳೂರ ಸಿಟಿ
ಶುದ್ಧ ನೀಲಗಿರಿ ಎಣ್ಣೆ ಸಿಗುತ್ತೆ.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ನವಯುಗ
ಆರೋಗ್ಯ ಮಂತ್ರಿ
ಶ್ರೀ. ಎ. ಬಿ. ಶೆಟ್ಟರಿಂದ
ಸ್ಥಾಪಿತವಾದ ವಾರಪತ್ರಿಕೆ,
ಉಡುಪಿ, ದ. ಕನ್ನಡ

ವಾ। ಚಂದಾ 5-12-0
6 ತಿಂಗಳಿಗೆ 3--0-0
ಬಿಡಿ ಪ್ರತಿಗೆ 0--2-0

Regd. No.
M. 3618

LICENCE No. 31
Licensed to Post without Prepayment

ನವಯುಗ

ಅಂತರಂಗ
ಕ್ಷಸ್ತ್ರಕ ಪತ್ರಿಕೆಯು
ಉಪಯುಕ್ತವಾದ
90 ಪುಸ್ತಕಗಳು
ಈ 24ಕ್ಕೆ ಸಿಗುತ್ತವೆ.
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ

9-4-1953

Vol 32
No. 31

NAVAYUGA WEEKLY POST BOX NO 22 UDIPI

ವರ್ಷ ೩೨
ವಾರ ೩೧

ಮಧುಪರ್ಕ

ಒಬ್ಬ ಡಾಕ್ಟರರ ಬಳಿಗೆ ಮಹನೀಯರೋರ್ವರು ಬಂದು, ತಮಗೆ ತುಂಬ ಆಯಾಸವೂ ದಣಿವೂ ಎನಿಸುತ್ತದೆ ಎಂದೂ ನಿಶ್ಶಕ್ತಿಯ ಕಾರಣದಿಂದ ಏನೊಂದು ಕೆಲಸಮಾಡಲೂ ಉತ್ಸಾಹವುಳಿದಿಲ್ಲವೆಂದೂ ದೂರಿಕೊಂಡರು. ಆಯಾಸದಿಂದ ದೂರಾಗುವ ಏನಾದರೊಂದು ಪರಿಣಾಮಕಾರೀ ಔಷಧಿಯನ್ನು ಕೊಟ್ಟು ಬೇಗನೇ ಈ ರೋಗದಿಂದ ಗುಣಪಡಿಸಬೇಕೆಂದು ಪ್ರಾರ್ಥಿಸಿದರು.

ಡಾಕ್ಟರರು ಇವರನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದಾಗ ಶಾರೀರಿಕ ಹಾಗೂ ನೋವು ದೇ ಕಾಹಿಲೆಯ ಕುರುಹು ಪತ್ತಲಿಲ್ಲ. ಆಯಾಸಕ್ಕೆ ಕಾರಣವಾಗಬಲ್ಲ ಸ್ನಾಯು ದೌರ್ಬಲ್ಯ ಮುಂತಾದ ಯಾವುದೇ ಚಿಹ್ನೆಗೂ ಅಲ್ಲಿ ಅವಕಾಶವಿರಲಿಲ್ಲ. ಆಯಾಸವು ಯಥಾರ್ಥವಾದುದಲ್ಲವೆಂದು ಡಾಕ್ಟರರು ತಿಳಿದು, "ನಿಮಗೇನು ಆಗಿಲ್ಲವಲ್ಲ. ನೀವು ಸೌಖ್ಯದಿಂದಿದ್ದೀರಿ' ಎಂದು ಹೇಳಿದರು.

ಇದನ್ನು ಕೇಳಿದವರೇ ಆ ಮಹನೀಯರು ಸಿಡಿಮಿಡಿಗೊಂಡರು "ನೀವೆಲ್ಲಿಯ ಡಾಕ್ಟರು, ಡಾಕ್ಟರ್. ನಿಮಗೆ ನನ್ನಷ್ಟು ಅನುಭವ ಇರಲಿಕ್ಕಿಲ್ಲ ನಾನೋ, ಈ ರೋಗವನ್ನು ಬಹುಕಾಲದಿಂದ ಅನುಭವಿಸಿದವನಿದ್ದೇನೆ" ಎಂದರು.

ಆಯಾಸ ಪರಿಹಾರ

ನಮ್ಮಲ್ಲಿ ಸಾಮಾನ್ಯವಾಗಿ ಪ್ರತಿಯೊಬ್ಬರೂ ದೂರಿಕೊಳ್ಳುವ ಒಂದು ಸಂಗತಿಯೆಂದರೆ ಆಯಾಸ. ಕೆಲಸ ಕಾರ್ಯಗಳನ್ನು ಕೊನೆಯ ನಿಮಿಷದವರೆಗೂ ಮುಂದರಿಸಿ ಹಾಕಬಲ್ಲೆವಾದರೆ ಆಗ ನಮಗೆ ತುಸು ಸಮಾಧಾನವೆನಿಸುತ್ತದೆ. ಏನು ಕೆಲಸ ಮಾಡಲಿಕ್ಕೂ ನಮಗೆ ಉಮೇದಾಗುವುದಿಲ್ಲ. ಮೈ ಕೈ ನೋವಾದಂತೆ ಏಕೋ ಬೇಸರಗೊಂಡಂತೆ, ಜಡ ಭರತರಂತೆ ನಮಗೆನ್ನಿಸುತ್ತದೆ. ಪರಿಣಾಮವಾಗಿ "ನನಗೆ ಏನೇನೂ ಕೂಡದು-ಏಕೋ ತುಂಬ ಆಯಾಸ" ಎಂಬುದಾಗಿ ನಾವು ಯಾವಾಗಲೂ ಗುಣುಗುಟ್ಟುತ್ತೇವೆ. ಡಾಕ್ಟರರು ವೈದ್ಯರು ಮುಂತಾದವರ ಮುಂದೆ ಕೂಡ ಮೊದಲಾಗಿ ನಮ್ಮ ಜಡ ಪ್ರವೃತ್ತಿಯನ್ನು ವರ್ಣಿಸುತ್ತೇವೆ. ಈ ದಣುವನ್ನೂ ಆಯಾಸವನ್ನೂ ಪರಿಹರಿಸಲು ಔಷಧಬೇಕೆಂದು ಕೇಳಿಕೊಳ್ಳುತ್ತೇವೆ.

ಡಾಕ್ಟರ ಜನ ನಮ್ಮಲ್ಲಿ ಏನಾದರೂ ರೋಗವಿದ್ದರೆ ಅದನ್ನು ಪರೀಕ್ಷಿಸಿ ಗುಣಪಡಿಸಿಯಾರು. ಆದರೆ ನಾವು ಬಳಲಿರುವೆವೆಂದು ತೋರುವ ಸಂಗತಿಯು ಯಾವುದೇ ವಿಶಿಷ್ಟ ರೋಗವಾಗಿ ಹೆಚ್ಚಿನ ಮಟ್ಟಿಗೆ ಕಂಡು ಬರುವುದಿಲ್ಲ ನಿಜ ಹೇಳಬೇಕೆಂದರೆ—ನಮಗೆ ಯಾವ ತರದ ರೋಗವೂ ಅಂಟಿಕೊಂಡಿರುವುದಿಲ್ಲ. ಕೆಲಸಗಳ್ಳತನವನ್ನು ಆಶ್ರಯಿಸುವ ನಮ್ಮ ಕೀಳು ಬುದ್ಧಿಯೇ ಆಯಾಸದ ಉಪಾಯವನ್ನು ಕಂಡು ಹಿಡಿಯುತ್ತದೆ. ಈ ರೀತಿ ನಾವಾಗಿ ಕಲ್ಪಿಸಿಕೊಂಡ ರೋಗ ಆಯಾಸವೆಂದು ನೂರರಲ್ಲಿ ತೊಂಭತ್ತೈದು ಪ್ರಸಂಗಗಳಿಂದ ಸಿದ್ಧಗೊಂಡಿದೆ. ಸ್ನಾಯು ದೌರ್ಬಲ್ಯ ಹಾಗೂ ನಿತ್ರಾಣದಿಂದ ಆಯಾಸವುಂಟಾಗುವ ಸಂಭವವಿದೆ. ಆದರೆ ಆಯಾಸದಿಂದ ಬಳಲಿರುವೆವೆಂದು ದೂರುವ ಜನರಲ್ಲಿ ಯಥಾರ್ಥವಾಗಿ ಆಯಾಸ ಹೊಂದಿದವರು ನೂರಕ್ಕೆ ಐದು ಜನ ಮಾತ್ರ.

ಆದುದರಿಂದ ನಾವಾಗಿ ಕಲ್ಪಿಸಿಕೊಂಡ ಆಯಾಸಕ್ಕೆ ಡಾಕ್ಟರರ ಔಷಧಿ ಪ್ರಯೋಜನವಿಲ್ಲ. ಅದಕ್ಕೆ ನಾವೇ ಮದ್ದು ಮಾಡಬೇಕು. ನಮ್ಮಲ್ಲಿ ಕೆಲವರ ಆಯಾಸ ಎಷ್ಟರಮಟ್ಟಿಗೆ ಬೆಳೆದಿದೆ ಎಂದರೆ ಈ ಆಯಾಸವನ್ನು ಪರಿಹರಿಸಲು ಉಪಾಯ ಹೇಳಿದರೆ, ಅದನ್ನು ಅನುಸರಿಸುವುದಕ್ಕೂ ಆಯಾಸ ಬಿಡುವುದಿಲ್ಲ! ಆಯಾಸ ಪರಿಹಾರಕ್ಕೆ ಔಷಧಿ ತೆಗೆದುಕೊಳ್ಳಲಿಕ್ಕೂ ಆಯಾಸದ ಭಯವೇ ಅಡ್ಡಬರುತ್ತದೆ. ಹಾಗೆಂದು ಮೊದಲೇ ಹೇಳಿದಂತೆ ಈ ಭ್ರಾಮಕ ಆಯಾಸದಿಂದ ನಾವು ಮುಕ್ತಿಹೊಂದದಿದ್ದರೆ ಯಾವ ರೀತಿ ಕರ್ತವ್ಯಜ್ಞಾನವಿರುವ ನಾಗರಿಕರಾಗಲು ಸಾಧ್ಯ? ಆದ ಕಾರಣ ಕಷ್ಟವಾಗಲೀ ಸುಖವಾಗಲೀ ಆಯಾಸ ಪರಿಹಾರದ ಉಪಾಯಗಳನ್ನು ಆಚರಣೆಯಲ್ಲಿ ತರುವುದು ಅತ್ಯವಶ್ಯ.

ಆಯಾಸದ ಅನುಭವವುಳ್ಳವರು ಹೆಚ್ಚಾಗಿ ಏನಾದರೊಂದು ಚಿಂತೆಯ ಸಂಗತಿಯನ್ನು ತಲೆಗೆ ಹಚ್ಚಿಕೊಂಡು, ಅದನ್ನೇ ಚಿಂತಿಸುತ್ತಾ ದಣುವಿನಿಂದ ಬಳಲುವರು. ಈ ಚಿಂತೆಗಳಲ್ಲಿ ಕೂಡ ಯಥಾರ್ಥ ಹಾಗೂ ಕಲ್ಪಿತವೆಂಬುದಾಗಿ ಎರಡು ಬಗೆಯವು ಇವೆ. ಯಥಾರ್ಥವಾದ ಚಿಂತೆಗಳು ನಮ್ಮ ಕೌಟುಂಬಿಕ ತಾಪತ್ರಯಗಳ ಕಾರಣದಿಂದ ಹುಟ್ಟಿಕೊಂಡಿದ್ದಾವು. ಅವುಗಳನ್ನು ನಿವಾರಿಸಲು ಬುದ್ಧಿಪೂರ್ವಕ ಯತ್ನಿಸಿದರೆ, ಅದರಲ್ಲಿ ಸಫಲತೆಯನ್ನು ಪಡೆಯಲು ಸಾಧ್ಯವಿದೆ. ಆದರೆ ಕಲ್ಪಿತ ಚಿಂತೆಗಳನ್ನು ಕಟ್ಟಿಕೊಂಡವರಿಗೆ, ಅವರೇ ತಮ್ಮ ಹುಚ್ಚು ಬುದ್ಧಿಯನ್ನು ಬಿಡಬೇಕಲ್ಲದೆ ಹೊರಗಿನವರು ತಿಳಿಸಿ ಹೇಳಿ, ಅವರ ಚಿಂತೆಯನ್ನು ದೂರೀಕರಿಸುವುದು ಕಷ್ಟಸಾಧ್ಯ. ಈ ರೀತಿ ಬೇಕೆಂದೇ ಚಿಂತೆಗಳನ್ನು ಮನಸ್ಸಿಗೆ ಹಚ್ಚಿಕೊಂಡವರು ತಮ್ಮ ಭ್ರಾಮಕ ಕಲ್ಪನೆಯಿಂದ ಸುಖಪಡೆಯುವ ಇಚ್ಛೆಯುಳ್ಳವರಾಗಿರುತ್ತಾರೆ. ಈ ಸುಖವು ಹಿತಕರವಲ್ಲವೆಂಬ ಸಂಗತಿಯನ್ನು ಅವರು ಮನಗಂಡರೆ, ಅದರ ಪರಿಣಾಮವಾಗಿ ಅವರು ಚಿಂತಾಮುಕ್ತರಾಗುತ್ತಾರೆ. ಚಿಂತೆಯಿಂದ ದೂರಾದೊಡನೆಯೇ ಆಯಾಸದ ದೂರಿಗೂ ಎಡೆ ಇರುವುದಿಲ್ಲ.

ಮನಸ್ಸಿನ ಬೇಸರವನ್ನು ಕಳೆಯಲು ಚಿಂತೆಯನ್ನು ಆಶ್ರಯಿಸುವುದು ಸರಿಯಾದ ಮಾರ್ಗವಲ್ಲ. ಈ ಲೋಕದಲ್ಲಿ ನಮ್ಮ ಅಭಿರುಚಿಯು ನೆಲೆಗೊಳ್ಳಬಹುದಾದ ಸಾವಿರಾರು ಸಂಗತಿಗಳು ಇವೆ. ನಮಗೆ ಲಭ್ಯವಿರುವ ಸಮಯ, ಅನುಕೂಲತೆ ಮುಂತಾದವುಗಳನ್ನು ಉಪಯೋಗಿಸಿಕೊಂಡು, ನಾವು ನಮ್ಮ ಮನಸ್ಸನ್ನು ನಿರ್ದಿಷ್ಟವಾದ, ಮತ್ತು ಉಪಯುಕ್ತವಾದ ಸಂಗತಿಯೊಂದರಲ್ಲಿ ಕೇಂದ್ರೀಕರಿಸಿ ಇಟ್ಟುಕೊಳ್ಳಬಲ್ಲೆವು. ಉದಾಹರಣೆಗೆ ಬಿಡುವಿನ ವೇಳೆ[illegible] ಪುಸ್ತಕಗಳನ್ನು ಕೆಲವರು ಓದಿಕೊಳ್ಳಬಹುದು; ಇನ್ನೂ ಕೆಲವರು ಸಂಗೀತದ ಅಭ್ಯಾಸ ಮಾಡಬಹುದು; ಮತ್ತು ಕೆಲವರು ಒಂದು ಹೂದೋಟವನ್ನು ಮಾಡಿ ಅದರ ಆರೈಕೆಯಲ್ಲಿ ಕಾಲ ಕಳೆಯಬಹುದು. ಸಣ್ಣ ಸಣ್ಣ ಹುಡುಗರು ಮತ್ತು ಪ್ರಾಯ ಸಂದ ಮುದುಕರು ಸಹ ಬೆಂಕಿಪೆಟ್ಟಿಗೆಯ ಚಿತ್ರಗಳ ಸಂಗ್ರಹ, ಅಂಚೆ ಟಿಕೇಟುಗಳ ಸಂಗ್ರಹ ಮುಂತಾದ ಸುಲಭ ರೀತಿಯ ಹವ್ಯಾಸಗಳನ್ನು ಇಟ್ಟುಕೊಂಡು ಮನಸ್ಸಿಗೆ ಸಂತೋಷವನ್ನು ಉಂಟುಮಾಡಬಲ್ಲರು. ಇದನ್ನೆಲ್ಲ ಮರೆತುಬಿಟ್ಟು, ಆಲಸ್ಯದಿಂದ ಬಿದ್ದಿರುವುದೇನು ಒಳ್ಳೆಯದಲ್ಲ.

ಕೆಲವೊಮ್ಮೆ ನಾವು ಬೇಕೆಂದೇ ಆಯಾಸವನ್ನು ಹೆಚ್ಚಿಸಿಕೊಳ್ಳುತ್ತೇವೆ. ಉದಾಹರಣೆಗೆ ಒಂದು ವಸ್ತುವನ್ನು ಹೆಕ್ಕಲು ನಾವು ಸೊಂಟವನ್ನು ಮಾತ್ರ ಬಗ್ಗಿಸುವುದಲ್ಲ—ಕೈಕಾಲು ಮುಖ ಎಲ್ಲವನ್ನೂ ಬಗ್ಗಿಸಿ, ಬೇಕೆಂದೇ ದಣಿವಿಗೆ ಆಸರೆ ನೀಡುತ್ತೇವೆ. ಹಾಗೆಯೇ ಕಿಟಕಿಯ ಬಾಗಿಲ್ಲನ್ನು ತೆಗೆಯಲು ಕೈಯನ್ನು ಮಾತ್ರ

೧೦ ನೇ ಪುಟ ನೋಡಿ.

ವಿವಿಧ ವಾರ್ತಾಪತ್ರಿಕೆಗಳಿಂದ ಅಭಿನಂದಿತ ಉಡುಪಿಯ ಹೆಸರನ್ನು ನಾಲ್ದೆಸೆಗಳೂ ಕೇಳಿಸುವಂತೆ ಮಾಡಿದ, ಕಸ್ತೂರ್ಬಾ ಮೆಡಿಕಲ್ ಕಾಲೇಜ್ ಸ್ಥಾಪನೆಯಲ್ಲಿ ನಿರತರಾಗಿರುವ ವೀರ ಸಾಹಸಿ
ಡಾ। ಟಿ. ಎಂ. ಎ. ಪೈ, ಎಂ. ಬಿ. & ಬಿ. ಎಸ್.
(ಸಿಂಡಿಕೇಟ್ ಬ್ಯಾಂಕಿನ ಅಧ್ಯಕ್ಷರು)

ನಿರಾಶೆಯ ನಡುವೆ ಆಶೋದಯ

ನಮ್ಮ ಅರ್ಥ ವ್ಯವಸ್ಥೆಯಲ್ಲಿ ಗೃಹೋದ್ಯಮಕ್ಕಿರುವ ಸ್ಥಾನ ಪ್ರಾಶಸ್ತ್ಯ.

— ೧ —

ಗೃಹೋದ್ಯಮಗಳೂ ಸಣ್ಣ ಕೈಗಾರಿಕೆಗಳೂ ತಮ್ಮ ಮಹತ್ವವನ್ನು ಇನ್ನೂ ವ್ಯಕ್ತಗೊಳಿಸಲು ಸಾಧ್ಯವಾಗಿಲ್ಲದಿದ್ದರೆ, ಅದರ ಕಾರಣ ಬೇರೆಯೇ ಇದೆ. ಪಾಶ್ಚಾತ್ಯ ದೇಶಗಳು ಕೈಗಾರಿಕೋದ್ಯಮದಲ್ಲಿ ಬಹಳ ಮುಂದುವರಿದಿವೆ. ಅಲ್ಲಿ ಗೃಹೋದ್ಯಮಗಳು ಏನೇನೂ ಪಾತ್ರವನ್ನು ವಹಿಸಿರುವುದಿಲ್ಲ. ಆದುದರಿಂದ ಔದ್ಯೋಗೀಕರಣವನ್ನು ಅಭಿವೃದ್ಧಿಯ ಸೋಪಾನವೆಂದು ಪರಿಗ್ರಹಿಸಿದ ಜನರು ಗೃಹೋದ್ಯಮಗಳ ಮಹತ್ವವನ್ನು ಲಕ್ಷಿಸುವುದೇ ಇಲ್ಲ. ಆದರೆ ಪೂರ್ವದ ಜಪಾನು ಮೇರವು ಸಣ್ಣ ಮಟ್ಟದ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸುವುದರ ಮೂಲಕ ಇಡೀ ದೇಶದಲ್ಲಿ ಸುಸಂಬದ್ಧವಾದ ರೀತಿಯಲ್ಲಿ ಔದ್ಯೋಗೀಕರಣವನ್ನು ಸಾಧಿಸಿತೆಂಬ ಸಂಗತಿಯು ಈಚೆಗೆ ಕೆಲವರ ಕಣ್ಣು ತೆರೆಯಿಸಿದೆ. ಈಗೀಗ ಸಂಯುಕ್ತ ರಾಜ್ಯ ಅಮೇರಿಕೆಯಲ್ಲಿ ಜನಪದ ಅಭಿವೃದ್ಧಿ ಯೋಜನೆಗಳ ಆಶ್ರಯದಲ್ಲಿ ಗೃಹೋದ್ಯಮಗಳು ನಡೆಸಲ್ಪಡುತ್ತಿವೆ. ಇಲ್ಲಿ ಉತ್ಪಾದಿತವಾದ ಒಡವೆ ಹಾಗು ಸರಕುಗಳಲ್ಲಿ ಕೆಲಸಗಾರನ ಕೌಶಲ್ಯವು ಒಡಮೂಡುತ್ತಿರುವುದರಿಂದ ಜನರು ಇವುಗಳನ್ನು ಹೆಚ್ಚು ಹೆಚ್ಚು ಬಯಸುತ್ತಾರೆಂದು ತಿಳಿದಿದೆ. ಕೈ ಕಾರ್ಖಾನೆಯಲ್ಲಿ ತಯಾರಾದ ಒಡವೆಗಳಿಗಿಂತಲೂ ಗೃಹೋದ್ಯಮದ ಮೂಲಕ ಉತ್ಪಾದಿಸಲ್ಪಟ್ಟ ಕೆಲವು ಸರಕುಗಳು ಅಧಿಕ ಜನಪ್ರಿಯವಾಗಿವೆ. ದೊಡ್ಡ ಕಾರ್ಖಾನೆಗಳು ಒದಗಿಸಿಕೊಳ್ಳಲಾರದ ಕೆಲವು ವಿಶಿಷ್ಟ ಅನುಕೂಲತೆಗಳಿಗೆ ಗೃಹೋದ್ಯಮದಲ್ಲಿ ಸ್ಥಾನ ದೊರೆಯುತ್ತಿದೆ ಎಂಬುದೇ ಇದಕ್ಕೆ ಕಾರಣ.

— ೨ —

ಉದಾಹರಣೆಗಾಗಿ ಕಲಾತ್ಮಕವಾದ ಒಡವೆಗಳನ್ನು ತೆಗೆದುಕೊಳ್ಳಬಹುದು. ಈ ಸರಕುಗಳ ಬೇಡಿಕೆಯು ಯಾವಾಗಲೂ ಚಂಚಲವಾಗಿರುತ್ತದೆ; ಮತ್ತು ಇಂಥ ಅಮೂಲ್ಯ ಒಡವೆಗಳನ್ನು ತೆಗೆದುಕೊಳ್ಳುವ ಜನರು ಕೆಲವೇ ಮಂದಿ ಶ್ರೀಮಂತರು ಮಾತ್ರ. ಇಂಥವನ್ನು ತಯಾರಿಸುವುದಕ್ಕೆ ದೊಡ್ಡ ಕಾರ್ಖಾನೆಗಳಿಂದ ಸಾಧ್ಯವಿಲ್ಲ. ಏಕೆಂದರೆ, ಕುಶಲನಾದ ಕೆಲಸಗಾರನ ಬುದ್ಧಿವಂತಿಕೆಯನ್ನು ದೊಡ್ಡ ಕಾರ್ಖಾನೆಯ ಯಂತ್ರವು ಪಡೆಯಲಾರದು; ಒಂದು ವೇಳೆ ಪ್ರಯತ್ನಪಟ್ಟು ಈ ಅಡ್ಡಿಯನ್ನು ದೂರೀಕರಿಸಿದರೂ, ಕಲಾತ್ಮಕವಾದ ಒಡವೆ ವಸ್ತುಗಳ ಬೇಡಿಕೆಯು ನಿಶ್ಚಿತವಾಗಿಲ್ಲದಿರುವುದರಿಂದ ದೊಡ್ಡ ಪ್ರಮಾಣದಲ್ಲಿ ಅದನ್ನು ಕಾರ್ಖಾನೆ ಉತ್ಪಾದಿಸಿದರೆ, ಅದರ ವ್ಯವಸ್ಥೆಯಲ್ಲಿ ಸ್ಥಿತ್ಯಂತರವಾಗುವುದು ತಪ್ಪಿದ್ದಲ್ಲ. ವೈಯಕ್ತಿಕ ಅಭಿರುಚಿ ಹಾಗು ಅಭಿಲಾಷೆಗಳೇ ಮಹತ್ವದ ಪಾತ್ರ ವಹಿಸುವ ಕಲಾತ್ಮಕ ಸರಕುಗಳಿಗೆ ಗೃಹೋದ್ಯಮವೇ ತಕ್ಕುದಾದ ಉತ್ಪಾದನಾ ಕ್ಷೇತ್ರ. ಇಲ್ಲಿರುವ ಕುಶಲ ಕೆಲಸಗಾರನು ತನ್ನ ಗಿರಾಕಿಗಳ ಮನಸ್ಸೊಪ್ಪುವಂತೆ ಅವರ ಇಚ್ಛೆಯಂತೆ ತನ್ನಲ್ಲಿರುವ ಸುಲಭ ಸಲಕರಣೆಗಳಿಂದ ಒಡವೆ ವಸ್ತುಗಳನ್ನು ಒದಗಿಸಿ ಕೊಡಬಲ್ಲನು. ಪೇಟೆಯ ಸ್ಥಿತ್ಯಂತರಕ್ಕೆ ಶೀಘ್ರವಾಗಿ ಹೊಂದಿಕೊಂಡು ಹೋಗುವುದೂ ಅವನಿಗೆ ಸಾಧ್ಯವಾಗಿದೆ.

— ೩ —

ಹೀಗೆಂದ ಮಾತ್ರಕ್ಕೆ ಕಲಾತ್ಮಕವಾದ ವಸ್ತುಗಳ ಮಟ್ಟಿಗೆ ಮಾತ್ರ ಗೃಹೋದ್ಯಮಗಳು ಹೇಳಿಸಿದವುಗಳೆಂಬ ಭಾವನೆ ಸಲ್ಲದು. ನಮ್ಮ ದೇಶದಲ್ಲಿ ಔದ್ಯೋಗೀಕರಣವು ಭರದಿಂದ ಅಭಿವೃದ್ಧಿಯನ್ನು ಹೊಂದುತಿದ್ದರೂ ನಮ್ಮ ಜನರಲ್ಲಿ ಹೆಚ್ಚಿನವರು ಹಳ್ಳಿಗಳಲ್ಲಿ ಕೃಷಿಯನ್ನು ಅವಲಂಬಿಸಿ ಬದುಕುತ್ತಿರುವರು. ಆದರೆ ದುರದೃಷ್ಟದಿಂದ ಕೃಷಿಯನ್ನು ಅವಲಂಬಿಸಿರುವವರ ಸಂಖ್ಯೆಯು ಅಗತ್ಯವಿದ್ದುದಕ್ಕಿಂತ ಹೆಚ್ಚಿಗಿರುವುದರಿಂದ ಮತ್ತು ನಾವು ಉಪಯೋಗಿಸುವ ಸಲಕರಣೆಗಳು ಬಹಳ ಪುರಾತನ ಮಾದರಿಯವಾದುದರಿಂದ, ಕೃಷಿಯು ಎಲ್ಲ ಜನರಿಗೂ ವರ್ಷವಿಡೀ ಉದ್ಯೋಗವನ್ನು ಒದಗಿಸಿಕೊಡಲಾರದ ಪರಿಸ್ಥಿತಿ ಇದೆ. ಆದುದರಿಂದ ನಮ್ಮ ರೈತರಲ್ಲಿ ಅಧಿಕಾಂಶ ಜನರು ಪೂರ್ಣೋದ್ಯೋಗಿಗಳಾಗಿರುವುದಿಲ್ಲ. ಹೀಗೆ ಅರ್ಧ ಉದ್ಯೋಗ ಅಥವಾ ನಿರುದ್ಯೋಗದಿಂದ ಬಳಲುತ್ತಿರುವ ರೈತರಿಗೆ ಮತ್ತು ಹಳ್ಳಿಗರಿಗೆ ಗೃಹೋದ್ಯಮವು ಯೋಗ್ಯ ಆಶ್ರಯ ಸ್ಥಾನವಾಗಬಲ್ಲುದು. ಬುಟ್ಟಿ ಹೆಣೆಯುವುದು, ಚಾಪೆ ಮಾಡುವುದು, ಜೇನು ನೊಣ ಸಾಕುವುದು, ಕೋಳಿ ಸಾಕಣೆ, ಹುರಿಹಗ್ಗದ ಕೈಗಾರಿಕೆ, ನೂಲುವುದು ಮತ್ತು ನೇಯುವುದು ಇಂಥ ನೂರಾರು ಕೆಲಸಗಳಿಂದ ಹಳ್ಳಿಗನು ಸಮಯದ ಸದುಪಯೋಗ ಮಾಡುವುದಲ್ಲದೆ, ಸ್ವಲ್ಪ ಹಣ ಸಂಪಾದನೆಯನ್ನೂ ಮಾಡಬಲ್ಲನು. ಈ ರೀತಿ ಉಪವೃತ್ತಿಯೊಂದನ್ನು ಅವಲಂಬಿಸುವುದರಿಂದ ಅವನ ಮುಖ್ಯ ವೃತ್ತಿಯಾಗಿರುವ ಕೃಷಿಗೆ ವ್ಯತ್ಯಯವುಂಟಾಗುವುದಿಲ್ಲ. ನಮ್ಮ ಗೃಹೋದ್ಯಮಗಳು ಎಲ್ಲ ಜನರ ಅಭಿರುಚಿಗೂ ಒಪ್ಪುವ ರೀತಿಯಲ್ಲಿ ಪುನರುತ್ಥಾನವನ್ನು ಹೊಂದುವುದು ಸಾಧ್ಯವಿದೆ ಎಂದು ಧುರೀಣರು ನಂಬಿದ್ದಾರೆ.

— ೪ —

ಇನ್ನೂ ಒಂದು ರೀತಿಯಲ್ಲಿ ಗೃಹೋದ್ಯಮವನ್ನು ಪ್ರಾಯೋಗಿಕ ರೂಪದಲ್ಲಿ ವ್ಯವಸ್ಥಿತಗೊಳಿಸಬಹುದು. ಸಾಧಾರಣವಾದ ಕಾರ್ಖಾನೆಯ ಮಾದರಿಯಲ್ಲಿ ಗೃಹೋದ್ಯಮಗಳನ್ನು ಜನರಲ್ಲಿ ಹಂಚಿಕೊಳ್ಳುವುದು ಸಾಧ್ಯ. ನೂರಾರು ನಮೂನೆಯ ಭಾಗಗಳನ್ನು ಒಟ್ಟಿಗೆ ಜೋಡಿಸಿ ಒಂದು ನಿರ್ದಿಷ್ಟ ಸಾಮಗ್ರಿಯನ್ನು ಸಿದ್ಧಗೊಳಿಸಬೇಕೆಂದಿರುವಾಗ–ಆ ನೂರಾರು ಭಾಗಗಳನ್ನು ಬಿಡಿ ಬಿಡಿಯಾಗಿ ಬೇರೆ ಬೇರೆ ಜನರು ತಮ್ಮಲ್ಲಿ ತಯಾರಿಸಬಲ್ಲರು. ಒಂದು ಮೋಟಾರು ರಚನೆಯಾಗಬೇಕೆನ್ನುವಾ, ಅಥವಾ ಒಂದು ಸೈಕಲು ಯಾ ಟೆಲಿಫೋನು ತಯಾರಿಸಬೇಕೆನ್ನುವಾ, ಇವುಗಳೆಲ್ಲ ಒಂದೇ ಭಾಗದಿಂದ ನಿರ್ಮಾಣಗೊಂಡವುಗಳಲ್ಲ. ನೂರಾರು ಭಿನ್ನ ಭಿನ್ನ ಸಾಮಗ್ರಿಗಳನ್ನು ಒಟ್ಟಿಗೆ ಜೋಡಿಸಿ ಮೋಟಾರನ್ನೂ ಸೈಕಲನ್ನೂ ಟೆಲಿಫೋನನ್ನೂ ಮಾಡುತ್ತಾರೆ. ಆದುದರಿಂದ ಸ್ವಲ್ಪ ತರಬೇತಿಯನ್ನು ಪಡೆದರೆ ಒಂದೊಂದೂ ಮನೆಯವರು ಒಂದೊಂದು ಬಿಡಿ ಭಾಗವನ್ನು ತಯಾರಿಸಲು ಸಾಧ್ಯವಿದೆ. ಪ್ರತಿಯೊಂದು ಮನೆಯೂ ಸಣ್ಣ ಕೈಗಾರಿಕೆಯ ಕೇಂದ್ರವಾಗಲು ಸಾಧ್ಯವಿದೆ. ಹಳ್ಳಿಯ ಮೂಲೆಗೂ ವಿದ್ಯುಚ್ಛಕ್ತಿಯ ಪೂರೈಕೆಯನ್ನು ಬಹಳ ಸುಲಭದಲ್ಲಿ ಮಾಡಲು ಈಗ ಸಾಧ್ಯವಾಗಿರುವುದರಿಂದ ಯಂತ್ರ ಚಾಲಕ ಶಕ್ತಿಯ ಸಮಸ್ಯೆ ಉಳಿದಿರುವುದಿಲ್ಲ. ಒಂದು ರೀತಿಯಿಂದ ನೋಡಿದರೆ, ವಿದ್ಯುಚ್ಛಕ್ತಿಯ ಸುಲಭ ಪೂರೈಕೆಯ ಅನುಕೂಲತೆಯಿಂದಾಗಿ, ಔದ್ಯಮಿಕ ಕ್ಷೇತ್ರದಲ್ಲಿ ವಿಕೇಂದ್ರೀಕರಣವನ್ನು ಸಾಧಿಸುವುದು ಈಗ ಬಹಳ ಸುಲಭವೆನಿಸಿದೆ.

— ೫ —

ಪಾಶ್ಚಾತ್ಯ ದೇಶಗಳ ಮಾದರಿಯಲ್ಲಿ ನಮ್ಮಲ್ಲಿಯೂ ಔದ್ಯೋಗೀಕರಣವನ್ನು ಸಾಧಿಸಬೇಕೆಂದು ಪ್ರಾರಂಭಿಕ ಪ್ರಯತ್ನಗಳು ನಡೆದಾಗ, ನಿಕಟ ಭವಿಷ್ಯದ ಲಾಭದ ಕಡೆಗೇನೆ ನಮ್ಮ ಉದ್ದಿಮೆದಾರರು ಲಕ್ಷ್ಯಕೊಟ್ಟರು. ಪರಿಣಾಮವಾಗಿ ಉದ್ದಿಮೆಗಳು ಕೆಲವೇ ವಿಶಿಷ್ಟ ಕೇಂದ್ರಗಳಲ್ಲಿ ಗುಂಪುಗೂಡಿದುವು. ಸಾರಿಗೆ ಸೌಕರ್ಯಗಳ ಅನುಕೂಲತೆ, ಬಂದರಿನ ಸಾಮೀಪ್ಯ ಕಚ್ಚಾಮಾಲು ಬರುವ ಹಿನ್ನೆಲೆ ಹಾಗೂ ಯಂತ್ರಚಾಲಕ ಶಕ್ತಿಯ ಪೂರೈಕೆ ಮುಂತಾದುವೆಲ್ಲ ಸೌಕರ್ಯಗಳು ಹೆಚ್ಚಿನ ಕಷ್ಟವಿಲ್ಲದೆ ದೊರೆಯಬೇಕೆಂಬ ಇರಾದೆಯಿಂದ ಈ ರೀತಿ ಉದ್ದಿಮೆಗಳು ಕೇಂದ್ರೀಕೃತಗೊಂಡವು. ಆದರೆ ಇಂದು ಪರಿಸ್ಥಿತಿಯು ತುಂಬ ಸುಧಾರಿಸಿದೆ. ವಿದ್ಯುಚ್ಛಕ್ತಿಯು ಯಾವ ಮೂಲೆಯಲ್ಲಿಯೂ ಯಂತ್ರಚಾಲಕ ಶಕ್ತಿಯಾಗಿ ಕೆಲಸಮಾಡಬಲ್ಲುದು; ಸಾರಿಗೆ ಸೌಕರ್ಯಗಳ ಅನುಕೂಲತೆಯೂ ತುಂಬ ಹೆಚ್ಚಿಕೊಂಡಿದೆ. ಆದುದರಿಂದ ಉದ್ದಿಮೆಗಳನ್ನು ವಿಕೇಂದ್ರೀಕರಿಸುವ ಕಡೆಗೆ ನಾವಿಂದು ಅಧಿಕ ಗಮನವನ್ನು ಕೊಡುವುದು ನ್ಯಾಯ. ಕೇಂದ್ರೀಕೃತ ಉದ್ದಿಮೆಯು ಸಾಮಾಜಿಕ ಸ್ವರೂಪದ ಅನೇಕ ಕೇಡುಗಳಿಗೆ ಅವಕಾಶ ಮಾಡಿಕೊಡುತ್ತದೆ. ವಿಕೇಂದ್ರೀಕರಣವನ್ನು ಸಾಧಿಸುವುದರಿಂದ ಸಾಮಾಜಿಕ ಕೇಡುಗಳು ಬಹುಮಟ್ಟಿಗೆ ನಿವಾರಣೆಯೊಂದುತ್ತವೆಂಬ ಭರವಸೆಯುಂಟು.

— ೬ —

ಹೀಗೆ ವಿಕೇಂದ್ರೀಕರಣವನ್ನು ಸಾಧಿಸಿ ಗೃಹೋದ್ಯಮಗಳು ಅಭಿವೃದ್ಧಿಹೊಂದುವುದಕ್ಕೆ ಅವಕಾಶ ಮಾಡಿ ಕೊಟ್ಟರೆ ಈಗ ಕೆಲಸವಿಲ್ಲದೆ ಅಲೆಯುತ್ತಿರುವ ತರುಣರು ಯೋಗ್ಯ ವೃತ್ತಿಯನ್ನು ಅವಲಂಬಿಸುವಂತಾಗುತ್ತದೆ. ಕೆಲಸಮಾಡಲು ಬಯಸುವವರಿಗೆ ಯೋಗ್ಯ ಅವಕಾಶವಿಲ್ಲ ಎನ್ನುವ ಕೆಟ್ಟ ಪರಿಸ್ಥಿತಿಯು ದೂರಗೊಂಡಂತೆ, ರಾಷ್ಟ್ರದ ಸಂಪತ್ತು ಅಭಿವೃದ್ಧಿಯನ್ನು ಹೊಂದುತ್ತದೆ. ಗೃಹೋದ್ಯಮಗಳನ್ನು

(ಮುಂದೆ ಕಾಲಂ ನೋಡಿರಿ)

ದಿ ಕೆನರಾ ಮ್ಯೂಚುವಲ್
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ]   [ಸ್ಥಾಪನೆ: ೧೯೩೫.

"ಕೆನರಾ ಮ್ಯೂಚುವಲ್" ಪರಸ್ಪರಾವಲಂಬಕವಾದ ಸಂಸ್ಥೆ.
ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ
ಬೋನಸು ಹಂಚಿ, ಪಾಲಿಸಿದಾರರ ನಂಬಿಕೆ ಪಡೆದಿದೆ.
ಈ ಕಂಪೆನಿಯಲ್ಲಿ ಇಂದೇ ವಿಮೆ ಇಳಿಸಿ,
ನಿಮ್ಮ ಕುಟುಂಬವನ್ನು ಭದ್ರವಾಗಿರಿಸಿರಿ.

The CANARA MUTUAL ASSURANCE CO. Ltd,
Head Office UDIPI, S. INDIA.   ESTD 1935

ರಾಮತೀರ್ಥ
ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧]   [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ. ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ. ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ. ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಪೆಶಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಅಧಿಕ ಉಳಿತಾಯದ ಚಳವಳಿ

ಮಿತವ್ಯಯದ ಪ್ರವೃತ್ತಿಯನ್ನು ಪ್ರೋತ್ಸಾಹಿಸುವಲ್ಲಿ ವಿಮಾ ವ್ಯವಹಾರದ ಮಹತ್ವ.

ಒಂದು ರಾಷ್ಟ್ರವನ್ನು ಕಟ್ಟುವಲ್ಲಿ ಮಹತ್ವದ ಕೈಗಾರಿಕೋದ್ಯಮಗಳು ನೆರವಾಗುತ್ತವೆಂಬುದನ್ನು ನಾವೆಲ್ಲರೂ ಬಲ್ಲೆವು. ಸರಕು ಸಾಮಗ್ರಿಗಳನ್ನು ಉತ್ಪಾದಿಸಿ, ದೇಶದ ಸಂಪತ್ತನ್ನೂ ಜನಜೀವನದ ಮಟ್ಟವನ್ನೂ ಏರಿಸುವ ಘನವಾದ ಕಾರ್ಯವು ಕೈಗಾರಿಕೋದ್ಯಮಗಳಿಂದ ಯಶಸ್ವಿಯಾಗಿ ನೆರವೇರುತ್ತದೆ. ಕೃಷಿಸಂಪನ್ನವಾದ ಭಾರತದ ಪುನಃ ನಿರ್ಮಾಣದಲ್ಲಿ ಕೈಗಾರಿಕೋದ್ಯಮಗಳ ತೀವ್ರ ಪ್ರಗತಿಗೆ ಮಹತ್ವದ ಪ್ರಾಶಸ್ತ್ಯ ಪ್ರಾಪ್ತವಾಗಿರುತ್ತದೆ. ಉತ್ಪಾದನೆ ಹೆಚ್ಚಿಕೊಂಡಂತೆ, ವಾಣಿಜ್ಯ ವ್ಯವಹಾರಗಳೂ ಬೆಳೆಯುವುದು ಸ್ವಾಭಾವಿಕ. ಸಾವಿರಾರು ಬಗೆಯ ಕಂಪೆನಿಗಳು, ಬ್ಯಾಂಕುಗಳು ಸಹಕರಿಸುವುದಿಲ್ಲವಾದಲ್ಲಿ ಉದ್ದಿಮೆಗಳು ಬೇಗನೇ ಪ್ರಾದುರ್ಭಾವಕ್ಕೆ ಬರುವಂತಿಲ್ಲ. ಆದುದರಿಂದ ದೇಶವನ್ನು ಕಟ್ಟುವಲ್ಲಿ ಪಾಲು ಬಂಡವಾಳದ ಸಂಸ್ಥೆಗಳ ಪಾತ್ರವೂ ದೊಡ್ಡದೆಂದು ತಿಳಿದುಕೊಳ್ಳಬಹುದು. ಇವೆಲ್ಲವುಗಳಂತೆ ವಿಮಾ ವ್ಯವಹಾರದ ಮಹತ್ವವಾದರೂ ಗಣನೀಯವಾಗಿದೆ. ವಿಮೆ, ಮುಖ್ಯವಾಗಿ ಜೀವ ವಿಮೆಯಿಂದ ರಾಷ್ಟ್ರದಲ್ಲಿ ಉಳಿತಾಯ ಪ್ರವೃತ್ತಿಗೆ ಪ್ರಚೋದನೆ ದೊರೆಯುತ್ತದೆಂಬ ಒಂದೇ ಲಾಭವನ್ನು ಮಾನದಂಡವಾಗಿಟ್ಟುಕೊಂಡರೆ, ಅದರ ಮಹತ್ವವು ವ್ಯಕ್ತಗೊಳ್ಳುತ್ತದೆ. ಇದರ ಜೊತೆಗೆ ವಿಮೆಯು ಆಪತ್ಕಾಲದಲ್ಲಿ ಜೀವನಾಧಾರವಾಗಬಲ್ಲುದು ಎಂಬುದನ್ನು ನೆನೆದುಕೊಂಡಲ್ಲಿ ವಿಮೆಯ ಕುರಿತು ನಾವು ಯಾರೂ ಅಸಡ್ಡೆಯನ್ನು ತೋರಿಸುವ ಪ್ರಮೇಯ ಒದಗಿಬರುವುದಿಲ್ಲ.

ಉಳಿತಾಯ ಮನೋಭಾವ

ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡಲಿರುವ ನಮ್ಮ ದೇಶದಲ್ಲಿ ಜನ ಸಾಮಾನ್ಯರು ಎಷ್ಟು ಹೆಚ್ಚು ಹಣವನ್ನು ಉಳಿಸಲು ಕಲಿತರೋ, ಅಷ್ಟು ಹೆಚ್ಚು ಲಾಭವಿದೆ. ನಮ್ಮದು ಬಡ ದೇಶವಾದುದರಿಂದ ನಮ್ಮ ಗಳಿಕೆಯು ಕಡಿಮೆಯಾಗಿದ್ದು ಅದರೊಳಗಿಂದ ಹೊಟ್ಟೆ ಬಟ್ಟೆಯ ಆವಶ್ಯಕತೆಯನ್ನು ಪೂರೈಸುವುದೇ ಕಷ್ಟವೆನಿಸಿದೆ. ಹೀಗಿದ್ದರೂ ನಾವು ಭವಿಷ್ಯದ ಹಿತಚಿಂತನೆಯಿಂದ ಸ್ವಲ್ಪವಾದರೂ ಹಣವನ್ನು ಈಗಲೇ ಕೂಡಿಸದಿದ್ದರೆ, ತೊಂದರೆ ತಾಪತ್ರಗಳು ನಮ್ಮನ್ನು ಕವಿಯುವಾಗ ದಿಗ್ಭ್ರಮೆಗೊಳ್ಳುವ ಪ್ರಸಂಗ ಬರುವುದು ನಿಶ್ಚಯ. ಆದುದರಿಂದ ನಾವು ಆದಷ್ಟು ಹೆಚ್ಚು ಮಿತವ್ಯಯವನ್ನು ಕೈಗೊಂಡು ಆದಾಯದಲ್ಲಿ ಸ್ವಲ್ಪಾಂಶವನ್ನು ಒತ್ತಾಯಪೂರ್ವಕವೆಂಬಂತೆ ಉಳಿಸಿಡಲು ನೋಡಬೇಕು. ಈ ರೀತಿಯಲ್ಲಿ ಜನರಲ್ಲಿ ಒತ್ತಾಯಪೂರ್ವಕ ಹಣವನ್ನು ಉಳಿಸುವ ಪ್ರವೃತ್ತಿಗೆ ಪೋಷಕವಾದದ್ದು ವಿಮಾ ವ್ಯವಹಾರವೆಂದು ಹೇಳಬಹುದು. ಜೀವವಿಮೆ ಇಳಿಸಿದವನು ಕಂತಿಗೆ ಸರಿಯಾಗಿ ಹಣವನ್ನು ಕಟ್ಟುತ್ತಾ ಬರಬೇಕೆಂಬ ಶರ್ತವಿರುವುದರಿಂದ, ಮತ್ತು ಹೀಗೆ ಕಟ್ಟದಿದ್ದ ಪಕ್ಷದಲ್ಲಿ ಜೀವವಿಮೆಯ ಲಾಭ ದೊರೆಯುವುದಿಲ್ಲವಾದುದರಿಂದ, ಹೇಗಾದರೂ ಮಾಡಿ ಆ ಸಮಯಕ್ಕೆ ಸರಿಯಾಗಿ ಅಷ್ಟು ಹಣವನ್ನು ತನ್ನ ಸಂಪಾದನೆಯಿಂದ ಉಳಿಸಿಡಲು ಪಾಲಿಸಿದಾರ ಬಯಸುತ್ತಾನೆ. ಹೀಗೆ ರಾಷ್ಟ್ರೀಯ ಉಳಿತಾಯ ಪ್ರವೃತ್ತಿಯನ್ನು ಪೋಷಿಸುವ ಹೊಣೆಯು ಇಂದು ಬ್ಯಾಂಕುಗಳಿಗಿಂತಲೂ ಹೆಚ್ಚು ವಿಮಾ ಕಂಪೆನಿಗಳ ಪಾಲಿಗೆ ಬಂದಿದೆ

ಸರಕಾರೀ ನಿಯಂತ್ರಣ

ಪ್ರತಿಯೊಬ್ಬ ಪಾಲಿಸಿದಾರನು ಉಳಿಸಿದ ಈ ಹಣವು ಸರಕಾರಕ್ಕೆ ಬಂಡವಾಳದ ಮೊತ್ತನಾಗಿ ಸಾಲ ರೂಪದಲ್ಲಿ ಸಿಗಲು ಸಾಧ್ಯವಾದರೆ, ಈ ಹಣವನ್ನು ಉಪಯೋಗಿಸಿ ರಾಷ್ಟ್ರದ ಕೈಗಾರಿಕೋದ್ಯಮಗಳನ್ನು ಬೆಳೆಸಬಹುದು; ಹೊಸ ಅಣೆಕಟ್ಟುಗಳನ್ನು ಕಟ್ಟಬಹುದು; ನೀರಾವರಿ ಕಾಲುವೆಗಳನ್ನು ನಿರ್ಮಿಸಬಹುದು. ಹೆಚ್ಚು ಕಡಿಮೆ ಪಂಚವಾರ್ಷಿಕ ಯೋಜನೆಯಲ್ಲಿ ವರ್ಣಿಸಲ್ಪಟ್ಟಂತೆ ರಾಷ್ಟ್ರದ ಪುನರುದ್ಧಾರ ಕಾರ್ಯವನ್ನು ನೆರವೇರಿಸಬಹುದು. ವಿಮಾ ಕಂಪೆನಿಗಳು ಇಂದು ಸರಕಾರದ ಕಾಯಿದೆಯಂತೆ ವ್ಯವಸ್ಥಿತವಾಗಿ ನಡೆಯುತ್ತವೆ. ೧೯೧೨ನೇ ಇಸವಿಯಷ್ಟು ಹಿಂದೆಯೇ ಸರಕಾರದವರು ದೇಶದೊಳಗಿನ ವಿಮಾ ವ್ಯವಹಾರವನ್ನು ವ್ಯವಸ್ಥಿತ ರೂಪದಿಂದ ನಡೆಸಿಕೊಳ್ಳಲು ಸಾಧ್ಯವಾಗುವಂತೆ ಕಾಯಿದೆ ಪಾಸು ಮಾಡಿದ್ದರು. ಆದರೆ ಆ ಕಾಲದಲ್ಲಿ ಭಾರತೀಯ ವಿಮಾ ಕಂಪೆನಿಗಳಿಗಿಂತಲೂ ವಿದೇಶೀ ಕಂಪೆನಿಗಳ ವ್ಯವಹಾರಕ್ಕೆ ಹೆಚ್ಚು ಪ್ರೋತ್ಸಾಹ ದೊರೆಯುತಿತ್ತು. ಮುಂದೆ ೧೯೩೮ರಲ್ಲಿ ಇದೇ ಕಾಯಿದೆಯನ್ನು ಪುನರ್ವಿಮರ್ಶಿಸಿ ಮೊದಲಿಗಿಂತಲೂ ಬಿಗಿಯಾದ ಹೊಸ ಕಾಯಿದೆಯನ್ನು ಮಾಡಿದರು. ಈ ಕಾಯಿದೆಯು ವಿಮಾ ವ್ಯವಹಾರದ ಮೇಲೆ ಸರಕಾರೀ ನಿಯಂತ್ರಣವನ್ನು ಅಧಿಕವಾಗಿ ಹೇರಿತು. ವಿಮಾ ವ್ಯವಹಾರವನ್ನು ತೊಡಗುವುದಕ್ಕೆ ಮುಂಚೆ ಸರಕಾರದ ಕೂಡೆ ಸ್ವಲ್ಪ ನಿಧಿಯನ್ನು ಒಪ್ಪಿಸಬೇಕೆಂದು ಇದು ವಿಧಿಸಿತು. ವಿಮಾಕಂಪೆನಿಗಳ ಜೀವನಿಧಿಯಲ್ಲಿ ೫೫% ಅಂಶವನ್ನು ಸರಕಾರದೊಡನೆಯೇ ನಿಕ್ಷೇಪಿಸತಕ್ಕದೆಂಬ ಒತ್ತಾಯವನ್ನು ಹೇರಿತು. ಮ್ಯಾನೇಜಿಂಗ್ ಏಜೆನ್ಸಿಗಳೆಂಬ ಮಧ್ಯವರ್ತಿ ವ್ಯವಸ್ಥೆಯನ್ನು ಈ ಕಾಯಿದೆ ಕಿತ್ತುಹಾಕಿದ್ದಲ್ಲದೆ, ಭಾರತದ ವಿಮಾ ವ್ಯವಹಾರದ ಮೇಲೆ ಕಣ್ಣಿಡಲು ಸುಪರಿಂಟೆಂಡೆಂಟ ಆಫ್ ಇನ್ಸೂರೆನ್ಸ ಎಂಬ ಅಧಿಕಾರಿಯನ್ನು ಸರಕಾರದ ಕಡೆಯಿಂದ ನೇಮಿಸಿತು. ವಿಮಾ ವ್ಯವಹಾರದ ವೆಚ್ಚವನ್ನು ಕಡಿಮೆಮಾಡಲೂ ಆಗ ಜ್ಯಾರಿಯಲ್ಲಿದ್ದ ಕೆಟ್ಟ ಚಾಳಿಗಳನ್ನು ನಿಲ್ಲಿಸಲೂ ಈ ಕಾಯಿದೆ ಪ್ರಯತ್ನಿಸಿತು.

ಸಾಲ ರೂಪದ ನೆರವು

ಹೀಗೆ ಸರಕಾರದೊಡನೆಯೇ ವಿಮಾ ಕಂಪೆನಿಗಳು ತಮ್ಮ ಜೀವನಿಧಿಯ ಅರ್ಧಾಂಶಕ್ಕೂ ಹೆಚ್ಚು ಹಣವನ್ನು ನಿಕ್ಷೇಪಿಸಬೇಕೆಂದು ಕಾಯಿದೆಮಾಡಿದುದರಿಂದ ಸರಕಾರಕ್ಕೆ ಸುಲಭರೀತಿಯಲ್ಲಿ ಸಾಲವು ದೊರೆತಂತಾಯಿತು. ಸಾಮಾನ್ಯ ಪ್ರಜೆಯ ಉಳಿತಾಯದಿಂದ ಈ ರೀತಿ ಸರಕಾರಕ್ಕೆ ನೆರವು ಸಿಕ್ಕಿತು. ಆದರೆ ಜೀವನಿಧಿಯ ಉಳಿದ ೪೫% ಅಂಶದ ಸಂಬಂಧದಲ್ಲಿ ಬಿಗುವಾದ ನಿರ್ಬಂಧ ಏನೂ ಇಲ್ಲದ್ದರಿಂದ, ದ್ವಿತೀಯ ಮಹಾಯುದ್ಧದ ಬಳಿಕ ಕೆಲವು ಶ್ರೀಮಂತ ವರ್ಗಗಳು ಈ ಹಣದ ಸಂಗತಿಯಲ್ಲಿ ಹಸ್ತಕ್ಷೇಪಮಾಡಲು ಉಪಕ್ರಮಿಸಿದುವು. ಇದರ ಅಪಾಯವನ್ನು ಮನಗಂಡ ಸರಕಾರವು ಸರ್ ಕವಾಸ್ಜೀಜಹಾಂಗೀರರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿ ಇಂಥ ಅನುಚಿತ ವ್ಯವಹಾರಗಳನ್ನು ತಡೆಗಟ್ಟುವ ಉಪಾಯ ಯೋಜಿಸಲು ಕೇಳಿಕೊಂಡಿತು. ಈ ಸಮಿತಿಯ ಶಿಫಾರಸುಗಳನ್ನೆ ಆಧರಿಸಿ ಸರಕಾರವು ೧೯೫೦ರಲ್ಲಿ ಹಳೆ ವಿಮಾಕಾಯಿದೆಗೆ ತಿದ್ದುಪಡಿ ಮಾಡಿತು ಪರಿಣಾಮವಾಗಿ ವಿಮಾ ಕ... ಳಗೆ ಬಿಟ್ಟ ಜೀವನಿಧಿಯ ಅಂಶವನ್ನು ನಿಕ್ಷೇಪಿಸುವ ಬಗ್ಗೆ ಹೊಸ ನಿಯಂತ್ರಣವನ್ನು ೨೭A ಕಲಮಿನಿಂದ ಹೇರಿತು. ಮಾತ್ರವಲ್ಲ ಸುಪರಿಂಟೆಂಡೆಂಟ ಆಫ್ ಇನ್ಸುರೆನ್ಸ್ ಎಂಬ ಅಧಿಕಾರಿಯನ್ನು ಕಂಟ್ರೋಲರ ಆಫ್ ಇನ್ಸುರೆನ್ಸ್ ಎಂಬುದಾಗಿ ಹೆಸರು ಬದಲಿಸಿ, ಅವನ ಅಧಿಕಾರದ ಕಕ್ಷೆಯನ್ನು ಬೆಳೆಸಿದರು. ಕೇಂದ್ರ ಸರಕಾರದ ಹಣಕಾಸಿನ ಖಾತೆಯು ಈಗ ವಿಮಾ ವ್ಯವಹಾರದ ಅಧಿಕಾರವನ್ನು ಹೊಂದಿರುತ್ತದೆ.

ಖಾಸಗಿ ಕಂಪೆನಿಗಳ ಕಾರ್ಯ

ನಮ್ಮ ದೇಶದಲ್ಲಿ ವಿಮಾ ಸೌಲಭ್ಯವನ್ನು ಮುಖ್ಯವಾಗಿ ಮೂರು ರೀತಿಯಿಂದ ಒದಗಿಸಿ ಕೊಡುತ್ತಾರೆ. ಸರಕಾರೀ ನೌಕರರ ಮಟ್ಟಿಗೆ ಮಾತ್ರ ಮಿತವಾಗಿರುವ ಟಪ್ಪಾಲು ಖಾತೆಯ ವಿಮಾ ಸೌಕರ್ಯ, ಕೆಲವು ರಾಜ್ಯ ಸರಕಾರಗಳು ನಡೆಸುವ ವಿಮಾ ವ್ಯವಹಾರ ಮತ್ತು ಪಾಲು ಬಂಡವಾಳ ಸಂಸ್ಥೆಗಳು ನೀಡುವ ವಿಮೆಯ ರಕ್ಷಣೆ. ಕೊನೆಯವುಗಳಲ್ಲಿ ೧೦೦೦ ರುಪಾಯಿಗಿಂತ ಕಡಿಮೆಯಾಗದ ಪಾಲಿಸಿಗಳನ್ನು ನೀಡುವ ವಿಮಾ ಕಂಪೆನಿಗಳದೊಂದು ಬಗೆ; ಮತ್ತು ೧೦೦ ರುಪಾಯಿಯಿಂದ ೧೦೦೦ ರುಪಾಯಿಗಳ ವರೆಗೆ ಮಾತ್ರ ಪಾಲಿಸಿಗಳನ್ನು ನೀಡುವ ಪ್ರೊವಿಡೆಂಟ್ ವಿಮಾಕಂಪೆನಿಗಳು ಇನ್ನೊಂದು ಬಗೆ. ಮೇಲಿನ ಮೂರು ವಿಧಾನಗಳಲ್ಲಿ ವಿಮೆಯನ್ನು ಜನಪ್ರಿಯಗೊಳಿಸುವ ಕೆಲಸ ಮಾಡಿದವುಗಳು ಖಾಸಗಿಯಾದ ವಿಮಾ ಕಂಪೆನಿಗಳೆಂಬುದು ಸ್ವತಃ ಸಿದ್ಧ. ಸರಕಾರದ ಕಡೆಯಿಂದ ನಡೆಸಲ್ಪಡುವ ವಿಮಾ ವ್ಯವಹಾರವು ಏನೇನೂ ಚಟುವಟಿಕೆಯಿಂದ ಕೂಡಿರುವುದಿಲ್ಲ ಏಕೆಂದರೆ, ಜನರ ಬಲವನ್ನು ಆರ್ಜಿಸಿಕೊಳ್ಳಲು ಸರಕಾರ ಪ್ರಯತ್ನಿಸಿಲ್ಲ. ಹಾಗೆಯೇ ಪಾಲಿಸಿದಾರರಿಗೂ ವಿಮಾಕಂಪೆನಿಗಳಿಗೂ ಇರಬೇಕಾದ ಸ್ನೇಹಾದರ ಭಾವನೆಯನ್ನು ಬೆಳೆಸಿಕೊಳ್ಳಲು ಸರಕಾರಕ್ಕೆ ಸಾಧ್ಯವಾಗಿಲ್ಲ. ಶೀಘ್ರವಾಗಿ ಪಾಲಿಸಿದಾರರ ಕಷ್ಟ ಸುಖಗಳಿಗೆ ಗಮನಕೊಡಲು ಆತಂಕವಾಗಿ ಸರಕಾರದ ದೀರ್ಘಸೂತ್ರವಿರುತ್ತದೆಂದು ಎಲ್ಲರೂ ಬಲ್ಲರು.

ಅಭಿವೃದ್ಧಿಗೆ ಆಸ್ಪದ

ನಮ್ಮ ದೇಶದಲ್ಲಿ ವಿಮಾ ವ್ಯವಹಾರವು ಇಷ್ಟರ ಮಟ್ಟಿಗೆ ಜನಪ್ರಿಯವಾಗಿದ್ದರೆ, ಅದರ ಶ್ರೇಯಸ್ಸು ಖಾಸಗಿ ಕಂಪೆನಿಗಳಿಗೆ ಸೇರಬೇಕು. ಕಳೆದ ಮಹಾಯುದ್ಧದವರೆಗೆ ವಿಮಾ ವ್ಯವಹಾರವು ಪೇಟೆ ಪಟ್ಟಣಗಳ ಜನರಲ್ಲಿ ಮಾತ್ರ ಬಳಕೆಯಲ್ಲಿದ್ದರೆ. ಈಗದು ಹಳ್ಳಿಯ ಮೂಲೆಯನ್ನು ಸೇರಿದೆ. ಹೀಗಿದ್ದರೂ ನಮ್ಮ ದೇಶದಲ್ಲಿ ವಿಮಾ ವ್ಯವಹಾರ ಬೆಳೆದದ್ದು ಏನೂ ಸಾಲದೆಂದು ಅಂಕೆ ಸಂಖ್ಯೆಗಳು ಹೇಳುತ್ತವೆ. ನಮ್ಮಲ್ಲಿ ಒಂದೊಂದು ತ

೧೨ ನೇ ಪುಟ ನೋಡಿರಿ.

ZANDU

ಝಂಡೂ ಫಾರ್ಮಸಿಯ ಮನೆಮದ್ದುಗಳನ್ನೇ ಸದಾ ಉಪಯೋಗಿಸಿರಿ.

ಝಂಡೂ ಬ್ರಾಹ್ಮೀ ಹೇರ್ ಆಯಿಲ್:— ಮೆದುಳಿಗೆ ತಂಪು— ಮನಸ್ಸಿಗೆ ಉಲ್ಲಾಸವೀಯುವುದು. 1 ಪೌಂಡಿಗೆ ರೂ. 3-8-0 ಕಾಲು ರಾತ್ತಲಿಗೆ ರೂ 1.

ಝಂಡೂ ಸರಸಪರಿಲ್ಲಾ:— ರಕ್ತವನ್ನು ಶುದ್ಧಗೊಳಿಸಲು ಹೆಸರುವಾಸಿಯಾದುದು ಚರ್ಮರೋಗಗಳನ್ನು ಗುಣಪಡಿಸಬಲ್ಲುದು. 4 ಔನ್ಸ್ ಬಾಟ್ಲಿ 1ರ ರೂ. 1-5-0

ಝಂಡೂ ಬಾಲಾಮೃತ:—ಅನಾರೋಗ್ಯವುಳ್ಳ ಮಕ್ಕಳಿಗೆ ಆದರ್ಶ ಟಾನಿಕ್- 4 ಔನ್ಸ್ ಬಾಟ್ಲಿ 1ರ ರೂ 1 3-0

ಝಂಡೂ ಬಾಮ್:—ತಲೆ ನೋವಿರ ಮೊದಲಾದ ಬೇನೆಗಳಿಗೆ 1 ಸೀಸೆಗೆ ರೂ1.

ಝಂಡೂ ಫಾರ್ಮಸಿಯ ಸಕಲ ಔಷಧಿಯು ಎಲ್ಲಾ ಏಜಂಟರಲ್ಲೂ ದೊರೆಯುವವು

ಸವಿವರ ಕ್ಯಾಟಲಾಗಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

DAMODER & CO.,

Nainiappa Naicken Street, MADRAS. 3



ಕರ್ನಾಟಕದ ಧುರೀಣರ ಹೊಣೆಗಾರಿಕೆ

ಮದ್ರಾಸಿನ ಜಿಲ್ಲಾ ಬೋರ್ಡುಗಳ ಸ್ಥಾನದಲ್ಲಿ ವಿಶೇಷಾಧಿಕಾರಿಯ ನೇಮಕ

ಕನ್ನಡಿಗರ ಪ್ರತಿಭಟನೆ

ಪ್ರಧಾನಿ ನೆಹರೂರವರು ಆಂಧ್ರರಾಜ್ಯ ನಿರ್ಮಾಣದ ಸಂಬಂಧದಲ್ಲಿ ಮಾಡಿದ ಘೋಷಣೆಯಲ್ಲಿ ಬಳ್ಳಾರಿ ಜಿಲ್ಲೆಯ ವಿಚ್ಛೇದನಕ್ಕೆ ಅಸ್ಪದಕೊಟ್ಟದ್ದನ್ನು ಕನ್ನಡಿಗರು ತೀವ್ರವಾಗಿ ಪ್ರತಿಭಟಿಸುತ್ತಿದ್ದಾರೆ. ಬಳ್ಳಾರಿ ಜಿಲ್ಲೆಯು ಸಂಪೂರ್ಣವಾಗಿ ಕನ್ನಡ ಪ್ರದೇಶವೆಂಬುದನ್ನು ಸಿದ್ಧಪಡಿಸಲು ಕೇಳಕರರ ಎವಾರ್ಡಿನ ಸಾಕ್ಷ್ಯವನ್ನು ಕೊಟ್ಟು, ಕನ್ನಡಿಗರು ತಮಗೆ ಅನ್ಯಾಯವಾಗಿದೆ ಎಂದು ಖಂಡ ತುಂಡ ಮಾತುಗಳಲ್ಲಿ ಅಸಮಾಧಾನವನ್ನು ವ್ಯಕ್ತಪಡಿಸಿರುವರು. ಕೇಳಕರರ ಎವಾರ್ಡಿನಂತೆ, ಬಳ್ಳಾರಿಯು ಕರ್ನಾಟಕಕ್ಕೆ ಸೇರಿದ ಜಿಲ್ಲೆಯಾಗಿದೆ. ತಾತ್ಕಾಲಿಕವಾಗಿ ಬಳ್ಳಾರಿಯ ಪೂರ್ವ ತಾಲೂಕುಗಳನ್ನು ಆಂಧ್ರಪ್ರದೇಶ ಕಾಂಗ್ರೆಸ್ ಸಮಿತಿಯ ಅಧಿಕಾರಕ್ಕೆ ಗುರಿಪಡಿಸಲಾಗಿದ್ದರೂ ಈ ವ್ಯವಸ್ಥೆಯನ್ನು ಬೇಗನೇ ಪುನರ್ವಿಮರ್ಶಿಸತಕ್ಕದೆಂದು ಕೇಳಕರರ ತೀರ್ಪು ಹೇಳಿದ್ದಿತು. ಆದರೆ ಕಾಂಗ್ರೆಸದ ಲಕ್ಷ್ಯವು ಇತರ ಮಹತ್ವದ ಸಂಗತಿಗಳತ್ತ ಸರಿದಂತೆಲ್ಲ ಈ ವ್ಯವಸ್ಥೆಯ ನ್ಯಾಯಾನ್ಯಾಯ ವಿಮರ್ಶೆಯನ್ನು ಮಾಡುವ ಕೆಲಸವು ಮೂಲೆಗುಂಪಾಯಿತು. ಪರಿಣಾಮವಾಗಿ ಇಂದು ನೆಹರೂರವರು ತಾವು ಹೇಳುತ್ತಾ ಬಂದ ಭರವಸೆಯ ಮಾತುಗಳನ್ನೆ ಮುರಿದು ಬಳ್ಳಾರಿಯ ವಿಚ್ಛೇದನದ ನಿರ್ಣಯವನ್ನು ಮಾಡಿದ್ದಾರೆಂದು ಕನ್ನಡದ ಜನತೆ ಹೇಳುತ್ತದೆ. ಸರಕಾರವು ತನ್ನ ನಿಲುಮೆಯನ್ನೂ ನಿರ್ಧಾರವನ್ನೂ ಬದಲಿಸಿ ಕನ್ನಡಿಗರಿಗಾದ ಅನ್ಯಾಯದ ಪರಿಮಾರ್ಜನವನ್ನು ಮಾಡಬೇಕೆಂಬುದಾಗಿ ಆಂದೋಲನವೇ ನಡೆದಿದೆ. ಅಖಿಲ ಕರ್ನಾಟಕ ಏಕೀಕರಣ ಸಂಘ ಮುಂತಾದವುಗಳು ಜನತೆಗೆ ಆಹ್ವಾನವನ್ನು ನೀಡಿ, ನೆಹರೂ ಹೇಳಿಕೆಯನ್ನು ಪ್ರತಿಭಟಿಸಲು ಬಿನ್ನವಿಸಿವೆ. ಇದನ್ನು ಜನತೆಯು ಸ್ವೀಕರಿಸಿ ಕಳೆದ ವಾರ ಉತ್ತರ ಕರ್ನಾಟಕ ಹಾಗೂ ಬಳ್ಳಾರಿ ಪ್ರದೇಶಗಳಲ್ಲಿ ಪ್ರಚಂಡ ಹರತಾಳ, ಸಭೆ, ಮೆರವಣಿಗೆ ಮುಂತಾದವುಗಳನ್ನು ಜರಗಿಸಿತು. ಬಳ್ಳಾರಿ ಜಿಲ್ಲೆಯನ್ನು ಒಡೆಯತಕ್ಕದ್ದಲ್ಲವೆಂದೂ ಅದನ್ನು ಇಡಿಯಾಗಿ ಮೈಸೂರಿನೊಡನೆ ಸೇರಿಸಬೇಕೆಂದೂ ಕೇಂದ್ರ ಸರಕಾರವನ್ನು ಪ್ರಾರ್ಥಿಸುವ ಗೊತ್ತುವಳಿಗಳು ಎಲ್ಲೆಡೆಯಲ್ಲೂ ಸ್ವೀಕರಿಸಲ್ಪಟ್ಟವು. ಆಂಧ್ರ ಪ್ರದೇಶಕ್ಕೆ ಸೇರಿಸಲ್ಪಡುವುದೆಂದಿರುವ ಬಳ್ಳಾರಿಯ ಪೂರ್ವದ ಮೂರು ತಾಲೂಕುಗಳಲ್ಲಿಯೂ ಕನ್ನಡಿಗರು ವಿಶೇಷ ಚಳವಳವನ್ನು ನಡೆಸಿದ್ದರು.

ಸಾಧನಾ ಮಾರ್ಗದ ವಿಮರ್ಶೆ

ಕನ್ನಡಿಗರ ಚಳುವಳಿಯು ಅರ್ಥವತ್ತಾಗಿದೆ ಎಂಬುದನ್ನು ಎಲ್ಲ ಭಾಷಾನುಗುಣ ಪ್ರಾಂತಾಭಿಮಾನಿಗಳೂ ಒಪ್ಪತಕ್ಕದ್ದೇ ಆಗಿದೆ. ಆದರೆ ಈ ಚಳುವಳಿಯ ಸಂಬಂಧದಲ್ಲಿ ಕೆಲವು ಕಡೆ ವಿಧ್ವಂಸಕ ಕೃತ್ಯಗಳೂ ನಡೆದುವೆಂದು ವಿಷಾದಿಸಬೇಕಾಗಿದೆ. ರೈಲ್ವೆ ಬಂಡಿಗಳನ್ನು ತಡೆದು ನಿಲ್ಲಿಸುವುದು, ರೈಲ್ವೆ ಕಂಬಿಯನ್ನು ಕೀಳುವುದು ಮುಂತಾದವುಗಳ ಮೂಲಕ ತಮ್ಮ ಅಸಮಾಧಾನವನ್ನು ವ್ಯಕ್ತಗೊಳಿಸುವುದೆಂದರೆ, ಭಾರತದ ಸತ್ಪ್ರಜೆಗಳಿಗೆ ಶೋಭೆಯಲ್ಲ. ಇವುಗಳನ್ನು ಗೂಂಡಾಗಿರಿ ಎಂಬ ಹೀನ ಶಬ್ದವನ್ನುಪಯೋಗಿಸಿ ವರ್ಣಿಸುವುದು ವಾಡಿಕೆ. ಇಂಥ ವಾಮಮಾರ್ಗದಿಂದ ಕರ್ನಾಟಕ ಏಕೀಕರಣದ ಸಾಧನೆಯಾಗಬೇಕೆನ್ನುವವರು, ಒಂದು ಶ್ರೇಷ್ಠವಾದ ತತ್ವವನ್ನು ಬಲಿದಾನ ಮಾಡುತ್ತಿರುವರೆಂದು ತೋರುತ್ತದೆ. ನಮ್ಮ ಧ್ಯೇಯವು ಪವಿತ್ರವಾದುದಿದ್ದಂತೆ, ಅದನ್ನು ಸಾಧಿಸುವ ಮಾರ್ಗ ಕೂಡ ಸಾಧುವಾದುದಾಗಿರಬೇಕೆಂದು ಎಲ್ಲ ಮಹಾಪುರುಷರೂ ಹೇಳುತ್ತಾ ಬಂದಿರುವರು. ಗಾಂಧೀಜಿಯವರು ಕೂಡ ಇದೇ ಅಭಿಪ್ರಾಯವನ್ನು ಪದೇ ಪದೇ ವ್ಯಕ್ತಗೊಳಿಸಿ ಜನರನ್ನು ಎಚ್ಚರಗೊಳಿಸಿದ್ದುಂಟು. ಈ ಕಾರಣದಿಂದಲೇ ಭಾರತದಲ್ಲಿ ಸ್ವಾತಂತ್ರ್ಯ ಹೋರಾಟವನ್ನು ನಡೆಸಿದಾಗ ಅಹಿಂಸಾತ್ಮಕವಾದ ಚಟುವಟಿಕೆಗಳನ್ನೆ ಕೈಗೊಂಡರು. ಶಾಂತರೀತಿಯ ಆಂದೋಲನಕ್ಕೆ ಅವಕಾಶ ನೀಡಿದರೇ ಹೊರತು, ವಿಧ್ವಂಸಕ ಕೃತ್ಯಗಳಿಗೆ ಮಹಾತ್ಮಜೀ ಮನ್ನಣೆ ನೀಡಲಿಲ್ಲ. ಇಂದು ಕರ್ನಾಟಕ ಏಕೀಕರಣ ಬಯಸುವವರಾದರೂ ಅನುಚಿತವಾದ ದಾರಿಯನ್ನು ತುಳಿಯಲು ಯತ್ನಿಸಬಾರದು. ಘಟನಾತ್ಮಕವಾದ ಕ್ರಮಗಳನ್ನು ಕೈಗೊಂಡು, ನ್ಯಾಯವಾದ ಬೇಡಿಕೆಯನ್ನು ಮುಂದಿಡಬೇಕಲ್ಲದೆ ಹೀನ ಕೆಲಸಗಳ ಮೂಲಕ ಧ್ಯೇಯಸಿದ್ಧಿಯ ಆಶೆಯನ್ನು ಕಟ್ಟಿಕೊಳ್ಳುವುದು ಹೇಳಿಸಿದ್ದಲ್ಲ. ಕನ್ನಡಿಗರಿಗೆ ಅನ್ಯಾಯವಾಗಿದೆ ಎಂದು ಕಾಂಗ್ರೆಸಿಗರೂ ಕಾಂಗ್ರೆಸ್ಸೇತರರೂ ಕೂಡಿಯೇ ಮೊರೆಯಿಡುತ್ತಿರುವರು. ಆದರೆ ಕಾಂಗ್ರೆಸಿಗರು ನ್ಯಾಯವಾದ ಹೆಜ್ಜೆಯನ್ನು ಇಡುವುದರ ಮೂಲಕ ಕೇಂದ್ರ ಸರಕಾರದ ಮೇಲೆ ವರ್ಚಸ್ಸನ್ನು ಬೀಳಿಸಲು ಪ್ರಯತ್ನಿಸಿದರೆ ಕಾಂಗ್ರೆಸ್ಸೇತರ ವರ್ಗಗಳು ಸರಕಾರದ ನಿಂದೆ ಮತ್ತು ಅನುಚಿತ ರೀತಿನೀತಿಗಳಿಂದ ಜನರಲ್ಲಿ ಉದ್ರೇಕ ಹುಟ್ಟಿಸಿ, ಸರಕಾರವನ್ನು ಅಂಜಿಸಲು ನೋಡುತ್ತಿರುವರು. ರಾಜ್ಯಶಾಸನ ಸಭೆ ಹಾಗೂ ಕೇಂದ್ರ ಪಾರ್ಲಿಮೆಂಟಿನಲ್ಲಿರುವ ಕರ್ನಾಟಕದ ಸದಸ್ಯರು ರಾಜೀನಾಮೆ ಕೊಟ್ಟು ಕನ್ನಡಿಗರಿಗಾದ ಅನ್ಯಾಯಕ್ಕೆ ಮುಯ್ಯಿ ತೀರಿಸಿಕೊಳ್ಳಬೇಕೆನ್ನುವುದು ಸರಿಯಲ್ಲ. ಸರಕಾರದ ಮನವೊಲಿಸಿಕೊಂಡು ಸಾಧಿಸಬೇಕಾದ ಸಂಗತಿಯನ್ನು ಸರಕಾರದೊಡನೆ ಅಸಹಕಾರ ತೋರಿ, ಕೈಗೂಡಿಸಬಲ್ಲೆವೆಂದು ಹೇಳುವುದು ಸ್ವತಂತ್ರ ಭಾರತದ ನಾಗರಿಕರಿಗೆ ಭೂಷಣವೆಂದು ಹೇಳಲಾರೆವು.

ಧುರೀಣರ ಹೊಣೆಗಾರಿಕೆ

ಕರ್ನಾಟಕ ಪ್ರದೇಶ ಕಾಂಗ್ರೆಸ ಸಮಿತಿಯು ಕರ್ತವ್ಯಭ್ರಷ್ಟವಾಗಿದೆಯೆಂದು ಆರೋಪಿಸುವುದು ಸರಿಯಲ್ಲವಾದರೂ ಅದು ಕರ್ತವ್ಯ ನಿರ್ವಹಣೆಯಲ್ಲಿ ಕೆಲಮಟ್ಟಿಗೆ ತಪ್ಪಿದೆ ಎಂದು ಹೇಳುವುದರಲ್ಲಿ ದಾಕ್ಷಿಣ್ಯಕ್ಕೆಡೆಯಿಲ್ಲ. ಸರಕಾರದ ಮುಂದೆ ಕನ್ನಡಿಗರ ನಿಲುಮೆಯನ್ನು ಇದ್ದುದಿದ್ದಂತೆ ನಿಷ್ಠುರವಾಗಿ ಇಡಲು ಕರ್ನಾಟಕ ಪ್ರದೇಶ ಸಮಿತಿಯು ಸಾಕಷ್ಟು ಪ್ರಯತ್ನವಮಾಡಿದೆಯೆಂದು ತೋರುವುದಿಲ್ಲ. ಮೇಲಾಗಿ ಈಚಿನ ಘಟನಾವಳಿಗಳನ್ನು ಅವಲೋಕಿಸಿದಲ್ಲಿ ಕಾಂಗ್ರೆಸ ವರಿಷ್ಠರ ಮೇಲೆ ಕರ್ನಾಟಕದ ಕಾಂಗ್ರೆಸ್ ಧುರೀಣರ ವರ್ಚಸ್ಸು ಏನೇನೂ ನಡೆಯುವುದಿಲ್ಲೆಂದು ಹೇಳಬೇಕಾಗುತ್ತದೆ. ಹೊಸ ದಿಲ್ಲಿಯಿಂದ

ಬಂದ ವಾರ್ತೆಯೊಂದರ ಪ್ರಕಾರ ಕ
ಭವಿಷ್ಯ ನಿಶ್ಚಯಿಸದೆ ಬಿಟ್ಟಿರುವ ಬಳ್ಳಾ
ತಾಲೂಕನ್ನು ಸಹ ಇಬ್ಭಾಗಮಾಡಿ,
ದು ತುಂಡನ್ನು ಆಂಧ್ರರಿಗೆ ಕೊಡುವು
ಸರಕಾರದ ನಿಲುಮೆಯೆಂದು ತಿಳಿಯು
ದೆ. ಮದ್ರಾಸುನಗರದ ಮೇಲೆ ಆಂಧ
ಅಧಿಕಾರದ ಪ್ರಶ್ನೆಯನ್ನು ಒತ್ತಟ್ಟಿಗೆ
ಧಿಸಿದ್ದರ ಪರಿಣಾಮವಾಗಿ ಆಂಧ್ರರ
ಸಂತೈಸಲು ಈ ಮಾರ್ಗದ ಮೊರೆ ಹೊ
ಲಾಗುವುದೆಂತೆ. ಕರ್ನಾಟಕ
ಧುರೀಣರು ಕಾಂಗ್ರೆಸ ವರಿಷ್ಠ
ಸಂಪೂರ್ಣ ವಿಶ್ವಾಸವನ್ನು ಇಟ್ಟು, ತ
ಗೆ ಕುಳಿತುದರಿಂದ ಈ ರೀತಿ ಕನ್ನಡಿ
ಮಾತಿಗೆ ಬೆಲೆ ಬರುವುದು ಎಂದು ಕ
ಗ್ರೆಸ್ಸೇತರರು ದೂರುವಂತಾಗಿದೆ. ಆಂ
ರು ತಮ್ಮದೆನ್ನುವದೆಲ್ಲವನ್ನೂ ಕಸಿ
ಕೊಂಡಾದ ಮೇಲೆ, ಉಳಿದುದನ್ನು ಕ
ಡ ಪ್ರದೇಶವೆಂದು ಮೌನವಾಗಿ ಸ್ವೀ
ಸುವ ಪ್ರವೃತ್ತಿ ಕನ್ನಡದ ಕಾಂಗ್ರೆಸ
ರೀಣರಲ್ಲಿದೆ ಎಂಬ ಅಸಂತೋಷ
ರಲ್ಲಿ ಮೂಡಿದೆ. ಇದನ್ನು ಮನಗಂ
ಕನ್ನಡದ ಕಾಂಗ್ರೆಸ ಧುರೀಣರು ತ
ಕ್ರಮಗಳನ್ನು ಕೈಗೊಳ್ಳಬೇಕೆಂದು ಒ
ಯಿಸುವುದು ತಪ್ಪಾಗಲಾರದು. ಕರ
ಟಕ ಪ್ರಾಂತರಚನೆ ಇಂದು ನಾಳೆ ಆ
ಕ್ಕಿಲ್ಲವಾದರೂ ಮುಂದೆ ಒಂದಾನೊ
ದು ಸಮಯ ರಾಜ್ಯ ನಿರ್ಮಾಣವಾದ
ಕನ್ನಡಿಗರ ಹಕ್ಕಿನ ನೆಲ ಅವರಿಗೆ ದೊ
ಯುವಂತಾಗಬೇಕು.

ಆಂಧ್ರರ ಮನಸ್ಸು

ಮೈಸೂರು ರಾಜ್ಯವು ಬಳ್ಳಾರಿ ಜಿ
ಯ ಕೆಲವಂಶಗಳನ್ನು ತನ್ನಲ್ಲಿ ಸೇರ
ಸುವ ಕೇಂದ್ರದ ವಿಚಾರವನ್ನು ಸ್ವೀ
ಸುತ್ತಿದೆ. ಬಳ್ಳಾರಿಯು ಕೊರತೆ ಪ್ರದೇ
ವಾದುದರಿಂದ ಮೈಸೂರಿನೊಡನೆ ಅ
ಸೇರಿಕೊಂಡರೆ, ಮೈಸೂರಿನ ಕನ್ನಡಿ
ಗೊಂದು ಹೊರೆಯಾದೀತೆಂದು ಕೆಲವು
ರುಗಳು ಅಂಜಿಕೊಂಡಂತಿದೆ. ಮ
ಸು ರಾಜ್ಯ ಸರಕಾರವು ಆಂಧ್ರ ರಾಜ್ಯ
ಸಂಬಂಧಿಸಿದ ಕಾಗದ ಪತ್ರಗಳನ್ನು
ತ್ಯೇಕಿಸಿಡುವದೇ ಮುಂತಾದ ಕೆಲಸ
ಶೀಘ್ರಾತಿಶೀಘ್ರ ನೆರವೇರುವಂತೆ ವಿಶೇ
ಷಿಬಂಧಿಯನ್ನೇ ನೇಮಿಸಿರುತ್ತದೆ. ಮು
ಮಂತ್ರಿ ರಾಜಗೋಪಾಲಾಚಾರ್ಯ
ರು ಪ್ರಧಾನಿ ನೆಹರೂರವರ ಹೇಳಿ
ಯನ್ನೂ ನ್ಯಾಯಮೂರ್ತಿ ವಾಂಛ
ವರದಿಯನ್ನೂ ಶಾಸನ ಸಭೆಯ ಮ
ಟ್ಟು ನೂತನ ರಾಜ್ಯ ನಿರ್ಮಾಣ ಕಾ
ವು ನೆರವೇರಲು ಅವಶ್ಯವಿದ್ದ ಎಲ್ಲ ಹ
ಗಳನ್ನೂ ಸರಕಾರ ಕೈಗೊಂಡಿರು
ಎಂದರು. ಆಂಧ್ರ ಧುರೀಣರು ನೂ
ರಾಜ್ಯವು ಅಸ್ತಿತ್ವಕ್ಕೆ ಬಂದ ಕೂಡ
ಹೊಸ ಹೈಕೋರ್ಟನ್ನೂ ಆಂಧ್ರ ಪ್ರ
ಶದಲ್ಲಿ ಸ್ಥಾಪಿಸತಕ್ಕದ್ದೆಂದು ನಿರ್ಣಯ
ಕೇಂದ್ರಕ್ಕೆ ಮನವಿ ಸಲ್ಲಿಸಿರುವರು.
ದ್ರವು ಈ ಸೂಚನೆಯನ್ನು ಒಪ್ಪೀತೆಂ
ಆಶೆಯಿದೆ. ರಾಜಧಾನಿಯಾಗಿ ಯಾವ
ಗರವನ್ನು ಆರಿಸಬೇಕೆಂಬ ಬಗ್ಗೆ ಇನ
ನಿರ್ಧಾರವಾಗಿಲ್ಲ. ಆದರೂ ಒಮ್ಮ
ನಿರ್ಣಯಕ್ಕೆ ಬೇಗನೇ ಆಂಧ್ರರು ಒ

PLACE YOUR LIFE ASSURANCE WITH A COMPANY OF YOUR OWN — — —

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policyholders and Representatives At whatever stage We welcome your association with the POPULAR.

The Popular Insurance Co. Ltd.
"Popular Buildings", MANGALORE—I.

ದಿ ವಿಜಯ ಬ್ಯಾಂಕ್, ಲಿಮಿಟೆಡ್
ಸ್ಥಾಪನೆ: 1931.] ಪ್ರಧಾನ ಕಚೇರಿ: ಮಂಗಳೂರು.

ಮೂಲಧನ	ರೂ. 20,00,000
ತೆತ್ತ ಪಾಲು ಭಂಡವಾಳ	„ 8,77,860
ಕ್ಷೇಮ ನಿಧಿ	„ 1,65,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವ್ಯಾದಿ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವುವು.
ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4½% ಬಡ್ಡಿ ದರ ಗಳಿಸಿಕೊಳ್ಳಬಹುದು.
ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬ್ಯಾಂಕಿನ ಶಾಖೆಗಳಿರುತ್ತವೆ.

ಬಿ. ಮಂಜಯ್ಯ ಹೆಗ್ಡೆ,
ಬ್ಯಾಂಕಿನ ಆಡಳಿತೆ ಕಮಿಟಿ ಅಧ್ಯಕ್ಷರು,
(ಮತ್ತು ದ. ಕ. ಜಿಲ್ಲಾ ಬೋರ್ಡಿನ ಅಧ್ಯಕ್ಷರು.)

THE VIJAYA BANK, Limited.

ಲುಶಾಯಿ ಜನರ ಮಹಾ ಸಾಹಸದ ಕಾರ್ಯ

ಆಸ್ತಿಕರ ಮಸೂದೆಯ ಕುರಿತು ಪರಿಶೀಲಕ ಸಮಿತಿಯ ವರದಿ

ರೆಂದು ಆಂಧ್ರ ಪ್ರದೇಶ ಕಾಂಗ್ರೆಸ ಸಮಿಯ ಅಧ್ಯಕ್ಷ ಸಂಜೀವ ರೆಡ್ಡಿಯವರ ಹೇಳಿಕೆಯಿಂದ ತಿಳಿಯುತ್ತದೆ

ಜಿಲ್ಲಾ ಬೋರ್ಡುಗಳ ಭವಿಷ್ಯ

ಆಂಧ್ರರಾಜ್ಯವು ಅಕ್ಟೋಬರದಲ್ಲಿ ಉದಯವಾಗುವುದರಿಂದ ಮದ್ರಾಸು ರಾಜ್ಯದಲ್ಲಿ ಜಿಲ್ಲಾ ಬೋರ್ಡುಗಳ ಚುನಾವಣೆಯನ್ನು ಇನ್ನೂ ಮುಂದಕ್ಕೆ ಹಾಕಲು ಸರಕಾರ ನಿಶ್ಚಯಿಸಿದೆ. ಈಗಿರುವ ಜಿಲ್ಲಾ ಬೋರ್ಡುಗಳ ಅಧಿಕಾರಾವಧಿಯನ್ನು ಇನೇ ಜೂನು ತಿಂಗಳ ವರೆಗೆ ವಿಸ್ತರಿಸಲು ಒಂದೊಮ್ಮೆ ನಿರ್ಧರಿಸಿದ್ದರು. ಈ ಅವಧಿಯನ್ನು ೧೯ ವರ್ಷಾಂತ್ಯದ ವರೆಗೆ ಬೆಳೆಸಬೇಕೆಂಬ ಬಗ್ಗೆ ಭಿನ್ನಾಭಿಪ್ರಾಯವುಂಟಾಗಿದೆ. ಶಾಸನ ಸಭೆಯಲ್ಲಿ ಕಾಂಗ್ರೆಸ್ ಸದಸ್ಯರೊಬ್ಬರು ಮಂಡಿಸಿದ ಒಂದು ಗೊತ್ತುವಳಿಯಲ್ಲಿ ಈಗಿನ ಜಿಲ್ಲಾ ಬೋರ್ಡುಗಳ ಅಧಿಕಾರಿಗಳೇ ಈ ವರ್ಷಾಂತ್ಯದವರೆಗೆ ಆ ಸ್ಥಾನದಲ್ಲಿದ್ದು ಕೆಲಸ ನಿರ್ವಹಿಬೇಕೆಂದು ಹೇಳಲಾಗಿತ್ತು. ಆದರೆ ಸರಕಾರವು ತನ್ನದೇ ಹೊಸ ನಿರ್ಣಯವೊಂದನ್ನು ಈ ಸಂಬಂಧದಲ್ಲಿ ಮಾಡಿದ್ದರಿಂದಾಗಿ ಕಾಂಗ್ರೆಸ್ ಸದಸ್ಯರಿಗೆ ಈ ಗೊತ್ತುವಳಿಯ ಸಂಬಂಧದಲ್ಲಿ ಮತದಾನದ ಸ್ವಾತಂತ್ರ್ಯವನ್ನಿತ್ತ ತಾನು ತಟಸ್ಥ ಉಳಿಯಿತು. ವಿರೋಧೀ ಗುಂಪಿನವರು ಚುನಾವಣೆಗಳನ್ನು ಮುಂದುವರಿಸಿದ್ದೇ ಅನ್ಯಾಯವೆಂದು ಹೇಳಿದರು. ರಾಜಗೋಪಾಲಾಚಾರಿಯವರು ತಕ್ಕ ಸಮಾಧಾನ ಹೇಳುತ್ತ, ಆಂಧ್ರ ರಾಜ್ಯದ ಉದಯದ ಸಮಯಕ್ಕೆ ಸರಿಯಾಗಿ ಸರಕಾರವು ಅಲ್ಲಿ ಚುನಾವಣೆಗಳ ಮೂಲಕ ಗೊಂದಲಮಯ ವಾತಾವರಣವನ್ನು ನಿರ್ಮಿಸಿದರೆ ಸರಕಾರದ ಮೇಲೆ ಆಂಧ್ರರು ಗಂಭೀರ ಆಪವಾದವನ್ನು ಹೊರಿಸುವುದು ನಿಶ್ಚಯ ಹೊಸ ರಾಜ್ಯದ ನಿರ್ಮಾಣ ಕಾರ್ಯವು ಶಾಂತರೀತಿಯಿಂದ ನೆರವೇರಬೇಕೆಂಬುದೇ ಸರಕಾರದ ಬಯಕೆ ಎಂದು ವಿಶದೀಕರಿಸಿದರು. ಮತದಾನದ ಸಮಯದಲ್ಲಿ ಕಾಂಗ್ರೆಸ್ ಸದಸ್ಯರ ಗೊತ್ತುವಳಿಯು ಬಿದ್ದು ಹೋಯಿತು. ಆದ ದರಿಂದ ಸರಕಾರದ ಕಡೆಯಿಂದ ಹೊಸ ಗೊತ್ತುವಳಿಯು ಮಂಡಿಸಲ್ಪಟ್ಟಿತು. ಇದರಂತೆ ಈಗಿನ ಜಿಲ್ಲಾ ಬೋರ್ಡುಗಳನ್ನು ವಿಸರ್ಜಿಸಿ ಅವುಗಳ ಸ್ಥಾನದಲ್ಲಿ ಸರಕಾರವೇ ಆಡಳಿತಾಧಿಕಾರಿಯನ್ನು ನೇಮಿಸುವುದು ಮುಂದಿನ ಜಿಲ್ಲಾ ಬೋರ್ಡು ಚುನಾವಣೆಗಳ ವರೆಗೆ ಈ ಏರ್ಪಾಡು ಇರುತ್ತದೆ. ಈ ವಿಶೇಷಾಧಿಕಾರಿಗಳ ನೇಮಕದಿಂದ ಸರಕಾರವು ತನ್ನ ಪಕ್ಷವನ್ನು ಸಂವರ್ಧಿಸಲು ಉಪಾಯ ಹೂಡಿದೆ ಎಂದು ವಿರೋಧೀ ಗುಂಪು ಆರೋಪಿಸಿದ್ದಕ್ಕೆ, ಸರಕಾರದ ಪ್ರಾಮಾಣಿಕತೆಯ ಮೇಲೆ ಅವಿಶ್ವಾಸ ತೋರಿಸ ಕೂಡದೆಂದು ರಾಜಾಜಿ ವಿನಂತಿಸಿರುವರು

ಆಸ್ತಿಯ ಮೇಲ ಕರ

ಪಾರ್ಲಿಮೆಂಟಿನ ಕಳೆದ ಅಧಿವೇಶನದಲ್ಲಿ ಪರಿಶೀಲಕ ಮಂಡಳಿಗೆ ಒಪ್ಪಿಸಿದ್ದ ಆಸ್ತಿಕರ ಮಸೂದೆಯ ಸಂಬಂಧವಲ್ಲಿ ಮಂಡಳಿಯು ಒಪ್ಪಿಸಿದವರದಿಯನ್ನು ಶ್ರೀ ಚಿಂತಾಮಣಿ ದೇಶಮುಖರು ಸದಸ್ಯರಿಗೆ ಸಾದರ ಪಡಿಸಿದರು. ಪರಿಶೀಲಕ ಸಮಿತಿಯು ಮಸೂದೆಯಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಿದೆ. ಆಸ್ತಿಕರದಿಂದ ಮುಕ್ತವಾಗುವ ಮಿತಿಯನ್ನು ಒಬ್ಬವ್ಯಕ್ತಿಯ ಆಸ್ತಿಯ ಸಂಬಂಧದಲ್ಲಿ ೭೫೦೦೦ರುಪಾಯಿಯೆಂದೂ ಅವಿಭಕ್ತ ಕುಟುಂಬದ ಆಸ್ತಿಯಲ್ಲಿ ಹಕ್ಕಿರುವಾತನ ಸಂಗತಿಯಲ್ಲಿ ೫೦೦೦೦ ರುಪಾಯಿಯೆಂದೂ ಗೊತ್ತುಪಡಿಸಿರುವರು ಯೋಗ್ಯವಿದ್ದ ಪ್ರಕರಣಗಳಲ್ಲಿ ಕೇಂದ್ರ ಸರಕಾರವು ಈ ಮಿತಿಯನ್ನು ಇನ್ನೂ ಹೆಚ್ಚಿಸಬಹುದೆಂದು ಪರಿಶೀಲಕ ಸಮಿತಿಯು ಹೇಳಿರುತ್ತದೆ. ಮಾತ್ರವಲ್ಲ ವಿಶಿಷ್ಟ ಪ್ರಕಾರದ ಕೆಲವು ಆಸ್ತಿಗಳನ್ನು ಕರಮುಕ್ತವೆಂದು ಪರಿಶೀಲಕ ಸಮಿತಿಯು ಶಿಫಾರಸು ಮಾಡಿದೆ. ಭಾರತವು ಮುಖ್ಯವಾಗಿ ಕೃಷಿ ಪ್ರಧಾನ ರಾಷ್ಟ್ರವಾಗಿರುವದರಿಂದ ಇಲ್ಲಿ ಕೃಷಿ ಭೂಮಿಯ ಮೇಲೆ ಆಸ್ತಿಕರವನ್ನು ಹೇರಲು ಅವಕಾಶವಿಲ್ಲದಿದ್ದರೆ ಈ ಮಸೂದೆ ಯಶಸ್ವಿಯಾಗಲಿಕ್ಕಿಲ್ಲ. ಆದರೆ ಕೃಷಿಭೂಮಿಯು ರಾಜ್ಯ ಸರಕಾರಕ್ಕೆ ಸಂಬಂಧಿಸಿದ ಪ್ರಶ್ನೆಯಾಗಿದೆ. ಅದರ ಮೇಲೆ ಕರಹೇರುವ ಅಧಿಕಾರ ಕೇಂದ್ರ ಸರಕಾರಕ್ಕೆ ಇಲ್ಲ ಆದಕಾರಣ, ಆಸ್ತಿಕರದ ಮಟ್ಟಿಗೆ ರಾಜ್ಯಸರಕಾರಗಳು ತಮ್ಮ ಅಧಿಕಾರವನ್ನು ಕೇಂದ್ರಕ್ಕೆ ಬಿಟ್ಟುಕೊಡುವ ನಿರ್ಣಯ ಮಾಡಬೇಕಾಗಿದೆ ಕೆಲವು ರಾಜ್ಯಗಳು ಈಗಾಗಲೇ ಈ ನಿರ್ಣಯವನ್ನು ಸ್ವೀಕರಿಸಿವೆ. ಇಂಥ ಆಸ್ತಿಯ ಸಂಬಂಧದಲ್ಲಿ ಕೂಡ ಪಾಲುದಾರರು ತೆರಿಗೆ ಕೊಡಬೇಕಾಗುತ್ತದೆ.

ಕೆಲವು ಕೊರತೆಗಳು

ಆಸ್ತಿಯ ಮೇಲೆ ಕರವನ್ನು ಹೇರುವ ಈ ಮಸೂದೆಯು ಪಾಸಾದರೆ, ಸರಕಾರಕ್ಕೆ ೫ ಕೋಟಿ ರೂಪಾಯಿಗಳ ವರಮಾನ ದೊರೆಯಬಹುದೆಂದು ಅಂದಾಜು ಆದರೆ ಈಗ ಈ ಸಂಬಂಧದಲ್ಲಿ ವ್ಯಕ್ತವಾಗಿರುವ ಪ್ರತಿಕ್ರಿಯೆಗಳನ್ನು ನೋಡಿದರೆ, ಪರಿಶೀಲಕ ಸಮಿತಿಯು ಗೊತ್ತುಪಡಿಸಿದ ಕರಮುಕ್ತ ಆಸ್ತಿಯ ಮಿತಿ, ಮತ್ತು ವಿನಾಯಿತಿಗಳು ವಿತರ್ಕ್ಯ ಸಾಲದೆಂದು ತೋರುತ್ತದೆ. ಕರಮುಕ್ತ ಆಸ್ತಿಯ ಮಿತಿಯನ್ನು ಕನಿಷ್ಟಪಕ್ಷ ಒಂದು ಲಕ್ಷ ರೂಪಾಯಿ ವರೆಗೂ ಏರಿಸಬೇಕೆಂದು ಒಂದು ಅಭಿಪ್ರಾಯ. ಹಾಗೆಯೇ ಮೃತಪಟ್ಟವನ ಜೀವವಿಮೆಯ ಸಂಬಂಧದಲ್ಲಿ ಬರತಕ್ಕ ಹಣ ೫೦೦೦ ರೂಪಾಯಿಗಳ ವರೆಗೆ ಮಾತ್ರ ತೆರಿಗೆ ವಿನಾಯಿತಿ ತೋರಿಸಿದ್ದೂ ಬಹಳ ಕಡಿಮೆಯಾಯಿತೆನ್ನುತ್ತಾರೆ. ಇನ್ನೂ ಇಂಥ ಕೆಲವು ತ್ರುಟಿಗಳು ಕಂಡು ಬರುತ್ತವೆ ಪಾರ್ಲಿಮೆಂಟು ಈ ಮಸೂದೆಯನ್ನು ಪರಿಶೀಲಿಸುವಾಗ ತುಂಬಾ ಜಾಗರೂಕತೆಯಿಂದ ವರ್ತಿಸಿ ಆಸ್ತಿಕರದ ಪರಿಣಾಮವಾಗಿ ನಾಗರಿಕರು ಅನಾವಶ್ಯಕವಾಗಿ ತಾಪತ್ರಯ ಪಡದಂತೆ ನೋಡಿಕೊಳ್ಳಬೇಕು ಹೊಸ ತೆರಿಗೆಗಳನ್ನು ಕೊಡುವ ಸಾಮರ್ಥ್ಯ ನಮ್ಮಲ್ಲಿ ಉಳಿದಿದೆಯೆ ಎಂಬುದು ಇನ್ನೂ ಅನಿಶ್ಚಿತವಾಗಿದೆ ಕರ ವಿಚಾರಣಾ ಆಯೋಗದ ನೇಮಕವನ್ನು ಈಗ ತಾನೆ ಸರಕಾರ ಮಾಡಿರುವುದರಿಂದ ಅದರ ವರದಿಯು ಬರುವವರೆಗೆ ಈ ಮಸೂದೆಯನ್ನು ತಡೆ ಹಿಡಿಯಬೇಕೆಂದು ಕೆಲವು ವರ್ಗಗಳ ಬೇಡಿಕೆ ಇದೆ. ಆದರೆ ಈ ವರದಿ ಕೈಸೇರಲು ಇನ್ನೂ ಎರಡು — ಮೂರು ವರ್ಷಗಳು ಬೇಕಾದಾವು. ಅಲ್ಲಿಯ ವರೆಗೆ ಸರಕಾರವು ವರ್ಷ ವರ್ಷಕ್ಕೂ ತನಗೆ ಬರುವ ಆದಾಯವನ್ನು ಕಳೆದುಕೊಳ್ಳಲು ಸಿದ್ಧವಾಗಿಲ್ಲ. ಇಷ್ಟರ ವರೆಗೆ ಕಾದು ನಿಂತದ್ದೇ ಹೆಚ್ಚೆಂದು ಸರಕಾರದ ಎಣಿಕೆ ಇದ್ದಂತಿದೆ. ಮೇಲಾಗಿ ಪಂಚವಾರ್ಷಿಕ ಯೋಜನೆಗೆ ಹಣದ ಕೊರತೆ ಬೀಳುತ್ತಿರುವುದರಿಂದ ಆದಾಯ ಬರುವ ಯಾವುದೇ ಉಪಾಯವನ್ನು ಬಿಟ್ಟುಕೊಡಲು ಸರಕಾರ ಇಚ್ಛಿಸುವುದಿಲ್ಲ.

ಹೊಗೆಸೊಪ್ಪಿನ ಮೇಲೆ ತೆರಿಗೆ

ಆದಾಯವನ್ನು ಹೆಚ್ಚಿಸಿಕೊಳ್ಳುವ ಬಗೆ ಹೇಗೆಂಬುದನ್ನು ನಿರ್ಣಯಿಸುವುದೇ ಸರಕಾರಗಳ ಸಮಸ್ಯೆಯಾದಂತಿವೆ ಮದ್ರಾಸು ಸರಕಾರವು ಹೊಗೆಸೊಪ್ಪಿನ ಮೇಲೆ ತೆರಿಗೆ ಹೇರಲು ನಿರ್ಣಯಿಸಿದೆ. ಬೀಡಿ, ನಶ್ಯ ಮಾಗೂ ನೇ ಜೊತೆಗೆ ತಿನ್ನುವ ಹೊಗೆಸೊಪ್ಪನ್ನು ಈ ತೆರಿಗೆಯಿಂದ ವಿನಾಯಿತಿಗೊಳಪಡಿಸಿರುವರು ಪ್ರತಿಯೊಂದಕ್ಕೆ ನೂರು ಪೈಗಿಂತ ಹೆಚ್ಚು ಬೆಲೆ ಇರುವ ಸಿಗರೇಟು ಮತ್ತು ಎಲ್ಲಾ ಬಗೆಯ ಚುಟ್ಟಗಳು ಈ ತೆರಿಗೆಗೆ ಒಳಪಡುವವು. ಸಂಗತಿ ಒಟ್ಟು ವ್ಯಾಪಾರದ ಮೇಲೆ ಶೇಕಡಾ ಮೂವತ್ತರಷ್ಟು ತೆರಿಗೆ ಬೀಳುತ್ತದೆ. ಸರಕಾರದ ಆದಾಯವನ್ನು ಹೆಚ್ಚಿಸುವುದು, ಅಥವಾ ಮಿತವ್ಯಯವನ್ನು ಸಾಧಿಸುವುದೇ ಮುಖ್ಯೋದ್ದೇಶವಾಗಿಲ್ಲದಿದ್ದರೂ ಪಾರ್ಲಿಮೆಂಟಿನಲ್ಲಿ ರಾಜಪ್ರಮುಖರ ಹುದ್ದೆಗಳನ್ನು ರದ್ದುಪಡಿಸಬೇಕೆಂದೂ ಹಿಂದಿನ ರಾಜ ಮಹಾರಾಜರುಗಳಿಗೆ ಕೊಡುವ ಸಂಭಾವನೆಯನ್ನು ನಿಲ್ಲಿಸಬೇಕೆಂದೂ ಕಾಂಗ್ರೆಸಾದಿಯಾಗಿ ಎಲ್ಲ ಪಕ್ಷದ ಸದಸ್ಯರೂ ಅಭಿಪ್ರಾಯಪಟ್ಟರು. ಆದರೆ ಪ್ರಕೃತದ ಸರಕಾರವು ತಾನು ಈ ಹಿಂದೆ ಕೊಟ್ಟ ವಚನಗಳನ್ನು ಮುರಿಯಲು ಸಾಧ್ಯವಿಲ್ಲವೆಂದು ಗೃಹಮಂತ್ರಿ ಕಟಜೂರವರು ಉತ್ತರಿಸಿದರು. ಕಾಶ್ಮೀರದಲ್ಲಿ ಅರಸೊತ್ತಿಗೆಯನ್ನು ನಿರ್ಮೂಲಿಸಿದ್ದು ನ್ಯಾಯವಾದದ್ದು, ಹೈದರಾಬಾದಿನ ರಾಜಪ್ರಮುಖರನ್ನು ಏಕೆ ಅಧಿಕಾರಚ್ಯುತರನ್ನಾಗಿಸಬಾರದೆಂದು ಸ್ವಾಮಿ ರಮಾನಂದ ತೀರ್ಥರು ಪ್ರಶ್ನಿಸಿದರು. ಹೈದರಾಬಾದು ರಾಜ್ಯವನ್ನು ಭಾಷಾನುಗುಣವಾಗಿ ವಿಭಜಿಸಬೇಕೆಂಬ ಬೇಡಿಕೆಗೆ ಈಗ ಮರಳಿ ಪ್ರಾಶಸ್ತ್ಯ ದೊರೆತಿದೆ. ನೂತನ ಆಂಧ್ರ ರಾಜಧಾನಿಯನ್ನು ಹೈದರಾಬಾದು ನಗರದಲ್ಲಿ ನೆಲೆಗೊಳಿಸಬೇಕೆಂದು ಸೂಚಿಸುವವರೆಗೆ ಈ ಪ್ರಶ್ನೆ ಮುಂದ ಹೋಗಿದೆ

ನೆಹರೂ ಸಂಚಾರ

ಪ್ರಧಾನಿ ನೆಹರೂರವರು ಭಾರತ ಬರ್ಮಾ ದೇಶಗಳ ಗಡಿಪ್ರದೇಶದ ಗುಡ್ಡಗಾಡು ಜನರನ್ನು ಕಂಡು ಅವರ ಸಮಸ್ಯೆಗಳನ್ನು ಬರ್ಮಾ ಪ್ರಧಾನಿ ಯುನೂರ ಜೊತೆಗೆ ಅಭ್ಯಸಿಸಿದರು. ಭಾರತ ಬರ್ಮಾಗಳು ಮಿತ್ರ ರಾಷ್ಟ್ರವಾಗಿರುವುದರಿಂದ ಗಡಿಯ ಸಂಬಂಧದಲ್ಲಿ ಘರ್ಷಣೆಗಳಿಗೆ ಅವಕಾಶ ಉಂಟಾಗಿಲ್ಲ ನೆಹರೂರವರು ಈ ಗಡಿಯ ಸಂಬಂಧದಲ್ಲಿ ಮಾತನಾಡುತ್ತ ರಾಜಕೀಯವಾಗಿ ಎರಡೂ ದೇಶಗಳ ನಡುವೆ ಸೀಮಾರೇಖೆಯನ್ನು ಗೊತ್ತುಪಡಿಸಿದ್ದರೂ, ಜನರ ಹೃದಯಗಳು ಒಂದೆ ಗಾಢವಾಕ್ಕೆ ಇದು ಆತಂಕವಾಗಲಾರದೆಂದು ನುಡಿದರು. ನೆಹರೂರವರ ಮಾತನ್ನು ಬರ್ಮಾ ಪ್ರಧಾನರೂ ಅನುಮೋದಿಸಿದರು. ಗುಡ್ಡಗಾಡು ಜನರ ಸ್ಥಿತಿಗತಿಯನ್ನು ಕಣ್ಣಾರೆಕಂಡು ಅವರ ವಿಶಿಷ್ಟ ಸಮಸ್ಯೆಗಳನ್ನು ಬಿಡಿಸಲು ಉಪಾಯ ಯೋಚಿಸುವುದೇ ತಮ್ಮ ಭೇಟಿಯ ಉದ್ದೇಶವೆಂದು ಅವರು ವಿವರಿಸಿದರು. ಗುಡ್ಡಗಾಡು ಜನರು ನೆಹರೂ ಹಾಗು ಯುನೂರನ್ನು ಸಂಭ್ರಮದಿಂದ ಬರಮಾಡಿಕೊಂಡರು ಕೆಲವು ಗುಂಪಿನವರು ಪರಸ್ಪರ ಎದುರಿಸಿ ಪ್ರಾಣಹಾನಿಯುಂಟುಮಾಡುವ ವಾರ್ತೆಗಳು ಈ ಪ್ರದೇಶದಿಂದ ಬರುತ್ತಿದ್ದುವು. ಈ ಗುಂಪಿನ ಧುರೀಣರು ಪ್ರಧಾನ ಮಂತ್ರಿಗಳ ಮುಂದೆ ಇನ್ನು ಇಂಥ ಕೃತ್ಯಗಳನ್ನೆಸಗುವುದಿಲ್ಲ ಎಂದು ಪ್ರತಿಜ್ಞೆಗೈದರು

(೩ನೇ ಪುಟ ನೋಡಿರಿ)

ಚಂದಾಹಣ ಬಾಕಿ ಇರುವವರು ನಾವು ಕಳುಹಿಸುವ ವಿ. ಪಿ. ಪಿ.ಯನ್ನು ದಯಮಾಡಿ ಸಕಾಲದಲ್ಲಿ ಪಡೆಕೊಳ್ಳುವಂತೆ ವಿನಂತಿ

ಏಳು ವರುಷಗಳಲ್ಲಿ ಫಲ

ನಮ್ಮ ಪಿಗ್ಮಿ ಮುಠಿಷಧಾರರಲ್ಲಿ ದಿನಪಿಡಿ ಕೆಲಸ ಮಾಡುವ ಶ್ರಮಜೀವಿಗಳು, ಅಂಗಡಿಗಾರರು, ವಕೀಲರು, ಡಾಕ್ಟರರು, ಇಂಜಿನಿಯರರು, ಬೇಸಾಯಗಾರರು, ವರ್ತಕರು ಇತ್ಯಾದಿ ತರಗತಿಯವರಿರುವರು ಅವರ ಪಿಗ್ಮಿ ಮುಡಿಪುಗಳು ಚಿಕ್ಕ ಪುಟ್ಟ ಠೇವಣಾತಿಗಳಿಂದ ಪ್ರಾರಂಭವಾದುವು ಅಂದು ಇಲಿಯಂತಿದ್ದುವು ಇಂದು ಹುಲಿಯಂತಾಗಿವೆ ಅಂತಹ ವಿವೇಕಪೂರ್ಣ ದೂರ ದರ್ಶಿ ಸಂಪನ್ನ ಪಿಗ್ಮಿ ಠೇವಣಾತಿದಾರರ ಕೂಟಕ್ಕೆ ನೀವೂ ಕೂಡಾ ಸೇರಿ ಭಾಗ್ಯವಂತರಾಗ ಬೇಕಾಗಿ ಆಹ್ವಾನಿಸುತ್ತೇವೆ

ಆಧಾರ ವಹಿವಾಟು ರೂ 5,00,000 00 ಕ್ಕೂ ಮಿಕ್ಕಿದೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ. 1925 ಹೆಡ್ ಆಫೀಸ್ ಉಡುಪಿ

THE CANARA INDUSTRIAL & BANKING SYNDICATE LIMITED

Estd: 1925 H. O. UDIPI

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ. ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸುರಕ್ಷಿತತೆ, ಭದ್ರತೆ ಮತ್ತು ಸೇವಾತತ್ಪರತೆ
ಇವುಗಳಿಗೆ
ತವರುಮನೆಯಂತಿದ್ದು, ನಿಮ್ಮೆಲ್ಲರ ಸ್ನೇಹ, ಸಹಕಾರಗಳನ್ನು
ಅಪೇಕ್ಷಿಸುವ ಬೇಂಕು.

THE CANARA BANKING CORPORATION LTD.
Estd: 1906] [H. O.: UDIPI, (S. India)

ನವಯುಗ

ಉಡುಪಿ, ಗುರುವಾರ ೯-೪-'೫೩

ಅನುಕರಣೀಯ ಸಾಹಸ

ಮೊನ್ನೆ ಅಸಾಮಿನ ಲುಶಾಯಿ ಗುಡ್ಡಗಾಡು ಪ್ರದೇಶದಲ್ಲಿ ಭಾರತದ ಪ್ರಧಾನಿ ನೆಹರೂ ಸಂಚರಿಸಿದಾಗ, ಅಲ್ಲಿಯ ಜನರು ಸ್ವಯಂಸ್ಫೂರ್ತಿಯಿಂದ ರಚಿಸಿದ ಸುಮಾರು ನೂರು ಮೈಲಿಗೂ ಮಿಕ್ಕಿದ ಮಾರ್ಗವೊಂದನ್ನು ಉದ್ಘಾಟಿಸಿದರು. ಈ ಮಾರ್ಗದ ರಚನೆಯಿಂದ ಲುಶಾಯಿ ಪ್ರದೇಶದಲ್ಲಿ ವ್ಯಾಪಾರಕ್ಕೆ ತುಂಬ ಅನುಕೂಲತೆಯೊದಗಿತೆಂದು ತಿಳಿಯುತ್ತೇವೆ. ತಮಗೆ ಯೋಗ್ಯ ಮಾರ್ಗ ಸೌಕರ್ಯವಿಲ್ಲದ್ದರಿಂದ ವ್ಯಾಪಾರಕ್ಕೆ ಅಡ್ಡಿ ಮುಂದಾಗುತ್ತಿರುವುದನ್ನು ಕಂಡ ಗುಡ್ಡಗಾಡು ಜನರು ತಾವಾಗಿ ಪರಿಶ್ರಮಪಟ್ಟು ಈ ದೀರ್ಘ ಮಾರ್ಗದ ರಚನೆಗೈದರು. ಸರಕಾರವು ಸ್ವಲ್ಪ ಧನಸಹಾಯವನ್ನು ನೀಡಿದೆ. ಹಾಗೆಯೇ ದುರ್ಗಮವಾದ ಪರ್ವತ ಪ್ರದೇಶದಲ್ಲಿ ಮಾರ್ಗ ರಚಿಸಲು ಅಸಾಮು ರೈಫಲ್ಸಿನ ಸಿಪಾಹಿಗಳು ನೆರವು ನೀಡಿರುವರು. ಆದರೆ ಹಿಂಸ್ರ ಪಶುಗಳಿಂದ ಕೂಡಿದ ಘನಘೋರವಾದ ಅರಣ್ಯಗಳನ್ನು ಹೊಕ್ಕು ಅವುಗಳ ನಡುವಿನಿಂದ ಮಾರ್ಗ ರಚಿಸುವ ಸಾಹಸವನ್ನು ಲುಶಾಯಿ ಜನರೇ ಮಾಡಿದರೆಂದರೆ ನಾವು ಬೆರಗಾಗುವುದು ಸಹಜ. ದೈಹಿಕ ಶ್ರಮದ ದಾನವಲ್ಲದೆ, ತಾವಾಗಿ ಹಣಕಾಸನ್ನೂ ಒಟ್ಟು ಕೂಡಿಸಿ ಈ ಕೆಲಸಕ್ಕಾಗಿ ಒಪ್ಪಿಸಿರುವುದು ಗುಡ್ಡಗಾಡು ಜನರು ಭಾರತದ ಇತರ ಕಡೆಯ ನಾಗರಿಕರಿಗೆ ತೋರಿಸಿ ಕೊಟ್ಟ ಆದರ್ಶವೆಂದೇ ಹೇಳಬೇಕು. ಭಾರತದಲ್ಲಿ ಜನಪದ ಅಭಿವೃದ್ಧಿ ಯೋಜನಾಕೇಂದ್ರಗಳನ್ನು ಐವತ್ತಕ್ಕೂ ಮಿಕ್ಕಿದ ಪ್ರದೇಶಗಳಲ್ಲಿ ತೆರಯಲಾಗಿದೆ. ಇದುವರೆಗಿನ ಹೇಳಿಕೆಯಂತೆ ಇಲ್ಲಿ ಕೆಲಸಗಳು ಯೋಜನಾಬದ್ಧವಾಗಿಯೇ ಮುನ್ನಡೆಯುತ್ತಿವೆ. ಆದರೆ ಭಾರತದ ಸರ್ವಾಂಗೀಣ ಪ್ರಗತಿಯನ್ನು ಬಯಸುವ ಜನರು ಜನಪದ ಅಭಿವೃದ್ಧಿಯೋಜನೆಗಳ ಮಾದರಿಯನ್ನು ಅನುಸರಿಸಿ, ಇತರ ಹಳ್ಳಿಗಳಲ್ಲೂ ಸುಧಾರಣೆಯನ್ನು ಮಾಡುವುದು ಉಚಿತ. ಗುಡ್ಡಗಾಡು ಜನರು ತೋರಿಸಿದ ಸ್ವಯಂಸ್ಫೂರ್ತಿಯು ನಮ್ಮೆಲ್ಲರಿಗೆ ಆದರ್ಶವಾಗಬೇಕು. ಒಂದೆರಡು ವರ್ಷಗಳ ಹಿಂದೆ ಶೋಲಾಪುರದಲ್ಲಿ ಅಲ್ಲಿಯ ಸರಕಾರೀ ಅಧಿಕಾರಿಗಳ ಪ್ರೋತ್ಸಾಹ ಮತ್ತು ಸಹಾಯದಿಂದ, ಜನರು ಅದ್ಭುತ ಚಟುವಟಿಕೆಯನ್ನು ನಡೆಸಿದರೆಂದು ಕೇಳಿದ್ದೇವೆ. ಈಗ ಮರಳಿ ಮುಂಬಯಿಯ ಸಮೀಪದ ಠಾಣಾ ಜಿಲ್ಹೆಯ ಮೂಡು ಹಳ್ಳಿಗಳು ಗ್ರಾಮ ಸುಧಾರಣಾ ಕೇಂದ್ರಗಳಾಗಿ ಪರಿವರ್ತನೆಗೊಳ್ಳುವ ವಾರ್ತೆ ಬಂದಿದೆ. ಸರಕಾರದ ನೆರವು ದೊರೆತರೂ ಜನರೇ ಸ್ವಯಂ ಪ್ರೇರಣೆಯಿಂದ ಈ ಕಾರ್ಯವನ್ನು ಕೈಗೊಂಡಿರುವರು. ಶ್ರೀ ಅಶೋಕ ಮೇಥಾರಂಥ ಧುರೀಣರು ಈ ಕೇಂದ್ರದ ಅಧ್ವರ್ಯುಗಳಾಗಿ ದುಡಿಯುವರು. ಮುಂಬಯಿಯಿಂದ ಅನೇಕ ವಿದ್ಯಾರ್ಥಿಗಳು ತಮ್ಮ ರಜೆಯ ಸಮಯವನ್ನು ಈ ಕೇಂದ್ರದಲ್ಲಿ ಕಳೆದು, ದುಡಿಯುವರು. ಹಳ್ಳಿಗಳ ಉದ್ಧಾರವನ್ನು ಧ್ಯೇಯವಾಗಿಟ್ಟುಕೊಂಡಲ್ಲಿ ಮಾತ್ರ ಭಾರತ ಸಾರ್ವಾಂಗಿಕವಾದ ಏಳಿಗೆಯನ್ನು ಹೊಂದೀತೆಂದು ಎಲ್ಲರೂ ಹೇಳುತ್ತಿರುವಾಗ, ಈ ರೀತಿಯ ಸಾಹಸಕಾರ್ಯಗಳು ನಡೆದದ್ದು ಸಂತೋಷ. ಜನಪದ ಅಭಿವೃದ್ಧಿಯೋಜನೆಗಳಲ್ಲಿ ಮಾರ್ಗದರ್ಶನಮಾಡಲು ತರಬೇತಿ ಹೊಂದಿದ ಸರಕಾರೀ ಅಧಿಕಾರಿಗಳು ಇರುವರು. ಆದರೆ ಠಾಣಾದ ಯೋಜನೆಯು ಅಲ್ಲಿಯ ಜನನಾಯಕರ ನಿರ್ದೇಶದಂತೆ ಮುನ್ನಡೆಯುತ್ತದೆ. ಯೋಗ್ಯ ಮಾರ್ಗದರ್ಶನವು ದೊರೆತಲ್ಲಿ ಇಂಥ ಸಾಹಸಗಳು ನಿಜಕ್ಕೂ ಫಲಪ್ರದವೆನಿಸಬಲ್ಲುವು. ಇದನ್ನು ಸರಕಾರ ಕೂಡ ಮನಗಂಡಿರುತ್ತದೆ. ಆದ ಕಾರಣವೇ ಯೋಜನಾ ಆಯೋಗವು ಇಂಥ ಸರಕಾರೇತರ ಪ್ರಯತ್ನಗಳಿಗೆ ಪ್ರೋತ್ಸಾಹ ಕೊಡುವುದನ್ನು ತನ್ನ ಕರ್ತವ್ಯವೆಂದು ಅಂಗೀಕರಿಸಿದೆ. ಈ ರೀತಿಯ ಖಾಸಗಿ ಪ್ರಯತ್ನಗಳಿಗೆ ಕೆಲಮಟ್ಟಿಗೆ ಧನಸಹಾಯವನ್ನು ನೀಡಲು ಯೋಜನಾ ಆಯೋಗ ನಿರ್ಧರಿಸಿ, ಸ್ವಲ್ಪ ಹಣವನ್ನು ಪ್ರತ್ಯೇಕಿಸಿ ಇಟ್ಟಿದೆ. ಠಾಣಾದಲ್ಲಿ ಜನರು ಕೈಗೊಳ್ಳುವ ಉಪಕ್ರಮಕ್ಕೆ ಇಂಥ ಧನಸಹಾಯ ದೊರೆತಿದೆ. ಇದು ಯೋಜನಾ ಆಯೋಗ ಖಾಸಗಿ ಪ್ರಯತ್ನಕ್ಕೆ ಕೊಟ್ಟ ಪ್ರಥಮ ಪ್ರೋತ್ಸಾಹವೆಂದು ತಿಳಿಯುತ್ತೇವೆ. ಈ ರೀತಿಯ ಪ್ರಯತ್ನಗಳು ಭಾರತದ ಇತರ ಹಳ್ಳಿಗಳಲ್ಲೂ ನಡೆದರೆ, ಯೋಜನಾ ಆಯೋಗ ಮತ್ತು ಸರಕಾರವು ತಮ್ಮಿಂದಾಗ ಬಹುದಾದ ಎಲ್ಲ ಬಗೆಯ ಸಹಾಯ ಮತ್ತು ಪ್ರೋತ್ಸಾಹವನ್ನು ಕೊಡುವುದು ನಿಶ್ಚಯ. ಆದುದರಿಂದ ರಚನಾತ್ಮಕ ಕಾರ್ಯದಲ್ಲಿ ಶ್ರದ್ಧೆ ಮತ್ತು ಆಸಕ್ತಿಯುಳ್ಳ ಎಲ್ಲರೂ ಈ ಸಂದರ್ಭದ ಸದುಪಯೋಗ ಮಾಡಿಕೊಂಡು ದೇಶ ಸೇವೆಯಲ್ಲಿ ಮುಂದಾಗಬೇಕೆಂದು ಸೂಚಿಸುತ್ತೇವೆ. ವಿದ್ಯಾರ್ಥಿಗಳ ಹಾಗೂ ಸ್ಥಳೀಯ ಜನರ ಸಹಕಾರವನ್ನು ಪಡೆದು, ಅಲ್ಲಲ್ಲಿಯ ಕಾರ್ಯಕರ್ತರು ಮಹಾ ಸಾಹಸವನ್ನು ಮಾಡಿ ತೋರಿಸಲು ಈ ಅವಕಾಶವನ್ನು ಉಪಯೋಗಿಸಬೇಕು. ಕಾಂಗ್ರೆಸಿಗರು ಈ ಕಡೆ ಹೆಚ್ಚು ಗಮನವನ್ನು ಕೊಡಬೇಕು ಎಂದು ಪ್ರಾರ್ಥಿಸುತ್ತೇವೆ.

ಉಡುಪಿಗೆ, ಕರ್ನಾಟಕ ಮತ್ತು ಮದ್ರಾಸು ವಿಶ್ವವಿದ್ಯಾಲಯಗಳ ನಿಯೋಗಗಳು.

ಸತ್ಕಾರ: ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಅಂಗೀಕಾರಕ್ಕಾಗಿ ಪೂರ್ವಭಾವಿ ವ್ಯವಸ್ಥೆಗಳನ್ನು ಪರಿಶೀಲಿಸಲು ಬಂದಿದ್ದ ಕರ್ನಾಟಕ ವಿಶ್ವ ವಿದ್ಯಾಲಯ ನಿಯೋಗದ ಏಕಮಾತ್ರ ಸದಸ್ಯರಾದ ಡಾಕ್ಟರ್ ಜೇರಿಗೆಯವರನ್ನು ಗೌರವಿಸಲು ಡಾ| ಕೆ. ಯುಲ್. ಐತಾಳರು ತಮ್ಮ ಸ್ವಗೃಹದಲ್ಲಿ ತಾ 5ನೇ ಮಧ್ಯಾಹ್ನ ಔತಣವನ್ನೇರ್ಪಡಿಸಿದ್ದರು. ಊರಪರವೂರ ಪ್ರಮುಖ ಡಾಕ್ಟರರೂ ಮಿತ್ರನ್ನಿತರರೂ ಹಾಜರಿದ್ದರು. ಭೋಜನದ ಬಳಿಕ ಡಾ| ಪಿ. ಆರ್. ನಾಯಕರು ಮೆಡಿಕಲ್ ಕಾಲೇಜನ್ನು ಸ್ಥಾಪಿಸಲು ಮುಂದೆ ಬಂದ ಡಾ| ಮಾಧವ ಪೈಗಳ ಯತ್ನವನ್ನು ಶ್ಲಾಘಿಸಿ ವಿಶ್ವವಿದ್ಯಾಲಯದ ಸಹಾನುಭೂತಿಯನ್ನು ಕೋರಿದರು. ಮುಂಬಯಿಯ ಡಾ|| ಯು. ಬಿ ನಾರಾಯಣರಾಯರು ಕಾಲೇಜು ಮುಂದಿನ ಹೆಜ್ಜೆಯನ್ನು ತೆಗೆದುಕೊಳ್ಳುವ ಮೊದಲು ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನ ಅಂಗೀಕಾರ ಪಡೆಯಬೇಕಾದುದು ಹಿತಕರವೆಂದು ಸೂಚಿಸಿದರು. ಡಾ| ಟಿ. ಮಾಧವ ಪೈಗಳು ಕಾಲೇಜು ತೊಡಗಿದ ಬಳಿಕವೇ ಮೆಡಿಕಲ್ ಕೌನ್ಸಿಲ್‌ನವು ನಿಯೋಗವನ್ನು ಕಳುಹಿಸಿ ಅಂಗೀಕಾರದ ಪ್ರಶ್ನೆಯನ್ನು ಪರಿಶೀಲಿಸುವುದು ಪ್ರಚಲಿತ ಕ್ರಮವಾಗಿಯತ್ತದೆ ಎಂದು ಸ್ಪಷ್ಟೀಕರಿಸಿದರು ಮತ್ತು ಡಾ| ಐತಾಳರಿಗೆ ಇಂತಹದೊಂದು ಸುಸಂಧಿಯನ್ನೊದಗಿಸಿದುದಕ್ಕಾಗಿ ಕೃತಜ್ಞತೆಯನ್ನು ಸಲ್ಲಿಸಿದರು.

ಉಪಾಹಾರ ಸತ್ಕಾರ:– ಡಾ| ಜೇರಿಗೆಯವರನ್ನು ಸತ್ಕರಿಸಲು ತಾ: 5ನೇ ಸಂಜೆ ಡಾ| ಬಿ. ಬಿ. ಶೆಟ್ಟರು ತಮ್ಮ ಅಜ್ಜರಕಾಡು ನಿವಾಸದಲ್ಲಿ ಉಪಾಹಾರ ಸಮಾರಂಭವೊಂದನ್ನು ನಡೆಸಿದ್ದರು. ಊರ ಪರವೂರ ಪ್ರಮುಖ ಡಾಕ್ಟರನೇಕರೂ ಮಿತ್ರರೂ ಆಮಂತ್ರಿತರಾಗಿದ್ದರು. ಘನತರ ಉಪಾಹಾರವಾದ ಮೇಲೆ ನಿವೃತ್ತ ಜಿಲ್ಲಾ ಜಡ್ಜ್ ಶ್ರೀ. ಬಿ. ಎಲ್. ಎನ್. ರೈಗಳು ಅತಿಥಿಗಳಿಗೆ ಆಭಾರ ಸೂಚಿಸಿ, ಡಾ| ಮಾಧವ ಪೈಗಳ ಮೆಡಿಕಲ್ ಯೋಜನೆಯು ಬೇಗನೆ ಕಾರ್ಯಗತವಾಗಿ ಜನ ಹಿತಕಾರಿಯಾಗುವಂತಾಗಲೆಂದಾಶಿಸಿದರು. ಡಾ. ಜೇರಿಗೆಯವರು ತಮಗಿತ್ತ ಸತ್ಕಾರಕ್ಕಾಗಿ ಧನ್ಯವಾದಗಳನ್ನಿತ್ತು ಮೆಡಿಕಲ್ ಕಾಲೇಜಿನ ಕುರಿತು ಸಹಾನುಭೂತಿಪರ ಮಾತುಗಳನ್ನಾಡಿದರು. ಡಾ| ಪೈಗಳು ಸತ್ಕಾರದ ವ್ಯವಸ್ಥೆ ಮಾಡಿದ ಡಾ|| ಬಿ ಬಿ ಶೆಟ್ಟಿ ಮತ್ತು ಅವರ ಹಿರಿಯ ಸಹೋದರರಾದ ಶ್ರೀ ಜಗಜ್ಜೀವನದಾಸ ಶೆಟ್ಟಿ, ರಘುನಾಥ ಶೆಟ್ಟಿ ಇವರಿಗೆ ಕೃತಜ್ಞತೆಗಳನ್ನರ್ಪಿಸಿ ಎಕೆಡೆಮಿ ಸಾಧಿಸಿದ ಕಾರ್ಯಗಳನ್ನು ವಿವರಿಸಿ, ಆದರ ಪ್ರಾರಂಭದ ಅಧ್ಯಕ್ಷರಾದ ಶ್ರೀ ರೈಗಳಿಗೂ ಧನ್ಯವಾದಗಳನ್ನಿತ್ತರು.

ಗೌರವಕೂಟ: ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಪರಿಶೀಲನಾರ್ಥವಾಗಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಬಂದಿದ್ದ ನಿಯೋಗದ ಡಾ| ಜೇರಿಗೆಯವರನ್ನೂ, ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜನ್ನು 1 ಗ್ರೇಡಿಗೇರಿಸುವ ಪ್ರಶ್ನೆಯನ್ನು ಪರಿಶೀಲಿಸಲು ಮದ್ರಾಸು ವಿಶ್ವವಿದ್ಯಾಲಯದಿಂದ ರಾವ್ ಸಾಹೇಬ್ ಕೃಷ್ಣಮೂರ್ತಿಯವರ ಧುರೀಣತ್ವದಲ್ಲಿ ಬಂದಿದ್ದ ನಿಯೋಗದವರನ್ನೂ ಸತ್ಕರಿಸಲು ತಾ 5ರ ರಾತ್ರಿ "ಮುಕುಂದ ನಿವಾಸ"ದಲ್ಲಿ ಒಂದು ಡಿನ್ನರ್‌ಪಾರ್ಟಿ ನಡೆಯಿತು. ... ಗರದ ಪ್ರಮುಖರನೇಕರು ಆಮಂತ್ರಿತರಾಗಿದ್ದರು. ಡಾ| ಮಾಧವ ಪೈಗಳು ಎಕೆಡೆಮಿಯ ಆದಿ ಅಧ್ಯಕ್ಷರಾಗಿದ್ದ ಶ್ರೀ ಬಿ ಎಲ್ ಎನ್ ರೈಗಳ ಪರಿಚಯ ಮಾಡಿಕೊಟ್ಟು ... ಸಂಗೀತವನ್ನು ನೆರವೇರಿಸಿದ ಶ್ರೀ ಜಗನ್ನಾಥರಾಯರಿಗೂ, ನಾಟ್ಯಾಭಿನಯಕಲೆಯನ್ನು ತೋರಿಸಿದ ಕು. ಲಿಮಾ ಸೀತಾರಾಮ ... ಗಳಿಗೂ ಬಹುಮಾನ ವಿತರಣೆ ಮಾಡಲು ... ರೈಗಳನ್ನು ಕೇಳಿಕೊಂಡರು. ಶ್ರೀ ರೈಗಳು ಎಕೆಡೆಮಿಯ ವಿಷಯದಲ್ಲಿ ತಮ್ಮ ಅನುಭವವನ್ನು ಹೇಳಿ, ಡಾ| ಮಾಧವ ಪೈಗಳ ಕಾರ್ಯದಕ್ಷತೆಯನ್ನೂ ಪ್ರಶಂಸಿಸಿ ತನ್ನನ್ನು ಕೇಳಿಕೊಂಡಂತೆ ಕಲಾವಿದರಿಬ್ಬರಿಗೆ ಬಹುಮಾನ ವಿತರಣೆಯನ್ನು ಮಾಡಿದರು. ಎರಡು ವಿಶ್ವವಿದ್ಯಾಲಯಗಳ ನಿಯೋಗದವರು ಕೂಡಿ ಅಪೂರ್ವ ಸುಯೋಗದಿಂದ ಡಾ| ಪೈಗಳು ತೃಪ್ತಿ ವ್ಯಕ್ತಪಡಿಸಿ ನಿಯೋಗಗಳ ಸದಸ್ಯರಿಗೆ ಹಾರವಿತ್ತು ಸತ್ಕರಿಸಿದರು, ಅನಂತರ ಮೆಡಿಕಲ್ ಕಾಲೇಜನ್ನು ಸ್ಥಾಪಿಸಲು ನಡೆದ ಪ್ರಯತ್ನ, ಕರ್ನಾಟಕ ವಿಶ್ವವಿದ್ಯಾಲಯದವರು ತೋರಿಸಿದ ಸಹಾನುಭೂತಿ ಹಾಗೂ ಅಂಗೀಕಾರದ ಬಗ್ಗೆ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಅರ್ಜಿ ಸಲ್ಲಿಸಿದುದು ಭಾವೀ ಕರ್ನಾಟಕ ಪ್ರಾಂತ್ಯ ವ್ಯವಸ್ಥೆಗನುಗುಣವಾಗಿ ಎಂದು ವಿವರಿಸಿದರು. ರಾವ್ ಸಾಹೇಬ್ ಕೃಷ್ಣಮೂರ್ತಿಯವರೂ, ಡಾ|| ಜೇರಿಗೆಯವರು ಉತ್ತರವೀಯುತ್ತ ಸತ್ಕಾರಕೂಟಕ್ಕಾಗಿ ವ್ಯಕ್ತಕೃತಜ್ಞತೆಗಳನ್ನರ್ಪಿಸಿದುದಲ್ಲದೆ ತಮ್ಮ ಕರ್ತವ್ಯದಲ್ಲೂ ಎಕೆಡೆಮಿಗೆ ಶಕ್ತಿಮೀರಿ ಸಹಾನುಭೂತಿ ಕೊಡುವುದಾಗಿ ಆಶ್ವಾಸನೆಯನ್ನಿತ್ತರು.

ಮರುದಿನ ಮಧ್ಯಾಹ್ನ ಎಂ. ಜಿ. ಎಂ ಕಾಲೇಜಿನಲ್ಲಿ ಮದ್ರಾಸು ವಿಶ್ವವಿದ್ಯಾಲಯದಿಂದ ಬಂದ ನಿಯೋಗದವರನ್ನು ಗೌರವಿಸಲು ಭೋಜನ ಸಮಾರಂಭ ನಡೆಯಿತು. ಇಲ್ಲಿಯ ಜನರ ಅತ್ಯಪೂರ್ವ ಉತ್ಸಾಹ, ಉತ್ಸಾಹಕ ತತ್ಕಾರ್ಯ ನಿರ್ವಹಣಾ ಶಕ್ತಿ, ಜನತೆಯ ಸಹಕಾರ ಬುದ್ಧಿ ಮೊದಲಾದವನ್ನು ನಿಯೋಗದವರು ಕೊಂಡಾಡಿ ಕಾಲೇಜ್ 1 ಗ್ರೇಡಿನಂತೆ ತಮ್ಮಿಂದಾದ ಸಹಕಾರ ನೀಡುವುದಾಗಿಯೂ ಸೂಚಿಸಿದರು.

1 ಗ್ರೇಡಿಗೇರಿಸಬೇಕೆಂಬ ಕಾಲೇಜ್ ಅಧಿಕಾರಿಗಳ ಸತ್ಪ್ರಯತ್ನವು ಈ ವರ್ಷದಿಂದಲೇ ಸಿದ್ಧಿಸುವುದೆಂದು ನಿರೀಕ್ಷಿಸಲಾಗಿದೆ.

ಕಾರ್ಕಳದ ಡಾ| ಮಹಾಬಲ ಅಡ್ಯಂತಾಯರ ಪುತ್ರ
ಶ್ರೀ. ದಿವಾಕರ ಅಡ್ಯಂತಾಯ, ಎಂ. ಬಿ. ಬಿ. ಎಸ್. ಅವರು
ನಿವೃತ್ತ ಜಿಲ್ಲಾ ಜಡ್ಜರಾದ ಶ್ರೀ ಬಿ. ಎಲ್. ಎನ್. ರೈಗಳ ಪುತ್ರಿ
ಸೌ| ನಿರ್ಮಲೆಯನ್ನು
ತಾ. 3-4-53ರಂದು ಉಡುಪಿ ಅಜ್ಜರಕಾಡಿನಲ್ಲಿ (ಡಾ| ಬಿ. ಬಿ. ಶೆಟ್ಟರ
ಮನೆಯಲ್ಲಿ) ಅತ್ಯಪೂರ್ವ ವೈಭವದಿಂದ ವಿವಾಹವಾದರು. ನೂತನ ದಂಪತಿಗಳಿಗೆ
ಹಾರ್ದಿಕ ಶುಭಾಶಯಗಳು.

ಕಮ್ಯೂನಿಸ್ಟರ ಶಾಂತಿ ಧೋರಣೆಯ ಹಿನ್ನೆಲೆ

ಆಂತರಿಕ ಭದ್ರತೆಗೋಸ್ಕರ ಬಾಹ್ಯ ಒತ್ತಡವನ್ನು ತಡೆಗಟ್ಟುವ ಕುತಂತ್ರವೇ?

ಅಂತಾರಾಷ್ಟ್ರೀಯ ರಂಗದಲ್ಲಿ ಸೋವಿಯೆಟ ರಶಿಯಾದ ಈಚಿನ ನೀತಿ ಪರಿವರ್ತನೆಯ ಕ್ರಮಗಳನ್ನು ನೋಡಿ ಆಶ್ಚರ್ಯ ವ್ಯಕ್ತಗೊಳಿಸಲ್ಪಟ್ಟಿದೆ. ರಶಿಯಾದ ಪ್ರತಿಯೊಂದು ಕೃತಿಯನ್ನೂ ಭೂತಕನ್ನಡಿಯ ಮೂಲಕ ನೋಡಿ ಅದರ ಸಾಧಕ ಬಾಧಕಗಳನ್ನು ಡಂಗುರ ಹೊಡೆಯುವುದು ಪಾಶ್ಚಾತ್ಯ ರಾಷ್ಟ್ರಗಳಿಗೆ ಅಂಟಿಕೊಂಡ ಬಹು ಕಾಲದ ರೋಗವಾಗಿದೆ. ರಶಿಯಾದ ನಿಜವಾದ ನಿಲುವು ಏನೆಂಬುವನ್ನು ತಿಳಿದುಕೊಳ್ಳಲಾರದೆ ಪಶ್ಚಿಮದ ರಾಷ್ಟ್ರಗಳು ಸದಾ ಪೇಚಾಡುತ್ತಿವೆ. ಕಮ್ಯೂನಿಷ್ಟರು ಶಾಂತಿ ಬೇಕೆಂದರೆ, ಈ ಶಾಂತಿಯ ವ್ಯಾಖ್ಯೆಯ ಬಗ್ಗೆ ಪಾಶ್ಚಾತ್ಯರು ಸಂದೇಹಪಡುತ್ತಾರೆ. ಸೋವಿಯೆಟ ರಶಿಯಾದ ಒಂದು ಸಣ್ಣ ಘಟನೆ ಕೂಡ ಪಾಶ್ಚಾತ್ಯರ ತಲೆಯನ್ನು ಬಿಸಿ ಮಾಡಬಲ್ಲುದು. ಏನೇನೂ ಮಹತ್ವವಿಲ್ಲದ ಸಂಗತಿಗಳಿಗೆ ಅತ್ಯಂತ ಮಹತ್ವವನ್ನೂ, ತುಂಬ ಮಹತ್ವದ ವಿಷಯಗಳ ಸಂಬಂಧದಲ್ಲಿ ಸಂದೇಹ ಜನ್ಯ ಉದಾಸೀನತೆಯನ್ನೂ ತೋರಿಸುವ ವಿರೋಧಾಭಾಸಪೂರ್ಣ ನಡವಳಿಕೆ ಪಶ್ಚಿಮದ ರಾಷ್ಟ್ರಗಳಲ್ಲಿ ಕಂಡು ಬರುವುದು ಅಪರೂಪವಲ್ಲ. ಇದೀಗ ಸ್ಟಾಲಿನ್ನರ ನಿಧನಾನಂತರ ಕಮ್ಯೂನಿಷ್ಟ ರಾಷ್ಟ್ರಗಳಾದ ರಶಿಯಾ ಮತ್ತು ಚೀನಾದ ನೀತಿಯಲ್ಲಿ ಎಂದೂ ಇಲ್ಲದ ಸೌಮನಸ್ಯ ಮತ್ತು ಪರಿವರ್ತನೆಗಳನ್ನು ಕಂಡು ದಿಗ್ಭ್ರಮೆಯೇ ಹಿಡಿದಿದೆ.

ಎಲ್ಲರಿಗೂ ಆಶ್ಚರ್ಯ

ಮೆಲೆಂಕೋವರ ಸರಕಾರವು ಅಧಿಕಾರ ಸೂತ್ರವನ್ನು ವಹಿಸಿ ಇನ್ನೂ ಒಂದು ತಿಂಗಳು ಸಂದಿಲ್ಲ—ಇಷ್ಟರೊಳಗೆ ಸೋವಿಯೆಟ ರಶಿಯಾ ಹಾಗು ಕಮ್ಯೂನಿಷ್ಟ ಚೀನಗಳು ಎಂಥೆಂಥ ಕ್ರಮಗಳನ್ನು ಕೈಗೊಂಡಿವೆ ಎಂದರೆ, ರಾಜಕಾರಣಿಗಳಿಗೆ ಇದರ ಹೊಲಬನ್ನು ತಿಳಿದುಕೊಳ್ಳುವುದು ಕಷ್ಟಸಾಧ್ಯವೆನಿಸಿದೆ. ರಶಿಯಾವು ಶಾಂತಿಯ ಪಾಠವನ್ನು ಎಂದಿನಂತೆ ಬಾಯಿಮಾತಿನಿಂದ ಪುನರುಚ್ಚರಿಸುತ್ತಿರದೆ, ಪಾಶ್ಚಾತ್ಯ ರಾಷ್ಟ್ರಗಳ ಕೂಡೆ ಮೈತ್ರಿಯನ್ನು ಪ್ರಸ್ಥಾಪಿಸುವ ನಿಜವಾದ ಬಯಕೆಯಿಂದಲೇ ಕೆಲಸ ಮಾಡುತ್ತಿದೆ ಎಂಬೋಪಾದಿಯಲ್ಲಿ ಘಟನೆಗಳು ಒಂದರ ಹಿಂದೊಂದು ನಡೆದಿವೆ. ಈ ಮೊದಲೇ ತಿಳಿಸಿರುವಂತೆ ಬ್ರಿಟಿಷ್ ಬಾಂಬರ ವಿಮಾನಗಳನ್ನು ರಶಿಯನ್ನರು ಹೊಡೆದರು. ಆದರೂ, ಸೋವಿಯೆಟ ಇತಿಹಾಸದಲ್ಲಿಯೇ ಪ್ರಥಮ ಬಾರಿ ಎಂಬಂತೆ ತಪ್ಪು ಒಪ್ಪಿಕೊಂಡದ್ದು ಮಾತ್ರವಲ್ಲ ಇಂಥದ ಘಟನೆಗಳು ಇನ್ನು ಮುಂದೆ ನಡೆಯದಂತೆ ನೋಡಿಕೊಳ್ಳಲು ಬ್ರಿಟಿಷರನ್ನು ಒಂದು ಪರಿಷತ್ತಿಗೆ ಕರೆದರು. ಈಗ ಈ ಪರಿಷತ್ತಿಗೆ ಫ್ರಾನ್ಸು ಮತ್ತು ಅಮೇರಿಕೆಗಳನ್ನೂ ಆಮಂತ್ರಿಸಿ ರಶಿಯನ್ನರು ತಮ್ಮ ಸೌಜನ್ಯವನ್ನು ದ್ವಿಗುಣೀಕರಿಸಿದ್ದಾರೆ. ಈಚೆ ಕೆಲ ವರ್ಷಗಳಿಂದ ಪಾಶ್ಚಾತ್ಯರಿಗೆ ಮುಚ್ಚಿದ್ದ ಬರ್ಲಿನ ಕಾಲುವೆಯನ್ನು ಈಗ ಮರಳಿ ಮುಕ್ತಗೊಳಿಸಿರುವರು. ಉತ್ತರ ಕೋರಿಯಾದಲ್ಲಿರುವ ಬ್ರಿಟಿಷ ಹಾಗೂ ಫ್ರೆಂಚ ನಾಗರಿಕ ಕೈದಿಗಳನ್ನು ಬಿಡುಗಡೆ ಮಾಡಲು ಪ್ರಯತ್ನಿಸುವುದಾಗಿ ರಶಿಯಾ ಆಶ್ವಾಸನ ನೀಡಿದೆ. ರಶಿಯಾವನ್ನು ಸಂದರ್ಶಿಸಿ ಅಲ್ಲಿಯ ಸ್ಥಿತಿಗತಿಯನ್ನು ಕಂಡುಕೊಳ್ಳಲು ಹತ್ತು ಮಂದಿ ಅಮೇರಿಕನ್ ಪತ್ರಿಕೋದ್ಯಮಿಗಳಿಗೆ ಅವಕಾಶ ಮಾಡಿಕೊಟ್ಟಿದೆ. ಇಂಥ ಕ್ರಮಗಳು ಒಂದರ ಹಿಂದೊಂದೆಂಬಂತೆ ಕಳೆದ ಮೂರು ವಾರಗಳಲ್ಲಿ ನಡೆದದ್ದರಿಂದ, ರಶಿಯಾ ಏಕಾಗಿ ಈ ರೀತಿ ತನ್ನ ಹಿಂದಿನ ನಿಲುವನ್ನು ಬಿಟ್ಟುಕೊಟ್ಟು ಹೊಸ ನೀತಿಯ ಆಶ್ರಯ ಪಡೆದಿದೆ ಎಂದೆಲ್ಲರೂ ಕೇಳುವಂತಾಗಿದೆ.

ರಶಿಯಾ ಸಹಕಾರ

ಜಾಗತಿಕ ಸಮಸ್ಯೆಗಳ ಪರಿಹಾರದಲ್ಲಿ ರಶಿಯಾ ತೋರುತ್ತಿರುವ ಆಸ್ಥೆಗೆ ನಿದರ್ಶನವಾಗಿ ಇನ್ನೂ ಕೆಲವು ಸಂಗತಿಗಳು ಜರಗಿವೆ. ಕೆಲಸಮಯದಿಂದ ಸಂಯುಕ್ತ ರಾಷ್ಟ್ರ ಸಂಘದ ಮಹಾ ಕಾರ್ಯದರ್ಶಿಯನ್ನು ಆರಿಸುವ ಸಂಬಂಧದಲ್ಲಿ ರಶಿಯಾ ಹಾಗೂ ಪಾಶ್ಚಾತ್ಯ ಬಣಗಳ ನಡುವೆ ಬಿಕ್ಕಟ್ಟು ಉಂಟಾಗಿತ್ತು. ೧೪ ಮಂದಿಯ ಸುದೀರ್ಘ ಪಟ್ಟಿಯೊಂದು ಸಿದ್ಧಗೊಂಡು ಅವರಲ್ಲಿಯಾದರೂ ಒಬ್ಬರ ಹೆಗಲಿಗೆ ಈ ಹೊಣೆಗಾರ ಸ್ಥಾನದ ಭಾರ ಬೀಳುವುದೋ ನೋಡೋಣವೆಂದು ಪ್ರಯತ್ನ ನಡೆಯಿತು. ಕೆನಡಾದ ಪಿಯರ್ಸನ್ನರ ಆಯ್ಕೆಯನ್ನು ರಶಿಯಾ ತಡೆ ಹಿಡಿದರೆ, ಭಾರತದ ವಿಜಯಲಕ್ಷ್ಮಿ ಹಾಗೂ ಜೆಕ್ ರಾಜಕರಣಿಯೊಬ್ಬನ ನೇಮಕವನ್ನು ಇತರರು ನಿರಾಕರಿಸಿದರು. ರಶಿಯಾದ ಮನವೊಲಿಸುವುದು ಸಾಧ್ಯವಿಲ್ಲವೆಂದೇ ಎಲ್ಲರ ತಿಳುವಳಿಕೆಯಾಗಿತ್ತು. ರಾಷ್ಟ್ರ ಸಂಘದ ಸಾಮಾನ್ಯ ಸಭೆಯು ಟ್ರಿಗ್ವಿಲೀಯವರನ್ನು ರಾಜೀನಾಮೆ ಹಿಂದೆಗೆದುಕೊಳ್ಳಬೇಕೆಂದು ಒತ್ತಾಯಿಸುವುದೆಂದಿತ್ತು. ಆದರೆ ಅಷ್ಟರಲ್ಲಿಯೇ ರಶಿಯಾ ರಾಷ್ಟ್ರ ಸಂಘದ ಕಲುಷಿತ ವಾತಾವರಣವನ್ನು ತಿಳಿಗೊಳಿಸುವ ರೀತಿಯಲ್ಲಿ ವರ್ತಿಸಿತು. ಸ್ವೀಡನ್ನಿನ ಡಾ| ಡಾಗ್ ಹ್ಯಾಮರ್ ಶೆಲ್ಡರನ್ನು ಸರ್ವಾನುಮತದಿಂದ ಭದ್ರತಾ ಮಂಡಳ ಆರಿಸಿದೆ. ಹ್ಯಾಮರ ಶೆಲ್ಡರು ಇಷ್ಟರಲ್ಲಿಯೇ ತಮ್ಮ ಹೊಸ ಅಧಿಕಾರವನ್ನು ಸ್ವೀಕರಿಸುವರು.

ನಿಃಶಸ್ತ್ರೀಕರಣದ ಸಂಬಂಧದಲ್ಲಿ

ರಶಿಯಾ ಪಶ್ಚಿಮದ ರಾಷ್ಟ್ರಗಳಿಗೆ ಅನುಕೂಲವಾದ ನೀತಿಯನ್ನು ನಿಃಶಸ್ತ್ರೀಕರಣದ ಸಂಬಂಧದಲ್ಲಿ ಅನುಸರಿಸಿದೆ. ಅಣು ಬಾಂಬಿನ [illegible] ಏಕಾಂತಿಕ ಅಸ್ತ್ರವನ್ನು ಪ್ರತಿಬಂಧಿಸಬೇಕೆಂದು ಹೇಳುತಿದ್ದರೆ ಸೈನ್ಯ ಬಲ ಸಾಕಷ್ಟಿಲ್ಲದ ಅಮೇರಿಕೆ ಮುಂತಾದ ರಾಷ್ಟ್ರಗಳು ಸೈನ್ಯಬಲವನ್ನು ಕಡಿಮೆ ಮಾಡಬೇಕೆಂದೂ ಅಣುಶಕ್ತಿಯನ್ನು ಅಂತಾರಾಷ್ಟ್ರೀಯ ನಿಯಂತ್ರಣಕ್ಕೆ ಒಳಪಡಿಸಬೇಕೆಂದೂ ಹೇಳುತ್ತಿದ್ದುವು. ಈ ರೀತಿಯ ಮತಭೇದ ಒಮ್ಮತವಿಲ್ಲದಿರುವ ಕಾರಣ ನಿಃಶಸ್ತ್ರೀಕರಣದ ಮಾತುಕತೆಗಳು ಪ್ರಗತಿಯನ್ನು ಹೊಂದಿಲ್ಲ. ಆದರೆ ಈಗಿನ ಸುದ್ದಿಯಂತೆ, ರಶಿಯಾ ಪಶ್ಚಿಮದ ರಾಷ್ಟ್ರಗಳು ಸೂಚಿಸಿದಂತೆಯೇ ಈ ಸಂಗತಿಯಲ್ಲಿ ಮಾತುಕತೆ ನಡೆಸಲು ಒಪ್ಪಿದೆ. ಇತ್ತ ಕೊರಿಯಾದಲ್ಲಿ ಚೀನೀ ಪ್ರಧಾನಿ ಚೌ ಎನ್ ಲಾಯಿಯವರು ಯುದ್ಧ ನಿಲ್ಲಿಸುವ ಬಗ್ಗೆ ನಡೆದ ಸಂಧಾನದ ತಳಹದಿಯನ್ನು ರಶಿಯಾ ಸಮರ್ಥಿಸಿ [illegible]. ಉತ್ತರ ಕೋರಿಯಾ ಮತ್ತು ಚೀನೀ ಪ್ರತಿನಿಧಿಗಳಿಗೆ ಸಂಯುಕ್ತ ರಾಷ್ಟ್ರ ಸಂಘದ ಪ್ರತಿನಿಧ್ಯವನ್ನು ಕೊಟ್ಟರೆ ಈ ಸಂಧಾನ ಸುಲಭಸಾಧ್ಯವಾದೀತೆಂದು ರಶಿಯನ್ ವಿದೇಶ ಮಂತ್ರಿ ಮೊಲೊಟೋವರು ಧ್ವನಿಸಿದರೂ, ಪಾನಮುಂಜಾನದಲ್ಲಿ ಮಾತುಕತೆಗಳನ್ನು ಮುನ್ನಡೆಸಲು ಇದು ಆತಂಕವಾಗಿಲ್ಲ. ಅಸ್ವಸ್ಥ ಹಾಗೂ ಗಾಯಾಳು ಕೈದಿಗಳ ವಿನಿಮಯ ಸಂಬಂಧದಲ್ಲಿ ಉಭಯ ಪಕ್ಷಗಳ ಸಂಪರ್ಕಾಧಿಕಾರಿಗಳು ಕಳೆದ ಸೋಮವಾರದಿಂದ ಮಾತುಕತೆ ನಡೆಸುತ್ತಿರುವರು. ಚೀನಾದ ಸೂಚನೆಯು ಹಿಂದೆ ಭಾರತವು ಸಂಯುಕ್ತ ರಾಷ್ಟ್ರ ಸಂಘದ ಮುಂದೆ ಮಂಡಿಸಿದ ಗೊತ್ತುವಳಿಯನ್ನೆ ಹೋಲುತ್ತಿದೆಯಾಗಿ— ಭಾರತವೇ ಮುಂತಾದ ಶಾಂತಿಪ್ರಿಯ ರಾಷ್ಟ್ರಗಳು ಸಮಾಧಾನವನ್ನು ವ್ಯಕ್ತಗೊಳಿಸಿವೆ

ಸೋವಿಯೆಟ್ ರಶಿಯಾದೊಳಗೆ–

ಪೌರ್ವಾತ್ಯ ಮತ್ತು ಪಾಶ್ಚಾತ್ಯ ಬಣಗಳಲ್ಲಿ ತೀರ ಸ್ವಾಭಾವಿಕವೆಂದಿದ್ದುಕೊಂಡಿದ್ದ ತಿಕ್ಕಾಟವನ್ನು ಈ ರೀತಿ ಒಮ್ಮಿಂದೊಮ್ಮೆಗೆ ಸ್ಟಾಲಿನ್ನರ ನಿಧನಾನಂತರ ಕಡಿಮೆ ಮಾಡುವ ರಶಿಯಾದ ನೀತಿಪರಿವರ್ತನೆಯ ಮರ್ಮವೇನಿದ್ದೀತೆಂದು ಎಲ್ಲರೂ ಚಿಂತಿಸುತ್ತಿರುವರು. ಈ ರಾಜಕೀಯ ಗತ್ತುಗಾರಿಕೆಯ ಹಿಂದೆ ಏನೋ ಒಳಸಂಚು ಇರಬಹುದೆಂದು ಕುಶಲ ರಾಜಕಾರಣಿಗಳು ತರ್ಕಿಸುತ್ತಿರುವರು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಬ್ರಿಟನು ಫ್ರಾನ್ಸುಗಳು ರಶಿಯಾದ ಈಗಿನ ನೀತಿಯನ್ನು ಪ್ರಾಮಾಣಿಕವಾಗಿ ನಂಬಿಕೊಂಡಿದ್ದರೆ ಅಮೇರಿಕ ಇನ್ನೂ ಸಂಶಯಾತ್ಮ ದೃಷ್ಟಿಯನ್ನು ಬಿಟ್ಟುಕೊಟ್ಟಿಲ್ಲ. ಇದರ ಪರಿಣಾಮವಾಗಿ ಪಶ್ಚಿಮದ ರಾಷ್ಟ್ರಗಳಲ್ಲಿಯೇ ಒಡಕು ಉಂಟಾದೀತೋ ಎಂಬ ಅಂಜಿಕೆ ಮೂಡಿದೆ. ಮಾತ್ರವಲ್ಲ ಭರದಿಂದ ಯುದ್ಧ ಸನ್ನಾಹದ ಕ್ರಮಗಳನ್ನು ಕೈಗೊಳ್ಳುವ ಪಾಶ್ಚಾತ್ಯ ರಾಷ್ಟ್ರಗಳ ಯೋಜನೆಗೆ ರಶಿಯಾದ ನೀತಿ ವಿಘ್ನವನ್ನೊಡ್ಡಿದೆ. ಸ್ಟಾಲಿನ್ನರ ನಿಧನದ ಬೆನ್ನಿಗೇ ಇಂಥ ನೀತಿ ಪರಿವರ್ತನೆಯಾಗಬೇಕಾದರೆ ಕಬ್ಬಿಣದ ಪರದೆಯ ಹಿಂದಿರುವ ಸೋವಿಯೆಟ ರಶಿಯಾದೊಳಗೆ ಏನೋ ವಿಪ್ಲವ ನಡೆಯುತ್ತಿದೆ ಎಂದು ದೂರದರ್ಶಿಗಳ ಅಭಿಪ್ರಾಯ. ಆಂತರಿಕ ಭದ್ರತೆಯನ್ನು ಕಾಯ್ದುಕೊಳ್ಳುವ ಮುಖ್ಯ ಉದ್ದೇಶದಿಂದ ಹೊರಗಿನ ಶತ್ರುಗಳ ಮೂಗಿಗೆ ತುಪ್ಪ ಹಚ್ಚುವುದು ಕಮ್ಯೂನಿಷ್ಟರ ಈಗಿನ ನೀತಿಯು ಆಗಿದೆಯೆಂದು ಅವರ ತರ್ಕ.

ದೂರದರ್ಶಿಗಳ ಅಭಿಮತ

[illegible] ತರ್ಕವೇ ನಿಜವಿದ್ದೀತು ಏಕೆಂದರೆ ಮೊನ್ನೆ ತಾನೆ ಮೆಲೆಂಕೋವರ ಸರಕಾರವು ಆಂತರಿಕ ನೀತಿಯ ಮೇಲೆ ಪರಿಣಾಮಕಾರೀ ಪ್ರಭಾವವನ್ನು ಮಾಡಬಲ್ಲ ಕ್ರಮವೊಂದನ್ನು ಕೈಗೊಂಡಿರುವುದು. ೧೫ ಜನರಲ್ಲಿ [illegible] ತಪ್ಪು ಚಿಕಿತ್ಸೆಯಿಂದ ಕೊಲೆಮಾಡಿರೆಂಬ ಆರೋಪದ ಮೇಲೆ ಬಂಧಿಸಿ ವಿಚಾರಣೆಗೆ ಗುರಿ ಮಾಡಿದ್ದ [illegible] ಡಾಕ್ಟರೆಲ್ಲರನ್ನೂ ಬಿಡುಗಡೆ ಮಾಡುವ ಘೋಷಣೆ ಮಾಡಿದೆ. ಸ್ಟಾಲಿನ್ನರ ಕಾಲದಲ್ಲಿ ಬಂಧಿಸಿ, ವಿಚಾರಣೆ ನಡೆಸಿ ಪ್ರಾಣಾಂತಿಕ ದಂಡನೆಯನ್ನು [illegible] ಈ ಡಾಕ್ಟರ ಜನರನ್ನು ಮೆಲೆಂಕೋವರು ಬಿಡುಗಡೆ ಮಾಡಿದ್ದೇಕೆ? ಮಾತ್ರವಲ್ಲ ಈ ಬಂಧನ ಸತ್ಯಸಂ ಅಕ್ರಮವಾಗಿ ನಡೆಯಿತೆಂಬ ಆರೋಪ ಹೊರಿಸಿ ಬಂಧನ ನಡೆಸಿದ ಸ್ಟಾಲಿನ್ನರ ಕೈವಾರಿಗಳನ್ನು [illegible] ಇದನ್ನೆಲ್ಲ ಸೂಕ್ಷ್ಮದೃಷ್ಟಿಯಿಂದ ವೀಕ್ಷಿಸಿದಲ್ಲಿ ಮೆಲೆಂಕೋವರ ಸರಕಾರದ [illegible] ಎನ್ನಬಹುದು.

(೫ನೇ ಪುಟದಿಂದ)

ಸ್ವಯಂಸ್ಫೂರ್ತಿ

ಗುಡ್ಡಗಾಡು ಜನರು ಸಹ ಭಾರತದ ರಾಷ್ಟ್ರೀಯರು ಮತ್ತು ಅವರು ಸ್ವತಂತ್ರರು ಎಂದು ನೆಹರೂ ತಿಳಿಸಿ ಹೇಳಿದರು. ನಾಗಾ ಜನರು ತಮಗೆ ಸ್ವಾಯತ್ತತೆ ಬೇಕೆಂದು ಬೇಡುತ್ತಿರುವುದರ ಅರ್ಥವೇ ತನಗಾಗುವುದಿಲ್ಲೆಂದು ನೆಹರೂ ನುಡಿದರು. ಭಾರತವು ಸ್ವತಂತ್ರಗೊಂಡ ಮೇಲೆ ನಾಗಾ ಜನರೂ ಸ್ವತಂತ್ರ ನಾಗರಿಕರೇ ಆಗಿರುವರೆಂದ ಬಳಿಕ, ತಮಗೆ ಸ್ವಾತಂತ್ರ್ಯ ಬೇಕೆಂದು ಅವರು ಹೇಳುವುದು ಅಸಂಗತವೆನಿಸುತ್ತದೆ. ನಾಗಾ ಜನರನ್ನು ಇಂಥ ಚಳವಳಿಕ್ಕೆ ನೂಕುವುದರಲ್ಲಿ ವಿದೇಶೀಯರ ಮುಖ್ಯವಾಗಿ ಬ್ರಿಟಿಷರ ಕಾಲದಿಂದಲೂ ಅಲ್ಲಿರುವ ಮಿಶನರಿಗಳ ಕೈವಾಡವಿದ್ದೀತೆಂದು ನೆಹರೂ ಸಂಶಯಿಸಿದರು. ಲುಶಾಯಿ ಗುಡ್ಡ ಪ್ರದೇಶಗಳಲ್ಲಿ ನೆಹರೂರವರು ಸಂಚರಿಸಿದಾಗ ಅವರು ತುಂಬ ಸಂತೋಷಪಟ್ಟರೆನ್ನಬಹುದು. ಈ ಪ್ರದೇಶದಲ್ಲಿ ಕಿತ್ತಳೆ ಮುಂತಾದ ಹಣ್ಣು ಹಂಪಲುಗಳು ಯಥೇಷ್ಟ ಬೆಳೆಯುತ್ತವೆ. ಗುಡ್ಡಗಾಡು ಜನರು ಸುಖಸಂತೋಷದಿಂದ ಜೀವಿಸುತ್ತಿರುವರು. ನೃತ್ಯ ಸಂಗೀತಗಳೆಂದರೆ ಇವರಿಗೆ ಪ್ರಾಣ. ಆದರೆ ಭಾರತ ವಿಭಜನೆಯ ಪರಿಣಾಮವಾಗಿ ವ್ಯಾಪಾರಕ್ಕೆ ಅನುಕೂಲವಾದ ಹೆದ್ದಾರಿಯು ಇಲ್ಲದೆ ಈ ಜನರು ಕಷ್ಟಪಡುತಿದ್ದರು. ವಿದ್ಯಾ ಸಂಸ್ಕಾರವು ಸಾಕಷ್ಟು ಇಲ್ಲದಿದ್ದರೂ ಸ್ವಯಂ ಪ್ರೇರಣೆಯಿಂದಲೇ ಐಜಾಲ—ಲುಂಗಲೇ ನಗರಗಳನ್ನು ಜೋಡಿಸುವ ಮಾರ್ಗರಚನೆಗೆ ಈ ಜನರು ಕೈಯಿಕ್ಕಿದರು. ೧೧೦ ಮೈಲಿಗೂ ಮಿಕ್ಕಿದ ಈ ಮಾರ್ಗವು ೬೦ ಮೈಲಿಗೂ ಹೆಚ್ಚು ಘನವಾದ ಅರಣ್ಯಗಳ ನಡುವಿಂದ ಹಾದು ಹೋಗಿದೆ. ಹಿಂಸ್ರ ಪಶುಗಳು ತುಂಬಿರುವ ಈ ಕಾಡುಗಳಲ್ಲಿ ಲುಶಾಯಿ ಜನರು ಸಾಹಸದಿಂದಲೂ ಪರಿಶ್ರಮದಿಂದಲೂ ದುಡಿದರು. ಈ ಮಾರ್ಗದ ಉದ್ಘಾಟನೆಯನ್ನು ನೆಹರೂರವರು ನೆರವೇರಿಸಿದಾಗ, ಇವರ ಅನುಕರಣೆಯನ್ನು ದೇಶದ ಇತರ ಕಡೆಯ ಜನರು ಮಾಡಬೇಕೆಂದು ನಾನು ಹೋದಲ್ಲೆಲ್ಲ ಆಹ್ವಾನ ಕೊಡುವೆನೆಂದು ಹೇಳಿ, ಲುಶಾಯಿ ಜನರ ಸ್ಫೂರ್ತಿಯನ್ನು ಪ್ರಶಂಸಿಸಿದರು. ಗುಡ್ಡಗಾಡು ಜನರು ಅನಾಗರಿಕರೆಂದು ಹೇಳುವುದುಂಟು, ಅವರನ್ನು ಹಿಂದುಳಿದವರೆಂದು ತಿಳಿಯುವವರೂ ಇದ್ದಾರೆ. ಆದರೆ ಕೆಲವು ಸಂಗತಿಗಳಲ್ಲಿ ನಮಗಿಂತಲೂ ಅವರು ಎಷ್ಟೋ ಹೆಜ್ಜೆ ಮುಂದುವರಿದಿರುವರೆಂಬುದಕ್ಕೆ ಇಂಥ ಕಾರ್ಯಗಳು ನಿದರ್ಶನವೆಂದು ನೆಹರೂ ಹೇಳಿದ್ದು ಸತ್ಯ.

ವಿವಾಹ— [illegible] ಶೆಟ್ಟಿ ಪುತ್ರ [illegible] ೨೮ನೇ [illegible] ನೂತನ ವಧೂವರರಿಗೆ ಶುಭ-ಹಾರೈಕೆಗಳು.

ಹಂಗಾರಕಟ್ಟೆ— ವೇದಾಂತ ಗ್ರಂಥವೊಂದನ್ನು ಬರೆದವರಿಗೆ ಬಾಳೇಕುದುರು ಶ್ರೀ ಮಠ ಸಂಸ್ಥಾನದಿಂದ ನೂರು ರೂಪಾಯಿ ಬಹುಮಾನ ಕೊಡಲಾಗುವದೆಂದು ಈ ಹಿಂದೆ ಪ್ರಕಟಿಸಿದ ವಿಚಾರದಲ್ಲಿ ಗ್ರಂಥವನ್ನು ಕಳುಹಿಸುವರೆ ನಂದನ ಸಂವತ್ಸರದ ಫಾಲ್ಗುಣ ಬಹುಳ ದ ಒಳಗೇ ತಲಪುವಂತೆ ಕಳುಹಿಸಬೇಕೆಂದಿರುವುದನ್ನು ಶ್ರೀ ಶ್ರೀ ಜಗದ್ಗುರುಗಳವರ ಅನುಮತಿ ಮೇರೆಗೆ ಒಂದು ತಿಂಗಳು ಮುಂದುವರಿಸಿದೆ, ಅಂದರೆ ವಿಜಯ ಸಂವತ್ಸರದ ಚೈತ್ರ ಬಹುಳದ ವರೆಗೆ ಸಮಯ ಕೊಟ್ಟಿರುತ್ತದೆಂತ ಈ ಮೂಲಕ ತಿಳಿಸಲಾಗಿರುತ್ತದೆ. ಪಿ. ಸೂ:— ಪಾರಿತೋಷಕಾರ್ಹವಾದ ಉತ್ತಮ ಗ್ರಂಥ ಬಾರದಿದ್ದಲ್ಲಿ ಬಂದಿರುವ ಗ್ರಂಥಗಳಿಗೆ ಯಥೋಚಿತವಾಗಿ, ಅಂಶಿಕವಾಗಿ ಬಹುಮಾನವೀಯಲಾಗುವುದು ಎಂದು ಸೆಕ್ರೆಟರಿ, ಶ್ರೀ ಶಂಕರ ಜಯಂತೀ ಸಭಾ, ಬಾಳೇಕುದುರು ಮಠ ಇವರು ತಿಳಿಸುತ್ತಾರೆ.

ಬಾಳೇಕುದುರ ಮಠದಲ್ಲಿ ಮೇ 17 ಮತ್ತು 18ನೇ ತಾರೀಕುಗಳಲ್ಲಿ ಶ್ರೀ ಶಂಕರ ಜಯಂತಿ ಸಭಾ ಸಂಬಂಧವಾದ ಕಾರ್ಯ ಕ್ರಮಗಳು ಜರಗಲಿವೆ.

ಬಾರಕೂರು- ಇಲ್ಲಿನ ಕೇಂದ್ರಕ್ಕೆ ಒಳಪಟ್ಟ ಶಾಲೆಗಳ ಮಕ್ಕಳ ಹಬ್ಬದ ಉತ್ಸವವು ತಾ. 28-3-53ರಲ್ಲಿ ಕೋಟಾ ವಿವೇಕಾ ಹೈಸ್ಕೂಲಿನ ಅಧ್ಯಾಪಕ ಶ್ರೀ ಕೆ. ರಾಮಚಂದ್ರ ಉಡುಪ, ಬಿ. ಎ. ಬಿ. ಟಿ. ಇವರ ಅಧ್ಯಕ್ಷತೆಯಲ್ಲಿ ಹ್ಯಾಯರ್ ಎಲಿಮೆಂಟರಿ ಶಾಲಾ ವಠಾರದಲ್ಲಿ ಜರಗಿತು. 7 ಶಾಲೆಗಳ ಬಾಬ್ತು ಎಂಟು ಮಕ್ಕಳ ಉತ್ತಮ ರೀತಿಯ ಆಟಗಳನ್ನು ಆಡಿ ತೋರಿಸಿದರು.

ಪ್ರಕಟಣೆ

ಹಾಲಿ ಉಡುಪಿ ಕಸ್ಬಾ ಅಜ್ಜರಕಾಡಿನಲ್ಲಿರುವ ಪೂವಪ್ಪ ಮಡಿವಾಳರ ಮಗ ಲೋಕಯ್ಯ ಮಡಿವಾಳನು ಈ ಮೂಲಕ ಸರ್ವರಿಗೂ ತಿಳುಹಿಸುವುದೇನಂದರೆ—

ತಾ. 26-2-53ನೇ ನವಯುಗದ ಸಂಚಿಕೆಯಲ್ಲಿ ನನ್ನ ತಾಯಿಯು ಒಂದು ಪ್ರಕಟಣೆಯನ್ನು ಹೊರಡಿಸಿದಂತೆ ಕಂಡು ಬರುತ್ತದೆ. ಅದರಲ್ಲಿ ಕಾಣಿಸಿದ ಎಲ್ಲಾ ವಿಚಾರಗಳು ಸತ್ಯಕ್ಕೂ ನ್ಯಾಯಕ್ಕೂ ವಿರೋಧವಾದ್ದು. ನನ್ನ ಹಿರಿ ಸಹೋದರಿ ಗಾರಿ ಮಡಿವಾಳ್ತಿ ಪಟ್ಟಿಕೆ ತಾಯಿಯ ಮಗ ರಾಜು ಮಡಿವಾಳನ ಪಿತೂರಿ ಮ ದುರ್ಭೋಧನೆ ಮೇರೆಗೆ ನನ್ನ ತಾಯಿಯು ಸದ್ರಿ ಪ್ರಕಟಣೆಯನ್ನು ಮಾಡಿಸಿದ್ದಾಗಿರುತ್ತದೆ. ಸದ್ರಿಯವರಿಗೂ ನನಗೂ ಈಗ ವ್ಯವಹರಣೆ ನಡೆಯುತ್ತಲಿದ್ದು ನನ್ನನ್ನು ಹೆಚ್ಚಿನ ನಷ್ಟ ಕಷ್ಟಕ್ಕೆ ಗುರಿಪಡಿಸುವ ಕೆಟ್ಟ ಇರಾದೆಯಿಂದ ಸದ್ರಿಯವರು ನನ್ನ ತಾಯಿಯನ್ನು ಒಳಸಂಚಿಗೆ ತೆಗೆದು ಕೊಂಡು ಈ ರೀತಿ ದುಸ್ಸಾಹಸಕ್ಕೆ ಪ್ರವರ್ತಿಸಿದ್ದಾಗಿರುತ್ತದೆ ಸದ್ರಿ ಪ್ರಕಟಣೆಯಲ್ಲಿ ಪ್ರಸ್ತಾಪಿಸಿದ ಯಾವ ದಸ್ತಾವೇಜೂ ಬಿನಾಮೆಯದ್ದಲ್ಲ. ನನ್ನ ತಾಯಿಯು ನನಗೆ ಬರೆದು ಕೊಟ್ಟ ಧರ್ಮ ಸಾಧನವು ಯಥಾರ್ಥದ್ದು ಹೊರತು ವಂಚನೆಯದಲ್ಲ. ನನ್ನ ಮೇಲಿರುವ ಪ್ರೀತಿಯ ಬೆಸೆಯಿಂದ ಅವಳು ದಸ್ತಾವೇಜನ್ನು ಬರೆಕೊಟ್ಟದ್ದಾಗಿರುತ್ತದೆ, ಅದರ ಆಧಾರದ ಮೇಲೆ ಸದ್ರಿ ಧರ್ಮ ಸಾಧನದಲ್ಲಿ ವಿವರಿಸಿದ ಆಸ್ತಿಗಳು ಈಗ ನನ್ನ ಸಂಪೂರ್ಣ ಮ ಇಚ್ಛಾನುಸಾರ ಹಕ್ಕಿಗೆ ಸಂಬಂಧ ಪಟ್ಟವುಗಳಾಗಿರುತ್ತವೆ. ನನ್ನ ತಾಯಿಯನ್ನು ನಾನು ವಂಚಿಸಿದ್ದಾಗಲೀ ಮೊದಲೇ ಬರಿಸಿ ತಯಾರಿಸಿದ ಕಾಗದಗಳ ಮೇಲೆ ಅವಳ ಎಡಕೈ ಹೆಬ್ಬೆಟ್ಟುಗಳನ್ನು ಪಡದ್ದಾಗಲಿ ಇರುವುದಿಲ್ಲ. ಸದ್ರಿ ಧರ್ಮ ಸಾಧನವನ್ನು ಅವಳು ಸ್ವಬುದ್ಧಿ ಮ ಅತ್ಯ ಸಂತೋಷದಿಂದಲೇ ಬರೆಕೊಟ್ಟದ್ದಾಗಿರುವುದರಿಂದ ಅದರ ವಿಷಯದಲ್ಲಿ ಆಕ್ಷೇಪವೆತ್ತುವರೆ ಯಾರಿಗೂ ತಕ್ಕ ಸಬಬು ಇರುವುದಿಲ್ಲ ಎಂತ ಈ ಮೂಲಕ ಜಾಹೀರು ಮಾಡುತ್ತೇನೆ.

ಲೋಕಯ್ಯ

ಉಡುಪಿ, ತಾ. 3-4-1953

ಕುಕ್ಕೆಹಳ್ಳಿ ಪಂಚಾಯತ ಬೋರ್ಡಿನ— ತಾ. 17-3-53ರಲ್ಲಿ ಜರಗಿದ ಇಲೆಕ್ಷನಿನ ಸಮಯ ಇಲೆಕ್ಷನ್ ಅಫೀಸರರು ಕೆಲವು ಕಾನೂನು ವಿರುದ್ಧ ಚರ್ಯೆಗಳನ್ನು ಮಾಡಿದರೆಂದೂ ಈ ಕುರಿತು ಬೋರ್ಡಿನ ಮಾಜಿ ಪ್ರಸಿಡೆಂಟ್ ಶ್ರೀ ಕುಕ್ಕೇಹಳ್ಳಿ ಗಣಪಯ್ಯ ಶೆಟ್ಟರು ಮೇಲಾಧಿಕಾರರಿಗೆ ಆಕ್ಷೇಪಣೆಕೊಟ್ಟಿರುವರೆಂದೂ ತಿಳಿದು ಬರುತ್ತದೆ.

ಎದುರಾಳಿಗೆ ಪಕ್ಷಪಾತ ತೋರಿಸಿದ್ದು, ಇಲೆಕ್ಷನ್ ಜರಗಿಸುವ ಕ್ರಮಗಳನ್ನು ಮುಂದಾಗಿ ವಿಚಾರಿಸಿದರೂ ಕೊನೆತನಕವೂ ತಿಳಿಸದೆ ಇದ್ದದ್ದು ಅನೇಕ ಮತದಾರರಿಗೆ 11 ಗಂಟೆಯ ಒಳಗೆ ತಾನು ಕಟ್ಟಿಸಿದ ಹಗ್ಗದ ಆವರಣದೊಳಗೆ ಸೇರಲಿಲ್ಲವೆಂಬ ನೆವದಿಂದ ಮತದಾನದ ಅನುಕೂಲತೆ ತಪ್ಪಿಸಿದ್ದು, ಕೆಲವು ಬಿನಾಮೆ ಮತದಾರರಿಗೆ ನೆರವು ಕೊಟ್ಟದ್ದು, ಏಜೆಂಟರನ್ನಿರಿಸಲು ನಿರಾಕರಿಸಿದ್ದು, ತನ್ನನ್ನು ಬಾಧಿಸುವಂತೆ ಕೂತುಕೊಳ್ಳಿಸಿ ಇಲೆಕ್ಷನ್ ಆಫೀಸರೇ ಸ್ವಂತವಾಗಿ ಮತಗಣನೆ ಮಾಡಿ ಗುಪ್ತವಾಗಿ ಬರೆಕೊಂಡದ್ದು, ಇತ್ಯಾದಿಗಳು ಮುಖ್ಯ ಆಕ್ಷೇಪಗಳು ಈ ಕುರಿತು ಸಂಬಂಧ ಪಟ್ಟವರು ತಕ್ಕ ತನಿಖೆ ನಡೆಸುವರೆಂದು ನಿರೀಕ್ಷಿಸಲಾಗಿದೆ

ಮರ್ಣೆ ಎಯ್ಡೆಡ್ ಎಲಿಮೆಂಟರಿ ಶಾಲೆಯಲ್ಲಿ— ತಾ. 26-3-53ರಲ್ಲಿ ಹೆತ್ತವರ ಸಭೆಯು ನೋರ್ತ್ ರೇಂಜಿನ ಶಾಲಾ ಪರೀಕ್ಷಕರಾದ ಶ್ರೀಯುತ H. ಸಂಜೀವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಬಾಲಕ ಬಾಲಕಿಯರಿಂದ 'ಲವಕುಶವಿಜಯ'ವೆಂಬ ಕನ್ನಡ ನಾಟಕವೂ ಹಳೆ ವಿದ್ಯಾರ್ಥಿಗಳಿಂದ 'ಕುಡಿಕೆ ತನದ ಜೀವನ' ವೆಂಬ ಹಾಸ್ಯರಹಿತ ತುಳು ನಾಟಕವೂ ಅಭಿನಯಿಸಲ್ಪಟ್ಟಿತು. ಸಭಿಕರು ಸಮಯಾನುಸಾರವಾಗಿ ಮಾತಾಡುತ್ತಾ ಮಕ್ಕಳ ಹೆತ್ತವರು ಶಾಲೆಯಲ್ಲಿ ಸಹಕರಿಸುವ ಆವಶ್ಯಕತೆಯನ್ನು ಸುರಸವಾಗಿ ವಿವರಿಸಿದರು. ಅಧ್ಯಕ್ಷರು ತಮ್ಮ ಕರದಿಯಲ್ಲಿ ಬಾಲಕರ ಪ್ರೋತ್ಸಾಹವನ್ನು ಕೊಂಡಾಡಿ, ಶಾಲೆಯ ಪ್ರಗತಿಯನ್ನು ಕೋರಿದರು. ಅಲ್ಲದೆ ಊರಿನವರ ಸಹಕಾರವನ್ನು ಪ್ರಶಂಸಿಸಿ 'ಸಹಕಾರವು ಊರಿನ ಪ್ರಗತಿಯ ಸೂಚನೆ!' ಎಂದು ಉದ್ಗರಿಸಿದರು. ರಾಷ್ಟ್ರಗೀತೆಯೊಂದಿಗೆ ಅಂದಿನ ಸಭೆಯು ಮುಕ್ತಾಯವಾಯಿತು

ಮಿತ್ತನಡ್ಕ— ತಾ. 28-3-53ರಲ್ಲಿ ಮಿತ್ತನಡ್ಕ ಬೋ. ಹಾ. ಎ. ಶಾಲೆಯ 20 ಮಂದಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಇಬ್ಬರು ಅಧ್ಯಾಪಕರೊಂದಿಗೆ 'ಬೇಕಲ ಕೋಟೆಗೆ' 'ಶೈಕ್ಷಣಿಕ ಪ್ರವಾಸ' ವನ್ನು ಕೈಕೊಂಡು ಮರು ದಿನ ಹಿಂದಿರುಗಿದರು.

ಶಿರ್ವ— ಸ್ಥಳೀಯ ಹಿಂದೂ ಹೈಸ್ಕೂಲಿನ ಸಹಾಯಾರ್ಥವಾಗಿ 28-1-53ರಲ್ಲಿ ಜರಗಿದ ಶ್ರೀ ಧರ್ಮಸ್ಥಳ ಮತ್ತು ಕೂಡ್ಲು ಜೋಡು ಮೇಳಗಳ ಬಯಲಾಟ ಸಂದರ್ಭದಲ್ಲಿ ಟಿಕೇಟುಗಳ ಮಾರಾಟದಿಂದ ರೂಪಾಯಿ 5580/- ಸಹಾಯಧನವಾಗಿ ಬಂದಿದೆ ಸರ್ವ ವಿಧದಿಂದಲೂ ನೆರವು ಕೊಟ್ಟು ಸಹಕರಿಸಿದ ಮಹನೀಯರಿಗೂ, ಸಂಬಂಧ ಪಟ್ಟ ಶಾಲೆಗಳ ಅಧ್ಯಾಪಕ ವೃಂದಕ್ಕೂ, ಮೇಲ್ಕಾಣಿಸಿದ ಮೇಳಗಳಿಗೂ ಶಾಲಾ ಪರವಾಗಿ ಶಾಲಾ ಬೇಖಕರಾದ ಶ್ರೀ ಕೆ ಮುದ್ದು ಸೆಟ್ಟಿ, ಹೃತ್ಪೂರ್ವಕ ಧನ್ಯವಾದಗಳನ್ನರ್ಪಿಸುತ್ತಾರೆ

ಪಡುಬಿದ್ರೆ– ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಶ್ರೀ ಪಾದಂಗಳವರು ಕಳೆದ ತಾ 31ರಲ್ಲಿ ಪಡುಬಿದ್ರೆ ಮೊಕ್ಕಾಮಿನಲ್ಲಿ ನಮ್ಮ ಗುರುಗಳ ಆರಾಧನೆಯನ್ನು ಅತ್ಯಂತ ಯಶಸ್ವಿಯಾಗಿ ನೆರವೇರಿಸಿದರು ಹರಿಜನರೇ ಮೊದಲಾದ ಬಡಬಗ್ಗರಿಗೂ ಅಂದು ಸಂಜೆ ಅನ್ನಧಾನ ನಡೆದುದು ಎತ್ತಿ ಹೇಳತಕ್ಕದಾಗಿದೆ

ಮನೆ ಸ್ಯಾಟುಗಳು ಮಾರಾಟಕ್ಕಿವೆ– ದ. ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ಅಧೀನದಲ್ಲಿರುವ, ಕಾರ್ಕಳ ತಾಲೂಕಿನ ಕಾರ್ಕಳ ಗ್ರಾಮದ ಕೆಲವು ಮನೆ ಸ್ಯಾಟುಗಳನ್ನು ತಾ 18-4-53ನೆ ಶನಿವಾರ ಪೂರ್ವಾಹ್ನ ಗಂಟೆ 11ರಿಂದ ಸಂಘದ ಅಧ್ಯಕ್ಷರು ಯಾ ಅವರಿಂದ ಅಧಿಕಾರಹೊಂದಿದವರು, ಬಹಿರಂಗ ಏಲಂ ಮಾಡಲಿರುವರು. ಮನೆ ಸ್ಯಾಟುಗಳಿರುವ ಸ್ಥಳದ ಸ್ಕೆಚ್, ನಕಾಶೆ ವಗೈರೆ ವಿವರಗಳು ಕಾರ್ಕಳ ವಕೀಲ್ ಶ್ರೀ ಕೆ ಮಹಾಬಲ ಹೆಗ್ಡೆ, ಸಂಘದ ಅಧ್ಯಕ್ಷ ಮಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಶ್ರೀ ಕೆ. ಟಿ. ಆಳ್ವ, ಕಾರ್ಯದರ್ಶಿ ಮಂಗಳೂರು ಕದ್ರಿ ರಸ್ತೆಯಲ್ಲಿರುವ ವಕೀಲ್ ಶ್ರೀ ಕೆ. ಸುಂದರರಾಮ ಸೆಟ್ಟಿ ಇವರಲ್ಲಿ ದೊರೆಯುವವು (ಹೆಚ್ಚಿನ ವಿವರಗಳನ್ನು ಇದೇ ಸಂಚಿಕೆಯಲ್ಲಿ ಇಂಗ್ಲಿಷಿನಲ್ಲಿ ಪ್ರಕಟವಾಗಿರುವ ಪ್ರಕಟಣೆಯಲ್ಲಿ ನೋಡಬಹುದು)

ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ್ ಕಮಿಟಿಯ ಕಾರ್ಯನಿರ್ವಾಹಕ ಸಮಿತಿಗೆ– ಶ್ರೀ ಎಸ್ ನಿಜಲಿಂಗಪ್ಪನವರು ಈ ಕೆಳಗಿನವರನ್ನು ಆರಿಸುತ್ತಾರೆ – ಶ್ರೀಗಳಾದ ಸಿ ಜೆ. ಅಂಬಲಿ, ಎಮ್.ಎಲ್. ಎ. ಬಿಜಾಪುರ ಮತ್ತು ಯು. ಶ್ರೀನಿವಾಸ ಮಲ್ಯ, ಎಮ್. ಯು. ಪಿ. (ಉಪಾಧ್ಯಕ್ಷರು) ಜಿ. ವಿ. ಹಳ್ಳಿಕೇರಿ, ಎಮ್. ಎಲ್. ಎ. ಮತ್ತು ಎಸ್. ಎಸ್. ಕಿಲ್ಲೆ, ಮಂಗಳೂರು (ಜನರಲ್ ಸೆಕ್ರೆಟರಿಗಳು), ಎಸ್, ಎಲ್. ಶಾಂತಿ ಟಿ ಆರ್. ನೇಶ್ವಿ, ಎಮ್. ಪಿ ಪಾಟೀಲ್, ಡಾ|| ಆರ್ ನಾಗಣ್ಣ ಗೌಡ ಮತ್ತು ಎ. ಬಿ. ಸೆಟ್ಟಿ (ಖಾಯಂ ಆಮಂತ್ರಿತರು) ಕೋಶಾಧಿಕಾರಿಯ ಆಯ್ಕೆ ನಡೆಯಲಿದೆ.

ಕಡಿಯಾಳಿ- ವಿವಾಹ ಸಮಾರಂಭ- ಕೊರಂಗ್ರಪಾಡಿ ಪಟೇಲ್ ಶ್ರೀ ಕೆ. ದೊಡ್ಡಣ್ಣ ಶೆಟ್ಟರು ಸಾ| ನೇತ್ರಾವತಿಯನ್ನು ಇವರ್ತೂರು ಕಂಡ್ಲಾಡಿ ಕೋರಗ ಹೆಗ್ಡೆರ ಪುತ್ರಿ) ತಾ. 5ರಂದು ಕಡಿಯಾಳಿ ದೇವಸ್ಥಾನದಲ್ಲಿ ವಿಜ್ರಂಭಣೆಯಿಂದ ವಿವಾಹವಾದರು.

ಉಡುಪಿ ಡಿ. ಮು, ಕೋರ್ಟಿನಲ್ಲಿ

OS No, 19/1951 R. I. A. No. 105/1953

ಅಂತಯ್ಯ ಶೆಟ್ಟಿ; —ವಾದಿ

ಮತ್ತು

ರಾಮಯ್ಯ ಶೆಟ್ಟಿ ಕೂಡಾ — ಪ್ರತಿವಾದಿಯವರೊಳಗೆ—

ಪೆರ್ಡೂರು ಗ್ರಾಮದಲ್ಲಿರುವ 1ನೇ ಪ್ರತಿವಾದಿ ತುಂಗಮ್ಮ ಶೆಡ್ತಿ ಮಗ ರಾಮಣ್ಣ ಶೆಟ್ಟೀಗೆ.

ಮೇಲ್ಕಂಡ o. s. No. 19/1951 ರಲ್ಲಿ ಕೊಡೋಣಾದ ಪ್ರಿಲಿಮಿನರಿ ಡಿಕ್ರಿಯ ಆಸ್ತಿಪಿಕೆ ಬಗ್ಗೆ ಫೈನಲ್ ಡಿಕ್ರಿ ಕೊಡಬೇಕೆ ಅರ್ಜಿದಾರ ದಾಖಲ್ಮಾಡಿದ ಮೇಲ್ಕಂಡ ಅರ್ಜಿ ತಾ. 16-4-1953ಕ್ಕೆ ತನ್ಖಿಗೆ ಇಟ್ಟಿದೆ, ಈ ಕುರಿತು ಆಕ್ಷೇಪವಿದ್ದರೆ ಸದ್ರಿ ದಿನ 10 ಗಂಟೆಗೆ ಕೋರ್ಟು ಮುಂದೆ ಹಾಜರಾಗಿ ಜಾಹಿರು ಮಾಡಿಕೊಳ್ಳ ತಕ್ಕದ್ದು ತಪ್ಪಿದ್ರೆ ಏಕಪಕ್ಷ ತೀರ್ಮಾನಿಸಲ್ಪಡುವುದು,

B, S. Hegde

ಅರ್ಜಿದಾರನ ಕಡೆ ವಕೀಲ್

ತಾ. 6—4—1953

WANTED

HINDU HIGH SCHOOL SHIRVA. S K

One science B. T., one maths. B. T., one qualified Kannada Pandit, one Higher grade drawing teacher, one qualified craft Teacher. Meduim of instruction Kannada. Scale of pay according to the latest Goverment scale of pay. Experienced teachers will be given a higher intial pay and candidates, applying should be prepared to join duty on 1—6—53. Application should be accompanied with the certified certificates. A copy of the application shuld be submitted to the D, E. O. S. K. Apply to the correspondent.

(Sd) K. Muddu Shetty.

Correspondent,

Shirva. S. K. 4—4—1953.

ದಿ ಬೊಂಬೆಲೈಫ್ ಎಶ್ಯೂರೆನ್ಸ್‌ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10-
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8
} ವರ್ಷ ಒಂದರ ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯುಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ, ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು.

The Bombay Life Assurance Co., Ltd., Bombay

ಇಂದಿನವರೆಗೆ ತಯಾರಾದ ಕನ್ನಡ ಚಿತ್ರಗಳು ಮುಂದಿನ ದಿಕ್ಕು ಕಾಣದೆ ಮೂಲೆ ಸೇರಿದುವಂತೆ— ಭಾರತ ಕನ್ನಡದ ಕೀರ್ತಿ ಹೆಚ್ಚಿಸಿದ ಖ್ಯಾತಿಯಿಂದು ಗುಬ್ಬಿ ಕರ್ನಾಟಕ ಪ್ರೊಡಕ್ಷನ್ಸ್ ನವರ ಗುಣಸಾಗರಿಗೆ ಸಂದಿತಂತೆ.

ಗುಣಸಾಗರಿ (ಕನ್ನಡ ಚಿತ್ರ)

ಜಿ. ಎಚ್. ವೀರಣ್ಣ, ಸಿ. ಹೊನ್ನಪ್ಪ, ಟಿ. ಎಸ್. ಬಾಲಯ್ಯ, ಜಯಮ್ಮ, ಪಂಡರೀಬಾಯಿ, ಕೃಷ್ಣಕುಮಾರಿ ಮೊದಲಾದವರು.

ತಾ. 3—4—1953 ರಿಂದ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಪಡಕಪ್ಪಿ ಋತುಸ್ರಾವವಾಗುವುದು, ಸಕೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಲಹುದು. ಯಾವ ಬಾಧಕವೂ ಯಿಲ್ಲ. ಸಾಕಿರಾರು ಮಂದಿಗೆ ಖಾತ್ರಿ ಗುಣವಾಗಿದೆ– ಬೆಲೆ: ರೂ. 3-; ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ. 8-]ಬಿ ಕ ಪವಿರದಾಳ ಪ್ರತ್ಯೇಕ]

MIS D. DEVEE, F. DS. (N.-J.)

Tollygunge CALCUTTA

ಪ್ರತಿನಿಧಿಗಳು: ಶಹಾಕಂಪೆನಿ, ಮಂಗಳೂರು

ಮಂಗಳೂರು

ವರ್ಗಾವರ್ಗಿ— ಜಿಲ್ಲಾ ಬೋರ್ಡಿನ ಚುನಾವಣೆಯನ್ನು ಮುಂದುವರಿಸಿದ್ದರಿಂದ ಈ ಕೆಳಗಿನ ಅಧಿಕಾರಿಗಳನ್ನು ವರ್ಗಾಯಿಸಲಾಗಿದೆ. ಮಂಗಳೂರು ತಾಲೂಕು ಚುನಾವಣಾ ಡಿ. ತಹಶಿಲ್ದಾರರಾಗಿದ್ದ ಶ್ರೀ ಕೆ. ಬಾಬು ಸೆಟ್ಟಿ ಅವರಿಗೆ ಹೊಸದುರ್ಗಕ್ಕೆ ಪೂರಯಿಕೆ ಅಧಿಕಾರಿಗಳಾಗಿಯೂ, ಉಡುಪಿ ತಾಲೂಕು ಚುನಾವಣಾ ಡಿ. ತಹಶಿಲ್ದಾರರಾಗಿದ್ದ ಶ್ರೀ ಎ. ಎಸ್. ಡಿ'ಸೋಜರವರಿಗೆ ಪುತ್ತೂರಿಗೆ ಹೆಚ್ಚು. ಡಿ. ತಹಶಿಲ್ದಾರರಾಗಿಯೂ, ಪುತ್ತೂರಿನಲ್ಲಿರುವ ಶ್ರೀ. ಕೆ. ಸಿ. ಬಾಲಕೃಷ್ಣ ನಾಯರ್‌ರವರಿಗೆ ಪುತ್ತೂರು ಸ್ಪೆ. ಸಬ್ ಮೆಜಿಸ್ಟ್ರೇಟರಾಗಿಯೂ, ಕುಂದಾಪುರದ ಚುನಾವಣಾ ಡಿ. ತಹಶಿಲ್ದಾರರಾಗಿದ್ದ ಶ್ರೀ ಕೆ. ಮಾಧವರಾಯರಿಗೆ ಕಾರ್ಕಳ ಸ್ಪೆ. ಸಬ್ ಮೆಜಿಸ್ಟ್ರೇಟರಾಗಿಯೂ, ಪುತ್ತೂರಿನ ಸ್ಪೆ. ಸಬ್ ಮೆಜಿಸ್ಟ್ರೇಟರಾಗಿದ್ದ ಶ್ರೀ ಡಜ್ಲ್ಯು. ಈ. ಸಿಕ್ವೇರರವರಿಗೆ ಕಾಸರಗೋಡು ತಾಲೂಕು ಶಿರಸ್ತೇದಾರರಾಗಿಯೂ, ಕಾಸರಗೋಡು ಶಿರಸ್ತೇದಾರರಾಗಿದ್ದ ಶ್ರೀ ಕೆ. ಎ. ಉಪಾಧ್ಯಾಯರಿಗೆ ಹೊಸದುರ್ಗ ಸಬ್ ತಾಲೂಕಿನ ಸಬ್ ತಾಲೂಕು ಶಿರಸ್ತೇದಾರರಾಗಿಯೂ, ವರ್ಗಾಯಿಸಲಾಗಿದೆ.

ಭಾಷಣ— ತರುಣ ಸಾಹಿತಿಗಳಾದ ಶ್ರೀ ಕ. ರಾ. ಸುಬ್ಬರಾಯರು ಇದೇ ತಾ. 3ರಲ್ಲಿ ಮಂಗಳೂರಿನ ತರುಣ ಕಲಾವೃಂದದ ಆಶ್ರಯದಲ್ಲಿ 'ಇಂದಿನ ಸಾಹಿತ್ಯದ ರೂಪರೇಖೆಗಳು' ಎಂಬ ವಿಚಾರವಾಗಿ ಮಾತನಾಡುತ್ತ, ಸಾಹಿತ್ಯದಲ್ಲಿ ಇದು ಬೇಕು ಅದು ಬೇಡವೆಂಬ ವಾದ ವಿವಾದ ಬೇಡವೆಂದೂ ಸಾಹಿತಿಯು ಮಾನವ ಕೋಟಿಯ ಕಲ್ಯಾಣಕ್ಕಾಗಿ ಬರೆಯಬೇಕೆಂದೂ, ಅದನ್ನು ಸಾಮಾಜಿಕರು ಮುಕ್ತ ಕಣ್ಣಿನಿಂದ ಓದಬೇಕೆಂದೂ ಕೇಳಿಕೊಂಡರು. ಶ್ರೀ. ಎಂ. ರಾಮ ಭಟ್ಟರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ. ಪ್ರಭಾಕರ ರಾಯರ ವಂದನಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ವಿದಾಯ ಸತ್ಕಾರ—ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರರಾಗಿದ್ದ ಶ್ರೀ. ಸಿ. ಎ. ರಾಮಕೃಷ್ಣನ್ ಅವರು ಮಧುರೆಗೆ ವರ್ಗಾಯಿಸಲ್ಪಟ್ಟುದರಿಂದ ಅವರನ್ನು ಬೀಳ್ಕೊಡುವ ಸತ್ಕಾರ ಸಭೆಯು ಇದೇ ತಾ. 3ರಂದು ಸಂಜೆ ಜಿಲ್ಲಾ ಬೋರ್ಡು ಸಭಾ ಸದನದಲ್ಲಿ ಜರಗಿತು. ಸಭೆಯಲ್ಲಿ ನಗರದ ಅಧ್ಯ ಮಹನೀಯರೂ ಇಲ್ಲಿಗೆ ಕಲೆಕ್ಟರರಾಗಿ ಬಂದಿರುವ ಶ್ರೀ. ಮಹಾಲಿಂಗ ಚೆಟ್ಟಿಯಾರರೂ ಸಭೆಯಲ್ಲಿದ್ದರು. ಪಲಾಹಾರವಾದೊಡನೆ ವರ್ಗವಾಗಿ ಹೋಗುವ ಶ್ರೀ. ಸಿ. ಎ. ರಾಮಕೃಷ್ಣನ್, ಅವರ ವಿದಾಯವಾಗಿ ಶ್ರೀಗಳಾದ ಕೆ. ಸೂರ್ಯನಾರಾಯಣ ಅಡಿಗ, ಡಾ. ಎ. ಎಫ್. ಕ್ರೊಜೊ, ಬಿ. ಆರ್. ರಂಗನಾಥ ಪೂಂಜ, ಡಿ. ಮೋಹನರಾವ್, ಎಸ್. ಗೋಪಾಲ ಸಾಲಿನ್ಸ ಮತ್ತು ಬಿ. ಮಂಜಯ್ಯ ಹೆಗ್ಡೆ ಮೊದಲಾದವರು ಭಾಷಣಮಾಡಿದರು. ಶ್ರೀ. ರಾಮಕೃಷ್ಣನ್, ಅವರು ಉತ್ತರವೀಯುತ್ತಾ, ಜಿಲ್ಲೆಯ ಜನತೆ ತನಗಿತ್ತ ಸಹಕಾರಕ್ಕಾಗಿ ಆಭಾರ ಮನ್ನಿಸಿದಲ್ಲದೆ ಜಿಲ್ಲೆಯ ಸೌಂದರ್ಯಾದಿಗಳನ್ನು ಕೊಂಡಾಡಿದರು. ಡಾ. ಕೆ. ನಾಗಪ್ಪಾಳ್ವರು ಅಭಿನಂದಿಸಿದರು.

ಶ್ರೀ ಕುಳುಕುಂದ ಶಿವರಾಯರ ಭಾಷಣ. ಶ್ರೀ ಕುಳುಕುಂದ ಶಿವರಾಯರು ಕಳೆದ ತಾ. 31ರಲ್ಲಿ ಮಂಗಳೂರಿನ ಜನಪದ ಕಲಾಮಂಡಳಿಯ ನೇತೃತ್ವದಲ್ಲಿ ಜರಗಿದ ಸಭೆಯಲ್ಲಿ ಮಾತನಾಡುತ್ತಾ, ಕನ್ನಡದ ಆರಂಭ ಕಾಲದಲ್ಲಿ ಕನ್ನಡದ ಪ್ರಚಾರಕ್ಕೆ ಕನ್ನಡ ಸಾಹಿತ್ಯ ಸಮಸ್ಯೆಗಳು ಪ್ರಾಮುಖ್ಯವಾಗಿದ್ದು ಅಂದಿನ ವಿಮರ್ಶೆಯು ರೀತಿಯೊಂದು ತೆರನಾಗಿತ್ತೆಂದೂ, ಆದರೆ ಇಂದು ಆ ಮಟ್ಟ ಸರಿಯಲ್ಲವೆಂದೂ ತಿಳಿಸಿದರು. ಅಲ್ಲದೆ ಮಕ್ಕಳ ಹೆಸರಿನಲ್ಲಿ ಹೆಂಗಸರ ಹೆಸರಿನಲ್ಲಿ ಮತ್ತು ವಿಜ್ಞಾನದ ಹೆಸರಿನಲ್ಲಿ ಕನ್ನಡದ ಮೇಲಾಗುವ ದಾಳಿಯನ್ನು ವಿವರಿಸಿ ಕೊನೆಯಲ್ಲಿ ದಿಲ್ಲಿಯಲ್ಲಿ ಪ್ರಗತಿಶೀಲ ಸಾಹಿತ್ಯ ಸಮ್ಮೇಳನದಲ್ಲಾದ ನಿರ್ಣಯಗಳ ಸಾರವನ್ನು ಹೇಳಿದರು.

ವಿಮಾನ ಹಾರಾಟ- ಮದ್ರಾಸಿನ ಫ್ಲೈಯಿಂಗ್ ಕ್ಲಬ್ಬಿನವರು ಇದೇ ತಾ. 6ರಿಂದ ಬಜ್ಪೆ ವಿಮಾನ ನಿಲ್ದಾಣದಿಂದ ಸಣ್ಣ ವಿಮಾನವೊಂದರ ಮೂಲಕ ಮಂಗಳೂರಿನ ಸುತ್ತಲೂ ಒಂದು ವಾರದ ತನಕ ವಿಹಾರಾರ್ಥ ಹಾರಾಟದ ವ್ಯವಸ್ಥೆಯನ್ನು ಮಾಡಿದ್ದಾರೆ. ದೊಡ್ಡವರಿಗೆ ರೂ. 10, ಮಕ್ಕಳಿಗೆ ರೂ. 5ರಂತೆ ತೆರಬೇಕಾಗುವುದು.

ವಿವಾಹ ಸಮಾರಂಭ—ಇದೇ ತಾ. 1ರಂದು ಶ್ರೀ. ಕೊಡಿಯಾಲಗುತ್ತು ರಾಮಯ್ಯ ಆಳ್ವರ ಪುತ್ರ ಶ್ರೀ. ಬಿ. ಸಿ. ಆಳ್ವ, ಬಿ.ಎ., ಬಿ.ಇ. ಅವರು ಡಾ. ಎಂ. ಆರ್. ಶೆಟ್ಟಿ ಪುತ್ರಿ ಸೌ. ಸುವಾಸಿನಿಯನ್ನು ಜ್ಯೋತಿ ಟಾಕೀಸಿನಲ್ಲಿ ವಿಜೃಂಭಣೆಯಿಂದ ವಿವಾಹವಾದರು.

ದ. ಕ. ಜಿಲ್ಲಾ ದೇವಡಿಗರ ಸಮಾಜ ಸುಧಾರಕ ಸಂಘ—ಕಳೆದ ತಾ. 29ನೇ ಆದಿತ್ಯವಾರ ಬೆ. ಗಂ॥ 10ಕ್ಕೆ ಮೇಲ್ಪಾಣಿಸಿದ ಸಂಘ ಸ್ಥಾಪನೆಯ ಪ್ರಥಮ ಸಭೆಯು ಪಿಂಟೊ ಮಹಲಿನ ಮಾಳಿಗೆಯಲ್ಲಿ ಶ್ರೀ॥ ಬೇಲಗದ್ದೆ ವಿದ್ವಾನ್ ಅಪ್ಪಯ್ಯರವರ ಅಧ್ಯಕ್ಷತೆಯಲ್ಲಿ ಜರಗಿತು. ಕಂಕನಾಡಿ ಶ್ರೀ ಸಂಕಪ್ಪ ದೇವಡಿಗರು ಅಧ್ಯಕ್ಷ ಮತ್ತು ಕೋಶಾಧಿಕಾರಿಯಾಗಿಯೂ, ಬಜ್ಪೆ ಶ್ರೀ. ಕೋಚ್ಚಪ್ಪ ದೇವಡಿಗರು ಉಪಾಧ್ಯಕ್ಷರಾಗಿಯೂ, ಶ್ರೀ. ಎಂ. ಬಿ. ನರಸಪ್ಪ ಮತ್ತು ಶ್ರೀ ಎಂ. ಗೋವಿಂದ ಕಾರ್ಯದರ್ಶಿಯರಾಗಿಯೂ, ಬಾಕಿ 7 ಮಂದಿ ಕಾರ್ಯಕಾರಿ ಸಮಿತಿಯ ಸದಸ್ಯರಾಗಿಯೂ ಆರಿಸಲ್ಪಟ್ಟು, ಸಂಘದ ಕಾರ್ಯಕಲಾಪಗಳನ್ನು ನಡೆಸಬೇಕಾಗಿ ಮಂಜೂರು ಮಾಡಲಾಯಿತು.

ಶೋಚನೀಯ ನಿಧನ— ಸ್ಥಳೀಯ 'ಸುಖ ನಿವಾಸ' ಹೋಟೇಲಿನ ಮಾಲಕರಾದ ಶ್ರೀ. ವಾಸುದೇವ ನಾಯ್ಕರು ತಮ್ಮ 42 ವರ್ಷ ಪ್ರಾಯದಲ್ಲಿ ಇದೇ ತಾ. 5ರಲ್ಲಿ ಬೆಳಿಗ್ಗೆ ಸುಮಾರು 7 ಗಂಟೆಗೆ ಅಕಸ್ಮಾತ್ ಹೃದಯಸ್ತಂಭನದಿಂದ ನಿಧಿವಶರಾದರೆಂಬ್ಬಲು ವಿಷಾದಿಸುತ್ತೇವೆ. ದಿವಂಗತರು ಆರಂಭದಲ್ಲಿ ಉಡುಪಿಯಲ್ಲಿ 'ಸುಖ ನಿವಾಸ'ವನ್ನು ಆರಂಭಿಸಿ ಯಶಸ್ವಿಯಾಗಿ ನಡೆಸಿಕೊಂಡು ಬಂದು, ತಮ್ಮ ಸರಳ ಸಾಧುಸ್ವಭಾವದಿಂದ ಜನಪ್ರಿಯತೆ ಗಳಿಸಿದ್ದರು. ಅನಂತರ ಸುಮಾರು 15 ವರ್ಷಗಳ ಹಿಂದೆ ಇಲ್ಲಿ ಸುಖನಿವಾಸದ ಶಾಖೆ ತೆರೆದು ಇಲ್ಲಿಯೂ ಜನಾದರಗಳಿಸಿದ್ದರು. ಅವರ ಕುಟುಂಬದವರಿಗೂ ಇಷ್ಟಮಿತ್ರರಿಗೂ ಉಂಟಾದ ಅಪಾರ ದುಃಖದಲ್ಲಿ ನಮ್ಮ ಸಂತಾಪವನ್ನು ಸೂಚಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವೆವು.

ಶ್ರೀ. ವಿ. ಎಸ್. ಕುದ್ವರ ಆಯ್ಕೆ— "ನವಭಾರತ" ಸಂಪಾದಕರೂ ಸಿ. ಪಿ. ಸಿ. ಕಂಪೆನಿಯ ಮೆನೇಜಿಂಗ್ ಡೈರೆಕ್ಟರರೂ ಆದ ಶ್ರೀ. ವಿ. ಎಸ್. ಕುದ್ವರು ಕೆನರಾ ವಣಿಕ ಸಂಘದ ಪ್ರತಿನಿಧಿಯಾಗಿ ಮದ್ರಾಸಿನ ಬ್ರಾಡ್‌ಗೇಜ್ ರೀಜನಿನ ಪ್ರಾದೇಶಿಕ ರೈಲ್ವೆ ಪ್ರಯಾಣಿಕರ ಸಲಹಾ ಸಮಿತಿಯ ಸದಸ್ಯರಾಗಿ ನೇಮಿಸಲ್ಪಟ್ಟಿರುವರು. ಈ ಸಮಿತಿಯ ಪ್ರಥಮ ಸಭೆಯು ಮದ್ರಾಸಿನಲ್ಲಿ ಇದೇ ತಿಂಗಳ ತಾ. 14ರಲ್ಲಿ ಜರಗಲಿರುವುದು.

ಸ್ಥಳೀಯ ರೈಲ್ವೆ ಸಲಹಾ ಸಮಿತಿಗಳ ಬದಲು ರೈಲ್ವೆ ಪ್ರಯಾಣಿಕರ ಪ್ರಾದೇಶಿಕ ಸಲಹಾ ಸಮಿತಿಯನ್ನೂ, ಪ್ರತಿಯೊಂದು ರೈಲ್ವೆಯ ಕೇಂದ್ರದಲ್ಲಿ ಆ ವಲಯದ ರೈಲ್ವೆ ಪ್ರಯಾಣಿಕರ ಸಲಹಾ ಸಮಿತಿಯನ್ನೂ, ಕೇಂದ್ರದಲ್ಲಿ ರಾಷ್ಟ್ರೀಯ ರೈಲ್ವೇ ಪ್ರಯಾಣಿಕರ ಸಲಹಾ ಸಮಿತಿಯನ್ನು ರಚಿಸಲು ಭಾರತ ಸರಕಾರವು ಇತ್ತೀಚೆಗೆ ನಿರ್ಧರಿಸಿತ್ತು.

ಬೆಳ್ಪರೆ— ಬೆಳ್ಪರೆಯ ಸಮೀಪದಲ್ಲಿರುವ ಗೌರಿಹೊಳೆಗೆ ಸಂಕ ಕಟ್ಟುವ ಯೋಜನೆಯನ್ನು ಫಿರ್ಕಾಭಿವೃದ್ಧಿ ಖಾತೆಯವರು ಸ್ವೀಕರಿಸಿದ್ದಾರೆ. ಈ ಯೋಜನೆಗೆ ಸುಮಾರು ರೂ. 22,000 ಖರ್ಚಾಗಬಹುದು. ಇದರಲ್ಲಿ ರೂ. 5,500ನ್ನು ಊರವರು ಸಂಗ್ರಹಿಸಬೇಕಾಗಿದೆ. ಈ ಸಂಗ್ರಹಕ್ಕಾಗಿ ಕಳೆದ ತಾ 29ರಲ್ಲಿ ಶ್ರೀಗಳಾದ ಡಾ| ಬಾಳಪ್ಪ ಸೆಟ್ಟಿ, ಕೆ. ಎಮ್. ಬಾಬು ಸೆಟ್ಟಿ, ರೂರಲ್ ವೆಲ್‌ಫೇರ್ ಆಫೀಸರ್ ಮೊದಲಾದವರು ಪಾಜ, ಎಣ್ಣಾರ್ ಮಿಯ್ಯಾರ್ ಮೊದಲಾದ ಗ್ರಾಮಗಳಲ್ಲಿ ಸಂಚರಿಸಿದರು. ಈ ಸಂಕದ ಯೋಜನೆಯು ಪೂರ್ಣವಾದರೆ ಪಂಚ ಸೀಮೆಗೆ ಸಾಗೆಯಲ್ಲಿದ್ದ ಬಹು ದೊಡ್ಡ ಆತಂಕದ ನಿವಾರಣೆಯಾಗುವುದು.

ಮುನಿಸಿಪಲ್ ಕೆಲಸಗಾರರ ಜನಸಾಧಾರಣ ಮಹಾಸಭೆಯು— ಇದೇ ತಾ. 1ರಲ್ಲಿ ಶ್ರೀ ಎ. ಶಾಂತಾರಾಮ ಪೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ. ಕೆ. ಮೋನಪ್ಪ ಶೆಟ್ಟಿ ಚೆಯರ್‌ಮೇನರಿಂದ, ಕಮಿಶನರಿಂದ, ಲೇಬರ್ ಆಫೀಸರಿಂದ ಬಂದ ಪತ್ರಗಳನ್ನು ಓದಿ ಹೇಳಿದ ಬಳಿಕ, ಮುನಿಸಿಪಲ್ ಕೌನ್ಸಿಲಿನ ಶಿಫಾರಸನ್ನು ಮಾನ್ಯಮಾಡಿ, ತಾ 27-3-53ರಂದು ಹೊರಡಿಸಿರುವ ಸರಕಾರದ ಆಜ್ಞೆಯೊಂದರಲ್ಲಿ ಮೂಲ ಸಂಬಳದಲ್ಲಿ ರೂಪಾಯಿ 3 ಭತ್ತೆ ಕೊಡಲೊಪ್ಪಿದುದನ್ನು ಸಭೆಯು ಸ್ವಾಗತಿಸಿತು. ಬಳಿಕ ತಾರೀಕು 25-3-53ರಂದು ಕೊಟ್ಟಿರುವ ಸಾಂಕೇತಿಕ ಮುಷ್ಕರದ ನೋಟೀಸನ್ನು ಹಿಂತೆಗೆಯಲು ಸಭೆಯು ತನ್ನ ಒಪ್ಪಿಗೆಯನ್ನಿತ್ತಿತು.

ಮಂಗಳೂರು ನಗರಸಭೆಯು— ಕಳೆದ ತಾ. 28ರಲ್ಲಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. 1953-54ನೆ ವರ್ಷದ ಬಾಬ್ತು ಮಾಂಸ ಮಾರುವ ಅಂಗಡಿಗಳ ಏಲಂ ಆದುದನ್ನು ಮಂಜೂರು ಮಾಡಲಾಯಿತು. ಮಾರ್ಕೆಟ್ ರೋಡ ... ಸ್ಟಾಲುಗಳು ರೂ. 3,300, ಕಂಕನಾಡಿಯ 2 ಸ್ಟಾಲುಗಳು ರೂ. 1725, ಕದ್ರಿ ಸಂತೆಯಲ್ಲಿ ರೂ. 325, ಅತ್ತಾವರದ ಕಸಾಯಿಗುಡಿ ರೂ. 1,475. ಇದಲ್ಲದೆ ಬಸ್ ಸ್ಟೇಂಡಿನ ಮಾಳಿಗೆಯ 14 ಕೋಣೆಗಳಿಗೆ ರೂ. 9,550 ಏಲಂ ಆದುದನ್ನು ಮಂಜೂರು ಮಾಡಲಾಯಿತು. ಅಂದಿನ ಸಭೆಯಲ್ಲಿ ಆರೋಗ್ಯ ಖಾತೆಯ ಕೂಲಿಗಳ ಮುಷ್ಕರ ನೋಟೀಸು ಚರ್ಚೆಗೆ ಬಂದಾಗ ಮುಷ್ಕರಕ್ಕೆ ನಗರ ಸಭೆಯು ಸಹಾನುಭೂತಿಯಿಲ್ಲವೆಂಬ ವಾಕ್ಯದ ತಿದ್ದುಪಡಿಗಾಗಿ ಚರ್ಚೆಯಾಗಿ ಶ್ರೀ. ಪಿ. ಎಂ. ನಾರಾಯಣ ಮೂರ್ತಿಯವರ ತಿದ್ದುಪಡಿಯು 7 ಮತ್ತು 11 ಮತಗಳಿಂದ ಬಿದ್ದು ಹೋಯಿತು. ಹಲವು ಸದಸ್ಯರು ತಟಸ್ಥರಿದ್ದರು. ಇದಲ್ಲದೆ ಹಲವು ಬಿಲ್ಲುಗಳು ಮಂಜೂರಾದುವು.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂಆಗಿಯೂ, ಚಿಲ್ಲರೆಯಾಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ

ರಥಬೀದಿ ಉಡುಪಿ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ

ನವಜೀವಾತು

ಎಂಬ

ಸೂತಿಕಾರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹ ಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರ ಪ್ರವರಸಾಯನ.

ಹೆಚ್ಚಿನ ಮಾಹಿತಿಗೆ— ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ. ಎಂ.
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ವಾಕಿಸ್ಟರು:— ಡಾ| ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಬೇಳಬೇಳೆ

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ್

ಆಯಾಸ ಪರಿಹಾರ

[೧ನೇ ಪುಟದಿಂದ]

ಉಪಯೋಗಿಸುವುದರ ಬದಲು ಅನಾವಶ್ಯಕವಾಗಿ ಮುಖವನ್ನೂ ಮೇಲೆತ್ತಿ ಜಿರಾಫೆಯ ಕೊರಳು ಮಾಡಿ ನೋಡುತ್ತೇವೆ. ನಮಗೆ ಮಗ್ಗುಲಲ್ಲಿರುವವರೊಬ್ಬರನ್ನು ನೋಡಬೇಕೆಂದಿಟ್ಟುಕೊಳ್ಳೋಣ—ಕೇವಲ ಕತ್ತು ತಿರುಗಿಸಿದರೆ ಸಾಕು, ನಾವವರನ್ನು ಕಾಣ ಬಲ್ಲೆವು. ಅಂಥದರಲ್ಲಿ ಇಡೀ ದೇಹವನ್ನು ತಿರುಗಿಸಿ ಏಕಾಗಬೇಕೆಂದೇ ಆಯಾಸ ತಂದುಕೊಳ್ಳಬೇಕು? ನಾವು ಕುಳಿತುಕೊಳ್ಳುವ, ಏಳುವ, ನಡೆಯುವ ಪ್ರತಿಯೊಂದು ರೀತಿಯಿಂದಲೂ ನಮ್ಮ ಶಕ್ತಿಯು ವ್ಯರ್ಥವಾಗಿ ವ್ಯಯ ಹೊಂದದಂತೆ ಮಿತವ್ಯಯವನ್ನು ಜ್ಯಾರಿಗೆ ತರಲು ಸಾಧ್ಯವಿದೆ. ಅದನ್ನು ಅರಿತುಕೊಂಡು ಜಾಗರೂಕತೆಯಿಂದ ವರ್ತಿಸಿದರೆ, ನಮಗೆ ಅದರಿಂದ ಲಾಭವಿದೆ.

ಆಯಾಸ ಪರಿಹಾರದ ಸುಲಭ ಉಪಾಯವೊಂದನ್ನು ನಿರ್ದೇಶಿಸಿದರೆ, ಅದರಿಂದ ನಮ್ಮಲ್ಲಿ ಹಲವರ ದೊಡ್ಡ ಸಮಸ್ಯೆಯೊಂದು ದೂರಾದೀತು. ಆಯಾಸದಿಂದ ಮುಕ್ತರಾಗಲು ನಾವು ಮನಸ್ಸಿನ ಬಲವನ್ನು ಬದಲಿಸಬೇಕೆನ್ನುವುದೊಂದು ಸೂತ್ರ, ಇದನ್ನು ಅನುಸರಿಸಿಯೇ ಈ ಔಷಧಿ ತಯಾರುಗೊಂಡಿದೆ. ನೀವೇನಾದರೂ ಕೆಲಸಮಾಡುತ್ತಿದ್ದರೆ, ಆಗ ನಿಮ್ಮಷ್ಟಕ್ಕೆ ಏನಾದರೂ ಗುಣುಗುಟ್ಟುತ್ತಾ ಇದ್ದುಬಿಡಿರಿ! ನೀವು ತುಟಿಯಲುಗಿಸಿ ಗುಣುಗುಣೆನ್ನುವುದರಲ್ಲಿ ನಿಮ್ಮೆಲ್ಲ ಆಯಾಸವನ್ನೂ ಪರಿಹರಿಸುವ ಅಪೂರ್ವ ಶಕ್ತಿ ನಿಹಿತವಾಗಿದೆ! ಮನಸ್ಸಿನ ಬೇಸರಗಳೆಲ್ಲ ಮೂಲೆಪಾಲಾಗಿ, ಅಲ್ಲಿ ಶಾಂತಿ ನೆಲೆಗೊಳ್ಳುತ್ತದೆ. ಕೆಲಸಮಾಡಿದ್ದು ತಿಳಿಯುವುದೇ ಇಲ್ಲ ಆದಕಾರಣ ಆಯಾಸವೆನಿಸುವುದೂ ಇಲ್ಲ. ಆದರೆ ನಾಲ್ಕುಜನ ಕೂಡಿರುವಾಗ ನೀವು ಗೊಣಗುಟ್ಟಿದರೆ, ಅವರು ತಪ್ಪು ತಿಳಿದುಕೊಂಡಾರು. ಆ ಮಟ್ಟಿಗೆ ಸ್ವಲ್ಪ ಜಾಗರೂಕತೆಯನ್ನು ವಹಿಸುವುದವಶ್ಯ. ನಾವೆಲ್ಲರೂ ಲವಲೇಶವಾದರೂ ಆಯಾಸ ಹೊಂದದೆ, ಸದಾ ಚಟುವಟಿಕೆಯಿಂದಲೂ ಕಾರ್ಯೋತ್ಸಾಹದಿಂದಲೂ ಕೂಡುವಂತಾಗಲಿ!

—ಓಂತತ್ಸತ್||

ಅಮೃತಾಂಜನ

ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ಎದೆ ನೋವುಗಳಿಗೂ ಗಾಯಗಳು, ಬಾತುಕೊಳ್ಳುವುದು ಚೇಳುವಿಷ ಮುಂತಾದುವು, ಪಕ್ಷವಾತ, ನೋಡಿವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧಿ.



ಹುಳು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

REGD.

ಅಮೃತಾಂಜನ ಲಿಮಿಟೆಡ್

ಮದರಾಸು ಬೊಂಬಾಯಿ ಮತ್ತು ಕಲ್ಕತ್ತ

ಅಧಿಕ ಉಳಿತಾಯದ ಚಳವಳ

[೬ನೇ ಪುಟದಿಂದ]

ಳಿಗೆ ೬೧ ರೂಪಾಯಿಗಳ ಜೀವವಿಮೆ ಇದೆ ಎಂದು ಸಂಖ್ಯಾ ಶಾಸ್ತ್ರಜ್ಞರ ಅಭಿಪ್ರಾಯ. ಅಮೇರಿಕದಲ್ಲಿ ಈ ಪ್ರಮಾಣ ಪ್ರತಿಯೊಬ್ಬನಿಗೆ ೭೫೦೦ ರೂಪಾಯಿಯಷ್ಟಿದೆ. ನಮ್ಮಲ್ಲಿ ವಿಮೆ ಇಳಿಸಿದ ಜನರೇ ಕಡಿಮೆ ಎಂಬುದನ್ನು ಇದು ತೋರಿಸುತ್ತದೆ. ವಿಮೆ ಇಳಿಸಿದ ಜನರನ್ನು ನೋಡಿದರೂ, ಒಂದೊಂದು ಪಾಲಿಸಿಯ ಸರಾಸರಿ ೨೦೦೦ ರೂಪಾಯಿಗಳಷ್ಟು ಮಾತ್ರ ಇದೆ. ಅದರಲ್ಲೂ ಎಲ್ಲರೂ ಕೊನೆಯವರೆಗೂ ಹಣ ಕಟ್ಟುತ್ತಿಲ್ಲ. ಅರೆವಾಸಿಗೂ ಹೆಚ್ಚಿನವರು ನಡುವೆಯೇ ಕಟ್ಟುವುದನ್ನು ನಿಲ್ಲಿಸುವರು. ಇದರಿಂದ ನಮ್ಮ ದೇಶದಲ್ಲಿ ವಿಮಾ ವ್ಯವಹಾರವನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಜನಪ್ರೀತಗೊಳಿಸಲು ಬಹಳ ಅವಕಾಶವಿದೆ ಎಂಬುದು ವ್ಯಕ್ತಗೊಳ್ಳುತ್ತದೆ. ನಮ್ಮ ಹಳ್ಳಿಗಳಿಗೆ ವಿಮಾ ಸೌಲಭ್ಯವನ್ನು ಚೆನ್ನಾಗಿ ವಿವರಿಸಿ ಹೇಳಬಲ್ಲವರ ಅಗತ್ಯವಿದೆ; ಅವರಲ್ಲಿ ಈ ಕುರಿತು ಆಸ್ಥೆ ಉತ್ಪನ್ನಗೊಳ್ಳುವಂತೆ, ವಿದ್ಯಾ ಸಂಸ್ಕಾರದ ಅಗತ್ಯವೂ ಅಷ್ಟೇ ಇದೆ.

ಪಾಲಿಸಿದಾರರ ಕ್ಷೇಮಚಿಂತನೆ

ನಮ್ಮ ದೇಶದ ವಿಮಾ ವ್ಯವಹಾರವು ೧೯೪೬ನೇ ವರ್ಷದಲ್ಲಿ ತುತ್ತ ತುದಿ ಸೇರಿತು. ಆದರೆ ೧೯೪೭ರಲ್ಲಿ ಭಾರತವು ವಿಭಜನೆಗೊಂಡುದರ ಪರಿಣಾಮವಾಗಿ, ಆ ವರ್ಷ ಮತ್ತು ಆ ಬಳಿಕ ವಿಮಾವ್ಯವಹಾರದ ಮೊತ್ತ ಇಳಿಮುಖಗೊಂಡಿತು. ಹೀಗಿದ್ದರೂ ಪ್ರಗತಿ ಕುಂಠಿತವಾಯಿತೆನ್ನಲು ಕಾರಣವಿಲ್ಲ. ೧೯೫೧ರಲ್ಲಿ ಭಾರತದಲ್ಲಿ ಆದ ವಿಮಾ ವ್ಯವಹಾರವು ೧೩೨೯೦ ಲಕ್ಷ ರುಪಾಯಿಗಳು; ೧೯೪೬ರಲ್ಲಿ ೧೪೪೩೦ ಲಕ್ಷ ರುಪಾಯಿಗಳಾಗಿದ್ದವು ೧೯೪೬ರ ಸಂಖ್ಯೆ ಅವಿಭಾಜ್ಯ ಭಾರತದ್ದೆಂಬುದನ್ನು ಲಕ್ಷಿಸಿದರೆ, ನಾವು ನಿಧಾನವಾಗಿ ಪ್ರಗತಿಯನ್ನೆ ಹೊಂದುತ್ತಿರುವೆವೆನ್ನಬಹುದು. ೧೯೫೧ನೇ ವರ್ಷಾಂತ್ಯದಲ್ಲಿ ಭಾರತೀಯ ವಿಮಾ ಕಂಪೆನಿಗಳ ಮೂಲವು ೨೪೯೮೦ ಲಕ್ಷ ರುಪಾಯಿಗಳಾಗಿದ್ದುವು. ಇದರಲ್ಲಿ ೧೨೫೩೧ ಲಕ್ಷ ರುಪಾಯಿಗಳು ಸರಕಾರದೊಡನೆಯೂ ೧೭೮೮ ಲಕ್ಷ ರುಪಾಯಿಗಳು ಮುನಿಸಿಪಾಲಿಟಿ, ಪೋರ್ಟಟ್ರಸ್ಟ ಮುಂತಾದವುಗಳೊಡನೆಯೂ ನಿಕ್ಷೇಪಿಸಲ್ಪಟ್ಟಿದ್ದುವು. ಸರಕಾರದ ಕೂಡೆ ಹಣವನ್ನು ನಿಕ್ಷೇಪಿಸಲೇ ಬೇಕೆಂಬ ಕಾಯಿದೆಯಿಂದ ಪಾಲಿಸಿದಾರರಿಗೆ ಹೆಚ್ಚು ಭದ್ರತೆ ದೊರೆತರೂ, ತಮ್ಮ ಉಳಿತಾಯದ ಹಣದ ಮೇಲೆ ಲಾಭಾಂಶ ಸಾಕಷ್ಟು ದೊರೆಯುತ್ತಿಲ್ಲ. ಇದಕ್ಕೆ ಕಂಪೆನಿಗಳ ಆಡಳಿತದ ವೆಚ್ಚವು ಮಿತಿಮೀರಿರುವುದೂ ಒಂದು ಕಾರಣ. ಭಾರತದಲ್ಲಿರುವ ಎಲ್ಲ ವಿಮಾಕಂಪೆನಿಗಳ ಒಟ್ಟು ಆದಾಯ ೧೯೫೧ರಲ್ಲಿ ೫೨೪೮ ಲಕ್ಷ ರೂಪಾಯಿಗಳಾಗಿದ್ದಾಗ ಅವುಗಳ ಆಡಳಿತ ವೆಚ್ಚ ೧೧೪೭ ಲಕ್ಷ ರೂಪಾಯಿ, ಅರ್ಥಾತ್ ಶೇಕಡಾ ೨೨. ಈ ವೆಚ್ಚದ ಪ್ರಮಾಣವನ್ನು ಮಿತವಾಗಿಡಲು ಸರಕಾರೀ ಕಾಯಿದೆ ಪ್ರಯತ್ನಿಸುತ್ತಿದ್ದರೂ ಅದು ಇನ್ನೂ ಯಶಸ್ವಿಯಾಗಿಲ್ಲ. ಕೆಲವು ಕಂಪೆನಿಗಳು ಮಾತ್ರ ತಮ್ಮ ಆಡಳಿತ ವೆಚ್ಚದ ಮೇಲೆ ಹತೋಟಿಯನ್ನಿಟ್ಟುಕೊಂಡು ಪಾಲಿಸಿದಾರರ ಕ್ಷೇಮಚಿಂತನೆಯನ್ನು ಮಾಡುತ್ತಿವೆ.

ಸಾಂಘಿಕ ಬಲ

ಸರಕಾರವು ವಿಮಾ ಕಂಪೆನಿಗಳ ಮೇಲೆ ನಿಯಂತ್ರಣ ಹೇರುತ್ತಿದ್ದಾರೆ, ವಿಮಾ ಕಂಪೆನಿಗಳೆಲ್ಲ ಒಟ್ಟಾಗಿ ತಮ್ಮದೇ ಒಂದು ಸಂಘವನ್ನೂ ಸ್ಥಾಪಿಸಿವೆ. ಈ ಸಂಘವು ಇದೇ ಎಪ್ರಿಲು ೪ನೇ ದಿನಾಂಕ ತನ್ನ ರಜತ ಮಹೋತ್ಸವವನ್ನು ನೆರವೇರಿಸಿತು. ಆರಂಭದಲ್ಲಿ ೨೨ ಕಂಪೆನಿಗಳ ಸದಸ್ಯತನವಿದ್ದ ಈ ಸಂಘಕ್ಕೆ ಈಗ ೭೬ ಕಂಪೆನಿಗಳು ಸದಸ್ಯರಾಗಿ ಸೇರಿವೆ. ಈ ಕಂಪೆನಿಗಳು ದೇಶದ ವಿಮಾ ವ್ಯವಹಾರದಲ್ಲಿ ನೂರಕ್ಕೆ ತೊಂಭತ್ತರಷ್ಟನ್ನು ನಡೆಸುತ್ತಿವೆ. ಸರಕಾರವು ವಿಮಾ ಸಂಬಂಧದ ಕಾಯಿದೆ ಮಾಡುವಾಗ, ಈ ಸಂಘವು ಕಂಪೆನಿಗಳ ಹಿತರಕ್ಷಣೆಗಾಗಿ ಶ್ರಮವಹಿಸಿ ದುಡಿದಿದೆ. ಸರಕಾರವು ಭಾರತೀಯ ವಿಮಾಕ್ಷೇತ್ರವನ್ನು ಪ್ರತಿನಿಧೀಕರಿಸಬಲ್ಲ ಸಂಸ್ಥೆಯಾಗಿ ಇದನ್ನು ಮನ್ನಿಸಿದೆ ವಿಮಾ ವ್ಯವಹಾರದ ಸಂಬಂಧದಲ್ಲಿ ಪರೀಕ್ಷೆಗಳನ್ನು ಈ ಸಂಘ ಏರ್ಪಡಿಸಿ, ಯಶಸ್ವಿ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ನೀಡುತ್ತದೆ. ವರ್ಷ ವರ್ಷವೂ ಸಾಮಾನ್ಯಾಧಿವೇಶನವನ್ನು ಜರುಗಿಸಿ ವಿಮಾ ಸಂಬಂಧವಾದ ವಿಷಯಗಳ ಕುರಿತು ಉಪನ್ಯಾಸಗಳನ್ನೇರ್ಪಡಿಸಿ, ಚರ್ಚೆಗೂ ಅವಕಾಶ ಮಾಡಿಕೊಡುತ್ತದೆ. ೧೯೩೪ರಲ್ಲಿ ಬಿಹಾರ ಮತ್ತು ಕ್ವೆಟ್ಟಾಗಳಲ್ಲಿ ಭೂಕಂಪವಾದಾಗ ಮತ್ತು ೧೯೪೭ರಲ್ಲಿ ಭಾರತದ ವಿಭಜನೆಯಾದಾಗ, ವಿಮೆ ಇಳಿಸಿದ ಪಾಲಿಸಿದಾರರು ತುಂಬ ಕಷ್ಟಕ್ಕೊಳಗಾದರು. ಈ ಸಂಘವು ತನ್ನ ಸದಸ್ಯ ಕಂಪೆನಿಗಳ ಮನವೊಲಿಸಿ, ಪಾಲಿಸಿದಾರರ ಹಿತ ರಕ್ಷಣೆಯಾಗುವಂತೆ ಮನಃಪೂರ್ವಕ ದುಡಿಯಿತು.

ಪ್ರೋತ್ಸಾಹದ ಅಗತ್ಯ

ಕೊನೆಯದಾಗಿ— ವಿಮಾ ವ್ಯವಹಾರವು ದೇಶದ ಪ್ರಗತಿಗೆ ಪೋಷಕವಾಗಿರುವುದರಿಂದ ಸರಕಾರವೂ ಜನತೆಯೂ ವಿಮಾ ಕಂಪೆನಿಗಳ ಕುರಿತು ಆತ್ಮೀಯತೆಯನ್ನು ತೋರುವುದೂ ಅವುಗಳ ಬೆಳವಣಿಗೆ ಮತ್ತು ಅಭಿವೃದ್ಧಿಗಾಗಿ ಸರ್ವ ವಿಧದ ಪ್ರೋತ್ಸಾಹ ನೀಡುವುದೂ ಅತ್ಯವಶ್ಯ. ಈ ವಿಮಾಕಂಪೆನಿಗಳ ವ್ಯವಹಾರದ ಮೇಲೆ ಸರಕಾರೀ ನಿಯಂತ್ರಣವಿರುವುದು ಅರ್ಥಪೂರ್ಣವಾಗಿದ್ದರೂ—ಜನ ಸಾಮಾನ್ಯರಿಗೆ ವಿಮೆಯ ಸೌಕರ್ಯದ ಬಗ್ಗೆ ಗೌರವ ಮೂಡುವಂತೆ, ಸರಕಾರವು ಯೋಗ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು. ಪಾಲಿಸಿಯನ್ನು ಪಡೆಯುವ ವೆಚ್ಚ ಕಡಿಮೆಯಾಗಬೇಕು; ಉಳಿತಾಯದ ಹಣದ ಮೇಲೆ ಯೋಗ್ಯ ಲಾಭ ದೊರೆಯುವಂತಾಗಬೇಕು; ಇಂಥವೆಲ್ಲ ಸೌಲಭ್ಯಗಳು ಸಿಕ್ಕುವಂತಾಗಲು. ವಿಮಾ ಕಂಪೆನಿಗಳ ಮೇಲೆ ಹೊರಿಸಿರುವ ತೆರಿಗೆ ಭಾರ ಇನ್ನೂ ಕಡಿಮೆಯಾಗಬೇಕು. ಇತರ ವ್ಯವಹಾರಗಳಲ್ಲಿ ಲಾಭವೇ ಮುಖ್ಯೋದ್ದೇಶವಾಗಿದ್ದರೂ, ವಿಮಾ ವ್ಯವಹಾರದಲ್ಲಿ ಉಳಿತಾಯ ಪ್ರವೃತ್ತಿಯ ಪೋಷಣೆಯೇ ಪ್ರಾಶಸ್ತ್ಯವನ್ನು ಹೊಂದಿದೆ. ವಿಮಾ ಕಂಪೆನಿಗಳು ಬೋನಸ್ಸು ಹಂಚುತ್ತವಾದರೂ ಅದು ಕಂಪೆನಿಯ ಆಡಳಿತ ವಿಚಕ್ಷಣತೆಯನ್ನು ಹೊಂದಿಕೊಂಡಿದ್ದಷ್ಟೇ, ಅಪ್ರತ್ಯಕ್ಷವಾಗಿ ವಿಮಾದಾರರಿಂದ ಪಡೆದ ಹಣದ ಮರುಪಾವತಿಯೇ ಆಗಿದೆ. ಇದನ್ನು ಸರಕಾರವು ಮನಗಂಡು, ವಿಮಾ ಕಂಪೆನಿಗಳ ಶ್ರೇಯಸ್ಸಿಗೆ ನೆರವಾಗಬೇಕು; ತನ್ಮೂಲಕ ರಾಷ್ಟ್ರದ ಉದ್ಧಾರ ಮಾರ್ಗದಲ್ಲಿ ಮುನ್ನಡಿ ಇಡಬೇಕು.

(ಸಂಕಲಿತ)

ನಿರಾಶೆಯ ನಡುವೆ ಆಶೋದಯ.

[೨ನೇ ಪುಟದಿಂದ]

ನಡೆಸಿಕೊಂಡು ಹೋಗಲಿಕ್ಕೆ ಅಪಾರ ಬಂಡವಾಳವೂ ಅಗತ್ಯವಿರುವುದಿಲ್ಲ. ಆದುದರಿಂದ ಇದ್ದ ಹಣವನ್ನೆ ಒಟ್ಟುಗೂಡಿಸಿ, ಅದರಿಂದ ಉಸ್ತಿಮೆ ಬೆಳೆಸಲು ಸಾಧ್ಯವಾಗುತ್ತದೆ. ಸಾಲ ಎತ್ತುವ ಪ್ರಮೇಯ ಒದಗುವುದಿಲ್ಲ. ನಮ್ಮ ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಬಂಡವಳವನ್ನು ಕೂಡಿಸುವುದು ತೊಡಕಿನ ಸಂಗತಿಯಾಗಿರುವುದರಿಂದ ಗೃಹೋದ್ಯಮ ಈ ದೊಡ್ಡ ಸಮಸ್ಯೆಯನ್ನು ಹಗುರಾಗಿ ಬಿಡಿಸುತ್ತದೆನ್ನುವ ಸಮಾಧಾನವಿದೆ. ಈ ಎಲ್ಲ ಕಾರಣಗಳನ್ನೂ ಅನುಕೂಲತೆಗಳನ್ನೂ ಗಮನಿಸಿದರೆ ನಮ್ಮ ಅರ್ಥ ವ್ಯವಸ್ಥೆಯಲ್ಲಿ ಗೃಹೋದ್ಯಮಗಳು ಮಹತ್ವದ ಪಾತ್ರವನ್ನು ವಹಿಸುವಂತಾಗಬೇಕೆನ್ನುವ ಬೇಡಿಕೆಗೆ ಅರ್ಥ ಬರುತ್ತದೆ. ಗೃಹೋದ್ಯಮಗಳು ನಮ್ಮ ದೇಶದಲ್ಲಿ ಪ್ರಾದುರ್ಭಾವಕ್ಕೆ ಬರುವುದು ತೀರಾ ಅಗತ್ಯವಾಗಿರುವುದರಿಂದ ಇದಕ್ಕೆ ತಕ್ಕುದಾದ ವಾತಾವರಣವನ್ನು ಕಲ್ಪಿಸಿಕೊಡುವಲ್ಲಿ ನಾವು ಮತ್ತು ಸರಕಾರದವರು ಹಿಂದಾಗಕೂಡದು. ಭಾರತದ ವಿಶಿಷ್ಟ ಸ್ಥಿತಿಗತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳುವುದಾದಲ್ಲಿ ಗೃಹೋದ್ಯಮಗಳನ್ನು ಪ್ರಚುರಗೊಳಿಸುವ ಮೂಲಕ ಔದ್ಯೋಗೀಕರಣವನ್ನು ಸಾಧಿಸುವುದೇ ಯೋಗ್ಯ ಉಪಾಯ - ಹೊರತು, ದೊಡ್ಡ ದೊಡ್ಡ ಕಾರ್ಖಾನೆಗಳನ್ನು ತೊಡಗುವುದಲ್ಲ.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 34/1953.

ಗಾಬ್ರಿಯಲ್ ಮಿನೇಜಸ್, ದಿಯೋಗ ಮಿನೇಜಸರ ಮಗ—ಕಾರ್ಕಳ ತಾಲ್ಲೂಕು ಕ... ಜಾರು ಗ್ರಾಮದಲ್ಲಿರುವವ— —ವಾದಿ

ಮತ್ತು

ಫ್ರಾಂಸಿಸ್ಸ ಸೋಜ, ಅಂತೋನಿ ಸೋಜರ ಮಗ, ಉಡುಪಿ ತಾಲ್ಲೂಕು ಶಿರ್ವಾ ಗ್ರಾಮ... ಕಾನದ ಬಳಿಯಲ್ಲಿರುವವ. —ಪ್ರತಿವಾದಿ

ಕಳೆದ ತಾ. 6-10-1950ರಲ್ಲು ರೂ. ನಿ... ವಾದಿಯು ಪ್ರತಿವಾದಿಗೆ ಬರಕೊಟ್ಟ ಸ್ಥಿರಾಸ್ತಿ... ಮುಡಿತ ಕ್ರಯಚೀಟಿನಲ್ಲಿ ಪ್ರತಿಫಲದ ರುಪಾಯಿ 1000/-ದ ಪೈಕಿ ಅವಮಾನಕು ಮುಂಗೊಡಿ... ದ ಸ್ವಲು ರುಪ್ಯಾ 800/ ವ ಆ ಬಾಬಿನ ಬಡ್ಡಿ ಆಸ್ಪೇಜು ಕೂಡಾ ಬಂಪಾಡುವ ಬಗ್ಗೆ ದಕ್ಲ ಮಾಡಿದ ಮೇಲ್ಕಂಡ ದಾವೆಯು, ತಾ. 12-4-1953ಕ್ಕೆ ಪ್ರತಿವಾದಿಯು ಹಾಜರಾಗುವ ಬಗ್ಗೆ ಮುಕ್ಕರಿಯಾಗಿರುವುದರಿಂದ ಸದ್ರಿ ದಿವ್ಸ ಬೆಳಿಗ್ಗೆ 10 ಗಂಟೆಗೆ ಕೋರ್ಟು ಮುಂದೆ ಹಾಜರಾಗಿ ಉದಶರಿಸಲಿಕ್ಕೆ ತಪ್ಪಿದ್ರೆ ನಿಮ್ಮ ಗೈರ ಹಾಜರಿಯಲ್ಲಿ ತೀರ್ಮಾನಿಸಲಾಗುವುದು ಎಂದು ಸಂಗ್ತಿ ಸದ್ರಿ ಪ್ರತಿವಾದಿಗೆ ಕೋರ್ಟು ಹುಕುಂ ಪ್ರಕಾರ ತಿಳಿಸಲಾಗಿಯದೆ.

S/d **K. Venkatesha Pai**

ವಾದಿಯ ಕಡೆ ವಕೀಲ್,

ಕಾರ್ಕಳ, ತಾ. 2-4-53.

ಹಿಂದೀ ವಿಮಾನ ಪಡೆಯ ಇತಿಹಾಸ

ಇಪ್ಪತ್ತು ವರ್ಷಗಳಲ್ಲಿ ಮಹತ್ವದ ಪ್ರಗತಿ.

ರಾಷ್ಟ್ರವನ್ನು ಸಂರಕ್ಷಿಸುವ ಆಧುನಿಕ ಯೋಜನೆಗಳಲ್ಲಿ ವಿಮಾನ ಪಡೆಗೆ ಇಂದು ಮಹತ್ವವು ಪ್ರಾಪ್ತವಾಗಿರುತ್ತದೆ. ಶೀಘ್ರಗತಿಯಿಂದ ಹಾರಾಡುವ ಅನುಕೂಲ ಮತ್ತು ಪರಿಣಾಮಕಾರಿಯಾದ ದಾಳಿಯನ್ನು ನಡೆಸುವ ಸಾಮರ್ಥ್ಯವು ವಿಮಾನ ಪಡೆಗೆ ಬಂದಿರುವುದರಿಂದ, ಅದನ್ನು ... ತಳಹದಿಯ ಮೇಲೆ ಪುನರ್ಘಟಿಸುವುದಕ್ಕೆ ಈಗ ಅಧಿಕ ಗಮನವನ್ನು ಕೊಡುತ್ತಿರುವರು. ದ್ವಿತೀಯ ಮಹಾಯುದ್ಧದಲ್ಲಿ ಪಡೆದ ಅನುಭವದ ಮೇಲಿಂದ ಆಕಾಶವೇ ಯುದ್ಧದ ನಿರ್ಣಾಯಕ ...ಗನೆಂದು ಎಲ್ಲ ಯುದ್ಧ ವಿಶಾರದರೂ ... ಮತಕ್ಕೆ ಬಂದಿರುವರು. ಆದದರಿಂದ ವಿಮಾನ ಪಡೆಯನ್ನು ಅತ್ಯಂತ ಯೋಗ್ಯ ... ಯಲ್ಲಿಡುವುದು ರಾಷ್ಟ್ರೀಯ ಸರಕಾರದ ಕರ್ತವ್ಯವೆನಿಸಿದೆ. ಹಿಂದೀ ವಿಮಾನ ಪಡೆಯು ಇಂದು ಇಪ್ಪತ್ತು ವರ್ಷಗಳ ಅನುಭವದ ಬಲವನ್ನು ಪಡೆದಿರುತ್ತದೆ. ಪ್ರಧಾನ ಮಂತ್ರಿಗಳು ಹೇಳುವಂತೆ ಈ ಅವಧಿಯಲ್ಲಿ ನಮ್ಮ ವಿಮಾನ ಪಡೆಯು ತನ್ನ ... ವನ್ನು ಭದ್ರಗೊಳಿಸಿರುವುದು. ಅದು ಅತ್ಯಂತ ಕಾರ್ಯಕ್ಷಮ ರೀತಿಯಲ್ಲಿ ...ರ್ವಹಿಸುತ್ತಿದೆಯಲ್ಲದೆ - ಸಮರ ಕಾರ್ಯದಲ್ಲಿಯಷ್ಟೇ ಉಪಯುಕ್ತವಾಗಿ ಶಾಂತಿ ಕಾಲದಲ್ಲೂ ಸಾರ್ವಜನಿಕ ಸೇವೆಗೆ ಮುಂದಿದೆ. ನಮ್ಮ ವಿಮಾನ ಪಡೆಯಲ್ಲಿ ... ಸಾಮಾನ್ಯವಾಗಿ ನಾದದ ವೇಗವು ... ಜೆಟ್ ವಿಮಾನಗಳೂ ರಾಡರ ಮುಂತಾದ ಉಪಕರಣಗಳೂ ಉಪಯೋಗಿಸಲ್ಪಡುತ್ತಿವೆ. ಜಟಿಲವಾದ ತಾಂತ್ರಿಕ ತರಬೇತಿಯನ್ನು ವೈಮಾನಿಕರಿಗೆ ಕೊಡಲಾಗುತ್ತಿದೆ.

ಆರಂಭದ ಅನುಭವ

ಭಾರತಕ್ಕೆ ಒಂದು ವಿಮಾನ ಪಡೆ ಬೇಕೆಂದು ಸ್ಕೀನ ಸಮಿತಿಯು ವರದಿ ಮಾಡಿ ಹಲವು ವರ್ಷಗಳು ಕಳೆದ ಮೇಲೆಯೇ ಆ ಸೂಚನೆಯು ಕಾಯಿದೆ ಬದ್ಧವಾಗಿ ರೂಪುಗೊಂಡಿತು. ಹಿಂದೀ ವಿಮಾನ ಪಡೆಯು ಸ್ಥಾಪನೆಗೊಂಡಾಗ ಅದರಲ್ಲಿ ಕೇವಲ ಆರು ಅಧಿಕಾರಿಗಳೂ ೧೯ ಹವಾಯಿ ಸಿಪಾಹಿಗಳೂ ಇದ್ದರು. ನಾಲ್ಕು ವೆಸ್ಟಲ್ಯಾಂಡ ವ್ಯಾಪಿಟೀಜ ಮಾದರಿಯ ವಿಮಾನಗಳಿದ್ದುವು. ಎರಡು ವರ್ಷಗಳ ಅವಧಿಯಲ್ಲಿ ಇನ್ನೂ ಎರಡು ದಳಗಳನ್ನು ಸೇರಿಸಿ, ವಿಮಾನ ಪಡೆಯನ್ನು ವಿಸ್ತರಿಸಿತು.

ವಿಮಾನ ಪಡೆಯು ಅಸ್ತಿತ್ವಕ್ಕೆ ಬಂದ ಸ್ವಲ್ಪಾವಧಿಯಲ್ಲಿಯೇ ವಾಯವ್ಯ ಸರಹದ್ದಿನ ಪ್ರಾಂತ್ಯದಲ್ಲಿ ಬಂಡಾಯ (೧೯೩೭) ...ದ್ದಿತು. ಭಾರತೀಯ ವಿಮಾನ ಪಡೆಯನ್ನು ಇಲ್ಲಿ ಯಶಸ್ವಿ ಕಾರ್ಯಾಚರಣೆಯ ಬಗ್ಗೆ ಉಪಯೋಗಿಸಿದರು. ಗುಡ್ಡ, ... ಹಾಗು ಕಂದರಗಳ ಪ್ರದೇಶದಲ್ಲಿ ಅ...ಕೆಳಗಿನಿಂದ ಹಾರಾಡುತ್ತ ಭೂ ಸೈನ್ಯ...ರಣವಾಗಿ ಕೆಲಸ ಮಾಡುವ ಅನುಭವ ನಮ್ಮ ವೈಮಾನಿಕರಿಗೆ ಆಗ ಉಂಟಾಯಿತು. ಆ ಬಳಿಕ ಎರಡು ವರ್ಷಗಳಲ್ಲಿ ...ಳಿ ಅಲ್ಲಿಯೇ ಕಾರ್ಯಾಚರಣೆ ನಡೆ...ವ ಪ್ರಸಂಗ ಬಂದಾಗ, ಅತ್ಯಂತ ದಕ್ಷತೆಯಿಂದಲೂ ಕಾರ್ಯಕ್ಷಮತೆಯಿಂದಲೂ ವಿಮಾನಪಡೆ ಕೆಲಸಮಾಡಿತು.

ದ್ವಿತೀಯ ಮಹಾಯುದ್ಧ

ಎರಡನೇ ಮಹಾಯುದ್ಧವು ಭಾರತೀಯ ವಿಮಾನ ಪಡೆಯ ವಿಸ್ತರಣಕ್ಕೆ ಅನುವು ಮಾಡಿಕೊಟ್ಟಿತು. ಈ ದಿಸೆಯಲ್ಲಿ ಪ್ರಥಮ ಹೆಜ್ಜೆ ಎಂದು ರೀಸಾಲ ಪುರದಲ್ಲಿ ಮೊದಲನೆಯ ತರಬೇತಿ ಕೇಂದ್ರವನ್ನು ತೆರೆದರು. ಕರಾವಳಿಯ ಸುತ್ತ ಅನೇಕ ಕಡೆಗಳಲ್ಲಿ ಸಣ್ಣ ಠಾಣ್ಯಗಳನ್ನು ಸ್ಥಾಪಿಸಿದರು. ಪರ್ಲ ಬಂದರಿನ ಪತನದ ಪರಿಣಾಮವಾಗಿ ಭಾರತವು ಆಗ್ನೇಯ ಏಶಿಯಾದ ಯುದ್ಧದಲ್ಲಿ ಧುಮುಕಿತು ೧೯೪೩ರ ಸುಮಾರಿಗೆ ಹಿಂದೀ ವಿಮಾನ ದಳವನ್ನು ಏಳು ಹರಿಕೇನ ಮತ್ತು ಎರಡು ವೆಂಜೆನ್ಸ ವಿಮಾನಗಳಿಂದ ಕೂಡಿದ ಬೃಹದ್ದಳವಾಗಿ ಪುನರ್ಘಟಿಸಿದರು

ಬರ್ಮಾದಲ್ಲಿ ಜಪಾನು ಯುದ್ಧನಡೆಸುತಿದ್ದಾಗ ಹಿಂದೀ ವಿಮಾನ ಪಡೆಯು ಮಹತ್ವದ ಅನುಭವವನ್ನು ಗಳಿಸಿತು. ಆಯಕಟ್ಟಿನ ಸ್ಥಳಗಳ ಮೇಲೆ ಬಾಂಬೆಸೆಯುವುದು ಎಂತಹ ವಿಶೇಷ ಅನುಭವಗಳಿಂದ ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಂಡಿತು. ಯುದ್ಧ ಮುಕ್ತಾಯಗೊಂಡಾಗ ವಿಮಾನ ಪಡೆಯ ಹತ್ತನೇ ದಳವು ಉದಯವಾಗುವುದರಲ್ಲಿತ್ತು. ಯುದ್ಧಾನಂತರ ವಿಮಾನ ಪಡೆಯಲ್ಲಿ ಭಾರತೀಕರಣಕ್ಕೆ ಹೆಚ್ಚಿನ ಗಮನವನ್ನು ಕೊಟ್ಟರು.

ಪುನರ್ಘಟನೆ

೧೯೪೭ನೇ ಅಗೋಸ್ತು ತಿಂಗಳ ಸುಮಾರಿಗೆ ಅನೇಕ ಕ್ಷೇತ್ರದಲ್ಲಿ ಪ್ರಗತಿಯನ್ನು ಸಾಧಿಸಿದರು. ವಿಭಜನೆಯ ಪರಿಣಾಮವಾಗಿ ವಿಮಾನ ಪಡೆಯು ಒಡೆದು ಹೋಗುವ ಭೀತಿಯುಂಟಾದರೂ ಅಧಿಕಾರಿಗಳ ದಕ್ಷತೆಯಿಂದ ಕೆಟ್ಟುದೇನೂ ಘಟಿಸಲಿಲ್ಲ. ಮುಂದಿನ ಮೂರು ವರ್ಷಗಳಲ್ಲಿ ವಿಮಾನಪಡೆಯನ್ನು ಆಧುನಿಕ ಯಂತ್ರೋಪಕರಣಗಳಿಂದ ಸುಸಜ್ಜಿತಗೊಳಿಸಿದರು. ೧೯೪೮ರಲ್ಲಿ ಜೆಟ್ ವ್ಯಾಂಪಾಯರಗಳು ಬಂದುವು. ೧೯೫೦ರಲ್ಲಿ ಮಹತ್ವದ ಸಂಘಟನಾತ್ಮಕ ಪರಿವರ್ತನೆಗಳು ರೂಪುಗೊಂಡವು ಅಧಿಕಾರಿಗಳ ಮತ್ತು ವೈಮಾನಿಕರ ತಾಂತ್ರಿಕ ತರಬೇತಿಯ ವಿಷಯದಲ್ಲಿ ಪೂರ್ಣ ಸ್ವಾವಲಂಬನ ಸಾಧ್ಯವೆನಿಸಿತು.

ಭಾರತದ ವಿಮಾನಪಡೆಯು ಕಾಶ್ಮೀರದ ಯುದ್ಧಭೂಮಿಯಲ್ಲಿ ಮಹತ್ವದ ಪಾತ್ರವನ್ನು ವಹಿಸಿ, ಆಕ್ರಮಣವನ್ನು ಯಶಸ್ವಿಯಾಗಿ ತಡೆಗಟ್ಟಿದೆ. ಮಾತ್ರವಲ್ಲ ಅಸಾಮಿನ ನೆರೆ ಹಾವಳಿ, ಹಾಗು ರಾಜಪುತಾನದಲ್ಲಿ ಮಿಡಿತೆಗಳ ದಾಳಿ ಮುಂತಾದ ಪ್ರಸಂಗಗಳಲ್ಲಿ ಸೇವೆ ಮಾಡಿ ಸಾರ್ವಜನಿಕರ ಪ್ರೀತಿಯನ್ನೂ ಸಂಪಾದಿಸಿದೆ. ಸಮರದಲ್ಲಿ ಮಾತ್ರವಲ್ಲ ಶಾಂತಿಯ ಕಾಲದಲ್ಲೂ ವಿಮಾನಪಡೆಯಿಂದ ರಾಷ್ಟ್ರಕ್ಕೆ ಉಪಕಾರವಿದೆ ಎಂಬುವನ್ನು ಸಿದ್ಧಮಾಡಿ ತೋರಿಸಿದೆ.

ಉಜ್ವಲ ಭವಿಷ್ಯ

ಭಾರತೀಯ ವಿಮಾನಪಡೆಯು ನಮ್ಮ ದೇಶದ ವೈಶಾಲ್ಯವನ್ನು ಗಮನಿಸಿದರೆ ಚಿಕ್ಕದಾಗಿ ಕಾಣಿಸುತ್ತದೆ. ಇದನ್ನು ... ವಿಸ್ತಾರಗೊಳಿಸುವುದು ಆವಶ್ಯವೆನಿಸಿದ್ದರೂ ನಮ್ಮ ಆರ್ಥಿಕ ಹಾಗೂ ಔದ್ಯಮಿಕ ಸ್ಥಿತಿಗತಿಯು ಅಭಿವೃದ್ಧಿ ಹೊಂದಿದ ವಿಮಾನಪಡೆಯನ್ನು ವಿಸ್ತರಿಸಲು ಬಾರದು. ಆದರೆ ದಿನದಿನಕ್ಕೆ ರಾಷ್ಟ್ರದ ಸಂರಕ್ಷಣೆಯ ಜವಾಬ್ದಾರಿಯು ನಮ್ಮ ಸಣ್ಣ ವಿಮಾನಪಡೆಯ ಮೇಲೆಯೇ ಹೆಚ್ಚಾಗಿ ಬೀಳುತ್ತದೆ ಎಂಬ ಸಂಗತಿ ನಿರ್ವಿವಾದ.

ನಮ್ಮದು ಚಿಕ್ಕ ವಿಮಾನಪಡೆಯಾಗಿದ್ದರೂ ಅದು ಸುಸಂಘಟಿತ ರೂಪದಲ್ಲಿದೆ. ಯೋಗ್ಯ ತರಬೇತಿ ಹಾಗು ಸಲಕರಣೆಗಳ ಸೌಲಭ್ಯವನ್ನು ಅದು ಪಡೆದಿದೆ. ಏಶಿಯಾದಲ್ಲಿಯೇ ಅತ್ಯುತ್ತಮವೆನಿಸಿದ ತರಬೇತಿ ಕೇಂದ್ರಗಳು ಭಾರತದಲ್ಲಿವೆ. ಭಾರತೀಯ ವಿಮಾನಪಡೆಯು ಹೆಚ್ಚು ಸೇವೆಗಳನ್ನು ಸಲ್ಲಿಸುತ್ತ ಉಜ್ವಲ ಭವಿಷ್ಯವನ್ನು ಪಡೆಯಲೆಂದು ಹಾರೈಸುವುದಷ್ಟೆ ನಮಗೆ ಉಳಿದ ... ಕೆಲಸ.

Bunts alias Nadavar Sangha,

South Kanara, Mangalore.

NOTICE

House sites plotted as 5B1/C, 5B1/D, 5B1/E, 5B1/F, 5B1/G, 5B1/H, 5B1 J and 4A/7 together, 5B1/L, 5B1/M, 5B1/N, 5B1/O, 5B1/K and 4A/3 together 4A 4 and 4A/5 in the sketch of field No. 90 5B1-4A of Karkala Village, will be sold by public auction on Saturday the 18th of April 1953 commencing from 10 a. m. by the President of the above shown Sangha or any one authorised by him. The terms and conditions of the same are as follows:-

1. The sale will be held with reference to the sketch prepared and kept with Sri K. Mahabala Hegde, Vakil, Karkala and demarcated on ground at the site. Copies of the sketch are also available for inspection with the President, Sri K. T Alva, Bijai, Mangalore and the Secretary, Sri K. Sunderram Shetty, Vakil, Kadri Road, Mangalore.

2. No person will be permitted to bid unless he has deposited a sum of Rs 100/-- The deposits of all except the highest bidder will be refunded at the close of the sale.

3. If the highest bid amount is to the satisfaction of the person holding the sale, the bidder shall immediately pay 25 percent of the amount of his purchase money to the person conducting the sale and in default of such payment the sites are liable to be forthwith resold at the risk of the highest bidder and his initial deposit forfeited to the Sangha. He will be liable for any loss caused but he will not be entitled to any [illegible] in the resultant profits.

4. The balance of the purchase money less the advance dep[illegible] Rs. 100 shall be paid by the pu[illegible] and necess[illegible] stamp papers furnished by the purchaser within ten days of the confirmation of the sale.

5. All the costs of the conveyance, viz. the value of stamp paper, registration fees, the charges for preparing the sale deed etc. shall be borne by the purchaser.

6. In the event of the purchaser not paying the balance of the purchase amount or of supplying the necessary stamp paper within the time limit fixed, the site will be resold after a fresh notification at the risk of the defaulter who will be liable for any deficiency in the price at the resale but shall not be entitled to participate in any excess. The deposit and 25 percent purchase money paid by the defaulter will be liable to be forfeited.

7. The site will be given possession to the purchaser after the sale deed is executed and registered.

8. No purchaser is entitled to trespass or in any way interfere with the plots 5B1/B, 5B1/I, 4A 2 and 4A 6 set apart for the road and all purchasers are bound to keep the road abutting their plots in good condition. If the owner of any of the plots is obstructed or prevented from making use of the road for men, cattle and vehicles he will have the right of obtaining the necessary redress from revenue, civil or crimin[illegible] Courts [illegible]ainst the obstructor.

9. The bidder should satisfy himself regarding the measurement and area of the plot which he intends to purchase.

K. T. Alva
President.
Bunt alias Nadavar Sangha, Mangalore.

Dated 23—3—1953.

ದಯಮಾಡಿ ನಿಮ್ಮ ಚಂದಾ ಹಣವನ್ನು ಕಳುಹಿಸಿಕೊಡಿರಿ

ವಾರದ ಒಳಿತು ಕೆಡುಕುಗಳು

ತಾ. ೯—೪—೫೩ರಿಂದ ತಾ. ೧೫—೪—೫೩ರ ವರೆಗೆ.

ಮೇಷ:—ನಿಮ್ಮ ದೇಹಾರೋಗ್ಯವಿಂದು ಉತ್ತಮವಾಗಲಿದೆ. ಮಾತ್ರವಲ್ಲ ವ್ಯರ್ಥ ಖರ್ಚುಗಳು ಕಡಿಮೆಯಾಗಿ ಆರ್ಥಿಕ ಭಾಗವೂ ಬಹು ಮಟ್ಟಿಗೆ ಸುಧಾರಿಸಲಿದೆ. ವ್ಯಾಪಾರ ವ್ಯವಹಾರಗಳಲ್ಲಿ ಉತ್ತಮ ಫಲ ಲಭಿಸಲಾಗುವದು. ಕಷ್ಟ ಸಾಧ್ಯವಾದ ಕಾರ್ಯವೂ ನಿಮ್ಮ ಭಾಗಕ್ಕೆ ಸುಲಭವೆನಿಸುವದು. ರಾಜಕೀಯ ಕ್ಷೇತ್ರದಲ್ಲಿ ಪರಿಣಾಮವು ನೆಟ್ಟಗಿರದು. ವಾತ ಪಿತ್ತಗಳ ದೋಷದಿಂದಾಗಿ ಹೆಂಡತಿ ಮಕ್ಕಳ ಆರೋಗ್ಯಕ್ಕೆ ಧಕ್ಕೆಯಿದೆ. ವಿದ್ಯಾರ್ಥಿಗಳಿಗೀ ಕಾಲವು ಅನುಕೂಲವಿರುವದು. ತಾ. 12, 13 ಬಿಟ್ಟುಳಿದ ದಿನಗಳು ಹಿತಕರವಿವೆ.

ವೃಷಭ—ಪ್ರಯತ್ನಕ್ಕಿಂತ ಅಧಿಕವಾದ ಫಲವು ಲಭಿಸುವದು. ನೀವು ಕೈಗೊಂಡ ಪ್ರತಿಯೊಂದು ಕಾರ್ಯವು ಏನೊಂದೂ ವಿಘ್ನ ವಿಡಂಬರಗಳಿಲ್ಲದೆ ನಿರಾತಂಕವಾಗಿ ಕೊನೆಗೊಂಡುವದು. ದೇಹಾರೋಗ್ಯವು ಅಷ್ಟೊಂದು ಉತ್ತಮವಿರದಿದ್ದರೂ ಮನಶ್ಶಾಂತಿ ಹಣದ ಸೌಕರ್ಯಗಳು ಚೆನ್ನಾಗಿರುವವು. ವ್ಯಾಪಾರದಲ್ಲಿ ಅತಿಶಯವಾದ ಲಾಭವಿದೆ. ಸೇವಕವರ್ಗದವರ ಆಶಾಕಾಂಕ್ಷೆಗಳು ಸಫಲಗಳಾಗುವವು. ತಾ. 10, 11, 12, 13 ಈ ದಿನಗಳಲ್ಲಿ ಜನಮನ್ನಣೆ ಕಾರ್ಯವಿಜಯ ಮಿತ್ರಸಮಾಗಮ ಧನಲಾಭಗಳಾಗುವವು.

ಮಿಥುನ—ನಿಮಗೀವಾರವು ಹಿಂದಿನ ದಿನಗಳಷ್ಟು ಉತ್ತಮವಾಗಿರದಾದರೂ ಅನಿಷ್ಟಕಾರಿಯಾಗಲಾರದು. ಪ್ರಯತ್ನಕ್ಕೆ ತಕ್ಕ ಫಲ ಲಭಿಸುವದು. ನಾನಾ ತೆರದಿಂದ ಧನವು ನಿಮ್ಮ ಕೈಸೇರಲಿದೆ. ರಾಜಕೀಯರಂಗದಲ್ಲಿನ ಪ್ರತಿಯೊಂದು ಕಾರ್ಯವೂ ನಿಮ್ಮಿಚ್ಛೆಯಂತೆ ಯೋಗ್ಯ ಕೊನೆಗೊಂಡುವದು. ಆದರೆ ವಾಕ್ಸಂಬಂಧವಾದ ಕಲಹ ನಿಷ್ಠುರಗಳು ದಿನೇದಿನೇ ಹೆಚ್ಚಲಿವೆ. ಅನಿರೀಕ್ಷಿತ ಪರ್ಯಟನದಿಂದಾಗಿ ದೇಹಾಯಾಸ ಚಿಂತಾದಿಗಳು ಹೆಚ್ಚುವವು. ವಾರಾಂತ್ಯದ ದಿನಗಳಲ್ಲಿ ಇಷ್ಟಪ್ರಾಪ್ತಿ ಸುಖ ಸಂತೋಷಗಳಿವೆ.

ಕರ್ಕಟ:—ನಿಮ್ಮ ಸುಖ ಲಾಭಪತಿಯಾದ ಶುಕ್ರನು ಭಾಗ್ಯದಲ್ಲಿ ಉಚ್ಚನಾಗಿರುವನು. ಭಾಗ್ಯಪತಿಯು ಲಾಭಸ್ಥಾನವನ್ನು ಹೊಂದಿರುವನು. ಅಂದ ಮೇಲೆ ನಿಮ್ಮ ಹಿಂದಿನ ದುಃಖ ಶೋಕ ತಾಪತ್ರಯಾದಿಗಳಿಂದ ದೂರವಾದುವೆಂದರೂ ತಪ್ಪಾಗದು. ಸತ್ಕರ್ಮ ಸದಾಚಾರ ಸಂಪನ್ನರೀಗೀ ವಾರವು ಒಳ್ಳೆಯ ಫಲವನ್ನೀವುದು. ಕೆಲವೊಮ್ಮೆ ಹಣದ ವ್ಯವಹಾರ ನಿಮಿತ್ತ ಜಗಳಗಳಾದಾವು. ಶತ್ರುಗಳ ಪೀಡೆಯೂ ಪ್ರಾಪ್ತವಾದೀತು. ಜನಾಪವಾದವು ಕೂಡ ಬಂದೀತು. ತಾ. 9 14 15 ಈ ದಿನಗಳಲ್ಲಿ ಶುಭವನ್ನೇ ಕಾಣಲಿರುವಿರಿ.

ಸಿಂಹ:—ಕರ್ಮಕುಶಲರೂ ವ್ಯವಹಾರದಕ್ಷರೂ ಆದ ನಿಮಗೆ ಈ ವಾರದಲ್ಲಿ ನಿರೀಕ್ಷಿಸಿದಷ್ಟು ಫಲ ಲಭಿಸದಾದರೂ ಪರಿಶ್ರಮಕ್ಕೆ ತಕ್ಕುದಾದ ಪ್ರಯೋಜನವು ಸಿಕ್ಕಿಯೇ ತೀರುವದು. ಗೃಹಕಾಪತ್ರಯಗಳು ದೂರವಾಗುವವಾದರೂ ಸತಿಪತಿಗಳಲ್ಲಿ ಮಾತ್ರ ಭೇದದಿಂದಾಗಿ ಮನಸ್ತಾಪವುಂಟಾದೀತು. ಸಾಮಾಜಿಕ ರಾಜಕೀಯ ಕಾರ್ಯಗಳಲ್ಲಿ ವಿಜಯವಿರದು. ಪಿತ್ಥದೋಷದಿಂದ ಆರೋಗ್ಯ ಕೆಡಲಿದೆ. ವಾರಾದಿಯ 3 ದಿನಗಳಲ್ಲಿ ನಿಮ್ಮ ಸಂಕಲ್ಪಗಳು ಸಿದ್ಧಿಸುವವು.

ಕನ್ಯಾ:—ನಿಮ್ಮ ಜೀವನದಲ್ಲಿಂದು ನಿರಾಶೆಯೇ ತಲೆದೋರುವದಾದರೂ ಸುರಗುರುಗಳ ಪೂರ್ಣ ದೃಷ್ಟಿಯು ನಿಮ್ಮ ಮೇಲಿರುವುದರಿಂದ ಹೆಚ್ಚಿನ ಅನಿಷ್ಟಗಳೂ ಕಾಣಿಸಲಾರವು. ವ್ಯರ್ಥ ಪರ್ಯಟನ ವಿಜಾತಿಯವರೊಡನೆ ಕಲಹ ಸ್ತ್ರೀ ಹೇತುಕವಾದ ಶೋಕ ಅನಿಷ್ಟ ಅಪವಾದಗಳು ಮೇಲಿಂದ ಮೇಲೆ ಪ್ರಾಪ್ತವಾಗಲಿವೆ. ಶತ್ರು ಜನರಿಂದೂ ನಿಮ್ಮ ಧನಮಾನಗಳಿಗೆ ಕಂಟಕಪ್ರಾಯರಾಗುವರು. ಹಣದ ಅಭಾವದಿಂದಾಗಿ ದಿನಗಳೆಯುವು ಕಷ್ಟವೆನಿಸಿದರೂ ತಾ. 10ರಿಂದ 13ರ ವರೆಗಿನ ದಿನಗಳು ಶುಭದಾಯಿಗಳಾಗಲಿವೆ.

ತುಲಾ— ಔದ್ಯೋಗಿಕ ಮತ್ತು ಆರ್ಥಿಕ ಭಾಗದಲ್ಲಿ ನಿಮಗೆ ಏನೂ ಕೊರತೆ ಕಾಣಿಸದಾದರೂ ಆರೋಗ್ಯದ ಮಟ್ಟಿಗೆ ಹೆಚ್ಚಿನ ನಿಗಾಇಡುವದುತ್ತಮ. ಸಂಸಾರದಲ್ಲಿ ನಿತ್ಯ ಕಲಹ ಆಕಸ್ಮಿಕ ಪ್ರವಾಸ ಏತನ್ನಿಮಿತ್ತವಾಗಿ ದೇಹಾಲಸ್ಯ ಶೋಕಾದಿ ಅನರ್ಥಗಳಿಗವಕಾಶವಿದೆ. ವ್ಯಾಪಾರದಲ್ಲಿ ಅನಿರೀಕ್ಷಿತ ನಷ್ಟವೂ ದಗೀತು. ವಿನಾಕಾರಣ ಕಲಹ ಪ್ರಿಯಜನರ ವಿರಹ ಗುರುಹಿರಿಯರೊಡನೆ ಮನಸ್ತಾಪವೂ ಉಂಟಾದೀತು. ವಾರಾಂತ್ಯದ 4 ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳು ಕಾಣಿಸದೆ ದೈಹಿಕ ಸುಖ ಮನೋನೆಮ್ಮದಿ ಸ್ತ್ರೀಧನ ಲಾಭಾದಿಗಳಾಗಲಿವೆ.

ವೃಶ್ಚಿಕ— ನಿಮ್ಮ ಹಿಂದಿನ ಶೋಕ ನಷ್ಟಗಳನ್ನು ಮರೆಮಾಚುವ ಸುದಿನಗಳಿಂದು ಪ್ರಾಪ್ತವಾಗಿವೆ. ಶಕ್ತಿ ಯುಕ್ತಿಗಳ ಸಹಾಯದಿಂದ ಹಲವಾರು ಕಾರ್ಯಗಳನ್ನು ಸಾಧಿಸುವಿರಿ. ಕಳೆದುಹೋದ ವಸ್ತು ಒಡವೆಗಳೂ ನಿಮಗಿಂದು ಪ್ರಾಪ್ತವಾಗಲಿವೆ. ಪ್ರಿಯಜನರ ಗುರು ಹಿರಿಯರ ಸಹಕಾರದಿಂದಾಗಿ ಗಣ್ಯಸ್ಥಾನವನ್ನು ಪಡೆವಿರಿ. ಆದರೆ ಮನೆಯಲ್ಲಿ ಮಾತ್ರ ತಂದೆ ಮಕ್ಕಳು ಗಂಡ ಹೆಂಡಿರೊಳಗೆ ನಿತ್ಯ ಕಲಹ ತಪ್ಪದು. ತಾ. 9, 14, 15 ಈ ದಿನಗಳಲ್ಲಿ ನಿಮ್ಮ ಆಕಾಂಕ್ಷೆಗಳು ನಿರ್ವಿಘ್ನದಿಂದ ನೆರವೇರುವವು.

ಧನು— ಗ್ರಹರ ಸ್ಥಿತಿಗತಿಗಳು ವಿಶೇಷವಾಗಿ ಬದಲಿಸಿದಕಾರಣ ನಿಮ್ಮ ಇಂದಿನ ಆಗುಹೋಗುಗಳು ಮುಂಚಿನಂತಿರವು. ಕಾರ್ಯಗಳು ನೆನಸಿದಷ್ಟು ಸುಲಭಸಾಧ್ಯಗಳಾಗಲಾರವು. ಮನೋರೋಗವು ಕಿಂಚಿದಧಿಕವಾಗಲಿದೆ. ಗುರುಹಿರಿಯರ ಆಗ್ರಹಕ್ಕೆ ಸಿಲುಕುವಿರಿ. ಆದರೂ ಸನ್ಮಿತ್ರರ ಬೆಂಬಲವೂ ಸೇವಕವೃಂದದವರ ಸಹಕಾರವೂ ಚೆನ್ನಾಗಿರುವುದರಿಂದ ದಿನಯಾಪನೆಯು ಸುಲಭವೆನಿಸೀತು. ತಾ. 10, 11 ಈ ದಿನಗಳು ಉಳಿದೆಲ್ಲ ದಿನಗಳಿಗಿಂತಲೂ ಉತ್ತಮವಿಹುದು.

ಮಕರ— ದೈವಬಲವಿಂದು ನಿಮ್ಮ ಭಾಗಕ್ಕೆ ಉತ್ತಮವಿರುವದು. ನೆನೆದ ಕಾರ್ಯಗಳು ಕಾರ್ಯರೂಪಕ್ಕೆ ಬರಲಿವೆ. ಗೃಹೋಪಕರಣಗಳಲ್ಲಿ ಆದಾವುದಕ್ಕೂ ಕೊರತೆಯಿಂದ ಕಾರಣ ಸಂಸಾರದಲ್ಲಿ ದುಃಖಕ್ಕೆಡೆಯಿಂದು. ದುರ್ಜನರ ಸಹವಾಸದಿಂದಾಗಿ ಕೆಲವೊಮ್ಮೆ ಜನನಿಂದೆಗೂ ಕಷ್ಟನಷ್ಟಗಳಿಗೂ ಗುರಿಯಾಗುವ ಸಂಭವವಿದೆ. ವಿಶೇಷತಃ ಮನಸ್ಸು ಚಂಚಲವಾಗಲಿರುವುದರಿಂದ ಯಾವ ಕಾರ್ಯವನ್ನೂ ಕೊನೆತನಕ ಸಾಧಿಸಲಾರಿರಿ. ತಾ. 9, 12, 13 ಈ ದಿನಗಳು ಉತ್ತಮವಿವೆ.

ಕುಂಭ— ಎಷ್ಟೆಷ್ಟೋ ವಿಘ್ನ ಪರಂಪರೆಗಳು ಬಂದರೂ ಹಿಡಿದ ಕಾರ್ಯವನ್ನು ಕೊನೆತನಕವೂ ಸಾಧಿಸಿಯೇ ತೀರುವ ಅಸಾಧಾರಣ ಶಕ್ತಿ ನಿಮ್ಮಲ್ಲಿರುವುದು ನಿಮ್ಮ ಕರ್ಮಕುಶಲತೆಯನ್ನು ಕಂಡ ಶತ್ರುಜನರೂ ಮೂಗಿನಮೇಲೆ ಬೆರಳಿಡಲಿರುವರು. ಬಂಧುಜನರಿಗೂ ನಿಮಗೂ ಉಂಟಾದ ಮನಸ್ತಾಪವು ನಿಮ್ಮನ್ನು ವಿಶೇಷವಾಗಿ ಚಿಂತೆಗೆ ಗುರಿಮಾಡಲಿದೆ. ಕೆಲವೊಮ್ಮೆ ಮಿತ್ರಜನರಿಗೂ ನಿಮಗೂ ಕೂಡ ಮನಸ್ತಾಪವುಂಟಾಗುವ ಸನ್ನಿವೇಶಗಳೊದಗುವವು. ಹಿಂದಿನ ಸಾಲ ಕಡಗಳಿಂದ ಮುಕ್ತರಾದ ನೀವು ತಾ. 10, 11, 14, 15 ಈ ದಿನಗಳನ್ನು ನಿಶ್ಚಿಂತೆಯಿಂದ ಕಳೆವಿರಿ.

ಮೀನ—ನಿಮ್ಮ ಜನ್ಮರಾಶಿಗತನಾದ ಉಚ್ಚ ಶುಕ್ರನೊಬ್ಬನನ್ನುಳಿದು ಮಿಕ್ಕೆಲ್ಲಾ ಗ್ರಹರೂ ಪ್ರತಿಕೂಲ ಸ್ಥಾನಗತರಾಗಿರುವುದರಿಂದ ನೀವೀ ವಾರದಲ್ಲಿ ವಿಶೇಷ ಕಷ್ಟನಷ್ಟ ದುಃಖಗಳಿಗೆ ಗುರಿಯಾಗಲಿರುವಿರಿ. ರಾಜಕೀಯ ಅಧಿಕಾರಿಗಳ ಪೀಡೆಗೆ ಸಿಲುಕುವಿರಿ. ಪಿತ್ತೋಷ್ಣ ದೋಷದಿಂದ ಆರೋಗ್ಯ ಕೆಟ್ಟೀತು. ಹಣದಬಿಕ್ಕಟ್ಟು ಹೆಚ್ಚುವದಲ್ಲದೆ ಪರ್ಯಟನ, ಆಪ್ತೇಷ್ಟರ ವಿಯೋಗ ಸ್ಥಾನಚ್ಯುತಿ ಮೊದಲಾದ ಅರಿಷ್ಟಗಳೊದಗುವವು. ತಾ. 9, 12, 13 ಈ ದಿನಗಳಲ್ಲಿ ಹೆಚ್ಚಿನ ತಾಪತ್ರಯಕ್ಕೆ ಸಿಲುಕಲಾರಿರಿ.

ಶರೀರ ಸಮತೂಕತೆಗೆ-ಸರ್ವ ರೋಗ ನಿವಾರಣೆಗೆ
ನವಚೇತನ, ಅಮೂಲ್ಯ ಶಕ್ತಿವರ್ಧಕವೆಂದರೆ— ಸುಪ್ರಸಿದ್ಧ
ಸರ್ ಜೀವನ್ ಶಿಲಾಜಿತ್ ಲೇಹ್ಯ
ಸಕಲ ಋತುವಿನಲ್ಲಿ ಸರ್ವರಿಗೂ ಅನುಕೂಲವುಂಟು.
44 ದಿನದ ಲೇಹ್ಯ ರೂ. 5-4-0, 22 ದಿನದ ಲೇಹ್ಯ ರೂ. 3-4-0
(ಪೋಸ್ಟೇಜ್ ಮಾಫಿ)
ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರ ಸಿಟಿ
ಶುದ್ಧ ನೀಲಗಿರಿ ಎಣ್ಣೆ ಸಿಗುತ್ತೆ.

For rotection and Provision Consult
The New Guardian of India Life Insurance Co., Ltd.
Estd] Head office: MADRAS [1934

NEW BUSINESS	Exceeds	... 66½	Lakhs
PREMIUM INCOME	,,	... 15	,,
LIFE FUND	,,	... 54¾	,,
ASSETS	,,	... 60¾	,,
BUSINESS IN FORCE	Nearly	3	Crores

A Policy in this Progressive Life Office is good investment; its Agency is valuable business connection.

Applications for Representation are invited from energetic influential persons, with good connection. *Please apply to:*

G. R. Wallia, *Branch Manager,*
Diamond Building, Hampankatta, MANGALORE, S. K.

ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.
ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.
ಯು. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.
ಫೋನು ನಂಬ್ರ 66

ಕುದುರೆ ಮುಖ

(ಲೇ:— ಚರ್ಕಲ್ ಶಾಂತಾರಾಮರಾವ್, ಮಂಗಳೂರು)

ಸೆಕೆ ಕಾಲದ ತಾಪವನ್ನು ತಡೆಯಲಾರದ ನಮ್ಮ ಜಿಲ್ಲೆಯ ಹಲವಾರು ಮಂದಿ ಉದಕಮಂಡಲ, ಕೊಡೈಕೆನಲ್, ನಂದಿಬೆಟ್ಟ ಮೊದಲಾದ ಗುಡ್ಡನಾಡುಗಳಿಗೆ ಹೋಗುವುದು ವಾಡಿಕೆಯಾಗಿದೆ. ಆದರೆ ನಮ್ಮ ಜಿಲ್ಲೆಯಲ್ಲಿಯೇ ಸೆಕೆಯುಬೇಗೆಯನ್ನು ನಿವಾರಿಸುವ ಚಳಿ ಪ್ರದೇಶವೊಂದಿದೆಯೆಂದು ಇನ್ನೂ ಹಲವರಿಗೆ ತಿಳಿಯದ ವಿಚಾರವಾಗಿದೆ. ಕಾರಣವೇನೆಂದರೆ, ಇಲ್ಲಿಗೆ ಹೋಗಲು ರಸ್ತೆಯ ಏರ್ಪಾಡಾಗಲಿ, ಉಳಕೊಳ್ಳಲು ತಕ್ಕ ವಸತಿ ಸೌಕರ್ಯವಾಗಲಿ ಇರುವುದಿಲ್ಲ. ಇದುವೇ ಕುದುರೆ ಮುಖ. ಇದು ಬೆಳ್ತಂಗಡಿ ಸಬ್ ತಾಲೂಕಿನೊಳಗಿದ್ದು, ಬೆಳ್ತಂಗಡಿಯಿಂದ ಹತ್ತು ಹದಿನೈದು ಮೈಲಿಗಳೊಳಗಿದೆ. ಶಿಖರವು ಪಶ್ಚಿಮ ಘಟ್ಟಗಳಲ್ಲಿದ್ದು ನಮ್ಮ ಜಿಲ್ಲೆಯ ಹಾಗೂ ಮೈಸೂರಿನ ಅತೀ ಉನ್ನತ ಪ್ರದೇಶಗಳಲ್ಲಿ ಒಂದಾಗಿದೆ, ಸಮುದ್ರ ಮಟ್ಟದಿಂದ 6,200 ಅಡಿ ಎತ್ತರದಲ್ಲಿದೆ. ಸಮುದ್ರಾಭಿಮುಖದಿಂದ ನೋಡುವಾಗ ಇದು ಕುದುರೆಯ ಮುಖದಂತೆ ತೋರಿ ಬರುವುದರಿಂದ ಇದಕ್ಕೆ ಕುದುರೆ ಮುಖವೆಂದು ಕರೆಯುವರು. ಅಲ್ಲದೆ ನಾವಿಕರಿಗಿದೊಂದು ಸುಪ್ರಸಿದ್ಧ ಗುರುತು ಆಗಿರುತ್ತದೆ. ಬೆಳ್ತಂಗಡಿಯಿಂದಾಗಿ ಇಲ್ಲಿಗೆ ಹೋಗಲು ಅತ್ಯಂತ ಸಮೀಪವಾಗಿರುತ್ತದೆ. ಆದರೆ ನಾವೂರು ವರೆಗೆ ಮಾತ್ರ ಸರಿಯಾದ ರಸ್ತೆಯಿದ್ದು ಮುಂದೆ ವಾಹನ ಸೌಕರ್ಯವಾಗಲಿ ವಾಹನ ಚಲಾವಣೆಗೆ ಯೋಗ್ಯವಾದ ಮಾರ್ಗವಾಗಲಿ ಇರುವುದಿಲ್ಲ. ಇವೆಲ್ಲಾ ಅಭ್ಯಂತರಗಳಿಂದಾಗಿ, ಇದೊಂದು ಉತ್ತಮ ಬೇಸಿಗೆ ಕಾಲದ ವಸತಿ ಸ್ಥಾನವಾಗಿದ್ದರೂ ಜನಗಳಿಗೆ ಪ್ರಯೋಜನಕ್ಕೆ ಬಾರದ ಸ್ಥಳವಾಗಿ ಪರಿಣಮಿಸಿದೆ. ಆದುದರಿಂದ ಇದನ್ನು ಆದಷ್ಟು ತೀವ್ರವಾಗಿ ಸರಿಗೊಳಿಸುವ ಏರ್ಪಾಡು ಮಾಡಿದಲ್ಲಿ, ನಮ್ಮ ಜಿಲ್ಲೆಯವರಿಗೆ ಮಾತ್ರವಲ್ಲ, ನೆರೆನಾಡಿನವರಿಗೂ ಅದು ತುಂಬಾ ಪ್ರಯೋಜನಕಾರಿಯಾಗಬಹುದು.

ಹತ್ತಿಪ್ಪತ್ತು ವರ್ಷಗಳ ಹಿಂದಿನ ವರೆಗೆ ದಿ ಶೋಸರೀ ಮೊದಲಾದ ಜೆಸುವಿಟ್ ಇಟಾಲಿಯನ್ ಪಾದ್ರಿಗಳೂ ಜರ್ಮನ್ ಮಿಶನರಿಗಳೂ ಆಂಗ್ಲ ಕಲೆಕ್ಟರರೂ ಎಪ್ರಿಲ್—ಮೇ ತಿಂಗಳುಗಳಲ್ಲಿ ಇಲ್ಲಿಗೆ ಹೋಗಿ ವಿಶ್ರಾಂತಿ ಪಡೆಯುತ್ತಿದ್ದರು. ಆದರೆ ಇಂದು ಆ ಪದ್ಧತಿಯೂ ಕೂಡ ನಿಂತು ಹೋಗಿದೆ. ಬೆಟ್ಟದ ಮೇಲ್ಗಡೆಯಲ್ಲಿ ದಿಶೋಸರ ಹಾಗೂ ಬಾಸೆಲ್ ಮಿಶನಿನವರ ಬಂಗ್ಲೆಗಳಿದ್ದುವು. ಆದರೆ ಇವೆಲ್ಲಾ ಇಂದು ಬಹಳ ಜೀರ್ಣಾವಸ್ಥೆಯಲ್ಲಿವೆಯೆಂದು ತಿಳಿಯುತ್ತೇವೆ. ನಮ್ಮ ಜಿಲ್ಲೆಯಲ್ಲಿಯೇ ಇರುವ ಇಂಥಾ ಸುರಮ್ಯ ಗುಡ್ಡನಾಡನ್ನು (Hill-Station) ಅಭಿವೃದ್ಧಿ ಪಡಿಸಲು ಲೋಕಲ್ ಜಿಲ್ಲಾ ಬೋರ್ಡು ಸದಸ್ಯರೂ ನ್ಯಾಯ ವಿಧಾಯಕ ಸಭೆಗಳ ಸದಸ್ಯರೂ ತಕ್ಕ ಪ್ರಯತ್ನಗಳನ್ನು ಕೈಕೊಳ್ಳುವರೆಂದು ಆಶಿಸುತ್ತೇನೆ. ಮುಖ್ಯವಾಗಿ ಕುಲೆನಾಡಿನ ಪ್ಲಾಂಟರ್ ವೊಂಟನವರು ಈ ವಿಚಾರಕ್ಕೆ ಗಮನವನ್ನೀಯುವುದು ಅತ್ಯಗತ್ಯವಾಗಿದೆ.

Edited, Printed & Published By K. H. Shetty at the Navayuga Press, Udipi, S. India

Regd No
M 3618

LICENCE No. 31
Licensed to Post without Prepayment

ನವಯುಗ
ಆರೋಗ್ಯ ಮಂತ್ರಿ
ಶ್ರೀ. ಎ. ಬಿ. ಶೆಟ್ಟರಿಂದ
ಉದ್ಘಾಟಿತವಾದ ವಾರಪತ್ರಿಕೆ,
ಉಡುಪಿ, ದ. ಕನ್ನಡ.

ವಾರ್ಷಿಕ ಚಂದಾ 5-12-0
ಆರು ತಿಂಗಳಿಗೆ 3-0-0
ಬಿಡಿ ಪ್ರತಿಗೆ 0-2-0

ನವಯುಗ

16-4-1953

Vol 32
No 32

NAVAYUGA WEEKLY POST BOX NO 22 UDIPI

ವರ್ಷ ೩೨
ವಾರ ೩೨

ಅಂತರಂಗ
ಪುಸ್ತಕ ಪತ್ರಿಕೆಯು
ಉಪಯುಕ್ತವಾದ
90 ಪುಸ್ತಕಗಳು
ರೂ 24ಕ್ಕೆ ಸಿಗುತ್ತವೆ
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ

ಮಧುಚಕ್ರ

"ಡಾಕ್ಟರ್, ತ್ವರೆ ಮಾಡಿರಿ" ಎಂದೊಬ್ಬ ಮಹನೀಯರು ಗಡಿಬಿಡಿಯಿಂದ ಹೇಳಿದರು ಡಾಕ್ಟರರು ಎಲ್ಲಿಗೆ ಏನು ಸಮಾಚಾರ ಎಂದು ಕೇಳಲು, ಹದಿನೈದು ಮೈಲು ದೂರದ ಊರೊಂದಕ್ಕೆ ಹೋಗಬೇಕಾಗಿದೆ ಎಂದು ಉತ್ತರ ಬಂತು ಡಾಕ್ಟರರು ಒಡನೆಯೇ ತಮ್ಮ ಕಾರಿನಲ್ಲಿ ಆ ವ್ಯಕ್ತಿಯನ್ನು ಕುಳ್ಳಿರಿಸಿಕೊಂಡು, ತಾಸಿಗ ನಲುವತ್ತೈದು ಮೈಲು ವೇಗದಲ್ಲಿ ಕಾರು ಬಿಟ್ಟರು

ಆ ಊರು ಮನೆಯನ್ನು ಮುಟ್ಟಿದೊಡನೆಯೇ ಮಹನೀಯರು "ಡಾಕ್ಟರ್, ತಮ್ಮ ಫೀಸು ಎಷ್ಟು? ಎಂದು ಕೇಳಿದರು ಆಶ್ಚರ್ಯಚಕಿತರಾದ ಡಾಕ್ಟರರು "ಐದು ರೂಪಾಯಿ" ಎಂದರು

ಪಾಕೀಟು ತೆರೆದು ಐದು ರೂಪಾಯಿಯ ನೋಟೊಂದನ್ನು ಡಾಕ್ಟರರಿಗೆ ಕೊಡುತ್ತಾ "ತುಂಬ ಉಪಕಾರವಾಯಿತು" ಎಂದು ಮಹನೀಯರು ಹೇಳಲು, ಡಾಕ್ಟರರಿಗೆ ದಿಗ್ಭ್ರಮೆಯಾಯಿತು "ಸಂಗತಿಯೇನು, ರೋಗಿಯೆಲ್ಲಿ ಎಂದವರು ಕೇಳಿದರು

"ಹ್ಮ, ಇನ್ನಿಲ್ಲಿ ಡಾಕ್ಟರ್ ನನಗೆ ಅಗತ್ಯದ ಕೆಲಸದ ಮೇಲೆ ಈ ಊರಿಗೆ ಬರಬೇಕಿತ್ತು ಈ ರಾತ್ರಿಗೆ ಟ್ಯಾಕ್ಸಿಯಾಗಲೀ ಕಾರಾಗಲೀ ಸಿಗಲಿಲ್ಲ ಸಿಕ್ಕಿದರೂ ಹತ್ತು ರೂಪಾಯಿಗೆ ಕಡಿಮೆ ಕೆಲಸವಾಗುತ್ತಿರಲಿಲ್ಲ ಅದಕ್ಕೆ ನಿಮ್ಮ ಬಳಿ ಬಂದೆ. ಬಂದದ್ದೇ ಸಂಪಾದನೆ ಕೆಲಸವಾಗಿದೆ ತಾನೆ'

ಬಹುಮುಖ ಅಭಿರುಚಿ

"ಆಡು ಮುಟ್ಟದ ಸೊಪ್ಪಿಲ್ಲ" ಎಂದು ಗಾದೆಮಾತೊಂದಿದೆ. ಆಡು ಎಲ್ಲವನ್ನೂ ಮೆಂದು ತಿನ್ನುತ್ತದೆ. ಅದಕ್ಕೆ ನೇರದುದೆಂಬುದಿಲ್ಲ. ಅದರಂತೆಯೇ ನಮ್ಮ ಅಭಿರುಚಿಗಳನ್ನೂ ಇಟ್ಟುಕೊಳ್ಳಬೇಕೆಂದು ಬಲ್ಲವರ ಅಭಿಮತ. ನಮ್ಮ ಮನಸ್ಸಿಗೆ ಒಗ್ಗದುದು ಯಾವುದೂ ಇರಬಾರದು ಪ್ರತಿಯೊಂದು ಸಂಗತಿ ನಮಗೆ ಸೇರಬೇಕು—ಎಂದರೆ ಸುಖ ಜೀವನಕ್ಕೆ ಆತಂಕ ಒದಗಲಾರದು. ಜೀವನವನ್ನು ಅನೇಕ ಮುಖಗಳಿಂದ ಸ್ಪರ್ಶಿಸುವವರೇ ಸುಖಿಗಳು. ಯಾವುದಾದರೊಂದು ಅಭಿರುಚಿ ಮಾತ್ರವುಳ್ಳ ಜನರು ಅದರಿಂದ ವಂಚಿತರಾದೊಡನೆಯೇ ಬದುಕಿನಲ್ಲಿ ಜುಗುಪ್ಸೆ ಹೊಂದುವರು" ಎಂದೊಬ್ಬ ಮಹನೀಯರು ಎಚ್ಚರಿಕೆ ನೀಡಿದ್ದಾರೆ. ಇದು ಅತ್ಯಮೂಲ್ಯವಾದ ಸಂದೇಶವೇ ನಿಜ. ನಾವು ಜೀವನದಲ್ಲಿ ಅನುಭವ ಸಂಪನ್ನರಾಗಲು ನೋಡಿದರೆ ಮಾತ್ರ ಏರುತಗ್ಗುಗಳನ್ನು ಯಶಸ್ವಿಯಾಗಿ ಕ್ರಮಿಸಿ ಮುನ್ನಡೆಯಬಲ್ಲೆವು. ಇದಕ್ಕಾಗಿ ಅಭಿರುಚಿಗಳು ಬಹುಮುಖವಾಗಿರುವುದು ಅಪೇಕ್ಷಣೀಯ.

ಹದಿನೈದು ವರ್ಷಗಳಿಂದ ಕುರುಡನಾದವನಿಗೆ ಮೋದಿ ಡಾಕ್ಟರರು ಮರಳಿ ದೃಷ್ಟಿದಾನ ಮಾಡಿದಾಗ ಅವನ ಉಲ್ಲಾಸಕ್ಕೆ ಎಣೆ ಇರಲಿಲ್ಲ. ಇಷ್ಟು ದೀರ್ಘಾವಧಿಯ ಅಂಧಕಾರ ಕಳೆದ ಮೇಲೆ ಅವನೀಗ ಬದುಕಿನ ಚಿತ್ರವಿಚಿತ್ರ ಸಂಗತಿಗಳನ್ನು ಮರಳಿ ಗುರುತಿಸಿ ಅವುಗಳಲ್ಲಿ ತನ್ಮಯನಾಗುವ ಸೌಭಾಗ್ಯವನ್ನು ಪಡೆದನು. ನಿತ್ಯವೂ ನೂರಾರು ಹೊಸ ಅನುಭವವನ್ನು ಸಂಪಾದಿಸಲು ಕಣ್ಣುಗಳು ಅವನಿಗೆ ನೆರವು ನೀಡುತ್ತವಲ್ಲವೆ? ನಮ್ಮ ಅಭಿರುಚಿಗಳು ಹುಡುಕುವ ಕಣ್ಣಿನಂತೆ ನೂರಾರು ವಸ್ತುಗಳ ಮೇಲೆ, ಸಂಗತಿ ಹಾಗು ಘಟನೆಗಳ ಮೇಲೆ ನೆಲೆಗೊಳ್ಳಬೇಕು. ಸುಖಜೀವನದ ಹಂಬಲ ನಮ್ಮಲ್ಲಿ ಯಾರಿಗಿಲ್ಲ? ಆದರೆ ಪ್ರಸಿದ್ಧ ಮನೋವಿಜ್ಞಾನಿಯೋರ್ವನು ಹೇಳುವಂತೆ, ನಮ್ಮಲ್ಲಿ ಅಧಿಕಾಂಶ ಜನರು ತಮ್ಮೆಲ್ಲ ಮನಸ್ಸನ್ನು ಒಂದೇ ಸಂಗತಿಯ ಕುರಿತು ಕೇಂದ್ರೀಕರಿಸಿ, ಬದುಕಿನ ಸಾವಿರಾರು ಆನಂದದಾಯಿ ಅನುಭವದಿಂದ ವಂಚಿತರಾಗಿದ್ದಾರೆ. ಅಂಥವರು ಕುರುಡನು ದೃಷ್ಟಿಲಾಭ ಪಡೆದಂತೆ, ಮನಸ್ಸನ್ನು ಚಟುವಟಿಕೆ ತುಂಬಿದ ಸುತ್ತಣ ಬಾಳ್ವೆಯ ಕಡೆಗೆ ತಿರುಗಿಸುವುದುತ್ತಮ

ನಾವು ಬಾಲ್ಯವನ್ನು ಕಳೆದು ದೊಡ್ಡವರಾಗುತ್ತಾ ಬಂದಂತೆ ಒಂದೊಂದೇ ವಿಶಿಷ್ಟ ಅಭಿರುಚಿಯ ದಾಸ್ಯ ಸ್ವೀಕರಿಸುವ ಪ್ರವೃತ್ತಿ ಕಂಡುಬರುತ್ತದೆ. ಸಣ್ಣ ಮಕ್ಕಳನ್ನು ನೋಡಿ-ಅವುಗಳಿಗೆ ಪ್ರತಿಯೊಂದರಲ್ಲಿಯೂ ಇನ್ನಿಲ್ಲದ ಆಸ್ಥೆ ಮತ್ತು ಉತ್ಸಾಹ ಆದರೆ ಅವರ ಏಕಾಗ್ರ ಚಿತ್ತವು ಒಳಗೊಂಡಂತೆ. ಲೋಕದಲ್ಲಿ ತಮಗೆ ಒಡನೆಯೇ ಲಾಭ ನೀಡಬಲ್ಲ ಸಂಗತಿಯತ್ತ ಮಾತ್ರ ಬೆಳೆದ ಮಕ್ಕಳು ಮನಸ್ಸು ಕೊಡ ಹತ್ತುವರು ಸರಿಯಾದ ಮಾರ್ಗದರ್ಶನ ಈ ಕಾಲದಲ್ಲಿ ದೊರೆಯದಿದ್ದ ಪಕ್ಷದಲ್ಲಿ ಮಕ್ಕಳು ತಮಗೆ ಬೇಕಾದ ಪ್ರಾಗ-ಬೇಡವಪ್ಪಗಳೆಂದು ಲೋಕದ ಅತ್ಯಮೂಲ್ಯ ಸಂಗತಿಗಳ ವರ್ಗೀಕರಣಕ್ಕೆ ಕೈಹಾಕುವುದು ನಿಶ್ಚಯ. ಹೀಗೆ ಬಹುಮುಖವಾದ ಅಭಿರುಚಿಯು ಒಂದರವನ್ನು ಮಾತ್ರ ಸ್ವೀಕರಿಸುವುದರ ಪರಿಣಾಮವಾಗಿ ಜೀವನ ಸಂಜೆದಲ್ಲಿ ಕೂಡ ಅದಿರಾಂಶವನ್ನು ಕಳೆದುಕೊಳ್ಳುವರು ಮಕ್ಕಳ ಸರಿಕ ಹಾಗು ತಿರಸ್ಕಾರಗಳ ಸ್ವರೂಪ ಕೆಲವೊಮ್ಮೆ ಬಾಳ್ವೆಯ ಸೂತ್ರಕ್ಕೆ ಪ್ರತಿಕೂಲವಾಗಿದ್ದರೂ ಇದ್ದೀತು. ಉದಾಹರಣೆಗೆ ಆಟದ ಕುರಿತು ಮಾತ್ರ ಅವರಲ್ಲಿ ಅಭಿರುಚಿ ಮೂಡಿಕೊಂಡು, ಕೆಲಸವೆಂದರೆ ಜುಗುಪ್ಸೆ ಹುಟ್ಟಬಹುದು. ಇದರಷ್ಟು ಘಾತಕವಾದದ್ದು ಬೇರೇನಿದೆ?

ದೊಡ್ಡವರು ಕೂಡ ತಮ್ಮ ಅಭಿರುಚಿಯನ್ನು ಬಹುಮುಖವ ಗಿಟ್ಟಿಕೊಳ್ಳದ ದೊಡ್ಡ ತಪ್ಪು ಮಾಡುತ್ತಾರೆ ತನ್ನ ವ್ಯಾಪಾರ ವ್ಯವಹಾರದಲ್ಲಿಯೇ ಗ್ರಸ್ತನು ಮಗ್ನನಾಗಿ ಬಿಟ್ಟು, ಮನೆಮಕ್ಕಳ ಮೇಲೆ ಪ್ರೀತಿ ವಾತ್ಸಲ್ಯ ತೋರದಿದ್ದರೆ, ಸಮಾಜ ... ಚಟುವಟಿಕೆಗಳಲ್ಲಿ ಭಾಗವಹಿಸದಿದ್ದರೆ ಸಂತೋಷ ಕೂಟಗಳಲ್ಲಿ ಸೇರಿ ನಕ್ಕುನಲಿಯದಿದ್ದರೆ ಅವನು ಲಕ್ಷ ಲಕ್ಷ ರೂಪಾಯಿಗಳಿಸಿದರೂ ಸುಖಜೀವನದ ಪೂರ್ಣ ಸವಿಯನ್ನು ಅನುಭವಿಸಿದಂತಾಗಲಿಲ್ಲ. ಇದರಂತೆ ಮಹಿಳೆಯೋರ್ವಳು ನಿತ್ಯದ ಗೃಹಕೃತ್ಯದಲ್ಲಿಯೇ ತನ್ಮಯಳಾಗಿ, ಬದುಕಿನ ಇತರ ವಿಷಯಗಳನ್ನು ಕಡೆಗಣಿಸಿದರೆ, ಅವಳದು ಸುಖೀ ಜೀವನವೆಂದು ಹೇಳಲು ಸಾಧ್ಯವಿಲ್ಲ. ನಮ್ಮಲ್ಲಿ ಪ್ರತಿಯೊಬ್ಬರಿಗೂ ಚಿತ್ತೈಕಾಗ್ರತೆ ಇರುವುದು ಒಳ್ಳೆಯದಾದರೂ ಒಂದು ಸಂಗತಿಯ ... ನಕ್ಕೆ ಅದು ಆತಂಕವಾಗಿ ಪರಿಣಮಿಸಕೂಡದು. ಕ್ಷಣಕ್ಷಣಕ್ಕೂ ಬದಲಾಗುತ್ತಿರುವ ಘಟನೆಗಳ ಕೂಡ ಶೀಘ್ರದಲ್ಲಿಯೇ ಹೊಂದಾಣಿಕೆ ಸ್ಥಾಪಿಸಿಕೊಳ್ಳಲು ಅನುಕೂಲವಾಗುವ ರೀತಿಯಲ್ಲಿ ನಾವು ಬಹುಮುಖವಾದ ಅಭಿರುಚಿಯನ್ನು ಬೆಳೆಸಿಕೊಳ್ಳುವುದಗತ್ಯ.

ಅನೇಕ ಅಡಚಣೆಗಳನ್ನು ತಪ್ಪಿಸಿಕೊಂಡು ನಿರಾಶೆ ಪಡುವುದಕ್ಕಿಂತ ಯಾವುದಾದರೊಂದು ಸಂಗತಿಯ ಕುರಿತು ಮಾತ್ರ ಚಿಂತಿಸ

(೨-ನೇ ಪುಟ ನೋಡಿರಿ)



ಇಂಗ್ಲೆಂಡಿನ ... ವಿಮಾನ ನಿಲ್ದಾಣದ ... ಕೂಡಿದ ಈ ಗೋಪುರದಿಂದ ... ವಿಮಾನ ನಿಲ್ದಾಣವನ್ನು ... ವಿಮಾನಗಳು ... ವಿಮಾನಗಳಿಗೆ ... ಕಂಟ್ರೋಲ್ ... ಕೂರಡಿಯಲ್ಲದ

ಪಂಚವಾರ್ಷಿಕ ಯೋಜನೆಗೆ ಜನತಾ ಸಹಕಾರ

ಸ್ವಯಂ ಸೇವಕರ ತಂಡಗಳಿಂದ ಸ್ಥಳೀಯ ಅಭಿವೃದ್ಧಿ.

— ೧ —

ರಾಷ್ಟ್ರೀಯ ಯೋಜನೆಯ ಮುಖ್ಯ ತ...ವಾಗಿ ಹಿನ್ನಲೆಯಲ್ಲಿರುವ ವಿವಿಧ ವಿಷಯಗಳಲ್ಲಿ ಸಾರ್ವಜನಿಕ ಸಹಕಾರ ಮತ್ತು ...ಸಭಿಪ್ರಾಯವು ಮಹತ್ವದ್ದೆನ್ನಬಹುದು. ...ಸರ ಮನದೊಲವಿನಂತೆ ಅಧಿಕಾರವನ್ನು ...ಡೆಸುವ ಪ್ರಜಾಪ್ರಭುತ್ವದಲ್ಲಿ ಯೋಜನೆಯು ಜನತಾಸಹಕಾರದಿಂದ ರೂಪವಡೆಯಬೇಕಲ್ಲದೆ ರಾಜ್ಯ ಶಾಸನದ ನಿರಂಕುಚಲಾವಣೆಗೆ ಶರಣೆನ್ನಲಾಗದು. ಇದ...ರ್ಥ ಸಾಮಾಜಿಕ ಹಿತದ ಸದುದ್ದೇಶದಿಂ ಎಲ್ಲ ಜನರೂ ಒಟ್ಟಾಗಿ ದುಡಿಯಬೇ...ದಾಗುತ್ತದೆ ತಾನೆ! ಯೋಜನೆಯ ವಿ...ಧ ಘಟ್ಟಗಳಲ್ಲಿ ಜನರಿಂದ ಅಪೇಕ್ಷಿತವಾ...ಸರವು ಮತ್ತು ಸಹಕಾರಗಳನ್ನು ಸೀ...ವಲ್ಲಿ ಸಾರ್ವಜನಿಕರು ಮುಂಬರಬೇ...ು. ಯೋಜನೆಯನ್ನು ರೂಪಿಸುವ ಮತ್ತು ...ಯರ್ಾನ್ವಿತಗೊಳಿಸುವ ಹೊಣೆಯು ...ಕಾರದ ಮೇಲಿದ್ದರೂ ಅದಕ್ಕೆ ಸ್ಫೂರ್ತಿ...ತ್ತು ಉತ್ಸಾಹಗಳನ್ನು ಜನರೇ ಒದಗಿ...ವುದವಶ್ಯ. ಯೋಜನೆಯು ಪ್ರಗತಿ...ಂದಲು ಪೋಷಕವೆನಿಸಿದ ಜನತಾ ...ಸಹಕಾರಕ್ಕೆ ಎಡೆ ಮಾಡಿಕೊಡುವುದು ...ಕಾರೀ ಅಧಿಕಾರಿಗಳ ಕರ್ತವ್ಯ. ಸ...ರ ಹಾಗು ಜನತೆ ಕೂಡಿಯೇ ಪರಸ್ಪ...ಸಹಕಾರದಿಂದ ಸಾಮಾನ್ಯೋದ್ದೇಶಸಾ...ಯಲ್ಲಿ ಪರಿಶ್ರಮ ವಹಿಸಿ ದುಡಿದಾಗ ...ರ್ಯಕ್ರಮಕ್ಕೆ ಆತ್ಮಪೂರ್ವವಾದ ಕಳೆ ...ತ್ತದೆ. ಲೋಕದ ಪರಿಸ್ಥಿತಿಯನ್ನು ವೀ...ದವರಿಗೆ, ಪ್ರಜಾಪ್ರಭುತ್ವದ ಪ್ರಗತಿಗಾ...ನಿಷ್ಠೆಯಲ್ಲ ಅದರ ಉಳಿವಿಗಾಗಿಯೇ ...ಷ್ಟ್ರೀಯ ಅಭಿವೃದ್ಧಿ ಯೋಜನೆ ಅನಿ...ರ್ಯವೆನಿಸುತ್ತದೆ. ನಾವು ಕೈಗೊಳ್ಳ... ಯೋಜನೆಯು ಆರ್ಥಿಕ ವೈಷಮ್ಯ ...ಆಸ್ಪದವಿಲ್ಲದ ಮತ್ತು ಎಲ್ಲರಿಗೂ ಸ...ನಾವಕಾಶವಿರುವ ಸಾಮಾಜಿಕ ಪದ್ಧ...ು ಸ್ಥಾಪನಾ ಕಾರ್ಯದಲ್ಲಿ ಒಂದು ... ಮುಂದಿಡುವಂತಿದೆ ಎಂಬ ನಂಬಿಕೆ ...ರಲ್ಲಿ ಮೂಡಿಸುವಂತಿದ್ದರೆ ಚಂದ. ಆ...ದರಿಂದ ಪಂಚವಾರ್ಷಿಕ ಯೋಜನೆ ...ಮಟ್ಟಿಗೆ, ವಿವಿಧ ರಾಜಕೀಯ ಪಕ್ಷ ...ಮತಭೇದಗಳು ಹಿನ್ನೆಲೆಗೆ ಸರಿದು ...ಡು ರಾಷ್ಟ್ರೀಯ ಪ್ರಗತಿಯ ಏಕೋ...ಕಣ್ಣಮುಂದೆ ನಿಲ್ಲುತ್ತದೆ. ಕೆಲವು ...ಗಳಿಗೆ ನಮ್ಮ ಯೋಜನೆಯ ಕಾ...ಪ್ರಣಾಳಿ ಮತ್ತು ಅದರ ಉದ್ದೇಶ ...ಪ್ತಿಗೆಯಾಗಲಿಕ್ಕಿಲ್ಲ. ಹೀಗಿದ್ದರೂ ಬ...ನರ ಮನಸ್ಸನ್ನು ಯೋಜನೆ ಆಕ...ದರೆ ಸಾರ್ವಜನಿಕ ಬೆಂಬಲ ಅದಕ್ಕಿ...ಂಬುದು ಸ್ಪಷ್ಟವಿದೆಯಷ್ಟೆ!

— ೨ —

...ೋಜನೆಯ ಪೂರ್ತಿಗೆ ಮತ್ತು ಯ... ಜನರು ಅದರ ಕುರಿತು ಅಧಿಕಾಧಿ...ಕ ಮಾಹಿತಿಯನ್ನು ಪಡೆದಿರುವುದು ಅತ್ಯ... ಮುಂದಿನ ಕೆಲವು ವರ್ಷಗಳಲ್ಲಿ ...ನ ವಿಧವಾಗಿ ದೇಶವು ಪ್ರಗತಿಹೊಂ...ದೆಂಬುದನ್ನು ಅರಿತುಕೊಂಡು ಜನ...ಸಾಮಾನ್ಯರು ಮೆಚ್ಚುಗೆ ವ್ಯಕ್ತಪಡಿಸುವಂ...ಬೇಕು ಇದನ್ನು ಹೃದಯಂಗಮ...ತಿಕೊಂಡಾಗ ಜನರಿಗೆ ಪ್ರತಿಯೊಂ...ಕ್ಷೇತ್ರದ ಬೆಳವಣಿಗೆ ಹೇಗೆ ಪರಸ್ಪರ...ಕವಾಗಿದೆ ಎಂದೂ ಒಂದು ಇನ್ನೊಂದರ ಹಿತಸಾಧಿಸುತ್ತದೆಂದೂ ತಿಳಿಯುತ್ತದೆ. ಯೋಜನೆಯು ನೀಡಿದ ಪ್ರಾಶಸ್ತ್ಯಜ್ಞಾನದಿಂದ ಪ್ರತಿಯೊಬ್ಬನೂ ರಾಷ್ಟ್ರೀಯ ಅಭಿವೃದ್ಧಿಯಲ್ಲಿ ತಾನು ಈಗ ಮಾಡತಕ್ಕುದೇನೆಂಬುದರ ಪರಿಚಯ ದೊರೆಯುತ್ತದೆ. ಈ ಎಲ್ಲ ಕಾರಣಗಳಿಗಾಗಿ ಯೋಜನೆಯ ತಿಳುವಳಿಕೆಯನ್ನು ಪ್ರತಿಯೊಂದು ಮನೆಯವರೆಗೂ ಅವರಿಗೆ ಅರ್ಥವಾಗುವ ಭಾಷೆಯ ಮೂಲಕ ಮಾಡಿಕೊಡಬೇಕು. ಪತ್ರ ಪತ್ರಿಕೆಗಳು, ಬರೆಹಗಾರರು, ಕಲಾವಿದರು ಮುಂತಾದ ಜನರು ಸರಕಾರದೊಡನೆ ಈ ದಿಸೆಯಲ್ಲಿ ಸಹಕರಿಸಬಲ್ಲರೆಂದು ಯೋಜನಾ ಆಯೋಗ ಹೇಳುತ್ತದೆ. ಈ ಉದ್ದೇಶದಿಂದ ವಿಧಾಯಕ ಕಾರ್ಯಕರ್ತರು ಮತ್ತು ಜನತಾ ಪ್ರತಿನಿಧಿಗಳೊಡನೆ ಕೂಡಿಕೊಂಡು ಶಾಲಾಕಾಲೇಜುಗಳ ಅಧ್ಯಾಪಕ ಹಾಗು ವಿದ್ಯಾರ್ಥಿವೃಂದ, ಬರೆಹಗಾರರು, ಕಲಾವಿದರು, ಪತ್ರಿಕೋದ್ಯಮಿಗಳು ಇವರೆಲ್ಲ ತಮ್ಮ ಕಾರ್ಯಕ್ರಮವನ್ನು ರೂಪಿಸಬೇಕು. ಜನರಿಗೆ ತಿಳುವಳಿಕೆ ಮಾಡಿಸಿಕೊಡುವಲ್ಲಿ ನೆರವಾಗಬಲ್ಲ ಪ್ರತಿಯೊಂದು ವಿಧಿ ವಿಧಾನದ ಅನುಸರಣೆ ಮಾಡಲು ಹಿಂಜರಿಯಬಾರದು. ರೇಡಿಯೋ ಸಿನೆಮಾ, ನಾಟಕ, ಗೀತ ಮುಂತಾದ ಎಲ್ಲ ರಂಗವನ್ನು ಯೋಜನೆಯ ಪ್ರಚಾರಕ್ಕಾಗಿ ಬಳಸಬಹುದು. ಹೀಗೆ ಪಂಚವಾರ್ಷಿಕ ಯೋಜನೆಯ ಜ್ಞಾನವನ್ನು ಸಾಮಾನ್ಯ ಪ್ರಜೆಗೆ ಮಾಡಿಕೊಟ್ಟ ಪಕ್ಷದಲ್ಲಿ, ಅವನಲ್ಲಿ ಯೋಜನೆಯ ಆಗು ಹೋಗುಗಳ ಬಗ್ಗೆ ಆಸ್ಥೆ ಉತ್ಪನ್ನಗೊಳ್ಳುತ್ತದೆ. ತನ್ನ ಹಾಗು ತನ್ನವರ ಮತ್ತು ನಾಡಿನ ಆವಶ್ಯಕತೆಗಳ ಸ್ಪಷ್ಟ ಕಲ್ಪನೆಯನ್ನವನು ಮಾಡಿಕೊಂಡು, ಪರಿಶ್ರಮದಿಂದ ದುಡಿಯಲು ನಿಶ್ಚಯಿಸುವುದು ಖಚಿತ. ಯೋಜನಾ ಆಯೋಗವು ರಾಷ್ಟ್ರೀಯ ಅಭಿವೃದ್ಧಿಯನ್ನು ಸ್ಥಳೀಯ ಘಟಕಗಳ ರೂಪಕ್ಕೆ ಪರಿವರ್ತಿಸಬೇಕೆನ್ನುತ್ತದೆ. ಸ್ಥಳೀಯ ಕಾರ್ಯಕ್ರಮಗಳ ಮೂಲಕವೇ ಆ ಪ್ರದೇಶದ ಜನರಲ್ಲಿ ಉತ್ಸಾಹ ಮತ್ತು ಲವಲವಿಕೆಯನ್ನು ತುಂಬುವುದು ಸಾಧ್ಯ. ಈ ರೀತಿಯಿಂದ ದೇಶದ ಮೂಲೆ ಮೂಲೆಯಲ್ಲಿಯೂ ಅಭಿವೃದ್ಧಿ ಕಾರ್ಯಕ್ಕೆ ಆಸ್ಪದ ಮಾಡಿಕೊಟ್ಟಂತಾಗುವುದಲ್ಲದೆ-ಜನತಾ ಸಹಕಾರಕ್ಕೆ ವಿಶಾಲವಾದ ರಂಗಭೂಮಿಯನ್ನು ಒದಗಿಸಿದಂತಾಗುತ್ತದೆ. ಜನರು ತಮ್ಮ ಒಳಿತು ಕೇಡುಗಳ ಜ್ಞಾನಮಾಡಿಕೊಳ್ಳದಷ್ಟು ಅವಿವೇಕಿಗಳೆಂದು ಸರಕಾರದ ಪ್ರಭೃತಿಗಳು ತಿಳಿದುಕೊಳ್ಳುವುದು ಸರಿಯಲ್ಲ. ಜನರೇ ದೇಶದ ಜೀವಾಳ.

— ೩ —

ಆದುದರಿಂದ ಸಾರ್ವಜನಿಕ ಸಹಾಯ ಮತ್ತು ಸಹಕಾರವನ್ನು ಅಪೇಕ್ಷಿಸುವುದು ಅಧಿಕಾರಿಗಳ ಕರ್ತವ್ಯವಾಗುತ್ತದೆ. ಈ ರೀತಿ ಜನತೆಯೊಡನೆ ನೆರವಿನಯಾಚನೆ ಮಾಡುವಾಗ ಅಧಿಕಾರೀ ವರ್ಗವು ತನ್ನ ಆಲಸ್ಯ ಪ್ರಕೃತಿಯಿಂದ ಮುಕ್ತವಾಗಿರದಿದ್ದರೆ ಜನತೆಯಲ್ಲಿ ವಿಶ್ವಾಸ ಮೂಡುವುದು ಶಕ್ಯವಿಲ್ಲ. ಜನ ಸರಕಾರಿ' ಅಧಿಕಾರಿಗಳನ್ನು ಕಾಣುವಾಗ ಅವರು ಲಂಚಗುಳಿತನ ದೀರ್ಘಸೂತ್ರ, ಹಾಗು ಅನಾದರ ಭಾವನೆಯನ್ನು ತೋರಿಸಿದ ಪಕ್ಷದಲ್ಲಿ ಜನರ ಉತ್ಸಾಹಭಂಗವಾಗುವುದು ಸ್ವಾಭಾವಿಕ. ಇಂಥದಕ್ಕೆಲ್ಲ ಅವಕಾಶ ಕೊಡಕೂಡದು. ಸಂಘಟಿತ ಸಾರ್ವಜನಿಕ ಅಭಿಪ್ರಾಯಕ್ಕೆ ಮನ್ನಣೆ ನೀಡುವುದು ಮತ್ತು ತದನುಗುಣವಾಗಿ ಸುಧಾರಣೆಗೆ ಪ್ರಯತ್ನಿಸುವುದು ರಾಷ್ಟ್ರೀಯ ಪುರೋಭಿವೃದ್ಧಿಯಲ್ಲಿ ಮಹತ್ವದ ಅಂಗವೆನಿಸಿದೆ. ಆದುದರಿಂದ ಜನರ ಬಳಿ ಸಾರುವಾಗ ತಾವು ಸರಕಾರೀ ಅಧಿಕಾರಿ ಅಥವಾ ನೌಕರರೆಂಬ ಅಹಂಕಾರ ಬೇಡ. ಜನತಾ ಸೇವಕರೆಂಬ ವಿನಯದ ವರ್ತನೆ ಇರಲಿ ಎಂದು ಯೋಜನಾ ಆಯೋಗ ಉಪದೇಶಿಸ...ದರಿಂದ ತಾವು ಕಲಿಯತಕ್ಕ ಸಂಗತಿಗಳು ಹಲವಿವೆ ಎಂಬುದನ್ನು ಮನಸ್ಸಿನಲ್ಲಿ ಇಟ್ಟುಕೊಂಡು, ಜನಾಭಿಪ್ರಾಯವರಿಯುವ ಇಚ್ಛೆಯಿಂದ ಅಧಿಕಾರೀ ವರ್ಗ ನಡೆದುಕೊಳ್ಳುವುದರಲ್ಲಿ ಹಿತವಿದೆ ಈ ರೀತಿ ಅಧಿಕಾರಿಗಳ ಮನಃ ಪರಿವರ್ತನೆಯೊಡನೆ ಕೆಲವು ನಿರ್ದಿಷ್ಟ ಶಿಷ್ಟಾಚಾರಕ್ಕೂ ಇಂಬುಕೊಡಬೇಕು. ಅಧಿಕಾರೀ ವೃತ್ತದಲ್ಲಿ ಆಡಳಿತವು ಸತ್ವಶಾಲಿಯಾಗಿರಬೇಕು; ಸಾಮರ್ಥ್ಯವುಳ್ಳದ್ದಾಗಿರಬೇಕು; ವಿಳಂಬ ಹಾಗು ಆಲಸ್ಯಗಳಿಗೆ ಆಸ್ಪದವಿರಕೂಡದು. ಜನರೊಡನೆ ಬೆರೆತು ಅವರ ಸುಖದುಃಖಗಳಲ್ಲಿ ಪಾಲುಗೊಳ್ಳುವುದೂ ಅಧಿಕಾರಿಗಳ ನಡವಳಿಕೆಯ ಅಂಗವಾಗಬೇಕು. ಗೌರವ ಹಾಗು ಅಭಿಮಾನದ ಸಂಗತಿಗಳು ಜನರ ಸಂಪರ್ಕಕ್ಕೆ ಆತಂಕವೆನಿಸಬಾರದು. ಸರಕಾರದ ಚಟುವಟಿಕೆಯು ಸಾರ್ವಜನಿಕರಲ್ಲಿ ನಂಬುಗೆ ಹುಟ್ಟಿಸುವಂತಿರಬೇಕು; ಅಭಿವೃದ್ಧಿ ಯೋಜನೆಗಳ ಸಂಗತಿಯಲ್ಲಿಯೂ ಹಾಗೇನೆ. ಈ ರೀತಿ ಜನರನ್ನು ಆದರಿಸಿದರೆ ಜನರು ಸಹ ತಾವಾಗಿ ಸಹಕಾರಕೊಡುವರು. ಪರಸ್ಪರರನ್ನು ಪ್ರೀತಿಸಿ ಆದರಿಸುವುದು ಮನುಷ್ಯ ಸ್ವಭಾವ.

— ೪ —

ಐದು ವರ್ಷಗಳ ಅವಧಿಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧಿಸಬೇಕಾದ ಪ್ರಗತಿಯ ಅಂಕೆಸಂಖ್ಯೆಯನ್ನು ಯೋಜನಾ ಆಯೋಗ ನಿರೂಪಿಸಿದೆ. ಈ ಪ್ರಗತಿಯು ಸಾಧ್ಯವಾಗುವಂತೆ ವಾತಾವರಣವನ್ನು ಕಲ್ಪಿಸಿಕೊಡುವುದು ಸರಕಾರದ ಕರ್ತವ್ಯ. ಜನರು ತಾವಾಗಿ ಇಂಥ ರಂಗಸ್ಥಳವನ್ನು ಮಾಡಿಕೊಳ್ಳಲು ಅಡ್ಡಿಯೇನಿಲ್ಲ. ಜನರು ಯೋಜನೆಯು ತಮಗೇನು ಭರವಸೆ ಕೊಡುತ್ತಿದೆ, ತಮ್ಮಿಂದೇನು ಅಪೇಕ್ಷಿಸುತ್ತದೆ, ಮತ್ತು ತಮ್ಮಿಂದ ಅಪೇಕ್ಷಿತವಾದ ಕೆಲಸ ಮಾಡಿ ಮುಗಿಸಲು ಏನು ಅನುಕೂಲ ಮಾಡಿ ಕೊಟ್ಟದೆ ಎಂಬುದನ್ನು ತಿಳಿದುಕೊಂಡಲ್ಲಿ-ನಿಜ ಕರ್ತವ್ಯವನ್ನರಿಯಲು ಸಾಧ್ಯವಾಗುತ್ತದೆ. ರಾಷ್ಟ್ರೀಯ ಅಭಿವೃದ್ಧಿ ಯೋಜನೆಯು ಪ್ರಗತಿಯ ದಿಸೆಯನ್ನು ...ಸೂಚಿಸೀತೇ ಹೊರತು, ಪ್ರತಿಯೊಂದು ಹಳ್ಳಿ ಹಾಗು ಊರಿನ ಆವಶ್ಯಕತೆಗಳ ಅಂದಾಜನ್ನು ಮಾಡಲಾರದು. ಇದನ್ನು ಆಯಾ ಸ್ಥಳದ ಧುರೀಣರು ಮತ್ತು ಜನತೆಯೇ ನಿಶ್ಚಯಿಸಬೇಕು. ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಇಂಥ ಸ್ಥಳೀಯ ಪ್ರಯತ್ನಗಳಿಗೆ ಮಹತ್ವದ ಸ್ಥಾನವಿದೆ. ಈಗಾಗಲೇ ತೊಡಗಿರುವ ದೊಡ್ಡ ದೊಡ್ಡ ಯೋಜನೆಗಳಲ್ಲಿ ಸಾರ್ವಜನಿಕ ಸಹಕಾರದ ಕುರಿತು ತಕ್ಕ ವ್ಯವಸ್ಥೆ ನಡೆದಿದೆ. ಇದನ್ನು ಕಾಲಾನುಕಾಲಕ್ಕೆ ಪುನರ್ವಿಮರ್ಶಿಸಿ ಯೋಗ್ಯ ತಿದ್ದುಪಡೆಯನ್ನು ಮಾಡಲು ಹವಣಿಸಿದೆ. ಇನ್ನು ತೊಡಗಲಿರುವ ರಂಗಗಳಲ್ಲಿ ಜನತಾ ಸಹಕಾರ ಪಡೆಯುವ ಕುರಿತು ಯೋಗ್ಯ ಏರ್ಪಾಡು ಕೂಡಲೇ ಕೈಗೊಳ್ಳಲ್ಪಡತಕ್ಕದ್ದು. ಯೋಜನೆಯನ್ನು ಕಾರ್ಯರೂಪಕ್ಕೆ ಇಳಿಸುವಾಗ ಪಕ್ಷದ ಪಟ್ಟಿಯನ್ನು ಸಿದ್ಧಗೊಳಿಸುವುದಕ್ಕೆ ತೋರಿಸುವ ಜಾಗ್ರತೆ ಮತ್ತು ವಿವೇಕವನ್ನು ಜನತಾ ಸಹಕಾರದ ಮಟ್ಟಿಗೂ ಉಪಯೋಗಿಸಬೇಕು. ಜನತಾ ಸಹಕಾರವಿಲ್ಲದೆ ಯೋಜನೆ ಯಶಸ್ವಿಯಾಗಲಾರದೆಂದು ಪದೇ ಪದೇ ಹೇಳುತ್ತಿರುವುದು

(೧೦ನೇ ಪುಟ ನೋಡಿರಿ)

ZANDU ಝೂಂಡೂ ಫಾರ್ಮಸಿಯ ಮನೆಮದ್ದುಗಳನ್ನೇ ಸದಾ ಉಪಯೋಗಿಸಿರಿ.

ಝೂಂಡೂ ಬ್ರಾಹ್ಮೀ ಹೇರ್ ಆಯಿಲ್ Zandu Brahmi Hair Oil — ಮೆದುಳಿಗೆ ತಂಪು– ಮನಸ್ಸಿಗೆ ಉಲ್ಲಾಸವೀಯುವುದು.
1 ಪೌಂಡಿಗೆ ರೂ. 3–8–0 ಕಾಲು ಪಾಂಡ್ಗೆ ರೂ. 1·

ಝೂಂಡೂ ಸರಸಪರಿಲ್ಲಾ Zandu Sarasaparilla — ರಕ್ತವನ್ನು ಶುದ್ಧಗೊಳಿಸಲು ಹೆಸರುವಾಸಿಯಾದುದು. ಚರ್ಮರೋಗಗಳನ್ನು ಗುಣಪಡಿಸಬಲ್ಲುದು. 4 ಔನ್ಸ್ ಬಾಟ್ಲಿ 1 ಕ್ಕೆ ರೂ. 1–5–0

ಝೂಂಡೂ ಬಾಲಾಮೃತ Zandu Balamrutam — ಅನಾರೋಗ್ಯವುಳ್ಳ ಮಕ್ಕಳಿಗೆ ಆದರ್ಶ ಟಾನಿಕ್ 4 ಔನ್ಸ್ ಬಾಟ್ಲಿ 1 ಕ್ಕೆ ರೂ. 1–2–0

ಝೂಂಡೂ ಬಾಮ್ Zandu Balm — ತಲೆ ಸಿಡಿತ ಮೊದಲಾದ ಬೇನೆಗಳಿಗೆ। ಸೀಸೆಗೆ ರೂ1·

ಝೂಂಡೂ ಫಾರ್ಮಸಿಯ ದ. ಕ. ಜಿಲ್ಲೆಯ ಎಲ್ಲಾ ಏಜಂಟರಲ್ಲೂ ದೊರೆಯುವುವು.

ಸವಿವರ ಕ್ಯಾಟಲಾಗಿಗೆ ಈ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ:–

DAMODER & CO.,
Naimiappa Naicken Street, MADRAS. 3

ಪಂಚವಾರ್ಷಿಕ ಯೋಜನೆಗೆ ಜನತಾ ಸಹಕಾರ

ಸ್ವಯಂ ಸೇವಕರ ತಂಡಗಳಿಂದ ಸ್ಥಳೀಯ ಅಭಿವೃದ್ಧಿ.

— ೧ —

ರಾಷ್ಟ್ರೀಯ ಯೋಜನೆಯ ಮುಖ್ಯ ತತ್ವವಾಗಿ ಹಿನ್ನಲೆಯಲ್ಲಿರುವ ವಿವಿಧ ವಿಷಯಗಳಲ್ಲಿ ಸಾರ್ವಜನಿಕ ಸಹಕಾರ ಮತ್ತು ಜನಾಭಿಪ್ರಾಯವು ಮಹತ್ವಪೂರ್ಣ್ಣವೆನ್ನಬಹುದು. ಜನರ ಮನದೊಲವಿನಂತೆ ಅಧಿಕಾರವನ್ನು ನಡೆಸುವ ಪ್ರಜಾಪ್ರಭುತ್ವದಲ್ಲಿ ಯೋಜನೆಯು ಜನತಾಸಹಕಾರದಿಂದ ರೂಪವಡೆಯಬೇಕಲ್ಲದೆ ರಾಜ್ಯ ಶಾಸನದ ನಿರಂಕುಶ ಚಲಾವಣೆಗೆ ಶರಣೆನ್ನಲಾಗದು. ಇದರ್ಥ ಸಾಮಾಜಿಕ ಹಿತದ ಸದುದ್ದೇಶದಿಂದ ಎಲ್ಲ ಜನರೂ ಒಟ್ಟಾಗಿ ದುಡಿಯಬೇಕೆಂದಾಗುತ್ತದೆ ತಾನೆ! ಯೋಜನೆಯ ವಿವಿಧ ಘಟ್ಟಗಳಲ್ಲಿ ಜನರಿಂದ ಅಪೇಕ್ಷಿತವಾದ ನೆರವು ಮತ್ತು ಸಹಕಾರಗಳನ್ನು ನೀಡುವಲ್ಲಿ ಸಾರ್ವಜನಿಕರು ಮುಂಬರಬೇಕು. ಯೋಜನೆಯನ್ನು ರೂಪಿಸುವ ಮತ್ತು ಕಾರ್ಯಾನ್ವಿತಗೊಳಿಸುವ ಹೊಣೆಯು ಸರಕಾರದ ಮೇಲಿದ್ದರೂ ಅದಕ್ಕೆ ಸ್ಫೂರ್ತಿ ಮತ್ತು ಉತ್ಸಾಹಗಳನ್ನು ಜನರೇ ಒದಗಿಸುವುದವಶ್ಯ. ಯೋಜನೆಯು ಪ್ರಗತಿಗೊಂಡಲು ಪೋಷಕವೆನಿಸಿದ ಜನತಾ ಸಹಕಾರಕ್ಕೆ ಎಡೆ ಮಾಡಿಕೊಡುವುದು ಸರಕಾರೀ ಅಧಿಕಾರಿಗಳ ಕರ್ತವ್ಯ. ಸರಕಾರ ಹಾಗು ಜನತೆ ಕೂಡಿಯೇ ಪರಸ್ಪರ ಸಹಕಾರದಿಂದ ಸಾಮಾನ್ಯೋದ್ದೇಶಸಾಧನೆಯಲ್ಲಿ ಪರಿಶ್ರಮ ವಹಿಸಿ ದುಡಿದಾಗ ಕಾರ್ಯಕ್ರಮಕ್ಕೆ ಆತ್ಮಪೂರ್ವಕವಾದ ಕಳೆ ಏರುತ್ತದೆ. ಲೋಕದ ಪರಿಸ್ಥಿತಿಯನ್ನು ವೀಕ್ಷಿಸಿದವರಿಗೆ, ಪ್ರಜಾಪ್ರಭುತ್ವದ ಪ್ರಗತಿಗಾಗಿಯಷ್ಟೆಯಲ್ಲ ಅದರ ಉಳಿವಿಗಾಗಿಯೇ ರಾಷ್ಟ್ರೀಯ ಅಭಿವೃದ್ಧಿ ಯೋಜನೆ ಅನಿವಾರ್ಯವೆನಿಸುತ್ತದೆ. ನಾವು ಕೈಗೊಳ್ಳತಕ್ಕ ಯೋಜನೆಯು ಆರ್ಥಿಕ ವೈಷಮ್ಯಕ್ಕೆ ಆಸ್ಪದವಿಲ್ಲದ ಮತ್ತು ಎಲ್ಲರಿಗೂ ಸಮಾನಾವಕಾಶವಿರುವ ಸಾಮಾಜಿಕ ಪದ್ಧತಿಯ ಸ್ಥಾಪನಾ ಕಾರ್ಯದಲ್ಲಿ ಒಂದು ಹೆಜ್ಜೆ ಮುಂದಿಡುವಂತಿದೆ ಎಂಬ ನಂಬಿಕೆ ಜನರಲ್ಲಿ ಮೂಡಿಸುವಂತಿದ್ದರೆ ಚಂದ. ಆದುದರಿಂದ ಪಂಚವಾರ್ಷಿಕ ಯೋಜನೆಯ ಮಟ್ಟಿಗೆ, ವಿವಿಧ ರಾಜಕೀಯ ಪಕ್ಷಗಳ ಮತಭೇದಗಳು ಹಿನ್ನೆಲೆಗೆ ಸರಿದುಕೊಂಡು ರಾಷ್ಟ್ರೀಯ ಪ್ರಗತಿಯ ಏಕೋದ್ದೇಶ ಕಣ್ಣಮುಂದೆ ನಿಲ್ಲುತ್ತದೆ. ಕೆಲವು ಪಕ್ಷಗಳಿಗೆ ನಮ್ಮ ಯೋಜನೆಯ ಕಾರ್ಯ ಪ್ರಣಾಳಿ ಮತ್ತು ಅದರ ಉದ್ದೇಶ ಮೆಚ್ಚುಗೆಯಾಗಲಿಕ್ಕಿಲ್ಲ. ಹೀಗಿದ್ದರೂ ಬಹುಜನರ ಮನಸ್ಸನ್ನು ಯೋಜನೆ ಆಕರ್ಷಿಸಿದರೆ ಸಾರ್ವಜನಿಕ ಬೆಂಬಲ ಅದಕ್ಕಿದೆ ಎಂಬುದು ಸ್ಪಷ್ಟವಿದೆಯಷ್ಟೆ!

— ೨ —

ಯೋಜನೆಯ ಪೂರ್ತಿಗೆ ಮತ್ತು ಯಶಸ್ಸಿಗೆ ಜನರು ಅದರ ಕುರಿತು ಅಧಿಕಾಧಿಕ ಮಾಹಿತಿಯನ್ನು ಪಡೆದಿರುವುದು ಅತ್ಯವಶ್ಯ. ಮುಂದಿನ ಕೆಲವು ವರ್ಷಗಳಲ್ಲಿ ಯಾವ ವಿಧವಾಗಿ ದೇಶವು ಪ್ರಗತಿಗೊಂದುವುದೆಂಬುದನ್ನು ಅಂತುಕೊಂಡು ಜನಸಾಮಾನ್ಯರು ಮೆಚ್ಚುಗೆ ವ್ಯಕ್ತಪಡಿಸುವಂತಾಗಬೇಕು ಇದನ್ನು ಹೃದಯಂಗಮ ಮಾಡಿಕೊಂಡಾಗ ಜನರಿಗೆ ಪ್ರತಿಯೊಂದೂ ಕ್ಷೇತ್ರದ ಬೆಳವಣಿಗೆ ಹೇಗೆ ಪರಸ್ಪರ ಪೂರಕವಾಗಿದೆ ಎಂದೂ ಒಂದು ಇನ್ನೊಂದರ ಹಿತಸಾಧಿಸುತ್ತದೆಂದೂ ತಿಳಿಯುತ್ತದೆ. ಯೋಜನೆಯು ನೀಡಿದ ಪ್ರಾಶಸ್ತ್ಯಜ್ಞಾನದಿಂದ ಪ್ರತಿಯೊಬ್ಬನೂ ರಾಷ್ಟ್ರೀಯ ಅಭಿವೃದ್ಧಿಯಲ್ಲಿ ತಾನು ಈಗ ಮಾಡತಕ್ಕುದೇನೆಂಬುದರ ಪರಿಜ್ಞಾನವು ದೊರೆಯುತ್ತದೆ. ಈ ಎಲ್ಲ ಕಾರಣಗಳಿಗಾಗಿ ಯೋಜನೆಯ ತಿಳುವಳಿಕೆಯನ್ನು ಪ್ರತಿಯೊಂದು ಮನೆಯವರಿಗೂ ಅವರಿಗೆ ಅರ್ಥವಾಗುವ ಭಾಷೆಯ ಮೂಲಕ ಮಾಡಿಕೊಡಬೇಕು. ಪತ್ರ ಪತ್ರಿಕೆಗಳು, ಬರೆಹಗಾರರು, ಕಲಾವಿದರು ಮುಂತಾದ ಜನರು ಸರಕಾರದೊಡನೆ ಈ ದಿಶೆಯಲ್ಲಿ ಸಹಕರಿಸಬಲ್ಲರೆಂದು ಯೋಜನಾ ಆಯೋಗ ಹೇಳುತ್ತದೆ. ಈ ಉದ್ದೇಶದಿಂದ ವಿಧಾಯಕ ಕಾರ್ಯಕರ್ತರು ಮತ್ತು ಜನತಾ ಪ್ರತಿನಿಧಿಗಳೊಡನೆ ಕೂಡಿಕೊಂಡು ಶಾಲಾಕಾಲೇಜುಗಳ ಅಧ್ಯಾಪಕ ಹಾಗು ವಿದ್ಯಾರ್ಥಿವೃಂದ, ಬರೆಹಗಾರರು, ಕಲಾವಿದರು, ಪತ್ರಿಕೋದ್ಯಮಿಗಳು ಇವರೆಲ್ಲ ತಮ್ಮ ಕಾರ್ಯಕ್ರಮವನ್ನು ರೂಪಿಸಬೇಕು. ಜನರಿಗೆ ತಿಳುವಳಿಕೆ ಮಾಡಿಸಿಕೊಡ-ವಲ್ಲಿ ನೆರವಾಗಬಲ್ಲ ಪ್ರತಿಯೊಂದು ವಿಧಿ ವಿಧಾನದ ಅನುಸರಣೆ ಮಾಡಲು ಹಿಂಜರಿಯಬಾರದು. ರೇಡಿಯೋ ಸಿನೆಮಾ, ನಾಟಕ, ಗೀತ ಮುಂತಾದ ಎಲ್ಲ ರಂಗವನ್ನು ಯೋಜನೆಯ ಪ್ರಚಾರಕ್ಕಾಗಿ ಬಳಸಬಹುದು. ಹೀಗೆ ಪಂಚವಾರ್ಷಿಕ ಯೋಜನೆಯ ಜ್ಞಾನವನ್ನು ಸಾಮಾನ್ಯ ಪ್ರಜೆಗೆ ಮಾಡಿಕೊಟ್ಟ ಪಕ್ಷದಲ್ಲಿ, ಅವನಲ್ಲಿ ಯೋಜನೆಯ ಆಗು ಹೋಗುಗಳ ಬಗ್ಗೆ ಆಸ್ಥೆ ಉತ್ಪನ್ನಗೊಳ್ಳುತ್ತದೆ. ತನ್ನ ಹಾಗು ತನ್ನವರ ಮತ್ತು ನಾಡಿನ ಆವಶ್ಯಕತೆಗಳ ಸ್ಪಷ್ಟ ಕಲ್ಪನೆಯನ್ನವನು ಮಾಡಿಕೊಂಡು, ಪರಿಶ್ರಮದಿಂದ ದುಡಿಯಲು ನಿಶ್ಚಯಿಸುವುದು ಖಚಿತ. ಯೋಜನಾ ಆಯೋಗವು ರಾಷ್ಟ್ರೀಯ ಅಭಿವೃದ್ಧಿಯನ್ನು ಸ್ಥಳೀಯ ಘಟಕಗಳ ರೂಪಕ್ಕೆ ಪರಿವರ್ತಿಸಬೇಕೆನ್ನುತ್ತದೆ. ಸ್ಥಳೀಯ ಕಾರ್ಯಕ್ರಮಗಳ ಮೂಲಕವೇ ಆ ಪ್ರದೇಶದ ಜನರಲ್ಲಿ ಉತ್ಸಾಹ ಮತ್ತು ಲವಲವಿಕೆಯನ್ನು ತುಂಬುವುದು ಸಾಧ್ಯ. ಈ ರೀತಿಯಿಂದ ದೇಶದ ಮೂಲೆ ಮೂಲೆಯಲ್ಲೂ ಅಭಿವೃದ್ಧಿ ಕಾರ್ಯಕ್ಕೆ ಆಸ್ಪದ ಮಾಡಿಕೊಟ್ಟಂತಾಗುವುದಲ್ಲದೆ-ಜನತಾ ಸಹಕಾರಕ್ಕೆ ವಿಶಾಲವಾದ ರಂಗಭೂಮಿಯನ್ನು ಒದಗಿಸಿದಂತಾಗುತ್ತದೆ. ಜನರು ತಮ್ಮ ಒಳಿತು ಕೇಡುಗಳ ಜ್ಞಾನವಮಾಡಿಕೊಳ್ಳದಷ್ಟು ಅವಿವೇಕಿಗಳೆಂದು ಸರಕಾರದ ಪ್ರಭೃತಿಗಳು ತಿಳಿದುಕೊಳ್ಳುವುದು ಸರಿಯಲ್ಲ. ಜನರೇ ದೇಶದ ಜೀವಾಳ.

— ೩ —

ಆದುದರಿಂದ ಸಾರ್ವಜನಿಕ ಸಹಾಯ ಮತ್ತು ಸಹಕಾರವನ್ನು ಅಪೇಕ್ಷಿಸುವುದು ಅಧಿಕಾರಿಗಳ ಕರ್ತವ್ಯವಾಗುತ್ತದೆ. ಈ ರೀತಿ ಜನತೆಯೊಡನೆ ನೆರವಿನಯಾಚನೆ ಮಾಡುವಾಗಅಧಿಕಾರೀ ವರ್ಗವು ತನ್ನ ಆಲಸ್ಯ ಪ್ರಕೃತಿಯಿಂದ ಮುಕ್ತವಾಗಿರದಿದ್ದರೆ ಜನತೆಯಲ್ಲಿ ವಿಶ್ವಾಸ ಮೂಡುವುದು ಶಕ್ಯವಿಲ್ಲ. ಜನ ಸರಕಾರಿ ಅಧಿಕಾರಿಗಳನ್ನು ಕಾಣುವಾಗ ಅವರು ಲಂಚಗುಳಿತನ ದೀರ್ಘಸೂತ್ರ, ಹಾಗು ಅನಾದರ ಭಾವನೆಯನ್ನು ತೋರಿಸಿದ ಪಕ್ಷದಲ್ಲಿ ಜನರ ಉತ್ಸಾಹಭಂಗವಾಗುವುದು ಸ್ವಾಭಾವಿಕ. ಇಂಥದಕ್ಕೆಲ್ಲ ಅವಕಾಶ ಕೊಡಕೂಡದು. ಸಂಘಟಿತ ಸಾರ್ವಜನಿಕ ಅಭಿಪ್ರಾಯಕ್ಕೆ ಮನ್ನಣೆ ನೀಡುವುದು ಮತ್ತು ತದನುಗುಣವಾಗಿ ಸುಧಾರಣೆಗೆ ಪ್ರಯತ್ನಿಸುವುದು ರಾಷ್ಟ್ರೀಯ ಪುರೋಭಿವೃದ್ಧಿಯಲ್ಲಿ ಮಹತ್ವದ ಅಂಗವೆನಿಸಿದೆ ಆದುದರಿಂದ ಜನರ ಬಳಿ ಸಾರುವಾಗ ತಾವು ಸರಕಾರೀ ಅಧಿಕಾರಿ ಅಥವಾ ನೌಕರರೆಂಬ ಅಹಂಕಾರ ಬೇಡ. ಜನತಾ ಸೇವಕರೆಂಬ ವಿನಯದ ವರ್ತನೆ ಇರಲಿ ಎಂದು ಯೋಜನಾ ಆಯೋಗ ಉಪದೇಶಿಸುತ್ತದೆ. ಜನರಿಂದ ತಾವು ಕಲಿಯತಕ್ಕ ಸಂಗತಿಗಳು ಹಲವಿವೆ ಎಂಬದನ್ನು ಮನಸ್ಸಿನಲ್ಲಿ ಇಟ್ಟುಕೊಂಡು, ಜನಾಭಿಪ್ರಾಯವರಿಯುವ ಇಚ್ಛೆಯಿಂದ ಅಧಿಕಾರೀ ವರ್ಗ ನಡೆದುಕೊಳ್ಳುವುದರಲ್ಲಿ ಹಿತವಿದೆ ಈ ರೀತಿ ಅಧಿಕಾರಿಗಳ ಮನಃ ಪರಿವರ್ತನೆಯೊಡನೆ ಕೆಲವು ನಿರ್ದಿಷ್ಟ ಶಿಷ್ಟಾಚಾರಕ್ಕೂ ಇಂಬುಕೊಡಬೇಕು. ಅಧಿಕಾರೀ ವೃತ್ತದಲ್ಲಿ ಆಡಳಿತವು ಸತ್ವಶಾಲಿಯಾಗಿರಬೇಕು; ಸಾಮರ್ಥ್ಯವುಳ್ಳದ್ದಾಗಿರಬೇಕು; ವಿಳಂಬ ಹಾಗು ಆಲಸ್ಯಗಳಿಗೆ ಆಸ್ಪದವಿರಕೂಡದು. ಜನರೊಡನೆ ಬೆರೆತು ಅವರ ಸುಖದುಃಖಗಳಲ್ಲಿ ಪಾಲುಗೊಳ್ಳುವುದೂ ಅಧಿಕಾರಿಗಳ ನಡವಳಿಕೆಯ ಅಂಗವಾಗಬೇಕು. ಗೌರವ ಹಾಗು ಅಭಿಮಾನದ ಸಂಗತಿಗಳು ಜನರ ಸಂಪರ್ಕಕ್ಕೆ ಆತಂಕವೆನಿಸಬಾರದು. ಸರಕಾರದ ಚಟುವಟಿಕೆಯು ಸಾರ್ವಜನಿಕರಲ್ಲಿ ನಂಬುಗೆ ಹುಟ್ಟಿಸುವಂತಿರಬೇಕು; ಅಭಿವೃದ್ಧಿ ಯೋಜನೆಗಳ ಸಂಗತಿಯಲ್ಲೂ ಹಾಗೇನೆ. ಈ ರೀತಿ ಜನರನ್ನು ಆದರಿಸಿದರೆ ಜನರು ಸಹ ತಾವಾಗಿ ಸಹಕಾರಕೊಡುವರು. ಪರಸ್ಪರರನ್ನು ಪ್ರೀತಿಸಿ ಆದರಿಸುವುದು ಮನುಷ್ಯ ಸ್ವಭಾವ.

— ೪ —

ಐದು ವರ್ಷಗಳ ಅವಧಿಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧಿಸಬೇಕಾದ ಪ್ರಗತಿಯ ಅಂಕೆಸಂಖ್ಯೆಯನ್ನು ಯೋಜನಾ ಆಯೋಗ ನಿರೂಪಿಸಿದೆ. ಈ ಪ್ರಗತಿಯು ಸಾಧ್ಯವಾಗುವಂತೆ ವಾತಾವರಣವನ್ನು ಕಲ್ಪಿಸಿಕೊಡುವುದು ಸರಕಾರದ ಕರ್ತವ್ಯ. ಜನರು ತಾವಾಗಿ ಇಂಥ ರಂಗಸ್ಥಳವನ್ನು ಮಾಡಿಕೊಳ್ಳಲು ಅಡ್ಡಿಯೇನಿಲ್ಲ. ಜನರು ಯೋಜನೆಯು ತಮಗೇನು ಭರವಸೆ ಕೊಡುತ್ತಿದೆ, ತಮ್ಮಿಂದೇನು ಅಪೇಕ್ಷಿಸುತ್ತದೆ, ಮತ್ತು ತಮ್ಮಿಂದ ಅಪೇಕ್ಷಿತವಾದ ಕೆಲಸ ಮಾಡಿ ಮುಗಿಸಲು ಏನು ಅನುಕೂಲ ಮಾಡಿ ಕೊಟ್ಟಿದೆ ಎಂಬುದನ್ನು ತಿಳಿದುಕೊಂಡಲ್ಲಿ–ನಿಜ ಕರ್ತವ್ಯವನ್ನರಿಯಲು ಸಾಧ್ಯವಾಗುತ್ತದೆ. ರಾಷ್ಟ್ರೀಯ ಅಭಿವೃದ್ಧಿ ಯೋಜನೆಯು ಪ್ರಗತಿಯ ದಿಸೆಯನ್ನು ಸೂಚಿಸೀತೇ ಹೊರತು, ಪ್ರತಿಯೊಂದು ಹಳ್ಳಿ ಹಾಗು ಊರಿನ ಅವಶ್ಯಕತೆಗಳ ಅಂದಾಜನ್ನು ಮಾಡಲಾರದು. ಇದನ್ನು ಆಯಾ ಸ್ಥಳದ ಧುರೀಣರು ಮತ್ತು ಜನತೆಯೇ ನಿಶ್ಚಯಿಸಬೇಕು. ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಇಂಥ ಸ್ಥಳೀಯ ಪ್ರಯತ್ನಗಳಿಗೆ ಮಹತ್ವದ ಸ್ಥಾನವಿದೆ. ಈಗಾಗಲೇ ತೊಡಗಿರುವ ದೊಡ್ಡ ದೊಡ್ಡ ಯೋಜನೆಗಳಲ್ಲಿ ಸಾರ್ವಜನಿಕ ಸಹಕಾರದ ಕುರಿತು ತಕ್ಕ ವ್ಯವಸ್ಥೆ ನಡೆದಿದೆ. ಇದನ್ನು ಕಾಲಾನುಕಾಲಕ್ಕೆ ಪುನರ್ವಿಮರ್ಶಿಸಿ ಯೋಗ್ಯ ತಿದ್ದುಪಡಿಯನ್ನು ಮಾಡಲು ಹವಣಿಸಿದೆ. ಇನ್ನು ತೊಡಗಲಿರುವ ರಂಗಗಳಲ್ಲಿ ಜನತಾ ಸಹಕಾರ ಪಡೆಯುವ ಕುರಿತು ಯೋಗ್ಯ ಏರ್ಪಾಡು ಕೂಡಲೇ ಕೈಗೊಳ್ಳಲ್ಪಡತಕ್ಕದ್ದು. ಯೋಜನೆಯನ್ನು ಕಾರ್ಯರೂಪಕ್ಕೆ ಇಳಿಸುವಾಗ ವೆಚ್ಚದ ಮಿತವ್ಯಯವನ್ನು ಸಿದ್ಧಗೊಳಿಸುವುದಕ್ಕೆ ತೋರಿಸುವ ಜಾಗ್ರತೆ ಮತ್ತು ವಿವೇಕವನ್ನು ಜನತಾ ಸಹಕಾರದ ಪಟ್ಟಿಗೂ ಉಪಯೋಗಿಸಬೇಕು. ಜನತಾ ಸಹಕಾರವಿಲ್ಲದೆ ಯೋಜನೆ ಯಶಸ್ವಿಯಾಗಲಾರದೆಂದು ಪದೇ ಪದೇ ಹೇಳುತ್ತಿರುವುದು

(೧೦ನೇ ಪುಟ ನೋಡಿರಿ)

ZANDU ಝಂಡೂ ಫಾರ್ಮಸಿಯ ಮನೆಮದ್ದುಗಳನ್ನೇ ಸದಾ ಉಪಯೋಗಿಸಿರಿ.

ಝಂಡೂ ಬ್ರಾಹ್ಮೀ ಹೇರ್ ಆಯಿಲ್ / **Zandu Brahmi Hair Oil** — ಮೆದುಳಿಗೆ ತಂಪು– ಮನಸ್ಸಿಗೆ ಉಲ್ಲಾಸವೀಯುವುದು.
1 ಪೌಂಡಿಗೆ ರೂ. 3–8–0 ಕಾಲು ರಾತ್ತಿಗೆ ರೂ. 1·

ಝಂಡೂ ಸರಸಪರಿಲ್ಲಾ / **Zandu Sarasaparilla** — ರಕ್ತವನ್ನು ಶುದ್ಧಗೊಳಿಸಲು ಹೆಸರುವಾಸಿಯಾದುದು. ಚರ್ಮರೋಗಗಳನ್ನು ಗುಣಪಡಿಸಬಲ್ಲುದು. 4 ಔನ್ಸ್ ಬಾಟ್ಲಿ 1ರ ರೂ. 1–5–0

ಝಂಡೂ ಬಾಲಾಮೃತ / **Zandu Balamrutam** — ಅನಾರೋಗ್ಯವುಳ್ಳ ಮಕ್ಕಳಿಗೆ ಆದರ್ಶ ಟಾನಿಕ್ 4 ಔನ್ಸ್ ಬಾಟ್ಲಿ 1ರ ರೂ. 1–2–0

ಝಂಡೂ ಬಾಮ್ / **Zandu Balm** — ತಲೆ ಸಿಡಿತ ಮೊದಲಾದ ಬೇನೆಗಳಿಗೆ 1 ಸೀಸೆಗೆ ರೂ 1·

ಝಂಡೂ ಫಾರ್ಮಸಿಯ ದ. ಕ. ಜಿಲ್ಲೆಯ
ಎಲ್ಲಾ ಏಜಂಟರಲ್ಲೂ ದೊರೆಯುವುವು.

ಸವಿವರ ಕ್ಯಾಟಲಾಗಿಗೆ ಈ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ:–

DAMODER & CO.,
Nainiappa Naicken Street, MADRAS. 3

ನೆಹರೂ—ನಾಜಿಮುದ್ದೀನರ ಭೇಟಿಯ ವ್ಯವಸ್ಥೆ

ರಾಷ್ಟ್ರೀಕರಣದ ನೆವದಲ್ಲಿ ಖಾಸಗಿ ಉದ್ಯಮಗಳಿಗೆ ಆತಂಕವೊಡ್ಡಲು ಸಮಯವಿದಲ್ಲ.

ಪ್ರಧಾನಿದ್ವಯರ ಭೇಟಿ

ಲುಶಾಯಿ ಗುಡ್ಡ ಪ್ರದೇಶಗಳಲ್ಲಿ ನೆಹರೂ ಸಂಚರಿಸುತ್ತಿದ್ದಾಗಲೇ ನಾಜಿಮುದ್ದೀನರು ತಮ್ಮನ್ನು ಭೇಟಿಯಾಗಬೇಕೆಂದು ಕರೆನೀಡಿದ ಸುದ್ದಿಯನ್ನು ಕೇಳಿದರು. ಪಾಕಿಸ್ತಾನೀ ಪ್ರಧಾನಿಗಳ ಆದರದ ಆಹ್ವಾನವನ್ನು ಸ್ವೀಕರಿಸಲು ತನಗೆ ಸಂತೋಷವಾಗುತ್ತದೆಂದು ನೆಹರೂರವರು ಆಗ ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಿದರು. ಆಬಳಿಕ ಢಿಲ್ಲಿಗೆ ಮರಳಿದೊಡನೆಯೇ ನೆಹರೂರವರು ಪತ್ರಮುಖೇನ ನಾಜಿಮುದ್ದೀನರನ್ನು ಕಾಣಲು ಒಪ್ಪಿಗೆ ಸೂಚಿಸಿರುವರೆಂದು ತಿಳಿಯುತ್ತದೆ. ಆದರೆ ಈ ರೀತಿ ಪರಸ್ಪರರು ಭೇಟಿಯಾಗುವ ದಿನ ನಿರ್ಣಯ ಮಾತ್ರ ಇನ್ನೂ ಆಗಿಲ್ಲ. ಮಾತ್ರವಲ್ಲ ಹೀಗೆ ಭೇಟಿಯಾಗುವುದಕ್ಕೆ ಮುಂಚಿತವಾಗಿ ಪರಸ್ಪರರು ಚರ್ಚಿಸಿ ತಿಳಿದುಕೊಳ್ಳತಕ್ಕ ಸಂಗತಿಗಳ ಪಟ್ಟಿಯೊಂದನ್ನು ಸಿದ್ಧಗೊಳಿಸಬೇಕೆಂದು ಕೇಳಿಕೊಳ್ಳಲಾಗಿದೆ. ನಾವು ಈ ಹಿಂದೆ ಸೂಚಿಸಿದಂತೆ ಉಭಯ ರಾಷ್ಟ್ರಗಳ ಧುರೀಣರು ಚರ್ಚಿಸಬಲ್ಲ ಅಧಿಕಾರಯೊಂದದ ಯಾವ ವಿಷಯವೂ ಇಲ್ಲದಿದ್ದರೂ ಈ ರೀತಿ ವಿಷಯ ಪಟ್ಟಿಯನ್ನು ಮುಂಚಿತವಾಗಿಯೇ ಸಿದ್ಧಗೊಳಿಸುವುದು ಇಷ್ಟವೆಂದು ಹೇಳುತ್ತಿರುವವರು ಇದಕ್ಕೆ ಆಧಾರವಾಗಿ ಮುನ್ನೀಡುವ ವಾದದಲ್ಲಿ ಹುರುಳಿಲ್ಲವೆನ್ನಲಾರೆವು. ಉಭಯರಾಷ್ಟ್ರಗಳ ಪ್ರಧಾನಿಗಳು ಭಾರತ ಪಾಕಿಸ್ತಾನಕ್ಕೆ ಸಂಬಂಧಿಸಿದ ಸಮಸ್ಯೆಗಳ ಕುರಿತು ಮಾತುಕತೆಗೆ ತೊಡಗಿದರೆ—ಸ್ವಾಭಾವಿಕವಾಗಿಯೇ ಜನರಲ್ಲಿ ಹೊಸ ಉತ್ಸಾಹ ಮತ್ತು ಸಂತೋಷ ಉಂಟಾಗುತ್ತದೆ. ಪರಸ್ಪರ ದ್ವೇಷವಳಿದು ಶಾಂತಿ ಸಮಾಧಾನದ ವಾತಾವರಣ ನೆಲೆಸೀತೆಂಬ ಆಶೆ ಮರುಕಳಿಸುತ್ತದೆ. ಈ ಆಶೆ ಹಗಲುಗನಸಾಗಿ ಪರಿಣಮಿಸದೆ—ಯಥಾರ್ಥವಾದುದಾಗಬೇಕೆಂದು ಬಯಸಿ ಚರ್ಚಿಸತಕ್ಕ ಸಂಗತಿಗಳ ಪಟ್ಟಿಯನ್ನು ಸಿದ್ಧಗೊಳಿಸಲು ಪ್ರಯತ್ನ ನಡೆದಿದೆ.

ಪ್ರಾಮುಖ್ಯ ಸಮಸ್ಯೆಗಳು

ಹೀಗೆ ಪರಸ್ಪರ ಸಮ್ಮತವಾದ ವಿಷಯಪಟ್ಟಿಯಲ್ಲಿ ಪ್ರಧಾನಿಗಳು ಮಾತುಕತೆಯ ಮೂಲಕ ಬಿಡಿಸಬಹುದಾದ ತಂಟೆಗಳು ಇರುವುದು ಕ್ರಮಪ್ರಾಪ್ತವಾಗಿದೆ. ಭಾರತ ಪಾಕಿಸ್ತಾನಗಳ ನಡುವೆ ಇತ್ಯರ್ಥವಾಗದೆ ಇರುವ ಸಂಗತಿಗಳಲ್ಲಿ ಕಾಶ್ಮೀರದ ಸಮಸ್ಯೆ ಪ್ರಾಮುಖ್ಯವಾದದ್ದು. ಆದರೆ ಈ ಕುರಿತು ಪ್ರಧಾನಿಗಳು ಏನು ಮಾಡಬಹುದೆಂದು ಈಗಲೇ ಹೇಳಲಾರೆವು. ಸಂಯುಕ್ತ ರಾಷ್ಟ್ರಸಂಘದ ಮುಂದ ಕಾಶ್ಮೀರದ ಸಮಸ್ಯೆ ಇರುವಾಗ ಪ್ರಧಾನಿದ್ವಯರು ಒಮ್ಮತದ ಯಾವ ತೀರ್ಮಾನಕ್ಕೂ ಬಂದಾರೆಂದೆಣಿಸುವುದಿಲ್ಲ. ಅಲ್ಲದೆ ಆ ವಿಷಯವನ್ನು ಎತ್ತುವುದು ಕೂಡ ಸರಿಯೆನ್ನಲಾಗದು. ಹಾಗೆಂದು ಗ್ರಹಾಮರು ಮೊನ್ನೆ ತಾನೆ ಭದ್ರತಾ ಮಂಡಳಕ್ಕೆ ಸಲ್ಲಿಸಿದ ತಮ್ಮ ವರದಿಯಲ್ಲಿ ಕೂಡ, ಭಾರತ ಪಾಕಿಸ್ತಾನಗಳ ನಡುವಿದ್ದ ಭಿನ್ನಾಭಿಪ್ರಾಯವನ್ನು ನೀಗಿಸಲು ತಾನು ಅಸಮರ್ಥನಾದೆನೆಂಬ ಪಲ್ಲವಿಯೇ ಇದೆ. ಯುದ್ಧ ವಿರಾಮರೇಷೆಯ ಇಕ್ಕಡೆಗಳಲ್ಲಿ ನಿಲ್ಲಿಸುವ ಸೈನ್ಯಪ್ರಮಾಣದ ಕುರಿತಿದ್ದ ಭಿನ್ನಾಭಿಪ್ರಾಯವನ್ನು ನೀಗಿಸಲು ಡಾ|| ಗ್ರಹಾಮರು ಹೊಸ ಸೂಚನೆಯನ್ನೇನೂ ಮನ್ನೀಡಲಿಲ್ಲ. ಹಳೆಯ ಸೂಚನೆಗಳ ಕುರಿತು ಒಮ್ಮತವಾಗುವುದು ಸಾಧ್ಯವಿರಲಿಲ್ಲ. ಆದಕಾರಣ ನೋಡುವವರಿಗೆ ಈಗ ಕಾಶ್ಮೀರ ಸಮಸ್ಯೆಯ ಪರಿಹಾರಕ್ಕೆ ಉಳಿದಿರುವ ಏಕಮೇವ ಮಾರ್ಗವು ಭಾರತ ಪಾಕಿಸ್ತಾನಗಳು ನೇರಾಗಿ ಸಂಧಾನ ಮಾತುಕತೆಗಳನ್ನು ತೊಡಗುವುದಾಗಿದೆಯೆಂದು ಕಂಡು ಬರುತ್ತದೆ. ಹೇಗಿದ್ದರೂ ಸಂಯುಕ್ತ ರಾಷ್ಟ್ರಸಂಘದಿಂದ ಈ ದೂರನ್ನು ಹಿಂದೆಗೆದುಕೊಳ್ಳದ ಹೊರತು, ಭಾರತ ಹಾಗು ಪಾಕಿಸ್ತಾನೀ ಪ್ರಧಾನಿಗಳು ಒಂದು ತಿಳಿವಳಿಕೆಗೆ ಬರಲು ಸಾಧ್ಯವಾಗಲಿಕ್ಕಿಲ್ಲ.

ಸಂಧಾನದ ಆತುರ

ಕಾಶ್ಮೀರವನ್ನು ಬಿಟ್ಟರೆ ಕಾಲುವೆ ನೀರಿನ ಪ್ರಕರಣವಿದೆ. ಪಾಕಿಸ್ತಾನವು ಭಾರತದ ವಿರುದ್ಧ ಹುರುಳಿಲ್ಲದ ಅಪಪ್ರಚಾರವನ್ನು ಮಾಡುತ್ತಾ ಬಂದಿದ್ದರೂ—ಈ ತಂಟೆಯನ್ನು ನಿವಾರಿಸಬೇಕೆಂದು ನಾಜಿಮುದ್ದೀನರು ಪ್ರಾಮಾಣಿಕವಾಗಿ ಬಯಸುತ್ತಾರೆಂಬುದು ಪರಿಸ್ಥಿತಿಯ ಒತ್ತಡದಿಂದ ಸ್ಪಷ್ಟವಾಗಿದೆ. ಪಾಕಿಸ್ತಾನದಲ್ಲಿ ಈಗ ಆಹಾರಾಭಾವವು ಗಂಭೀರಮಟ್ಟವನ್ನು ಮುಟ್ಟಿದೆ. ಭಾರತವು ಕಾಲುವೆನೀರಿನ ಸಂಬಂಧದಲ್ಲಿ ಏನೊಂದೂ ಅನ್ಯಾಯ ಮಾಡಿಲ್ಲವಾದರೂ—ಮಳೆಯ ಅಭಾವವೇ ಹೇತುವಾಗಿ, ನೀರಿನ ಪೂರೈಕೆಯಲ್ಲಿ ಕೊರತೆ ಎನಿಸಿದೆ. ಪಾಕಿಸ್ತಾನಕ್ಕೆ ಒಂದೊದಗಿರುವ ಈ ಕುತ್ತಿನಿಂದ ಪಾರಾಗಲು ನಾಜಿಮುದ್ದೀನರು ಆತುರದಿಂದ ಇರಬಹುದು. ಆದರೆ ಈ ಆತುರವು ಭಾರತಕ್ಕೆ ಪಾಕಿಸ್ತಾನವು ಕೊಡಬೇಕಾಗಿರುವ ಸಾಲದ ಹಣದ ಸಂಬಂಧದಲ್ಲಿ ಕಂಡುಬರುವುದಿಲ್ಲ. ಎರಡು ರಾಷ್ಟ್ರಗಳ ನಡುವೆ ಈಗತಾನೆ ವಾಣಿಜ್ಯ ಒಪ್ಪಂದಗಳು ನಡೆದು ಪರಿಸ್ಥಿತಿ ಸ್ವಲ್ಪಮಟ್ಟಿಗೆ ಸುಧಾರಿಸಿದೆಯಾದರೂ—ಕಳೆದ ಐದಾರು ವರ್ಷಗಳಿಂದ ಈ ಸಾಲದ ಕುರಿತು ಸಂಧಾನ ನಡೆಸುವುದಾಗಿಲ್ಲ. ಅದೇಕೆ, ನಿರಾಶ್ರಿತರ ಆಸ್ತಿ ಪಾಸ್ತಿಗಳ ವಿಚಾರದಲ್ಲಿಯೂ ಪಾಕಿಸ್ತಾನದ ಕೂಡೆ ಪರಿಣಾಮಕಾರಿಯಾದ ಒಪ್ಪಂದಕ್ಕೆ ಬರಲು ಅನುಕೂಲವೆನಿಸಿಲ್ಲ. ಈ ವಿಷಯಗಳ ಚರ್ಚೆಯನ್ನು ಇನ್ನೂ ಮುಂದು ಹಾಕುವುದಕ್ಕೆ ಭಾರತ ಸರಕಾರ ಇಷ್ಟಪಡುವುದಿಲ್ಲ. ಆದುದರಿಂದ ವಿಷಯ ಪಟ್ಟಿಯಲ್ಲಿ ಇದನ್ನು ಸೇರಿಸುವ ಪ್ರಮೇಯ ಒದಗೀತು. ಭಾರತ ಪಾಕಿಸ್ತಾನಗಳನಡುವೆ ಪಾಸ್‌ಪೋರ್ಟು ಪದ್ಧತಿಯು ಬಳಕೆಗೆ ಬಂದಿರುವುದರಿಂದ ಈ ವ್ಯವಸ್ಥೆಯ ಸಾಧಕ ಬಾಧಕಾಂಶಗಳನ್ನು ಪ್ರಧಾನಿದ್ವಯರು ವಿಮರ್ಶಿಸಬಹುದು. ಉಭಯ ರಾಷ್ಟ್ರಗಳ ಪ್ರತಿನಿಧಿಗಳು ಕಾರ್ಯಕ್ರಮದ ಪಟ್ಟಿಯನ್ನು ಸಿದ್ಧಗೊಳಿಸಿದ ಬಳಿಕವೇ, ನೆಹರೂ ನಾಜಿಮುದ್ದೀನರಭೇಟಿಯ ದಿನ ನಿಶ್ಚಯವಾದೀತು.

ಭೇಟಿಯ ದಿನ

ನಾಜಿಮುದ್ದೀನರು ಈ ತಿಂಗಳ ಉತ್ತರಾರ್ಧದಲ್ಲಿಯೇ ಕರಾಚಿಯಲ್ಲಿ ತನ್ನನ್ನು ಭೇಟಿಯಾಗಬೇಕೆಂದು ನೆಹರೂರನ್ನು ಆಮಂತ್ರಿಸಿದ್ದರೂ ನೆಹರೂರಿಗೆ ಈ ಬಿನ್ನಹವನ್ನು ಮನ್ನಿಸುವುದಾಗಿಲ್ಲ. ಚರ್ಚಿಸತಕ್ಕ ವಿಷಯಗಳ ಪಟ್ಟಿ ಇನ್ನೂ ಸಿದ್ಧಗೊಂಡಿಲ್ಲ ಅಲ್ಲದೆ ಈಗ ಪಾರ್ಲಿಮೆಂಟಿನ ಅಧಿವೇಶನ ನಡೆಯುತ್ತಿದೆ. ಈ ತಿಂಗಳಾಂತ್ಯದಲ್ಲಿ ಅಮೇರಿಕಾದ ವಿದೇಶ ಮಂತ್ರಿ ಡಲ್ಲೆಸರು ಭಾರತಕ್ಕೆ ಸಂದರ್ಶನ ನೀಡುವ ನಿರೀಕ್ಷೆ ಇದೆ. ಅವರು ಬರುವಾಗ ನೆಹರೂ ಹೊಸ ಢಿಲ್ಲಿಯಲ್ಲಿರುವುದು ಆವಶ್ಯ. ಮೇ ತಿಂಗಳಲ್ಲಿ ನೆಹರೂ ಬ್ರಿಟಿಷ ರಾಣಿಯ ಸಿಂಹಾಸನಾರೋಹಣ ಸಮಾರಂಭದಲ್ಲಿ ಉಪಸ್ಥಿತರಿರಲು ಇಂಗ್ಲೆಂಡಿಗೆ ಪ್ರಯಾಣಿಸಲಿರುವರು. ನಾಜಿಮುದ್ದೀನರೂ ಅಲ್ಲಿಗೆ ಹೋಗುವರು ಆದಕಾರಣ ಬ್ರಿಟನ್ನಿನಿಂದ ಮರಳಿದ ಬಳಿಕವೇ ಪ್ರಧಾನಿಗಳು ಪರಸ್ಪರರನ್ನು ಭೇಟಿಯಾದಾರೆಂದೂ, ಇದಕ್ಕೆ ಮುಂಚೆ ಇಂಗ್ಲೆಂಡಿನಲ್ಲಿ ಅನೌಪಚಾರಿಕವಾದ ಮಾತುಕತೆಗಳು ನಡೆದರೂ ನಡೆದಾವೆಂದೂ ಹೇಳಲಾಗುತ್ತಿದೆ. ಇದು ಹೇಗೆ ಇದ್ದರೂ ನೆಹರೂ ನಾಜಿಮುದ್ದೀನ ಭೇಟಿಯನ್ನು ಶೀಘ್ರಾತಿಶೀಘ್ರ ಕೈಗೂಡಿಸುವುದರಿಂದ ಪರಸ್ಪರ ಸೌಹಾರ್ದ ಸಂಬಂಧ ಬೆಳೆಯಲು ಅನುಕೂಲವಾದ ವಾತಾವರಣವೇರ್ಪಡುವುದೆಂಬ ಬಗ್ಗೆ ಪ್ರತಿವಾದವಿಲ್ಲ.

ರಾಷ್ಟ್ರೀಕರಣದ ಪ್ರಶ್ನೆ

ಪಾರ್ಲಿಮೆಂಟಿನಲ್ಲಿ ಕೆಲವು ಸ್ವಾರಸ್ಯ ಪ್ರಸಂಗಗಳು ನಡೆದುವು. ಸರಕಾರೀ ಲೆಕ್ಕಪರಿಶೋಧಕರ ವರದಿಗಳು ಹಣದ ಅಪವ್ಯಯ ನಡೆದದ್ದನ್ನು ಕಟು ಮಾತಿನಲ್ಲಿ ಟೀಕಿಸಿದರೆ, ಸದಸ್ಯರು ಇನ್ನೂ ಉಗ್ರವಾಣಿಯಿಂದ ಸರಕಾರದ ಕಿವಿ ಹಿಂಡಲು ನೋಡಿದರು. ಹಿರಾಕುದ ಯೋಜನೆಯಲ್ಲಿ ಅಪಾರ ಧನದ ಅಪವ್ಯಯವಾಗಿದೆ ಎಂದು ಒಂದು ದೂರು; ಹಿಂದೊಮ್ಮೆ ಜೀಪ ಗಾಡಿಯ ಕಲಂಕವೆಂದು ಹೆಸರಾದ ಪ್ರಕರಣದ ಮೇಲೆ ಹೊಸ ಬೆಳಕು ಮುಂತಾದವುಗಳು ಸದಸ್ಯರ ಟೀಕೆಗೆ ಆಹುತಿಯಾದವು. ಆರ್ಥಿಕ ಖಾತೆಯ ಬೇಡಿಕೆಯ ಮೇಲೆ ಚರ್ಚೆ ನಡೆಯುವಾಗ ಸರಕಾರಕ್ಕೆ ಮಿತವ್ಯಯದ ಉಪದೇಶವನ್ನು ಸದಸ್ಯರು ಕೊಟ್ಟರು. ಪ್ರತಿಯೊಂದೂ ಖಾತೆಯ ಕೆಲಸಗಳಲ್ಲಿ ದುಂದು ವೆಚ್ಚವನ್ನು ನಿಲ್ಲಿಸಬೇಕೆಂದು ಸೂಚನೆಗಳು ಬಂದುವು. ಬ್ಯಾಂಕಿಂಗ್ ಮತ್ತು ವಿಮಾ ಕಂಪೆನಿಗಳ ರಾಷ್ಟ್ರೀಕರಣವಾಗಬೇಕೆಂದು ಪ್ರಜಾ-ಸೋಶಿಯಲಿಸ್ಟ್ ಮತ್ತು ಕಮ್ಯೂನಿಸ್ಟ್ ಪಕ್ಷದ ಸದಸ್ಯರು ಪ್ರತಿಪಾದಿಸಿದರು. ಆದರೆ ಈ ವಾದದಲ್ಲಿ ಹುರುಳಿಲ್ಲವೆಂದು ಅರ್ಥಮಂತ್ರಿ ದೇಶಮುಖರು ಮನಗಾಣಿಸಿಕೊಟ್ಟರು. ಸದ್ಯದ ಆರ್ಥಿಕ ಪದ್ಧತಿಯನ್ನು ಅನು-

ಭರ್ತ ಕಂಟ್ರೋಲ

[ಮಕ್ಕಳನ್ನು ಹೆಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ-೧ ಬಾಟ್ಲಿಗೆ — ರೂ. ೫–೮–೦ .... ಪೋಸ್ಟ್ ಖರ್ಚು ರೂ. ೦–೧೪–೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ದಿ ವಿಜಯ ಬೇಂಕ್, ಲಿಮಿಟೆಡ್

ಸ್ಥಾಪನೆ: 1931.] ಪ್ರಧಾನ ಕಛೇರಿ: ಮಂಗಳೂರು.

ಮೂಲಧನ	. .	ರೂ. 20,00,000
ತೆತ್ತ ಪಾಲು ಭಂಡವಾಳ	. .	,, 4,77,860
ಕ್ಷೇಮ ನಿಧಿ	. .	,, 1,65,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 12 ತಿಂಗಳಿನ ಮ್ಯಾದೆ ವರೆಗ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4½% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಬಿ. ಮಂಜಯ್ಯ ಹೆಗ್ಡೆ,
ಬೇಂಕಿನ ಆಡಳಿತೆ ಕಮಿಟಿ ಅಧ್ಯಕ್ಷರು,
(ಮತ್ತು ದ. ಕ. ಜಿಲ್ಲಾ ಬೋರ್ಡಿನ ಅಧ್ಯಕ್ಷರು.)

THE VIJAYA BANK, Limited.

SR
ಸೇವನೆಯ ಆನಂದಕ್ಕೆ,
ಅತ್ಯುತ್ತಮವಾದುದನ್ನೇ ಪಡಕೊಳ್ಳಿರಿ
ಎಸ್. ಆರ್.
ತಾಜಾ ನಿಪ್ಪಾಣಿ ತಂಬಾಕು
ಮತ್ತು
ದೊಂಟ್ಯಾ ಎಲೆ
ಇವುಗಳಿಂದ ತಯಾರಿಸಿದ
ಬೀಡಿಗಳಾಗಿರುತ್ತವೆ.
S.R. Beedi Works.

ಕೈಮಗ್ಗದ ಬಟ್ಟೆಯನ್ನು ಪ್ರೋತ್ಸಾಹಿಸುವ ಪ್ರಯತ್ನ

ಬಳ್ಳಾರಿ ಜಿಲ್ಲೆಯ ವಿಚ್ಛೇದನಾ ಸಂಬಂಧದಲ್ಲಿ ಪ್ರಧಾನಮಂತ್ರಿಗಳಿಗೆ ಕನ್ನಡಿಗರ ಬಿನ್ನಹ

ರಿಸುವುದು ಸರಕಾರದ ಧೋರಣವಾಗಿರುವಷ್ಟು ಕಾಲ ರಾಷ್ಟ್ರೀಕರಣದ ಹೆಜ್ಜೆಯನ್ನು ಇಡುವ ಆಗತ್ಯ ಸರಕಾರಕ್ಕೆ ಇರಲಾರದು. ದೇಶಮುಖರು ಈ ಅಂಶವನ್ನು ಚೆನ್ನಾಗಿ ಬಿಂಬಿಸಲು ಪ್ರಯತ್ನಿಸಿದರು. ಬ್ಯಾಂಕಿಂಗ ಮತ್ತು ವಿಮಾ ಸಂಸೆಗಳನ್ನು ಪ್ರಕೃತ ಖಾಸಗಿ ಕ್ಷೇತ್ರಗಳ ಕೈವಾಡಕ್ಕೆ ಬಿಟ್ಟು ಕೊಡುವುದರಲ್ಲಿಯೇ ಕ್ಷೇಮವಿದೆ ಎಂದವರು ಸ್ಪಷ್ಟೀಕರಿಸಿದರು. ಸರಕಾರವೇ ಇವುಗಳನು ನಡೆಸತೊಡಗಿದರೆ ಆಡಳಿತ ಕ್ರಮದಲ್ಲಿ ಬದಲಾವಣೆಯನ್ನೇನು ಮಾಡುವುದು ಸಾಧ್ಯವಿಲ್ಲ; ಬದಲು ಸರಕಾರೀ ದೀರ್ಘಸೂತ್ರದ ಪ್ರಭಾವವು ಈ ವ್ಯವಹಾರಗಳ ಮೇಲೂ ಬೀಳದಿರದು ಎಂದವರು ಎಚ್ಚರಿಸಿದರು.

ಖಾಸಗಿ ಉದ್ಯಮಕ್ಕೆ ಪ್ರೋತ್ಸಾಹ

ರಾಷ್ಟ್ರೀಕರಣವೇ ಆರ್ಥಿಕ ವೈಷಮ್ಯದ ನಿವಾರಣೋಪಾಯವೆಂದು ಹೇಳುವ ಕಮ್ಯೂನಿಸ್ಟ ಮತ್ತು ಸೋಶಲಿಸ್ಟರು ವ್ಯಾವಹಾರಿಕ ಕ್ಷೇತ್ರದ ಅನುಭವವೇನೆಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸುವುದಿಲ್ಲ. ಮೂಲೋದ್ಯೋಗಗಳ ರಾಷ್ಟ್ರೀಕರಣವು ದೇಶದ ಭದ್ರತೆ ಮತ್ತು ಸಂರಕ್ಷಣಾದೃಷ್ಟಿಯಿಂದ ಅಪೇಕ್ಷಣೀಯವಾದರೂ ಖಾಸಗಿ ಉದ್ಯಮಕ್ಕೆ ಸಾಕಷ್ಟು ವಿಸ್ತಾರವಾದ ಕ್ಷೇತ್ರವನ್ನು ಬಿಟ್ಟುಗೊಡುವುದು ರಾಷ್ಟ್ರೀಯ ಪುರೋಗತಿಗೆ ಪೋಷಕವೆನಿಸಿದೆ. ಅಲ್ಲದೆ ಹಣಕಾಸಿನ ತೊಂದರೆಯಿಂದ ಬಳಲುತ್ತಿರುವ ಸರಕಾರವು ಈ ಉದ್ದಿಮೆಗಳನ್ನೆಲ್ಲ ರಾಷ್ಟ್ರೀಕರಿಸುವುದಕ್ಕೆ ಬೇಕಾದ ಬಂಡವಾಳವನ್ನು ಎಲ್ಲಿಂದ ತರಬೇಕು? ಸರಕಾರದ ನಿಲುವೆಯನ್ನು ವಿಶದೀಕರಿಸುವಾಗ ದೇಶಮುಖರು ಒಂದೆರಡು ಬಿರು ನುಡಿಗಳನ್ನು ನುಡಿದರು. ಸರಕಾರ ಮತ್ತು ಕಮ್ಯೂನಿಸ್ಟರು ಒಂದೇ ಭಾಷೆಯಾಡುವುದಿಲ್ಲವೆಂದವರು ಹೇಳಿದ್ದಲ್ಲದೆ ಪ್ರಜಾಸೋಶಲಿಸ್ಟರು ಸರಕಾರ ದ್ರುತಗತಿಯಿಂದ ಹೆಜ್ಜೆ ಇಡಬೇಕೆಂದು ಅಪೇಕ್ಷಿಸುತ್ತಾರೆಂದರು. ಕಾಂಗ್ರೆಸು ಇಂದು ಅಧಿಕಾರ ಸ್ಥಾನದಲ್ಲಿರುವುದು ನಿಜವಾದರೂ ತಾತ್ವಿಕ ಮತ ಭೇದಕ್ಕೆ ಮನ್ನಣೆಕೊಟ್ಟು ಅವನ್ನು ಆದರಿಸುವ ಕಲೆಯನ್ನು ಕರಗತಮಾಡಿಕೊಂಡಲ್ಲಿ ಅದರಿಂದ ಪ್ರಯೋಜನವಿದೆ. ಕಡಿಮೆ ಪಕ್ಷ ವಿರೋಧೀ ಗುಂಪಿನ ನಿಲುವೆಯೇನೆಂಬುದನ್ನು ತಾಳ್ಮೆಯಿಂದ ಅವಲೋಕಿಸುವ ಅವಕಾಶವಾದರೂ ದೊರೆಯುತ್ತದೆ. ಪಂಡಿತ ಕುಂಜ್ರೂ ಮತ್ತು ನೆಹರೂರೊಳಗೆ ಕಾಶ್ಮೀರ ಪ್ರಶ್ನೆಯ ಸಂಬಂಧದಲ್ಲಿ ಬಿರುಸಾದ ವಾಗ್ವಾದ ನಡೆದುದನ್ನು ಈ ಸಂದರ್ಭದಲ್ಲಿ ಗಮನಿಸಬಹುದು.

ಕಾಶ್ಮೀರ ಒಪ್ಪಂದ

ಕಳೆದ ವರ್ಷ ಕಾಶ್ಮೀರ ಮತ್ತು ಭಾರತಗಳ ನಡುವೆ ಆದ ಒಪ್ಪಂದದ ವಿವಿಧಾಂಗಗಳಲ್ಲಿ ಕೆಲವನ್ನು ಮಾತ್ರ ಇಷ್ಟರವರೆಗೆ ಜ್ಯಾರಿಗೆ ತಂದಿದೆ. ಭಾರತದ ಘಟನೆಯಲ್ಲಿ ಕಾಶ್ಮೀರಕ್ಕೆ ವಿಶಿಷ್ಟ ಸ್ಥಾನಮಾನವನ್ನು ಕೆಲಸಂಗತಿಗಳ ಬಗ್ಗೆ ಕೊಟ್ಟಿದೆ. ಘಟನೆಯಲ್ಲಿ ನಾಗರಿಕರಿಗೆ ಕೊಟ್ಟ ಮೂಲಭೂತ ಹಕ್ಕುಗಳನ್ನು ಕಾಶ್ಮೀರದ ಪ್ರಜೆಗಳಿಗೆ ಕೊಡಲಾಗುವುದೇ ಹೇಗೆಂದು ಪಂಡಿತ ಕುಂಜ್ರೂ ಪ್ರಶ್ನಿಸಿದ್ದಕ್ಕೆ ನೆಹರೂರವರು ಕೆಲವೊಂದು ಅಪವಾದಗಳನ್ನಿಟ್ಟು ಈ ಹಕ್ಕನ್ನು ಕಾಶ್ಮೀರ ಪ್ರಜೆಗಳಿಗೆ ನೀಡಲಾಗುವುದೆಂದು ಹೇಳಿದರೂ, ಆ ಬಗ್ಗೆ ಅನುಸರಿಸತಕ್ಕ ಕ್ರಮಗಳ ಕುರಿತು ಯೋಚನೆ ಮಾಡಿಲ್ಲವೆಂದರು. ಇಂಥ ಗಂಭೀರ ಸಂಗತಿಯಲ್ಲಿ ಸರಕಾರವು ಏನೊಂದೂ ನಿಶ್ಚಯಕ್ಕೆ ಬಾರದಿದ್ದುದು ಸರಿಯಾಗಲಿಲ್ಲವೆಂದು ಕುಂಜ್ರೂ ಆಕ್ಷೇಪಿಸಿದ್ದನ್ನು ಅಲ್ಲಗಳೆಯುವಂತಿಲ್ಲ. ಮೊದಲಿಂದಲೂ ಕಾಶ್ಮೀರ ಪ್ರಸಂಗದಲ್ಲಿ ಭಾರತ ಸರಕಾರ ಸಡಿಲು ಮನೋಭಾವವನ್ನು ತೋರಿಸಿದೆ. ನಿರ್ಣಯಾತ್ಮಕವಾದ ನಿಲುವೆಯು ಕಾಶ್ಮೀರಿಗಳು ತಮ್ಮ ಭವಿತವ್ಯದ ಬಗ್ಗೆ ಸ್ವಯಂ ನಿರ್ಣಯಾಧಿಕಾರದಿಂದ ಕೂಡಿರುವರೆಂಬ ಸಂಗತಿಗೆ ಮಾತ್ರ ಅನ್ವಯಿಸಿದೆ— ಹೊರತು, ಆದಕ್ಕೂ ಮಿಕ್ಕಿದ ಪ್ರಶ್ನೆಯನ್ನು ಕಡೆಗಣಿಸಲಾಗಿದೆ. ಭಾರತ ಕಾಶ್ಮೀರಗಳ ನಡುವಾದ ಒಡಂಬಡಿಕೆಯು ಮುಖ್ಯಾಂಶಗಳನ್ನು ಕಾರ್ಯರೂಪಕ್ಕೆ ಇನ್ನೂ ಇಳಿಸದ್ದರಿಂದ--ಕೆಲವು ಕಿಡಿಗೇಡಿಗಳು ಜಮ್ಮೂ ಆಂದೋಲನದಂಥ ಪ್ರತಿಗಾಮಿ ಚಳುವಳಿಯನ್ನು ತೊಡಗಲು ಪ್ರೋತ್ಸಾಹ ದೊರೆತಿದೆಯೇನೋ!

ಗಿರಣಿ ಬಟ್ಟೆಯ ಮೇಲಿನ ಸುಂಕ

ಖಾದಿ ಮತ್ತು ಕೈಮಗ್ಗದ ಬಟ್ಟೆಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಗಿರಣಿ ಬಟ್ಟೆಯ ಮೇಲೆ ಗಜಕ್ಕೆ ಮೂರು ಪೈಯಂತೆ ಕರ ಹೇರುವ ಮಸೂದೆಯನ್ನು ಲೋಕಸಭೆ ಸ್ವೀಕರಿಸಿದೆ. ಕೈಮಗ್ಗಗಳ ಉದ್ದಿಮೆಗ ಸಂರಕ್ಷಣೆ ನೀಡಬೇಕೆನ್ನುವುದರ ಕುರಿತು ಎಲ್ಲ ವರ್ಗಗಳೂ ಏಕಾಭಿಪ್ರಾಯವನ್ನು ವ್ಯಕ್ತಗೊಳಿಸಿದರೂ, ವಿರೋಧೀ ಗುಂಪಿನವರು ಈ ಕರವು ವಿಶೇಷ ಪರಿಣಾಮಕಾರಿಯಾದ ಸಹಾಯಣೆಯನ್ನೇನು ಮಾಡಲಿಕ್ಕಿಲ್ಲ ಎಂದು ನುಡಿದರು. ಭಾರತದಲ್ಲಿ ಒಂದೂವರೆ ಕೋಟಿ ನೇಕಾರರು ಕೈಮಗ್ಗದ ಉದ್ದಿಮೆಯನ್ನು ಅವಲಂಬಿಸುವರು. ಈ ಕರದ ಪರಿಣಾಮವಾಗಿ ಐದು ಕೋಟಿ ರೂಪಾಯಿಗಳ ನಿಧಿ ನಿರ್ಮಿತ್ತೀತೆಂದು ಅಂದಾಜು. ಅರ್ಥಾತ್, ಪ್ರತಿಯೊಬ್ಬನಿಗೆ ವರ್ಷಕ್ಕೆ ಸುಮಾರು ಮೂರು ರೂಪಾಯಿಯ ಪರಿಹಾರ ದೊರೆತಂತಾಯಿತು. ಇದು ಎಷ್ಟು ಮಾತ್ರಕ್ಕೂ ಸಾಲದು ಎಂದೊಬ್ಬ ಸದಸ್ಯರು ಪರಿಸ್ಥಿತಿಯನ್ನು ನಿವೇದಿಸಿದರು. ಶ್ರೀ ಗುರುಪಾದ ಸ್ವಾಮಿಯವರು ಕೈಮಗ್ಗ ಮುಂತಾದ ಗೃಹೋದ್ಯಮಗಳಲ್ಲಿ ಬಳಸುವ ಯಂತ್ರೋಪಕರಣದಲ್ಲಿ ಸುಧಾರಣೆಯಾಗಿ ಆಧುನಿಕ ಕ್ರಮ ಬಳಕೆಗೆ ಬರುವಂತಾಗಬೇಕೆಂದರು. ಕಾಂಗ್ರೆಸಿನ ಶ್ರೀಮನ್ನಾರಾಯಣ ಅಗ್ರವಾಲರ ಖಾದಿ ಮತ್ತು ಕೈಮಗ್ಗಗಳಿಗೆ ಪ್ರೋತ್ಸಾಹ ನೀಡುವಾಗ ಗಾಂಧೀ ಭಕ್ತಿಯಾಗಲೀ ಕಾಂಗ್ರೆಸು ಪ್ರೇಮವಾಗಲೀ ಇರಬೇಕಾದ ಆಗತ್ಯವಿಲ್ಲ, ದೇಶದ ಸಾವಿರಾರು ಕುಟುಂಬಗಳ ಹೊಟ್ಟೆ ಬಟ್ಟೆಯ ಪ್ರಶ್ನೆ ಇದೆಂದು ತಿಳಿದರೆ ಸಾಕೆಂದರು. ಹಿಂದೂ ಮಹಾಸಭೆಯ ಡಾ। ಖರೆ ಮಾತ್ರ ಖಾದಿ ಸತ್ತು ಹೋದ ವಸ್ತು; ಅದರ ಪುನರುಜ್ಜೀವನ ಪ್ರಯತ್ನ ಅನಗತ್ಯ ಎಂದರು. ಆದರೆ ಈ ಆಕ್ಷೇಪ ತಿಳಿಗೇಡಿತನದ್ದೆನ್ನದೆ ಬೇರೇನು ಹೇಳೋಣ?

ಬಳ್ಳಾರಿಯ ಮೇಲೆ ಕಣ್ಣು

ಆಸ್ತಿಕರ ಮಸೂದೆಯನ್ನು ಈ ಅಧಿವೇಶನದಲ್ಲಿಯೇ ಪಾಸುಮಾಡಿಕೊಳ್ಳಬೇಕೆಂಬ ತವಕ ಪಾರ್ಲಿಮೆಂಟಿನ ಕಾಂಗ್ರೆಸು ಪಕ್ಷಕ್ಕಿದೆ. ಇದಲ್ಲದೆ ಹಿಂದೂ ಕೋಡ್ ನ್ನ ಸೂಚೆಯ ಎರಡನೆಯ ಖಂಡವನ್ನು ರಾಜ್ಯಪರಿಷತ್ತಿನಲ್ಲಿ ಮಂಡಿಸಿರುವರು. ಇದು ಅಲ್ಪವಯಿ ಮಕ್ಕಳಿಗಾಗಿ ಸಂರಕ್ಷಕರನ್ನು ನೇಮಿಸಲು ಈ ಮೊದಲಿದ್ದ ಕಾಯಿದೆಯ ಪೂರಕ ರೂಪದಲ್ಲಿದೆ. ಕೇಂದ್ರ ಪಾರ್ಲಿಮೆಂಟಿನ ಚಟುವಟಿಕೆಗಳಿಗಿಂತಲೂ ದಕ್ಷಿಣದಲ್ಲಿ ಆಂಧ್ರ ರಾಜ್ಯ ನಿರ್ಮಾಣದ ಸಂಗತಿಯಲ್ಲಿ ಕನ್ನಡಿಗರ ಪ್ರತಿಕ್ರಿಯೆಗೆ ಈಗ ಅಧಿಕ ಪ್ರಾಶಸ್ತ್ಯ ದೊರೆತಂತಿದೆ. ಹಿಂದೆ ಹೇಳಿದಂತೆ ನೆಹರೂ ಘೋಷಣೆಯು ಕನ್ನಡಿಗರ ಹಕ್ಕು ಬಾಧ್ಯತೆಯನ್ನು ದುರ್ಲಕ್ಷಿಸಿರುವುದಾಗಿ ಚಳುವಳಿ ನಡೆದಿದೆ. ಮಾತ್ರವಲ್ಲ ಕರ್ನಾಟಕ ಪ್ರದೇಶ ಕಾಂಗ್ರೆಸ ಸಮಿತಿಯ ಅಧ್ಯಕ್ಷ ನಿಜಲಿಂಗಪ್ಪನವರು ನೆಹರೂರನ್ನು ಕಂಡು ಕನ್ನಡಿಗರ ನಿಲುವೆಯನ್ನು ವಿಶದೀಕರಿಸಿರುವರೆಂದು ಕೇಳುತ್ತೇವೆ. ಬಳ್ಳಾರಿಯ ಜಿಲ್ಲೆಯ ಕನ್ನಡಿಗರ ಅಭಿಪ್ರಾಯವೇನೆಂಬುದನ್ನು ಒಂದು ಶಿಷ್ಟ ಮಂಡಲವು ನೆಹರೂರಿಗೆ ತಿಳಿಯಪಡಿಸಿದೆ. ಆಂಧ್ರರು ಬಳ್ಳಾರಿ ತಾಲೂಕನ್ನು ಸಹ ಹೊಸ ರಾಜ್ಯಕ್ಕೆ ಸೇರಿಸಿಕೊಳ್ಳಲು ಆತುರ ತೋರಿಸುತ್ತಿರುವರು. ಮದ್ರಾಸು ನಗರದ ಆಶೆಯನ್ನು ಬಿಡುವಂತಾಗಿ ಬಂದ ಮೇಲೆ, ಆಂಧ್ರರು ಬಳ್ಳಾರಿ ನಗರದ ಮೇಲೆ ಕಣ್ಣಿಟ್ಟಿರುವರು. ನೆಹರೂರವರು ಈ ಕುರಿತು ಇಷ್ಟರಲ್ಲಿಯೇ ನಿರ್ಣಯಕ್ಕೆ ಬರುವರೆಂಬುದರಿಂದ ದಿನಾಂಕ ೧೬ರಂದು ಸೇರಬೇಕಿದ್ದ ಕರ್ನಾಟಕ ಪ್ರದೇಶ ಕಾಂಗ್ರೆಸ ಸಮಿತಿಯ ಸಭೆಯನ್ನು ೨೬ನೇ ತಾರೀಕಿಗೆ ಮುಂದೂಡಿರುವರು. ಬಳ್ಳಾರಿ ಜಿಲ್ಲೆಯ ಭವಿತವ್ಯದ ಜೊತೆಗೆ, ಕೆಲವರು ದಕ್ಷಿಣ ಕನ್ನಡವನ್ನು ಸಹ ಮೈಸೂರಿನಲ್ಲಿ ಈಗಲೇ ವಿಲೀನಗೊಳಿಸಬೇಕೆಂದು ಮನವಿ ಮಾಡಿರುವರು. ಆದರೆ ಸಂಯುಕ್ತ ಕರ್ನಾಟಕ ರಾಜ್ಯದ ರಚನೆಯಾಗದ ವಿನಹ ಈ ರೀತಿ ಕ್ರಮ ಕೈಗೊಳ್ಳುವುದು ಇಷ್ಟವೆಂದು ತೋರುವುದಿಲ್ಲ; ಮತ್ತು ಕೇಂದ್ರವಾದರೂ ಇದಕ್ಕೆ ಪ್ರಕೃತ ಹೆಚ್ಚಿನ ಮಹತ್ವ ಕೊಡಲಿಕ್ಕಿಲ್ಲ.

ಬಾಳಿನ ಮುನ್ನೋಟವುಳ್ಳ ಪ್ರತಿಯೊಬ್ಬರೂ ಸಂಪಾದನೆಯ ಸ್ವಲ್ಪಾಂಶವನ್ನಾದರೂ ಸತತವಾಗಿ ಉಳಿಸಲು ಪ್ರಯತ್ನಿಸುತ್ತಾರೆ.

ನೀವು ನಿಮ್ಮ ಸಂಪಾದನೆಗೆ ತಕ್ಕಂತೆ ತಿಂಗಳ, ೩ತಿಂಗಳ ಯಾ ೬ತಿಂಗಳ ಕಂತಿನಂತೆ ಪಾವತಿ ಮಾಡಬಹುದಾದ ಸಾವಿರ ರೂಪಾಯಿ ಒಳಗಿನ ವಿಮೆಯ ಮೂಲಕ ಸಾಧ್ಯವಾದಷ್ಟು ಹಣವನ್ನು ಶೇಖರಿಸುವ ನಿರ್ಧಾರ ಮಾಡಿರಿ.

ನ್ಯೂ ಕರ್ನಾಟಕ ಪ್ರಾವಿಡೆಂಟ
ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್
ಉಡುಪಿ,

The New Karnataka Provident Insurance Co, Ltd UDIPI

ಏಳು ವರುಷಗಳಲ್ಲಿ ಫಲ

ನಮ್ಮ ಸಿಗ್ಮಿ ಮುಡಿಪುದಾರರಲ್ಲಿ ದಿನವಿಡಿ ಕೆಲಸ ಮಾಡುವ ಶ್ರಮಜೀವಿಗಳು, ಅಂಗಡಿಗಾರರು, ವಕೀಲರು, ಡಾಕ್ಟರರು, ಎಂಜಿನಿಯರರು, ಬೇಸಾಯಗಾರರು, ವರ್ತಕರು ಇತ್ಯಾದಿ ತರಗತಿಯವರಿರುವರು. ಅವರ ಸಿಗ್ಮಿ ಮುಡಿಪುಗಳು ಚಿಕ್ಕ ಮೊತ್ತ ಠೇವಣಾತಿಗಳಿಂದ ಪ್ರಾರಂಭವಾದವು ಅಂದು ಇಲಿಯಂತಿದ್ದುವು ಇಂದು ಹುಲಿಯಂತಾಗಿವೆ. ಅಂತಹ ವಿವೇಕವುಳ್ಳ ದೂರದರ್ಶಿ ಸಂಪನ್ನ ಸಿಗ್ಮಿ ಠೇವಣಾತಿದಾರರ ಕೂಟಕ್ಕೆ ನೀವೂ ಕೂಡಾ ಸೇರಿ ಭಾಗ್ಯವಂತರಾಗ ಬೇಕಾಗಿ ಆಹ್ವಾನಿಸುತ್ತೇವೆ

ಆಧಾರ ವಹಿವಾಟು ರೂ 5 00,000 ರ ಕ್ಕೂ ಮಿಕ್ಕಿದೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925 ಹೆಡ್ ಆಫೀಸು: ಉಡುಪಿ

THE CANARA INDUSTRIAL & BANKING SYNDICATE LIMITED
Estd: 1925 H O: UDIPI



ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸುರಕ್ಷಿತತೆ, ಭದ್ರತೆ ಮತ್ತು ಸೇವಾತತ್ಪರತೆ
ಇವುಗಳಿಗೆ
ತವರುಮನೆಯಂತಿದ್ದು, ನಿಮ್ಮೆಲ್ಲರ ಸ್ನೇಹ, ಸಹಕಾರಗಳನ್ನು
ಅಪೇಕ್ಷಿಸುವ ಬ್ಯಾಂಕು.

THE CANARA BANKING CORPORATION LTD.
Estd: 1906] [H. O. UDIPI, (S. India)

ಯುದ್ಧ ಮುಕ್ತಾಯದ ಮಾತುಕತೆಯಲ್ಲಿ ಪ್ರಗತಿ

ಅಸ್ವಸ್ಥ ಕೈದಿಗಳ ವಿನಿಮಯ ಪ್ರಶ್ನೆಯ ಇತ್ಯರ್ಥ

ಕೊರಿಯಾ ರಣರಂಗದಲ್ಲಿ ಯುದ್ಧದ ಬೇಗೆ ಆರದಿದ್ದರೂ ಪಾನ್‌ಮುಂಜಾಮಿನ ಸಂಧಾನ ಮಾತುಕತೆಗಳಿಗೆ ಇದು ಆತಂಕವಾಗಲಿಲ್ಲ. ಸಂಧಿ ಪ್ರಸ್ತಾಪವನ್ನು ಕಮ್ಯೂನಿಸ್ಟರು ಎತ್ತಿದ ಮಾತ್ರಕ್ಕೆ ಸಂಯುಕ್ತ ರಾಷ್ಟ್ರ ಸಂಘವು ಯುದ್ಧದ ಒತ್ತಡವನ್ನೇನು ಕಡಿಮೆ ಮಾಡುವುದಿಲ್ಲೆಂದು ಸೈನ್ಯಾಧಿಕಾರಿಗಳು ಹೇಳಿದರು. ಆದರೆ ಈ ಯುದ್ಧವು ಇನ್ನೂ ಹೆಚ್ಚಿನ ಸಮಯದ ವರೆಗೆ ನಡೆಯದೆ ಬೇಗನೇ ಮುಕ್ತಾಯಗೊಳ್ಳುವುದೆಂಬ ಬಗ್ಗೆ ಹೆಚ್ಚಿನ ರಾಷ್ಟ್ರಗಳು ಆಶೆ ತಾಳಿವೆ. ಈ ಆಶೆಯು ಕಮ್ಯೂನಿಸ್ಟರ ನೀತಿ ಪರಿವರ್ತನೆಯ ತಳಹದಿಯ ಮೇಲೆಯೇ ನಿಂತಿದೆ ಎಂಬುದು ನಿರ್ವಿವಾದ. ಪಾನ್ ಮುಂಜಾಮಿನ ಮಾತುಕತೆಗಳ ಪರಿಣಾಮವಾಗಿ ಅಸ್ವಸ್ಥ ಹಾಗು ಗಾಯಾಳು ಕೈದಿಗಳ ವಿನಿಮಯವು ಮುಂದಿನ ಸೋಮವಾರ (ತಾ.೨೦) ದಿಂದ ಇಪ್ಪತ್ತು ದಿನಗಳವರೆಗೆ ನಡೆಯಲಿದೆ. ಕೈದಿಗಳನ್ನು ಆರು ತಂಡಗಳಲ್ಲಿ ವಿನಿಮಯ ಮಾಡಲಾಗುವುದು. ಮೇ ೧೦ ನೇ ದಿನಾಂಕದೊಳಗೆ ಈ ಎಲ್ಲ ಕೈದಿಗಳ ವಿನಿಮಯ ಮುಗಿಯಬೇಕೆಂದು ಹೇಳಲಾಗಿದೆ. ರಾಷ್ಟ್ರಸಂಘದ ವರಿಷ್ಠರ ಹೇಳಿಕೆಯಂತೆ ಕಮ್ಯೂನಿಸ್ಟರು ವಿನಿಮಯಕ್ಕೆ ಒಪ್ಪಿಕೊಂಡ ಮಿತ್ರರಾಷ್ಟ್ರಗಳ ಸೈನಿಕ ಕೈದಿಗಳ ಸಂಖ್ಯೆ ಅತ್ಯಲ್ಪವಿದ್ದರೂ ಶಾಂತಿ ಸಾಧನೆಯಲ್ಲಿ ಇಂಥದೊಂದು ಕ್ರಮವು ನೆರವಾಗಬಲ್ಲುದಾದರೆ, ಅದಕ್ಕೆ ಕಲ್ಲು ಹಾಕ ಕೂಡದೆಂಬ ಮನೋಭಾವನೆ ರಾಷ್ಟ್ರ ಸಂಘಕ್ಕೆ ಇದೆ. ಸದ್ಯ ಕೈದಿಗಳ ವಿನಿಮಯವು ಮುಗಿದ ಬಳಿಕ ಕದನ ವಿರಾಮದ ಕುರಿತು ಸಂಧಾನ ನಡೆಸಲು ಅನುಕೂಲವಾದ ವಾತಾವರಣವೇ ಏರ್ಪಟ್ಟೀತು.

ತತ್ವಗಳ ತಿಕ್ಕಾಟ

ಕೊರಿಯಾದ ಯುದ್ಧವು ಚೀನಿಯರ ಸಹಕಾರದಿಂದಾಗಿ ವಿಶ್ವ ಯುದ್ಧಕ್ಕೆ ತಿರುಗಿಕೊಂಡೀತೆಂದು ಅಂಜಿಕೆ ಇದ್ದಿತು. ಇದಕ್ಕೆ ಆಧಾರವೂ ಬಲವಾಗಿತ್ತು. ಕೊರಿಯಾ ಯುದ್ಧವನ್ನು ದಾಯಾದಿ ಕಲಹವೆಂದು ಹೇಳಬಹುದಾಗಿದ್ದರೂ ವಾಸ್ತವವಾಗಿ ಅಲ್ಲಿ ಎರಡು ತತ್ವಗಳ ನಡುವೆ ಘರ್ಷಣೆ ನಡೆದಿದೆ. ಅಮೇರಿಕವೇ ಮುಂದಾಳುವಾಗಿರುವ ಪ್ರಜಾಪ್ರಭುತ್ವ ನೀತಿಗೂ ರಶಿಯಾ ಧುರೀಣತ್ವ ವಹಿಸಿರುವ ಕಮ್ಯೂನಿಸ್ಟ ತಂತ್ರಕ್ಕೂ ನಡುವಿನ ತಿಕ್ಕಾಟದ ರಂಗಸ್ಥಳವಾಗಿ ಕೊರಿಯಾ ನಮಗೆ ಕಾಣಿಸಿದೆ. ಸೋವಿಯಟ ರಶಿಯಾದ ಸದ್ಯದ ಆಡಳಿತವು ಸ್ವಾರ್ಥದೃಷ್ಟಿಯಿಂದಲೇ ಆದರೂ ತನ್ನ ವಿದೇಶ ನೀತಿಯಲ್ಲಿ ಸೌಮನಸ್ಯ ತೋರಿಸಲು ಮುಂದಾದುದರಿಂದ ಶಾಂತಿಯ ದಿಸೆಯಲ್ಲಿ ಇಷ್ಟರ ಮಟ್ಟಿನ ಪ್ರಗತಿಯಾದರೂ ಕೈಗೂಡಿತು. ಆದರೆ ಅಮೇರಿಕ ಇನ್ನೂ ವರೆಗೆ ಕಮ್ಯುನಿಸ್ಟರ ಹೊಸನೀತಿಗೆ ಸೈಗುಟ್ಟುವಂತೆ ತೋರುವುದಿಲ್ಲ. ಕಮ್ಯುನಿಸ್ಟ ನೀತಿಪರಿವರ್ತನೆಯನ್ನು ಇದ್ದುದಿದ್ದಂತೆ ಒಪ್ಪಿಕೊಳ್ಳಲು ಅಮೇರಿಕಾ ಶಂಕೆ ಪಡುತ್ತಿದೆ. ಕೊರಿಯಾದಲ್ಲಿ ಯುದ್ಧ ಮುಕ್ತಾಯಗೊಳಿಸಿದರೂ ದೂರಪ್ರಾಚ್ಯದಲ್ಲಿ ಬೇರೆಕಡೆ ಕಮ್ಯೂನಿಸ್ಟರು ಆಕ್ರಮಣ ನಡೆಸಿಯೇ ತೀರುವರೆಂದು ಅಮೇರಿಕಾ ಕಟ್ಟಿಕೊಂಡಿದೆ. ಇಂಡೋಚೀನದಲ್ಲಿ ಕಮ್ಯೂನಿಸ್ಟರು ಫ್ರೆಂಚ ಸಾಮ್ರಾಜ್ಯ ಶಾಹಿಯ ವಿರುದ್ಧ ಹೋರಾಡುತ್ತಿರುವ ಹೋ-ಚಿ-ಮಿನ್ಹರಿಗೆ ನೆರವಾಗುತ್ತಿರುವುದನ್ನು ನಿಲ್ಲಿಸದಿದ್ದರೆ, ಅಮೇರಿಕಾ ಕಮ್ಯೂನಿಸ್ಟರ ಹೃದಯ ಪರಿವರ್ತನೆಯಾಯಿತೆಂದು ಹೇಳಲು ಒಪ್ಪುವುದಿಲ್ಲ. ಇಂಡೋಚೀನಾದಲ್ಲಿ ಫ್ರೆಂಚರಿಗೆ ಸಕಲ ವಿಧದಿಂದಲೂ ಅಮೇರಿಕಾ ನೆರವು ನೀಡುತ್ತಿದೆ.

ಅಮೇರಿಕನ್ ಯೋಜನೆ

ಇಂಥ ಗಳಿಗೆಯಲ್ಲಿ ಪತ್ರಿಕಾ ವರದಿಗಳಿಂದ ತಿಳಿದು ಬರುವ ಸಂಗತಿಗಳನ್ನು ನೋಡಿದರೆ, ಅಮೇರಿಕಾದ ಆಡಳಿತಾಧಿಕಾರಿಗಳ ನಡುವೆ ಭಿನ್ನಾಭಿಪ್ರಾಯ ತಲೆದೋರಿದೆಯೋ ಎಂದನ್ನಿಸುತ್ತದೆ. ಕಳೆದ ಕೆಲವು ದಿನಗಳ ಘಟನೆಗಳ ಮೇಲಿಂದ ಸೋವಿಯಟ ರಶಿಯಾದಲ್ಲಿ ಆಂತರಿಕ ಅಶಾಂತಿಯ ಜ್ವಾಲೆ ಎದ್ದಿದೆ ಎಂಬ ನಿರ್ಣಯಕ್ಕೆ ಬಂದಂತೆಯೇ ಅಮೇರಿಕನ್ ನೀತಿಯ ಪ್ರಸ್ತುತ ವಿಮರ್ಶೆಯಿಂದ ನಿರ್ಧಾರ ಹೊಂದಬಹುದೋ ಏನೋ. ದೂರ ಪ್ರಾಚ್ಯದಲ್ಲಿ ಶಾಂತಿ ಪ್ರಸ್ಥಾಪಿಸುವ ಬಗ್ಗೆ ಅಮೇರಿಕಾದ ವಿದೇಶ ಖಾತೆಯು ಒಂದು ಯೋಜನೆಯನ್ನು ಸಿದ್ಧಗೊಳಿಸಿದ್ದು, ಕೊರಿಯಾವನ್ನು ವಿಭಜಿಸುವುದೂ ಫೊರ್ಮೋಸಾ ದ್ವೀಪವನ್ನು ರಾಷ್ಟ್ರಸಂಘದ ವಿಶ್ವಸ್ತಿಕೆಗೊಪ್ಪಿಸುವುದೂ ಈ ಯೋಜನೆಯ ಮುಖ್ಯಾಂಶ. ಈ ಯೋಜನೆಯನ್ನು ಕಾರ್ಯಾನ್ವಿತಗೊಳಿಸುವಲ್ಲಿ ಅನೇಕ ಅಡೆತಡೆಗಳಿವೆ ಎಂಬುದು ಸುಸ್ಪಷ್ಟವಿದೆ. ರಾಷ್ಟ್ರ ಸಂಘವು ೧೯೫೦ರಲ್ಲಿ ಸ್ವೀಕರಿಸಿರುವ ನಿರ್ಣಯದಂತೆ, ಕೊರಿಯಾದವಿಭಜನೆಗೆ ಅವಕಾಶವೇ ಇಲ್ಲ. ಉತ್ತರ ದಕ್ಷಿಣ ಕೊರಿಯಾಗಳೆರಡನ್ನೂ ಒಂದುಗೂಡಿಸಿ ಭದ್ರವಾದ ಸರಕಾರದ ರಚನೆ ಮಾಡುವುದೇ ರಾಷ್ಟ್ರ ಸಂಘದ ಉದ್ದೇಶ. ಇದರಂತೆ ಫೊರ್ಮೋಸಾ ದ್ವೀಪವನ್ನು ವಿಶ್ವಸ್ತಿಕೆಗೊಪ್ಪಿಸುವುದು ಸಾಧ್ಯವೆನಿಸುವುದಿಲ್ಲ. ಈ ಹಿಂದಿನ ಒಡಂಬಡಿಕೆಯಂತೆ ಫೊರ್ಮೋಸಾವು ಚೀನೀ ಸರಕಾರದ ವಶದಲ್ಲಿರತಕ್ಕದ್ದು. ಚೀನಾದ ಮುಖ್ಯ ನೆಲದಲ್ಲಿ ಈಗ ಕಮ್ಯೂನಿಸ್ಟರು ಇದ್ದಾರಲ್ಲದೆ ಫೊರ್ಮೋಸಾ ನಡುಗಡ್ಡೆಯ ಮೇಲೆ ಅವರು ತಮ್ಮ ಅಧಿಕಾರವಿದೆ ಎಂದು ಹೇಳುತ್ತಲೇ ಬಂದಿರುವರು. ಒಪ್ಪಂದ ನಡೆದ ಕಾಲದಲ್ಲಿ ಚೀನಾದ ಮುಖ್ಯ ನೆಲದಲ್ಲಿ ರಾಷ್ಟ್ರೀಯರು ಇದ್ದರೂ ಇಂದು ನೆಲೆ ಇಲ್ಲದ ದ್ವೀಪವಾಸಿಗಳಾಗಿದ್ದಾರೆ; ಮಾತ್ರವಲ್ಲ ಇನ್ನವರು ಚೀನಾದಲ್ಲಿ ತಳವೂರುವುದು ಅಸಾಧ್ಯವೆಂದು ಅಮೇರಿಕಾದ ಜನತೆ ತಿಳಿಯುತ್ತಿದೆ. ಆದರೆ ಅಮೇರಿಕನ ಸರಕಾರ ರಾಷ್ಟ್ರೀಯರ ಪುನರುತ್ಥಾನದ ಕುರಿತು ಇನ್ನೂ ಆಶೆಕಟ್ಟಿಕೊಂಡಿದೆ. ಎಂತಲೇ ವಿದೇಶ ಖಾತೆಯ ವಕ್ತಾರರೊಬ್ಬರು ಮೇಲಿನಂತೆ ವರ್ಣಿಸಿದ ಅಮೇರಿಕನ್ ಯೋಜನೆಯನ್ನು ಅಧ್ಯಕ್ಷರ ವಾಸಸ್ಥಾನವಾದ ಶ್ವೇತ ಭುವನದಿಂದ ನಿರಾಕರಿಸಿರುವರು.

ನವಯುಗ

ಉಡುಪಿ, ಗುರುವಾರ ೧೬-೪-'೫೩

ವೈಜ್ಞಾನಿಕ ಪ್ರಗತಿ

ಉತ್ತರ ಪ್ರದೇಶದಲ್ಲಿರುವ ರೂರ್ಕಿಯಲ್ಲಿ ಕೇಂದ್ರ ಗೃಹನಿರ್ಮಾಣ ಶಾಸ್ತ್ರ ಸಂಶೋಧನಾ ಸಂಸ್ಥೆಯ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ ಮೌಲಾನಾ ಆಝಾದರೂ ನೆಹರೂರವರೂ ಪ್ರಾಸಂಗಿಕವಾಗಿ ನುಡಿದ ಮಾತುಗಳು ಮನನೀಯವಾಗಿವೆ. ವಿಜ್ಞಾನವು ಇಂದು ದಿನೇ ದಿನೇ ಪ್ರಗತಿಯನ್ನು ಹೊಂದುತ್ತಿದೆ. ಮಾನವೋಪಯೋಗಿಯಾದ ಸಾಧನ ಸಲಕರಣೆಗಳನ್ನು ಒದಗಿಸಿಕೊಡುವುದರಲ್ಲಿ ವಿಜ್ಞಾನವು ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿದೆ. ರಾಷ್ಟ್ರಕಲ್ಯಾಣಕ್ಕಾಗಿ ವಿಜ್ಞಾನವು ನೀಡಬಲ್ಲ ನೆರವಿನ ಅಂದಾಜನ್ನು ಮಾಡಿ ಮುಗಿಸುವಂತಿಲ್ಲ. ಪಾಶ್ಚಾತ್ಯ ರಾಷ್ಟ್ರಗಳ ಜನರು ಇಂದು ಉಚ್ಚ ಜೀವನ ಮಟ್ಟದ ಸುಖ ಅನುಭವಿಸುತ್ತಿರುವುದಕ್ಕೆ ವಿಜ್ಞಾನದ ಸಹಾಯವೇ ಪ್ರಾಮುಖ್ಯ ಕಾರಣವೆಂದು ನಾವೆಲ್ಲರೂ ಬಲ್ಲೆವು. ಆದುದರಿಂದ ಜಗತ್ತಿನ ಜನಸಂಪತ್ತಿನ ಐದರಲ್ಲಿ ಒಂದಂಶ ಪಡೆದಿರುವ ಭಾರತವು ಉನ್ನತ ಸ್ಥಿತಿಯನ್ನು ಹೊಂದಲು ಬಯಸಿದರೆ-- ವಿಜ್ಞಾನವನ್ನು ಶರಣೆನ್ನದೆ ಬೇರೆ ಉದ್ಧಾರ ಮಾರ್ಗವಿಲ್ಲ. ನೆಹರೂರವರು ವಿಜ್ಞಾನವು ಮನುಷ್ಯನ ಬಾಳ್ವೆಯ ಚಿತ್ರವನ್ನು ಸುಂದರಗೊಳಿಸುವುದರಲ್ಲಿ ಹೇಗೆ ಸಹಕರಿಸಬಲ್ಲುದೆಂದು ವರ್ಣಿಸಿದರು. ಭಾರತದ ಮೂವತ್ತಾರು ಕೋಟಿ ಜನರ ಉದ್ಧಾರಕ್ಕೆ ವಿಜ್ಞಾನವು ಮಹತ್ವದ ಕೆಲಸಗಳನ್ನು ಮಾಡಬಲ್ಲುದೆಂಬ ಆಶೆಯನ್ನು ವ್ಯಕ್ತಗೊಳಿಸಿದರು. ಇತರ ರಾಷ್ಟ್ರಗಳು ವೈಜ್ಞಾನಿಕ ಕ್ಷೇತ್ರದಲ್ಲಿ ಮುನ್ನಡೆಯುತ್ತಿರುವಾಗ ನಾವು ತೃತೀಯ ವರ್ಗದ ರಾಷ್ಟ್ರವಾಗಿ ಉಳಿಯುವಂತಿಲ್ಲ. ಆದಕಾರಣವೇ ಸ್ವಾತಂತ್ರ್ಯೋತ್ತರದಲ್ಲಿ ಹನ್ನೊಂದು ಬೇರೆ ಬೇರೆ ವೈಜ್ಞಾನಿಕ ಸಂಶೋಧನಾಲಯಗಳನ್ನು ಸರಕಾರ ತೆರೆದಿದೆ. ಈ ಸಂಸ್ಥೆಗಳು ವಿಜ್ಞಾನದ ಅಮೂಲ್ಯ ಸಂಶೋಧನೆಗಳನ್ನು ನಿತ್ಯವ್ಯವಹಾರದಲ್ಲಿ ಯಾವರೀತಿಯುಪಯೋಗಿಸಬಹುದೆಂದು ಕಂಡುಹಿಡಿಯುವುವು. ಭಾರತದಲ್ಲಿ ವೈಜ್ಞಾನಿಕ ಸಂಶೋಧನೆಗೆ ವಿಶ್ವವಿದ್ಯಾಲಯಗಳಾಗಲೀ ಸರಕಾರವಾಗಲೀ ಅಷ್ಟುಪ್ರಾಮುಖ್ಯತೆಯನ್ನು ಕೊಟ್ಟಿಲ್ಲ. ಕೆಲವು ಖಾಸಗಿಸಂಸ್ಥೆಗಳು ವೈಜ್ಞಾನಿಕ ಸಂಶೋಧನೆಯ ಉದ್ದೇಶವನ್ನಿಟ್ಟುಕೊಂಡು, ಮಹತ್ವದ ಪ್ರಗತಿಯನ್ನು ಸಾಧಿಸಿದರೂ ಈ ಅಮೂಲ್ಯ ಜ್ಞಾನವು ಜನತೆಯ ಜೀವನ ಮಟ್ಟವನ್ನು ಎತ್ತರಿಸುವುದಕ್ಕೆ ಸಹಾಯ ನೀಡಲಿಲ್ಲ. ಪ್ರಕೃತದ ಸಂಶೋಧನಾ ಸಂಸ್ಥೆಗಳು ಜನರ ಜೀವನದಲ್ಲಿ ವಿಜ್ಞಾನದ ಸಂಶೋಧನೆಗಳಿಗೆ ಸ್ಥಾನ ಕಲ್ಪಿಸಿ ಕೊಡುವ ಪ್ರಯತ್ನವನ್ನು ಮಾಡುತ್ತವೆಂದು ಆಝಾದರು ಹೇಳಿದರು. ಮನೆ ಕಟ್ಟುವ ಕಲೆಯಲ್ಲಿ ವಿಜ್ಞಾನದ ನೆರವನ್ನು ಯಶಸ್ವಿಯಾಗಿ ಉಪಯೋಗಿಸುವುದು ರೂರ್ಕಿಯ ಸಂಶೋಧನಾಲಯದ ಉದ್ದೇಶವಿದೆ. ಭಾರತದ ಬಡ ಜನರ ಆರ್ಥಿಕ ಸಾಮರ್ಥ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಕಡಿಮೆ ವೆಚ್ಚದಲ್ಲಿ ಆರೋಗ್ಯಕರವಾದ ಮನೆಗಳನ್ನು ನಿರ್ಮಿಸುವುದು ಅಗತ್ಯವಿದೆ ಕಟ್ಟಡಗಳ ರಚನೆಯಲ್ಲಿ ಅತ್ಯಧಿಕ ವೆಚ್ಚವು ಬರುವುದರಿಂದ, ಬಡ ಜನರಿಗೆ ವಾಸ ಯೋಗ್ಯವಾದ ಮನೆಗಳನ್ನು ಕಟ್ಟಿಕೊಂಡು ನಾಗರಿಕ ಜೀವನವನ್ನು ನೀಗಿಸುವುದು ಕಷ್ಟಸಾಧ್ಯವೆನಿಸಿದೆ. ಇಂಥ ಸಂಶೋಧನಾಲಯಗಳು ಬಡಜನರಿಗೆ ಅಗ್ಗದರದಲ್ಲಿ ಚೆನ್ನಾದ ಮನೆ ಕಟ್ಟಿಸುವ ಮಾರ್ಗ ತೋರಿಸಿಕೊಟ್ಟರೆ ಅದರಿಂದ ತುಂಬ ಪ್ರಯೋಜನವುಂಟು. ಆದರೆ ಇಂಥ ಸಂಶೋಧನಾಲಯಗಳ ಕುರಿತು ಜನರಲ್ಲಿ ಹೆಚ್ಚಿನ ಆಸ್ಥೆ ಮೂಡುವುದಿಲ್ಲ. ನಮ್ಮ ವಿಶಾಲ ದೇಶದ ಆವಶ್ಯಕತೆಯನ್ನು ಪೂರೈಸುವಷ್ಟರ ಮಟ್ಟಿನ ಹೆಚ್ಚು ಸಂಖ್ಯೆಯಲ್ಲಿ ವೈಜ್ಞಾನಿಕ ಸಂಶೋಧನಾ ಸಂಸ್ಥೆಗಳು ಹೆಚ್ಚಿಕೊಂಡರೆ ಮಾತ್ರ ಜನರು ಇಂಥ ಪ್ರಯತ್ನಗಳ ಕಡೆಗೆ ಆಕರ್ಷಿತರಾದಾರು. ಆದುದರಿಂದ ನಾವು ಇನ್ನೂ ಇನ್ನೂ ಸಂಶೋಧನಾಲಯಗಳು ಸ್ಥಾಪಿಸಲ್ಪಡಬೇಕೆಂದು ಬಯಸುತ್ತಿರಬೇಕು ವೈಜ್ಞಾನಿಕ ಪ್ರಗತಿಯಲ್ಲಿ ನಮಗೆ ತೃಪ್ತಿಯ ಭಾವ ಬರಲೇಕೂಡದು. ಸದಾ ಅಸಹನೆ ಮತ್ತು ಅತೃಪ್ತಿಯು ನಮ್ಮಲ್ಲಿದ್ದು, ಹೊಸ ಹೊಸ ಪ್ರಯತ್ನಕ್ಕೆ ನಮ್ಮನ್ನು ಪ್ರೋತ್ಸಾಹಿಸಬೇಕೆಂದು ನೆಹರೂ ಹೇಳಿದ್ದು ಈ ದೃಷ್ಟಿಯಿಂದ ಉಚಿತವೇ ಸೈ. ಒಂದು ಸಂಗತಿಯನ್ನು ಮಾತ್ರ ನಾವು ನೆನಪಿನಲ್ಲಿಟ್ಟುಕೊಳ್ಳತಕ್ಕದ್ದು.— ಅದೇನೆಂದರೆ, ನಮ್ಮ ಅಸಹನೆಯಾಗಲೀ ಅತೃಪ್ತಿಯಾಗಲೀ ನಿರಾಶೆಯ ಹಾಗೂ ನಿಷ್ಕ್ರಿಯತೆಯ ಕಡೆಗೆ ನಮ್ಮನ್ನು ಒಯ್ಯುವಂತಿರದೆ, ಕಾರ್ಯಪಟುತ್ವಕ್ಕೆ ಪ್ರಚೋದನೆ ಕೊಡುವಂತಿರಬೇಕು. ಭಾರತದಲ್ಲಿ ವೈಜ್ಞಾನಿಕ ಪ್ರಗತಿಯು ಖಾಸಗಿ ಹಾಗು ಸರಕಾರೀ ಪ್ರಯತ್ನಗಳ ಫಲವಾಗಿ ಶೀಘ್ರಬಲ್ಲಿಯೇ ಬೆಳೆದು ಬರಲೆಂದೂ, ತತ್ಪರಿಣಾಮವಾಗಿ ಜನತೆಯು ಸುಖಜೀವನಕ್ಕೆ ಭಾಗಿಯಾಗಲೆಂದೂ ಹಾರೈಸೋಣ!

ದಿಟ್ಟತನದ ಹೆಜ್ಜೆ

ಆದರೂ ಈ ನಮೂನೆಯ ಸೂಚನೆಗ ನ್ನು ಅಮೇರಿಕಾ ಚರ್ಚಿಸುತ್ತಿದೆ ಎಂದು ಶಿಷ್ಟಿನ ವರ್ಗಗಳು ನಂಬಿವೆ. ಪತ್ರಪತ್ರಿಕೆಗಳ ವರದಿಯಂತೆ ವಿದೇಶ ಶಾಖೆಯ ಮಂತ್ರಿ ಡಲ್ಲೇಸರೇ ಖುದ್ದಾಗಿ ಈ ಸಂಗತಿಯನ್ನು ಬಹಿರಂಗಗೊಳಿಸಿರುವರು ಕಮ್ಯೂನಿಷ್ಟ ವರ್ತುಲಗಳಿಂದ ಒದಬಹುದಾದ ಪ್ರತಿಕ್ರಿಯೆಯನ್ನು ತಿಳಿಯಲು ಬೇಕೆಂದೇ ಈ ದಿಟ್ಟತನದ ಹೆಜ್ಜೆಯನ್ನಿಟ್ಟವರು ಎಂದೆನ್ನಲಾಗಿದೆ. ಆದರೆ ಇಂಥ ವರದಿಗಳನ್ನು ನಂಬುವುದಾದಲ್ಲಿ ರಶಿಯಾದ ನೀತಿ ಪರಿವರ್ತನೆಗೆ ಪೂರಕವಾಗಿ ಅಮೇರಿಕಾದ ನಿಲುಮೆಯಲ್ಲೂ ಬದಲಾವಣೆಯಾಗಬೇಕಿದ್ದು, ಈ ಬದಲಾವಣೆಯು ದ್ಯೋತಕವಾಗಿ ಡಲ್ಲೇಸರು ಧ್ಯಾನಸ್ಥರಾದರೂ ಆಶ್ಚರ್ಯವಿಲ್ಲ' ಈ ವರದಿ ನಿಜವೆನಿಸಿದರೆ — ಅದರ ಪರಿಣಾಮ ಲೋಕದ ಮೇಲೆ ಗಂಭೀರವಾಗದಿರದು. ಡಲ್ಲೇಸರು ಈಚೆಗೆ ವಿಶ್ವದ ಪರಿಸ್ಥಿತಿಯ ಸಂಗಮಾವಲೋಕನ ಮಾಡುತ್ತ ಯುರೋಪ್ಯ ರಕ್ಷಣಾ ಸೇನೆಯು ಒಂದೇ ಆಗದಿದ್ದಲ್ಲಿ ಅ ಮೇ ರಿ ಕಾ ತನ್ನ ಧೋರಣೆಯನ್ನು ಪುನರ್ವಿಮರ್ಶಿಸಬೇಕಾಗಿ ಬರಬಹುದೆಂದರು.

ಫೊರ್ಮೋಸಾ ಮತ್ತು ಇಂಡೋಚೀನಗಳಿಗೆ ಅಧಿಕಾಧಿಕ ನೆರವು ನೀಡಬೇಕು;ಅತ್ತ ಮಧ್ಯಪೂರ್ವದ ಪರಿಸ್ಥಿತಿಯು ಶೀಘ್ರ ಉತ್ಕಟಾವಸ್ಥೆಯನ್ನು ಮುಟ್ಟಿರವುದರಿಂದ ಮತ್ತು ಅಮೇರಿಕನ್ ಹಿತ ಸಂಬಂಧಗಳಿಗೆ ಇದು ಘಾತಕವಾಗಿರುವುದರಿಂದ ಹೊಸ ನೀತಿಯನ್ನು ಅನುಸರಿಸಬೇಕಾಗಿ ಬಂದೀತೆಂದು ಡಲ್ಲೇಸರು ಹೇಳಿದರು. ಈ ಹೊಸ ನೀತಿಯೆಂಥದೆಂಬುದನ್ನು ಅವರು ಬಹಿರಂಗ ಪಡಿಸಲಿಲ್ಲ. ಆದರೆ ಆಂಗ್ಲೋ ಅಮೇರಿಕನ್ ಗುಂಪುಗಳು ಮಧ್ಯ ಪೂರ್ವದಲ್ಲಿ ಸಂರಕ್ಷಣಾ ಯೋಜನೆಗೆ ನೆಲಗಟ್ಟು ಹಾಕುವ ಸಿದ್ಧತೆಯಲ್ಲಿವೆ ಎಂಬುದನ್ನು ಗಮನಿಸಬೇಕು. ಪಾಕಿಸ್ತಾನವನ್ನು ಈ ಕುರಿತು ಮಸಲಾಯಿಸುತ್ತಿರುವರಲ್ಲದೆ ನಿಕಟ ಸೈನಿಕ ಸಂಬಂಧವನ್ನು ಪ್ರಸ್ತಾಪಿಸುವುದಕ್ಕೆ ನೇರಾದ ಕಾರ್ಯಾಚರಣೆಯ ಪ್ರಯತ್ನವೂ ನಡೆದಿದೆ.

ಸ್ಫೋಟಕ ಪ್ರಮೇಯ

ರಾಷ್ಟ್ರ ಸಂಘದಲ್ಲಿ ಬರ್ಮಾವು ಚೀನೀ ರಾಷ್ಟ್ರೀಯರ ವಿರುದ್ಧ ಕೊಟ್ಟ ದೂರು ಬೇಗನೇ ಚರ್ಚಿಸಲ್ಪಡುವಂತಾಗಬೇಕೆಂದು ಏಶಿಯನ್ ರಾಷ್ಟ್ರಗಳು ಜೋರು ಕೊಟ್ಟಿವೆ. ಬರ್ಮಾದ ದೂರು ಅತ್ಯಂತ ಗಂಭೀರ ಸ್ವರೂಪದ್ದಿರುವುದರಿಂದ ರಾಷ್ಟ್ರ ಸಂಘ ಇದನ್ನು ಮೂಲೆ ಗುಂಪಾಗಿಸಲು ಸಾಧ್ಯವೇ ಇಲ್ಲ; ಅದರಂತೆ ಅಲಕ್ಷ್ಯವನ್ನೂ ತೋರಿಸಲಾರದು. ಆದರೆ ರಾಷ್ಟ್ರ ಸಂಘವು ಈ ದೂರಿನ ವಿಚಾರಣೆಯನ್ನು ತೊಡಗಿದ ಪಕ್ಷದಲ್ಲಿ ಅಮೇರಿಕಾವಿಗೆ ತೀವ್ರ ಧಕ್ಕೆ ತಗಲುತ್ತದೆ ಅಮೇರಿಕನ ಅಭಿಪ್ರಾಯದಂತೆ, ರಾಷ್ಟ್ರ ಸಂಘದ ಮುಂದೆ ಬಂದಿರುವ ದೂರುಗಳಲ್ಲಿ ಬರ್ಮಾದ ತಕರಾರು ಅತ್ಯಂತ ಸ್ಫೋಟಕವೆನಿಸಿದೆ. ಏಕೆಂದರೆ ಅಮೇರಿಕನ್ ಬಣದ ರಾಷ್ಟ್ರವಾದ ಫೋರ್ಮೋಸಾ ಸರಕಾರದ ವಿರುದ್ಧ ಕಮ್ಯೂನಿಸ್ಟರಲ್ಲ— ಪ್ರಜಾಪ್ರಭುತ್ವ ನೀತಿಯನ್ನನುಸರಿಸುವ ಬರ್ಮಾದಂಥ ತಟಸ್ಥ ರಾಷ್ಟ್ರ ಆರೋಪ ಮಾಡುತ್ತಿದೆ. ಇದು ಕಮ್ಯೂನಿಸ್ಟರಿಗೆ ಅನುಕೂಲವಾಗಿ ಪರಿಣಮಿಸುವುದು ನಿಶ್ಚಯವೆಂದು ಅಮೇರಿಕಾ ಭೀತಿಹೊಂದಿದೆ. ಆದುದರಿಂದ ರಾಷ್ಟ್ರ ಸಂಘದಲ್ಲಿ ಬಿಸಿಯೇರಿದ ವಾತಾವರಣವನ್ನುಂಟುಮಾಡುವ ವಾತುಕತೆಗಳು ನಡೆಯುವುದು ತಪ್ಪಬೇಕೆಂದು ಅಮೇರಿಕಾ ಬಯಸುತ್ತಿದೆ. ರಾಷ್ಟ್ರ ಸಂಘದ ಹೊರಗೆಯೇ ಈ ಪ್ರಶ್ನೆ ಇತ್ಯರ್ಥಹೊಂದಬೇಕೆಂದು ಅಮೇರಿಕೆಯ ಅಪೇಕ್ಷೆಯಾಗಿದ್ದು, ಈ ಕುರಿತು ಬರ್ಮಾದ ಸರಕಾರದೊಡನೆ ನೇರ ಮಾತಿಗೆ ತೊಡಗಿದೆ. ಆದರೆ ಅಮೇರಿಕಾವು ಫೋರ್ಮೋಸಾದ ಸರಕಾರಕ್ಕೆ ನೆರವೀಯುತ್ತಿದೆ; ಮತ್ತು ಆ ದೇಶ ಫೋರ್ಮೋಸಾದ ಸೈನಿಕರು ಬರ್ಮಾದಲ್ಲಿ ಗುಲ್ಲೆಬ್ಬಿಸಿರುವುದರಿಂದ, ಅಮೇರಿಕಾದ ಈ ಪ್ರಯತ್ನ ವಿಫಲವಾಗುವ ಸಂಭವವೇ ಅಧಿಕ. ಅಮೇರಿಕಾ ಇದನ್ನು ಮೊದಲೇ ಶಂಕಿಸಿದ್ದು—ತನ್ನ ಪ್ರಯತ್ನದ ಜೊತೆಗೆ ಬರ್ಮಾದೊಡನೆ ನಿಕಟಬಾಂಧವ್ಯವಿರುವ ಭಾರತವು ಆ ಸರಕಾರದ ಮನವೊಲಿಸಿದಾಗಬಹುದೆಂದು ಯೋಚಿಸಿದೆ. ಭಾರತ ಸರಕಾರವನ್ನು ಸಹಕಾರಕ್ಕಾಗಿ ಅಮೇರಿಕಾ ಕೇಳಿದೆಯೆಂದೂ, ತನ್ನ ವೆಚ್ಚದಿಂದಲೇ ಚೀನೀ ರಾಷ್ಟ್ರೀಯ ಸೈನಿಕರನ್ನು ಬರ್ಮದಿಂದ ಫೋರ್ಮೋಸಾಕ್ಕೆ ವಿಮಾನ ಮೂಲಕ ಒಯ್ಯುವ ಕೊಡುಗೆ ನೀಡಿದೆ ಎಂದೂ ತಿಳಿದುಬಂದಿದೆ. ಆದರೆ ಚಿಯಾಂಗರು ಅಮೇರಿಕೆಯ ಈ ಪ್ರಯತ್ನವನ್ನು ಪುರಸ್ಕರಿಸುವುದು ಸಂಶಯಾಸ್ಪದ.

ಕೆನ್ಯಾಟಾರಿಗೆ ಶಿಕ್ಷೆ

ಕೆಲಸಮಯದಿಂದೀಚೆಗೆ ಆಫ್ರಿಕಾದಲ್ಲಿ ನಡೆಯುತ್ತಿದ್ದ ಜೊಮೋ ಕೆನ್ಯಾಟಾರ ವಿಚಾರಣೆಯು ಪೂರ್ಣ ಮುಗಿದು, ಮೆಜಿಸ್ಟ್ರೇಟರು ಕೆನ್ಯಾಟಾ ಮತ್ತು ಇತರರಿಗೆ ಅತ್ಯುಗ್ರವಾದ ಶಿಕ್ಷೆಯನ್ನು ವಿಧಿಸಿರುವರು. ಕೆನ್ಯಾಟಾರು ಐರೋಪ್ಯರನ್ನು ಆಫ್ರಿಕದಿಂದ ಓಡಿಸಿಬಿಡುವ ಪಿತೂರಿಗಳನ್ನು ನಡೆಸಿದರೆಂದು ಮೆಜಿಸ್ಟ್ರೇಟರು ನಿರ್ಣಯಿಸಿ, ಏಳು ವರ್ಷಗಳ ಕಠಿಣ ದಂಡನೆಗೆ ಅವರನ್ನು ಗುರಿ ಮಾಡಿರುವರು. ಮಾವ್ ಮಾವ್ ಗುಪ್ತ ಸಂಸ್ಥೆಯೊಡನೆ ನಿಕಟ ಸಂಪರ್ಕವನ್ನು ಇಟ್ಟುಕೊಂಡು ಐರೋಪ್ಯರನ್ನು ನಿರ್ಮೂಲ ಮಾಡುವುದಕ್ಕೆ ಪ್ರಚೋದಿಸಿದರೆಂದೂ ಕೆನ್ಯಾಟಾರ ಮೇಲೆ ಆರೋಪವಿದೆ. ಇದನ್ನೆಲ್ಲ ಕೇಳುವಾಗ ಬ್ರಿಟಿಷರು ಭಾರತದಲ್ಲಿ ಸ್ವಾತಂತ್ರ್ಯ ಸಂಗ್ರಾಮವನ್ನು ಹತ್ತಿಕ್ಕಲು ತೆಗೆದುಕೊಂಡ ಕ್ರಮಗಳ ನೆನಪಾಗುತ್ತದೆ. ಆಫ್ರಿಕಾದಲ್ಲಿ ಇಂದು ರಾಷ್ಟ್ರೀಯ ಭಾವನೆಯು ಜಾಗ್ರತವಾಗಿದ್ದು, ಆಫ್ರಿಕನ್ನರು ಸ್ವಾತಂತ್ರ್ಯ ಚಳುವಳಿಯನ್ನು ನಡೆಸುತ್ತಿರುವರು. ಆದರೆ ಆಡಳಿತ ನಡೆಸುವ ಬ್ರಿಟಿಷರು ದಬ್ಬಾಳಿಕೆಯನ್ನು ನಡೆಸಿ, ಆಫ್ರಿಕನ್ನರನ್ನು ಸದೆಬಡೆಯಲು ನೋಡುತ್ತಿದ್ದಾರೆ. ಕೆನಿಯಾದ ನಿವಾಸಿಗಳಲ್ಲಿ ನಾಲ್ಕರಲ್ಲಿ ಒಂದಂಶದಷ್ಟಿರುವ ಕಿಕುಯೂ ಜನರನ್ನು ಸೈನ್ಯವನ್ನುಪಯೋಗಿಸಿಯೂ ಪೋಲೀಸ ಪಡೆಯ ನೆರವಿನಿಂದಲೂ ಕೊಂದು ಹಾಕುತ್ತಿರುವರು.ಈ ಭೀಕರಹತ್ಯಾಕಾಂಡದ ಪರಿಣಾಮವು ಆಫ್ರಿಕನ್ನರ ಮೇಲೆ ಗಂಭೀರ ಪ್ರಭಾವವುಂಟುಮಾಡದಿರದು. ಮಾವ್ ಮಾವ್ ಸಂಘಟನೆಯಿಂದ ಐರೋಪ್ಯ ಜನರು ತತ್ತರಿಸುತ್ತಿದ್ದು ಮಲಯಾದಲ್ಲಿ ಭಯೋತ್ಪಾದಕರನ್ನು ಹತ್ತಿಕ್ಕಲು ಟೆಂಪ್ಲರರು ಕೈಕೊಂಡ ಕ್ರಮಗಳನ್ನು ಕೆನಿಯಾದಲ್ಲೂ ಸರಕಾರ ಪ್ರಯೋಗಿಸಬೇಕೆಂದಿರುವರು. ಆದರೆ ಹಿಂಸೆಯನ್ನು ಬಿಟ್ಟುಕೊಡದ ಹೊರತು ಕೆನಿಯಾದ ಚಳವಳಿಯನ್ನು ನಿಲ್ಲಿಸಲು ಬ್ರಿಟಿಷ ಸರಕಾರಕ್ಕೆ ಸಾಧ್ಯವಿಲ್ಲ.

ಮದ್ರಾಸಿನ ಗವರ್ನರ್ ಶ್ರೀ. ಶ್ರೀಪ್ರಕಾಶರವರು

ಇದೇ ತಾ. ೭೮ಕ್ಕೆ ಮಂಗಳೂರಿಗೆ ಬಂದು ಮರುದಿನ ಬೆಳಗ್ಗೆ 11 ಗಂಟೆಗೆ ಉಡುಪಿಗೆ ಬಂದು ಇಲ್ಲಿಯ ಕಾರ್ಯಕ್ರಮ ಮುಗಿಸಿ ಸಂಜೆ ಹಿಂದೆರಳಲಿರುವರು.

— —

ಶ್ರೀ. ಕಿಲ್ಲೆಯವರು ಗುಣಹೊಂದುತ್ತಿದ್ದಾರೆ.

ಆಕಸ್ಮಾತ್ತಾಗಿ ಅಸ್ವಸ್ಥಬಿದ್ದ ಶ್ರೀ ಎಸ್. ಎಸ್. ಕಿಲ್ಲೆಯವರನ್ನು ಚಿಕಿತ್ಸೆಗಾಗಿ ಮದ್ರಾಸಿಗೊಯ್ಯಲಾಗಿತ್ತಷ್ಟೆ! ಮುಂದಿನ ಚಿಕಿತ್ಸೆಗಾಗಿ ನವಚೇತನ ಪಡೆಯಲಾಗುವಂತೆ ಬದಲಾವಣೆ ನಿಮಿತ್ತ ಅವರು ಇದೇ ತಾ 5ರಂದು ಮಂಗಳೂರಿಗೆ ಬಂದು ಡಾ। ಎಂ ವಿ. ಶೆಟ್ಟರ ನರ್ಸಿಂಗ್ ಹೋಮಿನಲ್ಲಿ ಶುಶ್ರೂಷೆ ಪಡೆಯುತ್ತಿದ್ದಾರೆ. ಅವರನ್ನು ನಮ್ಮ ಪ್ರತಿನಿಧಿಗಳು ತಾ. 10ರಲ್ಲಿ ಭೆಟ್ಟಿಯಾಗಿ ವಿಚಾರಿಸಲಾಗಿ ಪ್ರಕೃತ ತನ್ನ ಆರೋಗ್ಯ ಸ್ವಲ್ಪ ಸುಧಾರಿಸಿದ್ದುದರಿಂದ ಸ್ವಲ್ಪ ಚೇತನಬಂದೊಡನೆ ತಿರುಗಿ ಮದ್ರಾಸಿಗೆ ಹೋಗಬಹುದೆಂದೂ ತಿಳಿಸಿರುತ್ತಾರೆ. ಸದ್ಯ ಅವರು ತುಂಬಾ ಕ್ಷೀಣವಾಗಿದ್ದಾರೆ ಆದರೆ ನೋಡ ಬಂದ ಪ್ರತಿಯೊಬ್ಬರೊಡನೆ ಮಾತನಾಡುತ್ತಿದ್ದಾರೆ ಅವರು ಕ್ಯಾನ್ಸರ ರೋಗದ ಬಳಲುತ್ತಿರುವುದಾಗಿ ತಿಳಿದು ಬರುತ್ತಿದೆ ಅಮೇರಿಕಾದ ನವೀನವಾಗಿ ತಯಾರಿಸಿದ ಇಂಜಕ್ಷನ್ ಒಂದರ ಪ್ರಯೋಗವನ್ನು ಅವರ ಮೇಲೆ ಮಾಡಲಾಗುತ್ತಿದೆ ಎಂದು ತಿಳಿದು ಬರುತ್ತದೆ ಅಂತೂ ಅವರ ಆರೋಗ್ಯ ಬೇಗನೆ ಸುಧಾ[illegible] ಪ್ರಾರ್ಥಿಸುತ್ತೇವೆ

ಮಾರಾಳಿ

ಉಡುಪಿ ತಾಲೂಕು ಉತ್ತರ ಶ್ರೇಣಿಯಲ್ಲಿರುವ ನಾಲ್ಕೂರು ಗ್ರಾಮದ ಮಾರಾಳಿಯಲ್ಲಿ ಕೆಲವು ತಿಂಗಳ ಹಿಂದೆ ತೆರೆದಿರುವ ದಯಾನಂದ ವಯಸ್ಕರ ಶಾಲೆಗೆ ತಾ 2–1–1953 ರಿಂದ ಸರಕಾರದಿಂದ ಅನುಮತಿದೊರಕಿಯದೆ.

ಎಮ್ ನಾರಾಯಣ ಶೆಟ್ಟಿ

[illegible]

The Catholic Bank, Ltd., UDIPI

ದಿ ಕೆಥೋಲಿಕ್ ಬೇಂಕ್ ಲಿಮಿಟೆಡ್, ಉಡುಪಿ ಬ್ರಾಂಚ್.

ಏಲಂ ನೋಟೀಸು

ಈ ಕೆಳಗೆ ಕಾಣಿಸಿದ ಮದನೀಯರು ಸದ್ರೀ ಬ್ಯಾಂಕಿನಲ್ಲಿ ಚಿನ್ನಾಭರಣಗಳ ಈಡಿನ ಮೇಲೆ ಪಡೆದ [illegible] ಸಾಲದ ಅಸಲು ಬಡ್ಡಿ ವಗೈರೆ ಐವೇಜನ್ನು ಕ್ಲಪ್ತಸಮಯದಲ್ಲಿ ಕೊಡದೆ ಬಾಕಿ ಮಾಡಿರುವುದರಿಂದಲೂ ಅಲ್ಲದೆ ಕ್ರಮ ಪ್ರಕಾರ ರಿಜಿಸ್ಟ್ರ ನೋಟೀಸು ಕೊಟ್ಟರೆ ಕೆಲವರು ಪಡೆಯದೂ, ಕೆಲವರು ಊರಿನಲ್ಲಿ ಇಲ್ಲವೆಂತ ವಾಪಾಸು ಬಂದಿ ಎಷ್ಟು ಲೂ ಸದ್ರೀಯವರಿಗೆ ಯಾ ಸದ್ರೀಯವರ ವಾರೀಸುದಾರರಿಗೆ ಈ ಮೂಲಕ ತಿಳಿಸ ವುದೇನೆಂದರೆ ಸದ್ರೀಯವರು ಈಡಿಟ್ಟ ಒಡವೆಗಳನ್ನು ಇದೇ 1953ನೇ ಇಸವಿ ಎಪ್ರಿಲ್ ತಿಂಗಳ ತಾರೀಕು 25ನೇ ಶನಿವಾರ ಅಪರಾಹ್ನ ಗಂಟೆ 3ಕ್ಕೆ ಯಾ ಬ್ಯಾಂಕಿಗೆ ಯುಕ್ತ ಕಂಡ ಇನ್ನಿತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಸದ್ರೀ ಬ್ಯಾಂಕಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು
27/210	ಲಿಯೋ ಮಾರ್ಟಿಸ್, ಗಾಬ್ರಿಯಲ್ ಮಾರ್ಟಿಸರ ಮಗ, ಶಂಕರಪುರ. P O.	200 0 0
27/1305	ಕೆ ರಾಮಣ್ಣ ಮಗ, ಶಂಕಪ್ಪ ಮೊಯಿಲಿಯರ ಮಗ, ಬಡಗಬೆಟ್ಟು, ಬೈಲೂರು. ಉಡುಪಿ P. O.	110 0 0
28/267	ಸಯ್ಯದ್ ಹುಸೇನ್ ಸಾಹೇಬ್, ಸಯ್ಯದ್ ಮೊಹಿದಿನ್ ಸಾಹೇಬರ ಮಗ, ಬಡಗುಬೆಟ್ಟು ಬೈಲೂರು ಉಡುಪಿ	60 0 0
28/285	ಯು. ರಾಮಚಂದ್ರ ಮಯ್ಯ, ಯು, ನಾರಾಯಣ ಮಯ್ಯರ ಮಗ, ಉದ್ಯಾವರ P. O.	60 0 0
28/366	ಪಿ. ಕೃಷ್ಣ ಹೆಗ್ಡೆ, ಮಂಜಯ್ಯ ಸೆಟ್ಟಿ ಅಳಿಯ, ಬಿಲ್ಲಂಪಳ್ಳಿ ಗ್ರಾಮ, ಪೆರ್ಡೂರು. P O	135 0 0
28/740	ಪಿ. ಕಾಳುನ್ನಾರಿ ಎಲ್ಲುನ್ನಾರಿಯರ ಅಳಿಯ. ಬ್ರಹ್ಮಗಿರಿ ಉಡುಪಿ P O.	125 0 0
28/861	ಅಬ್ಬು ಪೂಜಾರಿ, ದಾಸು ಪೂಜಾರಿಯ ಹೆಂಡತಿ ಕುತ್ಪಾಡಿ ಗ್ರಾಮ, ಕುತ್ಪಾಡಿ P. O	50 0 0
28/598	ಯು, ವಾದಿರಾಜ ಉಪಾಧ್ಯಾಯ, ಪುಟ್ಟಣ್ಣ ಉಪಾಧ್ಯಾಯರ ಮಗ ಬಡ ಪೇಟೆ, ಉಡುಪಿ P. O	45 0 0
28/1599	ಬಿ. ಕಾಳು ನ್ನಾರಿ, ಎಲ್ಲು ನ್ನಾರಿಯರ ಅಳಿಯ, ಬ್ರಹ್ಮಗಿರಿ ಉಡುಪಿ	35 0 0

V. J. Andrade.
Agent.



ಬರೇ ರೂ- 5 ಕ್ಕೆ
15 ಜ್ಯುವೆಲಿನ
ರಿಸ್ಟ್ ವಾಚು
15 ವರ್ಷ ಗ್ಯಾರಂಟಿ ಇರುವ, 15 ಜ್ಯುವೆಲಿನ ರಿಸ್ಟ್ ವಾಚುಗಳು ರೂ. 5 ಕ್ಕೆ ದೊರೆಯುತ್ತವೆ.
ಬೇಗನೆ ಬರೆಯಿರಿ:
American Swiss Watch Suppliers.
Putlighar (N. U.) Amritsar.

ಬಾಲಚಂದ್ರ
ಶೈಕ್ಷಣಿಕ ಮಾಸಪತ್ರಿಕೆ
ವಾರ್ಷಿಕ ಚಂದಾ ರೂ. 3–0–0
ಬ್ಯಾ[illegible] ಡಿಪೆ ಹೆಗೆ ಸಂಪುಟಗಳು ದೊರೆಯುತ್ತವೆ.
ವಿಚಾರಿಸಿರಿ:
ಬಾಲಚಂದ್ರ ಆಫೀಸು, ಉಡುಪಿ.
ಅಥವಾ
ನವಯುಗ ಪ್ರೆಸ್, ಉಡುಪಿ.

ಉಡುಪಿ.

ಉದ್ಘಾಟನಾ ಸಮಾರಂಭ ಉಡುಪಿ ಮುನಿಸಿಪಲ್ ಸೌತ್ ಹಾಯಿ ಶಾಲೆಗೆ ಹೊಸತಾಗಿ ಕಟ್ಟಲ್ಪಟ್ಟ ಕಟ್ಟಡದ ಉದ್ಘಾಟನೆಯನ್ನು ಅಧಮಾರು ಮಠದ ಶ್ರೀ ವಿಬುಧೇಶ ತೀರ್ಥ ಸ್ವಾಮಿಗಳವರು ಇದೇ ತಾ. 6ರಲ್ಲು ಸಂಜೆ ನೆರವೇರಿಸಿದರು ಶ್ರೀ ಕೆ. ರಮಾನಾಥ ಪೈಗಳು ಸಮಾರಂಭದ ಅಧ್ಯಕ್ಷಸ್ಥಾನ ವಹಿಸಿದ್ದರು ಮುನಿಸಿಪಲ್ ಕಮಿಶನರ್ ಶ್ರೀ ಕೆ. ಗೋಪಾಲ ಮೆನೊನ್ನರು ಸ್ವಾಗತ ಭಾಷಣ ಮಾಡಿದರು ಶಾಲಾ ಮುಖ್ಯೋಪಾಧ್ಯಾಯಿಕೆ ಶ್ರೀಮತಿ ದೇವಕಿಯು ವಂದನಾರ್ಪಣ ಮಾಡಿದರು ಶಾಲಾ ಕಟ್ಟಡ ಮೇಸ್ತ್ರಿಗಳಿಗೂ ಆಟ ಪಾಟಗಳಲ್ಲಿ ಗೆದ್ದ ಬಾಲ ಬಾಲಿಕೆಯರಿಗೂ ಸಭಾಧ್ಯಕ್ಷರು ಬಹುಮಾನ ಹಂಚಿದರು ಮುನಿಸಿಪಲ್ ಚೆರ್‌ಮೆನ್ ಶ್ರೀ ಯು ಎಸ್ ನಾಯ್ಕರು ವಂದನೆಗಳನ್ನರ್ಪಿಸಿದರು ಬಳಿಕ ಶಾಲಾ ಬಾಲ ಬಾಲಿಕೆಯರಿಂದ 'ಸತ್ಯ ಹರಿಶ್ಚಂದ್ರ' ನಾಟಕವು ಜಯಶೀಲವಾಗಿ ಅಭಿನಯಿಸಲ್ಪಟ್ಟಿತು.

ಮುನಿಸಿಪಲ್ ಕೌನ್ಸಿಲು ಸಭೆಯು- ಇದೇ ತಾ. 11ರಲ್ಲಿ ಚೆರ್‌ಮೆನ್ ಶ್ರೀ ಯು ಎಸ್ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು ಈ ತಿಂಗಳ ಮೂರನೆ ವಾರದಲ್ಲಿ ಜಿಲ್ಲಾ ಪ್ರವಾಸವನ್ನು ಕೈಕೊಂಡು ಉಡುಪಿಗೆ ಬರಲಿರುವ ಮದ್ರಾಸು ಗವರ್ನರರಿಗೆ ನಗರಸಭೆಯು ಕಡೆಯಿಂದ ಮಾನಪತ್ರ ಕೊಡಬೇಕೆಂದು ನಿರ್ಣಯವಾಯಿತು ಕೆಲವು ಸರಕಾರಿ ಆರ್ಡರುಗಳು ರಿಕಾರ್ಡು ಮಾಡಲಾದುವು ಕೆಲವು ವೆಚ್ಚಗಳು ಸೆಂಕ್ಷನ್ ಮಾಡಲಾದುವು ಸ್ಥಳೀಯ ಸರಕಾರಿ ಆಸ್ಪತ್ರೆಯ ಮೆಟರ್ನಿಟಿ ವಾರ್ಡಿನಲ್ಲಿ ಹೆಚ್ಚಿನ ಸೌಕರ್ಯಗಳನ್ನು ಕೂಡಲೇ ಒದಗಿಸುವಂತೆ ಜಿಲ್ಲಾ ಮೆಡಿಕಲ್ ಆಫೀಸರರ ಮೂಲಕ ಮದ್ರಾಸು ಸರಕಾರವನ್ನು ಕೇಳಿಕೊಳ್ಳಬೇಕೆನ್ನುವ ಶ್ರೀ ಸೀತಾರಾಮ ಉಪಾಧ್ಯರ ನಿರ್ಣಯವು ಬಹುಮತದಿಂದ ಪಾಸಾಯಿತು ಮೆಟರ್ನಿಟಿ ವಾರ್ಡಿಗಾಗಿ ರೂ. 75,000 ಮಂಜೂರಾಗಿರುವುದಾಗಿ ಶ್ರೀ ಕೆ ಕೆ. ಪೈಗಳು ಸುದ್ದಿಯಿತ್ತರು

ಅದ್ಭುತ ಸೈಕಲ್ ಸವಾರಿ- ಇದೇ ತಾ 10ನೆ ಶುಕ್ರವಾರ ಬೆಳಗ್ಗೆ 6 ಗಂಟೆಯಿಂದ ಮರುದಿನ ಶನಿವಾರ ಸಂಜೆ 7 ಗಂಟೆಯ ವರೆಗೆ ಅಂದರೆ 37 ಗಂಟೆಗಳ ವರೆಗೆ ಹೈದರಾಬಾದಿನ ವಿದ್ಯಾರ್ಥಿ ಶ್ರೀ ಸತ್ಯನಾರಾಯಣ ರಾಯರು ಸೈಕಲಿನಿಂದ ಕೆಳಗೆ ಇಳಿಯದೆನೇ ಅಖಂಡ ಸೈಕಲ್ ಸವಾರಿ ಮಾಡಿದರು. ಈ ಪ್ರದರ್ಶನವು ಉಡುಪಿ ಎಲ್ಲೂಭಂಡಾರಿ ಗದ್ದೆಯಲ್ಲಿ ನಡೆಯಿತು ಸಹಸ್ರಾರು ಜನರು ಸೇರಿದ್ದರು ನಾಗರಿಕರ ಪರವಾಗಿ ಸೈಕಲ್ ಸವಾರರನ್ನು ಶ್ರೀ ಯು ಎಸ್. ನಾಯ್ಕರು ಅಭಿನಂದಿಸಿದರು. ಮಹಾಜನರ ಕಡೆಯಿಂದ ಕಿಂಚಿತ್ ಧನ ಸಹಾಯವನ್ನೂ ಒದಗಿಸಿಕೊಡಲಾಯಿತು

ಸ್ಪೀಡ್ ಲಿಮಿಟ್—ಬಸ್ಸು, ಕಾರು ಮೊದಲಾದ ವಾಹನಗಳ ಕಡೆಗೆ ವಾಹನ ಚಾಲಕರು ಹೆಚ್ಚಿನ ಗಮನ ಕೊಡಗಿರುವುದರಿಂದ- ಟರ್ನಿಂಗಿನಲ್ಲಿ ವಿಶೇಷ ಲಕ್ಷ್ಯ ಕೊಡದಿರುವುದರಿಂದ ನಗರದಲ್ಲಿ ಆಗಾಗ ಅಪಘಾತ ಉಂಟಾಗುತ್ತಿವೆ. ಈ ಕುರಿತು ಸಂಬಂಧಪಟ್ಟವರು ನಿಗಾ ಕೊಡುವುದು ಹಿತಕರ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದಿನೈದು ಋತುಸ್ರಾವವಾಗದ್ದು ಹಕೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಯಿಲ್ಲ. ಸಾಧಾರಣ ಮಂದಿಗೆ ಖಾತ್ರಿ ಗುಣವಾಗಿ- ಬೆಲೆ, ರೂ. 3) ಸ್ಪೆಶ್ಯಲ್ ರೂ 5- ಅಧಿಕಾಧಿಕ ಸ್ಪೆಶ್ಯಲ್ ರೂ. 8]ವಿ ಪಿ ಹನೆರವಾನ ಪ್ರತ್ಯೇಕ)

Mrs. D. DEVLE, F 23 (N. J)
Tollygange CALCUTTA
ಖ್ಯಾತಿಕ್ಸರು ಶಹಾಕಂಪೆನಿ, ಮಂಗಳೂರು

ಮಳೆ—ಕೆಲವು ದಿವಸಗಳಿಂದ ನೋಡ ಕವಿದಿದ್ದು ಎರಡು ಮೂರು ಬಾರಿ ಅಲ್ಪಸ್ವಲ್ಪ ಮಳೆಯಾಗಿದೆ ಸೆಖೆಯು ದಿನೇದಿನೇ ಹೆಚ್ಚುತ್ತಿದೆ

ಬೋರ್ಡು ಹೈಸ್ಕೂಲಿನ ಮುಖ್ಯ ಅಧ್ಯಾಪಕರಾದ ಶ್ರೀ ಕೆ ಸಂಜೀವ ಶೆಟ್ಟರು ಜಿಲ್ಲಾ ಬೋರ್ಡಿನ ಕಾರ್ಯದರ್ಶಿಗಳಾಗಿ ನೇಮಕ ಹೊಂದಿ ಈ ತಿಂಗಳ ಆರಂಬದಲ್ಲೇ ಚಾರ್ಜು ವಹಿಸಿಕೊಂಡಿರುವುದರಿಂದ ಅವರ ಸ್ಥಾನಕ್ಕೆ ಶ್ರೀ ಪಿ ರಾಮಕೃಷ್ಣರಾಯರು ಮುಖ್ಯ ಅಧ್ಯಾಪಕರಾಗಿ ಬಂದಿರುವರು ಶ್ರೀ ಶೆಟ್ಟರು ಈ ಮೊದಲು ಸ್ವಲ್ಪ ಸಮಯ ಕಾರ್ಯದರ್ಶಿಗಳಾಗಿ "ಏಕ್ಟ್" ಮಾಡಿ ಆಡಳಿತಾನುಭವವುಳ್ಳವರಾಗಿದ್ದಾರೆ

ಕುಂಬಳೆ— ಕಾಸ್ರಗೋಡು ರೇಂಜ್ ಶಾಲಾ ಜೂನಿಯರ್ ಡಿಪ್ಯೂಟಿ ಇನ್ಸ್‌ಪೆಕ್ಟರ್ ರಾಮಚಂದ್ರನವರು, ಜಿಲ್ಲಾ ವಿದ್ಯಾಧಿಕಾರಿಯವರು ಪೆರಡಾಲ್ ನವಜೀವನ್ ಹೈಸ್ಕೂಲನ್ನು ಪರಿಶೋಧನೆ ಮಾಡುವಾಗ ಹಾಜರಾದ ಸಂದರ್ಭದಲ್ಲಿ, ಫಕ್ಕನೆ ಜ್ವರವುಂಟಾಗಿ ಅವರನ್ನು ತಾ 10ರಂದು ಪೂರ್ವಾಹ್ನ ಕಾಸ್ರಗೋಡು ಸರಕಾರಿ ಆಸ್ಪತ್ರೆಗೆ ತಂದಕೂಡಲೇ ಅಕಸ್ಮಾತ್ತಾಗಿ ಸ್ವರ್ಗಸ್ಥರಾದರು ದಿವಂಗತರು ಬಿ ಟಿ ತರಬೇತಿ ಪರೀಕ್ಷೆ ಕೊಟ್ಟು ಕಾಸ್ರಗೋಡು ಜೂನಿಯರ್ ಡಿಪ್ಯೂಟಿ ಇನ್‌ಸ್ಪೆಕ್ಟರಾಗಿ ಕಳೆದ ವಾರ ಹಾಜರಾದವರಾಗಿರುತ್ತಾರೆ

ತಾ. 11ನೇ ರಾತ್ರಿ ಅಂಗಡಿ ಮೊಗರು, ಮುಜ್ಞಗೆ, ನಾಯ್ಕಾಪು, ಕಾಸ್ರಗೋಡು ಈ ಕಡೆಗಳಲ್ಲಿ ವಿಶೇಷ ಮಳೆ ಬಿದ್ದಿದೆ

ಇಲ್ಲೆಲ್ಲಾ ಈಗಲೇ ಕುಡಿಯುವ ನೀರಿಗೆ ತುಂಬಾ ಅಭಾವವುಂಟಾಗಿದೆ

ಪಬ್ರೆ--ಕಮ್ಯುನಿಟಿ ಪ್ರೊಜಕ್ಟಿನ ಕೇಂದ್ರವನ್ನು ಪ್ರಾರಂಭಿಸುವ ಸಮಾರಂಭವು ತಾ 13 ರಂದು ರಾವ್ ಸಾಹೇಬ್ ಕೆ ಕೃಷ್ಣಯ್ಯ ನಿವೃತ್ತ ಸಬ್ ಕಲೆಕ್ಟರ್ ಅವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ. ಎಂ ಕೃಷ್ಣಯ್ಯ ಶೆಟ್ಟರು ಸ್ವಾಗತ ಭಾಷಣ ಮಾಡಿದ ಮೇಲೆ ಶ್ರೀಗಳಾದ ಬಿ. ಎಸ್ ಭಾಸ್ಕರ ರೈ, ಮುಕುಂದ ಪ್ರಭು ಮೊದಲಾದವರು ಸಂದರ್ಭೋಚಿತ ಭಾಷಣ ಮಾಡಿದರು. ಅಧ್ಯಕ್ಷ ಭಾಷಣವಾದ ಮೇಲೆ ಶ್ರೀ ಭುಜಂಗ ಬಲ್ಲಾಳರು ಧನ್ಯವಾದಗಳನ್ನಿತ್ತರು, ಪ್ರಕೃತ ಈ ಕೇಂದ್ರದ ವತಿಯಿಂದ ಆಸ್ಪತ್ರೆಯೊಂದು ತೆರೆಯಲ್ಪಟ್ಟು ಒಬ್ಬ ಎಂ ಬಿ ಬಿ ಎಸ್ ಲೇಡಿ ಡಾಕ್ಟರು ನೇಮಕಹೊಂದಿರುವರು,

ಉಪ್ಪೂರು— ಇಲ್ಲಿಯ ಹಿಂದೂ ಹಾಯಿ ಶಾಲಾ ವರ್ಧಂತ್ಯುತ್ಸವವು ಇದೇ ತಾ 21ರಲ್ಲು ಸಂಜೆ ಶ್ರೀ ವೈ ಮಂಜಯ್ಯ ಸೆಟ್ಟಿ, ಎಮ್. ಎಲ್. ಎ ಅವರ ಅಧ್ಯಕ್ಷತೆಯಲ್ಲಿ ಜರಗುವುದು

ಗುರು ಕಂಬಳ— ಮಂಗಳೂರು ತಾಲೂಕು ಗುರುಕಂಬಳದಲ್ಲಿ ವರ್ಷಂಪ್ರತಿ ಜರಗುವ 'ಅಶ್ವಾರೂಢ ಡ್ರೀಸ್'ವಲಿಯುಲ್ಲ ಉರುಸ್ ಇದೇ ತಾ 26ರಲ್ಲಿ ರಾತ್ರಿ ಜರಗಲಿರುವುದಾಗಿ ಸಂಬಂಧಪಟ್ಟವರು ತಿಳಿಸುತ್ತಾರೆ

ಓದಲೇ ಬೇಕಾದ ನವೀನ ಸಾಮಾಜಿಕ ಕಾದಂಬರಿ

ಕುಲವಿಲ್ಲದ ಹೆಣ್ಣು

(ತೆಲುಗಿನಿಂದ ಅನುವಾದಿತ)

ಅನುವಾದಕರು:- ಶ್ರೀ ಪಿ ವೆಂಕೋಬಾಚಾರ್ಯರು,
ಬಿ ಎ ಬಿ ಟಿ, ಹುಬ್ಬಳ್ಳಿ

"ಮಿಶ್ರಸಂತತಿಯ ಹೆಣ್ಣೊಂದು ಧರ್ಮದ ಸೋಗಿನ ಜಾಲ ಧನದ ಜಾಲ, ವೃದ್ಧರ ಕಾಮಜಾಲದಿಂದ ಪಾರಾಗಿ ಆಧುನಿಕ ಯುವಕ ಸಂತತಿಯ ಉದಾರತೆಯ ಕೈಪಿಡಿದು ಸುಖವಾಗಿ ಬಾಳಿತೆಂಬುದನ್ನು ಸೂಚಿಸುವ ಈ ಕಾದಂಬರಿಯಲ್ಲಿ ಪ್ರಾಸಂಗಿಕವಾಗಿ ನಾಟಕ ಕಲೆಯ ಮೇಲೆಯೂ ಕೆಲವು ಅಭಿಪ್ರಾಯಗಳನ್ನು ಸೂಚಿಸಿದ್ದಾರೆ

ಕುಲವಿರಲಿ ಇಲ್ಲದಿರಲಿ ವೈಯಕ್ತಿಕ ಶೀಲವೊಂದಿದೆ, ಆದರ ಬೆಳಕಿನಲ್ಲಿ ವ್ಯಕ್ತಿಯು ಎಂತಹ ಸಾಮಾಜಿಕ, ಧಾರ್ಮಿಕ ಎಡರುತೊಡರುಗಳನ್ನೂ ದಾಟಿ ಮನಮೆಚ್ಚಿದ ಶಾಂತಿಸುಖ ಸಮಾಧಾನಗಳ ಬಾಳನ್ನು ಬಾಳಬಲ್ಲದು ಎಂಬುದೇ ಈ ಕಾದಂಬರಿಯ ನೀತಿ"—ಜೈಹಿಂದ್

ಕನ್ನಡದ ಸ್ತ್ರೀಪುರುಷರೆಲ್ಲರೂ ಅವಶ್ಯ ಓದಲೇ ಬೇಕಾದ ಆಧ್ಯಾತ್ಮಿಕ ಕಾದಂಬರಿ

ಬೆಲೆ ರೂ 2-0-0 ಅಂಚೆ ವೆಚ್ಚ ಪ್ರತ್ಯೇಕ

ಇಂದಿನವರೆಗೆ ತಯಾರಾದ ಕನ್ನಡ ಚಿತ್ರಗಳು ಇಂದಿನ ದಿಕ್ಕು ಕಾಣದೆ ಮೂಲೆ ಸೇರಿದುವಂತೆ— ಕಾರಣ ಕನ್ನಡದ ಕೀರ್ತಿ ಹೆಚ್ಚಿಸಿದ ಖ್ಯಾತಿಯಿಂದು

ಗುಬ್ಬಿ ಕರ್ನಾಟಕ ಪ್ರೊಡಕ್ಷನ್ಸ್ ನವರ ಗುಣಸಾಗರಿಗೆ ಸಂದಿತಂತೆ

ಗುಣಸಾಗರಿ (ಕನ್ನಡ ಚಿತ್ರ)

ಜಿ. ಎಚ್ ವೀರಣ್ಣ, ಸಿ. ಹೊನ್ನಪ್ಪ, ಟಿ. ಎಸ್. ಬಾಲಯ್ಯ, ಜಯಮ್ಮ, ಪಂಡರೀಬಾಯಿ, ಕೃಷ್ಣಕುಮಾರಿ ಮೊದಲಾದವರು.

ತಾ 3—4—1953 ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಉಡುಪಿಗೆ ಹೋಗಬೇಕು! ಆದರೆ ಇಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಟೆಲಿಫೋನ್, ಶಯನ ಇವಕ್ಕೆಲ್ಲ ಅತ್ಯವಶ್ಯ ವೃದ್ಧರೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿ ಬಿಚಿ ಹೇಳಬೇಕೆ

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

ಸುರತ್ಕಲ್ಲು—ವಿದ್ಯಾದಾಯಿನೀ ಹೈಸ್ಕೂಲಿನ ಬಡವಿದ್ಯಾರ್ಥಿ ವೇತನ ನಿಧಿಯ ಸಹಾಯಕ್ಕಾಗಿ ಸದ್ರಿ ಶಾಲಾ ಹಳೆ ವಿದ್ಯಾರ್ಥಿ ಸಂಘದವರು ದುರ್ಗೇಶನಂದಿನಿ ಎಂಬ ಚಾರಿತ್ರಿಕ ನಾಟಕವನ್ನು ತಾ. 11-4-53ರಂದು ಅಭಿನಯಿಸಿದರು. ಇದೇ ನಾಟಕವು ತಾ 18 4 53 ರಂದು ಮಂಗಳೂರ ರೋಶನ್ ಟಾಕೀಸ್ನ ಹಾಲಿನಲ್ಲೂ ಅಭಿನಯಿಸಲ್ಪಡುವುದು ವಿದ್ಯಾಭಿಮಾನಿಗಳು ಪ್ರೋತ್ಸಾಹಿಸಬೇಕಾಗಿ ಸಂಬಂಧಪಟ್ಟವರು ವಿನಂತಿಸುತ್ತಾರೆ

ಕುಂದಾಪುರ— ಬೋರ್ಡು ಹೈಸ್ಕೂಲಿನ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಇದೇ ತಾ 26ಕ್ಕೆ ಶ್ರೀ ಎಸ್. ಎಸ್. ಸಾಲ್ಯಾನರ ಅಧ್ಯಕ್ಷತೆಯಲ್ಲಿ ಜರಗಲಿದೆ

ಬೋರ್ಡು ಹೈಸ್ಕೂಲಿನ ಮುಖ್ಯ ಅಧ್ಯಾಪಕ ಶ್ರೀ ಸದಾಶಿವ ರಾಯರು ಇದೇ ತಾ 21ಕ್ಕೆ ನಿವೃತ್ತಿಹೊಂದಲಿರುವುದರಿಂದ ತಾ 9 ಲ್ಲು ಹಳೆ ವಿದ್ಯಾರ್ಥಿಗಳು ಬೀಳ್ಕೊಡುವ ಸಮಾರಂಭವನ್ನು ಶ್ರೀ ಎಸ್ ಎಸ್. ಕೊಳ್ಕೆಬೈಲ್, ಎಂ ಎಲ್ ಎ ಅವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದರು ಶ್ರೀಗಳಾದ ಎಂ ಎಂ ಹೆಗ್ಡೆ ಗಣಪತಿ ಭಟ್, ಸುಬ್ರಾಯ ಕಬ್ಬೂರ ಮೊದಲಾದವರು ಮಾತನಾಡಿದ ಮೇಲೆ ವಿದ್ಯಾರ್ಥಿಗಳ ಪರವಾಗಿ ಶ್ರೀ ಸುಬ್ರಾಯ ಉರಳರು ಬೆಳ್ಳಿಯ ಬಟ್ಟಲಲ್ಲಿ ಭಿನ್ನವತ್ತಳೆಯನ್ನರ್ಪಿಸಿದರು

ಬೆಳ್ತಂಗಡಿ ಹೊಳೆ ತೀರದಲ್ಲಿ ದಕ್ಷಿಣಚಿ ಎಂಬಲ್ಲಿ ಇದೇ ತಾ. 23ನೇ ಸಂಜೆ ಮದ್ರಾಸಿನ ಗವರ್ನರ್ ಶ್ರೀ ಶ್ರೀ, ಪ್ರಕಾಶರವರ ನೇತೃತ್ವದಲ್ಲಿ ಓಟದ ಕೋಣಗಳ ಸ್ಪರ್ಧೆ ನಡೆಯುವುದು, ಗವರ್ನರರು ಬಹುಮಾನ ವಿತರಣೆ ಮಾಡುವರು

ವಿವಾಹ ಸಮಾರಂಭಗಳು— ಶ್ರೀ ಧರ್ಮಪರೇಲ್ ರಾಮಯ್ಯ ಭಂಡಾರಿಗಳ ಪುತ್ರ ಶ್ರೀ ಜನಾರ್ದನ ಭಂಡಾರಿಯವರು ಶ್ರೀ ಕೊಳ್ಕೆಬೈಲು ಸಂಕಯ್ಯ ಹೆಗ್ಗಡೆಯರ ಪುತ್ರಿ ಸೌ| ದ್ರಾಕ್ಷಾಯಿಣಿಯನ್ನು ತಾ 8 4 53ರಂದು ಮಂಗಳೂರು ಜ್ಯೋತಿ ಓ ಟೀಸಿನಲ್ಲಿ ವಿಜೃಂಭಣೆಯಿಂದ ವಿವಾಹವಾದರು

ಶ್ರೀ ಯು ಶೇಷಗಿರಿಯವರ ಪುತ್ರರಾದ ಶಿವರಾಮನವರು ಶ್ರೀ ಪಿ ಹರಿಶ್ಚಂದ್ರರಾಯರ ಪುತ್ರಿ ಸೌ| ವಸಂತಿಯನ್ನು ತಾ 6-4-53ರಲ್ಲಿ ಮಂಗಳೂರು ಜಪ್ಪಿನಲ್ಲಿ ವಧುವಿನ ಗೃಹದಲ್ಲಿ ವಿವಾಹಮಾಡಿಕೊಂಡರು

ದ ಕ ನಿ ಭಾ ವೈದ್ಯ ಸಂಘದ— ಪ್ರತಿನಿಧಿಗಳು ಇದೇ ತಾ. 6 ಲ್ಲಿ ಜಿಲ್ಲಾ ಕಲೆಕ್ಟರರನ್ನು ಕಂಡು, ಆಯುರ್ವೇದದ ವೈದ್ಯರು ಲೈಸೆನ್ಸು ಫೀಸಹಿತ ಅರ್ಜಿ ಕಳುಹಿಸಿದರೆ, ಅದಾಗಿ ಅವರ ಲೈಸೆನ್ಸು ಊರ್ಜಿತಗೊಳಿಸಲ್ಪಡಬೇಕೆಂದು ರೆವಿನ್ಯೂ ಬೋರ್ಡಿನ ಹುಕುಮು ತರಿಪ್ಪದೂ, ಪುರ್ನ್ಯಾರಿನ ವೈದ್ಯರಿಗೆ ಲೈಸೆನ್ಸು ಹಸ್ತಗತವಾಗಿಲ್ಲವೆಂಬ ನೆಪದಿಂದ ಪ್ರತಿಬಂಧಿಸಿದವರು ಅಸವಾರಿಷ್ಟಗಳನ್ನು ಉಪಯೋಗಿಸಕೂಡದೆಂದು ಆತಂಕಿಸುತ್ತಿರುವುದು ತೀರ ಅನ್ಯಾಯವೆಂದು ವಿವರಿಸಿದ್ದಕ್ಕೆ ಸಕಾಲದಲ್ಲಿ ಅರ್ಜಿ ಮಾಡಿದವರಿಗೆ ಯಾವ ಆತಂಕಿಸದಂತೆ ಹುಕುಮು ಮಾಡುವುದಾಗಿಯೂ ಎಲ್ಲಾ ಲೈಸೆನ್ಸುಗಳನ್ನು ಎರಡು ದಿನಗಳೊಳಗೆ ಹೊರಡಿಸುವುದಾಗಿಯೂ ಭರವಸೆ ಕೊಟ್ಟರು

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

Tre Moolky Bank Ltd.,
Moolky, S K.

ಮಂಗಳೂರು

ಟೆಲಿಫೋನ್ ಎಕ್ಸ್‌ಚೇಂಜ್ ಮಳಿಗೆ ಉದ್ಘಾಟನೆ— ಮಂಗಳೂರಲ್ಲಿ ಹೊಸತಾಗಿ ಕಟ್ಟಿದ ಮಂದಿರದಲ್ಲಿ ನವೀನರೀತಿಯ ಟೆಲಿಫೋನ್ ಯಂತ್ರಗಳನ್ನು ಜೋಡಿಸಿದ್ದು ಅದರ ಉದ್ಘಾಟನೆಯು ತಾ. ೪ರಂದು ಸಂಜೆ ಪಾರ್ಲಿಮೆಂಟ್ ಸದಸ್ಯರಾದ ಶ್ರೀ. ಕೆ. ಸದಾನಂದ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಅದೇ ಸಂದರ್ಭದಲ್ಲಿ ಮಂಗಳೂರು ವರ್ತಕರ ಸಂಘದವರು ಕೊಟ್ಟ ಗಾಂಧೀಜಿಯವರ ಭಾವಚಿತ್ರದ ಅನಾವರಣವೂ ಅವರ ಮೂಲಕವೇ ನಡೆಯಿತು.

ಸಭಾರಂಭದಲ್ಲಿ ಶ್ರೀ. ಬಿ ವಿ. ಬಾಳಿಗರು ವಂದೇ ಮಾತರಂ ಹಾಡಿದ ಮೇಲೆ ಪೋಸ್ಟ್ ಮಾಸ್ಟರ್ ಜನರಲ್ ಮೇಜರ್ ಎಸ್. ರಾಜನ್ ಅವರು ಅಂಚೆ ಖಾತೆಯ ಪರವಾಗಿ ಎಲ್ಲರನ್ನೂ ಸ್ವಾಗತಿಸಿದರು. ಸರಕಾರದ ಟೆಲಿಫೋನ್ ಟೆಲಿಗ್ರಾಫ್ ಪತ್ರ ಟಪಾಲುಗಳ ವಿಚಾರವಾದ ಪ್ರಗತಿಯನ್ನು ವಿವರಿಸಿದರು. "ಸ್ವಾತಂತ್ರ್ಯೋದಯದಲ್ಲಿ 1,15,000 ಟೆಲಿಫೋನುಗಳು ಕೆಲಸಮಾಡುತ್ತಿದ್ದರೆ ಈಗ 2,00,000 ಟೆಲಿಫೋನುಗಳು ಇದೇ ದೇಶದಲ್ಲಿ ಕೆಲಸಮಾಡುತ್ತಿವೆ. ಮೊದಲು 32 ಕೋಟಿ ರೂಪಾಯಿಯ ಬಂಡವಾಳ ಹಾಕಿದ್ದರೆ ಈಗಿನ ಮೊತ್ತವು ಅದರ ಇಮ್ಮಡಿಯಾಗಿದೆ. ಈಗ ಪ್ರತಿ ವರ್ಷಕ್ಕೆ 30,000 ಹೆಚ್ಚು ಟೆಲಿಫೋನುಗಳನ್ನೊದಗಿಸುವುದು ಸರಕಾರದ ಧೋರಣೆಯಾಗಿದೆ. ಸರಕಾರವು ಈಗಲೇ ಬೆಂಗಳೂರು ಮತ್ತು ಚಿತ್ತರಂಜನ ನಗರಗಳಲ್ಲಿ ಇದಕ್ಕೆ ಸಂಬಂಧಿಸಿದ ಫ್ಯಾಕ್ಟರಿ ತೆರೆದಿರುತ್ತದೆ. ಜಿಲ್ಲಾ ಕೇಂದ್ರಗಳಲ್ಲೂ 30 ಸಾವಿರಕ್ಕಿಂತ ಹೆಚ್ಚು ಜನ ಸಂಖ್ಯೆಯಿರುವ ಪಟ್ಟಣಗಳಿಗೂ ಟೆಲಿಫೋನ್ ಸೌಕರ್ಯವೊದಗಿಸುವುದು ಸರಕಾರದ ಉದ್ದೇಶವಾಗಿದೆ. ಇದಲ್ಲದೆ ವ್ಯಾಪಾರ ವಿಶೇಷವಿರುವಲ್ಲಿಯೂ ಟೆಲಿಫೋನ್ ಮಂದಿರ ತೆರೆಯಲಾಗುವುದು. ಕುಂದಾಪುರ ಮತ್ತು ಕಾಂಞಂಗಾಡ ಗಳಲ್ಲಿ ಸದ್ಯದಲ್ಲೇ ತೆರೆಯುವುದು ವ್ಯಾಪಾರದ ಸೌಕರ್ಯಕ್ಕಾಗಿಯೇ. ಈಗ ನಮ್ಮ ದೇಶದಲ್ಲಿ 604 ಟೆಲಿಫೋನ್ ಎಕ್ಸ್‌ಚೇಂಜ್‌ಗಳೂ 1819 ಸಾರ್ವಜನಿಕ ಕರೆಯ ಮಂದಿರಗಳೂ ಇವೆ. ಈ ಪೈಕಿ ಮದ್ರಾಸು ವೃತ್ತದಲ್ಲಿ 109 ಟೆಲಿಫೋನು ಮಂದಿರಗಳೂ 441 ಸಾರ್ವಜನಿಕ ಕರೆಯುವ ಮಂದಿರಗಳೂ ಇವೆ. ಈ ಜಿಲ್ಲೆಯಲ್ಲಿ ಇತ್ತೀಚೆಗೆ ಮೂಲ್ಕಿ, ಕಾರ್ಕಳ, ಬಂಟ್ವಾಳ ಮತ್ತು ಕಾಸರಗೋಡುಗಳಲ್ಲಿ ಸಾರ್ವಜನಿಕ ಕರೆಯ ಮಂದಿರಗಳನ್ನು ತೆರೆಯಲಾಗಿದೆ. ಗಂಗೊಳ್ಳಿ, ಬಂಟ್ವಾಳ, ಪುತ್ತೂರುಗಳಲ್ಲಿ ಸದ್ಯದಲ್ಲೇ ತೆರೆಯಲಾಗುವುದು. ನಮ್ಮ ದೇಶದಲ್ಲಿ 3600 ಟೆಲಿಗ್ರಾಫ್ ಆಫೀಸುಗಳಿವೆ. ಇವುಗಳಲ್ಲಿ 950 ಮದ್ರಾಸು ವೃತ್ತದಲ್ಲೇ ಇವೆ. 50000 ಕ್ಕಿಂತಹೆಚ್ಚು ಜನರಿರುವ ಕೇಂದ್ರಗಳಿಗೆಂದು ಟೆಲಿಗ್ರಾಫ್ ಕಛೇರಿಯೊದಗಿಸುವುದು ಸರಕಾರದ ಧೋರಣೆ. 2000ಕ್ಕಿಂತ ಹೆಚ್ಚು ಜನರಿರುವ ಹಳ್ಳಿಗೊಂದು ಅಂಚೆ ಮಂದಿರ ಒದಗಿಸುವುದು ಸರಕಾರದ ಕಾರ್ಯಕ್ರಮವಾಗಿದೆ. ಈ ಯೋಜನೆಯಂತೆ ಈ ಜಿಲ್ಲೆಯಲ್ಲಿ ಈ ವರ್ಷ 15 ಅಂಚೆ ಮನೆಗಳನ್ನೂ ತೆರೆಯಲಾಗಿದೆ. ದಕ್ಷಿಣ ಕನ್ನಡದ 803 ಗ್ರಾಮಗಳಲ್ಲಿ 2000 ಜನಸಂಖ್ಯೆಯ ಗ್ರಾಮಗಳು 183 ಇವೆ. ಇವುಗಳಲ್ಲಿ 5 ಬಿಟ್ಟು ಉಳಿದವುಗಳಿಗೆಲ್ಲ ಅಂಚೆ ಮನೆವೊದಗಿಸಲಾಗಿದೆ. ಉಳಿದ 5 ಗ್ರಾಮಗಳಿಗೂ ಸದ್ಯದಲ್ಲೇ ಒದಗಿಸಲಾಗುವುದು ಎಂದು ಹೇಳಿದರು.

ಅನಂತರ ಡಿವಿಜನಲ್ ಇನ್ಸ್‌ಪೆಕ್ಟರ್ ಶ್ರೀ ಕೃಷ್ಣ ಸ್ವಾಮಿಯವರು ಈ ಸಮಾರಂಭಕ್ಕೆ ಬಂದ ಶುಭ ಸಂದೇಶಗಳನ್ನು ಓದಿದರು. ಶ್ರೀಗಳಾದ ಎ. ಉಮಾನಾಥ ರಾವ್, ಬಿ. ವೈಕುಂಠ ಬಾಳಿಗ, ಕೆ. ಸೂರ್ಯನಾರಾಯಣ ಅಡಿಗ, ಎಸ್. ನರ್ಸಪ್ಪಯ್ಯ ಮೊದಲಾದವರು ಈ ಮಂದಿರದ ಕಾರ್ಯ ಪೂರೈಸಿದ್ದಕ್ಕಾಗಿ ಸರಕಾರನ್ನು ಅಧಿಕಾರಿಗಳನ್ನು ಅಭಿನಂದಿಸಿದರು. ಅಂಚೆ ಮತ್ತು ತಂತಿ ಕೆಲಸಗಾರರ ಸಂಘದ ಕಾರ್ಯದರ್ಶಿಗಳು ಮಾತಾಡಿದರು. ಅಧ್ಯಕ್ಷರು ಭಾಷಣದಲ್ಲಿ ಈ 5 ವರ್ಷಗಳಲ್ಲಿ ನಮ್ಮ ದೇಶದಲ್ಲಾದ ಅಂಚೆ ಮತ್ತು ತಂತಿ ಖಾತೆಯಲ್ಲಿ ಕೆಲಸಗಳನ್ನು ನಿರೂಪಿಸಿದರು. ಕೊನೆಯಲ್ಲಿ ಟೆಲಿಗ್ರಾಫ್ ಇನ್ಸ್‌ಪೆಕ್ಟರ್ ಶ್ರೀ ಎಸ್. ಆರ್ ಪಿಳ್ಳೆಯವರು ಅಭಿನಂದಿಸಿದರು.

ಅಂಚೆ ಕಛೇರಿಯ ಕೆಲಸಗಾರರ ವಾರ್ಷಿಕ ಮಹಾಸಭೆಯು ತಾ. 7ರಂದು ಸಂಜೆ ಶ್ರೀ. ಬಿ ಗಂಗಾಧರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪೋಸ್ಟ್ ಮಾಸ್ಟರ್ ಜನರಲ್ ಮೇಜರ್ ಸಿ ವಿ ರಾಜನ್ನರು ಕೇಂದ್ರವ ನನ್ನು ನಡೆಸುವ ಕುರಿತು. ಸಲಹೆ ಇತ್ತರು; ಬಳಿಕ ಕೆಲವು ರಂಜನೆಗಳಾಗಿ ಕಾರ್ಯ ಕಾರೀ ಸಮಿತಿಯ ರಚನೆಯಾಯಿತು.

ಅಂಚೆ ಮತ್ತು ತಂತಿ ಕೆಲಸಗಾರರ ಸಂಘದ ಮನವಿ—ಯೊಂದನ್ನು ತಾ. 9ರಲ್ಲಿ ಸಂಘದ ಶಿಷ್ಟ ಮಂಡಲವು ಶ್ರೀ ಬಿ. ಗಂಗಾಧರ ರಾವ್‌ರ ನಾಯಕತ್ವದಲ್ಲಿ ಪೋಸ್ಟ್ ಮಾಸ್ಟರ್ ಜನರಲ್‌ರವರನ್ನು ಕಂಡು ಅರ್ಪಿಸಿತು.

ಒಂದು ಲಕ್ಷ ನಲ್ವತ್ತು ಸಾವಿರದ ವಂಚನೆ—

ಹುಜೂರು ಟ್ರೆಜರಿಯಿಂದ ಒಂದು ಲಕ್ಷ 40 ಸಾವಿರ ರೂಪಾಯಿಗಳ ವಂಚನೆ ನಡೆದಿದೆ. ಆ ಬಗ್ಗೆ ಅಲ್ಲಿನ ಕ್ಲರ್ಕ್ ಶ್ರೀ ಎ ರೋಬರ್ಟ್ಸ್ ಮತ್ತು ಶ್ರೀ ವೈದ್ಯನಾಥ ಐಯ್ಯರ್ ಎಂಬಿಬ್ಬರನ್ನು ಕೈದು ಮಾಡಲಾಗಿದೆ. ಇವರಿಬ್ಬರಲ್ಲದೆ ಇನ್ನು ಇಬ್ಬರ ಬಂಧನವಾಗಿ ಜಾಮೀನಿನ ಮೇಲೆ ಬಿಡಲಾಗಿದೆ. ಮಂಗಳೂರು ಪೋಲೀಸ್ ಇನ್ಸ್‌ಪೆಕ್ಟರ್ ಶ್ರೀ ಕೆ. ವಿ. ನಾಲ್ಕರು ಈ ಕುರಿತು ತನಿಖೆ ನಡೆಸುತ್ತಿದ್ದಾರೆ.

ಈ ಘಟನೆಯ ಸಂಬಂಧ ಈ ತನಕ ನಡೆದ ವಿಚಾರಣೆಯಿಂದ ಇಷ್ಟು ಅಂಶಗಳು ತಿಳಿದು ಬರುತ್ತವೆ. ಹುಜೂರು ಕಛೇರಿಯ ಕ್ಲರ್ಕ್‌ರಾದ ರಾಬರ್ಟ್ಸ್ ಎಂಬವರು 'ಮಿಲಿಟರಿ ಪೆನ್ಶನ್‌ದಾರರ ಹೆಸರಲ್ಲಿ ಮೋಸದ ಪೆನ್ಶನ್ ಕಾಗದ ಪತ್ರಗಳನ್ನು ತಯಾರಿಸಿ ಅವುಗಳ ಆಧಾರದ ಮೇಲೆ ಪ್ರತಿ ತಿಂಗಳು ಬೇರೆ ಬೇರೆ ಮೊಬಲಗನ್ನು ಪಡೆಯುತ್ತಿದ್ದರಂತೂ, ಇದೇ ಎಪ್ರಿಲ್ ತಾ. 1ರಂದು ರೂ. 12,000 ಪಡೆಯಲಿಕ್ಕೆ ಬಿಲ್ಲು ಕೊಟ್ಟಾಗ ಕಛೇರಿಯ ಶಿರಸ್ತೇದಾರರಿಗೆ ಸಂಶಯ ಬಂದು, ವಿಚಾರಿಸಿದಾಗ ಈ ವಿಷಯ ಬಯಲಾಯಿತೆಂದು, ಇದೇ ಪ್ರಕಾರ ಹಿಂದೆ ಕೆಲವು ವರ್ಷಗಳಿಂದ ಈ ರೀತಿಯ ವಂಚನೆ ನಡೆಯುತ್ತಿದ್ದಿತೆಂದೂ ಹೇಳಲಾಗುತ್ತಿದೆ.

ಈ ಪ್ರಕರಣದ ತನಿಖೆಯನ್ನು ನಡೆಸುತ್ತಿರುವ ಪೋಲೀಸ್ ಇನ್ಸ್‌ಪೆಕ್ಟರರು ಕೆ. ವಿ. ನಾಲ್ಕರು ರೋಬರ್ಟ್ಸ್‌ರ ಮನೆಶೋಧ ಮಾಡಿದಾಗ ಸುಮಾರು ಆರು ಸಾವಿರ ರೂಪಾಯಿ ಬೆಲೆಬಾಳುವ ಚಿನ್ನಬೆಳ್ಳಿಯ ಸಾಮಾನು, ಒಂದು ರೇಡಿಯೊ ಮತ್ತು ರೂಪಾಯಿ 72000ದ ನೋಟುಗಳು, ಬ್ಯಾಂಕಿನ ರಶೀದಿ ಹಾಗೂ ಇತರ ಕಾಗದ ಪತ್ರಗಳು ದೊರಕಿದುವಾಗಿ ತಿಳಿದು ಬರುತ್ತದೆ.

— ಪ್ರಕಟಣೆ —

ಉಡುಪಿ ತಾಲೂಕು ಹೆಗ್ಗುಂಜೆ ಗ್ರಾಮದಲ್ಲಿರುವ ಹೊಸಮನೆ ದಾರಮ್ಮ ಹೆಗ್ಗಡ್ತಿಯವರ ಮಕ್ಕಳು ಚಂದಮ್ಮ ಹೆಗ್ಗಡ್ತಿಯು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ:-

ನನ್ನ ನನ್ನ ಅಣ್ಣ ರಾಮಣ್ಣ ಹೆಗ್ಡೆ ವಗೈರೆಯವರು ಪಕ್ಷದ ಆಸ್ತಿ ಬಗ್ಗೆ ಖಾಲಿನ ವಿಷಯ ನನ್ನ ತಾಯಿ ದಾರಮ್ಮ ಹೆಗ್ಗಡ್ತಿ, ಅಕ್ಕ ... ನನ್ನು ಹೆಗ್ಗಡ್ತಿ ವಗೈರೆಯವರ ಮೇಲೆ ವ್ಯಾಜ್ಯ ಮಾಡುವ ಅಗತ್ಯ ನನಗೂ, ನನ್ನ ಅಣ್ಣ ರಾಮಣ್ಣ ಹೆಗ್ಡೆಗೂ ಅಗತ್ಯವಾಗಿ ಒರಿಜಿನಲ್ ಸೂಟು ನಂಬ್ರ 206/51ನೆಗೂ ಮತ್ತು ಜೀವನಾಂಶದ ಬಗ್ಗೆ ನನ್ನ ಮಾವ ಮುದ್ದಯ್ಯ ಹೆಗ್ಡೆ ವಗೈರೆಯವರ ಮೇಲೂ ಕುಂದಾಪುರದ ಡಿ. ಮುನ್ಸಿಫ್ ಕೋರ್ಟಿನಲ್ಲಿ ನಂಬ್ರ 644/51ನೆಗೂ ದಾಖಲೆ ಮಾಡಿದ ವ್ಯಾಜ್ಯದಲ್ಲಿ ದಾವೆಯ ಪ್ರಕಾರ ನನ್ನ ಅಣ್ಣ ಮತ್ತು ಹೆಗ್ಡೆ ನಾನು ಕೂಡಾ ಖರ್ಚು ಮಾಡಿ ವ್ಯಾಜ್ಯದಾಖಲೆ ಮಾಡುವೆನೆಂತ ನಿರ್ಧಯಿಸಿ ವ್ಯಾಜ್ಯದಾಖಲೆ ಮಾಡಿದ್ದೇವೆ. ಸದ್ರಿ ವ್ಯಾಜ್ಯದ ಖರ್ಚಿನ ಬಗ್ಗೆ ನಾನು ನನ್ನ ಬೆಲೆಬಾಳುವ ಚಿನ್ನ ವ ಸರ ವಗೈರೆ ಮಾರಿ 2000 ರೂಪಾಯಿಯಷ್ಟನ್ನು ನನ್ನ ಅಣ್ಣನ ವಶ ಅವನಿಗೆ ಕೊಟ್ಟುದಲ್ಲದೆ ನಾನು ನನ್ನ ಗಂಡ ಕೂಡಾ ಕೆಲವು ಸಗ್ರಿ ಹಣವು ಕೂಡಾ ಕೊಟ್ಟಿರುತ್ತೇವೆ ಸದ್ರಿ ವ್ಯಾಜ್ಯದ ಬಗ್ಗೆಯೆಂತಲೂ ಸದ್ರಿ ರಾಮಣ್ಣ ಹೆಗ್ಡೆಯವರು ಖಾಲಿ ವ ಬರೆದ ಕಾಗದದಲ್ಲಿ ಅಗಾಗ ನನ್ನ ಎಡ ಹೆಬ್ಬೆಟ್ಟಿನ ಮುದ್ರೆಯನ್ನು ನನ್ನ ತಂದೆ ಶೀನ ಹೆಗ್ಡೆಯವರ ಹೇಳಿಕೆಯಿಂದ ಹಾಕಿ ಕೂಡಾ ಕೊಟ್ಟಿರುತ್ತೇನೆ. ಇತ್ತಲಾಗಿ ಸದ್ರಿ ರಾಮಣ್ಣ ಹೆಗ್ಡೆಯು, ಶೀನ ಹೆಗ್ಡೆಯೂ, ನನ್ನ ತಾಯಿ ದಾರಮ್ಮ ಹೆಗ್ಗಡ್ತಿ ವಗೈರೆ ಒಂದಾಗಿ ಖಾಸಗಿಯಿಂದ ಪಾಲು ಮಾಡಿ ನನಗೆ ಬರುವ ಆಸ್ತಿಯಲ್ಲಿ ಹೆಚ್ಚಿನ ಅಂಶ ರಾಮಣ್ಣ ಹೆಗ್ಡೆಗೆ ಕೊಡುವುದಾಗಿಯೂ, ಚಂದಮ್ಮ ಹೆಗ್ಗಡ್ತಿ ಪಾಲಿಗೆ ಅವಳ ಲಾಭವಾಗಿ ಪಾಲುಮಾಡಿ ಕೊಡುವುದಕ್ಕೆ ನಿಶ್ಚಯಿಸಿರುವುದಕ್ಕೆ ನಾನು ಒಪ್ಪದೆ ಇರುವುದರಿಂದ ಸದ್ರಿ ರಾಮಣ್ಣ ಹೆಗ್ಡೆಯು, ನೀನು ಒಪ್ಪಲೇಬೇಕು, ಇಲ್ಲವಾದರೆ ನಿನ್ನಿಂದ ಪಡೆದ ಹೆಬ್ಬೆಟ್ಟು ಕಾಗದದಲ್ಲಿ ರಿಕಾರ್ಡು ತಯಾರಿಸುವೆನೆ. ನನ್ನ ಮೇಲೆ ವ್ಯಾಜ್ಯ ಮಾಡುತ್ತೇನೆಂತ ಭಯ ಪಡಿಸುತ್ತಾರೆ. ಆದುದರಿಂದ ಮೇಲೆ ಹೇಳಿದ ರೀತಿ ವೃತರ್ಣೆ ಗೋಚರವೆಂತ ನನ್ನಿಂದ ಪಡೆದ ಎಡ ಹೆಬ್ಬೆಟ್ಟು ನ ಬಿಳಿಮೆ ರಿಕಾರ್ಡಿನ ಆಧಾರದ ಮೇಲೆ ಏನಾದರೂ ನನ್ನ ಮೇಲೆ ಯಾರಾದರೂ ರಿಕಾರ್ಡು ತಯಾರಿಸಿ, ರಾಮಣ್ಣ ಹೆಗ್ಡೆ, ಅವನ ಸ್ನೇಹಿತರು ಅಕ್ರಮ ಲಾಭ ಪಡೆಯಲು ವಿರುದ್ಧ ಮಾಡಿದರೆ ಸದ್ರಿ ಹೆಬ್ಬೆಟ್ಟಿನ ಬಿಳಿಮೆ ರಿಕಾರ್ಡಿನಿಂದ ಏನ್ನನ್ನಾದರೂ ಪ್ರಯೋಜನ ಸಿಕ್ಕಲಾರದೆಂಬ ಸಂಗತಿ ಈ ಮೂಲಕ ಪ್ರಕಟನೆ ಮಾಡಿರುತ್ತೇನೆ. ಸರ್ವರೂ ತಿಳಿದಿರಬೇಕು

॥ ಈ ಗುರುತು ಎಡ ಹೆಬ್ಬೆಟ್ಟು ಚಂದಮ್ಮ ಹೆಗ್ಗಡ್ತಿ ರುಜು. 8-4-53

ದಿ ವಿಜಯಾ ಬೇಂಕ್ ಲಿಮಿಟೆಡ್, ಕಾಪು.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಆಸಾಮಿಗಳು ಈ ಬೇಂಕಿನಿಂದ ಚಿನ್ನಾಭರಣಗಳ ಆಧಾರದ ಮೇಲೆ ಪಡಕೊಂಡ ಈ ಕೆಳಗೆ ನಮೂದಿಸಿದ ಸಾಲಗಳ ಅಸಲು ವ ಬಡ್ಡಿ ಇತ್ಯಾದಿಗಳನ್ನು ಬೇಂಕಿನ ಕ್ರಮಪ್ರಕಾರ ನೋಟೀಸು ವ ರಿಜಿಸ್ತ್ರಿ ನೋಟೀಸು ಕೊಟ್ಟಾಗ್ಯೂ, ಕೂಡಾ ಬಾಕಿ ಮಾಡಿಕೊಂಡಿರುವುದಲ್ಲದೇ ಕೆಲವರಿಗೆ ಕೊಟ್ಟ ನೋಟೀಸು ವ ರಿಜಿಸ್ತ್ರಿ ನೋಟೀಸು ಕಾರಣಾಂತರದಿಂದ ವಾಪಾಸು ಬಂದಿರುವುದರಿಂದಲೂ ಸದ್ರಿ ... ಬೇಂಕಿಗೆ ಸಲತಕ್ಕ ಸಂಪೂರ್ಣ ಐವೇಜುಗಳನ್ನು ಇದೇ ಬರುವ ತಾರೀಕು 20-4-1953ನೇ ಸೋಮವಾರದ ಒಳಗೆ ಸಲ್ಲಿಸದೆ ಇದ್ದಲ್ಲಿ ಸದ್ರಿ ಸಾಲಗಳಲ್ಲಿ ಅಡವಿಟ್ಟ ಆಭರಣಗಳನ್ನು ಇದೇ ತಾರೀಕು 25-4-1953ನೇ ಶನಿವಾರ ಪೂರ್ವಾಹ್ನ ಘಂಟೆ 11ಕ್ಕೆ ಯಾ ಬೇಂಕಿಗೆ ಯುಕ್ತ ತೋರುವ ಇನ್ನಿತರ ದಿನಗಳಲ್ಲಿ ಪುನಃ ನೋಟೀಸು ಕೊಡದೆನೇ ಈ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುದು. ಏಲಮ್ಮಿನಲ್ಲಿ ಹುಟ್ಟಿ ಬಂದ ಐವೇಜು ಸಾಲದ ಮೊಬಲಗಿಗೆ ಕಡಿಮೆ ಬಂದಲ್ಲಿ ಸಂಬಂಧಪಟ್ಟವರ ಮೇಲೆ ವ್ಯಾಜ್ಯದ್ವಾರಾ ಬಾಕಿ ಐವೇಜನ್ನು ವಸೂಲು ಮಾಡಲಾಗುವುದೆಂತ ತಿಳಿದಿರುವುದು

ತಾರೀಕು	ಸಾಲದ ನಂಬ್ರ	ಸಾಲ ಪಡೆದವರ ಹೆಸರುಗಳು	ರೂ.	ಆ
9—5—50	607/50	ಐ ಆನಂದ ಭಟ್ಟ, ಶ್ರೀನಿವಾಸ ಮಗ, ಇನ್ನಂಜೆ ಗ್ರಾಮ, ಪೋಸ್ಟು ಇನ್ನಂಜೆ	33	8
೨-12 50	2084/50	ಗೋವಿಂದ ಸೇರ್ಮೆಗಾರ, ಕುಂಜಮ್ಮರ ಮಗ, ಮಲ್ಲಾರು ಗ್ರಾಮ, ಪೋಸ್ಟು ಮಲ್ಲಾರು	10	6
18-7—51	796/51	ಪಿಟ್ಟು ಪೂಜಾರಿ, ನಕ್ರ ಪೂಜಾರಿಯ ಅಳಿಯ, ಇನ್ನಂಜೆ ಕೇವಲ ಸೆ, ಪೋಸ್ಟು ಇನ್ನಂಜೆ	26	15
15-9—51	1133/51	ರಾಮ ಭಟ್ಟ, ಗಣಪತಿಭಟ್ಟನ ಭಟ್ಟ ಮಗ, ಏಣಗುಡ್ಡೆ ಗ್ರಾಮ, ಪೋಸ್ಟು ಕಾಪು	35	0
6-10—51	1241/51	ಕೃಷ್ಣರ್ ಶಿವೇಲ, ವೈದಿನ್ ಸಾಹೇಬರ ಮಗ, ಕಟಪಾಡಿ, ಪೋಸ್ಟು ಕಾಪು	13	15
4—1 52	2/52	ಶ್ರೀನಿವಾಸ ಭಟ್ಟ, ವಾಸು ಭಟ್ಟ ಮಗ, ಪಾದಂಬು ಮುಂಡರಮನೆ, ಇನ್ನಂಜೆ ಗ್ರಾಮ, ಪೋಸ್ಟು ಇನ್ನಂಜೆ	101	12
23-1- 52	56/52	ಶ್ರೀನಿವಾಸ ಭಟ್ಟ, ವಾಸು ಭಟ್ಟ ಮಗ, ಪಾದಂಬು ಮುಂಡರಮನೆ, ಇನ್ನಂಜೆ ಗ್ರಾಮ, ಪೋಸ್ಟು ಇನ್ನಂಜೆ.	101	7

K. Sitarama Shetty,
Agent.

Date 11-4-1953.

ಅಮೃತಾಂಜನ

ಶಿರೋವೇದನೆ, ಉಳುಕು ಕುತ್ತಿಗೆ ಭುಜ ಹಲ್ಲು ಎದೆ ನೋವುಗಳಿಗೂ ಗಾಯಗಳು, ಚಾಕುಕೊಳ್ಳುವುದು ಚೇಳುವಿಷ ಪಸುಂತಾಮರವು, ವಕ್ಷವಾತ, ನೆಗಡಿ ನೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧಿ.

ಮಳು ಕಡ್ಡಿ ಮಮ್ಮ ನಮ್ಮ ಲ್ಲಿ ಸಿಕ್ಕು ತ್ತದೆ.

REGD.

ಅಮೃತಾಂಜನ ಲಿಮಿಟೆಡ್

ಮದರಾಸು ಬೊಂಬಾಯಿ ಮತ್ತು ಕಲ್ಕತ್ತ

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಜೆಟ್ಟಿ, ತಾಪ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ರಿಟೇಲು ಕ್ರಯಕ್ಕೆ ಸಿಗುತ್ತವೆ.

ಕಲ್ಯಾಂಜೆ ವ್ಯಾಪಾರಸ್ಥರು

ರಥಬೀದಿ ಉಡುಪಿ

ಪಂಚವಾರ್ಷಿಕ ಯೋಜನೆಗೆ ಜನತಾ ಸಹಕಾರ

೩ನೇ ಪುಟದಿಂದ)

ಅರ್ಥಶೂನ್ಯವಾದ ಮಾತಲ್ಲ-ಉದಾಹರಣೆಗೆ ಕೃಷಿ ಕ್ಷೇತ್ರದಲ್ಲಿ ಉತ್ಪಾದನೆ ಹೆಚ್ಚಬೇಕು, ಸಾಮಾಜಿಕರಂಗದ ಸುಧಾರಣೆಗೆ ಅವಕಾಶ ದೊರೆಯಬೇಕು ಎನ್ನುವಾಗ ಜನರು ಸ್ವತಃ ದುಡಿದೇ ಈ ಗುರಿ ಸಾಧಿಸಬೇಕೆನ್ನುವುದು ಸ್ಪಷ್ಟವಿದೆ. ಯೋಜನಾ ಆಯೋಗದ ಸಲಹೆ ಹಾಗು ಹಿತನುಡಿಗಳನ್ನು ಮನ್ನಿಸಿ ಜನರು ಕೃಷಿಕ್ಷೇತ್ರದಲ್ಲಿ ಹಾಗು ಗ್ರಾಮಾಭಿವೃದ್ಧಿ ಪ್ರಯತ್ನಗಳಲ್ಲಿ ಸಹಕರಿಸದಿದ್ದರೆ, ಸರಕಾರೀ ಪ್ರಯತ್ನ ವ್ಯರ್ಥವೆನಿಸೀತು.

— ೨ —

ಖಾಸಗಿ ಪ್ರಯತ್ನಗಳು ನಿಃಸ್ವಾರ್ಥ ದೃಷ್ಟಿಯಿಂದ ಕೂಡಿದ್ದರೆ ಪ್ರಜಾಪ್ರಭುತ್ವದ ಯಶಸ್ಸಿಗೆ ಅವುಗಳು ತುಂಬ ನೆರವಾಗುತ್ತವೆ. ಸ್ವಯಂಸೇವಕರ ತಂಡಕ್ಕೆ ತಂಡವೇ ಪ್ರತಿಯೊಂದೂ ಹಳ್ಳಿಯಲ್ಲಿ ಕಾರ್ಯ ತತ್ಪರವಾಗುವಂತಾದರೆ-ನಮ್ಮನ್ನು ಇಂದು ದಿಗ್ಭ್ರಮೆಗೊಳಗುಮಾಡಿರುವ ಅನೇಕ ಸಮಸ್ಯೆಗಳು ದೂರಾಗುತ್ತವೆ. ನೀರಾವರಿ, ಶಾಲಾ ಕಾಲೇಜುಗಳ ರಚನೆ, ಗೃಹೋದ್ಯಮಗಳಿಗೆ ಪ್ರೋತ್ಸಾಹ ಮುಂತಾದೆಲ್ಲ ಕಾರ್ಯ ಪ್ರಣಾಳಿಯಲ್ಲಿ ಸಾರ್ವಜನಿಕ ಸಹಕಾರಕ್ಕೇನೆ ಪ್ರಾಶಸ್ತ್ಯ; ಸರಕಾರೀ ನೆರವಿಗೆ ಗೌಣಸ್ಥಾನ. ಹಳ್ಳಿಯ ಅಭಿವೃದ್ಧಿಗೆ ಧನ ಸಹಾಯದ ಅಗತ್ಯವಿದೆಯೆಂಬುದನ್ನು ಮನಗಂಡ ಯೋಜನಾ ಆಯೋಗ ೧೫ ಕೋಟಿ ರುಪಾಯಿಗಳನ್ನು ಬೇರೆಯೇ ತೆಗೆದಿಟ್ಟಿದೆ. ಜನರು ಸ್ವಯಂಸ್ಫೂರ್ತಿಯಿಂದ ಸ್ಥಳೀಯ ಅಭಿವೃದ್ಧಿ ಕಾರ್ಯವನ್ನಿಟ್ಟುಕೊಂಡಲ್ಲಿ ಸರಕಾರ ಈ ನಿಧಿಯಿಂದ ನೆರವು ಕೊಡುತ್ತದೆ. ಇವರಲ್ಲಿ ಯಾವ ರಾಜಕೀಯ ಪಕ್ಷಕ್ಕೂ ಭೇದ ತೋರಿಸದೆ, ಎಲ್ಲ ಪ್ರಯತ್ನಗಳನ್ನೂ ರಾಷ್ಟ್ರೀಯ ಹಿತದ ದೃಷ್ಟಿಕೋಣದಿಂದ ನೋಡಲಾಗುವುದು. ಇಂಥ ಪ್ರಯತ್ನಗಳಲ್ಲಿ ಡಾಕ್ಟರರು, ವಕೀಲರು, ಉಪಾಧ್ಯಾಯರು, ವಿದ್ಯಾರ್ಥಿಗಳು ತಂತ್ರಜ್ಞರು, ಅಧಿಕಾರಿಗಳು, ಸಾಮಾಜಿಕ ಕಾರ್ಯಕರ್ತರು ಮುಂತಾದವರೆಲ್ಲರೂ ಕರ್ತವ್ಯ ಭಾವನೆಯಿಂದ ಮಾಡಬಹುದಾದ ಕೆಲಸಗಳು ಹಲವಿವೆ. ಪಂಚವಾರ್ಷಿಕ ಯೋಜನೆಯು ಕೆಲವೇ ನಿರ್ದಿಷ್ಟ ಕ್ಷೇತ್ರಗಳಲ್ಲಿ ಮತ್ತು ಪ್ರದೇಶದಲ್ಲಿ ಅಭಿವೃದ್ಧಿಯ ರೂಪರೇಖೆಯನ್ನು ನಿರ್ದೇಶಿಸುತ್ತದೆ ಉಳಿದ ಕಡೆಗಳಲ್ಲಿ ಜನರು ಸ್ವಯಂ ಪ್ರೇರಣೆಯಿಂದ ಯೋಜನಾ ಆಯೋಗದ ಮಾರ್ಗದರ್ಶಿತ್ವದಂತೆ ರಚನಾತ್ಮಕ ಕಾರ್ಯಗಳನ್ನು ಕೈಗೊಳ್ಳತಕ್ಕುದೆಂದು ಯೋಜನಾ ಆಯೋಗ ಅಪೇಕ್ಷಿಸುತ್ತದೆ. ಸ್ಥಳೀಯ ಜನರ ಇಂಥ ಸಾಹಸವು ಜನತಾ ಸಾಮರ್ಥ್ಯದ್ಯೋತಕವಾಗಿ ಮುಂದಿನ ಪೀಳಿಗೆಗೆ ಆದರ್ಶವೆನಿಸಬಲ್ಲುದು. ಇಂಥ ಪ್ರಯತ್ನಗಳಿಗೆ ಪ್ರೋತ್ಸಾಹ ನೀಡುವುದಕ್ಕಾಗಿ ೬ ಕೋಟಿ ರುಪಾಯಿಗಳನ್ನು ಯೋಜನಾ ಆಯೋಗ ಮೀಸಲಿರಿಸಿದೆ. ಮಾತ್ರವಲ್ಲ ಜನತಾ ಸಹಕಾರದ ಕುರಿತು ರಾಷ್ಟ್ರೀಯ ಸಲಹಾ ಮಂಡಳಿಯನ್ನೂ ಭಾರತ ಸೇವಕ ಸಮಾಜದಂಥ ಸಂಘಟನೆಯನ್ನೂ ರಚಿಸಿದೆ.

ಸ್ವೀಕಾರ—ವಿಮರ್ಶೆ

ಹಸಿದ ಹಂಬಲ (ಕಾದಂಬರಿ)- ಬರೆದವರು: ಎಂ. ಹರಿದಾಸ ರಾಯರು. ಪ್ರಕಾಶಕರು: ಸರ್ವೋದಯ ಸಾಹಿತ್ಯ ಮಾಲೆ, ಹುಬ್ಬಳ್ಳಿ. ಬೆಲೆ. ರೂ ೧-೮-೦

ಇದು ಆಧ್ಯಾತ್ಮಿಕ ಹಿನ್ನೆಲೆಯನ್ನು ಇಟ್ಟುಕೊಂಡು ಬರೆದ ಸುಂದರ ಕಾದಂಬರಿಯಾಗಿದೆ. ಜರ್ಮನಿಯ ಹೆರ್ಮನ್ ಹೆಸ್ಸೇರವರು ಬರೆದಿರುವ ಸಿದ್ಧಾರ್ಥನೆಂಬ ಕಥೆಯೇ ಇದಕ್ಕೆ ಮೂಲಾಧಾರವೆಂದು ಲೇಖಕರ ಮಾತುಗಳಿಂದ ತಿಳಿಯುತ್ತದೆ ಆದರೆ ಈ ಕಾದಂಬರಿಯನ್ನು ಓದುವಾಗ ಸ್ವತಂತ್ರವಾದ ಕೃತಿ ಪಠಣದ ಅನುಭವವಾಗುತ್ತದೆ ಲೇಖಕರು ಗಹನವಾದ ಆಧ್ಯಾತ್ಮ ತತ್ವಗಳನ್ನು ತಿಳಿಯಾದ ಶಬ್ದಗಳಲ್ಲಿ ಮತ್ತು ಕಥೆಯನ್ನು ಸುಲಲಿತವಾದ ಶೈಲಿಯಲ್ಲಿ ಹೇಳಿರುವರು. ಈ ಕಥೆಯ ನಾಯಕನು ಸಿದ್ಧಾರ್ಥನೆಂಬವನಾದರೂ ಗೌತಮ ಬುದ್ಧನಲ್ಲ—ಅವನ ಸಮಕಾಲೀನ ಮಾತ್ರ. ಬಾಲ್ಯದಲ್ಲಿ ಜ್ಞಾನದಾಹವುಳ್ಳವನಾಗಿ ಸನ್ಯಾಸಾಶ್ರಮವನ್ನು ಸಿದ್ಧಾರ್ಥ ಸ್ವೀಕರಿಸಿದ ಶರೀರ ಸ್ಥಿತಿಯನ್ನು ಮುಟ್ಟಲು ಸುಖ ದುಃಖಗಳಿಂದ ಅತೀತನಾಗಲು, ಮೋಹಪಾಶಗಳಿಂದ ಅಲಿಪ್ತನಾಗಲು ಹಾಗು ಅಹಂ ಭಾವದ ಅವಸಾನವಾಗಲು ಅವನಪೇಕ್ಷೆ. ಯೋಗಾಭ್ಯಾಸದಲ್ಲಿ ಅವನು ಸಾಕಷ್ಟು ಪ್ರಾವೀಣ್ಯವನ್ನು ಪಡೆದರೂ ಅವನಿಗೆ ತಾನು ಸರಿದಾರಿಯಲ್ಲಿ ಮುನ್ನಡೆಯುತ್ತಿಲ್ಲವೆಂದು ಅನುಮಾನಿಕೆ ಮೂಡುತ್ತದೆ. ಸನ್ಯಾಸಿಗಳು ಮನಸ್ಸಿನ ಉದ್ವೇಗವನ್ನು ಸಂತೈಸುವುದಕ್ಕೆ ಕೆಲವು ತಂತ್ರಗಳನ್ನು ಹೇಳಿಕೊಟ್ಟು ವಂಚಿಸುತ್ತಾರೆಂದು ಅವನ ತಿಳಿವಳಿಕೆಗೆ ಬರುತ್ತದೆ, ಈ ಜಗತ್ತಿನಲ್ಲಿ ಪವಿತ್ರವಾದುದು ಬೇರೇನಿದೆ ಎಂದವನು ತನ್ನನ್ನು ಪ್ರಶ್ನಿಸಿಕೊಳ್ಳುತ್ತಿರುವಾಗ ಬುದ್ಧದೇವನ ಉದಯವಾಗಿದೆ ಎಂಬ ಸುದ್ದಿ ತಿಳಿದು ಅವನ ದರ್ಶನಕ್ಕೆ ಹೋಗುತ್ತಾನೆ- ಬುದ್ಧನ ತತ್ವೋಪದೇಶ ಕೇಳಿದ ಬಳಿಕವೂ ಅವನ ಸಂದೇಹ ದೂರಾಗುವುದಿಲ್ಲ. ಪ್ರಪಂಚವೆಲ್ಲ ಒಂದೇ ಮತ್ತು ಅದು ಸತ್ಯನಿತ್ಯವೆನ್ನುವ ಬುದ್ಧ ಈ ಪ್ರಪಂಚವನ್ನು ತೊರೆದು ಮೋಕ್ಷ ಸಾಧಿಸಬೇಕೆಂದು ಹೇಳುವವನಲ್ಲ ಎಂದವನು ಆಕ್ಷೇಪಿಸುತ್ತಾನೆ. ಬುದ್ಧನು ಇದಕ್ಕೆ ಹೇಳುವ ಸಮಾಧಾನ ಇದು—"ಜ್ಞಾನದಾಹವುಳ್ಳವರಿಗೆ ಈ ಪ್ರಪಂಚವನ್ನು ವಿವರಿಸುವುದು ನನ್ನ ಮಾತಿನ ಗುರಿಯಲ್ಲ. ದುಃಖದಿಂದ ಜನರನ್ನು ಮುಕ್ತರಾಗಿಸುವುದೇ ಗೌತಮನ ಬೋಧೆ". ಈ ಮಾತು ಸಿದ್ಧಾರ್ಥನನ್ನು ತೃಪ್ತನಾಗಿಸುವುದಿಲ್ಲ. ಅವನು ಸ್ವತಃ ಚಿಂತನೆಯಲ್ಲಿ ಮುಳುಗೇಳುತ್ತಾನೆ. ಆಗವನಿಗೆ ಒಂದು ವಿಚಾರ ಹೊಳೆಯುತ್ತದೆ— "ನನ್ನೊಳಗಿರುವ ಆತ್ಮ, ಚೈತನ್ಯ, ದೈವತ್ವ, ಸಂಪೂರ್ಣತ್ವಗಳನ್ನು ಅರಸುವುದಕ್ಕಾಗಿ ನನ್ನನ್ನು ನಾನು ನಾಶಮಾಡುತಿದ್ದೇನಲ್ಲ" ಎಂದೆನಿಸುತ್ತದೆ. ಈ ದೃಶ್ಯ ಪ್ರಪಂಚ ಮಾಯೆಯಲ್ಲ ಎಂಬ ಅನುಭವವಾಗುತ್ತದೆ. ಮಗುವಿನಂತೆ ಅವನು ಸೌಂದರ್ಯಾಪೇಕ್ಷಿಯಾಗಿ ಪ್ರಪಂಚವನ್ನು ವೀಕ್ಷಿಸುತ್ತಾನೆ, ಆದರಲ್ಲಿ ತನ್ಮಯನಾಗುತ್ತಾನೆ ಪ್ರಾಪಂಚಿಕ ಸುಳಿಯಲ್ಲಿ ಕಮಲಾ ಎಂಬ ಗಣಿಕೆಯ ಸಹವಾಸ ಲಾಭವೂ ಆಗುತ್ತದೆ. ಆಕೆ ಸಿದ್ಧಾರ್ಥನಿಂದ ಒಂದು ಮಗುವನ್ನು ಹಡೆಯುವಷ್ಟರೊಳಗೆ ಅವನು ಪೂರ್ವವಾಸನಾಪ್ರಭಾವದಿಂದ ಪಲಾಯನಗೈದು, ಒಬ್ಬ ದೋಣಿಕಾರನೊಡನೆ ಸಖ್ಯ ಬೆಳೆಸುತ್ತಾನೆ. ಅವನೊಂದಿಗೆ ದಿನಗಳೆದಂತೆ ಸಿದ್ಧಾರ್ಥನ ಲೋಕಾನುಭವ ಪಕ್ವವಾಗುತ್ತದೆ. ಅವನಿಗೆ ಆತ್ಮಜ್ಞಾನವಾಗುತ್ತದೆ. ದೊಡ್ಡ ತತ್ವಜ್ಞಾನಿಗಳು ಈ ಪ್ರಪಂಚವನ್ನು ತಿರಸ್ಕರಿಸಲು ಮುಂದೆ ಹೊರಟರೆ, ಸಿದ್ಧಾರ್ಥ ಅದನ್ನು ಪ್ರೀತಿಸುವುದು ಅವಶ್ಯ ಎಂಬ ನಿರ್ಣಯಕ್ಕೆ ಬರುತ್ತಾನೆ. ಇಂಥ ಸುಂದರ ಕಥೆಯನ್ನು ಹರಿದಾಸರಾಯರು ನಿರರ್ಗಳವಾಗಿ ಬರೆದಿರುವರು. ಲೋಕಕ್ಕೆ ಹೊಸಸಂದೇಶನೀಡುವ ಈ ಕಾದಂಬರಿಯನ್ನು ಎಲ್ಲರೂ ಓದಿ, ಮೆಚ್ಚಬೇಕು ನವ ಜೀವನ ದರ್ಶನದಿಂದ ಧನ್ಯರಾಗಬೇಕು.

In the High Court of Judicature at Madras.

Ordinary Original Civil Jurisdiction.

O. P. No. 73 of 1953.

In the matter of the Indian Companies Act
and
In the matter of the Agricultural and Industrial Bank, Ltd. Coondapoor.

The Agricultural and Industrial Bank, Ltd.—Petitioner.

By an order made by the High Court of Judicature at Madras in the above matter on the 6th day of April 1953, on the petition of the above Bank, the said Bank has been directed to be wound up by Court under the provisions of the Act, and the Official Receiver of South Kanara has been appointed the Official Liquidator of the Bank.

1—A, Thomas Road,
T. Nagar, Madras 17
6th April 1953

A. Narayana Pai,
Advocate for the Petitioner.

ಖಾತ್ರಿ ಚಿನ್ನದ ನೆಕ್‌ಲೇಸ್. ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ರಕ್ಷಣೆಗೂ ಉಳಿತಾಯ ವ್ಯವಸ್ಥೆಗೂ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್.

ಸ್ಥಾಪನೆ: 1934. ಪ್ರಧಾನ ಕಚೇರಿ: ಮದ್ರಾಸು.

66¾ ಲಕ್ಷಕ್ಕೂ ಮಿಕ್ಕಿದ ಹೊಸ ವ್ಯವಹಾರ, **15** ಲಕ್ಷಕ್ಕೂ ಮಿಕ್ಕಿದ ಪ್ರೀಮಿಯಮ್ ಉತ್ಪತ್ತಿ, **45**¾ ಲಕ್ಷಕ್ಕೂ ಮಿಕ್ಕಿದ ಜೀವವಿಮಾ ನಿಧಿ, **10**¾ ಲಕ್ಷಕ್ಕೂ ಮಿಕ್ಕಿದ ಮೂಲಗಳು. ಸಾಧಾರಣ **3** ಕೋಟಿಯಷ್ಟು ಊರ್ಜಿತದಲ್ಲಿರುವ ವಹಿವಾಟು.

ಪ್ರಗತಿಪರವಾದ ಈ ಕಂಪೆನಿಯಲ್ಲಿ ಒಂದು ಪೊಲಿಸಿ ಇರುವುದು ಉತ್ತಮ ಠೇವಣಾತಿ ಅಂತೆಯೇ ಇದರ ಏಜನ್ಸಿ ಇರುವುದು ಚಲೋ ವ್ಯವಹಾರ ಸಾಧನ.

ಉತ್ಸಾಹಿ, ಜನಾನುರಾಣೀಯ, ನವ ಸ್ತ್ರೀ ಪುರುಷರಿಂದ ಕಂಪೆನಿ ಪ್ರಾತಿನಿಧ್ಯದ ಬಗ್ಗೆ ಅರ್ಜಿಗಳು ಸ್ವಾಗತಾರ್ಹವು. ದಯಮಾಡಿ ಬರೆಯಿರಿ:-

ಜಿ. ಆರ್ ವಾಲ್ಕ, ಬ್ರಾಂಚ್ ಮೆನೇಜರ್,
ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು [ದ. ಕ.]

NOTICE

The Bombay Life Assurance Company, Limited

The notice having been given of the Loss of Policy No. 161183 on the life of SRI. PANGAL GOVINDRAO a duplicate policy will be issued and the claim will be settled thereunder unless objection is lodged with us within one month from this date.

K. Balasubrahmanyam.
Manager and Actuary.

Dated 9—4—1953.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. No 15/1953

1, ಹರಿಜನ ಬೊಗ್ಗಿ, ಹರಿಜನ ಕೊರಗನ ವಿಧವೆ

2. ಹರಿಜನ ಗುರುವ 3. ಹರಿಜನ ತುಕ್ರ 4. ಹರಿಜನ ನಾದು – 1ನೇ ಅರ್ಜಿದಾರ್ತಿ ಮಕ್ಕಳು-ಉಡುಪಿ ತಾಲ್ಲೂಕು ಶಿವಳ್ಳಿ ಗ್ರಾಮದ ಪೆರಂಪಳ್ಳಿಯಲ್ಲಿರುವವರು. ಅರ್ಜಿದಾರರು

ಈ ಮೂಲಕ ಸರ್ವರಿಗೂ ತಿಳಿಸುವುದೇನೆಂದರೆ,

1ನೇ ಅರ್ಜಿದಾರಳ ಮಗ-ಮ-2ರಿಂದ 4ನೆ ವರೆಗಿನ ಅರ್ಜಿದಾರರ ಸಹೋದರ ವ್ಯಕ್ತಿಯು, ಪಿ ನಾರಾಯಣನಿಗೆ ತಾ. 11-1-1950 ರಲ್ಲು ಜಿ. ಎಚ್. ಗೋವಿಂದರು ರೂ. 1000ಕ್ಕೆ ಬರಕೊಟ್ಟ ಡಿ. ಪ್ರೊ- ನೋಟಿನ ಬಾಬು ಅಸಲು ಬಡ್ಡಿ ಆದೇಯಗಳನ್ನು-ವಸೂಲು ಮಾಡುವರೆ. ತಾವೇ ಉತ್ತರವಾರಿಸ್ದಾರೆಂತಲೂ ಆ ಬಗ್ಗೆ ತಮಗೆ ಒಂದು ವಾರಿಸ್ ಸರ್ಟಿಫಿಕೇಟ್ ಕೊಡಿಸೋಣಾಗ ಬೇಕೆಂತಲೂ ಅಪೇಕ್ಷಿಸಿಟ್ಟು ಅರ್ಜಿದಾರರು ಮಾಡಿದ ಅರ್ಜಿಯು ತಾ. 30-5-1953ಕ್ಕೆ ಇಟ್ಟಿದೆ. ಈ ಬಾಬಿನಲ್ಲಿ ಯಾರಿಗಾದರೂ ಆಕ್ಷೇಪವಿದ್ದಲ್ಲಿ ಸದ್ರಿ ದಿನ ಪೂರ್ವಾಹ್ನ 10ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಅರ್ಜಿದಾರರ ಅಪೇಕ್ಷೆ ಮೇರೆಗೆ ತೀರ್ಮಾನಿಸಲಾದೀತು.

(ಕೋರ್ಟಿನ ಹುಕುಂ ಮೇರೆಗೆ)

ಯು. ಬಿ. ಕೃಷ್ಣ ರಾವ್.
ಅರ್ಜಿದಾರರ ಕಡೆ ವಕೀಲ್ಲರು

ಉಡುಪಿ ತಾ. 11-4-1953

ಮುಂದಿನ ಮೂರು ವರ್ಷಗಳ ವಿಕಾಸ ರೇಖೆ

(೨ನೇ ಪುಟದಿಂದ)

...ಲ್ವೆ ಉಳಿತಾಯ ಹೆಚ್ಚಿಕೊಂಡಲ್ಲಿ ಪ್ರಗತಿ ಶೀಘ್ರ ಸಾಧ್ಯವಾಗಲೂ ಅವಕಾಶವಿದೆ. ಯೋಜನಾ ಆಯೋಗವು ರೈಲ್ವೆಗಳ ಪುನಃಸ್ಥಾಪನಾ ಕಾರ್ಯಕ್ಕೆ ಅತ್ಯಧಿಕ ಪ್ರಾಶಸ್ತ್ಯವನ್ನು ಕೊಟ್ಟಿದೆ. ಅದರ ಜೊತೆಗೆ ತಾಂತ್ರಿಕ ಅಭಿವೃದ್ಧಿಯ ಕಾರ್ಯ ನೆರವೇರಬೇಕು. ಮೂರನೆಯ ಸ್ಥಾನವು ತೀರ ಅಗತ್ಯವೆಂದು ಕಂಡು ಬಂದ ರೈಲ್ವೆ ವಿಸ್ತರಣೆಗೆ ದೊರಕಿದೆ. ಈ ಪ್ರಾಶಸ್ತ್ಯಾನುಕ್ರಮದ ಕುರಿತು ನಾವೇನೂ ದೂರಿಕೊಳ್ಳಲಾರೆವು. ಏಕೆಂದರೆ ಹೊಸ ರೈಲ್ವೆಗಳ ಪ್ರಾಮುಖ್ಯಕ್ಕಿಂತಲೂ, ಇದ್ದುದನ್ನು ಯೋಗ್ಯ ರೀತಿಯಲ್ಲಿ ಕಾಪಾಡಿಕೊಂಡು ಬರುವುದು ಮಹತ್ವದ ಸಂಗತಿ. ಹಾಗೆಯೇ ಸಿಗ್ನಲು ನೀಡುವ ಸಲಕರಣೆಗಳು, ಇಂಜಿನು ಕಾರ್ಖಾನೆಗಳು, ಮುಂತಾದುವುಗಳಲ್ಲಿ ಅತ್ಯಾಧುನಿಕ ಕ್ರಮಗಳನ್ನು ಅನುಸರಿಸುವುದು ಅಂತಹದೇ ಆಗಿದೆ. ಇಂಥ ಆಧುನಿಕ ಪದ್ಧತಿಗಳನ್ನು ಅನುಸರಿಸಿದ್ದರಿಂದ ಈಗಾಗಲೇ ಕೆಲಮಟ್ಟಿಗೆ ಅಭಿವೃದ್ಧಿ ಗೋಚರಿಸಿದೆ. ೧೯೪೮-೪೯ರ ಅವಧಿಯಲ್ಲಿ ಓಡಾಡಿದಷ್ಟೇ ಇಂಜಿನು ಮತ್ತು ವಾಗೀನುಗಳು ೧೯೫೧-೫೨ರಲ್ಲಿ ಉಪಯೋಗಿಸಲ್ಪಟ್ಟರೂ ಅವುಗಳ ಸ್ಥಿತಿಯನ್ನು ಸುಧಾರಿಸಿದ್ದರಿಂದ ಸರಕು ಸಾಗಾಟದ ಮೈಲೇಜು ಶೇಕಡಾ ೫ರಷ್ಟು ಹೆಚ್ಚಿಕೊಂಡಿತು; ಪ್ರವಾಸದ ಮೈಲೇಜು ಶೇಕಡಾ ೧೭ರಷ್ಟು ಅಧಿಕವಾಯಿತು.

— ೫ —

ಈ ರೀತಿಯಲ್ಲಿ ರೈಲ್ವೆಗಳ ಶಕ್ತಿಸಾಮರ್ಥ್ಯ ಹೆಚ್ಚಿಕೊಳ್ಳುವುದಕ್ಕೆ ರೈಲ್ವೆಗಳ ಪ್ರತಿಯೊಂದು ಅಂಗೋಪಾಂಗದಲ್ಲೂ ಸುಧಾರಣೆ ನಡೆಸುವುದವಶ್ಯ. ಇಂಜಿನುಗಳನ್ನು ಪ್ರತಿಕ್ಷೇಪಿಸುವುದಾಗಲೀ ಹೊಸ ವಾಗೀನುಗಳನ್ನು ಪೂರೈಸುವುದಾಗಲೀ ಮಾರ್ಗದ ದುರಸ್ತಿಯಾಗಲೀ ಒಂದೊಂದೇ ರೈಲ್ವೆಯ ಅಭಿವೃದ್ಧಿಯನ್ನು ಸಾಧಿಸದು. ಹಾಗೆಯೇ ರೈಲ್ವೆಯಲ್ಲಿ ಕೆಲಸ ಮಾಡುವ ಜನರಿಗೆ ತಕ್ಕ ತರಬೇತಿಯನ್ನು ನೀಡದಿದ್ದರೆ, ಅಪೇಕ್ಷಿತ ಅಭಿವೃದ್ಧಿಯು ಸಿದ್ಧಿಸಲಿಕ್ಕಿಲ್ಲ. ಭಾರತೀಯರು ಕೆಲಸಗಾರರಿಂದೂ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಸಾಕಷ್ಟು ಉಪಯೋಗಿಸಿ ಪರಿಶ್ರಮದಿಂದ ದುಡಿಯುತ್ತಿಲ್ಲೆಂದೂ ದೂರುವ ರುಂಟು. ಆದರೆ ಶಕ್ತಿ ಸಾಮರ್ಥ್ಯಗಳಲ್ಲಿ ಹೆಚ್ಚಳವು ಸಾಧ್ಯವಾಗಲಿಕ್ಕೆ ಕಾರ್ಮಿಕರ ಊಟ ವಸತಿಗಳ ಅಂತಸ್ತು ಮೇಲೇರಬೇಕಾದದ್ದು ಅಗತ್ಯ. ಹೊಟ್ಟೆಗೆ ಸಾಕಷ್ಟು ಹಿಟ್ಟಿಲ್ಲದಿರುವಾಗ ಮತ್ತು ಮನಃಸಂತೃಪ್ತಿಗೆ ಆಸ್ಪದವಿಲ್ಲದಾಗ- ಮನುಷ್ಯ ಉತ್ಸಾಹ ಮತ್ತು ಉಲ್ಲಾಸದಿಂದ ದುಡಿಯುವುದೆಂತು? ಆದುದರಿಂದ ರೈಲ್ವೆಗಳ ಅಭಿವೃದ್ಧಿಯಲ್ಲಿ ನೌಕರರ ಯೋಗಕ್ಷೇಮ ಚಿಂತನೆಗೂ ಅವಕಾಶವಿರಬೇಕು. ಇವನ್ನೆಲ್ಲ ಗಮನದಲ್ಲಿಟ್ಟುಕೊಂಡು ವಿಸ್ತರಣಾ ಕಾರ್ಯಗಳನ್ನು ನೆರವೇರಿಸುವುದು ರೈಲ್ವೆ ಬೋರ್ಡಿನ ಕರ್ತವ್ಯ. ಪಂಚವಾರ್ಷಿಕ-ಯೋಜನೆಯು ಹಾಕಿಕೊಟ್ಟ ರೂಪರೇಷೆಯನ್ನನುಸರಿಸಿಕೊಂಡು, ಕೆಲವು ವಿಸ್ತರಣಾ ಕಾರ್ಯಗಳನ್ನು ಕೈಗೊಳ್ಳಲು ನಿರ್ಧರಿಸಿದ್ದು ಅವುಗಳಲ್ಲಿ ಬೆಜವಾಡ ಮತ್ತು ಮದ್ರಾಸು ನಗರಗಳ ನಡುವಿನ ರೈಲ್ವೆ ಓಡಾಟದಲ್ಲಿ ೪೦% ಹೆಚ್ಚಳವನ್ನು ಕೈಗೂಡಿಸುವುದೊಂದು. ಇದರಂತೆ ಭಾರತದಲ್ಲಿ ಉಕ್ಕಿನ ಕೈಗಾರಿಕೆಯು ವಿಸ್ತರಣ ಹೊಂದುತ್ತಿರುವುದರಿಂದ ಈ ಕಾರ್ಯದಲ್ಲಿ ಸಹಕರಿಸಲು ರೂರ್ಕೇಲಾ--ಮನೋಹರಪುರ ಮತ್ತು ಅದ್ರಾ--ಅಸನ್ ಸೋಲಗಳ ರೈಲ್ವೆ ಮಾರ್ಗಗಳನ್ನು ದ್ವಿಗುಣಿತ ಮಾಡುವ ಕಾರ್ಯಕ್ರಮವೂ ಇದೆ. ಕಲ್ಲಿದ್ದಲು ಪೂರೈಕೆಯು ಹೆಚ್ಚಬೇಕೆಂಬುದಕ್ಕಾಗಿ ಅನ್ನೂಪುರ--ಕಾಟ್ನಿ ಹಾಗು ಬರ್ಕಖಾನ-ಪೂರ್ವ ಸೋನ್ ದಂಡೆಯ ಮಾರ್ಗಾಭಿವೃದ್ಧಿಯನ್ನು ಮಾಡಬೇಕೆಂದಿದೆ. ಗಂಗಾ ನದಿಗೆ ಮೋಕಮೇಹದಲ್ಲಿ ಒಂದು ಬ್ರಾಡ್‌ಗೇಜ ಸೇತುವೆಯನ್ನು ಕಟ್ಟಲಾಗುವುದು. ಅಹಮ್ಮದಾಬಾದು — ಮೊಹಸಾನಾ ಮಾರ್ಗದ ಭಾಗವೊಂದನ್ನು ಇಮ್ಮಡಿ ಮಾಡಲಾಗುವುದು. ಪ್ರಾಮುಖ್ಯ ರೈಲ್ವೆ ಮಾರ್ಗಗಳಲ್ಲಿ ಸಿಗ್ನಲ್ಲಿಂಗ್ ಮುಂತಾದವುಗಳ ಉಪಕರಣಗಳನ್ನು ಅಭಿವೃದ್ಧಿಪಡಿಸುವುದಲ್ಲದೆ, ವಿದ್ಯುಚ್ಛಕ್ತಿಯ ಬಳಕೆಯನ್ನೂ ಹೆಚ್ಚಿಸಲು ನೋಡಲಾಗುವುದು.

— ೬ —

ರೈಲ್ವೆಗಳಲ್ಲಿ ಹಳೆಯ ಯಂತ್ರೋಪಕರಣಗಳ ಸ್ಥಾನದಲ್ಲಿ ಹೊಸದನ್ನು ಪ್ರತಿಕ್ಷೇಪಿಸುವ ಕೆಲಸವು ಕೆಲವು ವರ್ಷಗಳಿಂದ ಬಾಕಿಯುಳಿದಿದೆ. ೧೯೫೧ನೇ ಇಸವಿಯ ಮಾರ್ಚ ಆಖೈರಿಗೆ ಭಾರತೀಯ ರೈಲ್ವೆಗಳಲ್ಲಿ ೮೨೦೯ ಇಂಜಿನುಗಳು, ೧೯೧೯೩ ಪ್ರಯಾಣಿಕರ ಬಂಡಿಗಳು ಮತ್ತು ೨೦೫೪೮೦ ವಾಗೀನುಗಳು ಇದ್ದವು. ಇವುಗಳಲ್ಲಿ ೩೯೫೭ ಇಂಜಿನುಗಳು, ೯೧೭೬ ಪ್ರಯಾಣಿಕರ ಬಂಡಿಗಳು ಮತ್ತು ೭೩೩೭೧ ವಾಗೀನುಗಳು ಪಂಚವಾರ್ಷಿಕ ಯೋಜನೆಯ ಕೊನೆಗೆ ಹಳತಾಗಿ ಹೋಗುವುವು. ಅವುಗಳೆಂದ ಸಾಮಾನ್ಯ ಕೆಲಸಗಳನ್ನು ಸಹ ಈಗಿನ ಪ್ರಮಾಣದಲ್ಲಿ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಎಂತಲೇ ಹೊಸ ಯಂತ್ರೋಪಕರಣಗಳನ್ನು ಜೋಡಿಸುವುದವಶ್ಯ. ಇದರ ಅರ್ಥ ೧೦೦ ಹಳೆ ಇಂಜಿನುಗಳ ಸ್ಥಾನದಲ್ಲಿ ಅಷ್ಟೇ ಹೊಸ ಇಂಜಿನುಗಳು ಬೇಕೆಂದಲ್ಲ. ನವೀನ ಮಾದರಿಯ ಇಂಜಿನುಗಳು ಹಳೆಯ ಮಾದರಿಯದಕ್ಕಿಂತ ಅಧಿಕ ಸಾಮರ್ಥ್ಯದಿಂದ ಕೂಡಿವೆಯಾಗಿ ಹೊಸ ಇಂಜಿನು ಮುಂತಾದವುಗಳು ಸ್ವಲ್ಪ ಕಡಿಮೆ ಸಾಕಾದವು. ಈ ವ್ಯವಸ್ಥೆಯನ್ನು ಮಾಡಿಕೊಳ್ಳುವುದು ಕಠಿಣವೆನಿಸಲಿಕ್ಕಿಲ್ಲ. ಆದರೆ, ರೈಲ್ವೆಗಳ ವಿಸ್ತರಣೆಯೂ ಭರದಿಂದ ನಡೆಯಬೇಕಾಗಿರುವುದರಿಂದ ಸಮಾಧಾನದ ಉಸಿರೆಳೆಯಲು ಆತಂಕವೆನಿಸಿದೆ. ಈಗಿನ ಎಣಿಕೆಯಂತೆ ೧೦೩೮ ಹೊಸ ಇಂಜಿನುಗಳು, ೬೧೩೭ ಹೊಸ ಪ್ರಯಾಣಿಕರ ಬಂಡಿಗಳು ಮತ್ತು ೫೦೬೬೨ ವಾಗೀನುಗಳು ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಉಪಯೋಗಕ್ಕೊದಗುವುವು, ಅಷ್ಟೆ. ಇದರಂತೆಯೇ ಹೊಸ ಮಾರ್ಗಗಳ ನಿರ್ಮಾಣ ಕಾರ್ಯ ಕೂಡ ಹಿಂದುಳಿಯುವುದು ನಿಶ್ಚಯ. ನಮ್ಮ ಬೇಡಿಕೆ ಮಿತಿಮೀರಿದೆ, ಆದರೆ ಅದನ್ನು ಪೂರೈಸುವ ಸಾಧನಗಳ ಕೊರತೆ ಎನಿಸಿದೆ. ಹೊಸತಾಗಿ ತೈಲ ಶುದ್ಧೀಕರಣ ಗೃಹಗಳನ್ನು ತೊಡಗಿದಾಗ ಉತ್ತರ ಹಾಗು ದಕ್ಷಿಣ ಭಾರತಗಳನ್ನು ಜೋಡಿಸಬಲ್ಲ ಮೀಟರ್ ಗೇಜ ರೈಲ್ವೆ ಮಾರ್ಗದ ರಚನೆ ಅವಶ್ಯ. ಹಾಗೆಯೇ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಯ ದೃಷ್ಟಿಯಿಂದ ಹೊಸ ಲೈನುಗಳ ರಚನೆಯಾಗಬೇಕು. ಇಂಥೆಲ್ಲ ಕೆಲಸಗಳಿಗೆ ವರ್ಷ ವರ್ಷವೂ ಸ್ವಲ್ಪ ಹಣವನ್ನು ಪ್ರತ್ಯೇಕಿಸಿಡುವುದು ತುಂಬ ಒಳ್ಳೆಯದೆನಿಸುತ್ತದೆ. ಈಗಿನ ಧಾರಣೆಯಂತೆ, ಪ್ರತಿಯೊಂದು ಮೈಲು ರೈಲುಮಾರ್ಗಕ್ಕೆ ನಾಲ್ಕು ಲಕ್ಷ ರುಪಾಯಿಗಳ ವೆಚ್ಚ ಬರುತ್ತದೆ. ಸಾಧಾರಣ ರೀತಿಯ ಮಾರ್ಗ ರಚನೆಗಾಗಿ ಈ ವೆಚ್ಚ ೧೦ರಿಂದ ೧೫% ಕಡಿಮೆಯಾದೀತು. ಆದರೆ ಇಂಥ ಹೊಸ ಮಾರ್ಗಗಳು ಪ್ರಾರಂಭ ಆದಂದಿನಿಂದ ಹನ್ನೆರಡು ವರ್ಷಗಳವರೆಗೆ ಏನೇನೂ ಲಾಭ ತರುವುದಿಲ್ಲ. ಅಲ್ಲದೆ ಈ ಮಾರ್ಗಗಳ ಮೇಲೆ ಓಡಾಡಲು ಇಂಜಿನು, ಹೊಗೆಬಂಡಿ ಮುಂತಾದುವುಗಳ ವೆಚ್ಚ ಬೇರೆಯೇ ಇದೆ. ಪರ್ವತ ಪ್ರದೇಶಗಳ ಮೂಲಕ ಮಾರ್ಗ ಮಾಡುವುದಾಗುವಲ್ಲಿ, ಮೈಲಿಗೆ ೧೦ರಿಂದ ೧೫ ಲಕ್ಷ ರುಪಾಯಿ ಖರ್ಚಾದರೂ ಆಶ್ಚರ್ಯವಿಲ್ಲ.

— ೭ —

ಇವುಗಳಲ್ಲದೆ, ಕಲ್ಕತ್ತೆಯ ಆಸುಪಾಸಿನ ರೈಲ್ವೆಯಲ್ಲಿ ವಿದ್ಯುಚ್ಛಕ್ತಿಯ ಬಳಕೆ ತೀರ ಅಗತ್ಯವೆನಿಸಿದೆ. ಈ ವ್ಯವಸ್ಥೆಯನ್ನು ಕಲ್ಲಿದ್ದಲು ಗಣಿಗಳ ವರೆಗೆ ಓಡುವ ರೈಲ್ವೆಯಲ್ಲಿ ತರುವ ಇರಾದೆ ಇದೆ. ಹಾಗೆಯೇ ಮುಂಬಯಿ ಬಂದರದ ಸರಕುಸಾಗಾಟ ನಿರಾತಂಕವಾಗಿ ನೆರವೇರಬೇಕೆಂದಿದ್ದರೆ ಅಲ್ಲಿಯೂ ವಿದ್ಯುಚ್ಛಕ್ತಿಯನ್ನು ಬಳಸಬೇಕು. ಈ ಎಲ್ಲ ಸಮಸ್ಯೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ತರುವಾಯ ರೈಲ್ವೆ ಬೋರ್ಡಿನವರು ಮುಂದಿನ ಮೂರು ವರ್ಷಗಳಿಗೆ ಸಿಗುವ ೨೫೦ ಕೋಟಿ ರುಪಾಯಿಯನ್ನು ಈ ರೀತಿ ಹಂಚಿ ಹಾಕಿದರು —

(೧) ಸ್ವಾವಲಂಬನ ಹಾಗೂ ಪ್ರತಿಕ್ಷೇಪಣ ಕಾರ್ಯಕ್ಕೆ ೧೯೩ ಕೋಟಿ; (೨) ತಾಂತ್ರಿಕ ಅಭಿವೃದ್ಧಿ ಹಾಗು ಪ್ರಯಾಣಿಕರ ಸೌಕರ್ಯಕ್ಕೆ ೨೩ ಕೋಟಿ; (೩) ಈಗ ಕೈಗೊಂಡಿರುವ ಕೆಲಸಗಳನ್ನೊಳಗೊಂಡು ಹೊಸ ಮಾರ್ಗ ಮತ್ತು ವಿಸ್ತರಣ ಕಾರ್ಯಕ್ಕೆ ೩೦ ಕೋಟಿ, ಮತ್ತು (೪) ಇತರ ವೆಚ್ಚಗಳಿಗೆ ೪ ಕೋಟಿ ರುಪಾಯಿ.

ಇವುಗಳನ್ನು ನೋಡಿದಲ್ಲಿ ಪಂಚವಾರ್ಷಿಕ ಯೋಜನೆಯ ಪರಿಣಾಮವಾಗಿ ರೈಲ್ವೆಗಳು ಅಭಿವೃದ್ಧಿಯನ್ನು ಹೊಂದಿದರೂ ಜನರನ್ನು ತೃಪ್ತಿಗೊಳಿಸುವಷ್ಟರ ಮಟ್ಟಿಗೆ ಈ ಪ್ರಗತಿಯಾಗದು. ಈಗಿರುವ ರೇಶನಿಂಗ್ ಕ್ರಮವನ್ನು ಮುಂದೆಯೂ ಕೆಲವು ವರ್ಷ ಅನುಸರಿಸದೆ ಗತ್ಯಂತರವಿಲ್ಲ. ಹೀಗಿದ್ದರೂ ನಮ್ಮ ರೈಲ್ವೆ ಸಾಗಾಟದಲ್ಲಿ ಶೇಕಡಾ ೯೦ರಷ್ಟನ್ನು ಸುಲಭವಾಗಿ, ಹೆಚ್ಚಿನ ತ್ರಾಸ ಹಾಗು ತೊಂದರೆಗಳಿಲ್ಲದೆ ಪೂರೈಸಬಹುದು. ಉಳಿದ ೧೦%ದಷ್ಟನ್ನಾದರೂ ರೈಲ್ವೆಗಳ ಹೊಣೆಯ ಮೇಲೆ ಬಿಟ್ಟರೆ, ನಿಧಾನವಾಗಿ ಈ ಸಾಗಾಟವೂ ನೆರವೇರಬಲ್ಲುದು. ಆದರೆ ಕೆಲವು ವಾಣಿಜ್ಯ ಸಂಸ್ಥೆಗಳು ಬಯಸುವಂತೆ ಬೇಕೆಂದಾಗ ಬೇಕಾದಲ್ಲಿಗೆ ಬೇಕಷ್ಟು ರೈಲುಗಳನ್ನೋಡಿಸಲು ಅನುಕೂಲವಾಗುವಂತೆ ಕಾಯ್ದಿರಿಸಲು ಮಾತ್ರ ಎಂದಿಗೂ ಸಾಧ್ಯವಾಗದು. ವಿವಿಧೋದ್ದೇಶದ ಅಣೆಕಟ್ಟುಗಳು ಕಬ್ಬಿಣ ಮತ್ತು ಉಕ್ಕಿನ ವ್ಯಾಪಕ ಉತ್ಪಾದನೆ, ಅನೇಕ ಹೊಸ ಕಾರ್ಖಾನೆಗಳು, ಕುಶಿಜೋತ್ಪನ್ನ ಕೇಂದ್ರಗಳು ಮುಂತಾದುವೆಲ್ಲ ಪಂಚವಾರ್ಷಿಕ ಯೋಜನೆಯ ... ವಾಗಿ ಅಸ್ತಿತ್ವಕ್ಕೆ ಬರುವುದರಿಂದ, ಅವುಗಳ ಜೊತೆಗೆ ರೈಲ್ವೆಗಳೂ ಹೆಚ್ಚು ಬೆಳೆಯಬೇಕೆನ್ನುವುದು ನ್ಯಾಯ. ಇದಕ್ಕಾಗಿ ರೈಲ್ವೆಗೆ ಸಂಬಂಧಿಸಿದ ಸರಕುಗಳ ಹೊಸ ಪೂರೈಕೆಗೆ ಈಗಾಗಲೇ ದೇಶದೊಳಗಿನ ಉತ್ಪಾದಕ ಕೇಂದ್ರಗಳೊಡನೆ ಆರ್ಡರು ಕೊಟ್ಟು ಆಗಿದೆ. ಈ ಕಾರ್ಖಾನೆಗಳು ಪೂರ್ಣ ಕೆಲಸಮಾಡಿದರೂ ನಮಗೆ ಸಾಕಾಗದೆ, ವಿದೇಶಗಳಿಂದ ೫೦೦ ಹೊಸ ಇಂಜಿನುಗಳು ಮತ್ತು ೨೦೦೦೦ ವಾಗೀನುಗಳನ್ನು ಆಯಾತ ಮಾಡಿಕೊಳ್ಳುವ ಪ್ರಸಂಗ ಬಂದಿದೆ. ಈ ಆಮದು ಸಾಧ್ಯವಾಗದಿದ್ದಪಕ್ಷದಲ್ಲಿ— ಪಂಚವಾರ್ಷಿಕ ಯೋಜನೆಯಲ್ಲಿ ಅಪೇಕ್ಷಿಸಿದ ಅಧಿಕ ಉತ್ಪಾದನೆಯನ್ನು ಹೊತ್ತು ಸಾಗುವುದು ರೈಲ್ವೆಗಳಿಗೆ ಸಾಧ್ಯವಾಗದ ಹೋದೀತು.

— —

‘ಗೋಪಾಲ ಭೇಷಜಾಶ್ರಮ” ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ.

ಇವರ

ನವಜೀವಾತು

ಎಂಬ

ಸೂತಿಕಾರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಧುರಂಧರ ರಸಾಯನ.



ಹೆಚ್ಚಿನ ಮಾಹಿತಿಗೆ— ಡಾ| ಯಂ. ಸಿ. ಶಾಸ್ತ್ರೀ, ಯಲ್. ಐ. ಎಂ.
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:— ಡಾ| ಐ. ಕೆ ಶಿವರಾಮರಾವ್, ಕುಂಜಿಬೆಟ್ಟು.

ಚಂದಾಹಣ ಬಾಕಿ ಇರುವವರು ನಾವು ಕಳುಹಿಸುವ ವಿ. ಪಿ. ಪಿ.ಯನ್ನು ದಯಮಾಡಿ ಸಕಾಲದಲ್ಲಿ ಪಡಕೊಳ್ಳುವಂತೆ ವಿನಂತಿ

ಬಹುಮುಖ ಅಭಿರುಚಿ

(೧ನೇ ಪುಟದಿಂದ)

ಬಹುದಲ್ಲ ಎಂದು ನೀವನ್ನಬಹುದು. ಆದರೆ ನಾವು ಕೈಗೂಡದ ಆಶೆಯ ಬೆನ್ನು ಮಾತ್ರ ಹತ್ತಬೇಕೇ? ನಮ್ಮ ಕೈಯಿಂದಾಗಬಲ್ಲ ಬೇರೆ ಅನೇಕ ಸಂಗತಿಗಳಿಲ್ಲವೆ? ಉದಾಹರಣೆಗೆ ದಿನಾಲೂ ನೀವು ನಡೆದುಕೊಂಡೇ ಆಫೀಸಿಗೆ ಹೋಗುತ್ತೀರಾದರೆ, ತಿಂಗಳಿಗೆ ಒಂದೆರಡು ದಿನ ಸಿಟಿ ಬಸ್ಸಿನಲ್ಲಿ ಪ್ರಯಾಣಿಸಿರಿ. ಇದೊಂದು ಹೊಸ ಅನುಭವ; ಅಥವಾ ಸೈಕಲು ಹತ್ತಿಹೋಗಿರಿ. ಸಿನೇಮಾ ಕಂಪೆನಿಯ ನೌಕರರು ನೀವಾಗಿದ್ದರೆ, ಬಳಿಯ ಕಾರ್ಖಾನೆಯೊಂದನ್ನು ಸಂದರ್ಶಿಸಿ, ಹೊಸ ಅನುಭವ ಹಾಗೂ ಸಂತೋಷಪಡೆಯಬಲ್ಲಿರಿ. ಪೇಟೆ ಪಟ್ಟಣದಲ್ಲಿ ಕುಳಿತುಕೊಳಿತಿದ್ದರೆ, ಎರಡು ದಿನ ಹಳ್ಳಿಯ ಪ್ರವಾಸ ಕೈಗೊಳ್ಳಿರಿ. ವ್ಯಾಪಾರದಲ್ಲಿಯೇ ಮುಳುಗಿಹೋದವರು ನೀವಾಗಿದ್ದರೆ, ಆದಿತ್ಯವಾರ ದಿನ ಮನೆಯಲ್ಲಿ ವಿರಾಮವಾಗಿ ಕುಳಿತು ಮಡದಿ ಮಕ್ಕಳೊಡನೆ ಚಕ್ಕಂದವಾಡಿರಿ ಅಭ್ಯಾಸಕ್ಕಾಗಿ ದಪ್ಪ ದಪ್ಪ ಪುಸ್ತಕ ಓದಿ ಬೇಜಾರುಬಂದ ವಿದ್ಯಾರ್ಥಿಯಾದ ಪಕ್ಷದಲ್ಲಿ-ನೀವು ಅ. ನ. ಕೃಷ್ಣರಾಯರ ಕಾದಂಬರಿಯನ್ನು ಶರಣೆನ್ನಬಹುದು. ಇವಕ್ಕೆಲ್ಲ ನೀವು ಪಡುವ ಕಷ್ಟ, ಅದು ಕೊಡುವ ಸುಖದ ದೃಷ್ಟಿಯಿಂದ ತೃಣಸಮಾನವೆನ್ನುತ್ತೇನೆ.

ಆದರೆ ಇಂಥವೆಲ್ಲ ಹುಚ್ಚಾಟಗಳಿಗೆ ಗಮನಕೊಡಲು ನನಗೆ ಸಮಯವೆಲ್ಲಿದೆ? ನನಗೆ ನನ್ನ ಕೆಲಸವೇ ಹೆಚ್ಚಾಗಿದೆ ಎಂದು ನೀವು ದೂರಿಕೊಳ್ಳುವುದಾದಲ್ಲಿ--ನಿಮಗೊಂದು ಎಚ್ಚರಿಕೆಕೊಡುವುದವಶ್ಯ. ಇಂಗ್ಲೀಷಿನಲ್ಲಿ "ನಿಮ್ಮೆಲ್ಲ ತತ್ತಿಗಳನ್ನು ಒಂದೇ ಬುಟ್ಟಿಯಲ್ಲಿಡಬೇಡ" ಎಂದು ಗಾದೆ ಮಾತಿದೆ. ಎಲ್ಲಿಯಾದರೂ ಆ ಬುಟ್ಟಿ ಕೈ ತಪ್ಪಿ ನೆಲಕ್ಕೆ ಬಿದ್ದರೆ ನಿಮ್ಮೆಲ್ಲ ತತ್ತಿಗಳೂ ನಾಶಹೊಂದುವವು! ಬುಟ್ಟಿ ಕೆಳಗೆ ಬೀಳುವ ಪ್ರಸಂಗ ನೂರರಲ್ಲಿ ಒಂದಿರಬಹುದು. ಆದರೆ ಅದು ಬೀಳುವುದಿಲ್ಲೆಂದು ಗ್ಯಾರಂಟಿ ಯಾರು ಕೊಟ್ಟಿದ್ದಾರೆ? ಇದರಂತೆಯೇ ನೀವು ನಿಮ್ಮೆಲ್ಲ ಭಾವನೆಗಳನ್ನು ಒಂದೇ ವಸ್ತುವಿನಲ್ಲಿ ಕೇಂದ್ರೀಕರಿಸಿ ಇಡುವುದು ಸುಖಜೀವನಕ್ಕೆ ಘಾತಕವಾದ ಪ್ರವೃತ್ತಿ. ಉದಾಹರಣೆಗೆ ತನ್ನ ಮಗನ ಮೇಲೆ ಅತ್ಯಂತ ವಾತ್ಸಲ್ಯವುಳ್ಳ ತಾಯಿ, ಮಗನನ್ನು ಕಾಲೇಜಿಗೆ ಮಂಗಳೂರಿಗೆ ಕಳಿಸಿಕೊಡುವಾಗ ಕಣ್ಣೀರ ಕಾಲುವೆ ಹರಿಸಿಯಾಳು. ಆ ಮಗನು ಮನೆಯಿಂದ ದೂರಾದ ಒಳಿಕ ಈ ತಾಯಿ ನೆಲೆತಪ್ಪಿದವಳಂತಾಗುವಳು. ಇದು ಚೆಂದವೆ? ತಮ್ಮ ಅಧಿಕಾರಾವಧಿಯು ಮುಗಿದು ಪೆನ್ಶನ್ ಪಡೆದ ಮಹನೀಯರನೇಕರು ತಮ್ಮ ವೃದ್ಧಾಪ್ಯದಲ್ಲಿ ದಿನದೂಡುವುದೇ ಕಷ್ಟವೆಂದುಕೊಳ್ಳುವರು. ಇದೆಲ್ಲ ಮನಸ್ಸನ್ನು ಏಕಮುಖವಾಗಿಟ್ಟುಕೊಂಡಿದ್ದರ ಪರಿಣಾಮ.

ಮನಸ್ಸನ್ನು ವಿವಿಧ ವಿಷಯಗಳಲ್ಲಿ ತೊಡಗಿಸಬೇಕೆಂಬುದಕ್ಕಾಗಿ, ನಮ್ಮ ಮುಖ್ಯ ವೃತ್ತಿಗೆ ತಿಲಾಂಜಲಿ ಕೊಡಬೇಕಾದ ಅಗತ್ಯವಿಲ್ಲ. ನಮ್ಮ ದೃಷ್ಟಿಯನ್ನು ಸ್ವಲ್ಪ ವಿಶಾಲವಾಗಿಟ್ಟುಕೊಂಡರೆ, ಅಷ್ಟೇ ಸಾಕು. ನಿಮ್ಮ ಮುಖ್ಯ ಪ್ರವೃತ್ತಿಗೆ ಪೋಷಕವಾಗಬಲ್ಲ ಅನೇಕ ಸಂಗತಿಗಳು ಇದ್ದೇ ಇವೆ. ಅವುಗಳನ್ನು ಕಂಡುಕೊಂಡು ಸವಿಯುವ ಸಾಮರ್ಥ್ಯ ಬೆಳೆಸಿಕೊಳ್ಳುವುದರಲ್ಲಿಯೇ ಜಾಣ್ಮೆ ಇದೆ. ನಮ್ಮ ಸುಖಜೀವನಕ್ಕೆ ಹೇತುವಾಗಬಲ್ಲವನಿದ್ದರೂ ಸರಿಯೆ—ಆ ಪ್ರತಿಯೊಂದರ ರುಚಿಯನ್ನೂ ಸವಿದೇ ನೋಡೋಣ. ನಮ್ಮ ನಿತ್ಯ ವ್ಯವಹಾರದಲ್ಲಿ ಈ ಬಗೆಯ ಬಹುಮುಖವಾದ ಅಭಿರುಚಿಯನ್ನು ಬೆಳೆಸಿಕೊಂಡ ಪಕ್ಷದಲ್ಲಿ—ವರ್ಷ ಕಳೆದಂತೆ ನಾವು ಬದುಕಿನ ಕುರಿತು ವಿಶಾಲಾನುಭವವುಳ್ಳ ನಾಗರಿಕರಾಗುತ್ತೇವೆ. ಜನರೊಡನೆ ನಯವಾಗಿ ಬೆರೆತು ಅವರ ಸ್ನೇಹ ಸಂಪಾದಿಸಿಕೊಳ್ಳಲು ಸಮರ್ಥರಾಗುತ್ತೇವೆ. ಇಂಥವರು ಯಾರ ಕೂಡೆಯೂ ನಿಸ್ಸಂಕೋಚವಾಗಿ ವ್ಯವಹರಿಸುವ ಚತುರರಾಗುತ್ತಾರೆ. ಇಂಥ ದೊಡ್ಡ ಮನಸ್ಸಿನ ದೊಡ್ಡ ಮನುಷ್ಯರಾಗಬೇಕೆನ್ನುವ ಆಸೆ ನಮ್ಮಲ್ಲಿ ಯಾರಿಗೆ ಇಲ್ಲ? ಆದರೊಂದು ಮಾತು— ನಾನು ದೊಡ್ಡವನಾಗಬೇಕೆಂದು ಬಯಸುವುದೂ, ನಿಜವಾಗಿ ದೊಡ್ಡವನಾಗುವುದೂ ಒಂದೇಯಲ್ಲ. ಅವುಗಳ ನಡುವೆ ವಿಶೇಷ ಅಂತರವಿದೆ. ಕೇವಲ ಮನಸ್ಸಿದ್ದರೆ ಸಾಲದು—ತಕ್ಕ ಕೆಲಸವನ್ನೂ ಕೈಗೊಳ್ಳಬೇಕು. ಹೊಸ ಸಾಹಸವೆಂದರೆ ಅಂಜುವ ಬುದ್ಧಿ ಇರಬಾರದು ಬಾಳ್ವೆಯು ಕ್ಷಣಕ್ಷಣಕ್ಕೂ ಹೊಸ ಮಿಂಚು ಮಿರುಗಿನಿಂದ ಕೂಡಿದೆ ಎಂಬುದನ್ನು ಮನಗಂಡು- ಅದರೊಡನೆ ಬೆರೆತು ಹೋಗುವ ಹವ್ಯಾಸವುಳ್ಳವರಾಗಬೇಕು. ಇಂಥ ಬಹುಮುಖವಾದ ಅಭಿರುಚಿ, ಸುಖಜೀವನ ಬೀಗದ ಕೈ ಇದ್ದಂತೆ.

— ಓಂ ತತ್ಸತ್||

ವಾರದ ಒಳಿತು ಕೆಡುಕುಗಳು

ತಾ. ೧೬—೪—೫೩ರಿಂದ ತಾ. ೨೨—೪—೫೩ರ ವರೆಗೆ.

ಮೇಷ— ನಿಮ್ಮ ಕರ್ಮಲಾಭ ಪತಿಯಾದ ಶನೈಶ್ಚರನು ವಕ್ರನಾಗಿ ಉಚ್ಚಯಸ್ಥಾನಕ್ಕೆ ಬರುವುದರಿಂದ ನಿಮ್ಮ ಸಾಂಸಾರಿಕ ತಾಪತ್ರಯಗಳೆಲ್ಲವು ಬಹುಮಟ್ಟಿಗೆ ನಿವಾರಣೆಯಾಗುವವು. ಭಾಗ್ಯಪತಿಯ ಅನುಗ್ರಹವು ದೊರೆತ ಕಾರಣ ಆರ್ಥಿಕ ಮುಗ್ಗಟ್ಟಿನಿಂದ ಮುಕ್ತರಾಗುವಿರಿ. ಪಿತ್ತೋಷ್ಣ ಪ್ರಕೋಪದಿಂದ ಆರೋಗ್ಯವು ಕೆಡಲಿದೆ ರಾಜಕೀಯ ಕಾರ್ಯಗಳಲ್ಲಿ ಯಶಃ ಇರದು ಸೇವಕ ಜನತೆಗೂ ವ್ಯಾಪಾರಿ ವೃಂದಕ್ಕೂ ಈ ವಾರವು ಸುಖ ನೆಮ್ಮದಿಕಾರಿಯಾಗಿರುವುದು. ತಾ. 18, 19, 20 ಈ ದಿನಗಳಲ್ಲಿ ನಿಮ್ಮ ಬಯಕೆಯು ಈಡೇರಲಿದೆ.

ವೃಷಭ— ಒಮ್ಮೆಗೇ ನಿಮ್ಮ ಜೀವನದಲ್ಲಿ ಅನೇಕ ಬದಲಾವಣೆಗಳಾಗಲಿವೆ. ಆಯಕ್ಕಿಂತ ದ್ವಿಗುಣವ್ಯಯವಾದೀತು. ಹೆಚ್ಚಿನ ಸಮಯವನ್ನು ಪೂರ್ಗತಿಕ್ರಮಣದಲ್ಲಿ ಕಳೆಯಬೇಕಾಗುವದು ಗೃಹತಾಪತ್ರಯಗಳು ಹೆಚ್ಚಿ ಸಂಕಟಪಡಿಸಲಿದೆ. ನೌಕರಿ ಜನರಿಗೆ ಅಧಿಕಾರಿ ವರ್ಗದವರ ಪೀಡೆ ಸಂಭವಿಸಲಿದೆ; ಮಕ್ಕಳ ಆರೋಗ್ಯದ ಕಡೆಗೆ ವಿಶೇಷ ಲಕ್ಷ್ಯವನ್ನಿಡಿರಿ. ಹಿಂದು ಮುಂದಿನ ವಿಮರ್ಶೆ ಮಾಡದೆ ಕಾರ್ಯರಂಗದಲ್ಲಿ ಧುಮುಕುವುದರಿಂದ ನಷ್ಟ ಸೋಲುಗಳಿಗೀಡಾಗಲಿರುವಿರಿ. ತಾ. 16, 17 21, 22, ಈ ದಿನಗಳಲ್ಲಿ ಭೋಗಲಾಭ ವಿಜಯಗಳು ಲಭಿಸುವವು.

ಮಿಥುನ—ನೀವೆಷ್ಟೇ ವಾಚಾಳಿಗಳಿದ್ದರೂ ಕೂಡ ಈ ವಾರದಲ್ಲಿ ವಾಕ್ಕಲಹ ಬೇರೆ ತಪ್ಪಲಾರದು. ಪರ್ಯಟನದಲ್ಲಿ ಅನೇಕ ತರದ ಕಷ್ಟನಷ್ಟಗಳೊದಗುವವು. ದೇಹಪೀಡೆ ಮನೋರೋಗಗಳಿಗೆ ಸಿಲುಕಿದ ನಿಮಗೆ ಬಂಧುಗಳು ಸೋದರ ವರ್ಗದವರಿಂದ ನೆರವು ಲಭಿಸುವುದು, ಚಂಚಲವಾದ ಮನಸ್ಸು ವಿಷಯಾದಿಗಳ ಕಡೆಗೆ ಸೆಳೆದು ನಷ್ಟ ಕಷ್ಟ ನಿಂದಾಪವಾದಗಳಿಗೆ ಗುರಿಮಾಡುವರು. ತಾ. 16, 17, 21, 22, ಈ ದಿನಗಳಲ್ಲಿ ಅಧಿಕವ್ಯಯ ಆಕಸ್ಮಿಕ ಪ್ರವಾಸ ವಾಕ್ಕಲಹಗಳುಂಟಾಗುವವು.

ಕರ್ಕಟ— ಬಹುಕಾಲದಿಂದ ಕಷ್ಟವನ್ನನುಭವಿಸಿದ ನೀವು ಇಂದು ಸುಖ ಸಂತಸದಲ್ಲಿ ನಲಿದಾಡಲಿರುವಿರಿ. ಜನತೆಯಲ್ಲಿ ಗೌರವಾದರಗಳನ್ನು ಪಡೆವಿರಿ. ಹಲವಾರು ವಿಧದಿಂದ ಧನಾಗಮನವಾಗುವದು. ನಿಮ್ಮ ಹಿಂದಿನ ದುಃಖದಾರಿದ್ರ್ಯಗಳು ನಾಶವಾಗಿ ಕೈಯಲ್ಲಿ ಸಾಕಷ್ಟು ಧನಸಂಗ್ರಹವಾಗುವದು. ನಿಮಗಿಂತ ಅಧಿಕ ಬಲ ಸಂಪನ್ನರಾದ ಶತ್ರುಗಳು ಇಂದು ನಿಮಗೆ ಶರಣು ಬರುವರು. ಹೆಚ್ಚೇಕೆ ಯಾವತರದ ಲೋಪದೋಷಗಳೂ ನಿಮ್ಮಲ್ಲಿ ಕಾಣಲಾರವು ತಾ. 18, 19 20, ಬಿಟ್ಟುಳಿದ ದಿನಗಳು ಅತ್ಯುತ್ತಮವಿವೆ.

ಸಿಂಹ—ಇಂದಿನ ದಿನಗಳು ಹಿಂದಿನ ದಿನಗಳಂತಿರಲಾರವು. ನಿಮ್ಮ ಕಾರ್ಯಗಳು ಬಹುಶ್ಚ ವಿಘ್ನಗಳಿಂದಾಗಿ ಅರ್ಧದಲ್ಲೇ ನಿಲ್ಲುವವು. ಪರಿಶ್ರಮ ಪಟ್ಟು ದುಡಿದ ಹಣವು ಖರ್ಚಿಗೆ ಸಾಲದಾಗುವುದು. ಹಣದ ಲೇವಾದೇವಿ ನಿಮಿತ್ತ ಕಲಹವೆದ್ದು ಕೋರ್ಟು ಮನೆಗಳಿಗೆ ತಿರುಗುವ ಪ್ರಸಂಗ ಬಂದಿದೆ. ವಾತಪ್ರಕೋಪದಿಂದ ಆರೋಗ್ಯವು ಕೆಡಲಿದೆ. ಸಾಮಾಜಿಕ ಕಾರ್ಯಗಳಲ್ಲೂ ರಾಜಕೀಯ ಕ್ಷೇತ್ರದಲ್ಲೂ ಪರಿಣಾಮವು ನೆಟ್ಟಗಿರದು. ವಾರಾಂತ್ಯದ 2ದಿನಗಳು ಅತೀವ ಹಾನಿಕರಗಳಿವೆ.

ಕನ್ಯಾ— ಸುಖಪತಿಗಳಾದ ಬೃಹಸ್ಪತ್ಯಾಚಾರ್ಯರು ಭಾಗ್ಯಸ್ಥಾನದಲ್ಲಿ ನಿಂತು ನಿಮ್ಮನ್ನು ಪೂರ್ಣದೃಷ್ಟಿಯಿಂದ ನೋಡುತ್ತಿರುವರು ಆದಕಾರಣ ಇತರ ಗ್ರಹರೆಲ್ಲರೂ ವಿಮುಖರಿದ್ದರೂ ನಿಮಗೆ ಹೆಚ್ಚಿನ ಹಾನಿಯಾಗದು. ಖರ್ಚಿಗೆ ತಕ್ಕಷ್ಟು ಉತ್ಪತ್ತಿಯಾಗುವದು ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ನಷ್ಟ ಸಂಭವಿಸಲಿದೆ. ದೇಹದಲ್ಲಿ ದೌರ್ಬಲ್ಯ ಕ್ಷೀಣತೆಗಳುಂಟಾಗಲಿವೆ ಸ್ತ್ರೀಸಂಬಂಧವಾದ ವ್ಯವಹಾರದಿಂದಾಗಿ ಕಲಹ ಅನಿಷ್ಟ ಅಪವಾದಗಳು ಪ್ರಾಪ್ತವಾಗಲಿವೆ. ವಾರಾಂತ 5ದಿನಗಳು ಹೆಚ್ಚಿನ ಅನಿಷ್ಟಕಾರಿಗಳಾಗರವು.

ತುಲಾ - ನಿಮ್ಮ ದೈವವಿಂದು ತೀರ ದುರ್ಬಲವಾಗಿದೆ, ನಿಮ್ಮ ಸಂಕಲ್ಪಗಳೆಲ್ಲವು ಗಗನಕುಸುಮದಂತೆ ವ್ಯರ್ಥಗಳಾಗುವವು. ಆಪ್ತವರ್ಗದವರು ತೀರ ದೂರ ಸರಿವರು. ರುಹಿರಿಯರೊಡನೆ ಮನಸ್ತಾಪ ಸೋದರರೊಡನೆ ಕಲಹ ಗೃಹಕೃತ್ಯದಲ್ಲಿ ಅನ್ಯಾಯಗಳು ಹೆಚ್ಚಲಿವೆ. ವಿಪತ್ತುಪರಂಪರೆಗಳು ಸಮುದ್ರದಲೆಗಳಂತೆ ಮೇಲಿಂದ ಮೇಲೆ ಬರಲಿ ಶತ್ರುಜನರಿಂದ ಧನಮಾನಗಳಿಗೆ ವಿಶೇಷ ನಿ ತಟ್ಟೀತು. ವಾರಾಂತ್ಯದ 2ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳು ಕಾಣಿಸವು

ವೃಶ್ಚಿಕ— ಕಷ್ಟದಿನಗಳು ದೂರವಾದ ನಿಮ್ಮ ಸಂಪದ್ಭಾಗ್ಯವು ಅತೀವ ಉತ್ತಮಸ್ಥಿತಿಗೆ ಬರಲಿದೆ ಉಚ್ಚರಾದ ರವಿ ಶುಕ್ರರ ಪೂರ್ಣ ಅನುಗ್ರಹವು ಮಾತ್ರವಲ್ಲದೆ ಧನ[illegible]ಯ ಪೂರ್ಣದೃಷ್ಟಿಗೆ ಪಾತ್ರರಾದ ನಿಮಗೆ ಸರ್ವತೋಮುಖದಿಂದ ಧನಾಗಮವಾಗಲಿದೆ ವಿದ್ಯೋಪಜೀವಿಗಳೂ ಸೇವಕ ವರ್ಗದವರೂ ವ್ಯಾಪಾರಿ ವೃಂದವೂ ಕೂಡ ನೆಮ್ಮದಿಯಿಂದ ಕಾಲ ಕಳೆವರು. ಆದರೆ ಸತಿ[illegible]ಗಳಲ್ಲಿ ದಿನದಿನಕ್ಕೆ ಕಲಹವಾಗುವ ಸಂಭವವಿದೆ. ವಾರಾದಿಯ 2ದಿನಗಳು ಅತೀವ ಪ್ರಶಸ್ತವಿವೆ.

ಧನು— ಸುಖ ದುಃಖಗಳೂ ಲಾಭನಷ್ಟಗಳೂ ಸರಿತೂಕದಲ್ಲಿ ಪರಿಣಮಿಸುವವು. [illegible]ಗೀನಾರದಲ್ಲಿ ಕಷ್ಟಸಾಧ್ಯವಾದ ಕಾರ್ಯ ಕೂಡ ನಿಮ್ಮ ಭಾಗಕ್ಕೆ ಕ್ಷಣಕನುವೆನಿಸುವುದು, ಮನಸ್ಸಿನ ಚಪಲತೆಯಿಂದಾಗಿ ವಿಷ ಕಷ್ಟನಷ್ಟಗಳುಂಟಾದಾವು. ದಿನೇ ದಿನೇ ಮನೋರೋಗವು ಪ್ರಬಲಿಸುವುದು. [illegible]ರಂವ್ಯಾಪಾರಿ ನೌಕರಿ ಭಾಗದಲ್ಲಿ ಇಚ್ಛಾಫಲ ಲಭಿಸುವದು, ಗೃಹತಾಪತ್ರಯಗಳು ತಾನಾಗಿ ಶಾಂತವಾಗಲಿವೆ. ವಾರಾದಿಯ 5 ದಿನಗಳಲ್ಲಿ ಸುಖನೆಮ್ಮದಿ ಲಾಭವಿಜಯಗಳು ಲಭಿಸುವವು.

ಮಕರ— ಈ ವಾರದಲ್ಲಿ ನಿಮಗೆ ಹೆಚ್ಚು ಇಷ್ಟವಾಗಲಿ ಅನಿಷ್ಟವಾಗಲಿ ಪ್ರಾಪ್ತವಾಗಲಾರದು. ಶತ್ರು ಜನರ ಪೀಡೆಯಿಂದಾಗಿ [illegible]ವಂಶ ಧನ ವ್ಯಯವಾಗುವುದಾದರೂ [illegible]ಗೊಂಡ ಕಾರ್ಯಗಳಲ್ಲಿ ವಿಜಯ ಲಾಭ[illegible]ಗುವದು. ಬಾಲ್ಯ ಮಿತ್ರರ ನೆರವು ಬಂಧುಗ[illegible]ದವರ ಸಹಕಾರ ಇವು ಪೂರ್ಣವಾಗಿರು[illegible]ದರಿಂದ ದಿನಯಾಪನೆಯು ದುಸ್ತರವಾಗ[illegible]ರದು. ಮಕ್ಕಳ ಆರೋಗ್ಯಕ್ಕೆ ಸ್ವಲ್ಪ ಹಾ[illegible] ಸಂಭವಿಸೀತು. ವಾರಾಂತ್ಯದ 5 ದಿನಗಳು ಹೆಚ್ಚಿನ ಶುಭಪ್ರದಗಳಿವೆ.

ಕುಂಭ— ದೇಹಪತಿಯಾದ ಶನೈಶ್ಚರ[illegible] ಇಂದು ಅನಿಷ್ಟ ಸ್ಥಾನವಾದ ಅಷ್ಟಮವ[illegible] ಪ್ರವೇಶಿಸಿರುವನು. ಅದಕಾರಣ ದೇಹದ[illegible] ವಾತಪ್ರಕೋಪದಿಂದಾಗಿ ಸಂಧಿ ಗೊಂಡು[illegible]ಲ್ಲಿ ನೋವು ಕಾಣಿಸೀತು. ದುರ್ಜನರ ಸಹ[illegible]ಸದಿಂದಾಗಿ ಜನಾಪವಾದಕ್ಕೆ ಗುರಿಯಾಗು[illegible] ಬಂಧುವರ್ಗದವರಲ್ಲಿ ಅನ್ಯೋನ್ಯವಿರದು. [illegible]ರ್ಥಿಕ ಭಾಗವು ಉತ್ತಮವಿರುವದು. ಎ[illegible]ಹ ಕಾರ್ಯವೇ ಇರಲಿ ನಿರ್ವಿಘ್ನದಿಂದ [illegible]ನೆರವೇರುವದು, ವಾರಾಂತ್ಯದ 2 ದಿನಗಳ[illegible] ನಿಮ್ಮ ಸಂಕಲ್ಪವು ಸಿದ್ಧಿಸುವುದು.

ಮೀನ— ನಿಮ್ಮ ಧನಭಾಗ್ಯಾದಿಪನೂ ವಿಮುಖನೂ ಆದ ಅಂಗಾರಕನಿಂದು ಉಚ್ಚಸ್ಥಾನದಲ್ಲಿ ಸುರಗುರುಗಳಿಂದ ಕೂಡಿರುವ ಕಾರಣ ನಿಮ್ಮ ಪ್ರತಿಯೊಂದು ಕಾರ್ಯವೂ ನಿರ್ವಿಘ್ನದಿಂದ ಕೊನೆಗೊಂಡುವುದ[illegible] ನಿರೀಕ್ಷೆಗಿಂತಲೂ ಅಧಿಕವಾದ ಫಲ ಲಭಿಸುವುದು ನಿಮ್ಮ ಸ್ವಂತ ಉಪಭೋಗಕ್ಕೆ ಅ[illegible]ವ ತೆರನಾದ ಕೊರತೆಯೂ ಉಂಟಾಗದು ಮನಸ್ಸಿನ ದೌರ್ಬಲ್ಯದಿಂದಾಗಿ ಆಪ್ತಜನರ ಅವಿಶ್ವಾಸ ಹುಟ್ಟಲಿದೆ. ವಾರಾದಿಯ 2 ದಿನಗಳಲ್ಲಿ ಭೋಗ ಮಾನ ಲಾಭಗಳಿವೆ.



ಶರೀರ ಸಮತೂಕತೆಗೆ- ಸರ್ವ ರೋಗ ನಿವಾರಣೆಗೆ
ನವಚೇತನ, ಅಮೂಲ್ಯ ಶಕ್ತಿವರ್ಧಕನೆಂದರೆ—ಸುಪ್ರಸಿದ್ಧ
ಸರ್ ಜೀವನ್ ಶಿಲಾಜಿತ್ ಲೇಹ್ಯ
ಸಕಲ ಋತುವಿನಲ್ಲಿ ಸರ್ವರಿಗೂ ಅನುಕೂಲವುಂಟು.
44 ದಿನದ ಲೇಹ್ಯ ರೂ. 5-4-0, 22 ದಿನದ ಲೇಹ್ಯ ರೂ. 3-4-0
(ಪೋಸ್ಟೇಜ್ ಮಾಫಿ)
ನೀಲಗಿರಿ ಡಿಪ್ಪೋ, ಅಕ್ಕಿಪೇಟೆ ಚೌಕ, ಬೆಂಗಳೂರ ಸಿಟಿ
ಶುದ್ಧ ನೀಲಗಿರಿ ಎಣ್ಣೆ ಸಿಗುತ್ತೆ.

Edited, Printed & Published By K. H. Shetty at the Navayuga Press, Udipi, S. India

Regd. No.
M. 3618

LICENCE No. 31
Licensed to Post without Prepayment

ನವಯುಗ
ಆರೋಗ್ಯ ಮಂತ್ರಿ
ಎ. ಬಿ. ಶೆಟ್ಟರಿಂದ
ಸ್ಥಾಪಿತವಾದ ವಾರಪತ್ರಿಕೆ,
ಉಡುಪಿ, ದ. ಕನ್ನಡ.

ವಾರ್ಷಿಕ ಚಂದಾ 5-12-0
ಆರು ತಿಂಗಳಿಗೆ 3- 0-0
ಬಿಡಿ ಪ್ರತಿಗೆ 0--2-0

ನವಯುಗ

23-4-1953

Vol 32
No 33

NAVAYUGA WEEKLY POST BOX NO 22 UDIPI

ವರ್ಷ ೩೨
ವಾರ ೩೩

ಅಂತರಂಗ
ಶೈಕ್ಷಣಿಕ ಪತ್ರಿಕೆಯು
ಉಪಯುಕ್ತವಾದ
90 ಪುಸ್ತಕಗಳು
ರೂ. 24ಕ್ಕೆ ಸಿಗುತ್ತವೆ.
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ

ಮಧುಪರ್ಕ

ಸಿಪಾಯಿಯೊಬ್ಬನು ತನ್ನ ಮಾಲಕರ ಬಳಿಗೆ ಬಂದು, "ಸೇಠಜೀ, ದಿನ ದಿನಕ್ಕೂ ಪದಾರ್ಥಗಳು ತುಟ್ಟಿಯಾಗುತ್ತಿವೆ. ಸಿಗುವ ಸಂಬಳ ಸಂಸಾರದ ಖರ್ಚಿಗೆ ಸಾಕಾಗುವುದಿಲ್ಲ. ಮುಂದಿನ ತಿಂಗಳಿಂದ ನನಗೆ ಹತ್ತು ರೂಪಾಯಿ ಹೆಚ್ಚಿಗೆ ಕೊಡಬೇಕು" ಎಂದು ವಿನಂತಿಸಿದ.

ಸಿಟ್ಟಿಗೆದ್ದ ಸೇಠಜೀ "ಈಗ ಯಾವ ವರ್ಷ?" ಎಂದು ಕೇಳಿದರು. "೧೯೫೩ನೇ ಇಸವಿ" ಎಂದ ಸಿಪಾಯಿಯು.

"ಅಂದರೆ ಈ ವರ್ಷದಲ್ಲಿ ೩೬೫ ದಿನಗಳು. ನೀನು ದಿನಾಲೂ ೮ ತಾಸು ಮಾತ್ರ ಕೆಲಸ ಮಾಡುತ್ತಿ. ಅಂದರೆ ನೀನು ವರ್ಷದ ೧೨೨ ದಿನಗಳು ಮಾತ್ರ ಕಾರ್ಖಾನೆಯಲ್ಲಿದ್ದು, ಉಳಿದ ಸಮಯ ಹೊರಗೆ ತಿರುಗಾಡುತ್ತ ಇದ್ದಂತಾಯಿತು. ಈ ೧೨೨ ದಿನಗಳಲ್ಲಿ ೫೨ ರವಿವಾರ ನಿನಗೆ ಬಿಡುವಿದೆ. ಈಗ ಉಳಿಯಿತು ೭೦ ದಿನ. ಪ್ರತಿ ಶನಿವಾರ ನಾನು ರೇಸ್ ಕೋರ್ಸಿಗೆ ಹೋಗುವಾಗ ನಿನಗೆ ಕೆಲಸವಿಲ್ಲ. ಇದರಿಂದ ನೀನು ಕೆಲಸಮಾಡುವ ದಿನಗಳು ೧೮ ಎಂದಾಯಿತು. ಇವರಲ್ಲಿ ದಸರೆ, ದೀಪಾವಳಿ, ಹೋಳಿ ಹುಣ್ಣಿಮೆ, ಗಣೇಶ ಚತುರ್ಥಿ ಇವುಗಳಿಗಾಗಿ ನಾಲ್ಕು ದಿನ ರಜೆ. ಸರಕಾರವು ಕೆಲಸಗಾರರಿಗೆ ವರ್ಷಕ್ಕೆ ೧೪ ದಿನ ರಜೆ ಕೊಡಬೇಕೆಂದು ವಿಧಿಸಿದೆ. ಒಟ್ಟಿನಲ್ಲಿ ಒಂದು ದಿನವೂ ನೀನು ಕೆಲಸಮಾಡುವುದಿಲ್ಲ ಎಂದಾಯಿತು. ಅಂದಮೇಲೆ ನಿನಗೆ ಸಂಬಳ ಏರಿಸುವ ಪ್ರಶ್ನೆಯೇ ಇಲ್ಲ. ಹಾಗೆ ಕೇಳಿದರೆ, ನಾನು ನಿನಗೆ ಸಂಬಳವನ್ನಾದರೂ ಏಕೆ ಕೊಡಬೇಕು?"

ನೌಕರಿಗೆ ಸೇರುವಿರಾ?

ಉದ್ಯೋಗವೇ ಪುರುಷ ಲಕ್ಷಣವೆಂದು ನಾವು ಹೇಳುತ್ತಾ ಬಂದಿದ್ದೇವೆ. ಕೊತೆಗೆ ಗಂಡು ಕೂತು ಕೆಟ್ಟ, ಹೆಣ್ಣು ತಿರುಗಿ ಕೆಟ್ಟಳು ಎಂಬಿತ್ಯಾದಿ ಗಾದೆ ಮಾತಿನಿಂದ ಕೆಲಸವಿಲ್ಲದೆ ನಾವು, ಗಂಡಸರು, ಇರಲೆಯ ಬಾರದೆಂದು ತೀರ್ಮಾನಿಸಿದ್ದೇವೆ. ಹಲವಾರು ನಮೂನೆಯ ಕೆಲಸಗಳಿವೆಯಲ್ಲ— ಅವುಗಳಲ್ಲಿ ಆಫೀಸಿನಲ್ಲಿಯೋ, ಕಾರ್ಖಾನೆಯಲ್ಲಿಯೋ ಸಂಸ್ಥೆಯಲ್ಲಿಯೋ ನೌಕರರಾಗಿ ದುಡಿಯುವುದೂ ಒಂದು. ಹೀಗೆ ನೌಕರಿಗಾಗಿ ಅಂಡಲೆಯುತ್ತಿರುವ ನಿರುದ್ಯೋಗಿಗಳ ತಂಡತಂಡವನ್ನೆ ನಾವು ಕಾಣುತ್ತೇವೆ. ಎಲ್ಲ ಜನರಿಗೂ ಉದ್ಯೋಗ ಒದಗಿಸಿಕೊಡಬೇಕೆಂದು ಸರಕಾರವನ್ನೂ ಸಮಾಜವನ್ನೂ ಒತ್ತಾಯಿಸಲಾಗುತ್ತಿದೆ. ಆದರೆ ಯಾರಾದರೊಬ್ಬನಿಗೆ ಏನಾದರೊಂದು ನೌಕರಿ ದೊರೆತರೆ ಆಯಿತೆ? ಎಲ್ಲ ಜನರೂ ಹೇಗೆ ಒಂದೇ ಬುದ್ಧಿ, ಗುಣ, ಸಾಮರ್ಥ್ಯವುಳ್ಳವರಾಗಿರದೆ—ತಾರತಮ್ಯದಿಂದ ಕೂಡಿರುವರೋ ಹಾಗೆ ಎಲ್ಲ ಕೆಲಸಗಳೂ ಒಬ್ಬನ ಪ್ರವೃತ್ತಿಗೆ ಒಗ್ಗಲಾರವು. ಪ್ರತಿಯೊಂದು ಉದ್ಯೋಗಕ್ಕೂ ತನ್ನದೇ ಆದ ವೈಶಿಷ್ಟ್ಯವಿದೆ; ಇವುಗಳನ್ನು ಕರಗತಮಾಡಿಕೊಂಡಿರುವ ನಿಪುಣ ಮಾತ್ರ ಆ ಉದ್ಯೋಗಕ್ಕೆ ಅರ್ಹನು. ಹೀಗಿದ್ದರೂ ಎಲ್ಲ ನೌಕರರಲ್ಲೂ ಸಾಮಾನ್ಯವಾಗಿರುವ ಒಂದು ಗುಣ ವಿಶೇಷನೆಂದರೆ— ಅವರು ನೌಕರರಾಗಿ ದುಡಿಯಬೇಕೆಂದುಕೊಂಡದ್ದೇ ನಿಜ. ಅವರು ನೌಕರರು ಎಂದುದರಿಂದ ಒಳ್ಳೆಯ ನೌಕರರಾಗಿ ಕೆಲಸ ಮಾಡಲು ಅವರು ಏನುಪಾಯ ಕೈಕೊಳ್ಳಬಹುದೆಂದು ಕಂಡು ಕೊಂಡರೆ ಎಲ್ಲರಿಗೂ ಪ್ರಯೋಜನವಾದೀತು.

ಒಂದು ವಿಶಿಷ್ಟ ಉದ್ಯೋಗಕ್ಕೆ ಬೇಕಿರುವ ಎಲ್ಲ ನೈಪುಣ್ಯವನ್ನೂ ನಮ್ಮಲ್ಲಿ ಒಬ್ಬರು ಸಂಪಾದಿಸಿರ ಬಹುದು. ಆದರೆ ಒಳ್ಳೆಯ ನೌಕರನಾಗುವಯೋಗ್ಯತೆ ಅವನಲ್ಲಿಲ್ಲವಾದರೆ ಆ ನೈಪುಣ್ಯವನ್ನು ಉಪಯೋಗಿಸಿ ದುಡಿಯುವ ಅವಕಾಶ ಅವನಿಗೆ ದೊರೆಯದೆ ಹೋದೀತು. ಒಬ್ಬನ ನೌಕರನಾಗಿ ದುಡಿಯುವುದೇನು ಸುಲಭದ ಕೆಲಸವಲ್ಲ—ಆ ನೌಕರನ ನಾಲಿಗೆ ಪ್ರತಿಯೊಂದು ಕ್ಷಣವೂ ಪರೀಕ್ಷಿಸಲ್ಪಡುತ್ತದೆ. ಹೊರಗಿನವರ ಪ್ರೀತಿ ವಿಶ್ವಾಸಗಳನ್ನೆ ಅವಲಂಬಿಸಿ ಕೆಲಸ ನೌಕರನು ತನ್ನ ಕೆಲಸ ಮಾಡುತ್ತಿರಬೇಕಾಗುತ್ತದೆ ಹಾಗೆಂದು ತಾನು ಮಾಡುವ ಕೆಲಸದಿಂದ ಆತ್ಮ ಸಂತೃಪ್ತಿಯಾಗಬೇಕಾದದ್ದೂ ಮುಖ್ಯ ಅನ್ಯಥಾ ತನ್ನ ಒಡೆಯರ ಇಚ್ಛಾನುಸಾರ ಯೋಗ್ಯರೀತಿಯಲ್ಲಿ ಕೆಲಸಮಾಡಿ ಮುಗಿಸಲು ನೌಕರನಿಗೆ ಆಗುವುದಿಲ್ಲ ಆದುದರಿಂದ ಮೊದಲಾಗಿ ನೌಕರನು ತನ್ನ ಪ್ರವೃತ್ತಿಗೆ ಅನುಗುಣವಾದ ಮತ್ತು ಆತ್ಮ ಸಂತೃಪ್ತಿಯನ್ನು ನೀಡಬಲ್ಲ ಉದ್ಯೋಗಗಳನ್ನು ಹುಡುಕಬೇಕು.

ಉದ್ಯೋಗದಲ್ಲಿ ಭದ್ರತೆ ಮುಖ್ಯವೋ? ಸೂತ್ರ ಬದ್ಧವಾಗಿ ನಡೆಸುವ ಕೆಲಸವನ್ನು ನೌಕರಿಯಾಗಿ ಸ್ವೀಕರಿಸಬೇಕೆ ಅಥವಾ ನಮ್ಮ ಕಲ್ಪಕ ಶಕ್ತಿ ಸಾಮರ್ಥ್ಯ ಹಾಗು ವ್ಯಕ್ತಿತ್ವದ ವರ್ಚಸ್ಸಿನ ಯೋಗ್ಯ ಪರೀಕ್ಷಾ ಕ್ಷೇತ್ರದಲ್ಲಿ ದುಡಿಯುವ ಹುಮ್ಮಸ್ಸು ತೋರಬೇಕೆ? ಈ ವಿಷಯದಲ್ಲಿ ನೌಕರಿ ಅಪೇಕ್ಷಿಸುವ ಯುವಕರು ಒಂದು ನಿರ್ಣಯಕ್ಕೆ ಸರ್ವ ಪ್ರಥಮವಾಗಿ ಬರಬೇಕು. ಏಕೆಂದರೆ ಇವೆರಡು ಬಗೆಯ ಉದ್ಯೋಗಗಳಲ್ಲಿ ಮೂಲಭೂತವಾದ ವ್ಯತ್ಯಾಸವಿದೆ. ಈ ಉದ್ಯೋಗಗಳು ಪರಸ್ಪರ ವಿರುದ್ಧ ವ್ಯಕ್ತಿತ್ವದ ಜನರನ್ನು ಬಯಸುತ್ತವೆ. ಉದಾಹರಣೆಗೆ ಒಂದು ವಿಮಾಕಂಪೆನಿಯಲ್ಲಿ, ಬೇಂಕಿನಲ್ಲಿ, ಸರಕಾರೀ ಕಚೇರಿಗಳಲ್ಲಿ ಕಾರಕೂನನ ಕೆಲಸವನ್ನು ಕೈಗೊಂಡರೆ ಅದರಲ್ಲಿ ಭದ್ರತೆ ಇದೆ, ಮತ್ತು ಕೆಲಸವಾದರೂ ಸೂತ್ರಬದ್ಧವಾಗಿ ಪ್ರತಿಯೊಂದೂ ನಿಯಮದಂತೆ ನಡೆಯುತ್ತದೆ. ನೌಕರನು ವಿಶ್ವಾಸದಿಂದ ನಡೆದುಕೊಂಡರೆ ಅವನ ಕರ್ತವ್ಯ ಮುಗಿಯಿತು. ಸಂಬಳ ಹೆಚ್ಚು ದೊರೆಯದೆಹೋದರೂ ಭದ್ರತೆ ಈ ಅವಗುಣವನ್ನು ಮುಚ್ಚಿಡುತ್ತದೆ. ಅದೇ ಒಬ್ಬನು ವಿಮಾ ಏಜಂಟನಾಗಿ ಕೆಲಸಮಾಡುವವನಾದರೆ ಇಲ್ಲಿ ಅವನು ಜನರಕೂಡೆ ವ್ಯವಹರಿಸುವ ಚಮತ್ಕಾರ ತೋರಬೇಕು. ತನ್ನ ಕಲ್ಪನೆಯನ್ನು ಕ್ಷಣ ಕ್ಷಣವೂ ತೀಕ್ಷ್ಣವಾಗಿಸಿ, ತಕ್ಕ ಸಮಯದಲ್ಲಿ ಅದರ ಯೋಗ್ಯ ಪ್ರಯೋಜನ ತೆಗೆದುಕೊಳ್ಳಬೇಕು. ಹೊಸ ಹೊಸ ಸನ್ನಿವೇಶಗಳೊಡನೆ ತ್ವರಿತದಲ್ಲಿಯೇ ಹೊಂದಾಣಿಕೆ ಸ್ಥಾಪಿಸಿಕೊಳ್ಳತಕ್ಕದ್ದು. ಇದೆಲ್ಲ ಕಷ್ಟವೆನಿಸೀತು. ಕೆಲವೊಮ್ಮೆ ನಾವು ನಿರಂತರಾಗಿ ಅಪಜಲತೆಯನ್ನು ಇದಿರಿಸಬೇಕಾದೀತು. ಆದರೆ ಇದರಿಂದ ದೊರೆಯುವ ಪವಮಾನ ಹೆಚ್ಚು; ಮತ್ತು ಶೀಘ್ರದಲ್ಲಿಯೇ ನಾವು ಉನ್ನತ ಸ್ಥಿತಿಯನ್ನು ಹೊಂದಬಲ್ಲೆವು.

ಇನ್ನೊಂದು ಸಂಗತಿ ನಾವು ಯಾವ ಸಂಸ್ಥೆಯಲ್ಲಿ ನೌಕರಿ ಸ್ವೀಕರಿಸಬೇಕ? ನೂರು ಶಾಖೆಗಳಿರುವ ದೊಡ್ಡ ಕಂಪೆನಿಯಲ್ಲೋ, ಅಥವಾ ಸಣ್ಣ ಸಂಸ್ಥೆಯಲ್ಲೋ? ಸಣ್ಣ ಸಂಸ್ಥೆಯಲ್ಲಿ ನಾವು ನಮ್ಮ ಸಹಕಾರ್ಯಕರ್ತರೊಡನೆ ವೈಯಕ್ತಿಕ ಸಂಬಂಧ ಇಟ್ಟುಕೊಂಡ ನಿತ್ಯವೂ ಕೆಲಸಮಾಡುತ್ತೇವೆ ಆದರೆ ದೊಡ್ಡ ಕಂಪೆನಿಗಳಲ್ಲಿ ಪ್ರತಿಯೊಂದೂ [illegible] ಮಾರ್ಗಗಳ ಮೂಲಕವಾಗಿಯೇ ಮುಂದೆ ಹೋಗಬೇಕು. ಇದಕ್ಕಾಗಿ ನಿರ್ಣೀತವಾದ ಕ್ರಮನಿಯಮಗಳನ್ನು ಅನುಸರಿಸತಕ್ಕದ್ದು. ಸಣ್ಣ ಸಂಸ್ಥೆಯಲ್ಲಿ ಕೆಲಸ ಮಾಡುವಾಗ ನಮ್ಮ ನಿರ್ಣಯ ಹಾಗು ಕೆಲಸಗಳ ಪರಿಣಾಮವೇನಾಯಿತೆಂಬ ದನ್ನು ಒಡನೆಯೇ ತಿಳಿದುಕೊಳ್ಳಬಲ್ಲೆವು. ದೊಡ್ಡ ಸಂಸ್ಥೆಯ ದೊಡ್ಡ ಹುದ್ದೆಯಲ್ಲಿರುವವರಿಗೂ ಒಂದೆ [illegible] ಕ್ಷೇಯ ವರೆಗ ಬಂದ [illegible] ತಿಳಿಯಿಮವುದಿಲ್ಲ. ಏಕೆಂದರೆ ಅವರು ದೊಡ್ಡ ಸಂಸ್ಥೆ ಎಂಬ ಯಂತ್ರದ ಆ ತುದಿಯಲ್ಲಿರುವ ಗೋಣಸು ಮಾತ್ರ. ಸಣ್ಣ ಸಂಸ್ಥೆಯ ನೌಕರರು ಪ್ರತಿಯೊಂದೂ ಕ್ಷೇತ್ರದ ಕೆಲಸಗಳಲ್ಲಿ ಅನುಭವಗಳಿಸುವುದು ಅಗತ್ಯವೆನಿಸುತ್ತದೆ; ಇಲ್ಲಿ ಸರಿಯೆ ಸೂಚನೆಗಳನ್ನು ಪಡೆದು ಅದರಂತೆ [illegible] ಕೊಳ್ಳಬ ಅವಕಾಶ ಕಡಿಮೆ ಇದೆ. ಆದರೆ ದೊಡ್ಡ ಕಂಪೆನಿಯಲ್ಲಿ ನಮಗ ಒಂದು ನಿರ್ದಿಷ್ಟ ಕೆಲಸವನ್ನು

(೧ನೇ ಪುಟ ನೋಡಿರಿ)



ಮದರಾಸಿನ ಗವರ್ನರ್
ಶ್ರೀ. ಶ್ರೀಪ್ರಕಾಶರು.

ವಿಶಾಲವಾದ ಲೋಕಾನುಭವವುಳ್ಳವರು, ಗವರ್ನರರಾಗುವ ಮೊದಲು ಅನೇಕ ಕ್ಷೇತ್ರಗಳಲ್ಲಿ ಮಹಾ ರಾಷ್ಟ್ರ ಸೇವೆ ಸಲ್ಲಿಸಿದವರು. ರಾಷ್ಟ್ರದ ಸರ್ವೋನ್ನತಿಯನ್ನು ಹಾರೈಸಿ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿರುವ ಕರ್ಮವೀರರಲ್ಲಿ ಒಬ್ಬರು. ಇದೇ ತಾ. ೨೧ರಲ್ಲಿ ನಮ್ಮ ಜಿಲ್ಲೆಗೆ ಸಂದರ್ಶಿಸಿ ಜಿಲ್ಲೆಯ ಸಂಭ್ರಮದ ಸ್ವಾಗತ ಪಡೆದರು.

ಮೂರನೇ ವರ್ಗದ ಗಾಡಿಯ ಸುಖ

ಇನ್ನೂ ಹೆಚ್ಚಿಸಬೇಕೆಂಬ ಬೇಡಿಕೆಗೆ ರೈಲ್ವೇಯ ಸಮ್ಮತಿ

ಸ್ವಾತಂತ್ರ್ಯೋತ್ತರದಲ್ಲಿ ಭಾರತೀಯ ರೈಲ್ವೆಗಳಲ್ಲಿ ತೃತೀಯ ಶ್ರೇಣಿಯ ಪ್ರಯಾಣಿಕರ ಅನುಕೂಲತೆ ಮತ್ತು ಸೌಕರ್ಯಗಳ ಕಡೆಗೆ ಭಾರತ ಸರಕಾರವು ಹೆಚ್ಚು ಗಮನವನ್ನು ಕೊಡುತ್ತಲಿದೆ. ಮೂರನೇ ವರ್ಗದ ಗಾಡಿಯಲ್ಲಿ ಪ್ರಯಾಣವು ಸುಖಕರವೆನಿಸಲು ಅನುಕೂಲವಾದ ಹಲವಾರು ಸುಧಾರಣೆಗಳು ನಡೆದಿವೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ರೈಲ್ವೆ ಪ್ರಯಾಣಿಕರಿಗೆ ಅತ್ಯಧಿಕ ಸೌಕರ್ಯಗಳನ್ನು ಒದಗಿಸಿಕೊಟ್ಟಿರುವರು ಆ ಉನ್ನತ ಮಟ್ಟವನ್ನು ಮುಟ್ಟುವುದು ನಮ್ಮ ರೈಲ್ವೆಗಳ ಶಕ್ತಿ ಸಾಮರ್ಥ್ಯವನ್ನು ಮೀರಿದ್ದೆಂದು ಕಂಡುಬಂದರೂ ಸರಕಾರದವರು ಪ್ರಯಾಣಿಕರ ಅನುಕೂಲತೆ ಎಂಬ ವಿಷಯವನ್ನು ತುಂಬ ಸಹಾನುಭೂತಿಯಿಂದ ನೋಡುತ್ತಿರುವರು ರೈಲ್ವೆ ಮಂತ್ರಿಗಳಾದ ಲಾಲ ಬಹಾದ್ದೂರ ಶಾಸ್ತ್ರಿಯವರು ಈಚೆಗೆ ಬರೆದೊಂದು ಲೇಖನದ ಮೇಲಿಂದ ಹೇಳುವುದಾದಲ್ಲಿ ಮೂರನೇ ವರ್ಗದಲ್ಲಿ ಪ್ರಯಾಣಿಸುವವರ ಸ್ಥಿತಿಗತಿಯು ಇನ್ನು ಕೆಲವೇ ವರ್ಷಗಳ ಅವಧಿಯಲ್ಲಿ ಬಹಳಷ್ಟು ಸುಧಾರಿಸುವುದೆಂದಿಟ್ಟುಕೊಳ್ಳಬಹುದು

ಜನಪ್ರಿಯ ವರ್ಗ

ಮೂರನೇ ವರ್ಗದ ಪ್ರಯಾಣಿಕರ ಹಿತದೃಷ್ಟಿಯನ್ನು ಮುಖ್ಯವಾಗಿ ಇಟ್ಟುಕೊಳ್ಳಬೇಕಾದ ಕಾಲವು ಈಗ ಬಂದಿರುತ್ತದೆ. ನಮ್ಮದೇಶದಲ್ಲಿ ರೈಲ್ವೆಯ ಸವಾರಿಗೆ ಎಂದರೆ ತೃತೀಯ ಶ್ರೇಣಿಯ ಬಂಡಿಗಳಲ್ಲಿ ಪ್ರಯಾಣಿಸುವವರಿಂದೇ ಅರ್ಥವಾಗುತ್ತದೆ ೧೯೫೧-೫೨ರಲ್ಲಿ ಪ್ರಯಾಣಿಸಿದ ೧೨೩೨ಲಕ್ಷ ಜನರಲ್ಲಿ ೧೧೮೨ಲಕ್ಷ ಜನರು, ಅರ್ಥಾತ್ ನೂರಕ್ಕೆ ೯೭ಮಂದಿ, ಮೂರನೇ ವರ್ಗದ ಗಾಡಿಯಲ್ಲಿ ಪ್ರಯಾಣ ಬೆಳೆಸಿದರು ಪ್ರಥಮ, ದ್ವಿತೀಯ ಹಾಗೂ ಇಂಟರ್ ವರ್ಗಗಳೆಂಬ ಉನ್ನತ ದರ್ಜೆಯ ಬಂಡಿಗಳಲ್ಲಿ ಪ್ರಯಾಣಿಸಿದವರು ೫೦ ಲಕ್ಷ ಜನ ಮಾತ್ರ. ಈ ಅಂಕೆ ಸಂಖ್ಯೆಯ ಬದಲು ಪ್ರಯಾಣಿಕರ ಮೈಲೇಜನ್ನು ಮಾನದಂಡವಾಗಿಟ್ಟುಕೊಂಡರೂ ಮೂರನೇ ವರ್ಗದ ಗಾಡಿಯ ಪ್ರಯಾಣವೇ ಪ್ರಾಮುಖ್ಯವೆಂದು ಕಂಡುಬರುತ್ತದೆ ಭಾರತೀಯ ರೈಲ್ವೆಗಳ ೩೯೫೫೯ಲಕ್ಷ ಪ್ರವಾಸ ಮೈಲುಗಳಲ್ಲಿ ಮೂರನೇ ವರ್ಗದ ಗಾಡಿಯ ಪ್ರಯಾಣಿಕರ ಮೈಲೇಜು ೩೭,೬೬೦ಲಕ್ಷದಷ್ಟು ಅರ್ಥಾತ್ ನೂರಕ್ಕೆ ೯೫ಕ್ಕೂ ಹೆಚ್ಚು ರೈಲ್ವೆಗಳ ಆದಾಯದ ದೃಷ್ಟಿಯಿಂದಲೂ ಮೂರನೇ ವರ್ಗದ ಗಾಡಿಗಳಿಗೆ ಮಹತ್ವವಿದೆ ೧೯೫೧-೫೨ರಲ್ಲಿ ಪ್ರಯಾಣಿಕರಿಂದ ದೊರೆತ ೧೧೦ಕೋಟಿ ರೂಪಾಯಿಗಳ ಆದಾಯದಲ್ಲಿ ೯೭ಕೋಟಿ ರೂಪಾಯಿಯಷ್ಟು ತೃತೀಯಶ್ರೇಣಿಯ ಪ್ರಯಾಣಿಕರಿಂದಲೇ ಬಂದಿದೆ ಈ ಅಂಕೆ ಸಂಖ್ಯೆಗಳು ಭಾರತೀಯ ರೈಲ್ವೆಗಳಲ್ಲಿ ಮೂರನೇ ವರ್ಗವೇ ಜನಪ್ರಿಯವಾದುದೆಂಬುದನ್ನು ಮನಗಾಣಿಸಿಕೊಡುತ್ತವಲ್ಲದೆ-ಈ ವರ್ಗದ ಜನರ ಹಿತರಕ್ಷಣೆಯೇ ರೈಲ್ವೆಗಳ ಧ್ಯೇಯವಾಗಬೇಕೆಂಬುದನ್ನು ಸೂಚಿಸುತ್ತವ.

ಆದಾಯ ಪ್ರಮಾಣ

ರೈಲ್ವೆಗಳ ದೃಷ್ಟಿಕೋಣದಲ್ಲಿ ಇನ್ನೂ ಒಂದು ವಿಷಯ ನೋಡಲಿಕ್ಕಿದೆ-ಆರ್ಥಿಕೋನ್ನತಿಯನ್ನು ಹೊಂದಿದ ರಾಷ್ಟ್ರಗಳಾದ ಸಂಯುಕ್ತ ರಾಜ್ಯ ಅಮೇರಿಕಾ ಅಥವಾ ಗ್ರೇಟ್ ಬ್ರಿಟನುಗಳಲ್ಲಿ ರೈಲ್ವೆಗಳ ಸಾರಿಗೆಯ ಒಟ್ಟು ಆದಾಯದ ಸ್ವಲ್ಪಾಂಶ ಮಾತ್ರ ಪ್ರಯಾಣಿಕರಿಂದ ದೊರೆಯುತ್ತದೆ ಆದರೆ ಭಾರತದಲ್ಲಿ ಈ ಪ್ರಮಾಣ ಬಹಳ ಹೆಚ್ಚಿದೆ. ಬ್ರಿಟಿಷ್ ರೈಲ್ವೆಗಳಲ್ಲಿ ಪ್ರಯಾಣಿಕರಿಂದ ದೊರೆತ ಆದಾಯವು ೧೯೫೦ರಲ್ಲಿ ಸರಕು ಸಾರಿಗೆಗಳಿಂದ ದೊರೆತುದರ ೪೭% ವಷ್ಟಿತ್ತು ಅಮೇರಿಕಾದಲ್ಲಂತೂ ಪ್ರಯಾಣಿಕರಿಂದ ದೊರೆತ ಆದಾಯದ ಪ್ರಮಾಣ ಕೇವಲ ೧೦ ಪರಿಣಾಮವಾಗಿ ಪ್ರವಾಸಿಕರ ಬಂಡಿಗಳನ್ನು ನಷ್ಟದಲ್ಲಿ ಓಡಿಸಬೇಕಾಯಿತು ಆದರೆ ಭಾರತೀಯ ರೈಲ್ವೆಗಳಲ್ಲಿ ಸರಕು ಸಾಗಾಟದಿಂದ ದೊರಕುವ ಆದಾಯದ ೭೨% ದಷ್ಟು ಪ್ರಯಾಣಿಕರಕ್ಕೆಯಿಂದಸಿಗುತ್ತದೆ ನಮ್ಮ ರೈಲ್ವೆಗಳಲ್ಲಿ ಪಾಶ್ಚಾತ್ಯದೇಶಗಳು ಒದಗಿಸುತ್ತಿರುವ ಉಚ್ಚಮಟ್ಟದ ಸೇವೆ ಅಥವಾ ಸೌಕರ್ಯಗಳಿಲ್ಲ ರೈಲ್ವೆ ಪ್ರಯಾಣದ ಟಿಕೇಟಿನದರವು ಕಡಿಮೆಯೆಂದೇನು ತೋರುವದಿಲ್ಲ ಸರಕಾರದವರು ಈ ದರ ನಿರ್ಣಯಿಸುವಾಗ ರೈಲ್ವೆಬಂಡಿಗಳನ್ನೋಡಿಸುವ ಕಂಪನಿಗಳೆದು ಒಂದವಾಗದ ಮೇಲೆ ಸಾಕಷ್ಟು ಲಾಭದೊರೆಯುವಂತೆ ಜಾಗ್ರತೆ ವಹಿಸಿರುವರು. ಆದರೂ ಪ್ರಯಾಣಿಕರ ಆದಾಯ ರೈಲ್ವೆಗಳಲ್ಲಿ ಮಹತ್ವದ ಸ್ಥಾನ ಪಡೆಯುತ್ತದೆ, ಮತ್ತು ಈ ಪ್ರಯಾಣಿಕರಲ್ಲಿ ಮೂರನೇ ವರ್ಗದ ಗಾಡಿಯನ್ನು ಬಳಸುತ್ತಿರುವವರೇ ಅತ್ಯಧಿಕ ಎಂಬುದು ಮನೋಜ್ಞವಾಗಿದೆ ಈ ಮೂರನೇ ವರ್ಗದ ಪ್ರಯಾಣಿಕರೇ ರೈಲ್ವೆಗಳ ನಿಜವಾದ ಪ್ರಯೋಜನವನ್ನು ಪಡೆಯುತ್ತಿರುವರು

ಸಹಾನುಭೂತಿಯ ಕೊರತೆ

ಆದುದರಿಂದ ಸರಕಾರದ ಕಡೆಯಿಂದಲೂ ಜನತೆಯಿಂದಲೂ ಅಧಿಕ ಸಹಾನುಭೂತಿಯು ತೃತೀಯ ಶ್ರೇಣಿಯ ಪ್ರಯಾಣಿಕರಿಗೆ ದೊರೆತದ್ದು ಆಶ್ಚರ್ಯವೇನಲ್ಲ ರೈಲ್ವೆಗಳು ಖಾಸಗಿ ಕಂಪೆನಿಗಳ ಕೈಯಲ್ಲಿದ್ದಾಗ, ಅಧಿಕ ಲಾಭಗಳಿಸುವುದನ್ನು ಮುಖ್ಯಧ್ಯೇಯವಾಗಿ ಆಡಳಿತದಾರರು ಇಟ್ಟುಕೊಂಡಿದ್ದರು ಬೇರೆ ದೇಶಗಳಲ್ಲಾದರ ಈ ಖಾಸಗಿ ಕಂಪೆನಿಗಳು ಪರಸ್ಪರ ಸ್ಪರ್ಧೆ ಹೂಡಿ ತಮ್ಮ ವ್ಯವಹಾರವನ್ನು ಸಾಗಿಸುವ ಪ್ರಮೇಯವಿದ್ದ ಪರಿಣಾಮವಾಗಿ ರೈಲ್ವೆಗಳನ್ನುಪಯೋಗಿಸುವವರಿಗೆ ಹೆಚ್ಚು ಹೆಚ್ಚು ಸೌಕರ್ಯ ಮತ್ತು ಸವಲತ್ತುಗಳನ್ನು ತೋರಿಸಿ, ತಮ್ಮ ವ್ಯವಹಾರವನ್ನು ಮುನ್ನಡೆಸುವುದು ಅವಶ್ಯವೆನಿಸುತ್ತದೆ ಆದರೆ ಭಾರತದಲ್ಲಿ ಪರಿಸ್ಥಿತಿ ಇದಕ್ಕೆ ವಿರುದ್ಧವಾಗಿತ್ತು ಸರಕಾರದವರು ರೈಲ್ವೆ ಕಂಪೆನಿಗಳಿಗೆ ಆದಾಯದ ಭರವಸೆಯನ್ನು ಕೊಟ್ಟಿದ್ದುದರಿಂದ ಈ ರೀತಿ ಪೈಪೋಟಿಯ ವಾತಾವರಣ ಇರಲಿಲ್ಲ ಆದಕಾರಣ, ಪ್ರಯಾಣಿಕರ ಹಿತಚಿಂತನೆಯನ್ನು ಲಕ್ಷಿಸುತ್ತಲೇ ಇರಲಿಲ್ಲ ಈ ದುರ್ಲಕ್ಷ್ಯವು ಮೂರನೇ ವರ್ಗದ ಗಾಡಿಯ ಪ್ರಯಾಣಿಕರ ಸುಖ ಸೌಕರ್ಯಗಳಲ್ಲಿ ಮಾತ್ರವಲ್ಲ – ರೈಲ್ವೆ ನಿಲ್ದಾಣಗಳಲ್ಲಿ ಕಾಯುವ ಕೋಣೆಗಳಲ್ಲಿ, ಟಿಕೇಟು ಆಫೀಸುಗಳಲ್ಲಿ ಇತ್ಯಾದಿಯಾಗಿಯೂ ಎದ್ದು ತೋರುತಿತ್ತು ಮೂರನೇ ವರ್ಗದ ಪ್ರಯಾಣಿಕರೇ ಬಹುಸಂಖ್ಯಾಕರಾಗಿರುವ ಜನ ಸಮ್ಮರ್ದವು ಏನಾದರೊಂದು ರೀತಿಯಿಂದ ಸುಧಾರಿಸಿಕೊಳ್ಳುವುದೆಂಬ ನಿರ್ಣಯಕ್ಕೆ ಆಡಳಿತಾಧಿಕಾರಿಗಳು ಬಂದಂತಿತ್ತು ಪ್ರಯಾಣಿಕರ ಸೌಲಭ್ಯದ ಪ್ರಶ್ನೆ ಬಂದಾಗಲೆಲ್ಲ ಉನ್ನತ ಶ್ರೇಣಿಯ ಬಂಡಿಗಳಲ್ಲಿ ಪ್ರಯಾಣಿಸುವವರಿಗೆ ಏನಾದರೂ ಅಲ್ಪ ಸ್ವಲ್ಪ ಅನುಕೂಲತೆ ಒದಗಿಸಿಕೊಟ್ಟರ ಸಾಕೆಂಬಂತಿತ್ತು.

ಯುದ್ಧೋತ್ತರದಲ್ಲಿ

ಆದರೆ ಸರಕಾರವ ವಶಕ್ಕೆ ರೈಲುಗಳು ಬಂದ ದಿನದಿಂದ ಈ ಪರಿಸ್ಥಿತಿಯು ಸುಧಾರಿಸಿದ ೧೯೨೫ರಿಂದ ರೈಲ್ವೆಯ ಮಂಗಡ ಪತ್ರದ ಚರ್ಚೆಯ ಕಾಲದಲ್ಲಿ ಪ್ರಯಾಣಿಕರ ಅನುಕೂಲತೆ ಮತ್ತು ಹಿತಗಳನ್ನು ಎತ್ತಿಹಿಡಿಯುವ ಭಾಷಣಗಳು ಕೇಳಿ ಬರುತ್ತಿವೆ ಹೀಗಿದ್ದರೂ ಯುದ್ಧಕಾಲದಲ್ಲಿ ಇಂಥ ಭಾಷಣಗಳು ಅರಣ್ಯ ರೋದನವಾಗಿಯೇ ಪರಿಣಮಿಸಿದುವು ಪ್ರಯಾಣಿಕರಿಂದಲೂ ಸರಕು ಸಾಗಾಟದಿಂದಲೂ ದೊರೆಯುವ ಆದಾಯವು ಯುದ್ಧದ ಪರಿಣಾಮವಾಗಿ ೧೯೩೯ರಿಂದ ಒಂದೇ ಸಮನೆ ಏರುತ್ತಾ ಬಂದರೂ, ರೈಲ್ವೆ ಪ್ರಯಾಣವನ್ನು ಸುಖಕರವೆನಿಸಲು ಯಾವುದೇ ಪ್ರಯತ್ನ ಕೈಗೊಳ್ಳಲ್ಪಡಲಿಲ್ಲ ನಿಜ ಹೇಳಬೇಕೆಂದರೆ ಓಡುವ ರೈಲ್ವೆಗಳ ಸಂಖ್ಯೆಯೇ ಕಡಿಮೆಯಾಯಿತು ಪ್ರಯಾಣಿಕರ ಒತ್ತಡ ಹೆಚ್ಚಿಕೊಂಡಂತೆ ಬಂಡಿಗಳಲ್ಲಿ ಜನ ಸಮ್ಮರ್ದಕ್ಕೆ ಮಿತಿಯೇ ಇಲ್ಲವಾಯಿತು. ಈ ವಿಪರೀತ ಪರಿಸ್ಥಿತಿಯು ಇನ್ನೂ ಪೂರ್ಣಹತೋಟಿಗೆ ಬಂದಂತೆ ಕಾಣುವದಿಲ್ಲ ಈ ಜನ ಸಮ್ಮರ್ದ ಯಾವರೀತಿಯಲ್ಲಿ ಬೆಳೆದು ಬಂದಿತೆಂಬುದನ್ನು ಯುದ್ಧ ಪೂರ್ವ ಹಾಗು ಯುದ್ಧೋತ್ತರದಲ್ಲಿ

(೧೧ನೇ ಪುಟ ನೋಡಿರಿ)

LIFE INSURANCE SELLING?

"Canara Mutual" has demonstrated that life insurance selling can be as respectable a profession as any other Canara Mutual agents enjoy respect and regard from the public

We have at our Head Office a newest psychological test that can state within an hour the chances of success in the field of a prospective agent Educated young men who want to carve out a brilliant independent career will please contact

THE MANAGING DIRECTOR,
The CANARA MUTUAL ASSURANCE CO. Ltd,
Head Office UDIPI, S INDIA ESTD 1935

ರಾಮತೀರ್ಥ ಬ್ರಾಹ್ಮಿ ತೈಲ

ರೈಜಿಸ್ಟರ್ ನಂ ೧| [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ ಬುದ್ಧಿ ವಾಸಿಯಾಗುತ್ತದೆ ಕೂದಲು ಕಪ್ಪಾಗುತ್ತದೆ ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ

ಸ್ಪೆಶಿಯಲ್ ಕ್ರಯ. ದೊಡ್ಡ ಬಾಟ್ಲಿಗೆ ರೂ 3—6—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

SR
ಸೇವನೆಯು ಆನಂದಕ್ಕೆ,
ಅತ್ಯುತ್ತಮವಾದುದನ್ನೇ ಪಡೆಯಿರಿ
ಎಸ್. ಆರ್.
ತಾಜಾ ಎಸ್ಪಾಶ್ ತಂಬಾಕು
ಬೊಂಬಾಯಿ ಎಲೆ
ಇವುಗಳಿಂದ ತಯಾರಿಸಿದ
ಬೀಡಿಗಳಾಗಿರುತ್ತವೆ.
S.R. Beedi Works.

ನೀವೇಲಿಯ ಭೂಗರ್ಭ ನಿಧಿ

ದಕ್ಷಿಣದ ಔದ್ಯಮಿಕ ಅಭಿವೃದ್ಧಿಗೆ ನೆರವಾಗಬಲ್ಲ ಕಂದು ಕಲ್ಲಿದ್ದಲು

ಭಾರತವು ಔದ್ಯಮಿಕ ಅಭಿವೃದ್ಧಿಯ ಹೊಂದುವುದಕ್ಕೆ ಖನಿಜ ಸಂಪತ್ತಿನ ಗಳ ಪ್ರಯೋಜನವನ್ನು ಪಡೆಯುವುದು ಅಗತ್ಯ. ನಮ್ಮಲ್ಲಿ ಮೂಲೋದ್ಯೋಗಗಳನ್ನು ಅಭಿವೃದ್ಧಿಗೊಳಿಸಲು ಅತ್ಯಾವಶ್ಯವೆನಿಸಿದ ಕಬ್ಬಿಣ ಮತ್ತು ಕಲ್ಲಿದ್ದಲು ಗಳವಾಗಿದೆ ಎಂದು ಸಂಶೋಧನೆಗಳಿಂ ತಿಳಿದುಬಂದಿದೆ. ಭಾರತದಲ್ಲಿ ಮುಖ್ಯವ ಕಲ್ಲಿದ್ದಲು ಗಣಿಗಳು ಈಶಾನ್ಯ ಭಾಗದಲ್ಲಿ ಬಿಹಾರ ಮತ್ತು ಬಂಗಾಳ ರಾಜ್ಯದಲ್ಲಿ ಹಬ್ಬಿವೆ. ಭಾರತದ ಒಟ್ಟು ಉತ್ಪಾದನೆಯ ನೂರರಲ್ಲಿ ೮೦ ಅಂಶ ಈ ಪ್ರದೇಶದಲ್ಲೇ ಬರುತ್ತದೆ. ಮಧ್ಯಪ್ರದೇಶ, ಒರಿಸ್ಸಾ, ಹೈದರಾಬಾದು, ಅಸ್ಸಾಮುಗಳ ಲ್ಲೂ ಉತ್ಪಾದನೆ ಮಿತಪ್ರಮಾಣದಲ್ಲಿ. ಇವುಗಳಲ್ಲದೆ ಮದ್ರಾಸು ಕಾಶ್ಮೀರ, ಮುಂತಾದೆಡೆಗಳಲ್ಲಿ ಕಲ್ಲಿದ್ದಲಿನ ನಿಕ್ಷೇಪಗಳಿವೆ ಎಂಬುದು ಕಂಡುಬಂದಿದೆ. ಮದ್ರಾಸಿನ ದಕ್ಷಿಣ ಆರ್ಕಾಟು ಜಿಲ್ಲೆಯ ಈಚೆಗೆ ಲಿಗ್ನೈಟ್ (ಅಥವಾ ಕಂದು ಕಲ್ಲಿದ್ದಲು) ದೊರೆಯುತ್ತದೆಂದು ದು, ಅದನ್ನು ಪಡೆದು ಉಪಯೋಗಿ ಪ್ರಾಥಮಿಕವ್ಯವಸ್ಥೆಗಳು ನಡೆದಿವೆ.

ಮಹತ್ವದ ನಿಕ್ಷೇಪ

ಕಳೆದ ತಿಂಗಳು ಮದ್ರಾಸು ರಾಜ್ಯದ ದ್ಯೋಗಿಕ ಮಂತ್ರಿ ಡಾ। ಯು. ಕೃಷ್ಣರಾಯರು ದಕ್ಷಿಣ ಆರ್ಕಾಟಿನ ನೀವೇಲಿಯಲ್ಲಿ ಕಂದು ಕಲ್ಲಿದ್ದಲನ್ನೆತ್ತುವ ಸಾಹಸದ ಉದ್ಘಾಟನೆಯನ್ನು ಮಾಡಿದರು. ಕಂದು ಕಲ್ಲಿದ್ದಲು ಉರುವಲಿಗೆ ಬಹಳ ಉಪಯೋಗಕರವೆನಿಸಿದೆ. ಭೂಗರ್ಭದಲ್ಲಿ ನಿಹಿತವಾಗಿರುವ ಈ ಉರುವಲನ್ನು ಎತ್ತಿ, ಮಾನವನ ನಿತ್ಯೋಪಯೋಗಕ್ಕೆ ಬಳಸುವ ಪ್ರಯತ್ನವನ್ನು ಕೈಗೊಂಡುದರಿಂದ ನ್ನು ಕಟ್ಟಿಗೆಯ ಸಮಸ್ಯೆ ಕೆಲಮಟ್ಟಿಗೆ ಕಮೆಯಾದೀತು. ದಕ್ಷಿಣ ಆರ್ಕಾಟಿನಲ್ಲಿ ಕಂದು ಕಲ್ಲಿದ್ದಲು ದೊರೆಯುತ್ತದೆಂದು ಸಂಗತಿ ತಿಳಿದು ಬಂದಂದಿನಿಂದ ನೀವೇಲಿ ಪ್ರದೇಶಕ್ಕೆ ಬಹಳ ಮಹತ್ವ ಪ್ರಾಪ್ತವಾಗಿದೆ. ಕಡಲೂರಿನಿಂದ ೨೪ ಮೈಲು ಮತ್ತು ಮದ್ರಾಸಿನ ನೈಋತ್ಯಕ್ಕೆ ೧೩೫ ಮೈಲು ದೂರದಲ್ಲಿ ನೀವೇಲಿ ಇದೆ. ಕೆಲವೇ ದಿನಗಳ ಹಿಂದೆ ಯಾರೊಬ್ಬರೂ ಕಂದು ಕಲ್ಲಿದ್ದಲೆಂದರೇನು ಎಂಬುದನ್ನು ತಿಳಿದು ಅದರ ಪ್ರಯೋಜನವನ್ನು ಮನಗಾಣಲು ಯಲಿಲ್ಲ. ಆದರೆ ಇಂದು ಪರಿಸ್ಥಿತಿಯೇ ಬೇರಾಗಿದೆ. ತಮಿಳುನಾಡಿನಲ್ಲಿ ಜವುಳಿ ಗಿರಣಿಗಳು ಹೆಚ್ಚಬೇಕಾದರೆ ಮತ್ತು ವಿದ್ಯುಚ್ಛಕ್ತಿಯು ಪ್ರಸಾರವಾಗಬೇಕಿದ್ದರೆ ಈ ಕಲ್ಲಿದ್ದಲಿನ ನಿಕ್ಷೇಪಗಳು ನೆರವಾಗಬಲ್ಲವೆಂದು ಎಲ್ಲರೂ ಕಂಡುಕೊಂಡಿರುರು.

ತೂತು ಬಾವಿಗಳು

ಇಲ್ಲಿ ಸುಮಾರು ೩೩ ಮೈಲು ಕ್ಷೇತ್ರದಲ್ಲಿ ಕಂದು ಕಲ್ಲಿದ್ದಲಿನ ನಿಕ್ಷೇಪವಿದೆ. ಕಲ್ಲಿದ್ದಲನ್ನು ಉರವಲಿಗಾಗಿ ಯಥೇಷ್ಟ ಬಳಸಬಹುದಲ್ಲದೆ ಅತ್ಯಮೂಲ್ಯವಾದ ಪೆಟ್ರೋಲಿಯಂ, ಡೀಸೆಲ್ ಎಣ್ಣೆ, ಮೇಣ ಮತ್ತು ಹೈಡ್ರೋಕಾರ್ಬನ್ ಗ್ಯಾಸ್ ಮುಂತಾದವುಗಳನ್ನೂ ಇದರಿಂದ ಪಡೆಯಬಲ್ಲೆವು. ಪ್ರಕೃತ ಈ ನಿಕ್ಷೇಪದ ಪ್ರಾಥಮಿಕ ಸರ್ವೆ ಮಾತ್ರ ನಡೆಯುತ್ತಿದೆ. ಇಲ್ಲಿ ಮಹೋದ್ಯಮಗಳು ಬೆಳೆದುಬಂದಾವೆಂದೂ ಹೇಳುವುದು ಸರಿಯಲ್ಲ ಏಕೆಂದರೆ ಕಲ್ಲಿದ್ದಲನ್ನು ತೆಗೆಯುವಾಗ ಎತ್ತಿಹಾಕಿದ ಚೆಲುವಾದ ಕೆಂಪುಮಣ್ಣಿನಿಂದ ಮಕ್ಕಳ ಆಟದ ಬೊಂಬೆಗಳು, ಪಿಂಗಾಣಿಯ ಒಡವೆಗಳು, ಇಟ್ಟಿಗೆ ಮುಂತಾದವುಗಳನ್ನು ಗೃಹೋದ್ಯಮದ ಮಟ್ಟದಲ್ಲಿ ಕೈಗೊಳ್ಳಲು ಹವಣಿಸಿರುವರು. ಈ ಕಲ್ಲಿದ್ದಲು ಕ್ಷೇತ್ರದಿಂದ ರಾಜ್ಯಕ್ಕೆ ಒಂದು ಸಣ್ಣ ನೀರಾವರಿ ಯೋಜನೆ ದೊರೆತಂತಾಗಿದೆ. ದಕ್ಷಿಣ ಆರ್ಕಾಟಿನಂಥ ಶುಷ್ಕ ಭೂಮಿಯಲ್ಲಿ ತೂತು ಬಾವಿಗಳು ಕಾಣಿಸಿಕೊಂಡಿವೆ. ಈಗಿನ ಅಂದಾಜಿನಂತೆ ಎರಡು ಸಾವಿರ ಎಕ್ರೆ ಪ್ರದೇಶವನ್ನು ನೀರಿನವರೆಗೆ ಈ ಬಾವಿಗಳು ಒಳಪಡಿಸಬಲ್ಲವು. ಕೆಲವು ಬಾವಿಗಳಲ್ಲಿ ಒರತೆಯು ಒತ್ತಡವು ಎಷ್ಟು ಹೆಚ್ಚಿದೆ ಎಂದರೆ ಪ್ರತಿ ನಿಮಿಷಕ್ಕೆ ಎರಡೂವರೆ ಸಾವಿರ ಗೆಲನು ನೀರು ಚಿಮ್ಮುತ್ತದೆ. ಸದ್ಯಕ್ಕೆ ೧೭೦ ತೂತು ಬಾವಿಗಳು ಇದ್ದಿದ್ದು ಪ್ರತಿಯೊಂದು ಬಾವಿ ಪತ್ತರಿಂದ ಎಪ್ಪತ್ತು ಎಕ್ರೆ ಭೂಮಿಗೆ ವರ್ಷವಿಡೀ ನೀರನ್ನು ಉಣಿಸುತ್ತವೆ.

ಪ್ರಾಯೋಗಿಕ ಪ್ರಯತ್ನ

ಪ್ರಯೋಗಿಕ ಯೋಜನೆಯು ಈ ವರ್ಷದಲ್ಲಿ ಮುಗಿದಾಗ ೧೬೦೦೦ ಟನ್ನು ಕಂದು ಕಲ್ಲಿದ್ದಲನ್ನು ತೆಗೆದಾಗುತ್ತದೆ. ಇಲ್ಲಿ ಭೂಗರ್ಭದಲ್ಲಿ ನಿಕ್ಷೇಪಿಸಲ್ಪಟ್ಟ ಕಲ್ಲಿದ್ದಲಿನ ಪ್ರಮಾಣ ಸುಮಾರು ಇನ್ನೂರು ಕೋಟಿ ಟನ್ನುಗಳು. ಪ್ರಾಯೋಗಿಕ ಪ್ರಯತ್ನವು ಯಶಸ್ವಿಯಾದಲ್ಲಿ ಕಲ್ಲಿದ್ದಲನ್ನು ದೊಡ್ಡ ವ್ಯಾಪಾರೀ ಮಟ್ಟದಲ್ಲಿ ಎತ್ತುವ ಹೊಸ ಪ್ರಯತ್ನವನ್ನು ಕೈಗೊಳ್ಳಲಾಗುವುದು. ನೀವೇಲಿಯ ಈ ಕಂದು ಕಲ್ಲಿದ್ದಲು ಉತ್ತಮವರ್ಗದ ಕಲ್ಲಿದ್ದಲನ್ನು ಬಹುಮಟ್ಟಿಗೆ ಹೋಲುತ್ತದೆ. ಆದಕಾರಣ ದಕ್ಷಿಣದ ಔದ್ಯಮಿಕ ಅಭಿವೃದ್ಧಿಗಾಗಿ ಉತ್ತರ ಭಾರತದಿಂದ ಕಲ್ಲಿದ್ದಲನ್ನು ತರಿಸಿಕೊಳ್ಳುವ ತೊಂದರೆ ತಾಪತ್ರಯ ಮತ್ತು ಖರ್ಚು ವೆಚ್ಚಗಳು ಉಳಿಯುತ್ತವೆ. ಉದಾಹರಣೆಗೆ ಮದ್ರಾಸಿನ ವಿದ್ಯುಚ್ಛಕ್ತಿ ಕೇಂದ್ರವು ಈ ಲೆಕ್ಕದಲ್ಲಿ ದಿನಕ್ಕೆ ೬೦೦೦ ರೂಪಾಯಿ ಉಳಿತಾಯವನ್ನು ಹೊಂದುತ್ತದೆಂದು ಅಂದಾಜು. ನೀವೇಲಿಯಲ್ಲಿ ಕಲ್ಲಿದ್ದಲನ್ನು ಅಗೆದು ತೆಗೆಯುವ ಕೆಲಸ ಉಳಿದ ಕಡೆಗಳ ಮಾದರಿಯಂತಿರದೆ, ಸಾಮಾನ್ಯವಾಗಿ ನಾವು ಕೆರೆ ತೋಡುವಂತಿದೆ. ಮಣ್ಣು ಬಹಳ ಮಿದುವಾಗಿದ್ದು ನೀರಿನ ಒರತೆಯಿಂದ ಕೂಡಿರುತ್ತದೆ. ಆದುದರಿಂದ ಸೊಂಟ ಮಟ್ಟ ನೀರಿನಲ್ಲಿ ನಿಂತುಕೊಂಡು ಕಲ್ಲಿದ್ದಲನ್ನು ಎತ್ತಬೇಕಾಗುತ್ತದೆ. ಈ ಏಕಾಂತ ಪ್ರದೇಶದಲ್ಲಿ ಪರಿಶ್ರಮವನ್ನು ವಹಿಸಿ ದುಡಿಯುವವರಲ್ಲಿ ಶ್ರೀ. ಎಚ್. ಕೆ. ಫೋಣ ಮತ್ತು ಶ್ರೀ ಪಾವುಲ್ ಆರ್. ಈರಿಚ ಇವರ ಹೆಸರು ಉಲ್ಲೇಖನೀಯ. ಮೊದಲಿನವರು ಕಳೆದಾರು ವರ್ಷಗಳಿಂದ ಈ ಯೋಜನೆಯ ಹೊಣೆ ಹೊತ್ತಿರುವರು. ಈರಿಚರ ಸೇವೆಯನ್ನು ಮಗಾಗಿ ಅಮೇರಿಕಾ ಒದಗಿಸಿದೆ.

ನಮ್ಮ ರೈಲ್ವೆಯ ಕಾರ್ಯಕ್ಷಮತೆ

ಭಾರತ ವಿಭಜನೆಯ ಪರಿಣಾಮವಾಗಿ ಅಸ್ಸಾಮಿನೊಡನೆ ನೇರದ ರೈಲ್ವೆ ಸಂಬಂಧ ತಪ್ಪಿತು. ಗಡಿನಾಡಿನ ಭದ್ರತೆಯನ್ನು ಕಾಯ್ದುಕೊಳ್ಳುವ ಮತ್ತು ವ್ಯಾಪಾರ ವ್ಯವಹಾರ ಹಾಗು ಪ್ರಯಾಣ ಸೌಕರ್ಯದ ದೃಷ್ಟಿಯಿಂದ ಅಸ್ಸಾಮನ್ನು ರೈಲು ಮೂಲಕ ಭಾರತಕ್ಕೆ ಜೋಡಿಸುವುದು ಅವಶ್ಯವೆನಿಸಿತು.

ಇದಕ್ಕಾಗಿ ಒಂದು ಯೋಜನೆ ಮಾಡಿ, ಸುಮಾರು ೪೩೦ ಲಕ್ಷ ರೂಪಾಯಿಗಳ ವೆಚ್ಚದಿಂದ ೧೪೩ ಮೈಲು ಉದ್ದದ ರೈಲ್ವೆ ಮಾರ್ಗ ನಿರ್ಮಾಣಗೊಂಡಿತು. ಈ ದಾರಿಯು ಬಿಹಾರದ ಪೂರ್ಣಿಯಾ ಜಿಲ್ಲೆಯಲ್ಲಿ ೪೦ ಮೈಲು, ಪಶ್ಚಿಮ ಬಂಗಾಳದ ದಾರ್ಜಿಲಿಂಗ ಮತ್ತು ಜಲಪಗುರಿ ಜಿಲ್ಲೆಗಳಲ್ಲಿ ೬೫ ಮೈಲು ಕೂಚ ಬಿಹಾರ ರಾಜ್ಯದಲ್ಲಿ ೫ ಮೈಲು, ಮತ್ತು ಅಸ್ಸಾಮಿನ ಗೋಲಪಾರ ಜಿಲ್ಲೆಯಲ್ಲಿ ೩೦ ಮೈಲು ಸಾಗುತ್ತದೆ.

ಈ ರೈಲ್ವೆಯನ್ನು ರಚಿಸುವಾಗ ಕೆಲವು ಘನವಾದ ಆತಂಕಗಳನ್ನು ಇದಿರಿಸಬೇಕಾಯಿತು. ಘೋರಾರಣ್ಯ ಹಾಗು ಪರ್ವತ ಪ್ರದೇಶಗಳ ನಡುವಿನ ರೈಲ್ವೆ ಹೋಗಬೇಕಿತ್ತು. ಇಲ್ಲಿ ಕೆಲಸ ಮಾಡುವುದೇನು ಸುಲಭವಲ್ಲ. ಸಾಲದುದಕ್ಕೆ ತೀವ್ರ ಪ್ರವಾಹಗಾಮಿಗಳಾದ ನದಿಗಳು ಅಡ್ಡಬಂದು ದಾರಿ ಕಟ್ಟುತ್ತಿದ್ದವು. ಇವುಗಳಿಗೆ ಸಂಕ ಕಟ್ಟಿ ಮುಂದುವರಿವುದು ಕಠಿಣ ಕೆಲಸವೇ. ಹೀಗಿದ್ದರೂ ಇಡೀ ... ವರ್ಷದಲ್ಲಿಯೇ ಪೂರ್ಣಗೊಂಡಿತು.

೧೯೪೮ರ ಜನವರಿ ೨೬ನೆಯ ದಿನಾಂಕ ಈ ಯೋಜನೆಯನ್ನು ಕೈಕೊಂಡು, ೧೯೪೯ನೇ ದಿಸೆಂಬರ ೫ನೇ ದಿನಾಂಕ ರೈಲ್ವೆ ಪ್ರಯಾಣಕ್ಕೆ ಯೋಗ್ಯವಾಗಿ ರೂಪಿಸಿದರು. ವರ್ಷಕ್ಕೆ ೬ ತಿಂಗಳ ಕಾಲ ಸೊಳ್ಳೆ ಮಳೆ ಮುಂತಾಗಿ ಕೆಲಸ ಮಾಡದ ಪರಿಸ್ಥಿತಿ ಇದ್ದುದರಿಂದ ಕೇವಲ ಹನ್ನೆರಡು ತಿಂಗಳ ಅವಧಿಯಲ್ಲಿ ಈ ಕೆಲಸ ಪೂರೈಸಿತು.

ಈ ಯೋಜನೆಯಂತೆ ಸುಮಾರು ೬೦ ಕೋಟಿ ಘನ ಅಡಿ ಮಣ್ಣು ತೆಗೆಯಲಾಯಿತು. ೩೫ ಸಾವಿರ ಟನ್ನು ಸಿಮೆಂಟನ್ನು ಉಪಯೋಗಿಸಿದರು. ರೈಲು ಪಟ್ಟಿಯ ಹೊರತು ಉಳಿದ ಕೆಲಸಗಳಿಗೆ ಹತ್ತು ಸಾವಿರ ಟನ್ನು ಉಕ್ಕನ್ನು ಬಳಸಿದರು.

ಭೂಕಂಪದ ಹಾವಳಿ ಈ ಪ್ರದೇಶದಲ್ಲಿ ... ಗಳನ್ನೂ ಭೂಕಂಪ ನಿರೋಧಿಸುವ ರೀತಿಯಲ್ಲಿ ಕಟ್ಟಿಗುವ ಭಾರತೀಯ ರೈಲ್ವೆ ಕಾರ್ಯಕ್ಷಮ ರೀತಿಯಿಂದ ನಡೆದು ಕೊಳ್ಳುತ್ತಿರುವುದಕ್ಕೆ ಈ ರೈಲ್ವೆ ಉದಾಹರಣೆ.

1952

23RD ANNUAL REPORT

NEW BUSINESS COMPLETED	over Rs.	30,36,000
PREMIUM & OTHER INCOME	„ Rs.	8,01,000
LIFE AND RESERVE FUNDS	„ Rs.	27,99,000
TOTAL CLAIMS PAID TODATE	„ Rs.	7,80,000
BUSINESS IN FORCE	„ Rs.	1,35,00,000

RENEWAL EXPENSE RATIO 17.7%

INTEREST EARNED 3.47%

* * * * * * *

WANTED in all important centres enterprising applicants for FIELD appointments. Attractive rates of commission or salary offered.

'PRUDENT PEOPLE PREFER POPULAR POLICIES'

Popular Insurance Company Ltd.

'Popular Buildings', MANGALORE-1.

ಹಿರಿಯಡಕ ಮಹತೋಬಾರ್ ಶ್ರೀ ವೀರಭದ್ರ ದೇವಸ್ಥಾನ

ಪ್ರಕಟಣೆ

ಮಹತೋಬಾರ್ ಶ್ರೀ ವೀರಭದ್ರ ಸ್ವಾಮಿ ಸನ್ನಿಧಿಯಲ್ಲಿ ಕಾಲೋತ್ಸವ ಜರಗುವ ಮಹಾರಥೋತ್ಸವ ಕಾರ್ಯಕ್ರಮಗಳು ತಾ 29-4-53ನೇ ಬುಧವಾರ ಪ್ರಾರಂಭವಾಗಿ ತಾ. 4-5-53ನೆ ಸೋಮವಾರ ತನಕ ನಡೆಯಲಿರುವವು. ತಾ 2-5-53ನೇ ಶನಿವಾರ ದಿನ ಮಹಾರಥೋತ್ಸವ ಜರಗುವುದು. ತತ್ಸಂಬಂಧ ಭಕ್ತಾದಿಗಳು ಇಷ್ಟಮಿತ್ರರೊಡಗೂಡಿ ಬಂದು ದೇವತಾ ಕಾರ್ಯಗಳಲ್ಲಿ ಭಾಗವಹಿಸಿ ಶ್ರೀ ದೇವರ ಗಂಧಪ್ರಸಾದಗಳನ್ನು ಸ್ವೀಕರಿಸಿ ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸಲಾಗುತ್ತದೆ.

ವೈ. ನಾರಾಯಣ ಹೆಗ್ಡೆ, ಎಡ್ವೋಕೇಟ್
ಬಿ. ಹಿರಿಯಣ್ಣ ಹೆಗ್ಡೆ, ಎಡ್ವೋಕೇಟ್
ಟ್ರಸ್ಟೀಸ್

ಎ. ಜಗಂಜೀವನ ಆಳ್ವ
ಮೇನೇಜಿಂಗ್ ಟ್ರಸ್ಟಿ.

ನಮ್ಮ ರೇಲ್ವೇಗಳ ಶತಸಾಂವತ್ಸರಿಕೋತ್ಸವ

ವಿಮಾನ ಸಾರಿಗೆಯನ್ನು ರಾಷ್ಟ್ರೀಕರಿಸುವ ಕೇಂದ್ರ ಸರಕಾರದ ಮಸೂದೆ ಪರಿಶೀಲನ ಸಮಿತಿಗೆ

ರಾಷ್ಟ್ರೀಯ ಉದ್ಯಮ

ಕಳೆದ ಗುರುವಾರ ದಿನ ಭಾರತದಲ್ಲಿ ರೇಲ್ವೆಗಳ ಶತಾಬ್ದಿಯನ್ನು ವಿಜೃಂಭಣೆಯಿಂದ ಆಚರಿಸಿದರು. ಈ ಸಂಬಂಧದಲ್ಲಿ ಹೊಸದಿಲ್ಲಿಯಲ್ಲಿ ಏರ್ಪಡಿಸಲಾದ ಸಮಾರಂಭದ ಅಧ್ಯಕ್ಷತೆಯನ್ನು ನಮ್ಮ ಉಪರಾಷ್ಟ್ರಾಧ್ಯಕ್ಷರಾದ ಡಾ| ಎಸ್. ರಾಧಾಕೃಷ್ಣನ್ನರು ವಹಿಸಿದ್ದರು. ರೇಲ್ವೆ ಮಂತ್ರಿ ಶ್ರೀ ಲಾಲ ಬಹಾದ್ದೂರ ಶಾಸ್ತ್ರಿಯವರು ಭಾರತೀಯ ರೇಲ್ವೆಗಳು ಇದುವರೆಗೆ ಸಾಧಿಸಿದ ಪ್ರಗತಿ ಮತ್ತು ದೇಶಕ್ಕೆ ಸಲ್ಲಿಸಿದ ಸೇವೆಯನ್ನು ವಿಮರ್ಶಿಸಿ ಮಾತನಾಡಿದರು. ನಮ್ಮ ರೇಲ್ವೆಗಳು ಈ ಮೊದಲು ದೇಶಕ್ಕೆ ಬಹಳ ಚೆನ್ನಾಗಿ ಸೇವೆಸಲ್ಲಿಸಿವೆ; ಇನ್ನು ಮುಂದೆ ಹಿಂದಿನದಕ್ಕಿಂತಲೂ ಅಧಿಕ ಸೇವೆಸಲ್ಲಿಸುವುದು ನಿಶ್ಚಯವೆಂಬ ಅಭಿಪ್ರಾಯವನ್ನು ರೇಲ್ವೆಮಂತ್ರಿಗಳು ವ್ಯಕ್ತಗೊಳಿಸಿದರು. ಒಂದು ರಾಷ್ಟ್ರೀಯ ಉದ್ಯಮದ ಶತಸಾಂವತ್ಸರಿಕೋತ್ಸವವನ್ನು ನೋಡುವುದೆಂದರೆ ಸಣ್ಣ ಮಾತಲ್ಲ. ಈಗ ಎರಡನೆ ಶತಮಾನ ಪ್ರಾರಂಭವಾಗುವಾಗ ಭರದಲ್ಲಿ ಹೆಚ್ಚುತ್ತಿರುವ ಸಾರಿಗೆ ಸೌಕರ್ಯದ ಬೇಡಿಕೆಯನ್ನು ಸಮರ್ಥನೀಯ ರೀತಿಯಲ್ಲಿ ರೇಲ್ವೆಗಳು ಪೂರೈಸಿಯಾವೆಂದು ಆಶಿಸಿಂದು ಒರುತ್ತದೆ. ರೇಲ್ವೆಯ ಅಭಿವೃದ್ಧಿಯು ನಮ್ಮ ಆರ್ಥಿಕ ಸಂಪತ್ತು ಮತ್ತು ಔದ್ಯಮಿಕ ಕ್ಷೇತ್ರದ ಪ್ರಗತಿಯನ್ನು ಹೊಂದಿಕೊಂಡಿದೆ. ನಮ್ಮ ಸಂಪತ್ತು ಹೆಚ್ಚಿಕೊಂಡಂತೆಲ್ಲ ಅದರಲ್ಲಿ ರೇಲ್ವೆಗಳ ಪಾಲೂ ಅಧಿಕಗೊಳ್ಳುವುದು. ಸ್ವಾತಂತ್ರ್ಯೋತ್ತರದಲ್ಲಿ ರಾಷ್ಟ್ರೀಕೃತ ರೇಲ್ವೆಗಳನ್ನು ಪುನರ್ಘಟಿಸಿದ್ದು ಒಂದು ಮಹತ್ವದ ಸಾಧನೆ ಎನ್ನಬಹುದು ಬೇರೆ ಬೇರೆಯಾಗಿದ್ದ ೩೨ ರೇಲ್ವೆಗಳನ್ನು ಆರು ಪ್ರಾದೇಶಿಕ ರೇಲ್ವೆಗಳ ರೂಪದಲ್ಲಿ ಸಂಘಟಿಸಲಾಗಿದೆ. ಸಾರಿಗೆ ಹಾಗು ಪ್ರವಾಸದ ದರಗಳಲ್ಲಿ ಸಾಮಂಜಸ್ಯವನ್ನು ಸ್ಥಾಪಿಸಲು ರೇಲ್ವೆಗಳು ಪ್ರಯತ್ನಿಸಿವೆ. ಮೂರನೇ ವರ್ಗದ ಪ್ರಮಾಣಿಕರಿಗೆ ಹೆಚ್ಚು ಸುಖಸೌಕರ್ಯಗಳನ್ನು ಒದಗಿಸಲು ನೋಡುತ್ತಿರುವರು. ರೇಲ್ವೆ ನೌಕರರ ಜೀವನ ಪರಿಸ್ಥಿತಿಯನ್ನು ಉತ್ತಮಗೊಳಿಸುವ ಕ್ರಮಗಳೂ ಕೈಗೊಳ್ಳಲ್ಪಟ್ಟವೆ ಎಂದು ಮುಂತಾಗಿ ರೇಲ್ವೆ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದರು.

ಸಾರಿಗೆಯಲ್ಲಿ ರೇಲ್ವೆಗಳ ಸ್ಥಾನ

ರಾಷ್ಟ್ರೀಕೃತ ಉದ್ಯಮವಾಗಿರುವ ರೇಲ್ವೆಗಳಲ್ಲಿ ಸುಮಾರು ಹತ್ತು ಲಕ್ಷ ಜನರು ಕೆಲಸ ಮಾಡುತ್ತಿರುವರು. ರೇಲ್ವೆ ಮಾರ್ಗವು ಇಂದು ಸುಮಾರು ೩೩,೦೦೦ ಮೈಲುಗಳಷ್ಟು ಉದ್ದವಿದೆ; ಮತ್ತು ಈ ಉದ್ಯಮದಲ್ಲಿ ತೊಡಗಿದ ಬಂಡವಾಳವು ೮೩೦.೫ ಕೋಟಿ ರೂಪಾಯಿಗಳಷ್ಟಿದೆ. ಪ್ರತಿ ವರ್ಷವೂ ಸುಮಾರು ೧೨೦ ಕೋಟಿ ಜನ ಪ್ರವಾಸಿಕರು ರೇಲ್ವೆಗಳ ಮೂಲಕ ಪ್ರಯಾಣಿಸುವರು. ೯೦ ಲಕ್ಷ ಟನ್ನುಗಳಷ್ಟು ಸರಕುಗಳನ್ನು ರೇಲ್ವೆ ಹೊತ್ತು ಸಾಗುತ್ತದೆ. ಭಾರತದ ಪ್ರಕೃತ ಪರಿಸ್ಥಿತಿಯಲ್ಲಿ ರೇಲ್ವೆಗಳು ಮಹೋದ್ಯಮಗಳಲ್ಲಿ ಒಂದಾಗಿ ಪರಿಣಮಿಸಿವೆ ಸಾರಿಗೆ ಸೌಕರ್ಯದ ದೃಷ್ಟಿಯಿಂದ ನೋಡಿದರೂ ರೇಲ್ವೆಗಳ ಸ್ಥಾನವು ದೊಡ್ಡದು. ಜಲಮಾರ್ಗ, ವಾಯು ಮಾರ್ಗಗಳು ನಮ್ಮದೇಶದಲ್ಲಿ ಇನ್ನೂ ಶೈಶವಾವಸ್ಥೆಯಲ್ಲಿವೆ ರೈಲ್ವೆಯನ್ನುಳಿದ ಇತರ ನೆಲಮಾರ್ಗದ ಪ್ರಗತಿಯೂ ಹೇಳಿಕೊಳ್ಳುವಷ್ಟು ಕೈಗೂಡಿಲ್ಲ. ಇಂಥಚರದಲ್ಲಿ ಒಳನಾಡಿನ ಸಾರಿಗೆ ಸೌಕರ್ಯದ ಏಕಮೇವ ಸಾಧನವಾಗಿ ರೇಲ್ವೆಗಳು ಕೆಲಸ ಮಾಡುತ್ತಿವೆ. ಪ್ರತಿ ಮೂರು ನಿಮಿಷಕ್ಕೆ ೬,೨೭೩ ನಿಲ್ದಾಣಗಳಲ್ಲಿ ೭೦,೦೦೦ ಪ್ರವಾಸಿಕರು ಟಿಕೇಟು ಕೊಂಡುಕೊಳ್ಳುತ್ತಿರುವರೆಂದು ತಿಳಿಯುತ್ತದೆ. ಆದರೆ ಈಚೆಗೆ ಕೆಲವು ವರ್ಷಗಳಿಂದ ರೈಲ್ವೆಗಳಲ್ಲಿ ಜನದಟ್ಟಣೆಯು ಮಿತಿಮೀರುತ್ತಿದೆ ಇದನ್ನು ನಿವಾರಿಸಲು ಅಗತ್ಯವಿರುವ ಹೊಸ ಇಂಜಿನುಗಳು ಮತ್ತು ಪ್ರವಾಸಿಕರ ಡಬ್ಬಿಗಳ ಸಂಗತಿಯಲ್ಲಿ ಇನ್ನು ಸ್ವಾವಲಂಬನವನ್ನು ನಾವು ಪಡೆದಿಲ್ಲ ಆದರೂ ಚಿತ್ತರಂಜನ ಹಾಗೂ ಪೆರಂಬೂರುಗಳಲ್ಲಿ ಉತ್ಪಾದಿತವಾದ ರೇಲ್ವೆ ಯಂತ್ರೋಪಕರಣಗಳಿಂದ ನಮ್ಮ ರೇಲ್ವೆಗಳು ಪ್ರಯೋಜನ ಪಡೆಯುವುದು! ಖಂಡಿತ.

ಸ್ವಯಂ ಪೂರ್ಣತೆಯ ಧ್ಯೇಯ

ಉದ್ದಿಮೆ ಮತ್ತು ವ್ಯವಸಾಯಗಳಿಗೆ ರೇಲ್ವೆಗಳು ಸಾಕಷ್ಟು ಉತ್ತೇಜನವನ್ನು ಕೊಟ್ಟು ಅನುಕೂಲತೆ ಒದಗಿಸಿದ್ದರೂ ಪ್ರಯಾಣಿಕರ ಹಿತಸೌಕರ್ಯಗಳನ್ನು ದುರ್ಲಕ್ಷಿಸಲಾರದಷ್ಟು ಮಟ್ಟಿಗೆ ಪ್ರವಾಸಿಕರಿಂದ ಬರುವ ಉತ್ಪನ್ನವಿದೆ. ಆದುದರಿಂದ ಇತರ ಉದ್ಯಮಗಳಿಗೆ ಅನುಕೂಲವೆನಿಸುವ ಸುಧಾರಣೆಗಳು ರೇಲ್ವೆಗಳಲ್ಲಿ ಕೈಕೊಳ್ಳುವಾಗ ಪ್ರಯಾಣಿಕರ, ಮುಖ್ಯವಾಗಿ ಮೂರನೇ ವರ್ಗದವರ, ಹಿತಸೌಕರ್ಯಗಳನ್ನು ಅವಶ್ಯ ಗಮನಿಸಬೇಕು. ಕಲ್ಲಿದ್ದಲು, ಯಂತ್ರೋಪಕರಣಗಳು ಮುಂತಾದ ಕ್ಷೇತ್ರಗಳಲ್ಲಿ ಸ್ವಯಂಪೂರ್ಣತೆಯ ಧೋರಣೆಯನ್ನಿಟ್ಟುಕೊಂಡು ರೇಲ್ವೆಗಳು ಅಭಿವೃದ್ಧಿಯನ್ನು ಸಾಧಿಸತಕ್ಕದ್ದು. ಹೊಸತಾಗಿ ರೇಲ್ವೆ ವಿಸ್ತರಣ ಕಾರ್ಯವನ್ನು ಕುಂಠಿತಗೊಳಿಸಬೇಕಾಗಿ ಬಂದರೂ ಅಡ್ಡಿಯಿಲ್ಲ- ಇದ್ದ ಮಾರ್ಗಗಳ ಆತಂಕಗಳನ್ನು ನಿವಾರಿಸಿ ಯೋಗ್ಯ ಅನುಕೂಲತೆಗಳು ದೊರೆಯುವಂತಾಗಲಿ. ವಿದೇಶಗಳಲ್ಲಿ ರೇಲ್ವೆಗಳು ನೀಡುವ ಅನುಕೂಲತೆಗಳ ದೃಷ್ಟಿಯಿಂದ ನಾವಿನ್ನೂ ಬಹಳ ಹಿಂದುಳಿದಿರುವೆವೆಂಬುದನ್ನು ಅಲ್ಲಗಳೆಯಲಾರೆವು ಜನರಾದರೂ ರೇಲ್ವೆಗಳೊಡನೆ ನಿಕಟ ಸಂಪರ್ಕ ಇಟ್ಟುಕೊಳ್ಳಬೇಕು. ರಾಷ್ಟ್ರೀಯ ಮಹತ್ವದ ಈ ಉದ್ಯಮದ ಕುರಿತು ಯೋಗ್ಯ ಮಾಹಿತಿಯನ್ನು ಪಡೆಯಲು ಯತ್ನಿಸಬೇಕು. ಹೊಸದಿಲ್ಲಿಯಲ್ಲಿ ಏರ್ಪಡಿಸಿದ ರೇಲ್ವೆ ವಸ್ತುಪ್ರದರ್ಶನಾಲಯವನ್ನು ಐದು ಲಕ್ಷ ಜನರು ಸಂದರ್ಶಿಸಿರುವುದು, ರೇಲ್ವೆಗಳ ಇತಿಹಾಸ ಮತ್ತು ಅಭಿವೃದ್ಧಿ ಸೂಚಿಸುವ ಚಲನಚಿತ್ರದ ತಯಾರಿ ಹಾಗು ಇದೇ ದಿನಾಂಕ ೧೬ರಂದು ಟಪ್ಪಾಲು ಖಾತೆಯವರು ಮಾರಾಟಕ್ಕಿಟ್ಟ ರೇಲ್ವೆ ಶತಸಾಂವತ್ಸರಿಕೋತ್ಸವದ ಸ್ಮಾರಕ ಸ್ಟಾಂಪು ಮುಂತಾದವುಗಳು ಸಾರ್ವಜನಿಕ ತಿಳುವಳಿಕೆಯನ್ನು ಹೆಚ್ಚಿಸುವಲ್ಲಿ ನೆರವು ನೀಡಿದವು. ಏಶಿಯಾದ ಇತಿಹಾಸದಲ್ಲಿಯೇ ದೊಡ್ಡ ಸಾಹಸವನ್ನು ಕೈಗೂಡಿಸಿದ ಶ್ರೇಯಸ್ಸನ್ನು ನಮಗೆ ರೇಲ್ವೆಗಳು ತಂದುಕೊಟ್ಟಿರುವುದನ್ನು ಹೆಮ್ಮೆಯಿಂದ ಸ್ಮರಿಸಿ ಭವಿಷ್ಯದ ಕುರಿತು ಆಶಾವೃಷ್ಟಿಯನ್ನು ಬೀರೋಣ.

ಲೋಕಸಭೆಯ ಕಾರ್ಯಕಲಾಪ

ಪಾರ್ಲಿಮೆಂಟಿನಲ್ಲಿ ವಿಮಾನ ಸಾರಿಗೆಯನ್ನು ರಾಷ್ಟ್ರೀಕರಿಸುವ ಮಸೂದೆ ಪರಿಶೀಲಕ ಸಮಿತಿಗೆ ಒಪ್ಪಿಸಲ್ಪಡಬೇಕೆಂಬ ಬಗ್ಗೆ ಚರ್ಚೆ ನಡೆಯಿತು, ಆಂತರಿಕ ಹಾಗೂ ವಿದೇಶಗಳ ಸಾರಿಗೆಯ ವ್ಯವಸ್ಥೆಯನ್ನು ನೋಡಿಕೊಳ್ಳುವುದಕ್ಕೆ ಅನುಕೂಲವೆನಿಸಿದ ರೀ... ಯಲ್ಲಿ ಎರಡು ಕಾರ್ಪೊರೇಶನುಗಳ... ರಚಿಸಲು ಈ ಮಸೂದೆ ಅವಕಾಶ ಮಾ... ಕೊಡುತ್ತದೆ. ಈಗಿನ ವಿಮಾನ ಸಾ... ಕಂಪೆನಿಗಳಿಗೆ ಯೋಗ್ಯ ಪರಿಹಾರವ... ಕೊಡಲಾಗುವುದು. ವಿಮಾನ ಸಾ... ಯನ್ನು ಸುಧಾರಿಸಲು ಅವಶ್ಯವಿದ್ದ ಕ್ರ... ಗಳನ್ನು ಕೈಗೊಳ್ಳುವುದು ಪ್ರಕೃತದ... ಪೆನಿಗಳಿಗೆ ಅಸಾಧ್ಯವೆನಿಸಿದ್ದರಿಂದ ... ಕಾರವೇ ಈ ಹೊಣೆಯನ್ನು ತನ್ನ ಮೇ... ಹೊರಲು ನಿಶ್ಚಯಿಸಿ ರಾಷ್ಟ್ರೀಕರ... ಧೋರಣೆಯನ್ನು ಅನುಸರಿಸಿತು. ಇದ... ದ ವಿಮಾನ ಸಾರಿಗೆಯಲ್ಲಿದ್ದ ಕೆಲಸಗಾ... ರು ನಿರುದ್ಯೋಗಿಗಳಾದರೆಂದು ಭಾ... ಬಾರದು. ಈ ಕೆಲಸಗಾರರು ಮುಂದಕ... ಉಳಿಯುವರು. ಆದರೆ ಆಡಳಿತವು ... ತ್ರ ಹಸ್ತಾಂತರಗೊಳ್ಳುವುದು. ಇದ... ಮುಂಚೆ ಪಾರ್ಲಿಮೆಂಟಿನಲ್ಲಿ ಶ್ರೀ ಸಿ. ... ದೇಶಮುಖರು ಮುಂಡಿಸಿದ್ದ ಹಣಕಾ... ಮಸೂದೆಯ ಮೇಲೆ ಸುದೀರ್ಘವಾ... ವಿಚಾರ ವಿನಿಮಯ ನಡೆಯಿ... ಈ ವರ್ಷದ ಮುಂಗಡಪತ್ರವನ್ನು ... ಯ ಮುಂದಿಟ್ಟ ಸಮಯದಲ್ಲಿ ದೇಶ... ಖರು ಈಗಿದ್ದ ಕರಗಳಲ್ಲಿ ಅಲ್ಪಸ್ವಲ್ಪ ... ಲಾವಣೆಯನ್ನು ಮಾಡಲು ಸರಕಾರ ... ರ್ಧರಿಸಿದೆ ಎಂದಿದ್ದರಷ್ಟೆ ಸಭೆಯು ... ಸೂಚನೆಗಳನ್ನು ಕೂಲಂಕಷವಾಗಿ ... ಶೀಲಿಸಿತು. ಟಪ್ಪಾಲು ದರಗಳನ್ನು ಏ... ದ್ದರಿಂದ ತೊಂದರೆಯಾಗಿದೆ ಎಂದು ... ವರು ಆಕ್ಷೇಪ ಸೂಚಿಸಿದರು. ಆ... ನಷ್ಟದಲ್ಲಿ ನಡೆಯುತ್ತಿರುವ ಟಪ್ಪಾ... ಖಾತೆಯನ್ನು ಸ್ವಾವಲಂಬಿ ಮಾಡುವ... ಕ್ಕೆ ಹಾಗು ಗ್ರಾಮಾಂತರಗಳಲ್ಲಿ ಟಪ... ಲು ವ್ಯವಸ್ಥೆಯನ್ನು ವಿಸ್ತರಿಸುವುದಕ್ಕೆ ... ಕ್ರಮ ಅಗತ್ಯವೆಂದೂ ಇದರಿಂದ ಅ... ಸಂಖ್ಯಾಕರಾದ ಒಡವರಿಗೆ ಹಾನಿಯಿ... ವೆಂದೂ ಸಮಾಧಾನ ದೊರೆಯಿತು. ... ಶ್ಮೀರದಲ್ಲಿ ಸೈನ್ಯವಿಡುವ ವೆಚ್ಚ ಹಾ... ಸಂರಕ್ಷಣಾ ಖಾತೆಯ ಖರ್ಚುಗಳ ... ಕೆಲವರು ಸೂಚಿಸಿದ ಅಸಮಾಧಾನಕ... ತೃಪ್ತಿಕರವಾದ ವಿವರಣೆ ಕೊಟ್ಟ... ಸೈನ್ಯವನ್ನು ಸರಕಾರವು ಪೋ... ಸಲೇ ಬೇಕು. ಅದೂ ಕಾಶ್ಮೀರದ... ಆಯಕಟ್ಟಿನ ಪ್ರದೇಶದಲ್ಲಿ ಸೈ... ಪಿಟ್ಟಿದ್ದು ಅಗತ್ಯದ ಕ್ರಮ. ಕಾಶ್ಮೀ... ಲ್ಲಿರುವ ನಮ್ಮ ಸೈನಿಕರಸಂಖ್ಯೆ ಈಗ ... ಬ ತಗ್ಗಿದೆ. ಇವರ ಸಂಬಂಧದಲ್ಲಿ ಸರ... ರಕ್ಕೆ ಒರುವ ಅಧಿಕ ವೆಚ್ಚವೆಂದರೆ ಸೈ... ರಿಗೆ ರಣರಂಗದ ಭತ್ತೆ ಕೊಡುವುದು ... ತ್ರ. ಇದು ಅತ್ಯಲ್ಪವೆಂದು ಮುಂತ... ದೇಶಮುಖರು ಹೇಳಿ ಹಣಕಾಸಿನ ... ಸೂದೆಗೆ ಸಾಮಾನ್ಯ ಒಪ್ಪಿಗೆ ಪೊಂ... ಕೊಂಡರು.

ಭದ್ರ ಆರ್ಥಿಕ ಪರಿಸ್ಥಿತಿ

ದೇಶದ ಆರ್ಥಿಕ ಪರಿಸ್ಥಿತಿಯು ... ಧಾರಿಸಿದೆ ಎಂದು ದೇಶಮುಖರು ಹಣ... ಸಿನ ಮಸೂದೆಯ ಚರ್ಚೆಯ ಕಾಲ... ಅಭಿಪ್ರಾಯ ಪಟ್ಟರು. ಮಾತ್ರವಲ್ಲ ... ವನ ವೆಚ್ಚದ ಸೂಚಿಯು ತಗ್ಗುತ್ತಾ ...

ZANDU ಝೂಂಡೂ ಫಾರ್ಮಸಿಯ ಮನೆಮದ್ದುಗಳನ್ನೇ ಸದಾ ಉಪಯೋಗಿಸಿರಿ.

ಝೂಂಡೂ ಬ್ರಾಹ್ಮೀ ಹೇರ್ ಆಯಿಲ್
Zandu Brahmi Hair Oil — ಮೆದುಳಿಗೆ ತಂಪು- ಮನಸ್ಸಿಗೆ ಉಲ್ಲಾಸವೀಯುವುದು.
1 ಪೌಂಡಿಗೆ ರೂ. 3-8-0 ಕಾಲು ರಾತ್ತಿಗೆ ರೂ. 1.

ಝೂಂಡೂ ಸರಸಪರಿಲ್ಲಾ
Zandu Sarasaparilla — ರಕ್ತವನ್ನು ಶುದ್ಧಗೊಳಿಸಲು ಹೆಸರುವಾಸಿಯಾದುದು. ಚರ್ಮರೋಗಗಳನ್ನು ಗುಣಪಡಿಸಬಲ್ಲುದು. 4 ಔನ್ಸ್ ಬಾಟ್ಲಿ 1 ರ ರೂ. 1-5-0

ಝೂಂಡೂ ಬಾಲಾಮೃತ
Zandu Balamrutam — ಅನಾರೋಗ್ಯವುಳ್ಳ ಮಕ್ಕಳಿಗೆ ಆದರ್ಶ ಟಾನಿಕ್ 4 ಔನ್ಸ್ ಬಾಟ್ಲಿ 1 ರ ರೂ. 1-2-0

ಝೂಂಡೂ ಬಾಮ್
Zandu Balm — ತಲೆ ಸಿಡಿತ ಮೊದಲಾದ ಬೇನೆಗಳಿಗೆ 1 ಸೀಸೆಗೆ ರೂ1.

ಝೂಂಡೂ ಫಾರ್ಮಸಿಯ ದ. ಕ. ಜಿಲ್ಲೆಯ
ಎಲ್ಲಾ ಏಜಂಟರಲ್ಲೂ ದೊರೆಯುವುವು.

ಸವಿವರ ಕ್ಯಾಟಲಾಗಿಗೆ ಈ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ:—

DAMODER & CO.,
Nainiappa Naicken Street, MADRAS. 3

ಉದ್ಯೋಗವಿಲ್ಲದೆ ಅಲೆಯುತ್ತಿರುವ ಸುಶಿಕ್ಷಿತರು

ಸಂಯುಕ್ತ ಕರ್ನಾಟಕ ರಾಜ್ಯರಚನೆಯ ಪ್ರಯತ್ನದಲ್ಲಿ ವಿಧ್ವಂಸಕ ಚಟುವಟಿಕೆ ಸಲ್ಲದು

ದಿದೆಎಂದೂ ನುಡಿಗರು. ಆದರೆ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುವಲ್ಲಿ ಈ ಪರಿಸ್ಥಿತಿಗಳು ಎಷ್ಟರಮಟ್ಟಿಗೆ ಅನುಕೂಲತೆ ನೀಡಿವೆ ಎಂಬುದು ಸಂಶಯಾಸ್ಪದ. ದೇಶಮುಖರು ಬಂಡವಳ ವೆಚ್ಚವನ್ನು ಹೆಚ್ಚಿಸುವುದಕ್ಕೂ ಮಿಕ್ಕಿದ ಕ್ರಮವನ್ನು ಸರಕಾರವು ಪ್ರಕೃತ ಕೈಗೊಳ್ಳುವುದು ಸಾಧ್ಯವಿಲ್ಲವೆಂದು ಹೇಳಿದರು. ನಿರುದ್ಯೋಗದ ಪ್ರಶ್ನೆಯನ್ನು ಬಿಡಿಸಲು ಆರ್ಥಿಕ ಹಾಗೂ ಔದ್ಯಮಿಕ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವುದು ಯೋಗ್ಯವಾದ ಮಾರ್ಗವೆಂದು ದೇಶಮುಖರು ಹೇಳುತ್ತಾರೆ. ಪಂಚವಾರ್ಷಿಕ ಯೋಜನೆಯು ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುವುದನ್ನೆ ಮೂಲೋದ್ದೇಶವಾಗಿಟ್ಟುಕೊಂಡಿಲ್ಲವಾದರೂ ಈ ಸಮಸ್ಯೆಯ ಪರಿಹಾರದಲ್ಲಿ ಸಾಕಷ್ಟು ಮಹತ್ವದ ಪಾತ್ರ ವಹಿಸುವುದೇನೋ ನಿಶ್ಚಯ. ಆದರೆ ನಮ್ಮ ಯೋಜನೆಯು ಕೊರತೆ ಧನ ವಿನಿಯೋಗ ಪದ್ಧತಿಯನ್ನು ಅನುಸರಿಸಿರುವುದರಿಂದ ಈ ದಿಸೆಯಲ್ಲಿ ಅಪೇಕ್ಷಿತವಾದ ಸಾಧನೆಯಾದೀತೋ ಎಂಬ ಸಂಶಯ ಸಹಜವಾಗಿಯೇ ಏಳುತ್ತದೆ. ಕೊರತೆ ಧನ ವಿನಿಯೋಗದಿಂದ ಹಾನಿಯಿಲ್ಲವೆಂದು ದೇಶಮುಖರು ಭರವಸೆಯನ್ನು ಕೊಡುತ್ತಾ ಬಂದಿರುವರು. ಅಲ್ಲದೆ ಯಾವ ರೀತಿಯಿಂದಲಾದರೂ ಬಂಡವಳ ವೆಚ್ಚವನ್ನು ಹೆಚ್ಚಿಸುವುದೇ ಈಗಿನ ಧ್ಯೇಯವಾಗಬೇಕು, ಅನ್ಯಥಾ ನಿರುದ್ಯೋಗ ಸಮಸ್ಯೆ ಇನ್ನೂ ಜಟಿಲವಾಗುತ್ತದೆ. ಈಗಾಗಲೇ ಅದು ತೀವ್ರತೆಯನ್ನು ಮುಟ್ಟಿದೆ. ಲೋಕಸಭೆಯಲ್ಲಿ ಕೇಳಿದ ಪ್ರಶ್ನೆಯೊಂದನ್ನು ಉತ್ತರಿಸುತ್ತಾ ಕೂಲಿಕಾರ ಸಚಿವರಾದ ಶ್ರೀ ಗಿರಿಯವರು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ೧೯೫೨ನೇ ವರ್ಷಾಂತ್ಯದಲ್ಲಿ ಹೆಸರು ಬರೆಯಿಸಿದ ಸುಶಿಕ್ಷಿತ ನಿರುದ್ಯೋಗಿಗಳ ಸಂಖ್ಯೆಯನ್ನು ತಿಳಿಯಪಡಿಸಿದರು. ಇದರಂತೆ ೩೨ ಸಾವಿರ ಜನ ಮೆಟ್ರಿಕ್ಯುಲೇಟರೂ ೧೧ ಸಾವಿರ ಜನ ಇಂಟರ ಮಿಡಿಯೇಟ ಪಾಸಾದವರೂ ೧೪ ಸಾವಿರ ಸಾಮಾನ್ಯ ಪದವೀಧರರೂ ೮೩೨ ಇಂಜಿನಿಯರಿಂಗ್ ಪದವೀಧರರೂ ೧೫೦ ವೈದ್ಯಕೀಯ ಪದವೀಧರರೂ ನಮ್ಮ ದೇಶದಲ್ಲಿರುವರು.

ಸುಶಿಕ್ಷಿತರ ನಿರುದ್ಯೋಗ

ಇದು ಹೊರತು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರು ಬರೆಯಿಸದೆ ಇರುವ ಸುಶಿಕ್ಷಿತ ನಿರುದ್ಯೋಗಿಗಳು ಎಷ್ಟಿರುವರೆಂಬುದನ್ನು ತಿಳಿದುಕೊಳ್ಳುವ ಸಾಧನಗಳಿಲ್ಲ. ಈ ಎಲ್ಲ ಜನರನ್ನು ಯಾವುದಾದರೂ ಯೋಗ್ಯ ಉದ್ಯೋಗಗಳಲ್ಲಿ ತೊಡಗಿಸದಿದ್ದಲ್ಲಿ ಶಿಕ್ಷಣದ ಬಗ್ಗೆ ಜನರಲ್ಲಿ ಜುಗುಪ್ಸೆಯುಂಟಾದೀತು. ಸ್ವತಃ ನಿರುದ್ಯೋಗಿಗಳು ಅಸಮಾಧಾನದಿಂದ ಕುದಿಯುತ್ತಿದ್ದಾರು. ಈ ಸಮಸ್ಯೆಯು ತಂದೊಡ್ಡುವ ದುಷ್ಪರಿಣಾಮಗಳನ್ನು ದೂರದರ್ಶನದಿಂದ ಗ್ರಹಿಸಿಕೊಂಡು, ಪಂಚವಾರ್ಷಿಕ ಯೋಜನೆಯ ಕೆಲಸಗಳಲ್ಲಿ ಇವರಿಗೆಲ್ಲ ಸಾಕಷ್ಟು ಸ್ಥಾನ ಕಲ್ಪಿಸಿಕೊಡುವುದು ಉಚಿತ. ಇದು ಸರಕಾರದ ಹೊಣೆಯಾಗಿದ್ದರೆ, ಸುಶಿಕ್ಷಿತ ನಿರುದ್ಯೋಗಿಗಳು ತಾವಾಗಿ ಕೈಗೊಳ್ಳಬೇಕಾದ ಕರ್ತವ್ಯವೂ ಇದೆ. ಅದೇನೆಂದರೆ, ಗೌರವ ಹಾಗೂ ಸಮಾಧಾನದ ಅಭಿಲಾಷೆಯಿಂದ ಸರಕಾರಿ ನೌಕರಿಯನ್ನೇ ಆಧರಿಸಿ ಕುಳಿತಿರಲು ನೋಡದೆ, ತಮ್ಮ ವಿದ್ಯಾಬುದ್ಧಿಗಳನ್ನು ಇತರ ಕ್ಷೇತ್ರಗಳಲ್ಲಿ ಸಾಹಸದಿಂದ ಪ್ರಯೋಗಿಸಲು ಮುಂಬರಬೇಕು. ವ್ಯಾಪಾರ ಮಾಂದ್ಯವು ವಿಷಮ ಪರಿಸ್ಥಿತಿಯನ್ನು ನಿರ್ಮಿಸುವುದಕ್ಕೆ ಮುಂಚಿತವಾಗಿ ಸುಶಿಕ್ಷಿತ ನಿರುದ್ಯೋಗಿಗಳು ತಮ್ಮ ಶ್ರೇಯಸ್ಸಿನ ಮಾರ್ಗವನ್ನು ಕಂಡುಕೊಳ್ಳುವುದು ಅಗತ್ಯ. ಗ್ರಾಮಾಂತರ ಪ್ರದೇಶಗಳ ಜನರೊಡನೆ ಈ ಜನರು ಸಹಕರಿಸಿಕೊಂಡು ಉತ್ಪಾದನೆಯನ್ನು ಹೆಚ್ಚಿಸಲು ಪ್ರಯತ್ನಿಸಿದರೆ ಅದರಿಂದ ಒಳ್ಳೆಯ ಪರಿಣಾಮವಾಗುವುದು ನಿಶ್ಚಯ. ಹಳ್ಳಿಗಳಲ್ಲಿ ಇಂದು ತಾಂಡವವಾಡುವ ಭೀಕರ ಪರಿಸ್ಥಿತಿಯು ನಿರುದ್ಯೋಗ, ಅರ್ಧ ನಿರುದ್ಯೋಗ ಹಾಗು ಅರ್ಧ ಉತ್ಪಾದನೆಯ ಪರಿಣಾಮವಾಗಿದೆ. ಈ ಅನಿಷ್ಟಗಳನ್ನು ಗಮನಿಸದೆ ನಾವು ಸಿದ್ಧಪಡಿಸಿದ ಕಾರ್ಯಕ್ರಮವು ಯೋಗ್ಯ ಫಲವನ್ನುಂಟು ಮಾಡಲಾರದು. ಜನಪದ ಅಭಿವೃದ್ಧಿ ಯೋಜನೆ ಮುಂತಾದವುಗಳಲ್ಲಿ ವರ್ಣಿಸಿದ ಸುಖ ಸೌಕರ್ಯಗಳ ಸಾಧನೆಗೆ ಹಾಗು ಅಧಿಕ ಉತ್ಪಾದನೆಗೆ ಜನರು ಆಸ್ಥೆ ತೋರಿಸಿ ದುಡಿಯಬೇಕು.

ಉದ್ವೇಗಕರ ಪರಿಸ್ಥಿತಿ

ಆದರೆ ವಿಧಾಯಕ ಕಾರ್ಯಕ್ರಮಗಳ ಕಡೆಗೆ ಹೆಚ್ಚು ಗಮನ ಕೊಡುವುದಕ್ಕಿಂತಲೂ ಜನರು ಉದ್ವೇಗ ಕಳವಳಗಳ ಪರಿಸ್ಥಿತಿಯ ಕಡೆಗೆ ಅಧಿಕ ವಾಲುತ್ತಾರೆಂಬುದು ಅನುಭವದಿಂದ ಸಿದ್ಧಗೊಂಡಿದೆ. ಇಂಥ ಒಂದೆರಡು ಸಂಗತಿಗಳಲ್ಲಿ ಈಗ ಶಾನೇ ಕಾರ್ಯಕ್ಕೆ ಒಂದಿರುವ ಭಾಷಾನುಗುಣ ಪ್ರಾಂತದ ಪ್ರಶ್ನೆಯೂ ಒಂದೆನ್ನಬಹುದೇನೋ. ತಾತ್ವಿಕವಾಗಿ ಭಾಷಾನುಗುಣ ಪ್ರಾಂತ ನಿರ್ಮಾಣವು ಸರ್ವಮಾನ್ಯವಾಗಿದ್ದರೂ ಅದನ್ನು ವ್ಯವಹಾರ್ಯವಾಗಿಸುವಲ್ಲಿ ಕಂಡುಬರುವ ತೊಡಕುಗಳು ಮತ್ತು ಜನತೆಯು ಈ ಬಗ್ಗೆ ತೋರುವ ವ್ಯರ್ಥ ಉದ್ವೇಗಗಳನ್ನು ಗಮನಿಸಿದರೆ, ಯೋಗ್ಯ ತತ್ವವಾದರೂ ತಪ್ಪು ತಿಳುವಳಿಕೆಯು ಜನರಿಗೆ ಪಥ್ಯವಾಗುವುದಿಲ್ಲೆಂದೆನಿಸುತ್ತದೆ. ಆಂಧ್ರರಾಜ್ಯ ನಿರ್ಮಾಣವನ್ನು ಇದೇ ಅಕ್ಟೋಬರ ೧ನೇ ದಿನಾಂಕ ಮಾಡಲಾಗುವುದೆಂದು ನೆಹರೂರವರು ಪಾರ್ಲಿಮೆಂಟಿನಲ್ಲಿ ಹೇಳಿಕೆ ಕೊಟ್ಟಂದಿನಿಂದ ಕರ್ನಾಟಕವೇ ಮುಂತಾದ ಪ್ರದೇಶಗಳಲ್ಲಿ ಉದ್ವೇಗ ಹಾಗು ವಿವಂಚನೆಯ ವಾತಾವರಣವುಂಟಾಗಿರುತ್ತದೆ. ಕಳೆದ ದಶಂಬರದಲ್ಲಿ ಶ್ರೀ ಪೊಟ್ಟಿ ಶ್ರೀ ರಾಮುಲು ಅವರ ಪ್ರಾಣತ್ಯಾಗದಬೆನ್ನಿಗೇನೆ ನೆಹರೂರವರು ಆಂಧ್ರ ರಾಜ್ಯ ರಚಿಸುವ ಸರಕಾರದ ನಿರ್ಧಾರವನ್ನು ಪ್ರಕಟಪಡಿಸಿದಾಗ, ಇದು ಅನಿಷ್ಟ ಮಾದರಿಯಾಗಿ ಪರಿಣಮಿಸಬಹುದೆಂದು ಅಂಜಿಕೆ ತಲೆದೋರಿತ್ತು. ಏಕೆಂದರೆ ರಾಜ್ಯ ಸಂಪಾದನೆಗೆ ಗಣ್ಯ ವ್ಯಕ್ತಿಯೊಬ್ಬನು ಉಪವಾಸಗೈದು ಮೋಕ್ಷ ಪಡೆಯುವುದೇ ನೇರವಾದ ಮಾರ್ಗವೆಂಬ ತಪ್ಪು ಕಲ್ಪನೆಗೆ ಇದು ಅವಕಾಶ ಮಾಡಿಕೊಟ್ಟಿತು. ನೆಹರೂರವರು ಆಂಧ್ರ ರಾಜ್ಯ ನಿರ್ಮಾಣದ ಘೋಷಣೆ ಮಾಡಿದುದರಿಂದ ಭಾಷಾನುಗುಣ ಪ್ರಾಂತರಚನೆಯ ಪುರಸ್ಕರ್ತರೆಲ್ಲ ಸಂತೋಷಗೊಂಡರೂ ವಿವೇಕಶೀಲರು ನೆಹರೂ ಅವಸರ ಮಾಡಿದರೇ ಎಂದು ಶಂಕಿಸಿದ್ದರು. ಈ ಶಂಕೆ ಈಗ ಹೆಚ್ಚು ಹೆಚ್ಚು ದೃಢವಾಗುತ್ತಾ ಬರುತ್ತಿದೆ. ಭಾಷಾನುಗುಣ ಪ್ರಾಂತರಚನೆಯಂಥ ಮಹತ್ವದ ಪ್ರಶ್ನೆಯನ್ನು ಅರ್ಥಪೂರ್ಣವಾಗಿ ಬಿಡಿಸುವ ಪ್ರಯತ್ನದಲ್ಲಿ ಸರಕಾರ ತೊಡಗಿದರೆ, ಸರಕಾರವನ್ನು ಮಣಿಸುವ ಉಪಾಯವೆಂಬುದಾಗಿ ಕರ್ನಾಟಕ ಏಕೀಕರಣವಾದಿಗಳು ಆಂಧ್ರದಲ್ಲಿ ನಡೆದ ಮಾದರಿಯ ಡೊಂಬಿ, ಗೊಂದಲ ಹಾಗೂ ಉಪವಾಸ ವ್ರತಗಳನ್ನು ನಡೆಸಿರುವರು.

ಪುಂಡಾಟಿಕೆ ನಾಚಿಕೆಗೇಡು.

ಕೆಲವು ದಿನಗಳ ಹಿಂದೆ ಶ್ರೀ ನಾರಾಯಣ ಅಚ್ಯುತ ಪೈ ಎಂಬವರು ಉಪವಾಸಗೈದರು. ಕರ್ನಾಟಕ ಜನತೆಯ ಚಿತ್ತ ಆಕಡೆ ಆಕರ್ಷಿಸಲ್ಪಟ್ಟಿತು. ದುರ್ದೈವದಿಂದ ಧಾವಿಸಿ ನಡೆದು ಅವರಿಗೆ ಯೋಗ್ಯ ಭರವಸೆ ನೀಡಿ ಉಪವಾಸ ಮುರಿಸಿದರು. ಅದರ ಬೆನ್ನಿಗ ಹುಬ್ಬಳ್ಳಿಯ ಸರ್ಕಲ್ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಶಂಕರ ಗೌಡ ಪಾಟೀಲರು ಉಪವಾಸಕ್ಕೆ ಕೈಯಿಕ್ಕಿದರು. ಮರಳಿ ಜನರು ವಿವಂಚನೆಗೊಳಗಾದರೂ ಈ ಬಾರಿಯ ಉಪವಾಸ ೩೩ ದಿನಗಳಷ್ಟು ದೀರ್ಘಕಾಲ ಜರುಗಿತು. ಇವರಲ್ಲದೆ ಬೇರೆ ಕೆಲವರೂ ಉಪವಾಸ ಮಾಡುವ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಿ ಧನ್ಯರಾದರು. ಶ್ರೀ ಶಂಕರ ಗೌಡ ಪಾಟೀಲರು ಉಪವಾಸ ಪ್ರಶ್ನೆಯು ಎಷ್ಟು ವಿಕೋಪಕ್ಕೆ ಹೋಯಿತೆಂಬುದನ್ನು ಹುಬ್ಬಳ್ಳಿಯಲ್ಲಿ ನಡೆದ ಮತಪ್ರದರ್ಶನ ಮತ್ತು ದರ ಪರಿಣಾಮಗಳಿಂದ ಅಂದಾಜು ಮಾಡಬಲ್ಲೆವು. ಸರಕಾರದ ಮನಸ್ಸೊಲಿಸಲು ಸಾತ್ವಿಕವಾದ ಮಾರ್ಗವನ್ನು ಕೈಗೊಳ್ಳುವ ಬದಲು, ಜನಬಲವನ್ನು ಸಂಘಟಿಸುವ ನೆನವಲ್ಲಿ ಹಾಗು ಸರಕಾರದ ಲಕ್ಷ್ಯ ಸೆಳೆಯುವುದಕ್ಕಾಗಿ ಪ್ರಾಣಾಂತಿಕ ಉಪವಾಸದ ಅನಿಷ್ಟ ಮಾರ್ಗವನ್ನು ಕೈಗೊಳ್ಳುವುದು ಸರ್ವಥಾ ಶ್ರೇಯಸ್ಕರವಲ್ಲ. ಇದನ್ನು ಜನತೆಯೂ ಏಕೀಕರಣ ವಾದಿಗಳೂ ಮನಗಾಣದಿದ್ದರೆ, ಶಾಂತ ರೀತಿಯ ಚಳುವಳಿಯನ್ನು ನಡೆಸಲು ಸಾಧ್ಯವಾಗಲಿಕ್ಕಿಲ್ಲ. ಬಳ್ಳಾರಿ ವಿಭಜನೆಯ ಪ್ರಶ್ನೆಯಲ್ಲಿ ಕನ್ನಡಿಗರ ಸಹನೆ ಕಮ್ಯೂನಿಸ್ಟರ ವಿಧ್ವಂಸಕ ಕೃತ್ಯಕ್ಕೆ ಬಂದು ಮುಟ್ಟಿತು. ಶಂಕರ ಗೌಡರ ಉಪವಾಸ ಪ್ರಕರಣವು ಹುಬ್ಬಳ್ಳಿಯಲ್ಲಿ ಪುಂಡಾಟಿಕೆಗೆ ಅವಕಾಶ ಮಾಡಿಕೊಟ್ಟಿತು. ಶ್ರೀ ನಿಜಲಿಂಗಪ್ಪನವರ ದೃಢ ನಿರ್ಧಾರದಿಂದ ಬಳ್ಳಾರಿಯ ಬದಲು ಹುಬ್ಬಳ್ಳಿಯಲ್ಲಿಯೇ ಕರ್ನಾಟಕ ಪ್ರದೇಶ ಕಾಂಗ್ರೆಸ ಸಮಿತಿಯ ಸಭೆ ಕರೆದದ್ದರಿಂದ ಇಷ್ಟೇ ಅನಾಹುತವಾಯಿತು. ಇದು ಬಿಟ್ಟು ಬಳ್ಳಾರಿಯಲ್ಲಿ ಈ ಸಭೆ ಜರಗುತ್ತಿದ್ದರೆ, ಪರಿಸ್ಥಿತಿ ಯಾವ ಮಟ್ಟಕ್ಕೆ ಬರುತ್ತಿತ್ತೋ, ಯಾರು ಹೇಳಬಲ್ಲರು? ನಮ್ಮ ಇಷ್ಟಸಿದ್ಧಿಗಾಗಿ ಪುಂಡಾಟಿಕೆಯನ್ನು ಕೈಗೊಳ್ಳುವುದೇ ಶ್ರೇಯಸ್ಕರವಾಗಿದ್ದ ಪಕ್ಷದಲ್ಲ-ನಾವು ನಾಗರಿಕರು ಎಂಬ ಜಂಭಕ್ಕೆ ಅರ್ಥವಿಲ್ಲ. ಕನ್ನಡಿಗರು ಇಂಥ ನಾಚಿಕೆಗೇಡು ವರ್ತನೆಯ ಮೂಲಕ ಸಂಯಮ ವಿಹೀನ ಚಪಲ ತೋರಿಸ್ಪಕ್ಕ ಮುಖ ತಗ್ಗಿಸುವ ಪರಿಸ್ಥಿತಿಯುಂಟಾಗಿದೆ. ಕನ್ನಡಿಗರ ಧವಳ ಕೀರ್ತಿಗೆ ಇಂಥ ಅನುಚಿತ ಚಟುವಟಿಕೆ ಕಳಂಕ ತಂದೊಡ್ಡಿದ್ದು ಖೇದಾಯಕ. ಇನ್ನಾದರೂ ಜನತೆಯು ಶಾಂತ ಮಾರ್ಗವನ್ನು ಹಿಡಿಯದೆ ಘಟನಾತ್ಮಕವಾದ ರೀತಿಯಲ್ಲಿ ಶಾಂತ ರೀತಿಯ ಚಳುವಳಿ ನಡೆಸಬೇಕು. ಇದರಲ್ಲಿಯೇ ಹಿತವಡಗಿದೆ.

ಏಳು ವರುಷಗಳಲ್ಲಿ ಫಲ

ನಮ್ಮ ಪಿಗ್ಮಿ ಮುಡಿಪುದಾರರಲ್ಲಿ ದಿನವಿಡಿ ಕೆಲಸ ಮಾಡುವ ಶ್ರಮಜೀವಿಗಳು, ಅಂಗಡಿಗಾರರು, ವಕೀಲರು, ಡಾಕ್ಟರರು, ಎಂಜಿನಿಯರರು ಬೇಸಾಯಗಾರರು, ವರ್ಗದಾರರು ಇತ್ಯಾದಿ ತರಗತಿಯವರಿರುವರು ಅವರ ಪಿಗ್ಮಿ ಮುಡಿಪುಗಳು ಚಿಕ್ಕ ಪುಟ್ಟ ಠೇವಣಾತಿಗಳಿಂದ ಪ್ರಾರಂಭವಾದುವು ಅಂದು ಇಲಿಯಂತಿದ್ದುವು ಇಂದು ಹುಲಿಯಂತಾಗಿವೆ ಅಂತಹ ವಿವೇಕಪೂರ್ಣ ದೂರದರ್ಶಿ ಸಂಪನ್ನ ಪಿಗ್ಮಿ ಠೇವಣಾತಿದಾರರ ಕುಟುಕ್ಕೆ ನೀವೂ ಕೂಡಾ ಸೇರಿ ಭಾಗ್ಯವಂತರಾಗಬೇಕಾಗಿ ಆಹ್ವಾನಿಸುತ್ತೇವೆ

ಆಧಾರ ವಹಿವಾಟು ರೂ 5,00,000 00 ಕ್ಕೂ ಮಿಕ್ಕಿದೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ 1925 ಹೆಡ್ ಆಫೀಸು ಉಡುಪಿ

THE CANARA INDUSTRIAL & BANKING SYNDICATE LIMITED

Estd 1925 H O: UDIPI

ಚಂದಾಹಣ ಬಾಕಿ ಇರುವವರು ನಾವು ಕಳುಹಿಸುವ ವಿ. ಪಿ. ಪಿ. ಯನ್ನು ದಯವಿಟ್ಟು ಸಕಾಲದಲ್ಲಿ ಪಡೆಕೊಳ್ಳಬೇಕೆಂದು ವಿನಂತಿ

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ ಉಡುಪಿ (ದ ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸುರಕ್ಷಿತತೆ, ಭದ್ರತೆ ಮತ್ತು ಸೇವಾತತ್ಪರತೆ
ಇವುಗಳಿಗೆ
ತವರುಮನೆಯಂತಿದ್ದು, ನಿಮ್ಮೆಲ್ಲರ ಸ್ನೇಹ, ಸಹಕಾರಗಳನ್ನು
ಅಪೇಕ್ಷಿಸುವ ಬೇಂಕು.

THE CANARA BANKING CORPORATION LTD.
Estd. 1906] [H O UDIPI, (S India)

ನವಯುಗ

ಉಡುಪಿ, ಗುರುವಾರ ೨೩-೪-'೫೩

ಕನ್ನಡಿಗರ ಭವಿತವ್ಯ

ಆಂಧ್ರ ರಾಜ್ಯವನ್ನು ಮುಂದಿನ ಅಕ್ಟೋಬರ ೧ನೇ ದಿನಾಂಕದಂದು ಸ್ಥಾಪಿಸಲಾಗುವುದೆಂದು ನೆಹರೂ ಹೇಳಿಕೆ ಕೊಟ್ಟಾಗ, ಬಳ್ಳಾರಿ ಜಿಲ್ಲೆಯನ್ನು ವಿಚ್ಛೇದಿಸುವ ಸರಕಾರದ ನಿರ್ಧಾರವನ್ನೂ ಬಹಿರಂಗಗೊಳಿಸಿದರು. ಸಾಲದುದಕ್ಕೆ ಬಳ್ಳಾರಿ ತಾಲೂಕಿನ ಭವಿಷ್ಯ ನಿರ್ಣಯವನ್ನು ಹಿಂದಿನಿಂದ ಮಾಡಲಾಗುವುದೆಂದರು ಈ ಘೋಷಣೆಯ ಪ್ರತಿಕ್ರಿಯೆಯು ಈ ಕಾರಣದಿಂದ ಮಿಶ್ರ ಭಾವನೆಯ ರೂಪ ತಳೆಯಿತು. ಆಂಧ್ರರ ಬಹುಕಾಲದ ಚಳುವಳಿಯು ಯಶಸ್ಸು ಹೊಂದಿದ್ದಕ್ಕೆ ಕನ್ನಡಿಗರು ಸಂತೋಷಪಟ್ಟರೂ, ಬಳ್ಳಾರಿ ಜಿಲ್ಲೆಯು ವಾದಗ್ರಸ್ತ ಪ್ರದೇಶವಾಗಿದ್ದಂತೆಯೇ ಅದನ್ನು ವಿಚ್ಛೇದಿಸಲು ಕೇಂದ್ರ ಸರಕಾರ ನಿರ್ಣಯಿಸಿದುದರಿಂದ ವಿಪಂಚನೆಗೊಳಗಾದರು. ಬಳ್ಳಾರಿಯು ಕನ್ನಡ ಪ್ರದೇಶವೆಂದೂ ನೂರರಲ್ಲಿ ಅರುವತ್ತಕ್ಕೂ ಹೆಚ್ಚು ಕನ್ನಡಿಗರು ಇಡೀ ಜಿಲ್ಲೆಯಲ್ಲಿರುವರೆಂದೂ ಕನ್ನಡಿಗರ ಹೇಳಿಕೆಯಿದೆ. ಈ ಮತ್ತು ಇತರ ಕಾರಣಗಳಿಗಾಗಿ ಇಡೀ ಬಳ್ಳಾರಿ ಜಿಲ್ಲೆಯು ಕರ್ನಾಟಕಕ್ಕೆ ಸೇರಬೇಕೆಂದು ಹೇಳಲಾಗುತ್ತಿದೆ ಆದರೆ ಕೇಂದ್ರಸರಕಾರದವರು ಇದನ್ನು ಒಪ್ಪದೆ, ಪೂರ್ವದ ಮೂರು ತಾಲೂಕುಗಳನ್ನು ಆಂಧ್ರಕ್ಕೆ ಕೊಡಮಾಡಿದರು. ಬಳ್ಳಾರಿ ತಾಲೂಕನ್ನು ಮಾತ್ರ ವಿವಾದಗ್ರಸ್ತ ಪ್ರದೇಶವೆಂದು ನಿರ್ಣಯಿಸಿ, ಈಗತಾನ ಹೈದರಾಬಾದು ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾದ ಶ್ರೀ ಲಕ್ಷ್ಮೀಕಾಂತ ಮಿಶ್ರರನ್ನು ಈ ಕುರಿತು ವಿಚಾರಣೆ ನಡೆಸಲು ನೇಮಕಮಾಡಿರುವರು. ನ್ಯಾಯಮೂರ್ತಿ ಮಿಶ್ರರು ಬಳ್ಳಾರಿ ತಾಲೂಕಿನ ಬಗ್ಗೆ ಆಂಧ್ರ ಹಾಗು ಕನ್ನಡಿಗರ ಹಕ್ಕುಬಾಧ್ಯತೆಗಳನ್ನು ಪರಿಶೀಲಿಸಿ, ಇದೇ ಮೇ ತಿಂಗಳ ಹದಿನೈದನೇ ದಿನಾಂಕದೊಳಗೆ ವರದಿ ಒಪ್ಪಿಸಬೇಕಾಗಿದೆ. ಇದರಿಂದ ಕನ್ನಡದ ವೃತ್ತಗಳಲ್ಲಿ ಏನು ಪ್ರತಿಕ್ರಿಯೆಯಾಗಿದೆಂಬುದು ಕೂಡಲೇ ತಿಳಿದುಬಂದಿಲ್ಲ ಬಳ್ಳಾರಿತಾಲೂಕಿನ ಬಗ್ಗೆ ಮಾತ್ರ ವಿಚಾರಣೆಮಾಡುವುದಾದಲ್ಲಿ ಕನ್ನಡಿಗರು ಸಂತುಷ್ಟರಾದಾರೆ? ಆಂಧ್ರಕ್ಕೆ ಸೇರಿಸಬೇಕೆಂದಿರುವ ಮೂರು ತಾಲೂಕುಗಳ ಕುರಿತು ಕನ್ನಡಿಗರು ಚಿಂತೆಯನ್ನು ಹೊಂದಬೇಕೆ? ಇಂಥ ಪ್ರಶ್ನೆಗಳನ್ನು ಉತ್ತರಿಸುವಾಗ ಒಂದುಸಂಗತಿಯನ್ನು ನಾವು ನೆನಪಿಟ್ಟುಕೊಳ್ಳಬೇಕು. ಭಾಷಾನುಗುಣಪ್ರಾಂತ ನಿರ್ಮಾಣಮಾಡುವಾಗ ಯಾವ ತಳಹದಿಯನ್ನು ಅನುಸರಿಸಬೇಕು? ಆರ್ಥಿಕ ಮತ್ತಿತರ ಕಾರಣಗಳು ಅವಶ್ಯ ಚರ್ಚಿಸಲ್ಪಡುವುವು. ಜೊತೆಗೆಪ್ರದೇಶಗಳನ್ನು ಹಂಚಿ ಕೊಡುವಾಗ ಯಾವ ನೀತಿಯನ್ನನುಸರಿಸಬೇಕು? ಜಿಲ್ಲೆಯನ್ನೇ ಸಾಮಾನ್ಯ ಘಟಕವಾಗಿ ಹಿಡಿಯಬೇಕೆಂದು ಹೇಳುವುದುಂಟು ಆದರೆ ಇದನ್ನು ನ್ಯಾಯ ಸಮ್ಮತವೆಂದು ಒಪ್ಪಲು ಬರುವುದೇ? ಕೇವಲ ಬಳ್ಳಾರಿ ಜಿಲ್ಲೆಗೆ ಮಾತ್ರ ಈ ನೀತಿಯನ್ನು ಅನುಸರಿಸಿ ಉಳಿದ ಪ್ರದೇಶಗಳ ಸಂಗತಿಯಲ್ಲಿ ಇದನ್ನು ಬಿಟ್ಟುಕೊಡಬಹುದು? ಕೇಂದ್ರ ಸರಕಾರದ ಈಗಿನ ನಿಲುಮೆಯಂತೆ ಬಳ್ಳಾರಿ ತಾಲೂಕನ್ನು ಫಿರ್ಕಗಳಾಗಿ ಒಡೆದು, ಕೆಲವನ್ನು ಕನ್ನಡಿಗರಿಗೆ, ಮತ್ತು ಕೆಲವನ್ನು ತೆಲುಗರಿಗೆ ಹಂಚಿಕೊಡುವರೆಂದು ತಿಳಿದಿದೆ ಈ ನೀತಿಯ ಸಾಧಕ ಬಾಧಕಾಂಶಗಳನ್ನು ದೂರ ದೃಷ್ಟಿಯಿಂದ ವಿಮರ್ಶಿಸಿ, ಒಂದು ಯೋಗ್ಯ ತಳಹದಿಯನ್ನು ಕೈಗೊಳ್ಳದಿದ್ದರೆ, ನಾಳೆ ಸ್ಪರ್ಧೆಗೊಂದಲಕ್ಕೆ ಎಡೆಯುಂಟು ಮಾಡಿದಂತಾದೀತು. ಬಳ್ಳಾರಿ ಜಿಲ್ಲೆಯ ಅಂಶಗಳನ್ನು ಮೈಸೂರಿಗೆ ಸೇರಿಸಿಕೊಳ್ಳಲು ಮುಖ್ಯ ಮಂತ್ರಿ ಹನುಮಂತಯ್ಯನವರು ಒಪ್ಪಿಗೆ ತೋರಿಸಿರುವರು. ಅದರಂತೆ ಮೈಸೂರಿನೊಡನೆ ಸೇರಬಯಸುವ ಕನ್ನಡಿಗರಿಗೆ ಸ್ವಾಗತ ಕೋರುವರು. ಇದು ಶುಭ ಚಿಹ್ನೆ. ಆದರೆ ಮೈಸೂರಿಗೆ ಉಳಿದ ಕನ್ನಡ ಪ್ರದೇಶಗಳನ್ನು ಸೇರಿಸಿಕೊಳ್ಳುವ ಕುರಿತು ಈಚೆಗೆ ರಾಜನೀತಿ ವಿಶಾರದರೆನಿಸಿದ ಡಿ. ವಿ. ಜಿ. ಅವರು ವ್ಯಕ್ತಗೊಳಿಸಿದ ಅಭಿಪ್ರಾಯ ಇಂಥ ಕ್ರಮವನ್ನು ಪುರಸ್ಕರಿಸುವುದಿಲ್ಲ. ಇಂಥ ಪ್ರಕ್ಷೋಭಕರ ಸಂಗತಿಗಳು ಕರ್ನಾಟಕ ಏಕೀಕರಣದ ದಾರಿಯಲ್ಲಿ ಬರುತ್ತಿದ್ದಂತೆಯೇ ಹುಬ್ಬಳ್ಳಿಯಲ್ಲಿ ಸೇರಿದ ಪ್ರದೇಶ ಕಾಂಗ್ರೆಸು ಸಮಿತಿಯು ೧ನೇ ಅಕ್ಟೋಬರದೊಳಗಾಗಿ ಸಂಯುಕ್ತ ಕರ್ನಾಟಕದ ರಚನೆಯಾಗಬೇಕೆಂದೂ ಈ ಕುರಿತು ಇದೇ ಅಕ್ಟೋಬರದೊಳಗೆ ಕೇಂದ್ರ ಸರಕಾರ ನಿರ್ಣಯ ಕೈಕೊಳ್ಳಬೇಕೆಂದೂ ಗೊತ್ತುವಳಿ ಸ್ವೀಕರಿಸಿತು. ಕೇಂದ್ರ ಸರಕಾರವು ಇದಕ್ಕೆ ತಪ್ಪಿದಲ್ಲಿ ಕನ್ನಡಿಗರ ಅಸಂತೋಷವನ್ನು ಪ್ರಕಟಿಸುವುದಕ್ಕೆಂದು ಕರ್ನಾಟಕ ಪ್ರದೇಶ ಕಾಂಗ್ರೆಸ ಸಮಿತಿಯ ಸದಸ್ಯರೂ ಕರ್ನಾಟಕದ ಪಾರ್ಲಿಮೆಂಟು ಹಾಗೂ ಶಾಸನ ಸಭಾಸದಸ್ಯರೂ ರಾಜೀನಾಮೆ ಕೊಡುವರೆಂದು ಈ ಗೊತ್ತುವಳಿ ಹೇಳುತ್ತದೆ. ನೆಹರೂರವರು ಕೇಂದ್ರದ ಕನ್ನಡ ಮಂತ್ರಿ ಕರಮಕರರ ಮೂಲಕ ಪ್ರಕಟಿಸಿದ—ಆಂಧ್ರದ ಬಳಿಕ ಇತರ ಭಾಷಾನುಗುಣ ಪ್ರಾಂತರಚನೆಯ ಪ್ರಶ್ನೆಯನ್ನು ತೆಗೆದುಕೊಳ್ಳಲಾಗುವುದೆಂಬ ಅಭಿಪ್ರಾಯ ಈ ಗೊತ್ತುವಳಿಯ ಹಿನ್ನಲೆಯಲ್ಲಿದೆ. ಕರ್ನಾಟಕ ಏಕೀಕರಣದ ಮಾರ್ಗವು ನಿಷ್ಕಂಟಕವಾಗಬೇಕಿದ್ದರೆ ಕನ್ನಡಿಗರು ವಿವೇಕಶೀಲರಾಗಿ ವರ್ತಿಸಬೇಕು. ಈ ಕರ್ತವ್ಯ ನಿರ್ವಹಿಸುವ ಸಂಕಲ್ಪ ನಮ್ಮದಿರಲಿ!

—— —

ನಾಜಿಮುದ್ದೀನರ ಪದಚ್ಯುತಿಯ ಹಿನ್ನೆಲೆ

ಪಾಕಿಸ್ತಾನದ ಆಂತರಿಕ ಪರಿಸ್ಥಿತಿ ಹದಗೆಟ್ಟಿದೆ

ರಾಜಕೀಯ ಕ್ಷೇತ್ರದಲ್ಲಿ ಕೆಲವೊಮ್ಮೆ ಘಟನೆಗಳು ಎಷ್ಟು ಕ್ಷಿಪ್ರದಲ್ಲಿ ಪ್ರಭಾವಿಯಾದ ಮತ್ತು ಪರಿಣಾಮಕಾರಿಯಾದ ಪರಿವರ್ತನೆಗಳನ್ನು ತಂದೊಡ್ಡುವುವೆಂದರೆ ಎಲ್ಲರೂ ಬೆರಟ್ಟುಕಚ್ಚಿ ವಿಸ್ಮಯ ಸೂಚಿಸುವರು. ಕಳೆದವಾರ ಪಾಕಿಸ್ತಾನದಲ್ಲಿ ನಡೆದ ಘಟನೆಗಳ ಮೇಲಿಂದಲೂ ಈ ಮಾತನ್ನು ಸ್ಪಷ್ಟೀಕರಿಸಬಹುದು. ಹೋದ ವರ್ಷ ಈಜಿಪ್ತದಲ್ಲಿ ಜನರಲ್ ನಗೀಬರು ಫರೂಕ ಅರಸರನ್ನು ಸಿಂಹಾಸನ ತ್ಯಜಿಸುವಂತೆ ಮಾಡಿದ ಪ್ರಕರಣವು ಎಷ್ಟು ತ್ವರಿತಗತಿಯಿಂದ ನೆರವೇರಿತೋ ಅಂಥದೇ ರೀತಿಯ ಬದಲಾವಣೆ ಪಾಕಿಸ್ತಾನದಲ್ಲಿ ಜರಗಿತು. ಅಲ್ಲಿಯ ಗವರ್ನರ ಜನರಲರಾದ ಗುಲಾಮ ಮಹಮ್ಮದರು ಪ್ರಧಾನಮಂತ್ರಿ ಖ್ವಾಜಾ ನಾಜಿಮುದ್ದೀನರನ್ನು ಪದಚ್ಯುತರನ್ನಾಗಿ ಮಾಡಿದರು; ಮತ್ತು ಅಮೇರಿಕಾದಲ್ಲಿ ಪಾಕಿಸ್ತಾನದ ರಾಯಭಾರಿಯಾಗಿದ್ದ ಮುಹಮ್ಮದ ಅಲಿಯವರನ್ನು ಮಂತ್ರಿಮಂಡಳ ರಚಿಸಲು ಆಮಂತ್ರಿಸಿದರು. ಈ ಘಟನೆ ಮಿಂಚಿನವೇಗದಿಂದ ನಡೆಯಿತು. ಸ್ವತ ನಾಜಿಮುದ್ದೀನರಿಗೆ ಕೂಡ ಇದರ ಸುಳಿವು ಹತ್ತಿರಲಿಲ್ಲ ಮುಹಮ್ಮದ ಅಲಿಯವರಿಗೂ ತಾವು ಪ್ರಧಾನಿ ಪಟ್ಟವನ್ನು ಏರಬೇಕಾದೀತೆಂಬ ಕಲ್ಪನೆ ಇರಲಿಲ್ಲ

ಗಂಭೀರ ಆರೋಪ

ಆದರೆ ಗವರ್ನರ ಜನರಲರು ತನ್ನ ಅಧಿಕಾರ ಬಲದಿಂದ ಪಾಕಿಸ್ಥಾನದ ಈಗಿನ ಪರಿಸ್ಥಿತಿಯನ್ನು ಸುಧಾರಿಸುವ ಇರಾದೆಯಿಂದ ಇಂಥ ಉಗ್ರಕ್ರಮವನ್ನು ಕೈಗೊಂಡರು ನಾಜಿಮುದ್ದೀನರನ್ನು ಮನೆಗಟ್ಟುವುದಕ್ಕೆಕಾರಣಗಳನ್ನು ವಿವರಿಸುತ್ತಾ ಕಾಯಿದೆ ಮತ್ತು ಸುವ್ಯವಸ್ಥೆಯನ್ನು ಕಾಯ್ದುಕೊಳ್ಳಲು ದೃಢ ಹೆಜ್ಜೆಯ ಅಗತ್ಯವಿತ್ತು ಸರಕಾರವು ಈ ಸಂಬಂಧದಲ್ಲಿ ಕೈಗೊಂಡ ಕ್ರಮಗಳು ಉಗ್ರ ಟೀಕೆಗೆ ಗುರಿಯಾದವು ಆದುದರಿಂದ ನಾಜಿಮುದ್ದೀನರ ಮಂತ್ರಿ ಮಂಡಲವು ದೇಶದ ಮುಂದಿನ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಅಸಮರ್ಥವೆಂದು ನಿರ್ಣಯಿಸಿದ್ದೇನೆ ಎಂದಿರುವರು ಈ ಆರೋಪಗಳು ಅತ್ಯಂತ ಗಂಭೀರ ಸ್ವರೂಪದವುಗಳೆಂಬುದ ಸುಸ್ಪಷ್ಟವಿದೆ. ಆದುದರಿಂದ ಪಾಕಿಸ್ತಾನದ ಮುಂದಿರುವ ಉತ್ಕಟ ಪರಿಸ್ಥಿತಿಯಲ್ಲಿ ಸರಕಾರವನ್ನು ಚಾಣಾಕ್ಷತನದಿಂದ ನಡೆಸಿಕೊಂಡು ಹೋಗಬಲ್ಲ ಸಮರ್ಥ ಮಂತ್ರಿ ಮಂಡಳವನ್ನು ರಚಿಸಬೇಕೆಂದು ಗವರ್ನರ ಜನರಲರು ಬಯಸಿದ್ದು ಸ್ವಾಭಾವಿಕ. ಮಹಮ್ಮದ ಅಲಿಯವರು ಈ ಸಮಯದಲ್ಲಿ ಪಾಕಿಸ್ತಾನದಲ್ಲಿಯೇ ಇದ್ದರು. ಮತ್ತು ಗವರ್ನರ ಜನರಲರ ಕೇಳಿಕೆಯಂತೆ ತಮ್ಮ ಮಂತ್ರಿ ಮಂಡಳವನ್ನೂ ರಚಿಸಿರುವರು. ಹೊಸ ಮಂತ್ರಿಮಂಡಳದಲ್ಲಿ ನಾಜಿಮುದ್ದೀನ ಹಾಗು ಅವರ ಬೇರೆ ನಾಲ್ಕು ಸಹಕಾರಿಗಳು ಮಾತ್ರ ಇಲ್ಲ. ಅವರ ಬದಲಿಗೆ ಭಾರತದಲ್ಲಿ ಪಾಕಿಸ್ತಾನದ ರಾಯಭಾರಿ ಶ್ರೀಯುತ ಕುರೇಶೀ, ಗಡಿನಾಡಿನ ಮುಖ್ಯಮಂತ್ರಿ ಖಾನ ಅಬ್ದುಲ್ ಕ್ವಯಂಖಾನ ಮುಂತಾದ ಹೊಸಬರು ಬಂದಿರುವರು ಹಿಂದಿನವರಲ್ಲಿ ಚೌಧುರಿ ಮಹಮ್ಮದ ಜಾಫರುಲ್ಲಾ ಖಾನ ಮುಸ್ತಾಕ ಅಹಮ್ಮದ ಗುರಮಾನಿ, ಸರದಾರ ಬಹದ್ದೂರ ಖಾನ, ಡಾ। ಎ. ಎಂ. ಮಲಿಕ್, ಡಾ। ಐ ಎಚ್. ಕುರೇಶಿ, ಮತ್ತು ಎ ಕೆ ... ರೋರಿ ಇದ್ದಾರೆ.

ಸಂಘಟಿತ ವಿರೋಧ

ಜಿನ್ನರ ಮರಣಾನಂತರ ಪಾಕಿಸ್ತಾನದ ಗವರ್ನರ ಜನರಲರಾಗಿ ಕೆಲಸ ಮಾಡಿ ಮತ್ತು ಒಂದೂವರೆ ವರ್ಷಗಳಿಗೆ ಹಿಂದೆ ಲಿಯಾಕತ ಅಲಿಖಾನರ ಕೊಲೆಯ ನಂತರ ಪ್ರಧಾನಿ ಪಟ್ಟವನ್ನೇರಿದ ನಾಜಿಮುದ್ದೀನರನ್ನು ಸ್ಥಾನ ಭ್ರಷ್ಟರನ್ನಾಗಿ ಮಾಡುವ ಕೆಲಸ ಸಾಮಾನ್ಯವೆಂದೆನಿಸುವುದಿಲ್ಲ. ಅವರ ಮಂತ್ರಿ ಮಂಡಳವು ಆಡಳಿತ ನಡೆಸಲು ಅಸಮರ್ಥವೆಂಬ ನಿರ್ಣಯವನ್ನು ಗವರ್ನರ ಜನರಲರು ಕೈಗೊಳ್ಳಬೇಕಿದ್ದರೆ, ಅದಕ್ಕೆ ಪಾಕಿಸ್ತಾನದ ಆಂತರಿಕ ಪರಿಸ್ಥಿತಿಯ ಒತ್ತಡವೇ ಪ್ರಾಮುಖ್ಯ ಕಾರಣವೆಂದು ಹೇಳಬೇಕು ಗವರ್ನರ ಜನರಲರ ಪ್ರಕಟಿತದ ಕ್ರಮದಿಂದ ಕೆಲದಿನಗಳಿಗೆ ಹಿಂದೆ ಪಾಕಿಸ್ತಾನೀವಲಯಗಳಲ್ಲಿ ನಾಜಿಮುದ್ದೀನರ ವ್ಯಕ್ತಿತ್ವ ಹಾಗು ದೃಢತೆಯ ಕುರಿತು ಕೇಳಿ ಬರುತ್ತಿದ್ದ ಪ್ರಶಂಸೋದ್ಗಾರಗಳಿಗೆ ನೆಲೆಯಿಲ್ಲವೆಂದೆನಿಸುತ್ತದೆ ಅಹಮ್ಮದೀಯ ಮುಸ್ಲಿಮರ ವಿರುದ್ಧ ಮುಲ್ಲಾಗಳು ನಡೆಸಿದ ಚಳುವಳಿಯನ್ನು ಭದ್ರಮುಷ್ಟಿಯಿಂದ ಹತ್ತಿಕ್ಕಲು ನಾಜಿಮುದ್ದೀನರು ನೋಡಿದರು. ಹಾಗೆಯೇ ಪಾಕಿಸ್ತಾನದ ಪಂಜಾಬಿನಲ್ಲಿ ದೌಲತಾನಾರನ್ನು ಒತ್ತಾಯದಿಂದೆಂಬಂತೆ ಮುಖ್ಯಮಂತ್ರಿ ಪದದಿಂದ ನಿವೃತ್ತಗೊಳಿಸಿ, ಫಿರೋಜಖಾನನೂನರನ್ನು ಆ ಸ್ಥಾನಕ್ಕೆ ನೇಮಿಸಿದರು ಇವೇ ಕ್ರಮಗಳಿಗ ಕೇಂದ್ರ ಸರಕಾರದ ಸಂಪೂರ್ಣ ಒಪ್ಪಿಗೆ ಇದ್ದಿರಬಹುದೆಂಬ ಆಗಿನ ... ಈಗ ಬಯಲಾಗಿದೆ ಪ್ರಾಯಶಃ ಇಂಥ ವರ್ತನೆಯೇ ನಾಜಿಮುದ್ದೀನರ ಮಂತ್ರಿಮಂಡಳದ ಬಗ್ಗೆ ಅಸಂತೃಪ್ತಿಯನ್ನು ಉಂಟುಮಾಡಿತು. ಈ ಅಸಂತೃಪ್ತಿಯ ಸಂಘಟಿತ ವಿರೋಧದ ರೂಪವನ್ನು ತಳೆಯಿತು ಸಿಂಧದಲ್ಲಿ ಖುರ್‍ರೋರವರೂ ... ಗಳತ್ತಿದ್ದು ಈ ವಿರೋಧದ ಒಂದು ಮುಖ. ಹೀಗೆ ಆಂತರಿಕ ಕ್ಷೋಭೆಯು ಉತ್ಕಟ ಪರಿಸ್ಥಿತಿ ಒಂದು ಮಟ್ಟದ್ದಾಗ ಅದನ್ನು ದೂರೀಕರಿಸಲು ನಾಜಿಮುದ್ದೀನರು ತಮ್ಮನ್ನೇ ಆಹುತಿ ಕೊಡಬೇಕಾಯಿತು.

ತಪ್ಪಿ ಬಿದ್ದ ಹೆಜ್ಜೆ

ನಾಜಿಮುದ್ದೀನರ ಸ್ಥಾನಚ್ಯುತಿಗೆ ...

...ಒಂದು ಕಾರಣವನ್ನು ಉಲ್ಲೇಖಿಸಬದು ಆಂತರಿಕ ಸುವ್ಯವಸ್ಥೆಯನ್ನು ಕಾಪ್ಪಾಡಿಕೊಳ್ಳುವಲ್ಲಿ ಅವರು ದೃಢತೆಯನ್ನು ತೋರಿಸಲಾಗದಿದ್ದರೆ ಅದಕ್ಕೆ ಪಾಕಿಸ್ತಾನ ಪತ್ರಿಕೆಗಳು ಮತ್ತು ಮುಸ್ಲಿಂ ಲೀಗು

ಪೋಪ್ಯುಲರ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೆನೇಜಿಂಗ್ ಡೈರೆಕ್ಟರ್
ಶ್ರೀ. ಬಿ. ವಿಟ್ಠಲರಾಯರು.

ಮೇಲ್ಕಂಡ ಸಂಸ್ಥೆಯ 1952ನೇ ಡಿಸೆಂಬರ ತಾ. 31ಕ್ಕೆ ಅಂತ್ಯವಾದ 23ನೇ ವಾರ್ಷಿಕ ವರದಿಯು ನಮ್ಮ ಹಸ್ತಗತವಾಗಿದೆ. ವರದಿ ವರುಷದಲ್ಲಿ ಹೊಸನ್ಯವ ...ರವು ರೂಪಾಯಿ ...0,36,500ರ ಮ...ವನ್ನೇರಿತು. ವಿಮಾ ಪೋಲಿಸಿಗಳು ಮೆಚ್ಯೂರ್ ಆಗಿಯೂ, ವಿಮಾ ಅವಧಿಯ ಒಳಗಲೇ ಮೃತಪಟ್ಟವರಿಗೂ ಒಟ್ಟು ರೂಪಾಯಿ 1,11,454-2-0 ಕೊಡಬೇಕಾದಲ್ಲಿ 'ಡಿಸ್‌ಚಾರ್ಜ್' ಪತ್ರಗಳು ಕಾಲದಲ್ಲಿ ಬಾರದಿದ್ದುದರಿಂದ ವರ್ಷಾಂತ್ಯದಲ್ಲಿ ರೂಪಾಯಿ 33 530 - 5 - 0ರಷ್ಟಕ್ಕೆ ...ಕಿನಿಂತಿತು. ಇವಕ್ಕೆ ಪೋಲಿಸಿದಾರರ ಸ್ವಂತಾಧಿಕಾರಿಗಳೇ ಕಾರಣ.

ವರದಿ ವರುಷದಲ್ಲಿ ಪ್ರೀಮಿಯಮ್ ...ಡ್ಡಿ ಇತ್ಯಾದಿ ಬಾಬುಗಳಿಂದ ರೂ. ...01,836-9-8 ಜಮೆಯಾಗಿತ್ತು. ಗತ ವರುಷದಲ್ಲಿ ಈ ಮೊತ್ತವು ಬರೇ ರೂ ...0, 394—7—6ಆಗಿತ್ತು. ಆಡಳಿತ ...ರ್ಚು ಗತವರ್ಷದಲ್ಲಿ ಸೇಕಡಾ 19.3 ...ದ್ದುದು ವರದಿ ವರುಷದಲ್ಲಿ 17·7%ಕ್ಕೆ ...ಯಿತು. ಲೈಫ್ ಇನ್ಶೂರನ್ಸ್ ಅವಧಿಗೆ ...ದಿ ವರುಷದ ರೂ 3,94,094-8-11 ...ರಿಸಲಾಗಿ ವರದಿ ವರುಷಾಂತ್ಯದಲ್ಲಿ ಅದು ರೂ. 26,64,181 - 0 - 10ರಷ್ಟು ...ಯಿತು.

ಮೇಲಿನ ಅಂಕೆ ಸಂಖ್ಯೆಗಳನ್ನು ಪರಿಶೀಲಿಸುವಾಗ ರಾಷ್ಟ್ರದ ಆರ್ಥಿಕ ಮುಗ್ಗಟ್ಟಿನ ಕಾಲದಲ್ಲೂ ಈ ಕಂಪೆನಿಯು ಪ್ರಗತಿಪಥದಲ್ಲಿ ಒಂದು ಹೆಜ್ಜೆ ಮುನ್ನಡೆದುದು ...ಶ್ಲಾಘನೀಯ. ...ಹೇಳ ತಕ್ಕದಾಗಿದೆ ಸಮರ್ಥ ಡೈರೆಕ್ಟರ ಮಂಡಳಿಯ ಸಹಕಾರದಿಂದ ಪೋಲಿಸಿದಾರರ ಪ್ರೋತ್ಸಾಹದಿಂದ ಕಂಪೆನಿಯು ...ಸ್ವದೇಶಾಭಿಮಾನಿ ಜ್ಞಾನ ಮತ್ತು ಅನುಭವ ಸಂಪನ್ನರೂ ವ್ಯವಹಾರ ನಿಪುಣರೂ ಆದ ಮೆನೇಜಿಂಗ್ ಡಾರೆಕ್ಟರ್ ಶ್ರೀ ಬಿ. ವಿಠಲರಾಯರ ಸಮರ್ಥ ಆಡಳಿತದಲ್ಲಿ ಈ ದೇಶೀಯ ವಿಮಾ ಕಂಪೆನಿಯು ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದಿ ಎಲ್ಲೆಡೆಗಳಲ್ಲೂ ಶಾಖೆಗಳನ್ನುಳ್ಳ ಸಂಸ್ಥೆಯಾಗಲೆಂದು ಹಾರೈಸುತ್ತೇವೆ.

ಧುರೀಣರು ಭಾರತದ ವಿರುದ್ಧ ಆಕ್ರೋಶ ವೆಬ್ಬಿಸಿದ್ದೇ ಹೇತು. ಈ ವಿರೋಧ ಪ್ರಚಾರವನ್ನ ಪಾಕಿಸ್ತಾನವು ಮೊದಲಿಂದಲೂ ತನ್ನ ಶ್ರೇಯಸ್ಸಿಗೆ ನೆರವಾಗುವ ಸಂಗತಿಯ ರೂಪದಲ್ಲಿ ಪರಿಗ್ರಹಿಸಿದೆ. ಆದರೆ ನಿಜ ಹೇಳಬೇಕೆಂದರೆ ಇದು ಉಭಯ ರಾಷ್ಟ್ರಗಳ ಮನ ಮುದುಡಿಸಿತಲ್ಲದೆ, ಸ್ವತಹಃ ಪಾಕಿಸ್ತಾನದ ಆರ್ಥಿಕ ಹಾಗು ವಾಣಿಜ್ಯ ಕ್ಷೇತ್ರದ ಸವಾಂತೋಲವನ್ನು ತಪ್ಪಿಸಿತು. ಎಲ್ಲಕ್ಕೂ ಹೆಚ್ಚಾಗಿ ಆಹಾರದ ಕೊರತೆಯ ಮೇಲೆ ಪ್ರಬಲಾಘಾತವನ್ನುಂಟುಮಾಡಿತು. ಈ ವಿಷಮ ಪರಿಸ್ಥಿತಿಯು ಸಾಕಷ್ಟು ಹೆಚ್ಚುವವರೇಗೆ ಪಾಕಿಸ್ತಾನ ಸರಕಾರವು ಕೈಕಟ್ಟಿ ಕುಳಿತು. ಈ ತೊಂದರೆಗಳಿಗೆ ಭಾರತವೇ ಹೊಣೆಗಾರವೆಂದು ಸಾರಿತು. ಆದರೆ ಒಪ್ಪರಿಂದ ಕಾರ್ಯ ನೆರವೇರಲಾರಂದೆದು ತಡವಾಗಿಯಾದರೂ ಅದಕ್ಕೆ ಮನವರಿಕೆಯಾದ ದರಿಂದಲೋ ಏನೋ ನಾಜಿಮುದ್ದೀನ ಮತ್ತು ನೆಹರೂ ಪರಸ್ಪರ ಭೇಟಿಯಾಗುವರೆಂದು ವರ್ತಮಾನ ಹರಡಿತು. ಹೊಸಪ್ರಧಾನಿಯಾದ ಮಹಮ್ಮದ್ ಅಲಿಯವರೂ ನೆಹರೂರೊಡನೆ ಮಾತುಕತೆ ನಡೆಸಲು ಅನುಕೂಲರು ಮತ್ತು ಈ ಬಗ್ಗೆ ಅರ್ದಾರಾಯವರಿಗೆ ಮುನ್ನಡೆಯಲು ಸಿದ್ಧ. ಇದು ನಾಜಿಮುದ್ದೀನರ ನಿಲುಮೆಗಿಂತ ಸ್ವಲ್ಪ ಭಿನ್ನವಾಗಿದ್ದು ಪ್ರಾಯಶಃ ಮುಸ್ಲಿಂ ಲೀಗು ವರ್ತುಲಗಳನ್ನು ಸಂತೈಸಲು ಹೂಡಿದ ಉಪಾಯವೇ ನಿಜ. ಭಾರತ ವಿರೋಧಿ ಪ್ರಚಾರಕರ ಒತ್ತಡವನ್ನು ಮೀರಿ ಸಾಗುವಕೆಚ್ಚು ಈಗಲೇ ಹೊಸ ಪ್ರಧಾನಿಗಳಿಗೆ ಬರಲಾರದು.

ಹದಗೆಟ್ಟ ಆರ್ಥಿಕ ಪರಿಸ್ಥಿತಿ

ಮಹಮ್ಮದ ಅಲಿಯವರು ಪಾಕಿಸ್ತಾನೀ ಜನತೆಯನ್ನು ಉದ್ದೇಶಿಸಿ ಮಾತನಾಡುವಾಗ ಅಲ್ಪ ಸಂಖ್ಯಾಕರ ನ್ಯಾಯವಾದ ಹಕ್ಕುಗಳನ್ನು ರಕ್ಷಿಸಲಾಗುವುದು, ಮತಭೇದ, ಒಡಕು, ಪ್ರಾಂತೀಯತೆ ಅಸಹಿಷ್ಣುತೆ ಮುಂತಾದುವು ಅಳಿಯಬೇಕು. ಪಾಕಿಸ್ತಾನದ ...ಹದಿನಾಗಿರುವ ಆದರ್ಶಗಳ ಮೇಲೆ ದೃಢವಾಗಿ ನಿಂತು ಐಕ್ಯಸ್ಥಾಪಿಸುವುದು ಈಗಿನ ಕರ್ತವ್ಯ. ಪಾಕಿಸ್ತಾನದ ಅಭಿವೃದ್ಧಿ ಕಾರ್ಯದಲ್ಲಿ ಜನತೆಯ ಸಹಾಯ ಕೋರುತ್ತೇನೆ ಎಂದರು. ಆಂತರಿಕ ಸುವ್ಯವಸ್ಥೆಯನ್ನು ಕಾಯ್ದುಕೊಳ್ಳುವುದು ಈಗಿನ ಪ್ರಾಮುಖ್ಯ ಕರ್ತವ್ಯವಾಗಿದೆ ಆದರೆ ಪಾಕಿಸ್ತಾನದಲ್ಲಿ ಐಕ್ಯಮತ್ಯವನ್ನು ಸ್ಥಾಪಿಸಲು ಸಾಧ್ಯವಾದೀತೋ ಎಂಬುದನ್ನು ಇತಿಹಾಸದ ಪುಟಗಳೇ ನಿರ್ಣಯಿಸಬೇಕು. ಏಕೆಂದರೆ ಪಾಕಿಸ್ತಾನದ ಕಳಕದಿಯ ಅಸಹಿಷ್ಣುತೆ ಮತಾಂಧತೆ, ಹಾಗೂ ಘೋರ ದ್ವೇಷ ಭಾವನೆ ಉಳಿದಿದೆ. ಹಿಂದೂ ಮುಸ್ಲಿಮ ಬಂಧುಗಳೊಳಗೆ ಪರಸ್ಪರ ಒಡಕುಂಟು ಮಾಡುವುದು ಹಿಂದಿನ ನೀತಿಯಾಗಿದ್ದರೆ ಇಂದು ಮುಸ್ಲಿಮರಲ್ಲಿಯೇ ವರ್ಗಭೇದ ಉಂಟಾಗಿದೆ. ಈ ಕಠಿಣ ಪರಿಸ್ಥಿತಿಯನ್ನು ಇದಿರಿಸುವ ಕಷ್ಟ ಮಹಮ್ಮದ ಅಲಿಯವರಿಗೆ ತಪ್ಪಿದ್ದಲ್ಲ. ಸಾಮಾನ್ಯವಾಗಿ ಪಶ್ಚಿಮ ಪಾಕಿಸ್ತಾನದಲ್ಲಿ ಹೊಸ ನೇಮಕದ ಬಗ್ಗೆ ಸ್ವಾಗತ ಕಂಡು ಬಂದರೂ ಅದನ್ನು ನಂಬಿ ಕುಳಿತಿರುವುದಕ್ಕೆ ಧೈರ್ಯ ಸಾಲದು. ಇದರಂತೆ ಹದಗೆಟ್ಟ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದೂ ಸುಲಭವಲ್ಲ. ಗವರ್ನರ್ ಜನರಲ್ ಗುಲಾಮ ಮಹಮ್ಮದರು ಈ ಹಿಂದೆ ಸ್ವತಃ ಅರ್ಥ ಮಂತ್ರಿಗಳಾಗಿದ್ದುದರಿಂದ, ಪಾಕಿಸ್ತಾನ ಪ್ರಕೃತ ಇದಿರಿಸುತ್ತಿರುವ ಆರ್ಥಿಕ ಸಂಕಟದಿಂದ ನೊಂದಿರಬೇಕು. ವಿದೇಶಗಳೊಡನೆ ಸ್ನೇಹ ಸೌಹಾರ್ದದಿಂದ ಇದ್ದರೆ, ಈ ಸಮಸ್ಯೆ ಮುಕ್ಕದ್ವಿತನದಿಂದ ಬಿಡಿಸಲ್ಪಟ್ಟೀತು. ಆದರೆ ಇವೆಲ್ಲ ಅರೆಗಳನ್ನು ಬುಡಮೇಲು ಮಾಡುವಂತೆ, ಘಟನಾತ್ಮಕ ಬಿಕ್ಕಟ್ಟು ತಲೆದೋರಿದೆ. ನಾಜಿಮುದ್ದೀನರು ಗವರ್ನರ್ ಜನರಲರು ತಮ್ಮ ಮಂತ್ರಿಮಂಡಳನನ್ನು ರದ್ದುಗೊಳಿಸಲು ಅಧಿಕಾರ ಹೊಂದಿಲ್ಲ, ಅವರು ಘಟನೆಗೆ ವಿರುದ್ಧವಾದ ಹೆಜ್ಜೆ ಇಟ್ಟಿರುವರು ಕಾಯಿದೆ ದೃಷ್ಟಿಯಿಂದ ತನ್ನ ಮಂತ್ರಿಮಂಡಳ ರಾಜೀನಾಮೆಕೊಡುವವರೆಗೆ ಅಥವಾ ಶಾಸನ ಸಭೆಯು ತನ್ನಲ್ಲಿ ಅವಿಶ್ವಾಸ ಸೂಚಿಸುವವರೆಗೆ ತಾನೇ ಪ್ರಧಾನಿಯಾಗಿದ್ದೇನೆ ಎಂದಿರುವರು. ಈ ವಾದದ ಪರಿಣಾಮವಾಗಿ ಹೊಸ ...ಉಂಟಾಗಿರುವುದೆ.

ಕೊರಿಯಾದ ಕಟನೆ

ಜಾಗತಿಕ ಕ್ಷೇತ್ರದ ಪರಿಸ್ಥಿತಿ ಮಾತ್ರ ತುಂಬ ಉತ್ತೇಜಕವಾಗಿದೆ. ಶಾಂತಿಯ ಆಸೆಗೆ ಹೆಚ್ಚು ಪುಷ್ಟಿಕರವಾದ ವಾತಾವರಣವು ಕಂಡುಬರುತ್ತದೆ ಯುದ್ಧ ಕೈದಿಗಳ ಸಂಬಂಧದಲ್ಲಿ ಉಂಟಾದ ಬಿಕ್ಕಟ್ಟು ನಿಧಾನವಾಗಿ ಪರಿಹಾರ ಗೊಳ್ಳುತ್ತಾ ಬರುತ್ತಿದೆ. ರೋಗಗ್ರಸ್ತ ಹಾಗೂ ಗಾಯಾಳು ಯುದ್ಧ ಕೈದಿಗಳ ವಿನಿಮಯವು ಕಳೆದ ಸೋಮವಾರದಿಂದ ಆರಂಭವಾಗಿದೆ. ಮುಂದಿನ ಶನಿವಾರ (೧ ನಾಂಕದಿಂದ) ದಿಂದ ಮರಳಿ ಕದನ ವಿರಾಮ ಮಾತುಕತೆಗಳನ್ನು ತೊಡಗಬೇಕೆಂದು ಸಂಯುಕ್ತ ರಾಷ್ಟ್ರ ಸಂಘ ಹಾಗು ಕಮ್ಯೂನಿಸ್ಟರ ಪ್ರತಿನಿಧಿಗಳು ನಿರ್ಣಯಿಸಿರುವರು. ಹೀಗೆ ಕೊರಿಯಾದಲ್ಲಿ ದಿನೇದಿನೇ ವಾತಾವರಣವು ಆಶಾದಾಯಕವಾಗಿ ಪರಿಣಮಿಸುತ್ತಿರುವುದನ್ನು ಕಂಡು ರಾಷ್ಟ್ರ ಸಂಘದಲ್ಲಿ ತೃಪ್ತಿ ಹಾಗು ಸಮಾಧಾನ ಉಂಟಾಗಿದೆ. ಸಂಯುಕ್ತ ರಾಷ್ಟ್ರ ಸಂಘದಲ್ಲಿ ಪೋಲೆಂಡವು ಮಂಡಿಸಿದ್ದ ಶಾಂತಿ ಸಾಧನೆಯ ಗೊತ್ತುವಳಿಯನ್ನು ಹಿಂದೆಗೆದುಕೊಳ್ಳಬೇಕೆಂದೂ ಬ್ರೆಜಿಲದ ಗೊತ್ತುವಳಿಗೆ ಬೆಂಬಲ ಕೊಡಬೇಕೆಂದೂ ಭಾರತದ ಪ್ರತಿನಿಧಿ ಕೃಷ್ಣಮೇನನ್ನರು ವಿನಂತಿಸಿಕೊಂಡದ್ದಕ್ಕೆ, ಪೋಲೆಂಡು ಮನ್ನಣೆ ಕೊಟ್ಟಿದೆ. ರಶಿಯಾದ ಗುಂಪಿನ ರಾಷ್ಟ್ರವು ತನ್ನ ಗೊತ್ತುವಳಿಯ ಬಗ್ಗೆ ಆಗ್ರಹಪಡದೆ ಭಾರತದ ಪ್ರಾರ್ಥನೆಯನ್ನು ನಡೆಸಿಕೊಟ್ಟು, ಶಾಂತಿ ಮಾರ್ಗದಲ್ಲಿ ಸಹಕರಿಸಿದ್ದು ವಿಸ್ಮಯನನ್ನುಂಟುಮಾಡಿದರೂ, ಅದರಿಂದ ಎಲ್ಲ ರಾಷ್ಟ್ರಗಳೂ ಸಂತೋಷಗೊಂಡವು. ಪೋಲೆಂಡದ ಗೊತ್ತುವಳಿಯು ಕೊರಿಯಾ ಯುದ್ಧವನ್ನು ಒಡನೆಯೇ ನಿಲ್ಲಿಸಿ, ನಿಃಶಸ್ತ್ರೀಕರಣವನ್ನು ರಶಿಯಾ ಸೂಚಿಸಿದ ಮಾದರಿಯಲ್ಲಿ ಕೈಗೊಳ್ಳಬೇಕೆಂದಿತ್ತು. ಬ್ರೆಜಿಲಿನ ಗೊತ್ತುವಳಿಯಲ್ಲಿ ಕೊರಿಯಾದಲ್ಲಿ ಇದುವರೆಗಾದ ಪ್ರಗತಿಯನ್ನು ಸ್ವಾಗತಿಸಿ, ಮುಂದಿನ ಬೆಳ್ವಿಗೆಯನ್ನು ನಿರೀಕ್ಷಿಸಬೇಕೆಂದು ಹೇಳಿದೆ. ಈ ಗೊತ್ತುವಳಿ ರಾಜಕೀಯ ...ಸಮಿತಿಯಲ್ಲಿಯೂ ರಾಷ್ಟ್ರ ಸಂಘದ ಸಾಮಾನ್ಯಾಧಿವೇಶನದಲ್ಲಿಯೂ ಸರ್ವಾನುಮತದಿಂದ ಪಾಸಾಯಿತು. ಯಾರ ಆಕ್ಷೇಪವೂ ಇಲ್ಲದೆ ಗೊತ್ತುವಳಿಯೊಂದು ಒಮ್ಮತದಿಂದ ಸ್ವೀಕಾರ ಗೊಂಡದ್ದು ಕಳೆದ ಐದು ವರ್ಷಗಳಲ್ಲಿ ಇದೇ ಮೊದಲು.

ಉಡುಪಿ

ಕೌನ್ಸಿಲು ಸಭೆ— ಉಡುಪಿ ಮುನಿಸಿಪಲ್ ಕೌನ್ಸಿಲಿನ ವಿಶೇಷ ಸಭೆಯು ಇದೇ ತಾ 20ರಲ್ಲು ಸಂಜೆ ಚೆರ್‌ಮೆನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಕೌನ್ಸಿಲಿನ 1951ನೇ ವರ್ಷದ ಲೆಕ್ಕ ಪತ್ರ ಮತ್ತು ಸಾಮಾನ್ಯ ಖಾತೆಗಳ ಆಡಿಟ್ ವರದಿಗಳಲ್ಲಿ ಸೂಚಿಸಲಾದ ದೋಷಗಳ ಕುರಿತು ಚರ್ಚೆ ನಡೆಯಿತು. ಮುನಿಸಿಪಲ್ ಲೈಬ್ರೆರಿಯ ಪುಸ್ತಕಗಳ ಮತ್ತು ಹಣದ ವಂಚನೆ ಮತ್ತು ಮುನಿಸಿಪಲ್ ಹಣದ ತಾತ್ಕಾಲಿಕ ದುರುಪಯೋಗ ಇತ್ಯಾದಿ ವಿಶೇಷ ಚರ್ಚೆ ನಡೆಯಿತು. ಆಡಿಟ್ ವರದಿಯಲ್ಲಿ ತೋರಿಸಿದ ದೋಷಗಳಿಗೆ ಆಫೀಸು ಕಳುಹಿಸಿದ ಉತ್ತರಗಳು ಸಮರ್ಪಕವಾಗಿಲ್ಲವೆಂದೇ ಚರ್ಚೆ ಕಾಲದಲ್ಲಿ ಅಭಿಪ್ರಾಯಪಡಲಾಯಿತು.



ಮಿತ ದರದಲ್ಲಿ
ಚಲೋ ಗಡಿಯಾರಗಳೂ
ಟೈಂಪೀಸುಗಳೂ
ದೊರೆಯುತ್ತವೆ.
ವಿವರಗಳಿಗೆ ಬರೆಯಿರಿ:
MUBARAK & CO
Watch & Clock
Specialists,
MADRAS 3.
ಮುಬಾರಕ್ & ಕೊ
ವಾಚ್ ಎಂಡ್ ಕ್ಲಾಕ್
ಸ್ಪೆಶಲಿಸ್ಟ್ಸ್,
ಮದ್ರಾಸು 3

ಪ್ರದರ್ಶಿಸುತ್ತಿರುವ ಚಿತ್ರ -
ವರ್ಜಿನ್ಸ್ ಒಫ್ ಬಾಲಿ
(ಬಾಲಿ ಕನ್ನಿಕೆಯರು)
ಇದರೊಂದಿಗೆ
ಲೊರೆಲ್ ಮತ್ತು ಹಾರ್ಡಿ ನಟಿಸಿದ ಹಾಸ್ಯ ಚಿತ್ರಪ್ರದರ್ಶನ.
ಬರುವ ಚಿತ್ರಗಳು - ಕುಮಾರಿ, ಕನ್ನಿಕಾ, ಜಾನ್ಸಿಕಿರಾನಿ.
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಜಿಲ್ಲೆಯ ಹಳ್ಳಿಗಳಲ್ಲಿ ಮಾನ್ಯ ಮಂತ್ರಿ ಪಟ್ಟಾಭಿ ರಾಮರಾಯರು

ಜಿಲ್ಲೆಯ ಹಳ್ಳಿಗಳಲ್ಲಿ ಮಾನ್ಯ ಮಂತ್ರಿ ಪಟ್ಟಾಭಿ ರಾಮರಾಯರು— ಮದ್ರಾಸು ಸರಕಾರದ ಗ್ರಾಮಾಭಿವೃದ್ಧಿ ಮಂತ್ರಿಗಳಾದ ಶ್ರೀ ಎಸ್. ಬಿ. ಪಿ. ಪಟ್ಟಾಭಿ ರಾಮರಾಯರು ತಾ 18ರಂದು ಕುಂಬಳೆಗೆ ಆಗಮಿಸಿದರು. ಅಲ್ಲಿ ಮಂತ್ರಿಗಳು ಗುಡಿಕೈಗಾರಿಕೆಗಳ ಸಹಕಾರಿ ಸಂಘವನ್ನು ಸಂದರ್ಶಿಸಿದರು. ಸಂಘದ ಕಾರ್ಯದರ್ಶಿ ಶ್ರೀ ಬಿ. ಸುಕೀರ್ತಿ ರೈ ಮೊದಲಾದವರು ಸ್ವಾಗತಿಸಿದರು. ಮಂತ್ರಿಗಳು ಕಮ್ಯೂನಿಟಿ ಹಾಲನ್ನೂ, ಪುಸ್ತಕಾಲಯವನ್ನೂ ಕುಂಬಳೆ ಹಾ। ಪ್ರಾ। ಶಾಲೆಯ ಕಟ್ಟಡದ ಬಡಾವಣೆಯನ್ನೂ ನೋಡಿದರು. ಬಳಿಕ ಮಂತ್ರಿಗಳು ಕೃಷ್ಯಾಭಿವೃದ್ಧಿಯ ಮಾರ್ಗದ ಕೆಲಸವನ್ನು ಸಂದರ್ಶಿಸಿದರು.

ಸರ್ಕಲ್ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿ ಶ್ರೀ ಮಾಧವ ಪೈಗಳು ಹಿಂದುಳಿದ ಜಾತಿಯಾದ ಕೊರಗರ ಸಂಕಷ್ಟಗಳನ್ನು ಮಂತ್ರಿಗಳೊಡನೆ ಅರಿಕೆ ಮಾಡಿಕೊಂಡು ಆ ಜನರಿಗೆ ಕುಂಬಳೆಯಲ್ಲಿ ಅಥವಾ ಕುಂಬಳೆಯ ಹೊರಗೆ ಜಮೀನನ್ನು ಕೊಡಬೇಕು ಮತ್ತು ಅವರಿಗೆ ಸರಕಾರವು ಕಟ್ಟಿಮನೆಗಳನ್ನು ಕಟ್ಟಿಸಿ ಕೊಡಬೇಕು ಎಂದರು. ಮಂತ್ರಿಗಳು ಆದ್ಯತ್ನವಾಗಿ ತಾನು ಹರಿಜನ ಮಂತ್ರಿಗಳೊಡನೆ ಕೇಳಿಕೊಳ್ಳುವೆನು ಎಂದು ಭರವಸೆ ಕೊಟ್ಟರು. ಮೊಗ್ರಾಲಿನಲ್ಲಿಯ ಹರಿಜನ ಕಾಲನಿಯ ಪರವಾಗಿ ಮಿ। ಎಸ್. ಎಸ್. ಮೊಗ್ರಾಲ್, ಎಸ್. ಎಲ್. ಎ. ಅವರು ಅವರ ಕಷ್ಟಗಳನ್ನು ವಿವರಿಸುತ್ತಾ ಇವರಿಗೆ ಆಗತ್ಯವಿರುವ ಜಮೀನನ್ನು ಕೊಡಬೇಕು. ಹರಿಜನವಸಾಹತಿನ ತನಕ ಒಂದು ಕಾಲ್ದಾರಿಯನ್ನು ಮಾಡಿಸಬೇಕು ಎಂದರು.

ಕುಂಬಳೆ ಪಂಚಾಯತ ಬೋರ್ಡಿನ ಪರವಾಗಿ ಅದರ ಅಧ್ಯಕ್ಷ ಶ್ರೀ ಕಣ್ಣಪ್ಪನವರು ಒಂದು ಮನವಿಯನ್ನು ಅರ್ಪಿಸಿದರು. ಪೆರ್ಡಾಲದ ಜನರ ಪರವಾಗಿಯೂ ಮನವಿಯೊಂದು ಅರ್ಪಿಸಲ್ಪಟ್ಟಿತು. ಮಂತ್ರಿಗಳು ಜನರ ಕೋರಿಕೆಗಳನ್ನು ಪರಿಶೀಲಿಸುವುದಾಗಿ ತಿಳಿಸಿದರು.

ತಾ. 19ರಂದು ಬೆಳಿಗ್ಗೆ ಮಂತ್ರಿಗಳು ಕುಂಬಳೆ ಪಂಚಾಯತ ಬೋರ್ಡಿನ ಹೊಸ ಕಟ್ಟೋಣದ ಶಂಕುಸ್ಥಾಪನೆಯನ್ನು ಮಾಡಿದರು, ಬಳಿಕ ಮಾಯಿಪಾಡಿ ತರಬೇತಿ ಶಾಲೆಯನ್ನು ಸಂದರ್ಶಿಸಿದಾಗ ಆ ಶಾಲೆಯ ಹೆಡ್ಮಾಸ್ತರ್ ಶ್ರೀ ಕೆ. ರಾಮಕೃಷ್ಣ ಶೆಟ್ಟರು ವಸ್ತುಪ್ರದರ್ಶನವನ್ನು ಮತ್ತು ಮಾದರಿ ವಿಭಾಗವನ್ನು ತೋರಿಸಿದರು. ಅಲ್ಲಿಂದ ಮಂತ್ರಿಗಳು ಸುಳ್ಯಕ್ಕೆ ತೆರಳಿದರು. ಸುಳ್ಯದಲ್ಲಿ ಸಾರ್ವಜನಿಕರ ಪರವಾಗಿ ಶ್ರೀ ಕುಂಞಣ್ಣ ಗೌಡರು ಮಂತ್ರಿಗಳಿಗೆ ಒಂದು ಮನವಿಯನ್ನೊಪ್ಪಿಸಿ, ಸುಳ್ಯದಲ್ಲಿ ಆಸ್ಪತ್ರೆ ಅಗತ್ಯವೆಂದೂ

ಪ್ಯಾಸೆಂಜರಿನ ಕಟ್ಟಡಕ್ಕೆ ಧನಸಹಾಯ ಮಾಡಬೇಕೆಂದೂ ಕೋರಿಕೆಗಳನ್ನು ಮುಂದಿಟ್ಟರು ಮಾನ್ಯ ಮಂತ್ರಿಗಳು ಜೊಕ್ಕಾಡಿ ಮತ್ತು ಬೆಳ್ಳಾರೆ ಸೆಂಟರುಗಳನ್ನು ಕೂಡಾ ಸಂದರ್ಶಿಸಿದರು. ತಾ 20ರಲ್ಲಿ ಮಾನ್ಯ ಮಂತ್ರಿಗಳು ಮಂಗಳೂರಿಗೆ ಆಗಮಿಸಿದ್ದರು. ಸ್ಥಳೀಯ ಸ್ವಸ್ತಿಕ ಗೇರು ಬೀಜದ ಕಾರ್ಖಾನೆಯನ್ನೂ ಎಫ್. ಎಕ್ಸ್. ಡಿ. ಪಿಂಟೋರವರ ಹಂಚಿನ ಕಾರ್ಖಾನೆಯನ್ನೂ ಸಂದರ್ಶಿಸಿದರು. ಮಂಗಳೂರಿನಲ್ಲಿ ಸಾಧಾರಣ 28 ಹಂಚಿನ ಕಾರ್ಖಾನೆಗಳಲ್ಲಿ ಸಾಧಾರಣ 12,000 ಮಜೂರರು ಕೆಲಸ ಮಾಡುತ್ತಿರುವರೆಂಬ ಮಂತ್ರಿಗಳ ಅವಗಾಹನೆಗೆ ತರಲಾಯಿತು. ಮಂತ್ರಿಗಳು ಸ್ಥಳೀಯ ಕಾಂಗ್ರೆಸ್ ಶಾಸನ ಸಭಾ ಸದಸ್ಯರೊಡನೆಯೂ ಇತರ ಕಾರ್ಯಕರ್ತರೊಡನೆಯೂ ಮಾತುಕತೆ ನಡೆಸಿದರು.

ಪುತ್ತೂರು— ವಿಟ್ಲ ಹಾ। ಪ್ರಾ। ಶಾಲಾ ವಾರ್ಷಿಕೋತ್ಸವವು ತಾ. 12ರಲ್ಲು ಜಿಲ್ಲಾ ವಿದ್ಯಾಧಿಕಾರಿ ಶ್ರೀ. ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ರವಿವರ್ಮ ಕೃಷ್ಣ ರಾಜರು ಪಾರಿತೋಷಕ ವಿತರಣೆ ಮಾಡಿದರು. ಶ್ರೀ. ಕೆ. ನಾರಾಯಣ ರೈ, ವಕೀಲ್, ಎ. ಜಿ. ತಿರುಮಲೇಶ್ವರ್ ಭಟ್ ಬಾಬು ಮಾಸ್ತರ ಮೊದಲಾದವರು ಮಾತನಾಡಿದರು.

ದೇವಿಪುರ— ತಲಪಾಡಿ ಶ್ರೀ ದುರ್ಗಾ ಪ್ರಾಸಾದಿಕ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ತಾ. 12ರಲ್ಲು ಮಂಗಳೂರು ಸೆಂಟ್ರಲ್ ರೇಂಜ್ ಶಾಲೆಗಳ ಡೆಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ. ಸ್ಟ. ಗೋಪಾಲ ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಸುಬ್ರಹ್ಮಣ್ಯ— ಸ್ಥಳೀಯ ಶ್ರೀ ವಾಗೀಶ್ವರೀ ಸಂಗೀತ ಪಾಠಶಾಲೆ ಮತ್ತು ನಾಟಕ ಸಂಘದ ವಾರ್ಷಿಕೋತ್ಸವವು ಹೊಸತಾಗಿ ಕಟ್ಟಿಸಿರುವ ನಾಟಕ ಥಿಯೇಟರಿನಲ್ಲಿ ತಾ. 5ರಲ್ಲು ಶ್ರೀ ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಸಿಂಧು ಶ್ರೀ ಪಾದಂಗಳವರ ಸಮಕ್ಷಮ ಶ್ರೀ ಕೆ. ವ್ಯಾಸರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ರಾಘವೇಂದ್ರ ರಾಯರು ವಿದ್ಯಾರ್ಥಿಗಳಿಗೆ ಬಹುಮಾನ ಹಂಚಿದರು. ಸ್ವಾಮಿಗಳು ಸಂಗೀತ ಮತ್ತು ನಾಟ್ಯದ ವಿಷಯದಲ್ಲಿ ಭಾಷಣವಿತ್ತರು. ರಾತ್ರಿ ನಾಟಕ ಸಂಘದವರು 'ಭಕ್ತ ಪ್ರಹ್ಲಾದ' ಎಂಬ ಸಂಗೀತ ನಾಟಕವನ್ನು ಅಭಿನಯಿಸಿದರು.

ಕುಕ್ಕೆಹಳ್ಳಿ— ಸ್ಥಳೀಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಜೀರ್ಣೋದ್ಧಾರದ ಕುರಿತು ವಿಚಾರ ವಿನಿಮಯ ನಡೆಸುವರೆ ಇದೇ ತಾ ೧ರಲ್ಲು ಗ್ರಾಮಸ್ಥರ ಸಭೆಯು ಜರಗಿತು. ಶ್ರೀಗಳಾದ ಎ. ಕೆ. ರಾಮರಾವ್ (ಅಧ್ಯಕ್ಷ) ಕೆ ಸಂಜೀವ ಹೆಗ್ಡೆ, ಕೆ ಆನಂದ ಹೆಗ್ಡೆ, ಕೆ. ಕೃಷ್ಣಯ್ಯ ಉಡುಪ, ಕೆ. ಅಣ್ಣಯ್ಯ ಹೆಗ್ಡೆ ಮೊದಲಾದವರಿರುವ ಜೀರ್ಣೋದ್ಧಾರ ಕಮಿಟಿ ರಚಿಸಲ್ಪಟ್ಟಿತು. ಈ ಕಮಿಟಿಯು ಮಹಾಜನರ ಸಹಾಯವನ್ನು ಪಡೆದು ದೇವಸ್ಥಾನದ ಜೀರ್ಣೋದ್ಧಾರ ಕಾರ್ಯವನ್ನು ಮಾಡಬೇಕೆಂದು ಶ್ರೀ ಕೆ. ಚಂದ್ರ ಶೇಖರ ಹೆಗ್ಡೆಯವರು ವಿನಂತಿಸುತ್ತಾರೆ.

ವಿಟ್ಲ— ಭಾರತ ಕೇಂದ್ರ ಅಡಿಕೆ ಸಮಿತಿಯ ಸದಸ್ಯರಾಗಿರುವ ಮದ್ರಾಸು ಸರಕಾರದ ಕೃಷಿ ಇಲಾಖಾ ಡೆಪ್ಯುಟಿ ಡೈರೆಕ್ಟರ್ ಡಾ। ಕೆ. ಸಿ ನಾಯ್ಡು, ಬೊಂಬಾಯಿ ಸರಕಾರದ ತೋಟಗಾರಿಕೆಯ ಮುಖ್ಯಾಧಿಕಾರಿ ಡಾ। ಆರ್. ಎಲ್. ನಾಗಪಾಲ್, ಭಾರತ ಕೇಂದ್ರ ಅಡಿಕೆ ಸಮಿತಿ ಕಾರ್ಯದರ್ಶಿ ಶ್ರೀ ಕೆ. ಕೆ. ನಂಬಿಯಾರ್, ಉಪಾಧ್ಯಕ್ಷ ಶ್ರೀ ಎಸ್. ಎನ್. ಚೌಟ ಮೊದಲಾದವರು ಜಿಲ್ಲಾ ಕೃಷಿ ಅಧಿಕಾರಿಗಳೊಡನೆ ಇದೇ ತಾ 12ರಲ್ಲು ಇಲ್ಲಿಗೆ ಆಗಮಿಸಿದರು. ಇವರೆಲ್ಲರನ್ನು ವಿಟ್ಲ ಪಂಚಾಯತ ಬೋರ್ಡ್ ಅಧ್ಯಕ್ಷ ಶ್ರೀ ರಾಮವರ್ಮರಾಜ, ಉಪಾಧ್ಯಕ್ಷ ಶ್ರೀ ಎ. ಜಿ. ತಿರುಮಲೇಶ್ವರ ಭಟ್, ಶ್ರೀಗಳಾದ ಎನ್. ನಾರಾಯಣ ಭಟ್, ಕೆ. ವೆಂಕಪ್ಪಯ್ಯ, ಕೆ. ಉಗ್ಗಪ್ಪ ಸೆಟ್ಟಿ ಮೊದಲಾದವರು ಸ್ವಾಗತಿಸಿದರು. ಭಾರತ ಕೇಂದ್ರ ಅಡಿಕೆ ಪರಿಶೋಧನಾ ಕ್ಷೇತ್ರಕ್ಕೆ ಸ್ಥಳ ಪರಿಶೀಲಿಸಲು ಬಂದ ಈ ಸದಸ್ಯರುಗಳಿಗೆ ವಿಟ್ಲದ ಸಮೀಪದ ತಂಬಾಕು ನೀರಾಶ್ರಯ ವಿರುವ ಮತ್ತು ಸ್ಥಳಾನುಕೂಲತೆ ಇರುವ ಕೋಟಿ, ಪಳೀರ, ಬದನಾಜೆ ಎಂಬ ಮೂರು ಸ್ಥಳಗಳನ್ನು ತೋರಿಸಲಾಯಿತು. ನಂತರ ಬಂಗ್ಲೆಯಲ್ಲಿ ತೋಟಗಾರರ ಪರವಾಗಿ ಮನವಿಯೊಂದನ್ನು ಸಮಿತಿ ಸದಸ್ಯರಿಗೆ ಅರ್ಪಿಸಲಾಗಿ ಶ್ರೀ. ಆರ್. ಎಲ್. ನಾಗಪಾಲ್, ಅವರು ಉತ್ತರ ಕೊಡುತ್ತ ತಮಗೆ ನೀಡಿದ ಸ್ವಾಗತಕ್ಕಾಗಿ ವಂದನೆಗಳನ್ನರ್ಪಿಸಿದರು.

ದಿವಂಗತ ಸಿದ್ಧಮುಳಿ ಮುದ್ದಪ್ಪನವರು

ಕೊಡಗಿನ ಸಮರ್ಥ ಹಾಗೂ ಜನಪ್ರಿಯ ನ್ಯಾಯಾಧೀಶರಾಗಿದ್ದ ಶ್ರೀ ಎಸ್. ಮುದ್ದಪ್ಪನವರು ಇದೇ ತಾ 9ರಲ್ಲು ರಾತ್ರೆ ಹತ್ತು ಗಂಟೆಗೆ ಹೃದ್ರೋಗದಿಂದ ನಿಧನರಾದರೆನ್ನಲು ತುಂಬಾ ವಿಷಾದಪಡುತ್ತೇವೆ.

ಶ್ರೀ ಮುದ್ದಪ್ಪನವರು ಸೋಮವಾರಪೇಟೆ ತಾಲೂಕಿನ ಪೆರಾಜೆ ಗ್ರಾಮದಲ್ಲಿ ಜನಿಸಿ ಮಡಿಕೇರಿಯಲ್ಲಿ ತಮ್ಮ ಹೈಸ್ಕೂಲು ವಿದ್ಯಾಭ್ಯಾಸ ಮುಗಿಸಿ ಮಂಗಳೂರಲ್ಲಿ ಬಿ. ಎ. ಪಾಸಾಗಿ 1924ರಲ್ಲು ಮದ್ರಾಸಿನಲ್ಲಿ ಲಾಡಿಗ್ರಿ ಪಡೆದರು. ನಂತರ ಕೆಲಸಮಯ ಮಡಿಕೇರಿ ಭಾಗಮಂಡಲ ಸಾಗುಕ್ಷೇತ್ರದಿಂದ ಶಾಸನ ಸಭೆಗೆ ಆರಿಸಲ್ಪಟ್ಟರು. 1931ರಲ್ಲಿ ಮುನ್ಸೀಫರಾದರು. 1940ರಲ್ಲು ಜಿಲ್ಲಾ ಜಡ್ಜರಾಗಿ ನೇಮಿಸಲ್ಪಟ್ಟು ಕೊನೆತನಕ ಆ ಹುದ್ದೆಯಲ್ಲಿದ್ದರು.

The Vijaya Bank Ltd., Bombay.

ದಿ ವಿಜಯಾ ಬೇಂಕ್ ಲಿಮಿಟೆಡ್, ಬೊಂಬಾಯಿ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹಾಶಯರು ನಮ್ಮ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲದ ಮೊಬಲಗನ್ನಾಗಲೀ ಯಾ ಅದಕ್ಕಾಗುವ ಈ ತನಕದ ಬಡ್ಡಿಯನ್ನಾಗಲೀ ಕೊಡದೆ ಇರುವುದರಿಂದಲೂ ಅಲ್ಲದೆ ಕ್ರಮವಾದ ರಿಜಿಸ್ಟ್ರಿ ನೋಟೀಸು ಕೊಟ್ಟಲ್ಲಿ ಕೆಲವರು ಪಡಕೊಂಡು ಕೆಲವರು ಊರಿನಲ್ಲಿ ಇಲ್ಲವೆಂತ ವಾಪಾಸು ಬಂದಿರುವುದರಿಂದಲೂ, ನಗಗಳನ್ನು ಅವರವರು ಬಿಡಿಸಿಕೊಂಡು ಹೋಗದಿರುವುದರಿಂದಲೂ ಸದರೀಯವರಿಗೆ ಯಾ ಸದರಿಯವರ ವಾರೀಸುದಾರರಿಗೆ ಈ ಮೂಲಕ ತಿಳಿಸುವುದೇನಂದರೆ ಸದರೀಯವರು ಈಡಿಟ್ಟ ನಗಗಳನ್ನು ತಾರೀಕು 9—5—53ನೇ ಶನಿವಾರ ದಿವಸ ಗಂಟೆ 2ಕ್ಕೆ ಯಾ ಬೇಂಕಿಗೆ ಯುಕ್ತ ಕಂಡ ಇನ್ನಿತರ ದಿನಗಳಲ್ಲಿ ಪುನಹಾ ನೋಟೀಸು ಕೊಡದೆನೇ ಬ್ಯಾಂಕಿನ ಮಹಾಡದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

A/c:

ಲೋನು ನಂಬ್ರ ಮತ್ತು ತಾರೀಕು	ಹೆಸರು ಮತ್ತು ವಿಳಾಸ	ಮೊಬಲಗು ರೂ. ಆ.
15/52 15-1-52	೧. ಯಮರ್, ಕಿಲ್ಲೆವಾಲ, ಕೇಪ್ ಒಫ್ ಚಿಕ್ಕಾಗೋ ರೇಡಿಯೋ, ಹೊಟೆಲ್, ಬೊಂಬಾಯಿ	196 0 ಮತ್ತು ಬಡ್ಡಿ
28/52 2-2-52	ಬಿ. ಶಂಕರ ಶೆಟ್ಟಿ, ವಿಮಲಾ ಮಿಲ್ಕ ಬಾರ್, ಡಾಕ್ಯಾರ್ ಡಿ. ಸಿಲ್ವ ರೋಡ್, ದಾದರ್, ಬೊಂಬಾಯಿ 14.	1001 0 ಮತ್ತು ಬಡ್ಡಿ
7/52 11-1-52	ಕೆ. ಆನಂದ ಶೆಟ್ಟಿ, ರೂಮು ನಂಬ್ರ 55, ಬ್ಲೋಕ್ ನಂಬ್ರ 6, ನ್ಯೂ ಲೇಬರ್ ಕೆಂಪ್, ವರ್ಲಿ, ಬೊಂಬಾಯಿ-18.	101 0 ಮತ್ತು ಬಡ್ಡಿ

Hasan Chambers
Parsee Bazar Street,
Fort, Bombay.

P. P. Lobo Prabhu,
Manager.

For rotection and Provision Consult

The New Guardian of India Life Insurance Co., Ltd.

Estd] Head office: **MADRAS** [1934

NEW BUSINESS Exceeds	...	66½ Lakhs.
PREMIUM INCOME ,,	...	15 ,,
LIFE FUND ,,	...	54½ ,,
ASSETS ,,	...	60½ ,,
BUSINESS IN FORCE Nearly		3 Crores.

A Policy in this Progressive Life Office is good investment; its Agency is valuable business connection.

Applications for Representation are invited from energetic influential persons, with good connection. Please apply to:

G. R Wallia, *Branch Manager,*
Diamond Building, Hampankatta, MANGALORE, S. K.

ಬಾಳಿನ ಮುನ್ನೋಟವುಳ್ಳ ಪ್ರತಿಯೊಬ್ಬರೂ ಸಂಪಾದನೆಯ ಸ್ವಲ್ಪಾಂಶವನ್ನಾದರೂ ಸತತವಾಗಿ ಉಳಿಸಲು ಪ್ರಯತ್ನಿಸುತ್ತಾರೆ.

ನೀವೂ ನಿಮ್ಮ ಸಂಪಾದನೆಗೆ ತಕ್ಕಂತೆ, ತಿಂಗಳ, 3 ತಿಂಗಳ ಯಾ 6 ತಿಂಗಳ ಕಂತಿನಂತೆ ಪಾವತಿ ಮಾಡಬಹುದಾದ ಸಾವಿರ ರೂಪಾಯಿ ಒಳಗಿನ ವಿಮೆಯ ಮೂಲಕ ಸಾಧ್ಯವಾದಷ್ಟು ಹಣವನ್ನು ಶೇಖರಿಸುವ ನಿರ್ಧಾರ ಮಾಡಿರಿ.

ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ಉಡುಪಿ,

The New Karnataka Provident Insurance Co, Ltd. UDIPI.

ಕಣ್ಮನಗಳಿಗೆ ಔತಣ! ಯೋಚನೆಗಳಿಗೆ ಚೇತನ!

ಕಲಾಭಿಮಾನಿಗಳಿಗೆ ರಸಾಯನ!!!

ಕುಂದಾಪುರ ಬೋರ್ಡ್ ಹೈಸ್ಕೂಲು ವಠಾರದಲ್ಲಿ ಏಪ್ರಿಲ್ ತಾ. 24; 25; 26 ರಂದು ಶಾಲೆಯ ಹಳೆ ವಿದ್ಯಾರ್ಥಿ ಸಂಘದ ವತಿಯಿಂದ

ಕಲೆ—ವೃತ್ತಿ—ಕೈಗಾರಿಕೆ—ಪ್ರದರ್ಶನ

ಪ್ರಪಂಚದ ಹಲವಾರು ವಿಶೇಷಗಳು; ಭಾರತದ ಪ್ರಮುಖ ಪಟ್ಟಣಗಳ ವಸ್ತು ಸಂಗ್ರಹ ಕಲಾಕೇಂದ್ರದ ನಟನಟಿಯರ ನೃತ್ಯ ನಾಟಕಗಳು, ಮೂರು ಕಾಲಿನ ಜೀವಂತ ಮನುಷ್ಯ ಇತ್ಯಾದಿ ಅದ್ಭುತಗಳು. ತಾ. 24ರ ರಾತ್ರಿ ಪ್ರದರ್ಶನರಂಗದಲ್ಲಿ "ಕರ್ಣಾರ್ಜುನ" ಎಂಬ ನಾಟಕ. ತಾ. 25ರ ರಾತ್ರಿ "ದ್ರೌಪದಿ ಪ್ರತಾಪ" ಎಂಬ ಯಕ್ಷಗಾನದ ಬಯಲಾಟ.

— ಬರೇ ಮೂರುದಿನ ಮಾತ್ರ —

ಮಂಗಳೂರು

ಭೂದಾನ ಯಜ್ಞ— ಪೂಜ್ಯ ವಿನೋಬಾ ಭಾವೆಯವರು ಈಗ ದೇಶದಾದ್ಯಂತ ನಡೆಸುತ್ತಿರುವ ಭೂದಾನ ಯಜ್ಞದ ಕಾರ್ಯಕ್ರಮಕ್ಕನುಸಾರವಾಗಿ ದ. ಕ. ಜಿಲ್ಲೆಯಲ್ಲಿ ಕೂಡ ಭೂದಾನ ಸಮಿತಿಯೊಂದನ್ನು ಏರ್ಪಡಿಸುವರೆ ಇದೇ ತಾ 26ನೇ ಆದಿತ್ಯವಾರ ಅಪರಾಹ್ನ 4 ಗಂಟೆಗೆ ಮಂಗಳೂರಿನ ಕೊಡಿಯಾಲಬೈಲು ಇಗರ್ಜಿಯ ಸಮೀಪವಿರುವ ಸತ್ಯಶೋಧಕ ಸಂಘದ ಮಾಳಿಗೆಯಲ್ಲಿ ಒಂದು ಸಭೆ ಸೇರುವುದು. ಈ ಸಭೆಗೆ ಭೂಮಾಲಿಕರೂ ಇತರರೂ ಬಂದು ಭೂದಾನದ ಕಾರ್ಯಕ್ರಮವನ್ನು ಈ ಜಿಲ್ಲೆಯಲ್ಲೂ ಯಶಸ್ವಿಯಾಗಿ ಮಾಡಬೇಕೆಂದು ದ. ಕ. ಜಿಲ್ಲಾ ಭೂದಾನ ಸಮಿತಿ ಸಂಯೋಜಕ ಶ್ರೀ ರಾಮಚಂದ್ರ ರಾಯರು ಸೂಚಿಸುತ್ತಾರೆ.

ವಸಂತೋತ್ಸವ ಸ್ಥಳೀಯ ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ವಸಂತೋತ್ಸವವು ಇದೇ ತಾ 11 ಮತ್ತು 12 ರಲ್ಲಿ ಕುಮಾರಿ ವಿ. ಶಾರದಾಬಾಯಿಯವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು. ವಸಂತ ರಾಣಿಯವರಿಂದ "ಅದೃಷ್ಟ ಪರೀಕ್ಷೆ" ಮತ್ತು ಇತರ ಆಟಗಳ ಪ್ರದರ್ಶನದ ಉದ್ಘಾಟನೆಯೂ ನಡೆಯಿತು.

ಜಿಲ್ಲಾ ಪ್ರಜಾ ಸೋಶಲಿಸ್ಟ್ ಪಾರ್ಟಿಯ ಕಾರ್ಯಕಾರೀ ಸಮಿತಿ ಸಭೆಯು ತಾ 12ರಲ್ಲಿ ಜರಗಿತು. ಜಿಲ್ಲಾ ಪ್ರಜಾ ಸೋಶಲಿಸ್ಟ್ ಪಾರ್ಟಿಯ ಸಮ್ಮೇಳನ, ಕರ್ನಾಟಕ ಏಕೀಕರಣ ಪರಿಷತ್ತು ಮತ್ತು ಜಿಲ್ಲಾ ಹಿಂದ್ ಕಿಸಾನ್ (ರೈತ) ಪಂಚಾಯತ ಸಮ್ಮೇಳನಗಳನ್ನು ಕಾಸರಗೋಡಿನಲ್ಲಿ ಮುಂದಿನ ತಿಂಗಳ ತಾ 9 ಮತ್ತು 10ಕ್ಕೆ ಜರಗಿಸಬೇಕೆಂದು ನಿರ್ಣಯವಾಯಿತು.

ಪೋರ್ಟ್ ಟ್ರಸ್ಟ್- ಮಂಗಳೂರಿನ ಹಲವು ಸಂಸ್ಥೆಗಳು ಇಲ್ಲಿ ಒಂದು ಪೋರ್ಟ್ ಟ್ರಸ್ಟನ್ನು ರಚಿಸಿ ಬಂದರಿನ ಆಡಳಿತದಲ್ಲಿ ಹೆಚ್ಚಿನ ಸ್ವಾತಂತ್ರ್ಯ ಸಿಗುವಂತೆ ಆಗಬೇಕೆಂದು ಕೇಳಿಕೊಂಡಿರುವುದರಿಂದ ಇಲ್ಲಿಗೆ ಒಂದು ಪೋರ್ಟ್ ಟ್ರಸ್ಟನ್ನು ರಚಿಸುವ ಮಸೂದೆಯನ್ನು ಮುದ್ರಾಸು ಸರಕಾರವು ಪ್ರಕಟಿಸಿರುತ್ತದೆ. ಮಂಗಳೂರು ಬಂದರಿನ ಸುಧಾರಣೆ ಮತ್ತು ರಕ್ಷಣೆಗಳ ವಿಷಯವೂ ಮಸೂದೆಯಲ್ಲಿ ಅಡಕವಾಗಿದೆ.

ದ. ಕ. ಜಿಲ್ಲಾ ಮೋಟಾರು ಕೆಲಸಗಾರರ ದ್ವಿತೀಯ ಸಮ್ಮೇಳನವು- ತಾ 21ರಲ್ಲಿ ತಮಿಳುನಾಡಿನ ಮಜೂರ ಮುಖಂಡ ಶ್ರೀ. ಕೆ ಟಿ. ಕೆ ತಂಗಮಣಿಯವರ ಅಧ್ಯಕ್ಷತೆಯಲ್ಲಿ ಜರಗಿತು. ದ. ಕ. ಓಟೊಮೊಬೈಲ್ ಕೆಲಸಗಾರರ ಸಂಘದ ಕಾರ್ಯದರ್ಶಿ ಶ್ರೀ. ಎ ಕೆ. ನಾರಾಯಣನವರು ಸ್ವಾಗತ ಮಾಡುಗಳನ್ನಾಡಿದರು, ಶ್ರೀ. ಪಿ ಎಂ. ನಾರಾಯಣ ಮೂರ್ತಿಯವರು ಸಮ್ಮೇಳನಕ್ಕೆ ಬಂದಿದ್ದ ಸಂದೇಶಗಳನ್ನು ಓದಿದರು. ಶ್ರೀ ಎ. ಕೃಷ್ಣ ಶೆಟ್ಟರು ಸಮ್ಮೇಳನವನ್ನು ಉದ್ಘಾಟಿಸಿದರು. ಆ ಮೇಲೆ ಶ್ರೀಗಳಾದ ಮಲಬಾರಿನ ಬಾಲಚಂದ್ರ ಮೆನನ್ ಮತ್ತು ಮಂಗಳೂರಿನ ಶಾಂತಾರಾಮ ಪೈಗಳು ಭಾಷಣ ಮಾಡಿದರು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮಜೂರ ಸಮಸ್ಯೆ ಮತ್ತು ಸಂಘಟನೆಯ ಕುರಿತು ಮಾತನಾಡಿದರು. ಈ ಜಿಲ್ಲೆಯಲ್ಲಿ ಮೋಟಾರ್ ತೆರಿಗೆ ಕೊಟ್ಟ ವಾಹನಗಳ ಮೇಲೆ ಕೊಡಗು ಮೈಸೂರುಗಳಲ್ಲಿ ತೆರಿಗೆ ಹೊರಿಸಬಾರದು, ಮುದ್ರಾಸು ಸರಕಾರವು ತನ್ನ ಮೋಟಾರ್ ತೆರಿಗೆಯ ಮಿತಿಯನ್ನು ಇತರ ಪ್ರಾಂತಗಳ ಮಟ್ಟಕ್ಕಿಳಿಸಬೇಕು ಹೊಸತಾಗಿ ಹೇರಿಸಿದ ಮೋಟಾರ್ ಸರ್ಚಾರ್ಜನ್ನು ರದ್ದುಗೊಳಿಸಬೇಕು, ಕೇಂದ್ರ ಸರಕಾರದ ರೋಡ್ ಫಂಡಿನಿಂದ ಮುದ್ರಾಸು ಸರಕಾರಕ್ಕೆ ಒಂದೂವರೆ ಕೋಟಿ ರೂಪಾಯಿ ಲಭಿಸಿದ್ದರೂ ಈ ಜಿಲ್ಲೆಗೆ ಅದರಿಂದ ಯಾವ ಸಹಾಯವೂ ದೊರೆಯದಿದ್ದುದು ಶೋಚನೀಯವಾಗಿದೆ. ಮತ್ತು ಮಂಗಳೂರು–ಚಾರ್ಮಾಡಿ ರಸ್ತೆಗೂ ಮಂಗಳೂರು–ಸೋಮೇಶ್ವರ- ಕುಂದಾಪುರ ರಸ್ತೆಗೂ ಡಾಮರ ಹಾಕಿಸಬೇಕು ಎಂಬ ನಿರ್ಣಯಗಳಾದುವು. ಜಿಲ್ಲೆಯಲ್ಲಿಯ ಎರಡು ಮೋಟಾರ್ ಕೆಲಸಗಾರರ ಸಂಘಗಳು ಒಂದಾಗಬೇಕೆಂಬ ಮತ್ತು ವಿಶ್ವಶಾಂತಿಯಾಗಬೇಕೆಂಬ ನಿರ್ಣಯಗಳು ಕೂಡಾ ಆದುವು.

ದೇವಾಡಿಗ ಸಮಾಜ ಸುಧಾರಕ ಸಂಘದ- ಕಾರ್ಯಸಮಿತಿ ಸಭೆಯು ತಾ. 12ರಲ್ಲಿ ಶ್ರೀ ಕೆ. ಸಂಕಪ್ಪ ದೇವಾಡಿಗರ ಅಧ್ಯಕ್ಷತೆಯಲ್ಲಿ ಜರಗಿತು ಬೊಂಬಾಯಿಯ ದೇವಾಡಿಗ ಸಮಾಜ ಸುಧಾರಕ ಸಂಘದ ಅಧ್ಯಕ್ಷ ಶ್ರೀ ಎಸ್. ವೆಂಕಟಪ್ಪ ಮತ್ತು ಉಪಾಧ್ಯಕ್ಷ ಶ್ರೀ ಎಮ್. ಬಾಬು, ರ. ದೇವಾಡಿಗರು ಯೋಗ್ಯ ಸಲಹೆಗಳನ್ನಿತ್ತು ಶುಭ ಕೋರಿದರು

ನಾಭಿಕ ಸಮಾಜ ಬಂಧುಗಳ ಸಭೆ ಇದೇ ತಾ 14ರಲ್ಲಿ ನಗರದ ನಾಭಿಕ (ಕ್ಷೌರಿಕ ಸಮಾಜ)ರ ಸಭೆಯು ಫೆಲಿಕ್ಸ್ ಪೈ ಬಜಾರಿನಲ್ಲಿ ಶ್ರೀ ಕದ್ರಿ ಗೋವಿಂದ ಭಂಡಾರಿಯವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ನಾರಾಯಣ ಮಲ್ಯರು ನಾಭಿಕ ಸಮಾಜದ ಸಂಕ್ಷಿಪ್ತ ಚರಿತ್ರೆಯನ್ನು ತಿಳಿಸಿದರು. ಶ್ರೀ ತಿಮ್ಮಪ್ಪ ಮಲ್ಯರು ನಾಭಿಕ ಸಮಾಜ ಬಂಧುಗಳ ಸಂಘಟನೆಯ ಆವಶ್ಯಕತೆಯನ್ನು ಸೂಚಿಸಿದರು ಶ್ರೀಗಳಾದ ಬಿ. ರಾಧಾಕೃಷ್ಣ, ಕೃಷ್ಣ ಮಾಲಡಾ ಸಂಜೀವ ನಾಥ ಮೊದಲಾದವರು ಮಾತನಾಡಿದ ನಂತರ ನಾಭಿಕ ಸಮಾಜ ಸುಧಾರಣಾ ಸಂಘವೊಂದು ಸ್ಥಾಪಿಸಲ್ಪಟ್ಟು ಸಂಘದ ಕೆಲಸ ಮಾಡಲು ಹದಿನೈದು ಜನರುಳ್ಳ ತಾತ್ಕಾಲಿಕ ಸಮಿತಿಯು ರಚನೆಯಾಯಿತು.

ದಿ ವಿಜಯ ಬೇಂಕ್, ಲಿಮಿಟೆಡ್

ಸ್ಥಾಪನೆ: 1931.] ಪ್ರಧಾನ ಕಛೇರಿ: **ಮಂಗಳೂರು.**

ಮೂಲಧನ	ರೂ. 10,10,000
ತೆತ್ತ ಪಾಲು ಭಂಡವಾಳ	„ 8,77,860
ಕ್ಷೇಮ ನಿಧಿ	„ 1,65,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವ್ಯಾದಿ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವುವು

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4½°/. ಬಡ್ಡಿ ದರ ಗಳಿಸಿಕೊಳ್ಳಬಹುದು

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ

ಬಿ. ಮಂಜಯ್ಯ ಹೆಗ್ಡೆ,
ಬೇಂಕಿನ ಆಡಳಿತೆ ಕಮಿಟಿ ಅಧ್ಯಕ್ಷರು,
(ಮತ್ತು ದ. ಕ. ಜಿಲ್ಲಾ ಬೋರ್ಡಿನ ಅಧ್ಯಕ್ಷರು.)

THE VIJAYA BANK, Limited.

ನೋಟೀಸು

ದಕ್ಷಿಣ ಕನ್ನಡ ಸಬೊರ್ಡಿನೇಟ್ ಕೋರ್ಟಿನಲ್ಲಿ.

ಕ್ರಮ ನಂಬ್ರ 143/1950

ಲಕ್ಷ್ಮಿ ಹೆಗ್ಗಡ್ತಿ ಕೂಡಾ . . .. ವಾದಿಯು

ಮತ್ತು

ಇನ್ನೊಡಿ ದುಗ್ಗಪ್ಪ ಶೆಟ್ಟಿ ಕೂಡಾ .. . ಪ್ರತಿವಾದಿಯು.

ಮೇಲ್ಕಂಡ ವ್ಯಾಜ್ಯದಲ್ಲಿ 30ನೇ ಪ್ರತಿವಾದಿ ರಾಜೀವ ಶೆಟ್ಟಿ, ರುದ್ರು ಶೆಡ್ತಿ ಮಗ, ಬಲ್ಯೂರು ಗ್ರಾಮದ ಕಂಡಾವರ ಎಂಬಲ್ಲಿರುವವರು

32ನೇ ಪ್ರತಿವಾದಿ ಮೋನಪ್ಪ ಶೆಟ್ಟಿ } ಗುಲಾಬಿ ಶೆಟ್ಟಿ
33ನೇ ಪ್ರತಿವಾದಿ ವಿಶ್ವನಾಥ ಶೆಟ್ಟಿ } ಮಕ್ಕಳು [illegible]

ತಾಲ್ಲೂಕು ಬಾರ್ಕೂರು ಗ್ರಾಮ [illegible]

ಮೇಲ್ಕಂಡ ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನೆಂದ್ರೆ —

ಮೇಲ್ಕಂಡ ವ್ಯಾಜ್ಯದಲ್ಲಿ ತಾರೀಕು 14—4—1953ರಲ್ಲಿ ಆದ ಹುಕುಂ ಪ್ರಕಾರ ಈ ಕೆಳಗೆ ವಿವರಿಸಿದ ಆಸ್ತಿಯನ್ನು ಕಮಿಶನರು ತಾರೀಕು 18—5—1953ನೇ ಸೋಮವಾರ ದಿನ ಬೆಳಿಗ್ಗೆ 10 ಘಂಟೆಗೆ ಹಾವಂಜೆ ಗ್ರಾಮದಲ್ಲಿರುವ ಕುಟುಂಬದ ಮನೆಯಲ್ಲಿ ಬಿಕರಾರರೊಳಗೆ ಏಲಂ ಮಾಡುವದರಿಂದ, ಬಿಕರಾರರು ಸದ್ರಿ ಕುಟುಂಬದ ಮನೆಗೆ ಬಂದು ಏಲಮಿಗೆ ಹಾಜರಾಗಬಹುದು.

ಏಲಂ ಕಾಲದಕ್ಕೆ ಪ್ರಥಮ ವಾರು ಕರೆಯುವರೆ ಅಂದಾಜು ಕ್ರಯ ರೂ 4000/ ಎಂತ ನಿರ್ಣಯಿಸಿದೆ ಅತೀ ಹೆಚ್ಚಿನ ಏಲಂಕೊಡುವವರಿಗೆ ನಿಂತ ದರಖಾಸ್ತುದಾರನ ಹೆಸರಿನಲ್ಲಿ ಕ್ರಮದಂತೆ ಕೋರ್ಟಿನವರು ಏಲಂ ಕಾಯಂ ಮಾಡುವರು ದರಖಾಸ್ತುದಾರನು ತನ್ನ ಹೆಸರಿನಲ್ಲಿ ಕ್ರಾಯವಾದ ಆಸ್ತಿಯ ಕ್ರಯದ ಏಲಂಜಿನ ಪೈಕಿ ½ನೇ ಅಂಶವನ್ನು ಕೂಡಲೇ ಕಮಿಶನರಿಗೆ ತೆತ್ತು ರಸೀದಿ ಪಡೆಯತಕ್ಕದ್ದು ಬಾಕಿ ಹಣವನ್ನು ಏಲಂ ತಾರೀಕಿನಿಂದ 15 ದಿವಸಗಳೊಳಗೆ ಕಮಿಶನರಿಗೆ ಕೊಟ್ಟು ರಸೀದಿ ಪಡೆಯತಕ್ಕದ್ದು ಇದಕ್ಕೆ ತಪ್ಪಿದರೆ ಆತನು ಕೊಟ್ಟ ½ನೇ ಅಂಶದ ಏಲಂಜನ್ನು ವಾಪಾಸು ಕೇಳುವ ಅಧಿಕಾರ ವ ಹಕ್ಕು ದರಖಾಸ್ತುದಾರನಿಗೆ ಇರುವದಿಲ್ಲ

ಕೋರ್ಟಿನವರು ಏಲಮನ್ನು ಕಾಯಂ ಮಾಡಿದ ನಂತರ ಸೇಲ್ ಸರ್ಟಿಫಿಕೇಟಿನ ಖರ್ಚು ಕ್ರಯದಾರನೇ ವಹಿಸಿಕೊಳ್ಳತಕ್ಕದ್ದು ಆಸ್ತಿ ಕುರಿತು ಹೆಚ್ಚಿನ ಮಾಹಿತಿ ಬಗ್ಗೆ ಮಂಗಳೂರು ಬಾವುಟ ಗುಡ್ಡೆ ರಸ್ತೆ ಬಳಿ ಎಡ್ವೊಕೇಟ್ ಕಮಿಶನರ್ ಎ. ರಂಗನಾಥರಾವ್ ಇವರ ಆಫೀಸಿಗೆ ಬಂದು ತಿಳಕೊಳ್ಳಬಹುದು.

ಆಸ್ತಿ ವಿವರ

[illegible] ಹಾವಂಜೆ ಗ್ರಾಮದ ಸರ್ವೆ ನಂಬ್ರ 96—28ರಲ್ಲಿ ಕಮಿಶನರು ಕೋರ್ಟಿನಲ್ಲಿ ಹಾಕಿದ್ದ ನಕಾಶೆಯಲ್ಲಿ 96—28B ಎಂತ ನಮೂದು ಹಾಕಿದ 70 ಸೆಂಟ್ಸ್ ವಿಸ್ತೀರ್ಣದ ಸ್ಥಳ ಮತ್ತು ಅದರ ಮತ್ತು ಸದ್ರಿ ಆವರಣದಲ್ಲಿರುವ ಕುಟುಂಬದ ಮನೆ 1, ಉಪಕಟ್ಟಡಗಳು 3, ಬಾವಿ 1, ತೆಂಗಿನ ಮರಗಳು ವಗೈರೆ ಸಹಾ.

ಮಂಗಳೂರು }
ತಾ. 18-4-1953. }

A. Ranganath Rao
Commissioner

ಮೊಡರ್ನ್ ಹಾ. ಎ. ಶಾಲೆ, ಉಡುಪಿ, ರಜತ ಮಹೋತ್ಸವ ಸಮಿತಿಯ ವಿನಂತಿ

ಮೊಡರ್ನ್ ಹಾಯರ್ ಎಲಿಮೆಂಟರಿ ಶಾಲೆಯು ಚಿರಪರಿಚಿತವಾದ ಸಂಸ್ಥೆ. ಈ ಸಂಸ್ಥೆಯು ಇತ್ತನೆ ವಿದ್ಯಾದಾನ ಮಾಡಿ ಅನೇಕಾನೇಕರು ವಿದ್ವಾಂಸರೂ, ಕೀರ್ತಿವಂತರೂ ಆಗಿರ ತಕ್ಕವರ ವಿದ್ಯಾಕ್ಷೇತ್ರದಲ್ಲಿ ಕಷ್ಟನಷ್ಟಗಳನ್ನು ಸಹಿಸಿದ ಈ ಕಳೆದ ಇಪ್ಪತ್ತೈದು ವರ್ಷಗಳಿಂದ ಈ ಸಂಸ್ಥೆಯು ನಿಸ್ವಾರ್ಥ ಸೇವೆಯನ್ನು ಸಲ್ಲಿಸುತ್ತಿದೆ ಎಂಬುದು ನಮಗೆಲ್ಲರಿಗೂ ಅಭಿಮಾನದ ವಿಷಯ. ಈ ಅಭಿಮಾನವನ್ನು ವ್ಯಕ್ತಪಡಿಸಲು, ಈ ಸಂಸ್ಥೆಯು ನೀಡಿದ ಅಭಿವೃದ್ಧಿಗಾಗಿ ಸೇವೆಯಲ್ಲಿ ತೃಪ್ತಿ ಪ್ರದರ್ಶಿಸಲು, ತಾರೀಕು 8-5-53ನೇ ಶುಕ್ರವಾರದ ಮೊದಲ್ಗೊಂಡು ಮೂರು ದಿನಗಳ ಪರ್ಯಂತ ಈ ಶಾಲೆಯ "ರಜತ ಮಹೋತ್ಸವವನ್ನು" ಜರಗಿಸಬೇಕೆಂದು ನಿಶ್ಚಯಿಸಿರುವೆವು. ಈ ರಜತ ಮಹೋತ್ಸವ ಕಾಲದಲ್ಲಿ ಅನೇಕ ಮಹನೀಯರು ಶಾಲೆಯ ಶುಭಾಶಯಗಳನ್ನು ಕೋರಲಿರುವರಲ್ಲದೆ ನಾಟಕ, ಸಂಗೀತ, ವಸ್ತುಪ್ರದರ್ಶನ, ಲಕ್ಕಿ ಡಿಪ್, ಸಂಗೀತ, ನೃತ್ಯವೇ ಮೊದಲಾದ ಅನೇಕ ಕಾರ್ಯಕ್ರಮಗಳನ್ನಿಟ್ಟುಕೊಂಡಿರುವೆವು ಇದಕ್ಕಾಗಿ ಒಂದೊಂದು ರೂಪಾಯಿ ಮೌಲ್ಯದ "ರಜತ ಮಹೋತ್ಸವ ಪದಕಗಳನ್ನು" ವಿಕ್ರಯಿಸಲಿರುವೆವು. ಮಹಾಜನರೆಲ್ಲರೂ ಈ ಪದಕಗಳನ್ನು ಪಡಕೊಂಡು ತಮ್ಮ ಪ್ರೋತ್ಸಾಹವನ್ನಿತ್ತು ಈ ಮಹೋತ್ಸವದಲ್ಲಿ ಭಾಗಿಗಳಾಗಬೇಕಾಗಿ ಕೋರುತ್ತೇವೆ. ಶಾಲಾ ವಿದ್ಯಾರ್ಥಿಗಳಿಗೆ ಆಟ ಎಂಟರ್ ಟೈನ್ ಮೆಂಟ್ ಹಳೆ ವಿದ್ಯಾರ್ಥಿಗಳಿಗೆ ರೂಪಾಯಿ ವರೆಗಿನ "ಸ್ಪೆಶಲ್" ಪದಕಗಳನ್ನು ಹೊರಡಿಸುವ ಏರ್ಪಾಡು ಮಾಡಲಾಗಿರುವುದು ಇದೇ ಸಂದರ್ಭದಲ್ಲಿ ಈ ಶಾಲೆಯ ಸ್ಥಿತಿಯಲ್ಲಿ ಸ್ಥಿರತೆ ಮನ್ನಂಟುಮಾಡಲು ಇದರ ಭವ್ಯ ಭವಿತವ್ಯವನ್ನು ಸಾಧಿಸಲು ಹಾಗೂ ಇದರ ಸತ್ಪ್ರಯೋಜನವು ಜನತೆಗೆ ಎಂದೆಂದಿಗೂ ಲಭ್ಯವಾಗಲೆಂದು ಶಾಲಾಭಿಮಾನಿಗಳ ಸಹಕಾರದಿಂದ ಶಾಲೆಯ "ರಜತ ಮಹೋತ್ಸವ ಟ್ರಸ್ಟ್" ಒಂದನ್ನು ಸ್ಥಾಪಿಸುವ ನಿರ್ಧಾರವನ್ನು ಮಾಡಿರುವೆವು ಇದರ ಮೂಲಧನ ಸುಮಾರು ಹತ್ತು ಸಾವಿರ ರೂಪಾಯಿಗಳಾಗಬೇಕೆಂದೂ, ಅದರಲ್ಲಿ ಯೋಗ್ಯ ವಿದ್ಯಾರ್ಥಿಗಳಿಗೆ ವೇತನ ಕೊಡಲು ರೂ. 3000ಕ್ಕೆ ಒಂದು ನಿಧಿಯು [illegible], ರೂ. 2000ಗಳನ್ನು ಶಾಲೆಯ ಲೈಬ್ರೆರಿ ಮತ್ತು ಲೆಬೊರೇಟರಿಗೆ ವಿನಿಯೋಗಿಸಿ ಮಿಕ್ಕಿರುವ 5000 ರೂಪಾಯಿಗಳನ್ನು ಕ್ಷೇಮ ನಿಧಿಯಾಗಿ ಇಡಬೇಕೆಂದು ನಿರ್ಣಯ ಮಾಡಿರುವೆವು [illegible] ಸಂಗ್ರಹವಾಗಬಹುದೆಂದು ವಿಶ್ವಾಸವಾಗಿದೆ. ಇಲ್ಲವಾದ ಈ ಜಮೆಯಾದ ಹಣವನ್ನು ಸೋಲಿನ [illegible] ವಿನಿಯೋಗಿಸಲಾಗುವುದು ಪದಕಗಳ ಮೂಲಕ ಸಂಗ್ರಹವಾದ ಹಣದಲ್ಲಿ ಮಹೋತ್ಸವದ ಖರ್ಚು ಕಳೆದು ಉಳಿದ ಮೊಬಲಗು ಟ್ರಸ್ಟ್ ನಿಧಿಗೆ ಸೇರಲಾಗುವುದು

—ಈ ಟ್ರಸ್ಟಿನ ಸದಸ್ಯತನ ಹೀಗಿದೆ -

1. ಆಜೀವ ಸದಸ್ಯರು 101ರೂ 2 ಪೋಷಕರು 51 ರೂ. 3 ಆಶ್ರಯದಾತರ 26ರೂ. 4 ಸಾಮಾನ್ಯ ಸದಸ್ಯರು 11 ರೂ

ಅಲ್ಲದೆ ರೂ. 250ಕ್ಕೆ ಮೇಲ್ಪಟ್ಟು ಸಹಾಯ ಮಾಡುವವರು ಟ್ರಸ್ಟಿನ ಸಂರಕ್ಷಕರಾಗುವರು ಟ್ರಸ್ಟಿನ ಸದಸ್ಯರು, ರಜತ ಮಹೋತ್ಸವದ ಸ್ವಾಗತ ಸಮಿತಿಯ ಸದಸ್ಯರೆಂದು ಪರಿಗಣಿಸಲ್ಪಡುವರು

ಉದಾರ ಹೃದಯಿಗಳೂ ದೇಶಾಭಿಮಾನಿಗಳೂ ಶಕ್ತಿ ಮೀರಿ ಸಹಾಯವನ್ನಿತ್ತು ಈ ಸುಸಂದರ್ಭದಲ್ಲಿ ಭಾಗಿಗಳಾಗಬೇಕಾಗಿ ವಿನಂತಿ

ಟಿ. ಎ. ಪೈ, ಎಮ್. ಎಲ್. ಎ ಅಧ್ಯಕ್ಷ
ಎ. ಜೆ. ಅಲ್ಸೆ, ಕಾರ್ಯದರ್ಶಿ
ಕೆ ಜಗನ್ನಾಥ ನಾಯಕ್ ಬಿ.ಎ. ಮೆನೇಜರ್



ಬರೇ ರೂ- 5ಕ್ಕೆ
15 ಜ್ಯುವೆಲಿನ
ರಿಸ್ಟ್ ವಾಚು

15 ವರ್ಷ ಗ್ಯಾರಂಟಿ ಇರುವ, 15 ಜ್ಯುವೆಲಿನ ರಿಸ್ಟ್ ವಾಚುಗಳು ರೂ. 5ಕ್ಕೆ ದೊರೆಯುತ್ತವೆ.

ಬೇಗನೆ ಬರೆಯಿರಿ:

American Swiss Watch Suppliers.
Putlighar (N.U) Amritsar.

ನೌಕರಿಗೆ ಸೇರುವಿರಾ?

(೧ನೇ ಪುಟದಿಂದ)

ಕಲಿಸಿ ತರಬೇತಿಗೊಳಿಸಿ ಅದರಲ್ಲಿ ನಿಷ್ಣಾತನನ್ನಾಗಿ ಮಾಡುವರು. ಆದರೆ ಆ ಕೆಲಸ ಬಿಟ್ಟರೆ ಬೇರೇನೂ ಗೊತ್ತಿರುವುದಿಲ್ಲ ಒಟ್ಟಾರೆ ಸಣ್ಣ ಸಂಸ್ಥೆಯ ನೌಕರನು ಎಲ್ಲ ವಿಷಯಗಳನ್ನೂ ಒಲ್ಲವನು; ಆದರೆ ಪಾಂಡಿತ್ಯ ಯಾವುದರಲ್ಲೂ ಇಲ್ಲ. ದೊಡ್ಡ ಕಂಪೆನಿಯಾತನಿಗೆ ತೀರಾ ಕಡಿಮೆ ವಿಷಯದ ಮೇಲೆ ಬಹಳ ಹೆಚ್ಚು ಜ್ಞಾನವಿದೆ

ಆದುದರಿಂದ ನಾವು ಸಾಮಾನ್ಯ ಜ್ಞಾನವುಳ್ಳವರಾಗ ಬೇಕೆ, ಅಥವಾ ಘನಪಾಂಡಿತ್ಯ ಸಂಪಾದಿಸ ಬೇಕೆ ಎಂಬುದನ್ನು ಮೊದಲೇ ನಿರ್ಧರಿಸಿಕೊಂಡು ಅದಕ್ಕೆ ಅನುಗುಣವಾದ ನೌಕರಿಯಲ್ಲಿ ಸೇರುವುದು ಅಪೇಕ್ಷಣೀಯ ಇಂಜಿನಿಯರಿಂಗ್ ಮುಂತಾದುವುಗಳಲ್ಲಿ ನಾಕಷ್ಟು ಪಾಂಡಿತ್ಯವಿದ್ದ ಜನರಿಗೆ ಮಾತ್ರ ಪ್ರವೇಶ ದೊರೆಯುತ್ತದೆ. ಉತ್ಪಾದನಾಕ್ಷೇತ್ರಗಳಲ್ಲಿ, ಕಾರ್ಖಾನೆಗಳಲ್ಲಿ, ಆಯಾ ಕೆಲಸಗಳಲ್ಲಿ ಪಾಂಡಿತ್ಯವಿದ್ದವರಿಗೇನೆ ಪ್ರಾಶಸ್ತ್ಯ. ಆದರೆ ಆಡಳಿತ ಕ್ಷೇತ್ರದಲ್ಲಿ ವಿಶಾಲ ದೃಷ್ಟಿಯನ್ನಿಟ್ಟುಕೊಳ್ಳ ಬಲ್ಲ, ಎಲ್ಲ ವಿಷಯವನ್ನೂ ಮನನ ಮಾಡಿಕೊಳ್ಳ ಬಲ್ಲ ಜನರಿಗೆ ಅಧಿಕ ಬೇಡಿಕೆ ಇದೆ. ಮರಗಳನ್ನು ಮಾತ್ರ ನೋಡುವವನಿಗಿಂತ ಇಡೀ ಅರಣ್ಯವನ್ನು ಕಾಣುವವನಿಗೆ ಈ ಕ್ಷೇತ್ರದಲ್ಲಿ ಸ್ವಾಗತವಿದೆ ಪಾಂಡಿತ್ಯವಿದ್ದವನು ಒಂದುವಿಷಯದ ಆಗು ಹೋಗುಗಳ ಸಂಪೂರ್ಣ ಜ್ಞಾನವುಳ್ಳವ ಅದರ ತಂತ್ರ, ಸಾಧನ ಸಲಕರಣೆ, ಮುಂತಾದುವೆಲ್ಲದರಲ್ಲೂ ಅವನದು ಪಳಗಿದ ಕೈ. ಆದರೆ ಒಬ್ಬ ಮೆನೇಜರನ ಕೆಲಸ ಇದರಂತಿಲ್ಲ—ಅವನು ಧುರೀಣತ್ವ ವಹಿಸಬೇಕು; ಯೋಜನೆಗಳನ್ನು ಮಾಡಿಟ್ಟುಕೊಂಡು, ಮಾರ್ಗದರ್ಶನದ ಹೊಣೆ ಹೊರಬೇಕು. ತನ್ನ ಸಂಪರ್ಕಕ್ಕೆ ಬರುವ ಎಲ್ಲ ಜನರೊಡನೆಯೂ ತೃಪ್ತಿಕರವಾಗಿ ವ್ಯವಹರಿಸುವ ಕೌಶಲ್ಯ ಇದ್ದವನಿರಬೇಕು

ನಮ್ಮ ವ್ಯಕ್ತಿತ್ವ ಎಂಥದೆಂಬುದನ್ನು ನೋಡಿಕೊಂಡು ಅನುಕೂಲವಾದ ನೌಕರಿ ಹಿಡಿದರೆ, ಅದರಲ್ಲಿ ಉತ್ಕರ್ಷ ಹೊಂದಬಲ್ಲೆವು. ಆದರೆ ನಮಗೆ ಸರಿಯಾಗಿ ಒಪ್ಪುವ ನೌಕರಿಯನ್ನು ಹುಡುಕುವುದೇನು ಸಾಮಾನ್ಯವೇ? ಅದೂ ಈ ನಿರುದ್ಯೋಗದ ದಿನಗಳಲ್ಲಿ ಕೈಗೆ ಸಿಕ್ಕಿದ ಯಾವ ಕೆಲಸವಾದರೂ ಸರಿಯೆ, ಸಂಬಳ ಎಷ್ಟಾದರೂ ಸರಿಯೆ, ಅದನ್ನು ಬಿಡಬಾರದೆನ್ನುವಾಗ—ನಮ್ಮ ವ್ಯಕ್ತಿತ್ವದ ವೈಶಿಷ್ಟ್ಯಗಳಿಗೊಪ್ಪುವ ಉದ್ಯೋಗದೊರೆಯುವುದೇ ದುರ್ಲಭ ಅಷ್ಟು ಸೌಭಾಗ್ಯ ಅದು ಪಡೆದವರು ಯಾರಾದರಿದ್ದರೆ ತೀರ ಆಕಸ್ಮಿಕ ಯೋಗದ ಪರಿಣಾಮವೆಂದಿಟ್ಟುಕೊಳ್ಳಬಹುದು. ಆದುದರಿಂದ ನಾವು ಕೈಗೊಂಡ ಮೊದಲನೇ ನೌಕರಿಯನ್ನು ಬಿಟ್ಟುಬಿಡಬೇಕಾಗಿ ಬರುವ ಪ್ರಸಂಗ ಬರುವುದುಂಟು; ಆಗ ನಾವು ಹತಾಶರಾಗಕೂಡದು. ಬೇರೊಂದು ಇದಕ್ಕೂ ಹೆಚ್ಚು ನಮಗೊಪ್ಪುವ ಕೆಲಸಕ್ಕೆ ಸೇರಿಕೊಳ್ಳಬೇಕು ನಾವು ಮೊದಲು ಸೇರಿಕೊಂಡ ಕೆಲಸವನ್ನು ಯೋಗ್ಯ ರೀತಿಯಲ್ಲಿ ಸಾಗಿಸಿಕೊಂಡು ಹೋಗಲು ನಮಗೆ ಸಾಧ್ಯವಿಲ್ಲವೆಂದೆನಿಸಿದರೆ—ಅದನ್ನು ನಾವಾಗಿ ಬಿಟ್ಟುಕೊಡುವುದು ಉಚಿತ. ಇದರಿಂದ ನಮಗೆ ಸಮಾಧಾನ ದೊರೆಯುತ್ತದೆ. ಬದಲಿಗೆ, ಒಡೆಯರ ಕೈಯಿಂದ "ನಿಮ್ಮ ಕೆಲಸ ಸಮರ್ಪಕವಾಗಿಲ್ಲ-ನೀವು ನಾಳೆಯಿಂದ ಬರುವುದಗತ್ಯವಿಲ್ಲ" ಎಂಬ ಮಾತನ್ನು ಕೇಳಿಸಿಕೊಳ್ಳುವವರೆಗೆ ನಿಧಾನ ಮಾಡಿದಲ್ಲಿ-ಆತ್ಮಗ್ಲಾನಿಗೆ ಗುರಿಯಾಗುತ್ತೇವೆ. ಇಷ್ಟು ಹೇಳಿದ ಮಾತ್ರಕ್ಕೆ ದಿನಕ್ಕೊಂದು ಕೆಲಸಕ್ಕೆ ಸೇರಿ ಮರುದಿನ ಅದಕ್ಕೆ ತಿಲಾಂಜಲಿ ಕೊಡಬೇಕೆಂದು ಅಭಿಪ್ರಾಯವಲ್ಲ. ಹಲವಾರುಸಲ ಕೆಲಸ ಬಿಟ್ಟರೆ ಜನರಿಗೆ ನಮ್ಮಲ್ಲಿ ಕೆಲಸಮಾಡುವ ಕೌಶಲ್ಯವೇ ಇಲ್ಲವೆಂಬ ತಪ್ಪು ತಿಳುವಳಿಕೆಯಾಗುತ್ತದೆ. ನಮ್ಮ ವ್ಯಕ್ತಿತ್ವಕ್ಕೆ ಒಪ್ಪುವ ಕೆಲಸ ದೊರೆಯದಿದ್ದ ಪಕ್ಷದಲ್ಲಿ-ದೊರೆತ ಕೆಲಸಕ್ಕೆ ಹೊಂದಿಕೊಳ್ಳುವಂತೆ ನಮ್ಮ ವ್ಯಕ್ತಿತ್ವವನ್ನು ಬದಲಾಯಿಸಲಾಗುತ್ತದೋ ಎಂದು ಪ್ರಯತ್ನಿಸಿ ನೋಡಬೇಕು "ದೇರಿನಂಚಿ ಪೋಯಿಜಿಡ, ಪೋಯಿನಂಚಿ ದೇರೊಡು" (ಅಟ್ಟದತ್ತ ಹೋಗದಿದ್ದರೆ, ಹೋದತ್ತ ಅಟ್ಟೋಣ) ಎಂದೊಬ್ಬ ಗೆಳೆಯರು ತುಳುಗಾದೆ ಮಾಡಿದ್ದಾರೆ.

ನೌಕರರಾಗಿರುವುದರಿಂದ ನಾವು ಬೇರೆ ಜನರ ಕೃಪಾಕಟಾಕ್ಷದ ಮೇಲೆ ನಮ್ಮ ಭವಿಷ್ಯ ರೂಪಿಸುತ್ತೇವೆ. ಇತರರೊಡನೆ ನಾವು ವ್ಯವಹರಿಸುವ ಧಾಟಿಯನ್ನೆ ನಮ್ಮ ಉತ್ಕರ್ಷ ಅಥವಾ ಅಪಕರ್ಷ ಹೊಂದಿಕೊಂಡಿದೆ. ನಮ್ಮ ವಿಚಾರ ಹಾಗು ಮಾತುಗಳನ್ನು ಪರಿಣಾಮಕಾರಿಯಾದ ರೀತಿಯಲ್ಲಿ ಮಂಡಿಸ ಬಲ್ಲೆವಾದರೆ ಮಾತ್ರ ನಮಗೆ ಒಳ್ಳೆಯದಾದೀತು. ನಾವು ಬರೆಯುವ ಕಾಗದ ಪತ್ರಗಳು ತಯಾರಿಸುವ ರಿಪೋರ್ಟುಗಳು, ಕೆಲವೇ ನಿಮಿಷಗಳಲ್ಲಿ ನಮ್ಮ ನಿಲುವೆಯನ್ನು ಸ್ಪಷ್ಟೀಕರಿಸುವ ಮಾತುಗಳು ಇವುಗಳೇ ನಮ್ಮ ಭವಿಷ್ಯ ನಿರ್ಣಯಿಸುತ್ತವೆ. ದೈಹಿಕ ಪರಿಶ್ರಮದಿಂದ ದೂರಾಗಿ ಮನೋಬಲವನ್ನು ನಮ್ಮ ನೌಕರಿ ಹೆಚ್ಚು ಹೆಚ್ಚು ಅವಲಂಬಿಸಿಕೊಂಡಂತೆ ನಮ್ಮ ಲೇಖನಿ ಮತ್ತು ನಾಲಿಗೆ ಚುರುಕಾಗುವುದವಶ್ಯ. ಶಾಲೆಯಲ್ಲಿ ಪ್ರಬಂಧ ಸ್ಪರ್ಧೆ ಭಾಷಣ ಸ್ಪರ್ಧೆಗಳಲ್ಲಿ ಭಾಗ ವಹಿಸಿ ಜಯಹೊಂದಿದ ಧೀರರು ನೌಕರ ಶಾಹಿಯಲ್ಲೂ ದಕ್ಷತೆಯಿಂದ ವರ್ತಿಸ ಬಲ್ಲರು. ಇವರಿಗೆ ಬಡ್ತಿ ಬೇಗ ಬೇಗನೇ ದೊರೆತೀತು. ಆದರೆ ಒಂದು ಸಂಗತಿ ನೆನಪಿರಲಿ, ಭತ್ತಿಯೇ ನೌಕರಿಯ ಸರ್ವಸ್ವವಲ್ಲ; ಆ ಗೌರವ ಆತ್ಮ ಸಂತೃಪ್ತಿಗೆ!

— ಓ ತತ್ಸತ್॥

ಸ್ವೀಕಾರ—ವಿಮರ್ಶೆ

ಪುರಾತನದ ತ್ರಿವಿಧಿ (ನಿಜಗುಣ ಶಿವಯೋಗಿ ವಿರಚಿತ)-ಸಂಪಾದಕರು: ಬಿ. ಶಿವಮೂರ್ತಿ ಶಾಸ್ತ್ರಿ. ಪ್ರಕಾಶಕರು ಶರಣ ಸಾಹಿತ್ಯ ಕಾರ್ಯಾಲಯ, ಬಳೇಪೇಟೆ ಬೆಂಗಳೂರು ೨. ಬೆಲೆ: ರೂ. ೧—೦—೦

ಕನ್ನಡ ಸಾಹಿತ್ಯದಲ್ಲಿ ಆಳವಾದ ಅಭ್ಯಾಸ ಗೈದಿರುವ ಪಂಡಿತರತ್ನರಾದ ಶಿವಮೂರ್ತಿ ಶಾಸ್ತ್ರಿಯವರು ನಮ್ಮ ನಾಡಿನ ಮುಮುಕ್ಷುಗಳು, ಸಾಹಿತಿ ಹಾಗು ಕವಿಗಳು ಅತ್ಯಂತ ಆದರದಿಂದ ಕಾಣುವ ಶ್ರೀ ನಿಜಗುಣ ಶಿವಯೋಗಿ ವಿರಚಿತವಾದ ಪುರಾತನದ ತ್ರಿವಿಧಿಯೆಂಬ ಗ್ರಂಥದ ವಿಸ್ತಾರವಾದ ಮತ್ತು ವಿಮರ್ಶಾತ್ಮಕವಾದ ಪರಿಚಯವನ್ನು ಇದರಲ್ಲಿ ಮಾಡಿಕೊಟ್ಟಿರುವರು. ಈ ಗ್ರಂಥವು ಕನ್ನಡಿಗರ ಅಚ್ಚುಮೆಚ್ಚಿನ ಛಂದಸ್ಸೆನಿಸಿದ ತ್ರಿಪದಿಯಲ್ಲಿದೆ; ಶಿವಧರ್ಮದ ಉದ್ಧಾರಕರೆನಿಸಿದ ಅರುವತ್ತು ಮೂರು ಮಂದಿ ಪುರಾತನರ ಮಹಿಮಾ ವರ್ಣನೆಯೇ ಕವಿಯ ಉದ್ದೇಶ. ಈ ಎಲ್ಲ ಪುರಾತನರ ಸ್ತೋತ್ರವನ್ನು ಆರಂಭದಲ್ಲಿ ಪ್ರಕಟಿಸಿರುವರು ಆ ಬಳಿಕ ಸಂಪಾದಕರು ಐದು ಅನುಬಂಧಗಳನ್ನು ಜೋಡಿಸಿರುವರು. ನಿಜಗುಣ ಶಿವಯೋಗಿಯ ಪರಿಚಯಾತ್ಮಕವಾದುದು ಮೊದಲನೆಯ ಅನುಬಂಧ. ಎರಡನೆಯ ಹಾಗು ಮೂರನೆಯ ಅನುಬಂಧಗಳು ಅರುವತ್ತು ಮೂವರು ಪುರಾತನದ ಇತಿಹಾಸ ಹಾಗೂ ಅವರ ಕುರಿತು ರೂಢಿಯಲ್ಲಿರುವ ಸಂಗತಿಗಳ ಸಂಶೋಧನಾತ್ಮಕವಾದ ವಿಮರ್ಶೆಯಿಂದ ಕೂಡಿವೆ. ನಾಲ್ಕನೆಯ ಅನುಬಂಧದಲ್ಲಿ ಕೆಲವು ವಿಶೇಷ ವಿಚಾರಗಳನ್ನು ಹೇಳುವರು ಕೊನೆಯ ಅನುಬಂಧವು ಕಠಿಣ ಶಬ್ದಾರ್ಥದಿಂದ ಕೂಡಿದೆ. ಪುಸ್ತಕ ಹೀಗಿರುವುದರಿಂದ ಸಂಶೋಧಕ ಅಭ್ಯಾಸಿಗಳಿಗೆ ತುಂಬ ಪ್ರಯೋಜನಕ್ಕೆ ಬರುವುದು ನಿಶ್ಚಯ. ಈ ಅಮೂಲ್ಯವಾದ ಬರಹಗಳ ಸೌಂದರ್ಯ ಹೆಚ್ಚಿಸಲಿಕ್ಕೆಂಬಂತೆ ನಿಜಗುಣಶಿವ ಯೋಗಿಯ ಗವಿ ಮತ್ತು ಸಮಾಧಿ ಸುತ್ತಿದ್ದ ಶಂಭುಲಿಂಗೇಶ್ವರನ ಬೆಟ್ಟ, ಹಾಗು ಶಂಭುಲಿಂಗೇಶ್ವರನ ಗುಡಿಯ ಚಿತ್ರಗಳೂ ಪುಸ್ತಕದಲ್ಲಿವೆ.

ಕಿರ್ಲೋಸ್ಕರ ವಿಶೇಷಾಂಕ—

ಸಂಪಾದಕರ: ಶ್ರೀ. ಶಂ. ವಾ. ಕಿರ್ಲೋಸ್ಕರ.

ದಕ್ಷಿಣ ಸಾತಾರಾ ಜಿಲ್ಲೆಯ ಕಿರ್ಲೋಸ್ಕರ ವಾಡಿಯಿಂದ ಮರಾಠಿ ಭಾಷೆಯಲ್ಲಿ ಪ್ರತಿ ತಿಂಗಳಲ್ಲೂ ಹೊರಡುವ ಈ ಮಾಸಪತ್ರಿಕೆಯು ವಿಶೇಷತಃ ಮಹಾರಾಷ್ಟ್ರದಲ್ಲಿ ಜನಪ್ರಿಯತೆಯನ್ನು ಸಂಪಾದಿಸಿದೆ ಎಂಬುದಕ್ಕೆ ಇದೀಗ ಈ ಪತ್ರಿಕೆಯ ಸಂಚಾಲಕರು ನಾಲ್ಕುನೂರನೇ ವಿಶೇಷಾಂಕವನ್ನು ಪ್ರಕಟಿಸಿದುದೇ ಸಾಕ್ಷಿ.

ಈ ವಿಶೇಷಾಂಕದಲ್ಲಿ ಮಹಾರಾಷ್ಟ್ರದ ಗಣನೀಯ ಲೇಖಕರ ಲೇಖನಗಳೂ, ಅನೇಕ ಚಿತ್ರಗಳೂ ಇದ್ದು ವಿಶೇಷಾಂಕವು ಹೆಸರಿಗೆ ತಕ್ಕುದಾಗಿದೆ, ಅಲ್ಲದೆ ಈ ಪತ್ರಿಕೆಯ ವಿದೇಶ ವಾಚಕರ ಒಂದು ನೂರು ಭಾವಚಿತ್ರಗಳನ್ನು ಈ ಬಾರಿ ವಿಶೇಷತಃ ಕೊಡಲಾಗಿದೆ. ಕಿರ್ಲೋಸ್ಕರ ಮಾಸಪತ್ರಿಕೆಯು ಚಿರಾಯುವಾಗಿ ಬೆಳಗಲೆಂದು ಹಾರೈಸುತ್ತೇವೆ.

Roc. No. 5320-D1-53.

ಟೆಂಡರ ನೋಟೀಸು

1-1-1953 ರಿಂದ 31-3-54ರ ವರೆಗೆ ದ. ಕ. ಜಿಲ್ಲಾ ಬೋರ್ಡು ಆಫೀಸು ಮತ್ತು ಇದರ ತಾಬೆಯಲ್ಲಿರುವ ಬೇರೆ ಆಫೀಸುಗಳ ಪ್ರಿಂಟಿಂಗ್, ಬೈಂಡಿಗ್ ಇತ್ಯಾದಿ ಕೆಲಸಾವಳಿ ಬಗ್ಗೆ ಸೀಲ್ಡ ಟೆಂಡರುಗಳನ್ನು, 1953-54 ನೇ ವರ್ಷದ ಬಾಬ್ತು ಪ್ರಿಂಟಿಂಗ್ ಬೈಂಡಿಂಗ್ ವಗೈರೆ ಕೆಲಸಾವಳಿಗಳ ಬಾಬ್ತು ಟೆಂಡರು ಎಂತ ಸೀಲುಮಾಡಿದ ಲಕೋಟೆಯ ಮೇಲೆ ಪ್ರೆಸಿಡೆಂಟ್, ದಕ್ಷಿಣ ಕನ್ನಡ ಜಿಲ್ಲಾ ಬೋರ್ಡ ಮಂಗಳೂರು ಎಂತ ವಿಳಾಸ ಬರೆದು 1953ನೇ ಇಸವಿ ಎಪ್ರಿಲ್ ತಿಂಗಳ ತಾರೀಕು 29ನೇ ಬುಧವಾರ ಅಪರಾಹ್ನ ಗಂಟೆ 3ರ ಒಳಗೆ ದ. ಕ. ಜಿಲ್ಲಾ ಬೋರ್ಡು ಆಫೀಸಿಗೆ ತಲಪುವಂತೆ ಕಳುಹಿಸಿಕೊಡಬೇಕಾಗಿ ಕೇಳಿಕೊಳ್ಳಲಾಗುತ್ತದೆ ಮೇಲ್ಕಾಣಿಸಿದ ತಾರೀಕಿನ ಸಾಯಂಕಾಲದನಂತರ ತಲಪುವ ಟೆಂಡರುಗಳನ್ನು ಅಂಗೀಕರಿಸಲಾಗಲಿಕ್ಕಿಲ್ಲ. ಟೆಂಡರುಗಳು ದ. ಕ. ಜಿಲ್ಲಾ ಬೋರ್ಡ ಪ್ರೆಸಿಡೆಂಟರಿಂದ ಅಥವಾ ಅವರಿಂದ ಅಧಿಕಾರ ಹೊಂದಲ್ಪಟ್ಟವರಿಂದ 1953ನೇ ಇಸವಿ ಎಪ್ರಿಲ್ ತಿಂಗಳ ತಾರೀಕು 30ನೇ ಗುರುವಾರ ಅಪರಾಹ್ನ ಘಂಟೆ 4-30ಕ್ಕೆ ದ. ಕ. ಜಿಲ್ಲಾ ಬೋರ್ಡು ಆಫೀಸಿನಲ್ಲಿ, ಆ ಸಮಯ ಹಾಜರಿರುವ ಟೆಂಡರುದಾರರ ಸಮಕ್ಷಮ ತೆರಿಯಲ್ಪಡೋಣಾಗುವುದು.

2. ಪ್ರಿಂಟಿಂಗ್ ಇತ್ಯಾದಿ ಕೆಲಸಗಳ ಕುರಿತು ಪ್ರಿಂಟ್ ಮಾಡಿದ ಟೆಂಡರು ಫಾರ್ಮು ಮತ್ತು ಟೆಂಡರು ಕುರಿತಾದ ಕ್ರಮ ನಿಬಂಧನೆಗಳನ್ನು ಪ್ರತಿಯೊಂದು ಎರಡು ಫಾರ್ಮುಗಳ ಒಂದು ಸೆಟ್ಟಿಗೆ ರೂ (1-0-0) ಒಂದರಂತೆ ಪಾವತಿ ಮಾಡಿ ಬರವಮೂಲಕ ಕೇಳೋಣಾದಲ್ಲಿ ಒದಗಿಸಿಕೊಡಲಾಗುವುದು,

M, Sunder Rao,
For President.

ದ. ಕ. ಜಿಲ್ಲಾ ಬೋರ್ಡು ಆಫೀಸು,
ಮಂಗಳೂರು, 16-1-53.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ಬಂಟರ ಯಾನೆ ನಾಡವರ ಸಂಘ, ಮುಂಬಯಿ.
ಸಂಚಾಲಕರು. ದಿ ಕರ್ಣಾಟಕ ಫ್ರೀ ನೈಟ್ ಹೈಸ್ಕೂಲು.

ಮಹಾಶಯರೇ,

ನಮ್ಮ ಸಂಘದ ರಜತ ಮಹೋತ್ಸವ ಸಮಾರಂಭವು ಇದೇ ಎಪ್ರಿಲ್ ತಿಂಗಳ ತಾ. 26—4—1953ನೇ ಆದಿತ್ಯವಾರ ಅಪರಾಹ್ನ ಘಂಟೆ ೨ಕ್ಕೆ ಸರಿಯಾಗಿ ಮಾನ್ಯ ಮದ್ರಾಸ್ ಸರಕಾರದ ಆರೋಗ್ಯ ಮಂತ್ರಿ ಶ್ರೀ ಅತ್ತಾವರ ಬಾಲಕೃಷ್ಣ ಶೆಟ್ರಿಂದ ಉದ್ಘಾಟಿಸಲ್ಪಟ್ಟು, ಡಾಕ್ಟರ್ ಪಡುಬಿದ್ರಿ ಜಗನ್ನಾಥ ಶೆಟ್ರ ಅಧ್ಯಕ್ಷತೆಯಲ್ಲಿ ಸರ್ ಕವಾಸ್ಜಿ ಜಹಂಗೀರ್ ಸಾರ್ವಜನಿಕ ಸಭಾಸದನದಲ್ಲಿ ಜರಗಲಿರುವುದು ತಾವು ದಯಮಾಡಿ ಚಿತ್ತೈಸಬೇಕಾಗಿ ವಿಜ್ಞಾಪನೆ.

17, ಕುಷ್ರೂ ಸ್ಟ್ರೀಟ್, ಫೋರ್ಟು, ಮುಂಬಯಿ } ಡಾಕ್ಟರ್ ಎಸ್. ವೆಂಕಟ್ರಾಸ್ ಶೆಟ್ಟಿ, ಜೆ. ಪಿ. ಚೇರ್‌ಮೇನ್, ರಜತ ಮಹೋತ್ಸವ ಸ್ವಾಗತ ಸಮಿತಿ.

ಭರ್ತ ಕಂಟ್ರೋಲ
[ಮಕ್ಕಳನ್ನು ಹೆಡೆಯುವುದು ಸಾಕು]
ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು ಸೇವಿಸಿದರೆ ಗರ್ಭಪಾತವಾಗುವದು.
ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦
—ವಿಳಾಸ:—
ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಯೌವನಪ್ರದ ವಿಂತಿತು
'ಯೌವನಾರಿ' ಪಿಲ್ಸಗಳನು ಉಪಯೋಗಿಸಿದರೆ ಹಸಿವು ಹೆಚ್ಚು, ಯೌವನಪ್ರದವಾಗುವದು, ಹಕೀಕತಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾಧಾರಣ ಮಂದಿಗೆ ಶಾಶ್ವತ ಗುಣವಾಗಿದೆ- ಬೆಲೆ; ರೂ. 3-; ಸ್ಪೆಶಲ್ ರೂ. 5- [ಫಾರಿಸ್ ಸ್ಪೆಶಲ್ ರೂ. 3-] ವಿ. ಪಿ. ಖರ್ಚು ಪ್ರತ್ಯೇಕ]

MIS. D. DEVEE, F. DS. (N. J.)
Tollygunge CALCUTTA.
ಸ್ಟಾಕಿಸ್ಟರು: ಶಹಾಕಂಪೆನಿ, ಮಂಗಳೂರು

ಮೂರನೇ ವರ್ಗದ ಗಾಡಿಯ ಸುಖ

(೨ನೇ ಪುಟದಿಂದ)

ತ್ತಿಯೊಂದು ಟ್ರೈನಿನಲ್ಲಿ ಪ್ರಯಾಣಿಸು ವ ಮೂರನೇ ವರ್ಗದ ಪ್ರವಾಸಿಕರ ಸರಾಸರಿ ಸಂಖ್ಯೆಯಿಂದ ತಿಳಿದುಕೊಳ್ಳಬಹುದು. ಅದು ಹೀಗಿದೆ—

೧೯೩೮—೩೯ ರಲ್ಲಿ ೧೫೪

೧೯೪೭—೪೮ ರಲ್ಲಿ ೩೧೩

೧೯೫೦—೫೧ ರಲ್ಲಿ ೩೮೬

೧೯೫೧—೫೨ ರಲ್ಲಿ ೩೫೬

ಅಧಿಕ ಸೌಕರ್ಯ

ಸ್ವಾತಂತ್ರ್ಯದೊರೆತ ಬಳಿಕವೇ ಸರಕಾರವು ತನ್ನ ಆರ್ಥಿಕ ಅನುಕೂಲತೆಯ ಹಾಗೆ ಮೂರನೇ ವರ್ಗದ ಗಾಡಿಯ ಸುಧಾರಣೆಯ ಪ್ರಶ್ನೆಯನ್ನು ಒಪ್ಪಿಸಿದರೆ ನ್ಯಾಯದೆಂದು ತಿಳಿದುಕೊಂಡಿತು. ನಿಮ್ನ ವರ್ಗದ ಪ್ರಯಾಣಿಕರಿಗೆ ಅಧಿಕಾಧಿಕ ಸೌಕರ್ಯಗಳನ್ನು ಒಂದು ನಿರ್ದಿಷ್ಟ ಯೋಜನೆಯನ್ವಯ ಒದಗಿಸಿಕೊಡುತ್ತಾ ಹೋಗಬೇಕೆಂಬ ತತ್ವವನ್ನು ಸರಕಾರ ಅಂಗೀಕರಿಸಿತು. ಈ ತತ್ವಕ್ಕೆ ಅನುಗುಣವಾಗಿ ರೈಲ್ವೆ ಇಲಾಖೆಯು ೧೯೫೧—೫೦ ನೇ ವರ್ಷದಿಂದ ವರ್ಷಕ್ಕೆ ಮೂರುಕೋಟಿ ರೂಪಾಯಿಯಷ್ಟನ್ನು ಪ್ರವಾಸಿಕರ ಸೌಕರ್ಯಕ್ಕಾಗಿ ವಿನಿಯೋಗಿಸಲು ನಿರ್ಧರಿಸಿದೆ. ಪ್ರಯಾಣಿಕರು ಬಯಸುವ ಸೌಕರ್ಯಗಳನ್ನು ಸ್ಥೂಲವಾಗಿ ಈ ರೀತಿ ವಿಂಗಡಿಸಬಹುದು ಒದಗಿಸಿಕೊಡುವ ಸ್ಥಳದ ಮತ್ತು ಅನುಕೂಲತೆಯ ಮಟ್ಟ (೨) ಸೇವೆಯ ಲಾಭ, ಮತ್ತು (೩) ಪ್ರಯಾಣದ ಅನುಕೂಲತೆ. ಮೊದಲನೆಯ ವಿಷಯವನ್ನು ಅನ್ವಯಿಸಿ ಹೇಳುವುದಾದಲ್ಲಿ—ರೈಲುಗಳಲ್ಲಿ ಹೊಸ ಕೋಚನ್ನು ಸೇರಿಸುವಾಗ ಪ್ರಯಾಣಿಕರ ಹಿತದೃಷ್ಟಿಯನ್ನು ಇಟ್ಟುಕೊಳ್ಳಲಾಗುತ್ತಿದೆ. ಬೆಂಗಳೂರಿನಲ್ಲಿರುವ ಭಾರತೀಯ ವಿಮಾನ ಕಂಪೆನಿ (H. A. L.)ತಯಾರಿಸುತ್ತಿರುವ ಕೋಚು ಮೂರನೇ ವರ್ಗದ ಪ್ರಯಾಣಿಕರಿಂದ ಮೆಚ್ಚುಗೆಯನ್ನು ಪಡೆದಿದೆ. ಇತರ ಗಾಡಿಗಳಿಗಿಂತ ಇದರಲ್ಲಿ ಪ್ರಯಾಣಿಕರ ಸುಖಕ್ಕೆ ಹೆಚ್ಚು ಅವಕಾಶವನ್ನು ಕಲ್ಪಿಸಿರುವರು. ಆದರೂ ಇದರ ರಚನೆಯನ್ನು ಇನ್ನೂ ಹೆಚ್ಚು ಪರಿಷ್ಕರಿಸಿ, ಪ್ರಯಾಣಿಕರ ಸುಖ ಸೌಕರ್ಯಗಳನ್ನು ಅಧಿಕಗೊಳಿಸಬೇಕೆಂಬ ಬಗ್ಗೆ ಪ್ರಯತ್ನಗಳು ನಡೆಯುತ್ತಿವೆ. ವಿದ್ಯುತ್ ಬೀಸಣಿಗೆ, ಬೆಳಕು, ಪಾಯಿಖಾನೆ ಮುಂತಾದವುಗಳನ್ನು ಒದಗಿಸುವಾಗ—ಉಚ್ಚ ವರ್ಗ ಹಾಗು ನಿಮ್ನ ವರ್ಗವೆಂಬ ತಾರತಮ್ಯ ಮಾಡಕೂಡದೆಂದು ಸಾಮಾನ್ಯ ನಿರ್ಣಯವನ್ನು ಸರಕಾರ ಕೈಗೊಂಡಿದೆ.

ಜನಸಂಮರ್ದಣೆಯ ನಿವಾರಣೆ

ಜನಸಮ್ಮರ್ದವನ್ನು ತಡೆಗಟ್ಟುವುದು ಮೂರನೇ ವರ್ಗದ ಗಾಡಿಯಲ್ಲಿ ಪ್ರಯಾಣಿಸುವಾಗಿನ ಮುಖ್ಯ ಹಾಗು ಮಹತ್ವದ ಪ್ರಶ್ನೆಯಾಗಿರುತ್ತದೆ. ಕಳೆದ ವರ್ಷ ಈ ಪಟ್ಟಣಿಯು ಕೆಲ ಮಟ್ಟಿಗೆ ಇಳಿಮುಖಗೊಂಡಿದೆ ಎಂಬುದು ಸಂತೋಷದಾಯಕ. ರೈಲ್ವೆಗಳಿಗೆ ಹೆಚ್ಚಾಗಿ ಸೇರಿಸಿದ ಹೊಸಕೋಚುಗಳು ಪರಿಸ್ಥಿತಿಯನ್ನು ನಿಧಾನವಾಗಿ ಸುಧಾರಿಸುತ್ತಿವೆ ೧೯೫೦ ರಿಂದಲೂ ವಿದೇಶಗಳಿಂದ ಆದಷ್ಟು ಹೆಚ್ಚು ಗಾಡಿಗಳನ್ನು ತರಿಸಲು ಮಾಡಿದ ಪ್ರಯತ್ನಗಳ ಫಲ ಇದು ಎಂದು ಹೇಳಬಹುದು. ೧೯೫೨ನೇ ಇಸವಿ ಮಾರ್ಚ್ ೩೧ನೇ ತಾರೀಕಿಗೆ ಅಂತ್ಯವಾಗುವ ಐದು ವರ್ಷಗಳಲ್ಲಿ ಬ್ರಾಡಗೇಜು ರೈಲ್ವೆಯಲ್ಲಿ ೨೧೮೯ ಮತ್ತು ಮೀಟರ ಗೇಜ್ ರೈಲುಗಳಲ್ಲಿ ೧೨೮೭ ಹೊಸ ಬಂಡಿಗಳನ್ನು ಸೇರಿಸಲಾಯಿತು. ಓಡಾಡುವ ಟ್ರೈನುಗಳನ್ನು ಹೆಚ್ಚಿಸಲಾಗಿದ್ದು ೧೯೪೮-೪೯ ರಿಂದ ೧೯೫೧-೫೨ರ ಅವಧಿಯಲ್ಲಿ ಪ್ರತಿ ದಿನಕ್ಕೆ ಓಡುವ ಪ್ರಯಾಣಿಕರ ಟ್ರೈನಿನ ಮೈಲೇಜು೩೫೦೦೦ದಷ್ಟು ಹೆಚ್ಚಿ ಕೊಂಡಿದೆ. ಇದು ೧೯೩೮-೩೯ರ ಓಡಾಟಕ್ಕಿಂತ ನೂರಕ್ಕೆ ೧೬ರಷ್ಟು ಹೆಚ್ಚು. ೧೯೫೨-೫೩ರ ಅವಧಿಯಲ್ಲಿ ಇನ್ನೂ ೯೦೦೦ ಮೈಲಿನಷ್ಟು ಈ ಪ್ರಮಾಣ ಅಧಿಕ ಗೊಂಡಿದೆ.

ಜನತಾ ಗಾಡಿಗಳು

ಈ ಸಂದರ್ಭದಲ್ಲಿ ಅಧಿಕ ಜನಪ್ರಿಯವೆನಿಸಿದ ಜನತಾ ಎಕ್ಸ್‌ಪ್ರೆಸ್‌ಗಳನ್ನು ಉಲ್ಲೇಖಿಸ ಬಹುದು. ಇವು ಕೇವಲ ಮೂರನೇ ವರ್ಗದ ಪ್ರಯಾಣಿಕರಿಗಾಗಿಯೇ ಮೀಸಲಾಗಿವೆ. ೧೯೪೮ ೪೯ನೇ ವರ್ಷದಲ್ಲಿ ಸರ್ವಪ್ರಥಮವಾಗಿ ಇವುಗಳನ್ನು ಓಡಿಸಲಾಯಿತು. ಈ ಎಕ್ಸ್‌ಪ್ರೆಸ್ಸುಗಳ ಸಂಖ್ಯೆಯು ನಿಧಾನವಾಗಿ ಹೆಚ್ಚುತ್ತಾ ಒಂದು ಈಗ ೨೨ ಟ್ರೈನುಗಳ ಮಟ್ಟಕ್ಕೆ ಮುಟ್ಟಿದೆ ಸಾಕಷ್ಟು ಪ್ರಯಾಣಿಕರು ಇರುವ ಕಡಿಮೆ ದೂರದ ಮಾರ್ಗಗಳಲ್ಲೂ ಜನತಾ ಎಕ್ಸ್‌ಪ್ರೆಸ್ಸನ್ನು ಓಡಿಸಬೇಕೆಂದು ರೈಲ್ವೆ ಮಂತ್ರಿಮಂಡಳವು ಹವಣಿಸುತ್ತಿದೆ. ಇವುಗಳಲ್ಲದೆ ಪ್ರಯಾಣಿಕರ ಸುಖಕ್ಕಾಗಿ ಇಂಟರ ತರಗತಿಗೆ ಮಾತ್ರವಲ್ಲ ಮೂರನೇ ವರ್ಗಕ್ಕೂ ಬೀಸಣಿಗೆಗಳನ್ನು ಒದಗಿಸಲಾಗುತ್ತಿದೆ. ಇಂಟರು ವರ್ಗದ ಕೋಚುಗಳಲ್ಲಿ ೪೫೫೦ ಬೀಸಣಿಗೆಗಳನ್ನೂ ಮೂರನೇ ವರ್ಗದವುಗಳಲ್ಲಿ ೧೫೭೮೪ ಬೀಸಣಿಗೆಗಳನ್ನೂ ಕಳೆದ ಮೂರು ವರ್ಷಗಳಲ್ಲಿ ಒದಗಿಸಿರುವರು ಈ ವೇಗದಲ್ಲಿಯೇ ಮುನ್ನಡೆದರೆ ಅಲ್ಪಾವಧಿಯಲ್ಲಿ ಭಾರತೀಯ ರೈಲ್ವೆಗಳಲ್ಲೆಲ್ಲ ಬೀಸಣಿಗೆಗಳು ಸೆಕೆಗಾಲದ ತಾಪವನ್ನು ಪರಿಹರಿಸಲು ನೆರವಾಗುವುವು. ದೂರ ದೂರುಗಳ ಪ್ರಯಾಣ ಕೈಗೊಂಡ IIIನೇ ವರ್ಗದ ಪ್ರಯಾಣಿಕರಿಗಾಗಿ ವಿಶೇಷ ಡಬ್ಬಗಳನ್ನು ಮೈಲ್ ಹಾಗು ಎಕ್ಸ್‌ಪ್ರೆಸ್ಸು ಟ್ರೈನುಗಳಲ್ಲಿ ಒದಗಿಸಿರುವರು

ಹೆಚ್ಚಿನ ಸೌಲಭ್ಯ

ರೈಲ್ವೆ ನಿಲ್ದಾಣಗಳಲ್ಲಿ ಕೂಡ ಅಧಿಕ ಅನುಕೂಲತೆಯನ್ನೊದಗಿಸಿ ಕೊಡುವ ಏರ್ಪಾಡುಗಳು ನಡೆದಿವೆ. ಪ್ರಯಾಣಿಕರಿಗೆ ಅಧಿಕ ಸ್ಥಳಾನುಕೂಲತೆ,ಕಾಯುವ ಕೋಣೆ ಮತ್ತು ಪ್ಲಾಟ ಫಾರಂಗಳ ವಿಸ್ತರಣೆ, ಕುಡಿಯುವನೀರಿನ ಪೂರೈಕೆ ಮುಂತಾದುವುಗಳನ್ನು ಹೆಚ್ಚು ಗಮನವಿಟ್ಟು ನೋಡಲು ತೊಡಗಿರುವರು. ಈ ವೆಚ್ಚಗಳನ್ನು ನಿರ್ವಹಿಸುವುದಕ್ಕಾಗಿ ರೈಲ್ವೆ ಮಂಗಡ ಪತ್ರಗಳಲ್ಲಿ ಸಾಕಷ್ಟು ಹಣ ಕಲ್ಪಿಸಿ ಕೊಡುತ್ತಿರುವರು. ಈಗಿನ ಘೋಷಣೆಯಂತೆ ರೈಲ್ವೆ ನಿಲ್ದಾಣಗಳು ದೊಡ್ಡದಿರಲಿ, ಸಣ್ಣದಿರಲಿ ಪ್ರಯಾಣಿಕರ ಅನುಕೂಲತೆಗಾಗಿ ಕನಿಷ್ಠ ಮಿತಿಯ ಸೌಕರ್ಯಗಳು ಇರಲೇ ಬೇಕೆಂದು ನಿರ್ಣಯಿಸಿರುವರು.

ಇದರ ಪರಿಣಾಮವಾಗಿ ಸಣ್ಣ ನಿಲ್ದಾಣವೆಂದು ಉಪೇಕ್ಷಿಸ ಬಹುದಾಗಿದ್ದ ಸ್ಥಳಗಳಲ್ಲೂ ಪ್ರಯಾಣಿಕರಿಗೆ ಸಾಕಷ್ಟು ಸೌಲಭ್ಯ ದೊರೆಯುತ್ತದೆ. ಕಾಯುವ ಕೋಣೆಗಳು, ಬೆಂಚುಗಳು ಬೆಳಕಿನ ವ್ಯವಸ್ಥೆ ಟಿಕೇಟುಕೊಡುವಕೋಣೆ, ಕುಡಿಯುವ ನೀರು ಸುಧಾರಿತರೀತಿಯ ಪಾಯಿಖಾನೆ ನೆರಳು ಕೊಡುವ ಮರಗಳು ಮುಂತಾದವುಗಳು ಸಣ್ಣನಿಲ್ದಾಣಗಳಿಗೂ ದೊರೆಯುತ್ತವೆ. ಪ್ರಯಾಣಿಕರ ಸಮ್ಮರ್ದ ಹೆಚ್ಚಿರುವ ಕಡೆಗಳಲ್ಲಿ ಈ ಅನುಕೂಲತೆಗಳನ್ನು ಇನ್ನೂ ವಿಸ್ತರಿಸಲಾಗುತ್ತದೆ. ಪ್ರಯಾಣಿಕರ ಅನುಕೂಲತೆಗಳಿಗಾಗಿ ಕಾರ್ಯಕ್ರಮವನ್ನು ನಿರ್ಧರಿಸಲು ಒಂದು ಸಲಹಾ ಮಂಡಳದ ರಚನೆಯಾಗಿದೆ. ಪ್ರಾದೇಶಿಕ ಹಾಗೂ ಸ್ಥಳೀಯ ಘಟ್ಟಗಳಲ್ಲಿ ಈ ಸಲಹಾ ಮಂಡಳ ದುಡಿಯುತ್ತಿದೆ.

ಪ್ರಯಾಣಿಕರ ಕರ್ತವ್ಯ

ಇಷ್ಟು ಹೇಳಿದ ಬಳಿಕ—ರೈಲ್ವೆ ಪ್ರಯಾಣಿಕರು ಸರಕಾರದೊಡನೆ ಸಹಕರಿಸುವಲ್ಲಿ ಹಿಂದಾಗಬಾರದೆಂದು ಸೂಚಿಸಿದರೆ ಅಪ್ರಸ್ತುತವಾಗಲಾರದು. ಡಬ್ಬಿಗಳನ್ನು ನಿರ್ಮಲವಾಗಿಡುವುದು ರೈಲ್ವೆಗಳ ಕರ್ತವ್ಯವಾಗಿದ್ದಂತೆ, ಪ್ರಯಾಣಿಕರ ಮೇಲೂ ಈ ಹೊಣೆ ಇದೆ. ರೈಲ್ವೆ ಅಧಿಕಾರಿಗಳು ಬಂಡಿಯು ಹೊರಡುವಾಗ ಪ್ರತಿಯೊಂದೂ ಡಬ್ಬಿಯನ್ನು ಶುಚಿಗೊಳಿಸಲಾಗಿದೆಯೊ ಹೇಗೆಂಬುದನ್ನು ಪರೀಕ್ಷಿಸತಕ್ಕದೆಂದು ಈಚೆಗೆ ಆಜ್ಞಾಪಿಸಿರುವರು. ಆದರೆ ಪ್ರಯಾಣಿಕರು ತಿಳಿಯದೆಯೋ ಅಥವಾ ಉಪೇಕ್ಷೆಯಿಂದಲೋ ಡಬ್ಬಿಗಳನ್ನು ಹೊಲಸು ಮಾಡುವ ಪ್ರಸಂಗಗಳೇನು ಕಡಿಮೆ ಇಲ್ಲ. ಜನಸಮ್ಮರ್ದದ ಪರಿಣಾಮವಾಗಿ ಡಬ್ಬಿಗಳು ಹೊಲಸಾಗುತ್ತವೆ ಎಂಬುದು ನಿಜ. ಆದರೆ ತಿಂಡಿ ತಿನಸುಗಳನ್ನು ಚೆಲ್ಲುವದು ಮುಂತಾದ ರೀತಿಯಿಂದ ಡಬ್ಬಿಯನ್ನೂ ಕಾಯುವ ಕೋಣೆಯನ್ನೂ ನಿಲ್ದಾಣವನ್ನೂ ಹೊಲಸು ಮಾಡುವ ಜನರು ಅನೇಕ. ಇಂಥವರು ಸಾರ್ವಜನಿಕ ಹಿತದೃಷ್ಟಿಯಿಂದ ನಡೆದು ಕೊಳ್ಳಬೇಕು. ಇದರ ... ವ್ಯವಸ್ಥೆಯನ್ನು ದರೂ ಜನರು ಮೆಚ್ಚಿ ಪುರಸ್ಕರಿಸಬೇಕು. ರೈಲನ್ನು ಹತ್ತುವಾಗ, ಇಳಿಯುವಾಗ ಟಿಕೇಟು ಪಡೆಯುವಾಗ ಈ ವ್ಯವಸ್ಥೆಯನ್ನು ಜಾರಿಯಲ್ಲಿಟ್ಟು ಶಿಸ್ತು ಪಾಲಿಸುವ ಮತ್ತು ಉತ್ತಮ ನಡವಳಿಕೆಯ ನಾಗರಿಕರು ತಾವೆಂಬುದನ್ನು ವ್ಯಕ್ತಗೊಳಿಸಬೇಕು. ನ್ಯಾಯ ಮತ್ತು ಸರಕಾರದದೃಷ್ಟಿಯಿಂದ ವಿಶೇಷ ಮಹತ್ವದ್ದೆನಿಸಿದ ಇನ್ನೊಂದು ಸಂಗತಿಯೆಂದರೆ. — ಟಿಕೇಟು ಇಲ್ಲದೆ ಪ್ರಯಾಣಿಸುವವರ ಕಡೆಗೆ ಇತರರು ತೋರಿಸುವ ಸಹಾನುಭೂತಿ. ಟಿಕೇಟು ಚೆಕ್ಕರ ಕೈಗೆ ಸಿಕ್ಕಿಬಿದ್ದ ಮೋಸಗಾರನನ್ನು ದಯೆ ತುಂಬಿದ ಕಣ್ಣುಗಳಿಂದ ಇತರರು ನೋಡ ಪುದೂ ತನ್ನ ಕರ್ತವ್ಯ ನಿರ್ವಹಿಸಿದ ಅಧಿಕಾರಿಯನ್ನು ಕ್ರೂರ ನೆಕ್ಕಿಗರ ಹಿಸುವುದೂ ಸರಿಯಲ್ಲ. ... ಹಣವನ್ನು ಸಲ್ಲಿಸದೆ ಪ್ರಯಾಣಿಸುವುದು ತಪ್ಪು. ಈ ಸಂಗತಿಯಲ್ಲಿ ನಾವು ತೋರಿಸುವ ಸಹಾನುಭೂತಿಯೂ ನ್ಯಾಯವಾದುದಲ್ಲ.

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್‌ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋವ್ಮೆಂಟ್ ಪೊಲಿಸಿಗಳ ಮೇಲೆ ರೂ 16- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯವೊಂದಲಿಕ್ಕಾಗಲೀ

ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವೆವು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ, ಬೊಂಬಾಯಿ. ಮಂಗಳೂರು ಮತ್ತು ಕೊಯಮುತ್ತೂರು.

The Bombay Life Assurance Co., Ltd., Bombay

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ

ನವಜೀವಾತು

ಎಂಬ

ಸೂತಿಕಾರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹ ಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಪುರಪ್ರಸಾಯನ

ಹೆಚ್ಚಿನ ಮಾಹಿತಿಗೆ— ಡಾ। ಯಂ ಸಿ. ಶಾಸ್ತ್ರೀ. ಯಲ್ ಐ. ಎಂ.

ಕೊಡಿಯಾಲಬೈಲು ಪೋಸ್ಟು. (ಮಂಗಳೂರು)

ಸ್ಥಾನಿಕರು.— ಡಾ| ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು.

ವಾರದ ಒಳಿತು ಕೆಡುಕುಗಳು

ತಾ. ೨೨—೪—೫೩ರಿಂದ ತಾ. ೨೮—೪—೫೩ರ ವರೆಗೆ.

ಮೇಷ— ಅಳಾಗಿ ದುಡಿದರೆ ಅರಸಾಗಿ ಉಣಬಹುದು ಎಂಬ ಗಾದೆಯಂತೆ ನೀವೀವಾರದಲ್ಲಿ ಆಲಸಿಗರಾಗದೆ ಕಾರ್ಯಕ್ಷೇತ್ರದಲ್ಲಿ ಮುನ್ನುಗ್ಗಿದರೆ ನಿಮ್ಮ ಇಚ್ಛೆಯಂತೆ ಫಲ ಲಭಿಸುವದು. ಹಣದ ಅಡಚಣೆಯು ನಿಮ್ಮ ಹತ್ತಿರ ಬಾರದು. ಕೆಲವೊಮ್ಮೆ ದೇಹದಲ್ಲಿ ತಾಪಾಧಿಕ್ಯದಿಂದ ಜ್ವರ ಕಾಣಿಸಬಹುದು. ಸರಕಾರಿ ಅಧಿಕಾರಿಗಳಿಂದ ತೊಂದರೆಗಳುಂಟಾಗುವ ಸಂಭವವೂ ಇದೆ. ಆಕಸ್ಮಿಕ ಪ್ರವಾಸದ ಯೋಗವಿದೆ. ವಾರಾದಿಯ 5 ದಿನಗಳಲ್ಲಿ ನಿಮ್ಮ ಪರಿಶ್ರಮಕ್ಕಿಂತ ಅಧಿಕ ಫಲಪ್ರಾಪ್ತಿಯಿದೆ.

ವೃಷಭ— ಸಾಂಸಾರಿಕ ತಾಪತ್ರಯಗಳು ಹೆಚ್ಚಲಿವೆ. ತಂದೆ ಮಕ್ಕಳೊಳು ಭೃತ್ಯವರ್ಗದವರಲ್ಲೂ ಮನಸ್ತಾಪ ಕಲಹಗಳುಂಟಾದಾವು. ನಿಷ್ಠುರ ಭಾಷಿಗಳಾಗುವದರಿಂದ ಅಪೇಕ್ಷಿತ ನೆರವು ನಿಮಗೆ ಲಭಿಸದು. ಆದರೂ ನಿಮ್ಮ ದೈನಂದಿನ ಖರ್ಚಿಗೆ ತಕ್ಕಷ್ಟು ಸ್ವಯಮೇವ ದುಡಿಯಲು ಶಕ್ತರಿರುವಿರಿ. ವಿದ್ಯೋಪಜೀವಿಗಳಿಗೂ ವ್ಯಾಪಾರ ವ್ಯವಹಾರ ಕುಶಲರಿಗೂ ಕಾಲವು ಹೆಚ್ಚಿನ ಪ್ರತಿಕೂಲವಾಗಲಾರದು. ವಾರಾಂತ್ಯದ 4 ದಿನಗಳಲ್ಲಿ ಜನಾದರ ಕಾರ್ಯಲಾಭ ಧನ ಪ್ರಾಪ್ತಿಯ ಯೋಗವಿದೆ.

ಮಿಥುನ— ನಿಮ್ಮಲ್ಲಿನ ಧೈರ್ಯ ಸ್ಥೈರ್ಯಗಳು ಲೋಪವಾಗಿ ಪರರ ಸಹಕಾರವಿಲ್ಲದೆ ಯಾವ ಕಾರ್ಯವನ್ನೂ ಮಾಡಲು ಶಕ್ತರಾಗಲಾರಿರಿ. ಹೆದರಿದ ಹರಿಣದಂತಿರುವ ನಿಮ್ಮ ಮನಸ್ಸು ದುರ್ಮಾರ್ಗದತ್ತ ನಿಮ್ಮನ್ನು ಸೆಳೆಯಲಿದೆ. ವಿನಾಕಾರಣ ಜನತೆಯೊಡನೆ ಕಲಹವಾಗುವದು. ಉತ್ಪತ್ತಿಗಿಂತ ದ್ವಿಗುಣ ವ್ಯಯವಾಗುವುದರಿಂದ ಹೊರವರೊಡನೆ ಸಾಲಕಡಮಾಡಬೇಕಾಗುವದು. ದೇಹ ಮನಸ್ಸುಗಳಿಗೆ ಸುಖಶಾಂತಿಯಿರದು. ವಾರಾದಿಯ 3 ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳು ಕಾಣಿಸವು.

ಕರ್ಕಟ— ಇಂದೀಗ ನೀವೇ ಸುಖೈಸಿಗಳೆನ್ನಬೇಕು. ಕಾರಣ ಈ ಹಿಂದೆ ಅನೇಕ ಸಮಯದಿಂದ ಕಷ್ಟಪರಂಪರೆಗಳನ್ನು ಅನುಭವಿಸಿ ಸಾಂಸಾರಿಕ ಜೀವನದಲ್ಲೇ ಬೇಸರಗೊಂಡ ನಿಮಗೆ ಇಂದು ಲಭಿಸಿದ ಸುಸಂಧಿಗಳು ನಿಮ್ಮ ಹಿಂದಿನ ಕಟು ಅನುಭವಗಳನ್ನು ದೂರೀಕರಿಸಿ ಸಂತೋಷ ಸಾಗರದಲ್ಲಿ ತೇಲಿಸುವವು. ನಿಮ್ಮ ಸಕಲ ಬಯಕೆಗಳು ಅಲ್ಪ ಯತ್ನದಿಂದ ಕಾರ್ಯರೂಪಕ್ಕೆ ಬರಲಿವೆ. ಯಾವ ಭಾಗದಲ್ಲಿಯೂ ಕುಂದು ಕೊರತೆಗಳಿರವು. ತಾ. 26, 27, ಅತ್ಯುತ್ತಮ ದಿನಗಳಾಗಿವೆ.

ಸಿಂಹ— "ಸುಖಸ್ಯಾನಂತರಂ ದುಃಖಂ" ಎಂಬ ಗಾದೆಯು ನಿಮ್ಮ ಭಾಗಕ್ಕೆ ಸಲ್ಲುತಿದೆ. ನಾಲ್ಕಾರು ತಿಂಗಳುಗಳಿಂದ ಸುದಿನಗಳನ್ನೆ ಕಾಣುತ್ತಿದ್ದ ನಿಮಗಿಂದು ಕಷ್ಟವನ್ನು ಹೊಂದುವ ಪ್ರಸಂಗಗಳು ಬರಲಿದೆ. ನಿಮ್ಮ ಪ್ರಯತ್ನಕ್ಕೆ ತಕ್ಕ ಫಲ ಕಾಣಿಸು. ಖರ್ಚುಗಳೋ ದಿನದಿಂದ ದಿನಕ್ಕೆ ಹೆಚ್ಚುವವು. ಆಪ್ತೇಷ್ಟರು ನಿಮಗೀಕಾಲದಲ್ಲಿ ನೆರವಾಗರು. ಹೆಚ್ಚೇಕೆ ಹೆಂಡತಿ ಮಕ್ಕಳ ಸಹಕಾರವು ನಿಮಗೆ ಲಭಿಸದು. ತಾ. 26 27, ರಲ್ಲಿ ಕಾರ್ಯಹಾನಿ ಹಣದಅಡಚಣೆ ದೇಹಾಲಸ್ಯಗಳು ಹೆಚ್ಚುವವು.

ಕನ್ಯಾ— ದಿನದಿಂದ ದಿನಕ್ಕೆ ನಿಮ್ಮ ಅದೃಷ್ಟವು ಕುಗ್ಗುತ್ತಾ ಬರುತ್ತಿದೆ. ಗ್ರಹ ಕೃತ್ಯದಲ್ಲಿ ಅವ್ಯವಸ್ಥೆ ಜನತೆಯಲ್ಲಿ ನಿಷ್ಠುರ ದೇಹದ ಅನಾರೋಗ್ಯ ವಿಶೇಷತಃ ಆರ್ಥಿಕ ಬಿಕ್ಕಟ್ಟು ಇವುಗಳು ನಿಮ್ಮನ್ನು ತಲೆಯೆತ್ತಿ ತಿರುಗದಂತೆ ಮಾಡುವವು. ವಾತ ಸಂಬಂಧವಾದ ಕಾಹಿಲೆಗೆ ಗುರಿಯಾಗುವಿರಿ. ಆದರೂ ಸುರಗುರುಗಳಾದ ಬೃಹಸ್ಪತ್ಯಾಚಾರ್ಯರ ಪೂರ್ಣಾನುಗ್ರಹವು ನಿಮಗಿರುವುದರಿಂದ ಹಲವಾರು ಅನಿಷ್ಟಗಳು ದೂರವಾದಾವು. ತಾ. 26, 27, ಈ ದಿನಗಳಲ್ಲಿ ಬಯಕೆಯಂತೆ ಕಾರ್ಯವು ಸಿದ್ಧಿಸಲಿದೆ.

ತುಲಾ— ಮೀನದಲ್ಲಿರತಕ್ಕ ನೀಚ ಬುಧನೊಬ್ಬನ ಹೊರತಾಗಿ ಮಿಕ್ಕೆಲ್ಲ ಗ್ರಹರೂ ನಿಮ್ಮ ಭಾಗಕ್ಕೆ ಪ್ರತಿಕೂಲರಾಗಿರುವದರಿಂದ ಮೇಲೆ ನಿಮಗೀಕಾಲವು ಅದೆಷ್ಟು ಕಷ್ಟದಾಯಿಯಾದೀತೆಂಬ ವಿಚಾರವನ್ನು ಬೇರೆ ಹೇಳಬೇಕಾಗಿಲ್ಲ. ಆದರೆ ದೈವವು ಅನುಕೂಲವಿಲ್ಲೆಂದು ಪೌರುಷವನ್ನು ತ್ಯಜಿಸದಿರಿ "ಯತ್ನೇ ಕೃತೇಯದಿ ನ ಸಿಧ್ಯತಿ ಕೋಽತ್ರ ದೋಷಃ" ವೆಂಬಂತೆ ಪ್ರಯತ್ನ ಮಾಡಿಯೂ ವಿಫಲವಾದರೆ ನಿಮ್ಮ ಮೇಲಿನ ಭಾರ ವಿಲ್ಲವು ಇಂದಲ್ಲ ಮುಂದಾದರೂ ಅದು ಸಿದ್ಧಿಸಿಯೇ ತೀರುವುದು. ತಾ. 26, 27ರಲ್ಲಿ ಅಧಿಕ ವ್ಯಯ ದೇಹಾಲಸ್ಯಗಳು ತೋರಬಹುದು.

ವೃಶ್ಚಿಕ— ದೈವವಿಂದು ಪ್ರಸನ್ನವಾಗಿದೆ. ನಿಮ್ಮ ಪುರುಷಯತ್ನವು ಅನಾಯಾಸದಿಂದ ಸಾಧಿಸಲಿದೆ. ಮನದ ಸಂಕಲ್ಪದಂತೆ ಸಕಲವು ಸಿದ್ಧಿಸುವವು. ವಾದವಿವಾದಗಳಲ್ಲಿ ವಿಜಯಗಳಾಗುವಿರಿ. ಹಿಂದಿನ ಆರ್ಥಿಕ ಮುಗ್ಗಟ್ಟಿನಿಂದ ಪಾರಾಗಿ ಕೈಯಲ್ಲಿ ಸಾಕಷ್ಟು ಧನ ಸಂಗ್ರಹಿಸಿಕೊಳ್ಳುವಿರಿ. ಗೃಹದಲ್ಲಿ ತಂದೆ ಮಕ್ಕಳೂಳು ಗಂಡಹೆಂಡಿರೊಳು ಸ್ವಲ್ಪ ಮನಸ್ತಾಪವೇಳುವ ಸಂಭವವಿದೆ. ಆದರೂ ದೈವಾನುಗ್ರಹದಿಂದ ವಾರಾದಿಯ 5 ದಿನಗಳೂ ಸುಖಪ್ರದಗಳಾಗಲಿವೆ.

ಧನು— ಎಷ್ಟೇ ವಿಘ್ನಗಳು ಬಂದರೂ ಮುಂದಿಟ್ಟ ಹೆಜ್ಜೆಯನ್ನು ಹಿಂದಿಡಲಾರಿರಿ. ಮಿತ್ರಬಂಧುಗಳ ಸಹಕಾರಸಂಪನ್ನರಾದ ನಿಮಗೆ ವಿಶೇಷತಃ ರಾಜಕೀಯ ರಂಗದಲ್ಲಿ ವಿಜಯವಿದೆ. ವ್ಯರ್ಥಖರ್ಚುಗಳು ಹಲವಾರಿದ್ದರೂ ಖರ್ಚಿನ ಸಲುವಾಗಿ ಹೆರವರ ಮುಖನೋಡಬೇಕಾಗದು. ಕಫಪ್ರಕೋಪದಿಂದ ಆರೋಗ್ಯ ಕೆಡಲಿದೆ. ನಿಮ್ಮ ಮನೋರೋಗವು ದಿನೇ ದಿನೇ ಬಲಿತೀತು. ಜನಾಪವಾದಕ್ಕೂ ಕೂಡ ಗುರಿಯಾಗುವ ಸಂಭವವಿದೆ. ವಾರಾಂತ್ಯದ 4 ದಿನಗಳು ಅನುಕೂಲವಿರುವವು.

ಮಕರ— ಗುರು ಶುಕ್ರರ ಅನುಗ್ರಹಪಾತ್ರರಾಗಿರುವಿರಿ. ಸತ್ಕಾರ್ಯಗಳಲ್ಲಿ ನಿಮ ಸಂಪೂರ್ಣ ವಿಜಯವಿದೆ. ಆದರೆ ಖಚ ಆದಾಯಗಳು ಸಮತೂಕದಲ್ಲೇ ನಿಲ್ಲುವ ನೌಕರಿ ಜನರಿಗೆ ಸ್ವಲ್ಪ ಆತಂಕವುಂಟಾದೀ ಸೇವಕ ವರ್ಗದರು ದುಡಿಮೆಗೆ ತಕ್ಕ ಕೂ ಸಾಣದೆ ಕಷ್ಟಕ್ಕೀಡಾಗುವರು. ತ್ರಿದೋ ಸಂಬಂಧವಾದ ಕಾಹಿಲೆ ಪ್ರಾಪ್ತವಾಗುವ ಭವವಿದೆ. ಹೆಚ್ಚಿನ ಕಾಲವನ್ನು ಪ್ರಯಾ ಲ್ಲಿ ಕಳೆವ ಪ್ರಸಂಗಬಂದೀತು. ವಾರಾಂತ 2 ದಿನಗಳು ಸ್ವಲ್ಪ ಉತ್ತಮ.

ಕುಂಭ— ನಿಮ್ಮ ಬಯಕೆಯಂತೆ ಕಾಯ ವು ನೆರವೇರದ ಹೋದರೂ ಆರ್ಥಿಕ ಭಾ ಲ್ಲಿ ತೊಂದರೆಯಾಗದು ನಿಮ್ಮ ಸಂಪದಾ ವು ಮುಂಚಿಗಿಂತ ಎಷ್ಟೋ ವೃದ್ಧಿ ಹೊಂ ದೆ. ರಾಜಕೀಯ ಕ್ಷೇತ್ರದಲ್ಲಿ ಸಂಪೂ ವಿಜಯಗಳಾಗುವಿರಿ. ಆದರೆ ಸಂಸರ್ಗದೆ ಷದಿಂದಾಗಿ ಜನಾಪವಾದ ಕಷ್ಟನಷ್ಟಗಳಿಗೆ ರಿಯಾಗುವ ಸಂಭವವಿದೆ ಬಂಧುವರ್ಗದ ರೊಡನೆ ಮನಸ್ತಾಪ ಬೆಳೆಯುವುದು. ವಾ ದಿಯ 3 ದಿನಗಳಲ್ಲಿ ಗೃಹ ಸುಖಧನಲ ಯಾನ ವಾಹನಗಳು ಲಭಿಸುವವು.

ಮೀನ— ಧೈರ್ಯಸಾಹಸಗಳಲ್ಲಿ ಅದ್ವಿ ಯರಾದ ನಿಮಗೆ ಶ್ರಮಸಾಧ್ಯವ ದ ಕಾಯ ಗಳಲ್ಲಿ ವಿಜಯವು ಲಭಿಸುವದು. ಶತ್ರು ರನ್ನು ಸದೆ ಬಡಿದು ಕಾರ್ಯವನ್ನು ನಿವ ತೆ ಸಾಧಿಸಲು ಶಕ್ತರಾದ ನಿಮಗೆ ಆಪ್ತೇ ರಬೆಂಬಲ ಮಿತ್ರವರ್ಗದವರ ಸಹಾಯ ಪೂರ್ಣವಾಗಿ ಲಭಿಸಲಿದೆ. ಪತ್ನಿಪುತ್ರ ರೋಗ್ಯ ಕೆಟ್ಟೀತು. ಕೆಲವೊಮ್ಮೆ ವಿನಾಕಾ ಚಾಂಚಲ್ಯವಾಗುವದು ನೇತ್ರರೋಗಕ್ಕ ಕಾಶವಿದೆ. ವಾರಾದಿಯ 5 ದಿನಗಳು ಪ್ರದಗಳಿವೆ.

ಕುಂದಾಪುರ. ಡಿ. ಮು. ಕೋರ್ಟಿನಲ್ಲಿ

O. S 8/53

ಪದ್ಮನಾಭ ಹೇರ್ಳೆ — ವಾದಿ

ಶ್ರೀನಿವಾಸ ಹೇರ್ಳೆ ಕೂಡಾ ಪ್ರತಿವಾದಿರು

1ನೇ ಪ್ರತಿವಾದಿ ಶ್ರೀನಿವಾಸ ಹೇರ್ಳೆ ಕೃಷ್ಣ ಹೇರ್ಳೆರ ಮಗ, ಕೃಷ್ಣ ವಿಲಾಸ್ ಕಾಫಿ ಕ್ಲಬ್, ನಗರತ್ತರ ಪೇಟೆ ಬೆಂಗಳೂರು ಸಿಟಿ ಇವರಿಗೆ ಈ ಮೂಲ್ಯ ತಿಳಿಯಪಡಿಸುವುದೇನೆಂದರೆ

ವಾದಿಗೆ ನೀವು ಕೂಡಾ ಜನರ ಕುಟುಂಬದ ಯಜಮಾನರಾಗಿದ್ದ ಸದಾಶಿವ ಹೇರ್ಳೆರು ತಾ 27-12-49ರಲ್ಲಿ ಬರಕೊಟ್ಟ ಡಿ. ನೋಟಿನ ಬಾಬ್ತು ಅಸಲು ಬಡ್ಡಿ ಹಣಗಳ ವಸೂಲಿ ಕುರಿತು ನೀವು ಕೂಡಾ ಜನರ ಮೇಲೆ ಜರಗಿಸಿದ ಮೇಲಣ ದಾವೆಯು ತಾ.27-5-53 ಕ್ಕೆ ಇಟ್ಟಿರುತ್ತದೆ. ಆ ಕುರಿತ ನಿಮ್ಮದೇನಾದರೂ ಉಜ್ರಹರಣೆ ಇದ್ದಲ್ಲಿ ಸದ್ರಿ ದಿವಸ ಹಗಲು 11 ಗಂಟೆಗೆ ನಿವು ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜರಾಗದಿದ್ದಲ್ಲಿ ಸದ್ರಿ ನಂಬ್ರವು ಯೇಕ ಪಕ್ಷವಾಗಿ ತೀರ್ಮಾನಿಸಲ್ಪಡುತ್ತದೆಂಬ ಸಂಗ್ತಿ ಈ ಮೂಲ್ಯ ತಿಳಿಸಿಯದೆ

(By order of the court)

(Sd) A. N. Rao

Advocate for Plaintiff

Coondapoor, 7—4—1953.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿದೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ

ಪ್ರೊಪ್ರೈಟರ್:—ಕೆ. ವೆಂಕಟ್ರಮಣ ಭಟ್

ಶರೀರ ಸಮತೂಕತೆಗೆ ಸರ್ವ ರೋಗ ನಿವಾರಣೆಗೆ
ನವಜೀವನ, ಅಮೂಲ್ಯ ಶಕ್ತಿವರ್ಧಕವೆಂದರೆ— ಸುಪ್ರಸಿದ್ಧ

ಸರ್ ಜೀವನ್ ಶಿಲಾಜಿತ್ ಲೇಹ್ಯ

ಸಕಲ ಋತುವಿನಲ್ಲಿ ಸರ್ವರಿಗೂ ಅನುಕೂಲವುಂಟು.
44 ದಿನದ ಲೇಹ್ಯ ರೂ. 5-4-0, 22 ದಿನದ ಲೇಹ್ಯ ರೂ. 3-4-0
(ಪೋಸ್ಟೇಜ್ ಮಾಫಿ)

ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರ ಸಿಟಿ

ಶುದ್ಧ ನೀಲಗಿರಿ ಎಣ್ಣೆ ಸಿಗುತ್ತೆ.

ಅಮೃತಾಂಜನ

ಶಿರೋವೇದನೆ, ಉಳುಕು ಕುತ್ತಿಗೆ ಭುಜ ಹಲ್ಲು ಎದೆ ನೋವುಗಳಿಗೂ ಫ ಯಗಳು, ಬಾತುಕೊಳ್ಳುವುದು ಚೇಳು ಹಮುಂತಾದುವು, ಪಕ್ಷವಾತ, ಮೊ ವೆ ಮೊದಲಾದ ಎಲ್ಲಾ ರೋಗಳಿಗೂ ಸಿದ್ಧೌಷಧಿ.

ಹುಳು ಕಡ್ಡಿ ಮದ್ದು ನಮ್ಮ ಲ್ಲಿ ಸಿಕ್ತದೆ

REGD.

ಅಮೃತಾಂಜನ ಲಿಮಿಟೆಡ್

ಮದರಾಸು ಬೊಂಬಾಯಿ ಮತ್ತು ಕಲ್ಕ

ವಿವಿಧ ಪಾತ್ರೆಗಳು

ಯಾವತ್ತೂ ದ ಬೆಳ್ಳಿ, ತಾ ಹಿತ್ತಾಳೆ, ಕಂ ಮೊದಲಾದ ಳ ವಿವಿಧ ಪಾ ಗಳೂ ಸಾಮ ಗಳೂ ರಖಂ ಗಿಯೂ, ಚಿಲ್ಲರೆಯಾಗಿಯೂ ಸಿಗುತ್ತ

ಕಲ್ಮಂಜೆ ವ್ಯಾಸಾಚಾರ್ಯ

ರಥಬೀದಿ ಉಡುಪಿ.

Edited, Printed & Published By K. H. Shetty at the Navayuga Press, Udipi, S. India

Regd. No
M. 3618

LICENCE No. 31
Licensed to Post without Prepayment

ನವಯುಗ
ಆರೋಗ್ಯ ಮಂತ್ರಿ
ಶ್ರೀ. ಎ. ಬಿ. ಶೆಟ್ಟಿರಿಂದ
ಸ್ಥಾಪಿತವಾದ ವಾರಪತ್ರಿಕೆ,
ಉಡುಪಿ, ದ. ಕನ್ನಡ

ವಾ. ಚಂದಾ 5-12-0
6 ತಿಂಗಳಿಗೆ 3--0-0
ಬಿಡಿ ಪ್ರತಿಗೆ 0--2-0

ನವಯುಗ

ಅಂತರಂಗ
ಕುಸ್ತಕ ಪತ್ರಿಕೆಯು
ಉಪಯುಕ್ತವಾದ
90 ಪುಸ್ತಕಗಳು
ಗೂ 24ಕ್ಕೆ ಸಿಗುತ್ತದೆ
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ

30-4-1953

Vol 32
No 34

NAVAYUGA WEEKLY POST BOX NO 22 UDIPI

ವರ್ಷ ೩೨
ವಾರ ೩೪

ಮನುಷ್ಯನು ಇಷ್ಟು ನಾಗರಿಕನಾಗಲಿಕ್ಕೆ ಅವನ ಸೌಂದರ್ಯದೃಷ್ಟಿಯೇ ಕಾರಣ. ಪಂಚೇಂದ್ರಿಯಗಳ ಉಪಯೋಗವನ್ನು ಸಮರ್ಪಕವಾದ ರೀತಿಯಲ್ಲಿ ಮಾನವನು ಮಾಡಿಕೊಂಡು ಬಂದು ನಾಗರಿಕತೆಯ ಸೌಧ ನಿರ್ಮಾಣ ಮಾಡಿದನು. ಅವನ ಸೌಂದರ್ಯ ದೃಷ್ಟಿಯು ಕಸದಲ್ಲಿಯೂ ರಸವನ್ನು ಕಂಡುಕೊಂಡಿತು. ಬದುಕಿಗೊಂದು ಅರ್ಥವನ್ನು ಆದರ್ಶವನ್ನು ನಮ್ಮ ಸೌಂದರ್ಯದೃಷ್ಟಿಯು ನಮಗೆ ನೀಡಿದೆ. ತಿಂದುಣ್ಣುವುದು ಮಾತ್ರ ಬಾಳ್ವೆಯಾಗಲಾರದೆಂದೂ ರಸಾನುಭೂತಿಯ ಸೇಚನದಿಂದಲೇ ಬದುಕು ಬಂಗಾರವಾಗುವುದೆಂದೂ ಪರಂಪರಾಗತವಾದ ಅಭಿಪ್ರಾಯ ನಮ್ಮದು ಈ ಕಾರಣಕ್ಕಾಗಿಯೇ ನಾವು ಪರಮಾತ್ಮ ಸ್ವರೂಪವನ್ನು ಸತ ಸತ್ಯ ಶಿವ ಹಾಗು ಸುಂದರವಾಗಿ ಕಂಡೆವು. ಋಗ್ವೇದವೇ ಮುಂತಾದ ಯುಗಳಲ್ಲಿ ನಿಸರ್ಗದ ಶೋಭೆಗೆ ಮಾರುಹೋಗಿ ಸೌಂದರ್ಯಾನುಭೂತಿಯ ಉತ್ತುಂಗಕ್ಕೇರಿದ ಋಷಿ ಮುನಿಗಳ ಶ್ಲೋಕಗಳು ತುಂಬಿ ತುಳುಕಿವೆ. ವೇದಗಳ ಪ್ರತಿಯೊಂದೂ ನುಡಿಯೂ ಮನುಷ್ಯನ ನಿಸರ್ಗ ಪ್ರೇಮದ ಚಿಹ್ನೆಯಾಗಿರುತ್ತದೆ. ಸಾಮಾನ್ಯತಃ ನಮ್ಮ ದೇವದೇವತೆಗಳ ಕಲ್ಪನೆಯ ಹಿನ್ನೆಲೆಯಲ್ಲಿ ಸೌಂದರ್ಯಾನುಭೂತಿಯೇ ಇದೆ ಸಾಹಿತ್ಯದಲ್ಲಿ ಸಹ ಸೌಂದರ್ಯ ವರ್ಣನೆಗೆ ಮಹತ್ವದ ಸ್ಥಾನವು ಕೊಡಲ್ಪಟ್ಟಿದೆ. ಸೌಂದರ್ಯದ ಉಪಾಸನೆಯೇ ಬದುಕಿನ ಸರ್ವಸ್ವವಾಗಿರುವ, ಚರಮಧ್ಯೇಯವಾಗಿರುವ ಮಹೋನ್ನತ ಕಲಾವಿದರನ್ನು ನಾವು ಕಾಣುತ್ತೇವೆ

ಇವೆಲ್ಲದರ ಮೇಲಿಂದ ನಿಸರ್ಗದ ಮಡಿಲಲ್ಲಿ ಬೆಳೆದ ಕೂಸುಗಳಾದ ನಾವು ಅದರ ಚೆಲುವನ್ನು ಕಡೆಗಣಿಸಲಾರೆವೆಂದು ಹೇಳಬಹುದು. ನಮ್ಮಲ್ಲಿ ಪ್ರತಿಯೊಬ್ಬರಿಗೂ ಸೌಂದರ್ಯವನ್ನು ನೋಡುವ ಕಣ್ಣುಗಳು ಇರುತ್ತವೆ. ಸಣ್ಣ ಮಗುವು ಸಹ "ಆಹಾ ಎಷ್ಟು ಚಂದ!" ಎಂದು ಕೈತಟ್ಟಿ ನಕ್ಕು ತನ್ನ ಮನಸ್ಸಿನ ಸೌಂದರ್ಯಭಾವನೆಯನ್ನು ಮಾತಿನಲ್ಲಿ ಹೊರಗೆಡವುತ್ತದೆ ನಿಸರ್ಗದ ಅಂದ ಚಂದಗಳನ್ನು ಬಣ್ಣಿಸುವುದರಲ್ಲಿ ನಿಷ್ಣಾತರೆನಿಸಿದ ಕನ್ನಡದ ಶಿವರಾಮಕಾರಂತರು ತಮ್ಮ ಮರಳಿ ಮಣ್ಣಿಗೆ, ಕುಡಿಯರ ಕೂಸು ಮುಂತಾದವುಗಳಲ್ಲಿ "ಎಷ್ಟು ಚಂದ" ಎಂಬ ಎರಡು ಶಬ್ದಗಳ ಮೂಲಕವೇ ಚಿಕ್ಕ ಮಕ್ಕಳ ಮನೋ

ಮಧು ಪರ್ಕ

ಆ ಸಣ್ಣ ಹುಡುಗನು ಓಡುತ್ತಾ ಬಂದು ಫೊಟೋಗ್ರಾಫರ ಅಂಗಡಿಯನ್ನು ಪ್ರವೇಶಿಸಿದ. ಮತ್ತು ಫೋಟೋಗ್ರಾಫರನ ಕೈಯನ್ನು ಹಿಡಿದು ಜೋರಾಗಿ ಕಡಿದು ಎಳೆದಾಡುತ್ತಲೇ ಹೇಳಿದ-

"ಬೇಗ ಬನ್ನಿ, ನನ್ನ ಮುಖ್ಯೋಪಾಧ್ಯಾಯರನ್ನು ಓಂದಿನಿಂದ ಒಂದು ಗೂಳಿಯು ಓಡಿಸಿಕೊಂಡು ಬರುತ್ತಿದೆ ಅವರು ಪ್ರಾಣ ಕೈಯಲ್ಲಿ ಹಿಡಿದುಕೊಂಡು ಓಡುತಿದ್ದಾರೆ!"

ಪ್ರಾಯಶಃ ಹುಡುಗನು ಸಹಾಯವನ್ನು ಅಪೇಕ್ಷಿಸುತ್ತಿರುವುದಾಗಿ ಫೊಟೋಗ್ರಾಫರ ತಿಳಿದುಕೊಂಡ. ತನ್ನ ಸಹಾಯಕನನ್ನು ಕರೆದು ತನ್ನ ಕೆಲಸವನ್ನು ಒಪ್ಪಿಸಿ ಕೊಟ್ಟು, ಹೊರಬಾಗಿಲಿಗೆ ಓಡಿದ ಆಗ ಹುಡುಗನು ಹಿಂದಿನಿಂದ ಆವನನ್ನು ಕರೆದು ಹಿಡಿದು "ಏನು, ಹೀಗೆಯೇ ಹೊರಟಿರಾ?" ಎಂದು ಕೇಳಿದ

"ಮತ್ತೇನು?" ಎಂದ ಫೊಟೋಗ್ರಾಫರ "ಅಂಡ್ರ್ಯೂ, ಕೆಮರಾ ಸಹ ತೆಗೆದುಕೊಂಡಿಲ್ಲ ತಡಮಾಡಿದರೆ, ಒಂದು ಚೆಲೋದಾದ ಶಾಟ್ ನಿಮಗೆ ತಪ್ಪಿಹೋಗುತ್ತದಲ್ಲ" ಎಂದು ಹುಡುಗ ಚಡಪಡಿಸಿದ

ಸೌಂದರ್ಯಾನುಭೂತಿ

ಲೋಕದ ಸುಂದರ ಭಾವನೆಗಳಿಗೆ ಮಾತಿನ ವ್ಯಕ್ತ ಸ್ವರೂಪವನ್ನು ಕೊಡುತ್ತಾರೆ ಚಂದಮಾಮದಂಥ ಮಕ್ಕಳ ಪತ್ರಿಕೆಯು ಅತ್ಯಂತ ಜನಪ್ರಿಯವಾಗಲಿಕ್ಕೆ ಬಹುಶಃ ಚಂದ ಎಂಬ ಶಬ್ದವೇ ಹೇತುವಾಗಿದ್ದೀತು.

ಚಂದವಾದುದನ್ನು ನಿರೀಕ್ಷಿಸಿ, ತನ್ಮೂಲಕ ಸಂತೋಷಪಡುವುದಕ್ಕೆ ಸಾಕಷ್ಟು ಸಂಸ್ಕೃತಿ ನಮ್ಮಲ್ಲಿ ಇರಬೇಕು. ಅವರಂಗಜೇಬನಿಗೆ ಸಂಗೀತವನ್ನು ಕೇಳುವುದೆಂದರೆ ಆಗದು. ಆವರ ಒಳಕೆಯಲ್ಲಿರುವ ಒಂದು ಗಾದೆಯಂತೆ ಸಂಗೀತ ಕೇಳದವನು ಕೋಣ ಇದೇ ಮಾತನ್ನು ಸೌಂದರ್ಯಾನುಭೂತಿಗೂ ಚೆನ್ನಾಗಿ ಅನ್ವಯಿಸಬಹುದು. ನಿಸರ್ಗದ ಚೆಲುವು ನಲಿವಗಳಿಂದ ಮನಸ್ಸಂತೋಷ ತಾಳಲಾರದವನು ಮನುಷ್ಯನೇ ಅಲ್ಲ. ಎಷ್ಟು ತಲೆ ಬಿಸಿಏರಿದ್ದರೂ ಇಂಪಾದ ಕೊಳಲ ಗಾನವು ನಮ್ಮ ಉದ್ವೇಗವನ್ನು ತಣಿಸಿದಂತೆ, ಸಂಜೆಯ ಸೊಬಗು ಮನದ ಕಳವಳವನ್ನು ದೂರೀಕರಿಸಿ ಪ್ರಸನ್ನತೆಯನ್ನು ತರುತ್ತದೆ ಒಬ್ಬ ಕಾಯಿಲೆಯವನು ಹದಿನೈದು ದಿನ ಆಸ್ಪತ್ರೆಯ ಮಂಚದಲ್ಲಿ ಕುಳಿತು, ನರಳುವ ರೋಗಿಗಳಿಂದಲೂ ಸಮ ವಸ್ತ್ರಧರಿಸಿದ ನರ್ಸುಗಳಿಂದಲೂ ಔಷಧ [illegible] ಗಾಳಿ[illegible]ಯಿಂದಲೂ ಆವೃತನಾಗಿದ್ದಾಗ—ಚೈತನ್ಯವನ್ನೇ ಕಳೆದುಕೊಂಡನು ಆದರೆ ಆಸ್ಪತ್ರೆಯಿಂದ ಬಿಡುಗಡೆಗೊಂಡು ಮನೆಗೆ ಮರಳುವಾಗ ನಿಸರ್ಗದ ಚೆಲುವನ್ನು ನೋಡಲು ಅದರಿಂದ ಅವನ ಮನಸ್ಸು ಸಂತೋಷಗೊಂಡಿತು. ತಂಬಲರು ತುಂಬಿದ ಸುಂದರ ಮಾರುತ ಉದ್ಯಾನದ ಹಸುರು, ಹಕ್ಕಿಗಳ ಚಿಲಿಪಿಲಿ, ಮುಳುಗುವ ಸೂರ್ಯ, ಜನನಿಬಿಡವಾದ ಮಾರ್ಗ, ವ್ಯಾಪಾರ ವ್ಯವಹಾರಗಳ ಗೊಂದಲ ಇವುಗಳ ನಡುವೆ ನಿಸರ್ಗದ ಶೋಭೆಯನ್ನು ಅವನು ನೋಡಿದ. ಪ್ರಕೃತಿಯ ವೈವಿಧ್ಯಪೂರ್ಣ ಲಾಸ್ಯ ಅವನ ತಪ್ತ ಹೃದಯದಲ್ಲಿ ಅಮೃತದ ಸೇಚನಗೈದಿತು, ಮತ್ತು ಪೂರ್ಣ ಶಾಂತಿಯನ್ನು ಕೊಟ್ಟಿತು.

ನಮಗೆ ಪಂಚೇಂದ್ರಿಯಗಳ ಜೊತೆಗೆ ಮನಸ್ಸೆಂಬುದೂ ಇರುವುದರಿಂದ ಸೌಂದರ್ಯದ ಕಲ್ಪನೆಯು ಇನ್ನಷ್ಟು ಮನೋರಂಜಕವಾಗುವಂತೆ ಮಾಡಬಲ್ಲೆವು ಪ್ರತಿಯೊಂದೂ ಸನ್ನಿವೇಶ ನಮಗೆ ಹೊಸ ಹೊಸ ಸಂದೇಶವನ್ನು ನೀಡಬಹುದು; ನಮ್ಮ ತೀರ ನವೀನ ಭಾವನೆಯನ್ನುಂಟುಮಾಡಬಹುದು ಈ ವಿಶಾಲವಾದ ವಿಶ್ವದಲ್ಲಿ ಪ್ರತಿಯೊಬ್ಬನ ಮನಸ್ಸೂ ಒಂದೊಂದು ಬಗೆಯಾಗಿರುವುದರಿಂದ ಒಬ್ಬರಿನ್ನೊಬ್ಬರ ಭಾವನೆಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದರ ಅದರಿಂದಲೂ ಪ್ರಯೋಜನಹೊಂದಬಲ್ಲೆವು. ಕೋಗಿಲೆಯ ಇಂಚರವು ವಿರಹಿಗಳ ವೇದನೆಯನ್ನು ವರ್ಧಿಸಿದರೆ, ಪ್ರೇಮಿಗಳ ಬಂಧನವನ್ನು ಬಿಗಿಗೊಳಿಸುವುದು. ಗುಬ್ಬಚ್ಚಿಯು ತನ್ನ ಮರಿಗಳಿಗೆ ಅಕ್ಕಿಯ ಕಾಳನ್ನು ಉಣ್ಣಿಸುವುದನ್ನು ಕಂಡ ಸೀತೆ ತನಗಾದ ಮಕ್ಕಳಾಗದೇ ಎಂದುಕೊಂಡಳು ಅರಳಿದ ಪುಷ್ಪದ ಮೇಲೆ ಭ್ರಮರ ಬಂದೆರಗುವ ದೃಶ್ಯವನ್ನು ಮನಸ್ಸಿನಲ್ಲಿಟ್ಟುಕೊಂಡೇ ಗುಣಸಾಗರಿಯು "ಬಾ ಭ್ರಮರ, ಏರಾಗವಿರೆ ವೈರಾಗ್ಯಪಿಪೇತಕೊ" ಎಂದು ಪರದೇಶಕ್ಕೆ ತೆರಳಿದ ತನ್ನ ಗಂಡನನ್ನು ನೆನೆದು ಹಾಡಿದಳು. ಪ್ರಕೃತಿ ನಮ್ಮ ಜೈತನ್ಯವನ್ನು ಎಷ್ಟು ವಿಧವಾಗಿ ಕೆರಳಿಸಬಲ್ಲದೆಂಬುದನ್ನು ವರ್ಣಿಸಿ ಮುಗಿಯುವುದುಂಟೆ? ಮಹಾಕವಿಗಳೇ ಹೇಳುವಂತೆ ಸಾವಿರ ನಾಲಗೆಯ ಮಹಾಶೇಷನಿಗೂ ಸೀಗಿದ ಕೆಲಸ ಇದಲ್ಲ.

ಪ್ರಕೃತಿಯನ್ನು ನೋಡಿ ತಿಳಿದುಕೊಳ್ಳುವ ಅಪೂರ್ವ ದೃಷ್ಟಿ ಪ್ರತಿಭಾನ್ವಿತರಾದ ಮನುಷ್ಯರಿಂದ ಚಿತ್ರ ವಿಚಿತ್ರವಾದ ಸಾಹಸಗಳನ್ನು ಮಾಡಿಸುತ್ತದೆ. ಹಕ್ಕಿಯು ಗಗನ ಮಂಡಲದಲ್ಲಿ ಹಾರುವುದನ್ನು ಕಂಡೇ ರೈಟ್ ಸಹೋದರರು ವಿಮಾನದ ಸೃಷ್ಟಿಗೈದರಲ್ಲವೇ? ಗುಡುಗು ಮಿಂಚುಗಳಿಂದ

(೧-ನೇ ಪುಟ ನೋಡಿರಿ)

ಮೇ ತಾ 3ನೇ ಆದಿತ್ಯವಾರ ಸಂಜೆ ಮಂಗಳೂರಿಗೆ ಬಂದು ತಾ 7ರ ತನಕ ಜಿಲ್ಲೆಯ ಪ್ರಾಮುಖ್ಯ ಸ್ಥಳಗಳಲ್ಲಿ ಸಂಚರಿಸಲಿರುವ ಮದ್ರಾಸಿನ ಲೋಕೋಪಯೋಗಿ ಮಂತ್ರಿ ಶ್ರೀ ಎನ್. ರಂಗಾರೆಡ್ಡಿಯವರು

ಕಾಗದ ಕಾರ್ಖಾನೆಗಳ ಮುಂದಿರುವ ತೊಡಕು

ಪರಿಹರಿಸುವುದಕ್ಕೆ ಯೋಜನಾ ಆಯೋಗದ ವ್ಯವಹಾರ್ಯ ಸಲಹೆಗಳು.

— ೧ —

ಪಂಚವಾರ್ಷಿಕ ಯೋಜನೆಯು ದೇಶದ ಕೃಷಿ ಮತ್ತು ಕೈಗಾರಿಕೋತ್ಪನ್ನಗಳ ನಡುವೆ ಸಾಮಂಜಸ್ಯವನ್ನು ಕಾಯ್ದುಕೊಳ್ಳಲು ನೋಡುತ್ತಿದೆಯಷ್ಟೆ. ಭಾರತದಲ್ಲಿ ನಡೆಯುವ ಅನೇಕ ಮುಖ್ಯ ಕೈಗಾರಿಕೆಗಳಲ್ಲಿ ಕಾಗದ ತಯಾರಿಯೂ ಒಂದು. ಸಣ್ಣ ಮತ್ತು ದೊಡ್ಡ ಪ್ರಮಾಣಗಳಲ್ಲಿ ಕಾಗದ ತಯಾರಿಸುವ ಕಾರ್ಖಾನೆಗಳು ಹೆಚ್ಚು ಕಡಿಮೆ ಪ್ರತಿಯೊಂದೂ ರಾಜ್ಯದಲ್ಲಿವೆ. ಕಾಗದವು ನಮ್ಮ ದಿನನಿತ್ಯದ ಉಪಯೋಗಕ್ಕೆ ಬೇಕಾಗುವ ಒಂದು ಮುಖ್ಯ ವಸ್ತುವಾಗಿ ಪರಿಣಮಿಸಿದೆ. ಅದರಲ್ಲೂ ಪತ್ರ ಪತ್ರಿಕೆಗಳು ಮತ್ತು ಪುಸ್ತಕಗಳ ಪ್ರಚಾರ ದಿನೇದಿನೇ ಹೆಚ್ಚುತ್ತಿರುವುದನ್ನು ಗಮನಿಸಿದರೆ ಕಾಗದ ತಯಾರಿಯ ಉದ್ಯಮಕ್ಕೆ ಒಳ್ಳೆಯ ಭವಿಷ್ಯವಿದೆ ಎನ್ನಬಹುದು. ಪಂಚವಾರ್ಷಿಕ ಯೋಜನೆಯು ಯಶಸ್ವಿಯಾಗಬೇಕಿದ್ದರೆ, ಅದರಲ್ಲಿ ಹೇಳಿದಂತೆ ಜನತೆ ನಡೆದುಕೊಳ್ಳುವುದು ಅವಶ್ಯವಿದೆ. ಈ ಕುರಿತು ಜನರಲ್ಲಿ ಯೋಗ್ಯ ತಿಳುವಳಿಕೆಯನ್ನು ಉಂಟುಮಾಡುವುದಕ್ಕೆ ಬರಹಗಾರರು ಪ್ರಯತ್ನಿಸಬೇಕೆಂದು ಯೋಜನಾ ಆಯೋಗ ಹೇಳಿದೆ. ಇದರಿಂದ ಅಪ್ರತ್ಯಕ್ಷವಾಗಿ ಕಾಗದದ ಉಪಯೋಗ ಹೆಚ್ಚುತ್ತದೆಂಬ ಸೂಚನೆ ದೊರಕುತ್ತದೆ, ಬರೆಹಗಾರರಿಗೂ ಪುಸ್ತಕ ಮತ್ತು ಪತ್ರಿಕಾ ಪ್ರಕಾಶಕರಿಗೂ ಸಾಕಷ್ಟು ಕಾಗದದ ಪೂರೈಕೆಯಾದರೆ ಮಾತ್ರ ಜನರ ಶಿಕ್ಷಣ ಕಾರ್ಯ ಸುಗಮವಾಗಬಲ್ಲುದು.

— ೨ —

ಭಾರತವು ಕಾಗದದ ಮಟ್ಟಿಗೆ ಪೂರ್ಣ ಸ್ವಾವಲಂಬಿಯಾಗಿಲ್ಲ. ಅದರಲ್ಲೂ ವೃತ್ತಪತ್ರಿಕೆಗಳಿಗೆ ಬಳಸುವ ಕಾಗದದ ಅಭಾವ ನಮ್ಮಲ್ಲಿ ಬಹಳವಿದೆ. ಆದುದರಿಂದ ಕಾಗದ ತಯಾರಿಯ ಅಭಿವೃದ್ಧಿಗಾಗಿ ಯೋಜನಾ ಆಯೋಗ ಮಾಡಿದ ಸಲಹೆಗಳಂತೆ ನಡೆದುಕೊಳ್ಳುವುದು ತೀರ ಅನಿವಾರ್ಯವಾಗಿದೆ. ಕಾಗದ ಹಾಗು ಕಾಗದದ ಬೋರ್ಡುಗಳ ಉತ್ಪಾದನೆ ೧೯೫೦-೫೧ರಲ್ಲಿ ೧೧೪೦೦೦ ಟನ್ನುಗಳು ಇದ್ದುದನ್ನು ೧೯೫೫—೫೬ರ ಸುಮಾರಿಗೆ ಎರಡು ಲಕ್ಷ ಟನ್ನುಗಳಿಗೆ ಹೆಚ್ಚಿಸಬೇಕೆಂದು ಯೋಜನಾ ಆಯೋಗ ಸೂಚಿಸಿದೆ. ರಟ್ಟು ಮುಂತಾದವುಗಳ ಉತ್ಪಾದನೆಯು ಈ ಅವಧಿಯಲ್ಲಿ ೨೦೦೦೦ ಟನ್ನುಗಳಿಂದ ೫೬೦೦೦ ಟನ್ನುಗಳಿಗೇರುತ್ತದೆ. ಇದು ನಮ್ಮ ಬೇಡಿಕೆಯನ್ನು ಪೂರೈಸಲು ಸಾಕೆಂದು ಯೋಜನಾ ಆಯೋಗ ಎಣಿಸಿದೆ. ಆದರೆ ಸೂಕ್ಷ್ಮ ಪರಿಶೀಲನೆಯ ಮೇಲಿಂದ ಹೇಳುವುದಾದಲ್ಲಿ ನಮಗೆ ಕಾಗದದ ಕೊರತೆ ಎನಿಸದೀದು ಈ ಕೊರತೆ ಮುಖ್ಯವಾಗಿ ವೃತ್ತಪತ್ರಿಕೆಗಳಿಗೆ ಉಪಯೋಗಿಸುವ ಕಾಗದದ್ದು ಇರುತ್ತದೆ ಯೋಜನಾ ಆಯೋಗವು ಬರೆಯುವ ಕಾಗದದ ಉತ್ಪಾದನೆಗೋಸ್ಕರ ಹೊಸತಾಗಿ ಕಾಗದ ತಯಾರಿಯ ಕಾರ್ಖಾನೆಗಳನ್ನು ತೆರೆಯುವುದಗತ್ಯವಿಲ್ಲವೆಂದು ಹೇಳಿದ್ದರೂ, ವೃತ್ತಪತ್ರಿಕೆಗಳ ಆವಶ್ಯಕತೆಯನ್ನು ಪೂರೈಸಲು ಹೊಸ ಕಾರ್ಖಾನೆಗಳು ತಲೆ ಎತ್ತುವುದವಶ್ಯ. ಮಧ್ಯ ಪ್ರದೇಶದಲ್ಲಿ ಇಂಥದೊಂದು ಉದ್ಯಮವನ್ನು ತೊಡಗುವ ಹವಣಿಕೆ ನಡೆದಿದೆ ಎಂದು ಕೇಳುತ್ತೇವೆ.

— ೩ —

ಕಾಗದ ತಯಾರಿಯ ಕ್ಷೇತ್ರದಲ್ಲಿ ನಮಗಿರುವ ಆತಂಕವೆಂದರೆ ಕಚ್ಚಾ ಸಾಮಗ್ರಿಗಳ ಪೂರೈಕೆಯಲ್ಲಿ ಕೊರತೆ. ಮುಖ್ಯವಾಗಿ ಬಿದಿರು ಮತ್ತು ಸಬಾಯಿ ಎಂಬೊಂದು ಜಾತಿಯ ಹುಲ್ಲು ಕಾಗದಕ್ಕೆ ಉಪಯೋಗಿಸುವ ಕಚ್ಚಾ ವಸ್ತುಗಳಾಗಿವೆ ನಮ್ಮ ಅರಣ್ಯ ಪ್ರದೇಶಗಳಲ್ಲಿ ಇವೆರಡೂ ಧಾರಾಳವಾಗಿದ್ದರೂ ಕಾರ್ಖಾನೆಗಳಿಗೆ ಇವುಗಳನ್ನು ಸಾಕಷ್ಟು ಉಪಯೋಗಿಸುವ ಅನುಕೂಲತೆ ದೊರೆತಿಲ್ಲ. ಪಶ್ಚಿಮ ಬಂಗಾಳದ ಪರಿಸ್ಥಿತಿಯಂತೂ ಇನ್ನೂ ಶೋಚನೀಯ. ಇಲ್ಲಿ ಭಾರತದ ವಿಭಜನೆಯ ಪರಿಣಾಮವಾಗಿ ಪೂರ್ವ ಬಂಗಾಳದಿಂದ ಬರುತ್ತಿದ್ದ ಬಿದಿರಿನ ಪೂರೈಕೆ ನಿಂತು ಹೋಯಿತು. ಬಂಗಾಳದಂತೆ ಬಿಹಾರವೂ ತನ್ನ ಕಾರ್ಖಾನೆಗಳಿಗೋಸ್ಕರ ಬೇರೆಕಡೆಯಿಂದ ಬಿದಿರಿನ ಪೂರೈಕೆಯಾಗಬೇಕಲ್ಲಾ ಎಂದು ಚಿಂತಿಸುತ್ತಿದೆ. ಯೋಜನಾ ಆಯೋಗದ ಗಮನಕ್ಕೆ ಇವೆರಡು ರಾಜ್ಯಗಳ ಸಮಸ್ಯೆ ಬಂದದ್ದು ನೆರೆಯ ಒಡಿಸಾ ರಾಜ್ಯದಿಂದ ಬಿದಿರನ್ನು ತರಿಸುವ ಮೂಲಕ ಈ ಸಮಸ್ಯೆಯನ್ನು ನಿವಾರಿಸಬಹುದೆಂದು ಅದು ಸೂಚಿಸಿದೆ. ಒಡಿಸಾ ರಾಜ್ಯದಲ್ಲಿ ಕಾಗದ ಕಾರ್ಖಾನೆಗಳಿದ್ದರೂ ಇವುಗಳಿಗೆಲ್ಲ ಬಿದಿರನ್ನು ಪೂರೈಸಿದ ಬಳಿಕ ವರ್ಷಕ್ಕೆ ೨೫೦೦೦ ಟನ್ನುಗಳಷ್ಟನ್ನು ನೆರೆಯ ರಾಜ್ಯಗಳಿಗೆ ಕೊಡುವ ಸಾಮರ್ಥ್ಯ ಅದಕ್ಕಿದೆ. ಹೀಗೆಂದ ಮಾತ್ರಕ್ಕೆ ಈ ರಾಜ್ಯಗಳು ಕಚ್ಚಾ ವಸ್ತುವಿನ ಸಂಗತಿಯಲ್ಲಿ ನಿಶ್ಚಿಂತೆಯಿಂದ ನಿದ್ದೆಹೋಗಬಹುದೆಂದುಕೊಳ್ಳುವುದು ತಪ್ಪು. ಕಚ್ಚಾ ಸಾಮಗ್ರಿಯ ಕೊರತೆ ಇತರ ರಾಜ್ಯಗಳಲ್ಲಿಯೂ ನಿಧಾನವಾಗಿ ತಲೆ ಎತ್ತಿರುವುದರಿಂದ ತಂತಮ್ಮ ಆವಶ್ಯಕತೆಗಳ ಪೂರೈಕೆ ನಿರಾತಂಕವಾಗಿ ನೆರವೇರುವಂತೆ ಯೋಗ್ಯ ವ್ಯವಸ್ಥೆಯನ್ನು ಪ್ರತಿಯೊಂದು ರಾಜ್ಯವೂ ಮಾಡಿಕೊಳ್ಳಬೇಕು.

— ೪ —

ಈ ಸಂಬಂಧದಲ್ಲಿ ಕಾಗದ ಕಾರ್ಖಾನೆಗಳು ಅನುಭವಿಸುತ್ತಿರುವ ಇನ್ನೊಂದು ತೊಂದರೆಯೆಂದರೆ- ಕಚ್ಚಾ ವಸ್ತುವಿನ ಪೂರೈಕೆಯಲ್ಲಿ ರಾಜ್ಯ ಸರಕಾರದ ವರ್ತನೆ ಉದ್ಯಮದ ಶ್ರೇಯಸ್ಸಿಗೆ ಪೋಷಕವಾಗಿಲ್ಲವೆಂಬುದು. ಕಾರ್ಖಾನೆಗಳಿಗೆ ಬಿದಿರು ಮುಂತಾದವುಗಳನ್ನು ಪೂರೈಸುವ ಶರ್ತ ಮತ್ತು ನೀತಿ ತೃಪ್ತಿಕರವಾಗಿಲ್ಲ. ಪರಿಣಾಮವಾಗಿ ಈ ಪೂರೈಕೆ ಸಮಯಕ್ಕೆ ಸರಿಯಾಗಿಲ್ಲ; ಸಾಕಷ್ಟು ಪ್ರಮಾಣದಲ್ಲಿಯೂ ಇಲ್ಲ; ಅವ್ಯವಸ್ಥೆ ಕಂಡು ಬಂದರೂ ಆಶ್ಚರ್ಯವಿಲ್ಲ. ಮೇಲಾಗಿ ವಿವಿಧ ರಾಜ್ಯ ಸರಕಾರಗಳು ತಮ್ಮ ಅರಣ್ಯಗಳು ನೀಡುವ ಕಚ್ಚಾ ವಸ್ತುಗಳ ಬೆಲೆಯನ್ನು ಒಂದೊಂದು ತೆರನಾಗಿ ನಿರ್ಧರಿಸಿವೆ; ಪೇಟೆಯಲ್ಲಿದ್ದ ಸರಕಿನ ಬೆಲೆಗೂ ಈ ಕಚ್ಚಾ ವಸ್ತುವಿನ ಬೆಲೆಗೂ ತಾಳಿಕೆಯೇ ಇಲ್ಲ. ಇಂಥ ತೊಂದರೆಗಳು ಉದ್ಯಮಕ್ಕೆ ಅನಿಷ್ಟಕಾರಕಗಳಾಗಿವೆಯಾದುದರಿಂದ ಯೋಜನಾ ಆಯೋಗವು ಬಹಳ ವಿವೇಕದಿಂದ ಕೆಲವು ಅಮೂಲ್ಯ ಸೂಚನೆಗಳನ್ನು ಮಾಡಿರುತ್ತದೆ.

(೧) ಕಾಗದದ ಕಾರ್ಖಾನೆಗಳಿಗೋಸ್ಕರ ನಿರ್ದಿಷ್ಟ ಅರಣ್ಯ ಪ್ರದೇಶಗಳನ್ನು ಕಾಯ್ದಿಟ್ಟುಕೊಂಡು ದೀರ್ಘಾವಧಿಯ ಉಪಯೋಗಕ್ಕೋಸ್ಕರ ರಾಜ್ಯಸರಕಾರ ಇದನ್ನು ಕಾರ್ಖಾನೆಗಳಿಗೆ ಬಿಟ್ಟುಕೊಡಬೇಕು

(೨) ಅಖಿಲ ಭಾರತದ ತಳಹದಿಯ ಮೇಲೆ ಕಾಗದದ ಉದ್ಯಮಕ್ಕೆ ಯೋಗ್ಯ ಬೆಲೆಯಲ್ಲಿ ಬಿದಿರು ಮುಂತಾದದವುಗಳು ದೊರಕುವಂತೆ ಕಚ್ಚಾ ವಸ್ತುವಿನ ಬೆಲೆಯನ್ನು ನಿರ್ಧರಿಸುವುದವಶ್ಯ. ರಾಜ್ಯ ಸರಕಾರಗಳ ಹಿತಕ್ಕೆ ಧಕ್ಕೆಯೊದಗದಂತೆ ಕಚ್ಚಾ ವಸ್ತುವಿನ ಮೂಲ ಬೆಲೆಯೊಂದನ್ನು ನಿಗದಿಮಾಡಬೇಕು ಮತ್ತು ಅದರ ಮೇಲೆ ಸಿದ್ಧ ಸರಕಿನ ಮಾರಾಟದಿಂದ ಬರುವ ಲಾಭಕ್ಕನುಸಾರ ಸ್ವಲ್ಪ ಹಣವನ್ನು ಕೊಡಿಸಬೇಕು.

(೩) ಅರಣ್ಯ ಪ್ರದೇಶಗಳಲ್ಲಿ ಸಾರಿಗೆ ಸೌಕರ್ಯಗಳು ಹೆಚ್ಚುವಂತೆ ಮಾರ್ಗಗಳ ಅಭಿವೃದ್ಧಿಯಾಗಬೇಕು.

— ೫ —

ರಾಜ್ಯ ಸರಕಾರಗಳು ಯೋಜನಾ ಆಯೋಗದ ಸಿಫಾರಸಿನಂತೆ ನಡೆದುಕೊಂಡಲ್ಲಿ ಅದರಿಂದ ತುಂಬ ಪ್ರಯೋಜನವಿದೆ. ಜನ ಶಿಕ್ಷಣ ಕಾರ್ಯದಲ್ಲಿ ಕಾಗದದ ಉದ್ದಿಮೆಯ ಪಾತ್ರವೂ ಮಹತ್ವದೆಂಬುದರಿಂದ, ಸರಕಾರವು ಅದನ್ನು ದುರ್ಲಕ್ಷ್ಯದಿಂದ ನೋಡಲಾರದು. ಆದರೆ ದುರ್ದೈವದಿಂದ ರಾಜ್ಯ ಸರಕಾರಗಳು ಕಾಗದದ ಉದ್ದಿಮೆಯನ್ನು ಪ್ರೋತ್ಸಾಹಿಸುವ ಕುರಿತು ಸಾಕಷ್ಟು ಗಮನಕೊಟ್ಟದ್ದು ಕಾಣ್ಬರುವದಿಲ್ಲ. ಪ್ರತಿಯೊಂದು ರಾಜ್ಯದಲ್ಲಿಯೂ ಕಾಗದ ತಯಾರಿಸುವ ಕಾರ್ಖಾನೆಗಳಿದ್ದರೂ ಮುಂಗಡ ಪತ್ರದಲ್ಲಿ ಅವುಗಳ ಅಭಿವೃದ್ಧಿಗೆ ಯೋಗ್ಯ ಅವಕಾಶ ಮಾಡಿಕೊಟ್ಟದ್ದು ಇರುವುದಿಲ್ಲ. ಆದುದರಿಂದ ಯೋಜನಾ ಆಯೋಗದ ಸಲಹೆಗಳನು

(೧೯ನೇ ಪುಟ ನೋಡಿರಿ)

LIFE INSURANCE SELLING?

"Canara Mutual" has demonstrated that life insurance selling can be as respectable a profession as any other Canara Mutual agents enjoy respect and regard from the public

We have at our Head Office a newest psychological test that can state within an hour the chances of success in the field of a prospective agent. Educated young men who want to carve out a brilliant independent career will please contact

THE MANAGING DIRECTOR.
The CANARA MUTUAL ASSURANCE CO. Ltd.
Head Office: **UDIPI**, S. INDIA. ESTD: 1935

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ ಬುಕ್ಕೆ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ. ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಸೇವನೆಯ ಆನಂದಕ್ಕೆ, ಅತ್ಯುತ್ತಮವಾದುದನ್ನೇ ಪಡೆಕೊಳ್ಳಿರಿ
ಎಸ್. ಆರ್.
ತಾಜಾ ನಿಪ್ಪಾಣಿ ತಂಬಾಕು ಮತ್ತು
ಟೆಂಬುರ್ಣಿ ಎಲೆ
ಇವುಗಳಿಂದ ತಯಾರಿಸಿದ
ಬೀಡಿಗಳಾಗಿರುತ್ತವೆ
S.R. Beedi Works

ನೂರು ವರ್ಷಗಳ ಬಳಿಕ—

ಮನುಷ್ಯನ ಸ್ಥಾನದಲ್ಲಿ ಯಾಂತ್ರಿಕ ಪ್ರಾಬಲ್ಯ

ಬ್ರಿಟನ್ನಿನ ಸುಪ್ರಸಿದ್ಧ ವಿಚಾರಕರೆನಿಸಿದ ಎಚ್. ಜಿ. ವೆಲ್ಸರು ಸುಮಾರು ೩೦-೩೫ ವರ್ಷಗಳಿಗೆ ಹಿಂದೆ ತಮ್ಮ "ಶೇಪ್ ಆಫ್ ದಿ ಥಿಂಗ್ಸ್ ಟು ಕಮ್" ಎಂಬ ಪುಸ್ತಕದಲ್ಲಿ ಇಂದಿನ ಪ್ರಸಿದ್ಧ ಆವಿಷ್ಕಾರಗಳ ಕುರಿತು ಬರೆದಾಗ, ಎಲ್ಲರೂ ಇದನ್ನು ಕಲ್ಪನಾ ಮಾತ್ರವೆಂದು ತಿಳಿದು ನಕ್ಕರು. ಆದರೆ ಇಂದು ಈ ಮಾತುಗಳು ಅಕ್ಷರಶಃ ಸತ್ಯವೆಂದು ನಾವು ಕಂಡುಕೊಂಡಿದ್ದೇವೆ. ಇನ್ನೊಬ್ಬ ತತ್ವಜ್ಞಾನಿ ಬರ್ಟ್ರೆಂಡ್ ರಸ್ಸೆಲ್ಲರು ತಮ್ಮ ದಿನಚರಿಯಲ್ಲಿ ಬರೆದ ಅಂಶಗಳನ್ನು ಈಗ ತುಲನಾತ್ಮಕ ದೃಷ್ಟಿಯಿಂದ ತೂಗಿನೋಡಿದರೆ, ಕಳೆದ ನೂರುವರ್ಷಗಳಲ್ಲಿ ಇದ್ದ ಪರಿಸ್ಥಿತಿ ಇಂದು ತೀರ ಭಿನ್ನವಾಗಿದೆಯೆಂದು ವ್ಯಕ್ತಗೊಳ್ಳುತ್ತವೆ. ಈ ಪ್ರಗತಿಅಥವಾ ವಿಕಾಸವು ವೈಜ್ಞಾನಿಕಕ್ಷೇತ್ರವನ್ನು ಮಾತ್ರ ಆವರಿಸಿಲ್ಲ-ಮಾನವನು ಪ್ರತಿಯೊಂದು ರಂಗದಲ್ಲಿಯೂಪ್ರಗತಿಪರನಾಗಿರುವನು. ಇದೇ ಶತಮಾನದ ಆದಿಯಲ್ಲಿ ಬ್ರಿಟನಿನ ಮಹಿಳೆಯರಿಗೆ ಸಮಾನಾಧಿಕಾರದ ಗಂಧವಿರಲಿಲ್ಲ;ಮೊದಲನೇ ಮಹಾಯುದ್ಧದ ಬಳಿಕ ಅವರದನ್ನು ಪಡೆದುಕೊಂಡರು. ಸಾಮ್ರಾಜ್ಯಶಾಹಿ ಮನೋವೃತ್ತಿಗೆ ಇಂದು ಪ್ರಬಲವಾದ ಆಘಾತವಾಗಿದೆ ಲೋಕದಲ್ಲಿ ಸ್ವಾತಂತ್ರ್ಯದ ಕಹಳೆ ಮೊಳಗುತ್ತಿದೆ. ಪರಂಪರಾಗತವಾದ ರಾಜಮಹಾರಾಜರ ಬದಲು ಚುನಾಯಿತ ಅಧಿಕಾರಿಗಳ ಮೂಲಕ ಆಡಳಿತ ನಡೆಸಿಕೊಳ್ಳುವ ಪ್ರಜಾಪ್ರಭುತ್ವ ಸ್ವರೂಪದ ಗಣರಾಜ್ಯಕ್ಕೆ ಪ್ರಾಶಸ್ತ್ಯದೊರೆತಿದೆ.

ಉತ್ತರೋತ್ತರ ಅಭಿವೃದ್ಧಿ.

ಸಂಕ್ಷೇಪದಲ್ಲಿ ಮನುಷ್ಯನು ಎಲ್ಲ ದಿಸೆಯಲ್ಲಿಯೂ ಉತ್ತರೋತ್ತರ ಅಭಿವೃದ್ಧಿಯನ್ನು ಪ್ರಗತಿ ಹಾಗು ವಿಕಾಸವನ್ನು ಹೊಂದುತ್ತಿರುವ ಶುಭಲಕ್ಷಣಗಳಿವು. ಪರಿಣಾಮವಾಗಿ ಮುಂದಿನ ನೂರು ವರ್ಷಗಳಲ್ಲಿ ಎಂಥ ವಾತಾವರಣವು ಉಂಟಾದೀತೆಂದು ಈಗಿನ ವಿಚಾರಕರು ಊಹಿಸತೊಡಗಿರುವರು. ಅವರು ತಮ್ಮ ವಿಚಾರಬಲದಿಂದ ಹೇಳುವ ಮಾತುಗಳು ನಮಗಿಂದು ಸರ್ವಥಾ ಅಸಂಭವನೀಯವೆಂದು ತೋರಬಹುದು. ಆದರೆ ಅದು ಪೂರ್ಣ ಸತ್ಯವಾಗಿ ಪರಿಣಮಿಸುವ ಸಂಭವವೇ ಹೆಚ್ಚೆಂದು ಇದು ವರೆಗಿನ ಅನುಭವ ವ್ಯಕ್ತಗೊಳಿಸುತ್ತದೆ. ಈಗಿನ ವಿಜ್ಞಾನದ ದ್ರುತಗತಿಯ ವಿಕಾಸದ ರೂಪರೇಷೆಗಳನ್ನು ಗಮನಿಸಿದರೆ, ಇನ್ನು ಮುಂದಿನ ಒಂದು ಶತಮಾನದೊಳಗೆ ಮನುಷ್ಯನು ಕೂಡ ಪುರಾತನ ಪ್ರಾಣಿಯಾಗಿ ಮೂಲೆಗುಂಪಾದಾನು ಎಂದೆನಿಸುತ್ತದೆ. ಏಕೆಂದರೆ ಲೋಕದಲ್ಲಿ ಮನುಷ್ಯನ ಸ್ಥಾನವನ್ನು ಯಂತ್ರಗಳು ಆಕ್ರಮಿಸುತ್ತವೆ. ಇದು ಅತಿಶಯೋಕ್ತಿಯಲ್ಲ. ನೂರು ವರ್ಷಗಳಿಗೆ ಮುಂಚೆ ಮನುಷ್ಯ ತನ್ನ ಕೈಯಿಂದ ಎಲ್ಲಾ ಕೆಲಸ ಮಾಡುತಿದ್ದ! ಇಂದು ಅವನು ಎಲ್ಲ ಕಾರ್ಯಗಳನ್ನು ಯಾಂತ್ರಿಕ ಸಾಧನೆಗಳ ಮೂಲಕವೇ ಪೂರೈಸುತ್ತಿದ್ದಾನೆ. ೧೮೫೫ರಲ್ಲಿ ಗಿರಣಿಯ ಚಿಮಣಿಯನ್ನು ಚೊಕ್ಕಟಗೊಳಿಸಲು ಯಾರಾದರೊಬ್ಬನು ಅದನ್ನು ಹತ್ತಿ ಮೇಲ್ತುದಿಯನ್ನು ಮುಟ್ಟಬೇಕಿತ್ತು. ಆದರೆ ಇಂದು ವಿದ್ಯುಚ್ಛಕ್ತಿಯ ಒಂದು ಗುಂಡಿಯನ್ನು ಕೆಳಗಿಂದಲೆ ಒತ್ತಿದರೆ ಸಾಕು-ಕೆಲಸ ನೆರವೇರುತ್ತದೆ. ವಸ್ತ್ರ. ಅನ್ನ, ನಿತ್ಯೋಪಯೋಗದ ಅನೇಕ ವಸ್ತುಗಳು ಈಗ ಯಂತ್ರದ ನೆರವಿನಿಂದಲೇ ಸಿದ್ಧಗೊಳ್ಳುತ್ತವೆ ಮನುಷ್ಯ ಸ್ವತಃ ಕೈಯಿಂದ ತಯಾರಿಸಿಕೊಳ್ಳುವ ವಸ್ತುಗಳು ದಿನ ದಿನಕ್ಕೂ ಕಡಿಮೆಯಾಗುತ್ತಿವೆ.

ಯಾಂತ್ರಿಕ ಮನುಷ್ಯ

ಆದರೊಂದು ಮಾತು-ಪ್ರಕೃತ ಯಂತ್ರಗಳು ಕೆಲಸ ಮಾಡಿದರೂ ಅವನ್ನು ನೋಡಿಕೊಳ್ಳಲಿಕ್ಕೆ ಮತ್ತು ಯೋಗ್ಯರೀತಿಯಲ್ಲಿ ನಡೆಸಿಕೊಳ್ಳಲಿಕ್ಕೆ ಯಾರಾದರೊಬ್ಬನು ಅಲ್ಲಿರುವುದವಶ್ಯ ಆದರೆ ಇನ್ನು ಒಂದೇ ಶತಾಬ್ದಿಯೊಳಗೆ ಮನುಷ್ಯನ ಮಿದುಳು ನಿರ್ವಹಿಸುವ ಕೆಲಸ ವಿದ್ಯುಚ್ಛಕ್ತಿಯ ಯಂತ್ರದ ಮೂಲಕ ನೆರವೇರುತ್ತದೆ. ಈಗಾಗಲೇ ಯಾಂತ್ರಿಕ ಮನುಷ್ಯನ ಮೂಲಕ ನಮ್ಮ ಕೆಲಸಗಳನ್ನು ಮಾಡಿಸಿಕೊಳ್ಳುವ ರೀತಿ ಇಂಗ್ಲೆಂಡು ಅಮೇರಿಕಾಗಳಲ್ಲಿ ತೊಡಗಲ್ಪಟ್ಟಿದೆ. ಒಂದು ರೇಡಿಯೋ ತಯಾರಿಸಬೇಕಿದ್ದರೆ,ಅದಕ್ಕೆ ಬೇಕಾದ ಎಲ್ಲ ವಸ್ತುಗಳನ್ನು ಒಂದೆಡೆ ಸೇರಿಸಿಟ್ಟರೆ ಆಯಿತು, ತನ್ನಿಂದ ತಾನೆ ರೇಡಿಯೋ ನಿರ್ಮಾಣ ಗೊಳ್ಳುತ್ತದೆ. ನಾವೊಂದು ಬಟನು ಒತ್ತಿದ ಮಾತ್ರಕ್ಕೆ ದಿನದ ಇಪ್ಪತ್ತನಾಲ್ಕು ತಾಸೂ ಕೆಲಸ ನಿಲ್ಲದೆ ನೆರವೇರುತ್ತದೆ. ಮೋಟಾರುಕಾರುಗಳನ್ನು ಇನ್ನೂ ಹೆಚ್ಚು ವೇಗದಲ್ಲಿ ಡ್ರೈವರ ನಿಲ್ಲದೆ ನಡೆಸಬಹುದು. ಇದು ಬಯಿ ಬೂಟಾಟಿಕೆಯಲ್ಲ. ರಾಡಾರ್ ಮೂಲಕ ಕಾರುಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲಾಗುವುದು ಸಿಗ್ನಲಿನ ದೆಸೆಯಿಂದ ಕಾರುಗಳು ಪರಸ್ಪರ ಡಿಕ್ಕಿ ಹೊಡೆಯದೆ ಉಳಿಯುತ್ತವೆ ಪ್ರಾರಂಭದಲ್ಲಿ ಇಂಥ ಮೋಟಾರು ಕಾರುಗಳಲ್ಲಿ ಪ್ರಯಾಣಿಸುವವರು ಭಯಭೀತರಾಗುವರೋ ಏನೋ. ಇಂಥದೇ ವಿಮಾನಗಳೂ ರಚನೆಗೊಳ್ಳುತ್ತವೆ. ಹಾಗೆಯೇ ಈಗಿನ ಸಮಾಚಾರ ಪತ್ರ, ಸಿನೆಮಾ ಮುಂತಾದವುಗಳ ಸ್ಥಾನದಲ್ಲಿ ಟೆಲಿವಿಜನ್ ಬರುತ್ತದೆ. ಇದರ ಪರಿಣಾಮವಾಗಿ ನಾವು ಯಾವುದನ್ನು ಮುಚ್ಚಿಟ್ಟುಕೊಳ್ಳಲು ಸಾಧ್ಯವಾಗುವುದಿಲ್ಲ. ಕಳ್ಳಕಾಕರು ತಮ್ಮಕಪಟವನ್ನು ಕಾಯ್ದುಕೊಳ್ಳಲಿಕ್ಕೆ ಸಾಧ್ಯವಿಲ್ಲ. ಪ್ರಾಯಶಃ ನಮ್ಮ ಈಗಿನ ಗಣಿತಪದ್ಧತಿಯೂ ಹಳೆಯದೆನಿಸೀತು. ಈಗಾಗಲೇ ಕೈಬೆರಳುಗಳ ಮೂಲಕ ಕಾಗದ ಪೆನ್ಸಿಲುಗಳ ಮೂಲಕ ಬುದ್ಧಿಬಲದಿಂದ ಮನುಷ್ಯಮಾಡುವ ಲೆಕ್ಕಗಳನ್ನು ಯಂತ್ರಗಳು ನಿಮಿಷಾರ್ಧದಲ್ಲಿ ಮಾಡಿ ಬಿಡುತ್ತವೆ.

ಕೃತ್ರಿಮ ಅನ್ನದ ಆವಿಷ್ಕಾರ

ಇನ್ನೊಂದು ಮಹತ್ವಪೂರ್ಣ ಸಂಗತಿಯೆಂದರೆ ರಾಸಾಯನಿಕ ಪ್ರಣಾಳಿಯಿಂದ ಉತ್ಪಾದನಾಕಾರ್ಯವನ್ನು ನೆರವೇರಿಸುವ ಸೋಜಿಗ. ಭೂಮಿಯನ್ನು ಉತ್ತು ಬಿತ್ತಿ ಕೊಯ್ಯುವ ಪರಿಶ್ರಮದಿಂದ ಮನುಷ್ಯ ಉಳಿಯಬಲ್ಲನು. ಬೆವರಿಳಿಸಿ ದುಡಿಯುವುದೇ ತೀರ ಅನಗತ್ಯವಾಗಬಹುದು ಸೂರ್ಯ ಹಾಗೂ ಮಳೆಯ ಅನುಗ್ರಹದ ಮೇಲೆಯೇ ಕೃಷಿಯನ್ನು ಮಾಡುವ ದಿನಗಳು ಇನ್ನು ಮುಂದೆ ಉಳಿಯಲಿಕ್ಕಿಲ್ಲ. ಇನ್ನು ಮುಂದೆ ಮನುಷ್ಯಬುದ್ಧಿಯು ಭೂಮಿಯಿಂದಲ್ಲ-ಯಂತ್ರದಿಂದ ಅನ್ನಪಾನೀಯಗಳನ್ನು ತಯಾರಿಸಿಕೊಳ್ಳುವ ಸಾಮರ್ಥ್ಯ ಪಡೆಯಬಹುದು. ಮೊದ ಮೊದಲಿಗೆ ನೈಸರ್ಗಿಕ ಆಹಾರವನ್ನುಂಡು ಅಭ್ಯಸ್ತರಾಗಿರುವ ನಮಗೆ ಕೃತ್ರಿಮ ಸೇವನೆ ರುಚಿಕರವಾಗದು. ಆದರೆ ಇಂದು ಸೋಯಾ ಬೀನಿನ ಹಾಲು ಸ್ವಾದಿಷ್ಟವಾದುದೆಂದು [illegible]ಕೊಂಡಂತೆ ಕ್ರಮೇಣ ಕೃತ್ರಿಮ ಆಹಾರವೇ [illegible] ಬಳಕೆಗೆ ಬರುತ್ತದೆ. ಇಂಥ ಪರಿಸ್ಥಿತಿಯಲ್ಲಿ ಭೂಮಿಯನ್ನು ಆಹಾರಕ್ಕೋಸ್ಕರ ಉತ್ತು ಬಿತ್ತುವುದು ಚೋದ್ಯದ ಸಂಗತಿಎನಿಸುತ್ತದೆ. ಎಲ್ಲಾದರೂ ವಿಶೇಷ ಸಮಾರಂಭಗಳಲ್ಲಿ ಮಾತ್ರ ತಾಜಾ ಅಕ್ಕಿಯ ಅನ್ನವನ್ನು ಬಡಿಸಬಹುದು ವಿವಾಹೋತ್ಸವಗಳಲ್ಲಿ, ಪ್ರೀತಿ ಭೋಜನಗಳಲ್ಲಿ ಈ ತಾಜಾ ಅನ್ನವು ಒಂದು ವಿಶೇಷ ಆಕರ್ಷಣೆಯುಳ್ಳ ಮಹತ್ವದ ವಸ್ತುವಾಗಬಲ್ಲುದು. ನಮ್ಮಲ್ಲಿ ರೇಶನು ಬರುವುದಕ್ಕೆ ಮುಂಚೆ ಗೋಧಿ ಪಾಯಸಕ್ಕೆ ಇದ್ದ ಮಹತ್ವವೇ ಕೃತ್ರಿಮ ಅಕ್ಕಿಯು ಬಳಕೆಯಲ್ಲಿ ಬಂದಾಗ ತಾಜಾ ಅಕ್ಕಿಗೆ ದೊರೆಯುತ್ತದೆ.

ಬೃಹತ್ ಸಮಸ್ಯೆ

ಹೀಗೆ ಯಾಂತ್ರಿಕ ಮಹತ್ವದ ಮುಂದಿನ ಶತಾಬ್ದಿಯಲ್ಲಿ ಮನುಷ್ಯ ನಿರುಪಯುಕ್ತ ವಸ್ತುವಾಗುವ ಸಂಭವ ಹೆಚ್ಚು. ಆಗ ಈ ನಿರುದ್ಯೋಗಿ ಮನುಷ್ಯನ ಸಮಸ್ಯೆಗಳನ್ನು ಹೇಗೆ ಬಿಡಿಸಬೇಕೆಂಬ ಸಂಗತಿಗೆ ಗಂಭೀರ ಸ್ವರೂಪ ಬರುತ್ತದೆ. ಗಿರಣಿಗಳ ಹಾವಳಿಯಿಂದ ಕೈಮಗ್ಗಗಳು ಹೊಂದಿದ ದುರವಸ್ಥೆಯಂತೆ ಮನುಷ್ಯ ಪ್ರತಿಭೆಯ ಪರಿಣಾಮವಾಗಿ ಹುಟ್ಟಿಕೊಂಡ ಯಾಂತ್ರಿಕ ಮನುಷ್ಯನ ಪ್ರಾಬಲ್ಯದಿಂದ ನಿಜಮಾನವನು ಮಾನಭಂಗ ಹೊಂದುವನು. ಆಗಿನ ರಾಜನೀತಿಜ್ಞರಿಗೆ ಹಾಗು ಸಮಾಜ ಸುಧಾರಕರಿಗೆ ನಿಷ್ಕ್ರಿಯರೂ ಆಲಸಿಗಳೂ ನಿರುದ್ಯೋಗಿಗಳೂ ಆದ ಮನುಷ್ಯರನ್ನು ಯೋಗ್ಯ ವ್ಯವಸ್ಥೆಯಲ್ಲಿಡುವುದು ಒಂದು ಬೃಹತ್ ಸಮಸ್ಯೆಯಾಗುತ್ತದೆ ಮಾಡಲು ಕೆಲಸವೇ ಇಲ್ಲದಿದ್ದರೆ, ಮನುಷ್ಯನು ಪ್ರಾಚೀನಕಾಲದಿಂದ ಕಟ್ಟಿಕೊಂಡು ಬಂದ ರೀತಿನೀತಿಗಳು ಅರ್ಥಶೂನ್ಯವಾಗುತ್ತವೆ. ನಮ್ಮ ಇಂದಿನ ಆಚಾರಗಳಿಗೆ ಮೂಲದಲ್ಲಿ ಕೆಲಸದ ತಳಹದಿ ಇದೆ ಎಂಬುದನ್ನು ಕಡೆಗಣಿಸುವಂತಿಲ್ಲ. ಯಾಂತ್ರಿಕ ಸಾರ್ವಭೌಮಾಧಿಕಾರವನ್ನು ಪಡೆದಾಗ ಮನುಷ್ಯನು ಒಬ್ಬನಿನ್ನೊಬ್ಬನ ಮೇಲೆ ಅಧಿಕ ಒಳಿತನ್ನು ಮಾಡಬಹುದು; ಅಥವಾ ಅತ್ಯಧಿಕ ಕೆಡುಕನ್ನುಂಟುಮಾಡುವುದೂ ಸಾಧ್ಯ. ಕೆಲವು ಸ್ವಾರ್ಥಿಗಳು ಯಾಂತ್ರಿಕ ಸಾಧನಗಳ ಉತ್ಪಾದನದ ಗುತ್ತಿಗೆಯನ್ನು ಪಡೆದು ಸಮಾಜದ ಇತರ ಗುಂಪಿನಮೇಲೆ ಜಂಬೂ ಸವಾರಿ ಮಾಡುವ ಸಂಭವವಿದೆ. ಆಗ ಈಗಿನ ವರ್ಗಕಲಹ ಉಗ್ರಸ್ವರೂಪ ತಳೆಯುತ್ತದೆ ಬದಲು ಒಬ್ಬರಿನ್ನೊಬ್ಬರ ಸ್ನೇಹಕಾಂಕ್ಷಿಗಳಾಗಿ ಸಹೃದಯತೆಯಿಂದಿರಬಯಸಿದರೆ ಆಗಮಿಕ ಸುಖವನ್ನು ಅನುಭವಿಸುವ ಭಾಗ್ಯವೂ ಮನುಷ್ಯನಿಗೆ ಬರುವುದು. ಓದುವುದು ಬರೆಯುವುದು, ಆಡುವುದು, ತಿಂದುಂಡು ತಿರುಗುವುದು, ಗಾನ ನರ್ತನ ಮುಂತಾದವುಗಳಲ್ಲಿ ಮನುಷ್ಯ ತನ್ನ ಸಮಯ ಕಳೆದು, ಸ್ವರ್ಗದ ಸುಖವನ್ನು ಧಿಕ್ಕರಿಸಬಹುದು ಬರ್ಟ್ರೆಂಡ ರಸ್ಸೆಲ್ಲರು ಹೇಳುವಂತೆ ಮಂತ್ರವು ಮಹಾನ್ ದರ್ಶನ, ಸಾಹಿತ್ಯ ಅಥವಾ ಕಲಾ ಸೃಷ್ಟಿಯನ್ನೇನೂ ಮಾಡಲಾರದು. ಮನುಷ್ಯನು ತಾನು ಬುದ್ಧಿಬಲದಿಂದ ಉಂಟುಮಾಡಿದ ಸೃಷ್ಟಿಯ ಸ್ಥಿತಿಯೊಡನೆ ಹೊಂದಿಕೆಯಿಂದು ಹೋಗಲು ಹೃದಯವನ್ನು ಉನ್ನತವಾಗಿಟ್ಟುಕೊಳ್ಳುವ ಆಗತ್ಯ ಮಾತ್ರ ಮುಂದಿನ ಶತಾಬ್ದಿಯಲ್ಲಿ ಈಗಿನದಕ್ಕಿಂತ ಬಹಳಷ್ಟು ಹೆಚ್ಚಿದೆ. ಇದನ್ನು ನಾವೆಂದೂ ಮರೆಯುವಂತಿಲ್ಲ.

ZANDU ಝೂಂಡೂ ಫಾರ್ಮಸಿಯ ಮನೆಮದ್ದುಗಳನ್ನೇ ಸದಾ ಉಪಯೋಗಿಸಿರಿ.

ಝೂಂಡೂ ಬ್ರಾಹ್ಮೀ ಹೇರ್ ಆಯಿಲ್ **Zandu Brahmi Hair Oil** — ಮೆದುಳಿಗೆ ತಂಪು— ಮನಸ್ಸಿಗೆ ಉಲ್ಲಾಸನೀಯುವುದು.
1 ಪೌಂಡಿಗೆ ರೂ. 3–8–0 ಕಾಲು ರಾತ್ತಲಿಗೆ ರೂ. 1·

ಝೂಂಡೂ ಸರಸಪರಿಲ್ಲಾ **Zandu Sarasaparilla** — ರಕ್ತವನ್ನು ಶುದ್ಧಗೊಳಿಸಲು ಹೆಸರುವಾಸಿಯಾದುದು. ಚರ್ಮರೋಗಗಳನ್ನು ಗುಣಪಡಿಸಬಲ್ಲುದು 4 ಔನ್ಸ್ ಬಾಟ್ಲ 1ಕ ರೂ. 1–5–0

ಝೂಂಡೂ ಬಾಲಾಮೃತ **Zandu Balamrutam** — ಅನಾರೋಗ್ಯವುಳ್ಳ ಮಕ್ಕಳಿಗೆ ಆದರ್ಶ ಟಾನಿಕ್ 4 ಔನ್ಸ್ ಬಾಟ್ಲ 1ಕ ರೂ. 1–2–0

ಝೂಂಡೂ ಬಾಮ್ **Zandu Balm** — ತಲೆ ಸಿಡಿತ ಮೊದಲಾದ ಬೇನೆಗಳಿಗೆ 1 ಸೀಸೆಗೆ ರೂ 1·

ಝೂಂಡೂ ಫಾರ್ಮಸಿಯ ದ. ಕ. ಜಿಲ್ಲೆಯ
ಎಲ್ಲಾ ಏಜಂಟರಲ್ಲೂ ದೊರೆಯುವುವು

ಸವಿವರ ಕ್ಯಾಟಲಾಗಿಗೆ ಈ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ;-

DAMODER & CO.,
Nainiappa Naicken Street, MADRAS. 3

ಭಾಷಾ ರಾಜ್ಯಗಳ ನಿರ್ಮಾಣದ ಪ್ರಶ್ನೆ

ಸಮಸ್ಯೆಯನ್ನು ಹಸಿ ಬಿಸಿಯಾಗಿ ಬಿಡಿಸುವುದು ಅನಿಷ್ಟಕ್ಕೆ ಕೊಟ್ಟ ಆಹ್ವಾನ

ನಿಶ್ಚಿತ ಧೋರಣೆಯ ಅಗತ್ಯ

ಬಳ್ಳಾರಿ ತಾಲೂಕಿನ ಭವಿತವ್ಯವನ್ನು ನಿರ್ಣಯಿಸುವುದಕ್ಕಾಗಿ ಕೇಂದ್ರ ಸರಕಾರದವರು ಹೈದರಾಬಾದು ಹೈಕೋರ್ಟಿನ ನ್ಯಾಯಮೂರ್ತಿ ಲಕ್ಷ್ಮಿಶಂಕರ ಮಿಶ್ರರನ್ನು ನೇಮಕ ಮಾಡಿದ ಕುರಿತು ಕನ್ನಡಿಗರ ಪ್ರತಿಕ್ರಿಯೆಯು ತೀರಾ ಅಸಮಾಧಾನದಿಂದ ತುಂಬಿದೆ. ಕನ್ನಡಿಗರು ಕಾಂಗ್ರೆಸಿನ ಮೇಲೆ ಮತ್ತು ಸರಕಾರದ ಧುರೀಣರ ಮೇಲೆ ಶ್ರದ್ಧಾಭಕ್ತಿಯನ್ನು ಇಟ್ಟುಕೊಂಡಿದ್ದುದಕ್ಕೆ ಈರೀತಿ ಅವಮಾನಕರವಾದ ಪ್ರಸಂಗಗಳನ್ನು ಒಂದರ ಹಿಂದೊಂದೆಂಬಂತೆ ಇದಿರಿಸಬೇಕಾಗಿ ಬಂದಿತಲ್ಲಾ ಎಂದು ಕರ್ನಾಟಕದ ಮುಖಂಡರು ವಿಷಾದ ವ್ಯಕ್ತಪಡಿಸಿರುವರು. ಕೇಂದ್ರ ಸರಕಾರವು ಕನ್ನಡಿಗರಿಗೆ ಅನ್ಯಾಯವನ್ನೆ ಮಾಡುತ್ತಿದೆಯಾಗಿ ಕನ್ನಡಿಗರ ಸಾಮಾನ್ಯ ಅಭಿಪ್ರಾಯ. ಇಂಥ ಅಭಿಪ್ರಾಯಕ್ಕೆ ಬರುವಂತಾಗಲು ಕೇಂದ್ರ ಸರಕಾರವು ಭಾಷಾನುಗುಣ ಪ್ರಾಂತ ರಚನೆಯ ಸಂಬಂಧದಲ್ಲಿ ಕೈಗೊಂಡ ಅನಿಶ್ಚಿತವಾದ ಮತ್ತು ಚಾಂಚಲ್ಯ ಧೋರಣೆಯೇ ಕಾರಣವೆಂದು ಹೇಳಬೇಕಾಗುವುದು. ಭಾಷಾನುಗುಣ ಪ್ರಾಂತ ರಚನೆಯ ತತ್ವವನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಕಾಂಗ್ರೆಸು ತಾನು ಕೊಟ್ಟ ವಚನದಂತೆ ನಡೆದುಕೊಳ್ಳಬೇಕೆಂಬುದರಲ್ಲಿ ಪ್ರತಿಮಾತಿಲ್ಲ, ಮತ್ತು ಭಾಷಾನುಗುಣ ಘಟಕಗಳನ್ನು ನಿರ್ಮಾಣಮಾಡುವುದಕ್ಕೆ ಬೆಂಬಲ ಕೊಡುವ ಇತರ ಅಂಶಗಳೂ ಮಹತ್ವದಿಂದ ಕೂಡಿವೆ. ಆದುದರಿಂದ ಭಾಷಾನುಗುಣ ಪ್ರಾಂತದ ರಚನೆಯೇ ಬೇಡವೆಂಬ ವಾದವಾಗಲೀ, ಅದರಿಂದ ದೇಶದ ಐಕ್ಯಕ್ಕೆ ಭಂಗಬರುವುದೆಂಬ ಶಂಕೆಯಾಗಲೀ ಈಗಿನ ವಾತಾವರಣಕ್ಕೆ ಹೇಳಿಸಿದುದಲ್ಲ. ಆದರ ಭಾಷಾನುಗುಣ ಪ್ರಾಂತ ರಚನೆಯ ಸಂಬಂಧದಲ್ಲಿ ಸ್ಪಷ್ಟವಾದ ಅಭಿಪ್ರಾಯಕ್ಕೆ ಕೇಂದ್ರ ಸರಕಾರವು ಬರುವುದು ತೀರ ಅಗತ್ಯವೆನಿಸಿದೆ. ಇದುವರೆಗೆ ಈ ಸಂಗತಿಯಲ್ಲಿ ನಡೆದ ಪ್ರಗತಿಯನ್ನು ವಿಮರ್ಶಿಸಿದರೆ, ಸರಕಾರವು ಹೆಜ್ಜೆ ಹೆಜ್ಜೆಗೂ ಮುಗ್ಗರಿಸಿ ಬೀಳುವರೀತಿ ನಡೆದುಕೊಂಡಿದೆ ಎಂಬುದು ವ್ಯಕ್ತವಾಗುತ್ತದೆ. ಸರಕಾರದ ಎಲ್ಲ ಕಾರ್ಯಗಳೂ ಹರಕು ಬಟ್ಟೆಗೆ ತೇಪೆ ಹಚ್ಚುವ ಉದ್ಯೋಗದಂತೆ ಹೊಸ ಹೊಸ ಸಮಸ್ಯೆಗಳಿಗೆ ಅವಕಾಶ ಮಾಡಿಕೊಟ್ಟವೆಯೇ ಹೊರತು ಮೂಲ ಪ್ರಶ್ನೆಗಳ ಇತ್ಯರ್ಥದಲ್ಲಿ ಸಹಾಯಕವೆನಿಸಿಲ್ಲ. ಇಂಥ ದೋಷಗಳೂ ಕುಂದು ಕೊರತೆಗಳೂ ಪರಿಹಾರಗೊಳ್ಳುವ ಸಲುವಾಗಿಯೇ ಕೇಂದ್ರ ಸರಕಾರವು ಸ್ಪಷ್ಟವಾದ ಪೂರ್ವ ಕಲ್ಪನೆಯನ್ನಿಟ್ಟುಕೊಂಡು ಅದರಂತೆ ಮುನ್ನಡೆಯಬೇಕು. ಜನತೆಯ ಇಚ್ಛೆಗೆ ವಿರುದ್ಧ ಹೋಗಬಾರದು. ಅದರಂತೆ ಜನತೆಯನ್ನು ಪ್ರತಿಕ್ಷಣಕ್ಕೂ ದಿಙ್ಮೂಢಾವಸ್ಥೆಯಲ್ಲಿಡುವ ಹವಣಿಕೆಯೂ ಸರಿಯಲ್ಲ.

ಸಮಸ್ಯೆಗಳ ಸ್ವರೂಪ

ಇದನ್ನೆ ಇನ್ನಷ್ಟು ಸ್ಪಷ್ಟೀಕರಿಸುವುದು ಯೋಗ್ಯವೆಂದು ನಮಗೆ ತೋರುತ್ತದೆ. ಇದು ವರೆಗಿನ ಘಟನೆಗಳನ್ನು ನೋಡಿದರೆ ಈ ಕೆಳಗಿನ ಸಮಸ್ಯೆಗಳು ಸಂಕಲೆಯ ಗೊಣಸಿನೋಪಾದಿಯಲ್ಲಿ ಪರಸ್ಪರ ಹೆಣೆದುಕೊಂಡು ಬಂದಿವೆ. ಮೊದಲನೆಯದಾಗಿ ಆಂಧ್ರ ಪ್ರಾಂತವನ್ನು ಮಾತ್ರ ನಿರ್ಮಾಣ ಮಾಡುವ ನಿರ್ಣಯವನ್ನು ಕೇಂದ್ರ ಸರಕಾರ ಕೈಗೊಂಡದ್ದು ಸರಿಯಲ್ಲ. ಪೊಟ್ಟಿ ಶ್ರೀ ರಾಮುಲು ಅವರ ಉಪವಾಸಕ್ಕೆ ಬೆದರಿಕೊಂಡಂತೆ ಕೇಂದ್ರ ಸರಕಾರ ವರ್ತಿಸಿದ್ದು ಸರ್ವಥಾ ಸರಿಯಲ್ಲ. ಭಾಷಾನುಗುಣ ಪ್ರಾಂತರಚನೆ ಉಪವಾಸದಿಂದ ಕೈಗೂಡಬಲ್ಲುದಾದರೆ ಆತ್ಮತ್ಯಾಗ ಮಾಡಿ ಧನ್ಯರಾಗುವ ಪುಣ್ಯಜೀವಿಗಳು ಇತರ ಭಾಷಾ ಪ್ರದೇಶಗಳಲ್ಲೂ ಇರುವರು. ಇದನ್ನು ಗಮನಿಸದಿದ್ದುದರಿಂದಲೇ ಕೆಲವು ಅನಾಹುತಗಳು ಅನಪೇಕ್ಷಿತವಾಗಿದ್ದರೂ ಘಟಿಸಿದುವು. ಎಲ್ಲ ಭಾಷಾನುಗುಣ ಪ್ರಾಂತರಚನೆಯನ್ನು ಏಕ ಕಾಲಕ್ಕೆ ಮಾಡುತಿದ್ದರೆ ಗಡಿಸಂಬಂಧದ ತೊಡಕುಗಳೂ ಆಗಾಗಲೇ ಇತ್ಯರ್ಥಹೊಂದುತಿದ್ದುವು. ಈಗಿನ ಧೋರಣೆಯಂತೆ ಗಡಿ ನಿರ್ಣಯ ಮಾಡುವಾಗ ಒಂದೇ ರೀತಿಯ ನಿಯಮವನ್ನು ಸರ್ವಕಾಲಕ್ಕೂ ಅನುಸರಿಸುವ ಪ್ರಮೇಯ ಬಹಳ ಕಡಿಮೆಯಾಗಿದೆ. ಗಡಿನಿರ್ಣಯಿಸುವಾಗ ಯಾವ ಯಾವ ಅಂಶಗಳನ್ನು ಗಮನಿಸತಕ್ಕದೆಂಬ ಸಂಗತಿಯನ್ನು ಮೊದಲಿಗೇ ನಿರ್ಣಯಿಸಿಕೊಳ್ಳದೆ ಇರುವುದು ಇನ್ನೊಂದು ತಪ್ಪು. ವಿವಾದ ಗ್ರಸ್ತ ಪ್ರದೇಶಗಳನ್ನು ಹಂಚಿಕೊಡುವಾಗ ಕನಿಷ್ಠ ಘಟಕವಾಗಿ ಹಳ್ಳಿಯನ್ನು ಹಿಡಿಯಬೇಕೋ, ಫಿರ್ಕವನ್ನೊ, ತಾಲೂಕನ್ನೊ, ಜಿಲ್ಲೆಯನ್ನೊ ಎಂಬೀ ಸಂಗತಿಯಲ್ಲಿ ಯಾವುದೇ ನಿರ್ಧಾರ ಕೈಗೊಳ್ಳದೆ ಏನು ವಿಚಾರಣೆ ನಡೆಸಬೇಕೋ ತಿಳಿಯುವುದಿಲ್ಲ. ಜಿಲ್ಲೆಯನ್ನಾಗಲೀ, ತಾಲೂಕನ್ನಾಗಲೀ ಒಡೆಯುವ ಪ್ರಸಂಗ ಬಂದಾಗ ಅವುಗಳು ಮೂಲದ ರಾಜ್ಯಕ್ಕೆ ಸೇರುವಂತಿರಬೇಕೆಂಬುದು ಅಗತ್ಯವಾಗಿ ಗಮನಿಸಬೇಕಾದ ವಿಷಯ. ಬಳ್ಳಾರಿ ಜಿಲ್ಲೆಯನ್ನು ಆಂಧ್ರ ಹಾಗು ಕನ್ನಡಿಗರಿಗೆ ಹಂಚಿಕೊಡಲು ಕೇಂದ್ರ ಸರಕಾರ ನಿರ್ಧರಿಸಿದ್ದಕ್ಕೆ ಆಂಧ್ರವು ಪ್ರತ್ಯೇಕಗೊಂಡಾಗ ಈ ಜಿಲ್ಲೆ ಮದ್ರಾಸಿನೊಡನೆ ಸಂಬಂಧ ಕಳೆದುಕೊಂಡ ನಡುಗಡ್ಡೆಯಾಗಿ ಉಳಿಯುವುದೆಂಬುದೇ ಕಾರಣ. ಕರ್ನಾಟಕ ಪ್ರಾಂತ ನಿರ್ಮಾಣವಾಗುವ ತನಕ ವಿವಾದಾಸ್ಪದ ಜಿಲ್ಲೆಯಾಗಿರುವ ಬಳ್ಳಾರಿಯನ್ನು ಮದ್ರಾಸಿನಲ್ಲಿ ಇಡುವುದೊಳ್ಳೆಯದಿದ್ದರೂ ಹಾಗೆ ಮಾಡದೆ ಕಸಿಬಿಸಿ ಪರಿಹಾರಕ್ಕೆ ಮನಗೊಟ್ಟದ್ದು ಈಗ ಪೀಕಲಾಟವಾಗಿದೆ.

ಮುಂದಿನ ದಾರಿ

ಇಂಥ ಬಿಕ್ಕಟ್ಟಿನ ಪ್ರಸಂಗದಲ್ಲಿ ಇದುವರೆಗಿನ ತಪ್ಪುಗಳನ್ನು ತಿದ್ದಿಕೊಂಡು, ಸಮರ್ಪಕವಾದ ರೀತಿಯಲ್ಲಿ ಮುನ್ನಡೆಯುವುದೆಂತು? ನ್ಯಾಯ ಮೂರ್ತಿ ಮಿಶ್ರರವರು ಮೇ ೧ನೇ ದಿನಾಂಕದಿಂದ ಬಳ್ಳಾರಿ ತಾಲೂಕಿನ ಕುರಿತು ತಮ್ಮ ವಿಚಾರಣೆಯನ್ನು ತೊಡಗುವರು. ಅವರು ಬಳ್ಳಾರಿ ತಾಲೂಕನ್ನು ಒಡೆಯುವ ನಿರ್ಣಯ ಮಾಡಬಹುದು; ಅಥವಾ ಇಡಿಯಾಗಿಯೇ ಆಂಧ್ರಕ್ಕೆ ಅಥವಾ ಮೈಸೂರಿಗೆ ಸೇರಿಸುವ ನಿರ್ಣಯ ಮಾಡಬಹುದು. ಬಳ್ಳಾರಿ ತಾಲೂಕು ಮಾತ್ರ ವಾದಗ್ರಸ್ತ ಪ್ರದೇಶವಲ್ಲ—ರಾಯದುರ್ಗ, ಆದವಾನಿ ಮತ್ತು ಆಲೂರುಗಳ ಕುರಿತೂ ಕನ್ನಡಿಗರು ಅಧಿಕಾರ ಪೂರ್ವಕ ಬೇಡಿಕೆ ಮುನ್ನಿಡುತ್ತಿರುವುದರಿಂದ ಕೇಂದ್ರ ಸರಕಾರ ಆಂಧ್ರ ರಾಜ್ಯ ನಿರ್ಮಾಣಕ್ಕೆ ಮುಂಚೆಯೇ ಗಡಿ ನಿರ್ಣಯ ಸಮಿತಿಯನ್ನು ನೇಮಿಸಿ ಈ ವಿಚಾರವನ್ನು ಬಗೆಹರಿಸಬೇಕು. ಕರ್ನಾಟಕ ಏಕೀಕರಣವನ್ನು ಮುಂದಿನ ವರ್ಷದ ಅಕ್ಟೋಬರದೊಳಗೆ ಮಾಡುವದಾಗಿ ಕೇಂದ್ರ ಸರಕಾರವು ಇದೇ ಅಕ್ಟೋಬರಕ್ಕೆ ಮುಂಚೆ ಘೋಷಣೆ ಹೊರಡಿಸಬೇಕೆಂದು ಕರ್ನಾಟಕ ಪ್ರದೇಶ ಕಾಂಗ್ರೆಸ ಸಮಿತಿ ಸ್ವೀಕರಿಸಿದ ನಿರ್ಣಯವನ್ನು ಗಂಭೀರವಾಗಿ ಪರ್ಯಾಲೋಚಿಸಬೇಕು. ಹೀಗೆ ಮಾಡುವಾಗ ಒಂದು ಸಂಗತಿಯನ್ನು ಅವಶ್ಯ ಗಮನದಲ್ಲಿಡುವುದು ಒಳಿತು. ಕರ್ನಾಟಕ ಪ್ರಾಂತವನ್ನು ರಚಿಸುವಾಗ ದಕ್ಷಿಣದಲ್ಲಿ ತಮಿಳು ಹಾಗು ಕೇರಳಗಳೊಡನೆ, ಉತ್ತರದಲ್ಲಿ ಮಹಾರಾಷ್ಟ್ರದೊಡನೆ ಬಹುಶಃ ಪೂರ್ವದಲ್ಲಿಯೂ ಆಂಧ್ರದ ಅನಂತಪುರ ಜಿಲ್ಲೆಯೊಡನೆ ಗಡಿ ಸಂಬಂಧದ ತಕರಾರುಗಳು ಏಳದಿರವು. ಪರಿಣಾಮವಾಗಿ ಸಂಯುಕ್ತ ಕರ್ನಾಟಕದ ಜೊತೆಗೆ ಐಕ್ಯ ಕೇರಳ, ಬೃಹತ್ ಮಹಾರಾಷ್ಟ್ರ ಪ್ರಾಂತಗಳ ರಚನೆಯ ಹೊಣೆಯನ್ನು ಕೂಡಲೇ ಹೊರುವ ಪ್ರಸಂಗ ಕೇಂದ್ರ ಸರಕಾರಕ್ಕೆ ಬಂದರೆ ಆಶ್ಚರ್ಯವಿಲ್ಲ. ಮಹಾರಾಷ್ಟ್ರ ರಾಜ್ಯದ ರಚನೆಯನ್ನು ಕೈಗೆತ್ತಿಕೊಳ್ಳುವಾಗ ಗುಜರಾಥಿಗಳು ಸುಮ್ಮನುಳಿಯಲಿಕ್ಕಿಲ್ಲ. ಹೀಗೆ ಪ್ರಶ್ನೆ ದಕ್ಷಿಣ ಭಾರತದ ಸರಹದ್ದು ಮೀರಿ ಉತ್ತರ ಭಾರತಕ್ಕೂ ಕಾಲಿಟ್ಟು, ವಿಸ್ತರಿಸುವುದು ನಿಶ್ಚಯ. ಇದಕ್ಕೆ ಮುಂಚೆಯೆ ಹೈದರಾಬಾದು ರಾಜ್ಯವನ್ನು ವಿಭಜಿಸುವ ಕುರಿತು ಒತ್ತಾಯ ಬೆಳೆಯಬಹುದು. ಆ ರಾಜ್ಯವನ್ನು ವಿಭಜಿಸದಿದ್ದರೆ ಭಾಷಾನುಗುಣ ಪ್ರಾಂತರಚನೆಯ ಕೆಲಸ ಪೂರ್ತಿಯಾಗಲಾರದು. ಆದುದರಿಂದ ಈ ಕುರಿತು ನಿಗಾ ಕೊಡುವುದು ತಪ್ಪದು. ಪರಿಣಾಮ ಎಲ್ಲಿಗೆ ಬಂದು ಮುಟ್ಟುವುದೆಂದರೆ ಭಾಷಾನುಗುಣ ಪ್ರಾಂತ ರಚನೆಯ ಪ್ರಶ್ನೆಯೇ ರಾಜಕೀಯ ಕ್ಷೇತ್ರದಲ್ಲಿ ಇನ್ನು ಕೆಲವು ವರ್ಷಗಳ ಕಾಲ ರಾರಾಜಿಸುವುದು ಹೊರತು— ಸ್ವಾತಂತ್ರ್ಯೋತ್ತರದ ರಾಷ್ಟ್ರೀಯ ಅಭಿವೃದ್ಧಿಯ ಕೆಲಸಗಳಿಗೆ ಗಮನಕೊಡುವುದು ಕಷ್ಟಸಾಧ್ಯವೆನಿಸೀತು. ಈ ಅನರ್ಥವನ್ನು ನೆಹರು ಪದೇ ಪದೇ ಜನತೆಗೆ ತಿಳಿಸಿ ಹೇಳುತ್ತಾ ಬಂದು ತಾವೇ ಆಂಧ್ರರಾಜ್ಯ ನಿರ್ಮಿಸುವ ಸಂಕಲ್ಪ ಕೈಕೊಂಡು, ಚಳವಳಿಗೆ ಅಪ್ರತ್ಯಕ್ಷ ಪ್ರಚೋದನೆಯನ್ನು ಕೊಟ್ಟರು. ಈಗ ತೆಗೆದುಕೊಂಡ ತುತ್ತನ್ನು ನುಂಗುವುದಕ್ಕೂ ಇಲ್ಲ— ಉಗುಳಲೂ ಬಾರದು ಎಂಬಂಥ ಪರಿಸ್ಥಿತಿ ಬಂದೊದಗಿದೆ.

ಅಭಿವೃದ್ಧಿ ಕಾರ್ಯದ ಯಶಸ್ಸು

ರಾಷ್ಟ್ರೀಯ ಅಭಿವೃದ್ಧಿಯನ್ನು ಕೈಗೊಳ್ಳುವ ಕೆಲಸ ಈಗ ನೆರವೇರಬೇಕಾದದ್ದು ಅತ್ಯಗತ್ಯ ಎಂದು ಎಲ್ಲರೂ ಒತ್ತಿ ಹೇಳುತ್ತಿರುವಾಗ ರಾಜಕೀಯ ಕ್ಷೇತ್ರದ ಗೊಂದಲದಲ್ಲಿಯೇ ಇನ್ನೂ ಕೆಲವು ವರ್ಷ ಕಾಲ ಮುಳುಗೇಳುತ್ತಿರುವುದು ಅನಿಷ್ಟ ಪರಿಣಾಮವನ್ನುಂಟುಮಾಡದಿರದು. ಪಂಚವಾರ್ಷಿಕ ಯೋಜನೆಯನ್ನು ಕೈಗೊಂಡು ಈಗಾಗಲೇ ಎರಡು ವರ್ಷಗಳು ಸಂದಿವೆ. ಎರಡುಸಾವಿರ ಕೋಟಿ ರುಪಾಯಿಗೂ ಹೆಚ್ಚು ಬಂಡವಳವನ್ನು ವೆಚ್ಚಮಾಡಿ ದೇಶವನ್ನು ಕೆಲವು ವಿಷಯಗಳ ಮಟ್ಟಿಗಾದರೂ ಸ್ವಾವಲಂಬಿಯಾಗಿಸುವ ನಿರ್ಧಾರವನ್ನು ಸರಕಾರ ಮಾಡಿರುತ್ತದೆ. ದೇಶೀಯರಿಂದ ನಮ್ಮ ಇಂಥ ಉಪಕ್ರಮಗಳು ಮಹತ್ವ ಸ್ಪಷ್ಟವಾಗಿ ಗೊತ್ತಾಗದಿದ್ದರೂ ವಿದೇಶಗಳಿಂದ ಬಂದ ಸಂದರ್ಶಕರು ಭಾರತವು ಸರಿಯಾದ ದಾರಿಯಲ್ಲಿ ಮುನ್ನಡೆಯುತ್ತಿರುವ ಬಗ್ಗೆ ತಮ್ಮ ಸಂತೋಷವನ್ನು ವ್ಯಕ್ತಗೊಳಿಸುತ್ತಿರುವರು. ಇವರೆಲ್ಲರೂ ಕೇಂದ್ರ ಸರಕಾರದ ಹೊಗಳು ಭಟರೆಂದು ಹೇಳಲಾಗದು. ಜನತೆಯೂ ಸರಕಾರದ ಉದ್ಯಮದಲ್ಲಿ ಸರ್ವ ವಿಧದ ಸಹಕಾರ ನೀಡುತ್ತಿದೆ ಎಂಬುದು ಈಗ ಹೆಚ್ಚು ಹೆಚ್ಚು ಬೆಳಕಿ

ಏಳು ವರುಷಗಳಲ್ಲಿ ಫಲ

ನಮ್ಮ ಪಿಗ್ಮಿ ಮುಡಿಸುದಾರರಲ್ಲಿ ದಿನವಿಡಿ ಕೆಲಸ ಮಾಡುವ ಶ್ರಮಜೀವಿಗಳು, ಅಂಗಡಿಗಾರರು, ವಕೀಲರು, ಡಾಕ್ಟರರು, ಎಂಜಿನಿಯರರು, ಬೇಸಾಯಗಾರರು, ಪಗಾರದಾರರು ಇತ್ಯಾದಿ ತರಗತಿಯವರಿರುವರು. ಅವರ ಪಿಗ್ಮಿ ಮುಡಿಪುಗಳು ಚಿಕ್ಕ ಮಟ್ಟ ಠೇವಣಾತಿಗಳಿಂದ ಪ್ರಾರಂಭವಾದುವು ಅಂದು ಇಲಿಯಂತಿದ್ದುವು ಇಂದು ಹುಲಿಯಂತಾಗಿವೆ. ಅಂತಹ ವಿವೇಕವುಳ್ಳ ದೂರ ದರ್ಶಿ ಸಂಪನ್ನ ಪಿಗ್ಮಿ ಠೇವಣಾತಿದಾರರ ಕೂಟಕ್ಕೆ ನೀವೂ ಕೂಡಾ ಸೇರಿ ಭಾಗ್ಯವಂತರಾಗ ಬೇಕಾಗಿ ಆಹ್ವಾನಿಸುತ್ತೇವೆ.

ಆಧಾರ ವಹಿವಾಟು ರೂ 5,00,000 00 ಕ್ಕೂ ಮಿಕ್ಕಿದ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925 ಹೆಡ್ ಆಫೀಸು: ಉಡುಪಿ

THE CANARA INDUSTRIAL & BANKING SYNDICATE LIMITED

Estd: 1925 H. O: UDIPI

ಅಭಿವೃದ್ಧಿ ಯೋಜನೆಗಳ ಗಣ್ಯ ಪ್ರಗತಿ

ಬ್ಯಾಂಕ ನೌಕರರಿಗೆ ನ್ಯಾಯಮಂಡಳ ಕೊಟ್ಟ ತೀರ್ಪು ತೃಪ್ತಿಕರವೆನಿಸಿಲ್ಲ

ಬಂದಿದೆ. ಉದಾಹರಣೆಗೆ ಪಂಚವಾರ್ಷಿಕ ಯೋಜನೆಯ ಆಶ್ರಯದಲ್ಲಿ ಕೈಗೊಂಡ ಜನಪದ ಅಭಿವೃದ್ಧಿ ಯೋಜನಾ ಕೇಂದ್ರಗಳ ಕೆಲಸವನ್ನು ತೆಗೆದುಕೊಳ್ಳಬಹುದು. ಈ ಕೇಂದ್ರಗಳಲ್ಲಿ ನೂರಕ್ಕೆ ೨೫ ರಷ್ಟು ಅತ್ಯುತ್ತಮ ರೀತಿಯಿಂದ ಕೆಲಸ ನಿರ್ವಹಿಸುತ್ತವೆಂದೂ ೩೦ ರಷ್ಟು ಉತ್ತಮ ರೀತಿಯಲ್ಲಿ ಮುನ್ನಡೆಯುತ್ತಿವೆಯಾಗಿಯೂ, ಉಳಿದವುಗಳಲ್ಲಿ ೩೫ ರಷ್ಟು ಸಾಧಾರಣ ಪ್ರಗತಿಯನ್ನು ತೋರಿಸಿವೆಎಂದೂ ವರದಿಗಳ ಮೇಲಿಂದ ತಿಳಿದು ಬರುತ್ತಿದೆ. ನೂರಕ್ಕೆ ಹತ್ತರಷ್ಟು ಕೇಂದ್ರಗಳಲ್ಲಿ ಮಾತ್ರ ಅಭಿವೃದ್ಧಿ ಕಾರ್ಯವು ಕುಂಠಿತವಾಗಿದೆ; ಇದಕ್ಕೆ ಜನತಾ ಸಹಕಾರವಿಲ್ಲವೆಂಬುದೊಂದೇ ಕಾರಣವಲ್ಲ. ಅಗತ್ಯವಿರುವ ಸಾಮಾನು ಸರಂಜಾಮುಗಳಪೂರೈಕೆ ಸಕಾಲದಲ್ಲಿಆಗದಿರುವುದು ಮುಂತಾದವುಗಳುಪ್ರಗತಿಯನ್ನು ತಡೆಹಿಡಿದವು. ಈಚೆಗೆ ಸೇರಿದ ಜನಪದ ಅಭಿವೃದ್ಧಿ ಯೋಜನಾ ಕೇಂದ್ರಗಳ ಅಧಿಕಾರಿಗಳ ಪರಿಷತ್ತಿನಲ್ಲಿ ಈ ಎಲ್ಲ ಪ್ರಶ್ನೆಗಳನ್ನು ವಿಮರ್ಶಿಸಲಾಯಿತು. ಈ ಯೋಜನೆಯಂತೆ ಕೈಗೊಂಡ ಕೆಲಸಗಳು ಆಕರ್ಷಕವೂ ಯಶಸ್ವಿಯೂ ಆದವೆಂದು ಶ್ರೀ ಡೇಯವರು ಹೇಳಿದುದರಿಂದ ನಮಗೆಲ್ಲರಿಗೂ ಸಂತೋಷ. ಜನತಾ ಸಹಕಾರವು ಕೆಲವು ಕೇಂದ್ರಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ದೊರೆಯುವಿಲ್ಲೆಂಬ ದೂರಿಗೆ ಒಂದೇ ಪರಿಹಾರ ಮಾರ್ಗವಿದೆ. ಅದೇನೆಂದರೆ ಕೇಂದ್ರದ ಅಧಿಕಾರಿಗಳು ಜನತೆಯೊಡನೆ ನಿಕಟ ಸಂಪರ್ಕವನ್ನು ಸ್ಥಾಪಿಸಿಕೊಳ್ಳುವಲ್ಲಿ ಹೆಚ್ಚು ಪ್ರಯತ್ನಶೀಲರಾಗಬೇಕು. ಈ ಯೋಜನೆಯನ್ನು ಕಾರ್ಯಕ್ರಮ ರೀತಿಯಲ್ಲಿ ನಿರ್ವಹಿಸಿದರೆ, ಅಪೇಕ್ಷಿತ ಲಾಭವನ್ನು ಪಡೆಯುವುದಕ್ಕೆ ಸಂದೇಹವಿಲ್ಲ.

ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು

ಹಳ್ಳಿಗರ ಜೀವನ ಮಟ್ಟವನ್ನು ಸುಧಾರಿಸುವ ಘನೋದ್ದೇಶದಿಂದ ಕೈಗೊಂಡ ಪ್ರಯತ್ನಗಳು ಯಶಸ್ಸು ಹೊಂದಿದಲ್ಲಿ, ಈಗಿರುವಂತೆ ಗ್ರಾಮಗಳು ನಿರ್ಜೀವ ಘಟಕಗಳಾಗಿ ಉಳಿಯಲಾರವು. ಅವು ಲವಲವಿಕೆಯಿಂದಲೂ ಚೈತನ್ಯದಿಂದಲೂ ತುಂಬಿ ತುಳುಕುವುದು ನಿಶ್ಚಯ. ಆಗ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಹೆಚ್ಚಿನ ಪ್ರಾಧಾನ್ಯ ತಾನಾಗಿ ಬರುತ್ತದೆ. ಜನತೆಯೊಡನೆ ನಿಕಟ ಸಂಪರ್ಕವನ್ನಿಟ್ಟುಕೊಳ್ಳುವ ಆಡಳಿತ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯತುಗಳಿಗಿಂತ ಉತ್ತಮವಾದುದು ಬೇರೇನೂ ಇಲ್ಲ. ಈ ಮಾತನ್ನು ಮಹಾತ್ಮಾ ಗಾಂಧೀಜಿಯವರು ಯಾವಾಗಲೂ ಒತ್ತಿ ಹೇಳುತ್ತಿದ್ದರು. ಈಗಿನ ಧುರೀಣರೂ ಈ ಅಭಿಪ್ರಾಯವನ್ನು ಪುರಸ್ಕರಿಸುವರು. ಜನತೆಯ ಪ್ರತ್ಯಕ್ಷದ ಸುಖ ಕಷ್ಟಗಳ ಪರಿಜ್ಞಾನವು ಆ ಹಳ್ಳಿಯ ಧುರೀಣರಿಗೇ ಅಧಿಕವಿರುವುದಲ್ಲದೆ, ಆ ಮತದಾರ ಕ್ಷೇತ್ರದ ಶಾಸನಸಭಾಸದಸ್ಯರಿಗಾಗಲೀ,ಆ ತಾಲೂಕಿನ ನೌಕರಸಿಬಂಧಿಗಳಿಗಾಗಲೀ ಇರುವುದು ಶಕ್ಯವಿಲ್ಲ.ಈ ದೃಷ್ಟಿಯಿಂದ ಭಾರತದಲ್ಲಿ ಪಂಚಾಯತು ರಾಜ್ಯವನ್ನು ಸ್ಥಾಪಿಸಬೇಕೆಂದು ಪ್ರತಿಪಾದಿಸಿದವರು ಅನೇಕ. ಆದರೆ ನಮ್ಮ ರಾಜ್ಯ ಘಟನೆಯಲ್ಲಿ ಇಂಥ ವ್ಯವಸ್ಥೆಯನ್ನು ಸಹಾನುಭೂತಿಯಿಂದ ನೋಡಿಲ್ಲ. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಅಸ್ತಿತ್ವ ಅಗತ್ಯವೆಂದು ಒಪ್ಪಿಕೊಂಡರೂ ಅವುಗಳು ಸರಕಾರದ ನಿಯಂತ್ರಣಕ್ಕೆ ಕಟ್ಟುಬಿದ್ದಿವೆ. ಅವುಗಳ ಹೊಣೆಗಾರಿಕೆಯು ಹೆಚ್ಚಿದ್ದರೂ-ಅದನ್ನು ಯಶಸ್ವಿಯಾಗಿ ಕೈಗೂಡಿಸಲು ಸಾಧ್ಯವಾಗುವಂತೆ ಅನುಕೂಲತೆಗಳನ್ನು ಒದಗಿಸಿರುವುದಿಲ್ಲ. ಮದ್ರಾಸಿನಲ್ಲಿ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಪರಿಷತ್ತು ಕೂಡಿದಾಗ ಈ ಎಲ್ಲ ಸಂಗತಿಗಳ ಕೂಲಂಕಷ ಚರ್ಚೆಯು ನಡೆಯಿತು. ಹಳ್ಳಿಗಳು ತಮ್ಮ ಯೋಗಕ್ಷೇಮವನ್ನು ತಾವೇ ನೋಡಿಕೊಳ್ಳಲು ಸಮರ್ಥವಾಗುವಂತೆ ಅವಕಾಶವನ್ನು ಕಲ್ಪಿಸಿಕೊಟ್ಟಲ್ಲಿ ಭಾರತವು ಕ್ರಾಂತಿಯನ್ನು ಅಪ್ಪಿಕೊಂಡಂತೆಯೇ ಸೈ. ಅಧಿಕಾರದ ವಿಕೇಂದ್ರೀಕರಣದಿಂದ ಅಧಿಕ ಪ್ರಯೋಜನವಿದೆ ಎಂಬುದರಿಂದ ಸ್ಥಾನಿಕ ಸಂಸ್ಥೆಗಳ ಹಕ್ಕು ಬಾಧ್ಯತೆಗಳನ್ನು ವ್ಯಾಪಕಗೊಳಿಸುವುದು ಅಪೇಕ್ಷಣೀಯ. ಗ್ರಾಮ ಪಂಚಾಯತುಗಳು ಕೇವಲ ಆಡಳಿತ ಘಟಕಗಳಾಗಿ ಮಾತ್ರ ಉಳಿಯದೆ ಗ್ರಾಮದ ಜನತೆಯನ್ನು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಮುನ್ನಡೆಸುವ ಸಂಸ್ಥೆಗಳಾಗಿಯೂ ದುಡಿದರೆ ಅದು ಹಿತಕರವಾದ ಪರಿಣಾಮವುಂಟು ಮಾಡುವುದು.

ಅತೃಪ್ತಿಕರ ತೀರ್ಮಾನ

ಕೇಂದ್ರ ಸರಕಾರವು ಮದ್ರಾಸು ಹೈಕೋರ್ಟಿನ ನಿವೃತ್ತ ನ್ಯಾಯಾಧೀಶ ಶ್ರೀ ಪಂಚಪಕೇಶ ಅಯ್ಯರರ ಅಧ್ಯಕ್ಷತೆಯಲ್ಲಿ ನೇಮಿಸಿದ್ದ ಔದ್ಯೋಗಿಕ ನ್ಯಾಯಮಂಡಳವು ಬ್ಯಾಂಕುಗಳ ನೌಕರರ ಬಗ್ಗೆ ನೀಡಿದ ಕೊಡುಗೆಯ ವಿವರಗಳು ಈಗ ತಾನೆ ಪ್ರಕಟಗೊಂಡಿವೆ. ಆದರೆ ಇದಕ್ಕೆ ದೊರೆತ ಪ್ರತಿಕ್ರಿಯೆ ಮಾತ್ರ ಸಮಾಧಾನಕರವಾಗಿಲ್ಲ. ನೌಕರರಿಗೆ ಈ ಕೊಡುಗೆಯಿಂದ ಇಲ್ಲಿಯ ತನಕ ದೊರೆಯುತ್ತಿದ್ದ ಸೌಕರ್ಯ ಸವಲತ್ತುಗಳು ಕಡಿಮೆಯಾದವೆಂದು ಅನಿಸಿದೆ. ಸಾಮಾನ್ಯವಾಗಿ ಬ್ಯಾಂಕುಗಳು ತಮ್ಮ ನೌಕರರನ್ನು ಚೆಲೋ ರೀತಿಯಲ್ಲಿ ನಡೆಸಿಕೊಂಡಿದ್ದು ಈ ಕೊಡುಗೆಯು ನೀಡುವ ಸುಖ ಸೌಲಭ್ಯಗಳಗಿಂತ ಹೆಚ್ಚು ಒಳ್ಳೆಯ ಅನುಕೂಲತೆಗಳನ್ನು ಒದಗಿಸಿ ಕೊಟ್ಟಿವೆ ಎಂದು ಬ್ಯಾಂಕ ಅಧಿಕಾರಿಗಳ ಹೇಳಿಕೆ ಇದೆ. ಬ್ಯಾಂಕ ನೌಕರರು ಈಗಿನ ಕೊಡುಗೆಯು ಬ್ಯಾಂಕು ಅಧಿಕಾರಿಗಳ ಪಕ್ಷಪಾತಿಯಾಗಿದೆಯೆಂದು ದೂರಿಕೊಂಡಿರುವರು. ಇದಕ್ಕೆ ಕಾರಣಗಳು ಇಲ್ಲದಿಲ್ಲ. ನೌಕರರ ದುಡಿಯುವ ವೇಳೆಯನ್ನು ಹೆಚ್ಚು ಮಾಡಲಾಗಿದೆ. ಬ್ಯಾಂಕುಗಳು ನೆಲಸಿರುವ ಸ್ಥಳವನ್ನು ಅನುಸರಿಸಿಯೂ ಅವುಗಳ ಬಂಡವಳವನ್ನು ಹೊಂದಿಕೊಂಡೂ ನೌಕರರಿಗೆ ದೊರಕುವ ಸಂಬಳವನ್ನು ವರ್ಗೀಕರಿಸಿದುದು ಕೆಲಸಗಾರರಿಗೆ ಹಿತವಾಗಿ ತೋರಿಲ್ಲ. ಬ್ಯಾಂಕು ಕೆಲಸಗಾರರಲ್ಲಿ ವರ್ಗಭೇದವನ್ನುಂಟುಮಾಡುವ ಔಚಿತ್ಯದ ಬಗ್ಗೆ ತೀವ್ರ ಭಿನ್ನಾಭಿಪ್ರಾಯವಿದೆ. ಇದರಂತೆ ತುಟ್ಟಿಭತ್ತೆಯನ್ನು ನಿರ್ಣಯಿಸಿದ ರೀತಿಯೂ ಸರಿಯಾಗಿಲ್ಲವೆಂದು ಆಕ್ಷೇಪವಿದೆ. ಮನೆ ಬಾಡಿಗೆಯ ಸಂಬಂಧದಲ್ಲಿ ಕೂಡ ನೌಕರರ ಅಂತಸ್ತನ್ನು ಹೊಂದಿಕೊಂಡು ತಾರತಮ್ಯ ಮಾಡಿದುದು ಸರಿಯಲ್ಲವೆಂದೆನಿಸುತ್ತದೆ. ನ್ಯಾಯಮಂಡಳವು ಸ್ವಾಭಾವಿಕವಾಗಿ ನೌಕರರ ಪಕ್ಷಪಾತಿಯೂ ಆಗಿರಬೇಕಾಗಿರುವಾಗ ಅದು ಬ್ಯಾಂಕು ಅಧಿಕಾರಿಗಳ ಹಿತರಕ್ಷಣೆಗೆ ಪ್ರಾಧಾನ್ಯ ಕೊಟ್ಟದ್ದು [illegible] ತೋರುವುದಿಲ್ಲ. ಬ್ಯಾಂಕು ನೌಕರರಿಗೆ ಈಗಿನ ಸೌಕರ್ಯ ಹಾಗು ಅನುಕೂಲತೆಗಳು ಅತೃಪ್ತಿಕರವಿವೆ ಎಂಬುದನ್ನು ಮನಗಂಡು, ಸಮಾಧಾನಕರವಾಗಿ ಈ ಪ್ರಶ್ನೆಯನ್ನು ಬಗೆಹರಿಸುವ ಉದ್ದೇಶದಿಂದ ನ್ಯಾಯಮಂಡಳ ನೇಮಕಗೊಂಡಿತು. ಆದರೆ ಹೆಚ್ಚಿನ ನೌಕರರಿಗೆ ಈ ಮುಂಚೆ ದೊರೆತ ಸೌಕರ್ಯಗಳೂ ಇನ್ನು ಮುಂದೆ ದೊರೆಯದಂತೆ ಈ ಕೊಡುಗೆ ಇದೆ. ಹಣಕಾಸಿನ ಹಾಗು ವಾಣಿಜ್ಯ ವ್ಯವಹಾರದ ಕ್ಷೇತ್ರದಲ್ಲಿ ಮಹತ್ವದ ಸ್ಥಾನ ಪಡೆದಿರುವ ಬ್ಯಾಂಕುಗಳು ತಮ್ಮ ಕೆಲಸವನ್ನು ಚೆನ್ನಾಗಿ ನಡೆಸಿಕೊಂಡು ಹೋಗಲಿಕ್ಕೆ ಅಲ್ಲಿ ದುಡಿಯುವ ನೌಕರರೇ ಕಾರಣ. ಅವರ ಹಿತವನ್ನು ದುರ್ಲಕ್ಷಿಸುವ ಯಾವ ಕೊಡುಗೆಯಾದರೂ ನ್ಯಾಯಸಮ್ಮತವೆಂದು ಹೇಳಲು ಬಾರದು.

ಬರ್ಮಾದ ಗೆಳೆತನ

ಬರ್ಮಾ ದೇಶದಿಂದ ಭಾರತಕ್ಕೆ ವಿನಿಮಯದ ತಳಹದಿಯ ಮೇಲೆ ಅಕ್ಕಿಯನ್ನು ತರಿಸುವ ಕುರಿತು ಮಾತುಕತೆಗಳು ನಡೆದಿವೆ. ಭಾರತದ ಆಹಾರ ಮಂತ್ರಿ ಶ್ರೀ ಕಿದ್ವಾಯಿ ಮತ್ತು ವಾಣಿಜ್ಯ ಮಂತ್ರಿ ಶ್ರೀ. ದ. ಪ. ಕರಮರಕರರು ಮೊನ್ನೆ ರಂಗೂನಿಗೆ ಭೇಟಿಕೊಟ್ಟು ಹಿಂತಿರುಗಿದರು. ಸುಮಾರು ಐದು ಲಕ್ಷ ಟನ್ನುಗಳಷ್ಟು ಅಕ್ಕಿಯನ್ನು ಪಡೆಯುವ ಇಚ್ಛೆ ಭಾರತ ಸರಕಾರಕ್ಕಿದೆ. ಭಾರತಕ್ಕೆ ಬರ್ಮಾದಿಂದ ಅಕ್ಕಿಯ ಸರಬರಾಜು ಬಹಳ ಹಿಂದಿನಿಂದ ನಡೆಯುತಿತ್ತು. ದ್ವಿತೀಯ ಮಹಾಯುದ್ಧದ ಪರಿಣಾಮವಾಗಿ ಈ ಪೂರೈಕೆಯು ನಡುವೆಯೇ ಕಟ್ಟಾಯಿತು ಈಗ ಬರ್ಮಾವು ಸ್ವಾತಂತ್ರ್ಯವನ್ನು ಪಡೆದ ಒಂದು ರಾಷ್ಟ್ರವಾಗಿದೆ; ಮತ್ತು ಭಾರತದ ಆಪ್ತ ಸ್ನೇಹಿತನಂತಿದೆ. ಬರ್ಮಾದೊಡನೆ ಇರುವಷ್ಟು ಸ್ನೇಹಮಯ ಸಂಬಂಧವು ಭಾರತಕ್ಕೆ ಬೇರೆ ಯಾವುದೇ ರಾಷ್ಟ್ರದ ಕೂಡೆ ಇರುವುದಿಲ್ಲ. ಈ ಮಾತನ್ನು ಪ್ರಸ್ತಾಪಿಸುತ್ತಾ ಮಂತ್ರಿದ್ವಯರು ತಾವು ಕೇವಲ ಅಕ್ಕಿಯ ಕುರಿತು ಮಾತುಕತೆ ನಡೆಸುವ ವ್ಯಾಪಾರಿಗಳಂತೆ ಬಂದಿಲ್ಲವೆಂದೂ ಪರಸ್ಪರ ಸ್ನೇಹದ ಬೆಸುಗೆಯನ್ನು ಕಾಪಾಡಿಕೊಳ್ಳುವ ಇಚ್ಛೆಯನ್ನು ತಳೆದಿರುವುದಾಗಿಯೂ ಹೇಳಿದರು. ಭಾರತದ ಪ್ರಧಾನಿ ನೆಹರೂರವರು ಬರ್ಮೀಯರ ಯೋಗಕ್ಷೇಮದ ಕುರಿತು ಮತ್ತು ಗೆಳೆತನದ ಕುರಿತು ತುಂಬ ಆಸ್ಥೆಯನ್ನು ತೋರಿಸುತ್ತಿರುವ ಸಂಗತಿ ಎಲ್ಲರಿಗೂ ವೇದ್ಯವಿದೆ. ಭಾರತದ ಸೌಜನ್ಯಕ್ಕೆ ತಕ್ಕಂತೆ ಬರ್ಮಾ ಕೂಡ ನಡೆದುಕೊಂಡಿದೆ. ಬರ್ಮಾ ಪತ್ರಿಕೆಗಳು ಭಾರತಕ್ಕೆ ಅಕ್ಕಿ ಕೊಡುವ ಸಂಬಂಧದಲ್ಲಿ ಅನುಕೂಲಾಭಿಪ್ರಾಯವನ್ನು ಪ್ರಕಟಿಸಿರುವುವು. ಸದ್ಯದಲ್ಲಿಯೇ ಬರ್ಮಾ ಶಿಷ್ಟ ಮಂಡಳವೊಂದು ಭಾರತಕ್ಕೆ ಬರಲಿದೆ. ಭಾರತಕ್ಕೆ ಕೊಡುವ ಅಕ್ಕಿಯ ಬದಲು ಹಣವು, ಹತ್ತಿ, ಹಾಗು ಯಂತ್ರೋಪಕರಣಗಳನ್ನು ಪಡೆಯುವ ಸಂಬಂಧದಲ್ಲಿ ಅದು ನಿರ್ಣಯಕ್ಕೆ ಬರುವುದು..

1952

23RD ANNUAL REPORT

NEW BUSINESS COMPLETED	over	Rs.	30,36,000
PREMIUM & OTHER INCOME	,,	Rs.	8,01,000
LIFE AND RESERVE FUNDS	,,	Rs.	27·99,000
TOTAL CLAIMS PAID TODATE	,,	Rs.	7·80,000
BUSINESS IN FORCE	,,	Rs.	1,35,00,000

RENEWAL EXPENSE RATIO 17·7%

INTEREST EARNED 3·47%

* * * * * * *

WANTED in all important centres enterprising applicants for FIELD appointments. Attractive rates of commission or salary offered.

'PRUDENT PEOPLE PREFER POPULAR POLICIES'

Popular Insurance Company Ltd.

'Popular Buildings', MANGALORE–1.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸುರಕ್ಷಿತತೆ, ಭದ್ರತೆ ಮತ್ತು ಸೇವಾತತ್ಪರತೆ
ಇವುಗಳಿಗೆ
ತವರುಮನೆಯಂತಿದ್ದು, ನಿಮ್ಮೆಲ್ಲರ ಸ್ನೇಹ, ಸಹಕಾರಗಳನ್ನು
ಅಪೇಕ್ಷಿಸುವ ಬೇಂಕು.

THE CANARA BANKING CORPORATION LTD.
Estd: 1906] [H. O.: UDIPI, (S. India)

ನವಯುಗ

ಉಡುಪಿ, ಗುರುವಾರ ೩೦-೪-'೫೩

ಧೋರಣೆಯ ಪುನರ್ವಿಮರ್ಶೆ

ಮೈಸೂರು ಸರಕಾರವು ಈಚೆಗೆ ಕೈಗೊಂಡ ನಿರ್ಣಯವೊಂದು ಪಾನಪ್ರತಿಬಂಧದ ಸಂಗತಿಯಲ್ಲಿ ನಾವು ತಳೆಯಬೇಕಾದ ಧೋರಣೆ ಏನಿರಬೇಕೆಂಬುದನ್ನು ಪುನರ್ವಿಮರ್ಶಿಸುವ ರೀತಿಯಲ್ಲಿದೆ. ೧೯೪೭ರಲ್ಲಿ ಮೈಸೂರಲ್ಲಿ ಕಾಂಗ್ರೆಸ್ಸೇತರ ಸರಕಾರವು ಇದ್ದಾಗ ಮುಚ್ಚಿದ್ದ ೧೫೦ ಮದ್ಯದಂಗಡಿಗಳನ್ನು ಈಗಿರುವ ಕಾಂಗ್ರೆಸ್ ಸರಕಾರವು ತೆರೆಯಬೇಕೆಂದು ನಿರ್ಧರಿಸಿದೆ. ಈ ಸಂಗತಿಯನ್ನು ಕೇಳಿ ಪಾನಪ್ರತಿಬಂಧದಲ್ಲಿ ಶ್ರದ್ಧೆ ಮತ್ತು ಆಸ್ಥೆ ಇರುವ ಎಲ್ಲರಿಗೂ ಸಖೇದಾಶ್ಚರ್ಯವಾಗುವುದು ಸ್ವಾಭಾವಿಕ. ಸರಕಾರಕ್ಕೆ ಈ ಮದ್ಯದಂಗಡಿಗಳ ಮೂಲಕ ೧೯೫೩-೫೪ನೇ ಸಾಲಿನಲ್ಲಿ ೧೭೧ ಲಕ್ಷ ರೂಪಾಯಿ ಆದಾಯ ದೊರೆಯುವ ನಿರೀಕ್ಷೆ ಇದೆ. ಮೈಸೂರಿನ ಐದು ಜಿಲ್ಲೆಗಳಲ್ಲಿ ಈಗಾಗಲೇ ಪಾನಪ್ರತಿಬಂಧವು ಜಾರಿಯಲ್ಲಿ ಇರುವಾಗ ಈ ಮೊದಲು ಮುಚ್ಚಿದ್ದ ಮದ್ಯದಂಗಡಿಗಳನ್ನು ಮರಳಿ ತೆರೆಯುವ ವಿಚಾರ ವಿರೋಧಾಭಾಸಕ್ಕೆ ಎಡೆಮಾಡಿಕೊಡುವುದು. ಮಂತ್ರಿಗಳು ಸರಕಾರದ ನಿಲುವನ್ನು ಸ್ಪಷ್ಟೀಕರಿಸುತ್ತಾ, ಪಾನಪ್ರತಿಬಂಧವಿಲ್ಲದ ಕಡೆಯಲ್ಲಿ ಮದ್ಯದಂಗಡಿಗಳನ್ನು ಮುಚ್ಚುವುದು ವ್ಯರ್ಥವೆಂದಿರುವರು. ಇದು ಮೊದಲೇ ಹೇಳಿದಂತೆ ಮಹತ್ವದ ಧೋರಣೆಯ ಪ್ರಶ್ನೆಯಾಗಿರುತ್ತದೆ. ನಾವು ಪೂರ್ವಗ್ರಹಪೀಡಿತವಾದ ಭಾವನೆಗೊಳಗಾಗದೆ ನಿರ್ವಿಕಾರ ಚಿತ್ತದಿಂದ ಈ ಗಂಭೀರ ಪ್ರಶ್ನೆಯನ್ನು ವಿಚಾರಿಸಬೇಕು.

ಪಾನಪ್ರತಿಬಂಧವನ್ನು ಜ್ಯಾರಿಗೆ ತರುವಲ್ಲಿ ಈ ಮುಂಚಿನ ಸರಕಾರ ಮತ್ತು ಈಗಿನ ಸರಕಾರ ಅನುಸರಿಸಿದ ಧೋರಣೆಯ ತಳಹದಿಯಲ್ಲಿ ತಾರತಮ್ಯವಿದೆ. ಕಾಂಗ್ರೆಸ್ಸೇತರ ಸರಕಾರವು ಮದ್ಯದಂಗಡಿಗಳಲ್ಲಿ ವರ್ಷ ವರ್ಷವೂ ನೂರಕ್ಕೆ ಇಪ್ಪತ್ತರಷ್ಟನ್ನು ಮುಚ್ಚಬೇಕೆಂದು ನಿರ್ಣಯಿಸಿದರೆ, ಕಾಂಗ್ರೆಸು ಮದ್ರಾಸು ರಾಜ್ಯದಲ್ಲಿ ಮಾಡಿದಂತೆ, ಒಂದರಹಿಂದೊಂದು ಜಿಲ್ಲೆಯನ್ನು ಪಾನಪ್ರತಿಬಂಧಕ್ಕೆ ಒಳಗಾಗಿಸಲು ನೋಡಿತು. ಆದರೆ ಹೀಗೆ ಮಾಡುವಾಗ ಒಮ್ಮೆ ಮುಚ್ಚಿದ ಮದ್ಯದಂಗಡಿಗಳನ್ನು ಮರಳಿ ತೆರೆಯಬೇಕೆಂದೇನು ಇರಲಿಲ್ಲ. ಈಗ ಅಂಥ ಕ್ರಮವನ್ನು ಕೈಗೊಂಡುದರಿಂದ ಮದ್ಯಪಾನಕ್ಕೆ ಉತ್ತೇಜನವನ್ನು ಕೊಟ್ಟಂತೆ ಆಗಿದೆ. ಸದ್ಯಕ್ಕೆ ಸಂಬಳದ ದಿನಗಳಲ್ಲಿ ಮೈಸೂರಲ್ಲಿ ಮದ್ಯದಂಗಡಿಗಳನ್ನು ಮುಚ್ಚುತ್ತಿರುವರು. ಇನ್ನು ಮುಂದೆ ಅವನ್ನು ತೆರೆದಿಡಲಾಗುವುದು. ಸಾಲದುದಕ್ಕೆ ಬೆಂಗಳೂರಿನಲ್ಲಿ ಹೊಸತಾಗಿ ಒಂದು ಬೀರ್ ಮದ್ಯದ ಅಂಗಡಿಯನ್ನು ತೆರೆಯಲಾಗುವುದು ಎಂದು ಮಂತ್ರಿಗಳು ಹೇಳಿರುವುದನ್ನು ನೋಡಿದರೆ, ಪಾನಪ್ರತಿಬಂಧದ ಸದಾಶಯಗಳನ್ನು ಗಾಳಿಗೆ ತೂರಿದಂತೆ ತೋರುತ್ತದೆ. ಪಾನಪ್ರತಿಬಂಧವನ್ನು ಜ್ಯಾರಿಗೆ ತರುವುದಕ್ಕೆ ಸರಕಾರವು ಪ್ರಯತ್ನಿಸಬೇಕೆಂದು ರಾಜ್ಯಘಟನೆಯ ನಿರ್ದೇಶಕ ತತ್ವಗಳಲ್ಲಿ ಹೇಳಿದೆ. ಈ ಸೂತ್ರಗಳಲ್ಲಿ ವಿವರಿಸಿದ ಸಂಗತಿಗಳೆಲ್ಲವನ್ನೂ ಜ್ಯಾರಿಗೆ ತರಲೇ ಬೇಕೆಂದು ಬಲಾತ್ಕರಿಸುವುದಕ್ಕೆ ಅವಕಾಶವಿಲ್ಲದಿದ್ದರೂ ಕಲ್ಯಾಣ ರಾಷ್ಟ್ರದ ಧ್ಯೇಯವನ್ನು ಇಟ್ಟುಕೊಂಡಿರುವ ರಾಜ್ಯ ಈ ತತ್ವಗಳನ್ನು ಆದಷ್ಟು ಬೇಗನೆ ಕಾರ್ಯರೂಪಕ್ಕೆ ಇಳಿಸಲು ನೋಡಬೇಕೆಂಬುದು ಸುಸ್ಪಷ್ಟವಿದೆ. ಹೀಗಿರುತ್ತಾ ಒಂದುಸಲ ಮುಚ್ಚಿದ್ದ ಮದ್ಯದಂಗಡಿಗಳನ್ನು ಮರಳಿ ಗುತ್ತಿಗೆಗೆ ಕೊಡುವುದೆಂದರೆ ಮುಂದಿಟ್ಟ ಹೆಜ್ಜೆಯನ್ನು ಹಿಂದೆಗೆದು ಕೊಂಡಂತಾಗುವುದು. ಇದು ಸರಕಾರದ ದೃಢ ಸಂಕಲ್ಪದ ಕುರಿತು ತಪ್ಪು ಅಭಿಪ್ರಾಯಕ್ಕೆ ಆಸ್ಪದ ಮಾಡಿಕೊಟ್ಟಲ್ಲಿ ಆಶ್ಚರ್ಯವಿಲ್ಲ. ಇದಕ್ಕೂ ಹೆಚ್ಚು ದುಃಖದ ಸಂಗತಿಯೆಂದರೆ ಜನತೆಯು ಈ ಮದ್ಯದಂಗಡಿಗಳು ತೆರೆಯುವುದನ್ನು ಬಯಸುತ್ತಿದೆ ಎಂಬ ಮಂತ್ರಿಗಳ ಹೇಳಿಕೆ. ಪಾನಪ್ರತಿಬಂಧದ ಸಂಗತಿಯಲ್ಲಿ ಜನತೆಯು ಅನುಕೂಲವಾಗಿದೆಯೋ ವಿರುದ್ಧವಾಗಿದೆಯೋ ಎಂಬುದನ್ನು ಕ್ರೋಢೀಕರಿಸಿ ತಿಳಿಯಲು ಬಂದಿಲ್ಲ. ಆದರೆ ಮದ್ಯಪಾನವು ವ್ಯಕ್ತಿಯನ್ನು ನೈತಿಕ ಪತನಕ್ಕೆ ಈಡು ಮಾಡುವುದೆಂದೂ ತತ್ಪರಿಣಾಮವಾಗಿ ಆರ್ಥಿಕ, ಸಾಮಾಜಿಕ ಕೇಡುಗಳು ಸಂಭವಿಸುವುವೆಂದೂ ಎಲ್ಲ ವಿವೇಕಶೀಲರೂ ಒಪ್ಪಿ, ಪಾನಪ್ರತಿಬಂಧಕ್ಕೆ ಪ್ರೋತ್ಸಾಹ ಕೊಡುತ್ತಿರುವರು. ಬಡ ಕುಟುಂಬಗಳಲ್ಲಿ ಸಂತೋಷ ನೆಲೆನಿಲ್ಲುವಂತೆ ಪಾನಪ್ರತಿಬಂಧ ನೆರವಿತ್ತಿದೆ ಎಂದು ಪ್ರಶಂಸೋದ್ಗಾರಗಳನ್ನು ಸಾಮಾನ್ಯವಾಗಿ ಕೇಳುತ್ತೇವೆ. ಅಂಥದರಲ್ಲಿ ಆರ್ಥಿಕ ತಾಪತ್ರಯಗಳು ಸರಕಾರದ ಮಟ್ಟಿಗೆ ಗೌಣವಾಗಿ ಕಾಣಬೇಕಲ್ಲದೆ- ಅವುಗಳಿಗೆ ಪ್ರಾಧಾನ್ಯ ಸಲ್ಲುವುದಕ್ಕೆ ನ್ಯಾಯವಿಲ್ಲ. ಪಾನಪ್ರತಿಬಂಧ ಇಲ್ಲದಕಡೆ ಜ್ಯಾರಿಗೆ ತರದಿದ್ದರೂ ಚಿಂತಿಲ್ಲ ಇದ್ದಸ್ಥಳಗಳಲ್ಲಿ ಅದನ್ನು ಬಿಟ್ಟುಗೊಡುವುದು ಶ್ರೇಯಸ್ಕರವಲ್ಲ. ನಮ್ಮನ್ನು ಅಪಮಾನಕ್ಕೀಡುಮಾಡುವ ಹವ್ಯಾಸಗಳಲ್ಲಿ ತೊಡಗದೆ, ಉನ್ನತಮಟ್ಟವನ್ನು ಪ್ರತಿಯೊಂದೂ ಕ್ಷೇತ್ರದಲ್ಲಿ ಕಾಯ್ದುಕೊಳ್ಳುವುದರಲ್ಲಿ ಶೋಭೆ ಇದೆ. ನ್ಯಾಯಮೂರ್ತಿ ವಾಂಚೂರವರು ಸದ್ಯದಲ್ಲಿಯೇ ಅಸ್ತಿತ್ವಕ್ಕೆ ಬರಲಿರುವ ಆಂಧ್ರರಾಜ್ಯವು ಆರ್ಥಿಕ ಭಾರದಿಂದ ಚೇತರಿಸಿಕೊಳ್ಳಲು ಪಾನಪ್ರತಿಬಂಧವನ್ನು ಕಿತ್ತೊಗೆಯಬೇಕೆದು ಸಲಹೆ ಮಾಡಿರುವರು. ಇಂಥ ಅನುಚಿತ ಸೂಚನೆಗಳನ್ನು ಭಾವನಾವಶರಾಗಿ ನಿಚಾರಿಸದೆ, ಬಹುಜನರ ಹಿತದೃಷ್ಟಿಯಿಂದ ತೂಗಿ ನೋಡಬೇಕು.

ಬರ್ಮಾದಲ್ಲಿ ರಾಷ್ಟ್ರೀಯ ಚೀನೀ ಸೈನ್ಯ

ನಿಷ್ಕ್ರಮಣವನ್ನು ಒತ್ತಾಯಿಸುವ ಗೊತ್ತುವಳಿಯ ಸ್ವೀಕಾರ

ಸಂಯುಕ್ತ ರಾಷ್ಟ್ರ ಸಂಘದ ಮುಂದೆ ಬರ್ಮಾವು ತನ್ನ ನೆಲದಲ್ಲಿ ದಾಳಿ ನಡೆಸುತ್ತಿರುವ ರಾಷ್ಟ್ರೀಯ ಚೀನೀ ಸೈನಿಕರ ಸಂಬಂಧದಲ್ಲಿ ತಂದ ದೂರಿನ ವಿಚಾರಣೆಯು ನಡೆದು, ಬರ್ಮಾದ ಪ್ರಯತ್ನ ಸಾಕಷ್ಟು ಒಳ್ಳೆಯ ಫಲವನ್ನು ಕೊಟ್ಟಿದೆ. ರಾಷ್ಟ್ರಸಂಘವು ಒಂದು ಗೊತ್ತುವಳಿಯನ್ನು ಸ್ವೀಕರಿಸಿ, ಬರ್ಮಾದ ಸಾರ್ವಭೌಮಾಧಿಕಾರವಿರುವ ನೆಲದಲ್ಲಿ ಪರಕೀಯ ಸೈನ್ಯವಿರಬಾರದೆಂಬ ತತ್ವವನ್ನು ಮನ್ನಿಸಿದೆ. ಅಂತೆಯೇ ಬರ್ಮಾದಲ್ಲಿರುವ ಎಲ್ಲ ವಿದೇಶೀ ಸೈನಿಕರನ್ನು ನಿಃಶಸ್ತ್ರೀಕರಿಸಿ ಸ್ಥಾನಬದ್ಧತೆಯಲ್ಲಿ ಇಡಬೇಕು, ಇಲ್ಲವೆ ಹೊರ ಸಾಗಿಸಬೇಕೆಂದು ಈ ಗೊತ್ತುವಳಿಯು ಹೇಳುತ್ತದೆ. ರಾಜಕೀಯ ಸಮಿತಿಯ ಮುಂದೆ ಇದಕ್ಕೆ ಮುಂಚೆ ಅರ್ಜೆಂಟೀನಾ ಮಂಡಿಸಿದ ಒಂದು ಗೊತ್ತುವಳಿ ಇದ್ದಿತು: ಅದರಲ್ಲಿ ಸಂಬಂಧಿಸಿದ ರಾಷ್ಟ್ರಗಳು ನೇರಾಗಿ ಮಾತುಕತೆಗಳನ್ನು ನಡೆಸಿ ಸಮಸ್ಯೆಯನ್ನು ಪರಿಹರಿಸಿಕೊಳ್ಳಬೇಕೆಂದು ಇದ್ದಿತು. ಆದರೆ ಬರ್ಮಾದ ದೂರನ್ನು ಮೂಲೆಗುಂಪಾಗಿಸುವ ಪ್ರಯತ್ನದಂತೆ ಈ ಗೊತ್ತುವಳಿ ಕಂಡುಬರುತ್ತದೆ. ಬರ್ಮಾವಿಗಾಗಲೀ ಆದರ ದೂರನ್ನು ಸಮರ್ಥಿಸಿ ಮಾತನಾಡಿದ ಭಾರತದಂಥ ಇತರ ರಾಷ್ಟ್ರಗಳಿಗಾಗಲೀ ಇಂಥ ಗೊತ್ತುವಳಿ ಸಮಾಧಾನವನ್ನು ತರುವಂತಿಲ್ಲ. ಆದ ಕಾರಣ ಭಾರತದ ಶ್ರೀ ಕೃಷ್ಣ ಮೆನನ್ನ ಮತ್ತು ಕೆಲವರು ಅರ್ಜೆಂಟೀನಾದ ಮೂಲಕ ಈಗ ಪಾಸಾದ ಗೊತ್ತುವಳಿಯನ್ನು ಮಂಡಿಸಿ, ಬರ್ಮಾದ ದೂರಿಗೆ ಅಗತ್ಯವಾಗಿ ದೊರಕಬೇಕಿದ್ದ ಸ್ಥಾನವನ್ನು ಗಳಿಸಿ ಕೊಟ್ಟರು.

ಗೊತ್ತುವಳಿಯ ಆಶಯ

ಗೊತ್ತುವಳಿಯಲ್ಲಿ ರಾಷ್ಟ್ರೀಯ ಚೀನೀ ಸೈನಿಕರೆಂಬ ಶಬ್ದಗಳ ಸ್ಥಾನದಲ್ಲಿ ವಿದೇಶೀ ಸೈನಿಕರೆಂಬ ಶಬ್ದವನ್ನು ಪ್ರತಿಕ್ಷೇಪಿಸಿರುವುದು ಜಾಣತನವಾಗಿದೆ. ಬರ್ಮಾವಿಗೆ ಈ ಗೊತ್ತುವಳಿಯು ಸಂಪೂರ್ಣ ಸಮಾಧಾನಕರವೆನಿಸದುದಕ್ಕೆ ರಾಷ್ಟ್ರೀಯ ಚೀನಾವನ್ನು ಹೆಸರೆತ್ತಿ ದೋಷಿಯಾಗಿ ಮಾಡದಿದ್ದುದೇ ಕಾರಣ. ಆದರೆ ಉಳಿದ ರಾಷ್ಟ್ರಗಳು ಗೊತ್ತುವಳಿಯನ್ನು ಸಮರ್ಥಿಸಿ ಮಾಡಿದ ಭಾಷಣಗಳನ್ನು ನೋಡಿದಲ್ಲಿ ಪ್ರತಿಯೊಂದು ರಾಷ್ಟ್ರಕ್ಕೂ ರಾಷ್ಟ್ರೀಯ ಚೀನಾವೇ ಅಪರಾಧಿಸ್ಥಾನದಲ್ಲಿದೆಂಬ ಸಂಗತಿ ವೇದ್ಯವಾಗಿದೆ ಎಂಬುದು ಸ್ಪಷ್ಟವಾಗಿ ತೋರುತ್ತದೆ. ರಾಷ್ಟ್ರೀಯ ಚೀನಾವನ್ನು ಹೆಸರೆತ್ತಿ ಆಕ್ರಮಣಕಾರಿ ಎಂದು ಘೋಷಿಸುವುದರಿಂದ ಅಮೇರಿಕಾವಿಗೆ ಮನನೋಯುವ ಸಂಭವ ಬಹಳ ಹೆಚ್ಚು. ಅಮೇರಿಕಾ ಇನ್ನೂ ತನ್ನ ಅಪ್ಪುಗೆಯಲ್ಲಿಟ್ಟುಕೊಂಡಿರುವ ಚ್ಯಾಂಗ ಕೈಶೇಕರ ರಾಷ್ಟ್ರೀಯ ಚೀನಾದ ತೇಜೋವಧೆಯನ್ನು ರಾಷ್ಟ್ರಸಂಘ ಮಾಡುವುದು ಹಿತಕರವೆನಿಸುತ್ತಿರಲಿಲ್ಲ. ಇದನ್ನು ಮುಂದಾಗಿ ಕಂಡುಕೊಂಡು, ಹೊಸ ಗೊತ್ತುವಳಿಯನ್ನು ಮಂಡಿಸಿದುದರಿಂದ ಎಲ್ಲವೂ ಸುಗಮವಾಗಿ, ಒಳ್ಳೆಯದರಲ್ಲಿ ಪರಿಣಮಿಸಿತು. ರಶಿಯಾ ಕೂಡ ಈ ಗೊತ್ತುವಳಿಗೆ ಬೆಂಬಲ ಕೊಟ್ಟು, ಬಹುಸಂಖ್ಯಾಕರ ಸಾಲಿಗೆ ಬಂದಿತು. ಈ ವಿವಾದದಲ್ಲಿ ಬಿದ್ದಿರುವ ಬರ್ಮಾ ಮತ್ತು ರಾಷ್ಟ್ರೀಯ ಚೀನಾಗಳು ಮಾತ್ರ ಮತದಾನ ಮಾಡದೆ ಉಳಿದವು. ಭಾರತವು ಬರ್ಮಾದ ದೂರಿಗೆ ನಿಃಸಂದಿಗ್ಧವಾದ ಬೆಂಬಲವನ್ನು ಕೊಟ್ಟಿತು. ರಾಜಕೀಯ ಸಮಿತಿಯಲ್ಲಾದಂತೆ ಸಾಮಾನ್ಯ ಅಧಿವೇಶನದಲ್ಲಿಯೂ ಗೊತ್ತುವಳಿ ಒಮ್ಮತದಿಂದ ಅಂಗೀಕರಿಸಲ್ಪಟ್ಟಿತು.

ನಿರ್ಗಮನ ಕಾರ್ಯ

ರಾಷ್ಟ್ರೀಯ ಚೀನಾವು ಬರ್ಮಾದಲ್ಲಿರುವ ಜನರಲ್ ಲೀಮಿ ಮತ್ತು ಅವರ ಕೈಕೆಳಗೆ ಇರುವರೆಂದು ಹೇಳಲಾದ ೧೨೦೦೦ ಜನರ ಮೇಲೆ ತನ್ನದೇನೂ ಹತೋಟಿ ಇಲ್ಲವೆಂದೂ ತನಗೂ ಅವರಿಗೂ ಸಂಬಂಧವೇ ಇಲ್ಲವೆಂದೂ ಹೇಳಿದೆ. ಹಾಗೆಂದು ಅವರನ್ನು ಫೊರ್ಮೋಸಾವಿಗೆ ವಾಪಸು ತರಿಸುವ ವಿಚಾರದಲ್ಲಿ ತನ್ನ ಅನುಕೂಲ ಮತವನ್ನು ವ್ಯಕ್ತಗೊಳಿಸಿದೆ. ಇದರಿಂದ ಈ ದಾಳಿಕಾರರಿಗೂ ರಾಷ್ಟ್ರೀಯ ಚೀನಾಕ್ಕೆ ಒಂದಲ್ಲ ಒಂದು ರೀತಿಯ ಸಂಬಂಧವಿದೆ ಎಂಬುದು ಗೊತ್ತಾಗುತ್ತದೆ. ಬರ್ಮಾವು ಈ ಆಕ್ರಮಣಕಾರೀ ಸೈನಿಕರನ್ನು ನಿಃಶಸ್ತ್ರೀಕರಿಸಿ ಸ್ಥಾನಬದ್ಧತೆಯಲ್ಲಿಡಲು ಬಯಸುವುದಿಲ್ಲ. ಏಕೆಂದರೆ ಈ ಪರಕೀಯರ ಹೊಟ್ಟೆ ತುಂಬಿಸುವ ಜವಾಬ್ದಾರಿಯನ್ನು ಅನಿಶ್ಚಿತ ಅವಧಿಯ ವರೆಗೆ ಹೊರಲು ಅದು ಸಿದ್ಧವಿಲ್ಲ. ಜನರಲ್ ಲೀಮಿಯವರ ಸೈನ್ಯವು ಬರ್ಮಾದಿಂದ ಕಾಲ್ತೆಗೆಯಬೇಕೆಂಬುದೇ ಬರ್ಮಾ ಸರಕಾರದ ಅಪೇಕ್ಷೆ. ಈ ನಿರ್ಗಮನ ಕಾರ್ಯವು ಸುಗಮವಾಗಬೇಕೆಂದು ಬರ್ಮಾವು ನೆರೆಯ ಥ್ಯಾಯ್ ಲೇಂಡಿನ ಕೂಡೆ ಈಗ ಸಂಧಾನಕ್ಕೆ ತೊಡಗಿದೆ. ಬರ್ಮಾದಲ್ಲಿರುವ ಹನ್ನೆರಡು ಸಾವಿರ ದಾಳಿಕಾರರಲ್ಲಿ ಎಲ್ಲರೂ ರಾಷ್ಟ್ರೀಯ ಚೀನೀ ಸೈನಿಕರು ಆಗಿರಲಿಕ್ಕಿಲ್ಲ. ಕೆಲವರಾದರೂ ಬರ್ಮಾಯ ಕ್ರಾಂತಿಕಾರರು ಇರಬಹುದು. ಜನರಲ್ ಲೀಮಿಯವರ ಕೂಡೆ ಸೇರಿ ಈ ಕ್ರಾಂತಿಕಾರಿಗಳು ಬರ್ಮಾ ಸರಕಾರದ ವಿರುದ್ಧ ಕತ್ತಿಕಟ್ಟುವ ಹವ್ಯಾಸಕ್ಕೆ ಬಿದ್ದಿರಬಹುದು. ಅಂಥವರು ಜನರಲ್ ಲೀಮಿಯವರೊಡನೆ ಪೆಟ್ಟಿಗೆ ಕಟ್ಟುವುದು ಸಂಶಯದ ವಿಷಯ.

ಅಮೇರಿಕಾದ ಹೊಣೆ

ಬರ್ಮಾ ಸರಕಾರ ಇದನ್ನು ತಿಳಿದುಕೊಂಡಿದ್ದು, ಆ ಜನರು ಬರ್ಮಾದ ನೆಲದಲ್ಲಿ ಉಳಿದರೂ, ಅವರು ದಾಳಿ ನಡೆಸದಂತೆ

...ಡಿಕೊಳ್ಳಲು ತಮ್ಮ ಸೈನ್ಯ ಸದಾ ಸಿದ್ಧವಿದೆ ಎಂದು ಹೇಳಿರುವರು. ಬಹು ಪ್ರಮಾಣದ ಆಕ್ರಮಕ ಸೇನೆ ಹಿಂದೆಗೆದ ಅಲ್ಪ ಬಲದ ಸ್ವಕೀಯ ಕ್ರಾಂತಿಕಾರಿಗಳನ್ನು ಇದಿರಿಸುವುದು ದೊಡ್ಡ ಸಂಗತಿಯಲ್ಲ ಎಂದದು ಅಭಿಪ್ರಾಯ ಪಟ್ಟಿದೆ. ...ಂದಿನ ಸಪ್ಟಂಬರ ತಿಂಗಳಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಅಧಿವೇಶನ ಕೂಡುವುದರೊಳಗೆ ಈ ನಿರ್ಗಮನ ಕಾರ್ಯವು ...ಗಿಯ ಬೇಕು. ಒಂದು ವೇಳೆ ಅಲ್ಲಿ ...ತನಕವೂ ಪ್ರಗತಿ ದೃಷ್ಟಿಗೋಚರವಾಗದಿದ್ದರೆ ರಾಷ್ಟ್ರ ಸಂಘವು ಬಿಗಿಯಾದ ನಿಲುಮೆಯನ್ನು ತಳೆಯುವ ಪ್ರಸಂಗ ಬಹುದು. ಆದರೆ ಈಗಿನ ಪರಿಸ್ಥಿತಿಯು ಪರಿಶೀಲಿಸಿದಲ್ಲಿ ನಿರ್ಗಮನ ಕಾರ್ಯ ಹೆಚ್ಚು ತೊಂದರೆ ಇಲ್ಲದೆ ನೆರವೇರಬಹುದು ರಾಷ್ಟ್ರೀಯ ಚೀನಾದ ಮುಖವು ...ವ ಹೊಣೆಯನ್ನು ತನ್ನ ಹೆಗಲ ಮೇಲೆ ತೆಗೆದುಕೊಂಡಿರುವ ಅಮೇರಿಕಾ ಏದರೊಂದು ವ್ಯವಹಾರ್ಯವಾದ ಉಪಾಯದಿಂದ ಈ ಕೆಲಸ ತೊಡಕಿಲ್ಲದೆ ...ಗಿಯುವಂತೆ ನೋಡುವ ಭರವಸೆ... ಚೀನೀ ರಾಷ್ಟ್ರೀಯ ಸೈನಿಕರು ...ರ್ಮಾದಲ್ಲಿ ನಡೆಸಿದ ದಾಳಿಯು ಗಂಭೀರ ಸ್ವರೂಪದ ಸಮಸ್ಯೆಗಳಿಗೆ ಕಾರಣವೆನಿಸಿ ... ಅದಷ್ಟು ಸುಲಭದಲ್ಲಿ ಇತ್ಯರ್ಥವಾಗುವುದು ಶುಭ ಲಕ್ಷಣ.

ವಿಚಾರಣಾ ಸಮಿತಿ

ಕೊರಿಯಾದಲ್ಲಿ ರಾಷ್ಟ್ರ ಸಂಘವು ಕ್ರಿ...ಯುದ್ಧವನ್ನು ನಡೆಸಿದೆ ಎಂದು ...ಮ್ಯುನಿಸ್ಟ ವೃತ್ತಗಳು ಪದೇಪದೇ ಆಕ್ಷೇಪಿಸುತ್ತಿರುವುದರಿಂದ ಸತ್ಯ ಸಂಗತಿಯನ್ನು ತಿಳಿದುಕೊಳ್ಳಲು ರಾಷ್ಟ್ರ ಸಂಘವು ...ಯಸಿದೆ ಈ ಆರೋಪದ ವಿಚಾರಣೆಯನ್ನು ನಡೆಸಲು ಅದು ನಿರ್ಧರಿಸಿ ಈಗ ಇಜಿಪ್ತ, ಪಾಕಿಸ್ತಾನ, ಸ್ವೀಡನ್ ಬ್ರೇಜಿಲ್ ಮತ್ತು ಉರುಗ್ವೆಗಳ ಪ್ರತಿನಿಧಿಗಳಿಂದ ...ಡಿದ ಒಂದು ಸಮಿತಿಗೆ ಈ ಕೆಲಸವನ್ನು ಒಪ್ಪಿಸಿ ಕೊಟ್ಟಿದೆ. ಆದರೆ ಈ ವಿಷಯದಲ್ಲಿ ರಶಿಯಾ ಅನುಕೂಲ ಮತವನ್ನು ವ್ಯಕ್ತಗೊಳಿಸದೆ, ವಿರುದ್ಧ ನಿಂತದ್ದು ...ವೆ ದಾಶ್ಚರ್ಯಜನಕವಾದ ಸಂಗತಿ! ...ಮಿಯುದ್ಧವನ್ನು ರಾಷ್ಟ್ರ ಸಂಘ ನಡೆಸಿದೆ ಎಂದು ಗಂಭೀರವಾದ ಆರೋಪವನ್ನು ಮಾಡುವ ಕಮ್ಯೂನಿಸ್ಟರು, ಅದರ ವಿಚಾರಣೆ ನಡೆಸುವುದನ್ನು ಪ್ರತಿಭಟಿಸುವುದು ಏಕೋ ತಿಳಿಯುವುದಿಲ್ಲ. ಇದರಿಂದ ಆರೋಪವೇ ಹುರುಳಿಲ್ಲದುದೆಂಬ ರಾಷ್ಟ್ರ ಸಂಘದ ವಾದವನ್ನು ರಶಿಯಾ ಅಪ್ರತ್ಯಕ್ಷವಾಗಿ ಬೆಂಬಲಿಸಿದಂತೆಯೇ ಆಯಿತೆನ್ನಬಹುದು. ...ಮ್ಮ ಊಹನೆ ನಿಜವೊ ಏನೆಂಬುದು ವಿಚಾರಣೆಯ ಬಳಿಕ ಸ್ಪಷ್ಟಗೊಳ್ಳುತ್ತದೆ. ...ಕೃತ ಕೊರಿಯಾದಲ್ಲಿ ಗಾಯಾಳು ಕೈದಿಗಳ ವಿನಿಮಯ ಕಾರ್ಯ ನಡೆಯುತ್ತಿದೆ ... ನಡುವೆ ಕಳೆದ ಶನಿವಾರದಿಂದ ಯುದ್ಧ ನಿಲ್ಲಿಸುವ ಕುರಿತು ಮಾತುಕತೆಗಳು ಪ್ರಾರಂಭಿಸಲ್ಪಟ್ಟಿವೆ. ಆದರೆ ಈಗ ...ನೆಯಿಂದ ವರದಿಗಳಂತೆ ಈ ಮಾತುಕತೆ ಸಫಲವಾಗುವುದಿಲ್ಲವೋ ಎಂಬ ಸಂಶಯ ...ತ್ತಿದೆ.

ಕೊರಿಯಾದ ಮಾತುಕತೆ

ತಟಸ್ಥ ರಾಷ್ಟ್ರದ ಆಯ್ಕೆಯ ಸಂಬಂಧದಲ್ಲಿ ರಾಷ್ಟ್ರ ಸಂಘ ಮತ್ತು ಕಮ್ಯೂನಿಸ್ಟರೊಳಗೆ ಮತಭೇದವಿದೆ. ಸ್ವಿಜರಲೇಂಡನ್ನು ತಟಸ್ಥ ರಾಷ್ಟ್ರವಾಗಿ ಒಪ್ಪಿಕೊಳ್ಳಬೇಕೆಂದು ರಾಷ್ಟ್ರಸಂಘ ಮಾಡಿದ ಸೂಚನೆಯನ್ನು ಕಮ್ಯೂನಿಸ್ಟರು ಒಪ್ಪುವುದಿಲ್ಲ. ಸ್ವಿಜರಲೇಂಡವು ರಾಷ್ಟ್ರ ಸಂಘದ ಸದಸ್ಯ ರಾಷ್ಟ್ರವಾಗಿಲ್ಲ ಮತ್ತು ಅದು ಹಲವು ವರ್ಷಗಳಿಂದ ತನ್ನ ತಾಟಸ್ಥ್ಯ ಧೋರಣವನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದಿದೆ ಎಂಬುದಕ್ಕಾಗಿ ಸ್ವದೇಶಕ್ಕೆ ಹೋಗಲೊಲ್ಲದ ಯುದ್ಧ ಕೈದಿಗಳನ್ನು ಅಲ್ಲಿಡುವುದು ಯೋಗ್ಯವೆಂದು ರಾಷ್ಟ್ರ ಸಂಘದ ಅಭಿಪ್ರಾಯ ಕಮ್ಯೂನಿಸ್ಟರು ಇದನ್ನು ಸ್ವಾಗತಿಸದಿದ್ದುದರಿಂದ ರಾಷ್ಟ್ರ ಸಂಘದ ಅಧಿಕಾರಿಗಳು ಅತೃಪ್ತರಾಗಿರುವರು ಕಮ್ಯೂನಿಸ್ಟರು ಸಹಕಾರದ ಮನೋಭಾವ ತೋರದಿದ್ದರೆ ಮಾತುಕತೆಗಳು ಮುರಿದಾವೆಂದು ಅವರು ಹೇಳಿರುವರು ಆದರೆ ಈ ರೀತಿ ಜುಡ ಕುವುದೇಕೋ ತಿಳಿಯದಾಗಿದೆ ಕಮ್ಯೂನಿಸ್ಟರು ಹೇಳುವಂತೆ ರಾಷ್ಟ್ರ ಸಂಘ ತಾನು ಸೂಚಿಸಿದ ಹೆಸರೇ ವಿರುದ್ಧ ಪಕ್ಷಕ್ಕೂ ಒಪ್ಪಿಗೆಯಾಗಬೇಕೆಂದು ಛಲ ತೊಡುವುದು ಸರಿಯಲ್ಲ. ಕಮ್ಯೂನಿಸ್ಟರ ಸೂಚನೆಯನ್ನು ಸ್ವಾಗತಿಸಿ, ಅದನ್ನು ಪರಿಶೀಲಿಸುವುದು ಒಳ್ಳೆಯದು. ರಶಿಯಾವಾಗಲೀ ಚೀನಾವಾಗಲೀ ಜಾಗತಿಕ ಸಮಸ್ಯೆಗಳ ಪರಿಹಾರಕ್ಕೋಸ್ಕರ ಸಹಕಾರ ನೀಡಲು ಸಿದ್ಧವಿಯೆ ಎಂದು ದಿನದಿನಕ್ಕೂ ಸ್ಪಷ್ಟವಾಗುತ್ತಾ ಬರುತ್ತಿದೆ. ಕಳೆದವಾರ ಐಸೇನ್ ಹೋವರರು ಜಾಗತಿಕ ತಂಟೆಗಳ ಸಂಬಂಧದಲ್ಲಿ ರಶಿಯಾ ಶಾಂತಿಯ ಅಭಿಲಾಷೆಯನ್ನು ಕಾರ್ಯತಃ ವ್ಯಕ್ತಗೊಳಿಸಬೇಕೆಂದು ಹೇಳಿದುದಕ್ಕೆ ರಶಿಯಾದ ಪತ್ರಿಕೆಗಳು ಮಹತ್ವಕೊಟ್ಟಿವೆ. ಮಾತ್ರವಲ್ಲ ರಶಿಯಾ ಸಹಾನುಭೂತಿಯಿಂದ ಈ ಪ್ರಶ್ನೆಯನ್ನು ವಿಚಾರಿಸುವುದಾಗಿ ಭರವಸೆ ಕೊಟ್ಟಿವೆ. ಸಾಲದುದಕ್ಕೆ ರಶಿಯಾದ ವಿದೇಶ ಮಂತ್ರಿ ಮೊಲೊಟೋವರು ಪಂಚ ಮಹಾರಾಷ್ಟ್ರಗಳು ಒಂದೆಡೆ ಸೇರಿ ಜಾಗತಿಕ ಸಮಸ್ಯೆಗಳ ಪರಿಹಾರದ ಬಗ್ಗೆ ಚರ್ಚಿಸುವುದಕ್ಕೆ ಬೆಂಬಲ ಸೂಚಿಸಿರುವರು.

ದ. ಕ. ಜಿಲ್ಲೆಯಲ್ಲಿ ಲೋಕೋಪಯೋಗಿ ಮಂತ್ರಿ ಶ್ರೀ. ಎನ್. ರಂಗ ರೆಡ್ಡಿಯವರ ಸಂಚಾರ ಕಾರ್ಯಕ್ರಮ

ತಾ. 3-5-53ನೆ ಆದಿತ್ಯವಾರ ಸಂಜೆ ತಲಚೇರಿಯಿಂದ ಮಂಗಳೂರಿಗೆ ಆಗಮನ. ತಾ. 4ರಲ್ಲು ಮಂಗಳೂರಿನಿಂದ ಬೆಳಗ್ಗೆ 7-30ಕ್ಕೆ ಹೊರಟು 9 ಗಂಟೆಗೆ ಪುತ್ತೂರಿಗೆ ಆಗಮನ. 10 ಗಂಟೆಗೆ ಅಲ್ಲಿಂದ ಹೊರಟು ದರ್ಭೆ-ಸುಬ್ರಹ್ಮಣ್ಯ ಮಾರ್ಗವಾಗಿ 11 ಗಂಟೆಗೆ ಸುಬ್ರಹ್ಮಣ್ಯಕ್ಕೆ ಆಗಮನ ಅಲ್ಲಿಂದ 2 ಗಂಟೆಗೆ ಹೊರಟು 4-30ಕ್ಕೆ ಸುಳ್ಯಕ್ಕೆ ಆಗಮನ ಮತ್ತು ಸಾರ್ವಜನಿಕ ಸಭೆ. 6½ ಗಂಟೆಗೆ ಪುತ್ತೂರಿಗೆ ಮರಳಿ ಆಗಮನ. ತಾ. 5ರಲ್ಲು ಬೆಳಗ್ಗೆ 7½ ತಾಸಿಗೆ ಪುತ್ತೂರಿನಿಂದ ಹೊರಟು ಬಂಟ್ವಾಳ ಧರ್ಮಸ್ಥಳಕ್ಕಾಗಿ ಬೆಳ್ತಂಗಡಿಗೆ 9ಗಂಟೆಗೆ ಆಗಮನ. ಸಾರ್ವಜನಿಕ ಸಭೆ ಮುಗಿಸಿ ಅಲ್ಲಿಂದ ಸಂಜೆ 7ಗಂಟೆಗೆ ಮಂಗಳೂರಿಗೆ ವಾಪಾಸು ತಾ. 6ನೇ ಬುಧವಾರ ಮಂಗಳೂರಿನಿಂದ ಪೂರ್ವಾಹ್ನ 7½ಗಂಟೆಗೆ ಹೊರಟು 9 ಗಂಟೆಗೆ ಕಾರ್ಕಳಕ್ಕೆ ಆಗಮನ 10ಗಂಟೆಗೆ ಪುತ್ತಿಗೆ ಸೇತುವೆ ತಪಾಸಣೆ 10-30ಕ್ಕೆ ಹಿರಿಯಡ್ಕ ಆಗಮನ ಮತ್ತು ಸಾರ್ವಜನಿಕ ಸಭೆ 11-30ಕ್ಕೆ ಉಡುಪಿಗೆ ಆಗಮನ ಮತ್ತು ಶ್ರೀ ಕೃಷ್ಣ ಮಠ ಸಂದರ್ಶನ. ಮಧ್ಯಾಹ್ನ 2½ಗಂಟೆಗೆ ಕಲ್ಯಾಡಿ ಸೇತುವೆ ತಪಾಸಣೆ, 3½ಗಂಟೆಗೆ ಮಲ್ಪೆಯಲ್ಲಿ ಸಾರ್ವಜನಿಕ ಸಭೆ ಸಂಜೆ 5 ಗಂಟೆಗೆ ಉಡುಪಿಯ ಪವರ್ ಹೌಸ್ ಸಂದರ್ಶನ ಸಂಜೆ 6ಗಂಟೆಗೆ ಸಾರ್ವಜನಿಕ ಸಭೆ ತಾ 7ನೇ ಗುರುವಾರ ಬೆಳಗ್ಗೆ 7½ಗಂಟೆಗೆ ಉಡುಪಿಯಿಂದ ಹೊರಟು 9ಗಂಟೆಗೆ ಕಟಪಾಡಿಗೆ ಆಗಮನ ಮತ್ತು ಸಾರ್ವಜನಿಕ ಸಭೆ 11ಗಂಟೆಗೆ ಶಿರ್ವದಲ್ಲಿ ಮಹಾಜನ ಸಭೆ ಅಪರಾಹ್ನ 1ಗಂಟೆಗೆ ಇನ್ನಂಜೆಗೆ ಆಗಮನ ಮತ್ತು 4½ ಗಂಟೆಕನಕ ವಿಶ್ರಾಂತಿ ಬಳಿಕ ಅಲ್ಲಿಂದ ಹೊರಟು ಬಜ್ಪೆ ವಿಮಾನ ನಿಲ್ದಾಣಕ್ಕೆ ಬಂದು 4-45 ಕ್ಕೆ ಮದ್ರಾಸಿಗೆ ಪ್ರಯಾಣ

ಉಡುಪಿ

ಮುನಿಸಿಪಲ್ ಕೌನ್ಸಿಲು ಸಭೆಯು— ಇದೇ 25ರಲ್ಲು ಸಂಜೆ ಶ್ರೀ ಯು. ಎಸ್. ನಾಯಕರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ ಕೆ ಪೈಗಳ ಮತ್ತು ಡಾ। ಪಿ. ವ್ಯಾಸರಾಯರ ಪ್ರಶ್ನೆಗಳಿಗೆ ಉತ್ತರವೀಯಲಾದನಂತರ ಸರಕಾರಿ ಅರ್ಜಿಗಳು ರಿಕಾರ್ಡುಮಾಡಲ್ಪಟ್ಟವು.

ಹವಾಮಾನ— ಬಿಸಿಲಿನ ತಾಪವು ದಿನೇದಿನೇ ಜಾಸ್ತಿಯಾಗುತ್ತಲಿದೆ. ಮಳೆಬರುವ ಲಕ್ಷಣಗಳಿ... ...

ಪ್ರಮಾಣ ಪತ್ರ ವಿತರಣೋತ್ಸವವು— ಇದೇ ತಾ 26ರಲ್ಲು ಸಂಜೆ ಮ ಎಕುಂದ ನಿವಾಸದಲ್ಲಿ ಡಾ. ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀಮತಿ ಲಕ್ಷ್ಮೀಬಾಯಿ, ಎಸ್. ಆರ್. ಪೈಗಳು ಪ್ರಮಾಣ ಪತ್ರಗಳನ್ನು ವಿತರಿಸಿದರು. ಶ್ರೀ ಟಿ. ಎ ಪೈ ಎಮ್ ಎಲ್. ಎ ಅವರು ತಮ್ಮ ಸ್ವಾಗತ ಭಾಷಣದಲ್ಲಿ ಇಂಗ್ಲಿಷು ಅಂತರ್ರಾಷ್ಟ್ರೀಯ ಭಾಷೆಯಾಗಿರ ಬೇಕೆಂದೂ ಹಿಂದಿಯನ್ನು ಪ್ರತಿಯೊಬ್ಬನೂ ರಾಷ್ಟ್ರಭಾಷೆಯಾಗಿ ಕಲಿಯ ಬೇಕೆಂದೂ ಹೇಳಿದರು. ಅಧ್ಯಕ್ಷರು ರಾಷ್ಟ್ರ ಸಂಘಟನೆಗಾಗಿ ಎಲ್ಲರೂ ಹಿಂದಿ ಕಲಿಯುವುದು ಅವಶ್ಯ ವೆಂದರು. ಸಭಿಕರ ಭಾಷಣ ನಾಟಕಾದಿನಯವಾದನಂತರ ಶ್ರೀ. ಎ. ಜಿ ಆಲ್ಮೆಯವರು ಧನ್ಯವಾದಗಳನ್ನು ಅರ್ಪಿಸಿದರು

ಆಸನ ಪ್ರದರ್ಶನವೊಂದನ್ನು ಎಂ. ಜಿ ಎಂ. ಕಾಲೇಜ್ ಪರಿಸರದಲ್ಲಿ ಕಾಲೇಜ್ ವಿದ್ಯಾರ್ಥಿ ಶ್ರೀ ಎಂ. ಸಂಜೀವ ಶೆಟ್ಟರು ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರ ಅಧ್ಯಕ್ಷತೆಯಲ್ಲಿ ತಾ. 3-5-53ನೇ ರವಿವಾರ ಸಂಜೆ ಗಂಟೆ 5ಕ್ಕೆ ಮಾಡಲಿದ್ದಾರೆ. ಸರ್ವರಿಗೂ ಸುಸ್ವಾಗತವೆಂದು ವ್ಯವಸ್ಥಾಪಕ ವರ್ಗದವರು ತಿಳಿಸುತ್ತಾರೆ

ಮೈಸೂರು ಪ್ರಧಾನರ ಆಗಮನ

ಮೈಸೂರಿನ ಪ್ರಧಾನಮಂತ್ರಿ ಶ್ರೀ ಕೆ. ಹನುಮಂತಯ್ಯನವರು 6-5-53ಕ್ಕೆ ಮಂಗಳೂರಲ್ಲಿ ಪ್ರಾರಂಭವಾಗುವ ಪ್ರಾಂತಿಕ ಶಿಕ್ಷಣ ಸಮ್ಮೇಲನದ ಉದ್ಘಾಟನೆ ಮಾಡಲು ಬರಲಿರುವರು ಅವರು ಮರುದಿನ ಕುಂದಾಪುರಕ್ಕೂ ತಾ. 8ಕ್ಕೆ ಉಡುಪಿಗೂ ಬರಲಿರುವರೆಂದು ತಿಳಿದು ಬರುತ್ತದೆ

ವಿವಾಹ ಸಮಾರಂಭಗಳು.

ಶ್ರೀ ಐಕಳ ಪಟೇಲ್ ಅಚ್ಚಣ್ಣ ಸೆಟ್ಟರ ಪುತ್ರ ಶ್ರೀ ಕೆ. ಬಾಲಕೃಷ್ಣ ಶೆಟ್ಟರು ಹರೇಕಳ ಗುತ್ತು ಶ್ರೀ ಸುಬ್ಬಯ್ಯ ಪಡಂಜಾರ ಪುತ್ರಿ ಸೌ। ಇಂದಿರಾಳನ್ನು ತಾ. 26-4-53ರಂದು ಮಂಗಳೂರು ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ವಿಜೃಂಭಣೆಯಿಂದ ವಿವಾಹವಾದರು

ದಿ। ಬಂಡಾರಿ ಕೊರಗಪ್ಪ ರೈಗಳ ಪುತ್ರ ಶ್ರೀ ರಾಮಣ್ಣ ರೈಗಳು ಶ್ರೀ ತ್ಯಾಂಪಣ್ಣ ಶೇಕರ ಪುತ್ರಿ ಸಾವಿತ್ರಿ ದೇವಕಿಯನ್ನು ತಾ 27-4-53 ರಂದು ಪುತ್ತೂರು ಅರುಣ ಥಿಯೇಟರಿನಲ್ಲಿ ಪಾಣಿಗ್ರಹಣ ಮಾಡಿಕೊಂಡರು.



ಮಿತ ದರದಲ್ಲಿ
ಜಲೋ ಗಡಿಯಾರಗಳೂ
ಟ್ರಾಯಂಪೀಸುಗಳೂ
ದೊರೆಯುತ್ತವೆ.
ವಿವರಗಳಿಗೆ ಬರೆಯಿರಿ.

MUBARAK & CO
Watch & Clock
Specialists,
MADRAS 3

ಮುಬಾರಕ್ & ಕೊ
ವಾಚ್ ಎಂಡ್ ಕ್ಲಾಕ್
ಸ್ಪೆಶ್ಯಲಿಸ್ಟ್ಸ
ಮದ್ರಾಸು 3

— ತಾರೀಕು 28 4-53ರಿಂದ —
ಹಮಾರಿ ಬೇಟಿ
ಮೋತಿಲಾಲ್, ನೂತನ್, ಆಗ, ಕೆ. ಎನ್ ಸಿಂಗ್, ಕುಕ್ಕು ಮೊದಲಾದವರು
ದಿಗ್ದರ್ಶನ ಶೋಭನಾ ಸಮರ್ಥ್
ಅನಂತರ:
ಕನ್ನಿಕಾ ಅಥವಾ ಬ್ರಹ್ಮಕಪಾಲ.
ಎನ್ ಎಸ್ ಕೃಷ್ಣನ್, ಟಿ ಎ ಮದುರಂ, ಲಲಿತ ಪದ್ಮಿನಿ, ಎಮ್ ಎಸ್. ಸರೋಜಿನಿ ಮೊದಲಾದವರು
ಬರುವುದು: ಜಾನ್ಸಿ-ಕಿ-ರಾಣಿ, ದಾಗ್, ಆನಂದ ಮಠ ಇತ್ಯಾದಿ.
ಶ್ರೀ ರಾಮಕೃಷ್ಣ ಥಿಯೇಟರ್. ಉಡುಪಿ

ಎಸ್. ವೆಂಕಟರಾಜರು ಬರೆದ
ವಿನೋದಪ್ರದ ನಾಟಕ
ನಡೆದ-ನಡೆಯುವ ವಿದ್ಯಮಾನದ ಒಂದು ಪಡಿಯಚ್ಚು
● ಒಂದು ನಾಟಕವಾಡಲು ಸುಲಭವಲ್ಲಿ ಸಿಕ್ಕಿದ ಸಾಮಾನ್ಯ ಘಟನೆಯೊಂದರ ಸ್ವಜ ಚಿತ್ರ
● ಆಕರ್ಷಕ ಪುಸ್ತಕ, ಬೆಲೆ 0 10 0

ಪಂಚಾಯತ ಬೋರ್ಡು
ಗ್ರಾಮ ಕಮಿಟಿ, ಶಾಲಾ ಕೋಲೇಜು ಮೊದಲಾದುವುಗಳ
ಲೈಬ್ರೆರಿಗಳಿಗೆ
ಬೇಕಾಗುವ ಕರ್ನಾಟಕದ ಎಲ್ಲಾ ಭಾಗಗಳ ಕನ್ನಡ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.
ವಿಚಾರಿಸಿರಿ: —
ನವಭಾರತ ಪುಸ್ತಕ ಭಂಡಾರ ಉಡುಪಿ

ಮಂಗಳೂರು

ಬೀಡಿ ಲೇಬರ್ ಯೂನಿಯನ್ನಿನ ಮಹಾಸಭೆಯು— ತಾ 22 ರಲ್ಲಿ ಶ್ರೀ ಕೃಷ್ಣ ಸೆಟ್ಟಿರ ಅಧ್ಯಕ್ಷತೆಯಲ್ಲಿ ಜರಗಿತು. ಕರ್ನಾಟಕ ಪ್ರಾಂತರಚನೆ ಯಾಗಬೇಕೆಂಬ ಅಕ್ಕಿಯ ಕ್ರಯ ಕಡಿಮೆಯಾಗಬೇಕೆಂಬ, ವಿಶ್ವಶಾಂತಿ ಚಳವಳಿಗೆ ಬೆಂಬಲ ನೀಡುವ, ಮುಟ್ಟಳ್ಳಿಯಲ್ಲಿ ನಡೆದ ಗೋಳಿಬಾರನ್ನು ಖಂಡಿಸುವ ಇತ್ಯಾದಿ ನಿರ್ಣಯಗಳಾದುವು.

ಶಾಲಾವರ್ಧಂತಿ— ಅತ್ತಾವರ ಮುನಿಸಿಪಲ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ಮುನಿಸಿಪಲ್ ಚೆರ್‌ಮೆನ್ ಶ್ರೀ ಕೆ.ಎಸ್. ಅಡಿಗರ ಅಧ್ಯಕ್ಷತೆಯಲ್ಲಿ ಈಚೆಗೆ ಜರಗಿತು. ಶ್ರೀಗಳಾದ ಮಾಧವ ಸುವರ್ಣ, ಪಿ. ಆನಂದ ಸೆಟ್ಟಿ, ಎಮ್. ಸೂರ್ಯ ನಾರಾಯಣ ಅವರು ಶಾಲೆಯ ಈಗಿರುವ ಕಟ್ಟಡ ದುರುಸಿಯಾಗಬೇಕು ಹೊಸ ಕಟ್ಟಡ ಒಂದನ್ನು ಬೇಗನೆ ಕಟ್ಟಿಸಬೇಕೆಂದು ಸೂಚಿಸಿದರು.

ವಿಜಯ ಬೇಂಕ್— ಇದರ ಡೈರೆಕ್ಟರರ ಸಭೆಯು ಇದೇ ತಾ 19 ರಲ್ಲಿ ಜರಗಿ ಶ್ರೀ ಕೆ. ಸುಂದರ ರಾಮ ಸೆಟ್ಟರು ಬೇಂಕಿನ ಚೆರ್‌ಮೆನರಾಗಿ ಆರಿಸಲ್ಪಟ್ಟರು. ಈ ಸಂದರ್ಭದಲ್ಲಿ ಹದಿನಾರು ವರುಷಗಳ ತನಕ ಬೇಂಕಿನ ಚೆರ್‌ಮೆನರಾಗಿದ್ದು ಈಗ ನಿವೃತ್ತಿ ಹೊಂದಿದ ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಕಾರ್ಯದಕ್ಷತೆ, ಅವರ ನೇತೃತ್ವದಲ್ಲಿ ಬೇಂಕು ಹೊಂದಿದ ಪ್ರಗತಿ ಮೊದಲಾದ ವಿಷಯಗಳನ್ನು ಶ್ರೀ ಶ್ರೀಗಳಾದ ಕೆ. ಮಹಾಬಲ ಹೆಗ್ಡೆ, ಕೆ. ಟಿ. ಆಳ್ವ ಮತ್ತು ಕೆ. ಸುಂದರರಾಮ ಸೆಟ್ಟರು ಮಾತನಾಡಿದರು ಶ್ರೀ ಹೆಗ್ಡೆಯವರ ನಾಯಕತ್ವದಲ್ಲಿ ಬೇಂಕಿನ ಪಾಲು ಭಂಡವಳವು ರೂಪಾಯಿ 31,000 ಇದ್ದುದು ರೂ 9,03,000 ಕ್ಕೂ ಕ್ಷೇಮನಿಧಿಯು ರೂ 2000 ದಿಂದ ರೂಪಾಯಿ 1,66,000 ಕ್ಕೂ ಠೇವಣಾತಿಗಳು ರೂ. 2,25,000 ದಿಂದ ರೂ 42,30,000 ಕ್ಕೂ ಆಧಾರ ವಹಿವಾಟು ರೂ 2,00,000 ದಿಂದ ರೂ 54,87,000 ಕ್ಕೂ ಏನ್ ಮುನಾಫೆಯು ರೂ 2500 ರಿಂದ ರೂ 42,500 ಕ್ಕೂ ಏರಿದುದು ಸಂತೋಷಕರ. ಅಲ್ಲದೆ ಬೊಂಬಾಯಿ, ಕೊಡಗು ಮೊದಲಾದ ಕೇಂದ್ರಗಳಲ್ಲಿ ಬೇಂಕಿನ ಶಾಖೆಗಳೂ ತೆರೆಯಲ್ಪಟ್ಟದ್ದವು

ಸಿನೇಟ್ ಚುನಾವಣೆ — ಮಂಗಳೂರು ಮತ್ತು ಉಡುಪಿ ಮುನಿಸಿಪಾಲಿಟಿಗಳಿಂದ ಮದ್ರಾಸು ವಿಶ್ವವಿದ್ಯಾಲಯದ ಸಿನೇಟಿಗೆ ಇರುವ ಒಂದು ಸ್ಥಾನಕ್ಕೆ ಉಮೇದ್ವಾರರಾಗಿ ಉಡುಪಿಯ ಡಾ| ಕೆ. ಎಲ್. ಐತಾಳ್ 6 ಮತ ಮತ್ತು ಶ್ರೀ ಸೀತಾರಾಮ ಕಾಮತ್ 13 ಮತ ಮಂಗಳೂರಿನ ಶ್ರೀಮತಿ ಬಿ. ಎಸ್. ಪಿಂಟೋ 33 ಮತ ಪಡೆದು ಶ್ರೀಮತಿ ಪಿಂಟೋರವರು ಆರಿಸಲ್ಪಟ್ಟರು.

ಕಮಿಶನರರಿಗೆ ವಿದಾಯ ಸತ್ಕಾರ— ಮಂಗಳೂರಿನಿಂದ ಕಲ್ಲಿಕೋಟೆಗೆ ವರ್ಗನಾಗಿರುವ ಮುನಿಸಿಪಲ್ ಕಮಿಶನರ್ ಶ್ರೀ ಎಮ್. ಗೋವಿಂದ ಮೆನೊನ್ ಅವರಿಗೆ ಮುನಿಸಿಪಲ್ ಆಫೀಸಿನ ಸಿಬಂದಿಯವರು ಇದೇ ತಾ 20 ರಲ್ಲಿ ವಿದಾಯ ಸತ್ಕಾರ ವಿತ್ತರು.

ಬಾಲಚಂದ್ರ

ಶಿಕ್ಷಣ ಸಂಬಂಧವಾದ ಮಾಸಪತ್ರಿಕೆ

ಸ್ಥಾಪಕರು:

ಶ್ರೀ ಉಳ್ಳಾಲ ಮಂಗೇಶರಾವ್,
ಬಿ. ಎ, ಎಲ್. ಟಿ

ಸಂಪಾದಕರು:

ಕೆ. ಆರ್. ಶೆಣೈ ಮತ್ತು ಕೆ ಎಚ್. ಶೆಟ್ಟಿ

ಉಪಾಧ್ಯಾಯರಿಗೂ ಉಪಾಧ್ಯಾಯಿನಿಯರಿಗೂ ಅತ್ಯಾವಶ್ಯಕವಾದ ಪತ್ರಿಕೆ.

ವಾರ್ಷಿಕ ಚಂದಾ ರೂ. 3-0-0

ಮೆನೇಜರ್,
ಬಾಲಚಂದ್ರ, ಉಡುಪಿ

ಈ ಸಂದರ್ಭದಲ್ಲಿ ಡಾ| ಕೆ. ನಾಗಪ್ಪ ಆಳ್ವ ಶ್ರೀಗಳಾದ ಎಮ್. ಗೋವಿಂದ ಪೈ. ಕೆ. ಸೂರ್ಯನಾರಾಯಣ ಅಡಿಗ ಮೊದಲಾದವರು ಮಾನ್ಯ ಅತಿಥಿಯ ಗುಣಗಾನ ಮಾಡಿದರು. ಶ್ರೀ ಪಾಯಸರು ಧನ್ಯವಾದಗಳನ್ನರ್ಪಿಸಿದರು.

ಶ್ರೀ ಕಿಲ್ಲೆಯವರ ಪ್ರಕೃತಿ ಇನ್ನೂ ಸುಧಾರಿಸುತ್ತದೆ.— ಮದರಾಸಿನಿಂದ ಹಿಂತಿರುಗಿದ ಮೇಲೆ ಡಾ| ಯಂ. ವೇಣುಗೋಪಾಲ ಸೆಟ್ಟರಲ್ಲಿ ಚಿಕಿತ್ಸೆ ಹೊಂದುತ್ತಿರುವ ಶ್ರೀ ಕಿಲ್ಲೆಯವರ ಆರೋಗ್ಯ ದಿನದಿಂದ ದಿನಕ್ಕೆ ನಿಧಾನವಾಗಿ ಸುಧಾರಿಸುತ್ತಾ ಇದೆ. ಇದೇ ಕಳೆದ ತಾ. 20 ರಲ್ಲಿ ಮದರಾಸಿನ ಫಿರ್ಕಾ ಡೆವಲಪ್‌ಮೆಂಟ್ ಮಂತ್ರಿಗಳಾದ ಮಾನ್ಯ ಪಟ್ಟಾಭಿರಾಮರಾಯರು ಶ್ರೀ ಕಿಲ್ಲೆಯವರನ್ನು ಕಂಡು ಅವರು ಆರೋಗ್ಯ ಲಾಭದ ಕುರಿತು ವಿಚಾರಿಸಿಕೊಂಡು ಹೋಗಿದ್ದರು.

ಇದೇ 22 ರಂದು ಮದರಾಸಿನ ಗವರ್ನರಾದ ಶ್ರೀ ಶ್ರೀಪ್ರಕಾಶ ರವರು ವೈದಾನಿನ ಸಭೆ ತೀರಿಸಿದೊಡನೆಯೇ, ಶ್ರೀ ಕಿಲ್ಲೆಯವರ ಕುರಿತು ವಿಚಾರಿಸಿ ಆಸ್ಪತ್ರೆಗೆ ಬಂದಿದ್ದರು. ಕಿಲ್ಲೆಯವರು ಕೂಡಾ ನಗುಮೊಗದಿಂದಲೇ ಅವರನ್ನು ಸ್ವಾಗತಿಸಿದರು. 18 ವರ್ಷಗಳ ಹಿಂದೆ ಇಲ್ಲಿ ನಡೆದಿದ್ದ ಕರ್ನಾಟಕ ಪ್ರಾಂತಿಕ ಪರಿಷತ್ತಿಗೆ ಅಧ್ಯಕ್ಷರಾಗಿ ಬಂದಿದ್ದಾಗ ಅವರ ಭಾಷಣಗಳನ್ನು ಶ್ರೀ ಕಿಲ್ಲೆಯವರು ಭಾಷಾಂತರಿಸಿದ್ದುದರ ನೆನಪನ್ನು ಮತ್ತು ಅವರ ಕಾಯಿಲೆಯ ಕುರಿತು ಸಾಮಾನ್ಯ ½ ತಾಸಿನ ತನಕ ಮಾತಾಡಿದರು. ಕೊನೆಗೆ ಡಾ| ಎಂ. ವಿ. ಶೆಟ್ಟರಲ್ಲಿ ಸಾಕಷ್ಟು ವಿಚಾರಿಸಿಕೊಂಡರು. ಆಮೇಲೆ ಕಿಲ್ಲೆಯವರ ಪತ್ನಿಯವರಿಗೆ ತುಂಬಾ ಧೈರ್ಯ ಹೇಳಿ ಕಿಲ್ಲೆಯವರನ್ನು ಆಶೀರ್ವದಿಸಿ ಹೊರಟು ಹೋದರು.

ಕೊಡಗಿನ ಮುಖ್ಯ ಮಂತ್ರಿ ಮಾನ್ಯ ಸಿ. ಯಂ. ಪೂಣಚ್ಚರವರ ಮಂಗಳೂರಿಗೆ ಖಾಸಗಿ ಭೇಟಿ— ಸಾಮಾನ್ಯ 4 ತಿಂಗಳಿಂದ ಕಾಯಿಲೆಯಲ್ಲಿರುವ ಶ್ರೀ ಕಿಲ್ಲೆಯವರನ್ನು ಕಾಣುವ ಸಲುವಾಗಿ ಕಳೆದ ತಾ. 22 ರಲ್ಲಿ ಸಂಜೆ ಮಾನ್ಯ ಶ್ರೀ ಪೂಣಚ್ಚನವರು ನರ್ಸಿಂಗ್ ಆಸ್ಪತ್ರೆಗೆ ಭೇಟಿ ಕೊಟ್ಟಿದ್ದರು. ಅವರನ್ನು ಡಾ| ಎಂ. ವಿ. ಶೆಟ್ಟರು ಸ್ವಾಗತಿಸಿ, ಸತ್ಕರಿಸಿ ಕಿಲ್ಲೆಯವರ ಕೋಣೆಗೆ ಕರೆದು ತಂದಿದ್ದರು. ಶ್ರೀ ಕಿಲ್ಲೆಯವರ ಅನಾರೋಗ್ಯದ ಕುರಿತು ಬೇರೆ ಬೇರೆ ಸುದ್ದಿಗಳನ್ನು ಕೇಳಿ ಕಳವಳಗೊಂಡಿದ್ದ ತನ್ನ ಮನಸ್ಸು ಈಗ ಸ್ವತಃ ನೋಡಿದ ಮೇಲೆ ತುಂಬಾ ಸಮಾಧಾನಗೊಂಡಿದೆ ಎಂದು ಹೇಳಿದರು. ಸಾಮಾನ್ಯ 1½ ಘಂಟೆಯ ತನಕ ಸಾವಕಾಶ ಮಾತುಕತೆಗಳನ್ನು ನಡೆಸಿ ದೀರ್ಘ ಆರೋಗ್ಯ ಲಾಭವನ್ನು ಬಯಸಿ ಮಡಿಕೇರಿಗೆ ಹಿಂತೆರಳಿದರು.

ದ. ಕ. ಜಿಲ್ಲಾ ದೇವಾಡಿಗರ ಸಮಾಜ ಸುಧಾರಕ ಸಂಘದ— ಕಡೆಯಿಂದ ಅದರ ಅಧಿಕಾರಿಗಳು ಒಂದು ಆತ್ಮನಿವೇದನಾ ಪತ್ರವನ್ನು ಹೊರಡಿಸಿ ಈ ಸಂಘಕ್ಕೆ ಸಮಾಜದವರೆಲ್ಲರೂ ಮೆಂಬರರಾಗಿ ಸೇರಿ ಸಮಾಜದ ಕಲ್ಯಾಣಕ್ಕೆ ನೆರವಾಗಬೇಕಾಗಿ ಬಿನ್ನವಿಸಿಕೊಂಡಿರುವರು. ಹೆಚ್ಚಿನ ಮಾಹಿತಿಯನ್ನು ಕಾರ್ಯದರ್ಶಿ ದೇವಾಡಿಗ ಸಮಾಜ ಸುಧಾರಕ ಸಂಘ, ರೂಂ, ನಂಬ್ರ 8, ಪಿಂಟೋ ಮಹಾಲ್, ಮೈದಾನ್ ಕ್ರಾಸ್ ರೋಡು, ಮಂಗಳೂರು 1 ಇವರಿಂದ ಪಡೆಯಬಹುದು.

ಹಿರಿಯಡ್ಕ— ಉಡುಪಿ ತಾಲೂಕು ಹಿರಿಯಡ್ಕ ಬೋರ್ಡ್ ಎಲಿಮೆಂಟರಿ ಶಾಲಾ ವರ್ಧಂತಿಯು ತಾ 25 ರಲ್ಲಿ ಕುಂದಾಪುರ ರೇಂಜಿನ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಪಿ. ಕೃಷ್ಣಯ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್ಮಾಸ್ತರ್ ಶ್ರೀ ಎಮ್. ರಾಮಣ್ಣ ಸೆಟ್ಟರು ವರದಿ ವಾಚನ ಮಾಡಿದರು. ಬಹುಮಾನ ವಿತರಣೆ, ಅಧ್ಯಕ್ಷರ ಭಾಷಣ, ಶಾಲಾ ಮಕ್ಕಳ ವಿನೋದಾವಳಿಗಳಿಂದ ಸಮಾರಂಭ ಕೊನೆಗೊಂಡಿತು.

ಅಂಪಾರು— ಸ್ಥಳೀಯ ನೆಲ್ಲಿಕಟ್ಟೆ ಜೈ ಭಾರತಿ ಖಾಸಗಿ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ಇದೇ ತಾ 18 ರಲ್ಲಿ ಶ್ರೀ ವೈ. ಮಂಜಯ್ಯ ಸೆಟ್ಟಿ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎ. ಆನಂದ ಸೆಟ್ಟರು ಸ್ವಾಗತ ಭಾಷಣ ಮಾಡಿದರು. ಬಹುಮಾನ ವಿತರಣೆ ಮಾಡಿ ಸಭಾಧ್ಯಕ್ಷರು ಸಮಯೋಚಿತ ಮಾತುಗಳನ್ನಾಡಿದರು. ಬಳಿಕ ನಟಕಾಭಿನಯ ನಡೆಯಿತು.

ಪಡುಬಿದ್ರಿ— ಸ್ಥಳೀಯ ಬೋರ್ಡ್ ಹಾಯಿಸ್ಕೂಲ್ ಶಾಲಾ ವರ್ಧಂತ್ಯುತ್ಸವವು ಇದೇ ತಾ 19 ರಲ್ಲಿ ಜಿಲ್ಲಾ ಎಜ್ಯುಕೇಶನಲ್ ಆಫೀಸರ್ ಶ್ರೀ ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು ಪ್ರಾರ್ಥನೆ, ಸ್ವಾಗತಗಳಾದ ನಂತರ ಶಾಲಾ ವರದಿ ವಾಚನವಾಯಿತು. ನಂತರ ಕಾರ್ಕಳ ಎಡ್ವೊಕೇಟ್ ಶ್ರೀ ಪಿ. ಎಚ್. ರಘುರಾಮ ರಾಯರು ಶಾಲಾಶಿಕ್ಷಣದ ಭಾಷಣ ಮಾಡಿದರು. ಸಭೆಯಲ್ಲಿ ಮುಖ್ಯವಾಗಿ ಅಳವಾರು ಬೋರ್ಡ್ ಹೈಸ್ಕೂಲಿನ ಮುಖ್ಯೋಪಾಧ್ಯಾಯ ಶ್ರೀ ಎಸ್. ಆರ್. ಆಚಾರ್ಯರು ಮಾತನಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈ ಶಾಲೆಯ ಪ್ರಗತಿಯನ್ನು ಎತ್ತಿ ಸೂಚಿಸಿದರಲ್ಲದೆ ಈ ಕೇಂದ್ರದಲ್ಲಿ ಒಂದು ಹ್ಯಾಸ್ಕೂಲ್ ಆಗುವಂತೆ ಊರ ಮಹಾ ಜನರು ಸಹಕಾರನೀಡಬೇಕೆಂದು ಕೇಳಿಕೊಂಡರು.

ಪುತ್ತೂರು— ಸ್ಥಳೀಯ ಬೋರ್ಡ್ ಹ್ಯಾಸ್ಕೂಲಿನ ಹೆಡ್ಮಾಸ್ತರರಾಗಿದ್ದ ಶ್ರೀ ಎಮ್. ರಾಮನ್ ನಂಬಿಯಾರರ ಭಾವಚಿತ್ರವನ್ನು ಅದೇ ಶಾಲೆಯ ನಿವೃತ್ತ ಉಪಾಧ್ಯಾಯರಾದ ಶ್ರೀ ಎಚ್. ವಾಸುದೇವರಾಯರು ದಾನವಿತ್ತುದರ ಅನಾವರಣ ಸಮಾರಂಭವು ಇದೇ ತಾ 16 ರಲ್ಲಿ ಸಂಜೆ ಶ್ರೀ ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಶ್ರೀ ಎಸ್. ಟಿ ನ್ನಪ್ಪ ನಾಯ್ಕರ ಹಸ್ತದಿಂದ ನೆರವೇರಿತು. ಭಾವಚಿತ್ರವನ್ನು ದಾನಮಾಡಿದ ಎಚ್. ವಾಸುದೇವ ರಾವ್ ಶ್ರೀಗಳಾದ ಸಿ. ಎಸ್. ಶಾಸ್ತ್ರಿ ಮತ್ತು ಬಿ. ರಾಮಚಂದ್ರ ರಾಯರು ಮಾತನಾಡಿದರು. ಈಗಿನ ಹೆಡ್ಮಾಸ್ತರ್ ಶ್ರೀ ಭವಾನಿಶಂಕರ ರಾಯರು ಧನ್ಯವಾದಗಳನ್ನರ್ಪಿಸಿದರು. ವಿವೇಕಾನಂದ ಪುಸ್ತಕ ಭಂಡಾರದ ಸಹಾಯಾರ್ಥವಾಗಿ ಇದೇ ತಾ 5 ರಲ್ಲಿ ಒಂದು ಸಂಗೀತ ಕಚೇರಿಯು ಶ್ರೀ ಎಚ್. ಪುಂಡಲೀಕ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ಕುದ್ರುಕೆರೆ- ಸ್ಥಳೀಯ ಬೋರ್ಡ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ಇದೇ ತಾ. 26 ರಲ್ಲಿ ಉಡುಪಿ ಉತ್ತರ ಶ್ರೇಣಿಯ ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಕೆ. ಚಂದ್ರಶೇಖರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎಮ್. ಕೆ. ತನಿಯಪ್ಪರವರು ಸ್ವಾಗತ ಮಾತುಗಳನ್ನಾಡಿದರು. ವಿವಿಧ ಕಾರ್ಯಕ್ರಮಗಳಿಂದ ಸಮಾರಂಭ ಕೊನೆಗೊಂಡಿತು.

ಕುಂದಾಪುರ- ಇದೇ ತಾ 21 ರಲ್ಲಿ ಬೋರ್ಡ್ ಕುಂದಾಪುರ ಬೋರ್ಡ್ ಹ್ಯಾಸ್ಕೂಲ್ ವಠಾರದಲ್ಲಿ ಕಲೆ, ವೃತ್ತಿ, ಕೈಗಾರಿಕೆಗಳ ಪ್ರದರ್ಶನವು ಸಬ್ ಕಲೆಕ್ಟರ್ ಶ್ರೀ ಡಿ. ಕೃಷ್ಣನ್ ಅವರಿಂದ ತೆರೆಯಲ್ಪಟ್ಟಿತು. ಉಪಯುಕ್ತ ವಸ್ತುಗಳಿಂದೊಡಗೂಡಿದ ಪ್ರದರ್ಶನ ರಂಗದಲ್ಲಿ ಸರಕಾರದವರು ಮೂರು ದಿನಗಳ ತನಕ ಸಿನಿಮಾ ಕೇಂದ್ರವನ್ನು ತೆರೆದಿದ್ದರು. ಪ್ರದರ್ಶನದಲ್ಲಿ ಉಪ್ಪಿನ ಕುದ್ರು, ಕೋಳಿಯವರ ಸಂಘದ ಕಾಗ ಮತ್ತು ಚೂಡಾಮಣಿ ಪ್ರಸಂಗಗಳ ಗೊಂಬೆಯಾಟಗಳು ಮನೋರಂಜಕವಾಗಿದ್ದುವು. ತಾ 24 ರ ರಾತ್ರಿ ಕರ್ಣಾರ್ಜುನ ಎಂಬ ನಾಟಕವು ಅತ್ಯುತ್ತಮ ರೀತಿಯಿಂದ ಅಭಿನಯಿಸಲ್ಪಟ್ಟಿತು. ತಾ 25 ರ ರಾತ್ರಿ ಕುಂದಾಪುರದ ಪ್ರಸಿದ್ಧ ವಕೀಲರೆಲ್ಲರೂ ಭಾಗವಹಿಸಿ ದ್ರೌಪದೀ ಪ್ರತಾಪ ಮತ್ತು ಭೀಷ್ಮ ವಿಜಯ ಎಂಬ ಬಯಲಾಟಗಳನ್ನೂ ಜನಮೆಚ್ಚುವಂತೆ ನಿರ್ವಹಿಸಿದರು ದ್ರೌಪದಿ ಪ್ರತಾಪದ ದಮಯಂತಿಯ ಪಾತ್ರವನ್ನು ಶ್ರೀ ವೈ. ಮಂಜಯ್ಯ ಸೆಟ್ಟಿ, ಎಂ.ಎಲ್.ಎ. ಅವರು ವಹಿಸಿದ್ದರು.

ತಾ 26 ರಂದು ಸಂಜೆ ಪ್ರದರ್ಶನ ಮುಕ್ತಾಯವಾಯಿತು. ನಂತರ ಬೋರ್ಡ್ ಹ್ಯಾಸ್ಕೂಲಿನ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಶ್ರೀ ಎನ್. ಎನ್. ಸುವರ್ಣ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ರಾತ್ರಿ ಸಾಧಾರಣ 800 ಜನರಿಗೆ ಊಟದ ವಿನಿಯೋಗವು ಮಾಡಲಾಗಿತ್ತು. ಅದು ಮುಗಿದ ಬಳಿಕ ಪಾಣಿಗ್ರಹಣ ಎಂಬ ನಾಟಕವು ಅಭಿನಯಿಸಲ್ಪಟ್ಟಿತು.

ಅಶ್ವತ್ಥಪುರ— ದ. ಕನ್ನಡ ಜಿಲ್ಲೆಯ ಅಶ್ವತ್ಥಪುರದ ಸಾಂಬರ ನಿವಾಸದ ಶ್ರೀ. ಎಮ್. ಕೆ. ವೆಂಕಟರಮಣನವರು ತಮ್ಮ ಧರ್ಮಪತ್ನಿ ಶ್ರೀಮತಿ ಕಮಲಮ್ಮನವರ ಹೆಸರಿನಲ್ಲಿ ಒಂದು ಹೊಸ ಕಟ್ಟಡವನ್ನು ಕಟ್ಟಿಸಿ ವಾಣೀವಿಲಾಸ ವಿದ್ಯಾ ಸಂಘಕ್ಕೆ ದಾನವಾಗಿ ಕೊಟ್ಟಿದ್ದಾರೆ. ಅದರ ಉದ್ಘಾಟನವು ತಾ. 18-4-51 ನೇ ದಿನ ಡಾ| ಎಮ್. ಗೋಪಾಲ ಕೃಷ್ಣಯ್ಯರ ಹಸ್ತದಿಂದ ವಿಜೃಂಭಣೆಯಿಂದ ನೆರವೇರಿತು.

ಮದುವೆಯಾದ ಸ್ತ್ರೀ ಪುರುಷರ ಸಲುವಾಗಿ

ಬರೆಯಲ್ಪಟ್ಟ ಪುಸ್ತಕ

ಮಿತ ಸಂತತಿ

ಹುಟ್ಟುವ ಮಕ್ಕಳು ಆರೋಗ್ಯ ಸಂಪತ್ತು ಸೌಭಾಗ್ಯ ಮೊದಲಾದುವನ್ನು ಸಾಕಷ್ಟು ಪಡೆಯುವ ಹಾಗೆ ಹೆತ್ತವರು ಸಾಧಿಸಲಾಗುವಂತೆ ಅತ್ಯನುಕೂಲವಾದ ಪರಿಸ್ಥಿತಿ ಯಾವುದೋ ಅದರಂತೆ ದಂಪತಿಗಳು ಮಕ್ಕಳನ್ನು ಹೆರುವ ಹಾಗೆ ಅವಶ್ಯವಾದ ತತ್ವಗಳನ್ನು ಬೋಧಿಸುವ ನವೀನ ಪುಸ್ತಕ **ಬೆಲೆ 0-8 0**

ಶ್ರೀ. ಕೆ. ಕೆ. ಶೆಟ್ಟಿ ನಿರ್ಭೀತ ಲೇಖನಿಯಿಂದ ಹೊರಹೊಮ್ಮಿದ ನವೀನ ಸಾಮಾಜಿಕ ಕಾದಂಬರಿ.

ಸನ್ಯಾಸಿಯ ಸೋಗಿನಲ್ಲಿ!

ವೇಶ್ಯಾಪುತ್ರಿಯಾದರೂ ನೀತಿವಂತ ಜೀವನ ನಡೆಸುವ ಮನಸ್ಸುಳ್ಳವಳಾದರೆ ಸಮಾಜವು ಅದಕ್ಕೆ ಹೇಗೆ ಅಡ್ಡಿ ಮಾಡಿ ಅವಳ ಜೀವನವನ್ನು ಕೆಡಿಸಲು ಕಾರಣವಾಗುವುದೆಂಬುದನ್ನು ಹೃದ್ರಾವಕವಾಗಿ ಚಿತ್ರಿಸುವ ಅತ್ಯಾಧುನಿಕ ಕಾದಂಬರಿ.

ಸನ್ಯಾಸದ ಮರೆಯಲ್ಲಿ ನಡೆಯುವ ವಿನ್ಯಾಸದ ಸತ್ಯಕತೆ.

ಬೆಲೆ 0—10—0. ಇತರ ಪುಸ್ತಕಗಳ ಕೆಟಲಾಗಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಗವರ್ನರ್ ಶ್ರೀ. ಶ್ರೀಪ್ರಕಾಶರ ಜಿಲ್ಲಾ ಸಂಚಾರ
ಎಲ್ಲೆಲ್ಲೂ ಸಂಭ್ರಮದ ಸ್ವಾಗತ.

ಮದ್ರಾಸು ಪ್ರಾಂತದ ಗವರ್ನರ್ ಶ್ರೀ ಶ್ರೀಪ್ರಕಾಶರು ಇದೇ ತಾ 21ರಲ್ಲು ರಾತ್ರಿಯ ರೈಲಿನಲ್ಲಿ ಬಂದವರು ತಾ. 26ರ ವರೆಗೆ ದ.ಕ.ಜಿಲ್ಲೆಯ ಸಂಚಾರಮಾಡಿ ಅಂದು ಸಂಜೆ ಮದ್ರಾಸಿನತ್ತ ಹಿಂತೆರಳಿದರು. ಗವರ್ನರರೊಂದಿಗೆ ಅವರ ಬಂಧುಗಳಾದ ಶ್ರೀ ಅರುಣಪ್ರಕಾಶರೂ ಅವರ ಕಾರ್ಯದರ್ಶಿಗಳಾದ ಶ್ರೀ ರಾಮಮೂರ್ತಿಯವರೂ ಸೇನಾ ಕಾರ್ಯದರ್ಶಿಗಳಾದ ಮೇಜರ್ ಭಗವಾನ್ ದಾಸರೂ ಬಂದಿದ್ದರು.

ಮುನಿಸಿಪಾಲಿಟಿಯ ಮತ್ತು ಜಿಲ್ಲಾ ಬೋರ್ಡಿನ ಬಿನ್ನವತ್ತಳೆ.

ಶ್ರೀ ಶ್ರೀಪ್ರಕಾಶರಿಗೆ ತಾ. 22 ರಂದು ಬೆಳಿಗ್ಗೆ ಕೇಂದ್ರ ಮೈದಾನಿನಲ್ಲಿ ಮಂಗಳೂರು ಮುನಿಸಿಪಾಲಿಟಿಯವರೂ ಜಿಲ್ಲಾ ಬೋರ್ಡಿನವರೂ ಪ್ರತ್ಯ ಪ್ರತ್ಯೇಕ ಬಿನ್ನವತ್ತಳೆಗಳನ್ನು ಅರ್ಪಿಸಿದರು. ಮೈದಾನಿಗೆ ಬಂದೊಡನೆ ಜಿಲ್ಲಾ ಕಲೆಕ್ಟರ್ ಶ್ರೀ ಎ. ಮಾಲಿಂಗಂ ಚೆಟ್ಟಿಯಾರರು ಮಾನ್ಯ ಗವರ್ನರರನ್ನು ಸ್ವಾಗತಿಸಿ ಮುನಿಸಿಪಲ್ ಚೇರ್‌ಮೆನ್ ಶ್ರೀ ಕೆ. ಸೂರ್ಯನಾರಾಯಣ ಅಡಿಗ, ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆ, ಜಿಲ್ಲಾ ಪೋಲೀಸ್ ಅಧಿಕಾರಿ ಶ್ರೀ ರಾಮಯ್ಯ ಪಿಳ್ಳೆ ಮುಂತಾದವರ ಪರಿಚಯ ಮಾಡಿಕೊಟ್ಟರು. ಬಳಿಕ ಗವರ್ನರರು ಪೋಲೀಸ್ ಪಡೆಯವರು ಕೊಟ್ಟ ಗೌರವ ರಕ್ಷೆಯನ್ನು ಸ್ವೀಕರಿಸಿ, ಎಲ್ಲರ ಕರತಾಡನಗಳೊಂದಿಗೆ ವೇದಿಕೆ ಏರಿದರು.

ನಗರಸಭಾಧ್ಯಕ್ಷ ಶ್ರೀ. ಸೂರ್ಯನಾರಾಯಣ ಅಡಿಗರು ಅರ್ಪಿಸಿದ ನಗರ ಸಭೆಯ ಬಿನ್ನವತ್ತಳೆಯಲ್ಲಿ "ನಮ್ಮ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ತಾವು ಸಲ್ಲಿಸಿದ ಸೇವೆಗಾಗಿ ನಾವು ಕೃತಜ್ಞರಾಗಿದ್ದೇವೆ. ತಾವು ಸಾರ್ವಜನಿಕ ಕಾರ್ಯಕರ್ತರಾಗಿ, ಪಾರ್ಲಿಮೆಂಟಿನ ಸದಸ್ಯರಾಗಿ, ರಾಜಕೀಯ ಮುತ್ಸದ್ದಿಗಳಾಗಿ, ಮಂತ್ರಿಗಳಾಗಿ, ಗವರ್ನರರಾಗಿ ರಾಷ್ಟ್ರಕ್ಕೆ ಸಲ್ಲಿಸಿದ ಸೇವೆಗಾಗಿ ರಾಷ್ಟ್ರ ತಮಗೆ ಋಣಿಯಾಗಿದೆ. ಈ ಸಂದರ್ಭದಲ್ಲಿ ನಮ್ಮ ಕೆಲ ಸಮಸ್ಯೆಗಳನ್ನು ತಮ್ಮ ಮುಂದಿಡಬಯಸುತ್ತೇವೆ. ನಾವು ವಿದ್ಯೆಯಲ್ಲಿ ಮುಂದುವರಿದರೂ ಆರ್ಥಿಕ ವಿಚಾರದಲ್ಲೂ ಕೈಗಾರಿಕೆಯ ವಿಚಾರದಲ್ಲೂ ಮುಂದುವರಿದಿಲ್ಲ. ಉತ್ತಮ ನೀರು ನಗರಕ್ಕೊದಗಬೇಕಾಗಿ ನಾವು ಹಲ ಕಾಲದಿಂದ ಕಾತರರಾಗಿದ್ದೇವೆ, ಇಪ್ಪತ್ತು ಲಕ್ಷದಷ್ಟು ವೆಚ್ಚಮಾಡಿದ್ದೇವೆ. ಆದರೂ ನೀರು ದೊರೆತಿಲ್ಲ. ನಮ್ಮ ನಗರದ ಇರುವತ್ತು ಮೈಲುಗಳ ರಸ್ತೆಯಲ್ಲಿ ಏಳು ಮೈಲಿಗೆ ಮಾತ್ರ ಡಾಮರು ಹಾಕಿದೆ. ಈಗಲ್ಲದೆ ನಮಗಿನ್ನೂ ಜೋಗಿನಿಂದ ವಿದ್ಯುತ್ ದೊರೆತಿಲ್ಲ. ನಗರದ ಆರೋಗ್ಯ ಚೆನ್ನಾಗಿಲ್ಲ. ಇದನ್ನೆಲ್ಲ ನಿಮ್ಮ ಸರಕಾರ ಪರಿಗಣಿಸಬೇಕು." ಎಂದು ಮುಖ್ಯವಾಗಿ ಬಿನ್ನವಿಸಲಾಗಿತ್ತು.

ಜಿಲ್ಲಾ ಬೋರ್ಡಿನ ಅಧ್ಯಕ್ಷ ಶ್ರೀ. ಮಂಜಯ್ಯ ಹೆಗ್ಡೆಯರು ಅರ್ಪಿಸಿದ ಜಿಲ್ಲಾ ಬೋರ್ಡಿನ ಬಿನ್ನವತ್ತಳೆಯಲ್ಲಿ ಈ ಕೆಳಗಿನ ವಿಚಾರಗಳನ್ನು ಗವರ್ನರರ ಗಮನಕ್ಕೆ ತರಲಾಯಿತು. "ನಮ್ಮ ಜಿಲ್ಲೆಯು ನಿಸರ್ಗ ಸೌಂದರ್ಯದ ನಿಧಿಯಾಗಿದ್ದರೂ ಅದರಿಂದಲೇ ನಮಗೆ ಬಾಧಕವಾಗಿದೆ. ಹರಿಯುತ್ತಿರುವ ನದಿ ತೊರೆಗಳಿಂದ ಸಾರಿಗೆ ಸಂಪರ್ಕಗಳಿಗೆ ತೊಂದರೆಯಾಗಿದೆ. 800 ಗ್ರಾಮಗಳ 4021 ಚದರಮೈಲು ವಿಸ್ತೀರ್ಣದ ಜಿಲ್ಲೆಯಲ್ಲಿ ಬರೇ 1470 ಮೈಲುಗಳಷ್ಟು ರಸ್ತೆಯೂ 60 ಮೈಲು ರೈಲ್ವೆ ರಸ್ತೆಯೂ ಇದೆ. 200 ಇಂಚು ಮಳೆ ಬೀಳುವುದರಿಂದ ರಸ್ತೆಗಳೆಲ್ಲ ಹಾಳಾಗುತ್ತವೆ. ರಸ್ತೆಗೆ ತಾರು ಹಾಕಲು ಸರಕಾರವು ಸಹಾಯ ನೀಡಬೇಕು. ಮಂಗಳೂರು—ಹಾಸನ ರೈಲು ಮಾರ್ಗದ ಕೆಲಸವು ಬೇಗನೇ ಆಗಬೇಕು. ಮಂಗಳೂರು ಬಂದರವನ್ನು ಅಭಿವೃದ್ಧಿಗೊಳಿಸಬೇಕು ಮತ್ತು ಜೋಗಿನಿಂದ ವಿದ್ಯುತ್ ಆದಷ್ಟು ಬೇಗನೆ ದೊರೆಯುವಂತಾಗಬೇಕು" ಇವಲ್ಲದೆ ಜಿಲ್ಲಾ ಬೋರ್ಡಿನ ಬಿನ್ನವತ್ತಳೆಯಲ್ಲಿ ಸರಕಾರವು ಈ ಜಿಲ್ಲೆಗಾಗಿ ಇತ್ತೀಚೆಗೆ ಕೈಕೊಂಡ ಕಾರ್ಯಗಳನ್ನು ತಿಳಿಸಿ. ಸರಕಾರಕ್ಕೆ ಕೃತಜ್ಞತೆ ಸಲ್ಲಿಸಲಾಗಿತ್ತು

ಗವರ್ನರರ ಉತ್ತರ

ಗವರ್ನರರು ತಮ್ಮ ಭಾಷಣದಲ್ಲಿ ಲೋಕಲ್ ಬೋರ್ಡುಗಳಿಂದ ಹೆಚ್ಚಿನ ಸಾರ್ವಜನಿಕ ಸೇವೆಸಲ್ಲಿಸಬಹುದೆಂಬುದನ್ನು ವಿವರಿಸುತ್ತ ಸಾರ್ವಜನಿಕರು ಈ ಸಂಸ್ಥೆಗಳಿಗೆ ಸರಿಯಾದ ಸಹಕಾರ ನೀಡಬೇಕೆಂದರು. ತಾನು ಈ ಜಿಲ್ಲೆಗೆ 1935 ರಲ್ಲು ರಾಜಕೀಯ ಪರಿಷತ್ತಿನ ಅಧ್ಯಕ್ಷನಾಗಿ ಬಂದಿದ್ದೆ. ಅದು ನನ್ನೊಡನೆ ಕಾರ್ಯವೆಸಗಿದವರು ನನಗೆ ಭೇಟಿ ಕೊಡಬೇಕಾಗಿ ಕೇಳಿಕೊಳ್ಳುತ್ತೇನೆ ಎಂದು ಹೇಳುತ್ತ ಅಂದು ಅವರ ಭಾಷಣಗಳನ್ನು ಭಾಷಾಂತರಿಸಿದ ಶ್ರೀ ಎಸ್. ಎಸ್. ಕಿಲ್ಲೆಯವರ ನೆನಪು ಮಾಡಿದರು. ಮುಂದುವರಿಸುತ್ತ ಅವರು ಅಂದು ನಾವು ಭಾಷಾ ಪ್ರಾಂತ ರಚನೆಯು ಆಗತಕ್ಕದೆಂದು ಹೇಳುತ್ತಿದ್ದೆವು. ಇಂದು ನಮಗೆ ಅದೇ ಒಂದು ಸಮಸ್ಯೆಯಾಗಿದೆ ಎಂದು ಹೇಳುತ್ತಾ ತಮ್ಮ ಅಭಿಪ್ರಾಯ ಈಗ ಬದಲಾಗಿದೆಯೆಂಬುದನ್ನು ಸೂಚಿಸಿದರು.

"ನಿಮ್ಮಲ್ಲಿ ಆತ್ಮತೃಪ್ತಿಗೊಳ್ಳುವ ಗುಣವಿದೆ. ಇದರಿಂದಾಗಿ ತಾವು ಪ್ರಕೃತಿಯೊಡನೆಯೂ ಸರಕಾರದೊಡನೆಯೂ ಆತ್ಮತೃಪ್ತಿಯಿಂದ ಹೋರಾಟ ಮಾಡಿ ಜಯಿಸಬಹುದು. ಆದರೂ ನೀವು ಸ್ವಾವಲಂಬಿಗಳಾಗಬೇಕು. ನಿಮ್ಮ ಕೆಲಸಗಳನ್ನು ನೀವೇ ಮಾಡಿ, ಸಮಸ್ಯೆ ಸಂಕಷ್ಟಗಳಿಲ್ಲದವರಾಗಬೇಕು. ಉತ್ತಮ ಮಾರ್ಗಗಳನ್ನು ಒದಗಿಸುವಾಗ ಕಾಲು ನಡೆಯುವ ಪ್ರಯಾಣಿಕರ ಸೌಕರ್ಯವನ್ನು ಕಡೆಗಣಿಸಬಾರದು. ಈಗೀಗ ರಸ್ತೆಗೆ ತಾರುಹಾಕಿ ಚೆನ್ನಾಗಿ ಮಾಡಿದ್ದಾರೆ. ಈ ಕಾಲುದಾರಿಯನ್ನು ಕಡೆಗಣಿಸಿ ಅದರಲ್ಲಿ ಜನ ನಡೆಯದಂತಾಗುತ್ತದೆ. ಜನರು ತಮ್ಮ ಸಾರ್ವಜನಿಕ ಕರ್ತವ್ಯಗಳನ್ನು ಯೋಗ್ಯ ನಾಗರೀಕರಂತೆ ಮಾಡಬೇಕು. ಎಲ್ಲಾ ಕಾರ್ಯಗಳೊಂದಿಗೆ ಲೋಕಲ್ ಬೋರ್ಡುಗಳು ಮಕ್ಕಳಿಗೆ ಶಿಕ್ಷಣವೀಯುವ ಕೆಲಸ ಹೆಚ್ಚಾಗಿ ಮಾಡಬೇಕು" ಎಂದು ಮುಂತಾಗಿ ತಿಳಿಸಿ ಜಿಲ್ಲೆಯ ನಾಗರಿಕರನ್ನು ಅಭಿನಂದಿಸಿದರು. ಅಲ್ಲಿಂದ ಅವರು ಡಾ॥ ಎಮ್. ವಿ. ಶೆಟ್ಟಿಯವರ ಚಿಕಿತ್ಸಾ ಭವನದಲ್ಲಿ ಚಿಕಿತ್ಸೆಹೊಂದುತ್ತಿರುವ ಕರ್ನಾಟಕಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಾಗಿರುವ ಶ್ರೀ ಎಸ್. ಎಸ್. ಕಿಲ್ಲೆಯವರನ್ನು ಕಂಡು ಮಾತನಾಡಿದರು. ಅಲ್ಲಿಂದ ಮೂಡಬಿದ್ರೆಗೆ ಬಂದು ಅಲ್ಲಿಯ ತ್ರಿಭುವನ ಚೂಡಾಮಣಿಯೆಂಬ ಸಾವಿರ ಕಂಬದ ಬಸದಿಯನ್ನು ನೋಡಿ ಅಲ್ಲಿನ ಕಂಬಗಳಲ್ಲಿರುವ ಕುಸುರಿ ಕೆಲಸಗಳ ಸೊಗಸನ್ನು ಶ್ಲಾಘಿಸಿದರು. ಅಲ್ಲಿ ಅವರನ್ನು ಶ್ರೀ ಧರ್ಮ ಸಾಮ್ರಾಜ್ಯ ಮೊದಲಾದವರು ಸ್ವಾಗತಿಸಿ ಬಸದಿಯನ್ನು ತೋರಿಸಿದರು. ಗವರ್ನರರು ಪ್ರಯಾಣ ಮುಂದರಿಸುತ್ತಾ ಕಾರ್ಕಳಕ್ಕೆ ಬಂದು ಅಲ್ಲಿಯ ಚತುರ್ಮುಖ ಬಸದಿಯನ್ನು ಸಂಜೆಯಲ್ಲಿ ಗುಮ್ಮಟ ಬೆಟ್ಟದ ಗೋಮಟೇಶ್ವರನ ಬಿಂಬವನ್ನು ಕಂಡು ಹರ್ಷಗೊಂಡರು.

ಉಡುಪಿಯಲ್ಲಿ ನಗರ ಸಭೆಯ ಮಾನಪತ್ರ

ಕಾರ್ಕಳದಿಂದ ಮಾನ್ಯ ಗವರ್ನರರು, ಪೂರ್ವಾಹ್ನ ಉಡುಪಿಗೆ ಆಗಮಿಸಿದರು. ಪೇಟೆಲೆಂಡ್ ಬಂಗ್ಲೆಯಲ್ಲಿ ಮುನಿಸಿಪಲ್ ಚೇರ್‌ಮೆನ್ ಶ್ರೀ ಯು. ಎಸ್. ನಾಯಕ್, ವೈಸ್ ಚೇರ್‌ಮೆನ್ ಡಾ॥ ಟಿ. ವ್ಯಾಸರಾವ್, ಶ್ರೀ ಟಿ ಎ. ಪೈ, ಎಮ್. ಎಲ್. ಎ. ಶ್ರೀ ಡಿ ಕೃಷ್ಣ, ಸಬ್ ಕಲೆಕ್ಟರ್ ಮೊದಲಾದವರು ಸ್ವಾಗತಿಸಿದರು. ಬಳಿಕ ಮಾನ್ಯ ಶ್ರೀ ಶ್ರೀಪ್ರಕಾಶರು ಉಡುಪಿ ಶ್ರೀ ಕೃಷ್ಣಮಠಕ್ಕೆ ಬಂದಾಗ ಸ್ವಾಗತಿಸಲ್ಪಟ್ಟು ಶ್ರೀ ಕೃಷ್ಣದರ್ಶನ ಪಡೆದು ಪರ್ಯಾಯ ಶ್ರೀ ಪೇಜಾವರ, ಮೊದಲಾದ ಸ್ವಾಮಿಗಳನ್ನು ಭೇಟಿಯಾಗಿ ಅಲ್ಲಿಂದ ಹೊರಟು ಮರಳಿ ಬಂಗ್ಲೆಗೆ ತೆರಳಿದರು.

ಸಂಜೆ ಮುನಿಸಿಪಲ್ ತೆಂಕಣ ಹಾ. ಎ. ಶಾಲೆಯಲ್ಲಿ ಮಾನ್ಯ ಗವರ್ನರರಿಗೆ ಚೇರ್‌ಮೆನ್ ಶ್ರೀ ಯು. ಎಸ್. ನಾಯ್ಕರು ನಗರ ಸಭೆಯ ಮಾನಪತ್ರವನ್ನೋದಿ ಒಪ್ಪಿಸಿದರು. ಮಾನ್ಯ ಗವರ್ನರರು ಉತ್ತರವೀಯುತ್ತಾ ನಗರ ಸಭೆಗಳು ದೇಶಸೇವೆ ಮಾಡುವವರಿಗೆ ತರಬೇತಿ ಕೇಂದ್ರಗಳಾಗಿವೆ ಎಂದು ಹೇಳಿ ತರುಣ ತರುಣಿಯರು ನಗರ ಸಭೆಗಳ ಸದಸ್ಯರಾಗಲು ಮುಂದೆ ಬರಬೇಕೆಂದು ಸೂಚಿಸಿದರು. ಮತ್ತೆ ಬಂದರದ ಕುರಿತು ಮಾತನಾಡುತ್ತಾ, ಮಂಗಳೂರು ಪ್ರಬುದ್ಧ ಬಂದರವಾಗುವುದಾದರೂ ಮಲ್ಪೆಗೂ ಸೌಕರ್ಯಗಳು ಸಿಕ್ಕುವುದಾಗಿ ಹೇಳಿದರು. ರೈಲ್ವೆ ಮಾರ್ಗ ಆಗತಕ್ಕದೆಂಬುದಕ್ಕೆ ಸಂಶಯವಿಲ್ಲವಾದರೂ ಕೇಂದ್ರವು ಆರ್ಥಿಕ ಪರಿಸ್ಥಿತಿಗೊಳಪಟ್ಟು ಬೇಗನೆ ಈ ಭಾಗದಲ್ಲಿ ಹೆಚ್ಚಿನ ರೈಲ್ವೆ ಸೌಕರ್ಯಗಳನ್ನು ನೀಡುವುದೆಂದು ಅಭಿಪ್ರಾಯಪಟ್ಟರು. ಕೊನೆಯದಾಗಿ ಈ ನಗರ ಸಭೆಯ ವ್ಯವಹಾರ ಕ್ಷೇತ್ರದಲ್ಲಿರುವ ಸರಕಾರಿ ಜಾಗದ ಟೇಕ್ಸ್ ವಸೂಲಿ ಕುರಿತು ಇರುವ ತಕರಾರನ್ನು ತಾನು ಪರಿಶೀಲಿಸುವುದಾಗಿ ಆಶ್ವಾಸನೆಯಿತ್ತರು. ವೈಸ್ ಚೇರ್‌ಮೆನ್ ಡಾ॥ ಟಿ. ವ್ಯಾಸರಾಯರು ಧನ್ಯವಾದಗಳನ್ನರ್ಪಿಸಿದರು. ನಂತರ ಮಾನ್ಯ ಗವರ್ನರರು ಮುನಿಸಿಪಲ್ ಆಫೀಸನ್ನು ನೋಡಿ ಮಂ[illegible]ಯಲ್ಲಿ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜನ್ನು ಸಂದರ್ಶಿಸಿದರು. ಹೆಮ್ಮಕ್ಕಳ ಪ್ರವೇಶಕ್ಕಾಗಿ ಸರಕಾರದೊಡನೆ ಹೋರಾಡಿ ಕಾಲೇಜಿಗೆ ಪ್ರವೇಶ ದೊರಕಿಸಿಕೊಂಡ ಕುಮಾರಿ ಶಾಂತಾ ಬಾಯಿಯು ಮಾನ್ಯ ಗವರ್ನರರಿಗೆ ಪುಷ್ಪ ಮಾಲಿಕೆಯನ್ನು ಅರ್ಪಿಸಿದರು. ಶ್ರೀ. ಟಿ. ಎ. ಪೈ. ಎಂ. ಎಲ್. ಎ. ಮೊದಲಾದವರೊಂದಿಗೆ ಕಾಲೇಜನ್ನು ಪರಿಶೀಲಿಸಿ ಶೀಘ್ರ ಪ್ರಗತಿಗಾಗಿ ಬಹಳ ಸಂತೋಷವನ್ನು ವ್ಯಕ್ತಪಡಿಸಿ ಕಾರ್ಕಳ ಮಾರ್ಗವಾಗಿ ಮಂಗಳೂರಿಗೆ ತೆರಳಿದರು.

ಧರ್ಮಸ್ಥಳದಲ್ಲಿ ಸ್ವಾಗತ

ಗವರ್ನರರು ತಾ. 23ರಲ್ಲು ಧರ್ಮಸ್ಥಳದ ಶ್ರೀ ಮಂಜುನಾಥ ದೇವಸ್ಥಾನವನ್ನು ಸಂದರ್ಶಿಸಿದರು. ಶ್ರೀ ಡಿ. ಮಂಜಯ್ಯ ಹೆಗ್ಡೆಯವರು ದೇವಸ್ಥಾನದ ಗೌರವ ಮರ್ಯಾದೆಗಳೊಂದಿಗೆ ಅವರನ್ನು ಸ್ವಾಗತಿಸಿದರು. ಧರ್ಮಸ್ಥಳಕ್ಕೆ ಹೋಗುವಾಗ ದಾರಿಯಲ್ಲಿ ಗವರ್ನರರು ಎರಡು ಗ್ರಾಮಗಳಲ್ಲಿ ತುಸು ಕಾಲವಿದ್ದು ಗ್ರಾಮಸ್ಥರೊಡನೆ ಅಲ್ಲಿ ನೀರಿನ ಸರಬರಾಯಿ ಮತ್ತು ನೀರಾವರಿಯ ಅನುಕೂಲತೆಗಳನ್ನು ವಿಚಾರಿಸಿದರು. ಬಂಟ್ವಾಳದ ಸಬ್ ಮೆಜಿಸ್ಟ್ರೇಟ್ ಕೋರ್ಟ್, ಜೈಲ್ ಮತ್ತು ಪೋಲೀಸ್ ಸ್ಟೇಶನುಗಳಿಗೆ ಆಕಸ್ಮಿಕ ಭೇಟಿಯಿತ್ತರು. ಮಂಗಳೂರಿಗೆ ವಾಪಾಸು ಬರುವಾಗ ಬಂಟ್ವಾಳದ ಐತಿಹಾಸಿಕ ಸ್ಥಳದಲ್ಲಿ ನೆರೆದ ಜನರನ್ನುದ್ದೇಶಿಸಿ ಗವರ್ನರರು ಸಮಗ್ರ ವಿಕಾಸಯೋಜನೆಯನ್ನು ವಿವರಿಸಿ ಗ್ರಾಮಸ್ಥರು ಅದಕ್ಕೆ ಸಹಕಾರ ನೀಡಬೇಕೆಂದು ಕೇಳಿಕೊಂಡರು. ಬಂಟ್ವಾಳದ ದೇವಸ್ಥಾನವನ್ನು ಸಂದರ್ಶಿಸಿ ಆ ಊರಿನ ಯುವಜನತೆ ವ್ಯಾಯಾಮ ಮಂದಿರದ ಸದಸ್ಯರ ಶಾರೀರಿಕ ಸಾಂಘಿಕ ಪ್ರದರ್ಶನವನ್ನು ನೋಡಿದರು.

ಮಂಗಳೂರಲ್ಲಿ ಸಂಸ್ಥೆಗಳಿಗೆ ಭೇಟಿ

ತಾ 24 ರಲ್ಲು ಬೆಳಿಗ್ಗೆ ಮಾನ್ಯ ಗವರ್ನರರು ಸೈಂಟ್ ಎಲೋಶಿಯಸ್ ಕಾಲೇಜಿನ ಇಗರ್ಜಿ, ಸೈಂಟ್ ಜೋಸೆಫ್ ಸೆಮಿನರಿ ಮಠ, ಲೊರ್ಡ್ಸ್, ಸೈಂಟ್ ಆಂತೋನಿಸ್ ಚ್ಯಾರಿಟಿ ಇನ್ಸ್ಟಿಟ್ಯೂಟನ್ನೂ ಮತ್ತು ಸಂಜೆ ಕೊಮನ್‌ವೆಲ್ತ್ ಹಂಚಿನ ಕಾರ್ಖಾನೆಯನ್ನೂ ಸಂದರ್ಶಿಸಿ ಮಾಹಿತಿ ಪಡೆದುಕೊಂಡರು.

ಮಾನ್ಯ ಗವರ್ನರರು ತಾ 25 ರಲ್ಲು ಸ್ಥಳೀಯ ಹರಿಜನ ವಸತಿಯ ಶಾಲೆಯನ್ನು, ಹರಿಜನರ ಮನೆಗಳನ್ನೂ ಸಂದರ್ಶಿಸಿದರು. ಹರಿಜನ ಕಾಲನಿಯಲ್ಲಿ ಶ್ರೀಗಳಾದ ಯು. ಪಿ. ಮಲ್ಯ ಮತ್ತು ಸಾಲಿಯಾನರು ಗವರ್ನರರನ್ನು ಸ್ವಾಗತಿಸಿದರು. ಶಾಲೆಯಲ್ಲಿ ಗವರ್ನರರು ಭಾಷಣ ಮಾಡುತ್ತಾ "ಜನರು ತಮಗಿಂತ ಮೇಲೆ ಇರುವವರನ್ನು ತಮ್ಮ ಸರಿಸಮಾನರಾಗಿ ಇರಲು ಇಚ್ಛಿಸುತ್ತಿರುವರು. ಆದರೆ ಕೆಳಗಿನವರು ತಮ್ಮ ಸ್ಥಾನಕ್ಕೆ ಬಂದು ತನ್ನ ತಮ್ಮ ಸಮಾನರಾಗಬೇಕೆಂದು ಅವರು ಇಚ್ಛಿಸುವದಿಲ್ಲ. ಮಂಗಳೂರಿನ ಹರಿಜನರು ಕೂಡಾ ತಮ್ಮೊಳಗೆ ಭೇದವನ್ನಿಟ್ಟುಕೊಂಡಿರುವರು. ಈ ರೀತಿಯಲ್ಲಿ ಭೇದ ಮಾಡದೆ ತಮ್ಮೊಳಗೆ ಐಕ್ಯವನ್ನು ಸಾಧಿಸಿಕೊಳ್ಳಬೇಕು" ಎಂದು ಹೇಳಿ ಈ ಸಂಸ್ಥೆಗೆ ಶುಭವನ್ನು ಕೋರಿದರು.

ತಾ 26ರಲ್ಲು ಮಾನ್ಯ ಗವರ್ನರ್ ಶ್ರೀ ಶ್ರೀ ಪ್ರಕಾಶರು ಬೋಳಾರದಲ್ಲಿರುವ ಶ್ರೀ ರಾಮಕೃಷ್ಣ ಮಿಶನನ್ನು ಸಂದರ್ಶಿಸಿದರು. ಆಶ್ರಮದಲ್ಲಿರುವ ಭಗಿನಿ ಸಮಾಜವನ್ನು ಸಂದರ್ಶಿಸಿದಾಗ ಶ್ರೀಮತಿ ಕಲ್ಯಾಣಿ ಶೆಟ್ಟಿಯವರು ಅವರನ್ನು ಸ್ವಾಗತಿಸಿದರು. ಸಮಾಜದ ಚಟುವಟಿಕೆಗಳನ್ನು ಕಂಡು ಸಂತೋಷಪಟ್ಟು ಗವರ್ನರರು ಈ ಭಗಿನಿ ಸಮಾಜಕ್ಕೆ ರೂ. 250 ದಾನ ಕೊಟ್ಟರು. ಆ ಮೇಲೆ ಶ್ರೀ ಶ್ರೀ ಪ್ರಕಾಶರು ಗಿಲ್ಡ್ ಆಫ್ ಸರ್ವಿಸಿಗೆ ಸಂದರ್ಶನವಿತ್ತಾಗ ಅದರ ಕಾರ್ಯದರ್ಶಿ ಶ್ರೀ ಶ್ರೀ ಕಮಲಾ ಎಸ್. ಆಳ್ವರು ಅವರನ್ನು ಸ್ವಾಗತಿಸಿದರು. ಸಂಸ್ಥೆಯ ಕಾರ್ಯಕಲಾಪಗಳನ್ನು ನೋಡಿ ಗವರ್ನರರು ಶುಭವನ್ನು ಕೋರಿದರು. ಬಳಿಕ ಕಂಕನಾಡಿಯ ಫಾದರ್ ಮುಲ್ಲರ್ಸ್ ಆಸ್ಪತ್ರೆಯನ್ನು ಸಂದರ್ಶಿಸಿದರು. ತರುವಾಯ ಕಂಕನಾಡಿಯ ಈಶ್ವರಾನಂದ ಮಹಿಳಾ ಸೇವಾಶ್ರಮವನ್ನು ಸಂದರ್ಶಿಸಿದಾಗ ಆಶ್ರಮದ ಗೌರವಕಾರ್ಯದರ್ಶಿ ಶ್ರೀ ಎನ್. ರಾಮರಾಯರು ಗವರ್ನರರನ್ನು ಸ್ವಾಗತಿಸಿದರು. ಇಂತಹ ಸಂಸ್ಥೆಗಳಲ್ಲಿದ್ದು ವಿದ್ಯಾಭ್ಯಾಸವನ್ನು ಪಡೆವ ವಿದ್ಯಾರ್ಥಿ ವಿದ್ಯಾರ್ಥಿನಿಯರ ಮುಂದಿನ ಜೀವನದಲ್ಲಿ ಉಂಟಾಗುವ ಪ್ರಗತಿಯನ್ನು ಸಂಸ್ಥೆಗಳು ನೋಡಬೇಕು. ಇದಕ್ಕಾಗಿ ಒಂದು ರಿಜಿಸ್ಟರ್ ಇಡಬೇಕು. ಸ್ತ್ರೀಯರು ಕೂಡಾ ತಮ್ಮೊಳಗೆ ಒಗ್ಗಟ್ಟನ್ನು ಇಟ್ಟುಕೊಳ್ಳಬೇಕು. ಅತ್ತೆ ಸೊಸೆಯರ ಜಗಳ ನಿಲ್ಲಬೇಕು ಎಂದು ಗವರ್ನರರು ಹೇಳಿದರು. ಈ ಸಂಸ್ಥೆಗೆ ರೂ 250 ಕೊಡಲು ಆಶ್ವಾಸನೆಯಿತ್ತರು. ನಂತರ ಅವರು ಆರ್ಯ ಸಮಾಜವನ್ನು ಸಂದರ್ಶಿಸಿದರು. ಸಂಜೆ 4½ ಗಂಟೆಯ ರೈಲಿನಲ್ಲಿ ಮಾನ್ಯ ಗವರ್ನರರು ಮದ್ರಾಸಿಗೆ ತೆರಳಿದರು. ರೈಲ್ವೆ ಸ್ಟೇಶನಿನಲ್ಲಿ ಅವರನ್ನು ಬೀಳ್ಕೊಡಲಾಯಿತು.

ಚಂದಾಹಣ ಬಾಕಿ ಇರುವವರು ನಾವು ಕಳುಹಿಸುವ ವಿ. ಪಿ. ಪಿ.ಯನ್ನು ದಯಮಾಡಿ ಸಕಾಲದಲ್ಲಿ ಪಡಕೊಳ್ಳುವಂತೆ ವಿನಂತಿ

ಸ್ವೀಕಾರ—ವಿಮರ್ಶೆ

ಶಕುಂತಲಾ (ಸಾಮಾಜಿಕ ಕಾದಂಬರಿ). ಮೂಲಲೇಖಕರು - ಪ್ರೊ. ನಾ. ಸೀ. ಫಡಕೆ. ಅನುವಾದಕರು: ಕು. ಸರೋಜಿನಿ ಮಹಿಷಿ ಪ್ರಕಾಶಕರು ಪ್ರತಿಭಾ ಗ್ರಂಥಮಾಲೆ, ಧಾರವಾಡ ಬೆಲೆ ರೂ ೨-೧೨-೦

ಮರಾಠೀ ವಾಙ್ಮಯ ಕ್ಷೇತ್ರದಲ್ಲಿ ಪ್ರೊ ಫಡಕೆಯವರು ನುರಿತ ಸಾಹಿತಿಗಳು ಅವರ ಸಣ್ಣ ಕತೆಗಳೂ ಕಾದಂಬರಿಗಳೂ ಈಗಾಗಲೇ ತುಂಬ ಜನಪ್ರಿಯವೆನಿಸಿವೆ ಶಕುಂತಲಾ ಕೂಡ ಫಡಕೆ ಜನಪ್ರಿಯ ಬರಹಗಾರರೆಂಬುದನ್ನು ಸಮರ್ಥಿಸುತ್ತದೆ. ಇದ್ದಿಯ ಸಾಮಾಜಿಕ ಕಥೆಗೆ ಹಿನ್ನೆಲೆಯಲ್ಲಿ ರಾಜಕೀಯದ ವಾತಾವರಣವಿದೆ. ಹೆಸರೇ ಸೂಚಿಸುವಂತೆ ಕಾದಂಬರಿಯ ನಾಯಕಿಯಾಗಿ ಶಕುಂತಲೆ ಇದ್ದಾಳೆ. ಈ ನಾಯಕಿಯ ಮನಸ್ಸನ್ನು ಹೃದಯಂಗಮವಾದ ರೀತಿಯಲ್ಲಿ ಚಿತ್ರಿಸುವುದರಲ್ಲಿ ಫಡಕೆಯವರು ತಮ್ಮ ಕೌಶಲ್ಯವನ್ನು ತೋರಿಸಿರುವರು. ಮಹಾರಾಷ್ಟ್ರದ ಪ್ರಾದೇಶಿಕ ಪರಿಸರವನ್ನು ನಾವು ಪ್ರತಿಕ್ಷಣವೂ ದರ್ಶಿಸುತ್ತೇವೆ ನಾರೀ ಜೀವನದ ಅಂತರಂಗ ಹಾಗು ಬಹಿರಂಗದ ಸೂಕ್ಷ್ಮ ಕಲ್ಪನೆಯು ನಮಗಾಗುವಂತೆ ಮನೋಜ್ಞವಾಗಿ ಘಟನೆಗಳು ಹೆಣೆಯಲ್ಪಟ್ಟಿವೆ ಮಾನಸಿಕ ಸಂಘರ್ಷವ, ಪರಸ್ಪರ ವಿರುದ್ಧವಾದ ವಿಚಾರಗಳ ನಡುವಣ ತೊಯ್ದಾಟದ ಸ್ಥಿತಿಯನ್ನು ಕಣ್ಣ ಮುಂದೆ ಕಟ್ಟುವ ಕಲೆಯಲ್ಲಿ ಫಡಕೆ ಸಫಲತೆ ಪಡೆದಿರುವರು ಕಾದಂಬರಿಯ ಅನುವಾದ ಕಾರ್ಯವು ಕಠಿಣವಾಗಿದ್ದರೂ ಕುಮಾರಿ ಮಹಿಷಿಯವರು ನಮ್ಮ ಓದುಗರ ರಸಭಾಗವನ್ನೇನೂ ನೂಡದೆ, ಕನ್ನಡ ಶೈಲಿಯ ಮಟ್ಟವನ್ನೂ ಕಾಯ್ದುಕೊಂಡಿರುವರು ಆದರೆ ಕಾದಂಬರಿಯನ್ನು ಮರಳಿ, ಮೊದಲು ಮತ್ತು ಆ ಮೇಲೆ ಎಂದು ಭಾಗಗಳಾಗಿ ವಿಂಗಡಿಸಿ ಬರೆದುದರ ಔಚಿತ್ಯ ಮಾತ್ರ ಗೊತ್ತಾಗುವುದಿಲ್ಲ. ಕಥೆಯ ಓಟವು ಮೊದಲು, ಮರಳಿ, ಆ ಮೇಲೆ ಎಂಬ ರೀತಿಯಲ್ಲಿದ್ದರೆ ಕಥಾ ತಂತ್ರದಲ್ಲಿ ಕೊರತೆ ಕಾಣಿಸುವುದೆಂದು ನಮಗೆನಿಸುತ್ತದಿಲ್ಲ ಇದು ಫಡಕೆಯವರು ಗಮನಿಸಬೇಕಾದ ವಿಚಾರ.

ವಿಹಂಗಮ ನೋಟ

○ ಶ್ರೀ ಶಂಕರ ಜಯಂತಿ ಸಭಾದಷಷ್ಠಾಧಿವೇಶನದ ಸಂಕ್ಷಿಪ್ತ ವರದಿ (೧೯೫೩)ಯನ್ನು ಟಾಕೀಕುದುರು ಶ್ರೀಮುರ ಹಂಗಾರಕಟ್ಟೆ ಪೋಸ್ಟು, ದಕ್ಷಿಣಕನ್ನಡ ಇವರು ಪ್ರಕಟಿಸಿರುವರು, ವರದಿಯಲ್ಲಿ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರ್ಣನೆಯಲ್ಲದೆ ಮೈಸೂರಿನ ಮಹಾರಾಜಾ ಸಂಸ್ಕೃತ ಕಾಲೇಜಿನ ವೇದಾಂತದ ಸಹ ಪ್ರಾಧ್ಯಾಪಕರಾದ ಶ್ರೀ ಕೆ ರಾಮಚಂದ್ರ ಸೋಮಯಾಜಿಗಳ ಉಪನಿಷತ್ಸಾರವೆಂಬ ಉಪನ್ಯಾಸ ಹಾಗು ಸಭಾಧ್ಯಕ್ಷರಾಗಿದ್ದ ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನದ ಶಂಕರಾಚಾರ್ಯರ ಭಾಷಣವಿದೆ. ಈ ಸಭೆಗೆ ಶುಭಸಂದೇಶ ನೀಡಿದ ಮಹನೀಯರ ಪಟ್ಟಿ, ಸಂಭಾವನೆ ಪಡೆದ ವಿದ್ಯಾರ್ಥಿ, ವಿದ್ವಾಂಸ ಹಾಗು ಮಹನೀಯರ ಪಟ್ಟಿ ಮತ್ತು ಧನ ಸಹಾಯವಿತ್ತು ಪ್ರೋತ್ಸಾಹಿಸಿದವರ ಹೆಸರಿನ ಪಟ್ಟಿಗಳೂ ತಾ 6-11-51 ರಿಂದ 2 10 52ರ ವರೆಗಿನ ಆಯವ್ಯಯ ಪಟ್ಟಿಯೂ ವರದಿಯಲ್ಲಿವೆ

○ ಮೇಷ ದಿ ದ್ವಾದಶರಾಶಿಯವರ ವರ್ಷಭವಿಷ್ಯವನ್ನು ಪ್ರತಿ ಪ್ರತ್ಯೇಕವಾದ ಪುಸ್ತಕರೂಪದಲ್ಲಿ ಮರವ ಶ್ರೀನಿವಾಸ ಜೋಯಿಸ, ಶಂಕರನಾರಾಯಣ ಪೋಸ್ಟು, ದಕ್ಷಿಣಕನ್ನಡ ಇವರು ಪ್ರಕಟಿಸಿರುವರು ತಾರೀಕು ೩೧-೩-೧೯೫೩ರಿಂದ ೩೦-೩-೧೯೫೪ರ ವರೆಗಿನ ರಾಶಿಫಲವನ್ನು ಶಾಸ್ತ್ರೋಕ್ತವಾದ ಆಧಾರ ಸಹಿತ ವಿವರಿಸಲು ಜೋಯಿಸರು ಪ್ರಯತ್ನಿಸಿರುವರು ಭವಿಷ್ಯಕಥನದಲ್ಲಿ ನಂಬಿಕೆಯುಳ್ಳವರು ನಾಲ್ಕಾಣೆ ಬೆಲೆಯ ಈ ಪುಸ್ತಕವನ್ನು ಪಡೆದು ಪ್ರಯೋಜನ ಹೊಂದಬಹುದು ಇ... ಬಂದ ಭವಿಷ್ಯ ಫಲಗಳಲ್ಲಿ ಯಾವ ಕಾಲ... ಸಮರ್ಥಕವಾಗಿಲ್ಲವೊ ಅದನ್ನೂ ಸುಧಾ... ಯಾಗಬೇಕಾದ ಸಂಗತಿಯನ್ನೂ ತಮಗೆ ... ಸಬೇಕೆಂದು ಜೋಯಿಸರು ಅಪೇಕ್ಷೆ ಇದೆ

○ ಭಾರತ ಸರಕಾರದ ಪ್ರಕಾಶನ ಖಾತೆ... ವರು Industry Records Progre... ಮತ್ತು Towards Expanding Tra... ಎಂಬ ಪರಿಚಯ ಪುಸ್ತಕಗಳನ್ನು ಸಾರ್ವ... ಕರಿಗೆ ಪ್ರತಿಯೊಂದಕ್ಕೆ ಎಂಟಾಣೆ ಬೆಲೆಯ... ಒದಗಿಸಿರುವರು ಮೊದಲನೆಯ ಪುಸ್ತಕ... ಭಾರತ ಸರಕಾರವು ಸ್ವಾತಂತ್ರ್ಯಾನಂತರದ ... ಷ್ಟು ವರ್ಷಗಳಲ್ಲಿ ಔದ್ಯೋಗಿಕ ವ... ಯ ಬಗ್ಗೆ ಕೈಗೊಂಡ ಕ್ರಮಗಳನ್ನು ವ... ಸಲಾಗಿದೆ ಭಾರತವು ನಿರ್ಯಾತ ವ್ಯಾಪಾ... ನ್ನು ಹೆಚ್ಚಿಸಿಕೊಂಡು ವಾಣಿಜ್ಯ ಕ್ಷೇತ್ರದಲ್ಲಿ ಮುನ್ನೊಕ್ಕಿಸಿಕೊಳ್ಳಲು ಮಾಡಿದ ಪ್ರ... ತ್ನಗಳ ವಿವರಣೆಯು ೨ ನೇ ಪುಸ್ತಕ... ದೆ ಅಧಿಕೃತ ಮಾಹಿತಿಯನ್ನು ನೀಡುವ ಎರಡೂ ಪರಿಚಯ ಬರಹಗಳು ಸಾರ್ವ... ಜನರ ಉಪಯೋಗಕ್ಕೆ ಎಂದಾವು.

ಶ್ರೀ. ನಿಟ್ಟೂರು ವಿಟ್ಠಲ ಶೆಟ್ಟಿ ಮತ್ತು ಸೌ। ರಂಭಾ
(ತಾ 29—3—53ರಲ್ಲಿ ವಿವಾಹವಾದ ನೂತನ ವಧೂವರರು)

ರಕ್ಷಣೆಗೂ ಉಳಿತಾಯ ವ್ಯವಸ್ಥೆಗೂ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ ಲೈಫ್ ಇನ್ಶೂರನ್ಸ್ ಕೊ ಲಿಮಿಟೆಡ್.

ಸ್ಥಾಪನೆ 1934 ಪ್ರಧಾನ ಕಚೇರಿ: ಮದ್ರಾಸು.

66½ ಲಕ್ಷಕ್ಕೂ ಮಿಕ್ಕಿದ ಹೊಸ ವ್ಯವಹಾರ, 15 ಲಕ್ಷಕ್ಕೂ ಮಿಕ್ಕಿದ ಪ್ರೀಮಿಯಮ್ ಉತ್ಪತ್ತಿ, 45½ ಲಕ್ಷಕ್ಕೂ ಮಿಕ್ಕಿದ ಜೀವವಿಮಾ ನಿಧಿ, 10½ ಲಕ್ಷಕ್ಕೂ ಮಿಕ್ಕಿದ ಮೂಲಗಳು. ಸಾಧಾರಣ 3 ಕೋಟಿಯಷ್ಟು ಊರ್ಜಿತದಲ್ಲಿರುವ ವಹಿವಾಟು

ಪ್ರಗತಿಪರವಾದ ಈ ಕಂಪೆನಿಯಲ್ಲಿ ಒಂದು ಪೋಲಿಸಿ ಇರುವುದು ಉತ್ತಮ ರೇವಣಾತಿ ಅಂತೆಯೇ ಇದರ ಏಜನ್ಸಿ ಇರುವುದು ಚಲೋ ವ್ಯವಹಾರ ಸಾಧನ

ಉತ್ಸಾಹಿ, ಜನಾದರಣೀಯ, ಸಮರ್ಥ ಸ್ತ್ರೀ ಪುರುಷರಿಂದ ಕಂಪನಿ ಪ್ರಾತಿನಿಧ್ಯದ ಬಗ್ಗೆ ಅರ್ಜಿಗಳು ಸ್ವಾಗತಾರ್ಹವು ದಯಮಾಡಿ ಬರೆಯಿರಿ -

ಜಿ. ಆರ್ ಮಲ್ಯ, ಬ್ರಾಂಚ್ ಮೆನೇಜರ್,
ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು [ದ ಕ]

ದಿ ವಿಜಯ ಬೇಂಕ್, ಲಿಮಿಟೆಡ್

ಸ್ಥಾಪನೆ: 1931.] ಪ್ರಧಾನ ಕಚೇರಿ: ಮಂಗಳೂರು.

ಮೂಲಧನ	.	.	ರೂ. 20,10,000
ತೆತ್ತ ಪಾಲು ಭಂಡವಾಳ	.	.	,, 8,77,660
ಕ್ಷೇಮ ನಿಧಿ	.	.	,, 1,18,000

ಕಾಯಂ ರೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವ್ಯಾದೆ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ರೇವಣಾತಿಯಲ್ಲಿ 4½% ಬಡ್ಡಿ ದರ ಗಳಿಸಿಕೊಳ್ಳಬಹುದು

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ

ಕೆ. ಸುಂದರರಾಮ ಶೆಟ್ಟಿ,
ಬಿ ಎ. ಬಿ ಯಲ್ ವಕೀಲ್,
ಬೇಂಕಿನ ಆಡಳಿತೆ ಕಮಿಟಿ ಅಧ್ಯಕ್ಷರು.

THE VIJAYA BANK, Limited.

ಭರ್ತ ಕಂಟ್ರೋಲ

[ಮಕ್ಕಳನ್ನು ಪಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವ್ಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ ಗರ್ಭ ಇದ್ದವರು ಸೇವಿಸ ಬಾರದು ಸೇವಿಸಿದರೆ ಗರ್ಭಪಾತವಾಗುವದು

ಬೆಲೆ ೧ ಬಾಟ್ಲಿಗೆ — ರೂ. ೫-೮-೦ . ಪೋಸ್ಟು ಖರ್ಚು ರೂ ೦-೧೪-೦

—:ವಿಳಾಸ —

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಬಾಳಿನ ಮುನ್ನೋಟವುಳ್ಳ ಪ್ರತಿಯೊಬ್ಬರೂ ಸಂಪಾದನೆಯ ಸ್ವಲ್ಪಾಂಶವನ್ನಾದರೂ ಸತತವಾಗಿ ಉಳಿಸಲು ಪ್ರಯತ್ನಿಸುತ್ತಾರೆ.

ನೀವೂ ನಿಮ್ಮ ಸಂಪಾದನೆಗೆ ತಕ್ಕಂತೆ,ತಿಂಗಳ, 3ತಿಂಗಳ ಯಾ 6ತಿಂಗಳ ಕಂತಿನಂತೆ ಪಾವತಿ ಮಾಡಬಹುದಾದ ಸಾವಿರ ರೂಪಾಯಿ ಒಳಗಿನ ವಿಮೆಯ ಮೂಲಕ ಸಾಧ್ಯವಾದಷ್ಟು ಹಣವನ್ನು ಶೇಖರಿಸುವ ನಿರ್ಧಾರ ಮಾದಿರಿ

ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್
ಉಡುಪಿ,

The New Karnataka Provident Insurance Co, Ltd. UDIPI.

ಶಾಲೆಗಳಿಗೆ ಬೇಕಾಗುವ ರಿಜಿಸ್ಟ್ರಿ ಫಾರ್ಮುಗಳು ಸಿಗುತ್ತವೆ

ಮಗ್ಗಿ ಪುಸ್ತಕಗಳು

ರಖಂ ಆಗಿಯೂ, ಚಿಲ್ಲರೆಯಾಗಿಯೂ ಮಾರಲ್ಪಡುತ್ತವೆ

ಬೆಲೆ ಪ್ರತಿ 1ಕ್ಕೆ 0—1—0
,, ,, 100ಕ್ಕೆ 5—0 -0

ನವಯುಗ ಪ್ರೆಸ್,ಉಡುಪಿ

ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜ ಪೇಟೆ ಬೆಂಗಳೂರ

ಕನ್ನಡ ಸಾಹಿತ್ಯ ಪರಿಷತ್ತಿನವರು ಹಲವು ವರುಷಗಳಿಂದ ನಡೆಸಿಕೊಂಡು ಬಂದ ವ... ತ ಸಾಹಿತ್ಯೋತ್ಸವವು ಈ ಬಾರಿ ಮೇ ತಿಂಗಳ, 12ರಿಂದ 17ರ ತನಕ ನಡೆಯಲಿರುವುದು ಉತ್ಸವದ ಭಾಗವಾಗಿ ಸಾಹಿತ್ಯ, ಕ... ಪ್ರಕೃತಿ ವಿಜ್ಞಾನ ಸಮಾಜ ವಿಜ್ಞಾನ, ವಿ... ಶಾಸ್ತ್ರಗಳು ಮೊದಲಾಗಿ ಸಾಂಪ್ರತ ಲೋಕಕ್ಕೆ ಉಪಯುಕ್ತಗಳಾದ ಅನೇಕ ವಿಷಯಗಳ ಕುರಿತು ಉಪನ್ಯಾಸಗಳೂ ಜೊ... ಕಾವ್ಯ ವಾಚನ, ಹರಿಕಥೆ, ಸಂಗೀತ, ನಾ... ಮೊದಲಾದ ಪ್ರಚಾರ ಕಾರ್ಯಗಳೂ ಜ... ಲಿವೆ ಈ ಉತ್ಸವದ ಯಶಸ್ಸಿಗಾಗಿ ಪ... ಜನರು ಉದಾರ ಮನಸ್ಸಿನಿಂದ ಸಹಾಯ ಮಾಡಬೇಕಾಗಿಯೂ ಸಂಬಂಧಪಟ್ಟವ... ಅಪೇಕ್ಷಿಸುತ್ತಾರೆ ಸಾಹಿತ್ಯೋತ್ಸವದ ಜೊತೆಯಲ್ಲಿ ಎಂದಿನಂತೆ ಗ್ರಂಥ ಪ್ರದರ್ಶನ ನಿರ್ಧರಿಸಲು ಕೂಡಾ ಮಾಡಲಾಗಿದೆ ಎಪ್ರಿಲ್ ಅಂತ್ಯದೊಳಗೆ ಕಳಿಸಲ್ಪಡುವ 1951 ನೇ ... ವರಿಯಿಂದ 1953 ನೇ ಮಾರ್ಚ್ ವರೆಗೆ ಪ್ರ... ವಾದ ಗ್ರಂಥಗಳು ಪ್ರದರ್ಶಿಸಲ್ಪಡುವವು

ಕಾಗದ ಕಾರ್ಖಾನೆಗಳ ಮುಂದಿರುವ ತೊಡಕು

(೨ನೇ ಪುಟದಿಂದ)

ವಾಗಿ ರಾಜ್ಯ ಸರಕಾರಗಳು ವಿಚಾ
ರಕೆಂದು ಕಾಗದ ತಯಾರಿಯ ಉ
ಅಪೇಕ್ಷಿಸುತ್ತದೆ ಆದರೆ ಬಿದಿರು
ತಾದ ಅರಣ್ಯದ ಉತ್ಪಾದನೆಗಳೇ
ತಯಾರಿಗೆ ಬೇಕಾದ ಕಚ್ಚಾ
ಗಳಲ್ಲ. ಬಟ್ಟೆಯ ಚಿಂದಿ, ತುಂಡು
ಗಳು, ಸಣಬು ಚೂರುಗಳು
ಬಾದುವನ್ನೂ ಈ ಉದ್ಯಮ
ಕ್ಷಿಸುತ್ತದೆ. ರಾಜ್ಯ ಹಾಗೂ
ಸರಕಾರಗಳು ತಮ್ಮಲ್ಲಿ ಆ
ಯುಕ್ತ ಕಾಗದದ ಚೂರುಗಳ
ಕಾಗದ ಕಾರ್ಖಾನೆಗಳಿಗೆ ಮಾರ
ದು ಒಂದು ಬೇಡಿಕೆ ಇದೆ ಪ್ರಕೃ
ಕಾರವು ಈ ಕಾಗದ ಚೂರುಗಳ
ಕಂಟ್ರಾಕ್ಟುದಾರರಿಗೆ ಕೊಡುತ್ತಿದೆ;
ಪ್ಯಾಕಿಂಗ ಮುಂತಾದವುಗಳ
ಕ್ಕರ ಉಪಯೋಗಿಸಲು ಈ ಚೂರು
ಮಾರಿಬಿಡುವರು. ಪರಿಣಾಮ
ಕಾಗದ ಉದ್ಯಮಕ್ಕೆ ಅಗತ್ಯವಿರು
ಚ್ಚಾ ಸಾಮಗ್ರಿ ದೊರೆಯದಾಗಿದೆ.
ಬೇಡಿಕೆಯ ಕುರಿತು ಯೋಜನಾ ಆ
ಗ ಮೌನ ತಾಳಿದ್ದರೂ ಈ ಕಚ್ಚಾ
ಗಳ ಪೂರೈಕೆಯು ಆಗಬೇಕಾದು
ಒತ್ತಿ ಹೇಳುತ್ತದೆ–

ಯೋಜನೆಯ ಅವಧಿಯಲ್ಲಿ ಕಾಗದ
ರಿಷು ಉದ್ಯಮದ ಅಭಿವೃದ್ಧಿಯು
ಡೆಯಲ್ಲೂ ಅಧಿಕ ಬಿದಿರು ಮುಂತಾ
ಗಳ ಪೂರೈಕೆಯಿಂದ ನೆರವೇರಬೇ
ಆದರೆ ಉತ್ತರದಲ್ಲಿ ಶ್ರೀ ಗೋಪಾಲ
ರ ಮಿಲ್ಲಿನ ವಿಸ್ತರಣೆಯು ಸಬಾಯಿ
ಚಿಂದಿಬಟ್ಟೆ ಹಾಗು ತುಂಡು ಕಾ
ಪೂರೈಕೆಯನ್ನೇ ಅವಲಂಬಿಸಿದೆ.
ಶಃ ಕಬ್ಬಿನ ಜೊಗಟು ಕೂಡ ಆಗ
ಸೀತು. ಆದುದರಿಂದ ಸಬಾಯಿ
ನ್ನು ಬೆಳೆಯಲು ಉತ್ತರ ಪ್ರದೇಶ
ಪಂಜಾಬಗಳು ಪ್ರಯತ್ನ ಮಾಡ
. ಜೊತೆಯಲ್ಲೇ ತುಂಡು ಕಾಗದ
ಚಿಂದಿಬಟ್ಟೆಗಳು ಮುಂತಾದವುಗ
ಕಲೆಹಾಕುವ ವ್ಯವಸ್ಥೆಯು ಪುನ
ಸಲ್ಪಟ್ಟು ಅಧಿಕಾಧಿಕ ಪ್ರಮಾಣದ
ವು ದೊರೆಯುವಂತಾಗಬೇಕು.

— ೬ —

ಸಾಮಾನ್ಯವಾಗಿ ಪೆಟ್ಟಾರಿಗಳು ಸಾಕಷ್ಟಿದ್ದರೂ ಕಾಗದ ಕಾರ್ಖಾನೆಗಳಿಗೆ ಅಗತ್ಯವೆನಿಸಿದ ಕಲ್ಲಿದ್ದಲು ಮುಂತಾದುವುಗಳನ್ನು ಕ್ಲಪ್ತಕಾಲಕ್ಕೆ ತರಿಸಿಕೊಳ್ಳುವುದು ಕಷ್ಟವೆನಿಸಿದೆ. ದಕ್ಷಿಣ ಭಾರತದಲ್ಲಿ ಈ ತೊಂದರೆ ಸಾಮಾನ್ಯತಃ ಕಂಡು ಬರುತ್ತದೆ. ಇವನ್ನು ಪರಿಹರಿಸುವ ಉದ್ದೇಶದಿಂದ ವಿದ್ಯುಚ್ಛಕ್ತಿಯ ಪೂರೈಕೆಯನ್ನು ಮಾಡಬೇಕೆಂಬ ಸೂಚನೆಯಿದೆ. ಯೋಜನಾ ಆಯೋಗದ ಹೇಳಿಕೆಯಂತೆ, ಮೈಸೂರು, ತಿರುಕೊಚ್ಚಿ ಮತ್ತು ಮುಂಬಯಿಗಳಲ್ಲಿ ವಿದ್ಯುಚ್ಛಕ್ತಿಯನ್ನು ಕಾಗದದ ಕಾರ್ಖಾನೆಗಳು ಉಪಯೋಗಿಸುತ್ತಿವೆ ಉಳಿದ ರಾಜ್ಯಗಳಲ್ಲಿಯೂ ವಿದ್ಯುಚ್ಛಕ್ತಿಯ ಬಳಕೆಯಾಗುವಂತೆ ಪ್ರಯತ್ನ ನಡೆದರೆ ಯಂತ್ರಚಾಲಕ ಶಕ್ತಿಯ ಸಮಸ್ಯೆ ದೂರಾಗುತ್ತದೆ. ಕಲ್ಲಿದ್ದಲಿನ ಸ್ಥಾನದಲ್ಲಿ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿದಲ್ಲಿ ವೆಚ್ಚವೂ ಕಡಿಮೆ ಬೀಳುವುದು, ಅರ್ಥಾತ್ ಸರಕು ಅಗ್ಗವಾಗುತ್ತದೆ. ಇದರ ಜೊತೆಗೆ ಕಾಗದ ಉದ್ದಿಮೆಯಲ್ಲಿ ಬಳಸುತ್ತಿರುವ ಸುಣ್ಣ, ಕಾಸ್ಟಿಕ್ ಸೋಡಾ, ಸೋಡಾ ಆಶ್, ಕ್ಲೋರಿನ್, ಗಂಧಕ, ಸೋಡಿಯಂ ಸಲ್ಫೇಟ್, ಕೊಜೆಮಣ್ಣು ಮುಂತಾದ ದ್ರವ್ಯಗಳ ಬೆಲೆಯು ತಗ್ಗಿದರೆ, ಉತ್ಪಾದನಾ ವೆಚ್ಚವು ಇನ್ನಷ್ಟು ಕಡಿಮೆಯಾಗುತ್ತದೆ. ಕೆಲವು ಕಾರ್ಖಾನೆಗಳು ತಮಗೆ ಬೇಕಾದ ರಾಸಾಯನಿಕ ದ್ರವ್ಯಗಳನ್ನು ತಮ್ಮಲ್ಲಿಯೇ ತಯಾರಿಸಿಕೊಂಡರೂ, ಹೆಚ್ಚಿನವುಗಳು ದೇಶೀಯ ಉತ್ಪಾದಕರಿಂದ ಇವನ್ನು ಪಡೆಯುತ್ತವೆ. ಕೆಲವೊಮ್ಮೆ ವಿದೇಶಗಳಿಂದ ತರಿಸುವುದೂ ಉಂಟು. ಸರಕಾರವು ಬೆಲೆಗಳ ಮೇಲೆ ನಿಯಂತ್ರಣವಿಟ್ಟು ಉತ್ಪಾದನಾ ವೆಚ್ಚವನ್ನು ತಗ್ಗಿಸುವಲ್ಲಿ ಸಹಕರಿಸಬಲ್ಲುದು.

— ೭ —

ಸ್ವಯಂ ಕಾಗದ ಕಾರ್ಖಾನೆಗಳೇ ತಮ್ಮ ಉತ್ಪಾದನಾ ವೆಚ್ಚವನ್ನು ತಗ್ಗಿಸುವಲ್ಲಿ ವ್ಯವಹಾರ್ಯವಾದ ಸೂಚನೆಯೊಂದನ್ನು ಅನುಸರಿಸಬಲ್ಲವು. ಇತರ ಪ್ರಾಮುಖ್ಯ ಉದ್ಯಮಗಳಿಗೆ ಪೂರಕವಾಗುವ ರೀತಿಯಲ್ಲಿ ತಮ್ಮ ಉತ್ಪಾದನಾ ಕಾರ್ಯಕ್ರಮವನ್ನು ಇಟ್ಟುಕೊಂಡ ಪಕ್ಷದಲ್ಲಿ ಕಾಗದ ಕಾರ್ಖಾನೆಗಳು ಮಿತವ್ಯಯವನ್ನು ಸಾಧಿಸುವಲ್ಲಿ ಒಂದು ಹೆಜ್ಜೆ ಮುಂದಿಟ್ಟಂತಾಗುವುದು. ಉದಾಹರಣೆಗೆ ಬೆಂಕಿ ಪೆಟ್ಟಿಗೆ, ಸಿಗರೇಟು, ಪ್ಯಾಕಿಂಗು ವಸ್ತುಗಳು ಮುಂತಾದವುಗಳನ್ನು ತಯಾರಿಸುವ ಕಾರ್ಖಾನೆಗಳಿಗೆ ವಿಶೇಷ ಮಾದರಿಯ ಕಾಗದ ಅಗತ್ಯವಿರುತ್ತದೆ. ಇವುಗಳ ಪೂರೈಕೆಯನ್ನು ನಮ್ಮ ಕಾಗದದ ಕಾರ್ಖಾನೆಗಳು ಯೋಗ್ಯ ರೀತಿಯಲ್ಲಿ ಮಾಡಿಕೊಟ್ಟರೆ, ಅದು ಹಿತಕರವೆನಿಸುತ್ತದೆ. ಆಧುನಿಕ ತಂತ್ರ ಹಾಗು ಕೌಶಲ್ಯದ ಯಶಸ್ವಿ ಪ್ರಯೋಗಕ್ಕೆ ಇದು ಅನುವು ಮಾಡಿಕೊಡುತ್ತದೆ. ಇದಲ್ಲದೆ ಉಪಯೋಗಿಸುವ ಉರುವಲು ಮತ್ತು ಕಚ್ಚಾ ವಸ್ತುಗಳಲ್ಲಿ ಕೈ ಬಿಗಿ ಮಾಡುವ ಹಾಗು ಕೆಲವು ವಿಧದ ಕಾಗದಗಳ ಗುಣವನ್ನು ಹೆಚ್ಚಿಸುವ ಮೂಲಕ ಮಿತವ್ಯಯವನ್ನು ಸಾಧಿಸಬಹುದೆಂದೂ ತತ್ಪರಿಣಾಮವಾಗಿ ಉತ್ಪಾದನಾ ವೆಚ್ಚವನ್ನು ಇಳಿಸಬಹುದೆಂದೂ ಯೋಜನಾ ಆಯೋಗ ಹೇಳುತ್ತದೆ. ಕಾಗದ ಕಾರ್ಖಾನೆಗಳು ಈ ಸಲಹೆಯನ್ನು ಗಂಭೀರವಾಗಿ ವಿಚಾರಿಸಬೇಕು.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ
ಸುಲಭವಾಗಿ ಇಂಗ್ಲಿಷ್ ಕಲಿಯಲಿಕ್ಕೆ
ಅತ್ಯಂತ ಉಪಯುಕ್ತವಾದ ಪುಸ್ತಕ–

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ ಶ್ರೀನಿವಾಸರಾಯರಿಂದ ರಚಿತವಾದ
ಇಂಗ್ಲಿಷ್ ಸ್ವಯಂಬೋಧಿನಿ
ಬೆಲೆ ರೂ 1 8 0; ಉತ್ತಮ ಪ್ರತಿ 2 0 0

ಡಾ| ಕೊರಡ್ಕಲ್ ವೆಂಕಟರಾವ್ ಕೃತ

ಮನೆಮದ್ದು

ಮನೆಯಲ್ಲೇ ಮಾಡಿಕೊಳ್ಳಬಹುದಾದ
ಸುಲಭ ಚಿಕಿತ್ಸೆಗಳು
ಬೆಲೆ ರೂ. 2 8 0: ವಿ. ಪಿ ದ್ವಾರಾ 3 0 0

ಹೊಸಕೆರೆ ಚಿದಂಬರಯ್ಯನವರಿಂದ ಸರಳ ಕನ್ನಡದಲ್ಲಿ
ಬರೆಯಲ್ಪಟ್ಟ ಭಾಷಾಂತರವನ್ನೊಳಗೊಂಡ

ಗೀತೆಯ ಕೈಗನ್ನಡಿ

(ಮೂಲ ಶ್ಲೋಕ ಮತ್ತು ಕನ್ನಡ ಅರ್ಥ)
ಅತಿ ಕಡಿಮೆ ಕ್ರಯದಲ್ಲಿ ಅತಿ ಪವಿತ್ರ ಗ್ರಂಥ.
ಬೆಲೆ ರೂ. 0—12—0 ~ ಸ,

ಸಿಗುವ ಸ್ಥಳಗಳು:
ನವಭಾರತ ಪುಸ್ತಕ ಭಂಡಾರ, ಉಡುಪಿ.
ನವಯುಗ ಪ್ರೆಸ್, ಉಡುಪಿ.

ಅಮೃತಾಂಜನ

ಶಿರೋವೇದನೆ, ಉಳುಕು ಕುತ್ತಿಗೆ, ಹಲ್ಲು ಎದೆ ನೋವುಗಳಿಗೂ ಘಾತಗಳು, ಬಾತುಕೊಳ್ಳುವುದು ಚೇಳುವಿಷ ಮುಂತಾದುವು, ಪಕ್ಷವಾತ, ಮೊಡಿ ಮೊದಲಾದ ಎಲ್ಲಾ ರೋಗಳಿಗೂ ದಿವ್ಯೌಷಧಿ.

ಹುಳು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

REGD.

ಅಮೃತಾಂಜನ ಲಿಮಿಟೆಡ್

ಮದರಾಸು ಬೊಂಬಾಯಿ ಮತ್ತು ಕಲ್ಕತ್ತ

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)
ಸ್ಥಾಪಕರು.-ಆಯುರ್ವೇದ ಭೂಷಣ ಯಂ ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹ ಸ್ಥಿತಿಯನ್ನು ನಿರ್ನೈಸಿ ತಯಾರಿಸಲ್ಪಟ್ಟ ಅಮೋಘವಾದ ಮದ್ದು ಅಪೂರ್ವ ರಸಾಯನ



ಹೆಚ್ಚಿನ ಮಾಹಿತಿಗೆ– ಡಾ। ಯಂ ಸಿ ಶಾಸ್ತ್ರೀ, ಯಲ್ ಐ. ಎಂ.
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಥಾಪಕರು – ಡಾ| ವಿ. ಕ ಶಿವರಾಮರಾವ್, ಕುಂಜಿಬೆಟ್ಟು.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ

ದರ ಬಹಳ ಕಡಿಮೆ ಮಾಡಿದೆ!

ಸರ್ವತರದ ಮುದ್ರಣ ಕಾರ್ಯಗಳಿಗೆ
ವಿಚಾರಿಸಿ –

ನವಯುಗ ಪ್ರೆಸ್

ಸಂಪಿಕಟ್ಟೆ, ಉಡುಪಿ.
ಮದುವೆ, ಉಪನಯನ, ಮತ್ತಿತರ ಸಮಾರಂಭಗಳ ಆಮಂತ್ರಣ ಪತ್ರಿಕೆಗಳನ್ನು ಶೀಘ್ರ ಗಂಟೆಗಳಲ್ಲಿ ತಯಾರಿಸಿ ಕೊಡಲಾಗುವುದು.

ವಾರದ ಒಳಿತು ಕೆಡುಕುಗಳು

ತಾ. ೨೦—೪—೫೩ರಿಂದ ತಾ. ೬—೫—೫೩ರ ವರೆಗೆ.

ಮೇಷ— ಭಾಗ್ಯಪತಿಯಾದ ಬೃಹಸ್ಪತಿಯಿಂದು ಧನಸ್ಥಾನದಲ್ಲಿರುವುದರಿಂದ ಮತ್ತು ಉಚ್ಛನಾದ ಶುಕ್ರನೂ ನಿಮಗನುಕೂಲನಾಗಿರುವುದರಿಂದ ನಿಮಗೀವಾರದಲ್ಲಿ ಬಹುಮುಖವಾದ ಧನಾಗಮವೂ ಕಾರ್ಯದಲ್ಲಿ ವಿಜಯವೂ ಸಮಾಜದಲ್ಲಿ ಸ್ಥಾನಮಾನಗಳೂ ಲಭಿಸುವವು. ಪರ್ಯಟನದಿಂದಾಗಿ ಆರೋಗ್ಯಕ್ಕೆ ಕೊಂಚ ಧಕ್ಕೆ ತಗಲೀತು. ಕೆಲವೊಮ್ಮೆ ವಾಕ್ಕಲಹಕ್ಕೂ ಅವಕಾಶ ದೊರೆತೀತು. ಗ್ರಹತಾಪತ್ರಯಗಳಿಂದ ಮುಕ್ತರಾದ ನೀವು ವಾರಾಂತ್ಯದ 2 ದಿನಗಳನ್ನು ಸುಖದಿಂದ ಕಳೆವಿರಿ

ವೃಷಭ— "ಕಾಲಸ್ಯ ಕುಟಿಲಾಗತಿಃ" ಎಂಬ ಆರ್ಯೋಕ್ತಿಯಂತೆ ಈಗಿನ ಸಮಯವು ನಿಮಗೆ ತುಂಬಾ ಪ್ರತಿಕೂಲಕಾರಿಯಾಗಿ ಪರಿಣಮಿಸಲಿದೆ. ದೇಹಮನಸ್ಸುಗಳಿಗೆ ಸುಖ ನೆಮ್ಮದಿಗಳು ಸ್ವಪ್ನದಲ್ಲೂ ದುರ್ಲಭವೆಂದರೆ ತಪ್ಪಾಗದು. ಗೃಹಕೃತ್ಯದಲ್ಲಿನ ಅವ್ಯವಸ್ಥೆಯಿಂದಾಗಿ ಸಂಸಾರದಲ್ಲಿ ನಿಮಗೆ ಕೆಲವೊಮ್ಮೆ ವಿರಕ್ತಿ ತೋರಬಹುದು. ಹಿಂದಿನ ಸ್ಥಾನಮಾನಗಳಿಗಿಂದು ಚ್ಯುತಿಬರಲಿದೆ. ವಿಶೇಷತಃ ಆರ್ಥಿಕ ದಿಕ್ಕಟ್ಟು ಕಾಣಿಸಿಕೊಳ್ಳುವದಾದರೂ ವಾರಾದಿಯ 3 ದಿನಗಳು ಕೆಟ್ಟಿನ ಕಷ್ಟದಾಯಿಗಳಾಗಲಾರವು.

ಮಿಥುನ— ಇಂದಿನ ದಿನಗಳು ನಿಮಗೆ ಹಿಂದಿನಷ್ಟು ಅನುಕೂಲವಾಗಿರವು. ದುಡಿಮೆಯ ಬಹ್ವಂಶವು ವ್ಯರ್ಥ ಖರ್ಚಾಗುವುದರಿಂದಲೂ ಆಕಸ್ಮಿಕ ಪ್ರವಾಸಗಳಿಂದಾಗಿ ತನುಮನಗಳಿಗೆ ಪೀಡಾ ಚಿಂತೆಗಳು ಪ್ರಾಪ್ತವಾಗುವುದರಿಂದಲೂ ನೀವೀ ಸಮಯವನ್ನು ಕಷ್ಟದಿಂದ ಕಳೆಯಬೇಕಾಗುವದು. ಮನಸ್ಸು ಹೆದರಿದ ಹುಲ್ಲೆಯಂತೆ ಅತೀವ ಚಂಚಲವಾಗುವುದರಿಂದ ನೀವು ಆರಂಭಿಸಿದ ಕಾರ್ಯವನ್ನು ಕೊನೆಗಾಣಿಸಲು ಅಸಮರ್ಥರಾಗುವಿರಿ. ವಾರಾದಿಯ 5 ದಿನಗಳು ಇತರ ದಿನಗಳಿಗಿಂತ ಸ್ವಲ್ಪ ಉತ್ತಮವೆನಿಸುವದು.

ಕರ್ಕಟ— ಈ ಕಾಲದಲ್ಲಿ ಭಾಗ್ಯವಂತರೆನ್ನಬೇಕು ನಿಮ್ಮನ್ನು. ಕಾಗಣ ರವ್ಯಾದಿಯಾಗಿ ಶನೈಶ್ಚರನವರೆಗಿನ ಸಕಲ ಗ್ರಹರೂ ಅನುಕೂಲಸ್ಥಾನಕರಾಗಿ ನಿಮ್ಮ ಹಿತವನ್ನು ಸದಾ ಬಯಸುತ್ತಿರುವರು. ವಿಕ್ರಮಸ್ಥಾನದಲ್ಲಿ ಶನಿಯೂ ಭಾಗ್ಯಕರ್ಮ ಲಾಭಗಳಲ್ಲಿ ಇತರ ಎಲ್ಲಾ ಗ್ರಹರೂ ಕೂಡಿರುವುದರಿಂದ ನಿಮಗೀ ವಾರದಲ್ಲಿ ಎಣೆಯಿಲ್ಲವೆಂದರೂ ತಪ್ಪಾಗದು. ಸಕಲ ಭಾಗಗಳೂ ನಿಮ್ಮಿಚ್ಛೆಯಂತೆ ಪೂರ್ಣವಾಗುವವು. ಸಂಪತ್ ವಿಜಯಕೀರ್ತಿಗಳು ಅನಾಯಾಸದಿಂದ ಲಭಿಸುವವು. ವಾರಾಂತ್ಯದ 4 ದಿನಗಳು ಅತ್ಯುತ್ತಮವಿವೆ.

ಸಿಂಹ— ಕೃಷ್ಣಪಕ್ಷದ ಚಂದ್ರನಂತೆ ದಿನದಿಂದ ದಿನಕ್ಕೆ ನಿಮ್ಮ ಅದೃಷ್ಟವು ಹ್ರಾಸವಾಗುತ್ತಾ ಬಂದು ಇದೀಗ ಬಹಳ ಕಠಿಣ ಪರಿಸ್ಥಿತಿಗೆ ಬಂದಿಹುದು. ವಿರೋಧಿ ಜನರ ಉಪಟಳದಿಂದಾಗಿ ನಿಮ್ಮ ಕಾರ್ಯಕಲಾಪಗಳು ಮುಂದರಿಯಲಾರವು. ವ್ಯಾಪಾರ ವ್ಯವಹಾರಗಳಲ್ಲಿ ನಷ್ಟವಧಿಕವಾಗುವದು. ಹೆಚ್ಚೇಕೆ ಹಿಂದೆ ಅಪಹ್ನವವಾಗಿರಿಸಿದ ಹಣವೂ ಇಂದು ಉಳಿಯಲಾರದು. ಆದರೆ ವಾರಾಂತ್ಯದ 2ದಿನಗಳಲ್ಲಿ ಬಾಲ್ಯಮಿತ್ರರ ಬೆಂಬಲವೂ ದೇಹದಲ್ಲಿ ಆರೋಗ್ಯವೂ ಕಿಂಚಿತ್ಪ್ರಾಪ್ತಿಯೂ ಆಗಲಿದೆ

ಕನ್ಯಾ— ಕಳೆದ ಕೆಲವೊಂದು ತಿಂಗಳುಗಳಿಂದ ಕೆಟ್ಟಿದ್ದ ನಿಮ್ಮ ಅದೃಷ್ಟವಿಂದು ಸ್ವಲ್ಪ ಉತ್ತಮ ಸ್ಥಿತಿಗೆ ಬಂದಿರುವದು. ಸುಖಪತಿಯಾದ ಸುರಗುರುಗಳು ಭಾಗ್ಯಗತರಾಗಿ ನಿಮ್ಮ ರಾಶಿಯನ್ನು ಪೂರ್ಣ ದೃಷ್ಟಿಯಿಂದ ಕಾಣುತ್ತಿರುವುದರಿಂದ ನಿಮ್ಮ ಆರ್ಥಿಕ ತಾಪತ್ರಯವುದೂರವಾಗುವದಲ್ಲದೆ ದೇಹಕ್ಕೆ ಸುಖವು ಮನಸ್ಸಿಗೆ ನೆಮ್ಮದಿಯೂ ಲಭಿಸುವದು. ವ್ಯಾಪಾರ ವ್ಯವಹಾರಗಳಲ್ಲಿ ಕೊಂಚ ಬಿಕ್ಕಟ್ಟು ಕಾಣಿಸಬಹುದು. ಸ್ತ್ರೀವರ್ಗದವರಿಂದ ಅನಿಷ್ಟಗಳೊದಗುವ ಸಂಭವವಿದೆ. ವಾರಾದಿಯ 3 ದಿನಗಳಲ್ಲಿ ಸಂಕಲ್ಪದಂತೆ ಕಾರ್ಯ ನೆರವೇರುವದು

ತುಲಾ— ನೀವಿಂದು ದುರ್ದೈವದ ಪರಾಕಾಷ್ಠವನ್ನೇರಿರುವಿರೆಂದರೆ ಅತಿಶಯೋಕ್ತಿಯೆನಿಸದು. ಯಾವನೊಬ್ಬ ಗ್ರಹನೂ ನಿಮ್ಮ ಭಾಗಕ್ಕೆ ಪ್ರಸನ್ನನಾಗಿಲ್ಲವು. ಅಷ್ಟಮಗತರಾದ ಕುಜಗುರುಗಳೂ ವ್ಯಯಗತನಾದ ಶನಿಯೂ ವಿಶೇಷ ಧನಹಾನಿ, ಆಕಸ್ಮಿಕ ಗಂಡಾಂತರ, ಪತಿ ಜನರಿಂದ ಪರಾಭವ ದೇಹಪೀಡೆ ಪರ್ಯಟನಾದಿ ನಾನಾ ಅನಿಷ್ಟಗಳನ್ನುಂಟುಮಾಡಲಿರುವರು. ಹೆಚ್ಚೇಕೆ ಆತ್ಮೀಯರೂ ವಿರೋಧಿಜನರಂತೆ ವರ್ತಿಸುವರು ಕಾಸುಇಲ್ಲದ ನರಳ್ಗೆ ಸಮನೆಂಬ ಗಾದೆಯಂತೆ ಸರ್ವರಿಂದಲೂ ದೂರೀಕರಿಸಲ್ಪಡುವಿರಿ. ಆದರೂ ಬಂದದ್ದೆಲ್ಲಾ ಬರಲಿ ಗೋವಿಂದನ ದಯೆವೊಂದಿರಲಿ ಎಂಬಂತೆ ದೇವರ ಮೇಲೆ ಭಾರವನ್ನಿಟ್ಟು ನಿಮ್ಮ ಕರ್ತವ್ಯಮಾಡಿರಿ. ತಾ. 3, 4 ಇದ್ದುದರಲ್ಲಿ ಉತ್ತಮವೆನಿಸೀತು.

ವೃಶ್ಚಿಕ— ಸಪ್ತಮಗತನಾದ ಅಂಗಾರಕನೊಬ್ಬನನ್ನುಳಿದು ಇತರ ಎಲ್ಲಾ ಗ್ರಹರ ಅನುಗ್ರಹಕ್ಕೆ ಪಾತ್ರರಾಗಿರುವ ನಿಮಗೆ ಈ ವಾರದಲ್ಲಿ ಯಾವೊಂದು ತರದ ನ್ಯೂನಾತಿರೇಕಗಳೂ ಉಂಟಾಗಲಾರವು. ಪ್ರಯತ್ನಕ್ಕಿಂತ ಅಧಿಕವಾದ ಫಲಪ್ರಾಪ್ತಿಯಾಗುವುದು ವ್ಯಾಪಾರ ಉದ್ಯೋಗ ವ್ಯವಹಾರಗಳಲ್ಲಿ ದಿನೇ ದಿನೇ ಪ್ರಗತಿಯನ್ನೈದುವಿರಿ. ವಿದ್ಯಾರ್ಥಿಗಳು ವ್ಯಾಪಾರೀವರ್ಗವೂ ಲೇಖಕ ನೌಕರಿ ಜನಗಳು ಕೂಡ ಸುಖದಿಂದ ಕಾಲಯಾಪನೆಮಾಡುವರು. ತಾ 3, 4 ಬಿಟ್ಟು ಉಳಿದ ದಿನಗಳು ಸರ್ವಾಭೀಷ್ಟಪ್ರದಗಳಾಗಿವೆ,

ಧನು— ಇತ್ತೀಚೆಗೆ ನಿಮ್ಮ ಅದೃಷ್ಟವು ಸ್ವಲ್ಪ ಸ್ವಲ್ಪವಾಗಿ ಹ್ರಾಸವಾಗುತ್ತಾ ಬರುತ್ತಿದೆ ಗ್ರಹತಾಪತ್ರಯಗಳು ದಿನಗಳೆದಂತೆ ಹೆಚ್ಚುವವು. ತಂದೆ ಮಕ್ಕಳೊಳು ಗಂಡ ಹೆಂಡಿರೊಳು ಪರಸ್ಪರ ಘರ್ಷಣೆಯುಂಟಾಗಲಿದೆ ಆತ್ಮೀಯರೂ ಗುರುಹಿರಿಯರೂ ನಿಮ್ಮಿಂದ ದೂರನಾಗುವರಾದರೂ ಹಿರಿಯರ ಬೆಂಬಲ ಸಲಹೆಗಳನ್ನು ಬಯಸದ ನೀವು ಸ್ವತಂತ್ರವಾಗಿ ಕಾರ್ಯರಂಗದಲ್ಲಿ ಮುನ್ನುಗ್ಗುವಿರಿ ನಿಮ್ಮ ಪ್ರಯತ್ನವು ಎಲ್ಲವೂ ವಿಫಲವಾಗ ತಾ. 3, 4 ಈ ದಿನಗಳಲ್ಲಿ ನಿಮ್ಮ ರೋಗಗಳು ದೂರವಾಗುವವು. ಇ ಕೈಗೂಡುವದು.

ಮಕರ— ನಿಸರ್ಗತಃ ಶುಭರಾ ಗುರು ಶುಕ್ರರಿಂದು ನಿಮಗನುಕ ರುವ ಕಾರಣ ಸತ್ಕರ್ಮ ಸದಾಚಾ ರಾದ ಸಜ್ಜನ ವೃಂದಕ್ಕೆ ಈ ವಾರವು ಫಲದಾಯಿಯಾಗಬಲ್ಲುದು. ಸಾರ್ವ ಯ್ರಗಳಲ್ಲಿ ಕೀರ್ತಿ ವಿಜಯಗಳು ವವು ಆದರೆ ರಾಜಕೀಯ ರಂಗದಲ್ಲಿ ಮ ನೆಟ್ಟಗಿರಲಾರದು, ಹೆಂಡತಿ ಆ ರೋಗ್ಯ ಕೆಡಲಿದೆ ಶ್ರಮಜೀವಿಗಳಿ ಅಷ್ಟೊಂದು ಚೆನ್ನಾಗಿರದು ತಾ 3, ತಾಗಿ ಉಳಿದ ದಿನಗಳಲ್ಲಿ ನೆನೆದ ಗಳು ಅನಾಯಾಸದಿಂದ ಕಾರ್ಯ ಬರಲಿವೆ

ಕುಂಭ— ನಿಮ್ಮ ಅರ್ಥಸ್ಥಾನದ ನೂ ವಿಕ್ರಮ ಸ್ಥಾನದಲ್ಲಿ ರವಿಯೂ ರಾಗಿರುವದರಿಂದ ನಿಮ್ಮ ಪ್ರತಿಯೊ ಯ್ರಗಳೂ ಸಫಲಗಳಾಗಲಿವೆ. ಹ ಚಣೆಯಿಂದ ಮುಕ್ತರಾಗುವಿರಲ್ಲದೆ ವಿಷಯದಲ್ಲಿ ಹೆರವರಿಗೂ ನೆರ ಸತ್ಪುರುಷರ ಸಂಸರ್ಗ ಸಹವಾಸ ಜನತೆಯ ನಿಂದಾಪವಾದಗಳಿಗೆ ದೀರಿ. ವಾರಾಂತ್ಯದ 2 ದಿನಗಳನು ಉಳಿದ ದಿನಗಳಲ್ಲಿ ಮಿತ್ರರ ಸಮಾ ರೀಕ್ಷಿತ ಪರ್ಯಟನ ವಿಜಯ ಲಾಭ

ಮೀನ— ವಿರೋಧಿ ವರ್ಗದವ ಮ್ಮ ಕಾರ್ಯಗಳಿಗೆ ಹಲವಾರು ಬ ವಿಘ್ನಗಳು ಬರಬಹುದು. ಅತ್ತ ಜ ಮನಸ್ತಾಪವು ಕೂಡ ಉಂಟಾಗುವ ವಿದೆ ಆದರೆ ಸ್ವರವಾದಿಗಳಾದ ನೀ ಕಷ್ಟ ನಿಷ್ಟಗಳೊದಗಿದರೂ ಹಿಡಿದ ವನ್ನು ಬಿಡಲಾರಿರಿ. ನಿಮ್ಮ ಪರಿಶ್ರ ಅಧಿಕವಾದ ಫಲಪ್ರಾಪ್ತಿಯಿದೆ & ಆರ್ಥಿಕ ಭಾಗದಲ್ಲಿ ಸುಧಾರಣೆ ಹೊ ಗೃಹ ತಾಪತ್ರಯಗಳೂ ದೂ ವಾರಾಂತ್ಯದ 4 ದಿನಗಳಲ್ಲಿ ನಿಮ್ಮ ಅಭೀಷ್ಟಗಳು ನೆರವೇರುವವು.

(೧ನೇ ಪುಟದಿಂದ)

ಮೋಹಿತನಾದ ಮಾನವ ವಿದ್ಯುಚ್ಛಕ್ತಿಯ ರಹಸ್ಯವನ್ನರಿತು ಅದನ್ನು ತನ್ನ ಉಪಯೋಗಕ್ಕೆ ಯಶಸ್ವಿಯಾಗಿ ಬಳಸಿಕೊಂಡ. ನಾವೆಲ್ಲರೂ ಒಬ್ಬೊಬ್ಬ ವಿಜ್ಞಾನಿ ಅಥವಾ ಸಂಶೋಧಕರಾಗುವುದು ಸಾಧ್ಯವಿಲ್ಲವಾದರೂ—ಪ್ರತಿಯೊಬ್ಬರೂ ಸೌಂದರ್ಯೋಪಾಸಕರಾಗುವುದು ಕಷ್ಟವಲ್ಲ. ಕಣ್ಣುಬಿಟ್ಟು ನೋಡಿದ ಸನ್ನಿವೇಶಗಳನ್ನು ಮನಸ್ಸಿನ ಪಟಲದಲ್ಲಿ ಚಿರಸ್ಥಾಯಿಯಾಗಿಸಿಕೊಂಡ ಪಕ್ಷದಲ್ಲಿ ನಮ್ಮ ಬೇಸರದಗಳಿಗೆಗೆ ಕಣ್ಣುಮುಚ್ಚಿ ಆ ಚಿತ್ರಗಳನ್ನು ಮರಳಿ ನೋಡಬಹುದು ತವರು ಮನೆಗೆ ಹೋದ ಹೆಂಡತಿಯ ಮುಖಕಮಲವನ್ನು ಗಂಡನು ಮನೆಯ ಮಂಚದಲ್ಲಿ ಕುಳಿತುಕೊಂಡೇ ನೋಡಬಹುದು. ಐದು ವರ್ಷದ ಹುಡುಗ ಶಾಲೆಯಲ್ಲಿ ಕಲಿಯುವಾಗ ತಾಯಿ ಮನೆಯಲ್ಲಿ ಅವನ ಚಟುವಟಿಕೆಯ ಚಿತ್ರವನ್ನು ಕಣ್ಣಮುಂದೆ ತಂದು ನಿರೀಕ್ಷಿಸಿ ನೋಡುತ್ತಿರಬಹುದು.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬ್ರೆಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿ ಹೇಳಬೇಕೆ

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್

ಶರೀರ ಸಮತೂಕತೆಗೆ-ಸರ್ವ ರೋಗ ನಿವಾರಣೆಗೆ ನವಚೇತನ, ಅಮೂಲ್ಯ ಶಕ್ತಿವರ್ಧಕವೆಂದರೆ— ಸುಪ್ರಸಿದ್ಧ

ಸರ್ ಜೀವನ ಶಿಲಾಜಿತಲೇಹ್ಯ

ಸಕಲ ಋತುವಿನಲ್ಲಿ ಸರ್ವರಿಗೂ ಅನುಕೂಲವುಂಟು.

44 ದಿನದ ಲೇಹ್ಯ ರೂ. 5-4-0, 22 ದಿನದ ಲೇಹ್ಯ ರೂ. 3-4 0 (ಪೋಸ್ಟೇಜ್ ಮಾಫಿ)

ನೀಲಗಿರಿ ಡಿಪ್ಪೋ, ಅಕ್ಕಿಪೇಟೆ ಚೌಕ, ಬೆಂಗಳೂರ ಸಿಟಿ

ಶುದ್ಧ ನೀಲಗಿರಿ ಎಣ್ಣೆ ಸಿಗುತ್ತೆ.

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾ ವರುಷಗಳಿಂದ ಊರ ಜನರ ಹಿ ಗಿ ಡಿಪ್ಪೋಸಿಟ್ ಹಣಕ್ಕೆ ನ್ಯಾಯ ಬಡ್ಡಿಯಿಂದಲೂ, ಸಾಲದ ಹ ತೀ ಕಡಿಮೆ ದರದ ಬಡ್ಡಿಯಿ ಜನ ಹಿತಸಾಧನೆಯನ್ನು ಮಾ ರುವುದು.

The Moolky Bank Moolky, S. K.

ಋತುಸ್ರಾವ ನಿಂತಿ

'ಕುಮಾರಿ' ಬಿಲ್ಲೆಗಳನು ಉ ಗಿಸಿದರೆ ಹದತಪ್ಪಿ ಋತುಸ್ರಾವ ದು, ಜತೋಟಿಗೆ ಬರುವುದು. ಸೇವನೆಯಿಂದ ತೀವ್ರ ಗುಣ ಹುದು, ಯಾವ ಬಾಧಕವೂ ರಾದು ಮುಂದಿಗೆ ಖಾತ್ರಿ ಗುಣ ಬೆಲೆ; ರೂ. 3-, ಸ್ಪೆಶಲ್ ಅಧಿಕಾಧಿಕ ಸ್ಪೆಶಲ್ ರೂ. 3- ಹನೆಬಾಡಿ ಪ್ರತ್ಯೇಕ]

Mrs. P. DEVEE, F. D8. Tollygunge CALCUTT

ಪ್ರಾತಿನಿಧ್ಯರು: ಶಹಾಕಂಪೆನಿ, ಮಂ

Regd No
M 3618

LICENCE No. 31
Licensed to Post without Prepayment

ನವಯುಗ
ಆರೋಗ್ಯ ಮಂತ್ರಿ
ಶ್ರೀ ಎ ಬಿ ಶೆಟ್ಟರಿಂದ
ಸ್ಥಾಪಿತವಾದ ವಾರಪತ್ರಿಕೆ,
ಉಡುಪಿ, ದ. ಕನ್ನಡ.

ವಾ। ಚಂದಾ 5-12-0
6 ತಿಂಗಳಿಗೆ 3-0-0
ಬಿಡಿ ಪ್ರತಿಗೆ 0-2-0

ನವಯುಗ

7-5-1953

Vol 32
No 35

NAVAYUGA WEEKLY POST BOX NO 22 UDIPI

ವರ್ಷ ೩೨
ವಾರ ೩೫

ಅಂತರಂಗ
ಪುಸ್ತಕ ಪತ್ರಿಕೆಯು
ಉಪಯುಕ್ತವಾದ
90 ಪುಸ್ತಕಗಳು
ಈ 24ಕ್ಕೆ ಸಿಗುತ್ತವೆ.
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ

ಉತ್ತಮ ವ್ಯಕ್ತಿತ್ವವು ಮನುಷ್ಯನ ಅಮೂಲ್ಯ ಸಂಪತ್ತು. ಈಚಿನವರೆಗೆ ಜನರು ಇದು ಹುಟ್ಟುವಾಗಲೇ ಪಡೆದು ಬರುವ ಸೌಭಾಗ್ಯವೆಂದು ತಿಳಿಯುತ್ತಿದ್ದರು. ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ಸಾಮರ್ಥ್ಯ ತಮ್ಮಲ್ಲಿಯೇ ಇವೆ ಎಂಬುದನ್ನಾಗಲೀ ವ್ಯಕ್ತಿತ್ವ ಪ್ರಾರಬ್ಧ ಫಲವಲ್ಲವೆಂಬ ಸಂಗತಿಯನ್ನಾಗಲೀ ತಿಳಿದು ವರ್ತಿಸಿದವರು ವಿರಳ. ಆದರೆ ಈಚೆಗೆ ನಮ್ಮ ಒಳಿತುಕೆಡುಕುಗಳಿಗೆ ನಾವೇ ಹೊಣೆಗಾರರೆಂಬ ಭಾವನೆಗೆ ಪ್ರಾಶಸ್ತ್ಯದೊರೆತಂತೆ ಉತ್ತಮ ವ್ಯಕ್ತಿತ್ವ ನಿರ್ಮಾಣವೂ ಸ್ವಂತ ಜವಾಬ್ದಾರಿ ಎಂಬುದು ಎಲ್ಲರಿಗೂ ಸಮ್ಮತವೆನಿಸಿದೆ. ನಾವು ಮನಸ್ಸನ್ನು ಉಚಿತ ಶಿಕ್ಷಣ ಮತ್ತು ಬೋಧನೆಗಳ ಪರಿಣಾಮವಾಗಿ ಸಂಸಾರಕ್ಕೆ ಗುರಿಮಾಡುವಂತೆ ವ್ಯಕ್ತಿತ್ವಕ್ಕೂ ಯೋಗ್ಯತರಬೇತಿಯನ್ನು ಕೊಡಬಲ್ಲೆವೆಂದು ಈಗ ಹೆಚ್ಚಿನ ಜನರು ನಂಬಿರುವರು. ಮನೋವಿಜ್ಞಾನಿಗಳು ಸಹ ಈ ಮಾತನ್ನು ಪುರಸ್ಕರಿಸುತ್ತಿರುವರು. ವ್ಯಕ್ತಿತ್ವ ನಿರ್ಮಾಣದ ಸಲುವಾಗಿ ಕೊಡುವ ತರಬೇತಿ ಅತ್ಯಧಿಕವಾಗಿ ನಾವು ಇತರ ಜನರೊಡನೆ ಹೇಗೆನಡೆದು ಕೊಳ್ಳುವೆವೆಂಬ ರೂಪದಲ್ಲಿಯೇ ಇದೆ. ನಮ್ಮ ಸಂಪರ್ಕಕ್ಕೆ ಬರುವ ಜನರಿಗೋಸ್ಕರ ಅವರಕೂಡೆ ಬೆರೆತು ಮಾಡುವ ಕೆಲಸಗಳು ನಮ್ಮ ವ್ಯಕ್ತಿತ್ವದ ವರ್ಚಸ್ಸನ್ನು ಬಹಳ ಮಟ್ಟಿಗೆ ಹೆಚ್ಚಿಸುತ್ತವೆ. ಮನಸ್ಸು ಇತರ ಜನರನ್ನು ತನ್ನಕಡೆಗೆ ಆಕರ್ಷಿಸಿಕೊಂಡು, ಅವರ ಸಲುವಾಗಿ ಏನು ಒಳ್ಳೆಯ ಕೆಲಸ ಮಾಡಬಹುದೆಂಬುದೇ ವ್ಯಕ್ತಿತ್ವದ ವ್ಯಾಖ್ಯೆಯಾಗಿರುತ್ತದೆ.

ವ್ಯಕ್ತಿತ್ವದ ವರ್ಚಸ್ಸು ವ್ಯಾಪಕಗೊಂಡಂತೆಲ್ಲ ನಮ್ಮ ಸುಖ ಸಂತೋಷವೂ ಅಧಿಕಗೊಳ್ಳುತ್ತದೆ. ಸುಖ ಸಂತೋಷವನ್ನು ನಾವು ಸುಗಂಧ ತೈಲಕ್ಕೆ ಹೋಲಿಸಬಹುದು. ನಾವು ಸ್ವಲ್ಪ ಮಟ್ಟಿಗಾದರೂ ಸುಖಿಗಳಾದರೆ, ನಮ್ಮ ಸಂಪರ್ಕಕ್ಕೆ ಬರುವ ಜನರೂ ನಮ್ಮ ಸುಖದ ಪರಿಮಳದಿಂದ ಆನಂದ ಪಡೆಯುವರು. ಒಬ್ಬ ಒಳ್ಳೆಯ ಮನುಷ್ಯನು ತನ್ನ ವ್ಯಕ್ತಿತ್ವದ ವರ್ಚಸ್ಸಿನಿಂದ ಅನೇಕ ಜನರಿಗೆ ಹಿತವನ್ನುಂಟುಮಾಡಬಲ್ಲನು. ಒಂದು ದೀಪವು ಗಾಢಾಂಧಕಾರವನ್ನು ನಿವಾರಿಸುವಂತೆ ಉತ್ತಮ ವ್ಯಕ್ತಿತ್ವವುಳ್ಳಾತನು ಅನೇಕ ಜನರನ್ನು ಯೋಗ್ಯ ನಾಗರಿಕರನ್ನಾಗಿ ಪರಿವರ್ತಿಸಬಲ್ಲನು. ಮುದ್ಗಲನ ರಾಮಾಶ್ವಮೇಧದಲ್ಲಿ ಒಂದು ಸುಂದರ ಪ್ರಸಂಗವಿದೆ. ರಾಜರ್ಷಿಯಾದ ಜನಕನು ದೇಹತ್ಯಾಗ ಮಾಡಿ ಕರ್ಮೋತ್ಕರ ಸ್ವರ್ಗಕ್ಕೆ ವಿಮಾನ ಮೂಲಕ ಹೋಗುವಾಗ ದೂರದಲ್ಲಿ ನರಕವು ತೋರುತ್ತವೆ. ರಾಜರ್ಷಿ ಜನಕನ ಪುಣ್ಯ ಪ್ರಭಾವವು ನರಕವಲ್ಲಿರುವ ಪಾಪಾತ್ಮರ ಕಷ್ಟವನ್ನು ಕೆಲವಂಶ ಕಡಿಮೆ ಮಾಡುತ್ತದೆ. ಆಗ ಆ ಪಾಪಾತ್ಮರು 'ಓ ಮಹಾತ್ಮಾ, ನೀನೊಮ್ಮೆ ನಮ್ಮಬಳಿ ಬಂದು, ನಮ್ಮನ್ನು ಈ ದುಃಖದಿಂದ ಪೂರ್ಣ ಮುಕ್ತರನ್ನಾಗಿಮಾಡಲಾರೆಯಾ' ಎಂದು ಆರ್ತನಾದಗೈದರು. ಜನಕನು ಈ ಮೊರೆಯನ್ನು ಕೇಳಿ ವಿಮಾನ ಸಾರಥಿಯಾದ ಮಾತಲಿಗೆ ನರಕದ ಹೆಬ್ಬಾಗಿಲಿಗೆ ತನ್ನನ್ನು ಒಯ್ದು ಬಿಡುವಂತೆ ಒತ್ತಾಯಿಸಿದನು. ಬಳಿಕ ತನ್ನ ಪುಣ್ಯವನ್ನೆಲ್ಲ ಧಾರೆಯೆರೆದು ಪಾಪಜೀವಿಗಳಿಗೆ [illegible] ಸಂತೋಷ ಕಂಡು ತಾನೂ ಆನಂದಗೊಂಡನು.

ಇದರ ಮೇಲಿಂದ ಸುಖ ಸಂತೋಷವೆಂದರೆ ಅದೊಂದು ವರದಾನವೆಂದಾಗಲೀ ಆಕಸ್ಮಿಕ ಘಟನೆಯೆಂದಾಗಲೀ ತೋರದೆ ನಾವು ಉಂಟುಮಾಡದ ಹಿತಕರವಾದ ಸ್ಥಿತಿ ಎಂದು ವೇದ್ಯವಾಗುತ್ತದೆ. ಆದುದರಿಂದ ಸುಖವನ್ನು ಕೊಡುವ ವ್ಯಕ್ತಿತ್ವವನ್ನು ನಾವು ಅಭ್ಯಾಸಬಲದಿಂದ ರೂಪಿಸಿಕೊಳ್ಳಬಹುದೆಂದೂ ಅದು ದೇವದತ್ತವಾದ ಭಾಗ್ಯ ಮಾತ್ರವಲ್ಲವೆಂದೂ ತಿಳಿದುಕೊಂಡರೆ ತಪ್ಪಿಲ್ಲ. ಆದರೆ ನಮಗೆ ಸುಖ ದೊರೆಯ ಬೇಕೆನ್ನುವ ಸ್ವಾರ್ಥಕ್ಕೆ ಮಾತ್ರ ಇಲ್ಲಿ ಅವಕಾಶವಿರಕೂಡದು. ಸ್ವಾರ್ಥಮೂಲದ ಕೆಲಸಗಳು ನಮ್ಮ ವ್ಯಕ್ತಿತ್ವವನ್ನು ಪೋಷಿಸುವ ಬದಲು, ವರ್ಚಸ್ಸನ್ನು ಕುಗ್ಗಿಸುವುದೇ ನಿಶ್ಚಯ. ಆದುದರಿಂದ ನಾವು ನೀಡುವ ನೆರವಾಗಲೀ ಮಾಡುವ ಕೆಲಸಗಳಾಗಲೀ ಪರಿಣಾಮತಃ ಇತರರಿಗೆ ಒಳ್ಳೆಯದನ್ನುಂಟುಮಾಡುವುದವಶ್ಯ. ನಮ್ಮ ಸುಖಕ್ಕೆ ಕೆಲವೊಂದು ರೀತಿಯಲ್ಲಿ ಭಂಗ ಬಂದರೂ ಚಿಂತಿಲ್ಲ—ಇತರರ ಸುಖ ನಮ್ಮ ಧ್ಯೇಯವಾಗಬೇಕು. ಆಗ ಮಾತ್ರ ನಾವು ಎಂದಿಗೂ ಅಳಿಯದ ಯಶಸ್ಸನ್ನು ತರುವ ಉತ್ತಮ ವ್ಯಕ್ತಿತ್ವ ಪಡೆದವರಾಗುತ್ತೇವೆ.

ಯುದ್ಧದಲ್ಲಿ ಸೈನಿಕನಾಗಿ ದುಡಿಯುತಿದ್ದೊಬ್ಬನನ್ನು "ನಿನ್ನ ಜೀವನದ ಅತ್ಯಂತ ರೋಮಾಂಚಕಾರಿ ಅನುಭವ ಯಾವುದು?" ಎಂದು ಕೇಳಿದಾಗ ಉತ್ತರ ರೂಪದಲ್ಲಿ ನೆತ್ತರಿನ ಹೊಳೆ ಹರಿದ ಘಟನೆಯ ವರ್ಣನೆ ಮಾಡೀತೆಂದು ಹಲವರು ಊಹಿಸಿದರು. ಆದರೆ ಆ ಸೈನಿಕ ತನ್ನ ಜೀವನದಲ್ಲಿ ಚಿರಸ್ಮರಣೀಯವಾದುದೆಂದೂ ಅತ್ಯಂತ ಮಹತ್ವದ್ದೆಂದೂ ತಿಳಿದು ಕೊಂಡ ಸಂಗತಿ ಬೇರೆಯೇ—ಒಂದು ರಾತ್ರಿ ಪೇರಿಸಿನ ರೈಲು ನಿಲ್ದಾಣದಲ್ಲಿ ನಾನು ಇಳಿವಾಗ, ಒಬ್ಬ ಮುದುಕಿ ತನ್ನೊಡನೆ ಇದ್ದ ಭಾರವಾದ ಹೊರೆಯನ್ನು ಹೊರಲಾರದೆ ಸಹಾಯ ಸಿಗುವುದೋ ಎಂದು ಆಚೀಚೆ ನೋಡುತ್ತಿದ್ದಳು. ಪೋರ್ಟರರು ಕಾಣಲಿಲ್ಲ. ಆ ಮುದುಕಿ ನೋಡಲು ಅಸಹ್ಯವಾಗಿದ್ದಳು. ಚಿಂದಿ ವಸ್ತ್ರ ಧರಿಸಿದ್ದಳು. ಅವಳ ಹೊರೆಯು ಅಸಾಧಾರಣ ಭಾರವಾಗಿತ್ತು. ಆದರೂ ಅದನ್ನು ನಾನೆತ್ತಿ ಕೊಂಡೆ. ಬನ್ನಿ ತಾಯಿಯೆಂದು ಮುದುಕಿಯನ್ನು ಕರೆದುಕೊಂಡು ಆಕೆಯನ್ನು ಮನೆಗೆ ಹೋಗುವ ಮೋಟಾರು ಹತ್ತಿಸಿದೆ. ಇನ್ನು ಮನೆಯ ಮುಂದೆ ಇಳಿಯುವಾಗ ಅವಳು ಗಂಟು ಮೂಟೆಹೊರಲು ಯಾರನ್ನು ಕರೆಯ ಬೇಕೆಂದು ಕೇಳಿ, ನಾನು ಅವ

(೧–ನೇ ಪುಟ ನೋಡಿರಿ)

ಮಧುಪರ್ಕ

ನಂದನವನದ ಸುಂದರ ಸುಗಂಧಿತ ಪುಷ್ಪಗಳಿಂದ ಶೃಂಗರಿಸಿದ ದೇವವಿಮಾನದಲ್ಲಿ ಆ ರಾಜರ್ಷಿಯನ್ನು ಕುಳ್ಳಿರಿಸಿಕೊಂಡು ಸ್ವರ್ಗಕ್ಕೆ ದೇವ ದೂತರು ಕರೆದೊಯ್ದರು. [illegible] ರಾಜರ್ಷಿಯನ್ನು ಅತಿ ಆದರದಿಂದ ಬರಮಾಡಿಕೊಂಡನು. ದೇವತೆಗಳು ಪುಷ್ಪ ವೃಷ್ಟಿಗರೆದರು, ಗಂಧರ್ವರು ರಾಜರ್ಷಿಯ ಯಶೋಗಾನ ಮಾಡಿದರು. [illegible] ರಾಜರ್ಷಿಯನ್ನು ಸ್ವರ್ಗದ ಪ್ರಮುಖ ಸ್ಥಳಗಳ ಸಂದರ್ಶನಕ್ಕೋಸ್ಕರ ಕರೆದುಕೊಂಡು ಹೋದನು.

[illegible] ವೈಕುಂಠಕ್ಕೆ ಹೋದರು. [illegible] ಚಂದ್ರಕಾಂತ [illegible]

ರಾಜರ್ಷಿ ಕೇಳಿದನು [illegible] ಚಂದ್ರಕಾಂತ [illegible]

ರಾಜರ್ಷಿ, [illegible] ಅವರ ಮುಖದಲ್ಲಿ [illegible] ಕೇವಲ ಅಹಂಕಾರವಿತ್ತು. ಅದನ್ನು [illegible] ಚಂದ್ರಕಾಂತ [illegible] ಚಂದ್ರಕಾಂತನ [illegible] ಹೃದಯ ಕರಗಿ [illegible]"

ಪರೋಪಕಾರ

ಮಂಗಳೂರಲ್ಲಿ ಇದೇ ತಾ ೩ರಂದ [illegible] ನರ ಉದ್ಘಾಟನೆ ಮಾಡಿದ [illegible] ಶಿಕ್ಷಣ ಪರಿಷತ್ತಿನ ಉದ್ಘಾಟಕರಾದ ಮೈಸೂರಿನ ಮುಖ್ಯಮಂತ್ರಿ

ಶ್ರೀ. ಕೆ. ಹನುಮಂತಯ್ಯ
ಬಿ ಎ ಎಲ್ ಎಲ್ ಬಿ

ಇವರು ತಾ ೭ಕ್ಕೆ ಉಡುಪಿಗೆ ಆಗಮಿಸಿ ಸಂಜೆ [illegible] ಗಂಟೆಗೆ [illegible] ಸಾರ್ವಜನಿಕ [illegible] ಮಾಡುವರು

ಕೇರಳದ ಜಲಮಾರ್ಗಗಳು

ತಿರುಕೊಚ್ಚಿಯ ಸಂಪತ್ತು ಹೆಚ್ಚಿಸುವ ಹಿನ್ನೀರು

— ೧ —

ಒಳನಾಡಿನ ಜಲ ಮಾರ್ಗಗಳ ಅಭಿವೃದ್ಧಿಯನ್ನು ಕೊಡಬೇಕಾದ ಗಮನ ವಿತ್ತು ನೋಡಿಲ್ಲವೆಂದು ಸಾಮಾನ್ಯವಾಗಿ ದೂರುವುದುಂಟು. ಒಳನಾಡಿನ ಜಲ ಮಾರ್ಗಗಳು ಸಾರಿಗೆ ಸೌಕರ್ಯವನ್ನು ಒದಗಿಸಿ ಕೊಡುವಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಬಲ್ಲುವೆಂಬುದು ನಿಶ್ಚಯವಾಗಿದ್ದರೂ- ಈ ಕಡೆ ವಿಶೇಷ ಲಕ್ಷ್ಯವನ್ನು ಇನ್ನೂ ಪೂರೈಸಿಲ್ಲ- ಪಂಚವಾರ್ಷಿಕ ಯೋಜನೆಯಲ್ಲಿ ರಾಷ್ಟ್ರಾಭ್ಯುದಯದ ದೃಷ್ಟಿಯಿಂದ ಸಾರಿಗೆ ಸೌಕರ್ಯಗಳು ಭರದಿಂದ ವೃದ್ಧಿ ಹೊಂದಬೇಕೆಂದು ನಿರ್ದೇಶಿಸಿರುವರು. ಆದಕಾರಣ ಜಲಮಾರ್ಗಗಳನ್ನು ಆದಷ್ಟು ಹೆಚ್ಚು ಬಳಕೆಯಲ್ಲಿ ತಂದು ಒಂದು ಮಹತ್ವದ ಸಮಸ್ಯೆಯನ್ನು ಹೇಗೆ ಬಿಡಿಸಬಹುದೆಂದು ತಿಳಿಯಲೆತ್ನಿಸಿದರೆ, ಅದರಿಂದ ಹಿತವಿದೆ. ಸಂಚಾರಾನುಕೂಲತೆ ಹಾಗು ಸಾಮಾನ್ಯ ಸಾಗಾಟಕ್ಕೆ ಅವಕಾಶ ಮಾಡಿಕೊಡುವ ಮಾರ್ಗಗಳು ಅನೇಕ ನಮೂನೆಯವು. ಆದುದರಿಂದ ಒಳನಾಡಿನ ಜಲಮಾರ್ಗಗಳ ಅಭಿವೃದ್ಧಿಯು, ಉಳಿದ ಮಾರ್ಗಗಳ ಪೂರಕವಾಗಿಯೇ ಕೈಗೂಡಬೇಕು. ಈಚೆಗೆ ರೈಲ್ವೆ ಮಾರ್ಗವನ್ನು ಹೊಸತಾಗಿ ತೆರೆಯಬೇಕೆಂಬ ಬೇಡಿಕೆಗೆ ಪ್ರಾಧಾನ್ಯ ದೊರೆತಿದೆಯಲ್ಲದೆ - ಜಲ ಮಾರ್ಗಗಳ ಕುರಿತು ಆಸ್ಥೆಯನ್ನು ವಹಿಸಿದವರು ಕಡಿಮೆ. ಉತ್ತರ ಭಾರತದಲ್ಲಿ ಗಂಗಾನದಿಯ ಅಧಿಕ ಶಾಖೆಗಳು ಯೋಗ್ಯ ಜಲಮಾರ್ಗಗಳಾಗಿ ಉಪಯೋಗಿಸಲ್ಪಡುತ್ತಾ ಬಂದಿವೆ. ದಕ್ಷಿಣದ ನದಿಗಳು ತೀವ್ರಗಾಮಿಗಳಾಗಿರುವುದರಿಂದ ಅವುಗಳನ್ನು ಯೋಗ್ಯರೀತಿಯಲ್ಲಿ ಉಪಯೋಗಿಸಲು ಸಾಧ್ಯವಿಲ್ಲವಾಗಿದೆ. ಆದರೂ ಕಡಲ ಕರೆಯಲ್ಲಿ ನದೀಮಾರ್ಗವಾಗಿ ಸರಕು ಸಾಗಾಟ ಹಾಗೂ ಪ್ರಯಾಣಿಕರ ಸಂಚಾರ ನಡೆಯುತ್ತದೆ.

— ೨ —

ನಮಗಿಂದು ಬಂಡವಲಕ್ಕೆ ಸಾಕಷ್ಟು ಹಣ ದೊರೆಯುತ್ತಿಲ್ಲ. ಪಂಚವಾರ್ಷಿಕ ಯೋಜನೆಯು ವಿದೇಶಗಳ ಸಹಾಯವನ್ನು ಕೋರುತ್ತ ಧನ ವಿನಿಯೋಗ ಪದ್ಧತಿಯನ್ನು ಹೊಂದಿಕೊಂಡಿದೆ. ಆದುದರಿಂದ ಸುಲಭ ಖರ್ಚಿನಲ್ಲಿ ಅಪೇಕ್ಷಿತ ಫಲವನ್ನು ನೀಡಬಲ್ಲ ಉಪಾಯಗಳಿಗೆ ಮನಗೊಡುವುದು ಒಳ್ಳೆಯದು. ಈ ದೃಷ್ಟಿಯಿಂದ ಒಳನಾಡಿನ ಜಲಮಾರ್ಗಗಳಿಗೋಸ್ಕರ ವೆಚ್ಚ ಮಾಡುವ ಹಣವು ನಿಜಕ್ಕೂ ಲಾಭಕರವೆನಿಸುತ್ತದೆ. ಅಲ್ಲದೆ ಇತರ ಸಂಚಾರಾನುಕೂಲತೆಗಳಿಗಿಂತ ಅಗ್ಗವೂ ಆಗುತ್ತದೆ. ರೈಲ್ವೆ ಮಾರ್ಗದ ಅಭಾವವಿದೆ ಎಂಬುದನ್ನು ಜನರ ಮನಸ್ಸಿಗೆ ತಾರದೆಯೇ ಸಾರಿಗೆಯ ಅನುಕೂಲತೆಗಳನ್ನು ಜಲ ಮಾರ್ಗಗಳು ಒದಗಿಸಿ ಕೊಟ್ಟ ಉದಾಹರಣೆಗಳಲ್ಲಿ ಕೇರಳದ ಹಿನ್ನೀರುಗಳು ಸರ್ವ ಪ್ರಥಮ ಸ್ಥಾನವನ್ನು ಪಡೆಯುತ್ತವೆ. ಜನರ ಸೌಕರ್ಯಗಳನ್ನಾಗಲೀ ವ್ಯಾಪಾರ ಮತ್ತು ಔದ್ಯೋಗಿಕ ಅಭಿವೃದ್ಧಿಯನ್ನಾಗಲೀ ರೈಲ್ವೆಯ ಅಭಾವವು ಈ ಪ್ರದೇಶದಲ್ಲಿ ಕುಂಠಿತಗೊಳಿಸಲಿಲ್ಲ. ವಿಶಾಲವಾದ ಹಿನ್ನೀರುಗಳು ಉತ್ತಮ ಜಲ ಮಾರ್ಗಗಳಾಗಿ ಕೆಲಸಮಾಡುತ್ತಿವೆ. ಅತ್ಯಂತ ಪ್ರಸಿದ್ಧವಾಗಿರುವ ಈ ಜಲ ಮಾರ್ಗ ಕೊಚ್ಚಿಯಿಂದ ದಕ್ಷಿಣಕ್ಕೆ ಸುಮಾರು ೯೦ ಮೈಲು ದೂರದ ತಿರುವಾಂಕೂರು ರಾಜ್ಯದ ಕ್ವಿಲೋನು ವರೆಗೆ ವಿಸ್ತರಿಸಿದೆ. ವೆಂಬನಾಡು, ಕಯಾಂಕುಲಂ ಅಷ್ಟಮುಡಿ ಸರೋವರಗಳನ್ನು ಈ ಮಾರ್ಗವು ಒಳಗೊಂಡಿದೆ ಮಹಾ ಕಾಲುವೆಯ ರೂಪದಲ್ಲಿ ಈ ಜಲ ಮಾರ್ಗವಿದೆ ಎಂದೆನ್ನಬಹುದೋ ಏನೋ. ಪೂರ್ವದಲ್ಲಿರುವ ಗುಡ್ಡ ಪ್ರದೇಶಕ್ಕೆ ಒತ್ತಿರುವ ಭಾಗವನ್ನು ಬಿಟ್ಟರೆ, ಈ ಜಲ ಮಾರ್ಗದಲ್ಲಿ ಉಪ್ಪು ನೀರು ತುಂಬಿದೆ. ಗುಡ್ಡದಿಂದ ಇಳಿದು ಬರುವ ಸಿಹಿ ನೀರು ಉಪ್ಪು ನೀರಿನೊಡನೆ ಸೇರಿಕೆಡದಂತೆ ಅದನ್ನು ಅಗಲಕಿರಿದಾದ ಕಾಲುವೆಗಳಲ್ಲಿ ಹಿಡಿದು ನೀರಾವರಿಗೆ ಉಪಯೋಗಿಸುವರು.

— ೩ —

ಸಾಮಾನ್ಯವಾಗಿ ಈ ಜಲಮಾರ್ಗವು ಇಳಿತದ ಹೊತ್ತಿಗೆ ಎಂಟು ಅಡಿ ಆಳವಿರುತ್ತದೆ. ಕೆಲವು ಕಡೆ ೩೦ ಅಡಿಯಷ್ಟು ಹೆಚ್ಚು ಇರಬಹುದು. ಅಥವಾ ನಾಲ್ಕೇ ಅಡಿಯಷ್ಟು ಕಡಿಮೆ ಇದ್ದೀತು. ಭರತದಲ್ಲಿ ನೀರು ಎರಡು ಮೂರು ಅಡಿಗಳಷ್ಟು ಏರುತ್ತದೆ ಆದುದರಿಂದ ಸಾಮಾನು ಸರಂಜಾಮುಗಳ ಸಾಗಾಟಕ್ಕೆ ಈ ಜಲಮಾರ್ಗವನ್ನು ಧಾರಾಳವಾಗಿ ಉಪಯೋಗಿಸಲು ಏನೇನೂ ಆತಂಕವಿಲ್ಲ ಜಲಮಾರ್ಗದ ಅಗಲ ಸುಮಾರು ೫೦ ಅಡಿಯಿಂದ ೩೦೦ ಅಡಿಯವರೆಗು ಇದೆ. ಜಲಮಾರ್ಗದ ದಕ್ಷಿಣ ತುದಿಯಲ್ಲಿರುವ ಕ್ವಿಲೋನ್ ನಗರವು ದಕ್ಷಿಣ ಹಾಗೂ ಪೂರ್ವದ ಹಿನ್ನಾಡುಗಳನ್ನು ಜೋಡಿಸುವ ರೈಲ್ವೆಯ ಕೊನೆಯಾಗಿರುತ್ತದೆ. ಜಲಮಾರ್ಗಗಳಿಂದ ಬಂದ ದವಸ ಧಾನ್ಯಗಳು, ಉಣ್ಣೆ ಸಿದ್ಧ ಸರಕುಗಳು ಕ್ವಿಲೋನದ ಮೂಲಕ ಒಳನಾಡುಗಳಿಗೆ ಹಿನ್ನೀರುಗಳ ಮೇಲಿಂದ ರವಾನೆಯಾಗುತ್ತವೆ. ಕತ್ತ ವಾಪಸು ಬರುವಾಗ ದೋಣಿಗಳಲ್ಲಿ ಕತ್ತ ಕೊಬ್ಬರಿ, ಒಣಮೀನು, ಗೇರುಬೀಜ ಮುಂತಾದವುಗಳು ಇರುತ್ತವೆ. ಈ ರೀತಿಯಲ್ಲಿ ವರ್ಷಕ್ಕೆ ಎಷ್ಟು ವ್ಯಾಪಾರವು ಈ ಜಲ ಮಾರ್ಗಗಳಿಂದ ನಡೆಯುತ್ತದೆಂಬ ಕುರಿತು ಅಂಕೆ ಸಂಖ್ಯೆಗಳ ಮಾಹಿತಿ ದೊರೆಯುವುದಿಲ್ಲ. ಹಾಗೆಂದು ಸಾಮಾನ್ಯವಾಗಿ ಈ ಜಲ ಮಾರ್ಗಗಳಲ್ಲಿ ನಿತ್ಯವೂ ಸಂಚರಿಸುತ್ತಿರುವ ಸಣ್ಣ ದೊಡ್ಡ ದೋಣಿಗಳ ಸಾಲನ್ನು ನೋಡಿದಲ್ಲಿ ಈ ಜಲಮಾರ್ಗಗಳು ಮುಖ್ಯವಾದ ಸಾರಿಗೆ ಕ್ಷೇತ್ರಗಳೆಂಬುದು ವ್ಯಕ್ತಗೊಳ್ಳುತ್ತದೆ. ಶಕ್ತಿಚಾಲಿತ ಬೋಟುಗಳೂ ಲಾಂಚುಗಳೂ ಓಡಾಡುವುದು ಈಗೀಗ ಹೆಚ್ಚಿದೆ. ನಿಶ್ಚಿತ ಸಮಯಕ್ಕೆ ಪ್ರಯಾಣಿಕರನ್ನು ಹೊತ್ತು ಸಾಗಿಸುವ ಲಾಂಚುಗಳ ಸರ್ವೀಸು ಇದೆ. ಅನೇಕ ಸಂಸ್ಥೆಗಳೂ ಮಹನೀಯರೂ ಸರಕು ಸಾಗಾಟ ಹಾಗೂ ಸಂಚಾರಾನುಕೂಲತೆಯನ್ನೊದಗಿಸಿ ಕೊಡುವ ಉದ್ಯಮವನ್ನು ಕೈಗೊಂಡಿರುವರು. ಮಧುರಾ ಕಂಪೆನಿ ಎಂಬುದು ಸಂಸ್ಥೆಗಳಲ್ಲಿ ದೊಡ್ಡದು.

— ೪ —

ಆದರೆ ಈಚೆಗೆ ಈ ಜಲ ಮಾರ್ಗಗಳ ಪ್ರತಿ ಸ್ಪರ್ಧೆಗೆ ಮೋಟಾರು ವಾಹನಗಳು ಇಳಿದಿವೆ. ಸರಕಾರವೇ ಪ್ರಯಾಣಿಕರಿಗಾಗಿ ಮೋಟಾರು ಗಾಡಿಗಳನ್ನು ಓಡಿಸುತ್ತಿದೆ; ಆದರೆ ಸರಕು ಸಾಗಾಟಕ್ಕಾಗಿ ಓಡುವ ಲಾರಿಗಳು ಮಾತ್ರ ಹೆಚ್ಚಿಕೊಂಡಿಲ್ಲ ಕೊಚ್ಚಿಯಲ್ಲಿ ದೊಡ್ಡಬಂದರಿರುವುದರಿಂದ ಆಲೆಪ್ಪಿ, ಕ್ವಿಲೋನ್ ಮತ್ತು ತಿರುವನಂತಪುರಗಳ ರಫ್ತು ವ್ಯಾಪಾರ ಸ್ವಲ್ಪ ಮಟ್ಟಿಗೆ ತಗ್ಗಿರುತ್ತದೆ ಆದುದರಿಂದ ಈ ಜಲ ಮಾರ್ಗಗಳ ಉಪಯೋಗ ಸ್ವಲ್ಪ ಮಟ್ಟಿಗೆ ಕಡಿಮೆಯಾಗುತ್ತಿರುವಂತೆ ತೋರುತ್ತದೆ ಈ ಜಲಮಾರ್ಗಗಳನ್ನು ಯೋಗ್ಯ ರೀತಿಯಲ್ಲಿ ಉಪಯೋಗಿಸಿಕೊಳ್ಳದಿದ್ದರೆ, ಕೇರಳಕ್ಕೆ ನಷ್ಟ ಸಂಭವಿಸುವುದು ನಿಶ್ಚಯ. ಆದುದರಿಂದ, ಆ ಕಡೆ ಗಮನ ಕೊಡಬೇಕೆಂಬ ಒತ್ತಾಯವೂ ಹೆಚ್ಚುತ್ತಿದೆ. ಕಾಲುವೆಗಳು ಹಾಳಾಗದಂತೆ ನೋಡಿಕೊಳ್ಳುವ, ಹಿನ್ನೀರುಗಳಲ್ಲಿ ಕೆಸರು ತುಂಬಿಕೊಳ್ಳದಂತೆ ತಡೆಯುವ ಪ್ರಯತ್ನಗಳನ್ನು ಅತ್ಯಗತ್ಯವಾಗಿ ಶೀಘ್ರದಲ್ಲಿಯೇ ಕೈಕೊಳ್ಳಬೇಕೆಂದು ಆಗ್ರಹ ಪೂರ್ವಕ ವಿನಂತಿಸಲಾಗುತ್ತಿದೆ. ಈಗಿದ್ದಂತೆ ತಿರುಕೊಚ್ಚಿ ರಾಜ್ಯವು ಅತ್ಯಂತ ಜನನಿಬಿಡವಾದ ಪ್ರದೇಶ. ಇಲ್ಲಿಯ ಸುಶಿಕ್ಷಿತರ ಪ್ರಮಾಣವು ಭಾರತದಲ್ಲಿಯೇ ಹೆಚ್ಚು ಉಳುಮೆಗೆ ಯೋಗ್ಯವಾದ ಎಲ್ಲ ಭೂಮಿಯನ್ನೂ ಎಂಬಂತೆ ಸಾಗುವಳಿ ಮಾಡುತ್ತಿರುವರು. ಖನಿಜಸಂಪತ್ತು ಈ ರಾಜ್ಯದಲ್ಲಿ ಹೇರಳವಾಗಿರುತ್ತದೆ. ಜಲವಿದ್ಯುಚ್ಛಕ್ತಿಯ ಉತ್ಪಾದನೆಗೆ ಸಕಲಾನುಕೂಲತೆಯೂ ಈ ರಾಜ್ಯದಲ್ಲಿದೆ, ಇವೆಲ್ಲವೂ ತಿರುಕೊಚ್ಚಿಯನ್ನು ಸಮೃದ್ಧವಾದ ರಾಜ್ಯವಾಗಿ, ಔದ್ಯಮಿಕ ಕ್ಷೇತ್ರವಾಗಿ ಮಾರ್ಪಡಿಸಬಹುದೆಂಬುದನ್ನು ಸ್ಪಷ್ಟಗೊಳಿಸುತ್ತವೆ. ಆದುದರಿಂದ ಸಾರಿಗೆ ಸೌಕರ್ಯಗಳನ್ನು ಯೋಗ್ಯ ರೀತಿಯಲ್ಲಿ ಉಪಯೋಗಿಸಿ ಕೊಳ್ಳಲು ಪ್ರಯತ್ನಿಸುವುದು ಸರಕಾರದ ಕರ್ತವ್ಯವಾಗಿ ಪರಿಣಮಿಸುತ್ತದೆ

— ೫ —

ಈ ವಿಷಯದಲ್ಲಿ ಇಡಲಾಗಿರುವ ಪ್ರಮುಖ್ಯ ಹೆಜ್ಜೆಯೆಂದರೆ- ಎರ್ನಾಕುಳಂ

(೧೦ನೇ ಪುಟ ನೋಡಿರಿ)

LIFE INSURANCE SELLING?

"**Canara Mutual**" has demonstrated that life insurance selling can be as respectable a profession as any other. Canara Mutual agents enjoy respect and regard from the public.

We have at our Head Office a newest psychological test that can state within an hour the chances of success in the field of a prospective agent. Educated young men who want to carve out a brilliant independent career will please contact

THE MANAGING DIRECTOR,
The CANARA MUTUAL ASSURANCE CO. Ltd.,
Head Office: UDIPI, S. INDIA. ESTD. 1935

ರಾಮತೀರ್ಥ ಬ್ರಾಹ್ಮಿ ತೈಲ

ಸೀರಿಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ ಬುದ್ಧಿ ಚುರುಕಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ತಂಪು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

SR
ಸೇವನೆಯ ಆನಂದಕ್ಕೆ,
ಅತ್ಯುತ್ತಮವಾದುದನ್ನೇ ಪಡೆಕೊಳ್ಳಿರಿ
ಎಸ್. ಆರ್.
ತಾಜಾ ನಿಪ್ಪಾಣಿ ತಂಬಾಕು
ಮತ್ತು
ದೊಂಬ್ಯಾ ಎಲೆ
ಇವುಗಳಿಂದ ತಯಾರಿಸಿದ
ಬೀಡಿಗಳಾಗಿರುತ್ತವೆ
S.R. Beedi Works

ಪಡುಕರಾವಳಿಯ ಮೆಣಸಿನ ಕಾಳು

ಡಾಲರು ಸಂಪಾದಿಸಿಕೊಡುವ ಸಂಬಾರಜೀನಸು

— ೧ —

ನಿತ್ಯದ ಅಡುಗೆಗಾಗಿ ಸಂಬಾರ ಜೀನಸುಗಳನ್ನು ನಾವೆಲ್ಲರೂ ಉಪಯೋಗಿಸುತ್ತೇವೆ. ಇವುಗಳಲ್ಲಿ ಅರ್ಧಾಂಶದಷ್ಟು ಮೆಣಸಿನ ಕಾಳು ಆಗಿರುತ್ತದೆ. ಸಂಬಾರಜೀನಸುಗಳಿಗೆ ವಿದೇಶಗಳಲ್ಲಿ ತುಂಬ ಬೇಡಿಕೆ ಇರುತ್ತದೆ. ಒಂದು ರೀತಿಯಿಂದ ನೋಡಿದರೆ ಅಮೇರಿಕದ ಡಾಲರುಗಳನ್ನು ಭಾರತಕ್ಕೆ ಸಂಪಾದಿಸಿಕೊಡುವವುಗಳಲ್ಲಿ ಸಂಬಾರ ಜೀನಸುಗಳಿಗೆ ಮಹತ್ವದ ಸ್ಥಾನವಿದೆ. ೧೯೫೧ನೇ ವರ್ಷದಲ್ಲಿ ಬ್ರಿಟಿಷ್ ಕುಂಬಾರಿಕೆ ಅಥವಾ ಇಂಡಿಯನ್ ಚಾಗಿಂತ ಸಂಬಾರ ಜೀನಸುಗಳೇ ಹೆಚ್ಚು ಡಾಲರು ಸಂಪಾದಿಸಿದುವು. ಕೇರಳದ ಕರಾವಳಿಯು ಸಂಬಾರ ಜೀನಸುಗಳಿಗೆ ಪ್ರಾಚೀನ ಕಾಲದಿಂದಲೂ ಸುಪ್ರಖ್ಯಾತವಾದ ಪ್ರದೇಶವೆನಿಸಿದೆ. ವಾಸ್ಕೋಡಗಾಮಾನು ಪೋರ್ಚುಗಲಿನ ಅರಸನಿಗೆ ಭಾರತದಿಂದ ಮೆಣಸಿನಕಾಯಿಯನ್ನು ಕಾಣಿಕೆಯಾಗಿ ತೆಗೆದುಕೊಂಡು ಹೋದನೆಂದು ಹೇಳುವುದುಂಟು. ಮೆಣಸಿನ ಕಾಳು ಭೂಮಧ್ಯ ರೇಖೆಯ ಉತ್ತರ ದಕ್ಷಿಣಕ್ಕೆ ೨೦° ಅಕ್ಷಾಂಶದ ವರೆಗೆ ಬೆಳೆಯುತ್ತದೆ. ಸುಮಾರು ೪೦೦೦ ಅಡಿ ಎತ್ತರದ ಗುಡ್ಡ ಪ್ರದೇಶಗಳಲ್ಲಿ ಮೆಣಸಿನ ಕಾಳು ಚೆನ್ನಾಗಿ ಫಲಬಿಡುತ್ತದೆ. ಈ ಗಿಡಗಳಿಗೆ ವರ್ಷಕ್ಕೆ ಸುಮಾರು ೬೦ ಇಂಚು ಮಳೆ ಬೇಕಾಗುತ್ತದೆ. ಮಳೆ ನೀರನ್ನು ಒಡನೆಯೇ ಹೀರಿಕೊಳ್ಳುವ ಕೆಂಪು ಮಣ್ಣೆಂದರೆ ತುಂಬ ಒಳ್ಳೆಯದು. ಮೆಣಸಿನ ಕಾಳಿನ ಬಳ್ಳಿಗಳು ಅತ್ಯುಷ್ಣವನ್ನು ಅಥವಾ ರಭಸದ ಮಳೆಯನ್ನು ತಡೆಯಲಾರವಾದುದರಿಂದ ಸಾಮಾನ್ಯವಾಗಿ ತೆಂಗಿನಮರ ಅಡಿಕೆ ಮರ ಅಥವಾ ಮಾವಿನ ಮರಗಳ ನೆರಳಿನಲ್ಲಿ ಇವನ್ನು ಬೆಳೆಯಗೊಡುವರು. ಸಾಧಾರಣತಃ ಮೆಣಸಿನ ಕಾಯಿಯ ಬಳ್ಳಿಯು ಮೂರನೇ ವರ್ಷದಲ್ಲಿ ಹೂ ಬಿಡುತ್ತದೆ. ಸುಮಾರು ಹತ್ತು ವರ್ಷಗಳವರೆಗೆ ಹೆಚ್ಚುತ್ತಾ ಹೋಗುತ್ತದೆ. ಸ್ಥಳಗುಣವನ್ನು ಹೊಂದಿಕೊಂಡು ಒಂದು ಉತ್ತಮ ಬಳ್ಳಿಯು ಒಳ್ಳೆಯ ಬೆಳೆ ಬಂದ ವರ್ಷ, ೪—೧೨ ರಾತಲಿನಷ್ಟು ಫಲ ಕೊಟ್ಟರೆ, ಕೆಲವು ಹಾಳಾದ ವರ್ಷ ಸಾಧಾರಣ ಬಳ್ಳಿಯು ಒಂದು ರಾತಲಿಗೂ ಕಡಿಮೆ ಫಲಕೊಡಬಹುದು.

— ೨ —

ಸಿಲೋನ್, ಮತ್ತು ದಕ್ಷಿಣ ಭಾರತಗಳಲ್ಲಿ ಮೆಣಸಿನ ಕಾಳು ಸ್ವಭಾವಿಕವಾಗಿಯೇ ಬೆಳೆಯುತ್ತದೆ. ಇಲ್ಲಿಂದ ಇಂಡೋನೇಶಿಯಾ, ಸಾರವಾಕ, ಬೋರ್ನಿಯೋ ಫ್ರೆಂಚ್ ಇಂಡೋಚೀನಾ ಮತ್ತು ಸಯಾಂಗಳಿಗೆ ಮೆಣಸಿನಕಾಳನ್ನು ಬೆಳೆಯುವ ಪದ್ಧತಿ ಹಬ್ಬಿತು. ಸಂಬಾರ ಜೀನಸುಗಳ ವ್ಯಾಪಾರದಲ್ಲಿ ತುಂಬ ಆಸಕ್ತಿ ಇದ್ದ ಡಚ್ಚರು ಮೆಣಸಿನ ಬಳ್ಳಿಯನ್ನು ಇಂಡೋನೇಶಿಯಾಕ್ಕೆ ತೆಗೆದುಕೊಂಡು ಹೋಗಿ, ಅಲ್ಲಿ ದೊಡ್ಡ ದೊಡ್ಡ ತೋಟಗಳ ಮಧ್ಯದಲ್ಲಿ ಬೆಳೆಯಲು ತೊಡಗಿದರು. ಭಾರತದಲ್ಲಿ ಉತ್ಪಾದನೆಯಾಗುವ ಮೆಣಸಿನ ಕಾಳಿನಲ್ಲಿ ಹೆಚ್ಚಿನದ್ದು ಪಶ್ಚಿಮ ಘಟ್ಟದ ತಪ್ಪಲಿನಲ್ಲಿ ಉತ್ತರ ಕನ್ನಡ ಜಿಲ್ಲೆಯ ಕಾರವಾರದಿಂದ ದಕ್ಷಿಣ ಕನ್ನಡ ಕೊಡಗು ಮೈಸೂರು ಮಲಬಾರು ತಿರುಕೊಚ್ಚಿಯನ್ನೊಳಗೊಂಡು ಕನ್ಯಾಕುಮಾರಿಯ ತನಕ ಬೆಳೆಯುತ್ತದೆ. ಬಂಗಾಳ ಮತ್ತು ಅಸ್ಸಾಮು ಪ್ರದೇಶಗಳಲ್ಲಿ ಮೆಣಸಿನ ಕಾಳನ್ನು ಮಿತವಾಗಿ ಬೆಳೆಯುತ್ತಾರೆ ಆದರೇ ಕೇರಳದ ಕರಾವಳಿಯಲ್ಲಿ ಬೆಳೆಯುವ ಮೆಣಸಿನ ಕಾಳಿಗೇನೆ ಜಾಗತಿಕ ಪೇಟೆಯಲ್ಲಿ ಬೇಡಿಕೆ ಇದೆ. ಯುದ್ಧಕ್ಕೆ ಮುಂಚೆ ಮೆಣಸಿನ ಕಾಳಿನ ಉತ್ಪಾದನೆಯಲ್ಲಾಗಲೀ ರಫ್ತು ವ್ಯಾಪಾರದಲ್ಲಾಗಲೀ ಇಂಡೋನೇಶಿಯಾವೇ ಪ್ರಾಮುಖ್ಯಸ್ಥಾನ ಪಡೆದಿದ್ದಿತು. ಅವರ ವಾರ್ಷಿಕ ಉತ್ಪಾದನವು ೫೦೦೦೦ ಟನ್ನುಗಳಷ್ಟು ಇದ್ದುದು ಕೆಲವೇ ವರ್ಷಗಳಲ್ಲಿ ೭೫೦೦೦ ಟನ್ನುಗಳಿಗೆ ಏರಿತು. ಜಾಗತಿಕ ಪೂರೈಕೆಯು ಇದರಿಂದ ೮೦ ಶೇಕಡಾದಷ್ಟು ಇಂಡೋನೇಶಿಯಾದಿಂದ ಲಭಿಸುತ್ತಿತ್ತು. ಇದನ್ನು ಬಿಟ್ಟರೆ ಮಲಯಾ (೧೪೦೦೦ ಟನ್ನು) ಮತ್ತು ಇಂಡೋ ಚೀನಾ (೪೦೦೦ ಟನ್ನು)ಗಳು ಪೂರೈಕೆಯ ದೊಡ್ಡ ದೇಶಗಳು. ಆ ಭಾರತದ ಸಾಮಾನ್ಯ ಉತ್ಪಾದನೆಯು ೨೫೦೦೦ ಟನ್ನುಗಳಷ್ಟು ಇದ್ದರೂ ನಮ್ಮ ಆಂತರಿಕ ಬೇಡಿಕೆಯನ್ನು ಪೂರೈಸಿದ ಬಳಿಕ ರಫ್ತು ವ್ಯಾಪಾರಕ್ಕೆ ೧೬೦೦೦ ಟನ್ನುಗಳು ಮಾತ್ರ ಉಳಿದವು. ಯುದ್ಧಕ್ಕೆ ಮುಂಚಿನ ದಿನಗಳಲ್ಲಿ ಜಾಗತಿಕ ಬೇಡಿಕೆಯು ೫೦೦೦೦ದಿಂದ ೬೦೦೦೦ ಟನ್ನುಗಳ ನಡುವೆ ಇದ್ದಿತು. ಇವುಗಳಲ್ಲಿ ಅಮೇರಿಕಾ ೧೫೦೦೦ ಟನ್ನು, ಜರ್ಮನಿ ೮೦೦೦ ಟನ್ನುಗಳನ್ನು ಕೊಂಡುಕೊಳ್ಳುತಿದ್ದವು.

— ೩ —

ಇಂಡೋನೇಶಿಯಾವನ್ನು ಜಪಾನು ಆಕ್ರಮಿಸಿದುದರ ಪರಿಣಾಮವಾಗಿ ಮೆಣಸಿನಕಾಳಿನ ತೋಟಗಳು ತುಂಬ ನಷ್ಟ ಹೊಂದಿದುವು. ಇದಲ್ಲದೆ ಭೂಮಿಯನ್ನು ಆಹಾರ ಧಾನ್ಯಗಳನ್ನು ಬೆಳೆಸುವುದಕ್ಕಾಗಿ ಉಪಯೋಗಿಸ ತೊಡಗಿದುದರಿಂದ ಮೆಣಸಿನ ಕಾಳಿನ ಉತ್ಪಾದನೆ ಇನ್ನಷ್ಟು ತಗ್ಗಿತು. ಈಚೆಗೆ ಇಂಡೋನೇಶಿಯಾದಲ್ಲಿ ಮರಳಿ ಮೆಣಸಿನ ಕಾಳಿನ ಬೆಳೆಗೆ ಪ್ರೋತ್ಸಾಹ ದೊರಕುತ್ತಿದ್ದರೂ ಯುದ್ಧ ಪೂರ್ವದ ಉತ್ಪಾದನಾ ಮಟ್ಟವನ್ನು ಮುಟ್ಟುವುದು ಅದಕ್ಕೆ ಸಾಧ್ಯವೆನಿಸಿಲ್ಲ. ೧೯೪೮ ರಲ್ಲಿ ಇಲ್ಲಿ ಬೆಳೆದ ಮೆಣಸಿನ ಕಾಳು ೫೦೦೦ ಟನ್ನುಗಳು ಮಾತ್ರ. ಇದು ಯುದ್ಧ ಪೂರ್ವದ ಉತ್ಪಾದನೆಯಲ್ಲಿ ಹತ್ತಕ್ಕೆ ಒಂದರಷ್ಟು ಅಥವಾ ಜಾಗತಿಕ ಬೇಡಿಕೆಯಲ್ಲಿ ನೂರಕ್ಕೆ ೧೦ ಮಾತ್ರ. ಆದರೆ ೧೯೫೦ರ ಸುಮಾರಿಗೆ ಉತ್ಪಾದನೆಯು ೮೦೦೦ ಟನ್ನುಗಳಿಗೆ ಮುಟ್ಟಿದ್ದು ಈಗ ಇನ್ನೂ ಹೆಚ್ಚಿದೆ ಈಚಿನ ವರದಿಗಳಂತೆ ಇಂಡೋನೇಶಿಯದಲ್ಲಿ ಹೊಸ ಹೊಸ ತೋಟಗಳು ತಲೆ ಎತ್ತಿವೆ. ಯುದ್ಧಪೂರ್ವದ ಪ್ರಮಾಣಕ್ಕಿಂತ ಕಡಿಮೆ ಕಂಡರೂ ಉತ್ಪಾದನೆ ಹೆಚ್ಚುವಾತರಷ್ಟು ಸಹ ಅಧಿಕ ಹೊಂದಿದೆ. ಇಂಡೋನೇಶಿಯ ಜಾಗತಿಕ ಪೇಟೆಯಲ್ಲಿ ತನ್ನ ಸ್ಥಾನ ಮಹತ್ವವನ್ನು ಕಳೆದು ಕೊಂಡುದರಿಂದ ಭಾರತದ ಮೆಣಸಿನ ಕಾಳಿಗೆ ಬೇಡಿಕೆ ಹೆಚ್ಚಿದೆ. ಆದರೆ ಕಳೆದ ಒಂದು ದಶಕದಿಂದ ಎಂಸೇ ಹೇಳಬಹುದು. ಮೆಣಸಿನ ಬೆಳೆಗೆ ಸಾಕಷ್ಟು ಗಮನವನ್ನು ಅಥವಾ ಪ್ರೋತ್ಸಾಹವನ್ನು ನಮ್ಮಲ್ಲಿ ಕೊಡುತ್ತಿಲ್ಲ. ೧೯೪೭-೪೮ರ ಸಾಲಿನಲ್ಲಿ ವರ್ಷಕ್ಕೆ ೩೨೦೦೦ ಟನ್ನುಗಳಿಗೂ ಹೆಚ್ಚು ಮೆಣಸಿನ ಕಾಳು ಉತ್ಪಾದನೆಗೊಂಡಿದ್ದಾಗ, ೧೯೫೧ನೇ ವರ್ಷದಲ್ಲಿ ೩೧೦೦೦ ಟನ್ನುಗಳು ಮಾತ್ರ ಇದ್ದಿತು. ೧೯೪೭ರಿಂದ ಮೆಣಸಿನ ಕಾಳಿನ ಬೆಳೆಯು ಅವನತಿಯನ್ನು ಹೊಂದುತ್ತಾ ಬರುತ್ತದೆ. ನಮ್ಮಲ್ಲಿ ವ್ಯಾಪಾರದ ಧ್ಯೇಯವಿದ್ದುಕೊಂಡು ವಿಶಾಲ ಪ್ರಮಾಣದ ತೋಟಗಳನ್ನು ಬೆಳೆಸಿರುವುದಿಲ್ಲ. ರಬ್ಬರು, ಚಾ ಮತ್ತು ಕಾಫಿಗಳಂತೆ ಮೆಣಸಿನ ಕಾಳನ್ನು ಒಂದು ಪ್ರಾಮುಖ್ಯ ಕೃಷಿಯೆಂದೇನೂ ಇಟ್ಟುಕೊಂಡಿಲ್ಲ. ಹತ್ತರ ಕೂಡೆ ಹನ್ನೊಂದೆಂಬಂತೆ ಬೇರೆ ಕೃಷಿಯ ಜೊತೆಗೆ ಬೆಳೆದಷ್ಟು ಬೆಳೆಯಲಿ ಎಂದು ಮೆಣಸಿನ ಕಾಳನ್ನು ಕಾಣುತ್ತೇವೆ. ಮೆಣಸಿನ ಕಾಳು ಏಳರಿಂದ ೫ ವರ್ಷಗಳಲ್ಲಿ ಫಲ ಕೊಡುವುದರಿಂದ, ಆ ಸಮಯ ಪೇಟೆ ಹೇಗಿರಬಹುದೆಂಬುದನ್ನು ಈಗಲೇ ಹೇಳಲು ಬಾರದು. ಆದುದರಿಂದ ವ್ಯಾಪಾರ ಉದ್ದೇಶವಿಟ್ಟುಕೊಂಡು ಅದನ್ನು ಬೆಳೆಯುವ ಹಠ ನಮ್ಮಲ್ಲಿಲ್ಲ. ಇದೆಲ್ಲಕ್ಕೂ ಹೆಚ್ಚು ನಿರುತ್ತೇಜಕ ಸಂಗತಿ, ದಳ್ಳಾಳಿಗಳ ದೆಸೆಯಿಂದ ಉತ್ಪಾದಕರಿಗೆ ಸಿಗುವ ಅತ್ಯಲ್ಪ ಪ್ರತಿಫಲ.

— ೪ —

ಉತ್ಪಾದನೆ ಹೆಚ್ಚಾಗದಿದ್ದರೂ ರಫ್ತು ವ್ಯಾಪಾರವು ಭಾರತದಲ್ಲಿ ದಿನೇ ದಿನೇ ಹೆಚ್ಚುತ್ತಿರುವುದು ಕಂಡುಬಂದಿದೆ, ಈಗಿನ ಅಂದಾಜಿನಂತೆ ಭಾರತದಿಂದ ರಫ್ತು ಹೊಂದುವ ಪ್ರಾಮುಖ್ಯ ವಸ್ತುಗಳಲ್ಲಿ ಮೆಣಸಿನ ಕಾಳಿಗೆ ಆರನೇ ಸ್ಥಾನ ದೊರಿತಿದೆ. ಭಾರತದಿಂದ ನಿರ್ಯಾತ ಹೊಂದಿದ ಸಂಬಾರ ಜೀನಸುಗಳು ತಂದಹಣದಲ್ಲಿ ಮೆಣಸಿನಕಾಳು ನೂರಕ್ಕೆ ೮೦ ರಷ್ಟನ್ನು ೧೯೪೯-೫೦ ನೇ ಸಾಲಿನಲ್ಲಿ ತಂದಿತು. ವಿದೇಶ ನಾಣ್ಯ ವಿನಿಮಯದಲ್ಲಿ ಮೆಣಸಿನ ಕಾಳು ಲಾಭದಾಯಕವಾದ ಸರಕೆಂದು ಮೆಚ್ಚುಗೆ ಪಡೆದಿದೆ ಯುದ್ಧಕ್ಕೆ ಮುಂಚಿನ ಐದು ವರ್ಷಗಳಲ್ಲಿ ಸುಮಾರು ೯ ಲಕ್ಷ ರುಪಾಯಿ ಬೆಲೆಯ ೩,೨೦೦೦ ಹಂಡ್ರೆಡ್ ವೈಟುಗಳಷ್ಟು ಮೆಣಸಿನಕಾಳು ನಿರ್ಯಾತ ಹೊಂದುತಿತ್ತು. ಇಂಡೋನೇಶಿಯಾದ ಪೂರೈಕೆ ಕುಸಿದುದರ ಪರಿಣಾಮವಾಗಿ ಭಾರತದ ನಿರ್ಯಾತವು ಹೆಚ್ಚಿಕೊಂಡಿತು ೧೯೪೦-೪೬ ರ ವರೆಗೆ ಪ್ರತಿ ವರ್ಷ ೩೩ ಲಕ್ಷ ರೂಪಾಯಿ ಬೆಲೆಯ ೭೭೦೦೦ ಹಂಡ್ರೆಡ ವೈಟುಗಳಷ್ಟು ಮೆಣಸಿನ ಕಾಳು [illegible]. ೧೯೪೭ರಲ್ಲಿ ೩.೭೨ ಲಕ್ಷ ರೂಪಾಯಿ ಬೆಲೆಯ ೩೩,೨೦೦೦ ಹಂಡ್ರೆಡ ವೈಟು ಮೆಣಸಿನ ಕಾಳು ನಿರ್ಯಾತ

[೧೦ನೇ ಪುಟ ನೋಡಿರಿ.]

ZANDU ಝೂಂಡೂ ಫಾರ್ಮಸಿಯ ಮನೆಮದ್ದುಗಳನ್ನೇ ಸದಾ ಉಪಯೋಗಿಸಿರಿ.

ಝೂಂಡೂ ಬ್ರಾಹ್ಮೀ ಹೇರ್ ಆಯಿಲ್ / **Zandu Brahmi Hair Oil** — ಮೆದುಳಿಗೆ ತಂಪು— ಮನಸ್ಸಿಗೆ ಉಲ್ಲಾಸವೀಯುವುದು.
1 ಪೌಂಡಿಗೆ ರೂ. 3-8-0 ಕಾಲು ರಾತ್ಲಿಗೆ ರೂ. 1.

ಝೂಂಡೂ ಸರಸಪರಿಲ್ಲಾ / **Zandu Sarasaparilla** — ರಕ್ತವನ್ನು ಶುದ್ಧಗೊಳಿಸಲು ಹೆಸರುವಾಸಿಯಾದುದು. ಚರ್ಮರೋಗಗಳನ್ನು ಗುಣಪಡಿಸಬಲ್ಲುದು. 4 ಔನ್ಸ್ ಬಾಟ್ಲಿ 1 ರ ರೂ. 1-5-0

ಝೂಂಡೂ ಬಾಲಾಮೃತ / **Zandu Balamrutam** — ಅನಾರೋಗ್ಯವುಳ್ಳ ಮಕ್ಕಳಿಗೆ ಆದರ್ಶ ಟಾನಿಕ್ 4 ಔನ್ಸ್ ಬಾಟ್ಲಿ 1 ರ ರೂ. 1-0-0

ಝೂಂಡೂ ಬಾಮ್ / **Zandu Balm** — ತಲೆ ಸಿಡಿತ ಮೊದಲಾದ ಬೇನೆಗಳಿಗೆ 1 ಸೀಸೆಗೆ ರೂ 1.

ದಕ್ಷಿಣಕನ್ನಡದಲ್ಲಿ ನಮ್ಮ ಸ್ಟಾಕಿಸ್ಟರು:—
ಮಂಗಳೂರು: ಷಾ ಕಂಪೆನಿ, ಹಂಪನಕಟ್ಟೆ.
ಉಡುಪಿ: ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್. ಇನ್ಸ್ಟಿಟ್ಯೂಟ್ ಲಿಮಿಟೆಡ್.
ಕಾರ್ಕಳ: ವಿ. ವಿ. ಶೆಣೈ ಮತ್ತು ಕಂಪೆನಿ.
ಪುತ್ತೂರು: ಪೈ ಫಾರ್ಮಸಿ.
ತಿರುವಾಂಕೂರು ಮತ್ತು ಕೊಚ್ಚಿ ಏಜಂಟರು:
ಧೀರಾಜ್‌ಲಾಲ್ ಬ್ರದರ್ಸ್, ನ್ಯೂ ರೋಡು, ಮಟ್ಟಂಚೇರಿ, ಕೊಚ್ಚಿ.

ಅಮೃತಾಂಜನ

ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ಎದೆ ನೋವುಗಳಿಗೂ ಘಾಯಗಳು, ಬಾತುಕೊಳ್ಳುವುದು ಚೇಳುವಿಷ ಮುಂತಾದುವು. ಪಕ್ಷವಾತ. ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧಿ.

ಹಳ್ಳಿ ಹಳ್ಳಿ ಸುದ್ದು ನಮ್ಮಲ್ಲಿ ಸಿಕ್ಕುತ್ತದೆ.

REGD.

ಅಮೃತಾಂಜನ ಲಿಮಿಟೆಡ್
ಮದರಾಸು ಬೊಂಬಾಯಿ ಮತ್ತು ಕಲ್ಕತ್ತ

ಕನ್ನಡಿಗರ ಬೇಡಿಕೆ ನೆಹರೂರಿಗೆ ಮಾನ್ಯ

ಬಳ್ಳಾರಿಯ ಭವಿಷ್ಯದ ಚಿಂತೆಗಿಂತಲೂ ಮೈಸೂರಿನ ಮನವೊಲಿಸುವುದು ಮುಖ್ಯ

ನೆಹರೂ ಸಂಚಾರ

ಪ್ರಧಾನ ಮಂತ್ರಿ ಶ್ರೀ ನೆಹರೂರವರು ಕಳೆದವಾರ ಮಹಾರಾಷ್ಟ್ರದ ಬರಗಾಲ ಪೀಡಿತ ಪ್ರದೇಶಗಳಲ್ಲಿ ಸಂಚರಿಸುವ ಉದ್ದೇಶದಿಂದ ಬೆಳಗಾಂವಿಗೆ ಬಂದಿದ್ದರು. ಕರ್ನಾಟಕ ಏಕೀಕರಣದ ಸಂಬಂಧದಲ್ಲಿ ಹಿಂದೆಂದೂ ಇಲ್ಲದ ಉದ್ವೇಗ ಮತ್ತು ಉತ್ಸಾಹಗಳು ಉಂಟಾಗಿರುವ ಈ ಸಂದಿಕಾಲದಲ್ಲಿ ನೆಹರೂರವರು ಬೆಳಗಾಂವಿಗೆ ಆಗಮಿಸಿದ್ದು ಕನ್ನಡಿಗರಪಾಲಿಗೆ ಒಂದು ಒಳ್ಳೆ ಸಂದರ್ಭವಾಗಿ ಪರಿಣಮಿಸಿತು. ನೆಹರೂರವರನ್ನು ಕರ್ನಾಟಕದಲ್ಲಿ ಸಂಚರಿಸಬೇಕೆಂದು ವಿನಂತಿಸಿಕೊಂಡದಕ್ಕೆ ಸಮಯದ ಅಭಾವದ ಮೂಲಕ ಅವರು ನಿರಾಕರಿಸಿದರು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಶಿಷ್ಟಮಂಡಳವನ್ನು ಕಾಣಲು ಅವರು ಒಪ್ಪಿಗೆ ಸೂಚಿಸಿದ್ದರು. ಪ್ರಕೃತದ ನೆಹರೂ ಸಂಚಾರವು ಮಹಾರಾಷ್ಟ್ರದ ಕ್ಷಾಮಗ್ರಸ್ತಪ್ರದೇಶಗಳಿಗೆ ಮಾತ್ರ ಮಿತವಾಗಿದ್ದದರಿಂದ, ಇಷ್ಟು ಅವಕಾಶ ಮಾಡಿಕೊಟ್ಟದ್ದು ಹೆಚ್ಚೆನ್ನಬಹುದು. ಪ್ರದೇಶ ಕಾಂಗ್ರೆಸ್ ಸಮಿತಿಯ ಏಪ್ರಿಲು ೭ನೇ ದಿನಾಂಕ ಕರ್ನಾಟಕ ಏಕೀಕರಣದ ಸಂಬಂಧದಲ್ಲಿ ಸ್ವೀಕರಿಸಿದ ಗೊತ್ತುವಳಿಯನ್ನೂ ಬಳ್ಳಾರಿ ತಾಲೂಕಿನ ಕುರಿತು ಸಿದ್ಧಪಡಿಸಿದ ಮನವಿಯನ್ನೂ ನೆಹರೂರವರಿಗೆ ನೀಡಲಾಯಿತು. ಮುಂದಿನ ಅಕ್ಟೋಬರದೊಳಗಾಗಿ ಸಂಯುಕ್ತ ಕರ್ನಾಟಕ ರಾಜ್ಯ ನಿರ್ಮಾಣ ಮಾಡುವುದಾಗಿ ಇದೇ ಅಕ್ಟೋಬರದೊಳಗೆ ಕೇಂದ್ರ ಸರಕಾರ ಸಾರಬೇಕೆಂದು ಪ್ರದೇಶ ಕಾಂಗ್ರೆಸ ಸಮಿತಿಯ ಗೊತ್ತುವಳಿ ಸ್ವೀಕರಿಸಿದೆಯಷ್ಟೆ: ಈ ಕುರಿತು ನೆಹರೂರವರು ಹೇಳುತ್ತ, ಸರಕಾರವನ್ನು ಬೆದರಿಸುವ ಕ್ರಮಗಳನ್ನು ಗಣನೆಗೆ ತರುವುದೇ ಇಲ್ಲವೆಂದೂ ಉಪವಾಸ ಮತ್ತು ರಾಜೀನಾಮೆಗಳು ಯಾವುದೇ ಪರಿಣಾಮವನ್ನು ಸರಕಾರದ ನಿಲುಮೆಯ ಮೇಲೆ ಮಾಡಲಾರವೆಂದೂ ಹೇಳಿದರು. ಕರ್ನಾಟಕರಾಜ್ಯದ ರಚನೆಯ ಉದ್ದೇಶವನ್ನು ಇಟ್ಟುಕೊಂಡು ಯಾರಾದರೂ ರಾಜೀನಾಮೆ ಕೊಡಲು ಬಯಸಿದರೆ, ಹಾಗೆ ಮಾಡಲು ಅವರು ಸ್ವತಂತ್ರರಿರುವರೆಂದು ನೆಹರೂ ತಿಳಿಸಿದರು.

ಒಮ್ಮತ ಅಗತ್ಯ

ನೆಹರೂರವರ ಖಂಡತುಂಡ ಮಾತುಗಳಿಂದ ಕರ್ನಾಟಕ ಪ್ರದೇಶ ಕಾಂಗ್ರೆಸ ಸಮಿತಿಯ ನಿಲುಮೆಯ ಸಂಬಂಧದಲ್ಲಿ ತಪ್ಪು ತಿಳುವಳಿಕೆಯಾಗುವ ಸಂಭವವಿರುವುದನ್ನು ಶಿಷ್ಟ ಮಂಡಳದ ಧುರೀಣರಾದ ಮುಂಬೈ ಶಾಸನ ಸಭೆಯ ಉಪಾಧ್ಯಕ್ಷ ಶ್ರೀ. ಎಸ್. ಆರ್. ಕಂಠಿ ಕಂಡುಕೊಂಡು, ನೆಹರೂರವರಿಗೆ ಕರ್ನಾಟಕ ಏಕೀಕರಣದ ಬಗ್ಗೆ ಜನರಲ್ಲಿ ಮೂಡಿರುವ ಉತ್ಕಟ ಭಾವನೆಯನ್ನು ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದರು. ಜನರು ಸಂಯುಕ್ತ ಕರ್ನಾಟಕ ರಾಜ್ಯ ರಚನೆಯಾಗಬೇಕೆಂದು ಕೇಳುವಾಗ ಅದನ್ನು ನಿರಾಕರಿಸಬಾರದು. ಉಪವಾಸ ಮುಂಡಾಟಿಕೆ ಮತ್ತು ವಿಧ್ವಂಸಕ ಕೃತ್ಯಗಳನ್ನು ಈ ಉದ್ದೇಶದಿಂದಲೇ ಜನರು ಕೈಗೊಳ್ಳುತ್ತಿರುವರು. ಈ ವರ್ತನೆಯು ಆಕ್ಷೇಪಾರ್ಹವಾಗಿದೆಯೆಂದು ನೀವು ದೂರುವಿರಿ. ಹೀಗೆ ಇಕ್ಕಟ್ಟಿನಲ್ಲಿ ಸಿಲುಗಿರುವ ಕರ್ನಾಟಕ ಧುರೀಣರ ಕುರಿತು ಸಹಾನುಭೂತಿ ತೋರಬೇಕೆಂದು ಶ್ರೀ ಕಂಠಿ ಕೇಳಿಕೊಂಡರು. ಆದರೆ ನೆಹರೂ ಇದಕ್ಕೆ ಕೊಟ್ಟ ಉತ್ತರ ತೀರ ಮಾರ್ಮಿಕವಾಗಿತ್ತು. ಜನತೆಯಮೇಲೆ ಧುರೀಣರು ತಮ್ಮ ವರ್ಚಸ್ಸು ಕಾಯ್ದುಕೊಳ್ಳಬೇಕೆಂದು ಅವರು ಉಪದೇಶಿಸಿದರು. ಪ್ರಾಯಶಃ ಕರ್ನಾಟಕ ಏಕೀಕರಣದ ಸಂಬಂಧದಲ್ಲಿ ಅನಿವಾರ್ಯವಾದ ಬಿಕ್ಕಟ್ಟು ಉಂಟಾಗಿರುವುದಕ್ಕೆ ಧುರೀಣರು ತಮ್ಮ ಕರ್ತವ್ಯವನ್ನು ಯೋಗ್ಯರೀತಿಯಲ್ಲಿ ನಿರ್ವಹಿಸುತ್ತಿಲ್ಲವೆಂಬುದೇ ಕಾರಣ. ಧುರೀಣರಲ್ಲಿ ಒಮ್ಮತವು ಕಂಡು ಬರುವುದಿಲ್ಲ. ಯೋಗ್ಯ ಮಾರ್ಗದರ್ಶನವನ್ನು ಮಾಡಿ ಜನತೆಯನ್ನು ತಮ್ಮ ಕೈಬಿಗಿಯಲ್ಲಿ ಇಟ್ಟುಕೊಳ್ಳುವುದು ಧುರೀಣರಾಗಿ ಸಾಧ್ಯವೆನಿಸಿಲ್ಲ. ಮೈಸೂರಿನೊಡನೆ ಕನ್ನಡದ ಉಳಿದ ಪ್ರದೇಶಗಳು ಸೇರಿ ಸಂಯುಕ್ತ ಕರ್ನಾಟಕ ರಾಜ್ಯವಾಗಬೇಕೆಂದು ಬಯಸುತ್ತಿರುವ ಜನರು ಮೈಸೂರಿನೊಡನೆ ಆತ್ಮೀಯತಾ ಸಂಬಂಧವನ್ನು ಏರ್ಪಡಿಸಿಕೊಳ್ಳುವುದಕ್ಕೆ ಎಂದೂ ಇಲ್ಲದಷ್ಟು ಹೆಚ್ಚು ಉತ್ಸುಕತೆಯನ್ನು ಇಂದು ತೋರಿಸುವುದವಶ್ಯವಿದೆ. ಆದರೆ ಮೈಸೂರಿನ ನಿಲುಮೆ ಏನೆಂಬುದನ್ನು ನಿರ್ದಿಷ್ಟವಾಗಿ ತಿಳಿದುಕೊಳ್ಳಲು ನಡೆಸಿದ ಪ್ರಯತ್ನಗಳು ಕಡಿಮೆ ಎಂದೇ ತೋರುತ್ತದೆ.

ಬಳ್ಳಾರಿಯ ಭವಿತವ್ಯ

ಬೆಳಗಾಂವಿಯಲ್ಲಿ ಪ್ರಧಾನಿಯವರು ಸಾರ್ವಜನಿಕ ಸಭೆಯಲ್ಲಿ ಈ ವಿಷಯದ ಮೇಲೆ ಹೆಚ್ಚು ಬೆಳಕು ಬೀರಿದರು. ಬಳ್ಳಾರಿ ಜಿಲ್ಲೆಯನ್ನು ಆಂಧ್ರದಿಂದ ಹೊರಗೆ ಉಳಿಸಬೇಕೆಂದೂ ಅನ್ಯಥಾ ಪೂರ್ವದ ತಾಲೂಕುಗಳ ವಿಚಾರಣೆಯನ್ನು ಈ ಕೂಡಲೇ ಕೈಗೊಳ್ಳಬೇಕೆಂದೂ ನೆಹರೂರವರಿಗೆ ಪ್ರದೇಶ ಕಾಂಗ್ರೆಸ ಸಮಿತಿ ಬಿನ್ನವಿಸಿದ್ದಿತು. ಬಳ್ಳಾರಿ ಜಿಲ್ಲೆಯನ್ನು ಒಡೆಯಬಾರದೆಂದು ಕನ್ನಡಿಗರ ಅಭಿಪ್ರಾಯವಿದ್ದರೂ ನೆಹರೂರವರು ಪಾರ್ಲಿಮೆಂಟಿನಲ್ಲಿ ಕೊಟ್ಟ ಹೇಳಿಕೆಯಂತೆ ಅದನ್ನು ಇಬ್ಭಾಗ ಮಾಡಲಾಗುವುದು. ಈಗ ಬಳ್ಳಾರಿ ತಾಲೂಕಿನ ಭವಿತವ್ಯದ ಸಂಬಂಧದಲ್ಲಿ ನ್ಯಾಯಮೂರ್ತಿ ಮಿಶ್ರರು ವಿಚಾರಣೆ ನಡೆಸಿರುವರು. ಶ್ರೀ ನೆಹರೂರವರು ಬಳ್ಳಾರಿ ತಾಲೂಕಿನ ಇತಿಹಾಸ ಮುಂತಾದುವನ್ನು ವಿಮರ್ಶಿಸಿ ಕೊನೆಯ ನಿರ್ಣಯಕ್ಕೆ ಬರಲು ಮಿಶ್ರಾ ನೋಡುವರೆಂದಿರುವರು. ಅಲ್ಲದೆ ಇಡೀ ಬಳ್ಳಾರಿ ಜಿಲ್ಲೆಯ ಪರಿಸ್ಥಿತಿಯನ್ನು ಮಿಶ್ರರು ಸಾಮಾನ್ಯವಾಗಿ ಅಭ್ಯಸಿಸಬಹುದೆಂದೂ ಪೂರ್ವದ ತಾಲೂಕುಗಳ ಸಂಬಂಧದಲ್ಲಿ ಮನವಿಗಳನ್ನು ಸ್ವೀಕರಿಸಬಲ್ಲರೆಂದೂ ಹೇಳಿರುವರು. ಇದರಿಂದ ನ್ಯಾಯಮೂರ್ತಿಗಳ ಅಧಿಕಾರ ಹೆಚ್ಚಿ ಕೊಂಡಂತಾಯಿತು. ಮತ್ತು ಕೇವಲ ಬಳ್ಳಾರಿ ತಾಲೂಕಿನ ಬಗ್ಗೆ ಮಾತ್ರವಲ್ಲ ಕನ್ನಡಿಗರು ತಮ್ಮ ಹಕ್ಕು ಸ್ಥಾಪಿಸುತ್ತಿರುವ ಪೂರ್ವ ತಾಲೂಕುಗಳ ಸಂಬಂಧದಲ್ಲೂ ಕೊನೆಯ ನಿರ್ಣಯಕ್ಕೆ ಬರುವುದು ಸಾಧ್ಯವೆನಿಸೀತು. ಈ ರಿಯಾಯತಿ ದೊರೆತುದನ್ನು ಕನ್ನಡಿಗರು ತಮ್ಮ ಪಕ್ಷದ ಮಂಡನೆಗೋಸ್ಕರ ಯಶಸ್ವಿಯಾಗಿ ಉಪಯೋಗಿಸಬೇಕು. ಶ್ರೀ ಮಿಶ್ರರವರು ಮೇ ೧ನೇ ದಿನಾಂಕದಿಂದ ತಮ್ಮ ವಿಚಾರಣೆಯನ್ನು ಆರಂಭಿಸಿರುವರು. ಈಗಾಗಲೇ ಆಂಧ್ರ ಮತ್ತು ಕರ್ನಾಟಕದ ಧುರೀಣರೂ ಹಲವಾರು ಸಂಘ ಸಂಸ್ಥೆಗಳೂ ಬಳ್ಳಾರಿಯ ಭವಿತವ್ಯದ ಕುರಿತು ತಮ್ಮ ತಮ್ಮ ಅಭಿಪ್ರಾಯವನ್ನು ಮಿಶ್ರರವರಿಗೆ ತಿಳಿಯಪಡಿಸಿರುವರು. ಶ್ರೀ ನಿಜಲಿಂಗಪ್ಪನವರು ಮತ್ತು ಶ್ರೀ ಟೇಕೂರು ಸುಬ್ರಹ್ಮಣ್ಯ ಮತ್ತು ಬಳ್ಳಾರಿ ಕನ್ನಡಿಗರೆಂಬುದನ್ನು ತುಂಬ ಜೋರು ಕೊಟ್ಟು ಹೇಳಿರುವರು.

ಮೈಸೂರಿನ ಮನಸ್ಸು

ಕರ್ನಾಟಕ ರಾಜ್ಯ ರಚನೆಯ ಬೇಡಿಕೆಯ ಬಗ್ಗೆ ಯಾರ ವಿರೋಧವೂ ಇಲ್ಲೆಂದು ನೆಹರೂ ಬೆಳಗಾಂವಿಯ ಸಾರ್ವಜನಿಕ ಭಾಷಣದಲ್ಲಿ ಹೇಳಿದರು. ಆದರೆ ಹೊಸ ಸಮಸ್ಯೆಗಳಿಗೆ ಅವಕಾಶವುಂಟಾಗದಂತೆ ಈ ಪ್ರಶ್ನೆಯನ್ನು ಜಾಣತನದಿಂದ ಬಿಡಿಸಬೇಕೆಂದು ಅವರು ಅಭಿಪ್ರಾಯಪಟ್ಟರು. ಆಂಧ್ರ ರಾಜ್ಯ ರಚನೆಯು ಶ್ರೀ ರಾಮುಲು ಅವರ ಉಪವಾಸದ ಪರಿಣಾಮವಾಗಿ ಆಯಿತೆಂದು ಯಾರೂ ತಿಳಿದುಕೊಳ್ಳಕೂಡದೆಂದೂ ಅದಕ್ಕೂ ಮುಂಚೆಯೇ ಈ ಪ್ರಶ್ನೆ ಒಂದು ನಿಲುಗಡೆಗೆ ಬಂದಿತ್ತೆಂದೂ ನೆಹರೂ ಜಾಹೀರು ಮಾಡಿದರು. ಭಾಷಾರಾಜ್ಯಗಳ ನಿರ್ಮಾಣದಲ್ಲಿ ಭಾಷೆಯೊಂದೇ ತಳಹದಿಯಾಗಲಾರದೆಂದು ನೆಹರೂ ಪುನರುಚ್ಚರಿಸಿದರು. ಜೊತೆಗೆ ಪ್ರತ್ಯೇಕತಾ ಭಾವನೆಗೆ ಆಸ್ಪದವಿಲ್ಲದಂತೆ ಈ ಪ್ರಶ್ನೆಯನ್ನು ಬಿಡಿಸುವುದು ಅವಶ್ಯವೆಂದು ನುಡಿದರು. ಈ ಎಲ್ಲ ವಿಷಯಗಳನ್ನು ಪರಿಶೀಲಿಸಿ ತಕ್ಕ ಕ್ರಮಗಳನ್ನು ಕೈಗೊಳ್ಳುವ ಉದ್ದೇಶದಿಂದ ಉಚ್ಚಾಧಿಕಾರ ಸಂಪನ್ನವಾದ ಆಯೋಗವನ್ನು ಸರಕಾರವು ಬೇಗನೇ ನೇಮಿಸುವುದಾಗಿ ನೆಹರೂ ಘೋಷಿಸಿದರು. ಆಂಧ್ರರಾಜ್ಯ ಅಸ್ತಿತ್ವಕ್ಕೆ ಬಂದಬಳಿಕ ಸುಮಾರು ಒಂದು ವರ್ಷಗಳಲ್ಲಿ ಈ ಆಯೋಗ ನೇಮಕ ಹೊಂದಬಹುದೆಂದೂ ಆಂಧ್ರ ರಾಜ್ಯಕಾರ್ಯನಿರ್ವಹಿಸುವ ರೀತಿಯನ್ನು ಪ್ರಯೋಗಿಕ ದೃಷ್ಟಿಯಿಂದ ನೋಡಿಯೇ ಭಾಷಾರಾಜ್ಯಗಳ ಕುರಿತು ಇತ್ಯರ್ಥಕ್ಕೆ ಬರಬೇಕಾಗುವುದೆಂದೂ ನೆಹರೂರವರ ಅಭಿಪ್ರಾಯ. ಸಂಯುಕ್ತ ಕರ್ನಾಟಕಕ್ಕೋಸ್ಕರ ಮೈಸೂರಿನ ಮೇಲೆ ಕೇಂದ್ರ ಸರಕಾರ ಒತ್ತಾಯ ಹೇರಲಾರದು. ಆದರೆ ಕನ್ನಡಿಗರು ತಮ್ಮಲ್ಲಿ ಸಾಮಾನ್ಯ ವಿಷಯಗಳ ಮಟ್ಟಿಗೆ ಒಮ್ಮತಕ್ಕೆ ಬಂದರೆ— ಅರ್ಥಾತ್ ಮೈಸೂರಿನ ಮನವೊಲಿಸಿದರೆ- ಈ ಪ್ರಶ್ನೆ ಸುಲಭವಾಗಿ ಬಿಡಿಸಲ್ಪಡುವುದೆಂದೂ ನೆಹರೂ ಹೇಳುತ್ತಾರೆ. ಇಂಣ್ಯಾಡಿಂದ ಮೈಸೂರಿನ ಮುಖ್ಯ ಮಂತ್ರಿಗಳು ಮೈಸೂರಿನ ಹೊರಗಿರುವ ಕನ್ನಡಿಗರ ಕುರಿತು ಸಹಾನುಭೂತಿಯನ್ನು ತೋರಿರುವರು. ಕನ್ನಡದ ಪ್ರದೇಶಗಳು ಮೈಸೂರಿನೊಡನೆ ಸೇರುವುದಕ್ಕೆ ಅವರ ಆಕ್ಷೇಪವಿಲ್ಲ. ಆದರೆ ಇಲ್ಲಿಗೆ ಪ್ರಶ್ನೆ ಮುಗಿಯದೆ-ಮೈಸೂರಿನ ಇತರ ಧುರೀಣರ, ಮುಖ್ಯವಾಗಿ ಕಾಂಗ್ರೆಸು ಸಂಸ್ಥೆ ಮತ್ತು ಶಾಸನ ಸಭೆಯ ಅಭಿಪ್ರಾಯ ಸ್ಪಷ್ಟವಾಗಬೇಕು.

ಉಪಾಧ್ಯಾಯರು ಬೇಕು

ಪೆರ್ಡೂರು ಶ್ರೀ ಅನಂತ ಪದ್ಮನಾಭ ದೇವಸ್ಥಾನದ ಎಲಿಮೆಂಟರಿ ಶಾಲೆಗೆ S .S. L. C. ತರಬೇತಾದ ಮುಖ್ಯೋಪಾಧ್ಯಾಯರೊಬ್ಬರು, ಹಾಯರ್ ಗ್ರೇಡ್ ತರಬೇತಾದ ಉಪಾಧ್ಯಾಯರು ಇಬ್ಬರು ಬೇಕಾಗಿದ್ದಾರೆ. ಉಮೇದ್ವಾರರು ಇದೇ ತಿಂಗಳ ತಾ. 31ರೊಳಗೆ ಅರ್ಜಿ ಕಳುಹಿಸುವುದು ಇಲ್ಲವೇ ಮುಖತ ಮಾತನಾಡುವುದು.

ಕೆ. ಭೋಜರಾಜ ಸೆಟ್ಟಿ
ಎಕ್ಸಿಕ್ಯೂಟಿವ್ ಆಫೀಸರ್
ಶ್ರೀ ಅನಂತ ಪದ್ಮನಾಭ ದೇವಸ್ಥಾನದ
ಪೆರ್ಡೂರು ತಾ. 4-5-53

ಏಳು ವರುಷಗಳಲ್ಲಿ ಫಲ

ನಮ್ಮ ಪಿಗ್ಮಿ ಮುಡಿಪುದಾರರಲ್ಲಿ ದಿನವಿಡಿ ಕೆಲಸ ಮಾಡುವ ಶ್ರಮಜೀವಿಗಳು, ಅಂಗಡಿಗಾರರು, ವಕೀಲರು, ಡಾಕ್ಟರರು, ಎಂಜಿನಿಯರರು, ಬೇಸಾಯಗಾರರು, ವರ್ಗದಾರರು ಇತ್ಯಾದಿ ತರಗತಿಯವರಿರುವರು. ಅವರ ಪಿಗ್ಮಿ ಮುಡಿಪುಗಳು ಚಿಕ್ಕ ಪುಟ್ಟ ಠೇವಣಾತಿಗಳಿಂದ ಪ್ರಾರಂಭವಾದುವು ಅಂದು ಇಲಿಯಂತಿದ್ದುವು ಇಂದು ಹುಲಿಯಂತಾಗಿವೆ. ಅಂತಹ ವಿವೇಕವುಳ್ಳ ದೂರ ದರ್ಶಿ ಸಂಪನ್ನ ಪಿಗ್ಮಿ ಠೇವಣಾತಿದಾರರ ಕೂಟಕ್ಕೆ ನೀವೂ ಕೂಡಾ ಸೇರಿ ಭಾಗ್ಯವಂತರಾಗಬೇಕಾಗಿ ಆಹ್ವಾನಿಸುತ್ತೇವೆ.

ಆಧಾರ ವಹಿವಾಟು ರೂ 5,00,000 00ಕ್ಕೂ ಮಿಕ್ಕಿದೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925 ಹೆಡ್ ಆಫೀಸು: ಉಡುಪಿ.

THE CANARA INDUSTRIAL & BANKING SYNDICATE LIMITED

ESTD: 1925 H. O: **UDIPI**.

ನಮ್ಮದು ಹಸಿವು ದಾರಿದ್ರ್ಯಗಳ ವಿರುದ್ಧ ಯುದ್ಧ

ತಟಸ್ಥ ರಾಷ್ಟ್ರವಾಗಿ ಭಾರತ ಉಳಿಯುವುದು ಆರ್ಥಿಕ ಸ್ವಾವಲಂಬನದಿಂದಲೇ ಸಾಧ್ಯ

ಭಾರತವೇ ದೇಗುಲ

ನೆಹರೂರವರು ತಮ್ಮ ಮಹಾರಾಷ್ಟ್ರ ಪ್ರದೇಶದ ಸಂಚಾರ ಕಾಲದಲ್ಲಿ ಬರಗಾಲ ಪೀಡಿತ ಜನರ ಗೋಳನ್ನು ಕಣ್ಣಾರೆ ಕಂಡರು. ಕಳೆದ ವರ್ಷ ರಾಯಲ ಸೀಮೆಯಲ್ಲಿ ತಾಂಡವವಾಡುತಿದ್ದ ಕ್ಷಾಮ ದೇವತೆಯ ಆಟೋಪವನ್ನು ನೋಡಲು ನೆಹರೂ ದಕ್ಷಿಣ ಭಾರತಕ್ಕೆ ಆಗಮಿಸಿದ್ದರು. ಈ ಬಾರಿಯ ಸಂದರ್ಶನದಲ್ಲಿ ರಾಜಕೀಯ ವಿಷಯಗಳಿಗೇ ಮಹತ್ವ ಬಂದಿತಲ್ಲದೆ ಕ್ಷಾಮ ನಿವಾರಣೆಯ ಕಡೆಗೆ ಆಸ್ಥೆ ಉಂಟಾದುದು ಕಡಮೆ ಎಂದೇ ಹೇಳಬೇಕು. ಆದರೆ ಜನನಾಯಕರಾದ ನೆಹರೂ ಹಸಿವಿನಿಂದ ಕಂಗೆಟ್ಟ ಜನತೆಯ ನಡುವಿಂದ ಹಾಯ್ದು ಹೋಗುವಾಗ ನಾಲ್ಕು ಭರವಸೆಯ ಮತ್ತು ಸಾಂತ್ವನದಾಯಕವಾದ ಮಾತುಗಳನ್ನು ಆಡುವುದು ತೀರಾ ಅಗತ್ಯ ಏಕೆಂದರೆ ಭಯಗ್ರಸ್ತರೂ ದಿಕ್ಕುಗೇಡಿಗಳೂ ಆದ ಜನರಿಗೆ ಯೋಗ್ಯ ಸಮಾಧಾನ ದೊರೆಯದಿದ್ದರೆ, ಭಾರತದ ಭವಿಷ್ಯ ಕಪ್ಪಿಟ್ಟುಕೊಳ್ಳುವುದು ನಿಜ. ನೆಹರೂರವರನ್ನು ಕಾಣಲು ಬಯಸಿ ಮಾರ್ಗದ ಎರಡೂ ಬದಿಯಲ್ಲಿ ತಾಸುಗಟ್ಟಲೆ ಕಾದು ನಿಂತಿರುವ ಜನ ನೆಹರೂರನ್ನು ರಾಜಕೀಯ ಧುರೀಣನೆಂದು ಮಾತ್ರವಲ್ಲ ಭಾರತ ಭಾಗ್ಯ ವಿಧಾತನೆಂದೂ ಮನ್ನಿಸುತ್ತಾರೆ. ಆದುದರಿಂದಲೇ ನೆಹರೂ ಜನರಮುಂದೆ ನಮ್ರರಾಗುತ್ತಾರೆ. ಪಂಡರಪುರದಂಥ ಪ್ರಸಿದ್ಧ ತೀರ್ಥಕ್ಷೇತ್ರದಲ್ಲಿ ವಿಠಲರುಕುಮಾಯಿ ದೇವರ ದರ್ಶನ ಲಾಭವನ್ನು ನೆಹರೂ ಮಾಡಿಕೊಂಡರೂ ಅದು ಕೇವಲ ಸಾಂಪ್ರದಾಯಿಕವಾಗಿತ್ತು. ಅವರೇ ಸಾರ್ವಜನಿಕ ಭಾಷಣದಲ್ಲಿ ನನ್ನ ದೇವಾಲಯವೇ ಭಾರತ; ಮತ್ತು ಭಾರತದ ಮೂವತ್ತೈದು ಕೋಟಿ ಜನರ ಪೂಜೆ ಮತ್ತು ಸೇವೆಯೇ ನನ್ನ ಆದರ್ಶ ಎಂದರು. ನೆಹರೂ ಮಾತು ಭಾವುಕನೋರ್ವನ ಅಂತರ್ವಾಣಿಯಂತೆ, ಕವಿ ಹೃದಯದ ಒಳನುಡಿಯಂತೆ ನಮಗೆ ಭಾಸವಾಗುತ್ತದೆ. ಪ್ರಾಮಾಣಿಕತೆಯನ್ನು ಮಾತಿನ ರೂಪದಲ್ಲಿ ವ್ಯಕ್ತಗೊಳಿಸುವಾಗ ಹೀಗಾಗುವುದು ಸ್ವಾಭಾವಿಕವೇ. ಜನರು ಇದನ್ನು ಆಕ್ಕರೆಯಿಂದ ಸ್ವಾಗತಿಸುತ್ತಾರೆ, ಮತ್ತು ಕಳೆದುಹೋದ ಸುಖವನ್ನು ಮರಳಿ ಪಡೆಯುವ ಆಶೆಯನ್ನು ಇಟ್ಟುಕೊಂಡು ಬದುಕುತ್ತಾರೆ

ಬಿವರಿಳಿಸುವ ಆದರ್ಶ

ಹಿಂದೆ ಹೇಳಿದ್ದನ್ನೇ ಈಗಲೂ ನೆಹರೂ ಜನರಿಗೆ ಬೋಧಿಸುತಿದ್ದರು. ಅದರಲ್ಲಿ ರೋಮಾಂಚಕವಾದುದೇನೂ ಇರಲಿಲ್ಲ; ಅಥವಾ ಉದ್ವೇಗಗೊಳಿಸುವಂಥದೂ ಇರಲಿಲ್ಲ. ನಿರುದ್ಯೋಗ ಮತ್ತು ಬಡತನಗಳನ್ನು ದೂರೀಕರಿಸಲು ಸರಕಾರ ಪ್ರಯತ್ನಿಸುತ್ತಿದೆ ಅನ್ನ ಬಟ್ಟೆಯಂಥ ಮೂಲ ಭೂತ ವಿಷಯಗಳಲ್ಲಿ ಸ್ವಾವಲಂಬನವನ್ನು ಹೊಂದುವ ಆಶೆ ಭಾರತಕ್ಕೆ ಇದೆ. ಪಂಚವಾರ್ಷಿಕ ಯೋಜನೆಯನ್ನು ಕಾರ್ಯಾನ್ವಿತಗೊಳಿಸುವ ಉದ್ದೇಶವಾದರೂ ಇದೇ ಆಗಿರುತ್ತದೆ. ಎಂದುಹೇಳಿ ನೆಹರೂರವರು ಜನರು ಸ್ವೇಚ್ಛೆಯಿಂದಲೂ ಸಂತೋಷದಿಂದಲೂ ಈ ಯೋಜನೆಯಲ್ಲಿ ಸಕ್ರಿಯ ಭಾಗವನ್ನು ತೆಗೆದುಕೊಳ್ಳಬೇಕೆಂದು ವಿನಂತಿಸಿದರು. ದೇಶದಲ್ಲಿ ಉತ್ಪಾದನೆ ಹೆಚ್ಚಿಕೊಂಡರೆ ಸಂಪತ್ತು ಬೆಳೆಯುತ್ತದೆ; ಬಡತನ ನಾಶವಾಗುತ್ತದೆ. ಉತ್ಪಾದಕ ಕಾರ್ಯಗಳಲ್ಲಿ ಪ್ರವೃತ್ತರಾಗುವುದರಿಂದ ನಿರುದ್ಯೋಗವು ಬಹಳ ಮಟ್ಟಿಗೆ ದೂರಾಗುತ್ತದೆ. ಆದುದರಿಂದ ನಿರುದ್ಯೋಗ ನಿವಾರಣೆಗಾಗಲೀ ಬಡತನವನ್ನು ಹೋಗಲಾಡಿಸುವುದಕ್ಕಾಗಲೀ ಅನ್ನ ಬಟ್ಟೆಯನ್ನು ಸಂಪಾದಿಸುವುದಕ್ಕಾಗಲೀ ಪ್ರತಿಯೊಬ್ಬನೂ ಪರಿಶ್ರಮ ಪೂರ್ವಕ ದುಡಿಯುವುದವಶ್ಯವೆಂದು ನೆಹರೂ ಜನತೆಗೆ ತಿಳಿಸಿದರು. ಮಹಾರಾಷ್ಟ್ರ ಪ್ರದೇಶದಲ್ಲಿ ಅನೇಕ ಪರಿಹಾರ ಕಾಮಗಾರಿಗಳನ್ನು ಮುಂಬಯಿ ಸರಕಾರವು ನಡೆಸಿರುತ್ತದೆ; ಮತ್ತು ಇದರಲ್ಲಿ ಸಂತ್ರಸ್ತಜನರು ಭಾಗವಹಿಸಿ ದುಡಿಯುತ್ತಿದ್ದಾರೆ. ನೆಹರೂ ಈ ರೀತಿ ದುಡಿಯುವ ಜನರ ಸುಖಕಷ್ಟಗಳನ್ನು ಮಾರ್ಗವಷ್ಟೆ ಅಲ್ಲಲ್ಲಿ ಮೋಟಾರು ನಿಲ್ಲಿಸಿಯೂ, ಜನಂದ್ದಲ್ಲಿಗೆ ನೇರಾಗಿ ಹೋಗಿಯೂ ವಿಚಾರಿಸಿದರು. ಅಹಮ್ಮದ ನಗರದಲ್ಲಿ ನೆರೆದ ವಿಶಾಲ ಜನಸಮುದಾಯದ ಮುಂದೆ ನೆಹರೂರವರು ಭಾಷಣ ಮಾಡುತ್ತಾ ನಾವು ಮೂರನೇ ಮಹಾಯುದ್ಧದಲ್ಲಿ ಭಾಗವಹಿಸಲು ಇಚ್ಛಿಸುವುದಿಲ್ಲ. ಯುದ್ಧ ಸಂಭವಿಸಿದ ಪಕ್ಷದಲ್ಲಿ ತಟಸ್ಥ ರಾಷ್ಟ್ರವಾಗಿರಲು ಬಯಸುತ್ತೇವೆ. ಆದರೆ ಪ್ರತ್ಯಕ್ಷ ಯುದ್ಧದಲ್ಲಿ ಭಾಗವಹಿಸದಿದ್ದರೂ ಯುದ್ಧವು ತಂದೊಡ್ಡುವ ಆರ್ಥಿಕ ವಿಪತ್ಪರಂಪರೆಗಳಿಂದ ತಪ್ಪಿಸಿಕೊಳ್ಳಲಾರೆವು. ಆದುದರಿಂದ ಅಂಥ ದುರಂತವನ್ನು ಇದಿರಿಸಲು, ಈಗಲೇ ನಮ್ಮ ಕಾಲುಗಳನ್ನು ದೃಢಗೊಳಿಸಬೇಕು, ದೇಶದ ಸಂಪತ್ತನ್ನು ಹೆಚ್ಚಿಸಪೇಕು ಎಂದರು.

ಇನ್ನೊಂದು ಚಿತ್ರ

ಮಾತಿಗಿಂತ ಕೃತಿ ಮಹತ್ವದ್ದೆಂದು ಎಲ್ಲರೂ ಒಪ್ಪಬೇಕು ನಿಜವಾದರೂ ಒಳ್ಳೆಯ ವಿಚಾರಗಳನ್ನು ತಿಳಿಸಲಿಕ್ಕೋಸ್ಕರ ಮಾಡುವ ಭಾಷಣಾದಿಗಳನ್ನು ಎಷ್ಟಕ್ಕೂ ದೂರುವಂತಿಲ್ಲ. ನಮ್ಮ ಮಂತ್ರಿಗಳು ಭಾಷಣ ಕೊಡುವುದರಲ್ಲಿಯೇ ಕಾಲ ಕಳೆಯುವರೆಂದು ದೂರುವ ಜನರು ಇದನ್ನು ಮರೆಯಬಾರದು ಧುರೀಣರು ಕೊಡುವ ಸಂದೇಶ ಹಾಗು ಭರವಸೆಗಳೇ ಜನತೆಗೆ ಆಧಾರವಲ್ಲವೆ? ಆದುದರಿಂದ ಮಂತ್ರಿಗಳು ಮುಂತಾದವರ ಸಂಚಾರ ಕಾರ್ಯಕ್ರಮವು ನಿರುಪಯುಕ್ತವೆಂದೂ ಭತ್ತೆ ತಿನ್ನುವುದಕ್ಕಾಗಿ ಕೈಗೊಳ್ಳುವ ತಂತ್ರವೆಂದೂ ಹಳಿಯಲ್ಪಡಲಾಗದು. ಜನತೆಯೊಡನೆ ಸಂಪರ್ಕವನ್ನು ಯಾವಾಗಲೂ ಇಟ್ಟು ಕೊಂಡು ಅವರ ಸುಖದುಃಖಗಳ ಪರಿಚಯವನ್ನು ಮಂತ್ರಿಗಳು ಮಾಡಿಕೊಳ್ಳದಿದ್ದರೆ-ಸರಕಾರವು ಜನತೆಯ ಪರವಾಗಿ ಕೆಲಸ ಮಾಡುವುದು ಹೇಗೆ? ಆದರೆ ಸದಾಕಾಲ ಜನರ ನಡುವೆ ಬದ್ದುಕೊಳ್ಳುವುದು ಮಾತ್ರ ಮಂತ್ರಿಗಳ ಕೆಲಸವಲ್ಲ – ಅವರು ಆಡಳಿತ ಮತ್ತು ಶಾಸನ ಕಾರ್ಯಗಳಲ್ಲೂ ಭಾಗವಹಿಸಬೇಕಾಗಿದೆ. ಇದಕ್ಕೋಸ್ಕರವೇ ಶಾಸನ ಸಭೆಗಳಲ್ಲಿ ಬಿಸಿ ಬಿಸಿ ಚರ್ಚೆ ನಡೆಯುತ್ತವೆ. ಪಾರ್ಲಿಮೆಂಟನಲ್ಲಿ ಮಹತ್ವದ ಮಸೂದೆಗಳು ಇಲ್ಲದಿದ್ದರೂ ಚಲಚ್ಚಿತ್ರಗಳಿಗೆ ಸಂಬಂಧಿಸಿದ ಕಾಯಿದೆಯ ತಿದ್ದುಪಡಿಯ ಕುರಿತು ಮೇಲ್ಮನೆಯಲ್ಲಿ ನಾಲ್ಕು ತಾಸು ಕಾವೇರಿದ ಚರ್ಚೆ ನಡೆಯಿತು. ಈಗಿನ ಚಲಚಿತ್ರಗಳು ಹಾಲಿವುಡ್ ಚಿತ್ರಗಳ ನಕಲು ಮಾತ್ರವೆಂದೂ ಶೃಂಗಿಕ ಮತ್ತು ಅಪರಾಧಿ ಪ್ರವೃತ್ತಿಗಳನ್ನು ಪ್ರಚೋದಿಸುವುದೇ ಅವುಗಳ ಉದ್ದೇಶವೆಂದೂ ಟೀಕೆಗಳು ಬಂದುವು. ಪಾರ್ಲಿಮೆಂಟಿನ ಕೆಳಮನೆಯು ರಾಜಕೀಯ ಧುರೀಣರ ಸಭೆಯೆಂದರೆ ಚೆಂದ, ಆದರೆ ಮೇಲ್ಮನೆ ಹಾಗಲ್ಲ ಅಲ್ಲಿ ಸಮಾಜದ ವಿವಿಧ ಚಟುವಟಿಕೆಗಳನ್ನು ಪ್ರತಿನಿಧೀಕರಿಸುವ ಮಹನೀಯರಿದ್ದಾರೆ ಶೈಕ್ಷಣಿಕ ವೈಜ್ಞಾನಿಕ ಸಾಂಸ್ಕೃತಿಕ ಸಾಹಿತ್ಯಿಕ ವಿಷಯಗಳಲ್ಲಿ ಯೋಗ್ಯ ಸಲಹೆ ದೊರೆಯುವ ಸ್ಥಳ ಮೇಲ್ಮನೆ ಎನ್ನಬಹುದು. ನಮ್ಮ ಚಲಚ್ಚಿತ್ರಗಳು ಕೀಳು ಮಟ್ಟಕ್ಕೆ ಇಳಿದಿವೆ ಎಂಬುದಕ್ಕೆ ಪ್ರತಿಮಾತಿಲ್ಲದಿದ್ದರೂ- ಅವುಗಳಲ್ಲಿ ನವಚೈತನ್ಯ ತುಂಬಿಸುವ ಬಗೆ ಏನೆಂಬುವನ್ನು ಜಾಗರೂಕತೆಯಿಂದ ಕಂಡುಹಿಡಿಯಬೇಕು.

ಸ್ವಾರಸ್ಯ ಪ್ರಸಂಗ

ಹಕ್ಕು ಬಾಧ್ಯತೆಯ ಒಂದು ಪ್ರಶ್ನೆಯನ್ನು ಆಧರಿಸಿ ಪಾರ್ಲಿಮೆಂಟನಲ್ಲಿ ನಡೆದ ಘಟನೆ ಮಾತ್ರ ನೋಡುವವರಿಗೂ ಕೇಳುವವರಿಗೂ ಸ್ವಾರಸ್ಯವಾಗಿದ್ದವು. ಇಂಥ ಪ್ರಸಂಗವು ಅಪೇಕ್ಷಣೀಯವಲ್ಲ; ಮತ್ತು ಅನಿವಾರ್ಯವೂ ಆಗಿರಲಿಲ್ಲ. ಆದರೆ ಹೇಗೆ ಹೇಗೊ ಘಟನೆಗಳು ಸಂಕಲೆಯಂತೆ ಒಂದರ ಹಿಂದೊಂದಾಗಿ ನಡೆದು, ಸ್ವಾರಸ್ಯ ಪ್ರಸಂಗವನ್ನು ಏರ್ಪಡಿಸಿದುವು. ಮೇಲ್ಮನೆಯಲ್ಲಿ ಆದಾಯಕರ ಸಂಬಂಧದ ಮಸೂದೆಯನ್ನು ಮಂಡಿಸಿದಾಗ, ಅದು ಹಣ ಶಾಸನ ಸ್ವರೂಪದ್ದೆಂದು ಕೆಳಮನೆಯ ಅಧ್ಯಕ್ಷರು ಶಿಫಾರಸು ಕೊಟ್ಟದ್ದು ಸಂಯೋ ಎಂದು ಆಕ್ಷೇಪವೆತ್ತಲಾಯಿತು. ಮೇಲ್ಮನೆಯ ಸಭಾಧುರೀಣರೂ ಕಾಯಿದೆ ಮಂತ್ರಿಗಳೂ ಆದ ಶ್ರೀ ಸಿ. ಸಿ. ಬಿಸ್ವಾಸರು ಬಹುಶಃ ಅಧ್ಯಕ್ಷರು ಸ್ವಂತ ನಿರ್ಣಯದಿಂದ ಹೀಗೆ ಮಾಡಿರಲಿಕ್ಕಿಲ್ಲ ಎಂದು ಹೇಳಿದರು. ಇದು ಅಧ್ಯಕ್ಷರ ನಡವಳಿಕೆಯ ಕುರಿತು ಎತ್ತಿದ ಆಕ್ಷೇಪವೆಂದು ಲೋಕ ಸಭೆಯಲ್ಲಿ ಓರ್ವ ಸದಸ್ಯರು ಹೇಳಿದರು; ಮತ್ತು ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದೂ ಕಾಯಿದೆ ಮಂತ್ರಿಗಳು ಅಲ್ಲಿರಬೇಕೆಂದೂ ಕೇಳಲಾಯಿತ . ಮೇಲ್ಮನೆಗೆ ಈ ಸಂಗತಿ ತಿಳಿದಾಗ ಮಂತ್ರಿಗಳು ಪ್ರಾಮಾಣಿಕವಾಗಿ ವರ್ತಿಸಿದರೆಂದು ಎಲ್ಲರೂ ಅಭಿಪ್ರಾಯಪಟ್ಟದ್ದಲ್ಲದೆ, ಮೇಲ್ಮನೆಯ ಸದಸ್ಯರಮೇಲೆ ಕೆಳಮನೆಗೆ ಅಧಿಕಾರವಿಲ್ಲವೆಂದು ತೀರ್ಮಾನಿಸಿ, ಕಾಯಿದೆ ಮಂತ್ರಿಗಳು ಲೋಕಸಭೆಯಲ್ಲಿ ಈ ವಿಷಯದ ಚರ್ಚೆಯ ಕಾಲಕ್ಕೆ ಹಾಜರಿರಬಾರದೆಂದು ಸರ್ವಾನುಮತದಿಂದ ನಿರ್ಣಯವಾಯಿತು. ಇದರಂತೆ ಲೋಕ ಸಭೆಯಿಂದ ಕಾಯಿದೆ ಮಂತ್ರಿಗಳು ಸಭಾತ್ಯಾಗ ಮಾಡಿದರು. ಆಗ ಮಂತ್ರಿಗಳು ಲೋಕಸಭೆಗೆ ಹೋಗಬಾರದಲ್ಲವೆ ಎಂಬ ಇನ್ನೊಂದು ಘಟನಾತ್ಮಕ ಪ್ರಶ್ನೆ ಎದ್ದಿತು ಪಾರ್ಲಿಮೆಂಟಿನ ಎರಡೂ ಮನೆಗಳು ಪರಸ್ಪರ ವಿಚಾರವಿನಿಮಯದಿಂದ ಸೌಹಾರ್ದಯುತವಾಗಿ ಬಿಡಿಸಬಹುದಾದ ಪ್ರಶ್ನೆಗಳು ಸಂಗತಿಗಳ ಒತ್ತಾಯದಿಂದೆಂಬಂತೆ ಘಟನಾತ್ಮಕ ಸಮಸ್ಯೆಗಳಿಗೆ ಜನ್ಮಕೊಟ್ಟವು ಸಾಮಾನ್ಯ ಸ್ಪಷ್ಟೀಕರಣದೊಡನೆಯೇ ಮುಗಿಯಬಹುದಾದುದು ಈ ರೀತಿ ಗತಿ ಪರಿವರ್ತನೆ ಹೊಂದುವುದಕ್ಕಾಗಿಯೇ ಕಡ್ಡಿಯನ್ನು ಗುಡ್ಡವಾಗಿಸುವುದು ಎನ್ನಬಹುದು.



ಮಿತ ದರದಲ್ಲಿ
ಚಲೋ ಗಡಿಯಾರಗಳೂ
ಟೈಂಪೀಸುಗಳೂ
ದೊರೆಯುತ್ತವೆ.
ವಿವರಗಳಿಗೆ ಬರೆಯಿರಿ:
MUBARAK & CO Watch & Clock Specialists, MADRAS 3.
ಮುಬಾರಕ್ & ಕೊ ವಾಚ್ ಎಂಡ್ ಕ್ಲಾಕ್ ಸ್ಪೆಶಲಿಸ್ಟ್ಸ್, ಮದ್ರಾಸು 3

PLACE YOUR LIFE ASSURANCE WITH A COMPANY OF YOUR OWN — — —

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policyholders and Representatives at whatever stage We welcome your association with the POPULAR.

The Popular Insurance Co. Ltd.
"Popular Buildings, MANGALORE—1.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸುರಕ್ಷಿತತೆ, ಭದ್ರತೆ ಮತ್ತು ಸೇವಾತತ್ಪರತೆ
ಇವುಗಳಿಗೆ
ತವರುಮನೆಯಂತಿದ್ದು, ನಿಮ್ಮೆಲ್ಲರ ಸ್ನೇಹ, ಸಹಕಾರಗಳನ್ನು
ಅಪೇಕ್ಷಿಸುವ ಬೇಂಕು.

THE CANARA BANKING CORPORATION LTD.
Estd: 1906] [H. O.: **UDIPI**, (S. India)

ನವಯುಗ

ಉಡುಪಿ, ಗುರುವಾರ ೭-೫-'೫೨

ಭೂ ಸುಧಾರಣಾ ಸಮಿತಿ

ಕೃಷೀವಲರ ನಾಡಾಗಿರುವ ಭಾರತದಲ್ಲಿ ಭೂಸುಧಾರಣೆಯು ಒಂದು ಮಹತ್ವದ ವಿಷಯವಾಗಿರುವುದರಿಂದ ಪಂಚವಾರ್ಷಿಕ ಯೋಜನೆಯಲ್ಲಿ ಈ ಕುರಿತು ಹಲವಾರು ಸೂಚನೆಗಳನ್ನು ಮಾಡಿರುವರು. ಯೋಜನಾ ಆಯೋಗವು ಕೊನೆಯದಾಗಿ ಸೂಚಿಸಿದ ವಿಷಯವೆಂದರೆ—ಭೂ ಸುಧಾರಣೆಯ ವಿಷಯವನ್ನು ಯೋಗ್ಯರೀತಿಯಲ್ಲಿ ಅಭ್ಯಸಿಸಿ ವಿಮರ್ಶಿಸುವುದಕ್ಕಾಗಿ ಕೇಂದ್ರ ಸಮಿತಿಯೊಂದನ್ನು ರಚಿಸಬೇಕೆಂಬುದಾಗಿದೆ. ಲೋಕಸಭೆಯಲ್ಲಿ ಮೊನ್ನೆ ಮಂತ್ರಿ ಶ್ರೀ ಜಯಸುಖಲಾಲ ಹಾಥಿಯವರು ಇಂಥ ಕೇಂದ್ರಸಮಿತಿಯನ್ನು ಸರಕಾರವು ರಚಿಸಲಿರುವುದೆಂದು ಹೇಳಿದರು. ಈ ಹೇಳಿಕೆಯನ್ನು ನಾವು ಸಂತೋಷದಿಂದ ಸ್ವಾಗತಿಸುತ್ತೇವೆ. ಈ ಸಮಿತಿಯಲ್ಲಿ ಯೋಜನಾ ಆಯೋಗದ ಸದಸ್ಯರು, ಭಾರತ ಸರಕಾರದ ಆಹಾರ ಹಾಗು ಕೃಷಿ ಮತ್ತು ಕೃಷಿ ಮಂತ್ರಿಗಳು ಇರುವರು. ಈ ಕೇಂದ್ರಸಮಿತಿಯ ಆದೇಶದಂತೆ ಭೂಸುಧಾರಣೆಯ ಬಗ್ಗೆ ಯೋಜನಾ ಆಯೋಗದಲ್ಲಿ ಹೊಸತೊಂದು ಶಾಖೆಯನ್ನು ತೆರೆಯಲಾಗುವುದು. ಈ ವಿಭಾಗವು ಕೇಂದ್ರ ಸಮಿತಿಯೊಡನೆಯೂ ಕೃಷಿ ಇಲಾಖೆಯೊಡನೆಯೂ ಸಂಪೂರ್ಣ ಸಹಕಾರವಿಟ್ಟುಕೊಂಡು ಕೆಲಸ ಮಾಡುವುದು. ಭೂಮಿಯ ಒಡೆತನ, ಮೇಲ್ವಿಚಾರಣೆ, ಬೇಸಾಯ, ಭೂಮಿಯ ಹಂಚುವಿಕೆ ಮುಂತಾದ ಸಮಸ್ಯೆಗಳನ್ನು ಈ ವಿಭಾಗವು ಕೂಲಂಕಷವಾಗಿ ಅಭ್ಯಸಿಸುತ್ತದೆ. ರಾಜ್ಯ ಸರಕಾರಗಳಿಗೆ ಭೂ ಸುಧಾರಣೆಯ ಸಂಬಂಧದಲ್ಲಿ ಯೋಗ್ಯ ಮಾರ್ಗದರ್ಶನವನ್ನೂ ಸಲಹೆಯನ್ನೂ ನೀಡುತ್ತದೆ; ಭೂ ಸುಧಾರಣೆಯ ಸಂಗತಿಯನ್ನು ಆಗಿಂದಾಗ್ಗೆ ಪರಿಶೀಲಿಸುವುದೂ ಪ್ರಗತಿಯ ವಿವರಗಳನ್ನು ಕ್ರೋಢೀಕರಿಸಿ ವರದಿ ಮಾಡುವುದೂ ಈ ಶಾಖೆಯ ಮಹತ್ವದ ಹೊಣೆಯಾಗಿರುತ್ತದೆ. ಅನೇಕ ರಾಜ್ಯ ಸರಕಾರಗಳು ಈಗಾಗಲೇ ಭೂ ಸಂಬಂಧದ ಸುಧಾರಣೆಯ ಉದ್ದೇಶದಿಂದ ಕಾಯಿದೆ ಮಾಡಿದ್ದರೂ ಅವುಗಳಲ್ಲಿ ಕುಂದು ಕೊರತೆಗಳು ಬಹಳ ಇವೆ. ರಾಜ್ಯ ಸರಕಾರಗಳ ಧೋರಣೆಗೆ ವ್ಯತ್ಯಯ ಬಾರದಂತೆ ಭೂ ಸುಧಾರಣೆಯ ಧೋರಣದಲ್ಲಿ ಹೊಸತಾಗಿ ನೇಮಕ ಹೊಂದುವ ವಿಭಾಗವು ಬದಲಾವಣೆಯನ್ನು ಸೂಚಿಸಬಹುದೆಂದು ಹೇಳಿದುದು ಗಮನಾರ್ಹವಾಗಿದೆ. ಸಹಕಾರಿ ಪದ್ಧತಿಯಿಂದ ಕೃಷಿಯನ್ನು ನಡೆಸುವ ಕುರಿತು ಹೆಚ್ಚಿನ ನಿಗಾ ತೆಗೆದುಕೊಳ್ಳಲು ನೋಡಲಾಗುವುದು. ಹೀಗಿರುವುದರಿಂದ ಕೇಂದ್ರ ಸಮಿತಿಯ ಹೊಣೆಗಾರಿಕೆಯು ಬಹಳ ವ್ಯಾಪಕವಾಗಿದೆ ಎಂದು ತೋರುತ್ತದೆ. ಭೂಸುಧಾರಣೆಯ ಪ್ರಶ್ನೆಯು ನಮ್ಮ ದೇಶದ ಉಸಿರೆಂದರೂ ಸಲ್ಲುತ್ತದೆ. ನಾವು ಅನ್ನ ಸ್ವಾವಲಂಬನವನ್ನು ಹೊಂದುವುದೇ ಈಗಿನ ಮಹತ್ವದ ವಿಷಯವಾದುದರಿಂದ, ನಮ್ಮ ಭೂಸುಧಾರಣೆಯ ಕಾರ್ಯಕ್ರಮದಲ್ಲೂ ಈ ಸಂಗತಿಗೆ ಪ್ರಾಶಸ್ತ್ಯ ದೊರೆಯಬೇಕೆಂದು ಹೇಳಬಹುದು. ಯೋಜನಾ ಆಯೋಗವಾದರೂ ಇದೇ ಸಲಹೆಯನ್ನು ಮಾಡಿದೆ. ಕೃಷಿ ಮೂಲವಾದ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೋಸ್ಕರ ಭೂಸುಧಾರಣೆಯನ್ನು ಕೈಗೊಳ್ಳುವುದು ಈಗಿನ ಆವಶ್ಯಕತೆ ಎಂಬುದನ್ನು ಒತ್ತಿಯೊತ್ತಿ ಹೇಳುವುದರ ಮೂಲಕ ಆರ್ಥಿಕ ದೃಷ್ಟಿಗೆ ಪ್ರಾಧಾನ್ಯವಿರಬೇಕೆಂದೂ ರಾಜಕೀಯದಿಂದ ಮಹತ್ವ ಸಲ್ಲತಕ್ಕ ಅಗತ್ಯವಿಲ್ಲೆಂದೂ ಯೋಜನಾ ಆಯೋಗ ಸ್ಪಷ್ಟಪಡಿಸಿದೆ. ಆನುಷಂಗಿಕವಾಗಿ ಸಾಮಾಜಿಕ ದೃಷ್ಟಿಯಿಂದ ಭೂಸುಧಾರಣೆ ಮಹತ್ವದ ಹೆಜ್ಜೆಯೆಂದು ಹೇಳಬೇಕು. ಏಕೆಂದರೆ ಐಶ್ವರ್ಯದ ತಾರತಮ್ಯವನ್ನು ಹೋಗಲಾಡಿಸುವ, ಸುಲಿಗೆ ಮತ್ತು ದಬ್ಬಾಳಿಕೆಯನ್ನು ದೂರೀಕರಿಸುವ, ಶ್ರಮಜೀವಿಗೆ ಜೀವನ ಭದ್ರತೆಯನ್ನೊದಗಿಸುವ ಮತ್ತು ಸಮಾನಾವಕಾಶವನ್ನು ಕಲ್ಪಿಸಿಕೊಡುವ ಸಾಧನವಾಗಿ ಭೂಸುಧಾರಣೆ ಇರುತ್ತದೆ. ರಾಜಕೀಯ ಪಕ್ಷಗಳು ಈ ಉದ್ದೇಶವನ್ನು ಸ್ವಾರ್ಥದೃಷ್ಟಿಯಿಂದ ಉಪಯೋಗಿಸಿಕೊಳ್ಳುತ್ತಿವೆ; ಮತ್ತು ಭೂಸುಧಾರಣೆಯ ನೆಪದಲ್ಲಿ ಅಸಂತೋಷವನ್ನು ಹೆಚ್ಚಿಸಲು ನೋಡುತ್ತಿವೆ. ಆದಕಾರಣ, ಇಂಥ ಗೊಂದಲದಿಂದ ದೂರವಿದ್ದು ದೇಶದ ಸಮಷ್ಟಿಹಿತ ದೃಷ್ಟಿಯಿಂದ ಭೂಸುಧಾರಣೆಯನ್ನು ವಿವೇಚಿಸುವುದು ಯೋಗ್ಯವೆನಿಸಿದೆ. ಭೂಸುಧಾರಣೆಯು ಹುಡುಗಾಟಿಕೆಯ ಕೆಲಸವಲ್ಲ— ಇದು ಮಹತ್ವದ್ದಿರುವಂತೆ ಬಿಕ್ಕಟ್ಟಿನ ಪ್ರಶ್ನೆಯೂ ಆಗಿರುತ್ತದೆ. ಯಾರಿಗೂ ಅನ್ಯಾಯವಾಗದಂತೆ, ಎಲ್ಲರಿಗೂ ಸಮ್ಮತವೆನಿಸುವಂತೆ ಈ ಪ್ರಶ್ನೆಯನ್ನು ಬಗೆಹರಿಸಲು ವಿಚಾರಮಾಡಿದಷ್ಟೂ ಕಡಮೆಯೇ. ಕೇಂದ್ರದ ಭೂಸುಧಾರಣಾ ಸಮಿತಿಯು ಭೂಸುಧಾರಣೆಯನ್ನು ಸಮರ್ಪಕವಾಗಿ ನಡೆಸಲೆಂದು ಆಶಿಸುತ್ತೇವೆ.

ಲಾವೋಸಿನ ಪತನ ಭಯ

ಮುಂದೊತ್ತಿ ಬರುತ್ತಿರುವ ಕಮ್ಯೂನಿಸ್ಟ ಸೈನ್ಯ

ಕೊರಿಯದಲ್ಲಿ ಯುದ್ಧ ನಿಲ್ಲಿಸುವ ಉದ್ದೇಶದಿಂದ ಈಗ ಮರಳಿ ನಡೆಯುತ್ತಿರುವ ಕದನ ವಿರಾಮ ಮಾತುಕತೆಗಳ ಪರಿಣಾಮವನ್ನು ಇನ್ನೂ ನಿಶ್ಚಿತವಾಗಿ ಹೇಳಲು ಸಾಧ್ಯವೆನಿಸಿಲ್ಲ. ಇದಕ್ಕೆ ಕಮ್ಯೂನಿಸ್ಟ ಮತ್ತು ಪಶ್ಚಿಮ ರಾಷ್ಟ್ರಗಳ ನಡುವೆ ಇನ್ನೂ ಒಮ್ಮನಸ್ಸು ಇಲ್ಲದುದೊಂದು ಮುಖ್ಯ ಕಾರಣ. ಪರಸ್ಪರರನ್ನು ಹಳಿಯುವುದು ಅಥವಾ ಕಣ್ಣು ಕೆಕ್ಕರಿಸಿ ನೋಡುವುದು ಈಚೆಗಿನ ಸೋವಿಯೆಟ್ ನೀತಿ ಪರಿವರ್ತನೆಯ ಬಳಿಕವೂ ಪೂರ್ಣ ನಿಂತುಹೋಗಿಲ್ಲ. ಬಹುಶಃ ರಾಜಕೀಯ ಧುರೀಣರು ಗತ್ತುಗಾರಿಕೆಯನ್ನು ಉಪಯೋಗಿಸಿಕೊಂಡಂತೆ ರಣರಂಗದ ಶೂರರಿಗೆ ಮನಸ್ಸು ಬದಲಾಯಿಸುವುದು ಸುಲಭವೆನಿಸಿರಲಿಕ್ಕಿಲ್ಲ. ಕಮ್ಯೂನಿಸ್ಟರು ಕೇವಲ ಧೂರ್ತರೆಂದೂ ಆಕ್ರಮಣಗೈದ ಅಪರಾಧಿಗಳೆಂದೂ ತಲೆಯಲ್ಲಿ ಹಚ್ಚಿಕೊಂಡು ರಾಷ್ಟ್ರ ಸಂಘದ ಕಡೆಯಿಂದ ಸಂಧಾನ ನಡೆಸುವ ಧುರೀಣರು ವರ್ತಿಸುತ್ತಿರುವರು. ಕಮ್ಯೂನಿಸ್ಟರು ಈ ಜನವಷ್ಟು ಬಾಳ್ಪಡಕತನವನ್ನು ತೋರದಿದ್ದರೂ- ಪ್ರಗತಿಗೆ ಸೂಚಕವಾದ ಅಂಶಗಳು ಅವರ ನಿಲುವಿನಲ್ಲಿ ಕಂಡು ಬರುತ್ತಿಲ್ಲ. ರಾಷ್ಟ್ರ ಸಂಘ ಕಮ್ಯೂನಿಸ್ಟರನ್ನು ಹೆಚ್ಚು ಹೆಚ್ಚು ಬೆದರಿಸುವುದರ ಮೂಲಕವೇ ಇಷ್ಟಸಿದ್ಧಿ ಮಾಡಿಕೊಳ್ಳಬಹುದೆಂಬ ನಿರ್ಣಯಕ್ಕೆ ಬಂದಂತಿದೆ. ಇಲ್ಲವಾದರೆ- ಮಾತುಕತೆಗಳನ್ನು ನಿಲ್ಲಿಸಿಬಿಡುವ ಪ್ರಸಂಗ ಬಂದೀತೆಂದು ಎಚ್ಚರಿಸುತ್ತಲೇ ಇರುವ ಅಗತ್ಯವೇನಿದೆ?

ತಟಸ್ಥ ರಾಷ್ಟ್ರ

ಸ್ವಿಜರ್‌ಲೇಂಡನ್ನು ವಿನಿಮಯಕ್ಕೆ ಒಪ್ಪಿದ ಯುದ್ಧ ಕೈದಿಗಳ ಯೋಗಕ್ಷೇಮ ನೋಡಿಕೊಳ್ಳುವ ತಟಸ್ಥ ರಾಷ್ಟ್ರವಾಗಿ ಒಪ್ಪಬೇಕೆಂದು ರಾಷ್ಟ್ರ ಸಂಘವು ಹಠ ಮಾಡಿದರೂ- ಕಮ್ಯೂನಿಸ್ಟರು ಇದಕ್ಕೆ ಒಪ್ಪಲಿಲ್ಲ. ಹಾಗೆ ಹೇಳುವಾಗ ತಾವು ಪ್ರತಿ ಸೂಚನೆಯನ್ನೂ ಮಾಡಲಿಲ್ಲ. ಇದರಿಂದ ರಾಷ್ಟ್ರ ಸಂಘದ ಅಧಿಕಾರಿಗಳು ಉದ್ವಿಗ್ನಗೊಂಡು ರಚನಾತ್ಮಕವಾದ ಸೂಚನೆಗಳನ್ನು ಕಮ್ಯೂನಿಸ್ಟರು ಕೊಡುವುದವಶ್ಯವೆಂದು ಹೇಳಿದರು. ಮುಂದೆ ಜರಗಿದ ಸಭೆಗಳಲ್ಲಿ ಕಮ್ಯೂನಿಸ್ಟರು ಏಶಿಯಾದ ಯಾವುದೊಂದು ರಾಷ್ಟ್ರವನ್ನು (ಹೆಸರು ಹೇಳಲಿಲ್ಲ) ತಟಸ್ಥ ಪ್ರದೇಶವೆಂದು ಸ್ವೀಕರಿಸಲು ಒಪ್ಪಿಗೆಯಿದೆ ಎಂದು ಸೂಚಿಸಿದರು ಇದಕ್ಕೆ ರಾಷ್ಟ್ರಸಂಘದ ಪ್ರತಿಕ್ರಿಯೆ ಅನುಕೂಲವಿರಲಿಲ್ಲ. ಏಶಿಯಾದ ರಾಷ್ಟ್ರವನ್ನು ತಟಸ್ಥ ಪ್ರದೇಶವೆಂದು ಸ್ವೀಕರಿಸಿದ ಪಕ್ಷದಲ್ಲಿ ಚೀನೀ ಕಮ್ಯೂನಿಸ್ಟರು ಅದರ ಮೇಲೆ ತಮ್ಮ ವರ್ಚಸ್ಸನ್ನು ಹೇರುವ ಭಯ ಪಾಶ್ಚಾತ್ಯರಿಗೆ ಇದೆ. ಈಗಲೇ ಏಶಿಯಾದ ರಾಷ್ಟ್ರಗಳಲ್ಲಿ ಕಮ್ಯೂನಿಸ್ಟರ ಪ್ರಭಾವ (ಅಥವಾ ಹಾವಳಿ) ಪಾಶ್ಚಾತ್ಯರ, ಮುಖ್ಯವಾಗಿ ಅಮೇರಿಕನ್ನರ, ಕಣ್ಣು ಕುಕ್ಕುವಷ್ಟು ಇದೆ. ಆದುದರಿಂದ ತನಗೆ ಅನ್ಯಾಯವಾದೀತೆಂಬ ಭಯದಿಂದ ರಾಷ್ಟ್ರಸಂಘ ಈ ಸೂಚನೆಯನ್ನು ವಿರೋಧಿಸಿತು. ಇದನ್ನು ಸರಿ ಎನ್ನೋಣವೆ? ಎಂದರೆ— ಪ್ರತಿಯೊಬ್ಬರೂ ತಂತಮ್ಮ ಹಿತಗಳನ್ನು ರಕ್ಷಿಸಿಕೊಳ್ಳುವುದಕ್ಕೆ ಮಾತ್ರ ಆತುರ ತೋರಿಸುತ್ತಿರುವರು, ಹೊರತು, ವಿಷಯವನ್ನು ನಿರ್ವಿಕಾರ ಮನಸ್ಸಿನಿಂದ ಬಿಡಿಸಲು ನೋಡುವುದಿಲ್ಲವೆನ್ನಬೇಕು

ಹೆಸರಿನ ಸೂಚನೆ

ಆದರೆ ಪ್ರಾರಂಭದ ಈ ಪ್ರತಿಕ್ರಿಯೆಯ ಬೆನ್ನಿಗೆ ಕಮ್ಯೂನಿಸ್ಟರ ಕಡೆಯಿಂದ ಸೂಚಿಸಲ್ಪಟ್ಟ ರಾಷ್ಟ್ರಗಳಲ್ಲಿ 'ಭಾರತ, ಪಾಕಿಸ್ತಾನಗಳ ಹೆಸರಿತ್ತೆಂದೂ ಈಗ ಪಾಕಿಸ್ತಾನವನ್ನು ತಟಸ್ಥ ರಾಷ್ಟ್ರವಾಗಿ ಒಪ್ಪಿಕೊಳ್ಳಲು ರಾಷ್ಟ್ರ ಸಂಘದ ಅಧಿಕಾರಿಗಳು ನಿರ್ಧರಿಸಿರುವುದಾಗಿಯೂ ತಿಳಿದು ಬಂದಿದೆ. ಈ ನೇಮಕವನ್ನು ಎರಡೂ ಕಡೆಯವರು ಅಧಿಕೃತವಾಗಿ ಒಪ್ಪಿಕೊಂಡ ಸುದ್ದಿ ಇಲ್ಲ. ಹೀಗಿದ್ದರೂ ಪಾಕಿಸ್ತಾನ ನೇಮಕವನ್ನು ಸ್ವೀಕರಿಸುವುದು ಒಳ್ಳೆಯದೆಂದು ಹೇಳಬಹುದು. ಭಾರತ ಸರಕಾರವು ಇದನ್ನು ಸ್ವಾಗತಿಸುವುದೆಂದು ತಿಳಿದು ಬಂದಿದೆ. ಆದರೆ ವಿನಿಮಯಕ್ಕೆ ಒಪ್ಪದ ಯುದ್ಧಕೈದಿಗಳು ಕೊರಿಯಾವನ್ನು ಬಿಟ್ಟು ಹೊರಡಲು ಇಚ್ಛೆಯುಳ್ಳವರಾಗಿದ್ದು, ಒಂದು ವೇಳೆ ಅಂಥ ಪ್ರಸಂಗ ಬಂದರೆ ಆತ್ಮಹತ್ಯೆ ಮಾಡಿಕೊಳ್ಳುವರೆಂದೂ ರಾಷ್ಟ್ರ ಸಂಘದ ಅಧಿಕಾರಿಗಳು ಈಚೆಗೆ ಕಮ್ಯೂನಿಸ್ಟರಿಗೆ ತಿಳಿಸಿರುವರು. ಯುದ್ಧ ಕೈದಿಗಳನ್ನು ಬಲಾತ್ಕಾರದಿಂದ ಅವರವರ ದೇಶಗಳಿಗೆ ಹಿಂದಿರುಗಿಸುವುದು ಅನ್ಯಾಯವಾದರೆ, ಅಂಥದೇ ಒತ್ತಾಯವನ್ನು ಉಪಯೋಗಿಸಿ ತಟಸ್ಥ ಪ್ರದೇಶಕ್ಕೆ ಒಯ್ಯುವುದೂ ಸರಿಯಲ್ಲವೆಂದು ರಾಷ್ಟ್ರ ಸಂಘದ ಅಭಿಪ್ರಾಯ.

ಲಾವೋಸಿನ ಮೇಲೆ ದಾಳಿ

ಸಂಧಾನ ಮಾತುಗಳು ಇನ್ನೂ ಮುಂದುವರಿಯುತ್ತಿರುವುದರಿಂದ ಕೊರಿಯಾದ ರಣರಂಗದಲ್ಲಿ ಚಟುವಟಿಕೆಗಳು ನಿಧಾನವಾಗಿವೆ. ಹಾಗೆಂದು ಕಮ್ಯೂನಿಸ್ಟರು ಎಲ್ಲ ಕಡೆ ಸಂಧಾನ ಪ್ರಿಯರಾಗಿ ತೋರ್ಪಡಿಸಿಲ್ಲ. ಇಂಡೋ ಚೀನಾದಲ್ಲಿ ಫ್ರೆಂಚ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡುತ್ತಿರುವ ವೀತನಾಮೀ ಸೇನೆಗಳು ಈಗ ಭರದಿಂದ ಲಾವೋಸಿನ ಕಡೆ ಧಾಳಿ ನಡೆಸಿವೆ. ವೀತನಾಮೀ ಸೇನೆಗೆ ಮೊದಲಿಂದಲೂ ಚೀನೀ ಕಮ್ಯೂನಿಸ್ಟರ ಬೆಂಬಲ ದೊರೆಯುತ್ತಿದೆ. ಅದರಂತೆ ಫ್ರೆಂಚ ಪಡೆಗೆ ಅಮೇರಿಕಾವು ಯಥೇಷ್ಟ ಯುದ್ಧೋಪಕರಣಗಳ ಪೂರೈಕೆ ಮಾಡುತ್ತಾ ಬಂದಿದೆ. ಕೊರಿಯಾದಲ್ಲಿ ತಮ್ಮ ಕಾರ್ಯಕಲಾಪಗಳನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಿರುವ ಕಮ್ಯೂನಿಸ್ಟರು ಇಂಡೋ ಚೀನಾದಲ್ಲಿ ಅ... ನ್ನು ವಿಸ್ತರಿಸುತ್ತಿರುವರೆಂದು ಅನೇ... ಕಾ ತಿಳಿದಿದೆ. ಲಾವೋಸಿನ ಪತನವಾ... ಕಮ್ಯೂನಿಸ್ಟರು ಗೆದ್ದುಕೊಂಡರೆ (ಹಾಗಾ... ಗುವುದೇ ಖಂಡಿತ)—ಅದರ ಪರಿಣಾಮ... ವು ರಾಜಕೀಯ ದೃಷ್ಟಿಯಿಂದ ಮಹತ್ವದ್ದೆನಿಸುವುದು. ಲಾವೋಸು ಸಯಾಮು ಮತ್ತು ಬರ್ಮಾಗಳ ಗಡಿಪ್ರದೇಶದಲ್ಲಿರುವ ಒಂದು ಸಣ್ಣ ರಾಜ್ಯ. ಇಲ್ಲಿಯ ಅರ... ರ ಕೂಡೆ ಹತ್ತು ಸಾವಿರ ಸೈನಿಕರ ಪ...

ಯುಂಟೋ ಏನೋ, ಆದರೆ ಕಮ್ಯೂನಿಸ್ಟರು ನಲುವತ್ತು ಸಾವಿರ ಸೈನಿಕರ ಬಲದೊಡನೆ ಮುನ್ನೊತ್ತುತ್ತಿರುವ ವರದಿ ಇದೆ. ಲಾವೋಸನ್ನು ಮುತ್ತಿಗೆ ಹಾಕಿರುವರೆಂದೂ ಅಲ್ಲಿ ಪ್ರತಿಭಟನೆಯನ್ನು ಕೊಡುವ ಸಿದ್ಧತೆ ಭರದಿಂದ ನಡೆದಿದೆಯೆಂದೂ ಈಚಿನ ವರದಿ ಹೇಳುತ್ತದೆ.

ಸಂಭಾವ್ಯ ಪರಿಣಾಮ

ಪ್ರಭಾವಿ ರಾಜಕೀಯ ಪರಿಣಾಮಗಳನ್ನು ಲಾವೋಸಿನ ಪತನ ತಂದೊಡ್ಡುವುದೆಂದೆವಷ್ಟೆ: ಮೊದಲನೆಯದಾಗಿ ಫ್ರೆಂಚ ಸಾಮ್ರಾಜ್ಯಶಾಹಿಯ ಪಾಲಿಗೆ ಇದು ಇನ್ನೊಂದು ಅಪಯಶದ ಕಲಂಕವನ್ನು ತರುತ್ತದೆ. ಇಂಡೋಚೀನಾದಲ್ಲಿ ಸೈನ್ಯವ್ಯವಸ್ಥೆಯನ್ನು ಯೋಗ್ಯ ರೀತಿಯಲ್ಲಿ ಇಟ್ಟುಕೊಳ್ಳಲು ಸಾಧ್ಯವಾಗಿಲ್ಲವೆಂದು ಫ್ರೆಂಚ ಪ್ರಜೆಗಳು ದೂರುತ್ತಿರುವರು. ಸರಕಾರದ ಕ್ರಮಗಳು ಪರಿಣಾಮಕಾರಿಯಾಗಿಲ್ಲವೆಂಬ ಅಸಮಾಧಾನವೂ ಸಂಬಂಧಿಸಿದ ವೃತ್ತಗಳಲ್ಲಿ ತುಂಬಿದೆ. ಈ ಕಾರಣಗಳಿಂದ ಫ್ರಾನ್ಸಿನಲ್ಲಿ ಮಾನ್ಸರ್ ರಿನೆ ಮೇಯರರ ಮಂತ್ರಿಮಂಡಳ ಉರುಳಿ ಬೀಳಬಹುದೆಂದು ಅಂದಾಜು ಮಾಡಿದ ಜನರು ಇರುವರು. ಎರಡನೆಯದಾಗಿ ಕಮ್ಯೂನಿಸ್ಟರು ಈ ಆಯಕಟ್ಟಿನ ಪ್ರದೇಶದಲ್ಲಿ ಗೆದ್ದುಕೊಂಡರೆ, ಅವರ ಪ್ರಗತಿಯನ್ನು ಮುರಿಯುವುದು ಕಷ್ಟಸಾಧ್ಯ. ಸಯಾಮಿನ ಮೇಲೆ ಚೀನಾವಿಗೆ ಹಗೆತನವಿದೆ. ಅಮೇರಿಕಾದ ಪಕ್ಷ ಪಟಿ, ಕಮ್ಯೂನಿಸ್ಟರನ್ನು ಬಗ್ಗು ಬಡಿಯುವಲ್ಲಿ ಸಯಾಮು ನೆರವೀಯುತ್ತಿದೆ ಎಂದು ಅದು ಈಗಾಗಲೇ ಆರೋಪಿಸಿದೆ. ಆದುದರಿಂದ ಸಯಾಮು ಗಡಿಯಲ್ಲಿರುವ ಲಾವೋಸು ಕೈಗೆ ದೊರೆತರೆ ಸಯಾಮನ್ನು ಹಣ್ಣುಗಾಯಿ, ನೀರುಗಾಯಿ ಮಾಡಲು ಕಮ್ಯೂನಿಸ್ಟ ಸೈನ್ಯಪಡೆ ಪ್ರಯತ್ನಿಸುವುದು ನಿಶ್ಚಯ. ಲಾವೋಸಿನ ಇನ್ನೊಂದು ಗಡಿಪ್ರದೇಶವಾಗಿ ಬರ್ಮಾ ಇರುವುದರಿಂದ ಕಮ್ಯೂನಿಸ್ಟ ಭೀತಿಯು ಅದಕ್ಕೂ ತಟ್ಟದಿರದು.

ಅಮೇರಿಕದ ಆತುರ

ಈ ಕಾರಣಗಳಿಂದ ಫ್ರೆಂಚರು ಅಮೇರಿಕಾ ತಮಗೆ ಅತ್ಯಧಿಕ ಸಹಾಯವನ್ನು ಕೊಡಬೇಕೆಂದು ಕೇಳುತ್ತಿರುವುದು ಮಾತ್ರವಲ್ಲ, ಅಮೇರಿಕಾ ಕೊರಿಯಾದಲ್ಲಿ ಮಾಡಿದಂತೆ ಪ್ರತ್ಯಕ್ಷ ಯುದ್ಧರಂಗದಲ್ಲಿ ಧುಮುಕಬೇಕೆಂದೂ ಅಪೇಕ್ಷಿಸುತ್ತಿದೆ. ಈ ಪ್ರಶ್ನೆಯನ್ನು ರಾಷ್ಟ್ರಸಂಘಕ್ಕೆ ಒಯ್ದರೆ ಹೇಗೆ ಎಂದು ಕೆಲವರು ವಿಚಾರಿಸುತ್ತಿರುವರೆಂದೂ ತಿಳಿಯುತ್ತದೆ. ಅಮೇರಿಕವು ಈ ಉತ್ಕಟವ ಪರಿಸ್ಥಿತಿಯಲ್ಲಿ ಫ್ರೆಂಚರ ಮೊರೆಯನ್ನು ಕೇಳಿ ಸುಮ್ಮನುಳಿಯುವಂತಿಲ್ಲವಷ್ಟೆ! ಅದುದರಿಂದ ವಿದೇಶ ಮಂತ್ರಿ ಜಾನ್ ಫಾಸ್ಟರ್ ಡಲ್ಲೇಸರು ಇಂಡೋಚೀನಾವಿಗೆ ಯುದ್ಧ ಸಾಮಗ್ರಿಗಳ ಪೂರೈಕೆಯನ್ನು ಶೀಘ್ರಗೊಳಿಸುವ ಪ್ರಯತ್ನದಲ್ಲಿರುವರು. ಈ ಗೊಂದಲದ ನಡುವೆ ಪಂಚ ಮಹಾರಾಷ್ಟ್ರಗಳು ಶಾಂತಿ ಒಪ್ಪಂದವನ್ನು ನಡೆಸುವುದಾದಲ್ಲಿ ರಶಿಯಾ ಅದಕ್ಕೆ ಸಿದ್ಧವಿದೆಯೆಂದು ಮೊಲೋಟೊವರು ಕಳೆದವಾರ ಹೇಳಿದುದಕ್ಕೆ ಅಮೇರಿಕನ್ ವರ್ತುಲಗಳು ಮಹತ್ವ ಕೊಟ್ಟಂತೆ ಕಾಣುವುದಿಲ್ಲ. ಅಮೇರಿಕನ್ನರು ಮೊದಲಿಂದಲೂ ಮಾತಿನಿಂದಲ್ಲ ಕೃತಿಯಿಂದ ರಶಿಯಾ ತನ್ನ ನಿಲುಮೆಯನ್ನು ತೋರಿಸಿಕೊಡಬೇಕೆಂದು ಹೇಳುತ್ತಾ ಬಂದಿರುವರು. ಜಗತ್ತಿನ ಮಹಾರಾಷ್ಟ್ರಗಳು ಹೀಗೆ ಪರಸ್ಪರರನ್ನು ಸಂದೇಹ ದೃಷ್ಟಿಯಿಂದ ನೋಡುವುದು ನಿಲ್ಲುವುದು ಅಗತ್ಯವಿದ್ದರೂ, ಹಾಗೆ ಆಗುರುವುದಿಲ್ಲ.

ಸೈನ್ಯ ಹೆಚ್ಚಿಸುವ ಸ್ಪರ್ಧೆ

ಮೇ ದಿನಾಚರಣೆಯ ಸಂಬಂಧದಲ್ಲಿ ರಶಿಯಾದ ಸಂರಕ್ಷಣಾ ಮಂತ್ರಿ ಬಲ್ಗೇನಿನ್ನರು ಮಾತನಾಡುತ್ತಾ ಪಶ್ಚಿಮದ ರಾಷ್ಟ್ರಗಳು ಶಸ್ತ್ರಾಸ್ತ್ರ ಸಂಗ್ರಹದ ಸ್ಪರ್ಧೆಯನ್ನು ನಿಲ್ಲಿಸದ ಹೊರತು ರಶಿಯಾವು ಆಕ್ರಮಣವನ್ನು ತಡೆಗಟ್ಟುವುದಕ್ಕಾಗಿ ತನ್ನ ಸೈನ್ಯಬಲವನ್ನು ಕಡಿಮೆ ಮಾಡಲಾರದೆಂದು ಹೇಳಿದರು. ರಶಿಯಾದ ಗಡಿಪ್ರದೇಶಗಳಲ್ಲಿ ಈ ರಾಷ್ಟ್ರಗಳು ಸಂರಕ್ಷಣಾ ಠಾಣ್ಯಗಳನ್ನು ಕಟ್ಟಿಕೊಳ್ಳುತ್ತಿರುವುದು ತೀರ ಅಪಾಯಕಾರಿ ಎಂದವರು ಅಭಿಪ್ರಾಯಪಟ್ಟರು. ಇಂಥ ಅನುಚಿತ ಕ್ರಮಗಳನ್ನು ಪಾಶ್ಚಾತ್ಯ ರಾಷ್ಟ್ರಗಳು ನಿಲ್ಲಿಸುವ ವರೆಗೆ ರಶಿಯಾ ತನ್ನ ಶಸ್ತ್ರಾಸ್ತ್ರ ಸ[illegible]ಬಲವನ್ನು ಹೆಚ್ಚಿಸಿಕೊಳ್ಳುವುದು ಅಗತ್ಯವೆಂದವರು ನುಡಿದರು. ಡಲ್ಲೇಸರು ಟೆಲಿವಿಜನ್ ಸಂದರ್ಶನವೊಂದರಲ್ಲಿ ಇದೇ ಆರೋಪವನ್ನು ರಶಿಯಾದ ಮೇಲೆ ಹೊರಿಸಿದರು. ರಶಿಯಾದ ಆಕ್ರಮಣ ಭೀತಿಯು ನಿಲ್ಲುವ ವರೆಗೆ ಪಾಶ್ಚಾತ್ಯ ರಾಷ್ಟ್ರಗಳು ಕೈಕಟ್ಟಿ ಕುಳಿತುಕೊಳ್ಳಲಾರವೆಂದು ಅವರ ಹೇಳಿಕೆಯಿದೆ. ೧೯೧೪ ಮತ್ತು ೧೯೩೯ರಂಥ ಘಟನೆ ಮೂರನೇಬಾರಿ ಜರಗುವುದು ತಪ್ಪಬೇಕಿದ್ದರೆ ಸ್ವಸಂರಕ್ಷಣಾ ಸಾಮರ್ಥ್ಯ ಹೆಚ್ಚಿಸಿಕೊಳ್ಳಬೇಕೆಂದವರ ಆಶಯ.

ಯುನಿವರ್ಸಿಟಿಯ ಆದೇಶ ಘಟನೆಗೆ ವಿರುದ್ಧವಲ್ಲ. ನ್ಯಾಯಮೂರ್ತಿಗಳ ಅಭಿಪ್ರಾಯ—

ಉಡುಪಿಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿಗೆ ಸೇರಿಸಿಕೊಳ್ಳಬೇಕೆಂಬ ಕುಮಾರಿ ಶಾಂತಾಬಾಯಿಯವರ ಅರ್ಜಿಯನ್ನು ಕಾಲೇಜು ಪ್ರಿನ್ಸಿಪಾಲರು ನಿರಾಕರಿಸಿದ್ದರು. ಮದ್ರಾಸು ಯುನಿವರ್ಸಿಟಿಯು ಇಂಟರ್ ಮಿಡಿಯಟ್ ಕ್ಲಾಸಿಗೆ ಹುಡುಗಿಯರನ್ನು ಸೇರಿಸಲು ಪ್ರಿನ್ಸಿಪಾಲರಿಗೆ ಅನುಮತಿ ಕೊಟ್ಟಿರಲಿಲ್ಲ. ಶಾಂತಾಬಾಯಿಯು ಪ್ರಿನ್ಸಿಪಾಲರಿಗೆ ಮತ್ತು ಯುನಿವರ್ಸಿಟಿಗೆ ವಿರುದ್ಧವಾಗಿ ಹೈಕೋರ್ಟಿಗೆ ರಿಟ್ ಅರ್ಜಿ ಹಾಕಿದರು. ತನ್ನನ್ನು ಹುಡುಗರ ಕಾಲೇಜಿಗೆ ಸೇರಿಸಿಕೊಳ್ಳುವಂತೆ ಪ್ರಿನ್ಸಿಪಾಲರಿಗೆ ರಿಟ್ ಆದೇಶ ಕೊಡಬೇಕೆಂದವಳು ಕೇಳಿಕೊಂಡಿದ್ದಳು.

ನ್ಯಾಯಮೂರ್ತಿ ಸುಬ್ಬರಾಯರು ಈ ಅರ್ಜಿಯ ವಿಚಾರಣೆ ನಡೆಸಿ ಕುಮಾರಿ ಶಾಂತಾಬಾಯಿ ಕೇಳಿದಂತೆ ರಿಟ್ ಆದೇಶ ಕೊಟ್ಟರು.

ಈ ತೀರ್ಪಿಗೆ ವಿರುದ್ಧವಾಗಿ ಮದ್ರಾಸು ಯುನಿವರ್ಸಿಟಿಯು ಅಪೀಲು ಮಾಡಿತು. ಮುಖ್ಯನ್ಯಾಯಮೂರ್ತಿ ರಾಜಮನ್ನಾರ ಹಾಗೂ ನ್ಯಾಯಮೂರ್ತಿ ವೆಂಕಟರಾಮ ಅಯ್ಯರ್ ಅವರೂ 'ಘಟನೆಯ 15ನೇ ಕಲಮಿನಲ್ಲಿ 'ರಾಜ್ಯವು' ಸ್ತ್ರೀ ಪುರುಷರೊಳಗೆ ಭೇದ ಮಾಡಬಾರದು ಎಂದಿದೆ. ಆ ಕಲಮಿನ ಪ್ರಕಾರ ಯುನಿವರ್ಸಿಟಿಯು ತನ್ನ ಸಂಬಂಧಪಟ್ಟ ಕಾಲೇಜುಗಳಿಗೆ ಕೊಡುವ ಆದೇಶಗಳನ್ನು ಪ್ರಶ್ನಿಸಲು ಬರುವುದಿಲ್ಲ. ಏಕೆಂದರೆ 'ರಾಜ್ಯ' ಎಂಬುದರ ಅರ್ಥ ವಿವರಣೆ ಪ್ರಕಾರ ಯುನಿವರ್ಸಿಟಿಯು ಒಂದು 'ರಾಜ್ಯವಲ್ಲ' ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಈ ನಿರ್ಣಯವು ನ್ಯಾಯಮೂರ್ತಿ ಸುಬ್ಬರಾಯರ ಮೊದಲಿನ ತೀರ್ಪನ್ನು ರದ್ದುಗೊಳಿಸುತ್ತದೆ.

ನ್ಯಾಯಮೂರ್ತಿಗಳು 'ವಿದ್ಯಾ ಸಂಸ್ಥೆಗಳಿಗೆ ಪ್ರವೇಶ ಕೊಡುವುದಕ್ಕೆ ಸಂಬಂಧಿಸಿದ ಶಾಸನವು 29ನೆ ಕಲಮಿನ ಸ್ಪೆಶಲ್ ಪ್ರೊವಿಜನಿಗೆ ಸಂಬಂಧಿಸಿದ್ದಾಗಿದೆ. ಆ ಕಲಮು ಮತ, ಜಾತಿಗಳ ಆಧಾರದ ಮೇಲೆ ಪ್ರವೇಶ ಕೊಡಲು ನಿರಾಕರಿಸುವುದನ್ನು ಮಾತ್ರ ನಿಷೇಧಿಸಿದೆ. ಲಿಂಗದ ವಿಚಾರವಾಗಿ ಅದರಲ್ಲಿ ಪ್ರಸ್ತಾಪ ಮಾಡಿಲ್ಲ ಎಂದೂ ಅಭಿಪ್ರಾಯ ವ್ಯಕ್ತಪಡಿಸಿದರು

(ಈ ವರ್ಷದಿಂದಲೇ ಎಮ್. ಜಿ. ಎಮ್. ಕಾಲೇಜು ಫಸ್ಟ್ ಗ್ರೇಡ್ ಆಗುವುದರಿಂದ ಹೆಣ್ಣುಮಕ್ಕಳ ಪ್ರವೇಶಕ್ಕೆ ತೊಂದರೆಯಿಲ್ಲವೆಂದು ತಿಳಿದು ಬರುತ್ತದೆ. ಸೆಕೆಂಡ್ ಗ್ರೇಡ್ ಕಾಲೇಜಾದರೂ ಯುನಿವರ್ಸಿಟಿಯವರು ಹೆಣ್ಣುಮಕ್ಕಳ ಪ್ರವೇಶಕ್ಕೆ ಕೆಲವು ಸೌಕರ್ಯ ಒದಗಿಸಬೇಕೆಂಬ ಶರ್ತಗಳನ್ನು ಹಾಕಬಹುದಲ್ಲದೆ ಪ್ರವೇಶವನ್ನೇ ತಡೆಗಟ್ಟಲು ಬರುವುದಿಲ್ಲವೆಂದೂ ಹುಡುಗಿಯರ ಪ್ರವೇಶದ ಶರ್ತಗಳು ಈಗಾಗಲೇ ಈಡೇರಿಸಲ್ಪಟ್ಟಿವೆ ಎಂದೂ ತಿಳಿದು ಬರುತ್ತದೆ. ...ಸಂ. ನ.)

ಮದ್ರಾಸುಮಂತ್ರಿ ಶ್ರೀ ಎನ್. ರಂಗ ರೆಡ್ಡಿ-ಯವರಿಗೆ ಮಂಗಳೂರು ನಗರ ಸಭೆಯ ಮಾನಪತ್ರ

ಸಾರ್ವಜನಿಕ ಕಾಮಗಾರಿಖಾತೆಯ ಮಂತ್ರಿಗಳಾದ ಶ್ರೀ ಎನ್. ರಂಗರೆಡ್ಡಿಯವರು ಮಂಗಳೂರಿಗೆ ಇದೇ ತಾ. 3 ರಂದು ರಾತ್ರಿ ಆಗಮಿಸಿದರು. ಮರುದಿನ ಬೆಳಿಗ್ಗೆ ಏಳು-ವರೆ ಗಂಟೆಗೆ ಮಂಗಳೂರು ನಗರ ಸಭೆಯವರು ಅರ್ಪಿಸಿದ ಮಾನಪತ್ರಕ್ಕೆ ಉತ್ತರವೀಯುತ್ತಾ ನಗರದ ನೀರು ಸರಬರಾಯಿ ಯೋಜನೆಯನ್ನು ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ ಕಾರಣ ಅದನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿಯು ಕೇಂದ್ರ ಸರಕಾರಕ್ಕೆ ಬರುವುದರಿಂದ ಅದು ಬೇಗನೆ ಕಾರ್ಯರೂಪಕ್ಕೆ ಬರುವುದು ಎಂದು ಶ್ರೀ ರೆಡ್ಡಿಯವರು ಹೇಳಿದರು. ಮದ್ರಾಸು ಸರಕಾರವು ಆರ್ಥಿಕ ಅಭಾವದಿಂದ ಹಲವು ಯೋಜನೆಗಳನ್ನು ಹಾಗೆಯೇ ಬಾಕಿಯಿಟ್ಟಿದೆ. ಜೋಗಿನಿಂದ ವಿದ್ಯುತ್ ಪೂರೈಕೆ ವಿಷಯವು ಎರಡು ಪ್ರಾಂತಗಳಿಗೆ ಸಂಬಂಧಪಟ್ಟ ವಿಷಯವಾಗಿರುತ್ತದೆ. ಇಂತಹ ವಿಷಯಗಳಲ್ಲಿ ಕೈ ಹಾಕುವಾಗ ಬಹಳ ಜಾಗರೂಕರಾಗಿರಬೇಕು. ಮದ್ರಾಸು ಸರಕಾರವು ಈ ವಿಷಯದಲ್ಲಿ ತುಂಬಾ ಪ್ರಯತ್ನ ಪಟ್ಟಿದೆ. ಕಳೆದ ವರ್ಷ ನಾನು ಇಲ್ಲಿಗೆ ಬಂದಾಗಲೂ ಮಂಗಳೂರಿನ ಜನರ ಕೇಳಿಕೆಯಲ್ಲಿ ಇದು ಸೇರಿತ್ತು. ಈ ವಿಷಯದಲ್ಲಿ ಮೈಸೂರು ಸರಕಾರವು ವಿದ್ಯುತ್ ಉತ್ಪತ್ತಿಯ ವೆಚ್ಚವು ಈಗ ಹೆಚ್ಚಿದುದರಿಂದ ವಿದ್ಯುಚ್ಛಕ್ತಿಯ ದರವನ್ನು ಪುನರ್ವಿಮರ್ಶಿಸಬೇಕು ಮತ್ತು 6000 ಕಿಲೋವಾಟ್ ವಿದ್ಯುತ್ತನ್ನು ಈ ಕೆಳಗಿನ ಶರ್ತಗಳ ಮೇಲೆಯೇ ಕೊಡಬಹುದೆಂದು ತಿಳಿಸಿರುತ್ತದೆ. (1) ಪತ್ತಮುಂಡಲ ಜಿಲ್ಲೆಗಳ ವಿದ್ಯುತ್ ಪೂರೈಕೆಯನ್ನು ಕೊನೆಗಾಣಿಸಿದ ನಂತರ 4000 ಕಿಲೋವಾಟ್‌ಗಳನ್ನು ಕೊಡಬಹುದು (2) ತುಂಗಭದ್ರಾ ವಿದ್ಯುತ್ ಕೇಂದ್ರ ಪೂರ್ಣವಾದ ಬಳಿಕ 200, ಕಿಲೋವಾಟ್ ವಿದ್ಯುತ್ತನ್ನು ಮದ್ರಾಸು ಮೈಸೂರಿಗೆ ಪೂರೈಸಿದರೆ ಉಳಿದ 2000 ಕಿಲೋವಾಟ್‌ಗಳನ್ನು ಮೈಸೂರು ಮದ್ರಾಸಿಗೆ ಕೊಡುವುದು

ನಗರ ಸಭೆಯು ಮಾರ್ಗಗಳಿಗೆ ಡಾಮರು ಹಾಕಲು ಸಾಲ ಕೇಳಿರುತ್ತದೆ, ಆದರೆ ಸರಕಾರದ ಆರ್ಥಿಕ ದುಸ್ಥಿತಿಯು ಕಾರಣ ಇದನ್ನು ದೊರಕಿಸುವುದು ಕಷ್ಟಕರವಾಗಿದೆ. ಆದರೂ ನಾನು ನನ್ನಿಂದಾದಷ್ಟು ಪ್ರಯತ್ನ ಮಾಡುತ್ತೇನೆಂದು ಅವರು ಭರವಸೆ ಕೊಟ್ಟರು.

ನಗರ ಸಭೆಯ ಪರವಾಗಿ ಉಪಾಧ್ಯಕ್ಷರಾದ ಶ್ರೀ ಬಿ. ಎಸ್. ಬಾಕ್ಯಂ ರೈಗಳವರು ಮಾನಪತ್ರವನ್ನರ್ಪಿಸಿದರು.

ಉಡುಪಿಗೆ ಮಂತ್ರಿ ರಂಗ ರೆಡ್ಡಿಗಳ ಆಗಮನ

ಲೋಕೋಪಯೋಗಿ ಖಾತೆಯ ಮದ್ರಾಸು ಮಂತ್ರಿ ಮಾನ್ಯ ಎನ್. ರಂಗ ರೆಡ್ಡಿಯವರು ಇದೇ ತಾ 6ರಲ್ಲು ಬೆಳಿಗ್ಗೆ ಮಂಗಳೂರಿನಿಂದ ಹೊರಟು ಕಾರ್ಕಳಕ್ಕೆ ಬಂದು ಅಲ್ಲಿಯ ಗೋಮಟೇಶ್ವರನನ್ನು ನೋಡಿ ಮುತ್ತಿಗೆ ಸೇತುವೆಯನ್ನು ಸಂದರ್ಶಿಸಿ ಹಿರಿಯಡಕಕ್ಕೆ ಬಂದಾಗ ದೇವಸ್ಥಾನದ ಕಡೆಯಿಂದ ಸಂಭ್ರಮದ ಸ್ವಾಗತವೀಯಲಾಯಿತು, ದೇವಸ್ಥಾನದ ಪರವಾಗಿ ಶ್ರೀ ಜಗಂಜೀವ ಆಳ್ವರೂ ಪಂಚಾಯತ ಬೋರ್ಡಿನ ಕಡೆಯಿಂದ ಶ್ರೀ ಜಗಂಜೀವನ ಹೆಗ್ಡೆಯವರೂ ಮಾನಪತ್ರಗಳನ್ನಿತ್ತರು. ಮಂತ್ರಿಗಳು ಅದಕ್ಕೆ ಉತ್ತರವಿತ್ತು ಸಾಧಾರಣ ಹನ್ನೊಂದೂವರೆ ಗಂಟೆಯ ವೇಳೆಗೆ ಉಡುಪಿ ಆಗಮಿಸುವರು. ಅವರ ಕಾರ್ಯಕ್ರಮದ ವಿವರಗಳನ್ನು ಮುಂದಿನ ಸಂಚಿಕೆಯಲ್ಲಿ ಕೊಡಲಾಗುವುದು

ಶ್ರೀ ಹನುಮಂತಯ್ಯನವರ ಆಗಮನ

ಮೈಸೂರು ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ನಿನ್ನೆ ಸಂಜೆ ಮಂಗಳೂರಿಗೆ ಬಂದಿರುತ್ತಾರೆ. ಸಂಜೆ 6 ಗಂಟೆಗೆ ಮಂಗಳೂರು ನಗರ ಸಭೆಯ ಮಾನಪತ್ರ ಸಮರ್ಪಿಸಲ್ಪಟ್ಟಿತು. ಏಳು ಗಂಟೆಗೆ ಕೆನರಾ ಹೈಸ್ಕೂಲಿನಲ್ಲಿ ಮದ್ರಾಸು ಪ್ರಾಂತದ ಶಿಕ್ಷಕ ಪರಿಷತ್ತನ್ನು ಉದ್ಘಾಟಿಸಿದರು. ಈ ದಿನ ಬೆಳಿಗ್ಗೆ ಮಂಗಳೂರಿನ ಬಂದರದ ದೃಶ್ಯವನ್ನು ನೋಡಿ ಪೂರ್ವಾಹ್ನ ಒಂಭತ್ತು ಗಂಟೆಗೆ ಜಿಲ್ಲಾ ಬೋರ್ಡಿನ ಬಿನ್ನವತ್ತಳೆಯನ್ನು ಸ್ವೀಕರಿಸಿ, ಕೆನರಾ ವರ್ಕ್ ಶೋಫ್ಸ್ ಮತ್ತು ಗೇರು ಬೀಜದ ಕಾರ್ಖಾನೆಯನ್ನು ನೋಡಿ ಮಧ್ಯಾಹ್ನ ಶ್ರೀ ಕೆ. ಆರ್ ಕಾರಂತರಲ್ಲಿ ಭೋಜನ ತೀರಿಸಿ ಸಂಜೆ ನಾಲ್ಕು ಗಂಟೆಗೆ ಉಡುಪಿಗೆ ಬಂದಿರುವರು. ಇಲ್ಲಿಯ ಕಾರ್ಯಕ್ರಮಗಳನ್ನು ಮುಗಿಸಿ ಮರುದಿನ ಮಂಗಳೂರಿಗೆ ಹಿಂತೆರಳುವರು. ಇಲ್ಲಿಯ ಕಾರ್ಯಕ್ರಮಗಳ ವಿವರಗಳಿಗೆ ಮುಂದಿನ ಸಂಚಿಕೆಯನ್ನು ನಿರೀಕ್ಷಿಸಿರಿ.

ತಾ. 8-5-53ರಿಂದ ಪ್ರಾರಂಭ
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಝಾನ್ಸಿ-ಕಿ-ರಾಣಿ

(ಮಿನರ್ವಾದವರ ವರ್ಣ ಚಿತ್ರ)
ಹಿಂದೂಸ್ಥಾನದ ಪ್ರಥಮವಾದ ವರ್ಣಚಿತ್ರದ
(Colour by Technicolour)
ಪಾತ್ರವರ್ಗ:— ಸೊಹರಬ್ ಮೋಡಿ, ಮೆಹತಾಬ್, ಮುಬಾರಕ್, ಉಲ್ಲಾಸ್, ರಾಮಸಿಂಗ್ ಮತ್ತು ಸಾವಿರಾರುಮಂದಿ ಇತರರು.

ಮುಂಬಯಿ ಬಂಟರ ಯಾನೆ ನಾಡವರ ಸಂಘದ ರಜತಮಹೋತ್ಸವ

ಮಂತ್ರಿ ಶ್ರೀ. ಎ. ಬಿ. ಶೆಟ್ಟರ ಮನನೀಯ ಉದ್ಘಾಟನಾ ಭಾಷಣ

ಮುಂಬಯಿ ಬಂಟರಯಾನೆನಾಡವರಸಂಘದ ರಜತ ಮಹೋತ್ಸವವು ಎಪ್ರಿಲ್ ತಿಂಗಳ 26 ನೇ ತಾರೀಕಿನಂದು ಸರ್. ಕವಾಸ್ಜಿ ಜಹಂಗೀರ್ ಹೋಲಿನಲ್ಲಿ ವಿಜೃಂಭಣೆಯಿಂದ ಜರಗಿತು. ಸಭಾರಂಭವು ಮದ್ರಾಸ್ ಸರಕಾರದ ಮಾನ್ಯ ಆರೋಗ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟಿಯವರಿಂದ ಉದ್ಘಾಟಿಸಲ್ಪಟ್ಟಿತು. ಸಭೆಯ ಅಧ್ಯಕ್ಷ ಸ್ಥಾನವನ್ನು ಡಾ| ಪಡುಬಿದ್ರಿ ಜಗನ್ನಾಥ ಶೆಟ್ಟಿಯವರು ವಹಿಸಿದ್ದರು.

ತಾ. 25ನೇ ಬೆಳಿಗ್ಗೆ 5-50ಕ್ಕೆ ಮದ್ರಾಸಿನಿಂದ ಬಂದ ಮಂತ್ರಿ ಶ್ರೀ ಎ. ಬಿ. ಶೆಟ್ಟಿಯವರಿಗೆ ಮುಂಬಯಿಯ ಸ್ವಜಾತಿಯ ಪ್ರಮುಖರೆಲ್ಲರೂ ವಿ. ಟಿ. ರೈಲ್ವೆ ನಿಲ್ದಾಣದಲ್ಲಿ ಗೌರವದ ಸ್ವಾಗತವನ್ನಿತ್ತರು. ಅಲ್ಲಿಂದ ಶ್ರೀ ಶೆಟ್ಟರು W. I. A. A. ಕ್ಲಬ್ಬಿಗೆ ತೆರಳಿದರು. ಅದೇ ದಿನ ಸಂಜೆ 5 ಗಂಟೆಗೆ ಮಹಾಲಕ್ಷ್ಮಿ ರೇಸ್ ಕೋರ್ಸಿನ ಉದ್ಯಾನದಲ್ಲಿ ಮಾನ್ಯ ಮಂತ್ರಿಗಳ ಗೌರವಾರ್ಥವಾಗಿ ಸತ್ಕಾರ ಕೂಟವನ್ನು ಏರ್ಪಡಿಸಲಾಗಿತ್ತು. ತಾ. 26 ನೇ ಆದಿತ್ಯವಾರ ಮಧ್ಯಾಹ್ನ ಗಂಟೆ 2-30ಕ್ಕೆ ಕವಾಸ್ಜಿ ಜಹಂಗೀರ್ ಸಭಾ ಸದನದಲ್ಲಿ ಸ್ವಜಾತಿ ಬಂಧುಗಳ ಪ್ರಚಂಡ ಸಭೆ ನೆರೆದಿತ್ತು.

ಪ್ರಾರ್ಥನೆಯಾದ ಬಳಿಕ ಕಾರ್ಯದರ್ಶಿ ಶ್ರೀ ಕೆ. ಶ್ಯಾಮರಾಯ ಶೆಟ್ಟರು ವರದಿಯನ್ನು ಓದಿದರು. ಡಾ| ವೆಂಕಪ್ಪಯ್ಯ ಶೆಟ್ಟಿಯವರು ಸ್ವಾಗತ ಭಾಷಣವನ್ನು ಮಾಡಿದರು. ಅನಂತರ ಮಾನ್ಯ ಮಂತ್ರಿ ಶ್ರೀ ಎ.ಬಿ. ಶೆಟ್ಟಿಯವರು ರಜತ ಮಹೋತ್ಸವದ ಉದ್ಘಾಟನ ಭಾಷಣ ಮಾಡುತ್ತ ಮುಂಬಯಿಯಲ್ಲಿ ಇಷ್ಟು ಸಂಖ್ಯೆಯಲ್ಲಿ ಬಂಟರಿರುವುದು ನನಗೆ ಆಶ್ಚರ್ಯವೂ ಸಂತೋಷವೂ ಆಗಿದೆ, ಮುಂಬಯಿಯೆಂಬುದು ಬಹಳ ಮನೋರಂಜನೆಯ ಶಹರು, ಇಲ್ಲಿ ಬುದ್ಧಿ ಜ್ಞಾನ, ಧನದ ಅಭಿವೃದ್ಧಿಗೆ ತುಂಬಾ ಅವಕಾಶವಿದೆ ಸ್ವಜಾತಿಯವರೆಲ್ಲರೂ ಇದರ ಉಪಯೋಗ ಪಡಕೊಳ್ಳುವಂತಾಗಬೇಕು, ಆರೋಗ್ಯದ ಕಡೆಗೆ ಗಮನ ಕೊಡಬೇಕು. ಸಂಘವು ಧರ್ಮಾರ್ಥ ರಾತ್ರಿ ಶಾಲೆ ನಡೆಸುವುದು ತುಂಬಾ ಶ್ಲಾಘನೀಯ, ಸಮಾಜದವರೆಲ್ಲರೂ ಸ್ತ್ರೀ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಗಮನ ಕೊಡಬೇಕು. ಸಂಗೀತ, ನೃತ್ಯ ಪಾಕ ಶಾಸ್ತ್ರ, ಕಸೂತಿ, ನರ್ಸಿಂಗ್ ಇತ್ಯಾದಿ ಕಲೆಗಳಲ್ಲಿ ನಮ್ಮ ಹೆಮ್ಮಕ್ಕಳಿಗೆ ಕಲಿಯುವಂತೆ ಅವಕಾಶ ಕೊಡಬೇಕು, ಎಲ್ಲರೂ ಸುಘಟಿತರಾಗಿ ಸಂಘದ ಏಳಿಗೆಗಾಗಿ ದುಡಿಯಬೇಕು ಎಂಬಿತ್ಯಾದಿಯಾಗಿ ಮನನೀಯವಾದ ಭಾಷಣ ಮಾಡಿದರು

ಅತಿಥಿಯಾಗಿ ಬಂದಿದ್ದ ದ. ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ಕಾರ್ಯದರ್ಶಿಯವರೂ, ವಿಜಯಾ ಬೇಂಕಿನ ಡೈರೆಕ್ಟರ್ ಮೇನರೂ ಆದ ವಕೀಲ್ ಕೆ. ಸುಂದರರಾಮ್ ಶೆಟ್ಟರು ಮಾತಾಡುತ್ತಾ ಮುಂಬಯಿಯಲ್ಲಿ ಸಂಘಕ್ಕೊಂದು ಸ್ವಂತ ಕಟ್ಟಡವು ಆಗಬೇಕೆಂದೂ ಊರಲ್ಲಿರುವ ಸಾರ್ವಜನಿಕ ಕಟ್ಟಡಗಳಿಗೆ ಉದಾರಧನ ಸಹಾಯ ಮಾಡಿದ ಮಹನೀಯರೆಲ್ಲರೂ ಈ ಕಾರ್ಯದಲ್ಲಿ ಹಿಂದುಳಿಯಲಾರರೆಂದೂ ಸಂಘಕ್ಕೊಬ್ಬ ಸಂಬಳದ ಸೆಕ್ರೆಟರಿಯು ಅವಶ್ಯವೆಂದೂ ಮುಂತಾಗಿ ಸಲಹೆ ಕೊಟ್ಟುದಲ್ಲದೆ ನಮ್ಮದೇ ಆದ ವಿಜಯಾ ಬೇಂಕಿನ ಏಳಿಗೆಗೆ ಎಲ್ಲರೂ ಸಹಕರಿಸ ಬೇಕೆಂದರು.

ಅನಂತರ ಡಾ| ಪಿ. ಜಗನ್ನಾಥ ಶೆಟ್ಟಿಯವರು ತನ್ನ ಅಧ್ಯಕ್ಷ ಭಾಷಣದಲ್ಲಿ ಮಾನ್ಯ ಮಂತ್ರಿಯವರು ಸೂಚಿಸಿದಂತೆ ಮುಂಬಾಯಿಯಲ್ಲಿ ಹುಟ್ಟಿದ ಸ್ವಜಾತಿ ಹೆಣ್ಣು ಮಕ್ಕಳಿಗೆ ಯೋಗ್ಯ ವಿದ್ಯೆಕೊಟ್ಟು ಸುಶಿಕ್ಷಿತೆಯರನ್ನಾಗಿ ಮಾಡಲಿಕ್ಕೆ ನಾವೆಲ್ಲರೂ ತಯಾರಿದ್ದೇವೆಂದೂ ವಿದ್ಯೆ ಕೊಟ್ಟರೂ ಕೊಡದಿದ್ದರೂ ವರದಕ್ಷಿಣೆಯ ಪೀಡೆಯು ಸಮಾಜವನ್ನು ಬಾಧಿಸುತ್ತಿದೆಯೆಂದೂ ಈ ಘನತರವಾದ ಸಮಾಜದ ಕುಂದನ್ನು ನಿವಾರಿಸದಿದ್ದರೆ ನಮ್ಮ ಮುಂದಿನ ಜನಾಂಗದ ಏಳಿಗೆಯಾಗಲಾರದೆಂದೂ ಈ ವಿಚಾರದಲ್ಲಿ ದ. ಕ. ಜಿಲ್ಲಾ ಸಂಘದವರು ಚಳವಳಿ ಹೂಡಬೇಕೆಂದೂ ವರದಕ್ಷಿಣಾ ನಿವಾರಣಾ ಮಸೂದೆ ಬರುವಂತಾಗಬೇಕೆಂದು ಈ ಕಾರ್ಯದಲ್ಲಿ ಮುಂಬಯಿಯ ಮೂವತ್ತು ಸಾವಿರ ಬಂಟರು ಸಂಪೂರ್ಣ ಬೆಂಬಲ ಕೊಡುತ್ತೇವೆಂದೂ ಹೇಳಿದರು.

ಮುಂಬಾಯಿ ಸಂಘದ ವಿಷಯ ಮಾತನಾಡುತ್ತಾ ಅದು ಎಷ್ಟೋ ವಿಷಯಗಳಲ್ಲಿ ಜಿಲ್ಲಾ ಸಂಘಕ್ಕಿಂತ ಹಿಂದಿದ್ದರೂ, ಅದು ನೂರೈವತ್ತಕ್ಕೂ ಮಿಕ್ಕ ಮಕ್ಕಳಿರುವ ಒಂದು ಹೈಸ್ಕೂಲನ್ನು ನಡೆಸಿಕೊಂಡು ಬರುವುದು ಮುಂಬಯಿ ಸಂಘಕ್ಕೊಂದು ಹೆಮ್ಮೆಯ ಮಾತೆಂದೂ ಸಂಘಕ್ಕೆ ಲೈಬ್ರರಿ, ವಾಚನಾಲಯ, Sports Club, ಮದುವೆ ಮುಂತಾದ ಸಮಾರಂಭಗಳಿಗೆ ಬೇಕಾಗುವ ಪಬ್ಲಿಕ್ ಹೋಲ್, Students Hostel ಇತ್ಯಾದಿಗಳನ್ನು ಮಾಡುವ ಯೋಜನೆ ಇದೆಯೆಂದೂ ಇದಕ್ಕೆಲ್ಲಾ ಸ್ವಂತ ಕಟ್ಟಡದ ಅವಶ್ಯಕತೆ ಇದೆಯೆಂದೂ, ಈ ಕಾರ್ಯಕ್ಕೆ ಸಮಾಜದ ಪ್ರತಿಯೊಬ್ಬರೂ ಸಹಾಯ ಮಾಡಬೇಕೆಂದೂ ಸಭಿಕರನ್ನು ಕೇಳಿಕೊಂಡರು. ಕೃಷಿಕರೆಂದೆನ್ನಿಸಿ ಕೊಂಡಿದ್ದವರಿಗೆ ವ್ಯಾಪಾರ ಪ್ರಪಂಚದಲ್ಲಿಯೂ ಸ್ಥಾನ ಕಲ್ಪಿಸಿಕೊಟ್ಟವರು ಮುಂಬಾಯಿ ಬಂಟರೆಂದೂ, Learn while you earn ದುಡಿಯುವಾಗಲೆ ವಿದ್ಯೆ ಕಲಿಯುತ್ತಿರುವ ನೂರಕ್ಕೂ ಮಿಕ್ಕಿದ ಸಮಾಜದ ಕಾಲೇಜ್ ವಿದ್ಯಾರ್ಥಿಗಳ ಸ್ಫೂರ್ತಿಗೆ ಸಂತೋಷ ವ್ಯಕ್ತಪಡಿಸಿದರು.

ಬಳಿಕ ಮಂತ್ರಿಯವರು ವಿವಿಧ ಪಂದ್ಯಾಟಗಳಲ್ಲಿ ಜಯಶೀಲರಾದ 48ಮಂದಿ ಸ್ವಜಾತಿ ಸ್ತ್ರೀ ಪುರುಷರಿಗೆ ಪಾರಿತೋಷಕ ವಿತರಣೆ ಮಾಡಿದರು. ಕೊನೆಗೆ ಕೆ. ಶ್ಯಾಮ ಶೆಟ್ಟರು ಧನ್ಯವಾದಗಳನ್ನು ಅರ್ಪಿಸಿದರು. ಆ ಬಳಿಕ ಉತ್ತಮವಾದ ಕಥಕಳಿ ಭರತನಾಟ್ಯ, ಸಂಗೀತ, "ಮೋಕ್ಷ ಸ್ವರ್ಗಗು ಪೋಯೆ" ಎಂಬ ತುಳು ನಾಟಕ, "ಸಿನೆಮ ಅಳಿಯ" ಎಂಬ ಕನ್ನಡ ನಾಟಕ ಇತ್ಯಾದಿ ಮನೋರಂಜಕ ವಿಷಯಗಳು ಸಭಿಕರ ಮನಸ್ಸನ್ನು ಆಕರ್ಷಿಸುವಂತಿತ್ತು. ಸೋಮವಾರ ಸಂಜೆ 5-10ಕ್ಕೆ ವಿ. ಟಿ. ರೈಲ್ವೆ ನಿಲ್ದಾಣದಲ್ಲಿ ಸ್ವಜಾತಿ ಪ್ರಮುಖರೆಲ್ಲರೂ ಸೇರಿ ಮಾನ್ಯ ಮಂತ್ರಿಯವರನ್ನು ಬೀಳ್ಕೊಟ್ಟರು.

ಉಡುಪಿ

ಮೈಸೂರು ಪ್ರಧಾನ ಮಂತ್ರಿಗಳಿಗೆ ಮಾನಪತ್ರ—ಉಡುಪಿ ಮುನಿಸಿಪಲ್ ಕೌನ್ಸಿಲಿನ ವಿಶೇಷ ಸಭೆಯು ಕಳೆದ ತಾ. 29ರಲ್ಲು ಸಂಜೆ ಶ್ರೀಯುತ. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿ ದಿನಾಂಕ ದಿನಾಂಕ 7ರಂದು ಉಡುಪಿಗೆ ಬರಲಿರುವ ಮೈಸೂರಿನ ಪ್ರಧಾನ ಮಂತ್ರಿ ಮಾನ್ಯ ಹನುಮಂತಯ್ಯನವರಿಗೆ ಮಾನಪತ್ರವೀಯ ಬೇಕೆಂಬ ನಿರ್ಣಯವಾಯಿತು. ಮದ್ರಾಸು ಮಂತ್ರಿ ಶ್ರೀ ಎನ್. ರಂಗರೆಡ್ಡಿಯವರಿಗೆ ಮಾನಪತ್ರಕೊಡುವ ನಿರ್ಣಯ ಕೆಲಸವಾಯದೆ ಹಿಂದೆ ಆಗಿತ್ತು

ಸಹಕಾರಿಗಳ ಸೌಹಾರ್ದ ಸಭೆಯು—ಕಳೆದ ತಾ. 29.ರಲ್ಲು ಸ್ಥಳೀಯ ಸಹಕಾರಿ ಸಂಘ ಕೂಟದ ಆಫೀಸಿನಲ್ಲಿ ಜರಗಿತು ಮಂಗಳೂರ ಶಾಖೆಯ ಡಿಪ್ಯುಟಿ ರಿಜಿಸ್ಟ್ರಾರ್ ಶ್ರೀ ಕೆ. ಕೇಶವ ಕಿಣಿ, ದ. ಕ. ಜಿಲ್ಲಾ ಸೆಂಟ್ರಲ್ ಕೋಓಪರೇಟಿವ್ ಬೇಂಕಿನ ಉಪಾಧ್ಯಕ್ಷ ಶ್ರೀ ಯಸ್. ನರ್ಸಪ್ಪಯ್ಯ ಎಮ್. ಎಲ್. ಸಿ ಅವರು ವಿಶೇಷತಃ ಹಾಜರಿದ್ದರು. ಸಹಕಾರಿ ಸಂಘಗಳ ಸ್ಥಿತಿಗತಿಗಳ ವಿಮರ್ಶೆ ನಡೆಯಿತು. ಸಂಘಗಳಲ್ಲಿ ಸದಸ್ಯರನ್ನು ಹೆಚ್ಚು ಮಾಡುವ ಪಾಲು ಭಂಡವಳವನ್ನು ಜಾಸ್ತಿ ಮಾಡುವ ಆವಶ್ಯಕತೆಯನ್ನು ಸಂಘಗಳ ಪ್ರತಿನಿಧಿಗಳ ಅವಗಾಹನೆಗೆ ತರಲಾಯಿತು. ಈ ತೆರನಾದ ಸೌಹಾರ್ದ ಸಭೆಯು ಅಂದು ಮಧ್ಯಾಹ್ನ ಬ್ರಹ್ಮಾವರ ಸಹಕಾರಿ ಸಂಘದಲ್ಲಿ ಜರಗಿತು.

ಆಸನ ಪ್ರದರ್ಶನ—ಸ್ಥಳೀಯ ಎಮ್. ಜಿ ಎಮ್. ಕಾಲೇಜಿನ ವಿದ್ಯಾರ್ಥಿ ಶ್ರೀ ಎಮ್. ಸಂಜೀವ ಸೆಟ್ಟರು ಇದೇ ತಾ 30ರಲ್ಲು ಸಂಜೆ ಪ್ರಿನ್ಸಿಪಾಲ್ ಎಚ್. ಸುಂದರ ರಾಯರ ಅಧ್ಯಕ್ಷತೆಯಲ್ಲಿ ಕಾಲೇಜು ಪಟಾಂಗದಲ್ಲಿ ಸಾಹಸಪೂರ್ಣ ಹಾಗೂ ವಿಸ್ಮಯಕರ ಆಸನ ಪ್ರದರ್ಶನ ಮಾಡಿದರು. ಅಧ್ಯಕ್ಷರು ಶ್ರೀ ಸೆಟ್ಟರ ಬಹುಮುಖ ದಕ್ಷತೆಯನ್ನು ಕೊಂಡಾಡಿ, ತನು ಮನ ಧನಗಳಿಂದ ಸರ್ವರೂ ಸಹಾಯ ಮಾಡಬೇಕೆಂದು ಕೇಳಿಕೊಂಡರು. ಶ್ರೀ ವಿ. ಶ್ರೀನಿವಾಸ ಭಟ್ಟರು ಧನ್ಯವಾದಗಳನ್ನರ್ಪಿಸಿದರು. ಆರಂಭದಲ್ಲಿ ಶ್ರೀ ಕೆ. ಪ್ರಭಾಕರ ಪೈಗಳು ಸ್ವಾಗತ ಮಾತುಗಳನ್ನಾಡಿದರು.

ಆನೆಕಾಲು ರೋಗ ತಡೆಗಟ್ಟುವ ಕಾರ್ಯವು— ಉಡುಪಿ ನಗರದಲ್ಲಿ ಕಳೆದ ವಾರದಿಂದ ಪ್ರಾರಂಭವಾಗಿದೆ, ಶ್ರೀಗಳಾದ ಟಿ. ಎ. ಪೈ, ಎಮ್. ಎಲ್. ಎ, ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿ ನರಹರಿ ಕಾಮತ್, ಮುನಿಸಿಪಲ್ ಹೆಲ್ತ್ ಆಫೀಸರ್ ಡಾ| ರಾಮಚಂದ್ರ ರಾವ್ ಮೊದಲಾದವರು ಪ್ರಮುಖ ಭಾಗವಹಿಸಿ, ಜನ ಜಾಗ್ರತಿಯನ್ನು ಮಾಡುತ್ತಿರುವರು.

ಸತ್ಕಾರ ಸಮಾರಂಭ— ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿಯವರು ಮ್ಯ ಕಂಪೆನಿಯ ಸ್ಥಾಪನೆ ಹಾಗೂ ಅಭಿವೃದ್ಧಿಗೆ ನೆರವಾದೆಲ್ಲರನ್ನು ಸತ್ಕರಿಸಲಿಕ್ಕೂ ಸ ಪಕರಾದ ಡಾ. ಟಿ. ಎಂ. ಎ ಪೈಗಳನ್ನು ಮ ೫೫ನೇ ಜನ್ಮದಿನದಂದು ಅಭಿನಂದಿಸು ದಕ್ಕೂ, ತಾ 30ರಂದು ಸಮಾರಂಭವೊಂ ನ್ನು ಏರ್ಪಡಿಸಿದ್ದರು. ಎಂ. ಜಿ. ಯಂ. ಲೇಜಿನ ಪ್ರಿನ್ಸಿಪಾಲ್ ಶ್ರೀ ಸುಂದರ ರಾ ರು ಅಧ್ಯಕ್ಷತೆವಹಿಸಿದ್ದರು.

ಉಪಾಹಾರ ಹಾಗೂ ಭಕ್ತಿಪರ ಸಂಗಿ ಗಳ ಬಳಿಕ ಶ್ರೀ ಯು. ಕೆ. ಶಿವಯವರು ದೇಶ ಓದಿದರು. ಸಭೆಯಲ್ಲಿ ಡಾ ಪಿ. ಅಂ ನಾಯಕ್ ಶ್ರೀಗಳಾದ ಶ್ರೀಪತಿ ಆಚಾಯ ರಾತಿ ಫೆರ್ನಾಂಡಿಸ್ ಇವರು ಕಂಪೆನಿಯ ರೋಗತಿಯನ್ನೂ, ಡಾ. ಪೈಯವರ ಬ ಮುಖವಾದ ಸೇವಾ ಜೀವನವನ್ನೂ ಪ್ರಶಂ ಸಿ ಮಾತನಾಡಿದರು, ಡಾ. ಪೈಗಳು ಉತ್ತ ಸ. ಕಾ ಪಂಚವಾರ್ಷಿಕ ಯೋಜನೆಯು ಕಾರ್ಯಕಾರಿಯಾಗುವಲ್ಲಿ ವಿಮಾ ಕಂ ಗಳು ವಹಿಸುವ ಪಾತ್ರದ ಮಹತ್ವವ ಬಣ್ಣಿಸಿದರು.

ತರುವಾಯ ಶ್ರೀ ಟಿ. ರಮೇಶ ಪೈಗ ಪ್ರಕಟಪಡಿಸಿದಂತೆ 1952ರ ವಿಮಾ ಸ್ಪ ಯಲ್ಲಿ ಗೆದ್ದ ಶ್ರೀ ಎ. ಆರ್. ಶೆಣೈಯವ ಚಿನ್ನದ ಪದಕವನ್ನೂ ಇತರ ಪ್ರಶಸ್ತಿ ಪತ್ರ ಕನ್ನೂ ನೀಡಲಾಯಿತು.

ಅಧ್ಯಕ್ಷರು ಸಂಸ್ಥೆಯ ಹಾಗು ಡಾ. ಯವರ ಜೀವನದ ವೈಶಿಷ್ಟ್ಯಗಳನ್ನು ವ ಸಿ ಸುದೀರ್ಘ ಭಾಷಣ ಮಾಡಿದರು. ಡಾ. ಎಲ್, ಐತಾಳರು ಧನ್ಯವಾದವನ್ನು ಅ ಸಿದರು.

ಯಕ್ಷಗಾನ ಬಯಲಾಟ— ಶ್ರೀ, ಧವ ಸ್ಥಳ ಮಂಜುನಾಥ ಸ್ವಾಮಿ ಕೃಪಾ ಪೋ ಯಕ್ಷಗಾನ ಬಯಲಾಟ ಮೇಳದವರು ಇ ತಾ 4ರಲ್ಲು ರಾತ್ರಿ ಅಜ್ಜರಕಾಡು ಮೈದಾ ಲ್ಲಿ 'ಬ್ರಹ್ಮಕಪಾಲ' ಆಟವನ್ನು ಸೊಗಸ ಆಡಿದರು. ಶ್ರೀ ಮಂಜುನಾಥ ಮೋಟ ಸರ್ವಿಸಿನ ಮಾಲಕರಾದ ಶ್ರೀ ಗೋಪಾ ಸೆಟ್ಟರು ಈ ಬಯಲಾಟವನ್ನು ಆಡಿಸಿ ದಾಗಿದೆ.

ವಾಹನಗಳ ಸ್ಪೀಡ್ ಲಿಮಿಟನ ಕ ಸಂಬಂಧಪಟ್ಟವರು ಇನ್ನೂ ಗಮನಕೊ ಕ ತೋರುವುದಿಲ್ಲ

ಮಹಿಳೆಯಾದ ಸ್ತ್ರೀ ಪುರುಷರ ಸಲುವಾಗಿ
ಬರೆಯಲ್ಪಟ್ಟ ಪುಸ್ತಕ

ಮಿತಸಂತತಿ

ಹುಟ್ಟುವ ಮಕ್ಕಳು ಆರೋಗ್ಯ ಸಂಪತ್ತು ಸೌಭಾಗ್ಯ ಮೊದಲಾದುವನ್ನು ಸಾಕಷ್ಟು ಪಡೆಯುವ ಹಾಗೆ ಹೆತ್ತವರು ಸಾಧಿಸಲಾಗುವಂತೆ ಅತ್ಯನುಕೂಲವಾದ ಪರಿಸ್ಥಿತಿ ಯಾವುದೋ ಅದರಂತೆ ದಂಪತಿಗಳು ಮಕ್ಕಳನ್ನು ಹೆರುವ ಹಾಗೆ ಆವಶ್ಯವಾದ ತತ್ವಗಳನ್ನು ಬೋಧಿಸುವ ನವೀನ ಪುಸ್ತಕ **ಬೆಲೆ 0-8 0**

ಶ್ರೀ. ಕೆ. ಕೆ. ಶೆಟ್ರ ನಿರ್ಭೀತ ಲೇಖನಿಯಿಂದ ಹೊರಹೊಮ್ಮಿದ
ನವೀನ ಸಾಮಾಜಿಕ ಕಾದಂಬರಿ.

ಸನ್ಯಾಸಿಯ ಸೋಗಿನಲ್ಲಿ!

ವೇಶ್ಯಾಪುತ್ರಿಯಾದರೂ ನೀತಿವಂತ ಜೀವನ ನಡೆಸುವ ಮನಸ್ಸುಳ್ಳವಳಾದರೆ ಸಮಾಜವು ಅದಕ್ಕೆ ಹೇಗೆ ಅಡ್ಡಿ ಮಾಡಿ ಅವಳ ಜೀವನವನ್ನು ಕೆಡಿಸಲು ಕಾರಣವಾಗುವುದೆಂಬುದನ್ನು ಹೃದಯಂಗಮವಾಗಿ ಚಿತ್ರಿಸುವ ಅತ್ಯಾಧುನಿಕ ಕಾದಂಬರಿ

ಸನ್ಯಾಸದ ಮರೆಯಲ್ಲಿ ನಡೆಯುವ ವಿನ್ಯಾಸದ ಕಥೆ.
ಬೆಲೆ 0—10—0. ಇತರ ಪುಸ್ತಕಗಳ ಕೆಟಲಾಗಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ದರ ಬಹಳ ಕಡಿಮೆ ಮಾಡಿದೆ!
ಸರ್ವತರದ ಮುದ್ರಣ ಕಾರ್ಯಗಳಿ
ವಿಚಾರಿಸಿರಿ:—

ನವಯುಗ ಪ್ರೆಸ್

ಸಂತೆಕಟ್ಟೆ, ಉಡುಪಿ.

ಮದುವೆ, ಉಪನಯನ, ಮತ್ತಿತರ ಸಮಾರಂಭಗಳ ಆಮಂತ್ರಣಪತ್ರಿಕೆಗಳನ್ನು ನಾಲ್ಕೇ ಗಂಟೆಗಳಲ್ಲಿ ತಯಾರಿಸಿ ಕೊಡಲಾಗುವುದು.



ದಕ್ಷಿಣ ಕನ್ನಡ

...ಕಾರ್ಕಳ— ಸ್ಥಳೀಯ ಆರ್. ಕೆ. ನಾ... ಶಾಲಾ ವಠಾರದಲ್ಲಿ ಕಳೆದ ತಾ 25 ... ಬೇಕಾರ್ಕಳ ಕೇಂದ್ರಕ್ಕೆ ಸಂಬಂಧ ... ಆರು ಶಾಲೆಗಳ 'ಮಕ್ಕಳ ಹಬ್ಬವು' ...ಪಿ ಉತ್ತರ ಶ್ರೇಣಿಯ ಜೂನಿಯರ್ ...ಸ್ಪೆಕ್ಟರ್ ಶ್ರೀ ಸಂಜೀವರಾಯರಿಂದ ...ಘಾಟಿಸಲ್ಪಟ್ಟಿತು. ಸ್ಥಳೀಯ ಪಂಚಾಯ... ಬೋರ್ಡಿನ ಅಧ್ಯಕ್ಷ ಶ್ರೀ ಎ. ಸುಬ್ಬರಾ... ...ು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು ...ು ಮಕ್ಕಳು ವಿವಿಧ ಚಟುವಟಿಕೆಗಳನ್ನು ...ಕ್ಷಣೀಯವಾಗಿ ಪ್ರದರ್ಶಿಸಿದರು.

...ಂಟಳೆ- ಕಳೆದ ತಾ. 30ರಲ್ಲಿ ಮಾಯ... ...ಬುನಾದಿ ಶಿಕ್ಷಣ ತರಬೇತಿ ಶಾಲೆಯಲ್ಲಿ ...ರು ತಿಂಗಳುಗಳ ಅಲ್ಪಾವಧಿ ಬುನಾದಿ ...ಣ ತರಬೇತಿ ತರಗತಿ ತೆರಯಲಾಗಿದೆ.

...ರ್ಕಳ— ಸಮಾಜಹಿತ ಯೋಜನೆಯ ...ಯದಿಂದ ಸ್ಥಳೀಯ ಪಂಚಾಯತ ...ದಿನವರು ಕಡಿಯಾಳಿರುವ ಪೆರ್ವಾ... ...ಕುಕ್ಕುಂದೂರು ರಸ್ತೆಯ ಆರಂಭೋ... ...ವು ಕಳೆದ ತಾ 30ರಲ್ಲಿ ಸಂಜೆ ಈ ...ಜನೆಯ ಪ್ರಾಂತಾಧಿಕಾರಿ ಶ್ರಿ ಟಿ. ...ರಾಮಚಂದ್ರನ್ ಅವರ ಅಧ್ಯಕ್ಷತೆ ...ಲ್ಲಿ ಜರಗಿತು.

...ಮೂಡಬಿದ್ರೆ, ಬೆಳುವಾಯಿ ಮೊದಲಾದ ...ಮಗಳಲ್ಲಿ ನಡೆಯುತ್ತಿರುವ ಸಮಾಜ ಯೋಜನೆಯ ಕಾರ್ಯಗಳನ್ನು ಕಳೆದ 30ರಲ್ಲಿ ಶ್ರಿ ಟಿ. ರಾಮಚಂದ್ರನ್ ಅ... ...ಸಂದರ್ಶಿಸಿದರು. ಅಲ್ಲದೆ ಇರ್ವತ್ತೂರಿನ ...ಸುಮಾರು 120 ಮಂದಿ ಗ್ರಾಮಸ್ಥರು ಸ್ವಂ... ...ಮದಿಂದ ರಚಿಸುವ ರಸ್ತೆಯ ಕಾರ್ಯ ಉದ್ಘಾಟನೆಯೂ ಈ ಸಂದರ್ಭದಲ್ಲಿ ನಡೆ...ು.

...ಳ್ಯಾರೆ- ಮಂಗಳೂರು ಸರಕಾರಿ ಕಲಾ... ...ಯ ಸಮಾಜ ಸೇವಾ ಸಂಘದವರು ಸ್ಥಾ... ...ರ ವಯಸ್ಕರ ಶಿಕ್ಷಣ ಶಿಬಿರದ ಉದ್ಘಾ... ಸಮಾರಂಭವು ಇದೇ ತಾ. 1ರಲ್ಲಿ ಪ್ರಿನ್ಸಿ... ...ಎಮ್. ಐ ರಾಶಿವಿಯಾವರ ಅಧ್ಯ... ...ಯಲ್ಲಿ ಜರಗಿತು. ಕ್ಯಾಂಪ್ ಆಫೀಸರ್ ಎಮ್. ವಿ. ಭಂಡಾರಿಗಳಿಂದ ಸ್ವಾಗತ ...ಷಣವಾದ ನಂತರ ಶ್ರೀ ಶಿವರಾಮ ಕಾ... ...ರು ಉದ್ಘಾಟನಾ ಭಾಷಣ ಮಾಡುತ್ತಾ ...ವು ಸಲಹೆಗಳನ್ನಿತ್ತು ಶಿಬಿರದ ಉದ್ದೇಶ ...ಯಶಸ್ವಿಯಾಗಲಿ ಎಂದರು. ಶ್ರೀಗಳಾ...ದ ನಾರಾಯಣ ಶೇಟ ಮತ್ತು ಮಾರಪ್ಪ ಸೆಟ್ಟರು ಮಾತನಾಡುತ್ತಾ ಶಿಬಿರದ ಉದ್ದೇಶಗಳನ್ನು ಪ್ರಶಂಸಿಸಿ ಊರವರು ಇದರಲ್ಲಿ ಸಹಕರಿಸಬೇಕೆಂದರು. ಶ್ರೀ ಜಗನ್ನಾಥ ಸೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಕುಕ್ಕೆಹಳ್ಳಿ— ಸ್ಥಳೀಯ ಮಹಾಲಿಂಗೇಶ್ವರ ದೇವಸ್ಥಾನದ ಜೀರ್ಣೋದ್ಧಾರದ ಕುರಿತು ವಾರ್ತೆಯೊಂದು ತಾ 23-4-53ರ ಸಂಚಿಕೆಯಲ್ಲಿ ಪ್ರಕಟವಾಗಿತ್ತಷ್ಟೆ. ಆ ವಾರ್ತೆಯು ಸದ್ರಿ ದೇವಸ್ಥಾನದ ಜೀರ್ಣೋದ್ಧಾರದ ಸೇವನದಿಂದ ಯಾರದ್ದೋ ಹಣವಾಡುವ ಉಪಾಯವಾಗಿ ತೋರುವುದೆಂದೂ ಸದ್ರಿ ದೇವಸ್ಥಾನದಲ್ಲಿ ಗ್ರಾಮಸ್ಥರ ಸಭೆಯು ತಾ 6-4-53ರಲ್ಲಿ ಜರಗಿದ್ದೇ ಇಲ್ಲವೆಂದೂ, ಜನತೆಯು ಮೋಸ ಹೋಗಬಾರದಾಗಿಯೂ ಸದ್ರಿ ದೇವಸ್ಥಾನದ ಮೊಕ್ತೇಸರಲ್ಲೊಬ್ಬರಾದ ಶ್ರಿ ಜಗನ್ನಾಥ ಹೆಗ್ಡೆಯವರು ಈ ಮೂಲಕ ತಿಳಿಸುತ್ತಾರೆ.

ಬೈಲೂರು— ಉಡುಪಿ ಪೇಟೆ ಸಹರಿನ ಲಗ್ಗೀ ಇರುವ ಬೈಲೂರಿನ ಮಹಿಷಾಸುರ ಮರ್ದಿನಿ ಭಜನಾ ಮಂಡಳಿಯವರು ಕಳೆದ ತಾ 17 ರಿಂದ 27 ರ ತನಕ ನಗರದಲ್ಲಿ ಭಜನೆ ಸಂಕೀರ್ತನೆ ನಡೆಸಿ ತಾ. 28ರಲ್ಲಿ ಮಂಗಲಾವರಣೆ ಮಾಡಿದರು. ಈ ಮಂಗಲ ಕಾರ್ಯದಲ್ಲಿ ಶ್ರೀಗಳಾದ ಕೊರಂಗ್ರಪಾಡಿ ಗುರುಡು ಸೆಟ್ಟಿ, ಬೈಲೂರು ವಾಸುದೇವ ರಾವ್, ಕಾಳು ಸೆಟ್ಟಿ, ಮೊದಲಾದವರು ತುಂಬಾ ಸಹಕಾರವನ್ನಿತ್ತಿದ್ದರು. ಮಂಡಳಿಯ ಅಧ್ಯಕ್ಷ ಶ್ರೀ ವಾಸು ಸೆಟ್ಟರು ಕಳೆದ ವರುಷದ ಭಜನಾ ಮಂಗಲದ ಆದಾಯ ವೆಚ್ಚಗಳ ಪಟ್ಟಿಯನ್ನು ಓದಿ ಹೇಳಿದರು. ಪ್ರಸಾದ ವಿತರಣೆಯೊಂದಿಗೆ ಸಭಾಂತ್ಯವಾಯಿತು.

ಮುಂಡಿಕ್ಕಾರು— ಸ್ಥಳೀಯ ಅಂಗಡಿ ಗುತ್ತಿನ ಹಿರಿಯ ಕುಟುಂಬದವರೂ ಯಕ್ಷಗಾನ ಅರ್ಥಧಾರಿಗಳೂ ಆದ ಶ್ರೀ ವಾಸ ಸೆಟ್ಟರು ತಮ್ಮ 86ನೆ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದವೆನಿಸುತ್ತದೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುವೆವು.

ಕಾಪು— ಇಲ್ಲಿಯ ಪೊಲಿಪು ಸರಕಾರಿ ಫಿಶರೀಸ್ ಸಾ[ಎ] ಶಾಲೆಯ ವಾರ್ಷಿಕೋತ್ಸವವು ಕಳೆದ ತಾ. 29ರಲ್ಲಿ ಸಂಜೆ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಟಿ. ಎ. ಪೈಗಳವರು ಬಹುಮಾನ ವಿತರಣೆ ಮಾಡಿದರು. ಫಿಶರೀಸ್ ಅಸಿಸ್ಟೆಂಟ್ ಡೈರೆಕ್ಟರ್ ಶ್ರೀ ಎನ್. ಮುಕುಂದನ್ ಉಪಸ್ಥಿತರಿದ್ದರು. ವರದಿವಾಚನ ಸಭಿಕರ ಭಾಷಣ, ಅಧ್ಯಕ್ಷರ ಭಾಷಣಗಳಾಗಿ ಚಿಕ್ಕಮಕ್ಕಳ ವಿವಿಧ ವಿನೋದಾವಳಿಗಳಾದುವು. ಅಂದು ಜೇಗ್ಗೆ ದ್ವಜವಂದನೆ ಮೊದಲಾದ ಕಾರ್ಯಕ್ರಮಗಳಾಗಿ ಬೊಂಬಾಯಿಯ ಶ್ರೀ ಕೆ ನಂ ಕಟ್ಟ್ರಯ ಲೆಪ್ಪದಿಂದ ಮಕ್ಕಳಿಗೆ ತಿಂಡಿ ಹಂಚಲಾಯಿತು.

ಮುಲ್ಕಿ— ಸುರತ್ಕಲ್ ಅಗ್ಗಿದಕರಿ ಹಾ ಎಲಿಮೆಂಟರಿ ಶಾಲೆಯ ಮೇಲಿನ ತರಗತಿಯ ವಿದ್ಯಾರ್ಥಿಗಳು ಕಳೆದ ತಾ 25 ಮತ್ತು 26 ರಲ್ಲಿ ಶ್ರಿಗಳಾದ ಕೆ. ಕೃಷ್ಣರಾವ್ ಮತ್ತು ಕುಮಾರ ನಾವಡರೊಂದಿಗೆ ಕಾಸರಗೋಡಿನ ಕುರುಡರ ಶಾಲೆ, ಬೆಳ್ಳಿ, ಗಾಜಿನ ಕಾರ್ಖಾನೆ, ಬೇಕಲಕೋಟೆ, ಹೊಸದುರ್ಗದ ರಾಮನಗರ, ನಿತ್ಯಾನಂದ ಗುಹೆ ಇತ್ಯಾದಿ ಸ್ಥಳಗಳನ್ನು ಸಂದರ್ಶಿಸಿದರು.

ಹಂಗಾರಕಟ್ಟೆ— ಸ್ಥಳೀಯ ಕರ್ನಾಟಕ ಸಂಘದ ಮಹಾಸಭೆಯು ಕಳೆದ ತಾ 20ರಲ್ಲಿ ಶ್ರಿ ಬಿ. ಕೃಷ್ಣದೇವ ಐತಾಳರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರಿಗಳಾದ ಕೆ ಲಕ್ಷ್ಮೀನಾರಾಯಣ ಐತಾಳ್, ಎ. ಸದಾನಂದ ಶೆಟ್ಟರ್ ಲಕ್ಷ್ಮೀನಾರಾಯಣ ಕೆದಿಲಾಯ ಕೆ. ರಾಮಚಂದ್ರ ಉಡುಪ, ಮತ್ತು ಕೆ. ಮಂಜನಾಥ ಉಡುಪರು ಅನುಕ್ರಮವಾಗಿ ಕರ್ನಾಟಕ ಏಕೀಕರಣ ಜಾನಪದ ಸಾಹಿತ್ಯ ಕರ್ನಾಟಕ ಸಾಹಿತ್ಯ ಸ್ವರೂಪ, ಸರ್ವಜ್ಞ ಕವಿ ಮಹಾತ್ಮೆ ಮತ್ತು ವಿಜಯನಗರ ಸಾಮ್ರಾಜ್ಯದ ವೈಭವ ವಿಷಯಗಳನ್ನೆತ್ತಿ ಮಾತನಾಡಿದರು, ಶ್ರೀ ಕೆ. ಜನಾರ್ಧನ ಹಂದೆಯವರು ಧನ್ಯವಾದಗಳನ್ನರ್ಪಿಸಿದರು.

ಮಂಗಳೂರು

ಕನರ್ಟಕ ಚೇಂಬರ್ ಒಫ್ ಎಗ್ರಿಕಲ್ಚರ್— ಈ ಸಂಸ್ಥೆಯ ಕಾರ್ಯ ನಿರ್ವಾಹಕ ಮಂಡಳಿಯ ಸಭೆಯು ಕಳೆದ ತಾ 27ರಲ್ಲಿ ಜರಗಿತು. ಕರ್ನಾಟಕ ಪ್ರಾಂತ ನಿರ್ಮಾಣದ ಕುರಿತು ಕೇಂದ್ರ ಸರಕಾರವು ಕೂಡಲೇ ಘೋಷಣೆ ಮಾಡಬೇಕೆಂದು ವಿನಂತಿಸುವ ಕರ್ನಾಟಕ ರಾಜ್ಯದ ಗಡಿಗಳನ್ನು ನಿರ್ಧರಿಸುವ ಕಾರ್ಯ ತೊಡಗಬೇಕೆನ್ನುವ, ನ್ಯಾಯಮೂರ್ತಿ ಮಿಶ್ರಾರವರ ಚೌಕಶಿ ಕಾರ್ಯವನ್ನು ಆಲೂರ, ರಾಯದುರ್ಗ, ಮತ್ತು ಅದೋನಿ ತಾಲೂಕುಗಳಿಗೂ ಅನ್ವಯಿಸ ಬೇಕೆನ್ನುವ, ಕುರಿತು ನಿರ್ಣಯಗಳಾದುವು. ಭೂಮಾಲೀಕರು ಜನತೆಗೆ ಅಕ್ಕಿಯನ್ನು ಮುಡಿ ಒಂದರ ರೂ. 24ಕ್ಕೆ ಮಿರದ ದರದಲ್ಲಿ ಒದಗಿಸಬೇಕೆಂದು ವಿನಂತಿಸುವ ನಿರ್ಣಯ ಕೂಡಾ ಆಯಿತು ಈ ಕುರಿತು ಚೇಂಬರಿನೊಡನೆ ಸಹಕರಿಸಲಿಚ್ಚಿಸುವವರು ಶ್ರೀ ವಿ. ಬಿ ಶೆಟ್ಟಿ, ಎಡ್ವಕೇಟ್, ಕಾರ್ಯದರ್ಶಿ. ಲೈಟ್ ಹೌಸ್ ಹಿಲ್, ಮಂಗಳೂರು ಈ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು.

ಮೇದಿನಾಚರಣೆ— ಸ್ಥಳೀಯ ಕೇಂದ್ರ ಮೈದಾನದಲ್ಲಿ ಇದೇ ತಾ 1ರಲ್ಲಿ ಸಂಜೆ ಕಮ್ಯೂನಿಸ್ಟ್ ಪಕ್ಷದ ಆಶ್ರ... ...ಎಸ್. ಶಾಸ್ತ್ರೀಯವರ ಅಧ್ಯಕ್ಷತೆಯಲ್ಲಿ ಮೇದಿನಾಚರಣೆ ನಡೆಯಿತು ಬೇರೆ ಬೇರೆ ಸಾಹುಕಾರ ಸಂಘಗಳ ಮೆರವಣಿಗೆಗಳು ಸಂಜೆ ಮೈದಾನದಲ್ಲಿ ಒಟ್ಟು ಗೂಡಿದವು. ಬೊಂಬಾಯಿ ಪ್ರಾಂತದ ಮಜೂರ ಮುಖಂಡರಾದ ಶ್ರೀ ಜಿ. ಎಸ್. ಸರ್ದೇಸಾಯಿಯವರು ಮೇದಿನಾಚರಣೆ ಮತ್ತು ಮಜೂರರ ಬಗ್ಗೆ ಮಾತನಾಡಿದರು.

ಕುರಿತು ಭಾಷಣವಿತ್ತರು. ಶ್ರೀ ಶಾಂತರಾಮ ಪೈಗಳವರು ಮಾತನಾಡಿದರು.

ಅಖಿಲ ಕರ್ನಾಟಕ ಏಕೀಕರಣ ಸಭೆಯು— ಇದೇ ತಾ 3ರಲ್ಲಿ ಕೇಂದ್ರ ಮೈದಾನದಲ್ಲಿ ಮುನಿಸಿಪಲ್ ವೈಸ್ ಚೇರ್ಮನ್ ಶ್ರಿ ಡಿ. ಭಾಸ್ಕರ ಶೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಕರ್ನಾಟಕ ಪ್ರಾಂತ ರಚನೆಯ ಕಾರ್ಯವನ್ನು ಕೇಂದ್ರ ಸರಕಾರವು ಮುಂದೂಡುತ್ತಿರುವುದನ್ನು ಖಂಡಿಸುವ ಮತ್ತು ಇಡೀ ಬಳ್ಳಾರಿಯನ್ನು ಮೈಸೂರಿಗೆ ಪ್ರತ್ಯೇಕ ಸೇರಿಸುವ ನಿರ್ಣಯಗಳು ಮಂಜೂರಾದುವು.

ಮೈಸೂರನ್ನೊಳಗೊಂಡ ಅಖಂಡ ಪ್ರಾಂತ ನಿರ್ಮಾಣದ ಉದ್ದೇಶವು ಫಲಕಾರಿಯಾಗುವಂತೆ ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮಂಗಳೂರಿಗೆ ಬಂದಾಗ ಅವರೊಡನೆ ವಿಚಾರ ವಿನಿಮಯ ಮಾಡಲು ನಗರದ ಪ್ರಮುಖ ಮಹನೀಯರನ್ನೊಳಗೊಂಡ ಒಂದು ನಿಯೋಗವನ್ನು ನೇಮಿಸಲಾಯಿತು. ಅಲ್ಲದೆ ಈ ಸಂದರ್ಭದಲ್ಲಿ ಕನ್ನಡಿಗರು ಯಾವ ಸ್ಥಳದಲ್ಲಿದ್ದರೂ ಯಾವ ಪಕ್ಷದವರಾದರೂ ಕರ್ನಾಟಕ ಪ್ರಾಂತಕ್ಕಾಗಿ ಒಗ್ಗಟ್ಟಿನಿಂದ ಆಂದೋಲನ ಹೂಡಬೇಕೆಂದು ಸಭೆಯು ನಿರ್ಣಯಿಸಿತು. ಪ್ರಧಾನಿ ನೆಹರೂರವರು ಬೆಳಗಾವಿಯಲ್ಲಿ ಕರ್ನಾಟಕ ಪ್ರಾಂತದ ನಿರ್ಮಾಣಕ್ಕಾಗಿ ಮಾಡಿದ ಹೇಳಿಕೆಯನ್ನು ಸಭೆಯು ಖಂಡಿಸಿತು. ಶ್ರೀಗಳಾದ ಕೆ. ಬಿ. ಜಿನರಾಜ ಹೆಗ್ಡೆ, ಕೆ. ಕೃಷ್ಣ ರಾವ್, ಬಿ ಶಂಕರ ಭಟ್ ಮತ್ತು ಪ್ರಭಾಕರ ಘಾಟಿಯವರು ಮಾತನಾಡಿದರು ಶ್ರೀ ರಾಮ. ಭಟ್ಟರು ಧನ್ಯವಾದಗಳನ್ನರ್ಪಿಸಿದರು.

ಕರ್ನಾಟಕ ಪ್ರಾಂತ ರಚನೆಯ ವಿಷಯದಲ್ಲಿ— ಮೈಸೂರು ಮುಂದಾಗಬೇಕೆಂದು ಒಂದು ನಿಯೋಗವು ಮೈಸೂರಿನ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರನ್ನು ಬೆಂಗಳೂರಲ್ಲಿ ಭೇಟಿಯಾಗಿ ಕೇಳಿಕೊಂಡಿತು. ದ. ಕ. ಜಿಲ್ಲೆಯ ಗುರುಪುರದಲ್ಲಿ ಕಳೆದ ವರ್ಷ ನಡೆದ ಕರ್ನಾಟಕ ಏಕೀಕರಣ ಸಮ್ಮೇಳನದಲ್ಲಿ ರಚಿಸಲ್ಪಟ್ಟ ಈ ನಿಯೋಗ ಮಂಡಲದಲ್ಲಿ ಶ್ರೀಗಳಾದ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಕೆ. ಎಮ್. ನೆಲವಿಗಿ, ಎಸ್. ಕೆ. ಹೊಸಮನಿ, ಕೆ. ಆರ್. ಕಾರಂತ ಮತ್ತು ಎಮ್. ಎನ್. ಬ್ಯಾಡಗಿಯವರಿದ್ದರು. ಈ ಪ್ರಶ್ನೆಯನ್ನು ಆದಷ್ಟು ಬೇಗನೆ ಮೈಸೂರು ನ್ಯಾಯವಿಧಾಯಕ ಸಭೆಯು ಕಾಂಗ್ರೆಸ್ ಪಕ್ಷ ಮತ್ತು ಪ್ರದೇಶ ಕಾಂಗ್ರೆಸ್ ಸಮಿತಿಯು ...ವಿಚಾರಿಸುವುದೆಂದು ಶ್ರೀ ಹನುಮಂತಯ್ಯನವರು ತಿಳಿಸಿದರೆಂದು ವರದಿಯಾಗಿದೆ.

ವಿವಾಹ ಸಮಾರಂಭ

ಡಾ। ಶ್ರೀ ಮೂಲ್ಕಿ ರಾಮಕೃಷ್ಣ ಪೂಂಜರ ಪುತ್ರ ಶ್ರೀ ಹರೀಶ ಪೂಂಜರು ಶ್ರೀ ಕುಂದಣ್ಣ ಕೋಟೆಪೈಗಳ ಪುತ್ರಿ ಶ್ರೀಮತಿ ಪದ್ಮಾವತಿಯವರನ್ನು ತಾ 1 5-53 ರ ಮಂಗಳೂರಿನ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ವಿಜೃಂಭಣೆಯಿಂದ ವಿವಾಹವಾದರು.

ಶ್ರೀ ಕೊಡ್ಯಾಲ್ ತಿಮ್ಮಪ್ಪ ಆಳ್ವರ ಪುತ್ರಿ ಕುಮಾರಿ ವಿಟ್ಟಮ್ಮಳನ್ನು ದಿ॥ ಇಜ್ಜಂಗೋಡಿ ರಾಮಯ್ಯ ಆಳ್ವ ಪುತ್ರ ಶ್ರೀ ವಿಶ್ವನಾಥ ಆಳ್ವರು ತಾ 6 5-53ರಲ್ಲಿ ಮಂಗಳೂರು ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ವಿಜೃಂಭಣೆಯಿಂದ ವಿವಾಹ ಮಾಡಿಕೊಂಡರು.

ಶ್ರೀ ಪಾವ್ಲುಲ್ ಫ್ರೆಡರಿಕ್ಸರ ಪುತ್ರ ಸುಂದರ ಫ್ರೆಡರಿಕ್ಸ್‌ರು ಕುಮಾರಿ ಮೇರಿಯ ಜತಕನ್ನರನ್ನು ತಾ 28-4-53 ಲ್ಲಿ ಉಡುಪಿಯಲ್ಲಿ ಪಾಣಿಗ್ರಹಣ ಮಾಡಿಕೊಂಡರು

ವಿವಿಧ ಪಾತ್ರೆಗಳು

ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂಲಗಿಯೂ, ಚಿಲ್ಲರೆಯಾಯೂ ಸಿಗುತ್ತವೆ.

ಕಲ್ಯಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

...ಮುತ್ರಸ್ರಾವ ನಿಂತಿತು

...ಕುಮಾರ್ ಗುಳ್ಳಿಗಳನು ಉಪಯೋ... ...ದರೆ ಪದಕಪ್ಪು ಮುತುಸ್ರಾವವಾಗಿ... ...ಹೊರಗೆ ಬರುವುದು. ಈ ಔಷಧವನೆಯಿಂದ ತೀವ್ರ ಗುಣಹೊಂದಬ...ದು. ಯಾವ ಬಾಧಕವೂ ಇಲ್ಲ. ಸಾತಿ... ...ರು ಮುಂದಿನ ಖಾತ್ರಿ ಗುಣವಾಗಿದೆ- ...ರೂ. 3-ಃ ಸ್ಪೆಶ್ಯಲ್ ರೂ. 5- ...ಕಾರಿಕ ಸ್ಪೆಶ್ಯಲ್ ರೂ. 8-] ಪಿ ಹ... ...ರಿಚಾರ್ ಪ್ರತ್ಯೇಕ]

...D. DEVEE, F. DS. (N. J.)
Tollygunge CALCUTTA
...ರು: ಕಮಾಳಂಪೆನಿ, ಮಂಗಳೂರು

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೋಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೋಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮದ್ರಾಸು, ಬೆಂಗಳೂರು. ತ್ರಿವೆಂಡ್ರಮ್, ಕಲ್ಲಿಕೋಟೆ, ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು.

The Bombay Life Assurance Co., Ltd., Bombay

ಚಂದಾಹಣ ಬಾಕಿ ಇರುವವರು ನಾವು ಕಳುಹಿಸುವ ವಿ. ಪಿ. ಪಿ.ಯನ್ನು ದಯೆಮಾಡಿ ಸಕಾಲದಲ್ಲಿ ಪಡೆಕೊಳ್ಳುವಂತೆ ವಿನಂತಿ

[೩ನೇ ಪುಟದಿಂದ]

ಹೊಂದಿತು. ಆದರೆ ಆ ಬಳಿಕ ನಿರ್ಯಾತ ಪ್ರಮಾಣವು ಕಡಿಮೆ ಹೊಂದಿದರೂ ೧೯೫೨ನೇ ವರ್ಷದಲ್ಲಿ ೨೦ಕೋಟಿ ರೂಪಾಯಿಗೂ ಹೆಚ್ಚು ಹಣ ಸಂಪಾದನೆಯು ಮೆಣಸಿನ ಕಾಳಿನ ದೆಸೆಯಿಂದ ಆಗಿರುತ್ತದೆ. ಅರ್ಥಾತ್ ೧೯೪೭-೪೮ನೇ ವರ್ಷ ಮೆಣಸಿನ ಕಾಳಿಗೆ ಇದ್ದ ಬೆಲೆಯು ಐದರಷ್ಟು ಕಳೆದ ವರ್ಷ ದೊರೆಯಿತು. ಅಮೇರಿಕವು ಭಾರತದ ಮುಖ್ಯ ಗಿರಾಕಿಯಾಗಿದೆ ಆ ಬಳಿಕ ಬ್ರಿಟನ್, ಕೆನಡಾ, ಇಟಲಿ ಮತ್ತು ಪಶ್ಚಿಮ ಜರ್ಮನಿಗಳ ಸ್ಥಾನವಿದೆ. ಯುದ್ಧಪೂರ್ವದಲ್ಲಿ ಇಟಲಿಯು ಭಾರತದಿಂದ ನಿರ್ಯಾತ ಹೊಂದುವ ಮೆಣಸಿನ ಕಾಳಿನಲ್ಲಿ ೪೫% ತಾನು ತರಿಸಿಕೊಳ್ಳುತ್ತಿದ್ದಿತು, ಅಮೇರಿಕಾ ೧೯% ಜರ್ಮನಿ ೬% ತರಿಸುತ್ತಿದ್ದವು, ಬ್ರಿಟನ್, ಸಿಲೋನು, ಕೆನಡಾಗಳು ೨೫% ತರಿಸುತ್ತಿದ್ದವು. ಯುದ್ಧದ ದೆಸೆಯಿಂದ ದೂರ ಪಶ್ಚಿಮಕ್ಕೆ ನಿರ್ಯಾತ ತಗ್ಗಿತು. ಬದಲು ಮಧ್ಯಪೂರ್ವದ ಅರೇಬಿಯಾ, ಇರಾನ್, ಇರಾಕು, ಈಜಿಪ್ಟ ಏಡನ್, ಬಾಹ್ರೈನ್ ದ್ವೀಪಗಳು ಇವಕ್ಕೆ ನಿರ್ಯಾತ ಹೆಚ್ಚಿತು ಈಗ ಯುರೋಪಿಗೆ ರಫ್ತು ಹೆಚ್ಚಿದ್ದರೂ ಇಟಲಿ ಮತ್ತು ಜರ್ಮನಿಗಳು ಭಾರತದಿಂದ ಮೆಣಸಿನ ಕಾಳು ತರಿಸುವುದನ್ನು ಕಡಿಮೆ ಮಾಡಿವೆ.

— ೫ —

ಈಚೆಗೆ ಪೇಟೆಯಲ್ಲಿ ಸ್ಥಿತ್ಯಂತರಗಳು ಕಾಣುಬರುತ್ತಿವೆ- ಅಮೇರಿಕಾವು ತರಿಸುವ ಮೆಣಸಿನ ಕಾಳಿನ ಪ್ರಮಾಣ ಮತ್ತು ಬೆಲೆ ಎರಡೂ ತಗ್ಗುತ್ತಾ ನಡೆದಿವೆ. ಬೆಲೆಗಳು ತಗ್ಗಿದ ಕಾರಣದಿಂದ ಮೆಣಸಿನ ಕಾಳಿನ ಉಪಯೋಗ ಹೆಚ್ಚುವುದು ಖಂಡಿತ ಅಧಿಕ ಉಪಯೋಗಕ್ಕೆ ಸಿಗುವಂತೆ ಉತ್ಪಾದನೆಯನ್ನು ಭರದಿಂದ ವೃದ್ಧಿಗೊಳಿಸುವುದು ಅವಶ್ಯ. ಪ್ರಕೃತ ಸ್ಥಿತಿಯಲ್ಲಿ ಇಂಡೋನೇಶಿಯಾ ಜಾಗತಿಕ ಪೇಟೆಯಲ್ಲಿ ಸ್ಪರ್ಧೆ ಕೊಡುತ್ತಿದೆ ಎನ್ನಬಹುದು ಭಾರತವು ತನ್ನ ನಿರ್ಯಾತವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನ ಮಾಡದಿದ್ದರೆ ಈ ಸ್ಪರ್ಧೆಯಲ್ಲಿ ಸೋತರೂ ಆಶ್ಚರ್ಯವಿಲ್ಲ. ಆದರೆ ನಮ್ಮ ವಿಶಾಲವಾದ ದೇಶ;ಮತ್ತು ಸಂಬಾರ ಜೀನಸುಗಳನ್ನು ಉಪಯೋಗಿಸುವ ಮಹಾಜನರಲ್ಲಿ ನಮಗೆ ಸರಿಗಟ್ಟುವವರು ಯಾರೂ ಇಲ್ಲ. ಕರಿಮೆಣಸನ್ನು ಉಪಯೋಗಿಸುವವರಲ್ಲಿ ನಾವು ಎರಡನೇ ಸ್ಥಾನಪಡೆಯುತ್ತೇವೆ. ಹೀಗಿರುವುದರಿಂದ ಆಂತರಿಕ ಬೇಡಿಕೆಯನ್ನು ಪೂರೈಸುವಷ್ಟಕ್ಕೆ ನಮ್ಮ ಉತ್ಪಾದನೆ ಮುಗಿದು ಹೋಗುತ್ತದೆ. ಇದಕೆ ಇದು ಸಮಾಧಾನಕರವೆಂದು ತೋರುವುದಿಲ್ಲ. ಬೇರೆ ದೇಶಗಳು ಮೆಣಸಿನ ಕಾಳಿನ ನಿರ್ಯಾತ ವ್ಯಾಪಾರದಿಂದ ಹೇರಳ ಹಣ ಸಂಪಾದಿಸುತ್ತಿರುವಾಗ, ನಾವೇಕೆ ನಮಗೆ ಅಗತ್ಯವಿರುವ ಡಾಲರು ಸಂಪಾದನೆಗೆ ಮುಂದಾಗ ಬಾರದು? ವಿದೇಶ ವ್ಯಾಪಾರದಲ್ಲಿ ಸಮತೂಕವನ್ನು ಸ್ಥಾಪಿಸಿಕೊಳ್ಳುವುದಲ್ಲದೆ, ಸಾಕಷ್ಟು ಲಾಭದಾಯಕ ವ್ಯವಹಾರವನ್ನು ಮಾಡುವುದರಲ್ಲಿ ಜಾಣ್ಮೆಯಿದೆ. ಆದುದರಿಂದ ನಮ್ಮ ಜನರು ಮೆಣಸಿನ ಕಾಳನ್ನು ಶಾಸ್ತ್ರೀಯ ರೀತ್ಯಾ ಬೆಳೆಯುವುದಕ್ಕೆ ಹೆಚ್ಚು ಮನಸ್ಸು ಕೊಡಬೇಕು. ರೊಕ್ಕದ ಬೆಳೆಯು ಅಗತ್ಯವಿರುವುದನ್ನು ಉಪೇಕ್ಷೆಯಿಂದ ನೋಡಬಾರದು.

ಸ್ವೀಕಾರ—ವಿಮರ್ಶೆ

ಪ್ರಭಾತ ವಾರ್ಷಿಕಾಂಕ, ೧೯೫೩—

ಮಂಗಳೂರಿನ—ರಥಬೀದಿಯಿಂದ ಶ್ರೀ ಕುಡ್ಪಿ ವಾಸುದೇವ ಶೆಣೈರ ಸಂಪಾದಕತ್ವದಲ್ಲಿ ಹೊರಡುತ್ತಿರುವ ಪ್ರಭಾತ ವಾರ ಪತ್ರಿಕೆಯು ಈ ಸಲದ ವಿಶೇಷಾಂಕವೂ ಎಂದಿನಂತೆ ಜನ ಮನರಂಜಕ ವಾಗುವ ರೀತಿಯಲ್ಲಿ ಹೊರಬಂದಿದೆ, ಗೋವಿಂದ ಪೈ, ಪಾಂಡೇಶ್ವರ ಗಣಪತಿ ರಾವ್ ಇವರುಗಳ ಕವನಗಳು, ದೇವುಡು ನರಸಿಂಹ ಶಾಸ್ತ್ರಿ, ದಾಮೋದರ ಬಾಳಿಗ, ಬಿ. ವಿ. ಬಾಳಿಗ, ಕೆ ವಿ. ದೇವದಾಸ ಮುಂತಾದವರ ಕಥಾರೂಪದ ಬರಹಗಳು ಮನಸ್ಸಿಗೆ ಆಹ್ಲಾದವನ್ನುಂಟು ಮಾಡುತ್ತವೆ. ಸ್ವಾಮಿ ಪ್ರಣವೇಶಾನಂದ, ಆರ್. ಎಲ್. ನರಸಿಂಹಯ್ಯ, ಡಾ, ವಿ, ಆರ್. ಭಟ್, ಎಸ್. ಬಿ ಪುಟ್ಟಣ್ಣ, ಬೈಕಾಡಿ ವೆಂಕಟ ಕೃಷ್ಣ ರಾವ್ ಮುಂತಾದವರು ಪಾರಮಾರ್ಥಿಕ, ವೈಜ್ಞಾನಿಕ, ಸಾಮಾಜಿಕ ಹಾಗೂ ರಾಜಕೀಯ, ವಿಷಯಗಳ ಕುರಿತು ಬರೆದಿರುವರು, ಸಾಹಿತ್ಯ ಮತ್ತು ಸಂಸ್ಕೃತಿಯ ಕುರಿತು ಉಡುಪಿ ವೆಂಕಟ ಕೃಷ್ಣ ರಾಯ, ಎಂ. ವಿ. ಸೀತಾರಾಮಯ್ಯ, ನಿರಂಜನ, ಶ್ರೀಮತಿ ಎಸ್. ರತ್ನಮ್ಮ ಇವರುಗಳೇ ಮುಂತಾದವರ ಬರಹಗಳಿವೆ ನಾಲ್ಕುವರ್ಣ ವಾರ್ಷಿಕಾಂಕವು ಸಚಿತ್ರವಾಗಿದೆ ಮತ್ತು ವರ್ಣಭವಿಷ್ಯದಿಂದ ಕೂಡಿದೆ, ಸುಮಾರು ೨೦೦ ಪುಟಗಳ ಈ ವಾರ್ಷಿಕಾಂಕದ ಬೆಲೆ ಒಂದೂವರೆ ರುಪಾಯಿ.

ನವೋದಯ—

ಸುರತ್ಕಲ್ಲಿನ ವಿದ್ಯಾದಾಯಿನೀ ಹೈಸ್ಕೂಲಿನ ವಿದ್ಯಾರ್ಥಿ ಸಂಸ್ಥೆಯ ಪತ್ರಿಕೆಯಾದ ನವೋದಯದ ನಾಲ್ಕನೆಯ ವಾರ್ಷಿಕಾಂಕ (೧೯೫೩)ದಲ್ಲಿ ನಾವು ವಿದ್ಯಾರ್ಥಿಗಳಿಂದ ಸಾಮಾನ್ಯವಾಗಿ ನಿರೀಕ್ಷಿಸಬಹುದಾದುದಕ್ಕಿಂತಲೂ ವಿಶೇಷ ಮಟ್ಟದ ಲೇಖನಗಳಿವೆ. ಶಾಲಾ ವಿದ್ಯಾರ್ಥಿಗಳು ಜ್ಞಾನಾರ್ಜನೆಯ ಉದ್ದೇಶದಿಂದ ಕೈಗೊಂಡ ಪ್ರವಾಸಗಳ ಕುರಿತು ಬರೆದವುಗಳು ಕೆಲವಾದರೆ, ಭಾಷಾನುಗುಣ ಪ್ರಾಂತ ರಚನೆ, ಪಂಚವಾರ್ಷಿಕ ಯೋಜನೆ, ಸಂಯುಕ್ತ ರಾಷ್ಟ್ರ ಸಂಘ, ಭಿಕ್ಷುಕರ ಸಮಸ್ಯೆ ಮುಂತಾದವುಗಳ ಮೇಲೂ ವಿದ್ಯಾರ್ಥಿಗಳು ಕೆಲವು ಲೇಖ ಬರೆದಿರುವರು. ಕನ್ನಡವಲ್ಲದೆ ಇಂಗ್ಲೀಷು ಮತ್ತು ಹಿಂದೀ ಭಾಷೆಯಲ್ಲಿ ಸಹ ಎರಡು ಮೂರು ಬರಹಗಳಿವೆ. ಶಾಲಾ ಚಟುವಟಿಕೆಗೆ ಸಂಬಂಧಿಸಿದ ಫೊಟೋ ಮುಂತಾದವುಗಳಿಂದ ಕೂಡಿದ ಈ ಸಂಚಿಕೆ ವಿದ್ಯಾರ್ಥಿಗಳು ಸಾಹಿತ್ಯ ಕ್ಷೇತ್ರದಲ್ಲಿ ಕೈಗೊಂಡ ದುಡಿಮೆಯ ಆಳತೆಗೋಲು

[೧೧ನೇ ಪುಟಕ್ಕೆ ಮುಂದರಿದಿದೆ.]

ದ. ಕ. ಜಿಲ್ಲಾ ಬೋರ್ಡಿನ ಆಡಳಿತ ವರದಿ ವಿಮರ್ಶೆ

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ 1951-52 ನೇ ವರುಷದ ಆಡಳಿತ ವರದಿಯನ್ನು ಮದ್ರಾಸು ಸರಕಾರವು ವಿಮರ್ಶಿಸಿ ಆಡಳಿತವು ಒಳ್ಳೆಯದಿದೆ ಎಂದು ಸೂಚಿಸಿರುವುದು, ವಿಮರ್ಶೆಯಲ್ಲಿ ಹೇಳಲಾದ ಇತರ ಪ್ರಾಮುಖ್ಯ ವಿಷಯಗಳು ಈ ಕೆಳಗೆ ಕೊಡಲಾಗಿದೆ

ಸಾರಿಗೆ ಸಂಪರ್ಕ— ಜಿಲ್ಲಾ ಬೋರ್ಡಿನ ಆಧಿಕಾರದಲ್ಲಿ 773½ ಮೈಲು ರಸ್ತೆಗಳಿದ್ದು ಅವುಗಳ ಪೋಷಣೆಗಾಗಿ ರೂ 2,38579 ಖರ್ಚು ಮಾಡಲಾಗಿತ್ತು. ಗತ ವರುಷದಲ್ಲಿ ಇವುಗಳ ವೆಚ್ಚವು ರೂ 2,41,874 ಆಗಿತ್ತು. ಜಿಲ್ಲಾ ಕಲೆಕ್ಟರರ ಸೂಚನೆಯಂತೆ ಇದ್ದ ರಸ್ತೆಗಳನ್ನು ಯೋಗ್ಯರೀತಿಯಲ್ಲಿಡಲಿಕ್ಕೂ ಗ್ರಾಮಾಂತರಗಳಲ್ಲಿ ವಿಶೇಷತಃ ಮಲನಾಡ ಕ್ಷೇತ್ರದಲ್ಲಿ ಹೊಸರಸ್ತೆಗಳನ್ನು ಮಾಡಲಿಕ್ಕೂ ನಿರ್ದಿಷ್ಟ ಕಾರ್ಯ ಕ್ರಮವನ್ನು ತಯಾರಿಸಬೇಕಾಗಿದೆ.

ಸ್ಥಳಾಕ್ರಮಣ- ಸ್ಥಳಾಕ್ರಮಣದ ತಕ್ಷೆರಗಳನ್ನು ಪತ್ತೆ ಹಚ್ಚುವ ಕಾರ್ಯವು ತೀವ್ರಗತಿಯಿಂದ ನಡೆಯಬೇಕು.

ವಿದ್ಯಾಭ್ಯಾಸ- 81 ಗ್ರಾಮಗಳಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕೊಡಲಾಗಿತ್ತು. ವರದಿ ವರುಷದಲ್ಲಿ ಜಿಲ್ಲಾ ಬೋರ್ಡಿನ ಕೈಕೆಳಗೆ 563 ಪ್ರಾಥಮಿಕ ಶಾಲೆಗಳಿದ್ದುವು. ಜಿಲ್ಲೆಯಲ್ಲಿ 45688 ಹುಡುಗರೂ 47670 ಹುಡುಗಿಯರೂ ಶಾಲಾವಯಸ್ಕರಿದ್ದು ವಿದ್ಯಾಭ್ಯಾಸ ಪಡೆಯಲಿಲ್ಲ. ಈ ಪೈಕಿ ಆದಷ್ಟು ಹೆಚ್ಚು ಮಂದಿ ಶಾಲೆಗಳಿಗೆ ಹೋಗಿ ವಿದ್ಯೆ ಪಡೆಯುವಂತೆ ಬೋರ್ಡಿನ ಅಧಿಕಾರಿಗಳು ನಿಗಾ ಕೊಡಬೇಕು. ಶಾಲೆಗಳಲ್ಲಿಯು ಮಕ್ಕಳ ಸಂಖ್ಯೆ ಏರಿದರೂ, ಮಕ್ಕಳ ಸರಾಸರಿ ದಿನವಹಿ ಹಾಜರಿ ಇಳಿ ಮುಖವಾಗಿತ್ತು.

ಸೆಕೆಂಡರಿ ವಿದ್ಯಾಭ್ಯಾಸ— ಬೋರ್ಡಿನ ತಬೆಯಲ್ಲಿ ಎಂಟು ಪೂರ್ಣ ಹ್ಯಾಸ್ಕೂಲು ಕೂ ಐದು ಅಪೂರ್ಣ ಹ್ಯಾಸ್ಕೂಲುಗಳೂ ಇದ್ದ ವರದಿ ವರುಷದಲ್ಲಿ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಬೋರ್ಡ್ ಹ್ಯಾಸ್ಕೂಲುಗಳಿಂದ ಪರೀಕ್ಷೆಗೆ ಕುಳಿತ 558 ವಿದ್ಯಾರ್ಥಿಗಳಲ್ಲಿ 334 ಮಂದಿ ಪಾಸಾಗಿರುವರು.

ಸಾರ್ವಜನಿಕ ಆರೋಗ್ಯ— ಜಿಲ್ಲಾ ಬೋರ್ಡ್ 41 ವೈದ್ಯಕೀಯ ಆಲಯಗಳನ್ನು ನಡೆಸುತ್ತಿದ್ದ, ಅವೆಲ್ಲವೂ ಜನಾದರಣೀಯವಾಗಿವೆ. ಸೂಲಗಿತ್ತಿಯವರ ಸಹಾಯ ಸಕಾಲದಲ್ಲಿ ಜನತೆಗೆ ದೊರೆಯಬೇಕಾಗಿ

ಉತ್ಪತ್ತಿದಾಯಕ ಕಾರ್ಯ— ಮೊಕ್ಕಟುಗಳ ಉತ್ಪತ್ತಿಯು ಕಡಿಮೆಯಾಗಿತ್ತು ಇದರ ಕಾರಣವನ್ನು ಕಂಡು ಹಿಡಿಯಬೇಕಾಗಿದೆ. ವನಮಹೋತ್ಸವ ಕಾಲದಲ್ಲಿ 5354 ಮರಗಳು ನೆಡಲ್ಪಟ್ಟಿವೆ. ಪೂರ್ವ ಕರಾವಳಿ ಜಿಲ್ಲೆಗಳಂತೆ ಈ ಜಿಲ್ಲೆಯಲ್ಲೂ ಪುಷ್ಕಳ ವರಂಗಳಿರುವುದರಿಂದ ವರ್ಷಂಪ್ರತಿ ಸಸಿ ಮರಗಳನ್ನು ನೆಡುವ ಪದ್ಧತಿ ಆವಶ್ಯಕವೆನಿಸಿಕೊಳ್ಳುವುದಿಲ್ಲವೆನ್ನಲಾಗಿದೆ. ಆದರೂ ರಾಜ್ಯದ ಹಿತದೃಷ್ಟಿಯಿಂದ ಜಿಲ್ಲಾ ಬೋರ್ಡ್ ಗಣನೀಯ ಉತ್ಸಾಹದಿಂದ ಸಸಿ ನೆಡುವ ಉತ್ಸವವನು ಆಚರಿಸಬೇಕಾಗಿದೆ.

ಕನ್ನಡ ಗ್ರಂಥಗಳಿಗೆ ಉತ್ತಮವೆಂದು ನಿರ್ಣಯಿಸಲ್ಪಟ್ಟ ಪ್ರತಿ ಗ್ರಂಥಕ್ಕೆ ರೂ. ೫೦೦ ರ ಬಹುಮಾನ.

ಮದ್ರಾಸು ಸರಕಾರವು ಕನ್ನಡದಲ್ಲಿ ಉತ್ತಮ ಗ್ರಂಥಗಳಿಗೆ 1953ರಲ್ಲಿ ಕೊಡುವ ಬಹುಮಾನದ ಬಗ್ಗೆ ಗ್ರಂಥಗಳನ್ನು ಕಳುಹಿಸುವವರು 31-7-53ರ ಒಳಗೆ ಅವುಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ. ಪುಸ್ತಕಗಳು 1943ರಲ್ಲಿ ಅಥವಾ ಆ ಮೇಲೆ ಪ್ರಕಟವಾದುವುಗಳಾಗಬೇಕು. ಕೈಬರಹದ ಪ್ರತಿಗಳನ್ನೂ ಕಳುಹಿಸಬಹುದು.

ವಿಷಯಗಳು:- (1) ಯಕ್ಷಗಾನ. (2) ಪದ್ಯ. (3) ವಿಮರ್ಶೆ.

ನಿಯಮಗಳು:- (1) ಮದ್ರಾಸು ಸಂಸ್ಥಾನದಲ್ಲಿರುವ ಗ್ರಂಥಕರ್ತರು ಮಾತ್ರ ಪುಸ್ತಕಗಳನ್ನು ಕಳುಹಿಸತಕ್ಕದ್ದು. (2) ಅಚ್ಚಾದ ಪುಸ್ತಕಗಳಾದರೆ ನಾಲ್ಕು ಪ್ರತಿಗಳನ್ನೂ ಕಳುಹಿಸಬೇಕು. ಕೈಬರಹದ ಪುಸ್ತಕವಾದರೆ ಒಂದೇ ಪ್ರತಿ ಕಳುಹಿಸಿದರೆ ಸಾಕು. ಆದರೆ ಸ್ಪರ್ಧೆಗಾಗಿ ಕಳುಹಿಸಿದ ಪುಸ್ತಕಗಳನ್ನು ಹಿಂದೆ ಕಳುಹಿಸಲಾಗುವುದಿಲ್ಲ. ಪುಸ್ತಕಗಳನ್ನು ಕಳುಹಿಸಬೇಕಾದ ವಿಳಾಸ-

ಕಾರ್ಯದರ್ಶಿ ಕರ್ನಾಟಕ ಸಂಘ
16 ವೀರಸ್ವಾಮಿ ಪಿಳ್ಳೆ ಬೀದಿ,
ಎಗ್ಮೋರ್, ಮದ್ರಾಸು ೮.

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ರಕ್ಷಣೆಗೂ ಉಳಿತಾಯ ವ್ಯವಸ್ಥೆಗೂ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್.

ಸ್ಥಾಪನೆ: 1934. ಪ್ರಧಾನ ಕಚೇರಿ: ಮದ್ರಾಸು.

66½ ಲಕ್ಷಕ್ಕೂ ಮಿಕ್ಕಿದ ಹೊಸ ವ್ಯವಹಾರ, **15** ಲಕ್ಷಕ್ಕೂ ಮಿಕ್ಕಿದ ಪ್ರೀಮಿಯಮ್ ಉತ್ಪತ್ತಿ, **45**¾ ಲಕ್ಷಕ್ಕೂ ಮಿಕ್ಕಿದ ಜೀವವಿಮಾ ನಿಧಿ. **10**¾ ಲಕ್ಷಕ್ಕೂ ಮಿಕ್ಕಿದ ಮೂಲಧನಗಳು. ಸಾಧಾರಣ **3** ಕೋಟಿಯಷ್ಟು ಊರ್ಜಿತದಲ್ಲಿರುವ ವಹಿವಾಟು,

ಪ್ರಗತಿಪರವಾದ ಈ ಕಂಪೆನಿಯಲ್ಲಿ ಒಂದು ಪೋಲಿಸಿ ಇರುವುದು ಉತ್ತಮ ಠೇವಣಾತಿ. ಅಂತೆಯೇ ಇದರ ಏಜನ್ಸಿ ಇರುವುದು ಚಲೋ ವ್ಯವಹಾರ ಸಾಧನ.

ಉತ್ಸಾಹಿ, ಜನಾದರಣೀಯ, ಸಮರ್ಥ ಸ್ತ್ರೀ ಪುರುಷರಿಂದ ಕಂಪೆನಿ ಪ್ರಾತಿನಿಧ್ಯದ ಬಗ್ಗೆ ಅರ್ಜಿಗಳು ಸ್ವಾಗತಾರ್ಹವು. ದಯಮಾಡಿ ಬರೆಯಿರಿ:-

ಜಿ. ಆರ್ ನಾಲ್ಕ, ಬ್ರಾಂಚ್ ಮೆನೇಜರ್,
ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು [ದ. ಕ.]

ದಿ ವಿಜಯ ಬೇಂಕ್, ಲಿಮಿಟೆಡ್

ಸ್ಥಾಪನೆ: 1931.] ಪ್ರಧಾನ ಕಛೇರಿ: ಮಂಗಳೂರು.

ಮೂಲಧನ	. .	ರೂ. 20,00,000
ತೆತ್ತ ಪಾಲು ಭಂಡವಾಳ	. .	,, 8,77,860
ಕ್ಷೇಮ ನಿಧಿ	. .	,, 1,18,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವ್ಯಾದೆ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4½% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ,
ಬಿ. ಎ. ಬಿ. ಯಲ್. ವಕೀಲ್,
ಬೇಂಕಿನ ಆಡಳಿತ ಕಮಿಟಿ ಅಧ್ಯಕ್ಷರು.

THE VIJAYA BANK, Limited.

ಕೇರಳದ ಜಲಮಾರ್ಗಗಳು

(೨ನೇ ಪುಟದಿಂದ)

...ತ್ರ ಕ್ವಿಲೋನುಗಳನ್ನು ಜೋಡಿ...ದ ಮೀಟರ್ ಗಾಜ್ ರೈಲ್ವೆ ಮಾರ್ಗದ ...ನೆ. ಕೆಲಸವು ಈಗಾಗಲೇ ಆರಂಭ...ಡಿರುತ್ತದೆ. ಪ್ರಧಾನಿ ನೆಹರೂರವರು ...ದ ವರ್ಷ ಈ ರೈಲುಮಾರ್ಗ ರಚನೆ ...ಕಾರ್ಯವನ್ನು ಉದ್ಘಾಟಿಸಿದರು. ...ರ ಸುಮಾರಿಗೆ ಈ ಮಾರ್ಗ ಪೂ...ಗೊಂಡಾಗ ಬಹುಶಃ ಪ್ರಯಾಣಿ...ಲ್ಲಿ ಹೆಚ್ಚಿನವರನ್ನು ರೈಲು ತುಂಬಿ...ಕೊಳ್ಳುತ್ತದೆ. ಆದರೆ ಸಾಮಾನು ಸಾಗಾಟ...ಷ್ಟಿಗೆ ಈ ಮಾತನ್ನು ಹೇಳಲಾರೆವು. ...ಮಾನು ಕ್ರಮದಲ್ಲಿ ಪ್ರಯಾಣಿಕರನ್ನು ...ಮಾರ್ಗಗಳಿಗೇ ಬಿಟ್ಟುಕೊಟ್ಟು, ರೈ...ಸರಕುಗಳನ್ನು ತುಂಬಿಕೊಂಡು ಸಾಗ...ಬಹುದೋ ಏನೋ. ಜಲ ಮಾರ್ಗ, ...ಮೋಟಾರು ಮಾರ್ಗ ಮತ್ತು ರೈಲ್ವೆಗಳು ...ಸ್ಪರ ಸ್ಪರ್ಧೆಗೆ ಇಳಿದರೆ, ಜನ ಸಾಮಾ...ನ್ಯರಿಗೆ ಲಾಭವಾಗದಿರದು. ಆದರೆ ಈ ಸ್ಪ...ರ್ಧೆಯಲ್ಲಿ ಜಲಮಾರ್ಗಗಳು ಬದುಕಿ ಉಳಿ...ಯಬೇಕೆಂದ ಪ್ರಮಾಣಿಕವಾಗಿ ಬಯಸು...ವವರು ಹೆಚ್ಚೆಂದು ಹೇಳಬಹುದು. ಏಕೆಂ...ದರೆ ಜಲಪ್ರಯಾಣ ತುಂಬ ಸುಖಕರವಾ...ಗುತ್ತದೆ. ಕಾಲುವೆಗಳನ್ನು ಇನ್ನೂ ಆ...ಳಗೊಳಿಸಿದರೆ, ಸರಕು ಸಾಗಾಟ ಹಾಗು ...ಪ್ರಯಾಣಿಕರ ಸಂಚಾರಕ್ಕೆ ಹೆಚ್ಚು ಅನು...ಕೂಲತೆ ಒದಗಿಸಿದರೆ, ವೇಗವಾಗಿ ಚಲಿಸ...ಬಲ್ಲ ಯಂತ್ರದಿಂದ ಸುಸಜ್ಜಿತವಾದ ದೋ...ಣಿಗಳನ್ನು ಉಪಯೋಗಿಸಿದರೆ, ರೈಲ್ವೆ ...ಮತ್ತು ಮೋಟಾರು ಗಾಡಿಯೊಡನೆ ...ಶಕ್ತಿ ಸ್ಪರ್ಧೆಯನ್ನ ಈ ಜಲ ಮಾರ್ಗ...ವು ಕೊಡಬಲ್ಲುವು.

— ೬ —

ಆದುದರಿಂದ ರಾಜ್ಯದ ಅಭಿವೃದ್ಧಿ...ಯನ್ನು ಕಣ್ಣಾಮುಂದಿಟ್ಟುಕೊಳ್ಳುವಾಗ ...ಜಲಮಾರ್ಗಗಳನ್ನು ಅವಶ್ಯ ಗಮನಿಸತ...ಕ್ಕದ್ದು. ದೊಡ್ಡ ದೊಡ್ಡ ಬಂದರುಗಳು ಇರುವಲ್ಲಿ ಹಿನ್ನಾಡಿನಿಂದ ಸರಕು ತರಲು ಯೋಗ್ಯ ಜಲಮಾರ್ಗಗಳಿದ್ದರೆ, ಅಲ್ಲಿ ಹೊಸತಾಗಿ ರೈಲು ದಾರಿಯನ್ನು ನಿರ್ಮಿಸುವ ಅಗತ್ಯ ಇರುವುದಿಲ್ಲ. ಕಾಲುವೆಗಳನ್ನು ವರ್ಷ ವರ್ಷವೂ ಮೇಲ್ವಿಚಾರಣೆಗೆ ಗುರಿಮಾಡಿದರೆ ಸಾಕು:–ಕಾಲುವೆಗಳನ್ನು ತೋಡುವ ಕಷ್ಟ ಮತ್ತು ಖರ್ಚು ಇರುವುದಿಲ್ಲ. ಕೇರಳದಲ್ಲಿ ಜನರು ಜಲಮಾರ್ಗದ ಉಪಯೋಗವನ್ನು ಮಾಡಿಕೊಂಡ ರೀತಿಯನ್ನೆ ಅನುಸರಿಸಿ ನಮ್ಮ ಜಿಲ್ಲೆಯಲ್ಲೂ ನದೀ ಮಾರ್ಗವನ್ನ ನಮ್ಮ ಅನುಕೂಲಕ್ಕೆ ತಕ್ಕಂತೆ ಉಪಯೋಗಿಸಿಕೊಳ್ಳಬಹುದು. ಮುಖ್ಯವಾಗಿ ಕರಾವಳಿಯ ತೀರದಲ್ಲಿ ಒಳನಾಡಿನ ವ್ಯಾಪಾರಕ್ಕೆ ಇದರಿಂದ ಅನುಕೂಲವಿದೆ ಒಂದೆರಡು ವರ್ಷಗಳಿಗೆ ಮುಂಚೆ ಮಹನೀಯರೊಬ್ಬರು ತಮ್ಮದೊಂದು ಲೇಖನದಲ್ಲಿ ಕುಂದಾಪುರದಿಂದ ಉಡುಪಿಗೆ ಜಲಮಾರ್ಗವನ್ನು ರಚಿಸಬಹುದೆಂದು ಮುಂತಾಗಿ ವರ್ಣಿಸಿದುದು ನೆನಪಿಗೆ ಬರುತ್ತದೆ. ನಮ್ಮ ಜಿಲ್ಲೆಯಲ್ಲಿ ಕೇರಳದಂತೆ ಹಿನ್ನೀರುಗಳಿರುವುದಿಲ್ಲ. ಹರಿಯುವ ನದಿಗಳೇ ಸಮುದ್ರಕ್ಕೆ ಸಮಾನಾಂತರವಾಗಿ ಬರುತ್ತವೆ. ನದಿಗಳ ನಡುವಿನ ಅಂತರವು ಕಡಮೆ ಇರುವುದರಿಂದ ನಡು ಭೂಮಿಯಲ್ಲಿ ಅಗತ್ಯವಿದ್ದಷ್ಟು ಕಿರಿದಾದ ಕಾಲುವೆಗಳನ್ನು ತೋಡಿದರೆ ಸಾಕು ಎಂದವರ ಅಭಿಪ್ರಾಯ. ಇದು ವ್ಯವಹಾರ್ಯವೇ ಹೇಗೆಂಬುದನ್ನು ವಿಮರ್ಶಿಸುವ ಉದ್ದೇಶ ವಿಲ್ಲದಿದ್ದರೂ ಅಂಥ ಸೂಚನೆಗಳು ಗಮನಾರ್ಹವಾಗಿವೆ. ಆಗ್ಗ ದರದಲ್ಲಿ ಸಂಚಾರ ಹಾಗು ಸರಕು ಸಾಗಾಟದ ಅನುಕೂಲತೆ ದೊರೆತರೆ ತುಂಬ ಪ್ರಯೋಜನವುಂಟಲ್ಲವೆ.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವ್ಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫–೮–೦ .... ಪೋಸ್ಟ ಖರ್ಚು ರೂ. ೦–೧೪–೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ

ನವಜೀವಾತು

ಎಂಬ

ಸೂತಿಕಾರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿದ ದೇಹ ಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದಮಧುರಪ್ರವರಸಾಯನ.

ಹೆಚ್ಚಿನ ಮಾಹಿತಿಗೆ— ಡಾ। ಯಂ ಸಿ. ಶಾಸ್ತ್ರೀ. ಯಲ್. ಐ. ಎಂ. ಕೊಡಿಯಾಲ್ಬೈಲು ಪೋಸ್ಟು, (ಮಂಗಳೂರು)

ಸ್ಥಾಪಿಸ್ಟರು.— ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಉಡುಪಿಗೆ ಹೋಗಬೇಕೇ! ಆದರೆ ಉಳಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಷನಿಗೆ ಅತಿ ಸಮೀಪ! ಕೃಷ್ಣ ಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ಪ್ರವಾಸಿಗಳಿಗೆಲ್ಲ ಕೇಂದ್ರ!

ನಿಮ್ಮ ...ಸ, ಊಟ, ...ಹಾರ, ... , ...

ಕರೆದರೆ ಓಗೊಡುವ ನೌಕರ ವರ್ಗ!

ಮೇಲಾಗಿ ಉಡುಪಿ ... ... , ... , ...

ಪ್ರೊಪ್ರೈಟರ್— ಕೆ. ವೆಂಕಟ್ರಮಣ ಭಟ್.

ಉಡುಪಿ ಡಿ. ಮು. ಕೋರ್ಟಿನಲ್ಲಿ

S. C. No. 185/1953

...ಂಜ ಸೆಟ್ಟಿ..ಇವರ ಪವರ್ ಆಫ್ ಎಟೋರ್ನಿ ಹೋಲ್ಡರ್— ಹಿರಿಯಣ್ಣ ಸೆಟ್ಟಿ ... ... ವಾದಿ

ಮತ್ತು

...ರ್ಬರ್ಟ್ ಲಸ್ರಾದೊ— ರುಜಾರಿ ...ಸ್ರಾದರ ಮಗ—ಉಡುಪಿ ತಾಲೂಕು ...ಡುತೋನ್ಸೆ ಗ್ರಾಮದಲ್ಲಿರುವವರು ... ಪ್ರತಿವಾದಿ

ಇವರೊಳಗೆ

...ಲ್ಯಂಡ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದರೆ.

...ವಾದಿಗೆ ಪ್ರತಿವಾದಿಯಿಂದ ಬರಾ ಕಳದ ...ಮತ್ತು ಸಂದನ ಸಂವತ್ಸರಗಳ ವರೆಗಿನ ...ಲಗೇಣಿ ಮತ್ತು ಬಡ್ಡಿ ವಗೈರೆ ಬಗ್ಗೆ ...ದಿಯು ಮಾಡಿದ ನೋಲ್ಯಂಡ ದಾವೆ ...—ತಾ—28—5—53ಕ್ಕೆ ನೋಟೀಸು ...ಯಿಟ್ಟಿರುತ್ತದೆ. ಪ್ರತಿವಾದಿಯು ತನ್ನ ...ವಾಹರಣೆಯಿದ್ದರೆ ಸ್ವತಹ ವ ವಕೀಲರ ...ಲಕ ಸದ್ರಿ ದಿವ್ಸ ಬೆಳಗ್ಗೆ ಗಂಟೆ 10ಕ್ಕೆ ...ಕೋರ್ಟು ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳ ತಕ್ಕದ್ದು. ತಪ್ಪಿದರೆ ಆತನ ಎಕ್ಸ್‌ಪಾರ್ಟಿ ಮಾಡಿ ಸದ್ರಿ ವ್ಯಾಜ್ಯವು ಮಾ... ನಿಸಲ್ಪಡುವುದು

K J Ballal,

Pleader for Plaintiff

...ted 27—4—1953 Camp:Udipi

ಸ್ವೀಕಾರ—ವಿಮರ್ಶೆ

(೧ನೇ ಪುಟದಿಂದ)

ಹಳ್ಳಿಯಿಂದ ಹಾದಿಗೆ (ಸಾಮಾಜಿಕ ಕಾದಂಬರಿ) ಬರೆದವರು: ಜನಾರ್ಧನ ಗುರ್ಕಾರ್ ಪ್ರಕಾಶಕರು: ಪ್ರತಿಭಾ ಗ್ರಂಥಮಾಲೆ, ಧಾರವಾಡ. ಬೆಲೆ: ರೂ. ೧-೮-೦

ವೇಶ್ಯಾ ಸಮಸ್ಯೆಯು ಕುರಿತು ಕನ್ನಡದಲ್ಲಿ ಈಚೆಗೆ ಕಾದಂಬರಿಗಳು ಒಂದರ ಹಿಂದೊಂದರಂತೆ ಪ್ರಕಟಗೊಳ್ಳುತ್ತಿವೆ. ಪ್ರಸ್ತುತ ಪುಸ್ತಕದ ಹಿನ್ನೆಲೆಯಲ್ಲಿರುವುದು ವೇಶ್ಯಾ ಸಮಸ್ಯೆ ಇದೆ. ಆದರೆ ಅನೇಕ ಕಾದಂಬರಿಗಳಲ್ಲಿರುವಂಥ ಭೀಭತ್ಸ ಮತ್ತು ಉದ್ರೇಕಕ ಪ್ರಣಯ ಚಿತ್ರವನ್ನೇನೂ ಇಲ್ಲಿ ಕಾಣೆವು, ಒಬ್ಬ ಸದ್ಗೃಹಸ್ಥೆಯ ಸಾತ್ವಿಕ ಮನೋಭಾವವನ್ನು ನಿರ್ವಿಕಾರ ಚಿತ್ತದಿಂದ ನೋಡುತ್ತೇವೆ ... ಬರಿಯಲ್ಲಿ ಸಂಚರಿಯನ್ನು ವೇಶ್ಯೆಯೆಂದಲ್ಲ. ತನ್ನ ಕೂಸಿನ ಭವಿಷ್ಯವನ್ನು ನೆನೆದು ಮರುಗುವ ತಾಯಿಯಾಗಿ ಚಿತ್ರಿಸಲು ಪ್ರಯತ್ನ ಪಟ್ಟಿರುವರು. ಸುಂದರಿ ತನ್ನ ಜೀವನದಲ್ಲಿ ಒಮ್ಮೆ ಕಾಲು ತಪ್ಪಿಬಿದ್ದವಳು ... ಶ್ರೀಮಂತ ಚೌಡಪ್ಪನವರ ಕೃಪೆಯಲ್ಲಿ ತನ್ನ ಬದುಕಿಗೊಂದು ಆಶ್ರಯವನ್ನು ಕಂಡಳು. ಪತ್ನೀ ವಿಯೋಗಿಯಾದ ಚೌಡಪ್ಪನವರ ಪಾಲಿಗೆ ಅವಳೇ ಎರಡನೆಯ ಹೆಂಡತಿ ಎನ್ನಬಹುದು. ಆದುದರಿಂದ ಸುಂದರಿಯು ವೇಶ್ಯಾ ಜೀವನವೆಂದು ಹಳಿಯಲು ನಮಗೆ ಮನಸ್ಸು ಬಾರದು. ಆವಳ ಮಗಳು ಗೋದಿ. ಸೂಳೆಯ ಮಗಳು ಸೂಳೆಯಾಗಬಾರದೆಂದು ಸುಂದರಿ ಬಯಸಿ ಗೋದಿಯನ್ನು ಒಬ್ಬ ಮುದುಕಿಯ ಜೋಗಕ್ಕೆ ಮಕ್ಕಳೊಪ್ಪಿಸಿ ದೂರದ ಹಳ್ಳಿಗೆ ಕಳುಹಿಸುತ್ತಾಳೆ. ತನ್ನ ಮಗಳು ಕುಲವಂತರ ಮನೆ ಬೆಳಗುವ ಗೃಹಲಕ್ಷ್ಮಿಯಾಗಬೇಕೆಂದು ಬಯಸಿ, ಸುಂದರಿ ತನ್ನ ಆಯುಷ್ಯವನ್ನು ಏಕಾಂತದಲ್ಲಿ ಕಳೆಯುತ್ತಾಳೆ. ಅವರ ಹುಡುಗಿ ಒಳಿದು ಪ್ರಾಯಪ್ರಬುದ್ಧೆಯಾದಾಗ, ಸುಂದರಿ ಕಂಡದ್ದೇನು? ಮುದುಕಿಯಾಗುತ್ತಾ ನಡೆದಿರುವ ತನ್ನಲ್ಲಿ ಆಸಕ್ತಿಯನ್ನು ಕಳೆದು ಕೊಂಡ ಚೌಡಪ್ಪನವರು ಗೋದಿಯಲ್ಲಿ ... ! ಮಗಳು ಗೋದಿ ತಾಯಿಯ ಮನಸ್ಸಿನ ಸಾತ್ವಿಕ ಇಚ್ಛೆಯನ್ನು ಧಿಕ್ಕರಿಸಿ ಹಾದಿತಪ್ಪಿ ಹಳ್ಳಕ್ಕೆ ಬೀಳುವಳು. ಹೀಗೆ ಸುಂದರಿಯು ... ದಾಗ... ಒಡುಗರ ಎದೆ ಕನಿಕರದಿಂದ ತುಂಬುತ್ತದೆ.

ಆದರೆ ಉತ್ತಮವಾದ ಕಥಾವಸ್ತುವಿನಲ್ಲಿ ಎಷ್ಟು ಕಾಣಬೇಕೊ ... ನಿರೂಪಣ ಕ್ರಮದಲ್ಲಿ ಏಕಸೂತ್ರತೆ ಇಲ್ಲದಿರುವುದು, ಕತೆಯು ಬಿಗಿ ಸುಗಮವಾಗಿಲ್ಲ. ಮನಸ್ಸಿನ ವ್ಯಾಕುಲದ ಚಿತ್ರಣಕ್ಕೆ ಮಹತ್ವವನ್ನು ಕೊಡಲು ನೋಡಿದ್ದರೂ ಅಲ್ಲಿ ಕಲಾ ಪಂಕ್ತಿಯು ತೋರುವುದಿಲ್ಲ. ಮಾರ್ಮಿಕವಾದ ಸನ್ನಿವೇಶಗಳ ಚಿತ್ರಣವು ಸಾಮಾನ್ಯತಃ ಸಪ್ಪೆಯಾಗಿರುತ್ತವೆ. ... ... , ... ವ ನಡುವಿ... ಅವುಗಳ ಮನಸ್ಸಿ... ... ಪರಿಣಾಮಕಾರಿ ಚಿತ್ರವನ್ನು ಕೊಡಲು ಲೇಖಕರು ಸಮರ್ಥರಾಗಿಲ್ಲ. ಇಂಥ ನ್ಯೂನತೆಗಳು ಕೈಕಳಗಿದಂತೆ ಕಬ್ಬುವ... ಹೇಳಬಹುದು ಶ್ರೀ ಗುರ್ಕಾರರು ನವ್ಯ ... ... ಹೊಸ ದಾರಿಯನ್ನು ತಳಿಯುತ್ತದೆ ಎಂಬ ... ... ಅವರ ಹಿಂದಿನ ಮತ್ತು ಈಗಿನ ಕೃತಿಗಳು ಮಾಡಿಕೊಟ್ಟಿವೆ.

(೧ನೇ ಪುಟದಿಂದ)
ಳೊಂದಿಗೆ ಮೂರು ಮೈಲುದೂರದ ಮನೆಗೆ ಪ್ರಯಾಣಿಸಿದ. ನನ್ನ ಒಳ್ಳೆಯತನವನ್ನು ಅವಳು ಬಹಳ ಮೆಚ್ಚಿಕೊಂಡಳು. ವಿನಂತಿ ಆಶೀರ್ವಾದಗಳನ್ನು ಕೊಟ್ಟಳು. ನೆರೆಕರೆಯವರೆಲ್ಲರನ್ನು ಕರೆಕರೆದು ನಾನು ದೇವತಾಮನುಷ್ಯನೆಂದು ಪ್ರಶಂಸಿಸಿದಳು. ನನಗೆ ನಾಚಿಕೆಯಾದರೂ ಸಣ್ಣ ಉಪಕಾರವು ಇಷ್ಟು ಗೌರವ ತರುವುದನ್ನು ಕಂಡು ಸಂತೋಷಿಸಿದೆ. ಇದು ಸಾಮಾನ್ಯ ಘಟನೆ. ಆದರೆ ಇದನ್ನು ನಾನೆಂದೂ ಮರೆಯುವಂತಿಲ್ಲ". ಎಂದು ಸೈನಿಕ ವರ್ಣಿಸಿದ

ವ್ಯಕ್ತಿತ್ವಕ್ಕೆ ಕೊಡುವ ತರಬೇತಿ ಮುಖ್ಯವಾಗಿ ನಮ್ಮ ಹೊಸ ಹೊಸ ಸಾಹಸಗಳಲ್ಲಿ ಮತ್ತು ಒಳ್ಳೆಯ ಮನುಷ್ಯನಾಗಬೇಕೆಂಬ ದೃಢ ಸಂಕಲ್ಪದಲ್ಲಿ ಇರುತ್ತದೆ. ಆ ಸೈನಿಕನು ಪೋರ್ಟರನ ಕೆಲಸ ಮಾಡಲು ಹಿಂದೆ ಮುಂದೆ ನೋಡಲಿಲ್ಲ ತನ್ನನ್ನು ಯಾರಾದರೂ ಏನೆಂದು ತಿಳಿದುಕೊಳ್ಳುವರೋ ಎಂಬ ಸಂಕೋಚ ಅಥವಾ ದಾಕ್ಷಿಣ್ಯ ಅವನಿಗಿರಲಿಲ್ಲ. ಜನ ತನ್ನನ್ನು ನಗೆಗೀಡು ಮಾಡಲಿಕ್ಕಿಲ್ಲವೆ ಎಂಬ ಭಯವೂ ಇರಲಿಲ್ಲ. ಆದುದರಿಂದ ತನ್ನ ಅಜ್ಜಿಗೆ ಸಮಾನಳಾದ ಮುದುಕಿಯಿಂದ ಪ್ರಶಂಸೆ ಹಾಗು ಆಶೀರ್ವಾದಗಳನ್ನು ಇವನು ಪಡೆದನು. ನಾವು ಪ್ರಾಮಾಣಿಕವಾದ ಮನಸ್ಸಿನಿಂದ ಮಾಡುವ ಸೇವೆಯನ್ನು ಮೆಚ್ಚಿ ಕೊಂಡಾಡುವರು. ಹೊರತು ನಮ್ಮನ್ನು ಯಾರೂ ತಪ್ಪು ತಿಳಿದು ಕೊಳ್ಳುವುದಿಲ್ಲ. ಬದಲು ನಮ್ಮನ್ನು ಅವರು ಸದಾ ನೆನಪಿನಲ್ಲಿಟ್ಟು ಕೊಳ್ಳುತ್ತಾರೆ. ತಮ್ಮ ವಿಚಿತ್ರ ಆದರೆ ನಿಜವಾದ ಅನುಭವವನ್ನು ಬಣ್ಣಿಸುವುದರಲ್ಲಿ ಅವರು ಹೆಮ್ಮೆ ಪಟ್ಟುಕೊಳ್ಳುವರು. ನಾವು ಕೂಡ ನಮ್ಮ ಸಂಪರ್ಕಕ್ಕೆ ಬರುವ ಒಳ್ಳೆಯ ಜನರನ್ನು ಉಪೇಕ್ಷೆಯಿಂದ ನೋಡಬಾರದು. ಅವರ ಹಿತಚಿಂತಕರಂತೆ ನಡೆದು ಕೊಳ್ಳಬೇಕು. ಪಾಶ್ಚಾತ್ಯರಲ್ಲಿ ಹುಟ್ಟಿದ ಹಬ್ಬದ ದಿನ ಬರುವ ಶುಭಾಶಯಗಳಿಗೆ, ಕ್ರಿಸ್ಮಸ್ ದಿನದ ಕಾಣಿಕೆಗಳಿಗೆ ತುಂಬ ಮಹತ್ವವಿದೆ. ನೋಡಲು ಇದೊಂದು ದೊಡ್ಡ ಸಂಗತಿಯೇನಲ್ಲವೆಂದು ತೋರಿದರೂ, ಹುಟ್ಟುಹಬ್ಬವನ್ನಾಚರಿಸುವ ಆ ವಿಶಿಷ್ಟ ವ್ಯಕ್ತಿಯ ಮಟ್ಟಿಗೆ ಆ ದಿನವೇ ಸರ್ವಸ್ವ. ಅಂಥ ಸಂದರ್ಭಗಳನ್ನು ನಾವು ನೆನಪಿನಲ್ಲಿಟ್ಟುಕೊಳ್ಳುವುದರಿಂದ ಆ ಬಡಪಾಯಿಗೆ ದೊರಕುವ ಸಂತೋಷ ನೋಡಿ, ನಾವೂ ಸುಖಿಗಳಾದೆವು.

ಇನ್ನೂ ಸುಲಭದ ಒಂದು ರೀತಿ ಹೇಳಿದರೆ, ಎಲ್ಲರೂ ಅದನ್ನು ಮೆಚ್ಚಬಹುದು. ಮಹನೀಯರೊಬ್ಬರು "ಇನ್ನೊಬ್ಬನಿಗೆ ಈ ಲೋಕದಲ್ಲಿರುವ ಅತ್ಯಂತ ಮಧುರ ಸಂಗೀತವೆಂದರೆ ಅವನ ಹೆಸರು" ಎಂದಿರುವರು ಇದನ್ನು ನೆನಪಿನಲ್ಲಿಟ್ಟುಕೊಂಡರೆ ನಾವು ಹಲವು ಜನರ ಮೇಲೆ ಸಾತ್ವಿಕ ವರ್ಚಸ್ಸನ್ನು ಕೆಡವ ಬಲ್ಲೆವು ಟಪಾಲಿನ ಪೇದೆಯನ್ನು "ಏನು ಗುಂಡಪ್ಪನವರೇ — ಎಂದು ಕರೆದರೆ, ಆ ಜನ ತನಗಿದೊಂದು ಭೂಷಣವೆಂದು ಒಳಗೆ ಮನದಲ್ಲೇ ಹರ್ಷಗೊಳ್ಳುತ್ತದೆ. ಕೂಲಿನಾಕೆಯನ್ನು "ಗೌರಮ್ಮ ಬಂದಿರಾ" ಎಂದು ಸ್ವಾಗತಿಸಿದರೆ ಅವಳು ಸಂತೋಷ ಚಿತ್ತಳಾಗುವುದು ನಿಶ್ಚಯ. ನಮ್ಮ ಸಂಪರ್ಕಕ್ಕೆ ಬರುವ ಜನರ ಹೆಸರನ್ನು ನೆನಪಿಟ್ಟುಕೊಳ್ಳುವುದು ಒಂದು ಒಳ್ಳೆಯ ಅಭ್ಯಾಸ. ಎಷ್ಟೋ ವೇಳೆ ದಾರಿಯಲ್ಲಿ ಕಂಡವರು ನಮ್ಮನ್ನು ಪೂರ್ಣ ಪರಿಚಯದಿಂದ ಮಾತನಾಡಿಸಿದರೂ ನಾವು ಮಾತ್ರ ಅವರು ಯಾರೆಂದು ತಿಳಿಯದೆ ನಾಚಾಡುವುದುಂಟು. "ಏನು ರಾಮಣ್ಣ?" ಎಂದು ನಮ್ಮನ್ನು ಕೇಳುವಾಗ "ಯಾವಾಗ ಬಂದಿರಿ ಕಿಟ್ಟಣ್ಣ" ಎನ್ನುವುದಕ್ಕೆ ನಮಗೆ ಸಾಧ್ಯವಾದರೆ ಮಾತ್ರ ವ್ಯಕ್ತಿತ್ವಕ್ಕೊಂದು ವರ್ಚಸ್ಸು ಬರುತ್ತದೆ

ಬೇರೆಯವರನ್ನು ಸಹಾನುಭೂತಿಯಿಂದ ನೋಡಲು ನಾವು ಮರೆತರೆ ವ್ಯಕ್ತಿತ್ವ ಬೆಳೆಯುವುದು ಸಾಧ್ಯವೇ ಇಲ್ಲ. ನಾವು ಏನನ್ನಾದರೂ ಕೊಡದೆ ನಮಗೇನಾದರೂ ದೊರೆಯಬೇಕೆನ್ನುವುದು ನ್ಯಾಯವಲ್ಲ. ಅಂಗಡಿಯವನಿಗೆ ದುಡ್ಡು ಕೊಡಬೇಕು. ಆಗ ಮಾತ್ರ ಅವನು ನಮಗೆ ಸಾಮಾನು ಕೊಡಬೇಕೆಂದು ಹೇಳಬಹುದು. ಅದರಂತೆ ಅವನು ಸಾಮಾನು ಕೊಟ್ಟರೆ ಮಾತ್ರ ದುಡ್ಡು ಕೇಳಬಲ್ಲನು ಈ ನ್ಯಾಯ ಉಳಿದ ಸಂಗತಿಗಳಿಗೂ ಅನ್ವಯಿಸುತ್ತದೆ. ನಿನ್ನ ನೆರೆಯವನನ್ನು ನಿನ್ನಂತೆಯೇ ನೋಡು ಎಂದು ಯೇಸು ಹೇಳಿದುದನ್ನು ಹೆಚ್ಚಿನವರು ಮರೆಯುತ್ತಾರೆ. ಸ್ವಲ್ಪ ಹೆಚ್ಚು ಕಡಿಮೆಯಾದರೆ. ಸಿಡಿಮಿಡಿಗೊಳ್ಳುವವರೇ ನಮ್ಮಲ್ಲಿ ಹೆಚ್ಚು ಹೊರತು ತಪ್ಪಿದವನ ಸ್ಥಾನದಲ್ಲಿ ನಾವಿರುತ್ತಿದ್ದರೆ ನಮಗೇನು ತೋರುತ್ತಿತ್ತೆಂಬುದನ್ನು ವಿಚಾರಿಸುವುದಿಲ್ಲ. ನಮಗೆ ದಿನಾಲು ಪೇಪರು ತಂದು ಕೊಡುವ ಹುಡುಗ ಹರಕು ಅಂಗಿಧರಿಸುತ್ತಿರುವುದನ್ನು ನಾವು ಗಮನಿಸುವುದಿಲ್ಲ. ಕೂಲಿನಾಕೆ ಅರ್ಧತಾಸು ತಡೆದು ಬಾಲುತಂದಳೆಂದು ಪರಿತಪಿಸುತ್ತೇವೆ ಹೊರತು ಅವಳ ಎಮ್ಮೆಯಕರು ಸಾಯುತ್ತಿದೆ ಎಂಬುದನ್ನು ತಿಳಿದುಕೊಳ್ಳುವ ಆವಶ್ಯಕತೆ ನಮಗಿಲ್ಲ. ನೌಕರನು ಆಫೀಸಿಗೆ ಬರುವಾಗ ತಡಮಾಡಿದನೆಂದು ಕೋಪಿಸುವ ಅಧಿಕಾರಿ, ಮನೆಯಲ್ಲಿ ಮಗುವಿಗೆ ಕಾಯಿಲೆಯೆಂಬುದನ್ನು ಲಕ್ಷಿಸುವುದಿಲ್ಲ

ಆದರೆ ಈಚೆಗೆ ಜನರ ಬುದ್ಧಿ ಪಕ್ವವಾಗುತ್ತದೆ. ಅವರ ಒಲವು ಬದಲಾಗುತ್ತಿದೆ. ಬಡವರ ಕಡೆಗೆ ಸಹಾನುಭೂತಿಯೂ ದೀನ ದುಃಖಿಗಳ ಕಡೆಗೆ ದಯೆಯೂ ತೋರಲ್ಪಡುತ್ತದೆ. ನೂರು ಮಂದಿ ಹಸಿದಿರುವಾಗ ಒಬ್ಬನಿಗೆ ಮೃಷ್ಟಾನ್ನ ಉಣ್ಣುವ ಅಧಿಕಾರವಿಲ್ಲೆಂಬ ತತ್ವಕ್ಕೆ ಸಾಮಾನ್ಯತಃ ಎಲ್ಲ ಸುಧಾರಕರ ಒಪ್ಪಿಗೆ ಇದೆ. ಕಮ್ಯೂನಿಸ್ಟರ ಸಮತಾವಾದವಾಗಲೀ ವಿನೋಬಾಜೀಯ ಭೂದಾನ ಮತ್ತು ಸಂಪತ್ ಯಜ್ಞವಾಗಲೀ ಎಲ್ಲರೂ ಸಮಾನರೆಂಬ ಆದರ್ಶವನ್ನು ಎತ್ತಿ ಹಿಡಿಯುತ್ತವೆ. ನಾವು ಸುಖಿಗಳಾದಂತೆ ಇತರರೂ ಆಗಬೇಕೆಂದು ಬಯಸುವ ಪ್ರವೃತ್ತಿ ಉಂಟಾಗಿರುವುದನ್ನು ಶುಭ ಚಿಹ್ನೆ ಎಂದುಕೊಳ್ಳಬಹುದು. ಇದನ್ನೇ ಇತರರು ಸುಖಿಗಳಾದರೆ ತಾನೂ ಸುಖಿ ಎಂಬ ರೂಪಕ್ಕೆ ತಂದು ಕಾರ್ಯ ಶೀಲರಾದರೆ— ನಾವು ಶೀಘ್ರದಲ್ಲಿಯೇ ಗುರಿ ಮುಟ್ಟಬಲ್ಲೆವು.

—ಶಾಂತಸ್ವರೂಪ||

ವಾರದ ಒಳಿತು ಕೆಡುಕುಗಳು

ತಾ. ೭—೫—೫೩ರಿಂದ ತಾ. ೧೩—೫—೫೩ರ ವರೆಗೆ.

ಮೇಷ— ಮನೋಧೈರ್ಯವು ಮಾಯವಾಗುವದು ಮಾತ್ರವಲ್ಲ ಕಾರ್ಯಶಕ್ತಿಯು ಕುಂಠಿತವಾಗಲಿದೆ. ಆದರೂ ದೈವಾನುಗ್ರಹವು ಸಾಕಷ್ಟು ನಿಮಗಿರುವ ಕಾರಣ ದಿನಚರಿಯು ದುಸ್ತರವಾಗಲಾರದು. ಆರ್ಥಿಕ ಭಾಗವು ಸಾಕಷ್ಟು ಉತ್ತಮಸ್ಥಿತಿಯಲ್ಲಿರುವುದು. ವ್ಯಾಪಾರ ವ್ಯವಹಾರಗಳಲ್ಲಿ ಫಲಪ್ರಾಪ್ತಿಯು ತೃಪ್ತಿಕರವಿರುವುದು. ರಾಜಕೀಯ ಕ್ಷೇತ್ರದಲ್ಲಿ ವಿಜಯವು ದುರ್ಲಭವೇ ಸರಿ. ವಿದ್ಯಾರ್ಥಿಗಳಿಗೆ ಅಧ್ಯಯನ ಭಾಗಕ್ಕೆ ತೊಡಕು ತೊಂದರೆಗಳು ಹೆಚ್ಚುವವು. ತಾ 7–8 11 12 ಈ ದಿನಗಳಲ್ಲಿ ಸುಖಭೋಗ ಲಾಭಗಳಿವೆ

ವೃಷಭ— ಲಾಭ ಸ್ಥಾನವನ್ನು ಹೊಂದಿದ ತಕ್ಕ ರಾಹು ನೊಬ್ಬನನ್ನುಳಿದು ಇತರ ಎಲ್ಲಾ ಗ್ರಹರ ವಕ್ರ ದೃಷ್ಟಿಗೆ ಗುರಿಯಾದ ನಿಮಗೆ ಸಂಪದ್ಭಾಗದಲ್ಲಿ ಏನೊಂದೂ ಕೊರತೆಗಳು ಕಾಣಿಸದಿದ್ದರೂ ಶಿತೋಷ್ಣ ದೋಷದಿಂದ ಆರೋಗ್ಯ ಕೆಡಲಿದೆ. ವಿಪಕ್ಷೀಯರ ಕೈವಾಡದಿಂದಾಗಿ ನಿಮ್ಮ ಹೆಚ್ಚಿನ ಕಾರ್ಯಗಳು ಕೊನೆಗೊಳ್ಳಲಾರವು, ಭೃತ್ಯವರ್ಗದವರೊಡನೆ ಕಲಹವಾದೀತು. ವ್ಯವಹಾರದಲ್ಲಿ ಕಷ್ಟ ನಷ್ಟಗಳೊದಗುವ ಸಂಭವವಿದೆ. ತಾ 11, 12 ಹೊರತಾಗಿ ಉಳಿದ ದಿನಗಳಲ್ಲಿ ಮಿತ್ರ ವರ್ಗದವರಿಂದ ಸನ್ಮಾನ ಅರ್ಥಲಾಭ ಸುಖಭೋಗಗಳು ಲಭಿಸುವವು

ಮಿಥುನ— ನೀವೆಷ್ಟೇ ನಾಗ್ಮಿಗಳಿದ್ದರೂ ಈ ವಾರದಲ್ಲಿ ಹೆಚ್ಚಿನವರೊಡನೆ ವಿನಾಕಾರಣ ಸಾಕ್ಷ್ಯಲಹಕ್ಕೆ ಗುರಿಯಾದೀರಿ. ದುಡಿಮೆ ಗಿಂತ ದ್ವಿಗುಣ ವ್ಯಯವಾಗುವ ಸಂಭವವಿದೆ ಚಂಚಲವಾದ ಮನಸ್ಸು ವಿಷಯಾದಿಗಳ ಕಡೆಗೆ ಹರಿದು ನಷ್ಟ ಕಷ್ಟಗಳಿಗೆ ಗುರಿ ಮಾಡೀತು. ಆತ್ಮೀಯರ ವಿಯೋಗವುಂಟಾಗುವುದು, ಆದರೂ ಲಾಭದಲ್ಲಿರತಕ್ಕ ಉಚ್ಚರವಿಯುನಿಮ್ಮನ್ನು ಹಣದ ಅಡಚಣೆಗೆ ಗುರಿಮಾಡನು. ತಾ. ೧೧ರಿಂದ 12ರ ವರೆಗಿನ ದಿನಗಳಲ್ಲಿ ಹೊಸ ಜನರ ಭೆಟ್ಟಿ ಬಂಧುವರ್ಗದವರ ನೆರವುಗಳು ದೊರೆತಾವು

ಕರ್ಕಟ— ನಿದ್ರೆ ನಿಮಗೆ ವತೆಯಾದ ಚಿಂತೆಗೂ ಅವಕಾಶವಿಲ್ಲವು ನಿಮ್ಮ ಹಲವು ಕಾಲದ ಬಯಕೆಗಳು ಇಂದು ಕಾರ್ಯರೂಪಕ್ಕೆ ಬರಲಿವೆ. ಇಂತಹ ಸುಸಂಧಿಯು ಸದ್ಯ ನಿಮಗೆ ಲಭಿಸಲಾರದು. ಈ ಕಾಲದಲ್ಲಿ ನೀವು ಆಲಸಿಗರಾಗದೆ ಕಾರ್ಯರಂಗದಲ್ಲಿ ಮುನ್ನುಗ್ಗಿರಿ. ನಿಮ್ಮ ಬಯಕೆಯು ಸಂಪೂರ್ಣ ಯಶಸ್ವಿಯಾಗಲಿದೆ ರಾಜಸ್ಥಾನದಲ್ಲೂ ಸಮಾಜದಲ್ಲೂ ಗೌರವಾದ ಗಳಿಸ್ಸು ಪಡೆವಿರಿ. ಎಂತಹ ಮಹತ್ಕಾರ್ಯ ಕೂಡ ನಿಮ್ಮ ಭಾಗಕ್ಕೆ ತೃಣಸಮನೆನಿಸೀತು. ವಾರಾಂತ್ಯದ 3 ದಿನಗಳು ನಿಮ್ಮನ್ನು ಸುಖಸಂಗಂದಲ್ಲಿ ತಲ್ಲೀನರನ್ನಾಗಿ ಮಾಡುವವು.

ಸಿಂಹ— ಬಹುಮುಖದಿಂದ ಖರ್ಚುಗಳು ಪ್ರಾಪ್ತವಾಗುವುದರಿಂದ ನೀವೆಷ್ಟೇ ದುಡಿದರೂ ದಿನಾಂತ್ಯದಲ್ಲಿ ರಿಕ್ತಹಸ್ತರಾಗುವಿರಿ. ವಾತಪ್ರಕೋಪದಿಂದಾಗಿ ಆರೋಗ್ಯವು ಸರಿಯಿರದು. ಆಪ್ತೇಷ್ಟರ ವಿರಹ ದುಃಖಕ್ಕೊಳಗಾಗಲಿರುವಿರಿ ಆದರೂ ಇದ್ದುದರಲ್ಲಿ ತೃಪ್ತಿಯಿಂದಿರೆ ಧನಲಾಭ ಪತಿಯಾದ ಬುಧನು ಭಾಗ್ಯದಲ್ಲಿ ಎಲ್ಲಂಥಿಯುತ್ತನಾಗಿರುವುದರಿಂದ ಸಾಲವನ್ನೂ ಪಡೆ ಭಾರವನ್ನು ಕಳೆವಿರಿ. ವಾರಾದಿಯ 2 ದಿನಗಳಲ್ಲಿ ಹೆಚ್ಚಿನ ಶುಭವನ್ನೇ ಕಾಣುವಿರಿ

ಕನ್ಯಾ— ನಿಮ್ಮ ರಾಶಿಯನ್ನು ಬಿಟ್ಟು ನು ಒದಗುವ ವಿಳಾವರ ಶನಿಯು ಇಂದೀಗ ವಕ್ರಿಯಾಗಿ ಜನ್ಮಕ್ಕೆ ಬಂದಿರುವನಾದ ಕಾರಣ ಶರೀರದಲ್ಲಿ ವಾತಪ್ರಕೋಪದಿಂದಾಗಿ ಅಲ್ಲಲ್ಲಿ ನೋವು ವಿಷವಸ್ತುಗಳ ಭಯವು ಕಾಣಿಸಬಹುದು. ದಿನದಿಂದ ದಿನಕ್ಕೆ ನಿಶ್ಶಕ್ತಿ ದೇಹಕ್ಷೀಣತೆಗಳು ಹೆಚ್ಚುತ್ತಾ ಬಂದಿವೆ. ಗೃಹತಾಪತ್ರಯಗಳಧಿಕವಾಗುವವು. ಆದರೂ ಇದ್ದುದರಲ್ಲಿ ತೃಪ್ತಿಯನಿಸಿದರೆ ಭಾಗ್ಯಸ್ಥ ಸುರಗುರುಗಳು ವಾರಾದಿಯ 4 ದಿನಗಳಲ್ಲಿ ಧನಧಾನ್ಯ ವಸನ ಲಾಭಗಳನ್ನು ನೀಡಲಿರುವರು.

ತುಲಾ— ಇಂದಿನ ಗೃಹಮಾನವನ್ನು ನೋಡಿದರೆ ನಿಮ್ಮ ದುರ್ದೈವವು ಅದೆಷ್ಟು ಅನಿವನ್ನುಂಟುಮಾಡೀತೆನ್ನಲಾಗುವುದಿಲ್ಲ ಕಾರ್ಯಾರಂಭಕ್ಕೆ ಮುಂಚಿತವಾಗಿಯೇ ವಿಘ್ನಗಳುಪಸ್ಥಿತವಾಗುವುದರಿಂದ ನೀವೇನನ್ನು ಮಾಡಲಾರಿರಿ. ನಿಮ್ಮ ಆಪ್ತಜನರಂತಿರಲಿ ಹಿತೈಷಿ ವಾಕ್ಯಗಳು ಕೂಡ ನಿಮ್ಮನ್ನು ದೂರೀಕರಿಸುವರೆಂದಮೇಲೆ ಬೇರೆ ಯಾರನ್ನು ತಾವು ನಂಬಿದರೆ ಏನು ಪ್ರಯೋಜನ ಆಪತ್ಕಾಲದ ಅತಿ ಧೈರ್ಯ ತಂದುಕೊಂಡು ಕಾರ್ಯತತ್ಪರರಾಗಿರಿ ಸುಖ ದುಃಖಗಳು ರಾತ್ರಿ ಹಗಲುಗಳಂತೆ ಪರಿವರ್ತಿತವಾಗುವದರಿಂದ ಸದ್ಯ ಸುದಿನಗಳನ್ನು ಕಾಣಲಿರುವಿರಿ. ತಾ. 7, 13ರಲ್ಲಿ ಜಾಗರೂಕರಾಗಿರಿ.

ವೃಶ್ಚಿಕ— ಸುಖಸ್ಥಾನದಲ್ಲಿ ನಿಮಗೆ ಹಿತಗಿದ್ದ ನಿಮಗೆ ಕೊರತೆಯೆಂದರೆ ಈ ವಾರದ ಕೈಹಿಡಿದಾಕೆಯಿಂದಾಗಿ ಮನಸ್ಸಿಗೆ ನೆಮ್ಮದಿಯಿರದು ಸದಾ ಒಂದಿಲ್ಲೊಂದು ನಿಮಿತ್ತ ಕಲಹ ಮಾಡುವಳು, ಬೇರೆ ಯಾವ ಭಾಗದಲ್ಲೂ ನಿಮಗೆ ತೊಂದರೆ ಎನಿಸದು ಸಾಮಾಜಿಕ ರಾಜಕೀಯ ಕಾರ್ಯಗಳಲ್ಲಿ ಒಳ್ಳೆ ಕೀರ್ತಿಶಾಲಿಗಳಾಗುವಿರಿ. ಹಲವು ಮುಖದ ಧನವು ನಿಮ್ಮ ಕೈಸೇರಲಿರುವುದು ದಿನಗಳು ಸುಖದಾಯಗಳಾಗಿ ಪರಿಣಮಿಸಲಿವೆ ವಾರಾಂತ್ಯದ 3 ದಿನಗಳಲ್ಲಿ ನಿಮ್ಮ ಸಂಕಲ್ಪಗಳು ಕಾರ್ಯರೂಪಕ್ಕೆ ಬರುವವು

ಧನು— ಕಷ್ಟಪಟ್ಟು ದುಡಿವಿರಿ ನಿಮ್ಮ ಪ್ರಯತ್ನಕ್ಕೆ ತಕ್ಕ ಫಲ ಲಭಿಸುವದು, ಬೇರೆ ಏನು ಚಿತ್ತದಿಂದಲೂ ಪ್ರಾಪ್ತವಾಗುವ ವರ್ಚಸ್ಸನ್ನು ಸಂಪಾದಿಸಿಕೊಳ್ಳುವ ಶಕ್ತರಾಗುವವರ ಕಡೆ ಕಾಲಮಾಡುವಿರಿ. ಮನೆ ರೋಗವು ದಿನದಿಂದ ದಿನಕ್ಕೆ ಪ್ರಬಲವಾಗುತ್ತಾ ಹೋಗುವದು ಸತಿಪುತ್ರರು ಕಲಹಯರಾಗುವರು. ಮನಸ್ಸು ಕಡಿವಾಣವಿಲ್ಲದ ಕುದುರೆಯಂತೆ ಮಾರ್ಗತಪ್ಪಿ ವಿಹರಿಸುವ ಗುರುಹಿರಿಯರ ವಕ್ರದೃಷ್ಟಿಗೆ ಗುರಿಯಾದೀರಿ. ಆದರೂ ತಾ. 7, 8, 13 ಈ ದಿನಗಳಲ್ಲಿ ಬಾಲ್ಯಮಿತ್ರರ ನೆರವು ಸೇವಕ ವರ್ಗದವರಿಂದ ಧನ ಲಾಭವೂ ಆಗುವದು.

ಮಕರ— ಇಷ್ಟಾನಿಷ್ಟರಾದ ಗ್ರಹರು ಸಮ ಬಲರಿರುವುದರಿಂದ ನಿಮಗೀ ವಾರ ಲಾಭ ನಷ್ಟ ಸುಖ ದುಃಖಗಳು ಸರಿತೂಕದಲ್ಲಿ ನಿಲ್ಲಲಿವೆ, ಬಂದು ಮಿತ್ರರ ನೆರವು ದೊರೆಯುವುದರಿಂದ ಪ್ರಬಲರಾದ ಇದಿರಾಳಿಗಳನ್ನು ಪರಾಭವವಗೊಳಿಸ ವಿರಿ ಪಶು ಭೃತ್ಯಾದಿ ಸಕಲ ಗ್ರಹಪರಿವಾರವೂ ಪರಿಪೂರ್ಣವಾಗಿರುವುದರಿಂದ ಗ್ರಹತಾಪತ್ರಯಗಳಾವವೂ ಬಾರವು. ನೀಚ ಜನರು ನಿಮ್ಮ ಆರ್ಥಿಕ ಭಾಗಕ್ಕೆ ಹಾನಿಯೊಡ್ಡಲಿರುವರು. ತಾ 10, ಈ ದಿನಗಳಲ್ಲಿ ನಿಮ್ಮ ಬಯಕೆಯು ವಿಘ್ನದಿಂದ ಈಡೇರುವರು.

ಕುಂಭ— ವ್ಯವಹಾರ ಕುಶಲರಾದ ನಿಮಗೆ ಈ ವಾರದಲ್ಲಿ ಹಲವು ತೆರದಿಂದ ಲಾಭವಾಗುವದು ಹಿಂದಿನ ಸಾಲಕರಗಳಿಂದ ಮುಕ್ತರಾಗಿ ಕೈಯಲ್ಲಿ ಸಾಕಷ್ಟು ಧನಸಂಗ್ರಹವಾಗುವದು. ಆದರೆ ಬಂಧುಜನತೆಯು ನಿಮ್ಮಲ್ಲಿ ವಿನಾಕಾರಣ ಕಲಹಪ್ರಿಯರಾಗುವರು ಶತ್ರುಜನರು ಮಿತ್ರರ ವೇಷಧಾರಿಗಳಾಗಿ ನಿಮ್ಮನ್ನು ವಂಚಿಸಲಿರುವರು. ನೌಕರಿ ಜನರ ಅಧಿಕಾರಿಗಳಿಂದ ಪೀಡೆಯೊದಗಲಿದೆ, ಕೃಷಿಜೀವಿಗಳಿಗೆ ದಿನೆಯಾತನೆಯು ಅತೀವವಾದೀತು. ತಾ. 7, 8, 11, 12 ಈ ದಿನಗಳು ಹಿತಕರಗಳಿವೆ.

ಮೀನ— ಹಿಡಿದ ಕಾರ್ಯವು ನಿರ್ವಿಘ್ನದಿಂದ ಕೊನೆಗೊಂಡುವದು. ನಿಮ್ಮ ನಿರೀಕ್ಷೆಗಿಂತಲೂ ಅಧಿಕವಾಗಿ ಫಲ ಲಭಿಸಲಿದೆ. ವ್ಯಾಪಾರ ನೌಕರಿ ಮೊದಲಾದ ಕಾರ್ಯಗಳಲ್ಲಿ ವಿಶೇಷ ಫಲ ಪ್ರಾಪ್ತಿಯಾಗುವದು ನಷ್ಟದ ವಸ್ತುಗಳು ಪುನಃ ಕೈಸೇರುವವು. ನಿಮ್ಮ ಶತ್ರುತ್ವದ ಶಕ್ತಿಯನ್ನು ಅಂತಃ ಶತ್ರುಜನರಿಂದಲೇ ಮಾಡುವಾಗುವದು. ಗೃಹದ ಆರೋಗ್ಯದತ್ತ ಲಕ್ಷ್ಯಕೊಡಿರಿ. ಆತ್ಮ ಪ್ರವಾಸವು ಧನವ್ಯಯ ದೇಹಶ್ರಮದಾಯಕವಾಗಿ ಪರಿಣಮಿಸೀತು. ತಾ. 9, 12. ಅನುಕೂಲ.

Edited, Printed & Published By K. H. Shetty at the Navayuga Press, Udipi, S. India

ನವಯುಗ
ಆರೋಗ್ಯ ಮಂತ್ರಿ
ಶ್ರೀ. ಎ. ಬಿ. ಶೆಟ್ಟರಿಂದ
ಸ್ಥಾಪಿತವಾದ ವಾರಪತ್ರಿಕೆ,
ಉಡುಪಿ, ದ. ಕನ್ನಡ

ವಾರ್ಷಿಕ ಚಂದಾ 5-12-0
ಆರು ತಿಂಗಳಿಗೆ 3-0-0
ಬಿಡಿ ಪ್ರತಿಗೆ 0-2-0

Regd. No.
M. 3618

ನವಯುಗ

LICENCE No. 31
Licensed to Post without Prepayment

ಅಂತರಂಗ
ಸಚಿತ್ರ ಪತ್ರಿಕೆಯು
ಉಪಯುಕ್ತವಾದ
90 ಪುಟಗಳು
ರೂ 24 ಕ್ಕೆ ಸಿಗುತ್ತದೆ.
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ

14-5-1953

Vol 32
No 36

NAVAYUGA WEEKLY POST BOX NO 22 UDIPI

ವರ್ಷ ೩೨
ವಾರ ೩೬

ಮಧುಪರ್ಕ

ಒಬ್ಬ ರೈತ ಯಾವಾಗಲೂ ತಾನು ಪಟ್ಟ ಶ್ರಮಕ್ಕೆ ತಕ್ಕ ಲಾಭ ದೊರೆಯುತ್ತಿಲ್ಲವೆಂದು ದೂರಿಕೊಳ್ಳುತ್ತಿದ್ದ. ತಾನು ಬಟಾಟೆ ಬೆಳೆಗಾಗಿ ಪ್ರಯತ್ನ ಮಾಡಿದರೂ ಫಸಲು ಚೆನ್ನಾಗಿ ಬರುತ್ತಿಲ್ಲವೆಂದು ಹೇಳುವುದು ಅವನ ಪದ್ಧತಿ.

ಒಂದು ವರ್ಷ ದೇವರ ದಯೆಯಿಂದ ಊರಲ್ಲಿ ಯಾರಿಗೂ ಬೆಳೆಯದಷ್ಟು ಬಟಾಟೆ ಈ ರೈತನ ಪರಿಶ್ರಮದಿಂದ ದೊರೆಯಿತು. ಊರಿನವರು ಈಗಲಾದರೂ ಈ ರೈತ ಸಮಾಧಾನದ ಉಸಿರೆಳೆಯುತ್ತಿರಬಹುದೆಂದುಕೊಂಡರು.

ಸ್ವಾಭಾವಿಕವಾದ ಕುತೂಹಲದಿಂದ ನೆರೆಯವನೊರ್ವನು ಆ ರೈತನ ಬಳಿ ಬಂದು „ಅಯ್ಯಾ, ಈ ವರ್ಷ ನಿನ್ನನ್ನು ದೇವರು ಕಣ್ತೆರೆದು ನೋಡಿದ. ಬಟಾಟೆಯ ಬೆಳೆ ಎಷ್ಟು ಚೆನ್ನಾಗಿ ನಿನ್ನ ಕೈಗೆ ಬಂದಿದೆ!” ಎಂದ. ಇದರಿಂದ ಆ ರೈತನಿಗೆ ಸಂತೋಷವಾಗಲಿಲ್ಲ. ಅವನು ಸಿಟ್ಟುಮೋರೆ ಮಾಡಿಕೊಂಡು „ಅದೇನೋ ಸರಿ, ಆದರೆ ನನಗೆ ಬೇರೆಯೇ ಚಿಂತೆ. ನನ್ನ ಹಂದಿಗಳಿಗೆ ಇಷ್ಟು ಒಳ್ಳೆಯ ಬಟಾಟೆಗಳನ್ನು ತಿನ್ನಕೊಡಲಿಕ್ಕೆ ಮನಸ್ಸು ಬಾರದು. ನಾಳೆ ಬಟಾಟೆ ಗಾಗಿಬೆರಕೊಡಬೇಕಾಗುತ್ತದಲ್ಲ!” ಎಂದು ನುಡಿದ.

ಲಾಭದ ಆಶೆ

ರಾಷ್ಟ್ರೀಕರಣದ ಕುರಿತು ತೀವ್ರ ಆಕ್ರಿಯನ್ನು ತೋರಿಸುವ ಈ ದಿನಮಾನದಲ್ಲಿ ಲಾಭದಾಶೆ ಇಲ್ಲದೆ ವ್ಯವಹಾರವನ್ನು ನಡೆಸುವುದಕ್ಕೆ ಸರಕಾರ ಅಧಿಕ ಗಮನ ಕೊಡಬೇಕೆಂದು ಜೋರುಕೊಡುವುದು ಸ್ವಾಭಾವಿಕ. ವ್ಯವಹಾರದಲ್ಲಿ ಕಾರ್ಯಕ್ಷಮತೆಯ ಉದ್ದೇಶವನ್ನು ಇಟ್ಟುಕೊಂಡು ಅಥವಾ ರಾಷ್ಟ್ರದ ಭದ್ರತೆಯನ್ನು ಕಾಯ್ದುಕೊಳ್ಳುವುದಕ್ಕೋಸ್ಕರ ರಾಷ್ಟ್ರೀಕರಣಕ್ಕಾಗಿ ಒತ್ತಾಯಿಸಿದರೆ ಅದನ್ನು ತಪ್ಪೆಂದು ಹೇಳಲು ಬಾರದು. ಆದರೆ ಕಮ್ಯೂನಿಸ್ಟ ರಾಜ್ಯಗಳಲ್ಲಿರುವಂತೆ ಎಲ್ಲ ವ್ಯವಹಾರವನ್ನೂ ಸರಕಾರದ ಕೈಗೊಪ್ಪಿಸಿಕೊಡುವುದು ಲೋಕದಲ್ಲಿ ಇದುವರೆಗೆ ನಡೆದುಕೊಂಡು ಬಂದ ಸಂಸ್ಕೃತಿಗೆ ಒಗ್ಗುವುದು. ಲಾಭಬಡಕತನವನ್ನು ಸಾಮಾನ್ಯ ವ್ಯಾಪಾರಿಗಳು ತೋರಿಸುತ್ತಿರುವರೆಂಬ ನೆಪಕ್ಕಾಗಿ ರಾಷ್ಟ್ರೀಕರಿಸುವಾಗ ನಮ್ಮ ತಪ್ಪು ಹೆಚ್ಚೆಯನ್ನು ಇಡುತ್ತೇವೆಂಬ ಸಂಶಯ ತಲೆದೋರುತ್ತದೆ. ಅನೇಕ ಜನರು ಲಾಭವೆಂಬ ಶಬ್ದದ ಕಡೆಗೆ ತಿರಸ್ಕಾರದಿಂದ ನೋಡುವುದನ್ನು ಸರಿಯೆಂದು ಹೇಳು ಬಾರದು.

ಲಾಭವನ್ನು ನಾವು ಕೀಳು ದೃಷ್ಟಿಯಿಂದ ನೋಡಬೇಕಾದ ಪ್ರಮೇಯವಿಲ್ಲ. ಲಾಭ ಧರ್ಮಕ್ಕೆ, ಪರಿಶ್ರಮವಿಲ್ಲದೆ ದೊರೆಯುವಂಥ ವಸ್ತುವೂ ಅಲ್ಲ. ಅದು ನ್ಯಾಯ್ಯವೆಂದು ಕಡೆಗಣಿಸುವುದು ಬೇಡ. ಸಾಮಾನ್ಯವಾಗಿ ಹೇಳುವುದಾದರೆ ನಷ್ಟದ ವಿರುದ್ಧ ಹೋರಾಡಿ ಪಡೆದುದೇ ಲಾಭ. ಆದುದರಿಂದ ನಾವೆಷ್ಟು ಲಾಭಗಳಿಸ ಬೇಕಾದರೆ ಆ ಉದ್ಯಮದಲ್ಲಿ ನಾವು ಕಾರ್ಯ ಪ್ರವೃತ್ತರಾಗುವುದು ಮಾತ್ರವಲ್ಲ—ಸದಾಕಾಲ ಶೌರ್ಯದಿಂದ, ಬುದ್ಧಿವಂತಿಕೆಯಿಂದ ಪರಿಸ್ಥಿತಿಯೊಡನೆ ಹೋರಾಡುತ್ತಿರಲೂ ಬೇಕು. ಕೇವಲ ಬಂಡವಾಳ ಮಾತ್ರ ಸಾಲದು, ಮನುಷ್ಯನ ಮೇಧಾ ಶಕ್ತಿಯನ್ನೂ ಉಪಯೋಗಿಸಬೇಕಾಗುವುದು. ಪ್ರತಿಯೊಂದೂ ಉದ್ಯಮದಲ್ಲಿ ಬಂಡವಾಳ ತೊಡಗಿಸುವಾತ ತನ್ನ ರೂಪಾಯಿಗಳು ತಿರುಗಿ ಬಂದಾವೆಂಬ ಪೂರ್ಣ ಆಸೆಯನ್ನು ಇಟ್ಟುಕೊಳ್ಳಲಿಕ್ಕೆ ಸಾಧ್ಯವಿಲ್ಲ. ವ್ಯವಹಾರದಲ್ಲಿ ನಷ್ಟ ಯಾವಾಗಲೂ ಯಾವರೀತಿಯಿಂದಲೂ ಸಂಭವಿಸಬಹುದು. ವೆಚ್ಚ ಕಳೆದು ಮಿಕ್ಕುಳಿದುದೇ ಲಾಭವೆಂದಿಟ್ಟುಕೊಂಡರೆ, ಆ ಲಾಭವು ಹಣತೊಡಗಿಸಿದಾತನಿಗೆ ಕೊಡುವ ಸಂಬಳವೇ ನಿಜ. ಹೊತ್ತು ಅದು ಅನ್ಯಾಯದ ಗಳಿಕೆಯಲ್ಲ

ಸಾಮಾನ್ಯವಾಗಿ ಜನತಾ ಹಿತದೃಷ್ಟಿಯಿಂದ ಅನೇಕ ಸಂಘ ಸಂಸ್ಥೆಗಳು ಲಾಭದಾಸೆ ಇಲ್ಲದೆ ಕೆಲಸ ಮಾಡುವುದಾಗಿ ಪ್ರಕಟಿಸುತ್ತವೆ. ಇದಲ್ಲದೆ ಸ್ವತಃ ಜನತೆ ಉಪಯೋಗಕ್ಕೋಸ್ಕರ ಉತ್ಪಾದನೆ ಇರಬೇಕು; ಹೊರತು ಲಾಭದಾಸೆಗಾಗಿ ಅಲ್ಲ ಎನ್ನುವುದನ್ನು ಕೇಳುತ್ತೇವೆ. ಇವರೆಲ್ಲರ ದೃಷ್ಟಿಯಲ್ಲಿ ಲಾಭ ಬಹಳ ಕೀಳು ತರಗತಿಗೆ ಸೇರಿದ. ರಾಜಕೀಯ ರಂಗದಲ್ಲಿಯೂ ಸಾಮಾಜಿಕ ಕ್ಷೇತ್ರದಲ್ಲಿಯೂ ಲಾಭಪಕ್ಷ ಕುತ್ಸಿತ ಟೀಕೆಯ ಸ್ವಾಗತ ದೊರೆಯುತ್ತದೆ. ಲಾಭವಿಲ್ಲದ ಉದ್ಯಮಗಳನ್ನು ತೊಡಗ ಬೇಕೆಂದು ಹೇಳುವವನು ಹೊಸ ಉದ್ದಿಮೆಗಳನ್ನು ಸ್ಥಾಪಿಸಲಿಕ್ಕಾಗಿಯೇ ಲಾಭದ ಆಸೆ ತೋರಿಸಬೇಕೆಂಬುದನ್ನು ಮರೆಯುತ್ತಾರೆ. ಮನುಷ್ಯ ಸ್ವಂತ ಲಾಭವನ್ನೇ ಧ್ಯೇಯವಾಗಿಟ್ಟುಕೊಂಡು ಪ್ರಾಚೀನ ಕಾಲದಿಂದಲೂ ಬಂದಿರುವನು. ಅನ್ಯರ ಸುಖದುಃಖಗಳ ವಿಚಾರಕ್ಕಿಂತಲೂ ತನ್ನ ಯೋಗಕ್ಷೇಮದ ಬಗ್ಗೆ ಅಧಿಕ ಆಸ್ಥೆ ವಹಿಸಿರುವನು. ಆದುದರಿಂದ ಲಾಭದಾಸೆಯನ್ನು ಮೂಗಿಗೆ ಹಚ್ಚುವ ತುಪ್ಪ ಎನ್ನಬಹುದು. ಅಥವಾ ಕರುವಿನ ಮುಂದೆ ನಾವು ಕೈಯಲ್ಲಿ ಹಿಡಿದು ತೋರಿಸುವ ಹುಲ್ಲು. ಆ ಹುಲ್ಲಿನಾಸೆಗಾಗಿ ಕರುವು ಎದ್ದು ಬಿದ್ದಾದರೂ ಓಡಿ ಬರುತ್ತದೆ. ಇಲ್ಲದಿದ್ದರೆ ನಿಂತಲ್ಲಿಂದ ಕದಲುವುದಿಲ್ಲ.

ಲಾಭದಾಶೆಯಿಂದಲೇ ಜನ ಬಂಡವಾಳವನ್ನು ಕೂಡಿಸುವರು. ಈ ಬಂಡವಾಳವನ್ನು ಒದಗಿಸುವುದಕ್ಕೋ ‘ಬಂಡವಾಳಗಾರ’ರೆಂದು ನೋಡುವರು. ನಾಳಿನ ಸುಖಕ್ಕಾಗಿ ಇಂದು ಸ್ವಲ್ಪ ಮಟ್ಟಿನ ತ್ಯಾಗ ಮಾಡಲು ಸಂಕಲ್ಪಿಸಿದ ತ್ಯಾಗಿಗಳಿಂದಲೇ ಈ ತೆರನ ಬಂಡವಾಳ ಬರುತ್ತದೆಂಬುದನ್ನು ಸ್ಮರಿಸೋಣ. ದೇಶದಲ್ಲಿ ಔದ್ಯಮಿಕ ಅಭಿವೃದ್ಧಿ ಸಂಪನ್ನವಾಗಬೇಕಿದ್ದರೆ ನಾವು ಬಂಡವಾಳವನ್ನು ಹೆಚ್ಚು ಹೆಚ್ಚಾಗಿ ಸ್ವಾಗತಿಸಬೇಕು. ಮಾತ್ರವಲ್ಲ ಕೆಲವು



ಕಾನೂನು ಖಾತೆಯ ಮಂತ್ರಿಗಳಾದ
ಶ್ರೀ. ಕೆ. ಪಿ. ಕುಟ್ಟಿಕೃಷ್ಣನ್ ನಾಯರ್.
(ದಾ ೧೭-೫-೫೩ಕ್ಕೆ ಉಡುಪಿಗೆ ಬರಲಿರುವರು)

ಸಂದರ್ಭಗಳಲ್ಲಿ ನಷ್ಟದ ವಿರುದ್ಧ ಭದ್ರತೆಯನ್ನೂ ಕೊಡಬೇಕಾದೀತು. ಏನಿಲ್ಲದಿದ್ದರೂ ಲಾಭದ ಆಮಿಷ ತೋರಿಸಲೇಬೇಕು. ವ್ಯವಹಾರ ಕುದುರುವುದಕ್ಕೆ ಲಾಭ ತೋರಿಸುವುದೇ ಯೋಗ್ಯ ಉಪಾಯ. ಈ ಕುರಿತ ಉತ್ಸಾಹ ಮಾಡುವವರು ದೇಶದ ಅಭ್ಯುದಯವನ್ನು ಸಿರಾಕರಿಸಿದಂತೆಯೇ.

ಟಾಟಾ, ಬಿರ್ಲಾರಂಥ ಕೆಲವು ಜನ ಕುಬೇರರನ್ನು ತೋರಿಸಿ ಅವರು ಲಾಭಬಡಕರೆಂದ ದೂರುವುದುಂಟು. ಆದರೆ ಅವರು ಸ್ವಂತ ಲಾಭಕ್ಕೋಸ್ಕರವಾಗಿಯಾದರೂ ಮಹೋದ್ಯಮಗಳನ್ನು ತೊಡಗದಿರುತ್ತಿದ್ದರೆ ನಮ್ಮ ದೇಶ ಅಷ್ಟರ ಮಟ್ಟಿಗ ಬಡವಾಗುತ್ತಿತ್ತು ಎಂಬುದನ್ನು ಆ ಸಮಯ ಸ್ಮರಿಸ ಬೇಡವೆ? ಅಮೇರಿಕಾದಂಥ ದೇಶ ಸುಖ ಸಮೃದ್ಧಿಯ ತವರೂರಾಗಲು ಅಲ್ಲಿ ಜನರು ಅಪಾರ ಬಂಡವಾಳವನ್ನು ಕೂಡಿಸಿಕೊಂಡು, ಕೈಗಾರಿಕೆಯ ಅಭಿವೃದ್ಧಿ ಮತ್ತು ಕೃಷಿಯಲ್ಲಿ ಅಭಿವೃದ್ಧಿಯನ್ನು ಕೈಗೂಡಿಸಿದ್ದೇ ಕಾರಣ. ಆದುದರಿಂದ ಒಟ್ಟಿ ಸಿಗುವ ಆಶೆಯಿಂದಾಗಲೀ ಲಾಭದ ದೃಷ್ಟಿಯಿಂದಾಗಲೀ ಹಣವನ್ನು ಕೂಡಿಡುವುದೂ ವಿನಿಯೋಗಿಸುವುದೂ ದೇಶಕ್ಕೆ ಶ್ರೇಯಸ್ಕರ. ಹಾಗೆ ನೋಡಿದರೆ ಬಂಡವಾಳವನ್ನು ತೊಡಗಿಸಿದವಗೆ ನಿಜವಾಗಿ ದೊರೆಯುವ ಹಣವಾದರೂ ಎಷ್ಟು? ಶೇಕಡಾ ಆರು ಇರಬಹುದು. ಉಳಿದೆಲ್ಲ ಹಣ ಸರಕಾರಕ್ಕೆ ಆದಾಯ ತೆರಿಗೆಯ ರೂಪದಲ್ಲಿ ಸಂದಾಯವಾಗುತ್ತದೆ. ಈ ಹಣವನ್ನೇ ತಿರುಗಿ ಉತ್ಪಾದನಾ ಕಾರ್ಯದಲ್ಲಿ ತೊಡಗಿಸಿದರೆ ಅದರಿಂದ ಬೇರೆ ಪ್ರಯೋಜನವಿದೆ.

ಆದರೆ ಕೆಲವೊಂದು ಸಂದರ್ಭದಲ್ಲಿ ಲಾಭದಾಸೆಯಿಂದ ಕೃತ್ರಿಮವಾಗಿ ಸರಕುಗಳ ಬೆಲೆ ಏರಿಕೊಂಡು ಜನಸಾಮಾನ್ಯಕ್ಕೆ ತುಂಬ ತೊಂದರೆಯಾಗಬಹುದು. ಬ್ರೆಜಿಲಿನಲ್ಲಿ ಕಾಫಿಗೆ ಹೆಚ್ಚು ಬೆಲೆ ಬರಬೇಕೆಂದು ಕಾಫಿಯ ಮೈರನ್ನೆಲ್ಲ ಸಮುದ್ರಕ್ಕೆಸೆಗೆಯುವುದುಂಟಂತೆ. ಪೇಟೆಯಲ್ಲಿ ಕಾಫಿ ದೊರೆಯದ ಕಾರಣ, ಇದ್ದ ಬಿದ್ದ ಕಾಫಿಗೆ ಗಿರಾಕಿ ಹೆಚ್ಚುವುದರಿಂದ ಬೆಲೆಯೂ ಹೆಚ್ಚಾಗುತ್ತದೆ. ಲಾಭದಾಸೆ ಮಿತಿಮೀರಿದ ವರ್ತಕರು ಇಂಥ ಕೃತ್ರಿಮ ಕೃತ್ಯಗಳನ್ನು ಗೈಯುವುದುಂಟು. ಇದನ್ನು ನಿವಾರಿಸುವುದಕ್ಕೋಸ್ಕರ ಪೇಟೆಯಲ್ಲಿ ಸ್ಪರ್ಧೆ ಬೆಳೆಯಲು ಅವಕಾಶ ಮಾಡಿಕೊಡುವುದು ಒಳ್ಳೆಯ ಉಪಾಯ. ಲಾಭದಾಸೆಯಿಂದ

(ಮುಂದಿನ ಪುಟ ನೋಡಿರಿ)

ರೋಮಾಂಚಕ ಸಿನೇರಮಾ

ಚಲಚ್ಚಿತ್ರ ಪ್ರಪಂಚದ ಅದ್ಭುತ ಆವಿಷ್ಕಾರ

— ೧ —

ಸಿನೇರಮಾದ ಕುರಿತು ಏನು ವಿಶೇಷ ಸಂಗತಿ ಇದೆ ಎಂದು ಈ ಲೇಖ ಬರೆಯ ತೊಡಗಿದಿರಿ? ಎಂದು ಮೊದಲಿಗೇ ನಿಮ್ಮಲ್ಲಿ ಯಾರಾದರೂ ಕೇಳಬಹುದು. ನಿಜಕ್ಕೂ ಒಂದು ವಿಶೇಷ ವರ್ಣನೆಯನ್ನು ಮಾಡುವ ಬಯಕೆ ಇದೆ ಸಿನೆಮಾ ಇಂದು ಹೊಂದಿರುವ ಪ್ರಗತಿಯ ಪರಿಚಯ ಮಾಡಿಕೊಂಡ ಪಕ್ಷದಲ್ಲಿ ನಿಮ್ಮ ನಮ್ಮಂಥ ಸಾಮಾನ್ಯರ ಮಾತೇನು, ಸ್ವತಃ ಐನ್‌ಸ್ಟೀನರಂಥ ಮೇಧಾವಿ ವಿಜ್ಞಾನಿಗಳೂ ಕ್ಷಣಕಾಲ ದಿಙ್ಮೂಢರಾಗುತ್ತಾರ ಐನ್‌ಸ್ಟೀನರೊಮ್ಮೆ ಪತ್ನೀ ಸಹಿತರಾಗಿ ಥಿಯೇಟರ್ ಹಾಲಿನಿಂದ ಹೊರ ಬಂದವರು ಸುಮ್ಮಗೆ ನಿಂತುಬಿಟ್ಟರು. ಅವರ ಮನಸ್ಸು ಶೂನ್ಯದಲ್ಲಿ ವಿಹರಿಸುತಿತ್ತು. ಹಾಗೆಯೇ ಸುತ್ತಲೂ ದೃಷ್ಟಿ ಹರಿಯಗೊಟ್ಟಾಗ ಬುದ್ಧಿ ಜೀವಿಗಳನೇಕರು ನೆರೆದಿರುವುದನ್ನು ಕಂಡರು ಅಣುಬಾಂಬಿನ ಅನ್ವೇಷಕರಾದ ಡಾ. ಓಪೆನ್ ಹಾಮರರ ಭುಜದ ಮೇಲೆ ಕೈಯಿಟ್ಟು ಐನ್‌ಸ್ಟೀನ್ ನಸುನಕ್ಕರು. "ಓ, ಇದು ಸಿನೇರಮಾ ಅಲ್ಲವೆ?" ಎಂದರು. ಅದಕ್ಕೆ ಹಾಮರ್ "ಹೌದು, ಇದು ಚಲಚ್ಚಿತ್ರದ ಅತ್ಯಾಧುನಿಕ ರೂಪ—ನಿಮ್ಮ ಸಾಪೇಕ್ಷವಾದದ ನವಪಥ!" ಎಂದು ಹೇಳಲು ಅಲ್ಲಿ ಕೂಡಿದ್ದ ಎಲ್ಲರೂ ಗೊಳ್ಳನೆ ನಕ್ಕುಬಿಟ್ಟರು.

೨

ಈ ಬಾರಿ ನ್ಯೂಯೋರ್ಕ್ ನಗರದ ಸುಪ್ರಸಿದ್ಧ ಬ್ರಾಡ್‌ವೇ ಥಿಯೇಟರಿನಲ್ಲಿ ಮೇ ೧೯ರ ವರೆಗಿನ ಎಲ್ಲ ಟಿಕೇಟುಗಳೂ ಮಾರಾಟಗೊಂಡಿವೆ. ಇದಲ್ಲದೆ. ಥಿಯೇಟರಿನ ಆಸುಪಾಸಿನಲ್ಲಿರುವ ಔಷಧವ್ಯಾಪಾರಿಗಳೆಷ್ಟು ಇರುವರೋ ಅವರೆಲ್ಲರಲ್ಲಿ ಡ್ರೆಮೆಮಾಇನ್ ಎಂಬ ಔಷಧ ವಿಶೇಷ ಒಂದರ ಬೇಡಿಕೆಯೂ ಮಾರಾಟವೂ ಬಹಳ ಹೆಚ್ಚು ಕೊಂಡಿದೆ.

ಡ್ರೆಮೆಮಾ ಇನ್ ವಾಯುಯಾತ್ರೆಯಿಂದ ಉಂಟಾದ ಅಸ್ವಾಸ್ಥ್ಯವನ್ನು ದೂರೀಕರಿಸುತ್ತದೆ ಆದರೆ ಬ್ರಾಡ್‌ವೇಯಲ್ಲಿ ವಾಯುಯಾನಗಳು ಹಾರಾಡುತ್ತವೆಯೇ? ಎಂದು ನೀವು ಕೇಳಬಹುದು. ಇಲ್ಲವೆಂಬುದು ನಮ್ಮ ಉತ್ತರ. ಆದರೆ ಅಲ್ಲಿ ತೀರ ನವೀನ ಮಾದರಿಯ ಚಲಚಿತ್ರವೊಂದನ್ನು ಪ್ರದರ್ಶಿಸುತ್ತಿರುವರು. ಅದರಲ್ಲಿ ವಾಯುಯಾನಗಳ ಹಾರಾಟ ತೋರಿಸಲ್ಪಟ್ಟಿದೆ. ಪ್ರೇಕ್ಷಕರು ಈ ಅದ್ಭುತ ದೃಶ್ಯವನ್ನು ನೋಡಿದಾಗ ಸ್ವಯಂ ವಾಯುಮಂಡಲದಲ್ಲಿ ಹಾರಾಡುತ್ತಿರುವ ಅನುಭವ ಪಡೆಯುತ್ತಾರೆ ಆದುದರಿಂದ ವಾಯುಯಾತ್ರೆಯ ಅಸ್ವಾಸ್ಥ್ಯಕ್ಕೆ ಗುರಿಯಾಗುವ ಭಯವಿದೆ. ಇಚೆಗೆ ಈ ಮಾದರಿಯ ಚಲಚ್ಚಿತ್ರದ ಮೂಲಕವೆಸಿಸಿನ ನೌಕಾವಿಹಾರದ ದೃಶ್ಯವೊಂದನ್ನು ತೋರಿಸಿದಾಗ ಪ್ರೇಕ್ಷಕರು ಸ್ತಬ್ಧರಾದರು ಅವರಿಗೆ ತಾವು ಸ್ವತಃ ನೌಕೆಯಲ್ಲಿ ಕುಳಿತು ಚಪಲತರಂಗಗಳ ಮಧುರ ಧ್ವನಿಯ ನಡುವೆ ಸರೋವರದಲ್ಲಿ ಸಂಚರಿಸುತ್ತಿದ್ದೇವೆಂಬ ಶಂಕೆಯವೇ ಕೊನೆಯವರಿಗೂ ಉಳಿಯಿತು.

— ೩ —

ಹೀಗೆ ಲೋಕದಲ್ಲಿ ಚಲಚ್ಚಿತ್ರ ಇತಿಹಾಸದಲ್ಲಿ ಯುಗಾಂತರವನ್ನು ಸೂಚಿಸುವ ನವೀನ ಆವಿಷ್ಕಾರವನ್ನು ಸಿನೇರಮಾ ಎಂದು ಕರೆಯೋಣ ಸಿನೇರಮಾ ಕೇವಲ ನ್ಯೂಯಾರ್ಕ್ ನಗರ ವಾಸಿಗಳ ಕುತೂಹಲಜನಕ ವಿಷಯವಾಗಿ ಉಳಿದಿಲ್ಲ ಲೋಕದ ಅರೆವಾಸಿಗೂ ಹೆಚ್ಚು ಪ್ರದೇಶದ ಜನರು ಸಿನೇರಮಾದ ಆವಿಷ್ಕಾರದ ಕುರಿತು ಆಸ್ಥೆ ತೋರಿಸುತ್ತಿರುವರು ಪ್ರತಿದಿನ ಈ ವಿಷಯದಲ್ಲಿ ಚರ್ಚೆ ಮಾಡುತ್ತಿರುವರು.

ಈ ಆವಿಷ್ಕಾರದ ಪರಿಣಾಮವಾಗಿ ಚಲಚ್ಚಿತ್ರವನ್ನು ಸುಮಾರು ೬೩ ಅಡಿ ಅಗಲ ಮತ್ತು ೨೫ ಅಡಿ ಎತ್ತರದ ಪರದೆಯ ಮೇಲೆ ತೋರಿಸಲಾಗುವುದು ಈ ಪರದೆಯ ರೂಪ ೧೪೬ ಡಿಗ್ರಿ ವರ್ತುಲವಾಗಿರುತ್ತದೆ ಇದರ ದೆಸೆಯಿಂದ ಪ್ರೇಕ್ಷಕರ ದೃಷ್ಟಿಯು ಒಂದು ಅರ್ಧ ವೃತ್ತದ ಮೇಲೆ ಕೇಂದ್ರೀಕರಿಸಲ್ಪಡುತ್ತದೆ ಒಂದು ಗುಡ್ಡದ ಮೇಲೆ ನಿಂತು ದೂರ ದಿಗಂತವನ್ನು ವೀಕ್ಷಿಸಿದಾಗ ನಮ್ಮ ಕಣ್ಣಮುಂದೆ ಒಂದು ಗೋಲಾರ್ಧವು ಗೋಚರಿಸುವ ರೀತಿಯಲ್ಲಿಯೇ ಸಿನೇರಮಾದ ಅರ್ಧ ವರ್ತುಲ ಪರದೆ ಇದೆ ಇದರಿಂದ ಮರಗಿಡಗಳು ಮನೆ ಗುಡಿಸಲುಗಳು, ಎಲ್ಲವೂ ತಮ್ಮ ನಿಜ ಸ್ವರೂಪದಲ್ಲಿ ದೃಷ್ಟಿಗೋಚರವಾಗುತ್ತವೆ. ಅರ್ಥಾತ್ ಅವುಗಳ ಉದ್ದ, ಅಗಲ ಮಾತ್ರವಲ್ಲ ದಪ್ಪವನ್ನೂ ನಾವು ನೋಡಬಲ್ಲೆವು. ಈಗ ನಮ್ಮ ದೇಶದಲ್ಲಿ ಪ್ರದರ್ಶಿಸಲ್ಪಡುವ ಚಲಚ್ಚಿತ್ರಗಳಲ್ಲಿ ಕೇವಲ ಉದ್ದ ಮತ್ತು ಅಗಲದ ಅನುಭವ ಮಾತ್ರ ನಮಗಾಗುತ್ತದೆ. ವಸ್ತುವಿನ ಸ್ಥೂಲ ಅಥವಾ ದಪ್ಪದ ಅರಿವಾಗುವುದಿಲ್ಲ.

— ೪ —

ಸಿನೇರಮಾದಲ್ಲಿ ವಸ್ತುವಿನ ಯಥಾರ್ಥ ರೂಪವನ್ನು ನಾವು ಹೇಗೆ ಕಾಣಬಲ್ಲೆವೆಂಬುದನ್ನು ನೋಡೋಣ— ನಮಗೆ ಎರಡು ಕಣ್ಣುಗಳಿವೆ. ಅವು ಪರಸ್ಪರ ಸೇರಿಕೊಂಡಿರದೆ ಪ್ರತ್ಯೇಕವಾಗಿರುತ್ತವೆ. ಮಾತ್ರವಲ್ಲ ಅವುಗಳು ನೋಡುವ ದೃಷ್ಟಿಕೋಣವೂ ಬೇರೆ ಬೇರೆಯಾಗಿರುತ್ತವೆ ಈ ಎರಡು ಕಣ್ಣುಗಳು ನೋಡುವ ಭಿನ್ನ ಭಿನ್ನ ರೂಪದ ಎರಡು ಆಕೃತಿಗಳನ್ನು ಮಸ್ತಿಷ್ಕವು ಒಂದಾಗಿಸಿ ನಮಗೆ ವಸ್ತುವಿನ ಪರಿಚಯ ಮಾಡಿಕೊಡುತ್ತದೆ ಈ ಸೂತ್ರದ ಆಧಾರದ ಮೇಲೆ ಫ್ರೆಡ್‌ವಾಲರ್ ಎಂಬ ಅಮೇರಿಕನ್ ವಿಜ್ಞಾನಿಯು ಸಂಶೋಧನೆಗಳನ್ನು ನಡೆಸಿದರು. ಸುಮಾರು ೧೫ ವರ್ಷಗಳ ಕಠಿಣ ತಪಸ್ಸಿನ ಫಲವಾಗಿ ಅವರಿಗೊಂದು ಹೊಸರಹಸ್ಯದ ಅರಿವಾಯಿತು. ಈ ತ್ರಿಕೋಣ ಪರಿಣಾಮವನ್ನು ರಜತ ಪರದೆಯ ಮೇಲೆ ಯಶಸ್ವಿಯಾಗಿ ಏಕೆ ಉಪಯೋಗಿಸ ಬಾರದು? ಎಂದವರು ಯೋಚಿಸಿದರು ಇಂಥ ದೃಶ್ಯವನ್ನು ನೋಡುವ ಪ್ರೇಕ್ಷಕನಿಗೆ ತಾನೂ ಅದರ ಅಂಗವೆಂದೇ ಭಾಸವಾಗುತ್ತದಲ್ಲ! ವಾಲರ್ ಅವರಿಗೆ ಹೊಳೆದ ಮಂಚನೆಯು ಸಂಗತಿಯೆಂದರೆ- ನಾವು ನಮ್ಮ ಎರಡು ಕಣ್ಣುಗಳಿಂದ ನೋಡದೆ. ಕಣ್ಣಂಚಿನ ಮೂಲಕ ನೋಡುತ್ತೇವೆ. ಕಡೆಗಣ್ಣಿನ ನೋಟದ ಮಹಿಮೆಯನ್ನು ಅನೇಕ ಕವಿಗಳು ಬಣ್ಣಿಸಿರುವರಷ್ಟೆ! ವಾಲರ್ ಮಹಾಶಯ ತಮ್ಮ ಸಂಶೋಧನೆಯಿಂದ ಇದರ ವೈಜ್ಞಾನಿಕ ಮಹತ್ವವನ್ನು ಕಂಡರು ಪರಿಣಾಮವಾಗಿ ಅವರ ಕೆಲಸ ಬಹಳ ಹಗುರೆನಿಸಿತು.

೫

ಈಗ ಈ ಚಲಚಿತ್ರವನ್ನು ತೆಗೆಯುವ ವಿಧಾನವನ್ನು ನೋಡೋಣ-ಇದಕ್ಕಾಗಿ ಒಂದು ವಿಶೇಷ ಮಾದರಿಯ ಬೇಬ ಗ್ರಾಫ್ (ಅಥವಾ ಕೆಮೆರಾ)ಯನ್ನು ಉಪಯೋಗಿಸುವರು ಇದರಲ್ಲಿ ಮೂರು ಮಸೂರ (ಲೆನ್ಸ್)ಗಳಿರುತ್ತವೆ ಮೂರೂ ಮಸೂರಗಳು ೪೦ ಡಿಗ್ರಿ ದೂರದಲ್ಲಿ ಇಡಲ್ಪಟ್ಟಿವೆ ೩೫ ಮಿಲಿ ಮೀಟರ್ ಪಟಲದ ಮೇಲೆ ಮೂರೂ ಮಸೂರಗಳು ಚಿತ್ರ ಚೆಲ್ಲುವಂತೆ ವ್ಯವಸ್ಥೆ ಇದೆ. ಹೀಗೆ ಮೂರು ಮಸೂರಗಳು ಕೆಡೆಯುವ ಮೂರು ಚಿತ್ರಗಳು ಮೂರು ಪಟಲದ ಮೇಲೆ ಒಮ್ಮೆಗೇ ಬೀಳುತ್ತವೆ. ಹೀಗೆ ಚಿತ್ರಾಂಕನ ಕಾರ್ಯ ಮುಗಿದ ಒಳಿಕ ಮೂರು ಚಿತ್ರ ದರ್ಶಕಗಳ ಮೂಲಕ ಒಮ್ಮೆಗೇ ಮೂರೂ ಚಿತ್ರಗಳನ್ನು ಪರದೆಯ ಮೇಲೆ ಬೀಳಿಸುವರು. ಬಲಗಡೆಯ ಚಿತ್ರದರ್ಶಕವು ಪರದೆಯ ಎಡಭಾಗದ ಮೇಲೆ, ಎಡಭಾಗದ ಚಿತ್ರ ಪ್ರದರ್ಶಕ ಪರದೆಯ ಬಲಭಾಗದ ಮೇಲೆ ಮತ್ತು ಮಧ್ಯಭಾಗದ ಚಿತ್ರದರ್ಶಕ ಪರದೆಯ ನಡುವಿಗೆ ಚಿತ್ರವನ್ನು ಚೆಲ್ಲುತ್ತವೆ ಚಿತ್ರ ದರ್ಶಕಗಳಿಂದ ಹೊರಟ ಬೆಳಕಿನ ಕಿರಣಗಳು ಪೊಲಾರ್‍ಯಾಡ್ ಫಿಲ್ಟರುಗಳ ಮೂಲಕ ಹಾದು ಪರದೆಯ ಮೇಲೆ ಬೀಳುವಂತೆ ವಿಶೇಷ ವ್ಯವಸ್ಥೆ ಇದೆ. ಮಸ್ತಿಷ್ಕದ ನೇತ್ರವು ನಮ್ಮ ಎರಡು ಕಣ್ಣುಗಳ ಚಿತ್ರಗಳನ್ನು ಕ್ರೋಢೀಕರಿಸಿ ವಸ್ತುವಿನ ಯಥಾರ್ಥ ಸ್ವರೂಪದ ಜ್ಞಾನ ಮಾಡಿಸುವಂತೆ ಈ ಪೊಲಾರ್‍ಯಾಡ್ ಫಿಲ್ಟರು ಕೆಲಸಮಾಡುತ್ತವೆ. ಪರದೆಯಿಂದ ಈ ಚಿತ್ರವು ಮರಳಿ ಪ್ರೇಕ್ಷಕನ ಕಣ್ಣಿಗೆ ಬರುವಾಗ ಪ್ರೇಕ್ಷಕರು ಧರಿಸುವ ಪೊಲಾರ್‍ಯಾಡ್ ಕನ್ನಡಕವನ್ನು ಹಾಯುತ್ತಿದೆ ತತ್ಪರಿಣಾಮವಾಗಿ ನಿಸರ್ಗ ಸೌಂದರ್ಯದೊಡನೆ ಪ್ರೇಕ್ಷ

(೧೧ನೇ ಪುಟ ನೋಡಿರಿ)

LIFE INSURANCE SELLING?

"**Canara Mutual**" has demonstrated that life insurance selling can be as respectable a profession as any other Canara Mutual agents enjoy respect and regard from the public

We have at our Head Office a newest psychological test that can state within an hour the chances of success in the field of a prospective agent Educated young men who want to carve out a brilliant independent career will please contact

THE MANAGING DIRECTOR,
The CANARA MUTUAL ASSURANCE CO. Ltd.,
Head Office **UDIPI**, S INDIA ESTD. 1935



ರಾಮತೀರ್ಥ ಬ್ರಾಹ್ಮಿ ತೈಲ

ರೈಜಿ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ. ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

SR
ಸೇವನೆಯ ಆನಂದಕ್ಕೆ,
ಅತ್ಯುತ್ತಮವಾದುದನ್ನೇ ಬಳಕೊಳ್ಳಿರಿ
ಎಸ್. ಆರ್.
ತಾಜಾ ನಿಪ್ಪಾಣಿ ತಂಬಾಕು
ಮತ್ತು
ಬೊಂಬಾಯಿ ಎಲೆ
ಇವುಗಳಿಂದ ತಯಾರಿಸಿದ
ಬೀಡಿಗಳಾಗಿರುತ್ತವೆ
S.R. Beedi Works

ಬಳ್ಳಾರಿಯ ಬಗ್ಗೆ ಮಿಶ್ರಾ ವರದಿಯ ನಿರೀಕ್ಷೆ

ಹತ್ತೈವತ್ತು ಪ್ರಯಾಣಿಕರನ್ನೂ ವೈಮಾನಿಕರನ್ನೂ ಬಲಿಗೊಂಡ ಗಗನಮಂಡಲದ ದುರಂತ ಯಜ್ಞ

ಮೈಸೂರಿನ ಅಡ್ಡಿಯಿಲ್ಲ

ಕನ್ನಡಿಗರ ಮಟ್ಟಿಗೆ ಪ್ರಕೃತ, ನ್ಯಾಯಮೂರ್ತಿ ಮಿಶ್ರರು ಬಳ್ಳಾರಿಯ ಭವಿತವ್ಯದ ಬಗ್ಗೆ ನಡೆಸಿದ ವಿಚಾರಣೆಯೇ ಮಹತ್ವದ ಸಂಗತಿಯಾಗಿರುತ್ತದೆ. ನ್ಯಾಯಮೂರ್ತಿ ಮಿಶ್ರರು ನ್ಯಾಯ ಸಮ್ಮತವಾದ ಒಂದು ನಿರ್ಣಯಕ್ಕೆ ಬರಲು ಅಗತ್ಯವಿರುವ ವಿವರವಾದ ಮಾಹಿತಿಯನ್ನು ಕೆಲವು ದಿನಗಳ ಬಳ್ಳಾರಿ ವಾಸ್ತವ್ಯದಲ್ಲಿ ಮಾಡಿಕೊಂಡಿರುವರು. ಮೈಸೂರು ಸರಕಾರವು ಬಳ್ಳಾರಿಯ ಭವಿತವ್ಯ ಕುರಿತಾಗಿ ಒಂದು ಮನವಿಯನ್ನು ನ್ಯಾಯಮೂರ್ತಿ ಮಿಶ್ರರಿಗೆ ಕಳಿಸಿದುದರಿಂದ ಮೈಸೂರು ಸರಕಾರದೊಡನೆ ಪರ್ಯಾಲೋಚಿಸಲಿಕ್ಕಾಗಿ ಮಿಶ್ರರು ಬೆಂಗಳೂರಿಗೆ ಬಂದು ಮುಖ್ಯಮಂತ್ರಿ ಹನುಮಂತಯ್ಯನವರನ್ನು ಕಂಡರು. ಬಳ್ಳಾರಿಯ ಏಳು ಕನ್ನಡ ತಾಲೂಕುಗಳನ್ನು ಮೈಸೂರಿನೊಡನೆ ಸೇರಿಸುವಾಗ, ಬಳ್ಳಾರಿ ತಾಲೂಕನ್ನು ಆಂಧ್ರಕ್ಕೆ ಸೇರಿಸುವುದೆಂದರೆ ರುಂಡವಿಲ್ಲದ ಮುಂಡದಂತೆ ಬಳ್ಳಾರಿ ಜಿಲ್ಲೆಯ ಕನ್ನಡ ಪ್ರದೇಶದ ಅವಸ್ಥೆಯಾಗುವುದೆಂಬುದಾಗಿ ಮೈಸೂರು ಸರಕಾರ ತನ್ನ ಮನವಿಯಲ್ಲಿ ಸೂಚಿಸಿದೆಯಾಗಿ ಕೇಳುತ್ತೇವೆ. ಬಳ್ಳಾರಿಯ ಏಳು ತಾಲೂಕುಗಳು ಮೈಸೂರಿನೊಡನೆ ಸೇರಿದಲ್ಲಿ ಜಿಲ್ಲಾ ಕೇಂದ್ರವಾಗಿರುವ ಬಳ್ಳಾರಿ ನಗರ ಸಮೇತ ಬಳ್ಳಾರಿ ತಾಲೂಕು ಮೈಸೂರಿಗೆ ಸೇರಬೇಕೆಂಬ ವಾದವನ್ನು ದುರ್ಲಕ್ಷಿಸಲು ಬಾರದು. ಮೈಸೂರು ಬಳ್ಳಾರಿಯನ್ನು ತನ್ನಲ್ಲಿ ಸೇರಿಸಿಕೊಳ್ಳುವುದಕ್ಕೆ ಮಾತ್ರವಲ್ಲ, ಕನ್ನಡದ ಉಳಿದ ಪ್ರದೇಶಗಳಿಗೂ ಆಶ್ರಯ ಸ್ಥಾನವಾಗಿ ಪರಿಣಮಿಸಲು ಒಪ್ಪುವ ಸೂಚನೆ ಈಗ ಹಿಂದಿಗಿಂತ ಹೆಚ್ಚು ಸ್ಪಷ್ಟವಾಗಿರುತ್ತದೆ. ಮೈಸೂರಿನ ಮುಖ್ಯ ಮಂತ್ರಿಗಳು ಈಚೆ ದಕ್ಷಿಣ ಕನ್ನಡ ಜಿಲ್ಲೆಯ ಪ್ರವಾಸ ಮಾಡುತಿದ್ದಾಗ ಸಂಯುಕ್ತ ಕರ್ನಾಟಕ ರಾಜ್ಯ ನಿರ್ಮಾಣಕ್ಕೆ ಮೈಸೂರಿನದು ಏನೂ ಅಡ್ಡಿ ಇಲ್ಲವೆಂದೂ ಕೇಂದ್ರ ಸರಕಾರ ಮನಸ್ಸು ಮಾಡಿದರೆ ಕೇವಲ ೨೪ ತಾಸಿನಲ್ಲಿ ಕರ್ನಾಟಕ ಏಕೀಕರಣ ಕಾರ್ಯ ನೆರವೇರಬಲ್ಲುದೆಂದೂ ಅಭಿಪ್ರಾಯ ಪಟ್ಟರು. ಮುಖ್ಯ ಮಂತ್ರಿಗಳ ಈ ಸ್ಪಷ್ಟ ಹೇಳಿಕೆಯನ್ನು ಕನ್ನಡಿಗರು ಪ್ರೀತಿಯಿಂದ ಸ್ವಾಗತಿಸಿರುವರು.

ಆದರೂ ನಿರಾಶೆಯೇ

ಮೈಸೂರಿನ ಮನೋಭೂಮಿಕೆಯಲ್ಲಿ ಬದಲಾವಣೆಯುಂಟಾದುದು ಕೇಂದ್ರ ಸರಕಾರದ ಗಮನಕ್ಕೂ ಬಂದಿದೆ. ಉಪಗೃಹ ಮಂತ್ರಿಗಳಾದ ಶ್ರೀ ದಾತಾರರು ಶ್ರೀ ಶೈಲಪ್ಪಾಯರ ಪ್ರಶ್ನೆಗೆ ಉತ್ತರ ಕೊಡುವಾಗ ಈ ಸಂಗತಿಯನ್ನು ವಿಶದಗೊಳಿಸಿದರು. ನೆಹರೂರವರು ತಮ್ಮ ಈಚಿನ ಭಾಷಣದಲ್ಲಿ ಮೈಸೂರಿನವರು ಕರ್ನಾಟಕ ಏಕೀಕರಣವಾಗುವುದಕ್ಕೆ ಪ್ರತಿಕೂಲಾಭಿಪ್ರಾಯಹೊಂದಿರುವರೆಂದು ಉಲ್ಲೇಖಿಸಿದ್ದಕ್ಕೆ ಮೈಸೂರಿನ ಮುಖ್ಯಮಂತ್ರಿಗಳು ವ್ಯಕ್ತಗೊಳಿಸುವ ಅಭಿಪ್ರಾಯಕ್ಕೂ ತಾರತಮ್ಯ ಬಹಳ; ಮಾತ್ರವಲ್ಲ ಅವು ಪರಸ್ಪರ ವಿಸಂಗತವಾಗಿವೆ. ಆದರೆ ನಾವು ಹಿಂದೆಯೇ ಹೇಳಿದಂತೆ ಹನುಮಂತಯ್ಯನವರ ಅಭಿಪ್ರಾಯಕ್ಕೆ ಮಹೋನ್ನತ ಸ್ಥಾನವಿದೆಯಾದರೂ ಅವರೊಬ್ಬರೇ ಈ ಸಂಗತಿಯ ನಿರ್ಣಾಯಕರಾಗುವುದು ಸಾಧ್ಯವಿಲ್ಲ. ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ, ಮೈಸೂರಿನ ಶಾಸನ ಸಭೆ ಇವುಗಳೇ ಈ ವಿಷಯದಲ್ಲಿ ಒಂದು ಇತ್ಯರ್ಥಕ್ಕೆ ಬರಬಲ್ಲವು. ಜನತೆಯ ಸಾಮಾನ್ಯಾಭಿಪ್ರಾಯಕ್ಕೂ ಇಲ್ಲಿ ವಿಶಿಷ್ಟ ಸ್ಥಾನವಿದೆ. ಮೈಸೂರು ಕರ್ನಾಟಕ ಏಕೀಕರಣದ ಚಳುವಳಿಯಲ್ಲಿ ಭಾಗವಹಿಸಲು ಇಚ್ಛಿಸುವುದಿಲ್ಲ–ಆದರೆ ಕನ್ನಡದ ಉಳಿದ ನೆಲತನ್ನಲ್ಲಿ ಸಮಾವೇಶಗೊಳ್ಳ ಬಯಸಿದರೆ ಅದಕ್ಕೆ ಅಡ್ಡಿ ಮಾಡುವುದಿಲ್ಲ ಎಂಬುದು ಗಮನಿಸತಕ್ಕ ಅಂಶ. ಹೊರಗಿನ ಕನ್ನಡಿಗರೇ ಸ್ವಂತ ಹಿತಕ್ಕೋಸ್ಕರ ಆತುರ ಹುಮ್ಮಸ್ಸು ತೋರಿಸುತ್ತಿರುವರು. ಸ್ವತಃ ಮೈಸೂರಿನ ಜನತೆಗೆ ಭಾಷಾನುಗುಣ ರಾಜ್ಯದ ರಚನೆಯಂಥ ತಲೆತಿನುಕತನದ ಪ್ರಶ್ನೆಯಲ್ಲ. ಧುಮುಕುವುದು ಬೇಡ ಎಂದು ಇದರ ಅಭಿಪ್ರಾಯವೋ ಏನೋ. ನೆಹರೂರವರು ಪ್ರಾಯಶಃ ಮುಂದಿನ ವರ್ಷಾಂತ್ಯದಲ್ಲಿ ಭಾಷಾವಾರ ರಾಜ್ಯ ನಿರ್ಮಾಣ ಪ್ರಶ್ನೆಯನ್ನು ಕೂಲಂಕಶವಾಗಿ ಚರ್ಚಿಸಿ ಯೋಗ್ಯಮಾರ್ಗದರ್ಶನ ಮಾಡಿಕೊಳ್ಳಲು ನೇಮಿಸಬಹುದಾದ ಸಮಿತಿಯ ಅಗತ್ಯ ಕರ್ನಾಟಕಕ್ಕೆ ಏನೇನು ಇಲ್ಲದಿದ್ದರೂ, ಬೇಗನೇ ಏಕೀಕರಣದ ಕನಸು ನನಸಾಗುವುದೆಂಬ ಭರವಸೆ ಇಲ್ಲ. ಪರಿಸ್ಥಿತಿಗಳು ಹೊಂದುತ್ತಿರುವ ಗತಿ ಬದಲಾವಣೆಯ ಸೂಕ್ಷ್ಮ ಪರಿಶೀಲನೆಯು ಪರಿಣಾಮವಾಗಿ ಹೀಗನ್ನಬೇಕಾಗಿದೆ.

ಪಕ್ಷ ಪ್ರತಿಪಾದನೆ

ನ್ಯಾಯಮೂರ್ತಿ ಮಿಶ್ರರ ಮುಂದೆ ಆಂಧ್ರರಾಗೂ ಕರ್ನಾಟಕದ ಪರವಾಗಿ ೩ ಸಾವಿರ ೩೦೦ ಮನವಿಗಳು ಅರ್ಪಿಸಲ್ಪಟ್ಟಿವೆಯಾಗಿ ತಿಳಿಯುತ್ತದೆ. ಎರಡೂ ಕಡೆಯವರು ತಂತಮ್ಮ ಪಕ್ಷದ ಸಮರ್ಥನೆಯನ್ನು ದಕ್ಷತೆಯಿಂದ ಮಾಡಲು ಪ್ರಯತ್ನಿಸಿರುವರು. ಆದರಲ್ಲೂ ಕನ್ನಡಿಗರ ಪಕ್ಷಪ್ರತಿಪಾದನಾ ವೈಖರಿಯು ಪ್ರಶಂಸನೀಯ ಎನ್ನಬಹುದು. ಬಳ್ಳಾರಿಯ ಭವಿತವ್ಯದ ಮಟ್ಟಿಗೆ ಮಿಶ್ರರ ಮುಂದೆ ಮಂಡಿಸಿದ ಸಾಕ್ಷಗಳೇ ಕೊನೆಯ ದಾಖಲೆಯಾಗುವುದರಿಂದ ಕನ್ನಡಿಗರು ತುಂಬ ಪರಿಶ್ರಮ ಪೂರ್ವಕ ಅಂಕಿ ಸಂಖ್ಯೆಗಳು, ಚಾರಿತ್ರಿಕ ಮತ್ತು ಸಾಂಸ್ಕೃತಿಕ ವಿಷಯಗಳು ಮುಂತಾದುವನ್ನು ಕಲೆಹಾಕಿ ನ್ಯಾಯಮೂರ್ತಿಗಳಿಗೆ ಒಪ್ಪಿಸಿರುವರು. ಮಿಶ್ರರ ಮುಂದೆ ಈಗ ಸಾಕಷ್ಟು ಮಾಹಿತಿಯು ಉಪಲಬ್ಧವಿರುವುದರಿಂದ ಇದನ್ನು ಚೆನ್ನಾಗಿ ಅಭ್ಯಸಿಸಿ ಅವರು ಯೋಗ್ಯ ನಿರ್ಣಯವನ್ನು ಕೈಗೊಳ್ಳುವಂತಾಗಿದೆ. ಮೇ ೧೫ನೇ ದಿನಾಂಕದ ಸುಮಾರಿಗೆ ಮಿಶ್ರರು ಕೇಂದ್ರ ಸರಕಾರಕ್ಕೆ ತಮ್ಮ ವರದಿ ಒಪ್ಪಿಸಬಹುದು. ಮಿಶ್ರರ ಮುಂದಿರುವ ಹೇಳಿಕೆಗಳು, ಮನವಿಗಳು, ಸಾಕ್ಷ್ಯಗಳು ಮುಂತಾದುವುಗಳ ಸ್ಥೂಲ ವಿಮರ್ಶೆಯ ಮೇಲಿಂದ ಹೇಳುವುದಾದಲ್ಲಿ ಕನ್ನಡಿಗರು ಬಳ್ಳಾರಿಯ ಮೇಲೆ ತಮ್ಮ ಹಕ್ಕು ಉಂಟೆಂದುದಕ್ಕೆ ಮನ್ನಣೆ ದೊರೆಯಬಹುದು. ಮಿಶ್ರರಿಗೆ ಒಪ್ಪಿಸಲ್ಪಟ್ಟ ೩೦೦ ಮನವಿಗಳಲ್ಲಿ ೧೭೩ ಕರ್ನಾಟಕದವುಗಳು. ಗ್ರಾಮ ಮತ್ತು ಹಳ್ಳಿಗಳಿಂದ ಮಿಶ್ರರಿಗೊಪ್ಪಿಸಿದ ಬಿನ್ನವತ್ತಳೆಗಳಲ್ಲಿ ಕನ್ನಡಿಗರದೇ ಪ್ರಾಧಾನ್ಯವಿದೆ. ಬಳ್ಳಾರಿ ನಗರದ ಜನಸಂಖ್ಯೆ ಬಿಟ್ಟು ಉಳಿದ ಕಡೆ ಮತ್ತು ಇಡೀ ಜಿಲ್ಲೆಯಲ್ಲಿ ಕನ್ನಡಿಗರೇ ಬಹುಸಂಖ್ಯಾಕರು. [illegible] ಸಂಗತಿಗಳು. ಸಂಶೋಧಕರು, ವ್ಯಾಪಾರೀ ಸಂಘ ಸಂಸ್ಥೆಗಳು ಮುಂದಿಟ್ಟ ಐತಿಹಾಸಿಕ ಮತ್ತು ಆರ್ಥಿಕ ವಿಚಾರಗಳೂ ಕನ್ನಡಿಗರಿಗೆ ಹೆಚ್ಚು ಅನುಕೂಲವಾಗಿವೆ. ಇಂಥದರಲ್ಲಿ ಆಂಧ್ರದ ಕಚೇರಿಗಳನ್ನು ಇಟ್ಟುಕೊಳ್ಳುವುದಕ್ಕೋಸ್ಕರ ಬಳ್ಳಾರಿ ನಗರವನ್ನು ಆಂಧ್ರಕ್ಕೆ ಕೊಡಲೇ ಬೇಕೆಂದೂ ಆಂಧ್ರದ ಮುಖ್ಯ ಭೂಮಿಯೊಡನೆ ನೇರವಾದ ಸಂಪರ್ಕವಿಟ್ಟುಕೊಳ್ಳಬಾರದಂತೆ ಕನ್ನಡಿಗರು ದಾರಿಪಟ್ಟಿಯನ್ನು ಬಿಟ್ಟುಕೊಡಬೇಕೆಂದೂ ಆಂಧ್ರರು ಕೇಳುತ್ತಿರುವುದಕ್ಕೆ ಮಹತ್ವ ಬರಲಿಕ್ಕಿಲ್ಲ; ಮತ್ತು ಮಹತ್ವಕೊಡುವುದೂ ಸರಿಯಲ್ಲ.

ತಲ್ಲಣಿಸುವ ಸುದ್ದಿ

ಈ ದಾಯಾದಿ ಕಲಹದ ಪ್ರಮೇಯ ಬಿಟ್ಟು ಭಾರತವನ್ನು ನೋಡಿದಲ್ಲಿ ನಮ್ಮ ಮನಸ್ಸಿಗೆ ಮೊದಲಿಗೆ ಹೊಳೆಯುವ ಸಂಗತಿ ಈಚೆಗೆ ನಡೆದ ವಿಮಾನ ಅಪಘಾತಗಳು. ವಿಮಾನ ಸಾರಿಗೆಯನ್ನು ರಾಷ್ಟ್ರೀಕರಿಸಿ, ಅವುಗಳ ಆಡಳಿತವನ್ನು ನೋಡಿಕೊಳ್ಳುವುದಕ್ಕಾಗಿ ಕೊರ್ಪೋರೇಶನುಗಳನ್ನು ತೆರೆಯುವ ವಿಧೇಯಕಕ್ಕೆ ಪಾರ್ಲಮೆಂಟು ಸಮ್ಮತಿ ಸೂಚಿಸಿದ ಹಿಂದು ಮುಂದಿನಲ್ಲಿ ಈ ಭೀಕರ ದುರ್ಘಟನೆಗಳು ನಡೆದವು. ಕಲ್ಕತ್ತದಿಂದ ದಿಲ್ಲಿಗೆ ಹೋಗುತ್ತಿದ್ದ ಬ್ರಿಟಿಷ ಸಾಗರೋತ್ತರ ವಿಮಾನ ಕಾರ್ಪೊರೇಶನಿನ ಕೊಮೆಟ್ ಲೈನರು ಬಿರುಗಾಳಿ ಹಾಗು ಮಳೆಯಿಂದಾಗಿ ಮುರಿದು ಬಿದ್ದುದಲ್ಲದೆ ಅದರಲ್ಲಿ ಪ್ರಯಾಣಿಸುತಿದ್ದ ೪೩ ಮಂದಿಸ್ತ್ರೀಪುರುಷರೂ ಮತ್ತು ವೈಮಾನಿಕರೂ ಮೃತ್ಯು ಹೊಂದಿದರು. ಮೊನ್ನೆ ದಿಲ್ಲಿಯಿಂದ ಮುಂಬಯಿಗೆ ಹಾರುತಿದ್ದ ಏರ್ ಇಂಡಿಯಾದ ಡಕೋಟಾ ವಿಮಾನವು ದಿಲ್ಲಿ ನಿಲ್ದಾಣದಿಂದ ಅನತಿ ದೂರದಲ್ಲಿಯೇ ಬೆಂಕಿಗೆ ಬಲಿಯಾಗಿ ಭಸ್ಮ ಹೊಂದಿತು. ಇದರಲ್ಲಿ ೨೨ ಮಂದಿ ಸಾವಿಗೀಡಾದರು. ಅದೇ ದಿನ ಮುಂಬಯಿಯಿಂದ ಬೆಂಗಳೂರಿಗೆ ಹಾರಲಿದ್ದ ವಿಮಾನ [illegible]ಸುವಾಗಲೇ ಅವ್ಯವಸ್ಥೆಯ ಮೂಲಕ ಆಕಾಶದಲ್ಲಿ ಏರಲಾರದೆ ಹೋಗಿ, ಅಲ್ಪ ಅಪಘಾತಕ್ಕೆ ಗುರಿಯಾಯಿತು. ಈ ರೀತಿ ವಿಮಾನ ಅಪಘಾತಗಳು ನಡೆದರೆ ವಿಜ್ಞಾನವು ಶೀಘ್ರ ಉಡ್ಡಾಣದ ಸೌಲಭ್ಯವನ್ನು ಒದಗಿಸಿಕೊಟ್ಟಾಗ್ಯೂ ಅದನ್ನು ನಂಬಿ ಹಾರಲು ಧೈರ್ಯ ಬರುವುದಿಲ್ಲ. ಆದ ಮರಿಂದ ಭಾರತ ಸರಕಾರದವರು ನೇಮಿಸಿರುವ ವಿಚಾರಣಾ ಸಮಿತಿಗಳು ಅಪಘಾತಗಳು ಎಷ್ಟು ಮಾತ್ರಕ್ಕೂ ನಡೆಯದೆ ಪ್ರವಾಸವು ಸುಖಕರವಾಗುವಂತೆ ಸೂಚನೆಗಳನ್ನು ಮಾಡಬೇಕೆಂದು ಅಪೇಕ್ಷಿಸುವುದು ನ್ಯಾಯ. ಭಾರತದ ವಿಮಾನಗಳು ಅಪಘಾತಕ್ಕೀಡಾಗುದು ಈಚೆಗೆ ಕಡಿಮೆಯಾಗಿದ್ದರೂ ಹೃದಯ ವಿದ್ರಾಯಕವಾದ ಸುದ್ದಿಗಳನ್ನು ಕೇಳುವ ಸೌಭಾಗ್ಯವುಂಟಾಗಬಂತೆ ದಕ್ಷತೆಯನ್ನು ಸಂಬಂಧಿಸಿದವರು ತೋರಿಸಬೇಕು. ವಿಮಾನಗಳಲ್ಲಿ ಹಾಂ.ವಾಗ ಸ್ಯೆನಿಕರು ಪೆರಚೂಟ್ ಕೊಡೆಗಳನ್ನು ಉಪಯೋಗಿಸಿ ಗಂಡಾಂತರ ಪ್ರಸಂಗದಲ್ಲಿ ರಕ್ಷಿಸಿಕೊಳ್ಳುವಂತೆ, ಸಾಮಾನ್ಯ ಪ್ರಯಾಣಿಕರು ಮಾಡಲಾರರೇ ಎಂಬುದನ್ನು ವಿಚಾರಿಸಬೇಕು.

ZANDU ಝಂಡೂ ಫಾರ್ಮಸಿಯ ಮನೆಮದ್ದುಗಳನ್ನೇ ಸದಾ ಉಪಯೋಗಿಸಿರಿ.

ಝಂಡೂ ಬ್ರಾಹ್ಮೀ ಹೇರ್ ಆಯಿಲ್ / **Zandu Brahmi Hair Oil** — ಮೆದುಳಿಗೆ ತಂಪು– ಮನಸ್ಸಿಗೆ ಉಲ್ಲಾಸವೀಯುವುದು
1 ಪೌಂಡಿಗೆ ರೂ. 3–8–0 ಕಾಲು ರಾತ್ತಲಿಗೆ ರೂ. 1-

ಝಂಡೂ ಸರಸಪರಿಲ್ಲಾ / **Zandu Sarasaparilla** — ರಕ್ತವನ್ನು ಶುದ್ಧಗೊಳಿಸಲು ಹೆಸರುವಾಸಿಯಾದುದು. ಚರ್ಮರೋಗಗಳನ್ನು ಗುಣಪಡಿಸಬಲ್ಲುದು. 4 ಔನ್ಸ್ ಬಾಟ್ಲಿ 1ರ ರೂ. 1–5–0

ಝಂಡೂ ಬಾಲಾಮೃತ / **Zandu Balamrutam** — ಅನಾರೋಗ್ಯವುಳ್ಳ ಮಕ್ಕಳಿಗೆ ಆದರ್ಶ ಟಾನಿಕ್ 4 ಔನ್ಸ್ ಬಾಟ್ಲಿ 1ರ ರೂ. 1–0–0

ಝಂಡೂ ಬಾಮ್ / **Zandu Balm** — ತಲೆ ಸಿಡಿತ ಮೊದಲಾದ ಬೇನೆಗಳಿಗೆ 1 ಸೀಸೆಗೆ ರೂ. 1-

ದಕ್ಷಿಣಕನ್ನಡದಲ್ಲಿ ನಮ್ಮ ಸ್ಟಾಕಿಸ್ಟರು.—

ಮಂಗಳೂರು. ಷಾ ಕಂಪೆನಿ, ಹಂಪನಕಟ್ಟೆ.
ಉಡುಪಿ: ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್. ಇನ್ಸ್ಟಿಟ್ಯೂಟ್ ಲಿಮಿಟೆಡ್.
ಕಾರ್ಕಳ: ವಿ. ವಿ. ಶೆಣೈ ಮತ್ತು ಕಂಪೆನಿ.
ಪುತ್ತೂರು: ಶೈ ಫಾರ್ಮಸಿ.

ತಿರುವಾಂಕೂರು ಮತ್ತು ಕೊಚ್ಚಿ ಏಜಂಟರು
ಧಿರಾಜ್‌ಲಾಲ್ ಬ್ರದರ್ಸ್, ಸ್ಟೋರೋಡು, ಮಟ್ಟಾಂಚೇರಿ, ಕೊಚ್ಚಿ.

ರಚನಾತ್ಮಕ ಕಾರ್ಯದಿಂದ ರಾಷ್ಟ್ರದ ಶ್ರೇಯಸ್ಸು

ಕೇಂದ್ರಸರಕಾರ ಧನಸಹಾಯಮಾಡದ ಹೊರತು ಸುಧಾರಿಸದ ಮದ್ರಾಸಿನ ಆರ್ಥಿಕ ಪರಿಸ್ಥಿತಿ

ಘರ್ಷಣೆ ಮುಗಿಯಿತು

ಪಾರ್ಲಿಮೆಂಟಿನ ಎರಡು ಮನೆಗಳ ನಡುವೆ ಘರ್ಷಣೆಗೆ ಕಾರಣವಾದ ಘಟನೆಗಳ ಹಿನ್ನೆಲೆಯನ್ನು ಪ್ರಧಾನಿ ನೆಹರೂರವರು ಒಂದು ಹೇಳಿಕೆಯ ಮೂಲಕ ವಿವರಿಸಿ, ಎರಡೂ ಮನೆಗಳ ಸ್ಥಾನಮಾನ ಒಂದೇ ಎಂದು ಸ್ಪಷ್ಟೀಕರಿಸಿದುದರಿಂದ ಆ ಪ್ರಕರಣ ಅಷ್ಟಕ್ಕೆ ಮುಕ್ತಾಯಗೊಂಡಿತು. ಕಾಯಿದೆ ಮಂತ್ರಿ ಶ್ರೀ ವಿಶ್ವಾಸರು ಲೋಕಸಭಾಧ್ಯಕ್ಷರ ಗೌರವಕ್ಕೆ ಕುಂದುಂಟಾಗುವಂತೆ ರಾಜ್ಯ ಪರಿಷತ್ತಿನಲ್ಲಿ ಮಾತನಾಡಿದರೆಂಬ ಆರೋಪವೇ ಈ ಪ್ರಕರಣದ ಮೂಲವಾದುದರಿಂದ, ಶ್ರೀ ವಿಶ್ವಾಸರು ತಾನು ತಪ್ಪು ನುಡಿದಿದ್ದರೆ ಅದಕ್ಕಾಗಿ ಕ್ಷಮೆ ಕೇಳಿದರು. ಸಭಾಧ್ಯಕ್ಷರನ್ನು ಅವಮಾನಕ್ಕೀಡುಮಾಡುವ ದುರುದ್ದೇಶ ತಿಲಾಂಶದಷ್ಟು ಕಾಯಿದೆ ಮಂತ್ರಿಗಳಿಗಿದ್ದಿಲ್ಲವೆಂಬುದು ತೀರ ಸ್ಪಷ್ಟವಾಗಿದ್ದರೂ ಪಾರ್ಲಿಮೆಂಟಿನ ಸದಸ್ಯರು ಅದನ್ನು ಸುಲಭದಲ್ಲಿ ಬಿಡಲಿಲ್ಲ. ಮಹಾರಾಷ್ಟ್ರ ಸಂಚಾರದಿಂದ ವಾಪಸು ಬಂದ ನೆಹರೂರವರು ಈ ಸಂಗತಿಯ ಪೂರ್ವೋತ್ತರವನ್ನೆಲ್ಲ ತಿಳಿದುಕೊಂಡು ಸದಸ್ಯರ ಮನದಲ್ಲಿರಬಹುದಾದ ಸಂಶಯಗಳನ್ನು ಸ್ಪಷ್ಟಮಾತುಗಳಿಂದ ನಿವಾರಿಸಿದರು. ಲೋಕಸಭೆ ಅಥವಾ ರಾಜ್ಯಪರಿಷತ್ತುಗಳಲ್ಲಿ ಒಂದೊಂದೇ ಪಾರ್ಲಿಮೆಂಟೆಂದು ಕರೆಯಲ್ಪಡುವುದಿಲ್ಲ ಇವೆರಡು ಪರಸ್ಪರ ಪೂರಕಾಂಗಗಳು; ಮತ್ತು ಎರಡೂ ಕೂಡಿಕೊಂಡಲ್ಲಿ ಮಾತ್ರ ಭಾರತದ ಪಾರ್ಲಿಮೆಂಟೆಂದು ಹೇಳಲ್ಪಡುವುವು. ಈ ಮಾತನ್ನು ಎಲ್ಲ ಸದಸ್ಯರೂ ಗಮನದಲ್ಲಿಟ್ಟುಕೊಂಡು ಪರಸ್ಪರ ಸಹಕಾರ ಬುದ್ಧಿಯನ್ನು ತೋರಿಸಬೇಕೆಂದು ನೆಹರೂ ವಿನಂತಿಸಿದರು. ಲೋಕಸಭೆಗೆ ಹಣಕಾಸಿನ ಮಸೂದೆಗಳ ಸಂಬಂಧದಲ್ಲಿ ವಿಶೇಷಾಧಿಕಾರಗಳಿವೆ; ಮತ್ತು ಯಾವ ಮಸೂದೆಯು ಹಣಕಾಸಿನ ಮಸೂದೆಯ ಕಕ್ಷೆಯಲ್ಲಿ ಬರುತ್ತದೆಂಬುದನ್ನು ಸಭಾಧ್ಯಕ್ಷರೇ ನಿರ್ಣಯಿಸಬಲ್ಲರು. ಆದರೆ ಮೊದಲಿಂದಲೂ ಸಭಾಧ್ಯಕ್ಷರು ಸ್ವೇಚ್ಛೆಯಿಂದ ಕಾಯಿದೆ ಮಂತ್ರಿಗಳ ಮತ್ತು ಅವರ ಶಾಖೆಯ ಸಲಹೆ ಕೇಳುತ್ತ ಬಂದಿರುವರು. ಈ ವಿಶಿಷ್ಟ ಪ್ರಕರಣದಲ್ಲಿ ಕಾಯಿದೆ ಶಾಖೆಯ ಸಲಹೆ ಕೇಳಲಾಗಿದೆ. ಆದರೆ ಸ್ವತಃ ಕಾಯಿದೆಮಂತ್ರಿಗಳಿಗೆ ಈ ಸುದ್ದಿ ತಿಳಿದಿರಲಿಲ್ಲ. ಮಂತ್ರಿಗಳೊಡನೆ ಹಿಂದಿನಿಂದ ವಿಚಾರಿಸುತಿದ್ದರೆ ಸದಸ್ಯರ ಸಂಶಯ ನಿವಾರಣೆಯಾಗುತಿತ್ತು. ಹಾಗೆ ಮಾಡದೆ ಹಕ್ಕು ಬಾಧ್ಯತೆಗಳ ಪ್ರಶ್ನೆಯನ್ನೆತ್ತಿದ್ದರಿಂದ ಕಾಯಿದೆ ಮಂತ್ರಿಗಳು ಇಕ್ಕಟ್ಟಿನಲ್ಲಿ ಬಿದ್ದರು. ರಾಜ್ಯ ಪರಿಷತ್ತಿನ ಆದೇಶದ ಮನೆಯೆಂದರೆ ಲೋಕ ಸಭೆಯ ಕೇಳಿಕೆಯನ್ನು ಉಲ್ಲಂಘಿಸುವುದೆಂಬ ಮಟ್ಟಿಗೆ ಅವರು ದ್ವಂದ್ವದಲ್ಲಿ ಬಿದ್ದರು. ಈ ಪೇಚಿಗೆ ಕಾರಣರಾದುದಕ್ಕೆ ಕಾಯಿದೆ ಮಂತ್ರಿಗಳಿಗೆ ವಿಷಾದವೆನಿಸಿದೆ ಎಂದು ಮುಂತಾಗಿ ನೆಹರೂ ನುಡಿದುದರಿಂದ ಎಲ್ಲವೂ ತಿಳಿಗೊಂಡಿತು.

ಭಾರತ ಸೇವಕ ಸಮಾಜ

ಕಳೆದ ಅಗೋಸ್ತು ತಿಂಗಳಲ್ಲಿ ಭಾರತ ಸೇವಕ ಸಮಾಜದ ರಚನೆಯು ಕಾರ್ಯವನ್ನು ತೊಡಗಿದ್ದರೂ ಇದರ ಚಟುವಟಿಕೆಯು ಸಾಕಷ್ಟು ಕ್ಷಿಪ್ರಗತಿಯಿಂದ ನಡೆದಿರುವುದಿಲ್ಲ. ಪೂರ್ಣ ರೂಪದ ಸಂಘಟನೆ ಇನ್ನು ನೆರವೇರಬೇಕಾಗಿದೆ. ಒಡಿಸಾ ಮತ್ತು ಪೆಪ್ಸುಗಳಲ್ಲಿ ನಿಯಂತ್ರಕರನ್ನು ಇಷ್ಟರವರೆಗೆ ನೇಮಿಸಿರುವುದಿಲ್ಲ. ಸಾಮಾನ್ಯವಾಗಿ ಭಾರತ ಸೇವಕ ಸಮಾಜದ ಅಧ್ಯಕ್ಷರಾದ ಶ್ರೀ ಜವಾಹರಲಾಲ ನೆಹರೂರವರು ಈ ನಿಯಂತ್ರಕರನ್ನು ನೇಮಿಸುವರು. ಮತ್ತು ಪ್ರತಿಯೋರ್ವ ನಿಯಂತ್ರಕರು ತಂತಮ್ಮ ಕೆಳಗಿನ ಘಟನೆಗಳನ್ನು ನೇಮಿಸುವರು. ಈ ಸಮಾಜವು ವಿಧಾಯಕ ಕಾರ್ಯಗಳಿಗೆ ಮೀಸಲಾಗಿರುವುದರಿಂದ ದಕ್ಷರಾದ ಜನರನ್ನೆ ಆರಿಸಬೇಕಾಗಿದೆ ಇದೇ ಸಮಾಜದ ಕೆಲಸವು ಮುಂದಗತಿಯಿಂದ ಸಾಗಲು ಕಾರಣ. ಜನರು ಸ್ವೇಚ್ಛೆಯಿಂದ ಅಧಿಕ ಸಂಖ್ಯೆಯಲ್ಲಿ ಈ ಸಮಾಜದ ಸದಸ್ಯರಾಗಿ ದುಡಿಯಲು ಮುಂಬಂದಿರುವುದು ಸಂತೋಷ. ಸಮಾಜವು ಎಂಟು ಅಂಶಗಳ ಕಾರ್ಯಪ್ರಣಾಳಿಯೊಂದನ್ನು ಪ್ರಾಶಸ್ತ್ಯಾನುಕ್ರಮ ರೀತಿಯಲ್ಲಿ ನಿರ್ಧರಿಸಿದೆ ಪಂಚವಾರ್ಷಿಕ ಯೋಜನೆಯ ಕುರಿತು ಜನರಿಗೆ ಯೋಗ್ಯ ಮಾಹಿತಿಯನ್ನೂ ಶಿಕ್ಷಣವನ್ನೂ ಕೊಡುವದು ಮತ್ತು ಸ್ಥಳೀಯ ಸರ್ವೆಯನ್ನು ನಡೆಸಿ ನಿಸರ್ಗ ಸಂಪತ್ತಿನ ಪ್ರಮಾಣವನ್ನೂ ಅದನ್ನು ಉಪಯೋಗಿಸಿಕೊಳ್ಳುವ ಬಗೆಯನ್ನೂ ನಿರ್ಧರಿಸುವುದು ಮುಖ್ಯ ಹೆಜ್ಜೆ. ಕಳೆದ ವಾರ ಬೇರೆ ಬೇರೆ ರಾಜ್ಯಗಳಿಂದ ಬಂದ ನಿಯಂತ್ರಕರು ಧಿಲ್ಲಿಯಲ್ಲಿ ಸಭೆ ಸೇರಿ ತಮ್ಮ ಮುಂದಿನ ಕಾರ್ಯಕ್ರಮದ ರೂಪರೇಷೆಯ ಕುರಿತು ವಿಚಾರ ಮಾಡಿದರು. ಪ್ರಧಾನಿ ನೆಹರೂ ಈ ನಿಯಂತ್ರಕರನ್ನು ಉದ್ದೇಶಿಸಿ ಮಾತನಾಡುತ್ತಾ "ನಿಮ್ಮ ನಿಮ್ಮ ಕ್ಷೇತ್ರದಲ್ಲಿ ಎಷ್ಟು ಜನರು ಕೆಲಸಕ್ಕಾಗಿ ಮುಂದೆಬಂದಿರುವರೆಂಬುದಕ್ಕಿಂತಲೂ ಎಷ್ಟು ಕೆಲಸ ನಡೆಯಿತೆಂಬ ಕುರಿತು ನನಗೆ ವಿಶೇಷ ಆಸ್ಥೆ" ಎಂದು ಹೇಳಿದರು. ನಮ್ಮ ಕೈಕಾಲುಗಳ ಬಲದ ಮೇಲೆ ನವಭಾರತದ ನಿರ್ಮಾಣ ಮಾಡುವೆವೆಂಬ ಛಲವು ಜನರಲ್ಲಿ ಮೂಡುವಂತೆ ಹೊಸ ವಿಚಾರವನ್ನು ರಭಸದಿಂದ ಪ್ರಚುರಗೊಳಿಸಬೇಕು. ತಮ್ಮ ನಿತ್ಯ ವ್ಯವಹಾರಗಳನ್ನು ಯೋಗ್ಯ ರೀತಿಯಲ್ಲಿ ಮುಗಿಸಿದ ಬಳಿಕ ಮಿಗುವ ಸಮಯದಲ್ಲಿ ಒಂದೆರಡು ತಾಸುಗಳ ಸಮಯವಾದರೂ ಶಾರೀರಕ ಶ್ರಮವನ್ನು ಮಾಡಲು ಜನರಿಗೆ ಬೋಧಿಸಬೇಕು. ಇದಕ್ಕೆ ವಿಚಾರ ಕ್ರಾಂತಿಯಾಗುವುದು ಅವಶ್ಯವಿದೆ. ಕಾಂಗ್ರೆಸಿಗರು ಹಿನ್ನೆಲೆಯಲ್ಲಿ ನಿಂತು ಇದನ್ನೆಲ್ಲ ವಿಚಾರಿಸಿಕೊಳ್ಳಬೇಕು. ಭಾರತದಲ್ಲಿ ತುಂಬಿರುವ ಶೂನ್ಯದ ಸ್ಥಾನದಲ್ಲಿ ಸುಖ ಸಮೃದ್ಧಿಯನ್ನು ತರಲೆತ್ನಿಸಬೇಕು.

ಮದ್ರಾಸಿನ ಆರ್ಥಿಕ ದುಸ್ಥಿತಿ

ಮದ್ರಾಸು ರಾಜ್ಯದ ಆರ್ಥಿಕ ಪರಿಸ್ಥಿತಿ ಹೇಗಿದೆಂಬುದನ್ನು ಅರ್ಥ ಸಚಿವರಾದ ಶ್ರೀ ಸಿ. ಸುಬ್ರಹ್ಮಣ್ಯಮರು ಈಚೆಗೆ ವಿವರಿಸಿರುವರು ಅದರಂತೆ ಈ ವರ್ಷದ ಮಾರ್ಚ ಅಂತ್ಯಕ್ಕೆ ೧೭ ಕೋಟಿ ರೂಪಾಯಿಗಳ ಕೊರತೆ ಇದೆ. ಈ ಕೊರತೆಯುಂಟಾಗುವುದಕ್ಕೆ ನೈಸರ್ಗಿಕವಾದ ವಿಪತ್ತುಗಳು ಮುಖ್ಯ ಕಾರಣ. ಐದಾರು ವರ್ಷಗಳಿಂದ ರಾಯಲಸೀಮೆಯಲ್ಲಿ ಮಳೆ ಬರದೆ ಜನರು ಕಷ್ಟನಷ್ಟಗಳಿಗೆ ಈಡಾದರೆ ಈ ವರ್ಷ ತಂಜಾವೂರಿನಲ್ಲಿ ಬಿರುಗಾಳಿಯಿಂದಾಗಿ ಮನೆಮಾರುಗಳೂ ಬೆಳೆಯೂ ಹಾನಿಗೀಡಾದುವು. ವಿಪತ್ತಿಗೆ ತುತ್ತಾದವರನ್ನು ಪೋಷಿಸುವ ಹೊಣೆ ಮತ್ತು ಕಂದಾಯದ ರಿಯಾಯತಿ ಮುಂತಾದುವುಗಳು ರಾಜ್ಯ ಸರಕಾರದ ಹೆಗಲೇರಿದುದರಿಂದ ಮದ್ರಾಸಿನ ಆರ್ಥಿಕ ಪರಿಸ್ಥಿತಿ ಈಗಿನ ವಿಷಮ ಮಟ್ಟಕ್ಕೆ ಕುಸಿದಿದೆ. ಕೇಂದ್ರ ಸರಕಾರವು ಬರಗಾಲ ಪೀಡಿತ ಪ್ರದೇಶಗಳಲ್ಲಿ ಚಿಕ್ಕ ಮಕ್ಕಳು ಮತ್ತು ಅಂಗಹೀನರಿಗಾಗಿ ನಡೆಸುತಿದ್ದ ಧರ್ಮಾರ್ಥ ಛತ್ರಗಳ ವೆಚ್ಚದಲ್ಲಿ ಅರ್ಧದಷ್ಟನ್ನು ವಹಿಸಿತು; ಮತ್ತು ಎರಡು ಕೋಟಿ ರೂಪಾಯಿಗಳ ನೆರವು ನೀಡಿತು ಆದರೆ ಈ ಸಹಾಯ ರಾಜ್ಯ ಸರಕಾರದ ಭಾರವನ್ನು ಗಣನೀಯವಾಗಿ ಇಳಿಸಲಿಲ್ಲ.

ಪಂಚವಾರ್ಷಿಕ ಯೋಜನೆಯಂತೆ ಅನೇಕ ಬಂಡವಳ ವೆಚ್ಚದ ಕಾರ್ಯಗಳು ನಡೆಯುತ್ತಿವೆ; ಅವುಗಳಿಗೆ ಹಣದ ಆಗತ್ಯವಿದೆ. ಕೇಂದ್ರ ಸರಕಾರ ಮದ್ರಾಸಿನ ಬಿನ್ನಹವನ್ನು ಮನ್ನಿಸಿ ೧೭ ಕೋಟಿ ರೂಪಾಯಿಗಳ ಸಾಲ ಕೊಟ್ಟಿದೆ. ಒಂದು ರೀತಿಯಿಂದ ಇದನ್ನು ಮಹದುಪಕಾರವೆಂದು ಪ್ರಶಂಸಿಸಿದರೂ — ರಾಜ್ಯ ಸರಕಾರದ ವಿಶಿಷ್ಟ ಪರಿಸ್ಥಿತಿಯನ್ನು ಲಕ್ಷಿಸಿ ಈ ಎಲ್ಲ ಹಣವನ್ನು ಸಹಾಯ ಧನವೆಂದು ಮನ್ನಿಸಿದಲ್ಲಿ ಅದು ಇನ್ನೂ ಹೆಚ್ಚಿನ ಉಪಕಾರವಾಗುತ್ತದೆ. ಮದ್ರಾಸು ರಾಜ್ಯದಲ್ಲಿರುವಂಥ ಅಸಾಧಾರಣ ಪರಿಸ್ಥಿತಿಯು ಬೇರೆಲ್ಲಿಯೂ ಇರುವುದಿಲ್ಲ. ಪಾರ್ಲಿಮೆಂಟಿನ ಮದ್ರಾಸೀ ಸದಸ್ಯರೂ ಶಾಸನ ಸಭಾ ಸದಸ್ಯರೂ ಕೇಂದ್ರ ಸರಕಾರವು ಈ ವಿಷಯವನ್ನು ಗಂಭೀರವಾಗಿ ಆಲೋಚಿಸಿ, ರಾಜ್ಯ ಸರಕಾರದ ಭಾರ ಇಳುಹಬೇಕೆಂದು ಪದೇ ಪದೇ ಕೇಳಿಕೊಂಡಿರುವರು. ಈ ವಿಷಯದಲ್ಲಿ ತಮಿಳುನಾಡಿನ ಕೆಲ ಪ್ರದೇಶಗಳ ಪರಿಸ್ಥಿತಿಯನ್ನು ಅರಿತುಕೊಳ್ಳಬಯಸಿ ಬಂದ ಕೇಂದ್ರ ಮಂತ್ರಿಮಂಡಳದ ಶ್ರೀ ಕೃಷ್ಣಮಾಚಾರಿಯವರು ಅನುಕೂಲಾಭಿಪ್ರಾಯವನ್ನು ತೋರಿಸಿ, ರಾಜ್ಯ ಸರಕಾರದ ಕೇಳಿಕೆಯನ್ನು ಎತ್ತಿ ಹಿಡಿಯುವರೆಂದು ಹಾರೈಸೋಣ. ಭಾರತ ಸರಕಾರ ಮದ್ರಾಸಿನ ಬೇಡಿಕೆ ನ್ಯಾಯವಾದುದೆಂದು ಮನಗಾಣುವಂತಾದರೆ ಹೊಸ ವರ್ಷಕ್ಕೆ ಚೊಕ್ಕ ಲೆಕ್ಕವನ್ನು ಪ್ರಾರಂಭಿಸಬಲ್ಲೆವು.

ಭೂದಾನ ಯಜ್ಞದ ಪ್ರಗತಿ

ಆಚಾರ್ಯ ವಿನೋಬಾ ಭಾವೆಯವರು ಹೈದರಾಬಾದಿನಲ್ಲಿ ೧೯೫೧ರಲ್ಲಿ ಸಂಚರಿಸುತಿದ್ದಾಗ ಅವರಿಗೆ ಭೂದಾನ ಯಜ್ಞದ ವಿಚಾರವು ಸ್ಫುರಿಸಿತು. ಕೆಲವು ಹರಿಜನರೊಡನೆ ಅವರ ಜೀವನಕ್ಕೋಸ್ಕರ ಭೂಮಿಯ ವಿಚಾರ ಮಾತಾಡುವಾಗ ಅಲ್ಲಿದ್ದ ಓರ್ವ ಮಹನೀಯರು ಒಂದನೂರು ಎಕ್ರೆಗಳಷ್ಟು ಜಮೀನನ್ನು ತಾವು ದಾನ ಮಾಡುವುದಾಗಿ ಸಾರಿದರು. ಹೀಗೆ ಪ್ರಾರಂಭಿಸಲ್ಪಟ್ಟ ಭೂದಾನಯಜ್ಞ ಚಳುವಳಿಯು ಇಂದು ವ್ಯಾಪಕಸ್ವರೂಪವನ್ನು ತಳೆದಿದೆಯಲ್ಲದೆ ಅಹಿಂಸಾತ್ಮಕ ಕ್ರಾಂತಿಯಲ್ಲಿ ಶ್ರದ್ಧೆಯುಳ್ಳ ಎಲ್ಲ ಜನರನ್ನೂ ತನ್ನೆಡೆಗೆ ಆಕರ್ಷಿಸಿಕೊಂಡಿರುತ್ತದೆ. ಅನೇಕ ರಾಜ್ಯ ಸರಕಾರಗಳು ಭೂದಾನ ಯಜ್ಞಕ್ಕೆ ಅನುಕೂಲವಾಗಲೆಂದು ಕೆಲವು ಕ್ರಮಗಳನ್ನು ಅನುಸರಿಸಿವೆ. ಕಾಂಗ್ರೆಸು ಈ ಚಳುವಳಿಯನ್ನು ಪ್ರೋತ್ಸಾಹಿಸಿದೆ. ಪ್ರಜಾ ಸಮಾಜವಾದೀ ಧುರೀಣರು ಸ್ವತಃ ವಿನೋಬಾಜೀಯ ಸಂದೇಶ ಪ್ರಚಾರ ಕಾರ್ಯಕ್ಕೆ ತೊಡಗಿರುವರು. ಭಾರತದಲ್ಲಿ ಭೂಮಿಯ ಪ್ರಶ್ನೆ ಅತ್ಯಂತ ಗಂಭೀರ ಸ್ವರೂಪದ ಸಮಸ್ಯೆಯಾಗಿರುತ್ತದೆ. ಇದನ್ನು ಭೂಮಾಲಿಕರ ಹೃದಯ ಪರಿವರ್ತನೆಯ ತಳಹದಿಯ ಮೇಲೆ ನಿಂತಿರುವ ಭೂದಾನ ಯಜ್ಞದ ಚಳುವಳಿಯೊಂದೇ ಯಶಸ್ವಿಯಾಗಿ ನಿರ್ವಹಿಸುವ ಭ

ಏಳು ವರುಷಗಳಲ್ಲಿ ಫಲ

ನಮ್ಮ ಪಿಗ್ಮಿ ಮುಡಿಪುದಾರರಲ್ಲಿ ದಿನವಿಡಿ ಕೆಲಸ ಮಾಡುವ ಶ್ರಮಜೀವಿಗಳು, ಅಂಗಡಿಗಾರರು, ವಕೀಲರು, ಡಾಕ್ಟರರು, ಎಂಜಿನಿಯರರು. ಬೇಸಾಯಗಾರರು, ವರ್ಗದಾರರು ಇತ್ಯಾದಿ ತರಗತಿಯವರಿರುವರು. ಅವರ ಪಿಗ್ಮಿ ಮುಡಿಪುಗಳು ಚಿಕ್ಕ ಪುಟ್ಟ ಠೇವಣಾತಿಗಳಿಂದ ಪ್ರಾರಂಭವಾದವು ಅಂದು ಇಲಿಯಂತಿದ್ದವು ಇಂದು ಹುಲಿಯಂತಾಗಿವೆ. ಅಂತಹ ವಿವೇಕವುಳ್ಳ ದೂರ ದರ್ಶಿ ಸಂಪನ್ನ ಪಿಗ್ಮಿ ಠೇವಣಾತಿದಾರರ ಕೂಟಕ್ಕೆ ನೀವೂ ಕೂಡಾ ಸೇರಿ ಭಾಗ್ಯವಂತರಾಗ ಬೇಕಾಗಿ ಆಹ್ವಾನಿಸುತ್ತೇವೆ.

ಆಧಾರ ವಹಿವಾಟು ರೂ 5,00,000.00ಕ್ಕೂ ಮಿಕ್ಕಿದೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925 ಹೆಡ್ ಆಫೀಸು: ಉಡುಪಿ

THE CANARA INDUSTRIAL & BANKING SYNDICATE LIMITED

Estd: 1925 H. O: UDIPI.

ಭಾರತಕ್ಕೆ ಮುಹಮ್ಮದಾಲಿಯವರ ಸ್ನೇಹ ಹಸ್ತ

ಉಭಯ ರಾಷ್ಟ್ರಗಳೊಳಗೆ ಸೌಹಾರ್ದ ಸಂಬಂಧವಲ್ಲದೆ ಸಂಯುಕ್ತ ಸಂರಕ್ಷಣೆಯೂ ಸಾಧ್ಯ

ಇಲ್ಲದಿದ್ದರೂ – ಕಲಿಯುಗದಲ್ಲಿ ಧರ್ಮಯುಗದ ಪ್ರಭಾವವನ್ನು ತೋರಿಸುವ ತಾತ್ವಿಕ ಪ್ರಯತ್ನವಿದೆಂಬುದನ್ನು ಎಲ್ಲ ಪ್ರಾಜ್ಞರೂ ಒಪ್ಪಬೇಕು. ಈ ಚಳುವಳಿಯ ಪರಿಣಾಮವಾಗಿ ಇದುವರೆಗೆ ಹತ್ತು ಲಕ್ಷ ಎಕ್ರೆ ಭೂಮಿ ದೊರೆತಿದೆ. ಬಿಹಾರದಲ್ಲಿ ಎಲ್ಲಕ್ಕೂ ಹೆಚ್ಚು ಅಂದರೆ ೫೫೦೦೦೦ ಎಕ್ರೆ ಭೂಮಿ ದೊರೆತಿದೆ. ಕರ್ನಾಟಕದಲ್ಲಿ ... ಎಕ್ರೆ ಮಾತ್ರ ದೊರೆತಿದೆ. ಉತ್ತರ ಪ್ರದೇಶ ಮತ್ತು ಬಿಹಾರಗಳಲ್ಲಿ ಈ ಚಳುವಳಿಯು ಜನರ ಮನಸ್ಸನ್ನು ಸೂರೆ ಮಾಡಿದಂತೆ, ಭಾರತದ ಉಳಿದ ಪ್ರದೇಶಗಳಲ್ಲಿ ಜನಪ್ರಿಯತೆಗಳಿಸಿಲ್ಲ. ಇದಕ್ಕೆ ಯೋಗ್ಯ ಕಾರ್ಯಕರ್ತರ ಅಭಾವವೇ ಹೇತು. ವಿಧಾಯಕ ಕೆಲಸಗಳಲ್ಲಿ ಶ್ರದ್ಧೆ ಮತ್ತು ಉತ್ಸಾಹವುಳ್ಳ ಜನರು ಕರ್ನಾಟಕದಲ್ಲಿ ಈ ಆಂದೋಲನವನ್ನು ತೊಡಗಿ ನೋಡಬಹುದು.

ಸಿಲೋನಿನ ನೀತಿ

ಪ್ರಧಾನಮಂತ್ರಿ ನೆಹರೂರವರು ಎಲಿಜಬೆಥ ರಾಣಿಯ ಸಿಂಹಾಸನಾರೋಹಣ ಸಮಾರಂಭದಲ್ಲಿ ಭಾಗವಹಿಸಲು ಸದ್ಯವೇ ಬ್ರಿಟನ್ನಿಗೆ ಪ್ರಯಾಣಿಸಲಿರುವರು. ಬ್ರಿಟನ್ನಿನ ೨೦ ದಿನಗಳ ವಾಸ್ತವ್ಯದಲ್ಲಿ ಭಾರತೀಯರೊಡನೆ ಅವರು ಈ ಸಂದರ್ಭದಲ್ಲಿ ಸಂಪರ್ಕವಿಟ್ಟುಕೊಳ್ಳುವರಲ್ಲದೆ, ಪಾಕಿಸ್ತಾನ ಮತ್ತು ಸಿಂಹಳದ ಮುಖ್ಯಮಂತ್ರಿಗಳನ್ನು ಕಾಣುವರೆಂದೂ ಊಹಿಸಲಾಗಿದೆ. ಸಿಂಹಳದಲ್ಲಿ ಹಿಂದೀ ವಲಸೆಗಾರ ಕುಟುಂಬಗಳಿಗೆ ಆಗುತ್ತಿರುವ ತೊಂದರೆಗಳ ಸಂಬಂಧದಲ್ಲಿ ಇಕ್ಕಡೆಯವರಿಗೂ ಗೌರವತರುವ ರೀತಿ ಕ್ರಮವನ್ನು ಕೈಗೊಳ್ಳುವ ಅಗತ್ಯ ಬಹಳವಿರುವುದರಿಂದ ಈ ಬಗ್ಗೆ ಮಾತುಕತೆಗಳು ನಡೆಯುವುದು ಇಷ್ಟವಾಗಿದೆ. ಸಿಂಹಳದಲ್ಲಿನ ಭಾರತದ ಪ್ರತಿನಿಧಿಗಳು ಈ ವಿಷಯದಲ್ಲಿ ಸಾಕಷ್ಟು ಉಳುಮೆಯ ಕೆಲಸವನ್ನು ಈಗಾಗಲೇ ಮಾಡುವರು; ಮತ್ತು ಭಾರತಸರಕಾರಕ್ಕೆ ತನ್ನ ಪ್ರಯತ್ನಗಳ ಪರಿಚಯ ಮಾಡಿಕೊಟ್ಟಿರುವರು. ಪಾರ್ಲಿಮೆಂಟಿನಲ್ಲಿ ಈ ಕುರಿತು ಕೇಳಿದ ಪ್ರಶ್ನೆಗೆ ನೆಹರೂರವರು ಉತ್ತರಿಸುತ್ತಾ ಹಿಂದೀಯರ ಬಗ್ಗೆ ವಿವಂಚನೆಯುಂಟಾಗುತ್ತಿರುವುದು ಸ್ವಾಭಾವಿಕ. ಈ ತಂಟೆ ಪರಿಹರಿಸಿಗೊಳ್ಳುವ ಪ್ರಯತ್ನಗಳು ನಿಧಾನವಾಗಿ ನಡೆಯುತ್ತಿವೆ ಎಂದು ತಿಳಿಸಿದರು. ಸಿಂಹಳ ಸರಕಾರವು ಹಿಂದೀ ವಲಸೆಗಾರ ನಾಗರಿಕರ ಸಂಬಂಧದಲ್ಲಿ ಮಾಡಿದ ಕಾನೂನುಗಳು ಹಿಂದೀಯರ ಹಿತಕ್ಕೆ ಧಕ್ಕೆ ತರುವಂಥವಾಗಿವೆ ಎಂದು ಸಾಮಾನ್ಯ ಅಭಿಪ್ರಾಯವಿದ್ದರೂ ಸಿಂಹಳ ಸರಕಾರವನ್ನು ಮನ್ನಿಸಲು ಒಪ್ಪಲಿಲ್ಲ. ಸಿಂಹಳದ ಶ್ರೇಷ್ಠ ನ್ಯಾಯಾಲಯವೂ ಪ್ರಿವಿಕೌನ್ಸಿಲೂ ಸಿಂಹಳ ಸರಕಾರದ ಕಾನೂನು ನ್ಯಾಯಬದ್ಧವೆಂದು ಎತ್ತಿ ಹಿಡಿದಿವೆ. ಇಂಥವರಲ್ಲಿ ಭಾರತೀಯ ವಲಸೆಗಾರರು ಸಿಂಹಳವನ್ನೆ ತಮ್ಮ ತಾಯ್ನಾಡೆಂದು ತಿಳಿದು ಅಲ್ಲಿಯ ನಿಷ್ಠಾವಂತ ಪ್ರಜೆಗಳಾಗಿ ಬಾಳುವ ಬಗೆಯೆಂತೆಂದು ವಿಷಾದಿಸಬೇಕಾಗಿದೆ. ಭಾರತೀಯ ವಲಸೆಗಾರರು ಸಿಂಹಳದ ಪುರೋಭಿವೃದ್ಧಿಗೆ ಮೂಲಕಾರಣರು ಮಾತ್ರವಲ್ಲ ಸಿಂಹಳವನ್ನೆ ತಮ್ಮ ತಾಯ್ನೆಲವೆಂದು ತಿಳಿಯುತ್ತಾ ಬಂದಿರುವರು. ಈ ಜನರಿಗೆ ತಮ್ಮ ನಾಗರಿಕ ಅಧಿಕಾರವನ್ನು ದೃಢಗೊಳಿಸಲು ಉಂಟಾಗಿರುವ ಅಡಚಣೆಗಾಗಿ ನಾವು ಪರಿತಪಿಸಬೇಕಾಗಿದೆ. ಆಫ್ರಿಕದ ವರ್ಣಭೇದ ನೀತಿಗೂ ಸಿಂಹಳ ಸರಕಾರದ ನಾಗರಿಕ ಕಾಯಿದೆಗಳಿಗೂ ಮೂಲದಲ್ಲಿ ಅಸಹಿಷ್ಣುತಾಭಾವನೆ ಇದೆ ಎಂಬುದಂತೂ ಈ ವಿದ್ಯಮಾನಗಳಿಂದ ಸುಸ್ಪಷ್ಟವಾಗಿದೆ.

ನಿಕಟ ಸಂಬಂಧ

ಆದರೆ ಪಾಕಿಸ್ತಾನಕ್ಕೂ ಭಾರತಕ್ಕೂ ಇರುವ ಸಂಬಂಧ ಸಿಂಹಳದಕ್ಕಿಂತ ಹೆಚ್ಚು ನಿಕಟವೂ ಗಾಢತಮವೂ ಆಗಿರುತ್ತದೆ. ವಿಭಜನೆಗೆ ಪೂರ್ವದಲ್ಲಿ ಸಹೋದರರಂತಿದ್ದ ಭಾರತೀಯರು ಪಾಕಿಸ್ತಾನದ ನಿರ್ಮಾಣ ದಿನದಿಂದ ರಾಜಕೀಯ ಕಾರಣಗಳಿಗಾಗಿ ಒಬ್ಬರಿನ್ನೊಬ್ಬರ ಸಂಪರ್ಕ ಕಡಿದು ಕೊಂಡು ಬಾಳುವ ಪರಿಸ್ಥಿತಿ ಬಂದೊದಗಿತು. ಬರ್ಮಾ ಮತ್ತು ಭಾರತಗಳ ನಡುವಿರುವಂಥ ಬಾಂಧವ್ಯ ಪಾಕಿಸ್ತಾನಕ್ಕೂ ಭಾರತಕ್ಕೂ ಇರುತಿದ್ದ ಪಕ್ಷದಲ್ಲಿ ನಮಗೆ ವಿಭಜನೆಯ ಗಂಭೀರ ಪರಿಣಾಮಗಳನ್ನು ಇದಿರಿಸುವ ಪ್ರಮೇಯವೇ ಬರುತ್ತಿರಲಿಲ್ಲ. ಭಾರತ ಮತ್ತು ಬರ್ಮಾ ಗಡಿಪ್ರದೇಶದಷ್ಟು ಸೌಹಾರ್ದಯುತವಾದ ಸೀಮೆ ಲೋಕದಲ್ಲಿಯೇ ಬೇರೊಂದಿಲ್ಲವೆಂದು ನೆಹರೂ ಪಾರ್ಲಿಮೆಂಟಿನಲ್ಲಿ ನುಡಿದದ್ದನ್ನು ನಾವು ಸಂತೋಷದಿಂದ ಸ್ವಾಗತಿಸುತ್ತೇವೆ. ಈ ರೀತಿಯ ಸೌಹಾರ್ದ ಸಂಬಂಧವನ್ನು ಪಾಕಿಸ್ತಾನದೊಡನೆ ನಾವು ಎಂದೋ ಸ್ಥಾಪಿಸಿಕೊಳ್ಳಬೇಕಿತ್ತು. ಹಾಗೆ ಆಗಿಲ್ಲವಾದರೆ ಅದಕ್ಕೆ ಪಾಕಿಸ್ತಾನೀ ಧುರೀಣರ ಮೌಢ್ಯ ಮೂಲವರ್ತನೆಯೇ ಕಾರಣವಲ್ಲದೆ ಭಾರತದ ಹೊಣೆ ಈ ಸಂಬಂಧದಲ್ಲಿ ಏನೇನೂ ಇಲ್ಲ. ಜನ್ಮಾರಂಭ ಕಾಲದಿಂದ ಇಂದಿನ ವರೆಗೆ ಪಾಕಿಸ್ತಾನವು ಭಾರತದೊಂದಿಗೆ ಸಹಕರಿಸುವ ಪ್ರಾಮಾಣಿಕ ಬುದ್ಧಿಯನ್ನು ತೋರಿಸುವುದರಲ್ಲಿ ಹಿಂದುಳಿದಿದೆ. ಲಿಯಾಖತ ಅಲಿಖಾನರಂಥ ಮುತ್ಸದ್ದಿಗಳ ಕೈಯಲ್ಲಿ ರಾಜ್ಯಸೂತ್ರವಿದ್ದಾಗಲೂ ಅವರು ಭಾರತದೊಡನೆ ಯುದ್ಧ ಹೂಡಲು ಕೈಯೆತ್ತುವ ಧಾರ್ಷ್ಟ್ಯ ಪ್ರದರ್ಶಿಸಿದರು. ಇಂಥ ಆಹ್ವಾನಗಳಿಗೆ ಪ್ರತ್ಯುತ್ತರವನ್ನು ಕೊಡದ ಹೇಡಿಗಳು ಭಾರತೀಯರಲ್ಲವಾದರೂ ಧುರೀಣರ ಸೌಮನಸ್ಯ ಮತ್ತು ಧರ್ಮ ಬುದ್ಧಿಗಳು ಅನಾಹುತಗಳನ್ನು ತಡೆದು ನಿಲ್ಲಿಸಿದುವು. ಇದು ಭಾರತೀಯರಿಗೆ ಮಾತ್ರ ಕ್ಷೇಮ ತಂದುದಲ್ಲ ಸ್ವತಃ ಪಾಕಿಸ್ತಾನೀ ಧುರೀಣರಿಗೆ ತಮ್ಮ ತಪ್ಪು ಮನವರಿಕೆಯಾಗಿದೆ. ನಾಜಮುದ್ದೀನರ ಸ್ಥಾನದಲ್ಲಿ ಅಧಿಕಾರವನ್ನು ಸ್ವೀಕರಿಸಿರುವ ಮುಹಮ್ಮದಾಲಿಯವರು ನೆಹರೂರನ್ನು ತನ್ನ ಅಣ್ಣನೆಂದು ಕರೆದು ಸಂಬೋಧಿಸಿದ್ದಲ್ಲದೆ ಅವರೊಡನೆ ಕಂಡು ಮಾತನಾಡುವ ತವಕವನ್ನೂ ಈ ವರೆಗಿನ ಅಲ್ಪಾವಧಿಯಲ್ಲಿ ಅನೇಕಾವರ್ತಿ ವ್ಯಕ್ತಗೊಳಿಸಿರುವರು. ನಾಜಮುದ್ದೀನರ ಪದಚ್ಯುತಿಯಿಂದ ಪಾಕಿಸ್ತಾನ ದಫೋರಣೆಯು ಭಾರತದ ವಿಷಯದಲ್ಲಿ ಏನು ಪರಿವರ್ತನೆ ಹೊಂದುವುದೋ ಎಂದು ಸಂಶಯಿಸುತ್ತಿದ್ದವರಿಗೆ ಈಗೀಗ ಹೆಚ್ಚು ಭರವಸೆಯ ಸೂಚನೆ ತೋರುತ್ತಿದೆ.

ಎರಡೇ ಸಮಸ್ಯೆ

ಉಭಯ ರಾಷ್ಟ್ರಗಳಲ್ಲಿ ಶಾಶ್ವತ ಸ್ನೇಹವು ನೆಲೆಗೊಳ್ಳಲಿಕ್ಕೆ ಅವಶ್ಯವಿರುವ ಸಂಗತಿಗಳು ಎರಡು ಹೇಳಬಹುದು ಒಂದನೇಯದು ಕಾಶ್ಮೀರ ಪ್ರಶ್ನೆ. ಎರಡನೇಯದು ಕಾಲುವೆ ನೀರಿನ ತಂಟೆ. ಕಾಶ್ಮೀರ ಪ್ರಶ್ನೆಯ ಇತ್ಯರ್ಥವು ಸಾರ್ವತ್ರಿಕ ಮತಗಣನೆಯ ಪರಿಣಾಮವಾಗಿ ಆಗಬೇಕೆಂಬ ತತ್ವಕ್ಕೆ ಎರಡೂ ರಾಷ್ಟ್ರಗಳು ಒಪ್ಪಿವೆ. ಮತಗಣನೆ ನಡೆಯಲು ಅನುಕೂಲವಾಗುವಂತೆ ನೆರವೇರಬೇಕಾದ ಪೂರ್ವಭಾವಿ ವ್ಯವಸ್ಥೆಗಳ ಮಟ್ಟಿಗೆ ಮಾತ್ರ ಭಿನ್ನಾಭಿಪ್ರಾಯವಿರುತ್ತದೆ. ಪ್ರಧಾನಿದ್ವಯರು ಈ ಕಗ್ಗಂಟನ್ನು ಸರಿಯಾಗಿ ಬಿಡಿಸಲು ಸಮರ್ಥರಾದರೆ, ಅದರಿಂದ ಎರಡೂ ರಾಷ್ಟ್ರಗಳಿಗೆ ಶ್ರೇಯಸ್ಸುಂಟಾಗುವುದಲ್ಲದೆ ಇಂದು ತಮ್ಮ ಸ್ಥಾನಮಾನದ ಕುರಿತು ನಿಶ್ಚಿತ ಜ್ಞಾನವಿಲ್ಲದ ಕಾಶ್ಮೀರಿ ಜನತೆಗೆ ಯೋಗ್ಯ ಭವಿಷ್ಯತ್ತಿನ ಭರವಸೆ ಕೊಟ್ಟಂತೆಯೂ ಆಗುತ್ತದೆ. ಇದರಂತೆ ಕಾಲುವೆ ನೀರಿನ ತಂಟೆಯೂ ಇದೆ. ಭಾರತವು ಯಾವ ರೀತಿಯದುರ್ವರ್ತನೆಯನ್ನು ಮಾಡದಿದ್ದರೂ ಪಾಕಿಸ್ತಾನದಲ್ಲಿ ಭಾರತದ ವಿರುದ್ಧ ಅಸಂತೋಷ ಹೆಚ್ಚಿಸುವುದನ್ನೆ ಉದ್ದೇಶವಾಗಿಟ್ಟುಕೊಂಡ ಸಂಗಡಗಳು ಪಾಕಿಸ್ತಾನೀ ಜನತೆ ಇಂದು ಇದಿರಿಸಬೇಕಾಗಿ ಬಂದಿರುವ ಕೆಟ್ಟ ಪರಿಸ್ಥಿತಿಗೆ ಭಾರತವೇ ಹೊಣೆಯೆನ್ನುತ್ತಿವೆ. ಈ ವಿಷಯದಲ್ಲಿ ಸರಕಾರೀ ದುರೀಣರಿಗಿಂತಲೂ ಮತ ಸಂಗಡಗಳ ನೇತ್ರಗಳು ಪತ್ರಿಕೆಗಳು ಮತ್ತು ಪಾಕಿಸ್ತಾನದ ಆಕಾಶವಾಣಿ ಹೆಚ್ಚು ಆಸ್ಥೆ ವಹಿಸಿ, ಭಾರತ ವಿರೋಧಿ ಪ್ರಚಾರವನ್ನು ಭರದಿಂದ ನಡೆಸುತ್ತಾ ಬಂದಿವೆ. ಮುಹಮ್ಮದಾಲಿಯವರು ಮುಖ್ಯ ಮಂತ್ರಿಗಳ ಪಟ್ಟಕ್ಕೆ ಬಂದ ಬಳಿಕ ಕೂಡ ಪಾಕಿಸ್ತಾನದ ಆಕಾಶವಾಣಿಯು ಮೊದಲಿನ ಧಾಟಿಯಲ್ಲಿಯೇ ಭಾರತವನ್ನು ಹಳಿಯುತ್ತಿದೆ. ಹೊರತು ಪ್ರಚಾರ ಪರಿವರ್ತನೆಯಾಗಿರುವುದಕ್ಕೆ ಸಾಕ್ಷಿ ಕೊಡುವಂತೆ ನಡೆದಿಲ್ಲವೆಂದು ಪಾರ್ಲಿಮೆಂಟಿನಲ್ಲಿ ಪ್ರಶ್ನೆಯೊಂದಕ್ಕೆ ಉತ್ತರ ದೊರಕಿದೆ. ರಾಜಕೀಯ ಧುರೀಣರು ಸಂಧಾನಕ್ಕಾಗಿ ಪ್ರಯತ್ನಿಸುತ್ತಿರುವಾಗ ಆಕಾಶವಾಣಿಯಾಗಲೀ ವೃತ್ತಪತ್ರಿಕೆಗಳಾಗಲೀ ಸಾರ್ವಜನಿಕ ಸಂಘ ಸಂಸ್ಥೆಗಳ ಕಾರ್ಯಕರ್ತರಾಗಲೀ ದ್ವೇಷಪೂರಿತ ಪ್ರಚಾರವನ್ನು ಕೈಗೊಳ್ಳುವುದು ಶುದ್ಧ ಅವಿವೇಕ.

ಸಂಯುಕ್ತ ಸಂರಕ್ಷಣೆ

ಮುಹಮ್ಮದಾಲಿಯವರು ಪೂರ್ವ ಪಾಕಿಸ್ತಾನದ ಸಂಚಾರ ಕಾಲದಲ್ಲಿ ಭಾರತದೊಡನೆ ಸ್ನೇಹಬಂಧನವ ತಮ್ಮ ಬಯಕೆಯನ್ನು ದೃಢೀಕರಿಸಿ ಮಾತನಾಡಿದರು ಕಲ್ಕತ್ತದಲ್ಲಿಯೂ ಢಾಕ್ಕಾದಲ್ಲಿಯೂ ಅವರು ಹೇಳಿದ ಅಂಶಗಳಿಂದ ಉಭಯ ರಾಷ್ಟ್ರಗಳ ಸಂಬಂಧಗಳೊಳಸದಿಂದ ಕೂಡುವುದೆಂಬ ಬಗ್ಗೆ ಹೆಚ್ಚು ವಿಶ್ವಾಸ ಮೂಡಿದೆ ಮೂಲಭೂತವಾದ ಭಿನ್ನಾಭಿಪ್ರಾಯಗಳಿಗೆ ಎಡೆಗೊಟ್ಟು, ವಿಶೇಷಪ್ರಶ್ನೆಗಳು ಇತ್ಯರ್ಥಗೊಂಡಾಗ ಎರಡೂ ರಾಷ್ಟ್ರಗಳು ಸಂಯುಕ್ತ ಸಂರಕ್ಷಣಾ ಯೋಜನೆಯನ್ನು ಕೈಗೊಳ್ಳಬಹುದೆಂದು ಮುಹಮ್ಮ

(೭ನೇ ಪುಟ ನೋಡಿರಿ)

NAVAYUGA ENTERPRISE LIMITED, UDIPI.

NOTICE

The Register of members and Share Transfer books of the Company will remain closed from 15th May, 1953 to 5th June, 1953 (both days inclusive).

Office of the Company,
Palukote, Udipi.
Dated: 2—5—'53.

K. Honnayya Shetty.
Managing Director.

ಶಿಲ್ಪಿ

ದಿ। ಹಲಿಸ್ಸಿನೆ ಕಾಳೆ ತಿಮ್ಮಪ್ಪ, ಅವರಿಂದ ರಚಿತವಾದ

ಐತಿಹಾಸಿಕ ನಾಟಕ

- ಕನ್ನಡ ನಾಡಿನಲ್ಲಿ ಅನೇಕ ವಿಷಯಗಳ ಮೇಲೆ ಕಥೆ, ಕಾದಂಬರಿ, ನಾಟಕ, ಕವಿತೆ ಮುಂತಾದವು ರಚಿತವಾಗಿವೆ. ಆದರೆ ಐತಿಹಾಸಿಕದ ಮೇಲೆ ಅವರಲ್ಲೂ ಶಿಲ್ಪಿಗಳ ನಿಪುಣ ಜಕಣಾಚಾರಿಯ ಮೇಲೆ ನಾಟಕ ರಚಿತವಾಗಿರುವುದು ಬಹಳ ವಿರಳ
- ಇದೀಗ ಪ್ರಕಟವಾಗಿರುವ 'ಶಿಲ್ಪಿ'ಯು ಜಕಣಾಚಾರಿಯ ಜೀವನ ಚಿತ್ರವನ್ನು ಚಿತ್ರಿಸುವ ನವೀನ ನಾಟಕ
- ಪಂಡಿತ ಪಾಮರರೆಲ್ಲರೂ ಮೆಚ್ಚುವ ಕಥಾ ಸಂವಿಧಾನ.

ಬೆಲೆ ರೂ. 1 0

ಪ್ರತಿಗಳಿಗೆ:- ಅಂತರಂಗ ಕಾರ್ಯಾಲಯ, ಉಡುಪಿ

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸುರಕ್ಷಿತತೆ, ಭದ್ರತೆ ಮತ್ತು ಸೇವಾತತ್ಪರತೆ
ಇವುಗಳಿಗೆ
ತವರುಮನೆಯಂತಿದ್ದು, ನಿಮ್ಮೆಲ್ಲರ ಸ್ನೇಹ, ಸಹಕಾರಗಳನ್ನು
ಅಪೇಕ್ಷಿಸುವ ಬೇಂಕು.

THE CANARA BANKING CORPORATION LTD.
Estd: 1906] [H. O.: **UDIPI**, (S. India)

ನವಯುಗ

ಉಡುಪಿ, ಗುರುವಾರ ೧೪-೫-'೫೩

ಕ್ರಾಂತಿಕಾರ ಪ್ರಯೋಗ

ಶೈಕ್ಷಣಿಕ ಪದ್ಧತಿಯಲ್ಲಿ ಸುಧಾರಣೆಯು ಅತ್ಯಗತ್ಯವೆಂಬುದಾಗಿ ನಮ್ಮ ದೇಶದ ಧುರೀಣರು ಅಭಿಪ್ರಾಯ ಪಟ್ಟಿರುವರು; ಶಿಕ್ಷಣ ವಿಷಯದಲ್ಲಿ ತಜ್ಞರಾದವರೂ ಪ್ರಕೃತ ಪದ್ಧತಿಯಲ್ಲಿ ಯೋಗ್ಯ ಬದಲಾವಣೆಯನ್ನು ತರಬೇಕೆಂದು ಹೇಳುತ್ತಾ ಬಂದಿರುವರು. ಮೊನ್ನೆ ಮಂಗಳೂರಿನಲ್ಲಿ ಸೇರಿದ ಮದ್ರಾಸು ರಾಜ್ಯ ಶಿಕ್ಷಣ ಸಮ್ಮೇಳನದಲ್ಲಿ ಸಹ ವಿದ್ಯಾಭ್ಯಾಸದ ಕ್ರಮದಲ್ಲಿ ಪರಿವರ್ತನೆಯನ್ನುಂಟುಮಾಡುವ ಕುರಿತು ಸಾಕಷ್ಟು ಚರ್ಚೆ ನಡೆಯಿತು. ಸಮ್ಮೇಳನದ ಉದ್ಘಾಟಕರಾಗಿ ಬಂದ ಮೈಸೂರಿನ ಮುಖ್ಯ ಮಂತ್ರಿ ಮಾನ್ಯ ಶ್ರೀ ಹನುಮಂತಯ್ಯನವರು ತಮ್ಮ ಭಾಷಣದಲ್ಲಿ ಸದ್ಯದ ಶೈಕ್ಷಣಿಕ ಪದ್ಧತಿಯಲ್ಲಿ ಆಮೂಲಾಗ್ರ ಪರಿವರ್ತನೆಯಾಗುವುದರ ಆವಶ್ಯಕತೆಯನ್ನು ಚೆನ್ನಾಗಿ ಮನವರಿಕೆ ಮಾಡಿಸಿ ಕೊಟ್ಟರು. ಮುಖ್ಯವಾಗಿ ಅವರು ಮೈಸೂರು ಸರಕಾರವು ತರಲಿರುವ ಸುಧಾರಣೆಗಳ ಕುರಿತು ಮಾತನಾಡಿದರೂ ಎರಡು ವಿಶಿಷ್ಟ ಹಾಗೂ ಮಹತ್ವದ ಸಂಗತಿಗಳನ್ನವರು ಎತ್ತಿಕೊಂಡಿದ್ದರು— ಒಂದನೆಯದು ಮಕ್ಕಳಿಗೆ ನೈತಿಕ ಶಿಕ್ಷಣವನ್ನು ಕೊಡಬೇಕೆಂಬ ಸಂಗತಿ. ಎರಡನೆಯದು ಇನ್ನೂ ಅಧಿಕ ಮಹತ್ವ ಪಡೆದಿರುವ ಮೂಲಶಿಕ್ಷಣ ಪದ್ಧತಿಗೆ ಸಂಬಂಧಿಸಿದೆ. ವಿದ್ಯಾರ್ಥಿಗಳಿಗೆ ಪುಸ್ತಕ ಜ್ಞಾನವನ್ನು ಮಾತ್ರ ಮಾಡಿಕೊಡುವ ತಾತ್ವಿಕ ಶಿಕ್ಷಣಕ್ಕಿಂತಲೂ ಭಾವೀಜೀವನವನ್ನು ಯೋಗ್ಯರೀತಿಯಲ್ಲಿ ನಿರ್ವಹಿಸಲು ಸಾಧ್ಯವಾಗುವಂತೆ ವೃತ್ತಿ ಶಿಕ್ಷಣವನ್ನು ಕೊಡುವುದು ಇದರ ಉದ್ದೇಶ. ಮೂಲಶಿಕ್ಷಣ ಪದ್ಧತಿಯನ್ನು ಸ್ವತಃ ಗಾಂಧೀಜಿಯವರು ಪುರಸ್ಕರಿಸಿದ್ದರು. ನಮ್ಮ ದೇಶದ ಈಗಿನ ಆವಶ್ಯಕತೆಯನ್ನು ಈ ಪದ್ಧತಿಯ ಶಿಕ್ಷಣವು ಪೂರೈಸುವುದೆಂದು ನಂಬಿದ ಜನರು ಅನೇಕ. ಈಗಿರುವಂತೆ ನಮ್ಮ ವಿದ್ಯಾಭ್ಯಾಸ ಪದ್ಧತಿಯು ಕೇವಲ ಕಾರಕೂನರನ್ನು ಸೃಷ್ಟಿ ಮಾಡುತ್ತಿದೆ. ಈ ಜನಕ್ಕೆ ಬೌದ್ಧಿಕ ತರಬೇತಿ ದೊರೆತಂತೆ ಶಾರೀರಿಕ ಶ್ರಮದ ಮಹತ್ವವನ್ನು ತಿಳಿಸಲಾಗಿಲ್ಲ. ಲೆಕ್ಕಣಿಕೆಯನ್ನೋಡಿಸುವುದಕ್ಕಿಂತ ಮಿಗಿಲಾದ ಯೋಗ್ಯತೆಯನ್ನು ಲಿಖಿತಪರೀಕ್ಷೆ ಪಾಸಾದ ಈ ವಿದ್ಯಾರ್ಥಿಗಳು ಪಡೆದಿರುವುದಿಲ್ಲ. ಆದುದರಿಂದ ಮೇಜಿನ ಮುಂದೆ ಕುರ್ಚಿಯಲ್ಲಿ ಕುಳಿತು ಬರೆಯುವುದನ್ನು ಬಿಟ್ಟರೆ ಬೇರೆಯಾವ ಉದ್ಯೋಗವನ್ನು ಕೈಗೊಳ್ಳಲೂ ಈ ವಿದ್ಯಾರ್ಥಿಗಳಿಗೆ ಸಾಧ್ಯವಾಗಿಲ್ಲ. ಪರಿಣಾಮವಾಗಿ ರೈತನ ಮಕ್ಕಳು ಓದು ಬರಹವನ್ನು ಕಲಿತು ಹೈಸ್ಕೂಲು ಮೆಟ್ಟಲು ಏರಿದರೆಂದರೆ ಹಿರಿಯರ ವೃತ್ತಿಯ ಬಗ್ಗೆ ಉದಾಸೀನ ಮಾತ್ರವಲ್ಲ, ತಿರಸ್ಕಾರವೂ ಜನಿಸುತ್ತಿದೆ. ಶಾರೀರಕ ಶ್ರಮ ಜನ್ಯವಾದ ಯಾವ ಕೆಲಸವೇ ಆಗಲಿ, ಅದನ್ನು ತ್ಯಾಜ್ಯವೆಂದು ನಮ್ಮ ವಿದ್ಯಾರ್ಥಿಗಳು ತಿಳಿದುಕೊಂಡಿರುವರು. ಬ್ರಿಟಿಷರು ತಮ್ಮ ಆಡಳಿತವನ್ನು ಸುಗಮವಾಗಿ ಸಾಗಿಸುವುದಕ್ಕೋಸ್ಕರ ಈಗಿರುವ ಪದ್ಧತಿಯ ಶಿಕ್ಷಣದಲ್ಲಿ ವಿಶಿಷ್ಟ ಯೋಗ್ಯತೆ ಪಡೆದವರಿಗೆ ಸರಕಾರಿ ನೌಕರಿ ಕೊಡುವ ಆಮಿಷ ತೋರಿಸಿ, ಶ್ರಮ ಮೂಲವಾದ ಭಾರತೀಯ ವಿದ್ಯಾಪದ್ಧತಿಯನ್ನು ನೆಲಸಮ ಮಾಡಿದರು. ಸುಮಾರು ಎರಡು ಶತಕಗಳಿಂದ ಅನೂಚಾನವಾಗಿ ನಡೆದು ಬಂದಿರುವ ಶಿಕ್ಷಣ ಪದ್ಧತಿಯಲ್ಲಿ ಏನು ಬದಲಾವಣೆಯನ್ನು ನಮ್ಮ ರಾಷ್ಟ್ರೀಯ ಸರಕಾರ ತಂದರೂ ಅದಕ್ಕೆ ಟೀಕೆಯನ್ನು ಇದಿರಿಸಲೇ ಬೇಕಾಗುವುದು. ಆದರೆ ಟೀಕೆಗಳಿಗೆ ಹೆದರಿ ಶೈಕ್ಷಣಿಕ ಪದ್ಧತಿಯಲ್ಲಿ ಸುಧಾರಣೆಗಳನ್ನು ಇನ್ನೂ ಹಿಂದಕ್ಕೆ ತಳ್ಳುವುದು ರಾಷ್ಟ್ರ ಕ್ಷೇಮದ ಮತ್ತು ಕಲ್ಯಾಣದ ದೃಷ್ಟಿಯಿಂದ ಅಪೇಕ್ಷಣೀಯವಲ್ಲ. ನಮ್ಮ ಜನರಲ್ಲಿ ವಿಚಾರ ಕ್ರಾಂತಿಯನ್ನುಂಟುಮಾಡುವ ಆಗತ್ಯ ಈ ವಿಶಿಷ್ಟ ಗಳಿಗೆಯಲ್ಲಿ ಸ್ಪಷ್ಟವಾಗಿರುತ್ತದೆ. ಈ ಕಾರಣದಿಂದ ಮದ್ರಾಸು ಸರಕಾರದವರು ೧೯೫೩ ಜುಲೈ ವರ್ಷದಿಂದ ಪ್ರಾಥಮಿಕ ಶಾಲೆಗಳ ವಿದ್ಯಾಭ್ಯಾಸ ಪದ್ಧತಿಯಲ್ಲಿ ಮಾಡಬೇಕೆಂದಿರುವ ಸುಧಾರಣೆ ಸ್ವಾಗತಾರ್ಹವೆನ್ನಬೇಕು. ಹೊಸ ಪದ್ಧತಿಯ ಹೆಸರೆತ್ತಿದರೆ ಹೆದರುವ ಮನೋಭಾವವಿರುವ ಹೇಡಿಗಳಿಗೆ ಈ ಪದ್ಧತಿ ಬೆರಗುಗೊಳಿಸುವುದು ನಿಶ್ಚಯ. ಹಾಗೆಯೇ ಬದಲಾದ ಪರಿಸ್ಥಿತಿಯೊಂದಿಗೆ ಹೊಂದಿಕೊಳ್ಳಲಾರದ ಆಲಸಿಗಳಿಗೂ ಈ ಪರಿವರ್ತನೆ ತೊಡಕುಂಟುಮಾಡೀತು; ಹೀಗಿದ್ದರೂ ಶೈಕ್ಷಣಿಕ ಸುಧಾರಣೆಯಲ್ಲಿ ಪ್ರಾಮಾಣಿಕವಾದ ಆಸ್ಥೆ ಇರುವ ಶ್ರದ್ಧಾಳು ಸಾಹಸಿಗರಿಗೆ ಇದು ಆಹ್ವಾನ ರೂಪದಲ್ಲಿದೆ. ಈ ಬದಲಾವಣೆಯ ಉದ್ದೇಶವು ಹಳ್ಳಿಯ ಪ್ರಾಥಮಿಕ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳು ತಮ್ಮ ಹೆತ್ತವರು ಮಾಡುತ್ತಿರುವ ಕೆಲಸಗಳಲ್ಲಿ ಸಹಕರಿಸುವಂತೆ ಮಾಡುವುದಾಗಿದೆ. ಶಾಲಾ ಕೆಲಸದ ಹೊರೆಯಿಂದ ಮಕ್ಕಳು ಕುಟುಂಬ ಪೋಷಣೆಗೆ ನೆರವಾಗುವ ದೈಹಿಕ ಶ್ರಮದ ಕೆಲಸಕ್ಕೂ, ರಚನಾತ್ಮಕ ಚಟುವಟಿಕೆಗಳಿಗೂ ಅಯೋಗ್ಯರಾಗಬಾರದೆಂದು ಸರಕಾರ ಉದ್ದೇಶಿಸಿದೆ. ತಮ್ಮ ಕುಟುಂಬದ ಉದ್ಯೋಗಗಳಲ್ಲಿ ಪಾರಂಗತರಾಗಿ ಹಳ್ಳಿಯ ಚಟುವಟಿಕೆಗಳಲ್ಲಿ ಜ್ಞಾನವಂತರಾಗಿ ವಿದ್ಯಾರ್ಥಿಗಳು ದೇಶವನ್ನು ತಮ್ಮ ಬೆವರಿನಿಂದ ಮರಳಿ ಕಟ್ಟುವ ಕಾರ್ಯವನ್ನು ಇಂದು ಕೈಗೊಳ್ಳಬೇಕಾಗಿರುತ್ತದೆ. ಅಂತು ತಮ್ಮ ಕುಟುಂಬದಲ್ಲಿಯೇ ವಿದ್ಯಾರ್ಥಿಗಳಿಗೆ ಯೋಗ್ಯಸ್ಥಾನವನ್ನು ಕಲ್ಪಿಸಿಕೊಡಬೇಕಾಗಿದೆ. ಹೀಗಿರುವುದರಿಂದ ಇದೇ ಜೂನ್ ತಿಂಗಳಿಂದ ಹಳ್ಳಿಯ ಪ್ರಾಥಮಿಕ ಶಾಲೆಗಳಲ್ಲಿ ಶಾಲಾದಿವಸದ ಕೆಲಸವನ್ನು ಮೂರು ತಾಸಿಗೆ ಇಳಿಸಲಾಗುವುದು. ಅಗತ್ಯವೆನಿಸಿದರೆ ವಾರದಲ್ಲಿ ಆರುದಿನ ಶಾಲೆ ನಡೆಯುವುದು ಪ್ರತಿಯೊಂದು ಶಾಲೆಯ ಮಕ್ಕಳನ್ನು ಎರಡು ವರ್ಗಗಳಾಗಿ ವಿಂಗಡಿಸಿ, ಪ್ರತಿವರ್ಗದವರು ಪೂರ್ವಾಹ್ನ ಮತ್ತು ಅಪರಾಹ್ನ ಸರದಿಯಾಗಿ ಶಾಲೆಗೆ ಬರಬೇಕು. ಉಳಿದ ಅರ್ಧದಿನದ ಅವಧಿಯಲ್ಲಿ ಮಕ್ಕಳು ತಮ್ಮ ಹೆತ್ತವರು ಸಾಮಾನ್ಯವಾಗಿ ಕೈಗೊಳ್ಳುವ ಕೆಲಸಗಳಲ್ಲಿ ಸಹಕರಿಸಬೇಕು. ವ್ಯವಸಾಯವನ್ನು ಅವಲಂಬಿಸಿರುವ ಮತ್ತು ಬಡಗಿ, ಕಮ್ಮಾರ ಕುಂಬಾರ ಮುಂತಾದ ಕೈಗಾರಿಕಾ ವೃತ್ತಿಯ ಕುಟುಂಬಗಳ ಮಕ್ಕಳಿಗೆ ಇದರಿಂದ ಯೋಗ್ಯ ತರಬೇತಿದೊರೆಯುವ ಅವಕಾಶವುಂಟಾಗುವುದು. ಆದರೆ ಹಳ್ಳಿಯಲ್ಲಿ ಕೆಲವುವಿದ್ಯಾರ್ಥಿಗಳಿಗಾದರೂ ಮನೆಯಲ್ಲಿ ಕುಳಿತು ಕಲಿಯಬಹುದಾದ ವೃತ್ತಿಯಿಲ್ಲದೆ ಇರಬಹುದು. ಅಂಥವರು ಹಳ್ಳಿಯಲ್ಲಿರುವ ಕಮ್ಮಾರ ಬಡಗಿ ಮುಂತಾದವರಲ್ಲಿಗೆ ಹೋಗಿ ತರಬೇತಿ ಹೊಂದಬೇಕೆಂದು ಸರಕಾರ ಅಪೇಕ್ಷಿಸುತ್ತದೆ. ಹಳ್ಳಿಯ ಈ ಕಸಬುದಾರನೇ ಮಕ್ಕಳ ಅಧ್ಯಾಪಕನಾಗಿರುವನು. ನಿಶ್ಚಿತ ಸಮಯದಲ್ಲಿ ಹುಡುಗರು ಹಾಜರಿದ್ದರೆಂದು ತೋರಿಸುವ ಒಂದು ರಿಜಿಸ್ಟ್ರಿಯೂ ಅವನಲ್ಲಿರುತ್ತದೆ. ಯಾವುದೇ ಕಸಬುದಾರನು ಇಲ್ಲದ ಹಳ್ಳಿಯಿದ್ದಲ್ಲಿ ಬೇರೆ ಊರಿನಿಂದ ಅಂಥವನೊಬ್ಬನನ್ನು ಬರಮಾಡಿಕೊಂಡು ಶಾಲಾ ಮಕ್ಕಳನ್ನು ಅವನ್ನಲ್ಲಿಗೆ ಕಳಿಸಬೇಕೆಂದಿದೆ. ಈ ವಿಧಾನದಿಂದ ಹಳ್ಳಿಯ ಮಕ್ಕಳು ತಮ್ಮ ಕೌಟುಂಬಿಕ ವೃತ್ತಿ ವ್ಯವಸಾಯಗಳನ್ನು ಗೌರವದಿಂದ ನೋಡುವಂತೆ ಆಗುತ್ತದೆ; ಮತ್ತು ಹಳ್ಳಿಯಲ್ಲಿ ಸಮಾಜ ಸೇವೆಯನ್ನು ಮಾಡುವ ಹುಮ್ಮಸ್ಸು ಅವರಲ್ಲಿ ಮೂಡುತ್ತದೆ.

ಶ್ರೀ ರಾಜಗೋಪಾಲಾಚಾರ್ಯರು ಗವರ್ನರ್ ಜನರಲ್‌ರಾಗಿದ್ದ ಕಾಲದಲ್ಲಿ ಈ ಪದ್ಧತಿಯ ರೂಪರೇಷೆಯನ್ನು ತಯಾರಿಸಿದ್ದವರು ಮದ್ರಾಸಿನ ಮುಖ್ಯ ಮಂತ್ರಿತ್ವದ ಈ ಸಂದರ್ಭದಲ್ಲಿ ಅದನ್ನು ಕಾರ್ಯಾನ್ವಿತಗೊಳಿಸಲು ಬಯಸಿರುವರು. ಸದುದ್ದೇಶದಿಂದ ಕೂಡಿದ ಈ ಸುಧಾರಣೆಯನ್ನು ವಿಮರ್ಶಾತ್ಮಕ ದೃಷ್ಟಿಯಿಂದ ನೋಡುವಾಗ ಮಾತ್ರ ನಮಗೆ ಕೆಲವು ಸಂದೇಹಗಳು ಕಂಡು ಬರುತ್ತವೆ. ಸರ್ವ ಪ್ರಥಮವಾಗಿ ಈ ಪದ್ಧತಿ ವ್ಯವಹಾರ್ಯವೇ ಎಂಬುದಕ್ಕೆ ಸಮಾಧಾನ ಬೇಕು. ಹಳ್ಳಿಯ ಕಸಬುದಾರನಲ್ಲಿಗೆ ಹೋಗಿ ಕಲಿಯುವ ಮಕ್ಕಳಿಗೆ ತರಬೇತಿಯನ್ನು ಅವನು ಕೊಡಬೇಕೆಂದು ಏನು ನಿರ್ಬಂಧವಿದೆ? ಅವನೊಂದು ಹಾಜರಿ ಪಟ್ಟಿಯನ್ನು ಕ್ರಮಪ್ರಕಾರ ಇಡಬೇಕೆಂದು ಒತ್ತಾಯಿಸುವುದು ಸಾಧ[...] ವಿದ್ಯಾರ್ಥಿಗಳಿಗೆ ತರಬೇತಿ ಕೊಟ್ಟು[...] ಅವನಿಗೇನು ಪ್ರತಿಫಲದ ಭರವಸೆ[...] ಶಾಲಾ ದಿವಸ ಮೂರು ತಾಸಿಗೆ [...]ಲಾಗಿದ್ದರೂ ಅಧ್ಯಾಪಕರ ಕೆಲಸದ ಅ[...] ಆರು ತಾಸಿಗೆ ಏರುವುದಿಲ್ಲವೆ? ಅ[...] ಅಧ್ಯಾಪಕರು ಉದ್ಯೋಗ ಕಳಕೊಳ್ಳ[...]ದಿಲ್ಲವೆ? ಮಕ್ಕಳು ಹೊಲಗದ್ದೆ[...] ಮತ್ತು ಹಳ್ಳಿಯ ಕರ್ಮಶಾಲೆಗಳಲ್ಲಿ[...]ದ ಯೋಗ್ಯತೆಯನ್ನು ನಿರ್ಣಯಿ[...] ರೀತಿ ಯಾವುದು? ವ್ಯವಸಾಯವೇ ಪ[...]ತಾದ ಕ್ಷೇತ್ರಗಳಲ್ಲಿ ಆಧುನಿಕ ಸಂಶೋ[...]ನೆಗಳನ್ನು ಜ್ಯಾರಿಗೆ ತರಬೇಕೆಂದು [...]ವಳಿ ನಡೆಯುವ ಈ ದಿನಗಳಲ್ಲಿ ಮ[...] ತರಬೇತಿಯ ಕೆಲಸವನ್ನು ಹಳೆಯ [...]ತಿಯನ್ನೆ ಪುರಸ್ಕರಿಸುತ್ತಿರುವ ಹೆತ್ತ[...] ಕೈಗೊಪ್ಪಿಸಿದರೆ, ಅದು ಚೆಂದವೆ? [...] ಬದಲು ಅಧ್ಯಾಪಕರಿಗೇ ಮೂಲ ಶಿಕ್ಷ[...] ತರಬೇತಿ ಕೊಟ್ಟು ಅವರ ಮೇಲ್ವಿಚಾ[...]ಯಲ್ಲಿ ಕೃಷಿ ಕೈಗಾರಿಕೆಗಳ ಶಿಕ್ಷಣ[...] ಕೊಟ್ಟರೆ ಹೇಗೆ? ಕೃಷಿಯನ್ನು ಅವ[...]ಬಿಸಿರುವ ಜನರು ನಮ್ಮಲ್ಲಿ ಹೆಚ್ಚಿರು[...]ದರೂ ವರ್ಷದಲ್ಲಿ ಆರು ತಿಂಗಳು ಪ[...] ಬೇಸಾಯದ ಕೆಲಸವಿದೆ. ಉಳಿದ [...]ಯ ಈ ವಿದ್ಯಾರ್ಥಿಗಳು ಏನು ಮ[...] ಬೇಕು? ಈ ಎಲ್ಲ ಸಂದೇಹಗಳಿಗೆ ಯೋ[...]ಗ್ಯ ಸಮಾಧಾನ ದೊರೆತಿರುವುದಿಲ್ಲ [...]ಕಾರವು ಇದನ್ನು ಒಂದು ಹೇಳಿ[...] ಮೂಲಕ ಬೇಗನೇ ನಿವಾರಿಸಿ, ಸು[...]ರಣೆಯು ಯಶಸ್ವಿಯಾಗು[...] ನೋಡಿಕೊಳ್ಳಬೇಕು. ಪ್ರಸಿದ್ಧ [...]ತಜ್ಞರನ್ನೂ ಶೈಕ್ಷಣಿಕ ಸಂಘ ಸಂ[...]ಳನ್ನೂ ಸಲಹೆಕೇಳಿ ಈ ಸಂಶಯ[...] ನಿವಾರಣೋಪಾಯಗಳನ್ನು ಕಂಡ[...]ಯಲು ಸಾಧ್ಯವಿದೆ. ಒಮ್ಮೆ ತಕ್ಕ [...]ಕರಣವನ್ನು ಕೊಟ್ಟಪಕ್ಷದಲ್ಲಿ ಈ [...]ರಣೆಯ ಕುರಿತು ಅಧ್ಯಾಪಕವರ್ಗವೂ [...]ತ್ತವರೂ ಹೆಚ್ಚು ಆಸಕ್ತಿಯನ್ನು ಹ[...]ವರೆಂದು ಆಶಿಸುತ್ತೇವೆ. ಮೊದಲಿಗೆ [...] ಚಣೆಗಳು ಕಂಡುಬರುತ್ತಿದ್ದರೂ [...]ದ್ಧತಿಯು ಪ್ರಾಯೋಗಿಕ ಘಟ್ಟ[...] ಮುಗಿಸಿದ ಬಳಿಕ ತುಂಬ ಜನಪ್ರಿ[...]ಗುವುದೆಂದೂ ಕಲ್ಯಾಣರಾಷ್ಟ್ರ [...]ದರಲ್ಲಿ ಮಹತ್ವದಪಾತ್ರವಹಿಸುವುದೆ[...] ಭರವಸೆ ಇದೆ.

ಮೈಸೂರು— ರಾಜಧಾನಿಯ[...]ಧಿ ಬಾಕದಲ್ಲಿರುವ 'ದಾಶ ಪ್ರಕಾಶ' [...]ದಲ್ಲಿ ಕಳೆದ ತಾ 30ರಲ್ಲು ರಾಮೋತ್ಸವ[...]ತ್ತು ಇಲೆಕ್ಟ್ರಿಕ್ ಲೈಟಿನ ಆರಂಭೋ[...]ಯಶಸ್ವಿಯಾಗಿ ಜರಗಿತು, ಸಮಾರಂಭ[...] ನೇಕರು ಆಗಮಿಸಿದ್ದರು. ಸಂಜೆ ವಿದ್ವಾನ್ ಶ್ರೀ ವಾಸುದೇವ ಆಚಾರ್ಯರ ಸಂಗೀತ, ಶ್ರೀ ಚೌಡಯ್ಯನವರ ಪಿಟೀಲು ವಾದನ, ಶ್ರೀ ಅರುಣಾಚಲಪ್ಪನವರ ಹಾರ್ಮೋನಿಯಮ್ ಮತ್ತು ಶ್ರೀ ವೀರಭದ್ರಯ್ಯ ಮೃದಂಗವಾದನದಿಂದ—ಕೂಡಿ ನಡೆ[...] ಮರುದಿನ ರಾಮೋತ್ಸವ ಅಂಗವಾಗಿ [...]ಗಿಗೆ ಅನ್ನದಾನ ನಡೆಯಿತು.

ಕೋಟ—ಇಲ್ಲಿ ಕೆಲಸವು ಮುಗಿದಿ[...] ಕ್ಯಾಂಪ ಮಾಡಿದ್ದ ಯು.ಪಿ.ಯ ವಾ[...]ಸಿನ ಟೆಂಟು ಇದೇ ತಾ 9ನೇ ರಾತ್ರಿ[...]ಯ 2-3 ಗಂಟೆಗೆ ಸುಟ್ಟು ಹೋಗಿ[...]ಡೆ ಸುಮಾರು 11-12 ಸಾವಿರ [...] ನಷ್ಟವುಂಟಾಗಿರ ಬಹುದೆಂದೂ ಪೊ[...] ಅಧಿಕಾರಿಗಳು ಈ ಕುರಿತು ತನಿಖೆ[...] ಸುತ್ತಿರುವರೆಂದೂ ತಿಳಿದು ಬರುತ್ತದೆ.

ವಿನಿಮಯಕ್ಕೊಪ್ಪದ ಯುದ್ಧ ಕೈದಿಗಳ ಸಮಸ್ಯೆ

ಭಾರತದ ಗೊತ್ತುವಳಿಗೆ ಕಮ್ಯೂನಿಸ್ಟರ ಪರೋಕ್ಷ ಬೆಂಬಲ

ಎರಡು ಮೂರುವಾರಗಳಿಂದ ಕೊರಿಯಾದಲ್ಲಿ ಯುದ್ಧ ವಿರಾಮ ಮಾತುಕತೆಗಳು ನಡೆಯುತ್ತಿವೆಯಷ್ಟೇ- ಕಳೆದವಾರದ ಕೊನೆಯಲ್ಲಿ ಸಂಯುಕ್ತ ರಾಷ್ಟ್ರಸಂಘದ ನಿಲುವಿಗೂ ಕಮ್ಯುನಿಸ್ಟರ ಧೋರಣೆಗೂ ವ್ಯತ್ಯಾಸ ಸಾಕಷ್ಟು ಕಂಡುಬಂದಿತು. ಸಂಯುಕ್ತರಾಷ್ಟ್ರ ಸಂಘವು ವಿನಿಮಯಕ್ಕೆ ಒಪ್ಪದ ಯುದ್ಧ ಕೈದಿಗಳನ್ನೆಲ್ಲ ಸ್ವಿಜರ್‌ಲೇಂಡಿಗೋ ಸ್ವಿಡನಕ್ಕೋ ಒಪ್ಪಿಸಬೇಕೆಂದು ಹೇಳಿತಲ್ಲದೆ ಕೊರಿಯಾದಿಂದ ಈ ಕೈದಿಗಳನ್ನು ತಟಸ್ಥರಾಷ್ಟ್ರಕ್ಕೆ ಸ್ಥಳಾಂತರಿಸುವುದು ವ್ಯವಹಾರ್ಯವಲ್ಲವೆಂದು ಆಕ್ಷೇಪಿಸಿತು. ಆದರೆ ಕಮ್ಯುನಿಸ್ಟರು ಈ ದೇಶಗಳನ್ನು ತಟಸ್ಥ ರಾಷ್ಟ್ರವಾಗಿ ಪರಿಗಣಿಸಲು ನಿರಾಕರಿಸಿದ್ದಲ್ಲದೆ ಕೊರಿಯಾದಲ್ಲಿಯೇ ವಿನಿಮಯಕ್ಕೊಪ್ಪದ ಯುದ್ಧ ಕೈದಿಗಳನ್ನು ನಿಲ್ಲಿಸುವುದಕ್ಕೆ ಅಸಮ್ಮತಿ ಸೂಚಿಸಿದರು. ಹೀಗೆ ಭಿನ್ನಾಭಿಪ್ರಾಯವುಂಟಾದುದರಿಂದ ರಾಷ್ಟ್ರಸಂಘವು ಕಮ್ಯುನಿಸ್ಟರಿಗೆ ಕಟುವಚನಗಳಲ್ಲಿ ಬೆದರಿಕೆ ಹಾಕಲು ಹಿಂಜರಿಯಲಿಲ್ಲ. ಕೊನೆಯಗಳಿಗೆಗೆ ಕಮ್ಯುನಿಸ್ಟರು ಏಷ್ಯದ ರಾಷ್ಟ್ರವೊಂದನ್ನು ತಟಸ್ಥ ಪ್ರದೇಶವೆಂದು ಸ್ವೀಕರಿಸಲು ಒಪ್ಪಿದ್ದರಿಂದ ಪಾಕಿಸ್ತಾನವನ್ನು ರಾಷ್ಟ್ರ ಸಂಘದ ಪ್ರತಿನಿಧಿಗಳು ಸೂಚಿಸಿದರು. ಈ ನೇಮಕವನ್ನು ಕಮ್ಯೂನಿಸ್ಟರು ಒಪ್ಪುವರೋ ಇಲ್ಲವೋ ಎಂಬ ಬಗ್ಗೆ ಯಾವುದೇ ನಿಶ್ಚಿತ ಅಭಿಪ್ರಾಯ ವ್ಯಕ್ತಗೊಳ್ಳುವುದರಲ್ಲಿಯೇ—ಕಮ್ಯೂನಿಸ್ಟರು ಅಂತರ್ಲಾಗ ಹೊಡೆದು ಹೊಸ ಸೂಚನೆಯೊಂದನ್ನು ಮುಂದಿಟ್ಟಿರುವರು.

ಕಮ್ಯೂನಿಸ್ಟರ ಸೂಚನೆ

ಈ ಹೊಸ ಸೂಚನೆಯು ಕದನ ವಿರಾಮಕ್ಕೋಸ್ಕರ ಭಾರತವು ಕಳೆದ ದಸಂಬರದಲ್ಲಿ ರಾಷ್ಟ್ರ ಸಂಘದ ಮುಂದೆ ಮಂಡಿಸಿದ ಗೊತ್ತುವಳಿಯನ್ನೆ ಬಹ್ವಂಶ ಹೋಲುತ್ತದೆ. ಗೊತ್ತುವಳಿಯ ರಚನೆಯಾಗಲೀ ಸ್ವರೂಪವಾಗಲೀ ಭಾರತವು ಅಂದು ಮಂಡಿಸಿದುದಕ್ಕಿಂತ ಭಿನ್ನವಿಲ್ಲವೆಂದೇ ಹೇಳಬೇಕು. ಕಮ್ಯೂನಿಸ್ಟರ ಈಗಿನ ಸೂಚನೆಯಂತೆ ವಿನಿಮಯಕ್ಕೆ ಒಪ್ಪದ ಯುದ್ಧ ಕೈದಿಗಳನ್ನು ಭಾರತ ಸ್ವೀಡನ್, ಸ್ವಿಜರ್‌ಲೇಂಡ್, ಜೆಕೊಸ್ಲೊವಾಕಿಯಾ ಮತ್ತು ಪೋಲಂಡಗಳಿಂದ ಕೂಡಿದ ತಟಸ್ಥ ರಾಷ್ಟ್ರ ಸಮಿತಿಯ ವಶಕ್ಕೆ ಕೊಡಬೇಕು. ಈ ಕೈದಿಗಳು ಕೊರಿಯಾದ ನೆಲದಲ್ಲಿಯೇ ಸಮಿತಿಯ ಮೇಲ್ವಿಚಾರಣೆಯಲ್ಲಿ ಉಳಿಯುವರು. ಭಾರತವು ಹಿಂದೆ ಮಂಡಿಸಿದ್ದ ಗೊತ್ತುವಳಿಯಲ್ಲಿ ಭಾರತವನ್ನು ಬಿಟ್ಟುಳಿದ ನಾಲ್ಕುರು ರಾಷ್ಟ್ರಗಳು ತಟಸ್ಥ ರಾಷ್ಟ್ರ ಸಮಿತಿಯ ಸದಸ್ಯರಲ್ಲಿ ಭಿನ್ನಾಭಿಪ್ರಾಯ ಏಳುವ ಪ್ರಸಂಗ ಬಂದಾಗ ನಿರ್ಣಯವನ್ನು ಕೊಡುವ ಅಧಿಕಾರವನ್ನು ಒಬ್ಬ ಅಂಪಾಯರನ ಕೈಗೊಪ್ಪಿಸಬೇಕೆಂದು ಸೂಚಿಸಲಾಗಿತ್ತು. ಆಗ ಈಡನರೂ ಅಚಿಸನರೂ ಅಂಪಾಯರ ಸ್ಥಾನದಲ್ಲಿರುವ ಐದನೇ ರಾಷ್ಟ್ರವು ಭಾರತವಾಗಬೇಕೆಂದು ಅಪೇಕ್ಷೆ ಪಟ್ಟಿದ್ದರು. ಮಾತ್ರವಲ್ಲ ಸಮಿತಿಯ ಸದಸ್ಯ ರಾಷ್ಟ್ರವಾಗಿ ಪ್ರಾರಂಭದಿಂದಲೂ ಈ ಅಂಪಾಯರ ರಾಷ್ಟ್ರ ಕೆಲಸಮಾಡಬೇಕೆಂದೂ, ಅಧ್ಯಕ್ಷ ಸ್ಥಾನವನ್ನು ವಹಿಸುವ ಕರ್ತವ್ಯ ಅದರದಾಗಬೇಕೆಂದೂ ಹೇಳಿದ್ದರು. ಭಾರತದ ಗೊತ್ತುವಳಿಯನ್ನು ಸಂಯುಕ್ತ ರಾಷ್ಟ್ರ ಸಂಘವು ಅತ್ಯಧಿಕ ಬಹುಮತದಿಂದ ಸ್ವೀಕರಿಸಿತ್ತು. ಆದಕಾರಣ ಹೆಚ್ಚು ಕಡಿಮೆ ಈ ಗೊತ್ತುವಳಿಯನ್ನು ಹೋಲುವ ಕಮ್ಯೂನಿಸ್ಟರ ಹೊಸ ಸೂಚನೆಗಳನ್ನು ಸ್ವೀಕರಿಸುವುದಕ್ಕೆ ರಾಷ್ಟ್ರಸಂಘ ಒಪ್ಪುವ ಪ್ರಮೇಯವಿದೆ.

ಮುಖ್ಯ ಆಕ್ಷೇಪ

ಭಾರತದ ಗೊತ್ತುವಳಿಗೆ ಕಮ್ಯೂನಿಸ್ಟ ರಾಷ್ಟ್ರಗಳು ಮಾತ್ರ ವಿರುದ್ಧ ಮತ ಕೊಟ್ಟಿದ್ದುವು. ಈಗ ಕಮ್ಯೂನಿಸ್ಟರ ಕಡೆಯಿಂದಲೇ ಭಾರತದ ಸೂಚನೆಗಳನ್ನು ತಮ್ಮದೆಂದು ಮುಂದು ಮಾಡಲಾಗಿರುವುದರಿಂದ ಭಾರತದ ಗೊತ್ತುವಳಿಯನ್ನು ಅಪ್ರತ್ಯಕ್ಷವಾಗಿ ಪುರಸ್ಕರಿಸಿದಂತೆಯೇ ಆಗಿದೆ. ಆದರೆ ಭಾರತವನ್ನು ಸಹ ಅಮೇರಿಕನ್ನರು ಕಮ್ಯೂನಿಸ್ಟ ಪಕ್ಷಪಾತಿ ರಾಷ್ಟ್ರವೆಂದು ಸಂಶಯದಿಂದ ನೋಡುತ್ತಿರುವರು. ಆದ ಕಾರಣವೇ 'ಇರಬೇಕು, ಕಮ್ಯೂನಿಸ್ಟರ ಸೂಚನೆಯನ್ನು ಸ್ವೀಕರಿಸಲು ಅಮೇರಿಕಾ ಹಿಂದು ಮುಂದು ನೋಡುತ್ತಿದೆ. ರಾಷ್ಟ್ರ ಸಂಘದಲ್ಲಿ ಭಾರತದ ಗೊತ್ತುವಳಿಗೆ ಕಮ್ಯೂನಿಸ್ಟರಿಂದ ದೊರೆತ ಪರೋಕ್ಷ ಬೆಂಬಲ ನೋಡಿ ಸಮಾಧಾನ ವ್ಯಕ್ತಪಡಿಸಲಾಗಿದ್ದರೂ ಅಮೇರಿಕಾದ ಪ್ರತಿಕ್ರಿಯೆ ಉತ್ತೇಜಕವಾಗಿರ ಲಿಲ್ಲ. ಸಂ[illegible] ಮಾತು ಕತೆಗಳಲ್ಲಿ ಭಾಗವಹಿಸುತ್ತಿರುವ ರಾಷ್ಟ್ರ ಸಂಘದ ಪ್ರತಿನಿಧಿಗಳು ಕಮ್ಯೂನಿಸ್ಟರೊಡನೆ ಅನೇಕ ಸಂಗತಿಗಳ ಕುರಿತು ಸ್ಪಷ್ಟೀಕರಣವನ್ನು ಕೇಳಿರುವರು. ಕಮ್ಯೂನಿಸ್ಟರ ಸೂಚನೆಯಂತೆ ತಟಸ್ಥ ರಾಷ್ಟ್ರಗಳ ಕೈಯಲ್ಲಿ ವಿನಿಮಯಕ್ಕೊಪ್ಪದ ಯುದ್ಧ ಕೈದಿಗಳು ನಾಲ್ಕು ತಿಂಗಳವರೆಗ ಇರಬೇಕು. ಈ ಅವಧಿಯಲ್ಲಿ ಭವಿಷ್ಯ ನಿರ್ಣಯಿಸಲ್ಪಡದ ಯುದ್ಧಕೈದಿಗಳು ಇದ್ದರೆ ಕೊರಿಯಾ ಕದನ ನಿಲುಗಡೆಯ ಬಳಿಕ ನಡೆಯುವ ರಾಜಕೀಯ ಸಮಿತಿಯು ಅಂಥವರ ಭವಿಷತ್ತನ್ನು ನಿರ್ಧರಿಸತಕ್ಕದ್ದು. ಹೀಗೆ ಅನಿರ್ದಿಷ್ಟ ಕಾಲಾವಧಿಯವರೆಗೆ ಈ ಜನರ ಭವಿಷ್ಯವನ್ನು ತೂಗಯ್ಯಾಲೆಯಲ್ಲಿಡುವುದು ರಾಷ್ಟ್ರಸಂಘಕ್ಕೆ ಇಷ್ಟವಿಲ್ಲ. ಕಮ್ಯುನಿಸ್ಟರು ಮಾಡಿದ ಸೂಚನೆಯಲ್ಲಿ ಇನ್ನೊಂದು ಮಹತ್ವದ ಅಂಶವಿದೆ. ಅದೇನೆಂದರೆ ತಟಸ್ಥ ರಾಷ್ಟ್ರಗಳು ವಿನಿಮಯಕ್ಕೊಪ್ಪದ ಯುದ್ಧಕೈದಿಗಳ ಸಂರಕ್ಷಣೆಗೋಸ್ಕರ ತಮ್ಮ ಸ್ವಂತ ಸೈನಿಕ ಪಡೆಯನ್ನು ತರಬೇಕಾಗುತ್ತದೆ. ಇದಕ್ಕೆ ತಟಸ್ಥ ರಾಷ್ಟ್ರಗಳು ಸಿದ್ಧವಿವೆಯೆ ಎಂಬುದು ಮೊದಲಿಗೆ ಗೊತ್ತಾಗುವುದು ಅವಶ್ಯ

(೫ನೇ ಪುಟದಿಂದ)

ಅಲಿಯವರು ಹೇಳಿರುವುದು ಅರ್ಥ ಗರ್ಭಿತವಾಗಿದೆ. ಭಾರತ ಪಾಕಿಸ್ತಾನ ಎರಡೂ ರಾಷ್ಟ್ರಗಳಲ್ಲಿ ಸೈನ್ಯದ ವೆಚ್ಚವು ಆದಾಯದ ಅರ್ಧದಷ್ಟು ಇರುತ್ತದೆ. ಇಷ್ಟು ಅಪಾರ ಹಣವನ್ನು ರಾಷ್ಟ್ರಸಂರಕ್ಷಣೆಯ ಉದ್ದೇಶದಿಂದ ವ್ಯಯಿಸುವುದರ ಔಚಿತ್ಯವನ್ನು ಪ್ರಶ್ನಿಸುವುದು ಸಲ್ಲದಾದರೂ ಈ ಹಣದಲ್ಲಿ ಒಂದು ಪಾಲು ಕಲ್ಯಾಣ ರಾಷ್ಟ್ರ ನಿರ್ಮಿಸುವ ಚಟುವಟಿಕೆಗಳಿಗೆ ದೊರೆಯುತಿದ್ದರೆ—ಎಂಬ ಭಾವನೆ ಬಡತನದ ಬೀಡಾಗಿರುವ ಈ ನಾಡಿನ ಜನರಲ್ಲಿ ತಾನಾಗಿ ಒಡಮೂಡುತ್ತದೆ. ಮಹಮ್ಮದಾಲಿಯವರು ಭಾರತ ಪಾಕಿಸ್ತಾನಗಳಲ್ಲಿ ದ್ವೇಷವು ತಗ್ಗಿದರೆ, ಸಂರಕ್ಷಣ ವೆಚ್ಚವನ್ನು ತಗ್ಗಿಸಬಹುದೆಂದು ಸೂಚಿಸಿದ್ದಾರೆ. ತನ್ಮೂಲಕ ಉಳಿಯುವ ಹಣವನ್ನು ಅಭಿವೃದ್ಧಿ ಯೋಜನೆಗೆ ಉಪಯೋಗಿಸಲು ಬರುವುದಾಗಿ ಅವರು ಆಶಿಸಿದ್ದಾರೆ. ಈ ಸೂಚನೆಯು ಹೊರಗಣ್ಣಿಗೆ ಸುಂದರವಾಗಿ ಕಾಣಿಸುತ್ತದೆ. ಆದರೆ ವ್ಯವಹಾರದಲ್ಲಿ ಇದು ಹೇಗೆ ತಳವೂರೀತೋ ಹೇಳಲು ಬಾರದು. ಉಭಯ ರಾಷ್ಟ್ರಗಳ ಅಭಿವೃದ್ಧಿಗೆ ಧಂಡವಾಳ ಬೇಕೆಂಬುದು ನಿಜ. ಈಗ ಅಮೇರಿಕೆಯು ಈ ವಿಷಯದಲ್ಲಿ ನೆರವಾಗುತ್ತಿದೆ. ಆದರೆ ಈಚೆಗೆ ಆಗ್ನೇಯ ಏಶಿಯಾದ ಸಂಚಾರ ಕೈಗೊಂಡ ಅಮೇರಿಕಾದ ಉಪಸಮಿತಿಯೊಂದು ಭಾರತ ಪಾಕಿಸ್ತಾನಗಳು ಅಮೇರಿಕದಿಂದ ದೊರೆತ ಧನಸಹಾಯದಿಂದ ಯುದ್ಧ ಪ್ರವೃತ್ತಿಗೆ ಚಾಲನೆ ದೊರಕಿಸಿಕೊಂಡಿವೆ ಎಂದು ಆರೋಪಿಸಿದೆ. ಇಂಥ ಮಾತುಗಳನ್ನು ಆಡುವುದರ ಪರಿಣಾಮ ತ್ರ ಎರಡು ಸ್ವತಂತ್ರ ರಾಷ್ಟ್ರಗಳ ಮೇಲೆ ಏನಾದೀತೆಂಬ ಕಲ್ಪನೆಯನ್ನು ಆ ಸಮಿತಿ ಮಾಡಿಕೊಳ್ಳದೆ ಹೋದುದು ದುರ್ದೈವ. ಇದೆಂತಿದ್ದರೂ, ನೆಹರೂ ಮತ್ತು ಮಹಮ್ಮದ್ ಅಲಿಯವರ ನಡುವೆ ಭೇಟಿಯನ್ನೇರ್ಪಡಿಸುವುದಕ್ಕೋಸ್ಕರ ವಿಷಯ ಪಟ್ಟಿಯನ್ನು ಸಿದ್ಧಗೊಳಿಸಲು ಪಾಕಿಸ್ಥಾನದಿಂದ ವಿದೇಶಾಂಗ ಖಾತೆಯ ಅಧಿಕಾರಿಗಳು ಈಗ ಹೊಸದಿಲ್ಲಿಗೆ ಬಂದಿರುವರು. ಅವರ ಪ್ರಯತ್ನಗಳು ಫಲಕಾರಿಯಾಗಲೆಂದು ಹಾರೈಸೋಣ.

ಮೈಸೂರು ಪ್ರಧಾನಿ ಕೆ. ಹನುಮಂತಯ್ಯ—ನವರೊಡನೆ ಶ್ರೀಗಳಾದ

ಜಿ. ವಿ. ಕೆ. ರಾವ್, ಕಾರ್ಯದರ್ಶಿ, ಸಿ. ರಾಮಸ್ವಾಮಿ ಆಪ್ತ ಕಾರ್ಯದರ್ಶಿ ಎಚ್. ಕೃಷ್ಣಸ್ವಾಮಿ, ಹಾಸನ ಜಿಲ್ಲಾ ಕಾಂ. ಕ. ಅಧ್ಯಕ್ಷ, ಟಿ. ಬಿ. ಶ್ರೀನಿವಾಸನ್, ಸಂಪಾದಕ ತಾಯಿನಾಡು, ಎಸ್. ಸಿ. ಬಸಪ್ಪ, ಸಂಪಾದಕ, ಜನ್ಮಭೂಮಿ, ಕೆ. ಎಲ್. ರಾಮಸ್ವಾಮಿ, ಪ್ರತಿನಿಧಿ, ಹಿಂದು, ರಾಮಸ್ವಾಮಿ, ಸುದ್ದಿಗಾರ, ಸತ್ಯ, ಜನಾಬ್ ಶರೀಫ್, ಸ್ಟಾಫ್ ಫೊಟೊಗ್ರಾಫರ್ ಜನವಾಣಿ, ಆಸ್ಥಾನ ವಿದ್ವಾನ್ ಸಂಗೀತ ರತ್ನ ಟಿ. ಚೌಡಯ್ಯ, ಎಂ. ಎಲ್. ಸಿ, ಸುಚ್ಚು ಮಾಸ್ತಿ ಗೌಡ, ಎಂ. ಎಲ್. ಎ, ಸೊಲ್ಲೂರು ಸಿದ್ದಪ್ಪ, ಎಂ. ಎಲ್. ಎ, ಎಸ್ ಕಾರ್ಯಪ್ಪ, ಎಂ. ಎಲ್. ಎ, ಡಿ. ದೇವರಾಜ್ ಅರಸ್, ಎಂ. ಎಲ್. ಎ, ಮಾಧವಾಚಾರ್, ಎಂ. ಎಲ್. ಎ, ಮೊದಲಾದವರೂ ಮಂಗಳೂರಿನ ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಗಡೆಯವರೂ ಬಂದಿದ್ದರು. ಇವರೆಲ್ಲರ ಪರಿಚಯವನ್ನು ನಮ್ಮ ಜಿಲ್ಲೆಯವರೇ ಆಗಿ ಭದ್ರಾವತಿಯಲ್ಲಿರುವ ಶ್ರೀ ಮಾಧವಾಚಾರ್ ಎಂ. ಎಲ್. ಎ, ಅವರು ಕೊರ್ಪರೇಶನಿನ ಉಪಾಹಾರ ಸತ್ಕಾರದ ವೇಳೆ ಸಭಿಕರಿಗೆ ಮಾಡಿಕೊಟ್ಟರಲ್ಲದೆ ಬ್ಯಾಂಕುಗಳ ಕಡೆಯಿಂದ ಅವರೆಲ್ಲರಿಗೂ ಹೂಮಾಲೆ ಹಾಕಿ ಗೌರವಿಸಲಾಯಿತು

ಕೆನರಾ ಬ್ಯಾಂಕಿಂಗ್ ಕೊರ್ಪರೇಶನಿನವರು—

ಮಡಿಕೇರಿಯಲ್ಲಿ ಕಟ್ಟಿಸಿದ ಸ್ವಂತ ಕಟ್ಟಡದ ಪ್ರಾರಂಭೋತ್ಸವವು ತಾ 16-5-53 ನೇ ಬೆಳಗ್ಗೆ 10 ಗಂಟೆಗೆ ಕೊಡಗಿನ ಚೀಫ್ ಕಮಿಶನರ್ ಶ್ರೀ ದಿ. ಎಸ್, ದಯಿಯವರಿಂದಲೂ ಸೇಫ್ ಡಿಪೊಸಿಟ್ ವೋಲ್ಟಿನ ಆರಂಭೋತ್ಸವವು ಕೊಡಗಿನ ಕಾನೂನು ಕಾರ್ಯದ ಮಂತ್ರಿ ಶ್ರೀ ಕೆ. ಮಲ್ಲಪ್ಪನವರಿಂದಲೂ ನೆರವೇರಲ್ಪಡಲಿವೆ. ಕೊಡಗಿನ ಪ್ರಧಾನಿ ಶ್ರೀ ಸಿ. ಎಂ. ಪೂಣಚ್ಚನವರು ಸಮಾರಂಭದ ಅಧ್ಯಕ್ಷತೆ ವಹಿಸುವರು.

ವಿವಾಹ ಸಮಾರಂಭಗಳು

ಶ್ರೀ ಕೊಡಪ್ಪನ್ ತಿಮ್ಮಪ್ಪ ಆಳ್ವರ ಪುತ್ರಿ ಕುಮಾರಿ ವಿಟ್ಟಮ್ಮಳನ್ನು ಶ್ರೀ ಇಚ್ಲಂಪಾಡಿ ರಾಮಯ್ಯ ಆಳ್ವರ ಪುತ್ರ ಶ್ರೀ ವಿಶ್ವನಾಥ ಆಳ್ವರು ತಾ. 6 5-53ರಲ್ಲಿ ಮಂಗಳೂರು S. R. S. ಹೋಮಿನಲ್ಲಿಯೂ

ಶ್ರೀ ಸಿಡ್ಡೋಡಿಬಾವ ಮುಸ್ತಣ್ಣ ಶೆಟ್ಟರ ಪುತ್ರ ಶ್ರೀ ಜಯಂತ ಶೆಟ್ಟರು ಶ್ರೀ ಕುಲಾಲು ಮಂಡ ಚೌಟರ ಪುತ್ರಿ ಕುಮಾರಿ ರತ್ನಳನ್ನು ತಾ 10-5-53ರಲ್ಲಿ ಮಂಗಳೂರು ಗಣಪತಿ ಹೈಸ್ಕೂಲಿನಲ್ಲಿಯೂ ವಿಜೃಂಭಣೆಯಿಂದ ವಿವಾಹವಾದರು

ಜನಾಬ್ ಮು. ಹುಸೇನ್ ಸಾಹೇಬರ ಪುತ್ರ ಬಿ. ಅಬ್ದುಲ್ ಖಾದರನು ಶಿವಮೊಗ್ಗದ ದಿ| ಜ| ಸೈಯದ್ ಅಬ್ದುಲ್ ಖಾದರರ ಪುತ್ರಿ ಆಶಾ ಬೇಗಮಳನ್ನು ತಾ. 7-5-53 ರಲ್ಲಿಯೂ ದಿ| ಜ| ಕುರ್ಕಳ ಮೂಸ ಸಾಹೇಬರ ಪುತ್ರ ಇಬ್ರಾಹಿಮನು ದಿ| ಜ| ರಜಬ್ ಸಾಹೇಬರ ಪುತ್ರಿ ಖತೀಮ್ಮಳನ್ನು ತಾ 11-5-53 ರಲ್ಲಿಯೂ ವಿವಾಹವಾದರು. ಈ ಸಂಬಂಧ ತಾ 12ನೇ ಸಂಜೆ ಜ| ಯು. ಅಬ್ದುಲ್ ರಹಿಮಾನರ ಮನೆಯಲ್ಲಿ ಉಪಾಹಾರ ಸಮಾರಂಭವಿತ್ತು.

ಬ್ರಹ್ಮಾವರ— ಇದೇ ತಾ. 5 ರಲ್ಲು ಬ್ರಹ್ಮಾವರ ವಾಣಿಜ್ಯ [illegible] ಲೋರಿ [illegible] ಕಂಟ್ರಾಕ್ಟರ್ [illegible] ಹೆಗ್ಡೆಯವರ [illegible] ದಿಂದ ಶ್ರೀ ಗೋಪಾಲ ಪೈಗಳ ಹತ್ತು ವರ್ಷ ಪ್ರಾಯದ ಪುತ್ರನೊಬ್ಬನು ಕೊಡಾ [illegible] ಅಗಿದ್ದು ಸ್ವಲ್ಪ ಸಮಯದಲ್ಲಿ ಮೃತಪಟ್ಟನೆಂದೂ ವಿಷಾದಕರ ವಾರ್ತೆ ಬಂದಿದೆ.

ಮಲ್ಪೆ— ಮಲ್ಪೆ ಕೊಡವೂರಿನ ಡಾ| ವೆಂಕಟಗಿರಿ ರಸ್ತೆಯನ್ನು [illegible] ಸುವುದಕ್ಕಾಗಿ ಪ್ರಯತ್ನಿಸಲು ಕಮಿಟಿಯೊಂದು ರಚಿಸಲ್ಪಟ್ಟಿತ್ತು. ರಸ್ತೆಯ ಶಂಕು ಸ್ಥಾಪನಾ ಕಾರ್ಯವು ಇದೇ ತಾ 3ರಲ್ಲಿ ಶ್ರೀ. ಯು. ಎಸ್. ನಾಯ್ಕರಿಂದ ಜರಗಿಸಲ್ಪಟ್ಟಿತು. ಸಮಿತಿಯು ಮಹಾಜನರ ಸಹಕಾರವನ್ನು ಕೋರುತ್ತದೆ.

ತಾ. 15—5—53ರಿಂದ ಪ್ರಾರಂಭ

2ನೇ ವಾರ

ಝಾನ್ಸಿ—ಕಿ—ರಾಣಿ

(ಮಿನರ್ವಾದವರ ವರ್ಣ ಚಿತ್ರ)

ಹಿಂದೂಸ್ಥಾನದ ಪ್ರಥಮವಾದ ವರ್ಣಚಿತ್ರವ

(Colour by Technicolour)

ಪಾತ್ರವರ್ಗ.— ಸೋಹರಬ್ ಮೋದಿ, ಮೆಹತಾಬ್, ಮುಬಾರಕ್, ಉಲ್ಹಾಸ್, ರಾಮಸಿಂಗ್ ಮತ್ತು ಸಾವಿರಾರುಮಂದಿ ಇತರರು.

[illegible] ಡಿಸ್ಟ್ರಿಬ್ಯುಟರ್ ಲಿಮಿಟೆಡ್, ಉಡುಪಿ.

ಉಡುಪಿಯಲ್ಲಿ ಮಂತ್ರಿ ರಂಗಾರೆಡ್ಡಿ ಮತ್ತು ಮೈಸೂರು ಪ್ರಧಾನಿ ಹನುಮಂತಯ್ಯನವರು

ದಕ್ಷಿಣ ಕನ್ನಡ

ಕಾರ್ಕಳ— ಮದ್ರಾಸಿನ ಪಬ್ಲಿಕ್ ವರ್ಕ್ಸ್ ಮಂತ್ರಿ ಮಾನ್ಯ ರಂಗರೆಡ್ಡಿಯವರು ತಾ 6ರಲ್ಲು ಕಾರ್ಕಳಕ್ಕೆ ಬಂದಾಗ ಶ್ರೀ ಆರ್ ಹರಿ ಶೆಣೈಯವರು ಊರವರ ಪರವಾಗಿ ಬಿನ್ನವತ್ತಳೆಯನ್ನು ಅರ್ಪಿಸಿ ವಿದ್ಯುತ್ ಸರಬರಾಯಿಯ ಆಕಸ್ಮಿಕದ ಸ್ಥಿತಿಯನ್ನು ಮಂತ್ರಿಗಳ ಗಮನಕ್ಕೆ ತಂದರು. ಉಡುಪಿಯಲ್ಲಿ ಖರ್ಚಾಗದೆ ಉಳಿದ ವಿದ್ಯುತ್ತನ್ನು ಕಾರ್ಕಳಕ್ಕೆ ಸರಬರಾಯಿ ಮಾಡುವ ವಿಚಾರವನ್ನು ಸರಕಾರವು ಪರಿಶೀಲಿಸಿ, ಶೀಘ್ರದಲ್ಲೇ ಕಾರ್ಯಪ್ರವೃತ್ತವಾಗುವುದು ಎಂದು ಉತ್ತರವಿತ್ತರು.

ಪುತ್ತೂರು— ಮಾನ್ಯ ಮಂತ್ರಿಗಳು ಪುತ್ತೂರಿನಿಂದ ಸುಬ್ರಹ್ಮಣ್ಯಕ್ಕೆ ಹೋಗುವಾಗ ಸವಣೂರು ಬೋರ್ಡ್ ಹಾ| ಎ| ಶಾಲೆಯ ಅವರಣದ ನೆರೆದಿದ್ದ ರೈತ ವರ್ಗದಾರರ ಸಭೆ| ಯಾಕರಾಗಿ ಆ ಪ್ರಾಂತದ 16 ಗ್ರಾಮಗಳ ಪರವಾಗಿ ಅರ್ಪಿಸಿದ ಮನವಿಯನ್ನೂ ಸವಣೂರು ಗುತ್ತಿನ ಶ್ರೀ ವೆಂಕಪ್ಪ ರೈಗಳು ನಿರ್ವಹಿಸಿದ ಸತ್ಕಾರವನ್ನು ಸ್ವೀಕರಿಸಿದರು. ಮನವಿಯಲ್ಲಿ ನಿವೇದಿಸಿದಂತೆ ದರ್ಬೆ ನೆತ್ತರಕಲ್ಲು ರಸ್ತೆಯ ಸವೆ ಹೊಳೆ ಮತ್ತು ಇತರ ಹಳ್ಳಿಗಳಿಗೆ ಕ್ರಾಸ್‌ವೇಗಳನ್ನು ಏರ್ಪಡಿಸುವ ಕುರಿತು ತನ್ನಿಂದಾದ ಪ್ರಯತ್ನ ಮಾಡುವುದಾಗಿ ಮಂತ್ರಿಗಳು ಆಶ್ವಾಸನೆ ಕೊಟ್ಟರು. ಆದೇ ರಾತ್ರಿ ಮಂತ್ರಿ ಮತ್ತು ಪಾರ್ಟಿಯವರಿಗೂ ಇತರ ಅರ್ಥಿಗಳಿಗೂ ಸವಣೂರು ಗುತ್ತಿನ ವೆಂಕಪ್ಪ ರೈಗಳೇ ಮೊದಲಾದವರು ಭೋಜನದ ವ್ಯವಸ್ಥೆ ಮಾಡಿದ್ದರು.

ಬೆಳ್ತಂಗಡಿ— ಮಾನ್ಯ ರೆಡ್ಡಿಯವರು ಇಲ್ಲಿಗೆ ಆಗಮಿಸಿದಾಗ ಸ್ಥಳೀಯ ಪಂಚಾಯತ ಬೋರ್ಡ್ ಪ್ರೆಸಿಡೆಂಟ್ ಶ್ರೀ ಬಿ. ಮಾಧವ ಪ್ರಭುಗಳು ಸ್ವಾಗತವಿತ್ತರು. ಮಂತ್ರಿಗಳೊಡನೆ ಧರ್ಮಸ್ಥಳ ಶ್ರೀ ಮಂಜಯ್ಯ ಹೆಗ್ಡೆ ಮತ್ತು ಶ್ರೀ ವೆಂಕಟ್ರಮಣ ಗೌಡ, ಎಮ್. ಎಲ್. ಎ. ಅವರು ಕೂಡಾ ಬಂದಿದ್ದರು. ಗುರುವಾಯನ ಕೆರೆ ಪಂಚಾಯತ ಬೋರ್ಡ್ ಅಧ್ಯಕ್ಷ ಶ್ರೀ ವೈ. ರಾಮರಾಯರು ಮಂತ್ರಿಗಳಿಗೆ ಮಾನಪತ್ರ ಅರ್ಪಿಸಿದರು. ಶ್ರೀ. ಎಸ್. ಕೆ. ಭಿಡೆಯವರು ಧನ್ಯವಾದಗಳನ್ನರ್ಪಿಸಿದರು.

ಶಿರೂರು— ಸ್ಥಳೀಯ ಎಯಿಡೆಡ್ ಎಲಿಮೆಂಟರಿ ಶಾಲೆಯ ಹಳೆವಿದ್ಯಾರ್ಥಿ ಸಂಘವು ಇದೇ ತಾ 10ರಲ್ಲು ಸ್ಥಾಪನೆಯಾಗಿ ಶ್ರೀಗಳಾದ ಎಸ್. ಸೂರಪ್ಪ ಶೆಟ್ಟಿ, ಎಸ್ ನಾಗಯ್ಯ ಶೆಟ್ಟಿ ಮೊದಲಾದವರಿರುವ ಕಮಿಟಿ ರಚಿಸಲಾಯಿತು.

ಮೂಲ್ಕಿ— ಸ್ಥಳೀಯ ಬೋರ್ಡ್ ಹಾ| ಎ| ಶಾಲೆಯ ವರ್ಧಂತ್ಯುತ್ಸವವು ಇದೇ ತಾ 4ರಲ್ಲು ಸಂಕಾರಿ ಹೈಸ್ಕೂಲಿನ ಹೆಡ್ಮಾಸ್ತರ್ ಶ್ರೀ ಎಚ್. ಸಂಜೀವ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ವರದಿವಾಚನ ಶ್ರೀ ಜಗನ್ನಾಥ ಶೆಟ್ಟರಿಂದ ಸ್ವಸ್ತಿ ವಾಚನಗಳಾದುವು. ಬಳಿಕ ಶ್ರೀಗಳಾದ ಬಿ ಬೋಜರಾಜ್, ಕೆ. ಬ್ಯಾಮರಾಯ ಶೆಟ್ಟಿ, ಡಾ. ಎಮ್. ರಾಯಪ್ಪ ಕಾಮತ್ ಮೊದಲಾದವರು ಸಂಲೋಚಿತ ಮಾತುಗಳನ್ನಾಡಿದರು.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂಆಗಿಯೂ, ಚಿಲ್ಲರೆಯಾಯೂ ಸಿಗುತ್ತವೆ

ಕಲ್ಮಂಜೆ ವ್ಯಾಸಾಚಾರ್ಯ

ರಥಬೀದಿ ಉಡುಪಿ

ಮದ್ರಾಸು ಮಂತ್ರಿ ಶ್ರೀ. ಎನ್ ರಂಗಾರೆಡ್ಡಿಯವರು ಇದೇ ತಾ. 6ರಲ್ಲು ಪುತ್ತೂರಿಗೆ, ಹಿರಿಯಡಕ ಕಾರ್ಯಕ್ರಮವನ್ನು ಮುಗಿಸಿ ಮಧ್ಯಾಹ್ನ ಹೊತ್ತಿಗೆ ಉಡುಪಿಗೆ ಆಗಮಿಸಿ ಶ್ರೀ ಮದನಂತೇಶ್ವರ, ಶ್ರೀಕೃಷ್ಣ ಮಠವನ್ನು ಸಂದರ್ಶಿಸಿ ಪಂಟ್ಲೆಂಡ್ ಬಂಗ್ಲೆಯಲ್ಲಿ ಭೋಜನ ತೀರಿಸಿ ಅಪರಾಹ್ನ ಮಲ್ಪೆಗೆ ಹೋಗಿ ಕಲ್ಮಾಡಿ ಸೇತುವೆ ಕಾರ್ಯವನ್ನು ಪರಿಶೀಲಿಸಿ ಅಲ್ಲಿಯ ಪಂಚಾಯತ ಬೋರ್ಡಿನ ಬಿನ್ನವತ್ತಳೆಯನ್ನು ಸ್ವೀಕರಿಸಿ ಉಡುಪಿಗೆ ಬಂದರು. ಸಂಜೆ ಮುನಿಸಿಪಲ್ ಆಫೀಸಿಗೆ ಆಗಮಿಸಿ ಚೆರ್‌ಮೆನ್ ಶ್ರೀ ಯು ಎಸ್. ನಾಯ್ಕರು ಒಪ್ಪಿಸಿದ ಮಾನಪತ್ರವನ್ನು ಸ್ವೀಕರಿಸಿ ಅದಕ್ಕೆ ತಕ್ಕ ಉತ್ತರವಿತ್ತರು.

ಬಳಿಕ ರಥಬೀದಿಯಲ್ಲಿ ಶ್ರೀ ದಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ವಕೀಲ್ ಶ್ರೀ ಪಿ. ವಿ ಆಚಾರ್ಯರು ಕಾಂಗ್ರೆಸ್ ಕಮಿಟಿಯ ಸುದೀರ್ಘ ಮನವಿಯನ್ನೊಪ್ಪಿಸಿದರು. ಮನವಿಯಲ್ಲಿ ಜೋಗಿನ ವಿದ್ಯುತ್ ಸರಬರಾಯಿ, ಮಂಗಳೂರು ಉಡುಪಿ ರೈಲ್ವೆ ನದಿಗಳಿಗೆ ಸೇತುವೆ, ನೀರಾವರಿ, ಮಲ್ಪೆ ಪ್ರಬುದ್ಧ ಬಂದರವಾಗುವ ಅವಶ್ಯಕತೆ ಇತ್ಯಾದಿ ಸೂಚಿ

ಬಹುಮಾನ ವಿತರಣೆ ಮೊದಲಾದ ಕಾರ್ಯಕ್ರಮಗಳಿಂದ ಸಭಾಂತ್ಯವಾಯಿತು

ಸ್ಯಾಬರಕಟ್ಟೆ— ಇಲ್ಲಿಯ ಬೋರ್ಡ್ ಹಾ| ಎ| ಶಾಲೆಯ ಪ್ರಥಮ ವರ್ಧಂತಿ ಸಮಾರಂಭವು ತಾ 2ರಲ್ಲಿ ಶ್ರೀ ವೈ ಮಂಜಯ್ಯ ಶೆಟ್ಟಿ, ಎಮ್ ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಎಸ್ ಎಸ್ ಕೊಳ್ಕೆಬೈಲ್, ಎಮ್. ಎಲ್. ಎ. ಅವರು ಸಭೆಯ ಉದ್ಘಾಟನೆ ಮಾಡಿದರು. ಕಾರ್ಕಳದ ಮುನ್ಸಿಫ್ ಶ್ರೀ ಚಂದ್ರಶೇಖರ ಹೆಗ್ಡೆಯವರು ಬಹುಮಾನ ವಿತರಣೆ ಮಾಡಿದರು. ಶ್ರೀ ಎಮ್. ಎಮ್ ಹೆಗ್ಡೆಯವರು ಭಾಷಣ ಮಾಡಿದರು. ಬಾಲಬಾಲಕಿಯರಿಂದ ನಾಟಕಾಭಿನಯಗಳಾಗಿ ಉತ್ಸವವು ಕೊನೆಗೊಂಡಿತು.

ನಂದಿಕೂರು- ಸ್ಥಳೀಯ ಬೋರ್ಡ್, ಹಾ. ಎ. ಶಾಲೆಯ ವರ್ಧಂತ್ಯುತ್ಸವವು ತಾ. 5ರಲ್ಲು ದ. ಕ. ಜಿಲ್ಲಾ ಬೋರ್ಡ್ ಮೆಂಬರ್ ಶ್ರೀ ಕೆ. ಕೃಷ್ಣಮೂರ್ತಿ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್ಮಾಸ್ತರ್ ಶ್ರೀ ವೈ. ಸೀತಾರಾಮರಾಯರ ವರದಿಯನ್ನೋದಿದರು ಶ್ರೀ ಎನ್ ಜಯಣ್ಣ ಶೆಟ್ಟರು ಸ್ವಸ್ತಿವಾಚನ ಮಾಡಿದರು. ಶ್ರೀ ಕಾಳು ಶೆಟ್ಟಿ, ವಿದ್ವಾನ್ ಮೊದಲಾದವರು ಮಾತನಾಡಿದರು. ನಂತರ ವಿವಿಧ ಕಾರ್ಯಕ್ರಮಗಳಾಗಿ ಸಭಾಂತ್ಯವಾಯಿತು.

ಶಿರ್ವ— ಸ್ಥಳೀಯ ಪಂಚಾಯತ ಬೋರ್ಡಿನ ಸಭೆಯು ಶ್ರೀ ಎಸ್. ಅಣ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ ಶಿರ್ವ ಕೋಡು ಪೇಟೆಗೆ ಒಂದು ಹೊಸ ಬಾವಿ ಮತ್ತು ಮಣಿಭಟ್ಟಿಗೆ ಹೊಸ ರಸ್ತೆ ಮಾಡಿಸುವ ನಿರ್ಣಯವಾಯಿತು

ಪೆರ್ಣಂಕಿಲ— ಉಡುಪಿ ತಾಲೂಕಿಗೆ ಸೇರಿದ ಪೆರ್ಣಂಕಿಲ, ಕುದಿ, ಹಿರೇಬೆಟ್ಟು ಮತ್ತು ಮರ್ಣೆ ಗ್ರಾಮಗಳ ಏಳಿಗೆಗಾಗಿ "ಲೋಕಮಾನ್ಯ ತಿಲಕ ಸಂಯುಕ್ತ ಗ್ರಾಮ ಸೇವಾ ಸಂಘ"ವೆಂಬ ಹೆಸರಿನಿಂದ ಒಂದು ಸಂಘ ಸ್ಥಾಪನೆಯಾಗಿ ಸಂಘದ ಉದ್ದೇಶಗಳನ್ನು ನೆರವೇರಿಸುವರೆ ಕಾರ್ಯ ಸಮಿತಿಯು ಏರ್ಪಡಿಸಲಾಯಿತು

ಸಲ್ಪಟ್ಟಿದ್ದವು. ಮಾನ್ಯ ಮಂತ್ರಿಗಳು ಮದ್ರಾಸು ಸರಕಾರವು ದ. ಕ ಜಿಲ್ಲೆಯನ್ನು ತಿರಸ್ಕರಿಸಲಿಲ್ಲವೆಂದೂ ಸಾಧ್ಯವಾದ ಸೌಕರ್ಯಗಳನ್ನು ಒದಗಿಸಿ ಕೊಡಲಾಗಿದೆ ಎಂದೂ ಹೇಳಿದರು. ಶ್ರೀ ಟಿ ಎ ಪೈ. ಎಂ. ಎಲ್. ಎ ಗಳು ಮಂತ್ರಿಗಳ ಭಾಷಣದ ಸಾರವನ್ನು ಕನ್ನಡದಲ್ಲಿ ಹೇಳಿ ಧನ್ಯವಾದಗಳನ್ನರ್ಪಿಸಿದರು.

ರಾತ್ರಿ ಶ್ರೀ ಟಿ. ಎ. ಪೈಗಳು ಸಿಂಡಿಕೇಟ್ ಬೇಂಕಿನ ಉಪನ್ಯಾಸ ಭವನದಲ್ಲಿ ಮಂತ್ರಿಗಳಿಗೆ ಭೋಜನ ಸತ್ಕಾರವಿತ್ತರು. ಮರುದಿನ ಬೆಳಿಗ್ಗೆ ಉದ್ಯಾವರ ಕಟಪಾಡಿ, ಕಾಪು, ಮಲ್ಲಾರು, ಪಡುಬಿದ್ರೆ, ಶಿರ್ವ, ಇನ್ನಂಜೆ ಸ್ಥಳಗಳನ್ನು ಸಂದರ್ಶಿಸಿ, ಮಾನಪತ್ರಗಳನ್ನು ಸ್ವೀಕರಿಸಿ ಮಂತ್ರಿಗಳು ಮಂಗಳೂರಿಗೆ ತೆರಳಿದರು

ಮೈಸೂರು ಪ್ರಧಾನಿ ಶ್ರೀ ಹನುಮಂತಯ್ಯನವರು— ಇದೇ ತಾ 7ರಂದು ಸಂಜೆ ಉಡುಪಿಗೆ ಚಿತ್ತೈಸಿ ಶ್ರೀ ಕೃಷ್ಣ ದರ್ಶನ ಮಾಡಿ ವಸಂತ ಮಂಟಪದಲ್ಲಿ ಅಷ್ಟ ಮಠಾಧಿಪತಿಗಳಿತ್ತ ಮಾನಪತ್ರವನ್ನು ಸ್ವೀಕರಿಸಿದರು. ನಂತರ ಮುನಿಸಿಪಲ್ ಆಫೀಸಿಗೆ ತೆರಳಿದರು, ಅಲ್ಲಿ ಅವರಿಗೆ ಚಹ ಸತ್ಕಾರವಾ/ ಚೆರ್‌ಮೆನ್ ಶ್ರೀ ಯು. ಎಸ್. ನಾಯ್ಕರು ನಗರಸಭೆಯ ಮಾನಪತ್ರವನ್ನೊಪ್ಪಿಸಿದರು. ಮಂತ್ರಿಗಳು ಅದಕ್ಕುತ್ತರವಿತ್ತ ಮೇಲೆ ಡಾ|| ಪಿ ವ್ಯಾಸರಾಯರು ಧನ್ಯವಾದಗಳನ್ನಿತ್ತರು ರಥಬೀದಿಯಲ್ಲಿ ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಕಾಂಗ್ರೆಸ್ ಕಮಿಟಿ ಪರವಾಗಿ ಶ್ರೀ ಟಿ ಎ ಪೈ. ಎಮ್. ಎಲ್. ಎ ಅವರು ಬಿನ್ನವತ್ತಳೆಯನ್ನು ಅರ್ಪಿಸಿದರು. ಕರ್ನಾಟಕ ಪ್ರಾಂತ ರಚನೆಗೆ ಮೈಸೂರು ಸ್ವಾಗತವೀಯುತ್ತದೆಂದೂ, ಜೋಗದ ವಿದ್ಯುತ್ 2000 ಕಿ ವಾ. ನಷ್ಟು ಪ್ರತ್ಯೇಕ ಕೊಡಲಾಗುವುದೆಂದೂ, ರೈಲು ಸೌಕರ್ಯಗಳ ಬಗ್ಗೆ ಕೇಂದ್ರ ಸರಕಾರದ ಒಲವು ಅಗತ್ಯವೆಂದೂ ಮುಂತಾಗಿ ಶ್ರೀ ಹನುಮಂತಯ್ಯನವರು ಉತ್ತರವಿತ್ತರು. ಹಾಸನ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ ಎಚ್. ಕೃಷ್ಣಸ್ವಾಮಿಯವರು ಕರ್ನಾಟಕ ಏಕೀಕರಣದ ಕುರಿತು ಪ್ರಸ್ತಾಪಿಸಿದ ಬಳಿಕ ಶ್ರೀ ಟಿ. ಎ. ಪೈಗಳು ಧನ್ಯವಾದಗಳನ್ನಿತ್ತರು (ಮಂತ್ರಿಗಳಿಬ್ಬರೂ ಇಲ್ಲಿಯೂ ಮಂಗಳೂರಲ್ಲಿಯೂ ಮಾಡಿದ ಭಾಷಣದ ಸಾರ ಬಹುತೇಕ ಒಂದೇ ಅರ್ಥದಿಂದ ಇಲ್ಲಿ ವಿವರವಾಗಿ ಕೊಡಲಿಲ್ಲ)

ರಾತ್ರಿ ಮಂತ್ರಿಗಳ ಗೌರವಾರ್ಥವಾಗಿ ಕಿನರಾ ಮಲ್ಯ ಚಾವಲಿನವರು ಭೋಜನವನ್ನೇರ್ಪಡಿಸಿದ್ದರು. ಶ್ರೀ ಬಿ. ವೈಕುಂಠ ಬಾಳಿಗರು ಸ್ವಾಗತಿಸಿ ಮಂತ್ರಿಗಳಿಗೆ ಶ್ರೇಯಸ್ಸನ್ನು ಕೋರಿದರು, ಮಂತ್ರಿಗಳು ಅಭಾರ ಸೂಚಿಸಿದರು. (ಇದೇ ತಾ 12ಕ್ಕೆ ಶ್ರೀ ಹನುಮಂತಯ್ಯನವರು ಮಲ್ಯ ಚಾವಲಿನ ಬೆಂಗಳೂರ ಹೊಸ ಕಟ್ಟಡವನ್ನು ಉದ್ಘಾಟಿಸಲಿರುವರೆಂದು ತಿಳಿದು ಬರುತ್ತದೆ)

ಮರುದಿನ ತಾ 8ರಲ್ಲು ಬೆಳಿಗ್ಗೆ ಮಂತ್ರಿಗಳು ಮಲ್ಪೆಗೆ ಹೋಗಿ ಅಲ್ಲಿಯ ಸೌಂದರ್ಯವನ್ನು ನೋಡಿ ಸಮುದ್ರ ಸ್ನಾನ ತೀರಿಸಿ ಉಡುಪಿಗೆ ಮರಳಿ ಒಂದು ಸಂಸ್ಕೃತ ಕಾಲೇಜಿನ ಡಾ ಯು, ರಾಮರಾಯರ ಭವನ ಚಿತ್ರದ ಅನಾವರಣ ಕಾರ್ಯ ನೆರವೇರಿಸಿದರು ಅಲ್ಲಿಂದ ಕೋಪರೇಶನ್ ಬೇಂಕ ಮರಾಡದಲ್ಲಿ ಕೋಪರೇಶನ್ ಮತ್ತು ಸಿಂಡಿಕೇಟಿನವರು ಸಂಯುಕ್ತವಾಗಿ ಏರ್ಪಡಿಸಲಾದ ಚಹಾ ಸತ್ಕಾರ ಕೂಟದಲ್ಲಿ ಭಾಗವಹಿಸಿದರು ಶ್ರೀ ಟಿ. ಎ. ಪೈ, ಎಮ್ ಎಲ್. ಎ ಅವರು ಪ್ರಾರಂಭಿಕ ಮಾತುಗಳನ್ನಾಡಿದ ಮೇಲೆ ಡಾ| ಎಸ್. ಆರ್ ಪೈ ಮತ್ತು ಟಿ. ಎಮ್. ಎ. ಪೈಗಳು ಸ್ವಾಗತ ಭಾಷಣಗಳನ್ನು ಮಾಡಿದರು. ಮಾನ್ಯ ಮುಖ್ಯ ಮಂತ್ರಿಗಳು ಈ ಎರಡು ಬೇಂಕುಗಳು ಸಲ್ಲಿಸಿದ ಸೇವೆಯನ್ನು ಪ್ರಶಂಸಿಸಿ, ಬೇಂಕಿಂಗ್ ಉದ್ಯಮದ ಕುರಿತು ಕೆಲವು ಹಿತವಚನಗಳನ್ನಾಡಿದರು. ಶ್ರೀ ಕೆ. ಎಸ್ ಶೆಣೈಯವರು ಧನ್ಯವಾದಗಳನ್ನರ್ಪಿಸಿದರು ಅಲ್ಲಿಂದ ಮಾನ್ಯ ಮಂತ್ರಿಗಳು ಶ್ರೀ ವೆಂಕಟರಮಣ ದೇವಸ್ಥಾನ, ಎಮ್. ಜಿ. ಎಮ್. ಕಾಲೇಜನ್ನು ನೋಡಿ ಮಂಗಳೂರಿಗೆ ಹೋದರು.

ಮೊಡರ್ನ್ ಹಾ| ಎ| ಶಾಲೆಯ ರಜತೋತ್ಸವವು ಇದೇ ತಾ 8ರಿಂದ 10ರ ತನಕ ವಸ್ತು ಪ್ರದರ್ಶನ ಛಾಯಾಚಿತ್ರಗಳ ಅನಾವರಣ, ಭಾಷಣ, ನಾಟಕ ಮೊದಲಾದ ವಿವಿಧ ಕಾರ್ಯಕ್ರಮಗಳಿಂದ ಯಥೋಚಿತವಾಗಿ ವಿಜೃಂಭಣೆಯಿಂದ ನೆರವೇರಿತು. ಶ್ರೀಗಳಾದ ಬಿ. ಶೀನಪ್ಪ ಹೆಗ್ಡೆ, ಎಡ್ವೋಕೇಟ್, ಬೇಳಂಜೆ ಕೃಷ್ಣಯ್ಯ ಹೆಗ್ಡೆ, ಉಗ್ರಾಣ ಕೃಷ್ಣರಾವ್, ಕೊಚ್ಚಿಕಾರ್ ಪದ್ಮನಾಭ ಪೈ, ಡಾ| ಟಿ. ಮಾಧವ ಪೈ, ಟಿ ಎ. ಪೈ, ಅಧಮಾರು ಮಠದ ಶ್ರೀ ವಿಬುಧೇಶತೀರ್ಥ ಶ್ರೀಪಾದಂಗಳವರು ಬಿ. ವೈಕುಂಠ ಬಾಳಿಗ, ಡಾ| ಕೊಚ್ಚಿಕಾರ್ ಮೋಹನದಾಸ ಪೈ, ಮುನ್ಸಿಫ್ ಟಿ ಪಿ, ಬಿ ಸಿ ಕುಲಾಸೋ, ಟಿ ರಮೇಶ ಯು ಪೈ, ಡಾ| ವಿಮಲಾ ಬಾಯಿ ಜಿಲ್ಲಾ ವಿದ್ಯಾಧಿಕಾರಿ ಸಂಜೀವ ಭಟ್, ಶ್ರೀಮತಿ ಲೀಲಾವತಿ ಮೋಹನದಾಸ ಪೈ, ವಕೀಲ್ ಪಿ ವಿ. ಆಚಾರ್, ಡಾ| ಎಸ್. ಆರ್ ಪೈ, ಆರ್. ಆರ್ ಕುಂಜಿಬೆಟ್ಟು, ಡಾ| ಪಿ ಆರ್. ನಾಯಕ್, ಡಾ| ಕೆ. ಎಲ್ ಐತಾಳ್, ಪಿ ಶೀನ ಶೆಟ್ಟಿ, ಪ್ರಿನ್ಸಿಪಾಲ್ ಸುಂದರರಾವ್, ಕೂಡಲಾದವರು ಉದ್ಘಾಟಕರಾಗಿ, ಅಧ್ಯಕ್ಷರಾಗಿ, ಭಾಷಣಗಾರರಾಗಿ ಭಾಗವಹಿಸಿದ್ದರು. ಶಾಲಾ ಮೆನೇಜರ್ ಶ್ರೀ ಕೆ ಜಗನ್ನಾಥ ನಾಯ್ಕರ ಅವಿರತ ಸಾಹಸವೂ ಹಳೆವಿದ್ಯಾರ್ಥಿಗಳ ಸಹಕಾರವೂ ರಜತೋತ್ಸವ ಸಮಿತಿಯ ಕಾರ್ಯದರ್ಶಿ ಎ ಜೆ. ಅಲ್ಸೆಯವರ ವ್ಯವಸ್ಥಾಪಕತ್ವವೂ ಶ್ಲಾಘನೀಯ ಸಾವಿರಾರು ಜನರು ಉತ್ಸವದಲ್ಲಿ ಭಾಗಿಗಳಾಗಿ ವಿಶೇಷವಾಗಿ ರಂಗಭೂಮಿಯ ವಿವಿಧ ಪ್ರದರ್ಶನಗಳಿಂದ ಅಭೂತಪೂರ್ವ ಕಣ್ಣಾನಂದಗೊಂಡರು ತಾ 11ನೇ ರಾತ್ರಿಯೂ ಕಾರ್ಯಕ್ರಮವಿದ್ದು 'ದೇವದಾಸಿ' ನಾಟಕವು ಯಶಸ್ವಿಯಾಗಿ ಪ್ರಯೋಗಿಸಲ್ಪಟ್ಟಿತು, ಶ್ರೀ. ಕೆ. ಜಗನ್ನಾಥ ನಾಯ್ಕರು ಅಭಾರ ಸೂಚಿಸಿ, ಪರಾಮರ್ಶೆಯಿಂದ ಅವಕಾಶ ಸಿಗದಿದ್ದವರು ಆ ಬಗ್ಗೆ ಅನ್ಯಥಾ ಭಾವಿಸದೆ ಎಂದಿನಂತೆ ಸಹಕರಿಸಬೇಕೆಂದರು.

ಸತ್ಕಾರ:- ಮಂಗಳೂರಲ್ಲಿ ಜರಗಿದ ಪ್ರಾಂತಿಕ ಶಿಕ್ಷಣ ಸಮ್ಮೇಳನಕ್ಕೆ ಆಗಮಿಸಿದ ಪ್ರತಿನಿಧಿಗಳನೇಕರು ಉಡುಪಿಗೆ ಆಗಮಿಸಿದ್ದು ಅವರನ್ನು ಸತ್ಕರಿಸಲು ತಾ 10ರಲ್ಲು ಸಂಜೆ ಡಾ| ಟಿ. ಎಮ್ ಎ. ಪೈಗಳು ಸಿಂಡಿಕೇಟಿನ ಮಾಳಿಗೆಯಲ್ಲಿ ಸತ್ಕಾರ ಕೂಟವೊಂದನ್ನೇರ್ಪಡಿಸಿದ್ದರು. ಉಪಾಹಾರವಾದ ಮೇಲೆ ಡಾ| ಪೈಗಳು ಉಪಾಧ್ಯಾಯರ ಸ್ಥಾನಮಾನವನ್ನು ವಿವರಿಸಿ ಯಶಸ್ಸಿನ ಹಾದಿಗಳಾವುವೆಂಬುದನ್ನು ವಿವರಿಸಿದರು. ತಿಂಚಿಪಾಡಿಯ ಪ್ರೊ. ಜೊಸೆಫ್ ಡಿಸ್ಸೋಜರು ಡಾ| ಪೈಗಳ ಅಸಾಧಾರಣ ವ್ಯಕ್ತಿತ್ವವನ್ನು ಕೊಂಡಾಡಿ ಅಭಾರ ಸೂಚಿಸಿದರು

ಮಂಗಳೂರಲ್ಲಿ ಮಾನ್ಯ ಹನುಮಂತಯ್ಯನವರು

ನಗರಸಭೆ—ಜಿಲ್ಲಾ ಬೋರ್ಡುಗಳ ಮಾನಪತ್ರ ಸ್ವೀಕಾರ

ಇದೇ ತಾ. 7ರಲ್ಲು ಮೈಸೂರು ಸಂಸ್ಥಾನದ ಮುಖ್ಯ ಮಂತ್ರಿ ಮಾನ್ಯ ಹನುಮಂತಯ್ಯನವರಿಗೆ ಮಂಗಳೂರು ನಗರ ಸಭೆಯು ಮತ್ತು ದ. ಕ. ಜಿಲ್ಲಾ ಬೋರ್ಡಿನವರು ಮಾನಪತ್ರಗಳನ್ನಿತ್ತು ಗೌರವಿಸಿದರು. ಮಾನ್ಯ ಮಂತ್ರಿಗಳು ಉತ್ತರ ನೀಡುತ್ತಾ 'ಮೈಸೂರಿಗೇನೇ ವಿದ್ಯುಚ್ಛಕ್ತಿಯು ಸಾಕಾಗದಿದ್ದರೂ ಈ ವರ್ತಮಾನದಲ್ಲಿ ದ. ಕ. ಜಿಲ್ಲೆಗೆ ಎರಡು ಸಾವಿರ ಕಿಲೋವಾಟ್ಸಿನಷ್ಟು ವಿದ್ಯುಚ್ಛಕ್ತಿಯನ್ನು ಒದಗಿಸುತ್ತೇನೆಂದು ಭರವಸೆ ಕೊಟ್ಟರು. ಕರ್ನಾಟಕ ಪ್ರಾಂತರಚನೆಗೆ ಕನ್ನಡಿಗರ, ಮೈಸೂರಿನ, ಮತ್ತು ಭಾರತ ಸರಕಾರದ ಒಪ್ಪಿಗೆಯು ಬೇಕಾಗಿರುತ್ತದೆ ಇವುಗಳ ಮೊದಲಿನ ಎರಡು ಕಡೆಯವರು ಒಪ್ಪಿದರೂ ಭಾರತ ಸರಕಾರದವರು ಒಪ್ಪುವುದಿಲ್ಲ. ಕರ್ನಾಟಕ ಪ್ರಾಂತದ ವಿವಿಧ ಭಾಗಗಳು ವಿವಿಧ ಪ್ರಾಂತಗಳಲ್ಲಿರುವ ಕಾರಣ ಮುಂಬಯಿ ಮದ್ರಾಸು, ಹೈದರಾಬಾದು ಮತ್ತು ಮೈಸೂರು ಶಾಸನ ಸಭೆಗಳ ಒಪ್ಪಿಗೆಯೂ ಬೇಕಾಗುತ್ತದೆ. ಮೈಸೂರಿನವರು ಇದಕ್ಕೆ ಒಪ್ಪುವುದಿಲ್ಲವೆಂದು ಬೆಳಗಾವಿಯಲ್ಲಿ ಭಾರತದ ಪ್ರಧಾನಿ ಪಂಡಿತ ನೆಹರುಗಳು ಇತ್ತೀಚೆಗೆ ಹೇಳಿರುತ್ತಾರೆ. ಮತ್ತು ಭಾಷಾವಾರು ಪ್ರಾಂತಗಳನ್ನು ರಚಿಸುವ ಕುರಿತು ಆಲೋಚಿಸಲು ಒಂದು ಸಮಿತಿಯನ್ನು ಏರ್ಪಡಿಸುವುದಾಗಿ ತಿಳಿಸಿರುವರು. ಆದರೆ ಮೈಸೂರಿನವರು ಕರ್ನಾಟಕ ಪ್ರಾಂತರಚನೆಗೆ ಅಡ್ಡಿ ಬರುತ್ತಿಲ್ಲ. ಕರ್ನಾಟಕ ಪ್ರಾಂತರಚನೆಯಾಗಬೇಕೆಂಬ ಅಭಿಪ್ರಾಯವನ್ನು ನಾವು ಸ್ವಾಗತಿಸುತ್ತೇವೆ. ಮೈಸೂರಿನವರು ದ. ಕ. ಜಿಲ್ಲೆಯವರೊಡನೆ ಸೌಹಾರ್ದದಿಂದ ಇರುವರು. ನನ್ನ ವೈಯಕ್ತಿಕ ಅಭಿಪ್ರಾಯವು ಕರ್ನಾಟಕ ಪ್ರಾಂತರಚನೆಗೆ ಅನುಕೂಲವಾಗಿದೆ ಎಂದರು. ಹಾಸನ—ಮಂಗಳೂರು ರೈಲ್ವೆಯ ವಿಷಯದಲ್ಲಿ ನಾನು ಕೇಂದ್ರ ಮಂತ್ರಿ ಶ್ರೀ ಲಾಲಬಹದೂರ್ ಶಾಸ್ತ್ರಿಯವರೊಡನೆ ಪ್ರಸ್ತಾಪಿಸಿರುವೆನು. ಈ ರೈಲುದಾರಿಯು ಎರಡು ಪ್ರಾಂತಗಳ ವ್ಯಾಪಾರ ರಕ್ಷಣೆಗೆ ಉಪಕಾರಿಯಾಗಬಹುದು. ಭಾರತ ಸರಕಾರವು ರೈಲ್ವೆಯ ವಿಷಯದಲ್ಲಿ ಅಥವಾ ಇತರ ವಿಷಯಗಳಲ್ಲಿ ದಕ್ಷಿಣ ಭಾರತದ ಕಡೆಗೆ ಹೆಚ್ಚು ಗಮನ ಕೊಡುವುದಿಲ್ಲ 'ಈ ವಿಷಯವು ಭಾರತ ರೈಲ್ವೆ ಬಜೆಟ್ಟನ್ನು ನೋಡಿದಲ್ಲಿ ಖಚಿತವಾಗುತ್ತದೆ ಪಂಚವಾರ್ಷಿಕ ಯೋಜನೆಯಲ್ಲಿ ಕೂಡಾ ಮುಂಬಯಿ ರಾಜ್ಯದ ಮುಕ್ತಾಲಂಕ ಉತ್ತರಭಾರತದ ವರೆಗೋಸ್ಕರವಾಗಿಯೇ ಇಟ್ಟಿರುವರು. ಮಲ್ಪೆ ಅಥವಾ ಮಂಗಳೂರು ಬಂದರನಾದಲ್ಲಿ ವ್ಯಾಪಾರಕ್ಕೆ ಅನುಕೂಲವಾಗಬಹುದು. ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ನಮಗೆ ಅಧಿಕ ಅನುಕೂಲತೆ ದೊರಕುವಂತೆ ಪ್ರಯತ್ನಿಸಬೇಕು ಎಂದರು. ನಗರ ಸಭೆಯ ಧನ್ಯವಾದವನ್ನು ಚೇರ್ಮನ್ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಅರ್ಪಿಸಿದರು. ಜಿಲ್ಲಾ ಬೋರ್ಡಿನ ಪರವಾಗಿ ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಬಿ ಮಂಜಯ್ಯ ಹೆಗ್ಡೆಯವರು ಮುಖ್ಯ ಮಂತ್ರಿಗಳಿಗೆ ಧನ್ಯವಾದವನ್ನು ಅರ್ಪಿಸಿದರು.

ಕೇಂದ್ರ ಮೈದಾನದಲ್ಲಿ ಭಾಷಣ—ತಾ 8ರಂದು ಶ್ರೀ. ಕೆ. ಹನುಮಂತಯ್ಯನವರು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಾ ಕರ್ನಾಟಕ ಪ್ರಾಂತರಚನೆಗೆ ಮೈಸೂರಿನವರೇನೂ ಅಡ್ಡಿ ಬರುತ್ತಿಲ್ಲ ಎಂದು ಹೇಳಿದರು. ಸ್ವಾತಂತ್ರ್ಯ ಪ್ರಾಪ್ತಿಯ ಮೊದಲು ಕಾಂಗ್ರೆಸಿನವರು ಭಾಷಾವಾರು ಪ್ರಾಂತರಚನೆಗೆ ಒಪ್ಪಿದ್ದರು. ಆದರೆ ಈಗ ಸರಕಾರವೇ ಈ ಪ್ರಶ್ನೆಯನ್ನು ಹಿಂದೂಡುತ್ತಿದೆ. ಈಗ ಪ್ರಜಾಪ್ರಭುತ್ವ ಸರಕಾರವಾದುದರಿಂದ ಎಲ್ಲರಿಗೂ ಸಮಾನ ಹಕ್ಕುಗಳಿವೆ. ಆದಕಾರಣ ಕರ್ನಾಟಕ ಪ್ರಾಂತಕ್ಕಾಗಿ ನಾವೇನೂ ಚಳವಳವನ್ನು ಹೂಡುವ ಆವಶ್ಯಕತೆ ಇಲ್ಲವೆಂದರು.

ಈಚೆಗೆ ಪಂಡಿತ ನೆಹರುಗಳು ಮೈಸೂರಿನವರು ಒಪ್ಪಿದಲ್ಲಿ ಕರ್ನಾಟಕ ಪ್ರಾಂತರಚನೆಯಾಗಬಹುದು. ಆದರೆ ಮೈಸೂರಿನವರು ಒಪ್ಪುವುದಿಲ್ಲನೆಂದು ಹೇಳಿರುವರು. ಆದರೆ ಮೈಸೂರಿನವರು ಇದಕ್ಕೆ ಅನುಕೂಲರಾಗಿಯೇ ಇರುವರು. ದ. ಕ. ಜಿಲ್ಲೆಯವರು ಮೈಸೂರಿನೊಡನೆ ಸೇರಲು ತುಂಬಾ ಆತುರದಿಂದಿರುವರೆಂದು ನನಗೆ ಹಲವು ಕಡೆಗಳಲ್ಲಿ ಅರ್ಪಿಸಿದ ಮಾನಪತ್ರಗಳಿಂದ ತಿಳಿಯಿತು. ಇದು ಸಂತೋಷದ ಸಂಗತಿಯಾಗಿದೆ ಮೈಸೂರಿನವರೂ ಇತರ ಕನ್ನಡಿಗರೊಡನೆ ಬೆರೆತು ಒಂದಾಗಿ ಕರ್ನಾಟಕ ಪ್ರಾಂತ ಕೇಳಿದರೆ ಕೇಂದ್ರ ಸರಕಾರವು ಇದಕ್ಕೆ ಒಪ್ಪಬೇಕಾಗಿದೆ. ಈ ವಿಷಯದಲ್ಲಿ ಕೇಂದ್ರದ ಒಪ್ಪಿಗೆಯು ಪ್ರಾಮುಖ್ಯವಾದುದು ಕೇಂದ್ರ ಸರಕಾರದ ಒಪ್ಪಿಗೆ ದೊರೆಯುವಂತೆ ಎಲ್ಲರೂ ಪ್ರಯತ್ನಪಡಬೇಕೆಂಬುದು ನನ್ನ ವಿನಂತಿ ಎಂದರು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ಎಫ್. ಎಕ್ಸ್. ಡಿ. ಪಿಂಟೋರವರು ವಹಿಸಿದ್ದರು. ಶ್ರೀ ಮಾಧವಾಚಾರ್ಯ ಎಮ್. ಎಲ್. ಎ. ಅವರೂ ಹಾಸನ ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ಎಚ್. ರಾಮಸ್ವಾಮಿಯವರೂ ಮಾತನಾಡಿದರು ಜಿಲ್ಲಾ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿಗಳಾದ ಶ್ರೀ ಬಿ ಆರ್. ಕರ್ಕೇರರು ಧನ್ಯವಾದಗಳನ್ನು ಅರ್ಪಿಸಿದರು. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಡೆಯಿಂದಲೂ ಮಾನ್ಯ ಮಂತ್ರಿಗಳಿಗೆ ಮಾನ ಪತ್ರ ಅರ್ಪಿಸಲಾಯಿತು.

ಕೆನರಾ ಚೇಂಬರ್ ಒಫ್ ಕೊಮರ್ಸ್—ಕಡೆಯಿಂದ ಅದರ ಅಧ್ಯಕ್ಷ ಶ್ರೀ ಎ. ಉಮಾನಾಥರಾಯರು ಮಾನ್ಯ ಹನುಮಂತಯ್ಯನವರಿಗೆ ಮಾನಪತ್ರ ಅರ್ಪಿಸಿದರು.

ಭೋಜನ ಸತ್ಕಾರ:-ತಾ 8-8-53ನೇ ರಾತ್ರಿ ಮಾನ್ಯ ಶ್ರೀ ಹನುಮಂತಯ್ಯನವರಿಗೆ ಎಸ್. ಆರ್. ಎಸ್. ಹೋಟೆಲಿನವರು ಒಂದು ಭೋಜನ ಸತ್ಕಾರ ಕೂಟವನ್ನು ಏರ್ಪಡಿಸಿದ್ದರು ಪಿ ಆರ್. ಆರ್. ಪೂಂಜ ಮತ್ತು ಶ್ರೀ ಬಿ. ಬಿ. ಶೆಟ್ಟಿಯವರು ಸ್ವಾಗತಿಸಿದರು ಮುಖ್ಯ ಮಂತ್ರಿಗಳು ಚಿಕ್ಕ ಭಾಷಣ ಮಾಡಿ ಎಸ್. ಆರ್. ಎಸ್. ಹೋಟೆಲಿನ ಸೊಬಗಿನ ಸಂತೋಷ ವ್ಯಕ್ತಪಡಿಸಿದರು. ಅಂತ್ಯದಲ್ಲಿ ಕರ್ನಾಟಕ ಏಕೀಕರಣದ ಕುರಿತು ಶ್ರೀಮಾನ್ ಜಿನರಾಜ ಹೆಗ್ಡೆ ವಗೈರೆಯವರು ಕೊಟ್ಟ ಮನವಿಯನ್ನು ಸ್ವೀಕರಿಸಿದರು.

ನಗರ ಸಭೆಯು—ಶ್ರೀ ಕೆ. ಸೂರ್ಯನಾರಾಯಣ ಅಡಿಗ ಅಧ್ಯಕ್ಷತೆಯಲ್ಲಿ ಇದೇ ತಾ 9ರಲ್ಲು ಜರಗಿತು. ಬೋಳೂರಿನ ಸಿಟಿ ಬಸ್ ಸಂಧಿ ಸ್ಥಳದಲ್ಲಿ ಮಳೆಗಾಲ ಆರಂಭವಾಗುವ ಮೊದಲು ಒಂದು ಸಿಟಿಬಸ್ ಸ್ಟ್ಯಾಂಡನ್ನು ಕಟ್ಟಿಸಲು ನಿಶ್ಚಯಿಸಲಾಯಿತು. ಸೈಂಟ್ ಜೊಸೆಫ್ಸ್ ಕುಷ್ಠರೋಗ ಆಸ್ಪತ್ರೆಗೆ ಮತ್ತು ಸೈಂಟ್ ಜೊಸೆಫ್ಸ್ ಎಸ್ಸಾಲಮಿಗೆ ವಾರ್ಷಿಕ ಧನ ಸಹಾಯ, ಶ್ರೀ ಪುಲೇಶ್ವರ ದೇವಸ್ಥಾನದ ಬಳಿ ಒಂದು ಎಲೆಕ್ಟ್ರಿಕ್ ಕಂಬವನ್ನಿಡಿಸಲು ಹಣ ಮಂಜೂರು ಮಾಡಲಾಯಿತು. ಅಲ್ಲದೆ ಬಿಷಪ್ ವಿಕ್ಟರ್ ರೋಡಿಗೆ ವಿದ್ಯುದ್ದೀಪಗಳನ್ನು ಒದಗಿಸಲೂ ನಿಶ್ಚಯಿಸಲಾಯಿತು.

ವಿಜಯ ಶಿಶುವಿಹಾರ ಉದ್ಘಾಟನೆಯನ್ನು ಇದೇ ತಾ 10ರಲ್ಲು ಶ್ರೀ ರಾಮಕೃಷ್ಣ ಮಿಶನಿನ ಸ್ವಾಮಿ ಆದಿದೇವಾನಂದರು ನೆರವೇರಿಸಿದರು. ಶ್ರೀಗಳಾದ ಬಿ ವೈಕುಂಠ ಬಾಳಿಗಾ, ಎಸ್. ನರ್ಸಪ್ಪಯ್ಯ, ಸ್ವಾಮಿ ಸದಾನಂದ ಸರಸ್ವತಿ, ಮೋಹನಪ್ಪ ತಿಂಗಳಾಯ, ಕೆ. ಕೃಷ್ಣರಾವ್ ಮತ್ತು ಕೇಶವ ರಾಮಚಂದ್ರ ಶೆಣೈಯವರು ಮಾತನಾಡಿದರು.

ಯುನಿವರ್ಸಿಟಿ ವಿದ್ಯಾಭ್ಯಾಸದ ಸೆಕ್ಷನಲ್ ಸಮ್ಮೇಳನವು—ತಾ. 8ರಲ್ಲು ಪಚಯಪ್ಪಾಸ್ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಆರ್. ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ [illegible] ಶ್ರೀ ಎನ್. ಸಂಬಂಧ... ಸ್ವಾಗತ ಭಾಷಣ ಮಾಡಿದರು. ಸಮ್ಮೇಳನ ಕಾರ್ಯದರ್ಶಿ ಉಡುಪಿ ಎಮ್. ಜಿ. ಎಮ್. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರು ಯುನಿವರ್ಸಿಟಿ ವಿದ್ಯಾಭ್ಯಾಸದಲ್ಲಿ ಕಂಡುಬಂದ ಕೆಲವು ಘಟನೆಗಳ ಕುರಿತು ಭಾಷಣ ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮದ್ರಾಸು ರಾಜ್ಯದಲ್ಲಿ ಕಾಲೇಜುಗಳ ಸಂಖ್ಯೆ ಏರಿದೆ. ಆದರ ಪರಿಣಾಮವಾಗಿ ಯುನಿವರ್ಸಿಟಿ ವಿದ್ಯಾಭ್ಯಾಸ ಮಟ್ಟವು ಬಹಳ ಮಟ್ಟಿಗೆ ಕೆಳಗಿಳಿದಿದೆ ಎಂದರು. ಸರಕಾರವು ಗ್ರಾಂಟನ್ನು ಹೆಚ್ಚಿಸಬೇಕು ಮತ್ತು ಕಾಲೇಜುಗಳ ಆಡಳಿತೆಯಲ್ಲಿ ಕೆಲವು ಸುಧಾರಣೆಗಳು ಅವಶ್ಯವೆಂದು ಸೂಚಿಸಿದರು. ನಂತರ ತಿರುಚಿನಾಪಳ್ಳಿಯ ಸೈಂಟ್ ಜೊಸೆಫ್ಸ್ ಕಾಲೇಜಿನ ಪ್ರೊಫೆಸರ್ ಜೊಸೆಫ್ ಚಿನ್ನಪ್ಪನವರು ಇಂಗ್ಲಿಷ್ ಕಲಿಸುವ ವಿಷಯದಲ್ಲಿ ಮಾತನಾಡಿ ಇಂಗ್ಲಿಷ್ ಭಾಷೆಯ ಆವಶ್ಯಕತೆಯನ್ನು ಸೂಚಿಸಿದರು.

ಮಂಗಳೂರಿನ ವಾಣಿಜ್ಯ ಸಲಹೆಗಾರರಾದ ಶ್ರೀ ಎಮ್. ವಿ ಕಾಮತರು ವಿಶ್ವವಿದ್ಯಾಲಯಗಳು ಮತ್ತು ವಾಣಿಜ್ಯ ಆವಶ್ಯಕತೆಯ ತರಬೇತಿಯ ಕುರಿತು ಪ್ರಬಂಧ ಓದಿ, ಅಮೆರಿಕದ ಯುನಿವರ್ಸಿಟಿಗಳಲ್ಲಿಯ ವಾಣಿಜ್ಯ ತರಬೇತಿಯ ಕುರಿತು ಮಾತನಾಡಿದರು. ಪಾಲಯಂಕೋಟೆಯ ಸೈಂಟ್ ಜೆವಿಯರ್ಸ್ ಹೈಸ್ಕೂಲಿನ ಹೆಡ್ಮಾಸ್ಟರ್ ಶ್ರೀ ಜಿ. ವಿಕ್ಟರ್ ಅವರು ಕೂಡಾ ಇದೇ ವಿಷಯದಲ್ಲಿ ಮಾತನಾಡಿದರು. ಉಡುಪಿಯ ಎಮ್. ಜಿ. ಎಮ್. ಕಾಲೇಜಿನ ಶ್ರೀ ಕು ಶಿ. ಹರಿದಾಸ ಭಟ್ಟರು ಕಾಲೇಜಿನಲ್ಲಿ ಶಿಕ್ಷಣ ಮಾಧ್ಯಮದ ಕುರಿತಾಗಿ ಒಂದು ಲೇಖನವನ್ನು ಓದಿದರು. ಸ ಕರ್ಕಳ ಬೋರ್ಡ್ ಹೈಸ್ಕೂಲ್ ಹೆಡ್ಮಾಸ್ಟರ್ ಶ್ರೀ ಕೆ. ಶ್ಯಾಮರಾಯರು ಜಗತ್ತಿನಲ್ಲಿ ಪ್ರಖ್ಯಾತವಾದ ಇಂಗ್ಲಿಷ್ ಭಾಷೆಯನ್ನು ತೆಗೆದು ಹಾಕಬಾರದೆಂದರು. ಬಳಿಕ ಮತ್ತು ಪ್ರಥಮಿಕ ವಿದ್ಯಾಭ್ಯಾಸದ ಸಮ್ಮೇಳನವು ಶ್ರೀ ಎಮ್. ಎಸ್. ಏಕಾಂಬರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಪ್ರಾಂತೀಯ ವಿದ್ಯಾ ಪರಿಷತ್ತಿನಲ್ಲಿ ಪಾಸಾದ ಗೊತ್ತುವಳಿಗಳು—ಸಂಬಳ, ರಜೆ, ಕಾನೂನುಗಳು ಪ್ರಾವಿಡೆಂಟ್ ಫಂಡ್ ಇನ್ಶ್ಯೂರೆನ್ಸ್ ಮತ್ತು ಪೆನ್ಶನ್‌ಗಳನ್ನೊಳಗೊಂಡ ಪದ್ಧತಿಯಲ್ಲಿ ಸಹಾಯ ನೀಡಬೇಕೆಂಬ ಕಲ್ಪದ ಪಕ್ಷದ ಠರಾವನ್ನು ಪಾಸು ಮಂಜೂರು ಮಾಡಿ ಅದನ್ನು ಸರಕಾರವು ಬೇಗನೆ ಕೊಡಿಸಬೇಕೆಂದು ಕೇಳಿಕೊಳ್ಳುವ, ಕೇಂದ್ರ ಸರಕಾರದ ನೌಕರರಿಗೆ ಕೊಡುವ ದರದಲ್ಲಿ ಎಲ್ಲಾ ವರ್ಗದ ಮತ್ತು ಎಲ್ಲಾ ಶಾಲೆಗಳ ಉಪಾಧ್ಯಾಯರುಗಳಿಗೆ ಮನೆ ಬಾಡಿಗೆ ಭತ್ತೆ ಮತ್ತು ತುಟ್ಟಿ ಭತ್ತೆ ಕೊಡಬೇಕೆನ್ನುವ, ಉಪಾಧ್ಯಾಯರ ಮಕ್ಕಳಿಗೆ ಮಾಧ್ಯಮಿಕ ಸಂಬಳ ರಿಯಾಯಿತಿಯನ್ನು ಕಾಲೇಜು ಉಪಾಧ್ಯಾಯರ ಮಕ್ಕಳಿಗೂ ಕೊಡಬೇಕೆನ್ನುವ, ಉಪಾಧ್ಯಾಯರು ನಿವೃತ್ತಿ ಹೊಂದುವ ಪ್ರಾಯವನ್ನು ಅರುವತ್ತಕ್ಕೇರಿಸಬೇಕೆನ್ನುವ, ಸಂಸ್ಥೆಯ ಕಟ್ಟಡಗಳಿಗೆ ಗ್ರಾಂಟನ್ನು ಕೊಡುವ ಧೋರಣೆಯನ್ನು ಪುನರಾಲೋಚಿಸಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದಕಿಸ್ಸಿ ಋತುಸ್ರಾವವಾಗದು, ತಕೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣ ಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾಧಾರಣ ಸಂದಿಗ್ಧ ಶಕ್ತಿ ಗುಣವಾಗಿದೆ. ರೂ. 3-8 ಸ್ಪೆಷಲ್ ರೂ. 5- ಅತ್ಯಧಿಕ ಸ್ಪೆಷಲ್ ರೂ. 6-] [illegible] ಪ್ರತ್ಯೇಕ]

MIS D. DEVEE, F. DR. (N. J.)
Tallygunge CALCUTTA.
ಸ್ಟಾಕಿಸ್ಟರು: ಪಡಾಕರಿಪಿ, ಮಂಗಳೂರು

ದಿ ವಿಜಯ ಬೇಂಕ್, ಲಿಮಿಟೆಡ್

ಸ್ಥಾಪನೆ: 1931.] ಪ್ರಧಾನ ಕಛೇರಿ: **ಮಂಗಳೂರು.**

ಮೂಲಧನ	.	.	ರೂ. 20,10,000
ತೆತ್ತ ಪಾಲು ಭಂಡವಾಳ	.	.	,, 8,77,860
ಕ್ಷೇಮ ನಿಧಿ	.	.	,, 1,80,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವ್ಯಾದೆ ವರೆಗೆ ಆಕರ್ಷಕ ಬಡ್ಡಿ ದರಗಳಲ್ಲಿ ಸ್ವೀಕರಿಸಲ್ಪಡುವವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ $4\frac{1}{2}\%$ ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, [illegible] ಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ,
ಬಿ. ಎ ಬಿ. ಯಲ್. ವಕೀಲ್,
ಬೇಂಕಿನ ಆಡಳಿತೆ ಕಮಿಟಿ ಅಧ್ಯಕ್ಷರು.

THE VIJAYA BANK, Limited.

ಬಾಳಿನ ಮುನ್ನೋಟವುಳ್ಳ ಪ್ರತಿಯೊಬ್ಬರೂ ಸಂಪಾದನೆಯ ಸ್ವಲ್ಪಾಂಶವನ್ನಾದರೂ ಸತತವಾಗಿ ಉಳಿಸಲು ಪ್ರಯತ್ನಿಸುತ್ತಾರೆ.

ನೀವೂ ನಿಮ್ಮ ಸಂಪಾದನೆಗ ತಕ್ಕಂತೆ, ತಿಂಗಳ, 3 ತಿಂಗಳ ಯಾ 6 ತಿಂಗಳ ಕಂತಿನಂತೆ ಪಾವತಿ ಮಾಡಬಹುದಾದ ಸಾವಿರ ರೂಪಾಯಿ ಒಳಗಿನ ವಿಮೆಯ ಮೂಲಕ ಸಾಧ್ಯವಾದಷ್ಟು ಹಣವನ್ನು ಉಳಿಸುವ ನಿರ್ಧಾರ ಮಾಡಿರಿ.

ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್
ಉಡುಪಿ,

The New Karnataka Provident Insurance Co, Ltd. UDIPI.

ಕುಂದಾಪುರದಲ್ಲಿ ಯಕ್ಷಗಾನ ಬಯಲಾಟ

ಯಕ್ಷಗಾನವು ನಮ್ಮ ಈ ಕನ್ನಡನಾಡಿನಲ್ಲಿ ಅತೀ ಪ್ರಾಚೀನಕಾಲದಿಂದ ಜಾನಪದ ಸಾಹಿತ್ಯವಾಗಿತ್ತು. ಇದರ ಉಗಮವು ಯಾವ ಕಾಲದಲ್ಲಿ ಆಯಿತು ಅದರ ಮೂಲಪುರುಷರು ಯಾರು ಎಂದು ತಿಳಿಯುವುದಾದರೂ, ಅದನ್ನು ಸಂಪೂರ್ಣ ಕಥಾ ಭಾಗವಾಗಿ, ಅಭಿನಯಿಸಲು ಅನುಕೂಲವಾಗುವಂತೆ ಪ್ರಸಂಗ ಬರೆದವರಲ್ಲಿ ಪಾರ್ಥಿಸುಬ್ಬರೇ ಮೊದಲಿನವರೆಂದು ಅನೇಕರ ತರ್ಕ. ಈ ಕಾಲವು ಸುಮಾರು 300 ವರ್ಷಕ್ಕೆ ಮಿಕ್ಕಿ ಇರಬಹುದು. ಯಕ್ಷಗಾನವು ಕನ್ನಡನಾಡಿನಲ್ಲಿ ಹುಟ್ಟಿ ಪಶ್ಚಿಮ ಕರಾವಳೀ ಪ್ರಾಂತ್ಯದಲ್ಲಿ ಮುಂದಾಗುತ್ತಾ ಇದೆ. ಯಕ್ಷಗಾನ ಪ್ರಸಂಗದಲ್ಲಿ ವೇಷ, ನರ್ತನ, ಹಾವ ಭಾವ, ಮಾತುಗಾರಿಕೆಯಿಂದ ಕೂಡಿ ಆಟವಾಡುವರಲ್ಲದೆ, ನಾಟಕರೂಪದಲ್ಲಿ ಅಭಿನಯಿಸುವುದೂ ಅಲ್ಲದೆ ತಾಳಮದ್ದಳೆಗಳಲ್ಲಿ ಅರ್ಥಹೇಳುವುದೂ ರೂಢಿಯಲ್ಲಿದೆ.

ತಾಳಮದ್ದಳೆಯಲ್ಲಿ ಅನೇಕ ವಿದ್ಯಾವಂತರು ಈಗೀಗ ಭಾಗವಹಿಸಲುಪಕ್ರಮಿಸಿರುತ್ತಾರೆ. ಕನ್ನಡ ಜಿಲ್ಲೆಗಳಲ್ಲಿ ಸುಮಾರು 15 ಮೇಳಗಳಿವೆ. ಅವರಲ್ಲಿ ವೇಷಧಾರಿಗಳಾಗಿ ನುರಿತ ನಟರು ಭಾಗವಹಿಸುತ್ತಾ ಇದ್ದಾರೆ. ಆದರೆ ಬಯಲಾಟದಲ್ಲಿ ಭಾಗವಹಿಸುವುದು ಹೀನವೆಂದು ಕೆಲವರ ಭಾವನೆ.

ಇಂದಿಗೆ ನಮ್ಮ ಪುರಾಣ ಪುಣ್ಯಕಥೆಗಳನ್ನು ಇಷ್ಟಕ್ಕೆ ಬಂದಂತೆ ನೋಡಬೇಕಾದರೆ ಅದು ಯಕ್ಷಗಾನದ ಬಯಲಾಟದಲ್ಲಿ ಮಾತ್ರ ಸಾಧ್ಯ. ಸಿನೆಮಾಗಳೂ, ನಾಟಕಗಳೂ, ಪೌರಾಣಿಕ, ಐತಿಹಾಸಿಕ ಕಥೆಗಳನ್ನು ಬಿಟ್ಟು ಸಾಮಾಜಿಕ ಪ್ರಯೋಗಕ್ಕೆ ಪ್ರಾರಂಭಿಸಿವೆ. ಸಾಮಾಜಿಕ ಕಥಾಭಾಗವು ಪೌರಾಣಿಕದಷ್ಟು ಬಿಗುಹಿನದ್ದಲ್ಲ. ಆದರೆ ಯಕ್ಷಗಾನ ಮಾತ್ರ ಈವರೆಗೂ ಯಾವ ಹವ್ಯಾಸಕ್ಕೂ ಕೈಹಾಕಲಿಲ್ಲ. ತನ್ನ ಪಾಲಿಗೆ ಬಂದುದು ಪವಿತ್ರವೆಂದೆಣಿಸಿ ಅದನ್ನೇ ಸಾಧಿಸುತ್ತಾ ಇದೆ. ಇದರಿಂದಾಗಿ ಇಂದಿಗೆ ನಮ್ಮ ಪುರಾಣ ಕಥಾಭಾಗದ ಅರಿವು ಸ್ವಲ್ಪವಾದರೂ ಉಳಿಯುವಂತಾಯಿತು. ಇದರ ಪ್ರಯತ್ನದ ಫಲ ಅಶಿಕ್ಷಿತರಿಗೆ ದೊರಕಿತು.

ಯಕ್ಷಗಾನ ಕಲೆಗೆ ಬೆಂಬಲ ಪ್ರೋತ್ಸಾಹ ದೊರಕಿದರೆ ಇದರ ಅಸ್ತಿತ್ವವು ಸ್ಥಿರವಾದೀತೆಂಬ ಹಿರಿಯ ಆಶೆಯಿಂದ ನಮ್ಮ ಯಂ ಎಲ್. ಎ. ಹಾಗೂ ಪ್ರಸಿದ್ಧ ವಕೀಲರೂ ಅಧ್ಯಶ್ರೀಮಂತರೂ ಆದ ಶ್ರೀಮಾನ್ ಯಡ್ತರೆ ಮಂಜಯ್ಯ ಶೆಟ್ರು ಈ ವರುಷ ಜರಗಿದ ಹಳೇ ವಿದ್ಯಾರ್ಥಿ ಸಂಘ ಕುಂದಾಪುರ ಇದರ ವಾರ್ಷಿಕೋತ್ಸವದ ಕಾರ್ಯಕ್ರಮದಲ್ಲಿ ಯಕ್ಷಗಾನ ಬಯಲಾಟವನ್ನು ಕುಂದಾಪುರದ ಸುಪ್ರಸಿದ್ಧ ವಕೀಲರೂ ಹಾಗೂ ವಿದ್ಯಾವಂತರೂ ಆದ ಶಾಲೆಯ ಹಳೇ ವಿದ್ಯಾರ್ಥಿಗಳಿಂದಲೇ ಅಭಿನಯಿಸಲ್ಪಡಬೇಕೆಂಬ ನಿರ್ಧಾರದಂತೆ ಕಾರ್ಯರಂಗಕ್ಕಿಳಿದರು. ಈ ಎರಡೂ ಪ್ರಸಂಗಗಳಲ್ಲಿ ವೇಷಮಾಡಿದವರು ಈವರೆಗೂ ಯಾವ ಸಂದರ್ಭದಲ್ಲೂ ಯಕ್ಷಗಾನ ಬಯಲಾಟದಲ್ಲಿ ಭಾಗವಹಿಸಿದವರಲ್ಲ ಒಬ್ಬಿಬ್ಬರನ್ನು ಬಿಟ್ಟರೆ ಉಳಿದವರು ತಾಳಮದ್ದಳೆಯಲ್ಲಿ ಅರ್ಥಕೂಡಾ ಹೇಳಿದವರಲ್ಲ.

ಶ್ರೀ. ಯಡ್ತರೆ ಮಂಜಯ್ಯ ಶೆಟ್ರು ಯಂ. ಎಲ್. ಎ, ಬಿ. ಎ ಬಿ. ಯಲ್. ಇವರು ಧರ್ಮರಾಯನ ಪಾತ್ರವನ್ನು ಯಶಸ್ವಿಯಾಗಿ ಅಭಿನಯಿಸಿದರು. ಧನವಂತ ಮನೆತನದಲ್ಲಿ ಹುಟ್ಟಿ ಉಚ್ಚ ಶಿಕ್ಷಣ ಹೊಂದಿ ಸರಿಯಾಗಿ ಒಂದು ಬಯಲಾಟವನ್ನು ಕೂಡಾ ನೋಡಲು ಅವಕಾಶ ದೊರಕದ ಇವರು ಖಂಡಿತವಾಗಿ ಪಾತ್ರವಹಿಸುವುದು ಕಷ್ಟವೆಂದೇ ಜನರ ಭಾವನೆ. ಆದರೆ ಇವರ ಪ್ರವೇಶದಿಂದಾಗಿ ಜನರಿಗೆ ದಂಗುಬಡಿದಂತಾಯಿತು. ಅವರ ಹಾವ ಭಾವ, ನಟನೆ, ಕುಣಿತ, ಮಾತುಗಾರಿಕೆ ಎಲ್ಲವೂ ಜನರನ್ನು ಮುಗ್ಧರನ್ನಾಗಿ ಮಾಡಿತು. ಕಲಿಯುಗದ ಧರ್ಮರಾಯನೇ ಪ್ರತ್ಯಕ್ಷನಾಗಿರಬೇಕೆಂದು ಎಣಿಕತೊಡಗಿದರು

ಶ್ರೀ ಎನ್. ಎಸ್. ಪರಮೇಶ್ವರಯ್ಯ ಬಿ. ಎ ಬಿ. ಎಲ್. ಬಿ. ಇವರ ಭೀಮನ ಪಾತ್ರವು ಅತೀ ಗಂಭೀರವಾಗಿತ್ತು ಅವರ ಅಭಿನಯವು ಉತ್ತಮವಾಗಿದ್ದುದು ಮಾತ್ರವಲ್ಲ ಅವರ ಮಾತುಗಾರಿಕೆ, ಅದರಲ್ಲಿಯೂ ದ್ರೌಪದಿಯೊಡನಾದ ಸಂಭಾಷಣೆಯು ಈ ವರೆಗೆ ಯಾವ ವೇಷಧಾರಿಯೂ ಆ ರೀತಿ ಆಡಲಿಲ್ಲವೆಂದರೆ ತಪ್ಪಾಗದು. ಆ ಮಾತು ಅವರಿಂದ ಆಡಲ್ಪಟ್ಟು ಜನರ ಮನಸ್ಸನ್ನು ಆನಂದ ಶರಧಿಯಲ್ಲಿ ತೇಲಾಡಿಸಿತು!

ಶ್ರೀ ಯಂ. ಮಂತ್ರಯ್ಯ ಹೆಗಡೆ ಬಿ. ಎ. ಎಲ್. ಎಲ್. ಬಿ. ಅವರ ಅರ್ಜುನನ ವೇಷ ಜನರನ್ನು ಮರುಳುಗೊಳಿಸಿತು. ಅವರ ವೇಷವಂತೂ ಬಹಳ ಮುದ್ದಾಗಿದ್ದು ಕೇದಿಗೆ ಮುಂಡಲೆಯು ಚಂದ ಹೇಳತೀರದಾಗಿತ್ತು. ಅವರ ಹಾವಭಾವ ಉತ್ತಮ ಮಾತ್ರವಲ್ಲ ಅವರ ಕುಣಿತವನ್ನು ನೋಡಿದೊಡನೆಯೇ "ಇವರು ವಕೀಲರಲ್ಲ ವಕೀಲರಾದರೆ ಈ ರೀತಿ ಕುಣಿಯಲಾರರು, ಇವು ಯಾರೋ ಮೇಳದಲ್ಲಿ ನುರಿತ ವೇಷಧಾರಿಗಳೇ ಸರಿ" ಎಂದರು. ಆದರೆ ಅವರ ಮಾತಿನ ಕ್ರಮ ಶೈಲಿ ಇದನ್ನು ಕೇಳಿದೊಡನೆಯೇ "ಇದು ಮಂತ್ರಯ್ಯ ಹೆಗಡೆಯವರೇ ಸರಿ" ಬೇರೆ ಯಾರಿಗೂ ಈ ರೀತಿ ಮಾತನಾಡಲು ಸಾಧ್ಯವಾಗದು ಎಂದು ಕೊಳ್ಳಲು ಪ್ರಾರಂಭಿಸಿದರು.

ಶ್ರೀ ಕೊಳ್ಕೆಬೈಲು ಸೂರಪ್ಪ ಶೆಟ್ರು ಬಿ. ಎ. ಎಲ್. ಎಲ್. ಬಿ ಇವರ ಈಶ್ವರನ ಪಾತ್ರ ಹೇಗಾಗಿರಬಹುದೆಂಬುದು ಅದನ್ನು ನೋಡಿದವರಿಗೆ ತಿಳಿಯದೇ ಇರದು ಮೈಬಿಟ್ಟು ಬಣ್ಣಹಚ್ಚಿ ಹುಲಿಚರ್ಮ ಸೊಂಟಕ್ಕೆ ಬಿಗಿದು ಬಂದು ನಿಂತಾಗ ಕಾಶೀ ವಿಶ್ವನಾಥನ ಚಿತ್ರ ರವಿವರ್ಮ ಬಿಡಿಸಿದಾಗ ನ್ಯೂನತೆ ಇತ್ತೆಂದೂ ಅದನ್ನು ಸರಿ ಮಾಡಲು ಇವರ ವೇಷನೋಡಿದರೆ ಆಗುತಿತ್ತೆಂಬಲೂ ಜನರು ಆಡಿಕೊಳ್ಳುತ್ತಿದ್ದರು. ಆದರೆ ಅದು ಖಂಡಿತ ಅತಿಶಯೋಕ್ತಿಯಲ್ಲ.

ಶ್ರೀ ತೀಜಪ್ಪ ಶೆಟ್ರು ಬಿ, ಎ ಬಿ ಎಲ್. ಇವರ ಚಂಡಿಬಣ್ಣ ಬಹಳ ಭೀಕರವಾಗಿದ್ದು ನೋಡಿದವರಿಗೆಭಯವನ್ನು ಹುಟ್ಟಿಸುತಿತ್ತು.

ಶ್ರೀ. ಯುಸ್. ಯುನ್. ಆಚಾರ್ಯರು ಬಿ. ಎ ಬಿ. ಎಲ್. ಅವರ ಸಹದೇವನ ಪಾತ್ರ ಅತೀ ಮುದ್ದಾಗಿತ್ತು. ಅವರು ರಂಗಸ್ಥಳಕ್ಕೆ ಬಂದೊಡನೆಯೇ ಜನರ ಸಹಸ್ರ ಕಣ್ಣುಗಳು ಮಿಟುಕದೇ ಅವರನ್ನೇ ನೋಡುತ್ತಿದ್ದವು. ಇಷ್ಟು ಮುದ್ದಾದ ವೇಷ ಈವರೆಗೆ ತಾವೆಲ್ಲಿಯೂ ನೋಡಲಿಲ್ಲವೆಂದು ಅಂದುಕೊಂಡರು.

ಮಾಸ್ಟರ್ ಇಗ್ನೇಷಿಯಸ್ ಮಿನೇಜಸರು ಬಿ. ಬೋರ್ಡ ಮೆಂಬರರು ಹೇಗೆ ಕೃಷ್ಣನ ಪಾತ್ರವಹಿಸುವರು, ಹೇಗೆ ಶುದ್ಧ ಕನ್ನಡದಲ್ಲಿ ಮಾತನಾಡುವರು, ಅವರಿಗೆ ಪುರಾಣ ಏನು ಗೊತ್ತು ಪರಧರ್ಮಿಗಳಾದ ಇವರು ಖಂಡಿತ ಯಶಸ್ವಿಯಾಗಲಾರರೆಂದು ಅಂಬವರು, ಇವರ ವೇಷ, ಕುಣಿತ, ಅರ್ಥನೋಡಿ, ಭಲಾ ಹುಡುಗರು ಕೂಡಾ ಈ ರೀತಿ ಮಾತನಾಡಲಾರರು. ಇವರ ಕುಣಿತ ಬಹಳಮಟ್ಟಿಗೆ ತಾಳಬದ್ಧವಾಗಿದೆಂತ ಹೇಳಿ ಹೊಗಳಿದರು ಶ್ರೀ. ವಿಶ್ವೇಶ್ವರಯ್ಯ ಮರವಂತೆ ಇವರ ಸೂತ್ರವರ್ಮನ ಬಣ್ಣ ಬಹಳಮಟ್ಟಿಗೆ ನುರಿತ ವೇಷಧಾರಿಗಳ ವೇಷದಂತಲೇ ಇತ್ತು. ಇವರ ಪರಿಚಯ ಯಾರಿಗೂ ಹತ್ತಲಿಲ್ಲ. ಬಸಪ್ಪಶೆಟ್ಟಿ ಕುಣಿದ ದ್ರೌಪದಿಯು ಪ್ರತಾಪೇ ಪ್ರಕಾಶ. ನಿಜವಾದ ದ್ರೌಪದಿ ಪ್ರತಾಪಿಯಾಗಿರುವಳೆಂದು ಜನರು ಅಂದರು.

ಶ್ರೀ. ರಾಮಚಂದ್ರ ಹೆಬ್ಬಾರರು ಪಟೇಲ. ಇವರು ಮಹಾಕಾಳಿ ಬಹಳ ಭೀತಿಯನ್ನು ಹುಟ್ಟಿಸಿತು. ಅಬ್ಬಾ ನಿಜವಾದ ಬಣ್ಣ ಇದೇ ಎಂದು ಜನರೆಂದರು. ಉಳಿದವರು ಅತೀ ಉತ್ತಮರೀತಿಯಲ್ಲಿ ಅಭಿನಯಿಸಿದರು. ಭೀಷ್ಮ ವಿಜಯದ ಭೀಷ್ಮ ಶ್ರೀಮಾನ್ ಯಂ. ವಿಶ್ವೇಶ್ವರಯ್ಯನವರದ್ದು ಅತೀ ಉತ್ತಮವಾಗಿತ್ತೆಂದೂ ಡಾಕ್ಟರ್ ಯುಸ್. ಪದ್ಮನಾಭಯ್ಯನವರ ಪರಶುರಾಮನ ಪಾತ್ರವನ್ನು ಯೋಗ್ಯರೀತಿಯಲ್ಲಿ ನಿರ್ವಹಿಸಿದರೆಂದೂ ಈ ಇಬ್ಬರ ಸಂವಾದ ಬಹಳ ಸ್ವಾರಸ್ಯವಾಗಿತ್ತೆಂದೂ ಜನರು ತುಂಬಾ ಶ್ಲಾಘಿಸಿದರು. ಇನ್ನುಳಿದವರು ೭೦ ಗಭೂಮಿಯಲ್ಲಿ ಉತ್ತಮರೀತಿಯಲ್ಲಿ ನಟಿಸಿರುವರು.

ಶ್ರೀ. ಯಡ್ತರೆ ಮಂಜಯ್ಯ ಶೆಟ್ರು ಮುಂದಾಳುತನವಹಿಸಿ ಯಂ. ಮಂತ್ರಯ್ಯ ಹೆಗ್ಗಡೆಯವರ ಕಾರ್ಯದಕ್ಷತೆಯಿಂದ ತಮ್ಮ ಸಹೋದ್ಯೋಗಿ ವಕೀಲವೃಂದದ ನೆರವಿನಿಂದಲೂ, ಮಿತ್ರವರ್ಗದವರ ಕೊಡುಗೆಯಿಂದಲೂ ಈ ಕಾರ್ಯಕ್ಕೆ ಮನಗೊಟ್ಟುದು ತುಂಬಾ ಶ್ಲಾಘನೀಯವೇ ಸರಿ ಮೇಳದವರ ವೇಶಭೂಷಣವನ್ನೇ ತೊಟ್ಟು, ಅದೇರೀತಿ ಆಡಿ ತೋರಿಸಿದ ಇವರ ಆಟವು ಎಂದೂ ನಮ್ಮ ಮನಸ್ಸಿನಿಂದ ದೂರವಾಗದು.

—ಮರವಂತೆ ವಿಶ್ವೇಶ್ವರಯ್ಯ

ತಾ 4-5-53

ಅಮೃತಾಂಜನ

ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ಎದೆ ನೋವುಗಳಿಗೂ ಘಾಯಗಳು, ಬಾತುಕೊಳ್ಳುವುದು ಚೇಳುವಿಷಮುಂತಾದುವು, ಪಕ್ಷವಾತ, ಮೊಡಿವೆ ಮೊದಲಾದ ಎಲ್ಲಾ ರೋಗಳಿಗೂ ಸಿದ್ಧೌಷಧಿ.

ಹುಳು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

REGD.

ಅಮೃತಾಂಜನ ಲಿಮಿಟೆಡ

ಮದರಾಸು ಬೊಂಬಾಯಿ ಮತ್ತು ಕಲ್ಕತ

ದಿ. ವಿಜಯ ಬೇಂಕ್ ಲಿಮಿಟೆಡ್, ಬೈಂದೂರು (ದ. ಕ-)

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿ ಕೊಂಡಾಗ್ಯೂ, ಅಸ್ಲ-ವ-ಬಡ್ಡಿ ಯಾವುದನ್ನೂ ಈ ತನಕವೂ ಕೂಡದೆ ಬಾಕಿಮಾಡಿಕೊಂಡಿರುವುದರಿಂದ, ಸದ್ರಿಯವರು ನಮ್ಮಲ್ಲಿ ಒತ್ತೆಯಿಟ್ಟ ನಗವನ್ನು ಇದೇ ಮೇ ತಿಂಗಳ ತಾ. 22ನೇ ಶುಕ್ರವಾರ ಅಪರಾಹ್ನ ಘಂಟೆ 2ಕ್ಕೆ ಯಾ-ಬೇಂಕಿಗೆ ಯುಕ್ತಕಂಡ ಇತರ ದಿನಗಳಲ್ಲಿ ಪುನಃ ನೋಟಿಸು ಕೊಡದೇನೆ, ಬೇಂಕಿನ ಮಠಾರದಲ್ಲಿ ಬಹಿರಂಗವಾಗಿ ಹರಾಜುಮಾಡಲಾದೀತು, ತಿಳಿದಿರಲಿ.

ಸಾಲದ ಜಂಜಾಪ್ರ ನಂಬ್ರ	ಹೆಸರು ಮತ್ತು ವಿಳಾಸ	ರೂ.	ಆ.	ಪೈ
374/48/9	ಶ್ರೀ ಯು. ಶ್ರೀನಿವಾಸ ಸೇಟ್, ಸುಬ್ರಾಯ ಸೇಟರ ಮಗ ಉಪ್ಪುಂದ	92	4	0
386/50	ಜ ಮಹಮ್ಮದ್ ಸಾಹೇಬ್, ಕಾದಿರ್ ಸಾಹೇಬರ ಮಗ, ಮುಗಡಿ, ಶಿರೂರು.	28	9	0
446/50	—Do—	58	0	0
604/50	E. M. ವಿಸಾರಾನ್, ಯುಸುಫ್ ಜಿ. ಉಮ್ಮರ್ ಸಾಹೇಬರ ಮಗ, ವ್ಯಾಪಾರಿ, ಕೇರಿ, ಬೈಂದೂರು.	1270	11	0
1133/50	—Do—	14	13	0
1548/50	ಶ್ರೀ ಸೋಕನ ದುರ್ಗ, ಅಳವೆ ಕೋಡಿ ದಾರನ ಮಗ, ತಾರಾಪತಿ, ಪಡುವರಿ.	60	10	0
360/51	ಜ. ಮೌಲನಾ ಅಬ್ದುಲ್ ಕಾದಿರ್ ಸಾಹೇಬ್, ಇಬ್ರಾಹಿಮ್ ಸಾಹೇಬರ ಮಗ, ಮೀನು ವ್ಯಾಪಾರಿ, ಶಿರೂರು	108	1	0
523/51	ಮಿ ಲೌರೆನ್ಸ್ ನಜ್ರತ್, ಜೋನ್ ಸಲಾಧರ ನಜ್ರತರ ಮಗ, ಬೆಸ್ಕೂರು, ಪಡುವರಿ.	31	10	0
692/52	ಶ್ರೀ ದುರ್ಗ ಸೋಮಯ್ಯ, ನಾಗನ ಅಳಿಯ ದುರ್ಗ ಪಡುವರಿ.	78	9	0

ಬೈಂದೂರು. 8-5 1953

ಎಚ್. ರಾಜೀವ ಶೆಟ್ಟಿ. ಏಜಂಟ್

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವ್ಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ, ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಅಳಿಯ ಸಂತಾನ ಕಾನೂನು

ಇದರ ಪ್ರತಿಗಳು ದೊರೆಯುತ್ತವೆ

ಕನ್ನಡ ಪ್ರತಿಗೆ 0-8-0

ಇಂಗ್ಲಿಷ್ ಪ್ರತಿಗೆ 0-8-0

ನವಯುಗ ಪ್ರೆಸ್, ಉಡುಪಿ.

ಚಂದಾದಾರರಲ್ಲಿ ವಿನಂತಿ

ಚಂದಾಹಣ ಬಾಕಿಮಾಡಿಕೊಂಡ ಚಂದಾದಾರರಿಗೆ ನಾವು ಕ್ರಮವಾಗಿ ನೆನಪೋಲೆ ಕೊಟ್ಟು ವಿ. ಪಿ. ಮಾಡಿದರೂ ಕೆಲವರು ಅದನ್ನು ತಿಳಿದೋ ತಿಳಿಯದೆಯೋ ನಿರಾಕರಿಸಿದ್ದಾರೆ ಅಂಥವರಿಗೆ ಪುನಃ ಬರೆದು ಅವರ ಬಾಕಿಯನ್ನು ತಿಳಿಸಿರುತ್ತವೆ. ಎಲ್ಲರೂ ಇನ್ನಾದರೂ ಬಾಕಿಯನ್ನು ಕಳಿಸಿ ಕೊಟ್ಟು ಪತ್ರಿಕೆ ಸಹಿಸುವಂತೆ ಕೇಳಿಕೊಳ್ಳುತ್ತೇವೆ. ಅಂತೂ ಸಕಾಲದಲ್ಲಿ ಚಂದಾ ಬಾರದಿದ್ದಲ್ಲಿ ತಿರುಗಿ ವಿ. ಪಿ ಮಾಡಲು ಒಪ್ಪಿಗೆ ಎಂದು ತಿಳಿಯಲಾಗಿದೆ. ಮಾಡುವೆವು. ಅದನ್ನಾದರೂ ಪಡೆಕೊಳ್ಳಬೇಕಾಗಿಯೂ ನಮಗೆ ವ್ಯಥಾ ಕಷ್ಟ ಪಡಿಸಬಾರದಾಗಿಯೂ ವಿನಂತಿಸುತ್ತೇವೆ

—ಮನೇಜರ

ರೋಮಾಂಚಕ ಸಿನೇರಮಾ

(೨ನೇ ಪುಟದಿಂದ)

ರು ನಿಜ ಚಿತ್ರವನ್ನು ನೋಡುವುದು ಸಾಧ್ಯವಾಗಿದೆ.

— ೬ —

ಈ ಆವಿಷ್ಕಾರದ ಇನ್ನೊಂದು ವೈಶಿಷ್ಟ್ಯ ಧ್ವನಿಮುದ್ರಣ ಚಮತ್ಕಾರಕ್ಕೆ ಸಂಬಂಧಿಸಿದೆ. ಈಗಿರುವಂತೆ ಚಲಚ್ಚಿತ್ರಗಳಲ್ಲಿ ಬೇರೆಬೇರೆ ವ್ಯಕ್ತಿಯ ಅಥವಾ ಸನ್ನಿವೇಶದ ಧ್ವನಿಯನ್ನು ಒಂದೇ ಕಡೆಯಿಂದ ಬಿತ್ತರಿಸುವ ಏರ್ಪಾಡು ಇದೆ. ಬಲಗಡೆಯ ವ್ಯಕ್ತಿ ಮಾತನಾಡುವಾಗಲಾಗಲೀ; ಎಡಬಗ್ಗಿನ ಪಿಯಾನೊ ಬಾರಿಸುವಾಗಲಾಗಲೀ ಧ್ವನಿಯು ಪರದೆಯ ಒಂದೇ ಸ್ಥಾನದಿಂದ ಕೇಳುತ್ತದೆ. ಇನ್ನು ಮುಂದೆ ಹಾಗಾಗದು. ಇಟಲಿಯ ಮಿಲಾನ್ ನಗರದ ಲಾಸ್ಕಲಾ ಥಿಯೇಟರಿನಲ್ಲಿ ಪ್ರದರ್ಶಿಸಿದ ಒಂದು ಚಿತ್ರದಲ್ಲಿ ಕೈಚಪ್ಪಾಳೆ ನಾಡುವ ದೃಶ್ಯವಿದೆ. ಈ ಧ್ವನಿ ತೀರಾ ಯಥಾರ್ಥವಾದುದಾಗಿರುತ್ತದೆ. ಸಾಧಾರಣವಾಗಿ ಚಲಚಿತ್ರಗಳಲ್ಲಿ ಮರದ ಎರಡು ತುಂಡುಗಳನ್ನು ಒಂದಕ್ಕೊಂದು ಬಡಿದು ಕೈಚಪ್ಪಾಳೆ ಕೇಳಿಸುತ್ತದೆ. ಧ್ವನಿಯ ಮೇಲೆ ಸಾಮೀಪ್ಯ ಅಥವಾ ದೂರದ ಯಾವ ಬಗೆಯ ಪ್ರಭಾವವೂ ಇರುವುದಿಲ್ಲ. ಅದನ್ನು ಲಕ್ಷಿಸುವುದೇ ಇಲ್ಲ. ಸಿನೇರಮಾದಲ್ಲಿ ಈ ಕುರಿತು ಆಶ್ಚರ್ಯಜನಕ ಪರಿವರ್ತನೆಯನ್ನು ಮಾಡಿರುವರು. ಇದರಲ್ಲಿ ದೃಷ್ಟಿಯೂ ಧ್ವನಿಯೂ ಒಟ್ಟಿಗೆ ಸೇರಿ ಅದ್ಭುತ ಚಿತ್ರವನ್ನು ನೀಡಲಾಗುವುದು. ಒಂದು ಮೋಟರ್ ಬೋಟಿನ ದೃಶ್ಯ ನೋಡುತ್ತೇವೆನ್ನೋಣ, ಮೊದಲನೆ ದೂರದಿಂದ ಮೋಟಾರ್ ಬೋಟಿನ ಸಪ್ಪಳ ಮೆಲ್ಲಗೆ ಕೇಳಿಸುತ್ತದೆ. ಹತ್ತಿರ ಬಂದಂತೆ ಧ್ವನಿ ಜೋರಾಗುತ್ತದೆ. ಮರಳಿ ದೂರಸರಿದಂತೆ ಧ್ವನಿ ಮಂದವಾಗುವುದು. ಕೊನೆಗೆ ಅಂತದಲ್ಲಿ ಧ್ವನಿ ಲೀನಗೊಂಡಂತೆನಿಸುವುದೆ. ಒಬ್ಬ ಅನಾಥ ಹುಡುಗನು ಚಿತ್ರದಲ್ಲಿ ಸಂಗೀತ ಹಾಡುವನಾದರೆ, ನಮ್ಮ ನಿಕಟದಲ್ಲಿಯೇ ಅತ್ತಿತ್ತ ಸುಳಿದು ಗೀತಾಮೃತವನ್ನು ಎಣಿಸುವಂತೆ ತೋರುತ್ತದೆ.

— ೭ —

ಕೊರಿಯಾ ಯುದ್ಧದಿಂದ ಹಿಂತಿರುಗಿದ ಸೈನಿಕನೋರ್ವ ತನ್ನ ನವವಧುವಿನೊಂದಿಗೆ ಸಿನೇರಮಾ ನೋಡುತ್ತಿರುವಾಗ ವಾಯುಯಾನವೊಂದು ಹಾರಾಡುವುದನ್ನು ಕಂಡು ಕುರ್ಚಿಯಿಂದ ನೆಗೆದು ಬಿಟ್ಟ. ನವ ವಧು ಗಾಬರಿಗೊಂಡಳು ಪತಿಯ ಹೆಗಲು ಮುಟ್ಟಿ ವ್ಯಗ್ರಭಾವದಿಂದ ಕಾರಣ ಕೇಳಿದಳು. ಪಕ್ಕದಲ್ಲಿಯೇ ಪತ್ನಿ ಕುಳಿತಿರುವುದನ್ನು ಗಮನಿಸಿದ ಸೈನಿಕನಿಗೆ ಜೀವ ಬಂತು. "ನನಗೆ ಇದು ಚಲಚ್ಚಿತ್ರವೆಂಬ ಸಂಗತಿ ಮರೆತೇ ಹೋಗಿತ್ತು. ನೀನು ಸಕಾಲದಲ್ಲಿ ಎಚ್ಚರಿಸದಿರುತಿದ್ದರೆ ನಾನೇ ಆ ವಿಮಾನ ಚಾಲಕನೆಂದುಕೊಳ್ಳುತಿದ್ದೆ" ಎಂದು ಸೈನಿಕ ತನ್ನ ವರ್ತನೆಗೆ ಸಮಾಧಾನ ಕೊಟ್ಟ. ಈ ದೃಶ್ಯವನ್ನು ಅಮೇರಿಕೆಯ ಮಾಜಿ ಅಧ್ಯಕ್ಷ ಹೂವರು ಪತ್ನಿ ನೋಡಿ ಹೊರಬಂದ ಮೇಲೆ ತಪ್ಪನ್ನು ಸ್ಥಿತಿಗೆ ತಂದುಕೊಳ್ಳಬೇಕಾದರೆ, ಒಂದು ತಾಸು ತಗಲಿತಂತೆ. ಅದಕ್ಕಾಗಿಯೇ ಬ್ರಾಡ್‌ವೇ ಥಿಯೇಟರಿನ ಹೊರಗೆ ಡ್ರೈಮಾ ಇನ್ ಔಷಧಿ ವಿಶೇಷ ಮಾರಲ್ಪಡುತ್ತದೆ.

ಪ್ರಕೃತ ಸಿನೇರಮಾದ ಜಾದೂ ನ್ಯೂಯಾರ್ಕ ನಗರದಲ್ಲಿ ಮಾತ್ರ ನಡೆಯುತ್ತದೆ. ಇಡೀ ಅಮೇರಿಕಾದಲ್ಲಿ ಇದು ಪ್ರಸಾರವಾಗಬೇಕೆಂದು ಪ್ರಯತ್ನಗಳು ಜರಗುತ್ತಿವೆ. ಚಿಕಾಗೋ ನಗರದಲ್ಲಿ ಎರಡನೆಯ ಕೇಂದ್ರ ತೆರೆಯಲ್ಪಡುತ್ತದೆ. ಬಹುಶಃ ಇನ್ನೈದು ವರ್ಷಗಳಲ್ಲಿ ಭಾರತಕ್ಕೂ ಸಿನೇರಮಾದ ವ್ಯಾಪ್ತಿಯಾದೀತು.

— ೮ —

ಆದರೆ ನ್ಯೂಯಾರ್ಕ್ ನಗರಕ್ಕೆ ಸಿನೇರಮಾ ಒಂದು ತಲೆಸಿಡಿತದಂತೆ ಆಗಿದೆ. ಕೋಟಿಗಟ್ಟಲೆ ಹಣವನ್ನು ವೆಚ್ಚಮಾಡಿ ಕಟ್ಟಿಸಿದ ಸಿನೇಮಾಗಳು ಈ ಹೊಸ ಆವಿಷ್ಕಾರಕ್ಕೆ ಹೊಂದಿಕೊಳ್ಳುವಂತೆ ಹೇಗೆ ಮಾಡಬಹುದೆಂಬುದೇ ದೊಡ್ಡ ಚಿಂತೆ. ಹೊಸ ಶೋಧನೆಗೆ ಹೊಂದಿಕೊಳ್ಳುವಂತೆ ತಮ್ಮ ಆಕಾರ ಪ್ರಕಾರಗಳಲ್ಲಿ ಪರಿವರ್ತನೆಯನ್ನು ಮಾಡಿಕೊಳ್ಳುವುದು ಸುಲಭಸಾಧ್ಯವಲ್ಲ. ಇದರಂತೆ ಸಿನೇರಮಾ ಕ್ಯಾಮೆರಾದಿಂದ ಚಿತ್ರ ತಯಾರಿಸುವುದೂ ಸುಲಭ ಕಾರ್ಯವಲ್ಲ. ಮೂರು ಪಟಲಗಳು ಮೂರು ಚಿತ್ರದ ದರ್ಶಕಗಳು, ಮೂರು ಮಸೂರದ ಬಿಂಬಗ್ರಾಹಿ—ಹೀಗೆ ಚಿತ್ರದ ಉತ್ಪಾದನಾ ವೆಚ್ಚ ಮಿತಿಮೀರಿ ಹೆಚ್ಚುತ್ತದೆ. ಇಷ್ಟು ಹಣವನ್ನು ಸುರುವಲು ಯಾವ ಕುಬೇರ ಮುಂದೆ ಬಂದಾನು? ಆದರೂ ಮಹಾತ್ತ್ವಾಕಾಂಕ್ಷೆ ಎಂಬುದೊಂದಿದೆಯಲ್ಲ! ಈ ಚಿತ್ರಗಳನ್ನು ನೋಡಲು ಪ್ರೇಕ್ಷಕರು ನೂಕು ನುಗ್ಗಲುಮಾಡುವರೆಂಬುದು ನಿಶ್ಚಯವಾದದ್ದರಿಂದ ಬಂಡವಾಳಗಾರರು ಲಾಭದ ಆಸೆಯಿಂದ ಈ ಸಾಹಸಕ್ಕೆ ಕೈಯಿಕ್ಕಬಹುದು. ಉತ್ಪಾದಕರಲ್ಲಿ ಹೆಚ್ಚಿನವರ ಹಿಂದು ಮುಂದು ನೋಡಿದರೂ ಯಾರಾದರೊಬ್ಬ ಮಹನೀಯ ಈ ಕಾರ್ಯದಲ್ಲಿ ಧುಮುಕಿಯಾನು. ಅಮೇರಿಕಾದಲ್ಲಿ ಈಗಾಗಲೇ ಮೊದಲನೇ ಚಿತ್ರದ ಕಾರ್ಯಯೋಜನೆಯು ನಡೆದಿರುತ್ತದೆ. ಈ ಚಿತ್ರದ ಕಥೆಯು ಬ್ಯಾಬಲಿನ ಪ್ರಸಂಗ ಒಂದನ್ನು ಆಧರಿಸಿದೆ. ಇದಲ್ಲದೆ ಎರಡು ಸಂಗೀತ ಚಿತ್ರಗಳನ್ನೂ ಒಂದು ವತ್ತೆದಾರಿ ಚಿತ್ರವನ್ನೂ ತಯಾರಿಸುವ ಹವಣಿಕೆ ಇದೆ. ಈ ಸಾಹಸದ ಹೆಜ್ಜೆ ಇಟ್ಟ ಧೀರ ನ್ಯೂಯೋರ್ಕಿನ ಕಟ್ಲೆರಿ ಅಂಗಡಿಯ ಒಡೆಯ ಜಾನ್ ಕ್ರೆಮರ್!

ಮಂಗಳೂರಲ್ಲಿ ಮದರಾಸುರಾಜ್ಯದ ಶಿಕ್ಷಣ ಸಮ್ಮೇಳನ

ಮೈಸೂರು ಮುಖ್ಯಮಂತ್ರಿಗಳಿಂದ ಉದ್ಘಾಟನ.

ಮದ್ರಾಸು ರಾಜ್ಯದ 43ನೇ ಶಿಕ್ಷಣ ಸಮ್ಮೇಳನವು ಇದೇ ತಾ. ೬ರಲ್ಲು ಮಂಗಳೂರಿನ ಕೆನರಾ ಹ್ಯಾಸ್ಕೂಲಿನಲ್ಲಿ ಶ್ರೀ ಕೆ ಕುರುವಿಲ ಜೇಕೂಬ್, ಹೆಡ್ಮಾಸ್ಟರ್ ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನ ಹ್ಯಾಸ್ಕೂಲ್, ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಮೈಸೂರು ಸಂಸ್ಥಾನದ ಮುಖ್ಯ ಮಂತ್ರಿಗಳಾದ ಶ್ರೀ ಕೆ. ಹನುಮಂತಯ್ಯನವರು ಸಂಮೇಳನವನ್ನು ಉದ್ಘಾಟಿಸುತ್ತಾ ನೀತಿಯಿಲ್ಲದ ವಿದ್ಯೆಯು ಆತ್ಮವಿಲ್ಲದ ಶರೀರಕ್ಕೆ ಸಮಾನ. ಧರ್ಮಬೋಧೆ, ನೀತಿಬೋಧೆ, ಇವುಗಳನ್ನು ಹೇಳಿ ವಿದ್ಯಾರ್ಥಿಗಳಿಗೆ ವಿವರಿಸಿ ತಿಳಿಸಬೇಕು. ನಾನು ಬಯಸುವ ನೈತಿಕ ವಿದ್ಯಾಭ್ಯಾಸಕ್ರಮದಲ್ಲಿ ಆ ರೀತಿ ನಡೆಯಬೇಕು' ಎಂದರು. ಅವರು ಮತ್ತೂ ಹೇಳಿದುದೇನೆಂದರೆ ಈಗಿನ ವಿದ್ಯಾಭ್ಯಾಸ ಪದ್ಧತಿಯೇ ಒಂದು ದೊಡ್ಡ ಯಂತ್ರದಂತಿದೆ. ಪ್ರತಿ ವರ್ಷವೂ ಮಿತಿ ಮೀರಿದ ಭಾರೀ ಸಂಖ್ಯೆಯ ಗಂಡಸರೂ ಹೆಂಗಸರೂ ಆ ಯಂತ್ರದಿಂದ ಹೊರಬೀಳುತ್ತಿದ್ದಾರೆ. ಇದರಿಂದ ನಿರುದ್ಯೋಗಿಗಳ ಸಂಖ್ಯೆಯು ಹೆಚ್ಚುತ್ತಿರುವುದು ಮಾತ್ರವಲ್ಲದೆ ಯಾವ ಉದ್ಯೋಗಕ್ಕೂ ಅರ್ಹತೆಯಿಲ್ಲದವರ ಸಂಖ್ಯೆಯೂ ಸಹ ಹೆಚ್ಚುತ್ತಿದೆ. ಕ್ಲೇಶಪ್ರದ ಹಂತ ರಿಗೆ ಮಾತ್ರ ನಡೆದು ಫಲವಿಲ್ಲ. ಅದು ಒಂದು ಉದ್ಯೋಗವನ್ನೇ, ಕಸಬನ್ನೋ ಅವಲಂಬಿಸಲು ವಿದ್ಯಾರ್ಥಿಯನ್ನು ಅರ್ಹನನ್ನಾಗಿ ಮಾಡುವಂತಿರಬೇಕು. ಹಿಂದೆ ಭಾರತದಲ್ಲಿ ಉಪಾಧ್ಯಾಯರುಗಳಿಗೂ ಮತ್ತು ವಿದ್ಯಾರ್ಥಿಗಳಿಗೂ ಸಾಂಪ್ರದಾಯಕವಾಗಿದ್ದಂತಹ ಒಂದಿದ್ದ ನಿಕಟ ಸಂಬಂಧವೇ ಈಗ ಸಂಪೂರ್ಣವಾಗಿ ಕಡಿದು ಹೋಗಿದೆ. ಆದರಿಂದ ಉಪಾಧ್ಯಾಯರುಗಳಿಗೂ ವಿದ್ಯಾರ್ಥಿಗಳಿಗೂ ಪರಸ್ಪರ ನಡೆಯುತ್ತಿದ್ದ ವಿಚಾರ ವಿನಿಮಯ ಜೀವ ವಾಹಿನಿಯು ಈಗ ಹರಿಯುತ್ತಿಲ್ಲ ಎಂದು ಹೇಳಬೇಕಾಗಿದೆ' ಎಂದು ಮುಂತಾಗಿ ಹೇಳಿದರು.

ಸಮ್ಮೇಳನಾಧ್ಯಕ್ಷರು ತಮ್ಮ ಭಾಷಣದಲ್ಲಿ 'ನಮ್ಮ ದೇಶವು ಪ್ರಕೃತಿಕ ಸಂಪತ್ತು ಮತ್ತು ಮಾನುಷ್ಯ ಶಕ್ತಿಯಲ್ಲಿ ಪ್ರಾಮುಖ್ಯವಾದರೂ ಆರ್ಥಿಕ ದೃಷ್ಟಿಯಿಂದ ಹಿಂದೆ ಬಿದ್ದಿದೆ. [illegible] ಸವು ಕೆಳಮಟ್ಟಕ್ಕಿಳಿದಿದೆ ಎಂಬ ದೂರು ಇದೆ. ಇಂತಹ ದೂರುಗಳನ್ನು ದೂರ ಮಾಡಲು ಈ ಸಮ್ಮೇಳನವು ಯೋಗ್ಯ ರೀತಿಯ ಸಲಹೆಯನ್ನು ಕೊಡಬಹುದು" ಎಂದರು. ಅವರು ಮತ್ತೂ ಹೇಳಿದುದೇನೆಂದರೆ 'ಧನಾರ್ಥ ಮತ್ತು ಕಡ್ಡಾಯ ಪ್ರಾಥಮಿಕ ವಿದ್ಯಾಭ್ಯಾಸವು, ಪ್ರಾಂತದಲ್ಲಿಯ ಆರ್ಥಿಕ ಕೊರತೆಯಿಂದಾಗಿ ಹೆಚ್ಚು ಅಭಿವೃದ್ಧಿಹೊಂದಲಿಲ್ಲ. ಇದಕ್ಕಾಗಿ ಬೇಗನೆ ಮದ್ರಾಸು ಪ್ರಾಂತದ ಪ್ರಾಥಮಿಕ ವಿದ್ಯಾಭ್ಯಾಸ ಯೋಜನೆಯನ್ನು ಕರಡುಹಾಕಬೇಕಾಗಿದೆ.

ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ಸ್ವಾಗತ ಭಾಷಣ ಮಾಡುತ್ತಾ 'ಪ್ರಾದೇಶಿಕ ಭಾಷೆಯನ್ನು ಶಿಕ್ಷಣದ ಮಾಧ್ಯಮವನ್ನಾಗಿ ಮಾಡಿದುದರಿಂದ ವಿದ್ಯಾರ್ಥಿಗಳಿಗೆ ಕಾಲೇಜಿನಲ್ಲಿ ತುಂಬಾ ಕಷ್ಟವುಂಟಾಗುತ್ತದೆ. ಇತ್ತೀಚೆಗೆ ಜಾರಿಗೆ ಬಂದ ಬುನಾದಿ ಶಿಕ್ಷಣವು ಹಲವಾರು ಕಾರಣಗಳಿಂದ ಸಾಕಷ್ಟು ಫಲಕಾರಿಯಾಗಿಲ್ಲ. ಈ ವಿಷಯದ ಕಡೆಗೆ ತುಂಬಾ ಗಮನ ಕೊಡಬೇಕಾಗಿದೆ. ಇದೇ ರೀತಿಯಲ್ಲಿ ಮಹಿಳಾ ಶಿಕ್ಷಣಕ್ಕೂ ಹೆಚ್ಚಿನ ಲಕ್ಷ್ಯ ಕೊಡುವುದು ಆವಶ್ಯ"ವೆಂದರು.

ದ. ಕ. ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಸಂಜೀವ ಭಟ್ಟರು ಶೈಕ್ಷಣಿಕ ವಸ್ತು ಪ್ರದರ್ಶನವನ್ನು ತೆರೆಯುತ್ತಾ, ಪ್ರತಿಯೊಂದು ಸಮ್ಮೇಳನಕ್ಕೆ ಒಂದು ವಸ್ತು ಪ್ರದರ್ಶನ ಅಗತ್ಯವಾಗಿರುತ್ತದೆಂದೂ ಅದರಲ್ಲೂ ಈ ವಿದ್ಯಾ ಸಮ್ಮೇಳನಕ್ಕೆ ಇದು ಬಹಳ ಅಗತ್ಯವೆಂದೂ ಹೇಳಿದರು.

ಸಮ್ಮೇಳನಾರಂಭದಲ್ಲಿ ದಿವಂಗತ ಆರ್. ಕೆ ಷಣ್ಮುಗಂ ಚೆಟ್ಟಿಯಾರರ ನಿಧನಕ್ಕೆ ಸಂತಾಪ ಸೂಚಿಸಲು ಎದ್ದು ನಿಮಿಷ ಮೌನ ನಾಚರಿಸಲಾಯಿತು. ಸ್ವಾಗತ ಸಮಿತಿ ಕಾರ್ಯದರ್ಶಿಗಳಾದ ಶ್ರೀ ಯು. ಶ್ರೀನಿವಾಸ ರಾವ್ ಯವರು ಶ್ರೀ ಶ್ರೀ ಪ್ರಕಾಶ, ಶ್ರೀ ರಾಜಗೋಪಾಲಾಚಾರ್ಯ ಮೊದಲಾದವರ ಸಂದೇಶಗಳನ್ನು ಓದಿ ಹೇಳಿದರು.

ಮರುದಿನ, ಮದ್ರಾಸ. ಪಚಯಪ್ಪಾ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಆರ್. ಕೃಷ್ಣಮೂರ್ತಿಯವರು ದಕ್ಷಿಣ ಭಾರತದ ಉಪಾಧ್ಯಾಯ ಸಂಘದ ಅಧ್ಯಕ್ಷರಾಗಿದ್ದ ದಿವಂಗತ ಸಭೇಶನ್‌ರವರ ಸ್ಮಾರಕ, ಭಾಷಣ ಮಾಡಿದರು. 'ಈಗಿನ ಸೆಕೆಂಡರಿ ವಿದ್ಯಾಭ್ಯಾಸದಲ್ಲಿ ಸಮಾಜ ಶಾಸ್ತ್ರ ಮತ್ತು ಪೌರತನ ಶಿಕ್ಷಣಕ್ಕೆ ಹೆಚ್ಚಿನ ಗಮನ ಕೊಟ್ಟಿರುವರು. ಹೈಸ್ಕೂಲುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗಿ ಶಿಫ್ಟ್ ಪದ್ಧತಿ ಜಾರಿಗೆ ಬಂತು. ಇದರಿಂದ ಪ್ರಯೋಜನವೂ ಹಾನಿಯೂ ಎರಡೂ ಇವೆ. ಉಪಾಧ್ಯಾಯರಿಗೆ, ತೋಟಿಗಳಿಗೆ ಅಥವಾ ಪ್ರೊಫೆಸರರಿಗೆ ಸಿಗುವಷ್ಟು ಕೂಡಾ ಸಂಬಳ ದೊರಕುವುದಿಲ್ಲ. ಆದರೆ ಅವರಿಗೆ ಸಮಾಜದಲ್ಲಿ ಗೌರವದ ಸ್ಥಾನವಿದೆ. ಸಂಬಳ ರಹಿತ ಮೊದಲಾಗಿರುವ ಕಾರಣ ಉಪಾಧ್ಯಾಯರ ಕೆಲಸಕ್ಕೆ ಹೆಚ್ಚಿನವರು ಸೇರುವುದಿಲ್ಲ ಎಂದು ಮುಂತಾಗಿ ಹೇಳಿದರು.

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ

ನವಜೀವಾತು

ಎಂಬ

ಸೂತಿಕಾರಸಾಯನ



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಸ್ವಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರ ಪ್ರವರಸಾಯನ

ಹೆಚ್ಚಿನ ಮಾಹಿತಿಗೆ— ಡಾ। ಯಂ. ಸಿ. ಶಾಸ್ತ್ರೀ, ಯಲ್ ಐ. ಎಂ.

ಕೊಡಿಯಾಲ್ಬೈಲು ಪೋಸ್ಟು, (ಮಂಗಳೂರು)

ಬ್ರಾಂಚ್: — ಡಾ। ಎ. ಕೆ. ಶಿವರಾಮರಾವ್, ಕುಂಬಳೆಪೇಟೆ.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಜಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಕಾರ್ಯವನ್ನು ಮಾಡುತ್ತಿರುವುದು.

The Moolky Bank Ltd.,

Moolky. S. K.

ವಾರದ ಒಳಿತು ಕೆಡುಕುಗಳು

ತಾ. ೧೪—೫—೫೫ರಿಂದ ತಾ. ೨೦—೫—೫೫ರ ವರೆಗೆ.

ಮೇಷ— ನಿಮ್ಮ ಇಂದಿನ ಗ್ರಹಮಾನವು ಉತ್ತಮವಾಗಿರುವುದು. ಯಾವ ಭಾಗದಲ್ಲೂ ಕುಂದು ಕೊರತೆಗಳು ಕಾಣಿಸಲಾರವು. ಆರೋಗ್ಯವು ಸುಧಾರಿಸಲಿವೆ ಗೃಹತಾಪತ್ರಯಗಳು ದೂರವಾಗುವವು. ನೌಕರಿ ವ್ಯಾಪಾರ ವ್ಯವಹಾರಾದಿಗಳಲ್ಲಿ ನಿರೀಕ್ಷೆಗಿಂತಲೂ ಅಧಿಕವಾದ ಫಲಪ್ರಾಪ್ತಿಯಿದೆ. ಅಪ್ತಜನ ವರ್ಗದೊಳು ಅಕಸ್ಮಾತ್ ವೈಮನಸ್ಸುಂಟಾಗುವ ಸಂಭವವಿದೆ. ರಾಜಕೀಯದಲ್ಲಿ ಕೊಂಚ ಪರಾಭವವುಂಟಾದೀತು. ತಾ. 16, 17 ಈ ಎರಡು ದಿನಗಳು ಅತ್ಯುತ್ತಮವಿವೆ.

ವೃಷಭ— ಕಾಲಗತಿಯು ವಿಪರೀತ ಸ್ಥಿತಿಗೆ ಬಂದಿದೆ. ಜನತೆಯ ನಿಂದಾಪವಾದಗಳಿಗೆ ಪಾತ್ರರಾಗುವಿರಿ. ವಾಕ್ಕಲಹವು ಅನಿವಾರ್ಯವು ಸತತ ಪರ್ಯಟನದಿಂದಾಗಿ ಅನಾರೋಗ್ಯಕ್ಕೆಡೆಯಾಗುವದು. ಸಾಂಸಾರಿಕ ತಾಪತ್ರಯಗಳು ದಿನೇ ದಿನೇ ಹೆಚ್ಚಲಿವೆ. ಶ್ರಮಜೀವಿಗಳಿಗೂ ನೌಕರಿ ಜನರಿಗೂ ದಿನಮಾನವೆಯು ದುಸ್ತರವೆನಿಸೀತು. ವಣಿಗ್ ಜನತೆಗೆ ಈ ಕಾಲವು ಅಷ್ಟೊಂದು ಕನಿಷ್ಠಕರವಾಗದು. ತಾ. 14, 15, 18, 19 ಈ ದಿನಗಳವು ಬಾಲ್ಯ ಸ್ನೇಹಿತರ ನೆರವಿನಿಂದಾಗಿ ಕಾರ್ಯದಲ್ಲಿ ವಿಜಯ ಲಾಭ ಸಂತೋಷಗಳಿವೆ

ಮಿಥುನ— ನಿಮ್ಮ ಭಾಗಕ್ಕೀವಾರವು ಅತೀವ ಅನಿಷ್ಟದಾಯಿಯಾಗಿ ಪರಿಣಮಿಸದೆಯೆನ್ನಲು ವಿಶಾದವೆನಿಸುವದು ಧನಾಗಮದ ಮಾರ್ಗವು ಅತ್ಯಲ್ಪವಾಗಿದ್ದು ಸರ್ವತೋಮುಖದಿಂದ ಖರ್ಚುವೆಚ್ಚಗಳು ಪ್ರಾಪ್ತವಾಗುವುದರಿಂದ ಆರ್ಥಿಕ ಬಿಕ್ಕಟ್ಟು ಅತಿಶಯವಾಗುವದು. ಸಿಕ್ಕ ಸಿಕ್ಕವರ ಕೂಡೆ ಸಾಲಕಡಗಳನ್ನು ಮಾಡಲಿರುವಿರಿ ನಿರ್ಗಂಧಕರುಸುಮಗಳನ್ನು ಭ್ರಮರಗಳು ದೂರೀಕರಿಸುವಂತೆ ಆಪ್ತ ಬಂಧು ಜನತೆಯೂ ನಿಮ್ಮನ್ನು ದೂರ ಮಾಡುವರು ಚಂಚಲ ಚಿತ್ತರಾದ ನೀವು ತಾ 16, 17, 20 ರಲ್ಲಿ ಕೊಂಚ ಸುಖವನ್ನು ಕಾಣಲಿರುವಿರಿ.

ಕರ್ಕಟ— ಧನ ರೆನ್ನಬೇಕು, ನಿಮ್ಮನ್ನ. ನಿಮ್ಮ ಲಾಭಸ್ಥಾನದಲ್ಲಿ ಗ್ರಹ ಚತುಷ್ಟಯಗಳ ಸಮ್ಮಿಳನವಾಗಿರುವುದು, ಮಾತ್ರವಲ್ಲ ಸುಖಲಾಭ ಪತಿಯಹದ ಶುಕ್ರನು ಭಾಗ್ಯದಲ್ಲಿ ಉಚ್ಚನಿರುವನು. ಅಂದಮೇಲೆ ಕೇಳಬೇಕೆ? ಎಂತಹನಂದಲೂ ದುಷ್ಕರ ವೆನಿಸುವ ಕಾರ್ಯವು ನಿಮ್ಮ ನಿಮ್ಮ ಭಾಗಕ್ಕೆ ತೃಣ ಸಮವೆನಿಸುವದು. ಇಂತಹ ಸುಸಂಧಿಯು ಇನ್ನು ಸಿದ್ಧ ನಿಮಗೆ ಲಭಿಸಲಾರದ ಕಾರಣ ನಿಮ್ಮ ಬಯಕೆಯನ್ನು ಇಂದೇ ಪೂರೈಸಿಕೊಳ್ಳಿರಿ. ದೈವವು ನಿಮ್ಮ ಅಭೀಷ್ಟವನ್ನು ಪೂರೈಸುವುದರಲ್ಲಿ ಬದ್ಧ ಕಂಕಣವಿರುವದು. ತಾ. 14, 15, 18, 19 ಅತ್ಯುತ್ತಮ ದಿನಗಳಾಗಿವೆ.

ಸಿಂಹ— ಈ ವಾರವು ನಿಮ್ಮ ಇಷ್ಟ ಸಾಧನೆಗೆ ಸಹಕಾರಿಯಾಗದಿದ್ದರೂ ಅನಿಷ್ಟವನ್ನುಂಟುಮಾಡದು. ಪ್ರಯತ್ನಕ್ಕೆ ತಕ್ಕ ಪ್ರತಿಫಲ ಸಿಕ್ಕಿಯೇ ತೀರಲಿವೆ. ಖರ್ಚು ಆದಾಯವನ್ನತಿಕ್ರಮಿಸದ ಕಾರಣ ಹಣದ ಚಿಂತೆ ನಿಮಗಿರದು. ಮಿತ್ರವರ್ಗದವರ ಬೆಂಬಲವು ಚೆನ್ನಾಗಿರುವ ಕಾರಣ ಹಿಡಿದ ಕಾರ್ಯವನ್ನು ಕೊನೆಗಾಣಿಸುವಿರಿ ಹಿಂದಿನ ಸ್ಥಾನಮಾನಗಳಿಗೆ ಇಂದು ಕೊಂಚ ಧಕ್ಕೆ ಕಾಣಿಸಲಿದೆ. ಕೆಲಪ್ರೌಢ ವಿರೋಧಿ ಜನರ ಸ್ನೇಹವನ್ನು ಬೆಳೆಸುವ ಪ್ರಸಂಗ ಬರಲಿದೆ. ತಾ. 18, 19 ಈ ದಿನಗಳಲ್ಲಿ ಅತಿವ್ಯಯ ಅನಾರೋಗ್ಯಗಳು ಕಾಣಿಸಿಯಾವು.

ಕನ್ಯಾ:— ಬಾಡದ್ದೆಲ್ಲ ಬರಲಿ ಗೋವಿಂದನ ದಯೇ ವೊಂದಿರಲಿ ಎಂಬ ಗಾದೆಯಂತೆ ಇಂದಿನ ನಿಮ್ಮ ಪರಿಸ್ಥಿತಿಯಿರುವದು. ಈ ವಾರದಲ್ಲಿ ಬೃಹಸ್ಪತ್ಯಾಚಾರ್ಯರನ್ನು ಹೊರತಾಗಿ ಇತರ ಎಲ್ಲಾ ಗ್ರಹರೂ ಪ್ರತಿಕೂಲರಿರುವರು. ಅದಕಾರಣ ವಾತ ಉಷ್ಣ ಪ್ರಕೋಪದಿಂದಾಗಿ ಆರೋಗ್ಯ ಕೆಡಲಿದೆ. ವ್ಯಾಪಾರವ್ಯವಹಾರಗಳಲ್ಲಿ ನಷ್ಟ ನಿಷ್ಠುರಗಳುಂಟಾಗುವವು ಸೇವಕ ವರ್ಗದವರೂ ಇದಿರು ನಿಲ್ಲುವರು. ಸ್ತ್ರೀಜನರ ಸಹ ವ್ಯವಹಾರ ದಿಂದಾಗಿ ಕಲಹ ಅಪವಾದಗಳುಂಟಾಗಲಿವೆ. ಹಣದ ವ್ಯವಹಾರದಲ್ಲಿ ಜಗಳಗಳುದ್ಭವಿಸುವವು. ಆದರೂ ಸುರ ಗುರುಗಳ ಪೂರ್ಣಾನುಗ್ರಹವನ್ನು ಪಡೆದ ನಿಮಗೆ ಹೆಚ್ಚಿನವು ಸ್ತ ಕಾರ್ಯ ರೂಪದಲ್ಲಿ ಕಾಣಿಸಲಾರವು. ತಾ 16ರಿಂದ 19ರ ವರೆಗಿನ ದಿನಗಳು ಅತ್ಯುತ್ತಮವಾಗಿವೆ

ತುಲಾ:— ದುರ್ದಿನಗಳು ದೂರವಾದವು. ನಿಮ್ಮ ಆರ್ಥಿಕ ಭಗದಲ್ಲಿ ಕೊಂಚ ಅಭಿವೃದ್ಧಿಯ ಚಿಹ್ನೆಗಳು ಕಾಣಿಸಲಿವೆ. ಬಂಧುವರ್ಗದವರ ಬೆಂಬಲವನ್ನು ಪಡೆವಿರಿ. ಆದರೆ ರಾಜಕೀಯ ಕ್ಷೇತ್ರದಲ್ಲಿ ಮೇಲಿಂದ ಮೇಲೆ ಪರಾಭವಗಳುಂಟಾದಾವು. ಆರೋಗ್ಯವು ಚೆನ್ನಾಗಿರದು ಶತ್ರು ಜನರ ಕಾಟದಿಂದ ಮುಕ್ತರಾಗಲು ಬಹಳ ಕಷ್ಟ ವೆನಿಸೀತು. ವ್ಯಾಪಾರ ವ್ಯವಹಾರಗಳಲ್ಲೂ ವಿಘ್ನ ವಿಪತ್ತುಗಳು ಹೆಚ್ಚಲಿವೆ, ವಾರಾಂತ್ಯದ 3 ದಿನಗಳು ಇತರ ದಿನಗಳಿಗಿಂತ ಉತ್ತಮವೆನಿಸೀತು.

ವೃಶ್ಚಿಕ— ನಿಮ್ಮ ಬಯಕೆಗಳಿಂದು ಪರಿಪೂರ್ಣವಾಗಲಿವೆ, ಶ್ರಮವಿಲ್ಲದೆ ಯುಕ್ತಿಯಿಂದಲೇ ಕಾರ್ಯಸಾಧಿಸುವಿರಿ. ಜನತೆಯ ಬೆಂಬಲದಿಂದಾಗಿ ಒಳ್ಳೇ ಸ್ಥಾನಮಾನಗಳು ಲಭಿಸುವವು. ಸೀಚಜನರಿಂದ ಹೆಚ್ಚಿನ ಧನಲಾಭವಾಗುವದು, ಆದರೆ ಸಾಂಸಾರಿಕ ತಾಪತ್ರಯಗಳು ನಿಮ್ಮ ಮನೋನೆಮ್ಮದಿಯನ್ನು ಕೆಡಿಸಲಿವೆ, ವಾಕ್ಕಲಹ ಅನಿವಾರ್ಯವಿದೆ. ತಾ. 14, 15, 20 ಈ ದಿನಗಳಲ್ಲಿ ಗುರುಹಿರಿಯರ ಮತ್ತು ಸತ್ಪುರುಷರ ಆಶ್ರಯಬಲದಿಂದಾಗಿ ಪಲವಾರು ಕಾರ್ಯಗಳಲ್ಲಿ ವಿಜಯಿಗಳಾಗಿ ಕೀರ್ತಿ ಲಾಭಗಳನ್ನು ಗಳಿಸುವಿರಿ.

ಧನು— ಹೆಚ್ಚಿನ ನಿಮ್ಮ ಕಷ್ಟಗಳು ದೂರವಾಗುವವು ಹೆರವರ ಆಶ್ರಯವಿಲ್ಲದೆ ಕಷ್ಟಸಾಧ್ಯವಾದ ಕಾರ್ಯವನ್ನೂ ಸ್ವಯಂಸಾಧಿಸುವ ಅಪದೃಶ ಶಕ್ತಿಯುತರಾದ ನಿಮಗೆ ಯಾವ ಕಾರ್ಯದಲ್ಲೂ ಕಷ್ಟನಷ್ಟಗಳೊದಗವು. ಮುಂದಿನ ಹೆಜ್ಜೆಯನ್ನು ಎಂದೂ ಹಿಂತೆಗೆವ ಪ್ರಸಂಗ ಬಾರದು. ಆದರೆ ಮನಸ್ಸೇಕೋ ಅತೀವ ಚಂಚಲವಾಗಿದ್ದು ಯಾವ ಕಾರ್ಯದಲ್ಲೂ ಮುಂದರಿಯಲು ಹಿಂಜರಿವದು. ವಾರಾದಿಯ 4 ದಿನಗಳಲ್ಲಿ ನಿಮ್ಮ ಅಭೀಷ್ಟಗಳು ಸಿದ್ಧಿಸಲಿವೆ.

ಮಕರ— ಈ ವಾರವು ನಿಮಗೆ ಹಿಂದಿನಷ್ಟು ಫಲದಾಯಿಯಾಗಿ ಪರಿಣಮಿಸದು. ದುರಿಮೆಯು ದ್ವಿಗುಣವ್ಯಯಗಳು ಕಾಣಿಸುವವು ಸಂಸಾರದೆಲ್ಲೆಂತೂ ಇಲ್ಲಸಲ್ಲದ ಕಲಹಗಳುದ್ಭವಿಸಲಿವೆ, ತಂದೆಮಕ್ಕಳೊಳು ಗಂಡ ಹೆಂಡಿರೊಳು ಐಕಮತ್ಯವಿರದು. ಆದರೂ ಗುರ್ವನುಗ್ರಹವೊಂದು ನಿಮಗೆ ಬಲವತ್ತರವಾಗಿರುವುದರಿಂದ ಅನಿಷ್ಟಗಳು ತಾವಾಗಿಯೇ ದೂರವಾಗಲಿವೆ ಅತ್ಮೀಯರ ವಿರಹದಿಂದ ಉದ್ರಿಕ್ತವಾದ ನಿಮ್ಮ ಮನಸ್ಸಿಗೆ ತಾ. 16, 17, 18, 19 ಈ ದಿನಗಳು ತೃಪ್ತಿಕರವೆನಿಸುವವು.

ಕುಂಭ— ಅಲ್ಪರಸಂಗ ಅಭಿಮಾನಭಂಗವೆಂಬ ನಾಣ್ಣುಡಿಯಂತೆ ಕುಜನರ ಸಹವಾಸದಿಂದಾಗಿ ಸಮಾಜದಲ್ಲಿ ನಿಂದಾಪವಾದಗಳಿಗೆ ಗುರಿಯಾಗುವಿರಿ. ಅತ್ಮೀಯರ ವಿರಹದಿಂದ ಸಂತಪ್ತರಾದ ನಮಗೆ ಬಂಧುಜನರಿಂದಲೂ ಮನಃ ಕ್ಲೇಶವುಂಟಾದೀತು, ಬೇಕಾದ ವಸ್ತು ಒಡವೆಗಳಿದ್ದರೂ ಸ್ವೋಪಭೋಗಕ್ಕೆ ದೊರೆಯಲೊಲ್ಲವು. ಇದ್ದುದರಲ್ಲಿ ತೃಪ್ತಿಕರ ಖರ್ಚಿನ ಸಲುವಾಗಿ ಹೆರವರ ಮುಖನೋಡಬೇಕಾಗಿ ಬರದು. ವಾರಾಂತ್ಯದ 3 ದಿನಗಳಲ್ಲಿ ನಿಮ್ಮ ಸಂಕಲ್ಪವು ಹೆಚ್ಚಿನಂಶ ಫಲಿಸಲಿದೆ.

ಮೀನ— ಎಷ್ಟೇ ವಿಘ್ನ ವಿಪತ್ತುಗಳು ಬಂದರೂ ಹಿಡಿದ ಛಲವನ್ನು ಬಿಡದೆ ಮುಂದರಿಸುವ ಶಕ್ತಿಸ್ವಭಾವ ನಿಮ್ಮದಾಗಿರುದರಿಂದ, ರಾಜಕೀಯಪಕ್ಷದ ಪ್ರತಿಯೊಂದು ಕಾರ್ಯಕಲಾಪಗಳೂ ನಿಮ್ಮಂತೆಯೇ ಆಗಲಿವೆ ಆದರೆ ಹೆಂಡತಿ ಮಕ್ಕಳ ಆರೋಗ್ಯದತ್ತ ಹೆಚ್ಚಿನ ಗಮನವಿಡಿರಿ ನಿಮ್ಮ ಸ್ವಂತ ಉಪಭೋಗಕ್ಕೆ ಯಾವ ಲೋಪದೋಷಗಳೂ ಉಂಟಾಗಲಾರವು, ತಾ 14, 15, 20 ಈ ದಿನಗಳಲ್ಲಿ ನಿಮ್ಮ ಪ್ರಯತ್ನವು ವಿಫಲಫಲದಾಯಿಯಾಗಲಿದೆ

(೧ನೇ ಪುಟದಿಂದ)

ಹೀಗಾಯಿತೆಂದು ಹಳಿಯುವುದಕ್ಕಿಂತಲೂ ಪೇಟೆಯಲ್ಲಿ ಸುಸ್ಥಿತಿಯನ್ನು ಕಾಪಾಡಿಕೊಳ್ಳಲು ಸಾಧ್ಯವಾಗದುದರ ಪರಿಣಾಮ ಇದೆಂದು ತಿಳಿಯುವುದು ಒಳಿತು. ನಿಜ ಹೇಳಬೇಕೆಂದರೆ-ಪ್ರಜಾಪ್ರಭುತ್ವ ರಾಜ್ಯ ಪದ್ಧತಿ ಇರುವಲ್ಲಿ ಪೇಟೆಗಳ ಮೇಲೆ ಯಶಸ್ವಿ ನಿಯಂತ್ರಣವನ್ನು ಪೈಪೋಟಿಯ ಮೂಲಕವೇ ಇಡುವುದು ಸಾಧ್ಯ. ಒಳಸಂಚು ಸುಂತಾದವುಗಳು ನಡೆದು ಸಾರ್ವಜನಿಕ ಹಿತಕ್ಕೆ ಧಕ್ಕೆ ಬಾರದಂತೆ ಸಾಮಾನ್ಯ ಹತೋಟಿಯನ್ನು ಮಾತ್ರ ಸರಕಾರ ಇಟ್ಟುಕೊಳ್ಳಬಹುದು ಬಡಲಿಗೆ ಲಾಭ ತಿನ್ನುವ ಜನರುಇರುವರೆಂದು ಖಾಸಗಿ ಬಂಡವಾಳ ತೊಡಗಿಸುವುದನ್ನೆ ನಿಲ್ಲಿಸಲು ಹವಣಿಸುವುದು ಸರಿಯಾಗದು.

ಲಾಭಬಡಕತನದ ಪ್ರವೃತ್ತಿಗೆ ಮಿತಿಮೀರಿ ಪ್ರಚೋದನೆ ಕೊಡಬಾರದೆಂಬುದಕ್ಕೆ ಯಾರದೂ ಆಕ್ಷೇಪವಿಲ್ಲ. ಅತಿ ಸರ್ವತ್ರ ವರ್ಜಯೇತ್ ಎಂಬಂತೆ, ಯಾವ ಸಂಗತಿಯೇ ಆಗಲಿ, ಹದ ಮೀರಿದರೆ ಅದರಿಂದ ಕೇಡು ತಪ್ಪಿದ್ದಲ್ಲ. ಲಾಭಬಡಕತನವು ಅಂಟಿಕೊಂಡ ಜನರನ್ನು ಆ ದುಷ್ಟ ಲಾಲಸೆಯಿಂದ ಪರಾವೃತ್ತರನ್ನಾಗಿಸುವುದೂ ಸುಲಭವಲ್ಲ. ಹಾಗೆ ತನ್ನ ನಿತ್ಯ ಜೀವನವನ್ನು ಸುಗಮವಾಗಿಸುವುದಕ್ಕೆ ಗಮನ ಕೊಡುವ ಬದಲು ಕಾಣದ ನಾಳಿನ ಸುಖವನ್ನು ನೆನೆದು ಇಂದು ಉಪವಾಸ ಮಾಡುವುದೂ ಸಮವಲ್ಲ. ಮನುಷ್ಯ ಏನೆಲ್ಲ ಮಾಡಿದ್ದಾನೊ ಸುಖದ ಧ್ಯೇಯವೇ ಆ ಸಮಯವೆಲ್ಲ ಅವನ ಮುಂದೆ ಇದ್ದಿತು. ಪರಂಪರಾಗತವಾಗಿ ಶತಕಾನುಶತಕದಿಂದ ನಡೆದುಕೊಂಡು ಬಂದ ಈ ರೂಢಿಯ ಬಂಧನದಿಂದ ಬಿಡಿಸಿಕೊಂಡು ಪಾರಾಗುವ ಜನರು ವಿರಳ. ನಾವಿಂದು ಪಂಚವಾರ್ಷಿಕ ಯೋಜನೆಯಂಥ ಮಹತ್ವದ ಹೊಣೆ ಹೊತ್ತಿರುವುದು ಸುಖದ ಉದ್ದೇಶದಿಂದ ತಾನೆ! ಹಣವಿರುವ ಮಹನೀಯರು ಧಾರಾಳವಾಗಿ ಹಣ ಒದಗಿಸುವಂತಾಗಬೇಕೆಂದು ಯೋಜನೆಯಲ್ಲಿ ಅವಕಾಶ ಮಾಡಿಗೊಟ್ಟಿರುವರು ಲಾಭದಾಸೆಯ ಮೋಹದಿಂದಲಾದರೂ ಈ ಸಂದರ್ಭದ ಸದುಪಯೋಗವಾಗಲೆಂದು ಹಾರೈಸೋಣ.

—ಓಂತತ್ಸತ್॥

For rotection and Provision Consult

The New Guardian of India Life Insurance Co., Ltd.

Estd] Head office: **MADRAS** [1934

NEW BUSINESS Exceeds ... 66½ Lakhs.
PREMIUM INCOME " .. 15 "
LIFE FUND " ... 54¾ "
ASSETS " ... 60¼ "
BUSINESS IN FORCE Nearly 3 Crores.

A Policy in this Progressive Life Office is good investment; its Agency is valuable business connection.

Applications for Representation are invited from energetic influential persons, with good connection. *Please apply to:*

G. R. Wallia *Branch Manager,*
Diamond Building, Hampankatta, MANGALORE, S. K.

ಖಾತ್ರಿ ಚಿನ್ನದ ನೆಕ್‌ಲೇಸ್ ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವೆಲ್ಲಕ್ಕೆ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿ ರುಚಿ ಹೇಳಬೇಕೆ

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

Edited, Printed & Published By K. H. Shetty at the Navayuga Press, Udipi, S. India

ನವಯುಗ
ಆರೋಗ್ಯ ಮಂತ್ರಿ,
ಎ. ಬಿ. ಶೆಟ್ಟರಿಂದ
ಟಿತವಾದ ವಾರಪತ್ರಿಕೆ,
ಉಡುಪಿ, ದ. ಕನ್ನ.

ಚಂದಾ 5-12-0
ತಿಂಗಳಿಗೆ 3-0-0
ಡಿ ಪ್ರತಿಗೆ 0-2-0

Regd. No.
M. 3618

LICENCE No. 31
Licensed to Post without Prepayment

ನವಯುಗ

ಅಂತರಂಗ
ಪುಸ್ತಕ ಪತ್ರಿಕೆಯು
ಉದಯಿಸಲಿರುವ
90 ಪುಸ್ತಕಗಳು
ರೂ. 24 ಕ್ಕೆ ಸಿಗುತ್ತವೆ.
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ.

21-5-1953

Vol 32
No. 37

NAVAYUGA WEEKLY POST BOX NO 22. UDIPI

ವರ್ಷ ೩೨
ವಾರ ೩೭

ಮನುಷ್ಯನನ್ನು ಕಾಡುತ್ತಿರುವ ಅನೇ ನಮೂನೆಯ ಸಮಸ್ಯೆಗಳ ಪರಿಹಾರ ನ್ನು ಯೋಜಿಸುವಾಗ ನಾವು ಒಂದು ಾಮಾನ್ಯ ತತ್ವವನ್ನು ಅನುಸರಿಸಿ. ಅದ ನ್ನು ಎಲ್ಲರ ಮೇಲೂ ಸಮವಾಗಿ ಅನ್ವ ಯಿಸುತ್ತೇವೆ. ಆದರೆ ನಮ್ಮ ಸಮಾಜದ ರುವ ವ್ಯಕ್ತಿಗಳೆಲ್ಲ ಒಂದೇಯಾಗಿರು ವುದಿಲ್ಲ ವಲ್ಲ! ಹೀಗಾಗಿ ನಾವು ಮಾಡಿದ ಾಮಾನ್ಯ ರೀತಿನೀತಿಗಳು ಆಗಿಂದಾಗ್ಗೆ ಭಂಗ ಹೊಂದುತ್ತಲೇ ಬಂದಿವೆ. ಮನುಷ್ಯ ಬ್ಬನಂತೆ ಒಬ್ಬನಿರುವುದಿಲ್ಲ. ಆದುದರಿಂ ಎಲ್ಲರನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಿದ ರೂಢಿನಿಯಮಗಳಿಗೆ ಒಪ್ಪದ ವನಾದರೂ ಇದ್ದೇ ಇರುವರು. ಈ ತಿ ವಿಚಾರಿಸುತ್ತಾ ಹೋದಂತೆ ನಮ್ಮ ಪ್ರತಿಯೊಬ್ಬರೂ ಒಂದು ಅಥವಾ ಹ ವು ವಿಷಯಗಳಲ್ಲಿ ಅಸಾಮಾನ್ಯ. ಪ್ರಕೃ ಯವರಾಗಿರುತ್ತೇವೆಂದು ಕಂಡುಬರುತ್ತ . ನಾವೆಲ್ಲ ಒಂದೇ ಎಂದೊಬ್ಬ ಕವಿ ಾಡಿರುವನಾದರೂ ನಿಜವಾಗಿ ನೀವು ೀರೆ, ನಾವು ಬೇರೆ. ನಿಮಗೂ ನಮಗೂ ಂತು ಮಾತ್ರ ಸಂಬಂಧವಿದೆ. ಜ್ಞಿನ ವಿಷಯಗಳಲ್ಲಿ ಬ್ಬನು ಇನ್ನೊಬನಂತೆ ಇರುವುದೇ ಇಲ್ಲ.

ಉದಾಹರಣೆಗೆ ರುಚಿಯನ್ನು ತೆಗೆದು ೊಳ್ಳೋಣ. ವೈಜ್ಞಾನಿಕರ ಪ್ರೊಂ ಪಿನಿಲ್ ಥಿಯೋಕಾರ್ಬ ಮೈಡ್ ಎಂ ದ್ರವ್ಯದ ರುಚಿಯನ್ನು ಪರೀಕ್ಷಿಸಿದರು. ಲವರಿಗೆ ಈ ದ್ರವ್ಯವು ತೀರ ಕಹಿಯಾಗಿ ಂಡುಬಂತು. ಹೆಚ್ಚಿನವರು ಇದಕ್ಕೆ ರುಚಿ ೇ ಇಲ್ಲವೆಂದು ಪ್ರತಿವಾದಿಸಿದರು. ರುಚಿ ಲ್ಲವೆನ್ನುತಿದ್ದ ಒಬ್ಬನಂತೂ ತನ್ನ ಮಡ ರನ್ನೆಯನ್ನು ಕರೆದು ಅವಳು ಈ ದ್ರ ್ಯದ ರುಚಿ ನೋಡುವಂತೆ ಮಾಡಿ ತನ್ನ ಭಿಪ್ರಾಯ ಪುಷ್ಟೀಕರಿಸಲು ನೋಡಿದ. ದರೆ ದುರ್ದೈವದಿಂದ ಅವಳೆಷ್ಟುಬಾರಿ ್ರವ್ಯದ ರುಚಿ ನೋಡಿದರೂ ಅದು ತೀರ ಹಿಯಾಗಿ ಕಂಡುಬಂತು. ಹೀಗೆ ವಿಜ್ಞಾ ಪತಿಯ ಮುಖಭಂಗವಾಯಿತು. ನಾ ಗೆ ರುಚಿಗೆ ಮಾತ್ರವಲ್ಲ. ನಮ್ಮ ಎಲ್ಲ ಂದ್ರಿಯಗಳ ಸಂಬಂಧದಲ್ಲೂ ಈ ತಾರ ಮ್ಯವಿದೆ. ಕಣ್ಣದೃಷ್ಟಿಯನ್ನು ತೆಗೆದು ೊಳ್ಳಬಹುದು. ಒಬ್ಬೊಬ್ಬನಿಗೆ ಒಂದೊಂ ಬಣ್ಣ ಚೆಲುವಾಗುತ್ತದೆ. ಕೆಂಬಣ್ಣವ ್ನ ನೋಡಿದೊಡನೆಯೇ ಸಾಧಿಗ ಬಡಿ ವೇರುವವರು ಇದ್ದಾರೆ; ಅವರಲ್ಲಿ ನೀಲಿ ಣ್ಣವು ತದ್ವಿರುದ್ಧ ಪರಿಣಾಮವನ್ನುಂ ುಮಾಡುತ್ತದೆ. ಇಂಥ ಉತ್ತೇಜಕಗಳ ಡೆಗೆ ಕೆಲವರು ತೀರಾ ಉದಾಸೀನರಾಗ

ಮಧು ಪರ್ಕ

ವಾಯುಲಿನು ವಾದಕನೊಬ್ಬ ಡಾ। ಜಾನ್ಸನರ ಬಳಿಗೆ ಬಂದು ತನ್ನ ವಾದನವನ್ನು ಕೇಳಬೇಕೆಂದು ದುಂಬಾಲು ಬಿದ್ದ. ನಿರುಪಾಯರಾಗಿ ಜಾನ್ಸನ್ ಅವನು ಬಾರಿಸುವುದನ್ನು ಕೇಳುತ್ತ ಕುಳಿತರು. ಒಂದು ತಾಸಿನ ಬಳಿಕ ವಾದಕನು ವಾಯುಲಿನ್ ನುಡಿಸುವುದನ್ನು ನಿಲ್ಲಿಸಿ "ಸ್ವಾಮಿ, ತಂತಿಯ ಮೇಲೆ ಸ್ವರ ಹೊರಡಿಸುವುದು ಎಷ್ಟು ಕಷ್ಟವೆಂಬುದು ತಮಗೆ ಇಷ್ಟರಲ್ಲೇ ಮನವರಿಕೆಯಾಗಿರಬಹುದು" ಎಂದು ಗರ್ವದಿಂದ ಹೇಳಿದ. ವಾಯುಲಿನ್ ವಾದನದಲ್ಲಿ ಏನೇನೂ ಆಸ್ಥೆ ಇಲ್ಲದ ಜಾನ್ಸನ್ "ಅಯ್ಯೋ, ಈ ತಂತಿಯನ್ನು ನುಡಿಸಲೇ ಬಾರದಿದ್ದರೆ ಎಷ್ಟು ಒಳ್ಳೆಯದಾಗುತಿತ್ತು! ಬೇಕೆಂದೇ ಕಷ್ಟ ಪಡುವ ಅಗತ್ಯವೇ ಇರುತ್ತಿರಲಿಲ್ಲ" ಎಂದರು. ತನ ವಿದ್ಯೆಗೆ ದೊರೆತ ಪ್ರಶಂಸೆ ಕೇಳಿ ವಾಯುಲಿನು ವಾದಕನ ಮೋರೆ ಪೆಚ್ಚಾಯಿತು

ಅಜಗಜಾಂತರ

ಬಹುದು, ಆದರೆ ಇನ್ನು ಕೆಲವರಿಗೆ ಇವು ಗಳ ಪ್ರಭಾವದಿಂದ ಮುಕ್ತವಾಗುವುದೇ ಅಸಾಧ್ಯವೆನಿಸುತ್ತದೆ. ಆದುದರಿಂದಲೇ ಇ ರಬೇಕು– ಸಂಜೆಯ ಮುಗಿಲ ನೋಟಗ ನ್ನು ಕಂಡು ತಲ್ಲೀನನಾಗಿ ಒಬ್ಬನು ಸಂ ತೋಷದಿಂದ ಕವನ ಹಾಡಿದರೆ, ಬೇ ರೊಬ್ಬನು ಆ ಮುಗಿಲನ್ನು ಕ್ಷಣಕಾಲ ವೂ ದಿಟ್ಟಿಸಲಿಕ್ಕಿಲ್ಲ.

ನೋಡಲು ಎಲ್ಲ ಜನರೂ ಒಂದೇ ಯಾಗಿರಬಹುದು; ಎತ್ತರ ತೋರದಲ್ಲಿ ಯೂ ವ್ಯತ್ಯಾಸವಿಲ್ಲದಿರಬಹುದು. ಆದರೆ ಅವರವರ ಪ್ರಕೃತಿಯಲ್ಲಿ ಮಾತ್ರ ಮಹ ತ್ತರವಾದ ವೈವಿಧ್ಯವಿದೆ. ಈ ಭಿನ್ನತೆಯು ಎಷ್ಟರ ಮಟ್ಟಿಗೆ ಪ್ರಭಾವಿಯಾಗಿರುವುದೆಂ ದರೆ, ಶಾರೀರಿಕ ಚಿಕಿತ್ಸೆ ನಡೆಸುವ ವೈದ್ಯ ರನ್ನು ಇವು ಪೇಚಿಗೆ ಸಿಲುಕಿಸುವುದುಂ ಟು. ಉದಾಹರಣೆಗೆ ಮಾರ್ಫಿನ್ ಅನೇಕ ಜನರನ್ನು ನಿದ್ರೆಗೆ ಹಚ್ಚುವುದು. ಆದರೆ ಕೆಲವರಿಗೆ ಮಾರ್ಫಿನ್ ಪ್ರಯೋಗದ ಪರಿ ಣಾಮವಾಗಿ ಏನೋ ಒಂದು ಉತ್ತೇಜನೆ ದೊರೆತಂತಾಗಿ ಮನಸ್ಸಿನಲ್ಲಿ ವಿಚಾರದ ಕುದುರೆಗಳು ನಾಗಾಲೋಟ ಪ್ರಾರಂಭಿ ಸುತ್ತವೆ. ಈ ಓಟದ ತೀವ್ರತೆಯಿಂದಾಗಿ ಆ ವ್ಯಕ್ತಿ ಅಸ್ವಸ್ಥನಾದಾನು. ಕಾಫಿನ್ ಸಂಬಂಧದಲ್ಲೂ ಇದೇ ಪ್ರತಿಕ್ರಿಯೆ ಕಂ ಡು ಬರುತ್ತದೆ. ಹತ್ತಿಪ್ಪತ್ತು ಕಪ್ಪು ಕಾಫಿ ಕುಡಿದ ಮೇಲೂ ಹಾಯಾಗಿ ನಿದ್ದೆಹೋಗುವ ಕುಂಭಕರ್ಣನೊಬ್ಬನಿ ದ್ದರೆ, ಕಾಫಿಯ ಒಂದೇ ಗುಟುಕಿನಿಂದ ದಿನವಿಡೀ ನಿದ್ದೆಗೇಡಿಯಾಗಿ ಬಳಲುವ ಮಹಾರಾಯನೂ ಇದ್ದಾನೆ. ತಂಬಾಕು ... ಇದೇ ಮಾತು ಹೇ ಳಬಹುದು. ಒಂಬರ ಹೊಂದೊಂದೆಂಬಂತೆ ದಿನವಿಡೀ ಬೀಡಿ ಸಿಗರೇಟು ಸೇದುತಿದ್ದ ರೂ ಖುಶಿಯಾಗಿರುವ ಜನರು ಇದ್ದಂತೆ ಒಂದು ದಮ್ಮು ಹೊಗೆ ಸೇವಿಸಲೂ ಸಾಧ್ಯ ವಾಗದ ಬಡಪಾಯಿಗಳು ಅಪೂರ್ವವಲ್ಲ.

ಈ ದೈಹಿಕ ವ್ಯತ್ಯಾಸವನ್ನು ಬಿಟ್ಟು ಬೌದ್ಧಿಕ ಕ್ಷೇತ್ರಕ್ಕೆ ಕಾಲಿಟ್ಟಾಗಲೂ ನಾವು ತಾರತಮ್ಯವನ್ನು ಕಾಣುತ್ತೇವೆ. ಯಾರ ಬುದ್ಧಿಯೂ ಇನ್ನೊಬ್ಬನಂತೆ ಇರು ವುದಿಲ್ಲ. ಯಾರೂ ಒಬ್ಬನನ್ನು ಸಂಪೂರ್ಣ ಹೋಲುವುದಿಲ್ಲ. ಈ ಲೋಕದಲ್ಲಿ ೨೦೦ ಕೋಟಿಗೂ ಮಿಕ್ಕಿ ಜನರಿದ್ದಾರೆ; ಅವರ ಪ್ರಕೃತಿ ಸ್ವಭಾವ, ಮನಸ್ಸು, ಬುದ್ಧಿ, ನಡತೆ ಎಲ್ಲವೂ ಭಿನ್ನ ಭಿನ್ನ ಪ್ರಕಾರವಾಗಿ ರುತ್ತದೆ. ನಾವು ಕೆಲವು ಜನರನ್ನು ಮೇ ಧಾವಿಗಳೆಂದು ತಿಳಿದು ಗೌರವಿಸಬಹು ದು. ಆದರೆ ಅವರು ಎಲ್ಲ ಸಂಗತಿಗಳಲ್ಲೂ ಅಷ್ಟು ಪಾಂಡಿತ್ಯವನ್ನಾಗಲೀ ಕೌಶಲ್ಯವ ನ್ನಾಗಲೀ ಗಳಿಸಿರಲಿಕ್ಕಿಲ್ಲ. ಆಲ್ಬರ್ಟ ಐನ್ ಸ್ಟೀನರನ್ನು ಶ್ರೇಷ್ಠ ಗಣಿತಜ್ಞರೆಂದು ನಾವು ಗಣಿಸಿದ್ದೇವೆ. ಹೀಗೆಂದ ಮಾತ್ರಕ್ಕೆ ಉಳಿದ ರಂಗದಲ್ಲಿಯೂ ಐನ್‌ಸ್ಟೀನರಿಗೆ ಅಷ್ಟು ಪ್ರಭುತ್ವವಿದೆಯೆಂದು ಹೇಳಲು ಬಾರದು. ಅಥವಾ ಮೊದಲಿಂದಲೂ ಐ ನ್‌ಸ್ಟೀನರು ಗಣಿತ ಪಂಡಿತರಾಗಿದ್ದರೆಂ ದು ಹೇಳುವಂತಿಲ್ಲ. ಶಾಲೆಗೆ ಹೋಗುತಿ ದ್ದಾಗ ಐನ್‌ಸ್ಟೀನರು ಅಷ್ಟು ಬುದ್ಧಿವಂ ತರಿರಲಿಲ್ಲ. ಇದರಂತೆ ಕೆಲವರ ಸ್ಮರಣ ಶಕ್ತಿ ತೀಕ್ಷ್ಣವಾಗಿರುತ್ತದೆ; ಕೆಲವರು ಕೈಗಾರಿಕೆಯಲ್ಲಿ ಕುಶಲರಾಗಿರುತ್ತಾರೆ, ಇನ್ನು ಕೆಲವರು ಉತ್ತಮ ವಾಗ್ಮಿಗಳಾ ಗಿ ಕೀರ್ತಿ ಹೊಂದುವರು. ಇವರನ್ನೆಲ್ಲ ಒಂದೇ ಸಾಲಿನಲ್ಲಿ ನಾವು ಕೂಡಿಸಲು ಬರುವುದಿಲ್ಲ. ಅಥವಾ ಒಟ್ಟು ಬುದ್ಧಿವಂತಿ ಕೆಯನ್ನು ಒಂದನೇ ವರ್ಗ, ಎರಡನೇ ವರ್ಗ, ಮೂರನೇ ವರ್ಗವೆಂದು ಸುಲಭ ವಾಗಿ ವಿಂಗಡಿಸಲೂ ಬರುವುದಿಲ್ಲ. ಏಕೆಂ ದರೆ ಮನಸ್ಸಿಗೆ ಸಂಬಂಧಿಸಿದಂತೆ ನೂ ರಾರಕ್ಕೂ ಹೆಚ್ಚು ವಿಧದ ಪ್ರವೃತ್ತಿಗಳು, ವಾಸನೆಗಳು, ವಿಚಾರಗಳು ಇರುತ್ತವೆ. ಇವುಗಳನ್ನು ಸ್ಪಷ್ಟ ರೂಪದಲ್ಲಿ ಪ್ರತ್ಯೇಕೀ ಕರಿಸುವುದು ಸಾಧ್ಯವೆಂದು ತೋರುವು ದಿಲ್ಲ.

ಕೆಲವರನ್ನು ಮಂದ ಬುದ್ಧಿಯವರೆಂ ದು ನಾವು ಹೀಗಳೆಯುವುದುಂಟು ಆದ ರೆ ಈ ಬುದ್ಧಿಮಾಂದ್ಯವು ಒಂದು ವಿಶಿಷ್ಟ ವಿಷಯದಲ್ಲಿ ಮಾತ್ರ ಇರಬಹುದು. ಉಳಿ ದ ಸಂಗತಿಗಳಲ್ಲಿ ಆ ವ್ಯಕ್ತಿಯು ನಿಷ್ಣಾತ ನಾಗಿ ಮೆರೆಯಬಲ್ಲನು. ಶಾಲೆಯಲ್ಲಿ ಪು ಸ್ತಕಾಭ್ಯಾಸದ ದೃಷ್ಟಿಯಿಂದ ದಡ್ಡನಾದ

(ಆರನೇ ಪುಟ ನೋಡಿರಿ)

ದಿ ಜುಪಿಟರ್ ಜನರಲ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬಾಯಿ.

ಆಸ್ತಿ ಬದುಕು ರೂ. 3 ಕೋಟಿ 10 ಲಕ್ಷಕ್ಕೆ ಮಿಕ್ಕಿದೆ

ಮೆಸರ್ಸ್ ಹೆಗ್ಡೆ ಎಂಡ್ ರಾವ್, ಶಿರ್ವ

ಇವರನ್ನು ದಕ್ಷಿಣ ಕನ್ನಡ ಜಿಲ್ಲೆ, ಕೊಡಗು ಮತ್ತು ಮೈಸೂರು ಸ್ಟೇಟಿನ ಹಾಸನ, ಕಡೂರು, ಶಿವಮೊಗ್ಗ ಜಿಲ್ಲೆಗಳ ನಮ್ಮ ಚೀಫ್ ಏಜಂಟರಾಗಿ ನೇಮಿಸಿದ್ದೇವೆ ಎಂದು ತಿಳಿಸಲು ಸಂತೋಷವಾಗುತ್ತದೆ. ಈ ಎಲ್ಲಾ ಜಿಲ್ಲೆಗಳಲ್ಲಿ ಕಂಪೆನಿಯ ಪ್ರಾತಿನಿಧ್ಯ ವಹಿಸಿ ಕೆಲಸ ಮಾಡಲು ಸಮರ್ಥ ಹಾಗೂ ಉತ್ಸಾಹಿ ಜನರಿಂದ ಅರ್ಜಿಗಳನ್ನು ಸ್ವೀಕರಿಸ ಲಾಗುವುದು

ಶ್ರೀ. ಎಸ್. ಎ. ಹೆಗ್ಡೆ
ಚೀಫ್ ಏಜಂಟ್, ಶಿರ್ವ ಪೋಸ್ಟು, ದ. ಕನ್ನಡ.
ಇವರಿಗೆ ದಯಮಾಡಿ ಒಡನೆಯೇ ಬರೆಯಿರಿ.

ಮೆನೇಜರ್.

ಗುಣಾನುರೂಪವಾದ ಶರೀರ

ನಿಮ್ಮ ಆಕೃತಿಯ ಮೇಲಿಂದ ಸ್ವಭಾವ ವಿಶ್ಲೇಷಣೆಯ ಚಮತ್ಕಾರ

ಮನಸ್ಸಿನ ಪ್ರತಿಬಿಂಬವಾಗಿ ದೇಹವಿದೆ ಎಂದು ಒಪ್ಪುವುದಕ್ಕೆ ನಾವೆಲ್ಲರೂ ಸಿದ್ಧರಾಗಲಿಕ್ಕಿಲ್ಲ. ಆದರೆ ನಾವು ಸಿಟ್ಟು ಬೆಂಕಿಯಾದಾಗ ಮುಖ ಕೆಂಪೇರುವುದನ್ನೂ ದುಃಖಪೀಡಿತರಾದಾಗ ಅಶ್ರುಬಿಂದುಗಳು ಉದುರುವುದನ್ನೂ ಲಜ್ಜೆ ಎನಿಸಿದಾಗ ಮುಖತಗ್ಗುವುದನ್ನೂ ಕಂಡರೆ ಮನಸ್ಸಿಗೂ ಶರೀರಕ್ಕೂ ನಿಕಟ ಸಂಬಂಧವಿದೆ ಎಂಬುದು ಸ್ಪಷ್ಟವಾಗುತ್ತದೆ. ಪ್ರಾಚೀನ ಕಾಲದ ನಾಣ್ಣುಡಿಯೊಂದು 'ಯತ್ರಾಕೃತಿಸ್ತತ್ರ ಗುಣಾ ವಸಂತಿ" ಅರ್ಥಾತ್, ಮನುಷ್ಯನ ಆಕೃತಿ ಅವನ ಗುಣಕ್ಕೆ ಅನುರೂಪವಾಗಿದೆ ಎನ್ನುತ್ತದೆ. ಭಾರತದ ಪ್ರಾಚೀನ ಋಷಿಗಳೂ ಆಚಾರ್ಯರೂ ಇದನ್ನು ಮನ್ನಿಸುತ್ತಿದ್ದರು. ಪುರುಷ ಮತ್ತು ನಾರಿಯರ ಆಕೃತಿಯನ್ನು ಹೊಂದಿಕೊಂಡು ಅವರ ಸ್ವಭಾವ ವಿಶ್ಲೇಷಣೆಯನ್ನು ಈ ಋಷಿಮುನಿಗಳು ಮಾಡಿರುವರು. ಸಾಮುದ್ರಿಕ ಶಾಸ್ತ್ರದಲ್ಲಿಯೂ ವಾತ್ಸಾಯನನ ಕಾಮಸೂತ್ರಗಳಲ್ಲಿಯೂ ಸ್ತ್ರೀಪುರುಷರ ಸ್ವಭಾವ ವೈಶಿಷ್ಟ್ಯವನ್ನು ಅವರ ಅಂಗೋಪಾಂಗಗಳ ರಚನೆಯಲ್ಲಿರುವ ವೈವಿಧ್ಯವನ್ನೂ ಭಿನ್ನಪ್ರಕೃತಿಯನ್ನೂ ಆಧರಿಸಿ ವರ್ಣಿಸಲು ಪ್ರಯತ್ನ ನಡೆದಿದೆ.

ಈಚೆಗೆ ಕೊಲಂಬಿಯಾ ವಿಶ್ವವಿದ್ಯಾಲಯದ ಡಾ| ವಿಲಿಯಂ ಶೆಲ್ಡನರು ವೈಜ್ಞಾನಿಕ ರೀತಿಯಿಂದ ಅದಕ್ಕೆ ಯೋಗ್ಯ ಉಪಪತ್ತಿಯನ್ನು ಕೊಡಲು ಯತ್ನಿಸಿ ಆವರ್ಗಗಳಿಂದ ಪ್ರಯತ್ನಿಸಿರುವರು. ಅವರ ಹೇಳಿಕೆಯಂತೆ ಮನುಷ್ಯನನ್ನು ಅವರ ಆಕೃತಿಯ ಸ್ವರೂಪವನ್ನು ಹೊಂದಿಕೊಂಡು ಮೂರು ಬಗೆಯಾಗಿ ವಿಂಗಡಿಸಬಹುದು. ಈ ಮೂರು ಶ್ರೇಣಿಗಳು ಶರೀರದ ನಿರ್ಮಾಣ ಕೋಶಗಳಲ್ಲಿರುವ ಭಿನ್ನತೆಯ ಕಾರಣದಿಂದ ನಿರ್ಧರಿಸಲ್ಪಟ್ಟಿವೆ. ಅವುಗಳು ಈ ತೆರನಾಗಿವೆ. ೧) ಆಹಾರ ಜೀರ್ಣಾಂಗಗಳೊಡನೆ ಸಂಬಂಧವಿರುವ ಒಳಗಿನ ಪದರು ೨) ಮಾಂಸಖಂಡಗಳು ಎಲುಬು ಮತ್ತು ರಕ್ತವಾಹಿನಿನಾಳಗಳೊಡನೆ ಸಂಬಂಧವಿರುವ ನಡುವಿನ ಪದರು. ಮತ್ತು ೩) ಚರ್ಮ ಉಗುರು ಕೂದಲು ಮತ್ತು ಸ್ನಾಯುಗಳೊಡನೆ ಸಂಬಂಧವಿರುವ ಹೊರಗಿನ ಪದರು.

ವೈಜ್ಞಾನಿಕರ ಅಭಿಪ್ರಾಯದಂತೆ ಈ ಎಲ್ಲ ಕೋಶಗಳ ವಿಕಾಸವು ಪ್ರತಿಯೊಬ್ಬ ಮನುಷ್ಯನಲ್ಲಿ ಒಂದೇರೀತಿಯಾಗಿರುವುದಿಲ್ಲ. ಫಲಸ್ವರೂಪದಲ್ಲಿ ಕೆಲವರ ಹೊಟ್ಟೆ ಕರಳು ಮುಂತಾದುವು ದೊಡ್ಡದಾಗಿರುತ್ತವೆ. ಕೆಲವರ ಮಾಂಸಖಂಡಗಳು ಪುಷ್ಟವಾಗಿಯೂ ಎಲುಬು ತೂಕವುಳ್ಳದ್ದೂ, ಹೃದಯ ದೃಢಕಾಯವೂ ರಕ್ತಕೋಶ ವಿಸ್ತೃತವೂ ಆಗಿರುತ್ತದೆ. ಇನ್ನು ಕೆಲವರು ದೀರ್ಘದೇಹಿಗಳಾಗಿದ್ದರೂ ಅವರು ಕ್ಷೀಣಕಾಯರಾಗಿರುತ್ತಾರೆ ಅವರ ದೇಹದಳತೆಗೆ ಹೋಲಿಕೊಂಡು ಮಾಂಸಖಂಡಗಳ ಬೆಳವಣಿಗೆಯಾಗಿರುವುದಿಲ್ಲ. ಕೇವಲ ಸ್ನಾಯುಖಂಡಗಳು ಮಾತ್ರ ಚೆನ್ನಾಗಿ ವಿಕಸಿತವಾಗಿರುತ್ತವೆ. ಈ ಮೂರೂ ವರ್ಗದವರನ್ನು ವೈಜ್ಞಾನಿಕ ರೀತಿಯಿಂದ (೧) ಮೇಧ ಪ್ರಧಾನ, (೨) ಮಾಂಸ ಪ್ರಧಾನ, ಮತ್ತು (೩) ಸ್ನಾಯು ಪ್ರಧಾನ ಜಾತಿಯವರೆಂದು ಕರೆಯೋಣ.

ಡಾ| ಶೆಲ್ಡನ್ ತನ್ನ ಪರೀಕ್ಷಾ ಪ್ರಯೋಗಗಳ ಅನುಸಾರ ಈ ಮೂರು ಶ್ರೇಣಿಯ ಸ್ವಭಾವ ಪ್ರಕೃತಿ ಮತ್ತು ಭಾವನೆಗಳ ವಿಶ್ಲೇಷಣೆ ಗೈದಿರುವರು. ಫಲತಃ ಮೇಧ ಪ್ರಧಾನ ವ್ಯಕ್ತಿಗೆ ಸುಖಾರಾಮದಲ್ಲಿರುವ ಬಯಕೆ ಇರುತ್ತದೆ. ತನಗಿರುವ ಸ್ಥೂಲಕಾಯದ ಪರಿಣಾಮವಾಗಿ ಆನೆಯಂತೆ ನಿಧಾನವಾದ ನಡಿಗೆಯುಳ್ಳವರು. ಕೂತುಕೊಂಡಿರುವುದರಲ್ಲಿ ಅವರಿಗೆ ಹೆಚ್ಚು ಸುಖವೆನಿಸುತ್ತದೆ. ಊಟದ ಸಮಯ ಭೀಮನೊಡನೆ ಸ್ಪರ್ಧಿಸಲೂ ಇವರು ಹಿಂಜರಿಯುವುದಿಲ್ಲ. ಗೆಳೆಯರೊಡನೆ ಕೂಡಿ ಹರಟುತ್ತಿರುವುದೆಂದರೆ ಬಹಳ ಇಷ್ಟ. ತನ್ನ ಮನಸ್ಸಿನ ಭಾವನೆಗಳನ್ನು ಯಾರ ಮುಂದೆ ಪ್ರಕಟಗೊಳಿಸಲಿಕ್ಕೂ ಇವರಿಗೆ ಸಂಕೋಚವೆನಿಸುವುದಿಲ್ಲ. ಪ್ರಯಾಣ ಮತ್ತು ಪಾನದ ಕಡೆಗೆ ಈ ಜನರ ಆಸಕ್ತಿ ಹೆಚ್ಚು. ಅಮಲೇರಿದ ಗಳಿಗೆಯಲ್ಲಿ ಮಾತಾಳಿಯಾಗಿಯೂ ವಾತ್ಸಲ್ಯ ಹೃದಯಿಯಾಗಿಯೂ ಸ್ನಿಗ್ಧ ಬುದ್ಧಿಯವರಾಗಿಯೂ ಈ ಜನ ಕಂಡುಬರುವರು ತನ್ನ ಶೈಶವಾವಸ್ಥೆಯೇ ಜೀವನದ ಸರ್ವೋತ್ತಮ ಕಾಲವೆಂದು ಇವರು ಭಾವಿಸುತ್ತಾರೆ. ತನ್ನ ಕುಟುಂಬ ಮತ್ತು ಪತ್ನಿಪುತ್ರರ ಪ್ರೇಮ ವಾತ್ಸಲ್ಯದಲ್ಲಿ ಅತ್ಯಧಿಕ ಆಸ್ಥೆಯುಳ್ಳವರಾಗಿರುವರು. ಮಾತೃ ಪ್ರೇಮವನ್ನು ಆದರ್ಶವೆಂದು ಇವರು ಗ್ರಹಿಸಿರುವರು. ಪ್ರಣಯ ಸಂಬಂಧ ಮಾತುಕತೆಗಿಂತಲೂ ಕುಟುಂಬದ ಆಗುಹೋಗುಗಳ ಕುರಿತು ಹರಟೆಹೊಡೆಯುವುದಕ್ಕೆ ಇವರು ಇಚ್ಛಿಸುವರು. ಕಾಮವಾಸನೆಯು ಅಲ್ಪ ಪ್ರಮಾಣದಲ್ಲಿರುತ್ತದೆ.

ಮಾಂಸ ಪ್ರಧಾನ ಶ್ರೇಣಿಯ ವ್ಯಕ್ತಿ ಎದೆ ಉಬ್ಬಿಸಿಕೊಂಡು ಕೈಬೀಸಿಕೊಂಡು ನಡೆಯುವುದಕ್ಕೆ ಇಚ್ಛಿಸುವರು. ಕೈಕಾಲುಗಳನ್ನು ಆಡಿಸುತ್ತಿರುವುದು ಅವರದೊಂದು ಸ್ವಭಾವ. ಮಾತುಕತೆಯಾಡುವ ಸಮಯ ಕೈಗಳಿಂದಲೂ ಮುಖದಿಂದಲೂ ವಿವಿಧ ಭಾವಭಂಗಿಗಳನ್ನು ಪ್ರದರ್ಶಿಸುವುದು ಅವರಿಗೆ ಪ್ರಿಯಕರವೆನಿಸುತ್ತದೆ. ತಮ್ಮ ಶಾರೀರಕ ಉತ್ಕರ್ಷ ಸಾಧನೆಯ ಕಡೆಗೆ ಈ ಜನ ಅಧಿಕ ಗಮನ ಕೊಡುವರು. ವ್ಯಾಯಾಮ, ಆಟ, ಓಟ ಮುಂತಾದ ಸ್ಪರ್ಧೆಗಳಲ್ಲಿ ವಿಜಯಿಯಾಗುವ ಹಂಬಲ ಹೆಚ್ಚು. ಪರ್ವತಾರೋಹಣ, ಹಡಗು ವಿಮಾನಗಳನ್ನು ನಡೆಸುವುದು ಮುಂತಾದವುಗಳನ್ನು ಈ ಜನ ಮೆಚ್ಚುವರು. ಬೇರೆಯವರ ಮೇಲೆ ಅಧಿಕಾರ ನಡೆಸುವ ಇಚ್ಛೆಯೂ ಇವರಿಗೆ ಅಧಿಕ. ಬಟ್ಟೆಬಯಲಿನಲ್ಲಿ ತಿರುಗಾಡುತ್ತಿರುವ ಹಂಬಲವಿರುತ್ತದೆ. ಇವರ ತಲೆಯು ಸಂಶಯಾತೀತ ಸ್ವಭಾವವುಳ್ಳದ್ದು. ನಿರ್ಣಯಕ ಬುದ್ಧಿಯು ತೀಕ್ಷ್ಣವಾಗಿರುತ್ತದೆ. ಮದ್ಯಪಾನದಿಂದ ಈ ವ್ಯಕ್ತಿ ಅಧಿಕ ಉತ್ಸಾಹಿಯಾಗಿ ಕಾಣಿಸಿಕೊಳ್ಳುವನು. ಯುದ್ಧೋತ್ಸಾಹವು ಇದರಿಂದ ದ್ವಿಗುಣಿತಗೊಳ್ಳುತ್ತದೆ. ಚಿಂತೆಯ ಗಳಿಗೆಯಲ್ಲಿ ಇಂಥ ವ್ಯಕ್ತಿ ಆತ್ಮ ಕೇಂದ್ರೀಕೃತವಾಗಿ ಸುಮ್ಮನೆ ಕುಳಿತುಕೊಳ್ಳಲಾರ; ಎಲ್ಲಿಯಾದರೂ ತಿರುಗಾಡುತ್ತಿರುವುದು, ಏನಾದರೊಂದು ರಚನಾತ್ಮಕ ಕೆಲಸದಲ್ಲಿ ಕೈಯಿಕ್ಕುವುದು ಮುಂತಾದವುಗಳಿಂದ ದುಃಖದ ಗಳಿಗೆಯನ್ನು ಕಳೆಯಬಿಡುವನು. ಯುವಾವಸ್ಥೆಯೇ ಜೀವನದ ಸರ್ವಾಧಿಕ ಉತ್ಕರ್ಷಪೂರ್ಣ ಅಂಶವಾಗಿರುತ್ತದೆ. ಕಾಮ ಭಾವನೆಯು ಮೇಧ ಪ್ರಧಾನ ವ್ಯಕ್ತಿಗಿಂತ ಹೆಚ್ಚು ವಿಕಾಸಿತವುಳ್ಳದ್ದಾಗಿರುತ್ತದೆ.

ಸ್ನಾಯು ಪ್ರಧಾನ ವ್ಯಕ್ತಿಯು ತನ್ನ ಗತಿವಿಧಿಯನ್ನು ಭಾವಭಂಗಿಯನ್ನು ಅತ್ಯಂತ ನಿಯಂತ್ರಿತ ರೂಪದಲ್ಲಿಡುವನು. ತನ್ನ ಮನೋಗತ ಭಾವನೆಗಳನ್ನು ಎರಡನೆಯವರ ಮುಂದೆ ಸುಸ್ಪಷ್ಟವಾಗಿ ಹೇಳಲು ಆತನು ಬಯಸುವುದಿಲ್ಲ. ಫಲತಃ ಈ ವ್ಯಕ್ತಿಯನ್ನು ತಿಳಿದುಕೊಳ್ಳುವುದು ಜನರಿಗೆ ಕಷ್ಟಸಾಧ್ಯವೆನಿಸುತ್ತದೆ. ಪ್ರತಿಯೊಂದು ಹೆಜ್ಜೆ ಇಡುವಾಗ ಜಾಗರೂಕತೆಯಿಂದಿಡುವುದು ಇವನ ಪದ್ಧತಿ. ಏಕಾಂತ ವಾಸವು ಇವನಿಗೆ ಪ್ರಿಯವಾಗಿರುತ್ತದೆ. ಇವೇ ತಾಪತ್ರಯಗಳ ತಗ್ಗಿನಲ್ಲಿ ಸಿಲುಕಿರುವುದರಿಂದ ಸಾಮಾಜಿಕ ಜೀವನದಲ್ಲಿ ಹೊಂದಿಕೊಳ್ಳುವುದು ಇವನಿಗೆ ಸಾಧ್ಯವಾಗುವುದಿಲ್ಲ. ತನ್ನನ್ನು ಸರ್ವಶ್ರೇಷ್ಠನೆಂದು ತಿಳಿಯುವ ಅಹಂಕಾರ ಇವನಿಗಿದೆ. ಮಿತ್ರರ ನಡುವೆಯೂ ಪರಿವಾರದಲ್ಲಿಯೂ ಹಠಪೂರ್ವಕವಾಗಿಯಾದರೂ ತನ್ನ ಪ್ರಾಧಾನ್ಯವನ್ನು ಸ್ಥಾಪಿಸಲು ನೋಡುತ್ತಾನೆ. ಜೀವನವನ್ನು ಸಂಶಯಾತ್ಮಕ ದೃಷ್ಟಿಯಿಂದ ನೋಡುವುದು ಇವನ ವೈಶಿಷ್ಟ್ಯ. ಇವನು ನಿರೋಗಿಯಾಗಿರುವನಾದರೂ ತನ್ನ ಸ್ವಾಸ್ಥ್ಯದ ಕುರಿತು ಚಿಂತೆ ಹೆಚ್ಚಿರುತ್ತದೆ. ಅತ್ಯಧಿಕ ಚಿಂತನಶೀಲನಾಗಿರುವುದೂ ಪರಿಣಾಮದರ್ಶಿಯಾಗಿರುವುದೂ ಇವನ ಹೆಮ್ಮೆ. ಆದರೆ, ವೈಯಕ್ತಿಕ ಪರಿಧಿಯಲ್ಲಿ ಅತ್ಯಂತ ಸಂಕೀರ್ಣನಾಗಿರುವುದರಿಂದ ರಚನಾತ್ಮಕ ವಿಚಾರವನ್ನು ಮಾಡಲು ಅವನಿಗೆ ಸಾಧ್ಯವಾಗುವುದಿಲ್ಲ. ತನ್ನ ಜೀವನದ ಸರ್ವೋತ್ತಮ ಭಾಗವು ವೃದ್ಧಾಪ್ಯವೆಂಬುದಾಗಿ ಇವನ ಅಭಿಮತ. ಇನ್ನೂ ಸಣ್ಣ ಪ್ರಾಯದಲ್ಲಿರುವಾಗ ವೃದ್ಧಯೋಗ್ಯವಾದ ಆಚರಣೆ ಮೈಗೂಡಿಸಿಕೊಂಡರೆ ಆಶ್ಚರ್ಯವಿಲ್ಲ. ಇವನಲ್ಲಿ ಕಾಮ ಭಾವನೆ ನಿಕೃಷ್ಟವಾಗಿಯೂ ಸರ್ವಾಧಿಕ ವಿಕಸಿತಗೊಂಡಿರುತ್ತದೆ.

ಮೇಲಿನ ವಿಶ್ಲೇಷಣೆಯು ಆಯಾ ಶ್ರೇಣಿಯ ವ್ಯಕ್ತಿಯ ಶಿಖರಾವಸ್ಥೆಯನ್ನು ಆಧರಿಸಿರುತ್ತದೆ. ಆದರೆ ಸಾಮಾನ್ಯವಾಗಿ ಮಧ್ಯಾವಸ್ಥೆಯಲ್ಲಿಯೇ ಹೆಚ್ಚಿನ ಜನರು ಇರುವರೆಂಬುದನ್ನು ಮರೆಯಲಾಗ

LIFE INSURANCE SELLING?

"Canara Mutual" has demonstrated that life insurance selling can be as respectable a profession as any other Canara Mutual agents enjoy respect and regard from the public

We have at our Head Office a newest psychological test that can state within an hour the chances of success in the field of a prospective agent Educated young men who want to carve out a brilliant independent career will please contact

THE MANAGING DIRECTOR,
The CANARA MUTUAL ASSURANCE CO. Ltd.,
Head Office: UDIPI, S. INDIA. ESTD: 1935



ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ ಬುಧ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ. ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ

ಸ್ಪೆಶಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ: ೨—೮—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಶಾಂತಿಸ್ಥಾಪನೆಗೆ ಪ್ರಯತ್ನಿಸುವ ಆಶ್ವಾಸನೆ

ಜಾಗತಿಕ ಸಮಸ್ಯೆಗಳ ಬಗ್ಗೆ ಭಾರತದ ನಿಲುಮೆಯ ಸ್ಪಷ್ಟೀಕರಣ

ಗತಅಧಿವೇಶನದ ವಿಮರ್ಶೆ

ಪಾರ್ಲಿಮೆಂಟಿನ ಬಜೆಟು ಅಧಿವೇಶನ ಇತ್ತೀಚೆಗಷ್ಟೇ ಮುಗಿದು ಅನಿರ್ದಿಷ್ಟ ಅವಧಿವರೆಗೆ ಸಭೆ ಮುಂದುವರಿದಿದೆ. ಹಣದ ವಿಷಯಗಳನ್ನು ಆಲೋಚಿಸುವ ಮುಖ್ಯೋದ್ದೇಶದಿಂದ ರಾಷ್ಟ್ರಾಧ್ಯಕ್ಷರು ಈ ಸಭೆಯನ್ನು ಕರೆದಿದ್ದರು. ಅವರು ಎರಡೂ ಮನೆಗಳ ಸದಸ್ಯರನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ಕಲ್ಯಾಣ ರಾಜ್ಯವನ್ನು ಕಟ್ಟುವುದೇ ಸರಕಾರದ ಮುಂದಿನ ಧ್ಯೇಯವೆಂದು ವಿವರಿಸಿದ್ದರು. ಈ ಭಾಷಣದಿಂದ ಸದಸ್ಯರಿಗೆ ಅಧಿವೇಶನದಲ್ಲಿ ಸ್ಪಷ್ಟ ಉತ್ಸಾಹವು ಮೂಡಿತ್ತು. ಹಣಕಾಸಿನ ಮಂತ್ರಿಗಳು ಮುಂಗಡಪತ್ರವ ಸಮತೂಕದಲ್ಲಿಡಲು ಪ್ರಯತ್ನಿಸಿದುದನ್ನು ಕಂಡು ಪಾರ್ಲಿಮೆಂಟು ಸಂತೃಪ್ತಿ ಸೂಚಿಸಿತು. ಇದರಂತೆ ರೈಲ್ವೆ ಬಜೆಟೂ ತೃಪ್ತಿದಾಯಕವಾಗಿದ್ದಿತು. ಹಣಕಾಸು ವಿನಿಯೋಗ ಮಸೂದೆ, ಚಹಾ ಉದ್ದಿಮೆ ನಿಯಂತ್ರಣ ಮಸೂದೆ ವಿಮಾನ ಸಾರಿಗೆ ರಾಷ್ಟ್ರೀಕರಣ ಮಸೂದೆ ಮುಂತಾದ ಮಹತ್ವದ ೨೦ ಮಸೂದೆಗಳನ್ನು ಪಾರ್ಲಿಮೆಂಟಿನ ಎರಡೂ ಮನೆಗಳು ಪರಿಶೀಲಿಸಿದುವು. ಚಲಚ್ಚಿತ್ರಕ್ಕೆ ಸಂಬಂಧಿಸಿದ ತಿದ್ದುಪಡಿ ಮಸೂದೆಯನ್ನು ಲೋಕಸಭೆ ಪರ್ಯಾಲೋಚನೆಗಾಗಿ ...ವಾಪಸು ಮಾಡಿದ ರಾಜ್ಯ ಪರಿಷತ್ತು ಎರಡು ದಿನಗಳ ಚರ್ಚೆ ಮಾಡಿದುದನ್ನೂ ಸಾಹಿತ್ಯಾಭಿವೃದ್ಧಿಗಾಗಿ ಸರಕಾರ ಪ್ರೋತ್ಸಾಹ ನೀಡಬೇಕೆಂಬ ಮಸೂದೆಯ ಮೇಲಿನ ಚರ್ಚೆಯನ್ನೂ ಗಮನಿಸಿದಲ್ಲಿ ರಾಜಕೀಯ ಚಟುವಟಿಕೆಗಳನ್ನು ಬಿಟ್ಟು ಇತರ ಸಾಮಾಜಿಕ ಹಿತಸಂಬಂಧಗಳ ಮಟ್ಟಿಗೆ ರಾಜ್ಯ ಪರಿಷತ್ತೆ ಯೋಗ್ಯ ರಕ್ಷಣೆ ಕೊಡಬಲ್ಲಂತೆ ತೋರುತ್ತದೆ. ಜಮ್ಮು ಚಳುವಳಿಯ ಸಂಬಂಧದಲ್ಲಿ ಸರಕಾರವು ಕಟುವಾದ ಕ್ರಮಗಳನ್ನು ಇದಿರಿಸಬೇಕಾಯಿತಾದರೂ ...ಸಂಘ, ಹಿಂದೂ ಮಹಾಸಭೆಯಂಥ ...ತೀಯವಾದಿ ಸಂಸ್ಥೆಗಳ ಸದಸ್ಯರಷ್ಟೆ ಸರಕಾರದಲ್ಲಿ ಧುಮುಕಿದ್ದರು. ಸರಕಾರದ ನೀತಿಯನ್ನು ಸದಾ ಟೀಕಿಸುವ ಕಮ್ಯುನಿಸ್ಟ ಸದಸ್ಯರು ಕೂಡ ಜಮ್ಮು ಚಳುವಳಿಯ ಸಂಬಂಧದಲ್ಲಿ ಸರಕಾರಕ್ಕೆ ಬೆಂಬಲ ಕೊಟ್ಟರು. ಪೆಪ್ಸುವಿನಲ್ಲಿ ರಾಷ್ಟ್ರಾಧ್ಯಕ್ಷರ ಆಳಿಕೆಯನ್ನು ತಂದುದರಿಂದ ಹಲವು ಸದಸ್ಯರು ಪ್ರಜಾಪ್ರಭುತ್ವ ಪದ್ಧತಿಯು ಕಗ್ಗೊಲೆಯಾಯಿತೆಂದು ದೂರಿದರೂ ಗೃಹ ಮಂತ್ರಿವರು ಪೆಪ್ಸುವಿನ ವಿಶಿಷ್ಟ ಪರಿಸ್ಥಿತಿಯನ್ನು ವಿವರಿಸಿದುದರಿಂದಲೂ ಬೇಗನೇ ಅಲ್ಲಿ ಚುನಾವಣೆ ನಡೆಸುವ ಆಶ್ವಾಸನೆ ಕೊಟ್ಟುದರಿಂದಲೂ ಸರಕಾರ ಸದಸ್ಯರ ಮನವೊಲಿಸಲು ಸಮರ್ಥವಾಯಿತು. ಅಧಿವೇಶನ ಮುಗಿಯುವಾಗ ವಿಂಧ್ಯ ಪ್ರದೇಶ ಶಾಸನ ಸಭೆಗೆ ಅನರ್ಹರಾದ ಹನ್ನೆರಡು ಸದಸ್ಯರ ಅಪಾತ್ರತೆಯನ್ನು ದೂರೀಕರಿಸುವ ಮಸೂದೆ ಸ್ವೀಕಾರಗೊಂಡಿತು.

ವಿಶ್ವ ಸಮಸ್ಯೆಗಳ ಸ್ವರೂಪ

ಅಧಿವೇಶನವನ್ನು ಪೂರೈಸುವ ಘಟ್ಟದಲ್ಲಿಯು ಕೊನೆಯ ಗಳಿಗೆಯಲ್ಲಿ ಲೋಕಸಭೆಯ ಮುಂದೆ ಚರ್ಚೆಗೆ ಬಂದಿತಾದರೂ ಪೂರ್ಣವಾಗಲಿಲ್ಲ. ಮುಂದಿನ ಅಧಿವೇಶನದಲ್ಲಿ ಮಸೂದೆಯ ಮೇಲೆ ಮರಳಿ ಚರ್ಚೆ ನಡೆಯುತ್ತದೆ. ಸಾಮಾನ್ಯವಾಗಿ ಸದಸ್ಯರು ಮೊದಮೊದಲು ಗೊಂದಲವೆಬ್ಬಿಸುತ್ತಿದ್ದರೂ ಸಭಾಧ್ಯಕ್ಷರ ದಕ್ಷತೆಯ ಪರಿಣಾಮವಾಗಿ ಶಿಸ್ತು ಪಾಲನೆ ಸಾಧ್ಯಗೊಂಡಿತು. ಕೊನೆಯಗಳಿಗೆಯಲ್ಲಿ, ಪ್ರಧಾನ ಮಂತ್ರಿ ನೆಹರೂರ ಗೈರು ಹಾಜರಿಯಲ್ಲಿ, ಪಾರ್ಲಿಮೆಂಟಿನ ಎರಡೂ ಮನೆಗಳ ನಡುವೆ ಕಾಯಿದೆ ಮಂತ್ರಿ ಶ್ರೀ ಬಿಸ್ವಾಸರ ಉದ್ಗಾರದ ಕುರಿತು ಘರ್ಷಣೆ ತಲೆದೋರಿತು. ಆದರೆ ನೆಹರೂರವರು ಜಾಣತನದಿಂದ ವರ್ತಿಸಿ ಎರಡೂ ಮನೆಗಳ ಮುಖವುಳಿಸಿದರು. ಸದಸ್ಯರಲ್ಲಿ ಕಕ್ಷಿ ಬಾಧ್ಯತೆಗಳ ಬಗ್ಗೆ ತೀವ್ರ ಕಳಕಳಿ ಇದ್ದುದು ಕಂಡುಬರುತಿತ್ತು. ಜಗತ್ತಿನಲ್ಲಿ ಮಹತ್ತರವಾದ ಸ್ಥಿತ್ಯಂತರಗಳಾಗುತ್ತಿರುವ ಈ ವಿಶಿಷ್ಟ ಪ್ರಸಂಗದಲ್ಲಿ ಜಾಗತಿಕ ಸಮಸ್ಯೆಗಳ ಕಡೆಗೆ ಸರಕಾರದ ಧೋರಣ ಏನಿರುವುದೆಂಬುದನ್ನು ಅಧಿವೇಶನ ಮುಂದುವರಿಯುವುದಕ್ಕೆ ಮುಂಚೆ ಪಾರ್ಲಿಮೆಂಟು ತಿಳಿದುಕೊಳ್ಳಲು ಬಯಸಿತು. ಪ್ರಧಾನ ಮಂತ್ರಿಯವರು ಈ ಸೂಚನೆಯನ್ನು ಗ್ರಾಹ್ಯಮಾಡಿ ಒಂದು ಹೇಳಿಕೆಯನ್ನು ಕೊಟ್ಟರು. ವಿಶ್ವದ ಸಮಸ್ಯೆಗಳು ಈಗ ದ್ರಾವಕ ಸ್ವರೂಪದಲ್ಲಿರುವುದರಿಂದ ಸೂಕ್ಷ್ಮ ವಿಶ್ಲೇಷಣೆಯನ್ನು ಮಾಡುವುದು ಕಷ್ಟಸಾಧ್ಯವಾದರೂ ಭಾರತದ ಪ್ರತಿಕ್ರಿಯೆಗಳನ್ನು ಲೋಕವು ಈ ಸನ್ನಿವೇಶದಲ್ಲಿ ತಿಳಿದಿರುವುದು ಒಳ್ಳೆಯದೆಂಬುದರಿಂದ ಈ ಹೇಳಿಕೆಗೆ ಮಹತ್ವ ಬಂದಿದೆ. ಶಾಂತಿಗಾಗಿ ಹಪಾಹಪಿಸುವ ಜನರಿಗೆ ಈಗಿನ ಕಾಲವು ಅಭೂತಪೂರ್ವವಾದ ಅವಕಾಶವಾಗಿರುತ್ತದೆ. ಇದನ್ನು ಬಿಗಿಯಾಗಿ ಹಿಡಿದುಕೊಂಡು ಸದುಪಯೋಗಪಡಿಸಿಕೊಳ್ಳಲು ಶಾಂತಿಪ್ರಿಯರು ನೋಡಿದಲ್ಲಿ, ಯುದ್ಧದ ಬೇಗೆಯಿಂದಲೂ ಸಾವು ನೋವುಗಳಿಂದಲೂ ಒಳಲಿ ಬೆಂಡಾದವರ ಎದೆ ತಣ್ಣಗಾದೀತು. ಮಾನವ ಸಹಜವಾದ ಈ ಬಯಕೆಗಿಂತಲೂ ಅಂತರರಾಷ್ಟ್ರೀಯ ಕ್ಷೇತ್ರದ ಇಂದಿನ ಘಟನೆಗಳ ಹಿನ್ನೆಲೆಯಲ್ಲಿ ನೆಹರೂರ ಹೇಳಿಕೆಗೆ ಬೆಂಬಲ ದೊರೆಯುತ್ತದೆ. ನೆಹರೂ ಇದೇ ಮೇ ೨೧ನೇ ತಾರೀಕಿಗೆ ಲಂಡನಿಗೆ ಪ್ರಯಾಣಿಸಿ, ರಾಷ್ಟ್ರಕೂಟದ ಮುಖ್ಯ ಮಂತ್ರಿಗಳ ಪರಿಷತ್ತಿನಲ್ಲಿ ಭಾಗವಹಿಸುವರು. ಇಲ್ಲಿ ಮಹತ್ವದ ಜಾಗತಿಕ ಸಮಸ್ಯೆಗಳ ವಿಮರ್ಶೆಯಾಗುವುದು ನಿಶ್ಚಯ. ಚರ್ಚಿಲರು ಪಂಚ ಮಹಾರಾಷ್ಟ್ರಗಳ ಪ್ರಧಾನಿಗಳು ಒಟ್ಟಿಗೆ ಸೇರಿ ಮಾತುಕತೆ ಮಾಡುವುದರಿಂದ ಶಾಂತಿಯ ಉದ್ದೇಶಕ್ಕೆ ಪ್ರಯೋಜನವಿದೆ ಎಂದಿರುವರು. ಕೊರಿಯದಲ್ಲಿ ಕಮ್ಯೂನಿಸ್ಟರು ಸಂಯುಕ್ತ ರಾಷ್ಟ್ರ ಸಂಘದಲ್ಲಿ ಭಾರತದ ಪತಿಯಿಂದ ಮಂಡಿಸಿ ಸ್ವೀಕರಿಸಲ್ಪಟ್ಟ ಗೊತ್ತುವಳಿಯನ್ನೆ ಹೆಚ್ಚು ಕಡಿಮೆ ಹೋಲುವ ಹೊಸ ಸೂಚನೆಗಳನ್ನು ಕೈದಿಗಳ ವಿನಿಮಯ ಸಂಬಂಧದಲ್ಲಿ ಮುಂದಿಟ್ಟಿರುವರು.

ಸ್ಪಷ್ಟ ಅಭಿಪ್ರಾಯ

ಈ ಎಲ್ಲ ವಿಷಯಗಳಲ್ಲಿ ಭಾರತದ ನಿಲುಮೆಯನ್ನು ಸ್ಪಷ್ಟಗೊಳಿಸುವುದು ಅತ್ಯಾವಶ್ಯಕ. ಕಮ್ಯೂನಿಸ್ಟರ ಹೃದಯ ಪರಿವರ್ತನೆಯಾಗುತ್ತಿದೆ ಎಂಬ ಬಗ್ಗೆ ಬ್ರಿಟನಿನಂತೆ ಭಾರತಕ್ಕೂ ವಿಶ್ವಾಸವಿದೆ. ಒಂದು ರೀತಿಯಿಂದ ನೋಡಿದರೆ ಪಂಚ ಮಹಾರಾಷ್ಟ್ರಗಳ ಮೇಲೆ ಸಮಾನ ವರ್ಚಸ್ಸನ್ನು ಬೀರಬಲ್ಲ ಸಾಮರ್ಥ್ಯವುಳ್ಳ ಏಕಮೇವ ರಾಷ್ಟ್ರವು ನೆಹರೂ ಧುರೀಣತ್ವದಲ್ಲಿರುವ ಭಾರತವೆನ್ನಬಹುದು. ಬನಾರಸದ ಪತ್ರಿಕೆಯೊಂದು ಪಂಚ ಮಹಾರಾಷ್ಟ್ರಗಳ ಪ್ರಧಾನಿಗಳು ಮಾತುಕತೆ ನಡೆಸುವಾಗ ಭಾರತದ ಪ್ರ... ...ೂ ಅಲ್ಲಿ ಹಾಜರಿರಬೇಕೆಂದೂ ಸೂಚಿಸಿದೆ. ಈ ಸೂಚನೆಗೆ ಮನ್ನಣೆ ದೊರೆಯದು ಸಂಶಯಾಸ್ಪದವಾಗಿದ್ದರೂ- ಭಾರತವು ಜಾಗತಿಕ ಕ್ಷೇತ್ರದಲ್ಲಿ ಧರ್ಮಬುದ್ಧಿಯಿಂದ ನಡೆದ ಕೊಳ್ಳುವ ರಾಷ್ಟ್ರವೆಂಬುದಾಗಿ ಪರಿಗಣಿಸಲ್ಪಟ್ಟಿರುವುದಕ್ಕೆ ಇದು ಉತ್ತಮ ನಿದರ್ಶನ. ಕೊರಿಯಾದಲ್ಲಿ ಕಮ್ಯೂನಿಸ್ಟರು ಮಂಡಿಸಿದ ಸೂಚನೆಗಳನ್ನು ರಾಷ್ಟ್ರ ಸಂಘವು ಸಂಪೂರ್ಣ ತಿರಸ್ಕರಿಸಿ ಪ್ರತಿ ಸೂಚನೆಗಳನ್ನು ಮಾಡಿದ್ದು ಸರಿಯಲ್ಲವೆಂದು ನೆಹರೂರ ಅಭಿಪ್ರಾಯ. ರಾಷ್ಟ್ರ ಸಂಘದ ಈಗಿನ ಸೂಚನೆಗಳು ಭಾರತದ ಠರಾವಿನ ಆಶಯಕ್ಕೆ ತೀರ ವ್ಯತಿರಿಕ್ತವಾಗಿರುವುದನ್ನು ನೋಡಿದರೆ ಮುಂದಿಟ್ಟ ಹೆಜ್ಜೆಯನ್ನು ರಾಷ್ಟ್ರ ಸಂಘ ಈಗೇಕೆ ಹಿಂದಿಡುತ್ತಿದೆಯೋ ಎಂಬ ಸಂದೇಹ ತಲೆದೋರುತ್ತದೆ. ಭಾರತದ ಗೊತ್ತುವಳಿಯನ್ನೆ ಬಹ್ವಂಶ ಹೋಲುವ ಕಮ್ಯೂನಿಸ್ಟರ ಸೂಚನೆಯನ್ನು ರಾಷ್ಟ್ರ ಸಂಘ ಸ್ವೀಕರಿಸಲು ತಪ್ಪಲಿಕ್ಕಿಲ್ಲ. ಬಹಳವಾದರೆ ಎರಡು-ಮೂರು ಅಂಶಗಳ ಮಟ್ಟಿಗೆ ಸ್ಪಷ್ಟೀಕರಣವನ್ನು ಕೇಳಿ ಕಮ್ಯೂನಿಸ್ಟರ ಮನವೊಲಿಸಲು ನೋಡಬೇಕೆಂಬ ಆಸೆ ಇದ್ದಿತು. ಈಗ ತತ್ವದ ಅಥವಾ ಧ್ಯೇಯದ ಕುರಿತು ಬಡಿದಾಟವಿಲ್ಲ. ಕೆಲವು ವ್ಯವಹಾರಿಕ ತೊಂದರೆಗಳನ್ನು ಮಾತ್ರ ಇದಿರಿಸಬೇಕಾಗಿರುತ್ತದೆ. ಕಮ್ಯೂನಿಸ್ಟರ ಸೂಚನೆಗಳಲ್ಲಿ ಒಂದೆರಡು ಸಂಗತಿಗಳು ವ್ಯವಹಾರಿಕ ತೊಡಕುಗಳನ್ನು ಉಂಟುಮಾಡುತ್ತಿವೆಯಾದುದರಿಂದ ಇವುಗಳನ್ನು ದೂರೀಕರಿಸಲು ಪ್ರಯತ್ನಿಸುವುದೇ ಯೋಗ್ಯ ಮಾರ್ಗ. ನೆಹರೂರವರು ರಾಷ್ಟ್ರ ಸಂಘದ ನಿಲುಮೆಯ ಬಗ್ಗೆ ಆಕ್ಷೇಪಿಸಿ ಕಮ್ಯೂನಿಸ್ಟ ಸೂಚನೆಗಳನ್ನು ಸ್ವಾಗತಿಸಿರುವುದು ಗಮನಾರ್ಹವಾಗಿರುತ್ತದೆ. ವಿನಿಮಯಕ್ಕೊಪ್ಪದ ಯುದ್ಧ ಕೈದಿಗಳ ಯೋಗಕ್ಷೇಮ ನೋಡಿಕೊಳ್ಳುವ ... ರಾಷ್ಟ್ರಗಳ ಸಮಿತಿಯಲ್ಲಿ ಅಂಪಾಯರನ, ಅರ್ಥಾತ್, ಅಧ್ಯಕ್ಷನ ಸ್ಥಾನವನ್ನು ಭಾರತ ಸ್ವೀಕರಿಸಬೇಕಾಗಿರುವುದರಿಂದ ಈ ರೀತಿ ಧೋರಣೆಯ ಮೇಲೆ ಬೆಳಕು ಬೀರಿದುದು ಸರಿಯಾಗಿದೆ. ನೆಹರೂರವರು ಪಂಚ ಮಹಾರಾಷ್ಟ್ರಗಳ ಧುರೀಣರು ಒಟ್ಟಿಗೆ ಸೇರಿ ವಿಶ್ವ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸಬೇಕೆಂದು ಚರ್ಚಿಲರು ಹೇಳಿದುದನ್ನು ಹೃತ್ಪೂರ್ವಕ ಸ್ವಾಗತಿಸಿರುವರು. ಐಸೆನ ಹೋವರರು ಈ ಪ್ರಯತ್ನವನ್ನು ತ್ಯಾಜ್ಯವೆಂದು ಹೇಳುವುದಿಲ್ಲ. ಹಾಗೆಂದು ಕಮ್ಯೂನಿಸ್ಟರಕೂಡೆ ನೇರಾಗಿ ವಿಚಾರವಿನಿಮಯಕ್ಕೂ ಸಿದ್ಧರಿಲ್ಲ. ಈಗಿನ ಪರಿಸ್ಥಿತಿಯು ಪಕ್ವವಾಗಿಲ್ಲ ಎಂದವರ ಅಭಿಪ್ರಾಯ. ಕಮ್ಯೂನಿಸ್ಟರ ಹೃದಯ ಪರಿವರ್ತನೆಯಾಗುತ್ತಿರುವುದರ ಬಗ್ಗೆ ಅವರಿಗೆ ವಿಶ್ವಾಸವಿಲ್ಲ. ಸಂಶಯಾತ್ಮಕ ದೃಷ್ಟಿಯನ್ನು ಇಟ್ಟು ಹೀಗೆಯೆ ಸಾಗುವುದಕ್ಕಿಂತಲೂ ಚರ್ಚಿಲರ ಸೂಚನೆಯಂತೆ ಒಮ್ಮೆ ನಡೆದು ನೋಡಿದರೆ ಅದರಿಂದ ಹಿತವಲ್ಲವೆ? ನೆಹರೂ ಚರ್ಚಿಲರ ಸೂಚನೆಗೆ ನೈತಿಕ ಬೆಂಬಲ ಕೊಟ್ಟದ್ದು ಯಥಾ ಯೋಗ್ಯವಾಗಿರುತ್ತದೆ.

ZANDU ಝಂಡೂ ಫಾರ್ಮಸಿಯ ಮನೆಮದ್ದುಗಳನ್ನೇ ಸದಾ ಉಪಯೋಗಿಸಿರಿ.

ಝಂಡೂ ಬ್ರಾಹ್ಮೀ ಹೇರ್ ಆಯಿಲ್
Zandu Brahmi Hair Oil — ಮೆದುಳಿಗೆ ತಂಪು- ಮನಸ್ಸಿಗೆ ಉಲ್ಲಾಸವೀಯುವುದು.
1 ಪೌಂಡಿಗೆ ರೂ. 3-8-0 ಕಾಲು ರಾತ್ಲಿಗೆ ರೂ. 1.

ಝಂಡೂ ಸರಸಪರಿಲ್ಲಾ
Zandu Sarasaparilla — ರಕ್ತವನ್ನು ಶುದ್ಧಗೊಳಿಸಲು ಹೆಸರುವಾಸಿಯಾದುದು. ಚರ್ಮರೋಗಗಳನ್ನು ಗುಣಪಡಿಸಬಲ್ಲುದು. 4 ಔನ್ಸ್ ಬಾಟ್ಲಿ 1ರ ರೂ. 1-5-0

ಝಂಡೂ ಬಾಲಾಮೃತ
Zandu Balamrutam — ಅನಾರೋಗ್ಯವುಳ್ಳ ಮಕ್ಕಳಿಗೆ ಆದರ್ಶ ಟಾನಿಕ್ 4 ಔನ್ಸ್ ಬಾಟ್ಲಿ 1ರ ರೂ. 1-0-0

ಝಂಡೂ ಬಾಮ್
Zandu Balm — ತಲೆ ಸಿಡಿತ ಮೊದಲಾದ ಬೇನೆಗಳಿಗೆ 1 ಸೀಸೆಗೆ ರೂ1.

ದಕ್ಷಿಣಕನ್ನಡದಲ್ಲಿ ನಮ್ಮ ಸ್ಟಾಕಿಸ್ಟರು—

ಮಂಗಳೂರು: ಸಾ ಕಂಪೆನಿ, ಹಂಪನಕಟ್ಟೆ.

ಉಡುಪಿ: ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್ ಲಿಮಿಟೆಡ್.

ಕಾರ್ಕಳ: ಪಿ. ವಿ. ಶೆಣೈ ಮತ್ತು ಕಂಪೆನಿ.

ಪುತ್ತೂರು: ಪೈ ಫಾರ್ಮಸಿ.

ತಿರುವಾಂಕೂರು ಮತ್ತು ಕೊಚ್ಚಿ ಏಜಂಟರು:

ಧಿರಾಜ್‌ಲಾಲ್ ಬ್ರದರ್ಸ್, ನ್ಯೂ ರೋಡು, ಮಟ್ಟಂಚೇರಿ, ಕೊಚ್ಚಿ.

ಕಲ್ಯಾಣ ರಾಷ್ಟ್ರದ ಪ್ರಗತಿಯ ಸುಂದರ ಚಿತ್ರ

ಪಾಕಿಸ್ತಾನೀ ಗವರ್ನರ ಜನರಲ್ಲರ ಬುಡವಿಲ್ಲದ ಸಂದೇಹಕ್ಕೆ ಸಮಾಧಾನ

ಪಾಕಿಸ್ತಾನದೊಡನೆ ಸ್ನೇಹ

ನೆಹರೂ ಹೇಳಿಕೆಯು ಇನ್ನೊಂದು ದೃಷ್ಟಿಯಿಂದಲೂ ಮಹತ್ವದ್ದೆನಿಸಿದೆ. ಭಾರತ-ಪಾಕಿಸ್ತಾನಗಳೊಳಗೆ ಉಂಟಾಗಿರುವ ಸಮಸ್ಯೆಗಳನ್ನು ಶಾಂತ ರೀತಿಯಿಂದ ಬಿಡಿಸುವುದಕ್ಕೋಸ್ಕರ ಉಭಯ ರಾಷ್ಟ್ರಗಳ ಪ್ರಧಾನ ಮಂತ್ರಿಗಳ ಭೇಟಿಗಾಗಿ ಸಿದ್ಧತೆಗಳು ನಡೆದಿವೆಯಷ್ಟೆ! ಪಾಕಿಸ್ತಾನದಿಂದ ಬಂದ ವಿದೇಶ ಖಾತೆಯ ಕಾರ್ಯದರ್ಶಿಗಳು ಭಾರತದ ಅಧಿಕಾರಿಗಳೊಡನೆ ಪರ್ಯಾಲೋಚಿಸಿ ಎರಡೂ ಪಕ್ಷಗಳಿಗೆ ಸಮ್ಮತವಾದ ಕಾರ್ಯಕ್ರಮ ಪಟ್ಟಿಯನ್ನು ತಯಾರಿಸಿರುವರೆಂದು ತಿಳಿಯುತ್ತದೆ. ಹೀಗಿರುವಾಗಲೇ ಪಾಕಿಸ್ತಾನದ ಗವರ್ನರ್ ಜನರಲರಾದ ಗುಲಾಮ ಮಹಮ್ಮದರು ಅಬೋಟಾಬಾದಿನಲ್ಲಿ ಒಂದು ಭಾಷಣಮಾಡಿ ಭಾರತವು ಪಾಕಿಸ್ತಾನದ ಸಾರ್ವಭೌಮತ್ವವನ್ನು ಪ್ರಶ್ನಿಸುವಂತಿರದಿದ್ದರೆ ಮಾತ್ರ ಬಿಕ್ಕಟ್ಟನ್ನು ಸಮರ್ಪಕವಾಗಿ ಬಗೆಹರಿಸಬಹುದೆಂದು ಹೇಳಿದರು. ಈ ರೀತಿ ಭಾರತದ ನಡವಳಿಕೆಯ ಬಗ್ಗೆ ಪಾಕಿಸ್ತಾನೀ ಗವರ್ನರ ಜನರಲ್ಲರು ಏಕಾಗಿ ಸಂಶಯ ದೃಷ್ಟಿ ಬೀರಿದರೋ ತಿಳಿಯುವುದಿಲ್ಲ. ಭಾರತವು ಪಾಕಿಸ್ತಾನ ಸರಕಾರದ ಸಾರ್ವಭೌಮಾಧಿಕಾರವನ್ನು ಮನ್ನಿಸದ ಪ್ರಸಂಗ ಯಾವುದೋ ಗೊತ್ತಾಗುವುದಿಲ್ಲ. ಪ್ರಾಯಶಃ ಪಾಕಿಸ್ತಾನಿಗಳ ತಲೆಯಲ್ಲಿ ತಮ್ಮ ರಾಷ್ಟ್ರದ ಸ್ವಾತಂತ್ರ್ಯಕ್ಕೆ ಅನಾವಶ್ಯಕವಾದ ವಿಘ್ನಗಳನ್ನು ಭಾರತ ತಂದೊಡ್ಡುತ್ತದೆ ಎಂಬ ಅಭಿಪ್ರಾಯ ಮೂಡಿಸುವುದು ಮತ್ತು ತನ್ಮೂಲಕ ಸಹಾನುಭೂತಿಯನ್ನು ಗಳಿಸುವುದು ಪಾಕಿಸ್ತಾನದ ಗತ್ತುಗಾರಿಕೆಯಾಗಿರುವುದೋ ಏನೋ! ಅನ್ಯಥಾ ಇಂಥ ಭಯಕ್ಕೆ ಎಡೆ ಇರುವುದಿಲ್ಲ. ಆದರೂ ನೆಹರೂರವರು ಭಾರತದ ವಿದೇಶ ಧೋರಣೆಯ ಕುರಿತು ಮಾತನಾಡುವಾಗ ಈ ಅಂಶವನ್ನು ಸ್ಪಷ್ಟ ಮಾತುಗಳಲ್ಲಿ ವಿಶದೀಕರಿಸಿದ್ದು ಚೆನ್ನಾಯಿತು. ಭಾರತವು ಪಾಕಿಸ್ತಾನದ ಸಾರ್ವಭೌಮಾಧಿಕಾರವನ್ನು ಮನ್ನಿಸುವುದೆಂದೂ ಶಾಂತಿ ಮತ್ತು ಸೌಹಾರ್ದಯುತವಾದ ವಾತಾವರಣವನ್ನು ನಿರ್ಮಿಸುವುದು ಭಾರತಕ್ಕೆ ಬೇಕಾಗಿದೆ ಎಂದೂ ಹೇಳಿದರು. ಇದರಿಂದ ಪಾಕಿಸ್ತಾನೀ ಗವರ್ನರ ಜನರಲ್ಲರ ಮತ್ತು ಅವರ ಸಾಲಿಗೆ ಸೇರಿದ ಇತರರ ಭೀತಿ ಹಾಗು ಸಂಶಯಗಳು ನಿವಾರಣೆಹೊಂದುವುವೆಂದು ಆಶಿಸಬಹುದು. ಪಾಕಿಸ್ತಾನದ ಮೇಲೆ ಪ್ರಭುತ್ವ ಸ್ಥಾಪಿಸಬೇಕೆಂದು ಭಾರತದ ಧುರೀಣರು ಹೇಳುವುದಿಲ್ಲ. ಉಭಯ ರಾಷ್ಟ್ರಗಳನ್ನು ಕಲಹಕ್ಕೆ ಹಚ್ಚಿ ಮೋಜು ನೋಡಬೇಕೆಂಬ ದುರ್ಬುದ್ಧಿಯುಳ್ಳ ಕೆಲವರು ಮಾತ್ರ ಇಲ್ಲಸಲ್ಲದ ಅಪಪ್ರಚಾರ ಮಾಡುತ್ತಿರುವರಲ್ಲದೆ ಹೊಣೆಗಾರ ಸ್ಥಾನದಲ್ಲಿರುವವರು ಪಾಕಿಸ್ತಾನದೊಡನೆ ಸ್ನೇಹ ಸಾಧಿಸಲು ಹಾರೈಸುವರು. ಈ ಸಂಗತಿಯನ್ನು ಪಾಕಿಸ್ತಾನಿಗರೂ ಅಲ್ಲಿಯ ಸರಕಾರವೂ ಸ್ಮರಣೆಯಲ್ಲಿಟ್ಟುಕೊಳ್ಳಬೇಕು. ಪಾಕಿಸ್ತಾನವು ಯಾವಾಗಲೂ ಸಂಶಯ ದೃಷ್ಟಿಯಿಂದ ಸಮಸ್ಯೆಗಳನ್ನು ನೋಡುತ್ತಿದೆ; ಆದುದರಿಂದ ಅದರ ಕುರಿತು ಎಲ್ಲರ ಆಸ್ಥೆ ಕೆರಳುತ್ತದೆ. ಭಾರತ ಬಿಚ್ಚು ಮಾತುಗಳಲ್ಲಿ ತನ್ನ ನಿಲುವೆಯನ್ನು ಸ್ಪಷ್ಟಗೊಳಿಸಿದರೂ ಪೂರ್ವಗ್ರಹ ದೂಷಿತ ಮನೋಭಾವದ ಜನರಿಗೆ ಅದು ಅರಿವಾಗಲೊಲ್ಲದು. ಅಮೇರಿಕದಲ್ಲಿ ಕಾಶ್ಮೀರ ಸಮಸ್ಯೆಯ ಸಂಬಂಧದಲ್ಲಿ ಪಾಕಿಸ್ತಾನದ ನಿಲುವೆಯ ಬಗ್ಗೆ ತಿಳಿವಳಿಕೆ ಹೆಚ್ಚಿದೆ ಎಂದೂ ಭಾರತದ ಧೋರಣವನ್ನು ಮನವರಿಕೆ ಮಾಡಿಕೊಳ್ಳಲು ಹೆಚ್ಚಿನವರಿಗೆ ಆಗಿಲ್ಲವೆಂದೂ ಅಡ್ಲಾಯ್ ಸ್ಟೀವನ್ಸನ್ನರು ಹೇಳಿದುದನ್ನು ಇಲ್ಲಿ ಸ್ಮರಿಸಬಹುದು.

ಮದ್ರಾಸಿಗೆ ಆರ್ಥಿಕ ನೆರವು

ಶಾಂತಿಯ ಉದ್ದೇಶಕ್ಕೋಸ್ಕರ ತನ್ನಿಂದ ಶಕ್ಯವಿದ್ದ ಸೇವೆಯನ್ನು ಸಲ್ಲಿಸಲು ಭಾರತ ಸದಾ ಸಿದ್ಧವಿದೆ ಎಂದು ನೆಹರೂ ಘೋಷಿಸಿದರು. ಇದು ಹೊಸತೇನಲ್ಲವಾದರೂ ನೆಹರೂರ ಬಾಯಿಂದ ಈ ಭರವಸೆ ದೊರೆತದ್ದು ಹೆಚ್ಚು. ಲೋಕದ ಜನರ ಉದ್ವೇಗವಿಳಿದು ಅವರಿಗೆ ಸಾಂತ್ವನ ದೊರೆಯುತ್ತದೆ. ಇದೇ ಮಾತನ್ನು ಮದ್ರಾಸಿನ ಆರ್ಥಿಕ ಸಂಕಟಕ್ಕೂ ಹೋಲಿಸಬಹುದು. ಕ್ಷಾಮ ಗ್ರಸ್ತ ಪ್ರದೇಶಗಳಲ್ಲಿ ಪರಿಹಾರೋಪಾಯಗಳಿಗೋಸ್ಕರ ಮದ್ರಾಸು ಸರಕಾರವು ತುಂಬ ಹಣವನ್ನು ವೆಚ್ಚಮಾಡಿದೆ. ಈ ಕೆಲಸಕ್ಕೆ ಕೇಂದ್ರ ಸರಕಾರ ಅರ್ಧಾಂಶದಷ್ಟು ನೆರವು ನೀಡುವುದೆಂಬ ವಿಶ್ವಾಸ ಎಲ್ಲರಲ್ಲೂ ಇತ್ತು. ಪ್ರಾಯಶಃ ಮದ್ರಾಸು ಸರಕಾರಕ್ಕೂ ಈ ರೀತಿ ಭರವಸೆಯಿದ್ದಿರಬಹುದು. ಆದರೆ ಕೇಂದ್ರ ಸರಕಾರದೊಡನೆ ಪಾರ್ಲಿಮೆಂಟಿನ ಸದಸ್ಯರು ಈ ಪ್ರಶ್ನೆಯನ್ನೆತ್ತಿದಾಗ ಅವರಿಗೆ ಮದ್ರಾಸು ಸರಕಾರದ ಪರಿಸ್ಥಿತಿ ವಿಶಿಷ್ಟವಾದುದಲ್ಲವೆಂಬ ದುಷ್ಟ ಉತ್ತರ ದೊರೆಯಿತು. ಮದ್ರಾಸು ಸರಕಾರವು ವೆಚ್ಚಮಾಡಿದ ಹಣ ಎಷ್ಟೇ ಇರಲಿ. ಕೇಂದ್ರ ಸರಕಾರವು ಅದನ್ನು ತನ್ನ ಹೊಣೆಗಾರಿಕೆ ಎಂದು ತಿಳಿಯಲು ಬರುವುದಿಲ್ಲ. ರಾಜ್ಯ ಸರಕಾರದ ಕರ್ತವ್ಯಕ್ಕೆ ಸೇರಿದ ಕರ್ಚುಗಳೆಷ್ಟೋ ಆ ಮೊತ್ತದಲ್ಲಿ ಅಡಕವಾಗಿವೆ. ಕೇಂದ್ರ ಸರಕಾರವು ಈಗಾಗಲೇ ಸಾಕಷ್ಟು ಧನ ಸಹಾಯವನ್ನು ಕೊಟ್ಟಿರುತ್ತದೆ ಎಂದು ಮುಂತಾಗಿ ಶ್ರೀ ದೇಶಮುಖರು ತಿಳಿಸಿದರು. ಆದರೂ ಮದ್ರಾಸಿನ ಬೇಡಿಕೆಯನ್ನು ಸಹಾನುಭೂತಿಯಿಂದ ವಿಚಾರಿಸಲಾಗುವುದೆಂದೂ ಕೇಂದ್ರ ಸರಕಾರವು ಸಾಧ್ಯವಿದ್ದ ಎಲ್ಲ ರೀತಿಯಲ್ಲಿ ಮದ್ರಾಸಿಗೆ ನೆರವಾಗುವುದೆಂದೂ ಆಶ್ವಾಸನೆ ಕೊಡಲು ಹಿಂಜರಿಯಲಿಲ್ಲ. ಕೇಂದ್ರದ ವಾಣಿಜ್ಯ ಮಂತ್ರಿಗಳಾದ ಶ್ರೀ ಕೃಷ್ಣಮಾಚಾರಿಯವರು ಈಚೆಗೆ ತಮಿಳುನಾಡಿನ ಬರಗಾಲ ಪ್ರದೇಶಗಳಲ್ಲಿ ಸಂಚರಿಸಿ, ಮರಳಿದವರು ಇಲ್ಲಿಯ ಭೀಕರ ಪರಿಸ್ಥಿತಿಯ ವರ್ಣನೆ ಮಾಡಿರುವರು. ಕುಡಿಯುವ ನೀರಿಗೆ ಸಹ ಅನುಕೂಲವಿಲ್ಲೆಂದೂ ಭೂಮಿ ಬಂಜರ ಬಿದ್ದಿದೆ ಎಂದೂ ಅವರು ಹೇಳಿರುವರು. ಇಂಥದರಲ್ಲಿ ಕೇಂದ್ರ ಸರಕಾರ ಉದಾಸೀನವಾಗಿ ನಡೆದುಕೊಂಡರೆ ಕ್ಷೇಮವಾಗದು. ಬರಗಾಲವು ಭಾರತದ ಮಹಾ ಪಿಡುಗಾಗಿರುತ್ತದೆ. ಅದನ್ನು ಹೋಗಲಾಡಿಸಿ ದೇಶವು ಸಸ್ಯಸಮೃದ್ಧವಾಗುವಂತೆಯೂ ಧನಧಾನ್ಯಸಂಪನ್ನವಾಗುವಂತೆಯೂ ಎಲ್ಲ ಕ್ರಮಗಳನ್ನು ಕೈಕೊಳ್ಳುವುದು ಅವಶ್ಯವಿದೆ. ಈಚೆಗೆ ಬರಗಾಲ ಪ್ರದೇಶಗಳನ್ನು ಸಂಚರಿಸಿ ವರದಿ ಮಾಡಿದ ಸಮಿತಿಯ ಸೂಚನೆಗಳನ್ನು ಸರಕಾರವು ಉಪೇಕ್ಷೆಯಿಂದ ನೋಡದೆ ಆದಷ್ಟು ತ್ವರಿತದಲ್ಲಿ ಕಾರ್ಯಾನ್ವಿತಗೊಳಿಸಲು ಪ್ರಯತ್ನಿಸಬೇಕೆಂದು ಆಗ್ರಹಪಡಿಸುವುದೊಳ್ಳೆಯದು. ಇಲ್ಲದಿದ್ದರೆ ಅನರ್ಥವನ್ನು ಹತೋಟಿಯಲ್ಲಿಡುವುದು ಸಾಧ್ಯವಾಗದೆ ಹೋದೀತು.

ಎರಡು ವರ್ಷಗಳ ಪ್ರಗತಿ

ಸರಕಾರವು ದೇಶಾಭ್ಯುದಯಕ್ಕೋಸ್ಕರ ಈಗಾಗಲೇ ಕೆಲವು ಮಹತ್ವದ ಯೋಜನೆಗಳನ್ನು ಕೈಗೊಂಡಿರುವ ಸಂಗತಿ ಎಲ್ಲರಿಗೂ ವೇದ್ಯವಿದೆ. ಪಂಚವಾರ್ಷಿಕ ಯೋಜನೆಯು ಈಗ ತಾನೆ ಮೂರನೆ ವರ್ಷವನ್ನು ಪ್ರವೇಶಿಸಿರುತ್ತದೆ. ಈ ಸಂದರ್ಭದಲ್ಲಿ ಕಳೆದ ಎರಡು ವರ್ಷಗಳ ಅವಧಿಯಲ್ಲಿ ಹೊಂದಿದ ಪ್ರಗತಿಯ ಸ್ಥೂಲ ಪರಿಚಯವನ್ನು ಮಾಡಿಕೊಳ್ಳುವುದರಿಂದ ಜನತೆಗೆ ಸರಕಾರದ ಮೇಲೆ ಹೆಚ್ಚು ಮಮತೆಯುಂಟಾಗಲೂ ಆತ್ಮವಿಶ್ವಾಸ ಹುಟ್ಟಿಕೊಳ್ಳಲೂ ಸಾಧ್ಯ. ಸರಕಾರದ ಕಡೆಯಿಂದ ಮಂತ್ರಿ ಗುಲ್ಜಾರಿಲಾಲನಂದರು ವಿಸ್ತೃತವಾದ ವಿಮರ್ಶಾತ್ಮಕ ವರದಿಯೊಂದನ್ನು ಪಾರ್ಲಿಮೆಂಟಿಗೆ ಸಾದರಪಡಿಸಿರುವರು. ಇದರ ಪ್ರಸ್ತಾಪನೆಯಲ್ಲಿ ಯೋಜನಾ ಆಯೋಗದ ಉಪಾಧ್ಯಕ್ಷರಾದ ಕೃಷ್ಣಮಾಚಾರಿಯವರು ಈ ವರದಿಯಲ್ಲಿ ಪ್ರಗತಿಯ ಕುರಿತು ಸಾಧ್ಯವಿದ್ದ ಎಲ್ಲ ವಿವರಗಳನ್ನು ಸಂಗ್ರಹಿಸಲು ಪ್ರಯತ್ನಿಸಿದ್ದರೂ ಅವು ಪೂರ್ಣವೆಂದೆನು ಹೇಳಲು ಬಾರದೆಂದೂ ಪ್ರಗತಿಯ ಸ್ಥೂಲ ಪರಿಚಯವನ್ನಷ್ಟೆ ಈ ವರದಿ ಮಾಡಿಸಿಕೊಡುವುದೆಂದೂ ಹೇಳಿರುವರು. ಮೇಲಾಗಿ ಕೃಷಿ ಮತ್ತು ವಿವಿಧೋದ್ದೇಶದ ಆಣೆಕಟ್ಟುಗಳು ಮುಂತಾದ ಕ್ಷೇತ್ರಗಳಲ್ಲಿ ನಾವು ಕಳೆದೆರಡು ವರ್ಷಗಳ ಪ್ರಗತಿಯನ್ನು ದಾಮಾಶಯದ ಪ್ರಕಾರ ಅಳೆಯಲು ಸಾಧ್ಯವಿಲ್ಲ. ಆಣೆಕಟ್ಟು ಮುಂತಾದವುಗಳು ಪೂರ್ಣಗೊಂಡ ಮೇಲೆಯೇ ಅವುಗಳಿಂದ ದೊರಕುವ ಪ್ರಯೋಜನವನ್ನು ಅಳೆಯಬಹುದಲ್ಲದೆ, ರಚನಾತ್ಮಕ ಘಟ್ಟದಲ್ಲಿಯೇ ಹಾಗೆ ಮಾಡಲು ಬಾರದು. ಹೀಗಿದ್ದರೂ ಇದುವರೆಗೆ ಸಾಧಿಸಿದ ಪ್ರಗತಿಯು ಗಣನೀಯವಾಗಿರುತ್ತದೆ. ಕೊರಿಯಾ ಯುದ್ಧದ ಕಾರಣದಿಂದಲೂ ವ್ಯಾಪಾರ ಮಾಂದ್ಯದ ಪ್ರಭಾವದಿಂದಲೂ ಯೋಜನೆಯ ಆರ್ಥಿಕ ವ್ಯವಸ್ಥೆ ಚೇತರಿಸಿಕೊಂಡಷ್ಟು ಗಣ್ಯ ಪ್ರಗತಿಯೆನ್ನಬೇಕು. ಇದು ಬಿಟ್ಟರೆ ಕಳೆದೆರಡು ವರ್ಷಗಳಲ್ಲಿ ದೊಡ್ಡ ಯೋಜನೆಗಳಿಂದ [illegible] ಲಕ್ಷ ಜಮೀನಿಗೆ ನೀರು ದೊರೆಯಿತು [illegible] ನೂರು ಲಕ್ಷ ಕಿಲೋವಾಟಿಗೂ ಹೆಚ್ಚು

[೮ನೇ ಪುಟ ನೋಡಿರಿ]

ಏಳು ವರುಷಗಳಲ್ಲಿ ಫಲ

ನಮ್ಮ ಪಿಗ್ಮಿ ಮುಡಿಸುದಾರರಲ್ಲಿ ದಿನವಿಡಿ ಕೆಲಸ ಮಾಡುವ-ಶ್ರಮ ಜೀವಿಗಳು, ಅಂಗಡಿಗಾರರು, ವಕೀಲರು, ಡಾಕ್ಟರರು, ಎಂಜಿನಿಯರರು, ಬೇಸಾಯಗಾರರು, ವರ್ಗದಾರರು ಇತ್ಯಾದಿ ತರಗತಿಯವರಿರುವರು. ಅವರ ಪಿಗ್ಮಿ ಮುದಿಮಗಳು ಚಿಕ್ಕ ಪುಟ್ಟ ಠೇವಣಾತಿಗಳಿಂದ ಪ್ರಾರಂಭವಾದುವು ಅಂದು ಇಲಿಯಂತಿದ್ದುವು ಇಂದು ಹುಲಿಯಂತಾಗಿವೆ. ಅಂತಹ ವಿವೇಕವುಳ್ಳ ದೂರ ದರ್ಶಿ ಸಂಪನ್ನ ಪಿಗ್ಮಿ ಠೇವಣಾತಿದಾರರ ಕೂಟಕ್ಕೆ ನೀವೂ ಕೂಡಾ ಸೇರಿ ಭಾಗ್ಯವಂತರಾಗ ಬೇಕಾಗಿ ಆಹ್ವಾನಿಸುತ್ತೇವೆ.

ಆಧಾರ ವಹಿವಾಟು ರೂ 5,00,000 00ಕ್ಕೂ ಮಿಕ್ಕಿದೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925 ಹೆಡ್ ಆಫೀಸು: ಉಡುಪಿ

THE CANARA INDUSTPIAL & BANKING SYNDICATE LIMITED

Estd: 1925 H. O: UDIPI

PLACE YOUR LIFE ASSURANCE WITH A COMPANY OF YOUR OWN — — —

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policyholders and Representatives At whatever stage We welcome your association with the POPULAR.

The Popular Insurance Co. Ltd.

"Popular Buildings", MANGALORE – I.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸುರಕ್ಷಿತತೆ, ಭದ್ರತೆ ಮತ್ತು ಸೇವಾತತ್ಪರತೆ
ಇವುಗಳಿಗೆ
ತವರುಮನೆಯಂತಿದ್ದು, ನಿಮ್ಮೆಲ್ಲರ ಸ್ನೇಹ, ಸಹಕಾರಗಳನ್ನು
ಅಪೇಕ್ಷಿಸುವ ಬೇಂಕು.

THE CANARA BANKING CORPORATION LTD.
Estd: 1906] [H. O.: UDIPI, (S. India)

ನವಯುಗ

ಉಡುಪಿ, ಗುರುವಾರ ೨೧-೫-'೫೩

ಶ್ರೀಮಂತ ರಾಷ್ಟ್ರಗಳ ಕರ್ತವ್ಯ

ಅಂತರ್ ರಾಷ್ಟ್ರೀಯ ಪತ್ರಿಕಾ ಸಂಸ್ಥೆಯ ದ್ವಿತೀಯ ಅಧಿವೇಶನವು ಲಂಡನಿನಲ್ಲಿ ಮೊನ್ನೆ ಜರಗಿದಾಗ ಶ್ರೀ ಬೆನೆಗಲ್ ನರಸಿಂಗರಾಯರು ಹಿಂದುಳಿದ ರಾಷ್ಟ್ರಗಳ ಅಭಿವೃದ್ಧಿಯ ಸಂಬಂಧದಲ್ಲಿ ಕೆಲವು ಮಾತುಗಳನ್ನು ಆಡಿದರು. ಶ್ರೀ ನರಸಿಂಗರಾಯರು ಈ ಮುಂಚೆ ಸಂಯುಕ್ತರಾಷ್ಟ್ರ ಸಂಘದಲ್ಲಿ ಭಾರತದ ಶಾಶ್ವತ ಪ್ರತಿನಿಧಿಯಾಗಿದ್ದರು; ಮತ್ತು ಸದ್ಯಕ್ಕೆ ಜಾಗತಿಕ ನ್ಯಾಯಾಲಯದ ನ್ಯಾಯಮೂರ್ತಿಗಳಾಗಿ ಕೆಲಸ ಮಾಡುತ್ತಿರುವರು. ಇಂಥ ಉಚ್ಚಾಧಿಕಾರ ಸಂಪನ್ನರು ನೀಡುವ ಸಲಹೆ ಸೂಚನೆಗಳು ಅತ್ಯಂತ ಅಮೂಲ್ಯವಾಗಿರುವುದು ಸ್ವಾಭಾವಿಕ. ಪತ್ರಿಕಾ ಸಂಸ್ಥೆಯ ಪ್ರತಿನಿಧಿ ಮಂಡಳಕ್ಕೆ ನರಸಿಂಗರಾಯರು ಭಾರತದ ಪಂಚವಾರ್ಷಿಕ ಯೋಜನೆಯ ವೈಶಿಷ್ಟ್ಯದಪರಿಚಯವನ್ನು ಮಾಡಿಕೊಟ್ಟರು. ವಿದೇಶಗಳಿಂದ ಪಂಚವಾರ್ಷಿಕ ಯೋಜನೆಗೆ ನೆರವು ದೊರೆಯುತ್ತಿರುವುದಲ್ಲದೆ, ಸ್ವತಃ ಭಾರತೀಯರಲ್ಲೂ ಸ್ವಸಹಾಯದ ಪ್ರವೃತ್ತಿ ಪ್ರವರ್ಧಮಾನಗೊಳ್ಳುತ್ತಿದೆ ಎಂಬುದಾಗಿ ನರಸಿಂಗರಾಯರು ನುಡಿದರು. ಕೊಲೊಂಬೋ ಯೋಜನೆ, ಗೋಧಿಯ ಸಾಲ, ಡಾಲರು ಸಹಾಯ ಮುಂತಾದ ರೀತಿಯಿಂದ ಭಾರತದ ಪಂಚವಾರ್ಷಿಕ ಯೋಜನೆಗೆ ಇತರ ರಾಷ್ಟ್ರಗಳು ಸಹಕಾರ ನೀಡುತ್ತಿರುವುದನ್ನು ನಾವೆಲ್ಲರೂ ಕೃತಜ್ಞತೆಯಿಂದ ಸ್ಮರಿಸಬೇಕು; ಮಾತ್ರವಲ್ಲ ಸ್ವತಃ ಉಳಿತಾಯವನ್ನು ಮಾಡಿ, ಅದನ್ನು ರಾಷ್ಟ್ರೀಯ ಅಭಿವೃದ್ಧಿಗಾಗಿ ವ್ಯಯಿಸುವ ಸಂಕಲ್ಪ ಮಾಡಬೇಕು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನೆಹರೂರ ನಿವಾಸದಲ್ಲಿ ಮೊನ್ನೆ ಸೇರಿದಾಗ ಉಳಿತಾಯ ಪ್ರವೃತ್ತಿಗೆ ಪ್ರಚೋದನೆ ಕೊಡುವ ಅಗತ್ಯವನ್ನು ಚೆನ್ನಾಗಿ ಚರ್ಚಿಸಿತು. ಭಾರತೀಯರು ಪಂಚವಾರ್ಷಿಕ ಯೋಜನೆಯ ಮಹತ್ವವನ್ನು ಮನವರಿಕೆ ಮಾಡಿಕೊಂಡು ಅದನ್ನು ಯಶಸ್ವಿಯಾಗಿಸುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಕೈಗೊಂಡು ಕೃತಾರ್ಥರಾಗಬೇಕಾದುದು ಕರ್ತವ್ಯ. ಯೋಜನೆಯ ಎರಡು ವರ್ಷಗಳ ಅವಧಿಯಲ್ಲಿ ಸಾಧಿಸಿದ ಪ್ರಗತಿಯ ಸುಂದರ ಚಿತ್ರವನ್ನು ಕಾಣುವಾಗ ನಮಗೆ ಹೆಮ್ಮೆ ಎನಿಸುತ್ತದೆ. ಆದರೂ ಈ ಸಂತೋಷದ ನಡುವೆ ವಿಷಾದದ ರೇಖೆಯೊಂದು ಸುಳಿದಿದೆ. ನಮ್ಮ ಯೋಜನೆಗೆ ಇನ್ನೂ ಹೆಚ್ಚು ವಿದೇಶೀ ಸಹಾಯದ ಅಗತ್ಯವಿದೆ. ನಮಗೆ ಈಗ ಲಭ್ಯವಿರುವ ಎಲ್ಲ ಸಾಧನ ಸಂಪತ್ತುಗಳನ್ನು ಉಪಯೋಗಿಸಿಕೊಂಡ ಬಳಿಕವೂ ಆರು ನೂರು ಕೋಟಿ ರೂಪಾಯಿಗಳ ಕೊರತೆ ಎನಿಸಿದೆ. ಅಮೇರಿಕಾದಂಥ ಶ್ರೀಮಂತ ರಾಷ್ಟ್ರಗಳು ಮಾನವ ಸಹಜವಾದ ಸಹಕಾರ ಬುದ್ಧಿಯಿಂದ ಇನ್ನೂ ಹೆಚ್ಚಿನ ಆರ್ಥಿಕ ನೆರವನ್ನು ನೀಡಿದಲ್ಲಿ ನಮ್ಮ ಸಮಸ್ಯೆ ಸುಲಭದಲ್ಲಿ ಬಗೆಹರಿಯಬಲ್ಲುದು. ಈ ಮುಂಚೆ ಭಾರತದಲ್ಲಿ ಅಮೇರಿಕೆಯ ರಾಯಭಾರಿಯಾಗಿದ್ದ ಚೆಸ್ಟರ ಚಾಲ್ಸರು ಭಾರತಕ್ಕೆ ಅಮೇರಿಕವು ಈಗಿನ ನಾಲ್ಕರಷ್ಟು ಹೆಚ್ಚು ಹಣ ಸಹಾಯ ನೀಡುವ ಅಗತ್ಯವನ್ನು ಬಿಂಬಿಸಿರುವರು. ಪ್ರಜಾಪ್ರಭುತ್ವ ಪದ್ಧತಿಯನ್ನು ಅನುಸರಿಸುತ್ತಿರುವ ಭಾರತದ ಪ್ರಗತಿಗೆ ಇದು ತೀರಾ ಅವಶ್ಯಕವೆನಿಸಿದ ನೆರವೆಂದು ಚೆಸ್ಟರ್ ಚಾಲ್ಸರು ಜೋರು ಕೊಟ್ಟಿರುವರು. ಬೆನಗಲ್ ನರಸಿಂಗರಾಯರು ಸಹ ಆರ್ಥಿಕ ದೃಷ್ಟಿಯಿಂದ ಸಮೃದ್ಧವಾದ ರಾಷ್ಟ್ರಗಳು ಯುದ್ಧೋತ್ಸಾಹಕ್ಕೆ ಬಲಿಬಿದ್ದು, ಶಸ್ತ್ರಾಸ್ತ್ರಗಳ ಉತ್ಪಾದನೆಗಾಗಿ ಹಣವನ್ನು ನೀರಿನಂತೆ ವೆಚ್ಚಮಾಡುವುದಕ್ಕಿಂತಲೂ ಹಿಂದುಳಿದ ಮಾನವ ಕೋಟಿಯ ಉದ್ಧಾರಕ್ಕೋಸ್ಕರ ಈ ಹಣವನ್ನು ವಿನಿಯೋಗಿಸಬೇಕೆಂದು ಪ್ರತಿಪಾದಿಸಿದರು. ಶ್ರೀಮಂತ ರಾಷ್ಟ್ರಗಳು ಈ ಬಗೆಯ ಔದಾರ್ಯವನ್ನು ತೋರಿಸಿದಲ್ಲಿ ಮಾನವತೆಯ ಕಲ್ಯಾಣವಾಗುವುದು ನಿಶ್ಚಯ. ನರಸಿಂಗರಾಯರ ಹೇಳಿಕೆಯಂತೆ ನಿಃಶಸ್ತ್ರೀಕರಣವನ್ನು ಯಶಸ್ವಿಗೊಳಿಸಿ, ತನ್ಮೂಲಕ ಉಳಿಸಿದ ಹಣವನ್ನು ಹಿಂದುಳಿದ ರಾಷ್ಟ್ರಗಳ ಕಲ್ಯಾಣ ಯೋಜನೆಗೆ ನೀಡಬೇಕು. ಅಮೇರಿಕಾಧ್ಯಕ್ಷರಾದ ಐಸೆನ ಹೋವರರು ಇಂಥ ಪ್ರಸಂಗ ಒದಗಿದಲ್ಲಿ ಅಮೇರಿಕೆ ತನ್ನಿಂದ ಶಕ್ಯವೆನಿಸಿದ ಸಹಕಾರ ನೀಡುತ್ತದೆಂದು ಹೇಳಿರುವುದನ್ನು ಗಮನಿಸಿದರೆ, ಈ ದಿಸೆಯಲ್ಲಿ ಯಾವುದಾದರೊಂದು ರಾಷ್ಟ್ರವು ಎದೆಗಟ್ಟಿಮಾಡಿಕೊಂಡು ನಿಃಶಸ್ತ್ರೀಕರಣವನ್ನು ಸಾಧಿಸುವ ಸಾಹಸಕ್ಕೆ ಇಳಿಯಬೇಕೆಂದೆನಿಸುತ್ತದೆ. ಈಗ ಜಗತ್ತಿನಲ್ಲಿ ಪರಸ್ಪರ ಅವಿಶ್ವಾಸ ಮತ್ತು ದ್ವೇಷ ಭಾವನೆ ಇರುವುದರಿಂದ ಶ್ರೀಮಂತ ರಾಷ್ಟ್ರಗಳು ಯುದ್ಧ ಸನ್ನಾಹದ ಸ್ಪರ್ಧೆಯಲ್ಲಿಳಿದಿವೆ. ಆದರೆ ಭಾರತದ ಪಂಚವಾರ್ಷಿಕ ಯೋಜನೆಯಂಥ ಯೋಜನೆಯನ್ನು ಎಲ್ಲ ಹಿಂದುಳಿದ ರಾಷ್ಟ್ರಗಳಲ್ಲೂ ಕಾರ್ಯಾನ್ವಿತಗೊಳಿಸುವುದಕ್ಕೆ ಬೇಕಾಗಿರುವ ಹಣವು ವರ್ಷಕ್ಕೆ ಮುನ್ನೂರು ಕೋಟಿ ಡಾಲರುಗಳು ಮಾತ್ರ. ಇದು ಶಸ್ತ್ರೀಕರಣಕ್ಕಾಗಿ ವ್ಯಯ ಮಾಡುವ ಹಣದ ಮೂರು ಪ್ರತಿಶತವಾಗುತ್ತದೆ. ಶಸ್ತ್ರೀಕರಣದ ಸ್ಪರ್ಧೆಯಲ್ಲಿ ಮೂರು ಪ್ರತಿಶತದಷ್ಟು ಕಡಿತವನ್ನುಂಟುಮಾಡಿದರೂ ಸಾಕು. ಹಿಂದುಳಿದ ರಾಷ್ಟ್ರಗಳು ಸಂಪತ್ಸಮೃದ್ಧವಾಗಬಲ್ಲುವು. ಇಂಥ ಧರ್ಮ ಕಾರ್ಯಕ್ಕೆ ಶ್ರೀಮಂತ ರಾಷ್ಟ್ರಗಳು ಮನಸ್ಸು ಮಾಡುವುದು ಅನಿವಾರ್ಯವಾದ ಹೊಣೆಯೆಂದು ತಿಳಿಯಬೇಕು. ವೃತ್ತ ಪತ್ರಿಕೆಗಳು ಈ ಹೊಣೆಯನ್ನು ಮನವರಿಕೆ ಮಾಡಿಸಿ ಕೊಡುವುದಕ್ಕೆ ಪ್ರಯತ್ನಿಸಬೇಕೆಂದು ನರಸಿಂಗರಾಯರು ಬಿನ್ನವಿಸಿದಂತೆ, ನಾವಾವರೂ ವಿವೇಕಶೀಲರೆಲ್ಲ ಈ ವಿಷಯವನ್ನು ಗಂಭೀರವಾಗಿ ಪರ್ಯಾಲೋಚಿಸಿ ರಾಜಕೀಯ ಧುರೀಣರ ಮೇಲೆ ತಕ್ಕ ಒತ್ತಾಯ ಹೇರಬೇಕೆಂದು ಕೇಳಿಕೊಳ್ಳುತ್ತೇವೆ. ರಶಿಯಾ-ಅಮೇರಿಕೆಗಳ ನಡುವಿನ ದ್ವೇಷವು ಇಳಿಯುತ್ತಿರುವ ಶುಭ ಚಿಹ್ನೆಗಳು ಇಂದು ತೋರುತ್ತಿರುವುದರಿಂದ ಇಂಥ ಪ್ರಯತ್ನಕ್ಕೆ ಫಲ ಬರುವ ಭರವಸೆ ಎಂದಿಗಿಂತಲೂ ಇಂದು ಹೆಚ್ಚು ವಾಸ್ತವಿಕವಾಗಿ ತೋರುತ್ತದೆ.

ಉಡುಪಿ

ವರ್ಗಾವರ್ಗಿ—ದಕ್ಷರೂ, ಕಾರ್ಯನಿಷ್ಠರೂ, ಕರ್ತವ್ಯ ಗೌರವವನ್ನು ಕಾಪಾಡಿಕೊಂಡು ಬಂದವರೂ ಆದ ಈ ಡಿವಿಜನಿನ ಜನಪ್ರಿಯ ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀ. ವಿ ಕೆ. ಶೆಟ್ಟರಿಗೆ ಮಂಗಳೂರಿಗೆ ವರ್ಗವಾಗಿದೆ ಅವರ ಸ್ಥಾನಕ್ಕೆ ಶ್ರೀ. ಸುಬ್ರಹ್ಮಣ್ಯಂ ಅಯ್ಯರ್ ಎಂಬವರು ಬಂದಿರುವರು.

ಸೈಕಲ್ ಸವಾರಿ—ಇದೇ ತಾ 15 ರಿಂದ 17ರ ತನಕ 61 ಗಂಟೆ ಕಾಲ ಎಳ್ಳು ಭಂಡಾರಿ ಗದ್ದೆಯಲ್ಲಿ ಬೆಳಗಾವಿಯ ಕರುಣ ಚಾಂದಾ ಸಾಹೇಬ್ ಚಾಂಪಿಯನ್ ಇವರು ಸೈಕಲ್ ಸವಾರಿ ಮಾಡಿದರು. ಇವರನ್ನು ನೋಡಲು ನೂರಾರು ಜನರು ಸೇರುತ್ತಿದ್ದರಲ್ಲದೆ ಅಂತ್ಯದಲ್ಲಿ ಶ್ರೀ ಟಿ ಎ. ಪೈ, ಎಂ. ಎಲ್. ಎ, ರವರು ಇವರನ್ನು ಶ್ಲಾಘಿಸಿ ಮಾಲೆ ಹಾಕಿ ಸೈಕಲಿನಿಂದ ಕೆಳಗೆ ಇಳಿಸಿಕೊಂಡರು.

ವಸಂತ ಸಾಹಿತ್ಯೋತ್ಸವವು—ಇದೇ ತಾ 20ರಿಂದ 21ರವರೆಗೆ ಶ್ರೀ ಕೃಷ್ಣ ಮಠದ ವಸಂತ ಮಹಲಿನಲ್ಲಿ ಜರಗಲಿದೆ.

ಶ್ರೀಗಳಾದ ವಿ. ಕೃ ಗೋಕಾಕ, ಶ್ರೀ ನಂ. ಶ್ರೀಕಂಠಯ್ಯ, ಶಿವರಾಮ ಕಾರಂತ ಮೊದಲಾದ ಪ್ರಸಿದ್ಧ ಸಾಹಿತಿಗಳ ಭಾಷಣಗಳಿವೆ.

ಹವಾಮಾನ—ಸೆಕೆಯು ವಿಪರೀತವಾಗಿದೆ. ಮಳೆ ಬಾರದಿರುವುದರಿಂದ ಅಲ್ಲಲ್ಲಿ ನೀರಿನ ಅಭಾವ ತಲೆದೋರಿದೆ.

ಹೆಬ್ರಿ—ಇದೇ ತಾ. 15ರಲ್ಲು ನಿವೃತ್ತ ಡಿ. ಕಲೆಕ್ಟರ್ ಶ್ರೀ ಕೆ. ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಎಸ್. ಎಲ್. ಗೆಳೆಯರಿಂದ 'ರಾವ್ ಬಹದೂರ್ ಗಂಡ' ಎಂಬ ನಾಟಕವು ಸಮಾಜ ವಿಕಾಸ ಯೋಜನೆಯ ಸಹಾಯಾರ್ಥವಾಗಿ ಯಶಸ್ವಿಯಾಗಿ ಪ್ರದರ್ಶಿಸಲ್ಪಟ್ಟಿತು. ಶ್ರೀಗಳಾದ ಗಣೇಶ ರಾವ್, ಬಿ.ವಿ ನಾಯಕ್, ಎಸ್. ಎಲ್. ಅಧ್ಯಕ್ಷರು ಸಮಾಜ ವಿಕಾಸ ಯೋಜನೆಯ ಉದ್ದೇಶ ಜನರು ನೀಡುವ ಸಹಕಾರದ ಕುರಿತು ಮಾತನಾಡಿದರು. ಶ್ರೀ ಭುಜಂಗ ಬಲ್ಲಾಳರು ಧನ್ಯವಾದಗಳನ್ನರ್ಪಿಸಿದರು.

ಪಿಣಗುಡ್ಡೆ: ಸ್ಥಳೀಯ ಶ್ರೀ ದುರ್ಗಾಪರಮೇಶ್ವರಿ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವ ಸಮಾರಂಭವು ಇದೇ ತಾ. 1 ರಲ್ಲು ಶ್ರೀ ಎಚ್. ವೆಂಕಟ್ರಾಯ ಗಡಿಯಾರ್, ಶಾಲಾ ಡೆಪ್ಯುಟಿ ಇನ್ಸ್‌ಪೆಕ್ಟರ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್ಮಾಸ್ತರ್ ಶ್ರೀ ವೈ. ನಾರಾಯಣ ಹೆಗ್ಡೆಯವರು ವರದಿವಾಚನ ಮಾಡಿದರು. ಶ್ರೀ ವೈ. ತಿಮ್ಮ ಮಡಿವಾಳರು ಶಾಲಾ ಪ್ರಶಸ್ತಿವಾಚನ ಮಾಡಿದರು. ಶಾಲಾ ಮಕ್ಕಳಿಂದ 'ಭಕ್ತಧ್ರುವ' ನಾಟಕ ಮೊದಲಾದ ವಿನೋದಾವಳಿಗಳಾಗಿ ಉತ್ಸವವು ಕೊನೆಗೊಂಡಿತು.

ದಿ ಕೆನರಾ ಮ್ಯೂಚುವಲ್
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಉಡುಪಿ—

ಇವರು ಬೆಂಗಳೂರಿನ ರೆಸಿಡೆನ್ಸಿ ರೋಡಿನಲ್ಲಿ ಭವ್ಯವಾದ ಕಟ್ಟೋಣವೊಂದನ್ನು ಕಟ್ಟಿಸಿದ್ದು,
ಇದೇ ಮೇ 22ನೇ ತಾರೀಕಿಗೆ ಸಾಯಂಕಾಲ ಘಂಟೆ 4ಕ್ಕೆ
ಮೈಸೂರಿನ ಮುಖ್ಯ ಮಂತ್ರಿಗಳಾದ
ಮಾನ್ಯ ಶ್ರೀ ಕೆ. ಹನುಮಂತಯ್ಯ, ಬಿ. ಎ., ಎಲ್.ಎಲ್. ಬಿ., ಇವರು
ಉದ್ಘಾಟನಾ ಕಾರ್ಯವನು ನೆರವೇರಿಸಲಿರುವರು.

ಈ ಶುಭ ಸಂದರ್ಭದಲ್ಲಿ ಕಂಪೆನಿಯು ತನ್ನ ಪಾಲಿಸಿದಾರರೂ, ಹಿತಚಿಂತಕರೂ ತೋರಿಸುತ್ತಾ ಬಂದ ಸಹಕಾರ ಮತ್ತು ಸದಿಚ್ಛೆಗಳನ್ನು ಕೃತಜ್ಞತಾಪೂರ್ವಕ ಸ್ಮರಿಸುವುದಲ್ಲದೆ, ಇನ್ನು ಮುಂದಕ್ಕೆ ಸಹ ಸಕಲರ ಪ್ರೋತ್ಸಾಹ ನಿರಂತರವಾಗಿ ದೊರೆಯುತ್ತಿರಲೆಂದು ಅಪೇಕ್ಷಿಸುತ್ತದೆ.

ಜನಯುಗ 21-5-53

THE VIJAYA BANK LIMITED.

BALANCE SHEET AS AT 31ST DECEMBER, 1952.

CAPITAL & LIABILITIES	Rs	As	Ps	Rs	As	Ps
1 CAPITAL—						
Authorised Capital						
24 000 shares of Rs 50/- each	12 00 000	0	0			
32 000 shares of Rs 25/- each	8 00 000	0	0	20 00 000	0	0
Issued & Subscribed Capital						
24 000 shares of Rs 50/- each	12,00 000	0	0			
12 000 shares of Rs 25/- each	3 00 000	0	0	15 00 000	0	0
Amount Called Up						
On 24 000 shares of Rs 50/ each at Rs 25/ per share	6 00 000	0	0			
On 12,000 shares of Rs 25/ each at Rs 25/ per share	3 00,000	0	0			
	9,00 000	0	0			
Less allotment money due	22 140	0	0			
	8,77,860	0	0			
Add Calls in Advance	24 975	0	0	9 02 835	0	0
2 Reserve Fund and Other Reserves				1 66 100	0	0
3 Deposits and Other Accounts						
Fixed Deposits ..	32 32 270	0	9			
Savings Bank Deposits	5 00 401	14	2			
Current Accounts, Contingency Accounts etc	4 96 945	10	9	42, 9 617	9	8
4 Borrowings from Other Banking Companies Agents etc						
(i) In India	Nil					
(ii) Outside India	Nil			Nil		
5 Bills Payable				13 017	4	5
6 Bills for Collection being Bills Receivable as per contra						
(i) Payable in India	34 000	1	3			
(ii) Payable outside India	21,983	11	0	47 983	12	3
7 Other Liabilities				81 414	2	0
8 Acceptances, Endorsements and Other Obligations per contra				Nil		
9 Profit and Loss						
Profit as per last Balance Sheet	72 605	5	0			
Less Appropriations—						
To Contingency Reserve (Provision for income tax) Rs 10,000 0 0						
Building Fund Rs 500 0 0						
,, Statutory Reserve under Sec 17 Rs 19 000 0 0						
,, Dividend at 5% Rs 29,935 3 4						
Investment Reserve Rs 13 000 0 0	72 435	3	4			
Balance brought forward	170	1	8			
Add Net Profit for the year brought from the Profit and Loss Account	42,495	0	4	42 665	2	0

PROPERTY & ASSETS	Rs	As	Ps	Rs	As	Ps
1 CASH						
In hand and with Reserve Bank and Imperial Bank				7,-8,976	9	1
2 Balances with other Banks						
(i) In India—On Current A/c	89 658	15	3			
On Fixed Deposits	2,12,850	0	0			
(ii) Outside India	Nil			3 02 508	15	3
3 Money at Call and Short Notice				Nil		
4 Investment at Cost				8 10,963	2	0
(i) Securities of the Central & State Governments and other Trustee Securities of the face value of Rs 8,13 400/- of which securities of the face value of Rs 1 20 000 lodged with Bankers for overdraft facilities (Average Market value Rs 7 79,196—7—0 as notified by the Reserve Bank of India)	8 10,963	2	0			
(ii) Shares (iii) Debentures or Bonds (iv) Other Investments (v) Gold	Nil					
5 Advances				32,97 061	9	6
(Other than bad and doubtful debts for which provision has been made to the satisfaction of the Auditor)						
(I) Loans Cash Credits, Overdrafts etc						
(i) In India	30 80,542	12	9			
(ii) Outside India	Nil					
(II) Bills Discounted and Purchased (excluding Treasury Bills of Central and State Governments)						
(i) Payable in India	1,79,383	15	4			
(ii) Payable outside India	37,134	13	5			
Particulars						
(i) Debts considered good in respect of which the Banking Company is fully secured	23,41,110	12	11			
(ii) Debts considered good for which the Banking Company holds no other security than the Debtor s personal security	7,77,088	3	9			
(iii) Debts considered good secured by the personal liabilities of one or more parties in addition to the personal security of the debtors	1,78,862	8	10			
(iv) Debts considered doubtful or bad not provided for	Nil					
(v) Debts due by Directors or Officers of the Banking Company or any of them either severally or jointly with any other persons	2,418	14	6			
(vi) Debts due by Companies or firms in which the Directors of the Banking Company are interested as Directors Partners or Managing Agents or in the case of private companies as members	2 37,327	14	3			
(vii) Maximum total amount of advances including temporary advances made at any time during the year to Directors or Managers or Officers of the Banking Company or any of them either severally or jointly with any other persons	8,343	5	7			
(viii) Maximum total amount of advances including temporary advances granted during the year to the companies or firms in which the Directors of the Banking Company are interested as Directors Partners, Managing Agents or in the case of private companies as members	2 95 490	1	11			
ix Due from Banking Companies	14 000	0	0			

		9. Furniture & Fixtures at Cost	51,826 15 5	
		Add additions during the year ...	7,888 8 7	
			62,715 8 0	
		Less depreciation ...	9,387 14 5	53,327 9 7
		10. Other Assets:		
		Land purchased for Head Office building	14,595 8 0	
		Interest receivable on loans and Investments	21,155 13 5	
		Stock of Printing and Stationery and books	11,986 9 8	
		Sundry advances receivable ...	58,948 0 11	
		Advance payment of Income-tax...	20,982 10 0	
		Income-tax deducted at source ...	4,988 6 0	1,32,657 0 0
		11. Non-Banking Assets acquired in satisfaction of claims:		
		Land and buildings at cost ..		89,881 3 0
Total		54,86,632 14 4	Total	54,86,632 14 4

Office of The Vijaya Bank, Ltd, Mangalore, Dated, 1—3—1953.

(Sd) M. G. GANESHNARAYANA RAI, " K. T. ALVA, " B. B. SHETTY, " K. C. ALVA
(Sd) K. M. HEGDE, " K. B. SHETTY, " A. S. MAHABALA RAI, " M. S. R. SHETTY
(Sd) K. P. B. SHETTY, " S. S. SHETTY, " K. ACHANNA SHETTY — DIRECTORS

(Sd.) B. MAHABALA SHETTY, *Secretary.*
Sd) P. J. SHETTY, *Superintendent*

(Sd) B. M. HEGDE. *Chairman.*

PROFIT & LOSS ACCOUNT FOR THE YEAR ENDED 31st DECEMBER, 1952.

EXPENDITURE	Rs. As. Ps.	INCOME	Rs. As. Ps.
1. Interest paid on deposits, borrowings etc ...	1,21,088 11 11	(Less provision made during the year for bad and doubtful debts and other usual or necessary provisions.)	
2. Salaries & allowances and Provident Fund (Secretary's salary and allowances Rs 2,020-8-0)	81,486 1 3		
3. Directors and Local Committee Members' fees and allowances ...	1,920 14 0	1. Interest and Discount ...	2,77,956 15 7
4. Rent, Taxes, Insurance, Lighting etc ...	37,881 11 9	2. Commission, exchange and brokerage ...	8,513 11 0
5. Law charge ...	308 3 0	3. Rents ...	1,691 8 0
6. Postage, Telegrams and stamps ...	1,858 2 10	4. Net Profits on sale of Investments, gold and silver, land, premises and other assets (not credited to reserves or any particular Fund or Account ...	62 0 0
7. Auditor's Fee and Travelling expenses ...	1,130 0 0		
8. Depreciation on and repairs to Banking Company's property ...	6,433 2 11	5. Net Profit on revaluation of Investments, gold and silver, land, promises and other assets ..	Nil
9. Stationery, Printing, Advertisement etc. ...	5,737 1 3	6. Income from Non-banking assets and profit from sale of or dealing with such assets ..	Nil
10. Loss from sale of or dealing with non-banking assets ...	Nil	7. Other Receipts ...	16,107 13 3
11. Other Expenditure ...	3,993 7 7		
12. Balance of Profit ...	42,495 0 4		
Total	3,04,361 15 10	Total	3,04,361 15 10

Office of The Vijaya Bank, Ltd., Manglore Dated, 1—3—1953

(Sd) M. G. GANESHNARAYANA RAI, " K. T. ALVA, " B. B. SHETTY, " K. C. ALVA
(Sd) K. M. HEGDE, " K. B. SHETTY, " A. S. MAHABALA RAI, " M. S. R. SHETTY
(Sd) K. P. B. SHETTY, " S. S. SHETTY, " K. ACHANNA SHETTY — DIRECTORS

(Sd) B. MAHABALA SHETTY, *Secretary*
(Sd) P. J. SHETTY *Superintendent*

(Sd) B. M. HEGDE, *Chairman*

Auditor's Report to the Share-holders of the Vijaya Bank, Ltd.

I have audited the Head Office and Branches, the Balance Sheet of the Vijaya Bank, Limited, as at 31st December 1952 and also the Profit and Loss Account for the year ended that day in which are incorporated the authenticated returns from the Branches and I have verified cash and securities both at the Head Office and Branch Offices. I report that.—

(1) I have obtained all the information and explanations I have required, (2) In my opinion, the Balance Sheet and Profit & Loss Account are drawn up in conformity with the law (3) Such Balance Sheet exhibits a true and correct view of the state of the Bank's affairs according to the best of my information and explanations given to me and as shown by the books of the Bank (4) In my opinion, the books of accounts have been kept by the Bank as required by Section 130 of the Indian Companies Act 1913. (5) The information and the explanations required have been found to be satisfactory. (6) The transactions of the Bank, which have come to my notice, have been within the powers of the Bank; (7) The returns received from the Branch Offices of the Bank have been found adequate for the audit, and (8) The Profit and Loss account shows a true balance of profit for the period covered by such account.

Mangalore,
Date, 1—3—1953

(Sd) P. M. Hegde,
CHARTERED ACCOUNTANT.

(೪ನೇ ಪುಟದಿಂದ)

ವಿದ್ಯುಚ್ಛಕ್ತಿ ಉತ್ಪನ್ನಗೊಂಡಿತು. ೧೪ ಲಕ್ಷ ಬೇಲು ಸಣಬು, ನಾಲ್ಕು ಲಕ್ಷ ಬೇಲು ಹತ್ತಿ, ಮೂರು ಲಕ್ಷ ಟನ್ನು ಕಬ್ಬು, ೧೧ ಲಕ್ಷ ಟನ್ನು ಆಹಾರ ಧಾನ್ಯಗಳು ಅಧಿಕ ಉತ್ಪಾದಿತವಾದುವು. ಅರುವತ್ತು ಲಕ್ಷ ಎಕ್ರೆ ಭೂಮಿಯು ಅಧಿಕ ಸಾಗುವಳಿಗೆ ಗುರಿಯಾಯಿತು. ಚಿತ್ತರಂಜನ ರೈಲ್ವೆ ಕಾರ್ಖಾನೆಯಲ್ಲಿ ೫೮ ಯಂತ್ರಗಳು ನಿರ್ಮಾಣಗೊಂಡವು. ೬೪೩ ಕೋಚುಗಳು ಸಿದ್ಧವಾದವು. ೮೦೦೦ ವಾಗೀನುಗಳು ತಯಾರಾದವು. ರೈಲ್ವೆಗೇ ಬೇಕಾದ ಸಾಮಗ್ರಿಗಳಲ್ಲಿ ನೂರಕ್ಕೆ ಎಪ್ಪತ್ತಾರಷ್ಟನ್ನು ನಮ್ಮ ದೇಶೀಯ ಕಾರ್ಖಾನೆಯಲ್ಲಿ ತಯಾರಿಸುವುದು ಸಾಧ್ಯವಾಯಿತು. ೭೭೦೦೦ ಟನ್ನೇಜುಗಳಷ್ಟು ಅಧಿಕ ಹಡಗು ಚಲಾವಣೆಯಾಯಿತು. ವಿಶಾಖಪಟ್ಟಣದ ಕಾರ್ಖಾನೆ ಆರು ಹಡಗುಗಳನ್ನು ಕಟ್ಟಿತು. ೧೭ ಮಹಾ ಸೇತುವೆಗಳೂ ೩೬೦ ಮೈಲು ಹದ್ದಾರಿಯೂ, ೧೫೫೦ ಮೈಲುದ್ದ ದಾರಿ ರಿಪೇರಿಯೂ ಆಯಿತು. ಸಿಂಧ್ರಿಯ ಗೊಬ್ಬರ ಕಾರ್ಖಾನೆ, ಭಾರತೀಯ ಟೆಲಿಫೋನು ಕಾರ್ಖಾನೆ, ಆವಡಿ ಲ್ಯ ವೃತ್ತಿಕಾ ಸಂಸ್ಥೆ, ಆಲಿಪುರದ ಹೊಸ ಟಂಕ ಸಾಲೆ, ಅಂಬರನಾಥದ ಸಂರಕ್ಷಣಾ ಸಾಮಗ್ರಿಗಳ ಕಾರ್ಖಾನೆ ಮುಂತಾದವು ಹೊಸತಾಗಿ ಉತ್ಪಾದನೆಯನ್ನು ಆರಂಭಿಸಿದುವು. ಬಟ್ಟೆ, ಸಿಮೆಂಟು, ಕಬ್ಬಿಣ ಮತ್ತು ಉಕ್ಕು, ಕಾಗದ, ಹೊಲಿಗೆ ಯಂತ್ರ, ಸ್ಯೈಕಲು, ಸಣಬಿನ ಸಾಮಗ್ರಿಗಳು ಹೆಚ್ಚು ಉತ್ಪಾದನೆಯನ್ನು ತೋರಿಸಿದುವು. ೫೫ ಜನಪದ ಯೋಜನೆಗಳು ಗ್ರಾಮಾಭ್ಯುದಯ ಕಾರ್ಯದಲ್ಲಿ ಮಹತ್ವದ ಪ್ರಗತಿ ಸಾಧಿಸುತ್ತವೆ. ೧೨೦೦೦೦ ಹಳ್ಳಿಗಳನ್ನು ಮುಟ್ಟುವ ರೀತಿಯಲ್ಲಿ ರಾಷ್ಟ್ರೀಯ ವಿಸ್ತಾರಣಾ ಯೋಜನೆಯನ್ನು ಕೈಗೊಳ್ಳುವ ಪ್ರಯತ್ನ ನಡೆದಿದೆ. ಇದುವರೆಗೆ ೫೫೫ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದ್ದು, ಇದು ಒಟ್ಟು ಮೊತ್ತದ ೩೦% ಮಾತ್ರ ವಾಗಿರುತ್ತದೆ. ಈ ಅವಧಿಯಲ್ಲಿ ರಾಜ್ಯ ಸರಕಾರಗಳಿಗೆ ಸಹಾಯಧನವಾಗಿ ಸುಮಾರು ೭೭ ಕೋಟಿ ರೂಪಾಯಿಗಳನ್ನು ಕೇಂದ್ರ ಕೊಟ್ಟಿರುತ್ತದೆ. ಈ ಪ್ರಗತಿಯ ಚಿತ್ರದಿಂದ ಭಾರತವು ಪುನರುಜ್ಜೀವನ ಕಾರ್ಯದಲ್ಲಿ ಆಸ್ಥೆವಹಿಸಿ ದುಡಿಯುತ್ತಿದೆ ಎಂದು ಎಲ್ಲರಿಗೂ ಮನವರಿಕೆಯಾಗುವುದಾಗಿ ಎಣಿಸುತ್ತೇನೆ.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ಉಡುಪಿ

ಎಂ. ಜಿ. ಎಂ ಕಾಲೇಜಿಗೆ ವಿದ್ಯಾರ್ಥಿನಿಯರ ಪ್ರವೇಶ—ಈಗ ಕೆಲವು ದಿನಗಳ ಹಿಂದೆ ಪ್ರಕಟವಾದ ಪಂವ್ರಾಸು ಹೈಕೋರ್ಟಿನ ತೀರ್ಪನ್ನು ನೋಡಿ ಹಲವು ಮಹನೀಯರು ಕಾಲೇಜಿಗೆ ಈ ವರ್ಷ ಹುಡುಗಿಯರನ್ನು ಸೇರಿಸಿಕೊಳ್ಳುವರೋ ಇಲ್ಲವೋ ಎಂಬ ಬಗ್ಗೆ ಸಂದೇಹ ಪಟ್ಟಿರುವುದನ್ನು ಪತ್ರ ಮುಖೇನ ನಮಗೆ ತಿಳಿಸಿರುತ್ತಾರೆ ಈ ಸಂದೇಹಕ್ಕೆ ಆಸ್ಪದವಿಲ್ಲ 1951 ನೆಯ ಇಸವಿ ಜುಲಾಯಿಯಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯದ ಸಿಂಡಿಕೇಟಿನವರು ಹುಡುಗಿಯರಿಗೆ ಪ್ರತ್ಯೇಕ ಕಾಲೇಜುಗಳು ಇಲ್ಲದ ಸ್ಥಳಗಳಲ್ಲಿ ಗಂಡು ಮಕ್ಕಳ ಕಾಲೇಜಿಗೆ ನಿಯಮಿತ ಸಂಖ್ಯೆಯಲ್ಲಿ ವಿದ್ಯಾರ್ಥಿನಿಯರನ್ನು ಸೇರಿಸಿಕೊಳ್ಳಬಹುದೆಂಬ ಅಪ್ಪಣೆ ಕೊಟ್ಟಿರುವುದರಿಂದ ಕಾಲೇಜಿಗೆ ಕಳೆದ ವರ್ಷದಂತೆ ಈ ವರ್ಷ ಮತ್ತು ಮುಂದಿನ ವರ್ಷಗಳಲ್ಲಿಯೂ ವಿದ್ಯಾರ್ಥಿನಿಯರಿಗೆ ಪ್ರವೇಶ ಇರುವದೆಂಬುದನ್ನು ಪ್ರಿನ್ಸಿಪಾಲ್ ಸುಂದರ ರಾಯರು ಮಹಾಜನರ ಅವಗಾಹನೆಗೆ ತರಲು ಅಪೇಕ್ಷಿಸುತ್ತಾರೆ.

ಅಶೋಕ ಮೆಹತರ ಆಗಮನ—ಪ್ರಜಾಸೋಶಿಯಲಿಸ್ಟ್ ಪಾರ್ಟಿಯ ಪ್ರಧಾನ ಕಾರ್ಯದರ್ಶಿ ಶ್ರೀ ಅಶೋಕ ಮೆಹತಾರವರು ಇದೇ ತಾ. 17ರಲ್ಲು ಬೆಳಗ್ಗೆ ಉಡುಪಿಗೆ ಆಗಮಿಸಿದರು. ರಥಬೀದಿಯಲ್ಲಿ ಶ್ರೀ ಕೆ. ರಮಾನಾಥ್ ಪೈಗಳವರ ಅಧ್ಯಕ್ಷತೆಯಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಮಾನ್ಯ ಅತಿಥಿಗೆ ಶ್ರೀ ಯು. ಎಸ್. ನಾಯ್ಕರು ಪುಷ್ಪಹಾರವನ್ನಿತ್ತು ಸ್ವಾಗತವಿತ್ತರು. ಶ್ರೀ ಮೆಹತಾರವರು ಧಾರ್ಮಿಕ ಕ್ಷೇತ್ರವಾದ ಉಡುಪಿಯನ್ನು ಸಂದರ್ಶಿಸಿ ಇಲ್ಲಿಯ ಜನತೆಯನ್ನು ನೋಡಲು ತಮಗೆ ಸುಸಂಧಿ ದೊರೆತುದಕ್ಕಾಗಿ ಪ್ರಥಮತ ತಮ್ಮ ಆನಂದವನ್ನು ವ್ಯಕ್ತಪಡಿಸಿದರು. ಬಳಿಕ ಕಾಂಗ್ರೆಸಿಗೂ ಪ್ರಜಾಸೋಶಲಿಸ್ಟ್ ಪಾರ್ಟಿಗೂ ಇರುವ ಭೇದಭಾವಗಳನ್ನು ವಿವರಿಸಿದರು. ತಮ್ಮ ಪಕ್ಷದ ಕಾರ್ಯಕ್ರಮವು ಒಳ್ಳೆಯದೆಂದು ತೋರಿದರೆ ಸರ್ವರೂ ಬೆಂಬಲ ವೀಯಬೇಕೆಂದರು. ಮೈಸೂರಿನ ಮಾಜಿ ಮಂತ್ರಿ ಶ್ರೀ ಎಸ್. ಇಮಾಮ್, ಅವರು ಕೂಡ ಶ್ರೀ ಮೆಹತಾರವರ ಅಭಿಪ್ರಾಯವನ್ನು ಪುಷ್ಟೀಕರಿಸಿ ಮಾತನಾಡಿದರು. ಶ್ರೀ ಹೊಸಮನಿ ಸಿದ್ಧಪ್ಪನವರು ಕರ್ನಾಟಕ ಏಕೀಕರಣದ ಆವಶ್ಯಕತೆಯ ಕುರಿತು ಮಾತನಾಡಿದರು. ಶ್ರೀ ಆರ್. ಮಾರ್ಟಿಸ್ ಅವರು ಧನ್ಯವಾದಗಳನ್ನರ್ಪಿಸಿದ ನಂತರ ಸಭೆಯು ಕೊನೆಗೊಂಡಿತು. ನಂತರ ಶ್ರೀ ಮೆಹತಾರವರು ಮಲ್ಪೆಗೆ ಹೋಗಿ ಅಲ್ಲಿಯೂ ತಮ್ಮ ಪಕ್ಷದ ಧ್ಯೇಯ ಧೋರಣೆಗಳನ್ನು ವಿವರಿಸಿದರು. ಮಧ್ಯಾಹ್ನ ಭೋಜನ ತೀರಿಸಿ ಉದ್ಯಾವರ, ಕಟಪಾಡಿ, ಕಾಪು ಪಡುಬಿದ್ರೆ ಕೇಂದ್ರಗಳಲ್ಲೂ ಆದಗಿದ ಸಾರ್ವಜನಿಕ ಸಭೆಗಳಲ್ಲಿ ಭಾಷಣವಿತ್ತು ಪ್ರಜಾ ಸೋಶಲಿಸ್ಟ್ ಪಕ್ಷದ ಕುರಿತು ಜನ ಜಾಗೃತಿಯನ್ನುಂಟು ಮಾಡಿದರು.

ಶ್ರೀ ಕಾಯಿದೆ ಮಂತ್ರಿ ಕುಟ್ಟಿಕೃಷ್ಣನ್ ನಾಯರರು— ಇದೇ ತಾ. 18 ರಂದು ಪೂರ್ವಾಹ್ನ ಉಡುಪಿಗೆ ಆಗಮಿಸಿ ಮಲ್ಪೆಗೆ ಹೋಗಿ ಅಲ್ಲಿಯ ಸೌಂದರ್ಯವನ್ನು ನೋಡಿ ಕೊಡವೂರಿಗೆ ಬಂದು ಅಲ್ಲಿಯ ಜನತೆಯ ಭಿನ್ನವತ್ತಳೆಯನ್ನು ಸ್ವೀಕರಿಸಿದರು ಕಾಲೋಚಿತ ಮಾತುಗಳನ್ನಾಡಿ ಉಡುಪಿಗೆ ಮರಳಿ ಬಂದು ಬಂಗ್ಲೆಯಲ್ಲಿ ವಿಶ್ರಮಿಸಿದರು ಅಪರಾಹ್ನ ಸ್ಥಳೀಯ ಸಬ್ ಜೈಲನ್ನು ಸಂದರ್ಶಿ, ಬಾರ್ ಎಸೋಸಿಯೇಶನಿಗೆ ಭೇಟಿಕೊಟ್ಟು, ಅಲ್ಲಿ ಶ್ರೀ ಕೆ. ಜಿ ಬಲ್ಲಾಳರು ಒಪ್ಪಿಸಿದ ಮಾನಪತ್ರವನ್ನು ಸ್ವೀಕರಿಸಿದರು. ಅದರಲ್ಲಿ ಸಬ್‌ಕೋರ್ಟಿನ ಆವಶ್ಯಕತೆ ಇತ್ಯಾದಿ ಸೂಚಿಸಲ್ಪಟ್ಟಿತು. ನಂತರ ಅವರು ಎಂ. ಜಿ. ಯಂ. ಕಾಲೇಜು, ಮಣಿಪಾಲದ ಇಂಡಸ್ಟ್ರಿಯಲ್ ಕೊಲನಿಯನ್ನು ಸಂದರ್ಶಿಸಿ ಉಡುಪಿಗೆ ಬಂದರು. ಶ್ರೀ ನಾಯರರು ನಗರ ಸಭೆಗೆ ಬಂದಾಗ ವೈಸ್ ಚೇರ್‌ಮೆನ್ ಡಾ| ಪ್ರಾಸರಾವ್ ರವರ ಮಾನ ಪತ್ರವನ್ನು ಒಪ್ಪಿಸಿದರು. ಮಂತ್ರಿಗಳು ಉತ್ತರ ಕೊಡುತ್ತಾ ತಾವು ಕೂಡಾ ಮುನಿಸಿಪಾಲಿಟಿಯ ಚೇರ್‌ಮೆನ್ ಆಗಿದ್ದು ಮುನಿಸಿಪಾಲಿಟಿಯ ಸ್ಥಿತಿಗತಿಗಳ ಅನುಭವವುಳ್ಳವನಾಗಿದ್ದೇನೆ ಚೆಯರ್ ಮೆನ್‌ಮೆಂಬರರು ಮತ್ತು ಸಿಬ್ಬಂದಿಯು ಜನತೆಯ ಸಹಕಾರದಿಂದ ಕೆಲಸ ಮಾಡಿದರೆ ನಗರಾಡಳಿತವು ಚಲೋದಾಗುವುದೆಂದೂ ಮುನಿಸಿಪಾಲಿಟಿಯಲ್ಲಿ ರಾಜಕೀಯ ಪಕ್ಷಗಳಿರುವುದು ಸರಿಯಲ್ಲವೆಂದೂ ಎಲ್ಲರೂ ಏಕಮತದಿಂದ ನಗರದ ಹಿತಕ್ಕಾಗಿ ದುಡಿಯ ಬೇಕೆಂದು ಕೊನೆಯದಾಗಿ ಉಪದೇಶವಿತ್ತರು ಕಮಿಶನರ್ ಶ್ರೀ ಗೋಪಾಲ ಮೆನೋನರು ಧನ್ಯವಾದಗಳನ್ನು ಅರ್ಪಿಸಿದರು ಬಳಿಕ ಮಂತ್ರಿಗಳು ಕೇರಳ ಸಮಾಜ, ಶ್ರೀ ಕೃಷ್ಣ ಮಠಕ್ಕೆ ಸಂದರ್ಶನವಿತ್ತರು

ಸಾರ್ವಜನಿಕ ಭಾಷಣ— ಸಂಜೆ ರಥಬೀದಿಯಲ್ಲಿ ಶ್ರೀ ಟಿ. ಎ ಪೈ ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಶ್ರೀ ಬಾಳ್ಕಟ್ಟುಬೀಡು ಕೃಷ್ಣಯ್ಯ ಹೆಗ್ಡೆಯವರು ಕಾಂಗ್ರೆಸ್ ಕಮಿಟಿ ಪರವಾಗಿ ಬಿನ್ನವತ್ತಳೆಯನ್ನರ್ಪಿಸಿದರು. ಮಂತ್ರಿಗಳು ತಮ್ಮ ಭಾಷಣದಲ್ಲಿ ಕಾಂಗ್ರೆಸ್ ಸರಕಾರವು ಈ ತನಕ ಸಾಧಿಸಿದ ಕಾರ್ಯಗಳನ್ನು ವಿವರಿಸಿ ರಾಜಾಜಿ ನಾಯಕತ್ವದಲ್ಲಿ ಗಂಡಾಂತರದ ಪ್ರಶ್ನೆಗಳು ಹೇಗೆ ಬಗೆಹರಿಸಲು ಸಾಧ್ಯವಾಯಿತೆಂಬುದನ್ನು ವಿವರಿಸಿದರು ಪ್ರಜಾಪ್ರಭುತ್ವವು ಉಳಿಯಬೇಕಾದರೆ ಸರ್ವರೂ ಪಾಡಿಸಿ ಸಹಕಾರವನ್ನಿತ್ತು ಸರಕಾರಕ್ಕೆ ಬೆಂಬಲವನ್ನೀಯಬೇಕೆಂದು ಸೂಚಿಸಿದರು ಒಕ್ಕಲಾಟಿಕ ಮಸೂದೆ, ಆಹಾರ ಕಂಟ್ರೋಲ್ ನೀಗಿಸುವಿಕೆ ಕೆಲಸದಲ್ಲಿ ಮದ್ರಾಸ್ ಸರಕಾರವು ಹಿಂದುಳಿಯುವುದಿಲ್ಲವೆಂದು ಹೇಳಿದರು. ಅಧ್ಯಕ್ಷರ ಭಾಷಣ ನಂತರ ಶ್ರೀ ಎ. ಜಿ. ಆಳ್ವೆಯವರು ಧನ್ಯವಾದಗಳನ್ನರ್ಪಿಸಿದರು.

ಹೊಸ ಬಸ್ ಸರ್ವಿಸು— ಜನಾದರಣೀಯರಾದ ಶ್ರೀ ಗೋಪಾಲ ಶೆಟ್ಟರು ಮೂಲ್ಕಿಯಿಂದ ಮೂಡಬಿದ್ರೆ, ಬಾರ್ಕೂರು ದಿನ ದಾರಿಗಾಗಿ ಕಡೂರಿಗೆ ಬಸ್ ಸರ್ವಿಸೊಂದನ್ನು ಬೋಂಬಾಯಿ ಪ್ರಯಾಣಿಕರಿಗಾಗಿ ತೆರೆದಿರುತ್ತಾರೆ. ಇವರು ಆಲೆವೂರು, ಕೆಮ್ಮಣ್ಣು ಓಟ ಬಸ್ ಸರ್ವಿಸನ್ನೂ ಸದ್ಯವೇ ತೆರೆಯಲಿರುವರು

ಪುನರುಜ್ಜೀವನ—ಶ್ರೀ ಹುಲಿಮನೆ ಸೀತಾರಾಮ ಶಾಸ್ತ್ರಿಗಳು ತಮ್ಮ ಜಯಕರ್ನಾಟಕ ನಾಟ್ಯ ಸಂಘವನ್ನು ಪುನರುಜ್ಜೀವನಗೊಳಿಸಲು ಉಡುಪಿಯ ಕಲಾಭಿಮಾನಿಗಳಿಂದ ವಿಶ್ವಸ್ತ ನಿಧಿ ಸಂಗ್ರಹ ಮಾಡುತ್ತಿದ್ದಾರೆ. ರೂಪಾಯಿ ಒಂದು ನೂರರಂತೆ ನೂರು ಜನರಿಂದ ಸಂಗ್ರಹಿಸುವ ಯೋಜನೆಗೆ ಈಗಾಗಲೇ ಸುಮಾರು ಇಪ್ಪತ್ತರಷ್ಟು ಹಿತೈಷಿಗಳು ಕಲಾಭಿಮಾನಿಗಳು ರೂ 100 ರಂತೆ ಕೊಟ್ಟು ನೆರವಾಗಿರುವರೆಂದು ತಿಳಿದು ಬರುತ್ತದೆ. ನಾಟ್ಯ ಕಲೆಯು ಲಯವಾಗುತ್ತಿರುವ ಈ ಕಾಲದಲ್ಲಿ ಶ್ರೀ ಶಾಸ್ತ್ರಿಗಳ ಸಾಹಸೋದ್ಯಮಕ್ಕೆ ಸರ್ವರೂ ಸಹಕರಿಸುವುದು ಸಮಂಜಸವಿದೆ.

ಕಾಣೆಯಾಗಿದ್ದಾನೆ— ಸುಮಾರು 16 ವರ್ಷ ಪ್ರಾಯದ ಉಡುಪಿ ಮಿಲ್ಕ್ ಸಪ್ಲೈ ಸೊಸ್ಯಾಟಿಯಲ್ಲಿ ಕೆಲಸಕ್ಕಿದ್ದ ತೆಳ್ಳಗೆ ಬೆಳ್ಳಗೆ ಇರುವ ಯು. ನಾರಾಯಣ ಎಂಬ ತನ್ನ ಮಗನು ಇದೇ ತಾ. 15ರ ಮಧ್ಯಾಹ್ನದಿಂದ ಕಾಣೆಯಾಗಿದ್ದಾನೆಂದೂ ಈ ಕುರಿತು ಮಾಹಿತಿ ದೊರೆತವರು ತನಗೆ ತಿಳಿಸಬೇಕೆಂದೂ ಸ್ಥಳೀಯ ಸರಕಾರೀ ಆಸ್ಪತ್ರೆಯ ನೌಕರ ಯು ಅಣ್ಣಪ್ಪನವರು ವಿನಂತಿಸುತ್ತಾರೆ,

ದ.ಕ. ಜಿಲ್ಲಾ ಪ್ರಜಾ-ಸೋಷಲಿಸ್ಟ್ ಸಮ್ಮೇಳನವು-ತಾ. 15 ರಂದು ಕಾಸರಗೋಡಿನಲ್ಲಿ ಶ್ರೀ ಅಶೋಕ ಮೆಹತಾರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಸಿ ಕೃಷ್ಣರು ಧ್ವಜಾರೋಹಣ ಮಾಡಿ ಸ್ವಾಗತ ಮಾತುಗಳನ್ನಾಡಿದರು. ಮೈಸೂರಿನ ಮಾಜಿ ಮಂತ್ರಿ ಶ್ರೀ ಜಿ. ಎಮ್ ಇಮಾಮ್ ಅವರು ಸಮ್ಮೇಳನವನ್ನು ಉದ್ಘಾಟಿಸಿದರು. ಅಧ್ಯಕ್ಷರು ಭಾಷಣದಲ್ಲಿ ಪಂಚವಾರ್ಷಿಕ ಯೋಜನೆಯಿಂದ ಯಾರಿಗೆ ಬಾಡು ಎರಡು ವರ್ಷಗಳಲ್ಲಿ ಜನರಿಗೆ ಅದರಿಂದ ದೊರೆತ ಪ್ರಯೋಜನಗಳೇನೆಂಬುದನ್ನು ವಿವರಿಸಿದರು. ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬನಿಗೂ ತನ್ನ ಹಕ್ಕಿಗಾಗಿ ಹೋರಾಡುವ ಅಧಿಕಾರವಿದೆ ಎಂದು ಸೂಚಿಸಿದರು ಬಳಿಕ ನಿರ್ಣಯಗಳು ಮಂಜೂರಾದವು, ಮರುದಿವಸ ಕರ್ನಾಟಕ ಏಕೀಕರಣ ಸಭೆಯು ಶ್ರೀ ಸಿದ್ಧಪ್ಪ ಹೊಸಮನಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರು ಸಭೆಯನ್ನು ಉದ್ಘಾಟಿಸಿದರು. ಎಲ್ಲಾ ಕನ್ನಡ ಪ್ರದೇಶಗಳನ್ನೊಳಗೊಂಡ ಕರ್ನಾಟಕ ಪ್ರಾಂತರಚನೆ ಬೇಗನೆ ಆಗಬೇಕೆಂಬ ನಿರ್ಣಯವಾಯಿತು.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ತಾರೀಕು 22—5—1953 ರಿಂದ

ಆನಂದ ಮಠ

ಗೀತಾಬಾಲಿ, ಪೃಥ್ವಿರಾಜ್ ಮೊದಲಾದವರು.

ಅನಂತರ. ದಾಗ್, ಮುರುಮುಗಲ್, ಪಾರಿಜಾತಂ, 'ಮಾ'

ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಉಡುಪಿ.

ಮಂಗಳೂರು

ಶ್ರೀ ಅಶೋಕ ಮೆಹತಾರ ಭಾಷಣ. ಇದೇ ತಾ. 17ರಲ್ಲು ಸಂಜೆ ಕೇಂದ್ರ ಮೈದಾನಿನಲ್ಲಿ ಶ್ರೀ ಕೆ. ಆರ್ ಕಾರಂತರ ಅಧ್ಯಕ್ಷತೆಯಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಪ್ರಜಾ ಸೋಶಿಯಲಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ ಅಶೋಕ ಮೆಹತಾರವರು ಭಾಷಣವೀಯುತ್ತಾ, ಕನ್ನಡಿಗರು ಕರ್ನಾಟಕ ಪ್ರಾಂತವನ್ನು ಹಲವು ವರ್ಷಗಳಿಂದ ಕೇಳುತ್ತಿರುವರು. ಇದು ನ್ಯಾಯವಾದ ಕೇಳಿಕೆಯಾಗಿದೆ. ಆದರೆ ಜನರು ಇದಕ್ಕಾಗಿ ಚಳುವಳಿಯನ್ನು ನಡೆಸುವಾಗ ಅದಕ್ಕೊಂದು ಮಿತಿಯಿಟ್ಟು ಕೊಳ್ಳಬೇಕು ಎಂದರು. ಅವರು ಮುತ್ತು ಹೇಳಿದುದೇನೆಂದರೆ "ಕೇವಲ ಈ ಸಮಸ್ಯೆಯು ಒಗೆಹರಿದಲ್ಲಿ ಎಲ್ಲಾ ಸಮಸ್ಯೆಗಳು ಬಗೆಹರಿದಂತಾಗಲಿಲ್ಲ. ಮರಿನ್ನು ಆನಾವು ಪ್ರಾಂತಗಳು ಭಾಷೆಯ ತಳಹದಿಯ ಮೇಲೆ ರಚಿಸಲ್ಪಟ್ಟದ್ದರೂ ಅಲ್ಲಿ ಆರ್ಥಿಕ ಸಾಮಾಜಿಕ ಹಾಗೂ ಸ್ವತಂತ್ರ ಸಮಸ್ಯೆಗಳು ಸಳಿದೋರಿವೆ ಅಂತೆಯೇ ಕರ್ನಾಟಕದಲ್ಲೂ ತೋರಬಹುದು. ಮರಾಟರು ಮತ್ತು ಗುಜರಾತಿಗಳು ತಿಕ್ಕಾಟ ನಡೆಸುವಂತೆ ಅಥವಾ ತಿರುವಾಂಕೂರಿನಲ್ಲಿ ಮಲೆಯಾಳಿ ಮತ್ತು ತಮಿಳರು ತಿಕ್ಕಾಟ ನಡೆಸುವಂತೆ ಕನ್ನಡಿಗರು ಗಡಿ ನಿರ್ಣಯದ ಸಮಯ ಜಗಳ ಮಾಡಬಾರದು. ಇದರಿಂದ ದೇಶದ ಏಕತೆಗೆ ಹಾನಿಯಿದೆ. ಪ್ರಾಂತದ ಭಾಷೆಯ ಮಹತ್ವವನ್ನು ಒತ್ತಿ ಹೇಳುವಾಗ ಎಲ್ಲಾ ಪ್ರಾಂತಗಳನ್ನೂ ಏಕಸೂತ್ರದಲ್ಲಿ ಬಂಧಿಸಲು ದೇಶಕ್ಕೊಂದು ಸಮಾನ ಭಾಷೆಬೇಕು ಎಂಬುದನ್ನು ಮರೆಯಬಾರದು. ದೇಶಕ್ಕೊಂದು ಸಮಾನ ಸಂಸ್ಕೃತಿಯನ್ನು ಕೊಡಲು ಯತ್ನಿಸಬೇಕು.

ಎರಡನೆಯದಾಗಿ ನಿರುದ್ಯೋಗದ ಕುರಿತು ಮಾತನಾಡಿದರು. ನಂತರ ರೈತರ ಸಮಸ್ಯೆ ಕುರಿತು ಮಾತನಾಡುತ್ತಾ ಅದು ಕೂಡಾ ಪ್ರಾಮುಖ್ಯವಾಗಿದೆ. ದೇಶದಲ್ಲಿ ದಿನೇ ದಿನೇ ಆಕ್ಕಿಯ ಬೆಲೆ ಏರುತ್ತಾ ಇದೆ. ಇದರ ಕಾರಣ ಗೇಣಿದ್ಯಾರಿಗೆ ಭದ್ರತೆ ಇಲ್ಲದಿರುವುದೇ ಇದರ ಮುಖ್ಯ ಕಾರಣ. ಅವರಿಗೆ ಭದ್ರತೆ ಇಲ್ಲದಿರುವಾಗ ಅವರಿಗೆ ಅಧಿಕ ಆಹಾರ ಉತ್ಪಾದನೆಗೆ ಹೇಗೆ ತಾನೇ ಮನಸ್ಸು ಬಂದೀತು? ಇದಕ್ಕಾಗಿ ಸರಕಾರವು ರೈತರಿಗೆ ಆದಷ್ಟು ಹೆಚ್ಚು ಸಹಾಯ ಕೊಡುವಂತೆ ಮಾಡಬೇಕು ಅಲ್ಲದೆ ರೈತರಿಗೂ ಸಮಾನ ಹಕ್ಕುಗಳನ್ನು ಕೊಡಬೇಕು ಎಂದು ಹೇಳಿದರು. ನಂತರ ಶ್ರೀಗಳಾದ ಇಮಾಮ್, ಮಾಸ್ತಿ ವೆಂಕಟೇಶ

ಅಯ್ಯಂಗಾರ, ಕೆ. ಜಿ. ಶಿವಸ್ವಾಮಿಯವರು ಮಾತನಾಡಿದರು. ಶ್ರೀ ಕೆ. ನಾಗಪ್ಪ ಆಳ್ವರು ಧನ್ಯವಾದಗಳನ್ನರ್ಪಿಸಿದರು.

ಮಹಾ ಸಭೆ—ದಕ್ಷಿಣಕನ್ನಡ ಜಿಲ್ಲಾ ನೇಕಾರರ ಸಂಘದ ವರ್ಷಾವಧಿ ಮಹಾ ಸಭೆಯು ಇದೇ ತಾ 10 ಲ್ಲು ಶ್ರೀ ಬಿ. ಕೆಂಗಪ್ಪ ಶೆಟ್ಟಿ, ಮುನಿಸಿಪಲ್ ಕೌನ್ಸಿಲರ್, ಇವರ ಅಧ್ಯಕ್ಷತೆಯಲ್ಲಿ ಜರಗಿತು. ವಾರ್ಷಿಕ ವರದಿ ಮತ್ತು ಲೆಕ್ಕಪತ್ರವು ಮಂಜೂರಾದ ಬಳಿಕ ಕೈಮಗ್ಗದ ವಸ್ತ್ರಗಳ ಮೇಲಿನ ಮಾರಾಟ ಕರ ರದ್ದಾಗಬೇಕೆನ್ನುವ ಮತ್ತು ಇತರ ಕೆಲವು ನಿರ್ಣಯಗಳು ಪಾಸಾದವು.

ನಿಷೇಧ ಸಭೆ—ಸ್ಥಳೀಯ ಜನಸಂಘದ ಆಶ್ರಯದಲ್ಲಿ ತಾ 13ರಲ್ಲು ಸಂಜೆ ಕೇಂದ್ರ ಮೈದಾನಿನಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ, ಕಾಶ್ಮೀರ ಸರಕಾರವು ಜನಸಂಘದ ಅಧ್ಯಕ್ಷರಾದ ಡಾ। ಶ್ಯಾಮ ಪ್ರಸಾದ ಮುಖರ್ಜಿಯವರನ್ನು ಬಂಧಿಸಿದುದನ್ನು ನಿಷೇಧಿಸುವ ಮತ್ತು ಅವರನ್ನು ಕೂಡಲೇ ಬಿಡುಗಡೆ ಮಾಡಬೇಕೆನ್ನುವ ನಿರ್ಣಯ ಪಾಸಾಯಿತು. ಶ್ರೀಯು. ನರಸಿಂಹಮಲ್ಯರು ಅಧ್ಯಕ್ಷತೆ ವಹಿಸಿದ್ದರು ಶ್ರೀ ಪ್ರಭಾಕರ ಘಾಟೆ ಮೊದಲಾದವರು ಮಾತನಾಡಿದರು.

ದ. ಕ. ಜಿಲ್ಲಾ ವೈದ್ಯಮಂಡಲದ ಮಹಾ ಸಭೆಯು—ಇದೇ ತಾ. 24ನೇ ಆದಿತ್ಯವಾರ ಅಪರಾಹ್ನ 2 30ಕ್ಕೆ ಜಪ್ಪಿನ ವೈದ್ಯಗುರು ಡಾ। ಎಮ್. ಆರ್. ಭಟ್ಟರ ಭವ್ಯ ಭವನದಲ್ಲಿ "ಕಲಿಯುಗ" ಸಂಪಾದಕ ಡಾ। ಎಮ್. ಗೋಪಾಲಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ಜರಗುವುದು. ಎಲ್ಲಾ ವೈದ್ಯಬಂಧುಗಳು ಸಭೆಗೆ ಬರಬೇಕಾಗಿ ಸಂಘದ ಕಾರ್ಯದರ್ಶಿಯವರ ವಿನಂತಿಯಿದೆ.

ಶ್ರೀ ಎಸ್. ಎಸ್. ಕಿಲ್ಲೆಯವರ ಆರೋಗ್ಯವು ಸುಧಾರಿಸುತ್ತಿದೆಯೆಂದು ತಿಳಿದು ಬರುತ್ತದೆ. ಅವರನ್ನು ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಇದೇ ತಾ. 8 ರಲ್ಲು ಸಂಜೆ ಕಂಡು ಅವರ ಆರೋಗ್ಯದ ಕುರಿತು ಮಾತನಾಡಿಸಿದರೆಂದು ಕೇಳುತ್ತೇವೆ.

ಪ್ರವೇಶೋತ್ಸವ—ಸನ್ಯಾಸಿ ಗುಡ್ಡೆಯ ಆರ್ಯ ಸಮಾಜದ ವಠಾರದಲ್ಲಿ ಶ್ರೀ ಎಮ್ ಗೋವಿಂದ ಅಣ್ಣಪ್ಪ ಪೈ ಮುನಿಸಿಪಲ್ ಕೌನ್ಸಿಲರ್ ಇವರು ಅಶ್ರಮದ ಮಕ್ಕಳಿಗಾಗಿ ಕಟ್ಟಿಸಿದ 'ವಿಜಯಾ ಶಿಶುವಿಹಾರ' ಟ್ಟಿದ ಪ್ರವೇಶೋತ್ಸವವು ಇದೇ ತಾ. 10ರಂದು ರಾಮಕೃಷ್ಣ ಆಶ್ರಮದ ಶ್ರೀ ಸ್ವಾಮಿ ಆದಿದೇವಾನಂದಜೀಯವರ ಹಸ್ತದಿಂದ ಜರಗಿತು. ಶ್ರೀಗಳಾದ ವೈಕುಂಠ ಬಾಳಿಗ, ಎಸ್. ನರಸಪ್ಪಯ್ಯ, ಮೊಹಿನ ತಿಂಗಳಾಯ ಕೆ ಕೃಷ್ಣರಾವ್, ಮೊದಲಾದವರ ಭಾಷಣಗಳಾದವು.

ಜಿಲ್ಲೆಯಲ್ಲಿ ಭೂದಾನ ಚಳವಳಿ— ಕಳೆದ ತಾ 26ರಲ್ಲು ಸಂಜೆ ಮಂಗಳೂರ ಪತ್ರಿಕೋದ್ಯೋಗಿ ಸಂಘದ ಮಾಳಿಗೆಯಲ್ಲಿ ಡಾ। ಎಮ್ ಎಸ್. ಹೆಗ್ಡೆಯವರ ಅಧ್ಯಕ್ಷತೆಯಲ್ಲೊಂದು ಸಭೆ ಸೇರಿ ದ. ಕ. ಜಿಲ್ಲೆಯಲ್ಲಿ ಭೂದಾನ ಯಜ್ಞ ಚಳವಳಿಯನ್ನು ಪ್ರಾರಂಭಿಸುವುದಕ್ಕಾಗಿ ತಾತ್ಕಾಲಿಕ ಸಮಿತಿಯೊಂದು ರಚಿಸಲಾಯಿತು. ಶ್ರೀಗಳಾದ ರಾಮಚಂದ್ರ ರಾವ್ ಮತ್ತು ಎಚ್. ನಾರಾಯಣ ರಾಯರು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು... ನ್ಯಾಯವಾದಿಗಳು, ಕಾರ್ಯ ನಡೆಸಲು ತಾತ್ಕಾಲಿಕ ಕಮಿಟಿ ರಚನೆಯಾಗಿದೆ.

ಕಡೇಕಾರು— ಸ್ಥಳೀಯ ಶ್ರೀ ಮಹಾಗಣಪತಿ ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವವು ಇದೇ ತಾ 3 ರಲ್ಲು ಡಿ. ಡಿ ಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಚಂದ್ರಶೇಖರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಚ್. ಸಂಜೀವ ರಾಯರು ಶಾಲೆಯ ಮತ್ತು ವಿದ್ಯಾರ್ಥಿ ಸಂಘದ ಅಭಿವೃದ್ಧಿ ಕುರಿತು ಮಾತನಾಡಿದರು. ಶ್ರೀಮತಿ ಲೀಲಾ ಎಮ್. ಪೈ ಕೊಟ್ಟ ಬಹುಮಾನ ಹಂಚಿದರು. ಮಕ್ಕಳ ವಿನೋದಾವಳಿಗಳಾದ ನಂತರ ಶ್ರೀ ಎಸ್. ಎ. ಭಂಡಾರಿಯವರು ಧನ್ಯವಾದಗಳನ್ನರ್ಪಿಸಿದರು.

ಮರುದಿವಸ ಕುತ್ಪಾಡಿ ಕೃಷ್ಣ ಮಾರುತಿ ವ್ಯಾಯಾಮ ಮಂದಿರದವರು ತಮ್ಮ ಸರ್ಕಸ ಇತ್ಯಾದಿ ಆಟಗಳನ್ನು ಆಡಿತೋರಿಸಿದರು.

ಸುಬ್ರಹ್ಮಣ್ಯ— ಶ್ರೀ ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಜ್ಞ ತೀರ್ಥ ಸ್ವಾಮಿಗಳವರ ನೇತೃತ್ವದಲ್ಲಿ ಕಾಲಂಪ್ರತಿ ಜರಗುವ ಶ್ರೀ ನರಸಿಂಹ ಜಯಂತಿ ಮಹೋತ್ಸವವು ಇದೇ ತಾ 25ರಿಂದ 29ರ ತನಕ ಜರಗಲಿರುವುದು

ಇದೇ ತಾ 9 ರಲ್ಲು ಸುಬ್ರಹ್ಮಣ್ಯದಲ್ಲಿ ಜರಗಿದ ಸುಳ್ಯ ಫರ್ಕ ಡೆವಲಪ್‌ಮೆಂಟ್ ಸಭೆಯ ಅಂಗವಾಗಿ ಅಂದು ರಾತ್ರಿ ಸ್ಥಳೀಯ ವಾಗೀಶ್ವರಿ ಸಂಗೀತ ನಾಟಕ ಸಭೆಯವರು 'ಭಾಗ್ಯ ಪರೀಕ್ಷೆ' ಎಂಬ ನಾಟಕವನ್ನು ಚಲೋದಾಗಿ ಅಭಿನಯಿಸಿದರು. ಸಭಾರಂಭದ ಅಧ್ಯಕ್ಷತೆಯನ್ನು ವಹಿಸಿದ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ ಸಂಜೀವ ಭಟ್ಟರು ಸಂಗೀತ ಮತ್ತು ಸಾಹಿತ್ಯಕಲೆಗಳ ಮಹತ್ವವನ್ನು ವಿವರಿಸಿ ಭಾಷಣ ಮಾಡಿದರು. ಶ್ರೀ ಕೆ. ಗೋವಿಂದ ಭಟ್ಟರು ಧನ್ಯವಾದಗಳನ್ನರ್ಪಿಸಿದರು.

ಯೆಡ್ತಾಡಿ— ಸ್ಥಳೀಯ ಬೋರ್ಡ್ ಎಲಿಮೆಂಟರಿ ಶಾಲೆಯ ಹೆತ್ತವರ ಕೂಟ ಮತ್ತು ಮಕ್ಕಳ ವಾರ್ಷಿಕ ಹಬ್ಬವು ಇದೇ ತಾ 11ರಲ್ಲು ಶ್ರೀ ಬನ್ನಾಡಿ ಸುಬ್ಬಣ್ಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು.

ಋತುಸ್ರಾವ ನಿಂತಿತು

'ಸುಬರಾಂ' ಗುಳಿಗೆಗಳನ್ನು ಉಪಯೋಗಿಸಿದರೆ ಹದಿನಾಲ್ಕು ಮಾಸಿಕಸ್ರಾವವಾಗುವುದು. ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾಧಾರಣ ಹಂದಿಗೆ ಖಾತ್ರಿ ಗುಣವಾಗಿದೆ—ಇಲ್ಲ; ರೂ. 3-1 ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8- [ವಿಶೇಷ ಪಥ್ಯವಿಲ್ಲ]

MIS. D. DEVEE, F. DS. (N. J.)
Tollygunge CALCUTTA
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ. ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

ಅಮೃತಾಂಜನ

ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ಎದೆ ನೋವುಗಳಿಗೂ ಗಾಯಗಳು, ಬಾತುಕೊಳ್ಳುವುದು ಚೇಳು ವಿಷ ಮುಂತಾದುವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧಿ.



ಎಲ್ಲ ಕಡೆ ಮಾರಲ್ಪಡುತ್ತದೆ.

RLGD.

ಅಮೃತಾಂಜನ ಲಿಮಿಟೆಡ್
ಮದರಾಸು ಬೊಂಬಾಯಿ ಮತ್ತು ಕಲ್ಕತ್ತ

ಕುಂದಾಪುರ ಡಿ ಮು. ಕೋರ್ಟಿನಲ್ಲಿ

O P. 23/1953

ಅರ್ಜಿದಾರರು. 1. ಗಿರಿಜ 2. ಮೈನರ ರಾಮಚಂದ್ರ. 3. ಮೈನರ ನಾರಾಯಣ 4. ಮೈನರ ಶೀತಾರಾಮ,

ಎದ್ರಿ ಇಲ್ಲ—

ಸದ್ರಿ ಅರ್ಜಿದಾರರು ಯಾವತ್ತು ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—1ನೇ ಅರ್ಜಿದಾರಳ ಗಂಡನ 2. 3. 4ನೇ ಅರ್ಜಿದಾರರ ತಂದೆ ಮೃತ ವಾಸುದೇವ ಸೋಮಯಾಜಿಯು ದಿ. ಪೃಥ್ವಿ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್‌ನಲ್ಲಿ ಪೋಲಿಸಿ ನಂಬ್ರ 3692 ರಾಗೆ ಜೀವವಿಮೆ ಮಾಡಿದ ಹಣ ಪಡೆಯುವರೆ ಅರ್ಜಿದಾರರ ಹೆಸರಿಗೆ ಸಕ್ಸೆಸ್ಸನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಖಲು ಮಾಡಿದ ಮೇಲಿನ ಅರ್ಜಿಯು ತಾರೀಖು 27-5 53ಕ್ಕೆ ಮೇಲಿನ ಕೋರ್ಟಿನಲ್ಲಿ ವಿಚಾರಣೆಗೆ ಇಟ್ಟಿರುತ್ತದೆ. ಆ ಕುರಿತು ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಮೇಲಿನ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ಹಾಜರಾಗಿ ತಕ್ಕರಾರು ಮಾಡಿಕೊಳ್ಳತಕ್ಕದ್ದು. ಎಂಬ ಸಂಗತಿ ತಿಳಿಯಪಡಿಸಿರುತ್ತದೆ

(Sd) N.S Parameshwariah
Advocate for Petr.
Date 15—5—53 Coondapoor.

ಯಕ್ಷಗಾನ ಕಲಾಮಂಡಲಿ, [ರಿಜಿಸ್ಟರ್ಡ್] ಉಡುಪಿ.

ವರ್ಧಂತಿ ಆಹ್ವಾನ

ಸುಸ್ವಾಗತವು ತಮಗೆ!

ನಮ್ಮ ಯಕ್ಷಗಾನ ಕಲಾಮಂಡಲಿಯ ಪ್ರಥಮ ವರ್ಷದ ವರ್ಧಂತಿಯ ಮಹೋತ್ಸವವನ್ನು ತಾ 25 5 53ನೇ ಸೋಮವಾರ ರಾತ್ರಿ 9 ಗಂಟೆಗೆ ಉಡುಪಿಯ ಶ್ರೀ ಕೃಷ್ಣ ದೇವಸ್ಥಾನದ ಪಾಕಶಾಲೆಯಲ್ಲಿ ಕಾರ್ಯಕ್ರಮ ನಡೆಯುವುದನ್ನನುಸರಿಸಿ ಶ್ರೀ ಟಿ. ಎ. ಪೈ, ಎಮ್. ಎಲ್. ಎ, ಇವರ ಅಧ್ಯಕ್ಷತೆಯಲ್ಲಿ ನಡೆಯುವುದಾಗಿ ನಿಶ್ಚಯಿಸಿದ್ದಾಗಿ ಆದಷ್ಟು ಸೂನಿಗಳಾದ ತಾವು ತಮ್ಮವರೆಲ್ಲರೊಂದಿಗೆ ದಯಮಾಡಿಸಿ ಈ ಮಹೋತ್ಸವದಲ್ಲಿ ಸಹಕರಿಸಬೇಕಾಗಿ ನಮ್ಮ ಆಕ್ಕರೆಯ ಕರೆಯಿದೆ. ಸ್ವೀಕರಿಸಿರಿ.

ಸಂಘದ ಕಾರ್ಯನಿರ್ವಾಹಕ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು

ವಿ: ಸೂ:—ರಾತ್ರಿ 10 ಗಂಟೆಗೆ ಸಂಘದ ಕಲಾವಿದರಿಂದ "ಶರ ಸೇತು ಬಂಧನ" ಎಂಬ ಯಕ್ಷಗಾನ ಕೂಟ ಜರಗಲಿದೆ.

ದಿ ವಿಜಯ ಬೇಂಕ್, ಲಿಮಿಟೆಡ್

ಸ್ಥಾಪನೆ: 1931.] ಪ್ರಧಾನ ಕಛೇರಿ: ಮಂಗಳೂರು.

ಮೂಲಧನ	ರೂ. 20,10,000
ತೆತ್ತ ಪಾಲು ಭಂಡವಾಳ	„ 6,77,860
ಕ್ಷೇಮ ನಿಧಿ	„ 1,60,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ಮ್ಯಾದೆ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4½% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ,
ಬಿ ಎ ಬಿ ಯಲ್. ವಕೀಲ್,
ಬೇಂಕಿನ ಆಡಳಿತೆ ಕಮಿಟಿ ಅಧ್ಯಕ್ಷರು.

THE VIJAYA BANK, Limited.

ವರ್ಗದಾರ ಮತ್ತು ವ್ಯಾಪಾರಿ ಬಂಧುಗಳಲ್ಲಿ ವಿನಂತಿ.

ನಮ್ಮ ಪ್ರಾಂತ್ಯದಲ್ಲಿ ಆಹಾರ ವಿನಿಯಂತ್ರಣ ಮಾಡಿದ ನಂತರ ಅಕ್ಕಿಯ ಬೆಲೆಯು ಈ ವರೆಗೆ ಒಂದು ಸ್ಥಿಮಿತದಲ್ಲಿತ್ತು. ಆಗಾಗ ಬೆಲೆಯಲ್ಲಿ ಸ್ವಲ್ಪಸ್ವಲ್ಪ ಏರಿಳಿತವಾಗುತ್ತಿದ್ದರೂ ಹತೋಟಿಮೀರಿ ಹೋಗುವ ಲಕ್ಷಣ ಕಂಡು ಬರಲಿಲ್ಲ ಆದರೆ ಇತ್ತೀಚೆಗೆ ಪುಸ್ಥಿತಿ ದಿನದಿಂದ ದಿನಕ್ಕೆ ವಿಷಮಗೊಳ್ಳುತ್ತಿರುವುದು ಶೋಚನೀಯ.

ಆಹಾರವಸ್ತು ನಿಯಂತ್ರಣದಿಂದ ಜನತೆಗೆ ಎಷ್ಟು ತೊಂದರೆ, ಕಷ್ಟ, ನಿರ್ಬಂಧಗಳಿವೆ ಎಂಬುದನ್ನು ಎಲ್ಲರೂ ಅನುಭವಿಸಿದ್ದಾರೆ. ಅದು ಎಂದಿಗೆ ಕೊನೆಗೊಳ್ಳುವುದೆಂದು ಜನರು ಕಾತರತೆಯಿಂದ ನಿರೀಕ್ಷಿಸುತ್ತಿದ್ದರು. ಜನರು ರಚಿಸುತಿದ್ದ ಪದ್ಧತಿಯನ್ನು ತೆಗೆದುಹಾಕಲು ನಾವೆಲ್ಲರೂ ಮದ್ರಾಸು ಶಾಸನ ಸಭೆಯಲ್ಲಿ ಮನಃಪೂರ್ವಕ ಬೆಂಬಲವಿತ್ತಿದ್ದೆವು. ಜನರು ಒಂದು ಕಠಿಣಬಂಧನದಿಂದ ಪಾರಾದವರಂತೆ ಸಂತೋಷದಿಂದ ನಿಯಂತ್ರಣ ರದ್ಧತಿಯನ್ನು ಸ್ವಾಗತಿಸಿದ್ದರು.

ಆದರೆ ಅದರ ಸದುಪಯೋಗವಮಾಡಿಕೊಳ್ಳಬೇಕಾದ್ದು ಜನರ ಹಿತದೃಷ್ಟಿಯಿಂದಲೇ ಅವರ ಕರ್ತವ್ಯವಾಗಿದೆ. ಹೆಚ್ಚಾಗಿ ರೈತರೂ, ವ್ಯಾಪಾರಿಗಳೂ ವಿನಿಯಂತ್ರಣವನ್ನು ಸ್ವಾರ್ಥಪರತೆಯಿಂದ ಅಧಿಕ ಲಾಭದ ದುರಾಶೆಯಿಂದ ದುರುಪಯೋಗಪಡಿಸಿಕೊಂಡಲ್ಲಿ ಆದರ ದುಷ್ಪರಿಣಾಮವನ್ನು ಅವರೇ ಅನುಭವಿಸಬೇಕಾದೀತು.

ಇತ್ತೀಚೆಗೆ ಬಡಜನರು ದಿನದಿನಕ್ಕೆ ಏರುತ್ತಿರುವ ಅಕ್ಕಿಬೆಲೆಯಿಂದ ಕಂಗಾಲಾದದ್ದು ಕಂಡುಬಂದಿದೆ. ಅಕ್ಕಿಬೆಲೆಯು ಏರಿಕೆಯು ಪರಿಣಾಮವಾಗಿ ಎಲ್ಲಾ ವಸ್ತುಗಳ ಬೆಲೆಯೂ ಏರುತ್ತಿದೆ ಸಾಮಾನ್ಯ ಪರಿಸ್ಥಿತಿಯಲ್ಲೇ ನಿತ್ಯ ಜೀವನವನ್ನು ನಡೆಸುವುದೇ ಬಡವರಿಗೆ ದುಸ್ತರವಾಗಿರುವಾಗ ಅಕ್ಕಿಯ ಬೆಲೆಯು ವಿಪರೀತವಾದಲ್ಲಿ ಅವರ ಜೀವನವೇ ಅಸಾಧ್ಯವಾಗಬಹುದು. ಆದರ ಪರಿಣಾಮವನ್ನು ಎಲ್ಲರೂ ಆಳವಾಗಿ ಆಲೋಚಿಸಬೇಕು. ಈಗಲೇ ಇಷ್ಟು ಏರುತ್ತಿರುವ ಅಕ್ಕಿಬೆಲೆಯು ಮುಂದೆ ಕಾಣುತ್ತಿರುವ ಮಳೆಗಾಲದಲ್ಲಿ ಎಷ್ಟು ವಿಷಮಕ್ಕೆ ಹೋಗಬಹುದೆಂದು ಜನರು ಗಾಬರಿಯಾಗಿದ್ದಾರೆ

ಆದುದರಿಂದ ಅಕ್ಕಿ ದಾಸ್ತಾನಿಟ್ಟಿರುವ ಎಲ್ಲಾ ಜನರು ದಯವಿಟ್ಟು ತಮ್ಮಲ್ಲಿರುವ ಮಾಲುಗಳನ್ನು ಮಾರ್ಕೇಟಿಗೆ ವಿಕ್ರಯಕ್ಕೆ ಕಳುಹಿಸಿ ಬೆಲೆ ಕಡಿಮೆಮಾಡ ಬೇಕೆಂತಲೂ ವ್ಯಾಪಾರಸ್ಥರು ನ್ಯಾಯವಾದ ಬೆಲೆಗಿಂತ ಹೆಚ್ಚಿನ ದರದಲ್ಲಿ ಕ್ರಯ–ವಿಕ್ರಯ ಮಾಡದೆ ಬೆಲೆಯನ್ನು ತಗ್ಗಿಸಲು ಸಹಾಯ ಮಾಡುವಂತೆಯೂ ವಿನಂತಿ ಸಕಾಲದಲ್ಲಿ ಜಾಗ್ರತೆವಹಿಸದಿದ್ದಲ್ಲಿ ಮುಂದೆ ಪಶ್ಚಾತ್ತಾಪ ಪಡಬೇಕಾದೀತು ಅಧಿಕಾರಿಗಳು ನ್ಯಾಯ ಬೆಲೆಯ ಅಂಗಡಿಗಳನ್ನು ತೆರೆಯುವ ಮೂಲಕವೂ, ಜಿಲ್ಲೆಯ ಹೊರಗೆ ಅಕ್ಕಿ ಹೋಗದಂತೆ ಜಾಗ್ರತೆ ವಹಿಸುವ ಮೂಲಕವೂ, ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಪರಿಶೀಲಿಸುತ್ತಿದ್ದು ಕಾಲಕಾಲದಲ್ಲಿ ಯುಕ್ತ ಕಾರ್ಯ ಕೈಕೊಂಡು ದುರಂತಗಳೊದಗದಂತೆ ಮುಂಜಾಗ್ರತೆ ವಹಿಸುವ ಮೂಲಕವೂ ಸಹಕರಿಸಬಹುದು. ನಿಯಂತ್ರಣ ರದ್ದಾದ ಸ್ವಲ್ಪ ಸಮಯದಲ್ಲಿ ಮಂಗಳೂರು ಕೆನರಾ ವಾಣಿಜ್ಯ ಸಂಘದವರು ಅಕ್ಕಿ ಬೆಲೆ ರೂಪಾಯಿ ಇಪ್ಪತ್ತೊಂದಕ್ಕೆ ಮೀರದಂತೆ ದರವನ್ನು ಹತೋಟಿಯಲ್ಲಿಡಬೇಕಾಗಿ ನಿರ್ಣಯಿಸಿದ್ದರೂ ಅವರು ಆ ಬಾಬಿನಲ್ಲಿ ನಿಷ್ಕ್ರಿಯರಾಗಿ ಕುಳಿತಿರುವುದು ವಿಷಾದಕರ

ದ. ಕ. ಸೆಂಟ್ರಲ್ ಕೊಓಪರೇಟಿವ್ ಹೋಲ್‌ಸೇಲ್ ಸ್ಟೋರಿನವರು ಹೆಚ್ಚಿಗೆ ದರದಲ್ಲಿ ಅಕ್ಕಿಯನ್ನು ವಿಕ್ರಯಮಾಡುವುದನ್ನು ನೋಡಿದರೆ ತುಂಬಾ ಆಶ್ಚರ್ಯಕರವಾಗಿದೆ.

ಈ ವಿಷಯದಲ್ಲಿ ಜನಮತವನ್ನು ಪ್ರಚೋದಿಸಲು ಎಲ್ಲರೂ ಸಹಕರಿಸಬೇಕಾಗಿ ಕೋರುತ್ತೇನೆ.

ಎಸ್. ಎಸ್ ಕೊಳ್ಕೆಬೈಲ್,
ಎಂ. ಎಲ್ ಎ

ಕುಂದಾಪುರ, 10–5–1953

ಪಬ್ಲಿಕ್ ನೋಟೀಸು

ಪಡುತೋನ್ಸೆ ಗ್ರಾಮದ ಪಡುಕುದ್ರುವಲ್ಲಿರುವ ದೂಜೆ ನಜ್ರತರ ಮಗ ಪಿಯಾದ ನಜ್ರತನು ಈ ಮೂಲಕ ಯಾವತ್ತೂ ಜನರಿಗೆ ತಿಳಿಸುವುದೇನೆಂದ್ರೆ— ರುಜಾರಿಯೊ ಗ್ರೆಗೊರಿ ಬಾಂಜರು ತಾ. 4—10—1949 ರಲ್ಲಿ ರೂ 1000/-ಕ್ಕೆ ರಿ. ನಿಶಿ ಬರಕೊಟ್ಟ ಕ್ರಯ ಸಾಧನ ಮೂಲಕ ನನ್ನ ಸ್ವಂತ ಹಕ್ಕಿನ ಲ್ಯವಜು ರೂಪಾಯಿ 1000-ನ್ನು ನಾನು ಕೊಟ್ಟು ಕ್ರಯಕ್ಕೆ ಪಡೆದ ಪಡುತೋನ್ಸೆ ಗ್ರಾಮದ ಸ. ನಂ. 72 ಪುಂಜ ಪೈಕಿ ತೆಂಕು ಮಧ್ಯ ಅಂದಾಜು ಸೆಂಟ್ಸು 12ರ ಸ್ಥಳ ಮ ಯದ್ರಲ್ಲಿರುವ ಕಟ್ಟಡಗಳು ವಗೈರೆಯು ಕುರಿತು ನನ್ನ ಹೆಂಡ್ತಿ ಫ್ಲೋರಿನ್ ಮಿನೇಜಳ ಹೆಸ್ರಲ್ಲಿ ಬಿನಾಮಿಯಾಗಿ ನಾನು ಸದ್ರಿ ಕ್ರಯಚೀಟು ಬರದಿಟ್ಟದ್ದಾಗಿರುತ್ತದೆ. ಸದ್ರಿ ಆಸ್ತಿಯ ಬಗ್ಗೆ ನನ್ನ ಹೆಂಡ್ತಿಯು ಎಷ್ಟನ್ನಾದರೂ ಹಣಕೊಟ್ಟಿದ್ದಿಲ್ಲ. ಸದ್ರಿ ಆಸ್ತಿಯು ನನ್ನ ಸ್ವಾಧೀನತೆಯಲ್ಲಿದ್ದು ಒಕ್ಕಲುಗಳಿಂದ ನಾನೇ ಬಾಡಿಗೆ ಚೀಟುಗಳನ್ನು ನನ್ನ ಹೆಸ್ರಲ್ಲಿ ಬರ್ಸಿಕೊಂಡು ಬಾಡಿಗೆಯನ್ನು ನಾನೇ ವಸೂಲುಮಾಡಿ ಬರುತ್ತೇನೆ. ಸದ್ರಿ ಆಸ್ತಿಯು ಹೆಂಡ್ತಿಯ ಸ್ವಾಧೀನ ಕೂಡಾ ಇರುವದಿಲ್ಲಾ. ಈ ಎಲ್ಲ ಸಂಗ್ತಿಗಳಿಂದ ಸದ್ರಿ ಆಸ್ತಿಗೆ ನಾನೇ ಸಂಪೂರ್ಣ ಹಕ್ಕುದಾರನಾಗಿರುತ್ತೇನೆ. ನನ್ನ ಹೆಂಡ್ತಿಗೆ ಸದ್ರಿ ಕ್ರಯಸಾಧನ ಅವಳ ಹೆಸ್ರಲ್ಲಿ ಉಂಟೆಂಬ ಕಾರಣದಿಂದ ಸದ್ರಿ ಆಸ್ತಿಯಲ್ಲಿ ಎಷ್ಟನ್ನಾದರೂ ಹಕ್ಕಿರುವದೂ ಉಂಟಾಗುವದೂ ಇಲ್ಲಾ. ನಾನು ನನ್ನ ಕಾಯಿಲೆಯ ಸಂಬಂಧ ಕೆಲವು ದಿವ್ಸಗಳಿಂದ ಉಡ್ಪಿ ಆಸ್ಪತ್ರೆಯಲ್ಲಿರುವದ್ರಿಂದ ನನ್ನನ್ನು ಮೋಸಪಡಿಸಬೇಕೆಂಬ ಇರಾದೆಯಿಂದ ನನ್ನ ದ್ವೇಷಿಕರ ದುರ್ಬೋಧನೆಗೆ ಒಳಗಾಗಿ ನನ್ನ ಹೆಂಡ್ತಿಯಿಂದ ಸದ್ರಿ ಆಸ್ತಿಯ ಕುರಿತು ಬೇರೆಯವರ ಕ್ರಯಚೀಟು ಈಡು ವಗೈರೆ ಬರ್ಸಿಕೊಳ್ಳುವ ಇರಾದೆಯುಳ್ಳವರಾಗಿ ನಾನು ತಿಳಿಯುತ್ತೇನೆ ಆ ರೀತಿ ಯಾರಾದರೂ ಸದ್ರಿ ಆಸ್ತಿಯ ಕುರಿತು ನನ್ನ ಹೆಂಡ್ತಿಯಿಂದ ಯಾವ ಪ್ರತಿಫಲಕ್ಕಾದರೂ ಕ್ರಯ ಚೀಟು ಈಡುವ ವಗೈರೆ ಬರ್ಸಿಕೊಂಡಲ್ಲಿ ಅಂಥಾದ್ದಾವರೂ ನನ್ನ ಮೇಲೆ–ಯಾ–ಸದ್ರಿ ಆಸ್ತಿಯ ಮೇಲೆ ಸಿಂಧೂ ಮಂಜೂರೂ ಆಗಲ್ಲಿಕ್ಕಿಲ್ಲಾವೆಂತ ಈ ಮೂಲಕ ನಾನು ಯಾವತ್ತೂ ಜನರಿಗೆ ತಿಳಿಯಪಡ್ಸುತ್ತೇನೆ

+ ಪಿಯಾ ಕುರಿಸು ಪಿಯಾದ ನಜ್ರತ ನರುಜು

ಮೊಕ್ಕಾಂ. ಉಡ್ಪಿ ಗವರ್ನ್‌ಮೆಂಟ್ ಆಸ್ಪತ್ರೆ

ತಾ. 18—5—1953.

Mahatma Gandhi Memorial College,

UDIPI (S Kanara)

College reopens for admissions on the 10th June, 1953 Regular classes for Seniors commence on the 5th June and for Juniors on the 29th June.

The College offers the following courses of the Madras University.

Intermediate

Part I—English, Part II—Kannada, Hindi, Sanskrit

Part III (a) Mathematics; Physics, Chemistry.
(b) Natural Science; Physics; Chemisty
(c) Indian History, Modern History, Logic or Psychology
(d) Mathematics, Commerce & Accountancy, and Logic.
(e) Indian History; Commerce & Accountancy; and Logic.

***B A**

Part I—English **Part II**—Kannada, Hindi.

Part III Group IV-b (Economics & History)

**Subject to the final sanction of the University*

Candidates seeking admission should apply for prospectus and application forms to the Principal with stamps of two annas. Limited Hostel accommodation available Women students are admitted. Experienced staff, excellent Laboratory, Library and Physical culture facilities

H. Sunder Rao, M A.,
Principal

ರಕ್ಷಣೆಗೂ ಉಳಿತಾಯ ವ್ಯವಸ್ಥೆಗೂ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್.

ಸ್ಥಾಪನೆ 1934. ಪ್ರಧಾನ ಕಚೇರಿ: ಮದ್ರಾಸು.

6¾ ಲಕ್ಷಕ್ಕೂ ಮಿಕ್ಕಿದ ಹೊಸ ವ್ಯವಹಾರ, **15** ಲಕ್ಷಕ್ಕೂ ಮಿಕ್ಕಿದ ಪ್ರೀಮಿಯಮ್ ಉತ್ಪತ್ತಿ, **45**¼ ಲಕ್ಷಕ್ಕೂ ಮಿಕ್ಕಿದ ಜೀವವಿಮಾ ನಿಧಿ. **10**¼ ಲಕ್ಷಕ್ಕೂ ಮಿಕ್ಕಿದ ಮೂಲಧನ. ಸಾಧಾರಣ **3** ಕೋಟಿಯಷ್ಟು ಊರ್ಜಿತದಲ್ಲಿರುವ ವಹಿವಾಟು.

ಪ್ರಗತಿಪರವಾದ ಈ ಕಂಪೆನಿಯಲ್ಲಿ ಒಂದು ಪೋಲಿಸಿ ಇಳುವುದು ಉತ್ತಮ ಕೆಲಸ ಅಂಕಿತರು ಇದರ ಏಜನ್ಸಿ ಇರುವುದು ಚಲೋ ವ್ಯವಹಾರ ಸಾಧನ

ಉತ್ಸಾಹಿ, ಜನಾನುರಣೀಯ, ಸಮರ್ಥ ಸ್ತ್ರೀ ಪುರುಷರಿಂದ ಕಂಪೆನಿ ಪ್ರಾತಿನಿಧ್ಯದ ಬಗ್ಗೆ ಅರ್ಜಿಗಳು ಸ್ವಾಗತಾರ್ಹವು ದಯಮಾಡಿ ಬರೆಯಿರಿ–

ಜಿ. ಆರ್ ಪಾಲ್ಕ, ಬ್ರಾಂಚ್ ಮನೇಜರ್,
ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು [ದ. ಕ]

ಸ್ವೀಕಾರ—ವಿಮರ್ಶೆ

ಸರ್ವೋದಯ ಕನ್ನಡ ವಾಚನ ಮಾಲೆಯು—ಒಂದರಿಂದ ಐದನೆ ಪುಸ್ತಕಗಳು-ಬರೆದವರು.-ಶ್ರೀ ಕಯ್ಯಾರ ಕಿಂಞ್ಞಣ್ಣ ರೈ, ವಿದ್ವಾನ್, ನವಜೀವನ ಹೈಸ್ಕೂಲ್, ಪೆರ್ಡಾಲ

ಪ್ರಕಾಶಕರು – ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್. ಬೆಲೆ – 1 ನೆ ಪುಸ್ತಕ 0 8-0, 2 ನೆ 0-10-0, 3 ನೆ 0-14 0 4 ನೆ 0-14-0 5 ನೆ 1-0-0

ಇತ್ತೀಚೆಗೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕನ್ನಡ ರೀಡರುಗಳ ಸಂಖ್ಯೆಯು ತುಂಬಾ ಹೆಚ್ಚುತ್ತ ಬಂದು ಈಗ ಅವುಗಳ ಸಂಖ್ಯೆ ಸುಮಾರು ಹನ್ನೆರಡಕ್ಕೂ ಮಿಕ್ಕಿರಬಹುದು. ಎರಡು ಮೂರು ದಶಕಗಳ ಮೊದಲು ಬಾಸೆಲ್ ಮಿಶನಿನವರ ಪಾಠ ಪುಸ್ತಕಗಳು ತುಂಬು ಪ್ರಚಾರದಲ್ಲಿದ್ದುವು ಮಾತ್ರವಲ್ಲ ಅವು ಬಹಳ ಉತ್ತಮವಾಗಿದ್ದುವೆನ್ನಬಹುದು. ಅನಂತರ ಎರಡನೆಯದಾಗಿ ಪಠ್ಯಪುಸ್ತಕಗಳನ್ನು ಪ್ರಕಟಿಸಿದವರು ಪ್ರಾಯಃ ಉಡುಪಿಯ ಲಕ್ಷಣ ರಾವ್ ಎಂಡ್ ಸನ್ಸ್. ಅವರ ಅನಂತರ ಅವುಗಳ ಸಂಖ್ಯೆಯು ಏರುತ್ತಾ ಬಂದಿತೆನ್ನಬಹುದು. ಆದರೆ ಸಂಖ್ಯೆಯಂತೆ ಅವುಗಳ ಮಟ್ಟವು ಏರಿದಂತೆ ತೋರುವುದಿಲ್ಲ. ಮಾತ್ರವಲ್ಲದೆ ಬಾಸೆಲ್ ಮಿಶನಿನ ರೀಡರ-ಗಳವರ ಯೋಗ್ಯತೆಯನ್ನು ಕೂಡ ಪಡದ ರೀಡರುಗಳು ಈ ವರೆಗೆ ಪ್ರಕಟವಾದಂತೆ ತೋರುವುದಿಲ್ಲ ಆದರೆ ಶ್ರೀ ಕಯ್ಯಾರ ಕಿಂಞ್ಞಣ್ಣ ರೈಗಳು ಪ್ರಸ್ತುತ ಈ ಕನ್ನಡ ವಾಚನ ಮಾಲೆಯನ್ನು ನವೀನ ಆಕಾರದಲ್ಲಿ, ನವೀನ ರೀತಿಯಲ್ಲಿ ಪ್ರಕಟಿಸಿದ್ದಾರೆನ್ನಬಹುದು ಆಯಾಯಾ ತರಗತಿಗೆ ತಕ್ಕಂತೆ ಅಕ್ಷರಗಳನ್ನು, ಚಿತ್ರಗಳನ್ನು, ಬಳಸಿಕೊಳ್ಳಲಾಗಿದೆ ಎಲ್ಲಾ ಪುಸ್ತಕಗಳಲ್ಲಿಯೂ ಬಣ್ಣದ ಚಿತ್ರಗಳಿದ್ದು ಮಕ್ಕಳ ಮನವನ್ನು ಆಕರ್ಷಿಸುವಂತಿವೆ ಈ ರೀಡರುಗಳು ಈಗಲೇ ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಮಂಜೂರಾಗಿವೆ ಎಂದು ತಿಳಿದು ಬರುತ್ತದೆ. ಕನ್ನಡದ ಖ್ಯಾತ ಉತ್ತಮ ಕವಿಗಳೂ ಲೇಖಕರೂ ಆಗಿರುವ ಶ್ರೀ ರೈಗಳ ಪ್ರಯತ್ನವು ಶ್ಲಾಘನೀಯ, ಮಂಗಳೂರು ಟ್ರೇಡಿಂಗ್ ಎಸೋಸಿಯೇಶನಿನವರ ಪ್ರಕಾಶನ ಕಾರ್ಯ ಪ್ರೋತ್ಸಾಹನೀಯ. ಶಾರದಾ ಪ್ರೆಸ್ಸಿನ ಮುದ್ರಣವಂತೂ ಅಂದವಾಗಿದೆ. ಆದರೆ ಕ್ರಯವು ಸ್ವಲ್ಪ ಹೆಚ್ಚೆಂದು ಸೂಚಿಸಬಯಸುತ್ತೇನೆ

ಜ್ಯೋತಿ—

ಶ್ರೀ ಬಿ ಎಸ್. ಭಾಸ್ಕರ ರೈಗಳು ಡಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು—ಇಲ್ಲಿಂದ ಪ್ರಕಟಿಸುತ್ತಿರುವ ಜ್ಯೋತಿ ಪತ್ರಿಕೆಯ ಎರಡನೇ ಜನ್ಮ ದಿನೋತ್ಸವ ಸಂಚಿಕೆಯಲ್ಲಿ ಶ್ರೀ ತಿರುಮಲೇಶ್ವರ ಭಟ್ಟ, ಬಿ ಬಿ. ಶೆಟ್ಟಿ, ರಾಮ ರಾಯ ಮಲ್ಯ, ಕೆ. ಆರ್ ಅಚಾರ್ ಮುಂತಾದವರ ಲೇಖನಗಳಿವೆ. ಅಲ್ಲದೆ ಕಯ್ಯಾರ ಕಿಞ್ಞಣ್ಣ ರೈ, ರಾಷ್ಟ್ರಕವಿ ಗೋವಿಂದ ಪೈಗಳ ಕವನವೂ ಪಿ. ವಿ ಓಕೆಗ್ರೆ, ದಾಮೋದರ ಬಾಳಿಗಾ ಮುಂತಾದವರ ಲಘು ಬರಹಗಳೂ ಇವೆ ಈಗಿನ ವಾತಾವರಣದಲ್ಲಿ ಜನರ ಅಭಿರುಚಿಯನ್ನು ಮೆಚ್ಚಿಸುವಂತಿದೆ ಎನ್ನಬಹುದು. ಈ ಸಂಚಿಕೆಯ ಬೆಲೆ. ಎಂಟಾಣೆ

ಸೇವನೆಯ ಆನಂದಕ್ಕೆ,
ಅತ್ಯುತ್ತಮವಾದುದನ್ನೇ ಪಡೆಯಿರಿ
ಎಸ್. ಆರ್.
ತಾಜಾ ನಿಪ್ಪಾಣಿ ತಂಬಾಕು
ಬೊಂಬಾಯಿ ಎಲೆ
ಇವುಗಳಿಂದ ತಯಾರಿಸಿದ
ಬೀಡಿಗಳಾಗಿರುತ್ತವೆ.
S. R. Beedi Works

ಅತಿಪ್ರಿಯನಾಗಿರುವವನು ಹಾನಿಕರ ಆಯುಕ್ತವೆಂದು ದಿವಂ॥ ಜಾರ್ಜ್ ಬರ್ನಾರ್ಡ್ ಷಾ ಅವರು ಮಹಾತ್ಮಾ ಗಾಂಧಿಯವರು ಹೇಳಿದ ಮಾತು ಪ್ರಕೃತ ರಾಷ್ಟ್ರಭಾಷೆಯಾಗಿರುವ ಹಿಂದೀಗೂ ಅನ್ವಯಿಸು ಯಿಸಬೇಕಾಗಿದೆ. ಏಕೆಂದರೆ, ಸುಮಾರು ಇದಿನೈದು ವರ್ಷಗಳ ಹಿಂದೆ ಅತ್ಯಂತ ಪ್ರೀತಿಯಿಂದ ಹಿಂದೀ ಕಲಿಯುತ್ತಿದ್ದವರಲ್ಲಿ ಕೆಲವರು ಇಂದು ಸಾರ್ವಜನಿಕ ಭಾಷೆಯಾಗಿರುವ ಅದನ್ನು ದ್ವೇಷಿಸುತ್ತಿದ್ದಾರೆ. ಇದು ಅದು ಸ್ತ್ರೀ-ಪುರುಷರೆಂಬ ಭೇದ ಭಾವವಿಲ್ಲದೆ, ಜನಪ್ರಿಯತೆಯನ್ನು ಗಳಿಸಿಕೊಂಡಿರುವದೇ ಅದಕ್ಕೆ ಕಾರಣವೆನ್ನಬಹುದು. ಅಥವಾ ಹಿಂದೀ ಕಲಿಯುವ ಮಬ್ಬಿನಲ್ಲಿ, ಎಲ್ಲಿ ನಮ್ಮ ಪ್ರಾಂತೀಯ ಭಾಷೆಗೆ ಕೊರಲಿಯು ಪ್ರಬೀಳುವದೋ ಎಂಬ ಶಂಕೆಯೂ ಅವರ ಹಿಂದೀ ದ್ವೇಶಕ್ಕೆ ಕಾರಣವಾಗಿರಲೂ ಬಹುದು. ಹೇಗಿದ್ದರೂ, ಅವರ ಶಂಕೆಯು ಸಂಪೂರ್ಣ ನಿರಾಧಾರವೆಂಬುದನ್ನು — ನಮ್ಮ ರಾಷ್ಟ್ರಪತಿಗಳಾದ ಬಾಬೂ ರಾಜೇಂದ್ರ ಪ್ರಸಾದರು ಪ್ರೈಸಿನಲ್ಲಿ ಹಿಂದೀ ಪದವೀದಾನ ಸಂದರ್ಭದಲ್ಲಿ ಅಪ್ಪಣೆ ಕೊಡಿಸಿದ ಮಾತುಗಳ ಮೂಲಕ ಸ್ಪಷ್ಟಗೊಳಿಸಬಹುದು.

ಹಿಂದಿಯೇ ಭಾರತದ ರಾಷ್ಟ್ರಭಾಷೆಯಾಗಬೇಕೆಂಬ ವಿಷಯವನ್ನು ನಮ್ಮ ಸಂವಿಧಾನದಲ್ಲಿ ಸ್ವೀಕೃತಗೊಳಿಸಲಾಗಿದೆ. ಹಾಗಾದರೆ ಮತ್ತು ಪಶ್ಚಿಮ ಬಂಗಾಳದಲ್ಲಿ ಪ್ರಾಂತೀಯ ಭಾಷೆಯೊಡನೆ ಸ್ಪರ್ಧೆ ನಡೆಸುವ ಕೀಳು ಅಭಿರುಚಿಯು ಹಿಂದೀಗೆ ಇರುವದಿಲ್ಲ. ಅವರ ಬಳಿ ಪ್ರಾಂತೀಯ ಭಾಷೆಗಳ ವಿಕಾಸ, ಬೆಳವಣಿಗೆಯೇ ಅದರ ಆಶಯ, ಅದರ ಧ್ಯೇಯವಾಗಿರುತ್ತದೆ. ಸ್ಪರ್ಧೆಯಿರುವದಾದರೆ ಅದು ಇಂಗ್ಲೀಷಿನೊಡನೆ ಮಾತ್ರ. ಅದ್ದರಿಂದ, ಹಿಂದೀಯು ಪ್ರಾಂತೀಯ ಭಾಷೆಗಳನ್ನು ಹಿಂದಿಕ್ಕುವ, ಹತ್ತಿಕ್ಕುವ ದುರಭಿಪ್ರಾಯವನ್ನು ಹೊಂದಿದೆಯೆಂದು ಯಾರಾದರೂ ಭಾವಿಸುವುದಾದರೆ, ಅದು ಅರ್ಥಹೀನವಾದುದು ಎಂದು ನಾನು ಸ್ಪಷ್ಟವಾಗಿ ಹೇಳುವೆ.

ಇಂಗ್ಲಿಷು ಇಂದು ಅಂತರರಾಷ್ಟ್ರೀಯ ಭಾಷೆಯಾಗಿದೆ, ಅದಕ್ಕೆ ಕಾರಣ, ವಿಶಾಲವಾಗಿಯೂ ವಿಕಾಸವಾಗಿರುವ, ಮೇಲ್ಮಟ್ಟದಲ್ಲಿರುವ ಅದರ ಸಾಹಿತ್ಯವೇ. ಯಾವದೊಂದು ಭಾಷೆಯ ಭಂಡಾರವು ಬೆಳೆದಷ್ಟಕ್ಕೆ ಅದರ ಸಾಹಿತ್ಯ ಬೆಳೆಯುವದು. ನಮ್ಮ ಮನಸ್ಸಿನೊಳಗಿನ ಸೂಕ್ಷ್ಮ ಭಾವನೆಗಳನ್ನು ಸಹ ಮಾತಿನ ಮೂಲಕ, ಭಾಷೆಯ ಮೂಲಕ ಪ್ರಕಟಗೊಳಿಸಬೇಕಾದರೆ, ಅದರ ಶಬ್ದ ಸಂಗ್ರಹವು ವಿಪುಲವಾಗಿರಬೇಕು. ಆಗ ಅದು ಅತ್ಯಂತ ಜನಪ್ರಿಯವಾಗಬಲ್ಲುದು. ಇಂಗ್ಲಿಷಿನಲ್ಲಿನ ಒಂದು ನುಡಿಯಂತೆ If a language would live it must eat. ಭಾಷೆಯು ಜೀವಿಸಿರಬೇಕಾದರೆ ಅದು ಉಣ್ಣಬೇಕು; ಅದರ ದೃಷ್ಟಿಕೋಣವು ಸಂಕುಚಿತವಾಗಿರಬಾರದು. ಬೇರೆ ಭಾಷೆಗಳಿಂದ ತನಗೆ ಬೇಕಾದ ಶಬ್ದಗಳನ್ನು ಸಂದರ್ಭಾನುಸಾರವಾಗಿ ಆರಿಸಿ ಅವುಗಳನ್ನು ತನ್ನೊಳಗೆ ಅರಗಿಸಿ ಕೊಳ್ಳಬೇಕು. ಪ್ರಕಾರ ಅದಕ್ಕೆ ತನ್ನ ಶಬ್ದಭಂಡಾರವನ್ನು ಬೆಳೆಯಿಸಲು ಸಾಧ್ಯವಿದೆ. ಯಾವದೇ ಭಾಷೆಯಾಗಲಿ, ಇತರ ಭಾಷೆಗಳ ಸಹಕಾರವಿಲ್ಲದೆ ಅದು ಬೆಳೆಯಲಾರದು. ಇಂದು ಇಂಗ್ಲಿಷ್ ಭಾಷಾ ಭಂಡಾರವು ಬೆಳೆಯಲು ಅದು ತನ್ನನ್ನು ಮಾತ್ರ ಎನ್ನದೆ ಪ್ರಪಂಚದ ಎಲ್ಲ ಭಾಷೆಗಳಿಂದ ಶಬ್ದಗಳನ್ನಾರಿಸಿ ತನ್ನೊಳಗೆ ಜೀರ್ಣಿಸಿಕೊಂಡಿರುವುದೇ ಕಾರಣ. ಬೇರೆ ಭಾಷೆಗಳಿಗೆ ತಾಯಿಯಾದ ಸಂಸ್ಕೃತವು ಜಗತ್ತಿನ ಸಮಸ್ತ ಭಾಷೆಗಳಿಗೂ ಉಣಿಸನ್ನು ನೀಡಿದ್ದಾಳೆ. ಮಾತೃ ಎಂಬುದರಿಂದ mother ಪಿತೃ ಎಂಬುದರಿಂದ father, ಭ್ರಾತೃ brother, ನಾಮ name, ಘೃತ ghee ಈ ತೆರನಾಗಿ ಸಂಸ್ಕೃತದ ಹಲವಾರು ಶಬ್ದಗಳು ಇಂಗ್ಲಿಷಿಗೆ ರೂಪಾಂತರಗೊಂಡಿವೆ. ಯೆಂಬ ನಿಜವನ್ನು ಅದಾರು ತಾನೇ ಅಲ್ಲಗಳೆಯಬಲ್ಲರು? ಈ ಪ್ರಕಾರ ಪರಭಾಷೆಗಳಿಂದ ಬೇಕಾಗ್ಗೆ ಶಬ್ದ-

ರಾಷ್ಟ್ರಭಾಷಾ ಪ್ರಚಾರ ಸಮಸ್ಯೆ

ಗಳನ್ನು ಆರಿಸಿಕೊಂಡಿರುವುದರಿಂದಲೇ ಆಂಗ್ಲಭಾಷಾ ಸಾಹಿತ್ಯವು ದಿನ ದಿನಕ್ಕೆ ಬೆಳೆಯುತ್ತಾ ಬಂದಿದೆ.

ಹಿಂದೀಯೂ ಪರಭಾಷೆಗಳಿಂದ ಶಬ್ದಗಳನ್ನು ಆರಿಸಿ ತನ್ನೊಳಗೆ ಅರಗಿಸಿಕೊಂಡಿದೆ, lantern ನಿಂದ ಲಾಲ್‌ಟೇನ್, Hospital ನಿಂದ ಅಸ್ಪತಾಲ್, rubber ರಬರ್, pantloon- ಪತಲೂನ್, platoon ಪಲ್‌ಟನ್ coachman ಕೋಚವಾನ, ಚರ್ಮ- ಪುರಾಷ್ಟ್ರ — ಚರಬಾಸೀ ತಾಬಡ್ ತೋಬ್- ಕಾಬಡ್ ತೆಸೀಲ, ಸುವಿಧಾ—ಸ ವ್ಯೆತಾ, ಪಿಶ್ಶ್ಯ—ಪಿಶಾ—ಇತ್ಯಾದಿ ಹಲವಾರು ಶಬ್ದಗಳನ್ನು ಇಂಗ್ಲಿಷಿನಂತಹ ಪರದೇಶೀಯ ಭಾಷೆಗಳಿಂದಲೂ ಫಾರಸೀ, ಮರಾಠೀ, ಬಂಗಾಲೀ, ತಮಿಳಿನಂತಹ ಸ್ವದೇಶೀಯ ಭಾಷೆಗಳಿಂದಲೂ ಆರಿಸಿ, ತನ್ನ ಭಾಷಾ ರಚನೆಗನುಗುಣವಾಗಿ, ಹೊಂದಿಸಿ ಕೊಂಡಿರುವದರಿಂದಲೇ ಇಂದು ಹಿಂದೀ ಸಾಹಿತ್ಯವು ಇಷ್ಟು ವಿಕಾಸ ಗೊಳ್ಳಲು, ಜನಪ್ರಿಯ ತೆನಿಸಿ ಕೊಳ್ಳಲು ಸಾಧ್ಯವಾಯಿತು.

ಹಿಂದೀಯು ಇಂಗ್ಲೀಷಿನೊಡನೆ ಸ್ಪರ್ಧೆ ನಡೆಯಿಸಿದೆಯೆಂದೆನಷ್ಟೆ. ಉತ್ತರ ಭಾರತದಲ್ಲಿ—ಹಲವಾರು ಪ್ರಾಂತ್ಯಗಳಲ್ಲಿ ಇಂದು ಹಿಂದೀ ಟೈಪರೈಟರುಗಳು ಇಂಗ್ಲಿಷ್ ಟೈಪರೈಟರುಗಳಷ್ಟೇ ಸುಲಭವಾಗಿ ಕೆಲಸ ಮಾಡುತ್ತಿವೆ. ಶೀಘ್ರಲಿಪಿ (Short hand) ಸುಧಾರಣೆಯ ಕಾರ್ಯವೂ ಭರದಿಂದ ಸಾಗುತ್ತಿದೆ. ರಾಜ್ಯದ ಟಪಾಲು ಕಚೇರಿಗಳಲ್ಲಿ ಹಿಂದೀ ಭಾಷೆಯಲ್ಲಿಯೇ ಟೆಲಿಗ್ರಾಮುಗಳ ಸಂಚಾರ ನಡೆಯುತ್ತಿದೆ. ಈಗ ದಕ್ಷಿಣ ಭಾರತದಲ್ಲಿಯೂ ಹಿಂದೀಯು ತುಂಬಾ ಜನಪ್ರಿಯವಾಗುತ್ತಿದೆ ಯೆಂಬುದಕ್ಕೆ ವರ್ಷೇ ವರ್ಷೇ ಹೆಚ್ಚುತ್ತಿರುವ ಪರೀಕ್ಷಾರ್ಥಿಗಳ ಸಂಖ್ಯೆಯೇ ನಿದರ್ಶನವಾಗಿದೆ.

ಇಂಗ್ಲಿಷಿನೊಡನೆ ಸ್ಪರ್ಧಿಸುವದರಲ್ಲಿ ಹಿಂದೀಯು ಯಶಸ್ವಿಯಾಗಬಲ್ಲುದು ಎಂಬುದಕ್ಕೆ ಹಿಂದೀ ಭಾಷೆ ಪಡೆದಿರುವ ಈ ಯೋಗ್ಯತೆಗಳೇ ಸಾಕಾಗಬಹುದು.

(೧) ಹಿಂದೀಯು ಸುಂದರವಾದ, ಓಜಸ್ವಿಯಾದ, ಕೀರ್ತಿವಂತವಾದ, ಉಚ್ಚಾರಣೆಗೆ ಹಿತವಾದ, ಸುಲಭವಾಗಿ ಕಲಿಯಬಹುದಾದ ಭಾಷೆ.

(೨) ಪ್ರೌಢ ವರ್ಷಗಳಲ್ಲಿ ಇಂಗ್ಲಿಷಿನಲ್ಲಿ ಎಷ್ಟು ಯೋಗ್ಯತೆಯನ್ನು ಗಳಿಸಬಹುದೋ ಅಷ್ಟೇ ಯೋಗ್ಯತೆಯನ್ನು ಹಿಂದೀಯಲ್ಲಿ ಆರು ತಿಂಗಳಲ್ಲಿ ಪಡೆಯಬಹುದು.

(೩) ಹಿಂದೀ ಅಕ್ಷರಗಳನ್ನು ಬರೆದಂತೆಯೇ ಉಚ್ಚರಿಸಬಹುದು. ಇಂಗ್ಲಿಷಿಗೆ ಆ ಸೌಲಭ್ಯವಿಲ್ಲ.

(೪) ಹಿಂದೀ ಉಚ್ಚಾರಣೆಯು ಇಂಗ್ಲಿಷ್ ಉಚ್ಚಾರಣೆಗಿಂತ ಸುಲಭ.

(೫) ಸಂಸ್ಕೃತಜನ್ಯ ಭಾಷೆಯಾದ ಹಿಂದೀ ಸಾಹಿತ್ಯವು ಅತೀ ಪುರಾತನವಾದುದು.

ಇಷ್ಟೆಲ್ಲಾ ಯೋಗ್ಯತೆಗಳು ಹಿಂದೀಯು ಇಂಗ್ಲಿಷಿನ ಸ್ಥಾನವನ್ನಾಕ್ರಮಿಸಲು ಯಥೇಷ್ಟ ಸಾಕಾಗುವವು ಮೇಲಾಗಿ ನಮ್ಮ ಸಂಸಾರವು ಅದರ ಬಗ್ಗೆ ರಾಷ್ಟ್ರೀಯ ಭಾವನೆಯನ್ನು ತಾಳಿರುವದರಿಂದ ಅವಧಿಗಿಂತ ಮೊದಲೇ ಅದು ತನ್ನ ಕರ್ತವ್ಯವನ್ನು ಪೂರೈಸಿಕೊಳ್ಳಬಲ್ಲುದು.

ನಮ್ಮ ಉದ್ದೇಶವು ಸಮೀಪದಲ್ಲೇ ಅಗತ್ಯವಿದ್ದು. ಅಂತೆಯೇ ನಮ್ಮ ರಾಷ್ಟ್ರಭಾಷೆಯ ಉನ್ನತಿಯೇ ನಮ್ಮ ಧ್ಯೇಯವಾಗಿರಬೇಕು. ರಾಷ್ಟ್ರಭಾಷೆಗಿರುವ ಸ್ವಾತಂತ್ರ್ಯವು ಸಂಭಾಷೆ ರೂಪದ ಇಂಗ್ಲಿಷಿಗೆ ಎಂದೂ ದೊರಕಲಾರದು; ದೊರಕ ಕೂಡದು ಅದರೆ ಅದಕ್ಕೆ ಕೊಡುವ ಗೌರವವನ್ನು ಕೊಡಲೇ ಬೇಕು. ಇಂಗ್ಲಿಷ್ ಸಾಹಿತ್ಯವೇ ನಮಗೆ ಸ್ವಾತಂತ್ರ್ಯವನ್ನೊದಗಿಸಿಕೊಡುವದರಲ್ಲಿ ಪ್ರಥಮ ಪಾತ್ರವನ್ನು ವಹಿಸಿದೆಯೆಂಬ ವಿಷಯವನ್ನು ಮರೆಯತಕ್ಕದ್ದಲ್ಲ.

ರಾಷ್ಟ್ರಭಾಷೆಯ ದೃಷ್ಟಿಯಿಂದ ನಾವು ಹಿಂದಿಯನ್ನು ಕಲಿಯಬೇಕು ಎಂಬುದನ್ನು ಇಷ್ಟರ ತನಕ ವಿವರಿಸಲಾಯಿತು. ಸಾಹಿತ್ಯದ ದೃಷ್ಟಿಯಿಂದಲೂ ಹಿಂದಿಯನ್ನು ಕಲಿಯಬಹುದು. ಈ ಹಿಂದೆ ವಿವರಿಸಿದಂತೆ ಒಂದು ಭಾಷೆಯು ಬೆಳೆಯಬೇಕಾದರೆ, ಅದಕ್ಕೆ ಇತರ ಭಾಷೆಗಳ ನೆರವು ಅವಶ್ಯ ಬೇಕು. ಪರಭಾಷೆಗಳಿಂದ ಹೆಕ್ಕಿ ಶಬ್ದಗಳನ್ನಾಯ್ದು ನಿತ್ಯವಾಗಿ ಉಪಯೋಗಿಸಿದ್ದಕ್ಕೆ, ಭಾಷೆಯಲ್ಲಿ ಜೀವಕಳೆಯು ತುಂಬುವದು ಒಂದು. ಹಾಗು ಒಂದು ನವೀನತೆಯು ಕಂಡುಬರುವದು. ಶ್ರಿಮಾನ್ ಕಾರಂತರ ಕಾದಂಬರಿಗಳಿಂದ ತಾರೀಖು ಪತ್ರೋತಿ, ಪಾರ್, ಮುಕಾಂ, I will ಕಾಲ್ you, ಡೋಂಗೀ, ಮಕ್ಕಾರ್, ಇತ್ಯಾದಿ ಗ್ರಾಮ್ಯ ಹಾಗೂ ಪರಭಾಷಾ ಶಬ್ದಗಳನ್ನು ತೆಗೆದು ಹಾಕಿ, ಅವುಗಳ ಸ್ಥಾನವನ್ನು ಶುದ್ಧ ಕನ್ನಡ ಶಬ್ದಗಳಿಂದ ಭರ್ತಿ ಮಾಡ ತ್ತೇಕ್ಕೆ, ಭಾಷಾ ಸೌಂದರ್ಯವು ಎಷ್ಟೋ ಕಡಮೆ ಯಾಗುತ್ತಿದ್ದಿತು ಇದರಿಂದ ನಮ್ಮ ಲ್ಲಿ ಇತರ ಭಾಷೆಗಳನ್ನು ಕಲಿಯುವದರಿಂದ ಪ್ರಾಂತೀಯ ಭಾಷೆಯನ್ನು ಬೆಳೆಸಲು ಬಹು ಸಹಕಾರವು ದೊರೆಯಬಲ್ಲುದು. ಎಂಬುದಕ್ಕೆ ಬೇರೆ ನಿದರ್ಶನ ಬೇಕೇ? ನಾವು, ನಮ್ಮ ಪ್ರಾಂತ್ಯ, ನಮ್ಮ ಪ್ರಾಂತೀಯ ಭಾಷೆ, ಅಷ್ಟೇ ಸಾಕು ಎಂಬ ಸಂಕುಚಿತ ಭಾವನೆಯು ಬೆಳೆಯುತ್ತಿರುವ ನಮ್ಮ ಭಾಷಾ ಸಾಹಿತ್ಯಕ್ಕೆ ಬಲ ನೀಡದೆ ಒಡೆದೊಂದೊದ್ದು ಉದಂಬವನ್ನು ಯಾ ಭಾಷಾ ಪ್ರೇಮಿಯೂ ಪ್ರದೇಶ ತಜ್ಞರಲ್ಲಿ ಹೆಚ್ಚಿನ ವಿದ್ವಾಂಸರು ಈ ವಿಷಯವನ್ನು ಬಲ್ಲರು. ಅದ್ದರಿಂದಲೇ ಇಂದು ಕರ್ನಾಟಕದಲ್ಲಿ ನೇಕರು ನೂರರಷ್ಟು ಎರಡೆರಡು ಭಾಷೆಗಳನ್ನು, ಅರವತ್ತರಷ್ಟು ಮೂರು ಮೂರು ಭಾಷೆಗಳನ್ನೂ, ಕೆಲವರು ನಾಲ್ಕಾರು ಭಾಷೆಗಳನ್ನೂ ಅರಿತವರಿದ್ದಾರೆ. ಕರ್ನಾಟಕ ಭಾಷಾ ಸಾಹಿತ್ಯವೂ ಬೆಳೆಯುತ್ತ ಬಂದಿದೆ.

ರಾಷ್ಟ್ರಭಾಷಾ ಪ್ರಚಾರ ಸಮಸ್ಯೆಯು ಬರಿಯ ಭಾಷಣಗಳಿಂದ ಪರಿಹರಿಸುವಂತಹ ಸಾಮಾನ್ಯ ಸಮಸ್ಯೆಯಾಗಿರುವದಿಲ್ಲ. ಅದಕ್ಕೆ ಅತ್ಯಂತ ತೃಪ್ತಿಯನ್ನು ಕಾಣಬಲ್ಲ, ಶುದ್ಧ ಸಾತ್ವಿಕ ದೃಷ್ಟಿಯನ್ನಿಟ್ಟುಕೊಂಡಿರುವ, ಹಿಂದೀ ಭಾಷೆಯ ರಚನಾತ್ಮಕ, ಶೈಲಿಯ ಸಂಪೂರ್ಣ ಪರಿಚಯವನ್ನು ಪಡೆದಿರುವ ನಿಸ್ವಾರ್ಥ ಸೇವಕ ಸೇವಕಿಯರು, ರಾಷ್ಟ್ರಭಾಷಾ ಸಮಸ್ಯೆಯನ್ನು ಸುಲಭವಾಗಿ ಪರಿಹರಿಸಬಲ್ಲರು. ಅದರೆ ವಿದ್ಯಾಇಲಾಖೆಯ ಸಹಕಾರವೂ ಇದಕ್ಕೆ ಅತೀ ಅಗತ್ಯ.

ಹೈಸ್ಕೂಲುಗಳಲ್ಲಿ ಮೊದಲನೇ ಇಯತ್ತೆಯಿಂದಲೇ ಹಿಂದೀ ಕಲಿಸುವರು. ಅದರೆ ಹಾಯರ್ ಎಲಿಮೆಂಟರೀ ಶಾಲೆಗಳಲ್ಲಿ ಅದರ ಪ್ರವೇಶವೇ ಆಗಲಿಲ್ಲ. ಪರಿಣಾಮವಾಗಿ, ಹಾಯರ್ ಎಲಿಮೆಂಟರೀ ಶಾಲೆಯಿಂದ ಹೈಸ್ಕೂಲಿಗೆ ದಾಖಲಾಗುವ ವಿದ್ಯಾರ್ಥಿಯು ಒಂದೋ ಹಿಂದೀ ತೆಗೆದುಕೊಳ್ಳುವದನ್ನೇ ಬಿಡಬೇಕು, ಒಂದೋ ಹಿಂದೀ ಅಭ್ಯಾಸಕ್ಕಾಗಿ ಮಾತ ಇತರರ ನೆರವನ್ನು ಪಡೆಯಬೇಕಾಗುತ್ತದೆ. ವಿದ್ಯಾ ಇಲಾಖೆಯು ಈ ತರದ ಭೇದ ಭಾವವು ಹೆಚ್ಚಿನ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಹಿಂದೀಯಿಂದ ವಂಚಿತರನ್ನಾಗಿ ಮಾಡುವರು. ಅದರೆ ಹಾಯರ್ ಎಲಿಮೆಂಟರೀ ಶಾಲೆಗಳಲ್ಲಿ ಹಿಂದೀ ಕಲಿಸದಿರುವದರಿಂದ ಈ ಯೋಜನೆ ಕೈಗೊಂಡರೆ ಅಷ್ಟು ನಷ್ಟವಾಗುವದಿಲ್ಲ. ವಿದ್ಯಾ ಇಲಾಖೆಯಿಂದ ಇದು ಸುಧಾರಣೆಯಾಗುವ ತನಕವಾದರೂ, ಹಿಂದೀ ಕಲಿಸಬಲ್ಲ ಹಾಯರ್ ಎಲಿಮೆಂಟರೀ ಶಾಲಾ ವಿದ್ಯಾರ್ಥಿಗಳಿಗೆ ತಮ್ಮ ಸ್ವಂತ ಪುಸ್ತಕದಲ್ಲಿ ಹಿಂದೀ ಬಲ್ಲ ಅಧ್ಯಾಪಕ ಅಧ್ಯಾಪಕಿಯರು ತಮ್ಮ ಕರ್ತವ್ಯದ ಒಂದು ಅಂಗವೆಂದು ತಿಳಿದುಕೊಳ್ಳಬೇಕು. ಸಂತೋಷದ ವಿಷಯವೆಂದರೆ ಅನೇಕ ಮಂದಿ ಅಧ್ಯಾಪಕ – ಅಧ್ಯಾಪಕಿಯರು ತಮ್ಮ ಬಿಡುವಿನ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಹಿಂದೀ ಕಲಿಸುವ ಕ್ರಮವಿಟ್ಟುಕೊಂಡಿದ್ದಾರೆ.

ಅದ್ದರಿಂದಲೇ ನಮ್ಮ ಕರ್ತವ್ಯವನ್ನು ಪೂರೈಸುವ ಹಾಗಾಗಲಿಲ್ಲ ನಮ್ಮಲ್ಲಿ ನಮ್ಮ ಜನರಲ್ಲಿ ಅತಿದೊಡ್ಡ ದೋಷವಾದುದಿದೆ. ಅಂಥ ದೂರದೃಷ್ಟಿ ಪೀಡೆಯನ್ನು ಕರೆಯಬಹುದು. ನಮ್ಮ ನಮ್ಮ ಉತ್ಸಾಹವನ್ನು ಗುಂಗೀ ಹುಳದ ಹಾಗೆ ಕೊರೆದು ಪೊಳ್ಳು ಮಾಡಿ ಬಿಡುತ್ತದೆ. ಟೊಳ್ಳು ಉತ್ಸಾಹವು ಬರಿಯ ಅಡಂಬರವನ್ನು ಮಾತ್ರ ಪ್ರದರ್ಶಿಸಬಲ್ಲದೆ ಕಾರ್ಯಾಚರಣೆಗೆ ಅನುವಾಗಲಾರದು. ಅದುದರಿಂದ ಹಿಂದೀ ಪ್ರಚಾರೋತ್ಸಾಹವನ್ನು ಕೊರೆದುತಿನ್ನುವ ಗೆಳೆಯರು ಅಂಥ ದೂರದೃಷ್ಟಿ ಪೀಡೆ ಗುಂಗೀಹುಳವನ್ನು ನಿರ್ನಾಶಮಾಡಬೇಕು. ಆಶಾವಾದಿಗಳಾಗಿ ರಾಷ್ಟ್ರಭಾಷಾ ಪ್ರಚಾರವನ್ನು ಸಮಸ್ಯೆಯನ್ನು ಬಿಡಿಸುವ ದೇಶಸೇವಾ ಕಾರ್ಯದಲ್ಲಿ ಸರ್ವರೂ ಒಮ್ಮತದಿಂದ ಪ್ರಸ್ತಾಪ್ರವರ್ತಕ ನೆರವಾಗಬೇಕು.

ಪ್ರೊ. ಉ. ಲಕ್ಷ್ಮೀನಾರಾಯಣ ರಾವ್,
ರಾಷ್ಟ್ರಭಾಷಾ ಶಿಕ್ಷಣ ಶಿಬಿರ, ಉಡುಪಿ.

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ

ನವಜೀವಾತು

ಎಂಬ

ಸೂತಿಕಾರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತನ ದೇಹ ಸ್ಥಿತಿಯನ್ನು ನಿರ್ಣಯಿಸಿ ತಯಾರಿಸಿದ ಪುಷ್ಟಿ-ಪೋಷಕವಾದವು ಘುರದ್ರವರಸಾಯನ.

ಚೀಫ್ ಫಿಸಿಶಿಯನ್ ಡಾ॥ ಯಂ. ಪಿ. ಶಾಸ್ತ್ರೀ, ಯಲ್. ಐ. ಎಂ.
ಕೊಡಿಯಾಲ್‌ಬೈಲ್ ಪೋಸ್ಟ್, (ಮಂಗಳೂರು.)
ಸ್ಥಾಪಕರು:— ಡಾ॥ ವಿ. ಕೆ. ಶಿವರಾಮರಾವ್, ಕಾಂಜಿಪೆಟ್ಟು

ಚಂದಾಹಣ ಬಾಕಿ ಇರುವವರು ನಾವು ಕಳುಹಿಸುವ ವಿ. ಪಿ. ಪಿ.ಯನ್ನು ದಯಮಾಡಿ ಸಕಾಲದಲ್ಲಿ ಪಡೆಯೊಳ್ಳುವಂತೆ ವಿನಂತಿ

(೧ನೇ ಪುಟದಿಂದ)

ಹುಡುಗನು ಕೈಗಾರಿಕಾಕ್ಷೇತ್ರದಲ್ಲಿ ಬುದ್ಧಿವಂತನಾದ ಕೆಲಸಗಾರನಾಗುವುದು ಅಪರೂಪವಲ್ಲ. ಗಣಿತದ ಪ್ರಶ್ನೆ ಬಿಡಿಸಲು ಬಾರದ ಹುಡುಗನೊಬ್ಬ ತಾಂತ್ರಿಕ ವಿಷಯದಲ್ಲಿ ನೈಪುಣ್ಯ ಪ್ರದರ್ಶಿಸುವುದನ್ನು ಕಂಡು ಅಚ್ಚರಿಬಿಡುವುದುಂಟು. ಗಡಿಯಾರ, ಸ್ಯೈಕಲು, ಬೀಗ, ವಿದ್ಯುತ್ತಿನ ಕೈದೀಪ ಮುಂತಾದವುಗಳನ್ನು ಚೆನ್ನಾಗಿ ರಿಪೇರಿ ಮಾಡಬಲ್ಲ ವಿದ್ಯಾರ್ಥಿಗಳೆಷ್ಟು ಶಾಲೆಯಲ್ಲಿ ದಡ್ಡರೆಂದು ಹಿಂದಿನ ಬೆಂಚಿನಲ್ಲಿ ಕುಳಿತಿರುವರು.

ಶಾಲೆಯ ಪ್ರಿನ್ಸಿಪಾಲರೊಬ್ಬರು ದಡ್ಡ ಹುಡುಗನನ್ನು ವೈದ್ಯಕ ಪರೀಕ್ಷೆಗೆ ಗುರಿಮಾಡಿಸಲು ಕರೆದುಕೊಂಡು ಹೋದರು. ಅಲ್ಲಿ ಕಂಡಾಬಟ್ಟೆಯಾಗಿ ತುಂಡು ಮಾಡಿದ್ದ ಒಂದು ಹಲಗೆಯನ್ನು ಮೊದಲಿನಂತಾಗಲು ಜೋಡಿಸುವ ಪರೀಕ್ಷೆ ನಡೆಯಿತು. ಹುಡುಗನು ಒಂದೇ ನಿಮಿಷದಲ್ಲಿ ಅದನ್ನು ಮಾಡಿದರೆ, ಆ ಪ್ರಿನ್ಸಿಪಾಲರು ಹದಿನೆಂಟು ನಿಮಿಷಗಳ ಒದ್ದಾಡಿ ಹೇಗೂ ಅದನ್ನು ಜೋಡಿಸಿ ಕೊಟ್ಟರು. ಎಂದ ಮೇಲೆ, ಯಾರು ಬುದ್ಧಿವಂತರು? ಶಾಲೆಯಲ್ಲಿ "ಏತಂಯಾ ಕವಿದು ಜಗದ್ವಿಖ್ಯಾತನಲ್ಲಾ ರಾಯರಲಿ ನ..." ಎಂಬ ಪದ್ಯವನ್ನು ಬಾಯಿಪಾಠ ಹೇಳಲು ಬಾರದ ಹುಡುಗನಿಗೆ ಮನೆ ಮುಂದಿನ ರಸ್ತೆಯಲ್ಲಿ ಓಡಾಡುವ ಎಲ್ಲ ಕಾರುಗಳ ಗುರುತು, ಅವುಗಳ ನಂಬ್ರ, ಡ್ರ್ಯೈವರನ ಹೆಸರು ವಿಳಾಸ, ಆ ಕಾರಿನ ಒಡೆಯರ ಕುಟುಂಬ ಚರಿತ್ರೆ ಎಲ್ಲ ಕಂಠಪಾಠವಾಗಿರುತ್ತದೆ. ಊರಿನ ಯಾರ್‍ಯಾರಿಗೆ ಟೆಲಫೋನು ಇವೆಯೆಂದೂ, ಆ ನಂಬ್ರ ಎಷ್ಟೆಂದೂ ಈ ಹುಡುಗ ತಟ್ಟನೆ ಹೇಳಿಬಿಡುತ್ತಾನೆ. ಹೀಗಿರುವುದರಿಂದ ನಾವು ಯಾರನ್ನೂ ಕೆಲಸಕ್ಕೆ ಬಾರದವನೆಂದು ನಿಂದಿಸುವುದು ಬೇಡ, ಎಲ್ಲರೂ ಒಂದೇ ತೆರನಾಗಿಲ್ಲ; ತಕ್ಕ ಅನುಕೂಲತೆ ಮತ್ತು ಯೋಗ್ಯ ವಾತಾವರಣ ದೊರೆತ ಪಕ್ಷದಲ್ಲಿ ಪ್ರತಿಯೊಬ್ಬನನ್ನೂ ಉತ್ಕರ್ಷಕ್ಕೇರುವುದು ಸಾಧ್ಯ.

ಆದುದರಿಂದ ಅವನಿಗಿಂತ ನಾನು ಮೇಲೆಂಬ ಅಭಿಮಾನ ತಾಳುವುದಾಗಲೀ ಅವನೂ ನಾನೂ ಒಂದೇ ಎಂದು ಗರ್ವಪಡುವುದಾಗಲೀ ಅರ್ಥಶೂನ್ಯವಾಗಿರುತ್ತದೆ. ಯಾರೊಬ್ಬನೂ ಸರ್ವಜ್ಞನಾಗಿರುವುದಿಲ್ಲ. ಮತ್ತು ಯಾರೇ ಆಗಲಿ ಎಲ್ಲರ ಮೇಲೆ ಪ್ರಭುತ್ವ ನಡೆಸುವುದೂ ಸಾಧ್ಯವಿಲ್ಲ. ಸಮಾಜದ ಧುರೀಣರು ಇರುತ್ತಾರೆ. ಹಾಗೆ ಧುರೀಣರಿರುವುದು ಅಗತ್ಯವಾಗಿ ತೋರೀತು. ವೈಜ್ಞಾನಿಕ ಕ್ಷೇತ್ರದಲ್ಲಿ, ಔದ್ಯಮಿಕ ರಂಗದಲ್ಲಿ ಶೈಕ್ಷಣಿಕ ವಿಷಯದಲ್ಲಿ, ರಾಜಕೀಯದಲ್ಲಿ ಹೀಗೆ ಪ್ರತಿಯೊಂದರಲ್ಲಿ ನಮಗೆ ಯೋಗ್ಯ ಮುಖಂಡತ್ವವಿದ್ದರೆ ಪ್ರಗತಿಗೆ ಪೋಷಕವಾದೀತು. ಆದರೆ ಯಾರೊಬ್ಬರೂ ಎಲ್ಲರಂಗದಲ್ಲಿಯೂ ಮನ್ನಣೆ ಪಡೆದಿರುವರೆಂದು ನಾವು ಎಣಿಸುವುದು ಬೇಡ. ಸರ್ವಾಧಿಕಾರಿತ್ವವನ್ನು ಮನ್ನಿಸುವುದಾಗಲೀ ಒಬ್ಬ ರಾಜನ ನಿರಂಕುಶತ್ವವನ್ನು ಒಪ್ಪುವುದಾಗಲೀ ಮನುಷ್ಯ ಸ್ವಭಾವ ವಿಶ್ಲೇಷಣ ದೃಷ್ಟಿಯಿಂದ ಸರಿಯೆನ್ನಲಾರೆವು. ಪ್ರತಿಯೊಬ್ಬನಲ್ಲಿಯೂ ಒಂದು, ಅಥವಾ ಕೆಲವು ವಿಶಿಷ್ಟ ಸಂಗತಿಗಳ ಮಟ್ಟಿಗೆ ಅಧಿಕಾರ ಸಂಪನ್ನವಾಗಿದೆ ಎಂದೇನೊ ಭಾವಿಸಬಹುದು. ಹೀಗೆ ಹೆಚ್ಚು ಹೆಚ್ಚು ಸಂಗತಿಗಳಲ್ಲಿ ಪಾಂಡಿತ್ಯವಿರುವ ಜನರನ್ನು ಗೌರವಿಸಿ ಪೂಜಿಸಬಹುದು. ಪರಿಣಾಮವಾಗಿ ಅವರ ವರ್ಚಸ್ಸಿಗೆ ಒಳಗಾಗಬಹುದು. ಆದರೆ ಅವರ ಮಾತೂ ನಡೆಯದಗಳಿಗೆಯೊಂದು ಬಂದರೆ ಆಶ್ಚರ್ಯಪಡುವ ಆಗತ್ಯವಿಲ್ಲ. ಮನುಷ್ಯ ಯಾರ ಅಂಕೆಗೂ ಒಳಗಾಗುವವನಲ್ಲ; ಅವನು ಸದಾ ಗತಿಶೀಲನಾಗಿರುವುದರಿಂದ ತನ್ನ ಹೆಜ್ಜೆ ಒದಲಾಯಿಸಿದ ಗಳಿಗೆ ಏನಾಗುವನೋ ಹೇಳಬಾರದು.

—ಓಂತತ್ಸತ್

ವಾರದ ಒಳಿತು ಕೆಡುಕುಗಳು

ತಾ. ೨೧—೫—೫೩ರಿಂದ ತಾ. ೨೭—೫—೫೩ರ ವರೆಗೆ.

ಮೇಷ— ನಿಮ್ಮ ಇಂದಿನ ಭವಿತವ್ಯವು ಉತ್ತಮ ಸ್ಥಿತಿಯಲ್ಲಿದೆ. ಪ್ರತಿಯೊಂದು ಉದ್ಯಮದಲ್ಲಿ ಒಳ್ಳೆಯ ಕೀರ್ತಿ ಲಾಭಗಳನ್ನು ಪಡೆವಿರಿ. ಸಮಾಜದಲ್ಲಿ ಮನ್ನಣೆಗಳು ಲಭಿಸುವವು. ಸ್ವಂತ ಉಪಭೋಗಕ್ಕೆ ಬೇಕಾದ ಸಕಲ ವಸ್ತು ಒಡವೆಗಳು ಅನಾಯಾಸದಿಂದ ಲಭಿಸುವವು. ಗೃಹತಾಪತ್ರಯಗಳಿಂದ ಮುಕ್ತರಾದ ನಿಮಗೆ ದಿನಯಾಪನೆಯು ಸುಗಮವಾಗುವದು. ವಿದ್ಯೋದ್ಯೋಗ ಜೀವಿಗಳಿಗೆ ಉದ್ಯೋಗದಲ್ಲಿ ನಿರೀಕ್ಷೆಗಿಂತ ಅಧಿಕ ಫಲಪ್ರಾಪ್ತಿಯಿದೆ. ನೇತ್ರಪೀಡೆ ಸಿತ್ತ ಪ್ರಕೋಪಗಳಿಗೆ ಗುರಿಯಾಗುವ ಸಂಭವವಿದೆ. ವಾರಾದಿಯ 2 ದಿನಗಳು ಪ್ರಶಸ್ತವಲ್ಲ.

ವೃಷಭ— ದೈವವು ಬಹಳ ದುರ್ಬಲವಿರುವದು. ಆದಕಾರಣ ನಿಮ್ಮ ಪ್ರಯತ್ನಗಳೆಂದು ನೀರಿನಲ್ಲಿ ಮಾಡಿದ ಹೋಮದಂತೆ ವಿಫಲವಾಗಲಿವೆ. ಸತತ ಪರ್ಯಟನದಿಂದಾಗಿ ಆರೋಗ್ಯಕ್ಕೆ ಧಕ್ಕೆಯಿದೆ. ಆರ್ಥಿಕ ದುರವಸ್ಥೆಗೊಳಗಾದ ನಿಮ್ಮ ಧೈರ್ಯಸ್ಥೈರ್ಯಗಳು ತಾವಾಗಿ ಮಾಯವಾಗುವವು. ಪತ್ನೀ ಪುತ್ರರೂ ಕೂಡ ನಿಮ್ಮ ಹಿಡಿತದಲ್ಲಿರಲಾರರು. ನಿಕಟ ಬಳಗದವರೊಡನೆ ಕಲಹ ಮಾಡುವಿರಿ. ಆದರೂ ವಾರಾಂತ್ಯದ 3 ದಿನಗಳಲ್ಲಿ ಬಾಲ್ಯಮಿತ್ರರ ನೆರವಿಂದಾಗಿ ಸುಖವಾಗಿ ಲಾಭಗಳನ್ನು ಹೊಂದುವಿರಿ.

ಮಿಥುನ— ಇಲ್ಲಸಲ್ಲದ ಖರ್ಚುವೆಚ್ಚಗಳು ಮೇಲಿಂದ ಮೇಲೆ ಪ್ರಾಪ್ತವಾಗಲಿವೆ. ದಿನಯಾಪನೆಯು ಕಷ್ಟವಾಗಿ ಹೆಂಡಂದಿರೊಡನೆ ಕಲಹಮಾಡುವ ಪ್ರಸಂಗಬರುವದು. ಆಕಸ್ಮಿಕ ಪರ್ಯಟನದಿಂದಾಗಿ ಅನೇಕ ದುಃಖಗಳಿಗೀಡಾಗುವಿರಿ. ತನುಮನಗಳಿಗೆ ಈ ಸತತ ಸುಖಶಾಂತಿಗಳಿಲ್ಲವೆಂದರೆ ತಪ್ಪಾಗದು. ಹೆದರಿಕ ಪರಿಣಮಿಸಿರುವ ನಿಮ್ಮ ಮನಸ್ಸು ಯಾವಕಾರ್ಯದಲ್ಲೂ ಮುಂದುವರಿಯದು. ವಾರಾದಿಯ 2 ದಿನಗಳು ಇದ್ದುದರಲ್ಲಿ ಉತ್ತಮವಿವೆ.

ಕರ್ಕಟ— ದೈವವು ನಿಮ್ಮ ಮೇಲೆ ಪೂರ್ಣಾನುಗ್ರಹವನ್ನಿಟ್ಟಿರುವುದು. ಈ ವಾರದಲ್ಲಿ ನಿಮಗಾವ ಭಾಗದಲ್ಲೂ ನ್ಯೂನತೆಗಳುಂಟಾಗಲಾರವು. ನಿಮಗಿಂತ ಪ್ರಬಲರಾದ ಇದಿರಾಳಿಗಳೂ ಇಂದು ಮೃಗರಾಜನಂ ಕಂಡ ಹರಿಣಗಳಂತೆ ಅಡಗಿಕೊಳ್ಳುವರು. ಸರ್ವತೋಮುಖದಿಂದ ಧನಾಗಮವಾಗಲಿದೆ. ಸಾಮಾಜಿಕ ರಾಜಕೀಯ ರಂಗಗಳಲ್ಲಿ ಅದ್ವಿತೀಯ ಕೀರ್ತಿಲಾಭಗಳನ್ನು ಪಡೆವಿರಿ. ತಾ. 23, 24 ಅತ್ಯುತ್ತಮ ದಿನವವು.

ಸಿಂಹ— ಸಖಕಷ್ಟಗಳೂ ಲಾಭನಷ್ಟಗಳೂ ಏಕಪ್ರಕಾರದಲ್ಲಿರುವವು. ಇಂದಿನ ನಿಮ್ಮ ಪ್ರಯತ್ನವು ವಿಫಲವಾಗದು. ನೌಕರಿ ವ್ಯಾಪಾರಾದಿಗಳಲ್ಲಿ ಪ್ರಯತ್ನಕ್ಕೆ ತಕ್ಕ ಫಲ ಲಭಿಸೀತು. ಗುರುಹಿರಿಯರ ವಕ್ರದೃಷ್ಟಿಗೊಳಗಾದ ನಿಮಗೆ ಆತ್ಮೀಯರ ವಿಯೋಗವುಂಟಾಗುವ ಸಂಭವವಿದೆ. ಶ್ರಮಜೀವಿಗಳಿಗೆ ಕಾಲಯಾಪನೆಯು ಸ್ವಲ್ಪ ಕಷ್ಟದಾಯಿಯಾಗಿ ಪರಿಣಮಿಸಲಿದೆ. ತಾ. 23, 24 ಹೊರತಾಗಿ ಮಿಕ್ಕದಿನಗಳು ಅನುಕೂಲವಾಗಿವೆ.

ಕನ್ಯಾ— ಸಂದ ಹೋದದಿನಗಳಿಗಿಂತ ಇಂದಿನ ದಿನಗಳು ಸುಖಕರವಾಗಬಲ್ಲವು. ಗೃಹತಾಪತ್ರಯಗಳು ಬಹುಮಟ್ಟಿಗೆ ಕಡಿಮೆಯಾಗುವವು. ಖರ್ಚಿಗೆ ತಕ್ಕಷ್ಟು ಧನವನ್ನು ಸ್ವಯಂದುಡಿಯುವಿರಿ. ಆದರೆ ವಾತಪ್ರಕೋಪದಿಂದಲೂ ಉಷ್ಣಾಧಿಕ್ಯದಿಂದಲೂ ಆರೋಗ್ಯ ಕೆಡಬಹುದು. ಮನೋರೋಗಗಳು ವಿಶೇಷವಾಗಿ ಪೀಡಿಸಲಿದೆ. ಶತ್ರುವರ್ಗದವರ ಪೀಡೆಯು ಅಧಿಕವಾದೀತು. ತಾ. 23, 24 ಈ ದಿನಗಳಲ್ಲಿ ಸುಖಭೋಜನ ಶಯನಾದಿಗಳನ್ನು ಪಡೆವಿರಿ.

ತುಲಾ— ದ್ವಾದಶದಲ್ಲಿ ಶನೈಶ್ವರನೂ ಅಷ್ಟಮದಲ್ಲಿ ರವಿಕುಜಾದಿಗಳೂ ವಿಶೇಷ ಕಷ್ಟದಾಯಿಗಳಾಗಿರುವರು. ಈ ಕಾರಣದಿಂದ ಧನನಾಶ ಪರ್ಯಟನ ದೇಹಾಲಸ್ಯ ಆಕಸ್ಮಿಕ ಗಂಡಾಂತರಗಳೂ ಒದಗುವ ಸಂಭವವಿದೆ. ಆದರೆ ಹಿಂದಿನ ದಿನಗಳಷ್ಟು ಕಷ್ಟದಾಯಿಯಾಗಿ ಪರಿಣಮಿಸದೀವಾರವು. ಆಧಿಕ ಭಾಗದಲ್ಲಿ ಕೊಂಚ ಸುಧಾರಿಸುವಿರಿ. ಕೈಗೊಂಡ ಕೆಲವೊಂದು ಕಾರ್ಯಗಳು ನಿಮ್ಮಿಚ್ಛೆಯಂತೆ ಫಲಿಸಲಿವೆ. ತಾ. 21, 22, 25, 25, 27 ಈ ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳಿಗವಕಾಶವಿರದು.

ವೃಶ್ಚಿಕ— ಸದ್ಯದ ದಿನಗಳು ಹಿಂದಿನಷ್ಟು ಸುಖದಾಯಿಗಳಾಗಲಾರವು. ವ್ಯಾಪಾರವ್ಯವಹಾರಗಳಲ್ಲಿ ವಿಘ್ನ ವಿದ್ರೋಹಗಳು ಅಧಿಕವಾಗುವುವು. ಆದರೆ ನಷ್ಟಸಂಭವಿಸದು. ಗೃಹಕೃತ್ಯದಲ್ಲಿ ಅವ್ಯವಸ್ಥೆಯು ಹೆಚ್ಚಲಿದೆ. ಗಂಡಹೆಂಡಿರೊಳು ಕಲಹವಾದೀತು. ಸದಾ ಪರ್ಯಟನದಿಂದಾಗಿ ದೇಹಾರೋಗ್ಯ ಕೆಡಬಹುದು. ಶತ್ರುವರ್ಗವು ವೃದ್ಧಿಹೊಂದುವದು. ಆದರೆ ಗುರ್ವನುಗ್ರಹವು ಪರಿಪೂರ್ಣವಾಗಿರುವ ನಿಮಗೆ ವಾರಾಂತ್ಯದ 3 ದಿನಗಳನ್ನು ಬಿಟ್ಟು ಉಳಿದ ದಿನಗಳು ಸುಖದಾಯಿಗಳಾಗಿ ಪರಿಣಮಿಸುವದು.

ಧನು— ನಿಮ್ಮ ಬಯಕೆಗಳಿಂದ ಪೂರ್ಣವಾಗಲಿವೆ. ಎಂತಹ ಕಷ್ಟಸಾಧ್ಯವಾದ ಕಾರ್ಯನಾದರೂ ನಿಮ್ಮ ಭಾಗಕ್ಕೆ ಸುಲಭವೆನಿಸೀತು. ದುಂದಿಟ್ಟ ಹೆಜ್ಜೆಯನ್ನಿಂದು ಹಿಂದಿಡಲಾರಿರಿ. ನಿರೀಕ್ಷಿಸಿದುದಕ್ಕಿಂದ ಅಧಿಕವಾದ ಫಲವನ್ನು ಪಡೆವಿರಿ. ಉದ್ಯೋಗದಲ್ಲಿ ಪ್ರಗತಿಸ್ಥಾನ ಲಾಭವೊದಗಲಿದೆ. ರಾಜಕೀಯದಲ್ಲಿಂತೂ ನಿಮ್ಮ ಬಯಕೆಯು ಅಕ್ಷರಶಃ ಫಲಿಸಲಿದೆ. ಆದರೆ ಪ್ರಬಲವಾದ ಮನೋರೋಗವು ನಿಮ್ಮನ್ನು ಸದಾ ಪೀಡಿಸಲಿದೆ. ವಾರಾಂತ್ಯದ 5 ದಿನಗಳು ಅತ್ಯುತ್ತಮವಿದೆ.

ಮಕರ— ಹೆಚ್ಚಿನ ಗ್ರಹರೂ ಪ್ರತಿಕೂಲರಾಗಿರುವುದರಿಂದ ನಿಮ್ಮ ಪೌರುಷವಿಂದು ಪೂರ್ಣಫಲವೀಯಲಾರದು. ಉಕ್ತಿಗಿಂತ ಗುಣವ್ಯ ಯವಾಗಲಿದೆ. ಧರ್ಮಕರ್ಮಗಳಲ್ಲಿ ಅನಾದರವುಂಟಾದೀತು. ಪತ್ನೀಪುತ್ರರ ಆರೋಗ್ಯದತ್ತ ಗಮನವಿಡಿರಿ. ಶತ್ರುಜನರು ಪ್ರತೀಕಾರ ತತ್ಪರರಾಗುವರು. ಆದರೂ ಇದ್ದುದರಲ್ಲಿ ತೃಪ್ತಿಯೆನಿಸೆಂದರೆ ಗುರ್ವನುಗ್ರಹವು ಚೆನ್ನಾಗಿರುವುದರಿಂದ ನಿಮಗೀ ಪೀಡೆಗಳು ಬಹ್ವಂಶ ಕಡಿಮೆಯಾಗಲಿದೆ. ತಾ. 25 26, 27, ಅನುಕೂಲ.

ಕುಂಭ— ನೌಕರೀವ್ಯಾಪಾರಾದಿಗಳಲ್ಲಿ ನಿಮ್ಮ ನಿರೀಕ್ಷೆಯು ಸಫಲವಾದೀತು. ಸಾಂಸಾರಿಕ ತಾಪತ್ರಯಗಳು ಕಡಿಮೆಯಾಗುವವು. ಬಂಧುಮಿತ್ರರ ನೆರವು ಸದಾ ಲಭಿಸಲಿದೆ. ಆದರೆ ಆಪ್ತಜನರ ವಿಯೋಗ ದುಃಖವು ಆಕಸ್ಮಾತ್ ಪ್ರಾಪ್ತವಾಗಲಿದೆ. ಶತ್ರುಜನಂ ಬಳಿಗೆ ಹಲವು ಕಷ್ಟನಷ್ಟಗಳನ್ನು ಹೊಂದುವಿರಿ. ವಾತದೋಷದಿಂದ ಆರೋಗ್ಯ ಕೆಡಲಿದೆ. ವಾರಾದಿಯ 2 ದಿನಗಳು ಹೆಚ್ಚಿನ ಅನಿಷ್ಟವನ್ನುಂಟುಮಾಡವು.

ಮೀನ— ಎಂತಹ ಕಷ್ಟಸಾಧ್ಯವಾದ ಕಾರ್ಯವೇ ಇರಲಿ ಕೊನೆಗಾಣಿಸಿಯೇತೀರುವೆನೆಂಬ ಹಠವಾದಿಗಳಾದ ನಿಮಗೆ ಈ ವಾರವು ಸಾಕಷ್ಟು ಉತ್ತಮವಾಗಿದೆಯೆನ್ನಬಹುದು. ಶತ್ರುಜನರೂ ಶರಣಾಗತರಾಗುವರು. ವ್ಯಯಕ್ಕೆ ಸರಿಯಾದ ಆಯವಿರುವುದರಿಂದ ದಿನಯಾಪನೆಯು ಸುಖವಾದೀತು. ಅಧ್ಯಾತ್ಮಿಕ ಆರೋಗ್ಯಕ್ಕೆ ಧಕ್ಕೆಯಿದೆ. ವಾರಾದಿಯ 4 ದಿನಗಳು ಅನುಕೂಲವಾಗಿವೆ.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆ ಬೇಕಾದ ವ್ಯವಸ್ಥೆ ಕರೆದರೆ ಓಗೊಡುವ ನೌಕರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ

ಪ್ರೊಪ್ರೈಟರ್:— ಕೆ. ವೆಂಕಟ್ರಮಣ ಭಟ್ರು

Edited, Printed & Published By K. H. Shetty at the Navayuga Press, Udipi, S. India

ನವಯುಗ
ಆರೋಗ್ಯ ಮಂತ್ರಿ
ಶ್ರೀ. ಎ. ಬಿ. ಶೆಟ್ಟರಿಂದ
ಉದ್ಘಾಟಿತವಾದ ವಾರಪತ್ರಿಕೆ,
ಉಡುಪಿ, ದ. ಕನ್ನಡ.

ವಾರ್ಷಿಕ ಚಂದಾ 5-12-0
6 ತಿಂಗಳಿಗೆ 3-0-0
ಬಿಡಿ ಪ್ರತಿಗೆ 0-2-0

Regd. No.
M. 3618

LICENCE No. 31
Licensed to Post without Prepayment

ನವಯುಗ

28-5-1953

Vol 32
No 38

NAVAYUGA WEEKLY POST BOX NO 22 UDIPI

ವರ್ಷ ೩೨
ವಾರ ೩೮

ಅಂತರಂಗ
ಪುಸ್ತಕ ಪತ್ರಿಕೆಯು
ಉಪಯುಕ್ತವಾದ
90 ಪುಸ್ತಕಗಳು
ರೂ. 24ಕ್ಕೆ ಸಿಗುತ್ತವೆ.
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ

ಮಧುಪರ್ಕ

ಜಾರ್ಜ ಬರ್ನಾರ್ಡ ಶಾರ ಕೃತಿಗಳನ್ನು ಚಲಚ್ಚಿತ್ರೀಕರಿಸಲು ಹಾಲಿವುಡಿನ ಅನೇಕ ಚಿತ್ರ ನಿರ್ಮಾಪಕರು ಅನುಮತಿ ಕೇಳಿ ನಿರಾಶರಾದರು. ಶಾರಿಗೆ ಸಂಭಾವನಾ ರೂಪದಲ್ಲಿ ದೊಡ್ಡ ಮೊತ್ತದ ಹಣದ ಗಂಟನ್ನು ಕೊಡಲು ಈ ಉತ್ಪಾದಕರು ಮುಂಬರಿದರೂ ಶಾ ಅವರಿಗೆ ಅಪ್ಪಣೆ ಕೊಡಲಿಲ್ಲ.

ಅವರೊಂದು ದಿನ ಪಾಸ್ಕಲ್ ಎಂಬ ಉತ್ಪಾದಕರು ಆರು ತಿಂಗಳ ಕಾಲ ಹಾಲಿವುಡಿನಲ್ಲಿದ್ದು, ಅಲ್ಲಿಯ ಪ್ರಚಾರ ದೆಸೆಯಿಂದ ಬೇಸರಪಟ್ಟು, ಇಂಗ್ಲೆಂಡಿಗೆ ವಾಪಸು ಬಂದರು. ಹಾಲಿವುಡಿನಲ್ಲಿ ಅವರಿಗೆ ಚಿತ್ರ ತೆಗೆಯುವುದೇ ಕಷ್ಟಸಾಧ್ಯವೆನಿಸಿತ್ತು. ಇಂಗ್ಲೆಂಡಿಗೆ ಬಂದವರೇ ಶಾರ ಪರಿಚಯ ಏನೇನೂ ಇಲ್ಲದಿದ್ದರೂ, ನೆಟ್ಟಗೆ ಅವರಬಳಿ ಹೋಗಿ "ನಿಮ್ಮ ಕೃತಿಗಳನ್ನು ಚಲಚ್ಚಿತ್ರೀಕರಿಸಲು ನಾನು ಅಪ್ಪಣೆ ಬೇಡುತ್ತೇನೆ" ಎಂದು ನಿಶ್ಶಂಕೆಯಿಂದ ನುಡಿದರು.

ಈ ದಿಟ್ಟತನ ಶಾರ ಮೇಲೆ ಪ್ರಭಾವ ಮಾಡಿತು. ಆದರೂ ಅವರು "ನಿಮ್ಮ ಕೈಯಲ್ಲಿ ಈಗೆಷ್ಟು ಹಣವಿದೆ?" ಎಂದು ಈ ಚಲಚ್ಚಿತ್ರ ಉತ್ಪಾದಕರನ್ನು ಕೇಳಿದರು

ಬೇರೆ ಯಾರಾದರಾಗಿದ್ದರೆ ಕೋಟಿಗಟ್ಟಲೆ ಹಣ ಕೈಯಲ್ಲಿದೆ ಎಂದು ಸುಳ್ಳು ನುಡಿದು ಶಾರ ಪ್ರೀತಿ ಸಂಪಾದಿಸಲು ನೋಡುತಿದ್ದರು. ಆದರೆ ಪಾಸ್ಕಲ್ ಹಾಗೆ ಮಾಡಲಿಲ್ಲ. "ನಿಜವಾಗಿ ನನ್ನ ಕೈಯಲ್ಲಿ ಈಗ ಇರುವುದು ಇಪ್ಪತ್ತೈದು ಶಿಲಿಂಗ್ ಮತ್ತು ಆರು ಪೆನ್ನುಗಳು. ಇದರ ಮೇಲೆ ಒಂದು ಪವನೂ ಸಾಲವಿದೆ" ಎಂದರು.

ಶಾರಿಗೆ ಈ ಪ್ರಾಮಾಣಿಕ ವರ್ತನೆ ತುಂಬ ಹಿಡಿಸಿತು. ಒಡನೆಯೇ ಅವರೊಂದು ಪವನನ್ನು ಪಾಸ್ಕಲರ ಕೈಗೆ ಕೊಟ್ಟರು, ಮತ್ತು ತಮ್ಮದೊಂದು ಕೃತಿಯನ್ನು ಚಲಚ್ಚಿತ್ರೀಕರಿಸಲು ಅಪ್ಪಣೆಯನ್ನು ನೀಡಿದರು.

ಆ ಪ್ರಸಿದ್ಧ ಚಲಚ್ಚಿತ್ರದ ಹೆಸರು—"ಪಿಗ್ಮೆಲಿಯನ್".

ಮೋಸದ ನಟನೆ

ಕಳ್ಳನ ಮನಸ್ಸು ಹುಳ್ಳ ಹುಳ್ಳಗೆ-ಎಂಬುದೊಂದು ಗಾದೆ ಇದೆ. ಇದನ್ನು ಮೋಸದ ನಟನೆಗೆ ಚೆನ್ನಾಗಿ ಅನ್ವಯಿಸಬಹುದು. ನಾಟಕದಲ್ಲಿ ನಾವು ಪಾತ್ರವಹಿಸಿ ನಟಿಸುವುದುಂಟು. ಆದರೆ ನಿಜಜೀವನದಲ್ಲಿಯೂ ರೆಕ್ಕು ಪಾತ್ರಧಾರಿಯಾಗಿ ನಟನಾ ಚಾತುರ್ಯದಿಂದ ವ್ಯವಹಾರ ಸಾಗಿಸುವುದು ಸುಲಭವೂ ಅಲ್ಲ-ಅದು ಕ್ಷೇಮತರುವುದೂ ಇಲ್ಲ. ಹೀಗಿದ್ದರೂ ನಮ್ಮಲ್ಲಿ ಅನೇಕರು ಮೋಸದ ನಟನೆಯನ್ನು ಮಾಡುತ್ತಿರುವ ಅಭ್ಯಾಸಕ್ಕೆ ಬಲಿಬಿದ್ದಿರುವುದನ್ನು ಕಾಣುತ್ತೇವೆ. ಮುಂಬಯಿಂದ ಬಂದೊಬ್ಬನನ್ನು ಕುರಿತು ವಿಚಾರಿಸಿರಿ 'ನಿನಗೇನಪ್ಪ ಕೆಲಸ?" ಎಂದರೆ ಅವನೆಂದೂ ಸತ್ಯಹೇಳುವುದಿಲ್ಲ. ಒಬ್ಬ ದೊಡ್ಡ ಸೇಠಜೀಯ ಆಪ್ತ ವರ್ಗದಲ್ಲಿಯೇ ತನ್ನ ಸ್ಥಾನವೆಂದವನು ತನ್ನ ಚತುರ ಮಾತುಗಳಿಂದ ನಮ್ಮ ಮನಸ್ಸಿನಲ್ಲಿ ಅಭಿಪ್ರಾಯ ಹುಟ್ಟಿಸಬಹುದು. ನಿಜವಾಗಿ ಅವನೊಬ್ಬ ಸೇಠಜೀಯ ಚಪ್ರಾಸಿ ಮಾತ್ರ. ನಾವು ನಾಳೆ ಅವನ ಕಪಟ ವರ್ತನೆಗೆ ಮರುಳಾಗಿ ಏನೋ ದೈವ ಬಲದಿಂದ ದೊಡ್ಡ ಮನುಷ್ಯನಾಗಿದ್ದಾನೆಂದು ಎಣಿಸುತ್ತೇವೆ. "ಆವಾರಾ" ಚಲಚ್ಚಿತ್ರದಲ್ಲಿ ರಾಜಕಪೂರ್ ತನ್ನ ತಾಯಿಯೊಡನೆ ತಾನು ಮಾಡುವ ಬಿಸಿನೆಸ್ಸು "ಇಂಪೋರ್ಟ್ ಎಂಡ್ ಎಕ್ಸ್‌ಪೋರ್ಟ್" (ಆಮದು ರಫ್ತು) ಎಂದೂ ಅದರರ್ಥ 'ಉಧರ್‌ಕಾ ಮಾಲ್ ಇಧರ್, ಇಧರ್‌ಕಾ ಮಾಲ್ ಉಧರ್" (ಅಲ್ಲಿಯ ವಸ್ತು ಇಲ್ಲಿಗೆ, ಇಲ್ಲಿಯದು ಅಲ್ಲಿಗೆ) ಎಂದೂ ಬಹಳ ಚಾತುರ್ಯದಿಂದ ಕಳ್ಳತನ ಮಾಡುವ ತನ್ನ ಕೆಲಸಕ್ಕೆ ಮುಸುಕು ಹಾಕುವಲ್ಲಿ-ನಮ್ಮಲ್ಲಿ ಹೀಗೆಯೇ ಮಾಡುತ್ತೇವೆ.

ಗೆಳೆಯರೊಬ್ಬರು ಮುಂಬಯಿಯಿಂದ ಬಂದೋರ್ವನ ಸಂಗತಿಯಲ್ಲಿ ಹೇಳುವುದುಂಟು. ನಿನಗೇನು ಸಂಬಳ ಸಿಗುತ್ತದೆಂದು ಪ್ರಶ್ನಿಸಿದರೆ ಇನ್ನೂರು ರೂಪಾಯಿ ಎಂದು ಗಟ್ಟಿಯಾಗಿ ಹೇಳಿ, ಮನಸ್ಸಿನಲ್ಲಿ ಮೂರು ತಿಂಗಳಿಗೆ ಎನ್ನುವುದು ಮರ್ಯಾದೆಯ ಲಕ್ಷಣವಂತೆ. ಮತ್ತು ದೇವರ ಎದುರು ಸತ್ಯನಿಷ್ಠನಾಗಿರುವುದಂತೆ! ಇದನ್ನೆಲ್ಲ ಏಕೆ ಹೇಳಿದವೆಂದರೆ, ನಾವೇನು ಇರುವೆವೋ ಅದಲ್ಲವೆಂಬುವನ್ನು ಬಿಂಬಿಸಲು ಹೆಚ್ಚಿನವರು ಸದಾ ಪ್ರಯತ್ನಿಸುತ್ತಲಿರುತ್ತೇವೆ. ಈ ಪ್ರಯತ್ನದಲ್ಲಿ ಕಪಟ ನಟನೆಯನ್ನು ಮಾಡಲಿಕ್ಕೆ ಹೆಚ್ಚಿನ ಅವಕಾಶವಿದೆ. ಸಾಮಾನ್ಯ ಕ್ಲಾರ್ಕನೊಡನೆ ನಿನಗೇನು ಕೆಲಸವಪ್ಪಾ ಎಂದು ಕೇಳಿದರೆ ಸರ್ವಿಸ್ ಎಂಬ ಇಂಗ್ಲೀಷು ಶಬ್ದವನ್ನೆ ಉತ್ತರವಾಗಿ ಕೊಡುವ ನೋಕರರು ಬಹಳ. ಅರ್ಜಿಯ ಕೊನೆಗೆ ಯುವರ್ಸ್ ಮೋಸ್ಟ್ ಒಬೀಡಿಯಂಟ್ ಸರ್ವೆಂಟ್ ಎಂದು ಇಂಗ್ಲೀಷಿನಲ್ಲಿ ಬರೆಯುವ ಜೂಸನಿಗೆ ಕನ್ನಡದಲ್ಲಿ ನಿಮ್ಮ ಅತ್ಯಂತ ವಿಧೇಯ ಸೇವಕನೆಂದು ಬರೆಯುವುದಕ್ಕೆ ತುಂಬ ಕೆಡುಕೆನಿಸುತ್ತದೆ. ಸೇವಕನೆಂದು ಕರೆದುಕೊಳ್ಳುವುದು ಆತ್ಮಗೌರವಕ್ಕೆ ಕುಂದೆಂದು ತೋರುತ್ತದೆ.

ಇದರಂತೆ ನಾವು ಗೆಳೆಯರೊಡನಾಗಲೀ ನಾಲ್ಕು ಮಂದಿಯೊಡನೆ [illegible] ವಾಗಲಾಗಲೀ ಹರಟೆಗೆ ತೊಡಗಿದರೆ, ಅಲ್ಲಿಯೂ ಒಂದು ನಿರ್ದಿಷ್ಟ ವಿಷಯದ ಮೇಲೆ ನಿಶ್ಚಿತ ಜ್ಞಾನವಿಲ್ಲವೆಂದು ಒಪ್ಪಿಕೊಳ್ಳಲು ನಮಗೆ ತುಂಬ ಕಷ್ಟವಾಗುತ್ತದೆ. ಭಿನ್ನ ಭಿನ್ನ ಅಭಿರುಚಿಗೆ ಸೇರಿದ ಕೆಲವರು ಕೂಡಿದಲ್ಲಿ ಸ್ವಾಭಾವಿಕವಾಗಿ ಬೇರೆ ಬೇರೆ ವಿಷಯಗಳು ಚರ್ಚೆಗೆ ಬರುತ್ತವೆ. ನಿಜವಾಗಿ ಎಲ್ಲರಿಗೂ ಆ ವಿಷಯದಲ್ಲಿ ಹೆಚ್ಚಿನ ತಿಳುವಳಿಕೆ ಇರುವುದಿಲ್ಲ. ಆದರೆ ಚರ್ಚೆಯ ಕಾಲಕ್ಕೆ ನಾವು ಅಲ್ಲಿದ್ದು ಇವರ ಮಾತುಕತೆಯನ್ನು ಕೇಳಿದರೆ ಒಬ್ಬರಿಗಿಂತ ಇನ್ನೊಬ್ಬರಿಗೆ ಹೆಚ್ಚು ಹೆಚ್ಚು ತಿಳುವಳಿಕೆ ಇದೆ ಎಂದೇ ಭಾಸವಾಗುತ್ತದೆ. ಕ್ರಿಕೆಟ್ ಆಟದ ಕುರಿತಿರಲಿ ರಾಜಕೀಯ ವಿಷಯವಿರಲಿ, ಸಿನೇಮಾ ಇರಲಿ ವ್ಯಾಪಾರ ವಹಿವಾಟಿಗೆ ಸಂಬಂಧಿಸಿರಲಿ ಮರುದಿನ ಮುಂಜಿಯ ಸುದ್ದಿಯಾಗಿರಲಿ, ಬೇಕಾದರೆ ನೆವಾಡಾದಲ್ಲಿ ನಡೆಯುತ್ತಿರುವ ಅಣುಬಾಂಬು ಸ್ಫೋಟನ ಪ್ರಯೋಗವೇ ಇರಲಿ ಯಾವ ಗೆಳೆಯನೂ ತನಗೆ ತಿಳಿದಿರುವುದು ಕಡಿಮೆ ಎಂಬುದನ್ನು ತೋರಿಸಲಾರ. ತನ್ನ ಚತುರ ಮಾತುಗಳಿಂದಲೂ ಸುಳ್ಳು ನಟನೆಯಿಂದಲೂ ತನಗೆ ಈ ಎಲ್ಲಾ ವಿಷಯಗಳಲ್ಲಿ ಸಂಪೂರ್ಣ ಮಾಹಿತಿ ಇದೆ. ಎಂಬುವನ್ನು ಸಿದ್ಧಿಪಡಿಸಲು ಆತನು ಹೇಣಾಡುವನು. ನಮ್ಮ ಗೆಳೆಯರಂತೆ ನಾವು ಸಹ ಎಂಬುದನ್ನು ಪ್ರತ್ಯೇಕ ಹೇಳುವುದು ಅನಗತ್ಯ.

[illegible] ಅನುಭವ ಬೇರೆ ಯಾರಿಗೂ ಇಲ್ಲ. ನಮಗಿರುವಷ್ಟು ತಿಳುವಳಿಕೆ ಇತರರಿಗೆ ಇಲ್ಲವೇ ಇಲ್ಲ. ನಾವೇ ಬುದ್ಧಿವಂತರು ಸಾಹಸಿಗರ ಸಹನ ಶೀಲರು. ನಮಗೆ ತಿಳಿಯದುದು ಏನೂ ಇಲ್ಲ-ನಾವೇ ಸರ್ವಜ್ಞ ಪಟ್ಟಕ್ಕೆ ಅರ್ಹರೆಂದು ವರ್ತಿಸುವುದನ್ನು ಕಂಡು ನಮಗೇಕೆ ನಗು ಬರುವುದಿಲ್ಲವೆಂಬುದೇ ಆಶ್ಚರ್ಯ! ನಾವು ಇಷ್ಟು ಕೌಶಲ್ಯದಿಂದ ನಟಿಸುತಿದ್ದೇವಲ್ಲ ಆ ನಮ್ಮ ಗೆಳೆಯನ ಮೇಲೆ ನಮ್ಮ ಪ್ರಾಭಿಮೆಯ ಪರಿಣಾಮ ಬೀರುತ್ತೇವಲ್ಲ ಎಂದು ನಮಗೆ ಆಶ್ಚರ್ಯವಾದರೂ, ಇದು ಸರಿಯಲ್ಲವೆಂದು ನಾವು ಭಾವಿಸುವುದಿಲ್ಲ. ಮಹನೀಯರೊಬ್ಬರು ನಮ್ಮ ಈ ಪ್ರವೃತ್ತಿಯನ್ನು ಹೀಗೆ ವರ್ಣಿಸಿರುವರು — "ಮೋಸದ ನಟನೆಯಿಂದ ದೊರಕುವ ಒಂದೇ ಒಂದು ಲಾಭವೆಂದರೆ, ಇತರರನ್ನು ನಾವು ಮರುಳು ಮಾಡುತ್ತೇವಲ್ಲ ಎಂಬ ಭಾವನೆಯಿಂದ ನಾವೇ ಮರುಳಾಗುವುದೆಂದು ಕೇಳಬಹುದು!" ಇದನ್ನೆ ಇನ್ನೊಂದು ರೀತಿ ಹೇಳವುದಾದಲ್ಲಿ—ನಾವು ಯಥಾರ್ಥವನ್ನು ಎದಿರಿಸಲು ಇಚ್ಛಿಸುವುದಿಲ್ಲ.

(೧೦ನೇ ಪುಟ ನೋಡಿರಿ)

ದಿ ಜುಪಿಟರ್ ಜನರಲ್
ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬಾಯಿ.

ಆಸ್ತಿ ಬದುಕು ರೂ. 3 ಕೋಟಿ 10 ಲಕ್ಷಕ್ಕೆ ಮಿಕ್ಕಿದೆ.

ಮೆಸರ್ಸ್ ಹೆಗ್ಡೆ ಎಂಡ್ ರಾವ್, ಶಿರ್ವ

ಇವರನ್ನು ದಕ್ಷಿಣ ಕನ್ನಡ ಜಿಲ್ಲೆ, ಕೊಡಗು ಮತ್ತು ಮೈಸೂರು ಸ್ಟೇಟಿನ ಹಾಸನ, ಕಡೂರು, ಶಿವಮೊಗ್ಗ ಜಿಲ್ಲೆಗಳ ನಮ್ಮ ಚೀಫ್ ಏಜಂಟರಾಗಿ ನೇಮಿಸಿದ್ದೇವೆ ಎಂದು ತಿಳಿಸಲು ಸಂತೋಷವಾಗುತ್ತದೆ. ಈ ಎಲ್ಲಾ ಜಿಲ್ಲೆಗಳಲ್ಲಿ ಕಂಪೆನಿಯ ಪ್ರಾತಿನಿಧ್ಯ ವಹಿಸಿ ಕೆಲಸ ಮಾಡಲು ಸಮರ್ಥ ಹಾಗೂ ಉತ್ಸಾಹಿ ಜನರಿಂದ ಅರ್ಜಿಗಳನ್ನು ಸ್ವೀಕರಿಸಲಾಗುವುದು

ಶ್ರೀ. ಎಸ್. ಎ. ಹೆಗ್ಡೆ,
ಚೀಫ್ ಏಜಂಟ್, ಶಿರ್ವ ಪೋಸ್ಟು, ದ. ಕನ್ನಡ.
ಇವರಿಗೆ ದಯಮಾಡಿ ಒಡನೆಯೇ ಬರೆಯಿರಿ
ಮೆನೇಜರ್.

ಆದಿವಾಸಿಗಳ ಮೂಢನಂಬಿಕೆ

ನಿತ್ಯಜೀವನದಲ್ಲಿ ಮಾಂತ್ರಿಕ ವಿದ್ಯೆಯ ಪ್ರಭಾವ

— ೧ —

ಮಂತ್ರ ಮಾಟಗಳ ಮೇಲೆ ಇಂದಿನ ಸುಧಾರಿತ ಮತ್ತು ಸುಶಿಕ್ಷಿತ ಜನರಿಗೂ ನಂಬಿಕೆ ಇರುವುದನ್ನು ಕಾಣುವಾಗ— ಪ್ರಾಚೀನ ಸಂಸ್ಕೃತಿ ಮರ್ಯಾದೆಗಳನ್ನು ಪರಿಪಾಲಿಸುತ್ತಾ ಬಂದಿರುವ ಆದಿವಾಸಿಗಳಲ್ಲಿ ಈ ಬಗ್ಗೆ ಹೆಚ್ಚು ಶ್ರದ್ಧೆ ಇರುವುದು ಸ್ವಾಭಾವಿಕವೇ. ಮಾಂತ್ರಿಕ ವಿದ್ಯೆ ಕೇವಲ ಮಿಥ್ಯೆ ಎಂಬುದಾಗಿ ಪ್ರತಿಪಾದಿಸುವ ಜನರು ಸಹ ಹೃದಯಾಂತರಾಳದಲ್ಲಿ ಈ ಚಾರಣ ಮಾರಣ ಪ್ರಯೋಗದ ಪ್ರಭಾವದಿಂದ ಮುಕ್ತರಾಗಿರುವರೋ ಎಂಬ ಬಗ್ಗೆ ಸಂಶಯವಿದೆ. ಭಾರತದಲ್ಲಿರುವ ಬುಡಕಟ್ಟಿನ ಜನಾಂಗಕ್ಕೆ ಸೇರಿದವರಲ್ಲಿ ಈ ಪದ್ಧತಿಯು ವಿಶೇಷ ಬಳಕೆಯಲ್ಲಿದೆ. ನಿತ್ಯ ವ್ಯವಹಾರದ ಅನಿವಾರ್ಯ ಅಂಗವಾಗಿ, ಮಾಂತ್ರಿಕ ವಿದ್ಯೆಯು ಅವರಲ್ಲಿ ಪ್ರಾದುರ್ಭಾವ ಹೊಂದಿರುತ್ತದೆ. ಬಿಹಾರ ರಾಜ್ಯದಲ್ಲಿ ಅನೇಕ ಲಕ್ಷ ಆದಿವಾಸಿಗಳು ಮಾಂತ್ರಿಕ ವಿದ್ಯೆಯ ಮೋಡಿಗೆ ಬಲಿಯಾಗಿರುವರು. ಇವರಿಗೆ ಚಾರಣ ಮಾರಣದಲ್ಲಿ ಅತ್ಯಂತ ಶ್ರದ್ಧೆಯೂ ಭಕ್ತಿ ವಿಶ್ವಾಸವೂ ಇರುತ್ತದೆ. ನೂರಾರು ಮಂದಿ ಮಾಟಗಾರ್ತಿಯರಾಗಿ, ಮಾಂತ್ರಿಕರಾಗಿ, ಮಾಂತ್ರಿಕ ವೈದ್ಯರಾಗಿ ತಮ್ಮ ಜೀವನ ನಿರ್ವಹಿಸುತ್ತಿರುವರು. ಬಿಹಾರಿನ ಛೋಟಾ ನಾಗಪುರ ಮತ್ತು ಸಂತಾಲ ಪರಗಣೆಯ ಆದಿವಾಸಿಗಳಿಗೆ ಮಾತ್ರವಲ್ಲ, ಇಂಗ್ಲೀಷು ವಿದ್ಯೆ ಕಲಿತ ಬುದ್ಧಿವಂತರಾದ ನಾಗರಿಕ ವರ್ಗದವರಿಗೂ ದೆವ್ವಗಳ ಈ ಲೀಲೆಯ ಮೇಲೆ ನಂಬಿಕೆ ಇದೆ. ನೇಪಾಳದಲ್ಲಿ ಪ್ರಚಲಿತವಿರುವ ತಾಂತ್ರಿಕ ವಿದ್ಯೆಯ ಪ್ರಭಾವದಿಂದಲೋ ಎಂಬಂತೆ, ಅದಕ್ಕೆ ಹೊಂದಿಕೊಂಡಿರುವ ಚಂಪಾರಣ್ಯ ಜಿಲ್ಲೆಯ ಪರಿಶಿಷ್ಟ ವರ್ಗದ ಜನರಲ್ಲಿಯೂ ಈ ವಿದ್ಯೆಗೆ ಹೆಚ್ಚಿನ ಮನ್ನಣೆ ಕಂಡುಬರುತ್ತದೆ.

— ೨ —

ದೆವ್ವಗಳ ಪೂಜೆಯನ್ನು ಮಾಡಬೇಕೆನ್ನುವ ಸಂಪ್ರದಾಯವೇ ಈ ಮಾಟ ಮೋಡಿಗಳ ಮೂಲದಲ್ಲಿರುತ್ತದೆ. ಈ ಆದಿವಾಸಿಗಳು ಒಂದು ಮಹಾದೈವವಿದೆ ಎಂದು ನಂಬುತ್ತಾರೆ. ಈ ಮುಖ್ಯ ದೆವ್ವದ ಕೈಕೆಳಗೆ ರೋಗೋತ್ಪತ್ತಿ ಮಾಡುವ, ಸಂಪತ್ತನ್ನು ಹೆಚ್ಚಿಸುವ ಮುಂತಾದ ಒಂದೊಂದೂ ಶುಭಾಶುಭ ಕೆಲಸಗಳನ್ನು ನಿರ್ವಹಿಸುವ ಅಸಂಖ್ಯ ಸಣ್ಣ ದೆವ್ವಗಳಿರುತ್ತವೆ. ಇವರಲ್ಲದೆ ಅರಣ್ಯ ಪ್ರದೇಶದಲ್ಲಿಯೋ ಸ್ಮಶಾನದಲ್ಲಿಯೋ ವಾಸಮಾಡುವ ದೆವ್ವಗಳ ಕುಟುಂಬಗಳು ಇರುತ್ತವೆ. ಇನ್ನು ಕೊನೆಯದಾಗಿ ಮನುಷ್ಯನ ಆತ್ಮವು ಶರೀರದಿಂದ ಬೇರೆಯಾದೊಡನೆಯೇ ಅದರಜೊತೆಗೂಡಿಸಾಗುವ ಚಪ್ರಾಸಿ (=ಪೇದ) ದೆವ್ವಗಳೂ ಇವೆ. ಸಾಮಾನ್ಯ ಆದಿವಾಸಿಗೆ ಸರಕಾರೀ ಪೇದೆಯೇ ಮಹಾ ವ್ಯಕ್ತಿಯಾಗಿರುವನು; ಆದ ದರಿಂದಲೋ ಏನೋ, ದೆವ್ವಗಳ ಮಾಲಿಕೆಯಲ್ಲಿಯೂ ಚಪ್ರಾಸಿಯೊಬ್ಬನಿರುವುದು ಭೂಷಣವೆಂದೇ ಅವನ ಗ್ರಹಿಕೆ. ನೀರಿನಲ್ಲಿ ಮುಳುಗುತ್ತಿರುವ ಒಂದು ದೆವ್ವವು ಮಾಟಗಾರ್ತಿಯರಿಗೂ ಮಾಂತ್ರಿಕರಿಗೂ ತನ್ನಿಂದಾದಷ್ಟು ಸೇವೆಯನ್ನು ಮಾಡುತ್ತದೆ. ಈ ದೆವ್ವಕ್ಕೋಸ್ಕರ ಪ್ರತಿ ಹಳ್ಳಿಯಲ್ಲಿ ಒಂದು ಸ್ಥಾನವನ್ನು ಮೀಸಲಿಡುತ್ತಾರೆ. ಅಲ್ಲಿ ಯಾರೊಬ್ಬರೂ ಹೊಲಮನೆ ಮಾಡಲಾರರು; ಅಥವಾ ಆ ಪ್ರದೇಶದ ಮರಗಿಡಗಳನ್ನೂ ಕಡಿಯಲಾರರು. ದೆವ್ವಗಳ ಮುಖ್ಯಾಧಿಕಾರಿಯ ಅಪ್ಪಣೆಯನ್ನು ಪಡೆಯದೆ ಈ ನಿಯಮಕ್ಕೆ ವಿರುದ್ಧ ನಡೆದರೆ ಅಂಥವನ ಗತಿ ನೆಟ್ಟಗಾಗುವುದಿಲ್ಲ. ಪ್ಲೇಗು ಮುಂತಾದ ಸೋಂಕು ರೋಗಗಳು ಬಂದಾಗ ಪೂಜೆ ಮಾಡಿ ಆರಾಧಿಸಲ್ಪಡುವ ಒಂದು ದೆವ್ವವಿದೆ ಮಾಂಸ, ಅಕ್ಕಿಯು ಮದ್ಯ ಮುಂತಾದವುಗಳನ್ನು ಈ ದೆವ್ವಕ್ಕೆ ನೈವೇದ್ಯ ಮಾಡಬೇಕು ಸಾಮಾನ್ಯ ರೋಗಗಳುಂಟಾದಾಗ ಪೂಜಿಸಲ್ಪಡುವ ಇನ್ನೊಂದು ದೆವ್ವಕ್ಕೆ ಸಾಮಾನ್ಯ ರೀತಿಯ ನೈವೇದ್ಯವೇ ಸಾಕಾಗುತ್ತದೆ ಮಾಂತ್ರಿಕ ವೈದ್ಯರು ಹೆಚ್ಚಾಗಿ ಈ ದೆವ್ವವನ್ನು ಒಲಿಸುವುದಕ್ಕೆ ಪ್ರಯತ್ನಪಡುವರು. ಈ ದೆವ್ವಗಳಲ್ಲದೆ ಕುಟುಂಬದಲ್ಲಿ ಸತ್ತುಹೋದ ಪ್ರತಿಯೊಬ್ಬರೂ ಒಂದೊಂದು ದೆವ್ವವೇ ಆಗಿರುವರು

— ೩ —

ಆದಿವಾಸಿಗಳಿಗೆ ದೆವ್ವಗಳೆಂದರೇನೇ ಬಾಳ್ವೆ. ದೆವ್ವಗಳನ್ನು ತಿರಸ್ಕಾರ ದೃಷ್ಟಿಯಿಂದ ಅವರು ನೋಡುವುದೇ ಇಲ್ಲ ಬುದ್ಧಿವಂತಿಕೆಯಲ್ಲಿಯೂ ಅದ್ಭುತ ಶಕ್ತಿಯಲ್ಲಿಯೂ ಈ ದೆವ್ವಗಳಿಗೆ ಇದಿರೇಟು ಹಾಕಬಲ್ಲವರು ಯಾರೂ ಇಲ್ಲವೆಂದು ಆದಿವಾಸಿಗಳ ತಿಳುವಳಿಕೆ. ಪ್ರಕೃತಿಯಿಂದಾಗಲೀ ಸಾವಿನಿಂದಾಗಲೀ ಈ ದೆವ್ವಗಳ ಮೇಲೆ ಯಾವುದೇ ಅನಿಷ್ಟ ಪರಿಣಾಮವನ್ನುಂಟುಮಾಡಲು ಬಾರದೆಂದವರ ಅಭಿಪ್ರಾಯ ನಮ್ಮ ಈ ದೃಶ್ಯ ಪ್ರಪಂಚಕ್ಕೆ ತೀರ ನಿಕಟವಾದ ಇನ್ನೊಂದು ಲೋಕದಲ್ಲಿ ಈ ದೆವ್ವಗಳೆಲ್ಲ ವಾಸಿಸುತ್ತಿವೆಯಾಗಿ ಆದಿವಾಸಿಗಳ ನಂಬಿಕೆ. ಇಷ್ಟು ಶ್ರದ್ಧೆ ಇದ್ದರೂ ಮಾಯಾ ಮೋಡಿಗಳಿಗೆ ನೇರಾಗಿ ಸಂಬಂಧಿಸಿದ ದೆವ್ವಗಳ ಆದಿವಾಸಿಗಳಿಗೆ ಕಾಟವಾಗಿಯೇ ತೋರುತ್ತದೆ. ಈ ಮಾರಿ ದೆವ್ವಗಳನ್ನು ಅವುಗಳು ಕೊಡುವ ಉಪದ್ರವದ ಹೆಸರಿನಿಂದಲೇ ಕರೆಯುವುದು ವಾಡಿಕೆ. ಉದಾಹರಣೆಗೆ ವಿಷವೇರಿಸಿ ಸಾಯಿಸುವ ದೆವ್ವಕ್ಕೆ ನಜಂಬೊಂಗಾ ಎನ್ನುತ್ತಾರೆ. ಆದರೂ ಈ ದೆವ್ವಗಳನ್ನು ಮಾಂತ್ರಿಕರೂ ಮಾಟಗಾರ್ತಿಯರೂ ತಮ್ಮ ಯುಕ್ತಿಯಿಂದ ವಿದ್ಯಾಬಲದಿಂದ ಒಲಿಸಿಕೊಳ್ಳಬಹುದು ಎಲ್ಲ ದೆವ್ವಗಳನ್ನು ಹೀಗೆ ತಮ್ಮ ವಿದ್ಯೆಯ ಮಹಿಮೆಯಿಂದ ಒಲಿಸಿಕೊಳ್ಳುವುದು ಕಷ್ಟಸಾಧ್ಯ ಆದರೂ ದುರ್ಮರಣಗಳಿಗೀಡಾದವರ ಆತ್ಮಗಳನ್ನೂ ಹೆರಿಗೆಯ ಕಾಲದಲ್ಲಿ ಸತ್ತ ಹೆಂಗಸರ ಆತ್ಮಗಳನ್ನೂ ಸುಲಭದಲ್ಲಿ ವಶೀಕರಿಸಬಹುದು. ಈ ಮಾಟಗಾರರ ಪ್ರಭಾವದಿಂದ ಮುಕ್ತಿ ಪಡೆಯಬೇಕಾದರೆ ಒಂದೇ ಒಂದು ಉಪಾಯವಿದೆ. ಸೋಖಾ ಅಥವಾ ದಿಯೋರಾ ಇವರು ಮಾಡುವ ಯಾಗಕರ್ಮಗಳೂ ಹೇಳುವ ಮಂತ್ರಗಳು ಮಾಟಗಾರರ ಮಾಯಾಮೋಡಿಗಳಿಂದ ರಕ್ಷಿಸಬಲ್ಲುವು. ಮಾಂತ್ರಿಕ ವೈದ್ಯರ ಮೇಲಿನ ಶ್ರೇಣಿಯವರನ್ನು ಸೋಖಾ… ದು ಕರೆಯುವರು. ಅಕ್ಕಿ, ಮೂರ್ತಿ, …ಜ, ಹಾಲು, ತುಪ್ಪ ಮುಂತಾದುವುಗಳ… ದ ಸೋಖಾ ಜನರು ತಮ್ಮ ವಿದ್ಯಾಪ್ರದರ್ಶನ ಮಾಡುತ್ತಾರೆ. ರೋಗವನ್ನಾಗಲೀ ಕೆಟ್ಟ ಪ್ರಸಂಗವನ್ನಾಗಲೀ ಉಂಟುಮಾಡಿದ ದೆವ್ವವನ್ನು ಕಂಡುಹಿಡಿಯುವುದು ಈ ಸೋಖಾ ಜನರ ಮುಖ್ಯ ಕೆಲಸ. ಸೋಖಾನಿಗೆ ಈ ಸಾಮರ್ಥ್ಯವು ಮಹಾದೇವನಿಂದಲೋ ಪಾರ್ವತಿಯಿಂದಲೋ ಗಂಗಾಮಾತೆಯಿಂದಲೋ ಬರುತ್ತದೆ. ಅಂತೂ ಮುಖ್ಯ ದೆವ್ವದ ಕೃಪೆಯಿಂದ ಜ್ಞಾನವಾಗುವುದಲ್ಲ. ತನ್ನ ಆರಾಧನೆಯ ಪರಿಣಾಮವಾಗಿ ಸೋಖಾನು ಉಪದ್ರವಕ್ಕೆ ಕಾರಣವಾದ ದೆವ್ವ ಮಾಟಗಾರ್ತಿಯ ಅಥವಾ ಮಾಂತ್ರಿಕನ ಹೆಸರನ್ನೂ ಈ ಕಾಟದ ನಿವಾರಣೆಗೆ ಕೈಗೊಳ್ಳಬೇಕಾದ ಕ್ರಮಗಳನ್ನು ವಿವರಿಸುತ್ತಾನೆ. ಈ ಉಪಶಮನಗಳನ್ನು ತಿಳಿಸುವುದಷ್ಟೇ ಅವನ ಕೆಲಸ—ಅದನ್ನು ಮಾಡಿಸಬೇಕಾದರೆ ಬೇರೆ ಜನರ ಕಡೆ ಹೋಗಬೇಕು.

— ೪ —

ಹೀಗೆ ದೆವ್ವಗಳನ್ನು ಒಲಿಸುವುದಕೋಸ್ಕರ ಪೂಜೆ ಪುನಸ್ಕಾರಗಳನ್ನೂ ನೈವೇದ್ಯಗಳನ್ನೂ ಅರ್ಪಿಸುವುದಕ್ಕೆ ದಿಯೋರಾ ಜನರು ಇದ್ದಾರೆ. ಇವರು ಹೇಳುವ ಮಂತ್ರದಿಂದ ಮುಖ್ಯ ದೆವ್ವವು ಸಂತುಷ್ಟವಾಗುತ್ತದೆ. ಯಾವುದಾದರೊಂದು ಮಾಧ್ಯಮದ ಮೂಲಕವಾಗಿಯಾಗಲೀ ನೋಹಿನಿ ಪ್ರಭಾವದಿಂದಾಗಲೀ …ಯ ಸೂಚನೆಯಿಂದಾಗಲೀ ಮಾಟದ ಮೂಲವನ್ನು ಕಂಡುಹಿಡಿಯುತ್ತಾರೆ. ಒಬ್ಬ ಹುಡುಗನನ್ನು ಮಾಧ್ಯಮವಾಗಿ …ಸಿ ಅವನಿಗೆ ಪ್ರಶ್ನೆ ಉಪಪ್ರಶ್ನೆಗಳನ್ನು ಹಾಕುವುದರ ಮೂಲಕ ಮಾಟದ ಮೂಲವನ್ನು ಗೊತ್ತುಪಡಿಸುವುದುಂಟು. ಸೋಖಾ ಜನರು ಇಂಥ ಪ್ರಸಂಗಗಳಲ್ಲಿ ಆವೇಶಭರಿತರಾಗುವುದುಂಟು. ಅವರನ್ನು ನೋಡಲು ಭಯಂಕರ… ಕೀಟಾಣುಗಳಿಂದಾಗಿ ಅಥವಾ ದೆವ್ವದ ಪ್ರವೇಶದಿಂದಾಗಿ ಉಂಟಾಗಬಹುದಾದ ವಿಷ ಅಥವಾ ಕೀಟಾಣುಗಳ ಕಾರಣದಿಂದ ಉಂಟಾದ ರೋಗಗಳನ್ನು ಉಪಶಮನಗೊಳಿಸಲು ಈ ಮಾಂತ್ರಿಕ ವೈದ್ಯರ ಬಳಿ ಔಷಧಿ ಗಿಡಮೂಲಿಕೆಗಳಿರುತ್ತವೆ. ಆ… ಮಾಟಗಾರರ ಮಾಟದ ಪರಿಣಾಮವಾಗಿ ಆ ರೋಗ ಉಂಟಾದಾಗ ರೋಗೋಪಶಮನವನ್ನು ಇಷ್ಟು ಸುಲಭದಲ್ಲಿ ಮಾಡಲಾರನು. ಸಾಮಾನ್ಯ ಮಾಂತ್ರಿಕ ವೈದ್ಯರಿಗೆ ಇದು ನೀಗುವ ಕೆಲಸವಲ್ಲ. ಒ… ಪಾಂಡಿತ್ಯ ಸಂಪನ್ನರನ್ನು ಇದಕ್ಕೆ ಹುಡುಕಬೇಕಾಗುವುದು. ಅದ್ಭುತ ಜೀವನವನ್ನು ನಡೆಸುತ್ತಿರುವ ಮತ್ತು ಶ್ಮಶಾನ…

(೧೦ನೇ ಪುಟ ನೋಡಿರಿ)

LIFE INSURANCE SELLING?

"Canara Mutual" has demonstrated that life insurance selling can be as respectable a profession as any other. Canara Mutual agents enjoy respect and regard from the public.

We have at our Head Office a newest psychological test that can state within an hour the chances of success in the field of a prospective agent. Educated young men who want to carve out a brilliant independent career will please contact

THE MANAGING DIRECTOR,
The CANARA MUTUAL ASSURANCE CO. Ltd.,
Head Office: **UDIPI**, S. INDIA. ESTD: 1935



ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ. ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ. ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಕಡಲ ರಾಣಿಯ ಕಿರೀಟಧಾರಣೆ

ಇಂಗ್ಲೆಂಡಿನ ಇತಿಹಾಸದಲ್ಲಿ ಚಿರಸ್ಮರಣೀಯವಾದ ಸನ್ನಿವೇಶ

ಇತಿಹಾಸದ ಪುಟಗಳಲ್ಲಿ ಬ್ರಿಟನನ್ನು „ಕಡಲ ರಾಣಿ" ಎಂಬುದಾಗಿ ಗೌರವದಿಂದ ವರ್ಣಿಸಿರುವುದನ್ನು ಕಾಣುತ್ತೇವೆ. ಬ್ರಿಟನಿಗೆ ಈ ಸಂಬೋಧನೆ ತುಂಬ ಒಪ್ಪುತ್ತದೆ. ಇಂದಿಗೂ ಬ್ರಿಟಿಷ್ ನೌಕಾ ಪಡೆಯೊಡನೆ ಸ್ಪರ್ಧಿಸಬಲ್ಲ ಸಾಮರ್ಥ್ಯ ಇತರ ರಾಷ್ಟ್ರಗಳಿಗಿರುವುದಿಲ್ಲ. ಕಡಲ ಮೇಲಿನ ಸ್ವಾಮಿತ್ವದ ಬಲದಿಂದಲೇ 'ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸೂರ್ಯ ಮುಳುಗುವುದೆಂದಿಲ್ಲ" ಎಂಬಷ್ಟು ವಿಶಾಲವಾದ ರಾಜ್ಯವನ್ನು ಬ್ರಿಟಿಷರು ಕಟ್ಟಿಕೊಂಡು ಮೊನ್ನೆ ಮೊನ್ನೆಯ ವರೆಗೆ ಆಳಿದರು. ಆದರೆ ಕಾಲಗತಿಯ ಪರಿಣಾಮವೆಂದೇ ಹೇಳಬೇಕು — ಬ್ರಿಟನಿನಲ್ಲಿ ಅರಸೊತ್ತಿಗೆಯೊಂದು ಉಳಿದಿದೆಯಲ್ಲದೆ, ಸಾರ್ವಭೌಮಾಧಿಕಾರವೆಲ್ಲ ಕಳೆದು ಹೋಗಿದೆ. ಭಾರತಕ್ಕೆ ಸ್ವಾತಂತ್ರ್ಯ ನೀಡುವುದಕ್ಕೆ ಮುಂಚೆ ಇದ್ದ ಸಾಮ್ರಾಜ್ಯಶಾಹಿತ್ವದ ಅಹಂಕಾರ ಇಂದು ಮಣ್ಣು ಮುಕ್ಕಿದೆ. ಆದರೂ ಲೋಕದಲ್ಲಿ ಬೇರಾವುದೇ ರಾಷ್ಟ್ರದಲ್ಲಿ ಬ್ರಿಟನಿಗೆ ಸರಿಜೋಡಿಯಾಗಬಲ್ಲ ರಾಜವಂಶ ಉಳಿದಿಲ್ಲವೆಂಬ ಹೆಮ್ಮೆ ಇನ್ನೂ ಬ್ರಿಟಿಷರಿಗೆ ಇದೆ. ಕಳೆದ ಒಂದು ತಲೆಮಾರಿನ ಕಾಲಾವಧಿಯಲ್ಲಿ ನಾವು ಕಂಡ ರಾಜವಂಶದ ಪತನ ಚಿತ್ರವನ್ನು ವಿಮರ್ಶಿಸಿದರೆ— ಈ ಮಾತು ಸತ್ಯವೆಂದೇ ತೋರುತ್ತದೆ.

ರಾಜ ವಂಶದ ಪತನ

ಈಗ ಯುರೋಪಿನಲ್ಲಿ ರಾಜ ವಂಶಗಳು ಉಳಿದಿರುವುದು (೧) ಬ್ರಿಟನ್ (೨) ಬೆಲ್ಜಿಯಂ, (೩) ನೆದರ್ಲೆಂಡ್ಸ್, (೪) ಗ್ರೀಸ್ (೫) ಸ್ವೀಡನ್ ಮತ್ತು (೬) ನಾರ್ವೆ ದೇಶಗಳಲ್ಲಿ ಮಾತ್ರ. ಇತ್ತೀಚೆಗೆ ಉರುಳಿದ ಅರಸೊತ್ತಿಗೆಗಳಲ್ಲಿ ಮುಖ್ಯವಾದುವು. (೧) ಫ್ರಾನ್ಸ್ (೨) ಜರ್ಮನಿ (೩) ಇಟಲಿ (೪) ರಶಿಯಾ (೫) ಆಸ್ಟ್ರಿಯಾ (೬) ಸ್ಪೈನ್ (೭) ಪೋರ್ಚುಗಲ್ (೮) ಯುಗೊಸ್ಲಾವಿಯಾ (೯) ಬಲ್ಗೇರಿಯಾ (೧೦) ರುಮೇನಿಯಾ (೧೧) ಟರ್ಕಿ (೧೨) ಆಲ್ಬೇನಿಯಾ (೧೩) ಬ್ರೆಜಿಲ್ ಮತ್ತು ಮೊನ್ನೆತಾನೆ (೧೪) ಈಜಿಪ್ಟ್. ಮಧ್ಯ ಪೂರ್ವದಲ್ಲಿ ಹಬ್ಬಿರುವ ಕ್ಷೋಭೆಯನ್ನು ನೋಡಿದರೆ ಅಲ್ಲಿರುವ ಮುಸ್ಲಿಂ ರಾಜರ ಭವಿಷ್ಯ ತೀರ ಅನಿಶ್ಚಿತವೆಂದು ಗೋಚರಿಸುತ್ತದೆ. ಕಳಿತ ಹಣ್ಣುಗಳಂತೆ ಯಾವ ಕ್ಷಣಕ್ಕೂ ಇಲ್ಲಿಯ ಅರಸೊತ್ತಿಗೆ ನೆಲಕ್ಕುರುಳಬಹುದು. ಆದರೆ ಇತರೆಲ್ಲ ದೇಶಗಳಿಂತ ಹೆಚ್ಚು ಭದ್ರವಾದ ರಾಜಪೀಠ ಬ್ರಿಟನಿನದ್ದು ಎನ್ನುವುದರಲ್ಲಿ ಸಂದೇಹವಿಲ್ಲ. ಇದಕ್ಕೆ ಬ್ರಿಟನಿನಲ್ಲಿ ನಡೆದುಕೊಂಡು ಬಂದಿರುವ ಪಾರ್ಲಿಮೆಂಟರಿ ಪದ್ಧತಿ ಮತ್ತು ಸಾಂಪ್ರತಿಕ ಮಹತ್ವವೇ ಕಾರಣವೆನ್ನಬಹುದು. ಬ್ರಿಟಿಷರಿಗೆ ಅರಸು ಮನೆತನದ ಮೇಲೆ ಈಗಲೂ ಗೌರವವಿದೆ. ಬ್ರಿಟಿಷ್ ಶಾಸಕರು ಕಟ್ಟಿದ ವಿಶಾಲವಾದ ಸಾಮ್ರಾಜ್ಯದ ಪರಿಷ್ಕೃತ ಸ್ಥಾನದಲ್ಲಿ ರಾರಾಜಿಸುವ ರಾಜಮನೆತನ ಬ್ರಿಟಿಷ ಪ್ರಜೆಗಳಲ್ಲಿ ಭಕ್ತಿಶ್ರದ್ಧೆಯನ್ನು ಉಕ್ಕೇರಿಸುತ್ತದೆ. ಧಾರ್ಮಿಕವಾಗಿ ಅರಸರ "ದೈವೀ ಅಧಿಕಾರ"ವನ್ನು ಒಪ್ಪಿಕೊಂಡ ಬ್ರಿಟಿಷರು ರಾಜ ನಿಷ್ಠೆಯನ್ನು ತೋರಿಸುತ್ತಾ ಬಂದಿರುವರು. ಇದರಂತೆ, ಕಾಲಗತಿಯನ್ನು ಹೊಂದಿಕೊಂಡು ನಡೆದ ಪರಿವರ್ತನೆಗಳನ್ನು ರಾಜನಿಷ್ಠೆಗೆ ಕುಂದು ಉಂಟಾಗದಂತೆ ಸ್ವೀಕರಿಸುವ ಕೆಚ್ಚನ್ನೂ ಬ್ರಿಟಿಷರು ತೋರಿಸಿರುವರು. ಪ್ರಜಾಪ್ರಭುತ್ವದ ಈ ದಿನಮಾನದಲ್ಲಿ ಬ್ರಿಟನ್ನಿನಲ್ಲಿ ಅಸ್ತಿತ್ವದಲ್ಲಿರುವ ಪಾರ್ಲಿಮೆಂಟರಿ ರೀತಿಯು ಆಡಳಿತ ಜನರ ಆಶೋತ್ತರಗಳನ್ನು ಪೂರೈಸಿರುತ್ತದೆ. ಘಟನಾತ್ಮಕವಾಗಿ ಪರಮಾಧಿಕಾರವನ್ನು ಮಾತ್ರ ಕಿರೀಟ ಧರಿಸಿದ ರಾಜ (ಅಥವಾ ರಾಣಿ) ಪಡೆದಿರುವನೇ ಹೊರತು— ನಿಜವಾದ ಅಧಿಕಾರವು ಜನರಿಂದ ಚುನಾಯಿತನಾದ ಪ್ರಧಾನ ಮಂತ್ರಿಯ ಕೈಯಲ್ಲಿರುತ್ತದೆ.

ಧಾರ್ಮಿಕ ವಿಧಿ

ಇದೇ ಜೂನು ಎರಡನೇ ದಿನಾಂಕ ಬ್ರಿಟನ ರಾಣಿ ಎರಡನೇ ಎಲಿಜಾಬೆಥಳ ಕಿರೀಟ ಧಾರಣಾ ಮಹೋತ್ಸವವು ನೆರವೇರುತ್ತದೆ. ದೇಶ ವಿದೇಶಗಳ ಸಹಸ್ರಾರು ಜನರು ಈ ಅಭೂತ ಪೂರ್ಣ ಉತ್ಸವದಲ್ಲಿ ಭಾಗಿಯಾಗುವರು. ಭಾರತದ ಪರವಾಗಿ ಪ್ರಧಾನ ಮಂತ್ರಿ ಶ್ರೀ ಜವಾಹರಲಾಲ ನೆಹರೂ ಈ ಉತ್ಸವದಲ್ಲಿ ಉಪಸ್ಥಿತರಿರುವರು. ರಾಷ್ಟ್ರಕೂಟದ ಸದಸ್ಯ ರಾಷ್ಟ್ರಗಳ ಪ್ರಧಾನ ಮಂತ್ರಿಗಳೂ ವಿದೇಶಗಳ ರಾಯಭಾರೀ ವರ್ಗ ಮತ್ತು ಪ್ರತಿನಿಧಿಗಳೂ ಇತರ ಉನ್ನತ ಅಧಿಕಾರಿಗಳೂ ಐತಿಹಾಸಿಕ ಮಹತ್ವದಿಂದ ಕೂಡಿದ ಈ ಉತ್ಸವದಲ್ಲಿ ಭಾಗವಹಿಸುವರು. ಅಂದು ರಾಣಿಯು ಬಕ್ಕಿಂಗ್ ಹಾಮ್ ಅರಮನೆಯಿಂದ ವೆಸ್ಟ್ ಮಿನಿಸ್ಟರ್ ಚರ್ಚಿಗೆ ಸವಾರಿ ಹೊರಡುವಳು. ಈ ಅರ್ವಾಚೀನ ಕಾಲದಲ್ಲಿ ಅನನ್ಯಾದೃಶವಾದ ದೃಶ್ಯಗಳ ನಡುವೆ ಗಂಭೀರವಾದ ಸನ್ನಿವೇಶಗಳಲ್ಲಿ ಕಡಲ ರಾಣಿಯ ಕಿರೀಟ ಧಾರಣೆ ನೆರವೇರುವುದು. ಇಂಥ ಉತ್ಸವ ಮೊತ್ತಮೊದಲು ಬ್ರಿಟನಿನಲ್ಲಿ ನಡೆದುದು ಕ್ರಿ. ಶ. ೧೦೬೬ನೇ ಇಸವಿಯಲ್ಲಿ. ಅಂದು ವಿಜಯಾ ವಿಲಿಯಮನ, ತನ್ನ ಜೈತ್ರ ಯಾತ್ರೆಯ ಪ್ರತ್ಯೇಕವಾಗಿ ಈ ಉತ್ಸವವನ್ನು ವೆಸ್ಟ್ ಮಿನಿಸ್ಟರ್ ಚರ್ಚಿನಲ್ಲಿ ನಡಿಸಿದನು. ಹೊರಗೆ ಸಾಕ್ಸನ್ ಸೋಲ್ಜರುಗಳು ಗುಲ್ಲೆಬ್ಬಿಸುತ್ತಿದ್ದರು. ನಾರ್ಮನರು ತಮ್ಮ ಅರಸರನ್ನು ಸಂರಕ್ಷಿಸುವುದಕ್ಕೆ ಇನ್ನಿಲ್ಲದ ಸಾಹಸ ಮಾಡುತಿದ್ದರು. ರಾಜರ ಕಿರೀಟ ಧಾರಣೆಯನ್ನು ಒಂದು ಧಾರ್ಮಿಕ ವಿಧಿಯಾಗಿಯೇ ಅಂದಿನಿಂದ ಆಚರಿಸಲಾಗುತ್ತಿದೆ. ರಾಜಕೀಯ ಮಹತ್ವಕ್ಕಿಂತಲೂ ಧಾರ್ಮಿಕ ನಿಷ್ಠೆಯು ಪ್ರಸಂಗದಲ್ಲಿ ಎದ್ದು ಕಾಣುತ್ತದೆ. ಅರಸರನ್ನು ಧರ್ಮರಕ್ಷಕನೆಂದು ಈ ಸಂದರ್ಭದಲ್ಲಿ ಕರೆಯಲಾಗುತ್ತದೆ ದೇವರ ಅವತಾರವೆಂದೇ ತಿಳಿದು ಗೌರವಿಸಲಾಗುತ್ತದೆ ರಾಜನಿಗೇ (ಅಥವಾ ರಾಣಿಗೆ) ತೈಲ ಲೇಪನಮಾಡಿ, ದೇವರು ನೀಡಿದ ಅಸಂಖ್ಯ ಪ್ರಜರನ್ನು ಆಳುವ ದೀಕ್ಷೆಕೊಟ್ಟು ಪ್ರತಿಷ್ಠಾಪನಾಕಾರ್ಯವನ್ನು ನೆರವೇರಿಸಿ ಧರ್ಮಾಧಿಕಾರಿಗಳು ಆಶೀರ್ವದಿಸುವರು. ತೈಲ ಲೇಪನದಿಂದ ತೊಡಗಿ ಕಿರೀಟ ಧಾರಣೆಯ ವರೆಗಿನ ಪ್ರತಿಯೊಂದೂ ವಿಧಿಯು ಧಾರ್ಮಿಕ ಸ್ವರೂಪವನ್ನಿರುತ್ತದೆ. ಆದುದರಿಂದಲೇ ಇಂದಿನವರೆಗೂ—ರಾಜಕೀಯ ಕ್ರಾಂತಿ ಉತ್ಕ್ರಾಂತಿಗಳಿಗೆ, ಯುದ್ಧದ ಕೋಲಾಹಲಕ್ಕೆ ಎಂದಿಗೂ ಭಯಭೀತರಾಗದ ಜನರು, ಕಿರೀಟಧಾರಣೆಯ ಸಮಯ ಅತ್ಯಂತ ಗಂಭೀರರಾಗಿದ್ದುಕೊಂಡು ನಯ, ಭಯ ಭಕ್ತಿ. ವಿಶ್ವಾಸಗಳಿಂದ ನಡೆದುಕೊಳ್ಳುವರು.

ಸ್ವಾರಸ್ಯ ಪ್ರಸಂಗ

ಬ್ರಿಟಿಷ್ ಸಿಂಹಾಸನವೇರಿದ ರಾಜರಾಣಿಯರಲ್ಲಿ ಮೂರನೇ ಮತ್ತು ಎಂಟನೇ ಎಡ್ವರ್ಡ್ ದೊರೆಗಳು ಮಾತ್ರ ಕಿರೀಟ ಧರಿಸಿರಲಿಲ್ಲ. ಐದನೇ ಜಾರ್ಜರ ನಿಧನಾನಂತರ ಎಂಟನೇ ಎಡ್ವರ್ಡ್ ದೊರೆಯಾಗಿ ರಾಜ್ಯತ್ಯಾಗ ಮಾಡಿದರೆಂಬುದು ಸ್ವಾರಸ್ಯವಾದ ಕಥಾಪ್ರಸಂಗವಾಗಿ ಲೋಕದಲ್ಲಿ ಜನಜನಿತವಾಗಿರುತ್ತವೆ. ಸ್ವತಃ ಎಡ್ವರ್ಡರು ತಮ್ಮ ಪ್ರೇಯಸಿಯ ಒಲುಮೆ ಸಂಪಾದನೆಗಾಗಿ ತಾವು ಮಾಡಿದ ತ್ಯಾಗದ ವರ್ಣನೆಯನ್ನು ಮಾಡಿರುವರು. ಇಷ್ಟು ದೊಡ್ಡ ಸಾಮ್ರಾಜ್ಯದ ಅಧಿಕಾರವನ್ನು ತನ್ನ ಪ್ರೇಯಸಿಯ ಪ್ರಿಯನಾಗುವುದಕ್ಕೋಸ್ಕರ ತ್ಯಜಿಸಿಕೊಟ್ಟು ತಾನು ಕರ್ತವ್ಯಪಾಲಿಸಿದೆ ಎಂದವರು ತಮ್ಮ ಬರೆಹದಲ್ಲಿ ಹೇಳಿರುವರು. ವಿಲಿಯಂ ಶೇಕ್ಸ್‌ಪಿಯರನೋ ಕಾಳಿದಾಸನೋ ಇನ್ನು ಮ್ಮೆ ಜನಿಸಿದಲ್ಲಿ ಡ್ಯೂಕ್ ಆಫ್ ವಿಂಡ್ಸರರ ಪ್ರಣಯ ಚಿತ್ರವನ್ನು ಅತ್ಯಂತ ರೋಮಾಂಚನದ ನಾಟಕ್ಯ ಕೃತಿಯ

([illegible])

MAHATMA GANDHI MEMORIAL COLLEGE, UDIPI.

OPENING OF B. A. CLASS 1953-1954.

The University having sanctioned the opening of B. A. class from 1953-1954, candidates seeking admission to the class may apply for copies of the Prospectus and application form. Languages taught under Part II-Kannada and Hindi. Part III-Gr. IV. b. Economics Main, History subsidiary.

H. Sunder Rao, M. A.

ZANDU ಝಂಡೂ ಫಾರ್ಮಸಿಯ ಮನೆಮದ್ದುಗಳನ್ನೇ ಸದಾ ಉಪಯೋಗಿಸಿರಿ.

ಝಂಡೂ ಬ್ರಾಹ್ಮೀ ಹೇರ್ ಆಯಿಲ್ **Zandu Brahmi Hair Oil** — ಮೆದುಳಿಗೆ ತಂಪು— ಮನಸ್ಸಿಗೆ ಉಲ್ಲಾಸವೀಯುವುದು.
1 ಪೌಂಡಿಗೆ ರೂ. 3-8-0 ಕಾಲು ರಾತ್ಲಿಗೆ ರೂ. 1.

ಝಂಡೂ ಸರಸಪರಿಲ್ಲಾ **Zandu Sarasaparilla** — ರಕ್ತವನ್ನು ಶುದ್ಧಗೊಳಿಸಲು ಹೆಸರುವಾಸಿಯಾದುದು. ಚರ್ಮರೋಗಗಳನ್ನು ಗುಣಪಡಿಸಬಲ್ಲುದು. 4 ಔನ್ಸ್ ಬಾಟ್ಲಿ 1 ರ ರೂ. 1-5-0

ಝಂಡೂ ಬಾಲಾಮೃತ **Zandu Balamrutam** — ಅನಾರೋಗ್ಯವುಳ್ಳ ಮಕ್ಕಳಿಗೆ ಅಪರ್ವ ಟಾನಿಕ್ 4 ಔನ್ಸ್ ಬಾಟ್ಲಿ 1 ರ ರೂ. 1-0-0

ಝಂಡೂ ಬಾಮ್ **Zandu Balm** — ತಲೆ ಸಿಡಿತ ಮೊದಲಾದ ಬೇನೆಗಳಿಗೆ 1 ಸೀಸೆಗೆ ರೂ 1.

ಮಂಗಳೂರು: ಷಾ ಕಂಪೆನಿ, ಹಂಪನಕಟ್ಟೆ.
ಉಡುಪಿ: ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್. ಇನ್ಸಿಟ್ಯೂಟ್ ಲಿಮಿಟೆಡ್.
ಕಾರ್ಕಳ: ವಿ. ವಿ. ಶೆಣೈ ಮತ್ತು ಕಂಪೆನಿ.
ಪುತ್ತೂರು: ಪೈ ಫಾರ್ಮಸಿ.

ಧೀರಾಜ್‌ಲಾಲ್ ಬ್ರದರ್ಸ್, ಸ್ಟ್ಯಾಂಡರ್ಡ್ ರೋಡ್, ಮಟ್ಟಾಂಚೇರಿ, ಕೊಚ್ಚಿ.

ಬಳ್ಳಾರಿ ತಾಲೂಕು ಅಚ್ಚ ಕನ್ನಡ ಪ್ರದೇಶ

ಆದರೂ ಆಂಧ್ರರಿಗೆ ತಾತ್ಕಾಲಿಕವಾಗಿ ಬಳ್ಳಾರಿ ನಗರದಲ್ಲಿ ಕೆಲವು ಸವಲತ್ತುಗಳು ಸಿಗುವುವು.

ಮಿಶ್ರಾರ ವರದಿ

ಬಳ್ಳಾರಿ ತಾಲೂಕಿನ ಭವಿತವ್ಯದ ಬಗ್ಗೆ ವಿಚಾರಣೆಯನ್ನು ನಡೆಸಿದ ಹೈದರಾಬಾದು ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾದ ಶ್ರೀ ಲಕ್ಷ್ಮೀಶಂಕರ ಮಿಶ್ರಾರವರು ತಮ್ಮ ವರದಿಯನ್ನು ಇದೇ ದಿನಾಂಕ ೧೯ರಂದು ಗೃಹಸಚಿವರಿಗೆ ಸಾದರಪಡಿಸಿದರು. ಸರಕಾರವು ನ್ಯಾಯಮೂರ್ತಿ ಮಿಶ್ರಾರ ವರದಿಯನ್ನು ತ್ವರಿತದಲ್ಲಿಯೇ ಪರಿಶೀಲಿಸಿ, ಮರುದಿನವೇ ನ್ಯಾಯಮೂರ್ತಿಗಳ ಸಿಫಾರಸನ್ನು ಇದ್ದುದಿದ್ದಂತೆ ಸ್ವೀಕರಿಸುವ ಘೋಷಣೆಹೊರಡಿಸಿತು. ಇದರನ್ವಯ ಬಳ್ಳಾರಿ ತಾಲೂಕು ಕನ್ನಡ ಪ್ರದೇಶವೆಂದೂ ಅದನ್ನು ಬಳ್ಳಾರಿ ಜಿಲ್ಲೆಯ ಉಳಿದಾರು ತಾಲೂಕುಗಳ ಜೊತೆಗೆ ಮೈಸೂರಿಗೆ ಸೇರಿಸಬೇಕೆಂದೂ ನಿರ್ಣಯವಾಗಿರುತ್ತದೆ. ತಮ್ಮ ವರದಿಯ ಕೊನೆಯಲ್ಲಿ ನ್ಯಾಯಮೂರ್ತಿಗಳು ಆಂಧ್ರರಿಗೆ ಕೆಲವು ತಾತ್ಕಾಲಿಕ ಸವಲತ್ತುಗಳನ್ನು ತೋರಿಸಬೇಕೆಂದೂ ಹೇಳಿರುವರು. ಈ ರೀತಿ ಕೆಲವು ಸೌಲಭ್ಯಗಳನ್ನು ಆಂಧ್ರರಿಗೆ ಒದಗಿಸಿಕೊಡಲು ಮೈಸೂರು ಸರಕಾರದ ಆಕ್ಷೇಪವಿಲ್ಲೆಂಬ ಸಂಗತಿಯು ಅಲ್ಲಿಯ ಮುಖ್ಯಮಂತ್ರಿಗಳ ಮಾತುಕತೆಯಿಂದ ವ್ಯಕ್ತಗೊಂಡಿದೆ. ಎಂಬುದಾಗಿ ನ್ಯಾಯಮೂರ್ತಿ ಮಿಶ್ರಾ ಹೇಳಿರುವರು. ತಮ್ಮ ವರದಿಯಲ್ಲಿ ನ್ಯಾಯಮೂರ್ತಿಗಳು ಬಳ್ಳಾರಿಯ ಮೇಲಿನ ಕನ್ನಡಿಗರ ಮತ್ತು ತೆಲುಗರ ಹಕ್ಕುಗಳನ್ನು ಕ್ರೋಢೀಕರಿಸಿದ್ದು, ಕೊನೆಗೆ ಬಳ್ಳಾರಿತಾಲೂಕು ಭಾಷಾದೃಷ್ಟಿಯಿಂದಲೂ, ಸಾಂಸ್ಕೃತಿಕ, ಆರ್ಥಿಕ, ಚಾರಿತ್ರಿಕ ಮತ್ತು ಆಡಳಿತ ಸೌಕರ್ಯದ ಕಾರಣಕ್ಕಾಗಿಯೂ ಮೈಸೂರಿನೊಂದಿಗೆ ಸೇರಿಕೊಂಡಿರುವುದೇ ವಿಹಿತವೆಂದೂ, ಬಳ್ಳಾರಿಯು ಅಚ್ಚಕನ್ನಡ ತಾಲೂಕೆಂದೂ ಸ್ಪಷ್ಟಗೊಳಿಸಿರುವರು. ಕೇಂದ್ರ ಸರಕಾರವರೂ ಬೇಕೆಂದೇ ಬಳ್ಳಾರಿ ತಾಲೂಕಿನ ಪ್ರಶ್ನೆಯನ್ನು ಹೊಯ್ದಾಡಲು ಬಿಟ್ಟು ಮಾಡಿದ ತಪ್ಪಿಗೆ ನ್ಯಾಯ ಮೂರ್ತಿಗಳ ವಿಚಾರಣೆಯು ಪಶ್ಚಾತ್ತಾಪ ರೂಪದಲ್ಲಿದೆ. ನ್ಯಾಯಮೂರ್ತಿಗಳ ವರದಿಯು ಕೈಸೇರಿದ ಮರುದಿನವೇ ಸರಕಾರವು ತಾನು ವರದಿಯ ಸಿಫಾರಸುಗಳನ್ನು ಒಪ್ಪಿಕೊಂಡ ಹೇಳಿಕೆ ಹೊರಡಿಸಿದೆ ಎಂದರೆ– ಕೇಂದ್ರ ಸರಕಾರ ಈ ವಿಷಯದಲ್ಲಿ ಇದಕ್ಕೂ ಮುಂಚೆಯೇ ಒಂದು ತೀರ್ಮಾನಕ್ಕೆ ಬಂದಿರಬೇಕೆಂದು ತೋರುತ್ತದೆ. ತನ್ನ ತೀರ್ಮಾನಕ್ಕೆ ನ್ಯಾಯಮೂರ್ತಿಗಳ ನಿಃಸಂದಿಗ್ಧ ಬೆಂಬಲ ದೊರೆತುದರಿಂದಲೇ ಸರಕಾರವು ಅಷ್ಟು ಶೀಘ್ರವಾಗಿ ನಿರ್ಣಯ ಪ್ರಕಟಪಡಿಸಿತೆಂದು ಯಾರೂ ಊಹಿಸಬಹುದು.

ಆಂಧ್ರರಿಗೆ ಸೌಕರ್ಯ

ವಾಂಚೂ ವರದಿಯಲ್ಲಿ ಬಳ್ಳಾರಿ ಜಿಲ್ಲೆಯನ್ನು ಒಡೆಯುವ ಅನುಚಿತ ಸೂಚನೆಯನ್ನು ಮಾಡಿದ್ದರೂ ಬಳ್ಳಾರಿ ತಾಲೂಕನ್ನು ಆಂಧ್ರಕ್ಕೆ ಸೇರಿಸಬೇಕೆಂಬ ವಿಷಯವಿರಲಿಲ್ಲ. ಎಲ್ಲರಿಗೂ ತಿಳಿದಿರುವಂತೆ ಕೇಂದ್ರ ಸರಕಾರವೇ ಈ ವಿಷಯದಲ್ಲಿ ಸ್ವೇಚ್ಛೆಯಿಂದ ವರ್ತಿಸಿತು. ನಾವು ಈ ಮುಂಚೆ ಸೂಚಿಸಿದಂತೆ ಹೊಸತಾಗಿ ಅಸ್ತಿತ್ವಕ್ಕೆ ಬರಲಿರುವ ಆಂಧ್ರ ರಾಜ್ಯಕ್ಕೆ ಬಳ್ಳಾರಿ ನಗರದ ಕಟ್ಟಡ ಹಾಗು ಕೆಲವು ವಿಶಿಷ್ಟ ಸೌಕರ್ಯಗಳ ಅಗತ್ಯವೆನಿಸಿದುದರಿಂದ ಕೇಂದ್ರ ಸರಕಾರ ಎರಡು ತಿಂಗಳ ಕಾಲ ಈ ವಿಷಯದ ಅಂತಿಮ ನಿರ್ಧಾರವನ್ನು ಮುಂದೂಡಿತು. ಈಗ ಆಂಧ್ರರಿಗೆ ಬೇಕಿರುವ ಸೌಲಭ್ಯಗಳು ತಾತ್ಕಾಲಿಕವಾಗಿ ನ್ಯಾಯಮೂರ್ತಿ ಮಿಶ್ರಾರ ಸಿಫಾರಸಿನಂತೆ ದೊರೆಯುತ್ತವೆ. ಅಂತಹ (೧) ಪ್ರಾದೇಶಿಕ ಕಚೇರಿಗಳು ಇನ್ನು ಐದು ವರ್ಷಗಳ ವರೆಗೆ ಬಳ್ಳಾರಿ ನಗರದಲ್ಲಿ ಇರಬಹುದು. (೨) ಜಿಲ್ಲಾ ಜೈಲಲ್ಲದೆ ಬೇರೆ ಮೂರು ಜೈಲುಗಳೂ ಬಳ್ಳಾರಿಯಲ್ಲಿವೆ. ಅವುಗಳ ಆಡಳಿತವನ್ನು ಮೈಸೂರಿಗೆ ವಹಿಸಿಕೊಡಬೇಕು; ಆದರೆ ಆಂಧ್ರದಿಂದ ಆಡಳಿತ ವೆಚ್ಚದಲ್ಲಿ ಪಾಲು ಪಡೆದು ಆ ರಾಜ್ಯದ ಆವಶ್ಯಕತೆಯನ್ನೂ ಸಾಕಷ್ಟು ಪೂರೈಸಬೇಕು. (೩) ಬಳ್ಳಾರಿಯಲ್ಲಿರುವ ರಾಯಲಸೀಮಾ ಪಾಲಿಟೆಕ್ನಿಕ್ ಸಂಸ್ಥೆಯಲ್ಲಿ ಆಂಧ್ರ ವಿದ್ಯಾರ್ಥಿಗಳಿಂದ ಫೀ ಪಡೆದು ಅರ್ಧದಷ್ಟು ಸೀಟುಗಳನ್ನು ಅವರಿಗೆ ಕೊಡಬೇಕು (೪) ಬಳ್ಳಾರಿಯಲ್ಲಿರುವ ಕ್ಷಯ ರೋಗದ ಸಾನಿಟೋರಿಯಮಿನಲ್ಲಿ ಆಂಧ್ರರಿಗೆ ಯೋಗ್ಯ ಅವಕಾಶ ದೊರೆಯಬೇಕು. ಉಭಯ ಸರಕಾರಗಳು ಈ ವಿಷಯದಲ್ಲಿ ಪರಸ್ಪರ ಸಮಾಲೋಚನೆ ನಡೆಸಿ ಒಂದು ನಿರ್ಣಯಕ್ಕೆ ಬರಬಹುದು. ಈ ರೀತಿ ಆಂಧ್ರರಿಗೆ ತಾತ್ಕಾಲಿಕ ಸೌಕರ್ಯಗಳನ್ನು ಒದಗಿಸಿಕೊಡುವುದರಿಂದ ಮೈಸೂರಿಗಾಗಲೀ ಬಳ್ಳಾರಿಜಿಲ್ಲೆಗಾಗಲೀ ನಷ್ಟವಿಲ್ಲವೆಂದು ಮಿಶ್ರರ ವರದಿ ಹೇಳುತ್ತದೆ. ಆಂಧ್ರರ ಪಾಲಿಗೆ ಇದು ಲಾಭದಾಯಕವಾಗಿಯೇ ಪರಿಣಮಿಸಿದೆ. ಆದುದರಿಂದ ಮಾನ್ಯ ಶ್ರೀ ಶಂಕರ ರೆಡ್ಡಿಯಂಥವರು ಮಿಶ್ರಾರ ಶಿಫಾರಸಿನಿಂದ ಅಸಮಾಧಾನಗೊಂಡರೂ–ಆಂಧ್ರ ಪ್ರದೇಶ ಕಾಂಗ್ರೆಸ ಸಮಿತಿಯ ಅಧ್ಯಕ್ಷ ಶ್ರೀ ಸಂಜೀವ ರೆಡ್ಡಿಯವರು ಈ ನಿರ್ಣಯವನ್ನು ಒಪ್ಪುತ್ತೇವೆಂದಿರುವರು. ಮದ್ರಾಸು ನಗರದ ಮೇಲಿನ ಹಕ್ಕು ಬಾಧ್ಯತೆಗಳನ್ನು ಬಿಟ್ಟುಕೊಟ್ಟ ಆಂಧ್ರರು ಬಳ್ಳಾರಿ ತಾಲೂಕು ಕೈಬಿಟ್ಟು ಹೋದುದನ್ನೂ ಸಮಾಧಾನದಿಂದ ಸಹಿಸುವರಂತೆ.

ಕನ್ನಡಿಗರ ಪ್ರಾಧಾನ್ಯ

ಕನ್ನಡಿಗರಿಗೆ ಬಳ್ಳಾರಿ ತಾಲೂಕನ್ನು ಅಸಂದಿಗ್ಧವಾಗಿ ಕನ್ನಡ ಪ್ರದೇಶವೆಂದು ಮಿಶ್ರಾರು ಸಾರಿದುದು ಕೇಳಿ ತುಂಬ ಸಂತೋಷವಾಗಿರುತ್ತದೆ. ತೆಲುಗರು ಕನ್ನಡಿಗರೂ ಜನಗಣನೆಯ ಅಂಕಿಸಂಖ್ಯೆಗಳ ಮೇಲೆ ತಮ್ಮ ವಾದ ವಿವಾದವನ್ನು ಮಂಡಿಸಿದ್ದರು. ಈ ಅಂಕೆ ಸಂಖ್ಯೆಗಳು ಅಸತ್ಯವೆಂದು ಸಾಧಿಸುವುದಕ್ಕೆ ಇಕ್ಕಡೆಯವರು ಪ್ರಯತ್ನಿಸಿದ್ದರು. ನ್ಯಾಯ ಮೂರ್ತಿಗಳು ೧೯೫೧ನೇ ಇಸವಿಯ ಖಾನೇಸುಮಾರಿಯಂತೆ ಜನಗಣನೆಯ ಲೆಕ್ಕವನ್ನು ಕ್ರೋಢೀಕರಿಸಿ, ಕನ್ನಡಿಗರ ಪ್ರಾಬಲ್ಯವೇ ಈ ತಾಲೂಕಿನಲ್ಲಿದೆ ಎಂಬುದನ್ನು ಸಿದ್ಧಗೊಳಿಸಿರುವರು. ಇದರಂತೆ ಬಳ್ಳಾರಿಗೆ ತುಂಗಭದ್ರಾ ನದೀ ಯೋಜನೆ, ಸರಕಾರೀ ಕೆಲಸಗಳು ಮುಂತಾದುವಕ್ಕೆ ಬಂದ ಜನರನ್ನು ಲೆಕ್ಕದಿಂದ ತೆಗೆದು ಶಾಶ್ವತವಾಗಿ ಬಳ್ಳಾರಿ ತಾಲೂಕಿನಲ್ಲಿ ವಾಸಿಸುವವರನ್ನು ಮಾತ್ರ ಲೆಕ್ಕಕ್ಕೆ ಹಿಡಿದರೆ ಇಡೀ ತಾಲೂಕಿನ ೧೭೧೬೩೬ ಜನಸಂಖ್ಯೆಯಲ್ಲಿ ಕನ್ನಡಿಗರು ೮೯೯೭೨ (ಅಂದರೆ ಸೇಕಡಾ ೫೨.೫೨), ತೆಲುಗರು ೪೩೩೧೭ (ಅಂದರೆ ಸೇಕಡಾ ೨೫.೨೯), ಇತರರು ೩೮೭೪೪ (ಅಂದರೆ ಸೇಕಡಾ ೨೨.೧೯), ಇದು ಕನ್ನಡಿಗರ ಪ್ರಾಧಾನ್ಯವನ್ನು ಸ್ಪಷ್ಟವಾಗಿ ಎತ್ತಿ ತೋರಿಸುತ್ತದೆ. ಹೀಗೆ ನ್ಯಾಯಮೂರ್ತಿಗಳು ಕನ್ನಡಿಗರಿಗೆ ಕೇಂದ್ರ ಸರಕಾರ ಮಾಡಿದ ಅನ್ಯಾಯದ ಪರಿಮಾರ್ಜನೆಯನ್ನು ಮಾಡಿದರೆಂದು ಹೇಳುವುದಕ್ಕೆ ಅಡ್ಡಿಯಿಲ್ಲ ಆದರೆ ಈ ವಿಷಯದಲ್ಲಿ ಇನ್ನೂ ಒಂದು ಸಂಗತಿಯು ನಿರ್ಣಯವಾಗುವುದು ಬಾಕಿ ಇದೆ. ಪ್ರಧಾನಿ ನೆಹರೂರವರು ನ್ಯಾಯಮೂರ್ತಿ ಮಿಶ್ರಾರು ಬಳ್ಳಾರಿ ತಾಲೂಕಿನ ಬಗ್ಗೆ ಮಾತ್ರವಲ್ಲದೆ ಆಂಧ್ರಕ್ಕೆ ಸೇರಿಸಬೇಕೆಂದಿರುವ ರಾಯದುರ್ಗ ಆಲೂರು ಮತ್ತು ಆದವಾನಿ ತಾಲೂಕುಗಳ ಸಂಬಂಧದಲ್ಲೂ ಮನವಿಯನ್ನು ಸ್ವೀಕರಿಸಬಹುದು ಎಂದು ಹೇಳಿದ್ದರು. ಆದರೆ ಈ ವಿಷಯದಲ್ಲಿ ಅವರ ಅಧಿಕಾರವನ್ನು ವಿಸ್ತರಿಸಿದ್ದಂತೆ ತೋರುವುದಿಲ್ಲ. ಪರಿಣಾಮವಾಗಿ ಜೆ. ವಿ. ಪಿ. ವರದಿ ಮತ್ತು ಪ್ರಧಾನಿ ನೆಹರೂರವರು ಆಂಧ್ರರಾಜ್ಯನಿರ್ಮಾಣ ಮಾಡಲು ತಕ್ಕ ಕ್ರಮ ಕೈಗೊಳ್ಳಲಾಗುವುದೆಂದು ಕಳೆದ ದಶಂಬರದಲ್ಲಿ ಕೊಟ್ಟ ಹೇಳಿಕೆಯ ವಿರುದ್ಧ ನಡೆದುಕೊಂಡ ತಪ್ಪು ತಿದ್ದಲ್ಪಟ್ಟಿಲ್ಲ. ಬಳ್ಳಾರಿ ತಾಲೂಕಿನ ಸಂಗತಿಯಲ್ಲಾದಂತೆ, ರಾಯದುರ್ಗ, ಆಲೂರು, ಆದವಾನಿ ತಾಲೂಕುಗಳ ಮಟ್ಟಿಗೆ, ಈ ರೀತಿ ವಿಚಾರಣೆಯನ್ನು ನಡೆಸುವುದು ಅತ್ಯವಶ್ಯವಾಗಿದ್ದಿತು. ಗಡಿ ನಿರ್ಣಯ ಸಮಿತಿಯು ಈ ವಿಷಯವನ್ನು ಪರಿಶೀಲಿಸುವುದೆಂದು ಈಗ ಹೇಳುತ್ತಿದ್ದರೂ ಹಾಗೆ ಕಾಲ ವಿಳಂಬ ಮಾಡುವ ಅಗತ್ಯವಿರಲಿಲ್ಲ ಈ ಮಟ್ಟಿಗೆ ನ್ಯಾಯಮೂರ್ತಿ ವಾಂಚೂರವರು ಬಳ್ಳಾರಿ ಜಿಲ್ಲೆಯನ್ನು ವಿಭಜಿಸಬೇಕೆಂದು ಮಾಡಿದ ಉದ್ಧಟತನ ಕ್ಷಮ್ಯವಲ್ಲ. ಅವರು ನೆಹರೂ ಹೇಳಿಕೆಯನ್ನು ಮೀರಿ ನಡೆದಿರುವರು; ಮತ್ತು ಕೇಂದ್ರ ಸರಕಾರವೂ ನ್ಯಾಯ ಮೂರ್ತಿಗಳ ವರದಿಗೆ ಸೈಗುಟ್ಟಿ ತಪ್ಪು ಹೆಜ್ಜೆ ಇಟ್ಟಿದೆ.

ಕಾಂಗ್ರೆಸಿನ ನಿಲುವು

ಕಾಂಗ್ರೆಸರ ಕಾರ್ಯಕಾರೀ ಸಮಿತಿಯು ಕಳೆದ ವಾರದ ಮೊದಲಿಗೆ ಸೇರಿದಾಗ ಭಾಷಾನುಗುಣ ಪ್ರಾಂತ ರಚನೆಯ ಸಂಬಂಧದಲ್ಲೂ ಇತರ ಸಂಗತಿಗಳ ಕುರಿತೂ ಮಹತ್ವದ ನಿರ್ಣಯಗಳನ್ನು ಮಾಡಿರುತ್ತದೆ. ಹೈದರಾಬಾದು ಅಧಿವೇಶನ ಕಾಲದಲ್ಲಿ ಮಾಡಿದ ನಿರ್ಣಯಕ್ಕೆ ಪೂರಕವಾಗಿ ಈಗ ಸ್ವೀಕರಿಸಿದ ಗೊತ್ತುವಳಿ ಇರುತ್ತದೆ. ನೆಹರೂರವರು ಬೆಳಗಾಂವಿಯಲ್ಲಿ ಮಾಡಿದ ಭಾಷಣದಲ್ಲಿ ದೇಶವನ್ನು ಭಾಷಾನುಗುಣವಾಗಿ ಪುನರ್ಘಟಿಸುವ ಪ್ರಶ್ನೆಯನ್ನು ವಿಚಾರಿಸಲು ಉಚ್ಚ ಮಟ್ಟದ ಆಯೋಗವೊಂದನ್ನು ನೇಮಿಸುವುದಾಗಿ ಸ

ಏಳು ವರುಷಗಳಲ್ಲಿ ಫಲ

ನಮ್ಮ ಪಿಗ್ಮಿ ಮುಡಿಪುದಾರರಲ್ಲಿ ದಿನವಿಡಿ ಕೆಲಸ ಮಾಡುವ ಶ್ರಮಜೀವಿಗಳು, ಅಂಗಡಿಗಾರರು, ವಕೀಲರು, ಡಾಕ್ಟರರು, ಎಂಜಿನಿಯರರು, ಬೇಸಾಯಗಾರರು, ವರ್ತಕದಾರರು ಇತ್ಯಾದಿ ತರಗತಿಯವರಿರುವರು. ಅವರ ಪಿಗ್ಮಿ ಮುಡಿಪುಗಳು ಚಿಕ್ಕ ಪುಟ್ಟ ರೇವಣಾತಿಗಳಿಂದ ಪ್ರಾರಂಭವಾದುವು ಅಂದು ಇಲಿಯಂತಿದ್ದುವು ಇಂದು ಹುಲಿಯಂತಾಗಿವೆ. ಅಂತಹ ವಿವೇಕವುಳ್ಳ, ದೂರ ದರ್ಶಿ ಸಂಪನ್ನ ಪಿಗ್ಮಿ ರೇವಣಾತಿದಾರರ ಕೂಟಕ್ಕೆ ನೀವೂ ಕೂಡಾ ಸೇರಿ ಭಾಗ್ಯವಂತರಾಗ ಬೇಕಾಗಿ ಆಹ್ವಾನಿಸುತ್ತೇವೆ.

ಆಧಾರ ವಹಿವಾಟು ರೂ 5,00,000 00ಕ್ಕೂ ಮಿಕ್ಕಿದೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925 ಹೆಡ್ ಆಫೀಸು: ಉಡುಪಿ

THE CANARA INDUSTRIAL & BANKING SYNDICATE LIMITED

ESTD: 1925 H. O: **UDIPI.**

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫–೮–೦ .... ಪೋಸ್ಟು ಖರ್ಚು ರೂ. ೦–೧೪–೦

—:ವಿಳಾಸ:—.

ಹಾಲಪ್ಪಾ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಡಲ್ಲೇಸರ ಢಿಲ್ಲಿ ಸಂದರ್ಶನದ ಮಹತ್ವ

ಪ್ರಾಮುಖ್ಯವಾದ ಅಂತಾರಾಷ್ಟ್ರೀಯ ಸಮಸ್ಯೆಗಳ ಸಂಬಂಧದಲ್ಲಿ ನೆಹರೂ ಅಭಿಪ್ರಾಯದ ಯಥಾರ್ಥ ಜ್ಞಾನ

ರಕಾರದ ಕಡೆಯಿಂದ ಕೊಟ್ಟ ಸೂಚನೆಯನ್ನು ಕಾಂಗ್ರೆಸ್ ಕಾರ್ಯಕಾರಿಣಿಯು ಸ್ವೀಕರಿಸಿದೆ. ನೆಹರೂರವರು ಆಂಧ್ರರಾಜ್ಯ ನಿರ್ಮಾಣದ ಒಂದು ವರ್ಷದ ಬಳಿಕ ಅಂಥ ಸಮಿತಿಯೊಂದನ್ನು ನೇಮಿಸಲಾಗುವುದೆಂದು ಬೆಳಗಾಂವಿಯಲ್ಲಿ ಹೇಳಿದ್ದುದರಿಂದ ಅಷ್ಟು ದೀರ್ಘಕಾಲ ವಿಷಯವನ್ನು ಮುಂದೂಡಬಾರದೆಂದು ಜನರ ಅಭಿಪ್ರಾಯವಿದ್ದಿತು. ಕಾಂಗ್ರೆಸ ಕಾರ್ಯಕಾರಿಣಿಯು ಈ ಅಭಿಪ್ರಾಯವನ್ನು ಮನ್ನಿಸಿದಂತೆ ಕಾಣುತ್ತದೆ. ಮೌಲಾನಾ ಆಝಾದರು ಹೊರಡಿಸಿದ ಒಂದು ಹೇಳಿಕೆಯಂತೆ ಇದೇ ಅಕ್ಟೋಬರದಲ್ಲಿ ಆಂಧ್ರರಾಜ್ಯ ನಿರ್ಮಾಣಗೊಂಡ ಬೆನ್ನಿಗೇ ಸರಕಾರವು ಉಚ್ಚಮಟ್ಟದ ಆಯೋಗವನ್ನು ನೇಮಿಸುವುದೆಂದೂ ಸುಮಾರು ಒಂದು ವರ್ಷದಲ್ಲಿ ಈ ಆಯೋಗವು ವಿಷಯವನ್ನು ಆಡಳಿತದ ಅನುಕೂಲತೆ, ಭಾಷೆ, ಆರ್ಥಿಕ ಪ್ರಶ್ನೆಗಳು, ಸಾಂಸ್ಕೃತಿಕ ಸಂಬಂಧ, ಐತಿಹಾಸಿಕ ಮಹತ್ವ ಮುಂತಾದುವೆಲ್ಲ ದೃಷ್ಟಿಯಿಂದ ವಿಚಾರಿಸಿ ವರದಿಯೊಪ್ಪಿಸುವುದೆಂದೂ ತಿಳಿದಿದೆ. ಈ ಒಂದು ವರ್ಷದ ಕಾಲಾವಧಿಯಲ್ಲಿ ಆಂಧ್ರರಾಜ್ಯ ಭದ್ರವಾದ ತಳಹದಿಯಲ್ಲಿ ನಿಂತಿರುವುದೇ ಹೇಗೆಂಬ ಸಂಗತಿ ಸಾಕಷ್ಟು ಸ್ಪಷ್ಟವಾಗುವುದರಿಂದ ಒಡನೆಯೇ ಅಂತಿಮ ನಿರ್ಣಯ ಕೈಗೊಳ್ಳಲು ಸಾಧ್ಯವೆಂದು ನಿರೀಕ್ಷೆ. ಎಲ್ಲವೂ ಸುಗಮವಾಗಿ ನಾಗಿದರೆ ಮುಂದಿನ ವರ್ಷದ ಕೊನೆಯಲ್ಲಿ ಕನ್ನಡ ಪ್ರದೇಶಗಳನ್ನೆಲ್ಲ ಒಟ್ಟಿಗೆ ಸೇರಿಸಿ ಕರ್ನಾಟಕ ಏಕೀಕರಣ ಸಾಧಿಸಲು ಕೇಂದ್ರ ಸರಕಾರ ಒಡಂಬಡಬಹುದೆಂದೂ, ಪರಿಣಾಮವಾಗಿ ೧೯೫೫ನೇ ಇಸವಿಗೆ ಕರ್ನಾಟಕ ರಾಜ್ಯ ಅಸ್ತಿತ್ವಕ್ಕೆ ಬರುವುದೆಂದೂ ಹೇಳಲಾಗುತ್ತಿದೆ. ಆದರೆ ಈ ವಿಷಯದಲ್ಲಿ ಏನು ಪ್ರಯತ್ನಗಳು ನಡೆದರೂ ಅವುಗಳ ಸ್ವರೂಪ ಘಟನಾತ್ಮಕವಾಗಿರಬೇಕಲ್ಲದೆ ವಿಧ್ವಂಸಕ ರೀತಿಯಲ್ಲಿರಬಾರದು

ಧುರೀಣರ ಸಂದರ್ಶನ

ಕೆಲವು ದಿನಗಳಿಗೆ ಹಿಂದೆ ಅಮೇರಿಕದ ಡೆಮೊಕ್ರಾಟಿಕ ಪಕ್ಷದ ನಾಯಕರಾದ ಅಡ್ಲಾಯ್ ಸ್ಟೀವನ್‌ಸನ್ನರು ಭಾರತವನ್ನು ಸಂದರ್ಶಿಸಿದ್ದರು. ಭಾರತವನ್ನು ಬಿಟ್ಟು ಹೋಗುವುದಕ್ಕೆ ಮುಂಚೆ ಸ್ಟೀವನ್ಸನ್ನರು ಪ್ರಧಾನಿ ನೆಹರೂ, ರಾಜಗೋಪಾಲಾಚಾರಿ ಮುಂತಾದ ಧುರೀಣರನ್ನು ಕಂಡು ಮಾತನಾಡಿದರು. ಭಾರತವು ಪೂರ್ವದಲ್ಲಿ ಪ್ರಜಾಪ್ರಭುತ್ವದ ಭದ್ರ ಕೋಟೆಯಾಗಿರುತ್ತದೆಂಬ ಸಮಾಧಾನವು ಅವರಿಗೆ ಆಯಿತೆಂಬುದು ಅವರು ವ್ಯಕ್ತಗೊಳಿಸಿದ ಅಭಿಪ್ರಾಯದಿಂದ ಸ್ಪಷ್ಟವಾಗುತ್ತದೆ. ಸ್ಟೀವನ್ಸನ್ನರು ಅಮೇರಿಕಾದಲ್ಲಿ ಅಧಿಕಾರ ಸ್ಥಾನದಲ್ಲಿ ಇರದಿದ್ದರೂ ಐಸನ ಹಾವರರೊಡನೆ ಸ್ಪರ್ಧೆಗೆ ನಿಂತ ಹುರಿಯಾಳು ಎಂಬ ಸ್ಥಾನದಿಂದ ಅವರ ಅಭಿಪ್ರಾಯಕ್ಕೆ ತುಂಬ ಬೆಲೆ ಇದೆ. ಆದಕಾರಣ ಅಮೇರಿಕಾದ ಜನತೆಯ ಮೇಲೆ ಭಾರತದ ಕುರಿತು ಯೋಗ್ಯ ತಿಳುವಳಿಕೆಯನ್ನು ಮಾಡಿಕೊಡುವುದಕ್ಕೆ ಸ್ಟೀವನ್ಸನ್ನರು ಸಮರ್ಥರೆಂದೇ ಹೇಳಬೇಕು. ಅವರು ತಮ್ಮ ಸಂದರ್ಶನ ಕಾಲದಲ್ಲಿ ಇಲ್ಲಿ ಅಮೇರಿಕದ ನೆರವಿನಿಂದ ಕಾರ್ಯಾನ್ವಿತಗೊಳ್ಳುತ್ತಿರುವ ಜನಪದ ಅಭಿವೃದ್ಧಿ ಯೋಜನೆಗಳನ್ನೂ ಪಂಚವಾರ್ಷಿಕ ಯೋಜನೆಯಂತೆ ನಡೆಯುವ ಕೆಲಸಗಳನ್ನೂ ನೋಡಿ ಸಂತೋಷಪಟ್ಟರು. ಮಹತ್ವದ ರಾಜಕೀಯ ವಿಷಯಗಳ ಕುರಿತು ಭಾರತದ ನಿಲುವು ಏನೆಂಬುದನ್ನು ನೆಹರೂರೊಡನೆ ವೈಯಕ್ತಿಕ ಭೇಟಿ ಮಾಡಿ ತಿಳಿದುಕೊಂಡರು. ಸ್ಟೀವನ್ಸನ್ನರು ಭಾರತ ಸಂದರ್ಶನದಿಂದ ಹೆಚ್ಚು ಜ್ಞಾನ ಸಂಪನ್ನರಾಗಿ ಮರಳಿದ ಬೆನ್ನಿಗೇ ಅಮೇರಿಕದ ವಿದೇಶ ವ್ಯವಹಾರದ ಮಂತ್ರಿಗಳಾದ ಜಾನ್ ಫಾಸ್ಟರ್ ಡಲ್ಲೇಸರು ಹೊಸ ದೆಹಲಿಗೆ ಬಂದರು. ಇಲ್ಲಿ ಮೂರು ದಿನಗಳವರೆಗೆ ಇದ್ದುಕೊಂಡು ಡಲ್ಲೇಸರು ಭಾರತವನ್ನು ತಿಳಿದುಕೊಳ್ಳಲು ಪ್ರಯತ್ನಿಸಿದರು. ಮುಖ್ಯವಾಗಿ ಅಂತಾರಾಷ್ಟ್ರೀಯ ಸ್ವರೂಪದ ಸಮಸ್ಯೆಗಳ ಕಡೆಗೆ ಭಾರತ ಯಾವ ದೃಷ್ಟಿಯಿಂದ ನೋಡುತ್ತಿದೆ ಎಂಬುದನ್ನವರು ಮನವರಿಕೆ ಮಾಡಿಕೊಂಡರು. ಕೊರಿಯಾದ ಕದನ, ಚತುಃರಾಷ್ಟ್ರಗಳ ಪ್ರಧಾನಿಗಳ ಭೇಟಿ, ಇಂಡೋಚೀನಾದಲ್ಲಿ ಕಮ್ಯೂನಿಸ್ಟರ ಮುನ್ನಡೆ-ಮುಂತಾದ ಸಂಗತಿಗಳ ಕುರಿತು ನೆಹರೂರವರ ಅಭಿಪ್ರಾಯವನ್ನು ಡಲ್ಲೇಸರು ವಿಚಾರಿಸಿ ತಿಳಿದುಕೊಂಡರೆಂದು ಹೇಳಬಹುದು.

ಭ್ರಮ ನಿರಸನ

ಪರಿಣಾಮವಾಗಿ ಭಾರತವು ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಇದುವರೆಗೆ ಅನುಸರಿಸಿಕೊಂಡು ಬಂದ ನೀತಿಯ ಅಪಾರ್ಥವನ್ನು ಅಮೇರಿಕನ್ನರು ಮಾಡಿಕೊಂಡಿದ್ದರೆ - ಅದು ದೂರವಾಯಿತೆಂದು ತಿಳಿಯಲು ಸಾಕಷ್ಟು ಆಧಾರವಿದೆ. ಅಮೇರಿಕವು ಭಾರತಕ್ಕೆ ನೀಡುತ್ತಿರುವ ಆರ್ಥಿಕ ಸಹಾಯದ ಹಿಂದೆ ಅಮೇರಿಕನ್ ಮಿಲಿಟರಿ ರಾಜ್ಯವನ್ನು ಭಾರತದಲ್ಲಿ ಸ್ಥಾಪಿಸುವ ಮರುದ್ದೇಶವನ್ನು ನಮ್ಮ ಕೆಲವು ಧುರೀಣರು ಕಂಡುಕೊಂಡಂತೆ ಸೋವಿಯೆಟ ರಶಿಯಾ ಮತ್ತು ಕಮ್ಯೂನಿಸ್ಟ ಚೈನಾದ ಕುರಿತು ಭಾರತ ತೋರುತ್ತಿರುವ ಆಸ್ಥೆಯನ್ನೂ ಅಮೇರಿಕನ್ನರಲ್ಲಿ ಹಲವರು ತಪ್ಪು ತಿಳಿದುಕೊಂಡಿರುವರು. ಜಾಗತಿಕ ಕ್ಷೇತ್ರದ ಪ್ರಬಲಶಕ್ತಿಗಳೆಂಬ ಕಾರಣಕ್ಕಾಗಿಯೇ ಭಾರತವು ರಶಿಯಾ ಚೀನಾಗಳ ಕೂಡೆ ಸಖ್ಯವನ್ನೂ ಬಾಂಧವ್ಯವನ್ನೂ ಬಯಸುತ್ತಿದೆಯಲ್ಲದೆ ಕಮ್ಯೂನಿಸ್ಟ ತತ್ವ ಪ್ರಣಾಳಿಯ ಕಡೆಗಿನ ಒಲವಿನ ಬಲದಿಂದಲ್ಲವೆಂಬುದು ಡಲ್ಲೇಸರಿಗೆ ಈ ಸಂದರ್ಶನದಿಂದ ಸ್ಪಷ್ಟವಾಯಿತೆಂದು ಹೇಳಲಾಗಿದೆ. ಭಾರತವು ಜಗತ್ತಿನಲ್ಲಿಯೇ ದೊಡ್ಡದಾದ ಪ್ರಜಾಪ್ರಭುತ್ವ ರಾಷ್ಟ್ರವೆಂದು ಡಲ್ಲೇಸರು ಹೇಳಿದ್ದು, ಪಂಚವಾರ್ಷಿಕಯೋಜನೆ ಹೊಂದುತ್ತಿರುವ ಪ್ರಗತಿಯನ್ನು ಶ್ಲಾಘಿಸಿರುವರು. ಹಾಗೆಂದು ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುವಾಗಲೂ ಆಕಾಶವಾಣಿ ಭಾಷಣದಲ್ಲೂ ಡಲ್ಲೇಸರು ಭಾರತದ ಕುರಿತಾದ ತಮ್ಮ ಅಭಿಪ್ರಾಯಕ್ಕೂ ಹೆಚ್ಚು ಅಮೇರಿಕವು ಜಾಗತಿಕ ಸಮಸ್ಯೆಗಳನ್ನು ಕಾಣುವ ದೃಷ್ಟಿಯನ್ನು ವಿವರಿಸಲು ನೋಡಿದಂತಿತ್ತು. ಹೇಗಿದ್ದರೂ ಪಂಚವಾರ್ಷಿಕಯೋಜನೆಗೆ ಅಮೇರಿಕವು ಇನ್ನು ಮುಂದಕ್ಕೂ ನೆರವು ನೀಡುವ ಭರವಸೆ ಅವರ ಮಾತಿನಿಂದ ಕಂಡುಬರುತ್ತದೆ. ಈಚೆಗೆ ಅಮೇರಿಕವು ತನ್ನ ಹಣವನ್ನು ಸಂರಕ್ಷಣಾ ಯೋಜನೆಗಳಿಗಾಗಿ ಹೆಚ್ಚು ಹೆಚ್ಚಾಗಿ ವ್ಯಯಿಸುತ್ತಿದೆಯಲ್ಲದೆ, ಹಿಂದುಳಿದ ರಾಷ್ಟ್ರಗಳಿಗೆ ಕೊಡುತ್ತಿರುವ ಸಹಾಯ ಕಳೆದ ವರ್ಷಕ್ಕಿಂತ ಈ ವರ್ಷ ತಗ್ಗುತ್ತಾ ನಡೆದಿದೆ. ಭಾರತಕ್ಕೆ ಕಳೆದ ವರ್ಷ ೧೦೦೦ ಲಕ್ಷ ಡಾಲರು ಸಹಾಯ ನೀಡಿದ್ದರೆ ಈ ವರ್ಷ ಭಾರತ ಪಾಕಿಸ್ತಾನಗಳೆರಡಕ್ಕೆ ಒಟ್ಟು ೬೪೦ ಲಕ್ಷ ಡಾಲರು ಆರ್ಥಿಕ ಸಹಾಯ ದೊರೆಯುತ್ತದೆ. ಈ ರೀತಿ ಹಣವನ್ನು ಮಂಜೂರು ಮಾಡುವುದು ಅಮೇರಿಕನ್ ಕಾಂಗ್ರೆಸಿನ ಕೈಯಲ್ಲಿದೆ ಎಂದು ಡಲ್ಲೇಸರು ಸ್ಪಷ್ಟಗೊಳಿಸಿರುವರು. ಭಾರತವು ರಾಷ್ಟ್ರೀಯ ಅಭಿವೃದ್ಧಿಯ ಉದ್ದೇಶದಿಂದ ಕೈಗೊಳ್ಳುವ ಯೋಜನೆಗಳಿಗೆ ಅಧಿಕಾಧಿಕ ಆರ್ಥಿಕ ನೆರವನ್ನು ಮಾನವೀಯ ಭಾವನೆಯಿಂದ ನೀಡುವುದಕ್ಕೆ ಅಮೇರಿಕ ಮುಂದಲ್ಲಿ ನಮ್ಮ ಸರಕಾರವು ಅತ್ಯಂತ ಕೃತಜ್ಞತೆಯೊಡನೆ ಅದನ್ನು ನಿಶ್ಚಯಕ್ಕೂ ಸ್ವೀಕರಿಸುವುದು.

ಗೆಳೆತನದ ಬೆಸುಗೆ

ಭಾರತ ಪಾಕಿಸ್ತಾನಗಳೊಡನೆ ಮೈತ್ರಿ ಸ್ಥಾಪನೆಯಾಗಬೇಕೆಂದು ಪ್ರಾಮಾಣಿಕವಾಗಿ ಬಯಸುತ್ತಿರುವವರಿಗೆ ಈಗ ಇನ್ನೂ ಹೆಚ್ಚು ಆಶಾಜನಕವಾದ ವಾರ್ತೆ ಬಂದಿರುತ್ತದೆ. ಉಭಯ ರಾಷ್ಟ್ರಗಳ ಪ್ರಧಾನಿಗಳು ಲಂಡನಿನಲ್ಲಿ ಬ್ರಿಟಿಷ ರಾಣಿಯ ಕಿರೀಟ ಧಾರಣಾ ಮಹೋತ್ಸವಕ್ಕೆ ಹೋದಲ್ಲಿ ಭೆಟ್ಟಿಯಾಗಿ ಪ್ರಾಸ್ತಾವಿಕ ಮಾತುಕತೆಗಳನ್ನು ನಡೆಸುವರೆಂದು ಭಾರತ ಪಾಕಿಸ್ತಾನಗಳೆರಡೂ ಏಕಕಾಲದಲ್ಲಿ ಹೊರಡಿಸಿದ ಪ್ರಕಟಣೆಯೊಂದು ಹೇಳುತ್ತದೆ. ಆದರೆ ಲಂಡನಿನಲ್ಲಿ ವಿವರವಾದ ಚರ್ಚೆ ನಡೆಸಲು ಸಮಯಾವಕಾಶವಿಲ್ಲದ ಕಾರಣ-ಅಲ್ಲಿಂದ ಮರಳಿ ಬಂದೊಡನೆಯೇ ಆದಷ್ಟು ಬೇಗನೆ ಕರಾಚಿಯಲ್ಲಿ ಪ್ರಧಾನಿ ದ್ವಯರು ಪರಸ್ಪರ ಭೇಟಿಯಾಗಿ ಚರ್ಚೆ ನಡೆಸುವರು. ಈ ನಡುವೆ ಇಬ್ಬರೂ ಪ್ರಧಾನಿಗಳಿಗೆ ಭಾರತ ಪಾಕಿಸ್ತಾನಗಳ ನಡುವೆ ಇತ್ಯರ್ಥವಾಗದೆ ಉಳಿದಿರುವ ಸಮಸ್ಯೆಗಳ ಸಂಬಂಧದಲ್ಲಿ ಆಯಾ ಸರಕಾರಗಳು ಕೈಗೊಂಡ ಪರಿಹಾರ ಕ್ರಮಗಳಲ್ಲಿ ನಡೆದ ಪ್ರಗತಿಯ ವರದಿಯು ಸಿಗುತ್ತಿರುತ್ತದೆ. ಈಗಾಗಲೇ ಉಭಯ ರಾಷ್ಟ್ರಗಳೂ ಅಧಿಕಾರೀ ಮಟ್ಟದಲ್ಲಿ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ನಿಯೋಜಿಸಲು ಪ್ರತಿನಿಧಿಗಳನ್ನು ನೇಮಿಸಿರುತ್ತವೆ. ತಾವು ನಡೆಸಿದ ಮಾತುಕತೆಗಳ ವರದಿಯನ್ನು ಈ ಪ್ರತಿನಿಧಿಗಳು ತಂತಮ್ಮ ಪ್ರಧಾನಮಂತ್ರಿಗಳಿಗೆ

(ಆರನೇ ಪುಟ ನೋಡಿರಿ)



ಮಿತ ದರದಲ್ಲಿ
ಚಲೋ ಗಡಿಯಾರಗಳೂ
ಟೈಮ್‌ಪೀಸುಗಳೂ
ದೊರೆಯುತ್ತವೆ.
ವಿವರಗಳಿಗೆ ಬರೆಯಿರಿ:
MUBARAK & CO
Watch & Clock
Specialists,
MADRAS 3.
ಮುಬಾರಕ್ & ಕೊ
ವಾಚ್ ಎಂಡ್ ಕ್ಲಾಕ್
ಸ್ಪೆಶಲಿಸ್ಟ್ಸ್,
ಮದ್ರಾಸು ೩

ಓದಲೇ ಬೇಕಾದ ನವೀನ ಸಾಮಾಜಿಕ ಕಾದಂಬರಿ

ಕುಲವಿಲ್ಲದ ಹೆಣ್ಣು

(ತೆಲುಗಿನಿಂದ ಅನುವಾದಿತ)

ಅನುವಾದಕರು:- ಶ್ರೀ. ಪಿ. ವೆಂಕೋಬಾಚಾರ್ಯರು,
ಬಿ. ಎ. ಬಿ ಟಿ, ಉಡುಪಿ.

"ಮಿತ್ರಸಂತತಿಯ ಹೆಣ್ಣೊಂದು ಧರ್ಮದ ಸೋಗಿನ ಜಾಲ ಧನದ ಜಾಲ ವೃದ್ಧರ ಕಾಮಜಾಲದಿಂದ ಪಾರಾಗಿ ಆಧುನಿಕ ಯುವಕ ಸಂತತಿಯ ಉದಾರತೆಯ ಕೈಹಿಡಿದು ಸುಖವಾಗಿ ಬಾಳಿತೆಂಬುದನ್ನು ಸೂಚಿಸುವ ಈ ಕಾದಂಬರಿಯಲ್ಲಿ ಪ್ರಾಸಂಗಿಕವಾಗಿ ನಾಟಕ ಕಲೆಯ ಮೇಲೆಯೂ ಕೆಲವು ಅಭಿಪ್ರಾಯಗಳನ್ನು ಸೂಚಿಸಿದ್ದಾರೆ

ಕುಲವಿರಲಿ ಇಲ್ಲದಿರಲಿ, ವೈಯಕ್ತಿಕ ಶೀಲವೊಂದಿದೆ, ಅದರ ಬೆಳಕಿನಲ್ಲಿ ವ್ಯಕ್ತಿಯು ಎಂತಹ ಸಾಮಾಜಿಕ, ಧಾರ್ಮಿಕ ಎಡರುತೊಡರುಗಳನ್ನೂ ದಾಟಿ ಮನಮೆಚ್ಚಿದ ಶಾಂತಿಸುಖ ಸಮಾಧಾನಗಳ ಬಾಳನ್ನು ಬಾಳಬಲ್ಲುದು ಎಂಬುದೇ ಈ ಕಾದಂಬರಿಯ ನೀತಿ"—ಜೈಹಿಂದ್

ಕನ್ನಡದ ಸ್ತ್ರೀಪುರುಷರೆಲ್ಲರೂ ಅವಶ್ಯ ಓದಲೇ ಬೇಕಾದ ಅತ್ಯಾಧುನಿಕ ಕಾದಂಬರಿ

ಬೆಲೆ ರೂ. 2 0-11 ಅಂಚೆ ವೆಚ್ಚ ಪ್ರತ್ಯೇಕ

ನವಭಾರತ ಪುಸ್ತಕ ಭಂಡಾರ ಉಡುಪಿ.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸುರಕ್ಷಿತತೆ, ಭದ್ರತೆ ಮತ್ತು ಸೇವಾತತ್ಪರತೆ
ಇವುಗಳಿಗೆ
ತವರುಮನೆಯಂತಿದ್ದು, ನಿಮ್ಮೆಲ್ಲರ ಸ್ನೇಹ, ಸಹಕಾರಗಳನ್ನು
ಅಪೇಕ್ಷಿಸುವ ಬೇಂಕು.

THE CANARA BANKING CORPORATION LTD.
Estd: 1906] [H. O.: UDIPI, (S. India)

ನವಯುಗ

ಉಡುಪಿ, ಗುರುವಾರ ೨೮-೫-'೫೩

ಅಕ್ಕಿಯ ಬೆಲೆ ತಗ್ಗಲಿ

ಮಳೆಗಾಲ ಕಾಲಿರಿಸುತ್ತಿರುವಾಗ ಬಡ ಜನರನ್ನು ಕಳವಳಕ್ಕೆ ಗುರಿಮಾಡಿರುವ ಮುಖ್ಯ ಸಂಗತಿಯೆಂದರೆ ದಿನ ದಿನಕ್ಕೂ ಏರುತ್ತಿರುವ ಅಕ್ಕಿಯ ಬೆಲೆಯಾಗಿರುತ್ತದೆ. ನಮ್ಮ ಜನರ ಮುಖ್ಯಾಹಾರವಾಗಿರುವ ಅಕ್ಕಿಯ ಬೆಲೆಯನ್ನೆ ಜೀವನವೆಚ್ಚವು ಹೊಂದಿಕೊಂಡಿರುವುದರಿಂದ ಸರಕಾರೀ ಅಧಿಕಾರಿಗಳೂ ಸಾರ್ವಜನಿಕ ಧುರೀಣರೂ ಈ ಕುರಿತು ಹೆಚ್ಚಿನ ಗಮನ ಕೊಡುವುದು ಅತ್ಯವಶ್ಯ. ಮಳೆಗಾಲದಲ್ಲಿ ಸ್ವಾಭಾವಿಕವಾಗಿಯೇ ಆಹಾರ ಧಾನ್ಯಗಳ ತುಟ್ಟಿಯು ಕಂಡುಬರುತ್ತಿರುವುದರಿಂದ, ಈಗಿನ ಧಾರಣೆಯು ಆ ಸಮಯ ನಿಲ್ಲದೆ, ನಿಶ್ಚಯವಾಗಿಯೂ ಹೆಚ್ಚುತ್ತದೆ. ಈಗಿರುವ ಧಾರಣೆ ಸಹ ಬಡಜನರಿಗೆ ಅನುಕೂಲವಾಗಿಲ್ಲವೆಂಬುದನ್ನು ಸ್ಪಷ್ಟವಾಗಿ ಹೇಳುವುದೊಳ್ಳೆಯದು. ಸೇರಿಗೆ ಹತ್ತಾಣೆಯಿಂದ ಹನ್ನೆರಡಾಣೆಯ ವರೆಗೆ ಪೇಟೆಯಲ್ಲಿ ಈಗಿನ ಧಾರಣೆಯಾಗಿರುತ್ತದೆ. ಇಷ್ಟು ಹೆಚ್ಚು ಬೆಲೆಯನ್ನು ಕೊಟ್ಟು ಅಕ್ಕಿಯನ್ನು ತೆಗೆದುಕೊಂಡು ಬಡವರೂ ಮಧ್ಯಮ ವರ್ಗದವರೂ ದಿನ ಕಳೆಯುವುದು ತುಂಬ ಕಷ್ಟವೆಂದು ಹೇಳುವ ಆಗತ್ಯವಿಲ್ಲ. ನಿಯಂತ್ರಣವು ಇದ್ದಾಗ ಕೂಡ ಕಾಳಸಂತೆಯಲ್ಲಿ ಮುಡಿಗೆ ೨೫-೩೦ ರೂಪಾಯಿ ಕೊಟ್ಟರೆ ಅಕ್ಕಿಯು ದೊರೆಯುತಿತ್ತೆಂದ. ಹೇಳುವಾಗ, ಮುಕ್ತಪೇಟೆಯ ಈಗಿನ ಧಾರಣೆಯು ಯಾವ ದೃಷ್ಟಿಯಿಂದಲೂ ನ್ಯಾಯವಾದುದಲ್ಲವೆಂದು ಕಂಡು ಬರುತ್ತವೆ. ಬಡ ಜನರು ಮಳೆಗಾಲದ ದುರ್ದಿನಗಳಲ್ಲಿ ಅಕ್ಕಿಗಾಗಿ ತಾವು ಪಡಬೇಕಾಗಿರುವ ಬನ್ನವನ್ನು ನೆನೆದು ದುಃಖಿತರಾಗಿರುವುದರಿಂದ, ಸರಕಾರದ ಕಡೆಯಿಂದಲೂ ರೈತ ಮತ್ತು ವ್ಯಾಪಾರಿಗಳ ಕಡೆಯಿಂದಲೂ ಇವರಿಗೆ ಸಾಂತ್ವನವೂ ಆಶ್ವಾಸನೆಯೂ ದೊರೆಯಬೇಕಾಗಿದೆ. ಅಲ್ಲಲ್ಲಿ ಬಡವರ ಪರವಾಗಿ ನಡೆಯುತ್ತಿರುವ ಸಭೆಗಳೂ ಸರಕಾರಕ್ಕೆ ಸಲ್ಲಿಸಲ್ಪಟ್ಟಿರುವ ಮನವಿಗಳೂ ವಿಷಯದ ಗಾಂಭೀರ್ಯವನ್ನು ಮನವರಿಕೆ ಮಾಡಿಸಿಕೊಟ್ಟಿವೆ. ಅಕ್ಕಿಯ ಬೆಲೆಯು ಈಗಿರುವ ಮಟ್ಟದಿಂದ ತುಂಬ ಇಳಿದು ಬರಬೇಕೆಂದು ಈ ಸಭೆಗಳೂ ಮನವಿಗಳೂ ಕೇಳುತ್ತವೆ. ಮಂಗಳೂರಲ್ಲಿಯೂ ಉಡುಪಿಯಲ್ಲಿಯೂ ರೆವಿನ್ಯೂ ಡಿವಿಜನಲ್ ಆಫೀಸರರು ವ್ಯಾಪಾರೀ ವರ್ಗದ ಪ್ರಮುಖರ ಸಭೆಯನ್ನು ಕರೆದು ಅಕ್ಕಿಯ ಬೆಲೆಯನ್ನು ಇಳಿಸುವ ಅವಶ್ಯಕತೆಯನ್ನು ಮನಗಾಣಿಸಿಕೊಟ್ಟರೆಂದು ತಿಳಿದುಬರುತ್ತದೆ. ಆದರೆ ಈ ಸಭೆಗಳು ಮಾಡಿದ ನಿರ್ಣಯವನ್ನು ನೋಡಿದರೆ ಬಡಜನರಿಗೆ ಇದರಿಂದ ಹೆಚ್ಚಿನ ಅನುಕೂಲತೆಯೊದಗಿತೆಂದು ಹೇಳಲಾರೆವು. ಮುಡಿಗೆ ೨೫ ರೂಪಾಯಿ ಅಥವಾ ಸೇರಿಗೆ ಹತ್ತಾಣೆಯನ್ನು ಅಕ್ಕಿಯ ಬೆಲೆಯು ಮೀರಲಾಗದೆಂಬ ತತ್ವಕ್ಕೆ ಸಾಮಾನ್ಯತಃ ವ್ಯಾಪಾರಿಗಳು ಸಮ್ಮತಿಸಿರುವುದು, ಇನ್ನು ಬೆಲೆ ಏರಲಾರದೆಂಬ ಸಮಾಧಾನವನ್ನು ತಂದರೂ- ಈಗಿನ ಬೆಲೆಯೇ ಹೆಚ್ಚೆನ್ನುವ ವಾದಕ್ಕೆ ಇದು ಉತ್ತರವೆನಿಸಲಾರದು. ಅಕ್ಕಿಯ ಬೆಲೆಯನ್ನು ತಗ್ಗಿಸುವುದು ತೀರಾ ಅಗತ್ಯ ಮತ್ತು ವ್ಯಾಪಾರೀ ವರ್ಗದವರು ಸ್ವೇಚ್ಛೆಯಿಂದ ಈ ದಿಸೆಯಲ್ಲಿ ತಕ್ಕ ಕ್ರಮಗಳನ್ನು ಒಡನೆಯೇ ಕೈಗೊಳ್ಳದಿದ್ದ ಪಕ್ಷದಲ್ಲಿ ಸರಕಾರವು ಬಡವರ ಸಹಾಯಕ್ಕೆ ಕೂಡಲೇ ಬರಬೇಕಾದುದು ನ್ಯಾಯ. ಸಾಮಾನ್ಯವಾಗಿ ಈಗಿನ ಬೆಲೆ ಏರಿಕೆಗೆ ಜಿಲ್ಲೆಯಿಂದ ಅಕ್ಕಿಯು ಹೊರಗೆ ಸಾಗುತ್ತಿರುವುದೂ, ವ್ಯಾಪಾರಿಗಳನ್ನೊಳಗೊಂಡು ಹೆಚ್ಚಿನ ಶ್ರೀಮಂತರು ತಮ್ಮ ಉಪಯೋಗಕ್ಕೂ ಮಾರಾಟಕ್ಕೂ ಹೆಚ್ಚು ದಾಸ್ತಾನುಮಾಡಿಟ್ಟಿರುವುದೂ ಕಾರಣವೆಂದು ತೋರುತ್ತವೆ. ಅಕ್ಕಿಯು ನ್ಯಾಯವಾದ ಬೆಲೆಗೆ ಇಳಿಯದಿದ್ದ ಪಕ್ಷದಲ್ಲಿ— ಮತ್ತು ಬಡಜನರು ಸಂಕಟವನ್ನು ಅನುಭವಿಸಬೇಕಾಗಿ ಬರುವ ಸಂದರ್ಭದಲ್ಲಿ— ಸರಕಾರವು ಈ ಸಂಗ್ರಹವನ್ನು ವಶಪಡಿಸಿಕೊಂಡು ವಿತರಿಸುವ ಯೋಗ್ಯ ವ್ಯವಸ್ಥೆಯನ್ನು ಮಾಡಬೇಕಾಗುವುದು. ಇಂಥ ಉಗ್ರ ಕ್ರಮಕ್ಕೆ ಅವಕಾಶಮಾಡಿಕೊಡದೆ ಪ್ರಾಮಾಣಿಕ ವರ್ತನೆಯನ್ನಿಟ್ಟುಕೊಳ್ಳುವುದು ರೈತರಿಗೂ ವ್ಯಾಪಾರಿಗಳಿಗೂ ಶ್ರೇಯಸ್ಕರವೆಂದು ಹೇಳುತ್ತೇವೆ. ಮುಡಿಗೆ ೧೮-೨೦ ರೂಪಾಯಿಗಳವರೆಗಿನ ಧಾರಣೆಯು ಎಲ್ಲರಿಗೂ ಸಮ್ಮತವಾದೀತೆಂದು ನಮ್ಮ ಅಭಿಪ್ರಾಯ. ಸಾರ್ವಜನಿಕ ಕಾರ್ಯಕರ್ತರು ಈ ದರವನ್ನು ವಿಧಿಸಿ ಬಡಜನರಿಗೆ ಅಕ್ಕಿಯನ್ನು ಒದಗಿಸಿಕೊಡುವುದಕ್ಕೆ ನೇರಾದ ಕಾರ್ಯಕ್ರಮವನ್ನು ಇಟ್ಟುಕೊಂಡರೆ ನಿಶ್ಚಯಕ್ಕೂ ಜನತೆಯ ಪ್ರಶಂಸೆಗೂ ವಿಶ್ವಾಸಕ್ಕೂ ಅವರು ಪಾತ್ರರಾಗುವರು. ಈ ಸೂಚನೆಯನ್ನು ಯೋಗ್ಯ ರೀತಿಯಲ್ಲಿ ಗಮನಿಸಲಾಗುವುದೆಂದು ನಂಬಿದ್ದೇವೆ.

ನವೋದಯ ಕನ್ನಡವಾಚನ ಮಾಲೆ

ಕಳೆದವಾರದ ಸಂಚಿಕೆಯ 10ನೇ ಪುಟದಲ್ಲಿ ನವೋದಯ ಕನ್ನಡ ವಾಚನ ಮಾಲೆಯ ಪುಸ್ತಕಗಳ ಸ್ವೀಕಾರ-ವಿಮರ್ಶೆಯಲ್ಲಿ ಅವುಗಳ ಬೆಲೆಯಲ್ಲಿ ಸ್ವಲ್ಪ ವ್ಯತ್ಯಾಸವಾಗಿಯದೆ, ಅವುಗಳ ಸರಿಯಾದ ಬೆಲೆ ಹೀಗಿದೆ 1ನೇ ಪುಸ್ತಕ 0-8-0 2ನೇ 0 10 0 3ನೇ 0-12-0 4ನೇ 0-12-0 5ನೇ 0-14-0

[ಸಂ: ನಂ]

ಬೆರ್ಮುಡಾದ ತ್ರಿರಾಷ್ಟ್ರ ಪರಿಷತ್ತು

ರಶಿಯಾದ ವಿರುದ್ಧ ಹುಯಿಲೆಬ್ಬಿಸುವುದೇ ಉದ್ದೇಶವೆಂದು ಪ್ರಾವ್ದಾದ ಟೀಕೆ

ನಾಲ್ಕು ಮಹಾ ರಾಷ್ಟ್ರಗಳಾದ ಬ್ರಿಟನು, ಅಮೇರಿಕ, ಫ್ರಾನ್ಸು ಮತ್ತು ರಶಿಯಾದ ಪ್ರಧಾನರು ಒಂದೆಡೆ ಸೇರಿ ಮಹತ್ವದ ಪ್ರಶ್ನೆಗಳನ್ನು ಪರಸ್ಪರ ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಲು ಪ್ರಯತ್ನಿಸುವ ಸೂಚನೆಯೊಂದನ್ನು ಬ್ರಿಟಿಷ್ ಪ್ರಧಾನಿ ಸರ್ ವಿನ್‌ಸ್ಟನ್ ಚರ್ಚಿಲ್ಲರು ಈಗ್ಗೆ ಕೆಲದಿನಗಳ ಹಿಂದೆ ಮಾಡಿದರಷ್ಟೆ! ಮುಂಬರುವ ರಾಷ್ಟ್ರಕೂಟದ ಸದಸ್ಯ ರಾಷ್ಟ್ರಗಳ ಪ್ರಧಾನಿಗಳ ಪರಿಷತ್ತಿನಲ್ಲಿ ಈ ವಿಷಯದಲ್ಲಿ ಚರ್ಚಿಲರು ಇತರರ ಸಲಹೆಯನ್ನೂ ಅಭಿಪ್ರಾಯವನ್ನೂ ಕೇಳುವುದು ನಿಶ್ಚಯ. ಭಾರತದ ಪ್ರಧಾನಿಗಳಂತೂ ಪಾರ್ಲಿಮೆಂಟಿನ ಮುಂದೆ ಕೊಟ್ಟ ಹೇಳಿಕೆಯಲ್ಲಿ ಚರ್ಚಿಲರ ಈ ಸೂಚನೆಯನ್ನು ಸ್ವಾಗತಿಸಿರುವರು. ಅಲ್ಲದೆ, ಅಖಿಲಭಾರತ ಕಾಂಗ್ರೆಸದ ಕಾರ್ಯಕಾರಿಣಿಯು ವಿಶ್ವದಲ್ಲಿ ಸದ್ಯ ಕಂಡು ಬರುತ್ತಿರುವ ದ್ವೇಷಮಯ ವಾತಾವರಣವನ್ನು ಕಳೆಯಲಿಕ್ಕೆ ಚರ್ಚಿಲರು ಮುಂದಿಟ್ಟ ಸೂಚನೆಯನ್ನು ಶ್ಲಾಘನೀಯವೆಂದು ಕರೆದಿರುವುದರಿಂದ, ನೆಹರೂರ ಹೇಳಿಕೆಗೆ ಸಮಸ್ತ ಭಾರತೀಯರ ಬೆಂಬಲವಿದೆ ಎಂದೂ ಹೇಳಬಹುದು. ಬ್ರಿಟನ ಪ್ರಧಾನಿಗಳು ತಮ್ಮ ಅಭಿಪ್ರಾಯಕ್ಕೆ ರಾಷ್ಟ್ರಕೂಟದ ಇತರ ಪ್ರಧಾನಿಗಳ ಬೆಂಬಲವನ್ನು ಪಡೆಯಲು ಹಾರೈಸುತ್ತಿರುವರೆಂದು ತೋರುತ್ತದೆ. ಏಕೆಂದರೆ, ಕಮ್ಯೂನಿಸ್ಟರೊಡನೆ ಯಾವುದೇ ರೀತಿಯ ಸ್ನೇಹ ಸಂಬಂಧವನ್ನು ಬೆಳೆಸಿಕೊಳ್ಳುವುದಕ್ಕೆ ಅಮೇರಿಕವು ಇಂದು ಸಿದ್ಧತೆಯನ್ನು ತೋರಿಸುತ್ತಿಲ್ಲ. ಐಸೆನ ಹಾವರರು ಎಪ್ರಿಲು ತಿಂಗಳಲ್ಲಿ ಲೋಕಕ್ಕೆ ಕೊಟ್ಟ ಶಾಂತಿಯ ಸಂದೇಶಕ್ಕೂ ನೊನ್ನೆ ಮೊನ್ನೆ ಅವರು ಆಕಾಶವಾಣಿ ಭಾಷಣದಲ್ಲಿ ಹೇಳಿದುದಕ್ಕೂ ಅಜಗಜಾಂತರವಿದೆ.

ಅಮೇರಿಕದ ಅಪನಂಬಿಕೆ

ಐಸೆನ ಹಾವರರ ಮತ್ತು ಅಮೇರಿಕದ ವಿದೇಶಾಂಗ ಸಚಿವ ಡಲ್ಲೇಸರ ಮಾತುಗಳಿಂದ ತೀರ ಸ್ಪಷ್ಟವಾಗುವ ಸಂಗತಿಯೊಂದೇ— ರಶಿಯಾದ ಧೋರಣೆಯಲ್ಲಿ ನಿಜಕ್ಕೂ ಪರಿವರ್ತನೆಯಾಗಿರುತ್ತದೆ ಎಂಬ ಬಗ್ಗೆ ಇದುವರೆಗೆ ಪ್ರಾಮಾಣಿಕವಾದ ಸಾಕ್ಷ್ಯ ಏನೂ ದೊರೆತಿರುವುದಿಲ್ಲ; ಮತ್ತು ಅಂಥ ರುಜುವಾತು ದೊರೆಯುವವರೆಗೆ ಕಮ್ಯೂನಿಸ್ಟರೊಡನೆ ಶಾಂತಿ ಸಂಧಾನದ ಪ್ರಯತ್ನಗಳನ್ನು ಅಮೇರಿಕ ಕೈಗೊಳ್ಳುವಂತಿಲ್ಲ. ಕೇವಲ ಚರ್ಚಿಲರು ಮಾತ್ರವಲ್ಲ— ಭಾರತವನ್ನೊಳಗೊಂಡು ಅರ್ಧ ಲೋಕವೇ ರಶಿಯಾದ ನೀತಿ ಮೊಬಲಿಸಾತಿರದೆ ಸೌಹಾರ್ದ ಸಂಬಂಧವನ್ನು ಸ್ಥಾಪಿಸುವುದರ ಕಡೆಗೆ ವಾಲುತ್ತಾ ಬಂದಿರುತ್ತದೆಂಬ ಅಭಿಪ್ರಾಯಕ್ಕೆ ಬಂದಿರುವಾಗಲೂ ಅಮೇರಿಕವು ಈ ವಿಷಯದಲ್ಲಿ ತೀವ್ರ ಭಿನ್ನಾಭಿಪ್ರಾಯವನ್ನು ಪಡೆದಿರುತ್ತದೆ. ಇದನ್ನು ನಿವಾರಿಸಲು ಸದ್ಯಕ್ಕೆ ಸಾಮರ್ಥ್ಯವಿರುವ ಒಂದೇ ಒಂದು ರಾಷ್ಟ್ರವೆಂದರೆ ಚರ್ಚಿಲರು ಪ್ರಧಾನಿಯಾಗಿರುವ ಬ್ರಿಟನ್ನೆಂದು ಹೇಳಬಹುದು. ಚರ್ಚಿಲರು ವಯಸ್ಸಿನಲ್ಲಿಯೂ ಅನುಭವದಲ್ಲಿಯೂ ದಕ್ಷರಾದ ಹಿರಿಯರಾಗಿರುವರು. ಐಸೆನ ಹೋವರರಿಗೆ ರಶಿಯಾದ ಮೇಲೆ ಇನಿತಾದರೂ ನಂಬಿಕೆ ಮೂಡುವಂತೆ ಮಾಡಲು ಚರ್ಚಿಲರೊಬ್ಬರೇ ಶಕ್ತರೆಂದು ಭಾಸವಾಗುತ್ತದೆ. ಇಂಥದೊಂದು ಸಾಹಸವನ್ನು ಕೈಗೊಳ್ಳುವುದಕ್ಕೆ ಮುಂಚೆ ಚರ್ಚಿಲರು ಆದಷ್ಟು ಹೆಚ್ಚು ಜನರ ಬೆಂಬಲ ತನಗಿರಬೇಕೆಂದು ಬಯಸುವುದು ಸ್ವಾಭಾವಿಕ. ಆದುದರಿಂದಲೇ ರಾಷ್ಟ್ರಕೂಟದ ಪ್ರಧಾನಿಗಳ ಪರಿಷತ್ತಿಗೆ ತುಂಬ ಮಹತ್ವ ಬಂದಿರುತ್ತದೆ. ಅಂತಾರಾಷ್ಟ್ರೀಯ ಜಗಳಗಳನ್ನು ನಿವಾರಿಸಲು ಎಲ್ಲ ರಾಜಕಾರಣಿಗಳೂ ಪರಸ್ಪರ ಸಹಕರಿಸಿ ದುಡಿಯುವುದು ಇಂದು ಎಂದಿಗಿಂತ ಅಗತ್ಯವೆನಿಸಿದೆ.

ಬೆರ್ಮುಡಾ ಸಮ್ಮೇಳನ

ಮೇಲಿಂದ ಮೇಲೆ ನೋಡುವಾಗ ಬ್ರಿಟನ— ಅಮೇರಿಕಾಗಳು ಆಪ್ತಮಿತ್ರರಂತೆ ಕಂಡುಬಂದರೂ ಮಹತ್ವದ ವಿಷಯಗಳಲ್ಲಿ ಅವುಗಳ ನಡುವೆ ತೀವ್ರ ಮತಭೇದವಿದೆ ಎಂಬುದು ಈಗಾಗಲೇ ಸ್ಪಷ್ಟಗೊಂಡಿರುತ್ತದೆ. ಹಾಗೆಂದು ಈ ಮತಭೇದಗಳ ಕಾರಣದಿಂದ ಬ್ರಿಟನಿನೊಡನಿರುವ ಸಂಬಂಧವು ನಾಜೂಕು ಪರಿಸ್ಥಿತಿಯನ್ನು ಇದಿರಿಸುವುದು ಅಮೇರಿಕಕ್ಕೆ ಬೇಕಾಗಿರುವುದಿಲ್ಲ. ಕಮ್ಯೂನಿಸ್ಟರೊಡನೆ ಸ್ನೇಹವನ್ನು ಕುದುರಿಸಿಕೊಳ್ಳಬೇಕೆಂದು ತನ್ನ ಹೆಚ್ಚಿನ ಮಿತ್ರರು ಪ್ರಬಲೇಚ್ಛೆಯನ್ನು ಪ್ರಕಟಪಡಿಸಿ ಒತ್ತಾಯ ಹೇರುವರಾದರೆ, ಅದಕ್ಕೆ ಅಮೇರಿಕ ಕೊನೆಗಾದರೂ ಒಪ್ಪಬೇಕಾದೀತು. ಇಂಥದೊಂದು ಹೆಜ್ಜೆ ಮುಂದಿಡುವುದಕ್ಕೆ ಮುಂಚೆ ಅಮೇರಿಕವು ಸಾಕಷ್ಟು ಸ್ಪಷ್ಟೀಕರಣವನ್ನು ಕೇಳಿಕೊಳ್ಳಲು ಬಯಸುವುದು ನ್ಯಾಯ. ಆದುದರಿಂದಲೇ ಐಸೆನ ಹಾವರರು ನಾಲ್ಕು ಮಹಾ ರಾಷ್ಟ್ರಗಳಲ್ಲಿ ಪಶ್ಚಿಮ ರಾಷ್ಟ್ರಗಳ ಬಣಕ್ಕೆಸೇರಿದ ಅಮೇರಿಕಾ, ಬ್ರಿಟನು ಮತ್ತು ಫ್ರಾನ್ಸುಗಳ ಪ್ರತಿನಿಧಿಗಳು ಮುಂದಿನ ತಿಂಗಳಲ್ಲಿ ಒಂದು ಪರಿಷತ್ತಿನಲ್ಲಿ ಸೇರಬೇಕೆಂದು ಹೇಳಿರುವರು. ಚರ್ಚಿಲರು ಇಂಥ ಸಮ್ಮೇಳನವು ಬೆರ್ಮುಡಾದಲ್ಲಿ ನಡೆಯಲೆಂದು ಹೇಳಿದುದಕ್ಕೆ ಅಮೇರಿಕಾದ ಮತ್ತು ಫ್ರಾನ್ಸಿನ ಒಪ್ಪಿಗೆ ದೊರೆತಿದೆ. ಬೆರ್ಮುಡಾದ ಸಮ್ಮೇಳನದಲ್ಲಿ ರಶಿಯಾದೊಡನೆ ಶಾಂತಿ ಸಂಧಾನ ನಡೆಸುವುದಕ್ಕೆ ಪೂರ್ವಭಾವಿಯಾಗಿ ಮಹತ್ವದ ವಿಷಯಗಳ ಕಡೆಗೆ ಆಯಾ ರಾಷ್ಟ್ರಗಳು ತಳೆದಿರುವ ಧೋರಣೆಯು ವಿವರವಾಗಿ ಚರ್ಚಿಸಲ್ಪಡುವುದೆಂದು ತೋರುತ್ತದೆ.

ಪರಿಷತ್ತಿನ ಉದ್ದೇಶ

ರಶಿಯಾದೊಡನೆ ಒಳ್ಳೆದ ಮನಸ್ಸಿನಿಂದ ಮಾತುಕತೆಗೆ ತೊಡಗಲು ಸರ್ವಥಾ ಸಿದ್ಧವಿಲ್ಲದ ಅಮೇರಿಕವು ಬ್ರಿಟನಿನ ನಿಲುವೆಯನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಬೆರ್ಮುಡಾ ಸಮ್ಮೇಳನದ

...ಮೂಲಕ ಪ್ರಯತ್ನಿಸಿದೆ ಎಂದರೂ ಸಲ್ಲುದು. ಈಗಿದ್ದಂತೆ ಚತುಃರಾಷ್ಟ್ರಗಳ ಪರಿಷತ್ತಿನಲ್ಲಿ ಭಾಗವಹಿಸುವುದರಿಂದ ತಮ್ಮ ಪಕ್ಷದ ಸದಸ್ಯರೊಡನೆಯೇ ಅಸಹಮತರಾಗುವ ದುರ್ದೈವ ಅಮೇರಿಕಕ್ಕೆ ಬಂದೊದಗೀತು. ಇದನ್ನು ತಪ್ಪಿಸ ಬಯಸಿ, ...ರಿಕಾ ಬೆರ್ಮುಡಾ ಸಮ್ಮೇಳನವ ...ರ್ವಡಿಸಿದೆ ಎಂದೂ ಹೇಳಬಹುದು. ...ಯಾದೊಡನೆ ಸಂಧಾನ ನಡೆಸುವುದಾ ...ಲ್ಲಿ ಇದಕ್ಕೆ ತಳಹದಿಯನ್ನು ರೂಪಿಸುದು ಬೆರ್ಮುಡಾ ಸಮ್ಮೇಳನದ ಉದ್ದೇಶವೆಂದೂ ಪರ್ಯಾಯವಾಗಿ ಅನುಮೋದಿಸಬಹುದು. ರಶಿಯಾದ ಪ್ರಾವ್ಡಾ ಪತ್ರಿಕೆಯು ಈ ಅಂಶವನ್ನು ಭರ್ತ್ಸನೆಯ ಮಾತುಗಳಿಂದ ಹೀಗಳೆದಿರುತ್ತದೆ. ರಶಿಯಾದೊಡನೆ ಶಾಂತಿಗಾಗಿ ಯಾವ ಕರಾರುಗಳನ್ನು ಹೇರಬೇಕೆಂಬುದನ್ನು ನಿರ್ಣಯಿಸುವುದೇ ಬೆರ್ಮುಡಾ ಪರಿಷತ್ತಿನ ಉದ್ದೇಶವೆಂದದು ಟೀಕಿಸಿದೆ. ಮಾತ್ರವಲ್ಲ ಯಾವೊಂದೂ ಶರ್ತಗಳಿಲ್ಲದೆ ಚತುಃರಾಷ್ಟ್ರಗಳ ಮಾತುಕತೆಯನ್ನು ನಡೆಸುವುದಾದಲ್ಲಿ ಮಾತ್ರ ರಶಿಯಾ ಭಾಗವಹಿಸಬಹುದಲ್ಲದೆ ಅನ್ಯಥಾ ಸಾಧ್ಯವಿಲ್ಲವೆಂದು ಪ್ರಾವ್ಡಾ ಬರೆಯುತ್ತದೆ.

ಪ್ರಗತಿಯಿಲ್ಲ-

ಕೊರಿಯಾದಲ್ಲಿ ಕದನ ವಿರಾಮ ಮಾತುಕತೆಗಳು ಮರಳಿ ಮುಂದೆ ಬಿದ್ದಿವೆ. ಸಂಯುಕ್ತ ರಾಷ್ಟ್ರಸಂಘವು ಕೆಲವು ದಿನಗಳಿಗೆ ಹಿಂದೆ ಮಂಡಿಸಿದ ಸೂಚನೆಗಳನ್ನು ಕಮ್ಯೂನಿಸ್ಟರು ಇದ್ದದಿದ್ದಂತೆ ತಿರಸ್ಕರಿಸಿದುದರಿಂದ ಮಾತುಕತೆಗಳನ್ನು ಮುಂದೂಡಿದ್ದರು. ಮೊನ್ನೆ ಸೋಮವಾರ ದಿನ ಉಭಯ ಪಕ್ಷದ ಪಂಚಾತಿಕೆದಾರರು ರಹಸ್ಯ ಸಭೆ ಸೇರಿದಾಗ, ಸಂಯುಕ್ತ ರಾಷ್ಟ್ರಸಂಘವು ಹೊಸ ಸೂಚನೆಗಳನ್ನು ಇಟ್ಟ ವಾರ್ತೆ ಬಂದಿದೆ. ಸಮಾಲೋಚನೆಯು ರಹಸ್ಯ ಸ್ವರೂಪದ್ದಿದ್ದುದಲ್ಲದೆ ಮರಳಿ ಒಂದು ವಾರದ ವರೆಗೆ ಮಾತುಕತೆಗಳು ಮುಂದೆ ಹಾಕಲ್ಪಟ್ಟಿವೆ. ಮೊನ್ನೆಯ ಸಭೆಯಲ್ಲಿ ಏನು ನಡೆಯಿತೆಂಬ ಬಗ್ಗೆ ನಿರವಾದ ವಾರ್ತೆ ತಿಳಿದು ಬಂದಿಲ್ಲವಾದರೂ ರಾಷ್ಟ್ರಸಂಘವು ತನ್ನ ಹಿಂದಿನ ಸೂಚನೆಗಳಿಗಿಂತ ಭಿನ್ನವಾದ ಭಾರತದ ಮೂಲ ಗೊತ್ತುವಳಿಗೆ ಸಮೀಪವೆನಿಸಿದ ಸೂಚನೆಗಳನ್ನು ಮಂಡಿಸಿದೆ ಎಂಬುದು ಸಾಮಾನ್ಯ ಅಭಿಪ್ರಾಯ. ಕಮ್ಯೂನಿಸ್ಟರ ಕೂಡೆ ಮಾತು ಕತೆ ನಡೆಸುವುದಕ್ಕೆ ಭಾರತದ ಗೊತ್ತುವಳಿಯನ್ನೇ ತಳಹದಿಯಾಗಿಟ್ಟುಕೊಳ್ಳಬೇಕೆಂದು ರಾಷ್ಟ್ರಸಂಘದವಲಯದಲ್ಲಿ ಕೇಳಬರುತ್ತಿತ್ತು. ಕಮ್ಯೂನಿಸ್ಟರ ಸೂಚನೆಗಳಲ್ಲಿ ಅನ್ಯವಹಾರ್ಯವೆನಿಸಿದ ಅಂಶಗಳು—ಒಂದನೆಯದಾಗಿ ವಿನಿಮಯಕ್ಕೊಳಪಡದ ಯುದ್ಧ ಕೈದಿಗಳ ಭವಿಷ್ಯವನ್ನು ಅನಿಶ್ಚಿತ ಅವಧಿಯವರೆಗೆ ಮುಂದೂಡುವುದು. ಎರಡನೆಯದು ತಟಸ್ಥರಾಷ್ಟ್ರಗಳು ತಮ್ಮ ಸೈನ್ಯ ಪಡೆಗಳ ಮೂಲಕ ಯುದ್ಧ ಕೈದಿಗಳ ಸಂರಕ್ಷಣಾ ಭಾರವನ್ನು ಹೊರುವುದು. ಇವನ್ನು ತೆಗೆದು ಹಾಕಿದ್ದಲ್ಲಿ ಎಲ್ಲ ಆಕ್ಷೇಪವು ದೂರ ಹೊಂದುವುದು.

ಸುಯೇಜ ಕಾಲುವೆ

ಈಜಿಪ್ತಿಗೆ ಕೆಲಸಮಯದಿಂದ ಬ್ರಿಟನು ಮತ್ತು ಈಜಿಪ್ತುಗಳ ನಡುವೆ ಸುಯೇಜ ಕಾಲುವೆಯ ಸಂಬಂಧದಲ್ಲಿ ವಿವಾದ ಉಂಟಾಗಿರುತ್ತದೆ. ಸುಯೇಜ ಕಾಲುವೆಯ ಪ್ರದೇಶದಿಂದ ಬ್ರಿಟನು ಆನಿರ್ಬಂಧವಾಗಿ ಕಾಲ್ತೆಗೆಯಬೇಕೆಂಬ ಈಜಿಪ್ತಿಯನರ ಬೇಡಿಕೆಯನ್ನು ಮನ್ನಿಸಲು ಬ್ರಿಟನು ಸುತರಾಂ ಒಪ್ಪಲಿಕ್ಕಿಲ್ಲ. ಏಕೆಂದರೆ, ಸುಮಾರು ೫೦೦೦ ಲಕ್ಷ ಪವನುಗಳಷ್ಟು ಬಂಡವಾಳವನ್ನು ಬ್ರಿಟನು ಈ ಕಾಲುವೆಯಲ್ಲಿ ತೊಡಗಿಸಿರುತ್ತದೆ. ಯುದ್ಧದ ಸಮಯದಲ್ಲಿ ಸುಯೇಜ ಕಾಲುವೆಗೆ ಇರುವ ಮಹತ್ವವನ್ನು ಕಳೆದೆರಡು ಮಹಾಯುದ್ಧಗಳು ಮನಗಾಣಿಸಿಕೊಟ್ಟಿವೆ. ಮಧ್ಯಪೂರ್ವದಲ್ಲಿ ತನ್ನ ವರ್ಚಸ್ಸನ್ನು ಉಳಿಸಿಕೊಳ್ಳಲು ಬ್ರಿಟಿಷರಿಗೆ ಇರುವ ಒಂದೇ ಒಂದು ಸಾಧನ ಸುಯೇಜ ಕಾಲುವೆಯ ಮೇಲಿನ ಪ್ರಭುತ್ವ. ಆದುದರಿಂದ ಈಜಿಪ್ತಿಯನರು ಕೇಳುವಷ್ಟು ಸುಲಭದಲ್ಲಿ ಬ್ರಿಟಿಷರು ಇಲ್ಲಿಂದ ಕಾಲ್ತೆಗೆಯುವುದಿಲ್ಲ. ಹೀಗಾಗಿ ಮಾತುಕತೆಗಳು ಮುಂದೆಬಿದ್ದಿರುತ್ತವೆ. ಸಾಲದುದಕ್ಕೆ ರಮಜಾನು ಹಬ್ಬದ ದಿನಗಳಲ್ಲಿ ಬ್ರಿಟಿಷ ಸೈನಿಕರು ಈಜಿಪ್ತಿನ ಲಾರಿಗಳ ಮೇಲೆ ಗುಂಡಿನ ಮಳೆಗರೆದು ಅತ್ಯಾಚಾರ ಮಾಡಿದರು. ಇದರಿಂದ ರೊಚ್ಚಿಗೆದ್ದು ಕೆರಳಿರುವರು. ಬ್ರಿಟಿಷರನ್ನು ಓಡಿಸಲು ಎಲ್ಲ ದೇಶಬಾಂಧವರೂ ಟೊಂಕ ಕಟ್ಟಬೇಕೆಂದು ಕರೆ ಕೊಡುತ್ತಿರುವರು. ಅಮೇರಿಕೆಯು ಕಡೆಯಿಂದ ಡಲ್ಲೇಸರು ಮಾಡಿದ ಮಧ್ಯಸ್ಥಿಕೆಯೂ ಫಲಕಾರಿಯಾದಂತೆ ತೋರುವುದಿಲ್ಲ. ಈಜಿಪ್ತಿನಲ್ಲಿರುವ ಬ್ರಿಟಿಷ ಸಿಪಾಯಿಗಳಿಗೆ ಬ್ರಿಟನಿಗೆ ವಾಪಾಸು ಬರಲು ಚರ್ಚಿಲರು ಅಪ್ಪಣೆ ಕೊಟ್ಟುದರಿಂದ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿದೆ. ರಾಷ್ಟ್ರೀಯ ಜಾಗೃತಿಗೆ ಕುಠಾರಾಘಾತವನ್ನುಂಟು ಮಾಡುವುದಕ್ಕೆ ಚರ್ಚಿಲರು ಪ್ರಚೋದನೆ ನೀಡುತ್ತಿರುವರೆಂಬ ಭಾವನೆ ಈಜಿಪ್ತಿನ ಪುಢಾರಿಗಳಲ್ಲೂ ಪತ್ರಿಕೆಗಳಲ್ಲೂ ತುಂಬಿಯುತ್ತದೆ.

ಕಲೆಕ್ಟರರು ಜಿಲ್ಲಾ ಬೋರ್ಡಿನ ವಿಶೇಷಧಿಕಾರಿಗಳಾಗುವರು.

ಇದೇ ಜೂನ್ ೩೦ಕ್ಕೆ ಅಂತ್ಯಗೊಳ್ಳುವ ಜಿಲ್ಲಾ ಬೋರ್ಡುಗಳಿಗೆ ಆಯಾಯ ಜಿಲ್ಲಾ ಕಲೆಕ್ಟರುಗಳನ್ನೇ ವಿಶೇಷಾಧಿಕಾರಿಗಳಾಗಿ ನೇಮಿಸಲಾಗುವುದೆಂದು ಮದರಾಸು ಸರಕಾರ ನಿರ್ಧರಿಸಿದೆ. ಕಲೆಕ್ಟರಿಂಗೆ ರೆವಿನ್ಯೂ ಖಾತೆಯಿಂದ ಆರಿಸಲ್ಪಡುವ ಪರ್ಸನಲ್ ಅಸಿಸ್ಟಾಂಟ್ ಸಹಾಯ ಮಾಡುವರು.

ಯಕ್ಷಗಾನ ಕಲಾ ಮಂಡಲಿ—

ಯಕ್ಷಗಾನ ಕಲಾ ಸೇವೆಯ ಧ್ಯೇಯದಿಂದ ಯಕ್ಷಗಾನ ಕಲಾಭಿಮಾನಿಗಳಿಂದ ಉಡುಪಿಯಲ್ಲಿ ಸ್ಥಾಪಿತವಾಗಿರುವ ಯಕ್ಷಗಾನ ಕಲಾ ಮಂಡಲಿ (ರಿಜಿಸ್ಟರ್ಡ್) ಇದರ ಒಂಭತ್ತನೆಯ ವರ್ಧಂತಿ ಸಮಾರಂಭವು ತಾ 25ನೇ ರಾತ್ರಿ ಶ್ರೀ ಮುಕುಂದೇಶ್ವರ ದೇವಸ್ಥಾನದ ಶಾಲೆಯಲ್ಲಿ ಜನಪ್ರಿಯ ಎಂ. ಎಲ್. ಎ. ಗಳಾದ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಯಥಾ ಸಾಂಗವಾಗಿ ನೆರವೇರಿತು.

ಸಂಘದ ವರದಿ ವಾಚನ, ಭಾರತ ವಾಚನ, ಸಭಿಕರ ಭಾಷಣದ ಕಾರ್ಯಕ್ರಮಗಳಾದ ನಂತರ ಅಧ್ಯಕ್ಷರು ಸಂದರ್ಭೋಚಿತ ಭಾಷಣ ಮಾಡಿ ಸಂಘದ ಏಳ್ಗೆಯನ್ನು ಹಾರೈಸಿದರು.

ಅಂತ್ಯದಲ್ಲಿ ಶ್ರೀಗಳಾದ ಪೊಲ್ಯ ದೇಜು ಶೆಟ್ಟಿ, ಮಟ್ಟಿ ಸುಬ್ರಾಯ್, ಮಲ್ಪೆ ಶಂಕರ ನಾರಾಯಣ ಸಾಮಗ, ಸೀತಾನದಿ ಗಣಪಯ್ಯ ಶೆಟ್ಟಿ, ಕೆ. ಪಿ. ರಾಮಕೃಷ್ಣ ತಂತ್ರಿ, ಪಾದುಬೆಟ್ಟು ಶೀನ ಶೆಟ್ಟಿ ಮೊದಲಾದ ಪ್ರಸಿದ್ಧ ಅರ್ಥಧಾರಿಗಳ ಕೂಡುವಿಕೆಯಿಂದ 'ಶ್ರೀಸೇತು ಬಂಧನ' ಎಂಬ ಯಕ್ಷಗಾನ ಕೂಟವು ಯಶಸ್ವಿಯಾಗಿ ನೆರವೇರಿತು. ಕಲಾಮಂಡಲದ ಮೂಲಕ ಯಕ್ಷಗಾನೋಜ್ಜೀವನಕ್ಕಾಗಿ ಶ್ರಮಿಸುತ್ತಿರುವ ಶ್ರೀ ನಾರಾಯಣ ಶೆಟ್ಟರ ಪ್ರಯತ್ನ ಸ್ತುತ್ಯ.

ಬಾಳೇ ಕುದುರು— ಉಡುಪಿ ತಾಲೂಕಿನ ಶ್ರೀ ಬಾಳೇ ಕುದುರು ಮಠದಲ್ಲಿ ಇದೇ ತಾ 17 ಮತ್ತು 18ರಲ್ಲು ಶ್ರೀ ಶಂಕರ ಜಯಂತಿ ಸಭಾ ಕಾರ್ಯಕಲಾಪಗಳು ವೈಭವದಿಂದ ನಡೆದವು. ಶ್ರೀ ಕೂಡಲಿ ಶೃಂಗೇರಿ ಜಗದ್ಗುರು ಶ್ರೀ ಸಚ್ಚಿದಾನಂದ ಶಂಕರ ಭಾರತೀ ಸ್ವಾಮಿಜಿಯವರು ಅಧ್ಯಕ್ಷಸ್ಥಾನ ವಹಿಸಿದ್ದರು. ಶ್ರೀ ಧಂಡಿಗದಿ ತೆಂಗಿನ ಮಠಾಧೀಶ್ವರರೂ ಆಗಮಿಸಿದ್ದರು.

ಕಾರ್ಯಕ್ರಮವು ಸಂಗೀತ ಮಂಗಲಾಚರಣೆಯೊಂದಿಗೆ ಪ್ರಾರಂಭವಾಯಿತು. ಶ್ರೀ ಶಂಕರಾಚಾರ್ಯ ವಿರಚಿತ ಗ್ರಂಥಗಳಲ್ಲಿ ವಿದ್ಯಾರ್ಥಿಗಳ ಪರೀಕ್ಷೆಯೂ ಸನಾತನ ಧರ್ಮ ಮತ್ತು ಅದ್ವೈತ ತತ್ವಗಳ ಕುರಿತು ಪಂಡಿತರಿಂದ ಉಪನ್ಯಾಸಗಳೂ ನಡೆದುವು. ಎರಡನೆ ದಿವಸದ ಮಹಾ ಸಭೆಯಲ್ಲಿ ಸಂಘದ ಕಾರ್ಯದರ್ಶಿ ಶ್ರೀ ರಂಗಯ್ಯ ಉಪಾಧ್ಯಾಯರಿಂದ ವರದಿ ಓದಲಾದ ಬಳಿಕ ಮಠದ ಏಜಂಟ್ ಶ್ರೀ ಎಸ್. ಗೋವಿಂದ ಶೆಟ್ಟಿಯವರು ಸಭಾಧ್ಯಕ್ಷರಿಗೆ ಮಾನಪತ್ರವನ್ನೊಪ್ಪಿಸಿದರು. ಅದ್ವೈತ ತತ್ವಗಳ ಕುರಿತು ಹಲವು ಮೌಲಿಕ ಭಾಷಣಗಳಾಗಿ ವಿದ್ವಾಂಸರಿಗೂ ವಿದ್ಯಾರ್ಥಿಗಳಿಗೂ ಸಂಭಾವನೆ ವಿತರಣೆಯಾಯಿತು. ಎರಡು ದಿವಸಗಳಲ್ಲಿ ಬ್ರಾಹ್ಮಣ ಸಂತರ್ಪಣೆ ನಡೆದುದಲ್ಲದೆ ಬಡಬಗ್ಗರಿಗೆ ಅನ್ನದಾನದ ವ್ಯವಸ್ಥೆ ಕೂಡಾ ಮಾಡಲಾಗಿತ್ತು.

[illegible] ...ಯುಕ್ತ ಬೋರ್ಡ್ ಚುನಾವಣೆಯು ತಾ. 25 ರಲ್ಲಿ ಜರಗಿ ಶ್ರೀ ಎಚ್. ಶಿವಾನಂದ ಹೆಗ್ಡೆಯವರು ಅಧ್ಯಕ್ಷರಾಗಿ ಅವಿರೋಧ ಆಯ್ಕೆ ಹೊಂದಿರುವರು.

ಸುರತ್ಕಲ್— ಇಲ್ಲಿಯ ಮುಖ್ಯ ಮಿತ್ರ ಪಟ್ಣ ಗಂಗಯ್ಯ ಸ್ಮಾರಕ ಫಂಡಿನ ವಾರ್ಷಿಕೋತ್ಸವವು ಇದೇ ತಾ 9ರಲ್ಲು ಶ್ರೀ ಯು. ಎಸ್. ಐತಾಳರ ಅಧ್ಯಕ್ಷತೆಯಲ್ಲಿ ಜರಗಿತು.

ಅಸಾಧಾರಣ ವಾಗ್ಮಿಗಳೂ ಗ್ರಂಥಕರ್ತರೂ ಆದ
ಶ್ರೀ. ಎ. ಎಸ್. ಪಂಚಪಕೇಶ ಐಯ್ಯರ್, ಎಂ. ಎ., ಐ. ಸಿ. ಎಸ್., ಬಾರ್ ಎಟ್ ಲಾ, ಎಫ್. ಎಸ್. ಎಲ್. ಅವರು ಬರೆದ Tales of Ind ಎಂಬ ಕಥಾವಳಿಯ ಅನುವಾದ

ಭಾರತೀಯ ಕತೆಗಳು

ಅನುವಾದಕರು— ಶ್ರೀ. ಕೊಡ್ಗಲ್ ಶ್ರೀನಿವಾಸ ರಾವ್.

ಪ್ರತಿಯೊಬ್ಬನಿಗೂ ತನ್ನ ಸಾಮಾಜಿಕ ಹಾಗೂ ವ್ಯಾವಹಾರಿಕವಾದ ಮಾತುಗಾರಿಕೆಯು ಸ್ವಾರಸ್ಯವಾಗಿ, ಪರಿಣಾಮಕಾರಿಯಾಗಬೇಕೆಂಬ ಹಿರಿಯಾಶೆ ಇದ್ದೇ ಇದೆ. ಇದು ಸಿದ್ಧಿಸಬೇಕಾದರೆ ಮಾತಿನ ನಡುನಡುವೆ ಸಂದರ್ಭೋಚಿತವಾದ ಉಪಮೆ, ಗಾದೆ, ಕಥೆ ದೃಷ್ಟಾಂತ ಇತ್ಯಾದಿಗಳು ಬರಬೇಕು. ಅಂತಹ ಅಮೂಲ್ಯ ಭಂಡಾಗಾರವೇ ಈ ಭಾರತೀಯ ಕತೆಗಳು.

ಎಲ್ಲರೂ ಅವಶ್ಯವಾಗಿ ಓದತಕ್ಕ ಅಪೂರ್ವ ಗ್ರಂಥ

121 ಕತೆಗಳು — ಬೆಲೆ ರೂ. 1-12-0

ನವಭಾರತ ಪುಸ್ತಕ ಭಂಡಾರ, ಉಡುಪಿ.

ತಾ. 26—5—1953ರಿಂದ

ದ್ವೇಷ, ಮತ್ಸರವೆಂಬುದು ಮಾನವನಿಗೆ ಮೃತ್ಯು!
ಪರರಲ್ಲಿ ಮತ್ಸರಗೊಂಡವರಿಗೆ ಯಾವ ಗತಿ ಒದಗುತ್ತದೆಂಬುದನ್ನು
ಯಥಾವತ್ತಾಗಿ ಚಿತ್ರಿಸಿರುವ ಅತ್ಯಮೋಘ ಪೌರಾಣಿಕ ಚಿತ್ರರತ್ನ!
ಪೌರಾಣಿಕ ಚಿತ್ರಗಳ ರಾಣಿ ಶ್ರೀ ನಿರುಪಾರಾಯ್
ದ್ರೌಪದಿಯ ಪಾತ್ರದಲ್ಲಿ ಉತ್ತಮ ಅಭಿನಯ ನೀಡಿರುವ ಚಿತ್ರ.

ವೀರ ಅರ್ಜುನ

ತ್ರಿಲೋಕ್ ಕಪೂರ್, ಅಮಿರಾಲ್ ಕರ್ನಾಟಕಿ, ಮಹಿತಾಬ್ ಮೊದಲಾದವರು

ಮುಂದಿನ ಚಿತ್ರ ನಿಮ್ಮಿ, ದಿಲೀಪ್ ಕುಮಾರ್ ನಟಿಸಿದ—
"ದಾಗ್"

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

ಚಂದಾದಾರರಲ್ಲಿ ವಿನಂತಿ

ವಿಳಾಸ ಬದಲಾದೊಡನೆ ದಯಮಾಡಿ ತಿಳಿಸಿರಿ.

ಚಂದಾ ಹಣವನ್ನು ಸಕಾಲದಲ್ಲಿ ಕಳುಹಿಸಿ ಪ್ರೋತ್ಸಾಹಿಸಿರಿ.

ಚಂದಾದಾರಿಕೆಯನ್ನು ಮುಂದುವರಿಸುವ ಇಚ್ಛೆಯಿಲ್ಲವಾದರೆ ಹಾಗೆಯೇ ತಿಳಿಸಿರಿ. ಅದರ ಹಾಗೆ ತಿಳಿಸುವಾಗ ಚಂದಾ ಹಣ ಬಾಕಿ ಇದ್ದರೆ ಅದನ್ನು ದಯ ಕೊಟ್ಟು ಸಹಕರಿಸಿರಿ.

ನಾವು ಕಾರ್ಡ್ ... ಗಿದ್ದು ವ.ಪಿ. ... ವಿ. ಪಿ. ಕಳಿಸಿದರೆ ಅದನ್ನು ದಯಮಾಡಿ ಸ್ವೀಕರಿಸಿ ಸಹಕರಿಸಬೇಕಿದೆ. ವಿ. ಪಿ. ಮರಳಬಾರದೆಂದೆ ನಮ್ಮ ಇಚ್ಛೆ.

ಮೆನೇಜರ್

ಅಜೆಕಾರು—ಈ ಕೇಂದ್ರದ ಅಧ್ಯಾಪಕ ಸಂಘದ ದಿನಾಚರಣೆಯು ಕಳೆದ ತಾ 16ರಲ್ಲು ಕಾರ್ಕಳ ರೇಂಜಿನ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಬಿ. ಪಿಂಟೋ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಕಾಂತ ರೈಗಳು ಬಹುಮಾನ ವಿತರಣೆ ಮಾಡಿದರು. ಶ್ರೀಗಳಾದ ಎಮ್. ಕೃಷ್ಣಯ್ಯ ಸೆಟ್ಟಿ, ದೊಡ್ಡಣ್ಣ ಸೆಟ್ಟಿ ಮೊದಲಾದವರು ಮಾತನಾಡಿದ ನಂತರ 'ಗ್ರಾಮ ಸೇವೆ' ಎಂಬ ನಾಟಕವು ಅಭಿನಯಿಸಲ್ಪಟ್ಟಿತು. ಕಾರ್ಯದರ್ಶಿ ಎಮ್. ಸುಂದರ ಸೆಟ್ಟರು, ಧನ್ಯವಾದಗಳನ್ನರ್ಪಿಸಿದರು.

[illegible]—ಕಳೆದ ತಾ 30ರಲ್ಲು [illegible]ದಲ್ಲಿ ಸಂತೆ ಕಟ್ಟುವವರು ದಾಸ್ತಾನು ಮಾಡುತ್ತಿದ್ದ ಪೆಟ್ರೋಲ್ ಕೋಣೆಗೆ ಆಕಸ್ಮಾತ್ತಾಗಿ ಬೆಂಕಿ ತಗಲಿ ಮೂರು ಜನರಿಗೆ ಗಾಯಗಳಾಗಿತ್ತು. ಇದೇ ತಾ 11ರಲ್ಲು ಕಡಬದಲ್ಲೂ ತಾ 18ರಲ್ಲು ಕಾನಾಜೆ ಗ್ರಾಮದಲ್ಲೂ ಒಂದೊಂದು ಮನೆಯು ಭಸ್ಮವಾಗಿ ಹೋಯಿತು.

ಬಂಟ್ವಾಳ— ಕಳೆದ ತಾ. 20 ರಲ್ಲು ಸಹಕಾರಿ ಸಂಘಗಳ ಪ್ರತಿನಿಧಿಗಳ ಸೌಹಾರ್ದ ಸಭೆಯು ಸೆಂಟ್ರಲ್ ಕೋಪರೇಟಿವ್ ಬೇಂಕಿನ ಉಪಾಧ್ಯಕ್ಷ ಶ್ರೀ ಎಸ್. ನರ್ಸಪ್ಪಯ್ಯ ಎಮ್. ಎಲ್. ಸಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕಾಸರಗೋಡು ರೇಂಜಿನ ಸಹಕಾರಿ ಸಂಘಗಳ ಡಿ| ರಜಿಸ್ಟ್ರಾರ್ ಶ್ರೀ ಸಂಕಪ್ಪ ಮತ್ತು ಶ್ರೀಗಳಾದ ಕೆ. ಜಿ ಶಿವಸ್ವಾಮಿ ಮತ್ತು ಎಮ್. ಎಸ್. ಏಕಾಂಬರ ರಾಯರು ಹಾಜರಿದ್ದರು ಉಜ್ರೆಯಲ್ಲಿಯೂ ಪುತ್ತೂರಿನಲ್ಲಿಯೂ ಇಂತಹ ಸಹಕಾರಿ ಸೌಹಾರ್ದ ಸಭೆಗಳು ಜರಗಿದವು

"ಕರ್ಣಾಟಕ ಫ್ರೀ ನೈಟ್ ಹೈಸ್ಕೂಲು ಮುಂಬಯಿ"

ಈ ಕೆಳಗಿನ ಮಹನೀಯರು 1953-54 ನೇ ಇಸವಿಯ ಶಾಲಾ ಕಮಿಟಿಯ ಸದಸ್ಯರಾಗಿ ನೇಮಕ ಹೊಂದಿರುವರು.

ಶ್ರೀಗಳಾದ ಮದನ ಶೆಟ್ಟಿ (ಚೇರ್ ಮೇನ್) ಕೆ ಶಾಮರಾಯ ಶೆಟ್ಟಿ (ಕಾರ್ಯದರ್ಶಿ) ಟಿ. ಬ್ರಹ್ಮಯ್ಯ ಶೆಟ್ಟಿ (ಕೋಶಾಧಿಕಾರಿ) ವಾಸು. ಬಿ. ಶೆಟ್ಟಿ (ಲೈಬ್ರೇರಿಯನ್.) ಸಿ ವಿ ರಾಮಚಂದ್ರ ರಾವ್ (ಪ್ರಿನ್ಸಿಪಾಲ್) ಎಲ್. ಗೋಮ್ಸ್ (ಹೆಡ್ಮಾಸ್ಟರ್.) ಡಿ. ಆರ್. ಅಂಚನ್. (ಅಸಿಸ್ಟೆಂಟ್ ಹೆಡ್ಮಾಸ್ಟರ್) ಸೂಡ ಸಂಜೀವ ಶೆಟ್ಟಿ. ಯಮ್. ಗಂಗಯ ಶೆಟ್ಟಿ. ಯಮ್. ಆರ್. ಶೆಟ್ಟಿ, ಕೆ. ಮುದ್ದಣ್ಣ ಶೆಟ್ಟಿ, ಮುತ್ತಯ ಶೆಟ್ಟಿ—ಸದಸ್ಯರು.

ಮುಂಬಯಿ—ಮದ್ರಾಸು ಸರಕಾರದ ಆರೋಗ್ಯ ಮಂತ್ರಿ ಶ್ರೀ. ಎ. ಬಿ. ಶೆಟ್ಟಿಯವರು ಇಲ್ಲಿಗೆ ಆಗಮಿಸಿದಾಗ, ಇಲ್ಲಿಯ ದಕ್ಷಿಣ ಕನ್ನಡ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ಕಟಪಾಡಿ ಗೋಪಾಲ ಕೋಟಿಯಾನರು (Member B P c c) ಶ್ರೀ ಕಾಪು ಹರೀಂದ್ರ (Membr Fort D. c' c) ಶ್ರೀ ಶಾಮ ಶೆಟ್ಟಿ (Secietary FortT c c) ಯವರು ಮಂತ್ರಿಯವರೊಡನೆ ರಾಜಕೀಯ ಸಂತ್ರಸ್ತರಿಗೆ ಕೊಟ್ಟಿರುವ ಭೂದಾನ ಮತ್ತು ಈಗಿನ ಮಂತ್ರಿ ಮಂಡಳದ ನೀತಿಯ ಕುರಿತು ವಿಚಾರ ವಿನಿಮಯ ಗೈಯುತ್ತ ಭೂಮಿ ಇಲ್ಲದ ರಾಜಕೀಯ ಸಂತ್ರಸ್ತರಿಗೆ ಭೂದಾನದೊರಕಿದ್ದರೆ ಅಂಥವರನ್ನು [illegible] ಭೂಮಿ ಇಲ್ಲದವರಾದರೂ ಅರ್ಜಿಗೈದಿದ್ದರೆ ಅಂಥವರಿಗೆ ಭೂದಾನವಿತ್ತು ಭೂವ್ಯವಸಾಯಕ್ಕೆ ಪ್ರೋತ್ಸಾಹವೀಯ ಬೇಕೆಂದು ಕೇಳಿಕೊಂಡಿರುವರು. ಮನ್ನ ಸಚಿವರು ಈ ಕುರಿತು ಗಮನ ಕೊಡುವೆನೆಂದೂ ಮುಂಬಯಿ ಕನ್ನಡಿಗರ ಕೇಂದ್ರ ಸ್ಥಾನವಾದ ಕೋಟೆ ವಿಭಾಗದಲ್ಲಿ ರಾಜಕೀಯ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಕನ್ನಡಿಗರು ಮುಂದೊತ್ತಿ ಭಾಗವಹಿಸುವುದನ್ನು ಕಂಡು ಸಂತೋಷಪಡುವೆನೆಂದು ಹೇಳಿದರು.

ವನಮಹೋತ್ಸವ

ತಾ. 1—7—53ರಿಂದ 7-7 53 ರ ವರೇಗೆ,

ಮಹಾಜನರಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎ. ಮಹಾಲಿಂಗಂ ಚೆಟ್ಟಿಯಾರ್ ಬಿ. ಎ. ಅವರ ವಿನಂತಿ

ಭಾರತ ಸರಕಾರವು ಮರಗಳನ್ನು ನೆಟ್ಟು ಬೆಳೆಸುವುದರ ಆವಶ್ಯಕತೆಯನ್ನು ಈ ಮೊದಲು ಅನೇಕ ಬಾರಿ ತಿಳಿಸಿರುತ್ತದೆ. ದೇಶದ ಸಾಮಾನ್ಯ ಆರ್ಥಿಕ ಜೀವನದಲ್ಲಿ ಮರಗಳ ಮಹತ್ವವನ್ನು ಎಷ್ಟು ವರ್ಣಿಸಿದರೂ ಸಾಲದು. ನಮ್ಮ ಗುಡ್ಡೆ ಬೆಟ್ಟಗಳಲ್ಲಿ ಸಾಗುವಳಿ ಮಾಡುವ ಸಮತಟ್ಟು ಭೂಮಿಗಳಲ್ಲಿ ಇದ್ದ ಮರಗಳನ್ನೆಲ್ಲಾ ಕಡಿದು ತೆಗೆದುದರ ಪರಿಣಾಮವಾಗಿ ಮಳೆಯೇ ಕಡಿಮೆಯಾಗಿ ಹವಾಮಾನ ಕೆಟ್ಟು ಇನ್ನಿತರ ಅನಿಷ್ಟ ಕಷ್ಟಗಳು ಒಂದರ ಮೇಲೊಂದು ಬಂದದ್ದು ಉಂಟು ಕಟ್ಟಿಗೆಯ ಅಭಾವದಿಂದ ಗೊಬ್ಬರಕ್ಕೆ ಉಪಯೋಗಿಸುವಂತಹ ಸೆಗಣಿಯನ್ನು ಬೆರಣಿ ಮಾಡಿ ಉರಿಸುವ ಪರಿಸ್ಥಿತಿಯನ್ನು ನಾವು ಎಲ್ಲೆಲ್ಲೂ ಕಾಣುತ್ತಿದ್ದೇವೆ ಈ ಕಾರಣಗಳಿಂದ ಹೆಚ್ಚು ಮರಗಳನ್ನು ನೆಟ್ಟು ಅವನ್ನು ರಕ್ಷಿಸುವಂತೆ ಜನತೆಯನ್ನು ಹುರಿದುಂಬಿಸಿ ಅವರಲ್ಲಿ ಈ ಬಗ್ಗೆ ಉತ್ಸಾಹ ಹುಟ್ಟಿಸುವುದು, ಅತೀ ಅಗತ್ಯವಿರುತ್ತದೆ.

ಈಗ ಕೆಲವು ವರುಷಗಳಿಂದ ಈ ವನಮಹೋತ್ಸವವನ್ನು ನಡಿಸಿದುದರಿಂದ ಕಂಡು ಬಂದ ಪ್ರಯೋಜನದಿಂದಾಗಿ ಸರಕಾರದವರು ಇದನ್ನು ಈ ವರ್ಷವೂ ಬಹು ವಿಜೃಂಭಣೆಯಿಂದ ಆಚರಿಸ ಬೇಕೆಂದೇ ನಿರ್ಣಯಿಸಿರುತ್ತಾರೆ. ಈ ಉತ್ಸವವು ಜುಲೈ ತಿಂಗಳ 1ನೇ ವಾರದಲ್ಲಿ ಜರಗುವುದು

ಮಹಾಜನರ ಸಹಕಾರದಿಂದ ನಮ್ಮ ಜಿಲ್ಲೆಯ ಹಿಂದಿನ ವರ್ಷಗಳಲ್ಲಿ ಸಸಿಗಳನ್ನು ನೆಡುವುದರಲ್ಲಿಯೂ ಅವುಗಳ ಆರೈಕೆಯನ್ನು ತೆಗೆದುಕೊಂಡು ಸಸಿಗಳನ್ನು ಕಾಪಾಡುವುದರಲ್ಲಿಯೂ ಹೆಚ್ಚು ಯಶಸ್ಸು ಸಿಕ್ಕಿಯದೆ. 1950ನೇ ಇಸವಿಯಲ್ಲಿ ನಮ್ಮ ಜಿಲ್ಲೆಯಲ್ಲಿ ನೆಟ್ಟಂತಹ ಮರಗಳ ಸಂಖ್ಯೆಯಷ್ಟು ಮರಗಳನ್ನು ನಮ್ಮ ಇಡೀ ಹಿಂದೂದೇಶದ ಯಾವ ಜಿಲ್ಲೆಯಲ್ಲಿಯೂ ನಡದಿದ್ದ ಕಾರಣ ಹಿಂದೂ ದೇಶದಲ್ಲಿ ಪ್ರಥಮ ಸ್ಥಾನ ಪಡೆದು ಅಖಿಲ ಭಾರತ ರಾಜೇಂದ್ರ ಭುರಾಣಿಯನ್ನು (All India Rajendra Silver Shield) ಇಡೀ ಮದ್ರಾಸು ಸಂಸ್ಥಾನದಲ್ಲಿ ಪ್ರಥಮ ಸ್ಥಾನ ಪಡೆದು ಪ್ರಾಂತ್ಯ ಭುರಾಣಿ (State Silver Shield) ಯನ್ನು ನಮ್ಮ ಜಿಲ್ಲೆಯು ಪಡೆದಿರುತ್ತದೆ. 1951ನೇ ಮತ್ತು 1952ನೇ ಇಸವಿಯಲ್ಲಿ ನೆಟ್ಟ ಮರಗಳ ಬಗ್ಗೆ ಈ ಭುರಾಣಿಗಳು ಯಾರಿಗೆ ಸೇರತಕ್ಕದೆಂದು ಇನ್ನೂ ನಿಶ್ಚಯವಾಗಿಲ್ಲ ಈ ವರ್ಷ ಸಹಾ ಎಲ್ಲಾ ರೈತ ಭಾಂಧವಗಳು ನಮ್ಮ ದೇಶದ ಸಂಪತ್ತನ್ನು ಹೆಚ್ಚಿಸುವ ಈ ಮಹಾ ಕಾರ್ಯದಲ್ಲಿ ಸಹಕರಿಸಿ ವನಮಹೋತ್ಸವ ಯಶಸ್ವಿಯಾಗುವಂತೆ ಮಾಡಬೇಕಾಗಿ ಅಪೇಕ್ಷಿಸಲಾಗುತ್ತದೆ. ಈ ವನ ಮಹೋತ್ಸವದಲ್ಲಿ ಹೆಚ್ಚಿನ ಉತ್ಸಾಹವನ್ನು ಜನರು ತೋರಿಸಿ ಹೆಚ್ಚೆಚ್ಚು ಮರಗಳನ್ನು ನೆಟ್ಟು ಬೆಳೆಸುವಂತೆ ಪ್ರೇರೇಪಿಸುವ ಉದ್ದೇಶದಿಂದ ಭಾಗಶಃ ಸರಕಾರವು ಈ ಕೆಳಗಿನ ಬಹುಮಾನ ವಿತರಣೆ ಯೋಜನೆಯನ್ನು ಕೈಕೊಂಡಿದೆ.

1) ಅಖಿಲ ಭಾರತ ರಾಜೇಂದ್ರ ಭುರಾಣಿ All India Rajendra SilverShield
ಭಾರತದಲ್ಲಿ ಹೆಚ್ಚು ಮರಗಳನ್ನು ನೆಟ್ಟ ಜಿಲ್ಲೆಗೆ ಅದು ಸಿಕ್ಕುವದು,

2] ಅಖಿಲ ಭಾರತ ಜವಾಹರ ಭುರಾಣಿ [All India Javahar Shield]
ಭಾರತದಲ್ಲಿ ಹೆಚ್ಚು ಮರಗಳನ್ನು ನಟ್ಟು ರಕ್ಷಿಸಿದ ಗ್ರಾಮಕ್ಕೆ ಅದು ಸಿಕ್ಕುವುದು

ಅಖಿಲ ಭಾರತ ಸರ್ದಾರ್ ಪಟೇಲ ಭುರಾಣಿ [All India Sardar Patel Shield
ಭಾರತದಲ್ಲಿ ಹೆಚ್ಚು ಮರಗಳನ್ನು ನಟ್ಟು ರಕ್ಷಿಸಿದ ಸಂಸ್ಥೆಗೆ ಇದು ಸಿಕ್ಕುವುದು.

4) ಅಖಿಲ ಭಾರತ ಮುನ್ಶಿ ಭುರಾಣಿ.
(All India Munshy Shield)
ಭಾರತದಲ್ಲಿ ಹೆಚ್ಚು ಮರಗಳನ್ನು ನೆಟ್ಟು ರಕ್ಷಿಸಿದ ಯುನಿವರ್ಸಿಟಿಗೆ —

5. State Silver Shield—
ಪ್ರಾಂತ್ಯ ಭುರಾಣಿಗಳು—
ಇದು ಪ್ರಾಂತ್ಯದಲ್ಲಿ ಹೆಚ್ಚು ಸಸಿಗಳನ್ನು ನೆಟ್ಟು ರಕ್ಷಿಸಿದ ಜಿಲ್ಲೆಗೆ ಸಿಕ್ಕುವುದು—

ಇದಲ್ಲದೆ ಬೇರೆ ಬೇರೆ ಬಹುಮಾನಗಳನ್ನು ವಿತರಣೆ ಮಾಡುವ ಏರ್ಪಾಡು ಇದೆ.—

ಆದುದರಿಂದ ಮಹಾಜನರು ಸರಕಾರದವರು ಕೈಕೊಂಡ ಈ ವನಮಹೋತ್ಸವ ಕಾರ್ಯದಲ್ಲಿ ಸಹಕರಿಸಿ ಜುಲಾಯಿ 1ನೇ ತಾರೀಕಿನಿಂದ ಪ್ರಾರಂಭವಾಗುವ ವನಮಹೋತ್ಸವ ಸಪ್ತಾಹ ಕಾಲದಲ್ಲಿ ಹೆಚ್ಚಿನ ಮರಗಳನ್ನು ನಟ್ಟು ಕಾಪಾಡಿ ಈ ವರ್ಷವೂ ವನಮಹೋತ್ಸವವನ್ನು ಚಂದಗಾಣಿಸಿ ಕೊಡಬೇಕಾಗಿ ಅಪೇಕ್ಷೆ—

ಉಡುಪಿ

ಹೆಂಗಸರ ಟ್ರೈನಿಂಗ್ ಶಾಲೆಯು

ಇದೇ ಜೂನ್ ತಿಂಗಳಿಂದ ಹೈಸ್ಕೂಲು ಆಗಿ IV ಫಾರ್ಮ್ ತೆರೆಯಲ್ಪಡುವುದು, ಹೈಸ್ಕೂಲು ವಿದ್ಯೆ ಕಲಿಯುವ ಬಡ ಹಾಗೂ ಮಧ್ಯಮ ವರ್ಗದ ಹುಡುಗಿಯರಿಗೆ ಅನುಕೂಲವಾದಂತಾಯಿತು

ವಸಂತ ಸಾಹಿತ್ಯೋತ್ಸವವು—ಶ್ರೀಕೃಷ್ಣ ಮಠದ ವಸಂತ ಮಹಲಿನಲ್ಲಿ ಪರ್ಯಾಯ ಶ್ರೀ ಪೇಜಾವರ ಸ್ವಾಮಿಗಳವರ ಉದಾರಾಶ್ರಯದಲ್ಲಿ ಇದೇ ತಾ 20ರಿಂದ 29ರ ತನಕ ಶ್ರೀ ಕೂಡಲಿ ಶೃಂಗೇರಿ ಮಠಾಧೀಶ, ಅದಮಾರು, ಸೋದೆ ಮತ್ತು ಶೀರೂರು ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಅನುಕ್ರಮವಾಗಿ ಜರಗಿತು. ಶ್ರೀಗಳಾದ ಪೊಳಲಿ ಶಂಕರನಾರಾಯಣ ಶಾಸ್ತ್ರಿ, ಮಹಾಬಲ ಸೋಂದನವರ ಭಾರತ ವಾಚನ, ಫಿಡ್ಲರ್ ಮಂಜುನಾಥಯ್ಯನವರ ಫಿಡ್ಲ್ ವಾದನ, ಶ್ರೀನಿವಾಸ ಉಡುಪ ಮೊದಲಾದವರ ಸಂಗೀತ, ಶ್ರೀಗಳಾದ ತಿ ನಾ. ಶ್ರೀ ಕಂಠಯ್ಯ, ಕಡಂಗೋಡ್ಲು ಶಂಕರಭಟ್ಟ, ಎಚ್. ಭೀಮರಾವ, ರಾಳ್ಳಪಲ್ಲಿ ಅನಂತ ಕೃಷ್ಣ ಶರ್ಮ, ಕೆ ಶಿವರಾಮ ಕಾರಂತ ಮೊದಲಾದವರ ಭಾಷಣ ಕಾರ್ಯಕ್ರಮಗಳಿದ್ದುವು. ಕೊನೆಯಲ್ಲಿ ಪರ್ಯಾಯ ಪೇಜಾವರ ಸ್ವಾಮಿಗಳವರು ಉತ್ಸವದಲ್ಲಿ ಸಹಕರಿಸಿದ ಸರ್ವರಿಗೂ ಧನ್ಯವಾದಗಳನ್ನರ್ಪಿಸಿದರು.

ವಿಶೇಷ ವಾಗ್ಮಿಗಳೂ ಮಹಾ ಪಂಡಿತರೂ ಆದ ಕೂಡಲಿ ಶೃಂಗೇರಿ

ಶ್ರೀ ಜಗದ್ಗುರು ಶ್ರೀ ಸಚ್ಚಿದಾನಂದ ಶಂಕರ ಭಾರತಿ ಮಹಾಸ್ವಾಮಿಗಳವರು

ಇವರು ಕಳೆದ ವಾರದಲ್ಲಿ ಶ್ರೀ ಬಾಳೇಕುದುರು, ಉಡುಪಿ, ಅಶ್ವತ್ಥಪುರ ಮೊದಲಾದ ಕಡೆಗಳಲ್ಲಿ ಸಂಚರಿಸಿ ತಮ್ಮ ಅಸ್ಖಲಿತ ವಾಣಿಯ ಭಾಷಣಗಳಿಂದ ಧಾರ್ಮಿಕ ಜನಜಾಗ್ರತಿಯನ್ನು ಮಾಡಿದರು.

ಅಕ್ಕಿಯ ಬೆಲೆ ತಗ್ಗಿಸಬೇಕೆನ್ನುವ ಸಭೆ— ಇದೇ ತಾ. 24 ರಲ್ಲು ಸಂಜೆ ರಥಬೀದಿಯಲ್ಲಿ ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀ ದಾಸ ಸೇರಿಗಾರರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಸೀನ ನಾಯ್ಕರು ಆಹಾರ ಪ್ರಶ್ನೆಯ ಕುರಿತು ಮಾತನಾಡಿದರು. ದ. ಕ. ಜಿಲ್ಲೆಯ ಅಕ್ಕಿ ಹೊರ ಪ್ರದೇಶಗಳಿಗೆ ಹೋಗದಂತೆ ತಡೆ ಹಾಕಬೇಕೆನ್ನುವ, ಅಕ್ಕಿ ಬೆಲೆಯನ್ನು ಸೇರಿಗೆ ಎಂಟಾಣೆ ಮಟ್ಟಕ್ಕೆ ತಗ್ಗಿಸ ಬೇಕೆನ್ನುವ ನಿರ್ಣಯಗಳಾದುವು, ಸಾರ್ವಜನಿಕರ ಸಹಿಗಳನ್ನೊಳಗೊಂಡ ಮನವಿಯೊಂದು ಶ್ರೀ ರಾಜಗೋಪಾಲಾಚಾರಿಯವರಿಗೆ ಕಳುಹಿಸಲು ಸಿದ್ಧವಾಗುತ್ತದೆ.

ವಿಮಾ ಪೋಲಿಸಿದಾರರ—ಹಿತರಕ್ಷಣೆಗೆಂದು ಮೈಸೂರಲ್ಲಿ ಸ್ಥಾಪಿತವಾಗಿರುವ ಅಖಿಲ ಭಾರತ ವಿಮಾಪೋಲಿಸಿದಾರರ ಮತ್ತು ಕೆಲಸಗಾರರ ಸಂಘದ ಕಾರ್ಯದರ್ಶಿಗಳಾದ ಶ್ರೀ ಪಿ. ಎ ರಾಯರು ಇತ್ತೀಚೆಗೆ ಸಂಘದ ಪ್ರಚಾರಾರ್ಥವಾಗಿ ನಮ್ಮ ಜಿಲ್ಲೆಗೆ ಬಂದಿದ್ದು ಅಲ್ಲಲ್ಲಿ ಸಂಚರಿಸಿ ಅಭಿಪ್ರಾಯ ವಿನಿಮಯ ಮಾಡಿಕೊಂಡು ಹೋಗಿರುವರು.

ಅಕ್ಕಿಬೆಲೆ ತಗ್ಗಿಸುವ ಕುರಿತು— ಸ್ಥಳೀಯ ಸಾಹುಕಾರರ, ವರ್ಗದಾರರ ಹಾಗೂ ಇತರರ ಸಭೆಯೊಂದು ತಾ 25ರಲ್ಲು ತಾಲೂಕು ಕಚೇರಿಯಲ್ಲಿ ಸಬ್ ಕಲೆಕ್ಟರ್ ಶ್ರೀ ಡಿ. ಕೃಷ್ಣನವರ ಅಧ್ಯಕ್ಷತೆಯಲ್ಲಿ ಜರಗಿತು. [illegible] ಅಕ್ಕಿ [illegible] ಕ್ರಯದಲ್ಲಿ ಮಾರಾಟ ಮಾಡಬೇಕೆನ್ನುವ ಹಾಗೆ ಮಾರಲು ಅನುಕೂಲ ವಾತಾವರಣವನ್ನು ವರ್ಗದಾರರೂ ದಾಸ್ತಾನುಗಾರರೂ ಕಲ್ಪಿಸಿಕೊಡಬೇಕೆನ್ನುವ ನಿರ್ಣಯವಾಯಿತು.

(೫ನೇ ಪುಟದಿಂದ)

ಒಪ್ಪಿಸುತ್ತಾ ಹೋಗುವರು. ಮಹಮ್ಮದಾಲಿ ಮತ್ತು ನೆಹರೂರವರು ಮುಖತಃ ಭೇಟಿಯಾಗುವ ನಡುವಿನ ಈ ವ್ಯವಸ್ಥೆಯು ಫಲಪ್ರದವಾಗುವುದೆಂದು ಹೃತ್ಪೂರ್ವಕವಾಗಿ ಆಶಿಸೋಣ. ಭಾರತವನ್ನು ಸಂದರ್ಶಿಸಿದ ಅಮೇರಿಕನ್ ಪ್ರಭೃತಿಗಳು ಪಾಕಿಸ್ತಾನದ ನೂತನ ಪ್ರಧಾನಿ ಮಹಮ್ಮದಾಲಿಯವರು ಭಾರತಕ್ಕೆ ನೀಡಿದ ಸ್ನೇಹ ಹಸ್ತವನ್ನೂ ಅದಕ್ಕೆ ನೆಹರೂರವರು ನೀಡಿದ ಹಾರ್ದಿಕ ಸ್ವಾಗತವನ್ನೂ ತುಂಬ ಮೆಚ್ಚಿಕೊಂಡಿರುವರು. ಅಮೇರಿಕಾವು ಕೆನಡಾದೊಂದಿಗೆ ಸೌಹಾರ್ದಯುತವಾದ ಸಂಬಂಧವನ್ನು (ಗಡಿಸ-ಬಂಧ ಸಮೇತ) ಇಟ್ಟುಕೊಂಡಂತೆ ಭಾರತ ಪಾಕಿಸ್ತಾನಗಳು ಸ್ನೇಹದಿಂದಿರುವ ದಿನ ಬೇಗನೇ ಬರಲೆಂದು ಅವರು ಹಾರೈಸಿರು. ಈ ಹಾರೈಕೆ ಹುಸಿಯಾಗದೆ ಇಕ್ಕಡೆಯವರಿಗೂ ಕ್ಷೇಮ ತರುವಂತಾದರೆ ತುಂಬ ಸಂತೋಷ

ಮಂಗಳೂರು

ಶೋಚನೀಯ ನಿಧನ—ಮಂಗಳೂರು ಗವರ್ನಮೆಂಟ್ ಕಾಲೇಜಿನ ಪ್ರಿನ್ಸಿಪಾಲರಾದ ಜನಾಬ್ ಎಮ್. ಐ. ಹಕೀಮ್, ಇವರು ತಾ 21ರಂದು ಸಂಜೆ ಹೃದಯ ಸ್ತಂಭನದಿಂದಾಗಿ ನಿಧನ ಹೊಂದಿದರೆಂದು ತಿಳಿಸಲು ವಿಷಾದವೆನಿಸುತ್ತದೆ. ಅವರು ಮದ್ರಾಸಿನಲ್ಲಿ ನಡೆಯಲಿದ್ದ ಯೂನಿವರ್ಸಿಟಿ ಬೋರ್ಡಿನ ಸಭೆಗೋಸ್ಕರ ತಾ 18ರಂದು ಮದ್ರಾಸಿಗೆ ಹೋಗಿದ್ದರು. ತಾ 21ರಲ್ಲಿ ಅವರು ಮದ್ರಾಸಿನಿಂದ ಮೈಲಿನಲ್ಲಿ ಬರುತ್ತಿದ್ದಾಗ ಮಂಗಳೂರು ಸ್ಟೇಷನು ತಲಪುವ ಸ್ವಲ್ಪ ಮುಂಚಿತವಾಗಿಯೇ ಪರಲೋಕ ವಾಸಿಗಳಾದರು. ದಿವಂಗತರಿಗೆ ಸುಮಾರು 55 ವರ್ಷ ಪ್ರಾಯವಾಗಿತ್ತು. ಅವರು ಇಬ್ಬರು ಗಂಡು ಮಕ್ಕಳೂ ಒಬ್ಬಳು ಮಗಳೂ, ಪತ್ನಿಯೂ ಇರುವರು ತಾ22ರಂದು ಮೃತರ ಶವ ಮೆರವಣಿಗೆಯು ಅವರ ಮನೆಯಿಂದ ಹೊರಟು ಗವರ್ನಮೆಂಟ್ ಕಾಲೇಜಿಗೆ ಬಂದಿತು. ಅಲ್ಲಿ ಶವವನ್ನು ಸುಮಾರು ಅರ್ಧ ಗಂಟೆಯ ತನಕ ಇಡಲಾಯಿತು. ವಿದ್ಯಾರ್ಥಿ, ವಿದ್ಯಾರ್ಥಿನಿಯರು ತಮ್ಮ ಗುರುಗಳ ನಿಧನಕ್ಕಾಗಿ ದುಃಖಿಸಿದರಲ್ಲದೆ ಹೂ ಮಾಲೆಗಳನ್ನು ಅರ್ಪಿಸಿದರು. ಅನಂತರ ಶವವನ್ನು ಬಂದರದಲ್ಲಿರುವ ಜುಮ್ಮಾ ಮಸೀದಿಗೆ ಕೊಂಡು ಹೋಗಲಾಯಿತು. ಅಲ್ಲಿ ಬಂಧು ಬಳಗದವರ ಪ್ರಾರ್ಥನೆಯ ತರುವಾಯ ಶವವನ್ನು ದಫನ ಮಾಡಲಾಯಿತು.

ವಾರ್ಷಿಕೋತ್ಸವ: ಆರ್ಯ ಸಮಾಜ ಹಾಗೂ ಸ್ವಾಮಿ ಶ್ರದ್ಧಾನಂದ ಸೇವಾಶ್ರಮದ ವಾರ್ಷಿಕೋತ್ಸವವು ತಾ 17ರಲ್ಲಿ ದ. ಕ. ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಸ್ವಾಮಿ ಸದಾನಂದ ಸರಸ್ವತಿಯವರು ಪೂರ್ವಾಹ್ನ ವೇದೋಪದೇಶವಿತ್ತರು. ಮಧ್ಯಾಹ್ನ ಪಂಡಿತ ಶ್ರೀ ಕೆ. ಗೋಪಾಲಕೃಷ್ಣ ಭಟ್ಟರಿಂದ ಧರ್ಮದ ಕುರಿತು ಹರಿಕಥಾ ಶ್ರವಣ ನಡೆಯಿತು. ಆ ವೇಳೆ ಸಾರ್ವಜನಿಕ ಸಭೆ ಜರಗಿತು.

(೪ನೇ ಪುಟದಿಂದ)

ರೂಪದಲ್ಲಿ ಇಳಿಸಿಯಾನು. ಆದೇನೇ ಇರಲಿ ಧರ್ಮಕ್ಕೂ ರಾಜಕಾರಣಕ್ಕೂ ಬ್ರಿಟನಿನಲ್ಲಿ ನಿಕಟ ಸಂಬಂಧವಿದೆ. ರಾಜನಿಗೂ ಧರ್ಮಾಧಿಕಾರಿಗಳಿಗೂ ಜಗಳಗಳು ಅನೇಕ ಸಂದರ್ಭಗಳಲ್ಲಿ ಹಿಂದಿನಿಂದಲೂ ನಡೆಯುತ್ತಿದ್ದುವು. ಮೊದಲನೇ ಜಾರ್ಜನ ಕಿರೀಟ ಧಾರಣಾ ಪ್ರಸಂಗವು ತುಂಬ ಮೋಜಿನದಾಗಿತ್ತು. ಈತನಿಗೆ ಜರ್ಮನಿ ಹೊರತು ಇಂಗ್ಲಿಷ ಭಾಷೆಯ ಒಂದಕ್ಷರವೂ ತಿಳಿಯುತ್ತಿರಲಿಲ್ಲ. ಆದುದರಿಂದ ಆರ್ಚ ಬಿಷಪರು ಕಷ್ಟಪಟ್ಟು ಜರ್ಮನಿಯ ಕೆಲವು ಶಬ್ದಗಳನ್ನು ಕಲಿತು ಅರಸನಿಗೆ ವಿಧಿ ನಿಯಮಗಳನ್ನು ವಿವರಿಸಿ ಹೇಳಲು ನೋಡಿದರು. ಆದರೆ ಈ ಧರ್ಮಾಧಿಕಾರಿಗಳ ಜರ್ಮನ್ ಉಚ್ಚಾರಣೆ ಎಷ್ಟು ಅಸಂಬದ್ಧವಿತ್ತೆಂದರೆ, ಜಾರ್ಜ ಅರಸನಿಗೆ ಒಂದೇ ಒಂದು ಶಬ್ದದ ಆಶಯವನ್ನೂ ಅರಿಯುವುದಾಗಲಿಲ್ಲ. ವಿಕ್ಟೋರಿಯಾ ಮಹಾರಾಣಿಯನ್ನು ಭಾರತದ ಸಾಮ್ರಾಜ್ಞಿ ಎಂಬುದಾಗಿ ಗೌರವಿಸಿದಂತೆ, ಐದನೇ ಜಾರ್ಜರನ್ನೂ ಭಾರತವು ಆದರಿಸಿದ್ದಿತು ನವದೆಹಲಿಯಲ್ಲಿ ನಡೆದ ದರ್ಬಾರು (೧೯೧೧) ಚಿರಸ್ಮರಣೀಯವಾದ ಸನ್ನಿವೇಶ. ಇಂದು ಗಣರಾಜ್ಯದ ನಾಗರಿಕರಾಗಿರುವ ನಮಗೆ ರಾಜವಂಶದ ಇತಿಹಾಸದ ವರ್ಣನೆ ಕೇಳುವುದು ಸಹ್ಯವೆನಿಸಲಿಕ್ಕಿಲ್ಲ ವಾದರೂ—ಬ್ರಿಟಿಷ ಜನತೆಗೆ ಇದು ಪುಣ್ಯಕಥಾ ಶ್ರವಣವೇ ನಿಜ.

ಸಭೆಯಲ್ಲಿ ಶ್ರೀ ಸಿ. ಎಚ್. ಕೇಶವ ರಾಮಚಂದ್ರ ಶೆಟ್ಟಿಯವರು ಅನಾಥಾಶ್ರಮಕ್ಕೆ ರೂ. 1000 ವನ್ನೂ ಮಂಗಳೂರಿನ ಜಯಂತಿಲಾಲ್ ಬ್ರದರ್ಸ್ ರೂ 101ನ್ನೂ ದಾನವಾಗಿ ಕೊಟ್ಟರು.

ಅಕ್ಕಿ ಬೆಲೆ ನಿಯಂತ್ರಣ ಕುರಿತು

ಅಕ್ಕಿಯ ದರವು ಮಿತಿಮೀರಿ ಏರುತ್ತಿದ್ದು, ಅದನ್ನು ಬೇಗನೆ ಯೋಗ್ಯ ಕ್ರಮ ಕೈಕೊಂಡು ಹತೋಟಿಗೆ ತರದಿದ್ದರೆ ಮಳೆಗಾಲದಲ್ಲಿ ಪರಿಸ್ಥಿತಿಯು ಕೆಡಬಹುದು. ಆದುದರಿಂದ ಸರಕಾರವು ವಿಳಂಬಮಾಡದೆ ಅಕ್ಕಿಯ ಕ್ರಯವು ಮುಡಿಗೆ ರೂ 21ಕ್ಕೆ ಮೀರದಂತೆ ಯೋಗ್ಯ ಕ್ರಮವನ್ನು ಕೈಕೊಳ್ಳಬೇಕೆಂದು ಸ್ಥಳೀಯ ಜನಸಂಘವು ಮದ್ರಾಸಿನ ಮುಖ್ಯ ಮಂತ್ರಿಗಳಿಗೆ ಒಂದು ಮನವಿ ಕಳುಹಿಸಿಯದೆ.

ಮುಸ್ಲಿಂ ಸಮಾಜ ಬಂಧುಗಳ ಸಭೆ—ಇದೇ ತಾ 17ರಲ್ಲಿ ಸಂಜೆ ಮಂಗಳೂರು ಜುಮ್ಮಾ ಮಸೀದಿಯಲ್ಲಿ ಸ್ಥಳೀಯ ಮುಸಲ್ಮಾನ್ ಬಂಧುಗಳ ಸಭೆಯು ಶ್ರೀ ಎ. ಐ. ಒಡೆಯರ್‌ರವರ ಅಧ್ಯಕ್ಷತೆಯಲ್ಲಿ ಜರಗಿದಾಗ ಶ್ರೀಗಳಾದ ಅಮೀರ್ ಸಾಹೇಬ್ ಹಾಜಿ ಎಮ್. ಕಾಸೀಮು ಸಾಹೇಬ್, ಎ. ಮೂಸಬ್ಬಾ ಸಾಹೇಬ್, ಹಾಗೂ ಅಧ್ಯಕ್ಷರು, ಸಮಾಜದವರೊಳಗೆ ಎಲ್ಲರೂ ಪರಸ್ಪರ ಸ್ನೇಹ ಸೌಹಾರ್ದದಿಂದಿದ್ದು ನಗರದ ಶಾಂತಿ ಪಾಲನೆಗೆ ನೆರವಾಗುವುದರ ಔಚಿತ್ಯದ ಕುರಿತು ಮಾತನಾಡಿದರು ಶ್ರೀ ಅಮಾರ್ ಹುಸೇನರು ಧನ್ಯವಾದಗಳನ್ನರ್ಪಿಸಿದರು.

ಭಾಷಣ—ಕಳೆದ ತಾ 18ರಲ್ಲಿ ಸಂಜೆ ಎಸ್. ಸಿ. ೩ ಬೇಂಕಿನ ಉಪ್ಪರಿಗೆಯಲ್ಲಿ ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಶ್ರೀ ಕೆ. ಜಿ. ಶಿವಸ್ವಾಮಿಯವರು ಮಧ್ಯ ಪೂರ್ವ ಪ್ರದೇಶಗಳ ತಮ್ಮ ಸಂಚಾರದ ಅನುಭವಗಳ ಕುರಿತು ಸುದೀರ್ಘ ಭಾಷಣವಿತ್ತರು. ಶ್ರೀ ಎಮ್. ಎಸ್. ಪಿ ಕಾಂಬರರಾಯರು ಧನ್ಯವಾದಗಳನ್ನರ್ಪಿಸಿದರು.

ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನ

ಮಂಗಳೂರು.

1 ಸದ್ರಿ ಭವನವು ತಾ 15-6-53ಕ್ಕೆ ತೆರೆಯಲ್ಪಡುತ್ತದೆ.

2 ಸ್ಥಳದ ಅಭಾವದಿಂದ ನಿವಾಸಿಗಳ ಪ್ರವೇಶ ಸಂಖ್ಯೆಯನ್ನು, ಆಡಳಿತೆ ಕಮಿಟಿಯವರು ನಿರ್ಧರಿಸಿದಂತೆ, ಮಿತಿಯೊಳಗೆ ಇಡಲ್ಪಡುವುದರಿಂದ, ಚಾಲ್ತಿ ವರ್ಷದಲ್ಲಿ ಪ್ರವೇಶಿಸಲು, ಇಚ್ಛಿಸುವ ಯಾವತ್ತೂ ಅರ್ಜಿಗಳನ್ನು, ಭವನದ ಅರ್ಜಿಫಾರ್ಮಿನಲ್ಲಿ ಬರೆದು, ತಾ. 10 6-1953ರ ಒಳಗೇನೇ ಭವನದ ಗೌರವ ಸುಪರಿಂಟೆಂಡೆಂಟರವರಿಗೆ ಕಳುಹಿಸಲ್ಪಡತಕ್ಕದ್ದು.

3. ಸದ್ರಿ ಅರ್ಜಿಫಾರ್ಮಿನಲ್ಲಿರುವ ಯಾವತ್ತೂ ಕಲಂಗಳನ್ನು ತುಂಬಿಸುವುದು ಮಾತ್ರವಲ್ಲದೆ, ತಂದೆ ಯಾ ರಕ್ಷಕನು, ಅರ್ಜಿ ಕೊನೆಯಲ್ಲಿ ಪ್ರತ್ಯೇಕವಾಗಿ, ತನ್ನ ವಿದ್ಯಾರ್ಥಿಯ ಮೇಲ್ವಿಚಾರವನ್ನು ಅಗಾಗ್ಯೆ ಬಂದು, ತಿಳಿದುಕೊಳ್ಳುವುದಾಗಿಯೂ, ಅಧಿಕಾರ ವರ್ಗದವರು ಉದ್ದೇಶಿಸಿದ್ದಲ್ಲಿ, ಕೂಡ್ಲೆ ತನ್ನ ವಿದ್ಯಾರ್ಥಿಯನ್ನು ಭವನದಿಂದ, ಹೊರಗಡೆ ಕೊಂಡು ಹೋಗಲು, ಸಿದ್ಧರಿರುವನಾಗಿಯೂ ಬರಹ ಮೂಲಕ ಒಪ್ಪಿಗೆಯನ್ನು ಕೊಡತಕ್ಕದ್ದು. ಅಂತೆಯೇ ವಿದ್ಯಾರ್ಥಿ ಕೂಡಾ ಒಪ್ಪಿಗೆಯನ್ನು ಬರಹ ಮೂಲಕ ಕೊಡತಕ್ಕದ್ದು. ವಿದ್ಯಾರ್ಥಿಯ ನಡತೆಯ ಬಗ್ಗೆ, ಮಂಗಳೂರಿನ ಸ್ಥಳೀಯ ಜವಾಬ್ದಾರಿ ಮನುಷ್ಯರ ಹೆಸರನ್ನು ಅಗತ್ಯವಾಗಿ, ಸೂಚಿಸತಕ್ಕದ್ದು. ಆ ಕುರಿತು ಹೇಳತಕ್ಕ ಅನಾನುಕೂಲತೆಗಳನ್ನು ಗಮನಿಸಲಾಗದು.

4. ಯಾವುದೇ ಅರ್ಜಿಗಳನ್ನು ಸ್ವೀಕರಿಸುವ ಅಥವಾ ನಿರಾಕರಿಸುವ ದು, ಸರ್ವ ಸ್ವತಂತ್ರವು, ಭವನದ ಗೌರವ ಸುಪರಿಂಟೆಂಡೆಂಟ ವರಿಗೆ ಇರುತ್ತದೆ

ಮಂಗಳೂರು, ತಾ. 22-5-'53.

ಬಿ. ಬಿ. ಶೆಟ್ಟಿ, ಎಡ್ವಕೇಟ್,
ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ,
ಗೌರವ ಸುಪರಿಂಟೆಂಡೆಂಟ್.

For Protection and Provision Consult

The New Guardian of India Life Insurance Co., Ltd.

Estd] Head office: **MADRAS** [1934

NEW BUSINESS Exceeds	...	66½ Lakhs.
PREMIUM INCOME ,,	...	15 ,,
LIFE FUND ,,	...	54½ ,,
ASSETS ,,	...	60½ ,,
BUSINESS IN FORCE Nearly		3 Crores.

A Policy in this Progressive Life Office is good investment; its Agency is valuable business connection.

Applications for Representation are invited from energetic influential persons, with good connection. *Please apply to:*

G. R Wallia, *Branch Manager,*
Diamond Building, Hampankatta, MANGALORE, S. K.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರಸ್ಥ ಪರವೂರ ವಿಹಾರಸ್ಥರಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ನೈರ್ಮಲ್ಯ, ಶಯನ ಇವೆಲ್ಲಕ್ಕೂ ಅತ್ಯಲ್ಪ ವ್ಯಯ
ಕರೆದರೆ ಒಗೊಡುವ ಸೌಕರ್ಯ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಂಡಿ ತಿನಿಸು, ಇವುಗಳ ರುಚಿ ರುಚಿ ದೇಶದೇಶ

ಪ್ರೊಪ್ರೈಟರ್:— ಕೆ. ವೆಂಕಟ್ರಮಣ ಭಟ್ಟ್

ವಾರ್ಷಿಕ ದಿನಾಚರಣೆ—ಮೊಗವೀರ ಲಿಟರರಿ ಯೂನಿಯನ್ನಿನ ವಾರ್ಷಿಕ ದಿನಾಚರಣೆಯು ಕಳೆದ ತಾ. 17ರಲ್ಲಿ ಮುನಿಸಿಪಲ್ ಚೇರ್‌ಮೆನ್ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಕುಮಾರಿ ಕುಸುಮಾವತಿಯವರು ಸ್ವಾಗತ ಭಾಷಣ ಮಾಡಿದರು. ಆಟಪಾಟ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ವಿತರಣೆಯಾಯಿತು. 'ಮಂತ್ರಿ ಗಂಡಭಾದರಿ' ಮತ್ತು 'ಪ್ರಹಸ್ಯ' ನಾಟಕಾಭಿನಯಗಳಾದವು.

ಬೊಂಬಾಯಿ

ಬಂಟರ ಯಾನೆ ನಾಡವರ ಸಂಘ
ಮುಂಬಾಯಿ.

ಸಂಘದ 25ನೇ ವಾರ್ಷಿಕ ಮಹಾಸಭೆಯು ಡಾ|| ಪಡುಬಿದ್ರೆ ಜಗನ್ನಾಥ ಶೆಟ್ಟರವರ ಅಧ್ಯಕ್ಷತೆಯಲ್ಲಿ ತಾ 3-5-1953ರಲ್ಲಿ ಕರ್ನಾಟಕ ಫ್ರಿ ಸ್ಕೂಲ್ ಹ್ಯಾಸ್ಕೂಲಿನಲ್ಲಿ ಬಹು ವಿಜೃಂಭಣೆಯಿಂದ ಜರಗಿತು.

ಗತವರ್ಷದ ವರದಿಯನ್ನು ಓದಿ ಸರ್ವಾನುಮತದಿಂದ ಮಂಜೂರಾದುದಲ್ಲದೆ ಹೊಸ ವರ್ಷದ ಕಾರ್ಯಕಾರೀ ಸಮಿತಿಗೆ ಈ ಕೆಳಗೆ ಕಾಣಿಸಿದವರನ್ನು ಸರ್ವಾನುಮತದಿಂದ ಆರಿಸಲಾಯ್ತು. ಡಾ|| ಪಡುಬಿದ್ರೆ ಜಗನ್ನಾಥ ಶೆಟ್ಟಿ (ಅಧ್ಯಕ್ಷ) ಶ್ರೀ. ಸೂಡ ಸಂಜೀವ ಶೆಟ್ಟಿ.(ಉಪಾಧ್ಯಕ್ಷ) ಶ್ರೀ. ಕಾಪು ಸುಬ್ಬಯ್ಯ. ಕೆ. ಶೆಟ್ಟಿ.(ಗೌ. ಕಾರ್ಯದರ್ಶಿ) ಶ್ರೀ. ಕೆ. ಆನಂದ ಹೆಗ್ಡೆ (ಗೌ. ಜತೆ ಕಾರ್ಯದರ್ಶಿ) ಶ್ರೀ. ಕಡೆಕಾರು ಕೃಷ್ಣ ಶೆಟ್ಟಿ.(ಗೌ ಕೋಶಾಧಿಕಾರಿ.) ಶ್ರೀ. ಕೆ. ಚಿದಂಬರ ಶೆಟ್ಟಿ (ಗೌ. ಉಪ ಕೋಶಾಧಿಕಾರಿ.) ಮತ್ತು 34ಮಂದಿ ಆಡಳಿತ ಮಂಡಳಿಯ ಸಭಿಕರು. ಅಧ್ಯಕ್ಷರೂ ಸಭಿಕರೂ ಸಂಘದ ಏಳಿಗೆಯನ್ನು ಬಯಸಿದ ಮೇಲೆ ಲಘು ಉಪಾಹಾರದಿಂದ ಸಭೆಯು ಮುಕ್ತಾಯವಾಯ್ತು.

ಪ್ರಕಟಣೆ

ಉಡುಪಿ ತಾಲೂಕು ಬೇಳರ್ಪಾಡಿ ಗ್ರಾಮದ ನಡುಮನೆ ಮುಕಾಂಬಿಕೆ ಶೆಡ್ತಿ ಮಗಳು ಮುತ್ತಕ್ಕ ಶೆಡ್ತಿಯು ಈ ಮೂಲಕ ಸರ್ವರಿಗೂ ತಿಳಿಸ ಬಯಸುವುದೇನೆಂದರೆ—

ನನ್ನ ಅಜ್ಜಿ ನರ್ಸಮ್ಮ ಶೆಡ್ತಿಯು ನಮ್ಮ ಕುಟುಂಬದ ಆಸ್ತಿ ಭೂಮಿಗೆ ಪಟ್ಟೇದಾರಳಾಗಿದ್ದು ಇತ್ತೀಚೆಗೆ ಸುಮಾರು 10 ತಿಂಗಳ ಹಿಂದೆ ವಾಸ ಆಗಿರುತ್ತಾರೆ. ನಮ್ಮ ಕುಟುಂಬಕ್ಕೆ ... ಎಷ್ಟು ಸಾಲವಿದೆ ಸಾಲವಗ್ಯೆ ಇರುವುದಿಲ್ಲ ಈಗ ನಮ್ಮ ಕುಟುಂಬದಲ್ಲಿ ಹಿರೇಯವನಾದ, ನಿಶ್ಶಂಕಿತ ಕವಠಿನವನಾದ ಗೋವಿಂದ ಹೆಗ್ಡೆಯು ಪಟ್ಟೇದಾರನಾಗಿರುತ್ತಾನೆಂದು ತಿಳಿದು ಬರುತ್ತದೆ. ಸದರಿ ಗೋವಿಂದ ಹೆಗ್ಡೆಗೂ ನಮಗೂ ಗೃಹಸ್ಥರಿದ್ದು ಪಂಚಾಯ್ತಿಗೆ ಮಾಡಿ ಭೂಮಿಯನ್ನು ಬಾಯಿ ದರೆಯಾಗಿ ಪಾಲುಮಾಡಿಕೊಟ್ಟಿರುತ್ತಾರೆ. ಆ ಪ್ರಕಾರ ನಾವು ನಮ್ಮ ಕವಠಿನ ಭೂಮಿಯಲ್ಲಿ ಕಷ್ಟಕೃತ ವಗ್ಯೆರೆ ಮಾಡಿ ಅನುಭವಿಸಿ ಕೊಂಡು ಬರುತ್ತೇವೆ ಈಗ ಸದರಿ ಗೋವಿಂದ ಹೆಗ್ಡೆಯು ತಾನು ಪಟ್ಟೇದಾರನೆಂಬಭಾಗನೆಯಿಂದ ಯಾರಿಗೆ ಕವರಿಗೆ ಬಿಟ್ಟ ಭೂಮಿಯ ಕೃತದ ಜವಾಬ್ದಾರಿಯಿಂದ ಕೂಡಾ ಸಾಲಹುಡುಕುತ್ತಿರುಗುತ್ತಾನಾಗಿ ತಿಳಿದು ಬರುತ್ತದೆ. ಯಾರೇ ಆಗಲಿ ಸದರಿ ಗೋವಿಂದ ಹೆಗ್ಡೆಯ ಮೋಸಕ್ಕೆ ಬಲಿಬಿದ್ದು ಸಾಲ ವಗ್ಯೆರೆ ಕೊಟ್ಟರೆ ಸಾಲಿಯುವನೇ ಜವಾಬ್ದಾರನಾಗಬೇಕಲ್ಲದೆ—ನಾವಾಗಲೀ ನಮ್ಮ ಕುಟುಂಬದ ಆಸ್ತಿಯಾಗಲೀ ... ಆಸ್ತಿಯ ಹುಟ್ಟುವಳಿಯ ಫಲ ಪೈರುಗಳಾಗಲೀ ಜವಾಬ್ದಾರಿಯಾಗತಕ್ಕದ್ದಲ್ಲ. ಆಗಲು ಕಾರಣವೂ ಇಲ್ಲ, ಎಂಬ ಸಂಗ್ತಿ ಈ ಮೂಲಕ ತಿಳಿಸಿರುತ್ತೇನೆ.

● ಈ ಎಡಹೆಬ್ಬೆಟ್ಟಿನ ಗುರುತು ಮುತ್ತಕ್ಕ ಶೆಡ್ತಿದ್ದಾಗಿರುತ್ತದೆ.

ಬೇಳರ್ಪಾಡಿ, ತಾ. 21—5—53

ಆದಿವಾಸಿಗಳ ಮೂಢ ನಂಬಿಕೆ

(೨ನೇ ಪುಟದಿಂದ)

ಸಿಗಳಾದ ಅಥವಾ ಗ್ರಾಮದ ದೆವ್ವಗಳು ವಾಸಿಸುವ ಅರಣ್ಯಗಳಲ್ಲಿರುವ ವೃಕ್ಷ ಮಾಂತ್ರಿಕ ವೈದ್ಯರನ್ನು ಇದಕ್ಕೋಸ್ಕರ ಚುನಾಯಿಸುವರು. ಈ ಮಾಂತ್ರಿಕ ವೈದ್ಯರು ರೋಗಿಯ ಮೇಲೆ ಮಾಟಗಾರರು ಸ್ವತಃ ಪ್ರವೇಶಿಸಿರುವರೋ ಅಥವಾ ಬೇರೇನಾದರೊಂದು ರೀತಿಯಿಂದ ರೋಗೋತ್ಪನ್ನ ಮಾಡಿರುವರೋ ಎಂಬುದನ್ನು ಮೊದಲು ನಿರ್ಣಯಿಸುವರು. ರೋಗಕ್ಕೆ ಈಡಾದವನ ಒಂದು ಮೂರ್ತಿಯನ್ನು ಮಾಡಿ ಅದಕ್ಕೆ ಪೂಜೆ ಸಲ್ಲಿಸಿ, ಕೊನೆಗೆ ವಿಷಪೂರಿತವಾದ ಚೂರಿಯ ಮೊನೆಯಿಂದ ತಿವಿದರೆ ಅದರ ಪರಿಣಾಮ ರೋಗಿಯ ಮೇಲೆ ಕಾಣಿಸಿಕೊಳ್ಳುವುದು. ಮಾಟ ಮಾಡುವವರ ಸ್ವತಃ ತಾವಾಗಿ ರೋಗಿಯ ಶರೀರ ಪ್ರವೇಶ ಮಾಡದಿದ್ದರೆ ಇಂಥ ವಾಮ ಮಾರ್ಗ ಅನುಸರಿಸುವರಂತೆ! ಅಮಾವಾಸ್ಯೆಯ ರಾತ್ರಿಯು ಇಂಥ ಮಾಟಗಳನ್ನು ಮಾಡಲೂ, ಮಾಟದ ಕಾಟವನ್ನು ನಿವಾರಿಸಲೂ ಒಳ್ಳೆಯ ಸಮಯವಾಗಿರುತ್ತದೆ. ಒಬ್ಬನ ಮೇಲೆ ಮಾಟ ಮಾಡುವುದಕ್ಕೆ ಅವನ ಉದುರಿದ ಕೂದಲು, ಉಗುರು ಇವು ಅತ್ಯಗತ್ಯವಾಗಿ ಬೇಕಾಗುತ್ತವೆ. ಇವನ್ನು ತೆಗೆದುಕೊಂಡೇ ಮಾಟಗಾರ್ತಿಯರೂ ಮಾಂತ್ರಿಕರೂ ತಮ್ಮನ್ನು ಹಾನಿಗೀಡುಮಾಡುವರೆಂಬ ಅಂಜಿಕೆಯಿಂದ, ಉಗುರು ಕೂದಲುಗಳನ್ನು ನೆಲದಲ್ಲಿ ಹೂತಿಡುವುದು ಆದಿವಾಸಿಗಳ ಪದ್ಧತಿ. ಈ ಉಗುರು ಮತ್ತು ಕೂದಲುಗಳನ್ನು ಸುಟ್ಟು, ಅದರ ಬೂದಿಯನ್ನು ಅಕ್ಕಿಯ ಮದ್ಯದಲ್ಲಿ ಬೆರಸಿ ಊರಲ್ಲಿ ಎಲ್ಲರಿಗೂ ಹಂಚುವರು. ನಿಜವಾಗಿ ಆ ಉಗುರು ಕೂದಲು ಯಾವುದೋ ಅವನು ಈ ಹೆಂಡ ಕುಡಿದೊಡನೆಯೇ ರೋಗಕ್ಕೆ ಬಲಿಯಾಗಿ ನರಳುವನು. ಉಳಿದವರಿಗೆ ಏನೂ ಆಗುವುದಿಲ್ಲ.

— ೭ —

ಇನ್ನೊಂದು ರೀತಿ ಪರಕಾಯ ಪ್ರವೇಶವಾಗಿರುತ್ತದೆ. ಸಾಮಾನ್ಯವಾಗಿ ಹುಲಿಯು ನರಭಕ್ಷಕನಾಗುವುದಿಲ್ಲವೆಂದು ಆದಿವಾಸಿಗಳ ನಂಬಿಕೆ. ಆದರೆ ಮಾಂತ್ರಿಕನೋ ಮಾಟಗಾರ್ತಿಯೋ ಹುಲಿಯ ದೇಹವನ್ನು ಪ್ರವೇಶಿಸಿದಲ್ಲಿ ಆ ಹುಲಿಯು ನರಭಕ್ಷಕನಾಗಿ ಪರಿಣಮಿಸುತ್ತದೆ. ಸಾಮಾನ್ಯವಾಗಿ ರೋಗವು ಯಾವ ಕಾರಣದಿಂದ ಬಂತೆಂಬುದನ್ನು ಶೋಧಿಸುವುದಕ್ಕೋಸ್ಕರ ರೋಗಿಯ ಕೈಗೆ ಒಂದು ಅಕ್ಕಿ ಕಾಳನ್ನು ಮುಟ್ಟಿಸಿ, ಅದನ್ನು ಸೋಖಾ ಇದ್ದಲ್ಲಿಗೆ ತೆಗೆದುಕೊಂಡು ಹೋಗುವರು. ಅವನು ಅದನ್ನು ಒಂದು ಕುಣಿಯುವ ಗೆರಸೆಯ ಮೇಲೆ ಇಟ್ಟು, ಸತ್ತವರ ಹೆಸರುಗಳನ್ನು ಹೇಳಲೂ ಪ್ರಶ್ನೆಗಳನ್ನು ಕೇಳಲೂ ಪ್ರಾರಂಭಿಸುವನು. ಹೀಗಿರುವಾಗ ಅಕ್ಕಿಯ ಕಾಳು ಒಂದಲ್ಲ ಒಂದು ಕ್ಷಣ ತನ್ನ ಸ್ಥಾನದಿಂದ ಅಲುಗುತ್ತಾಗ, ವನಿಸುತ್ತದೆ. ಸೋಖಾ ಜನರು ಈಗೀಗ ಹಿಂದೂ ಸಂಸ್ಕೃತಿಯ ಕಡೆಗೆ ಹೆಚ್ಚು ಬಂದಿರುವರು. ಅವರ ಮಂತ್ರಗಳಲ್ಲಿ ಹಿಂದೀ ಮತ್ತು ಸಂಸ್ಕೃತ ಶಬ್ದಗಳು ಕಾಣಿಸುತ್ತವೆ. ಸೋಖಾ ಜನರು ಮಹಾದೇವನನ್ನು ಪೂಜಿಸುವರು. ಮನೆಯಲ್ಲಿ ತುಳಸೀ ಗಿಡವನ್ನು ನೆಡುವರು. ಅಕ್ಷರಾಭ್ಯಾಸವಿಲ್ಲದಿದ್ದರೂ ಅವರಿಗೊಂದು ಪುಸ್ತಕವಿದೆ! ಅವರು ಉಪಶಮನದ ವಿಧಿಯನ್ನು ತಿಳಿಸುವರು ಮಾತ್ರ—ಸ್ವತಃ ಆ ಕೆಲಸವನ್ನು ನೆರವೇರಿಸುವುದಿಲ್ಲ. ಆದುದರಿಂದ ನಿಃಸ್ವಾರ್ಥ ಜೀವಿಗಳಾಗಿ ಇವರು ತೋರುತ್ತಾರೆ. ಇದು ಅವರ ಗೌರವವನ್ನು ಹೆಚ್ಚಿಸಿದೆ. ಇವರಿಗೆ ಒಂದುಕಾಲು ರೂಪಾಯಿಯಿಂದ ಹದಿನೈದು ರೂಪಾಯಿಗಳ ವರೆಗೆ ದಕ್ಷಿಣೆ ಕೊಡಬೇಕಾಗುತ್ತದೆ.

— ೫ —

ಗುಡ್ಡದ ನಿವಾಸಿಗಳಿಗೆ ಮಾಟ ಮೋಡಿಗಳೆಂದರೆ ಒಂದು ಧಾರ್ಮಿಕ ವಿಧಿಯೆಂಬಂತಾಗಿದೆ. ಜನರಲ್ಲಾಗಲೀ ಜಾನುವಾರುಗಳಲ್ಲಾಗಲೀ ಸೋಂಕು ರೋಗ ಏದೆಯೆಂದಾದರೆ,ಅಥವಾ ಹುಲಿಗಳ ಕಾಟವು ಅಸಾಧಾರಣವೆನ್ನುವಷ್ಟು ಹೆಚ್ಚಾದರೆ, ತಿರುಗಾಡುತ್ತಿರುವ ಆದಿವಾಸಿಗಳಿಗೆ ಊರು ಬಿಡಬೇಕಾಗಿ ಬಂದರೆ, ಒಂದಲ್ಲೊಂದು ದೆವ್ವವನ್ನು ಪೂಜಿಸುವುದು ಅತ್ಯಗತ್ಯ. ಹೆಂಗಸೊಬ್ಬಳು ಗರ್ಭಿಣಿಯಾದರೆ ಅದು ದೆವ್ವದ ಅನುಗ್ರಹವೆಂದು ತಿಳಿಯಲ್ಪಡುತ್ತದೆ. ಮದುವೆಯಾದ ಹೆಂಗಸು ಗರ್ಭವತಿಯಾಗದಿದ್ದರೆ, ಯಾವುದಾದರೊಂದು ದೆವ್ವದ ಅಪ್ರೀತಿಯೇ ಅದಕ್ಕೆ ಕಾರಣವೆಂದು ಆದಿವಾಸಿಗಳ ನಂಬಿಕೆ. ಎಲ್ಲವೂ ಸರಿಯಾಗಿಲ್ಲವೆಂಬುದರ ಸೂಚನೆ ಇದೆಂದು ಅವರು ತಿಳಿದು, ನಿವಾರಣೋಪಾಯಗಳನ್ನು ಕೈಗೊಳ್ಳುವರು ಸಾಮಾನ್ಯವಾಗಿ ಅವರ ಬುಡಕಟ್ಟಿನ ಹಿರಿಯರು ತಮ್ಮ ಕಿರಿಯರ ಹಾಗೂ ದೆವ್ವಗಳ ನಡುವೆ ಏಜೆಂಟರ ಕೆಲಸ ಮಾಡುತ್ತಾರೆ. ಆದರೆ ಎಷ್ಟೋವೇಳೆ ದೆವ್ವಗಳು ಈ ಹಿರಿಯನ ಮಧ್ಯಸ್ಥಿಕೆಯಿಂದ ಸಂಪ್ರೀತವಾಗದೆ ಇರವುದುಂಟು. ಸಾಂಕ್ರಾಮಿಕ ರೋಗಗಳು ನಿಲ್ಲದಿದ್ದರೆ ಉನ್ಮಾದಾವಸ್ಥೆ ಸುಧಾರಿಸದಿದ್ದರೆ, ಜಾನುವಾರುಗಳು ಇನ್ನೂ ಸಾಯುತ್ತಲಾದರೆ, ಈ ಜನರು ಮಾಂತ್ರಿಕ ವೈದ್ಯರಿಗೆ ಶರಣು ಹೋದೆಯುವರು. ಹೆಂಗಸು ಬಂಜೆಯಾಗಿದ್ದರೆ, ಅವಳ ಶರೀರವನ್ನು ಪ್ರವೇಶಿಸಿರುವ ದೆವ್ವವನ್ನು ಕೂಡ ಕುಟುಂಬದ ಮುಖ್ಯಸ್ಥನಲ್ಲ-ಮಾಂತ್ರಿಕ ವೈದ್ಯನೇ ಹೊಡೆದೋಡಿಸಬೇಕಾಗುವುದು. ಈ ಜನರಿಗೆ ಮಳೆ ಮೋಡಗಳು, ಗುಡುಗು ಮಿಂಚುಗಳು, ಜನ ಜಾನುವಾರುಗಳ ಕ್ಷೇಮ ಧನಧಾನ್ಯ ಸಮೃದ್ಧಿ, ಎಲ್ಲವನ್ನು ನೋಡಿಕೊಳ್ಳುವದು ನೂರಾರು ದೆವ್ವಗಳ ಕಾರ್ಯಭಾರವೆಂಬ ವಿಶ್ವಾಸವಿದೆ. ರೋಗ, ಶಾರೀರಕ ಊನ, ಸಾವು, ಬೆಳೆಯ ಹಾನಿ ಮುಂತಾದುವುಗಳಿಗೆ ವಿಶಿಷ್ಟ ದೆವ್ವಗಳ ಕೋಪವೇ ಕಾರಣವಾಗಿರುವುದರಿಂದ ಅವುಗಳನ್ನು ನಿಯಮದಂತೆ ಪೂಜೆ ಮತ್ತು ನೈವೇದ್ಯಗಳಿಂದ ಒಲಿಸಿಕೊಳ್ಳಬೇಕು. ಸಾಮಾನ್ಯವಾಗಿ ಭಕ್ತರು ಸಲ್ಲಿಸಿದ ಪೂಜೆ ಪುರಸ್ಕಾರಗಳಿಂದ ದೆವ್ವಗಳು ಸಂಪ್ರೀತವಾಗುತ್ತವೆ. ಒಂದು ವೇಳೆ ಈ ಪೂಜಾಚಾರಗಳಿಂದ ಏನೇನೋ ಉಪಯೋಗವಾಗದಿದ್ದರೆ, ಆಗ ಈ ಉಪಟಳಕ್ಕೆ ಯಾರೋ ಮಾಡಿದ ಮಾಟವೇ ಮೂಲ ಹೊರತು ದೆವ್ವಗಳ ಕಾಟ ಇದಲ್ಲವೆಂಬ ನಿರ್ಣಯಕ್ಕೆ ಅವರು ಬರುವರು. ದೆವ್ವಗಳು ಸಾಮಾನ್ಯವಾಗಿ ಒಳ್ಳೆಯವುಗಳು, ಆದರೆ ಮಾಟಗಾರರು ಹಾಗಲ್ಲ.

— ೬ —

ಮಾಂತ್ರಿಕ ವೈದ್ಯರು ರೋಗೋಪಶಮನಮಾರ್ಗವನ್ನು ಹೇಳುವಾಗ ಒಂದೇ ದಾರಿಯನ್ನನುಸರಿಸುವುದಿಲ್ಲ. ರೋಗಕ್ಕೆ ಮೂಲವಾಗಿ ಮೂರು ಕಾರಣಗಳು ಇವೆ ಎಂಬಷ್ಟು ಸಂಶೋಧನೆಯನ್ನು ಈ ವೈದ್ಯರು ಮಾಡಿರುವರು. ಒಂ ರೋಗವು ವಿಷದಿಂದಾಗಿ, ಅಕ್ಷತಗಳಲ್ಲಿ ಯಾರ ಹೆಸರ ಉಚ್ಚಾರವಾಯಿತೋ ಆ ಜನದ ಕಾಟವೇ ಈ ರೋಗವೆಂಬ ನಿರ್ಣಯವಾಗುತ್ತದೆ. ಬಿಹಾರದ ಸಿಂಗಭೂಮ ಜಿಲ್ಲೆಯಲ್ಲಿ ಈ ಪದ್ಧತಿ ಹೆಚ್ಚುಮಾಡಿಕೆಯಲ್ಲಿರುತ್ತದೆ. ಇನ್ನೊಂದು ರೀತಿಯೂ ಇದೆ: ಸೋಖಾನ ಎಡಬಲಗಳಲ್ಲಿ ದಂಡಧಾರಿಗಳು ನಿಂತುಕೊಳ್ಳುತ್ತಾರೆ. ಸೋಖಾನು ಹಿರಿಯರ ಹೆಸರುಗಳನ್ನೂ ಮಂತ್ರೋಚ್ಚಾರಣೆಯನ್ನೂ ಮಾಡುತ್ತಿದ್ದಂತೆ, ಈ ದಂಡಧಾರಿಗಳು ಒಮ್ಮೆಗೇ ಆವೇಶಭರಿತರಾಗುವರು ಈ ಜನರು ಸೋಖಾನ ಬೆನ್ನ ಹಿಂದೆ ದೆವ್ವಗಳ ಅರಣ್ಯ ಪ್ರವೇಶಿಸುವರು. ಕಾಡಿನಲ್ಲಿ ತಿರುಗಾಡುವಾಗ ವಿಶಿಷ್ಟಗಳಿಗೆಯಲ್ಲಿ ಅವರಿಗೆ ಕೈಯಲ್ಲಿರುವ ದಂಡವು ಭಾರವಾಗಿ ತೋರಿ ನಿಂತುಬಿಡುವರು. ಎಲ್ಲಿ ಅವರು ಹೀಗೆ ನಿಂತರೋ ಆ ಸ್ಥಳದಲ್ಲಿಯಾವ ದೆವ್ವವಿದೆ ಎಂಬದನ್ನು ಸೋಖಾ ತಿಳಿದು ತಕ್ಕ ಉಪಶಮನವನ್ನು ಹೇಳುವನು. ಇನ್ನೊಂದು ಕ್ರಮದಂತೆ ಸಾಲ ಮರದ ಎಲೆಯಮೇಲೆ ಅಕ್ಕಿಯನ್ನಿಟ್ಟು ಅದನ್ನು ರೋಗಿಯ ಮುಡಿಯಿಂದ ಅಡಿಯ ವರೆಗೆ ಮಂತ್ರೋಚ್ಚಾರಣೆಯೊಂದಿಗೆ ಬಳಸಿತ್ತ.. ವರು. ಆರೋಗಿಗೆ ವೈಭಾರ ವೆನಿಸ.. ದೆ. ಯಾವ ದೆವ್ವದ ಹೆಸರು ಹೇಳಿದಾಗ ಹಾಗೆ ವೈಭಾರವಾಯಿತೋ ಅದರ ಕಾ.. ವೆಂದು ಮಾಂತ್ರಿಕ ವೈದ್ಯ ನಿರ್ಣಯಿ.. ವನು.

— ೮ —

ತಕ್ಕ ಆರಾಧಾನೆಯನ್ನು ಮಾಡಿ ದೆ.. ಗಳಿಗೆ ಪ್ರಾಣಿಗಳ ಪಕ್ಷಿಗಳ ಮತ್ತು ಅ.. ರೂಪವಾಗಿ ಮನುಷ್ಯರ ಬಲಿಗಳನ್ನು ಇ.. ರು ಕೊಡುವರು. ಮಾಂತ್ರಿಕ ವೈದ.. ಯಾವ ರೀತಿಯ ಬಲಿಕೊಡಬೇಕೆಂಬ.. ನ್ನು ಹೇಳುವರು. ಈ ಹೇಳಿಕೆ ಕೊಡು.. ದಕ್ಕೆ ಮುಂಚೆ ಅವರಿಗೆ ದೈವಪ್ರೇ.. ಯಾಗುವುದೆಂದು ಆದಿವಾಸಿಗಳು ನಂ.. ರುವರು. ರೋಗಿಯು ಕೆಲವೊಮ್ಮೆ ಮ.. ತ್ಯುವಶನಾದರೂ, ಪ್ರೇತಬಾಧೆಯು ಅ.. ಗೇ ಮುಗಿಯದೆ ಕುಟುಂಬದ ಇತರರನ್ನೂ ಪೀಡಿಸುವುದೆಂದು ಮಾಂತ್ರಿಕ ವೈದ್ಯ.. ಹೇಳಬಹುದು. ಇದಕ್ಕೋಸ್ಕರ ಇನ್ನೂ ಹೆಚ್ಚು ಬಲಿಕೊಡುವ ಅಗತ್ಯ ಬೀಳುತ್ತ.. ಪೂರ್ವಜರ ಪೂಜೆಯು ಆದಿವಾಸಿ.. ನರನಾಡಿಗಳಲ್ಲಿ ಸಮಾವಿಷ್ಟ ಗೊಂಡಿ.. ಮೊದಲೇ ಹೇಳಿದಂತೆ ಇಂಥ ಸಾಮಾನ ವಿಧಾನಗಳಿಂದ ಸಂಕಟಗಳು ಪರಿಸ.. ಗೊಳ್ಳದಿದ್ದರೆ. ಸೋಖಾನು ಆವೇ.. ಭರಿತನಾಗಿ, ಇಂಥಿಂಥ ದಿಕ್ಕಿನಲ್ಲಿ ಇ.. ಮಾಟಗಾರ್ತಿಯೊಬ್ಬಳು ಇರುವಳೆಂದ.. ಅವಳೇ ಈ ಸಂಕಟಕ್ಕೆ ಹೊಣೆ ಎಂದ.. ಅಪ್ಪಣೆಕೊಡುವನು ಇದನ್ನು ತಿಳಿದೊ.. ನೆಯೇ ಊರಿನಲ್ಲಿ ಜನರೂ -.. ಹೆಂಗುಸಿನ ಗಂಡ ಸಮೇತ- ಅವಳೆಡ್ಡ.. ಗೆ ಹೋಗಿ ಅವಳನ್ನು ಸಾಯಬಡೆಯ.. ವರು ಬಿಹಾರ ರಾಜ್ಯದಲ್ಲಿ ಈ ರೀತಿಮಾ.. ತ್ರಿಕ ವಿದ್ಯೆಯದೆಸೆಯಿಂದ ಕೊಲೆಗಳೆಷ್ಟೋ.. ನಡೆಯುತ್ತಿವೆ. ಮಾತ್ರವಲ್ಲ ಬುಡಕಟ್ಟಿನ ಜನರ ರೀತಿನೀತಿಗಳ ಮೇಲೂ ಈ ಮಾ.. ತ್ರಿಕ ವಿದ್ಯೆಯ ಪ್ರಭಾವವಿದೆ. ಇ.. ಪದ್ಧತಿಯಂತೆ ವಿದೇಶೀಯನಿಂದ ಆಹಾ.. ವನ್ನು ತೆಗೆದುಕೊಳ್ಳಕೂಡದು. ತಮ್ಮ ನಿ.. ಯಮಗಳ ಉಲ್ಲಂಘನೆಯನ್ನು ಆದಿವಾಸಿಗಳು ಕ್ಷಮಿಸುವುದಿಲ್ಲ. ವಿದೇಶಿಗ.. ಳಿಂದ ಅಪ್ಪಿತಪ್ಪಿಯಾದರೂ ಒಬ್ಬನು ಆ.. ಹಾರ ತೆಗೆದುಕೊಂಡರೆ ಅವನನ್ನು ಎ.. ರೂ ಬಹಿಷ್ಕರಿಸುವರು. ಸಮಾಜದಲ್ಲಿ ಅವ.. ನ ಅಂತಸ್ತು ತಗ್ಗುತ್ತದೆ. ವಿದೇಶಿಯ.. ರೂಪದಲ್ಲಿಯಾರಾದರೊಬ್ಬ ಮಾಟಗಾರ್ತಿ.. ಯು ಬಂದಿರಬಹುದೆಂಬ ಅಂಜಿಕೆಯ.. ಈ ನಿಯಮಕ್ಕೆ ಮೂಲ ಇರದಂತೆ ಆತ್ಮ.. ಹತ್ಯೆಯೂ ಕೊಲೆಯೂ ಆದಿವಾಸಿಗ.. ಸಾಮಾನ್ಯ ಘಟನೆ. ಪಾವಿತ್ರ್ಯದವ ಪ.. ಟ್ಟವನ್ನು ಕಾಯ್ದುಕೊಳ್ಳಲು ಇವ.. ಪ್ರಯತ್ನಿಸುವರು.ವಿದೇಶಿಯನೊಡನೆ-.. ಳಹುಡುಗಿ ಲೈಂಗಿಕಸಂಬಂಧವನ್ನು ಇಟ್ಟು.. ಕೊಂಡ ಪಕ್ಷದಲ್ಲಿ ಅವುಗಳನ್ನು ಬಹಿಷ್ಕ.. ಸಲಾಗುವುದು ಮಾತ್ರವಲ್ಲ; ಅವಳು ಆ.. ಹತ್ಯೆ ಮಾಡಿಕೊಳ್ಳಬೆ ಕೆಂಬ ಒತ್ತಾ.. ವನ್ನೂ ಹೇರುವರು, ಇಂಥ ಕಾರಣಗ.. ಗಾಗಿ ಕೊಲೆಗಳು ಅನೇಕ ನಡೆಯುತ್ತವೆ. ಕಾಣದ ಕೈಯ ಕೈವಾಡದ ಮೇಲೆ ಈ ಜನರ ಭಕ್ತಿ ವಿಶ್ವಾಸ ಎಷ್ಟು ಹೆಚ್ಚಿದೆಯೆ.. ದರೆ ಕಣ್ಣ ಮುಂದಿನ ಆತ್ಮೀಯರ ಮೇ.. ಕತ್ತಿ ಮಸೆಯುವುದಕ್ಕೂ ಇವರು ಧೈ.. ಮಾಡಿಕೊಳ್ಳುತ್ತಾರೆ ಹೀಗಾಗಿ ಮಾಂ.. ಕ ವಿದ್ಯೆಯು ಪದ್ಧತಿಯನ್ನೆ ಈ ಎಲ್ಲ ಕೊ.. ಗಳು ಮತ್ತು ಅಪರಾಧಗಳು ಆಧಾ.. ಎಂದು ತಿಳಿಯಬೇಕಾಗಿದೆ ನಮ್ಮ.. ಜ್ಯದ ಕೋರ್ಟುಗಳು ಈ ಆರವನ್ನು ಮನಗಂಡು, ಇಂಥ ಕಾರಣಗಳಿಗೆ.. ಪಟ್ಟ ಅಪರಾಧಿಗಳಾದ ಆದಿವಾಸಿಗ.. ಶಿಕ್ಷೆ ವಿಧಿಸುವಾಗ ಸ್ವಲ್ಪ ರಿಯಾಯಿ.. ಯನ್ನು ತೋರಿಸುತ್ತವೆ.

— ಹಿಂದೂಸ್ಥಾನಿಂದ.

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್
ಬೊಂಬೆ ಲ್ಯಾಫ್ ಬಿಲ್ಡಿಂಗ್, ಮಂಗಳೂರು, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ,
ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು.

The Bombay Life Assurance Co., Ltd., Bombay

"ಸಬೈ ಭೂಮಿ ಗೋಪಾಲಕೀ"—ಎಲ್ಲ ಭೂಮಿಯು ದೇವರದ್ದು. ಬೆಳಕು, ನೀರು, ಗಾಳಿಯಂತೆ ಭೂಮಿಯೂ ಪರಮಾತ್ಮನ ದಾನವಾಗಿರುತ್ತದೆ ಭೂಮಿಯ ಮೇಲೆ ಎಲ್ಲರಿಗೂ ಅಧಿಕಾರವಿದೆ. ಅದನ್ನು ಸರ್ವರ ಹಿತಕ್ಕಾಗಿ ಉಪಯೋಗಿಸಬೇಕು. ಹಣಗಳಿಕೆಯೊಂದೇ ನಿಜವಾದ ಗಳಿಕೆಯಲ್ಲ. ಪ್ರೇಮವನ್ನು ಪಡೆಯುವುದೇ ಯಥಾರ್ಥವಾದ ಸಂಪತ್ತನ್ನು ಪಡೆಯುವುದು.

ಪ್ರತಿಯೊಂದು ಊರು ಒಂದು ಕುಟುಂಬದಂತಾಗ ಬೇಕೆಂಬುದು ನನ್ನ ಪ್ರಯತ್ನವು. ಭೂದಾನವು ಒಂದು ಸತ್ಯ ವಿಚಾರ. ಅದರಿಂದಲೇ ಶಾಂತಿಮಯ ಕ್ರಾಂತಿಯಾಗಬಹುದು.

ನಾನು ಮೊದಲು ನಿಮ್ಮ ಹೃದಯ ಪರಿವರ್ತನೆ ಮಾಡಲಪೇಕ್ಷಿಸುತ್ತೇನೆ. ಆ ಮೇಲೆ ನಿಮ್ಮ ಜೀವನ ಪರಿವರ್ತನೆ ಯಾಗುವುದು. ಕೊನೆಗೆ ಅದರಿಂದಾಗಿ ಸಮಾಜ ಪರಿವರ್ತನೆಯನ್ನು ಸಾಧಿಸಬಹುದು.

ದರಿದ್ರ ನಾರಾಯಣನು ಹಸಿದಿರುತ್ತಾನೆ. ಆತನು ಈಗ ಎಚ್ಚತ್ತಿದ್ದಾನೆ. ನೀವೆಲ್ಲರೂ ಆತನನ್ನು ನಿಮ್ಮ ಕುಟುಂಬದ ಒಂದು ಅಂಗವೆಂದೇ ಭಾವಿಸಿರಿ ನಿಮ್ಮಲ್ಲಿ ನಾಲ್ಕು ಮಕ್ಕಳಿದ್ದರೆ ಅವನನ್ನು ಐದನೆಯವನೆಂದು ಪರಿಗಣಿಸಿರಿ.

ನಾನು ಬಡವರ ಹಾಗೂ ಶ್ರೀಮಂತರ ಮಿತ್ರನು. ಮೈತ್ರಿಯಲ್ಲಿ ನನಗೆ ಆನಂದವಾಗುತ್ತದೆ. ಮೈತ್ರಿಯಲ್ಲಿರುವ ಶಕ್ತಿಯು ದ್ವೇಷದಲ್ಲಿಲ್ಲ.

ಪ್ರೇಮ ಅಹಿಂಸೆಗಳ ರೀತಿಯನ್ನು ಪಾಲಿಸುವಿರಾದರೆ, ಭೂಮಿಯ ಮಮತ್ವವನ್ನು ಬಿಡಬೇಕು; ಇಲ್ಲವಾದರೆ ಮುಂದಕ್ಕೆ ಭೂಮಿಯೆಲ್ಲವೂ ಅದರಲ್ಲಿ ವಾಸಿಸುವ ಪ್ರಾಣಿಗಳೆಲ್ಲವೂ ನಾಶವಾಗುವ ಸಮಯವೊಂದು ಬರುವುದು. ಅದನ್ನು ತಿಳಿದೇ ಭಗವಂತನು ಈ ಸಮಸ್ಯೆಯನ್ನು ನಮ್ಮ ಮುಂದಿಟ್ಟಿರುತ್ತಾನೆ.

ಅಮೃತಾಂಜನ

ಶಿರೋವೇದನೆ, ಉಳುಕು ಕುತ್ತಿಗೆ ಭುಜ ಹಲ್ಲು ಎದೆ ನೋವುಗಳಿಗೂ ಘಾಯಗಳು, ಬಾತುಕೊಳ್ಳುವುದು ಚೇಳುವಿಷ ಮುಂತಾದುವು, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧಿ.

ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

REGD.

ಅಮೃತಾಂಜನ ಲಿಮಿಟೆಡ್
ಮದರಾಸು ಬೊಂಬಾಯಿ ಮತ್ತು ಕಲ್ಕತ

ಋತುಸ್ರಾವ ನಿಂತಿತು

'ಕುಮಾರಿ' ಗುಳಿಗೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹಕೋಟಿಗೆ ಬರುವುದು. ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಖಾತ್ರಿ ಗುಣವಾಗಿದೆ- ರೆಗ್ಯುಲರ್ ರೂ. 3-4 ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8-[ಅಂಚೆ ಹಣೆರಹಾಕ ಪ್ರತ್ಯೇಕ]

Mrs D. DEVEE, F. D8. (N. J.)
Tollygunge CALCUTTA
ಸ್ವಶಿಕ್ಷಿತ ಶಹಾ ಕಂಪೆನಿ, ಮಂಗಳೂರು.

ಆಚಾರ್ಯ ವಿನೋಬಾರ ಸಾಧುವಾಣಿ

ಕರ್ನಾಟಕದ ಜಮೀನುದಾರರಿಗೆ ಪೂಜ್ಯ ಆಚಾರ್ಯ ವಿನೋಬಾರ ಸಂದೇಶ

ಕರ್ನಾಟಕದ ಜಮೀನುದಾರರನ್ನುದ್ದೇಶಿಸಿ ಒಂದು ಸಂದೇಶವನ್ನು ನಾನು ಅವರಿಗೆ ಕಳುಹಿಸಬೇಕೆಂದು ಕರ್ನಾಟಕದ ಕಾರ್ಯಕರ್ತರು ಚಾಂಡಿಲ (ಬಿಹಾರ) ದಲ್ಲಿ ನನ್ನನ್ನು ಕೇಳಿಕೊಂಡರು. ಅದರಿಂದ ಭೂದಾನ ಯಜ್ಞದ ಕಾರ್ಯಕ್ಕೆ ಪ್ರೋತ್ಸಾಹ ಸಿಗುವುದೆಂದು ಅವರು ಹೇಳಿದರು, ನನಗೂ ಆ ಸೂಚನೆಯು ಯೋಗ್ಯವೆನಿಸಿತು. ಆದುದರಿಂದಲೇ ಬರೆಯುತ್ತಿದ್ದೇನೆ.

ಕಳೆದ ಮಾರ್ಚ ತಿಂಗಳಲ್ಲಿ ಚಾಂಡಿಲ (ಬಿಹಾರ) ಸರ್ವೋದಯ ಸಮ್ಮೇಲನದಲ್ಲಿ ಬರುವ ಒಂದು ವರ್ಷದೊಳಗಾಗಿ ಮೊದಲನೇ ಕಂತಾಗಿ ಇಡೀ ಹಿಂದುಸ್ಥಾನದಲ್ಲಿ ಇಪ್ಪತ್ತೈದು ಲಕ್ಷ ಎಕ್ರೆ ಭೂಮಿಯನ್ನು ದೊರಕಿಸಬೇಕೆಂದು ನಿರ್ಣಯವಾಯಿತು. ಅದರಿಂದ ಭೂದಾನದ ಸಂದೇಶವು ಭಾರತದ ಹಳ್ಳಿ ಹಳ್ಳಿಗೂ ಮುಟ್ಟಲು ಅನುಕೂಲವಾಗುವುದು ಭೂಮಿಯಿಲ್ಲದ ಕಾರಣ ಉಪಜೀವನದ ದಾರಿಯನ್ನು ಪಡೆಯಲಸಮರ್ಥರಾದ ಕಷ್ಟಪಡುವ ರೈತರಿಗೆ ಪ್ರತಿಯೊಂದು ಕುಟುಂಬಕ್ಕೆ ಸಾಧಾರಣ 5 ಎಕ್ರೆ ಹೊಲದಂತೆ ಸಿಗಬೇಕೆಂದು ನನ್ನ ಪ್ರಯತ್ನವು. ಹಾಗಾದರೆ ಹಿಂದುಸ್ಥಾನದ ಒಂದು ಮಹತ್ವದ ಸಮಸ್ಯೆಯು ಶಾಂತಿ ಮತ್ತು ಪ್ರೇಮದಿಂದ ಬಗೆಹರಿದಂತಾಗುವುದು.

ಆದರೆ ಎಲ್ಲ ಜನರೂ ಈ ಕಾರ್ಯದಲ್ಲಿ ಸಹಕರಿಸಿದರೆ ಮಾತ್ರ ಅದು ಸಾಧ್ಯವಾಗಬಹುದು. ಅದರಲ್ಲಿ ದೊಡ್ಡ ಸಾಗುವಳಿದಾರರ ಮತ್ತು ಜಮೀನುದಾರರ ಕಾರ್ಯ ಭಾಗವು ವಿಶೇಷವಾಗಿದೆ. ನಾವು ಪ್ರತಿಯೊಬ್ಬನಿಂದಲೂ ಭೂಮಿಯನ್ನು ತೆಗೆದುಕೊಳ್ಳುತ್ತೇವೆ. ಆದರೆ ಬಡವರಿಂದ ಪಡೆಕೊಳ್ಳುವ ಭೂಮಿಯು ಒಂದು ಪ್ರೇಮದ ಕುರುಹು ಮಾತ್ರವಾಗಿರುವುದು. ಅದರಿಂದ ವಾತಾವರಣವು ಸಿದ್ಧವಾಗುವುದು. ಆದರೆ ಭೂದಾನದ ಮುಖ್ಯ ಭಾರವು ದೊಡ್ಡ ಸಾಗುವಳಿದಾರರ ಮತ್ತು ಜಮೀನುದಾರರ ಮೇಲೆ ಇರುವುದು. ಅಂಥವರು ಭೂಮಿದಾನದ ಈ ಆಂದೋಲನವನ್ನು ತಮ್ಮದೇ ಚಳವಳಿಯೆಂದು ನಾನು ಬಯಸುತ್ತೇನೆ. ಏಕೆಂದರೆ ಅದರಿಂದ ಬಡವರದ್ದು ಮಾತ್ರವೇ ಅಲ್ಲದೆ ಶ್ರೀಮಂತರ ಕಲ್ಯಾಣವೂ ನಿಶ್ಚಿತವಾಗಿ ಆಗುವುದು. ಸ್ವಲ್ಪ ದೂರ ದೃಷ್ಟಿಯಿಂದ ವಿಚಾರ ಮಾಡಿದರೆ ಅವರಿಗೆ ಅದು ಸ್ಪಷ್ಟವಾಗಿ ಭಾಸವಾಗುತ್ತದೆ. ಇಂಥಾ ದೂರದೃಷ್ಟಿಯನ್ನು ಕರ್ನಾಟಕದ ಜಮೀನುದಾರರು ವ್ಯಕ್ತ ಮಾಡುವರೆಂದೂ, ಈ ಪವಿತ್ರ ಕಾರ್ಯದಲ್ಲಿ ತಮ್ಮ ಕಾರ್ಯ ಭಾಗವನ್ನು ಅವರು ವಹಿಸುವರೆಂದೂ ನಾನು ಆಶಿಸುತ್ತೇನೆ. 5 ಕೋಟಿ ಎಕ್ರೆ ಭೂಮಿಯು ಒಟ್ಟುಗೂಡಿದಾಗಲೇ ಭಾರತದ ಭೂಮಿ ಹೀನರ ಸಮಸ್ಯೆಯು ಬಗೆ ಹರಿಯುವುದೆಂದು ನಾವು ಲೆಕ್ಕ ಹಾಕಿದ್ದೇವೆ. ಈ ದೃಷ್ಟಿಯಿಂದ ಈ ವರ್ಷದೊಳಗಾಗಿ 25 ಲಕ್ಷ ಎಕ್ರೆಯಾದರೂ ಸಿಗುವುದು ಮೊದಲನೇ ಹೆಜ್ಜೆಯು.

ಇಲ್ಲಿ ಒಂದು ವಿಷಯವನ್ನು ಸ್ಪಷ್ಟೀಕರಿಸುವ ಅಗತ್ಯವಿದೆ. ಭೂಮಿಯನ್ನು ದಾನ ಮಾಡಿದ ನಂತರ ಅದನ್ನು ಹಂಚಿ ಕೊಡುವ ವರೆಗಿನ ಮಧ್ಯಂತರದ ಅವಧಿಯಲ್ಲಿ ಭೂಮಿ ದಾನ ಮಾಡಿದವರ ಕರ್ತವ್ಯವೇನೆಂದು ಕೆಲ ಜನರು ಕೇಳುತ್ತಾರೆ. ಆ ಭೂಮಿಯು ದಾನ ಕೊಟ್ಟವರ ವಶದಲ್ಲಿಯೇ ಇರುವುದು, ತಮ್ಮ ಇತರ ಭೂಮಿಯಲ್ಲಿ ಶ್ರಮ ಪಡುವಂತೆ ಆ ಭೂಮಿಯಲ್ಲೂ ಅವರು ಕೆಲಸ ಮಾಡಿಸಬೇಕು, ಸರಕಾರಕ್ಕೆ ಕೊಡುವ ಕಂದಾಯವನ್ನು ಕೊಡುವುದು. ಭೂಮಿಯನ್ನು ಬಂಜರು ಬಿಡಕೂಡದು.

ವಿನೋಬಾನ ಪ್ರಣಾಮಗಳು.
ಜಿಲ್ಲೆ: ಮಾನ ಭೂಮಿ, ೧೧-೨-೧೯೫೩

ದಿ ವಿಜಯ ಬೇಂಕ್, ಲಿಮಿಟೆಡ್

ಸ್ಥಾಪನೆ: 1931.] ಪ್ರಧಾನ ಕಛೇರಿ: ಮಂಗಳೂರು.

ಮೂಲಧನ	. .	ರೂ. 20,00,000
ತೆತ್ತ ಪಾಲು ಭಂಡವಾಳ	. .	,, 8,77,860
ಕ್ಷೇಮ ನಿಧಿ	. .	,, 1,80,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ಮ್ಯಾದೆ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4¼% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ,
ಬಿ. ಎ. ಬಿ. ಯಲ್. ವಕೀಲ್,
ಬೇಂಕಿನ ಆಡಳಿತೆ ಕಮಿಟಿ ಅಧ್ಯಕ್ಷರು.

THE VIJAYA BANK, Limited.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡಲಾಗುವುದು.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

'ಗೋಪಾಲ್ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ, ಯಂ. ವಿ. ಶಾಸ್ತ್ರೀ,

ಇವರ **ನವಜೀವಾತು** ಎಂಬ **ಸೂತಿಕಾಸಾಯನ**

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹ ಸ್ಥಿತಿಯನ್ನು ಸನ್ನೋಡಿ ತಯಾರಿಸಲ್ಪಟ್ಟ ಅಮೋಘವಾದ ಧುರಂಧರ ರಸಾಯನ.

ಹೆಚ್ಚಿನ ಮಾಹಿತಿಗೆ-- ಡಾ। ಯಂ. ಸಿ. ಶಾಸ್ತ್ರೀ. ಯಲ್. ಐ. ಎಂ.
ಕೊಡಿಯಾಲಬೈಲು ಪೋಸ್ಟು. (ಮಂಗಳೂರು)
ಶಾಖೆ-- ಡಾ। ವಿ. ಕೆ. ಶಿವರಾಮರಾವ್, ಕುಂಬಳೆ,

ವಿವಿಧ ಪಾತ್ರೆಗಳು



ಯಾವತ್ತು ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

(೧ನೇ ಪುಟದಿಂದ)

ನಮ್ಮ ದೌರ್ಬಲ್ಯ ಪ್ರದರ್ಶನದಿಂದ ಆತ್ಮ ಘಾತವಾಗುತ್ತದೆಂದೇ ನಮ್ಮ ದೃಢವಾದ ವಿಶ್ವಾಸ. ನಮಗೂ ಒಂದು ಆದರ್ಶವಿರುತ್ತದೆ. ಆ ಆದರ್ಶವನ್ನು ಮುಟ್ಟಲು ಬೇಕಿರುವ ಸತತಪ್ರಯತ್ನವನ್ನು ಮಾಡಲಿಕ್ಕೆ ಮಾತ್ರ ನಾವು ಬಯಸುವುದಿಲ್ಲ. ಸಾಕಷ್ಟು ಹೆಚ್ಚು ವಿಷಯಗಳಲ್ಲಿ ಪಾಂಡಿತ್ಯ ಪಡೆಯುವ ಅಭಿಲಾಷೆಯನ್ನು ಕೆಟ್ಟದೆನ್ನಲಾರೆವು, ಆದರೆ ಅದನ್ನು ಪಡೆಯಲು ಪ್ರಯತ್ನಿಸದೆ, ಅಂಥ ಪಂಡಿತನೆಂಬ ಮನ್ನಣೆಬೇಕಿದ್ದರೆ ಮೋಸದ ರಚನೆಯನ್ನು ಬಿಟ್ಟರೆ ಬೇರೆ ಮಾರ್ಗವಿಲ್ಲ. ಇದು ಲಕ್ಷಾಧಿಪತಿಯಾಗಬೇಕೆಂದು ಬಯಸಿ ಶ್ರೀಮಂತನ ಮನೆಗೆ ಕನ್ನ ಹಾಕುವಂತೆಯೇ ವಿಪತ್ಕಾರಕವಾದ ವಾಮ ಮಾರ್ಗವೆಂಬುದನ್ನು ಮರೆತೇ ನಾವು ನಟನಾ ಚಾತುರ್ಯಕ್ಕೆ ಮನಸೋತಿರುವೆವು.

ಪರಿಣಾಮವಾಗಿ ನಾವು ಎಷ್ಟು ಕೌಶಲ್ಯದಿಂದ ನಟಿಸಿದರೂ, ನಮಗೆ ಸಮಾಧಾನವೆನಿಸುವುದಿಲ್ಲ. ನಾವೆಲ್ಲರೂ ಎಲ್ಲರನ್ನೂ ಎಲ್ಲ ಸಮಯದಲ್ಲೂ ಹುಚ್ಚರನ್ನಾಗಿಯೋ ಪೆಚ್ಚರನ್ನಾಗಿಯೋ ಮರುಳು ಮಾಡಲಾರೆವು. ಆದುದರಿಂದ ಯಾವ ಗಳಿಗೆಗೆ ನಮ್ಮ ಮೋಸದ ಬಯಲಾಗುವುದೋ ಯಾವಾಗ ಈ ಮೋಸದ ಪಂಚಾಂಗದ ಮೇಲೆ ಕಟ್ಟಿದ ಗೌರವದ ಗೋಪುರ ನೆಲಕ್ಕುರುಳುವುದೋ ತಿಳಿಯದೆ, ಮನಸ್ಸು ಸದಾ ಹೊಯ್ದಾಡುತ್ತಿರುತ್ತದೆ. ಈ ತೆರನಾದ ಚಾಂಚಲ್ಯ ಮಾನಸಿಕ ವಿಕಾರಕ್ಕೆ ಮಾತ್ರವಲ್ಲ ಶಾರೀರಿಕ ಸಂಕಟಗಳಿಗೂ ಮೂಲವಾಗಿರುತ್ತದೆ. ಇಂಥವರಲ್ಲಿ ನಾವು ಯಾವಾಗಲೂ ಅಸುಖಿಗಳಾಗಿ, ಅಸ್ವಸ್ಥರಾಗಿ ದಿನಗಳೆಯಬೇಕಾಗಿ ಬಂದರೂ ಅದು ಸ್ವಾಭಾವಿಕವೇ. ಆದುದರಿಂದ ಈ ನಟನೆಯನ್ನು ಬಿಟ್ಟುಗೊಡುವುದರಲ್ಲಿಯೇ ಶ್ರೇಯಸ್ಸಿದೆ. ಯಶಸ್ವಿಯಾಗಿ ಠಕ್ಕು ನಟಿಸಿ ತಕ್ಷಣಕ್ಕೆ ಕಣ್ಣಿಗೆ ಮಣ್ಣು ಹಾಕಬಲ್ಲವರಾಗಿದ್ದರೂ ಹಾಗೆ ಮಾಡದೆ ಸತ್ಯವರ್ತನೆಯನ್ನಿಟ್ಟುಕೊಂಡ ಪಕ್ಷದಲ್ಲಿ ನಮ್ಮ ಆತ್ಮಕ್ಕೆ ಸಮಾಧಾನವೂ ಸಂತೋಷವೂ ಉಂಟಾಗುತ್ತದೆ. ನಮ್ಮ ನೈತಿಕ ಬಲ ಹೆಚ್ಚುತ್ತಿದೆ. ಜನರನ್ನು ಧೈರ್ಯದಿಂದ ಇದಿರಿಸುವ ಸಾಮರ್ಥ್ಯ ಬರುತ್ತದೆ.

ಇದಕ್ಕೆ ನಮ್ಮ ಅಭ್ಯಾಸವನ್ನು ಸುಧಾರಿಸುವ ಆಗತ್ಯವಿದೆ. ನಾವಿರುವಈಪ್ರಪಂಚ ಸಾಮಾನ್ಯವಾದುದಲ್ಲ—ಅದರ ತುದಿ ಮೊದಲನ್ನು ಕೂಲಂಕಷವಾಗಿಅರಿತಿರುವುದು ನಮ್ಮಲ್ಲಿ ಯಾರಿಗೂ ಸಾಧ್ಯವಿಲ್ಲ. ಈ ಪ್ರಪಂಚದ ಮುಂದೆ ನಾವು ಕ್ಷುಲ್ಲಕ ಜೀವಿಗಳು. ನಮಗೆ ಜಗತ್ತಿನ ಕುರಿತು ತಿಳಿದಿರುವುದು ತೀರಾ ಕಡಿಮೆ ಎಂಬುದನ್ನು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಳ್ಳುವುದಕ್ಕೆ ನಾವು ಹಿಂಜರಿಯ ಬಾರದು. ಇದರಿಂದ ನಮಗೆ ತಿಳಿಯದ ಅನೇಕ ಸಂಗತಿಗಳೂ ಈ ಲೋಕದಲ್ಲಿವೆ. ಎಂಬುದು ಗೊತ್ತಾಗಿ ಅವುಗಳನ್ನು ನ್ಯಾಯ ಬದ್ಧವಾದ ಮಾರ್ಗದಿಂದ ಅರಿತುಕೊಳ್ಳುವ ಇಚ್ಛೆಯಾಗುತ್ತದೆ. ನಿಜವಾಗಿಯೂ ನಾವು ಅದನ್ನು ಕಲಿಯುತ್ತೇವೆ.. ಹೊರತು ಠಕ್ಕು ವರ್ಣನೆ ಮಾಡುವುದಿಲ್ಲ. ಹೀಗೆ ನಮ್ಮ ತಿಳುವಳಿಕೆಯನ್ನು ಯಥಾರ್ಥವಾಗಿ ಹೆಚ್ಚಿಸಿಕೊಳ್ಳುವ ಪ್ರಯತ್ನಗಳ ಪರಿಣಾಮವಾಗಿ ನಮ್ಮ ವ್ಯಕ್ತಿತ್ವವು ವಿಕಸನಗೊಳ್ಳುತ್ತದೆ ಈ ಮುಂಚೆ ಮೋಸದ ನಟನೆಗಾಗಿಯೂ ವಾಕ್ಚಾತುರ್ಯಕ್ಕಾಗಿಯೂ ದುರ್ವಿನಿಯೋಗಕ್ಕೆ ಒಳಪಟ್ಟ ಶಕ್ತಿಯು ಸದುಪಯೋಗವಾಗುತ್ತದೆ. ನಮಗೆ ಬದುಕಿನಲ್ಲಿ ಏನೂ ತಿಳಿದಿಲ್ಲ ಎಂಬ ಗ್ಲಾನಿ ಮೂಡುವುದಿಲ್ಲ. ಮೊದಲಿಗಿಂತ ನಮಗೆ ಈಗ ಸ್ವಲ್ಪವಾದರೂ ಹೆಚ್ಚು ಜ್ಞಾನವುಂಟಾಗಿದೆಯೆಂಬ ಭರವಸೆಯುಂಟಾಗುತ್ತದೆ. ಬದುಕು ಬೇಸರತಾರದೆ, ಕೇವಲ ಮೋಸವೆನಿಸದೆ, ಅದಕ್ಕೆ ಅರ್ಥವಿದೆ, ಅದರಲ್ಲಿ ರಸವಿದೆ ಎಂಬ ಭಾವನೆ ಮೊಳೆಯುತ್ತದೆ. ಮೊದಲಿನ ಹಠಮಾರಿ ಪ್ರವೃತ್ತಿಯಾಗಲೀ ಸಿಡುಕುತನವಾಗಲೀ. ಸ್ಪರ್ಧೆಯ ಭಾವನೆಯಾಗಲೀ ಉಳಿಯದೆ, ಹೆಚ್ಚು ಒಳ್ಳೆಯವರೂ, ಇತರರ ತಿಳುವಳಿಕೆಯಿಂದ ಲಾಭ ಹೊಂದುವ ಅಭಿಲಾಷಿಗಳೂ ಆಗಿ ನಾವು ಮಾರ್ಪಡುತ್ತೇವೆ. ನಮ್ಮ ಈ ಗುಣದಿಂದ ಹೆಚ್ಚು ಜನಪ್ರಿಯತೆಯನ್ನು ಗಳಿಸುವುದೂಸಾಧ್ಯ. ಏಕೆಂದರೆ, ಬೇರೆಯವರ ಕುರಿತು ನಾವು ತೋರಿಸುವ ಪ್ರಾಮಾಣಿಕವಾದ ಆಸಕ್ತಿ ಉತ್ತಮ ಪ್ರತಿಫಲವನ್ನು ನೀಡುತ್ತದೆ.

ಆದುದರಿಂದ ಇನ್ನೊಂದು ಸಲ ಮೋಸದ ನಟನೆ ಮಾಡಬೇಕಾದ ಸಂದರ್ಭದಲ್ಲಿ- 'ಇಲ್ಲ, ನನಗೆ ಆ ವಿಷಯ ಒಂದಿಷ್ಟೂ ತಿಳಿಯದು" ಎಂಬುದಾಗಿ ಧೈರ್ಯದಿಂದ ಹೇಳಲು ನೋಡಿರಿ. "ಓ, ನನಗದು ಗೊತ್ತೇ ಇರಲಿಲ್ಲ " ಎಂದು ನೀವು ನಿರ್ಮಲ ಮನಸ್ಸಿನಿಂದ ನುಡಿದರೆ ಎಂದಿಗೂ ನಿಮ್ಮ ಅವಮಾನವಾಗಲಿಕ್ಕಿಲ್ಲ. ಆದರೆ ನಟನೆ ಬೇಡವೆಂದ ಮಾತ್ರಕ್ಕೆ ವಿಷಯವನ್ನು ತಿಳಿದುಕೊಳ್ಳುವ ಕುತೂಹಲವನ್ನೇ ತ್ಯಜಿಸಿರಿ ಎಂಬ ಆ ಪಾರ್ಥವನ್ನು ಮಾತ್ರ ಸರ್ವಥಾ ಕಲ್ಪಿಸ ಕೂಡದು. ಅವಜ್ಞೆಯಾಗಲೀ ಔದಾಸೀನ್ಯವಾಗಲೀ ಮನುಷ್ಯನಿಗೆ ಶೋಭಿಸುವುದಿಲ್ಲ. ನಮಗೆ ಕ್ರಿಕೆಟಿನ ಕುರಿತು ಮಾಹಿತಿ ಇಲ್ಲವೆಂದ ಮಾತ್ರಕ್ಕೆ ಅದನ್ನು ಹುಚ್ಚಾಟವೆಂದು ಹೀಗಳೆಯುವುದು ಸಲ್ಲದು ಚಲಚ್ಚಿತ್ರದ ಕುರಿತು ಜ್ಞಾನವಿಲ್ಲದಿದ್ದರೆ ಬೇರೆ ಕೆಲಸವಿಲ್ಲದವರಿಗೆ ಇದೊಂದು ಮಜಾ ಮಾಡುವ ಅವಕಾಶವೆಂಬುದಾಗಿ ತಿರಸ್ಕಾರ ತೋರಿಸುವುದೂ ಬೇಡ. ಇದರ ಬದಲು ಸಿನೆಮಾ ನೋಡುವ ಆಶೆ ಇದೆ, ಆದರೆ ಬಿಡುವಿಲ್ಲ ಎಂದು ಸೌಮ್ಯವಾಗಿ ಹೇಳುವುದೊಳ್ಳೆಯದು ಬೌಲಿಂಗೆಂದರೆ ನನಗೆ ಮೆಚ್ಚು, ಆದರೆ ದುರ್ದೈವದಿಂದ ನನಗದರಲ್ಲಿ ಪಾಂಡಿತ್ಯವಿಲ್ಲ ಎಂಬುದಾಗಿ ಕ್ರಿಕೆಟಿನ ಕುರಿತು ಹೇಳಬಹುದು. ಈ ತೆರನಾದ ಪ್ರಾಮಾಣಿಕತೆ ಕಪಟ ಗಾಂಭೀರ್ಯಕ್ಕಿಂತ ಹೆಚ್ಚು ಒಳ್ಳೆಯದನ್ನು ಮಾಡುತ್ತದೆ.

ಚಂದಾಹಣ ಬಾಕಿ ಇರುವವರು ನಾವು ಕಳುಹಿಸುವ ವಿ. ಪಿ. ಪಿ.ಯನ್ನು ದಯಮಾಡಿ ಸಕಾಲದಲ್ಲಿ ಪಡೆಕೊಳ್ಳುವಂತೆ ವಿನಂತಿ

ವಾರದ ಒಳಿತು ಕೆಡುಕುಗಳು

ತಾ. ೨೮—೫—೫೩ರಿಂದ ತಾ. ೩—೬—೫೩ರ ವರೆಗೆ.

ಮೇಷ— ನಿಮ್ಮ ಮನೋರಥವು ನಿರ್ವಿಘ್ನದಿಂದ ನೆರವೇರುವದು. ಪ್ರತಿಯೊಂದು ಕಾರ್ಯಗಳಲ್ಲೂ ಅಧಿಕ ಫಲಪ್ರಾಪ್ತಿಯಾಗಲಿದೆ. ಆರ್ಥಿಕ ಭಾಗವು ಉತ್ತಮ ಸ್ಥಿತಿಗೆ ಬರುವದು ಶತ್ರುವರ್ಗದವರು ನಿಮ್ಮ ದೃಷ್ಟಿಗೆ ಬೀಳಲಾರರು. ಗೃಹ ಕಾಪತ್ರ್ಯಗಳೆಲ್ಲವು ಮಾಯವಾಗಿ ಸಾಂಸಾರಿಕ ಸುಖವನ್ನು ಅನುಭವಿಸುವಿರಿ. ಸೇವಕ ಜನರು ವ್ಯಾಪಾರಿಗಳು ವಿದ್ಯೋಪಜೀವಿ ವರ್ಗವೂ ಕೂಡಾ ನೆಮ್ಮದಿಯಿಂದ ಕಾಲಕಳೆಯುವುದು ವಾರಾದಿಯ 4 ದಿನಗಳಲ್ಲಿ ಅಸ್ತಿರಲ್ಲಿ ಮನಸ್ತಾಪ ಕೊಂಚ ದೇಹಾಲಸ್ಯ ಕಾಣಿಸೀತು.

ವೃಷಭ—ದುರ್ದೈವವು ನಿಮ್ಮನ್ನು ಬಲವತ್ತರವಾಗಿ ಪೀಡಿಸುತ್ತಿರುವುದು. ಯಾವ ಕಾರ್ಯವನ್ನು ಪ್ರಾರಂಭಿಸ ಬೇಕೆಂದರೂ ಮುಂಚಿತವಾಗಿಯೇ ವಿಘ್ನಗಳು ಉಪಸ್ಥಿತವಾಗುವವು. ಹಣದ ದಿಕ್ಕಟ್ಟಿನಿಂದಾಗಿ ಸಿಕ್ಕ ಸಿಕ್ಕವರೊಡನೆ ಸಾಲಮಾಡಬೇಕಾಗುವುದು ಅದರೂ ದಿನ ಯಾಪನೆಯು ಕಷ್ಟಸಾಧ್ಯವಾಗಲಿದೆ ಪರ್ಯಟನ ವಾಕ್ಕಲಹ ತಿರಸ್ಕಾರ ವಾಕ್ಕಲಹ ಸ್ಥಾನಚಲನ ಅನ ರೋಗ್ಯಾದಿಗಳು ಆಗಾಗ ಕಾಣಿಸುವವು. ಆದರೂ ತಾ. 28, 29, 3 ಈ ದಿನಗಳಲ್ಲಿ ಸುಖಲಾಭ ಇಷ್ಟಪ್ರಾಪ್ತಿಯಾದೀತು.

ಮಿಥುನ—ನಿಮ್ಮ ಸುಖಭಾಗ್ಯ ಲಾಭಪತಿಗಳೆಲ್ಲರೂ ವ್ಯಯಬಲ್ಲರುವುದರಿಂದ ಯಾವ ಉದ್ಯಮವನ್ನು ಕೈಗೊಂಡರೂ ವಿಶೇಷವಾದ ಖರ್ಚುವೆಚ್ಚಗಳೇ ಪ್ರಾಪ್ತವಾದಾವೇ ಹೊರತು. ಎಂದೂ ನಿಮ್ಮ ಮನೋರಥವು ಈಡೇರದು ಕಾಸು ಇಲ್ಲದ ನರ ಕಲ್ಲಿಗೆ ಸಮಾನನೆಂಬ ಗಾದೆಯಂತೆ ಜನರ ನಿಂದಾ ತಿರಸ್ಕಾರಗಳಿಗೆ ಗುರಿಯಾಗುವ ಸಂಭವಿದೆ. ಮನಸ್ಸು ಅತೀವ ಚಾಂಚಲ್ಯ ಭಾವವನ್ನೈದುವುದು. ಆದರೂ ವಾರಾದಿಯ 4 ದಿನಗಳಲ್ಲಿ ಸನ್ಮಿತ್ರರ ನೆರವಿನಿಂದಾಗಿ ವ್ಯಾಪಾರಾದಿಗಳಲ್ಲಿ ಕೊಂಚ ಲಾಭ ಕಾಣಿಸಬಹುದು.

ಕರ್ಕಟ—ಇಂದು ನಿಮ್ಮ ಅದೃಷ್ಟಕ್ಕೆ ಎಣೆ ಇಲ್ಲ ಎಂದರೂ ತಪ್ಪಾಗದು. ಧನಭಾಗ್ಯ ಪತಿಗಳಾದ ರವಿಗುರುಗಳು ಲಾಭಸ್ಥಾನಗತರಾಗಿರುವುದರಿಂದ ಸುತ್ತುಮುತ್ತಲಿಂದಲೂ ಧನಾಗಮವಾಗಲಿದೆ, ಹೆಚ್ಚೇಕೆ ಕೈಬಿಟ್ಟು ಹೋದ ಧನಾದಿಗಳೂ ಪುನಃಲಭಿಸುವವು. ಸಮಾಜದಲ್ಲಿ ಗಣ್ಯಸ್ಥಾನವನ್ನು ಪಡೆವಿರಿ. ಯಾವಭಾಗದಲ್ಲೂ ಕೊರತೆಯಿಲ್ಲದೆ ನಿಶ್ಚಿಂತೆಯಿಂದ ಕಾಲಕಳೆಯುವಿರಾದರೂ ಹಿತಭಾಷಿಗಳೂ ಕೂಡಾ ವಾಕ್ಕಲಹ ಬೇರೆ ತಪ್ಪಲಿಕ್ಕಿಲ್ಲದು ತಾ. 30 31, 1, 2, ಅತಿ ಪ್ರಶಸ್ತವಿದೆ.

ಸಿಂಹ— ಮುಂದುವರಿದ ಶನ್ಯೈಶ್ವರನು ವಕ್ರನಾಗಿ ನಿಮ್ಮ ಧನಸ್ಥಾನವನ್ನಾಕ್ರಮಿಸಿರುವುದರಿಂದ ನೀವೆಷ್ಟೇ ದುಡಿದರೂ ಕೂಡಾ ದಿನಾಂಕದಲ್ಲಿ ಕೈಬರಿದಾದೀತು. ಆದರೂ ದೈನಂದಿನ ಖರ್ಚುವೆಚ್ಚಗಳಿಗಾಗಿ ಹೆರವ ನ್ಯಾಕ್ಸ್ರಿ ಸಬೇಕಾಗದು. ಗೃಹಸುಖಕ್ಕಾವ ಕೊಂದರೆಯೂ ಕಾಣಿಸದು ಹಿಡಿದ ಕಾರ್ಯಗಳು ನಿಮ್ಮಂತೆ ಕೊನೆಗೊಳ್ಳಲಿವೆ. ವಾರಾಂತ್ಯದ 3 ದಿನಗಳಲ್ಲಿ ಧನ ವಸನ ಯಾನ ವಾಹನಗಳು ಪ್ರಾಪ್ತವಾದಾವು.

ಕನ್ಯಾ—ಹಣವ ಲೇವಾದೇವಿ ನಿಮಿತ್ತ ಕಲಹಗಳಾದಾವು. ಮಾನಸಿಕ ರೋಗವು ಪ್ರಬಲವಾಗಲಿದೆ, ಪಿತ್ತೋಷ್ಣ ಪ್ರಕೋಪದಿಂದ ಆರೋಗ್ಯವು ಕೆಡುವದು. ಶತ್ರುಜನರಿಂದ ಪರಾಭವ ಹೊಂದುವಿರಿ. ದಿನೇ ದಿನೇ ದೇಹದಲ್ಲಿ ದೌರ್ಬಲ್ಯ ಹೆಚ್ಚೀತು. ಸ್ವಜನರವಿಯೋಗ ಸಂಕಟಪರ್ಯಟನಾದಿಗಳಿಂದ ದುಃಖಿತರಾದ ನಿಮಗೆ ತಾ. 28, 29, 3, ಈ ದಿನಗಳಲ್ಲಿ ಧನವೃದ್ಧಿ ಧಾನ್ಯಾದಿಗಳ ಪ್ರಾಪ್ತಿ ವಿಜಯ ಮನಶ್ಯಾಂತಿಗಳು ಲಭಿಸುವವು.

ತುಲಾ—ಮನೆಯ ಜನರಲ್ಲೇ ಪರಸ್ಪರ ಕಲಹ ವೈಮನಸ್ಯಗಳು ಹೆಚ್ಚಿನಿತ್ಯ ಜಗಳವಾಗಲಿದೆ, ಶತ್ರುವರ್ಗದವರಂತೂ ನಿಮ್ಮ ಧನ ವಾಹನಗಳನ್ನು ಅಪಹರಿಸುವುದರಲ್ಲಿ ಬದ್ಧಕಂಕಣರಿರುವರು ಆಕಸ್ಮಿಕ ಪರ್ಯಟನದಿಂದಾಗಿ ನಷ್ಟ ಕಷ್ಟ ಅನಾರೋಗ್ಯಗಳು ತಲೆದೋರುವವು. ವ್ಯಯಗತ ಶನೈಶ್ವರನಂತೂ ದುಃಖ ಪರಂಪರೆಗಳನ್ನೇ ತಂದೊಡ್ಡಲಿರುವನು. ಆದರೂ ಭಾಗ್ಯಪತಿಯ ಅನುಗ್ರಹವು ನಿಮಗೆ ದೊರೆತ ಕಾರಣ ತಾ. 30, 31 ಈ ದಿನಗಳಲ್ಲಿ ಧನಲಾಭವಿಜಯಗಳು ಪ್ರಾಪ್ತವಾದಾವು.

ವೃಶ್ಚಿಕ—ನಿಮ್ಮ ಅದೃಷ್ಟವಿಂದು ದಿನದಿಂದ ದಿನಕ್ಕೆ ಹ್ರಾಸವಾಗುತ್ತ ಬರುತ್ತದೆ. ವ್ಯಾಪಾರಾದಿಗಳಲ್ಲಿ ನಷ್ಟವು ಅನಿವಾರ್ಯವೇ ಸರಿ ಪಾಲುಗಾರರೊಡನೆ ಕಲಹವಾಗುವದು. ಕೈಯಲ್ಲಿನ ದುಡ್ಡು ವ್ಯರ್ಥವ್ಯಯವಾಗವುದಲ್ಲದೆ ಅನುದಿನದ ಖರ್ಚಿಗೆ ಹೆರವರೊಡನೆ ಸಾಲಮಾಡಬೇಕಾಗುವುದು ರಾಜಕೀಯ ಕ್ಷೇತ್ರದಲ್ಲಿ ಶತ್ರುಜನರಿಂದ ಪರಾಭವ ಉಂಟಾಗಲಿದೆ. ಆದರೂ ಧನಪತಿಯಾದ ಬೃಹಸ್ಪತಿಯ ಅನುಗ್ರಹವು ನಿಮಗೆ ಪರಿಪೂರ್ಣವಿರುವುದರಿಂದ ತಾ. 28, 29, 1, 2, ಈ ದಿನಗಳಲ್ಲಿ ಗೃಹಸುಖ ಜನ ಮನ್ನಣೆ ಧನಪ್ರಾಪ್ತಿಗಳು ಆಗಲಿವೆ.

ಧನು—ನಿಮ್ಮ ಅದೃಷ್ಟವಿಂದು ಸಾಕಷ್ಟು ಉತ್ತಮ ಸ್ಥಿತಿಗೆ ಬಂದಿದೆ. ನೀವು ಕೈಕೊಂಡ ಪ್ರತಿ ಒಂದು ಉದ್ಯಮಗಳೂ ಅಧಿಕಾಧಿಕ ಫಲವೀಯುವವು. ಎಂತಹ ಮಹತ್ಕಾರ್ಯವೇ ಇರಲಿ ಹೆಚ್ಚಿನ ಶ್ರಮ ವಿಲ್ಲದೆ ಸ್ವಯಂಪೂರ್ತಿಗೊಳಿಸುವಿರಿ. ಉದ್ಯೋಗದಲ್ಲಿ ಪ್ರಗತಿ ವ್ಯಾಪಾರದಲ್ಲಿ ಲಾಭ ರಾಜಕೀಯದಲ್ಲಿ ವಿಜಯಗಳು ಕಟ್ಟಿಟ್ಟ ಗಂಟಿನಂತಿರುವುದು. ಆದರೆ ನಿಮ್ಮ ಕನಿಷ್ಠರಿಗೆ ಸುಖನೆಮ್ಮದಿ ಇರದು. ತಾ. 30, 31, ಈ ದಿನಗಳಲ್ಲಿ ಬೇಕಾದ ಸುಖಭೋಗಗಳನ್ನನುಭವಿಸುವಿರಿ.

ಮಕರ—ಸುದಿನಗಳು ಸಮೀಪಿಸುತ್ತಿವೆ ಮಂಗಳಮಯವಾದ ಕಾಲ ಎಂಬ ಲೋಕೋಕ್ತಿಯಂತೆ ಯತ್ನಿಸಿರಿ. ಸದ್ಯದಲ್ಲಿ ನಿಮ್ಮಪರಿಶ್ರಮದ ಫಲವು ಲಭಿಸುವದು. ಪ್ರಕೃತ ಗೃಹಕೃತ್ಯದಲ್ಲಿ ಅವ್ಯವಸ್ಥೆಯು ಹೆಚ್ಚಿ ತಂದೆ ಮಕ್ಕಳೊಳು ಗಂಡ ಹೆಂಡಿರೊಳು ಕಲಹವಾದೀತು. ಮಾತ್ರವಲ್ಲ ಅನಿರೀಕ್ಷಿತವಾಗಿ ಪ್ರವಾಸವೂ ಪ್ರಾಪ್ತವಾದೀತು. ಆದರೆ ತಾ. 28, 29, 1, 2, ಈ ದಿನಗಳಲ್ಲಿ ನಾನಾ ಕಡೆಯಿಂದ ಧನಾಪ್ತಿ ಮಿತ್ರ ಸಂಗಮ ಸುಖಸಂತೋಷಗಳು ಲಭಿಸುವವು.

ಕುಂಭ—ನಿಮ್ಮ ದೇಹಪತಿಯಾದ ಶನೈಶ್ವರನು ಅಷ್ಟಮ ಸ್ಥಾನದಲ್ಲಿ ನಿಂತ ಕಾರಣ ವಾತ ಪ್ರಕೋಪದಿಂದಾಗಿ ದೇಹಪೀಡೆ ಕಾಣಿಸುವದು. ಹೆಂಡತಿ ಮಕ್ಕಳಿಂದ ದೂರವಾಗಿರುವ ಪ್ರಸಂಗವು ಉಂಟಾಗಲಿದೆ. ಬಂಧು ಜನರೊಡನೆ ಮನಸ್ತಾಪವುಂಟಾಗುವದು. ಕೈಯಲ್ಲಿನ ತುತ್ತು ಬಾಯಿಗೆ ಬರಲಿಲ್ಲ ವೆಂಬಂತಹ ಅನೇಕ ಸಂಘಟನೆಗಳುಂಟಾದಾವು. ವಿರೋಧಿ ವರ್ಗದವರ ಕೃತ್ರಿಮ ಬಲೆಗೆ ಸಿಲುಕಿ ವೇದನಪಡಲಿರುವಿರಿ. ಆದರೆ ಆರ್ಥಿಕ ಭಾಗಕ್ಕೆ ಹೆಚ್ಚಿನ ದಕ್ಕೆಯಿಂದ. ತಾ. 1, 2, ಹೊರತಾಗಿ ಉಳಿದ ದಿನಗಳು ಅನುಕೂಲವಿವೆ

ಮೀನ—ಸುಖದುಃಖ ಲಾಭ ನಷ್ಟಗಳು ಈ ವಾರದಲ್ಲಿ ಸರಿ ಸಮಾನವಿದೆ. ನಿಮ್ಮ ಉದ್ಯಮಗಳಿಗೆ ನಾನಾ ತೆರದಿಂದ ವಿಘ್ನಗಳು ಒದಗುವುದಾದರೂ ಕಾರ್ಯವನ್ನು ಸಾಧಿಸದೆ ಬಿಡಲಾರಿರಿ. ನಿಮ್ಮ ಪ್ರಯತ್ನಕ್ಕೆ ತಕ್ಕುದಾದ ಫಲವು ಲಭಿಸುವದು. ವ್ಯಾಪಾರ ಕೋರ್ಟು ಕಛೇರಿಗಳಲ್ಲಿನ ವ್ಯವಹಾರಗಳಲ್ಲಿ ಫಲವು ನಿಮ್ಮಂತೆ ಆಗಲಿದೆ. ಕಫಾದಿ ಪ್ರಕೋಪದಿಂದ ಆರೋಗ್ಯಕ್ಕೆ ಧಕ್ಕೆಯಿದೆ, ತಾ. 30ರಿಂದ 2ರ ವರೆಗಿನ ದಿನಗಳಲ್ಲಿ ಇಷ್ಟಸಿದ್ಧಿ ಕಾರ್ಯ ಲಾಭ ಸುಖ ಸಂತೋಷಗಳಿವೆ.

Edited, Printed & Published By K. H. Shetty at the Navayuga Press, Udipi, S. India